

ಚರಿತ್ರೆ ಮಾಲೆ ೩

ಕರ್ನಾಟಕ ಚರಿತ್ರೆ

(ಕ್ರಿ. ಶ. ೧೩೩೬ - ೧೭೬೦)

ಸಂಪುಟ ೩

ಪ್ರಧಾನ ಸಂಪಾದಕರು

ಪ್ರೊ. ಬಿ. ಷೇಕ್ ಅಲಿ

ಸಂಪುಟ ಸಂಪಾದಕರು

ಪ್ರೊ. ಕೆ. ಎಸ್. ಶಿವಣ್ಣ



ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

ಕರ್ನಾಟಕ ಚರಿತ್ರೆ

(ಕ್ರಿ.ಶ. ೧೩೩೬-೧೭೬೦)

ಸಂಪುಟ ೩

KARNATAKA CHARITRE
(A.D. 1336-1760)
Volume Three in the Series of Comprehensive History of Karnataka

General Editor
Prof. B. Sheik Ali
Volume Editor
Prof. K.S. Shivanna
Translator
Prof. R.L. Anantha Ramaiah

Co-ordinator
Prof. Laxman Telagavi
Asst. Co-ordinator
Dr. C.R. Govindaraju
Project Assistant
K.L. Rajashekar

Published by :
Prof. A.V. Navada
Director, Prasaranga
Kannada University, Hampi
Vidyaranya, Kamalapura 583 221

Pages: XXXVI + 512 First Edition 1997

Rs. 350/-

ಪ್ರಕಾಶಕರು:
ಪ್ರೊ.ಎ.ವಿ. ನಾವಡ
ನಿರ್ದೇಶಕರು, ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ, ಕಮಲಾಪುರ ೫೮೩ ೨೨೧

ರೂ. ೩೫೦/-

ಮುಖಪುಟ : **ಕೆ.ಕೆ. ಮಕಾಳಿ**

ಮುದ್ರಕರು:
ಲಕ್ಷ್ಮಿ ಮುದ್ರಣಾಲಯ
೧೧೭, ೫ನೇ ಮುಖ್ಯರಸ್ತೆ
ಚಾಮರಾಜಪೇಟೆ, ಬೆಂಗಳೂರು ೫೬೦ ೦೧೮
ದೂ : ೬೬೧೩೧೨೩, ೬೬೧೮೭೫೨

ನಿಮ್ಮೊಡನೆ

ಕನ್ನಡ ವಿಶ್ವವಿದ್ಯಾಲಯ ವಿಜಯನಗರ ಸಾಮ್ರಾಜ್ಯದ ಸ್ಥಳದಲ್ಲಿ ಈಗ ತಲೆಯೆತ್ತಿದೆ. ಅದೇ ಕಾರಣಕ್ಕಾಗಿ ಈ ವಿಶ್ವವಿದ್ಯಾಲಯದ ಒಂದು ಜವಾಬ್ದಾರಿಯೆಂದರೆ ಕರ್ನಾಟಕದ ಸಮಗ್ರ ಇತಿಹಾಸವನ್ನು ಬರೆಯಿಸುವುದು. ಈ ಬರವಣಿಗೆಯ ಜವಾಬ್ದಾರಿ ಹೆಚ್ಚಿನದು. ನಮ್ಮ ದೇಶದ ಇತಿಹಾಸ ದೀರ್ಘಕಾಲದ್ದು ಮತ್ತು ಸಮೃದ್ಧವಾದದ್ದು. ಆದರೆ ಇತಿಹಾಸದ ಬರೆವಣಿಗೆ ಮಾತ್ರ ಇತ್ತೀಚಿನದು. ಬ್ರಿಟಿಶರು ತಮಗೆ ಅನುಕೂಲವಾಗುವಂತೆ ಈ ದೇಶದ ಇತಿಹಾಸವನ್ನು ರಚಿಸಿದರು. ಇತಿಹಾಸವೆಂದರೆ ಒಂದು ಕಥಾಮಾರ್ಗ, ಅದೂ ಕೂಡ ಕಥೆಯ ಒಂದು ರೂಪ. ವಾಸ್ತವ ಸತ್ಯವೇ ಕಥೆಯ ಸತ್ಯವಾಗಲಾರದು. ಉದಾಹರಣೆಗೆ ಟಿಪ್ಪೂ ಬ್ರಿಟಿಶರ ಕಡುವೈರಿಯಾಗಿದ್ದ. ಅಂದಮೇಲೆ ಟಿಪ್ಪೂನ ವ್ಯಕ್ತಿತ್ವ ಈ ವೈರದಿಂದ ರೂಪಿತವಾಗುವುದು ಅನಿವಾರ್ಯವಾದದ್ದು. ಬ್ರಿಟಿಶರು ನಮ್ಮ ದೇಶವನ್ನು ಗೆದ್ದವರು. ಗೆಲುವಿನ ಕಣ್ಣಿನಲ್ಲಿ ಸೋಲಿನ ನೋಟ ಹೇಗೆ ಇರಬೇಕೋ ಹಾಗೆ ಅವರು ಬರೆದರು. ಅದರ ಜೊತೆಗೆ ಇತಿಹಾಸವನ್ನು ಬರೆಯುವ ಶಾಸ್ತ್ರವನ್ನೂ ಕಲಿಸಿದರು. ಶಾಸ್ತ್ರೀಯ ಇತಿಹಾಸದಲ್ಲಿರುವುದು ಕಾರ್ಯಕಾರಣ ಸಂಬಂಧ. ಐತಿಹಾಸಿಕ ಕಾಲಕ್ರಮದಲ್ಲಿ ಕಾರ್ಯಕಾರಣ ಸಂಬಂಧದ ಹುರಿ ತೊಡಕು ಹಾಕಿಕೊಂಡಿದೆ. ಹೊಸ ಸಂಬಂಧ ಹುಟ್ಟಬೇಕಾದರೆ ಇದ್ದ ಸಂಬಂಧವನ್ನು ಬಿಡಿಸಿ ನೋಡಬೇಕಾಗುತ್ತದೆ. ನಮ್ಮ ದೇಶದಲ್ಲಿ ಈ ಶತಮಾನದ ಪ್ರಾರಂಭಕ್ಕಿಂತ ಮೊದಲು ಗಾಂಧೀಜಿಯಂಥ ಮಹಾತ್ಮ ಹೇಗೆ ಹುಟ್ಟಿದ್ದ? ಇಂಥ ಪ್ರಶ್ನೆಗಳಿಗೆ ಉತ್ತರ ಇತಿಹಾಸದಲ್ಲಿ ದೊರೆಯುವುದಿಲ್ಲ.

ಆದರೆ ಇತಿಹಾಸ ಹುಟ್ಟಿಕೊಂಡಿದೆ. ಇತಿಹಾಸವೂ ಒಂದು ಭಾಷೆ. ಆದ್ದರಿಂದ ಅದರಿಂದ ಬಿಡುಗಡೆ ಇಲ್ಲ. ಕರ್ನಾಟಕದ ಅಸ್ಮಿತೆಗಾಗಿ ಕರ್ನಾಟಕದ ಇತಿಹಾಸ ಅಗತ್ಯವಾಗಿದೆ. ಕನ್ನಡ ಭಾಷೆಯಂತೆ ಅದು ಈ ಭೌಗೋಲಿಕ ಪ್ರದೇಶದ ಅಸ್ಮಿತೆಗೆ, ನಾಡಿನ ಚಹರೆಪಟ್ಟಿಗೆ ಕಾರಣವಾಗಿದೆ. ಅನೇಕ ರಾಜವಂಶಗಳು ಈ ಪ್ರದೇಶದಲ್ಲಿ ರಾಜ್ಯಗಳನ್ನು ಕಟ್ಟಿದ್ದವು. ಜನತೆಗೆ ಒಂದು ರಾಜಕೀಯ ಅಸ್ತಿತ್ವವನ್ನು ಕಲ್ಪಿಸಿಕೊಟ್ಟವು. ವಾಸ್ತು, ಶಿಲ್ಪ, ನೃತ್ಯ, ಸಂಗೀತ, ಸಾಹಿತ್ಯಗಳು ಸಾಂಸ್ಕೃತಿಕ ಇತಿಹಾಸವನ್ನು ರೂಪಿಸಿದವು. ನಮ್ಮ ಜನಕ್ಕೆ ಐತಿಹಾಸಿಕ ತಿಳುವಳಿಕೆಯ ಅಗತ್ಯವಿದೆ.

ಇತಿಹಾಸವೆಂದರೆ ಕೇವಲ ಗತ ಸಂಗತಿಗಳ ದಾಖಲೆ ಮಾತ್ರ ಅಲ್ಲ. ಮನುಷ್ಯನ ಅನುಭವ ಮತ್ತು ತಿಳುವಳಿಕೆಗಳು ಒಂದರೊಳಗೊಂದು ಕೂಡಿ ಹೋಗುವುದೇ ಇತಿಹಾಸದಲ್ಲಿದೆ.

> ಒಂದಾಗಿಹವೈದು ಭೂತ, ಚಂದ್ರಸೂರ್ಯ ನಂದಿವಾಹನ ನಿಮ್ಮ
> ತನುವಲ್ಲವೇ? ನಿಂದು ನೋಡಲು ಜಗಭರಿತವಾಗಿಪ್ಪೆ
> ಇನ್ನು ನೋಯಿಸುವೆನಾರನಯ್ಯ ರಾಮನಾಥಾ?

ದೇವರದಾಸಿಮಯ್ಯನ ಈ ವಚನದ ಅರ್ಥಕ್ಕೆ ಸಾವಿರ ವರ್ಷಗಳ ಇತಿಹಾಸವಿದೆ. ಪಂಚಭೂತಗಳು, ಸೂರ್ಯ ಚಂದ್ರರು ಶಿವನ ಪ್ರತ್ಯಕ್ಷ ಅವಯವಗಳೆಂದು ಕಾಳಿದಾಸ ತನ್ನ 'ಅಭಿಜ್ಞಾನ ಶಾಕುಂತಲ'ದ ನಾಂದೀಪದ್ಯದಲ್ಲಿ ಹೇಳಿದ್ದಾನೆ. ಈ ತಿಳುವಳಿಕೆಯನ್ನು ಉಪಯೋಗಿಸಿದ ದಾಸಿಮಯ್ಯ ಜಗತ್ತಿನ ತುಂಬ ಶಿವನ ಪ್ರತಿಮೆಯನ್ನು ಕಾಣುತ್ತಾನೆ. ವಿಶ್ವವನ್ನೆಲ್ಲ ದೇವರು ವ್ಯಾಪಿಸಿದ್ದರೆ ಯಾರನ್ನು ನೋಯಿಸುವುದು?

ಅಹಿಂಸೆ ಜೈನ, ಬೌದ್ಧಧರ್ಮಗಳ ಒಂದು ಧಾರ್ಮಿಕ ತತ್ವ. ಇದು ದಾಸಿಮಯ್ಯನ ಅನುಭವದ ಆಳಕ್ಕೆ ಇಳಿದು ಈ ವಚನವನ್ನು ರೂಪಿಸಿದೆ. ಈ ವಚನವನ್ನು ಈಗ ಮತ್ತೊಂದು ದೃಷ್ಟಿಯಿಂದ ನೋಡಿ ಅರ್ಥವಿಸಬಹುದು. ಅನುಭವದ ತಿಳಿವು, ತಿಳುವಳಿಕೆಯ ಅನುಭವ ನಡೆಯುವುದು ಇತಿಹಾಸದಲ್ಲಿಯೇ.

ಕನ್ನಡ ವಿಶ್ವವಿದ್ಯಾಲಯ ಕರ್ನಾಟಕದ ಸಮಗ್ರ ಇತಿಹಾಸವನ್ನು ಬರೆಯಿಸಬೇಕೆಂದು ಯೋಚಿಸಿದಾಗ ಈ ವಿಚಾರಗಳು ನಮ್ಮಲ್ಲಿ ಅಸ್ಪಷ್ಟವಾಗಿ ರೂಪುಗೊಂಡಿದ್ದವು. ಭಾರತದ ಇತಿಹಾಸ ಕೇವಲ ಉತ್ತರಭಾರತದ ಇತಿಹಾಸವಾಗಿ, ದಕ್ಷಿಣ ಭಾರತದ ಇತಿಹಾಸ ಅಡಿಟಿಪ್ಪಣಿಗಳಲ್ಲಿ ಒಡಮೂಡುವುದನ್ನು ತಪ್ಪಿಸಬೇಕಾಗಿತ್ತು. ಅದು ತಪ್ಪಬೇಕಾದರೆ ಕರ್ನಾಟಕದ ಇತಿಹಾಸ ಸ್ವತಂತ್ರವಾಗಿ ರಚನೆಗೊಳ್ಳಬೇಕು. ನಮ್ಮ ಇತಿಹಾಸ ಕೇವಲ ದಿಗ್ವಿಜಯಗಳ ಇತಿಹಾಸ ಅಷ್ಟೇ ಆಗಬಾರದು, ಅದು ಸಾಂಸ್ಕೃತಿಕ ಇತಿಹಾಸವೂ ಆಗಬೇಕು. ರಾಜಕೀಯಕ್ಕೂ ಇತಿಹಾಸಕ್ಕೂ ಇರುವ ಸಂಬಂಧ ಅವಿಭಾಜ್ಯವೆಂದು ಒಪ್ಪಿಕೊಂಡರೂ ಈ ಮಾತನ್ನು ಹೇಳಬೇಕಾಗಿದೆ. ಇತಿಹಾಸದ ಬರೆವಣಿಗೆಯೂ ಬೇರೆ ಸ್ವರೂಪವನ್ನು ತಾಳಬೇಕಾಗಿದೆ. ಅವೆಲ್ಲ ಒಮ್ಮೆಲೆ ಆಗುವ ಕೆಲಸಗಳಲ್ಲ. ಮೊದಲು ಕರ್ನಾಟಕದ ಸಮಗ್ರ ಇತಿಹಾಸದ ಸಾಮಗ್ರಿ ಒಂದು ಕಡೆಗೆ ದೊರೆಯುವಂತಾಗಬೇಕು. ಈಗ ಆ ಕೆಲಸ ಪ್ರಾರಂಭವಾಗಿದೆ. ಇತಿಹಾಸದ ಈ ಸಂಪುಟಗಳಲ್ಲಿ ಈ ಪ್ರದೇಶದ ಅದ್ಭುತವಾದ ಸಾಂಸ್ಕೃತಿಕ ಮತ್ತು ರಾಜಕೀಯ ವಿಕಾಸದ ಚಿತ್ರಗಳಿವೆ. ಕರ್ನಾಟಕದ ಏಕೀಕರಣ ರಾಜಕೀಯವಾಗಿ ನಡೆದು ಹಳೆ ಮಾತಾಯಿತು. ಕರ್ನಾಟಕದ ಸೀಮಾರೇಖೆಗಳು ಅಲ್ಲಲ್ಲಿ ವಾದಗ್ರಸ್ತವಾಗಿದ್ದರೂ ನೃಪತುಂಗನಂತೆ ನಾವು ಈಗ ನಮ್ಮ ಪ್ರದೇಶ ಯಾವುದೆಂದು ನಿಶ್ಚಯಿಸಿಕೊಂಡಿದ್ದೇವೆ. ನಮ್ಮ ಇತಿಹಾಸ ಈ ಪ್ರಾದೇಶಿಕತೆಯಲ್ಲಿ ಪುನಃ ಸೃಷ್ಟಿಯಾಗಬೇಕು. ಇತಿಹಾಸ ಪ್ರತ್ಯಭಿಜ್ಞಾನದ ಫಲವೆಂದು ಬೇರೆ ಹೇಳುವ ಕಾರಣವಿಲ್ಲ. ಪ್ರತ್ಯಭಿಜ್ಞಾನ ಭಿನ್ನ ಭಿನ್ನವಾದ ಅಂಶಗಳನ್ನು ಒಳಗೂಡಿಸಿ ಒಂದು ಸಂಬಂಧವನ್ನು ಏರ್ಪಡಿಸಿಕೊಳ್ಳುತ್ತದೆ. ಈ ಸಂಬಂಧದ ಸೂತ್ರವನ್ನು ಅನುಸರಿಸುತ್ತಲೇ ಕನ್ನಡ ವಿಶ್ವವಿದ್ಯಾಲಯ ಕನ್ನಡದ ಕೆಲಸಕ್ಕಾಗಿ ಪ್ರಯತ್ನ ಮಾಡುತ್ತಿದೆ.

ಈ ಇತಿಹಾಸ ಸಂಪುಟಗಳ ಮಾರ್ಗದರ್ಶಕರಾಗಿ ಮತ್ತು ಪ್ರಧಾನ ಸಂಪಾದಕರಾಗಿ ನಾಡಿನ ಖ್ಯಾತ ಇತಿಹಾಸ ತಜ್ಞರಾಗಿರುವ ಪ್ರೊ. ಬಿ. ಷೇಕ್ ಅಲಿಯವರು ದೊರೆತದ್ದು ನಮ್ಮ ಪುಣ್ಯ. ಈಗ ಪ್ರಕಟವಾಗುತ್ತಿರುವ ಸಂಪುಟವನ್ನು ಪ್ರೊ. ಕೆ. ಎಸ್. ಶಿವಣ್ಣ ಅವರು ಸಂಪಾದಿಸಿ ಕೊಟ್ಟಿದ್ದಾರೆ. ಇವರೀರ್ವರಿಗೂ ವಿಶ್ವವಿದ್ಯಾಲಯದ ಪರವಾಗಿ ನಮ್ಮ ಕೃತಜ್ಞತೆಗಳು.

ಚಂದ್ರಶೇಖರ ಕಂಬಾರ
ಕುಲಪತಿಗಳು

ಪ್ರಧಾನ ಸಂಪಾದಕರ ಮಾತು

ಇತಿಹಾಸವು, ಯುಗ ಯುಗಾಂತರಗಳಿಂದ ಮಾನವನು ಪ್ರಗತಿ ಹೊಂದಿದ್ದಾನೆಯೇ ಅವನತಿ ಹೊಂದಿದ್ದಾನೆಯೇ ಎಂಬುದನ್ನು ಅಳೆಯುವ ಮಾನಕವಾಗಿದೆ. ಹಿಂದಿನಿಂದ ಬೆಳಕನ್ನು ಹಾಯಿಸಿ,ಗತಕಾಲದ ಘಟನೆಗಳ ಬಗ್ಗೆ ಅರಿಯುವುದು, ಅವುಗಳ ಮೌಲ್ಯಮಾಪನ; ವರ್ತಮಾನದ ಘಟನೆಗಳನ್ನು ಉತ್ತಮ ಪಡಿಸುವುದು ಹಾಗೂ ಭವಿಷ್ಯತ್ತಿನ ಘಟನೆಗಳನ್ನು ಮುಂಗಾಣುವುದು ಅದರ ಮುಖ್ಯ ಉದ್ದೇಶ. ಅದು ಮನುಷ್ಯನ ಸ್ಮರಣಶಕ್ತಿಯ ಹಾಗೆ. ಅದು ಭವಿಷ್ಯತ್ತನ್ನು ಕಟ್ಟುವ ಸಲುವಾಗಿ ಭೂತಕಾಲದ ಅನುಭವವನ್ನು ನೀಡುತ್ತದೆ. ವರ್ತಮಾನವು ಭೂತಕಾಲದ ಫಲವಾಗಿರುವಂತೆ ಭವಿಷ್ಯತ್ತು ವರ್ತಮಾನದ ಫಲ. ಇತಿಹಾಸದ ಕೆಲವು ಪುಟಗಳು ಮಾನವನ ಮನಸ್ಸನ್ನು ಕುರಿತು ಸಂಪುಟಗಟ್ಟಲೆ ತತ್ವಶಾಸ್ತ್ರಕ್ಕಿಂತಲೂ ಹೆಚ್ಚಿನ ಅಂತರ್ದೃಷ್ಟಿಯನ್ನು ಕೊಡುತ್ತವೆ ಎಂದು ಹೇಳಲಾಗಿದೆ. ಭೂತಕಾಲವನ್ನು ಮರೆತುಬಿಡುವ ದೇಶಕ್ಕೆ ಭವಿತವ್ಯವಿಲ್ಲ. ಆದ್ದರಿಂದಲೇ ಇತಿಹಾಸಕ್ಕೆ ಸಮುಚಿತ ಸ್ಥಾನ.

ಕರ್ನಾಟಕದ ಇತಿಹಾಸವು ಮಾನವನ ಜೀವನದಲ್ಲಿ ಖಂಡಿತವಾಗಿ ಒಂದು ರೋಮಾಂಚಕ ಅಧ್ಯಾಯ. ದಖ್ಖಿನ್ ಪ್ರಸ್ಥಭೂಮಿಯ ಹೃದಯಭಾಗದಲ್ಲಿದ್ದು ಕರ್ನಾಟಕವು ಅತಿ ಶ್ರೇಷ್ಠ ಪ್ರಾಚೀನ ಸಂಸ್ಕೃತಿಯುಳ್ಳ, ಭೂಮಿಯ ಮೇಲಿನ ಅತ್ಯಂತ ಶ್ರೇಷ್ಠ ಪ್ರದೇಶಗಳಲ್ಲಿ ಒಂದು. ಪ್ರಾಚೀನ ಶಿಲಾಯುಗದ, ಅಥವಾ ನವ ಶಿಲಾಯುಗದ, ಅಥವಾ ಸೂಕ್ಷ್ಮಶಿಲಾಯುಗದ, ಅಥವಾ ಬೃಹತ್‌ಶಿಲಾಯುಗದ ಸಂಸ್ಕೃತಿಗಳ ಪ್ರಾಚೀನ ಮಾನವನ ಜೀವನಕ್ಕೆ ಅದು ಒಂದು ವಸ್ತುಸಂಗ್ರಹಾಲಯವಿದ್ದ ಹಾಗಿದೆ. ಅದರ ಇತಿಹಾಸಪೂರ್ವ ಮಾಹಿತಿಯು ಪ್ರದೇಶದಾದ್ಯಂತ ಹರಡಿದೆ, ಹಲವು ಶತಮಾನಗಳಲ್ಲಿ ಮಾನವನು ನಡೆದು ಬಂದ ದಾರಿಯ ಕಿರುನೋಟವನ್ನು ಒದಗಿಸುತ್ತದೆ. ಕ್ರಿ. ಪೂ. ೩೦೦೦ಕ್ಕಿಂತಲೂ ಹೆಚ್ಚು ದೂರದ ಯುಗದಲ್ಲಿ ಹರಪ್ಪಕಣಿವೆಯಲ್ಲಿ ಕಂಡುಬಂದ ಚಿನ್ನವು ಕರ್ನಾಟಕದಿಂದ ಆಮದು ಮಾಡಿಕೊಂಡದ್ದು ಎಂದು ಊಹಿಸಲಾಗಿದೆ. ಇತಿಹಾಸಯುಗದ ಮುಂಬೆಳಗಿಗೂ ಬಹಳ ಮೊದಲೇ ಕ್ರಿ.ಶ. ಆರನೆಯ ಶತಮಾನದಲ್ಲಿ, ಋಗ್ವೇದದಲ್ಲಿ ಬರುವ ಅಗಸ್ತ್ಯರಂತಹ ಋಷಿಗಳ ಚಿಂತನ ಪ್ರಕ್ರಿಯೆಯಲ್ಲಿ ಕರ್ನಾಟಕವು ಅಭಿವ್ಯಕ್ತಿ ಪಡೆಯಿತು. ಮಹಾಭಾರತ-ರಾಮಾಯಣ ಈ ಮಹಾಕಾವ್ಯಗಳಲ್ಲಿ ಕರ್ನಾಟಕವನ್ನು ಗಮನಿಸಲಾಗಿದೆ, ಮಹಾಭಾರತದ ಭೀಷ್ಮಪರ್ವದಲ್ಲಿ ''ಕರ್ಣಾಟಕ'' ಎಂಬ ಪದವೇ ಇದೆ. ಕರ್ನಾಟಕದ ಪ್ರಾಚೀನತೆಯ ವಿಚಾರದಲ್ಲಿ ನಾವೆಲ್ಲರೂ ತುಂಬಾ ಹೆಮ್ಮೆ ಪಡಬೇಕು.

ಇನ್ನು ಇತಿಹಾಸಯುಗಕ್ಕೆ ಬಂದರೆ, ಜೀವನದ ಎಲ್ಲಾ ವಲಯಗಳಲ್ಲಿ ಸಂಭವಿಸಿದ ವೈವಿಧ್ಯಪೂರ್ಣ ನಾಟಕವು ಯಾರನ್ನೂ ಬೆರಗುಗೊಳಿಸುವಂಥದಾಗಿದೆ. ಕಲೆ, ವಾಸ್ತುಶಿಲ್ಪ, ಸಾಹಿತ್ಯ, ಧರ್ಮ, ತತ್ವಶಾಸ್ತ್ರ, ಸಂಗೀತ, ನೀತಿ, ನಡವಳಿಕೆ ಈ ಕ್ಷೇತ್ರಗಳಲ್ಲಿ ಭಾರತದ ಮುಖ್ಯವಾಹಿನಿಗೆ ಕರ್ನಾಟಕವು ಮಹತ್ವದ ಕೊಡುಗೆಯನ್ನು ನೀಡಿದೆ. ಅಲ್ಲದೆ ರಾಜಕೀಯ, ಸಾಮಾಜಿಕ, ಆರ್ಥಿಕ ಮತ್ತು ಆಡಳಿತೀಯ ಸಂಸ್ಥೆಗಳ ವಲಯದಲ್ಲೂ ಅದರ ಕೊಡುಗೆ ಮುಖ್ಯವಾದದ್ದು. ರಾಜಕಾರಣ ಕ್ಷೇತ್ರವನ್ನು ನೋಡಿದರೆ, ನಂದರು ಮತ್ತು ಮೌರ್ಯರಿಂದ ಇಂದಿನವರೆಗೆ ನಿರಂತರವಾದೊಂದು ಸರಪಣಿ ಕಂಡುಬರುತ್ತದೆ. ಬೇಕಾದಷ್ಟು ರಾಜವಂಶಗಳು

ಉದಿಸಿದುವು ಮತ್ತು ಬಿದ್ದುಹೋದುವು. ನೈರಂತರ್ಯವು ಬದಲಾವಣೆಯ ಹಕ್ಕು ಮಾತ್ರ ಎಂಬ ಪ್ರಕೃತಿಯ ನಿಯಮಕ್ಕೆ ನಿದರ್ಶನಗಳನ್ನು ನೀಡಿದುವು. ಪ್ರಮುಖ ರಾಜವಂಶಗಳಾದ ಸಾತವಾಹನರು, ಕದಂಬರು, ಗಂಗರು, ಚಾಲುಕ್ಯರು, ರಾಷ್ಟ್ರಕೂಟರು, ಹೊಯ್ಸಳರು, ಯಾದವರು, ಒಡೆಯರು, ವಿಜಯನಗರದ ರಾಯರು, ಬಹಮನಿ ಸುಲ್ತಾನರು, ಮೈಸೂರು ಸುಲ್ತಾನರು, ಶಾಹೀ ಸುಲ್ತಾನರು ಇವುಗಳ ಅದೃಷ್ಟವನ್ನು ರೂಪಿಸಿದ ಅಸಂಖ್ಯಾತ ನಟರ ಪ್ರವೇಶ-ನಿರ್ಗಮನಗಳನ್ನು ನೋಡಿ ಬೆರಗಾಗುತ್ತೇವೆ. ಇನ್ನು ಗಣನೆಯೇ ಇಲ್ಲದ ಕಿರಿಯ ವಂಶಗಳ ಬಗೆಗೆ ಹೇಳುವುದೇನು? ಒಳಿತು ಕೆಡುಕುಗಳ ನಡುವೆ ನಿರಂತರವಾಗಿ ನಡೆಯುವ ಕಾದಾಟದ ಜೀವನನಾಟಕದಲ್ಲಿ ಅವರು ತೊಡಗಿದ್ದರು. ಇನ್ನೂ ಆಶ್ಚರ್ಯಕರವಾದ ಅಂಶವೆಂದರೆ, ಈ ರಾಜವಂಶಗಳ ಆಳಿಕೆಯ ಕಾಲಾವಧಿ. ಕೆಲವರು ಹೀಗೆ ಬಂದು ಹಾಗೆ ಹೋದರು; ಇನ್ನು ಕೆಲವರು, ಉದಾಹರಣೆಗೆ ಗಂಗರು ಮತ್ತು ವೊಡೆಯರರು ಏಳು ಶತಮಾನಗಳಷ್ಟು ದೀರ್ಘಕಾಲ ಆಳಿಕೆ ನಡೆಸುತ್ತಿದ್ದರು. ಈ ರಾಜವಂಶಗಳಿಗೆ ಸೇರಿದ ರಾಜನೊಬ್ಬೊಬ್ಬನಿಗೂ ಸರಾಸರಿ ೨೦ವರ್ಷಗಳನ್ನು ಇಟ್ಟುಕೊಂಡರೆ, ಮಹತ್ವದ ಪಾತ್ರ ನಿರ್ವಹಿಸಿದ ಅರಸರ ಸಂಖ್ಯೆಯನ್ನು ನಾವೇ ಊಹಿಸಬಹುದು! ಯಾವುದೇ ಮಾನಕದಿಂದ ನೋಡಿದರೂ ಕರ್ನಾಟಕದ ರಾಜಕೀಯ ಇತಿಹಾಸ ಬಹು ಸಮೃದ್ಧವಾದದ್ದು.

ಚಿತ್ತಾಕರ್ಷಕವಾಗಿರುವುದು ರಾಜಕೀಯ ಇತಿಹಾಸ ಮಾತ್ರವಲ್ಲ. ಮಾನವ ಸಮಾಜದ ಆಡಳಿತ ವ್ಯವಹರಣೆಯಲ್ಲಿ ಸತ್ಯವನ್ನು, ನ್ಯಾಯವನ್ನು ನೆಲೆಗೊಳಿಸಲು ಮನುಷ್ಯನು ಹೋರಾಡಿದ್ದರಲ್ಲಿ ಕರ್ನಾಟಕವು ಮುಂಚೂಣಿಯಲ್ಲಿದೆ. ಕಲೆ ಮತ್ತು ಸಾಹಿತ್ಯ, ತತ್ವ ಮತ್ತು ಧರ್ಮ, ಸಾಹಸ ಮತ್ತು ಆಡಳಿತ, ಸಂಸ್ಕೃತಿ ಮತ್ತು ಜೀವನ ವಿಧಾನ ಇವೆಲ್ಲ ಮಾನವ ಸಮುದಾಯದ ಅಭಿವೃದ್ಧಿಗೆ ಅತ್ಯಗತ್ಯವಾದವು. ಇವುಗಳಲ್ಲಿ ಕರ್ನಾಟಕವು ನಾನಾ ಅಗ್ರಸ್ಥಾನದಲ್ಲಿದ್ದುದು ಕಂಡುಬರುತ್ತದೆ. ಭಾರತದ ಶುಭಕರವೂ ಮಹತ್ತರವೂ ಆದ ಸಮಸ್ತವೂ ದೇವಾಲಯಗಳ ನಿರ್ಮಾಣದಲ್ಲಿ ವಿನಿಯೋಗವಾಗಿದೆ ಎಂದು ಹೇಳಲಾಗಿದೆ. ಆದ್ದರಿಂದಲೇ, ಬೇಲೂರು, ಹಳೇಬೀಡು, ಸೋಮನಾಥಪುರ ಮತ್ತು ಹಂಪಿಗಳ ದೇವಾಲಯಗಳು ಜಗತ್ತಿನ ನಾಲ್ಕೂ ಮೂಲೆಗಳಿಂದ ಕಲೆ ಮತ್ತು ಸೌಂದರ್ಯ ಪ್ರೇಮಿಗಳನ್ನು ಆಕರ್ಷಿಸಿವೆ. ಬಂಡೆಯಲ್ಲಿ ಕೊರೆದ ಬಾದಾಮಿ, ಐಹೊಳೆ ಮತ್ತು ಪಟ್ಟದಕಲ್ಲುಗಳ ದೇವಾಲಯಗಳು ಆಶ್ಚರ್ಯವನ್ನು ಹುಟ್ಟಿಸುತ್ತವೆ. ಶಂಕರ, ರಾಮಾನುಜ, ಮಧ್ವ ಮತ್ತು ಇತರ ಚಿಂತಕರು ಪ್ರವರ್ತಿಸಿದ ದರ್ಶನವು ಮಾನವನ ಆತ್ಮದ ಆಳವನ್ನು ತಟ್ಟುತ್ತದೆ. ಮಹಾತ್ಮರು, ಸಂತರು ಮತ್ತು ಸೂಫಿಗಳು ಬೋಧಿಸಿದ ಭಕ್ತಿಪಂಥವು ಜಾತಿ, ಮತ, ವರ್ಗಗಳ ತಡೆಗಳನ್ನು ದಾಟಿ ಹೋಗುತ್ತದೆ. ಭಗವದುನ್ಮತ್ತರಾದ ಶರಣರು ರಚಿಸಿದ ವಚನಗಳು ಜಾಗತಿಕ ಮಟ್ಟದಲ್ಲಿ ಜನರ ಚಿಂತನೆಯನ್ನು ಕೆರಳಿಸುತ್ತವೆ. ಕರ್ನಾಟಕದ ಗೊಮ್ಮಟೇಶ್ವರ ವಿಗ್ರಹ ಮತ್ತು ಗೋಲ್‌ಗುಂಬಜ್ ಇವು ಗಾಢವಾದ ಶ್ರದ್ಧೆಯ ಮತ್ತು ಸೂಕ್ಷ್ಮವಾದ ಕಲೆಯ ಸಂಕೇತವಾಗಿ ನಿಂತಿವೆ. ವಸಾಹತು ವಿಸ್ತರಣಕ್ಕೆ ಅದು ಒಡ್ಡಿದ ಪ್ರತಿಭಟನೆ ಸುಪ್ರಸಿದ್ಧವಾದ ನಾಲ್ಕು ಮೈಸೂರು ಯುದ್ಧಗಳಲ್ಲಿ ಫಲಿತಗೊಂಡು ರಾಷ್ಟ್ರೀಯತೆಯ ಹೆಮ್ಮೆಯನ್ನು ಹೆಚ್ಚಿಸುತ್ತಿದೆ. ಅದರ ಭಿನ್ನತೆಯಲ್ಲಿ ಏಕತೆ, ಅನೇಕತೆಯಲ್ಲಿ ಸಮಾನತೆ, ಚಂಚಲತೆಯಲ್ಲಿ ಸ್ಥಿರತೆ, ಅದರ ಮಾನವೀಯತೆ ಮತ್ತು ಉದಾರತೆ, ಜೀವನದ ಉನ್ನತ ಮೌಲ್ಯಗಳನ್ನು ಅರಸಲು ನಡೆಸಿದ ಪ್ರಯತ್ನ ಇವುಗಳಿಂದ ಕರ್ನಾಟಕವು ಇತರರಿಗೆ ಅನುಕರಿಸಬೇಕಾದ ಮಾದರಿಯಾಗಿದೆ. ಇಂತಹ ಪ್ರದೇಶದ ಸಮಗ್ರ ಇತಿಹಾಸವು, ಈ ದೇಶವನ್ನು ಭವ್ಯತೆಯ ಶಿಖರಕ್ಕೆ ಕೊಂಡೊಯ್ಯಬೇಕೆಂದು ಬಯಸುವವರಿಗೆ ಮಾರ್ಗದರ್ಶನ ಮಾಡುವ ದೀಪಸ್ತಂಭ ವಾಗುತ್ತದೆ.

ಹಂಪಿಯ ಕನ್ನಡ ವಿಶ್ವವಿದ್ಯಾಲಯವು ಹಲವು ಸಂಪುಟಗಳಲ್ಲಿ ಕರ್ನಾಟಕದ ಸಮಗ್ರ ಇತಿಹಾಸ ರಚನೆಯ ಯೋಜನೆಯನ್ನು ಕೈಗೆತ್ತಿಕೊಂಡುದು ಪ್ರಶಂಸನೀಯವಾಗಿದೆ. ಸ್ಥಾಪನೆಗೊಂಡ ತರುಣದಲ್ಲೇ ವಿಶ್ವವಿದ್ಯಾಲಯವು ಇಂತಹ ಬೃಹತ್ ಯೋಜನೆಯನ್ನು ತನ್ನ ಸಮರ್ಥ, ಕಾರ್ಯಶೀಲ ಕುಲಪತಿ

ಡಾ. ಚಂದ್ರಶೇಖರ ಕಂಬಾರ ಅವರ ಸಮರ್ಥ ಮಾರ್ಗದರ್ಶನದಲ್ಲಿ ಕಾರ್ಯಗತಗೊಳಿಸಿದುದು ತುಂಬಾ ಸಂತೋಷ ಮತ್ತು ಹೆಮ್ಮೆಯ ವಿಷಯವಾಗಿದೆ. ಅವರ ಅವಿರತ ಪರಿಶ್ರಮವಿರದಿದ್ದರೆ ಈ ಯೋಜನೆಯು ಬೆಳಕು ಕಾಣುತ್ತಿರಲಿಲ್ಲ.

ಇತಿಹಾಸವನ್ನು ಬರೆಯುವುದು ಸುಲಭದ ಕೆಲಸವಲ್ಲ. ಯಾವನು ಬೇಕಾದರೂ ಇತಿಹಾಸವನ್ನು ನಿರ್ಮಿಸಬಹುದು, ಆದರೆ ಎಲ್ಲರೂ ಇತಿಹಾಸವನ್ನು ಬರೆಯಲಾರರು ಎಂಬ ಉಕ್ತಿಯಲ್ಲಿ ಸತ್ಯವಿದೆ. ಈ ಸಂಪುಟಗಳಲ್ಲಿ ಕರ್ನಾಟಕ ಇತಿಹಾಸದ ವಿವಿಧ ಮುಖಗಳನ್ನು ಕುರಿತು ಹೊಸಬೆಳಕು ಚೆಲ್ಲಲಾಗಿದೆ ಎಂದೇನೂ ನಾವು ಹೇಳಿಕೊಳ್ಳುವುದಿಲ್ಲ. ಇದು ಅತ್ಯಂತ ಪ್ರಾಚೀನಕಾಲದಿಂದ ಇಂದಿನವರೆಗೆ ಮಾನವರ ಮತ್ತು ಘಟನೆಗಳ ವಿಸ್ತಾರವಾದ ಸಮೀಕ್ಷೆ. ತೀರಾ ಇತ್ತೀಚೆಗೆ ಬೆಳಕು ಕಂಡ ಸಂಶೋಧನೆಗಳನ್ನು ಅದರಲ್ಲಿ ಅಳವಡಿಸಲಾಗಿದೆ. ವಿಭಿನ್ನ ಮನಸ್ಸುಗಳು ಒಂದು ವಿಷಯದ ಮೇಲೆ ಕೇಂದ್ರೀಕರಿಸಿದಾಗ ಅವು ಏನಾದರೊಂದು ಅತ್ಯಮೂಲ್ಯವಾದ ಅಂಶವನ್ನು ಹೊರಪಡಿಸಬಹುದು. ಅದು ತನ್ನದೇ ವಿಶಿಷ್ಟ ಮಹತ್ವ ಹೊಂದಿರಬಹುದು. ಜ್ಞಾನದ ದ್ವೀಪವು ವಿಸ್ತಾರವಾಗಿದ್ದಷ್ಟೂ ಆಶ್ಚರ್ಯದ ಕರಾವಳಿಯ ಉದ್ದ ಹೆಚ್ಚಾಗುತ್ತದೆ. ಕರ್ನಾಟಕ ಇತಿಹಾಸವನ್ನು ಕುರಿತ ವಿದ್ವತ್ತಿನ ದ್ವೀಪವು ನಿಜವಾಗಿಯೂ ತುಂಬಾ ವಿಸ್ತಾರವಾದದ್ದು; ಈ ಸಂಪುಟಗಳು ಉದ್ಬೋಧಿಸುವ ಆಶ್ಚರ್ಯದ ಕರಾವಳಿಯೂ ಸುದೀರ್ಘವಾಗಿದೆಯೆ ಇಲ್ಲವೆ ಎಂಬುದನ್ನು ಕಾದು ನೋಡಬೇಕಾಗಿದೆ. ಪ್ರತಿಯೊಂದು ಜ್ಞಾನಶಾಖೆಯಲ್ಲಿ ಸ್ಫೋಟವುಂಟಾಗಿದೆ. ಇತಿಹಾಸ ರಚನೆಯೂ ಈಚಿನ ದಿನಗಳಲ್ಲಿ ಸಾಗರದಷ್ಟು ವ್ಯಾಪಕವಾದ ಬದಲಾವಣೆಯನ್ನು ಕಂಡಿದೆ. ಈ ಸಂಪುಟಗಳು ಆ ಬದಲಾವಣೆಯನ್ನು ಪ್ರತಿಬಿಂಬಿಸುತ್ತಿವೆಯೆ ಎಂಬುದೂ ವಿಚಾರಣೀಯವಾಗಿದೆ. ಏನೇ ಇರಲಿ, ಪ್ರಸ್ತುತ ವಿನಮ್ರ ಪ್ರಯತ್ನದಿಂದ ಬಹು ದೀರ್ಘಕಾಲದಿಂದಿದ್ದ ಒಂದು ಅಗತ್ಯವು ಪೂರೈಕೆಯಾಗುತ್ತಿದೆ ಎನ್ನುವುದು ನಮಗೆ ಸಂತೋಷ ತಂದಿದೆ. ಇದು ಮುಂಬರುವ ವರ್ಷಗಳಲ್ಲಿ ಇನ್ನಷ್ಟು ಪರಿಷ್ಕರಣೆ, ಸುಧಾರಣೆಗೆ ಬಾಗಿಲು ತೆರೆಯಬಹುದು.

ಈ ಸಂಪುಟಗಳ ಪ್ರಧಾನ ಸಂಪಾದಕನಾಗಿ ಈ ಸಂಪುಟಗಳನ್ನು ಯೋಜಿಸಿ ಸಂಪಾದಿಸುವ ಹೊಣೆಗಾರಿಕೆಯನ್ನು ವಹಿಸಿದುದಕ್ಕಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ವಿವಿಧ ಸಂಪುಟಗಳ ಸಂಪಾದಕರಿಗೆ ಹಾಗೂ ಈ ಬೃಹತ್ ಯೋಜನೆಯನ್ನು ಕಾರ್ಯಗತಗೊಳಿಸುವಲ್ಲಿ ಪೂರ್ಣ ಸಹಕಾರ ನೀಡಿ ತಮ್ಮ ಬರಹಗಳನ್ನು ಕೊಟ್ಟ ಲೇಖಕವೃಂದಕ್ಕೆ ಹೃತ್ಪೂರ್ವಕ ವಂದನೆಗಳು. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಇತಿಹಾಸ ಪ್ರಾಧ್ಯಾಪಕರಾಗಿರುವ ಪ್ರೊ. ಕೆ.ಎಸ್. ಶಿವಣ್ಣ ಅವರು ಪ್ರಸ್ತುತ ಸಂಪುಟವನ್ನು ಸಂಪಾದಿಸಿ ಕೊಟ್ಟಿದ್ದಾರೆ. ಈ ಸಂಪುಟದ ಎಲ್ಲಾ ಲೇಖನಗಳನ್ನು ಕನ್ನಡಕ್ಕೆ ಅನುವಾದಿಸಿ ಕೊಟ್ಟವರು ಪ್ರೊ. ಆರ್.ಎಲ್. ಅನಂತರಾಮಯ್ಯನವರು. ಇವರೀರ್ವರಿಗೆ ನಮ್ಮ ಧನ್ಯವಾದಗಳು.

ಈ ಯೋಜನೆಯನ್ನು ಅತ್ಯಂತ ಉಪಯುಕ್ತವೆನಿಸುವಲ್ಲಿ ತಮ್ಮ ಶ್ರದ್ಧೆ, ಉತ್ಸಾಹಗಳಿಂದ ಸೇವೆ ಸಲ್ಲಿಸಿದ ಕೆಲವು ವಿದ್ವಾಂಸರು ಮತ್ತು ಇತರರನ್ನು ಇಲ್ಲಿ ಸ್ಮರಿಸುವ ಅಗತ್ಯವಿದೆ. ಇಂಥವರ ಪಟ್ಟಿ ದೊಡ್ಡದಾದರೂ ಪ್ರಸಾರಾಂಗದ ನಿರ್ದೇಶಕ ಪ್ರೊ. ಎ. ವಿ. ನಾವಡ, ಯೋಜನೆಯ ಸಂಯೋಜಕ ಪ್ರೊ. ಲಕ್ಷ್ಮಣ್ ತೆಲಗಾವಿ, ಸಹ ಸಂಯೋಜಕ ಡಾ. ಸಿ.ಆರ್. ಗೋವಿಂದರಾಜು, ಯೋಜನಾ ಸಹಾಯಕ ಕೆ.ಎಲ್. ರಾಜಶೇಖರ್, ಕಲಾವಿದ ಕೆ.ಕೆ. ಮಕಾಳಿ ಮತ್ತು ಬೆಂಗಳೂರು ಲಕ್ಷ್ಮಿ ಮುದ್ರಣಾಲಯದ ಅಶೋಕ್‌ಕುಮಾರ್ ಇವರುಗಳನ್ನಾದರೂ ಇಲ್ಲಿ ಸ್ಮರಿಸಲೇಬೇಕು. ಇಂಥ ಒಂದು ಅತ್ಯುತ್ತಮ ಕಾರ್ಯವನ್ನು ಈಡೇರಿಸುವಲ್ಲಿ ಇವರೆಲ್ಲರೂ ಸಾಕಷ್ಟು ಶ್ರಮವಹಿಸಿ ದುಡಿದಿದ್ದಾರೆ.

ಬಿ. ಷೇಕ್ ಅಲಿ
ಪ್ರಧಾನ ಸಂಪಾದಕ

ಸಂಪುಟ ಸಂಪಾದಕರ ಮಾತು

ಇತಿಹಾಸವನ್ನು ಯಾರು ಬೇಕಾದರು ನಿರ್ಮಾಣ ಮಾಡಬಹುದು, ಆದರೆ ಅದನ್ನು ಬರೆಯಲು ಎಲ್ಲರಿಂದಲೂ ಸಾಧ್ಯವಿಲ್ಲ ಎಂಬ ಮಾತಿದೆ. ಇದರ ಅರ್ಥ, ಇತಿಹಾಸವನ್ನು ರಚಿಸುವುದು ಬಹುಕಷ್ಟದ ಹಾಗೂ ತೊಡಕಿನ ಕೆಲಸ ಎಂಬುದಾಗಿದೆ. ಅದರಲ್ಲೂ ವಿಜಯನಗರ ಮತ್ತು ವಿಜಯನಗರೋತ್ತರ ಕಾಲದ ಕರ್ನಾಟಕದ ಇತಿಹಾಸವನ್ನು ಬರೆಯಲು ಸಾಕಷ್ಟು ತೊಡಕುಗಳಿವೆ. ಆದಾಗ್ಯೂ, ಈ ಸಂಪುಟ ಸಿದ್ಧಗೊಂಡು ನಿಮ್ಮ ಮುಂದಿದೆ. ಇದನ್ನು ಸಮಗ್ರವಾದ ಅಧ್ಯಯನವೆಂದು ಹೇಳುವ ಧೈರ್ಯ ನಮಗಿಲ್ಲ. ಆದರೆ, ಅಂತಹ ಕಾರ್ಯಕ್ಕೆ ಪ್ರೇರಕ ಇದು. ಇದರ ಜೊತೆಗೆ ಈ ಸಂಪುಟದ ಕೆಲವು ವಿಶೇಷಗಳನ್ನು ಇಲ್ಲಿ ಪ್ರಸ್ತಾಪಿಸಬಹುದು. ಸಾಮಾನ್ಯವಾಗಿ ಇಲ್ಲಿಯವರೆಗೆ ಈ ಕಾಲವನ್ನು ಕುರಿತಂತೆ ಪ್ರಕಟವಾಗಿರುವ ಗ್ರಂಥಗಳು ಸಾಮಾಜಿಕ-ಆರ್ಥಿಕ ಅಂಶಗಳ ಪ್ರಸ್ತಾವನೆಗೆ ಹೆಚ್ಚು ಗಮನ ನೀಡಿರಲಿಲ್ಲ. ಈ ಕೊರತೆ ಈ ಸಂಪುಟದಲ್ಲಿ ಸಾಕಷ್ಟು ನಿವಾರಣೆಯಾಗಿದೆ ಎಂದು ನಾವು ಭಾವಿಸುತ್ತೇವೆ.

ಒಂದು ಸಾಮ್ರಾಜ್ಯದ ಇತಿಹಾಸವನ್ನು ಪ್ರಸ್ತಾಪಿಸುವಾಗ ಅಲ್ಲಿನ ಅಧಿಕಾರವನ್ನು ಹಿಡಿದುಕೊಂಡಿದ್ದ ರಾಜಮನೆತನಗಳಿಗೇ ಸೀಮಿತವಾಗುವ ಮತ್ತು ಕೇವಲ ಚಕ್ರವರ್ತಿಗಳ ವೈಭವೀಕರಣಕ್ಕೇ ಸೀಮಿತಗೊಳ್ಳುವ ಸಾಧ್ಯತೆಗಳು ಹೆಚ್ಚು. ಆದರೆ ಈ ಸಂಪುಟದಲ್ಲಿ ಚಿಕ್ಕ ಚಿಕ್ಕ ನಾಡಪ್ರಭುಗಳು, ಸಾಮಂತರು ಅಥವಾ ಅಮರನಾಯಕರ ಒಂದು ಸ್ಥೂಲ ಪರಿಚಯವನ್ನು ಮಾಡಿಕೊಡುವುದರ ಮೂಲಕ, ಕೇವಲ ಸಾಮ್ರಾಜ್ಯ ಕೇಂದ್ರಕ್ಕೆ ಸೀಮಿತಗೊಳ್ಳಬಹುದಾದ ಅಧ್ಯಯನದ ಸಂಕುಚಿತೆಯನ್ನು ನಿವಾರಣೆ ಮಾಡಲು ಪ್ರಯತ್ನಿಸಲಾಗಿದೆ. ಏಕೆಂದರೆ ವಿಜಯನಗರ ಸಾಮ್ರಾಜ್ಯಕ್ಕೆ ಬುನಾದಿಯಾಗಿದ್ದವರು ಅಮರನಾಯಕರು. ಮುಂದೆ ವಿಜಯನಗರೋತ್ತರ ಕಾಲದಲ್ಲಿ 'ಪಾಳೆಯಗಾರ'ರೆಂದು ಖ್ಯಾತರಾದ ಹೆಚ್ಚುಕಡಮೆ ಎಲ್ಲಾ ಮನೆತನಗಳು ವಿಜಯನಗರ ಸಾಮ್ರಾಜ್ಯದ ಗರ್ಭದಿಂದ ಉದಯಿಸಿ ಬಂದ ಅಮರನಾಯಕರು ಎಂಬುದನ್ನು ಗಮನಿಸಬೇಕು.

ಒಂದು ಇತಿಹಾಸ ಘಟ್ಟದ ಸಾಹಿತ್ಯದ ಪ್ರಗತಿಯನ್ನು ಪ್ರಸ್ತಾಪಿಸುವಾಗ, ಅಂತಹ ಪ್ರಸ್ತಾವನೆ ಕೇವಲ ಕವಿಚರಿತೆಯಾಗುವ ಸಂದರ್ಭಗಳು ಹೆಚ್ಚು. ಐತಿಹಾಸಿಕ ಹಿನ್ನೆಲೆಯಲ್ಲಿ, ಅದರಿಂದ ಸ್ಫೂರ್ತಿಗೊಂಡು ಮತ್ತು ಅಂದಿನ ಅವಶ್ಯಕತೆಗೆ ಅನುಗುಣವಾಗಿ ಸಾಹಿತ್ಯ ನಿರ್ಮಾಣಗೊಳ್ಳುತ್ತದೆ. ಇತಿಹಾಸದಿಂದ ಬೇರ್ಪಡಿಸಿ ಸಾಹಿತ್ಯವನ್ನು ಅರ್ಥಮಾಡಿಕೊಳ್ಳುವುದು ಕಷ್ಟ. ಇದನ್ನು ಗ್ರಹಿಸಿ ಈ ಸಂಪುಟದ ಕಾಲಘಟ್ಟದ ಸಾಹಿತ್ಯದ ಬೆಳವಣಿಗೆಯನ್ನು ಗುರುತಿಸಲು ಪ್ರಯತ್ನ ಮಾಡಿರುವುದು ಈ ಸಂಪುಟದ ಮತ್ತೊಂದು ವೈಶಿಷ್ಟ್ಯ.

ನಮ್ಮ ನಾಡಿನ ಇತಿಹಾಸದಲ್ಲಿ ೧೩೩೬-೧೭೬೦ ಒಂದು ಪರ್ವಕಾಲ. ರಾಜಕೀಯ ದೃಷ್ಟಿಯಿಂದ ಪರಿಶೀಲಿಸಿದರೆ ಈ ಹಿಂದೆ ಇದ್ದ ರಾಜಕೀಯ ಅನೈಕ್ಯತೆ ಮಾಯವಾಗಿ ಅದರ ಸ್ಥಾನದಲ್ಲಿ ಒಂದು ರೀತಿಯ ಐಕ್ಯತೆಯನ್ನು ಸಾಧಿಸುವ (ಕನ್ನಡನಾಡಿನ ಹೆಚ್ಚಿನ ಭಾಗಗಳಲ್ಲಿ ಹಾಗೂ ದಕ್ಷಿಣಭಾರತದ ಅನೇಕ ಪ್ರದೇಶಗಳಲ್ಲಿ) ಪ್ರಯತ್ನ ನಡೆದದ್ದು ಗಮನಾರ್ಹ. ವಿಜಯನಗರ ಮನೆತನಗಳ ಸಾರ್ವಭೌಮಾಧಿಕಾರವನ್ನು ಸ್ವಯಂ ಪ್ರೇರಣೆಯಿಂದ ಅನೇಕ ಸ್ಥಳೀಯ ಪ್ರಭುಗಳು ಒಪ್ಪಿಕೊಂಡು ಸಾಮ್ರಾಜ್ಯದ ವಿಸ್ತರಣೆಗೆ ಕಾರಣವಾದದ್ದು ಮತ್ತೊಂದು ವಿಶೇಷ. ಇಂತಹ ಪರಿಸ್ಥಿತಿಗೆ ಸ್ಫೂರ್ತಿ ಬಂದದ್ದು ಉತ್ತರದ ದಂಡಯಾತ್ರೆಗಳಿಂದ. ರಾಜಕೀಯ ಐಕ್ಯತೆಯನ್ನು ಕಾಪಾಡಿಕೊಂಡನಂತರ ಧರ್ಮ, ಸಂಸ್ಕೃತಿಗಳ ರಕ್ಷಣೆಯ ಕೆಲಸ ಸುಗಮವಾಗಿ ಸಾಗಿತು.

ಇಲ್ಲೂ ಒಂದು ಗಮನಿಸಬೇಕಾದ ಅಂಶವೆಂದರೆ, ವಿಜಯನಗರದ ಚಕ್ರವರ್ತಿಗಳಾಗಲಿ, ಅಮರನಾಯಕರಾಗಲಿ ಅಥವಾ ಪಾಳೆಯಗಾರ ಮನೆತನಗಳಾಗಲಿ ಕಾಪಾಡಲು ಪ್ರಯತ್ನಿಸಿದ್ದು ವೈವಿಧ್ಯತೆಯ ಬದುಕನ್ನು; ಸಮನ್ವಯದ ದೃಷ್ಟಿಕೋನವನ್ನು. ಆದರೆ ಈ ಕಾಲದಲ್ಲೂ ಎಂದಿನ ಹಾಗೆ ಅನೇಕ ಕಾರಣಗಳಿಗಾಗಿ ಘರ್ಷಣೆ, ಒಳಸಂಚು ಮೊದಲಾದ ರಾಜಕೀಯ ಜೀವನದ ಅವಿಭಾಜ್ಯ ಅಂಗವಾದ ತಂತ್ರಗಳು ಇರಲಿಲ್ಲವೆಂದಲ್ಲ. ಹೆಚ್ಚಿನ ಜನರ ಬದುಕಿನಲ್ಲಿ ರಾಜಕೀಯವೇ ಪ್ರಧಾನವಾಗಿರದೆ, ಉಳಿದ ಅಂಶಗಳು ಪ್ರಧಾನವಾಗಿದ್ದು ಅವುಗಳು ಪರಿಪೋಷಣೆಗೊಂಡವು.

'ಪರಂಪರೆ' ಬೆಳೆಯುವುದು ಸತತವಾದ ಪ್ರಯತ್ನದಿಂದ. ಈ ಪ್ರಯತ್ನದಲ್ಲಿ ಅನೇಕ ತಲೆಮಾರುಗಳು ತಮ್ಮದೇ ಆದ ಕಾಣಿಕೆಯನ್ನು ನೀಡುತ್ತವೆ. ಇದರಿಂದ ಇತಿಹಾಸದ ಓಟದಲ್ಲಿ ಒಂದು ರೀತಿಯ ನಿರಂತರತೆ ಕಂಡುಬರುತ್ತದೆ. ಅಂತಹ ಸ್ವರೂಪ ಈ ಕಾಲದ ಇತಿಹಾಸದಲ್ಲೂ ಗಮನಿಸಬಹುದು. ವಿಜಯನಗರದ ಅರಸರು ಹಿಂದಿನ ಪರಂಪರೆಯ ಜೊತೆಗೆ ತಮ್ಮದೇ ಆದ ವಿಶಿಷ್ಟ ರೀತಿಯನ್ನು ನಮ್ಮ ನಾಡಿನ ಪರಂಪರೆಗೆ ಒದಗಿಸಿಕೊಟ್ಟರೆ, ಅದರ ಸಂಪ್ರದಾಯವನ್ನು ವಿಜಯನಗರೋತ್ತರ ರಾಜರು ನಡೆಸಿಕೊಂಡು ಬಂದರು. ರಾಜಕೀಯ ಬದಲಾವಣೆ ಪರಂಪರೆಯ ನಿರಂತರತೆಯ ಬೆಳವಣಿಗೆಯ ಮೇಲೆ ಹೆಚ್ಚು ಪರಿಣಾಮ ಬೀರಲಿಲ್ಲ. ಒಟ್ಟಿನಲ್ಲಿ ಈ ಸಂಪುಟದಲ್ಲಿ ದಾಖಲಾಗಿರುವ ಸ್ಥೂಲವಾದ ಇತಿಹಾಸ ಕರ್ನಾಟಕದ ರಾಜಕೀಯ ಮತ್ತು ಸಾಂಸ್ಕೃತಿಕ ವಿಕಾಸದಲ್ಲಿ ಮಹತ್ವಪೂರ್ಣವಾದ ಕಾಲಘಟ್ಟವಾಗಿದೆ.

ಕನ್ನಡ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಚಂದ್ರಶೇಖರ ಕಂಬಾರರು ನಮಗೆ ಸದಾ ಸ್ಫೂರ್ತಿ-ಉತ್ಸಾಹಗಳ ಮೂಲವಾಗಿದ್ದಾರೆ. ಪ್ರೊ. ಕಂಬಾರರು ಸಾಹಿತ್ಯ ಕ್ಷೇತ್ರದಲ್ಲಿ ಎತ್ತರದ ಸ್ಥಾನವನ್ನು ಗಳಿಸಿಕೊಂಡಿರುವಂತೆ ನಮ್ಮ ನಾಡಿನ ಪರಂಪರೆಯನ್ನು ನಮ್ಮಿಂದ ಬರೆಸಿ ಅವರು ತಮ್ಮ ಇತಿಹಾಸ ಪ್ರೇಮವನ್ನು ಬಿತ್ತರಿಸಿದ್ದಾರೆ ಮತ್ತು ಕನ್ನಡದ ಸಮಗ್ರ ಅಭಿವೃದ್ಧಿಗಾಗಿ ದುಡಿಯುತ್ತಿದ್ದಾರೆ. ಅವರ ದೂರದೃಷ್ಟಿ ಇಲ್ಲದೆ ಈ ಸಂಪುಟಗಳು ಬೆಳಕು ಕಾಣುತ್ತಿರಲಿಲ್ಲ. ಈ ಸಂಪುಟಗಳ ಪ್ರಧಾನ ಸಂಪಾದಕರು ಹಾಗೂ ನನ್ನ ವಿದ್ಯಾಗುರುಗಳಾದ ಪ್ರೊ. ಬಿ.ಷೇಕ್ ಅಲಿ ಎಂದಿನಿಂದಲೂ ನನಗೆ ಶಕ್ತಿಯ ಮೂಲವೂ ಮಾರ್ಗದರ್ಶಕರೂ ಆಗಿದ್ದಾರೆ. ಅಂತಹ ಪ್ರಸಿದ್ಧ ವಿದ್ವಾಂಸರೊಂದಿಗೆ ಸೇರಿಕೊಂಡು ಕೆಲಸ ಮಾಡುವಂತಾದುದು ನನ್ನ ಭಾಗ್ಯವೆಂದು ಎಣಿಸುತ್ತೇನೆ. ಅವರು ಉತ್ತಮ ಉಪಾಧ್ಯಾಯರೂ ಮಾನವೀಯತೆಯ ಬತ್ತದ ಚಿಲುಮೆಯೂ ಆಗಿದ್ದಾರೆ. ಅವರಿಗೆ ನಾನು ತುಂಬಾ ಋಣಿಯಾಗಿದ್ದೇನೆ. ಪ್ರೊ. ಕಂಬಾರರನ್ನೂ ಪ್ರೊ. ಷೇಕ್ ಅಲಿ ಅವರನ್ನೂ ನನ್ನದೇ ವಿನೀತ ವಿಧಾನದಿಂದ ಸರಸ್ವತೀದೇವಿಯ ಸೇವೆ ಮಾಡಲು ಅವಕಾಶ ಮಾಡಿಕೊಟ್ಟುದಕ್ಕಾಗಿ ಹೃತ್ಪೂರ್ವಕವಾಗಿ ವಂದಿಸುತ್ತೇನೆ. ಈ ಸಂಪುಟಕ್ಕೆ ಲೇಖನ ಬರೆದಿರುವ ಎಲ್ಲ ಲೇಖಕರನ್ನೂ ವಂದಿಸುತ್ತೇನೆ. ನನ್ನ ಪಿಎಚ್.ಡಿ. ವಿದ್ಯಾರ್ಥಿಗಳಾದ ಪ್ರೊ. ಎಂ. ಪ್ರಸನ್ನಕುಮಾರ್, ಫಾದರ್ ಕುಟಿನ್ಹಾ, ಫಾದರ್ ಪಿಂಟೋ, ನಾಗರಾಜ್ ಇವರಿಗೆ ಆಭಾರಿಯಾಗಿದ್ದೇನೆ. ನನ್ನ ಪತ್ನಿ ಪ್ರೊ. ಶ್ರೀದೇವಿ ನನಗೆ ಅಪಾರವಾಗಿ ಸಹಾಯ ಮಾಡಿದ್ದಾಳೆ, ಆಕೆಗೆ ನಾನು ಋಣಿಯಾಗಿದ್ದೇನೆ. ಕನ್ನಡ ವಿಶ್ವವಿದ್ಯಾಲಯದ ಪ್ರೊ. ಲಕ್ಷ್ಮಣ್ ತೆಲಗಾವಿ, ಡಾ. ಸಿ.ಆರ್. ಗೋವಿಂದರಾಜು, ಕೆ.ಎಲ್.ರಾಜಶೇಖರ್, ಎಸ್.ವೈ. ಸೋಮಶೇಖರ ಅವರು ಈ ಸಂಪುಟವನ್ನು ಅಂತಿಮವಾಗಿ ಸಿದ್ಧಪಡಿಸುವಲ್ಲಿ ನಮಗೆ ತುಂಬಾ ನೆರವು ನೀಡಿದ್ದಾರೆ. ಮುಖಪುಟದ ವರ್ಣಪಾರದರ್ಶಿಕೆಯನ್ನು ಗಣೇಶ್ ಯಾಜಿ ಅವರು ಒದಗಿಸಿದ್ದಾರೆ. ಇವರಿಗೆಲ್ಲಾ ನನ್ನ ವಂದನೆಗಳು. ಸಂಪುಟದ ಕೊನೆಗೆ ಟೈಪು ಪ್ರತಿ ತಯಾರಿಸುವುದರಲ್ಲಿ ಟೈಪಿಸ್ಟ್ ರವಿ ನೆರವಾಗಿದ್ದಾರೆ; ಕರ್ನಾಟಕ ಸರಕಾರದ ಪುರಾತತ್ವ ಮತ್ತು ವಸ್ತುಸಂಗ್ರಹಾಲಯ ಇಲಾಖೆಯ ಹಿಂದಿನ ನಿರ್ದೇಶಕರಾದ ಡಾ. ಡಿ.ವಿ.ದೇವರಾಜ್ ಅಗತ್ಯವಾದ ಗ್ರಂಥಗಳನ್ನೂ ವರದಿಗಳನ್ನೂ ಒದಗಿಸಿಕೊಟ್ಟು ಉಪಕಾರ ಮಾಡಿದ್ದಾರೆ. ಡಾ. ಲಲಿತ ಅವರು ಮಾಹಿತಿ ಸಂಗ್ರಹಣೆಯಲ್ಲಿ ನೆರವಾಗಿದ್ದಾರೆ. ಇವರೆಲ್ಲರಿಗೂ ವಂದನೆಗಳು ಸಲ್ಲುತ್ತವೆ.

ಕೆ.ಎಸ್.ಶಿವಣ್ಣ
ಸಂಪಾದಕ

ಪರಿವಿಡಿ

ಅಧ್ಯಾಯ : ಒಂದು

ಪ್ರವೇಶ ೧

– ಪ್ರೊ. ಕೆ.ಎಸ್.ಶಿವಣ್ಣ

ಅಧ್ಯಾಯ : ಎರಡು

ವಿಜಯನಗರ ಸ್ಥಾಪನೆ ೧೧

– ಪ್ರೊ. ಕೆ.ಎಸ್. ಶಿವಣ್ಣ

ಅಧ್ಯಾಯ : ಮೂರು

ವಿಜಯನಗರದ ಇತಿಹಾಸ ೧೯

– ಪ್ರೊ. ಬಾ.ರಾ. ಗೋಪಾಲ್

ಅಧ್ಯಾಯ : ನಾಲ್ಕು

ವಿಜಯನಗರ ರಾಜ್ಯಾಡಳಿತದಲ್ಲಿ ಅಮರನಾಯಕರು ೬೨

– ಪ್ರೊ. ಕೆ. ಎಸ್. ಶಿವಣ್ಣ, ಡಾ. ಡಿ.ಎನ್. ಯೋಗೀಶ್ವರಪ್ಪ,

– ಡಾ. ನಿರ್ಮಲರಾಜ್, ಡಾ.ಬಿ. ವಿ. ಸುಧಾಮಣಿ

ಅಧ್ಯಾಯ: ಐದು

ಕೃಷಿ ವ್ಯವಸ್ಥೆ ೧೫೩

– ಪ್ರೊ. ಕೆ. ಎಸ್. ಶಿವಣ್ಣ

ಅಧ್ಯಾಯ : ಆರು

ವಿಜಯನಗರದಲ್ಲಿ ಕೃಷಿಯೇತರ ತೆರಿಗೆ ೨೦೦

– ಡಾ. ಎಸ್. ಎ. ಬಾರಿ

ಅಧ್ಯಾಯ : ಏಳು

ಕೈಗಾರಿಕೆ, ವ್ಯಾಪಾರ ಮತ್ತು ವಾಣಿಜ್ಯ ೨೧೩

– ಪ್ರೊ. ಕೆ.ಎಸ್. ಶಿವಣ್ಣ

ಅಧ್ಯಾಯ : ಎಂಟು
ವಿಜಯನಗರ ಕಾಲದ ಸಮಾಜ ೨೪೧
-ಪ್ರೊ. ಕೆ.ಎಸ್. ಶಿವಣ್ಣ

ಅಧ್ಯಾಯ : ಒಂಬತ್ತು
ಮೈಸೂರು ಒಡೆಯರ ಇತಿಹಾಸ ೨೬೪
-ಪ್ರೊ. ಕೆ.ಎಸ್. ಶಿವಣ್ಣ

ಅಧ್ಯಾಯ : ಹತ್ತು
ವಿಜಯನಗರೋತ್ತರ ಕಾಲದ ರಾಜ್ಯಾಡಳಿತ ೨೯೪
-ಡಾ. ಎಂ.ಬಿ. ಪದ್ಮಾ

ಅಧ್ಯಾಯ : ಹನ್ನೊಂದು
ವಿಜಯನಗರೋತ್ತರ ಕಾಲದ ಸಾಮಾಜಿಕ ಒಲವುಗಳು ೩೧೬
-ಡಾ. ಎಂ.ಬಿ. ರಾಜಾಮಣಿ

ಅಧ್ಯಾಯ : ಹನ್ನೆರಡು
ವಿಜಯನಗರ ಕಾಲದ ಧಾರ್ಮಿಕ ಸ್ಥಿತಿ-ಗತಿಗಳು ೩೪೮
-ಡಾ. ಸಿ.ಆರ್. ಗೋವಿಂದರಾಜು

ಅಧ್ಯಾಯ : ಹದಿಮೂರು
ಕಲೆ ಮತ್ತು ವಾಸ್ತುಶಿಲ್ಪ ೩೫೮
-ಡಾ. ಚನ್ನಬಸಪ್ಪ ಎಸ್. ಪಾಟೀಲ


ಅಧ್ಯಾಯ : ಹದಿನಾಲ್ಕು
ಕನ್ನಡ ಸಾಹಿತ್ಯ ೩೮೯
-ಡಾ. ಎನ್.ಎಸ್. ತಾರಾನಾಥ

ಅಧ್ಯಾಯ : ಹದಿನೈದು
ಸಂಸ್ಕೃತ ಸಾಹಿತ್ಯ ೪೧೨
-ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ

ಅನುಬಂಧ
ಮೈಸೂರಿನ ಕಿರಿಯ ರಾಜವಂಶಗಳು ೪೨೮
-ಡಾ. ಸತ್ಯನಾರಾಯಣ

ಶಬ್ದಸೂಚಿ ೪೮೩

ಚಿತ್ರಗಳು



ಅಹಮದ್‌ಖಾನನ ಧರ್ಮಶಾಲಾ ಬಳಿಯ ಕೃಷ್ಣದೇವಾಲಯ-ಹಂಪಿ




ಗಾಣಗಿತ್ತಿ ಜೈನ ದೇವಾಲಯ - ಹಂಪಿ



ರಾಮಚಂದ್ರ ದೇವಾಲಯದ ಪ್ರಾಕಾರ - ಹಂಪಿ




ಕೋಟಿಲಿಂಗದ ಬಳಿಯ ನರಸಿಂಹ ದೇವಾಲಯ - ಹಂಪಿ



ನರಸಿಂಹ ದೇವಾಲಯದ ಕಂಬ - ಹಂಪಿ




ರಾಮಚಂದ್ರ ದೇವಾಲಯದ ಶಿಖರ - ಹಂಪಿ




ರಾಮಚಂದ್ರ ದೇವಾಲಯದ ಕಂಬ - ಹಂಪಿ




ವಿಠ್ಠಲ ದೇವಾಲಯ - ಹಂಪಿ



ವಿಠಲ ದೇವಾಲಯದ ಕಲ್ಲಿನ ರಥ - ಹಂಪಿ



ವಿಠಲ ದೇವಾಲಯದ ಕಂಬ - ಹಂಪಿ



ಕೃಷ್ಣ ದೇವಾಲಯದ ಕಂಬ - ಹಂಪಿ



ನರಸಿಂಹ - ಹಂಪಿ



ವಿರೂಪಾಕ್ಷ ದೇವಾಲಯದ ಗೋಪುರ - ಹಂಪಿ



ಶ್ರೀಮಂತರ ಅರಮನೆ - ಹಂಪಿ



ಶ್ರೀಮಂತರ ಅರಮನೆಯ ಇನ್ನೊಂದು ದೃಶ್ಯ - ಹಂಪಿ



ಮಹಾನವಮಿದಿಬ್ಬದ ಬಳಿಯ ಮೆಟ್ಟಿಲ ಕೊಳ - ಹಂಪಿ



ರಾಣಿಯರ ಸ್ನಾನಗೃಹ - ಹಂಪಿ



ಆನೆಯ ಲಾಯ - ಹಂಪಿ



ಮಾಳಿಗೆ ಕೂಪಾರಾಮ - ಮಲಪನಗುಡಿ



ಮಾಳಿಗೆ ಕೂಪಾರಾಮ - ಮಲಪನಗುಡಿ



ಅಪ್ರಮೇಯಸ್ವಾಮಿ ದೇವಾಲಯ - ಮಳೂರು



ದೀಪಾಲಂಕಾರಕೃತ ಮೈಸೂರು ಒಡೆಯರ ಅರಮನೆ




ನಂದಿ - ಚಾಮುಂಡಿಬೆಟ್ಟ




ಚಾಮುಂಡೇಶ್ವರಿ ದೇವಾಲಯದ ಗೋಪುರ - ಚಾಮುಂಡಿಬೆಟ್ಟ



ಶ್ರೀಕಂಠೇಶ್ವರ ದೇವಾಲಯ - ನಂಜನಗೂಡು




ರಂಗನಾಥಸ್ವಾಮಿ ದೇವಾಲಯ - ಶ್ರೀರಂಗಪಟ್ಟಣ



ಅಘೋರೇಶ್ವರ ದೇವಾಲಯ - ಇಕ್ಕೇರಿ



ರಾಮೇಶ್ವರ ದೇವಾಲಯ - ಕೆಳದಿ



ಆನಂದಪುರಮಠದಲ್ಲಿರುವ ಕೆಳದಿ ಅರಸರ ಲೋಹರಥ



ಮಾಳಗಮ್ಮನ ಸಮಾಧಿಯ ದ್ವಾರಬಂಧ ಚಿತ್ರ - ಕಳಲೆ



ಮಾಳಗಮ್ಮನ ಸಮಾಧಿ - ಕಳಲೆ



ಲಕ್ಷ್ಮೀಕಾಂತ ದೇವಾಲಯದ ಗೋಪುರ - ಕಳಲೆ



ಲಕ್ಷ್ಮೀಕಾಂತ ದೇವಾಲಯ - ಕಳಲೆ




ಚಿತ್ರದುರ್ಗ ಬೆಟ್ಟದ ಮಧ್ಯರಂಗದಲ್ಲಿರುವ ಸ್ಮಾರಕಗಳು - ವಿಹಂಗಮ ನೋಟ



ವಿಜಯನಗರ ಅವಧಿಯ ಮೂರುನೆಲೆಯ ಕಲ್ಲುಮಂಟಪ - ಚಿತ್ರದುರ್ಗ ಬೆಟ್ಟ



ವಿಜಯನಗರ ಅವಧಿಯ ಸ್ಮಾರಕಗಳು ಮತ್ತು ನಾಯಕರ ಕಾಲದ ಬೃಹನ್ಮಠ ಕಟ್ಟಡ - ಚಿತ್ರದುರ್ಗ ಬೆಟ್ಟ



ಕೋಟೆಯ ಪ್ರಾಕಾರದ ಮೇಲಿರುವ ಉಬ್ಬುಶಿಲ್ಪಗಳು: ವಿಜಯನಗರ - ಚಿತ್ರದುರ್ಗ ಬೆಟ್ಟ



ಹಸಿ ಇಟ್ಟಿಗೆಗಳಿಂದ ನಿರ್ಮಿಸಲಾದ ವಾಸಗೃಹ ಮತ್ತು ಕಣಜಗಳ ಅವಶೇಷಗಳು:
ನಾಯಕ ಅರಸರ ಅವಧಿ - ಚಿತ್ರದುರ್ಗ ಬೆಟ್ಟ



ನಾಯಕ ಅರಸರ ಅವಧಿಯ ಅರಮನೆ ಅವಶೇಷಗಳು - ಚಿತ್ರದುರ್ಗ ಬೆಟ್ಟ




ನಾಯಕ ಅರಸರ ಅವಧಿಯ ಕೋಟೆಸುತ್ತು - ಚಿತ್ರದುರ್ಗ ಬೆಟ್ಟ



ನಾಯಕ ಅರಸರ ಅವಧಿಯ ಏಕನಾಥೇಶ್ವರಿ ದೇವಾಲಯದ ಮುಖಮಂಟಪ - ಚಿತ್ರದುರ್ಗ ಬೆಟ್ಟ



ಏಕನಾಥೇಶ್ವರಿ ದೇವಾಲಯ ಮುಖಮಂಟಪದ ಮೇಲೆ ನಿರ್ಮಿಸಲಾದ ಗಾರೆತೆನೆಯಲ್ಲಿಯ ಸ್ತ್ರೀಮೂರ್ತಿ - ನಾಯಕ ಅರಸರ ಅವಧಿ



ಬಂಡೆ ಮೇಲೆ ಕೊರೆದಿರುವ ವೀರಭದ್ರಶಿಲ್ಪ - ಶಿವಗಂಗೆ



ಬಂಡೆ ಮೇಲೆ ಕೊರೆದಿರುವ ನಂದಿ - ಶಿವಗಂಗೆ



ಶಿವಗಂಗೆ ಬೆಟ್ಟ ಪರಿಸರದ ವಿಹಂಗಮ ನೋಟ



ವೀರಭದ್ರಶಿಲ್ಪ - ಶಿವಗಂಗ



ರಂಗನಾಥಸ್ವಾಮಿ ಗರ್ಭಗೃಹ ಶಿಲ್ಪ - ಮಾಗಡಿ



ಸಾವನದುರ್ಗ ಬೆಟ್ಟದ ವಿಹಂಗಮ ನೋಟ

ಛಾಯಾಚಿತ್ರ ಕೃಪೆ : ಡಾ. ಚನ್ನಬಸಪ್ಪ ಎಸ್. ಪಾಟೀಲ, ಗುರುರಾಜ್ ಹೂಗಾರ್
ಪ್ರೊ. ಲಕ್ಷ್ಮಣ್ ತೆಲಗಾವಿ, ಕೆ. ಎಲ್. ರಾಜಶೇಖರ್

ಅಧ್ಯಾಯ : ಒಂದು

ಪ್ರವೇಶ

ಪ್ರಸ್ತುತ ಸಂಪುಟವು ಒಳಗೊಳ್ಳುವ ೪೬೧ ವರ್ಷಗಳ ಕಾಲಾವಧಿಯು ಕರ್ನಾಟಕದ ರಾಜಕೀಯ ಮತ್ತು ಸಾಂಸ್ಕೃತಿಕ ಇತಿಹಾಸದಲ್ಲಿ ಒಂದು ಅಚ್ಚುಕಟ್ಟಾದ ಘಟಕವಾಗುತ್ತದೆ. ಸುಮಾರಾಗಿ ತುಂಗಭದ್ರಾ ನದಿಯ ದಕ್ಷಿಣದಿಂದ ಕಾವೇರಿಯ ತೀರದವರೆಗೆ ಮತ್ತು ಆಚೆಗೂ ಕ್ರಮೇಣ ವಿಜಯನಗರದ ಅರಸರೂ, ಆಮೇಲೆ ಮೈಸೂರಿನ ಒಡೆಯರೂ, ನಾಯಕರು ಮತ್ತು ಪಾಳೆಯಗಾರರೂ ಆಳಿದ ಭಾಗದ ಇತಿಹಾಸ ಇದು.

೧೨೯೬ ಮತ್ತು ೧೩೩೬ರ ನಡುವೆ ಟರ್ಕೋ ಆಫ್ಘನರ ಮಿಲಿಟರಿ, ರಾಜಕೀಯ, ಧಾರ್ಮಿಕ ಮತ್ತು ಸಾಂಸ್ಕೃತಿಕವಾಗಿ ಕರ್ನಾಟಕದೊಳಕ್ಕೆ ನುಗ್ಗಿದ್ದರಿಂದ ಈ ಪ್ರದೇಶದಲ್ಲಿದ್ದ ಮೇಲುಸ್ತರದ ರಾಜರುಗಳ ನಾಶವಾಯಿತು. ಅಲ್ಲದೆ, ಆಳುವ ವಂಶಗಳಲ್ಲಿ ಎಷ್ಟೇ ವ್ಯತ್ಯಾಸಗಳಾಗಿದ್ದರೂ ಬದಲಾಗದೆ ಭದ್ರವಾಗಿ ೧೨೯೬ರವರೆಗೂ ಉಳಿದುಕೊಂಡಿದ್ದ ಸಾಮಾಜಿಕ, ಧಾರ್ಮಿಕ ಸಂಸ್ಥೆಗಳು ಮತ್ತು ಆಡಳಿತೀಯ ವ್ಯವಸ್ಥೆ ಇವೂ ಅಸ್ತವ್ಯಸ್ತವಾದುವು. ಈ ಪರಿಸ್ಥಿತಿಯು ಸೃಷ್ಟಿಸಿದ ಶಕ್ತಿಶೂನ್ಯತೆಯನ್ನು ಮೇಲೆ ಹೇಳಿದ ಪ್ರದೇಶದಲ್ಲಿ ಉದಿಸಿದ ವಿಜಯನಗರ ರಾಜ್ಯವು ಸಮರ್ಥವಾಗಿ ತುಂಬಿತು. ಇಲ್ಲಿ ಹಿಂದಿನ ರಾಜಕೀಯ ಮತ್ತು ಸಾಂಸ್ಕೃತಿಕ ಪರಂಪರೆಗಳನ್ನು ಪುನಶ್ಚೇತನಗೊಳಿಸಲು ಪ್ರಯತ್ನಗಳು ನಡೆದರೂ ಹಲವು ಪ್ರಭಾವಗಳಿಂದಾಗಿ ಮತ್ತು ಸನ್ನಿವೇಶದ ಅಗತ್ಯಗಳಿಂದಾಗಿ ಹಳೆಯ ಮಾದರಿಯನ್ನು ತುಸು ಬದಲಾಯಿಸಿಕೊಳ್ಳಲಾಯಿತು. ವಿಜಯನಗರ ಸಾಮ್ರಾಜ್ಯದ ಅವಶೇಷಗಳಿಂದಲೇ ಉದಿಸಿ ಬಂದ ಮೈಸೂರಿನ ಒಡೆಯರು, ಕೆಳದಿಯ ನಾಯಕರು ಮತ್ತು ವಿವಿಧ ಪಾಳೆಯಗಾರರು ಬಹುತೇಕ ವಿಜಯನಗರ ಮಾದರಿಯನ್ನೇ ಅಳವಡಿಸಿಕೊಂಡರು. ಹೀಗೆ ಪ್ರಸ್ತುತ ಸಂಪುಟವು ಒಳಗೊಳ್ಳುವ ಕಾಲಾವಧಿಯು ಒಂದು ನಿರ್ದಿಷ್ಟ ಘಟಕವಾಗುತ್ತದೆ. ಅದರಲ್ಲಿ ನಾವು ಸ್ಥೂಲವಾಗಿ ಎರಡು ಪ್ರವೃತ್ತಿಗಳನ್ನು ಗಮನಿಸುತ್ತೇವೆ: ೧) ೧೩೩೬ರಿಂದ ೧೫೬೫, ಇದನ್ನು ರಾಜಕೀಯ ಸಂಘಟನೆಯ ಕಾಲ ಎಂದೂ ೨) ೧೫೬೫-೧೭೯೧, ಇದನ್ನು ರಾಜಕೀಯ ವಿಘಟನೆಯ ಕಾಲ ಎಂದೂ ಹೆಸರಿಸಬಹುದು.

ವಿಜಯನಗರ ಇತಿಹಾಸ ಲೇಖನದಲ್ಲಿ ಕಾಲಾನುಕ್ರಮವಾಗಿ ನಾವು ಮೂರು ಸ್ಥೂಲ ವಿಭಾಗಗಳನ್ನು ಗಮನಿಸಬಹುದು. ೧) ೧೯೦೦-೧೯೩೬, ೨) ೧೯೩೬-೧೯೪೭ ಮತ್ತು ೩) ೧೯೪೭ರಿಂದ ಮುಂದಕ್ಕೆ. ಮೊದಲಿನೆರಡು ಕಾಲಾವಧಿಗಳು ಸ್ವಾತಂತ್ರ್ಯಪೂರ್ವ ಹಂತವಾಗುತ್ತವೆ. ಈ ಹಂತದಲ್ಲಿ ವಿಜಯನಗರ ಇತಿಹಾಸ ಲೇಖನದಲ್ಲಿ ಎರಡು ಮುಖ್ಯವಾದ ಒಲವುಗಳು ಕಂಡುಬಂದುವು. ಒಂದನ್ನು 'ವಸಾಹತುಶಾಹಿ' ಪ್ರವೃತ್ತಿ ಎಂದು ಕರೆಯಬಹುದು. ಇನ್ನೊಂದು 'ರಾಷ್ಟ್ರೀಯ ಪ್ರವೃತ್ತಿ'. ಇದರಲ್ಲಿ ಕಾಲದ ಜಾಯಮಾನಕ್ಕೆ ತಕ್ಕಂತೆ ಪ್ರಾದೇಶಿಕ, ಭಾಷಾವಾರು ಮತ್ತು ಜಾತಿ ಅನ್ವಯಗಳು ಸೇರಿದುವು, ಸಿವೆಲನ 'ಎ ಫರ್‌ಗಾಟನ್ ಎಂಪೈರ್' ವಿಜಯನಗರವನ್ನು ಕುರಿತು ಕೆಲವು ಮೂಲಭೂತ ಒಳನೋಟಗಳನ್ನು ಕೊಡುವ ಮೊದಲ ಪ್ರಯತ್ನ ಇದು ಎನ್ನುವುದರಲ್ಲಿ ಸಂದೇಹವಿಲ್ಲ. ಆದರೆ ಈ ಕೃತಿಯು ವಸಾಹತುಶಾಹಿ ಒಲವುಗಳಿಂದ

ತಪ್ಪಿಸಿಕೊಳ್ಳಲಾಗಲಿಲ್ಲ. ಇದನ್ನು ಭಾರತೀಯ ವಿದ್ವಾಂಸರು ಮಾತ್ರವಲ್ಲ, ಬರ್ಟನ್ ಸ್ಟೀನ್ ಅಂತಹ ವಿದೇಶಿ ವಿದ್ವಾಂಸರೂ ಗುರುತಿಸಿದ್ದಾರೆ. ಬರ್ಟನ್ ಸ್ಟೀನನ ವಿಜಯನಗರ ಕೃತಿಯು ನ್ಯೂ ಕೇಂಬ್ರಿಜ್ ಹಿಸ್ಟರಿ ಆಫ್ ಇಂಡಿಯಾ ಸರಣಿಯಲ್ಲಿ ಇತ್ತೀಚೆಗೆ ಬೆಳಕು ಕಂಡಿದೆ. ಈ ಅಮೆರಿಕನ್ ವಿದ್ವಾಂಸನು, ಸಿವೆಲನ ಕೃತಿಯಲ್ಲಿ 'ಸಾರ್ವಭೌಮಿಕ ಒಲವು'ಗಳನ್ನು ಗುರುತಿಸಿದ್ದಾನೆ. ''ಶುದ್ಧಜ್ಞಾನದ ದೃಷ್ಟಿಯಿಂದಲ್ಲದೆ, ಅಧೀನರಾದ ಪ್ರಜೆಗಳನ್ನು ಹತೋಟಿಯಲ್ಲಿಟ್ಟುಕೊಳ್ಳುವ ದೃಷ್ಟಿಯಿಂದ ರಚಿತವಾದ ಐತಿಹಾಸಿಕ ಸಾಧನ'' ಎಂದು ಅವನು ಆ ಕೃತಿಯನ್ನು ಕುರಿತು ಭಾವಿಸುತ್ತಾನೆ. ಸಿವೆಲನು ಹದಿನಾರನೇ ಶತಮಾನದ ಪೋರ್ಚುಗೀಸ್ ವರ್ತಕ-ಸಾಹಸಿಗಳ ವರದಿಗಳನ್ನು ಅತಿಯಾಗಿ ಅವಲಂಬಿಸಿದ್ದಾನೆಂದೂ ಬರ್ಟನ್ ಸ್ಟೀನ್ ಟೀಕಿಸುತ್ತಾನೆ. ಆ ಮೂಲವನ್ನು ಸ್ಟೀನ್ ನಿರಾಕರಿಸುವುದಿಲ್ಲ. ಅವರ ಪ್ರಯತ್ನಗಳನ್ನು ಮೆಚ್ಚುಗೆಯಿಂದಲೇ ಉಲ್ಲೇಖಿಸುತ್ತಾನೆ. ಸಿವೆಲನ ಕೃತಿಯು ವಿಜಯನಗರದ ಅಧ್ಯಯನಕ್ಕೆ ಮತೀಯ ದೃಷ್ಟಿಕೋನವೊಂದನ್ನು ಪರಿಚಯಗೊಳಿಸಿತು ಎಂದೂ ಇತರ ಕೆಲವು ವಿದ್ವಾಂಸರು ಸೂಚಿಸಿದ್ದಾರೆ. ವಾಸ್ತವವಾಗಿ ಅವನ ಕೃತಿಯು ವಿಜಯನಗರ ಇತಿಹಾಸ ಲೇಖನದ ಸರಣಿಯನ್ನೇ ಪ್ರಾರಂಭಗೊಳಿಸಿತು. ಇದನ್ನು ಮುಂದಿನ 'ರಾಷ್ಟ್ರೀಯ' ಮತ್ತು 'ದೇಶಭಕ್ತ' ಇತಿಹಾಸಕಾರರು ಉಪಯೋಗಿಸಿಕೊಂಡರು.

೧೯೩೬ರಲ್ಲಿ ವಿಜಯನಗರದ ಉದಯದ ೬೦೦ನೆಯ ವರ್ಷವನ್ನು ಗುರುತಿಸಿ (೧೩೩೬-೧೯೩೬) ಕೊಂಡಾಡಲು ಒಂದು ವಿಚಾರ ಸಂಕಿರಣವು ವ್ಯವಸ್ಥೆಗೊಂಡಿತು. ಅಲ್ಲಿ ಮಂಡಿಸಿದ ವಿದ್ವತ್ ಪ್ರಬಂಧಗಳನ್ನು ಒಂದು ಸಂಪುಟವಾಗಿ ಪ್ರಕಟಿಸಲಾಯಿತು. ಇದು ವಿಜಯನಗರ ಇತಿಹಾಸ ಲೇಖನದಲ್ಲಿ, ಸಿವೆಲನ ಕೃತಿಯ ನಂತರ ಇನ್ನೊಂದು ಮುಖ್ಯವಾದ ಮಜಲು. ಸುಪ್ರಸಿದ್ಧ ಇತಿಹಾಸಜ್ಞರಾದ ಬಿ.ಎ. ಸಾಲೆತೊರೆ, ಎಸ್.ಕೃಷ್ಣಸ್ವಾಮಿ ಅಯ್ಯಂಗಾರ್, ವೆಂಕಟರಮಣಯ್ಯ ಮೊದಲಾದವರು ವಿಜಯನಗರ ಸ್ಥಾಪನೆಯ ಉದ್ದೇಶವನ್ನು ಕುರಿತ ಹಲವು ಅಂಶಗಳನ್ನು ಚರ್ಚಿಸಿದರು. ವಿದ್ಯಾರಣ್ಯರು ಯಾರು? ವಿಜಯನಗರದ ಸ್ಥಾಪಕರು ಕನ್ನಡಿಗರೋ ತೆಲುಗರೊ? 'ಹಿಂದೂ ರಾಷ್ಟ್ರೀಯತೆ', 'ಭಾಷಾ ಪ್ರತ್ಯೇಕತೆ' ಇತ್ಯಾದಿ. ಈ ಸಂಪುಟದಲ್ಲಿ ಸೇರಿದ ಹಲವು ಪ್ರಬಂಧಗಳಲ್ಲಿ ಮತೀಯತೆಯ ಒಲವುಗಳೂ ಕಂಡುಬಂದುವು. ವಿಮರ್ಶಾತ್ಮಕ ವಿಶ್ಲೇಷಣೆಗಿಂತ ಮಿಗಿಲಾಗಿ 'ಗತಕಾಲವನ್ನು ಕುರಿತ ವೈಭವೀಕರಣ' ಅನೇಕ ಲೇಖನಗಳಲ್ಲಿ ವ್ಯಕ್ತವಾಯಿತು. ಒಂದು ರೀತಿಯಲ್ಲಿ, ದಿ ಸೆಕ್ಸೆಂಟಿನರಿ ವಾಲ್ಯೂಮ್, ಸಿವೆಲನ ವಸಾಹತುಶಾಹಿ ದೃಷ್ಟಿಕೋನಗಳನ್ನು ಬೆಂಬಲಿಸುವಂತೆ ತೋರಿತು. ಅದೇ ಸಮಯಕ್ಕೆ ವಿಜಯನಗರ ಸಾಮ್ರಾಜ್ಯವು, ಆ ವೇಳೆಗೆ ದಕ್ಷಿಣಭಾರತದಲ್ಲಿ ರಾಜಕೀಯ, ಸಾಮಾಜಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ಶಕ್ತಿಯಾಗಿ ಕಾಣಿಸಿಕೊಂಡಿದ್ದ ಇಸ್ಲಾಮಿಗೆ ಎದುರಾಗಿ ತಡೆಗೋಡೆ ಎಂಬಂತೆ ಕಲ್ಪಿಸಿಕೊಳ್ಳಲೂ ಪ್ರಯತ್ನ ನಡೆದಂತೆ ತೋರಿತು. ಈ ಕೆಲವು ಸ್ಥೂಲ ಪ್ರವೃತ್ತಿಗಳು ೧೯೪೭ರವರೆಗೂ ಇತಿಹಾಸಕಾರರ ಬರವಣಿಗೆಗಳಲ್ಲಿ ಕಾಣಿಸಿಕೊಂಡುವು.

೧೯೪೭ ರಿಂದ ಇಂದಿನವರೆಗೂ ವಿಜಯನಗರ ಇತಿಹಾಸ ಲೇಖನವು ವೈವಿಧ್ಯತೆಯ ಲಕ್ಷಣವನ್ನು ಪಡೆದುಕೊಂಡಿದೆ. ವಿಜಯನಗರದ ಹಲವು ಮುಖಗಳನ್ನು ಭಾರತೀಯ ಹಾಗೂ ವಿದೇಶೀಯ ವಿದ್ವಾಂಸರು ಪರೀಕ್ಷಿಸಿದ್ದಾರೆ. ಆಡಳಿತೀಯ ಸಂಸ್ಥೆಗಳನ್ನು ಟಿ. ವಿ. ಮಹಾಲಿಂಗಂ ಪರಿಶೀಲಿಸಿದ್ದಾರೆ; ವಿಜಯನಗರ ಸಾಮ್ರಾಜ್ಯದಲ್ಲಿ ಅನೇಕ ಬಗೆಯ ಸ್ವಯಮಾಡಳಿತ ಘಟಕಗಳಿದ್ದುವು, ಅವು ಸ್ಥಳೀಯ ಸರಕಾರದ ಕರ್ತವ್ಯಗಳನ್ನು ನಿರ್ವಹಿಸುತ್ತಿದ್ದುವು ಎಂಬ ಸಿದ್ಧಾಂತಕ್ಕೆ ಸಮಗ್ರವಾಗಿ ಆಧಾರಗಳನ್ನು ಒದಗಿಸಲು ಎ.ವಿ. ವೆಂಕಟರತ್ನಂ ಪ್ರಯತ್ನಿಸಿದ್ದಾರೆ. ಅಗ್ರಹಾರಗಳು, ಮಠಗಳು, ಗ್ರಾಮಸಭೆಗಳು, ನಾಡು ಮತ್ತು ವರ್ತಕ ಸಂಘಗಳು ಅಂತಹ ಘಟಕಗಳಾಗಿದ್ದುವು. ಸಾಮಂತ-ಒಕ್ಕೂಟ-ವಿಕೇಂದ್ರೀಕೃತ ರಾಜ್ಯಾಡಳಿತ ವ್ಯವಸ್ಥೆಯನ್ನು ಟಿ.ವಿ. ಮಹಾಲಿಂಗಂ, ಎ.ವಿ. ವೆಂಕಟರತ್ನಂ, ಜಿ.ಎಸ್. ದೀಕ್ಷಿತ್, ಜಿ.ಆರ್. ಗೋಪಾಲ್ ಮತ್ತು ಪಿ.ಬಿ. ದೇಸಾಯಿ ಅಂತಹ ವಿದ್ವಾಂಸರು ಗುರುತಿಸಿದ್ದಾರೆ. ಆ ಕಾಲದ ಕೃಷಿ ವ್ಯವಸ್ಥೆಯನ್ನು ಕೆ.ಎಸ್. ಶಿವಣ್ಣ ಸಮಗ್ರವಾಗಿ

ಪರಿಶೀಲಿಸಿದ್ದಾರೆ; ನೀರಾವರಿ ವ್ಯವಸ್ಥೆಯನ್ನು ಸಿ.ಟಿ.ಎಂ. ಕೊಟ್ರಯ್ಯನವರ ಕೃತಿಯು ವಿಚಾರ ಮಾಡಿದೆ. ರೆವರೆಂಡ್ ಫಾದರ್ ಎಚ್. ಹೆರಾಸ್ ಅವರು ಅರವೀಡು ವಂಶದ ಕಾಲದ ಇತಿಹಾಸವನ್ನು ಅಧ್ಯಯನ ಮಾಡಿ ಪ್ರಕಟಿಸಿದರು. ವಿಜಯನಗರವನ್ನು ಕುರಿತ ಹಲವು ಅಂಶಗಳ ಮೇಲೆ ರಚಿತವಾಗಿ ಇನ್ನೂ ಪ್ರಕಟಗೊಂಡಿಲ್ಲದ ಹಲವು ನಿಬಂಧಗಳು ಕರ್ನಾಟಕದ ವಿಶ್ವವಿದ್ಯಾಲಯ ಗ್ರಂಥಾಲಯಗಳಲ್ಲಿ ಉಪಲಬ್ಧವಿವೆ.

ವಿದೇಶೀಯ ವಿದ್ವಾಂಸರ ಪೈಕಿ ಜಪಾನಿನ ನೊಬುರು ಕರಾಶಿಮ ಹಾಗೂ ಅಮೆರಿಕದ ಬರ್ಟನ್ ಸ್ಟೀನ್ ಅವರನ್ನು ವಿಶೇಷವಾಗಿ ಉಲ್ಲೇಖಿಸಬೇಕು. ಕರಾಶಿಮ ಕಂಪ್ಯೂಟರನ್ನು ಉಪಯೋಗಿಸಿ, ತಮಿಳುನಾಡು ಮತ್ತು ಕರ್ನಾಟಕಗಳಲ್ಲಿ ದೊರಕುವ ವಿಜಯನಗರ ಶಾಸನಗಳಲ್ಲಿನ ತೆರಿಗೆಗೆ ಸಂಬಂಧಿಸಿದ ಪದಗಳನ್ನು ವಿಶ್ಲೇಷಣೆ ಮಾಡಿದ್ದಾನೆ. ಆತನಿಗೆ ವೈ. ಸುಬ್ಬರಾಯಲು ಮತ್ತು ಪಿ. ಷಣ್ಮುಖಂ ಎಂಬ ತಮಿಳುನಾಡಿನ ಇಬ್ಬರು ವಿದ್ವಾಂಸರು ನೆರವು ನೀಡಿದರು. ವಿಜಯನಗರ ಸಾಮ್ರಾಜ್ಯದಲ್ಲಿ 'ನಾಯಕರನ್ನು' ಕುರಿತೂ ಕರಾಶಿಮ ಅಧ್ಯಯನ ಮಾಡಿದ್ದಾನೆ. ಆ ಕಾಲದ ಸಾಮಾಜಿಕ ಆರ್ಥಿಕ ಪರಿಸ್ಥಿತಿಗಳನ್ನು ಅರ್ಥಮಾಡಿಕೊಳ್ಳಲು ಕರಾಶಿಮನ ಕೃತಿಗಳು ಬಹುಮುಖ್ಯವಾಗುತ್ತವೆ. ತೆರಿಗೆಗೆ ಸಂಬಂಧಿಸಿದ ಪದಗಳ ಅಧ್ಯಯನವು, ೧೬ನೆಯ ಶತಮಾನದ ಪ್ರಾರಂಭದಲ್ಲಿ ವಿಜಯನಗರದ ತೆರಿಗೆ ನೀತಿಯಲ್ಲಿ ಆದ ಒಂದು ಬದಲಾವಣೆಯನ್ನು ಸ್ಪಷ್ಟವಾಗಿ ಸೂಚಿಸುತ್ತವೆ. ತುಳುವ ವಂಶದ ರಾಜರು ರಾಜ್ಯದ ಆಡಳಿತವನ್ನು ಪುನರ್ ವಿನ್ಯಾಸಗೊಳಿಸಿದುದನ್ನೂ ಅದು ಒಳಗೊಂಡಿತ್ತು. ಉತ್ತರ ಮತ್ತು ದಕ್ಷಿಣ ಆರ್ಕಾಟ್ ಜಿಲ್ಲೆಗಳಲ್ಲಿ ಹದಿನಾಲ್ಕನೆಯ ಶತಮಾನದಿಂದ ಮುಂದಕ್ಕೆ ಕೈಗಾರಿಕೆ ಮತ್ತು ವಾಣಿಜ್ಯ ವಿಕಾಸಗೊಂಡುದನ್ನು ಅವು ಸೂಚಿಸುತ್ತವೆ. ಇದು ವಿಜಯನಗರದ ಅರಸರನ್ನು ಕರ್ನಾಟಕದಿಂದ ತಮಿಳುನಾಡಿಗೆ ಆಕರ್ಷಿಸಿದಂತೆ ತೋರುತ್ತದೆ. ಕರಾಶಿಮ ಆಡಂಬರವಿಲ್ಲದೆ ಸರಳವಾಗಿ ಬರೆಯುತ್ತಾರೆ. ಅನೇಕ ವ್ಯಾಖ್ಯಾನಗಳಲ್ಲಿ ಅವರು ಬರ್ಟನ್ ಸ್ಟೀನನ ನಿಲುವನ್ನು ಒಪ್ಪುವುದಿಲ್ಲ. ಉದಾಹರಣೆಗೆ ಬರ್ಟನ್ ಸ್ಟೀನನಂತಲ್ಲದೆ ಅವರು, ವಿಜಯನಗರದ ಕೇಂದ್ರಾಡಳಿತವು 'ಧಾರ್ಮಿಕ'ವಾಗಿರಲಿಲ್ಲ, 'ಸಂಪ್ರದಾಯ ಪಾಲನೆ'ಯದಾಗಿರಲಿಲ್ಲ. ನಿಜವಾದ ಅಧಿಕಾರ ಅಲ್ಲಿರಲಿಲ್ಲ ಎಂದು ನಂಬುತ್ತಾರೆ. ಅಮರನಾಯಕರು ಮತ್ತು ಇತರ ವಿಕೇಂದ್ರೀಕೃತ ಅಂಗಗಳಿದ್ದರೂ ಕೇಂದ್ರ ಪ್ರಭುತ್ವವು ಅಧೀನ ಘಟಕಗಳ ಮೇಲೆ ಸ್ವಲ್ಪಮಟ್ಟಿಗೆ ನಿಜವಾದ ಹತೋಟಿಯನ್ನು ಹೊಂದಿದ್ದಿತು. ಸ್ಟೀನರಂತಲ್ಲದೆ ಕರಾಶಿಮ ಅವರು, ನ್ಯೂನಿಜ್, ಪೇಸ್, ಬಾರ್ಬೋಸಾ ಮತ್ತು ಇತರರ ನಿರೂಪಣೆಗಳನ್ನು ಮುಖ್ಯವಾದ ಆಧಾರವೆಂದು ಭಾವಿಸುತ್ತಾರೆ. ಅವುಗಳ ಜೊತೆಗೆ ಇನ್ನೂ ಹೆಚ್ಚು ಅಧಿಕೃತವಾದ ಶಾಸನ ಮೂಲಗಳನ್ನು ಸೇರಿಸುತ್ತಾರೆ.

ಬರ್ಟನ್ ಸ್ಟೀನ್ ಯೂರೋಕೇಂದ್ರಿತ (Eurocentric) ಪಕ್ಷಪಾತದಿಂದ ಬಳಲುವಂತೆ ತೋರುತ್ತದೆ. ''ಯೂರೋಪಿಯನ್ನರು (ಮುಗಲರೊಂದಿಗೆ)ಮಧ್ಯಕಾಲೀನ ದಕ್ಷಿಣಭಾರತದ ಹಿಂದಿನ ಆಡಳಿತವು ತಡೆದುಕೊಳ್ಳಲು ಸಾಧ್ಯವೇ ಆಗದಂತಹ ಮಿಲಿಟರಿ ಮತ್ತು ವಾಣಿಜ್ಯ ಮಹತ್ವವುಳ್ಳ ಪರಿವರ್ತಕ ಶಕ್ತಿಗಳನ್ನು ಉತ್ಪತ್ತಿ ಮಾಡಿದರು'', ''(ವಿಜಯನಗರದ) ಸೈನೀಕರಣವು ಹದಿನಾರನೆಯ ಶತಮಾನದಲ್ಲಿ ಯೂರೋಪಿಯನ್ನರೊಂದಿಗೆ ಖಂಡಿತವಾಗಿ ಬರುವುದಿತ್ತು, ಆಗ ತೋಫುಗಳು, ಕೂಲಿ ಸಿಪಾಯಿಗಳು ಮತ್ತು ಯುದ್ಧದ ಕುದುರೆಗಳು ಮೊದಲಾದವುಗಳ ರೂಪದಲ್ಲಿ ಬಂದಹಾಗೆ''ಇಂತಹ ಹೇಳಿಕೆಗಳಿಂದ ಅವರ ಪಕ್ಷಪಾತವು ವ್ಯಕ್ತವಾಗುತ್ತದೆ. ಆದರೆ ವಾಸ್ತವ ಸಂಗತಿ ಏನೆಂದರೆ, ಈ ಕಾಲದಲ್ಲಿ ಭಾರತದ ರಂಗಸ್ಥಳದ ಮೇಲೆ ಯೂರೋಪಿಯನರು ಇನ್ನೂ ಹೊರ ಅಂಚಿನಲ್ಲೇ ನಿಂತು ಅಭಿನಯಿಸುವ ಪಾತ್ರಧಾರಿಗಳಾಗಿದ್ದರು. ವಿಜಯನಗರದಲ್ಲಾದ ಬದಲಾವಣೆಗಳ ಮೇಲೆ ಅವರ ಪ್ರಭಾವವಿರಲಿಲ್ಲ. ಪೋರ್ಚುಗೀಸರು ಶಸ್ತ್ರಾಸ್ತ್ರಗಳನ್ನೂ ಕುದುರೆಗಳನ್ನೂ ಒದಗಿಸುತ್ತಿದ್ದರೂ ಅದು ಯೂರೋಪಿಯನ್ ಪ್ರಭಾವ ಎನ್ನುವಂತಿರಲಿಲ್ಲ. ಹಿಂದೆ ಅದೇ ಕೆಲಸ ಮಾಡುತ್ತಿದ್ದ ಅರಬ್ಬರ ಬದಲಿಗೆ ಈಗ ಅವರು ಒದಗಿಸುತ್ತಿದ್ದರು ಅಷ್ಟೆ. ಗಮನಿಸಬೇಕಾದ ಇನ್ನೂ

ಒಂದು ಅಂಶವಿದೆ. ಬರ್ಟನ್ ಸ್ಟೀನ್ ಕಥನಾತ್ಮಕ ಇತಿಹಾಸ ರಚನೆಯಿಂದ ತೃಪ್ತರಾಗುವಂತೆ ತೋರುವುದಿಲ್ಲ. ಹಾಗಾಗಿ ವಿಜಯನಗರ ಕೃತಿಯಲ್ಲಿ ಓದುಗನಿಗೆ ವಿಜಯನಗರ ಇತಿಹಾಸದ ಮೂಲ ರೂಪರೇಖೆಗಳಷ್ಟೇ ಕಾಣುತ್ತದೆ. ರಾಜ್ಯದ ಇತಿಹಾಸಕ್ಕೆ ಯಾವುದೇ ಹೊಸ ಒಳನೋಟವನ್ನು ಬೀರುವುದಿಲ್ಲ. ಇದಕ್ಕೆ ಅಪವಾದ ಬಹುಶಃ ನಾಯಕರು ವಹಿಸಿದ ಪಾತ್ರವನ್ನು ಕುರಿತ ಚರ್ಚೆ. ಪಠ್ಯದ ೧೪೬ ಪುಟಗಳಲ್ಲಿ ವಿಜಯನಗರ ಪಟ್ಟಣದ ವಿನ್ಯಾಸದ ಮಹತ್ವವನ್ನು ಕುರಿತ ವಿಸ್ತಾರವೂ, ತುಸು ಅಸ್ಪಷ್ಟವೂ ಆದ ಚರ್ಚೆಯಿದೆ.

ಈಚೆಗೆ ಕರ್ನಾಟಕ ಸರಕಾರದ ಪುರಾತತ್ತ್ವ ಹಾಗೂ ವಸ್ತುಸಂಗ್ರಹಾಲಯಗಳ ಇಲಾಖೆಯು ಎಂ.ಎಸ್.ನಾಗರಾಜರಾವ್, ಅ. ಸುಂದರ ಮತ್ತು ಡಿ.ವಿ.ದೇವರಾಜ್ (ಇಲಾಖೆಯ ಹಿಂದಿನ ನಿರ್ದೇಶಕರು) ಇವರ ನೇತೃತ್ವದಲ್ಲಿ ಹಂಪಿಯಲ್ಲಿ ಉತ್ಖನನಗಳನ್ನು ನಡೆಸಿತು. ಅದರಲ್ಲಿ ಜಾರ್ಜ್ ಮಿಚೆಲ್, ಜಾನ್ ಎಂ. ಫ್ರಿಚ್ ಮತ್ತು ಕಾರ್ಲಾ ಸಿನೋಪೋಲಿ ಮೊದಲಾದ ವಿದೇಶಿ ವಿದ್ವಾಂಸರೂ ಭಾಗವಹಿಸಿದ್ದರು. ಉತ್ಖನನದ ಫಲಿತಗಳನ್ನು ಮೂರು ವರದಿಗಳಾಗಿ ಇಲಾಖೆಯು ಪ್ರಕಟಿಸಿದೆ. ವಿಜಯನಗರ ಪಟ್ಟಣದ ಮುಖ್ಯ ಭಾಗವನ್ನು ಸಮಗ್ರ ಸಂಶೋಧನೆಗೆ ಒಳಪಡಿಸಿದ ನಂತರ ಇವು ವಾಸ್ತುಶಿಲ್ಪ ಮತ್ತು ಸಾಂಸ್ಕೃತಿಕ ಅವಶೇಷಗಳನ್ನು ವಿದ್ವತ್ಪೂರ್ಣವಾದ ರೀತಿಯಲ್ಲಿ ದಾಖಲಿಸಿವೆ. ಅವುಗಳಲ್ಲಿ ಅಹಮದ್‌ಖಾನ್ ಧರ್ಮಶಾಲಾ ಮತ್ತು ನೋಬಲ್‌ಮನ್ಸ್ ಪ್ಯಾಲೇಸ್‌ಗಳನ್ನು ಉಲ್ಲೇಖಿಸಬಹುದು. ಜಾರ್ಜ್ ಮಿಚೆಲ್, ವಿಜಯನಗರದ ಕಲೆ ಮತ್ತು ವಾಸ್ತುಶಿಲ್ಪಗಳನ್ನು ಕುರಿತು ಕೇಂಬ್ರಿಜ್ ಹಿಸ್ಟಾರಿಕಲ್ ಸೀರೀಸ್‌ನಲ್ಲಿ ಒಂದು ಕೃತಿಯನ್ನು ಪ್ರಕಟಿಸಿದ್ದಾರೆ. ವಿಜಯನಗರದ ಶಾಸನಗಳಿಗೆ ಸಂಬಂಧಿಸಿದಂತೆ ಬಿ.ಆರ್. ಗೋಪಾಲ್ ಅವರ ನಾಲ್ಕು ಸಂಪುಟಗಳನ್ನು ಇಲಾಖೆಯು ಪ್ರಕಟಿಸಿದೆ. ಇವೆಲ್ಲ ವಿದೇಶೀಯ ವಿದ್ವಾಂಸರು ತೋರಿಸಿದ ಆಸಕ್ತಿಯನ್ನೂ ವಿಜಯನಗರ ಅಧ್ಯಯನಕ್ಕೆ ಮಧ್ಯಕಾಲೀನ ಪುರಾತತ್ವಶಾಸ್ತ್ರದ ಅನ್ವಯವನ್ನೂ ಸೂಚಿಸುತ್ತವೆ. ಇಲ್ಲಿನ ಸ್ಮಾರಕಗಳನ್ನು ಜಾಗತಿಕ ಪರಂಪರೆಯ ಸ್ಮಾರಕಗಳೆಂದು ಘೋಷಿಸಲಾಗಿದೆ. ಸಿ.ಎಸ್.ಪಾಟೀಲರು ಹಂಪಿಯಲ್ಲಿ ಈಚೆಗೆ ದೊರೆತ ಶಾಸನಗಳನ್ನು ವಿಶ್ಲೇಷಣೆ ಮಾಡಿ ತಮ್ಮ ವಿಚಾರಗಳನ್ನು ವರದಿಗಳಲ್ಲಿ ಪ್ರಕಟಿಸಿದ್ದಾರೆ. ಮುಹಮದ್-ಬಿನ್-ತುಗಲಖನ ಸೈನ್ಯಗಳೊಂದಿಗೆ ಕಾದಿದ ಕಂಪಿಲರಾಯನು ಕುಮ್ಮಟದಿಂದ ಆಳುತ್ತಿದ್ದನೇ ಹೊರತು ಕಂಪಿಲಿಯಿಂದಲ್ಲ ಎಂದು ಅವರು ತೋರಿಸಿಕೊಟ್ಟಿದ್ದಾರೆ. ಕೃಷ್ಣದೇವರಾಯನ ಪಟ್ಟಾಭಿಷೇಕದ ಕಾಲವನ್ನು ನೂತನ ಸಂಶೋಧನೆಗಳ ಬೆಳಕಿನಲ್ಲಿ ಪರಿಷ್ಕರಿಸಿದ್ದಾರೆ. ತಲಕಾಡಿನಲ್ಲಿ ಈಚೆಗೆ ಡಿ.ವಿ. ದೇವರಾಜ್ ಮತ್ತು ಎ.ವಿ. ನರಸಿಂಹಮೂರ್ತಿ ಇವರ ನಿರ್ದೇಶನದಲ್ಲಿ ನಡೆಸಿದ ಉತ್ಖನನಗಳಿಂದ ವಿಜಯನಗರ ಕಾಲದ ಸುತ್ತುಬಾವಿಗಳೂ (ringed-wells) ಬೇಕಾದಷ್ಟು ನಾಣ್ಯಗಳೂ ಕಂಡುಬಂದಿವೆ. ಹೀಗೆ ೧೯೪೭ರಿಂದ ಕರ್ನಾಟಕದಲ್ಲಿ ವಿಜಯನಗರ ಇತಿಹಾಸ ಲೇಖನದ ಪ್ರಮಾಣ ಅಧಿಕವಾಗುತ್ತಿರುವುದು ಮಾತ್ರವಲ್ಲ, ವಿಷಯದಲ್ಲೂ ವ್ಯಾಖ್ಯಾನದಲ್ಲೂ ವೈವಿಧ್ಯತೆಯ ಚಿತ್ರವನ್ನು ಒದಗಿಸಿದೆ.

ಕರ್ನಾಟಕದ ಪ್ರದೇಶಕ್ಕೆ ಸಂಬಂಧಪಟ್ಟಂತೆ, ವಿಜಯನಗರೋತ್ತರ ಕಾಲದ (೧೬೦೦-೧೭೬೧) ಇತಿಹಾಸ ಲೇಖನವು, ಈ ಸಂಪುಟದಲ್ಲಿ ಒಳಗೊಂಡಿರುವ ಹಾಗೆ, ಸಮೃದ್ಧವೂ ವೈವಿಧ್ಯಪೂರ್ಣವೂ ಆಗಿರದಿದ್ದರೂ ಗಣನೀಯವಾದ ವೇಗದಲ್ಲಿ ಬೆಳೆಯುತ್ತಿದೆ. ವಿದ್ವಾಂಸರನ್ನು ಆಕರ್ಷಿಸುತ್ತಿದೆ. ತುಲನಾತ್ಮಕವಾದ ಉತ್ಸಾಹ ಶೂನ್ಯತೆಗೆ ಕಾರಣ ನಾಯಕರು ಮತ್ತು ಪಾಳೆಯಗಾರರು ಪ್ರಧಾನ್ಯ ಪಡೆದಿದ್ದ ತುಘಲಕು ರಾಜಕೀಯದ ಕಾಲಾವಧಿ ಎಂದು ತೋರುತ್ತದೆ. ಅದು ವಿಜಯನಗರಕ್ಕೆ ಹೋಲಿಸಿದರೆ ಅದರಷ್ಟು ಕೋರೈಸುವಂತಿಲ್ಲ. ಅದ್ಭೂರಿಯದಾಗಿಲ್ಲ. ಜೊತೆಗೆ, ಸ್ಥಳೀಯ ಹಂತದಲ್ಲಿ ಮೂಲಸಾಮಗ್ರಿಯನ್ನು ಹುಡುಕಿಕೊಳ್ಳಬೇಕು, ಅದು ವಿಶ್ವವಿದ್ಯಾನಿಲಯಗಳ ಅನೇಕ ಸಂಶೋಧಕ ವಿದ್ವಾಂಸರಿಗೆ ಸಾಧ್ಯವಾಗದ ಕೆಲಸ. ಆದರೂ ಇಲ್ಲೂ ಸಂಶೋಧನೆ ಮುಂದುವರೆದಿದೆ. ಒಡೆಯರ ಕಾಲಕ್ಕೆ ಸಂಬಂಧಪಟ್ಟಂತೆ (೧೬೦೦-೧೭೬೧)

ಮಾರ್ಕ್ಸ್ ವಿಲ್ಕ್ಸನ 'ಹಿಸ್ಟರಿ ಆಫ್ ಮೈಸೂರ್' (ಎರಡು ಸಂಪುಟಗಳು), ಸಿ. ಹಯವದನರಾವ್ ಅವರ 'ಹಿಸ್ಟರಿ ಆಫ್ ಮೈಸೂರ್' (ಮೂರು ಸಂಪುಟಗಳು) ತಮ್ಮಲ್ಲಿರುವ ಅಪಾರ ಮಾಹಿತಿ ಸಂಗ್ರಹಗಳಿಂದಾಗಿ ಇನ್ನೂ ಮುಖ್ಯವಾದ ಸ್ಥಾನವನ್ನು ಪಡೆದಿವೆ. ವಿಲ್ಕ್ಸನ ಕೃತಿ 'ವಸಾಹತು' ಪಕ್ಷಪಾತದಿಂದ ಬಳಲುತ್ತದೆ, ಹಯವದನರಾಯರ ಕೃತಿ ಸಾಮಾನ್ಯವಾಗಿ ವಸ್ತುನಿಷ್ಠವಾಗಿರುವಂತೆ ತೋರಿ ಅನೇಕ ವಿಚಾರಗಳಲ್ಲಿ ವಿಲ್ಕ್ಸನನ್ನು ಟೀಕಿಸುವಂತೆ ತೋರಿದರೂ 'ಆಸ್ಥಾನ ಇತಿಹಾಸಕಾರ'ನ ಪಕ್ಷಪಾತದಿಂದ ಸಂಪೂರ್ಣವಾಗಿ ಮುಕ್ತವಾದಂತೆ ತೋರುವುದಿಲ್ಲ. ಈಚೆಗೆ ಸತ್ಯನಾರಾಯಣ ಅವರು ಅರ್ಲಿ ಹಿಸ್ಟರಿ ಆಫ್ ದಿ ವೊಡೆಯರ್ಸ್ ಆಫ್ ಮೈಸೂರು ಎಂಬ ಕೃತಿಯನ್ನು ಪ್ರಕಟಿಸಿದ್ದಾರೆ. ಅದರಲ್ಲಿ ರಾಜಕೀಯ ಬೆಳವಣಿಗೆಗಳ ಜೊತೆಗೆ ಸಾಮಾಜಿಕ- ಆರ್ಥಿಕ ಹಾಗೂ ಸಾಂಸ್ಕೃತಿಕ ಅಂಶಗಳನ್ನೂ ಒಳಪಡಿಸಲು ಲೇಖಕರು ಪ್ರಯತ್ನಿಸಿದ್ದಾರೆ. ಕಳಲೆ ಮನೆತನದ ವೀರಶೈವ ದಳವಾಯಿಗಳು ಎನ್ನುವುದು ಕೆ.ಎಸ್.ಶಿವಣ್ಣ ಸಂಪಾದಿಸಿದ ಸೆಮಿನಾರ್ ಪ್ರಬಂಧಗಳ ಒಂದು ಸಂಕಲನ. ದಳವಾಯಿ ಕಾಲದ (೧೭೦೪-೧೭೬೧) ಒಂದು ಸಮಗ್ರ ಚಿತ್ರವನ್ನು ಅದು ಒದಗಿಸುತ್ತದೆ. ಈಚೆಗೆ ಒಡೆಯರನ್ನು ಕುರಿತು ಮತ್ತು ಸಣ್ಣಪುಟ್ಟ ರಾಜವಂಶಗಳನ್ನು ಕುರಿತು ಇಂಗ್ಲಿಷಿನಲ್ಲೂ ಕನ್ನಡದಲ್ಲೂ ಅನೇಕ ಪಿಎಚ್.ಡಿ. ಪ್ರಬಂಧಗಳು ತಯಾರಾಗಿವೆ. ಪಾಳೆಯಗಾರರು ಮತ್ತು ೧೬ನೇ ಶತಮಾನದ ರಾಜಕೀಯದಲ್ಲಿ ಅವರ ಪಾತ್ರ ಕುರಿತು ಮೊದಮೊದಲು ಅಧ್ಯಯನ ಮಾಡಿದವರು ಎಂ. ಎಸ್. ಪುಟ್ಟಣ್ಣ ಹಾಗೂ ಹುಲ್ಲೂರು ಶ್ರೀನಿವಾಸ ಜೋಯಿಸರು. ಈ ಪರಂಪರೆಯನ್ನು ಎಂ. ವಿ. ಶ್ರೀನಿವಾಸ್, ಲಕ್ಷ್ಮಣ್ ತೆಲಗಾವಿ, ಹೆಚ್. ಶ್ರೀಶೈಲಾರಾಧ್ಯ ಮತ್ತು ಬಿ. ರಾಜಶೇಖರಪ್ಪ ಮುಂದುವರಿಸಿದ್ದಾರೆ. ಇನ್ನೂ ಅನೇಕರು ಈ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದಾರೆ. ಸ್ವಾಮಿನಾಥನ್ ಮತ್ತು ಚಿಟ್ನಿಸ್ ಕೆಳದಿಯ ನಾಯಕರನ್ನು ಕುರಿತು ಬರೆದಿದ್ದಾರೆ. ಈಚೆಗೆ ಈ ವಿಷಯವನ್ನು ಕುರಿತ ವಿಚಾರ ಸಂಕಿರಣದ ಪ್ರಬಂಧಗಳನ್ನು ಸಂಬಂಧಿತ ಶಾಸನಗಳೊಂದಿಗೆ ಕನ್ನಡದಲ್ಲಿ ಗ್ರಂಥರೂಪದಲ್ಲಿ ವೆಂಕಟೇಶ ಜೋಯಿಸ್ ಪ್ರಕಟಿಸಿದ್ದಾರೆ. ಅ. ಸುಂದರ ಮತ್ತು ಡಿ.ವಿ. ದೇವರಾಜ್ ಶಿವಮೊಗ್ಗದಲ್ಲಿ ಶಿವಪ್ಪನಾಯಕನ ಅರಮನೆಯನ್ನು ಕಂಡುಹಿಡಿದದ್ದು ಮತ್ತು ಸುರಕ್ಷಿತವಾಗಿ ಉಳಿಸಿದ್ದು ಪುರಾತತ್ವದ ಈಚಿನ ಬೆಳವಣಿಗೆಯಾಗಿದೆ. ಸಾ.ಶಿ. ಮರುಳಯ್ಯನವರು ಕೆಳದಿಯ ನಾಯಕರ ಸಾಹಿತ್ಯಕ ಕೊಡುಗೆಯನ್ನು ಪರಿಶೀಲಿಸಿದ್ದಾರೆ. ಈ ಕ್ಷೇತ್ರವು ಈಚೆಗೆ ಅನೇಕ ವಿದ್ವಾಂಸರನ್ನು ಆಕರ್ಷಿಸಿದೆ. ಜೊತೆಗೆ ಹಲವಾರು ಲೇಖನಗಳ ಸಂಗ್ರಹಗಳ ಮೂಲಕ ಇರುವ ಆಧಾರ ಸಾಮಗ್ರಿಗೆ ನೂತನ ವ್ಯಾಖ್ಯಾನ ನೀಡುವ ಪ್ರಯತ್ನವೂ ನಡೆದಿದೆ.

ಮೇಲೆ ಕೊಟ್ಟಿರುವುದು ಪ್ರಸ್ತುತ ಕಾಲಾವಧಿಯ ಇತಿಹಾಸ ಲೇಖನವನ್ನು ಕುರಿತ ವಿಸ್ತಾರವಾದ ಪ್ರಬಂಧವಲ್ಲ, ಅಥವಾ ಪ್ರಸ್ತಾಪಿಸಿದ ಕೃತಿಗಳ ಸಮಗ್ರ ಮೌಲ್ಯಮಾಪನವೂ ಅಲ್ಲ; ಆ ಕಾಲವನ್ನು ಕುರಿತ ಇತಿಹಾಸ ಲೇಖನದ ಸ್ಥೂಲ ಒಲವುಗಳನ್ನು ಸೂಚಿಸುವ ಪ್ರಯತ್ನ ಮಾತ್ರ. ಪ್ರಸ್ತುತ ಸಂಪುಟದ ಸಂಪಾದಕರೂ ಲೇಖಕರೂ ಅಸಂಖ್ಯಾತ ವಿದ್ವಜ್ಜನರಿಗೆ ಆಭಾರಿಯಾಗಿದ್ದಾರೆ. ಅವರು ನಡೆಸಿದ ಸಂಶೋಧನೆಗಳಿಂದಾಗಿ ಈ ಮಟ್ಟದ ಸಂಪುಟವನ್ನು ಸಿದ್ಧಪಡಿಸಲು ಸಾಧ್ಯವಾಗಿದೆ. ಈಗ ಕಾಲದ ಮಹತ್ವಕ್ಕೆ ಸಂಬಂಧಪಟ್ಟಂತೆ, ಪ್ರಸ್ತುತ ಸಂಪುಟವು ಒಳಗೊಳ್ಳುವ ವಿಷಯಗಳನ್ನು ಕುರಿತು ಒಂದೆರಡು ಮಾತುಗಳನ್ನು ಹೇಳಬಹುದು.

ವಿಜಯನಗರ ರಾಜ್ಯವು ಏಕಕಾಲದಲ್ಲಿ ಸಾಮಂತ, ಒಕ್ಕೂಟ ಹಾಗೂ ವಿಕೇಂದ್ರೀಕೃತ ಅಂಶಗಳನ್ನು ಒಳಗೊಂಡಿದ್ದಿತು. ಅನೇಕ ಯೂರೋಪಿಯನ್ ಪ್ರವಾಸಿಗರು, ವಿಶೇಷವಾಗಿ ನ್ಯೂನಿಜ್ ಮತ್ತು ಪೇಸ್ ಪ್ರಸ್ತುತ ಕಾಲದಲ್ಲಿ ಕರ್ನಾಟಕದಲ್ಲಿ ಪ್ರಚುರವಾಗಿದ್ದ, ಊಳಿಗಮಾನ್ಯಪದ್ಧತಿ ಎಂದು ತಾವು ಭಾವಿಸಿದ ವ್ಯವಸ್ಥೆಯನ್ನು ವರ್ಣಿಸಿದ್ದಾರೆ. ದೊಡ್ಡ, ಚಿಕ್ಕ ರಾಜ್ಯ ಭಾಗಗಳನ್ನು ಅನೇಕ ಸಂದರ್ಭಗಳಲ್ಲಿ ಒಂದೇ ಒಂದು ಹಳ್ಳಿಯನ್ನು ಗಣ್ಯಜನರಿಗೆ ವಹಿಸಲಾಗುತ್ತಿತ್ತು. ಅಗತ್ಯ ಬಂದಾಗ ನಿರ್ದಿಷ್ಟಪಡಿಸಿರುವ ಸಂಖ್ಯೆಯ ಸೇನೆಯನ್ನು ಅವರು ಒದಗಿಸತಕ್ಕದ್ದು ಎಂಬುದೊಂದೇ ಷರತ್ತು. ಈ ಭೂಹಿಡುವಳಿಗಳನ್ನು ಅಮರಂ ಎಂದು ಕರೆಯುತ್ತಿದ್ದರು.

ಅದನ್ನು ಪಡೆದಿದ್ದವರನ್ನು ಅಮರನಾಯಕರೆಂದು ಕರೆಯಲಾಗುತ್ತಿತ್ತು. ಒಂದು ರೀತಿಯಲ್ಲಿ ಇವರು ವಿಜಯನಗರ ರಾಜ್ಯಾಡಳಿತದ ಆಧಾರಸ್ತಂಭಗಳಾಗಿ ವರ್ತಿಸುತ್ತಿದ್ದರು. ಕೆಳದಿಯ ನಾಯಕರು, ಚಿತ್ರದುರ್ಗ, ಹಾಗಲವಾಡಿ, ತರೀಕೆರೆ,ಯಲಹಂಕ, ಮಾಗಡಿ ಮತ್ತಿತರ ಅನೇಕ ರಾಜರು ಮೊದಲು ವಿಜಯನಗರ ಸಾಮ್ರಾಜ್ಯದ ಅಮರನಾಯಕರಾಗಿದ್ದರು ಎನ್ನುವುದು ಸ್ವಾರಸ್ಯವಾದ ವಿಚಾರವಾಗಿದೆ. ಈ ವ್ಯವಸ್ಥೆಯು ಎರಡು ವಿಚಾರಗಳನ್ನು ಸೂಚಿಸಬಹುದು. ಒಂದು, ರಾಜಕೀಯ ರಚನೆಯಲ್ಲಿ ದೌರ್ಬಲ್ಯ; ಎರಡನೆಯದು ತನ್ನ ಬಳಿ ಇದ್ದ ಅಲ್ಪ ಸಂಖ್ಯೆಯ ಸೈನ್ಯದಿಂದ ಯಾವುದೇ ಒಳ ಅಥವಾ ಹೊರ ಆಪತ್ತುಗಳನ್ನು ಎದುರಿಸಲು ಚಕ್ರವರ್ತಿಗಿದ್ದ ಅಸಾಮರ್ಥ್ಯ. ಅಂತಹ ಸಂದರ್ಭಗಳಲ್ಲಿ ತಾನು ಅಥವಾ ತನ್ನ ಹಿಂದಿನವರು ನೇಮಿಸಿದ ಅಮರನಾಯಕರ ನೆರವನ್ನು ಅವನು ಪಡೆಯಬೇಕಾಗಿತ್ತು. ಎಲ್ಲಿಯವರೆಗೆ ಅವರನ್ನು ತನ್ನ ಅಂಕೆಯಲ್ಲಿ ಇಟ್ಟುಕೊಂಡಿರಲು ಶಕ್ತನಾಗಿದ್ದನೋ ಅಲ್ಲಿಯವರೆಗೆ ಅವರ ಬೆಂಬಲ ದೊರಕುತ್ತಿತ್ತು. ಅವರಲ್ಲಿ ಪ್ರತಿಯೊಬ್ಬನೂ ತನ್ನ ಸ್ವಾತಂತ್ರ್ಯವನ್ನು ಘೋಷಿಸಿಕೊಳ್ಳಲು, ಚಕ್ರವರ್ತಿಯ ವಿರುದ್ಧ ದಂಗೆಯೇಳಲು ಅವಕಾಶಕ್ಕಾಗಿ ಕಾದಿರುತ್ತಿದ್ದನು. ತಾಳಿಕೋಟೆ ನಂತರದ ಕಾಲದಲ್ಲಿ (೧೫೬೫-೧೭೬೭) ಆದದ್ದು ಹೀಗೆಯೇ. ಅದು ರಾಜಕೀಯ ಕುದಿತಕ್ಕೆ ಎಡೆ ಮಾಡಿತು. ಈ ವ್ಯವಸ್ಥೆಯ ಫಲವಾಗಿ, ಕೋಟೆಗಳ ನಿರ್ಮಾಣ, ಸಮರ್ಥವಾದ ಸೈನ್ಯದ ಪೋಷಣೆ,ಹೆಚ್ಚು ಕಂದಾಯವನ್ನು ತರುವ ಸಲುವಾಗಿ ಹೆಚ್ಚು ನೀರಾವರಿ ಕಾರ್ಯಗಳನ್ನು ಕೈಗೆತ್ತಿಕೊಳ್ಳುವಿಕೆ ಇವುಗಳಿಗೊಂದು ಭಾರೀ ಮೊತ್ತದ ಹಣವನ್ನು ವೆಚ್ಚಮಾಡಬೇಕಾಯಿತು. ಈ ಪ್ರದೇಶದ ಬಹುತೇಕ ಕೋಟೆಗಳು ಮತ್ತು ಕೆರೆಗಳು ನಿರ್ಮಾಣವಾದದ್ದು ಈ ಕಾಲದಲ್ಲಿಯೇ.

ರಾಜ್ಯದ ಅಗತ್ಯಗಳಿಗೆ ಅನುಗುಣವಾಗಿ ತೆರಿಗೆಗಳನ್ನು ರೂಪಿಸಲಾಗಿತ್ತು. ತೆರಿಗೆಗಳು ಅಸಂಖ್ಯಾತವಾಗಿದ್ದುವು ಮತ್ತು ದಮನಕಾರೀ ಲಕ್ಷಣವನ್ನು ಹೊಂದಿದ್ದುವು. ಭೂಕಂದಾಯದ ಜೊತೆಗೆ, ಮನೆ, ದನಕರು, ದನಗಳ ದೊಡ್ಡಿ, ಹುಲ್ಲುಗಾವಲು, ಉಪ್ಪಿನಗದ್ದೆ, ಕೈಮಗ್ಗ, ಅಂಗಡಿಗಳು ಇವುಗಳ ಮೇಲೆ ತೆರಿಗೆಯಿರುತ್ತಿತ್ತು. ಅಲ್ಲದೆ ಗ್ರಾಮದ ಆನುವಂಶಿಕ ಅಧಿಕಾರಿಗಳನ್ನು ನೋಡಿಕೊಳ್ಳಲು, ರಾಜಮಾತೆ, ಪಾರಸುದಾರ ಮೊದಲಾದ ರಾಜಮನೆತನದ ಸದಸ್ಯರು, ರಾಜ್ಯದ ಸಚಿವರು, ಸೇನಾದಂಡನಾಯಕರು, ಅರಮನೆಯ ಕಾವಲುಗಾರರು ಇವರೆಲ್ಲರಿಗೂ ವೇತನ ನೀಡಲು ತೆರಿಗೆಗಳನ್ನು ವಿಧಿಸಲಾಗುತ್ತಿತ್ತು. ವಿವಿಧ ವೃತ್ತಿಗಳಲ್ಲಿ ನಿರತರಾಗಿದ್ದವರೂ ವೃತ್ತಿತೆರಿಗೆ ಕೊಡಬೇಕಾಗಿತ್ತು. ಕೊನೆಗೆ ವೇಶ್ಯೆಯರನ್ನೂ ಬಿಟ್ಟಿರಲಿಲ್ಲ. ಮಾರಲು ತಂದ ಸರಕುಗಳು ಮತ್ತು ಪ್ರಾಣಿಗಳ ಮೇಲೆ ತೆರಿಗೆಯಿತ್ತು. ಎಣ್ಣೆಗಾಣಗಳು, ಎತ್ತಿನ ಬಂಡಿಗಳು, ಕೆರೆಯಿಂದ ಹಿಡಿದ ಮೀನು, ಬೆಲ್ಲದ ತಯಾರಿಕೆ ಇತ್ಯಾದಿಗಳ ಮೇಲೆ ತೆರಿಗೆ ಕೊಡಬೇಕಿತ್ತು.ಮದುವೆಗೂ ತೆರಿಗೆಯಿತ್ತು.

ವಿಜಯನಗರದ 'ಊಳಿಗಮಾನ್ಯವ್ಯವಸ್ಥೆ'ಯು ಯೂರೋಪಿಯನ್ ಮಾದರಿಯದಾಗಿರಲಿಲ್ಲ. ವಿಜಯನಗರ ಮತ್ತು ಅನಂತರದ ಕಾಲದ ಈ ವ್ಯವಸ್ಥೆಯ ಪ್ರಧಾನ ಲಕ್ಷಣ ಆರ್ಥಿಕತೆ ಮತ್ತು ಸೇನೆ. ಯೂರೋಪಿನಂತೆ ಜಹಗೀರು ಮಾದರಿಯದಾಗಿರಲಿಲ್ಲ. ಅಲ್ಲಿ ಜಹಗೀರುದಾರನು ತನ್ನ ಜಹಗೀರಿಗೆ ಒಡೆಯನಾಗಿದ್ದಂತೆ ಇಲ್ಲಿ ಅಮರನಾಯಕನು 'ಅಮರಂ' ಗೆ ಒಡೆಯನಾಗಿರಲಿಲ್ಲ; ರೈತನು ಅವನ ಊಳಿಗದವನೂ ಆಗಿರಲಿಲ್ಲ. ಅಮರನಾಯಕನಿಗೆ ಕೃಷಿಯ 'ಹೆಚ್ಚುವರಿ' ಫಸಲಿನ ಮೇಲೆ ಆಸಕ್ತಿಯಿತ್ತೇ ಹೊರತು ನೇರವಾಗಿ ಕೃಷಿಯನ್ನು ಕುರಿತಲ್ಲ; ಹಾಗೆಯೇ ರೈತನು ದಬ್ಬಾಳಿಕೆ ತಡೆಯಲಾಗದೆ ಇನ್ನೊಂದು ಹಳ್ಳಿಗೆ ವಲಸೆ ಹೋಗಬಹುದಾಗಿತ್ತು. ಆದ್ದರಿಂದ ಅಮರಂ ಹಿಡುವಳಿಗಳಲ್ಲಿ ಅಮರನಾಯಕನಿಗೂ ರೈತನಿಗೂ ನಡುವೆ ಘರ್ಷಣೆಯಿರಲಿಲ್ಲ. ಯೂರೋಪಿನಲ್ಲಿ ಬೇಸಾಯ ಮತ್ತು ಫಸಲಿನ ವಿನಿಯೋಗಗಳ ವಿಷಯದಲ್ಲಿ ಕಲಹವಿರುತ್ತಿತ್ತು.

ಕರ್ನಾಟಕದ ಆಯಗಾರ (Ayagar) ವ್ಯವಸ್ಥೆಯಲ್ಲಿ ನಿದರ್ಶಿತವಾಗಿರುವಂತೆ ಕೃಷಿ ಮತ್ತು ಉದ್ದಿಮೆಗಳ ನಡುವೆ ಇದ್ದ ಸಾಂಪ್ರದಾಯಿಕ ಐಕ್ಯತೆಯು, ಪ್ರಸ್ತುತ ಸಂಪುಟವು ಒಳಗೊಂಡಿರುವ ಕಾಲಾವಧಿಯಲ್ಲಿ, ಒಂದು ಬದಲಾವಣೆಯನ್ನು ಕಂಡಿತು. ಗ್ರಾಮ-ಸ್ವಯಂ-ಪೂರ್ಣತೆಯು ಕ್ರಮೇಣ ನಶಿಸುತ್ತಾ ಹೋಯಿತು. ಈ ಬದಲಾವಣೆಯನ್ನು ಉಂಟುಮಾಡಿದ ಒಂದು ಮುಖ್ಯವಾದ ಅಂಶವೆಂದರೆ ಸರಕು-ಮಾರುಕಟ್ಟೆ ಸಂಬಂಧ ಬೆಳೆದದ್ದು. ಇದರಿಂದ ಹಳ್ಳಿಯು ಹೆಚ್ಚುಹೆಚ್ಚಾಗಿ ಪಟ್ಟಣವನ್ನು ಅವಲಂಬಿಸುವಂತಾಯಿತು. ವ್ಯಾಪಾರ-ವಾಣಿಜ್ಯಗಳಿಗೆ ರಾಜರಿಂದ ದೊರೆತ ಪ್ರೋತ್ಸಾಹ, ಯೂರೋಪಿಯನ್ ವರ್ತಕ ಬಂಡವಾಳವು ಮಾರುಕಟ್ಟೆಗಾಗೇ ಉತ್ಪಾದಿಸಲು ನೀಡಿದ ಪ್ರೋತ್ಸಾಹ ಇವೂ ಬದಲಾವಣೆಗೆ ತಮ್ಮ ಕೊಡುಗೆ ನೀಡಿದುವು. ಈ ಬದಲಾವಣೆಯು ವ್ಯಕ್ತವಾದದ್ದು ಬಹುಸಂಖ್ಯೆಯ ಮಾರುಕಟ್ಟೆ ನಗರಗಳು ಮತ್ತು ಸಂತೆಗಳ ಉದಯದಲ್ಲಿ ಹಾಗೂ ವರ್ತಕ ಸಂಘಗಳ ಪಟ್ಟಿಯಲ್ಲಿ.

ರೈತ ಕುಟುಂಬಗಳು ಮಾರುಕಟ್ಟೆಗೋಸ್ಕರವಾಗಿ ಹೆಚ್ಚುಹೆಚ್ಚಾಗಿ ಉತ್ಪಾದಿಸತೊಡಗಿದಾಗ ಶ್ರಮದ ಸಾಮಾಜಿಕ ಹಂಚಿಕೆ ತೀವ್ರಗೊಂಡಿತು; ಕೈಕಸಬುಗಳಾದ ಬೇಸಾಯವೂ ಬೇರೆ ಬೇರೆಯಾದುವು; ವೃತ್ತಿಪರ ಕಸಬುದಾರವರ್ಗಗಳ ಸಂಖ್ಯೆ ಹೆಚ್ಚಿತು. ಪಂಚವಳರು, ಕೈಕೋಳರು, ದೇವಾಂಗರು, ಕುಂಬಾರರು, ಬಡಗಿಗಳು ಮತ್ತು ಇತರರು ತಮ್ಮ ತಮ್ಮ ಸಂಘಗಳನ್ನು ಮಾಡಿಕೊಂಡರು.

ಕರ್ನಾಟಕದಲ್ಲಿ ಒಳನಾಡ ವ್ಯಾಪಾರವನ್ನು ಅರಬ್ಬರು, ನವಾಯಿತರು, ಕೊಂಕಣಿ-ಹಿಂದೂಗಳು, ಕೊಂಕಣಿ-ಕ್ರಿಶ್ಚಿಯನರು, ಸಾಲುಮೂಲೆ- ಬಣಜಿಗ, ಶೆಟ್ಟಿ ಮತ್ತಿತರ ದೇಶೀಯ ವರ್ತಕ ಸಮುದಾಯಗಳು ನಿರ್ವಹಿಸುತ್ತಿದ್ದುವು, ಯೂರೋಪಿಯನ್ ವರ್ತಕರು ಕಾಲಿಟ್ಟಮೇಲೂ ಅವರ ವ್ಯಾಪಾರಕ್ಕೆ ಧಕ್ಕೆಯಾಗಿರಲಿಲ್ಲ. ಕರ್ನಾಟಕದ ಸಾಗರೋತ್ತರ ಮಾರುಕಟ್ಟೆಗಳಲ್ಲಿ, ಪಶ್ಚಿಮದಲ್ಲಿ ಕೆಂಪುಸಮುದ್ರ ಮತ್ತು ಪರ್ಷಿಯನ್ ಕೊಲ್ಲಿಗಳ ಅಂಚಿನ ಅನೇಕ ಪ್ರದೇಶಗಳಿದ್ದುವು: ಪೂರ್ವದಲ್ಲಿ ಬಂಗಾಳಕೊಲ್ಲಿಯ ಪೂರ್ವಕ್ಕಿರುವ ದೇಶಗಳು, ಮಲಯ ಪರ್ಯಾಯ ದ್ವೀಪ ಮತ್ತು ಇಂಡಿಯನ್ ಆರ್ಕಿಪಿಲಾಗೋ ಇವು ಸೇರಿದ್ದುವು. ಚೈನಾ ಮತ್ತು ದೂರ ಪ್ರಾಚ್ಯಗಳೊಂದಿಗೂ ಸಂಬಂಧಗಳಿದ್ದುವು. ಯೂರೋಪಿನ ಅನೇಕ ದೇಶಗಳು ಕರ್ನಾಟಕದಿಂದ ಸಂಬಾರ ವಸ್ತುಗಳು, ಅಕ್ಕಿ, ಶ್ರೀಗಂಧ, ಹತ್ತಿ ಬಟ್ಟೆಗಳನ್ನು ತರಿಸಿಕೊಂಡು, ಚಿನ್ನ, ಬೆಳ್ಳಿ, ಕುದುರೆಗಳನ್ನು ವಿನಿಮಯವಾಗಿ ಕಳಿಸುತ್ತಿದ್ದುವು. ವ್ಯಾಪಾರದ ತಕ್ಕಡಿಯು ಕರ್ನಾಟಕದ ಪರವಾಗಿತ್ತು. ಪೋರ್ಚುಗೀಸ್, ಡಚ್, ಇಂಗ್ಲಿಷ್ ಮತ್ತು ಫ್ರೆಂಚ್ ವರ್ತಕರು ಕರ್ನಾಟಕದ ಕರಾವಳಿಗೆ ಬಂದದ್ದು, ಕರ್ನಾಟಕದ ವಿದೇಶಿ ವ್ಯಾಪಾರವು ವಿಸ್ತಾರಗೊಳ್ಳುವುದಕ್ಕೆ ಎಡೆಯಾಯಿತು. ವಾಣಿಜ್ಯಕ್ಕೆ ಎರಡು ಬಗೆಯ ಸರಕು ಉತ್ಪಾದನೆಯು ಇಂಬುಕೊಟ್ಟಿತು. ಮೊದಲನೆಯದು ಮಾರುಕಟ್ಟೆಗಾಗಿ ಕುಶಲವಸ್ತುಗಳ ಉತ್ಪಾದನೆ, ಜೊತೆಗೆ ರೈತ ಕುಟುಂಬಗಳಲ್ಲಿ ಬೇಸಾಯ; ಎರಡನೆಯದು, ವೃತ್ತಿಪರ ಕುಶಲಕರ್ಮಿಗಳು ಪಟ್ಟಣಗಳಲ್ಲಿ ಮತ್ತು ದೇಶಗಳಲ್ಲಿ, ಮಾರುಕಟ್ಟೆಯ ವ್ಯಾಪಾರಕ್ಕಾಗಿ ಮಾಡಿದ ಉತ್ಪಾದನೆ.

ಈ ಕಾಲದ ಕೃಷಿವ್ಯವಸ್ಥೆಯಲ್ಲಿ ಗಣನೀಯ ಸಂಖ್ಯೆಯ ಗ್ರಾಮೀಣಜನರು ಇತರರನ್ನು ಅವಲಂಬಿಸಿದ ಗುತ್ತಿಗೆದಾರರಾಗಿ, ಊಳಿಗದವರಾಗಿ ಮತ್ತು ಕೃಷಿ ಕಾರ್ಮಿಕರಾಗಿ ಪರಿವರ್ತಿತರಾದುದನ್ನು ಮೂಲಗಳು ಸೂಚಿಸುತ್ತವೆ. ಶಾಸನಗಳಲ್ಲಿ ಬರುವ ಗೇಣಿ, ಗುತ್ತಿಗೆ, ವಾರ, ಸಿದ್ದಾಯ, ಮತ್ತು ಗಡಿ ಮೊದಲಾದ ಶಬ್ದಗಳು ಗೇಣಿದಾರಿಕೆಯಿದ್ದುದನ್ನು ಸೂಚಿಸುತ್ತವೆ. ಹೊಲೆಯ, ಹೆಣ್ಣಾಳು, ಗಂಡಾಳು, ಮಣ್ಣಾಳು, ಕೂಲಿಯಾಳು ಪದಗಳು ಕೃಷಿ ಊಳಿಗದವರನ್ನೂ ಬಿಟ್ಟಿ ಕಾರ್ಮಿಕರನ್ನೂ ಹೇಳುತ್ತವೆ. ಧಾರ್ಮಿಕ ಮತ್ತು ಧರ್ಮೇತರ ಮಧ್ಯವರ್ತಿಗಳ ಸಂಖ್ಯೆಯಲ್ಲಿ ಹೆಚ್ಚಳವುಂಟಾದುದನ್ನು ದೇವದಾಯ, ಬ್ರಹ್ಮದಾಯ, ಅಗ್ರಹಾರ, ಮಠಪುರ, ಉಂಬಳಿ ಕೊಡಿಗೆಗಳಲ್ಲಿ ನೋಡಬಹುದು. ಈ ಕಾಲಾವಧಿಯಲ್ಲಿ ಶೃಂಗೇರಿಮಠವು ಬಹುದೊಡ್ಡ

ಜಮೀನುದಾರನಾಗಿ ಬೆಳೆದದ್ದು ಒಂದು ಮಹತ್ವದ ಸಂಗತಿ. ಒಟ್ಟಿನಲ್ಲಿ ಈ ಸಂಪುಟವು ನಿರೂಪಿಸುವ ರಾಜಕೀಯ-ಆರ್ಥಿಕತೆಯು ಮಾರ್ಕ್ಸ್ ಹೇಳಿದ ಊಳಿಗಮಾನ್ಯ, ಬಂಡವಾಳಶಾಹಿ ಮತ್ತು 'ಉತ್ಪಾದನೆಯ ಏಷಿಯಾಟಿಕ್ ಮಾದರಿ'ಗಳ ಮಿಶ್ರ ಲಕ್ಷಣಗಳನ್ನು ಹೊಂದಿದಂತೆ ತೋರಿತು. ಅದೊಂದು ಸಂಕೀರ್ಣವಾದ ಪರಿಸ್ಥಿತಿಯಾಗಿತ್ತು.

ಪರಿಶೀಲನೆಯಲ್ಲಿರುವ ಕಾಲಾವಧಿಯ ಸಾಮಾಜಿಕ- ಧಾರ್ಮಿಕ ಜೀವನದ ಲಕ್ಷಣ, ಆಚಾರವಂತಿಕೆ ಉದಾರತೆ, ಮೂಢನಂಬಿಕೆಗಳು, ರಾಷ್ಟ್ರೀಯತೆ ಮತ್ತು ಸಾಂಪ್ರದಾಯಿಕತೆ ಇವು. ಕರ್ನಾಟಕದ ಸಾಮಾಜಿಕ-ಧಾರ್ಮಿಕ ವಲಯದಲ್ಲಿ ಕಂಡುಬಂದ ಅಸಾಧಾರಣವಾದೊಂದು ಬೆಳವಣಿಗೆಯೆಂದರೆ ಇಸ್ಲಾಂ ಪ್ರಚುರಗೊಂಡದ್ದು. ಅದು ಏಕದೇವವಾದ ಮತ್ತು ಪ್ರಜಾಸತ್ತಾತ್ಮಕ ವ್ಯವಸ್ಥೆಗೆ ಒತ್ತುಕೊಟ್ಟಿತು. ಜಾತಿ ಶ್ರೇಣೀಕರಣವನ್ನಾಗಲಿ ಪೊಳ್ಳು ಆಚರಣೆಗಳನ್ನಾಗಲಿ ಅದು ಮಾನ್ಯ ಮಾಡಲಿಲ್ಲ. ಈ ಶಕ್ತಿಯುತ ಧರ್ಮದೆದುರಿಗೆ ತನ್ನ ವೈಶಿಷ್ಟ್ಯವನ್ನು, ಆಚರಣೆಗಳನ್ನು ರಕ್ಷಿಸಿಕೊಳ್ಳುವುದು, ತನ್ನ ಕೆಲವು ಉದಾತ್ತ ವಿಚಾರಗಳನ್ನು ಪುನಶ್ಚೇತನಗೊಳಿಸುವುದು ಹಿಂದೂಧರ್ಮಕ್ಕೆ ಅಗತ್ಯವಾಯಿತು. ನಾವು ಸ್ಮಾರ್ತ-ಭಾಗವತ, ದ್ವೈತ-ಭಕ್ತಿ ಮತ್ತು ವೀರಶೈವ ಸಂಪ್ರದಾಯಗಳ ಪಾತ್ರವನ್ನು ಈ ಹಿನ್ನೆಲೆಯಲ್ಲಿ ಅರ್ಥ ಮಾಡಿಕೊಳ್ಳಬೇಕು.

ವಿಜಯನಗರದ ಸ್ಥಾಪನೆಯಲ್ಲಿ ಶಂಕರರು ಕ್ರಿ.ಶ. ೮ನೆಯ ಶತಮಾನದಲ್ಲಿ ಸ್ಥಾಪಿಸಿದ ಶೃಂಗೇರಿ ಮಠದ ಪಾತ್ರ, ವಿದ್ಯಾರಣ್ಯ ಮತ್ತು ಮಠದ ಇತರ ಗುರುಗಳ ಪಾತ್ರ ಉಲ್ಲೇಖಿತವಾಗಿದೆ. ಶೃಂಗೇರಿಮಠವು ಅದ್ವೈತ ದರ್ಶನವನ್ನು ಸ್ಮಾರ್ತ-ಭಾಗವತ-ಪಂಚಾಯತ ಪೂಜಾಕ್ರಮವನ್ನೂ ಪ್ರಸಾರ ಮಾಡಿತು. ಈ ದರ್ಶನ ಮತ್ತು ದೇವತಾಶಾಸ್ತ್ರಗಳು ಕಾಲದ ಅಗತ್ಯಗಳನ್ನು ಸಮರ್ಪಕವಾಗಿ ಪೂರೈಸಿದುವು. ಆಗ ಅಗತ್ಯವಾಗಿದ್ದದ್ದು ಧಾರ್ಮಿಕ ವಲಯದಲ್ಲಿ ಐಕಮತ್ಯ. ಮಠದ ತಾತ್ವಿಕ ನಿಲುವು, ಹರಿಹರ-ಬುಕ್ಕ ಮತ್ತಿತರ ಸಂಗಮ ಸಹೋದರರಿಗೆ ಆ ಐಕಮತ್ಯವನ್ನು ಸ್ಥಾಪಿಸುವುದರಲ್ಲಿ ಗುರುಗಳು ನೀಡಿದ ನೆರವಿನಲ್ಲಿ ವ್ಯಕ್ತವಾಯಿತು. ಹಾಗೆಯೇ ಮಠದ ದೇವತಾ ಶಾಸ್ತ್ರೀಯ ನಿಲುವು ಅಂದರೆ, ಸ್ಮಾರ್ತ-ಭಾಗವತ-ಪಂಚಾಯತವು ಶೈವ, ವೈಷ್ಣವ, ಶಾಕ್ತ ಮತ್ತು ಗಾಣಾಪತ್ಯ ಸಂಪ್ರದಾಯಗಳನ್ನು ಹಾಳತವಾಗಿ ಒಂದುಗೂಡಿಸಿತು. ಎಲ್ಲ ಪಂಥಗಳೂ ಒಂದು ಪತಾಕೆಯ ಕೆಳಗೆ ಸೇರಲು ಸಹಾಯ ಮಾಡಿತು. ಆದ್ದರಿಂದ ೧೩೪೬ರ ಸುಪ್ರಸಿದ್ಧ ಶೃಂಗೇರಿ ಶಾಸನದಲ್ಲಿ ಹೇಳಿದಂತೆ, ಸಂಗಮ ವಂಶದ ಅರಸರು ಮಠದ ಗುರುಗಳ ದರ್ಶನ-ಆಶೀರ್ವಾದಗಳನ್ನು ಪಡೆಯುವ ಸಲುವಾಗಿ ಶೃಂಗೇರಿಗೆ ಹೋದದ್ದರಲ್ಲಿ ಏನೂ ಆಶ್ಚರ್ಯವಿಲ್ಲ. ವೈಷ್ಣವ ಧರ್ಮವಾಗಲಿ, ಶೈವ, ವೀರಶೈವ ಧರ್ಮಗಳಾಗಲಿ ಈ ಐಕಮತ್ಯದ ವಾತಾವರಣವನ್ನು ಪ್ರಾರಂಭದಲ್ಲಿ ಮೂಡಿಸಲು ವಿಫಲವಾದುವು. ಅಷ್ಟೇ ಅಲ್ಲದೆ, ಸಂಗಮ ವಂಶವು ಹಿಂದೂಧರ್ಮದ ಬೇರು ಎನಿಸಿದ ವೈದಿಕ ಮಾರ್ಗವನ್ನು ಸಂರಕ್ಷಿಸುವುದರಲ್ಲಿ ಪ್ರಸಿದ್ಧವಾಗಿತ್ತು. ಕೆಳದಿಯ ವೀರಶೈವ ಅರಸರೂ ಶೃಂಗೇರಿ ಮಠಕ್ಕೆ ಪೋಷಣೆ ನೀಡಿದರು.

ಹದಿನಾರನೆಯ ಶತಮಾನದಲ್ಲಿ ವಿಷ್ಣುವಿನ ಸುತ್ತ ಬೆಳೆದ ದ್ವೈತ ಭಕ್ತಿಪಂಥದ ಉದಯವನ್ನು ನಾವು ಗಮನಿಸುತ್ತೇವೆ. ಹರಿದಾಸ ಆಂದೋಲನವು ಆ ಕಾಲದ ಉದಾರ ಸಾಮಾಜಿಕ-ಧಾರ್ಮಿಕ ದೃಷ್ಟಿಕೋನದ ಸಂಕೇತವಾಗಿತ್ತು. ಅಲ್ಲದೆ ಒಂದು ರೀತಿಯಲ್ಲಿ, ಕರ್ನಾಟಕದಲ್ಲಿ ಇಸ್ಲಾಂ ಬಲವಾಗಿ ಬೇರುಬಿಡುತ್ತಿದ್ದ ಹಿನ್ನೆಲೆಯಲ್ಲಿ, ಅದು ಸಂರಕ್ಷಕ ಕಾರ್ಯತಂತ್ರವಾಗಿ ವರ್ತಿಸಿತು. ಹರಿದಾಸ ಆಂದೋಲನದ ಉದಯವು, ವಿಜಯನಗರ ಸಮಾಜದಲ್ಲಿ ಸಾಮಂತ ಶಕ್ತಿಗಳು ಪ್ರಾಧಾನ್ಯ ಪಡೆದಿದ್ದ ಸಮಯಕ್ಕೆ ಹೊಂದಿಕೊಂಡಿತ್ತು. ವಿಜಯನಗರ ಸಾಮ್ರಾಜ್ಯವು ತನ್ನ ಉನ್ನತಿಯ ಶಿಖರದಲ್ಲಿದ್ದಾಗ, ಪುರಂದರದಾಸರು ಉತ್ತಮ ಆಡಳಿತದ ಪೊಳ್ಳು ಹೇಳಿಕೆಗಳ ಬಗೆಗೆ ಮಾತನಾಡಿದರು. ಕನಕದಾಸರು ಅಲ್ಪರಾದ ರಾಜರಿಗೆ ಗುಲಾಮರಾಗುವುದರ ವ್ಯರ್ಥತೆಯನ್ನು ಹೇಳಿದರು. ಹಿಂದೂ ಮತ್ತು ಮುಸ್ಲಿಂ ರಾಜರು ಪರಸ್ಪರ ಕಚ್ಚಾಡುತ್ತಿದ್ದಾಗ, ದಾಸರು

ಜನರಿಗೆ ಮಾರ್ಗದರ್ಶನ ಮಾಡುವ ಮಹತ್ವದ ಕೆಲಸವನ್ನು ನಿರ್ವಹಿಸಿದರು. ಮಾನವೀಯ ಮೌಲ್ಯಗಳ ಅನ್ವೇಷಣೆಯಲ್ಲಿ ಹರಿದಾಸರು ಸಮಕಾಲೀನ ಅಗತ್ಯಗಳ ಬಗೆಗೆ ಪ್ರತಿಸ್ಪಂದಿಸಿದರು. ೧೨ನೆಯ ಶತಮಾನದ ವೀರಶೈವ ಸಂತರಂತಲ್ಲದೆ ೧೬ನೆಯ ಶತಮಾನದ ಹರಿದಾಸರು ಸಾಂಸ್ಕೃತಿಕ ಕೇಂದ್ರಗಳಾಗಿದ್ದ ದೇವಾಲಯಗಳಿಂದ ತಮ್ಮ ಕಾರ್ಯವನ್ನು ನಿರ್ವಹಿಸಿದರು.

ವೀರಶೈವ ಧರ್ಮವು ಅಸಾಮಾನ್ಯ ಪ್ರಗತಿಯನ್ನು ಕಂಡಿತು. ಸಾವಿರಾರು ವಚನಗಳು ರಚಿತವಾದುವು. ವೀರಶೈವ ವಿದ್ವಾಂಸರು ಸಂಸ್ಕೃತದಲ್ಲಿ ಧಾರ್ಮಿಕ ಕೃತಿಗಳನ್ನು ಬರೆಯಲು ತೊಡಗಿದುದು. ಇನ್ನೊಂದು ವಿಶೇಷವಾದ ಅಂಶ. ಕೆಳದಿಯ ವೀರಶೈವ ನಾಯಕರು, ವಿಜಯನಗರದ ಅರಸರು, ಮೈಸೂರಿನ ಒಡೆಯರು ವೀರಶೈವ ಕವಿಗಳನ್ನು ಪೋಷಿಸಿದರು. ಹರಿದಾಸರು ಮತ್ತು ವೀರಶೈವ ಸಂತರು ಜಾತಿಪದ್ಧತಿಯನ್ನು ಖಂಡಿಸಿದರು. ಸಗುಣ, ಸಾಕಾರ ಭಗವಂತನ ಪೂಜೆಯನ್ನು ಒತ್ತಿ ಹೇಳಿದರು; ಅವನಿಗೆ ಸಂಪೂರ್ಣವಾಗಿ ಶರಣಾಗುವುದೇ ಮೋಕ್ಷವನ್ನುಗಳಿಸುವ ಮಾರ್ಗ, ಅದೇ ಪರಮೋನ್ನತ ಆನಂದ. ಪ್ರಪಂಚದ ದೈನಂದಿನ ಕಷ್ಟ ಸಂಕಟಗಳಿಂದ ನಲುಗುತ್ತಿದ್ದ ಜನಸ್ತೋಮಕ್ಕೆ ಈ ಭಕ್ತಿಸಿದ್ಧಾಂತವು ಸಾಂತ್ವನವನ್ನು ನೀಡಿತು. ಅದು ಮುಂದಿಟ್ಟ ಅತ್ಯಂತ ಕರುಣಾಮಯನಾದ ಭಗವಂತನ ಕಲ್ಪನೆ, ಭಗವಂತನ ಎದುರಿಗೆ ಎಲ್ಲರೂ ಒಂದೇ ಸಮ ಎಂಬ ಸಿದ್ಧಾಂತ ಇವು ಜನರ ಮೇಲೆ ಅಪಾರವಾದ ಪರಿಣಾಮವನ್ನುಂಟು ಮಾಡಿದುವು. ಅದು ಲಕ್ಷಣದಲ್ಲಿ ಪಲಾಯನವಾದದಂತಿದ್ದರೂ ಹಿಂದೂ ಮತ್ತು ಇಸ್ಲಾಮಿಕ್ ವಿಚಾರಗಳ ಮಿಶ್ರಣದಲ್ಲಿ ಉದಾರವಾಗಿತ್ತು. ಅರಸರು ತೋರಿಸಿದ ಧರ್ಮ ಸಹಿಷ್ಣುತಾ ಮನೋಭಾವ, ವಿವಿಧ ಧರ್ಮಗಳಿಗೆ ಸೇರಿದ ಜನರ ಸಂಯೋಜನೆಗೆ ದಾರಿ ಮಾಡಿಕೊಟ್ಟಿತು. ಸ್ವಲ್ಪಮಟ್ಟಿಗೆ ಇದು ಕಲೆ ಮತ್ತು ಸಾಹಿತ್ಯ, ಜನಪ್ರಿಯ ಕಥೆಗಳು, ಹಬ್ಬಗಳು, ಆಹಾರ, ಮನರಂಜನೆ ಮೊದಲಾದವುಗಳಲ್ಲಿ ಪ್ರತಿಫಲಿತವಾಯಿತು. ಹಂಪಿಯ ಲೌಕಿಕ ಕಟ್ಟಡಗಳು, ಕೆಳದಿಯ ದೇವಾಲಯಗಳು, ಇಕ್ಕೇರಿ, ನಗರ, ಶ್ರೀರಂಗಪಟ್ಟಣ ಮೊದಲಾದೆಡೆಗಳಲ್ಲಿನ ಇತರ ಕಟ್ಟಡಗಳು ಈ ಪರಸ್ಪರ ಕೊಳುಕೊಡೆಯನ್ನು ಸೂಚಿಸುತ್ತವೆ.

ಇದರ ಜೊತೆಗೆ ಸಮಾಜದ ಅತಿ ಗಡುಸಾದ ಸಾಮಾನ್ಯ ಸನ್ನಿವೇಶದಲ್ಲಿಯೂ ಸಾಮಾಜಿಕ ಚಲನೆ ಇಲ್ಲದಿರಲಿಲ್ಲ. ಅಸಂಖ್ಯಾತ ಪಾಳೆಯಗಾರರ ಕುಟುಂಬಗಳ ಉದಯವೂ, ಕೆಳದಿ ಮನೆತನದ ಮೂಲವೂ ಈ ಅಭಿಪ್ರಾಯವನ್ನು ಪೋಷಿಸುತ್ತದೆ. ಈ ಕಾಲಾವಧಿಯಲ್ಲಿ ರಾಣಿಯರು, ಮಹಿಳಾ ಆಡಳಿತಗಾರ್ತಿಯರು ಸಾಂಸ್ಕೃತಿಕವಾಗಿ ಅಪೂರ್ವ ಸಾಧನೆ ಮಾಡಿದ ಮಹಿಳೆಯರು ಕೂಡ ಕಾಣಿಸಿಕೊಂಡರು. ಕರಾವಳಿ ಪ್ರದೇಶದಲ್ಲಿ ಅಳಿಯ ಸಂತಾನ ಪದ್ಧತಿಯ ಆಚರಣೆ ಮಹಿಳೆಯ ಪ್ರಾಧಾನ್ಯವನ್ನು ಎತ್ತಿತೋರಿಸಿತು. ಹೆಣ್ಣುಮಗು ಜನಿಸಿದರೆ ತಿರಸ್ಕರಿಸುವುದನ್ನೂ, ಕುಟುಂಬಕ್ಕೆ 'ಮಗ' ಇರಲೇಬೇಕು ಎಂದು ಅನಗತ್ಯವಾಗಿ ಒತ್ತಿ ಹೇಳುವುದನ್ನು ಭಕ್ತಿ ಸಂತರು ಖಂಡಿಸಿದರು. ಕ್ರಿಶ್ಚಿಯನರು ಮತ್ತು ಮುಸ್ಲಿಮರನ್ನೂ ವಿದೇಶಗಳಿಂದ ಬಂದ ಪ್ರತಿಭಾವಂತರನ್ನೂ ಅರಸರು ತಮ್ಮ ಬಳಿ ಉದ್ಯೋಗಕ್ಕೆ ನೇಮಿಸಿಕೊಂಡರು. ಅವರ ಮಂತ್ರಾಲೋಚನ ಸಭೆಗಳು ರಾಜ್ಯದ ಮುಖ್ಯ ಸಾಮಾಜಿಕ ವರ್ಗಗಳಿಗೆ ಕೊಟ್ಟ ಪ್ರಾತಿನಿಧ್ಯವನ್ನು ಸೂಚಿಸುತ್ತಿದ್ದುವು. ಹೀಗೆ ರಾಜಕಾರಣ, ಆಡಳಿತ, ಮತ್ತು ಅರ್ಥವ್ಯವಸ್ಥೆ ಇವು ಹೆಚ್ಚುಕಡಮೆ ಎಲ್ಲಾ ವರ್ಗದ ಜನರಿಗೂ ಮುಕ್ತವಾಗಿ ತೆರೆದಿದ್ದುವು. ಯಾವುದೇ ಒಂದು ಸಾಮಾಜಿಕ ವರ್ಗವು ಏಕಸ್ವಾಮ್ಯ ಹೊಂದಿರಲು ಅವಕಾಶವಿರಲಿಲ್ಲ. ಒಟ್ಟಿನಲ್ಲಿ ಈ ಕಾಲಾವಧಿಯಲ್ಲಿ ನಿರಂತರತೆಯೂ ಪರಿವರ್ತನೆಯೂ ಕಾಣಿಸಿದುವು; ಸುಧಾರಣೆ ಮತ್ತು ಸಂರಕ್ಷಣೆ; ಸಾಂಪ್ರದಾಯಿಕತೆ ಮತ್ತು ಉದಾರತೆಗಳು ಕಂಡುಬಂದುವು. ಸ್ಥೂಲವಾಗಿ ಹೇಳುವುದಾದರೆ, ಕರ್ನಾಟಕದ ಆಳುವ ಗಣ್ಯರು ವೈವಿಧ್ಯವನ್ನು ಉಳಿಸಿಕೊಳ್ಳಲು ಪ್ರಯತ್ನಿಸಿದರು; ಅನೇಕ ಸಾಮಾಜಿಕ, ಆರ್ಥಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ಕೊರತೆಗಳ ನಡುವೆಯೂ ಸಾಂಸ್ಕೃತಿಕ ಬಹುಳತೆಯನ್ನೂ ಜಾತ್ಯತೀತತೆಯನ್ನೂ ಉಳಿಸಿಕೊಳ್ಳಲು ಪ್ರಯತ್ನಿಸಿದರು.

ಪ್ರಸ್ತುತ ಸಂಪುಟದಲ್ಲಿ ವಾಸ್ತವ ಸಂಗತಿಗಳನ್ನು ನಿರೂಪಿಸಿರುವ ಹಾಗೂ ವ್ಯಾಖ್ಯಾನಿಸಿರುವ ರೀತಿಯನ್ನು ಕುರಿತು ಕೆಲವು ಮಾತುಗಳನ್ನು ಹೇಳಬಹುದು. ಈ ವಿಚಾರವಾಗಿ ಒಬ್ಬ ಪ್ರಸಿದ್ಧ ಅಮೆರಿಕನ್ ವಿದ್ವಾಂಸ ಹೇಳಿದ ಮಾತನ್ನು ನೆನಪು ಮಾಡಿಕೊಳ್ಳುವುದು ಸೂಕ್ತ. ಸ್ಯಾಮ್ಯುಯಲ್ ಹಂಟಿಂಗ್‌ಟನ್ನನ ದಿ ಕ್ಲ್ಯಾಶ್ ಆಫ್ ಸಿವಿಲೈಸೇಷನ್ ಕೃತಿಯನ್ನು ಕುರಿತು ಉಲ್ಲೇಖಿಸುತ್ತಾ ಅವನು ಹೇಳಿದ್ದು ಹೀಗೆ: ಪ್ರತಿಯೊಬ್ಬ ಪ್ರಾಧ್ಯಾಪಕನೂ ಕನಸು ಕಾಣುವುದನ್ನು, ಅಂದರೆ ಜನರು ನಿಜವಾಗಿ ಓದುವ ಲೇಖನವೊಂದನ್ನು ಬರೆಯಬೇಕೆಂಬುದನ್ನು ಸಾಧಿಸಿದ ವೈಶಿಷ್ಟ್ಯ ಹಂಟಿಂಗಟನ್ನನದಾಗಿದೆ. ಇದು ತಮಾಷೆಯೆಂಬಂತೆ ತೋರಬಹುದು; ಆದರೆ ವಾಸ್ತವ ಸಂಗತಿ ಅದು ಒಂದು ಜೋಕ್ ಅಲ್ಲ ಎನ್ನುವುದು. 'ವಿಜ್ಞಾನಿಗಳು' ಅನೇಕ ವೇಳೆ ವಿವೇಕವೇ ಇಲ್ಲದಂತೆ ವರ್ತಿಸುತ್ತಾರೆ. ಒಂದು ಸೂಜಿಯ ಮೊನೆಯ ಮೇಲೆ ಎಷ್ಟು ಜನ ಅಪ್ಸರೆಯರು ನರ್ತಿಸಬಹುದು ಎಂದು ಅಪಾರ ಪ್ರಾಮಾಣಿಕತೆಯಿಂದ ವಾದ ಮಾಡುತ್ತ ಹೋಗುವ ಮಧ್ಯಕಾಲೀನ ವಿದ್ವಾಂಸರ ಹಾಗೆ ವರ್ತಿಸುತ್ತಾರೆ. ಈಚೆಗೆ ಸಮಾಜ ವಿಜ್ಞಾನಿಗಳಲ್ಲೂ ಇಂತಹ 'ವಿಜ್ಞಾನಿ'ಗಳನ್ನು ಅನುಕರಿಸುವ ಚಟ ಬೆಳೆದಿದೆ. ಇಂದು ಸಮಾಜಶಾಸ್ತ್ರ ಎನಿಸಿಕೊಳ್ಳುವುದರಲ್ಲಿ ಪೊಳ್ಳು ಶಬ್ದಾಡಂಬರ ತಾನೇ ತಾನಾಗಿದೆ. ಸಾಹಿತ್ಯದಲ್ಲೂ ಅಷ್ಟೆ, ಪ್ರಾಧ್ಯಾಪಕರು ಏನು ಹೇಳುತ್ತಿದ್ದಾರೆ ಎಂದು ಅರ್ಥ ಮಾಡಿಕೊಳ್ಳುವುದೇ ಕಷ್ಟವಾಗುತ್ತದೆ. ಹಾರ್ವರ್ಡ್ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಸೈಮನ್ ಸೆಹಾಮ, ಇತಿಹಾಸದಲ್ಲಿ ಶೈಕ್ಷಣಿಕ ದೃಶ್ಯ ಹೇಗಿದೆ ಎಂಬುದನ್ನು ಕುರಿತು ಹೀಗೆ ಯೋಚಿಸುತ್ತಾರೆ: ''ಇತಿಹಾಸಕಾರರು ಒಂದು ಶೈಕ್ಷಣಿಕ ವೃತ್ತಿಯಾಗಿ ತಮ್ಮನ್ನು ಸಂಸ್ಥೀಕರಿಸಿಕೊಂಡಾಗ, ಐತಿಹಾಸಿಕ ವಾಸ್ತವ ಸಂಗತಿಗಳಿಂದ ದೂರ ಸರಿದು ಇತಿಹಾಸ ಲೇಖನದ ಪೂರ್ವಾಗ್ರಹಗಳ ಕಡೆಗೆ ತಿರುಗಿದರು. ಇತಿಹಾಸದ ರಕ್ತಮಾಂಸಗಳಾದ ವ್ಯಕ್ತಿಗಳು ಮತ್ತು ಘಟನೆಗಳಿಂದ (ತಮ್ಮದೇ ರಚನೆಯಾದ) ಅಮೂರ್ತ ವಿಚಾರಗಳ ಕಡೆಗೆ ಹೊರಳಿದರು''. ಫ್ರೆಂಚ್‌ಮಹಾಕ್ರಾಂತಿಯನ್ನು ಕುರಿತ ರೋಮಾಂಚಕ ಅಧ್ಯಯನವಾದ ಸಿಟಿಜನ್ಸ್ ಎಂಬ ಕೃತಿಯಲ್ಲಿ ಪ್ರೊ. ಸೆಹಾಮ ಹೀಗೆ ಬರೆಯುತ್ತಾರೆ: ''ನಾನು ಒಂದು ಜಗತ್ತನ್ನು ವಿದ್ವತ್ಪೂರ್ಣ ಪ್ರವಚನದಲ್ಲಿ ಸಮಾಧಿ, ಕಟ್ಟಿದೆ, ಅದನ್ನು ಸಜೀವಗೊಳಿಸಲು ಪ್ರಯತ್ನಿಸಿದ್ದೇನೆ'' ಈ ಅಭಿಪ್ರಾಯಗಳ ಬೆಳಕಿನಲ್ಲಿ ನೋಡುವುದಾದರೆ ಈ ಸಂಪುಟದ ಲೇಖಕರು ಕಥನ ಹಾಗೂ ಆಡಂಬರದ ಭಾಷೆಯ ಭಾವರಚನೆಗಳ ನಡುವೆ ಸಮತೋಲನವನ್ನು ಸಾಧಿಸಲು ಪ್ರಯತ್ನಿಸಿದ್ದಾರೆ.

ಪ್ರಸ್ತುತ ಸಂಪುಟವು ಒಂದು ರೀತಿಯಲ್ಲಿ ಮೇಲೆ ಹೇಳಿದ ವಿಚಾರಗಳನ್ನು ಪರಿಕಲ್ಪನೆಗಳನ್ನೂ ತಕ್ಕ ಮಟ್ಟಿಗೆ ವಿಸ್ತಾರವಾಗಿ ದಾಖಲಿಸಲು ಪ್ರಯತ್ನಿಸುತ್ತದೆ. ಈ ಕೃತಿಯು ಈ ವಿಷಯವನ್ನು ಕುರಿತಾಗಲಿ, ಈ ಕಾಲಾವಧಿಯನ್ನು ಕುರಿತಾಗಲಿ ಸಮಗ್ರವಾದ ಕೃತಿ ಎಂದು ನಾನು ಹೇಳಲಾರೆ. ಐತಿಹಾಸಿಕ ಅಧ್ಯಯನವು ಎಂದಿಗೂ ಸಂಪೂರ್ಣವಾಯಿತು ಎಂದು ಹೇಳುವುದು ಸಾಧ್ಯವಿಲ್ಲ. ಈ ಕಾಲಾವಧಿಗೆ ಸಂಬಂಧಿಸಿದಂತೆ ಇನ್ನಷ್ಟು ಆಳವಾದ, ಬಹು ಆಯಾಮದ ಪರಿಕಲ್ಪನೆಗಳ ಚೌಕಟ್ಟಿನಲ್ಲಿ ನಡೆಯುವ ಅಧ್ಯಯನದ ಆವಶ್ಯಕತೆ ಇದ್ದೇ ಇದೆ. ಈ ಸಂಪುಟವು ಇನ್ನೂ ಹೆಚ್ಚು ಪ್ರಮಾಣದಲ್ಲಿ ಸಂಶೋಧನೆ ಮಾಡಲು ಇತರರಿಗೆ ಪ್ರೇರಕವಾಗುತ್ತದೆ ಎಂದು ವಿನಯಪೂರ್ವಕವಾಗಿ ಹೇಳಬಯಸುತ್ತೇನೆ. ಈ ಪುಟಗಳಲ್ಲಿ ವ್ಯಕ್ತಪಡಿಸಿರುವ ಅಭಿಪ್ರಾಯಗಳಿಗೆ ಆಯಾ ಲೇಖಕರು ಮಾತ್ರವೇ ಹೊಣೆಗಾರರು. ಆದರೂ ರಚನಾತ್ಮಕವಾದ ಹಾಗೂ ಉತ್ಪಾದಕವಾದ ವಿಮರ್ಶೆಗೆ ಸ್ವಾಗತವಿದ್ದೇ ಇದೆ.

ಅಧ್ಯಾಯ : ಎರಡು

ವಿಜಯನಗರದ ಸ್ಥಾಪನೆ

ವಿಜಯನಗರ ಸ್ಥಾಪನೆಗೆ ಸಂಬಂಧಿಸಿದಂತೆ ಇತಿಹಾಸಕಾರರು ಮೂರು ಮುಖ್ಯ ಸಮಸ್ಯೆಗಳನ್ನು ಚರ್ಚಿಸುತ್ತಾ ಬಂದಿದ್ದಾರೆ. ಇದುವರೆಗೂ ಚರ್ಚೆಯಿಂದ ಒಟ್ಟಭಿಪ್ರಾಯ ಯಾವುದೂ ಹೊರಬಂದಂತೆ ತೋರುವುದಿಲ್ಲ. ಸಮಸ್ಯೆಗಳು ಇವು. ಅ) ವಿಜಯನಗರವು ಸ್ಥಾಪನೆಯಾದ ಸನ್ನಿವೇಶ ಮತ್ತು ಉದ್ದೇಶ, ಏನಾದರೂ ಇದ್ದರೆ; ಆ) ವಿಜಯನಗರ ಸ್ಥಾಪಕರ ಪ್ರಾದೇಶಿಕ, ಭಾಷಾ ಮತ್ತು ಜಾತಿ ನಿರ್ದಿಷ್ಟತೆ; ಇ) ವಿದ್ಯಾರಣ್ಯರ ಸಮಸ್ಯೆ. ಈ ಸಮಸ್ಯೆಗಳಿಗೆ ಬಹುಮಟ್ಟಿಗೆ ಕಾರಣ ಬೇರೆ ಬೇರೆ ಕಾಲಗಳ ಮುಸ್ಲಿಂ ಮತ್ತು ಹಿಂದೂ ಮೂಲಗಳಲ್ಲಿ ಅಭಿವ್ಯಕ್ತವಾಗಿರುವ ಪರಸ್ಪರ ವಿರೋಧಿ ಅಭಿಪ್ರಾಯಗಳು. ಇತಿಹಾಸಕಾರರು ಅವುಗಳನ್ನು ಉಪಯೋಗಿಸಿಕೊಂಡು ತಮ್ಮ ಪ್ರಾದೇಶಿಕ, ತಾತ್ವಿಕ ಪರಿಗಣನೆಗಳ ಆಧಾರದಿಂದ ಒಂದಲ್ಲ ಒಂದು ಮೂಲವನ್ನು ಪಟ್ಟಾಗಿ ಹಿಡಿದು ಅಭಿಪ್ರಾಯಗಳನ್ನು ಕೊಟ್ಟಿದ್ದಾರೆ.

ಮೊದಲು ನಾವು ವಿಜಯನಗರ ಸ್ಥಾಪನೆಗೆ ಎಡೆಮಾಡಿಕೊಟ್ಟ ಸನ್ನಿವೇಶಗಳನ್ನು ಕುರಿತು ವಿಚಾರ ಮಾಡಬಹುದು. ೧೨೯೬ರಿಂದ ೧೩೩೬ರ ವರೆಗಿನ ಸುಮಾರು ನಲವತ್ತು ವರ್ಷಗಳ ಕಾಲ ಖಿಲ್ಜಿ ಮತ್ತು ತುಗಲಖ್ ಸಾಮ್ರಾಜ್ಯಗಳಿಂದಾಗಿ ಸೃಷ್ಟಿಯಾದ ಶಕ್ತಿಶೂನ್ಯತೆಯ ಫಲವಾಗಿ ದಕ್ಷಿಣಭಾರತದಲ್ಲಿ, ನಿರ್ದಿಷ್ಟವಾಗಿ ಕರ್ನಾಟಕದಲ್ಲಿ ವಿಜಯನಗರವು ಒಂದು ರಾಜಕೀಯ ಶಕ್ತಿಯಾಗಿ ಉದಿಸಿತು. ದಕ್ಷಿಣಭಾರತದ ಮೇಲೆ ಧಾಳಿಮಾಡಿದ ದೆಹಲಿ ಸುಲ್ತಾನಿಯ ಮೊದಲನೆಯ ಅರಸ ಅಲ್ಲಾವುದ್ದೀನ್ ಖಿಲ್ಜಿ (ಕ್ರಿ.ಶ. ೧೨೯೬-೧೩೧೬) ಆಗ ದಕ್ಷಿಣದಲ್ಲಿ ದೇವಗಿರಿಯ ಸೇವುಣರು, ವರಂಗಲ್ಲಿನ ಕಾಕತೀಯರು, ದ್ವಾರಸಮುದ್ರದ ಹೊಯ್ಸಳರು ಮತ್ತು ಮಧುರೆಯ ಪಾಂಡ್ಯರು ಸ್ಥಾಪಿಸಿಕೊಂಡಿದ್ದ ಶಕ್ತಿ ಸಮತೋಲನಕ್ಕೆ ಅವನಿಂದಾಗಿ ಅಪಾಯದ ಭೀತಿ ಒದಗಿತು. ಮುಹಮದ್-ಬಿನ್-ತುಗಲಖನ (ಕ್ರಿ.ಶ. ೧೩೨೫-೧೩೫೧) ಆಳಿಕೆಯಲ್ಲಿ ದಕ್ಷಿಣಭಾರತದ ಶಕ್ತಿಸಮತೋಲನವು ಇನ್ನಷ್ಟು ನಾಶವಾಯಿತು. ಒಂದು ಬಗೆಯ ಶೂನ್ಯತೆ ಆವರಿಸಿತು.

ದಕ್ಷಿಣಭಾರತಕ್ಕೆ ಅನ್ವಯಿಸಿದಂತೆ, ಖಿಲ್ಜಿ ಆಡಳಿತಕ್ಕೂ ತುಗಲಖ್ ಆಡಳಿತಕ್ಕೂ ನಡುವೆ ವ್ಯತ್ಯಾಸಗಳಿದ್ದುವು. ಖಿಲ್ಜಿ ಅರಸೊತ್ತಿಗೆಯು ಹಾಲಿ ಇದ್ದ ರಾಜ್ಯಗಳನ್ನೇ ಅಧೀನ ರಾಜ್ಯಗಳನ್ನಾಗಿ ಮಾಡಿಕೊಂಡರೆ, ತುಗಲಖ್ ಆಡಳಿತವು ಇರುವ ದೇಶೀಯ ರಾಜ್ಯಗಳನ್ನು ನಾಶಮಾಡಿ ನೇರವಾಗಿ ತನ್ನ ನಿಯಂತ್ರಣದಲ್ಲಿರುವ ಆಡಳಿತ ವ್ಯವಸ್ಥೆಯನ್ನು ಕಟ್ಟಲು ಪ್ರಯತ್ನಿಸಿತು. ರಾಜಧಾನಿಯನ್ನು ದೆಹಲಿಯಿಂದ ದೇವಗಿರಿಗೆ ವರ್ಗಾಯಿಸುವ ವಿಚಾರ ಬಂದದ್ದೇ ಈ ಹೊಸ ನೀತಿಯಿಂದ. ಪ್ರಸ್ತುತ ಇದ್ದ ದೇಶೀಯ ರಾಜ್ಯಗಳು ಸಂಪೂರ್ಣವಾಗಿ ಮೂಲೋತ್ಪಾಟನೆಗೊಂಡುವು. ಹೊಯ್ಸಳ ೩ನೇ ವೀರಬಲ್ಲಾಳ ಮಾತ್ರ ಇದಕ್ಕೆ ಅಪವಾದ. ಆದರೂ ತುಗಲಖ್ ಅರಸೊತ್ತಿಗೆಯು ದಕ್ಷಿಣದಲ್ಲಿ ರಾಜಕೀಯ ಸ್ಥಿರತೆಯನ್ನು ಮೂಡಿಸುವಲ್ಲಿ ವಿಫಲವಾಯಿತು. ಅದಕ್ಕೆ ಬದಲಾಗಿ, ತಕ್ಕಮಟ್ಟಿಗೆ ಇದ್ದ ಸ್ಥಿರತೆಯ ಜಾಗದಲ್ಲಿ ರಾಜಕೀಯ ಶೂನ್ಯತೆ ಉಂಟಾಯಿತು. ಈ ತೆರಪನ್ನು ತುಂಬಲು ಹಲವು ಬಗೆಯ ಸಾಹಸಿಗಳು, ಕ್ಷಯಿಸುತ್ತಿದ್ದ ರಾಜ್ಯಗಳು

ಕೈತಪ್ಪಿಹೋದವರು ದಕ್ಷಿಣಭಾರತದಲ್ಲೂ, ವಿಶೇಷವಾಗಿ ಕರ್ನಾಟಕದಲ್ಲೂ ಇದ್ದರು. ಅವರಲ್ಲಿ ಹರಿಹರ ಮತ್ತು ಬುಕ್ಕ ಬಹುಮುಖ್ಯರಾದವರು. ಅವರು ಕರ್ನಾಟಕದಲ್ಲಿ ಹುಟ್ಟಿ ದಕ್ಷಿಣಭಾರತದ ಇತರ ಭಾಗಗಳಿಗೆ ತನ್ನ ಪ್ರಭುತ್ವವನ್ನು ಹರಡಿಕೊಂಡ ಒಂದು ಸಾಮ್ರಾಜ್ಯಕ್ಕೆ ತಳಹದಿಯನ್ನು ಹಾಕಿದರು.

ಉತ್ತರದಿಂದ ಬಂದ ಧಾಳಿಕೋರರು ಸಂಸ್ಕೃತಿಯಲ್ಲೂ ಧರ್ಮದಲ್ಲೂ ದಕ್ಷಿಣದ ರಾಜರುಗಳಿಗಿಂತ ಬೇರೆಯಾಗಿದ್ದುದರಿಂದ, ಅದುವರೆಗೆ ತಮ್ಮ ಸಂಸ್ಕೃತಿಯನ್ನೂ, ಧಾರ್ಮಿಕ ವಿಶಿಷ್ಟತೆಯನ್ನೂ ರಕ್ಷಿಸಿದ್ದ ರಾಜಕೀಯ ಶಕ್ತಿಗಳು ದಿಢೀರನೆ ಕುಸಿದುಹೋದಾಗ ಜನರಿಗೆ ಬಹುಶಃ ಉತ್ಕಟವಾದ ಅಭದ್ರತೆಯ ಭಾವನೆ ಉಂಟಾಯಿತು. ಸಾಹಸಿಗಳು ಜನತೆಯ ಈ ಅಭದ್ರತೆಯ ಭಾವನೆಯನ್ನು ಉಪಯೋಗಿಸಿಕೊಂಡು, ತಮ್ಮದೇ ಆದ ಒಂದು ರಾಜ್ಯವನ್ನು ರೂಪಿಸಲು ಪ್ರಯತ್ನಿಸಿದರು. ಹಾಗಾಗಿ ಕರ್ನಾಟಕದಲ್ಲಿ ರಾಜ್ಯ ನಿರ್ಮಾಣಕ್ಕೆ ಜನರ ಧರ್ಮ ಮತ್ತು ಸಂಸ್ಕೃತಿಗಳ ರಕ್ಷಣೆ ಮತ್ತು ಪಾಲನೆ ಸ್ಫೂರ್ತಿಯ ಮೂಲವಾಗಿ ಪರಿಣಮಿಸಿತು. ವಿಜಯನಗರ ಸ್ಥಾಪನೆಯಲ್ಲಿ ವಿದ್ಯಾರಣ್ಯ ಸಂಪ್ರದಾಯವನ್ನು ಈ ಬೆಳಕಿನಲ್ಲಿ ವಿಶ್ಲೇಷಣೆ ಮಾಡಬೇಕು. ರಾಜ್ಯವೊಂದರ ನಿರ್ಮಾಣದಲ್ಲಿ ಒಬ್ಬ ಸಂತನ ಸಹಯೋಗದ ಸಂಪ್ರದಾಯವು ವಿಜಯನಗರಕ್ಕೇ ವಿಶಿಷ್ಟವಾದದ್ದೇನಲ್ಲ. ಅದು ಕರ್ನಾಟಕದಲ್ಲಿ ಬಹಳ ಹಿಂದಿನಿಂದಲೂ ಇದ್ದ ಸಂಪ್ರದಾಯವೇ. ಉದಾಹರಣೆಗೆ ಗಂಗವಂಶದ ಸ್ಥಾಪಕರಾದ ದಡಿಗ ಮತ್ತು ಮಾಧವರಿಗೆ ಸಿಂಹನಂದಿ ಮುನಿ ಸಹಾಯಮಾಡಿದರು; ಹೊಯ್ಸಳನಿಗೆ ಸುದತ್ತಮುನಿಯು ಸಹಾಯ ಮಾಡಿದರು ಇತ್ಯಾದಿ.

ವಿಜಯನಗರದ ಉದಯಕ್ಕೆ ತತ್ಕ್ಷಣದ ಮೊದಲು ಉತ್ತರ ಮತ್ತು ದಕ್ಷಿಣದ ರಾಜಕೀಯ ಶಕ್ತಿಗಳ ನಡುವೆ ಸಂಘರ್ಷಕ್ಕೆ ಧರ್ಮವು ಕಾರಣವಾಗಲಿಲ್ಲ. ಒಂದು ಉದಾಹರಣೆಯಿಂದ ಇದನ್ನು ನೋಡಬಹುದು. ಕಂಪಿಲದೇವ ಮತ್ತು ಅವನ ಮಗ ರಾಮನಾಥ ಇವರು, ಮುಹಮದ್ ಬಿನ್ ತುಗಲಖನ ಸೋದರಳಿಯ, ರಾಜಕುಮಾರ ಬಹಾವುದ್ದೀನ್ ಗುರ್ಷಸ್‌ನಿಗೆ ಆಶ್ರಯಕೊಟ್ಟು ಆ ಮಾತನ್ನು ಉಳಿಸಿಕೊಳ್ಳುವುದಕ್ಕಾಗಿ ತಮ್ಮ ರಾಜ್ಯವನ್ನೂ ಪ್ರಾಣವನ್ನೂ ಅಪಾಯಕ್ಕೆ ಒಡ್ಡಿದರು. ತುಗಲಖನು ಭಾರೀ ಸೈನ್ಯದೊಂದಿಗೆ ಆಕ್ರಮಣ ಮಾಡಿ ರಾಜ್ಯವನ್ನು ನಿರ್ನಾಮ ಮಾಡಿದರು. ಕಂಪಿಲಿ ಬಿದ್ದದ್ದಕ್ಕೆ ಕಾರಣ ಅವರು ಹಿಡಿದ ಶರಣಾಗತ ರಕ್ಷಣೆಯ ನೀತಿ. ಆದರೂ ವಿಜಯನಗರದ ಸ್ಥಾಪನೆಯ ಇತಿಹಾಸದಲ್ಲಿ ವಿದ್ವಾಂಸರು ಧಾರ್ಮಿಕ ಅಂಶವನ್ನು ಒತ್ತಿ ಹೇಳುವುದನ್ನು ನಾವು ನೋಡುತ್ತೇವೆ. ಉದಾಹರಣೆಗೆ, ೧೯೬೦ರಷ್ಟು ಈಚೆಗೆ, ಕೆ.ಎನ್.ಚಿಟ್ನಿಸ್ 'ಮೆಡೀವಲ್ ಇಂಡಿಯನ್ ಹಿಸ್ಟರಿ' ಎಂಬ ತಮ್ಮ ಕೃತಿಯನ್ನು ಬರೆಯುತ್ತಾ, ಅಲ್ಲಾವುದ್ದೀನ್ ಖಿಲ್ಜಿ, ಮಲ್ಲಿಕ್‌ಕಾಫರ್ ಮತ್ತು ಮುಹಮದ್-ಬಿನ್-ತುಗಲಖ್‌ರ ದಕ್ಷಿಣಭಾರತದ ದಾಳಿಗಳ ಪ್ರಭಾವವನ್ನು ವಿಚಾರ ಮಾಡಿ ಹೀಗೆ ಹೇಳುತ್ತಾರೆ: ''ಈ ಸಂಧಿಕಾಲದಲ್ಲಿ, ಹಿಂದೂಧರ್ಮ ಮತ್ತು ಹಿಂದೂಸಮಾಜ, ಸಂಸ್ಕೃತಿಗಳಿಗೆ ದಕ್ಷಿಣದಲ್ಲಿ ಆಪತ್ತು ಒದಗಿದ್ದಾಗ, ವಿಜಯನಗರ ಸಾಮ್ರಾಜ್ಯವು ತಲೆಯೆತ್ತಿತು, ಹಿಂದೂಧರ್ಮದ ರಕ್ಷಕ ತಡೆಗೋಡೆಯಾಗಿ ನಿಂತಿತು''[೭] ಬಿ.ಎ. ಸಾಲೆತೊರೆ[೮] ಮತ್ತು ಎಸ್.ಕೆ. ಅಯ್ಯಂಗಾರ್ ಕೂಡ ಮೊದಲು ಇದೇ ರೀತಿಯಾಗಿ ವಾದ ಮಾಡಿದ್ದರು. ಆದರೆ ಸ್ಥಾಪನೆಯಾದ ಮೇಲೆಯೂ ವಿಜಯನಗರವು ಹಿಂದೂಧರ್ಮವನ್ನು ಮಾತ್ರವೇ ಪೋಷಿಸಲಿಲ್ಲ. ಅದು ಧರ್ಮಾಂಧ ರಾಜ್ಯವಾಗಿರಲಿಲ್ಲ ಜೈನರು, ಕ್ರಿಶ್ಚಿಯನರು ಮತ್ತು ಮುಸ್ಲಿಮರು ಮೊದಲಾದ ಅಲ್ಪಸಂಖ್ಯಾತ ಸಮುದಾಯಗಳನ್ನೂ ಅಷ್ಟೇ ಮಟ್ಟಿಗೆ ಪೋಷಿಸಿತು. ಜೈನರು ವೈಷ್ಣವರಿಂದ ಹಿಂಸೆಗೊಳಗಾಗಿದ್ದಾಗ. ೧ನೇ ಬುಕ್ಕನು ಜೈನರ ಹಿತವನ್ನು ರಕ್ಷಿಸಿದನು. ವಿಜಯನಗರ ಸರಕಾರದಲ್ಲಿ ಮುಸ್ಲಿಮರನ್ನೂ ನೇಮಿಸಲಾಗಿತ್ತು. ರಾಜಧಾನಿಗಳಲ್ಲಿ ಮಸೀದಿಗಳನ್ನು ನಿರ್ಮಿಸಿಕೊಳ್ಳಲು ಅವರಿಗೆ ಅವಕಾಶ ನೀಡಲಾಗಿತ್ತು. ೨ನೇ ದೇವರಾಯ ಮತ್ತು ಕೃಷ್ಣದೇವರಾಯ ಕುಳಿತುಕೊಳ್ಳುತ್ತಿದ್ದ ಸಿಂಹಾಸನದ ಬಳಿ ಇಸ್ಲಾಂ ಧರ್ಮಕ್ಕೆ ಗೌರವ ಸೂಚಿಸುವುದರ ಕುರುಹಾಗಿ ಕೊರಾನ್ ಅನ್ನು ಇರಿಸಲಾಗಿತ್ತು. ಮುಸ್ಲಿಂ

ಅಧಿಕಾರಿಗಳು ತಮ್ಮ ಧರ್ಮಕ್ಕೆ ಗೌರವತೋರಿಸಲು ಇದರಿಂದ ಸಾಧ್ಯವಾಗಿತ್ತು. ಗೋವೆಯ ಕೊಂಕಣಿ ಕ್ರಿಶ್ಚಿಯನ್ನರು ಪೋರ್ಚುಗೀಸರಿಂದ ಕಿರುಕುಳಕ್ಕೊಳಗಾದಾಗ ಅವರಿಗೆ ಕರಾವಳಿಯಲ್ಲಿ ಆಶ್ರಯವನ್ನು ಕೊಡಲಾಯಿತು. ಈ ನಿದರ್ಶನಗಳಿಂದ ವಿಜಯನಗರವು ಸ್ಥಾಪನೆಯಾದದ್ದು ಕೇವಲ ಹಿಂದೂಧರ್ಮವನ್ನು ರಕ್ಷಿಸುವುದಕ್ಕಾಗಿ ಅಲ್ಲ ಎಂಬುದು ತಿಳಿಯುತ್ತದೆ. ಆದರೆ ಹಿಂದೂಧರ್ಮದ ವಿವಿಧ ಪಂಥ ಪಂಗಡಗಳು ಸಹಜವಾಗಿಯೇ ಅನುಸರಿಸುವವರ ಸಂಖ್ಯಾಬಲದಿಂದಾಗಿ ಹೆಚ್ಚಿನ ಸವಲತ್ತುಗಳನ್ನು ಪಡೆದುದೇನೋ ನಿಜ. ಆದರೆ ಇತರ ಧರ್ಮಗಳ ಹಿತವನ್ನು ಬಲಿಗೊಟ್ಟು ಅವಕ್ಕೆ ಹೆಚ್ಚಿನ ಒಲವು ತೋರಿಸಲಿಲ್ಲ. ಹಾಗಾಗಿ ಖಿಲ್ಜಿ ಮತ್ತು ತುಗಲಖ್ ಆಡಳಿತಗಳು ದಕ್ಷಿಣದಲ್ಲಿ ವಿಸ್ತರಣಗೊಂಡದ್ದಕ್ಕೆ ಪ್ರೇರಣೆ ರಾಜಕೀಯ ಮತ್ತು ಆರ್ಥಿಕ ಕಾರಣಗಳೇ ಹೊರತು ಧರ್ಮವಲ್ಲ ಎಂದು ಸ್ಪಷ್ಟವಾಗುತ್ತದೆ. ಆಗ ಉದಿಸಿದ ಬಿಸಿ ಹಿಂದೂ ರಾಜ್ಯಗಳಾದರೋ ತಮ್ಮ ಧರ್ಮದ ರಕ್ಷಣೆಗಿಂತ ಮಿಗಿಲಾಗಿ ರಾಜಕೀಯ ಆಶೋತ್ತರಗಳ ಕಡೆಗೆ ಕಾಳಜಿ ಹೊಂದಿದ್ದುವು.

ವಿಜಯನಗರ ಸ್ಥಾಪನೆಗೆ ಸಂಬಂಧಿಸಿದ ಎರಡನೆಯ ಸಮಸ್ಯೆ, ಸ್ಥಾಪಕರ ಪ್ರಾದೇಶಿಕ, ಭಾಷಾ ಮತ್ತು ಜಾತಿಗಳನ್ನು ಕುರಿತದ್ದು. ಸಂಗಮ ಸಹೋದರರು, ಮುಖ್ಯವಾಗಿ ಹರಿಹರ ಮತ್ತು ಬುಕ್ಕರೇ ವಿಜಯನಗರ ಸ್ಥಾಪನೆಗೆ ಕಾರಣರು ಎನ್ನುವುದರಲ್ಲಿ ವಿವಾದವಿಲ್ಲ.

ತೆಲುಗು ಮೂಲ

ವರಂಗಲ್ಲಿನ ಪ್ರತಾಪರುದ್ರನ ಬಳಿ ಹರಿಹರ ಮತ್ತು ಬುಕ್ಕ ಅಧಿಕಾರಿಗಳಾಗಿದ್ದರು. ಒಬ್ಬನು ಸಚಿವನಾಗಿದ್ದರೆ, ಇನ್ನೊಬ್ಬನು ಕೋಶಾಧಿಕಾರಿ. ಆ ರಾಜ್ಯವು ದೆಹಲಿಯ ಸುಲ್ತಾನನ ವಶವಾಗಲು ಅವರಿಬ್ಬರೂ ಕಂಪಿಲಿ ಅಥವಾ ಆನೆಗುಂದಿ ಪ್ರದೇಶಕ್ಕೆ ಹೋಗಿ ಅಲ್ಲಿ ಅಧಿಕಾರಿಗಳಾಗಿ ನೇಮಕಗೊಂಡರು. ಅದೂ ಮುಸ್ಲಿಮರ ಆಕ್ರಮಣಕ್ಕೆ ತುತ್ತಾಯಿತು. ಅವರಿಬ್ಬರನ್ನು ಬಂಧಿಸಿ ದೆಹಲಿಗೆ ಒಯ್ಯಲಾಯಿತು. ಅಲ್ಲಿ ಕೆಲವು ಕಾಲ ಅವರು ಸುಲ್ತಾನನ ಸೇವೆಯಲ್ಲಿದ್ದರು. ಆಮೇಲೆ ಸುಲ್ತಾನನು ಅವರನ್ನು ಕಂಪಿಲಿ-ಆನೆಗುಂದಿ ಪ್ರಾಂತಕ್ಕೆ ಆಡಳಿತಾಧಿಕಾರಿಗಳನ್ನಾಗಿ ಕಳುಹಿಸಿದನು. ದಕ್ಷಿಣಕ್ಕೆ ಬಂದವರೇ ದೆಹಲಿಯ ಸುಲ್ತಾನನ ಸಂಬಂಧವನ್ನು ಕಡಿದುಕೊಂಡು ಹರಿಹರ ಮತ್ತು ಬುಕ್ಕರು ಸ್ವತಂತ್ರವಾದ ರಾಜ್ಯವೊಂದನ್ನು ಸ್ಥಾಪಿಸಿದರು. ಅದೇ ವಿಜಯನಗರ.

ಈ ಕತೆಯು ರಾಜಕಾಲನಿರ್ಣಯ, ವಿದ್ಯಾರಣ್ಯ ಕಾಲಜ್ಞಾನ ಮೊದಲಾದ ಹದಿನಾರನೇ ಶತಮಾನದ ಮತ್ತು ಈಚಿನ ಕೃತಿಗಳಲ್ಲಿ ಉಕ್ತವಾಗಿದೆ. ಇತಿಹಾಸಜ್ಞರು ಈ ಯಾವ ಕೃತಿಗಳನ್ನು ಐತಿಹಾಸಿಕ ಗ್ರಂಥಗಳೆಂದು ಪರಿಗಣಿಸುವುದಿಲ್ಲ. ಏಕೆಂದರೆ ಅವು ಯಾವುವೂ ಸಮಕಾಲೀನ ಕೃತಿಗಳಲ್ಲ, ರಾಜ್ಯ ಸ್ಥಾಪನೆಯಾದ ಎಷ್ಟೋ ವರ್ಷಗಳ ನಂತರ ರಚಿಸಿದವು. ಸಂಗಮವಂಶಕ್ಕೆ ಸಂಬಂಧಪಟ್ಟ ಅನೇಕ ಶಿಲಾ ಮತ್ತು ತಾಮ್ರಶಾಸನಗಳು ಬೆಳಕಿಗೆ ಬಂದಿವೆ. ಅವು ಯಾವುದರಲ್ಲೂ ವಿಜಯನಗರ ಸ್ಥಾಪಕರು ತೆಲುಗು ಮೂಲದವರೆಂದು ಹೇಳಿಲ್ಲ. ವರಂಗಲ್ಲಿನ ಕಾಕತೀಯ ಪ್ರತಾಪರುದ್ರನ ಆಸ್ಥಾನದಲ್ಲಿದ್ದು ಬಂದವರೇ ಆಗಿದ್ದರೆ, ಯಾವುದಾದರೂ ಗ್ರಂಥದಲ್ಲಿ ಈ ಪ್ರಸ್ತಾಪವಿರುತ್ತಿತ್ತು. ಅದಕ್ಕೆ ಬದಲಾಗಿ ವಿಜಯನಗರದ ಮೊದಮೊದಲ ರಾಜರಿಗೂ ಆಂಧ್ರದೇಶದ ರಾಜರಿಗೂ ವೈರವಿತ್ತೆಂದು ಅನೇಕ ಶಾಸನಗಳಿಂದ ತಿಳಿಯುತ್ತದೆ. ಆದ್ದರಿಂದ ತೆಲುಗು ಮೂಲಕ್ಕೆ ಸಮರ್ಥನೆ ದೊರಕುವುದಿಲ್ಲ.

ಆಂಧ್ರಪ್ರದೇಶದ ನೆಲ್ಲೂರು ಜಿಲ್ಲೆಯ ಗೊಜಲವೀಡು ಗ್ರಾಮದಲ್ಲಿ ದೊರೆತ ೧೩೧೪ರ ಒಂದು ಶಾಸನವನ್ನು ಆಧಾರವಾಗಿಟ್ಟುಕೊಂಡು, ಈ ಮೊದಲನೆಯ ಬುಕ್ಕನು ಕಾಕತೀಯ ಪ್ರತಾಪರುದ್ರನ ಸಾಮಂತನಾಗಿದ್ದನೆಂದು ಕೆಲವು ವಿದ್ವಾಂಸರು ವಾದಿಸಿದ್ದಾರೆ. ಆದರೆ ವಾಸ್ತವವಾಗಿ ಶಾಸನದ ಮೂಲವನ್ನು

ಪರೀಕ್ಷಿಸಿ, ಪಠ್ಯವನ್ನು ಪರಿಶೀಲಿಸಿದಾಗ, ಅದರ ಕಾಲ ಶಕವರ್ಷ ೧೨೫೮, ೧೩೩೬ ಎಂಬುದು ಸ್ಪಷ್ಟವಾಗುತ್ತದೆ. ೧೩೨೩-೨೪ರಲ್ಲಿ ಬುಕ್ಕನು ಸ್ವತಂತ್ರವಾಗಿ ಆಳುತಿದ್ದನಾಗಿ ಈ ಶಾಸನದ ಆಧಾರದಿಂದ ವಿಜಯನಗರದ ಮೂಲಪುರುಷರು ಆಂಧ್ರರು ಎಂಬ ವಾದಕ್ಕೆ ಪುಷ್ಟಿ ದೊರಕುವುದಿಲ್ಲ.

ಕನ್ನಡ ಮೂಲ

ವಿಜಯನಗರ ಸಾಮ್ರಾಜ್ಯದ ಸಂಸ್ಥಾಪಕರು ಕರ್ನಾಟಕದವರು, ಕನ್ನಡಿಗರು ಎಂದು ಹೇಳಲು ಸಾಕಷ್ಟು ಐತಿಹಾಸಿಕ ಸಾಮಗ್ರಿ ದೊರೆಯುತ್ತದೆ. ದೆಹಲಿಯ ಸುಲ್ತಾನನು ತನ್ನ ಬಾಹುಬಲದಿಂದ ದಕ್ಷಿಣ ಭಾರತವೆಲ್ಲವನ್ನೂ ತನ್ನ ವಶಪಡಿಸಿಕೊಳ್ಳಲು, ಆಂಧ್ರ, ತಮಿಳುನಾಡು ಮತ್ತು ಕರ್ನಾಟಕಗಳಲ್ಲಿ ಜನರು ಅವನ ವಿರುದ್ಧವಾಗಿ ದಂಗೆಯೆದ್ದರು. ಈ ಬಂಡಾಯಗಳು ಬೇರೆ ಬೇರೆಯಾಗಿರಲಿಲ್ಲ. ನಾಯಕರು ಪರಸ್ಪರ ಸಂಪರ್ಕವಿರಿಸಿಕೊಂಡಿದ್ದು ತಮ್ಮ ಉದ್ದೇಶವನ್ನು ಈಡೇರಿಸಿಕೊಳ್ಳಲು ಸರ್ವತ್ಯಾಗಕ್ಕೂ ಸಿದ್ಧರಾಗಿದ್ದರು. ಹೀಗೆ ವಿದೇಶೀಯರ ವಿರುದ್ಧ ಹೋರಾಡಿದವರಲ್ಲಿ ಮುಖ್ಯನಾದವನು ಹೊಯ್ಸಳ ೩ನೇ ಬಲ್ಲಾಳ. ಅವನಿಗೆ ಚಳವಳಿಯ ನಾಯಕತ್ವ ವಹಿಸಲು ಅನೇಕ ಅನುಕೂಲತೆಗಳಿದ್ದುವು. ತುಂಗಭದ್ರಾ ನದಿಯ ದಕ್ಷಿಣದ ಪ್ರದೇಶಕ್ಕೆಲ್ಲಾ ಅವನೇ ಪ್ರಭುವಾಗಿದ್ದು ತಮಿಳುನಾಡು, ಕರ್ನಾಟಕಗಳ ಬಹುತೇಕ ಪ್ರದೇಶಗಳ ಮೇಲೆ ಅವನು ತನ್ನ ಅಧಿಕಾರವನ್ನು ಸ್ಥಾಪನೆ ಮಾಡಿದ್ದನು. ಅವನ ರಾಜ್ಯ ರಾಮೇಶ್ವರದವರೆಗೂ ವ್ಯಾಪಿಸಿತ್ತು. ಹಾಗೆಯೇ ಉತ್ತರದಲ್ಲೂ ಹಲವು ವಿಜಯಗಳನ್ನವನು ಸಾಧಿಸಿದ್ದನು. ಆಂಧ್ರಪ್ರದೇಶದಲ್ಲಿಯೂ ಅದೇ ಸಮಯಕ್ಕೆ ಅನೇಕ ರೆಡ್ಡಿ ಮುಖಂಡರು ವಿದೇಶಿ ಆಳಿಕೆಯ ವಿರುದ್ಧ ದಂಗೆಯೆದ್ದರು ಎಂಬುದಾಗಿ ಈಚಿನ ಸಂಶೋಧನೆಗಳು ವ್ಯಕ್ತಪಡಿಸಿವೆ. ಮುಸ್ಲಿಂ ಇತಿಹಾಸಕಾರರ ಪ್ರಕಾರ ಆ ಆಂದೋಲನದ ನಾಯಕತ್ವವನ್ನು ಪ್ರೋಲನಾಯಕ ಹಾಗೂ ಅವನ ತಮ್ಮನ ಮಗ ಕಾಸಯನಾಯಕ ವಹಿಸಿದ್ದರು. ಇವರಿಗೆ ಮುಮ್ಮಡಿ ಬಲ್ಲಾಳನೊಂದಿಗೆ ನಿಕಟ ಸಂಪರ್ಕವಿದ್ದಿತು, ಅವನಿಂದ ಹೆಚ್ಚಿನ ಪ್ರೋತ್ಸಾಹವನ್ನು ಪಡೆದಿದ್ದರು. ಈ ಬಂಡಾಯದ ಪರಿಣಾಮವಾಗಿ ೧೩೩೧ರ ವೇಳೆಗೆ ತೀರ ಪ್ರದೇಶದ ನೆಲ್ಲೂರು ಜಿಲ್ಲೆಯು ವಿದೇಶೀಯ ಆಡಳಿತದಿಂದ ಮುಕ್ತವಾಯಿತು.

೩ನೇ ಬಲ್ಲಾಳನ ಪ್ರಾಂತಾಧಿಕಾರಿಗಳು ಮತ್ತು ಸಾಮಂತರು ರಾಜ್ಯದ ಉತ್ತರ ಮತ್ತು ಪಶ್ಚಿಮ ಭಾಗಗಳಲ್ಲಿ ಕೋಟೆ ಕೊತ್ತಳಗಳನ್ನು ಭದ್ರಪಡಿಸಿಕೊಂಡು ವೈರಿಯು ನುಗ್ಗದಂತೆ ತಡೆಯೊಡ್ಡಲು ಕಾರ್ಯನಿರತರಾಗಿದ್ದರು. ಇವರಲ್ಲಿ ಪ್ರಮುಖರಾಗಿದ್ದವರು ಹರಿಹರ ಮತ್ತು ಅವನ ಸೋದರರು. ಕ್ರಿ.ಶ. ೧೩೩೬ರಿಂದ ಒಂದು ದಶಕದ ಕಾಲ ಹರಿಹರನು ಸೈನಿಕ ಚಟುವಟಿಕೆಗಳಲ್ಲಿ ಮಗ್ನನಾಗಿದ್ದನೆಂದು ಶಾಸನಗಳಿಂದ ತಿಳಿದುಬರುತ್ತದೆ. ಪೂರ್ವಪಶ್ಚಿಮ ಸಮುದ್ರಾಧೀಶ್ವರ ಎಂಬ ಬಿರುದನ್ನು ಧರಿಸಿ ಅವನು ಗುತ್ತಿಯಿಂದ ರಾಜ್ಯಭಾರ ಮಾಡುತ್ತಿದ್ದನೆಂದು ೧೩೩೯ರ ಒಂದು ಶಾಸನವು ಹೇಳುತ್ತದೆ. ೧೩೪೦ರ ಒಂದು ಶಾಸನವು ಹರಿಹರನ ಅಧಿಕಾರಿಯು ಬಾದಾಮಿಯಲ್ಲಿ ಒಂದು ಕೋಟೆಯನ್ನು ಕಟ್ಟಿಸುತ್ತಿದ್ದನೆಂದು ಹೇಳುತ್ತದೆ. ತುಂಗಭದ್ರೆಯ ಉತ್ತರಕ್ಕೆ ಇದ್ದ ಪ್ರದೇಶಗಳಲ್ಲೂ ಜನರು ಅವನ ಅಧಿಕಾರವನ್ನು ಒಪ್ಪಿಕೊಂಡಿದ್ದರು. ಅದೇ ವರ್ಷ ಹೊರಡಿಸಲಾದ ಮತ್ತೊಂದು ಶಾಸನವು ಹರಿಹರನ ಪೂರ್ಣಸಾರ್ವಭೌಮತ್ವದ ಬಿರುದುಗಳನ್ನು ಪಟ್ಟಿಮಾಡುತ್ತದೆ. ಕ್ರಿ.ಶ. ೧೩೪೨ರ ವೇಳೆಗೆ ಕೊಂಕಣ ಪ್ರದೇಶದಲ್ಲಿ ಹರಿಹರನ ಅಧಿಕಾರವನ್ನು ವಿರೋಧಿಸುವವರು ಯಾರೂ ಇರಲಿಲ್ಲವೆಂದೂ, ಹೊನ್ನಾವರದಲ್ಲಿದ್ದ ಮುಸ್ಲಿಂ ಅಧಿಕಾರಿಯೂ ಅವನಿಗೆ ಕಪ್ಪಕಾಣಿಕೆ ಸಲ್ಲಿಸುತ್ತಿದ್ದನೆಂದೂ ಇಬ್ನಬತೂತ ಹೇಳುತ್ತಾನೆ. ೧೩೪೩ರ ಒಂದು ಶಾಸನವೂ ಅವನ ಸಾರ್ವಭೌಮ ಬಿರುದುಗಳನ್ನು ಉದಹರಿಸುತ್ತದೆ. ೧೩೪೪ರ ಇನ್ನೊಂದು ಶಾಸನವು ಹರಿಹರನ ಸಹೋದರ ಬುಕ್ಕನು ಸಾರ್ವಭೌಮಿಕ ಬಿರುದುಗಳನ್ನು ಧರಿಸಿ ಒಂದು ಪ್ರಾಂತಕ್ಕೆ ಗವರ್ನರ್ ಆಗಿದ್ದನೆಂದು ತಿಳಿಸುತ್ತದೆ.

೧೩೪೬ರ ಶೃಂಗೇರಿ ಶಾಸನ ಈ ಸಂದರ್ಭದಲ್ಲಿ ಪರಿಗಣಿಸಬೇಕಾದ ಮುಖ್ಯವಾದೊಂದು ಶಾಸನ. ಹರಿಹರನು ದೇಶವನ್ನು ವಿದೇಶೀಯರ ಆಳಿಕೆಯಿಂದ ಮುಕ್ತಗೊಳಿಸಿ ವಿಜಯೋತ್ಸವವನ್ನು ಆಚರಿಸಲು ತನ್ನ ನಾಲ್ವರು ಸಹೋದರರೊಂದಿಗೆ ಶೃಂಗೇರಿಗೆ ಭೇಟಿನೀಡಿದನೆಂದೂ, ಅಲ್ಲಿಯ ಸ್ವಾಮಿ ಭಾರತೀತೀರ್ಥರಿಗೆ ಅನೇಕ ದಾನಧರ್ಮಗಳನ್ನು ಮಾಡಿದನೆಂದೂ ಶಾಸನವು ಹೇಳುತ್ತದೆ. ಎಲ್ಲರಿಗೂ ತಿಳಿದಿರುವ ಪರಂಪರೆಯಂತೆ ಹರಿಹರನು ಕ್ರಿ.ಶ. ೧೩೩೬ ಏಪ್ರಿಲ್ ೧೮ರಂದು ವಿಜಯನಗರದ ಶಂಕುಸ್ಥಾಪನೆಯನ್ನು ನೆರವೇರಿಸಿದನು. ಕೆಲವು ವಿದ್ವಾಂಸರು ಶೃಂಗೇರಿ ಶಾಸನವನ್ನು ಆಧರಿಸಿ ಆ ಕಾಲನಿರ್ಣಯ ಸರಿಯಲ್ಲವೆಂದು ವಾದಿಸುತ್ತಾರೆ. ಆದರೆ ಅವರ ವಾದ ನಿಲ್ಲುವುದಿಲ್ಲ. ಏಕೆಂದರೆ ಈ ಐತಿಹ್ಯಕ್ಕೂ ಶಾಸನದ ವಿಷಯಕ್ಕೂ ಪರಸ್ಪರ ವಿರೋಧವಾದ ಯಾವ ಅಂಶವೂ ಇಲ್ಲ. ಮತ್ತು ಅನೈತಿಹಾಸಿಕವೆಂದು ಹೇಳಿಕೊಳ್ಳುವಂಥ ಯಾವುದೂ ಅದರಲ್ಲಿಲ್ಲ. ಕ್ರಿ.ಶ. ೧೩೩೬ರ ವೇಳೆಗೆ ಹರಿಹರನಿಗೆ ಸಾಕಷ್ಟು ವಯಸ್ಸಾಗಿದ್ದಿತು, ಹೊಯ್ಸಳ ಸಾಮ್ರಾಜ್ಯವೂ ಆ ವೇಳೆಗೆ ಅವನತಿಯ ಹಾದಿಯನ್ನು ಹಿಡಿದಿತ್ತು. ವಿಶಾಲ ಹೊಯ್ಸಳ ರಾಜ್ಯದ ಉತ್ತರಭಾಗದ ಆಡಳಿತದ ಹೊಣೆ ಹೊತ್ತಿದ್ದ ಹರಿಹರನು ಕೇಂದ್ರಸರಕಾರವೂ ದೂರ ದಕ್ಷಿಣದಲ್ಲಿದ್ದುಕೊಂಡು ವಿಶಾಲವಾದ ಸಾಮ್ರಾಜ್ಯದ ಆಡಳಿತ ನಿರ್ವಹಿಸುವುದಾಗಲಿ ಉತ್ತರದಿಂದ ಪ್ರವಾಹದೋಪಾದಿಯಲ್ಲಿ ಬರುತ್ತಿದ್ದ ಮುಸ್ಲಿಂ ದಾಳಿಕೋರರನ್ನು ತಡೆಯುವುದಾಗಲಿ ಕಠಿಣವಾದ ಕೆಲಸವೆಂದು ಭಾವಿಸಿದನು. ಅವನು ಮಹಾಮಂಡಲೇಶ್ವರನಾಗಿಯೇ ಇದ್ದುಕೊಂಡು, ಬಹುಶಃ ತನ್ನ ಪ್ರಭುವಿನ ಅಪ್ಪಣೆ ಪಡೆದು ಒಂದು ರಾಜ್ಯವನ್ನು ಕಟ್ಟಲು ನಿಶ್ಚಯಿಸಿದನು. ಇದರಿಂದ ಶತ್ರುವಿನ ದಾಳಿಯನ್ನು ತಡೆಯಲು ಒಂದು ಅಡ್ಡಗೋಡೆಯನ್ನು ನಿರ್ಮಿಸಿದಂತಾಗಿ ತನ್ನ ಪ್ರಭುವಿನ ಶಕ್ತಿಯು ಮತ್ತಷ್ಟು ಹೆಚ್ಚುವುದೆಂದು ಅವನು ಯೋಚಿಸಿರಬೇಕು. ಹೀಗೆ ಸಣ್ಣಪ್ರಮಾಣದಲ್ಲಿ ನಡೆಸಿದ ಪ್ರಯತ್ನ ಕಾಲಕ್ರಮದಲ್ಲಿ ಹೆಮ್ಮರವಾಗಿ ಬೆಳೆಯಿತು. ಇದನ್ನೆಲ್ಲಾ ಗಮನಿಸಿದರೆ, ಹರಿಹರನು ಕ್ರಿ.ಶ. ೧೩೩೬ರಿಂದ ದಿನೇ ದಿನೇ ಪ್ರಗತಿ ಹೊಂದಿ, ಸಂಪತ್ಸಾಧನಗಳನ್ನು ರೂಢಿಸಿಕೊಂಡು ೧೩೪೨ರ ವೇಳೆಗೆ ಒಬ್ಬ ಮಹಾವ್ಯಕ್ತಿಯಾಗಿ ಬೆಳೆದನೆಂದು ಗೊತ್ತಾಗುತ್ತದೆ. ಅದು ೩ನೇ ಬಲ್ಲಾಳನ ಕೊನೆಯ ವರ್ಷವೂ ಆಗಿತ್ತು. ಅಲ್ಲಿಂದ ಮುಂದಕ್ಕೆ ಹೊಯ್ಸಳ ರಾಜ್ಯವು ಮುರಿದುಬಿದ್ದಿತು. ಕ್ರಿ.ಶ. ೧೩೪೩ರ ನಂತರದ ಶಾಸನಗಳು ಹೊಯ್ಸಳ ಆಡಳಿತದ ಬಗೆಗೆ ಏನನ್ನೂ ಹೇಳದಿರುವುದು ಗಮನಾರ್ಹವಾದ ವಿಷಯವಾಗಿದೆ. ಮುಂದಿನ ಮೂರುವರ್ಷಗಳ ಕಾಲ ಹರಿಹರನು ಹೊಯ್ಸಳ ಸಾಮ್ರಾಟರ ಪ್ರತಿನಿಧಿಯಾಗಿ ತನ್ನ ಅಧಿಕಾರವನ್ನು ಕ್ರೋಢೀಕರಿಸಿಕೊಂಡುದಲ್ಲದೆ, ಇಡೀ ದೇಶವನ್ನು ವಿದೇಶಿ ಶೃಂಖಲೆಗಳಿಂದ ಬಿಡಿಸಲು ಹೋರಾಟ ನಡೆಸಿದನು. ಶೃಂಗೇರಿ ಶಾಸನವು ತಿಳಿಸುವಂತೆ ಅವನ ಪ್ರಯತ್ನಗಳು ಕ್ರಿ. ಶ. ೧೪೪೬ರಲ್ಲಿ ಸಫಲವಾಗಿ, ಅವನೂ ಅವನ ಸಹೋದರರೂ ಒಟ್ಟಿಗೆ ಸೇರಿ ಹೊಸದಾಗಿ ವಿಜಯನಗರವನ್ನು ಸ್ಥಾಪಿಸಿದರು.

ಹರಿಹರನೂ ಅವನ ಸಹೋದರರೂ ಕನ್ನಡ ನೆಲದಲ್ಲಿ ಜನಿಸಿದವರು ಮತ್ತು ಹೊಯ್ಸಳ ಸಾಮ್ರಾಟರ ಉತ್ತರಾಧಿಕಾರಿಗಳು ಎಂದು ಪ್ರತಿಪಾದಿಸಲು ಅನೇಕ ಆಧಾರಗಳಿವೆ. ಹೊಯ್ಸಳರು ಯಾವ ಪ್ರದೇಶದಲ್ಲಿ ರಾಜರಾಗಿದ್ದರೋ ಅದೇ ಪ್ರದೇಶದಲ್ಲಿಯೇ ಯಾವುದೇ ಗಲಭೆ,ಗೊಂದಲ, ಘರ್ಷಣೆಗಳಿಲ್ಲದೆ ಅವರೂ ರಾಜರಾದರು. ಅಧಿಕಾರ ವರ್ಗಾವಣೆಯಲ್ಲಿ ಯಾವ ಹಿಂಸಾಕೃತ್ಯವೂ ಜರುಗಲಿಲ್ಲ. ಒಂದೇ ಕುಟುಂಬಕ್ಕೆ ಸೇರಿದವರು ಅಧಿಕಾರಕ್ಕೆ ಬಂದಂತಾಯಿತು. ರಾಜಕೀಯ ಮತ್ತು ಆಡಳಿತ ಕ್ಷೇತ್ರಗಳಲ್ಲಿ ಹೊಯ್ಸಳರು ಸನಾತನ ಧರ್ಮಕ್ಕನುಗುಣವಾಗಿ ಯಾವುದು ಮಿಗಿಲು ಎಂದು ಭಾವಿಸಿದರೋ ಅದನ್ನೇ ಹರಿಹರ ಮತ್ತು ಅವನ ಸಹೋದರರೂ ಎತ್ತಿಹಿಡಿದರು. ಹೊಯ್ಸಳರು ಹಾಕಿಕೊಟ್ಟ ಚೌಕಟ್ಟಿನಲ್ಲೇ ಅವರು ಆಡಳಿತ ನಡೆಸಿದರು. ಆಡಳಿತಾಂಗಗಳು ಮೊದಲಿನಂತೆಯೇ ಇದ್ದು, ಹಿಂದಿದ್ದ ಹೊಯ್ಸಳ ಅಧಿಕಾರಿಗಳೇ ಅವರವರ ಸ್ಥಾನಗಳಲ್ಲಿ ಮುಂದುವರಿದರು. ಹೊಯ್ಸಳ ಕುಲದೇವರಾದ ಹಂಪೆಯ ವಿರೂಪಾಕ್ಷ ಮತ್ತು ಬೇಲೂರು ಚೆನ್ನಕೇಶವರೇ ಸಂಗಮ ಸಹೋದರರಿಗೂ ಮನೆದೇವರುಗಳಾದರು. ಶೃಂಗೇರಿ ಗುರುಪೀಠದ ಬಗೆಗೂ ಅವರು

ಹೊಯ್ಸಳರಂತೆಯೇ ಭಕ್ತಿ ಗೌರವಗಳಿಂದ ನಡೆದುಕೊಂಡರು. ಮುಮ್ಮಡಿ ಬಲ್ಲಾಳನ ಸಮೀಪಬಂಧುವಾದ ಬೆಳ್ಳಪ್ಪನಾಯಕನು ಹರಿಹರನ ಮಗಳನ್ನು ಮದುವೆಯಾದುದರಿಂದ ಸಂಗಮ- ಹೊಯ್ಸಳ ನಿಕಟ ಸಂಬಂಧವೇರ್ಪಟ್ಟಿತು. ಹೊಯ್ಸಳ ವಂಶವು ಕೊನೆಗೊಂಡು, ತಾವು ಸ್ವತಂತ್ರರಾಗಿ ಆಳುತ್ತಿದ್ದ ಕಾಲದಲ್ಲೂ ಹೊಯ್ಸಳೇಶ್ವರರಿಗೆ ತಮ್ಮ ನಿಷ್ಠೆಯನ್ನು ತೋರಿಸುವುದಕ್ಕಾಗಿ ಮಹಾಮಂಡಲೇಶ್ವರ, ಒಡೆಯ ಇತ್ಯಾದಿ ಬಿರುದುಗಳನ್ನು ಧರಿಸಿದ್ದರು. ಇಮ್ಮಡಿ ದೇವರಾಯನ ಆಸ್ಥಾನಕವಿಯಾಗಿದ್ದ ಶ್ರೀನಾಥನು ತನ್ನ ಸ್ವಾಮಿಯನ್ನು ಕರ್ನಾಟಕ ಕ್ಷಿತಿನಾಥ ಎಂದು ಕರೆದಿದ್ದಾನೆ. ವಿಜಯನಗರದ ಅರಸರ ಅನೇಕ ಬಿರುದುಗಳು ಅವರ ಕನ್ನಡ ಮೂಲವನ್ನು ಸೂಚಿಸುತ್ತವೆ. ಆಂಧ್ರ ಮತ್ತು ತಮಿಳುನಾಡಿನಲ್ಲಿ ದೊರೆತಿರುವ ಶಾಸನಗಳಲ್ಲಿ ಕನ್ನಡ ಲಿಪಿಯೇ ಪ್ರಧಾನವಾಗಿ ಕಂಡುಬರುತ್ತದೆ. ಪೆದ್ದನನು ಕೃಷ್ಣದೇವರಾಯನನ್ನು 'ಕನ್ನಡ ರಾಜ್ಯ ರಮಾರಮಣ' ಎಂದು ಕೊಂಡಾಡಿದ್ದಾನೆ. ವಿಜಯನಗರದ ಅರಸರು ಕನ್ನಡದವರು ಎಂಬುದೇ ಪ್ರೊ. ಪಿ. ಬಿ. ದೇಸಾಯಿ ಅವರ ವಾದವೂ ಆಗಿದೆ. ಆದ್ದರಿಂದ ಅವರನ್ನು ಕನ್ನಡ ನೆಲದಿಂದ, ಕನ್ನಡ ಜನತೆಯಿಂದ ಅಗಲಿಸುವಂತಹ ಯಾವ ಆಧಾರವೂ ನಮಗೆ ದೊರಕುವುದಿಲ್ಲ.

ಇತ್ತೀಚೆಗೆ ಆಂಧ್ರದ ಕೆಲವು ಇತಿಹಾಸಕಾರರು ಕೂಡ ವಿಜಯನಗರದ ಸ್ಥಾಪಕರು ಕನ್ನಡಿಗರು ಎಂಬ ವಾದವನ್ನು ಒಪ್ಪಿಕೊಂಡಿದ್ದಾರೆ. ಉದಾಹರಣೆಗೆ ಆಂಧ್ರದ ಖ್ಯಾತ ಇತಿಹಾಸಜ್ಞ ಕೆ. ಸತ್ಯನಾರಾಯಣ ಅವರು ಹೀಗೆ ಹೇಳುತ್ತಾರೆ: ''ವಿಜಯನಗರದ ಸ್ಥಾಪಕರು ಕರ್ನಾಟಕದವರು. ಅನೇಕ ದಾನ ಶಾಸನಗಳು ಅವರನ್ನು ಕರ್ನಾಟಕದ ಅರಸರೆಂದೂ ಮತ್ತು ಅವರ ಅಧೀನ ಸಾಮಂತ ರಾಜರನ್ನು ಕರ್ನಾಟಕದ ಪ್ರಭುಗಳೆಂದೂ ಹೇಳುತ್ತವೆ. ವಿಜಯನಗರದ ಅರಸರು ತಮ್ಮ ಮನೆತನದ ದೈವ ವಿರೂಪಾಕ್ಷನ ಹೆಸರನ್ನು ಶಾಸನಗಳ ಕೊನೆಯಲ್ಲಿ ತಾಯ್ನುಡಿಯಾದ ಕನ್ನಡದಲ್ಲೆ ಹಾಕಿಸಿದ್ದಾರೆ. ಮೂರನೆಯ ಮನೆತನದ ಕೊನೆಯವರೆಗೂ ಅವರು ವಿರೂಪಾಕ್ಷನ ಹೆಸರಿನಲ್ಲೇ ಸಹಿ ಹಾಕಿರುವುದು ಸ್ಪಷ್ಟವಾಗಿದೆ. ಪೋರ್ಚುಗೀಸ್ ಪ್ರವಾಸಿಗರು ವರ್ಣಿಸಿರುವ ಹೊಸವರ್ಷದ ಹಬ್ಬದ ಆಚರಣೆಯು ಕನ್ನಡದ ಹೊಸವರ್ಷವೇ ಆಗಿತ್ತು. ಕರ್ನಾಟಕ ಭುವನೇಶ್ವರಿಯ ಕರ್ಣಕುಂಡಲಗಳು ಶಾಶ್ವತವಾಗಿರುವಂತೆ ಮಾಡಿದವರು (ಅಂದರೆ ಅವಳಿಗೆ ವೈಧವ್ಯ ಪ್ರಾಪ್ತಿಯಾಗದಂತೆ ಮಾಡಿದವರು) ಎಂದು ಶಾಸನಗಳು ಹೇಳುತ್ತವೆ.[೬]''

ವಿದ್ಯಾರಣ್ಯ

೧೪ನೆಯ ಶತಮಾನದಲ್ಲಿ ವಿಜಯನಗರ ಸಾಮ್ರಾಜ್ಯದ ಸ್ಥಾಪನೆಗೆ ಕಾರಣರಾದವರೆಂದು ಪ್ರಸಿದ್ಧರಾದ ಅದ್ವೈತಪಂಥದ ಯತಿ, ಶೃಂಗೇರಿ ಮಠಾಧೀಶ; ದರ್ಶನ, ಸಂಗೀತ ಮೊದಲಾದ ಕ್ಷೇತ್ರಗಳಲ್ಲಿ ಮಹತ್ ಕೃತಿಗಳನ್ನು ರಚಿಸಿರುವ ಪ್ರತಿಭಾನ್ವಿತ ವಿದ್ವಾಂಸ.

ವಿದ್ಯಾರಣ್ಯರನ್ನು ಕುರಿತು ಇತಿಹಾಸಕಾರರಲ್ಲಿ ಅನೇಕ ವಿವಾದಗಳಿವೆ.[೭] ಇಸ್ಲಾಂಧರ್ಮವನ್ನು ಸ್ವೀಕರಿಸಿದ್ದ ಹಕ್ಕ ಮತ್ತು ಬುಕ್ಕ ಎಂಬ ಸಹೋದರರನ್ನು ಇವರು ತಮ್ಮ ಗುರುಗಳ ಅನುಮತಿ ಪಡೆದು, ಹಿಂದೂಧರ್ಮಕ್ಕೆ ಮತಾಂತರಿಸಿ ಸಾಮ್ರಾಜ್ಯ ಸ್ಥಾಪನೆಗೆ ಪ್ರೇರಿಸಿದರು ಎಂದು ಕೆಲವು ಯೂರೋಪಿಯನ್ ಹಾಗೂ ಮುಸ್ಲಿಂ ಗ್ರಂಥಗಳು ಸೂಚಿಸುತ್ತವೆ. ಶಿಥಿಲವಾಗುತ್ತಿದ್ದ ಹಿಂದೂಧರ್ಮದ ಪುನರುದ್ಧಾರಕ್ಕೆ ಬಲಾಢ್ಯವಾದ ಹಿಂದೂ ರಾಜ್ಯದ ಆವಶ್ಯಕತೆಯಿದೆ ಎಂಬುದನ್ನು ಗಮನಿಸಿದ ವಿದ್ಯಾರಣ್ಯರು ತುಂಗಭದ್ರಾನದಿಯ ದಕ್ಷಿಣ ದಂಡೆಯ ಪಂಪಾಕ್ಷೇತ್ರದಲ್ಲಿ ಒಂದು ಪಟ್ಟಣವನ್ನು ಕಟ್ಟಿ ರಾಜ್ಯಸ್ಥಾಪನೆ ಮಾಡಬೇಕೆಂದು ಹರಿಹರ ಮತ್ತು ಬುಕ್ಕ ಸೋದರರನ್ನು ಪ್ರೋತ್ಸಾಹಿಸಿದರೆಂದೂ , ಅವರು ಆ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸಿ (೧೩೩೬) ಆ ನಗರವನ್ನು ತಮ್ಮ ಗುರುಗಳ ಹೆಸರಿನಲ್ಲಿ ವಿದ್ಯಾನಗರವೆಂದು ಕರೆದರೆಂದೂ ಮುಂದೆ ಅದೇ

ವಿಜಯನಗರವಾಯಿತೆಂದು ಚರಿತ್ರಕಾರರು ಹಲವಾರು ದೇಶೀಯ ಗ್ರಂಥಗಳ ಆಧಾರದಿಂದ ಊಹಿಸಿದ್ದಾರೆ. ೧೫ನೆಯ ಶತಮಾನದ ಕೊನೆ ಹಾಗೂ ೧೬ನೇ ಶತಮಾನದ ಹಲವು ಶಾಸನಗಳಲ್ಲೂ ಈ ವಿಷಯ ತಿಳಿದು ಬರುತ್ತದೆ.

ಆದರೆ ವಿದ್ಯಾರಣ್ಯರು ವಿಜಯನಗರ ಸ್ಥಾಪನೆಗೆ ಕಾರಣರಾದರೆಂಬ ವಿಷಯವು ಯಾವುದೇ ಸಮಕಾಲೀನ ಶಾಸನದಲ್ಲೂ ಉಕ್ತವಾಗಿಲ್ಲ. ಅಂದಿನ ಶಾಸನಗಳೆಲ್ಲವೂ ಪಾಶುಪತ ಪಂಥದ ಕ್ರಿಯಾಶಕ್ತಿ ಎಂಬುವರನ್ನೇ ರಾಜಗುರುಗಳೆಂದು ಹೆಸರಿಸುತ್ತವೆ. ಈ ಕಾರಣಗಳಿಂದ ಮೇಲೆ ಹೇಳಿರುವುದೆಲ್ಲ ಕಟ್ಟುಕತೆ ಎಂದು ಕೆಲವರು ಅಭಿಪ್ರಾಯ ಪಡುತ್ತಾರೆ. ಶೃಂಗೇರಿ ಮಠದ ಗುರುಪರಂಪರೆಯಲ್ಲಿ ವಿದ್ಯಾರಣ್ಯರು ೧೩೩೧ರಲ್ಲಿ ಸನ್ಯಾಸ ಸ್ವೀಕಾರ ಮಾಡಿದರೆಂದೂ ಅವರ ಗುರುಗಳಾದ ಭಾರತೀತೀರ್ಥರ ನಂತರ ೧೩೭೭ರಿಂದ ೧೩೮೬ರ ವರೆಗೆ ಪೀಠಾಧಿಪತಿಗಳಾಗಿದ್ದರೆಂದೂ ಉಲ್ಲೇಖಗಳಿವೆ. ವಿಜಯನಗರದ ಅರಸರು ಶೃಂಗೇರಿ ಮಠಕ್ಕೆ ವಿಶೇಷ ಗೌರವದ ಸ್ಥಾನವನ್ನು ಕೊಟ್ಟಿದ್ದರೆನ್ನುವುದು ಶಾಸನಗಳಿಂದ ವ್ಯಕ್ತವಾಗುತ್ತದೆ. ಸಾಮ್ರಾಜ್ಯದ ಎರಡನೆಯ ಅರಸನಾದ ೧ನೇ ಬುಕ್ಕನ ಹಲವು ಶಾಸನಗಳಲ್ಲಿ ವಿದ್ಯಾರಣ್ಯರ ಹೆಸರು ಕಂಡುಬರುತ್ತದೆ. ಇದನ್ನೆಲ್ಲ ಗಮನಿಸಿ ಕೆಲವು ವಿದ್ವಾಂಸರು, ವಿಜಯನಗರದ ಸ್ಥಾಪನೆಗೆ ಕಾರಣರಾದವರು ವಿದ್ಯಾರಣ್ಯರು; ಆದರೆ ಆಗ ಮತ್ತು ಸ್ಥಾಪನೆಯಾದ ತರುಣದಲ್ಲಿ ಅವರ ಗುರುಗಳೂ ಜೀವಿಸಿದ್ದುದರಿಂದ ಈ ಕಿರಿಯ ಯತಿಯ ಪ್ರಸ್ತಾಪ ಸಾಧುವಾಗುವುದಿಲ್ಲವೆಂಬ ಭಾವನೆಯಿಂದ ಶಾಸನಗಳಲ್ಲಿ ಅವರ ಹೆಸರು ಉಕ್ತವಾಗಿರುವುದಿಲ್ಲ ಎಂದು ಭಾವಿಸಿದ್ದಾರೆ. ವಿಜಯನಗರದ ಮೊದಲ ಶಾಸನಗಳಲ್ಲಿ ಬಹುಗೌರವ ವಿಶೇಷಣಗಳೊಂದಿಗೆ ಕಂಡುಬರುವ ಪಾಶುಪತಾಚಾರ್ಯ ರಾಜರಾಜಗುರು ಕಾಶೀವಿಲಾಸ ಕ್ರಿಯಾಶಕ್ತಿಯೇ ಮುಂದೆ ಅದ್ವೈತಿಯಾಗಿ ಶೃಂಗೇರಿ ಮಠದ ಪೀಠವನ್ನಲಂಕರಿಸಿದರೆಂಬ ಒಂದು ಅಭಿಪ್ರಾಯವೂ ಇದೆ.

ಈ ಕಾಲದಲ್ಲಿದ್ದ ಸುಪ್ರಸಿದ್ಧ ಗ್ರಂಥಕರ್ತ ಮಾಧವರೂ ಮತ್ತು ವಿದ್ಯಾರಣ್ಯರೂ ಒಬ್ಬರೋ ಅಥವಾ ಬೇರೆ ಬೇರೆ ವ್ಯಕ್ತಿಗಳೋ ಎನ್ನುವುದೂ ವಿವಾದದ ವಿಷಯವಾಗಿದೆ. ಕೆಲವು ವಿದ್ವಾಂಸರು, ವಿದ್ಯಾರಣ್ಯರೇ ಮಾಧವರೆಂದೂ ವೇದಭಾಷ್ಯಗಳನ್ನು ರಚಿಸಿದ ಸಾಯಣಾಚಾರ್ಯರ ಸೋದರರೆಂದೂ ಅಭಿಪ್ರಾಯ ಪಡುತ್ತಾರೆ. ಅಲ್ಲದೆ ಉಪನಿಷತ್ತುಗಳ ವ್ಯಾಖ್ಯಾನಕಾರರಾದ ಶಂಕರಾನಂದರ ಶಿಷ್ಯರಾಗಿರಬಹುದು ಎಂಬ ಪ್ರತೀತಿಯೂ ಇದೆ. ವಿದ್ಯಾರಣ್ಯ, ಗ್ರಂಥಕಾರ ಮಾಧವ ಮತ್ತು ವಿಜಯನಗರ ಸಾಮ್ರಾಜ್ಯದ ಪ್ರಾಂತಾಧಿಕಾರಿ ಯಾಗಿದ್ದ ಮಾಧವ ಒಬ್ಬನೇ ವ್ಯಕ್ತಿ ಎಂದೂ ಕೆಲವರು ಊಹಿಸಿದ್ದಾರೆ. ಆದರೆ ಈ ಅಭಿಪ್ರಾಯಕ್ಕೆ ಹೆಚ್ಚು ಮನ್ನಣೆ ದೊರಕಿಲ್ಲ.

ಸಂಪ್ರದಾಯದಲ್ಲಿ ಪ್ರಸಿದ್ಧರಾಗಿರುವ ವಿದ್ಯಾರಣ್ಯರು ಬಹುಮುಖ ಪ್ರತಿಭೆಯ ವ್ಯಕ್ತಿ. ಹಿಂದೂ ರಾಜ್ಯವೊಂದರ ಸ್ಥಾಪನೆಗೆ ಪ್ರೇರಕರೂ, ಸುಪ್ರಸಿದ್ಧ ಮಠಾಧಿಪತಿಗಳೂ ಆಗಿದ್ದರು. ಶಂಕರಾಚಾರ್ಯರ ನಂತರ ಅದ್ವೈತ ವೇದಾಂತವು ಪುಷ್ಟಿ ಪಡೆದದ್ದು ವಿಖ್ಯಾತ ವೈಚಾರಿಕರಾದ ಇವರಿಂದಲೇ. ವಿವರಣಾ ಸಂಪ್ರದಾಯ ಎಂದು ಕರೆಯುವ ಅದ್ವೈತ ಪರಂಪರೆಯನ್ನು ಸ್ಪಷ್ಟವಾಗಿ ನಿರೂಪಿಸಿ ಜನಪ್ರಿಯಗೊಳಿಸಿದವರು ವಿದ್ಯಾರಣ್ಯರು. ಅವರ 'ವಿವರಣಾಪ್ರಮೇಯ ಸಂಗ್ರಹ' ಈ ದೃಷ್ಟಿಯಿಂದ ಬಹು ಮಹತ್ವದ ಕೃತಿಯೂಗಿದೆ. ಅದ್ವೈತ ವೇದಾಂತ ಸಾರವನ್ನು ನಿರೂಪಿಸುವ ಪಂಚದಶೀ ಜೀವನ್ಮುಕ್ತಿ ವಿವೇಕ, ಅನುಭೂತಿ ಪ್ರಕಾಶ ಎಂಬ ಗ್ರಂಥಗಳನ್ನೂ ಇವರು ರಚಿಸಿದ್ದಾರೆ. ಸರ್ವದರ್ಶನ ಸಂಗ್ರಹ, ಜ್ಯೋತಿಷ ಕೃತಿ ಕಾಲನಿರ್ಣಯ, ಶಂಕರವಿಜಯಗಳೂ ಇವರ ಕೃತಿಗಳೇ ಎಂದು ಭಾವಿಸಲಾಗಿದೆ. ಅಲ್ಲದೆ ವಿದ್ಯಾರಣ್ಯರು ಸಂಗೀತಸಾರ (ಈಗ ದೊರೆತಿಲ್ಲ) ಎಂಬ ಸಂಗೀತ ಶಾಸ್ತ್ರಕೃತಿಯನ್ನು ರಚಿಸಿದ್ದಾರೆ. ಜನ್ಯ-ಜನಕರಾಗಗಳ ಮೊದಲ ನಿರೂಪಣೆ ಇದರಲ್ಲಿ ಕಂಡುಬರುವುದೆಂದೂ ಇವರ ನಿರೂಪಣೆಯಿಂದಾಗಿಯೇ ದಕ್ಷಿಣಾದಿ ಸಂಗೀತಕ್ಕೆ ಕರ್ನಾಟಕ ಸಂಗೀತ ಎಂಬ ಹೆಸರು ಬಂದಿತೆಂದೂ ಒಂದು ಅಭಿಪ್ರಾಯವಿದೆ. ವಿದ್ಯಾರಣ್ಯರು ವಿದ್ಯೆಯನ್ನು ಪ್ರೇಮಿಸುತ್ತಿದ್ದರೆಂದೂ, ತಮ್ಮ ಸಮಕಾಲೀನರಾಗಿದ್ದ

ವಿಶಿಷ್ಟಾದ್ವೈತ ವೇದಾಂತ ದೇಶಿಕರನ್ನೂ ದ್ವೈತ ಟೀಕಾಚಾರ್ಯರನ್ನೂ ಗೌರವಿಸಿದ್ದರೆಂದೂ ಹೇಳಲಾಗಿದೆ. ವಿದ್ಯಾರಣ್ಯರು ೧೩೮೬ರಲ್ಲಿ ಹಂಪೆಯಲ್ಲಿ ಮೃತರಾದರೆಂದೂ ಅವರ ಸಮಾಧಿಯು ವಿರೂಪಾಕ್ಷ ದೇವಾಲಯದ ಹಿಂಭಾಗದಲ್ಲಿದೆಯೆಂದೂ ಕೆಲವು ದಾಖಲೆಗಳು ತಿಳಿಸುತ್ತವೆ.

ಒಟ್ಟಿನಲ್ಲಿ, ಶಂಕರಾಚಾರ್ಯರು ಶೃಂಗೇರಿಯಲ್ಲಿ ಸ್ಥಾಪಿಸಿದ ಅದ್ವೈತಮಠಕ್ಕೆ ವಿದ್ಯಾರಣ್ಯರು ಅಧಿಪತಿಗಳಾಗಿದ್ದುದು ನಿಜ. ಆದರೆ ಅವರು ಆ ಪೀಠವನ್ನೇರುವ ವೇಳೆಗಾಗಲೆ ವಿಜಯನಗರ ಸ್ಥಾಪನೆಯಾಗಿ ಎರಡು ದಶಕಗಳು ಸಂದಿದ್ದುವು. ಮೇಲೆ ಉಲ್ಲೇಖಿಸಿದ ಶೃಂಗೇರಿ ಶಾಸನದಲ್ಲಿ ಹರಿಹರಾದಿಗಳಿಗೆ ಗುರುಗಳಾಗಿದ್ದವರು ಭಾರತೀತೀರ್ಥ ಶ್ರೀಪಾದರೆಂದಿದೆ. ಆ ಸಂದರ್ಭದಲ್ಲಿ ವಿದ್ಯಾರಣ್ಯರು ಶೃಂಗೇರಿಯಲ್ಲಿರಲೇ ಇಲ್ಲ. ೧೩೫೬ರ ಸುಮಾರಿಗೆ ೧ನೇ ಬುಕ್ಕನ ಪ್ರಾರ್ಥನೆಯ ಮೇರೆಗೆ, ಹಾಗೂ ವಿದ್ಯಾತೀರ್ಥರ ಆದೇಶದಂತೆ, ಆಗ ವಾರಣಾಸಿಯಲ್ಲಿದ್ದ ವಿದ್ಯಾರಣ್ಯರು ವಿಜಯನಗರಕ್ಕೆ ಬಂದು ಅಲ್ಲಿಂದ ಶೃಂಗೇರಿಗೆ ತೆರಳಿದರು. ಅವರು ಶೃಂಗೇರಿಯ ಮಠಾಧಿಪತ್ಯವನ್ನು ಸ್ವೀಕರಿಸಿದ್ದು ೧೩೭೫ರಲ್ಲಿ; ದೈವಾಧೀನರಾದದ್ದು ೧೩೮೬ರಲ್ಲಿ. ಅವರ ಕಾಲದಲ್ಲಿ ಬುಕ್ಕ ಮತ್ತು ೨ನೇ ಹರಿಹರರು ಶೃಂಗೇರಿಯ ಮಠಕ್ಕೆ ಅನೇಕಾನೇಕ ದತ್ತಿಗಳನ್ನು ಬಿಟ್ಟರು.

ಇದರಿಂದ ವಿಜಯನಗರ ಸಾಮ್ರಾಜ್ಯ ಸ್ಥಾಪನೆಯಾದ ಬಳಿಕ ಆ ಅರಸರ ಮೊದಲ ಗುರುಗಳಾಗಿದ್ದವರು ವಿದ್ಯಾತೀರ್ಥ ಶ್ರೀಪಾದರು ಎಂಬುದು ಸ್ಪಷ್ಟವಾಗುತ್ತದೆ. ಆಗಿನ್ನೂ ಕಿರಿಯ ಸನ್ಯಾಸಿಯಾಗಿದ್ದ ವಿದ್ಯಾರಣ್ಯರು ಅಧ್ಯಯನಕ್ಕಾಗಿ ವಾರಣಾಸಿಯಲ್ಲಿ ನೆಲೆಸಿದ್ದರು. ಆದ್ದರಿಂದ ವಿದ್ಯಾರಣ್ಯರನ್ನು ಕುರಿತು ಪ್ರಚಲಿತವಾಗಿರುವ ಕತೆಗಳಲ್ಲಿ ಐತಿಹಾಸಿಕ ಸತ್ಯವಿಲ್ಲ. ಶೃಂಗೇರಿಯ ಮಠಾಧಿಪತಿಗಳೇ ಅಲ್ಲದೆ ಕಾಳಾಮುಖ ಸಂಪ್ರದಾಯದ ಕಾಶೀವಿಲಾಸ ಕ್ರಿಯಾಶಕ್ತಿ ಎಂಬ ಮುನಿಗಳೂ ಸಹ ವಿಜಯನಗರ ಅರಸರಿಗೆ ಗುರುಗಳಾಗಿದ್ದರು. ಇವರನ್ನು ರಾಜಗುರುಗಳೆಂದೇ ಶಾಸನಗಳಲ್ಲಿ ಸಂಬೋಧಿಸಲಾಗಿದೆ.

ಟಿಪ್ಪಣಿಗಳು

೧ ಚಿಟ್ನಿಸ್ ಕೆ. ಎನ್.: ಮೆಡೀವಲ್ ಇಂಡಿಯನ್ ಹಿಸ್ಟರಿ, ನವದೆಹಲಿ, ೧೯೯೦, ಪು. ೨೯

೨ ಎಸ್.ಪಿ.ಎಲ್.ವಿ.ಇ., ಸಂಪುಟ ೧, ಪು. ೨೨ ಮತ್ತು ೨೪೯; ಎಸ್.ಕೆ.ಅಯ್ಯಂಗಾರ್: ಕಾಂಟ್ರಿಬ್ಯೂಷನ್ಸ್ ಆಫ್ ಸೌತ್ ಇಂಡಿಯಾ ಟು ಇಂಡಿಯನ್ ಕಲ್ಚರ್, ಪು. ೨೯೯; ವಿಜಯನಗರ ಸೆಕ್ಸೆಂಟಿನರಿ ಕಮ್ಮೆಮೊರೇಷನ್ ವಾಲ್ಯೂಮ್, ಪು. ೧೬

೩ ಸತ್ಯನಾರಾಯಣ, ಕೆ.: ಎ ಸ್ಟಡಿ ಆಫ್ ದಿ ಹಿಸ್ಟರಿ ಎಂಡ್ ಕಲ್ಚರ್ ಆಫ್ ದಿ ಆಂಧ್ರಾಸ್, ಸಂಪುಟ ೨, ನವದೆಹಲಿ, ೧೯೮೩, ಪು. ೨೨೫

೪ ಸಾಲತೊರೆ ಬಿ.ಎ.: ''ಥಿಯಾರೀಸ್ ಕನ್ಸರ್ನಿಂಗ್ ದಿ ಆರಿಜಿನ್ ಆಫ್ ವಿಜಯನಗರ'', ವಿಜಯನಗರ ಸೆಕ್ಸೆಂಟಿನರಿ ಕಮ್ಮೆಮೊರೇಷನ್ ವಾಲ್ಯೂಮ್, ಪು. ೧೪೯-೧೫೯; ಎಸ್. ಶ್ರೀಕಂಠಯ್ಯ, ''ವಿಜಯನಗರ ಎಂಡ್ ವಿದ್ಯಾರಣ್ಯ'', ಅದೇ, ಪು. ೧೬೧-೧೬೮

ಅಧ್ಯಾಯ : ಮೂರು

ವಿಜಯನಗರದ ಇತಿಹಾಸ

ದಕ್ಷಿಣಭಾರತದ ಇತಿಹಾಸದಲ್ಲಿ ಕ್ರಿ.ಶ. ೧೩೩೬ನೆಯ ವರ್ಷವು ಒಂದು ಮೈಲುಗಲ್ಲು. ಏಕೆಂದರೆ ವಿಜಯನಗರ ರಾಜ್ಯವು ಉದಿಸಿದ್ದು ಆ ವರ್ಷ. ಹೊಯ್ಸಳ ಮತ್ತು ಯಾದವ ವಂಶಗಳ ಉತ್ತರಾಧಿಕಾರಿಯಾಗಿ ಅದರ ಪ್ರಾರಂಭದ ಬೆಳವಣಿಗೆ ಕರ್ನಾಟಕದಲ್ಲಿ ಆಯಿತು. ತುಂಗಭದ್ರಾನದಿಯ ದಕ್ಷಿಣ ದಂಡೆಯುದ್ದಕ್ಕು, ಹಾಗೂ ಸ್ವಲ್ಪಮಟ್ಟಿಗೆ ಉತ್ತರ ದಂಡೆಯ ಸಣ್ಣಪುಟ್ಟ ಪ್ರದೇಶಗಳಿಗೆ ಅದು ವಿಸ್ತರಿಸಿತ್ತು. ಈ ಸಣ್ಣ ರಾಜ್ಯವು ಅನತಿಕಾಲದಲ್ಲೇ ಒಂದು ದೊಡ್ಡ ಸಾಮ್ರಾಜ್ಯವಾಗಿ ಇಡೀ ದಕ್ಷಿಣ ಭಾರತವನ್ನು ಆವರಿಸಿಕೊಂಡಿತು. ದಕ್ಷಿಣ ಭಾರತದಲ್ಲಿದ್ದ ಹಲವು ಸಣ್ಣಪುಟ್ಟ ರಾಜ್ಯಗಳು ಆ ವೇಳೆಗೆ ತುರ್ಕಿ, ಆಫ್ಘನ್ ಆಕ್ರಮಣಗಳ ಪರಿಣಾಮವಾಗಿ ಕ್ಷೀಣಿಸಿದ್ದುವು, ನಾಶಹೊಂದಿದ್ದುವು, ಕಾಲಗರ್ಭದಲ್ಲಿ ಮರೆಯಾಗಿಬಿಟ್ಟಿದ್ದುವು. ವಿಜಯನಗರವು ಈಗ ಒಂದು ಸಣ್ಣ ಭಾಷಾ ಪ್ರದೇಶಕ್ಕೆ ಸೀಮಿತವಾಗಿ ಉಳಿಯದೆ, ವಸ್ತುತಃ ದಕ್ಷಿಣದ ಒಂದು ಚಕ್ರಾಧಿಪತ್ಯದೆತ್ತರಕ್ಕೆ ಬೆಳೆಯಿತು. ಅದರ ಕೀರ್ತಿ-ಪ್ರಸಿದ್ಧಿ ನಮ್ಮ ಉಪಖಂಡದಷ್ಟಕ್ಕೆ ನಿಲ್ಲದೆ ದೂರ ದೇಶಗಳಿಗೂ ಹಾರಿತು, ವರ್ತಕರು, ಪ್ರವಾಸಿಗಳು ಈ ಬೃಹತ್ ರಾಜಕೀಯ ಶಕ್ತಿಯ ಕಡೆಗೆ ಕಣ್ಣು ತಿರುಗಿಸುವಂತೆ ಆಹ್ವಾನಿಸಿತು. ಅದಕ್ಕೆ ಅಂತರರಾಷ್ಟ್ರೀಯ ಖ್ಯಾತಿ ದೊರಕಿತು, ಪಶ್ಚಿಮ, ಪೂರ್ವ ಮತ್ತು ಆಗ್ನೇಯ ದಿಕ್ಕಿನ ದೇಶಗಳಿಂದ ಜನರನ್ನು ಈ ಭವ್ಯ ಸಾಮ್ರಾಜ್ಯವನ್ನು ಸಂದರ್ಶಿಸಲು ತೋಳು ಬೀಸಿ ಕರೆಯಿತು.

ವಿಜಯನಗರ ರಾಜ್ಯದ ಮೂಲವನ್ನು ಕುರಿತ ಪರಿಶೀಲನೆಯು ಈ ಅಧ್ಯಾಯದ ವ್ಯಾಪ್ತಿಗೆ ಬರುವುದಿಲ್ಲ.[೧] ಆದರೂ ಶೃಂಗೇರಿಯ ಮಠವು ನಿರ್ವಹಿಸಿದ ಪಾತ್ರವನ್ನು ಇಲ್ಲಿ ಪರಿಗಣಿಸಬೇಕು. ಹರಿಹರ ಸಹೋದರರು ಶೃಂಗೇರಿಯ ಪೀಠಸ್ಥರಾದ ಗುರುಗಳ ಬಗೆಗೆ, ವಿದ್ಯಾರಣ್ಯರೂ ಕೂಡಿದಂತೆ, ಅಪಾರವಾದ ಭಕ್ತಿ ಗೌರವಗಳನ್ನು ಇಟ್ಟುಕೊಂಡಿದ್ದರು. ಸಂಗಮನ ಐವರು ಪುತ್ರರು ಕ್ರಿ.ಶ. ೧೩೪೬ರಲ್ಲಿ ವಿಜಯನಗರದ ಸ್ಥಾಪನೆಯಾದ ಒಂದು ದಶಕದ ನಂತರ ಶೃಂಗೇರಿಗೆ ಹೋದರು.

ಬಳ್ಳಾರಿ, ಚಿಕ್ಕಮಗಳೂರು ಮತ್ತು ದಕ್ಷಿಣಕನ್ನಡ ಜಿಲ್ಲೆಗಳಲ್ಲಿ ಕಂಡುಬಂದ, ಸಂಗಮಕಾಲದ ಶಾಸನಗಳ ವಿಶ್ಲೇಷಣೆಯಿಂದ ಕೆಲವು ಸ್ವಾರಸ್ಯವಾದ ವಿವರಗಳು ವ್ಯಕ್ತವಾಗುತ್ತವೆ. ಹಂಪೆ ರಾಜಧಾನಿಯಾಗಿತ್ತು. ರಕ್ಷಕ ಕೋಟೆಯಿಂದ ಸುಭದ್ರವಾಗಿ ಉತ್ತಮವಾದ ಸ್ಥಳದಲ್ಲಿ ಇದ್ದುದು ಮಾತ್ರವಲ್ಲದೆ ಎಲ್ಲಾ ಪಕ್ಕಗಳಲ್ಲೂ ಇದ್ದ ವ್ಯಾಪಾರ ಕೇಂದ್ರಗಳೊಂದಿಗೆ ಸುಲಭವಾದ ಸಂಪರ್ಕವನ್ನು ಹೊಂದಿದ್ದಿತು. ಬಳ್ಳಾರಿ ಜಿಲ್ಲೆಯಲ್ಲಿ ಸಂಪೂರ್ಣವಾಗಿ ಸರ್ವೇಕ್ಷಣೆ ಇನ್ನೂ ನಡೆದಿಲ್ಲ. ಆದರೂ ಆ ಜಿಲ್ಲೆಯಲ್ಲಿ ಸಂಗಮವಂಶದ ದೊರೆಗಳ ೧೫ ಶಾಸನಗಳು ಕಂಡುಬರುತ್ತವೆ. ಚಿಕ್ಕಮಗಳೂರು ಜಿಲ್ಲೆಯಲ್ಲಾದರೆ ಸುಮಾರು ೪೦ ಶಾಸನಗಳು, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೨೦೦ಕ್ಕೂ ಹೆಚ್ಚು ಶಾಸನಗಳು ದೊರಕಿವೆ. ಅಧಿಕಾರವನ್ನು ತಮ್ಮ ಕೈಯಲ್ಲಿಟ್ಟುಕೊಂಡಿದ್ದ ದಳವಾಯಿಗಳು ಅಥವಾ ಸೇನಾನಾಯಕರು ತಮಗೆ ದೊರಕುವ ಸೈನ್ಯ ಮತ್ತು ಸಂಪನ್ಮೂಲಗಳನ್ನು ಕೂಡಿಸಿಕೊಂಡು ಧಾಳಿ ಮಾಡುವ ವೈರಿಯನ್ನು ಪ್ರತಿಭಟಿಸಬೇಕಾಗಿತ್ತು. ಸಂಗಮ ಸಹೋದರರಿಗೆ ಹೊಯ್ಸಳರ ನೈತಿಕ ಬೆಂಬಲ

ಇದ್ದಿತು. ಆದರೆ ಜನ ಮತ್ತು ಹಣ ಎರಡೂ ಅವರಿಗೆ ಅಗತ್ಯವಾಗಿ ಬೇಕಾಗಿದ್ದುವು.. ಚಿಕ್ಕ ಮಗಳೂರು ಜಿಲ್ಲೆಯ ಸುತ್ತುಮುತ್ತಿನ ಮಲೆನಾಡು ಪ್ರದೇಶದ ದಷ್ಟಪುಷ್ಟರಾದ ಜನರಿಂದ ಅವರಿಗೆ ಜನಬಲ ದೊರೆಯುತ್ತಿತ್ತು, ದಕ್ಷಿಣಕನ್ನಡ ಜಿಲ್ಲೆಯ ಶ್ರೀಮಂತ ವರ್ತಕ ಜನಾಂಗದಿಂದ ಆರ್ಥಿಕ ಬೆಂಬಲವೂ ದೊರಕುತ್ತಿತ್ತು. ಅಲ್ಲದೆ ಶೃಂಗೇರಿಯ ಮಠದ ಅನುಗ್ರಹ ಅವರಿಗಿತ್ತು. ಆ ಕಾಲಕ್ಕೆ ಅದು ಆ ಸ್ಥಳದ ಅತ್ಯಂತ ಪ್ರಭಾವಶಾಲಿಯಾದ, ಜನತೆಯ ಆಧ್ಯಾತ್ಮಿಕ ತೃಷೆಯನ್ನು ಪೂರೈಸುವಂತಹ ಧರ್ಮಸಂಸ್ಥೆಯಾಗಿತ್ತು.[೨]

ವಿದ್ಯಾರಣ್ಯ ಯತಿಯನ್ನು ಕುರಿತು ಒಂದು ಮಾತನ್ನು ಇಲ್ಲಿ ಹೇಳಿಬಿಡಬಹುದು. ಕ್ರಿ.ಶ. ೧೩೪೬ರ ಶಾಸನವೊಂದು ೧ನೇ ಹರಿಹರನ ಅತ್ಯಂತ ಪ್ರಸಿದ್ಧವಾದ ಶಾಸನ[೩] ಅವನು ತನ್ನ ತಮ್ಮ ಅಲ್ಲಪ್ಪ ದಣ್ಣಾಯಕ, ಹಾಗೂ ಅಳಿಯ ಸೊವಣ್ಣರೊಂದಿಗೆ ಶೃಂಗೇರಿಗೆ ಹೋದನು. ಈ ವರ್ಷದ ವೇಳೆಗೆ ಶತ್ರುಗಳನ್ನು ನಾಶಪಡಿಸಿ, ಸಾಮ್ರಾಜ್ಯವನ್ನು ಸ್ಥಾಪನೆ ಮಾಡುವ ತನ್ನ ಉದ್ದೇಶವನ್ನು ಅವನು ಸಾಧಿಸಿದ್ದನು. ಕ್ರಿ.ಶ. ೧೩೪೩, ೧೩೪೮ ಮತ್ತು ೧೩೫೩ರ ವೇಳೆಗೆ ಅವನು ತನ್ನ ಅಧಿಕಾರಿಗಳ ಮೂಲಕವಾಗಿ ಹಾಸನ, ಉತ್ತರಕನ್ನಡ ಮತ್ತು ಬಿಜಾಪುರ ಜಿಲ್ಲೆಗಳನ್ನು ಕೈವಶಪಡಿಸಿಕೊಂಡಿದ್ದನು.[೪] ಸಿಂಹಾಸನವನ್ನು ಏರಿದೊಡನೆಯೇ ೧ನೇಬುಕ್ಕನು ಕ್ರಿ.ಶ. ೧೩೫೬ರಲ್ಲಿ ಶೃಂಗೇರಿಗೆ ಭೇಟಿ ನೀಡಿದನು[೫] ವಿದ್ಯಾತೀರ್ಥ ಶ್ರೀಪಾದ ಗುರುಗಳಿಗೆ, ಸನ್ಯಾಸಿಗಳಿಗೆ ಅನ್ನದಾನ ಮಾಡುವುದಕ್ಕಾಗಿಯೂ ಮಠದ ಸೇವಕರುಗಳಿಗೆ ಜೀವನೋಪಾಯಕ್ಕಾಗಿಯೂ ಸಾಕಷ್ಟು ಧನವನ್ನು ದಾನ ಮಾಡಿದನು. ೨ನೇ ಹರಿಹರನು ಕ್ರಿ.ಶ ೧೩೮೦ರ ಶಾಸನ ಮಠದಲ್ಲಿರುವ ಕಡಿತವೊಂದರಲ್ಲಿ ಕಂಡುಬರುತ್ತದೆ. ಅದು ಒಂದು ತಾಮ್ರಫಲಕ ಶಾಸನದ ಪ್ರತಿ ಎಂದು ಹೇಳಲಾಗಿದೆ.[೬] ಇದು ೧ನೇ ಹರಿಹರನ ಮತ್ತು ೧ನೇ ಬುಕ್ಕ ಮೊದಲು ಮಾಡಿದ ಎರಡು ದಾನಗಳನ್ನು ಉಲ್ಲೇಖಿಸುತ್ತದೆ. ೧ನೇ ಬುಕ್ಕನ ಪ್ರಾರ್ಥನೆಯ ಮೇರೆಗೆ ವಿದ್ಯಾರಣ್ಯ ಶ್ರೀಪಾದರು ವಾರಣಾಸಿಯಿಂದ ಹಿಂದಿರುಗಿ ಬಂದು ವಿರೂಪಾಕ್ಷನ ಸನ್ನಿಧಿಯಲ್ಲಿ, ಅಂದರೆ ಹಂಪಿಯಲ್ಲಿ ಸ್ವಲ್ಪ ಕಾಲ ಇದ್ದು ಶೃಂಗೇರಿಗೆ ಬಂದರು ಎಂದು ಹೇಳುತ್ತದೆ. ಈ ಹೇಳಿಕೆಯನ್ನು ಅಲ್ಲಗಳೆಯುವಂತಹ ಅಂಶವೇನೂ ಶಾಸನದಲ್ಲಿ ಇಲ್ಲ. ಹೇಳಿಕೆಯು ವಿಶ್ವಾಸಾರ್ಹವಲ್ಲವೆಂದು ಒತ್ತಟ್ಟಿಗೆ ನೂಕುವಂತೆಯೂ ಇಲ್ಲ. ಶಾಸನದಲ್ಲಿ ಹೇಳಿರುವ ಹಿಂದಿನ ಎರಡು ದಾನಗಳ ವಿಚಾರವು ಮೂಲ ಶಾಸನಗಳಿಂದಲೇ ಸ್ಥಿರಪಟ್ಟಿರುವಾಗ ಈ ಶಾಸನದ ವಿಶ್ವಾಸಾರ್ಹತೆ ಇನ್ನೂ ಹೆಚ್ಚುತ್ತದೆ.

ಅರಸರು ಮಠಾಧೀಶರನ್ನು ಬಹು ಗೌರವದಿಂದ ನೋಡುತ್ತಿದ್ದರು. ರಾಜನು ವಿದ್ಯಾರಣ್ಯರ ಅನುಗ್ರಹದಿಂದ ಜ್ಞಾನ ಸಾಮ್ರಾಜ್ಯವನ್ನು ಸಂಪಾದಿಸಿದನು ಎಂದು ೨ನೇ ಹರಿಹರನು ಕ್ರಿ.ಶ. ೧೩೮೪ರ ಒಂದು ಶಾಸನದಲ್ಲಿ ಹೇಳುತ್ತಾನೆ.[೭] ೧೩೮೬ರ ಒಂದು ಶಾಸನದಿಂದ, ಇದೇ ರಾಜನು ಶೃಂಗೇರಿಯ ಮಹಾಜನರಿಗೆ, ಆ ವೇಳೆಗೆ ವಿಧಿವಶರಾಗಿದ್ದ (ಪರಿಪೂರ್ಣರಾದಲ್ಲಿ) ವಿದ್ಯಾರಣ್ಯ ಮುನಿಗಳ ನೆನಪಿನಲ್ಲಿ ಒಂದು ದಾನ ಮಾಡಿದನು ಎಂದಿದೆ.[೮] ಶ್ರೀ ವಿದ್ಯಾರಣ್ಯರ ಉತ್ತರಾಧಿಕಾರಿಯಾದ ಭಾರತೀತೀರ್ಥ ಶ್ರೀಪಾದರಿಗೆ ಗೌರವವನ್ನು ಅರ್ಪಿಸುವ ಸಲುವಾಗಿ ಚಿಕ್ಕ ಪರಿಹರನು (೨ನೇ ಹರಿಹರ) ಕ್ರಿ.ಶ. ೧೪೧೦ರಲ್ಲಿ ಶೃಂಗೇರಿಗೆ ಹೋದನು.[೯] ಇವುಗಳಿಂದ ವಿಜಯನಗರ ರಾಜ್ಯದ ಸಂಸ್ಥಾಪನೆಯಲ್ಲಿ ವಿದ್ಯಾರಣ್ಯ ಮುನಿಗಳು ಯಾವ ರೀತಿಯಲ್ಲೂ ನೇರವಾಗಿ ಸಂಬಂಧಪಟ್ಟಿರಲಿಲ್ಲವೆನ್ನುವುದು ಸೂಚಿತವಾಗುತ್ತದೆ.

ರಾಜಕೀಯ ಇತಿಹಾಸ

ವಿಜಯನಗರದ ಸ್ಥಾಪನೆಗೆ ಮೊದಲು ಎಷ್ಟೋ ಪೀಳಿಗೆಗಳವರೆಗೆ ದಕ್ಷಿಣದ ರಾಜ್ಯಗಳು ತಮ್ಮ ತಮ್ಮ ನಡುವೆಯೇ ಯುದ್ಧಗಳಲ್ಲಿ ನಿರತವಾಗಿದ್ದುವು. ಮೊದಮೊದಲು ನದಿಗಳ ಆಸುಪಾಸಿನ ಪ್ರದೇಶಗಳನ್ನು ಆಕ್ರಮಿಸಿಕೊಳ್ಳಲು ಈ ಹೋರಾಟ ನಡೆಯುತ್ತಿದ್ದುದರಿಂದ ಅವುಗಳಿಗೆ ಒಂದು ಆರ್ಥಿಕ ಹಿನ್ನೆಲೆ ಇರುತ್ತಿತ್ತು.

ಆದರೆ ಕ್ರಮೇಣ ಅದು ಆನುವಂಶಿಕ ಲಕ್ಷಣವಾಯಿತು. ಆರ್ಥಿಕತೆ ಮತ್ತು ಐಶ್ವರ್ಯಗಳಿಗಿಂತ ಹೆಚ್ಚಾಗಿ ಪರಸ್ಪರ ಮಾರಕವಾದ ಯುದ್ಧಗಳು ಮೇಲುಗೈ ಆದುವು. ಇತರರ ಮೇಲೆ ಪಾರಮ್ಯವನ್ನು ಗಳಿಸುವ ಬಯಕೆಯಿಂದ ರಾಜಕೀಯ ವೈಭವೀಕರಣವೂ ನಡೆಯುತ್ತಿತ್ತು. ನಂತರದ ಚೋಳರು ಮತ್ತು ಪಾಂಡ್ಯರ ನಡುವೆ, ಹೊಯ್ಸಳರು ಮತ್ತು ಸೇವುಣರ ನಡುವೆ, ಸೇವುಣರು ಮತ್ತು ಕಾಕತೀಯರ ನಡುವೆ ಯುದ್ಧಕ್ಕೆ ಕಾರಣವಾಗುತ್ತಿದ್ದುದು ಈ ಬಯಕೆಯೇ. ಅಲ್ಲಾವುದ್ದೀನ್ ಖಿಲ್ಜಿಯ ಪ್ರತಿನಿಧಿ ಮಲ್ಲಿಕ್ ಕಾಫರನು ನುಗ್ಗಿ ಬಂದದ್ದು ರಾಜ್ಯಾಕಾಂಕ್ಷೆಯಿಂದಲ್ಲ, ಲೂಟಿ ಹೊಡೆಯುವ ಉದ್ದೇಶದಿಂದ ಎನ್ನುವುದನ್ನು ಅವರು ಎಂದೂ ಯೋಚಿಸಲೇ ಇಲ್ಲ. ದಕ್ಷಿಣದಲ್ಲಿ ದೇವಾಲಯಗಳು ವಿದ್ಯಾಭ್ಯಾಸದ ಕೇಂದ್ರಗಳಾಗಿದ್ದುದ್ದು ಮಾತ್ರವಲ್ಲದೆ, ಅಮೂಲ್ಯ ಕೋಶಾಗಾರಗಳೂ ಆಗಿದ್ದುವು ಎಂಬುದು ನಮಗೆ ತಿಳಿದಿದೆ. ವೈರಿಯು ಒಂದು ದೇವಾಲಯವನ್ನು ನಾಶಮಾಡಿ, ಅಲ್ಲಿ ಸಂಗ್ರಹವಾಗಿದ್ದ ಅತ್ಯಮೂಲ್ಯ ಸಂಪತ್ತೆಲ್ಲವನ್ನು ಸುಲಭವಾಗಿ ದೋಚಿಕೊಂಡು ಹೋಗಬಹುದಾಗಿತ್ತು. ಧರ್ಮದ ಮೇಲೆಯೂ ಒತ್ತುಕೊಟ್ಟಿದ್ದಂತೆ ತೋರುವುದಿಲ್ಲ. ಆ ವೇಳೆಗೆ ಅನೇಕ ಅರಬ್ ಮತ್ತು ಪರ್ಷಿಯನ್ ವರ್ತಕರು ಭಾರತಕ್ಕೆ ಬಂದಿದ್ದರು, ಇಲ್ಲಿ ನೆಲೆಸಿಯೂ ಇದ್ದರು, ತಮ್ಮ ವೃತ್ತಿಯನ್ನು ಇಲ್ಲೇ ಮುಂದುವರೆಸಿದ್ದರು. ಅವರೂ ದೇವಾಲಯಕ್ಕೆ ಮುತ್ತಿಗೆ ಹಾಕಿ ಹಾಳುಗೆಡವಿದರು. ದಕ್ಷಿಣ ಭಾರತದಲ್ಲಿ ಹಿಂದೂಗಳಿಗೆ ದೇವಾಲಯ ಒಂದು ಧಾರ್ಮಿಕ ಕೇಂದ್ರ. ಅವರ ಜೀವನದ ಕೇಂದ್ರಬಿಂದು ಆಗಿತ್ತು. ಉದ್ದೇಶಗಳು ಬೇರೆ ಬೇರೆಯಾಗಿದ್ದುವು. ಫಲಮಾತ್ರ ಬೇರೆ. ವಿಜಯನಗರದ ಉದಯದಲ್ಲಿ ಅದು ಪರ್ಯವಸಾನಗೊಂಡಿತು.

ರಾಜ್ಯಸ್ಥಾಪನೆಯ ಕೀರ್ತಿಯು ೧ನೇ ಹರಿಹರನು ಮತ್ತು ೧ನೇ ಬುಕ್ಕನು ಎಂಬ ಇಬ್ಬರು ಸಹೋದರರಿಗೆ ಸಲ್ಲುತ್ತದೆ. ಇವರು ಸಂಗಮನ ಮಕ್ಕಳು. ಅವನಿಂದಾಗಿ ವಂಶಕ್ಕೇ ಸಂಗಮವಂಶವೆಂಬ ಹೆಸರು ಬಂದಿತು. ಸಾಮ್ರಾಜ್ಯದ ಭವ್ಯತೆಯು ಕ್ರಿ.ಶ. ೧೩೩೬ರಿಂದ ೧೫೬೫ರ ವರೆಗೆ ಪ್ರಸರಿಸಿತ್ತು, ೨೨೦ ವರ್ಷಗಳ ಬಹು ದೀರ್ಘವಾದ ಅವಧಿ. ಆಮೇಲೆ ಘನತೆ ಗೌರವ ಕಡಿದುಹೋಗಿ ೧೭ನೆಯ ಶತಮಾನದ ಕೊನೆಯವರೆಗೂ ಕುಟುಕು ಜೀವವನ್ನು ಉಳಿಸಿಕೊಂಡಿತ್ತು. ಖಚಿತವಾಗಿ ಹೇಳಬೇಕೆಂದರೆ ಕ್ರಿ.ಶ. ೧೬೮೧ರಲ್ಲಿ ಕೊನೆಯ ರಾಜನು (ಕೇವಲ ಹೆಸರಿಗಷ್ಟೇ ರಾಜನು) ಕೊನೆಯುಸಿರೆಳೆದನು. ನಾಲ್ಕು ರಾಜವಂಶಗಳು ಆಳಿದುವು-ಸಂಗಮ, ಸಾಳುವ, ತುಳುವ ಮತ್ತು ಅರವೀಡು. ಹೊರಗಿನ ಅಧಿಕಾರ, ಕೀರ್ತಿಗಳು ಎಷ್ಟೇ ಇದ್ದರೂ, ಹೆಚ್ಚುಕಡಮೆ ಈ ಎಲ್ಲ ವಂಶಗಳೂ ಸಿಂಹಾಸನಕ್ಕಾಗಿ ಹೋರಾಡಿದುವು. ಹಿಂದೆ ಪಡೆದ ಗೆಲುವುಗಳು, ಅಪಾರ ಸಂಪತ್ತಿನ ಸಂಗ್ರಹ ಇವುಗಳಿಂದಾಗಿ ಪ್ರತಿಯೊಬ್ಬ ರಾಜನು ಸತ್ತಾಗಲೂ, ಸಿಂಹಾಸನಕ್ಕೆ ಒಬ್ಬನಲ್ಲ. ಹಲವಾರು ಹಕ್ಕುದಾರರು ತಲೆಯೆತ್ತುತ್ತಿದ್ದರು. ನಿರಾಶೆಗೊಂಡವರು ಹಲವಾರು ಮುಖಂಡರ ಮನಸ್ಸಿನಲ್ಲಿ ನಿಷ್ಠಾಹೀನತೆಯ ಬೀಜವನ್ನು ಬಿತ್ತುತ್ತಿದ್ದರು. ರಾಜನು ಇಂಥವರ ಮೂಲಕವೇ ಅಗಾಧವಾದ ಸಾಮ್ರಾಜ್ಯವನ್ನು ಆಳಬೇಕಾಗಿತ್ತು, ಅಧಿಕಾರವನ್ನು ತನ್ನ ಹಿಡಿತದಲ್ಲಿಟ್ಟುಕೊಳ್ಳಬೇಕಾಗಿತ್ತು. ನಾಯಂಕರ ಪದ್ಧತಿಯು ಜಾರಿಗೆ ಬಂದಿತು. ಅಧಿಕಾರವು ವಿಕೇಂದ್ರೀಕೃತನಾಗಿ ನಾಯಕರೆಂದು ಕರೆಸಿಕೊಡ ಹಲವು ಮುಖ್ಯಸ್ಥರು ತಮ್ಮ ತಮ್ಮ ಅಧಿಕಾರ ವ್ಯಾಪ್ತಿಯ ಪ್ರದೇಶಗಳ ಮೇಲೆ ಸಂಪೂರ್ಣ ಹಿಡಿತವನ್ನು ಇಟ್ಟುಕೊಂಡಿದ್ದರು. ಕಪ್ಪಕಾಣಿಕೆಗಳನ್ನು ಸಲ್ಲಿಸುವುದರ ಮೂಲಕ ತಮ್ಮ ರಾಜಭಕ್ತಿಯನ್ನು ತೋರಿಸುತ್ತಿದ್ದರು.

೧ನೇ ಹರಿಹರನು (೧೩೩೬-೫೬)ನಿಗೆ ನಾಲ್ವರು ತಮ್ಮಂದಿರು. ೧ನೇ ಬುಕ್ಕ, ಕಂಪಣ್ಣ, ಮಾರಪ್ಪ ಮತ್ತು ಮುದ್ದಪ್ಪ. ಇವರಲ್ಲಿ ಮೊದಲನೆಯವನಾದ. ೧ನೇ ಬುಕ್ಕನು ಅಣ್ಣನೊಂದಿಗೆ ರಾಜ್ಯದ ಸ್ಥಾಪನೆ ಮತ್ತು ವಿಸ್ತರಣೆಗಳಲ್ಲಿ ಪಾಲುಗೊಂಡನು. ಹರಿಹರನಿಗೆ ಹೊಯ್ಸಳ ೩ನೇ ಬಲ್ಲಾಳನ ಅನುಗ್ರಹವಿದ್ದಿತು. ಅವನು ತನ್ನ ಕಷ್ಟಕರವಾದ ಪರಿಸ್ಥಿತಿಯನ್ನು ಅರ್ಥಮಾಡಿಕೊಂಡು, ತನ್ನ ಮಗ ವಿರೂಪಾಕ್ಷ ೪ನೇ ಬಲ್ಲಾಳನು ಪರಿಸ್ಥಿತಿಯನ್ನು ನಿಭಾಯಿಸಲು ತೀರಾ ಅಸಮರ್ಥ ಎಂದು ಮನಗಂಡು, ತನ್ನ ಸಮಸ್ತ ಅಧಿಕಾರವನ್ನು

ಹರಿಹರನಿಗೆ ಒಪ್ಪಿಸಿಕೊಟ್ಟನು. ಕ್ರಿ.ಶ. ೧೩೪೨ರಲ್ಲಿ ೩ನೇ ಬಲ್ಲಾಳನು ಕಣ್ಮರೆಗೊಂಡಾಗ, ಆ ವರ್ಷವೇ ಸುಭದ್ರವಾಗಿ ವಿಜಯನಗರದ ತಳಹದಿಯನ್ನು ಹಾಕಲಾಯಿತು. ಆದರೆ ನಾಲ್ಕೇ ವರ್ಷಗಳಲ್ಲಿ ಅಲ್ಲಾವುದ್ದೀನ್-ಬಹ್ಮನ್‌ಶಹಾನು ಬಹಮನಿ ರಾಜ್ಯವನ್ನು ಸ್ಥಾಪಿಸಿದನು. ಅವನು ಹರಿಹರನ ಮೇಲೆ ಸೇನಾಸಮೇತ ಮುಬಾರಕ್ ಖಾನನನ್ನು ಕಳುಹಿಸಿಕೊಟ್ಟನು. ಆದರೆ ಅದು ವ್ಯರ್ಥ ಸಾಹಸವಾಯಿತು, ಮುಬಾರಕ್‌ಖಾನನು ಶರಣಾಗತನಾಗಬೇಕಾಯಿತು. ಆಮೇಲೆ ಸುಲ್ತಾನನೇ ಯುದ್ಧಕ್ಕೆ ಬಂದನು. ಅವನೂ ಸೋಲಿನ ಅಪಮಾನವನ್ನು ನುಂಗಬೇಕಾಯಿತು. ೧ನೇ ಹರಿಹರನೂ ಮುಂದೆ ಅವನ ವಂಶಜ ೨ನೇ ದೇವರಾಯನ ವರೆಗೆ ಎಲ್ಲರೂ ಮಹಾಮಂಡಲೇಶ್ವರ ಎಂಬ ಬಿರುದನ್ನು ಧರಿಸಿದರು. ಪ್ರಾಂತೀಯ ರಾಜ್ಯಪಾಲನಾಗಿರುವ ಅಧೀನ ಪದವಿಯನ್ನು ಅದು ಸೂಚಿಸುತ್ತಿತ್ತು. ಆದರೆ ಅದನ್ನು ಅವರು ಒಂದು ವಿಶೇಷ ಸವಲತ್ತು ಎಂಬಂತೆ ಸ್ವೀಕರಿಸಿದ್ದಂತೆ ತೋರುತ್ತದೆ. ಮೂಲಭೂತನಾಗಿ ಅವರು ಹೊಯ್ಸಳ ೩ನೇ ಬಲ್ಲಾಳನಿಗೆ ರಾಜನಿಷ್ಠೆಯನ್ನು ತೋರಿಸಬೇಕಾಗಿತ್ತು. ಶೃಂಗೇರಿಯ ಧರ್ಮಗುರುಗಳು ಅವರಿಗೆ ಆಧ್ಯಾತ್ಮಿಕ ಮಾರ್ಗದರ್ಶನ ನೀಡುತ್ತಿದ್ದರು. ಆದರೆ ಅವರ ಶಾಸನಗಳು ಶೈವಧರ್ಮದ ಪಾಶುಪತಪಂಥಕ್ಕೆ ಸೇರಿದ ಕಾಶೀವಿಲಾಸ ಕ್ರಿಯಾಶಕ್ತಿ ಎಂಬ ಸಂತರನ್ನು ಉಲ್ಲೇಖಿಸುತ್ತವೆ. ಇವರು ಸಂಗಮ ರಾಜರ ಕುಟುಂಬ ಪುರೋಹಿತರಾಗಿದ್ದರೆಂದು ಭಾವಿಸಬಹುದು. ಹಂಪಿಯ ವಿರೂಪಾಕ್ಷದೇವನು ಅವರ ಮನೆತನದ ದೇವರು. ಈ ವಂಶದ ಮೊದಲ ಅರಸರ ಅನೇಕ ಶಾಸನಗಳಲ್ಲಿ ರಾಜನ ಸಹಿ-ಮುದ್ರೆ "ಶ್ರೀ ವಿರೂಪಾಕ್ಷ" ಎಂದಿದೆಯೇ ಹೊರತು ರಾಜನ ವ್ಯಕ್ತಿಗತವಾದ ಹೆಸರು ಇರುವುದಿಲ್ಲ. ಹರಿಹರನಿಗೆ ಅವನ ಸೋದರರ ಸಹಕಾರ ದೊರಕಿತು. ಅವರನ್ನು ಬೇರೆ ಬೇರೆ ಪ್ರಾಂತಗಳ ಗವರ್ನರುಗಳನ್ನಾಗಿ ನೇಮಿಸಲಾಗಿತ್ತು. ಕಂಪಣ್ಣನು ಆಂಧ್ರಪ್ರದೇಶದ ನೆಲ್ಲೂರು ಮತ್ತು ಕಡಪಾ ಜಿಲ್ಲೆಗಳನ್ನು ಒಳಗೊಂಡ ಉದಯಗಿರಿ ರಾಜ್ಯದ ರಾಜ್ಯಪಾಲನಾದನು. ಯುವರಾಜನಾದ ಬುಕ್ಕನು ದೋರಸಮುದ್ರದಲ್ಲಿ ಇದ್ದುಕೊಂಡು ರಾಜ್ಯದ ಮಧ್ಯಪ್ರಾಂತವನ್ನು ಆಳುತ್ತಿದ್ದನು. ಮಾರಪ್ಪನು ಪಶ್ಚಿಮ ಕರಾವಳಿ ಪ್ರದೇಶವಾದ ಮಲೆ ರಾಜ್ಯದ ರಾಜ್ಯಪಾಲನಾಗಿದ್ದನು. ಅವನ ರಾಜಧಾನಿ ಚಂದ್ರಗುತ್ತಿ. ಮುದ್ದಪ್ಪನು ಮುಳಬಾಗಲಿನಿಂದ ಆಡಳಿತ ನಡೆಸುತ್ತಿದ್ದನು. ಆದರೆ ಅವನು ಅಕಾಲಮರಣವನಪ್ಪಿದಂತೆ ತೋರುತ್ತದೆ. ಅವನು ದೃಢ ನಿರ್ಧಾರದ, ದೂರದೃಷ್ಟಿಯಿದ್ದ ವ್ಯಕ್ತಿ. ಅಪ್ರತಿಮ ಜಯಶಾಲಿಯೂ ಸಮರ್ಥನಾಯಕನೂ ಸಂಘಟನ ಶಕ್ತಿಯುಳ್ಳವನೂ ಆಗಿದ್ದನು. ಮಧುರೆಯ ಸುಲ್ತಾನ ಹಾಗೂ ಉತ್ತರ ಆರ್ಕಾಟಿನಲ್ಲಿ ಪಡೈ ವೀಡಿನ ನಾಯಕ ಸಂಬುವರಾಯ ಇಬ್ಬರೂ ತಮ್ಮ ಸಂಸ್ಥಾನಗಳನ್ನು ಉಳಿಸಿಕೊಂಡರು. ಮುಂದೆ ೧ನೇ ಬುಕ್ಕನ ಮಗ ೨ನೇ ಕಂಪಣ್ಣ ದಂಡೆತ್ತಿ ಹೋಗಿ ಅವರನ್ನು ಗೆದ್ದನು. ಹರಿಹರನು ರಾಜ್ಯವನ್ನು ಸ್ಥಾಪಿಸಿದುದು ಮಾತ್ರವಲ್ಲದೆ, ಉತ್ತಮ ಸರಕಾರವನ್ನು ರೂಪಿಸಿ, ರಾಜ್ಯದಲ್ಲಿ ಶಾಂತಿ ಸುಭದ್ರತೆಗಳು ನಿಲ್ಲುವಂತೆ ಮಾಡಿ, ಅನಾಯಕ ಸ್ಥಿತಿಯನ್ನು ಹೋಗಲಾಡಿಸಿ ಸುವ್ಯವಸ್ಥೆಯನ್ನು ಮೂಡಿಸಿದ ಕೀರ್ತಿಯೂ ಅವನಿಗೆ ಸಲ್ಲುತ್ತದೆ.

೧ನೇ ಬುಕ್ಕ (೧೩೫೬-೭೭), ಅಣ್ಣನ ನಂತರ ಸಿಂಹಾಸನಕ್ಕೆ ಬಂದನು. ಹರಿಹರನಿಗೆ ಮಕ್ಕಳಿರಲಿಲ್ಲವೆನ್ನುವುದು ಸ್ಪಷ್ಟವಾಗುತ್ತದೆ. ಆಡಳಿತ ಸೂತ್ರವನ್ನು ವಹಿಸಿಕೊಳ್ಳುವ ವೇಳೆಗಾಗಲೆ ಬುಕ್ಕನು ರಾಜಕಾರಣದಲ್ಲಿ ಸಾಕಷ್ಟು ಪಳಗಿದ್ದನು. ರಾಜ್ಯದ ಸ್ಥಾಪನೆಯಲ್ಲಿ ಅಣ್ಣನೊಂದಿಗೆ ಸೇರಿದ್ದುದರಿಂದ ವಸ್ತುತಃ ಅವನು ಜೊತೆ ಅರಸನಾಗಿಯೇ ವರ್ತಿಸಿದ್ದನು. ಮೇಲೆ ನೋಡಿದಂತೆ, ದಕ್ಷಿಣದಲ್ಲಿ ಇನ್ನು ಕೆಲವು ವೈರಿಗಳು ಹೆಡೆಯಾಡುತ್ತಿದ್ದರು. ಅವರನ್ನು ಅವನು ಮೊದಲು ಅಡಗಿಸಬೇಕಾಗಿತ್ತು. ತನ್ನ ಮಗ ೨ನೇ ಕಂಪಣ್ಣನ ನೆರವಿನಿಂದ ಅದನ್ನು ಸಾಧಿಸಿದನು. ಕಂಪಣ್ಣನ ಪತ್ನಿ ಗಂಗಾದೇವಿಯು ಮಧುರಾವಿಜಯಂ ಅಥವಾ ವೀರಕಂಪರಾಯಚರಿತಂ ಎಂಬ ಕೃತಿಯಲ್ಲಿ ತನ್ನ ಪತಿಯ ಶೌರ್ಯ ಸಾಹಸಗಳನ್ನು ಚಿತ್ರಿಸಿದ್ದಾಳೆ. ಅವನು ಮೊದಲು ರಾಜಗಂಭೀರ ರಾಜನಾರಾಯಣ ಸಂಬುವರಾಯನನ್ನು ಸೋಲಿಸಿದನು. ಸಂಬುವರಾಯನು ಕಾಳಗದಲ್ಲಿ ಮಡಿದನು. ಅವನ ಮಗ ಹಾಗೂ ಉತ್ತರಾಧಿಕಾರಿ ೨ನೇ ವೆನ್ರುಮಂಕೊಂಡಾನ್ ಯುದ್ಧವನ್ನು

ಮುಂದುವರಿಸಿ ೧೩೬೦ರಲ್ಲಿ ಕೊಲ್ಲಲ್ಪಟ್ಟನು. ಇದರಿಂದ ಆ ಚಿಕ್ಕ ಪ್ರಾಂತವನ್ನು ಸಾಮ್ರಾಜ್ಯಕ್ಕೆ ಸೇರಿಸಿಕೊಂಡಂತಾಯಿತು, ವಿಜಯನಗರವು ತಮಿಳುದೇಶದ ಒಡತಿಯೆನಿಸಿತು.[೧೦] ಮಧುರೆಯು ಆಗ ಸುಲ್ತಾನರ ವಶದಲ್ಲಿತ್ತು. ಈಗ ಕಂಪಣ್ಣನು ಮಧುರೆಯ ಮೇಲೆ ನಡೆದನು. ಅದರ ಒತ್ತಿಗೇ ಇದ್ದ ತೊಂಡೈಮಂಡಲವನ್ನು ವಶಪಡಿಸಿಕೊಂಡನು. ಮಲಬಾರಿನ ಮುಸ್ಲಿಂ ಅರಸರು ಅಲ್ಲಿಯ ಹಿಂದೂ ಜನತೆಗೆ ಅಪಾರವಾದ ಕ್ಲೇಶವನ್ನು ಉಂಟುಮಾಡಿದ್ದರು. ಅವರ ಆಸ್ತಿಪಾಸ್ತಿಗಳನ್ನು ಮುಟ್ಟುಗೋಲು ಹಾಕಿಕೊಂಡು ದೇವಾಲಯಗಳನ್ನು ಕೊಳ್ಳೆ ಹೊಡೆದಿದ್ದರು. ಶ್ರೀರಂಗದ ಬಳಿಯ ಸಮಯವರಂ ಎಂಬಲ್ಲಿ ಯುದ್ಧನಡೆಯಿತು. ಕಣ್ಣಾನೂರು ಕೊಪ್ಪಂ ಅನ್ನು ಗೆದ್ದುದಾಯಿತು. ಸುಲ್ತಾನನ ಆಳಿಕೆಯಲ್ಲಿ ಶ್ರೀರಂಗಂ ದೇವಾಲಯದಿಂದ ಕೊಂಡೊಯ್ದು ತಿರುಪತಿಯಲ್ಲಿ ರಕ್ಷಿಸಿ ಇರಿಸಿದ್ದ ರಂಗನಾಥನ ಮೂರ್ತಿಯನ್ನು ಮತ್ತೆ ಈಗ ಪ್ರತಿಷ್ಠೆ ಮಾಡಲಾಯಿತು. ಯುದ್ಧದಲ್ಲಿ ಸುಲ್ತಾನನು ಮಡಿದರೂ ಅವನ ಕೆಲವು ಅನುಯಾಯಿಗಳು ಆತ್ಮರಕ್ಷಣೆಯನ್ನು ಮುಂದುವರಿಸಿದರು. ಕಂಪಣ್ಣನು ಮಧುರೆಗೆ ಮುತ್ತಿಗೆ ಹಾಕಿ ಮಿಂಚಿನ ವೇಗದಲ್ಲಿ ಅದನ್ನು ವಶಪಡಿಸಿಕೊಂಡನು. ಇದರಲ್ಲಿ ರಾಜಕುಮಾರನಿಗೆ ಸಾಳುವ ಮಂಗು ಎನ್ನುವವನೂ ಮಂತ್ರಿಯಾದ ಗೋಪಣ್ಣನೂ ನೆರವಾದರು. ಕಂಪಣ್ಣನನ್ನು ತಮಿಳುದೇಶದ ರಾಜ್ಯಪಾಲನನ್ನಾಗಿ ನೇಮಿಸಲಾಯಿತು. ಆದರೆ ದುರದೃಷ್ಟವಶಾತ್, ಅವನು ೧೩೭೪ರಲ್ಲಿ ಅಕಾಲಮರಣ ಹೊಂದಿದನು.

ಬಹಮನಿರಾಜ್ಯದಲ್ಲಿ ಅಲ್ಲಾವುದ್ದೀನ (೧೩೪೭-೫೮)ನಾದ ಮೇಲೆ ೧ನೇ ಮುಹಮದ್‌ಶಾಹಿ (೧೩೫೮-೭೫) ಅರಸನಾದನು. ಬುಕ್ಕನೂ ಕಾಕತೀಯ ೨ನೇ ಪ್ರತಾಪರುದ್ರನ ಮೊಮ್ಮಗ ವಿನಾಯಕದೇವನ ಪ್ರತಿನಿಧಿಯಾಗಿದ್ದ ತೆಲಂಗಾಣದ ಕಾಪಯನಾಯಕನೂ ಮುಹಮದ್ ಶಾಹನನ್ನು ಅವನ ತಂದೆಯು ಆಕ್ರಮಿಸಿಕೊಂಡಿದ್ದ ತಮ್ಮ ಭೂ ಭಾಗವನ್ನು ಮರಳಿಸಬೇಕೆಂದು ಕೇಳಿದರು. ಸಹಜವಾಗಿಯೇ ಬೇಡಿಕೆಯನ್ನು ಅವನು ತಿರಸ್ಕರಿಸಿದನು, ಫಲ ಯುದ್ಧ. ಮುಸ್ಲಿಂ ಇತಿಹಾಸಕಾರರು, ವಿಶೇಷವಾಗಿ ಫೆರಿಷ್ತಾ, ಯಾವಾಗಲೂ ಸುಲ್ತಾನನಿಗೇ ಗೆಲುವನ್ನು ಆರೋಪಿಸುತ್ತಾರೆ. ಈ ಸಂದರ್ಭದಲ್ಲಿ ಕಾಪಯನು ಅಪಾರವಾಗಿ ಹಣವನ್ನು ತೆರಬೇಕಾಯಿತು. ಸ್ವಾರಸ್ಯವಾದ ಕೆಲವು ಘಟನೆಗಳು ಚಾಲ್ತಿಯಲ್ಲಿವೆ. ಒಮ್ಮೆ ಕೆಲವು ನಾಯಕರು ಮುಹಮದ್ ಶಾಹನೆದುರಿಗೆ ಹಾಡಿ ಅವನನ್ನು ಸಂತೋಷಪಡಿಸಿ, ವಿಜಯನಗರದ ಅರಸನಿಂದ ಅವನು ಕಾಣಿಕೆಯನ್ನು ವಸೂಲು ಮಾಡಬೇಕೆಂದು ಸೂಚಿಸಿದರು. ಅದಷ್ಟೇ ಯುದ್ಧಕ್ಕೆ ಕಾರಣವಾಯಿತು. ಈ ಮುಹಮದ್ ಶಾಹನು ಮೊದಮೊದಲಲ್ಲಿ ಒಂದೆರಡು ಸಾರಿ ಗೆದ್ದಿರಬಹುದು. ಆದರೆ ಅಂತಿಮವಾದ ವಿಜಯವು ಬುಕ್ಕನ ಪಾಲಿಗೆ ದೊರಕಿತು. ಯುದ್ಧಕ್ಕೆ ಕೊಡುತ್ತಿದ್ದ ಕಾರಣಗಳು ಎಷ್ಟೇ ದುರ್ಬಲವಾಗಿರಬಹುದು, ಕ್ಷುಲ್ಲಕವಾಗಿರಬಹುದು, ಆದರೆ ವಾಸ್ತವವಾಗಿ ತುಂಗಭದ್ರಾ-ಕೃಷ್ಣಾ ನದೀ ಬಯಲನ್ನು ವಶಪಡಿಸಿಕೊಳ್ಳುವುದೇ ನಿಜವಾದ ಕಾರಣವಾಗುತ್ತಿದ್ದಿತು. ರಾಜಕೀಯ ಸ್ವ-ಪ್ರತಿಷ್ಠೆ, ಅದರ ಫಲವಾದ ಆರ್ಥಿಕ ಪ್ರಾಬಲ್ಯ ಇವು ನಿರ್ಣಾಯಕ ಅಂಶವಾಗುತ್ತಿದ್ದುವು. ಮುಹಮ್ಮದ್ ಶಾಹನು ಮತ್ತೆ ಮತ್ತೆ ವರಂಗಲ್ ಮೇಲೆ ಮುಗಿಬೀಳುತ್ತಿದ್ದನು, ಕೊಳ್ಳೆ ಹೊಡೆಯುತ್ತಿದ್ದನು. ಕೊನೆಗೆ ಅವನು ಗೋಲ್ಕೊಂಡವನ್ನು ವಶಪಡಿಸಿಕೊಂಡನು. ಆಂಧ್ರದ ಅರಸರು ಆ ವೇಳೆಗೆ ಬಳಲಿದ್ದರು, ತಮ್ಮ ಸಂಪತ್ತೆಲ್ಲವನ್ನೂ ಕಳೆದುಕೊಂಡಿದ್ದರು, ತಾವೆಲ್ಲರೂ ಒಂದುಗೂಡಲು ಅಸಮರ್ಥರಾಗಿದ್ದರು. ವಿಜಯನಗರದ ರಾಜರು ಮಧ್ಯ ಪ್ರವೇಶ ಮಾಡಿದರು. ಬಹುತೇಕ ಆತ್ಮ ಸಂರಕ್ಷಣೆಗೆ, ವೈರಿಯ ಸನ್ನಾಹಗಳನ್ನು ತಡೆಯುವ ಸಲುವಾಗಿ ಮತ್ತು ತಮ್ಮ ರಾಜ್ಯದ ಗಡಿಗಳನ್ನು ಕೃಷ್ಣೆ ಮತ್ತು ತುಂಗಭದ್ರೆಗಳವರೆಗೆ ಮತ್ತು ಇನ್ನೂ ಮುಂದಕ್ಕೆ ವಿಸ್ತರಿಸುವುದಕ್ಕಾಗಿ ಅವರು ಆ ಕ್ರಮವನ್ನು ಕೈಗೊಂಡರು. ಅಂತಿಮ ವಿಶ್ಲೇಷಣೆಯಲ್ಲಿ ೧ನೇ ಬುಕ್ಕನು ಗೆದ್ದನು. ಆದರೆ ಬುಕ್ಕನ ಕೊನೆಯ ವರ್ಷಗಳಲ್ಲಿ ಬಹಮನಿ ರಾಜ್ಯದಲ್ಲಿ ಮುಹಮ್ಮದನ ನಂತರ ಪಟ್ಟಕ್ಕೆ ಬಂದಿದ್ದ ಮುಜಾಹಿದನು ನದೀ ಬಯಲಿನ

ಪ್ರದೇಶಗಳನ್ನು, ವಿಶೇಷವಾಗಿ ಬುಕ್ಕನು ಆಕ್ರಮಿಸಿಕೊಂಡಿದ್ದ ರಾಯಚೂರು ಮತ್ತು ಮುದ್ಗಲ್ ಕೋಟೆಗಳನ್ನು ತೆರವು ಮಾಡಬೇಕೆಂದೂ ಜೊತೆಗೆ ಬಂಕಾಪುರ ಕೋಟೆಯನ್ನು ಒಪ್ಪಿಸಬೇಕೆಂದೂ ಕೇಳಿದನು. ಆದರೆ ಆ ಪ್ರದೇಶಗಳೆಲ್ಲ ಬುಕ್ಕನಿಗೆ ಸೇರಿದವು. ಹಾಗಾಗಿ ಯುದ್ಧವು ಸಂಭವಿಸಿತು. ಸುಲ್ತಾನನ ಸೈನ್ಯವು ಆದೋನಿವರೆಗೂ ನಡೆಯಿತು. ಅಲ್ಲಿಂದ ಮುಂದಕ್ಕೆ ಸುಲ್ತಾನನೇ ರಾಜಧಾನಿಯ ಮೇಲೆ ನಡೆದನು. ಬುಕ್ಕನು ಬಯಲು ಯುದ್ಧ ಮಾಡದೆ ಗೆರಿಲ್ಲಾ ಯುದ್ಧಕ್ಕಿಳಿದನು. ಆದರೆ ಅದರ ಮುಕ್ತಾಯವನ್ನು ನೋಡಲು ಅವನು ಬದುಕಿರಲಿಲ್ಲ, ೧೩೭೭ರಲ್ಲಿ ಮೃತನಾದನು. ಅವನ ನಂತರ ೨ನೇ ಹರಿಹರ ಪಟ್ಟಕ್ಕೆ ಬಂದನು.

ಬುಕ್ಕನ ಮಕ್ಕಳ ಪೈಕಿ ೨ನೇ ಕಂಪಣ್ಣನು ಆ ವೇಳೆಗೆ ತೀರಿಕೊಂಡಿದ್ದನು. ೨ನೇ ಹರಿಹರನು ಪಟ್ಟಕ್ಕೆ ಬಂದುದು ತೀರಾ ಅನಿರೀಕ್ಷಿತ. ಏಕೆಂದರೆ, ಇತರ ಸೋದರರಂತೆ ಪ್ರಾಂತೀಯ ರಾಜ್ಯಪಾಲನಾಗಿ ಆಡಳಿತಾನುಭವವನ್ನಾಗಲಿ, ತಂದೆಯ ಜೊತೆಯಲ್ಲಿ ಯುದ್ಧಗಳಲ್ಲಿ ಭಾಗವಹಿಸಿ ಯುದ್ಧಾನುಭವನ್ನಾಗಲಿ ಅವನು ಪಡೆದಿರಲಿಲ್ಲ.

ಹಿಂದೂಧರ್ಮದ ಆಧಾರ ಶಿಲೆಯಾದ ವೇದಗಳ ಮೇಲಿನ ವ್ಯಾಖ್ಯಾನಗಳ ಸಂಕಲನವನ್ನು ಮಾಡಿಸಿದ್ದರಿಂದ ಬುಕ್ಕನಿಗೆ ಅಮರಕೀರ್ತಿ ಲಭ್ಯವಾಯಿತು. ಸಂಪ್ರದಾಯವು ಕಡಿದುಹೋಗಿ ಅವು ಕಣ್ಮರೆಯಾಗಿ ಬಿಟ್ಟಿದ್ದುವು. ಈ ಪುನರುಜ್ಜೀವನದ ಮಹತ್ಕಾರ್ಯವನ್ನು ೧೩೬೦ರಲ್ಲಿ ಮಾಧವಾಚಾರ್ಯ (ಅನೇಕರು ಇವರೇ ವಿದ್ಯಾರಣ್ಯರು ಎಂದು ಗುರುತಿಸುತ್ತಾರೆ) ಮತ್ತು ಅವರ ತಮ್ಮ ಸಾಯಣರಿಗೆ ವಹಿಸಿದನು. ಸಾಹಿತ್ಯವೂ ಅಭಿವೃದ್ಧಿ ಪಡೆಯಿತು. ಗಂಗಾದೇವಿಯ ಮಧುರಾವಿಜಯ ಅಥವಾ ವೀರಕಂಪರಾಯಚರಿತಂ ಸಂಸ್ಕೃತದಲ್ಲಿ ರಚಿತವಾದ ಉತ್ತಮವಾದ ಕೃತಿ. ತೆಲುಗುಕವಿ ನಾಚನ ಸೋಮನು ಉತ್ತರ ಹರಿವಂಶವನ್ನು ತೆಲುಗಿಗೆ ಭಾಷಾಂತರಿಸಿದನು. ಅವನಿಗೆ ಸಾಹಿತ್ಯ- ರಸ- ಪೋಷಣ ಎಂಬ ಬಿರುದು ದೊರಕಿತು. ಕನ್ನಡದಲ್ಲಿ ವೀರಶೈವಧರ್ಮದ ಕಥಾಕೋಶವಾದ ಬಸವಪುರಾಣವನ್ನು ೧೪ನೆಯ ಶತಮಾನದ ಮೂರನೆಯ ಪಾದದಲ್ಲಿ ಭೀಮಕವಿಯು ಬರೆದು ಮುಗಿಸಿದನು. ರಾಜನು ಸಹಿಷ್ಣುತಾ ನೀತಿಯನ್ನು ಹೊಂದಿದ್ದನು. ಜೈನರಿಗೂ ಶ್ರೀವೈಷ್ಣವರಿಗೂ ನಡುವೆ ಉಂಟಾದ ಒಂದು ವ್ಯಾಜ್ಯವನ್ನು ಬಗೆಹರಿಸಿ ರಾಜನು ಒಂದು ಶಿಲಾಶಾಸನವನ್ನು ಹಾಕಿಸಿದನು. ಇದರ ಪ್ರಕಾಶ, ಅಲ್ಪ ಸಂಖ್ಯಾತರ ಹಕ್ಕು ಸೌಲಭ್ಯಗಳನ್ನೂ, ಹಿತಾಸಕ್ತಿಗಳನ್ನು ಕಾಪಾಡುವ ಹೊಣೆಯು ಬಹುಸಂಖ್ಯಾತ ಸಮುದಾಯಕ್ಕೆ ಸೇರಿತ್ತು. ವೇದಗಳ ಪುನರುಜ್ಜೀವನ ಕಾರ್ಯವನ್ನು ಕೈಗೊಂಡುದಕ್ಕಾಗಿ ಬುಕ್ಕನಿಗೆ ವೇದಮಾರ್ಗ ಪ್ರತಿಷ್ಠಾಪನಾಚಾರ್ಯ ಎಂಬ ಬಿರುದು ದೊರಕಿತು.

೨ನೇ ಹರಿಹರನು ಪಟ್ಟಕ್ಕೆ ಬಂದುದು ಅನೇಕರ ಪ್ರತಿಭಟನೆಗಳಿಗೆ ಎಡೆಗೊಟ್ಟಿತು. ಆದರೆ ಹೊಸ ದೊರೆಯು ಅವುಗಳನ್ನು ಅಡಗಿಸಿ, ಆಡಳಿತ ವ್ಯವಸ್ಥೆಯಲ್ಲಿ ಕೆಲವು ಸುಧಾರಣೆಗಳನ್ನು ಜಾರಿಗೆ ತಂದನು. ತನ್ನ ದಾಯಾದಿಗಳ ಸ್ಥಾನದಲ್ಲಿ ತನ್ನ ಮಕ್ಕಳನ್ನು ಪ್ರಾಂತೀಯ ರಾಜ್ಯಪಾಲರನ್ನಾಗಿ ನೇಮಿಸಿದನು. ೨ನೇ ವಿರೂಪಾಕ್ಷನನ್ನು ತಮಿಳು ಪ್ರಾಂತಗಳ ಆಡಳಿತಕ್ಕೆ ನೇಮಿಸಲಾಯಿತು. ಅಲ್ಲಿ ಮೊದಲು ಕಂಪಣನು ಅಧಿಕಾರದಲ್ಲಿದ್ದನು. ಉದಯಗಿರಿ ರಾಜ್ಯವು ೧ನೇ ದೇವರಾಯನ ಆಳಿಕೆಗೆ ಒಳಪಟ್ಟಿತು. ೨ನೇ ಬುಕ್ಕ ಮುಳಬಾಗಿಲು ರಾಜ್ಯಕ್ಕೆ ರಾಜ್ಯಪಾಲನೂ ಯುವರಾಜನೂ ಆದನು. ಮಂತ್ರಿಯಾದ ಮಾಧವನು, ಆರಗ ಮತ್ತು ಬನವಾಸಿ ಪ್ರದೇಶಗಳನ್ನು ನೋಡಿಕೊಳ್ಳಲು ನೇಮಿತನಾದನು. ಅಲ್ಲಿ ಮೊದಲು ಮಾದಪ್ಪನೂ ಅನಂತರ ಉದಯಗಿರಿ ವೀರಣ್ಣನೂ ಆಡಳಿತದ ಸೂತ್ರಗಳನ್ನು ಹಿಡಿದಿದ್ದರು.

ಅಸಮಾಧಾನಗೊಂಡ ಮುಖ್ಯಸ್ಥರು ದಂಗೆಯ ಕೊಳಕು ಹೆಡೆಯನ್ನು ಬಿಚ್ಚಿದರು. ಬಾರಕೂರಿನ ಭೈರರಸ ನಾಯಕರನ್ನು ಮೊದಲು ಬುಕ್ಕನು ಅಡಗಿಸಿದನು. (ಕ್ರಿ.ಶ. ೧೩೮೦) ಆಮೇಲೆ ಚೋಳ ಮತ್ತು

ಪಾಂಡ್ಯ ಪ್ರದೇಶದ ತುಂಡೀರ ನಾಯಕರ ಸರದಿ. ಈ ದಂಗೆಯನ್ನು ದಮನ ಮಾಡುವ ಕೆಲಸವು ೨ನೇ ವಿರೂಪಾಕ್ಷನ ಪಾಲಿಗೆ ಬಂದಿತು (೧೩೭೭). ಅಲ್ಲಿ ದೊರೆತ ವಿಜಯವನ್ನೇ ಅನುಸರಿಸಿ ಮುಂದೆ ಹೋಗಿ ಸಿಲೋನಿನ ದೊರೆ ಭುವನೈಕ ಬಾಹುವಿನಿಂದ ಕಾಣಿಕೆಯನ್ನು ವಸೂಲು ಮಾಡಿದನು. ಹೀಗೆ ವಿಜಯನಗರದ ಪ್ರಭಾವವನ್ನು ದಕ್ಷಿಣದ ದ್ವೀಪದ ಮೇಲೆ ವಿಸ್ತರಿಸಲು ಪ್ರಾರಂಭ ಮಾಡಿದುದಾಯಿತು. ದಕ್ಷಿಣ ಪರ್ಯಾಯ ದ್ವೀಪದ ಬೃಹತ್ ರಾಜ್ಯವು ಒಂದು ಶ್ವೇತಚ್ಛತ್ರದ ಕೆಳಗೆ ಬಂದಾಗ ಅಲ್ಲಲ್ಲಿ ಅತೃಪ್ತಿ ಅತ್ಯಂತ ಸಹಜವೇ ಆಗಿತ್ತು.

೧೩೯೧ರ ಸುಮಾರಿನಲ್ಲಿ ಚಾಲ್, ದಭೋಲ್ ಮತ್ತು ಖಾರೇಪಟ್ಟಣಗಳನ್ನು ಜಯಿಸಲಾಯಿತು. ಇದರಿಂದ ಸಾಮ್ರಾಜ್ಯವು ಉತ್ತರದಲ್ಲಿ ಕೃಷ್ಣಾ ನದಿಯವರೆಗೆ ವಿಸ್ತರಿಸಿತು. ತೆಲಂಗಾಣದಲ್ಲಿ, ಕೊಂಡವೀಡು ಮನೆತನದ ರೆಡ್ಡಿಗಳ ಮೇಲೆ ದೇವರಾಯನು ಆಕ್ರಮಣ ಮಾಡಿದನು. ದೇವರಾಯನು ಕೃಷ್ಣೆಯನ್ನೇ ಸಾಮ್ರಾಜ್ಯದ ಈಶಾನ್ಯ ಗಡಿಯನ್ನಾಗಿ ಮಾಡಲು ಬಯಸಿದ್ದನು. ಬುಕ್ಕನೇ ೧೩೬೫-೧೩೭೦ರ ನಡುವೆ ರೆಡ್ಡಿ ರಾಜ್ಯದ ಮೇಲೆ ಆಕ್ರಮಣ ಮಾಡಿದ್ದನು. ಏಕೆಂದರೆ ವಿಜಯನಗರವನ್ನು ಪೂರ್ವಕರಾವಳಿಯ ಕಡೆಗೆ ವಿಸ್ತರಿಸುವುದಕ್ಕೆ ಕೊಂಡವೀಡು ತಡೆಯಾಗಿತ್ತು. ಈಗ ದೇವರಾಯನು ಅದೇ ಪ್ರಯತ್ನವನ್ನು ಮುಂದುವರಿಸಿದನು. ಅನಪೋತರೆಡ್ಡಿಯ ಮರಣಾನಂತರ ಅವರಲ್ಲಿ ಆಂತರಿಕವಾದ ವೈಮನಸ್ಯಗಳು ಮೇಲೆದ್ದಿದ್ದುವು. ಈಗ ಘರ್ಷಣೆಯಿದ್ದದ್ದು ವೇಮರಿಗೂ ವೇಲಮರಿಗೂ ನಡುವೆ. ಅನವೇಮರೆಡ್ಡಿಯು ಕಿರಿಯ ತಮ್ಮನೂ ನ್ಯಾಯವಾದ ವಾರಸುದಾರನೂ ಆಗಿದ್ದನು. ಅವನು ವೇಲಮರನ್ನು ಸೋಲಿಸಿದನು. ವೇಲಮ ಅನಪೋತ-ನಾಯಡು ಶ್ರೀಶೈಲವನ್ನು ವಶಪಡಿಸಿಕೊಂಡನು. ಶ್ರೀಶೈಲ ಪರ್ವತಕ್ಕೆ ಮೆಟ್ಟಿಲುಗಳನ್ನು ಕಟ್ಟಿಸಿದ ಕೀರ್ತಿ ಇವನಿಗೆ ಸಲ್ಲುತ್ತದೆ.[೧೧] ಈಚೆರ್ಲಾ ನಾಯಕರೂ ಬಹಮನಿಗಳೊಂದಿಗೆ ಮೈತ್ರಿ ಬೆಳೆಸಿಕೊಂಡು ವಿಜಯನಗರಕ್ಕೆ ತೊಂದರೆಯನ್ನುಂಟು ಮಾಡಿದರು. ಹರಿಹರನು ರಾಮದೇವ ಹಾಗೂ ನಾಯಂಕರಾಚಾರ್ಯ ಕಂಪಣರನ್ನು ೨ನೇ ಬುಕ್ಕನ ನಾಯಕತ್ವದಲ್ಲಿ ಕಳಿಸಿಕೊಟ್ಟನು. ವರಂಗಲ್ಲಿನ ವಾಯವ್ಯದ ಕೊತ್ತಕೊಂಡದಲ್ಲಿ ನಡೆದ ಯುದ್ಧದಲ್ಲಿ ರಾಮದೇವನು ಮೃತನಾದನು. ಆದರೆ ವೇಲಮನ ಸೇನೆಯನ್ನು ಬಹಮನಿ ಸೇನೆಯೊಂದಿಗೆ ನುಚ್ಚುನೂರು ಮಾಡಲಾಯಿತು. ವೇಲಮನು ಮತ್ತೆ ೧೩೯೦ರಲ್ಲಿ ಬಹಮನಿಯ ೨ನೇ ಮುಹಮದ್ ಶಾಹನ ನೆರವು ಪಡೆದು ಯುದ್ಧಕ್ಕೆ ಬಂದನು.[೧೨] ಮಾಚನ ಮಗ ಪೆದವೇದಗಿರಿ ಮತ್ತು ಅನವೇತನ ಸೋದರಳಿಯ ಸೇನಾಸಮೇತನಾಗಿ ಹೊರಟನು. ೧ನೇ ದೇವರಾಯ ಆಳುತ್ತಿದ್ದ ಉದಯಗಿರಿ ರಾಜ್ಯದ ಮೇಲೆ ಸೇನೆಯು ಧಾಳಿ ಮಾಡಿತು. ವೇಲುಗೋಟಿವಾರಿ ವಂಶಾವಳಿಯ ಪ್ರಕಾರ, ದಂಡನಾಥ ಗುಂಡನು ಪೆದವೇದಗಿರಿಯಿಂದ ಪರಾಭವಗೊಂಡನು.[೧೩] ಆದರೆ ದೇವರಾಯನ ಮಗ ರಾಮಚಂದ್ರ ಒಡೆಯನು ಅಂತಿಮವಾಗಿ ವೈರಿಗಳನ್ನು ಅಡಗಿಸಿ ಓಡಿಸಿದನು. ತನ್ನ ತಂದೆಯ ಆಣತಿಯಂತೆ ದೇವರಾಯನು ತುಂಗಭದ್ರಾ ನದಿಯ ದಂಡೆಯ ಮೇಲಿದ್ದ ಆಲಂಪುರಕ್ಕೆ ಮುತ್ತಿಗೆ ಹಾಕಿದನು. ಈ ಮುತ್ತಿಗೆಯು ಹತ್ತು ವರ್ಷಗಳಷ್ಟು ದೀರ್ಘಕಾಲ ನಡೆಯಿತು. ಆ ಅವಧಿಯಲ್ಲಿ ೨ನೇ ಬುಕ್ಕನು ದಂಡನಾಯಕ ಇರುಗಪ್ಪನ ಸಹಾಯದಿಂದ ಪಂಗಳವನ್ನು ಗೆದ್ದನು. ವಾಸ್ತವವಾಗಿ ವಿಜಯನಗರವು ತೆಲಂಗಾಣದಲ್ಲಿ ನಡೆಸಿದ ಯುದ್ಧಗಳ ಪ್ರಾರಂಭ ಇದು. ಈ ಯುದ್ಧದ ಬಗೆಗೆ ಇಂಡೋ-ಪರ್ಷಿಯನ್ ಇತಿಹಾಸಕಾರರು ಮೌನವಾಗಿದ್ದರೂ, ಫೆರಿಷ್ಟಾನು ೧೪೧೭ರ ಯುದ್ಧವನ್ನು ವರ್ಣಿಸುವಾಗ, ಫಿರೋಜ್‌ಶಾಹ ಬಹಮನಿಯು ಪಣಗಲ್ಲನ್ನು ಗೆದ್ದುಕೊಳ್ಳುವುದರಲ್ಲಿ ವಿಫಲನಾದನು ಎಂದು ಹೇಳುತ್ತಾನೆ. ೧ನೇ ದೇವರಾಯನ ಕಾಳೇಶ್ವರಂ (ಕರೀಂನಗರ ಜಿಲ್ಲೆ) ಶಾಸನವು, ಅವನ ಸೈನ್ಯವು ಗೋದಾವರಿಯ ದಂಡೆಯ ಮೇಲೆ ಆ ಸ್ಥಳದವರೆಗೂ ಹೋಗಿದ್ದಿತೆಂದೂ ಅಲ್ಲಿ ದೇವರಾಯನು ೨ನೇ ಹರಿಹರನ ಪರವಾಗಿ ವಿಜಯೋತ್ಸವವನ್ನು ಆಚರಿಸಿದನೆಂದೂ ಹೇಳುತ್ತದೆ. ಈ ಶಾಸನದ ಕಾಲ ಕ್ರಿ.ಶ. ೧೩೯೧.[೧೪] ಫಿರೂಜ್ ಶಾಹ ಬಹಮನಿಯು (೧೩೯೭-೧೪೨೨), ಫೆರಿಷ್ಟಾನ ಪ್ರಕಾರ, ಕೃಷ್ಣಾನದಿಯನ್ನು ದಾಟಿ ಬಂದು ವೈರಿಯ ರಾಜ್ಯವನ್ನು ಧೂಳೀಪಟ

ಮಾಡಿದನು. ಓಂದಿರುಗುವ ಮೊದಲು ಹರಿಹರನಿಂದ ಭಾರೀ ಮೊತ್ತದ ಒತ್ತೆಹಣವನ್ನು ಕಿತ್ತುಕೊಂಡನು.[೧೫] ವಾಸ್ತವವಾಗಿ ಬೇರೆ ಯಾವ ಇತಿಹಾಸಕಾರನೂ ಇದನ್ನು ಉಲ್ಲೇಖಿಸುವುದಿಲ್ಲ. ಸುಲ್ತಾನನು ಅನುಭವಿಸಿದ ಸೋಲುಗಳು, ಮಿತ್ರನಾಗಿದ್ದ ವೇಲಮನಾಯಕನು ನಿರ್ವಹಿಸಿದ ಪಾತ್ರ ಇವುಗಳ ವಿಷಯವಾಗಿ ಅವರು ಮೌನವಾಗಿದ್ದಾರೆ. ಫಿರೋಜನು ಸಾಗರ್‌ಗೆ ಮುತ್ತಿಗೆ ಹಾಕಿದನೆನ್ನುವುದು ಗೋದಾವರಿ ಜಿಲ್ಲೆಯನ್ನು ಆಳುತ್ತಿದ್ದ ಅಣ್ಣದೇವ ಚೋಡನ ತಾಮ್ರಫಲಕ ದಾನಶಾಸನವೊಂದರಲ್ಲಿ ಪ್ರತಿಧ್ವನಿಸಿದೆ. ವಿಜಯನಗರದ ರಾಜನನ್ನು ಸಾಗರದಲ್ಲಿ ಸೋಲಿಸುವುದರಲ್ಲಿ ಅವನು ತುರುಷ್ಕನಿಗೆ ಸಹಾಯ ಮಾಡಿದನು ಎಂದು ಅದು ಹೇಳುತ್ತದೆ.[೧೬]

೨ನೇ ಹರಿಹರನು ಕ್ರಿ.ಶ. ೧೪೦೪ರ ಆಗಸ್ಟ್‌ನಲ್ಲಿ ನಿಧನ ಹೊಂದಿದನು. ಪ್ರಾರಂಭಿಕವಾದ ಕಷ್ಟಗಳಿದ್ದರೂ ಅವನು ರಾಜ್ಯವನ್ನು ವಿಸ್ತರಿಸಿದನು, ಬಲಪಡಿಸಿದನು, ಪ್ರಜೆಗಳ ಯೋಗಕ್ಷೇಮವನ್ನು ಗಮನಿಸಿಕೊಂಡನು. ಭಾರೀಕ್ಷಾಮವು ಉಂಟಾಯಿತು, ವಿಶೇಷವಾಗಿ ರಾಜ್ಯದ ದಕ್ಷಿಣ ಭಾಗಗಳು ತತ್ತರಿಸಿದುವು.[೧೭] ಆಗ ಹರಿಹರನು ಪ್ರಜೆಗಳಿಗೆ ಎಲ್ಲಾ ಬಗೆಯ ಸೌಲಭ್ಯಗಳನ್ನು ಒದಗಿಸಿಕೊಟ್ಟನು. ಮುನ್ನೆಚ್ಚರಿಕೆಯ ಕ್ರಮವಾಗಿ ನದಿಗಳಿಗೆ ಕಟ್ಟೆಹಾಕಿ, ಕಾಲುವೆಗಳನ್ನು ತೋಡಿಸಿ, ಕೆರೆಗಳನ್ನು ಶೋಧಿಸಿದನು. ಸಿಂಗಮಭಟ್ಟ ಎಂಬ ಒಬ್ಬ ಹೈಡ್ರಲಿಕ್ ಎಂಜಿನಿಯರನ ಹೆಸರನ್ನು ನಾವು ಕೇಳುತ್ತೇವೆ. ಅವನು ಹೆನ್ನೆ ನದಿಯಿಂದ ಒಂದು ಕಾಲುವೆಯನ್ನು ನಿರ್ಮಿಸಿ ಪೆನುಗೊಂಡೆಗೆ ನೀರನ್ನು ಒದಗಿಸಿದನು.[೧೮] ರಾಜಪೋಷಣೆಯಿಂದಾಗಿ ವ್ಯಾಪಾರ-ವಾಣಿಜ್ಯಗಳು ಅಭಿವೃದ್ಧಿ ಹೊಂದಿದುವು. ಅವನ ಆಡಳಿತಾವಧಿಯಲ್ಲಿ ವೇದಗಳ ಮೇಲಿನ ಭಾಷ್ಯರಚನೆಯ ಕಾರ್ಯವು ಸಮಾಪನಗೊಂಡಿತು. ವೈದಿಕ ಮಾರ್ಗ ಸ್ಥಾಪನಾಚಾರ್ಯ ಎಂಬ ಬಿರುದು ನೀಡಿ ಅವನನ್ನು ಸನ್ಮಾನಿಸಲಾಯಿತು. ಕನ್ನಡ ಸಾಹಿತ್ಯಕ್ಕೆ ನೀಡಿದ ಆಶ್ರಯ-ಪೋಷಣೆಗಳಿಂದಾಗಿ ಅವನನ್ನು ಕರ್ನಾಟಕ ವಿದ್ಯಾವಿಲಾಸ ಎಂದು ಕೊಂಡಾಡಲಾಯಿತು.

೨ನೇ ಹರಿಹರನಿಗೆ ಇಬ್ಬರು ಪತ್ನಿಯರು, ಪಂಪಾದೇವಿ ಮತ್ತು ಮಲ್ಲಾದೇವಿ; ನಾಲ್ಕು ಜನ ಪುತ್ರರು-೨ನೇ ಬುಕ್ಕ, ೨ನೇ ವಿರೂಪಾಕ್ಷ, ೧ನೇ ದೇವರಾಯ ಮತ್ತು ಚಿಕ್ಕರಾಯ ಇವರಲ್ಲಿ ಮೊದಲ ಮೂವರು ಸಿಂಹಾಸನಕ್ಕೆ ತಮ್ಮ ಹಕ್ಕನ್ನು ಮುಂದಿಟ್ಟರು. ಕ್ರಿ.ಶ. ೧೪೦೪-೧೪೦೬ರ ನಡುವೆ ಮೊದಲ ಇಬ್ಬರು ಕಾದಾಡಿ ಬಗೆಹರಿಸಿಕೊಂಡರು. ಬುಕ್ಕನು ಅಕಾಲ ಮೃತ್ಯುವಿಗೆ ತುತ್ತಾದನು. ವಿರೂಪಾಕ್ಷನನ್ನು ಬುಕ್ಕನೇ ನಿವಾರಿಸಿದ್ದನು. ಹಾಗಾಗಿ ಎರಡು ವರ್ಷಗಳ ತೆರಪಿನ ಅನಂತರ ಕ್ರಿ.ಶ. ೧೪೦೬ರಲ್ಲಿ ೧ನೇ ದೇವರಾಯನು ಅರಸನಾದನು.

ಇನ್ನೂ ಕಿರಿಯನಾಗಿದ್ದಾಗಲೇ ದೇವರಾಯನು ರೆಡ್ಡಿಗಳೊಂದಿಗೆ ಹಾಗೂ ಫಿರೂಜ್‌ಶಾಹ ಬಹಮನಿಯೊಂದಿಗೆ ಯುದ್ಧದಲ್ಲಿ ನಿರತನಾಗಿದ್ದನೆಂಬುದನ್ನು ಆಗಲೆ ನೋಡಿದ್ದೇವೆ. ಸಹಜವಾಗಿಯೇ ಅದು ಮುಂದುವರಿಯಿತು. ರಾಜಧಾನಿಯಲ್ಲಿ ಮೂಡಿದ್ದ ಗೊಂದಲ ವಾತಾವರಣದ ಪ್ರಯೋಜನವನ್ನು ಪಡೆದು ಫಿರೂಜ್ ೧೪೦೬ರಲ್ಲಿ ವಿಜಯನಗರದ ಮೇಲೆ ಆಕ್ರಮಣ ಮಾಡಿದನು. ಫೆರಿಷ್ಟಾನು ಇಲ್ಲಿ ಒಂದು ಪ್ರೇಮ ಕಥಾನಕವನ್ನು ಹೇಳುತ್ತಾನೆ. ದೇವರಾಯನು ಒಬ್ಬ ಅಕ್ಕಸಾಲಿಗನ ಮಗಳನ್ನು ಪ್ರೇಮಿಸಿದನು. ಅದನ್ನು ತಪ್ಪಿಸಲು ಅಕ್ಕಸಾಲಿಗನು ಫಿರೂಜನ ಸಹಾಯವನ್ನು ಯಾಚಿಸಿದನು. ದೇವರಾಯನನ್ನು ಸೋಲಿಸಿ ಫಿರೂಜನ ಮಗನು ಅವನ ಮಗಳನ್ನೇ ಮದುವೆಯಾದನು.[೧೯]

ಈಗ ನಾವು ಕೊಂಡವೀಡಿನ ರೆಡ್ಡಿ ಮನೆತನದ ವಿಷಯವಾಗಿ ಸ್ವಲ್ಪ ಪರಿಶೀಲಿಸಬೇಕು. ಈ ಮನೆತನದ ಸ್ಥಾಪಕ ದೊಂತಿ ಅಲ್ಲಾಡರೆಡ್ಡಿ. ಆ ವಂಶದಲ್ಲಿ ಬಂದ ವೇಮಯ್ಯನ ಮಗ ಪ್ರೋಲಯ ವೇಮನು ಶ್ರೀಶೈಲದ ಬೆಟ್ಟಕ್ಕೆ ಮೆಟ್ಟಿಲುಗಳನ್ನು ಹಾಕಿಸಿದನು (೧೩೨೫-೪೯). ಅವನ ಮಗ ಅನವೋತನ ತಂಗಿ ದೊಡ್ಡಾಂಬಿಕೆಯು ರಾಜಮಹೇಂದ್ರಿಯ ೨ನೇ ಕಾಟಯವೇಮನನ್ನು ಮದುವೆಯಾದಳು. ಅನವೋತನ ಮಗ ಕುಮಾರಗಿರಿ (೧೩೮೧-೧೪೦೨). ಇವನು ರಾಜಮುಂದ್ರಿಶಾಖೆಯ ಸ್ಥಾಪಕ. ಆ ಪ್ರದೇಶವನ್ನು ತನ್ನ ಮಂತ್ರಿ

೩ನೇ ಕಾಟಯವೇಮನಿಗೆ ವಹಿಸಿಕೊಟ್ಟನು. ಪ್ರೋಲಯ ವೇಮನ ಅಣ್ಣ ಮಾಚ. ಅವನ ಮೊಮ್ಮಗನೇ ಪೆದ್ದಕೋಮಟಿ ವೇಮ. ಕುಮಾರಗಿರಿಯ ಕಾಲದಲ್ಲಿ (೧೩೮೬-೧೪೦೨), ಮನೆತನದಲ್ಲಿ ಒಡಕು ಉಂಟಾಯಿತು. ರಾಜ್ಯವನ್ನು ಮೂರು ಭಾಗ ಮಾಡಲಾಯಿತು. ಕೊಂಡವೀಡು ಪೆದ್ದಕೋಮಟಿಗೂ, ರಾಜಮಹೇಂದ್ರಿಯು ಕೋಟಿಯ ೩ನೇ ವೇಮನಿಗೂ ಮೂರನೆಯ ಭಾಗವು ದುವ್ವೂರಿನ ಪೆರುಮಾಡಿರೆಡ್ಡಿಯು ಸ್ಥಾಪಿಸಿದ ರಾಜಮಂಡ್ರಿಯ ಇನ್ನೊಂದು ಶಾಖೆಗೂ ದೊರಕಿತು.

ಆಂತರಿಕ ಕಲಹಗಳ ಭಾಗವಾಗಿ ದೇವರಾಯನನ್ನು ಕೊಲ್ಲುವ ಪ್ರಯತ್ನವೂ ನಡೆಯಿತು; ಆದರೆ ಅವನ ಮಂತ್ರಿ ಲಕ್ಷ್ಮೀಧರನಿಂದಾಗಿ ಅದು ತಪ್ಪಿತು. ಮುಂದೆ ಈ ಲಕ್ಷ್ಮೀಧರನು ದೇವರಾಯನ ಯುದ್ಧಗಳಲ್ಲಿ ಮಹತ್ವದ ಪಾತ್ರವನ್ನು ನಿರ್ವಹಿಸಿದನು. ರಾಜಧಾನಿಯಲ್ಲಿದ್ದ ಗೊಂದಲದ ಪ್ರಯೋಜನ ಪಡೆದು ಪೆದ್ದಕೋಮಟಿ ವೇಮನ ದಾಯಾದಿ ಮಲ್ಲಾರೆಡ್ಡಿಯು ಪೊತ್ತಪೀನಾಡನ್ನೂ ಪುಲುಗುಲ ನಾಡನ್ನೂ ಆಕ್ರಮಿಸಿದನು. ಫಿರೂಜ್ ಶಾಹ ಬಹಮನಿಯು ಅವನ ಜೊತೆ ಸೇರಿದನು. ಕೊನೆಗೆ ದೇವರಾಯನು ಸೋಲನ್ನೊಪ್ಪಿಕೊಳ್ಳಬೇಕಾಯಿತು. ಕೆಲವು ಮುಸ್ಲಿಂ ಇತಿಹಾಸಕಾರರ ಪ್ರಕಾರ, ಕಾಣಿಕೆಯಾಗಿ ಸುಲ್ತಾನನಿಗೆ ಬಂಕಾಪುರವನ್ನು ವರದಕ್ಷಿಣೆಯಾಗಿ ಒಪ್ಪಿಸಬೇಕಾಯಿತು. ಆದರೆ ಫಿರೂಜನ ಮಗನು ದೇವರಾಯನ ಮಗಳನ್ನು ಮದುವೆಯಾಗಲು ವರದಕ್ಷಿಣೆ ಪಡೆದ ವಿಷಯವನ್ನು ಯಾರೂ ಪ್ರಸ್ತಾಪಿಸುವುದಿಲ್ಲ. ಸುಲ್ತಾನನು ಭನೂರನ್ನೂ ಮುಸಲ್‌ಕಲ್‌ಗಳನ್ನೂ ಆಕ್ರಮಿಸಿ ೩೦ಲಕ್ಷ ಹಣಗಳನ್ನು ಕಾಣಿಕೆಯಾಗಿ ಸಂಗ್ರಹಿಸಿದನು ಎಂದು ಸುಲ್ತಾನನನ್ನು ಕುರಿತು ಸಯ್ಯದ್ ಅಲಿ ಹೇಳುತ್ತಾನೆ. ಆದರೆ ನ್ಯೂನಿಜನು ದೇವರಾಯನು ಸದಾಕಾಲವೂ ಮೂರರೊಂದಿಗೆ ಯುದ್ಧದಲ್ಲಿ ತೊಡಗಿರುತ್ತಿದ್ದನು ಎಂದು ಹೇಳುತ್ತಾನೆ. ಕುಮಾರಗಿರಿಯಿಂದ ನಾಯಕತ್ವವನ್ನು ಪಡೆದ ಕೇತಯ ವೇಮನು ಎರುವ ಮನೆತನದ ತೆಲುಗು-ಚೋಳ ಅಣ್ಣದೇವನಲ್ಲಿ ಸನ್ಮಿತ್ರನನ್ನು ಗುರುತಿಸಿದನು. ಅವನು ವೇಲಮರ ನೆರವನ್ನು ಪಡೆದನು. ಅಣ್ಣದೇವನು ಕೃಷ್ಣಾ ಮತ್ತು ಗೋದಾವರಿ ನದಿಗಳ ನಡುವಣ ಪ್ರದೇಶವನ್ನು ಆಕ್ರಮಿಸಿಕೊಂಡು, ಪೂರ್ವಕರಾವಳಿಯ ಮೇಲೆ ಧಾಳಿ ನಡೆಸುವಂತೆ ಕೇತಯವೇಮನ ವೈರಿ ಫಿರೂಜ್‌ನನ್ನು ಆಹ್ವಾನಿಸಿದನು (ಕ್ರಿ.ಶ. ೧೪೧೦). ಕೇತಯವೇಮನು ದೇವರಾಯನ ನೆರವನ್ನು ಕೋರಿದನು. ಇಬ್ಬರೂ ೧೪೧೦ರಲ್ಲಿ ಅಹೋಬಲದಲ್ಲಿ ಸಂಧಿಸಿದರು. ಅವರ ಸೈನ್ಯವು ಗೋದಾವರಿ ಮುಖದ ಕಡೆಗೆ ನಡೆಯಿತು. ಅಣ್ಣದೇವನ ರಾಜಮಂಡ್ರಿ ಮ್ಯೂಸಿಯಂ ಫಲಕಗಳು, [೨೦] ಅವನು ವಿಜಯನಗರದ ಸೈನ್ಯದ ಮೇಲೆ ಮೂರು ವಿಜಯಗಳನ್ನು ಪಡೆದಂತೆ ಹೇಳುತ್ತವೆ.ಯುದ್ಧದಲ್ಲಿ ಕೇತಯವೇಮನು ಅಸುನೀಗಿದಂತೆ ತೋರುತ್ತದೆ.[೨೧] ಇದು ನಿಜವಾಗಿಯೂ ಫಿರೂಜ್ ಶಾಹನಿಗೆ ದೊರೆತ ವಿಜಯ. ಇದಕ್ಕೆ ಸೇಡು ತೀರಿಸಿಕೊಳ್ಳಲು ದೇವರಾಯನು ನಲ್ಗೊಂಡ ಮತ್ತು ಪಾಂಗಳಗಳ ಮೇಲೆ ಧಾಳಿ ಮಾಡಿದನು. ಸುಲ್ತಾನನ ಸುದ್ದಿಸಂಪರ್ಕ ಮಾರ್ಗಗಳನ್ನು ಕಡಿದುಹಾಕಿದನು (ಕ್ರಿ.ಶ.೧೪೧೭). ಎರಡು ವರ್ಷಗಳ ಕಾಲ ಫಿರೂಜನು ಈ ಮುತ್ತಿಗೆಯನ್ನು ತೆಗೆಸಲು ಸಾಧ್ಯವಾಗಲಿಲ್ಲ. ಇದರ ಜೊತೆಗೆ ರಾಚಕೊಂಡದ ವೇಲಮರು ಪಕ್ಷಾಂತರ ಮಾಡಿ ದೇವರಾಯನ ಕಡೆಗೆ ಸೇರಿಕೊಂಡರು. ಈ ಬೆಳವಣಿಗೆಗೆ ಕಾರಣ ಪೆದ್ದ ಕೋಮಟಿ ವೇಮನು ಸುಲ್ತಾನನಿಗೆ ಅವನ ಪೂರ್ವಕರಾವಳಿಯ ದಂಡಯಾತ್ರೆಗೆ ನೆರವು ನೀಡಿದುದು. ಸುಲ್ತಾನನು ಭಾರಿ ಸೋಲನ್ನು ಅನುಭವಿಸಿ ಹಿಮ್ಮೆಟ್ಟಬೇಕಾಯಿತು (೧೪೧೯).[೨೨] ಈ ಮಧ್ಯೆ ರಾಜಮಹೇಂದ್ರಿಯಲ್ಲಿ ಕಾಟಯವೇಮನ ಮಂತ್ರಿ ಅಲ್ಲಾಡನು ಪೆದ್ದ ಕೋಮಟಿಯನ್ನು ಆಮೇಲೆ ಅಣ್ಣದೇವನನ್ನೂ ಸೋಲಿಸಿದನು. ಕುಮಾರಗಿರಿಯು ಮೃತನಾಗಲು ಅವನ ತಂಗಿ ಅನಿತಲ್ಲಿಯನ್ನು ತನ್ನಮಗ ವೀರಭದ್ರನಿಗೆ ಮದುವೆ ಮಾಡಿ ತನ್ನ ಸೊಸೆಯನ್ನಾಗಿ ತಂದುಕೊಂಡನು. ಈಗ ಅವನು ಆ ಪ್ರದೇಶವನ್ನು ಆಳತೊಡಗಿದನು. ಇವೆಲ್ಲ ಕೂಡಿ ಒಟ್ಟಿನ ವಿಶ್ಲೇಷಣೆಯಲ್ಲಿ ದೇವರಾಯನ ಕೈ ಮೇಲಾಯಿತು.[೨೩]

ಈ ಸಂದರ್ಭಗಳಲ್ಲಿ ಲಕ್ಷ್ಮೀಧರನು ದೇವರಾಯನ ಮಂತ್ರಿಯಾಗಿ ಸೇವೆ ಸಲ್ಲಿಸಿದನು. ಉದಯಗಿರಿ

ರಾಜ್ಯದ ಪುಷ್ಪಗಿರಿ ಪ್ರದೇಶದಲ್ಲಿ ತೆಲುಗು-ಚೋಳ ರಾಜ ಅಪ್ರತಿಮಲ್ಲನೆನ್ನುವವನು ದಂಗೆಯೆದ್ದನು. ರಾಜನು ತನ್ನ ಮಗ ವಿಜಯರಾಯನೊಂದಿಗೆ ಹೋಗಿ ಆ ದಂಗೆಯನ್ನು ಅಡಗಿಸಿ, ರಾಜಧಾನಿಯನ್ನು ಅದರ ಸುತ್ತುಮುತ್ತಿನ ಪ್ರದೇಶವನ್ನೂ ಪಾಳುಗೆಡವಿದನು. ನ್ಯೂನಿಜನ ಪ್ರಕಾರ ರಾಜಕುಮಾರ ವಿಜಯನು ''ನಿರೂಪಿಸಲು ಅರ್ಹವಾದ ಏನನ್ನೂ ಮಾಡಲಿಲ್ಲ.''[೨೪] ಸ್ಥಳೀಯ ಶಾಸನಗಳಲ್ಲಿ ಅವನು ಶಕ್ತಿ ಉತ್ಸಾಹ ಭರಿತನಾಗಿದ್ದು ತಂದೆಗೆ ಅನೇಕ ಯುದ್ಧಗಳಲ್ಲಿ, ಎಲ್ಲವೂ ಅಲ್ಲದಿದ್ದರೂ ಸಹಾಯ ಮಾಡಿದನು ಎಂದಿದೆ. ದೇವರಾಯನು ಬಲಿಷ್ಠ ಯೋಧ ಮಾತ್ರವಲ್ಲದೆ, ರಚನಶೀಲವಾದ ದೊರೆಯೂ ಆಗಿದ್ದನು. ಅವನು ತುಂಗಭದ್ರಾನದಿಗೆ ಅಡ್ಡಲಾಗಿ ಒಂದು ಅಣೆಕಟ್ಟನ್ನು ನಿರ್ಮಿಸಿ, ಹದಿನೈದು ಮೈಲಿಗಳಷ್ಟು ಉದ್ದವಾದ ನಾಲೆಗಳನ್ನು ತೋಡಿಸಿದನು. ಈ ನಾಲೆಗಳ ಮೂಲಕ, ಜಲಭಾವದಿಂದ ನರಳುತ್ತಿದ್ದ ರಾಜಧಾನಿಗೆ ನೀರನ್ನು ಪೂರೈಸಲು ವ್ಯವಸ್ಥೆ ಮಾಡಿದನು. ನ್ಯೂನಿಜ್ ಮತ್ತು ನಿಕೋಲೋ ಕಾಂಟಿ ಇಬ್ಬರೂ ಅವನ ಸಾಧನೆಗಳನ್ನು ಶ್ಲಾಘಿಸುತ್ತಾರೆ.

ದೇವರಾಯನಿಗೆ ಮೂವರು ಪತ್ನಿಯರು ಮತ್ತು ನಾಲ್ವರು ಅರ್ಹರಾದ ಪುತ್ರರು-ವೀರವಿಜಯ, ವೀರಮಲ್ಲಪ್ಪ, ೩ನೇ ಹರಿಹರ, ಮತ್ತು ರಾಮಚಂದ್ರ. ಸಿಂಹಾಸನಕ್ಕೆ ಬರಲು ಜನನ ಜ್ಯೇಷ್ಠತೆಯು ನಿರ್ಣಾಯಕ ವಾದ ಅಂಶವಾಗಿರಲಿಲ್ಲ. ರಾಮಚಂದ್ರನು ತಂದೆಯ ವಿಶ್ವಾಸಕ್ಕೆ ಪಾತ್ರನಾಗಿದ್ದನು. ಆದರೆ ವಿಜಯನನ್ನು ಪಟ್ಟಕ್ಕೆ ತರಲು ತಾನಾಗಿ ಬದಿಗೆ ಸರಿದನು. ದೇವರಾಯನು ೧೪೨೨ರಲ್ಲಿ ಮೃತನಾದನು.[೨೫] ಆಮೇಲೆ ವಿಜಯನು ರಾಜನಾದನು. ಶಾಸನಗಳಲ್ಲಿ ಇವನ ಹೆಸರನ್ನು ೩ನೇ ವಿಜಯಬುಕ್ಕ ಎಂದೂ ವಿಜಯಭೂಪತಿ ಎಂದೂ ಕೊಟ್ಟಿರುವುದೂ ಉಂಟು. ತಾನು ಆಡಳಿತಕ್ಕೆ ಸರಿಯಾದವನಲ್ಲ ಎಂದು ಅವನಿಗೆ ತಿಳಿದಿತ್ತು. ಹಾಗಾಗಿ ತನ್ನ ಬೆಳೆದ ಮಗ ೨ನೇ ದೇವರಾಯನನ್ನು ತನ್ನ ಜೊತೆಗೆ ಇರಿಸಿಕೊಂಡನು. ಎರಡುವರ್ಷಗಳ ನಂತರ ೨ನೇ ದೇವರಾಯನು ಆಡಳಿತ ಸೂತ್ರಗಳನ್ನು ತಾನೇ ವಹಿಸಿಕೊಂಡು ಎರಡು ದಶಕಗಳಿಗೂ ಹೆಚ್ಚುಕಾಲ ಕ್ರಿ.ಶ. ೧೪೪೬ರ ವರೆಗೆ ಆಳಿದನು. ಇವನು ಪ್ರೌಢದೇವರಾಯ, ಅಭಿನವ ವೀರದೇವರಾಯ ಮತ್ತು ಪ್ರತಾಪದೇವರಾಯ ಎಂಬ ಹೆಸರುಗಳಿಂದಲೂ ಪ್ರಸಿದ್ಧನಾಗಿದ್ದಾನೆ.

ಬಹಮನಿ ರಾಜ್ಯದಲ್ಲಿ ಫಿರೂಜನ ನಂತರ ೧ನೇ ಶಿಹಾಬುದ್ದೀನ್ ಅಹಮದ್ ರಾಜನಾದನು. ಅವನು ಮತ್ತು ಅವನ ಮಗ ೨ನೇ ಅಲ್ಲಾವುದ್ದೀನ್ ಅಹಮದ್ ಇಬ್ಬರೂ ೨ನೇ ದೇವರಾಯನ ಸಮಕಾಲೀನರು (೧೪೨೨-೩೬ ಮತ್ತು ೧೪೩೬-೫೮). ಪೆದ್ದಕೋಮಟಿವೇಮನು ಮೃತನಾಗಲು (ಕ್ರಿ.ಶ. ೧೪೨೦) ಕೊಂಡವೀಡು ರೆಡ್ಡಿಗಳು ರಾಜಕೀಯ ನಕ್ಷೆಯಿಂದ ಕಣ್ಮರೆಯಾದರು. ಆ ಪ್ರದೇಶದಲ್ಲಿ ಒರಿಸ್ಸಾದ ಗಜಪತಿಗಳು ತಮ್ಮ ಆಡಳಿತವನ್ನು ಸ್ಥಾಪಿಸಿದರು. ಆ ಕುಟುಂಬದ ೪ನೇ ಭಾನುದೇವರೆಡ್ಡಿಯು ರಾಜ್ಯವನ್ನು ವಿಜಯನಗರದಿಂದ ಕಿತ್ತುಕೊಂಡನು. ಕ್ರಿ.ಶ. ೧೪೨೮ರಲ್ಲಿ ಪಂತ ಮೈಲಾರನೂ ಶಂಬುವರಾಯನ ಮಗ ತೆಲುಂಗರಾಯನೂ ಕೊಂಡವೀಡನ್ನು ತಮ್ಮ ವಶದಲ್ಲಿರಿಸಿಕೊಂಡಿದ್ದಂತೆ ತೋರುತ್ತದೆ. ಆದರೆ ೨ನೇ ದೇವರಾಯನು ಅವರನ್ನು ಹತೋಟಿಗೆ ತಂದುಕೊಂಡನು. ಇದು ಸುಮಾರು ಕ್ರಿ.ಶ. ೧೪೩೪ರಲ್ಲಿ ನಡೆದಿರಬೇಕು. ದೇವರಾಯ ಮತ್ತು ಭಾನುದೇವರ ನಡುವೆ ಮೈತ್ರಿಯನ್ನು ಮೂಡಿಸಲು ಅಲ್ಲಾಡವೇಮನು ಪ್ರಯತ್ನಿಸಿದನು. ಆದರೆ ಅದು ಅಲ್ಪಕಾಲಿಕವಾಗಿತ್ತು.

ನೂತನ ಬಹಮನಿ ಸುಲ್ತಾನನು ಪಟ್ಟಕ್ಕೆ ಬಂದೊಡನೆಯೇ ೧೪೨೨ರಲ್ಲಿ ವಿಜಯನಗರದ ಮೇಲೆ ದಂಡೆತ್ತಿ ಬಂದನು. ಈ ಯುದ್ಧಗಳನ್ನು ಕುರಿತು ಫೆರಿಷ್ಟಾ ಏನನ್ನೇ ಹೇಳಿರಬಹುದು. ಅವೆಲ್ಲ ಉತ್ಪ್ರೇಕ್ಷೆಗಳು. ವಾಸ್ತವವಾಗಿ ಎರಡು ಪಕ್ಷಗಳೂ ಸೋಲನ್ನು ಅನುಭವಿಸಿದುವು. ಆದರೂ ಅಂತಿಮವಾಗಿ ವಿಜಯನಗರವು ಜಯಶಾಲಿಯಾಯಿತೆಂದು ಶಾಸನಗಳು ಹೇಳುತ್ತವೆ. ಅಹಮದ್ ಶಾಹನು ರಾಜಧಾನಿಯನ್ನು ಗುಲ್ಬರ್ಗದಿಂದ

ಇನ್ನೂ ಉತ್ತರಕ್ಕಿದ್ದ ಬೀದರ್‌ಗೆ ೧೪೨೩ರಲ್ಲಿ ವರ್ಗಾಯಿಸಿದನೆನ್ನುವುದರಿಂದ ಕೂಡ ಅದು ಸ್ಥಿರಪಡುತ್ತದೆ. ಇತಿಹಾಸದಿಂದಲೂ ಹಿಂದೂ ಸಾಹಿತ್ಯಕ ಮೂಲಗಳಿಂದಲೂ ಆರಿಸಿಕೊಂಡ ವಿವರಗಳು ಅಸ್ಪಷ್ಟವಾಗಿವೆ ಎಂಬುದನ್ನು ನಾವು ಇಲ್ಲಿ ಗಮನಿಸಬೇಕು. ದೇವರಾಯನು ಮೊದಲು ಅನಪೋತ ವೇಲಮನ ನೆರವು ಪಡೆದು ಸೇನೆಯನ್ನು ನಡೆಸಿದನೆಂದು ತೋರುತ್ತದೆ. ಸೈನ್ಯಗಳು ತುಂಗಭದ್ರೆಯ ದಂಡೆಯ ಮೇಲೆ ಎದುರಾದುವು. ವಿಜಯನಗರವು ಗೆರಿಲ್ಲಾ ಯುದ್ಧದಲ್ಲಿ ತೊಡಗಿತು. ಆದರೆ ಅಂತಿಮವಾಗಿ ರಾಜನು ದುರ್ಗದೊಳಗೆ ಅಡಗಿಕೊಳ್ಳಬೇಕಾಯಿತು. ಕ್ರಿ.ಶ. ೧೪೩೩ರಲ್ಲಿ ಅವನು ಮತ್ತೆ ತೆಲಂಗಾಣಕ್ಕೆ ದಂಡೆತ್ತಿ ಹೋದನು. ವರಂಗಲ್ಲಿನ ೩ನೇ ಸಿಂಗ ಮತ್ತು ಇತರ ನಾಯಕರು ಶರಣಾಗತರಾದರು. ಈ ಯುದ್ಧಗಳನ್ನು ಕುರಿತ ವಿವರಗಳು ಸ್ಪಷ್ಟವಾಗಿಲ್ಲ. ತಬತಬಾನ ಬರ್ಹಾನ್-ಇ-ಮೈಸರ್ ಸ್ವತಂತ್ರವಾಗಿ ತೆಲಂಗಾಣವೇ ಮಾಡಿದ ಯುದ್ಧವೊಂದನ್ನು ಕುರಿತು ಹೇಳುತ್ತದೆ. ವೇಲುಗೋಟಿವಾರಿ ವಂಶಾವಳಿಯ ಆಧಾರದಿಂದ ೧೪೨೫-೩೫ರ ನಡುವೆ ತೆಲಂಗಾಣದ ಬಹುಭಾಗವು ಮುಸ್ಲಿಂ ಆಡಳಿತದಲ್ಲಿತ್ತು ಎಂದು ಹೇಳಲಾಗಿದೆ. ಬಹಮನಿಯ ಬೆಂಬಲಿಗರಾಗಿದ್ದ ವೇಲಮರು ೧ನೇ ದೇವರಾಯನ ಆಳಿಕೆಯ ಅವಧಿಯಲ್ಲೇ ಪಕ್ಷ ಬದಲಾಯಿಸಿದುದನ್ನು ನೋಡಿದ್ದೇವೆ. ಈಗ ಮತ್ತೆ ಅವರು ಹಿಂದಿನ ವೈರವನ್ನೇ ಮುಂದುವರಿಸಿದರು. ಆ ವೇಳೆಗೆ ವೇಲಮರು ಒಡೆದು ಎರಡು ಗುಂಪಾಗಿದ್ದರು. ೧ನೇ ಅನಪೋತನು ಉತ್ತರಾರ್ಧದ ಹೊಣೆಯನ್ನು ಹೊತ್ತುಕೊಂಡಿದ್ದನು. ರಾಚಕೊಂಡವು ಅವನ ಮುಖ್ಯ ನಗರವಾಗಿತ್ತು. ೧ನೇ ಮಾಚನು ದಕ್ಷಿಣಾರ್ಧದ ಹೊಣೆ ಹೊತ್ತಿದ್ದನು. ದೇವರಕೊಂಡವು ಅವನ ಕೇಂದ್ರ ಸ್ಥಾನವಾಗಿತ್ತು. ವೇಲಮರೊಂದಿಗೆ ಕೊನೆಯೇ ಇಲ್ಲದೆ ಸಣ್ಣಪುಟ್ಟ ಕದನಗಳು ನಡೆಯುತ್ತಲೇ ಇದ್ದುವು. ವೇಲಮರು ಈಗ ದಕ್ಷಿಣದ ಕಡೆಗೆ ಬಂದಿದ್ದ ಗಜಪತಿ ಭಾನುದೇವನ ಪಕ್ಷವಹಿಸಿದ್ದರು. ದೇವರಕೊಂಡದ ಲಿಂಗನು ಕಾಟಯವೇಮನ ಅಣ್ಣ ವೇಮನ ಜೊತೆಗೆ ಸೇರಿಕೊಂಡಿದ್ದನು. ಸ್ವಲ್ಪ ಕಾಲ ರಾಜಮಂಡ್ರಿಯ ಈ ನಾಯಕರು ಭಾನುದೇವನನ್ನು ಪ್ರತಿರೋಧಿಸಿ ನಿಂತರು. ಆದರೆ ವೇಲಮನು ಗಜಪತಿಯೊಂದಿಗೆ ಸೇರಿಕೊಂಡದ್ದು ಅವರನ್ನು ದುರ್ಬಲಗೊಳಿಸಿತು. ಕೊನೆಗೆ ಭಾನುದೇವನನ್ನು ಅವರು ಪ್ರಭುವೆಂದು ಒಪ್ಪಿಕೊಳ್ಳಬೇಕಾಯಿತು. ಹೀಗೆ ಗಜಪತಿಯು ರಾಜಮಂಡ್ರಿಯನ್ನು ವಶಪಡಿಸಿಕೊಂಡು ಕೊಂಡವೀಡಿನ ಕಡೆಗೆ ನಡೆದನು. ಅಲ್ಲಿ ರಾಚವೇಮನು ೧೪೨೪ರಲ್ಲಿ ಕೊಲೆಗೀಡಾದನು. ಈಗ ದೇವರಾಯನು ಮಧ್ಯಪ್ರವೇಶಮಾಡಿ, ಕೊಂಡವೀಡು ರೆಡ್ಡಿ ರಾಜ್ಯವನ್ನು ಕಸಿದುಕೊಂಡು, ಮತ್ತೆ ರಾಜಮಂಡ್ರಿಯ ರೆಡ್ಡಿಗಳನ್ನು ಅಲ್ಲಿ ರಾಜರನ್ನಾಗಿ ಸ್ಥಾಪಿಸಿದನು (ಕ್ರಿ.ಶ. ೧೪೨೭). ಆದರೆ ಅದು ರಾಜಕೀಯವಾಗಿ ಎಲ್ಲೆಲ್ಲೂ ಗೊಂದಲ -ಅನಾಯಕತ್ವಗಳಿದ್ದ ಕಾಲ. ನಾಯಕರುಗಳು ತಮಗೆ ಅನುಕೂಲವೆನಿಸಿದ ಹಾಗೆಲ್ಲಾ, ನಿಷ್ಠೆಯೆಂಬ ಪರಿಕಲ್ಪನೆಯನ್ನೇ ಗಾಳಿಗೆ ತೂರಿ ಪಕ್ಷ ಬದಲಾಯಿಸುತ್ತಿದ್ದರು. ಶುದ್ಧಾಂಗವಾಗಿ ಅಧಿಕಾರದ ರಾಜಕೀಯವಾಗಿತ್ತು. ನಾಯಕರು ಚದುರಂಗದ ಮಣೆಯ ಮೇಲಿನ ಕಾಯಿಗಳಂತೆ ಅಲ್ಲಿಂದಿಲ್ಲಿಗೆ ಇಲ್ಲಿಂದಲ್ಲಿಗೆ ಚಲಿಸುತ್ತಿದ್ದರು.

ಎರಡನೆಯ ಸಾರಿಗೆ ದೇವರಾಯನು ಬಹಮನಿ ಸುಲ್ತಾನನೊಂದಿಗೆ ಘರ್ಷಣೆಗಿಳಿದನು. ಕ್ರಿ.ಶ. ೧೪೩೬ರಲ್ಲಿ ಅಹಮದ್ ಶಾಹ ತೀರಿಕೊಂಡು ಅವನ ಮಗ ೨ನೇ ಅಲ್ಲಾವುದ್ದೀನ್ ರಾಜ್ಯಸೂತ್ರಗಳನ್ನು ವಹಿಸಿಕೊಂಡನು. ವೈರಿಗಳಿಬ್ಬರೂ ೧೪೩೬ ಮತ್ತು ೧೪೪೩ರಲ್ಲಿ ಎರಡುಸಾರಿ ಘರ್ಷಿಸಿದಂತೆ ತೋರುತ್ತದೆ. ಎಂದಿನಂತೆ ಫೆರಿಷ್ಟಾ ಉತ್ಪ್ರೇಕ್ಷೆ ಮಾಡುತ್ತಾನೆ. ಆದರೆ ಈ ಎರಡೂ ಯುದ್ಧಗಳು ನದಿಗಳ ನಡುವಣ ಪ್ರದೇಶಕ್ಕೆ ಸೀಮಿತವಾಗಿದ್ದುವು. ಅಲ್ಲಾವುದ್ದೀನನು ಮುದ್ಗಲ್‌ಕೋಟೆಯನ್ನು ವಶಪಡಿಸಿಕೊಂಡನು. (೧೪೩೬).[೨೬] ಆದರೆ ಮುದಗಲ್ಲುಕೋಟೆಯಲ್ಲಿರುವ ಒಂದು ಶಾಸನವೇ ಹೀಗೆ ಅವನು ವಶಪಡಿಸಿಕೊಂಡದ್ದು ಸುಳ್ಳೆಂದು ಹೇಳುತ್ತದೆ. ಆಗ ಕೋಟೆಯ ಅಧಿಕಾರಿಯಾಗಿದ್ದವನು ವರದಣ್ಣನಾಯಕ. ಇದು ಅಧಿಕ ಬಲಶಾಲಿಗಳಾಗಿದ್ದ ವಿಜಯನಗರ ಸೈನ್ಯದಿಂದ ಸ್ತಬ್ಧವಾಗಿಸಿ ವಶಪಡಿಸಿಕೊಳ್ಳುವ ಪ್ರಯತ್ನವಾಗಿರಬಹುದು.[೨೭]

ಮೂರನೆಯ ಸಾರಿಗೆ ಮತ್ತೆ ಅಲ್ಲಾವುದ್ದೀನನು ದೇವರಾಯನ ಮೇಲೆ ಯುದ್ಧಕ್ಕೆ ಬಂದನು. ಇಲ್ಲೂ ಒಂದು ಕತೆಯನ್ನು ಹೇಳಲಾಗುತ್ತದೆ.[೨೪] ಹೀಗೆ ಒಂದೇ ಸಮನೆ ಸೋತುದರಿಂದ ದೇವರಾಯನು ಸೋಲಿಗೆ ಕಾರಣಗಳೇನೆಂದು ಆಲೋಚನೆ ಮಾಡಿದನು. ಕಾರಣ ದುರ್ಬಲವಾಗಿದ್ದ ಅಶ್ವದಳ, ಹಾಗೂ ಅವನ ಸೈನ್ಯದ ಬಿಲ್ಲುಗಾರರು ಎಂಬುದು ಗೊತ್ತಾಯಿತು. ಆದ್ದರಿಂದ ರಾಜನು ತನ್ನ ಬಿಲ್ಲುಗಾರರಿಗೆ ಬಹಮನಿಯ ಬಿಲ್ಲುಗಾರರಿಂದಲೇ ಒಳ್ಳೆಯ ತರಬೇತಿ ದೊರಕುವಂತೆ ಮಾಡಿದನು. ೨,೦೦೦ ಮುಸ್ಲಿಂ ಬಿಲ್ಗಾರರು ೬೦,೦೦೦ ಹಿಂದೂ ಬಿಲ್ಗಾರರು, ೮,೦೦೦ ಅಶ್ವದಳ, ೨,೦೦,೦೦೦ ಪದಾತಿ ಪಡೆಗಳಿಂದ ಸಜ್ಜಿತನಾಗಿ ಅಲ್ಲಾವುದ್ದೀನನ ಮೇಲೆ ಯುದ್ಧಕ್ಕೆ ಹೋದನು. ಇದು ಮೇಲೆಯೇ ತೋರುವಂತೆ ಸುಳ್ಳು. ಈ ವಿಚಾರವಾಗಿ ಅವನ ಹಿಂದೆ ರಾಜನಾಗಿದ್ದ ದೇವರಾಯನೇ ಸಾಕಷ್ಟು ಎಚ್ಚರಿಕೆ ವಹಿಸಿದ್ದನು. ಈಗ ರಾಜನು ಮತ್ತೆ ಆ ಬಗೆಗೆ ವಿಚಾರ ಮಾಡಬೇಕಾದ ಅಗತ್ಯವೇ ಇರಲಿಲ್ಲ ! ಅಲ್ಲಾವುದ್ದೀನನು ಬಹಮನಿ ಸಿಂಹಾಸನಕ್ಕೆ ಬರುವುದಕ್ಕಿಂತ ಮೊದಲೇ ೧೦,೦೦೦ಕ್ಕೂ ಹೆಚ್ಚು ಟರ್ಕಿ ಯೋಧರು ವಿಜಯನಗರದ ಸೈನ್ಯದಲ್ಲಿದ್ದರು.

ಆ ಕಾಲದಲ್ಲಿ ವಿಜಯನಗರಕ್ಕೆ ಭೇಟಿ ನೀಡಿದ ಪರ್ಷಿಯನ್ ರಾಯಭಾರಿ ಅಬ್ದುಲ್ ರಜಾಕನಿಂದ ನಮಗೆ ತಿಳಿದುಬರುವುದು, ರಾಜಮನೆತನದ ವಿರೋಧಿಬಣದ ಸದಸ್ಯನೊಬ್ಬನು ಮೋಸದಿಂದ ಸಿಂಹಾಸನವನ್ನು ಆಕ್ರಮಿಸಲು ಪ್ರಯತ್ನಿಸಿದನು. ತಾನು ಕಟ್ಟಿಸಿದ ಹೊಸ ಅರಮನೆಗೆ ರಾಜನನ್ನೂ ಅವನ ಕುಟುಂಬವನ್ನೂ ಇತರ ಕೆಲವು ಗಣ್ಯರನ್ನೂ ಔತಣಕ್ಕೆ ಆಹ್ವಾನಿಸಿದನು. ಅನಾರೋಗ್ಯದಿಂದಾಗಿ ರಾಜನು ಅಲ್ಲಿಗೆ ಹೋಗಲಾಗಲಿಲ್ಲ. ಅವನನ್ನು ಕರೆದುಕೊಂಡು ಬರಲು ತಾನೇ ಅರಮನೆಗೆ ಹೋದ ಅತಿಥೇಯನು ರಾಜನೊಬ್ಬನೇ ಇದ್ದುದನ್ನು ನೋಡಿ ಅವನನ್ನು ಇರಿದು ಕೊಂದುಬಿಟ್ಟನು. ರಾಜನು ಸತ್ತುಹೋದನೆಂದು ಭಾವಿಸಿ ಉಪ್ಪರಿಗೆಯ ಮೇಲಿನಿಂದ ತಾನೇ ಇನ್ನು ಮುಂದೆ ರಾಜ ಎಂದು ಘೋಷಿಸಿದನು. ಆದರೆ ಕೇವಲ ಗಾಯಗೊಂಡಿದ್ದ ರಾಜನು ಅವನ ಬೆನ್ನ ಹಿಂದಿನಿಂದಲೇ ತೆವಳಿಕೊಂಡು ಬಂದು ತಾನು ಇನ್ನೂ ಬದುಕಿರುವುದಾಗಿ ಸಾರಿದನು. ರಾಜನ ಕಡೆಯವರು ಒಡನೆಯೇ ಆ ಕೊಲೆಗಾರನ ಮೇಲೆ ಬಿದ್ದು ಅವನನ್ನು ಮುಗಿಸಿಬಿಟ್ಟರು. ಈ ಘಟನೆಯಿಂದ ಸಹಜವಾಗಿಯೇ ಸ್ವಲ್ಪ ಮಟ್ಟಿಗೆ ಗೊಂದಲವುಂಟಾಯಿತು.[೨೫] ಈ ಸಂದರ್ಭವನ್ನು ಉಪಯೋಗಿಸಿಕೊಂಡು ಅಲ್ಲಾವುದ್ದೀನನು ವಿಜಯನಗರದ ಮೇಲೆ ಆಕ್ರಮಣ ಮಾಡಿದನು. ತಾನು ಹಿಂದಿರುಗಬೇಕಾದರೆ ರಾಜನು ೭ ಲಕ್ಷ ವರಹಗಳನ್ನು ಕೊಡಬೇಕು ಎಂದನು. ಯುದ್ಧವು ನಡೆಯಿತು. ಫೆರಿಷ್ಟನೂ ಈ ಸಂದರ್ಭದಲ್ಲಿ ಉತ್ಪ್ರೇಕ್ಷೆ ಮಾಡಿಲ್ಲ. ಮೂರು ಯುದ್ಧಗಳಲ್ಲಿ ಎರಡು ಮುದ್ಗಲ್ಲುಕೋಟೆಯಲ್ಲಿ ನಡೆಯಿತು. ಮೊದಲ ಹಂತದಲ್ಲಿ ಅಲ್ಲಾವುದ್ದೀನನು ಕೋಟೆಯನ್ನು ವಶಪಡಿಸಿಕೊಂಡನೆಂದು ಅವನು ಹೇಳುತ್ತಾನೆ. ಆದರೆ, ಒಪ್ಪಂದವಾದ ಮೇಲೂ ಅಲ್ಲಾವುದ್ದೀನನು ಕೋಟೆಯನ್ನು ದೇವರಾಯನ ವಶದಲ್ಲೇ ಬಿಟ್ಟನು. ಫೆರಿಷ್ಟಾನ ಹೇಳಿಕೆ ಸುಳ್ಳೆನ್ನುವುದನ್ನು ಇದೇ ಹೇಳುತ್ತದೆ. ಒಂದು ಪರ್ಷಿಯನ್ ಶಾಸನದ ಪ್ರಕಾರ, ಸುಲ್ತಾನನ ರಾಜ್ಯದ ದಕ್ಷಿಣದ ಗಡಿಯು ಬಿಜಾಪುರ ಜಿಲ್ಲೆ ಇಂಡಿ ತಾಲೂಕಿನ ಹಲಸಂಗಿಯ ಮೂಲಕ ಹೋಗುತ್ತಿತ್ತು.

ರಾಜನ ದಳಪತಿಗಳಲ್ಲಿ ಒಬ್ಬನಾದ ಲಕ್ಕಣ್ಣದಂಡನಾಯಕನು ಸಿಲೋನಿಗೆ ಒಂದು ನೌಕಾ ವಿಜಯಯಾತ್ರೆಯನ್ನು ಕೈಗೊಂಡನು. ೨ನೇ ಹರಿಹರನ ಕಾಲದಲ್ಲಿ ಆ ದ್ವೀಪ-ರಾಜ್ಯವು ವಿಜಯನಗರಕ್ಕೆ ಅಧೀನವಾಗಿತ್ತು. ನಾಮಮಾತ್ರದ ವಾರ್ಷಿಕ ಕಪ್ಪಕಾಣಿಕೆಯನ್ನು ಅಲ್ಲಿಂದ ಸಂಗ್ರಹಿಸಲಾಗುತ್ತಿತ್ತು. ಅದರ ಪಾವತಿಯಲ್ಲೂ ಸಡಿಲತೆಯುಂಟಾಯಿತೆಂದು ತೋರುತ್ತದೆ. ಹಡಗು ಪಡೆಯೊಂದನ್ನು ಕೊಂಡೊಯ್ಯುವಂತೆ ರಾಜನು ಲಕ್ಕಣ್ಣನಿಗೆ ಆಜ್ಞೆ ಮಾಡಿದನು. ವಿಜಯಯಾತ್ರೆ ಯಶಸ್ವಿಯಾಯಿತು. ಸಿಲೋನಿನ ರಾಜನು ಸೋತು ಕಪ್ಪ ಕೊಡಲು ಸಮ್ಮತಿಸಿದನು, ದ್ವೀಪದ ಮೇಲೆ ವಿಜಯನಗರದ ಪ್ರಭುತ್ವವನ್ನು ಮರಳಿ ಸ್ಥಾಪಿಸಿದ್ದಾಯಿತು. ಇದು ಕ್ರಿ.ಶ. ೧೪೩೮ಕ್ಕಿಂತ ಸ್ವಲ್ಪ ಮುಂಚೆ. ಏಕೆಂದರೆ ೧೪೩೮ರ ಶಾಸನಗಳು ಈ ಘಟನೆಯನ್ನು ವರ್ಣಿಸುತ್ತವೆ.

ಸುಮಾರು ೧೪೪೩ರಲ್ಲಿ ಕಪಿಲೇಂದ್ರ ಗಜಪತಿಯು ವಿಜಯನಗರವನ್ನು ಧೂಳೀಪಟಮಾಡಬೇಕೆಂಬ ದೃಢ ನಿಶ್ಚಯದಿಂದ ಬಂದನು. ಆದರೆ ಮೊದಲು ಅವನು ರೆಡ್ಡಿಗಳಾದ ಅಲ್ಲಾಡವೇಮ ಹಾಗೂ ವೀರಭದ್ರರನ್ನು ಎದುರಿಸಬೇಕಾಯಿತು. ವೇಲಮನು ಗಜಪತಿಯ ಜೊತೆಗೆ ನಿಂತನು. ದೇವರಾಯನು ಮಲ್ಲಪ್ಪ ಒಡೆಯನ ಕೈಕೆಳಗೆ ಒಂದು ಪ್ರಬಲವಾದ ತುಕಡಿಯನ್ನು ಕಳುಹಿಸಿಕೊಟ್ಟನು. ಯುದ್ಧದ ವಿವರಗಳು ನಮಗೆ ದೊರಕುವುದಿಲ್ಲವಾದರೂ ಅಂತಿಮವಾಗಿ ಗಜಪತಿಯನ್ನು ಸೋಲಿಸಿ ಅವನ ರಾಜ್ಯಕ್ಕೆ ಹಿಂದಕ್ಕೆ ಓಡಿಸಲಾಯಿತು. ಮಲ್ಲಪ್ಪನು ರೆಡ್ಡಿಗಳಿಗೆ ಸಹಾಯ ಮಾಡಲು ಸ್ವಲ್ಪಕಾಲ ರಾಜಮಂಡ್ರಿಯಲ್ಲೇ ಉಳಿದುಕೊಂಡನು. ಹೀಗೆ ರೆಡ್ಡಿ ಆಳಿಕೆಯೂ ಅವರ ರಾಜ್ಯದಲ್ಲಿ ಸ್ಥಿರವಾಗಿ ನೆಲೆ ನಿಂತಿತು.

ದೇವರಾಯನು ಕ್ರಿ.ಶ. ೧೪೪೬ರ ವರೆಗೆ ಆಳಿದನು. ೨೨ ವರ್ಷ ಕಾಲ ಆಳಿದ ಮೇಲೆ[೬೦] ೧೪೪೬ರ ಮೇ ತಿಂಗಳಲ್ಲಿ ನಿಧನ ಹೊಂದಿದನು. ಅವನ ಆಡಳಿತಾವಧಿಯು ತುಂಬ ವೈಭವೋಪೇತವಾದ ಕಾಲ. ರಾಜನ ಬಹು ಸಮಯವು ಯುದ್ಧರಂಗದಲ್ಲೇ ಕಳೆಯಿತು. ಆದರೆ ಅದರಿಂದ ಅವನು ಕೇರಳವೂ ಕೂಡಿದಂತೆ ಇಡೀ ದಕ್ಷಿಣದಲ್ಲಿ ರಾಜ್ಯವನ್ನು ವಿಸ್ತರಿಸಲು ಸಾಧ್ಯವಾಯಿತು. ಸಿಲೋನ್ ದ್ವೀಪವು (ಶ್ರೀಲಂಕಾ) ಅವನಿಗೆ ಶರಣಾಯಿತು. ರೆಡ್ಡಿ ನಾಯಕರೂ ಗಜಪತಿಯೂ ತೆಪ್ಪಗಾದರು. ಕೊನೆಯಪಕ್ಷ ವಿಜಯನಗರದ ಕೆಲವು ಭಾಗಗಳನ್ನು ವಶಪಡಿಸಿಕೊಳ್ಳಬೇಕೆಂದು ಮಾಡಿದ ಬಹಮನಿ ಸುಲ್ತಾನನ ಪ್ರಯತ್ನಗಳೆಲ್ಲವೂ ವಿಫಲಗೊಂಡುವು. ದೇವರಾಯನಿಗೆ ಸಮರ್ಥರಾದ ದಳಪತಿಗಳು ಹಾಗೂ ಇತರ ಅಧಿಕಾರಿಗಳು ಆಡಳಿತದಲ್ಲಿ ನೆರವಾಗುತ್ತಿದ್ದರು, ಅವರೆಲ್ಲ ಸಂಪೂರ್ಣವಾಗಿ ವಿಶ್ವಾಸಾರ್ಹರಾಗಿದ್ದರು. ಅಬ್ದುಲ್ ರಜಾಕನು ವಿಜಯನಗರಕ್ಕೆ ಭೇಟಿನೀಡಿದನು. ರಾಜನನ್ನೂ ರಾಜ್ಯವನ್ನೂ ಅವನು ಕೊಂಡಾಡಿದ್ದಾನೆ. ದೇಶವು ಜನಭರಿತವಾಗಿತ್ತು, ಸಂಪದ್ಭರಿತವಾಗಿತ್ತು. ಬಲವಾದ ಕೋಟೆಗಳಿದ್ದ ರಾಜಧಾನಿಯೂ ರಜಾಕನಿಗೆ ತಿಳಿದಂತೆ ಅತ್ಯಂತ ಬಲವಾದ ಕೋಟೆಯಾಗಿತ್ತು. ಸಮಸ್ತ ನಾಗರಿಕ ಸೌಲಭ್ಯಗಳೂ ಅಲ್ಲಿದ್ದುವು. ಜನರು ಮೇಲ್ವರ್ಗದವರಾಗಿದ್ದರು, ಸುಸಂಸ್ಕೃತರಾಗಿದ್ದರು. ರಾಯಭಾರಿಯು ಹೇಳುತ್ತಾನೆ:[೬೧]

> ಮೊದಲನೆಯ ಕೋಟೆಯು ಎರಡನೆಯದನ್ನು ಬೇರ್ಪಡಿಸುವ ಸ್ಥಳದಲ್ಲಿ ಮತ್ತು ಮೂರನೆಯ ಕೋಟೆಯವರೆಗೆ ಬೇಸಾಯದ ಗದ್ದೆಗಳು, ಮನೆಗಳು, ತೋಟಗಳು ತುಂಬಿವೆ. ಮೂರನೆಯದರಿಂದ ಏಳನೆಯದರವರೆಗಿನ ಸ್ಥಳದಲ್ಲಿ ಅಸಂಖ್ಯಾತ ಜನರಿದ್ದಾರೆ, ಅನೇಕಾನೇಕ ಅಂಗಡಿಗಳಿವೆ, ಒಂದು ಪೇಟೆ ಬೀದಿಯಿದೆ.... ಎಲ್ಲೆಲ್ಲೂ ಗುಲಾಬಿ ಹೂವುಗಳು ಮಾರಾಟವಾಗುತ್ತವೆ... ಹೂವುಗಳು ಈ ಜನರಿಗೆ ಆಹಾರದಷ್ಟೇ ಮುಖ್ಯವಾಗಿವೆ... ಪ್ರತಿಯೊಂದು ವೃತ್ತಿಗೆ ಸೇರಿದ ಪ್ರತಿಯೊಂದು ಜನವರ್ಗವೂ ಪಕ್ಕ ಪಕ್ಕದಲ್ಲಿ ಅಂಗಡಿ ಮಳಿಗೆಗಳನ್ನು ಹೊಂದಿದೆ. ಆಭರಣ ವ್ಯಾಪಾರಿಗಳು ಬಹಿರಂಗವಾಗಿ ಪೇಟೆಗಳಲ್ಲಿ ಮುತ್ತುಗಳು, ಮಾಣಿಕ್ಯಗಳು, ಪಚ್ಚೆಗಳು, ವಜ್ರಗಳು ಮೊದಲಾದ ಅಮೂಲ್ಯ ಹರಳುಗಳನ್ನು ಮಾರುತ್ತಾರೆ.

ನಿಕೋಲೋ ಕಾಂಟಿ ಒಬ್ಬ ಇಟಲಿಯ ಪ್ರವಾಸಿ. ವಿಜಯನಗರವನ್ನು ಅವನು ಬಿಜೆನೆಗಾಲಿಯ ಎಂದು ಉಲ್ಲೇಖಿಸುತ್ತಾನೆ. ಸುಮಾರು ಕ್ರಿ.ಶ. ೧೪೨೦-೨೧ರಲ್ಲಿ ನಗರವನ್ನು ಸಂದರ್ಶಿಸಿದ ಅವನು ಹೇಳುತ್ತಾನೆ.[೬೨]

> ಬಿಜೆನೆಗಾಲಿಯ ಮಹಾನಗರವು ಕಡಿದಾದ ಪರ್ವತಗಳ ನಡುವೆ ಇದೆ. ಈ ನಗರದ ಸುತ್ತಳತೆ ಅರವತ್ತು ಮೈಲು; ಅದರ ಕೋಟೆಗೋಡೆಗಳನ್ನು ಪರ್ವತಗಳವರೆಗೂ ಒಯ್ಯಲಾಗಿದೆ, ತಪ್ಪಲಿನ ಕಣಿವೆಗಳನ್ನೂ ಒಳಗೊಳ್ಳುತ್ತವೆ. ಇದರಿಂದ ನಗರದ ಹರಹು

ಇನ್ನೂ ಹೆಚ್ಚಿದೆ. ಈ ನಗರದಲ್ಲಿ ಆಯುಧ ಧರಿಸಬಲ್ಲ ತೊಂಬತ್ತು ಸಾವಿರ ಜನ ಯೋಧರಿದ್ದಾರೆ ಎಂದು ಅಂದಾಜು ಮಾಡಲಾಗಿದೆ.

ಅವನು ಅಲ್ಲಿನ ಸಾಮಾಜಿಕ ಜೀವನ ಒಂದು ಚಿತ್ರವನ್ನು ಕೊಡುತ್ತಾನೆ. ಸತಿಪದ್ಧತಿಯನ್ನು ಉಲ್ಲೇಖಿಸಿದ್ದಾನೆ. ''ಈ ಪ್ರದೇಶದ ನಿವಾಸಿಗಳು ತಮಗೆ ಇಷ್ಟ ಬಂದಷ್ಟು ಜನ ಪತ್ನಿಯರನ್ನು ಹೊಂದಿರಬಹುದು. ಪತಿ ಸತ್ತು ಹೋದರೆ ಅವರನ್ನು ಪತಿಯ ದೇಹದೊಂದಿಗೆ ಸುಟ್ಟುಬಿಡುತ್ತಾರೆ.''[೩೬] 'ಕನರೀಸ್ ನೂತನ ವರ್ಷದ ಆರಂಭ ದಿನ'ವನ್ನೂ ಸಂಭ್ರಮದಿಂದ ಆಚರಿಸುವ ದೀಪಾವಳಿಯನ್ನೂ ಮಹಾನವಮಿಯನ್ನೂ ಬಹುಶಃ ಹೋಳಿಹಬ್ಬವನ್ನೂ ಉಲ್ಲೇಖಿಸುತ್ತಾನೆ.

ರಾಜ್ಯದ ಪೂರ್ವಮುಖ ವಿಸ್ತರಣ, ಕ್ರೋಢೀಕರಣ ಮತ್ತು ರಾಜ್ಯದ ಬಲವರ್ಧನೆಗಳ ಕೀರ್ತಿಯು ದೇವರಾಯನಿಗೆ ಸಲ್ಲುತ್ತದೆ. ಶ್ರೇಷ್ಠ ರಾಜಕಾರಣಿಯೂ ಧೈರ್ಯಶಾಲಿಯಾದ ಪ್ರತಿಭಾವಂತ ಯೋಧನೂ ಆಗಿದ್ದ ಅವನು ಕ್ವಿಲಾನ್, ಸಿಲೋನ್, ಪೆಗು, ಮತ್ತು ಟೆನಸ್ಸೆರಿಮ್ (ಬರ್ಮಾ) ದೇಶಗಳ ರಾಜರು ತನಗೆ ಕಪ್ಪ ಕಾಣಿಕೆ ಸಲ್ಲಿಸುವಂತೆ ಮಾಡಿದನು. ಆಂತರಿಕವಾದ ಶಾಂತಿ ಸಮೃದ್ಧಿ, ತುಂಬಿದ ಜನತೆ, ತೃಪ್ತರಾದ ಪ್ರಜೆಗಳು, ಸಾಮಾಜಿಕ ಸೌಹಾರ್ದ, ಕೃಷಿ ಸಂಪತ್ತು, ಒಳನಾಡು ವ್ಯಾಪಾರ ಹಾಗೂ ಹೊರನಾಡಿನೊಂದಿಗೆ ವಾಣಿಜ್ಯಗಳ ಅಭಿವೃದ್ಧಿ–ಇವೆಲ್ಲ ಸೇರಿ ಸಾಮ್ರಾಜ್ಯವು ಅಭ್ಯುದಯದ ಶಿಖರವನ್ನು ಮುಟ್ಟುವಂತೆ ಮಾಡಿದ್ದುವು. ಇವೆಲ್ಲ ಸಾಧಿತವಾಗಿದ್ದುದೂ ಅವಿರತವಾಗಿ ನಡೆಯುತ್ತಲೇ ಇದ್ದ ಯುದ್ಧಗಳ ಜೊತೆ ಜೊತೆಗೆ ಎಂಬುದನ್ನು ನೆನಪಿನಲ್ಲಿಡಬೇಕು. ರಾಜನು ಧಾರ್ಮಿಕ ಸಹಿಷ್ಣುತಾ ನೀತಿಯನ್ನೂ, ೧ನೇ ಬುಕ್ಕನು ಹೇಳಿ ಆಚರಿಸಿದ ಹಾಗೆಯೇ, ಆಚರಿಸುತ್ತಿದ್ದನು. ವಾಸ್ತವವಾಗಿ ಅದು ವಿಜಯನಗರದ ಎಲ್ಲಾ ಅರಸರ ಒಂದು ಸಾಮಾನ್ಯ ನೀತಿಯಾಯಿತು. ದೇವರಾಯನು ಅವರನ್ನು ಸೇನೆಗೆ ಸೇರಿಸಿಕೊಳ್ಳುವ ಹಂತಕ್ಕೂ ಹೋದನು. ರಾಜಧಾನಿಯಲ್ಲಿ ಅವರು ನಿರಾತಂಕವಾಗಿ ನೆಲೆಸುವಂತಾಗಬೇಕೆಂದು ಅವರಿಗಾಗಿ ಒಂದು ಮಸೀದಿಯನ್ನೂ ಕಟ್ಟಿಸಿಕೊಟ್ಟನು. ಇಸ್ಲಾಂ ಪಂಥೀಯರು ತನ್ನ ಸಿಂಹಾಸನದೆದುರಿಗೆ ಬಂದು ತನಗೆ ವಂದಿಸುವಾಗ ಅವರಿಗೆ ಮುಜುಗರವಾಗದಿರಲಿ ಎಂದು ಸಿಂಹಾಸನದ ಪಕ್ಕದಲ್ಲಿ ಒಂದು ಮೇಜಿನ ಮೇಲೆ ಕೊರಾನಿನ ಒಂದು ಪ್ರತಿಯನ್ನು ಇರಿಸಿದ್ದನು ಎಂದು ಹೇಳುತ್ತಾರೆ.

ಸ್ವತಃ ಸಾಹಿತ್ಯ ಮತ್ತು ಕಲೆಗಳಲ್ಲಿ ಪರಿಣತನಾಗಿದ್ದ ಅವನು ಅನೇಕ ಕವಿಗಳನ್ನು ವಿದ್ವಾಂಸರನ್ನು ಸತ್ಕರಿಸಿ ಅವರಿಗೆ ಆಶ್ರಯ ನೀಡಿದನು. ಸಂಸ್ಕೃತ ಮತ್ತು ಇತರ ದೇಶಭಾಷೆಗಳು ಪ್ರೋತ್ಸಾಹ ಪಡೆದುವು. ಆಂಧ್ರಕವಿ ಶ್ರೀನಾಥನಿಗೆ ಕನಕಾಭಿಷೇಕ ಮಾಡಿ ಗೌರವಿಸಿದನು. ವೀರಶೈವ ಧರ್ಮವು ಸಾಂಸ್ಥಿಕವಾಯಿತು. ಜೈನ,ಬ್ರಾಹ್ಮಣ ಮತ್ತು ವೀರಶೈವ ಸಾಹಿತ್ಯಗಳು ಬೆಳೆದುವು. ಇದು ಕನ್ನಡ ಕವಿಗಳಾದ ಚಾಮರಸ ಮತ್ತು ಕುಮಾರವ್ಯಾಸರ ಕಾಲ. ಶೃಂಗೇರಿಯ ಧರ್ಮಗುರುಗಳಾದ ಚಂದ್ರಶೇಖರ ಭಾರತಿಗಳನ್ನು ಅವನು ಭಕ್ತಿಯಿಂದ ಗೌರವಿಸಿದನು.

ದೇವರಾಯನ ಮರಣಾನಂತರ, ಅವನ ತಮ್ಮನಾದ ಪ್ರತಾಪದೇವರಾಯನು (೨ನೇ ವಿಜಯನು ಎಂದೂ ಇವನಿಗೆ ಹೆಸರಿತ್ತು) ಬಹು ಸ್ವಲ್ಪಕಾಲ ಆಳಿದನು. ದೇವರಾಯನ ಪತ್ನಿ ಪೊನ್ನಲಾದೇವಿಯ ಮಗ ಮಲ್ಲಿಕಾರ್ಜುನನೂ ಅದೇ ಸಮಯದಲ್ಲಿಯೇ ಆಳುತ್ತಿದ್ದಂತೆ ತೋರುತ್ತದೆ. ಇನ್ನೊಬ್ಬಳು ಪತ್ನಿ ಭೀಮಾದೇವಿ. ೧೪೪೬ರಲ್ಲಿ (ಮೇ ೨೪) ದೇವರಾಯನು ವಿಧಿವಶನಾಗುತ್ತಿದ್ದಂತೆಯೇ ಎಂದಿನಂತೆ ಸಿಂಹಾಸನಕ್ಕಾಗಿ ಕಚ್ಚಾಟ ನಡೆಯಿತು. ಮಲ್ಲಿಕಾರ್ಜುನನಿಗೆ ಇಮ್ಮಡಿ ದೇವರಾಯ ಅಥವಾ ೨ನೇ ಪ್ರೌಢದೇವರಾಯ ಎಂದು ಹೆಸರಾಯಿತು. ಬಲದಲ್ಲಾಗಲಿ ಸಾಹಸದಲ್ಲಾಗಲಿ ಮಲ್ಲಿಕಾರ್ಜುನನನ್ನು ಅವನ ತಂದೆಯೊಂದಿಗೆ ಹೋಲಿಸಲು ಸಾಧ್ಯವಿರಲಿಲ್ಲ. ಇದರಿಂದ ಬಹಮನಿ ಸುಲ್ತಾನನಿಗೂ ಗಜಪತಿ ಅರಸನಿಗೂ ಸೇಡು ತೀರಿಸಿಕೊಳ್ಳಲು ಅವಕಾಶ

ದೊರಕಿದಂತಾಯಿತು. ಗಂಗಾಧರನ ಗಂಗಾಧೀಶ ಪ್ರತಾಪ ವಿಲಾಸಮು ಎಂಬ ತೆಲುಗು ಕೃತಿಯ ಪ್ರಕಾರ, ಕಪಿಲೇಶ್ವರ ಗಜಪತಿಯೂ ಬಹಮನಿ ಸುಲ್ತಾನನೂ ವಿಜಯನಗರದ ರಾಜಧಾನಿಯ ಮೇಲೆ ಬಿಡಿಬಿಡಿಯಾಗಿಯೇ ಆಕ್ರಮಣ ಮಾಡಿದರು. ಇಬ್ಬರೂ ಒಟ್ಟಿಗೆ ಆಕ್ರಮಿಸಿದ್ದು ಕೇವಲ ಕಾಕತಾಳೀಯ.[೩೪] ರಷ್ಯಾಪ್ರವಾಸಿ ನಿಕಿಟಿನ್, ವಿಜಯನಗರದ ಮೇಲೆ ಬಹಮನಿ ಸೇನೆಯು ಮುತ್ತಿದುದನ್ನು ವರ್ಣಿಸುತ್ತಾನೆ.[೩೫] ಕ್ರಿ.ಶ. ೧೪೫೦ರಲ್ಲಿ ಎರಡೂ ಸೇನೆಗಳು ವಿಜಯನಗರದ ಮೇಲೆ ಧಾಳಿ ಮಾಡಿದುವು. ರಾಜಧಾನಿಯವರೆಗೂ ಬಂದುವು. ಆದರೆ ಯಶಸ್ವಿಯಾಗಿ ಅವುಗಳನ್ನು ಹಿಮ್ಮೆಟ್ಟಿಸಲಾಯಿತು.

ಕಪಿಲೇಶ್ವರನು ತನ್ನ ಮಗ ಹಮ್ಮೀರನನ್ನು ರಾಜಮಂತ್ರಿಯ ಮೇಲೆ ಆಕ್ರಮಣ ಮಾಡಲು ಕಳುಹಿಸಿದನು. ರೆಡ್ಡಿ ರಾಜ್ಯವನ್ನು ಹಮ್ಮೀರನು ಕೈವಶಪಡಿಸಿಕೊಂಡನು. ಗಜಪತಿಯ ಇನ್ನೊಂದು ಸೇನಾ ತುಕಡಿಯು ಗಜರಾಮ ತಿಪ್ಪನ ಕೈಕೆಳಗೆ ತೆಲಂಗಾಣದ ಕಡೆಗೆ ನಡೆಯಿತು. ಸಂಜರ್‌ಖಾನನ ಅಧೀನದಲ್ಲಿದ್ದ ಯವನರನ್ನು ಸೋಲಿಸಿ, ತಿಪ್ಪನು ಆ ಪ್ರದೇಶವನ್ನು ರಘುದೇವ ನರೇಂದ್ರ ಮಹಾಪಾತ್ರನ ವಶದಲ್ಲಿರಿಸಿದನು. ಈಗ ಕೃಷ್ಣಾ ನದಿಯು ರಾಜ್ಯದ ದಕ್ಷಿಣ ಗಡಿಯಾಯಿತು.[೩೬] ಸೇನೆಯ ಮೂರನೆಯ ಭಾಗವನ್ನು ತೆಗೆದುಕೊಂಡು ಸ್ವತಃ ಗಜಪತಿಯೇ ದಕ್ಷಿಣದ ಕಡೆಗೆ ಹೊರಟು ಕರ್ನೂಲು ಪ್ರದೇಶವನ್ನು ಆಕ್ರಮಿಸಿಕೊಂಡನು. ಮಲ್ಲಿಕಾರ್ಜುನನು ಸಾಳುವ ನರಸಿಂಹನೆಂಬ ಬಹು ಸಮರ್ಥನಾಗಿದ್ದ ದಳಪತಿಯನ್ನು, ಸಾಮ್ರಾಜ್ಯದ ಮಧ್ಯಭಾಗವನ್ನು ಸಂರಕ್ಷಿಸಲು ಪೆನುಕೊಂಡೆಗೆ ಕಳುಹಿಸಿದನು. ಚಂದ್ರಗಿರಿಯು ಸಾಳುವ ರಾಮಚಂದ್ರನ ಉಸ್ತುವಾರಿಯಲ್ಲಿ ಉಳಿಯಿತು. ಗಜಪತಿಯ ಚೈತ್ರಯಾತ್ರೆ ಬಹುತೇಕ ಯಶಸ್ವಿಯಾಯಿತು. ತಮಿಳುನಾಡಿನ ದಕ್ಷಿಣ ಆರ್ಕಾಟ್ ಜಿಲ್ಲೆಯ ಮಣ್ಣೂರಿನಲ್ಲಿ ದೊರೆತ ಶಾಸನಗಳು ಹಮ್ಮೀರನ ಮಗ ದಕ್ಷಿಣ ಕಪಿಲೇಶ್ವರ ಕುಮಾರ ಮಹಾಪಾತ್ರನು ಕೊಂಡಪಲ್ಲಿ, ಅದ್ದಂಕಿ, ವಿನುಕೊಂಡ, ಪಡೈವೀಡು, ತಿರುಚಿರಾಪಲ್ಲಿ, ಚಂದ್ರಗಿರಿ ಮುಂತಾದ ಸ್ಥಳಗಳಲ್ಲಿ ಆಳುತ್ತಿದ್ದುದನ್ನು ಹೇಳುತ್ತವೆ. ಯಾವುದೇ ಪ್ರತಿಭಟನೆಯಿಲ್ಲದೆ ಹಮ್ಮೀರನು ರಾಮೇಶ್ವರದವರೆಗೂ ಮುಂದುವರಿದನೆಂಬುದನ್ನು ಇದು ಸೂಚಿಸುತ್ತದೆ.[೩೭] ಇದು ಕೇವಲ ಒಂದು ಧಾಳಿಯೋ ಇಲ್ಲವೇ ಪ್ರದೇಶಗಳನ್ನು ಆಕ್ರಮಿಸಿಕೊಂಡು ಆಳಲು ನಡೆಸಿದ ದಂಡಯಾತ್ರೆಯೇ ಎಂಬುದನ್ನು ಕುರಿತು ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ. ಏನೇ ಇರಲಿ, ಕ್ರಿ.ಶ. ೧೪೬೩ರ ಸುಮಾರಿನಲ್ಲಿ ನಡೆದ ಈ ಸೈನ್ಯಾಚರಣೆಯು ಅಲ್ಪಕಾಲಿಕವಾದುದಾಗಿತ್ತು. ತಾನು ಗೆದ್ದಿದ್ದ ಪ್ರದೇಶಗಳಿಂದ ಹಮ್ಮೀರನು ಹಿಂದೆಗೆಯಬೇಕಾಯಿತು. ಆದರೂ ಉದಯಗಿರಿ ಮತ್ತು ಕೊಂಡವೀಡು ಈ ಎರಡು ಅತ್ಯಂತ ಮಹತ್ವದ ದುರ್ಗಗಳನ್ನು ಅವನು ಉಳಿಸಿಕೊಂಡನು.

ಈ ಯುದ್ಧಗಳು ಮಲ್ಲಿಕಾರ್ಜುನನನ್ನು ಕಂಗೆಡಿಸಿದುವು. ಸೋಲನ್ನು ಅನುಭವಿಸಬೇಕಾಗಿ ಬಂದದ್ದು ಸಾಮ್ರಾಜ್ಯದ ಭವಿಷ್ಯಕ್ಕೆ ಮಾರಕವಾಗುವಂತೆ ತೋರಿತು. ಎಲ್ಲೆಲ್ಲೂ ಗೊಂದಲ, ಅವಿಧೇಯತೆ, ಶೈಥಿಲ್ಯಗಳು ಕಂಡುಬಂದುವು. ಇದರಿಂದಾಗಿ ಮಲ್ಲಿಕಾರ್ಜುನನು ಅಧಿಕಾರ ತ್ಯಾಗ ಮಾಡಬೇಕಾಯಿತು. ಪ್ರತಾಪದೇವನ ಮಗ ೨ನೇ ವಿರೂಪಾಕ್ಷನು, ಮಲ್ಲಿಕಾರ್ಜುನನ ಮಗ ರಾಜಶೇಖರನ ಹಕ್ಕನ್ನು ತಿರಸ್ಕರಿಸಿ ಪಟ್ಟಕ್ಕೆ ಬಂದನು. ರಾಜಶೇಖರನಾದರೋ ಗಡೀಪಾರಾಗಿ ಸುಮಾರು ಎರಡು ದಶಕಗಳ ಕಾಲ, ಕ್ರಿ.ಶ. ೧೪೮೭ರಲ್ಲಿ ಸಾಯುವವರೆಗೂ ದಕ್ಷಿಣದಲ್ಲಿ ಇದ್ದುಬಿಟ್ಟನು.

೨ನೇ ವಿರೂಪಾಕ್ಷನೂ (ಸು. ೧೪೬೫-೮೫) ಉತ್ತಮನೇನೂ ಆಗಿರಲಿಲ್ಲ. ಶ್ರೀಮಂತಿಕೆಯ ಸುಖಭೋಗಗಳು ಮತ್ತು ದುಶ್ಚಟಗಳಿಗೆ ಬಿದ್ದ ಅವನು ತನ್ನ ಕೈಕೆಳಗಿನವರ ನಿಷ್ಠೆಯನ್ನೂ ಪಡೆಯದಾದನು. ರಾಜ್ಯವು ಕಡಿದು ತುಂಡಾಗುವುದನ್ನು ತಡೆಯಲು ಅವನು ಏನನ್ನೂ ಮಾಡಲಾಗಲಿಲ್ಲ. ಗಜಪತಿ ಕಪಿಲೇಂದ್ರನು ೧೪೭೦ರಲ್ಲಿ ಮರಣಹೊಂದಿದಾಗ, ಬಹಮನಿ ಸುಲ್ತಾನನಾದ ೩ನೇ ಮುಹಮ್ಮದ್ ಶಾಹ (೧೪೬೩-೮೨)ನು ತನ್ನ ಪ್ರಧಾನಮಂತ್ರಿ ಮಹಮೂದ್ ಗವಾನನ ಸೂಚನೆಯಂತೆ ಅವನನ್ನು ಸೇನೆಯೊಂದಿಗೆ

ವಿಜಯನಗರದ ಮೇಲೆ ಆಕ್ರಮಣ ಮಾಡಲು ಕಳುಹಿಸಿದನು. ಯುದ್ಧ ಮಾಡಿದ್ದಕ್ಕಿಂತ ಮಿಗಿಲಾಗಿ ಲಂಚವನ್ನು ಕೊಟ್ಟು ಬೆಳ್ಗಾಕೋಟೆಯನ್ನು ವಶಪಡಿಸಿಕೊಂಡನು. ಆಮೇಲೆ ಗೋವಾದ ಸರದಿ. ಈಗ ವಿರೂಪಾಕ್ಷನು ಪ್ರತಿಭಟನೆಯೊಡ್ಡಿದನು. ಆದರೆ ಮುಹಮ್ಮದ್‌ನು ಯೂಸುಫ್ ಅದಿಲ್‌ಖಾನನನ್ನು ಕಳುಹಿಸಿದನು, ಅವನು ವಿಜಯನಗರದ ಆಕ್ರಮಣವನ್ನು ಹಿಮ್ಮೆಟ್ಟಿಸಿದನು. ಇದು ತುಳು ರಾಜ್ಯಕ್ಕೆ ಬಾಗಿಲು ತೆರೆಯಿತು. ವಿರೂಪಾಕ್ಷನು ಉತ್ತರ ಕೊಂಕಣವನ್ನು ಕಳೆದುಕೊಂಡನು. ಇದು ವಿಜಯನಗರಕ್ಕೆ ಬಿದ್ದ ಬಲವಾದ ಪೆಟ್ಟು. ಏಕೆಂದರೆ ಪಾಶ್ಚಾತ್ಯ ದೇಶಗಳೊಂದಿಗೆ ಲಾಭದಾಯಕ ವ್ಯಾಪಾರ ನಡೆಸಲು, ವಿಶೇಷವಾಗಿ ಸೇನಾಬಲಕ್ಕೆ ಅಗತ್ಯವಾದ ಕುದುರೆಗಳನ್ನು ಕೊಳ್ಳಲು ಅದು ಹೆಬ್ಬಾಗಿಲಾಗಿತ್ತು.

ಆದರೆ ಚಂದ್ರಗಿರಿಯ ರಾಜ್ಯಪಾಲನಾಗಿದ್ದ ಸಾಳುವ ನರಸಿಂಹನು ವಿಜಯನಗರದ ವೈರಿಗಳ ಮೇಲೆ ಪ್ರತಿ-ಆಕ್ರಮಣ ಮಾಡಿದನು. ಕಪಿಲೇಂದ್ರ ಮತ್ತು ಹಮ್ಮೀರರು ಸತ್ತದ್ದು ಅವನಿಗೆ ಚೇತರಿಸಿಕೊಳ್ಳಲು ಅವಕಾಶ ಕೊಟ್ಟಿತು. ಹಮ್ಮೀರ ಮತ್ತು ಅವನು ಸಹೋದರ ಪುರುಷೋತ್ತಮರ ನಡುವಣ ವೈಮನಸ್ಯದಿಂದಾಗಿ ಮುಹಮ್ಮದನಿಗೆ ಸ್ವಾಗತ ಕೋರಿದಂತಾಯಿತು. ಪುರುಷೋತ್ತಮನನ್ನು ಹೊರಗಟ್ಟಲಾಯಿತು. ನರಸಿಂಹನು ಈ ಅವಕಾಶವನ್ನು ಉಪಯೋಗಿಸಿಕೊಂಡನು. ದಂಡನಾಯಕನಾಗಿದ್ದ ಈಶ್ವರನಾಯಕನ ನೆರವಿನಿಂದ, ಕಳೆದುಹೋಗಿದ್ದ ರಾಜ್ಯಭಾಗಗಳನ್ನು ಗೆದ್ದುಕೊಂಡನು. ೧೪೭೦ರಿಂದ ೮೫ರ ವರೆಗೆ ೧೫ ವರ್ಷಗಳ ಅವಧಿಯಲ್ಲಿ ದಂಗೆಗಳನ್ನು ಅಡಗಿಸಿದನು. ಅವನ ಅಧಿಕಾರವು ಈಗ ಸರ್ವೋನ್ನತವಾಯಿತು, ಅಜೇಯವಾಯಿತು.

ವಿರೂಪಾಕ್ಷನು ಈಗ ನಾಮಮಾತ್ರಕ್ಕೆ ರಾಜನಾಗಿದ್ದನು. ಗೌರವವಾಗಲಿ, ಅಧಿಕಾರವಾಗಲಿ, ಜನತೆಯ ಬೆಂಬಲವಾಗಲಿ ಅವನಿಗಿರಲಿಲ್ಲ. ಬೇಸತ್ತ ಮಗನೇ ಅವನನ್ನು ಕೊಂದನು, ಆದರೆ ಪಟ್ಟಕ್ಕೆ ಬರಲಿಲ್ಲ. ತನ್ನ ತಮ್ಮ ಪ್ರೌಢರಾಯನಿಗೆ ರಾಜ್ಯವನ್ನು ವಹಿಸಿಕೊಟ್ಟನು. ತೆಲುಗು ಕೃತಿಗಳಾದ ವರಾಹಪುರಾಣಮು ಮತ್ತು ಜೈಮಿನಿಭಾರತವು, ಹೇಗೆ ಬಹಮನಿ ಸುಲ್ತಾನನಾದ ಮುಹಮ್ಮದ್ ಶಾಹನು ಕಾಂಚಿಯ ದೇವಾಲಯದಲ್ಲಿದ್ದ ಅಪಾರವಾದ ಸಂಪತ್ತನ್ನು ದೋಚಿಕೊಂಡು ಹೋಗಬೇಕೆಂಬ ಆಸೆಯಿಂದ, ನೆಲ್ಲೂರಿನಲ್ಲಿ ಇದ್ದುಕೊಂಡು ಕಾಂಚಿಯ ಮೇಲೆ ಸೇನಾಸಮೇತನಾಗಿ ನಡೆದನು ಎಂದು ವರ್ಣಿಸುತ್ತವೆ. ಕಾಂಚೀನಗರವನ್ನೂ ದೇವಾಲಯವನ್ನೂ ಪಾಳುಗೆಡವಿ ಅಪಾರವಾದ ಲೂಟಿಯೊಂದಿಗೆ ಹಿಂದಿರುಗಿದನು. ಆದರೆ ದೈವೇಚ್ಛೆ ಬೇರೆಯಾಗಿತ್ತು. ಇದನ್ನು ತಿಳಿದ ನರಸಿಂಹನು ಈಶ್ವರನಾಯಕನನ್ನು ಸೇನೆಯೊಂದಿಗೆ ಕಳುಹಿಸಿದನು. ಅವನು ಮುಹಮ್ಮದ್ ಶಾಹನನ್ನು ಅಡ್ಡಗಟ್ಟಿದನು. ನೆಲ್ಲೂರು ಜಿಲ್ಲೆಯ ಕಂದುಕೂರಿನಲ್ಲಿ ಮುಹಮ್ಮದನನ್ನು ಸೋಲಿಸಿ ಲೂಟಿಯನ್ನು ಕೈವಶಪಡಿಸಿಕೊಂಡನು. ಇದರಿಂದ ಕ್ರುದ್ಧನಾದ ಮುಹಮ್ಮದನು ಅದಿಲ್‌ಖಾನನನ್ನು ಪೆನುಕೊಂಡೆಯ ಕಡೆಗೆ ಕಳುಹಿಸಿ ತಾನು ಸ್ವತಃ ಕೊಂಡಪಲ್ಲಿ ಮತ್ತು ಮಸಲಿಪಟ್ಟಣಗಳಲ್ಲಿ ವಿಜಯನಗರದ ಸೈನ್ಯವನ್ನು ಪರಾಭವಗೊಳಿಸಿದನು. ಆದರೆ ಈಶ್ವರನಾಯಕನನ್ನು ಅಲುಗಾಡಿಸಲು ಸಾಧ್ಯವಾಗಲಿಲ್ಲ. ಈ ಮಧ್ಯೆ ರಾಜದ್ರೋಹದ ಮಿಥ್ಯಾ ಆಪಾದನೆಗಳ ಮೇಲೆ ಗವಾನನನ್ನು ಮರಣದಂಡನೆಗೊಳಪಡಿಸಲಾಯಿತು. ವಿರೂಪಾಕ್ಷನು ಸಂಗಮವಂಶದ ಕೊನೆಯ ಅರಸನಾದನು.

ಕ್ರಿ.ಶ. ೧೪೮೫ರಿಂದ ಎರಡು ದಶಕಗಳ ಕಾಲವು ವಿಜಯನಗರದ ಇತಿಹಾಸದಲ್ಲಿ ನೂತನ ಹಂತ. ಈ ಅವಧಿಗೆ ಸಂಬಂಧಿಸಿದಂತೆ ನಮಗೆ ಮುಖ್ಯವಾಗಿ ಮಾಹಿತಿ ಕೊಡುವವನು ನ್ಯೂನಿಜ್. ಅವನ ಹೇಳಿಕೆಗೆ ಫೆರಿಷ್ಟಾನ ಹೇಳಿಕೆ ಪೂರ್ತಿ ವಿರುದ್ಧವಾಗಿದೆ. ಫೆರ್ನಾವೋ ನ್ಯೂನಿಜ್ ಒಬ್ಬ ಕುದುರೆಗಳ ವ್ಯಾಪಾರಿ. ಅವನು ೧೫೩೫ರಿಂದ ೧೫೩೭ವರೆಗೆ ಸುಮಾರು ಮೂರು ವರ್ಷ ವಿಜಯನಗರದಲ್ಲಿ ಕಳೆದನು. ಫೆರಿಷ್ಟಾ ತನ್ನ ಕೃತಿಯನ್ನು ಬರೆದುದು ಹೆಚ್ಚುಕಡಮೆ ಆರುದಶಕಗಳ ಅನಂತರ, ಮುಗಿಸಿದ್ದು ಕ್ರಿ.ಶ. ೧೬೧೨ರಲ್ಲಿ. ಅನೇಕ ದೃಷ್ಟಿಗಳಿಂದ ನ್ಯೂನಿಜನು ಫೆರಿಷ್ಟನಿಗಿಂತ ಹೆಚ್ಚು ವಿಶ್ವಾಸಾರ್ಹನಾಗಿದ್ದಾನೆ. ನರಸಿಂಹನು ಅಧಿಕಾರವನ್ನು ಆಕ್ರಮಿಸಿಕೊಂಡುದನ್ನು ಕುರಿತು ನ್ಯೂನಿಜ್ ಹೀಗೆ ಹೇಳುತ್ತಾನೆ.[೩೮]

ನರಸಿಂಗನೆಂಬ ಅವನ ದಂಡನಾಯಕರಲ್ಲಿ ಒಬ್ಬನು ಅವನಿಗೆ ಹತ್ತಿರವಾಗಿದ್ದನು. ಅವನ ಜೀವನ ವಿಧಾನವನ್ನು ನೋಡಿ, ಅದು ರಾಜ್ಯಕ್ಕೆ ಎಷ್ಟು ಹಾನಿಕಾರಕವೆಂಬುದನ್ನು ತಿಳಿದು ಕೊಂಡು, ತಾನು ವಹಿಸಿಕೊಂಡು ಆಡಳಿತ ನಡೆಸಬೇಕು ಎಂದು ತೀರ್ಮಾನಿಸಿದನು. ಒಡನೆಯೇ ಅದನ್ನು ಕಾರ್ಯರೂಪಕ್ಕೆ ತಂದನು.

ಆದ್ದರಿಂದ ರಾಜನ ಅಧೀನ ನಾಯಕರಿಗೂ ಸೇವಾಪತಿಗಳಿಗೂ ಉದ್ದೇಶಿಸಿ, ಸರಿಯಾಗಿ ಆಡಳಿತ ನಡೆಸುವ ರಾಜನಿಲ್ಲದುದು ಎಷ್ಟು ಕೆಟ್ಟ ಪರಿಸ್ಥಿತಿ ಎಂಬುದನ್ನು ತಿಳಿಯ ಹೇಳಿದನು. ಈ ಬಗೆಯ ದುರ್ವ್ಯಸನ ತುಂಬಿದ ಜೀವನದಿಂದಾಗಿ ತಂದೆಯು ಕಳೆದುದಕ್ಕಿಂತಲೂ ಹೆಚ್ಚಾಗಿ ಇವನು ಕಳೆದುಬಿಡುತ್ತಾನೆನ್ನುವುದರಲ್ಲಿ ಆಶ್ಚರ್ಯವಿಲ್ಲ ಎಂದನು.

ನ್ಯೂನಿಜನ ಪ್ರಕಾರ ನರಸಿಂಹನು ದಂಗೆಯೆದ್ದನು. ಈ ವಿಷಯ ತಿಳಿದಾಗ, ತನಗುಂಟಾದ ನಷ್ಟವನ್ನು ಮನಸ್ಸಿಗೇ ತಂದುಕೊಂಡಂತೆ ತೋರಲಿಲ್ಲ. ಕೊನೆಗೆ ರಾಜನು ನಗರದಿಂದ ಓಡಿಹೋದನು. ನರಸಿಂಹನು ಅವನನ್ನು ಅಟ್ಟಿಸಿಕೊಂಡು ಹೋಗುವ ಕಷ್ಟವನ್ನು ತೆಗೆದುಕೊಳ್ಳಲಿಲ್ಲ ಬದಲು, ನಗರವನ್ನು ತನ್ನ ವಶಪಡಿಸಿಕೊಂಡನು. ಸಾಳುವಾಭ್ಯುದಯಂ, ರಾಮಾಭ್ಯುದಯಂ, ವರಾಹಪುರಾಣಂ. ಮತ್ತು ಪಾರಿಜಾತಾ ಪಹರಣಂ ಈ ಸಾಹಿತ್ಯ ಕೃತಿಗಳು ಈ ಸಾಳುವನ ದಿಗ್ವಿಜಯಗಳನ್ನು ವರ್ಣಿಸುತ್ತವೆ. ವಿರೂಪಾಕ್ಷನನ್ನು ಕುರಿತು ತಿಳಿದಿರುವ ೨೯.೧.೧೪೮೫ ಹಾಗೂ ನರಸಿಂಹನ ಅತ್ಯಂತ ಮೊದಲಿನ ತಾರೀಕು ೧.೧೧.೧೪೮೬ ಈ ಎರಡರ ನಡುವೆ ವಿರೂಪಾಕ್ಷನನ್ನು (ಮತ್ತು ಪ್ರೌಢದೇವರಾಯನನ್ನು) ಪತನಗೊಳಿಸುವುದು ಸಂಪೂರ್ಣವಾಯಿತು. ಸಂಗಮ ವಂಶವು ಸಾಳುವ ವಂಶಕ್ಕೆ ದಾರಿ ಮಾಡಿಕೊಟ್ಟಿತು.

ಯಾವುದೇ ಬಗೆಯ ಹಿಂಸಾಚಾರವಾಗಲಿ ರಕ್ತದಿಂದ ಕಳಂಕಿತವಾದ ಹೋರಾಟವಾಗಲಿ ಇಲ್ಲದೆ ಈ ರಾಜವಂಶಗಳ ಬದಲಾವಣೆ ನಡೆದುಹೋಯಿತು. ಅದನ್ನು ಅಧಿಕಾರಾಕ್ರಮಣ ಎಂದೂ ಹೇಳಲು ಬರುವುದಿಲ್ಲ. ಅದು ಸನ್ನಿವೇಶಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಹೇಳುವುದಾದರೆ ಸಹಜವಾದ ಬೆಳವಣಿಗೆಯಾಗಿತ್ತು. ವೈಭವೋಪೇತವಾಗಿ ಬಾಳಿದ ಸಾಮ್ರಾಜ್ಯದ ಹಿತದೃಷ್ಟಿಯಿಂದ ಈ ಬೆಳವಣಿಗೆ ಅತ್ಯಗತ್ಯವೇ ಆಗಿತ್ತು.

ಸಾಳುವರು ಮಂಗಳಗಿರಿಯಿಂದ ಬಂದವರು. ಆ ವಂಶದ ಮಂಗು ಎನ್ನುವವನು ಸಂಬುವರಾಯ ಮತ್ತು ಮಧುರೆಯ ಸುಲ್ತಾನನ ವಿರುದ್ಧ ನಡೆದ ಯುದ್ಧದಲ್ಲಿ ರಾಜಕುಮಾರ ೨ನೇ ಕಂಪಣನಿಗೆ ನೆರವು ನೀಡಿದನು ಎಂಬುದನ್ನು ಮೇಲೆ ನೋಡಿದ್ದೇವೆ. ಸಾಳುವಾಭ್ಯುದಯಂ ಪ್ರಕಾರ, ಅವನ ಪೂರ್ವಜರು ಕಲ್ಯಾಣಿಯಲ್ಲಿ ಆಳುತ್ತಿದ್ದರು. ತಾವು ಯದುವಿನಿಂದ ಬಂದವರೆಂದೂ, ಸೂರ್ಯಕುಲಕ್ಕೆ ಸೇರಿದವರೆಂದೂ ಹೇಳಿಕೊಂಡರು. ಗೌತಯನ ಮಗ, ಮಂಗುವಿನ ಮೊಮ್ಮಗ ಸಾಳುವ ತಿಪ್ಪನೆನ್ನುವವನು ೨ನೇ ದೇವರಾಯನ ಒಬ್ಬ ತಂಗಿಯಾದ ಹರಿಣಾಳನ್ನು ಮದುವೆಯಾಗಿದ್ದನೆಂದು ತೋರುತ್ತದೆ. ಗೌತಯನ ಮಗ ೩ನೇ ಗುಂಡನು, ಅವನ ಕಿರಿಯ ಮಗನೇ ನರಸಿಂಹ. ಚಂದ್ರಗಿರಿ ರಾಜ್ಯದ ಮಹಾಮಂಡಲೇಶ್ವರನಾಗಿ ನರಸಿಂಹನು ಮಲ್ಲಿಕಾರ್ಜುನನ ಅಧೀನನಾಗಿ ರಾಜ್ಯಪಾಲನಾಗಿದ್ದನು. ಅವನ ರಾಜಕಾರಣ ಪ್ರವೇಶವು ಕ್ರಿ.ಶ. ೧೪೫೨ರಲ್ಲಿ ಆಯಿತು. ಅದಕ್ಕೆ ಎರಡೇ ವರ್ಷಗಳ ಮುಂಚೆ ವಿಜಯನಗರದ ಮೇಲೆ ನಡೆದ ಆಕ್ರಮಣವನ್ನು ಯಶಸ್ವಿಯಾಗಿ ಹಿಮ್ಮೆಟ್ಟಿಸಲಾಗಿತ್ತು. ಆದರೆ ಅದರಿಂದ ಮಲ್ಲಿಕಾರ್ಜುನನು ಎಷ್ಟು ದುರ್ಬಲನೂ ಅಲಕ್ಷ್ಯ ಸ್ವಭಾವದವನೂ ಆಗಿದ್ದಾನೆ, ರಾಜ್ಯವ್ಯವಹಾರಗಳನ್ನು ನೋಡಿಕೊಳ್ಳಲು ಹೇಗೆ ಅಸಮರ್ಥನಾಗಿದ್ದಾನೆ ಎನ್ನುವುದು ನರಸಿಂಹನಿಗೆ ತಿಳಿಯಲು ಅವಕಾಶವಾಯಿತು.

ವಿರೂಪಾಕ್ಷನ ಆಳಿಕೆಯ ಮೊದಲ ವರ್ಷಗಳಲ್ಲಿ ನರಸಿಂಹನು ಆಂಧ್ರಪ್ರದೇಶದ ಚಿತ್ತೂರು ಜಿಲ್ಲೆಯನ್ನೂ, ತಮಿಳುನಾಡಿನಲ್ಲಿ ಎರಡು ಆರ್ಕಾಟ್ ಜಿಲ್ಲೆಗಳನ್ನೂ ಕರ್ನಾಟಕದಲ್ಲಿ ಅದರ ನೆರೆಯ ಕೋಲಾರ ಜಿಲ್ಲೆಯನ್ನೂ ತನ್ನ ಹತೋಟಿಯಲ್ಲಿಟ್ಟುಕೊಂಡಿದ್ದನು. ಕಪಿಲೇಂದ್ರಗಜಪತಿಯ ಸಾವು ಒರಿಸ್ಸಾದ ಮೇಲೆ ಆಕ್ರಮಣ ಮಾಡಲು ಒಂದು ಅವಕಾಶವನ್ನು ಒದಗಿಸಿತು. ಗಜಪತಿಯ ಆಕ್ರಮಣದಿಂದ ಆಂಧ್ರ ಪ್ರದೇಶವನ್ನು ಬಿಡುಗಡೆ ಮಾಡಲು ಸಂದರ್ಭ ಬಂದಿತು. ಅವನು ಮೊದಲು ಆಂಧ್ರದ ಕರಾವಳಿಗೆ ದಕ್ಷಿಣದ ಬಾಗಿಲಿನಂತಿದ್ದ ಉದಯಗಿರಿ ಕೋಟೆಯನ್ನು ಗೆದ್ದನು. ಆದರೆ ಅಷ್ಟರಲ್ಲಿ ಅವನ ಗಮನವು ದಕ್ಷಿಣದ ಕಡೆಗೆ ಹರಿಯಬೇಕಾಯಿತು. ಅಲ್ಲಿ ಪಾಂಡ್ಯ ದೊರೆ ಭುವನೈಕ ವೀರ ಸಮರಕೋಲಾಹಲ, ಚೆಲುವ ಪೋತು(ಲಂಬ ಕರ್ಣ)ನು ಚೋಳದೇಶ ಮತ್ತು ತೊಂಡೈಮಂಡಲ ದೇಶಗಳ ಮೇಲೆ ಧಾಳಿಮಾಡಿ ತಿಗುಳರ (ತಮಿಳರು) ನಾಡಿನಲ್ಲಿ ನಿಂತನು. ನರಸಿಂಹನ ಸೈನ್ಯಗಳನ್ನು ನೋಡುತ್ತಿದ್ದಂತೆಯೇ ಈ ದಂಗೆಕೋರರು ಪಲಾಯನ ಮಾಡಿದರು. ಆಮೇಲೆ ನರಸಿಂಹನ ಸೈನ್ಯವು ರಾಮೇಶ್ವರದವರೆಗೂ ನಡೆಯಿತು. ಅಲ್ಲಿ ಶ್ರೀಲಂಕಾದ ಬೌದ್ಧ ದೊರೆಯೂ ಸುತ್ತುಮುತ್ತಲ ಇತರ ದ್ವೀಪಗಳ ಅರಸರೂ ಅವನಿಗೆ ಉಡುಗೊರೆಗಳನ್ನಿತ್ತು ಗೌರವಿಸಿದರು. ಆಮೇಲೆ ನರಸಿಂಹನು ನೈರುತ್ಯದಿಕ್ಕಿಗೆ ತಿರುಗಿದನು. ಅನಂತಶಯನ (ತಿರುವನಂತಪುರಂ)ದಲ್ಲಿ ಲಂಬಕರ್ಣರ ವಿರುದ್ಧ (ಗುರು ಕರ್ಣರೆಂದೂ ಹೇಳಲಾಗಿದೆ) ಸೈನ್ಯಾಚರಣೆಗಳನ್ನು ನಡೆಸಿದನು. ಅವರ ಮೂಲನೆಲೆ ಆ ಪ್ರದೇಶದ ಸುತ್ತುಮುತ್ತಲೇ ಇತ್ತು ಹೀಗೆ ಕ್ರಿ.ಶ. ೧೪೭೭ರ ವೇಳೆಗೆ ನರಸಿಂಹನು ದಕ್ಷಿಣದಲ್ಲಿ ತನ್ನ ಪ್ರಭಾವವನ್ನು ಸ್ಥಾಪಿಸಿದ್ದನು.

ಈಗ ನರಸಿಂಹನು ಆಂಧ್ರದ ಕಡೆಗೆ ಗಮನ ಕೊಟ್ಟನು. ಆದರೆ ಅಷ್ಟರಲ್ಲಿ ಪರಿಸ್ಥಿತಿಗಳು ಬಹುವಾಗಿ ಬದಲಾಗಿದ್ದುವು. ಮುಹಮ್ಮದ್ ಶಾಹನು ತೆಲಂಗಾಣವನ್ನೂ ಆಂಧ್ರದ ಕರಾವಳಿ ಪ್ರದೇಶವನ್ನೂ ಆಕ್ರಮಿಸಿಕೊಂಡಿದ್ದನು. ಸಾಳುವನು ತನ್ನ ಸೈನ್ಯಶಕ್ತಿಯನ್ನು ಮಾತ್ರವಲ್ಲದೆ ರಾಜಕಾರಣ ಕ್ಷಮತೆಯನ್ನೂ ಉಪಯೋಗಿಸಿ ಸುಲ್ತಾನನನ್ನು ಕೆಳಗೆಳೆದು ಮಸಲಿಪಟ್ಟಣವನ್ನೂ ಕೊಂಡವೀಡು ಕೋಟೆಯನ್ನೂ ಗೆದ್ದುಕೊಳ್ಳಬೇಕಾಯಿತು (೧೪೮೦). ಸುಲ್ತಾನನು ಕೆರಳಿ ನರಸಿಂಹನೊಂದಿಗೆ ವೀರಾವೇಶದಿಂದ ಕಾದಿ ಕೊಂಡ ವೀಡನ್ನು ಮರಳಿ ವಶಪಡಿಸಿಕೊಂಡು, ಕಾಂಚಿಯವರೆಗೆ ಹೋಗಿ ಲೂಟಿಮಾಡಿದನು. ಹೇಗೂ ಹಿಂದೆ ಗಜಪತಿಗೆ ಆದಂತೆ ಇವನಿಗೂ ಆಯಿತು. ತಾನು ತಂದ ಲೂಟಿಯನ್ನು ಅನುಭವಿಸಲು ಸಾಧ್ಯವಾಗಲಿಲ್ಲ. ಮಹಮೂದ್ ಗವಾನನ ನಿಷ್ಠೆಯ ವಿಷಯದಲ್ಲಿ ಸುಲ್ತಾನನಿಗೆ ಶಂಕೆಯುಂಟಾಗಿ ಅವನ ತಲೆ ಕಡಿಸಿದನು. ಆಗ ಸುಲ್ತಾನನು ಕಂದುಕೂರಿನಲ್ಲಿ ಶಿಬಿರ ಹೂಡಿದ್ದನು. ಈ ಗೊಂದಲದಲ್ಲಿ ಕಾಂಚಿಯಿಂದ ತಂದ ಕೊಳ್ಳೆಯು ಕಳೆದು ಹೋಯಿತು. ತನ್ನ ಘನತೆಯನ್ನು ಉಳಿಸಿಕೊಳ್ಳಲು ಮುಹಮ್ಮದನು ಯೂಸುಫ್ ಅದಿಲ್‌ಖಾನನನ್ನೂ ಫಕ್ರ್-ಉಲ್- ಮುಲುವನ್ನೂ ನರಸಿಂಹನ ಮೇಲೆ ಸೈನ್ಯದೊಂದಿಗೆ ಕಳುಹಿಸಿದನು, ತಾನು ಕಂದುಕೂರಿನಿಂದ ಮಸಲಿ ಪಟ್ಟಣದ ಕಡೆಗೆ ನಡೆದನು. ಆದರೆ ಇಬ್ಬರು ದಳಪತಿಗಳೂ ಸೋತುಕೊಂಡರು. ಮಸಲಿಪಟ್ಟಣ ಮಾತ್ರ ಅವನ ವಶವಾಯಿತು.

ನರಸಿಂಹನ ದಂಡನಾಯಕನಾದ ಈಶ್ವರ ನಾಯಕನು ಗೆದ್ದ ಸ್ಥಳಗಳ ಪಟ್ಟಿಯನ್ನು ವರಾಹಪುರಾಣಂ ಒದಗಿಸುತ್ತದೆ. ಕ್ರಿ.ಶ. ೧೪೬೯-೭೦ರಷ್ಟು ಮೊದಲೇ ಉದಯಗಿರಿ ಮತ್ತು ನೆಲ್ಲೂರುಗಳನ್ನು ಅವನು ವಶಪಡಿಸಿಕೊಂಡನು. ಹಾಗೆಯೇ ಆ ಮೂರು (ಚೆಂಗಲ್‌ಪೇಟೆ), ಕೋವೆಲ (ಶ್ರೀರಂಗಂ), ಬೋನ (ಭುವನ)ಗಿರಿ ಮತ್ತು ಚೆಂಜಿಗಳನ್ನು ಈ ದಂಡನಾಯಕನು ತನ್ನ ದಕ್ಷಿಣದ ಜೈತ್ರಯಾತ್ರೆಯಲ್ಲಿ (೧೪೭೦) ವಶಪಡಿಸಿಕೊಂಡನು ಎಂದು ಜೈಮಿನಿಭಾರತಂ ಕೃತಿಯಲ್ಲಿ ಹೇಳಿದೆ. ಒಂದು ದಶಕದ ನಂತರ, (ಕ್ರಿ.ಶ. ೧೪೮೨-೧೫೦೪)ರಲ್ಲಿ ಕರ್ನಾಟಕದ ಶ್ರೀರಂಗಪಟ್ಟಣ, ನಾಗಮಂಗಲ, ಬೆಂಗಳೂರುಗಳನ್ನೂ; ತಮಿಳುನಾಡಿನಲ್ಲಿ

ಕೊಂಗು ಧಾರಾಪುರಿ (ಕೊಯಮತ್ತೂರು), ಸೇಲಂ (ಕುಂದಾನೆ)ಗಳನ್ನೂ ಆಂಧ್ರ ಪ್ರದೇಶದಲ್ಲಿ ಪೆನುಕೊಂಡಾ ಮತ್ತು ಗಂಡಿಕೋಟಗಳನ್ನೂ ಪಡೆದುಕೊಂಡನು. ಉಮ್ಮತ್ತೂರಿನ ನಾಯಕರ ದಂಗೆಯನ್ನು ಅಡಗಿಸಲು ಹೋದಾಗ ಅವನು ಈ ಸ್ಥಳಗಳನ್ನು ಶಿವನಸಮುದ್ರದ ಕೋಟೆಯೊಂದಿಗೆ ಗೆದ್ದುಕೊಂಡನು. ಈ ನಾಯಕರು ದೇವ(ಪ)ಣ್ಣ (೧೪೮೮ ಮತ್ತು ೧೫೦೪), ನಂಜರಾಜ (೧೪೮೨-೧೫೦೪), ಮತ್ತು ಚನ್ನನಂಜರಾಜ (೧೪೯೭) ಇವರಲ್ಲಿ ನಂಜರಾಜನು ಈಶ್ವರನಾಯಕನ ಕ್ರೋಧವನ್ನು ಎದುರಿಸಬೇಕಾಯಿತು. ಆದರೆ ಒಂದೇ ಸಾರಿಗೆ ಈ ನಾಯಕರನ್ನು ಅವನು ಮುಗಿಸಿಬಿಡಲಿಲ್ಲ. ಏಕೆಂದರೆ, ಕೃಷ್ಣದೇವರಾಯನು ಪಟ್ಟಕ್ಕೆ ಬಂದೊಡನೆ ಇವರೊಂದಿಗೆ ಯುದ್ಧಮಾಡಿ ಅಂತಿಮ ಆಘಾತ ಕೊಡಬೇಕಾಯಿತು.

ಬಹಮನಿ ರಾಜ್ಯದಲ್ಲಿ ಎರಡು ಪ್ರಬಲವಾದ ಗುಂಪುಗಳಿದ್ದುವು. ಸಮುದ್ರದಾಚೆಯಿಂದ ಬಂದ ಅಫಕಿಗಳು ಹಾಗೂ ದಖನಿಗಳು. ಉತ್ತರದಿಂದ ಬಂದು ನೆಲೆಸಿದವರೂ ಅಬಿಸೀನಿಯನ್ನರೂ ದಖನಿಗಳಲ್ಲಿ ಸೇರಿರುತ್ತಿದ್ದರು. ಆದರೂ ಇರಾನೀ ಸಂಸ್ಕೃತಿಯು ದಖ್ಖನಿನ ಒಳಕ್ಕೆ ಇಳಿದಿತ್ತು. ೨ನೇ ಮುಹಮ್ಮದ್‌ನ ಆಡಳಿತಾವಧಿಯಲ್ಲಿ ಅವರ ನಡುವೆ ಘರ್ಷಣೆಗಳು ಉಂಟಾದುವು. ಅದು ಮಹಮೂದ್ ಗವಾನನ ಪ್ರಧಾನ ಮಂತ್ರಿತ್ವದವರೆಗೂ ಮುಂದುವರಿದಿತ್ತು. ೩ನೇ ಮುಹಮ್ಮದ್‌ನು ಅವನನ್ನು ಕೊಲ್ಲಿಸಿದನು ಎಂಬುದನ್ನು ನೋಡಿದ್ದೇವೆ. ಮುಹಮ್ಮದನು ಪಶ್ಚಾತ್ತಾಪದಿಂದ ೧೪೮೨ರಲ್ಲಿ ಸತ್ತನು.

ಅವನ ನಂತರ ಪಟ್ಟಕ್ಕೆ ಬಂದಾಗ ೩ನೇ ಶಿಹಾಬುದ್ದೀನ್ ಮಹಮೂದ್‌ನಿಗೆ ಇನ್ನೂ ಹದಿಹರಯ. ಅವನು ೩೫ವರ್ಷಗಳ ಕಾಲ ಆಳಿದನು (೧೪೮೨-೧೫೧೭). ಆದರೆ ಅದು ಶಿಥಿಲತೆಯ ಯುಗ. ಯೂಸುಫ್ ಅದಿಲ್ ಖಾನ್ ಫತುಲ್ಲಾ-ಇಮದ್-ಉಲ್-ಮುಲ್ಕ್ ಪಟ್ಟಾಭಿಷೇಕ ಸಮಾರಂಭಕ್ಕೆ ಬರಲಿಲ್ಲ. ಕಾಸಿಂ ಬರೀದ್‌ನು ದಖನಿಗಳ ಪಕ್ಷ ವಹಿಸಿದನು. ಪ್ರಧಾನಮಂತ್ರಿಯಾಗಿ ತಂದೆಯಿಂದ ನೇಮಿತನಾಗಿದ್ದ ಮಲಿಕ್‌ಹಸನ್ ನಿಜಾಂ-ಉಲ್-ಮುಲ್ಕ್‌ನು ಯೂಸುಫ್ ಅದಿಲನ ಬಗೆಗೆ ತಿರಸ್ಕಾರದಿಂದ ಮಾತನಾಡಿದನು. ಯೂಸುಫನು ಬಿಜಾಪುರಕ್ಕೆ ಹಿಂದಿರುಗಿದನು. ಸುಲ್ತಾನನು ಪ್ರೌಢವಯಸ್ಕನಾದಾಗ ಜಗಳಗಳು ಇನ್ನೂ ತೀವ್ರವಾದುವು. ಸುಲ್ತಾನನು ಮದ್ಯದ ಚಟಕ್ಕೆ ಬಿದ್ದಿದ್ದನು, ಸ್ತ್ರೀಲಂಪಟನಾಗಿದ್ದನು. ವಜೀರನೆಂದು ನೇಮಿತನಾಗಿದ್ದ ಫತುಹ್-ಉಲ್-ಲ- ಇಮದ್-ಉಲ್-ಮುಲ್ಕ್ ಬೀರಾರಿಗೆ ಓಡಿಹೋದನು, ಅಲ್ಲಿ ತನ್ನ ಸ್ವಾತಂತ್ರ್ಯವನ್ನು ಘೋಷಿಸಿದನು. ನಿಜಾಂ-ಉಲ್-ಮುಲ್ಕ್ ಮಲಿಕ್-ನಾಯಿಬ್ ಅವನ ತಲೆ ಕಡಿಯಲಾಯಿತು. ಇದರಿಂದ ದಖನಿಗಳು ಕೆರಳಿದರು. ಅವರು ಅಬಿಶಿ (ಅಬಿಸೀನಿಯನ್ನರು)ಗಳ ಜೊತೆ ಕಟ್ಟಿಕೊಂಡರು. ಸುಲ್ತಾನನನ್ನು ಬೀದರ್ ಕೋಟೆಯಲ್ಲಿಯೇ ಮುಗಿಸಿಬಿಡಲು ಪ್ರಯತ್ನಿಸಿದರು. ಆದರೆ ಅಫಕಿಗಳು ಅವನನ್ನು ಕಾಪಾಡಿದರು. ಸುಲ್ತಾನನು ದಖ್ಖನಿಗಳ ಕಗ್ಗೊಲೆಗೆ ಆಜ್ಞೆಮಾಡಿದನು. ಅಧಿಕಾರಕ್ಕಾಗಿ ಅಂತಃಕಲಹಗಳು ಮುಂದುವರಿದುವು.

ಒರಿಸ್ಸಾದಲ್ಲಿ ಪ್ರತಾಪರುದ್ರ ಗಜಪತಿಯು ಗೆಲುವುಗಳಿಂದ ಉತ್ತೇಜಿತನಾಗಿ, ಉದಯಗಿರಿಯನ್ನು ವಶಪಡಿಸಿಕೊಂಡು ಸಾಳುವ ನರಸಿಂಹನನ್ನು ಕೈಸೆರೆ ಹಿಡಿದನು. ಪ್ರತಾಪರುದ್ರನ ವಿಜಯಗಳನ್ನು ವಿವರಿಸುವ ಸರಸ್ವತೀ ವಿಲಾಸವು ಸಾಳುವನನ್ನು ಸೆರೆ ಹಿಡಿದು ಆಮೇಲೆ ಬಿಡುಗಡೆಗೊಳಿಸಲಾಯಿತು ಎಂದು ಹೇಳುತ್ತದೆ. ಇದು ಪ್ರತಾಪರುದ್ರನ ೧೫೦೦ರ ಅನಂತವರಂ ತಾಮ್ರಫಲಕದಿಂದಲೂ ನ್ಯೂನಿಜನಿಂದಲೂ ಸ್ಥಿರಪಡುತ್ತದೆ. ಎಲ್ಲಾ ಸಾಹಸಗಳಲ್ಲೂ ನರಸಿಂಹನಿಗೆ ಈಶ್ವರ ಮತ್ತು ನರಸ ಎಂಬ ಇಬ್ಬರು ದಳಪತಿಗಳ ಸಹಾಯವು ದೊರಕಿತ್ತು. ನರಸಿಂಹನ ಬಳಿ ಸರಿಯಾದ ಅಶ್ವದಳದ ಕೊರತೆಯಿತ್ತು. ೨ನೇ ವಿರೂಪಾಕ್ಷನು ಅರಬ್ಬರನ್ನು ಓಡಿಸಿದ್ದು ತಪ್ಪು ನಡೆಯಾಗಿತ್ತು. ಬಹಮನಿಗಳು ಅದರ ಅನುಕೂಲ ಪಡೆದುಕೊಂಡಿದ್ದರು. ನರಸಿಂಹನು ತುಳುರಾಜ್ಯವನ್ನು ಗೆದ್ದಾಗ, ಹೊನ್ನಾವರ, ಭಟ್ಕಳ, ಮಂಗಳೂರು ಮೊದಲಾದ ಬಂದರುಗಳು ಅವನ ವಶಕ್ಕೆ

ಬಂದುವು. ಅರಬ್ಬರಿಗೆ ಬಹು ದುಬಾರಿಯಾದ ಬೆಲೆ ಕೊಟ್ಟು ಅವನು ಹೆಚ್ಚು ಸಂಖ್ಯೆಯಲ್ಲಿ ಕುದುರೆಗಳನ್ನು ಆಮದು ಮಾಡಿಕೊಂಡನು. ನರಸಿಂಹನು ೧೪೯೦ ಅಕ್ಟೋಬರ್ ೧೪ ಮತ್ತು ೧೪೯೬ ನವೆಂಬರ್ ೨೮ರ ನಡುವೆ ದೈವಾಧೀನನಾದನು. ಅವನು ಕೇವಲ ೬ ವರ್ಷಗಳ ಕಾಲ ಸ್ವತಂತ್ರವಾಗಿ ಆಡಳಿತ ನಡೆಸಿದ್ದನು.

ಅವನ ಮಗನು ತೀರಾ ಕಿರಿಯನಾಗಿದ್ದುದರಿಂದ ನರಸನಾಯಕನನ್ನು ರಾಜಪ್ರತಿನಿಧಿಯನ್ನಾಗಿ ನೇಮಿಸಲಾಯಿತು. ಹಿರಿಯಮಗನಾದ ತಿಮ್ಮನನ್ನು ಸಿಂಹಾಸನಕ್ಕೇರಿಸಲಾಯಿತು. ಆದರೆ ಮಂತ್ರಿಯಾಗಿದ್ದ ತಿಮ್ಮರಸನು ರಾಜನನ್ನು ಕೊಲ್ಲಿಸಿದನು. ಆಮೇಲೆ ಇಮ್ಮಡಿ ನರಸಿಂಹನನ್ನು ಪಟ್ಟಕ್ಕೆ ತರಲಾಯಿತು. ಅವನು ನಾಮಮಾತ್ರಕ್ಕೆ ರಾಜನಾಗಿದ್ದನು, ವಾಸ್ತವ ಅಧಿಕಾರಗಳೆಲ್ಲ ನರಸನಾಯಕನ ಕೈಯಲ್ಲಿದ್ದುವು. ಅವನನ್ನು ರಕ್ಷಾಕರ್ತ (ರಕ್ಷಿಸುವವನು), ಸ್ವಾಮಿ ಕಾರ್ಯಕರ್ತ ಎಂದೆಲ್ಲ ಕರೆಯಲಾಗಿದೆ. ಅವನು ದಳಪತಿಯೂ ಮಹಾಪ್ರಧಾನನೂ ಆಗಿದ್ದನು. ಭಂಡಾರ, ವರಮಾನಗಳು ಮತ್ತು ನಾಡಿನ ಆಡಳಿತ ಇವುಗಳನ್ನು ಅವನು ತಾನೇ ನಿರ್ವಹಿಸುತ್ತಿದ್ದನೆಂದು ನ್ಯೂನಿಜ್ ಹೇಳುತ್ತಾನೆ. ಶಾಸನಗಳೂ ಈ ಸಂಗತಿಯನ್ನು ಸ್ಥಿರಪಡಿಸುತ್ತವೆ. ಸಿವೆಲ್ ಈ ಹೇಳಿಕೆಯನ್ನು ಸಂದೇಹಿಸಿದರೂ ವೆಂಕಟರಮಣಯ್ಯ ಅದನ್ನು ಸ್ಥಿರಪಡಿಸಿದ್ದಾರೆ.[೪೦]

೨ನೇ ನರಸಿಂಹನು ತಿಮ್ಮರಸನನ್ನು ಶಿಕ್ಷಿಸಬೇಕೆಂದು ನರಸನಾಯಕನು ಬಯಸಿದನು.[೪೧] ಆದರೆ ತಿಮ್ಮರಸನ ಮೇಲಿನ ವಿಶ್ವಾಸದಿಂದ ನಾಮಕಾವಸ್ಥೆಯ ರಾಜನು ಪ್ರತಿಕ್ರಿಯೆ ತೋರಿಸಲಿಲ್ಲ. ಇದರಿಂದ ಅಸಮಾಧಾನಗೊಂಡ ನರಸನಾಯಕನು ವಿಜಯನಗರದ ವಿರುದ್ಧವಾಗಿ ಪೆನುಗೊಂಡೆಯಿಂದ ಹೊರಟನು. ಆಗ ತಿಮ್ಮರಸನಿಗೆ ಮರಣದಂಡನೆ ವಿಧಿಸಲಾಯಿತು. ಆದರೆ ನರಸಿಂಹನು ಉಂಟುಮಾಡುತ್ತಿದ್ದ ಕಿರುಕುಳಗಳಿಂದ ಬೇಸತ್ತು ನರಸನಾಯಕನು ಅವನನ್ನು ಕೋಟೆಯಲ್ಲಿ ಬಂಧನದಲ್ಲಿಟ್ಟನು. ೨೦೦೦ ಕ್ರುಸೆಡೋಗಳನ್ನು ಜೀವನಾಂಶವಾಗಿ ಅವನಿಗೆ ಕೊಡುವ ಏರ್ಪಾಟು ಮಾಡಿದನು. ಇದರಿಂದ ನರಸನಾಯಕನು ವಸ್ತುತಃ ರಾಜನಾದಂತಾಯಿತು. ವರದಾಂಬಿಕಾ ಪರಿಣಯ, ಪಾರಿಜಾತಪಹರಣಂ ಮತ್ತು ಅಚ್ಯುತ ರಾಯಾಭ್ಯುದಯಂ ಈ ಸಾಹಿತ್ಯಕೃತಿಗಳೂ ಅನೇಕ ಶಾಸನಗಳೂ ಅವನ ವಿಜಯಗಳು ಮತ್ತು ಸಾಧನೆಗಳ ಬಗೆಗೆ ಸಾಕಷ್ಟು ವಿವರಗಳನ್ನು ಕೊಡುತ್ತವೆ. ಆದರೆ ಅವುಗಳನ್ನು ಕಾಲಾನುಕ್ರಮದಲ್ಲಿ ಜೋಡಿಸುವುದು ಸಾಧ್ಯವಿಲ್ಲ. ಇವುಗಳನ್ನೂ ಫೆರಿಷ್ಟಾನ ವರದಿಯನ್ನು ಆಧರಿಸಿ ಆರ್. ಸುಬ್ರಹ್ಮಣ್ಯ ಒಂದು ಅನುಕ್ರಮವನ್ನು ಕೊಡುತ್ತಾರೆ. ೧೪೯೨ರಲ್ಲಿ ಯೂಸುಫ್ ಅದಿಲ್ ಖಾನನು ರಾಯಚೂರಿನ ಮೇಲೆ ದಂಡೆತ್ತಿ ಬಂದಿದ್ದಾಗ ನರಸನಾಯಕನು ವಿಜಯನಗರವನ್ನು ಸೋಲಿಸಿದನು. ಕಾಸಿಂ ಬರಿದನ ಪ್ರಚೋದನೆಯಂತೆ, ರಾಯಚೂರನ್ನೂ ಮುದಗಲ್ಲನ್ನೂ ತನ್ನ ವಶಪಡಿಸಿಕೊಂಡನು. ಫೆರಿಷ್ಟಾನು ಮೊದಮೊದಲು ಯೂಸುಫ್ ಅದಿಲ್‌ಖಾನನಿಗೆ ಗೆಲುವು ದೊರಕಿತೆಂದು ಹೇಳುತ್ತಾನೆ. ಆದರೆ ಆಮೇಲೆ ಅವನು ಸೋಲಬೇಕಾಯಿತು. ಮೇಲೆ ಹೇಳಿದ ಸಾಹಿತ್ಯಕ ಮೂಲಗಳು ನರಸನ ವಿಜಯಗಳನ್ನು ಹೇಳುತ್ತವೆ.[೪೨] ಚೋಳ ಮತ್ತು ಪಾಂಡ್ಯ ರಾಜ್ಯಗಳನ್ನು ಆಳುತ್ತಿದ್ದ ಚೋಳರಾಜನು ಯುದ್ಧದಲ್ಲಿ ಸೋಲುವ ಗಳಿಗೆಯವರೆಗೂ ನರಸನ ಪ್ರಭುತ್ವವನ್ನು ಒಪ್ಪಲಿಲ್ಲ. ಅನಂತರ ಸೋಲನ್ನುಂಡ ಮಧುರೆಯ ಮಾನಭೂಷ ಯಾರೆಂದು ಇನ್ನೂ ಸರಿಯಾಗಿ ಗುರುತಿಸಬೇಕಾಗಿದೆ. ಇವು ಶಾಸನಗಳಿಂದ ಸ್ಪಷ್ಟವಾಗುತ್ತವೆ.[೪೩] ಪೋರ್ಚುಗೀಸನಾದ ಆಲ್ಬುಕರ್ಕನು ನರಸನು ೧೫೦೦ಕ್ಕೆ ಮುಂಚೆ ಕ್ವಿಲಾನ್ (ಕೇರಳ) ಮೇಲೆ ಯುದ್ಧಮಾಡಿದುದನ್ನು ಉಲ್ಲೇಖಿಸುತ್ತಾನೆ. ಶ್ರೀರಂಗದ ಕೋನೇಟಿರಾಜನ ವಿರುದ್ಧವಾಗಿ ಕಿರುಕುಳದ ಆಪಾದನೆಗಳಿದ್ದುವು. ಅವನನ್ನು ಶಿಕ್ಷಿಸಿ ಪದವಿಯಿಂದ ತೆಗೆದುಹಾಕಲಾಯಿತು (೧೪೯೬). ಆಮೇಲೆ ಉಮ್ಮತ್ತೂರಿನ ಮೇಲೆ ದಂಡಯಾತ್ರೆ ನಡೆಯಿತು. ಅದರ ರಾಜರು ಶ್ರೀರಂಗಪಟ್ಟಣದ ಸುತ್ತುಮುತ್ತಣ ಪ್ರದೇಶವನ್ನು ಆಳುತ್ತಿದ್ದರು. ೧೪೯೬ರಲ್ಲಿ ಮಡಿದ ಪುರುಷೋತ್ತಮ ಗಜಪತಿಯ ನಂತರ ಅಧಿಕಾರಕ್ಕೆ ಬಂದ ಪ್ರತಾಪರುದ್ರನ ಮೇಲೆ ಜಯಗಳಿಸಿದನು. ಪ್ರತಾಪರುದ್ರನು ಬಹಮನಿಯವರಿಗೆ ಸೇರಿದ್ದ ವರಂಗಲ್ ಮತ್ತು

ಕೋವಿಲ್‌ಕೊಂಡಗಳ ಮೇಲೆ ಹೋಗುತ್ತಿರಲು, ನರಸನಾಯಕನು ಅವನನ್ನು ತಡೆದನು. ಆದರೂ ಪ್ರತಾಪರುದ್ರನು ತನ್ನ ದಳಪತಿಯಾಗಿದ್ದ ಸೀತಾಪತಿ ಅಲಿಯಾಸ್ ಶಿತಾಬ್‌ಖಾನ್‌ನ ನೆರವಿನಿಂದ ತೆಲಂಗಾಣದಲ್ಲಿ ನೆಲೆ ನಿಂತನು.

ಆದರೆ ಪಶ್ಚಿಮ ಕರಾವಳಿಯಲ್ಲಿ ಅವನು ಪೋರ್ಚುಗೀಸರ ಮುನ್ನಡೆಯನ್ನು ತಡೆಯಲು ಅಸಮರ್ಥನಾದನು. ವಾಸ್ಕೋಡಗಾಮ ೧೪೯೮ರಲ್ಲಿ ಕಲ್ಲಿಕೋಟೆಗೆ ಬಂದಿಳಿದನು. ನಾಲ್ಕು ವರ್ಷಗಳ ನಂತರ ೧೫೦೨ರಲ್ಲಿ ಅವರು ಭಟ್ಕಳದಲ್ಲಿ ವಿಜಯನಗರದ ಅಧಿಕಾರಿಗಳ ಮೇಲೆ ವ್ಯಾಪಾರ ಸಂಬಂಧವಾದ ನಿಯಮಗಳನ್ನು ಹೇರಿದರು. ೧೫೦೫ರಲ್ಲಿ ಆಲ್ಮೇಡನು ಹೊನ್ನಾವರದ ರಾಜನ ಸಾಮಂತತ್ವವನ್ನು ಒತ್ತಾಯಿಸಿದನು. ಆದರೆ ಆ ವೇಳೆಗೆ ನರಸನಾಯಕನು ಮಡಿದಿದ್ದನು (೧೫೦೩). ಅವನ ಮಗ ವೀರ ನರಸಿಂಹನು ಅವನ ನಂತರ ಪಟ್ಟಕ್ಕೆ ಬಂದನು. ನರಸನಾಯಕನು ಮಾಡಿದ ಕೆಲಸ ವಾಸ್ತವವಾಗಿ ಅಧಿಕಾರದ ಅಪರಣ ಎಂದು ಹೇಳಬಹುದು. ವೀರಪ್ಪಯ್ಯ ಕಾಲಜ್ಞಾನ ಎನ್ನುವ ಕೃತಿಯು, ನರಸನ ಮಗ ವೀರನರಸಿಂಹನು ''ತಮ್ಮರಾಯನನ್ನು ಕೊಲೆ ಮಾಡಿಸಿ'' ೧೫೦೫ ಫೆಬ್ರವರಿಯಿಂದ ಐದು ವರ್ಷಗಳ ಕಾಲ ಆಡಳಿತ ನಡೆಸಿದನು. ಸಾಮ್ರಾಜ್ಯದ ಹಳೆಯ ಗಡಿಗಳನ್ನು ಮರಳಿ ಸಂಸ್ಥಾಪಿಸಿದ ಕೀರ್ತಿಯು ನರಸನಾಯಕನಿಗೆ ಸಲ್ಲುತ್ತದೆ. ಸಾಳುವ ನರಸಿಂಹನು ಅಪೂರ್ಣವಾಗಿಸಿದ್ದ ಕಾರ್ಯವನ್ನು ಅವನು ಪೂರ್ತಿಮಾಡಿದನು. ಮುಖಂಡರಲ್ಲಿ ನೂತನ ಉತ್ಸಾಹ, ಚೈತನ್ಯಗಳನ್ನು ತುಂಬಿ, ಅವನು ಸೇನಾಬಲವನ್ನು ಹೆಚ್ಚಿಸಿದನು, ವಿಜಯನಗರದ ಘನತೆ ಗೌರವಗಳನ್ನು ಕಾಪಾಡಿದನು. ಅವನ ಅಧಿಕಾರ ಗ್ರಹಣವನ್ನು ನೈತಿಕ ಸ್ತರದಲ್ಲಿ ಖಂಡಿಸಬೇಕಾದರೂ ಸಾಮ್ರಾಜ್ಯದ ಒಳಿತಿಗಾಗಿ ಅವನು ಮಾಡಿದುದನ್ನು ಒಟ್ಟಾರೆ ಗಮನಿಸಿದಾಗ ಅದನ್ನು ಕ್ಷಮಿಸಿಬೇಕಾಗುತ್ತದೆ. ಆದರೂ ಅದು ಕೆಟ್ಟ ಮಾದರಿಯನ್ನು ಹಾಕಿಕೊಟ್ಟಿತೆನ್ನುವುದನ್ನು ಅಲ್ಲಗಳೆಯುವಂತಿಲ್ಲ.

ವೀರನರಸಿಂಹ, ಕೃಷ್ಣ, ರಂಗ, ಅಚ್ಯುತ ಇವರನ್ನು ಶಾಸನಗಳಲ್ಲಿ ನರಸನ ಮಕ್ಕಳೆಂದು ಹೇಳಿದೆ. ಇವರಲ್ಲದೆ ಇನ್ನೂ ಒಬ್ಬನಿದ್ದನು. ನ್ಯೂನಿಜನ ಪ್ರಕಾರ ವೀರನರಸಿಂಹನಿಗೆ ಬುಸ್ಬಲರಾವ್ (Busbalarao) ಎಂದೂ ಹೆಸರಿತ್ತು. ಈ ಹೊಸರಾಜನು ಅನೇಕ ದಂಗೆಗಳನ್ನೂ ಆಕ್ರಮಣಗಳನ್ನೂ ಎದುರಿಸಬೇಕಾಯಿತು. ಉಮ್ಮತ್ತೂರಿನ ರಾಜರು ಮತ್ತೆ ದಂಗೆಯೆದ್ದರು. ನಂಜರಾಜನು ತಾನು ಪೆನುಗೊಂಡೆಯನ್ನು ವಶಪಡಿಸಿಕೊಂಡುದಾಗಿ ಕೂಡ ಹೇಳಿಕೊಂಡನು. ಮುಹಮೂದ್ ಶಾಹ ಬಹಮನಿಯ ಕರೆಯಮೇರೆಗೆ ಬಿಜಾಪುರದ ಯೂಸುಫ್ ಅದಿಲ್‌ಖಾನನು ಇತರರೊಂದಿಗೆ ರಾಯಚೂರು ಪ್ರದೇಶದ ಮೇಲೆ ದಾಳಿ ಮಾಡಿ ರಾಯಚೂರು ಮತ್ತು ಮುದಗಲ್ಲು ಕೋಟೆಗಳನ್ನು ವಶಪಡಿಸಿಕೊಂಡನು. ಅಸಮಾಧಾನಗೊಂಡಿದ್ದ ಕೆಲವು ನಾಯಕರೇ ವಿಜಯನಗರದಲ್ಲಿದ್ದರು. ಆದವಾನಿಯ ಕಾಚಪ್ಪ ಒಡೆಯನಂಥವರು. ಅವನು ಯೂಸುಫನಿಗೆ ಸಹಾಯ ಮಾಡಲು ಪ್ರಯತ್ನಿಸಿದನು. ಕೋನೇರುನಾಥನ ಬಾಲಭಾಗವತಂ ಪ್ರಕಾರ, ಅದಿಲ್ ಶಾಹನು ಆಕ್ರಮಿಸಿದಾಗ ಕೋಟೆಯೊಳಗಿದ್ದ ರಾಮರಾಜ ಮತ್ತು ಅವನ ಮಗ ತಿಮ್ಮ ವೀರಾವೇಶದಿಂದ ಕಾದಿ ಧಾಳಿಯನ್ನು ಹಿಮ್ಮೆಟ್ಟಿಸಿದರು. ಕಾಚಪ್ಪನನ್ನು ಆದವಾನಿಯಿಂದ ಓಡಿಸಿದರು. ಇದರಿಂದ ಬಹು ಪ್ರೀತನಾದ ವೀರ ನರಸಿಂಹನು ಅವನಿಗೆ ಕಾಲುಬಳೆ ತೊಡಿಸಿ (ಗಂಡ ಪೆಂಡೇರ) ಗೌರವಿಸಿದನು. ಕಂದನವೋಲು (ಕರ್ನೂಲು) ಮತ್ತು ಆದವಾನಿಗಳ ನಾಯಕತ್ವವನ್ನುಅವನಿಗೆ ನೀಡಿದನು.

ಮುಂದೆ ಕೃಷ್ಣದೇವರಾಯನು ಸೋಲಿಸಿದ ಉಮ್ಮತ್ತೂರಿನ ರಾಜನು ಗಂಗರಾಜ ಎಂಬುದಾಗಿ ಸಾಹಿತ್ಯಕ ಮೂಲಗಳು ಸೂಚಿಸುತ್ತವೆ. ಆದರೆ ಅವರ ವಂಶಾವಳಿಯಲ್ಲಿ ಆ ಹೆಸರಿನ ದೊರೆಯೇ ಇರಲಿಲ್ಲವೆನ್ನುವುದು ಈಗ ಗೊತ್ತಾಗಿದೆ. ಇಮ್ಮಡಿ ರಾಯಒಡೆಯನ (ಸೋಮರಾಯ ಒಡೆಯ) ಮಗ ನಂಜರಾಜನು ಕ್ರಿ.ಶ. ೧೪೮೨ರಿಂದ ಕ್ರಿ.ಶ. ೧೫೦೪ರ ವರೆಗೂ ಉಮ್ಮತ್ತೂರಿನ ಆಡಳಿತವನ್ನು ನಡೆಸುತ್ತಿದ್ದನು.

ಸಂಬಂಧವೇ ಇಲ್ಲದ ಮಲ್ಲರಾಜ ಎಂಬ ಇನ್ನೊಂದು ಹೆಸರು ಕ್ರಿ.ಶ. ೧೫೩೦ರ ಒಂದು ಶಾಸನದಲ್ಲಿ ಕಂಡು ಬರುತ್ತದೆ. ಮೇಲೆ ಹೇಳಿದ ನಂಜರಾಜನೇ ಆ ಗಂಗರಾಜನಾಗಿರುವುದು ಸಾಧ್ಯ.[೪೪]

ವೀರನರಸಿಂಹನು ತನ್ನ ಮಗನನ್ನೇ ಸಿಂಹಾಸನಕ್ಕೆ ತರಬೇಕೆಂದು ಬಯಸಿದನು. ಕೃಷ್ಣದೇವರಾಯನನ್ನು ಕೊಲ್ಲಿಸಲು ಒಂದು ಒಳಸಂಚು ಮಾಡಿದನು. ನ್ಯೂನಿಜ್ ಈ ಅಕೃತ್ಯವನ್ನು ತಪ್ಪಾಗಿ ನರಸನಾಯಕನಿಗೆ ಆರೋಪಿಸುತ್ತಾನೆ. ಆದರೆ ಮಂತ್ರಿ ತಿಮ್ಮರಸನು ರಾಜಕುಮಾರನ ರಕ್ಷಣೆಗೆ ಬಂದನು. ಕ್ರಿ.ಶ. ೧೫೦೯ರಲ್ಲಿ ವೀರ ನರಸಿಂಹನು ಮಡಿಯಲು ಕೃಷ್ಣದೇವರಾಯನು ಪಟ್ಟಕ್ಕೆ ಬಂದನು. ಆಗ ಇದ್ದ ಭಾರತೀಯ ರಾಜರಲ್ಲಿ ಅತ್ಯಂತ ಶ್ರೇಷ್ಠನೆಂಬ ಹೆಗ್ಗಳಿಕೆ ಕೃಷ್ಣದೇವರಾಯನದಾಯಿತು. ಅವನ ಪಟ್ಟಾಭಿಷೇಕವಾದದ್ದು ಕ್ರಿ.ಶ. ೧೫೦೯ ಆಗಸ್ಟ್ ೮ನೆಯ ತಾರೀಕು ಶ್ರೀಜಯಂತಿ (ಕೃಷ್ಣಜನ್ಮಾಷ್ಟಮಿ)ಯ ಪವಿತ್ರ ದಿನದಂದು.[೪೫] ಅವನು ಆಳಿದ್ದು ಕ್ರಿ.ಶ. ೧೫೨೯ರ ವರೆಗೆ, ಕೇವಲ ಎರಡು ದಶಕಗಳ ಕಾಲ. ಅವನ ಪೂರ್ವಜರು ಹೆಚ್ಚುತ್ತಿದ್ದ ಆಡಳಿತ ವೆಚ್ಚ, ರಕ್ಷಣಾವೆಚ್ಚ, ಅರಮನೆಯ ಅಗಾಧವಾದ ವೆಚ್ಚ ಇವುಗಳನ್ನು ನಿರ್ವಹಿಸಲು ಜನರ ಮೇಲೆ ಭಾರೀ ತೆರಿಗೆಗಳನ್ನು ವಿಧಿಸಿದ್ದರು. ವೀರ ನರಸಿಂಹನು ಕೆಲವು ಸ್ಥಳಗಳಲ್ಲಿ ಭಾಗಶಃ ತೆರಿಗೆಯನ್ನು ಮನ್ನಾಮಾಡಿದ್ದನು, ಉದಾಹರಣೆಗೆ ವಿವಾಹದ ತೆರಿಗೆ. ಕೃಷ್ಣದೇವರಾಯನು ಮೊದಲು ಈ ತೆರಿಗೆಯನ್ನು ಇತರ ಸುಂಕಗಳನ್ನೂ ರದ್ದುಪಡಿಸಿದನು. ಅದಕ್ಕೆ ಪ್ರತಿಯಾಗಿ ಹೊಸದಾಗಿ ಭೂಮಿಯನ್ನು ಉಳುಮೆಗೆ ಬರುವಂತೆ ಮಾಡಿ ಭೂಕಂದಾಯವು ಅಧಿಕವಾಗಿ ಬರುವಂತೆ ಮಾಡಿದನು. ಪ್ರಾಂತೀಯ ರಾಜ್ಯಪಾಲರು ಮತ್ತು ಅಧೀನರಾಜರು ಕ್ರಮತಪ್ಪದೆ ನಿರ್ದಿಷ್ಟ ಸಂಖ್ಯೆಯ ಸೈನಿಕರನ್ನೂ ಕುದುರೆಗಳನ್ನೂ ಅವನಿಗೆ ಕಳುಹಿಸಿಕೊಡಬೇಕಾಗಿತ್ತು.

ಈ ಬಗೆಯ ಆರ್ಥಿಕ ಕ್ರಮಗಳಿಂದ ದೇಶದ ಹಣಕಾಸು ಪರಿಸ್ಥಿತಿ ಉತ್ತಮಗೊಂಡಿತು. ಆಮೇಲೆ ಕೃಷ್ಣದೇವರಾಯನು ಜೈತ್ರಯಾತ್ರೆಯ ಕಾರ್ಯಕ್ರಮವನ್ನು ರೂಪಿಸಿಕೊಂಡನು. ಆಲ್ಬುಕರ್ಕನು ಜಾಮೋರಿನ್ನನಿಂದ ಕಲ್ಲಿಕೋಟೆಯನ್ನು ಗೆದ್ದುಕೊಳ್ಳಲು ಅವನ ಸಹಾಯವನ್ನು ಕೋರಿದನು. ಅದಕ್ಕೆ ಪ್ರತಿಯಾಗಿ ಅವನು ರಾಯನಿಗೆ ಕುದುರೆಗಳನ್ನು ಒದಗಿಸುವುದಾಗಿ ತಿಳಿಸಿದನು. ರಾಜನು ಸುಮ್ಮನಿದ್ದನು. ಪೋರ್ಚುಗೀಸರು ಬಿಜಾಪುರದ ಯೂಸುಫ್ ಅದಿಲ್ ಶಾಹನಿಂದ ಗೋವಾವನ್ನು ಕಿತ್ತುಕೊಂಡರು. ರಾಯನು ಅವರಿಗೆ ಭಟ್ಕಳದಲ್ಲಿ ಒಂದು ಕೋಠಿಯನ್ನು ಕಟ್ಟಿಕೊಳ್ಳಲು ಅನುಮತಿ ನೀಡಿದನು. ವಾಸ್ತವವಾಗಿ ವಿಜಯನಗರದ ರಾಜನು ಗೋವೆಯನ್ನು ತಾನೇ ಗೆದ್ದುಕೊಳ್ಳಲು ಬಯಸಿದ್ದನು. ಆದರೆ ಆ ವಿದೇಶೀಯರ ಮೈತ್ರಿಯನ್ನು ಕಳೆದುಕೊಳ್ಳಲು ಅವನು ಸಿದ್ಧನಿರಲಿಲ್ಲ. ಅದಕ್ಕೆ ಬಹುಮಟ್ಟಿಗೆ ಕಾರಣ ಅವರು ಪೂರೈಸುತ್ತಿದ್ದ ಸೊಗಸಾದ ಕುದುರೆಗಳು. ಹೀಗೆ ಗೋವಾ ಕೈ ಬಿಟ್ಟುಹೋಯಿತು.

ರಾಜ್ಯದೊಳಗೆಯೇ ಉಮ್ಮತ್ತೂರಿನ ರಾಜರು ಮಗ್ಗಲು ಮುಳ್ಳಾಗಿದ್ದರು. ಒರಿಸ್ಸಾದ ಗಜಪತಿಯು ರಾಜ್ಯದ ಈಶಾನ್ಯ ಜಿಲ್ಲೆಗಳನ್ನು ಆಕ್ರಮಿಸಿಕೊಂಡಿದ್ದನು. ಯೂಸುಫ್ ಅದಿಲ್ ಶಾಹನು ತನ್ನ ರಾಜ್ಯವನ್ನು ವಿಸ್ತರಿಸಿಕೊಳ್ಳಲು ಪ್ರಯತ್ನಿಸುತ್ತಿದ್ದನು. ಇವೆಲ್ಲ ಕಷ್ಟಗಳನ್ನು ಗೆಲ್ಲುವುದಕ್ಕಾಗಿ ರಾಜನು ವಿವರವಾದ ಒಂದು ಕಾರ್ಯಯೋಜನೆಯನ್ನು ರೂಪಿಸಿದನು. ಸುಲಭವಾಗಿಯೂ ಅನಿರೀಕ್ಷಿತವಾಗಿಯೂ ಒಂದು ಅವಕಾಶವೂ ಅವನಿಗೆ ಎದುರಾಯಿತು. ಬಹಮನಿ ೩ನೇ ಸುಲ್ತಾನ ಮುಹಮ್ಮದ್‌ನ ಸ್ಥಾನದಲ್ಲಿ ೨ನೇ ಮಹಮೂದ್ ಅರಸನಾದನು. ಇವನು ಸಾಮ್ರಾಜ್ಯವಿಲ್ಲದ ಸುಲ್ತಾನನಾಗಿದ್ದ ವ್ಯಕ್ತಿ. ರಾಯನ ವಿರುದ್ಧವಾಗಿ ಒಂದು ಜಿಹಾದ್(ಧರ್ಮಯುದ್ಧ)ಅನ್ನು ನಡೆಸಬೇಕೆಂದು ಅವನು ಒತ್ತಡ ಹಾಕಿದನು. ತಾನೇ ಒಂದು ದಂಡಯಾತ್ರೆಯನ್ನು ನಡೆಸಿದನು (ಕ್ರಿ.ಶ. ೧೫೦೯-೧೦). ಬಿಜಾಪುರದ ಯೂಸುಫ್ ಅದಿಲ್ ಶಾಹ ಅವನ ರಕ್ಷಣೆಗಾಗಿ ಧಾವಿಸಿ ಬರಬೇಕಾಯಿತು. ಆದರೆ ಯುದ್ಧವು ವಿನಾಶದಲ್ಲಿ ಕೊನೆಗೊಂಡಿತು. ಕೋವಿಲ್‌ಕೊಂಡದಲ್ಲಿ ಮುಸ್ಲಿಂ ಸೇನೆಯು ಪರಾಭವ ಹೊಂದಿತು. ಅಲ್ಲಿ ಯೂಸುಫ್ ಅದಿಲ್ ಕೊಲೆಯಾದನು. ಗಾಯಗೊಂಡಿದ್ದ

ಮಹಮೂದನಿಗೆ ಸಹಾಯ ಮಾಡುವುದಕ್ಕಾಗಿ ಅವನು ಬಂದಿದ್ದನು. ಉಮ್ಮತ್ತೂರಿನ ರಾಜರನ್ನೂ ಕೃಷ್ಣದೇವರಾಯನು ಅಡಗಿಸಿದನೆಂಬುದನ್ನು ಮೇಲೆ ನೋಡಿದ್ದೇವೆ. ಸಾಹಿತ್ಯ ಮೂಲಗಳು ಈ ರಾಜನನ್ನು ಗಂಗರಾಜ ಎಂದು ಉಲ್ಲೇಖಿಸುತ್ತವೆ. ಈ ವಿಚಾರವನ್ನುಮೇಲೆ ಚರ್ಚಿಸಿದ್ದಾಗಿದೆ, ಇವನು ನಂಜರಾಜನೇ ಇರಬಹುದು. ಅವನು ಚಕ್ರವರ್ತಿಯ ಅಧಿಕಾರವನ್ನು ತಿರಸ್ಕರಿಸಿ ಪೆನುಗೊಂಡೆಯನ್ನು ಆಕ್ರಮಿಸಿಕೊಂಡನು. ಅಲ್ಲಿಂದ ಹೊರಗಟ್ಟಲು ಶ್ರೀರಂಗಪಟ್ಟಣಕ್ಕೆ ಹೋಗಿ ನಿಂತನು. ಅದಕ್ಕೂ ಹತ್ತಿರದಲ್ಲೇ ಇದ್ದ ಶಿವನಸಮುದ್ರಕ್ಕೂ ಮುತ್ತಿಗೆ ಹಾಕಿ, ಎರಡೂ ನಗರಗಳನ್ನು ನೆಲಸಮ ಮಾಡಲಾಯಿತು. ವೈರಿಯು ಸತ್ತನು. ರಾಜನು ಆ ಪ್ರದೇಶವನ್ನು ಒಂದು ಪ್ರಾಂತವನ್ನಾಗಿ ಮಾಡಿದನು. ಶ್ರೀರಂಗಪಟ್ಟಣವು ಅದರ ರಾಜಧಾನಿಯಾಯಿತು. ಗೋವಿಂದರಾಜನು ರಾಜ್ಯಪಾಲನಾಗಿ ನೇಮಿತನಾದನು. ಸ್ಥಳೀಯ ಆಡಳಿತವು ಮಾಗಡಿ ಕೆಂಪೇಗೌಡನ ಕೈಗಳಲ್ಲಿ ನಿಂತಿತು.

ಮುಂದಿನ ಗುರಿಯಾಗಿದ್ದದ್ದು ಒರಿಸ್ಸಾ. ಗಜಪತಿಯ ವರ್ತನೆಯಿಂದ ಕೃಷ್ಣದೇವರಾಯನು ಕ್ರುದ್ಧನಾಗಿದ್ದನು. ತನಗೆ ಸಹಾಯ ಮಾಡುವುದಕ್ಕೆ ಬದಲಾಗಿ ಅವನು ತನ್ನ ವಿರುದ್ಧ ಕತ್ತಿ ಮಸೆಯುತ್ತಾ ತನ್ನದೇ ರಾಜ್ಯವನ್ನು ವಿಸ್ತರಿಸಿಕೊಳ್ಳಲು ಬಯಸುತ್ತಿದ್ದನು. ಇದರಿಂದಾಗಿ ವಿಜಯನಗರದ ರಾಜನು ಅವನ ವಿರುದ್ಧ ಯುದ್ಧವನ್ನು ಘೋಷಿಸುವಂತಾಯಿತು. ಯುದ್ಧವು ಹಲವು ಹಂತಗಳಲ್ಲಿ ನಡೆಯಿತು. ಮೊದಲನೆಯ ಹಂತವು ಕ್ರಿ.ಶ. ೧೫೧೩ರಲ್ಲಿ ನಡೆಯಿತು. ಗಜಪತಿಯು ಆಕ್ರಮಿಸಿಕೊಂಡಿದ್ದ ಉದಯಗಿರಿಯ ಮೇಲೆ ಧಾಳಿ ಮಾಡಿದನು. ಆದರೆ ಅವನನ್ನು ಸೋಲಿಸಿ ಕೊಂಡವೀಡುವರೆಗೆ ಅಟ್ಟಿಸಿಕೊಂಡು ಹೋಗಲಾಯಿತು. ಈ ಯುದ್ಧವನ್ನು ಸಾಳುವ ತಿಮ್ಮರಸನ ನಾಯಕತ್ವಕ್ಕೆ ಬಿಟ್ಟು ರಾಜನು, ಆಡಳಿತೀಯ ಸಮಸ್ಯೆಗಳನ್ನು ಪರಿಹರಿಸುವ ಸಲುವಾಗಿ ರಾಜಧಾನಿಗೆ ಹಿಂದಿರುಗಿದನು. ಆಮೇಲೆ ತಿರುಮಲೆಗೆ ದರ್ಶನಾರ್ಥವಾಗಿ ಭೇಟಿ ನೀಡಿದನು. ತಿಮ್ಮರಸನು ಕೊಂಡವೀಡಿನ ಮುಂದೆ ಸೇನಾಸಮೇತನಾಗಿ ಬೀಡು ಬಿಡುವುದಕ್ಕೆ ಮೊದಲು ಕಂದುಕೂರು, ವಿನುಕೊಂಡ ಮತ್ತು ನಾಗಾರ್ಜುನಕೊಂಡಗಳನ್ನು ವಶಪಡಿಸಿಕೊಂಡನು. ರಾಜನೂ ಅಲ್ಲಿಗೆ ಬಂದು ಸೇರಿದನು. ಏಣಿಗಳಿಂದ ಕೋಟೆಗೆ ಲಗ್ಗೆ ಹತ್ತಿ ಅದನ್ನು ಕೈವಶಪಡಿಸಿಕೊಳ್ಳಲಾಯಿತು. ರಾಜನಾದ ವೀರಭದ್ರಗಜಪತಿಯನ್ನೂ ಅವನ ರಾಣಿಯನ್ನೂ ಸೆರೆ ಹಿಡಿಯಲಾಯಿತು. ರಾಜನು ಹಿಂದಿರುಗಿ ಮತ್ತೆ ವಿಜಯವಾಡದಲ್ಲಿ ತನ್ನ ಸೇನಾಧಿಪತಿಯನ್ನು ಕೂಡಿಕೊಂಡನು. ಆಮೇಲೆ ಕೊಂಡಪಲ್ಲಿಯ ಸರದಿ (ಕ್ರಿ.ಶ. ೧೫೧೭) ಈ ಮಧ್ಯೆ ನಲ್ಗೊಂಡದ ಭಾಗಗಳು ಮತ್ತು ವರಂಗಲ್ಲನ್ನೂ ಗೆಲ್ಲಲಾಯಿತು. ಇದು ವಸ್ತುತಃ ತೆಲಂಗಾಣಕ್ಕೆ ಬಾಗಿಲು ತೆರೆದಂತಾಯಿತು. ಅಲ್ಲಿ ಭೋಗಿ ಕುಲಕ್ಕೆ ಸೇರಿದ ಶಿತಬ್‌ಖಾನ್ (ಸೀತಾಪತಿ) ಆಳುತ್ತಿದ್ದನು. ಅಲ್ಲಿಂದ ವೇಲಮನಾಯಕರನ್ನೂ ಮುಸ್ಲಿಮರನ್ನೂ, ಬಹುಶಃ ಗಜಪತಿಗಳ ನೆರವಿನಿಂದ ಓಡಿಸಿ ತಾನು ನೆಲೆ ನಿಂತಿದ್ದನು. ವಿಜಯನಗರದ ಅರಸನು ಮೊದಲು ಪಶ್ಚಿಮಕ್ಕೆ ನಡೆದು ನಲ್ಗೊಂಡ ಕೋಟೆ ಮತ್ತು ವರಂಗಲ್ ಜಿಲ್ಲೆಗಳನ್ನು ಗೆದ್ದು ಗೋದಾವರಿಯನ್ನು ತಲುಪಿ, ಅಲ್ಲಿಂದ ಸೇನೆಯನ್ನು ಪೂರ್ವಾಭಿಮುಖವಾಗಿ ತಿರುಗಿಸಿದನು. ಶಿತಬ್‌ಖಾನನು ೬೦,೦೦೦ ಬಿಲ್ಗಾರರ ಪಡೆಯೊಂದಿಗೆ ಉಗ್ರವಾಗಿ ಎದುರಿಸಿದನು. ರಾಜನ ಅಶ್ವಪಡೆಯ ಎರಡೂ ಪಕ್ಕಗಳಲ್ಲಿದ್ದ ಬೆಟ್ಟಗಳನ್ನು ಹತ್ತಿಕೊಂಡು ಹಿಂದಿನಿಂದ ವೈರಿಯ ಮೇಲೆ ಮುಗಿಬಿದ್ದಿತು. ಸೀತಾಪತಿಯ ಯೋಧರು ದಿಕ್ಕುಪಾಲಾಗಿ ಓಡಿದರು. ೩೦,೦೦೦ ಅಶ್ವಾರೋಹಿ ಪಡೆಯನ್ನು ಆ ಕಣಿವೆಯ ಕಾವಲಿಗೆ ನೇಮಿಸಿ ಕೃಷ್ಣದೇವರಾಯನು ಬಹು ಸುಲಭವಾಗಿ ರಾಜಮಹೇಂದ್ರಿಯನ್ನು ಗೆದ್ದುಕೊಂಡನು. ಸಮಗ್ರವಾಗಿ ವೆಂಗಿನಾಡು ಅವನ ಆಳಿಕೆಗೆ ಒಳಪಟ್ಟಂತಾಯಿತು. ರಾಜನು ಸಿಂಹಾಚಲಕ್ಕೆ ಭೇಟಿ ನೀಡಿದನು, ಪುತನೂರಿನಲ್ಲಿ ಒಂದು ವಿಜಯಸ್ತಂಭವನ್ನು ನಡೆಸಿ ರಾಜಧಾನಿಗೆ ಹಿಂದಿರುಗಿದನು. ಇಷ್ಟಾದರೂ ಗಜಪತಿಯು ಶರಣಾಗತನಾಗುವ ಒಲವು ತೋರಿಸಲಿಲ್ಲ. ಈ ಯುದ್ಧಗಳ ವಿವರವಾದ ನಿರೂಪಣೆಯನ್ನು ರಾಯವಾಚಕಮು ಒದಗಿಸುತ್ತದೆ ಇದರ ಪ್ರಕಾರ, ಒಂದು ಕುಟಿಲೋಪಾಯವನ್ನು ಯೋಚಿಸಿ ಗಜಪತಿಯು ಸಂಧಿಯನ್ನು

ಯಾಚಿಸಿದನು. ರಾಜಕುಮಾರ ವೀರಭದ್ರನು ಸೆರೆಯಲ್ಲಿರುವಾಗಲೇ ಆತ್ಮಹತ್ಯೆ ಮಾಡಿಕೊಂಡನೆಂದು ನ್ಯೂನಿಜ್ ಹೇಳುತ್ತಾನೆ. ಆದರೆ ಇದೆಲ್ಲದರ ಕೊನೆಗೆ ಗಜಪತಿಯು ಅತಿದೈನ್ಯದಿಂದ ಕ್ಷಮೆಯನ್ನು ಕೋರಿದನು. ತನ್ನ ಮಗಳು ಜಗನ್ಮೋಹಿನಿಯನ್ನು ರಾಜನಿಗೆ ಮದುವೆ ಮಾಡಿಕೊಟ್ಟನು. ಕೃಷ್ಣೆಯ ಉತ್ತರಕ್ಕೆ ಕಳೆದುಕೊಂಡಿದ್ದ ರಾಜ್ಯಗಳನ್ನೆಲ್ಲ ಹಿಂದಕ್ಕೆ ಪಡೆದನು. ಹೀಗೆ ಭಾರತದ ಮಿಲಿಟರಿ ಇತಿಹಾಸದಲ್ಲಿ ಅತ್ಯಂತ ಉಜ್ವಲವಾದ ಘಟನೆಗಳಲ್ಲಿ ಒಂದು ಸಮಾಪನಗೊಂಡಿತು. ೧೬ನೆಯ ಶತಮಾನದ ಮೊದಲಲ್ಲಿ ಐದು ಹಂತಗಳಲ್ಲಿ ಹರಡಿದ್ದ ಈ ಇತಿಹಾಸದಲ್ಲಿ ಪ್ರಸ್ತುತ ಘಟನೆಯು ಕ್ರಿ.ಶ. ೧೫೧೩ರಿಂದ ೧೫೧೮ರ ವರೆಗೆ ಆರು ವರ್ಷಗಳನ್ನು ಒಳಗೊಂಡಿತ್ತು.

ಗಜಪತಿಯ ದೈನ್ಯಾವಸ್ಥೆಯಿಂದ ಪ್ರಚೋದಿತನಾಗಿ ಗೋಲ್ಕೊಂಡದ ಕ್ವಲಿ ಕುತುಬ್ ಶಾಹ ಅವನ ಮೇಲೆ ದಂಡೆತ್ತಿ ಹೋದನು. ಮೊದಲು ಪಂಗಳವನ್ನು ಗುಂಟೂರನ್ನು ಗೆದ್ದುಕೊಂಡನು. ವಿಜಯನಗರದ ರಾಜನ ಕೈಗೆ ಸಿಕ್ಕಿ ಬಸವಳಿದಿದ್ದ ಪ್ರತಾಪರುದ್ರನೂ ಈಗ ಕ್ವಲಿ ಕುತುಬ್ ಶಾಹನನ್ನು ಎದುರಿಸಬೇಕಾಯಿತು. ಕುತುಬ್ ಶಾಹನು ಶಿತಬ್‌ಖಾನನಿಂದ ತೆಲಂಗಾಣದಲ್ಲಿ ವರಂಗಲ್ ಮೊದಲಾದ ಕೋಟೆಗಳನ್ನೂ ಗಜಪತಿಯಿಂದ ಕೊಂಡಪಲ್ಲಿ, ಎಲ್ಲೋರ ಮತ್ತು ರಾಜಮಹೇಂದ್ರಿಗಳನ್ನೂ ಗೆದ್ದುಕೊಂಡನು. ಕೃಷ್ಣಾ ಮತ್ತು ಗೋದಾವರಿಗಳ ನಡುವಣ ಪ್ರದೇಶವನ್ನು ಒರಿಸ್ಸಾರಾಜನು ವೈರಿಗೆ ಒಪ್ಪಿಸಿಕೊಡಬೇಕಾಯಿತು. ಇಲ್ಲಿ ದೊರೆತ ವಿಜಯವು ವಿಜಯನಗರ ರಾಜ್ಯಕ್ಕೆ ನುಗ್ಗಲು ಅವನಿಗೆ ಪ್ರಚೋದನೆ ನೀಡಿತು. ರಾಯನು ರಾಜಧಾನಿಯಲ್ಲಿರದೆ ಸುಮಾರು ಐವತ್ತು ವರ್ಷಗಳಷ್ಟು ದೀರ್ಘಕಾಲದಿಂದ ದಂಗೆಯೇಳುತ್ತಿದ್ದ ಚತುರ್(Catuir)ಗೆ ಹೋಗಿದ್ದನು. ಕೊಂಡವೀಡಿಗೆ ಮುತ್ತಿಗೆ ಹಾಕಿದಾಗ ಅಲ್ಲಿಯ ರಾಜ್ಯಪಾಲ ಸಾಳುವ ತಿಮ್ಮನೂ ಅಲ್ಲಿರಲಿಲ್ಲ. ಅವನ ಸೋದರಳಿಯ ನಾದಂಡ್ಲ ಗೋಪನಿಗೆ ಕುತುಬ್ ಶಾಹನ ಮುನ್ನಡೆಯನ್ನು ತಡೆಯುವುದು ಸಾಧ್ಯವಾಗಲಿಲ್ಲ. ಕೊನೆಗೆ ಕೃಷ್ಣದೇವರಾಯನು ಚತುರ್‌ನಿಂದ ಹಿಂದಿರುಗಿ ತಿಮ್ಮರಸನನ್ನು ೨,೦೦,೦೦೦ ಯೋಧರ ಭಾರೀ ಸೈನ್ಯದೊಂದಿಗೆ ಕಳುಹಿಸಿದನು. ಅದರ ನೆರವಿನಿಂದ ತಿಮ್ಮನು ಶತ್ರುವಿನ ಮೇಲೆ ಬಿದ್ದು ಅದರ ದಂಡನಾಯಕ ಮದರ್-ಉಲ್-ಮುಲು ಅನ್ನೂ ಅವನ ಅಧಿಕಾರಿಗಳನ್ನು ಸೆರೆಹಿಡಿದು ವಿಜಯನಗರಕ್ಕೆ ಕಳುಹಿಸಿಕೊಟ್ಟನು. ಈ ಪ್ರಾಂತದಲ್ಲಿ ಸುವ್ಯವಸ್ಥೆಯನ್ನು ಸ್ಥಾಪಿಸಲು ತಿಮ್ಮನಿಗೆ ಸ್ವಲ್ಪ ಸಮಯವೇ ಹಿಡಿಯಿತು.

ಕ್ರಿ.ಶ. ೧೫೧೨ರಲ್ಲಿ ವಿಜಯನಗರದ ಅರಸನು ರಾಯಚೂರು ಕೋಟೆಯನ್ನು, ಯೂಸುಫ್ ಅದಿಲನ ಬಲಗೈ ಮನುಷ್ಯನೂ, ಆಗ ಬಿಜಾಪುರದ ಇಸ್ಮೈಲ್‌ನ ರಾಜಪ್ರತಿನಿಧಿಯಾಗಿ ನಿರ್ವಹಿಸುತ್ತಿದ್ದವನೂ ಆದ ಕಮಲ್‌ಖಾನನಿಂದ ಗೆದ್ದುಕೊಂಡಿದ್ದನು. ಆದರೆ ಇಸ್ಮೈಲ್ ಅದನ್ನು ಸುಲಭವಾಗಿ ಒಪ್ಪಿಕೊಳ್ಳದಾದನು. ಕೃಷ್ಣದೇವರಾಯನು ಗಜಪತಿಯೊಂದಿಗೆ ನಡೆಸಿದ ಯುದ್ಧಗಳನ್ನು ಅವನು ಉಪಯೋಗಪಡಿಸಿಕೊಂಡಿದ್ದನು. ಕಮಲ್‌ಖಾನನನ್ನು ಓಡಿಸಿ, ಇಸ್ಮಾಯಿಲನು ಧಾಳಿಮಾಡಿ ಉಗ್ರಕಾಳಗದ ಕೊನೆಗೆ ರಾಯಚೂರು ಕೋಟೆಯನ್ನು ಗೆದ್ದುಕೊಂಡನು. ರಾಯಚೂರಿನೊಂದಿಗೇ ಇದ್ದ ಇನ್ನೊಂದು ಬಲವಾದ ಕೋಟೆ ಮುದಗಲ್ಲು, ಒರಿಸ್ಸಾದ ವ್ಯವಹಾರಗಳಿಂದ ಬಿಡುಗಡೆ ಹೊಂದಿದ ಮೇಲೆ ರಾಜನು ಬಿರುಸಾದ ಯುದ್ಧಮಾಡಿ ರಾಯಚೂರನ್ನು ಪಡೆದುಕೊಂಡನು (ಮೇ ೧೯, ೧೫೨೦), ಇದಕ್ಕಾಗಿ ಪೋರ್ಚುಗೀಸ್ ಬಂದೂಕುಧಾರಿ ಪಡೆಯ ಸೇವೆಯನ್ನು ಅವನು ಪಡೆಯಬೇಕಾಯಿತು. ರಾಯಚೂರು ಕೋಟೆಯೊಳಗಿದ್ದ ಜನರು ಭೀತಿಯಿಂದ ತಲ್ಲಣಿಸಿದ್ದರೆಂದೂ ಅವರನ್ನು ಸಮಾಧಾನ ಪಡಿಸಲು ದಂಡನಾಯಕನು ಮುಂದಕ್ಕೆ ಬಂದಾಗ ಅವನಿಗೆ ಗುಂಡಿಟ್ಟು ಕೊಲ್ಲಲಾಯಿತೆಂದೂ, ಇದರಿಂದಾಗಿ ಕೋಟೆ ಬಿದ್ದಿತೆಂದೂ ಹೇಳಲಾಗಿದೆ. ಪೋರ್ಚುಗೀಸನಾದ ಕಾಸ್ಟನ್‌ಹಿಡಾ, ಆಸ್ಥಾನ ಗಾಯಕನೂ ಸಂಗೀತ ಸೂರ್ಯೋದಯದ ಕರ್ತೃವೂ ಆದ ಲಕ್ಷ್ಮೀನಾರಾಯಣನೂ ಈ ಘಟನೆ ನಡೆದುದು ಕ್ರಿ.ಶ. ೧೫೨೦ರಲ್ಲಿ ಎಂದು ಸೂಚಿಸುತ್ತಾರೆ. ಕೆಲವು ವಿದ್ವಾಂಸರು ಇನ್ನೂ ಇದನ್ನು ಒಪ್ಪಿಲ್ಲ.

ಕೃಷ್ಣದೇವರಾಯನು ರಾಜಧಾನಿಗೆ ಮರಳಿದಾಗ ಇಸ್ಮಾಯಿಲನ ಪ್ರತಿನಿಧಿಯು ತನಗಾಗಿ ಕಾಯುತ್ತಿರುವುದನ್ನು ಕಂಡನು. ರಾಜನು ರಾಯಚೂರಿನ ಮೇಲೆ ಆಕ್ರಮಣ ಮಾಡಿದುದು ತಪ್ಪೆಂದು ಹೇಳಿದ ರಾಯಭಾರಿಯು, ಅದನ್ನೂ ಇಸ್ಮಾಯಿಲನಿಂದ ಕಿತ್ತುಕೊಂಡ ಭಾಗಗಳೆಲ್ಲವನ್ನೂ ಒಡನೆಯೇ ಮರಳಿಸಬೇಕೆಂದು ಪ್ರಾರ್ಥಿಸಿದನು. ಇಸ್ಮಾಯಿಲನು ತನ್ನ ಪಾದಗಳಿಗೆ ಮುತ್ತಿಟ್ಟು ಗೌರವಿಸುವುದಾದ ಪಕ್ಷದಲ್ಲಿ ಎಲ್ಲವನ್ನೂ ಹಿಂದಿರುಗಿಸುವುದಾಗಿ ರಾಜನು ಷರತ್ತು ಹಾಕಿದನು. ಇಬ್ಬರೂ ಮುದಗಲ್ಲಿನಲ್ಲಿ ಸಂಧಿಸುವುದಾಗಿ ವ್ಯವಸ್ಥೆಯಾಯಿತು. ಆದರೆ ನಿಗದಿಯಾದ ದಿನ ಇಸ್ಮಾಯಿಲ್ ಬರಲಿಲ್ಲ. ಸುಲ್ತಾನನು ಇನ್ನೊಂದು ಪ್ರಯತ್ನ ಮಾಡಿದನು. ಈ ಸಾರಿ ಬೆಳಗಾವಿಯ ರಾಜನೂ ಇಸ್ಮಾಯಿಲನ ಪ್ರತಿನಿಧಿಯೂ ಆದ ಅಸದ್‌ಖಾನ್‌ಲಾರಿಯು ಇನ್ನೊಬ್ಬ ಪ್ರತಿನಿಧಿಯು ತನ್ನನ್ನು ತಪ್ಪುದಾರಿಗೆಳೆದನೆಂದು ದೂರಿದನು. ಇದರಿಂದ ಕ್ರೋಧಗೊಂಡ ರಾಜನು ಬಿಜಾಪುರದ ಮೇಲೆ ದಂಡೆತ್ತಿ ಹೋಗಿ ಫಿರೂಜಾಬಾದನ್ನು ಹಿಡಿದು, ಹಸನಕಾಡ್ ಅನ್ನು ಗೆದ್ದು ಸಾಗರವನ್ನು ಮುಟ್ಟಿದನು. ಇಲ್ಲಿ ಬಯಲು ಯುದ್ಧ ನಡೆಯಿತು. ಇಸ್ಮಾಯಿಲ್ ಸೋತು ಸುಣ್ಣವಾದನು. ಶೋರಾಪುರ ಮತ್ತು ಕೆಂಬಾವಿಗಳಲ್ಲೂ ಯುದ್ಧ ನಡೆಯಿತು. ಬಿಜಾಪುರಿಗಳು ಮತ್ತೆ ಅಲ್ಲೂ ಸೋತರು. ಘಟನೆಗಳ ವಿವರವನ್ನು ಕೊಡುವ ಫೆರಿಷ್ಟಾ ಹೇಳುತ್ತಾನೆ, ಕೃಷ್ಣಾನದಿಯ ದಂಡೆಯ ಮೇಲೆ ಶಿಬಿರ ಹೂಡಿದ್ದ ಇಸ್ಮಾಯಿಲ್ ಮದ್ಯಪಾನದಲ್ಲಿ ಮುಳುಗಿಹೋಗಿದ್ದನು. ಆಗಿಂದಾಗಲೆ ನದಿಯನ್ನು ದಾಟಬೇಕೆಂದು ತನ್ನ ಜನರಿಗೆ ಆಜ್ಞೆಮಾಡಿ ತಾನೂ ನದಿಗೆ ಧುಮುಕಿದನು. ರಾಜನ ಅಗಾಧವಾದ ಸೈನ್ಯವನ್ನು ನೋಡಿ ನಿರ್ವಿಣ್ಣನಾದ ಇಸ್ಮಾಯಿಲ್ ತನ್ನ ಕಡೆಯವರೊಂದಿಗೆ ಅವಸರವಸರವಾಗಿ ಹಿಮ್ಮೆಟ್ಟಿದನು. ಓಡಿಹೋಗುತ್ತಿದ್ದ ಬಿಜಾಪುರಿಗಳ ಕುದುರೆಗಳನ್ನೂ ಆನೆಗಳನ್ನೂ ಕೃಷ್ಣರಾಯನು ತನ್ನ ವಶಪಡಿಸಿಕೊಂಡನೆಂದು ಹೇಳಲಾಗಿದೆ. ಈಗ ರಾಜನು ಗುಲ್ಬರ್ಗಾಕ್ಕೆ ಮುತ್ತಿಗೆ ಹಾಕಿದನು. ಉಗ್ರವಾದ ಪ್ರತಿರೋಧ ಬಂದರೂ ಕೋಟೆಯನ್ನು ಗೆದ್ದುಕೊಂಡನು. ನ್ಯೂನಿಜನನ್ನು ನಂಬುವುದಾದರೆ, ಗುಲ್ಬರ್ಗಾ ಕೋಟೆಯನ್ನು ನೆಲಸಮ ಮಾಡಲಾಯಿತು.[೪೭] ಆದರೆ ಮಂತ್ರಿ ಪರಿಷತ್ತಿನ ಸಲಹೆಯನ್ನು ಅಂಗೀಕರಿಸಿ ರಾಜನು ಇಸ್ಮಾಯಿಲನ ಮೇಲೆ ಆಕ್ರಮಣ ಮಾಡುವುದನ್ನು ನಿಲ್ಲಿಸಿದನು. ಗುಲ್ಬರ್ಗಾದಲ್ಲಿ ಬಂದಿಯಾಗಿದ್ದ ೨ನೇ ಮಹಮೂದ್ ಶಾಹನನ್ನು ಬಿಡುಗಡೆ ಮಾಡಿ ಅವನನ್ನು ಸಿಂಹಾಸನದ ಮೇಲೆ ಕುಳ್ಳಿರಿಸಿದನು. ಇಸ್ಮಾಯಿಲನ ಇಬ್ಬರು ಪುತ್ರರನ್ನೂ ಬಿಡುಗಡೆಗೊಳಿಸಿ ಹಂಪೆಗೆ ಕರೆದೊಯ್ದು ಅಲ್ಲಿ ಅವರನ್ನು ಕ್ಷೇಮವಾಗಿ ಇರಿಸಿ ಚೆನ್ನಾಗಿ ನೋಡಿಕೊಂಡನು. ಹೀಗೆ ಬಹಮನಿ ಸುಲ್ತಾನಶಾಹಿಯನ್ನು ಪುನರುಜ್ಜೀವನಗೊಳಿಸಿ ರಾಜನು ಮುಸ್ಲಿಂ ರಾಜ್ಯಗಳ ಮೇಲೆ ತನ್ನ ಹಿಡಿತವನ್ನು ಸಾಧಿಸಿದನು. ಈ ಸಂದರ್ಭದ ನೆನಪಿಗಾಗಿ ಯವನರಾಯ ಸ್ಥಾಪನಾಚಾರ್ಯ ಎಂಬ ಬಿರುದನ್ನು ಧರಿಸಿದನು.


ಪೋರ್ಚುಗೀಸರೊಂದಿಗೆ ಕೃಷ್ಣದೇವರಾಯನು ಹೊಂದಿದ್ದ ಸಂಬಂಧಗಳು ಮೈತ್ರಿಯುತವಾಗಿಯೇ ಮುಂದುವರಿದುವು. ಒಬ್ಬ ಟರ್ಕನು ವಿಜಯನಗರದಲ್ಲಿ ಫ್ರೈಯರ್ ಲೂಯಿಜ್‌ನನ್ನು ಕೊಲೆ ಮಾಡಿದರೂ ಈ ಮೈತ್ರಿಗೆ ಅದರಿಂದ ಬಾಧೆಯಾಗಲಿಲ್ಲ. ಹೊನ್ನಾವರದ ಮೇಲೆ ವೈರಭಾವವನ್ನು ಕೈ ಬಿಡಬೇಕೆಂದು ಅಲ್ಬುಕರ್ಕನು ಇಸ್ಮಾಯಿಲನನ್ನು ಕೋರಿದನು. ಸಿಲೋನಿನಲ್ಲಿ ಒಂದು ಜನಕ್ರಾಂತಿಯಾಗಿ ವಿಜಯಬಾಹುವನ್ನು ಅಧಿಕಾರದಿಂದ ಕೆಳಗಿಳಿಸಲಾಯಿತು. ಕೃಷ್ಣದೇವರಾಯನು ಮಧ್ಯ ಪ್ರವೇಶಮಾಡಿ ಆ ದಂಗೆಗಳನ್ನು ಅಡಗಿಸಿ ವಿಜಯಬಾಹುವಿನ ಮಗ ಭುವನೈಕಬಾಹುವನ್ನು ಸಿಂಹಾಸನದ ಮೇಲೆ ಕುಳ್ಳಿರಿಸಿದನು.

ರಾಜನ ಆಳಿಕೆಯ ಕೊನೆಯ ವರ್ಷಗಳಲ್ಲಿ ತಕ್ಕಮಟ್ಟಿಗೆ ಶಾಂತಿಯು ನೆಲೆಗೊಂಡಿತ್ತು. ಆದರೂ ಒಂದು ಅಸಹ್ಯವಾದ ಸಂದರ್ಭವು ಅವನನ್ನು ನಡುಗಿಸಿಬಿಟ್ಟಿತು. ರಾಜನಿಗೆ ಬಹುಕಾಲ ಪುತ್ರ ಸಂತಾನವಿರಲಿಲ್ಲ. ಸುಮಾರು ೧೫೧೮-೧೯ರಲ್ಲಿ ರಾಣಿ ತಿರುಮಲದೇವಿಯು ಗಂಡುಮಗುವಿಗೆ ಜನನವಿತ್ತಳು. ಅವನೇ ತಿರುಮಲದೇವ. ಗುಲ್ಬರ್ಗಾ ವಿಜಯದ ನಂತರ ರಾಜನು ಕಿರಿಯ ರಾಜಕುಮಾರನಿಗೆ ರಾಜ್ಯವನ್ನು ವಹಿಸಿ

ಅವನನ್ನು ಯುವರಾಜನನ್ನಾಗಿ ಮಾಡಿ ತಾನು ಮಹಾಪ್ರಧಾನನಾದನು. ಆದರೆ ಕೇವಲ ಎಂಟು ತಿಂಗಳಲ್ಲಿ ರಾಜಕುಮಾರನು ಸತ್ತುಹೋದನು. ಅವನಿಗೆ ವಿಷಪ್ರಯೋಗ ಮಾಡಲಾಯಿತೆಂದು ವರದಿಯಾಯಿತು. ದುರದೃಷ್ಟವಶಾತ್ ಸಾಳುವ ತಿಮ್ಮರಸನು ಈ ಕೃತ್ಯಕ್ಕೆ ಕಾರಣನೆಂದು ತಿಳಿಯಿತು. ರಾಜನಿಗೆ ಸಹನೆ ಉಳಿಯದೆ ಅವನನ್ನೂ ಅವನ ಮಗ ತಿಮ್ಮದಂಡನಾಯಕನನ್ನೂ ಸೆರೆಗೆ ದೂಡಿದನು. ಎರಡನೆಯ ಮಗ ಸಾಳುವ ಗುಂಡರಾಜನೂ ಅಪರಾಧಿಯಾಗಿದ್ದನು. ಮೂರುವರ್ಷಗಳ ನಂತರ ಹಿರಿಯ ಮಗ ತಿಮ್ಮನು ಸೆರೆಮನೆಯಿಂದ ತಪ್ಪಿಸಿಕೊಂಡು ಗೂಟಿಗೆ (ಕೊಂಡವೀಡು) ಓಡಿಹೋದನು. ಅಲ್ಲಿ ಅವನ ದಾಯಾದಿಗಳಾದ ನಾದೆಂಡ್ಲ ಅಪ್ಪ ಮತ್ತು ಗೋಪರು ರಾಜ್ಯಪಾಲರಾಗಿದ್ದರು. ಅಲ್ಲಿ ಬಂಡಾಯದ ಬಾವುಟವೆದ್ದಿತು. ಅದನ್ನು ಅಡಗಿಸುವುದು ಸುಲಭವಾಗಲಿಲ್ಲ. ಕೊನೆಗೆ ರಾಯಸಂ ಅಯ್ಯಪ್ಪರಸನು ಭಾರೀ ಸೈನ್ಯದೊಂದಿಗೆ ಹೋಗಿ ತಿಮ್ಮನನ್ನು ಸೆರೆಹಿಡಿದು ರಾಜಧಾನಿಗೆ ತಂದನು. ಕ್ರೋಧದ ಆವೇಶದಲ್ಲಿ ತಂದೆ ಮತ್ತು ಮಗ ಇಬ್ಬರ ಕಣ್ಣುಗಳನ್ನೂ ಕೀಳಬೇಕೆಂದು ರಾಜನು ಆಜ್ಞೆಮಾಡಿದನು. ಮುಂದೆ ತಿಮ್ಮನು ಮೃತನಾದನು. ತಿಮ್ಮರಸನೂ ಗುಂಡನೂ ಸರೆಮನೆಯಲ್ಲೇ ಕ್ಷಯಿಸಿಹೋದರು. ಇದು ನ್ಯೂನಿಜ್ ಕೊಡುವ ವರದಿ. ಎಷ್ಟು ಮಟ್ಟಿಗೆ ನಂಬಬಹುದೋ ಅದು ಯಾರೊಬ್ಬರ ಊಹೆಗೂ ಬಿಟ್ಟಿದ್ದು. ಆದರೆ ಈ ಘಟನೆ ರಾಜನ ಮನಸ್ಸನ್ನು ತೀವ್ರವಾಗಿ ಗಾಸಿಗೊಳಿಸಿತು. ಕೆಲವರೇನೋ ತಿರುಮಲನ ಸಾವೇ ರಾಜನ ದುಃಖಕ್ಕೆ ಕಾರಣ ಎಂದು ವಾದಿಸುತ್ತಾರೆ. ಏನೇ ಇರಲಿ, ಇದಾದ ಮೇಲೆ ರಾಜನು ಕಾಯಿಲೆ ಮಲಗಿ ಕ್ರಿ.ಶ. ೧೫೨೯ರಲ್ಲಿ ಕೊನೆಯುಸಿರೆಳೆದನು.

ಕೃಷ್ಣದೇವರಾಯನ ಆಡಳಿತಾವಧಿಯು ಕರ್ನಾಟಕ ಇತಿಹಾಸದಲ್ಲಿ, ಮಧ್ಯಯುಗೀನ ದಕ್ಷಿಣಭಾರತದ ಇತಿಹಾಸದಲ್ಲಿ, ಅಷ್ಟೇ ಅಲ್ಲ, ಭಾರತೀಯ ಇತಿಹಾಸದಲ್ಲಿಯೇ ಅತ್ಯಂತ ಉಜ್ವಲವಾದ ಅವಧಿ. ಬೇರೆ ಯಾವ ಚಕ್ರವರ್ತಿಯೂ ಅವನಷ್ಟು ಸಮರ್ಥನೂ ಪ್ರಜಾಪಾಲಕನೂ, ಪರಾಕ್ರಮಿಯೂ ಆಗಿರಲಿಲ್ಲ. ಅವನ ಆಡಳಿತಾವಧಿ ಎರಡೇ ದಶಕಗಳಿಗೆ ಸೀಮಿತವಾಗಿತ್ತು. ಆದರೂ ಅದು ರಾಜಕೀಯವಾಗಿ ಸಶಕ್ತವಾಗಿತ್ತು, ಕಲೆಯಲ್ಲಿ ಪುನರುಜ್ಜೀವನ ಕಾಲವಾಗಿತ್ತು, ಸಾಹಿತ್ಯದಲ್ಲಿ ಸಂಸ್ಕೃತ ಹಾಗೂ ಇತರ ಭಾಷಾ ಸಾಹಿತ್ಯಗಳಲ್ಲಿ ಉತ್ಕರ್ಷದ ಕಾಲವಾಗಿತ್ತು. ವಿಜಯನಗರದ ವೈಭವವನ್ನು ನೋಡಲೆಂದೇ ಅನೇಕ ಪ್ರವಾಸಿಗರು ಭಾರತಕ್ಕೆ ಬಂದರು. ನ್ಯೂನಿಜ್ ಮತ್ತು ಪೇಸ್ ತಾವು ಕಂಡುದನ್ನು, ಅರ್ಥಮಾಡಿಕೊಂಡುದನ್ನು ಬರೆದಿಟ್ಟಿರುವ ಸುಪ್ರಸಿದ್ಧ ಚರಿತ್ರಕಾರರು. ಅವರ ವರದಿಗಳು ಹಾಗೂ ರಾಯವಾಚಕಮು ಅಂತಹ ಕೆಲವು ಸಾಹಿತ್ಯಕ ಕೃತಿಗಳು ಇರದೆ ಹೋಗಿದ್ದರೆ ಕೃಷ್ಣದೇವರಾಯನ ವಿಷಯವಾಗಿ ಈಗ ನಮಗೆ ತಿಳಿದಿರುವಷ್ಟೂ ತಿಳಿಯುತ್ತಿರಲಿಲ್ಲ. ಅವನು ಹಾಕಿಸಿದ ಹಲವು ನೂರು ಶಾಸನಗಳು ದಕ್ಷಿಣ ಭಾರತಾದ್ಯಂತ, ಏಕೆ ಹೊರಗೂ ಹರಡಿಕೊಂಡಿದ್ದು ಅವನ ವ್ಯಕ್ತಿತ್ವ, ಅವನು ಮಾಡಿದ ಯುದ್ಧಗಳು, ಅವನ ಉದಾರ ದಾನಧರ್ಮಗಳು ಮತ್ತು ಇತರ ಸಾಮಾಜಿಕ-ಆರ್ಥಿಕ ವಿವರಗಳನ್ನು ಒದಗಿಸುತ್ತವೆ. ಶಾಸನಗಳಿಂದಲ್ಲದೆ ಇವು ಯಾವುವೂ ತಿಳಿಯುತ್ತಲೇ ಇರಲಿಲ್ಲ. ತಮಿಳರು, ತೆಲುಗರು ಮತ್ತು ಕನ್ನಡಿಗರು ಎಲ್ಲರೂ ಕೃಷ್ಣದೇವರಾಯನನ್ನು ತಮ್ಮವನೆಂದು ಹೇಳಿಕೊಳ್ಳುತ್ತಾರೆ. ಆದರೆ ಅವನು ಮೊದಲು ಕನ್ನಡಿಗನಾಗಿದ್ದನು, ಆಮೇಲೆ ದಕ್ಷಿಣ ಭಾರತೀಯ, ಅಂತಿಮ ವಿಶ್ಲೇಷಣೆಯಲ್ಲಿ ಭಾರತೀಯ. ಪೇಸ್ ಅವನನ್ನು ಕುರಿತು ಕೊಡುವ ಚಿತ್ರ ಇದು: [೪೮]

> ರಾಜನು ಮಧ್ಯಮ ಎತ್ತರದವನಾಗಿದ್ದು ಬೆಳ್ಳಗಿದ್ದಾನೆ, ಒಳ್ಳೆಯ ಮೈಕಟ್ಟನ್ನು ಹೊಂದಿದ್ದಾನೆ, ತೆಳುವಲ್ಲ, ಸ್ವಲ್ಪ ದಪ್ಪವೆಂದೇ ಹೇಳಬಹುದು. ಮುಖದ ಮೇಲೆ ಸಿಡುಬಿನ ಕಲೆಗಳಿವೆ. ಎಲ್ಲರೂ ಹೆದರುವ ಅತ್ಯುತ್ತಮ ರಾಜನಾದ ಅವನು ಹಸನ್ಮುಖಿಯೂ ಸದಾ ಉಲ್ಲಸಿತನೂ ಆಗಿದ್ದಾನೆ. ವಿದೇಶೀಯರನ್ನು ಗೌರವಿಸುತ್ತಾನೆ, ಅವರನ್ನು ವಿಶ್ವಾಸದಿಂದ ಸ್ವಾಗತಿಸುತ್ತಾನೆ, ಅವರ ಪರಿಸ್ಥಿತಿ ಏನೇ ಇರಲಿ ಅವನು ವಿಚಾರಿಸುತ್ತಾನೆ. ಒಳ್ಳೆಯ ರಾಜನೂ ನ್ಯಾಯಪರನಾದ ವ್ಯಕ್ತಿಯೂ ಆಗಿದ್ದಾನೆ.



ವಿಜಯನಗರ ಸಾಮ್ರಾಜ್ಯ

ರಾಜನನ್ನು ವೈಯಕ್ತಿಕವಾಗಿ ಭೇಟಿ ಮಾಡಿದ್ದ ಪೇಸ್ ರಾಜನ ದಿನಚರಿಯ ಬಗೆಗೆ ವಿವರಗಳನ್ನು ಕೊಡುತ್ತಾನೆ. ಯುದ್ಧದಲ್ಲಿ ಅವನ ವೀರತೆ, ಧೈರ್ಯ-ನಿರ್ಭೀತಿಗಳನ್ನು ವರ್ಣಿಸುತ್ತಾನೆ. ಉಲ್ಲಸಿತ, ಸದಾ ನಗುಮುಖವುಳ್ಳವ, ಮಿತ್ರರಿಗೂ ಶತ್ರುಗಳಿಗೂ ಒಂದೇ ಸಮನಾಗಿ ದಯಾಪರ, ಉದಾರಿ. ಆದರೆ ಇದ್ದಕ್ಕಿದ್ದಂತೆ ಕ್ರೋಧವು ಉಕ್ಕೇರುವ ಪ್ರವೃತ್ತಿಯವನು. ತನ್ನ ಮಾತನ್ನೇ ಎಲ್ಲರೂ ಶಾಸನವಾಗಿ ಪರಿಗಣಿಸಬೇಕು ಎಂದು ಪರಿಗಣಿಸುವ ಚಕ್ರವರ್ತಿಯ ಲಕ್ಷಣ ಅದಾಗಿರಬಹುದು. ಅವನ ಆಳ್ವಿಕೆಯು, ಪ್ರಜೆಗಳ ಕ್ಷೇಮಾಭ್ಯುದಯವನ್ನೇ ಪ್ರಧಾನವಾಗಿ ಪರಿಗಣಿಸುವ ಆದರ್ಶವನ್ನು ತನ್ನ ಮುಂದಿರಿಸಿಕೊಂಡ ಚಕ್ರವರ್ತಿಯ ಉಜ್ವಲ ನಿದರ್ಶನವಾಗಿದೆ. ಆ ಉದ್ದೇಶ ಸಾಧನೆಗಾಗಿ ಅವನು ಅವಿರತವಾಗಿ ಶ್ರಮಿಸಿದನು.

ಕೃಷ್ಣದೇವರಾಯನು ಬಹು ಉದಾರವಾಗಿ ದಾನಧರ್ಮಗಳನ್ನು ಮಾಡಿದನು. ಅವನು ದಕ್ಷಿಣ ಭಾರತದ ದೇವಾಲಯಗಳಿಗೆ ನೀಡಿದ ಉದಾರ ಕೊಡುಗೆಯನ್ನು ಶಾಸನಗಳು ಸಾರಿ ಹೇಳುತ್ತವೆ. ಅವನು ಧಾರ್ಮಿಕ ವ್ಯವಹಾರಗಳಲ್ಲಿ ಶ್ರೀ ವೈಷ್ಣವನಾಗಿದ್ದನು. ಆದರೆ ತನ್ನ ರಾಜ್ಯದಲ್ಲಿದ್ದ ಶೈವ ದೇವಾಲಯಗಳನ್ನು ಅವನು ಕಡೆಗಣಿಸಲಿಲ್ಲ ಎನ್ನುವುದನ್ನು ಶಾಸನಗಳ ವಿಶ್ಲೇಷಣೆಯು ತೋರಿಸಿಕೊಡುತ್ತದೆ. ವಿಶೇಷವಾದ ಒಲವು ತಿರುಮಲ-ತಿರುಪತಿ, ಶ್ರೀರಂಗಂ, ಕುಂಭಕೋಣಂ, ಅಹೋಬಲಂ, ಕಾಂಚೀಪುರಂ ಮೊದಲಾದೆಡೆಗಳಲ್ಲಿನ ಶ್ರೀವೈಷ್ಣವ ದೇವಾಲಯಗಳ ಕಡೆಗಿದ್ದಿತಾದರೂ ಕಾಳಹಸ್ತಿ, ಶ್ರೀಶೈಲಂ ಮೊದಲಾದ ಶೈವ ಕೇಂದ್ರಗಳೂ ಅವನ ಗಮನವನ್ನು ಪಡೆದಿದ್ದುವು. ಅಂಕಿಸಂಖ್ಯೆಗಳ ಆಧಾರದಿಂದ ಹೇಳುವುದಾದರೆ ಅವನಿಂದ ಶೈವದೇವಾಲಯಗಳಿಗಿಂತ ಶ್ರೀವೈಷ್ಣವ ದೇವಾಲಯಗಳು ಅಧಿಕ ಪ್ರಯೋಜನವನ್ನು ಪಡೆದುವು. ಕೃಷ್ಣದೇವರಾಯನು ಆಮುಕ್ತಮಾಲ್ಯದ ಎಂಬ ಒಂದು ಕಾವ್ಯವನ್ನು ರಚಿಸಿದನು. ಅದು ದಕ್ಷಿಣಭಾರತದ ಸಂತ ಮಹಿಳೆ ಆಳ್ವಾರ್ ಗೋದಾದೇವಿಯ ಕತೆ. ಶ್ರೀವೈಷ್ಣವ ಸಾಹಿತಿ ವಿದ್ವಾಂಸರನ್ನು ರಾಜನು ಪ್ರೋತ್ಸಾಹಿಸಿದನು. ವೆಂಕಟತಾತಾಚಾರ್ಯನನ್ನು ಸಾಮ್ರಾಜ್ಯದ ಎಲ್ಲಾ ಶ್ರೀವೈಷ್ಣವರ ಮುಖ್ಯಸ್ಥನನ್ನಾಗಿ ಮಾಡಿದನು. ಮುಂದೆ ಅಚ್ಯುತರಾಯ ಮತ್ತು ಸದಾಶಿವರೂ ಇದೇ ನೀತಿಯನ್ನು ಅನುಸರಿಸಿದರು. ಈ ನೀತಿಯು, ಮುಂದೆ ನೋಡುವಂತೆ, ತಾಳಿಕೋಟೆ ಯುದ್ಧದಲ್ಲಿ ತನ್ನ ವಿಕೃತ ಪರಿಣಾಮಗಳನ್ನು ವ್ಯಕ್ತಪಡಿಸಿತು. ರಾಜಧಾನಿಯ ವಿನಾಶಕ್ಕೆ ಇವೂ ಸ್ವಲ್ಪಮಟ್ಟಿಗೆ ಕಾರಣವಾಯಿತು.

ನರಸನಾಯಕನಿಗೆ ಮೂವರು ಪತ್ನಿಯರಿದ್ದರು-ತಿಪ್ಪಾಜಿ,ನಾಗಲಾ ಮತ್ತು ಓಬಾಂಬಾ, ಮೊದಲ ಇಬ್ಬರಿಗೆ ಒಬ್ಬೊಬ್ಬರು ಪುತ್ರರು ವೀರನರಸಿಂಹ ಮತ್ತು ಕೃಷ್ಣದೇವರಾಯ. ಓಬಾಂಬೆಗೆ ಅಚ್ಯುತ ಮತ್ತು ರಂಗ ಎಂದು ಇಬ್ಬರು ಮಕ್ಕಳು. ಕೃಷ್ಣದೇವರಾಯನಿಗೆ ಇನ್ನೂ ಒಬ್ಬ ಮಗನಿದ್ದನು. ರಾಜನು ಸಾಯುವಾಗ ಆ ಮಗುವಿಗೆ ಇನ್ನೂ ಹದಿನೆಂಟು ತಿಂಗಳು. ರಾಜನ ಇಬ್ಬರು ಪುತ್ರಿಯರಾದ ತಿರುಮಲಾಂಬಾ ಮತ್ತು ತಿಂಗಳಾಂಬಾರನ್ನು ಕ್ರಮವಾಗಿ ಆರವೀಡು ವಂಶದ ರಾಮರಾಯ ಮತ್ತು ಅವನ ತಮ್ಮ ತಿರುಮಲರಿಗೆ ಮದುವೆ ಮಾಡಿಕೊಡಲಾಗಿತ್ತು. ರಾಮರಾಯನು ಅಳಿಯ ರಾಮರಾಯನೆಂದೇ ಪ್ರಸಿದ್ಧನಾದನು. ರಂಗನ ಮಗ ಸದಾಶಿವ. ಮುಂದೆ ಇವನು ನಾಮಮಾತ್ರ ರಾಜನಾದನು. ಕೃಷ್ಣದೇವರಾಯನು ಮಡಿಯುತ್ತಲೇ ಅರಮನೆಯಲ್ಲಿ ಒಳಸಂಚುಗಳು ಪ್ರಾರಂಭವಾದುವು. ಅವನು ತನ್ನ ಮಲಸೋದರ ಅಚ್ಯುತರಾಯನನ್ನು ತನ್ನ ಉತ್ತರಾಧಿಕಾರಿ ಎಂದು ಹೆಸರಿಸಿದ್ದನು. ಆದರೆ ರಾಮರಾಯನು ಶಿಶುವಾಗಿದ್ದ ಮಗನ ಹಕ್ಕನ್ನುಎತ್ತಿಹಿಡಿದನು, ಮಗುವಿನ ಚಿಕ್ಕಪ್ಪ ಹುಚ್ಚ ತಿರುಮಲನೂ ಅವನಿಗೆ ಒತ್ತಾಸೆಯಾಗಿ ನಿಂತನು. ರಾಮರಾಯನಿಗೆ ತಾನೇ ಸಿಂಹಾಸನಕ್ಕೆ ಬರಬೇಕೆಂದು ಪ್ರಬಲವಾದ ಆಸೆಯಿತ್ತು. ಅಚ್ಯುತನು ಚಂದ್ರಗಿರಿಯಲ್ಲಿದ್ದಾಗ ಇಲ್ಲಿ ತಾನು ರಾಜಧಾನಿಯನ್ನು ವಶಪಡಿಸಿಕೊಳ್ಳಲು ರಾಮರಾಯನು ಪ್ರಯತ್ನಿಸಿದನು. ಆದರೆ ಈ ಪ್ರಯತ್ನವನ್ನು ಸಾಳುವ ನರಸಿಂಹರಾಜ ದಂಡನಾಯಕನು ವಿಫಲಗೊಳಿಸಿದನು. ಕೃಷ್ಣದೇವರಾಯನು ಮೃತನಾಗುವುದಕ್ಕೆ ಮುಂಚೆಯೇ ಅವನನ್ನು ಪ್ರಧಾನಮಂತ್ರಿಯನ್ನಾಗಿ ನೇಮಿಸಿದ್ದನು. ಆದರೆ ನರಸಿಂಹರಾಯನಿಗೆ ದಿಗ್ಭ್ರಮೆಯಾಗುವಂತೆ

ಅಚ್ಯುತನೂ ರಾಮರಾಯನೂ ಒಂದುಗೂಡಿದರು. ನರಸಿಂಹರಾಯನು ತಿರುವಡಿಗೆ ಹೋಗಿ ಉಮ್ಮತ್ತೂರಿನ ರಾಜನೊಂದಿಗೆ ಸೇರಿಕೊಂಡನು. ಅಚ್ಯುತನ ಸೋದರಮಾವ ಸಲಕರಾಜು ತಿರುಮಲನು ನರಸಿಂಹರಾಯನ ವಿರುದ್ಧವಾಗಿ ಯುದ್ಧಮಾಡಿ ಸೋಲಿಸಿ ಅವನನ್ನು ತಿರುವಾಂಕೂರಿನವರೆಗೆ ನೂಕಿದನು. ಇತರ ರಾಜರೂ ಶರಣಾದರು. ನರಸಿಂಹರಾಯನನ್ನು ಸೆರೆಹಿಡಿದು ರಾಜಧಾನಿಗೆ ತರಲಾಯಿತು.

ಅಚ್ಯುತನು ಸಿಂಹಾಸನಾರೋಹಣ ಮಾಡಿ ರಾಮರಾಯನೊಂದಿಗೆ ಒಂದು ಒಪ್ಪಂದ ಮಾಡಿಕೊಂಡನು, ಅವನನ್ನು ಆಡಳಿತದಲ್ಲಿ ತನ್ನ ಭಾಗಸ್ಥನನ್ನಾಗಿ ಮಾಡಿದನು. ನರಸಿಂಹರಾಜನ ದಂಗೆಯನ್ನು ಅಡಗಿಸಿದ ಮೇಲೆ ಪರಿಸ್ಥಿತಿ ಉತ್ತಮಗೊಂಡಿತು. ಅದಕ್ಕೆ ಇನ್ನೂ ಒಂದು ಮುಖ್ಯಕಾರಣ ಹಿರಿಯಣ್ಣ ಕೃಷ್ಣದೇವರಾಯನ ಹಸುಳೆ ಮಗು ರಾಮಚಂದ್ರ ಸತ್ತದ್ದು. ಈ ದುರ್ಘಟನೆಗಳು ಬಿಜಾಪುರದ ಸುಲ್ತಾನನಿಗೂ ಗಜಪತಿಗೂ ವಿಜಯನಗರದ ಮೇಲೆ ಧಾಳಿ ಮಾಡಲು ಪ್ರಚೋದನೆ ನೀಡಿದುವು. ಈ ಮಧ್ಯೆ ರಾಮರಾಯ ಮತ್ತು ಅಚ್ಯುತರಾಯರ ನಡುವಣ ವ್ಯಾಜ್ಯವನ್ನು ಪರಿಹರಿಸಲು ಬಿಜಾಪುರದ ಇಸ್ಮಾಯಿಲನನ್ನು ವಿಜಯನಗರಕ್ಕೆ ಆಹ್ವಾನಿಸಿದ್ದು ಅತ್ಯಂತ ದುರದೃಷ್ಟಕರ ಸಂಗತಿಯಾಯಿತು. ಅದಕ್ಕಿಂತ ತುಸುವೇ ಮೊದಲು (ಕ್ರಿ.ಶ. ೧೫೩೦-೩೧ರಲ್ಲಿ) ಅವನು ಇಮದ್-ಉಲ್-ಮುಲ್ಕ್ ಮತ್ತು ಅಮೀರ್ ಬಾರಿದ್‌ರೊಂದಿಗೆ ಸೇರಿ ವಿಜಯನಗರದ ಮೇಲೆ ಆಕ್ರಮಣ ಮಾಡಿದ್ದನು. ಆಗ ಆರವೀಡು ರಾಮರಾಯನ ಮಗ ಅಪ್ಪಲರಾಜನು ಅವನನ್ನು ಎದುರಿಸಿದ್ದನು. ಆದರೆ ಕೂರಹ ಚೆರ್ಲದ ಯುದ್ಧದಲ್ಲಿ ತಿಮ್ಮನು ಮಡಿದು ಇಸ್ಮಾಯಿಲ್ ಮುದಗಲ್ಲು ಮತ್ತು ರಾಯಚೂರು ಕೋಟೆಗಳನ್ನು ವಶಪಡಿಸಿಕೊಂಡನು. ಸೋತ ಗಜಪತಿಗೆ ದಯಾಭಿಕ್ಷೆ ನೀಡಲಾಯಿತು. ರಾಜನಾಥ ಡಿಂಡಿಮನ ಅಚ್ಯುತರಾಯಾಭ್ಯುದಯಂ ಈ ಘಟನೆಗಳ ವಿವರಗಳನ್ನು ನೀಡುತ್ತದೆ.

ಇಸ್ಮಾಯಿಲನ ನಂತರ ಅವನ ಎರಡನೆಯ ಮಗ ಇಬ್ರಾಹಿಂ ಪಟ್ಟಕ್ಕೆ ಬಂದನು. ಹಿರಿಯ ಮಗನಾದ ಮಲ್ಲುಖಾನ್‌ನನ್ನು ಅನೇಕ ಅಮೀರರು ಇಷ್ಟಪಡುತ್ತಿರಲಿಲ್ಲ. ಅವನ ಕಣ್ಣುಗಳನ್ನು ಕೀಳಿಸಿ ಸೆರೆಗೆ ಹಾಕಿದರು. ಕೊನೆಗೆ ಅಲ್ಲೇ ಅವನು ಸತ್ತನು. ಇಬ್ರಾಹಿಮನು ಸಿಂಹಾಸನವನ್ನೇರಿ ಅಸದ್‌ಖಾನನ್ನು ತನ್ನ ಮುಖ್ಯ ಮಂತ್ರಿಯನ್ನಾಗಿ ಮಾಡಿಕೊಂಡನು. ಅಚ್ಯುತನ ಭಾವ ಸಲಕರಾಜು ತಿರುಮಲನ ಆಹ್ವಾನದ ಮೇರೆಗೆ ಅಸದ್-ಖಾನ್ ವಿಜಯನಗರಕ್ಕೆ ಹೋದನು. ಇಬ್ರಾಹಿಂ ತಾನು ಪಟ್ಟ ಕಷ್ಟಕ್ಕೆ ಪ್ರತಿಫಲವಾಗಿ ೬ ಲಕ್ಷ ಹಣಗಳನ್ನು ಪಡೆದನು. ಆದರೆ ಇಸ್ಮಾಯಿಲ್‌ನ ಮರಣಾನಂತರ ಬಿಜಾಪುರದಲ್ಲಿ ಉಂಟಾದ ಅವ್ಯವಸ್ಥೆಯು ಅಚ್ಯುತರಾಯನಿಗೆ ಮುದಗಲ್ಲು ಮತ್ತು ರಾಯಚೂರು ಕೋಟೆಗಳನ್ನು ವಶಪಡಿಸಿಕೊಳ್ಳಲು ಅವಕಾಶ ಮಾಡಿಕೊಟ್ಟಿತು. ಇನ್ನೊಂದು ವಿಷಯವನ್ನು ಇಲ್ಲಿ ಗಮನಿಸಬೇಕು. ಈ ಕಾಲವನ್ನು ಕುರಿತು ಅಸ್ಪಷ್ಟತೆಯಿದೆ. ನ್ಯೂನಿಜ್ ಮತ್ತು ಫೆರಿಷ್ತಾ ಕೊಡುವ ವರದಿಗಳು ಗೊಂದಲಗೊಳಿಸುವಂತಿವೆ, ಕಾಲಾನುಕ್ರಮಣಿಯಲ್ಲಿ ತೊಂದರೆ ಕೊಡುತ್ತವೆ, ಘಟನೆಗಳನ್ನು ಸರಿಯಾದ ಕ್ರಮದಲ್ಲಿ ಜೋಡಿಸಲು ಸಾಧ್ಯವಾಗುವುದಿಲ್ಲ.

ಮುದಗಲ್ಲು ಮತ್ತು ರಾಯಚೂರುಗಳನ್ನು ಗೆದ್ದ ಅಚ್ಯುತರಾಯನು ತನ್ನ ಭಕ್ತಿ ಸಲ್ಲಿಸಲು ತಿರುಪತಿಗೆ ಹೋದನು (ಕ್ರಿ.ಶ. ೧೫೩೭). ಈಗ ರಾಮರಾಯನು ತನ್ನ ಅಧಿಕಾರವನ್ನು ಸ್ಥಿರಪಡಿಸಿಕೊಂಡನು. ಅಚ್ಯುತನಿಗೆ ನಿಷ್ಠರಾಗಿದ್ದ ಹಲವು ಅಧಿಕಾರಿಗಳನ್ನು ತೆಗೆದುಹಾಕಿ ಆ ಸ್ಥಾನಗಳಲ್ಲಿ ತನ್ನ ಬಂಧುಗಳನ್ನೂ ಮಿತ್ರರನ್ನೂ ನೇಮಿಸಿದನು. ಇಬ್ರಾಹಿಮನು ಸೇವೆಯಿಂದ ವಜಾ ಮಾಡಿದ್ದ ಸುಮಾರು ೩,೦೦೦ ಸೈನಿಕರನ್ನೂ ಅವನು ತನ್ನ ಸೇನೆಗೆ ಸೇರಿಸಿಕೊಂಡನು. ಅಚ್ಯುತನು ಹಿಂದಿರುಗಿ ಬರುತ್ತಲೇ ಅವನನ್ನು ಹಿಡಿದು ಸೆರೆಗೆ ದೂಡಿದನು. ಆದರೆ ಮುಖ್ಯ ನಾಯಕರು ತನ್ನ ವಿರುದ್ಧವಾಗಿದ್ದುದರಿಂದ ಸದಾಶಿವನನ್ನು ಸಿಂಹಾಸನದ ಮೇಲೆ ಕುಳ್ಳಿರಿಸಿದನು. ನಾಯಕರು ಮಧುರೈ, ತಂಜಾವೂರು ಮತ್ತು ಜಿಂಜಿಗಳಲ್ಲಿ ತಮ್ಮ ಬೆಂಬಲವನ್ನು ಸ್ಥಾಪಿಸಿದರು. ಅವರನ್ನು ಹತ್ತಿಕ್ಕಲು ರಾಮರಾಯನು ದಕ್ಷಿಣಕ್ಕೆ ಹೋದಾಗ ಇಲ್ಲಿ ತಿರುಮಲನ ಸಹಾಯದಿಂದ ಅಚ್ಯುತನು ಸೆರೆಯಿಂದ

ಹೊರಬಂದನು. ತಿರುಮಲನು ವಸ್ತುತಃ ಬಿಗಿಯಾದ ಹಿಡಿತದಿಂದ ಆಳಿದನು. ಭಾರೀ ಪ್ರಮಾಣದ ತೆರಿಗೆ ವಿಧಿಸಿ ಜನರನ್ನು ಪೀಡಿಸುತ್ತಿದ್ದನು. ಅಚ್ಯುತನನ್ನು ಸೋಲಿಸಲು ಇಬ್ರಾಹಿಮನು ವಿಜಯನಗರದ ಮೇಲೆ ದಂಡೆತ್ತಿ ಬಂದನು. ಆದರ ಅಸದ್‌ಖಾನ್ ಲೋರಿಯ ವಿಶ್ವಾಸದ್ರೋಹದಿಂದ ಅವನು ಹಿಮ್ಮೆಟ್ಟಬೇಕಾಯಿತು. ಪೋರ್ಚುಗೀಸರು ಜನರನ್ನು ತಂಡೋಪತಂಡವಾಗಿ ಕ್ರೈಸ್ತಮತಕ್ಕೆ ಪರಿವರ್ತಿಸುವುದರಲ್ಲಿ ತೊಡಗಿದ್ದರು. ಅಚ್ಯುತರಾಯನು ನಿಧಾನವಾಗಿ ಸುಖಭೋಗಗಳ ಸಡಿಲ ಜೀವನಕ್ಕೆ ಜಾರಿದನು. ವಾಸ್ತವವಾಗಿ ಅವನು ರಾಜ್ಯಾಡಳಿತ ನಡೆಸಲು ಅನರ್ಹನಾಗಿದ್ದನು. ಪೋರ್ಚುಗೀಸರಿಂದಾಗುತ್ತಿದ್ದ ವಿಪತ್ತನ್ನು ನಿವಾರಿಸುವುದಕ್ಕೆ ಬದಲಾಗಿ ಅವನು ಅವರೊಂದಿಗೆ ಉತ್ತಮ ಸಂಬಂಧಗಳನ್ನು ಕಾಪಾಡಿಕೊಂಡನು. ಆನಂದನಿಧಿ ಎಂಬ ಒಂದು ನಿಧಿಯನ್ನು ಸ್ಥಾಪಿಸಿ ಅದರಿಂದ ವಿದ್ವಾಂಸರಿಗೂ ಇತರರಿಗೂ ಉಡುಗೊರೆಗಳನ್ನು ನೀಡುತ್ತಿದ್ದನು. ಆದರೆ ಅದೇನಿದ್ದರೂ ತನ್ನ ದೌರ್ಬಲ್ಯವನ್ನು ಮುಚ್ಚಿಕೊಳ್ಳಲು ಮಾಡುತ್ತಿದ್ದ ಪ್ರಯತ್ನವಷ್ಟೇ. ಸೋತಿದ್ದ ಪಾಂಡ್ಯ ರಾಜನನ್ನು ಅವನ ಸಂಸ್ಥಾನದಲ್ಲಿ ಮತ್ತೆ ಪಟ್ಟಕ್ಕೆ ತಂದನು. ಆಮೇಲೆ ತಾನು ಪಾಂಡ್ಯ ರಾಜಕುಮಾರಿ ವರದಾದೇವಿಯನ್ನು ಮದುವೆಯಾದನು.

ಕ್ರಿ.ಶ. ೧೫೪೨ರಲ್ಲಿ ಅಚ್ಯುತನು ತೀರಿಕೊಂಡನು. ಅವನ ಮಗ ೧ನೇ ವೆಂಕಟನನ್ನು ಸಿಂಹಾಸನದ ಮೇಲಿರಿಸಿ ತಿರುಮಲನು ರಾಜಪ್ರತಿನಿಧಿಯಾಗಿ ಆಳಿದನು. ಅವನ ಸಹೋದರಿ, ಮಹಾರಾಣಿ ವರದಾದೇವಿಗೆ ತಿರುಮಲನ ಉದ್ದೇಶಗಳ ಬಗೆಗೆ ಶಂಕೆಯುಂಟಾಗಿ ಅವಳು ಇಬ್ರಾಹಿಮನ ನೆರವು ಕೋರಿದಳು. ಸದಾಶಿವನನ್ನು ಗುತ್ತಿಯಲ್ಲಿ ಬಂಧನದಲ್ಲಿರಿಸಿದ್ದ ರಾಮರಾಯನು ಈಗ ಅವನನ್ನು ಬಿಡುಗಡೆ ಮಾಡಿದನು. ಆದರೆ ಇಬ್ರಾಹಿಮನ ಸೇನೆಗಳು ನುಗ್ಗಿ ದಾಂಧಲೆ ಮಾಡಿದುವು. ತಿರುಮಲನು ವೆಂಕಟ ಹಾಗೂ ಅವನ ಕುಟುಂಬದ ಎಲ್ಲ ಸದಸ್ಯರನ್ನು ಕಗ್ಗೊಲೆ ಮಾಡಿಸಿಬಿಟ್ಟನು. ಪೆನುಕೊಂಡಾದಲ್ಲಿ ಆಶ್ರಯ ಪಡೆದಿದ್ದ ರಾಮರಾಯನು ಗಂಡಿಕೋಟದವರೆಗೆ ಹೋಗಿ ಅಲ್ಲಿ ತಿರುಮಲನ ಸೈನ್ಯವನ್ನು ಎದುರಿಸಿದನು. ಹಲವೆಡೆಗಳಲ್ಲಿ ಯುದ್ಧ ನಡೆದು ಕೊನೆಗೆ ತುಂಗಭದ್ರೆಯ ದಂಡೆಯ ಮೇಲೆ ತಿರುಮಲನು ಮೃತಪಟ್ಟು ಸದಾಶಿವನು ವಿಜಯನಗರದ ಸಿಂಹಾಸನವನ್ನೇರಿದನು.

ಹಿಂದಿನವನಿಗೆ ಹೋಲಿಸಿದರೆ ಅಚ್ಯುತರಾಯನು ತುಂಬಾ ನಿಶ್ಶಕ್ತನಾಗಿದ್ದನು. ಮೊದಮೊದಲಲ್ಲಿ ರಾಜ್ಯದ ಯೋಗಕ್ಷೇಮದ ಬಗೆಗೆ ಅವನಿಗೆ ಕಾಳಜಿಯಿತ್ತು. ಆದರೆ ಅನೇಕಾನೇಕ ತಡೆಗಳು ಅವನನ್ನು ತಲ್ಲಣಗೊಳಿಸಿದುವು, ಅವುಗಳನ್ನು ಎದುರಿಸುವ ಧೈರ್ಯ ಅವನಿಗಿರಲಿಲ್ಲ, ಶ್ರೀಮಂತರಿಂದ ಬೇಕಾದಷ್ಟು ಹಣವನ್ನು ಸಂಗ್ರಹಿಸಿದನು, ಅದನ್ನು ಯಜ್ಞಾಚರಣೆಗಳಲ್ಲಿ ಧಾರಾಳವಾಗಿ ಖರ್ಚು ಮಾಡಿದನು. ಕೃಷ್ಣದೇವರಾಯನನ್ನು ಅನುಕರಿಸಲು ಅವನು ಪ್ರಯತ್ನಿಸಿದನಾದರೂ ಅವನಿಗೆ ಸರಿದೊರೆಯಾಗದಾದನು. ವಾಸ್ತವವಾಗಿ ವಿಜಯನಗರದ ಅವನತಿಯು ಪ್ರಾರಂಭವಾದುದೇ ಅವನ ಕಾಲದಿಂದ. ಸಿಂಹಾಸನಕ್ಕಾಗಿ ಕಚ್ಚಾಡಿದ ಯಾರೂ ಇದನ್ನು ಅರ್ಥಮಾಡಿಕೊಳ್ಳದಾದರು. ತಮ್ಮ ತಮ್ಮಲ್ಲಿನ ವ್ಯಾಜ್ಯವನ್ನು ಬಗೆಹರಿಸಲು ವೈರಿಯನ್ನು ರಾಜ್ಯದೊಳಕ್ಕೆ ಆಹ್ವಾನಿಸಿ ಈ ರಾಜರು ತಮ್ಮ ಒಳ, ಹೊರ ದೌರ್ಬಲ್ಯಗಳನ್ನು ಪ್ರದರ್ಶಿಸಿದರು.

ರಾಮರಾಯನು ಸದಾಶಿವನನ್ನು ಸಿಂಹಾಸನದ ಮೇಲೆ ಕುಳ್ಳಿರಿಸಿದನು. ಆದರೆ ಸದಾಶಿವನು ಶಾಸನಬದ್ಧ ದೊರೆಯಾಗಿದ್ದನು ಅಷ್ಟೆ. ನಿಜವಾಗಿ ಸಮಸ್ತ ಅಧಿಕಾರವೂ ರಾಮರಾಯನ ಕೈಯಲ್ಲಿ ಕೇಂದ್ರೀಕೃತವಾಗಿತ್ತು. ತಾನೇ ಅಧಿಕೃತ ಅರಸ ಎಂದು ಹೇಳಿಕೊಳ್ಳುವ ಧೈರ್ಯವೊಂದು ಅವನಿಗಿರಲಿಲ್ಲ. ಆದರೆ ಹಿನ್ನೆಲೆಯಲ್ಲೇ ಇದ್ದುಕೊಂಡು ರಾಜ್ಯದ ವ್ಯವಹಾರಗಳನ್ನು ನಿಯಂತ್ರಿಸುತ್ತಿದ್ದವನು ಅವನೇ. ಹಾಗೂ ಅವನೇ ವಸ್ತುತಃ ರಾಜನಾಗಿದ್ದನು. ಕ್ರಿ.ಶ. ೧೫೫೨ರಿಂದಲೂ ರಾಮರಾಯನನ್ನು ಸಹ-ರಾಜಪ್ರತಿನಿಧಿ ಎಂದು ಪರಿಗಣಿಸಲಾಯಿತು. ಅಧಿಕಾರ ವಷ್ಟರಿಂದ ತೃಪ್ತನಾಗದೆ ಅವನು ರಾಜಸಂಬಂಧವಾದ ಬಿರುದುಗಳನ್ನು ಧರಿಸಿದನು. ವಾಸ್ತವವಾಗಿ ಸದಾಶಿವನನ್ನು ಪೆನುಗೊಂಡೆಯಲ್ಲಿದ್ದಂತೆಯೇ ಗೃಹಬಂಧನದಲ್ಲಿರಿಸಿದನು. ರಾಮರಾಯನಿಗೆ ಅವನ

ಸೋದರರಾದ ತಿರುಮಲ ಮತ್ತು ವೆಂಕಟಾದ್ರಿ ಆಡಳಿತ ವಿಚಾರಗಳಲ್ಲಿ ನೆರವಾಗುತ್ತಿದ್ದರು. ವಿಶ್ವಾಸಾರ್ಹರಾಗಿದ್ದ ಹಿಂದಿನ ನೌಕರರನ್ನೆಲ್ಲ ತೆಗೆದುಹಾಕಿ ಯಾರು ನಾಯಕತ್ರಯರೊಂದಿಗೆ ಸಹಕರಿಸುತ್ತಿದ್ದರೋ ಅವರನ್ನು ಮಾತ್ರ ನೇಮಿಸಲಾಗಿತ್ತು. ಅಚ್ಯುತನಿಗೆ ನಿಷ್ಠಾವಂತರಾಗಿದ್ದ ರಾಮಭಟ್ಟ ಹಾಗೂ ರಾಮಯಾಮಾತ್ಯರನ್ನು ಬಗ್ಗು ಬಡಿಯಲಾಯಿತು. ಹೇಗೋ ಪುಲಿಗದ್ದ ಪಾಟಿನರಸಯ್ಯನು ರಾಜನ ವಿಶ್ವಾಸವನ್ನು ಉಳಿಸಿಕೊಂಡಿದ್ದನು. ಆರವೀಡು, ಕಮ್ಮ ಮತ್ತು ತೆಲುಗುಚೋಳ ವಂಶಗಳ ಅನೇಕ ಗಣ್ಯರು, ಗಣನೀಯ ಪ್ರಮಾಣದಲ್ಲಿ ಕ್ಷತ್ರಿಯರು. ಎಲ್ಲರಿಗಿಂತ ಮುಖ್ಯವಾಗಿ ಮುಸ್ಲಿಮರು ಆಡಳಿತದಲ್ಲಿ ಪರಿಣಾಮಕಾರಕವಾದ ಸ್ಥಾನಗಳನ್ನು ಪಡೆದಿದ್ದರು. ಇದರಿಂದ ಮುಸ್ಲಿಮರಿಗೆ ವಿಜಯನಗರ ರಾಜ್ಯದ ಆಂತರಿಕ ವ್ಯವಹಾರಗಳ ನೇರವಾದ ಪರಿಚಯವಾಗುವಂತಾಯಿತು. ಆದರೆ ಅಂತಿಮವಾಗಿ ಇವೇ ರಾಜ್ಯಕ್ಕೆ ಮಾರಕವಾದುವು. ಬಹಮನಿ ರಾಜ್ಯವು ದಕ್ಷಿಣ ಭಾರತದಲ್ಲಿ ಹೆಚ್ಚುಕಡಮೆ ವಿಜಯನಗರದ ಜೊತೆಗೇ ಸ್ಥಾಪಿತವಾಗಿತ್ತು. ಮುಂದೆ ಅದು ಐದು ಸುಲ್ತಾನಶಾಹಿಗಳಾಗಿ ಒಡೆಯಿತು. ಬಹಮನಿ ವಿಜಯನಗರಗಳೆರಡೂ ಮುಖ್ಯವಾಗಿ ರಾಯಚೂರು ಪ್ರದೇಶವನ್ನು ತಮ್ಮ ಸ್ವಾಧೀನಪಡಿಸಿಕೊಳ್ಳುವುದಕ್ಕಾಗಿ ಕಾದಾಡುತ್ತಿದ್ದುವು. ಆದರೆ ರಾಮರಾಯನ ಕಾಲದವರೆಗೂ ಅವರು ಒಬ್ಬರೊಬ್ಬರ ಆಂತರಿಕ ವ್ಯವಹಾರಗಳಲ್ಲಿ ಮೂಗು ಹಾಯಿಸಿರಲಿಲ್ಲ. ಮೊದಲಬಾರಿಗೆ ಪರಸ್ಪರ ಕಚ್ಚಾಡುತ್ತಿದ್ದ ಎರಡೂ ಬಣಗಳ ನಡುವೆ ನಿಂತು ತೀರ್ಮಾನ ಮಾಡಲು ಒಬ್ಬ ಸುಲ್ತಾನನನ್ನು ಕರೆಸಲಾಯಿತು.

ವಿಜಯನಗರ ಆಡಳಿತದ ವಿರುದ್ಧವಾಗಿ ಅವಿಧೇಯತೆ, ಪ್ರತಿಭಟನೆ ವ್ಯಾಪಕವಾಗಿತ್ತು. ದಕ್ಷಿಣದ ಪ್ರದೇಶಗಳಲ್ಲಿ ಅದರ ಪ್ರಭುತ್ವವನ್ನು ಅನೇಕ ರಾಜರು ಪ್ರಶ್ನಿಸತೊಡಗಿದರು. ವಿಜಯನಗರದ ಪರಮ ಪ್ರಭುತ್ವಕ್ಕೆ ಅಧೀನವಾಗಲು ಅವರು ನಿರಾಕರಿಸಿದರು. ಪೋರ್ಚುಗೀಸರು ತಮ್ಮ ಪಾಡಿಗೆ ಮತಾಂತರ ಕಾರ್ಯದಲ್ಲಿ ನಿರತರಾಗಿದ್ದರು. ಕರಾವಳಿಯ ಮೀನುಗಾರರಾದ ಪರವರಲ್ಲಿ ಅನೇಕ ಜನರು ಹೀಗೆ ಕ್ರಿಶ್ಚಿಯನರಾಗಿ ಮತಾಂತರಗೊಂಡು ಪೋರ್ಚುಗಲ್ಲಿನ ರಾಜನನ್ನು ತಮ್ಮ ಪ್ರಭುವೆಂದು ಪರಿಗಣಿಸಿದರು. ಪೋರ್ಚುಗೀಸ್ ಗವರ್ನರನು ದಕ್ಷಿಣಭಾರತದ ದೇವಾಲಯಗಳನ್ನು ಕೊಳ್ಳೆಹೊಡೆದನು. ರಾಮರಾಯನು ಕಳುಹಿಸಿದ, ಅವನ ದಾಯಾದಿಗಳಾದ ಚಿನ್ನತಿಮ್ಮ ಮತ್ತು ವಿಠ್ಠಲರು ಮೊದಲು ಚಂದ್ರಗಿರಿಯಲ್ಲಿ ಎದ್ದಿದ್ದ ಬಂಡಾಯವನ್ನು ಅಡಗಿಸಿದರು. ಪರವರನ್ನು ಶಿಕ್ಷಿಸಿದರು, ಸಿಲೋನಿನ ಕ್ಯಾಂಡಿಯ ದೊರೆಯನ್ನು ಸೋಲಿಸಿ ಕಪ್ಪ ಕಾಣಿಕೆ ತೆರುವಂತೆ ಮಾಡಿದರು. ರಾಮರಾಯನು ಸ್ಯಾನ್‌ಥೋಮ್‌ನಲ್ಲಿದ್ದ ಕ್ರಿಶ್ಚಿಯನ್ ನೆಲೆಯ ಮೇಲೆ ಧಾಳಿ ಮಾಡಿ ಭಾರೀ ಮೊತ್ತದ ಹಣವನ್ನು ಕಾಣಿಕೆಯಾಗಿ ವಸೂಲು ಮಾಡಿದನು. ಅವರ ಬಗೆಗೆ ತುಂಬಾ ಉಗ್ರವಾಗಿ ನಡೆದುಕೊಳ್ಳಲು ಅವನು ಇಷ್ಟಪಡಲಿಲ್ಲ. ಒಂದು ವೇಳೆ ಹಾಗೆ ಮಾಡಿದರೆ ಅವರು ಮುಸ್ಲಿಂ ರಾಜ್ಯಗಳ ಕೈವಶವಾಗಿ ಬಿಡಬಹುದು ಎಂದು ಹೆದರಿದನು. ಹಾಗಾಗಿ ಕ್ರಿ.ಶ. ೧೫೪೭ರಲ್ಲಿ ಅವರೊಂದಿಗೆ ಒಂದು ರಾಜಕೀಯ ಮತ್ತು ವಾಣಿಜ್ಯ ಒಪ್ಪಂದವನ್ನು ಮಾಡಿಕೊಂಡನು. ಕೆಳದಿಯ ದೊರೆ ಸಂಕಣ್ಣನಾಯಕನ ನೆರವಿನಿಂದ ವಿಠ್ಠಲನು ಗೋವೆಗೆ ಹೋಗಿ ಪಂಜಿಂ (ಹಳೆಯ ಗೋವಾ ನಗರ) ಅನ್ನು ವಶಪಡಿಸಿಕೊಂಡನು. ಇದರಿಂದ ಪೋರ್ಚುಗೀಸರು ಕೊನೆಯಪಕ್ಷ ಕೆಲವು ವರ್ಷಗಳ ಕಾಲ ಸಂಯಮದಿಂದ ಇರುವಂತಾಯಿತು.

ವಿಜಯನಗರ ಸ್ಥಾಪನೆಯಾದ ಒಂದೇ ವರ್ಷದೊಳಗೆ ಕ್ರಿ.ಶ. ೧೩೪೬-೪೭ರಲ್ಲಿ ಬಹಮನಿ ರಾಜ್ಯವು ಅಸ್ತಿತ್ವಕ್ಕೆ ಬಂದಿತು. ಅಲ್ಲಾವುದ್ದೀನ್ ಹಸನ್ ಬಹ್ಮನ್ ಶಾಹ ಅದನ್ನು ಸ್ಥಾಪಿಸಿದನು. ಈ ರಾಜನ ಪೂರ್ವ ಸಂಬಂಧಗಳ ವಿಷಯವಾಗಿ ಫೆರಿಷ್ಟಾ ಹೇಳುತ್ತಾನೆ, ಅವನು ಗಂಗು ಎಂಬ ಬ್ರಾಹ್ಮಣ ಜ್ಯೋತಿಷ್ಯನ ನೌಕರನಾಗಿದ್ದನು. ಇತರ ಕೆಲವರು ಹೇಳುವಂತೆ, ಈ ರಾಜನು ಪರ್ಷಿಯದ ಅರೆ-ಪೌರಾಣಿಕ ವ್ಯಕ್ತಿಯಾದ ರಾಜ ಬ್ರಹ್ಮನ್ ಶಾಹನ ಸಂಬಂಧಿಯಾಗಿದ್ದನು. ಇವರ ಇತಿಹಾಸವನ್ನು ಬೇರೆ ಕಡೆ ಕೊಡಲಾಗಿದೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ಸ್ಥಾಪನೆಯಾದ ಇನ್ನೂರು ವರ್ಷಗಳಲ್ಲಿ ರಾಜ್ಯವು ಐದು ಭಾಗವಾಗಿ

ಒಡೆಯಿತು: ಗೋಲ್ಕೊಂಡದ ಕುತುಬ್ ಶಾಹರು, ಬಿಜಾಪುರದ ಅದಿಲ್‌ಶಾಹಿಗಳು, ಅಹಮದ್‌ನಗರದ ನಿಜಾಂಶಾಹಿಗಳು, ಬೀರಾರಿನ ಇಮದ್‌ಶಾಹಿಗಳು ಮತ್ತು ಬೀದರಿನ ಬಾರಿದ್‌ಶಾಹಿಗಳು. ಅವರವರಲ್ಲೇ ಅವಿರತವಾಗಿ ಹೋರಾಟಗಳು ಕಲಹಗಳು ನಡೆಯುತ್ತಿದ್ದುವು. ಅವುಗಳ ಗುರಿ ರಾಯಚೂರು ಪ್ರದೇಶವನ್ನು ಸ್ವಾಧೀನಪಡಿಸಿಕೊಳ್ಳುವುದು. ಬೀರಾರಿನ ಇಮದ್‌ಶಾಹಿಗಳು ರಂಗದಲ್ಲಿರಲಿಲ್ಲ, ಬಹುಮಟ್ಟಿಗೆ. ಈ ಪ್ರಾಂತೀಯ ಆಡಳಿತಗಳು ಸಾಮ್ರಾಜ್ಯಗಳ ಸ್ಥಾನ ಪಡೆದುವು. ಅಹಮದ್‌ನಗರ, ಬಿಜಾಪುರ ಮತ್ತು ಗೋಲ್ಕೊಂಡಗಳ ನಡುವೆ ದಖ್ಖನಿನ ಒಟ್ಟು ಪ್ರಭುತ್ವಕ್ಕಾಗಿ ನಿರಂತರ ಯುದ್ಧ ನಡೆಯುತ್ತಿದ್ದಿತು. ಪರಿಸ್ಥಿತಿಗೆ ತಕ್ಕಂತೆ ಬೀರಾರ್ ಮತ್ತು ಬೀದರ್‌ಗಳು ಒಂದಿಲ್ಲ ಒಂದು ಪಕ್ಷವಹಿಸುತ್ತಿದ್ದುವು.

ಮೇಲೆ ನೋಡಿರುವಂತೆ, ಮುಹಮ್ಮದ್ ಗವಾನನು ಸತ್ತ ನಂತರ (ಕ್ರಿ.ಶ. ೧೪೮೧) ಬಹಮನಿ ರಾಜ್ಯವು ವಸ್ತುತಃ ತನ್ನ ಪ್ರಾಧಾನ್ಯವನ್ನು ಕಳೆದುಕೊಂಡಿತು. ವಂಶವು ೧೫೨೭ರಲ್ಲಿ ಕೊನೆಗೊಂಡಿತು. ಬಿಜಾಪುರದಲ್ಲಿ ಕ್ರಿ.ಶ. ೧೪೯೦ರಲ್ಲಿ ಯೂಸುಫ್ ಅದಿಲ್ ಖಾನನು ಅದಿಲ್‌ಶಾಹಿ ಸುಲ್ತಾನಿಯು ಸ್ಥಾಪನೆಗೊಂಡಿತು. ಅಮೀರ್‌ಖಾಸಿಂ ಬಾರಿದನು ಬಾರಿದ್‌ಶಾಹಿರಾಜ್ಯವನ್ನು ಸ್ಥಾಪಿಸಿದನು. ಬೀದರ್ ಅದರ ರಾಜಧಾನಿಯಾಯಿತು. ಜುನ್ನಾರಿನ ರಾಜ್ಯಪಾಲನಾದ ಮಲಿಕ್ ಅಹಮದ್ ನಿಜಾಂ-ಉಲ್-ಮುಲ್ಕ್ ಕಾಸಿಂ ಬಾರಿದನ ವಿರುದ್ಧ ಬಂಡೆದ್ದನು. ೧೪೯೦ರಲ್ಲಿ ತಾನು ಸ್ವತಂತ್ರನೆಂದು ಸಾರಿದನು. ೧೫೧೦ರಲ್ಲಿ ಇಮದ್-ಉಲ್-ಮುಲ್ಕನು ಬೀರಾರಿನಲ್ಲಿ ಅವನ ಹೆಸರಿನಲ್ಲಿ ಖುತ್ಬಾ ಓದಿದನು. ಗೋಲ್ಕೊಂಡದಲ್ಲಿ ಮೂರನೆಯ ದೊರೆಯಾದ ಇಬ್ರಾಹಿಂ ಕುತುಬ್ ಶಾಹ ೧೫೫೦-೮೦ರ ನಡುವೆ ತನ್ನನ್ನು ಶಾಹ ಎಂದು ಕರೆದುಕೊಂಡನು. ಈ ಐದು ಜನರಲ್ಲಿ ತುಂಬ ಪ್ರಮುಖರಾದವರು ಅದಿಲ್ ಶಾಹ, ಕುತುಬ್ ಶಾಹ ಮತ್ತು ನಿಜಾಂ ಶಾಹ. ಇವರು ಪದೇ ಪದೇ ತಮ್ಮ ತಮ್ಮೊಳಗೇ ದಖ್ಖನಿನ ಪ್ರಭುತ್ವಕ್ಕಾಗಿ ಕಾದಾಡುತ್ತಿದ್ದರು. ಬೀರಾರ್ ಮತ್ತು ಬೀದರ್‌ಗಳೂ ಅದರಲ್ಲಿ ಸೇರಿಕೊಳ್ಳುತ್ತಿದ್ದುವು, ಆದರೆ ತಮಗೆ ಅನುಕೂಲವಾದಂತೆ ಒಂದಿಲ್ಲೊಂದು ಪಕ್ಷದ ಪರವಾಗಿ. ಈ ಉದ್ದೇಶಕ್ಕಾಗಿಯೇ ಅವರು ಅನೇಕ ವೇಳೆ ವೈವಾಹಿಕ ಸಂಬಂಧಗಳನ್ನೂ ಮಾಡಿಕೊಳ್ಳುತ್ತಿದ್ದರು. ಆದರೆ ಅದರಿಂದೇನೂ ಪರಿಸ್ಥಿತಿ ಸುಧಾರಿಸುತ್ತಿರಲಿಲ್ಲ. ಏಕೆಂದರೆ, ಅವರು ಬಹುತೇಕ ತಮ್ಮ ವೈರಿಗಳನ್ನು ನಾಶಮಾಡಲು ಆಸಕ್ತರಾಗುತ್ತಿದ್ದರೇ ಹೊರತು ಸಣ್ಣಪುಟ್ಟ ರಾಜ್ಯಗಳನ್ನು ಗೆಲ್ಲುವುದರಲ್ಲಲ್ಲ. ದಖ್ಖನಿನಲ್ಲಿ ಶಕ್ತಿ ಸಮತೋಲನವನ್ನು ಕಾಪಾಡಲು ಅವರು ಪ್ರಯತ್ನಿಸುತ್ತಿದ್ದರು. ತಮ್ಮ ವೈರಿಗಳು ತಮಗೇ ದುಸ್ಸಾಧ್ಯರಾಗುವಷ್ಟು ಪ್ರಬಲರಾಗುವುದನ್ನು ಸಹಿಸುತ್ತಿರಲಿಲ್ಲ. ಹೀಗಾಗಿ ಚಿಕ್ಕ ದುರ್ಬಲ ರಾಜ್ಯಗಳು ಹಾಗೆಯೇ ತಮ್ಮಪಾಡಿಗೆ ತಾವಿದ್ದುವು.

ರಾಮರಾಯನು ದಳಪತಿಗಳಲ್ಲೆಲ್ಲ ಅತ್ಯಂತ ಹೆಚ್ಚು ಆಸೆಯುಳ್ಳವನಾಗಿದ್ದನು. ಸುಲ್ತಾನಿಗಳ ಪರಸ್ಪರ ವೈರವು ಅನೇಕವೇಳೆ ವಿಜಯನಗರದೊಂದಿಗೆ ವ್ಯವಹರಿಸಿ ಅವರ ಮೈತ್ರಿಯನ್ನು ಬಯಸುವಂತೆ ಬಲಾತ್ಕರಿಸುತ್ತಿದ್ದುದುಂಟು. ಜಾಣತನದ ಮುತ್ಸದ್ದಿತನದಿಂದ ಅವರನ್ನು ಒಲಿಸಿಕೊಂಡು ರಾಮರಾಯನು ಎಲ್ಲಾ ಸುಲ್ತಾನರನ್ನೂ ಮಿತ್ರರನ್ನಾಗಿಸಿಕೊಂಡಿದ್ದನು. ಅವರ ರಾಜಕಾರಣದಲ್ಲಿ ಮಧ್ಯ ಪ್ರವೇಶ ಮಾಡಿ, ಒಬ್ಬರ ಮೇಲೊಬ್ಬರನ್ನು ಎತ್ತಿಕಟ್ಟಿ, ತನಗೆ ಅನುಕೂಲವಾಗುವಂತೆ ಮೈತ್ರಿಯನ್ನು ಬದಲಾಯಿಸಿಕೊಳ್ಳುತ್ತಿದ್ದನು. ರಾಮರಾಜೀಯಮು ಕೃತಿಯು ಅವನ ಅನೇಕ ವಿಜಯಗಳನ್ನು ವರ್ಣಿಸುತ್ತದೆ.

ವಿಜಯನಗರದ ಇತಿಹಾಸದಲ್ಲಿ ಮೊತ್ತಮೊದಲನೆಯ ಸಾರಿಗೆ, ವಿದೇಶಾಂಗ ನೀತಿಯಲ್ಲೂ ಉತ್ತರದ ಗಡಿಯ ನೆರೆಯ ರಾಜ್ಯಗಳೊಂದಿಗೆ ಸಂಬಂಧಗಳಲ್ಲೂ ಒಂದು ಮಹತ್ತರ ಬದಲಾವಣೆಯಾದುದನ್ನು ನೋಡುತ್ತೇವೆ. ಅದುವರೆಗೆ ಅದು ಬಹಮನಿಯವರೊಂದಿಗೆ ಆಕ್ರಮಣಕಾರಿ ಹಾಗೂ ಆತ್ಮರಕ್ಷಕ ಯುದ್ಧಗಳನ್ನು ಮಾಡಿದ್ದಿತು. ಆದರೆ ಎಂದಿಗೂ ಅವರ ಮಿತ್ರತ್ವವಿರಲಿಲ್ಲ. ಆದರೆ ಈಗ ಸುಲ್ತಾನಿಗಳು ತಮ್ಮ ಮತೀಯರೇ

ಆದ ವೈರಿಗಳನ್ನು ಅಡಗಿಸುವ ಸಲುವಾಗಿ ವಿಜಯನಗರವನ್ನು ಸ್ವಾಗತಿಸಿ ಮೈತ್ರಿಯನ್ನು ಬೆಳೆಸಿಕೊಳ್ಳಲು ಮುಂದೆ ಬಂದರು.

ಸುಲ್ತಾನರೊಂದಿಗೆ ರಾಮರಾಯನು ಮಾಡಿದ ಯುದ್ಧಗಳನ್ನು ಮೂರು ಹಂತಗಳಾಗಿ ವರ್ಗೀಕರಿಸಬಹುದು. ಪಕ್ಷಮೈತ್ರಿ ಮತ್ತು ಜೊತೆ ಸೇರುವಿಕೆಗಳ ಆಧಾರದಿಂದ ಈ ವರ್ಗೀಕರಣ ಸಾಧ್ಯ. ಮುಖ್ಯವಾಗಿ ಭಾಗವಹಿಸಿದ್ದ ಸುಲ್ತಾನರೆಂದರೆ ಅಹಮದ್‌ನಗರದ ನಿಜಾಂ ಶಾಹಿ, ಬಿಜಾಪುರ ಅದಿಲ್ ಶಾಹಿ ಹಾಗೂ ಗೋಲ್ಕೊಂಡದ ಕುತುಬ್ ಶಾಹಿ. ಸದಾಶಿವನು ಶಾಸನಬದ್ಧ ಚಕ್ರವರ್ತಿಯಾಗಿದ್ದರೂ ಸಮಸ್ತ ಅಧಿಕಾರವೂ ರಾಮರಾಯನ ಕೈಗಳಲ್ಲಿ ಕೇಂದ್ರೀಕೃತವಾಗಿತ್ತು. ತನ್ನ ತಮ್ಮಂದಿರಾದ ತಿರುಮಲ ಮತ್ತು ವೆಂಕಟಾದ್ರಿಯರೊಂದಿಗೆ ಸೇರಿಕೊಂಡು ತ್ರಿಮೂರ್ತಿಯಾಗಿದ್ದರು. ರಾಮಭಟ್ಟ ಮತ್ತು ರಾಮಯಾಮಾತ್ಯ ಇಬ್ಬರು ಬಹುಮುಖ್ಯ ಅಧಿಕಾರಿಗಳಾಗಿದ್ದರು. ಈ ಇಬ್ಬರಲ್ಲಿ ಕೊನೆಯ ಪಕ್ಷ ಮೊದಲಿನವನು ದಕ್ಷಿಣದಲ್ಲಿ ಜನಾನುರಾಗವನ್ನು ಕಳೆದುಕೊಂಡಿದ್ದನೆಂಬುದು ಶಾಸನಗಳಿಂದ ತಿಳಿಯುತ್ತದೆ. ಈಗ ಅವರಿಬ್ಬರನ್ನು ಸದೆಬಡಿಯಲಾಯಿತು.

ಸದಾಶಿವನ ರಾಜ್ಯಾಭಿಷೇಕವಾಗುತ್ತಿದ್ದಂತೆಯೇ ಇಬ್ರಾಹಿಂ ಅದಿಲ್ ಆದೋನಿಯನ್ನು ಗೆಲ್ಲಲು ಅಸದ್‌ಖಾನನನ್ನು ಕಳಿಸಿಕೊಟ್ಟನು. ವೆಂಕಟಾದ್ರಿಯು ಅವನನ್ನು ಸೋಲಿಸಿದನು. ಆದರೆ ಅವನ ಮೇಲೆಯೇ ಆಕ್ರಮಣವಾಗಿ ಅವನು ಸಂಧಿಯನ್ನು ಯಾಚಿಸುವಂತಾಯಿತು. ಈಗ ರಾಮರಾಯನು ಬರ್ಹಾನ್ ನಿಜಾಂ ಶಾಹನೊಂದಿಗೆ ಸೇರಿಕೊಂಡು ಇಬ್ರಾಹಿಂನನ್ನು ಮೂರು ಸಾರಿ ಸೋಲಿಸಿದನು. ರಾಯಚೂರು ಮತ್ತು ಮುದಗಲ್ಲುಗಳನ್ನು ರಾಮರಾಯನಿಗೆ ಕೊಟ್ಟು ತಾನು ಕಲ್ಯಾಣವನ್ನೂ ಬಿಜಾಪುರವನ್ನೂ ತೆಗೆದುಕೊಂಡನು. ಬರ್ಹಾನನ ಅನಂತರ ಬಂದ ಹುಸೇಯ್ನ್, ಇಬ್ರಾಹಿಂ ಕುತುಬ್ ಶಾಹನ ಗೆಳೆತನ ಬೆಳೆಸಿಕೊಂಡು ಬಿಜಾಪುರವನ್ನು ಆಕ್ರಮಿಸಿದನು (೧೫೫೫). ಇದರಿಂದ ಅದಿಲ್‌ಶಾಹನು ರಾಮರಾಯನ ಆಶ್ರಯವನ್ನು ಕೋರಬೇಕಾಯಿತು. ಇಬ್ರಾಹಿಂ ಕ್ರಿ.ಶ. ೧೫೫೭ರಲ್ಲಿ ಮೃತನಾದನು. ಅವನ ಸ್ಥಾನಕ್ಕೆ ಮಗ ಅಲಿ ಅದಿಲ್‌ಶಾಹ ಬಂದನು. ಅವನು ರಾಮರಾಯನೊಂದಿಗೆ ಸಂಬಂಧವನ್ನು ಬಲಪಡಿಸಿಕೊಳ್ಳಲು ಇಚ್ಛಿಸಿದನು. ಅವನ ಒಬ್ಬ ಮಗನು ಮೃತನಾದಾಗ ಸುಲ್ತಾನನು ತಾನೇ ವಿಜಯನಗರಕ್ಕೆ ಹೋಗಿ ತನ್ನ ಸಂತಾಪವನ್ನು ಸೂಚಿಸಿ ಬಂದನು. ಹುಸೇನ್ ನೀಜಾಂ ಶಾಹ, ಇಬ್ರಾಹಿಂ ಕುತುಬ್ ಶಾಹನೊಂದಿಗೆ ಕೈ ಜೋಡಿಸಿ ಬಿಜಾಪುರದ ಮೇಲೆ ಧಾಳಿ ಮಾಡಿದನು. ಅಲಿ ಅದಿಲ್ ಶಾಹನು ರಾಮರಾಯನ ನೆರವನ್ನು ಕೋರಲು ಅವನು ಅಹಮದ್‌ನಗರದ ಕಡೆಗೆ ಸೇನಾಸಮೇತನಾಗಿ ನಡೆದನು. ಇಬ್ರಾಹಿಂ ಕುತುಬ್ ಶಾಹ ಕೂಡ ಇವರನ್ನು ಸೇರಿಕೊಳ್ಳುವಂತೆ ಸೂಚಿಸಲಾಯಿತು. ಅವನು ಒಲ್ಲದ ಮನಸ್ಸಿನಿಂದಲೇ ಸೇರಿಕೊಂಡನು. ಹುಸೇನ್ ತನ್ನ ರಾಜ್ಯಕ್ಕೆ ಹಿಮ್ಮೆಟ್ಟಿದನು. ಅಲ್ಲಿಂದ ಗೋದಾವರಿಯ ಮೇಲಿನ ಪೈಠಣಕ್ಕೆ ಹೋದನು. ಅಹಮದ್‌ನಗರದ ರಕ್ಷಣೆಗೆ ಒಂದು ಪಡೆಯನ್ನು ನೇಮಿಸಿದನು. ಬೀರಾರ್, ಬೀದರ್ ಮತ್ತು ಖಾಂದೇಶಗಳ ಸುಲ್ತಾನರ ನೆರವು ಕೋರಿದರೂ ಅವನಿಗೆ ಯಾವುದೇ ಪರಿಹಾರ ದೊರಕಲಿಲ್ಲ.

ರಾಮರಾಯನು ನಾಲ್ವರು ಸುಲ್ತಾನರ ಒಂದು ಸಭೆಯನ್ನು ಕರೆದನು. ಅವರು ಒಂದು ಒಪ್ಪಂದ ಮಾಡಿಕೊಳ್ಳಬೇಕು; ಯಾರೇ ಒಬ್ಬನು ಅನ್ಯಾಯವಾಗಿ ಇನ್ನೊಬ್ಬನ ಮೇಲೆ ಯುದ್ಧಕ್ಕೆ ಬಂದ ಪಕ್ಷದಲ್ಲಿ ಇತರರು ಮೂವರೂ ಒಂದುಗೂಡಿ ಆಕ್ರಮಣಕಾರನ ವಿರುದ್ಧ ಹೋರಾಡಬೇಕು ಎಂಬುದೇ ಆ ಒಪ್ಪಂದ. ಆದರೆ ಅದು ಬಹಳ ಕಾಲ ನಡೆಯಲಿಲ್ಲ. ಸುಲ್ತಾನರು ಒಂದುಗೂಡಲಿಲ್ಲ. ಕೊನೆಗೆ ತಾವು ಬಹುಕಾಲ ಅಪಮಾನಿತರಾಗಿದ್ದೇವೆ, ರಾಮರಾಯನ ಕೈಗೆ ಸಿಕ್ಕಿ ನೊಂದಿದ್ದೇವೆ ಎಂದು ಅವರು ಅರಿತರು. ಅವರಲ್ಲಿ ತುಂಬಾ ಗಾಸಿಗೊಂಡಿದ್ದವನು ಅಹಮದ್‌ನಗರದ ಸುಲ್ತಾನ. ತನ್ನ ಗಾದಿಯನ್ನು ನಾಶವಾಗದಂತೆ ಉಳಿಸಿಕೊಳ್ಳಲು ಅವನಿಗಿದ್ದ ಒಂದೇ ಒಂದು ಮಾರ್ಗವು ತನ್ನ ವೈರಿಗಳೊಂದಿಗೆ ಸಂಧಾನ ಮಾಡಿಕೊಳ್ಳುವುದು. ರಾಮರಾಯನು

ಸಂಧಿಗೆ ಒಪ್ಪಬೇಕಾದರೆ ಹುಸೇನ್‌ನು ಕಲ್ಯಾಣಿಯನ್ನು ಬಿಜಾಪುರಕ್ಕೆ ವಹಿಸಿಕೊಡಬೇಕು ಎಂದು ಷರತ್ತು ಹಾಕಿದನು. ಜಹಾಂಗೀರ್‌ಖಾನನು ರಾಮರಾಯನಿಗೆ ವೈಯಕ್ತಿಕವಾಗಿ ಶರಣಾಗಿ ಮುತ್ತಿಗೆ ಹಾಕಿದವರಿಗೆ ಮುಜುಗರವುಂಟುಮಾಡಿದನು. ಪೋರ್ಚುಗೀಸರು ಆಯ್ಕೆ ಮಾಡಿಕೊಂಡು ಕೋಟೆಯನ್ನು ಕಟ್ಟಿಕೊಳ್ಳಲು ಅನುಮತಿಕೋರಿದ್ದ ಸ್ಥಳವಾದ ರೇವದಂಡದಲ್ಲಿ ತಾನೇ ಒಂದು ಕೋಟೆಯನ್ನು ನಿರ್ಮಿಸಿ ಅವರ ವಿರೋಧವನ್ನೂ ಹುಸೇನ್ ಕಟ್ಟಿಕೊಂಡಿದ್ದನು. ಈಗ ಅವರೂ ಅವನ ಮೇಲೆ ಬಿದ್ದು ಸಂಧಿ ಯಾಚಿಸುವಂತೆ ಮಾಡಿದರು. ಇದಕ್ಕೆಲ್ಲಾ ಸೇಡು ತೀರಿಸಿಕೊಳ್ಳುವ ಉದ್ದೇಶದಿಂದ ಹುಸೇನ್‌ನು ತನ್ನ ಮಗಳು ಜಮಾಲ್‌ಬೀಬಿಯನ್ನು ಕುತುಬ್ ಶಾಹನಿಗೆ ಮದುವೆ ಮಾಡಿಕೊಟ್ಟನು (ಕ್ರಿ.ಶ. ೧೫೧೫).

ಬಿಜಾಪುರದ ಅಲಿ ಅದಿಲ್ ಶಾಹನಿಗೆ ವಿಪತ್ತು ಕಾದಿರುವುದನ್ನು ರಾಮರಾಯನು ಮುಂದಾಗಿಯೇ ಕಂಡುಕೊಂಡನು. ಬೀದರ್ ಮತ್ತು ಬೀರಾರಿನ ಸುಲ್ತಾನರೂ ಅವನ ಜೊತೆಗೆ ಕೂಡಿದರು. ವೆಂಕಟಾದ್ರಿಯ ಕೈಕೆಳಗೆ, ಗೋಲ್ಕೊಂಡವನ್ನು ಮುತ್ತಲು ಒಂದು ಸೈನ್ಯವನ್ನು ಕಳುಹಿಸಲಾಯಿತು. ಹುಸೇನ್‌ನು ಕಲ್ಯಾಣಿಯ ಮೇಲೆ ಹಾಕಿದ್ದ ತನ್ನ ಮುತ್ತಿಗೆಯನ್ನು ಹಿಂದೆಗೆದುಕೊಳ್ಳಲು ನಿರ್ಧರಿಸಿದನು. ಮಳೆ ಮತ್ತು ಬಿರುಗಾಳಿ ಅವನ ನೆರವಿಗೆ ಬಂದರೂ ಕೊನೆಗೆ ಸೋಲನ್ನು ಅಪ್ಪಬೇಕಾಯಿತು. ಪಂಗಳ, ಕೋವಿಲ್‌ಕೊಂಡ ಮತ್ತು ಗಣಪುರಗಳು ಬಿದ್ದುವು. ಬಿಜಾಪುರ ಮತ್ತು ಅಹಮದ್‌ನಗರಗಳ ನಡುವೆ ಕಲಹ ನಿಲುಗಡೆಯೇ ಇಲ್ಲದೆ ನಡೆಯುತ್ತಿತ್ತು. ರಾಮರಾಯನು ಮಧ್ಯಪ್ರವೇಶಮಾಡಿದುದರಿಂದ ಅವನ ಘನತೆ ಹೆಚ್ಚಿತು. ಅಲಿ ಅದಿಲ್ ಶಾಹನೂ ಯಾದಗಿರ್ ಮತ್ತು ಬಾಗಲಕೋಟೆಗಳನ್ನು ರಾಮರಾಯನಿಗೆ ಒಪ್ಪಿಸಬೇಕಾಯಿತು. ಈಗ ನಿಜವಾಗಿಯೂ ಸುಲ್ತಾನರು ದಿಗಿಲುಗೊಂಡರು.

ಸುಲ್ತಾನರ ಐಕ್ಯತೆಯನ್ನು ಸಾಧಿಸಲು ಮೊದಲನೆಯ ಹೆಜ್ಜೆ ಅಲಿ ಅದಿಲ್ ಶಾಹನಿಂದ ಬಂದಿತು. ಹುಸೇನ್ ನಿಜಾಂ ಶಾಹ ಜೊತೆ ಸೇರಲು ಸಿದ್ಧನಾಗಿದ್ದನು. ಇಬ್ರಾಹಿಂ ಕುತುಬ್ ಶಾಹನೇ ಮುಂದೆ ನಿಂತು ಅಲಿಗೂ ಹುಸೇನ್ ನಿಜಾಂ ಶಾಹನಿಗೂ ಒಪ್ಪಂದ ಮಾಡಿಸಿದನು. ನಿಜಾಂ ಶಾಹನು ತನ್ನ ಮಗಳು ಚಾಂದ್‌ಬೀಬಿಯನ್ನು ಅಲಿಗೆ ಮದುವೆ ಮಾಡಿಕೊಟ್ಟನು, ಅಲಿಯ ಸಹೋದರಿ ಹದಿಯಾ ಸುಲ್ತಾನಾಳನ್ನು ಹುಸೇನ್‌ನ ಉತ್ತರಾಧಿಕಾರಿ ಮುರ್ತಜಾನಿಗೆ ಮದುವೆ ಮಾಡಲಾಯಿತು. ಬೀರಾರ್ ಮಟ್ಟಿಗೆ ಈ ಒಕ್ಕೂಟಕ್ಕೆ ಸೇರದೆ ಉಳಿದುಕೊಂಡಿತು.

ಅಂತಿಮ ಯುದ್ಧದ ಮೊದಲನೆಯ ಹೆಜ್ಜೆಯಾಗಿ ರಾಮರಾಯನು ಯಾದಗಿರ್, ಮುದ್ಗಲ್ ಮತ್ತು ರಾಯಚೂರು ಹಾಗೂ ಇತರ ಕೋಟೆಗಳನ್ನು ಒಡನೆಯೇ ಮರಳಿಸಬೇಕೆಂದು ಅಲಿ ಅದಿಲ್ ಶಾಹ ಆಗ್ರಹಪಡಿಸಿದನು. ಸಹಜವಾಗಿಯೇ ರಾಮರಾಯನು ನಿರಾಕರಿಸಿದನು. ಒಕ್ಕೂಟವು ಸೇನೆಯೊಂದಿಗೆ ದಕ್ಷಿಣ ಮುಖವಾಗಿ ನಡೆದು ಬಿಜಾಪುರದ ಬಳಿ ಇದ್ದ ತಾಳಿಕೋಟೆ ಎಂಬ ಸಣ್ಣ ಊರಿನ ಬಳಿ ಬೀಡುಬಿಟ್ಟಿತು. ಅದು ವಿಜಯನಗರದ ಉತ್ತರದಗಡಿಯಾದ ಕೃಷ್ಣಾ ನದಿಯ ಉತ್ತರಕ್ಕೆ ಸುಮಾರು ೩೫ ಕಿ.ಮೀ.ಗಳಷ್ಟು ದೂರದಲ್ಲಿದ್ದಿತು. ಇದು ನಡೆದದ್ದು ಕ್ರಿ.ಶ ೧೫೬೪ ಡಿಸೆಂಬರಿನಲ್ಲಿ. ಮಿತ್ರ ಸೇನೆಯು ಅಲ್ಲಿ ಕೆಲವು ದಿನ ಶಿಬಿರ ಹೂಡಿತು. ಅಲ್ಲಿ ಶಿಬಿರ ಹೂಡಿದುದರಿಂದ ಈ ಯುದ್ಧವನ್ನು ಸಾಮಾನ್ಯವಾಗಿ ತಾಳಿಕೋಟೆಯುದ್ಧ ಎಂದು ಕರೆಯಲಾಗುತ್ತದೆ. ಆದರೆ ವಾಸ್ತವವಾಗಿ ಯುದ್ಧ ನಡೆದ ಸ್ಥಳ ಕೃಷ್ಣೆಯಿಂದ ಸುಮಾರು ೧೯ ಕಿ.ಮೀ. ದಕ್ಷಿಣಕ್ಕೆ, ತಾಳಿಕೋಟೆಯಿಂದ ಸಾಕಷ್ಟು ದೂರದಲ್ಲಿ. ರಕ್ಕಸಗಿ ಮತ್ತು ತಂಗಡಗಿ ಎಂಬ ಎರಡು ಹಳ್ಳಿಗಳು ಯುದ್ಧ ನಡೆದ ಸ್ಥಳದ ಸಮೀಪದಲ್ಲಿದ್ದ ಹಳ್ಳಿಗಳು. ಆದ್ದರಿಂದ ರಕ್ಕಸತಂಗಡಿ ಯುದ್ಧವೆಂದು ಕರೆಯಲಾಗುತ್ತದೆ. ಮಸ್ಕಿನದಿ ಮತ್ತು ಅದರ ಉಪನದಿಯೊಂದರ ಸಂಗಮ ಸ್ಥಳದ ಬನ್ನಿಹಟ್ಟಿ ಎಂಬಲ್ಲಿ ಈ ಯುದ್ಧ ನಡೆಯಿತು ಎಂದೂ ಭಾವಿಸಲಾಗಿದೆ.

ರಾಮರಾಯನು ಎಂದಿನಂತೆಯೇ ಧೈರ್ಯ ಪರಾಕ್ರಮಗಳಿಂದ ತನ್ನ ಬಲವೆಲ್ಲವನ್ನು ಪ್ರಯೋಗಿಸಿ ವೈರಿಯನ್ನೆದುರಿಸಲು ನಿರ್ಧರಿಸಿದನು. ಇದು ಭಾರತದಲ್ಲಿ ನಡೆದ ಅತ್ಯಂತ ಮಹತ್ವದ ಐತಿಹಾಸಿಕ ಹಾಗೂ ನಿರ್ಣಾಯಕ ಯುದ್ಧಗಳಲ್ಲಿ ಒಂದಾಯಿತು. ಇದರ ಫಲದ ಮೇಲೆ ಒಂದು ಬೃಹತ್ ಸಾಮ್ರಾಜ್ಯದ ಅದೃಷ್ಟ ನಿಂತಿತ್ತು. ಅದು ಇತಿಹಾಸದ ಗತಿಯನ್ನೇ ಬದಲಾಯಿಸಿತು. ವಿಜಯನಗರಕ್ಕೆ ಎಂತಹ ತತ್ತರಿಸುವ ಪೆಟ್ಟು ಕೊಟ್ಟಿತೆಂದರೆ, ಅದು ಮತ್ತೆ ಹಿಂದಿನ ಸ್ಥಿತಿಗೆ ಮುಂದೆ ಎಂದಿಗೂ ಬರಲು ಸಾಧ್ಯವಾಗಲಿಲ್ಲ. ೭೦ ವರ್ಷ ವಯಸ್ಸಾಗಿದ್ದರೂ ರಾಮರಾಯನು ಅಪಾರ ಪರಾಕ್ರಮದಿಂದ ಕಾದಿದನು. ಅವನ ಎಲ್ಲಾ ಸಾಮಂತರು, ಅಧೀನರಾಜರು, ಕೃಷ್ಣಾನದಿಯ ದಂಡೆಯ ಮೇಲಿದ್ದ ಅರಸರು, ಸಿಲೋನ್ ದ್ವೀಪದವರೆಗೂ ಇದ್ದ ರಾಜರಿಗೆಲ್ಲ ಕರೆ ಹೋಯಿತು. ಒಂದು ಹಂತದಲ್ಲಿ ಬಿಜಾಪುರ ಮತ್ತು ಗೋಲ್ಕೊಂಡಗಳು ಹಿಮ್ಮೆಟ್ಟಲು ಸಿದ್ಧವಾಗಲು ಯುದ್ಧವು ಮುಸ್ಲಿಮರ ಕೈಬಿಟ್ಟಿತು ಎಂದೇ ತೋರಿತು. ಆದರೆ ಇದ್ದಕ್ಕಿದ್ದಂತೆ ರಾಮರಾಯನ ಕೈಕೆಳಗಿದ್ದ ಇಬ್ಬರು ಮುಸ್ಲಿಂ ಸೇನಾಪತಿಗಳು ಒಡೆಯನಿಗೆ ದ್ರೋಹ ಮಾಡಿ ತಮ್ಮ ಸೇನೆಯೊಂದಿಗೆ ತಮ್ಮ ಧರ್ಮೀಯರನ್ನು ಸೇರಿಕೊಂಡುಬಿಟ್ಟರು. ಮುಸ್ಲಿಂ ಗೋಲಂದಾಜರು ಮತ್ತು ಅಶ್ವಾರೋಹಿಗಳು ಹೊಡೆಯತೊಡಗಿದ್ದು ಸೈನ್ಯದಲ್ಲಿ ಗೊಂದಲಕ್ಕೆ ಕಾರಣವಾಯಿತು. ರಾಮರಾಯನನ್ನು ಸೆರೆಹಿಡಿದು, ನಿಜಾಂ ಶಾಹನು ಅವನನ್ನು ಗುಂಡಿಟ್ಟು ಕೊಂದನು. ವೆಂಕಟಾದ್ರಿಯನ್ನೂ ಕೊಲ್ಲಲಾಯಿತು. ತಿರುಮಲನು ಮಾತ್ರ ಉಳಿದುಕೊಂಡನು.

ರಾಮರಾಯನನ್ನು ಅವನ ವಿದೇಶಾಂಗ ನೀತಿಗಾಗಿ, ಸುಲ್ತಾನರ ವ್ಯವಹಾರಗಳಲ್ಲಿ ಮಧ್ಯಪ್ರವೇಶ ಮಾಡಿದ್ದಕ್ಕಾಗಿ ಸಾಮಾನ್ಯವಾಗಿ ಎಲ್ಲರೂ ನಿಂದಿಸುತ್ತಾರೆ. ಇದು ಸರಿಯಲ್ಲ. ಅವನು ಯುದ್ಧಾಕಾಂಕ್ಷಿಯಾಗಿರಲಿಲ್ಲ, ಅಥವಾ ತಾನಾಗಿ ಯಾವ ಕಲಹವನ್ನೂ ಪ್ರಚೋದಿಸಲಿಲ್ಲ. ಕೆಲವು ದೃಷ್ಟಿಗಳಿಂದ ಅವನು ಅಂತರ-ರಾಜ್ಯನೀತಿಯನ್ನು ಕುರಿತು ಕೌಟಿಲ್ಯನು ವಿಧಿಸುವಂತೆ ನಡೆದುಕೊಂಡನು. ಸುಲ್ತಾನರ ಅಂತಃಕಲಹಗಳಲ್ಲಿ ಮಧ್ಯ ಪ್ರವೇಶ ಮಾಡಿದ್ದರೆ ಅದು ವಿಜಯನಗರದ ಹಿತಕ್ಕಾಗಿ. ಮೂರರಲ್ಲಿ ಪರಸ್ಪರ ವಿಶ್ವಾಸವೇ ಇರುವುದಿಲ್ಲ, ಅವರು ನಾಯಿಗಳಂತೆ ಸದಾ ಕಚ್ಚಾಡುತ್ತಿರುತ್ತಾರೆ, ಒಬ್ಬರು ನಾಶವಾಗುವುದನ್ನು ಇನ್ನೊಬ್ಬರು ಬಯಸುತ್ತಾರೆ-ಎಂದು ನ್ಯೂನಿಜ್ ಹೇಳಿದನು. ಸ್ವಾರಸ್ಯದ ಸಂಗತಿಯೆಂದರೆ ಈ ಮಾತು ಸುಲ್ತಾನರ ಗುಣದ ಸರಿಯಾದ ವರ್ಣನೆಯಾಗಿದೆ.

ನಿಂದಾರ್ಹವಾದದ್ದು ರಾಮರಾಯನ ವಿದೇಶಾಂಗ ನೀತಿಯಲ್ಲ. ಬದಲು ಸುಲ್ತಾನರ ಭೀತಿ, ತೀವ್ರವಾದ ಮತ್ಸರ, ರಾಮರಾಯನ ಸ್ಥಾನಮಾನವನ್ನು ಕುರಿತ ಅಸೂಯೆ ಮತ್ತು ದ್ವೇಷ ಇವು. ರಾಮರಾಯನ ಸ್ಥಾನಮಾನಕ್ಕೆ ಅವರೂ ಕೊಡುಗೆ ನೀಡಿದ್ದರಷ್ಟೆ. ಅಲ್ಲದೆ ಹಿಂದೂ ಸಾಮ್ರಾಜ್ಯವನ್ನು ಕುರಿತ ಧಾರ್ಮಿಕ ವೈರ ಅವರಲ್ಲಿ ಮನೆ ಮಾಡಿದ್ದುದನ್ನು ಗಮನಿಸಬೇಕು. ಹಿಂದೂ ಸಾಮ್ರಾಜ್ಯದ ಅಸ್ತಿತ್ವವು ಅವರ ಪಾಲಿಗೆ ವಿಷದಂತಿತ್ತು.

ಆದರೆ ಇದು ನಾಣ್ಯದ ಒಂದು ಮುಖ ಮಾತ್ರ. ರಾಮರಾಯನ ಸುಲ್ತಾನರ ಮತ್ತು ಅವರ ರಾಯಭಾರಿಗಳ ಬಗೆಗೆ ಉದ್ಧಟನಾಗಿ ವರ್ತಿಸುತ್ತಿದ್ದನು, ಇಸ್ಲಾಂ ಧರ್ಮವನ್ನು ಅಗೌರವಿಸುತ್ತಿದ್ದನು, ಎಂದು ಮುಸ್ಲಿಂ ಚರಿತ್ರಕಾರರು ಆಪಾದಿಸುತ್ತಾರೆ. ಯುದ್ಧದ ಸಮಯಗಳಲ್ಲಿ ಅವನ ಸೈನಿಕರು ಮುಸ್ಲಿಂ ಜನತೆ ಮತ್ತು ಸಂಸ್ಥೆಗಳ ಬಗೆಗೆ ಅತ್ಯಾಚಾರ ತೋರಿಸುತ್ತಿದ್ದರು ಎಂದು ಹೇಳುತ್ತಾರೆ. ಆದರೆ ಈ ಆಪಾದನೆಗಳು ವಾಸ್ತವ ಸಂಗತಿಗಳ ವಿಕಾರರೂಪಗಳು, ಮತ್ತು ಉತ್ಪ್ರೇಕ್ಷೆಗಳು. ವಾಸ್ತವವಾಗಿ ವಿಜಯನಗರದಲ್ಲಿ ಎಲ್ಲ ರಾಜರ ಆಡಳಿತ ಕಾಲದಲ್ಲಿಯೂ ಇಸ್ಲಾಂ ಮತ್ತು ವಿಶೇಷತಃ ಮುಸ್ಲಿಮರು ಪಕ್ಷಪಾತವೆನಿಸುವಷ್ಟು ಒಳ್ಳೆಯ ವರ್ತನೆಯನ್ನು ಪಡೆದಿದ್ದರು. ರಾಮರಾಯನೂ ಅದಕ್ಕೆ ಅಪವಾದವಾಗಿರಲಿಲ್ಲ. ಮುಸ್ಲಿಮರು ರಾಜ್ಯದಲ್ಲಿ ಚೆನ್ನಾಗಿ ನೆಲೆಗೊಂಡಿದ್ದರು, ಮುಸ್ಲಿಂ ಯೋಧರಿಗೆ ಮತ್ತು ಅಧಿಕಾರಿಗಳಿಗೆ ಸಮೃದ್ಧವಾಗಿ ನೌಕರಿಗಳು ದೊರೆತಿದ್ದುವು. ಅವರಿಗಾಗಿ ರಾಜಧಾನಿಯಲ್ಲಿ ಒಂದು ಮಸೀದಿಯನ್ನೂ ನಿರ್ಮಿಸಲಾಗಿತ್ತು. ಯುದ್ಧಗಳಲ್ಲಿ

ವಿಜಯನಗರ ಸೈನಿಕರ ಅತಿರೇಕ ವರ್ತನೆಗಳು ಮತ್ತು ರಾಮರಾಯನ ಕುಕೃತ್ಯಗಳಿಂದು ಹೇಳಲಾದವು ಉತ್ಪ್ರೇಕ್ಷಿತವಾದವು. ಅಲ್ಲದೆ ಅವುಗಳನ್ನು ಆ ಕಾಲದ ನೀತಿ ನಿಯಮಗಳು ಮತ್ತು ಸಾಮಾನ್ಯ ರೂಢಿಗಳ ಸಂದರ್ಭದಲ್ಲಿ ನಿರ್ಣಯಿಸಬೇಕು.

ಯುದ್ಧದಲ್ಲಿ ಜೀವಸಹಿತ ಉಳಿದುಕೊಂಡ ತಿರುಮಲನು ೧೫೦ ಆನೆಗಳ ಮೇಲೆ ಇಷ್ಟು ಕೊಂಡೊಯ್ಯ ಬಹುದಾದಷ್ಟನ್ನು ತೆಗೆದುಕೊಂಡು, ಶಾಸನಬದ್ಧ ರಾಜ, ಅರಮನೆಯ ಸ್ತ್ರೀಯರು ಮತ್ತು ಬಂಧುಗಳೊಂದಿಗೆ ಚಂದ್ರಗಿರಿಗೆ ತೆರಳಿದನು. ರಾಜಧಾನಿಯ ರಕ್ಷಣೆಯ ಪ್ರಶ್ನೆಯೇ ಉಳಿಯಲಿಲ್ಲ, ಎಲ್ಲೋ ಕೆಲವರು ಕಾವಲು ಪಡೆಯವರಿದ್ದರು ಅಷ್ಟೆ. ತೆರಪೇ ಇಲ್ಲದ ಲೂಟಿ, ಕೊಳ್ಳೆ, ಸುಲಿಗೆಗಳಿಗೆ ರಾಜಧಾನಿಯ ಬಾಗಿಲು ತೆರೆದಂತಾಯಿತು. ಪೋರ್ಚುಗೀಸ್ ವರದಿಗಳು ಈ ಭೀಕರ ವಿನಾಶದ ಹೊಣೆಯನ್ನು ಪೂರ್ತಿಯಾಗಿ ಮುಸ್ಲಿಮರ ಮೇಲೆ ಹೊರಿಸುವಂತೆ ತೋರುತ್ತದೆ. ಲೂಟಿ ಎಷ್ಟು ಅಗಾಧವಾಗಿದ್ದಿತೆಂದರೆ ಒಕ್ಕೂಟದ ಸೈನ್ಯದಲ್ಲಿದ್ದ ಪ್ರತಿಯೊಬ್ಬ ವ್ಯಕ್ತಿಯೂ ಅಪಾರವಾದ ಚಿನ್ನ, ನಗನಾಣ್ಯಗಳು, ಗುಡಾರಗಳು, ಯುದ್ಧೋಪಕರಣಗಳು, ಕುದುರೆಗಳು, ಗುಲಾಮರು ಇವರಿಂದ ಶ್ರೀಮಂತನಾದನು. ಸುಲ್ತಾನರು ಆನೆಗಳ ಹೊರತು ಮಿಕ್ಕ ಯಾವುದನ್ನು ಕೊಳ್ಳೆ ಹೊಡೆದರೂ ಅದು ಲೂಟಿ ಮಾಡಿದವನಿಗೇ ಸೇರುತ್ತದೆ ಎಂದು ಘೋಷಿಸಿಬಿಟ್ಟಿದರಿಂದ ಪ್ರತಿಯೊಬ್ಬನೂ ಲೂಟಿಮಾಡಿದನು. ಆಮೇಲೆ ಅದ್ಭುತ ಭವ್ಯ ವಿಜಯನಗರ ಪಟ್ಟಣದ ವಿನಾಶ ಪ್ರಾರಂಭವಾಯಿತು. ಆದರೆ ಅಲ್ಲಿಗೆ ಗೆದ್ದ ಸೈನ್ಯಗಳು ಬರುವ ಮೊದಲೇ ಕಳ್ಳಕಾಕರು, ಪಕ್ಕದ ಕಾಡು ಮೇಡುಗಳಲ್ಲಿದ್ದ ದರೋಡೆಗಾರರು ನಗರವನ್ನು ಲೂಟಿಮಾಡಿ ಕೈಗೆ ಸಿಕ್ಕಿದುದನ್ನೆಲ್ಲಾ ಎತ್ತಿಕೊಂಡು ಹೋದರು. ಲೂಟಿ ಮಾಡಿದವರು ಮುಸ್ಲಿಮರು ಮಾತ್ರವೇ ಅಲ್ಲ ಎನ್ನುವುದು ಇದರಿಂದ ಸ್ಪಷ್ಟವಾಗುತ್ತದೆ; ಹಿಂದೂಗಳೂ ಅವರ ಜೊತೆಗೆ ಸೇರಿಕೊಂಡಿದ್ದರು. ಹೇಳುತ್ತಾರೆ, ''ಕೈಯಲ್ಲಿ ಕೊಳ್ಳಿ, ಕತ್ತಿಗಳನ್ನು ಹಿಡಿದು, ಹಾರೆ-ಕೊಡಲಿಗಳನ್ನು ಹಿಡಿದು ದರೋಡೆಗಾರರು, ಕಾಡಿನ ಜನರು ನುಗ್ಗಿಬಂದರು, ದಿನದಿವೂ ಬಂದು ಕೈಗೆ ಸಿಕ್ಕಿದುದನ್ನು ಎತ್ತಿಕೊಂಡು ಹೋದರು, ವಿನಾಶದ ಕೆಲಸವನ್ನು ತಡೆಯಿಲ್ಲದೆ ಮುಂದುವರಿಸಿದರು.'' ಪ್ರಭುವಿನ ರಕ್ಷಣೆಗೆ ಬರಬಹುದಾಗಿದ್ದ ಸಾಮಂತ ರಾಜರೇನೋ ಇದ್ದರು.

ನಮಗೆ ಉಳಿದು ಬಂದಿರುವ ವರದಿಗಳ ಪ್ರಕಾರ, ವಿಜಯನಗರದ ಆಸುಪಾಸಿನಲ್ಲಿದ್ದ ಎಲ್ಲೋ ಕೆಲವು ಅಧೀನರಾಜರು ಮಾತ್ರ ಯುದ್ಧದಲ್ಲಿ ಭಾಗವಹಿಸಿದರು ಎಂದು ತಿಳಿಯುತ್ತದೆ. ಕೆಳದಿಯ ನಾಯಕರನ್ನೂ ಮೈಸೂರಿನ ಒಡೆಯರನ್ನೂ ಇಲ್ಲಿ ಹೆಸರಿಸಬಹುದು. ಜಿಂಜಿ, ಮಧುರೈ, ತಂಜಾವೂರುಗಳಲ್ಲಿ ನೆಲೆಸಿದ್ದ ಇತರರು ಯಾರೊಬ್ಬರೂ ವಿಜಯನಗರಕ್ಕೊದಗಿದ ಗಂಡಾಂತರವನ್ನು ಲಕ್ಷ್ಯಕ್ಕೇ ತಂದುಕೊಂಡಂತೆ ಕಾಣಲಿಲ್ಲ. ಅದು ಪತನಗೊಂಡರೆ ತಾವು ಸ್ವತಂತ್ರವಾಗಿ ಆಳಬಹುದು ಎಂದು ಅವರು ಭಾವಿಸಿದರು. ಅದಕ್ಕಿಂತ ಮುಖ್ಯವಾದದ್ದು ರಾಜಧಾನಿಯಲ್ಲೇ ಶೈವರಿಗೆ ಅಧಿಕ ಪ್ರಮಾಣದ ರಾಜಾಶ್ರಯವನ್ನು ಪಡೆದಿದ್ದ ಶ್ರೀ ವೈಷ್ಣವರ ಮೇಲೆ ಉಂಟಾದ ಮಾತ್ಸರ್ಯ. ಶ್ರೀವೈಷ್ಣವರಿಗೆ ದೊರಕಿದ್ದ ಅಪಾರ ಸವಲತ್ತುಗಳು, ದಾನ-ಧರ್ಮಗಳು, ಉಡುಗೊರೆಗಳು ಶೈವರಿಗೆ ಸಹನೆಯಾಗಿರಲಿಲ್ಲ. ರಾಜಧಾನಿಯಲ್ಲಿ ಗೊಂದಲವುಂಟಾಗಿದ್ದಾಗ ಆ ಸಂದರ್ಭವನ್ನು ಉಪಯೋಗಿಸಿಕೊಂಡು ಶೈವರೂ ಲೂಟಿ ಮಾಡತೊಡಗಿದರು. ಲೂಟಿಗಿಂತ ಹೆಚ್ಚಾಗಿ ಶ್ರೀವೈಷ್ಣವ ದೇವಾಲಯಗಳನ್ನು ನೆಲಸಮ ಮಾಡುವುದರಲ್ಲಿ ಅವರಿಗೆ ಆಸಕ್ತಿಯುಂಟಾಯಿತು. ಹಂಪಿಗೆ ಭೇಟಿಕೊಟ್ಟ ಯಾರಿಗೇ ಆದರೂ ಇಂದಿಗೂ ಚೆನ್ನಾಗಿ ತಿಳಿಯುವ ಒಂದು ಅಂಶವೆಂದರೆ, ವಿಷ್ಣುದೇವಾಲಯಗಳೇ ಅಧಿಕವಾಗಿ ವಿನಾಶಕ್ಕೊಳಗಾದುವು ಎನ್ನುವುದು. ವಿರೂಪಾಕ್ಷ ದೇವಸ್ಥಾನವು ಭದ್ರವಾಗಿಯೇ ಉಳಿದಿದೆ. ಆದ್ದರಿಂದ ಯುದ್ಧದ ಬೆನ್ನಿಗೇ ಬಂದ ಲೂಟಿ, ವಿನಾಶಕಾರ್ಯಗಳು ಮುಸ್ಲಿಮರ ಕುಕೃತ್ಯಗಳು ಎಂದು ಭಾವಿಸುವುದು ಸಮಂಜಸವಲ್ಲ. ಅವರಿಗೂ ಕೊಳ್ಳೆಯಲ್ಲಿ ಪಾಲಿತ್ತು ನಿಜ. ಆದರೆ ಲಾಭ ಪಡೆದವರು ಅವರು ಮಾತ್ರವೇ ಅಲ್ಲ !

ತಿರುಮಲನು ಆರವೀಡು ಮನೆತನಕ್ಕೆ ಸೇರಿದವನು. ಅವನೀಗ ರಾಜಪ್ರತಿನಿಧಿಯೂ ರಕ್ಷಕನೂ ಆದನು. ಆದರೆ ಅವನು ಪರಿಹರಿಸಬೇಕಾದ ಹಲವಾರು ಸಮಸ್ಯೆಗಳಿದ್ದುವು. ರಾಜಧಾನಿಗೆ ಹಿಂದಿನ ವೈಭವವನ್ನು ಮರಳಿ ಗಳಿಸಿಕೊಡುವುದು ಅವನಿಂದಾಗಲಿಲ್ಲ. ಪೆನುಗೊಂಡೆಗೆ ತನ್ನ ಕಾರ್ಯಸ್ಥಾನವನ್ನು ವರ್ಗಾಯಿಸಿದನು. ಅವನ ಮಗ ೧ನೇ ಶ್ರೀರಂಗ ತೆಲುಗುಪ್ರಾಂತವನ್ನು ಪೆನುಗೊಂಡೆಯಿಂದ ಆಳುತ್ತಿದ್ದನು. ರಘುನಾಥನು ಸಾಯಲು ೨ನೇ ಶ್ರೀರಂಗನು ಉತ್ತರಾಧಿಕಾರಿಯಾಗಿ ನೇಮಿತನಾಗಿದ್ದನು. ಮೂರನೆಯ ಮಗ ರಾಮನು ಮುಖ್ಯವಾಗಿ ಕನ್ನಡ ಪ್ರದೇಶಗಳನ್ನು ಪಡೆದನು. ಶ್ರೀರಂಗಪಟ್ಟಣ ಅವನ ರಾಜಧಾನಿಯಾಗಿತ್ತು[೪೯] ತಮಿಳು ಪ್ರದೇಶದ ಹೊಣೆಯನ್ನು ವೆಂಕಟಾದ್ರಿಯು ಹೊತ್ತಿದ್ದನು. ಅವನ ರಾಜಧಾನಿ ಚಂದ್ರಗಿರಿ. ಮತ್ತೊಮ್ಮೆ ಕೌಟುಂಬಿಕ ಕಲಹಗಳು ಹೆಡೆಯೆತ್ತಿದ್ದುವು. ರಾಮರಾಯನ ಮಗ ತಿಮ್ಮ ಅಲಿಯಾಸ್ ಪೆದ್ದ ತಿರುಮಲನು ತಾನೇ ರಾಜ ಪ್ರತಿನಿಧಿಯಾಗಬೇಕು ಎಂದು ಅಲಿ ಅದಿಲ್ ಶಾಹನಿಗೆ ಪತ್ರ ಬರೆದುಕೊಂಡನು. ಬಿಜಾಪುರ ಸೈನ್ಯವು ಆನೆಗೊಂದಿಯನ್ನು ವಶಪಡಿಸಿಕೊಂಡು ಪೆನುಗೊಂಡೆಯ ಕಡೆಗೆ ನಡೆಯಿತು. ಮುರ್ತಜಾ ನಿಜಾಂ ಶಾಹನು ತಿರುಮಲನ ಆಹ್ವಾನವನ್ನು ಅಂಗೀಕರಿಸಿದನು. ಸವರಂ ಚಿನ್ನಪ್ಪನಾಯಕನು ಅಲಿಗೆದುರಾಗಿ ವೀರಾವೇಶದಿಂದ ಕಾದಿದನು. ಅಲಿಯು ಸೋತು ಹಿಮ್ಮೆಟ್ಟಬೇಕಾಯಿತು. ಗೋವಾ ತಿರುಮಲನಿಗೆ ಕುದುರೆಗಳನ್ನು ಒದಗಿಸಿತ್ತು. ಆದರೆ ಅವಕ್ಕೆ ಕೊಡಬೇಕಾದ ಹಣವನ್ನು ಪಾವತಿ ಮಾಡದೆ ಅವನು ಪೋರ್ಚುಗೀಸರ ವಿರೋಧವನ್ನು ಕಟ್ಟಿಕೊಂಡನು.[೫೦] ಆದರೂ ಸಾಹಿತ್ಯ ಮತ್ತು ಲಲಿತ ಕಲೆಗಳನ್ನು ಪ್ರೋತ್ಸಾಹಿಸಿದನು. ರಾಮರಾಯಭೂಷಣ (ಭಟ್ಟ ಮೂರ್ತಿ)ನು ವಸುಚರಿತಂ ಎಂಬ ಕೃತಿಯನ್ನು ರಾಜನಿಗೆ ಅರ್ಪಿಸಿದನು. ರಾಜನು ಕಾಂಚಿ, ಶ್ರೀರಂಗಂ, ತಿರುಪತಿ ಮತ್ತಿತರ ಸ್ಥಳಗಳಲ್ಲಿ ದೇವಾಲಯಗಳನ್ನು ಜೀರ್ಣೋದ್ಧಾರ ಮಾಡಿಸಿದನು. ಎಲ್ಲ ಶಾಂತವಾದ ಮೇಲೆ ಕ್ರಿ.ಶ. ೧೫೭೦ರಲ್ಲಿ ಕಿರೀಟಧಾರಣೆ ಮಾಡಿಸಿಕೊಂಡನು. ಸದಾಶಿವನನ್ನು ವೆಂಕಟಪತಿಯು ಕೊಲೆಮಾಡಿದನು ಎಂದು ಆಪಾದಿಸುತ್ತಾರೆ, ಆದರೆ ಅವನು ಕ್ರಿ.ಶ. ೧೫೭೬ರಲ್ಲಿಯೂ ಬದುಕಿದ್ದನು ಎಂದು ತೋರಿಸುವ ಶಾಸನಾಧಾರಗಳಿವೆ.

ಆದರೆ ತಿರುಮಲನು ಸಿಂಹಾಸನಾರೋಹಣ ಮಾಡಿದ ಮೇಲೆ ಬಹಳ ಕಾಲ ಆಳಲಿಲ್ಲ. ೧೫೭೨ರಲ್ಲಿ ಸಿಂಹಾಸನವನ್ನು ತನ್ನ ಮಗ ೧ನೇ ಶ್ರೀರಂಗನಿಗೆ ಒಪ್ಪಿಸಿದನು.[೫೧] ಹೊಸರಾಜನು ಬಿಜಾಪುರ ಮತ್ತು ಗೋಲ್ಕೊಂಡಗಳ ಧಾಳಿಯನ್ನು ಎದುರಿಸಬೇಕಾಯಿತು. ಅನಂತಪುರದ ಹಂದರಾಜ ತಿಮ್ಮನಾಯಕನು ಅದಿಲ್ ಶಾಹನಿಗೆ ನೆರವಾದನು. ಮತ್ತೆ ಸವರಂಚಿನ್ನಪ್ಪ ನಾಯಕನು ಸಹಾಯಕ್ಕೆ ಬಂದು ಪೆನುಗೊಂಡೆಯ ಕೋಟೆಯನ್ನು ಅಮೋಘವಾದ ರೀತಿಯಲ್ಲಿ ರಕ್ಷಿಸಿದನು. ಅನಂತಪುರದ ಮಲಕಪ್ಪನಾಯುಡು ಜೊತೆಗೂಡಿದರೂ ಇಬ್ರಾಹಿಂ ಕುತುಬ್ ಶಾಹನಿಗೂ ಅದೇ ಗತಿಯಾಯಿತು. ಅವನು ಅಹೋಬಲವನ್ನು ಕೊಳ್ಳೆಹೊಡೆದು ಕುತುಬ್ ಶಾಹನಿಗೆ ಒಪ್ಪಿಸಿದನು. ಕೊಂಡರಾಜು ವೆಂಕಟರಾಜುವು ನಾಯುಡುವನ್ನು ಪರಾಭವಗೊಳಿಸಿದನು. ಆದರೆ ಕುತುಬ್ ಶಾಹನು ಬೆಲ್ಲಂಕೊಂಡ, ನಾಗಾರ್ಜುನಕೊಂಡ, ಕೋಚರ್ಲ ಕೋಟ ಮತ್ತು ಇತರ ಕೋಟೆಗಳನ್ನು ಗೆದ್ದು ಸೇಡು ತೀರಿಸಿಕೊಂಡನು. ಕೊಂಡವೀಡು ದುರ್ಗವನ್ನು ಗೆಲ್ಲಲು ಅವನು ಮಾಡಿದ ಪ್ರಯತ್ನವನ್ನು ವೆಲುಗೋಟಿ ಕಸ್ತೂರಿ ರಂಗಪ್ಪನು ಭಗ್ನಗೊಳಿಸಿದನು. ಆದರೆ ವಿಶ್ವಾಸದ್ರೋಹ ಮತ್ತು ಭ್ರಷ್ಟಾಚಾರಗಳಿಂದ ಕೊಲೆಯು ಕುತುಬ್ ಶಾಹನ ಕೈವಶವಾಯಿತು. ಈ ವೇಳೆಗೆ ವಿಜಯನಗರದ ಮುಖ್ಯ ನಾಯಕರೆಲ್ಲರೂ ಅಂಕೆ ತಪ್ಪಿದ್ದರು, ಪರಿಸ್ಥಿತಿ ಗೊಂದಲಮಯವಾಗಿತ್ತು. ಶ್ರೀರಂಗನು ಸಂತಾನವಿಲ್ಲದೆ ಮೃತನಾದನು. ರಾಜ್ಯವು ೨ನೇ ವೆಂಕಟಪತಿಯ ಕೈಗೆ ಬಂದಿತು. ೧೫೮೬ ಜನವರಿಯಲ್ಲಿ ಅವನು ಚಂದ್ರಗಿರಿಯಲ್ಲಿ ಪಟ್ಟಾಭಿಷಿಕ್ತನಾದನು. ಅಲ್ಲಿಂದ ಪೆನುಗೊಂಡಕ್ಕೆ ಹೋದನು. ಮುಹಮ್ಮದ್ ಕುಲಿ ಕುತುಬ್ ಶಾಹನು ಗಂಡಿಕೋಟ, ನಂದ್ಯಾಲ್, ಕಂದನವೋಲು ಮತ್ತು ಗುತ್ತಿಗಳನ್ನು ಗೆದ್ದು ಆಮೇಲೆ ಪೆನುಗೊಂಡೆಗೆ ಮುತ್ತಿಗೆ ಹಾಕಿದನು. ವೆಂಕಟನೂ ತನ್ನ ನಾಯಕರುಗಳಾದ ಚನ್ನಪಟ್ಟಣದ ಜಗದೇವರಾಯ, ಮಲ್ಲೆ ಅನಂತ, ವೆಲುಗೋಟಿ ಕಸ್ತೂರಿರಂಗ

ಮೊದಲಾದವರನ್ನು ಕೂಡಿಸಿಕೊಂಡನು. ವೈರಿಯನ್ನು ಬುಡಸಹಿತ ನಾಶಮಾಡಲಾಯಿತು, ಅನೇಕ ಸೋಲುಗಳ ನಂತರ ಕೃಷ್ಣಾ ನದಿಯೇ ಎರಡೂ ರಾಜ್ಯಗಳ ನಡುವಣ ಗಡಿ ಎಂದು ಒಪ್ಪಿಕೊಂಡನು ಎಂದು ರಘುನಾಥಾಭ್ಯುದಯಮು ಹೇಳುತ್ತದೆ.

ಅನತಿಕಾಲದಲ್ಲೇ ವೆಂಕಟಪತಿಯ ಸಹಾಯಕರಾದ ನಾಯಕರೇ ಅವನಿಗೆ ತಿರುಗಿಬಿದ್ದರು. ಮೊಗಲ್ ಚಕ್ರವರ್ತಿ ಅಕ್ಬರನು ಅಹಮದ್‌ನಗರವನ್ನು ಗೆದ್ದದ್ದರಿಂದ, ಅದಿಲ್ ಶಾಹನು ವೆಂಕಟನ ಸಹಾಯವನ್ನು ಕೋರುವಂತಾಯಿತು. ಆದರೆ ಅಕ್ಬರನು ಸತ್ತನು. ವೆಂಕಟನು ಜೆಸೂಟ ಮಿಶನರಿಗಳಿಗೆ ಅಗತ್ಯವಾಗಿದ್ದ ಆಶ್ರಯವನ್ನು ಕೊಟ್ಟನು, ಅದಕ್ಕಾಗಿ ಸ್ಪೇಯಿನಿನ ೨ನೇ ಫಿಲಿಪ್ ಅವನಿಗೆ ಕೃತಜ್ಞತೆ ಸೂಚಿಸಿದನು. ಜಿಂಜಿಯ ನಾಯಕನ ಅನುಮತಿಯಿಂದ ಡಚ್ಚರು ಪುಲಿಕಾಟ್‌ನಲ್ಲಿ ಒಂದು ಉಗ್ರಾಣವನ್ನು ಕಟ್ಟಿಕೊಳ್ಳಲು ಪ್ರಯತ್ನಿಸಿದಾಗ ಪೋರ್ಚುಗೀಸರು ಅವರನ್ನು ಅಲ್ಲಿಂದ ಓಡಿಸಿದರು (೧೬೧೨). ಆಗ ವೆಂಕಟನು ಮಧ್ಯ ಪ್ರವೇಶಮಾಡಿ ಡಚ್ಚರು ಉಗ್ರಾಣವನ್ನು ಕಟ್ಟಿಕೊಳ್ಳಲು ಅನುಮತಿಯಿತ್ತನು. ಅವನು ಸಾಹಿತ್ಯವನ್ನೂ ಕಲೆಯನ್ನೂ, ಮುಖ್ಯವಾಗಿ ವರ್ಣಚಿತ್ರಕಲೆಯನ್ನು ಪ್ರೋತ್ಸಾಹಿಸಿದನು. ತಿರುಮಲೆಯಲ್ಲಿ ಇರಿಸಿರುವ ಅವನ ತಾಮ್ರ ವಿಗ್ರಹವು ಅವನ ಕಲಾಭಿರುಚಿಗೆ ಸಾಕ್ಷಿಯಾಗಿದೆ. ಪುತ್ರಸಂತಾನವಿರದುದರಿಂದ ವೆಂಕಟನು ಶ್ರೀರಂಗಪಟ್ಟಣದ ರಾಮನ ಮಗ ಶ್ರೀರಂಗನನ್ನು ತನ್ನ ಉತ್ತರಾಧಿಕಾರಿಯನ್ನಾಗಿ ನೇಮಿಸಿದನು. ಆದರೆ ವೆಂಕಟನ ಅಳಿಯನೂ ವೆಂಕಟಜಗ್ಗರಾಯನ ಮಗನೂ ಆದ ಚಿಕ್ಕರಾಯನು ದಂಗೆಯೆದ್ದನು. ರಾಜಕುಟುಂಬದ ಎಲ್ಲ ಸದಸ್ಯರನ್ನೂ ಕಗ್ಗೊಲೆ ಮಾಡಲಾಯಿತು. ಯಚಮನಾಯಕನ ಪ್ರತಿರೋಧ ಎಣಿಕೆಗೆ ಬರಲಿಲ್ಲ. ಹಿಂದೆಯೇ ಜನರು ಬಂಡೆದ್ದರು. ತಂಜಾವೂರಿನ ರಘುನಾಥನು ತೋಪುರದ ಯುದ್ಧದಲ್ಲಿ (೧೬೧೭) ಜಗ್ಗರಾಯನನ್ನು ಕೊಂದನು. ಶ್ರೀರಂಗನ ಮಗ ರಾಮದೇವರಾಯನನ್ನು ಸಿಂಹಾಸನಕ್ಕೇರಿಸಲಾಯಿತು. ಜಗ್ಗರಾಯನ ಕಿರಿಯ ಸೋದರ ಯತಿರಾಜನ ಮುಂದಾಳತ್ವದಲ್ಲಿ ವೈಮನಸ್ಯವು ಮುಂದುವರಿಯಿತು. ಅಷ್ಟರಲ್ಲಿ ಚಿಕ್ಕರಾಯನೇ ಮೃತನಾದನು. ಯತಿರಾಜನು ಗೊಬ್ಬೂರಿ ಕುಟುಂಬದ ರಾಮದೇವರಾಯನಿಗೆ ತನ್ನ ಮಗಳನ್ನು ಕೊಟ್ಟು ಮದುವೆ ಮಾಡಿ ಯಚಮನಾಯಕನ ಸ್ಥಿತಿಯನ್ನು ದುರ್ಬಲವಾಗಿಸಿದನು. ಇದೇ ಸಮಯ ಕಾಯುತ್ತಿದ್ದ ಶತ್ರುಗಳು ಮುಗಿಬಿದ್ದರು. ರಾಮದೇವನೂ ೧೬೩೦ರಲ್ಲಿ ಮೃತನಾದನು. ರಾಮರಾಯನ ಮೊಮ್ಮಗ ಪೆದ್ದ ವೆಂಕಟನು ಪಟ್ಟಕ್ಕೆ ಬಂದನು.

ಅದಿಲ್ ಶಾಹನು ಮತ್ತೆ ರಣದುಲ್ಲಾಖಾನನನ್ನು ಸೇನಾಸಮೇತ ಕಳುಹಿಸಿದನು. ಇಕ್ಕೇರಿಯ ವೀರಭದ್ರನಾಯಕನನ್ನು ಗೆದ್ದು ಬೆಂಗಳೂರಿನವರೆಗೆ ಬಂದು ಕೆಂಪೇಗೌಡನಿಂದ ಅದನ್ನು ಗೆದ್ದ ಖಾನನು ಶ್ರೀರಂಗಪಟ್ಟಣಕ್ಕೆ ಬಂದನು. ಕಂಠೀರವ ನರಸರಾಜ ಒಡೆಯರಿಂದ ನಷ್ಟ ಭರ್ತಿಯಾಗಿ ಭಾರೀ ನಗದು ಹಣವನ್ನು ಪಡೆದುಕೊಂಡನು. ಪೂರ್ವಕರಾವಳಿಯ ಕೋಟೆಗಳನ್ನು ಗೆದ್ದು ಮದ್ರಾಸಪಟ್ಟಣದಲ್ಲಿ ಕೋಠಿಯನ್ನು ಕಟ್ಟಿಕೊಳ್ಳಲು ಅವನು ಬ್ರಿಟಿಷರಿಗೆ ಒಂದು ಕೌಲಿನ ಮೂಲಕ ಅನುಮತಿ ಕೊಟ್ಟನು.

ಅವನ ಮರಣಾನಂತರ ಹಿಂದೆ ಅದಿಲ್ ಶಾಹನ ಮಿತ್ರನಾಗಿದ್ದ ೩ನೇ ಶ್ರೀರಂಗನು ಪಟ್ಟಕ್ಕೆ ಬಂದನು (೧೬೪೨). ಅವನ ನಾಯಕರು-ಮುಖ್ಯವಾಗಿ ತಂಜಾವೂರು, ಮಧುರೈ ಮತ್ತು ಜಿಂಜಿಗಳವರು ಸ್ವತಂತ್ರರಾದಾಗ ಅವನು ಏಕಾಂಗಿಯಾದನು. ಗೋಲ್ಕೊಂಡದ ದಳಪತಿ ಮೀರ್ ಜುಮ್ಲನು ವೆಲ್ಲೂರನ್ನು ಮುತ್ತಿದನು. ಶ್ರೀರಂಗನು ಹಣಕೊಟ್ಟು ಸಂಧಿ ಮಾಡಿಕೊಳ್ಳಬೇಕಾಯಿತು. ಫ್ರೆಂಚ್ ಪ್ರವಾಸಿ ಥಾವೆನಾಟ್ ಹೇಳುವಂತೆ ಬಿಸ್ನಾಗನು ರಾಜ್ಯವಿಲ್ಲದಾದನು. ಶ್ರೀರಂಗನು ಆಶ್ರಯವಿಲ್ಲದೆ ಅಲೆದಾಡುತ್ತಿದ್ದುದನ್ನು ಶಿವತತ್ವರತ್ನಾಕರವೂ ಹೇಳುತ್ತದೆ. ೧೬೫೯ರ ವೇಳೆಗೆ ಸಾಮಂತರೆಲ್ಲರೂ ವಂಚಿಸಲು ಶ್ರೀರಂಗನು ತನ್ನ ರಾಜ್ಯದ ಕಾಡುಮೇಡುಗಳಲ್ಲಿ ಆಶ್ರಯ ಪಡೆಯಬೇಕಾಯಿತು. ಎಂದು ಫಾದರ್ ಪ್ರೊಯೆನ್ಸಾ ಹೇಳುತ್ತಾನೆ. ಇಕ್ಕೇರಿಯ ಶಿವಪ್ಪನು ಅವನ ಮೇಲೆ ಅನುಕಂಪ ತೋರಿಸಿ ಬೇಲೂರನ್ನು ಗೆದ್ದು ೩ನೇ ಶ್ರೀರಂಗನಿಗೆ ಕೊಟ್ಟನು. ೧೬೬೯ರಲ್ಲಿ ಅವನು

ಬೇಲೂರಿನಲ್ಲಿ ಆಳುತ್ತಿದ್ದಂತೆ ತಿಳಿಯುತ್ತದೆ. ಆದರೆ ಅವನೊಂದಿಗೆ ಆರವೀಡು ವಂಶವೂ, ವಿಜಯನಗರ ಸಾಮ್ರಾಜ್ಯವೂ ವಿಸ್ಮೃತಿಗೆ ಸಂದುಹೋದುವು.[೫೬]

ಸಾಮ್ರಾಜ್ಯವನ್ನು ಸ್ಥಾಪಿಸಿದವರು ಕೆಲವೊಂದು ಆದರ್ಶಗಳನ್ನೂ ಮೌಲ್ಯಗಳನ್ನೂ ತಮ್ಮೆದುರು ಇರಿಸಿಕೊಂಡಿದ್ದರು. ಇಡೀ ದಕ್ಷಿಣಭಾರತವನ್ನು, ಕೊನೆಯ ಪಕ್ಷ, ಒಳಗೊಳ್ಳುವ, ಬಹುತೇಕ ಹಿಂದೂಗಳೇ ಪ್ರಧಾನವಾದ ಒಂದು ಸಾಮ್ರಾಜ್ಯವನ್ನು ಕಟ್ಟಲು ಅವರು ಬಯಸಿದರು. ರಾಜಕೀಯವಾಗಿ ಪರಕೀಯ ದಾಸ್ಯದಿಂದ ನರಳುತ್ತಿದ್ದು ಸ್ವಾತಂತ್ರ್ಯಕ್ಕಾಗಿ ಹಂಬಲಿಸುತ್ತಿದ್ದ ಜನರ ಅಭೀಪ್ಸೆ, ಅಗತ್ಯಗಳು ಒಟ್ಟಿನ ಮೇಲೆ ಈಡೇರಿದುವು. ಮೊದಮೊದಲ ಅರಸರು ಸಂಕುಚಿತ, ಸ್ವಾರ್ಥಪೂರಿತ, ಕುಟುಂಬ ಪ್ರಾಧಾನ್ಯದ ಆಸೆಯಿಂದ ಮೇಲೆ ನಿಂತಿದ್ದರು. ವಿಜಯನಗರವು ಕೊನೆಯ ಬೃಹತ್ ಹಿಂದೂ ಸಾಮ್ರಾಜ್ಯವಾದರೂ ಅದಕ್ಕೆ ಮತೀಯತೆಯ ಕಳಂಕ ಅಂಟಲಿಲ್ಲ. ಆದರೆ ಅದಕ್ಕೆ ಅಪವಾದಗಳಿರಲಿಲ್ಲವೆಂದಲ್ಲ. ವಿಜಯನಗರದ ರಾಜರು ಬಹುತೇಕ ಈ ಆದರ್ಶಗಳಿಗೆ ತಕ್ಕಂತೆ ನಡೆದುಕೊಂಡರು. ಅದೃಷ್ಟವಶಾತ್, ಈ ಸಾಮ್ರಾಜ್ಯದ ಅರಸರಾಗಿ ಆಡಳಿತಗಾರರಾಗಿ ಬಂದವರು ಶಾಂತಿ ಮತ್ತು ಪ್ರಗತಿಯ ಪಥವನ್ನು ಹಿಡಿದವರು, ತುಂಬು ಉತ್ಸಾಹದಿಂದ ನಿರ್ಧಾರಪೂರ್ವಕ ಕಾರ್ಯಗಳಿಂದ ಗುರಿಯನ್ನು ಮುಟ್ಟಲು ಯತ್ನಿಸಿದವರು. ನಿಜ, ಇದಕ್ಕೂ ಅಪವಾದಗಳಿದ್ದುವು. ಕೊಳಕು ಸ್ವಭಾವದ, ಕೃತಘ್ನ ವ್ಯಕ್ತಿಗಳು ಸಾಮ್ರಾಜ್ಯದ ಪ್ರಗತಿಗೆ ತಡೆಯಾಗಿದ್ದವರು ಕೆಲವರಿದ್ದರು. ಆದರೆ ಅವರ ಸಂಖ್ಯೆ ವಿರಳ, ಹಾಗೂ ಒಬ್ಬರಿಗೊಬ್ಬರು ದೂರದಲ್ಲಿ ಇದ್ದವರು. ಸಾಮ್ರಾಜ್ಯಕ್ಕೆ ಸದಾಕಾಲವೂ ಆಕ್ರಮಣ ಭೀತಿಯಿತ್ತು, ಹಾಗೆಯೇ ಅಂತಃಕಲಹಗಳು, ಒಳಸಂಚುಗಳು, ಅಧಿಕಾರ ಅಪಹರಣಗಳು, ವಂಶ ಬದಲಾವಣೆಗಳು ಎಲ್ಲವೂ ಇದ್ದುವು. ಆದರೂ ಕೊನೆಯವರೆಗೂ ವಿಜಯನಗರವು ಐಕ್ಯಕವಾಗಿ, ಅಖಂಡವಾಗಿ, ಒಂದು ದೇಹ-ಒಂದು ಮನಸ್ಸು-ಒಂದು ಆತ್ಮವಾಗಿ ಬಾಳಿತು.

ಸಾಮ್ರಾಜ್ಯದಲ್ಲಿ ಸರ್ವತೋಮುಖವಾದ ಅಭಿವೃದ್ಧಿಯಿತ್ತು. ಬಹುಮಟ್ಟಿಗೆ ಶಾಂತಿ, ಜೀವನ ಭದ್ರತೆ, ಪ್ರಜೆಗಳ ಕಲ್ಯಾಣಕ್ಕಾಗಿ ಕಾಳಜಿ, ಪೌರಜೀವನದ ಸೌಲಭ್ಯಗಳು, ಕೃಷಿಯಲ್ಲಿ ಬೆಳವಣಿಗೆ, ವ್ಯಾಪಾರ-ವಾಣಿಜ್ಯಗಳಲ್ಲಿ ಅಭಿವೃದ್ಧಿ, ಆಲೋಚನೆ ಮತ್ತು ಕ್ರಿಯಾಸ್ವಾತಂತ್ರ್ಯ, ಶಿಕ್ಷಣಕ್ಕೆ ಪ್ರೋತ್ಸಾಹ-ಹೀಗೆ ಸಾಮ್ರಾಜ್ಯವು ಸಮೃದ್ಧ ಸಂಪನ್ಮೂಲಗಳಿಂದ, ಕಟ್ಟುಕಥೆ ಎಂದು ತೋರುವ ಮಟ್ಟಿಗೆ ಅಭ್ಯುದಯ ಹೊಂದಿತು, ಸಮೃದ್ಧವಾಯಿತು. ಪರ್ಷಿಯಾ, ಅರೇಬಿಯ, ಈಜಿಪ್ಟ್, ಇಟಲಿ, ಪೋರ್ಚುಗಲ್, ಸಿಲೋನ್, ಸುಮಾತ್ರಾ, ಮಲಯ, ಬರ್ಮಾ ಮತ್ತು ಚೈನಾಗಳಂತಹ ದೇಶಗಳೊಂದಿಗೆ ರಾಜನೈತಿಕ ಹಾಗೂ ವಾಣಿಜ್ಯ ಸಂಬಂಧಗಳನ್ನು ಹೊಂದಿದ್ದಿತು. ಅಬ್ದುಲ್ ರಜಾಕ್, ಡೊಮಿಂಗೋ ಪೇಸ್, ಫೆರ್ನಾವೋ ನ್ಯೂನಿಜ್ ಅಂತಹ ವಿದೇಶಿ ಪ್ರವಾಸಿಗರು ನಗರ ಜನರು ಮತ್ತು ಅರಸರ ಬಗೆಗೆ ಕೊಟ್ಟಿರುವ ವರದಿಗಳು ಕಿನ್ನರಲೋಕದ ಅದ್ಭುತ ರಮ್ಯ ಕಥಾನಕಗಳಂತೆ ಓದಿಸುತ್ತವೆ. ಆ ವರದಿಗಳ ಪ್ರಕಾರ ವಿಜಯನಗರ ಪಟ್ಟಣವು ಪ್ರಪಂಚದಲ್ಲೇ ಅತಿದೊಡ್ಡ ನಗರವಾಗಿತ್ತು, ಜನನಿಬಿಡವಾಗಿತ್ತು, ಸಕಲ ಸೌಲಭ್ಯಗಳಿಂದ ಕೂಡಿತ್ತು. ನಗರ-ಪಟ್ಟಣಗಳನ್ನೂ ಕೋಟೆಗಳನ್ನೂ ಅತ್ಯಂತ ಸಮರ್ಪಕವಾಗಿ ಯೋಚಿಸುವ ಸಮರ್ಥ ಎಂಜಿನಿಯರರು ಇದ್ದರು. ಸರಕಾರಕ್ಕೆ ಸಂಬಂಧಿಸಿದ ಹಾಗೂ ಖಾಸಗಿಯಾದ ಕಟ್ಟಡಗಳನ್ನು ದೇವಾಲಯ-ಅರಮನೆಗಳನ್ನು ಕಟ್ಟುವುದರಲ್ಲಿಯೂ, ನದಿಗಳಿಗೆ ಅಣೆಕಟ್ಟು ಹಾಕುವುದರಲ್ಲಿ ಮತ್ತು ನಾಲೆಗಳನ್ನು ನಿರ್ಮಿಸುವುದರಲ್ಲಿಯೂ, ಕೃಷಿಗಾಗಿ ಕೆರೆಗಳನ್ನು ತೋಡಿಸುವುದರಲ್ಲಿಯೂ ಅವರು ಪರಿಣತರಾಗಿದ್ದರು. ಪೋರ್ಚುಗೀಸ್ ಪ್ರವಾಸಿ ಡ್ಯುಅರ್ಟ್ ಬಾರ್ಬೋಸಾ (ಸು. ಕ್ರಿ.ಶ. ೧೫೧೪) ಹೇಳುತ್ತಾನೆ. ''ಪ್ರತಿಯೊಬ್ಬ ಮನುಷ್ಯನೂ ಅವನು ಕ್ರಿಶ್ಚಿಯನ್ನನಾಗಿರಲಿ, ಯೆಹೂದ್ಯನಾಗಿರಲಿ, ಮೂರ್ ಆಗಿರಲಿ, ಹೀದವನಾಗಿರಲಿ, ತನ್ನ ತನ್ನ ಮತಧರ್ಮಕ್ಕೆ ಅನುಗುಣವಾಗಿ, ಯಾವುದೇ ತೊಂದರೆಯಿಲ್ಲದೆ, ವಿಚಾರಣೆಯಿಲ್ಲದೆ ವಾಸ ಮಾಡಬಹುದಾಗಿತ್ತು, ಬರಬಹುದಾಗಿತ್ತು,

ಹೋಗಬಹುದಾಗಿತ್ತು. ಅತಂಹ ಸ್ವಾತಂತ್ರ್ಯವನ್ನು ರಾಜನು ಪ್ರಜೆಗಳಿಗೆ ಕೊಟ್ಟಿದ್ದಾನೆ''. ತಾವು ಕೇಳಿದುದನ್ನು ಕಣ್ಣಾರ ನೋಡಲೆಂದೇ ಅನೇಕ ಪ್ರವಾಸಿಗರು ರಾಜಧಾನಿಗೆ ಬಂದರು. ಅವರನ್ನು ಗೌರವದಿಂದ, ಪ್ರೇಮದಿಂದ ಸ್ವಾಗತಿಸಲಾಯಿತು.

ಹಿಂದೂ ಧರ್ಮದ ರಕ್ಷಣೆ ಮತ್ತು ಪುನಶ್ಚೇತನ, ಸಾಮ್ರಾಜ್ಯದ ಬದ್ಧ ಗುರಿಗಳಲ್ಲಿ ಒಂದಾಗಿತ್ತು. ಈ ಉದ್ದೇಶಕ್ಕಾಗಿ, ಮೇಲೆ ನೋಡಿದಂತೆ, ೧ನೇ ಬುಕ್ಕನು ಹಿಂದೂಧರ್ಮದ ಆಧಾರ ಶಿಲೆಯಾದ ವೇದಗಳ ಮೇಲಿನ ಭಾಷ್ಯದ ಕ್ರೋಢೀಕರಣವನ್ನು ಪ್ರಾರಂಭ ಮಾಡಿಸಿದನು. ಈ ಮಹತ್ಕಾರ್ಯವು ೨ನೇ ಹರಿಹರನ ಆಳಿಕೆಯ ಕಾಲದಲ್ಲಿ ಮುಗಿಯಿತು. ಹಾಗಿದ್ದರೂ ರಾಜರು ಎಲ್ಲಾ ಮತಗಳಿಗೂ ಆಶ್ರಯ ನೀಡಿದ್ದರು. ಶೃಂಗೇರಿಯ ವಿದ್ಯಾರಣ್ಯರ ಜೊತೆಗೆ, ಕಾಶೀವಿಲಾಸ ಕ್ರಿಯಾಶಕ್ತಿ ೧ನೇ ಬುಕ್ಕನಿಗೆ ಇನ್ನೊಬ್ಬ ಗುರುವಾಗಿದ್ದರು. ದೇವರಾಯನ ಕಾಲದಲ್ಲಿ ವೀರಶೈವಧರ್ಮ ಮತ್ತು ದರ್ಶನಗಳು ವ್ಯವಸ್ಥಿತವಾದ ನೆಲೆಗಟ್ಟು ಪಡೆದುವು. ೨ನೇ ದೇವರಾಯನ ಆಳಿಕೆಯಲ್ಲಿ ವೀರಶೈವ ಕವಿ ಚಾಮರಸನು ಉತ್ಕರ್ಷ ಪಡೆದನು. ಈ ಅರಸರ ಕಾಲದಲ್ಲಿ ಸಂಸ್ಕೃತಕ್ಕೂ ಹೆಚ್ಚಿನ ಮನ್ನಣೆ ದೊರಕಿತು. ಹಾಗೆಯೇ ಪ್ರಾದೇಶಿಕ ಭಾಷಾ ಸಾಹಿತ್ಯಗಳೂ ಏಳಿಗೆ ಪಡೆದುವು.

ವಿಜಯನಗರದ ವಾಸ್ತುಶಿಲ್ಪಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ, ನೂತನವಾಗಿ ನಿರ್ಮಿಸಿದ ದೇವಾಲಯಗಳು ಸಾಮ್ರಾಜ್ಯದ ಆದರ್ಶಗಳನ್ನೂ ಮೌಲ್ಯಗಳನ್ನೂ ಪ್ರತಿನಿಧಿಸುತ್ತಿದ್ದುವು. ಒಂದು ವಿಶೇಷಲಕ್ಷಣ ಬೃಹತ್ತು ಮತ್ತು ಶಿಲ್ಪಗಳ ಬಹು ಸಂಖ್ಯಾಕತೆ. ಕಂಬಗಳು, ಭಿತ್ತಿಗಳು. ಮಂಡಪಗಳೇ ಮೊದಲಾದ ಅಂಗಗಳು ವಿಶಿಷ್ಟವಾಗಿದ್ದುವು. ವಾಸ್ತವವಾಗಿ ವಿಜಯನಗರದ ಶೈಲಿಯು ಮಿಕ್ಕ ಎಲ್ಲಾ ಪ್ರಾದೇಶಿಕ ಶೈಲಿಗಳಿಗೆ ಬದಲಿಯಾಯಿತು. ಇನ್ನೊಂದು ದೃಷ್ಟಿಯಿಂದ ಅವೆಲ್ಲವುಗಳ ಸಮ್ಮಿಳನವಾಗಿತ್ತು. ಬೇರೆ ಬೇರೆ ಭಾಷಾ ಪ್ರದೇಶದ ವಾಸ್ತುಶೈಲಿ ಲಕ್ಷಣಗಳು ಇಲ್ಲಿ ಮಿಳಿತವಾಗಿದ್ದುವು. ಅವರು ಬಳಸುತ್ತಿದ್ದ ಕಲ್ಲು ಗ್ರಾನೈಟ್, ಭಾರವನ್ನು ತಡೆದುಕೊಳ್ಳಬಲ್ಲಂಥದು. ಭಾರಿಯಾದ ಅನೇಕ ಕಂಬಗಳ ನೆರವಿನಿಂದ ವಾಸ್ತುಶಿಲ್ಪಿಗಳು ವಿಶಾಲವಾದ ಮಂಡಪಗಳನ್ನು ಕಟ್ಟುತ್ತಿದ್ದರು. ದೇವಾಲಯದ ಸುತ್ತ ಪೌಳಿಗೋಡೆಯಿರುತ್ತಿದ್ದಿತು. ಅದಕ್ಕೆ ತಾಗಿದಂತೆ ಸಾಲುಸಾಲಾಗಿ ಮಂಡಪಗಳು ಮತ್ತು ಕಿರು-ಗರ್ಭಗುಡಿಗಳು ಇರುತ್ತಿದ್ದುವು. ಸಾಮಾಜಿಕ ಸಭೆಯೇ ಧಾರ್ಮಿಕ ಕಾರ್ಯಕ್ರಮವೋ ನಡೆಯುವಾಗ ಮಂಡಪಗಳೇ ಸಭಾಭವನವಾಗುತ್ತಿದ್ದುವು. ಉಯ್ಯಾಲೆ (ಊಂಜತ) ಮಂಡಪ, ಕಲ್ಯಾಣಮಂಡಪ, ವಾಹನಮಂಡಪ (ದೇವರ ಮೆರವಣಿಗೆಗೆ ವಿವಿಧ ವಾಹನಗಳನ್ನು ಜೋಡಿಸಿಟ್ಟಿರುವ ಸ್ಥಳ), ವಸಂತಮಂಡಪ, ರಂಗಮಂಡಪ, ಕನ್ನಡಿಮಂಡಪ ಮುಂತಾದುವನ್ನು ಮುಖ್ಯ ದೇವಾಲಯದ ಸಂಕೀರ್ಣಗಳನ್ನಾಗಿ ಜೋಡಿಸಲಾಗುತ್ತಿತ್ತು. ಚೋಳ ಮತ್ತು ಪಾಂಡ್ಯ ಗೋಪುರ ನಿರ್ಮಾಣ ಶೈಲಿಯು ಇಲ್ಲಿ ಮುಂದುವರಿಯಿತು. ಹಲವು ಸಂದರ್ಭಗಳಲ್ಲಿ ದೇವಾಲಯದ ನಾಲ್ಕು ದಿಕ್ಕುಗಳಲ್ಲೂ ಅಂತಹ ಗೋಪುರಗಳಿರುತ್ತಿದ್ದುವು. ಇವುಗಳನ್ನು ಜನಪ್ರಿಯವಾಗಿ ರಾಯಗೋಪುರಗಳೆಂದು ಕರೆಯುತ್ತಿದ್ದರು. ಇವು ಈಗ ಎತ್ತರವಾದುವು, ದಪ್ಪಗೆ ಕುಳ್ಳಗೆ ಇರುವುದಕ್ಕಿಂತ ಉದ್ದವಾಗಿ ತೆಳುವಾಗಿ ಇರುತ್ತಿದ್ದುವು. ಈ ಗೋಪುರಗಳಲ್ಲಿ ಅಸಂಖ್ಯಾತ ದೇವದೇವಿಯರ ಮೂರ್ತಿಗಳು ಜನಸಾಮಾನ್ಯರ ವಿಗ್ರಹಗಳು ಸೇರಿಸಲ್ಪಟ್ಟುವು. ಇಂತಹ ಅಗಾಧ ದೇವಾಲಯಗಳನ್ನು ಸಹಜವಾಗಿಯೇ ಹಳ್ಳಿಗಳಲ್ಲಿ ನಿರ್ಮಿಸಲು ಸಾಧ್ಯವಿರಲಿಲ್ಲ. ಅಲ್ಲದೆ ಅಂತಹ ದೇವಾಲಯಗಳ ನಿರ್ಮಾಣ ವೆಚ್ಚವು ಮಧ್ಯಮವರ್ಗದವರಿರಲಿ, ಮೇಲುವರ್ಗದವರಿಗೂ ಎಟುಕುತ್ತಿರಲಿಲ್ಲ, ಹೆಚ್ಚುಕಡಮೆ ಸದಾ ಯುದ್ಧದಲ್ಲೇ ಮುಳುಗಿಹೋಗಿದ್ದುದರಿಂದ ರಾಜರು ಮತ್ತು ಗಣ್ಯ ಅಧಿಕಾರಿಗಳಿಗೆ ಅಂತಹ ದೇವಾಲಯಗಳನ್ನು ನಿರ್ಮಿಸಲು ಬೇಕಾದ ಸಮಯವಾಗಲಿ ಶಕ್ತಿಯಾಗಲಿ ಇರುತ್ತಿರಲಿಲ್ಲ. ಆದ್ದರಿಂದಲೇ ಈ ಅವಧಿಯಲ್ಲಿ ನೂತನ ದೇವಾಲಯಗಳು ಬಹುದೂರ ದೂರದಲ್ಲಿ ಹಾಗೂ ವಿರಳ ಸಂಖ್ಯೆಯಲ್ಲಿ ಕಂಡುಬರುತ್ತವೆ. ಆದರೆ ಇದ್ದ ದೇವಾಲಯಗಳಿಗೆ ಹೆಚ್ಚಿನಭಾಗವನ್ನು

ಜೋಡಿಸುವುದು ಶಿಥಿಲವಾದವನ್ನು ಜೀರ್ಣೋದ್ಧಾರ ಪಡಿಸುವುದು ಧಾರಾಳವಾಗಿ ನಡೆಯಿತು. ವಾಸ್ತವವಾಗಿ ಹೊಸದಾಗಿ ದೇವಾಲಯಗಳನ್ನು ಹಂಪಿ, ಪೆನುಗೊಂಡ, ಚಂದ್ರಗಿರಿ ಮೊದಲಾದ ನಗರಗಳಲ್ಲಿ ಮಾತ್ರ ಕಟ್ಟಿಸಲಾಯಿತು.

ಭಾರತೀಯ ಸಂಸ್ಕೃತಿಯ ಪುನರುಜ್ಜೀವನದ ಅಂಗವಾಗಿ ದೇವಾಲಯಗಳಲ್ಲಿ ಹಲವು ಆಚರಣೆಗಳನ್ನು ಸಾರ್ವಜನಿಕವಾಗಿ ನಡೆಸುವ ರೂಢಿ ಬಂದಿತು. ವರ್ಷಕ್ಕೊಮ್ಮೆ ಜಾತ್ರೆ ನಡೆಸುವುದು ಆ ಕಾಲದ ರೂಢಿಯಾಗಿತ್ತು. ಸಂಗೀತ, ನರ್ತನ, ಹರಿಕಥೆ ಮೊದಲಾದ ಸಾಂಸ್ಕೃತಿಕ ಚಟುವಟಿಕೆಗಳನ್ನು ದೇವಾಲಯದ ಆವರಣದಲ್ಲಿ ನಡೆಸಲಾಗುತ್ತಿತ್ತು. ವಿಶಾಲವಾದ ಮಂಡಪಗಳಲ್ಲಿ ಕುಳಿತುಕೊಳ್ಳಲು ಅವಕಾಶವಾಗುತ್ತಿತ್ತು. ಉತ್ಸವಗಳು ಜನಪ್ರಿಯವಾದವು, ರಾಮಾಯಣ, ಮಹಾಭಾರತ ಮಹಾಕಾವ್ಯಗಳ ಮೂಲಕವಾಗಿ ಧರ್ಮವನ್ನು ಪ್ರಸಾರ ಮಾಡುವುದಕ್ಕೆ ಪ್ರೋತ್ಸಾಹ ಪ್ರಚೋದನೆಗಳನ್ನು ಕೊಡಲಾಯಿತು. ಪುರಾಣಗಳಿಂದಾರಿಸಿದ ಕಥಾನಕಗಳನ್ನು ದೇವಾಲಯದ ಭಿತ್ತಿಗಳ ಮೇಲೆ ಹಾಗೂ ಸ್ತಂಭಗಳ ಮೇಲಿನ ಅಲಂಕಾರ ಪಟ್ಟಿಕೆಗಳಲ್ಲಿ ಕೆತ್ತಲಾಯಿತು. ಆನೆಗಳು ಮತ್ತು ಅಶ್ವಾರೋಹಿಗಳನ್ನು ಸಶಸ್ತ್ರ ಯೋಧರನ್ನೂ ಪ್ರದರ್ಶಿಸುವುಕ್ಕೆ ಪ್ರಾಮುಖ್ಯ ನೀಡಲಾಯಿತು.

ಈ ಕಾಲದ ವಾಸ್ತುಶಿಲ್ಪದಲ್ಲಿ ಗಮನಿಸಲು ಅರ್ಹವಾದ ಇನ್ನೊಂದು ಲಕ್ಷಣವೆಂದರೆ, ನಾಗರಿಕ ವಾಸ್ತು. ಹಂಪಿಯಲ್ಲಿ ಅರಮನೆಗಳು, ಈಜುಕೊಳಗಳು, ಮೆಟ್ಟಿಲುಗಳಿರುವ ಕೊಳ (ಈಚೆಗೆ ಕಂಡುಹಿಡಿಯಲಾಗಿದೆ), ಕಮಲದ ಆಕಾರದ ಕಟ್ಟಡ, ಕಾವಲು ಗೋಪುರಗಳು, ಆನೆ ಲಾಯಗಳು ಮೊದಲಾದ ಕಟ್ಟಡಗಳ ಅವಶೇಷಗಳನ್ನು ನೋಡುತ್ತೇವೆ. ಈ ಕಟ್ಟಡಗಳ ತಳಪಾಯ ಮಾತ್ರ ಕಲ್ಲಿನದು. ಮೇಲಿನ ನಿರ್ಮಾಣ ಮರ ಅಥವಾ ಗಾರೆಯದು. ಕಂಬಗಳಿಗೂ ಮರವನ್ನು ಉಪಯೋಗಿಸಿದ್ದರು. ಕೆಲವೊಮ್ಮೆ ಕಲ್ಲಿನ ಕಂಬದ ಸುತ್ತಲೂ ಇಟ್ಟಿಗೆ ಗಾರೆಗಳಿಂದ ಕಟ್ಟಿ ಕಂಬದ ಗಾತ್ರವನ್ನು ಹೆಚ್ಚುಪಡಿಸುತ್ತಿದ್ದರು. ಕೆಲವು ಕಡೆ ಮುಖ್ಯಸ್ತಂಭಗಳು ಮಧ್ಯಭಾಗದಲ್ಲಿ ಕಡಮೆ ಸುತ್ತಳತೆಯವಾಗಿದ್ದು, ಅದರ ಸುತ್ತ ಗೋಡೆಗಂಬಗಳನ್ನೂ ಮೂಲೆ ಕಂಬಗಳನ್ನೂ ನಿಲ್ಲಿಸುತ್ತಿದ್ದರು. ಕಂಬಗಳ ಮೇಲೆ ಕುದುರೆಗಳು ಮತ್ತು ಹುಲಿಗಳನ್ನು ಮುಂಗಾಲುಗಳನ್ನು ಮೇಲೆತ್ತಿ ಓಡಲು ಸಿದ್ಧವಾಗಿರುವಂತೆ ಕೆತ್ತಿರುತ್ತಿದ್ದರು. ಕಂಬದ ಮೇಲಿನ ಬೋದಿಗೆಗಳಲ್ಲಿ ಮುನ್‌ಚಾಚಿದ ಪೀಠವೊಂದಿದ್ದು ಅದರಿಂದ ಕೆಳಮುಖವಾದ ತಾವರೆಮೊಗ್ಗನ್ನು ನೇತುಬಿಟ್ಟಂತೆ ಕೆತ್ತಿರುತ್ತಿದ್ದರು. ಕಮಾನುಗಳ ಉಪಯೋಗ ಇಸ್ಲಾಮೀ ವಾಸ್ತುಶಿಲ್ಪದ ಪ್ರಭಾವ.

ಟಿಪ್ಪಣಿಗಳು

೧ ಮೇಲೆ ನೋಡಿ. ಪು. ೨೦

೨ ಬಿ.ಆರ್. ಗೋಪಾಲ್ (ಸಂ): ವಿಜಯನಗರ ಇನ್ಸ್‌ಕ್ರಿಪ್ಷನ್ಸ್, ಸಂಪುಟ ೨, ಪೀಠಿಕೆ, ಪು. ೨೭

೩ ಅದೇ, ಪು. ೨೮

೪ ಅದೇ, ಕೆ.ಎನ್. ೭೪೭, ೧೦೦೭, ೭೧೭

೫ ಅದೇ, ಕೆ.ಎನ್. ೫೧೧

೬ ಅದೇ, ಕೆ.ಎನ್. ೫೧೨

೭ ಅದೇ, ಕೆ.ಎನ್. ೫೧೩

೮ ಅದೇ, ಕೆ.ಎನ್. ೫೧೪

೯ ಅದೇ, ಕೆ.ಎನ್. ೫೧೫

೧೦ ಹಿಸ್ಟರಿ ಅಂಡ್ ಕಲ್ಚರ್ ಆಫ್ ದಿ ಇಂಡಿಯನ್ ಪೀಪಲ್, ಸಂಪುಟ ೬, ದೆಹಲಿ ಸುಲ್ತಾನರು (ಸಂ), ಆರ್. ಸಿ. ಮಜುಂದಾರ್, ಭಾರತೀಯ ವಿದ್ಯಾಭವನ, ಪು. ೨೭೭

೧೧ ಅದೇ, ಪು. ೨೮೨

೧೨ ಶೇರ್ವಾನಿ, ಎಚ್. ಕೆ. ಮತ್ತು ಜೋಶಿ, ಪಿ.ಎಂ. (ಸಂ): ಹಿಸ್ಟರಿ ಆಫ್ ಮೇಡಿವಲ್ ಡೆಕನ್, ಸಂ. ೧, ಪು. ೫೩೦-೩೧

೧೩ ವೆಂಕಟರಮಣಯ್ಯ, ಎನ್. (ಸಂ.): ವೇಲುಗೋಟಿವಾರಿ ವಂಶಾವಳಿ, ಮುನ್ನುಡಿ, ಪು. ೨೦-೨೧

೧೪ ಇ.ಆ. ಸಂ. ೩೬, ಪು. ೧೯೯

೧೫ ಬ್ರಿಗ್ಸ್,: ಹಿಸ್ಟರಿ ಆಫ್‌ದಿ ರೈಸ್ ಆಫ್ ಮಹಮಡನ್ ಪವರ್ ಇನ್ ಇಂಡಿಯಾ, ಸಂ. ೨, ಪು. ೩೭೦

೧೬ ಇ.ಆ. ಸಂ. ೨೮, ಪು. ೧೮೬

೧೭ ಎ.ಕ. ೨ (ಪ.) ಶ್ರವಣಬೆಳಗೊಳ ೪೪೬, ಮುನ್ನುಡಿ ಪು. ೪೦

೧೮ ಎ.ಕ. ೧೦, ಗೌರಿಬಿದನೂರು ೬

೧೯ ನೋಡಿ ಸಿವೆಲ್: ಎ ಫರ್‌ಗಾಟನ್ ಎಂಪೈರ್, ಪು. ೫೬-೫೯. ಫೆರಿಷ್ಟನು ಅವಳನ್ನು ಪೆರ್ಕಲ್ ಎಂದು ಕರೆಯುತ್ತಾನೆ, ಬ್ರಿಗ್ಸ್ ಆಕೆಗೆ ನೆಹಾಲ್ ಎಂದು ಹೆಸರು ಕೊಡುತ್ತಾನೆ. ನ್ಯೂನಿಜ್ ಆಗಲಿ ಇತರ ಮುಸ್ಲಿಂ ಚರಿತ್ರಕಾರರಾಗಲಿ ಇವುಗಳನ್ನು ಉಲ್ಲೇಖಿಸುವುದಿಲ್ಲ.

೨೦ ಎ.ಇ. ೨೬, ಪು. ೧೪-೧೮

೨೧ ಇ.ಆ. ೨೮, ಪು. ೧೮೬; ಎ.ಆರ್. ಐ.ಎಸ್.ಇ. ೧೯೨೪, ನಂ. ೩೦೬

೨೨ ಇ.ಆ. ಪೂರ್ವೋಕ್ತ ಪು ೧೮೬

೨೩ ವೇಲುಗೋಟವಾರಿ ವಂಶಾವಳಿ, ಮುನ್ನುಡಿ, ಪು. ೨೩-೧೮; ಎ.ಇ. ೩೬, ಪು. ೩೨-೩೭

೨೪ ಸಿವೆಲ್: ಪೂರ್ವೋಕ್ತ, ಪು. ೨೮೯

೨೫ ಎ.ಕ. ೩, ಗುಂಡ್ಲುಪೇಟೆ ೭೮, ದೇವರಾಯನು ೧೪೨೨ರ ಆಗಸ್ಟ್ ೩ಕ್ಕೆ ಮುಂಚೆ ಯಾವಾಗಲೋ ಮೃತನಾದನೆಂದು ಶಾಸನವು ಸೂಚಿಸುತ್ತದೆ.

೨೬ ಬ್ರಿಗ್ಸ್ : ಪೂರ್ವೋಕ್ತ, ಪು. ೨೩೦-೩೨

೨೭ ಮಜುಂದಾರ್, ಆರ್. ಸಿ. (ಸಂ.): ದೇಹಲಿ ಸುಲ್ತಾನೇಟ್, ಪು. ೨೯೨-೯೩

೨೮ ಸಿವೆಲ್: ಪೂರ್ವೋಕ್ತ, ಪು. ೭೦-೭೧

೨೯ ಅದೇ, ಪು. ೭೧-೭೩

೩೦ ಎ.ಕ. ೨, ಶ್ರವಣಬೆಳಗೊಳ ೪೪೫

೩೧ ಸಿವೆಲ್: ಪೂರ್ವೋಕ್ತ, ಪು. ೮೮

೩೨ ಅದೇ, ಪು. ೮೦

೩೩ ಅದೇ, ಪು. ೮೨

೩೪ ಅಯ್ಯಂಗಾರ್, ಎಸ್.ಕೆ.: ಸೋರ್ಸ್‌ಸ್ ಆಫ್ ವಿಜಯನಗರ ಹಿಸ್ಟರಿ, ಪು. ೬೫-೬೬

೩೫ ಮೇಜರ್: ಇಂಡಿಯಾ ಇನ್ ದಿ ಫಿಫ್ಟೀನ್ತ್ ಸೆಂಚುರಿ, ಪು. ೯೦

೩೬ ಸೌ. ಇ.ಇ. ೪, ಸಂಖ್ಯೆ ೧೦೦ (ತಿರುಪತಿಯಲ್ಲಿ ದೊರೆತ ಶಾಸನ)

೩೭ ಎ.ಆರ್.ಎಸ್.ಐ.ಸಿ. ೧೯೦೬ ರ ೬೯೩

೩೮ ಸುಬ್ಬರಾವ್, ಆರ್.: ಕಳಿಂಗದೇಶ ಚರಿತ್ರ, ಪು. ೧೦೪

೩೯ ದಿ ದೆಹಲಿ ಸುಲ್ತಾನೇಟ್, ಪು. ೩೦೬

೪೦ ಸಿವೆಲ್: ಪೂರ್ವೋಕ್ತ, ಪು. ೨೯೩

೪೧ ಹಿಸ್ಟರಿ ಆಫ್ ಮೆಡಿವಲ್ ಡಕ್ಕನ್, ಪು. ೧೦೮

೪೨ ಸೋರ್ಸ್‌ಸ್ ಆಫ್ ವಿಜಯನಗರ ಹಿಸ್ಟರಿ, ಪು. ೧೦೮

೪೩ ಎ.ಕ. ೮, ಎನ್.ಆರ್. ೬೪

೪೪ ಈ ತೇದಿಗೆ ಆಧಾರ ಕ್ರಿ. ಶ. ೧೬೦೪ರಲ್ಲಿ ೨ನೇ ವೆಂಕಟನ ಆದೇಶದಂತೆ ಅಟ್ಟವಣಂ ಅಧಿಕಾರಿಗಳು ತಯಾರಿಸಿದ ಒಂದು ವರದಿ 'ವಿಜಯನಗರ ಸಾಮ್ರಾಜ್ಯಮು' ಎನ್ನುವುದು. (ಫರ್‌ದರ್ ಸೋರ್ಸಸ್ ಆಫ್ ವಿಜಯನಗರ ಹಿಸ್ಟರಿ, ಪು. ೧೮೮.) ಆದರೆ ಈಗ ಡಾ. ಸಿ.ಎಸ್. ಪಾಟೀಲ್ ಮತ್ತು ಬಾಲಸುಬ್ರಹ್ಮಣ್ಯ ಅವರು ಸಿಂಗನಾಯಕನ ಹಳ್ಳಿಯ ಒಂದು ಶಾಸನವನ್ನು ಪ್ರಕಟಿಸಿದ್ದಾರೆ. ಅದರಲ್ಲಿ ಕೃಷ್ಣದೇವರಾಯನು ತನ್ನ ಪಟ್ಟಾಭಿಷೇಕ ಸಮಾರಂಭವನ್ನು ಶಕ ೧೪೩೧ ಶುಕ್ಲ ಮಾಘ ಶು. ೧ ಅಥವಾ ಕ್ರಿ.ಶ ೧೫೧೦ ಜನವರಿ ೨೪ ರಂದು ಮಾಡಿಕೊಂಡನೆಂದು ಸ್ಪಷ್ಟವಾಗಿ ಹೇಳಿದೆ. ನೋಡಿ: ವಿಜಯನಗರ ಪ್ರೋಗ್ರೆಸ್ ಆಫ್ ರಿಸರ್ಚ್ ೧೯೮೮-೯೧, ಸಂ. ೨, ಎಪಿಗ್ರಾಫಿಕಲ್ ಸ್ಟಡೀಸ್, ಪು. ೨೦.

೪೫ ಎ.ಕ. ೩, (ಪ.) ಮುನ್ನುಡಿ ಪು. ೧೧೬-೧೭

೪೬ ಸಿವೆಲ್: ಪೂರ್ವೋಕ್ತ, ಪು. ೩೦೫

೪೭ ಅದೇ, ಪು. ೩೩೯

೪೮ ಅದೇ, ಪು. ೨೩೯

೪೯ ರಾಮಶರ್ಮ, ಎಂ. ಎಚ್.: ದಿ ಹಿಸ್ಟರಿ ಆಫ್ ದಿ ವಿಜಯನಗರ ಎಂಪೈರ್, ಭಾಗ ೨, ಪು. ೨

೫೦ ತಾನ್ವರರ ರಾಜ್ಯ; ಪೋರ್ಚುಗೀಸ್ ಇನ್ ಇಂಡಿಯಾ, ಸಂ. ೧, ಪು. ೫೪೫-೪೬

೫೧ ಅವನು ೧೫೭೬ರಲ್ಲೂ ಬದುಕಿದ್ದನೆಂದು ತೋರಿಸಲು ಶಾಸನಾಧಾರವಿದೆ. (ಎಂ.ಎ.ಆರ್. ೧೯೦೯-೧೦)

೫೨ ಲಾ ಮಿಷನ್ ಡು ಮಧುರೆ, ನೋಡಿ: ಸತ್ಯನಾಥ ಅಯ್ಯರ್: ಸ್ಟಡಿ ಆಫ್ ನಾಯಕ್ಸ್ ಆಫ್ ಮಧುರೈ

೫೩ ಅಯ್ಯಂಗಾರ್, ಎಸ್.ಕೆ.: ಶ್ರೀರಂಗರಾಯಲು, ಪು. ೨೦

ಅಧ್ಯಾಯ : ನಾಲ್ಕು

ವಿಜಯನಗರ ರಾಜ್ಯಾಡಳಿತದಲ್ಲಿ ಅಮರನಾಯಕರು

ಅಮರನಾಯಕ ವ್ಯವಸ್ಥೆಯ ಸಾಮಾನ್ಯ ಸ್ವರೂಪ

ವಿಜಯನಗರ ಕಾಲದ ಭೂದಾನ ಶಾಸನಗಳು ಆಗ ಸೇನಾಧಿಕಾರಿಗಳ ವಿಶಿಷ್ಟ ವರ್ಗವೊಂದು ಅಸ್ತಿತ್ವದಲ್ಲಿದ್ದುದಕ್ಕೆ ಸಾಕಷ್ಟು ಆಧಾರವನ್ನು ಒದಗಿಸುತ್ತವೆ. ಈ ಅರ್ಥದಲ್ಲಿ ವಿಜಯನಗರ ಸರಕಾರವು ಸದಾಕಾಲವೂ ನೆರೆಹೊರೆಯ ರಾಜರುಗಳೊಂದಿಗೆ ಯುದ್ಧದಲ್ಲಿ ತೊಡಗಿರುತ್ತಿದ್ದ ಮಿಲಿಟರಿ ಆಡಳಿತವಾಗಿತ್ತು. ಹಾಗಾಗಿ, ಆಡಳಿತೀಯ ಸಮಗ್ರತೆಯನ್ನೂ ಪ್ರಭುತ್ವವನ್ನೂ ರಕ್ಷಿಸಿಕೊಳ್ಳಲು ಸರಕಾರವು ಸದಾ ಜಾಗರೂಕವಾಗಿರಬೇಕಾಗಿತ್ತು. ಎರಡು ಅಂಶಗಳ ಬೆಂಬಲದಿಂದ ಮಾತ್ರ ಅದು ಸಾಧ್ಯವಾಗುತ್ತಿತ್ತು. ಅವು ಸೈನ್ಯ ಮತ್ತು ರೈತರು. ಸೈನ್ಯಗಳನ್ನು ಕಟ್ಟುವುದು ಒಂದು ಪ್ರಧಾನ ಅಗತ್ಯವಾಗಿತ್ತು. ಬೃಹತ್ತಾದ ಸಶಸ್ತ್ರ ಸೇನೆಯನ್ನು ಕಟ್ಟುವುದು ಹೇಗೆ ಎನ್ನುವುದೇ ಪ್ರಶ್ನೆಯಾಗಿತ್ತು. ಕೇಂದ್ರದಲ್ಲಿದ್ದ ರಾಜನೊಬ್ಬನಿಗೇ ಹಾಗೆ ಬೃಹತ್ ಸೇನೆಯ ನಿರ್ಮಾಣವು ಸಾಧ್ಯವಿರಲಿಲ್ಲ. ಅದರಿಂದಾಗಿ ವಿಜಯನಗರದ ಅರಸರು ಅಧಿಕಾರವನ್ನು ವಿಕೇಂದ್ರೀಕರಿಸಲು ದಾರಿಯಾಯಿತು. ಮಾನ್ಯತೆ ಪಡೆದ ನಾಯಕರು ವಿವಿಧ ಪ್ರಾಂತಗಳ ಉಸ್ತುವಾರಿ ನೋಡಿಕೊಳ್ಳುತ್ತಿದ್ದು ನಿರ್ದಿಷ್ಟ ಪ್ರಮಾಣದ ಸೈನ್ಯವನ್ನು ಸದಾ ಸನ್ನದ್ಧವಾಗಿಟ್ಟಿರಬೇಕಾಗಿತ್ತು. ರಾಜರು ಅಗತ್ಯದ ಸಮಯಗಳಲ್ಲಿ ಅವುಗಳನ್ನು ಬಳಸಿಕೊಳ್ಳುತ್ತಿದ್ದರು. ಸ್ಥಿರವಾದ ಸರಕಾರಕ್ಕೆ ಅಗತ್ಯವಾಗಿದ್ದ ಎರಡನೆಯ ಅಂಶ ಕೃಷಿಕ ವರ್ಗ, ರಾಜ್ಯದ ಅರ್ಥ ವ್ಯವಸ್ಥೆಯ ಬೆನ್ನೆಲುಬಾಗಿದ್ದವರು ಕೃಷಿಕರು. ಭೂಮಿಯನ್ನು ಬೇಸಾಯಮಾಡಿ, ಆಹಾರವನ್ನು ಬೆಳೆದು, ಸರಕಾರಕ್ಕೆ ತೆರಿಗೆಯನ್ನು ಪಾವತಿಮಾಡುತ್ತಿದ್ದರು. ಆದ್ದರಿಂದ ಈ ಎರಡು ವರ್ಗಗಳ ಬೆಂಬಲವನ್ನು ಸರಕಾರವು ಅವಲಂಬಿಸಿತ್ತು ಮುಂದೆ ಪಾಳೆಯಗಾರರಾಗಿ ಬೆಳೆದ ಅಮರ ನಾಯಕರು ವಿಜಯನಗರದ ರಾಜ್ಯಾಡಳಿತದಲ್ಲಿ ಮುಖ್ಯ ಸೈನ್ಯಾಡಳಿತಾಧಿಕಾರಿಗಳಾಗಿ ಕಾಣಿಸಿಕೊಂಡರು.

ಅವರಿಗೆ ಭೂಮಿಯನ್ನು ಮಂಜೂರು ಮಾಡಲಾಗಿತ್ತು. ಅವುಗಳಿಗೆ 'ಅಮರಂ' ಎಂದು ಹೆಸರು. ಅವುಗಳಿಂದ ಅವರಿಗೆ ರಾಜಕೀಯ, ಆಡಳಿತೀಯ, ಆರ್ಥಿಕ ಮತ್ತು ನ್ಯಾಯ ಅಧಿಕಾರಗಳು ತಮ್ಮ ಅಮರಂ ಪ್ರದೇಶ ವ್ಯಾಪ್ತಿಗೆ ಅನ್ವಯಿಸುವಂತೆ ದೊರಕುತ್ತಿದ್ದುವು. ಸೈನ್ಯ ಹಾಗೂ ಹಣಕಾಸಿಗೆ ಸಂಬಂಧಿಸಿದ ತಮ್ಮ ಕರ್ತವ್ಯಗಳನ್ನು ಪೂರೈಸುತ್ತಿರುವವರೆಗೆ ಅವರಿಗೆ ಅರಸರಿಂದ ಯಾವುದೇ ಬಗೆಯ ಕಷ್ಟವಿರುತ್ತಿರಲಿಲ್ಲ. ಶಾಸನಗಳಲ್ಲಿ ಚಕ್ರವರ್ತಿಯು ಈ ಅಮರನಾಯಕರಿಗೆ ಭೂಮಿಯನ್ನು ಮಂಜೂರು ಮಾಡಿದ ವಿಚಾರವನ್ನು ನೋಡುತ್ತೇವೆ.[೧]

ಒಂದು ಅಮರಂ ಪ್ರದೇಶದಲ್ಲಿ ಕೇಂದ್ರದ ಆಡಳಿತವು ಜಾರಿಯಲ್ಲಿದ್ದುದಕ್ಕೆ ಯಾವ ಉಲ್ಲೇಖವೂ ನಮಗೆ ಕಾಣಿಸುವುದಿಲ್ಲ. ಈ ಅರ್ಥದಲ್ಲಿಯೇ ಡಾ. ಬರ್ಟನ್ ಸ್ಟೀನ್, ವಿಜಯನಗರ ರಾಜ್ಯಾಡಳಿತದಲ್ಲಿ

ಧರ್ಮಾಚರಣೆಯನ್ನು ನಿರ್ವಹಿಸುವ ಕೇಂದ್ರವಿತ್ತು ಎಂದು ಹೇಳುತ್ತಾನೆ. ಕೇಂದ್ರವಿದ್ದುದು ನವರಾತ್ರಿ ಅಥವಾ ಮಹಾನವಮಿಯೇ ಮೊದಲಾದ ಹಬ್ಬ ಹರಿದಿನಗಳನ್ನು ನಡೆಸಿ ಸೈನ್ಯಾಧಿಕಾರಿಗಳನ್ನು ಸಂಘಟಿಸುವ ಸಲುವಾಗಿ ಅಷ್ಟೆ. ವಿಜಯನಗರ ಸಾಮ್ರಾಜ್ಯವು ಹೆಚ್ಚು ಮಟ್ಟಿಗೆ ಕೇಂದ್ರೀಕೃತ ಆಧಾರದ ಮೇಲೆ ವ್ಯವಸ್ಥೆಗೊಂಡಿರಲಿಲ್ಲ. ಕೃಷ್ಣಸ್ವಾಮಿ ಅಯ್ಯಂಗಾರ್, ಕೆ. ಎ. ನೀಲಕಂಠ ಶಾಸ್ತ್ರಿ, ಎನ್. ವೆಂಕಟರಮಣಯ್ಯ, ಟಿ.ವಿ. ಮಹಾಲಿಂಗಂ ಮತ್ತು ನೊಬುರು ಕರಾಶಿಮ ಮೊದಲಾದ ವಿದ್ವಾಂಸರು ಈ ಸಿದ್ಧಾಂತವನ್ನು ಮುಂದಿಡುತ್ತಾರೆ.

ವಿಜಯನಗರದ ರಾಜಕೀಯ ಆಡಳಿತ ರಚನೆಯಲ್ಲಿ ಕೆಳದಿ ಮತ್ತು ಚಿತ್ರದುರ್ಗದ ನಾಯಕರಂತಹ ಆರು ವಿವಿಧ ಬೇರೆ ಬೇರೆ ವಿಭಾಗಗಳನ್ನು ನೋಡುತ್ತೇವೆ. ಕೆಳದಿಯು ತನ್ನ ಆಡಳಿತ ವ್ಯಾಪ್ತಿಯಲ್ಲಿ ಹೆಚ್ಚು ಸ್ವಯಮಾಧಿಕಾರವನ್ನು ಪಡೆದಿದ್ದುವು, ಹೆಚ್ಚು ವಿಶಾಲವಾದ ಭೂಭಾಗ ಹಾಗೂ ಸಂಪನ್ಮೂಲಗಳು ಕೆಳದಿಗೆ ಇದ್ದುವು. ಚಿತ್ರದುರ್ಗದ ಕುಟುಂಬವು ಅದಕ್ಕೆ ಹೋಲಿಸಿದರೆ ಗಾತ್ರದಲ್ಲಿ ಚಿಕ್ಕದು. ಅದರ ಸಂಪನ್ಮೂಲಗಳೂ ಕಡಮೆ. ಇದರ ಪರಿಣಾಮವಾಗಿ ಕೆಳದಿಯ ನಾಯಕರಷ್ಟು ಸ್ವಯಮಾಧಿಕಾರವನ್ನು ಚಿತ್ರದುರ್ಗದ ನಾಯಕರು ಪಡೆದಿರಲಿಲ್ಲ. ಅಂದರೆ, ಅಮರನಾಯಕರ ಪ್ರಾಮುಖ್ಯವು ನಿಂತಿದ್ದುದು ಅದರ ಭೌಗೋಳಿಕ ಸ್ಥಾನ, ಗಾತ್ರ ಮತ್ತು ಸಂಪನ್ಮೂಲ ಇವುಗಳ ಮೇಲೆ.

ಆದರೆ, ಕೆಳದಿಯಲ್ಲೇ ನಾವು ಹಲವು ಸಣ್ಣ ಸಣ್ಣ ವಿಭಾಗಗಳನ್ನು ನೋಡುತ್ತೇವೆ. ಚಂದ್ರಗುಪ್ತ, ಅರಗ ಇತ್ಯಾದಿ. ಇವರು ನೇರವಾಗಿ ಕೆಳದಿಗೆ ಉತ್ತರದಾಯಿಗಳಾಗಿದ್ದರೇ ಹೊರತು ರಾಜಕೀಯ ನಿಷ್ಠೆಯಲ್ಲಿ ವಿಜಯನಗರಕ್ಕಲ್ಲ. ಒಂದು ಬಗೆಯ ಅನುಕ್ರಮಿಕ ಶ್ರೇಣಿ ವ್ಯವಸ್ಥೆಯಿದ್ದಿತು. ಸಣ್ಣ ಭಾಗಗಳು ಕೆಳದಿಯ ಅಂಕೆಯಲ್ಲಿದ್ದು, ಉಪ-ಸಾಮಂತೀಕರಣ ಪ್ರಕ್ರಿಯೆಯ ಫಲಗಳಾಗಿದ್ದರು.

ವಿಜಯನಸರ ರಾಜ್ಯಾಡಳಿತ ವ್ಯವಸ್ಥೆಯಲ್ಲಿ ಈ ರಾಜಕೀಯ ಆಡಳಿತ ಪ್ರಕ್ರಿಯೆಯು ಅನೇಕ ಪರಿಣಾಮ ಗಳನ್ನು ಹೊಂದಿದ್ದಿತು. ಒಳಜಗಳಗಳನ್ನೂ ರಾಜಕೀಯ ಅಧಿಕಾರಕ್ಕಾಗಿ ಕಚ್ಚಾಟವನ್ನೂ ಕನಿಷ್ಠ ಪ್ರಮಾಣಕ್ಕಿಳಿಸಲು ಅದು ಪ್ರಯತ್ನಿಸಿತೆನ್ನುವುದರಲ್ಲಿ ಸಂದೇಹವಿಲ್ಲ. ವಿಧೇಯತೆ-ನಿಷ್ಠೆಯನ್ನು ಒಂದು ವ್ಯವಸ್ಥಿತವಾದ ರೂಪದಲ್ಲಿ ಸರಪಣಿಕ್ರಿಯೆಯಾಗಿ ನಿಲ್ಲುವಂತೆ ಮಾಡಿತು ಕೂಡ. ಗೆದ್ದ ಸ್ಥಳೀಯ ಸಾಮಂತ ಕುಟುಂಬವನ್ನು ನಾಶ ಮಾಡದೆ ವಿಜಯನಗರ ರಾಜಕೀಯ ರಚನೆಯ ಮುಖ್ಯವಾಹಿನಿಗೆ ಸೇರಿಸಲಾಗುತ್ತಿತ್ತು. ಕೆಲವೇ ಸಂದರ್ಭಗಳಲ್ಲಿ ಹಳೆಯ ಮನೆತನಗಳನ್ನು ನಾಶಮಾಡಲಾಯಿತು. ಈ ರೀತಿಯಾಗಿ ವಿಜಯನಗರ ಸಾಮ್ರಾಜ್ಯದಲ್ಲಿ ವಿವಿಧ ಆಡಳಿತ ಘಟಕಗಳನ್ನು ಕಟ್ಟುಗೂಡಿಸಿ ಇಡಲಾಗಿತ್ತು. ಸಾಮ್ರಾಜ್ಯದ ರಾಜಕೀಯ ಅಧಿಕಾರವು ಕೇಂದ್ರದಲ್ಲಿ ಸಂಚಯಗೊಳ್ಳದೆ ಹಲವಾರು ಮಿಲಿಟರಿ ಆಡಳಿತೀಯ ಘಟಕಗಳ ಮೂಲಕ ಕೆಳಮುಖವಾಗಿ ಹಂಚಿಹೋಗಿತ್ತು.

ಈ ರೀತಿಯಲ್ಲಿ ಅಮರನಾಯಕರು ಮೂಲತಃ ಸೈನ್ಯಾಧಿಕಾರಿಗಳಾಗಿದ್ದರು. ಸೇನಾ ಸೇವೆಯನ್ನು ಸಲ್ಲಿಸುವ ಷರತ್ತಿನ ಮೇಲೆ ಅವರು ರಾಜನಿಂದ ಭೂಮಿಯನ್ನು ಪಡೆದುಕೊಂಡಿದ್ದರು. ಟಿ. ವಿ. ಮಹಾಲಿಂಗಂ ಅವರ ಪ್ರಕಾರ ''ಭೂಮಿಯೆಲ್ಲವೂ ರಾಜನಿಗೆ ಸೇರಿದ್ದು. ಅವನು ತನ್ನನ್ನು ಅವಲಂಬಿಸಿದವರಿಗೆ ಅದನ್ನು ಹಂಚುತ್ತಿದ್ದರು. ಹಾಗೆ ಭೂಮಿಯನ್ನು ರಾಜನಿಂದ ಪಡೆದುಕೊಂಡವರನ್ನು ನಾಯಕರೆಂದು ಕರೆಯುತ್ತಿದ್ದರು.[೨] ಸಮಕಾಲೀನ ಶಾಸನಗಳು ಅಮರನಾಯಕರ ಸ್ಥಾನಮಾನದ ಮೇಲೆ ಹಾಗೂ ವಿಜಯನಗರದ ಅರಸರು ನಾಯಕರಿಗೆ ನೆಲವನ್ನು ದಾನವಾಗಿ ನೀಡಿದ ವಿಚಾರದ ಮೇಲೆ ಸ್ವಾಗತಾರ್ಹವಾದ ಬೆಳಕು ಚೆಲ್ಲುತ್ತದೆ.[೩] ಅಮರನಾಯಕರಿಗೆ ನೀಡಿದ ಭೂದಾನವನ್ನು ಅಮರಮಾಗಣಿ[೪] ಅಮರನಾಯಕರ[೫], ಅಮರ ಮಹಲ್[೬] ಅಮರ ಅಂಬಲಿ[೭] ಅಮರ ಪಂದೆಯನಾಯಕ[೮] ಎಂದು ವಿಧವಿಧವಾಗಿ ಕರೆಯುತ್ತಿದ್ದರು. ರಾಜನಿಗೆ ಅಗತ್ಯ ಬಿದ್ದಾಗಲೆಲ್ಲಾ ಸೈನ್ಯ ಸೇವೆಯನ್ನು ಒದಗಿಸುವುದಾಗಿ ಷರತ್ತನ್ನು ಒಪ್ಪಿ ಅವರು ನೆಲವನ್ನು ಪಡೆಯುತ್ತಿದ್ದರು. ಅಮರ ಎನ್ನುವುದು ಒಂದು ಸಾವಿರ ಕಾಲ್ದಳದ ಒಡೆತನ.[೯] ಒಬ್ಬೊಬ್ಬ ನಾಯಕನೂ ನಿರ್ದಿಷ್ಟ ಪ್ರಮಾಣದ

ಸೈನ್ಯವನ್ನು ಚಕ್ರವರ್ತಿಯ ಸೇವೆಯಲ್ಲಿ ತೊಡಗಿಸಲು ಸಿದ್ಧವಾಗಿ ಇಟ್ಟಿರಬೇಕಾಗಿತ್ತು. ಅದು ಅವರು ಪಡೆದ ಭೂಭಾಗದ ವಿಸ್ತಾರವನ್ನು ಅವಲಂಬಿಸಿತ್ತು. ಅದರ ಆಧಾರದ ಮೇಲೆಯೇ ಅವರ ಸ್ಥಾನಮಾನಗಳೂ ನಿಂತಿದ್ದುವು.

ಅದರ ಆಧಾರದಿಂದ ನಾವು ಅಮರನಾಯಕರನ್ನು ಸ್ಥೂಲವಾಗಿ ಮೂರು ವರ್ಗವಾಗಿ ವಿಭಾಗಿಸಬಹುದು. ಕೆಳದಿಯ ನಾಯಕರು, ಯಲಹಂಕ ನಾಯಕರು ಮತ್ತು ಚಿತ್ರದುರ್ಗ ನಾಯಕರು ಮೊದಲನೆಯ ವರ್ಗಕ್ಕೆ ಸೇರುತ್ತಾರೆ. ಏಕೆಂದರೆ ಅವರು ಬಹು ವಿಶಾಲ ವ್ಯಾಪ್ತಿಯ ಭೂಮಿಯನ್ನು ತಮ್ಮ ಹತೋಟಿಯಲ್ಲಿ ಇಟ್ಟುಕೊಂಡಿದ್ದರು. ತಮ್ಮ ಸಂಪನ್ಮೂಲದಿಂದ ಅವರು ಸೈನ್ಯವನ್ನು ಕೋಟೆಗಳನ್ನು ಕಾಪಾಡಿಕೊಂಡಿದ್ದರು, ಕೆಳದಿಯನಾಯಕ ಚೌಡನು ಎಂಟು ಮಾಗಣೆಗಳನ್ನು ವಿಜಯನಗರದ ಅರಸನಿಂದ ಅಮರಮಾಗಣೆಯಾಗಿ ಪಡೆದಿದ್ದನು.[೧೧] ಮುಂದೆ ಕೆಳದಿಯ ನಾಯಕರು ಸದಾಶಿವರಾಯನಿಂದ ಚಂದ್ರಗುತ್ತಿಯನ್ನೂ ತುಳುನಾಡನ್ನೂ ಅಮರಮಾಗಣೆಯಾಗಿ ಪಡೆದರು.[೧೨] ಹೆಚ್ಚು ಭೂಭಾಗವು ದೊರಕಿದಂತೆ ಅವರು ಸಂಪನ್ಮೂಲವನ್ನೂ ಬೆಳೆಸಿ ಸೈನ್ಯಬಲವನ್ನೂ ಹೆಚ್ಚಿಸಲು ಪ್ರಯತ್ನಿಸಿದರು. ಹೀಗೆ ಗಳಿಕೆ ಮತ್ತು ಸಂಘಟನೆಗಳು ಜೊತೆ ಜೊತೆಯಾಗಿ ನಡೆದಿದ್ದುವು. ಇದರ ಫಲವಾಗಿ ಸಾಮ್ರಾಜ್ಯದ ವ್ಯವಹಾರಗಳಲ್ಲಿ ಅವರು ಮುಖ್ಯವಾದ ಪಾತ್ರವನ್ನು ನಿರ್ವಹಿಸತೊಡಗಿದರು. ಉದಾಹರಣೆಗೆ, ಕಲ್ಯಾಣ ಮತ್ತು ಗುಲ್ಬರ್ಗಾ ಅರಸರ ವಿರುದ್ಧ ಕಾದಲು ಚಕ್ರವರ್ತಿಯು ಕೆಳದಿಯ ರಾಜ ಸದಾಶಿವನಾಯಕನನ್ನು (೧೫೧೩-೧೫೪೫) ಕರೆಸಿದನು.[೧೩] ಬೀದರ್ ಸುಲ್ತಾನ, ತುಳುವರು, ಬಂಕಾಪುರ ಮತ್ತು ಕೇರಳಗಳ ರಾಜರು ಮೊದಲಾದವರ ಮೇಲೆ ನಡೆದ ಯುದ್ಧಗಳಲ್ಲಿ ಭಾಗವಹಿಸಿದುದರಿಂದ ಅವನು ಸಲ್ಲಿಸಿದ ಸೇವೆಯನ್ನು ಮೆಚ್ಚಿ ರಾಮರಾಯನು ಅವನನ್ನು ವಿಶೇಷವಾಗಿ ಸನ್ಮಾನಿಸಿದನು.

ಕೆಳದಿಯ ನಾಯಕರು ತಮ್ಮ ಪ್ರಭುವಿಗೆ ವಿಧೇಯರಾಗಿ ಉಳಿದುಕೊಂಡಿದ್ದರು, ಅವರ ಪ್ರಾಮಾಣಿಕ ಸೇವೆಗಾಗಿ ಬೇಕಾದಷ್ಟು ಪ್ರತಿಫಲವನ್ನು ಪಡೆದರು ಎನ್ನುವುದು ಇದರಿಂದ ವೇದ್ಯವಾಗುತ್ತದೆ. ಅವರಿಗಿದ್ದ ಅಮರಂಗಳ ವ್ಯಾಪ್ತಿಯಿಂದ, ಅವರು ಸಂಗ್ರಹಿಸಿಟ್ಟುಕೊಂಡಿದ್ದ ಐಶ್ವರ್ಯದಿಂದ, ಅವರ ಆಜ್ಞಾಧೀನವಾಗಿದ್ದ ಯೋಧಬಲದಿಂದ, ಅವರು ತೋರಿಸಿದ ಪ್ರಶ್ನಾತೀತವಾದ ನಿಷ್ಠೆಯಿಂದ ಅವರು ಮೊದಲನೆಯ ವರ್ಗಕ್ಕೆ ಸೇರಿದವರಾದರು.

ಯಲಹಂಕನಾಡು ನಾಯಕರೂ ಮೊದಲವರ್ಗಕ್ಕೇ ಸೇರುತ್ತಾರೆ. ಈ ಸಾಮಂತ ಮನೆತನದ ಸ್ಥಾಪಕ ರಣಬೈರೇಗೌಡ; ಅವನೊಬ್ಬ ಉದ್ಯಮಶೀಲನಾದ ಕೃಷಿಕ . ೧ನೇ ಕೆಂಪೇಗೌಡನ ಆಳಿಕೆಯಲ್ಲಿ (೧೫೧೩-೧೫೬೯) ಈ ಮನೆತನವು ವಿಶೇಷ ಪ್ರಾಮುಖ್ಯವನ್ನು ಪಡೆಯಿತು. ಯುದ್ಧ ಭೂಮಿಯಲ್ಲಿ ಅವನ ಪರಾಕ್ರಮವನ್ನು ನೋಡಿ ಮೆಚ್ಚಿದ ಅಚ್ಯುತರಾಯನು ಅವನಿಗೆ ಒಂದು ಕೋಟೆಯನ್ನು ಕಟ್ಟಿಕೊಳ್ಳಲು ಅನುಮತಿ ನೀಡಿದನು. ಅಲ್ಲದೆ ವರ್ಷಕ್ಕೆ ೩೦,೦೦೦ ಪಗೋಡಗಳ ವರಮಾನ ಬರುತ್ತಿದ್ದ ಒಟ್ಟು ೧೨ ಹೋಬಳಿಗಳನ್ನು ಅವನಿಗೆ ಉಡುಗೊರೆಯಾಗಿ ಕೊಟ್ಟನು.[೧೪] ರಾಯನ ಅಧೀನದಲ್ಲಿ ಹೀಗೆ ಪುರೋಭಿವೃದ್ಧಿ ಹೊಂದುತ್ತಿದ್ದರೂ ಕ್ರಮೇಣ ಅವಿಧೇಯತೆಯ ಕುರುಹುಗಳನ್ನು ತೋರತೊಡಗಿದನು. ಚಕ್ರವರ್ತಿಯ ಅನುಮತಿ ಪಡೆಯುವ ಗೋಜಿಗೇ ಹೋಗದೆ ತಾನೇ ಒಂದು ಟಂಕಸಾಲೆಯನ್ನು ಸ್ಥಾಪಿಸಿಕೊಂಡನು. ಈ ಬೆಳವಣಿಗೆಗಳನ್ನು ತಿಳಿದುಕೊಂಡ ಚಕ್ರವರ್ತಿಯು ಅವನನ್ನು ಬಂಧಿಸಿ, ಆನೆಗೊಂದಿಯಲ್ಲಿ ೫ ವರ್ಷಗಳ ಕಾಲ ಸೆರೆಯಲ್ಲಿಟ್ಟನು.[೧೫]

ಚಿತ್ರದುರ್ಗದ ನಾಯಕರೂ ದಕ್ಷಿಣಭಾರತದ ರಾಜಕಾರಣದಲ್ಲಿ ಪ್ರಾಧಾನ್ಯ ಪಡೆದಿದ್ದವರು. ಪ್ರಾರಂಭದಲ್ಲಿ ತಿಮ್ಮಣ್ಣನಾಯಕನು ಒಬ್ಬ ಸಾಧಾರಣ ಅಮರನಾಯಕನಾಗಿದ್ದನು. ಅವನ ಪರಿಶ್ರಮ ಮತ್ತು ಪರಾಕ್ರಮಗಳನ್ನು ಗುರುತಿಸಿ ವಿಜಯನಗರದ ಅರಸರು ಕ್ರಿ. ಶ. ೧೫೬೫ರಲ್ಲಿ ಅವನಿಗೆ ಹೊಳಲ್ಕೆರೆಯ ಅಮರನಾಯಕನಾಗಿ ಬಡ್ತಿನೀಡಿ ಪುರಸ್ಕರಿಸಿದರು. ೧೫೬೮ರಲ್ಲಿ ಅವನು ಚಿತ್ರದುರ್ಗದ ನಾಯಕನೆಂದೂ

ಕರೆದುಕೊಳ್ಳಲು ಸಾಧ್ಯವಾಯಿತು. ೧೫೦೨ರಲ್ಲಿ ಸಾಮ್ರಾಜ್ಯ ಸೌಧದ ಮುಖ್ಯ ಆಧಾರಸ್ತಂಭಗಳಲ್ಲಿ ಒಬ್ಬನೆಂದು ಅವನನ್ನು ಗೌರವಿಸಲಾಗಿತ್ತು. ಆಮೇಲೆ ಗುಲ್ಬರ್ಗ ಕೋಟೆಯನ್ನು ಗೆದ್ದು ಸಾಮ್ರಾಜ್ಯಕ್ಕೆ ಸೇರಿಸಿದನು. ಆದರೆ ಅವಿಧೇಯತೆಯಿಂದಾಗಿ ಅವನು ವಿಜಯನಗರದಲ್ಲಿ ಬಂಧನಕ್ಕೊಳಗಾಗಿ ತನ್ನ ಜೀವನವನ್ನು ಮುಗಿಸಬೇಕಾಯಿತು.[೧೫] ಅಂಕೆಯಲ್ಲಿದ್ದ ಭೂವಿಸ್ತಾರ, ಪಡೆದಿದ್ದ ಅಧಿಕಾರ ಮತ್ತು ಗೌರವಗಳ ದೃಷ್ಟಿಯಿಂದ ಚಿತ್ರದುರ್ಗದ ನಾಯಕರನ್ನು ಮೊದಲನೆಯ ವರ್ಗಕ್ಕೆ ಸೇರಿಸಬಹುದು.

ಬೇರೆ ಬೇರೆ ನಾಯಕರು ಹೇಗೆ, ತಮ್ಮ ತಮ್ಮ ನಿಯಂತ್ರಣದಲ್ಲಿದ್ದ ಭೂಪ್ರದೇಶಕ್ಕನುಗುಣವಾಗಿ ವರಮಾನವನ್ನು ರಾಜನಿಗೆ ಒಪ್ಪಿಸುತ್ತಿದ್ದರು ಎಂಬುದನ್ನು ಕುರಿತ ಒಂದು ನಿರೂಪಣೆಯನ್ನು ಪೇಸ್ ಕೊಡುತ್ತಾನೆ:''ಈ ರಾಜನಿಗೆ ವರಮಾನ ಏನು? ಅವನ ಸಂಪತ್ತು ಎಷ್ಟಿದೆ, ಅಷ್ಟೊಂದು ಅಗಾಧವಾದ ಸೈನ್ಯಕ್ಕೆ ಅವನು ವೇತನ ಕೊಡಬೇಕಲ್ಲ? ಅವನ ರಾಜ್ಯದಲ್ಲಿ ಅನೇಕ ದೊಡ್ಡ ನಾಯಕರಿದ್ದರೆ, ಅವರು ಭಾರೀ ಐಶ್ವರ್ಯವನ್ನು ಹೊಂದಿದ್ದರೆ – ಎಂದು ಯಾರಾದರೂ ಕೇಳಿದರೆ ನಾನು ಹೀಗೆ ಉತ್ತರ ಕೊಡುತ್ತೇನೆ. ''ಈ ಸೇನಾನಾಯಕರು ಸೈನ್ಯಗಳ ಮೇಲೆ ಒಡೆತನ ಹೊಂದಿದ್ದಾರೆ. ಅವರು ರಾಜರಿದ್ದ ಹಾಗೆ, ಅವರೇ ನಗರವನ್ನು ಆಳುತ್ತಾರೆ.ರಾಜ್ಯದ ಪಟ್ಟಣಗಳು ಮತ್ತು ಹಳ್ಳಿಗಳನ್ನು ಆಳುತ್ತಾರೆ. ಒಂದು ಮಿಲಿಯನ್ ಅಥವಾ ಒಂದೂವರೆ ಮಿಲಿಯನ್ ಪರ್ದಾವೋಗಳ ವರಮಾನವುಳ್ಳ ನಾಯಕರಿದ್ದರೆ. ಇತರರು ನೂರು ಸಾವಿರ ಪರ್ದಾವೋಗಳು, ಇತರರು ಇನ್ನೂರು, ಮುನ್ನೂರು, ಐನೂರು ಸಾವಿರ ಪರ್ದಾವೋಗಳ ವರಮಾನ ಪಡೆದಿದ್ದಾರೆ. ಪ್ರತಿಯೊಬ್ಬನಿಗೂ ಹೀಗೆ ವರಮಾನವಿರುವುದರಿಂದ ಅವನು ಕಾಪಾಡಬೇಕಾದ ಸೈನ್ಯದ ಸಂಖ್ಯೆಯನ್ನು ರಾಜನು ನಿಗದಿಪಡಿಸಿದ್ದಾನೆ, ಇಂತಿಷ್ಟು ಪದಾತಿ ಪಡೆ, ಕುದುರೆ, ಆನೆಗಳು ಇತ್ಯಾದಿ, ಈ ಸೇನಾ ಪಡೆಗಳು ಯಾವಾಗಲೂ ಯುದ್ಧಕ್ಕೆ ಸಿದ್ಧವಾಗಿರುತ್ತವೆ. ಯಾವಾಗ ಕರೆದರೂ, ಎಲ್ಲಿಗೆ ಹೋಗಬೇಕಾದರೂ ಸಿದ್ಧವಾಗಿರುತ್ತವೆ. ಹೀಗೆ ರಾಜನು ಮಿಲಿಯಗಟ್ಟಲೆ ಯೋಧರ ಪಡೆಯನ್ನು ಸದಾ ಕಾಲವೂ ಸಿದ್ಧವಾಗಿಟ್ಟುಕೊಂಡಿದ್ದಾನೆ. ಪ್ರತಿಯೊಬ್ಬ ನಾಯಕನೂ ಅತ್ಯುತ್ತಮ ಸೇನೆಯನ್ನು ಸಜ್ಜುಗೊಳಿಸಲು ಕಷ್ಟಪಡುತ್ತಾನೆ. ಏಕೆಂದರೆ ಅವರಿಗೆ ಅವನು ವೇತನ ಕೊಡುತ್ತಾನೆ. ಈ ದೃಷ್ಟಿಯಿಂದ ನೋಡಿದಾಗ ಅತ್ಯಂತ ಸದೃಢರಾದ ತರುಣರು ಸೇನೆಯಲ್ಲಿ ನನಗೆ ಕಾಣಿಸಿದರು. ಒಬ್ಬನೇ ಒಬ್ಬನೂ ಹೇಡಿಯಾಗಿ ನಡೆದುಕೊಳ್ಳುವಂಥವನು ಕಾಣಿಸಲಿಲ್ಲ. ಹೀಗೆ ಸೈನ್ಯವನ್ನು ಸಾಕುವುದರ ಜೊತೆಗೆ, ಪ್ರತಿಯೊಬ್ಬ ನಾಯಕನೂ ರಾಜನಿಗೆ ವಾರ್ಷಿಕವಾಗಿ ಹಣವನ್ನು ಪಾವತಿ ಮಾಡಬೇಕು. ರಾಜನು ತಾನೇ ವೇತನ ಕೊಡುವ ಒಂದು ಸೇನಾ ಪಡೆಯನ್ನೂ ಇಟ್ಟಿಕೊಂಡಿದ್ದಾನೆ. ...... ಬಿಸ್ನಾಗರ ರಾಜನಿಗೆ ಅಧೀನರೂ ಸಾಮಂತರೂ ಆದ ಐದು ಜನ ರಾಜರಿದ್ದಾರೆ. ಅಲ್ಲದೆ ವಿಶಾಲವಾದ ಭೂಭಾಗಗಳನ್ನೂ ಅಧಿಕ ವರಮಾನವನ್ನೂ ಹೊಂದಿರುವ ಇತರ ಅನೇಕ ನಾಯಕರು ಮತ್ತು ರಾಜರು ಇದ್ದಾರೆ.'' ಪೇಸ್‌ನ ಈ ನಿರೂಪಣೆಯಿಂದ ನಾವು ಹೀಗೆ ತೀರ್ಮಾನಿಸಬಹುದು. ಬೇರೆ ಬೇರೆ ವರ್ಗಗಳ ಅಮರನಾಯಕರಿದ್ದರು. ಅವರು ತಾನು ನಿಯಂತ್ರಿಸುತ್ತಿದ್ದ ಪ್ರದೇಶ ವಿಸ್ತಾರಕ್ಕನುಗುಣವಾಗಿ ರಾಜನಿಗೆ ವರಮಾನವನ್ನು ಪಾವತಿ ಮಾಡುತ್ತಿದ್ದರು. ಅದಕ್ಕೆ ಅನುಗುಣವಾದ ಸಂಖ್ಯೆಯ ಸೈನ್ಯವನ್ನು ಪಾಲಿಸಬೇಕಾಗಿದ್ದಿತು.[೧೬]

ನ್ಯೂನಿಜ್ ಹೇಳುತ್ತಾನೆ. ''ಎಲ್ಲ ಭೂಮಿಯೂ ರಾಜನಿಗೆ ಸೇರಿದೆ. ಅವನಿಂದ ಪಡೆದು ಸೇನಾನಾಯಕರು ಅದನ್ನು ಆಳುತ್ತಾರೆ.[೧೭] ಈ ರೀತಿಯಲ್ಲಿ ಬಿಸ್ನಗರ್ ರಾಜ್ಯವು ಇನ್ನೂರಕ್ಕೂ ಹೆಚ್ಚು ಜನ ನಾಯಕರಲ್ಲಿ ವಿಭಾಗಗೊಂಡಿದೆ. ಅವರೆಲ್ಲರೂ ವಿಧರ್ಮಿಯರು. ಅವರು ಹೊಂದಿರುವ ಭೂಪ್ರದೇಶ ಮತ್ತು ಅವರಿಗಿರುವ ವರಮಾನಗಳ ಆಧಾರದಿಂದ ರಾಜನು ಅವರು ಕಾಪಾಡಲೇಬೇಕಾದ ಸೈನ್ಯದ ಪ್ರಮಾಣವನ್ನೂ, ಪ್ರತಿವರ್ಷ ತನಗೆ ಕೊಡಬೇಕಾದ ವರಮಾನವನ್ನೂ ನಿಗದಿ ಪಡಿಸುತ್ತಾನೆ. ಅದನ್ನು ಅವರು ಸೆಪ್ಟೆಂಬರ್ ತಿಂಗಳ ಮೊದಲ ಒಂಬತ್ತು ದಿನಗಳೊಳಗಾಗಿ ಪಾವತಿ ಮಾಡಬೇಕಾಗುತ್ತದೆ''[೧೮] ಅವರಲ್ಲಿ ನ್ಯೂನಿಜ್‌ನು ಕರ್ನಾಟಕದ

ಬಂಕಾಪುರ, ಕಳಲೆ, ಮಂಗಳೂರು ಮತ್ತು ಬೂದಿಹಾಳುಗಳನ್ನು ಉಲ್ಲೇಖಿಸುತ್ತಾನೆ. ಅಮರನಾಯಕರ ಮೊದಲನೆಯ ವರ್ಗವನ್ನು ಕುರಿತು ಅವನು ಹೇಳುವುದು, ''ಈ ರಾಜ್ಯದ ನಾಯಕರು ಡೋಲಿಗಳನ್ನೂ ಪಲ್ಲಕ್ಕಿಗಳನ್ನೂ ಉಪಯೋಗಿಸುತ್ತಾರೆ...... ಆದರೆ ಜನರು ಉತ್ತಮ ಅಶ್ವಾರೋಹಿಗಳಾಗಿದ್ದ ಹೊರತು ಡೋಲಿಗಳನ್ನು ಬಳಸುವುದಕ್ಕೆ ಅವಕಾಶವಿರುವುದಿಲ್ಲ.''[೧೯] ''ನಾಯಕರು ಮತ್ತು ಗಣ್ಯ ಜನರು ರಾತ್ರಿ ವೇಳೆ ಎಣ್ಣೆಯಿಂದ ಉರಿಯುವ ಪಂಜುಗಳನ್ನು ಉಪಯೋಗಿಸುತ್ತಾರೆ. ಅವರವರ ಸ್ಥಾನಮಾನಕ್ಕೆ ತಕ್ಕಂತೆ ೪ ರಿಂದ ೧೨ ಪಂಜುಗಳು ಉರಿಯುತ್ತವೆ. ಅತ್ಯಂತ ಉನ್ನತವಾದ ಸ್ಥಾನದಲ್ಲಿರುವವನಿಗೆ ಹೆಚ್ಚೆಂದರೆ ೧೨ ಪಂಜುಗಳು ಇರುತ್ತವೆ.''[೨೦]

ನ್ಯೂನಿಜ್ ತನ್ನ ವರದಿಯಲ್ಲಿ ಮುಖ್ಯರಾದ ಅಮರನಾಯಕರು, ಅವರು ನಿಯಂತ್ರಿಸುತ್ತಿದ್ದ ಪ್ರದೇಶ ವಿಸ್ತಾರ, ಅವರ ವರಮಾನ, ಅವರು ಒದಗಿಸಬೇಕಾಗಿದ್ದ ಸೈನ್ಯ, ಚಕ್ರವರ್ತಿಗೆ ಸಲ್ಲಿಸಬೇಕಾಗಿದ್ದ ವಾರ್ಷಿಕ ಕೊಡುಗೆ ಇವುಗಳನ್ನು ಪಟ್ಟಿ ಮಾಡಿದ್ದಾನೆ.

ಅಮರನಾಯಕನ ಹೆಸರು	ವಾರ್ಷಿಕ ವರಮಾನ	ಸೈನ್ಯದ ಪ್ರಮಾಣ	ಹಣ(ವಾರ್ಷಿಕ)
೧. ಅಚ್ಯುತರಾಯನ ಮಂತ್ರಿ ಸಾಳುವ ನಾಯಕ, ಚಾರಮಂಡಲ, ನಾಗಪಟ್ಟಣ ತಂಜಾವೂರು, ರಂಗನಿಯನ್ (ತಿಳಿದಿಲ್ಲ) ದಲಪತವೋ (ದೇವಿಪಟ್ಟಣ) ಟ್ರಿಕೆವಿಲ್ ಕೌಲಿನ್-ಸಿಲೋನಿನ ಗಡಿಗಳ ನಾಯಕರು	೧೧,೦೦೦,೦೦೦ ಪರ್ಡಾವೋಗಳು ಚಿನ್ನದವು	೩೦,೦೦೦ ಪದಾತಿ ೩೦೦೦ ಕುದುರೆ ೩೦ ಆನೆ	೧/೩ ಭಾಗ
೨. ಅಜಪರ್ ಚಟಿಮಪ, ಉದಯಗೀರ್ ಗವರ್ನರ್, ಕೊಂಡವೀಡು, ಪೆನುಗೊಂಡೆ, ತನಿಗಿರಿ, ಸಿಡೆಯೋಟ್ (ಕಡಪಾ ಜಿಲ್ಲೆಯ ಸಿದ್ಧಾರ್ಥಂ)	೮,೦೦೦,೦೦ ಚಿನ್ನದಪರ್ಡಾವೋ	೨೫,೦೦೦ ಪದಾತಿ ೧,೫೦೦ ಕುದುರೆ ೪೦ ಆನೆ	೩,೦೦,೦೦೦ ಪಾರ್ಡಾವೋ
೩. ರೋಸಿತ (ಬಹುಶಃ ಗೋವಾದ ಬಳಿಯ ರಾಚೋಟ್) ರಾಜ ಗೋಪನಾಯಕ	೬,೦೦,೦೦೦ ಪರ್ಡಾವೋ	೨೦,೦೦೦ ಪದಾತಿ ೨೫೦೦ ಕುದುರೆ ೨೦ ಆನೆ	೧,೫೦,೦೦೦ ಪರ್ಡಾವೋ
೪. ಲೆಪೋಪಾಯ್ಕ, ವಿಂಗಪೂರ್ (ಬಂಕಾಪುರ) ರಾಜ	೩,೦೦,೦೦೦	೧೦,೦೦೦ ಪದಾತಿ ೧೨,೦೦ ಕುದುರೆ ೨೮ ಆನೆ	೮೦,೦೦೦ ಪರ್ಡಾವೋ
೫. ಒಂದೆಗೆರಾದ ರಾಜ ನರವರ	೪,೦೦,೦೦೦ ಪರ್ಡಾವೋ	೧೨,೦೦೦ ಪದಾತಿ ೬೦೦ ಕುದುರೆ ೨೦ ಆನೆ	೨,೦೦,೦೦೦ ಪರ್ಡಾವೋ
೬. ಬೆನಪ್ಪನಾಯಕ, ಕ್ಯಾಲೆಯ ರಾಜ (ಬಹುಶಃ ಮೈಸೂರಿನ ಕಳಲೆ)	೩,೦೦,೦೦೦ ಪರ್ಡಾವೋ	೧೦,೦೦೦ ಪದಾತಿ ೮೦೦ ಕುದುರೆ	೧,೦೦,೦೦೦ ಪರ್ಡಾವೋ
೭. ಆವೋಪತ (ಗುರುತಿಸಲಾಗಿಲ್ಲ) ರಾಜ ಕೃಷ್ಣಪ್ಪನಾಯಕ	೨೦,೦೦೦ ಪರ್ಡಾವೋ	೭೦೦ ಪದಾತಿ ೫೦೦ ಕುದುರೆ	೭,೦೦೦ ಪರ್ಡಾವೋ
೮. ಬೋದಿಯಲ್ (ಬೂದಿಹಾಳ) ಅರಸ ಬಾಜಪನಾಯಕ	೩,೦೦,೦೦೦ ಪರ್ಡಾವೋ	೧೦,೦೦೦ ಪದಾತಿ ೮೦೦ ಕುದುರೆ ೧೫ ಆನೆ	೧೦,೦೦೦ ಪರ್ಡಾವೋ

೯. ಮಲ್ಲಪ್ಪನಾಯಕ, ಅವಲಿ ರಾಜ್ಯದ ರಾಜ (ಬಹುಶಃ ಕೋಲಾರ ಜಿಲ್ಲೆಯ ಅವಂತಿ)	೧೫,೦೦೦ ಪರ್ಡಾವೋ	೬,೦೦೦ ಪಾವತಿ ೪೦೦ ಕುದುರೆ	೫,೦೦೦ ಪರ್ಡಾವೋ
೧೦. ಗೋಟ್ಸ್ (ಬಹುಶಃ ಗೂಟಿ-ಗುತ್ತಿ-) ರಾಜ್ಯದ ಆದಪ್ಪನಾಯಕ	೩,೦೦,೦೦೦ ಪರ್ಡಾವೋ	೮,೦೦೦ ಪದಾತಿ ೮೦೦ ಕುದುರೆ ೩೦ ಆನೆ	೪೦,೦೦೦ ಪರ್ಡಾವೋ
೧೧. ಮುದೋಗಲ್ (ಮುದ್ಗಲ್) ರಾಜ ಬಾಜಪ್ಪನಾಯಕ	೪,೦೦,೧೦೦ ಪರ್ಡಾವೋ	೧೦,೦೦೦ ಪದಾತಿ ೮,೦೦೦ ಕುದುರೆ ೫೦ ಆನೆ	೧,೫೦,೦೦೦ ಪರ್ಡಾವೋ

ಅಮರನಾಯಕರಲ್ಲಿಯೇ ಬೇರೆ ಬೇರೆ ವರ್ಗಗಳಿದ್ದುವು ಎನ್ನುವುದನ್ನು ಈ ಪಟ್ಟಿಯು ಸ್ಥಿರ ಪಡಿಸುತ್ತದೆ. ಅವರಲ್ಲಿ ಹೆಚ್ಚಿನವರು ಮೊದಲನೆಯ ಶ್ರೇಣಿಗೆ ಸೇರಿದವರು ಎಂಬುದೂ ತಿಳಿಯುತ್ತದೆ. ಪ್ರತಿಯೊಬ್ಬ ಅಮರನಾಯಕನು ಸಾಕಿ ಸಿದ್ಧವಾಗಿಟ್ಟಿರಬೇಕಾದ ಪದಾತಿದಳ, ಕುದುರೆ, ಆನೆಗಳ ಸಂಖ್ಯೆಯೂ ಪ್ರತಿವರ್ಷ ಅವರು ಸಲ್ಲಿಸಬೇಕಾದ ವರಮಾನವೂ ನಿಗದಿಯಾಗಿತ್ತು. ಪಂಚವಾದ್ಯಗಳನ್ನು ಉಪಯೋಗಿಸಲು ಅವರಿಗೆ ಅರ್ಹತೆಯಿತ್ತು. ಆ ವಾದ್ಯಗಳು ಕೊಂಬುಕಹಳೆ, ಶಂಖ, ಭೇರಿ, ಜಯಘಂಟೆ ಹಾಗೂ ತಮ್ಮಟೆ. ಅಲ್ಲದೆ ಸಾಮಂತ ಸಿಂಹಾಸನ, ಚಾಮರ, ಪಲ್ಲಕ್ಕಿ, ಅಶ್ವಾರೋಹಿಪಡೆ, ಆನೆಗಳು ಮತ್ತು ಡೋಲಿಗಳು ಇವುಗಳನ್ನು ಇಟ್ಟುಕೊಳ್ಳಬಹುದಾಗಿತ್ತು.[೨೨] ಪ್ರಥಮಶ್ರೇಣಿಗೆ ಸೇರಿದವರು ಚಕ್ರವರ್ತಿಗೆ ತಿಳಿಸದೆಯೇ ಭೂಮಿಯನ್ನೇ ಹಳ್ಳಿಗಳನ್ನೇ ಪರಭಾರೆ ಮಾಡುವ ಹಕ್ಕನ್ನೂ ಪಡೆದಿದ್ದರು. ಈ ವರ್ಗದ ಸೇನಾನಾಯಕರು ಸರದಿಯಲ್ಲಿ ತಮ್ಮ ಅಧೀನರಾದ ನಾಯಕರನ್ನು ನಿರ್ಮಿಸಿಕೊಳ್ಳಬಹುದಾಗಿತ್ತು, ಕೋಟೆಗಳನ್ನು ಕಟ್ಟಲು, ತಮ್ಮ ಸ್ವಂತದ ಸೇನೆಯನ್ನು ಇಟ್ಟುಕೊಳ್ಳಲು ಅವರಿಗೆ ಅವಕಾಶವಿದ್ದಿತು. ಕೆಳದಿಯ ನಾಯಕರು ಈ ಹಕ್ಕುಗಳನ್ನು ಅನುಭವಿಸುತ್ತಿದ್ದರು.[೨೩] ವಾರ್ಷಿಕವಾದ ಕಾಣಿಕೆ, ಸೈನ್ಯದ ಪೂರೈಕೆ ಈ ಎರಡು ಬದ್ಧತೆಗಳಿಗೆ ಒಳಗಾಗಿದ್ದರೂ ಅವರಿಗೆ ವರಮಾನ, ತೆರಿಗೆ, ಗ್ರಾಮಗಳ ಪರಭಾರೆ, ಮಾರಾಟ ಮೊದಲಾದ ಎಲ್ಲಾ ಹಕ್ಕುಗಳೂ ಇದ್ದುವು. ತಮ್ಮದೇ ನಾಣ್ಯಗಳನ್ನು ಕೂಡ ಅವರು ಚಲಾವಣೆಗೆ ಕೊಡಬಹುದಾಗಿತ್ತು, ಸಾಮಾನ್ಯವಾಗಿ ಕಡಮೆ ಮೌಲ್ಯದ ನಾಣ್ಯಗಳು. ಉದಾಹರಣೆಗೆ ಲಕ್ಕಣ್ಣ ದಂಡನಾಯಕನು ಒಂದು ತಾಮ್ರದ ನಾಣ್ಯವನ್ನು ಹಾಕಿಸಿದನು. ಹೀಗೆ ಪ್ರಥಮ ಶ್ರೇಣಿಯ ಅಮರನಾಯಕರು ಹಲವು ಅಧಿಕಾರಗಳನ್ನು ಪಡೆದಿದ್ದರು.

ಎರಡನೆಯ ವರ್ಗದ ಅಮರನಾಯಕರಿಗೆ ಈ ಅಧಿಕಾರಗಳಲ್ಲಿ ಕೆಲವು ಇರಲಿಲ್ಲ. ತಮ್ಮ ಪ್ರದೇಶದ ಯಾವುದೇ ಭೂಮಿಯನ್ನು ಚಕ್ರವರ್ತಿಯ ಹೆಸರನ್ನು ಉಲ್ಲೇಖಿಸದೆ ಪರಭಾರೆ ಮಾಡಲು ಅವರಿಗೆ ಅಧಿಕಾರವಿರಲಿಲ್ಲ. ಉದಾಹರಣೆಗೆ ಬೈರಿದೇವನು ಯಲಹಂಕನಾಡಿನ ಸಾಮಂತರಾಜನಾಗಿದ್ದನು. ಅವನು ಕೊಡಿಗೇಹಳ್ಳಿ ಗ್ರಾಮವನ್ನು ಕರಿಯನಾಯಕನಿಗೆ ಸರ್ವಮಾನ್ಯ ಕೊಡುಗೆಯಾಗಿ ನೀಡಿದನು. ಈ ಕೊಡುಗೆ ನೀಡುವಾಗ ಅವನು ವಿಜಯನಗರದ ತನ್ನ ಪ್ರಭುಗಳಾದ ಹರಿಹರ ಮತ್ತು ಬುಕ್ಕರ ಹೆಸರನ್ನು ಉಲ್ಲೇಖಿಸಿದನು.[೨೪] ಸಣ್ಣಪ್ಪನಾಯಕನು ಹುಲುಕಡಿನಾಡಿನ ರಾಜನಾಗಿದ್ದನು. ಅವನು ಹುಲುಕಡಿನಾಡಿನ ಕಾಡನೂರನ್ನು ಭಗವಾನ್ ಚನ್ನಕೇಶವನಿಗೆ ಅರ್ಪಿಸಿದನು. ದೇವಾಲಯಕ್ಕೆ ಈ ಸಂಬಂಧವಾದ ದಾನ ಶಾಸನವನ್ನು ಕೊಡುವಾಗ ಅದರಲ್ಲಿ ತನ್ನ ಪ್ರಭು ಅಚ್ಯುತರಾಯನ ಹೆಸರನ್ನು ಉಲ್ಲೇಖಿಸಿದನು. ಅದು ಚಕ್ರವರ್ತಿಯನ್ನು ಕುರಿತ ಅವನ ನಿಷ್ಠೆಯ ದ್ಯೋತಕವಾಗಿತ್ತು.[೨೫]

ಸಾಳುವ ನರಸಿಂಹನ ಕಾಲದಲ್ಲಿ ವರದರಾಜದೇವನು ಚನ್ನಪಟ್ಟಣ ಪ್ರದೇಶದ ರಾಜನಾಗಿದ್ದನು. ಅವನು ಚಕ್ಕಲೂರು ಗ್ರಾಮವನ್ನು ''ಎಲ್ಲಾ ತೆರಿಗೆಗಳು, ಹಕ್ಕುಗಳ ಸಮೇತವಾಗಿ, ಯಾವುದೇ ಮಧ್ಯ

ಪ್ರವೇಶದಿಂದ ಮುಕ್ತವಾಗಿ'' ದೊಡ್ಡಯ್ಯ ಎಂಬುವನಿಗೆ ಕೊಟ್ಟನು. ಹಾಗೆ ಕೊಡುವಾಗ ವಿಜಯನಗರದ ತನ್ನ ಪರಮ ಪ್ರಭುವಿಗೆ ಸಕಲ ಸಂತೋಷಗಳನ್ನೂ ಧರ್ಮವನ್ನೂ ಪ್ರಾರ್ಥಿಸಿದನು.[೨೬]

ಕೃಷ್ಣದೇವರಾಯನ ಕಾಲದಲ್ಲಿ ಕೆಂಚಸೋಮಣ್ಣನಾಯಕನು ಚನ್ನಪಟ್ಟಣ ಸೀಮೆಯ ಅಮರನಾಯಕನಾಗಿದ್ದನು. ಅವನು ಭಗವಾನ್ ಜನಾರ್ಧನನ ನೈವೇದ್ಯಕ್ಕಾಗಿ ವಾಣಿಯಗೆರೆಯನ್ನು ದಾನ ಮಾಡಿದನು. ಆ ಶಾಸನದಲ್ಲಿ ಅವನು ತನ್ನ ಪ್ರಭುವಾದ ಚಕ್ರವರ್ತಿಗೆ ಕೂಡಲೂರುಕೆರೆಯನ್ನು ದುರಸ್ತಿಗೊಳಿಸಿದುದಕ್ಕಾಗಿ ಕೃತಜ್ಞತೆಯನ್ನೂ, ಸಕಲ ಅಭ್ಯುದಯಗಳನ್ನೂ ಧರ್ಮವನ್ನೂ ಕೋರಿ ಪ್ರಾರ್ಥನೆ ಸಲ್ಲಿಸಿದನು.[೨೭]

ಇದರಿಂದ ದ್ವಿತೀಯ ವರ್ಗಕ್ಕೆ ಸೇರಿದ ಅಮರನಾಯಕರು ಕೆಲವು ಹಳ್ಳಿಗಳನ್ನು ಮಾತ್ರ ತಮ್ಮ ಹತೋಟಿಯಲ್ಲಿಟ್ಟುಕೊಂಡಿದ್ದರು ಎಂಬುದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಪರಿಣಾಮವಾಗಿ ಅವರ ಬಲವೂ ಸಂಪನ್ಮೂಲವೂ ಸೀಮಿತವಾಗಿದ್ದುವು. ಅವರು ಸಾಕಬೇಕಾದ ಸೈನ್ಯವೂ ಚಿಕ್ಕ ತುಕಡಿ. ಎಲ್ಲಕ್ಕಿಂತ ಮಿಗಿಲಾಗಿ ತಮ್ಮ ಅಧೀನರಿಗೋ ದೇವಾಲಯಗಳಿಗೋ ಭೂಮಿಯನ್ನು ದಾನ ಮಾಡುವಾಗ ಅವರು ತಪ್ಪದೆ ಚಕ್ರವರ್ತಿಯನ್ನು ಹೆಸರಿಸಲೇಬೇಕಾಗಿತ್ತು.

ಒಂದೆರಡು ಸ್ಥಳಗಳನ್ನೇ ಒಂದು ಹಳ್ಳಿಯನ್ನೇ ಪಡೆದಿದ್ದವರು ಮೂರನೆಯ ವರ್ಗದ ಅಮರನಾಯಕರು. ಅವರು ಚಕ್ರವರ್ತಿಯ ನೇರ ನಿಯಂತ್ರಣದಲ್ಲಿ ಇರುತ್ತಿದ್ದರು ಇಲ್ಲವೆ, ಅಧೀನರಾಜನ ಹತೋಟಿಯಲ್ಲಿರುತ್ತಿದ್ದರು. ಅವರು ಯಾವಾಗ ಭೂಮಿಯನ್ನು ದಾನ ಮಾಡಬೇಕಾದರೂ ಚಕ್ರವರ್ತಿಯ ಪೂರ್ವಾನುಮತಿಯನ್ನು ಪಡೆಯಬೇಕಾಗಿತ್ತು. ಇದು ಈ ವರ್ಗದ ಅಮರನಾಯಕರ ಕೆಳವರ್ಗವನ್ನು ಸ್ಪಷ್ಟವಾಗಿ ತೋರಿಸುತ್ತದೆ.

ಉದಾಹರಣೆಗೆ, ಅಚ್ಯುತರಾಯನ ಕಾಲದಲ್ಲಿ ಹೊಳಲ್ಕೆರೆ ಪ್ರದೇಶದಲ್ಲಿ ಹಡಪ ಬೈಯಪೇಂದ್ರ ನಾಯಕ ಒಬ್ಬ ಅಮರನಾಯಕನಾಗಿದ್ದನು. ಅವನು ವಿದ್ವಾಂಸರಾಗಿದ್ದ ಬ್ರಾಹ್ಮಣರಿಗೆ ಸ್ವಲ್ಪ ಭೂಮಿಯನ್ನು ದಾನವಾಗಿ ಕೊಡಬೇಕೆಂದು, ಚಕ್ರವರ್ತಿ ಅಚ್ಯುತರಾಯನ ಅನುಮತಿಯನ್ನು ಕೋರಿದನು. ಅವನು ಅನುಮತಿ ನೀಡಿದನು. ಈ ವರ್ಗದ ಅಮರನಾಯಕರು ಯಾವುದೇ ಭೂದಾನ ಮಾಡುವ ಮೊದಲು ಚಕ್ರವರ್ತಿಯ ಅನುಮತಿ ಪಡೆಯಬೇಕಾಗಿದ್ದುದನ್ನು ಇದು ತೋರಿಸುತ್ತದೆ.[೨೮]

ಮಹಾಮಂಡಲೇಶ್ವರರ ಅಧೀನದಲ್ಲಿ ಅನೇಕ ಅಮರನಾಯಕರಿರುತ್ತಿದ್ದರು. ಸದಾಶಿವರಾಯನ ಆಳಿಕೆಗೆ ಸಂಬಂಧಪಟ್ಟ, ಕ್ರಿ.ಶ. ೧೫೫೮ರ ಒಂದು ಶಾಸನವು ಕೊಂಡರಾಜಯ್ಯನೆಂಬ ಮಹಾಮಂಡಲೇಶ್ವರ ಮತ್ತು ಅವನ ಅಮರನಾಯಕ ಕೊರ್ಲಕುಂಟೆ ಕೊಂಡಮನಾಯಕರ ವಿಷಯ ಹೇಳುತ್ತದೆ. ಅಮರನಾಯಕನು ವೀರಭದ್ರದೇವನಿಗೆ ಭೂಮಿಯನ್ನು ದಾನಮಾಡುವಾಗ ತನ್ನ ತತ್‌ಕ್ಷಣದ ಒಡೆಯ ಕೊಂಡರಾಜಯ್ಯನನ್ನು ಉಲ್ಲೇಖಿಸುತ್ತಾನೆ. ಈ ಸಂದರ್ಭದಲ್ಲಿ ಕೊರ್ಲಕುಂಟೆ ಕೊಂಡಮನಾಯಕನು ಮೂರನೆಯ ವರ್ಗದ ಅಮರ ನಾಯಕನಾಗಿದ್ದನೆಂದು ನಾವು ನಿರ್ಣಯಿಸಬಹುದು.[೨೯]

ಅಮರನಾಯಕರ ಬದ್ಧತೆಗಳನ್ನು ಕುರಿತು ಪೇಸ್ ಹೀಗೆ ಹೇಳುತ್ತಾನೆ. ಸೈನ್ಯವನ್ನು ಪಾಲಿಸಿ ಸಿದ್ಧವಾಗಿಟ್ಟುಕೊಳ್ಳುವುದು ಅಮರನಾಯಕರ ಅತಿ ಮುಖ್ಯವಾದ ಕರ್ತವ್ಯವಾಗಿತ್ತು. ಅವರು ಪದಾತಿದಳದ ಸೈನಿಕರನ್ನೂ ಕುದುರೆಗಳನ್ನೂ ಆನೆಗಳನ್ನೂ ಸಾಕುತ್ತಿದ್ದರು.[೩೦] ಸೈನ್ಯವನ್ನು ಪಾಲಿಸುವುದರ ಜೊತೆಗೆ ಪ್ರತಿಯೊಬ್ಬ ನಾಯಕನೂ ರಾಜನಿಗೆ ಪ್ರತಿವರ್ಷವೂ ನಿರ್ದಿಷ್ಟ ಪ್ರಮಾಣದ ಹಣವನ್ನು ಪಾವತಿ ಮಾಡಬೇಕಾಗಿತ್ತು. ''ರಾಜನಿಗೆ ಮಗನೋ ಮಗಳೋ ಜನಿಸಿದರೆ ರಾಜ್ಯದ ಎಲ್ಲಾ ನಾಯಕರು ಮತ್ತು ಗಣ್ಯರು ಅವರಿಗೆ ಆಭರಣಗಳನ್ನೋ ಹಣವನ್ನೋ ಉಡುಗೊರೆಯಾಗಿ ಅರ್ಪಿಸಬೇಕಾಗಿತ್ತು. ಹಾಗೆಯೇ ಪ್ರತಿವರ್ಷವೂ ರಾಜನ

ಹುಟ್ಟಿದ ಹಬ್ಬದ ದಿನ ಕಾಣಿಕೆ ಒಪ್ಪಿಸಬೇಕಾಗಿತ್ತು. ''ನೂತನ ವರ್ಷಾರಂಭದ ದಿನವೂ ಈ ನಾಯಕರು ರಾಜನಿಗೆ ಕಾಣಿಕೆಯನ್ನು ಸಲ್ಲಿಸುತ್ತಿದ್ದರು. ಆದಿನ ಅವರು ರಾಜನಿಗೆ ಅರ್ಪಿಸುತ್ತಿದ್ದ ಹಣವು ಒಟ್ಟು ಹದಿನೈದು ಲಕ್ಷ ಚಿನ್ನದ ಪರ್ಡಾವೋಗಳಷ್ಟಾಗುತ್ತಿದ್ದಿತು ಎಂದು ಹೇಳಲಾಗುತ್ತದೆ.[೬೧]

ನ್ಯೂನಿಜ್ ಹೇಳುತ್ತಾನೆ: ''ಈ ಚಿತ್ರರಾವ್ (ಅಚ್ಯುತರಾಯ) ರಾಜನು, ಸಾಮಂತರಾಜರು ವೇತನ ಕೊಡುತ್ತಿದ್ದ ಸೈನಿಕರನ್ನು ಹೊಂದಿದ್ದಾನೆ. ಆರು ಲಕ್ಷಯೋಧರು, ಇಪ್ಪತ್ತನಾಲ್ಕು ಸಾವಿರ ಕುದುರೆಗಳು ಹಾಗೆ ಸಾಮಂತರಿಂದ ಕಾಪಾಡಲ್ಪಡುತ್ತಿದ್ದರು. ಈ ಸಾಮಂತರು ಒಂದು ರೀತಿಯಲ್ಲಿ ಗುತ್ತಿಗೆದಾರರಿದ್ದ ಹಾಗೆ. ರಾಜನಿಂದ ಭೂಮಿಯನ್ನು ಪಡೆದು, ಈ ಯೋಧರನ್ನು ಸಾಕುತ್ತಾ, ಜೊತೆಗೆ ರಾಜನಿಗೆ ಅವರು ಅರವತ್ತುಲಕ್ಷ ಹಣವನ್ನು ಕಾಣಿಕೆಯಾಗಿ ಸಲ್ಲಿಸುತ್ತಾರೆ. ಭೂಮಿಯಿಂದ ಅವರಿಗೆ ಒಂದುನೂರ ಇಪ್ಪತ್ತು ಲಕ್ಷ ವರಮಾನವಿದೆ ಎಂದು ಹೇಳುತ್ತಾರೆ. ಅದರಲ್ಲಿ ಅರವತ್ತು ಲಕ್ಷ ರಾಜನಿಗೆ ಸಲ್ಲುತ್ತದೆ. ಉಳಿಕೆ ಅರವತ್ತು ಲಕ್ಷ ಸೇನೆಯನ್ನು ಪೋಷಿಸುವುದು, ಆನೆಗಳ ಸಾಕಾಣಿಕೆ ವೆಚ್ಚ ಇತ್ಯಾದಿಗಳಿಗೆ ನಿರ್ವಾಹವಾಗುತ್ತದೆ.[೬೨] ಅವರು ಸದಾಕಾಲವೂ ತಮಗೆ ನಿಗದಿ ಪಡಿಸಿರುವಷ್ಟು ಸಂಖ್ಯೆಯ ಯೋಧರನ್ನು ಒದಗಿಸಿರಲೇಬೇಕು. ಅದು ಕಡ್ಡಾಯ, ಸಂಖ್ಯೆಯೇನಾದರೂ ಕೊರತೆಯಾದರೆ ಆ ಸಾಮಂತನನ್ನು ಉಗ್ರವಾಗಿ ಶಿಕ್ಷಿಸಲಾಗುತ್ತದೆ, ಅವನ ಭೂಮಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುತ್ತದೆ.[೬೩] ಅವಿಧೇಯತೆಗಾಗಿ ಚಿತ್ರದುರ್ಗದ ತಿಮ್ಮಣ್ಣನಾಯಕ ಮತ್ತು ಯಲಹಂಕದ ೧ನೇ ಕೆಂಪೇಗೌಡ ಶಿಕ್ಷೆಗೊಳಗಾದರು.

ಅಮರನಾಯಕ ವ್ಯವಸ್ಥೆಯಲ್ಲಿ ಅನುಕೂಲ ಅನನುಕೂಲಗಳೆರಡೂ ಇದ್ದುವು ೧) ವಿಜಯನಗರದ ರಾಜರು ಬೃಹತ್ ಸಾಮ್ರಾಜ್ಯವನ್ನು ನಿಯಂತ್ರಣದಲ್ಲಿಟ್ಟುಕೊಳ್ಳಲು ಸಾಧ್ಯವಾಗಿದ್ದುದೇ ಈ ಅಮರನಾಯಕರಿಂದ. ೨) ಕಾನೂನು-ಸುವ್ಯವಸ್ಥೆಯ ಪಾಲನೆ ಸುಲಭವಾಯಿತು. ಏಕೆಂದರೆ ಪ್ರತಿಯೊಬ್ಬ ನಾಯಕನೂ ತನ್ನ ಆಡಳಿತ ವ್ಯಾಪ್ತಿಯ ಪ್ರದೇಶದ ಕಾನೂನು-ಸುವ್ಯವಸ್ಥೆಗೆ ಹೊಣೆಗಾರನಾಗಿದ್ದನು. ಆದ್ದರಿಂದಲೇ ಕೃಷ್ಣದೇವರಾಯ ಮತ್ತು ಸದಾಶಿವರಾಯರು ತಮ್ಮ ಆಡಳಿತಾವಧಿಯಲ್ಲಿ ಭಾರೀ ಸಂಖ್ಯೆಯಲ್ಲಿ ಅಮರನಾಯಕರನ್ನು ನೇಮಿಸಿದರು. ೩) ಅಮರನಾಯಕರು ನಿರ್ದಿಷ್ಟ ಪ್ರಮಾಣದ ಸೈನ್ಯವನ್ನು ಸಾಕಿ, ಸಿದ್ಧವಾಗಿಟ್ಟುಕೊಂಡು ಅಗತ್ಯವಾದಾಗಲೆಲ್ಲ ಒದಗಿಸಬೇಕಾಗಿತ್ತು. ಅದು ಅವರ ಅತಿಮುಖ್ಯ ಹೊಣೆಗಾರಿಕೆಯಾಗಿತ್ತು.[೬೪] ಅವರ ಸೈನ್ಯಗಳ ನೆರವಿನಿಂದ ವಿಜಯನಗರದ ಚಕ್ರವರ್ತಿಗಳು ಹೊಸರಾಜ್ಯಗಳನ್ನು ಗೆಲ್ಲುತ್ತಿದ್ದರು, ಕ್ರೋಢೀಕರಿಸುತ್ತಿದ್ದರು, ಶತ್ರುಗಳೊಂದಿಗೆ ಕಾದುತ್ತಿದ್ದರು. ಕೆಳದಿಯ ಅರಸರೂ[೬೫] ಚಿತ್ರದುರ್ಗದ ನಾಯಕರೂ[೬೬] ಹೇಗೆ ಸಾಮ್ರಾಜ್ಯದ ವೈರಿಗಳೊಂದಿಗೆ ಯುದ್ಧಮಾಡಿ ಅದಕ್ಕೆ ಪ್ರತಿಯಾಗಿ ಚಕ್ರವರ್ತಿಯಿಂದ ಪುರಸ್ಕಾರ ಪಡೆದರು ಎಂಬುದನ್ನು ನೋಡಿದ್ದೇವೆ. ೪) ಕೊನೆಯದಾಗಿ, ಜನಸಾಮಾನ್ಯರಿಗೂ ಚಕ್ರವರ್ತಿಗೂ ನಡುವೆ ಅಮರನಾಯಕರು ಸಂಪರ್ಕ ಕಲ್ಪಿಸುವ ಕೊಂಡಿಯಾಗಿ ವರ್ತಿಸಿದರು.

ಇಷ್ಟೆಲ್ಲ ಅನುಕೂಲತೆಗಳಿದ್ದರೂ ಅಮರನಾಯಕ ವ್ಯವಸ್ಥೆ ದೋಷಮುಕ್ತವೇನಾಗಿರಲಿಲ್ಲ. ೧) ಚಕ್ರವರ್ತಿಯು ಪ್ರಬಲನಾಗಿದ್ದು ನಾಯಕರನ್ನು ಹತೋಟಿಯಲ್ಲಿ ಇಟ್ಟುಕೊಂಡಿರುವವರೆಗೆ ಈ ವ್ಯವಸ್ಥೆಯು ಚೆನ್ನಾಗಿ ಕೆಲಸ ಮಾಡಿತು. ಆದರೆ ದುರ್ಬಲನಾದ ರಾಜನು ಸಿಂಹಾಸನಕ್ಕೆ ಬಂದೊಡನೆ ನಾಯಕರು ತಮ್ಮ ಸ್ವಾತಂತ್ರ್ಯವನ್ನು ಘೋಷಿಸಿಕೊಳ್ಳಲು ಪ್ರಯತ್ನಿಸುತ್ತಿದ್ದರು. ೨) ಕಾಲಕಳೆದಂತೆ ಈ ವ್ಯವಸ್ಥೆಯು ಆನುವಂಶಿಕ ವಾಯಿತು.[೬೭] ಪರಿಣಾಮವಾಗಿ ವಿಜಯನಗರ ರಾಜರಿಗೆ ಒಬ್ಬ ನಾಯಕನ ಅಮರಂ ಭೂಮಿಯನ್ನು ಹಿಂದಕ್ಕೆ ತೆಗೆದುಕೊಳ್ಳುವುದಾಗಲಿ, ಬೇರೊಬ್ಬರಿಗೆ ಅದನ್ನು ವಹಿಸುವುದಾಗಲಿ ಸೇನಾಬಲ ಪ್ರಯೋಗವಿಲ್ಲದೆ ಸಾಧ್ಯವಾಗುತ್ತಿರಲಿಲ್ಲ. ೩) ಈ ಅಮರನಾಯಕರು ವಿಶಾಲ ಪ್ರದೇಶಗಳನ್ನಾಗಿ ಅಪಾರ ಜನಸಮೂಹವನ್ನು ತಮ್ಮ ನಿಯಂತ್ರಣದಲ್ಲಿ ಇಟ್ಟುಕೊಂಡಿದ್ದುದರಿಂದ, ಜನರ ನಿಷ್ಠೆಯು ಮೊದಲು ನಾಯಕರಿಗೆ ಸಲ್ಲುತ್ತಿದ್ದಿತೇ

ಹೊರತು, ಎಲ್ಲೋ ದೂರದಲ್ಲಿದ್ದ ಚಕ್ರವರ್ತಿಗಲ್ಲ. ೪) ಈ ವ್ಯವಸ್ಥೆಯು ಹಚ್ಚೆಂದರೆ ತಾಳಿಕೋಟೆ ಯುದ್ಧದ ವರಗೆ ಉದ್ದೇಶದ ಪ್ರಕಾರ ನಡೆಯಿತು. ೧೫೬೫ರ ಈ ಯುದ್ಧದಲ್ಲಿ ಸಾಮ್ರಾಜ್ಯದ ಬೆನ್ನುಮೂಳೆಯು ಚೂರುಚೂರಾಗಿ ಮುರಿದುಹೋಯಿತು. ವಾಸ್ತವವಾಗಿ ಅದು ಕೊನೆಯ ಹೂವಿನ ಕೊನೆಯ ದಳವು ಕಳಚಿ ಬಿದ್ದುದನ್ನು ಸೂಚಿಸಿತು. ಸಾಮ್ರಾಜ್ಯದ ವೈಭವವು ಕೊನೆಗೊಂಡಿತು. ಆಮೇಲೆ ನಾಯಕರು ಪ್ರಬಲರಾಗಿ ಸಾಮ್ರಾಜ್ಯವು ಅರೆ-ಸ್ವತಂತ್ರ ಸಂಸ್ಥಾನಗಳ ಸಮೂಹವಾಗಿ ಮಾರ್ಪಟ್ಟಿತು.[೩೮] ಕೆಳದಿ, ಯಲಹಂಕ, ಶಿವನ ಸಮುದ್ರ, ಚಿತ್ರದುರ್ಗ ಇವು ಇಂತಹ ಸಂಸ್ಥಾನಗಳು. ಈ ಐತಿಹಾಸಿಕ ಯುದ್ಧವಾದ ಮೇಲೆ ಅವರು ಕೇಂದ್ರದ ಪ್ರಭುತ್ವವನ್ನು ನಿರ್ಲಕ್ಷಿಸತೊಡಗಿದರು, ತಮ್ಮತಮ್ಮಲ್ಲೇ ವೈರ ವೈಮನಸ್ಯಗಳಲ್ಲಿ ಯುದ್ಧಗಳಲ್ಲಿ ನಿರತರಾದರು. ಕ್ರಿ.ಶ. ೧೫೬೫ರ ಅನಂತರ ಉಂಟಾದ ಅನಾಯಕತ್ವ ಪರಿಸ್ಥಿತಿಗೆ ಕಾರಣ, ಈ ವ್ಯವಸ್ಥೆಯ ಕೆಟ್ಟ ದೋಷ. ದೇವರಾಯ ಮತ್ತು ಕೃಷ್ಣದೇವರಾಯರಂತಹ ಅರಸರು ಮಾತ್ರ ರಾಜ್ಯವನ್ನು ಸುಭದ್ರವಾಗಿ ಇಟ್ಟುಕೊಳ್ಳಲು ಸಮರ್ಥರಾಗಿದ್ದರು. ದುರ್ಬಲರಾಜರಿಗೆ ಈ ಪ್ರಬಲ ನಾಯಕರುಗಳನ್ನು ಅಂಕೆಯಲ್ಲಿಟ್ಟುಕೊಳ್ಳುವುದು ಸಾಧ್ಯವಾಗಲಿಲ್ಲ. ಈ ಪರಿಸ್ಥಿತಿಯಲ್ಲಿ ಅನೇಕ ನಾಯಕರು ತಾವು ಸ್ವತಂತ್ರ ರಾಜರೆಂದು ಘೋಷಿಸಿಕೊಂಡರು.

ಅಮರನಾಯಕ ವ್ಯವಸ್ಥೆಗೂ ಮಧ್ಯಕಾಲೀನ ಯೂರೋಪಿನ ಊಳಿಗಮಾನ್ಯ (ಫ್ಯೂಡಲಿಸಂ) ಪದ್ಧತಿಗೂ ಸ್ಥೂಲವಾದ ಹೋಲಿಕೆಗಳಿದ್ದುವು ೧) ಯೂರೋಪಿನಲ್ಲಿ ಜಹಗೀರುಗಳು ಮತ್ತು ಉಂಬಳಿಗಳು ಫ್ಯೂಡಲ್ ಚಟುವಟಿಕೆಗಳ ಕೇಂದ್ರಗಳಾಗಿದ್ದುವು. ಜಹಗೀರುದಾರನು ಪ್ರಭುವಿಗೆ ಅಧೀನನಾಗಿದ್ದನು, ಅದು ಬಹುತೇಕ ಸೇನಾ ಅಧೀನತೆಯ ರೂಪದ್ದಾಗಿತ್ತು. ಹಾಗೆಯೇ ಸಾಮಂತನೊಬ್ಬನ ಕೈಕೆಳಗೆ ಅನೇಕ ಜಹಗೀರು ಒಡೆಯರಿರುತ್ತಿದ್ದರು, ಅವನಿಗೆ ತಮ್ಮ ಸೇವೆಯನ್ನು ಸಲ್ಲಿಸುತ್ತಿದ್ದರು. ಅಮರನಾಯಕ ವ್ಯವಸ್ಥೆಯಲ್ಲೂ ಅಷ್ಟೇ. ರಾಜನಿಂದ ಭೂ ಪ್ರದೇಶವನ್ನು ಪಡೆದುಕೊಳ್ಳುತ್ತಿದ್ದರು. ಅವನೇ ನಿಜವಾದ ಒಡೆಯನಾಗಿದ್ದನು. ಸೈನ್ಯ ಸೇವೆಯೇ ಮೊದಲಾದ ಕೆಲವು ಕರ್ತವ್ಯ ಪಾಲನೆಗೆ ಒಪ್ಪಿ ನಾಯಕರು ಭೂಮಿಯನ್ನು ಪಡೆದುಕೊಳ್ಳುತ್ತಿದ್ದರು. ಹೆಚ್ಚು ಹೆಚ್ಚು ಭೂ ಪ್ರದೇಶವನ್ನು ಪಡೆದುಕೊಂಡಂತೆ ಅವರ ಸಂಪನ್ಮೂಲಗಳೂ ಹೆಚ್ಚುತ್ತಿದ್ದುವು. ಅವರು ಪ್ರಬಲವಾದ ಸಾಮಂತರಾಜರಾಗುತ್ತಿದ್ದರು. ಈ ಸಂದರ್ಭದಲ್ಲಿ ಪೇಸ್ ಹೇಳುತ್ತಾನೆ, ''ಬಸ್ನಾಗಾರ ರಾಜನಿಗೆ ಐದು ಜನ ರಾಜರು ಸಾಮಂತರಾಗಿದ್ದಾರೆ. ವಿಸ್ತಾರವಾದ ಭೂಪ್ರದೇಶಗಳನ್ನೂ ಸಂಪನ್ಮೂಲಗಳನ್ನೂ ಹೊಂದಿರುವ ಇತರ ನಾಯಕರೂ ಇದ್ದಾರೆ''[೩೯] ವಿಜಯನಗರದ ಈ ನಾಯಕರುಗಳಿಗೆ ಅಧೀನನಾಯಕರೂ ಇರುತ್ತಿದ್ದರು, ಇವರು ಅವರಿಗೆ ಭೂಮಿಯನ್ನು ಕೊಡುತ್ತಿದ್ದರು.[೪೦] ಇದು ಉಪ-ಊಳಿಗಮಾನ್ಯಕ್ಕೆ ಎಡೆಗೊಟ್ಟಿತ್ತು. ಹೀಗೆಯೆ ಮಧ್ಯಯುಗೀನ ಯೂರೋಪಿನಲ್ಲೂ ಅನೇಕ ಫ್ಯೂಡಲ್ ರಾಜರಿದ್ದರು. ಪ್ರತಿಯೊಬ್ಬನಿಗೂ ಅಧೀನರಾದ ನಾಯಕರಿರುತ್ತಿದ್ದರು ೨) ಯೂರೋಪಿನ ಫ್ಯೂಡಲ್ ನಾಯಕನಿಗೂ ವಿಜಯನಗರದ ಅಮರನಾಯಕನಿಗೂ ವ್ಯತ್ಯಾಸವೂ ಇದ್ದಿತು. ಇಲ್ಲಿ ಭೂಮಿಯನ್ನು ನೀಡುತ್ತಿದ್ದುದು ಅವರ ಸೈನ್ಯ ಸೇವೆಗೋಸ್ಕರವಾಗಿ ಕಾಲಕಳೆದಂತೆ ಅದು ಆನುವಂಶಿಕವಾಗಿ ಹೋಯಿತು, ಅವರು ಆ ಪ್ರದೇಶದ ರಾಜರೇ ಎಂದುಕೊಂಡರು. ಯೂರೋಪಿನಲ್ಲಿ ಕ್ಷೇಮ ಮತ್ತು ಭದ್ರತೆಗೋಸ್ಕರವಾಗಿ ಜಮೀನು ಹಿಡುವಳಿದಾರರು ಒಬ್ಬ ರಾಜನಿಗೆ ವಹಿಸಿಕೊಟ್ಟು ಆಮೇಲೆ ಅವನಿಂದ ಅದನ್ನು ಉಂಬಳಿಯಾಗಿ ಅಥವಾ ಜಹಗೀರಾಗಿ ಪಡೆಯುತ್ತಿದ್ದರು. ಅದೇ ಸಮಯದಲ್ಲಿ ರಾಜನು ಅವರಿಗೆ ರಕ್ಷಣೆಯ ಭರವಸೆಕೊಡುತ್ತಿದ್ದನು. ೩) ಮಧ್ಯಯುಗದ ಯೂರೋಪಿನಲ್ಲಿ ಇಡೀ ಸಮಾಜವೇ ಫ್ಯೂಡಲಿಸಂ ಪ್ರಭಾವಕ್ಕೆ ಸಿಲುಕಿತ್ತು. ವಿಜಯನಗರದಲ್ಲಾದರೆ ಊಳಿಗಮಾನ್ಯಪದ್ಧತಿಯು ಕೆಲಸ ಮಾಡುತ್ತಿದ್ದುದು ಅಮರನಾಯಕ ವ್ಯವಸ್ಥೆ ಮತ್ತು ಕೆಲವು ಧಾರ್ಮಿಕ ಸಂಸ್ಥೆಗಳಲ್ಲಿ ಮಾತ್ರ. ೪) ಉಪ-ಉಂಬಳಿ ವ್ಯವಸ್ಥೆಯೂ ವಿಜಯನಗರದಲ್ಲಿ ಆಳವಾಗಿ ಬೇರು ಬಿಟ್ಟಿರಲಿಲ್ಲ. ಆದರೆ ಯೂರೋಪಿನಲ್ಲಿ ಅದು ಪರಿಪೂರ್ಣತೆಯ ಹಂತವನ್ನು ಮುಟ್ಟಿತ್ತು. ಇಡೀ ಸಮಾಜವೇ ಫ್ಯೂಡಲ್ ವ್ಯವಸ್ಥೆಗೆ ಒಳಪಟ್ಟಿತ್ತು. ೫) ಯೂರೋಪಿನಲ್ಲಿ ನ್ಯಾಯಾಂಗ ವ್ಯವಸ್ಥೆಯಲ್ಲೂ

ಫ್ಯೂಡಲ್ ಪದ್ಧತಿ ಕೆಲಸ ಮಾಡುತ್ತಿತ್ತು. ಆದರೆ ವಿಜಯನಗರದಲ್ಲಿ ಅದು ನ್ಯಾಯಾಂಗಕ್ಕೆ ವಿಸ್ತರಿಸಿರಲಿಲ್ಲ. ೬) ಕೊನೆಯದಾಗಿ, ಊಳಿಗಮಾನ್ಯ ತತ್ವಗಳು ನಾಯಕ ವ್ಯವಸ್ಥೆಯಲ್ಲಿ ಅಷ್ಟು ಆಳವಾಗಿ ಬೇರು ಬಿಟ್ಟಿರಲಿಲ್ಲ. ಇದಕ್ಕೆ ಕಾರಣ ಎರಡು ಅಂಶಗಳು. ಈ ವ್ಯವಸ್ಥೆ ಕೆಲಸ ಮಾಡುತ್ತಿದ್ದುದು ಎರಡು ಬೇರೆ ಬೇರೆ ದೂರದ ಸ್ಥಳಗಳಲ್ಲಿ ಮತ್ತು ಸನ್ನಿವೇಶಗಳಲ್ಲಿ. ಮಧ್ಯಯುಗದ ಯೂರೋಪಿನಲ್ಲಿ ಬರ್ಬರರ ಧಾಳಿಯ ಫಲವಾಗಿ ಫ್ಯೂಡಲಿಸಂ ಅಸ್ತಿತ್ವಕ್ಕೆ ಬಂದಿತು, ಇಡೀ ಸಮಾಜವೇ ಹಾಗೆ ಪರಿವರ್ತಿತವಾಯಿತು. ವಿಜಯನಗರದಲ್ಲಿ ಅದು ಒಂದು ಐತಿಹಾಸಿಕ ಅಗತ್ಯವಾಗಿ ಮತ್ತು ೧೪-೧೫ನೇ ಶತಮಾನಗಳ ವಿಜಯನಗರದ ಅರಸರ ಆಡಳಿತ ನೀತಿಯ ಕಾರಣವಾಗಿ.

ಹೀಗೆ ವಿಜಯನಗರದ ಅರಸರು ಬೃಹತ್ ಸಾಮ್ರಾಜ್ಯವನ್ನು ಕಟ್ಟಿ ಅಮರನಾಯಕರಿಗೆ ಸೈನ್ಯ ಸೇವೆಗಾಗಿ ಭೂಪ್ರದೇಶಗಳನ್ನು ಕೊಡತೊಡಗಿದರು. ಕಾಲಕ್ರಮದಲ್ಲಿ ಅವು ಆನುವಂಶಿಕವಾಗಿ, ಈ ಅಮರನಾಯಕರು ಸಾಮ್ರಾಜ್ಯದ ವ್ಯವಹಾರಗಳಲ್ಲಿ ಮುಖ್ಯವಾದ ಪಾತ್ರವನ್ನು ವಹಿಸತೊಡಗಿದರು. ಕಾನೂನು ಸುವ್ಯವಸ್ಥೆಗಳ ಪಾಲನೆಗಾಗಿಯೂ ಯುದ್ಧ ಮತ್ತು ಸಾಮ್ರಾಜ್ಯ ರಕ್ಷಣೆಯ ಸಲುವಾಗಿಯೂ ಚಕ್ರವರ್ತಿಗೆ ದೊಡ್ಡ ಸೈನ್ಯದ ಅಗತ್ಯವಿತ್ತು. ಒಂದು ಸ್ಥಳದಲ್ಲಿ ಅಷ್ಟು ಅಗಾಧವಾದ ಸೈನ್ಯವನ್ನು ಇಟ್ಟುಕೊಂಡು ಪೋಷಿಸುವುದು ಕಷ್ಟವಾಗಿತ್ತು. ಆದ್ದರಿಂದ ಅರಸನಿಗೆ ಅಗತ್ಯವಾದಾಗಲೆಲ್ಲ ಸೇನೆಯನ್ನು ಕಳುಹಿಸಿಕೊಡಬೇಕೆಂಬ ಷರತ್ತು ವಿಧಿಸಿ ಅವರು ಭೂಪ್ರದೇಶವನ್ನು ಅಮರನಾಯಕರಿಗೆ ನೀಡಿದರು. ಅಲ್ಲದೆ, ತಮ್ಮ ಅಧಿಕಾರ ವ್ಯಾಪ್ತಿಯ ಪ್ರದೇಶದಲ್ಲಿ ಕಾನೂನು-ಸುವ್ಯವಸ್ಥೆಯ ಪಾಲನೆಯೂ ಅವರ ಹೊಣೆಗಾರಿಕೆಯಾಯಿತು. ಅದರಿಂದ ಚಕ್ರವರ್ತಿಗೆ ಅಗಾಧವಾದ ಸಾಮ್ರಾಜ್ಯವನ್ನು ಅಂಕೆಯಲ್ಲಿ ಇಟ್ಟುಕೊಳ್ಳಲು ಸಹಾಯವಾಯಿತು. ಜೊತೆಗೆ ಯುದ್ಧಗಳಲ್ಲಿ ಮತ್ತು ಗೆದ್ದ ಪ್ರದೇಶಗಳ ಸಂಘಟನೆಯಲ್ಲಿ ಈ ನಾಯಕರು ಚಕ್ರವರ್ತಿಗೆ ಸಹಾಯ ಮಾಡುತ್ತಿದ್ದರು.

ಸ್ಥೂಲವಾಗಿ ಅಮರನಾಯಕರನ್ನು ನಾವು ಮೂರುವರ್ಗಗಳಾಗಿ ಗುಂಪು ಮಾಡಬಹುದು. ಅವರ ಅಧಿಕಾರದಲ್ಲಿದ್ದ ಪ್ರದೇಶವಿಸ್ತಾರ, ಅವರ ಸಂಪನ್ಮೂಲಗಳು ಮತ್ತು ಬಲಗಳ ಆಧಾರದಿಂದ ಈ ವರ್ಗೀಕರಣವನ್ನು ಮಾಡಬಹುದು. ಸಾಮಂತರೆನಿಸಿಕೊಂಡ ಮೊದಲ ವರ್ಗದ ನಾಯಕರು ಯುದ್ಧಗಳಲ್ಲಿ ಸೇನೆಯನ್ನು ನಡೆಸುತ್ತಿದ್ದರು. ಎರಡನೆಯ ವರ್ಗದಲ್ಲಿ ಅನೇಕ ದಂಡನಾಯಕರು ಇದ್ದರು. ಮೂರನೆಯ ವರ್ಗದಲ್ಲಿ ಅನೇಕ ಸಣ್ಣ ಅಮರನಾಯಕರಿದ್ದರು. ಯುದ್ಧದಲ್ಲಿ, ದಂಡಯಾತ್ರೆಯಲ್ಲಿ, ಸಾಮ್ರಾಜ್ಯದ ಸಂಘಟನೆಯಲ್ಲಿ ಅವರು ಚಕ್ರವರ್ತಿಯ ಸೈನ್ಯವನ್ನು ಸೇರಿಕೊಳ್ಳುತ್ತಿದ್ದರು. ಈ ನಾಯಕರು ತಮ್ಮ ಬಾಧ್ಯತೆಗಳನ್ನು ಸರಿಯಾಗಿ ನೆರವೇರಿಸುತ್ತಿರುವವರೆಗೆ ರಾಜನು ಅವರ ವ್ಯವಹಾರಗಳಲ್ಲಿ ಮಧ್ಯಪ್ರವೇಶ ಮಾಡುತ್ತಿರಲಿಲ್ಲ. ಆದರೆ ಕರ್ತವ್ಯ ನಿರ್ವಹಣೆಯಲ್ಲಿ ಅವರು ಲೋಪ ತೋರಿಸಿದರೆ, ಅಥವಾ ಅವಿಧೇಯವಾಗಿ ವರ್ತಿಸಿದರೆ ಅವರನ್ನು ಶಿಕ್ಷಿಸಲು ರಾಜನು ಸ್ವಲ್ಪವೂ ಹಿಂಜರಿಯುತ್ತಿರಲಿಲ್ಲ. ಚಿತ್ರದುರ್ಗದ ನಾಯಕ ಯಲಹಂಕದ ರಾಜ ಮೊದಲಾದವರು ಕೂಡ ಅವಿಧೇಯತೆಗಾಗಿ ಶಿಕ್ಷೆಯನ್ನು ತಪ್ಪಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಅವರನ್ನು ಸೆರೆಗೆ ಹಾಕಲಾಯಿತು.

ಈ ವ್ಯವಸ್ಥೆಯು ಯಾವ ಉದ್ದೇಶಕ್ಕಾಗಿ ಅಸ್ತಿತ್ವಕ್ಕೆ ಬಂದಿತೋ ಅದನ್ನು ಕೊನೆಯ ಪಕ್ಷ ೧೫೬೫ರ ರಕ್ಕಸತಂಗಡಿ ಐತಿಹಾಸಿಕ ಯುದ್ಧದವರೆಗೆ ಪೂರೈಸಿತು. ಆಮೇಲೆ ಚಕ್ರವರ್ತಿಯು ದುರ್ಬಲನಾಗುತ್ತಾ ಹೋದಂತೆ ಈ ನಾಯಕರು ಬಲಗೊಳ್ಳುತ್ತಾ ಹೋದರು. ಯಾವ ತಳಹದಿಯ ಮೇಲೆ ಸಾಮ್ರಾಜ್ಯ ಸೌಧವನ್ನು ಕಟ್ಟಲಾಗಿತ್ತೋ ಅದು ಆ ಯುದ್ಧವಾದ ಮೇಲೆ ಚೂರು ಚೂರಾಗಿ ಒಡೆದುಹೋಯಿತು.

ಅಮರನಾಯಕ ವ್ಯವಸ್ಥೆಯನ್ನು ಮಧ್ಯಯುಗೀನ ಯೂರೋಪಿನ ಫ್ಯೂಡಲ್ ಪ್ರಭುಗಳ ವ್ಯವಸ್ಥೆಯೊಂದಿಗೆ ಕೂಡ ಹೋಲಿಸಬಹುದು. ಆದರೆ ಅಲ್ಲಿನಂತೆ ವಿಜಯನಗರದಲ್ಲಿ ಊಳಿಗಮಾನ್ಯಪದ್ಧತಿಯು ಪರಿಪೂರ್ಣತೆಯ

ಹಂತವನ್ನು ಮುಟ್ಟಲಿಲ್ಲ. ಅಲ್ಲದೆ ಇಲ್ಲಿ ಇಡೀ ಸಮಾಜವು ಅದರಿಂದ ಆವೃತವಾಗಲಿಲ್ಲ, ಯೂರೋಪಿನಲ್ಲಾದರೆ ಇಡೀ ಸಮಾಜವೇ ಫ್ಯೂಡಲ್ ಆಗಿ ಪರಿವರ್ತಿತವಾಯಿತು. ಈಗ ನಾವು ಕೆಲವು ಮುಖ್ಯ ಅಮರನಾಯಕ ಮನೆತನಗಳ ಇತಿಹಾಸವನ್ನು ಪರಿಶೀಲಿಸಬಹುದು. ಕರ್ನಾಟಕದಲ್ಲಿ ವಿಜಯನಗರದ ಅವನತಿಯ ನಂತರ ಅವರು ಪಾಳೆಯಗಾರ ಮನೆತನಗಳೆಂದು ಹೆಸರಾದರು.

ಕೆಳದಿಯ ಅರಸರು

ವಿಜಯನಗರ ಸಾಮ್ರಾಜ್ಯದ ರಚನೆಯಲ್ಲಿ ಕೆಳದಿಯು ಬಹುಮುಖ್ಯವಾದೊಂದು ಭಾಗವಾಗಿತ್ತು. ಅದನ್ನು ಸೃಷ್ಟಿಸಿ ಪುರಸ್ಕರಿಸಿದ್ದು ೧೬ನೆಯ ಶತಮಾನದ ಪ್ರಾರಂಭದಲ್ಲಿ. ಅದರ ಪ್ರದೇಶ ವ್ಯಾಪ್ತಿಯು ಉತ್ತರದಲ್ಲಿ ಗಂಗವಾಡಿ ನದಿ, ಈಶಾನ್ಯದಲ್ಲಿ ಮಾಸೂರು, ಪೂರ್ವದಲ್ಲಿ ಚಿಕ್ಕನಾಯಕನಹಳ್ಳಿ, ದಕ್ಷಿಣದಲ್ಲಿ ಬಳ್ಳಿಯಪಟ್ಟಣ, ಪಶ್ಚಿಮಕ್ಕೆ ಕರಾವಳಿಗಳ ನಡುವೆ ಹರಡಿತ್ತು. ಹಾಗಾಗಿ ಈ ಅರಸರು ಇಂದಿನ ಶಿವಮೊಗ್ಗ ಮತ್ತು ದಕ್ಷಿಣಕನ್ನಡ ಜಿಲ್ಲೆಗಳನ್ನು ಇಡಿಯಾಗಿಯೂ, ಚಿತ್ರದುರ್ಗ ಮತ್ತು ಹಾಸನ ಜಿಲ್ಲೆಗಳ ಬಹುಭಾಗವನ್ನೂ, ಕಾರವಾರ, ಧಾರವಾಡ ಮತ್ತು ತುಮಕೂರು ಜಿಲ್ಲೆಗಳ ಕೆಲವು ಭಾಗಗಳನ್ನೂ ಆಳುತ್ತಿದ್ದರು.

ಈ ಸಂಸ್ಥಾನದ ಬೇರು ಕೃಷಿ ವಲಯದಲ್ಲಿದೆ. ಏಕೆಂದರೆ ಈ ವಂಶದ ಸ್ಥಾಪಕನಾದ ಚೌಡ ಮತ್ತು ಭದ್ರ ಇಬ್ಬರೂ ರೈತರು. ಅವರು ವೀರಶೈವ ಧರ್ಮವನ್ನು ಅನುಸರಿಸುತ್ತಿದ್ದರು. ಅವರು ಹೇಗೆ ಜಹಗೀರು ಪಡೆದ ಧಣಿಗಳಾದರು ಎಂಬುದನ್ನು ಕೆಳದಿನೃಪವಿಜಯವು ಹೀಗೆ ವರ್ಣಿಸುತ್ತದೆ.

ಒಂದು ದಿನ ಚೌಡಪ್ಪನಿಗೆ ಒಂದು ಕನಸಾಯಿತು. ಅಲ್ಲಿ ದೇವರು ಒಬ್ಬ ಜಂಗಮನ ರೂಪದಲ್ಲಿ ಕಾಣಿಸಿಕೊಂಡು ಕೆಳದಿಯ ಪಕ್ಕದಲ್ಲಿ ಸೀಗೆವಳ್ಳಿ ಎಂಬ ಸ್ಥಳದಲ್ಲಿ ಒಂದು ರಾಮೇಶ್ವರ ಲಿಂಗವಿರುವುದಾಗಿಯೂ ಅದಕ್ಕೆ ಸರಿಯಾಗಿ ಪೂಜೆ ಮೊದಲಾದವು ನಡೆಯುತ್ತಿಲ್ಲವೆಂದೂ ಹೇಳಿದನು. ಅಲ್ಲಿ ಹುತ್ತಗಳು ಬೆಳೆದಿದ್ದುವು. ಚೌಡಪ್ಪನ ಒಂದು ಹಸುವು ದಿನವೂ ಅಲ್ಲಿಗೆ ಹೋಗಿ ಒಂದು ಹುತ್ತದ ಮೇಲೆ ಹಾಲನ್ನು ಸುರಿಸಿ ಬರುತ್ತಿತ್ತು. ಆ ಲಿಂಗವನ್ನು ಭಕ್ತಿಯಿಂದ ಪೂಜಿಸಿದ್ದೇ ಆದರೆ, ಅವನಿಗೆ ಒಂದು ದೊಡ್ಡ ರಾಜ್ಯವೇ ದೊರಕುವುದಾಗಿ ದೇವರು ಚೌಡಪ್ಪನಿಗೆ ಹೇಳಿದನು. ಅವನಿಗೆ ಬಹಳ ಸಂತೋಷವಾಯಿತು. ಮಾರನೆಯ ದಿನವೇ ಸೀಗೆವಳ್ಳಿಗೆ ಹೋಗಿ, ನಿರ್ದಿಷ್ಟ ಪ್ರದೇಶವನ್ನು ಸ್ವಚ್ಛಪಡಿಸಿ ನೋಡಿದನು. ಆಶ್ಚರ್ಯಕರವಾಗಿ ಅವನಿಗೆ ಲಿಂಗವು ಕಾಣಿಸಿತು. ಆ ಮೇಲೆ ಆ ಲಿಂಗಕ್ಕೆ ಅಲ್ಲೇ ಒಂದು ದೇವಾಲಯವನ್ನು ಕಟ್ಟಿಸಿದನು. ಶ್ರದ್ಧೆ-ಭಕ್ತಿಗಳಿಂದ ಲಿಂಗವನ್ನು ಪೂಜಿಸಿದನು.[೪೧] ಸಾಮರ್ಥ್ಯದಿಂದಲೂ ಕಠಿಣ ಪರಿಶ್ರಮದಿಂದಲೂ ಚೌಡಪ್ಪನು ಅಧಿಕಾರವನ್ನು ಪಡೆದನು. ಅವನಿಗೆ ಸಂಪತ್ತು ಹೇಗೆ ದೊರಕಿತು ಎಂಬುದನ್ನು ಕುರಿತು ಕೆಳದಿನೃಪವಿಜಯವು ಒಂದು ಕತೆಯನ್ನು ಹೇಳುತ್ತದೆ.

ಚೌಡಪ್ಪನು ಒಂದು ದಿನ ತನ್ನ ಜಮೀನು ನೋಡಿಕೊಂಡು ಬರಲು ಹೋಗಿದ್ದನು. ಕೆಲಸಗಳೆಲ್ಲ ಮುಗಿದ ಮೇಲೆ ಬಹಳ ಆಯಾಸದಿಂದ ಬಳಲಿ ಒಂದು ಮರದ ಕೆಳಗೆ ಮಲಗಿಕೊಂಡಿದ್ದನು. ಸಕಾಲಕ್ಕೆ ಮನೆಗೆ ಹಿಂದಿರುಗಲಿಲ್ಲವಾದ್ದರಿಂದ ಅವನ ತಾಯಿಯು ಅವನನ್ನು ಹುಡುಕಿಕೊಂಡು ಬಂದಳು. ಅಲ್ಲಿ ಮಲಗಿದ್ದ ಚೌಡಪ್ಪನ ತಲೆಯ ಮೇಲೆ ಹೆಡೆಯನ್ನು ಬಿಚ್ಚಿಕೊಂಡು ಒಂದು ಸರ್ಪವು ಆಡುತ್ತಿದ್ದುದನ್ನು ನೋಡಿದಳು. ಅವಳಿಗೆ ಬಹಳ ಆಶ್ಚರ್ಯವಾಯಿತು. ಸ್ವಲ್ಪ ಹೊತ್ತಿನ ಮೇಲೆ ಹಾವು ಹೊರಟುಹೋಯಿತು. ಒಡನೆಯೇ

ತಾಯಿಯು ಅವನನ್ನು ಎಬ್ಬಿಸಿ ತಾನು ಕಂಡುದನ್ನು ಹೇಳಿದಳು. ಅಷ್ಟರಲ್ಲಿ ಮತ್ತೆ ಆ ಸರ್ಪವು ಕಾಣಿಸಿಕೊಂಡು ತನ್ನ ಹೆಡೆಯಿಂದ ಬಡಿದು ಒಂದು ಸ್ಥಳವನ್ನು ತೋರಿಸಿ ಮಾಯವಾಯಿತು. ಇಬ್ಬರಿಗೂ ಬೆರಗಾಯಿತು. ಹಾವು ತೋರಿಸಿದ ಆ ಸ್ಥಳದಲ್ಲಿ ಹುದುಗಿಸಿಟ್ಟಿರುವ ನಿಧಿಯಿರಬಹುದು ಎಂದು ಅವರು ತೀರ್ಮಾನಿಸಿದರು. ಅದನ್ನು ಪರೀಕ್ಷಿಸಲು ಆ ಭಾಗವನ್ನು ಚೌಡಪ್ಪನು ಉತ್ತನು. ಅದೇ ಸ್ಥಳದಲ್ಲಿ ಚಿನ್ನ ತುಂಬಿದ ಒಂದು ಮಡಕೆಯೂ ನಾಗರಮುರಿ ಎಂಬ ಒಂದು ಖಡ್ಗವೂ ದೊರಕಿದುವು. ಅವುಗಳನ್ನು ಕೊಂಡೊಯ್ದು ಚೌಡಪ್ಪನು ಆ ನಿಧಿ ದೊರಕಿದ ಸ್ಥಳದಲ್ಲಿ ಒಂದು ಮನೆಯನ್ನು ಕಟ್ಟಿದನು. ಈ ಕತೆಯಿಂದ ನಾವು ಊಹಿಸಬಹುದಾದುದು, ಚೌಡಪ್ಪನು ತನ್ನ ಬಹುಕಷ್ಟದ ದುಡಿಮೆಯಿಂದ ಐಶ್ವರ್ಯವನ್ನೂ ಅಧಿಕಾರವನ್ನೂ ಸಂಪಾದಿಸಿದನು ಎನ್ನುವುದು.

ಚೌಡಪ್ಪನು ಹೊಸದಾಗಿ ಪಡೆದ ಐಶ್ವರ್ಯದ ಫಲವಾಗಿ ರಾಜಕೀಯ ಮತ್ತು ಆರ್ಥಿಕ ಶಕ್ತಿಯನ್ನು ಪಡೆದನು. ಆ ಪ್ರದೇಶದ ಒಬ್ಬ ಗಣ್ಯನಾಗಿ ಕೃಷ್ಣದೇವರಾಯನ ಗಮನವನ್ನು ಸೆಳೆದನು. ಚಕ್ರವರ್ತಿಯು ಚೌಡಪ್ಪನನ್ನು ಅವನ ತಮ್ಮ ಭದ್ರಪ್ಪನನ್ನೂ ತನ್ನ ಆಸ್ಥಾನಕ್ಕೆ ಕರೆಸಿಕೊಂಡು, ಸಾಮಾನ್ಯ ರೈತರಾಗಿದ್ದ ಅವರು ಇಷ್ಟು ಶ್ರೀಮಂತರೂ ಶಕ್ತಿಶಾಲಿಗಳೂ ಆದುದು ಹೇಗೆ ಎಂದು ಕೇಳಿದನು. ಸೋದರರು ನಡೆದುದೆಲ್ಲವನ್ನೂ ಹೇಳಿದರು. ಕೃಷ್ಣದೇವರಾಯನು ಅವರನ್ನು ಆ ಪ್ರದೇಶಗಳ ನಾಯಕರನ್ನಾಗಿ ನೇಮಿಸಿ ಸೂಕ್ತ ಬಿರುದುಗಳು ಮತ್ತು ಲಾಂಛನಗಳನ್ನು ನೀಡಿದನು.

ಅಲ್ಲಿಂದಾಚೆಗೆ ಚೌಡಪ್ಪನಾಯಕನೂ ಭದ್ರಪ್ಪನಾಯಕನೂ ಕೃಷ್ಣದೇವರಾಯನಿಗೆ ನಿಷ್ಠರಾಗಿ ನಡೆದುಕೊಂಡರು. ಸಾಮ್ರಾಜ್ಯದ ಪೂರ್ವಭಾಗದಲ್ಲಿ ಎದ್ದಿದ್ದ ಶಬರರು ಮೊದಲಾದವರ ದಂಗೆಯನ್ನು ಅಡಗಿಸಲು ಕೃಷ್ಣದೇವರಾಯನು ಅವರನ್ನು ನೇಮಿಸಿದನು. ಸೋದರರು ಅತ್ಯಂತ ಯಶಸ್ವಿಯಾಗಿ ಅದನ್ನು ನೆರವೇರಿಸಿದರು. ಇದರಿಂದ ಪರಮಪ್ರೀತನಾದ ಚಕ್ರವರ್ತಿಯು ವೀಳೆಯವನ್ನಿತ್ತು ಅವರನ್ನು ಸತ್ಕರಿಸಿ, ಅವರಿಗೆ ಕೆಳದಿ, ಇಕ್ಕೇರಿ, ರೆಬಯಲ್, ಯಲಗಳಲಿ, ಮೋದೂರು, ಕಲಿಸೆ ಮತ್ತು ಲಾಟವಾಡಿ ಈ ಎಂಟು ಮಾಗಣೆಗಳನ್ನು ವಂಶಪರಂಪರೆಯಾಗಿ ಅನುಭವಿಸಲು ನೀಡಿದನು. ಅದರ ಬಗೆಗೆ ಶಾಸನ ಹಾಕಿಸಿಕೊಟ್ಟನು. ಅವರಿಗೆ ನಾಯಕ ಎಂಬ ಬಿರುದನ್ನು ಕೊಟ್ಟನು. ವಂಶಜರೆಲ್ಲರೂ ಆ ಬಿರುದನ್ನು ಧರಿಸುವಂತಾಯಿತು. ಅಲ್ಲಿಂದ ಮುಂದಕ್ಕೆ ಚೌಡಪ್ಪನನ್ನು ಕೆಳದಿ ಸಂಸ್ಥಾನದ ಮನ್ನೆಯ ಚೌಡಪ್ಪನಾಯಕ ಎಂದು ಕರೆದರು. ಅವನು ಕೆಳದಿಯಲ್ಲಿ ಸಿಂಹಾಸನವನ್ನೇರಿದುದಲ್ಲದೆ ಒಂದು ಅರಮನೆಯನ್ನೂ ಕಟ್ಟಿಸಿಕೊಂಡನು.[೪೨]

ಕೆಳದಿ ರಾಜ್ಯವು ಒಂದು ಅಮರಮಾಗಣೆಯಾಗಿ ಪ್ರಾರಂಭವಾಯಿತು. ರಾಜ್ಯದ ಮೂಲಪ್ರದೇಶವಾಗಿ ಏಳು ಮಾಗಣೆಗಳು[೪೩] ಅಥವಾ ಆಡಳಿತೀಯ ವಿಭಾಗಗಳಿದ್ದುವು. ಅವು ಇಕ್ಕೇರಿ, ರೆಬಯಲು, ಯಲಗಳಲಿ, ಮೋದೂರು, ಕಲಿಸೆ, ಲಾಟವಾಡಿ.[೪೪] ೧೫೬೨ರಲ್ಲಿ ಸದಾಶಿವನಾಯಕನು ಇವುಗಳ ಜೊತೆಗೆ ಅರಗೆ, ಗುತ್ತಿ, ತುಳುರಾಜ್ಯ, ಬಾರಕೂರು ಮತ್ತು ಮಂಗಳೂರುಗಳನ್ನು ಅಮರಮಾಗಣೆಯಾಗಿ ವಿಜಯನಗರದ ಚಕ್ರವರ್ತಿ ಸದಾಶಿವರಾಯನಿಂದ ಪಡೆದನು. ರಾಜ್ಯದ ಒಟ್ಟು ಉದ್ದ ೫೬ ಗಾವುದ ಇದ್ದಿತು.[೪೫]

ಚೌಡಪ್ಪನ ಕಾಲಕ್ಕೆ ಸೇರಿದ ಶಾಸನವು ಅವನಿಗೆ ಎಡವಮುರಾರಿ ಎಂಬ ಬಿರುದನ್ನು ಕೊಡುತ್ತದೆ[೪೬] ಎರಡು ಸಾಹಿತ್ಯ ಕೃತಿಗಳಾದ ಕೆಳದಿನೃಪವಿಜಯಂ ಹಾಗೂ ಶಿವತತ್ವರತ್ನಾಕರಗಳ ಪ್ರಕಾರ ಈ ಬಿರುದು ಬಂದದ್ದು ಸದಾಶಿವನಾಯಕನಿಗೇ ಹೊರತು ಚೌಡಪ್ಪನಿಗಲ್ಲ.[೪೭] ಸಾಹಿತ್ಯಕ ಮೂಲಕ್ಕಿಂತ ಶಾಸನಾಧಾರವು ಹೆಚ್ಚು ವಿಶ್ವಾಸಾರ್ಹವಾದುದರಿಂದ ಚೌಡಪ್ಪನಿಗೆ ಎಡವಮುರಾರಿ ಎಂಬ ಬಿರುದಿತ್ತು ಎಂದಿಟ್ಟುಕೊಳ್ಳಬಹುದು. ಈ ಬಿರುದಿಗೆ ಎರಡು ರೀತಿಯಾಗಿ ವಿವರಣೆ ಕೊಡಲಾಗಿದೆ. ಒಂದು ವಿವರಣೆಯು ಹೀಗೆ ಹೇಳುತ್ತದೆ.[೪೮] ಚೌಡಪ್ಪನ ಒಬ್ಬ ಸೇವಕ ಮುರಾರಿ ಎನ್ನುವವನು ನೆಲದಡಿಯಲ್ಲಿದ್ದ ನಿಧಿಯನ್ನು ತನ್ನ ಒಡೆಯನಿಗೆ ತೆಗೆದು

ಕೊಡುವುದರಲ್ಲಿ ತನ್ನ ಪ್ರಾಣವನ್ನೇ ಬಲಿಗೊಟ್ಟನು. ಅವನು ಯಾವಾಗಲೂ ಎಡವುತ್ತಿದ್ದುದರಿಂದ ಅವನಿಗೆ ಎಡವಮುರಾರಿ ಎಂದೇ ಹೆಸರಾಯಿತು. ಅವನ ಹೆಸರು ಕೆಳದಿಯ ಅರಸರ ಜೊತೆಗೆ ಬಿರುದಾಗಿ ಸೇರಿಕೊಂಡಿತು. ರೈಸ್ ಹೇಳುವುದು,[೫೯] ಚೌಡಪ್ಪನಿಗೆ ಯಾದವ ಮತ್ತು ಮುರಾರಿ ಎಂಬ ಇಬ್ಬರು ಸೇವಕರಿದ್ದರು. ಮಾನವಬಲಿಯನ್ನು ಅರ್ಪಿಸಿದರೆ, ನೆಲದಡಿಯಲ್ಲಿ ಹುದುಗಿರುವ ನಿಧಿಯು ದೊರಕುವುದು ಎಂದು ಅವನಿಗೆ ಒಂದು ಕನಸಾಯಿತು. ಒಡೆಯನಿಂದ ಈ ವಿಷಯವನ್ನು ತಿಳಿದುಕೊಂಡ ಆ ಸೇವಕರು ಸಂತೋಷವಾಗಿ ಆತ್ಮಾಹುತಿ ಮಾಡಿಕೊಂಡರು. ತಮ್ಮ ಹೆಸರು ಶಾಶ್ವತವಾಗಿ ಕೆಳದಿಯ ಪ್ರಭುಗಳ ಹೆಸರಿನೊಂದಿಗೆ ಇರಬೇಕು ಎಂಬ ಷರತ್ತನ್ನು ಅದಕ್ಕಾಗಿ ಅವರು ಹಾಕಿದರು.

ಚೌಡಪ್ಪನು ರಾಜಧಾನಿಯನ್ನು ಕೆಳದಿಯಿಂದ ಇಕ್ಕೇರಿಗೆ ವರ್ಗಾಯಿಸಿದನು. ಇಕ್ಕೇರಿಯನ್ನು ನೂತನ ರಾಜಧಾನಿಯನ್ನಾಗಿ ಏಕೆ ಆರಿಸಲಾಯಿತೆನ್ನುವುದಕ್ಕೆ ವಿವರಣೆಯನ್ನು ಹೀಗೆ ಕೊಡಲಾಗಿದೆ. ಒಂದು ಮೊಲವು ಅಲ್ಲಿ ಬೇಟೆನಾಯಿಯನ್ನೇ ಅಟ್ಟಿಸಿಕೊಂಡುಹೋದ ಪರಾಕ್ರಮದ ದೃಶ್ಯವನ್ನು ಚೌಡಪ್ಪನು ನೋಡಿದನು. ನಿಜವಾಗಿ ಅದು ಸಾಹಸದ ಭೂಮಿ ಎನಿಸಿದ್ದರಿಂದ ಅಲ್ಲಿ ಒಂದು ಕೋಟೆಯನ್ನೂ ಒಂದು ಅರಮನೆಯನ್ನೂ ನಿರ್ಮಿಸಿದನು.[೬೦] ಆಮೇಲೆ ಒಂದು ಮಾರುಕಟ್ಟೆ, ಪೊಲೀಸ್‌ಠಾಣೆ, ಕೋಶಾಗಾರ, ಉಗ್ರಾಣ, ಕುದುರೆ ಲಾಯಗಳು, ಆನೆಲಾಯಗಳು ಮತ್ತು ಇತರ ಕಟ್ಟಡಗಳನ್ನು ಕೂಡಿಸಲಾಯಿತು.[೬೧]

ಚೌಡಪ್ಪನ ನಂತರ ಅವನ ಮಗ ಸದಾಶಿವನಾಯಕನು ಪಟ್ಟಕ್ಕೆ ಬಂದನು. ಅವನು ಕ್ರಿ.ಶ. ೧೫೧೩ರಿಂದ ೧೫೬೩ರವರೆಗೆ ಆಳಿದನು.[೬೨] ಅವನ ಆಳ್ವಿಕೆಯಲ್ಲಿ ಸೈನ್ಯ ಶಕ್ತಿ ಮತ್ತು ರಾಜಕೀಯ ಬುದ್ಧಿಮತ್ತೆಗಳು ಕಾರಣವಾಗಿ ಕೆಳದಿಯ ಬಲವೂ ಸ್ಥಿರತೆಯೂ ಹೆಚ್ಚಿದುವು. ವಿಜಯನಗರದ ರಾಜನ ಅನುಮತಿಯಿಂದ ಸದಾಶಿವನಾಯಕನು ಚಂದ್ರಗುತ್ತಿ, ಬಾರಕೂರು, ಮಂಗಳೂರು ಈ ಅಮರಂಗಳನ್ನು ಪಡೆದನು. ವಿಜಯನಗರ ಸಾಮ್ರಾಜ್ಯಕ್ಕೆ ಸಲ್ಲಿಸಿದ ಸೇವೆಗೆ ಪ್ರತಿಫಲವಾಗಿ ಅವನು ಈ ಸ್ಥಳಗಳನ್ನು ಪಡೆದನು ಎಂದು ದೇಶೀಯ ಮೂಲಗಳು ಹೇಳುತ್ತವೆ.[೬೩]

ಅಮರನಾಯಕನಾಗಿ ಸದಾಶಿವನಾಯಕನು ಚಕ್ರವರ್ತಿಗೆ ಪರಮನಿಷ್ಠನಾಗಿದ್ದನು. ಪ್ರಭುವಿನ ಹಿತವನ್ನು ರಕ್ಷಿಸಲು ತನ್ನ ಪ್ರಾಣವನ್ನೇ ಅಪಾಯಕ್ಕೊಡ್ಡಲು ಅವನು ಸದಾ ಸಿದ್ಧನಾಗಿದ್ದನು. ಅವನು ಕಲ್ಯಾಣ ಮತ್ತು ಗುಲ್ಬರ್ಗಾ ರಾಜರ ಮೇಲೆ ಹೇಗೆ ಯಶಸ್ವಿಯಾಗಿ ದಂಡಯಾತ್ರೆಯನ್ನು ನಿರ್ವಹಿಸಿದನು ಎಂಬುದನ್ನು ಮೂಲಗಳು ಹೇಳುತ್ತವೆ.[೬೪] ಅಹಮದ್‌ನಗರದ ಮುಸ್ಲಿಂ ಅರಸನ ಸೈನ್ಯವನ್ನು ಅವನು ಸೋಲಿಸಿದನು.[೬೫] ಬಿಜಾಪುರದ ಮುಸ್ಲಿಂ ಪಡೆಗಳನ್ನು ಸಾಮ್ರಾಜ್ಯದ ಸೇನೆಗೆ ಸೇರಿಸಿದನು.[೬೬] ಬಿದರೆಯ ಸುಲ್ತಾನನು ಅತ್ಯಂತ ಹೀನಾಯವಾದ ಸೋಲುಣ್ಣುವಂತೆ ಮಾಡಿದನು.[೬೭] ಬಿಜಾಪುರದ ಸುಲ್ತಾನನನ್ನು ಅವನ ಏಳು ಜನ ಅಧೀನ ನಾಯಕರೊಂದಿಗೆ ಸೆರೆಹಿಡಿದು ರಾಮರಾಯನ ಬಳಿಗೆ ತಂದೊಪ್ಪಿಸಿದನು.[೬೮] ಕಾಸರಗೋಡಿನವರೆಗೂ ದಕ್ಷಿಣ ಕನ್ನಡ ಪ್ರದೇಶವನ್ನು ಸ್ವಾಧೀನಪಡಿಸಿಕೊಂಡನು.[೬೯] ಆ ಪ್ರದೇಶದಲ್ಲಿ ಒಂದು ಜಯಸ್ತಂಭವನ್ನು ನಿಲ್ಲಿಸಿದನು.[೭೦] ಕೇರಳದವರೆಗೆ ಹೋಗಿ ಅಲ್ಲಿಯ ಅರಸನೊಂದಿಗೆ ಯಶಸ್ವಿಯಾಗಿ ಯುದ್ಧಮಾಡಿದನು.[೭೧] ಜಾಲಿಹಾಳು ಎಂಬ ಸ್ಥಳದಲ್ಲಿ ಇಬ್ಬರು ನಾಯಕರಿದ್ದರು. ಅವರ ಹೆಸರು ಯಾದವ ಮತ್ತು ಮುರಾರಿ. ಸದಾಶಿವರಾಯನು ಅವರನ್ನು ಸೋಲಿಸಿದನು.[೭೨] ಅನೇಕ ವೇಳೆ ವಿಜಯನಗರದ ಪ್ರಭುವು ದಂಗೆಯೆದ್ದ ಸಣ್ಣಪುಟ್ಟ ನಾಯಕರನ್ನು ದಮನಗೊಳಿಸಲು ಕೆಳದಿಯ ರಾಜನಿಗೆ ಆಜ್ಞೆಮಾಡುತ್ತಿದ್ದನು. ಹಾಗಾಗಿ ಇಕ್ಕೇರಿ ಮಲ್ಲನಗೌಡ, ನಲ್ಲೂರು ಪುಟ್ಟೇಗೌಡ, ನರಗುಪ್ಪೆ ಪುಟ್ಟೇಗೌಡ, ಮಾಲತಿ ಪುಟ್ಟೇಗೌಡ, ಯಲಗಲ್ಲಿ ಪುಟ್ಟೇಗೌಡ, ಆವಗುಡಿಯ ವೀರಣ್ಣ, ಕಣಲೆಯ ಪುಟ್ಟಣ್ಣ ಮತ್ತು ಇತರರು ವಿಜಯನಗರದ ವಿರುದ್ಧವಾಗಿ ಬಂಡೆದ್ದಾಗ ಸದಾಶಿವನು ಅವರನ್ನು ಬಗ್ಗುಬಡಿದು ಆ ಪ್ರದೇಶಗಳನ್ನು ವಿಜಯನಗರದ ಅಂಕೆಗೆ ತಂದನು.[೭೩] ಅನೇಕ ವೇಳೆ ಸಾಮ್ರಾಜ್ಯದ

ವಿವಿಧ ಭಾಗಗಳಿಗೆ ಸೈನ್ಯಾಚರಣೆಗಾಗಿ ಚಕ್ರವರ್ತಿಯು ಹೊರಟಾಗ ಸದಾಶಿವನಾಯಕನೂ ಅವನ ಜೊತೆಯಲ್ಲಿರುತ್ತಿದ್ದನು. ಅಂತಹ ಸಂದರ್ಭಗಳಲ್ಲಿ ತನ್ನ ಸೈನ್ಯವನ್ನೂ ಕೊಂಡೊಯ್ಯುತ್ತಿದ್ದನು. ಈ ರೀತಿಯಲ್ಲಿ ತಿರುವಾಂಕೂರಿನ ಮೇಲೆ ನಡೆದ ದಂಡಯಾತ್ರೆಯಲ್ಲಿ ಪಾಲುಗೊಂಡಿದ್ದನು.[೬೪] ಹಾಗೆಯೇ ಚಂದ್ರಗುತ್ತಿಯ ಅವಿಧೇಯ ನಾಯಕರನ್ನು ಸೋಲಿಸಿದನು.[೬೫] ಬಂಕಾಪುರದ ಮಾದರಸ ಹಾಗೂ ತರೀಕೆರೆಯ ಸಾಳುವ ತಿಮ್ಮರೆಂಬ ಅವಿಧೇಯ ನಾಯಕರನ್ನು ಸೋಲಿಸಿ ಅಡಗಿಸಿದನು.[೬೬]

ಸದಾಶಿವನಾಯಕನು ಶತ್ರು ಸಪ್ತಾಂಗಹರಣ ಎಂಬ ಬಿರುದನ್ನು ಧರಿಸಿದ್ದನು. ಅದನ್ನು ಚಕ್ರವರ್ತಿಯು ಅವನಿಗೆ ನೀಡಿದ್ದನು.[೬೭] ಬರೀದ್ ಶಾಹನನ್ನು ಸೆರೆಹಿಡಿದು ವಿಜಯನಗರದ ಆಸ್ಥಾನಕ್ಕೆ ತಂದೊಪ್ಪಿಸಿದ ವಿಶೇಷ ಸೇವೆಗಾಗಿ ಅವನಿಗೆ ಈ ಬಿರುದನ್ನು ನೀಡಲಾಯಿತು. ಇತರ ಹಲವು ಬಿರುದುಗಳನ್ನೂ ಅವನು ಚಕ್ರವರ್ತಿಯಿಂದ ಪಡೆದನು: ಎಡವಮುರಾರಿ.[೬೮] ಕೋಟೆ ಕೋಲಾಹಲ (ಕೋಟೆಗಳನ್ನು ನಾಶ ಮಾಡುವವನು)[೬೯] ಬಲವಂತ[೭೦], ಏಕಾಂಗವೀರ[೭೧], ಮೇಘಾಡಂಬರ[೭೨], ದಿವ್ಯ ಪ್ರದೀಪ[೭೩], ಪಡುವಣ ಸಮುದ್ರಾಧೀಶ್ವರ.[೭೪] ಇವುಗಳ ಜೊತೆಗೆ ಸಾಮ್ರಾಟನು ಅವನಿಗೆ ಬರೀದಪಾತುಷಹ[೭೫] ಎಂದು ಕೆತ್ತಿದ್ದ ಮುದ್ರೆಯುಂಗುರವೊಂದನ್ನು ನೀಡಿದ್ದನು. ತನ್ನ ಹೆಸರಿಗೆ ರಾಯನಾಯಕ ಎಂಬ ಬಿರುದನ್ನು ಸೇರಿಸಿಕೊಳ್ಳಲು ಅವನಿಗೆ ಹಕ್ಕನ್ನು ನೀಡಿದ್ದನು.[೭೬]

ಕೆಳದಿಯ ರಾಜನಾಗಿ ಸದಾಶಿವನಾಯಕನು ಚಕ್ರವರ್ತಿಗಳ ಧಾರ್ಮಿಕ ನೀತಿಯನ್ನೇ ಅನುಸರಿಸಿದನು, ಅಗ್ರಹಾರಗಳನ್ನೂ ದೇವಾಲಯಗಳನ್ನೂ ಕಟ್ಟಿಸಿದನು. ಹಿಂದೂಧರ್ಮಕ್ಕೆ ಪರಿವರ್ತನೆ, ವಿಸ್ತರಣ, ಅಭಿವೃದ್ಧಿಗಳ ಸಾಮ್ರಾಜ್ಯದ ಧ್ಯೇಯಕ್ಕೆ ಇದು ಅನುಗುಣವಾಗಿಯೇ ಇದ್ದಿತು.[೭೭]

ಸದಾಶಿವನಾಯಕನ ನಂತರ ೧ನೇ ಸಂಕಣ್ಣನಾಯಕ ಅಥವಾ ದೊಡ್ಡಸಂಕಣ್ಣನಾಯಕನು ಪಟ್ಟಕ್ಕೆ ಬಂದನು. ಅವನು ಕ್ರಿ.ಶ. ೧೫೬೩ರಿಂದ ೧೫೭೦ರ ವರೆಗೆ ಆಳಿದನು. ಕೆಳದಿ ಸಂಸ್ಥಾನದ ಅಧೀನ ಸ್ಥಾನಮಾನವು ಈ ಕಾಲದಲ್ಲೂ ಮುಂದುವರಿಯಿತು. ಪೋರ್ಚುಗೀಸರಿಗೂ ವಿಜಯನಗರದ ಚಕ್ರವರ್ತಿಗಳಿಗೂ ಏನೋ ಒಂದು ಬಗೆಯ ಘರ್ಷಣೆಯಿದ್ದಂತೆ ಕಂಡುಬಂದಿತು. ಈ ಪರಿಸ್ಥಿತಿಯಲ್ಲಿ ಪೋರ್ಚುಗೀಸರ ಮೇಲೆ ದಂಡೆತ್ತಿ ಹೋಗುವಂತೆ ರಾಮರಾಯನು ಕೆಳದಿಯ ಅರಸನಿಗೆ ಹೇಳಿದನು. ವಿಧೇಯನಾಗಿದ್ದ ಸಂಕಣ್ಣನಾಯಕನು ಸೇನಾಸಮೇತನಾಗಿ ಹೋಗಿ ಅವರನ್ನು ಸೋಲಿಸಿದುದಲ್ಲದೆ, ಅವರ ಗವರ್ನರನನ್ನು ಸೆರೆಹಿಡಿದು ತಂದನು. ಚಕ್ರವರ್ತಿಯಾಗಿದ್ದ ರಾಮರಾಯನಿಗೆ ಇದರಿಂದ ತುಂಬಾ ಸಂತೋಷವಾಗಿ ಸಮುಚಿತವಾದ ಉಡುಗೊರೆಯನ್ನು ನಾಯಕನಿಗೆ ನೀಡಿದನು. ಈ ನಿರ್ದಿಷ್ಟ ಸೇವೆಗಾಗಿ ಮಹದೇವಪುರವನ್ನು ಅವನಿಗೆ ಕೊಡಲಾಯಿತು.[೭೮] ಸದಾಶಿವನಾಯಕನಂತೆಯೇ ಸಂಕಣ್ಣನಾಯಕನೂ ಪ್ರಭುವಿಗೆ ಪರಮನಿಷ್ಠನಾಗಿದ್ದು ಸದಾಕಾಲವೂ ಸಮ್ರಾಜ್ಯದ ರಾಜಕೀಯ ಹಿತವನ್ನು ಕೋರಿದನು. ಚಕ್ರವರ್ತಿಯ ಆಣತಿಯಂತೆ ದಂಗೆಯೆದ್ದಿದ್ದ ಈರಪ್ಪಣ್ಣ, ಕಾರ್ಕಳದ ಭೈರರಸ ಒಡೆಯ, ಗೇರಸೊಪ್ಪೆಯ ಭೈರಾದೇವಿ, ಜಂಬೂರಿನ ವಿರುಪಣ್ಣ ಒಡೆಯರ್ ಇವರುಗಳನ್ನು ತಕ್ಷಣವೇ ಅಡಗಿಸಿದನು.[೭೯] ವಿಜಯನಗರಕ್ಕೆ ಕಷ್ಟವನ್ನು ಕೊಡುತ್ತಿದ್ದ ಶಾಹಿ ಅರಸರ ವಿರುದ್ಧವಾಗಿಯೂ ಅವನು ಯುದ್ಧಮಾಡಿದನು.[೮೦] ಹೀಗೆ ಉದ್ದಕ್ಕೂ ಕೆಳದಿ ಅರಸರು ಚಕ್ರವರ್ತಿಗೆ ವಿಧೇಯರಾಗಿದ್ದು ಅವರ ಹಿತವನ್ನು ಕಾಪಾಡಲು ಪ್ರಯತ್ನಿಸಿದರು.

ದೊಡ್ಡ ಸಂಕಣ್ಣನಾಯಕನಿಗೂ ಚಕ್ರವರ್ತಿಗೂ ಇದ್ದ ಸಾಮಂತ ಸಂಬಂಧವನ್ನು ಕುರಿತು ಕೆಳದಿ ನೃಪವಿಜಯವು ಹೆಚ್ಚಿನ ಬೆಳಕು ಚೆಲ್ಲುತ್ತದೆ. ಅಧೀನ ರಾಜನ ಕರ್ತವ್ಯಗಳಲ್ಲಿ ಒಂದು ಅವನು ಸಾಮ್ರಾಜ್ಯದ ರಾಜಧಾನಿಯಲ್ಲಿ ಸ್ವಲ್ಪ ಸಮಯ ಇರಬೇಕು ಎನ್ನುವುದಾಗಿತ್ತು. ಅದರಂತೆ ದೊಡ್ಡ ಸಂಕಣ್ಣನಾಯಕನು ಕೆಲಕಾಲ ವಿಜಯನಗರ ರಾಜಧಾನಿಯಲ್ಲಿ ತಂಗಿದ್ದನು. ತನ್ನ ಗೈರುಹಾಜರಿಯಲ್ಲಿ ಕೆಳದಿಯ ಹೊಣೆಯನ್ನು ತಮ್ಮನಾದ ಚಿಕ್ಕ ಸಂಕಣ್ಣನಾಯಕನಿಗೆ ವಹಿಸಿದ್ದನು.[೮೧]

ಕೆಳದಿಯು ಕ್ರಮೇಣ ಬಲಾಢ್ಯವಾಗಿ, ವಿಜಯನಗರವು ನಿಧಾನವಾಗಿ ಆ ಸಾಮಂತ ರಾಜ್ಯದ ಮೇಲೆ ಹಿಡಿತವನ್ನು ಕಳೆದುಕೊಳ್ಳುತ್ತಿದ್ದುದನ್ನು ತೋರಿಸುವ ಒಂದು ಸ್ವಾರಸ್ಯವಾದ ಸಂದರ್ಭದ ಉಲ್ಲೇಖವಿದೆ. ಕಾರ್ಕಳದ ಭೈರರಸ ಒಡೆಯನೂ ದೊಡ್ಡ ಸಂಕಣ್ಣನಾಯಕನಂತೆಯೇ ವಿಜಯನಗರದ ಒಬ್ಬ ಅಧೀನರಾಜನಾಗಿದ್ದನು. ದಾಖಲೆಗಳ ಪ್ರಕಾರ, ದೊಡ್ಡ ಸಂಕಣ್ಣನು ಅವನನ್ನು ಸೋಲಿಸಿ ತನಗೆ ಕಪ್ಪವನ್ನು ಕೊಡುವಂತೆ ಬಲಾತ್ಕರಿಸಿದನು. ೧೫೬೫ರ ತಾಳಿಕೋಟೆ ಅನಾಹುತವಾದ ನಂತರ ಕೆಳದಿಯು ಕ್ರಮೇಣ ಸ್ವತಂತ್ರ ಸಂಸ್ಥಾನವಾಗುತ್ತಾ ಹೋಯಿತೆಂಬುದನ್ನು ಇದು ಸೂಚಿಸುತ್ತಿರಬಹುದು. ಕ್ರಿ.ಶ. ೧೫೮೨ರಲ್ಲಿ ಸಿಂಹಾಸನವನ್ನೇರಿದ ವೆಂಕಟಪ್ಪನಾಯಕನ ಕೈಕೆಳಗೆ ಕೆಳದಿಯು ಸಂಪೂರ್ಣವಾಗಿ ಸ್ವತಂತ್ರವಾಯಿತು.

ಹೀಗೆ ವಿಜಯನಗರದ ಅರಸರಿಗೂ ಕೆಳದಿಯ ನಾಯಕರಿಗೂ ನಡುವೆ ಚಕ್ರವರ್ತಿ-ಸಾಮಂತ ಸಂಬಂಧವು ಕೊನೆಯ ಪಕ್ಷ ದೊಡ್ಡ ಸಂಕಣ್ಣನಾಯಕನ ಆಳಿಕೆಯವರೆಗೆ ನಡೆಯಿತು. ಇಲ್ಲಿ ಗಮನಿಸಬೇಕಾದ ಒಂದು ಮುಖ್ಯ ಅಂಶವೆಂದರೆ, ಇಲ್ಲಿ ನಾಯಕ ಎಂಬ ಗೌರವದ ಹೆಸರನ್ನು ಕೆಳದಿಯ ಅರಸರಿಗೆ ವಿಜಯನಗರ ಚಕ್ರವರ್ತಿಯೇ ನೀಡಿದನು. ಅವರು ತಮ್ಮ ರಾಜಕೀಯ ಜೀವನವನ್ನು ವಿಜಯನಗರದ ಸಾಮಂತರಾಗಿಯೇ ಪ್ರಾರಂಭ ಮಾಡಿದರು ಎಂಬುದನ್ನು ಮೂಲಗಳು ಸ್ಪಷ್ಟವಾಗಿ ತೋರಿಸುತ್ತವೆ. ಅವರು ಅಮರನಾಯಕರಾಗಿದ್ದರು. ಹಾಗಾಗಿ ಅಮರನಾಯಕರಿಂದ ನಿರೀಕ್ಷಿತವಾಗಿದ್ದ ಎಲ್ಲ ಕರ್ತವ್ಯಗಳನ್ನೂ ನಿಷ್ಠೆಯಿಂದ ಅವರು ಪೂರೈಸಿದರು.

ವಿಜಯನಗರದ ಚೌಕಟ್ಟಿನಲ್ಲಿ ಕೆಳದಿಯ ಅರಸರು ಗಮನಾರ್ಹ ವಿಸ್ತಾರದ ಪ್ರದೇಶವನ್ನು ನಿಯಂತ್ರಿಸುತ್ತಿದ್ದರು. ಕರ್ನಾಟಕದ ಬಹು ಫಲವತ್ತಾದ ಪ್ರದೇಶವೇ ಅವರ ವಶದಲ್ಲಿತ್ತು. ಜೊತೆಗೆ ಕರಾವಳಿಯ ಉಸ್ತುವಾರಿಯೂ ಅವರದೇ ಆಗಿತ್ತು. ಈ ಪ್ರದೇಶಗಳ ಸಂಪನ್ಮೂಲಗಳನ್ನು ಕ್ರೋಢೀಕರಿಸಿ ಸಾಮ್ರಾಜ್ಯದ ಬಲವರ್ಧನೆಗೆ ಅರ್ಪಿಸಿದರು. ಕೆಳದಿ ರಾಜ್ಯಾಡಳಿತ (Keladi polity) ಎಂಬ ಕೃತಿಯಲ್ಲಿ ಚಿಟ್ನೀಸ್ ಹೀಗೆ ಹೇಳುತ್ತಾನೆ: ಪ್ರಾರಂಭದಲ್ಲಿ ಕೆಳದಿಯು ವಿಜಯನಗರದ ಒಂದು ಸಣ್ಣ ಸಾಮಂತ ಸಂಸ್ಥಾನವಾಗಿತ್ತು. ಅದರ ಮುಖ್ಯಸ್ಥರು ವಿಜಯನಗರದ ಚಕ್ರವರ್ತಿಗಳ ಕೈಕೆಳಗೆ ನಾಯಕರಾಗಿದ್ದರು. ಇತರ ಕೆಲವು ಸಮಕಾಲೀನ ಸಾಮಂತರ ಹಾಗೆ ಅವರು ಎಂದೂ ಪ್ರಭುತ್ವಕ್ಕೆ ನಿಷ್ಠೆ ಕಳೆದುಕೊಳ್ಳಲಿಲ್ಲ. ಸ್ವತಂತ್ರ ರಾಜರಾದ ಮೇಲೆಯೂ ಕೂಡ, ಪ್ರಭುಗಳಿಗೆ ಸಹಾಯ ಮಾಡಲು ಅವರು ಸದಾ ಸಿದ್ಧವಾಗಿದ್ದರು. ವಿಜಯನಗರದ ಅರಸರು ಹೆಚ್ಚು ಕಡಮೆ ಸಕಲ ಅಧಿಕಾರಗಳನ್ನೂ ಕಳೆದುಕೊಂಡಮೇಲೆಯೂ ಕೂಡ ಅವರ ಬಗೆಗೆ ಬಹು ಗೌರವದಿಂದ ನಡೆದುಕೊಂಡರು.[೨೨]

ಕೆಳದಿಯ ರಾಜರೂ ಚಕ್ರವರ್ತಿಯ ಆಡಳಿತ ನೀತಿಯನ್ನೇ ಅನುಸರಿಸಿದರು. ದೇವಾಲಯಗಳು, ಮಠಗಳು ಮೊದಲಾದ ಧಾರ್ಮಿಕ ಸಂಸ್ಥೆಗಳಿಗೂ ಬ್ರಾಹ್ಮಣರಿಗೂ ಬೇಕಾದಷ್ಟು ಭೂಮಿಯನ್ನು ದಾನ ಮಾಡಿದರು. ಅಸಂಖ್ಯಾತ ಅಗ್ರಹಾರಗಳನ್ನು ನಿರ್ಮಿಸಿದರು. ಅವರು ಪೂರ್ವಮರ್ಯಾದೆ ಅಥವಾ ತಮ್ಮ ಪ್ರಭುಗಳಾದ ವಿಜಯನಗರದ ಅರಸರು ನಡೆದುಕೊಳ್ಳುತ್ತಿದ್ದ ರೀತಿಯನ್ನು ಅನುಸರಿಸುತ್ತಿದ್ದರು.[೨೩]

ಕೆಳದಿ ರಾಜ್ಯದಲ್ಲಿ ಗಮನಿಸಬಹುದಾದ ಇನ್ನೊಂದು ಬೆಳವಣಿಗೆಯೆಂದರೆ ಷರತ್ತಿನ ಮೇಲೆ ಮಾನ್ಯಗಳನ್ನು ಕೊಡುವ ಪ್ರಕ್ರಿಯೆ. ಶಿವಮೊಗ್ಗ ಮತ್ತು ದಕ್ಷಿಣಕನ್ನಡ ಪ್ರದೇಶಗಳಲ್ಲಿ ತಮಗೆ ಅಧೀನರಾದ ನಾಯಕರನ್ನು ಅವರು ಸ್ಥಾಪಿಸಿದರು. ಅವರು ಕೆಳದಿಯ ಅರಸರಿಗೆ ವಿಧೇಯರಾಗಿದ್ದರು, ಕೆಳದಿಯರಸರು ವಿಜಯನಗರಕ್ಕೆ ವಿಧೇಯರಾಗಿದ್ದರು.

ಗೌಣ ಅಮರನಾಯಕರಂತಲ್ಲದೆ ಕೆಳದಿಯ ಅರಸರು ಒಂದು ವಿಶಾಲ ಭೂಪ್ರದೇಶವನ್ನು ಆಳಿದರು. ಸಹಜವಾಗಿಯೇ ಅವರ ಸ್ಥಾನಮಾನವೂ ಅಧಿಕಾರವೂ ಕೆಲವೇ ಹಳ್ಳಿಗಳನ್ನು ನಿಯಂತ್ರಿಸುತ್ತಿದ್ದ ಗೌಣ

ಅಮರನಾಯಕರದಕ್ಕಿಂತ ಗಣನೀಯವಾಗಿ ಮೇಲಿನದಾಗಿತ್ತು. ಉದಾಹರಣೆಗೆ ಅವರು ವರ್ಷ ಮತ್ತು ಹೊನ್ನು ಎರಡು ಚಿನ್ನದ ನಾಣ್ಯಗಳನ್ನು ಚಲಾವಣೆಗೆ ತಂದರು. ಇದು ಅವರು ಪಡೆದಿದ್ದ ಸ್ಥಾನಮಾನ ಮತ್ತು ಸ್ವಯಮಾಡಳಿತದ ಮಟ್ಟಗಳನ್ನು ಸೂಚಿಸುತ್ತದೆ. ಅವರು ಬಹುದೊಡ್ಡ ಸೈನ್ಯವನ್ನು ಕಟ್ಟಿದ್ದರು. ಅಗತ್ಯದ ಸಮಯಗಳಲ್ಲಿ ಚಕ್ರವರ್ತಿಯ ನೆರವಿಗೆ ಧಾವಿಸುತ್ತಿದ್ದರು. ಹೀಗೆ ಕೆಳದಿಯು ವಿಜಯನಗರ ಬೃಹತ್ ಸಾಮ್ರಾಜ್ಯದ ಚೌಕಟ್ಟಿನೊಳಗೆ ಒಂದು ಮುಖ್ಯವಾದ ಘಟಕವಾಗಿತ್ತು. ಕೆಳದಿಯಲ್ಲದೆ ಇನ್ನೂ ಕೆಲವರು ನಾಯಕರಿದ್ದರು. ಅವರಲ್ಲಿ ಚಿತ್ರದುರ್ಗದ ನಾಯಕರ ಹೆಸರನ್ನು ಉಲ್ಲೇಖಿಸಬಹುದು.

ಯಲಹಂಕನಾಡು ಪ್ರಭುಗಳು

ಯಲಹಂಕನಾಡು ಇಂದಿನ ಬೆಂಗಳೂರು ಜಿಲ್ಲೆಯಲ್ಲಿತ್ತು. ೧೪ ಮತ್ತು ೧೫ನೆಯ ಶತಮಾನಗಳಲ್ಲಿ ಈ ಪ್ರದೇಶದ ವಿವಿಧ ಭಾಗಗಳನ್ನು ಹಲವು ಸಣ್ಣಪುಟ್ಟ ನಾಯಕರು ಆಳುತ್ತಿದ್ದರು.[೮೪] ಅವರು ಮೂಲತಃ ಕಾಂಚೀಪುರದದ ಬಳಿ ಇರುವ ಅತ್ತೂರಿಗೆ ಸೇರಿದವರು. ಆಮೇಲೆ ಇಂದಿನ ಬೆಂಗಳೂರು ಜಿಲ್ಲೆಯಲ್ಲಿರುವ ಆವತಿಗೆ ಬಂದು ನೆಲೆಸಿದರು.[೮೫] ರಣಭೈರೇಗೌಡ ಎಂಬುವನು ಒಬ್ಬ ಉದ್ಯಮಶೀಲನಾದ ಕೃಷಿಕ ಹಾಗೂ ಈ ವಂಶದ ಸ್ಥಾಪಕ.[೮೬] ಅವನ ಮಗ ಜಯಗೌಡನು ಯಲಹಂಕದಲ್ಲಿ ನೆಲಸಿ ಅದರ ನಾಯಕನಾದನು. ಕ್ರಿ.ಶ. ೧೪೩೩ರಿಂದ ೧೪೪೩ರ ವರೆಗೆ ಅವನು ಈ ಪ್ರದೇಶವನ್ನು ತನ್ನ ಹತೋಟಿಯಲ್ಲಿ ಇಟ್ಟುಕೊಂಡಿದ್ದನು. ಮಹತ್ವಪಡೆದ ಗಣ್ಯನಾದನು. ಅವನಾದ ನಂತರ ಕೆಂಪನಂಜೇಗೌಡನು (ಕ್ರಿ.ಶ. ೧೪೪೩-೧೫೧೩) ನಾಯಕನಾದನು.

ರಣಭೈರೇಗೌಡನಿಂದ ಕೆಂಪನಂಜೇಗೌಡನವರೆಗೆ ಈ ನಾಯಕರ ಚಟುವಟಿಕೆಗಳು ಯಲಹಂಕನಾಡು ಮತ್ತು ಅದರ ಸುತ್ತು ಮುತ್ತಿನ ಪ್ರದೇಶಗಳಿಗೆ ಸೀಮಿತವಾಗಿದ್ದುವು. ಅವರು ವಿಜಯನಗರಕ್ಕೆ ಪ್ರಾಮಾಣಿಕವಾದ ನಿಷ್ಠೆಯನ್ನು ಹೊಂದಿದ್ದರು. ೧ನೇ ಕೆಂಪೇಗೌಡನ ಕಾಲದಲ್ಲಿ (ಕ್ರಿ.ಶ. ೧೫೧೩-೧೫೬೯) ವಿಜಯನಗರದ ಚಕ್ರವರ್ತಿಗಳ ಅನುಗ್ರಹದಿಂದ, ಕೃಷ್ಣದೇವರಾಯ ಮತ್ತು ಅಚ್ಯುತರಾಯ ಇವರ ಸಹೃದಯದಿಂದ ಯಲಹಂಕವು ಸಾಮಂತ ಸಂಸ್ಥಾನದ ಸ್ಥಾನಮಾನವನ್ನು ಪಡೆಯಿತು. ಯಲಹಂಕನಾಡಿಗೂ ವಿಜಯನಗರಕ್ಕೂ ಇದ್ದ ಸಾಮಂತ ಸಂಬಂಧಗಳ ಬಗೆಗೆ ೧ನೇ ಕೆಂಪೇಗೌಡನ ಜೀವನವು ಸ್ವಾರಸ್ಯವಾದ ಒಳನೋಟಗಳನ್ನು ಕೊಡುತ್ತದೆ. ರೈಸ್ ಅದನ್ನು ಹೀಗೆ ವರ್ಣಿಸಿದ್ದಾರೆ: ಒಮ್ಮೆ ಯಲಹಂಕನಾಡಿನ ಮೂಲಕ ಪ್ರವಾಸ ಮಾಡುತ್ತಿದ್ದಾಗ ಕೆಂಪೇಗೌಡನು ಶಿವನಸಮುದ್ರ ಎಂಬ ಹಳ್ಳಿಗೆ ಬಂದನು. ಅದು ಯಲಹಂಕದಿಂದ ದಕ್ಷಿಣಕ್ಕೆ ೧೦ ಮೈಲಿ, ಬೆಂಗಳೂರಿನಿಂದ ದಕ್ಷಿಣಕ್ಕೆ ೩ಮೈಲಿ ದೂರದ ಒಂದು ಹಳ್ಳಿ. (ಹೆಬ್ಬಾಳಕೆರೆಯ ವಾಯುವ್ಯಕ್ಕೆ ಕೊಡಿಗೇಹಳ್ಳಿಯ ಬಳಿ ಇರುವ ಹಳೆ ಬೆಂಗಳೂರು ಪ್ರದೇಶ. ಬೆಂಗಳೂರು ಜಿಲ್ಲೆಯನ್ನು ಬಹಳ ಹಿಂದಿನ ಕಾಲದಲ್ಲಿ ಶಿವನಸಮುದ್ರಂ ದೇಶವೆಂದೇ ಕರೆಯಲಾಗುತ್ತಿತ್ತು) ಆ ಸ್ಥಳವು ಒಂದು ಕೋಟೆಯನ್ನು ಕಟ್ಟಲು ಬಹಳ ಅನುಕೂಲಕರವಾಗಿ ಕಾಣಿಸಿತು. ಆದ್ದರಿಂದ ಅವನು ಅಚ್ಯುತರಾಯನಿಂದ ಅನುಮತಿಯನ್ನು ಪಡೆದುಕೊಂಡು ೧೫೩೭ರಲ್ಲಿ ಒಂದು ಮಣ್ಣಿನ ಕೋಟೆಯನ್ನು ನಿರ್ಮಿಸಿ[೮೭] ರಾಜಧಾನಿಯನ್ನು ನೂತನವಾಗಿ ನಿರ್ಮಿಸಿದ ಕೋಟೆ ಬೆಂಗಳೂರಿಗೆ ವರ್ಗಾಯಿಸಿದನು (ಅದನ್ನು ಬಂಗಳೂರು ಎಂದೂ ಕರೆಯಲಾಗುತ್ತಿತ್ತು). ಅವನ ಉತ್ಸಾಹ ಮತ್ತು ದಕ್ಷತೆ, ಕ್ರಿಯಾಶೀಲತೆಗಳಿಗೆ ಪ್ರತಿಫಲವಾಗಿ ಅಚ್ಯುತರಾಯನು ಅವನಿಗೆ, ಹಳೆಯ ಬಂಗಳೂರು, ವೊರ್ತೂರು, ಯೆಲಹಂಕ, ಬೇವೂರು, ಹಲಸೂರು, ತಂಚೇರಿ, ತಲೆಗಟ್ಟಿಪುರ, ದಿಗರಿ, ಕುಂಬಳಗೋಡು, ಕನಹಳ್ಳಿ, ಬಾಣಾವರ, ಮತ್ತು ಹೆಸರುಘಟ್ಟ ಈ ಸ್ಥಳಗಳನ್ನು ಕೊಟ್ಟನು.[೮೮] ಈ ಹನ್ನೆರಡು

ಹೋಬಳಿಗಳಿಂದ ಬರುತ್ತಿದ್ದ ವರಮಾನ ೩೦,೦೦೦ ಪಗೋಡಗಳಿಗಿಂತಲೂ ಹೆಚ್ಚು.[೬೯] ಹೀಗೆ ದೊರಕಿದ ಐಶ್ವರ್ಯವನ್ನು ಭಾಗಶಃ ದೇವಾಲಯಗಳ ನಿರ್ಮಾಣಕ್ಕೆ ವಿನಿಯೋಗಿಸಲಾಯಿತು. ಅವುಗಳಲ್ಲಿ ಮುಖ್ಯವಾದವು ಬೆಂಗಳೂರು ಕೋಟೆಯಲ್ಲಿರುವ ವೆಂಕಟರಮಣಸ್ವಾಮಿ ದೇವಸ್ಥಾನ, ಗವೀಪುರದಲ್ಲಿರುವ ಗವಿ ಗಂಗಾಧರೇಶ್ವರ ದೇವಸ್ಥಾನ, ಅದರ ಆಸುಪಾಸಿನಲ್ಲೇ ಬಸವೇಶ್ವರ ಮತ್ತಿತರ ದೇವಾಲಯಗಳು. ಈ ಕಟ್ಟಡಗಳ ಹತ್ತಿರದಲ್ಲೇ ಒಂದು ದೊಡ್ಡ ಕೆರೆಯನ್ನು ರೂಪಿಸಲಾಯಿತು. ಅದನ್ನು ಕುಲದೇವತೆಯ ಹೆಸರಿನಲ್ಲಿ ಕೆಂಪಾಂಬುಧಿ ಕೆರೆ ಎಂದು ಕರೆಯಲಾಯಿತು. ಅವನು ಹುಲಿಯೂರುದುರ್ಗದಲ್ಲಿ ಒಂದು ಕೋಟೆಯ ನಿರ್ಮಾಣಕ್ಕೂ ಮುಂದಾದನು.[೭೦]

ಸಾಮಂತಗೌರವಗಳಿಂದ ತೃಪ್ತನಾಗದ ನಾಯಕನು ರಾಜಪದವಿಯ ಸಕಲ ಮರ್ಯಾದೆಗಳನ್ನು ಕೂಡಿಸಿಕೊಂಡನು. ಒಂದು ಟಂಕಸಾಲೆಯನ್ನು ಸ್ಥಾಪಿಸಿ,[೭೧] ಭೈರೇಶ್ವರ ನಾಣ್ಯಗಳನ್ನು ಹಾಕಿಸಿದನು. ಈ ಸಮಯದಲ್ಲಿ ಅಚ್ಯುತರಾಯನು ಮೃತನಾಗಿ, ರಾಮರಾಯನ ಪಾಲಕತ್ವದಲ್ಲಿ ಸದಾಶಿವರಾಯನು ವಿಜಯನಗರ ಸಿಂಹಾಸನವನ್ನೇರಿದನು. ಕೆಂಪೇಗೌಡನು ಮಾಡಿದ ಕಾರ್ಯಗಳ ಸುದ್ದಿಯು ಆಸ್ಥಾನವನ್ನು ತಲುಪಿತು. ತನ್ನ ಕೃತ್ಯಗಳಿಗೆ ವಿವರಣೆ ನೀಡಬೇಕೆಂದು ಅವನನ್ನು ಕರೆಸಿ ಕೇಳಲಾಯಿತು. ಆಮೇಲೆ ಅವನನ್ನು ಸೆರೆಗೆ ಹಾಕಿ, ಅವನ ರಾಜ್ಯವನ್ನು ಪ್ರತ್ಯೇಕಿಸಿ ಜಗದೇವರಾಜನ ರಾಜ್ಯಕ್ಕೆ ಸೇರಿಸಲಾಯಿತು. ಆನೆಗುಂದಿಯಲ್ಲಿ ಐದು ವರ್ಷ ಬಂಧನದಲ್ಲಿದ್ದು, ಭಾರೀ ಜುಲ್ಮಾನೆಯನ್ನು ತೆತ್ತು ಕೆಂಪೇಗೌಡನು ಬಿಡುಗಡೆ ಹೊಂದಿದನು. ಅವನ ಸೊತ್ತುಗಳನ್ನೆಲ್ಲ ಅವನಿಗೆ ಮರಳಿಸಲಾಯಿತು. ಅವನ ಆಳಿಕೆಯು ೧೫೬೯ರ ವರೆಗೆ ಮುಂದುವರಿಯಿತು. ಬಂಧನಕ್ಕೆ ಮೊದಲು ೪೩ವರ್ಷ, ಬಿಡುಗಡೆಯನಂತರ ಐದು ವರ್ಷ ಮುಂದುವರಿಯಿತು.[೭೨]

ಮೇಲಿನ ಸಂಗತಿಗಳು ಸಾಮಂತ ಕೇಂದ್ರವಾಗಿ ಯಲಹಂಕನಾಡಿನ ಉಗಮ ಮತ್ತು ಬೆಳವಣಿಗೆಗಳನ್ನು ಸೂಚಿಸುತ್ತವೆ. ರೈತರ ಸಾಮಾನ್ಯವಾದ ಕುಟುಂಬವೊಂದು ಸ್ವಂತ ಪರಿಶ್ರಮದಿಂದ ಒಂದು ಊಳಿಗಮಾನ್ಯ ಸಂಸ್ಥಾನವನ್ನು ಕಟ್ಟಿದರು ಎನ್ನುವುದನ್ನು ಸೂಚಿಸುತ್ತದೆ. ವಿಜಯನಗರ ಚಕ್ರವರ್ತಿಗಳು ಅಂತಹ ಉದ್ಯಮಶೀಲರಾದ ಸ್ಥಳೀಯ ಗಣ್ಯರ ಸೇವೆಯನ್ನು ಗುರುತಿಸಿ ಪುರಸ್ಕರಿಸುತ್ತಿದ್ದರು. ಆದ್ದರಿಂದಲೇ ಅವರಿಗೆ ಸಕಲ ಸಾಮಂತಗೌರವಗಳನ್ನೂ ನೀಡಿದರು. ತನ್ನ ಮಧುರವಾದ ವ್ಯಕ್ತಿತ್ವದಿಂದ ಸಾಮಂತನಾಯಕ ೧ನೇ ಕೆಂಪೇಗೌಡನು ಕೃಷ್ಣದೇವರಾಯ ಮತ್ತು ಅಚ್ಯುತರಾಯರಿಗೆ ಹಲವು ಗೌರವಗಳನ್ನೂ ಅಭ್ಯುದಯಗಳನ್ನೂ ತಂದಿತ್ತನು. ೧ನೇ ಕೆಂಪೇಗೌಡನ ಕೈಕೆಳಗೆ ಅದು ಕೇವಲ ಕೃಷಿಕರ ಕುಟುಂಬವಾಗಿ ಉಳಿಯಲಿಲ್ಲ. ಅದು ಸಾಮಂತರಾಜರ ಕುಟುಂಬವಾಯಿತು. ಕೆಂಪೇಗೌಡನ ಸಾಮರ್ಥ್ಯವನ್ನು ಮೆಚ್ಚಿದ ಅಚ್ಯುತರಾಯನು ಅವನಿಗೆ ೩೦,೦೦೦ ಪಗೋಡ ವರಮಾನವುಳ್ಳ ಹನ್ನೆರಡು ಹೋಬಳಿಗಳ ಪ್ರದೇಶ ವ್ಯಾಪ್ತಿಯ ಸಾಮಂತ ಸಂಸ್ಥಾನವನ್ನು ಕೊಡುಗೆಯಾಗಿ ನೀಡಿದನು . ಕೆಂಪೇಗೌಡನಿಗೆ ಕೃಷಿ ಸಂಪನ್ಮೂಲಗಳಷ್ಟರಿಂದ ತೃಪ್ತಿಯಿರಲಿಲ್ಲ. ತನ್ನ ರಾಜ್ಯದ ಹಣಕಾಸು ಮೂಲಗಳನ್ನು ಹೆಚ್ಚಿಸಲು ಅವನು ಬಯಸಿದನು. ಈ ದಿಕ್ಕಿನಲ್ಲಿ ಅವನು ಎರಡು ತಂತ್ರಗಳನ್ನು ಅಳವಡಿಸಿಕೊಂಡನು. ಒಂದು, ತನ್ನ ಆಳಿಕೆಯ ಪ್ರದೇಶದಲ್ಲಿ ನೂತನ ನಗರಗಳನ್ನು ನಿರ್ಮಿಸುವುದು. ವರ್ತಕರು ಮತ್ತು ಕಸಬುದಾರರು ರಾಜ್ಯದ ಅಭ್ಯುದಯಕ್ಕೆ ಕೊಡುಗೆ ನೀಡುತ್ತಾರೆ ಎಂಬುದು ೧ನೇ ಕೆಂಪೇಗೌಡನಿಗೆ ತಿಳಿದಿತ್ತು. ಆದ್ದರಿಂದ ನೂತನ ಬೆಂಗಳೂರು ನಗರದಲ್ಲಿ ವಿದೇಶಿ ವರ್ತಕರು ಮತ್ತು ಕುಶಲಕರ್ಮಿಗಳು ನೆಲೆಸಲು ಪ್ರೋತ್ಸಾಹ ನೀಡಿದನು. ಚಕ್ರವರ್ತಿ ಅಚ್ಯುತರಾಯನ ಅನುಮತಿಯನ್ನು ಪಡೆದು ಒಂದು ಕೋಟೆಯನ್ನು ಕಟ್ಟಿಸಿದನು. ನಗರ ಇದ್ದ ಅತಿಮಹತ್ವದ ಸ್ಥಳವನ್ನು ಗಮನದಲ್ಲಿ ಇರಿಸಿಕೊಂಡರೆ ಕೆಂಪೇಗೌಡನಿಗೆ ಕೊಟ್ಟ ಅನುಮತಿ ವಿಶೇಷವಾದ ಒಲವೇ ಸರಿ. ಅನೇಕ ಅಗ್ರಹಾರಗಳನ್ನೂ ದೇವಾಲಯಗಳನ್ನೂ ನಿರ್ಮಿಸಿ ಬ್ರಾಹ್ಮಣೀಕರಣವನ್ನು ಚುರುಕುಗೊಳಿಸುವುದರಲ್ಲಿ ಚಕ್ರವರ್ತಿಗಳ ದಾರಿಯನ್ನೇ ಅವನೂ

ಅನುಸರಿಸಿದನು. ಭೂಮಿಯನ್ನು ದಾನವಾಗಿ ನೀಡುವುದರ ಮೂಲಕ ಅವರಿಗೆ ಲೌಕಿಕವಾದ ಆಧಾರವನ್ನು ಕಲ್ಪಿಸಿಕೊಡಲಾಯಿತು. ಸರ್ವಮಾನ್ಯ ಅಥವಾ ಸ್ವಯಮಾಡಳಿತ ಸ್ಥಾನಮಾನವನ್ನು ಅನುಭವಿಸುತ್ತಿದ್ದ ಪ್ರದೇಶದಲ್ಲಿ ಅಗ್ರಹಾರಗಳು ಮತ್ತು ದೇವಾಲಯಗಳು ಭೂ ಹಿಡುವಳಿದಾರರಂತೆ ವರ್ತಿಸುತ್ತಿದ್ದುವು. ಸಾಮಂತನು ಕೃಷಿಯನ್ನು ಅಭಿವೃದ್ಧಿ ಪಡಿಸಲು ಕಷ್ಟಪಟ್ಟು ಕೆಲಸ ಮಾಡುತ್ತಿದ್ದನು. ಕೆಂಪಾಂಬುಧಿಯಂತಹ ಹಲವು ಕೆರೆಗಳನ್ನು ನಿರ್ಮಿಸಿದನು. ಕೆಂಪೇಗೌಡನ ಆಳಿಕೆಯ ಕೊನೆಯ ವರ್ಷಗಳು, ಹೇಗೆ ಚಕ್ರವರ್ತಿಯು ಸ್ಥಳೀಯ ನಾಯಕರ ಸ್ವತಂತ್ರ ಪ್ರವೃತ್ತಿಯನ್ನು ಸ್ವಲ್ಪವೂ ಸಹಿಸುತ್ತಿರಲಿಲ್ಲ ಎಂಬುದನ್ನು ನಿರ್ದೇಶಿಸುತ್ತದೆ. ಚಕ್ರವರ್ತಿಯ ಅನುಮತಿಯನ್ನು ಪಡೆಯದೆ, ಭೈರೇಶ್ವರ ನಾಣ್ಯಗಳನ್ನು ಮುದ್ರಣ ಮಾಡಿಸಿ ಸ್ವಾತಂತ್ರ್ಯದ ಮನೋಧರ್ಮವನ್ನು ತೋರಿಸಿದ ಕೆಂಪೇಗೌಡನನ್ನು ಶಿಕ್ಷಿಸಲಾಯಿತು, ಸೆರೆಗೆ ದೂಡಲಾಯಿತು. ಕೆಲವರ್ಷಗಳ ನಂತರ ಬಿಡುಗಡೆ ಮಾಡಲಾಯಿತು. ಅದು ನಿಜವಾಗಿಯೂ ಸಾಮಂತನೊಬ್ಬನು ಚಕ್ರವರ್ತಿಯ ಪರಮಾಧಿಕಾರವನ್ನು ಉಲ್ಲಂಘಿಸಿದ ನಿದರ್ಶನ. ಹೀಗೆ ಕೆಂಪೇಗೌಡನ ನಾಯಕತ್ವದಲ್ಲಿ ಯಲಹಂಕನಾಡು, ಸಾಮ್ರಾಜ್ಯದೊಂದಿಗೆ ಸಾಮಂತರು ಹೊಂದಿದ್ದ ಸಂಬಂಧವನ್ನು ತೋರಿಸುತ್ತದೆ.

ಯಲಹಂಕನಾಡಿನ ಸಣ್ಣ ಪುಟ್ಟ ನಾಯಕರು

ಯಲಹಂಕಪ್ರಭುಗಳ ವಂಶ ಸ್ಥಾಪನೆಗೆ ಮುಂಚಿತವಾಗಿ ಅಲ್ಲಿ ಅಸಂಖ್ಯಾತ ಜಮೀನುದಾರರಿದ್ದರು. ಇಡೀ ಪ್ರದೇಶವನ್ನು ಬೇರೆ ಬೇರೆ ಸಣ್ಣ ಸಣ್ಣ ನಾಯಕರು ನಿಯಂತ್ರಿಸುತ್ತಿದ್ದರು. ಅವರು ವಿಜಯನಗರದ ಪರಮ ಪ್ರಭುತ್ವವನ್ನು ಒಪ್ಪಿಕೊಂಡಿದ್ದರು. ಚಕ್ರವರ್ತಿಗಳೂ ಅದೇ ಸಮಯದಲ್ಲಿ ಒಂದಿಲ್ಲೊಂದು ರೀತಿಯಲ್ಲಿ ಅವರ ನೆರವು ಪಡೆಯುತ್ತಿದ್ದರು. ಯಲಹಂಕನಾಡು ಪ್ರಭುಗಳ ವಂಶ ಸ್ಥಾಪನೆಯಾದ ಮೇಲೆಯೇ, ಪರಮಾಧಿಕಾರವನ್ನು ಒಪ್ಪಿಕೊಂಡದ್ದರಿಂದ ವಿಶಾಲ ಪ್ರದೇಶಗಳನ್ನು ತಮ್ಮ ಹತೋಟಿಗೆ ತಂದುಕೊಂಡರು. ಯಲಹಂಕನಾಡ ಪ್ರಭುವು ಅಚ್ಯುತರಾಯನಿಂದ ಪುರಸ್ಕಾರವಾಗಿ ೧೨ ಹೋಬಳಿಗಳನ್ನು ಪಡೆದನು. ಆಮೇಲೆ ಇತರ ಪ್ರದೇಶಗಳನ್ನು ಗೆದ್ದು ತಮ್ಮ ಹತೋಟಿಗೆ ತಂದುಕೊಂಡರು. ಈ ಪ್ರದೇಶದಲ್ಲಿ ಅವರಲ್ಲದೆ ಇನ್ನೂ ಅನೇಕ ಸಣ್ಣ ಪುಟ್ಟ ಭೂಹಿಡುವಳಿದಾರರಿದ್ದರು. ಅವರು ಚಕ್ರವರ್ತಿಗೂ ಜನಸಾಮಾನ್ಯರಿಗೂ ನಡುವೆ ಸಂಪರ್ಕ ಕಲ್ಪಿಸುವ ಕೊಂಡಿಯಾದರು. ಚಕ್ರವರ್ತಿಗೆ ದೂರದ ಸ್ಥಳಗಳನ್ನು ನಿಯಂತ್ರಣದಲ್ಲಿ ಇಟ್ಟುಕೊಳ್ಳಲು ಮಾತ್ರವಲ್ಲದೆ ಆ ಪ್ರದೇಶಗಳಲ್ಲಿ ಶಾಂತಿಯನ್ನು ಕಾಪಾಡಲೂ ಅವರ ಬೆಂಬಲ ಅಗತ್ಯವಾಗಿತ್ತು. ಇವರಲ್ಲಿ ಬೆಂಗಳೂರು[೯೩], ದೇವನಹಳ್ಳಿ[೯೪] ದೊಡ್ಡಬಳ್ಳಾಪುರ[೯೫] ಚನ್ನಪಟ್ಟಣ[೯೬] ಮಾಗಡಿ[೯೭] ನೆಲಮಂಗಲ[೯೮] ಮತ್ತು ಹೊಸಕೋಟೆ[೯೯]ಗಳಿಗೆ ನಾಯಕರನ್ನಾಗಿ ಹೆಸರಿಸಬಹುದು.

ಮೇಲಿನ ಅಧ್ಯಯನದಿಂದ ಯಲಹಂಕನಾಡಿನ ಸಾಮಂತನಾಯಕನ ಬಗೆಗೆ ಕೆಲವು ನಿರ್ಣಯಗಳನ್ನು ಕೈಗೊಳ್ಳಬಹುದು. ಹಾಗೆಯೇ ಇಂದಿನ ಬೆಂಗಳೂರು ಜಿಲ್ಲೆಯಲ್ಲಿದ್ದ ಇತರ ಕೆಲವು ಸಣ್ಣಪುಟ್ಟ ನಾಯಕರ ವಿಚಾರವಾಗಿಯೂ ತಿಳಿಯಬಹುದು. ಮೊದಲನೆಯದಾಗಿ ಯಲಹಂಕನಾಡಿನ ಗಣ್ಯರು ಆ ಪ್ರದೇಶದಲ್ಲಿ ಅತ್ಯಂತ ಸಮರ್ಥರಾದ ಸಾಮಂತನಾಯಕರಾಗಿದ್ದರು. ೧೫೬೫ರ ವರೆಗೂ ಬಹು ವಿಶಾಲವಾದ ಭೂಪ್ರದೇಶ ಗಳನ್ನು ಅವರು ನಿಯಂತ್ರಿಸುತ್ತಿದ್ದರು. ತಾಳಿಕೋಟೆಯ ಯುದ್ಧವಾದ ಮೇಲೆ ಅವರು ಹೆಚ್ಚುಕಡಮೆ ಎಲ್ಲಾ ಪ್ರಾಂತಗಳನ್ನೂ ತಮ್ಮ ನಿಯಂತ್ರಣಕ್ಕೆ ತಂದುಕೊಂಡರು. ಎರಡನೆಯದಾಗಿ ಯಲಹಂಕನಾಡ ಪ್ರಭುಗಳಲ್ಲದೆ ಇನ್ನೂ ಅನೇಕ ಇತರ ಸಣ್ಣಪುಟ್ಟ ಜಮೀನುಗಳನ್ನು ಹೊಂದಿದ್ದ ನಾಯಕರಿದ್ದರು. ಮೂರನೆಯದಾಗಿ, ಈ ಗೌಣನಾಯಕರಲ್ಲಿ ಅನೇಕರು ಅಮರನಾಯಕರಾಗಿದ್ದರು. ನಾಲ್ಕನೆಯದಾಗಿ, ಈ ಅಮರನಾಯಕರು, ಎಲ್ಲಾ ವಾಸ್ತವಿಕ ಉದ್ದೇಶಗಳಿಂದ ಚಕ್ರವರ್ತಿಗೆ ಅಧೀನರಾಗಿದ್ದರು, ಅವರ ನೇರ ಹತೋಟಿಯಲ್ಲಿ ಇರುತ್ತಿದ್ದರು. ಮತ್ತೆ ಮತ್ತೆ ಅವರ ನೆರವು ರಾಜನಿಗೆ ಬೇಕಾಗಿಯೇ ಕಾನೂನು ಮತ್ತು ಸುವ್ಯವಸ್ಥೆಯನ್ನು ಪಾಲಿಸಲು

ಯುದ್ಧಗಳನ್ನು ಮಾಡುವಲ್ಲಿ ಮತ್ತು ಸಾಮ್ರಾಜ್ಯವನ್ನು ಸಂಯೋಜಿಸುವಲ್ಲಿ ಅವರ ಸೇವೆಯು ಅಗತ್ಯವಾಗಿತ್ತು. ಐದನೆಯದಾಗಿ ಈ ಅಮರನಾಯಕರ ಕರ್ತವ್ಯ ತಮ್ಮ ಅಧಿಕಾರ ವ್ಯಾಪ್ತಿಯ ಪ್ರದೇಶದಲ್ಲಿ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡುವಷ್ಟಕ್ಕೆ ಮಾತ್ರ ಸೀಮಿತರಾಗುವುದಿಲ್ಲ. ಈ ದೃಷ್ಟಿಯಿಂದ ಅವರು ಯೂರೋಪಿಯನ್ ಫ್ಯೂಡಲ್‌ಗಿಂತ ವ್ಯತ್ಯಾಸ ಹೊಂದಿದ್ದರು.

ಅಮರನಾಯಕರಲ್ಲದೆ ಇತರ ಅನೇಕ ಉನ್ನತ ಶ್ರೇಣಿಯ ಅಧಿಕಾರಿಗಳು ಕೂಡ ಭೂಮಿಯನ್ನು ಉಂಬಳಿಗೆ ಪಡೆದುಕೊಂಡಿದ್ದರು. ಇದು ಮೇಲೆ ನಾವು ಮಾಡಿದ ಅಧ್ಯಯನದಿಂದ ಸ್ಪಷ್ಟವಾಗಿ ತಿಳಿದು ಬರುತ್ತದೆ. ಇವರಲ್ಲದೆ ಅನೇಕ ಸೇನಾನಾಯಕರನ್ನು ಮಂತ್ರಿಗಳನ್ನಾಗಿ ನೇಮಿಸಲಾಗಿದ್ದರು, ಅವರೂ ಭೂಮಿಯನ್ನು ಉಂಬಳಿಯಾಗಿ ಪಡೆದುಕೊಂಡಿದ್ದರು.

ಚಿತ್ರದುರ್ಗದ ನಾಯಕರು

ವಿಜಯನಗರದ ಸಾಮಂತ ಒಕ್ಕೂಟ ರಾಜ್ಯಾಡಳಿತ ವ್ಯವಸ್ಥೆಯಲ್ಲಿ ಚಿತ್ರದುರ್ಗ ಪ್ರದೇಶವು ಇನ್ನೊಂದು ಭಾಗವಾಗಿತ್ತು. ಚಿತ್ರದುರ್ಗದ ನಾಯಕರು ಎಂದೂ ಸ್ವತಂತ್ರವಾದ ವಿದೇಶಾಂಗ ನೀತಿಯನ್ನು ಪಾಲಿಸಲಿಲ್ಲ, ತಮ್ಮ ಹೆಸರಿನಲ್ಲಿ ನಾಣ್ಯಗಳನ್ನು ಚಲಾವಣೆಗೆ ತರಲೂ ಇಲ್ಲ. ಆದ್ದರಿಂದ ಕೆಳದಿಯ ನಾಯಕರಿಗಿಂತ ಅವರು ವಿಶಿಷ್ಟರೆನಿಸಿದರು. ಚಿತ್ರದುರ್ಗದ ಆರು ಜನ ಮುಖ್ಯರಾದ ನಾಯಕರಲ್ಲಿ ತಿಮ್ಮಣ್ಣನಾಯಕ, ಓಬಣ್ಣನಾಯಕ ಮತ್ತು ಕಸ್ತೂರಿ ರಂಗಪ್ಪನಾಯಕ ಈ ಮೊದಲ ಮೂವರು ನಾಯಕರು ಕ್ರಿ.ಶ. ೧೫೬೫ರ ವರೆಗೆ ವಿಜಯನಗರದ ಸಾಮಂತರಾಗಿದ್ದರು. ತಿಮ್ಮಣ್ಣನಾಯಕನೇ ವಿಜಯನಗರ ಸಾಮ್ರಾಜ್ಯದ ವ್ಯವಹಾರಗಳಲ್ಲಿ ಮುಖ್ಯವಾದ ಪಾತ್ರವನ್ನು ನಿರ್ವಹಿಸಿದನು. ಎಂ.ಎಸ್. ಪುಟ್ಟಣ್ಣನವರ ಪ್ರಕಾರ ತಿಮ್ಮಣ್ಣನಿಗಿಂತ ಹಿಂದೆ ಮೂವರು ನಾಯಕರಿದ್ದರು. ಅವರು ಹಂಪಿಗೆ ಬಂದು ವಿಜಯನಗರ ಅರಸರ ಕುಲದೈವ ವಿರೂಪಾಕ್ಷನಿಗೆ ಪೂಜೆ ಸಲ್ಲಿಸಿದುದಕ್ಕೂ ಚಕ್ರವರ್ತಿಗಳ ಜೊತೆ ಸಾಮಂತರು ಇರಿಸಿಕೊಳ್ಳುತ್ತಿದ್ದ ಸಂಬಂಧಕ್ಕೂ ಅನ್ಯೋನ್ಯತೆಯಿದೆ. ಪುಟ್ಟಣ್ಣನವರು ಹೇಳುತ್ತಾರೆ: ''ಸಬಗಡಿ ಓಬಣ್ಣನಾಯಕ, ಜಡವಿನಾಯಕ ಮತ್ತು ಬುಳ್ಳನಾಯಕ ಇವರು ವಾಲ್ಮೀಕಿ ಗೋತ್ರಕ್ಕೆ ಸೇರಿದವರು. ದೆಹಲಿಯಲ್ಲಿ ಸೇವಕರಾಗಿದ್ದವರು ಉತ್ತರಭಾಗದ ಜಡಕಲ್ ದುರ್ಗದಿಂದ ಬಂದರು. ತಮ್ಮೊಂದಿಗೆ ಕುಲದೈವ ಅಹೋಬಲ ನರಸಿಂಹ ಸ್ವಾಮಿಯನ್ನೂ ಇತರ ವಸ್ತುಗಳನ್ನೂ ತೆಗೆದುಕೊಂಡು ಈ ಮೂವರು ಸೋದರರು ದಕ್ಷಿಣಕ್ಕೆ ಬಂದು ನೆಲೆಸಿದರು. ದಾರಿಯಲ್ಲಿ ವಿಜಯನಗರದಲ್ಲಿ ಸ್ವಲ್ಪಕಾಲ ತಂಗಿದ್ದು ಹಂಪಿಯಲ್ಲಿ ಭಗವಾನ್ ವಿರೂಪಾಕ್ಷನ ದರ್ಶನ ಮಾಡಿದರು.''[೧೦೦] ವಿಜಯನಗರದ ರಾಜನು ಕರೆಸಿದ್ದರಿಂದ ಅವರು ರಾಜಧಾನಿಗೆ ಬಂದಿರಬೇಕು ಎಂದು ಯಾರಾದರೂ ಊಹಿಸಬಹುದು. ಅವರ ನಡುವಳಿಕೆಯಿಂದ ಮೆಚ್ಚಿದ ಅರಸನು ಅವರನ್ನು ನಾಯಕರನ್ನಾಗಿ ನೇಮಿಸಿ ಹೊಳಲ್ಕೆರೆಗೆ ಕಳಿಸಿರಬಹುದು. ಅವರು ತನಗೆ ನಿಷ್ಠರಾಗಿ ಉಳಿಯುತ್ತಾರೆ, ರಾಜ್ಯದ ಪ್ರತಿನಿಧಿಗಳೂ, ವಿಧೇಯ ಸೇವಕರೂ ಆಗಿ ತಮ್ಮ ಕರ್ತವ್ಯಗಳನ್ನು ನಿರ್ವಹಿಸುತ್ತಾರೆ ಎಂದು ಚಕ್ರವರ್ತಿಯು ಭಾವಿಸಿರಬಹುದು.

ವಾಸ್ತವವಾಗಿ ಚಿತ್ರದುರ್ಗದ ನಾಯಕತ್ವಕ್ಕೆ ಬಲವಾದ ತಳಹದಿಯನ್ನು ಹಾಕಿದವನು ತಿಮ್ಮಣ್ಣನಾಯಕ. ತನ್ನ ರಾಜಕೀಯ ಜೀವನವನ್ನು ಅವನು ಅಮರನಾಯಕನಾಗಿ ಪ್ರಾರಂಭಿಸಿದನು.[೧೦೧] ಕೃಷ್ಣದೇವರಾಯನಿಂದ ಉಂಬಳಿಯಾಗಿ ಅವನು ಹೊಳಲ್ಕೆರೆಯನ್ನು ಪಡೆದನು. ಅರಸರ ಅನುಮತಿಯಿಂದ ಹಿರಿಯೂರು ಮತ್ತು ಚಿತ್ರದುರ್ಗಗಳನ್ನು ಆಮೇಲೆ ಸೇರಿಸಿಕೊಳ್ಳಲಾಯಿತು. ಹಾಗೆಯೇ, ಅನುಮತಿ ಪಡೆದು ಅವನು ಚಿತ್ರದುರ್ಗದಲ್ಲಿ

ಒಂದು ಕೋಟೆಯನ್ನು ನಿರ್ಮಿಸಿದನು. ತಿಮ್ಮಣ್ಣನಾಯಕನು ಚಕ್ರವರ್ತಿಯ ಆದೇಶವನ್ನು ತಪ್ಪದೆ ಪಾಲಿಸುತ್ತಿದ್ದನು, ಅವರು ನಡೆಸಿದ ಯುದ್ಧಗಳಲ್ಲಿ ಭಾಗವಹಿಸಿದ್ದನು. ಚಿತ್ರದುರ್ಗದ ನಾಯಕರನ್ನು ಕುರಿತು ಪ್ರಮಾಣಯುತವಾಗಿ ಬರೆದಿರುವ ಎಂ. ಎಸ್. ಪುಟ್ಟಣ್ಣನವರು ಚಿತ್ರದುರ್ಗದ ನಾಯಕರು ಚಕ್ರವರ್ತಿಯೊಂದಿಗೆ ಹೊಂದಿದ್ದ ಆತ್ಮೀಯ ಸಂಬಂಧಗಳನ್ನು ವರ್ಣಿಸಿ, ಇದ್ದಕ್ಕಿದ್ದಂತೆ ಅಲ್ಲಿ ಕಾಣಿಸಿಕೊಂಡ ತಿಮ್ಮಣ್ಣನಾಯಕನ ಅವಿಧೇಯತೆಯನ್ನು ಹೇಳುತ್ತಾರೆ. ಇಬ್ಬರ ನಡುವೆ ಘರ್ಷಣೆಗೆ ಕಾರಣವಾದುದಾದರೂ ಏನು ಎಂಬುದನ್ನು ಅವರು ಸ್ಪಷ್ಟವಾಗಿ ಹೇಳುವುದಿಲ್ಲ ಇತರ ಮೂಲಗಳಲ್ಲೂ ಎರಡೂ ಕುಟುಂಬಗಳ ನಡುವೆ ವಿರಸವಾದುದು ಏಕೆ ಎನ್ನುವುದನ್ನು ಉಲ್ಲೇಖಿಸುವುದಿಲ್ಲ. ದೊರೆತಿರುವ ಯಾವುದೇ ಸಮಕಾಲೀನ ಶಾಸನದಲ್ಲೂ ಆ ಪ್ರಸ್ತಾಪವಿಲ್ಲ. ಬಿ.ಎಲ್. ರೈಸ್ ಕೂಡ ಈ ಬಗೆಗೆ ಮೌನವಾಗಿದ್ದಾರೆ. ಚಿತ್ರದುರ್ಗದ ನಾಯಕರನ್ನೂ ಕರ್ನಾಟಕದಲ್ಲಿ ಅವರ ವ್ಯವಹಾರಗಳನ್ನು ಕುರಿತು ಬರೆದಿರುವ ಹುಲ್ಲೂರು ಶ್ರೀನಿವಾಸ ಜೋಯಿಸರು ಈ ವಿಷಯವಾಗಿ ಏನನ್ನೂ ಹೇಳುವುದಿಲ್ಲ. ಹಾಗಾಗಿ ಖಚಿತವಾದ ಆಧಾರ ಯಾವುದೂ ಇಲ್ಲದೆ, ನಾಯಕರು ಏಕೆ ಚಕ್ರವರ್ತಿಯೊಂದಿಗೆ ವೈಮನಸ್ಯ ತಾಳಿದರು ಎಂಬುದನ್ನು ಹೇಳುವುದು ಕಷ್ಟವಾಗುತ್ತದೆ. ಅಂತೂ ತಿಮ್ಮಣ್ಣನಾಯಕನು ವಿಜಯನಗರ ಚಕ್ರವರ್ತಿಯ ಬಂದಿಯಾದನು. ರಾಜ್ಯವಿಸ್ತಾರದ ಆಕಾಂಕ್ಷೆಯೇ ಅವರ ನಡುವಣ ವಿರಸಕ್ಕೆ ಕಾರಣವಾಯಿತು ಎಂಬುದನ್ನು ಅದು ಸೂಚಿಸುತ್ತದೆ. ತಿಮ್ಮಣ್ಣನಾಯಕನನ್ನು ಅವಿಧೇಯತೆಯ ಅಪರಾಧಕ್ಕಾಗಿ ಬಂಧಿಸಿ ಸೆರೆಮನೆಯಲ್ಲಿಡಲಾಯಿತು.[೧೦೨] ಅವನ ಸ್ಥಾನದಲ್ಲಿ ಓಬಣ್ಣನಾಯಕನು ಬಂದು ಚಕ್ರವರ್ತಿಗೆ ನಿಷ್ಠೆಯಿಂದ ನಡೆದುಕೊಂಡನು.

ಶಾಸನಗಳಲ್ಲಿ ಕಂಡುಬರುವಂತೆ ಇತರ ಸಣ್ಣ ಹಿಡುವಳಿದಾರರು

ಚಿತ್ರದುರ್ಗದ ಪಾಳೆಯಗಾರ ವಂಶವನ್ನು ಸ್ಥಾಪಿಸುವುದಕ್ಕೆ ಮೊದಲು, ಹೊಳಲ್ಕೆರೆ ಮತ್ತು ದಾವಣಗೆರೆ ಪ್ರದೇಶಗಳಲ್ಲಿ ಅನೇಕ ಅಮರನಾಯಕರಿದ್ದರು. ಶಾಸನಗಳು ಈ ನಾಯಕರ ವಿಷಯವಾಗಿ ವಿವರಗಳನ್ನು ಒದಗಿಸುತ್ತವೆ. ಚಳ್ಳಕೆರೆ, ಮೊಳಕಾಲ್ಮುರು, ಜಗಳೂರು, ಹಿರಿಯೂರು, ಮತ್ತು ಚಿತ್ರದುರ್ಗಗಳ ಶಾಸನಗಳೂ ಈ ಪ್ರದೇಶದಲ್ಲಿ ಉಂಬಳಿ ಪಡೆದ ಗಣ್ಯರ ಬಗೆಗೆ ಮಾಹಿತಿಯನ್ನು ಕೊಡುತ್ತವೆ. ಅವರಲ್ಲಿ ಅನೇಕರು ಹೊಳಲ್ಕೆರೆ ಮತ್ತು ದಾವಣಗೆರೆಗಳಲ್ಲಿ ಇದ್ದರು. ಇವರಿಗೆ ಅವರದೇ ಬಿರುದುಬಾವಲಿಗಳು ಮತ್ತು ಭೂ ಪ್ರದೇಶಗಳು ಇದ್ದುವು.[೧೦೩]

ಮೇಲಿನ ಚರ್ಚೆಯಿಂದ ಈ ಕೆಲವು ನಿರ್ಣಯಗಳಿಗೆ ಬರಬಹುದು. ಮೊದಲನೆಯದಾಗಿ, ಸಾಮಂತ ಒಕ್ಕೂಟ ರಚನೆಯಲ್ಲಿ, ವಿಜಯನಗರ ರಾಜ್ಯದಲ್ಲಿ ಚಿತ್ರದುರ್ಗ ಪ್ರದೇಶವು ಬಹುಮುಖ್ಯವಾದ ಪಾತ್ರ ನಿರ್ವಹಿಸಿದೆ. ಆರ್ಥಿಕ ದೃಷ್ಟಿಯಿಂದ ಅದು ಕೆಳದಿ ಮತ್ತು ಕರಾವಳಿ ಪ್ರದೇಶದಷ್ಟು ಶ್ರೀಮಂತವಾಗಿರಲಿಲ್ಲ. ಅದು ಒಣಬೇಸಾಯದಲ್ಲಿದ್ದ ಪ್ರದೇಶ. ಆದರೂ ಮಿಲಿಟರಿ ಮಹತ್ವದ ದೃಷ್ಟಿಯಿಂದ ನೋಡಿದಾಗ ಚಿತ್ರದುರ್ಗ ಪ್ರದೇಶವು ಬಹು ಮುಖ್ಯವಾದುದು. ಏಕೆಂದರೆ ಅದಿದ್ದುದು ಭಾರತದ ಉತ್ತರ ಹಾಗೂ ನೈರುತ್ಯ ಭಾಗದಲ್ಲಿ; ಇದು ಭಾರತದ ಉತ್ತರ ಮತ್ತು ನೈರುತ್ಯ ಭಾಗಗಳ ನಡುವೆ ಹೋಗುವ ಹೆದ್ದಾರಿಯಲ್ಲಿ. ಸಹಜವಾಗಿಯೇ ವಿಜಯನಗರದ ರಾಜರು ಈ ಪ್ರದೇಶದ ನಾಯಕರ ಬಗೆಗೆ ಆಸಕ್ತಿ ವಹಿಸಿದರು.

ಎರಡನೆಯದಾಗಿ ಕಡಮೆ ಶ್ರೇಣಿಯ ಇತರ ನಾಯಕರೂ ಇದ್ದರು. ಅಂದರೆ, ಈ ಪ್ರದೇಶವು ಅತ್ಯಂತ ಹೆಚ್ಚು ಊಳಿಗಮಾನ್ಯ ಪ್ರದೇಶವಾಗಿದ್ದಿತು ಎಂದು ಅರ್ಥ. ಇದಕ್ಕೆ ಕಾರಣ ವಿಜಯನಗರ ಚಕ್ರವರ್ತಿಗಳ ನೀತಿಯೆ ಎಂದು ಖಚಿತವಾಗಿ ಹೇಳಲು ಬರುವುದಿಲ್ಲ. ಯಾರೊಬ್ಬರೂ ಪ್ರಾಧಾನ್ಯ ಪಡೆಯದ ಹಾಗೆ ಅನೇಕ ಅಧೀನ ನಾಯಕರ ಕೈಗಳಲ್ಲಿ ಈ ಪ್ರದೇಶವನ್ನು ಇಡುವುದು ಸೂಕ್ತ ಎಂದು ಚಕ್ರವರ್ತಿಯು ಯೋಚಿಸಿರಬಹುದು.

ಈ ನೀತಿಗೂ ಬಹುಶಃ ಈ ಪ್ರದೇಶ ಇದ್ದ ಅತಿ ಮಹತ್ವದ ಸ್ಥಾನವೇ ಕಾರಣ. ಮೂರನೆಯದಾಗಿ ಭೂ ಒಡುವಳಿದಾರರು ಹೊಳಲ್ಕೆರೆ ಮತ್ತು ದಾವಣಗೆರೆ ಪ್ರದೇಶದಲ್ಲಿ ಕೇಂದ್ರೀಕರಿಸಿದ್ದರು. ಅವರಿಗೆ ಅಮರನಾಯಕ, ಮಹಾಮಂಡಲೇಶ್ವರ ಮಹಾಅರಸು ಮೊದಲಾದ ಬಿರುದುಗಳಿದ್ದುವು. ಕೊನೆಯದಾಗಿ ಈ ಪ್ರದೇಶದ ಅಧೀನರಾಜರ ಇತಿಹಾಸವನ್ನು ಅಧ್ಯಯನ ಮಾಡಿದರೆ, ಸಾಮಂತ ವ್ಯವಸ್ಥೆಯು ಕೆಲಸಮಾಡುತ್ತಿದ್ದ ರೀತಿಯ ಬಗೆಗೆ ತಿಳಿಯಬಹುದಾಗುತ್ತದೆ. ಒಬ್ಬ ನಾಯಕನ ಅಧಿಕಾರವು ಚಕ್ರವರ್ತಿಯ ಸದ್ಭಾವನೆಯನ್ನು ಅವಲಂಬಿಸಿದ್ದಿತು. ಎಲ್ಲಿಯವರೆಗೆ ಅವನು ವಿಜಯನಗರಕ್ಕೆ ವಿಧೇಯತೆಯಿಂದಿದ್ದನೋ ಅಲ್ಲಿಯವರೆಗೆ ಅಧಿಕಾರದಲ್ಲಿ ಮುಂದುವರಿಯಲು ಅವನಿಗೆ ಅವಕಾಶವಿರುತ್ತಿತ್ತು. ಅವಿಧೇಯತೆಗೆ ಕಾರಾಗೃಹವಾಸವೇ ಶಿಕ್ಷೆಯಾಗುತ್ತಿತ್ತು. ಪ್ರದೇಶದ ಸ್ಥಾನಬಲ, ನಿಯಂತ್ರಣದ ವೈವಿಧ್ಯ ಮತ್ತು ಅಧಿಕಾರದ ಆನುವಂಶೀಯತೆಯ ಸ್ವರೂಪ ಇವು ಚಿತ್ರದುರ್ಗದ ನಾಯಕರ ಅಸಾಧಾರಣ ಲಕ್ಷಣಗಳಾಗಿದ್ದುವು. ಒಟ್ಟಿನಲ್ಲಿ ವಿಜಯನಗರದ ಅರಸರು ರೂಪಿಸಿದ ಸಾಮಂತ ವ್ಯವಸ್ಥೆಯ ರಚನೆಯಲ್ಲಿ ಚಿತ್ರದುರ್ಗದ ನಾಯಕರು ಒಂದು ಮುಖ್ಯವಾದ ಕೊಂಡಿಯಾಗಿದ್ದರು.

–ಪ್ರೊ. ಕೆ.ಎಸ್. ಶಿವಣ್ಣ

ಮಧುಗಿರಿ ಮಹಾನಾಡು ಪ್ರಭುಗಳು

ಹದಿನಾರನೆಯ ಶತಮಾನದ ಉತ್ತರಾರ್ಧದಲ್ಲಿ ವಿಜಯನಗರ ಸಾಮ್ರಾಜ್ಯವು ಸಣ್ಣ ಸಂಸ್ಥಾನಗಳಾಗಿ ಒಡೆಯತೊಡಗಿತು. ಪೆನುಗೊಂಡೆಯಿಂದಲೂ ಆಮೇಲೆ ಚಂದ್ರಗಿರಿಯಿಂದಲೂ ಆಳುತ್ತಿದ್ದ ಅರವೀಡು ವಂಶವು ಬಹು ದುರ್ಬಲವಾಗಿತ್ತು. ಅಂತಹ ಸನ್ನಿವೇಶದಲ್ಲಿ ದಕ್ಷಿಣಭಾರತದಲ್ಲಿ ಮುಸ್ಲಿಂ ಧಾಳಿಗಳೂ ಅಧಿಕವಾದುವು. ಸಾಮಂತ ರಾಜರ ನೆರವನ್ನೇ ಅವಲಂಬಿಸಿದ್ದ ಅರವೀಡು ಅರಸರು ಅವರಿಗೆ ಧಾರಾಳವಾಗಿ ಭೂ ಪ್ರದೇಶಗಳನ್ನು ದಾನವಾಗಿ ನೀಡಿದರು. ಅದರಿಂದ, ಕಾಲಕ್ರಮದಲ್ಲಿ ಸಾಮಂತರಾಜರು ಪ್ರಬಲರಾದರು. ಅರವೀಡು ವಂಶವು ಪತನ ಹೊಂದಿದ ಮೇಲೆ ಅವರು ಸ್ವತಂತ್ರ ಅರಸರಂತೆ ವರ್ತಿಸತೊಡಗಿದರು. ಅವರಲ್ಲಿ ಮಧುಗಿರಿ ಮಹಾನಾಡು ಅರಸರು ಮುಖ್ಯರು.

ಪ್ರಾರಂಭದಲ್ಲಿ ಮಧುಗಿರಿ ಅರಸರು ವಿಜಯನಗರದ ಸಾಮಂತರಾಗಿದ್ದರು. ಸಾಮ್ರಾಜ್ಯವು ಪತನಗೊಂಡ ಮೇಲೆ ಮೈಸೂರಿನ ಒಡೆಯರ ಸಾಮಂತರಾದರು. ಇವರನ್ನು ಕುರಿತು ನಮಗೆ ಬೇಕಾದಷ್ಟು ಸಾಹಿತ್ಯಕ ಹಾಗೂ ಶಾಸನ ಮಾಹಿತಿ ಮೂಲಗಳು ದೊರಕುತ್ತವೆ. ಮಲ್ಲಿಕಾರ್ಜುನ ಕವಿಯು ಬರೆದ ಇಮ್ಮಡಿ ಚಿಕ್ಕ ಭೂಪಾಲನ ಸಾಂಗತ್ಯ ಎಂಬ ವಿಶಿಷ್ಟ ಜೀವನಚರಿತ್ರೆಯು ಈ ರಾಜ್ಯದ ಬಗೆಗೆ ಹೆಚ್ಚಿನ ಬೆಳಕು ಚೆಲ್ಲುತ್ತದೆ. ಈ ಕೃತಿಯ ಜೊತೆಗೆ ಇದುವರೆಗೆ ಈ ವಂಶವನ್ನು ಕುರಿತು ಹೇಳುವ ಹನ್ನೊಂದು ಶಾಸನಗಳು ದೊರಕಿವೆ. ಅಲ್ಲದೆ ಮಧುಗಿರಿ, ಬಿಜ್ಜಾವರ, ತುಂಗವಾಟಿ, ಸಿದ್ದಾಪುರ ಮೊದಲಾದ ಸ್ಥಳಗಳಲ್ಲಿ ಅವರ ಕೋಟೆಗಳು ಮತ್ತು ದೇವಾಲಯಗಳು ಕಂಡುಬಂದಿದ್ದು ಅವು ಮಧುಗಿರಿ ಮಹಾನಾಡು ಪ್ರಭುಗಳ ಇತಿಹಾಸದ ಮೇಲೆ ಬೆಳಕು ಹಾಯಿಸುತ್ತವೆ.

ಮಧುಗಿರಿಯ ಈ ಅರಸರ ಇತಿಹಾಸವನ್ನು ಎರಡು ಭಾಗವಾಗಿ ವರ್ಗೀಕರಿಸಬಹುದು.

೧. ೮ನೆಯ ಶತಮಾನದಿಂದ ೧೧ನೆಯ ಶತಮಾನದವರೆಗೆ

೨. ೧೩ನೆಯ ಶತಮಾನದಿಂದ ಮುಂದಕ್ಕೆ.

ಕ್ರಿ.ಶ. ಮೂರನೆಯ ಶತಮಾನದಿಂದ ಮುಂದಕ್ಕೆ ಕಾಂಚಿಯ ಪಲ್ಲವರು ದಕ್ಷಿಣಭಾರತದ ಕೆಲವು ಭಾಗಗಳನ್ನು ಆಳುತ್ತಿದ್ದರು. ಕರ್ನಾಟಕದಲ್ಲಿ ಪಲ್ಲವರ ಶಾಖೆಯಾದ ನೊಳಂಬಪಲ್ಲವರು ಈ ಪ್ರದೇಶದಲ್ಲಿ ೮ರಿಂದ ೧೧ನೆಯ ಶತಮಾನದವರೆಗೆ ಆಳುತ್ತಿದ್ದರು. ಪ್ರಾರಂಭದಲ್ಲಿ ಹೆಂಜೇರು ಅಥವಾ ಹೇಮಾವತಿ (ಈಗ ಆಂಧ್ರದ ಅನಂತಪುರ ಜಿಲ್ಲೆಯಲ್ಲಿದೆ) ಅವರ ರಾಜಧಾನಿಯಾಗಿತ್ತು. ಚೋಳರಿಂದ ಪರಾಭವಗೊಂಡ ಮೇಲೆ ಅವರು ಹಂಪಿಯ ಬಳಿ ತುಂಗಭದ್ರಾನದಿಯ ಮೇಲೆ ಕಂಪಿಲಿ ಎಂಬ ಸ್ಥಳಕ್ಕೆ ತಮ್ಮ ರಾಜಧಾನಿಯನ್ನು ವರ್ಗಾಯಿಸಿದರು. ಕಾಲಕ್ರಮದಲ್ಲಿ ಕಂಪಿಲಿಯನ್ನೂ ಸೋತು ಸೊನ್ನಲಗಿಗೆ ಹೋಗಿ ನೆಲೆಸಿದರು.

ಹೆಂಜೇರಿನ ನೊಳಂಬ ಪಲ್ಲವರಾದ ಮಾರೇಗೌಡ ಮತ್ತು ಅವನ ಆರುಜನ ಸಹೋದರರು ಸೊನ್ನಲಗಿಯ ಸಿದ್ಧರಾಮೇಶ್ವರನ ಅನುಗ್ರಹವನ್ನು ಪಡೆದು ದಕ್ಷಿಣಾಭಿಮುಖವಾಗಿ ನಡೆದರು, ಕೊನೆಗೆ ವಿಜಯನಗರವನ್ನು ಸೇರಿದರು. ಆಗ ಅರಸನಾಗಿದ್ದ ಹರಿಹರನು ಈ ಸೋದರರ ಗಂಭೀರವೂ ತೇಜಸ್ವಿಯೂ ಆದ ವ್ಯಕ್ತಿತ್ವದಿಂದ ತುಂಬ ಪ್ರಭಾವಿತನಾಗಿ ಅವರನ್ನು ತನ್ನ ಅಶ್ವದಳದಲ್ಲಿ ಅಧಿಕಾರಿಗಳನ್ನಾಗಿ ನೇಮಕ ಮಾಡಿದನು. ಈ ಮಧ್ಯೆ ಮುಲ್ಲಾಖಾನನ ಕೈ ಕೆಳಗೆ ಮಹಮದೀಯ ಸೈನ್ಯವು ವಿಜಯನಗರದ ಮೇಲೆ ದಂಡೆತ್ತಿ ಬಂದಿತು. ಮಾರೇಗೌಡ ಮತ್ತು ಅವನ ಸೋದರರ ನೇತೃತ್ವದಲ್ಲಿ ವೀರಾವೇಶದಿಂದ ಕಾದಿ ವಿಜಯನಗರ ಸೈನ್ಯವು ವಿಜಯವನ್ನು ಗಳಿಸಿತು. ಈ ವಿಜಯದಿಂದ ಪ್ರಭಾವಿತನಾಗಿ ಹರಿಹರ ಮಹಾರಾಜನು ಮಾರೇಗೌಡನಿಗೂ ಅವನ ಸೋದರರಿಗೂ ಸೂಕ್ತವಾದ ಮರ್ಯಾದೆಯನ್ನು ಮಾಡಿ, ಮುಂದೆ ಅವರು ರಾಜ್ಯ ಸ್ಥಾಪನೆ ಮಾಡುವುದಾದರೆ ಮಹಾನಾಡು ಪ್ರಭು ಎಂದು ಬಿರುದು ಧರಿಸಿಕೊಳ್ಳಬಹುದೆಂದು ಪ್ರೋತ್ಸಾಹಿಸಿದನು.

ವಿಜಯನಗರದ ರಾಜನಿಂದ ಪುರಸ್ಕೃತರಾಗಿ ಮಾರೇಗೌಡನೂ ಅವನ ಸಹೋದರರೂ ತುಮಕೂರು ಜಿಲ್ಲೆಯ ತುಂಗವತಿ ಗ್ರಾಮಕ್ಕೆ ಬಂದರು. ಅಲ್ಲಿಂದ ಮುಂದೆ ಕೋರ ಗ್ರಾಮಕ್ಕೆ ಹೋಗಿ ಅಲ್ಲಿ ಕ್ರಿ.ಶ. ೧೩೪೬ರಲ್ಲಿ ಒಂದು ಕೋಟೆಯನ್ನು ಕಟ್ಟಿಕೊಂಡರು. ಕ್ರಮೇಣ ಸಹೋದರರು ಸ್ವತಂತ್ರವಾಗಿ ಇರಲು ಬಯಸಿದರು; ಈ ಕೆಳಗಿನಂತೆ ಬೇರೆ ಬೇರೆ ಸ್ಥಳಗಳಲ್ಲಿ ನೆಲೆಸಿದರು. ಕಲ್ಲಣಗೌಡನು ಕೋರದಲ್ಲಿ, ಚೆನ್ನಪ್ಪಗೌಡನು ತೆರೆಯೂರಿನಲ್ಲಿ, ಸಂಗಪ್ಪಗೌಡನು ಚೇಳೂರಿನಲ್ಲಿ, ಕಾಳ ಚಿಕ್ಕಪ್ಪಗೌಡನು ಗುಬ್ಬಿಹೊಸಹಳ್ಳಿಯಲ್ಲಿ, ರಾಮಪ್ಪಗೌಡನು ಎಣ್ಣೆಗೆರೆಯಲ್ಲಿ ಮತ್ತು ಚಿಕ್ಕಪ್ಪಗೌಡನು ಬಿದರೆಯಲ್ಲಿ ನೆಲೆಸಿದರು.

ಎಲ್ಲರಿಗಿಂತ ದೊಡ್ಡವನಾಗಿದ್ದ ಮಾರೇಗೌಡನು ತನ್ನ ರಾಜ್ಯವನ್ನು ಸ್ಥಾಪಿಸಲು ಸೂಕ್ತವಾದ ಸ್ಥಳಕ್ಕಾಗಿ ಹುಡುಕುತ್ತಿದ್ದನು. ಅವನು ಜಯಮಂಗಲಿ ನದಿಯ ಬಳಿಗೆ ಬಂದು ಅಲ್ಲಿದ್ದ ದಟ್ಟವಾದ ಅರಣ್ಯವನ್ನು ಸವರಿ ಹಸನುಗೊಳಿಸಿ ಅಲ್ಲಿ ನೊಣಬೇಶ್ವರ ದೇವಾಲಯವನ್ನು ಕಟ್ಟಿದನು, ಆ ಊರಿಗೆ ಮುಮ್ಮಡಿ ಎಂದು ಹೆಸರಿಟ್ಟನು. ಊರಿನ ಸುತ್ತಲೂ ಕೋಟೆಯನ್ನು ಕಟ್ಟಿ ಕಂಚಿನ ಹೆಬ್ಬಾಗಿಲನ್ನು ಹಾಕಿಸಿದನು.[೧೦೫] ಹೀಗೆ ಆ ಏಳು ಜನ ಸಹೋದರರು ನಿರ್ಮಿಸಿದ ನಾಡು ಮಹಾನಾಡು ಎಂದು ಹೆಸರು ಪಡೆಯಿತು, ಅಲ್ಲಿಯ ರಾಜರು 'ಮಹಾನಾಡು ಪ್ರಭುಗಳು' ಎಂದು ಪ್ರಸಿದ್ಧರಾದರು.

ಮಾರೇಗೌಡನ ನಂತರ ಅವನ ಮಗ ವೀರೇಗೌಡನು ಮುಮ್ಮಡಿಯನ್ನು ಬೆಳೆಸಿದನು. ಅವನ ಕಾಲದಲ್ಲಿ ವಿಜಯನಗರದ ಶತ್ರುಗಳಾಗಿದ್ದ ಬಹಮನಿ ಸುಲ್ತಾನರು ಮುಮ್ಮಡಿ ಪಟ್ಟಣದ ಮೇಲೆ ಧಾಳಿ ಮಾಡಿದರು. ಯುದ್ಧದಲ್ಲಿ ದೊಡ್ಡೇಗೌಡನು ಮಡಿದನು. ಸುಲ್ತಾನರು ನಗರವನ್ನು ನಾಶಪಡಿಸಿದರು. ಅವನ ಮಗ ಹಿರೇ ಚಿಕ್ಕಪ್ಪಗೌಡನು ಆಗ ತುಂಗವತಿ ಗ್ರಾಮದಲ್ಲಿ ಇದ್ದುದರಿಂದ ಶತ್ರುಗಳು ಅವನನ್ನು ಸೆರೆ ಹಿಡಿಯಲು ಸಾಧ್ಯವಾಗಲಿಲ್ಲ. ಸ್ವಲ್ಪ ಕಾಲ ಕಳೆದ ಮೇಲೆ ಹೊಸ ರಾಜಧಾನಿಯನ್ನು ನಿರ್ಮಿಸಬೇಕೆಂದು ಹಿರೇ ಚಿಕ್ಕಪ್ಪಗೌಡನು ತಕ್ಕ ಸುಭದ್ರವಾದ ಸ್ಥಳವನ್ನು ಹುಡುಕುತ್ತಿದ್ದನು. ಕ್ರಿ.ಶ. ೧೫೨೪ರಲ್ಲಿ ಕೃಷ್ಣದೇವರಾಯನ ಅನುಮತಿಯನ್ನು ಪಡೆದುಕೊಂಡು ಬಿಜ್ಜಾವರ ನಗರವನ್ನು ಸ್ಥಾಪಿಸಿ ರಾಜಧಾನಿಯನ್ನು ಅಲ್ಲಿಗೆ ವರ್ಗಾಯಿಸಿಕೊಂಡನು.

ಹಿರೇ ಚಿಕ್ಕಪ್ಪಗೌಡನ ಮರಣಾನಂತರ ಅವನ ಹಿರಿಯ ಮಗ ಕರಿತಿಮ್ಮ ಚಿಕ್ಕ ಭೂಪಾಲನು ಬಿಜ್ಜಾವರದ ಸಿಂಹಾಸನವನ್ನು ಏರಿದನು. ಅವನ ಕಾಲದಲ್ಲೇ ತಾಳೀಕೋಟೆ ಯುದ್ಧವು ವಿಜಯನಗರ ಮತ್ತು ಬಹಮನಿ ಸುಲ್ತಾನರ ನಡುವೆ ನಡೆದು ಸಾಮ್ರಾಜ್ಯವು ಸಂಪೂರ್ಣವಾಗಿ ನಾಶವಾಯಿತು. ರಾಜ ಸದಾಶಿವರಾಯನೂ ಅವನ ಸೇನಾಪತಿ ತಿರುಮಲನೂ ಪೆನುಗೊಂಡೆಗೆ ಓಡಿಹೋಗಿ ಅಲ್ಲಿಂದ ಆಳತೊಡಗಿದರು. ಇತರ ಪಾಳೆಯಗಾರರಂತೆ ಕರಿತಿಮ್ಮ ಚಿಕ್ಕಭೂಪಾಲನು ಈ ಸಂದರ್ಭವನ್ನು ದುರುಪಯೋಗಪಡಿಸಿಕೊಳ್ಳಲಿಲ್ಲ. ವಿಜಯನಗರದ ಶ್ರೀರಂಗರಾಯನ ಪರಮನಿಷ್ಠನಾಗಿಯೇ ಮುಂದುವರಿದನು. ಈ ಸಮಯದಲ್ಲಿ ಬಿಜಾಪುರದ ಅದಿಲ್‌ಶಾಹಿಗಳು ಪೆನುಗೊಂಡೆಯ ಮೇಲೆ ಆಕ್ರಮಣ ಮಾಡಿದರು. ಬಿಜ್ಜಾವರದರಸ ಕರಿತಿಮ್ಮ ಚಿಕ್ಕ ಭೂಪಾಲನು ಚನ್ನಪಟ್ಟಣದ ರಾಜ ಜಗದೇವರಾಯ ಮತ್ತು ಶ್ರೀರಂಗರಾಯನ ಅಳಿಯ ಇವರೊಂದಿಗೆ ಪೆನುಗೊಂಡೆಗೆ ಹೋಗಿ ಯುದ್ಧಮಾಡಿ ಅದಿಲ್‌ಶಾಹಿಗಳನ್ನು ಸೋಲಿಸಿದನು. ಅವನ ಧೈರ್ಯ, ಪರಾಕ್ರಮ, ನಿಷ್ಠೆಗಳಿಂದ ಪ್ರಭಾವಿತನಾಗಿ ವಿಜಯನಗರದ ಶ್ರೀರಂಗರಾಯನು ಅವನಿಗೆ ವಂಕಿನಿ ಎಂಬ ಪ್ರಸಿದ್ಧವಾದ ಆಯುಧವನ್ನೂ ಅನೇಕ ಬಿರುದುಗಳನ್ನೂ ನೀಡಿ ಸತ್ಕರಿಸಿದನು.[೧೦೬] ಕರಿತಿಮ್ಮ ಚಿಕ್ಕಭೂಪಾಲನ ಮರಣಾನಂತರ ಅವನ ಮಗ ಇಮ್ಮಡಿ ಚಿಕ್ಕಭೂಪಾಲನು ಬಿಜ್ಜಾವರದ ಸಿಂಹಾಸನವನ್ನೇರಿದನು. ಈ ರಾಜರಲ್ಲೆಲ್ಲ ಅವನೇ ತುಂಬಾ ಪ್ರಸಿದ್ಧನಾದವನು.

ಇಮ್ಮಡಿ ಚಿಕ್ಕಭೂಪಾಲ

ಗುರು ತೋಂಟದ ಸಿದ್ಧಲಿಂಗಯತಿಗಳ ಆಶೀರ್ವಾದದಿಂದ ಕರಿತಿಮ್ಮ ಚಿಕ್ಕಭೂಪಾಲ ಮತ್ತು ಸೋಮಾಂಬೆಯರಿಗೆ ಮಗನಾಗಿ ಇಮ್ಮಡಿ ಚಿಕ್ಕಭೂಪಾಲನು ಜನಿಸಿದನು.[೧೦೭] ಕ್ರಿ.ಶ. ೧೫೯೪ರಲ್ಲಿ ಅವನು ಆಳುತ್ತಿದ್ದನು.[೧೦೮] ಈ ಸಮಯದಲ್ಲಿ ಶ್ರೀರಂಗರಾಯನ ಸಹೋದರ ೧ನೇ ವೆಂಕಟಪತಿರಾಯನು ವಿಜಯನಗರದ ಚಕ್ರವರ್ತಿಯಾಗಿದ್ದನು. ಇಮ್ಮಡಿ ಚಿಕ್ಕಭೂಪಾಲನು ವೆಂಕಟಪತಿಯ ಅನುಮತಿಯನ್ನು ಪಡೆದು ಸಿದ್ಧಲಿಂಗೇಶ್ವರನ ಹೆಸರಿನಲ್ಲಿ ಬಿಜ್ಜಾವರದ ಪಶ್ಚಿಮಕ್ಕೆ ಒಂದು ಕೋಟೆಯನ್ನು ಕಟ್ಟಿಸಿದನು. ಅಲ್ಲಿ ವಿಘ್ನೇಶ್ವರ, ವೀರಭದ್ರ, ಭೈರವ ಮೊದಲಾದ ಪಂಚದೇವತಾ ದೇವಾಲಯಗಳನ್ನು ಕಟ್ಟಿಸಿದನು. ಅದಕ್ಕೆ ಸಿದ್ಧಾಪುರವೆಂದು ಹೆಸರಿಟ್ಟನೆಂದು ಅಲ್ಲಿ ದೊರೆತ ಒಂದು ಶಾಸನವು ಹೇಳುತ್ತದೆ.[೧೦೯] ಕೆಲ ಕಾಲಾನಂತರ ಕ್ರಿ.ಶ. ೧೬೦೧ರಲ್ಲಿ ಅವನು ಮದ್ದಗಿರಿಯನ್ನು ನಿರ್ಮಿಸಿದನು.

ಹರವೆ ಯುದ್ಧ

ಇದು ಇಮ್ಮಡಿ ಚಿಕ್ಕಭೂಪಾಲನು ಮಾಡಿದ ಅತ್ಯಂತ ಮುಖ್ಯವಾದ ಯುದ್ಧಗಳಲ್ಲಿ ಒಂದು. ಚಿಕ್ಕಬಳ್ಳಾಪುರದ ನಾಡಪ್ರಭು ಹವಲಿ ಭೈರೇಂದ್ರನು ಚಿಕ್ಕಭೂಪಾಲನಿಗೆ ಸೇರಿದ ಮಿಡಿಕೇಶಿ ಕೋಟೆಯನ್ನು ಗೆದ್ದಿದ್ದನು.[೧೧೦] ಇದು ಮಾತ್ರವಲ್ಲದೆ, ವಿಜಯನಗರದ ಅರಸ ವೆಂಕಟಪತಿಯು ಇಲ್ಲದಾಗ ಪೆನುಗೊಂಡೆಯನ್ನು ಗೆದ್ದು ಅಲ್ಲಿಂದ ಹದಿನೆಂಟು ಲಕ್ಷ ಮೌಲ್ಯದ ಐಶ್ವರ್ಯವನ್ನು ದೋಚಿದ್ದನು.[೧೧೧] ಚಕ್ರವರ್ತಿಯ ಪರಮ ನಿಷ್ಠನಾದ ಚಿಕ್ಕಭೂಪಾಲನು ಇದನ್ನು ಕೇಳಿ, ರಾಜಧಾನಿಯನ್ನು ರಕ್ಷಿಸಲು ಹವಲಿ ಭೈರೇಂದ್ರನ ಮೇಲೆ ಯುದ್ಧವನ್ನು ಸಾರಿದನು. ಅವನ ಜೊತೆಗೆ ಮಗ ತೋಂಟದಾರ್ಯ, ಕೆಂಪೇಂದ್ರ, ತಿಮ್ಮಿನಾಯಕ, ಬಸವೇಂದ್ರ, ಬಸವ, ಕೆಂಪ, ನಂಜಮಲ್ಲ, ಸಿದ್ಧ, ತಿಮ್ಮಣ್ಣ ಕೊಟ್ಟೂರ ಮೊದಲಾದವರೂ ಯುದ್ಧರಂಗಕ್ಕೆ ಹೋದರು. ಯುದ್ಧವು ಹರವೆಯಲ್ಲಿ ನಡೆಯಿತು. ಕೋಟೆಯನ್ನು ಸೋತು ಹವಲಿ ಭೈರೇಂದ್ರನು ಅವಮಾನದಿಂದ ಇನ್ನಷ್ಟು ಜನ ಸೈನಿಕರೊಂದಿಗೆ ಬಂದು ಮತ್ತೆ ಕಾದಿದನು. ಈ ಸಾರಿ ಭೈರೇಂದ್ರನು ತೋಂಟದಾರ್ಯನನ್ನು ಸೆರೆ ಹಿಡಿದು ಯುದ್ಧರಂಗದಲ್ಲೇ ಕೊಂದನು. ಮಗನ ಸಾವನ್ನು ನೋಡಿ ಕ್ರುದ್ಧನಾಗಿ ಚಿಕ್ಕಭೂಪಾಲನು

ವೀರಾವೇಶದಿಂದ ಯುದ್ಧಮಾಡಿದನು. ಆದರೆ ಜಯಗಳಿಸಲಾರದೆ ಯುದ್ಧದಲ್ಲಿ ಮಡಿದನು.[೧೧೨] ಹವಲಿ ಬೈರೇಂದ್ರನು ಸಾಮ್ರಾಜ್ಯಕ್ಕೆ ಮಾಡಿದ ಅನ್ಯಾಯವನ್ನು ನೋಡಿಯೂ ದುರ್ಬಲರಾಗಿದ್ದ ನೆರೆಹೊರೆಯ ರಾಜರು ಪ್ರತಿಕ್ರಿಯೆ ತೋರಿಸದೆ ಸುಮ್ಮನಿದ್ದ ಸಮಯದಲ್ಲಿ ಚಿಕ್ಕಭೂಪಾಲನು ಹರವೆ ಕೋಟೆಯಲ್ಲಿ ಅಪಾರ ಧೈರ್ಯದಿಂದ ಬೈರೇಂದ್ರನನ್ನು ಎದುರಿಸಿದನು. ತಂದೆ-ಮಗ ಇಬ್ಬರನ್ನೂ ಬಲಿ ತೆಗೆದುಕೊಂಡ ಈ ಯುದ್ಧವು ಬಿಜ್ಜಾವರದಲ್ಲಿ ಸ್ಮಶಾನ ಮೌನವನ್ನು ಹರಡಿತು.

ಇಮ್ಮಡಿ ಚಿಕ್ಕಭೂಪಾಲ ಮತ್ತು ಅವನ ಹಿರಿಯ ಮಗ ತೋಂಟದಾರ್ಯ ಇಬ್ಬರೂ ಮಡಿಯಲು, ರಾಜಗುರುಗಳಾದ ಚೋಳ ಬಸವೇಶ್ವರರು ಕಿರಿಯಮಗ ಸಪ್ಪೇಂದ್ರನಿಗೆ ಮುಮ್ಮಡಿ ಚಿಕ್ಕಭೂಪಾಲನೆಂಬ ಹೆಸರಿನಿಂದ ಪಟ್ಟಾಭಿಷೇಕ ಮಾಡಿದರು. ಇವನು ರಾಜಧಾನಿಯನ್ನು ಬಿಜ್ಜಾವರದಿಂದ ಮದ್ದಗಿರಿಗೆ ವರ್ಗಾಯಿಸಿದನು. ರಣದುಲ್ಲಖಾನನ ಆಕ್ರಮಣದ ಸಮಯದಲ್ಲಿ ಸಿರಾದ ರಂಗಪ್ಪರಾಜನ ಪುತ್ರರಾದ ರಾಮಪ್ಪರಾಜ ಮತ್ತು ಸರ್ಜಪ್ಪ ರಾಜರಿಗೆ ಆಶ್ರಯಕೊಟ್ಟನು. ಚಿಕ್ಕಭೂಪಾಲನ ಒಗ್ಗೂಡಿದ ಸೈನ್ಯವು ಮುಸ್ಲಿಂ ಸೇನೆಯನ್ನು ಸೋಲಿಸಿತು. ಆಮೇಲೆ ರತ್ನಗಿರಿಯನ್ನು ೫೦೦೦ ಸೀಮೆಯೊಂದಿಗೆ ಕೊಟ್ಟು ಆ ಸೋದರರು ಅಲ್ಲಿ ನೆಲಸುವಂತೆ ಮಾಡಿದನು.[೧೧೩]

ಮುಮ್ಮಡಿ ಚಿಕ್ಕಪ್ಪಗೌಡನು ತನ್ನ ರಾಜ್ಯವನ್ನು ಮಕ್ಕಳಿಗೆ ಹಂಚಿಕೊಟ್ಟನು. ಮದ್ದಗಿರಿಯು ಸಂಗಪ್ಪಗೌಡನಿಗೆ, ಚೆನ್ನರಾಯದುರ್ಗವು ಹಿರೇತೋಂಟಪ್ಪಗೌಡನಿಗೆ, ಮತ್ತು ಮಿಡಿಗೇಶಿಯು ಕಾಳಚಿಕ್ಕಪ್ಪ ಗೌಡನಿಗೆ ದೊರಕಿದುವು. ಇವರಲ್ಲಿ ಕಾಳಚಿಕ್ಕಪ್ಪಗೌಡನು ಬಹಳ ಧೈರ್ಯಶಾಲಿಯಾಗಿದ್ದು ಮದ್ದಗಿರಿಯ ಉಸ್ತುವಾರಿಯನ್ನೂ ಹೊತ್ತಿದ್ದನು. ವಿಜಯನಗರದ ದೊರೆ ಶ್ರೀರಂಗರಾಯನ ಅನುಮತಿಯನ್ನು ಪಡೆದು ಅವನು ತನ್ನ ಪ್ರಾಂತವನ್ನು ವಿಸ್ತರಿಸಿದನು. ಅವನ ಕಾಲದಲ್ಲಿ ನಡೆದ ಅತ್ಯಂತ ಮುಖ್ಯವಾದ ಘಟನೆಯೆಂದರೆ, ಸಿರಾದ ಕಿರಿಯ ರಾಜಕುಮಾರನಿಗೆ ಆಶ್ರಯ ನೀಡಿದ್ದು. ಕಸ್ತೂರಿ ರಾಯಪ್ಪರಾಜನೆಂಬ ಹೆಸರಿನ ಈ ರಾಜಕುಮಾರನ ಪರವಾಗಿ ಯುದ್ಧಮಾಡಿ ಪುವ್ವಲಕೆಂಗನನ್ನು ಸೋಲಿಸಿ ಕಿರಿವಯಸ್ಸಿನ ರಾಜಕುಮಾರನನ್ನು ಸಿರಾದ ಸಿಂಹಾಸನದ ಮೇಲೆ ಕೂರಿಸಿ ಅವನ ಪರವಾಗಿ ತಾನು ರಾಜ್ಯವಾಳಿದನು.[೧೧೪]

ಕಾಳ ಚಿಕ್ಕಪ್ಪಗೌಡನ ಮರಣಾನಂತರ ಅವನ ಮಕ್ಕಳಾದ ರಾಮಪ್ಪಗೌಡ ಮತ್ತು ತಿಮ್ಮಗೌಡರಲ್ಲಿ ಸಿಂಹಾಸನಕ್ಕಾಗಿ ಕಲಹವುಂಟಾಯಿತು. ರಾಮಪ್ಪಗೌಡನಿಗೆ 'ಮಹಾನಾಡು ಪ್ರಭು' ಎಂಬ ಬಿರುದು ದೊರೆತಾಗ ತಿಮ್ಮಪ್ಪಗೌಡನಿಗೆ ಅಸೂಯೆಯುಂಟಾಯಿತು. ಆದ್ದರಿಂದ ಅವನು ಶ್ರೀರಂಗಪಟ್ಟಣಕ್ಕೆ ಹೋಗಿ ಚಿಕ್ಕದೇವರಾಜ ಒಡೆಯರ ಸಹಾಯವನ್ನು ಕೋರಿದನು. ಈ ಸಂದರ್ಭವನ್ನು ಉಪಯೋಗಿಸಿಕೊಂಡು ಚಿಕ್ಕದೇವರಾಜನು ದಳವಾಯಿ ದೇವರಾಜನ ನೇತೃತ್ವದಲ್ಲಿ ಒಂದು ಸೈನ್ಯವನ್ನು ಕಳುಹಿಸಿದನು. ಈ ಸೈನ್ಯವು ಮದ್ದಗಿರಿಯನ್ನು ವಶಪಡಿಸಿಕೊಂಡು ರಾಮಪ್ಪಗೌಡನನ್ನು ಸೆರೆ ಹಿಡಿಯಿತು. ಮೂವತ್ತು ವರ್ಷಗಳ ನಂತರ ಅವನನ್ನು ಕಾರಾಗೃಹದಿಂದ ಬಿಡುಗಡೆ ಮಾಡಿ ಅವನ ರಾಜ್ಯವನ್ನು ಹಿಂದಕ್ಕೆ ಕೊಟ್ಟರು. ಅವನು ಮೈಸೂರಿನ ಒಡೆಯರ ಸಾಮಂತನಾಗಿ ರಾಜ್ಯವಾಳಲು ತೊಡಗಿದನು.

ಆಮೇಲೆ ಹೈದರ್ ಅಲಿಯ ಕಾಲದಲ್ಲಿ ಮದ್ದಗಿರಿಯನ್ನು ಮತ್ತೆ ಮೈಸೂರಿನ ಒಡೆಯರು ಗೆದ್ದರು. ಬಿದನೂರಿನ ರಾಣಿ ಚೆನ್ನಮ್ಮಳನ್ನೂ ಆಕೆಯ ಮಗ ಸೋಮಶೇಖರನನ್ನೂ ಹೈದರಲಿಯು ಮದ್ದಗಿರಿ ಕೋಟೆಯಲ್ಲಿ ಸೆರೆಯಲ್ಲಿಟ್ಟಿದ್ದನು. ಅವರನ್ನು ಬಿಡುಗಡೆ ಮಾಡಿದ ಮೇಲೆ ಹೈದರಲಿಯು ಮದ್ದಗಿರಿ ಕೋಟೆಯನ್ನು ಬಿಜ್ಜಾವರ ರಾಜರಿಗೆ ಹಿಂದಕ್ಕೆ ಕೊಟ್ಟನು. ಆದರೆ ಟಿಪ್ಪುಸುಲ್ತಾನನು ಮತ್ತೆ ಅದನ್ನು ೧೭೭೪ರಲ್ಲಿ ವಶಪಡಿಸಿಕೊಂಡು ಅದಕ್ಕೆ ಫತೇಹಾಬಾದ್ ಎಂದು ಹೊಸದಾಗಿ ಹೆಸರಿಟ್ಟನು. ಈ ಸಮಯದಲ್ಲಿ ಮದ್ದಗಿರಿ ಕೋಟೆಯನ್ನು ಚನ್ನಪ್ಪಗೌಡನು ಆಳುತ್ತಿದ್ದನು. ೧೭೯೧ರಲ್ಲಿ ಮರಾಠರು ಈ ಕೋಟೆಯನ್ನು ಮುತ್ತಿ

ಅದನ್ನು ನಾಶಮಾಡಿದರು. ಆಮೇಲೆ ಟಿಪ್ಪುಸುಲ್ತಾನನು ಮತ್ತೆ ಮದ್ದುಗಿರಿಯನ್ನು ಗೆದ್ದುಕೊಂಡು ಹಜರತ್‌ವಲಿಯನ್ನು ಉಸ್ತುವಾರಿಗೆ ನೇಮಿಸಿದನು. ೧೭೯೯ರವರೆಗೆ ಬಿಜ್ಜಾವರದ ಅರಸರು ಯಾವುದೇ ರಾಜ್ಯವಿಲ್ಲದೆ ಅಲೆಯುತ್ತಿದ್ದರು. ೧೭೯೯ರಲ್ಲಿ ಟಿಪ್ಪುವು ಮೃತನಾಗಲು, ಮದ್ದುಗಿರಿಯ ರಾಜ ಚನ್ನಪ್ಪಗೌಡನನ್ನು ಬ್ರಿಟಿಷರು ಬೆಂಗಳೂರಿಗೆ ಕರಸಿಕೊಂಡು ತಮ್ಮೊಂದಿಗೆ ಮಾತನಾಡಲು ಒಬ್ಬ ವಕೀಲನನ್ನು ಚನ್ನಪಟ್ಟಣಕ್ಕೆ ಕಳುಹಿಸಿಕೊಡಬೇಕೆಂದು ಕೇಳಿದರು. ವಕೀಲನು ಅಲ್ಲಿಗೆ ಹೋಗುವ ವೇಳೆಗೆ ಕರ್ನಲ್ ಸತ್ತುಹೋಗಿದ್ದನು. ಹೀಗೆ ರಾಜ್ಯವನ್ನು ಪಡೆದುಕೊಳ್ಳಲು ಅಸಮರ್ಥನಾದ ಚನ್ನಪ್ಪಗೌಡನು ದುಃಖದಿಂದ ೧೮೧೨ರಲ್ಲಿ ತೀರಿಕೊಂಡನು. ಅವನಿಗೆ ಮಕ್ಕಳಿರಲಿಲ್ಲ. ಈ ಪರಿಸ್ಥಿತಿಯಲ್ಲಿ ಬಿಜ್ಜಾವರವನ್ನು ಮೈಸೂರು ರಾಜ್ಯಕ್ಕೆ ಸೇರಿಸಿಕೊಳ್ಳಲಾಯಿತು.

ಆಡಳಿತ

ಈ ರಾಜ್ಯವನ್ನು ಜನಪ್ರಿಯವಾಗಿ ಮುಮ್ಮಡಿ ರಾಜ್ಯವೆಂದು ಕರೆಯಲಾಗುತ್ತಿತ್ತು. ರಾಜರಿಗೆ ಮುಮ್ಮಡಿ ಪ್ರಭುಗಳು, ಮಹಾನಾಡು ಪ್ರಭುಗಳು ಮತ್ತು ಬಿಜ್ಜಾವರ ಪುರವರಾಧೀಶ್ವರರು ಎಂಬ ಹೆಸರುಗಳಿದ್ದುವು.[೧೦೫] ಅವರು ವಿಜಯನಗರ ರಾಜರ ಸಾಮಂತರಾಗಿದ್ದರು. ಆದ್ದರಿಂದ ಅವರು ವಿಜಯನಗರದ ಆಡಳಿತ ಸಂಪ್ರದಾಯವನ್ನೇ ಅನುಸರಿಸಿದರು. ಅದು ಆನುವಂಶಿಕವಾದ ರಾಜ ಪ್ರಭುತ್ವವಾಗಿತ್ತು. ರಾಜನ ಹಿರಿಯ ಮಗನು ಮುಂದಿನ ರಾಜನಾಗುತ್ತಿದ್ದನು. ಏನಾದರೂ ಕಾರಣದಿಂದ ಅವನು ಜವಾಬ್ದಾರಿ ಹೊರಲು ಅಸಮರ್ಥನಾಗಿದ್ದರೆ ಇನ್ನೊಬ್ಬ ಮಗನನ್ನು ರಾಜನನ್ನಾಗಿ ನೇಮಿಸಲಾಗುತ್ತಿತ್ತು. ಆದರೆ ರಾಜನಾಗುವುದಕ್ಕೆ ಮೊದಲು ಯುವರಾಜನಾಗಿ ಅವನು ರಾಜ್ಯಾಡಳಿತದಲ್ಲಿ ತರಬೇತಿಯನ್ನು ಪಡೆದುಕೊಂಡಿರುತ್ತಿದ್ದನು. ರಾಜನಿಗೆ ಎಲ್ಲಾ ಜವಾಬ್ದಾರಿಗಳನ್ನು ತಾನೊಬ್ಬನೇ ನಿರ್ವಹಿಸಲು ಸಾಧ್ಯವಾಗುತ್ತಿರಲಿಲ್ಲ. ಆದ್ದರಿಂದ ಮಂತ್ರಿಗಳನ್ನು ನೇಮಿಸಿಕೊಂಡು ಆಡಳಿತದಲ್ಲಿ ಅವರ ನೆರವು ಪಡೆಯುತ್ತಿದ್ದನು. ಅವರು ಮಹಾಮಂತ್ರಿ, ದಳವಾಯಿ, ನ್ಯಾಯಪತಿ, ಬೊಕ್ಕರಸ, ಸುಂಕದ ಅಧಿಕಾರಿ ಮತ್ತು ಲೆಕ್ಕಪತ್ರ ತಜ್ಞ. ಮಹಾನಾಡು ಸ್ಥಾಪನೆಯ ಸಮಯದಲ್ಲಿ ಹರಿನರಸಯ್ಯ ಮತ್ತು ತಿಮ್ಮರಸಯ್ಯ ಮಂತ್ರಿಗಳಾಗಿದ್ದರು.[೧೦೬] ದಂಡನಾಯಕನು ಸೈನ್ಯದ ಮುಖ್ಯಸ್ಥನಾಗಿದ್ದನು. ಚಿಕ್ಕ ದಂಡನಾಯಕನು ಸೈನ್ಯದ ಅಧಿಪತಿಯಾಗಿದ್ದನೆಂದು ಒಂದು ಶಾಸನವು ಹೇಳುತ್ತದೆ.[೧೦೭] ಇದರಿಂದ ಮಹಾನಾಡು ಪ್ರಭುವು ಅತ್ಯಂತ ಶಿಸ್ತುಬದ್ಧವಾದ ಸೈನ್ಯವನ್ನು ಕಟ್ಟಿಕೊಂಡಿದ್ದನೆಂದು ಅರ್ಥವಾಗುತ್ತದೆ. ಒಂದು ರಾಜ್ಯದ ವೈಭವವು ಅಲ್ಲಿನ ಉತ್ತಮ ಆಡಳಿತವನ್ನು ಅವಲಂಬಿಸಿರುತ್ತದೆ. ಉತ್ತಮ ಆಡಳಿತಕ್ಕೋಸ್ಕರವಾಗಿ ರಾಜ್ಯವನ್ನು ಹಲವು ಆಡಳಿತೀಯ ವಿಭಾಗಗಳಾಗಿ ವಿಭಜಿಸಲಾಗಿತ್ತು. ಅವು ರಾಜ್ಯ, ಸೀಮೆ, ನಾಡು, ಹೋಬಳಿ, ಕಸಬೆ, ಸ್ಥಲ, ಗ್ರಾಮ ಮತ್ತು ಮಾಗಣಿ.

ನಾಡು ಆಡಳಿತದ ಕೇಂದ್ರವಾಗಿತ್ತು. ಅದರಲ್ಲಿ ಅನೇಕ ಗ್ರಾಮಗಳಿರುತ್ತಿದ್ದುವು. ಅಲ್ಲಿನ ಅಧಿಕಾರಿಗೆ ನಾಡಗೌಡ ಎಂದು ಹೆಸರು. ಮಹಾನಾಡು ಇಂತಹ ಒಂದು ನಾಡು ಆಗಿತ್ತು ಎಂದು ಶಾಸನದಿಂದ ತಿಳಿಯುತ್ತದೆ.[೧೦೮] ಮಾಗಣಿ ಎನ್ನುವುದೂ ಒಂದು ಆಡಳಿತೀಯ ವಿಭಾಗವೇ ಆಗಿತ್ತು ಎನ್ನುವುದೂ ಶಾಸನದಿಂದ ತಿಳಿಯುತ್ತದೆ.[೧೦೯] ಗ್ರಾಮವು ಅತ್ಯಂತ ಚಿಕ್ಕ ಘಟಕ, ಅದನ್ನು ನೋಡಿಕೊಳ್ಳುತ್ತಿದ್ದವರು ಗೌಡ, ಶಾನುಭೋಗ ಮತ್ತು ಕರಣಿಕ.

ಮುಮ್ಮಡಿ ಚಿಕ್ಕಭೂಪಾಲನು ಉತ್ತಮ ಕವಿಯೂ ಆಗಿದ್ದು ಸಂಸ್ಕೃತದಲ್ಲಿ ಅಭಿನವ ಭಾರತ ಸಾರಸಂಗ್ರಹ ಎಂಬ ಕೃತಿಯನ್ನು ರಚಿಸಿದ್ದಾನೆ. ಕ್ರಿ.ಶ. ೧೬೧೮ರಲ್ಲಿ ಜೀವಿಸಿದ್ದ ವಿರಕ್ತ ತೋಂಟದಾರ್ಯನು ಒಬ್ಬ ಮುಖ್ಯನಾದ ಕವಿಯೂ ಮಹಾನಾಡು ಅರಸರ ರಾಜಗುರುವೂ ಆಗಿದ್ದನು. ಕನ್ನಡ ಮತ್ತು ಸಂಸ್ಕೃತ ಎರಡೂ

ಭಾಷೆಗಳಲ್ಲಿ ಪರಿಣತ ವಿದ್ವಾಂಸನಾಗಿದ್ದು ಇಪ್ಪತ್ತಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾನೆ. ಅವುಗಳಲ್ಲಿ ಮುಖ್ಯವಾದವು ಶ್ರೀ ಸಿದ್ದೇಶ್ವರ ಪುರಾಣ, ಪಾಲ್ಕುರಿಕೆ ಸೋಮೇಶ್ವರ ಪುರಾಣ, ನಿರಂಜನ ಶತಕ, ತೋಂಟದಾರ್ಯ ರಗಳೆ, ಅನಾದಿ ವೀರಶೈವ ಸಂಗ್ರಹ ಇತ್ಯಾದಿ. ಮಹಾನಾಡು ಪ್ರಭುಗಳು ಸಾಹಿತ್ಯಕ್ಕೆ ಪೋಷಣೆ ನೀಡುವುದರಲ್ಲಿ ತುಂಬ ಆಸಕ್ತಿ ತೋರಿಸಿದರು, ಸಾಹಿತ್ಯಕ ಸಹಿಷ್ಣುತೆಯನ್ನು ಮೆರೆದರು.

ಧಾರ್ಮಿಕ ಕೊಡುಗೆ

ಮಹಾನಾಡು ಪ್ರಭುಗಳು ಮೂಲತಃ ವೀರಶೈವರು. ಅವರು ರಾಜ್ಯವನ್ನು ಸ್ಥಾಪಿಸಿದ್ದೇ ಶ್ರೀಗುರು ಸಿದ್ಧರಾಮೇಶ್ವರನ ಅನುಗ್ರಹದಿಂದ. ಆಮೇಲೆ ಗೋಪಾಲ ಚನ್ನ ಬಸವೇಶ್ವರ ಹಾಗೂ ತೋಂಟದ ಸಿದ್ಧಲಿಂಗೇಶ್ವರ ಇವರ ಪರಂಪರೆಯು ರಾಜವಂಶದ ಘನತೆಯನ್ನು ಹೆಚ್ಚಿಸಿತು. ತಮ್ಮ ಆಳ್ವಿಕೆಯಲ್ಲಿ ಅವರು ಅನೇಕ ವೀರಶೈವ ಮಠಗಳನ್ನು ಪ್ರಾರಂಭಿಸಿದರು. ಆ ಕಾಲದ ಒಂದು ಶಾಸನದ ಪ್ರಕಾರ ಐದು ದೇವಾಲಯಗಳಿರುವಂತೆ ಸಿದ್ಧಾಪುರ ಗ್ರಾಮವನ್ನು ನಿರ್ಮಿಸಲಾಯಿತು, ತೋಂಟದ ಸಿದ್ಧಲಿಂಗೇಶ್ವರರ ಹೆಸರಿನಲ್ಲಿ, ಈ ಹಿರೇಮಠವಲ್ಲದೆ, ಗೋಸಾಲಮಠ, ಬಲೇಶ್ವರಮಠ, ಪುಟ್ಟೇಶ್ವರಮಠಗಳು ಇಮ್ಮಡಿ ಚಿಕ್ಕಭೂಪಾಲನ ಆಳಿಕೆಯಲ್ಲಿ ಸ್ಥಾಪನೆಗೊಂಡುವು. ಅವು ಭಕ್ತಿ, ಜ್ಞಾನ, ವೈರಾಗ್ಯ, ಕಾಯಕಗಳನ್ನು, ಪ್ರಸಾರ ಮಾಡುತ್ತಾ ಸಾಮಾಜಿಕ ಚಟುವಟಿಕೆಗಳ ಕೇಂದ್ರಗಳಾಗಿದ್ದುವು.

ಅವರು ಹೆಚ್ಚಾಗಿ ಶೈವಧರ್ಮವನ್ನು ಪ್ರೋತ್ಸಾಹಿಸಿದರು. ಸಿದ್ಧಾಪುರದಲ್ಲಿ ಬೈರೇಶ್ವರ, ಮತ್ತು ವೃಷಭೇಶ್ವರ ಹಾಗೂ ಮಿಡಿಗೇಶಿಯ ಈಶ್ವರ ದೇವಾಲಯಗಳು ಇದಕ್ಕೆ ಸಾಕ್ಷಿಯಾಗಿವೆ. ಅವರು ನೊಳಂಬ ವೀರಶೈವರಾದರೂ ಧಾರ್ಮಿಕ ಸಹಿಷ್ಣುತೆಯಿದ್ದುದರಿಂದ ಇತರ ಧರ್ಮಗಳಿಗೂ ಪ್ರೋತ್ಸಾಹ ನೀಡಿದರು. ವೈಷ್ಣವ ಧರ್ಮಕ್ಕೂ ಪ್ರೋತ್ಸಾಹ ಕೊಟ್ಟು ಮಧುಗಿರಿಯಲ್ಲಿ ಶ್ರೀವೆಂಕಟೇಶ್ವರ ಸ್ವಾಮಿಯ ದೇವಾಲಯವನ್ನು ಕಟ್ಟಿಸಿದರು. ಮಧುಗಿರಿ ಬೆಟ್ಟದ ಬುಡದಲ್ಲಿ ಚಿಕ್ಕಪ್ಪಗೌಡನು ಕಟ್ಟಿಸಿದ ಗೋಪಾಲಸ್ವಾಮಿ ದೇವಾಲಯವು ಅವರ ಧಾರ್ಮಿಕ ಸಹಿಷ್ಣುತೆಗೆ ಅತ್ಯುತ್ತಮ ನಿದರ್ಶನವಾಗಿದೆ. ಅದಕ್ಕೆ ಇನ್ನೂ ಒಂದು ಉದಾಹರಣೆ ಮಧುಗಿರಿ ಬೆಟ್ಟದ ತಪ್ಪಲಿನಲ್ಲಿರುವ ಗಂಗರ ಕಾಲದ ಒಂದು ಜೈನ ಬಸದಿ, ಇಂದಿಗೂ ತನ್ನ ಮಹತ್ವವನ್ನು ಉಳಿಸಿಕೊಂಡಿದೆ. ಮಹಾನಾಡು ಪ್ರಭುಗಳು ವೀರಶೈವರಾಗಿದ್ದರೂ ಇತರ ಧರ್ಮಗಳನ್ನು ಅಲಕ್ಷಿಸಲಿಲ್ಲ, ಅವುಗಳಿಗೆ ಧಾರ್ಮಿಕ ಸ್ವಾತಂತ್ರ್ಯವನ್ನು ನೀಡಿದ್ದರು, ಹಾಗಾಗಿ ಸುಭದ್ರವಾದ ಸರಕಾರವನ್ನು ಸ್ಥಾಪಿಸಲು ಅವರಿಗೆ ಸಾಧ್ಯವಾಯಿತು ಎಂದು ನಾವು ನಿರ್ಣಯಿಸಬಹುದು.

ಕಲೆ ಮತ್ತು ವಾಸ್ತುಶಿಲ್ಪ

ಮಧುಗಿರಿ ತಾಲೂಕು ದೊಡ್ಡೇರಿ ಹೋಬಳಿಯ ಸಿದ್ದಾಪುರ ಗ್ರಾಮದ ಶಾಸನವು ಮಹಾನಾಡು ಪ್ರಭುಗಳ ಕಾಲದಲ್ಲಿ ಅಭಿವೃದ್ಧಿಗೊಂಡ ಕಲೆ ಮತ್ತು ವಾಸ್ತುಶಿಲ್ಪಗಳ ಅಧ್ಯಯನಕ್ಕೆ ಸಹಾಯಕವಾಗುತ್ತದೆ.[೧೨೦] ಚಿಕ್ಕಪ್ಪಗೌಡನ ಕಾಲದ ವಾಸ್ತುಶಿಲ್ಪದ ವಿವರಗಳನ್ನು ಈ ಶಾಸನವು ಕೊಡುತ್ತದೆ. ವಾಸ್ತುಶಿಲ್ಪದಲ್ಲಿ ಮುಖ್ಯವಾಗಿದ್ದುದು ಕೋಟೆ. ಅದರ ಜೊತೆಗೆ ವಿಘ್ನೇಶ್ವರ, ವೀರಭದ್ರ, ಭೈರವ, ಬಸವ ಮತ್ತು ಆಂಜನೇಯ ದೇವಾಲಯಗಳು. ಇವುಗಳಲ್ಲಿ ಭೈರವ ಮತ್ತು ವೀರಭದ್ರ ದೇವಾಲಯಗಳು ಅವರ ಶೈವ ಪರಂಪರೆಯನ್ನು ತೋರಿಸುತ್ತವೆ. ಬಸವ ದೇವಾಲಯದ ನಿರ್ಮಾಣವು ಅವರು ವೀರಶೈವ ಧರ್ಮದ ಕಡೆಗೆ ವಾಲಿದುದನ್ನು ಸೂಚಿಸುತ್ತದೆ. ಅವರ ಆಳ್ವಿಕೆಯಲ್ಲಿ ಶೈವ ವೈಷ್ಣವ ದೇವಾಲಯಗಳೂ ಜೈನ ಬಸದಿಗಳೂ ಒಟ್ಟೊಟ್ಟಿಗೆ ಇದ್ದುದನ್ನು ನೋಡುತ್ತೇವೆ.[೧೨೧]

ಮಧುಗಿರಿಯ ಮಲ್ಲೇಶ್ವರಸ್ವಾಮಿ ದೇವಾಲಯವು ಮಹಾನಾಡು ಪ್ರಭುಗಳ ಧಾರ್ಮಿಕ ವಾಸ್ತುಶಿಲ್ಪದ ಅತ್ಯುತ್ತಮ ಮಾದರಿಯಾಗಿದೆ. ದೇವಾಲಯದ ಅಂಗಳವನ್ನು ಮುಮ್ಮಡಿ ಚಿಕ್ಕಪ್ಪಗೌಡನು ಕಟ್ಟಿಸಿದನು. ಎತ್ತರವಾದ ಕಂಬಗಳು, ಬಸವೇಶ್ವರನ ವಿಗ್ರಹ, ಗಣಪತಿ, ದ್ವಾರಪಾಲ ವಿಗ್ರಹಗಳು ಮುಮ್ಮಡಿ ನಗರದಿಂದ ತಂದು ಇಲ್ಲಿ ಸ್ಥಾಪಿಸಿದವು. ಈ ದೇವಾಲಯದೆದುರಿಗೆ ಮೂವತ್ತು ಅಡಿ ಎತ್ತರದ ಒಂದು ಏಕಶಿಲಾ ಸ್ತಂಭವಿದೆ.

ಈ ರಾಜರ ಕಾಲದಲ್ಲಿ ನಾಗರಿಕ ವಾಸ್ತುಶಿಲ್ಪವೂ ಪ್ರಗತಿ ಹೊಂದಿತು. ಇವುಗಳಲ್ಲಿ ಕೋಟೆಗಳು ಮುಖ್ಯವಾದವು. ಕೋರಕೋಟೆ, ಬಿಜ್ಜಾವರ ಕೋಟೆ, ಮುಮ್ಮಡಿ ನಗರದ ಕೋಟೆ, ಸಿದ್ಧಾಪುರದ ಕೋಟೆ, ಮಧುಗಿರಿ ಕೋಟೆ, ಚನ್ನರಾಯದುರ್ಗದ ಕೋಟೆ, ಕೊಡಗದಹಾಳ ಕೋಟೆ ಇವು ಉಪಯುಕ್ತತೆ ಮತ್ತು ರಕ್ಷಣೆಗಳ ಜೊತೆಗೆ ಸೌಂದರ್ಯಪ್ರಜ್ಞೆಯನ್ನೂ ತೋರಿಸುತ್ತವೆ.

ಮಧುಗಿರಿ ಕೋಟೆಯನ್ನು ಇಮ್ಮಡಿ ಚಿಕ್ಕಪ್ಪಗೌಡನು ಕ್ರಿ.ಶ. ೧೬೦೧ರಲ್ಲಿ ಕಟ್ಟಿಸಿದನು. ಅದಕ್ಕೆ ೧೫ ಬಾಗಿಲುಗಳಿವೆ. ಕೋಟೆಯೊಳಗೆ ಸಮಸ್ತ ಪೌರ ಅನುಕೂಲಗಳೂ ಇರುವುದನ್ನು ನೋಡಬಹುದು. ಹಲವಾರು ಕೊಳಗಳಿವೆ, ಅವುಗಳಲ್ಲಿ ಜನ್ಯೆನ ಭಾವಿ, ಅರಸನಭಾವಿ, ಪ್ರಧಾನಭಾವಿ, ಮತ್ತು ದೇವರಾಯ ಸಮುದ್ರ ಇವು ಮುಖ್ಯವಾದವು. ಇವು ಇಂದಿಗೂ ಬಳಕೆಯಲ್ಲಿವೆ. ಕೋಟೆಯೊಳಗೇ ಮುಮ್ಮಡಿ ಚಿಕ್ಕಪ್ಪಗೌಡನು ಕಟ್ಟಿಸಿದ ಗೋಪಾಲಕೃಷ್ಣ ದೇವಸ್ಥಾನ ಮತ್ತು ಆಂಜನೇಯ ದೇವಸ್ಥಾನಗಳಿವೆ.[೧೨೩]

ಈ ಅರಸರು ಅನೇಕ ಗ್ರಾಮಗಳನ್ನು ನಿರ್ಮಿಸಿದರು. ಬಿಜ್ಜಾವರದ ರಾಜ ಚಿಕ್ಕಪ್ಪಗೌಡನು ಕ್ರಿ.ಶ. ೧೫೫೪ರಲ್ಲಿ ಸಿದ್ಧಾಪುರ ಗ್ರಾಮವನ್ನು ಕಟ್ಟಿಸಿದುದಕ್ಕೆ ಆಧಾರವಿದೆ.[೧೨೪] ಮಹಾನಾಡು ಪ್ರಭುಗಳ ಕಲೆ ಮತ್ತು ವಾಸ್ತುಶಿಲ್ಪವು ಸರಳತೆ, ಸೌಂದರ್ಯ, ಉಪಯುಕ್ತತೆ ಮತ್ತು ವೈವಿಧ್ಯಗಳನ್ನು ಹೊಂದಿದ್ದುವು ಎಂದು ಹೇಳಬಹುದು.

-ಡಾ. ಡಿ.ಎಸ್ ಯೋಗೀಶ್ವರಪ್ಪ

ಹಾಗಲವಾಡಿಯ ಪಾಳೆಯಗಾರರು

ಇಂದು ಹಾಗಲವಾಡಿಯು ತುಮಕೂರು ಜಿಲ್ಲೆ ಗುಬ್ಬಿ ತಾಲೂಕಿನ ಪ್ರಸಿದ್ಧ ಹೋಬಳಿ ಕೇಂದ್ರ. ಈ ಸ್ಥಳದ ಪಾಳೆಯಗಾರರು ವಿಜಯನಗರದ ಕಾಲದಲ್ಲಿ ಮತ್ತು ವಿಜಯನಗರಾನಂತರದ ಅವಧಿಯಲ್ಲಿ ಸ್ವತಂತ್ರವಾದ ಸಾಮಂತ ರಾಜ್ಯವನ್ನು ಕಟ್ಟಿ, ರಾಜಧಾನಿಯನ್ನು ಚಿಕ್ಕನಾಯಕನಹಳ್ಳಿಯಿಂದ ಹಾಗಲವಾಡಿಗೆ ವರ್ಗಾಯಿಸಿದರು. ಈ ಸ್ಥಳದಲ್ಲಿದ್ದುಕೊಂಡು ಅವರು ವಿಶಾಲವಾದ ಭೂ ಪ್ರದೇಶವನ್ನು ಆಳಿ, ಕರ್ನಾಟಕದ ಸಾಂಸ್ಕೃತಿಕ ಬೆಳವಣಿಗೆಗೆ ತಮ್ಮದೇ ಆದ ರೀತಿಯಲ್ಲಿ ಕೊಡುಗೆಯನ್ನು ನೀಡಿದರು. ಹಾಗಲವಾಡಿ ಪಾಳೆಯಗಾರರ ಇತಿಹಾಸವನ್ನು ರಚಿಸಲು ಆಧಾರಗಳಿಗೆ ಕೊರತೆಯಿಲ್ಲ, ಆ ವಂಶದವರು ಇನ್ನೂ ಇಟ್ಟುಕೊಂಡಿರುವ ಕಾಗದದ ಕಡಿತಗಳಿವೆ, ಎಂ. ಎಸ್. ಪುಟ್ಟಣ್ಣನವರು ಅವರನ್ನು ಕುರಿತು ಬರೆದ ಒಂದು ಸಣ್ಣ ಪುಸ್ತಕವಿದೆ; ಅವರ ಶಿಲಾಶಾಸನಗಳಿವೆ, ಕರ್ನಾಟಕ ಪುರಾತತ್ವ ಇಲಾಖೆಯ ವರದಿಗಳಿವೆ; ಜೊತೆಗೆ ಕಂಠೀರವ ನರಸರಾಜ ವಿಜಯ, ಮುದ್ದುವೀರಸ್ವಾಮಿ ಸ್ವರವಚನ, ಮುದ್ದುವೀರ ತಾರಾವಳಿ, ಬುಕನನ್ ಪ್ರವಾಸ ವರದಿಗಳು,

ಮತ್ತು ಹಾಗಲವಾಡಿ ಹಾಗೂ ಚಿಕ್ಕನಾಯಕನಹಳ್ಳಿಗಳಲ್ಲಿ ಉಳಿದಿರುವ ಪಾಳೆಯಗಾರರಿಗೆ ಸಂಬಂಧಿಸಿದ ಸ್ಮಾರಕಗಳು.

ಎಂ.ಎಸ್. ಪುಟ್ಟಣ್ಣನವರು 'ಹಾಗಲವಾಡಿಯ ಪಾಳೆಯಗಾರರು' ಎಂಬ ತಮ್ಮ ಕೃತಿಯ ಪೀಠಿಕೆಯಲ್ಲಿ ಈ ಸಂಸ್ಥಾನವನ್ನು ಕುರಿತು ಹೀಗೆ ಬರೆದಿದ್ದಾರೆ: ''ಈ ಸಂಸ್ಥಾನವು ಇಂದಿನ ತುಮಕೂರು ಜಿಲ್ಲೆಯ ಬಹುಭಾಗವನ್ನು ಒಳಗೊಂಡಿತ್ತು. ಆಗಲೂ ಅದು ಅಷ್ಟೊಂದು ಪ್ರಸಿದ್ಧವೇನೂ ಆಗಿರಲಿಲ್ಲ''.[೧೨೪] ಕರ್ನಾಟಕದ ಇತರ ಅನೇಕ ಮನೆತನಗಳಿಗೆ ಹೋಲಿಸಿದರೆ ಹೀಗೆ ಭಾವಿಸುವುದು ಸಹಜವೇ, ಹಾಗಲವಾಡಿಯ ವೀರಶೈವ ಪಾಳೆಯಗಾರರು ತಮಗಿದ್ದ ಅಲ್ಪ ಸಂಪನ್ಮೂಲದಿಂದ ವೈರಿಗಳ ದಾಳಿಯಿಂದ ತಮ್ಮ ಸಣ್ಣ ರಾಜ್ಯವನ್ನು ರಕ್ಷಿಸುತ್ತಿದ್ದರು. ಹಾಗಲವಾಡಿ ಸಂಸ್ಥಾನದ ಸಂರಕ್ಷಣೆಯು ಸುಲಭವಾದ ಕೆಲಸವೇನೂ ಆಗಿರಲಿಲ್ಲ. ೧೭ ಮತ್ತು ೧೮ನೆಯ ಶತಮಾನದಲ್ಲಿನ ದಕ್ಷಿಣ ಭಾರತದ ಪರಿಸ್ಥಿತಿಯನ್ನು ಗಮನಿಸಿದರೆ ಇದು ತಿಳಿಯುತ್ತದೆ. ಆದರೂ ಹಾಗಲವಾಡಿಯ ೧೫ ಪಾಳೆಯಗಾರರು ಕ್ರಿ.ಶ. ೧೫೭೮ರಿಂದ ೧೭೭೯ವರೆಗೆ ತಮ್ಮನ್ನೂ ತಮ್ಮ ಪುಟ್ಟ ರಾಜ್ಯವನ್ನೂ ಕಾಪಾಡಿಕೊಂಡು ಮುನ್ನೂರು ವರ್ಷ ಆಳಿದರು. ಕರ್ನಾಟಕದ ಇತಿಹಾಸದಲ್ಲಿ ಅನೇಕಾನೇಕ ಏಳು ಬೀಳುಗಳಿದ್ದರೂ ಇಷ್ಟು ಸಣ್ಣ ಸಂಸ್ಥಾನವೊಂದು ಅಷ್ಟು ದೀರ್ಘಕಾಲ ಹೇಗೆ ಸುರಕ್ಷಿತ ಅಸ್ತಿತ್ವವನ್ನು ಪಡೆದಿದ್ದಿತು ಎನ್ನುವುದೇ ಆಶ್ಚರ್ಯದ ಸಂಗತಿಯಾಗಿದೆ.

ವಿಜಯನಗರದ ಚಕ್ರವರ್ತಿಗಳ ಅಧೀನದಲ್ಲಿ ಈ ಪಾಳೆಯಗಾರರು ತಮ್ಮ ಪುಟ್ಟರಾಜ್ಯವನ್ನು ಆಳುತ್ತಾ ಪ್ರಸಿದ್ಧರಾದರು. ಹಾಗಲವಾಡಿಯ ಪೂರ್ವಕ್ಕೆ ಮದ್ದಗಿರಿ ರಾಜ್ಯ ಮತ್ತು ಕೆಂಪೇಗೌಡರ ರಾಜ್ಯಗಳಿದ್ದುವು; ನೈರುತ್ಯಕ್ಕೆ ಚನ್ನಪಟ್ಟಣದ ಜಗದೇವರಾಯನ ರಾಜ್ಯವಿದ್ದಿತು; ಉತ್ತರಕ್ಕೆ ಸೀರ್ಯ ಮತ್ತು ಚಿತ್ರದುರ್ಗಗಳಿದ್ದುವು. ಇವುಗಳ ನಡುವೆ ಇದ್ದ ಪ್ರದೇಶವೇ ಹಾಗಲವಾಡಿ ರಾಜ್ಯ.[೧೨೫]

ಹಾಗಲವಾಡಿ ರಾಜ್ಯವನ್ನು ಸ್ಥಾಪಿಸಿದ ಮೊದಲನೆಯ ಪಾಳೆಯಗಾರ ಎರಿಮಡಣಾಯಕ. ಅವನು ತುಮ್ಮಲ ಎಂಬ ಸ್ಥಳದಿಂದ ಬಂದು ವನವಸದುರ್ಗ ಎಂಬ ಸ್ಥಳದಲ್ಲಿ ತನ್ನ ಪ್ರಭುತ್ವವನ್ನು ಸ್ಥಾಪಿಸಿದನು.[೧೨೬] ತುಮ್ಮಲವು ಆಂಧ್ರದ ಅನಂತಪುರ ಜಿಲ್ಲೆಯ ಆದೋನಿ ತಾಲೂಕಿನ ಒಂದು ಸ್ಥಳ. ಸಂಶೋಧಕರು ಹೇಳುವಂತೆ ಇದಕ್ಕೆ ಚಿನ್ನ ತುಮ್ಮಲು ಎಂದೂ ಹೆಸರಿತ್ತು.[೧೨೭] ಹಾಗಾಗಿ ಹಾಗಲವಾಡಿ ಸಂಸ್ಥಾನದ ಮೊದಲ ಪಾಳೆಯಗಾರರು ಆಂಧ್ರ ಅಥವಾ ತೆಲುಗು ಮೂಲದವರು. ತನ್ನ ಪ್ರದೇಶದಲ್ಲಿ ಒಂದೆಡೆ ನೆಲದಲ್ಲಿ ಸಿಕ್ಕಿದ ನಿಧಿಯಿಂದ ಎರಿಮಡಣಾಯಕನು ಸಣ್ಣ ರಾಜ್ಯವನ್ನು ಕಟ್ಟಿದನು. ಸುದೀರ್ಘ ಕಾಲ ರಾಜ್ಯಭಾರ ಮಾಡಿ ಮೃತನಾದನು.

ಎರಿಮಡಣಾಯಕನ ಮರಣಾನಂತರ ಅವನ ಮಗ ಸಾಲಿನಾಯಕನು ಸಿಂಹಸಾನವನ್ನೇರಿದನು. ವನವಸದುರ್ಗದ ಬಳಿ ಎರಿಕಟ್ಟೆ ಎಂಬ ಹಳ್ಳಿಯನ್ನು ಸ್ಥಾಪಿಸಿ ಅದನ್ನು ತನ್ನ ಆಡಳಿತ ಕೇಂದ್ರವನ್ನಾಗಿ ಮಾಡಿಕೊಂಡನು. ಅವನು ವಿಜಯನಗರದ ಕೃಷ್ಣದೇವರಾಯನ ಸಮಕಾಲೀನನಾಗಿದ್ದನು. ೧೫೩೦ರಲ್ಲಿ ಕೃಷ್ಣದೇವರಾಯನ ಮರಣಾನಂತರ ಸಿಂಹಾಸನಕ್ಕಾಗಿ ಅಂತಃಕಲಹಗಳುಂಟಾದಾಗ ಪೆನುಗೊಂಡೆಯ ಅರಸನು ಸಾಲಿನಾಯಕನ ನೆರವನ್ನು ಪಡೆದನು. ಹನ್ನೆರಡು ಆನೆಗಳು, ಬೇಕಾದಷ್ಟು ಕೊಳ್ಳೆಯೊಂದಿಗೆ ಅವನು ಎರಿಕಟ್ಟೆಗೆ ಹಿಂದಿರುಗಿದನು.[೧೨೮] ಈ ನಿಧಿಯಿಂದ ಅವನು ಬಲವಾದ ಸೈನ್ಯವನ್ನು ಕಟ್ಟಿ ಹೊನ್ನವಳ್ಳಿ, ತುರುವೇಕೆರೆ ಮತ್ತು ನೊಣವಿನಕೆರೆಗಳನ್ನು ಗೆದ್ದನು.[೧೨೯] ಹೀಗೆ ವಿಜಯನಗರ ಸಾಮ್ರಾಜ್ಯಕ್ಕೆ ಸೇರಿಕೊಂಡಿದ್ದ ಹಾಗಲವಾಡಿ ಸಂಸ್ಥಾನವು ಸಾಮ್ರಾಜ್ಯದ ಪತನದ ನಂತರ ಸ್ವತಂತ್ರವಾಯಿತು.

ಸಾಲಿನಾಯಕನಾದ ಮೇಲೆ ಅವನ ಮಗ ಭೈರವನಾಯಕನು ಕ್ರಿ.ಶ. ೧೫೫೫ರಲ್ಲಿ ಮೂರನೆಯ ಪಾಳೆಯಗಾರನಾದನು. ರಾಜನಾದೊಡನೆ ಶೆಟ್ಟಿಕೆರೆಯ ಮೇಲೆ ಆಕ್ರಮಣ ಮಾಡಿ ಅದನ್ನು ಗೆದ್ದನು. ಆಮೇಲೆ ಚಿಕ್ಕನಾಯಕನಹಳ್ಳಿ ಎಂಬ ಊರನ್ನು ಕಟ್ಟಿ ಅದರ ಸುತ್ತ ಒಂದು ಕೋಟೆಯನ್ನು ಕಟ್ಟಿಸಿದನು. ಅದನ್ನು ತನ್ನ

ರಾಜಧಾನಿಯನ್ನಾಗಿ ಮಾಡಿಕೊಂಡನು.[೧೦] ಕಂಡಿಕೆರೆಯನ್ನು ಗೆದ್ದು ಅಲ್ಲೂ ಒಂದು ಕೋಟೆಯನ್ನು ಕಟ್ಟಿಸಿದನು.[೧೧] ಅವನ ಕಾಲದ ಮುಖ್ಯವಾದ ಘಟನೆ ಅವನು ವೀರಶೈವನಾಗಿ ಮತಾಂತರಗೊಂಡದ್ದು. ಇದಕ್ಕೆ ಐತಿಹಾಸಿಕ ಆಧಾರಗಳಿವೆ. ಮಕ್ಕಳಿಲ್ಲದ್ದರಿಂದ ಅವನು ಸಿದ್ಧರಾಮೇಶ್ವರನನ್ನು ಭಕ್ತಿಯಿಂದ ಪೂಜಿಸಿದನು, ಮಗನನ್ನು ಪಡೆದನು. ಮಗುವು ಪ್ರಜ್ಞಾಹೀನವಾಗಿದ್ದಾಗ ಒಬ್ಬ ಹಿರಿಯ ಜಂಗಮನು ಬಂದು ಮಗುವಿಗೆ ಜಂಗಮದೀಕ್ಷೆ ಕೊಡಬೇಕೆಂದು ಸೂಚಿಸಿದನು. ಮಗುವು ಬದುಕಿಕೊಂಡಿತು. ಐತಿಹಾಸಿಕ ದಾಖಲೆಗಳ ಪ್ರಕಾರ ಪಾಳೆಯಗಾರನು ಮಗುವಿಗೆ, ವಯಸ್ಸಾದ ಜಂಗಮನ ಹರಕೆಯಿಂದ ಬದುಕಿದ್ದರಿಂದಾಗಿ, ಮುದಿಯಪ್ಪ ಎಂದು ನಾಮಕರಣ ಮಾಡಿದನು. ಆಮೇಲೆ ಹಾಗಲವಾಡಿ ವರ್ಗವೆಲ್ಲವೂ ವೀರಶೈವರಾದರು, ರಾಜ್ಯವೂ ವೀರಶೈವ ರಾಜ್ಯವೆನಿಸಿತು.

ಬೈರಪ್ಪನಾಯಕನ ನಂತರ ಕ್ರಿ.ಶ. ೧೫೭೮ರಲ್ಲಿ ಅವನ ಮಗ ಮುದಿಯಪ್ಪನಾಯಕನು ಪಟ್ಟಕ್ಕೆ ಬಂದನು. ಇವನ ಕಾಲದಲ್ಲಿ ರಾಜ್ಯವು ವಿಸ್ತಾರಗೊಂಡಿತು. ಆನೆಗೊಂದಿಯ ಕರಿಯಪ್ಪನಾಯಕನ ಮಕ್ಕಳು ರಾಜರನ್ನೇ ಅಪಮಾನಿಸುತ್ತಾ ಜನರಿಗೆ ಹಿಂಸೆ, ಕಿರುಕುಳ ಕೊಡುತ್ತಿದ್ದರು. ಆದ್ದರಿಂದ ಮುದಿಯಪ್ಪನಾಯಕನು ಅವರ ಮೇಲೆ ಧಾಳಿಮಾಡಿ ಯುದ್ಧದಲ್ಲಿ ಸೋಲಿಸಿದನು. ಹಾಗಲದಹಳ್ಳಿ, ಹೊಸಕೆರೆ, ಅಳಿಲು ಘಟ್ಟ, ನಿಟ್ಟೂರು, ತ್ಯಾಗಟೂರು, ಕಾದಲಗೆರೆ ಮುಂತಾದ ಸ್ಥಳಗಳನ್ನು ತನ್ನ ಸಂಸ್ಥಾನಕ್ಕೆ ಸೇರಿಸಿಕೊಂಡನು. ಅವನ ರಾಜ್ಯವು ಬಹುವಾಗಿ ವಿಸ್ತಾರಗೊಂಡಿತು. ಹಾಗಲದಹಳ್ಳಿಗೆ ಒಂದು ಕೋಟೆಯನ್ನು ಕಟ್ಟಿ, ಅದನ್ನು ತನ್ನ ಎರಡನೆಯ ರಾಜಧಾನಿಯನ್ನಾಗಿ ಮಾಡಿಕೊಂಡನು. ಧೈರ್ಯಶಾಲಿಯಾದ ರಾಜನಾಗಿದ್ದುದು ಮಾತ್ರವಲ್ಲದೆ ಅವನು ಕವಿ ಕಲಾವಿದರ ಪೋಷಕನೂ ಆಗಿದ್ದನು. ಸೋಸಲೆ ರೇವಣಾರಾಧ್ಯನು ಅವನ ಆಸ್ಥಾನದಲ್ಲಿದ್ದ ಒಬ್ಬ ವೀರಶೈವ ಕವಿ.[೧೨] ಅವನು ಅನೇಕ ಕೃತಿಗಳನ್ನು ರಚಿಸಿದ್ದಾನೆ.

ಮುದಿಯಪ್ಪನಾಯಕನ ಮರಣಾನಂತರ ೨ನೇ ಬೈರಪ್ಪನಾಯಕ ಸಿಂಹಾಸನವನ್ನೇರಿದನು. ಇವನ ಕಾಲದಲ್ಲಿ ಕರ್ನಾಟಕದಲ್ಲಿ ಅನೇಕ ರಾಜಕೀಯ ಬದಲಾವಣೆಗಳು ಸಂಭವಿಸಿದುವು. ಮೈಸೂರಿನ ಒಡೆಯರು ತಮ್ಮ ರಾಜ್ಯವನ್ನು ವಿಸ್ತಾರಗೊಳಿಸಿಕೊಳ್ಳುವ ಹಾದಿಯಲ್ಲಿ ಚಿಕ್ಕನಾಯಕನಹಳ್ಳಿಯ ಪಾಳೆಯಗಾರರನ್ನು ಆಕ್ರಮಿಸಿದರು. ಕ್ರಿ.ಶ. ೧೬೩೧ರಲ್ಲಿ ಮೈಸೂರಿನ ಚಾಮರಾಜ ಒಡೆಯನು ಚಿಕ್ಕನಾಯಕನಹಳ್ಳಿಯ ಪರಮರಾಪುತ ಗುರುವಣ್ಣನ ಮೇಲೆ ಆಕ್ರಮಣ ಮಾಡಿದನು. ಗುರುವಣ್ಣನು ಯುದ್ಧದಲ್ಲಿ ಗಾಯಗೊಂಡು ಚಿಕ್ಕನಾಯಕನಹಳ್ಳಿಗೆ ಓಡಿಹೋದನು.[೧೩] ಮೈಸೂರಿನ ಸೇನೆಯು ಪಾಳೆಯಗಾರರ ಸೈನ್ಯವನ್ನು ಬೆನ್ನಟ್ಟಿತು. ಆಗ ಬೈರಪ್ಪನಾಯಕನು ಚಾಮರಾಜಒಡೆಯನಿಗೆ ಶರಣಾಗತನಾದನು. ಬೇಕಾದಷ್ಟು ಹಣವನ್ನೂ ರಾಮಲಿಂಗ ಎಂಬ ಒಂದು ಆನೆಯನ್ನೂ ಚಾಮರಾಜ ಒಡೆಯನಿಗೆ ಕಾಣಿಕೆಯಾಗಿ ಕೊಟ್ಟು ಸಂಧಿಯನ್ನು ಮಾಡಿಕೊಂಡನು.[೧೪] ಅದಿಲ್ ಶಾಹನ ನಂತರ ಬಿಜಾಪುರದ ರಾಜರು ದೆಹಲಿಯ ಮುಗಲ್ ಚಕ್ರವರ್ತಿಗಳೊಂದಿಗೆ ಒಪ್ಪಂದ ಮಾಡಿಕೊಂಡಿದ್ದರು. ತಮ್ಮ ಅಧೀನತೆಯನ್ನು ಒಪ್ಪಿಕೊಂಡು ದಕ್ಷಿಣದ ಕಡೆಗೆ ತಮ್ಮ ರಾಜ್ಯವನ್ನು ವಿಸ್ತಾರಪಡಿಸಿಕೊಳ್ಳಲು ಹೊರಟರು. ಮಹಮದ್ ಅದಿಲ್ ಶಾಹನು ತನ್ನ ಸೇನಾಪತಿ ರಣದುಲ್ಲಾಖಾನನನ್ನು ಶ್ರೀಮಂತವಾಗಿದ್ದ ಮೈಸೂರು ರಾಜ್ಯದ ಮೇಲೆ ದಂಡೆತ್ತಿ ಹೋಗುವಂತೆ ಹೇಳಿ ಕಳುಹಿಸಿದನು. ಯುದ್ಧದಲ್ಲಿ ರಣದುಲ್ಲಾಖಾನನು ಸೋತನು. ಬಿಜಾಪುರಕ್ಕೆ ಹಿಂದಿರುಗುವ ದಾರಿಯಲ್ಲಿ ಚಿಕ್ಕನಾಯಕನಹಳ್ಳಿಯಲ್ಲಿ ಶಿಬಿರವನ್ನು ಹೂಡಿದ್ದನು. ತನಗೆ ಒಂದು ಪಲ್ಲಕ್ಕಿಯನ್ನು ಅದನ್ನು ಹೊರಲು ಆಳುಗಳನ್ನೂ ಕಳಿಸಿಕೊಡಬೇಕೆಂದು ಪಾಳೆಯಗಾರನಿಗೆ ಖಾನನು ಆದೇಶ ಕಳಿಸಿದನು. ಆದರೆ ಪಾಳೆಯಗಾರ ಬೈರಪ್ಪನಾಯಕನು ಅವನ ಆದೇಶವನ್ನು ಪಾಲಿಸಲಿಲ್ಲ. ''ಮೈಸೂರಿನ ರಾಜರು ನಮ್ಮ ಮಿತ್ರರು. ಆದ್ದರಿಂದ ಮೈಸೂರು ರಾಜರ ಶತ್ರುಗಳು ನಮಗೂ ಶತ್ರುಗಳು. ನೀವು ನಮ್ಮ ಮಿತ್ರರ ಮೇಲೆ ಆಕ್ರಮಣ ಮಾಡಿದ್ದೀರಿ. ಆದ್ದರಿಂದ ನಮ್ಮ ವೈರಿಗಳಾಗಿದ್ದೀರಿ.

ನಿಮಗೆ ಯಾವುದೇ ಬಗೆಯ ಸಹಾಯವನ್ನೂ ನಾವು ನೀಡುವುದಿಲ್ಲ.[೧೩೫] ಈ ಉತ್ತರ ಬಂದಾಗ ರಣದುಲ್ಲಾ ಖಾನನು ಕ್ರೋಧತಪ್ತನಾದನು. ಆಗ ಬಿಜಾಪುರಕ್ಕೆ ಹಿಂದಿರುಗಿಹೋಗಿ ಮತ್ತೆ ಭಾರೀ ಸೈನ್ಯದೊಂದಿಗೆ ಬಂದು ಬಸವಪಟ್ಟಣವನ್ನು ಜಯಿಸಿದನು. ಆಮೇಲೆ ಚಿಕ್ಕನಾಯಕನ ಹಳ್ಳಿಯ ಪಾಳೆಯಗಾರ ಬೈರಪ್ಪನಾಯಕನನ್ನೂ ಸೋಲಿಸಿದನು.[೧೩೬] ಸೋತ ನಾಯಕನು ಖಾನನಿಗೆ ೨/ ಭಾಗ ರಾಜ್ಯವನ್ನು ಕೊಟ್ಟು ಚಿಕ್ಕನಾಯಕನಹಳ್ಳಿಯನ್ನೂ ಒಪ್ಪಿಸಿ ಸಂಧಿ ಮಾಡಿಕೊಂಡನು.[೧೩೭] ಈ ಪರಾಭವದ ನಂತರ ಬೈರಪ್ಪನಾಯಕನು ತನ್ನ ಕುಟುಂಬ ಮತ್ತು ಮಿತ್ರರೊಂದಿಗೆ ಹಾಗಲವಾಡಿಗೆ ಹೋಗಿ ಅಲ್ಲಿಂದ ಆಳತೊಡಗಿದನು. ಇಲ್ಲಿಂದ ಮುಂದಕ್ಕೆ ಹಾಗಲವಾಡಿಯೇ ನಾಯಕರ ರಾಜಧಾನಿಯಾಯಿತು. ಬೈರಪ್ಪನಾಯಕನ ಅನಂತರ ಚನ್ನಬಸಪ್ಪನಾಯಕನೂ ರಾಮಪ್ಪನಾಯಕನೂ ಆಳಿದರು.

೨ನೇ ಚನ್ನಬಸಪ್ಪನಾಯಕನು ತಂದೆ ರಾಮಪ್ಪನಾಯಕನು ನಿಧನ ಹೊಂದಿದ ಮೇಲೆ ಕ್ರಿ.ಶ. ೧೭೭೯ರಲ್ಲಿ ಹಾಗಲವಾಡಿಯ ಸಿಂಹಾಸನವನ್ನೇರಿದನು. ಈ ಸಮಯದಲ್ಲಿ ಅವನು ಚಿತ್ರದುರ್ಗದ ಪಾಳೆಯಗಾರರೊಂದಿಗೆ ಯುದ್ಧ ಮಾಡಬೇಕಾಯಿತು. ಎಷ್ಟು ಪ್ರಯತ್ನಿಸಿದರೂ ಚಿತ್ರದುರ್ಗದ ನಾಯಕರಿಗೆ ಹರತಿಕೋಟೆಯನ್ನು ತಮ್ಮ ಸಂಸ್ಥಾನಕ್ಕೆ ಸೇರಿಸಿಕೊಳ್ಳಲು ಸಾಧ್ಯವಾಗಿರಲಿಲ್ಲ. ಭಾರೀ ಸೈನ್ಯದೊಂದಿಗೆ ಹೋಗಿ ೨ನೇ ಚನ್ನಬಸಪ್ಪನಾಯಕನು ಚಿತ್ರದುರ್ಗದ ಸೈನಿಕರನ್ನು ಸೋಲಿಸಿ ಹರತಿಕೋಟೆಯನ್ನು ವಶಪಡಿಸಿಕೊಂಡನು. ಇದರಿಂದ ಕುಪಿತರಾದ ಚಿತ್ರದುರ್ಗದ ಪಾಳೆಯಗಾರರು ಮತ್ತೆ ಯುದ್ಧಕ್ಕೆ ಬಂದರು. ೨ನೇ ಚನ್ನಬಸಪ್ಪನಾಯಕನ ಸೈನ್ಯವನ್ನು ಸೋಲಿಸಿ ಹರತಿಕೋಟೆಯನ್ನು ತಮ್ಮ ಕೈವಶಪಡಿಸಿಕೊಂಡರು.[೧೩೮]

೨ನೇ ಚನ್ನಬಸಪ್ಪನಾಯಕನು ಮೃತನಾದ ಮೇಲೆ ಅವನ ಮಗ ೨ನೇ ಮುದಿಯಪ್ಪನಾಯಕ ಹಾಗಲವಾಡಿಯ ಅರಸನಾದನು. ಇವನ ಆಳ್ವಿಕೆಯಲ್ಲಿ ಹಾಗಲವಾಡಿಯು ವೈಭವ, ಸಂಪತ್ಸಮೃದ್ಧಿಗಳ ಶಿಖರವನ್ನು ತಲುಪಿತು. ಅದು ಹಾಗಲವಾಡಿ ಸಂಸ್ಥಾನದ ಸುವರ್ಣಯುಗವೆಂದು ಹೇಳಬಹುದು. ಆ ಕಾಲದಲ್ಲಿ ಯಾವ ಯುದ್ಧವೂ ನಡೆಯಲಿಲ್ಲ, ಅವನ ಸಾಮಂತ ಪದವಿಯು ಆದರ್ಶ ರಾಜ್ಯಭಾರದಿಂದಾಗಿ ಸುಪ್ರಸಿದ್ಧವಾಯಿತು. ಕಲಾವಿದರು ಮತ್ತು ವಿದ್ವಾಂಸರನ್ನು ಅವನು ಬಹುವಾಗಿ ಆದರಿಸಿ ಪೋಷಿಸಿದನು. ಧರ್ಮದ ದಾರಿಯಲ್ಲಿ ನಡೆದು ರಾಜ್ಯವಾಳಿದನು. ಬೆಂಗಳೂರಿನಿಂದ ಮುದ್ದುವೀರಸ್ವಾಮಿ ಎಂಬ ದಾರ್ಶನಿಕನನ್ನು ಕರೆಸಿಕೊಂಡು ಅವನ ಧಾರ್ಮಿಕ ಉಪನ್ಯಾಸಗಳನ್ನು ಕೇಳಿದನು.[೧೩೯] ಬ್ರಾಹ್ಮಣರು ಮತ್ತು ಜಂಗಮರಿಗೆ ಉದಾರವಾಗಿ ನೆರವು ನೀಡಿದನು. ಸೆರೆಯಲ್ಲಿದ್ದ ಬಂಧಿಗಳನ್ನು ಸಹಾನುಭೂತಿಯಿಂದ ಕರುಣೆಯಿಂದ ನಡೆಸಿಕೊಂಡನು. ದೀರ್ಘಕಾಲ ರಾಜ್ಯವಾಳಿ ಆಮೇಲೆ ಸನ್ಯಾಸಿಯಾದನು. ತನ್ನ ಮಗನಿಗೆ ಪಟ್ಟ ಕಟ್ಟಿ, ಕರ್ನಾಟಕಾದ್ಯಂತ ಧರ್ಮವನ್ನು ಪ್ರಚಾರ ಮಾಡುತ್ತಾ ಆಚರಿಸುತ್ತಾ ಪ್ರವಾಸ ಮಾಡಿದನು. ಪಕ್ವವಾದ ವಯಸ್ಸಿನಲ್ಲಿ ಈಶ್ವರನ ಪಾದಗಳನ್ನು ಸೇರಿಕೊಂಡನು.

೨ನೇ ಮುದಿಯಪ್ಪನಾಯಕನ ಮರಣಾನಂತರ ಅವನ ಮಗ ಮುದ್ದವೀರನಾಯಕನು ಪಾಳೆಯಗಾರನಾದನು. ಅವನು ಮೊಗಲ್ ಸೇನಾಪತಿ ದಿಲಾವರ್‌ಖಾನನೊಂದಿಗೆ ಯುದ್ಧ ಮಾಡಬೇಕಾಯಿತು. ಯುದ್ಧದಲ್ಲಿ ದಿಲಾವರ್‌ಖಾನನನ್ನು ಸೋಲಿಸಿ ಅವನಿಂದ 'ರಾಜಾ ಜಂಗ್‌ಬಹದ್ದೂರ್' ಎಂಬ ಬಿರುದನ್ನು ಪಡೆದನು. ಅವನ ಪರಾಕ್ರಮವನ್ನು ಮೆಚ್ಚಿ ದಿಲಾವರ್‌ಖಾನ್ ಈ ಬಿರುದು ಮಾತ್ರವಲ್ಲದೆ ೧೨ ಹಳ್ಳಿಗಳನ್ನು ಉಡುಗೊರೆಯಾಗಿ ಕೊಟ್ಟನು.[೧೪೦]

ಹೀಗೆ ಏಳುಬೀಳುಗಳಿಂದ ಮುನ್ನಡೆದ ಹಾಗಲವಾಡಿ ಸಂಸ್ಥಾನವು ಕಾಲಕ್ರಮದಲ್ಲಿ ಮೈಸೂರಿನ ಸರ್ವಾಧಿಕಾರಿ ಹೈದರಲಿಯಿಂದ ಸಂಪೂರ್ಣವಾಗಿ ಪರಾಭವಗೊಂಡಿತು. ಈ ಘಟನೆಗೆ ಮುಂಚೆ ಮೈಸೂರು

ಒಡೆಯರಿಗೂ ಹಾಗಲವಾಡಿ ಪಾಳೆಯಗಾರರಿಗೂ ನಡುವೆ ಆತ್ಮೀಯ ಮೈತ್ರಿಯುತ ಸಂಬಂಧವಿದ್ದಿತು. ಚಿಕ್ಕದೇವರಾಜ ಒಡೆಯನ ಆಳಿಕೆಯಲ್ಲಿ ಅನೇಕ ಸಂಸ್ಥಾನಗಳನ್ನು ಜಯಿಸಲಾಯಿತು. ಹಾಗಲವಾಡಿ ಸಂಸ್ಥಾನದ ಕೆಲವು ಭಾಗಗಳೂ ಮೈಸೂರಿಗೆ ಕೈವಶವಾದುವು.[೧೪೦] ಆಗಲೂ ಮೈಸೂರಿನ ರಾಜ್ಯ ವಿಸ್ತರಣ ನೀತಿಯಿಂದ ಹಾಗಲವಾಡಿ ಸಂಸ್ಥಾನಕ್ಕೆ ಹೆಚ್ಚಿನ ಹಾನಿಯೇನೂ ಆಗಿರಲಿಲ್ಲ. ಹೈದರಲಿಯು ಕ್ರಿ.ಶ. ೧೭೬೧ರಲ್ಲಿ ಮೈಸೂರು ರಾಜ್ಯದ ಸರ್ವಾಧಿಕಾರಿಯಾದನು. ಅವನ ಗುರಿಯೇ ರಾಜ್ಯವನ್ನು ದೊಡ್ಡದಾಗಿ ವಿಸ್ತರಿಸುವುದಾಗಿತ್ತು. ಆದ್ದರಿಂದ ಒಂದೊಂದಾಗಿ ಸಂಸ್ಥಾನಗಳನ್ನು ಜಯಿಸುತ್ತಾ ಬಂದನು. ಅವನ ಕಾಲದಲ್ಲಿ ಹಾಗಲವಾಡಿಯು ಅವನ ಕುತಂತ್ರಕ್ಕೆ ಬಲಿಯಾಯಿತು.

ಮುದ್ದವೀರನಾಯಕನ ನಂತರ, ಕರಿಚನ್ನಬಸಪ್ಪನಾಯಕ, ಅವನ ನಂತರ ಪ್ರಸನ್ನ ರಾಮಪ್ಪನಾಯಕ ಕ್ರಮವಾಗಿ ಹಾಗಲವಾಡಿಯ ಪಾಳೆಯಗಾರರಾಗಿ ಆಳಿದರು. ೩ನೇ ಚನ್ನಬಸಪ್ಪನಾಯಕನು ಪಾಳೆಯಗಾರನಾದಾಗ ಹೈದರಲಿಯು ಅವನನ್ನು ಮೈಸೂರಿಗೆ ಕರೆಸಿಕೊಂಡು ೫೦,೦೦೦ ರೂಪಾಯಿಗಳನ್ನು ಕಾಣಿಕೆಯಾಗಿ ಕೊಡಬೇಕೆಂದು ಒತ್ತಾಯ ಪಡಿಸಿದನು. ಪಾಳೆಗಾರನು ೧೮,೦೦೦ ರೂಪಾಯಿ ಕೊಡಲು ಒಪ್ಪಿ, ಹಾಗಲವಾಡಿಗೆ ಹಿಂದಿರುಗಿದನು. ಆದರೆ ಪರಿಸ್ಥಿತಿ ವಶವಾಗಿ ಆ ಹಣವನ್ನು ಹೈದರಲಿಗೆ ಕೊಡಲಾರದೆ ಹೋದನು. ಇದರಿಂದ ಹೈದರಲಿಗೆ ಕೋಪ ಬಂದು ಅವನನ್ನು ಶ್ರೀರಂಗಪಟ್ಟಣಕ್ಕೆ ಕರೆಸಿಕೊಂಡು, ಬಂಧಿಸಿ ಸೆರೆಯಲ್ಲಿಟ್ಟನು. ಹಣವನ್ನು ತರಲು ತನ್ನ ವಕೀಲ ನಾರಣಪ್ಪನೆಂಬುವನನ್ನು ಹಾಗಲವಾಡಿಗೆ ಕಳಿಸಿಕೊಟ್ಟನು. ಚನ್ನಬಸಪ್ಪನಾಯಕನು ಕಾರಾಗೃಹದಲ್ಲೇ ಕ್ರಿ.ಶ. ೧೭೭೫ರಲ್ಲಿ ಗತಿಸಿದನು. ಅವನ ಮಗ ೩ನೇ ಮುದಿಯಪ್ಪನಾಯಕನನ್ನು ಮುಂದಿನ ಪಾಳೆಯಗಾರನನ್ನಾಗಿ ಮಾಡಲಾಯಿತು. ಸಮಯಸಾಧಕನಾಗಿದ್ದ ಹೈದರಲಿಯು ಹಾಗಲವಾಡಿ ಸಾಮಂತ ರಾಜ್ಯವನ್ನು ಮೈಸೂರಿಗೆ ಒತ್ತುವರಿ ಮಾಡಿಕೊಂಡನು. ಪಾಳೆಯಗಾರನು ಇನ್ನೂ ಬಾಲಕನಾಗಿದ್ದುದರಿಂದ ಅವನಿಗೆ ಭೋಗಸಮುದ್ರ, ಶಿವಪುರ, ಲಕ್ಕೆಲಕಟ್ಟೆ, ಹಳ್ಳಿಗಳನ್ನು ಜಹಗೀರಾಗಿ ಕೊಟ್ಟನು.[೧೪೨] ಕೊನೆಯ ಪಾಳೆಯಗಾರನು ಸಿಂಹಾಸನವನ್ನೇರಿದಾಗ ಸಂಸ್ಥಾನದಲ್ಲಿ ಚೇಳೂರು, ಬಿದರೆ, ತುಮಕೂರು, ಕಡಬ, ಕಂಡ್ಲಿಕೆರೆ, ಚಿಕ್ಕನಾಯಕನಹಳ್ಳಿ, ತುರುವೇಕೆರೆ, ನೊಣವಿನಕೆರೆ ಮುಂತಾದ ಸ್ಥಳಗಳಿದ್ದುವು . ಕಾಲಕ್ರಮದಲ್ಲಿ ಈ ಸಂಸ್ಥಾನವು ಸಂಪೂರ್ಣವಾಗಿ ಒಡೆಯರ ಆಡಳಿತದ ಮೈಸೂರು ರಾಜ್ಯದಲ್ಲಿ ವಿಲೀನಗೊಂಡಿತು.

ಹಾಗಲವಾಡಿ ಪಾಳೆಯಗಾರರ ಸಾಂಸ್ಕೃತಿಕ ಕೊಡುಗೆ

ಸಾಹಿತ್ಯ: ಕ್ರಿ.ಶ ೧೪೭೮ರಿಂದ ೧೭೭೫ವರೆಗೆ ಹದಿನಾಲ್ಕು ಜನ ರಾಜರು ಹಾಗಲವಾಡಿ ಪಾಳೆಯಪಟ್ಟನ್ನು ಆಳಿದರು. ಈ ಅರಸರು ಸಾಹಿತ್ಯ ಕ್ಷೇತ್ರಕ್ಕೆ ಅಪಾರವಾದ ಕೊಡುಗೆಯನ್ನು ನೀಡಿದರು. ವಿಶೇಷವಾಗಿ ವೀರಶೈವ ಸಾಹಿತ್ಯಕ್ಕೆ ಅವರ ಕೊಡುಗೆ ಸಂದಿತು. ಎರಡು ಹಂತಗಳಲ್ಲಿ ಅದನ್ನು ಪರಿಶೀಲಿಸಬಹುದು.

೧. ರಾಜರು ತಾವೇ ಕವಿಗಳಾಗಿದ್ದರು.

೨. ಇತರ ಕವಿಗಳಿಗೆ ಆಶ್ರಯ ಮತ್ತು ಪೋಷಣೆ ನೀಡಿದರು.

೧. ಹಾಗಲವಾಡಿ ಪಾಳೆಯಪಟ್ಟಿನ ರಾಜ ಸಿದ್ದರಾಮಪ್ಪನಾಯಕನು ಒಬ್ಬ 'ಕವಿ-ರಾಜ'ನಾಗಿದ್ದನು. ಅವನು ಮಹಾನುಭವ ಪ್ರಕಾಶಿಕೆಯನ್ನು ಬರೆದಿದ್ದಾನೆ. ಸಿದ್ಧಲಿಂಗೇಶ್ವರನು ಇದನ್ನು ಶರಣ ಶೀಲವಂತ ಮುರಿಗೆಪ್ಪನಿಗೆ ಹೇಳಿ ಬರೆಸಿದನು ಎಂದು ಕವಿಚರಿತೆಯು ಹೇಳುತ್ತದೆ.[೧೪೩] ಇವನು ಹಾಗಲವಾಡಿಯಲ್ಲಿ ೧೬೭೧ರಿಂದ ೧೭೦೧ವರೆಗೆ ಆಳಿದ ದೊರೆ ರಾಮಪ್ಪನಾಯಕನೇ. ಇಮ್ಮಡಿ ಮುದಿವೆಪ್ಪನಾಯಕನು ಈ ವಂಶದ ಅತ್ಯಂತ ಶ್ರೇಷ್ಠನಾದ ಅರಸನು. ಅವನೂ ಕವಿಯಾಗಿದ್ದು ೨೦೦ ಹಾಡುಗಳನ್ನು ಬರೆದಿದ್ದಾನೆ.

ಅವುಗಳನ್ನು ಹಾಡಲು ಜೋಗಿ, ಜಂಗಮ ಮತ್ತು ದಾಸರಿಗಳಿಗೆ ಕಲಿಸಲಾಯಿತು. ಅವರು ಊರಿಂದೂರಿಗೆ ಹೋಗಿ ಧರ್ಮವನ್ನು ಮರ್ತ್ಯತೆಯ ಸ್ವರೂಪವನ್ನೂ ಬೋಧಿಸುವಂತೆ ಮಾಡಲಾಯಿತು.[೧೪೪] ಆದರೆ ಈ ಹಾಡುಗಳು ಈಗ ದೊರಕುವುದಿಲ್ಲ.

೨. ಹಾಗಲವಾಡಿ ಪಾಳೆಯಗಾರರು ಕವಿಗಳ ಪೋಷಕರೂ ಆಗಿದ್ದರು. ಅವರು ಪ್ರೋತ್ಸಾಹಿಸಿದ ಮುಖ್ಯರಾದ ಇಬ್ಬರು ಕವಿಗಳೆಂದರೆ, ಸೋಸಲೆ ರೇವಣಾರಾಧ್ಯ ಮತ್ತು ಮುದ್ದವೀರಸ್ವಾಮಿ.

ಸೋಸಲೆ ರೇವಣಾರಾಧ್ಯನು ಆರಾಧ್ಯ ಸಂಪ್ರದಾಯಕ್ಕೆ ಸೇರಿದ ವೀರಶೈವ ಕವಿ. ಅವನು ಕನ್ನಡ ಮತ್ತು ಸಂಸ್ಕೃತಗಳೆರಡರಲ್ಲೂ ವಿದ್ವಾಂಸನಾಗಿದ್ದನು. ವೀರಶೈವ ಸಾಹಿತ್ಯದ ಹಲವು ಕೃತಿಗಳನ್ನು ಅವನು ರಚಿಸಿದನು. ವೀರಶೈವ ಸಾಹಿತ್ಯ ಇತಿಹಾಸದಲ್ಲಿ ಅವನಿಗೆ ಬಹುಮುಖ್ಯವಾದ ಸ್ಥಾನವಿದೆ. 'ಮಹಿಮ್ನಸವ' ವ್ಯಾಖ್ಯಾನದಲ್ಲಿ ''ಚಿಕನಾಯಕ ಪುಷ್ಕರ್ತುರ್ಮುದಿನಾಯಕ ಭೂ ಭುಜನ ಮುದೆ ಟೀಕಾಕಾರಿತೇಯಂ ಸೋಮಶೇಖರ ಯೋಗಿನಾ'' ಎಂದು ಹೇಳಿದೆ.[೧೪೫] ಮಹಿಮ್ನಸವವನ್ನು ಕುರಿತ ಟೀಕೆಯನ್ನು ಚಿಕ್ಕನಾಯಕನಹಳ್ಳಿಯ ರಾಜ ಮುದಿಯಪ್ಪನಾಯಕನಿಗಾಗಿ ಸೋಮಶೇಖರಯೋಗಿಯ ಆದೇಶದಂತೆ ರಚಿಸಲಾಯಿತು ಎಂದು ಇದರ ಅರ್ಥ. ಮಹಿಮ್ನಸವ ಟೀಕೆಗೆ ಮಹಿಮ್ನ ಪ್ರದೀಪಿಕೆ ಎಂಬ ಇನ್ನೊಂದು ಹೆಸರೂ ಇದ್ದಿತು.[೧೪೬] ಅವನು ವೀರಶೈವ ಸಿದ್ಧಾಂತ ಶಿಖಾಮಣಿಗೂ ಒಂದು ಟೀಕೆಯನ್ನು ಬರೆದನು. ಕಳಲೆ ಕೆಂಪನಂಜಾರ್ಯ, ನಮಸ್ಕಾರ ಪುರಿ ಸಿದ್ದನಂಜಾರ್ಯ ಮತ್ತು ಸುತ್ತೂರು ಸಿಂಹಾಸನದ ಗುರುನಂಜಾರ್ಯನ ಶಿಷ್ಯ ಚೆನ್ನಬಸವ ಇವರು ಕವಿಯನ್ನು ಆ ಕಾರ್ಯದಲ್ಲಿ ತೊಡಗಿಸಿದರು.[೧೪೭] ಇವು ಮಾತ್ರವಲ್ಲದೆ ಈ ಕೆಳಗಿನ ಕೃತಿಗಳ ಮೇಲೂ ವ್ಯಾಖ್ಯಾನಗಳನ್ನು ಅವನು ರಚಿಸಿದನು:

೧. ಅಕ್ಷರಾಂಕ ಗದ್ಯ
೨. ಅಕ್ಷರ ಮಾಲಿಕಾ ಗದ್ಯ
೩. ಚನ್ನಬಸವ ರಗಳೆ
೪. ನಮಸ್ಕಾರ ಗದ್ಯ
೫. ಶರಣ ಬಸವ ರಗಳೆ
೬. ಸದ್ಗುರು ರಗಳೆ
೭. ರುದ್ರಭಾರತ

ಅವನು ಈ ಟೀಕೆಗಳಲ್ಲದೆ ಸ್ವತಂತ್ರ ಕೃತಿಗಳನ್ನೂ ರಚಿಸಿದ್ದಾನೆ.

೧. ಶರೀರ ಪ್ರಕಾಶಿಕೆ
೨. ಅಂತಃಕರಣ ಪ್ರಕಾಶಿಕೆ
೩. ಸ್ವಸ್ವರೂಪ ಪ್ರಕಾಶಿಕೆ
೪. ಪರಮಾತ್ಮ ಪ್ರಕಾಶಿಕೆ
೫. ನಿಜದೀಪ್ತಿ ಪ್ರಕಾಶಿಕೆ
೬. ಶಿವಜ್ಞಾನ ಪ್ರಕಾಶಿಕೆ (ಸಂಸ್ಕೃತದಲ್ಲಿ)

ಹಿರಿಯ ಮುದಿಯಪ್ಪನಾಯಕನು ವೀರಶೈವ ಸಾಹಿತ್ಯವನ್ನು ಬಹುವಾಗಿ ಪ್ರೋತ್ಸಾಹಿಸಿದನು. ಇಮ್ಮಡಿ ಮುದಿಯಪ್ಪ ನಾಯಕನ ಕಾಲದಲ್ಲಿ ವೀರಶೈವ ಸಾಹಿತ್ಯವು ಉತ್ಕರ್ಷದ ಸ್ಥಿತಿಗೇರಿತು. ಅವನ ಕಾಲದಲ್ಲಿ

ಮುದ್ವೀರಸ್ವಾಮಿಯು ಒಬ್ಬ ಆಸ್ಥಾನ ಕವಿಯಾಗಿದ್ದನು. ಅಲ್ಲದೆ ಅವನು ರಾಜಗುರುವೂ ಆಗಿದ್ದನು. ಮುದ್ವೀರಸ್ವಾಮಿಯು ಸಂಗಮದೇವರ ಶಿಷ್ಯನು. ಧರ್ಮಬೋಧನೆ, ಮತ್ತು ವೀರಶೈವ ಧರ್ಮ ಪ್ರಸಾರಗಳಿಗೋಸ್ಕರವಾಗಿ ಅವನನ್ನು ಬೆಂಗಳೂರಿನಿಂದ ಕರೆಸಿಕೊಂಡವನು ೨ನೇ ಮುದಿಯಪ್ಪನಾಯಕ. ಅವನು ಹಾಗಲವಾಡಿಯಲ್ಲಿದ್ದುಕೊಂಡು ಕ್ರಿ.ಶ. ೧೭೩೯ರಲ್ಲಿ ನಿಧನ ಹೊಂದಿದನು.[೧೪೮] ಮುದ್ವೀರಸ್ವಾಮಿಯು ಕನ್ನಡ ಮತ್ತು ಸಂಸ್ಕೃತಗಳೆರಡಲ್ಲೂ ದೊಡ್ಡ ಲೇಖಕನಾಗಿದ್ದನು.೧೦೭ ಸ್ವರವಚನಗಳು[೧೪೯] ಮತ್ತು ಶಿವತತ್ವ ಸುಜ್ಞಾನ ಪ್ರದೀಪಿಕೆಯನ್ನೂ ಒಂದು ವಚನವನ್ನೂ ಬರೆದನು.

ಶಿವತತ್ವ ಸುಜ್ಞಾನ ಪ್ರದೀಪಿಕೆಯಲ್ಲಿ ನಾಲ್ಕು ಅಧ್ಯಾಯಗಳಿವೆ. ಅವು ಜ್ಞಾನಪಾದ, ಕ್ರಿಯಾಪಾದ, ಚರ್ಯಾಪಾದ ಮತ್ತು ಯೋಗಪಾದ.[೧೫೦] ಶಿವಸುಜ್ಞಾನ ದೀಪಿಕೆ ಎಂದೂ ಇದಕ್ಕೆ ಹೆಸರಿದೆ. ಮುದ್ವೀರ ಸ್ವಾಮಿಯ ಸಾಹಿತ್ಯ ಕೃತಿಗಳಲ್ಲಿ ಸ್ವರವಚನಗಳಿಗೆ ಮುಖ್ಯವಾದ ಸ್ಥಾನವಿದೆ. ತನ್ನನ್ನು ಅವುಗಳಲ್ಲಿ ಮುದ್ವೀರ, ಮುದ್ವೀರದೇಶಿಕೋತ್ತಮ ಎಂದು ಕರೆದುಕೊಂಡಿದ್ದಾನೆ. ಎರಡು ಸ್ವರವಚನಗಳು ಸಂಸ್ಕೃತದಲ್ಲಿವೆ. 'ಶಾಂಭವಯೋಗ'ವನ್ನು ವಿವರಿಸುವ ಒಂದು ವಚನವನ್ನು ಮಾತ್ರ ಅವನು ಬರೆದನು.[೧೫೦]

ಧಾರ್ಮಿಕ ಕೊಡುಗೆ

ಕರ್ನಾಟಕದಲ್ಲಿ ಆಳಿದ ವೀರಶೈವ ರಾಜಮನೆತನಗಳನ್ನು ನಾವು ಮೂರು ವರ್ಗಗಳಾಗಿ ಗುಂಪು ಮಾಡಬಹುದು:

೧. ಮೊದಲಿನಿಂದಲೂ ವೀರಶೈವ ಧರ್ಮವನ್ನು ಅವಲಂಬಿಸಿದ್ದವರು,

೨. ಸನ್ನಿವೇಶದ ಒತ್ತಡದಿಂದ ವೀರಶೈವ ಧರ್ಮವನ್ನು ಹಿಡಿದವರು,

೩. ತಾತ್ಕಾಲಿಕವಾಗಿ ವೀರಶೈವ ಧರ್ಮಾವಲಂಬಿಗಳಾಗಿದ್ದವರು.

ರಾಜರು ಹೀಗೆ ವರ್ತಿಸುತ್ತಿದ್ದುದು ನಿಜವಾದ ನಂಬಿಕೆಯಿಂದಾಗಲಿ, ವೀರಶೈವ ಧರ್ಮ ಪ್ರೇಮದಿಂದಾಗಲಿ ಅಲ್ಲ, ಅದಕ್ಕೆ ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಕಾರಣಗಳಿದ್ದುವು.

ಕರ್ನಾಟಕದೊಳಗೆ ಮತ್ತು ಹೊರಗೆ ಅನೇಕ ರಾಜರು ವೀರಶೈವ ಧರ್ಮದ ಪ್ರಭಾವಕ್ಕೊಳಗಾಗಿದ್ದಾರೆ. ಅವರು ಕಾಕತೀಯ, ಯಾದವ, ವಿಜಯನಗರದ ಸಂಗಮದಂತಹ ದೊಡ್ಡ ರಾಜಮನೆತನಗಳು ಮಾತ್ರವಲ್ಲದೆ ಕೆಳದಿ, ಹಾಗಲವಾಡಿ, ಸ್ವಾದಿ, ಬೀಳಗಿ ಮತ್ತು ಕೊಡಗು ಇಂತಹ ಸಣ್ಣ ರಾಜ್ಯಗಳ ಅರಸರೂ ಆಗಿದ್ದರು.

ಹಾಗಲವಾಡಿಯ ರಾಜರು ಮೂಲತಃ ಬೇಡರಿಂದ ಬಂದವರಾಗಿದ್ದು ಹಿರೇಲಿಂಗದೇವರ ಪೂಜಕರಾಗಿದ್ದಂತೆ ತೋರುತ್ತದೆ.[೧೫೧] ಈ ವಂಶದ ಮೂರನೆಯ ರಾಜ ಬೈರವನಾಯಕನಿಂದ ಮುಂದಕ್ಕೆ ಅವರು ವೀರಶೈವರಾದಂತೆ ತೋರುತ್ತದೆ. ಅವನ ಮತಾಂತರವನ್ನು ಕುರಿತು ಸಂದೇಹಾಸ್ಪದವಾದ ಒಂದು ಕಥೆಯಿದೆ. ಬಹಳ ಕಾಲ ಅವನಿಗೆ ಸಂತಾನವಿರಲಿಲ್ಲ. ತನಗೊಬ್ಬ ಪುತ್ರನನ್ನು ಕರುಣಿಸು ಎಂದು ಕೋರಿ ಸಿದ್ಧರಾಮೇಶ್ವರನನ್ನು ಅವನು ಭಕ್ತಿಯಿಂದ ಪೂಜಿಸುತ್ತಿದ್ದನು. ತನ್ನ ರಾಜಧಾನಿ ಎರಿಕಟ್ಟೆಯ ಬಳಿ ಒಂದು ಗುಡ್ಡದ ಮೇಲೆ ಆ ದೇವರಿಗೆ ಒಂದು ದೇವಾಲಯವನ್ನೂ ಅವನು ಕಟ್ಟಿಸಿದ್ದನು. ಒಂದುದಿನ ಭಗವಾನ್ ಸಿದ್ಧರಾಮೇಶ್ವರನು ಒಬ್ಬ ಮುದುಕ ಜಂಗಮನ ರೂಪದಲ್ಲಿ ಕಾಣಿಸಿಕೊಂಡು ಒಬ್ಬ ಗೊಲ್ಲನ ಮೂಲಕ ರಾಜನಿಗೆ ಪ್ರಸಾದವನ್ನು ಕಳುಹಿಸಿಕೊಟ್ಟನು. ಆಮೇಲೆ ರಾಜನಿಗೆ ಪುತ್ರಜನನವಾಯಿತು. ಮಗುವಿಗೆ ಮುದಿಯಪ್ಪ ಎಂದು ಹೆಸರಿಟ್ಟರು. ಲಿಂಗಧಾರಣಾ ಸಮಾರಂಭವನ್ನು ನಡೆಸಿದರು.[೧೫೨] ಆಗಿನಿಂದ ರಾಜನು

ವೀರಶೈವನಾದನು. ಹಾಗಲವಾಡಿ ರಾಜ್ಯವು ವೀರಶೈವರಾಜ್ಯವಾಯಿತು. ಮುಂದಿನ ರಾಜರು ತಾವು ವೀರಶೈವರಾಗಿದ್ದುದು ಮಾತ್ರವಲ್ಲದೆ, ಆ ಧರ್ಮದ ಸ್ಥಾನಮಾನವನ್ನು ಉತ್ತಮಗೊಳಿಸಲು ಶ್ರಮಿಸಿದರು. ರಾಜ್ಯದ ವರಮಾನದ ಒಂದು ಭಾಗವನ್ನು ವೀರಶೈವ ಸಂಸ್ಕೃತಿಯ ವರ್ಧನೆಗಾಗಿಯೇ ಮೀಸಲಾಗಿಡಲಾಯಿತು. ವೀರಶೈವಧರ್ಮ ಪ್ರಸಾರಕ್ಕಾಗಿ ಹಲವು ಮಠಗಳನ್ನು ಸ್ಥಾಪಿಸಲಾಯಿತು. ಮಹಾಮಹತ್ತಿನ ಮಠ[೧೫೪], ಹೊಸಮಠ[೧೫೫], ಮಠ[೧೫೬], ವಿರಕ್ತ ಮಠ[೧೫೭], ಕಂತೇದೇವರ ಮಠ[೧೫೮], ಕಲ್ಮಠ[೧೫೯], ಸಂಪಾದನೆ ಮಠ[೧೬೦] ನೊಣವಿನಕೆರೆಯಲ್ಲಿ ಕಾಡಸಿದ್ದೇಶ್ವರ ಮಠ[೧೬೧] ಇವು ಆ ಮಠಗಳು. ಕೆಲವೊಮ್ಮೆ ಊರಿನ ಶ್ರೀಮಂತಗಣ್ಯರು ಮತ್ತು ರಾಜ್ಯಾಡಳಿತಕ್ಕೆ ಸಂಬಂಧಿಸಿದ ಅಧಿಕಾರಿಗಳು ಕೂಡ ಮಠಗಳನ್ನು ಕಟ್ಟಿಸುತ್ತಿದ್ದರು. ಮಠವನ್ನು ಕಟ್ಟಿಸಿದ ಮೇಲೆ ಅದನ್ನು ಸುಸ್ಥಿತಿಯಲ್ಲಿರುವಂತೆ ನೋಡಿಕೊಳ್ಳುವುದಕ್ಕಾಗಿ ಸ್ವಲ್ಪ ಭೂಮಿಯನ್ನು ದಾನವಾಗಿ ನೀಡುತ್ತಿದ್ದರು. ಚಿಕ್ಕನಾಯಕನಹಳ್ಳಿಯ ಜೋಗಿಹಳ್ಳಿ ದಳವಾಯಿಮಠದಲ್ಲಿ ಒಂದು ಶಾಸನವು ದೊರಕಿದೆ. ಅದರ ಪ್ರಕಾರ, ಮುದಿಯಪ್ಪನಾಯಕನ ದಳವಾಯಿಯಾಗಿದ್ದ ಶೀಲವಂತ ಪರಮಪ್ಪ ವಿರಕ್ತನು ನಂದೀಶ್ವರ ಸ್ವಾಮಿಗಾಗಿ ಒಂದು ಮಠವನ್ನು ಕಟ್ಟಿಸಿದನು. ಜೊತೆಗೇ ಒಂದು ತೋಟವನ್ನೂ ಒಂದು ಕೆರೆಯನ್ನೂ ಅದರ ಉಸ್ತುವಾರಿಗೋಸ್ಕರವಾಗಿ ದಾನ ಮಾಡಿದನು.[೧೬೨] ಕ್ರಿ.ಶ.೧೬೨೫ರ ಇನ್ನೊಂದು ಶಾಸನವು, ಹಟ್ನ ಎಂಬಲ್ಲಿ ಗುರುಬಸವರಾಜ ದೇವರಿಗಾಗಿ ಕಟ್ಟಿದ ಮಠವನ್ನು ಕುರಿತು ಹೇಳುತ್ತದೆ. ಅದಕ್ಕೂ ಭೂಮಿಯನ್ನು ದಾನವಾಗಿ ನೀಡಲಾಯಿತು.[೧೬೩] ಇಂತಹ ಮಠಗಳು ಶಿಕ್ಷಣದ ಕೇಂದ್ರಗಳಾಗಿ, ಪೂಜಾ ಸ್ಥಳಗಳಾಗಿ, ಸಾಂಸ್ಕೃತಿಕ ಚಟುವಟಿಕೆಗಳ ಕೇಂದ್ರವಾಗಿ ಜನರ ಮೇಲೆ ಬಹುವಾದ ಪ್ರಭಾವವನ್ನು ಹೊಂದಿದ್ದುವು. ಅವು ವೀರಶೈವ ಧರ್ಮವನ್ನು ಪ್ರಸಾರ ಮಾಡಿದುವು. ಇಂದೂ ನಾವು ಹಾಗಲವಾಡಿಯಲ್ಲಿ ಈ ಮಠಗಳ ಕುರುಹುಗಳನ್ನು ನೋಡಬಹುದು. ಮಹತ್ತಿನ ಮಠ, ಗುರುಪಾದಸ್ವಾಮಿ ಮಠ, ಸಂಪಾದನೆ ಮಠ, ಲಿಂಗಪ್ಪನ ಮಠ, ಮುದ್ವೀರಸ್ವಾಮಿ ಮಠ, ಕನಗೀಲು ಮಠ ಇತ್ಯಾದಿ, ಇಂಥವು. ಇವುಗಳಿಂದ ಹೇಗೆ ಹಾಗಲವಾಡಿಯ ಪಾಳೆಯಗಾರರು ವೀರಶೈವ ಧರ್ಮ ಪ್ರಸಾರವನ್ನು ಗಂಭೀರವಾಗಿ ಕೈಗೆತ್ತಿಕೊಂಡಿದ್ದರು ಎನ್ನುವುದು ತಿಳಿದುಬರುತ್ತದೆ. ಇಮ್ಮಡಿ ಮುದಿಯಪ್ಪನಾಯಕನ ಆಳಿಕೆಯು ವೀರಶೈವ ಧರ್ಮದ ಸುವರ್ಣಯುಗ. ಅವನು ವೀರಶೈವ ಧರ್ಮಕ್ಕಾಗಿ ತನ್ನಿಂದ ಸಾಧ್ಯವಾದುದೆಲ್ಲವನ್ನೂ ಮಾಡಿದನು. ತನ್ನ ರಾಜ್ಯದ ವರಮಾನದಲ್ಲಿ ದೊಡ್ಡಭಾಗವನ್ನು ಅದರ ಪ್ರಸಾರಕ್ಕಾಗಿ ವಿನಿಯೋಗಿಸಿದನು. ಈ ಉದ್ದೇಶ ಸಾಧನೆಗಾಗಿ ವೀರಶೈವ ಮಠಗಳನ್ನು ಪ್ರೋತ್ಸಾಹಿಸಿ ಅವಕ್ಕೆ ಬೇಕಾದಷ್ಟು ದತ್ತಿಗಳನ್ನು ನೀಡಿದನು. ಆನೆಹಳ್ಳಿಯ ಮಾವಿನತೋಟದಲ್ಲಿ ಒಂದು ವೀರಶೈವ ಮಠವನ್ನು ಸ್ಥಾಪಿಸಿ ಹಲವು ಹಳ್ಳಿಗಳ ವರಮಾನವನ್ನು ಅದಕ್ಕಾಗಿ ದಾನ ಮಾಡಿದನು.[೧೬೪] ಇಮ್ಮಡಿ ಮುದಿಯಪ್ಪನಾಯಕನು ವೀರಶೈವ ಜಂಗಮರನ್ನು ಬಂದು ತನ್ನ ರಾಜ್ಯದಲ್ಲಿ ನೆಲೆಸಲು ಸ್ವಾಗತಿಸಿದನು. ಬದುಕಿನ ಕೊನೆಯ ವರ್ಷಗಳಲ್ಲಿ ಸಿಂಹಾಸನವನ್ನು ಮಗ ಮುದ್ವೀರಪ್ಪನಾಯಕನಿಗೆ ಒಪ್ಪಿಸಿ ತಾನು ಸನ್ಯಾಸವನ್ನು ಸ್ವೀಕರಿಸಿದನು. ತನ್ನ ಜೀವನದ ಉಳಿಕೆಯ ಭಾಗವನ್ನು ವೀರಶೈವ ಧರ್ಮ ಪ್ರಸಾರಕ್ಕಾಗಿ ವಿನಿಯೋಗಿಸಿದನು.[೧೬೫]

ಹಾಗಲವಾಡಿಯ ಪಾಳೆಯಗಾರರು ಎಡೆಯೂರು ಸಿದ್ಧಲಿಂಗೇಶ್ವರನ ಭಕ್ತರು. ಸುವ್ವಿಮಲ್ಲನ ತೋಂಟದ ಸಿದ್ಧೇಶ್ವರನಸಾಂಗತ್ಯದ ಪ್ರಕಾರ, ಸಿದ್ಧಲಿಂಗೇಶ್ವರನು ನಿಟ್ಟೂರಿಗೆ ಬಂದಿದ್ದಾಗ ೧ನೇ ಬೈರಪ್ಪನಾಯಕ ಅವನನ್ನು ಮಹಾ ವಿಜೃಂಭಣೆಯಿಂದ ತನ್ನ ರಾಜಧಾನಿಗೆ ಕರೆದೊಯ್ದನು. ಅವನಿಂದ ಧರ್ಮೋಪದೇಶವನ್ನು ಶ್ರದ್ಧೆಯಿಂದ ಆಲಿಸಿದನು.[೧೬೬]

ಪಾಳೆಯಗಾರರು ಶೈವಧರ್ಮವನ್ನೂ ಪ್ರೋತ್ಸಾಹಿಸಿದರು. ಹಾಗಲವಾಡಿ ರಾಜರಿಗೆ ರಾಮೇಶ್ವರನು ಮನೆದೇವರು. ಆದ್ದರಿಂದ ತಮ್ಮ ಎಲ್ಲಾ ಶಾಸನಗಳನ್ನು ಅವರು ರಾಮೇಶ್ವರನ ಸ್ತುತಿಯಿಂದ ಪ್ರಾರಂಭಿಸುವುದು

ಅಥವಾ ಮುಕ್ತಾಯ ಮಾಡುವುದು ಆಶ್ಚರ್ಯವಲ್ಲ. ಈ ಪಾಳೆಯಗಾರರು ತಮ್ಮ ವಲಯದಲ್ಲಿ ಅನೇಕ ದೇವಾಲಯಗಳನ್ನು ನಿರ್ಮಿಸಿದರು. ಉದಾಹರಣೆಗೆ ಚಿಕ್ಕನಾಯಕನಹಳ್ಳಿಯ ಪ್ರಸನ್ನ ರಾಮೇಶ್ವರ ದೇವಸ್ಥಾನ, ಹಾಗಲವಾಡಿಯ ರಾಮೇಶ್ವರ ದೇವಸ್ಥಾನ, ವನವಸದುರ್ಗದ ತೀರ್ಥರಾಮೇಶ್ವರ ದೇವಸ್ಥಾನವು ಶೈವಧರ್ಮದ ಕುರುಹಾಗಿದೆ. ಹಾಗಲವಾಡಿಯ ಪಾಳೆಯಗಾರರು ಚಿತ್ರದುರ್ಗದ ಬೃಹನ್ಮಠಕ್ಕೆ ಭಕ್ತರಾಗಿದ್ದರು. ನಗಾರಿಯೊಂದನ್ನು ಅವರು ಆ ಮಠಕ್ಕೆ ದಾನ ಮಾಡಿದರು; ಅದರ ಮೇಲೆ 'ಹಾಗಲವಾಡಿ ಮುದಿಯಪ್ಪ ನಾಯಕನ ಭಕ್ತಿ' ಎಂದು ಬರೆದಿದೆ.

ಈ ಪಾಳೆಯಗಾರರು ಧಾರ್ಮಿಕ ಸಹಿಷ್ಣುತೆಗೆ ಹೆಸರಾಗಿದ್ದರು. ಅವರು ಶೈವಧರ್ಮ ವೀರಶೈವ ಧರ್ಮಗಳನ್ನು ಮಾತ್ರವಲ್ಲದೆ ವೈಷ್ಣವಧರ್ಮವನ್ನೂ ಪ್ರೋತ್ಸಾಹಿಸಿದರು. ಹಾಗಲವಾಡಿಯ ಚನ್ನಕೇಶವ ದೇವಾಲಯ ಹಾಗೂ ನರಸಿಂಹ ದೇವಾಲಯಗಳೇ ಇದಕ್ಕೆ ಸಾಕ್ಷಿ. ಈ ಧರ್ಮ ಸಹಿಷ್ಣುತೆಯು ಹಾಗಲವಾಡಿ ಪಾಳೆಯಗಾರರ ಆಡಳಿತದ ಮುಖ್ಯ ಲಕ್ಷಣವಾಗಿತ್ತು.

ವಾಸ್ತುಶಿಲ್ಪ

ಹಾಗಲವಾಡಿ ಪಾಳೆಯಗಾರರ ಕಟ್ಟಡಗಳನ್ನು ಹಾಗಲವಾಡಿಯ ಒಳಗೆ ಮತ್ತು ಸುತ್ತಮುತ್ತ, ಚಿಕ್ಕನಾಯಕನಹಳ್ಳಿ, ಕಂದೀಕೆರೆ, ಶೆಟ್ಟಿಕೆರೆ, ತುರುವೇಕೆರೆ, ಎರಿಕಟ್ಟೆ ಮುಂತಾದ ಸ್ಥಳಗಳಲ್ಲಿ ನೋಡಬಹುದು. ಹಾಗಲವಾಡಿಯ ದೇವಾಲಯವು ಕಲಾ ದೃಷ್ಟಿಯಿಂದ ಬಹಳ ಉನ್ನತ ಮಟ್ಟದ್ದಲ್ಲವಾಗಿರಬಹುದು, ಆದರೆ ಅವುಗಳ ಐತಿಹಾಸಿಕ ಮಹತ್ವದ ವಿಚಾರದಲ್ಲಿ ಸಂದೇಹವೇ ಇಲ್ಲ. ಈ ದೇವಾಲಯಗಳ ಜೊತೆಗೆ ಮಠಗಳು, ಗದ್ದುಗೆಗಳು ಕೂಡ ಐತಿಹಾಸಿಕ ಮಾಹಿತಿ ನೀಡುತ್ತವೆ. ಅವರ ಮುಖ್ಯವಾದ ದೇವಾಲಯಗಳೆಂದರೆ, ಕತ್ತಲು ಮಲ್ಲಪ್ಪ ದೇವಸ್ಥಾನ, ಸೋಮೇಶ್ವರ ದೇವಸ್ಥಾನ, ರುದ್ರೇಶ್ವರ ದೇವಸ್ಥಾನಗಳು ಹಾಗಲವಾಡಿಯ ಬಸವೇಶ್ವರ ದೇವಾಲಯ, ಚಿಕ್ಕನಾಯಕನಹಳ್ಳಿಯ ಪ್ರಸನ್ನರಾಮೇಶ್ವರ ಹಾಗೂ ವೆಂಕಟರಮಣಸ್ವಾಮಿ ದೇವಾಲಯಗಳು, ಕಂದೀಕೆರೆಯ ಪ್ರಸನ್ನ ರಾಮೇಶ್ವರ ದೇವಾಲಯ. ಇವುಗಳ ಜೊತೆಗೆ ಹಾಗಲವಾಡಿಯಲ್ಲಿ ಮುದ್ವೀರಸ್ವಾಮಿ ಗದ್ದುಗೆ, ಗುರುಪಾದಸ್ವಾಮಿ ಗದ್ದುಗೆ, ನಿರಂಜನಸ್ವಾಮಿ ಗದ್ದುಗೆ, ಲಿಂಗಪ್ಪನ ಮಠ ಮತ್ತು ಗುರುಪಾದ ಸ್ವಾಮಿ ಮಠಗಳು ಕಂಡುಬರುತ್ತವೆ. ನಗರದ ಹೊರ ಅಂಚಿನಲ್ಲಿ ಹಲವು ವೀರಗಲ್ಲುಗಳು ಕಂಡುಬರುತ್ತವೆ.

ಮುಖ್ಯವಾದವು ಚಿಕ್ಕನಾಯಕನಹಳ್ಳಿಯ ಪ್ರಸನ್ನ ರಾಮೇಶ್ವರ ದೇವಾಲಯ, ಹತ್ತಿಗುಡ್ಡದ ಮಲ್ಲಿಕಾರ್ಜುನ ದೇವಾಲಯ, ನೊಣವಿನಕೆರೆಯ ಮುದಿಯಪ್ಪನಾಯಕನ ಸಮಾಧಿ, ಕಂದೀಕೆರೆಯ ಪಾಳುಬಿದ್ದ ಕೋಟೆ, ತೀರ್ಥರಾಮೇಶ್ವರದ ಪಾಳು ಅರಮನೆ, ಹಾಗಲವಾಡಿಯ ಕೋಟೆಯೂ ಅವರ ಸಂಸ್ಕೃತಿಯ ವಾಸ್ತುಶಿಲ್ಪ ಆಧಾರವಾಗಿದೆ.

ಇವುಗಳಿಂದ ಎರಡು ನಿರ್ದಿಷ್ಟ ಸಾಂಸ್ಕೃತಿಕ ಪ್ರಭಾವಗಳನ್ನು ಗುರುತಿಸಬಹುದು. ೧) ಜಾನಪದ ಸಂಸ್ಕೃತಿ, ೨) ಮುಖ್ಯ ಸಂಸ್ಕೃತಿ. ಬಸವಣ್ಣ, ಕೆಂಪಮ್ಮ, ಕರಿಯಮ್ಮ, ದುರ್ಗಮ್ಮ, ಜುಂಜಪ್ಪ ಈ ದೇವಾಲಯಗಳು ಜಾನಪದ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತವೆ. ಇದರಿಂದ ಹಾಗಲವಾಡಿಯಲ್ಲಿ ಜಾನಪದ ಸಂಸ್ಕೃತಿ ಹಾಗೂ ಅದರ ಸಹವರ್ತಿಯಾದ ನಂಬಿಕೆಗಳು ಸಾಕಷ್ಟು ಬಲವಾಗಿದ್ದುವು ಎಂಬುದು ತಿಳಿಯುತ್ತದೆ. ಮುಖ್ಯ ಸಂಸ್ಕೃತಿ ಮತ್ತು ಅದರ ಪ್ರಭಾವ ರಾಮೇಶ್ವರ ದೇವಾಲಯದಲ್ಲಿ ವ್ಯಕ್ತವಾಗುತ್ತದೆ. ಗದ್ದುಗೆಗಳು, ಮಠಗಳು ವೀರಶೈವ ಪಾರಮ್ಯವನ್ನು ಸೂಚಿಸುತ್ತವೆ. ಇವೆಲ್ಲ ಕೂಡಿ ಆ ಕಾಲದ ಸಮೃದ್ಧ ಸಾಂಸ್ಕೃತಿಕ ವೈವಿಧ್ಯವನ್ನು ನಮ್ಮ ಮುಂದಿಡುತ್ತವೆ.

ಕೆಲವು ವಾಸ್ತುಶಿಲ್ಪ ಸ್ಮಾರಕಗಳನ್ನು ಚಿಕ್ಕನಾಯಕನಹಳ್ಳಿಯಲ್ಲೂ ನೋಡಬಹುದು. ಅದು ಪಾಳೆಯಗಾರರ ಎರಡನೆಯ ರಾಜಧಾನಿಯಾಗಿತ್ತು. ಕಲಾದೃಷ್ಟಿಯಿಂದ ಅವುಗಳಲ್ಲಿ ವಿಜಯನಗರದ ವಾಸ್ತುಶಿಲ್ಪ ಪ್ರಭಾವವನ್ನು ಗುರುತಿಸಬಹುದು. ಈ ದೃಷ್ಟಿಯಿಂದ ಪ್ರಸನ್ನ ರಾಮೇಶ್ವರ ದೇವಾಲಯವು ಅತ್ಯಂತ ಗಮನಾರ್ಹವಾಗಿದೆ. ಅದು ಶುದ್ಧ ದ್ರಾವಿಡ ಶೈಲಿಯ ದೇವಸ್ಥಾನ, ಅಗಾಧವಾಗಿದೆ. ಗರ್ಭಗೃಹ, ಸುಕನಾಸಿ, ನವರಂಗ, ಮುಖಮಂಟಪ ಮತ್ತು ತೆರೆದ ಅಂಗಳದ ಭಾಗ ಎಂದು ವಿಭಾಗಿಸಬಹುದು. ಎತ್ತರವಾದ ಗೋಪುರವಿದೆ. ದೇವಾಲಯದ ಸುತ್ತಲೂ ಗೋಡೆಯಿದೆ. ಸುಕನಾಸಿಯನ್ನು ಪ್ರವೇಶಿಸುವಾಗ ಬಲಗಡೆ ಗಣಪತಿಯ ವಿಗ್ರಹವಿದೆ; ಎಡಗಡೆ ಬೈರವನ ವಿಗ್ರಹವಿದೆ. ಎಡಪಕ್ಕದಲ್ಲಿ ಎದುರಿಗೆ ಧ್ಯಾನಸ್ಥನಾಗಿರುವ ವ್ಯಕ್ತಿಯ ೧೧/೨ ಅಡಿ ಎತ್ತರದ ವಿಗ್ರಹವೊಂದಿದೆ. ಎದುರಿಗಿರುವ ಕಂಬದ ಮೇಲೆ ೨೧/೨ ಅಡಿ ಎತ್ತರದ ಮನುಷ್ಯ ವಿಗ್ರಹವಿದೆ. ಇದು ಈ ದೇವಾಲಯವನ್ನು ಕಟ್ಟಿಸಿದ ಪಾಳೆಯಗಾರನ ಮೂರ್ತಿಯಿರಬೇಕು. ಇದೇ ಬಗೆಯ ಇನ್ನೊಂದು ವಿಗ್ರಹವು ಮುಖಮಂಟಪದ ಮೇಲುಭಾಗದಲ್ಲೂ ಇದೆ. ಇನ್ನೊಂದು ಮುಖ್ಯವಾದ ವಿಗ್ರಹವೆಂದರೆ ಲಿಂಗಪೂಜೆಯಲ್ಲಿ ನಿರತನಾಗಿರುವ ಬೇಡರ ಕಣ್ಣಪ್ಪನ ವಿಗ್ರಹ.

ಉಪಸಂಹರಿಸುತ್ತಾ ಹೀಗೆ ಹೇಳಬಹುದು: ಈ ವಾಸ್ತುಶಿಲ್ಪ ಅವಶೇಷಗಳು, ಕಲಾತ್ಮಕತೆಯಿಂದ ಅಷ್ಟೇನೂ ಉತ್ಕೃಷ್ಟವಾದುವಲ್ಲವಾದರೂ ಅಪಾರವಾದ ಸಾಂಸ್ಕೃತಿಕ ಪ್ರಭಾವವನ್ನು ಹೊಂದಿದ್ದುವು ಎನ್ನುವುದು ನಿಶ್ಚಯ. ವೀರಶೈವ ದೊರೆಯು ವಿವಿಧ ಧಾರ್ಮಿಕ ಸಾಂಪ್ರದಾಯಗಳ ಬಗೆಗೆ ಹಾಗೂ ಸಾಂಸ್ಕೃತಿಕ ಪರಂಪರೆಗಳ ಬಗೆಗೆ ತಳೆದಿದ್ದ ಉದಾರವೂ ಮಾನವೀಯವೂ ಆದ ದೃಷ್ಟಿಯನ್ನು ಅವು ತೋರಿಸುತ್ತವೆ.

ಕರಾವಳಿ ಪ್ರದೇಶದ ಅರಸರು

ವಿಜಯನಗರದ ಹತೋಟಿಯಲ್ಲಿ ಅನೇಕ ಪ್ರದೇಶಗಳಿದ್ದುವು. ತುಳುನಾಡು ಎಂದು ಕರೆಯುತ್ತಿದ್ದ ಕರ್ನಾಟಕದ ಕರಾವಳಿ ಪ್ರದೇಶವು ಬಹುಮುಖ್ಯವಾದ ಒಂದು ಪ್ರದೇಶವಾಗಿತ್ತು. ತುಳುನಾಡಿನ ಆರ್ಥಿಕ ಮಹತ್ವ ಏನೆಂಬುದು ಅರಸರಿಗೆ ಚೆನ್ನಾಗಿ ತಿಳಿದಿತ್ತು. ಪಾಶ್ಚಿಮಾತ್ಯ ದೇಶಗಳೊಂದಿಗೆ ನಡೆಸುತ್ತಿದ್ದ ವಾಣಿಜ್ಯದ ಬಹು ಭಾಗವು ತುಳುನಾಡಿನ ಮಂಗಳೂರು, ಬಾರಕೂರು, ಭಟ್ಕಳ ಮತ್ತು ಹೊನ್ನಾವರ ಬಂದರುಗಳಿಂದ ನಡೆಯುತ್ತಿದ್ದಿತು. ಇಲ್ಲಿ ಅರಬ್ಬರು ಮತ್ತು ಪೋರ್ಚುಗೀಸ್ ವರ್ತಕರು ತಮ್ಮ ವ್ಯಾಪಾರ ಕೇಂದ್ರಗಳನ್ನು ಸ್ಥಾಪಿಸಿಕೊಂಡಿದ್ದರು. ಅಲ್ಲದೆ ತಮ್ಮ ಸೈನ್ಯಕ್ಕಾಗಿ ಪರ್ಷಿಯ ಮತ್ತು ಅರೇಬಿಯಗಳಿಂದ ಕುದುರೆಗಳನ್ನು ಈ ಬಂದರುಗಳ ಮೂಲಕವಾಗಿಯೇ ಆಮದು ಮಾಡಿಕೊಳ್ಳುತ್ತಿದ್ದರು. ಈ ಕಾರಣಗಳಿಂದಾಗಿ ತುಳುನಾಡನ್ನು. ಕ್ರಿ.ಶ. ೧೩೪೫ರಲ್ಲಿ ಸಾಮ್ರಾಜ್ಯದ ಸಾಮಂತ ಒಕ್ಕೂಟ ವ್ಯವಸ್ಥೆಗೆ ಸೇರಿಸಿಕೊಳ್ಳಲಾಯಿತು.[೧೬೭] ಇದರ ಪರಿಣಾಮವಾಗಿ ತುಳುನಾಡಿನ ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿಗಳಲ್ಲಿ ಕ್ರಾಂತಿಕಾರಕ ಬದಲಾವಣೆಯುಂಟಾಯಿತು.[೧೬೮]

ರಾಜಕೀಯ ರಂಗದಲ್ಲಿ ಕಂಡುಬಂದ ಬದಲಾವಣೆ, ತುಳುನಾಡನ್ನು ಬಾರಕೂರು ರಾಜ್ಯ ಮತ್ತು ಮಂಗಳೂರು ರಾಜ್ಯ ಎಂದು ಎರಡು ಭಾಗವಾಗಿ ಒಡೆದದ್ದು. ಇವುಗಳಿಗೆ ಕ್ರಮವಾಗಿ ಬಾರಕೂರು ಮತ್ತು ಮಂಗಳೂರು ಕೇಂದ್ರವಾದುವು. ಎಲ್ಲ ವ್ಯವಹಾರಗಳೂ ಅಲ್ಲಿಂದ ನಡೆಯತೊಡಗಿದುವು. ಕೇಂದ್ರಕ್ಕೂ ಘಟಕಗಳಿಗೂ ಇದ್ದ ಸಂಬಂಧವನ್ನು ಸೂಚಿಸುವ ಶಾಸನಾಧಾರವು ಸಾಕಷ್ಟು ಪ್ರಮಾಣದಲ್ಲಿ ದೊರಕುತ್ತದೆ. ವಿಜಯನಗರದ ರಾಜರು ಈ ಘಟಕಗಳನ್ನು ನೋಡಿಕೊಳ್ಳಲು ಇಬ್ಬರು ಕೇಂದ್ರದ ಪ್ರತಿನಿಧಿಗಳನ್ನು ನೇಮಿಸಿದ್ದರು.

ಕೆಲವು ಸಂದರ್ಭಗಳಲ್ಲಿ ಒಬ್ಬನೇ ಪ್ರತಿನಿಧಿಯು ಎರಡೂ ಘಟಕಗಳನ್ನು ನೋಡಿಕೊಳ್ಳುತ್ತಿದ್ದನು. ಮುಂದೆ ಕೊಡುವ ಪಟ್ಟಿಯಲ್ಲಿ ಹಾಗೆ ರಾಜನಿಂದ ನೇಮಿತರಾದ ಪ್ರತಿನಿಧಿಗಳನ್ನು ನೋಡಬಹುದು. ಕರಾವಳಿಯ ಎರಡೂ ಘಟಕಗಳ ಉಸ್ತುವಾರಿ ಅವರದಾಗಿತ್ತು. ತುಳುನಾಡನ್ನು ಹೀಗೆ ನಿಯಂತ್ರಣದಲ್ಲಿಟ್ಟುಕೊಳ್ಳುವ ಕ್ರಮವು ೧೫೬೫ರವರೆಗೂ ಮುಂದುವರಿದಿತ್ತು.

ಈ ಸಂಬಂಧವಾಗಿ ಎರಡು ಅಂಶಗಳು ಸ್ಪಷ್ಟವಾಗಿವೆ. ಮೊದಲನೆಯದು ಈ ರಾಜ ಪ್ರತಿನಿಧಿಗಳು ಎರಡೂ ಘಟಕಗಳ ಮೇಲ್ವಿಚಾರಣೆಯ ಹೊಣೆಯನ್ನು ನೇರವಾಗಿ ವಿಜಯನಗರದ ಚಕ್ರವರ್ತಿಯಿಂದಲೇ ಪಡೆದಿದ್ದರು. ಎರಡನೆಯದಾಗಿ, ಕರಾವಳಿಯ ಈ ಪ್ರದೇಶದಲ್ಲಿ ಶಾಂತಿ ಸುವ್ಯವಸ್ಥೆಗಳನ್ನು ಕಾಪಾಡಲು, ಸಮರ್ಪಕ ಮೇಲ್ವಿಚಾರಣೆ ನಡೆಸಲು ತುಳುವರಲ್ಲದ ವ್ಯಕ್ತಿಗಳನ್ನೇ ನೇಮಿಸಲಾಗುತ್ತಿತ್ತು.

ಸಾಮಂತನಾಯಕರಿಗೆ ಮಹಾಪ್ರಧಾನ ಅಥವಾ ಮಹಾಮಂತ್ರಿ ಎಂಬ ಬಿರುದುಗಳಿದ್ದುವು. ಚಕ್ರವರ್ತಿಯು ಈ ಪ್ರದೇಶಕ್ಕೆ ಎಷ್ಟು ಮಹತ್ವ ಕೊಟ್ಟಿದ್ದನೆನ್ನುವುದು ಇದರಿಂದ ಸೂಚಿತವಾಗುತ್ತದೆ. ಮಹಾಪ್ರಧಾನ, ಮಹಾಮಂತ್ರಿ, ದಂಡನಾಯಕ, ಒಡೆಯ ಮುಂತಾದ ಪದಗಳು ಅವರ ಅಧೀನತೆಯನ್ನು ತೋರಿಸುತ್ತವೇನೋ ನಿಜ. ಮೇಲ್ವಿಚಾರಕನ ಕಾರ್ಯಾವಧಿಯು ಒಂದೋ ಎರಡೋ ವರ್ಷಕ್ಕಿಂತ ಕಡಮೆ. ಹೆಚ್ಚುಕಾಲ ಒಬ್ಬನನ್ನೇ ಇಟ್ಟರೆ ಅವನು ಅಧಿಕಾರವನ್ನು ದುರುಪಯೋಗಪಡಿಸಿಕೊಳ್ಳಬಹುದು ಎಂಬ ಭೀತಿಯಿಂದ ಚಕ್ರವರ್ತಿಯು ಯಾರೊಬ್ಬನನ್ನೂ ದೀರ್ಘಕಾಲ ಅಧಿಕಾರದಲ್ಲಿರಲು ಬಿಡುತ್ತಿರಲಿಲ್ಲವೆಂದು ತೋರುತ್ತದೆ. ಮಲಯ ದಂಡನಾಯಕ(೧೩೪೫-೬೫) ಮತ್ತು ಶಂಕರದೇವ ಒಡೆಯ (೧೪೦೮-೨೦) ಇವರೇ ಹೆಚ್ಚುಕಾಲ ಅಧಿಕಾರದಲ್ಲಿದ್ದವರು. ಅದಕ್ಕೆ ಕಾರಣ ಅವರು ಚಕ್ರವರ್ತಿಗೆ ತೋರಿಸುತ್ತಿದ್ದ ಅಪೂರ್ವ ನಿಷ್ಠೆ ಹಾಗೂ ಸಾಮ್ರಾಜ್ಯಕ್ಕೆ ಅವರು ಸಲ್ಲಿಸಿದ ಸೇವೆ. ಅಲ್ಲದೆ ಕೆಲವರನ್ನು ಅದೇ ಹುದ್ದೆಗೆ ನಿರ್ದಿಷ್ಟ ಅವಧಿಗಿಂತ ಹೆಚ್ಚುಕಾಲ ನೇಮಿಸಲಾಗುತ್ತಿತ್ತು. ಉದಾಹರಣೆಗೆ ಮಲ್ಲಪ್ಪ ಒಡೆಯನು ಬಾರಕೂರು ರಾಜ್ಯವನ್ನು ೧೩೮೬-೯೧ ಹಾಗೂ ೧೩೯೫-೯೬ ಒಟ್ಟು ಎಂಟು ವರ್ಷ ನೋಡಿಕೊಂಡನು. ಮಂಗಳೂರಿನಿಂದ ಬಾರಕೂರಿಗೂ, ಬಾರಕೂರಿನಿಂದ ಮಂಗಳೂರಿಗೂ ವರ್ಗಾವಣೆಯೂ ಆಗುತ್ತಿದ್ದಿತು. ಬಸವಣ್ಣ ಒಡೆಯನು ೧೪೦೦ರಿಂದ ೧೪೦೩ವರೆಗೆ ಬಾರಕೂರು ರಾಜ್ಯವನ್ನು ನೋಡಿಕೊಳ್ಳುತ್ತಿದ್ದನು; ಅವನೇ ೧೪೦೩ ರಿಂದ ೧೪೦೪ರ ವರೆಗೆ ಮಂಗಳೂರಿನ ಉಸ್ತುವಾರಿ ವಹಿಸಿದುದಾಗಿಯೂ ಕಂಡುಬರುತ್ತದೆ.[೧೬೯] ಚಕ್ರವರ್ತಿಯು ನೇಮಿಸಿದ ಈ ಸುದೀರ್ಘ ಪಟ್ಟಿಯಲ್ಲಿ ಒಂದು ಮುಸ್ಲಿಂ ಹೆಸರಿರುವುದು ಸ್ವಾರಸ್ಯವಾದ ಸಂಗತಿಯಾಗಿದೆ. ಅವನ ಹೆಸರು ಏಕದಲಖಾನ. ಸದಾಶಿವರಾಯನು ಕ್ರಿ.ಶ. ೧೫೫೧ರಲ್ಲಿ ಅವನನ್ನು ಬಾರಕೂರು ರಾಜ್ಯಕ್ಕೆ ಉಸ್ತುವಾರಿ ಅಧಿಕಾರಿಯಾಗಿ ನೇಮಿಸಿದನು. ಕೃಷ್ಣದೇವರಾಯನ ಕಾಲದಿಂದ ಮುಂದಕ್ಕೆ ಎರಡೂ ರಾಜ್ಯಗಳ ಮೇಲ್ವಿಚಾರಣೆಗೆ ಒಬ್ಬನೇ ರಾಜಪ್ರತಿನಿಧಿಯನ್ನು ನೇಮಿಸುವ ರೂಢಿ ಬಂದಿತು.[೧೭೦] ಕೆಳದಿಯ ಸದಾಶಿವನಾಯಕನ ಆಳ್ವಿಕೆಯಲ್ಲಿ ಇನ್ನೊಂದು ಅತಿಮುಖ್ಯ ಬದಲಾವಣೆಯು ಸಂಭವಿಸಿತು. ಇಡೀ ತುಳುನಾಡನ್ನು ಕೆಳದಿಯ ನಾಯಕನಿಗೆ ಅಮರಮಾಗಣಿಯನ್ನಾಗಿ ವಹಿಸಿಕೊಡಲಾಯಿತು. ಅಂದರೆ ಉಪ-ಸಾಮಂತ ಪ್ರಕ್ರಿಯೆಗೆ ಆ ಪ್ರದೇಶವನ್ನು ಒಳಪಡಿಸಲಾಯಿತು. ಕೆಳದಿಯ ನಾಯಕರು ವಿಜಯನಗರ ಸಾಮ್ರಾಜ್ಯದ ಅಮರನಾಯಕರಾಗಿದ್ದು ನೇರವಾಗಿ ಚಕ್ರವರ್ತಿಗಳ ಹತೋಟಿಯಲ್ಲಿದ್ದರು. ಈಗ ತುಳುನಾಡಿನ ರಾಜರು ಕೆಳದಿನಾಯಕರ ಪ್ರಭುತ್ವವನ್ನು ಒಪ್ಪಿಕೊಂಡುದರಿಂದ ಉಪ-ಅಧೀನತಾ ಪ್ರಕ್ರಿಯೆಗೆ ಒಳಪಟ್ಟಂತಾಯಿತು.[೧೭೧]

ತುಳುನಾಡು ಪ್ರದೇಶದಲ್ಲಿ ಸಾಮಂತ ಪದ್ಧತಿಯು ವ್ಯವಸ್ಥಿತವಾದ ರೀತಿಯಲ್ಲಿತ್ತು. ಕಳಸ-ಕಾರ್ಕಳ, ನಗಿರೆ, ಹಾಡುವಳ್ಳಿಗಳ ಸಾಮಂತರು ಮುಖ್ಯರಾಗಿದ್ದರು. ಬಂಗ, ಚೌಟ, ಮದ್ದ-ಹೆಗ್ಗಡೆ, ಕಿಣ್ಣಿಕ-ಹೆಗ್ಗಡೆ, ಅಜಿಲ ಮುಂತಾದವರು ಅಲ್ಲಿಯ ಸಣ್ಣ ಪುಟ್ಟ ಸಾಮಂತರು. ಇವರ ಆಡಳಿತ ಪ್ರದೇಶಗಳೂ ಬೇರೆ ಬೇರೆ

ಗಾತ್ರದವು. ಕಳಸ-ಕಾರ್ಕಳ, ನಗಿರೆ, ಹಾಡುವಳ್ಳಿ ರಾಜರು ಬಹಳ ಪ್ರಬಲರಾಗಿದ್ದು ವಿಸ್ತಾರವಾದ ಭೂಪ್ರದೇಶಗಳನ್ನು ಹೊಂದಿದ್ದರು. ಅವರಿಗೆ ಘಟ್ಟದ ಮೇಲೆಯೂ ಭೂಮಿಯಿತ್ತು. ಇತರರಿಗೆ ಕರಾವಳಿಯುದ್ದಕ್ಕೆ ಭೂಪ್ರದೇಶಗಳು ಸೇರಿದ್ದುವು. ಈ ಅಧೀನರಾಜರ ಅರೆ-ಸ್ವತಂತ್ರ ಸ್ಥಾನಕ್ಕೆ ಚಕ್ರವರ್ತಿಯ ಕಡೆಯಿಂದ ಅಡ್ಡಿಯಾಗುತ್ತಿರಲಿಲ್ಲ; ಅವರು ಆತನಿಗೆ ತಮ್ಮ ನಿಷ್ಠೆಯನ್ನು ವ್ಯಕ್ತಪಡಿಸಿದರೆ ಅಷ್ಟು ಸಾಕಾಗಿತ್ತು. ಈ ಕೆಳಗಿನ ಪಟ್ಟಿಯು ತುಳುನಾಡಿನ ರಾಜಪ್ರತಿನಿಧಿಗಳ ಹೆಸರುಗಳನ್ನು ಕೊಡುತ್ತದೆ.

ಬಾರಕೂರಿನ ರಾಜ್ಯಪಾಲರು

(ಕ್ರಿ.ಶ. ೧೩೫೩ರಿಂದ ಕ್ರಿ.ಶ. ೧೫೮೭ವರೆಗೆ)

ಹೆಸರು	ತೇದಿ	ಉಲ್ಲೇಖ
ಗೋಪರಸ ಒಡೆಯ	ಕ್ರಿ.ಶ.೧೩೫೩	ಎ.ಆರ್.೩೧೪, ೧೯೩೧-೩೨
ಮಹಾಪ್ರಧಾನ ಮಲ್ಲಯ	೧೩೫೬-೬೫	ಅದೇ ೫೩೪,೧೯೨೯-೩೦
ಮಹಾಪ್ರಧಾನ ಗೋಪರಸ ಒಡೆಯ	೧೩೬೬	ಸೌ.ಇ.ಇ. ೯-೨, ೪೦೯
	೧೩೭೩	ಅದೇ, ೭ ೩೦೬,೩೫೮
ಬಾಚರಸ ಒಡೆಯ	೧೩೭೬	ಅದೇ, ೩೪೧
ಬೊಮ್ಮರಸ ಒಡೆಯ	೧೩೭೭	ಅದೇ, ೯-೨, ೪೧೭
	೧೩೮೦	ಅದೇ, ೭, ೩೨೫; ೫೪೭, ಎ.ಆರ್. ೧೯೩೦
ಮಹಾಪ್ರಧಾನ ಜಕ್ಕಣ್ಣ ಒಡೆಯ	೧೩೮೨	ಅದೇ, ೩೧೭ ಮತ್ತು ೩೭೯
	೧೩೮೬	
ಮಲ್ಲಪ್ಪ ಒಡೆಯ	೧೩೮೬	ಅದೇ, ೩೫೧ ಮತ್ತು ೩೯೧
	೧೩೯೧	
ವಿರುಗಪ್ಪ ದಂಡನಾಯಕ	೧೩೮೯	ಹಳ್ಳಿಯಂಗಡಿಯಲ್ಲಿ ಕಂಡುಹಿಡಿದ ಹೊಸಶಾಸನ
ಸಿಂಗಣ್ಣ ಒಡೆಯ	೧೩೯೩	ಸೌ.ಇ.ಇ. ೭, ೩೪೪
ಹೆಗ್ಗಡೆ ಸಂಕರಸ	೧೩೯೪	ಅದೇ., ೩೫೬ ಮತ್ತು ೨೯೯
(ಶಂಕರದೇವ ಒಡೆಯ)	೧೩೯೫	
ಮಲ್ಲಪ್ಪ ಒಡೆಯ	೧೩೯೫-೧೩೯೬	ಅದೇ, ೩೬೩ ಮತ್ತು ೩೪೨
ಮಹಾಪ್ರಧಾನ ಶಂಕರದೇವ	೧೩೯೭	
ನಾಗರಸ ಒಡೆಯ	೧೩೯೯	ಅದೇ, ೩೫೦
ಬಸವಪ್ಪ ಒಡೆಯ	೧೪೦೦-೧೪೦೨	ಅದೇ, ೯-೨, ೪೨೩ ಮತ್ತು ೪೨೬
ಮಹಾಪ್ರಧಾನ ಬಾಚಪ್ಪ ಒಡೆಯ	೧೪೦೬	ಎಂ.ಎ.ಆರ್.೧೯೪೩, ಪು. ೧೪೭
ಶಂಕರದೇವ ಒಡೆಯ	೧೪೦೮	ಕ.ಇ. ೧, ಸಂ. ೩೭, ೧೯೩೯-೪೦
ಮಹಾಪ್ರಧಾನ ಬಾಚಣ್ಣ ಒಡೆಯ	೧೪೧೧	ಸೌ.ಇ.ಇ.೯-೨, ೪೩೫

ಶಂಕರದೇವ ಒಡೆಯ	೧೪೧೪-೧೪೧೭	ಎ.ಆರ್. ೫೪೫, ೧೯೩೦ ಮತ್ತು
		ಕ.ಇ.೧, ಸಂ. ೩೭, ೧೯೩೯-೪೦
		ಎ.ಆರ್. ೬೦೧, ೧೯೩೦ ಮತ್ತು
		ಕ.ಇ.೧, ಸಂ. ೪೧, ೧೯೩೯-೪೦
ಅಣ್ಣಪ್ಪ ಒಡೆಯ	೧೪೧೮	ಸೌ.ಇ.ಇ. ೭, ೨೬೧
ಮಹಾಪ್ರಧಾನ ಶಂಕರದೇವ ಒಡೆಯ	೧೪೨೨	ಎ.ಆರ್. ೫೪೫, ೧೯೩೦
ವಿರುಪಣ್ಣ	೧೪೨೨	ಕ.ಇ. ೧, ಸಂ. ೫೨, ೧೯೩೯-೪೦
ಹೈತದೇವ ಒಡೆಯ	೧೪೨೩	ಎ.ಆರ್. ೩೧೭, ೧೯೩೧-೩೨
ವಿರುಪಣ್ಣ ಒಡೆಯ	೧೪೨೪	ಅದೇ, ೩೬೬, ೧೯೩೧-೩೨
ನರಸಿಂಹದೇವ ಒಡೆಯ	೧೪೨೩	ಸೌ.ಇ.ಇ. ೯-೨, ೪೪೧
		ಎ.ಆರ್. ೫೭೧, ೧೯೨೯-೩೦
ತಿಮ್ಮಪ್ಪ ಒಡೆಯ	೧೪೨೭	ಅದೇ, ೪೦, ೧೯೩೯-೪೦
ಅಣ್ಣಪ್ಪ	೧೪೩೧	ಎ.ಆರ್. ೩೩೪, ೧೯೩೧-೩೨
ಮಹಾಪ್ರಧಾನ ಚಂದ್ರರಸ	೧೪೩೧	ಸೌ.ಇ.ಇ. ೭, ೩೦೯, ೩೧೧
	೧೪೩೩	೩೪೮ ಇತ್ಯಾದಿ
		ಅದೇ, ೯-೨, ೪೪೪
ಅಣ್ಣಪ್ಪ ಒಡೆಯ	೧೪೩೬	ಅದೇ, ೯-೨, ೪೪೬
	೧೪೩೭	ಅದೇ, ೭, ೩೭೨
ಅಂತಪ್ಪ ಒಡೆಯ	೧೪೩೮	ಕ.ಇ. ೧, ಸಂ. ೫೬, ೧೯೩೯-೪೦
ಅಣ್ಣರಸ (ಅಣ್ಣಪ್ಪ ಒಡೆಯ)	೧೪೩೯	ಎ.ಆರ್. ೩೪೬, ೧೯೩೦-೩೧
	೧೪೪೦	ಸೌ.ಇ.ಇ. ೭, ೩೧೩
ಚಂದ್ರರಸ ಒಡೆಯ	೧೪೪೨	ಅದೇ, ೯-೨, ೪೪೮
ಮಹಾಪ್ರಧಾನ ತಿಮ್ಮಣ್ಣ ಒಡೆಯ	೧೪೪೨	ಅದೇ ೭, ೩೬೭
	೧೪೪೪	ಎ.ಆರ್. ೩೨೩, ೧೯೩೧-೩೨
		ಅದೇ, ೫೮೮, ೧೯೨೯-೩೦
ಮಹಾಪ್ರಧಾನ ಆಚರಸ ಒಡೆಯ	೧೪೪೬	ಕ.ಇ.೧, ಸಂ. ೫೮-೫೯, ೧೯೩೯-೪೦
	೧೪೪೭	ಎ.ಆರ್. ೫೫೩, ೧೯೨೯-೩೦
ರೂಪಣ್ಣ ಒಡೆಯ	೧೪೪೭	ಎ.ಆರ್. ೪೬೭ ಮತ್ತು ೫೯೦
	೧೪೪೮	
ದೇವಪ್ಪ-ದಣ್ಣಾಯಕ ಒಡೆಯ	೧೪೪೯	ಎ.ಆರ್. ೫೯೬, ೧೯೨೯-೩೦
ರಾಯರಸ ಒಡೆಯ	೧೪೪೯	ಸೌ.ಇ.ಇ.೭, ೩೩೭
ಲಿಂಗರಸ ಒಡೆಯ (ಲಿಂಗಪ್ಪ)	೧೪೫೦	ಅದೇ, ೯-೨, ೪೫೨
ಮಹಾಪ್ರಧಾನ ವಲ್ಲಭದೇವ ಒಡೆಯ	೧೪೫೧	ಅದೇ, ೪೫೩
ಬಾಣಪ್ಪ ಒಡೆಯ	೧೪೫೧	ಅದೇ, ೪೫೬ ಎ.ಆರ್. ೫೫೯
	೧೪೫೨	೧೯೨೯-೩೦

ದೇಮಣ್ಣ ಒಡೆಯ	೧೪೫೩	ಸೌ.ಇ.ಇ.೭, ನಂ. ೩೬೮
ಪಂಡರಿದೇವ ಒಡೆಯ	೧೪೫೫	ಅದೇ, ೯-೨, ೪೫೭
		ಎ.ಆರ್. ೫೮೯, ೧೯೨೯-೩೦
ಬಾಣಪ್ಪ ಒಡೆಯ	೧೪೫೭	ಅದೇ, ೩೫೮, ೧೯೩೦-೩೧
ಗುರುವಪ್ಪ ಒಡೆಯ	೧೪೫೯	ಸೌ.ಇ.ಇ.೭, ೩೩೬ ಮತ್ತು ೩೧೫
ಸಿದ್ದಪ್ಪ ದಣ್ಣಾಯಕ	೧೪೫೯	ಎ.ಆರ್. ೫೯೫, ೧೯೨೯-೩೦
ದೇವರಸ ಒಡೆಯ	೧೪೬೧	
ಶಂಕರದೇವ ಒಡೆಯ	೧೪೬೧	ಎ.ಆರ್. ೫೮೯, ೧೯೨೯-೩೦
ಹೆಗ್ಗಡೆ ದೇವಪ್ಪ ದಣ್ಣಾಯಕ	೧೪೬೨	ಸೌ.ಇ.ಇ. ೭, ೩೩೮
ಮಹಾಪ್ರಧಾನ ಲಕ್ಕಣ ಒಡೆಯ	೧೪೬೩	ಅದೇ, ೩೬೧
ಪಂಡರಿದೇವ ಒಡೆಯ	೧೪೬೫	ಅದೇ, ೯-೨, ೪೩೯
ಸಿಂಗರಸ ಒಡೆಯ	೧೪೬೬	ಅದೇ. ೭, ೩೨೦
ಕೊಂಡರಾಜ ಒಡೆಯ	೧೪೬೭	ಅದೇ, ೩೭೩
ವಿಟ್ಟರಸ ಒಡೆಯ	೧೪೬೭	ಅದೇ, ೯-೨, ೨ ೪೬೧
	೧೪೬೮	ಎ.ಆರ್. ೩೭೨, ೧೯೩೨
ಪಂಡರಿದೇವ ಒಡೆಯ	೧೪೮೦	ಹಿಲವಾರದಲ್ಲಿ ಕಂಡುಬಂದ ಹೊಸಶಾಸನ
	೧೪೮೨	ಅದೇ, ೪೭೧
ಮಲ್ಲಪ್ಪನಾಯಕ	೧೪೮೨	ಅದೇ, ೪೭೧
ವಿರೂಪಾಕ್ಷ ಒಡೆಯ	೧೪೮೬	ಎ.ಆರ್. ೨೫೦, ೧೯೩೧-೩೨
	೧೪೮೭	ಸೌ.ಇ.ಇ. ೯-೨, ೪೭೩
ಹಂಪರಸ ಒಡೆಯ	೧೪೯೧	ಅದೇ, ೩೬೯, ೧೯೩೧-೩೨
ಹೊನ್ನಕಳಸರಾಯ	೧೪೯೨	ಅದೇ, ೫೯೮, ೧೯೨೯-೩೦
	೧೪೯೪	ಅದೇ, ೨೭೦, ೧೯೩೧-೩೨
ಪಂಡರಿದೇವ ಒಡೆಯ	೧೪೯೫	ಅದೇ, ೨೭೯, ೧೯೩೧-೩೨
ಸದಾರಣದೇವ	೧೫೦೦	ಸೌ.ಇ.ಇ.೭, ೩೬೪
ಕೆಂಡದ ಬಸವರಸ	೧೫೦೩	ಅದೇ, ೩೪೫ ಎ.ಆರ್. ೫೪೧
	೧೫೦೮	೧೯೩೧-೩೨
ಸೋಮಣ್ಣ ಒಡೆಯ	೧೫೧೦	ಎ.ಆರ್. ೨೭೧, ೧೯೩೧-೩೨
ರತ್ನಪ್ಪ ಒಡೆಯ	೧೫೧೩	ಅದೇ, ೩೪೦, ೧೯೩೦-೩೧
	೧೫೧೯	ಸೌ.ಇ.ಇ.೭, ೨೨೮
ವಿಜಯಪ್ಪ ಒಡೆಯ	೧೫೧೯	ಅದೇ,೯-೨, ೫೧೧ ಮತ್ತು ೫೧೨
	೧೫೨೦	ಎ.ಆರ್. ೫೧೫, ೧೯೨೯-೩೦
ವಿಟ್ಟರಸ ಡಣ್ಣಾಯಕ	೧೫೨೩	ಅದೇ, ೨೫೩, ೧೯೩೧-೩೨
	೧೫೨೫	ಸೌ.ಇ. ಇ. ೩೪೯

ಎತಿರಾಯ ಒಡೆಯ	೧೫೨೬	ಅದೇ, ೯-೨, ೫೨೦
ಆಹ್ಯ ತಿಮ್ಮಣ್ಣ	೧೫೨೮	ಅದೇ, ೫೨೫; ಎ.ಆರ್. ೩೫೫ ೧೯೩೦-೩೧
ಕೊಂಡಪ್ಪ ಒಡೆಯ	೧೫೩೩	ಅದೇ, ೯-೨, ೫೫೫
	೧೫೩೬	ಮತ್ತು ೫೭೮
ಆಚಪ್ಪ ಒಡೆಯ	೧೫೪೩	ಎ.ಆರ್. ೫೯೯, ೧೯೩೦-೩೧
ಚೆನ್ನರಸಣ್ಣ	೧೫೪೪	ಸೌ.ಇ.ಇ. ೯-೨, ೬೦೯
ಓಬಳರಾಯ ಒಡೆಯ	೧೫೪೪	ಎ.ಆರ್. ೩೧೦, ೧೯೩೨
ಅಚ್ಯುತ ಒಡೆಯ	೧೫೪೬	ಸೌ.ಇ.ಇ. ೯-೨, ೬೨೦-೬೨೧
ಏಕದಲಖಾನ್ ಒಡೆಯ	೧೫೫೧	ಎ.ಆರ್. ೩೭೫, ೧೯೨೭
ಮಲ್ಲಪ್ಪ ಒಡೆಯ	೧೫೫೪	ಸೌ.ಇ.ಇ. ೯-೨, ೬೫೫
	೧೫೫೭	ಎ.ಆರ್. ೨೯೪, ೧೯೩೨
ಕೊಲ್ಲೆಯ ಎಲ್ಲಪ್ಪ ಒಡೆಯ	೧೫೬೨	ಸೌ. ಇ.ಇ. ೯-೨, ೬೭೩
	೧೫೬೪	ಎ.ಆರ್. ೨೮೩, ೧೯೩೨
ದಲಂದ್ಯಿ ಲಿಂಗರಸರಾಯ	೧೫೬೯	ಸೌ.ಇ.ಇ. ೭, ೩೮೬
ರಾಮಕೃಷ್ಣ ಒಡೆಯ	೧೫೭೧	ಎ.ಆರ್. ೫೭೪, ೧೯೨೯-೩೦
ಆಚಪ್ಪ ಒಡೆಯ	೧೫೮೧	ಸೌ.ಇ.ಇ.೭, ೩೭೫ ಮತ್ತು ೩೨೧
	೧೫೮೬	
ಕೈಚಪ್ಪ	೧೫೮೭	ಅದೇ, ೩೩೧

ಮಂಗಳೂರಿನ ರಾಜ್ಯಪಾಲರು

(ಕ್ರಿ.ಶ. ೧೩೪೫ರಿಂದ ಕ್ರಿ.ಶ. ೧೫೬೩ರ ವರೆಗೆ)

ಶಂಕರದೇವ ಒಡೆಯ	೧೩೪೫	ಸೌ.ಇ.ಇ.೭, ೧೭೯
ಗೌಲರಸ	೧೩೪೬	ಎ.ಆರ್. ೧೯೦೦ ಪು. ೧೮
ಮಲ್ಲಯ ಡಣ್ಣಾಯಕ	೧೩೪೮	ಕ.ಇ. ೧, ೪೦
ಹಡಪದ ಗೌಟರಸ	೧೩೪೯	ಸೌ.ಇ.ಇ. ೭, ೨೩೧
ಮಲ್ಲಯ	೧೩೫೩	ಎ.ಆರ್. ೩೧೪ ೧೯೩೨
ಮಾದರಸ	೧೩೬೪	ಸೌ.ಇ.ಇ. ೯-೨, ೪೦೮
ಶಂಕರದೇವ ಒಡೆಯ	೧೩೭೫	
ಪಂಡರಿದೇವ ಒಡೆಯ	೧೩೭೭	ಸೌ.ಇ.ಇ. ೯-೨, ೪೧೬
ಮಾದರಸ	೧೩೭೯	ಅದೇ, ೪೧೮
ಮಲ್ಲರಸ	೧೩೮೯	ಎ.ಆರ್. ೪೭೭, ೧೯೨೮-೨೯
ಮಾದರಸ	೧೩೯೦	ಸೌ.ಇ.ಇ. ೯, ೧೮೬

ಮಂಗರಸ	೧೩೯೦	ಅದೇ, ೨೨೯
ಲಿಂಗರಸ	೧೩೯೦	ಎ.ಆರ್. ೬೫೨, ೧೯೫೮-೫೯
ಹಡಪದ ಮಾದರಸ	೧೩೯೬	ಸೌ.ಇ.ಇ. ೭, ೧೮೩
ನಾಗಣ್ಣ ಒಡೆಯ	೧೪೦೪	ಅದೇ, ೪೭೦, ೧೯೨೯
	೧೪೦೬	ಸೌ.ಇ.ಇ. ೩೪೯, ೨೧೧
	೧೪೦೭	
ಬನಪ್ಪ ಒಡೆಯ	೧೪೦೭	
ತಿಮ್ಮಣ್ಣ ಒಡೆಯ	೧೪೧೧	ಸೌ.ಇ.ಇ. ೭, ೨೫೯
ಕೇಸಪ್ಪ ಒಡೆಯ	೧೪೧೭	ಎ.ಆರ್. ೬೩೮, ೧೯೬೨
ಅಣ್ಣಪ್ಪ ಒಡೆಯ	೧೪೧೮	ಸೌ.ಇ.ಇ. ೭, ೨೬೧
ತಿಮ್ಮಣ್ಣ ಒಡೆಯ	೧೪೧೯	ಅದೇ, ೧೮೨
	೧೪೨೦	ಅದೇ, ೧೮೭ ಮತ್ತು ೧೯೨
	೧೪೨೩	
ದೇವರಾಯ ಒಡೆಯ	೧೪೨೯	ಸೌ.ಇ.ಇ. ೬, ೧೯೬; ಅದೇ,
	೧೪೩೦	೯-೨, ೪೪೨
ಅಣ್ಣಪ್ಪ ಒಡೆಯ	೧೪೩೧	ಎ.ಆರ್. ೩೩೪, ೧೯೩೧
ದೇವರಾಯ ಒಡೆಯ	೧೪೩೩	ಸೌ.ಇ.ಇ. ೭, ೨೩೦
	೧೪೩೭	ಪಾಪಂಬೂರಿನ ಹೊಸಶಾಸನ
ಅಣ್ಣಪ್ಪ ಒಡೆಯ	೧೪೩೭	ಸೌ.ಇ.ಇ. ೭, ೩೧೩
	೧೪೪೦	
ತ್ರಿಯಂಬಕದೇವ ಒಡೆಯ	೧೪೪೮	ಎ.ಆರ್. ೪೬೭, ೧೯೨೯
ಗೋಪಣ್ಣ ಒಡೆಯ (ಗಣಪಣ್ಣ)	೧೪೫೧	ಸೌ.ಇ.ಇ. ೭, ೧೯೭
ತಿಮ್ಮಣ್ಣ ಡಣ್ಣಾಯಕ	೧೪೫೬	ಅದೇ, ೧೮೪
ವಿಟ್ಟರಸ ಒಡೆಯ	೧೪೬೫	ಅದೇ, ೯-೨, ೪೬೦
	೧೪೭೮	ಎ.ಆರ್. ೨೭೨, ೧೯೩೨
ರತ್ನಪ್ಪ ಒಡೆಯ	೧೫೧೩	ಸೌ.ಇ.ಇ. ೭, ೨೨೮, ೨೧೨.
	೧೫೧೬	
ಕೊಂಡಪ್ಪ	೧೫೩೫	ಎ.ಆರ್. ೪೮೭,೧೯೨೯
ಸದಾಶಿವರಾಯ ನಾಯಕ	೧೫೫೭	ಕಾಪುವಿನಲ್ಲಿ ದೊರೆತ ಹೊಸಶಾಸನ[೧೬೨]

ಈ ರಾಜ ಪ್ರತಿನಿಧಿಗಳು ಸಾಮ್ರಾಜ್ಯಕ್ಕಾಗಿ ಕೆಲವು ಕರ್ತವ್ಯಗಳನ್ನು ನಿರ್ವಹಿಸಬೇಕಾಗಿತ್ತು. ರಾಜರ ಚಟುವಟಿಕೆಗಳನ್ನು ಎಚ್ಚರದಿಂದ ಗಮನಿಸುತ್ತಿರಬೇಕಾಗಿತ್ತು. ಏಕೆಂದರೆ ಅವರಲ್ಲಿ ಕೆಲವು ರಾಜರು ಬಹಳ ಪ್ರಬಲರಾಗಿದ್ದು, ಚಕ್ರವರ್ತಿಯು ಪರಮ ಪ್ರಭುತ್ವವನ್ನು ಸ್ಥಾಪಿಸುವುದಕ್ಕಿಂತಲೂ ಮೊದಲೇ ಕರಾವಳಿಯ ಬೇರೆ ಬೇರೆ ಪ್ರದೇಶಗಳನ್ನು ಅವರು ನಿಯಂತ್ರಿಸುತ್ತಿದ್ದರು. ಈ ಕಾರಣದಿಂದಲೇ ಚಕ್ರವರ್ತಿಯು ಅವರಿಗೆ

ಯಾವ ತೊಂದರೆಯನ್ನೂ ಮಾಡುತ್ತಿರಲಿಲ್ಲ, ಅವರ ನಿಷ್ಠೆಯನ್ನೂ ನಿಗದಿಯಾದ ಕಾಣಿಕೆಯನ್ನೂ ನಿರೀಕ್ಷೆ ಮಾಡುತ್ತಿದ್ದು ದಷ್ಟೆ. ಅಲ್ಲದೆ ವಿಜಯನಗರದ ಚಕ್ರವರ್ತಿಗಳು ಈ ರಾಜರನ್ನು ಸುಹೃದ್ಭಾವದಿಂದ ಇರಿಸಿಕೊಂಡು ತುಳುನಾಡು ಅಥವಾ ಕರಾವಳಿ ಪ್ರದೇಶದ ಆಡಳಿತ ನಿರ್ವಹಣೆಯಲ್ಲಿ ಅವರ ಸೇವೆಯನ್ನು ಬಳಸಿ ಕೊಳ್ಳುತ್ತಿದ್ದರು.[೧೭೬]

ಬಾರಕೂರು ಮತ್ತು ಮಂಗಳೂರುಗಳಲ್ಲಿ ರಾಜ ಪ್ರತಿನಿಧಿಗಳ ಅತ್ಯಂತ ಮುಖ್ಯವಾದ ಕೆಲಸ ಕಾನೂನು ಮತ್ತು ಸುವ್ಯವಸ್ಥೆಯ ಪಾಲನೆ. ಕರಾವಳಿಯ ಎಲ್ಲ ರಾಜರೂ ಸಾಮಂತಿಕೆಯ ಕಾಣಿಕೆಯನ್ನು ಚಕ್ರವರ್ತಿಗೆ ತಪ್ಪದೆ ಕೊಡುವಂತೆ ನೋಡಿಕೊಳ್ಳುವುದೂ ಅವರ ಕರ್ತವ್ಯವೇ ಆಗಿತ್ತು. ಈ ವಿಷಯದಲ್ಲಿ ಹಲವು ಸಂದರ್ಭಗಳಲ್ಲಿ ಅನೇಕ ರಾಜರು ಚಕ್ರವರ್ತಿಗೆ ಅವಿಧೇಯತೆ ತೋರಿಸಿದ್ದುಂಟು. ಉದಾಹರಣೆಗೆ ಪುತ್ತಿಗೆ ಮತ್ತು ಮೂಡಬಿದರೆಯ ಚೌಟರು[೧೭೭] ಕೇಂದ್ರದ ಪ್ರಭುತ್ವಕ್ಕೆ ಎದುರಾಗಿ ಬಂಡೆದ್ದರು. ಆ ಸಮಯದಲ್ಲಿ ಮಹಾಪ್ರಧಾನ ಮಂಗಪ್ಪ ದಂಡನಾಯಕನು ನಗರೆಯ ಹೈವರಸನೆಂಬ ರಾಜನ ನೆರವನ್ನು ಪಡೆದು ಚೌಟರ ದಂಗೆಯನ್ನು ಅಡಗಿಸಿದನು. ನಗರೆಯ ಸೈನ್ಯವು ಹಿಂದಿರುಗುತ್ತಿದ್ದಾಗ ಚೌಟರು ಮತ್ತೆ ಅದರ ಮೇಲೆ ಆಕ್ರಮಣ ಮಾಡಿದರು. ಕೊನೆಗೆ ನಡೆದ ಯುದ್ಧದಲ್ಲಿ ಜಕ್ಕಣ್ಣನಾಯಕ ಮತ್ತು ತಮ್ಮಣ್ಣನಾಯಕ ಎಂಬ ಇಬ್ಬರು ಸೇನಾಧಿಕಾರಿಗಳು ಪ್ರಾಣ ಕಳೆದುಕೊಂಡರು. ಆ ಬಿಕ್ಕಟ್ಟಿನ ಸಮಯದಲ್ಲಿ ರಾಜಪ್ರತಿನಿಧಿಯಾದ ಮಂಗಪ್ಪ ದಂಡನಾಯಕನು ಹೆಚ್ಚಿನ ಸೇನೆಯೊಂದಿಗೆ ಬಂದು ಚೌಟರನ್ನು ಸಂಪೂರ್ಣವಾಗಿ ಸೋಲಿಸಿ, ಚಕ್ರಾಧಿಪತ್ಯದ ಹತೋಟಿಗೆ ತಂದನು.

೧೪೩೮ನೆಯ ವರ್ಷದಲ್ಲಿ ಮಂಗಳೂರಿನ ರಾಜ ಪ್ರತಿನಿಧಿಯಾಗಿದ್ದ ಅಣ್ಣಪ್ಪ ಒಡೆಯನು ನಗರೆಯ ಮೇಲೆ ಧಾಳಿಮಾಡಿ ಅಲ್ಲಿಯ ರಾಜ ಭೈರದೇವ ಒಡೆಯನನ್ನು ಪರಾಭವಗೊಳಿಸಿ ತನ್ನ ಹತೋಟಿಗೆ ತಂದುಕೊಂಡನು.[೧೭೮] ಭೈರದೇವನು ಚಕ್ರವರ್ತಿಗೆ ಅವಿಧೇಯನಾದುದೇ ಅದಕ್ಕೆ ಕಾರಣ.

೧ನೇ ದೇವರಾಯನ ಆಳ್ವಿಕೆಯಲ್ಲಿ ಹಾಡುವಳ್ಳಿಯ ರಾಜ ಸಂಗಿರಾಯನು (ಉತ್ತರ ಕನ್ನಡ) ಕ್ರಿ.ಶ. ೧೪೧೫ರಲ್ಲಿ ದಂಗೆಯೆದ್ದನು. ಅವನು ಸ್ವತಂತ್ರ ಅರಸನಾಗಲು ಬಯಸಿದನು. ಆದರೆ ಕೇಂದ್ರದ ರಾಜ ಪ್ರತಿನಿಧಿ ಮಹಾಪ್ರಧಾನ ಶಂಕರದೇವ ಒಡೆಯನಿಗೆ ಅದು ಹಿಡಿಸಲಿಲ್ಲ. ಬಾರಕೂರಿನ ರಾಜ್ಯಪಾಲನಾದ ಅವನು ಸಂಗಿ ರಾಯನ ಸೇನೆಯ ಮೇಲೆ ಆಕ್ರಮಣ ಮಾಡಿದನು. ಯುದ್ಧದಲ್ಲಿ ಸಂಗಿರಾಯನ ಸೇನಾಪತಿ ಮಾಬು ನಾಯಕನು ಮೃತನಾದನು. ತನ್ನೆಲ್ಲ ಶಕ್ತಿ ಸಾಮರ್ಥ್ಯಗಳನ್ನು ಪ್ರಯೋಗಿಸಿ ಶಂಕರದೇವ ಒಡೆಯನು ದಂಗೆಯೆದ್ದಿದ್ದ ಹಾಡುವಳ್ಳಿಯ ರಾಜನನ್ನು ಸೋಲಿಸಿ ತನ್ನ ಹತೋಟಿಗೆ ತಂದುಕೊಂಡನು.[೧೭೯]

ಕ್ರಿ.ಶ. ೧೪೬೫ರಲ್ಲಿ ಪಂಡರಿದೇವನು ಬಾರಕೂರಿನ ರಾಜಪ್ರತಿನಿಧಿಯಾಗಿದ್ದನು. ಆ ಸಮಯದಲ್ಲಿ ನಿರುವಾರ ಗ್ರಾಮದ ಜನರು ಸರಕಾರಕ್ಕೆ ತೆರಿಗೆಯನ್ನು ಕೊಡಲು ನಿರಾಕರಿಸಿದರು. ಪಂಡರಿದೇವನು ಆ ಜನರ ವಿರುದ್ಧವಾಗಿ ಕ್ರಮ ಕೈಗೊಳ್ಳಲೇ ಬೇಕಾಯಿತು. ಅಷ್ಟರಲ್ಲಿ ಚಕ್ರವರ್ತಿಯು ರಾಮಚಂದ್ರ ದಂಡನಾಯಕನನ್ನು ಬಾರಕೂರಿಗೆ ಕಳುಹಿಸಿದನು. ಅವನು ಸಮಸ್ಯೆಯನ್ನು ಪರಿಹರಿಸಿ, ಅವರು ಕ್ರಮವಾಗಿ ತೆರಿಗೆಯನ್ನು ಪಾವತಿ ಮಾಡಬೇಕೆಂದು ಹೇಳಿದನು. ಜನರು ಅದಕ್ಕೆ ಒಪ್ಪಿದರು.[೧೮೦]

ಮೇಲಿನ ನಿದರ್ಶನಗಳು ಮಂಗಳೂರು ಬಾರಕೂರುಗಳಲ್ಲಿದ್ದ ರಾಜ ಪ್ರತಿನಿಧಿಗಳ ಜವಾಬ್ದಾರಿ ಏನಿದ್ದಿತೆಂಬುದನ್ನು ಸ್ಪಷ್ಟವಾಗಿ ಸೂಚಿಸುತ್ತವೆ. ಪ್ರತಿಯೊಂದು ಸಂದರ್ಭದಲ್ಲಿಯೂ ದಂಗೆಯನ್ನು ಅಡಗಿಸಿ ದಂಗೆಯೆದ್ದ ರಾಜನನ್ನು ಕೇಂದ್ರ ಅಧಿಕಾರದ ಹತೋಟಿಗೆ ತರಲಾಗುತ್ತಿತ್ತು. ಆದ್ದರಿಂದ ರಾಜಪ್ರತಿನಿಧಿಗಳು ಈ ರಾಜರುಗಳ ಚಟುವಟಿಕೆಯನ್ನು ಸದಾಕಾಲವೂ ಕಣ್ಣಿಟ್ಟು ನೋಡುತ್ತಿದ್ದರು. ಅವರ ಚಲನವಲನಗಳನ್ನು

ಗಮನಿಸುತ್ತಿದ್ದರು. ಏಕೆಂದರೆ ಯಾವುದೇ ಗಳಿಗೆಯಲ್ಲಿ ಬೇಕಾದರೂ ಈ ಸಾಮಂತರಾಜರು ಸಮಸ್ಯೆಯನ್ನು ತಂದೊಡ್ಡಬಹುದಾಗಿತ್ತು. ಕರಾವಳಿ ಪ್ರದೇಶದ ಸಾಮಂತರಾಜರನ್ನು ನಿಯಂತ್ರಿಸುವ ಉದ್ದೇಶದಿಂದಲೇ ಚಕ್ರವರ್ತಿಗಳು ಮಂಗಳೂರು, ಬಾರಕೂರುಗಳಲ್ಲಿ ತಮ್ಮ ಪ್ರತಿನಿಧಿಗಳನ್ನು ಅಥವಾ ರಾಜ್ಯಪಾಲರನ್ನು ನೇಮಕ ಮಾಡುತ್ತಿದ್ದರು.

ಕೇಂದ್ರ ಸರಕಾರವು ಬಲವಾಗಿರುವವರೆಗೆ ಸಾಮಂತರು ವಿಜಯನಗರಕ್ಕೆ ನಿಷ್ಠರಾಗಿದ್ದರು. ಯಾವಾಗ ಅವರು ದುರ್ಬಲರಾದರೋ ಆಗ ತಮ್ಮ ಸ್ವಾತಂತ್ರ್ಯವನ್ನು ಸ್ಥಾಪಿಸಿಕೊಳ್ಳಲು ತೊಡಗಿದರು. ಉದಾಹರಣೆಗೆ, ೧೪೯೪ರಲ್ಲಿ ವಿಜಯನಗರದಲ್ಲಿ ಗೊಂದಲವುಂಟಾದಾಗ ಅದರ ಉಪಯೋಗ ಮಾಡಿಕೊಂಡು ದೇವರಸ ಒಡೆಯನು ತಾನು ಸ್ವತಂತ್ರನೆಂದು ಘೋಷಿಸಿ, ಮಹಾರಾಜಾಧಿರಾಜ ಮತ್ತು ರಾಜಪರಮೇಶ್ವರ ಎಂಬ ಬಿರುದುಗಳನ್ನು ಧರಿಸಿದನು.[೧೭೮] ಅಲ್ಲದೆ ತಾನೇ ಸೇನಾಸಮೇತನಾಗಿ ಹೋಗಿ ಗೋವಾವನ್ನು ಮುತ್ತಿದನು. ಗೋವಾ ಮುಕುಂದಬಾನನ್ನು ಗೆಲ್ಲಲು ಅವನಿಗೆ ಸಾಧ್ಯವಾಗಲಿಲ್ಲ. ದೇವರಸ(ನಗರೆಯ ನಾಯಕ)ನ ಚಟುವಟಿಕೆಗಳು ಅವನು ಚಕ್ರವರ್ತಿಯ ಪರಮ ಪ್ರಭುತ್ವಕ್ಕೆ ಅವಿಧೇಯನಾಗಿದ್ದುದನ್ನು ಸ್ಪಷ್ಟವಾಗಿ ಸೂಚಿಸುತ್ತವೆ.

ಕೃಷ್ಣದೇವರಾಯನು ಅಧಿಕಾರವನ್ನು ವಹಿಸಿಕೊಂಡ ಮೇಲೆ ಈ ಎಲ್ಲ ನಾಯಕರನ್ನೂ ಮತ್ತೊಮ್ಮೆ ತನ್ನ ಹತೋಟಿಗೆ ತಂದುಕೊಂಡನು. ಆಗ ದೇವರಸ ಒಡೆಯನ ಮಗ ೨ನೇ ದೇವರಾಯ ನಗರೆಯ ನಾಯಕನಾಗಿದ್ದನು. ತನ್ನ ಒಂದು ಶಾಸನದಲ್ಲಿ ತನ್ನ ಪ್ರಭುವು ಕೃಷ್ಣದೇವರಾಯನೆಂದು ಅವನು ಉಲ್ಲೇಖಿಸಿದ್ದಾನೆ.[೧೭೯]

೧೫೧೫ರಿಂದ ೧೫೧೬ರ ವರೆಗೆ ೪ನೇ ಬೈರವನು ಕಳಸ-ಕಾರ್ಕಳ ಪ್ರದೇಶವನ್ನು ಆಳುತ್ತಿದ್ದನು. ಅವನು ಕಾಲಕ್ರಮದಲ್ಲಿ ಪ್ರಬಲನಾಗಿ ಚಕ್ರವರ್ತಿಯ ವಿರುದ್ಧ ಬಂಡಾಯದ ಬಾವುಟವನ್ನು ಹಾರಿಸಿದನು. ಆಗ ಕೃಷ್ಣ ದೇವರಾಯನು ತಾನೇ ಸೇನಾಸಮೇತ ಬಂದು ೫ನೇ ಬೈರವನನ್ನು ಸೋಲಿಸಿದನು. ಆಮೇಲೆ ಅವನು ಮಂಗಳೂರಿಗೆ ಹೋದನು.[೧೮೦] ಕೆಲವು ಕಾಲವಾದ ಮೇಲೆ ಬೈರವನ ಮೇಲೆ ದಯೆ ತೋರಿಸಿ, ತುಳುನಾಡನ್ನು ಬಿಟ್ಟು ಹೋಗುವುದಕ್ಕೆ ಮುಂಚೆ ಅವನ ಸಾಮಂತಿಕೆಯನ್ನು ಅವನಿಗೆ ಮರಳಿಸಿದನು. ಕಳಸ-ಕಾರ್ಕಳ ನಾಯಕನು ಅಲ್ಲಿಂದ ಮುಂದಕ್ಕೆ ಚಕ್ರವರ್ತಿಗೆ ಪರಮ ವಿಧೇಯತೆಯಿಂದ ನಡೆದುಕೊಂಡನು. ೧೫೨೪ರ ತನ್ನದೊಂದು ಶಾಸನದಲ್ಲಿ ಅವನು ಕೃಷ್ಣದೇವರಾಯನು ತನ್ನ ಪರಮಪ್ರಭು ಎಂದು ಹೇಳಿಕೊಂಡಿದ್ದಾನೆ.[೧೮೧] ಈ ನಿದರ್ಶನಗಳಿಂದ, ಕೇಂದ್ರ ಸರಕಾರವು ಬಲಿಷ್ಠವಾಗಿದ್ದಾಗ ಕರಾವಳಿ ಪ್ರದೇಶದ ನಾಯಕರು ವಿಧೇಯರಾಗಿದ್ದರು ಎಂಬುದು ಸಿದ್ಧವಾಗುತ್ತದೆ.

ರಾಜ ಪ್ರತಿನಿಧಿಗಳಿಗಿದ್ದ ಎರಡನೆಯ ಮುಖ್ಯ ಕರ್ತವ್ಯ ಇದು: ಕರಾವಳಿಯಲ್ಲೇ ಇಬ್ಬರು ರಾಜರಿಗೆ ವೈಮನಸ್ಯವುಂಟಾದಾಗ ಅವರು ಮಧ್ಯಸ್ಥಗಾರರಾಗಲು ಮುಂದೆ ಬಂದು, ಭಿನ್ನಾಭಿಪ್ರಾಯಗಳನ್ನು ಪರಿಹರಿಸುತ್ತಿದ್ದರು. ಇತರ ಕೆಲವು ಸಂದರ್ಭಗಳಲ್ಲಿ ಎರಡು ಗುಂಪುಗಳು ಅಥವಾ ವರ್ಗಗಳ ನಡುವೆ ವ್ಯಾಜ್ಯ ತಲೆದೋರುತ್ತಿದ್ದುದುಂಟು. ಆಗಲೂ ಅವುಗಳನ್ನು ಪರಿಹರಿಸಲು ರಾಜ್ಯಪಾಲರು ತುಂಬಾ ಶ್ರಮಿಸುತ್ತಿದ್ದರು. ಕರಾವಳಿಯನ್ನು ನಿಯಂತ್ರಣದಲ್ಲಿಟ್ಟುಕೊಳ್ಳಲು ಇದು ತುಂಬಾ ಅಗತ್ಯವಾಗಿತ್ತು. ಉದಾಹರಣೆಗೆ ೧೪೭೪ರಲ್ಲಿ ಬಾರಕೂರು-ಮಂಗಳೂರುಗಳಿಗೆ ವಿಟ್ಟರಸ ಒಡೆಯನು ರಾಜ್ಯಪಾಲನಾಗಿದ್ದಾಗ ಬಾರಕೂರಿನ ಶೆಟ್ಟಿಕಾರರಿಗೂ ನಿಡಂಬೂರಿನ ಜನರಿಗೂ ಒಂದು ಕಲಹವೆದ್ದಿತು. ಖುಷ್ಕಿ ಜಮೀನನ್ನು ಕುರಿತ ಕಲಹವದು. ಆಗ ಕೇಂದ್ರದ ಪ್ರತಿನಿಧಿಯು ವಿಚಾರಣೆ ನಡೆಸಿ ಎರಡು ಗುಂಪಿಗೂ ತೃಪ್ತಿಯಾಗುವಂತೆ ಅದನ್ನು ಇತ್ಯರ್ಥ ಪಡಿಸಿದನು.[೧೮೨] ಇನ್ನೊಂದು ಸಂದರ್ಭದಲ್ಲಿ ಕುಂದಹೆಗ್ಗಡೆ, ದುಗ್ಗನಸೇವಿತ ಮದ್ದಹೆಗ್ಗಡೆ ಮತ್ತು ಕಿನ್ನೆಯ ಹೆಗ್ಗಡೆ ಎಂಬ ಮೂವರು ನಾಯಕರು, ಇನ್ನು ಮುಂದೆ ತಾವು ಪರಸ್ಪರ ವೈರವನ್ನು ತೊರೆಯತಕ್ಕದ್ದು ಎಂದು, ವಿಠ್ಠರಸ

ಒಡೆಯನು ರಾಜ್ಯಪಾಲನಾಗಿದ್ದಾಗ, ಕ್ರಿ.ಶ. ೧೪೭೬ರಲ್ಲಿ ಒಂದು ಕರಾರು ಮಾಡಿಕೊಂಡರು.[೧೮೩] ಬಹುಶಃ ಅವರು ರಾಜಪ್ರತಿನಿಧಿಯ ಪ್ರಚೋದನೆಯಿಂದ ಈ ಕ್ರಮವನ್ನು ಕೈಗೊಂಡಿರಬಹುದು. ಅಲ್ಲಿಯವರೆಗೂ ಒಂದಿಲ್ಲೊಂದು ಕಾರಣಕ್ಕಾಗಿ ಅವರು ಪರಸ್ಪರ ಕಚ್ಚಾಡುತ್ತಲೇ ಇದ್ದರು.

ಬಾರಕೂರು-ಮಂಗಳೂರುಗಳ ರಾಜಪ್ರತಿನಿಧಿಗಳು ಅಲ್ಲಿನ ಜನರ ಅಥವಾ ವರ್ತಕರ ದೈನಂದಿನ ವ್ಯವಹಾರಗಳಲ್ಲಿ, ಸರಿಯಾದ ಕಾರಣವಿಲ್ಲದೆ ಮಧ್ಯಪ್ರವೇಶ ಮಾಡುವಂತಿರಲಿಲ್ಲ. ಕರಾವಳಿಯ ಸಾಮಂತ ರಾಜರ ಚಟುವಟಿಕೆಗಳನ್ನು ಗಮನಿಸುವುದಕ್ಕಷ್ಟೇ ಅವರು ನೇಮಿತರಾಗಿದ್ದುದು. ಏನಾದರೂ ಕಾರಣದಿಂದ ರಾಜ ಪ್ರತಿನಿಧಿಯು ಜನರಿಗೆ ಕಿರುಕುಳ ಕೊಟ್ಟ ಪಕ್ಷದಲ್ಲಿ, ಒಡನೆಯೇ ಆ ಪ್ರದೇಶದ ಜನರ ಹಿತರಕ್ಷಣೆಗೆ ಧಾವಿಸುತ್ತಿದ್ದನು. ಉದಾಹರಣೆಗೆ, ೧೪೦೫ರಲ್ಲಿ ೨ನೇ ಹರಿಹರನು ಚಕ್ರವರ್ತಿಯಾಗಿದ್ದಾಗ ಮಹಾಬಲದೇವನು ಬಾರಕೂರಿನ ರಾಜ್ಯಪಾಲನಾಗಿದ್ದನು. ಅವನು ಬಾರಕೂರಿನ ವರ್ತಕರ ಸಂಘದ ವ್ಯವಹಾರದಲ್ಲಿ ಮೂಗು ತೂರಿಸಿದನು. ಇದರಿಂದ ತೊಂದರೆಗೊಳಗಾದ ಬಾರಕೂರಿನ ವರ್ತಕರ ಮುಖಂಡ ಚಿಕ್ಕಣ್ಣನು ಚಕ್ರವರ್ತಿಯಲ್ಲಿಗೆ ದೂರು ಕೊಂಡೊಯ್ದನು. ಮಹಾಬಲದೇವನ ಮೇಲೆ ಕ್ರಮ ಕೈಗೊಳ್ಳುವಂತೆ ಮನವಿ ಮಾಡಿದನು. ಚಕ್ರವರ್ತಿಯು ಆ ಮನವಿಯನ್ನು ಸ್ವೀಕರಿಸಿ, ಒಡನೆಯೇ ಗೋವಾದ ರಾಜ್ಯಪಾಲ ಮಹಾಪ್ರಧಾನ ಬಾಚಣ್ಣ ಒಡೆಯನನ್ನು ಈ ವಿಷಯದ ವಿಚಾರಣೆ ನಡೆಸಿ ವರ್ತಕರ ಕಷ್ಟವನ್ನು ಪರಿಹರಿಸಬೇಕೆಂದು ಅಪ್ಪಣೆ ಮಾಡಿದನು. ಅದರ ಪ್ರಕಾರ ಬಾಚಣ್ಣ ಒಡೆಯನು ಬಾರಕೂರಿಗೆ ಹೋಗಿ ವರ್ತಕರ ಸಮಸ್ಯೆಯನ್ನು ವಿಚಾರ ಮಾಡಿದನು. ಮಹಾಬಲದೇವನು ಕೈಗೊಂಡ ಕ್ರಮವು ಅನಗತ್ಯವಾಗಿತ್ತು ಎಂಬ ತೀರ್ಮಾನಕ್ಕೆ ಅವನು ಬಂದನು. ವರ್ತಕ ಸಂಘದ ಎಲ್ಲಾ ಸವಲತ್ತುಗಳನ್ನು ಸಂಘಕ್ಕೆ ಮರಳಿಸಿದನು, ಆಗಿಹೋದ ನಷ್ಟಕ್ಕಾಗಿ ಅವರಿಗೆ ಒಂದಷ್ಟು ಭೂಮಿಯನ್ನೂ ದಾನವಾಗಿ ನೀಡಲಾಯಿತು.[೧೮೪] ಚಕ್ರವರ್ತಿಯು ಅವನ ಕಾರ್ಯವನ್ನು ಶ್ಲಾಘಿಸಿ, ಮುಂದೆ ೧೪೦೫-೬ರಲ್ಲಿ ಮಂಗಳೂರು-ಬಾರಕೂರುಗಳ ರಾಜ್ಯಪಾಲನನ್ನಾಗಿ ನೇಮಿಸಿದನು. ಮಹಾಬಲದೇವನನ್ನು ಆ ಪದವಿಯಿಂದ ತೆಗೆದು ಹಾಕಲಾಯಿತು. ಜನರ ಹಾಗೂ ಚಕ್ರವರ್ತಿಯ ಅಸಮಾಧಾನವನ್ನು ಕಟ್ಟಿಕೊಂಡು ರಾಜಪ್ರತಿನಿಧಿಗಳೂ ನೆಮ್ಮದಿಯಾಗಿರುವಂತಿರಲಿಲ್ಲ, ಅವರನ್ನು ಒಡನೆಯೇ ಅಲ್ಲಿಂದ ಬದಲಾಯಿಸಿ ಬಿಡಲಾಗುತ್ತಿತ್ತು ಎಂಬುದು ಇದರಿಂದ ತಿಳಿಯುತ್ತದೆ. ಉತ್ತಮ ಸೇವೆ ಸಲ್ಲಿಸಿದವರಿಗೆ ಬಡ್ತಿನೀಡಿ ಗೌರವಿಸಲಾಗುತ್ತಿತ್ತು.

೧ನೇ ದೇವರಾಯನ ಕಾಲದಲ್ಲಿ ಅಣ್ಣಪ್ಪ ಒಡೆಯನು ಕ್ರಿ.ಶ. ೧೪೩೪-೩೫ರಲ್ಲಿ ಬಾರಕೂರಿನ ರಾಜಪ್ರತಿನಿಧಿಯಾಗಿದ್ದನು. ಶಿವಳ್ಳಿಯಲ್ಲಿ ಅವನು ಸೇನಾ ಶಿಬಿರವನ್ನು ಹೂಡಿದುದರಿಂದಾಗಿ, ಉಡುಪಿಯ ದೇವಾಲಯದಲ್ಲಿ ಪೂಜೆಯು ನಿಂತುಹೋಯಿತು. ಆಗ ಜನರು ವಿಜಯನಗರದ ಚಕ್ರವರ್ತಿ ೧ನೇ ದೇವರಾಯನಿಗೆ ಮನವಿ ಸಲ್ಲಿಸಿದರು. ಅವನು ಒಡನೆಯೇ ಮಧ್ಯಪ್ರವೇಶ ಮಾಡಿ ದೇವಾಲಯದಲ್ಲಿ ನಿಂತುಹೋದ ಪೂಜೆಯನ್ನು ಮರಳಿ ತೊಡಗಿಸಬೇಕೆಂದು ಕೋರಿದರು. ಒಡನೆಯೇ ಚಕ್ರವರ್ತಿಯು ರಾಜ್ಯಪಾಲನಿಗೆ ಒಂದು ಆದೇಶವನ್ನು ಕಳುಹಿಸಿದನು. ಅದರ ಪ್ರಕಾರ ಅಣ್ಣಪ್ಪ ಒಡೆಯನು ಕೃಷ್ಣ ದೇವಾಲಯದಲ್ಲಿ ಪೂಜೆಯು ಮತ್ತೆ ನಡೆಯುವಂತೆ ಮಾಡಿ, ಇನ್ನಷ್ಟು ಭೂಮಿಯನ್ನು ದಾನ ಮಾಡಿದನು.[೧೮೫] ಜನರ ಧಾರ್ಮಿಕ ಭಾವನೆಗಳಿಗೆ ತೊಂದರೆಯುಂಟು ಮಾಡಲು ಚಕ್ರವರ್ತಿಯು ಎಷ್ಟು ಮಾತ್ರಕ್ಕೂ ಇಷ್ಟಪಡುತ್ತಿರಲಿಲ್ಲ. ಇಷ್ಟಾದರೂ ಅಣ್ಣಪ್ಪ ಒಡೆಯನು ಈ ಘಟನೆಯಿಂದಾಗಿ ಚಕ್ರವರ್ತಿಯ ಅಸಮಾಧಾನಕ್ಕೆ ತುತ್ತಾಗಲಿಲ್ಲವೆನ್ನುವುದು ಅವನ ಸುದೈವ.

ಕ್ರಿ.ಶ. ೧೫೨೮ರಲ್ಲಿ ವಿಜಯಣ್ಣ ಒಡೆಯನು ಬಾರಕೂರಿನಲ್ಲಿ ಕೇಂದ್ರದ ಪ್ರತಿನಿಧಿಯಾಗಿದ್ದನು. ಅವನು ನಿರುಪೂರು ಎಂಬಲ್ಲಿ ಯಾವುದೋ ಒಂದು ಕಾಳಗದಲ್ಲಿ ತೊಡಗಿದ್ದಾಗ, ಜನರ ಸ್ಥಿರ ಆಸ್ತಿಗೆ ಸ್ವಲ್ಪ

ಹಾನಿಯುಂಟಾಯಿತು. ಒಡನೆಯೇ ಜನರ ಬಾವನೆಗಳನ್ನು ಅವನು ಅರ್ಥ ಮಾಡಿಕೊಂಡನು. ಜನರಿಗಾದ ಹಾನಿಗೆ ಪರಿಹಾರರೂಪವಾಗಿ ಹಣವನ್ನುಕೊಟ್ಟನು. ಜನರ ಅಸಮಾಧಾನವನ್ನು ಕಟ್ಟಿಕೊಳ್ಳಲು ರಾಜಪ್ರತಿನಿಧಿಗಳು ಬಯಸುತ್ತಿರಲಿಲ್ಲವೆನ್ನುವುದು ಇದರಿಂದ ತಿಳಿಯುತ್ತದೆ.[೧೮೬] ಚಕ್ರವರ್ತಿಗೂ ಅದು ಇಷ್ಟವಾಗುತ್ತಿರಲಿಲ್ಲ. ಸಾಮ್ರಾಜ್ಯದ ಸಮಗ್ರತೆಯನ್ನು ಕಾಪಾಡಲು ತನ್ನಿಂದ ಸಾಧ್ಯವಾಗುವ ಎಲ್ಲಾ ಕ್ರಮಗಳನ್ನೂ ಅವನು ಕೈಗೊಳ್ಳುತ್ತಿದ್ದನು.

ಕ್ರಿ.ಶ. ೧೫೫೦ರಲ್ಲಿ ಕೋಟೇಶ್ವರದ ಕೋಟೇಶ್ವರ ದೇವಾಲಯದಲ್ಲಿ ಇನ್ನೊಂದು ಸ್ವಾರಸ್ಯವಾದ ಘಟನೆ ನಡೆಯಿತು. ಆ ಪ್ರದೇಶದ ಜನರೆಲ್ಲರೂ ವಾರ್ಷಿಕ ಉತ್ಸವಕ್ಕಾಗಿ ದೇವಾಲಯದಲ್ಲಿ ಸೇರಿದ್ದರು. ಅಷ್ಟರಲ್ಲಿ ವಿವಿಧವರ್ಗಗಳ ನಡುವೆ ಯಾವುದೋ ಸಣ್ಣ ಕಲಹವುಂಟಾಗಿ ಅದರಿಂದ ಅನೇಕಜನ ಬ್ರಾಹ್ಮಣರು ಮತ್ತು ಶೂದ್ರರು ಸತ್ತುಹೋದರು. ಅದರಿಂದಾಗಿ ದೇವಾಲಯವು ಅಪವಿತ್ರವಾಯಿತು, ಕಾರ್ಯಕ್ರಮಗಳೆಲ್ಲ ರದ್ದಾದುವು. ಕ್ರಿ.ಶ. ೧೫೫೧ರಲ್ಲಿ ಮತ್ತೆ ಆ ಉತ್ಸವಾಚರಣೆಗಳನ್ನು ನಡೆಸುವ ಸಲುವಾಗಿ ''ಅಳಿಯ ರಾಮರಾಯನಿಗೂ ವೆಂಕಟಾದ್ರಿಗೂ ಧರ್ಮ ಅಭಿವೃದ್ಧಿಯಾಗಲಿ'' ಎಂದು ರಾಜ್ಯಪಾಲನು ದೇವಾಲಯಕ್ಕೆ ಭೂಮಿಯನ್ನು ದಾನಮಾಡಿದನು. ಈ ರಾಜ್ಯಪಾಲನು ಏಕದಲಖಾನ ಎಂಬ ಮುಸ್ಲಿಂ. ಹಿಂದೂ ದೇವಾಲಯದ ವ್ಯವಹಾರಗಳಲ್ಲಿ ಮಧ್ಯ ಪ್ರವೇಶ ಮಾಡಿ, ಅಲ್ಲಿನ ಪೂಜೆ ಪುನಸ್ಕಾರಗಳು ಯಥಾಸಾಂಗವಾಗಿ ನಡೆಯುವಂತೆ ಒಬ್ಬ ಮುಸ್ಲಿಂ ರಾಜಪ್ರತಿನಿಧಿಯು ಕ್ರಮ ಕೈಗೊಂಡುದು ವಿಶೇಷವೇ ಸರಿ. ಬಾರಕೂರಿನ ಕೇಂದ್ರ ಪ್ರತಿನಿಧಿಯಾಗಿ ಹಿಂದೂಗಳು ಮಾತ್ರವಲ್ಲದೆ ಮುಸ್ಲಿಮರನ್ನು ನೇಮಿಸಲಾಗುತ್ತಿದ್ದಿತೆನ್ನುವುದಕ್ಕೆ ಇದು ನಿದರ್ಶನ.[೧೮೭]

ಮೇಲಿನ ಅಧ್ಯಯನದಿಂದ ಈ ಕೆಲವು ನಿರ್ಣಯಗಳಿಗೆ ಬರಬಹುದು. ವಿಜಯನಗರದ ಸಾಮಂತ-ಒಕ್ಕೂಟ ರಚನೆಯಲ್ಲಿ ಕರಾವಳಿ ಪ್ರದೇಶಕ್ಕೆ ಬಹು ಮುಖ್ಯವಾದ ಸ್ಥಾನವಿದ್ದಿತು. ಆದ್ದರಿಂದ ಚಕ್ರವರ್ತಿಗಳು ಬಾರಕೂರು ಮತ್ತು ಮಂಗಳೂರುಗಳಲ್ಲಿ ರಾಜಪ್ರತಿನಿಧಿಗಳನ್ನು ನೇಮಕಮಾಡಿದ್ದರು. ಈ ಪ್ರದೇಶದಲ್ಲಿ ಬೇಕಾದಷ್ಟು ಜನ ಸಾಮಂತರಾಜರಿದ್ದರು. ಅವರಲ್ಲಿ ಅನೇಕರು ವಿಜಯನಗರ ಸ್ಥಾಪನೆಗೂ ಮುಂಚಿನಿಂದಲೂ ಬೇರೆ ಬೇರೆ ಪ್ರದೇಶಗಳನ್ನು ಆಳುತ್ತಿದ್ದರು. ಚಕ್ರವರ್ತಿಯು ಪ್ರಜೆಗಳ ಯೋಗಕ್ಷೇಮವನ್ನೂ ಸಾಮ್ರಾಜ್ಯದ ಸಮಗ್ರತೆಯನ್ನೂ ಕಾಪಾಡುತ್ತಿದ್ದನು. ಅವರಿಗೆ ಅಗತ್ಯವಾಗಿದ್ದದ್ದು ಸಾಮಂತ ರಾಜರ ಅಚಲವಾದ ನಿಷ್ಠೆ ಹಾಗೂ ತಪ್ಪದೆ ವಾರ್ಷಿಕವಾಗಿ ಕಪ್ಪಕಾಣಿಕೆಯ ಪಾವತಿ. ರಾಜಪ್ರತಿನಿಧಿಗಳು ಈ ಸಾಮಂತರ ಚಟುವಟಿಕೆಗಳ ಮೇಲೆ ನಿಗಾ ಇರಿಸುತ್ತಿದ್ದರು, ಸಾಮ್ರಾಜ್ಯದ ಈ ಭಾಗದಲ್ಲಿ ಕಾನೂನು ಮತ್ತು ಸುವ್ಯವಸ್ಥೆಯ ಪಾಲನೆ ಅವರ ಹೊಣೆಗಾರಿಕೆಯಾಗಿತ್ತು. ಸಾಮಂತರು ಕ್ರಮತಪ್ಪದೆ ಪ್ರತಿವರ್ಷವೂ ಚಕ್ರವರ್ತಿಗೆ ಕಪ್ಪ ಸಲ್ಲಿಸುವಂತೆ ನೋಡಿಕೊಳ್ಳುವುದೂ ಅವರ ಕೆಲಸವಾಗಿತ್ತು. ಅನೇಕ ಸಂದರ್ಭಗಳಲ್ಲಿ ಸಾಮಂತರು ಬಂಡಾಯವೇಳುತ್ತಿದ್ದುದುಂಟು. ಆಗ ಅವರ ವಿರುದ್ಧವಾಗಿ ಕ್ರಮ ಕೈಗೊಳ್ಳಲು ರಾಜಪ್ರತಿನಿಧಿಗಳು ಹಿಂಜರಿಯುತ್ತಿರಲಿಲ್ಲ. ಆದರೆ ಜನರ ದೈನಂದಿನ ವ್ಯವಹಾರಗಳಲ್ಲೋ ಸಾಮಂತರ ವಿರುದ್ಧವಾಗಿಯೋ ಅನಗತ್ಯವಾಗಿ ರಾಜ್ಯಪಾಲರು ಕ್ರಮಕೈಗೊಳ್ಳುವಂತಿರಲಿಲ್ಲ. ಅಂತಹ ಸಂರ್ಭಗಳಲ್ಲಿ ಚಕ್ರವರ್ತಿಯು ತಪ್ಪದೆ ಜನರ ಹಿತರಕ್ಷಣೆಗೆ ನಿಲ್ಲುತ್ತಿದ್ದನು.

ಕೃಷ್ಣದೇವರಾಯನ ಆಳಿಕೆಯವರೆಗೂ ಬಾರಕೂರು ಮತ್ತು ಮಂಗಳೂರುಗಳಲ್ಲಿ ಒಬ್ಬೊಬ್ಬರಂತೆ ಒಟ್ಟು ಇಬ್ಬರು ರಾಜಪ್ರತಿನಿಧಿಗಳಿರುತ್ತಿದ್ದರು. ಕೃಷ್ಣದೇವರಾಯನು ಈ ಪದ್ಧತಿಯನ್ನು ಬದಲಾಯಿಸಿ ಮಂಗಳೂರಿಗೆ ಒಬ್ಬನೇ ಪ್ರತಿನಿಧಿಯನ್ನು ನೇಮಿಸಿದನು. ಸಾಮಂತರಾಜರನ್ನೆಲ್ಲ ಮತ್ತೆ ತನ್ನ ಹತೋಟಿಗೆ ತಂದುಕೊಂಡನು. ಅವನ ಮರಣಾನಂತರ ಅನೇಕ ಸಾಮಂತರು ಕೇಂದ್ರ ಪ್ರಭುತ್ವದ ನಿಯಂತ್ರಣವನ್ನು ಕೊಡವಿಹಾಕಿದರು. ಸದಾಶಿವರಾಯನ ಕಾಲದಲ್ಲಿ ಈ ಪ್ರದೇಶವು ಕೆಳದಿಯ ನಾಯಕರಿಗೆ ಅಮರಮಾಗಣೆಯಾಗಿ

ಸೇರಿತು. ಆದರೆ ಉತ್ತಮವ್ಯಾಪಾರ ವಾಣಿಜ್ಯ ಕೇಂದ್ರವಾಗಿ ಈ ಪ್ರದೇಶವು ವಿಜಯನಗರದ ರಾಜರ ಪೂರ್ಣಗಮನವನ್ನು ಪಡೆದಿತ್ತು.

-ಪ್ರೊ. ಕೆ.ಎಸ್. ಶಿವಣ್ಣ

ಹದಿನಾಡಿನ ಪಾಳೆಯಗಾರರು

ಹದಿನಾಡಿನ ಪಾಳೆಯಗಾರರು ಪ್ರಾಂತೀಯ ಅರಸರಾಗಿದ್ದರು (ಮಾಂಡಲಿಕ ಮನೆತನ). ಅವರು ಯಳಂದೂರು, ನಂಜನಗೂಡು ಮತ್ತು ಕೊಳ್ಳೇಗಾಲಗಳ ಸುತ್ತುಮುತ್ತಿನ ಪ್ರದೇಶವನ್ನು ಆಳುತ್ತಿದ್ದರು. ಪದಿನಾಡು ಅಥವಾ ಹದಿನಾಡು ಪುನ್ನಾಟ, ಗಂಗ, ಹೊಯ್ಸಳ, ವಿಜಯನಗರ, ಮೈಸೂರಿನ ಒಡೆಯರು, ಉಮ್ಮತ್ತೂರು ರಾಜರು, ಹದಿನಾಡು ದೊರೆಗಳು ಹಾಗೂ ತಮಿಳುನಾಡಿನ ಚೋಳರ ಆಳ್ವಿಕೆಯಲ್ಲಿದ್ದಂತೆ ತಿಳಿದುಬರುತ್ತದೆ. ಅವರಲ್ಲಿ ಅತ್ಯಂತ ಮುಖ್ಯರಾದವರು ಹದಿನಾಡಿನ ರಾಜರು ಎಂಬುದು ಶಾಸನಗಳಿಂದಲೂ ಇತರ ದಾಖಲೆಗಳ ಸಾಕ್ಷ್ಯಾಧಾರಗಳಿಂದಲೂ ತಿಳಿದುಬರುತ್ತದೆ. ಗಂಗ ಮತ್ತು ಚೋಳರ ಶಾಸನಗಳಲ್ಲಿ ಇದನ್ನು 'ಅದಿನಾರು' ಎಂಬ ಹೆಸರಿಸಿರುವುದುಂಟು. ಹೊಯ್ಸಳ ಮತ್ತು ವಿಜಯನಗರ ಶಾಸನಗಳಲ್ಲಿ ಹದಿನಾಡು ಎಂಬ ಉಲ್ಲೇಖವಿದೆ. ವಿಜಯನಗರ ರಾಜರ ಕಾಲದಲ್ಲಿ ಸ್ವತಂತ್ರ ಅಸ್ತಿತ್ವ ಪಡೆದಿದ್ದ ಹದಿನಾಡಿನ ರಾಜರು ವಿಜಯನಗರದ ಪ್ರಭುತ್ವವನ್ನು ಒಪ್ಪಿಕೊಂಡರು, ಯಳಂದೂರು ಹದಿನಾಡಿನ ರಾಜಧಾನಿಯಾಗಿತ್ತು. ಈ ರಾಜರು ಕ್ರಿ.ಶ. ೧೫೪೯ರಿಂದ ೧೬೭೭ರ ವರೆಗೆ ಒಟ್ಟು ೧೧೮ವರ್ಷ ರಾಜ್ಯಭಾರ ಮಾಡಿದರು, ರಾಜಕಾರಣ, ಸಾಹಿತ್ಯ ಮತ್ತು ಸಂಸ್ಕೃತಿಗಳಿಗೆ ವಿಶೇಷವಾದ ಕೊಡುಗೆಯನ್ನು ನೀಡಿದರು. ಮುಂದಿನ ಪುಟಗಳಲ್ಲಿ ಈ ವಿಚಾರಗಳನ್ನು ವಿವರವಾಗಿ ಚರ್ಚಿಸಲಾಗಿದೆ.

ರಾಜಕೀಯ ಇತಿಹಾಸ

ಮೂಲತಃ ಗೌಡ ಜನಾಂಗಕ್ಕೆ ಸೇರಿದ ಹದಿನಾಡು ರಾಜರು ಕಾಲಕ್ರಮದಲ್ಲಿ ರಾಜರಾಗಿ ಅಭಿವೃದ್ಧಿ ಹೊಂದಿದರು. ಈ ವಂಶದಲ್ಲಿ ಮೊದಲು ಕಂಡುಬರುವ ದೊರೆ ಸಿಂಘದೇವಭೂಪ ಅಥವಾ ದೇವಪ್ಪಗೌಡ. ಮಹಾಮಂಡಲೇಶ್ವರ ನರಪರಾಜನು ಹದಿನಾಡು ಪ್ರಾಂತವನ್ನು ಆಳುತ್ತಿದ್ದಾಗ ಕ್ರಿ.ಶ. ೧೫೪೭ರಲ್ಲಿ ಚಾಮರಸಗೌಡನು ಒಬ್ಬ ಆಧೀನ ಅಧಿಕಾರಿಯಾಗಿದ್ದನು. ಅನಂತರ ಸದಾಶಿವರಾಯನು ವಿಜಯನಗರ ವನ್ನಾಳುತ್ತಿದ್ದಾಗ, ಕ್ರಿ.ಶ. ೧೫೬೩ರಲ್ಲಿ ಅವನು ಪ್ರಾಂತೀಯ ಗವರ್ನರ್ ಆಗಿದ್ದ ಜಗದೇವರಾಯನ ಅಧೀನ ಅಧಿಕಾರಿಯೂ ಆಗಿದ್ದನು. ಹೀಗಿರಲು ಚಾಮರಸ ಒಡೆಯನ ತಂದೆ ದೇವಪ್ಪಗೌಡನು ಸಂಜರಖಾನ್ ಎಂಬ ಮುಸ್ಲಿಮನಿಂದ ಅನ್ಯಾಯವಾಗಿ ಕೊಲೆಯಾದನು. ಆಗ ಸದಾಶಿವರಾಯನು ಹದಿನಾರು ಪ್ರಾಂತದಲ್ಲಿ ಆರು ಹಳ್ಳಿಗಳನ್ನು ನೆತ್ತರ ಕೊಡುಗೆಯಾಗಿ ಚಾಮರಸ ಒಡೆಯನಿಗೆ ನೀಡಿದನು. ಕ್ರಿ.ಶ. ೧೫೬೭ರ ಶಾಸನಗಳ ಆಧಾರದಿಂದ ತಿಳಿಯುವುದು, ದೇವಪ್ಪ ಗೌಡನ ಮಗ ಚಾಮರಸನು ಹದಿನಾಡು ಪ್ರಾಂತ್ಯದ ರಾಜನಾಗಿದ್ದನು ಎಂದು. ಮೇಲಿನ ಅಂಶಗಳನ್ನು ವಿವರವಾಗಿ ಪರಿಶೀಲಿಸಿದರೆ ಹೀಗೆ ತಿಳಿದುಬರುತ್ತದೆ: ದೇವಪ್ಪಗೌಡ ಮತ್ತು ಚಾಮರಸ ಒಡೆಯರು ವಿಜಯನಗರ ಅರಸರ ಪ್ರಾಂತೀಯ ರಾಜ್ಯಪಾಲರಾಗಿದ್ದ ನರಪರಾಜ ಮತ್ತು ಜಗದೇವರಾಜರ ಅಧೀನ ಅಧಿಕಾರಿಗಳಾಗಿದ್ದರು; ಚಾಮರಸ ಒಡೆಯನ ಕಾಲದಲ್ಲಿ ಅವರು ತಾವೇ ರಾಜರಾದರು. ಆದ್ದರಿಂದ ಚಾಮರಸ ಒಡೆಯನು ಹದಿನಾಡಿನ ಮೊದಲನೆಯ ರಾಜನಾಗಿದ್ದನು ಎಂದು ಹೇಳಬಹುದು. ಅವನಾದ ನಂತರ ಅವನ ತಮ್ಮ ರಾಮರಾಜನಾಯಕನು ಪಟ್ಟಕ್ಕೆ ಬಂದನು.

ರಾಮರಾಜನಾಯಕ

ರಾಮರಾಜನಾಯಕನನ್ನು 'ರಾಮನೃಪಾಲ'ನೆಂದೂ ಕರೆಯುತ್ತಿದ್ದರು. ೧೫೫೬ ಮತ್ತು ೧೫೯೩ರ ಶಾಸನಗಳಿಂದ ಅವನು ದೇವಪ್ಪಗೌಡನ ಮಗ ಎಂದು ತಿಳಿಯುತ್ತದೆ. ಕ್ರಿ.ಶ. ೧೫೬೯ರಲ್ಲಿ ಸದಾಶಿವರಾಯನ ಮಹಾಮಂಡಲೇಶ್ವರನಾಗಿದ್ದ ತಿರುಮಲರಾಜನು ಹಿರಿಯೂರನ್ನು ಹದಿನಾಡು ಪ್ರಾಂತದ ರಾಜ ರಾಮರಾಜನಾಯಕನಿಗೆ ಪಲ್ಲಕ್ಕಿ ಉಂಬಳಿಯಾಗಿ ನೀಡಿದನು. ಕುದೇರು ಮತ್ತು ಮೂಕಹಳ್ಳಿ ಗ್ರಾಮಗಳನ್ನೂ ೧೫೭೪ರಲ್ಲಿ ಉಂಬಳಿಯಾಗಿ ನೀಡಲಾಯಿತು. ಹದಿನಾಡು ರಾಜರಲ್ಲಿ ತಮ್ಮ ಮಕ್ಕಳಿಗೆ ತಮ್ಮ ಪ್ರಭುಗಳ (ಚಕ್ರವರ್ತಿಗಳ) ಹೆಸರನ್ನು ಇಡುವ ರೂಢಿಯಿದ್ದಿತು. ಉದಾಹರಣೆಗೆ ರಾಮರಾಜನಾಯಕನು ತನ್ನ ಮಗನಿಗೆ ಮಹಾಮಂಡಲೇಶ್ವರ ತಿರುಮಲರಾಜನಾಯಕನ ಹೆಸರನ್ನೇ ಇಟ್ಟನು. ಅದರಿಂದಾಗಿ ಮಹಾಮಂಡಲೇಶ್ವರ ತಿರುಮಲರಾಜನು ಕ್ರಿ.ಶ. ೧೫೪೬ರಲ್ಲಿ ಹದಿನೈದು ಗ್ರಾಮಗಳನ್ನು ಪಲ್ಲಕ್ಕಿ ಉಂಬಳಿಯಾಗಿ ನೀಡಿದನು. ಹೀಗೆ ರಾಮರಾಜನಾಯಕನ ಕಾಲದಲ್ಲಿ ಹದಿನಾಡಿನ ರಾಜರು ವಿಜಯನಗರದ ಚಕ್ರವರ್ತಿಗಳ ವಿಶ್ವಾಸವನ್ನೂ ಮನ್ನಣೆಯನ್ನೂ ಗಳಿಸಿರುವದಲ್ಲದೆ, ಅವರಿಂದ ಬೇಕಾದಷ್ಟು ಭೂಮಿಯನ್ನು ಉಂಬಳಿಯಾಗಿ ಪಡೆದರು, ಆ ಪ್ರದೇಶದಲ್ಲಿ ತಮ್ಮ ಅಧಿಕಾರವನ್ನು ವಿಸ್ತರಿಸಿದರು. ತನ್ನ ತಂದೆ ದೇವಪ್ಪಗೌಡ ಮತ್ತು ತಾಯಿ ಚೆನ್ನಾಜಿಯಮ್ಮರ ಕಲ್ಯಾಣವನ್ನು ಮನಸ್ಸಿನಲ್ಲಿಟ್ಟುಕೊಂಡು ರಾಮರಾಜನಾಯಕನು ಸುತ್ತೂರು ಸಿಂಹಾಸನಕ್ಕೆ ಹಸುರಳ್ಳಿ ಗ್ರಾಮವನ್ನು ದಾನವಾಗಿ ನೀಡಿದುದಲ್ಲದೆ ಕ್ರಿ.ಶ. ೧೫೯೩ರಲ್ಲಿ ಗಾಣಗನೂರಿನ ಬಳಿ ಸುವರ್ಣಾವತಿ ನದಿಗೆ ಒಂದು ಅಣೆಕಟ್ಟನ್ನು ನಿರ್ಮಿಸಿದನು.

ತಿರುಮಲನಾಯಕ

ರಾಮರಾಜನಾಯಕನ ನಂತರ ಅವನ ಮಗ ತಿರುಮಲ ರಾಜನಾಯಕನು ಪಟ್ಟವನ್ನೇರಿದನು. ಅವನಿಗೆ ಕಳಲೆಯ ದೊರೆ ಮಲ್ಲರಾಜನ ಮಗಳು ಮಲ್ಲಾಜಮ್ಮಳೊಂದಿಗೆ ವಿವಾಹವಾಗಿತ್ತು. ಇದರಿಂದ ಹದಿನಾಡು ರಾಜರು ರಾಜಕೀಯವಾಗಿ ಬೆಳೆಯಲು ಅನುಕೂಲವಾಯಿತು. ಕ್ರಿ.ಶ. ೧೬೦೪ರಲ್ಲಿ ತಿರುಮಲ ರಾಜನಾಯಕನು ಶಿವನಸಮುದ್ರದ ವೀರೇಶ್ವರ ದೇವಸ್ಥಾನದಲ್ಲಿ ಮಹತ್ತಿನಮಠವನ್ನು ಸ್ಥಾಪಿಸಿದನು. ಅದಕ್ಕೆ ಭೂಮಿಯನ್ನು ದಾನಮಾಡಿದನು. ಕ್ರಿ.ಶ. ೧೬೦೫ರ ಶಾಸನಗಳಿಂದ ತಿಳಿದುಬರುವ ಮಾಹಿತಿಯಂತೆ, ಹದಿನಾಡು ಪ್ರಾಂತವನ್ನು ತಿರುಮಲನಾಯಕನು ಕಳೆದುಕೊಂಡ ಮೇಲೆ ಚೆನ್ನೊಡೆಯನ ಮಗ ನಂಜರಾಜನಿಗೆ ವರ್ಗಾಯಿಸಲಾಯಿತು. ಇದರರ್ಥ, ಬಹುಶಃ ದಾಯಾದಿಗಳ ನಡುವಣ ವ್ಯಾಜ್ಯದಲ್ಲಿ ತಿರುಮಲರಾಜ ನಾಯಕನು ಸೋತುದರಿಂದ ನಂಜರಾಜ ಒಡೆಯನಿಗೆ ಅಧಿಕಾರವನ್ನು ಹಸ್ತಾಂತರಿಸಿರಬಹುದು. ಆದರೆ, ಕ್ರಿ.ಶ. ೧೬೨೪ರ ಒಂದು ಶಾಸನದಂತೆ, ತಿರುಮಲ ರಾಜನಾಯಕನೇ ಮತ್ತೆ ಹದಿನಾಡನ್ನು ಆಳಿದನು. ಹಾಗೆಯೇ, ಕ್ರಿ.ಶ. ೧೬೪೭ರ ಒಂದು ಶಾಸನದ ಪ್ರಕಾರ ತಿರುಮಲ ರಾಜಒಡೆಯನಿಗೆ ಮಲ್ಲಾಜಮ್ಮ ಎಂಬ ಪತ್ನಿಯೂ ಲಿಂಗರಾಜೈ ಮತ್ತು ಮುದ್ದುರಾಜೈ ಎಂಬ ಮಕ್ಕಳೂ ಇದ್ದರು.

ನಂಜರಾಜಒಡೆಯ

ಇವನು ಕ್ರಿ.ಶ. ೧೬೦೫ರಿಂದ ೧೬೨೭ರ ವರೆಗೆ ಆಳಿದನು. ಮಹಾಮಂಡಲೇಶ್ವರ ಯತಿ ತಿಮ್ಮರಾಜಯ್ಯನ ಮಗ ವೆಂಕಟಪತಿಯ ಕಾಲದಲ್ಲಿ ಅವನು ಹದಿನಾಡನ್ನು ಆಳುತ್ತಿದ್ದನು. ಅವನೊಂದಿಗೆ ಆತ್ಮೀಯ ಸಂಬಂಧವನ್ನು ಇಟ್ಟು ಕೊಂಡಿದ್ದುದಲ್ಲದೆ ನಂಜರಾಜನು ನೆರೆಯ ಉಮ್ಮತ್ತೂರಿನ ರಾಜನ ಮಿತ್ರನಾಗಿದ್ದನು. ತನ್ನಮನೆದೇವರಾದ

ಸಿದ್ಧಮಲ್ಲಿಕಾರ್ಜುನ ದೇವರಿಗೆ ಹರದನಹಳ್ಳಿ ಮಠವನ್ನೂ ಮಲ್ಲಾಪುರ ಗ್ರಾಮವನ್ನೂ ದಾನ ಮಾಡಿದನು. ಅಲ್ಲದೆ ಕ್ರಿ.ಶ. ೧೬೧೩ರಲ್ಲಿ ಅಮಚವಾಡಿಯ ಕುಂಬೇಶ್ವರ, ವೀರಭದ್ರ, ಮತ್ತು ಬಸವೇಶ್ವರರಿಗೆ ಚನ್ನಪ್ಪನ ಪುರ ಗ್ರಾಮವನ್ನು ದತ್ತಿಯಾಗಿ ನೀಡಿದನು. ಆಮೇಲೆ ತೊಂದರೆಯುಂಟಾಯಿತು. ಮೈಸೂರಿನ ರಾಜಒಡೆಯರ ಕುದುರೆಯನ್ನು ಕಟ್ಟಿಹಾಕಿದುದರಿಂದಾಗಿ, ಇಬ್ಬರಿಗೂ ಘೋರವಾದ ಕಾಳಗವು ನಡೆದು ನಂಜರಾಜಒಡೆಯನು ಮಡಿದನು. ಅವನ ತಲೆಯನ್ನು ಕಡಿದು ತಟ್ಟೆಯಲ್ಲಿಟ್ಟು ಹದಿನಾಡಿಗೆ ಕಳುಹಿಸಲಾಯಿತು. ಇದರಿಂದ ಹದಿನಾಡಿನ ಅನೇಕ ಸ್ಥಳಗಳು ಕೈಬಿಟ್ಟು ಹೋದುವು. ಮೈಸೂರಿನ ದೊಡ್ಡದೇವರಾಜ ಒಡೆಯನು ನಂಜರಾಜನ ಮಗಳಾದ ಅಮೃತಾಂಬೆಯನ್ನು ವಿವಾಹವಾದುದರಿಂದ ಎರಡೂ ಮನೆತನಗಳ ನಡುವೆ ಆತ್ಮೀಯವಾದ ಸಂಬಂಧವು ಬೆಳೆಯಿತು.

ಲಿಂಗರಾಜಯ್ಯ ಒಡೆಯ

ತಿರುಮಲ ರಾಜನಾಯಕನ ಮಗನಾದ ಲಿಂಗರಾಜಯ್ಯ ಒಡೆಯನ ಆಳಿಕೆಯನ್ನು ಕುರಿತು ಆಧಾರಗಳಿವೆ. ಕ್ರಿ.ಶ. ೧೬೨೮ರಿಂದ ೧೬೫೪ರ ವರೆಗೆ ಈತನು ಹದಿನಾಡಿನಲ್ಲಿ ಆಳುತ್ತಿದ್ದಾಗ ಶ್ರೀರಂಗರಾಯನು ವಿಜಯನಗರದ ಅರಸನಾಗಿದ್ದನು. ರಾಜಒಡೆಯರಿಗೂ ಹದಿನಾಡಿನ ನಂಜರಾಜ ಒಡೆಯನಿಗೂ ಇದ್ದ ವೈರವು ಕೊನೆಗೊಂಡು, ಲಿಂಗರಾಜಯ್ಯನು ಕಂಠೀರವ ನರಸರಾಜರ ಆಳಿಕೆಯಲ್ಲಿ ಮೈಸೂರಿನ ಒಡೆಯರಿಗೆ ಸಮೀಪವರ್ತಿಯಾದನು. ಅವನ ನಂತರ ಅವನ ತಮ್ಮ ಮುದ್ದುರಾಜಯ್ಯನು ಕ್ರಿ.ಶ. ೧೬೫೪ರಿಂದ ೧೬೬೭ರ ವರೆಗೆ ಆಳಿದನು. ಚಿತ್ರದುರ್ಗದ ಬೃಹನ್ಮಠದಲ್ಲಿ ದೊರೆತ ಹಸ್ತಪ್ರತಿಯೊಂದರಲ್ಲಿ ಪದಿನಾಡು ಬಗೆಗೆ ಉಲ್ಲೇಖಗಳಿವೆ. ಈ ಹಸ್ತಪ್ರತಿಯಲ್ಲಿ ಬಹುಮುಖ್ಯವಾದ ಮಾಹಿತಿಯೊಂದಿದೆ. ಮುದ್ದುರಾಜಯ್ಯನು ಹದಿನಾಡಿನ ಕೊನೆಯ ದೊರೆ ಎಂದು ಶಾಸನಗಳಿಂದ ತಿಳಿಯುತ್ತಿದ್ದರೆ, ಈ ಓಲೆಗರಿ ಹಸ್ತಪ್ರತಿಯಲ್ಲಿ ಲಿಂಗರಾಜ ಒಡೆಯನ ಮಗ ಲಿಂಗರಾಜಯ್ಯನು ಹದಿನಾಡನ್ನು ಆಳುತ್ತಿದ್ದನು ಎಂದು ಹೇಳಿದೆ. ಈ ಓಲೆಗರಿ ಹಸ್ತಪ್ರತಿಯನ್ನು ರಚಿಸಿದ್ದು ಕ್ರಿ.ಶ. ೧೬೭೨ರಲ್ಲಿ. ಆದ್ದರಿಂದ ಲಿಂಗರಾಜಯ್ಯನು ಆಗ ಆಳುತ್ತಿದ್ದನೆಂದು ಹೇಳಬಹುದು. ಕೊಳ್ಳೇಗಾಲದ ೩೧ನೆಯ ಶಾಸನದಿಂದ ಅವನ ಮಗ ಚಾಮರಾಜ ಒಡೆಯನು ಅವನ ನಂತರ ಯಳಂದೂರನ್ನು ಆಳುತ್ತಿದ್ದನು ಎಂದು ತಿಳಿಯುತ್ತದೆ. ಇವನು ನಿಜವಾಗಿ ಹದಿನಾಡಿನ ಕೊನೆಯ ರಾಜ. ಅಲ್ಲಿಂದ ಮುಂದಕ್ಕೆ ಹದಿನಾಡಿನ ರಾಜರನ್ನು ಕುರಿತು ಮಾಹಿತಿ ದೊರಕುವುದಿಲ್ಲ. ಮೈಸೂರಿನ ರಾಜ ಚಿಕ್ಕದೇವರಾಜ ಒಡೆಯನು ಮುಂದೆ ಹದಿನಾಡನ್ನು ತನ್ನ ರಾಜ್ಯದಲ್ಲಿ ವಿಲೀನಗೊಳಿಸಿಕೊಂಡಂತೆ ತೋರುತ್ತದೆ. ಕ್ರಿ.ಶ. ೧೮೧೧ರಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಯಳಂದೂರು ಮತ್ತು ಅದರ ಸುತ್ತಣ ಹಳ್ಳಿಗಳನ್ನು ದಿವಾನ್ ಪೂರ್ಣಯ್ಯನವರಿಗೆ ಜಹಗೀರಾಗಿ ಕೊಡಲಾಯಿತು.

ಮೇಲಿನ ಮಾಹಿತಿಯಿಂದ ಈ ವಂಶದ ಸ್ಥಾಪಕರು ಬಹುಶಃ ಮಂಡಲಿಕರಿಗೆ (ಪ್ರಾಂತೀಯ ರಾಜ್ಯಪಾಲರು) ಅಧೀನರಾದ ಅಧಿಕಾರಿಗಳಾಗಿದ್ದರು ಎಂದು ಊಹಿಸಬಹುದು. ದೊರೆತ ಅವಕಾಶ, ಸನ್ನಿವೇಶ ಹಾಗೂ ಮೇಲಧಿಕಾರಿಗಳ ಕೃಪೆ ಇವುಗಳಿಂದ ಕಾಲಕ್ರಮದಲ್ಲಿ ಅವರು ಅಧಿಕಾರವನ್ನು ಗಳಿಸುವಂತಾಯಿತು. ಈ ವಂಶದ ದೇವಪ್ಪಗೌಡನ ಮಗ ಚಾಮರಸಗೌಡನು ವಿಜಯನಗರದ ತುಳುವ ವಂಶದ ಸದಾಶಿವರಾಯನ ಅನುಗ್ರಹಕ್ಕೆ ಪಾತ್ರನಾದುದು ನಿರ್ದಿಷ್ಟವಾದ ಅಂಶ. ವಿಜಯನಗರ ಸಾಮ್ರಾಜ್ಯದ ವಿಶ್ವಾಸಕ್ಕೆ ಪಾತ್ರನಾದ ಚಾಮರಸಗೌಡನು ಸ್ವಲ್ಪದರಲ್ಲೇ ಚಾಮರಸ ಒಡೆಯನಾದನು. ಮುಂದೆ ಆಡಳಿತಕ್ಕೆ ಬಂದ ಹದಿನಾಡು ದೊರೆಗಳೂ ವಿಜಯನಗರದೊಂದಿಗೆ, ವೆಂಕಟಪತಿರಾಯನ ಕಾಲದಲ್ಲಿಯೂ ಉತ್ತಮ ಸಂಬಂಧವನ್ನೇ ಬೆಳೆಸಿಕೊಂಡು ಬಂದರು. ಅವರು ಚಕ್ರವರ್ತಿಗಳಿಂದಲೂ ಪ್ರಾಂತೀಯ ರಾಜ್ಯಪಾಲರಿಂದಲೂ (ಮಹಾ ಮಂಡಲೇಶ್ವರರು) ನೆತ್ತರ ಕೊಡುಗೆ, ಉಂಬಳಿ, ಪಲ್ಲಕ್ಕಿ ಉಂಬಳಿ, ತೆರಿಗೆಯನ್ನು ವಸೂಲು ಮಾಡುವ ಹಕ್ಕು

ಮೊದಲಾದುವನ್ನು ಪಡೆದುದೇ ಇದಕ್ಕೆ ನಿದರ್ಶನ. ಉದ್ದಕ್ಕೂ ಅವರು ವಿಜಯನಗರದ ಪ್ರಭುತ್ವವನ್ನು ಒಪ್ಪಿಕೊಂಡು ಬಂದರು. ಈ ವಂಶದ ಕೊನೆಯ ಹಂತದ ರಾಜರುಗಳ ಹೆಸರುಗಳನ್ನು ನೋಡಿದರೆ ಅವರು ವಿಜಯನಗರದ ಕೊನೆಯ ಹಂತದ ಚಕ್ರವರ್ತಿಗಳ ಹೆಸರುಗಳನ್ನೇ ಅನುಕರಿಸಿರುವುದು ಕಂಡುಬರುತ್ತದೆ.

ನಿರಂತರವಾಗಿ ವಿಜಯನಗರ ಸಾಮ್ರಾಜ್ಯಕ್ಕೆ ವಿಧೇಯರಾಗಿದ್ದು, ಅವರ ವಿಶ್ವಾಸಕ್ಕೆ ಪಾತ್ರರಾದುದಕ್ಕೆ ಅವರಿಗೆ ನಿರಂತರ ಪ್ರೋತ್ಸಾಹ, ಪ್ರತಿಫಲ ದೊರಕಿತು. ರಾಜಕೀಯವಾಗಿ ಪ್ರಬಲವಾಗಿದ್ದ ವಿಜಯನಗರದೊಂದಿಗೆ ಆತ್ಮೀಯ ಸಂಬಂಧವನ್ನು ಇಟ್ಟುಕೊಂಡಿದ್ದುದರ ಜೊತೆಗೆ ಹದಿನಾಡು ಅರಸರು ತಮ್ಮ ನೆರೆಯ ಪಾಳೆಯಗಾರರೊಂದಿಗೆ (ಪ್ರಾಂತೀಯ ಗವರ್ನರರು) ಕೂಡ ಮೈತ್ರಿಯುತ ಸಂಬಂಧಗಳನ್ನು ಪಡೆದಿದ್ದರು. ಕಳಲೆಯ ದಳವಾಯಿ ಮನೆತನದೊಂದಿಗೆ ವೈವಾಹಿಕ ಸಂಬಂಧವನ್ನು ಬೆಳೆಸಿದ್ದರು. ಕಳಲೆಯ ರಾಜನಾದ ಮಲ್ಲರಾಜನ ಮಗಳು ಮಲ್ಲಾಜಮ್ಮ ಹದಿನಾಡಿನ ತಿರುಮಲನಾಯಕನ ರಾಣಿಯಾಗಿದ್ದಳು. ಹದಿನಾಡು ಅರಸರ ಬೆಳವಣಿಗೆಗೆ ಕಳಲೆಯ ಸಂಬಂಧ ಇಂಬುಗೊಟ್ಟಿತೆನ್ನುವುದನ್ನು ತಳ್ಳಿಹಾಕುವಂತಿಲ್ಲ. ಅವರು ಮೈಸೂರಿನ ಒಡೆಯರೊಂದಿಗೂ ಸಂಬಂಧವಿಟ್ಟುಕೊಂಡಿದ್ದರು. ಒಡೆಯರ್ ವಂಶಗಳ ಮೂಲದ ಬಗೆಗೆ ಒಂದು ಕತೆಯಿದೆ. ಉತ್ತರದೇಶದಿಂದ ಬಂದ ವಿಜಯ ಮತ್ತು ಕೃಷ್ಣ ಎಂಬಿಬ್ಬರು ಸೋದರರು ಈ ಹದಿನಾಡು ಪ್ರಾಂತದಲ್ಲಿ ನಿಂತರು. ಆಗ ಹದಿನಾಡಿನ ರಾಜನಿಗೆ ಬುದ್ಧಿ ವೈಕಲ್ಯವುಂಟಾಗಿದ್ದುದರಿಂದ, ಪಕ್ಕದ ಪ್ರಾಂತವಾದ ಕಾರುಗಹಳ್ಳಿಯ ಮಾರನಾಯಕನು, ರಾಜನಿಲ್ಲದ ಹದಿನಾಡಿನ ರಾಜಕುಮಾರಿಯನ್ನು ತಾನು ಮದುವೆಯಾಗ ಬೇಕೆಂದು ಬಹಳ ಪ್ರಯತ್ನಿಸುತ್ತಿದ್ದನು. ಆಗ ವಿಜಯ ಮತ್ತು ಕೃಷ್ಣರು ಮಾರನಾಯಕನನ್ನು ಕೊಂದು ರಾಜಕುಮಾರಿಯನ್ನು ರಕ್ಷಿಸಿದರು. ವಿಜಯನು ಮೈಸೂರು ಪ್ರಾಂತವನ್ನು ಆಳತೊಡಗಿದನು. ಹದಿನಾಡಿನ ರಾಜಕುಮಾರಿಯನ್ನು ಮದುವೆಯಾಗಿ, ಅದು ಮತ್ತು ಕಾರುಗಹಳ್ಳಿಯ ರಾಜನೂ ಆದನು. ಆದರೆ ಈ ಹೇಳಿಕೆಯ ಯಥಾರ್ಥತೆ ಸ್ಥಿರಪಟ್ಟಿಲ್ಲ. ಚಿಕ್ಕದೇವರಾಯ ವಂಶಾವಳಿಯ ಪ್ರಕಾರ, ಹದಿನಾಡಿನ ನಂಜರಾಜನು ಮೈಸೂರಿನಲ್ಲಿ ಕ್ರಿ.ಶ. ೧೬೧೪ರಲ್ಲಿ ರಾಜಒಡೆಯರು ಆಳುತ್ತಿದ್ದಾಗ ಶ್ರೀರಂಗಪಟ್ಟಣವನ್ನು ತನ್ನ ಕೈವಶ ಪಡಿಸಿಕೊಳ್ಳಲು ಯತ್ನಿಸಿದನು. ರಾಜಒಡೆಯರೊಂದಿಗೆ ನಡೆದ ಭೀಕರ ಕಾಳಗದಲ್ಲಿ ನಂಜರಾಜನು ಮಡಿದನು. ಮೈಸೂರು ಅರಸರ ಪೂರ್ವಾಭ್ಯುದಯ ವಿವರದಿಂದ ತಿಳಿದುಬರುವುದೇನೆಂದರೆ, ಈ ಕಾರಣದಿಂದ (ಹಿಂದಿನ ಘಟನೆಗಳು ಕಾರಣವಾಗಿ) ನಂಜರಾಜನಿಗೆ ಸೇರಿದ್ದ ತೆರಕಣಾಂಬಿ ಮತ್ತು ಇತರ ಸ್ಥಳಗಳು ಮೈಸೂರು ರಾಜ್ಯಕ್ಕೆ ಸೇರಿದುವು. ನಂಜರಾಜನ ತಮ್ಮ ಚಂದ್ರಶೇಖರ ಒಡೆಯನ ಆಳಿಕೆಯಲ್ಲಿ ಮೈಸೂರಿಗೆ ಶರಣಾಯಿತು. ಕಂಠೀರವ ನರಸರಾಜ ವಿಜಯದ ಪ್ರಕಾರ, ಹದಿನಾಡಿನ ಲಿಂಗರಾಜಯ್ಯನು ಮೈಸೂರಿನ ಒಡೆಯರೊಂದಿಗೆ ಆತ್ಮೀಯ ಸಂಬಂಧವನ್ನು ಹೊಂದಿದ್ದನು. ರಾಜಾವಳೀ ಕಥಾಸಾರವು ಹೇಳುವಂತೆ, ಮೈಸೂರಿನ ಅರಸ ದೊಡ್ಡದೇವರಾಜನು ನಂಜರಾಜನ ಮಗಳು ಅಮೃತಾಂಬೆಯನ್ನು ಮದುವೆಯಾದನು. ಕನ್ನಡದ ಕವಿಯೂ ೩ನೇ ಕೃಷ್ಣರಾಜ ಒಡೆಯರ್‌ರ ಸಮಕಾಲೀನನೂ ಆದ ನೂರೊಂದನು ಸು. ಕ್ರಿ.ಶ. ೧೭೪೦ರಲ್ಲಿ ಜೀವಿಸಿದ್ದನು. ಅವನು ತನ್ನ ಸೌಂದರ್ಯ ಎಂಬ ಕವಿತೆಯಲ್ಲಿ ಮೈಸೂರಿನ ದಸರಾ ಉತ್ಸವದ ವೈಭವವನ್ನು ವರ್ಣಿಸುತ್ತಾ, ಮೈಸೂರು ಅರಮನೆಗೆ, ರಾಜರ ಆಸ್ಥಾನಕ್ಕೆ ಬಂದಿದ್ದ ಹಲವು ಪ್ರಮುಖ ರಾಜರ ಹೆಸರುಗಳನ್ನು ಪಟ್ಟಿಮಾಡುತ್ತಾನೆ. ಆ ಕಾಲದ ಆಡಳಿತ ರಚನೆಯಲ್ಲಿನ ಮುಖ್ಯ ಕೇಂದ್ರಗಳ ಪಟ್ಟಿಯನ್ನೂ ಕೊಡುತ್ತಾನೆ. ಅವರಲ್ಲಿ 'ಅಳಿಯ ಪಟದ ಯಳಂದೂರ ದೊರೆ'ಯ ಉಲ್ಲೇಖವೂ ಇದೆ. ಈ ಆಧಾರಗಳಿಂದ ಹದಿನಾಡು ಮೈಸೂರಿನೊಂದಿಗೆ ಹೊಂದಿದ್ದ ಉತ್ತಮ ಸಂಬಂಧವನ್ನು ತಿಳಿದುಕೊಳ್ಳಬಹುದಾಗಿದೆ. ಕಳಲೆಯ ದಳವಾಯಿಗಳು ಮತ್ತು ಮೈಸೂರಿನ ಒಡೆಯರೊಂದಿಗೆ ವೈವಾಹಿಕ ಸಂಬಂಧಗಳನ್ನು ಮಾಡಿಕೊಳ್ಳುವುದರ ಮೂಲಕ ಹದಿನಾಡು ರಾಜರು ರಾಜಕೀಯವಾಗಿ ಬೆಳೆದರು. ಪ್ರಾರಂಭದಲ್ಲಿ ಸಾಮಾನ್ಯ ಅಧಿಕಾರಿಗಳಾಗಿದ್ದ ಹದಿನಾಡು ಅರಸರು ವಿಜಯನಗರ, ಮೈಸೂರು, ಕಳಲೆ ಮತ್ತು ಉಮ್ಮತ್ತೂರುಗಳೊಂದಿಗೆ ಆತ್ಮೀಯವಾದ ರಾಜಕೀಯ ಸಂಬಂಧಗಳನ್ನಿಟ್ಟುಕೊಂಡು ರಾಜರಾಗಿ ಬೆಳೆದರು.

ಆಡಳಿತ ವ್ಯವಸ್ಥೆ

ಹದಿನಾಡು ಅರಸರ ಆಡಳಿತಕ್ಕೆ ಹಿನ್ನೆಲೆಯಾಗಿ ಆಗ ರೂಢಿಯಲ್ಲಿದ್ದ ಆಡಳಿತ ಯಂತ್ರವು ಯಾವ ಸ್ವರೂಪದ್ದಾಗಿತ್ತು ಎಂಬುದನ್ನು ದೊರಕುವ ಕೆಲವೇ ಶಾಸನಗಳು ಮತ್ತು ಸಾಹಿತ್ಯಕ ದಾಖಲೆಗಳಿಂದ ತಿಳಿದುಕೊಳ್ಳಬಹುದು. ಪ್ರಾಂತದ ಆಡಳಿತದಲ್ಲಿ ಸಾಮ್ರಾಜ್ಯ, ಮಹಾಮಂಡಲ ಮತ್ತು ನಾಡು ವಿಭಾಗಗಳಿದ್ದುವು. ಅವುಗಳನ್ನು ಕ್ರಮವಾಗಿ ಚಕ್ರವರ್ತಿ, ಮಹಾಮಂಡಲೇಶ್ವರ ಮತ್ತು ಗೌಡ (ಅಥವಾ ಪ್ರಭು)ಗಳು ಆಳುತ್ತಿದ್ದರು. ಶ್ರೇಣಿಯಲ್ಲಿ ಚಕ್ರವರ್ತಿಯಾದ ನಂತರ ಮಹಾಮಂಡಲೇಶ್ವರ, ಅವನ ನಂತರ ಗೌಡ ಅಥವಾ ಪ್ರಭು. ಅದರ ಪ್ರಕಾರ ಈ ಪ್ರದೇಶದಲ್ಲಿ ಕುಮಾರನಾಡು, ಹಿರಿಯನಾಡು, ತೇರೆನಾಡು, ಎಣ್ಣೆನಾಡು, ಕುಡುಕುನಾಡು, ಪದಿನಾಲ್ಕುನಾಡು, ಹೊಸಲನಾಡು, ವಡಕರೈನಾಡು ಹೀಗೆ ಹಲವು ನಾಡುಗಳು ರೂಪುಗೊಂಡಿದ್ದುವು. ಹನ್ನೆರಡು ಸಾವಿರ ವರಹ ವರಮಾನ ಕೊಡುವ ಭೂಪ್ರದೇಶವು ಒಂದು ನಾಡು ಎನಿಸುತ್ತಿತ್ತು. ಅದೇ ಪ್ರಕಾರವಾಗಿ ಯಳಂದೂರು ಹನ್ನೆರಡು ಸಾವಿರ ವರಹ ವರಮಾನ ತರುವ ನಾಡಾಗಿತ್ತು. ಹೊಂಗನೂರಿನ ಒಂದು ಶಾಸನದಲ್ಲಿ ಹದಿನಾಡಿನ ಕೆಲವು ಅಧಿಕಾರಿಗಳ ಉಲ್ಲೇಖಗಳಿವೆ. ಅಲ್ಲ ಮಾಗಣಿಕಾರರು, ಪಾರುಪತ್ತೆಗಾರರು, ಗೌಡರು, ಸೇನುಭೋವರು, ಚಾವಡಿಕರಣಿಕರು ಮತ್ತು ಇತರ ಪದವಿಗಳು- ಹುದ್ದೆಗಳು ಇದ್ದುದಕ್ಕೆ ಉಲ್ಲೇಖವಿದೆ. ಜಿಲ್ಲೆ ಅಥವಾ ತಾಲೂಕಿನ ಆಡಳಿತದ ಒಂದು ಭಾಗವನ್ನು ಮಾಗಣಿಕಾರರು ನೋಡಿಕೊಳ್ಳುತ್ತಿದ್ದರು. ಹಾಗೆಯೇ ಪಾರುಪತ್ತೆಗಾರರೂ ಕೂಡ ಉಸ್ತುವಾರಿ ಅಧಿಕಾರಿಗಳು. ಸರಕಾರವು ಈ ಅಧಿಕಾರಿಗಳನ್ನು ನೇರವಾಗಿ ನೇಮಕ ಮಾಡುತ್ತಿತ್ತು. ಗೌಡನ ಸ್ಥಾನವು ಗ್ರಾಮದ ಮುಖ್ಯಸ್ಥನಾಗಿರುವುದರ ಕುರುಹಾಗಿತ್ತು. ವಿಜಯನಗರ ಕಾಲದಲ್ಲಿ ಗೌಡಿಕೆಯನ್ನು ಪಡೆಯಲು ಹಲವಾರು ವಿಧಾನಗಳಿದ್ದುವು. ಒಂದು ಹಳ್ಳಿಗೆ ಒಬ್ಬನಿಗಿಂತ ಹೆಚ್ಚು ಗೌಡರನ್ನು ಹೊಂದಿರುವ ರೂಢಿಯಿದ್ದಿತು. ಅದೇ ರೀತಿ ಒಬ್ಬನೇ ವ್ಯಕ್ತಿಯು ಒಂದಕ್ಕಿಂತ ಹೆಚ್ಚು ಗ್ರಾಮಗಳ ಗೌಡಿಕೆಯನ್ನು ಹೊಂದಿರುವ ನಿದರ್ಶನಗಳೂ ಇದ್ದುವು. ಗ್ರಾಮದ ಹುದ್ದೆಗಳಲ್ಲಿ ಸೇನುಬೋವನದು ಮುಖ್ಯವಾದುದು. ಗ್ರಾಮಕ್ಕೆ ಸೇರಿದ ಎಲ್ಲಾ ದಾಖಲೆ ಪತ್ರಗಳು, ಕಂದಾಯವನ್ನು ಕುರಿತ ವಿವರವಾದ ದಾಖಲೆಗಳು, ಬೇಸಾಯವಾಗುವ ಹಾಗೂ ಬೇಸಾಯಕ್ಕೆ ಇನ್ನೂ ಒಳಪಟ್ಟಿರದ ಜಮೀನುಗಳ ಲೆಕ್ಕಾಚಾರ, ಬೆಳೆ ಫಸಲಿನ ಅಂದಾಜು ಮತ್ತು ಗ್ರಾಮದ ಆಡಳಿತ ವಿವರಗಳು ಇವೆಲ್ಲ ಸೇನುಬೋವನ ವಶದಲ್ಲಿರುತ್ತಿದ್ದುವು. ಈ ಹುದ್ದೆಯು ಹೆಚ್ಚುಕಡಮೆ ಆನುವಂಶಿಕವಾಗಿತ್ತು. ಚಾವಡಿಕರುಣಿಕರು ಚಾವಡಿಯಲ್ಲಿ (ಮನೆಯ ಮುಂದಿನ ಜಗುಲಿ) ಕುಳಿತು ಲೆಕ್ಕಗಳನ್ನು ಬರೆಯುತ್ತಿದ್ದರು. ಅಲ್ಲದೆ ಶಾಸನಗಳಲ್ಲಿ ಕಾರ್ಯಕರ್ತ ಮತ್ತು ಕರ್ತ ಎಂಬ ಹುದ್ದೆಗಳ ಉಲ್ಲೇಖ ಬರುತ್ತದೆ. ಇವರು ಬಹುಶಃ ಆಡಳಿತದಲ್ಲಿ ಉಸ್ತುವಾರಿ ಹೊಣೆ ಹೊತ್ತ ಅಧಿಕಾರಿಗಳಿರಬಹುದು. ಸಮಸ್ತರು ಮತ್ತು ಮಹಾಜನರು ಎಂಬ ಉಲ್ಲೇಖಗಳೂ ಶಾಸನಗಳಲ್ಲಿ ಕಂಡುಬರುತ್ತವೆ. ಇವು ಆಡಳಿತಕ್ಕೆ ಸಂಬಂಧಿಸಿದಂತೆ ಸ್ಥಳೀಯ ಸಂಸ್ಥೆಗಳಾಗಿದ್ದಿರಬಹುದು. ಆಡಳಿತಕ್ಕೆ ಸಂಬಂಧಿಸಿದ ಕರ್ತವ್ಯಗಳನ್ನು ಈ ಎಲ್ಲ ಅಧಿಕಾರಿಗಳೂ ನಿರ್ವಹಿಸುತ್ತಿದ್ದರು.

ಹಣಕಾಸು

ಒಂದು ಪ್ರದೇಶದ ಸಮೃದ್ಧಿಯು ಅಲ್ಲಿಯ ಹಣಕಾಸು ಸಂಪನ್ಮೂಲಗಳನ್ನು ಅವಲಂಬಿಸುತ್ತದೆ. ಅರ್ಥವ್ಯವಸ್ಥೆಯ ಬೆನ್ನೆಲುಬಾಗಿ ಕೃಷಿ ಇರುವಾಗಲಂತೂ ಇದು ಹೆಚ್ಚು ಸತ್ಯ. ಈ ಪ್ರದೇಶದಲ್ಲಿ ಎರಡು ಬಗೆಯ ಕೃಷಿ ವಿಧಾನಗಳು ರೂಢಿಯಲ್ಲಿದ್ದುವು. ೧. ಕಡಾರಂಬ ಮತ್ತು ೨. ನೀರಾರಂಬ. ಮಳೆಯನ್ನೇ ಅವಲಂಬಿಸಿದ ಕಡಾರಂಬವು ಬೆದ್ದಲು ಅಥವಾ ಖುಷ್ಕಿ ಭೂಮಿಯಲ್ಲಿ ನಡೆಯುತ್ತಿದ್ದಿತು. ನೀರಾರಂಬವು ತರಿಭೂಮಿ, ನೀರು ಹಾಯಿಸಿ ಬೆಳೆಯುವ ತೋಟ, ಗದ್ದೆ ಮೊದಲಾದವುಗಳಲ್ಲಿ ನಡೆಯುತ್ತಿದ್ದಿತು. ನೀರಾವರಿಯು ಕೃಷಿಯ ಅತಿಮುಖ್ಯ ಅಂಗವಾದ್ದರಿಂದ ಅಣೆಕಟ್ಟುಗಳು, ಏರಿಗಳು, ಕೆರೆಗಳು, ಕಾಲುವೆಗಳು ನೀರಾವರಿಯ

ಅಂಗಗಳಾಗಿದ್ದುವು. ಇತರ ರಾಜರಂತೆಯೇ ಹದಿನಾಡು ಅರಸರೂ ನೀರಾವರಿ ಕಾರ್ಯಗಳನ್ನು ಕೈಗೆತ್ತಿಕೊಂಡು ಕೃಷಿಯನ್ನು ಪೋಷಿಸಿದರು. ಹೊನ್ನುಹೊಳೆ ಅಥವಾ ಸುವರ್ಣಾವತಿ ಎಂಬ ಸಣ್ಣದೊಂದು ನದಿಯು ಹದಿನಾಡಿನ ರಾಜಧಾನಿ ಯಳಂದೂರು ಮತ್ತು ಆಸುಪಾಸಿನಲ್ಲಿ ಹರಿಯುತ್ತದೆ. ಇದು ಬಹಳ ಪ್ರಾಚೀನವಾದ ನದಿ. ಚಿಕ್ಕದಾಗಿದ್ದರೂ ಈ ನದಿಯು ಈ ಭಾಗಕ್ಕೆ ನಿಸರ್ಗವು ನೀಡಿರುವ ವರ. ಈ ನದಿಯ ನೀರನ್ನು ಸಂಪೂರ್ಣವಾಗಿ ಉಪಯೋಗಿಸಿಕೊಳ್ಳಲು ಸಹಾಯಕವಾಗುವ ಕೆಲವು ಭೌತಿಕ ಲಕ್ಷಣಗಳೂ ಇವೆ. ಅದು ದಕ್ಷಿಣದಿಂದ ಉತ್ತರಕ್ಕೆ ಬಯಲಿನಲ್ಲಿ ಹರಿಯುತ್ತದೆ. ನದಿಯ ದಂಡೆಗಳು ತುಂಬಾ ಎತ್ತರವಾಗಿಲ್ಲ. ಹೆಚ್ಚುವರಿ ನೀರು ಸರಾಗವಾಗಿ ಬಯಲು ಪ್ರದೇಶದಲ್ಲಿ ಹರಿಯುವಂತೆ ನಾಲೆಗಳನ್ನು ತೋಡಲಾಗಿದೆ. ಮಳೆಗಾಲದಲ್ಲಿ ನೆರೆ ಬಂದಾಗ ಹೆಚ್ಚುವರಿ ನೀರು ಈ ನಾಲೆಗಳ ಮೂಲಕ ಹರಿಯುತ್ತದೆ. ಅಣೆಕಟ್ಟುಗಳನ್ನು ನಿರ್ಮಿಸದೆಯೇ ನದಿಯ ಹೆಚ್ಚುವರಿ ನೀರನ್ನು ಕೆರೆಗಳಿಗೆ ಹರಿಯಿಸಿಕೊಳ್ಳುವ ಪರಿಪಾಟವು ಹದಿನಾಡು ಅರಸರ ಆಳಿಕೆಯ ಕಾಲದಲ್ಲಿ ಇದ್ದಂತೆ ತೋರುತ್ತದೆ. ಹಲವು ಕಿಲೋಮೀಟರುಗಳ ದೂರಕ್ಕೆ ನೀರು ಈ ಕಾಲುವೆಗಳ ಮೂಲಕ ಹರಿದು ಕೆರೆಗಳನ್ನು ಸೇರುತ್ತಿದ್ದಿತು. ಗಾಣಿಗನೂರಿನ ಬಳಿ ಈ ನದಿಗೆ ಒಂದು ಅಣೆಯೂ ಆರು ನಾಲೆಗಳೂ ಇವೆ. ನೀರನ್ನು ಅಂಬಲೆ-ಯಳಂದೂರು, ಯೆರಿಯೂರು, ಮದ್ದೂರು ಮತ್ತು ಅಗರಗಳಲ್ಲಿನ ಕೆರೆಗಳಿಗೆ ಈ ನಾಲೆಗಳ ಮೂಲಕ ಹರಿಯಿಸಿ ಬೇಸಾಯಕ್ಕೆ ಉಪಯೋಗಿಸಲಾಗುತ್ತಿದ್ದಿತು. ಈ ಕೆರೆಗಳ ಇನ್ನೊಂದು ಮುಖ್ಯ ಲಕ್ಷಣ ಇದು. ಈ ಕೆರೆಗಳ ಮಟ್ಟವು ಒಂದರ ಕೆಳಗೆ ಇನ್ನೊಂದು ಇರುವುದರಿಂದ (ಅವುಗಳ ಮೇಲ್ಮಟ್ಟವನ್ನು ಪರಿಗಣಿಸಿ) ಒಂದು ಕೆರೆಯು ತುಂಬಿ ನೀರು ಉಕ್ಕಿ ಹರಿದರೆ, ಹಾಗೆ ಹರಿದು ಅದು ಅದರ ಕೆಳಮಟ್ಟದಲ್ಲಿರುವ ಇನ್ನೊಂದು ಕೆರೆಯನ್ನು ಸೇರುತ್ತಿದ್ದಿತು. ಪೂರ್ತಿ ತುಂಬಿದ ಕೆರೆಗಳಿಂದ ನೀರನ್ನು ಜಮೀನುಗಳಿಗೆ ಹಾಯಿಸಿ ಬೇಸಾಯಕ್ಕೆ ಅಣಿಪಡಿಸಲಾಗುತ್ತಿತ್ತು (ಅಚ್ಚುಕಟ್ಟು). ಯಳಂದೂರು ಕೆರೆಯ ನೀರು ಕ್ರಮವಾಗಿ ಎರಿಯೂರು, ಮದ್ದೂರು ಮತ್ತು ಅಗರಗಳ ಕೆರೆಗಳನ್ನು ಸೇರುತ್ತದೆ. ನೀರಿನ ಮಟ್ಟವು ಕಡಿಮೆಯಾದಾಗ, ದಸಿಗಳನ್ನು ನೆಟ್ಟು ಮರಳು, ತಡಿಕೆಗಳನ್ನು ಉಪಯೋಗಿಸಿ ತಾತ್ಕಾಲಿಕವಾದ ಒಡ್ಡುಗಳನ್ನು ನಿರ್ಮಿಸಲಾಗುತ್ತಿತ್ತು. ನೀರು ನದಿಯಿಂದ ಹರಿದುಬಂದು ಕೆರೆಯನ್ನು ಸೇರುವುದಕ್ಕೂ ಮೊದಲೇ ನೂರಾರು ಎಕರೆ ನೆಲಕ್ಕೆ ನೀರುಣಿಸಲಾಗುತ್ತಿತ್ತು. ಆಮೇಲೆ ಕೆರೆಗಳಿಂದಲೂ ನೂರಾರು ಎಕರೆ ಜಮೀನಿಗೆ ನೀರು ಪೂರೈಸಿ ಬೇಸಾಯಕ್ಕೆ 'ಅಚ್ಚುಕಟ್ಟು' ಮಾಡಲಾಗುತ್ತಿತ್ತು. ಹದಿನಾಡು ಅರಸರ ಕಾಲದಲ್ಲಿ ಈ ಪದ್ಧತಿ ಆಚರಣೆಯಲ್ಲಿದ್ದಿತೆಂಬುದು ಸ್ಥಿರಪಟ್ಟಿದೆ. ಈ ಕೆರೆಗಳ ತೂಬುಗಳನ್ನು ಪರಿಶೀಲಿಸಿದಾಗ ಇದು ತಿಳಿಯುತ್ತದೆ. ಸರೋವರಗಳು ಮತ್ತು ಕೆರೆಗಳಲ್ಲದೆ, ಬಾವಿಗಳಿಂದಲೂ ಕೃಷಿಗೆ ನೀರಾವರಿ ಸೌಲಭ್ಯವನ್ನು ಒದಗಿಸಲಾಗುತ್ತಿದ್ದಿತು. ಹೀಗೆ ಉತ್ತಮ ನೀರಾವರಿ ಸೌಲಭ್ಯಗಳು, ವ್ಯವಸ್ಥಿತವಾದ ಕ್ರಮ, ಫಲವತ್ತಾದ ಮಣ್ಣು ಇವುಗಳಿಂದಾಗಿ ಈ ಪ್ರದೇಶವು ಕೃಷಿಯಲ್ಲಿ ಮುಂದುವರಿದಿದ್ದು ಆರ್ಥಿಕವಾಗಿ ಭದ್ರವಾಗಿತ್ತು.

ಧಾರ್ಮಿಕ ನೀತಿ

ಯಾವುದೇ ರಾಜಕೀಯ ವ್ಯವಸ್ಥೆಯ ಅಧಿಕಾರ ವಲಯದಲ್ಲಿ ಮುಖ್ಯವಾದ ಸಾಧನಗಳು ದಂಡ (ಶಿಕ್ಷೆ) ಮತ್ತು ಧರ್ಮ. ರಾಜ್ಯವನ್ನು ಆಳುವವರ ಮತ್ತು ಅವರ ಅಧೀನರ ಕರ್ತವ್ಯ. ಆಗ ಪ್ರಚಲಿತವಾದ ಧಾರ್ಮಿಕ ಸಂಪ್ರದಾಯಗಳನ್ನು ಸ್ವೀಕರಿಸುವುದು, ಪಾಲಿಸುವುದು ಮತ್ತು ಆಶ್ರಯಕೊಟ್ಟು ಪೋಷಿಸುವುದು. ಈ ದೃಷ್ಟಿಯಿಂದ ಹದಿನಾಡು ಅರಸರ ಧಾರ್ಮಿಕ ನೀತಿಗಳನ್ನು ಪರೀಕ್ಷಿಸಿನೋಡಿದರೆ, ಅವರು ವೀರಶೈವ ಧರ್ಮಕ್ಕೆ ವಿಶೇಷ ಪ್ರಾಧಾನ್ಯವನ್ನು ಕೊಟ್ಟರೂ ಇತರ ಎಲ್ಲಾ ಧರ್ಮಗಳಿಗೂ ಆಶ್ರಯ ನೀಡಿದರು ಎಂದು ಹೇಳಬೇಕಾಗುತ್ತದೆ. ದಕ್ಷಿಣ ಕರ್ನಾಟಕದಲ್ಲಿ ವೀರಶೈವ ಧರ್ಮದ ಜನಪ್ರಿಯತೆ ಮಂದಗತಿಯಲ್ಲಿತ್ತು. ಕಲ್ಯಾಣದಿಂದಾಗಿ ಉತ್ತರ ಕರ್ನಾಟಕದಲ್ಲಿ ಅದು ಬಹು ಜನಪ್ರಿಯವಾಗಿತ್ತು. ಜಂಗಮರಿಂದಾಗಿ ಮತ್ತು

ಮಠಗಳಿಂದಾಗಿ ಅದು ಕಾಲಕ್ರಮದಲ್ಲಿ ಪ್ರಾಧಾನ್ಯವನ್ನು ದ್ವಿಗುಣಗೊಳಿಸಿಕೊಂಡಿತು. ವೀರಶೈವ ಧರ್ಮವು ರಾಜಮಹಾರಾಜರ ಕೃಪಾನುಗ್ರಹಗಳನ್ನು ಹುಡುಕಿಕೊಂಡು ಹೋಗಲಿಲ್ಲ. ಆದರೆ ಮೈಸೂರಿನ ಒಡೆಯರು, ಕಳಲೆಯ ದಳವಾಯಿಗಳು, ಹದಿನಾಡು ಅರಸರು ಮತ್ತು ಇತರರು ಅದಕ್ಕೆ ಸಾಕಷ್ಟು ಪೋಷಣೆ ನೀಡಿದರು. ಹದಿನಾಡಿನಲ್ಲೂ ವೀರಶೈವ ಧರ್ಮವು ಚೆನ್ನಾಗಿ ಬೆಳೆಯಿತು ಎಂದು ತಿಳಿದಿದೆ. ಹದಿನಾಡಿನ ಅರಸರು ಮೊದಲು ಜೈನರಾಗಿದ್ದರು. ಆಮೇಲೆ ಅವರು ಚೆನ್ನರಾಜನ ಕಾಲದಲ್ಲಿ ಜಂಗಮಗುರು ಆರಾಧ್ಯ ಪುತ್ರ ಷಡಕ್ಷರಿಯ ಸಲಹೆಯಂತೆ ವೀರಶೈವ ಧರ್ಮವನ್ನು ಅವಲಂಬಿಸಿದರು. ೧೭ ಮತ್ತು ೧೮ನೆಯ ಶತಮಾನಗಳಲ್ಲಿ ವೀರಶೈವ ಧರ್ಮವು ಹೆಚ್ಚು ಹೆಚ್ಚು ಜನಪ್ರಿಯವಾಯಿತು. ಇತರ ಧರ್ಮಗಳಿಗೆ ಸೇರಿದ್ದ ಜನರು ಬಹು ಸಂಖ್ಯೆಯಲ್ಲಿ ವೀರಶೈವ ಧರ್ಮಕ್ಕೆ ಪರಿವರ್ತಿತರಾದರು. ದೇವಚಂದ್ರನು ಈ ಮತಾಂತರವನ್ನು ವಿಸ್ತಾರವಾಗಿ ತನ್ನ ಕೃತಿಯಲ್ಲಿ ಚರ್ಚಿಸಿದ್ದಾನೆ. ಈ ಪ್ರದೇಶಗಳಲ್ಲಿ ವೀರಶೈವ ಧರ್ಮವು ಗಮನಾರ್ಹವಾಗಿ ಪ್ರಬಲಿಸಿದುದರಿಂದ ಹದಿನಾಡು ಅರಸರು ಕೆಲವು ಹೊಸ ವೀರಶೈವ ಮಠಗಳನ್ನು ನಿರ್ಮಿಸುವುದರ ಜೊತೆಗೆ ಹಳೆಯ ಮಠಗಳಿಗೆ ಬೇಕಾದಷ್ಟು ಕೊಡುಗೆಗಳನ್ನು ದತ್ತಿಗಳನ್ನೂ ನೀಡಿದರು. ಉದಾಹರಣೆಗೆ ರಾಮರಾಜನಾಯಕನು ಹಸುರಹಳ್ಳಿ ಗ್ರಾಮವನ್ನು ಸುತ್ತೂರು ಮಠಕ್ಕೆ ನೀಡಿದನು. ನಂಜರಾಜ ಒಡೆಯನು ಉಮ್ಮತ್ತೂರಿನ ಸಿದ್ಧಮಲ್ಲಿಕಾರ್ಜುನ ದೇವರಿಗೆ ಹರದನಹಳ್ಳಿ ಮಠವನ್ನೂ ಮಲ್ಲಾಪುರ ಗ್ರಾಮವನ್ನು ಅರ್ಪಿಸಿದನು. ತಿರುಮಲರಾಜನಾಯಕನು ಶಿವನಸಮುದ್ರದ ವೀರೇಶ್ವರ ದೇವಸ್ಥಾನದಲ್ಲಿ ಮಹತ್ತಿನ ಮಠವನ್ನು ಸ್ಥಾಪಿಸಿದನು. ಅದಕ್ಕೆ ಭೂಮಿಯನ್ನು ದತ್ತಿಯಾಗಿ ಬಿಟ್ಟನು. ಲಿಂಗರಾಜಯ್ಯನು ತನ್ನ ತಾಯಿ ಮಲ್ಲಾಜಮ್ಮನು ಕಟ್ಟಿಸಿದ್ದ ಮಹಾಮಹತ್ತಿನ ಕಲ್ಲುಮಠಕ್ಕೆ ಮಾವಿನಹಳ್ಳಿ ಮತ್ತು ಕರಿಸಿದ್ದನಪುರ ಗ್ರಾಮಗಳನ್ನು ಕೊಡುಗೆಯಾಗಿ ನೀಡಿದನು. ಮುದ್ದುರಾಜನು ಯಳಂದೂರಿನಲ್ಲಿ ಕವಿ ಷಡಕ್ಷರದೇವನಿಗೋಸ್ಕರವಾಗಿ ಕಟ್ಟಿಸಿದ ಮಠವು ವಿಶೇಷವಾದದ್ದು. ಷಡಕ್ಷರ ದೇವನೂ ಇನ್ನಿತರ ವೀರಶೈವ ಕವಿಗಳೂ ಹದಿನಾಡು ಅರಸರ ಆಶ್ರಯವನ್ನು ಪಡೆದಿದ್ದರು. ಇದರಿಂದಾಗಿ ವೀರಶೈವ ಧರ್ಮವನ್ನು ಕುರಿತ ಅನೇಕ ಗ್ರಂಥಗಳು ರಚಿತವಾದುವು; ಮತ್ತು ವೀರಶೈವ ಧರ್ಮದ ಪ್ರಸಾರಕ್ಕೆ ಅನುಕೂಲಕರವಾದ ಸನ್ನಿವೇಶವು ನಿರ್ಮಾಣವಾಯಿತು. ಇವೆಲ್ಲವುಗಳಿಂದ ತಿಳಿದುಬರುವುದೇನೆಂದರೆ, ಹದಿನಾಡಿನ ಅರಸರು ವೀರಶೈವ ಧರ್ಮಾನುಯಾಯಿಗಳಾಗಿದ್ದು ಅದನ್ನು ಅಪಾರವಾಗಿ ಪ್ರೋತ್ಸಾಹಿಸಿದರು. ಧಾರ್ಮಿಕ, ದಾರ್ಶನಿಕ, ಶೈಕ್ಷಣಿಕ ಚಟುವಟಿಕೆಗಳ ಕೇಂದ್ರವಾಗಿದ್ದ ವೀರಶೈವ ಮಠಗಳು ಸಮಾಜದಲ್ಲಿ ಗೌರವವನ್ನು ಗಳಿಸಿದ್ದುವು. ಮಠದ ಕಾರ್ಯಚಟುವಟಿಕೆಗಳು ಅವಿಚ್ಛಿನ್ನವಾಗಿ ನಡೆಯಬೇಕೆನ್ನುವುದು ಜನರ ಇಚ್ಛೆಯಾಗಿದ್ದಿತು. ಏನಾದರೂ ತೊಂದರೆಯುಂಟಾದಲ್ಲಿ ಮಠಗಳ ನೆರವಿಗೆ ಜನರು ಧಾವಿಸುತ್ತಿದ್ದರು. ಯಳಂದೂರಿನ ಶಾಸನದಲ್ಲಿ ಇದಕ್ಕೆ ಒಳ್ಳೆಯ ನಿದರ್ಶನವಿದೆ. ಅದರ ಪ್ರಕಾರ, ಯಳಂದೂರಿನ ಕಾರೇಪುರ ಮಠದಲ್ಲಿ ಬಸವೇಶ್ವರರ ಪೂಜೆಯು ಅಬಾಧಿತವಾಗಿ ನಡೆದುಕೊಂಡು ಬಂದಿತ್ತು. ಭೂಮಿ, ತೋಟ ಹಾಗೂ ಕಾರೇಪುರ ಗ್ರಾಮಗಳು ಈ ಮಠಕ್ಕೆ ದತ್ತಿಯಾಗಿದ್ದುವು. ಕೆಲವು ಕಾಲಾನಂತರ ಮೈಸೂರಿನ ಅರಸರು ಕಾರೇಪುರ ಗ್ರಾಮವನ್ನು ಮಠದಿಂದ ಹಿಂದಕ್ಕೆ ತೆಗೆದುಕೊಂಡುಬಿಟ್ಟರು. ಅರಮನೆಗೆ ಹೆಚ್ಚಿನ ತೆರಿಗೆ ಕೊಡಲು ಎಲ್ಲ ಶೆಟ್ಟಿಗಳು ಮತ್ತು ದೇಶದವರ ಸಮ್ಮತಿ ಪಡೆದ ನಂತರ, ಬಸವೇಶ್ವರರ ಪೂಜೆಯನ್ನು ನಿರಂತರವಾಗಿ ನಡೆಸಲು, ದೀಪೋತ್ಸವ ಅನ್ನದಾನಾದಿಗಳನ್ನು ನಡೆಸಲು, ಜನರು ಮಾಡಿದ ಮನವಿಯಂತೆ, ಕಾರೇಪುರವನ್ನು ಮಠಕ್ಕೆ ಹಿಂದಿರುಗಿಸಲಾಯಿತು. ಬಹುಶಃ ಆಗ ಹೊರಿಸಿದ ಹೆಚ್ಚಿನ ತೆರಿಗೆಯು ಕಾರೇಪುರದ ವರಮಾನಕ್ಕೆ ಸಮನಾದುದಾಗಿರಬಹುದು. ಹೀಗೆ ಹದಿನಾಡು ಅರಸರ ಆಳಿಕೆಯಲ್ಲಿ ವೀರಶೈವ ಧರ್ಮಕ್ಕೆ ರಾಜರ ಮತ್ತು ಜನರ ಆಶ್ರಯವಿತ್ತು ಎಂದು ಹೇಳಬಹುದು. ಈ ಅರಸರು ಇತರ ಧರ್ಮಗಳಿಗೂ ಪೋಷಣೆ ಕೊಟ್ಟರು. ಉದಾಹರಣೆಗೆ, ದೇವಪ್ಪಗೌಡನ ಕಾಲದಲ್ಲಿ ಯಳಂದೂರಿನಲ್ಲಿ ಶೈವ ಧರ್ಮಕ್ಕೆ ಸೇರಿದ ಗೌರೀಶ್ವರ ದೇವಾಲಯವನ್ನು ನಿರ್ಮಿಸಲಾಯಿತು. ಚಾಮರಸ ಒಡೆಯನು ಹಲವು ದೇವಾಲಯಗಳಿಗೆ ಕೊಡುಗೆ

ನೀಡಿದನು. ರಾಮನೃಪಾಲನು ಈ ದೇವಾಲಯಕ್ಕೆ ಗಾಣಿಗನೂರು ಗ್ರಾಮವನ್ನೇ ದತ್ತಿಯಾಗಿ ಬಿಟ್ಟನು. ತಿರುಮಲರಾಜನಾಯಕನು ವಾದಿಯರಪುರ, ಸೇನಗುಂಡಲ, ಮತ್ತು ಚಿಂಚನಪುರ ಗ್ರಾಮಗಳನ್ನು ನೀಡಿದರೆ, ಮುದ್ದುರಾಜನು ಗೋಪುರವನ್ನೂ 'ಮಂಟಪ', 'ಗುಡಿ'ಗಳನ್ನೂ ಕಟ್ಟಿಸಿ, ಈ ದೇವಾಲಯದಲ್ಲಿ ಪಂಚಲಿಂಗ ವಿಗ್ರಹಗಳನ್ನು ಪ್ರತಿಷ್ಠೆ ಮಾಡಿಸಿದನು; ಅಲ್ಲದೆ ಬೇಕಾದಷ್ಟು ಭೂಮಿಯನ್ನು ದತ್ತಿ ನೀಡಿದನು. ಗೌರೀಶ್ವರ ದೇವಾಲಯದ ಎಡಪಕ್ಕದಲ್ಲಿ ಪಾರ್ವತಿಯ ದೇವಾಲಯವನ್ನು ಕಟ್ಟಲಾಗಿದೆ. ಕೊಳ್ಳೇಗಾಲದ ಮೂವತ್ತೊಂದನೆಯ ಶಾಸನದಲ್ಲಿ ಲಿಂಗರಾಜಯ್ಯನ ಮಗ ಚಾಮರಾಜ ಒಡೆಯನು ಸತ್ಯಗಾಲದಲ್ಲಿ 'ಗುಡಿ'ಯನ್ನು ಕಟ್ಟಿಸಿ, ಪಂಚಲಿಂಗಗಳನ್ನು ಸ್ಥಾಪಿಸಿ, ದೇವರಿಗೆ ಪೂಜೆ ಮತ್ತು ನೈವೇದ್ಯಗಳಿಗಾಗಿ ಭೂಮಿಯನ್ನು ದಾನ ಮಾಡಿದನು-ಎಂದು ಹೇಳಿದೆ. ಶಾಸನಗಳಲ್ಲಿ 'ಕಪಾಲೇಶ್ವರ'ಎಂದು ಕರೆದಿರುವ 'ಕವಿತೇಶ್ವರ' ದೇವಾಲಯವು ಚೋಳರ ಕಾಲಕ್ಕೆ ಸೇರಿದ್ದು. ಯಳಂದೂರಿನಲ್ಲಿ ವೈಷ್ಣವಧರ್ಮವನ್ನು ಪ್ರತಿನಿಧಿಸುವ ವರಾಹಸ್ವಾಮಿ ದೇವಾಲಯವಿದೆ. ಮುದ್ದುರಾಜನು ಬಿಳಿಗಿರಿರಂಗನ ಬೆಟ್ಟದ ದೇವರು ರಂಗನಾಥಸ್ವಾಮಿಗೆ ನವರಾತ್ರಿಯ ಸೇವೆಗಾಗಿ ೩೦ 'ವರಹ'ಗಳನ್ನು ದತ್ತಿಯಾಗಿ ಕೊಟ್ಟನು. ಒಟ್ಟಿನಲ್ಲಿ ಹದಿನಾಡು ಮತ್ತು ಸುತ್ತು ಮುತ್ತಿನ ಪ್ರದೇಶದ ಜನರ ಧಾರ್ಮಿಕ ಜೀವನವನ್ನು ಅಧ್ಯಯನ ಮಾಡಿದಾಗ, ಇತರ ಧರ್ಮಗಳ ಬಗೆಗೆ ಸಹಿಷ್ಣುತೆ, ಸಹಬಾಳ್ವೆಯ ದರ್ಶನ ಅಲ್ಲಿದ್ದುದು ಚೆನ್ನಾಗಿ ವ್ಯಕ್ತವಾಗುತ್ತದೆ. ವೀರಶೈವ ಧರ್ಮವು ಈ ಪ್ರದೇಶದಲ್ಲಿ ದಟ್ಟವಾದ ಪ್ರಭಾವ ಬೀರಿದ್ದರೂ, ಅದರ ಜೊತೆಗೇ ಶೈವ, ವೈಷ್ಣವ ಧರ್ಮಗಳೂ ಹರಡಿದ್ದುವು. ಹದಿನಾಡು ಅರಸರ ದೂರದೃಷ್ಟಿಯನ್ನು ಇದು ತೋರಿಸುತ್ತದೆ. ಒಂದು ಧರ್ಮದ ಅಂಥ ಅನುಯಾಯಿಗಳಾಗದೆ ಅವರು ಎಲ್ಲ ಧರ್ಮಾನುಯಾಯಿಗಳನ್ನೂ ಸಮಾನವಾಗಿ ಪರಿಗಣಿಸಿದರು. ತಮ್ಮ ಆಳಿಕೆಯ ಪ್ರದೇಶದಲ್ಲಿ ಎಲ್ಲಾ ಧರ್ಮಗಳ ಪೋಷಕರಾಗಿದ್ದರು.

ಸಾಮಾಜಿಕ ಪರಿಸ್ಥಿತಿ

ಹದಿನಾಡಿನ ಅರಸರು ರೂಢಿಯಿಂದ ಬಂದ ಸಾಮಾಜಿಕ ಪರಿಸ್ಥಿತಿಯನ್ನು ಕಾಪಾಡಿಕೊಳ್ಳಲು ಪ್ರಯತ್ನಿಸಿದರು. ಅವರು ಶಾಂತಿ ಮತ್ತು ಸೌಹಾರ್ದಗಳಂತಹ ಮೌಲ್ಯಗಳಿಂದ ಕೂಡಿದ ಸಾಮಾಜಿಕ ಜೀವನವನ್ನು ಬೆಳೆಸಿ, ಬಲಪಡಿಸಿ, ಮುಂದುವರಿಸುವ ಸಲುವಾಗಿ, ಮೈಸೂರು, ಕಳಲೆ, ಉಮ್ಮತ್ತೂರು ಮತ್ತಿತರ ನೆರೆ ರಾಜ್ಯಗಳೊಂದಿಗೆ ವೈವಾಹಿಕ ಹಾಗೂ ಮೈತ್ರಿಯುತ ಸಂಬಂಧಗಳನ್ನು ಉಳಿಸಿಕೊಂಡರು. ಇದು ರಾಜಕೀಯ ಸ್ಥಿರತೆ ಮತ್ತು ಸಂಘಟನೆಗೆ ನೆರವಾಗುವ ಉತ್ತಮ ರಾಜಕೀಯ-ಸಾಮಾಜಿಕ-ನೈತಿಕ ಮಾರ್ಗ. ಸಾಂಪ್ರದಾಯಿಕ ಸಾಮಾಜಿಕ ರಚನೆಯು ಹದಿನಾಡಿನಲ್ಲಿ ಮುಂದುವರಿದೇ ಇತ್ತು. ಬ್ರಾಹ್ಮಣರು ಸಮಾಜದ ಅಗ್ರಭಾಗದಲ್ಲಿದ್ದರು. ಅವರಿಗೆ ಸಮಾಜದಲ್ಲಿ ಅಪಾರ ಗೌರವ, ಪ್ರೇಮ ಮತ್ತು ಮರ್ಯಾದೆಯ ಸ್ಥಾನವಿದ್ದಿತು. ಏಕೆಂದರೆ ಅವರು ಷಟ್ಕರ್ಮನಿರತರಾಗಿದ್ದರು (ಅಧ್ಯಯನ, ಅಧ್ಯಾಪನ, ಯಜನ, ಯಾಜನ, ದಾನ ಮತ್ತು ಪ್ರತಿಗ್ರಹ). ಶಾಸನದಿಂದ ತಿಳಿದುಬರುವಂತೆ ಬ್ರಾಹ್ಮಣರು ದಕ್ಷರಾದ, ಉತ್ತಮ ಕುಟುಂಬ/ವಂಶಗಳಿಂದ ಬಂದ ಜನರು, ಶಾಂತಿಪ್ರಿಯರು, ಉತ್ತಮ ಸುಸಂಸ್ಕೃತ ನಡವಳಿಕೆಯುಳ್ಳವರು. ಧಾರ್ಮಿಕ ಕ್ಷೇತ್ರದಲ್ಲಿ ಅವರದು ಅತ್ಯಂತ ಮುಖ್ಯವಾದ ಪಾತ್ರ. ರಾಜಕೀಯದಲ್ಲಿಯೂ ಮಂತ್ರಿಗಳಾಗಿ ಮತ್ತು ಇತರ ಅಧಿಕಾರಿಗಳಾಗಿ ಗಣನೀಯವಾಗಿ ಪ್ರಭಾವಶಾಲಿಗಳಾಗಿದ್ದರು. ಬ್ರಾಹ್ಮಣರು ಅಗ್ರಹಾರಗಳಲ್ಲಿ ವಾಸಮಾಡುತ್ತಿದ್ದರು. ಅಗ್ರಹಾರವನ್ನು ಉಡುಗೊರೆಯಾಗಿ ಪಡೆದ ಬ್ರಾಹ್ಮಣರನ್ನು ಮಹಾಜನರೆಂದು ಕರೆಯುತ್ತಿದ್ದರು. ಈ ಅಗ್ರಹಾರಗಳು ಶಿಕ್ಷಣದ ಮುಖ್ಯ ಕೇಂದ್ರಗಳಾಗಿದ್ದುವು. ಒಂದು ಅಗ್ರಹಾರವೂ ಆಗಿದ್ದ ಯಳಂದೂರು ಚೋಳೇಂದ್ರ ಸಿಂಹ ಚತುರ್ವೇದಿಮಾಗಳಂ ಎಂದು ಪ್ರಸಿದ್ಧವಾಗಿತ್ತು. ಯಳಂದೂರಿನ ಮೊದಲನೆಯ ಶಾಸನದಿಂದ ತಿಳಿದುಬರುವಂತೆ ವೀರಶೈವರು, ಅರಸುಗಳು, ದರ್ಪಣರು (ಕನ್ನಡಿ) ಸೀಗುರಿ (ಚಾಮರ)ಗಳು, ಗುಂಬಾರತಿಗಳು,

ಮಂಗಲಾಷ್ಟಕರು, ಮಂಗಳಾರತಿಗಳು, ನರ್ತಕರು, ಮೇಳಗಳು, ಸೇರುವೆಗಾರರು, ಕ್ಷೌರಿಕರು, ಗಾರೆಯವರು, ಹೂವಾಡಿಗರು, ತಮಟೆ ಹೊಡೆಯುವವರು, ಮದ್ದಳೆಕಾರರು, ಗಾಯಕರು ಮತ್ತು ನಟ್ಟುವರು ಇದ್ದರು. ರಾಮರಾಜನಾಯಕನು ನಾಯಿಂದರು, ಅಗಸರು ಮತ್ತು ಕುಂಬಾರರ ನಡುವೆ ಉಂಟಾಗಿದ್ದ ವ್ಯಾಜ್ಯವನ್ನು ಪರಿಹರಿಸಿದನು ಎಂದು ತಿಳಿಯುತ್ತದೆ. ಯಳಂದೂರಿನ ಹತ್ತನೆಯ ಶಾಸನದಲ್ಲಿ ಶೆಟ್ಟಿಗಳು ಮತ್ತು ದೇಶಿ ಜನರ ಉಲ್ಲೇಖವಿದೆ. ಜನರು ಜಾತಿ-ತೆರಿಗೆಯನ್ನು ಕೊಡುವ ಪದ್ಧತಿ ರೂಢಿಯಲ್ಲಿತ್ತು. ಹೆಣ್ಣು ದಾರಿತಪ್ಪಿಹೋದರೆ ಅವಳಿಗೆ ತೆರಿಗೆ ಪಾವತಿಯಿಂದ ವಿನಾಯಿತಿಯಿತ್ತು, ಅಲ್ಲದೆ ಅವಳ ಜೀವನೋಪಾಯಕ್ಕಾಗಿ ಆರ್ಥಿಕ ಸಹಾಯ ದೊರಕುತ್ತಿತ್ತು. ಹದಿನಾಡಿನಲ್ಲಿ ಬೇರೆ ಬೇರೆ ಜಾತಿಯ ಮತ್ತು ವರ್ಗಗಳ ಜನರು ಒಟ್ಟಿಗೆ ಸಹಬಾಳ್ವೆ ನಡೆಸುತ್ತಿದ್ದರು ಎಂಬುದರ ಬಗೆಗೆ ಮಾಹಿತಿ ದೊರಕುತ್ತದೆ. ಆಗಾಗ ಘರ್ಷಣೆಗಳಾಗುತ್ತಿದ್ದರೂ ಹದಿನಾಡ ಅರಸರು ರಾಜ್ಯದಲ್ಲಿ ಶಾಂತಿ-ಸಾಮರಸ್ಯಗಳನ್ನು ನೆಲೆಗೊಳಿಸಲು ಬಹಳ ಶ್ರಮಿಸುತ್ತಿದ್ದರು. ಸಮಾಜದ ಸುವ್ಯವಸ್ಥೆ ತಮ್ಮ ಹೊಣೆಯೆಂಬುದನ್ನು ಅವರು ಗಂಭೀರವಾಗಿಯೇ ತೆಗೆದುಕೊಂಡಿದ್ದರು. ಹಬ್ಬಗಳು, ಉತ್ಸವಗಳು, ಸಾಪ್ತಾಹಿಕ ಸಂತೆಗಳು, ವಾರ್ಷಿಕ ಜಾತ್ರೆಗಳು ಅದಕ್ಕೆ ಪೋಷಕವಾಗಿದ್ದುವು. ಈ ಸಮಾರಂಭಗಳು ಕೇವಲ ಧಾರ್ಮಿಕವೋ ಪ್ರಾಪಂಚಿಕವೋ ಆದ ಚಟುವಟಿಕೆಗಳಾಗಿರದೆ, ಜನರು ಸಾಮೂಹಿಕವಾಗಿ ಪಾಲುಗೊಳ್ಳಲು ಸಾಂಸ್ಕೃತಿಕ ವೇದಿಕೆಯಾಗುತ್ತಿದ್ದುವು. ಜೊತೆಗೇ ಅವರಿಗೆ ಮನರಂಜನೆಯನ್ನು ಒದಗಿಸುತ್ತಿದ್ದುವು. ವೀರಗಲ್ಲುಗಳು (ಜನರು ಅಂಕನಕಲ್ಲುಗಳೆಂದೂ ಕರೆಯುತ್ತಿದ್ದರು). ಹಳ್ಳಿಯ ಹಿತಕ್ಕಾಗಿ ತಮ್ಮ ಪ್ರಾಣವನ್ನೂ ಲೆಕ್ಕಿಸದೆ ಸಮಾಜವಿರೋಧಿ ಶಕ್ತಿಗಳ ಮೇಲೆ ಕಾದಿ ಮಡಿದವರ ಸ್ಮಾರಕಗಳು, ಅಸಹಾಯಕರಾದವರು, ದುರ್ಬಲವರ್ಗದವರು, ಮುಗ್ಧರು, ಹಳ್ಳಿಯ ಹಸು-ಕರುಗಳು, ಇವರುಗಳಿಗಾಗಿ ಕಾದಿ ಮಡಿದವರ ಹಾಗೂ ಯುದ್ಧದಲ್ಲಿ ಮಡಿದ ಯೋಧರ ಸ್ಮಾರಕಗಳು ಸಾಮಾಜಿಕ ಜೀವನದ ಭಾಗವೇ ಆಗಿದ್ದುವು.

ಹದಿನಾಡು ಅರಸರು ವಿದ್ಯಾಭ್ಯಾಸ ಕ್ಷೇತ್ರಕ್ಕೂ ತಮ್ಮ ಗಮನ ಹರಿಸಿದರು ಎನ್ನುವುದು ಶಾಸನಗಳಿಂದ ತಿಳಿದುಬರುತ್ತದೆ. ಯಳಂದೂರಿನ ಅಗ್ರಹಾರವು ಬ್ರಾಹ್ಮಣ ವಿದ್ವಾಂಸರು ವಾಸಮಾಡುವ ಅಗ್ರಹಾರವಾಗಿದ್ದುದರ ಜೊತೆಗೆ ಶಿಕ್ಷಣದ ಮುಖ್ಯ ಕೇಂದ್ರವೂ ಆಗಿದ್ದಿತು. ಹಾಗೆಯೇ ವೀರಶೈವ ಮತ್ತು ಇತರ ಮಠಗಳೂ ಶಿಕ್ಷಣ ವ್ಯವಸ್ಥೆಯ ಕೇಂದ್ರಗಳಾಗಿದ್ದುವು. ಅವು ದಾರ್ಶನಿಕ, ಧಾರ್ಮಿಕ ಮತ್ತು ಶೈಕ್ಷಣಿಕ ಸಂಸ್ಥೆಗಳಾಗಿದ್ದುವು. ಈ ಅರಸರ ಕಾಲದಲ್ಲಿ ಕನ್ನಡ ಮತ್ತು ಸಂಸ್ಕೃತ ಸಾಹಿತ್ಯಗಳು ವಿಪುಲವಾಗಿ ಬೆಳೆದುವು. ಷಡಕ್ಷರದೇವ, ಪರ್ವತ ಶಿವಯೋಗಿ, ಸಾಸಲಯ್ಯ, ನಂಜಶೆಟ್ಟಿ, ನಿಜಗುಣಶಿವಯೋಗಿ, ಮತ್ತು ಮುಪ್ಪಿನ ಷಡಕ್ಷರಿ ಇವರು ಈ ಕಾಲದ ಬಹುಮುಖ್ಯ ಕವಿಗಳಾಗಿದ್ದರು. ಅವರಲ್ಲೂ ಷಡಕ್ಷರದೇವನು ಅಗ್ರಗಣ್ಯನು. ಅವನು ಮೈಸೂರಿನ ಚಿಕ್ಕದೇವರಾಜ ಒಡೆಯ, ಕೆಳದಿಯ ಶಿವಪ್ಪನಾಯಕ, ಹದಿನಾಡಿನ ಮುದ್ದುರಾಜ ಮತ್ತು ಇತರ ಅರಸರ ನಿಕಟವರ್ತಿಯಾಗಿದ್ದನು. ಅವನು ಕನ್ನಡದಲ್ಲಿ ರಾಜಶೇಖರವಿಳಾಸ, ಬಸವರಾಜವಿಜಯ, ಶಬರಶಂಕರವಿಳಾಸಗಳನ್ನೂ, ಸಂಸ್ಕೃತದಲ್ಲಿ ಕವಿಕರ್ಣರಸಾಯನ, ಶಿವಸ್ತವಮಂಜರಿ, ನಮಃಶಿವಾಯಶತಕ, ಸಿದ್ಧಲಿಂಗಸ್ತವನ, ವೀರಭದ್ರೋದಾಹರಣಗದ್ಯಗಳನ್ನು ಬರೆದಿದ್ದಾನೆ. ಷಡಕ್ಷರದೇವನ ಸಮಕಾಲೀನನಾಗಿದ್ದ ಪರ್ವತಶಿವಯೋಗಿ ಬಸವೇಶ್ವರ ದೇವರ ವಚನಸಾರಾರ್ಥ, ಮುರಿಗೆಯ ಶಾಂತವೀರೇಶನ ಪ್ರಭುಲಿಂಗಕಂದದ ಟೀಕೆ, ಕರಸ್ಥಲದ ನಾಗಲಿಂಗನ ತ್ರಿಪದಿಯ ಟೀಕೆ, ಗುರುಸ್ತೋತ್ರ ತ್ರಿಪದಿಯ ಟೀಕೆ, ಚೆನ್ನಬಸವನ ಕರಣಹಸುಗೆಯ ಟೀಕೆ, ಚೆನ್ನಬಸವನ ಮಿಶ್ರಪದ ಟೀಕೆ ಮತ್ತು ಇತರ ಕೃತಿಗಳನ್ನು ರಚಿಸಿದ್ದಾನೆ. ಸಾಸಲಯ್ಯನು ಇಂದುಶೇಖರಲೀಲೆ ಅಥವಾ ಶಿವಲಂಕೇಶ್ವರನ ಮಹಾತ್ಮೆ ಎಂಬ ಕೃತಿಯನ್ನು ಬರೆದಿದ್ದಾನೆ. ನಿಜಗುಣ ಶಿವಯೋಗಿಯನ್ನು ನಿಜಗುಣಾರಾಧ್ಯ ಎಂದೂ ಕರೆಯುತ್ತಿದ್ದರು. ಅನುಭವಸಾರ ಅರವತ್ತು ಮೂವರ ತ್ರಿಪದಿ, ಕೈವಲ್ಯ ಪದ್ಧತಿ, ಪರಮಾನುಭವ ಬೋಧೆ, ಪರಮಾರ್ಥಗೀತೆ, ಪರಮಾರ್ಥ ಪ್ರಕಾಶಿಕೆ, ವಿವೇಕ ಚಿಂತಾಮಣಿ ಮತ್ತು ಇತರ ಹಲವು ಕೃತಿಗಳನ್ನು ಈತನು ರಚಿಸಿದನು. ಮುಪ್ಪಿನ ಷಡಕ್ಷರಿಯು ಸುಬೋಧಸಾರವನ್ನು ಬರೆದಿದ್ದಾನೆ. ಕವಿ ನಂಜಶೆಟ್ಟಿಯು

ಭೀಮಸೇನವಿಲಾಸವನ್ನು ರಚಿಸಿದ್ದಾನೆ. ಇವರಲ್ಲದೆ ಯಳಂದೂರಿನ ಹರೀಶ್ವರ, ಪರ್ವತ ಶಿವಯೋಗಿ, ಸಂಚಿಯ ಹೊನ್ನಮ್ಮ ಮೊದಲಾದವರು ಹದಿನಾಡು ಅರಸರ ಕಾಲದಲ್ಲಿದ್ದ ಇತರ ಕವಿಗಳು. ಸಂಚಿಯ ಹೊನ್ನಮ್ಮನು ಚಿಕ್ಕದೇವರಾಜ ಒಡೆಯನ ಆಸ್ಥಾನದಲ್ಲಿದ್ದು ಹದಿಬದೆಯಧರ್ಮವನ್ನು ರಚಿಸಿದ್ದರೂ ಅದರ ಮೂಲವಸ್ತು ಹದಿನಾಡಿಗೇ ಸೇರಿದ್ದು. ಈ ಮೇಲಿನ ಗ್ರಂಥಗಳಲ್ಲಿ, ಆ ಕಾಲದ ಹದಿನಾಡು ಅರಸರ ರಾಜಕಾರಣ, ಸಾಮಾಜಿಕ, ಧಾರ್ಮಿಕ, ಆಡಳಿತೀಯ, ಆರ್ಥಿಕ ಸ್ಥಿತಿಗತಿ, ಜನರ ಸಾಮಾನ್ಯ ಜೀವನ ಹೀಗೆ ಸಂಸ್ಕೃತಿಯನ್ನು ಒಟ್ಟಾರೆ ಬಿಂಬಿಸುವ ಎಲ್ಲಾ ಅಂಶಗಳನ್ನೂ ನೋಡುತ್ತೇವೆ. ಆಗ ರಚಿತವಾದ ಕಾವ್ಯಕೃತಿಗಳು ಕನ್ನಡ ಮತ್ತು ಸಂಸ್ಕೃತ ಸಾಹಿತ್ಯದಲ್ಲಿ ಬಹಳ ಶ್ರೇಷ್ಠವಾದ ಮಟ್ಟಕ್ಕೆ ಸೇರಿದವಾಗಿದ್ದುವು. ಈ ಅರಸರ ಕಾಲದಲ್ಲಿ ಸಮಾಜವು ಸುವ್ಯವಸ್ಥಿತವಾಗಿ ಕೆಲಸ ಮಾಡುತ್ತಿತ್ತು, ಸಂಸ್ಕೃತಿಯ ವರ್ಧನೆಗೆ ಸಾಕಷ್ಟು ಪ್ರಯತ್ನಗಳಾಗುತ್ತಿದ್ದುವು ಎಂದು ಹೇಳಬಹುದು.

ಕಲೆ ಮತ್ತು ವಾಸ್ತುಶಿಲ್ಪ

ವಾಸ್ತುಶಿಲ್ಪ, ಶಿಲ್ಪ ಮತ್ತು ಚಿತ್ರಕಲೆಗಳು ಹದಿನಾಡಿನ ಅರಸರು ಪೋಷಿಸಿದ ಸಾಂಸ್ಕೃತಿಕ ಅಂಶಗಳಾಗಿದ್ದುವು. ಅವರ ಕಾಲದ ಸ್ಮಾರಕಗಳನ್ನು ಮುಖ್ಯವಾಗಿ ಹದಿನಾಡು ಮತ್ತು ಯಳಂದೂರುಗಳಲ್ಲಿ ನೋಡಬಹುದು. ಈ ಸ್ಥಳಗಳಲ್ಲಿರುವ ಸಣ್ಣ ದೇವಾಲಯಗಳು ಭವ್ಯತೆಯಲ್ಲೋ ಕಲೆಯ ದೃಷ್ಟಿಯಿಂದಲೋ ಬಹಳ ಉನ್ನತ ಮಟ್ಟದವಲ್ಲವಾದರೂ, ಇವಕ್ಕೆ ಐತಿಹಾಸಿಕ ಮಹತ್ವವುಂಟು. ನಿದರ್ಶನಕ್ಕೆ ಇಲ್ಲಿರುವ ಈ ಕೆಲವು ದೇವಾಲಯಗಳನ್ನು ನೋಡಬಹುದು. ೧. ಚೆನ್ನಿಗರಾಯಸ್ವಾಮಿ, ೨. ಬಸವಣ್ಣ, ೩. ಕೆಂಪಮ್ಮ, ೪. ಚೌಡೇಶ್ವರಿ, ೫. ಗೌರೀಶ್ವರಿ, ೬ ಮಾರಮ್ಮ ದೇವಾಲಯಗಳು ಅಲ್ಲದೆ ಮಂಟೇಸ್ವಾಮಿ ಎಂಬ ವೀರಶೈವ ಜಂಗಮನ ಗದ್ದುಗೆಯಿದೆ. ದೇವನೂರು ಮಠದ ಶಾಖೆ ಹಾಗೂ ಗುರುಮಲ್ಲೇಶ್ವರ ಮಠಗಳೂ ಇವೆ. ಅಲ್ಲದೆ ಕೆರೆದಂಡೆಗಳ ಮೇಲೆ ಕೆಲವು ವೀರಗಲ್ಲುಗಳು ನಿಂತಿವೆ. ಅದೇ ಸ್ಥಳದಲ್ಲಿ ವೀರಗನ ದೇವಸ್ಥಾನವಿದೆ. ಇವು ಎರಡು ಬಗೆಯ ಸಾಂಸ್ಕೃತಿಕ ಪರಂಪರೆಯನ್ನು ಸೂಚಿಸುತ್ತವೆ. ೧. ಜಾನಪದ ಸಂಸ್ಕೃತಿ ೨. ವಿದ್ಯಾವಂತ ಅಥವಾ ಶಿಷ್ಟ ಸಂಸ್ಕೃತಿ. ಬಸವಣ್ಣ, ಕೆಂಪಮ್ಮ, ಚೌಡೇಶ್ವರಿ ಮತ್ತು ಮಾರಮ್ಮರು ಜಾನಪದ ದೇವದೇವತೆಗಳಾದುದರಿಂದ ಅವರ ಸುತ್ತ ಜಾನಪದ ನಂಬಿಕೆಗಳು ಸುತ್ತಿಕೊಂಡಿವೆ. ಶಿಷ್ಟ ಸಂಸ್ಕೃತಿಯ ಪ್ರತಿನಿಧಿಗಳಾಗಿ ಚೆನ್ನಿಗರಾಯಸ್ವಾಮಿ ಮತ್ತು ಗೌರೀಶ್ವರ ದೇವಾಲಯಗಳಿವೆ. ಗದ್ದುಗೆ ಮತ್ತು ಮಠಗಳು ವೀರಶೈವ ಸಂಸ್ಕೃತಿಯನ್ನು ಸಂಕೇತಿಸುತ್ತವೆ. ಸಣ್ಣದೊಂದು ಐತಿಹಾಸಿಕ ಸ್ಥಳದಲ್ಲಿ ಎಷ್ಟು ವೈವಿಧ್ಯವಿದ್ದಿತು ಎಂಬುದನ್ನು ಈ ಕಟ್ಟಡಗಳು ಸೂಚಿಸುತ್ತವೆ. ಯಳಂದೂರು ಹದಿನಾಡು ಅರಸರ ರಾಜಧಾನಿಯಾಗಿತ್ತು. ಅಲ್ಲಿನ ಮುಖ್ಯ ದೇವಾಲಯ ಗೌರೀಶ್ವರನದು. ಅಲ್ಲಿ ದೊರಕಿದ ಶಾಸನದ ಪ್ರಕಾರ ದೇವಾಲಯದ ಮುಖ್ಯದ್ವಾರವನ್ನೂ ಗೋಪುರವನ್ನೂ ಮುದ್ದುಭೂಪರಾಜನು (೧೬೪೭-೧೬೫೪) ಕಟ್ಟಿಸಿದನು. ದ್ರಾವಿಡ ಶೈಲಿಯ ಈ ದೇವಾಲಯವು ಶೈವ ಮತ್ತು ವೈಷ್ಣವ ಸಿದ್ಧಾಂತಗಳ ಮಿಶ್ರಣವಾಗಿದೆ. ಇದರ ಮಹಾದ್ವಾರವು ಅತ್ಯಂತ ಸುಂದರವಾದದ್ದು. ಉಮಾಮಹೇಶ್ವರ ಮತ್ತು ವಿಷ್ಣು ವಿಗ್ರಹಗಳಿವೆ. ನರ್ತಕರ ಮತ್ತು ಗಾಯಕರ ಶಿಲ್ಪಗಳು ಹೊಳೆಯುತ್ತಿವೆ. ಇವುಗಳನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡಿದರೆ ಉಡುಗೆ, ಆಭರಣಗಳು, ಹಲವು ಬಗೆಯ ಸಂಗೀತ ವಾದ್ಯಗಳು ಮತ್ತು ಇತರ ಅಂಶಗಳ ಬಗೆಗೆ ವಿಶೇಷ ಮಾಹಿತಿ ದೊರಕುತ್ತದೆ. ಅಲ್ಲಲ್ಲೇ ನಡುವೆ ಪ್ರಾಣಿಗಳನ್ನೂ ಕೆತ್ತಲಾಗಿದೆ. ಹಣ್ಣು ತಿನ್ನುತ್ತಿರುವ ಒಂದು ಕೋತಿಯ ವಿಗ್ರಹ ಬಹಳ ಸೊಗಸಾಗಿದೆ. ಸ್ತ್ರೀರೂಪದಲ್ಲಿ ಗಂಗಾ ಮತ್ತು ಯಮುನಾ ನದಿಗಳ ವಿಗ್ರಹಗಳು ಭಾಗಶಃ ಕಾಣಿಸುತ್ತವೆ.

ದೇವಾಲಯಗಳ ಶಿಲ್ಪಗಳನ್ನು ಸ್ವಲ್ಪ ವಿವರಿಸಬಹುದು. ಕುಳ್ಳಾದ ಅರೆನಗ್ನ ಸ್ತ್ರೀಯರು ಭೈರವನ ಬಳಿ ನರ್ತಿಸುತ್ತಿರುವ ವಿಗ್ರಹಗಳಿವೆ. ವೆಂಕಟೇಶ ವಿಗ್ರಹ, ಅವನನ್ನು ಪೂಜಿಸುತ್ತಿರುವ ವಿಗ್ರಹಗಳನ್ನು ನೋಡಿದಾಗ

ತಿರುಪತಿಯ ಪ್ರಭಾವ ಇಲ್ಲಿಯವರಿಗೆ ವಿಸ್ತರಿಸಿರುವುದು ತಿಳಿಯುತ್ತದೆ. ವೇಣುಗೋಪಾಲ ಮತ್ತು ಗೋಪಿಯರ ಉಬ್ಬುಶಿಲ್ಪಗಳು, ಸುತ್ತುವರಿದ ವೀರಭದ್ರ, ದಕ್ಷಬ್ರಹ್ಮ, ಅರ್ಧನಾರೀಶ್ವರ, ರತಿ-ಮನ್ಮಥ, ಋಷಿಗಳು ಇತ್ಯಾದಿ ಮೂರ್ತಿಗಳು ಕಾಣುತ್ತವೆ. ಇನ್ನೊಂದು ಪಕ್ಕದಲ್ಲಿ ಶಿವನು ಕುಳಿತಿದ್ದಾನೆ, ನಂದಿಕೇಶ್ವರನನ್ನು ಹಾಡುತ್ತಿದ್ದಾನೆ, ಗಣೇಶನು ನರ್ತಿಸುತ್ತಿದ್ದಾನೆ. ಗೋಪಿಯು ಉಡುಪು ಕಳಚುತ್ತಿರುವ ಉಬ್ಬುಶಿಲ್ಪದ ಪಕ್ಕದಲ್ಲಿ ರಾಮಾಯಣದ ದೃಶ್ಯಗಳನ್ನು ಕೆತ್ತಲಾಗಿದೆ. ಶಿವನೊಂದಿಗೆ ನರಸಿಂಹನ ಹಲವು ಮೂರ್ತಿಗಳನ್ನು ಕೆತ್ತಿದ್ದಾರೆ. ಕಂಬಗಳ ಮೇಲೆ ಕೆತ್ತಿರುವ ಹದಿನಾಡು ಅರಸರ ಮತ್ತು ಅವರ ಪೂರ್ವಜರ ಮೂರ್ತಿಗಳು ಸೊಗಸಾಗಿವೆ. ದೇವಾಲಯದ ಒಂದು ಗರ್ಭಗುಡಿಯಲ್ಲಿ ಗೌರಿಯ ವಿಗ್ರಹವೂ ಇನ್ನೊಂದು ಗರ್ಭಗುಡಿಯಲ್ಲಿ ಶಿವಲಿಂಗವೂ ಇವೆ. ಒಟ್ಟಿನಲ್ಲಿ ಯಳಂದೂರಿನ ಗೌರೀಶ್ವರ ದೇವಾಲಯವು ಶೈವ ಹಾಗೂ ವೈಷ್ಣವ ಸಂಪ್ರದಾಯಗಳ ಮಿಲನವನ್ನು ಸಾಧಿಸಲು ಪ್ರಯತ್ನ ಮಾಡಿದೆ. ಶಿವನಿಗೂ ವಿಷ್ಣುವಿಗೂ ನಡುವೆ ಯಾವ ಭೇದವನ್ನೂ ಮಾಡಬಾರದು ಎಂಬ ಭಾವನೆಯು ಇದಕ್ಕೆ ಪ್ರೇರಕವಾಗಿರಬಹುದು. ಅಲ್ಲದೆ ಹದಿನಾಡು ಅರಸರ ಧಾರ್ಮಿಕ ನೀತಿಯನ್ನೂ ಇದು ವಿಸ್ತರಿಸುತ್ತಿರುವಂತೆ ತೋರುತ್ತದೆ. ಈ ದೇವಾಲಯ ಆವರಣದಲ್ಲಿ ದೊರಕುವ ಶಾಸನಗಳೂ ಕೂಡ ಈ ಸ್ಥಳದ ರಾಜರು ಮತ್ತು ಜನರ ಧಾರ್ಮಿಕ ಸಹಿಷ್ಣುತಾ ಮನೋಧರ್ಮವನ್ನು ಪ್ರತಿಬಿಂಬಿಸುತ್ತವೆ.

ಲಕ್ಷ್ಮೀವರಾಹ ದೇವಿಯ ಆಲಯವು ಊರಿನ ಮಧ್ಯದಲ್ಲಿದೆ. ಈ ದೇವಾಲಯದ ಮುಖ್ಯದ್ವಾರದಲ್ಲಿರುವ ಮೂರುಗೋಪುರಗಳಲ್ಲಿನ ಮೂರ್ತಿಗಳು ಕಳೆದುಹೋಗಿವೆ. ಮುಖ್ಯದ್ವಾರ, ಪಟಲಾಂಕಣ, ನವರಂಗ, ಅರ್ಧಮಂಟಪ, ಗರ್ಭಗುಡಿ, ಪ್ರದಕ್ಷಿಣಪಥ, ದೇವಿಗೆ ಬೇರೆಯೇ ಗರ್ಭಗುಡಿ, ಬಲಗಡೆ ಚೆನ್ನಿಗರಾಯನ ಗುಡಿ, ಮುಖ್ಯದ್ವಾರದ ಪಕ್ಕದಲ್ಲೇ ಒಳಗೆ ಆಂಜನೇಯನಗುಡಿ ಇವು ಹೆಮ್ಮೆಯ ಕಟ್ಟಡಗಳಾಗಿ ನಿಂತಿವೆ.

ಗರ್ಭಗುಡಿಯ ಮೂಲ ವಿಗ್ರಹದ ಎದುರಿಗೆ ಸರಿಯಾಗಿ ದೊಡ್ಡ ಬಲಿಪೀಠವಿದೆ. ಬಸವನ ಸುಂದರವಾದ ಕೆತ್ತನೆಯಿದೆ. ಜೈನ ತೀರ್ಥಂಕರರ ಎರಡು ಮೂರ್ತಿಗಳಿವೆ. ಒಂದು ಮಹಾವೀರನದು ಇನ್ನೊಂದು ಪಾರ್ಶ್ವನಾಥನದು. ಪ್ರದಕ್ಷಿಣೆಯ ಮಾರ್ಗದಲ್ಲಿ ಧ್ಯಾನಸ್ಥರಾಗಿ ಕುಳಿತ ಆಳ್ವಾರರ ವಿಗ್ರಹವಿದೆ. ವಿಷ್ಣುವಿನ ತೊಡೆಯ ಮೇಲೆ ಕುಳಿತ ಲಕ್ಷ್ಮಿಯ ಮೂರ್ತಿ ಬಹು ಸುಂದರವಾಗಿದೆ. ಈ ವಿಗ್ರಹವು ಚೋಳರ ಕಾಲದೆಂದು ಅಭಿಪ್ರಾಯಪಡಲಾಗಿದೆ. ಮಹಾದ್ವಾರವು ಎಂಟು ದೊಡ್ಡ ಕಂಬಗಳಿಂದಾಗಿದೆ. ಈ ಮುಖ್ಯದ್ವಾರದ ಪಕ್ಕದಲ್ಲೇ ಆಂಜನೇಯನ ಗುಡಿಯಿದೆ. ನೆಲಮಟ್ಟದಿಂದ ಕೆಳಗೆ (ಪಾತಾಳ) ಎಡಭಾಗದಲ್ಲಿ ಚೆನ್ನಿಗರಾಯ ಸ್ವಾಮಿಗುಡಿಯಿದೆ. ನಾಲ್ಕು ಅಡಿ ಎತ್ತರದ ಚೆನ್ನಿಗರಾಯ ವಿಗ್ರಹ ಬಹಳ ರಮಣೀಯವಾಗಿದೆ. ಈ ವಿಗ್ರಹವೂ ಚೋಳರ ಕಾಲದ್ದೆಂದು ತೋರುತ್ತದೆ.

ಗೌರೀಶ್ವರ ದೇವಾಲಯದ ಹಿಂಭಾಗದಲ್ಲಿ ಪಂಚಲಿಂಗೇಶ್ವರ ದೇವಾಲಯವಿದೆ. ಒಂದೇ ಸಾಲಿನಲ್ಲಿ ಪಕ್ಕಪಕ್ಕವಾಗಿ ಐದು ಗರ್ಭಗುಡಿಗಳಿವೆ. ಒಂದೊಂದರ ಎದುರಿಗೂ ಒಂದು ಅಂಕಣ ಅಗಲವಾಗಿರುವ ಮಂಟಪವಿದೆ. ಈ ಲಿಂಗಗಳ ಹೆಸರುಗಳು ಹೀಗಿವೆ. ಮಲ್ಲಿಕಾರ್ಜುನ, ಜಂಬುನಾಥೇಶ್ವರ, ಅರುಣಾಚಲೇಶ್ವರ, ತಾರಕೇಶ್ವರ ಮತ್ತು ಚಿದಂಬರೇಶ್ವರ.

ಇವಲ್ಲದೆ ಗಣೇಶ ಮತ್ತು ಕಲಿಕಂಬರ ದೇವಾಲಯಗಳೂ ಇವೆ. ಜೊತೆಗೆ ಯಳಂದೂರು ವಿರಕ್ತಮಠ, ಎಕ್ಕದತೋಲು ಬಸಪ್ಪನ ಮಠ, ಮಹತ್ತಿನ ಮಠ ಮೊದಲಾದ ಮಠಗಳಿವೆ. ಇವುಗಳಲ್ಲದೆ ಹದಿನಾಡು ಅರಸರು ಕಟ್ಟಿಸಿದ್ದ ಕೋಟೆಯ ಅವಶೇಷಗಳು ಇದ್ದುವೆಂದು ೧೯೨೭ರಲ್ಲಿ ದಾಖಲಾಗಿದೆ. ಒಟ್ಟಿನಲ್ಲಿ ಹದಿನಾಡು ಅರಸರ ಕಾಲದ ಕಲಾಸ್ಮಾರಕಗಳು ಹದಿನಾಡು ಮತ್ತು ಯಳಂದೂರುಗಳಲ್ಲಿ ಸಾಂಸ್ಕೃತಿಕ ಮೌಲ್ಯಗಳ ದೃಷ್ಟಿಯಿಂದ ಹೆಚ್ಚು ಮಹತ್ವದವಾಗಿದೆ.

ವಿಜಯನಗರ, ಮೈಸೂರು, ಕಳಲೆ ಮೊದಲಾದ ರಾಜವಂಶಗಳೊಂದಿಗೆ ಆತ್ಮೀಯ ಹಾಗೂ ರಕ್ತಸಂಬಂಧಗಳನ್ನು ಬೆಳೆಸಿಕೊಂಡ ಹದಿನಾಡ ಅರಸರು ಕೊಳ್ಳೇಗಾಲ, ಯಳಂದೂರು, ನಂಜನಗೂಡು, ಟಿ. ನರಸೀಪುರ ಮತ್ತು ಸುತ್ತಣ ಪ್ರದೇಶಗಳನ್ನು ಆಳುತ್ತಿದ್ದರು. ಎಲೆಮರೆಯ ಕಾಯಿಯಂತೆ ಕೆಳಮಟ್ಟದಲ್ಲೇ ಇದ್ದುಕೊಂಡಿದ್ದ ಈ ರಾಜವಂಶವು ಸಂಸ್ಕೃತಿಯ ಎಲ್ಲಾ ಶಾಖೆಗಳಿಗೂ ಪ್ರೋತ್ಸಾಹ ನೀಡಿ ಕೀರ್ತಿಯನ್ನು ಗಳಿಸಿತು. ಹದಿನಾಡು ಅರಸರು ವಿಶೇಷವಾಗಿ, ತಮ್ಮ ಗಡಿಗಳೊಳಗೆ, ಸಾಹಿತ್ಯಕ, ಧಾರ್ಮಿಕ, ಶೈಕ್ಷಣಿಕ, ಆರ್ಥಿಕ ಮತ್ತಿತರ ಸಾಂಸ್ಕೃತಿಕ ಚಟುವಟಿಕೆಗಳೊಂದಿಗೆ ಈ ಪ್ರದೇಶಕ್ಕೆ ಉತ್ತಮ ಆಡಳಿತವನ್ನೂ ಒದಗಿಸಿದರು. ಚಿಕ್ಕ ಅರಸುವಂಶಗಳು, ಸುಪ್ರಸಿದ್ಧ ಅರಸುವಂಶಗಳಂತೆಯೇ ಅಷ್ಟೇ ಪ್ರಮುಖವಾದ ಪಾತ್ರವನ್ನು ನಿರ್ವಹಿಸಿವೆ. ಕರ್ನಾಟಕದ ಐತಿಹಾಸಿಕ ಮತ್ತು ಸಾಂಸ್ಕೃತಿಕ ಪರಂಪರೆಯ ರಚನೆಗೆ ಅಗತ್ಯವಾದ ಮೂಲವಸ್ತುವನ್ನು ಒದಗಿಸಿವೆ ಎಂಬುದನ್ನು ನಾವು ಮರೆಯಬಾರದು. ಈ ದೃಷ್ಟಿಯಿಂದ ಹದಿನಾಡಿನಂತಹ 'ಸಣ್ಣ' ರಾಜವಂಶವು ಸಾಂಸ್ಕೃತಿಕ ಮತ್ತು ಐತಿಹಾಸಿಕ ಪರಂಪರೆಗೆ ನೀಡಿದ ಕೊಡುಗೆಯು ಮಹತ್ತರವಾದದ್ದು, ದಾಖಲಿಸಬೇಕಾದದ್ದು.

ಉಮ್ಮತ್ತೂರಿನ ಪಾಳೆಯಗಾರರು

ವಿಜಯನಗರ ಸ್ಥಾಪನೆಯೊಂದಿಗೆ ಹೊಯ್ಸಳನಾಡಿನಲ್ಲಿ ಕೆಲವು ನೂತನ ಪ್ರಾದೇಶಿಕ ರಾಜಕೀಯ ಶಕ್ತಿಗಳು ಅಸ್ತಿತ್ವಕ್ಕೆ ಬಂದುವು. ಇಂತಹ ವಂಶಗಳಲ್ಲಿ ಉಮ್ಮತ್ತೂರಿನ ಪಾಳೆಯಗಾರರದು ಮುಖ್ಯವಾದುದೊಂದು. ಅವರು ಮೈಸೂರು ಜಿಲ್ಲೆಯ ದಕ್ಷಿಣ ಭಾಗಗಳಾದ ನಂಜನಗೂಡಿನ ಸ್ವಲ್ಪಭಾಗ, ಗುಂಡ್ಲುಪೇಟೆ, ಚಾಮರಾಜನಗರ, ಯಳಂದೂರು ತಾಲೂಕುಗಳು ಹಾಗೂ ಕೊಯಮತ್ತೂರು ಜಿಲ್ಲೆಯ ಸ್ವಲ್ಪ ಭಾಗ ಈ ಪ್ರದೇಶದ ಮೇಲೆ ನಿಯಂತ್ರಣವನ್ನು ಪಡೆದಿದ್ದರು.[೧೮೮] ಉಮ್ಮತ್ತೂರು ಪಾಳೆಯಗಾರರು ಮೈಸೂರಿನ ದಕ್ಷಿಣಕ್ಕೆ ಮುಖ್ಯರಾದ ಅರಸರಾಗಿದ್ದು ಮೈಸೂರಿನ ಒಡೆಯರಿಗೆ ಆ ಭಾಗದ ಮುಖ್ಯ ವೈರಿಗಳಾಗಿದ್ದರು. ಅವರು ವಿಜಯನಗರದ ಸಾಮಂತರೂ ಆಗಿದ್ದರು. ಉಮ್ಮತ್ತೂರು ಚಾಮರಾಜನಗರ ತಾಲೂಕಿನಲ್ಲಿದೆ. ಆದರೆ ಈ ಅರಸರ ಮುಖ್ಯವಾದ ಕೋಟೆಯು ಶಿವಸಮುದ್ರ ದ್ವೀಪದಲ್ಲಿ [೧೮೯] ಕಾವೇರಿಯ ಜಲಪಾತದ ಬಳಿ ಇದೆ. ಅಲ್ಲೇ ಅವರ ಕುಲದೈವ ಸೋಮೇಶ್ವರನ ದೇವಾಲಯವೂ ಇದೆ.[೧೯೦] ಕಾವೇರಿ ಮತ್ತು ಕಪಿಲೆಗಳಿಂದ ಸುತ್ತುವರಿಯಲ್ಪಟ್ಟ ಮೈಸೂರು ಮತ್ತು ಮಂಡ್ಯ ಜಿಲ್ಲೆಗಳಲ್ಲಿ ಈ ಮನೆತನದವರು ಆಳುತ್ತಿದ್ದರು.

ಉಮ್ಮತ್ತೂರು ಪ್ರಭುಗಳು ತಮ್ಮ ರಾಜ್ಯವನ್ನು ಸ್ಥಾಪಿಸಿದ್ದು ಯಾವಾಗ? ಅವರು ಮಹಾಮಂಡಲೇಶ್ವರ ಎಂಬ ಬಿರುದನ್ನು ಯಾರಿಂದ ಪಡೆದರು? ಉಮ್ಮತ್ತೂರು ಪ್ರಭುಗಳು ಉಮ್ಮತ್ತೂರಿಗೇ ಸೇರಿದವರೋ ಹೇಗೆ? ಅಲ್ಲವಾದರೆ ಅವರು ಎಲ್ಲಿಂದ ಬಂದರು? ಈ ಪ್ರಶ್ನೆಗಳಿಗೆ ಸಾಮಾನ್ಯವಾಗಿ ತೃಪ್ತಿಕರವಾದ ಉತ್ತರಗಳು ದೊರಕುವುದಿಲ್ಲ. ಹಾಗಿದ್ದರೂ, ಶಾಸನಗಳನ್ನು ಆಧರಿಸಿ ಉಮ್ಮತ್ತೂರು ಪ್ರಭುಗಳ ಮೂಲದ ಬಗೆಗೆ ಸ್ವಲ್ಪ ಬೆಳಕು ಹಾಯಿಸಬಹುದು. ಕ್ರಿ.ಶ. ೧೩೪೦ರ ಕೆಂಬಾರಿ ಶಾಸನವು ಪೆಸಣಿ ಹನುಮಂತ ಚೌಧರಿ ಎಂಬುವನ ಹೆಸರನ್ನು ಹೊಂದಿದೆ. ಅವನು ಬಹಳ ಮುಖ್ಯಸಾದ ವ್ಯಕ್ತಿ. ಏಕೆಂದರೆ ಪೆಸಣಿ ಅಥವಾ ಪೆಸಳಿ ಹನುಮಂತನೇ ಉಮ್ಮತ್ತೂರು ವಂಶದ ಸ್ಥಾಪನೆಗೆ ಕಾರಣನಾದವನು.

ಕ್ರಿ.ಶ. ೧೪೮೨ರ ಶಾಸನದಲ್ಲೂ ಪೆಸಳಿ ಹನುಮಂತನನ್ನು ಕುರಿತ ವಿವರಗಳಿವೆ.[೧೯೧] ಉಮ್ಮತ್ತೂರು ಪ್ರಭುಗಳ ಮೂಲಪುರುಷ ಹನುಮಂತಪ್ಪ ಒಡೆಯ ಎಂಬುದನ್ನು ಒಪ್ಪಿಕೊಳ್ಳಲಾಗಿದೆ. ೧೫೦೭ರ ಮಳವಳ್ಳಿ

೧೦೬ನೆಯ ಶಾಸನವು ಉಮ್ಮತ್ತೂರುರಾಜ ದೇಪಣ್ಣ ಒಡೆಯನ ಮಗ ಚಿಕ್ಕರಾಯನ ಬಗೆಗೆ ಹೇಳುತ್ತದೆ. ಚಿಕ್ಕರಾಯನನ್ನು ಮಲ್ಲರಾಯನೆಂದೂ ಕರೆಯಲಾಗಿದೆ. ಆಗ ಅವನು ತೆರಕಣಾಂಬಿಯನ್ನು ತನ್ನ ಕೇಂದ್ರವನ್ನಾಗಿ ಇಟ್ಟುಕೊಂಡು ಆಳುತ್ತಿದ್ದನು. ಆಗ ವಿಜಯನಗರದ ಚಕ್ರವರ್ತಿಯಾಗಿದ್ದವನು ತುಳುವ ವಂಶದ ನರಸಿಂಹ ಮಹಾರಾಯ. ಜ್ಞಾನಾಂಕಚಕ್ರೇಶ್ವರ, ಪೆಸಳಿಹನುಮ, ಅರಸಾಂಕಸೇನೆಗಾರ ಇತ್ಯಾದಿ ವಿಶೇಷಣಗಳನ್ನು ಹೊಂದಿದ್ದ ದೇಪಣ್ಣ ಒಡೆಯನನ್ನು ವರ್ಣಿಸುತ್ತದೆ. ಮೇಲ್ಕಂಡ ಶಾಸನಗಳಿಂದ, ಪೆಸಳಿ, ಪೆಸಣೆ, ಪರ್ಸನಿ ಎಂದರೆ ಸೇನೆಯ ದಂಡನಾಯಕ ಎಂಬ ಅರ್ಥ ಬರುತ್ತದೆ ಎಂದು ವ್ಯುತ್ಪತ್ತಿಯು ತಿಳಿಸುತ್ತದೆ. ಪೆಸಳಿ ಹನುಮಂತನ ವಂಶಜರು ಉಮ್ಮತ್ತೂರಿನ ಸುತ್ತಣ ಪ್ರದೇಶಗಳನ್ನು ಮಹಾಮಂಡಲೇಶ್ವರರಾಗಿ ಆಳುತ್ತಿದ್ದರು. ಎಂಬ ನಿರ್ಣಯಕ್ಕೆ ಬರಬಹುದಾಗಿದೆ.[೯೨]

೧೪೯೧ರಲ್ಲಿ ಉಮ್ಮತ್ತೂರು ಪ್ರಭುಗಳು ರಾಜತ್ವದ ಬಿರುದುಗಳನ್ನು ಸ್ವೀಕರಿಸಿ ಸ್ವತಂತ್ರರಾದುದನ್ನು ನೋಡುತ್ತೇವೆ. ೧೫೦೫ರಲ್ಲಿ ಅವರಿಗೆ ಚಿಕ್ಕರಾಯ, ಪೆನುಗೊಂಡ ಚಕ್ರೇಶ್ವರನ, ರಾಜಾಧಿರಾಜ ಎಂಬ ಬಿರುದುಗಳನ್ನು ಪಡೆದಿದ್ದಾರೆ. ಪೆನುಗೊಂಡ ಚಕ್ರೇಶ್ವರ ಎಂಬ ಬಿರುದಿನಿಂದ ಅವರೇನಾದರು ಆಂಧ್ರ ಪ್ರದೇಶದ ಅನಂತಪುರ ಜಿಲ್ಲೆಯ ಪೆನುಕೊಂಡಾದಿಂದ ಬಂದರೇ ಹೇಗೆ ಎಂಬ ಸಂದೇಹವುಂಟಾಗುತ್ತದೆ. ಹನುಮಪ್ಪ ಒಡೆಯನ ನಂತರ ೧ನೇ ಚಿಕ್ಕರಾಯ, ಆಮೇಲೆ ಚೆನ್ನರಾಯ ಮಹಾರಾಜರು ಕ್ರಿ.ಶ. ೧೪೧೮ರ ವರೆಗೂ ಆಳಿದರು. ಆಮೇಲೆ ವೀರಸೋಮಣ್ಣನು ಉಮ್ಮತ್ತೂರಿನ ರಾಜನಾದನು. ಗುಂಡ್ಲುಪೇಟೆಯ ೨೪ನೆಯ ಶಾಸನದ ಪ್ರಕಾರ, ವೀರ ಸೋಮಣ್ಣಒಡೆಯನ ಮಗ ಮಹಾಮಂಡಲೇಶ್ವರ ಚಿಕ್ಕಒಡೆಯನು (ಕುಮಾರ ಚಿಕ್ಕಣ್ಣ) ತೆರಕಣಾಂಬಿಯನ್ನು ಆಳುತ್ತಿದ್ದನು. ವೀರಸೋಮಣ್ಣ ಒಡೆಯನ ನಂತರ ಆಳಿದ ಈ ವಂಶದ ಇಬ್ಬರು ಮುಖ್ಯರಾದ ಅರಸರು ವೀರಹನುಮಪ್ಪ ಒಡೆಯ ಮತ್ತು ಇಮ್ಮಡಿ ರಾಯಒಡೆಯ ಅಥವಾ ಸೋಮರಾಯ.[೯೩] ೧೪೬೭ರಿಂದ ೧೪೬೯ರ ವರೆಗಿನ ಶಾಸನಗಳಲ್ಲಿ ಇಮ್ಮಡಿರಾಯನನ್ನು ಉಲ್ಲೇಖಿಸಿದೆ. ಅವನ ಮುಳ್ಳೂರು ಶಾಸನವು ನಂಜನಗೂಡಿನ ನಂಜುಂಡೇಶ್ವರನಿಗೆ ಭೂಮಿಯನ್ನು ದಾನಮಾಡಿದ ವಿಚಾರವನ್ನು ಹೇಳುತ್ತದೆ.[೯೪] ಅವನು ಉಮ್ಮತ್ತೂರಿನವನೆಂದು ಅಲ್ಲಿ ಹೇಳಿದೆ. ಈ ಸಮಯದಲ್ಲಿ ಅವನ ಮಗ ದೇವರಾಜ ಒಡೆಯನು ತೆರಕಣಾಂಬಿಯಿಂದ ಕುಡುಗುನಾಡನ್ನು ಆಳುತ್ತಿದ್ದನು. ಇದನ್ನು ಶಿವಪುರದ ೧೪೬೯ರ ಒಂದು ಶಾಸನವು ತಿಳಿಸುತ್ತದೆ.[೯೫] ಕುಡುಗುನಾಡನ್ನು ಅವನಿಗೆ 'ರಾಯರು' ನೀಡಿದರೆಂದು ಶಾಸನವು ಹೇಳುತ್ತದೆ. ಇಲ್ಲಿ ಶಾಸನಕಾರನು ವಿಜಯನಗರದ 'ರಾಯ'ರನ್ನು ಸೂಚಿಸುತ್ತಿದ್ದಾನೆಯೇ, ಅವನ ತಂದೆ ಸೋಮರಾಯನನ್ನು ಸೂಚಿಸುತ್ತಿದ್ದಾನೆಯೇ ಗೊತ್ತಾಗುವುದಿಲ್ಲ.

ಸೋಮಯ್ಯ ಅಥವಾ ಸೋಮೇಶ್ವರನ ಕರಣಿಕ ದೇವರಸನು ಹರವೆಯ ಬಸದಿಯನ್ನು ಕಟ್ಟಿಸಿದನು. ರಾಜನು ೧೪೮೨ರಲ್ಲಿ ಅದಕ್ಕೆ ಅಗತ್ಯವಾದ ದತ್ತಿಗಳನ್ನು ನೀಡಿದನು.[೯೬] ಈ ಸೋಮಯ್ಯನು ಉಯಮಹಳ್ಳಿಯಲ್ಲಿ ಸೋಮಸಾಗರ ಎಂಬ ಕೆರೆಯನ್ನು ನಿರ್ಮಿಸಿದನು. ಅವನ ಮಗ ನಂಜರಾಜನೂ ಬಸದಿಗೆ ಹೆಚ್ಚಿನ ದಾನಗಳನ್ನು ನೀಡಿದನು.[೯೭] ಸೋಮಯ್ಯನ ಹಿರಿಯಮಗ ದೇವರಾಜ ಅಥವಾ ದೇಪಣ್ಣನು ೧೪೮೫ರಲ್ಲಿ ಸ್ಥಳದ ಸುಪ್ರಸಿದ್ಧ ದಿವ್ಯಲಿಂಗ ಅನಿಲೇಶ್ವರ ದೇವಾಲಯಕ್ಕೆ ಹರದನಹಳ್ಳಿ ಗ್ರಾಮವನ್ನೂ ಇತರ ಕೆಲವು ಗ್ರಾಮಗಳ ಆದಾಯವನ್ನು ದಾನವಾಗಿ ನೀಡಿದನು.[೯೮]

ಕಿರಿಯಮಗ ನಂಜರಾಜನ ಹೆಸರನ್ನು ೧೪೮೨ರ ಹರವೆ ಶಾಸನವೂ ಸೇರಿದಂತೆ ಹತ್ತು ಹನ್ನೆರಡು ಶಾಸನಗಳು ಉಲ್ಲೇಖಿಸುತ್ತವೆ. ಅವನ ಬಗೆಗೆ ದೊರಕುವ ಮುಂದಿನ ಉಲ್ಲೇಖ ೧೪೮೩ರ ಅಗರದ ಶಾಸನದಲ್ಲಿ.[೯೯] ಆಮೇಲೆ ತೆರಕಣಾಂಬಿಯ ೧೪೯೯ರ ಶಾಸನಲ್ಲಿ.[೧೦೦] ಸ್ಥಳದ ದೇವಾಲಯಗಳ ದತ್ತಿಗಳನ್ನು ಹಂಚಿಕೊಳ್ಳುವ ಬಗೆಗೆ ಉಂಟಾಗಿದ್ದ ವ್ಯಾಜ್ಯವನ್ನು ನಂಜರಾಜನ ಅಧಿಕಾರಿಯೊಬ್ಬನು ಪರಿಹರಿಸಿದನು

ಎಂಬುದಾಗಿ ೧೪೯೦ರ ತಗಡೂರು ಶಾಸನವು ಹೇಳುತ್ತದೆ.[೨೦೧] ೧೪೯೨ ಮತ್ತು ೧೪೯೫ರ ನಡುವಣ ಕಾಲದ, ನೇರಳೆಯ ಮೂರು ಶಾಸನಗಳು[೨೦೨] ಅವನ ಹೆಸರನ್ನು ಉಲ್ಲೇಖಿಸುತ್ತವೆ. ೧೫೦೧ರ ಕುದೇರಿನ ಶಾಸನವು.[೨೦೩] ಬಹುಶಃ ಅವನ ಮಗನಾದ ಚನ್ನರಾಜನನ್ನು ಕುರಿತು ಹೇಳುತ್ತದೆ. ನಂಜರಾಜನ ಇನ್ನೊಬ್ಬ ಮಗನನ್ನೂ ಶಾಸನವು ಸ್ಪಷ್ಟವಾಗಿ ವರ್ಣಿಸುತ್ತದೆ. ೧೫೧೧ರ ಶಾಸನದಲ್ಲಿ ಚಿಕ್ಕರಾಯನನ್ನು ಹೆಸರಿಸಿದೆ.[೨೦೪] ಇವನು ತೆರಕಣಾಂಬಿಯಲ್ಲಿದ್ದನು. ಆದರೆ ಇದೇ ರಾಜನನ್ನು ಹೊನಕನಹಳ್ಳಿಯ ೧೫೦೬ರ ಶಾಸನದಲ್ಲಿ ದೇಪಣ್ಣನ ಮಗನೆಂದು ಹೇಳಿದೆ.[೨೦೫] ೧೫೧೨ರ ಕುಂತೂರು ಶಾಸನವು ಅವನನ್ನು ಇಮ್ಮಡಿ ಚಿಕ್ಕರಾಯ ಎಂದು ವರ್ಣಿಸಿ, ಸಾಲೂರು ವೀರಶೈವ ಮಠಕ್ಕೆ ಅವನು ದಾನ ನೀಡಿದನೆಂದು ಹೇಳುತ್ತದೆ.[೨೦೬] ಈ ರಾಜನು ಹದಿನಾಡನ್ನು ಆಳುತ್ತಿದ್ದನು. ಮತ್ತೆ ೧೫೧೨ರ ಹೊಂದರಬಾಳು ಶಾಸನದಲ್ಲೂ ನಂಜರಾಜನ ಉಲ್ಲೇಖವಿದೆ. ಉಮ್ಮತ್ತೂರಿನ ನಿರಸಿಮಠಕ್ಕೆ ಒಂದು ಗ್ರಾಮವನ್ನು ದಾನ ಮಾಡಿದ ವಿಷಯ ಅದರಲ್ಲಿ ಬರುತ್ತದೆ. ೧೫೧೧ರ ದುಗ್ಗಹಟ್ಟಿ ಶಾಸನವು ಅವನನ್ನು ಗಂಗರಾಜ ಎಂದು ಕರೆಯುತ್ತದೆ.[೨೦೭] ಇವನು ಉಮ್ಮತ್ತೂರಿನ ಕೊನೆಯ ಪ್ರತಿನಿಧಿ. ಕಾವೇರಿ ಜಲಪಾತವಿರುವ ಶಿವಸಮುದ್ರಂ ದ್ವೀಪದಲ್ಲಿ ಕೋಟೆಯನ್ನು ಕಟ್ಟಿಕೊಂಡನು. ೧೬ನೆಯ ಶತಮಾನದ ಮೊದಲಲ್ಲಿ ಸ್ವತಂತ್ರನಾದವನು ಇವನೇ.[೨೦೮] ಮೈಸೂರು ರಾಜ್ಯವು ಕೃಷ್ಣದೇವರಾಯನ ಆಳ್ವಿಕೆಯಲ್ಲಿ ವಿಜಯನಗರದ ಅಧೀನವಾಗಿತ್ತು. ಅವನು ಉಮ್ಮತ್ತೂರಿನ ಗಂಗರಾಜನನ್ನು ಸೋಲಿಸಿ, ಶಿವಸಮುದ್ರದ ಕೋಟೆಯನ್ನೂ ಶ್ರೀರಂಗಪಟ್ಟಣವನ್ನೂ ವಶಪಡಿಸಿಕೊಂಡನು. ೧೫೧೨ರ ನಂಜನಗೂಡಿನ ಶಾಸನದ ಪ್ರಕಾರ[೨೦೯] ಕೃಷ್ಣದೇವರಾಯನು ತಲಕಾಡು-ಉಮ್ಮತ್ತೂರುಗಳೆರಡನ್ನೂ ಗೆದ್ದು ಸಾಳುವ ಗೋವಿಂದರಾಜನನ್ನು ಉಮ್ಮತ್ತೂರಿನ ವೈಸರಾಯಿ ಆಗಿ ನೇಮಕ ಮಾಡಿದ್ದನು. ಆಮೇಲೆ ಎಲ್ಲಾ ಪ್ರದೇಶಗಳೂ ವಿಜಯನಗರದಲ್ಲಿ ಸಾಮ್ರಾಜ್ಯದ ಅಧೀನವಾದುವು. ಮುಂದೆ ರಾಜಒಡೆಯರ ಕಾಲದಲ್ಲಿ ಉಮ್ಮತ್ತೂರು ಪಾಳೆಯಪಟ್ಟು ಮೈಸೂರು ರಾಜ್ಯಕ್ಕೆ ಸೇರಿಕೊಂಡಿತು.

ಧರ್ಮ ಮತ್ತು ಸಮಾಜ

ಉಮ್ಮತ್ತೂರಿನ ಅರಸರ ಧಾರ್ಮಿಕ ಜೀವನವನ್ನು ಅಧ್ಯಯನ ಮಾಡಿದಾಗ, ಅವರು ಮೂಲತಃ ಶೈವರಾದರೂ ಕಾಲಕ್ರಮದಲ್ಲಿ ವೀರಶೈವ ಧರ್ಮದಿಂದ ಪ್ರಭಾವಿತರಾದರು ಎಂಬುದು ತಿಳಿಯುತ್ತದೆ. ಕ್ರಿ.ಶ. ೧೪೯೭ರ ಕರಕಲಮಡಹಳ್ಳಿ ಶಾಸನವು, ಸೋಮೇಶ್ವರನು ಅವರ ಕುಲದೈವವಾಗಿದ್ದನೆಂದು ಹೇಳುತ್ತದೆ. [೨೧೦] ಅದರಲ್ಲೂ ಕಾವೇರಿಯ ಎರಡು ಹರಿವುಗಳ ನಡುವೆ ನೆಲೆಸಿದ ಸೋಮೇಶ್ವರನೇ ಅವರ ಮುಖ್ಯ ಮನೆದೇವರು. ನಂಜನಗೂಡಿನ ನಂಜುಂಡೇಶ್ವರನಿಗೆ ಈ ವಂಶದ ರಾಜರು ಅರ್ಪಿಸಿದ ವಿವಿಧ ಕೊಡುಗೆಗಳನ್ನು ಪರಿಶೀಲಿಸಿದಾಗ ಅವರ ಮೇಲೆ ಶೈವಧರ್ಮದ ಪ್ರಭಾವವೆಷ್ಟಿದ್ದಿತೆನ್ನುವುದು ತಿಳಿಯುತ್ತದೆ. ಉದಾಹರಣೆಗೆ ಕ್ರಿ.ಶ. ೧೪೬೭ರ ಶಾಸನದಿಂದ ತಿಳಿದುಬರುವಂತೆ, ಉಮ್ಮತ್ತೂರಿನ ಅರಸ ಸೋಮಯ್ಯ ದೇವನು ಹೊಳೆಮುಳ್ಳೂರು ಗ್ರಾಮವನ್ನು, ನಂಜನಗೂಡಿನ ನಂಜುಡೇಶ್ವರನ ಲಿಂಗಭೋಗ ರಂಗಭೋಗಗಳಿಗೂ ಅಮೃತಪಡಿ ಮತ್ತು ಅಭಿಷೇಕಗಳಿಗೂ ದಾನ ಮಾಡಿದನು.[೨೧೧] ಹಾಗೆಯೇ ವೀರಮಲ್ಲರಾಜ ಒಡೆಯನು ನಂಜನಗೂಡಿನ ನಂಜುಂಡೇಶ್ವರನಿಗೆ ತಗಡೂರು ಪ್ರದೇಶದಲ್ಲಿರುವ ಕಲುಕೂಡ ಗ್ರಾಮದ ಆದಾಯವನ್ನು ಪೂರ್ತಿಯಾಗಿ ಕಾಣಿಕೆಯಾಗಿ ಅರ್ಪಿಸಿದನು.[೨೧೨] ಚಿಕ್ಕಣ್ಣಒಡೆಯನು ತೆರಕಣಾಂಬಿಯಿಂದ ಆಳುತ್ತಿದ್ದಾಗ, ಕುಡುಗುನಾಡಿನ ಅಲತ್ತೂರು ಗ್ರಾಮವನ್ನು ಅರ್ಪಿಸಿದನು.[೨೧೩] ವೀರಚಿಕ್ಕರಾಜ ಒಡೆಯನು ಭಗವಾನ್ ನಂಜುಂಡನಿಗೆ ಗದ್ದೆಯನ್ನು, ರಾಘವಪುರದ ಮತ್ತು ಹೊಂಪುರದ ಚೆಡ್ಡ, ತೋಡಿ, ಮಡಿಕೆ ಮತ್ತಿತರ ಎಲ್ಲಾ ಬಗೆಯ ಆದಾಯಗಳನ್ನೂ ಸಮರ್ಪಿಸಿದನು.[೨೧೪] ನಂಜರಾಯ ಒಡೆಯನು ವೀರಭದ್ರದೇವರಿಗೆ ಕ್ರಿ.ಶ. ೧೪೮೨ರಲ್ಲಿ ಕಾಚಗೌಡನಹಳ್ಳಿಯನ್ನೂ ತೆರಕಣಾಂಬಿಯ ಚಿಕ್ಕಣ್ಣ ಹಳ್ಳಿಕೊಪ್ಪಲನ್ನು ಉಂಬಳಿಯಾಗಿ ಅರ್ಪಿಸಿದನು.[೨೧೫] ಸೋಮರಾಯ ಒಡೆಯನು

ತನ್ನಗುರು ರುದ್ರಾಕ್ಷಿ ಒಡೆಯರ ಶಿವಾರಾಧನೆಗೋಸ್ಕರವಾಗಿ ತೆರಕಣಾಂಬಿಯ ಮಧುವಿನಹಳ್ಳಿಯ ತೋಟವನ್ನು ನೀಡಿದನು.[೨೧೬] ಚೆನ್ನನಂಜರಾಜ ಒಡೆಯನು ತನ್ನ ಮನೆದೇವರಾದ ಶಿವಸಮುದ್ರದ ಸೋಮೇಶ್ವರನಿಗೆ ಮಾದಹಳ್ಳಿಯನ್ನು ಅರ್ಪಿಸಿದನು.[೨೧೭] ಇದೇ ರೀತಿಯಲ್ಲಿ ಶಾಸನಗಳ ಆಧಾರದಿಂದ ಉಮ್ಮತ್ತೂರು ರಾಜರ ಆಳಿಕೆಯಲ್ಲಿ ಶೈವಧರ್ಮವು ಗಣನೀಯ ಪ್ರಭಾವವನ್ನು ಹೊಂದಿತ್ತು ಎನ್ನುವುದು ತಿಳಿಯುತ್ತದೆ. ಈ ಅರಸರಲ್ಲಿ ಅನೇಕರು ನಂಜುಂಡೇಶ್ವರನ ಹೆಸರನ್ನೇ ಇಟ್ಟುಕೊಂಡಿದ್ದುದೂ ಅವರು ಈ ದೈವದ ಬಗೆಗೆ ತಾಳಿದ್ದ ಭಕ್ತಿಯನ್ನು ಸೂಚಿಸುತ್ತದೆ. ಈ ಪಾಳೆಯಗಾರರ ಆಳಿಕೆಯ ಅವಧಿಯಲ್ಲಿ ಶೈವಧರ್ಮವು ಪ್ರಾಧಾನ್ಯವನ್ನು ಪಡೆದಿತ್ತೆಂದೂ, ಸೋಮೇಶ್ವರನು ಅವರ ಕುಲದೈವವೆಂದೂ, ಬೇರೆ ಶೈವ ದೇವಾಲಯಗಳಲ್ಲೂ ಕ್ರಮಾನುಗತವಾದ ಪೂಜೆ ಮತ್ತು ಭಗವತ್‌ಸೇವೆಗಳು ನಡೆಯುತ್ತಿದ್ದುವೆಂದೂ ಹೇಳಬಹುದಾಗಿದೆ. ಉಮ್ಮತ್ತೂರಿನ ಅರಸರ ಕಾಲದಲ್ಲಿ ಶೈವ ಧರ್ಮವಲ್ಲದೆ ವೈಷ್ಣವ ಧರ್ಮವೂ ಪ್ರಾಧಾನ್ಯ ಪಡೆದಿದ್ದಿತು ಎಂದು ಕೆಲವು ಶಾಸನಗಳ ಆಧಾರದಿಂದ ಹೇಳಬಹುದಾಗಿದೆ. ಕ್ರಿ.ಶ. ೧೪೮೦ರ ಒಂದು ಶಾಸನದ ಪ್ರಕಾರ ನಂಜರಾಜ ಒಡೆಯನು ತಗಡೂರಿನ 'ಮೂಲಸ್ಥಾನ ದೇವರ' ಹಾಗೂ ಲಕ್ಷ್ಮೀಕಾಂತ ದೇವರ ಪೂಜೆಗೋಸ್ಕರವಾಗಿ ತಗಡೂರಿನ ಎಲ್ಲಾ ತೆರಿಗೆಗಳನ್ನೂ ಇತರ ವರಮಾನಗಳನ್ನೂ ದಾನವಾಗಿ ಅರ್ಪಿಸಿದನು.[೨೧೮] ವೀರರಾಜ ಒಡೆಯನು ಹುಲ್ಲಹಳ್ಳಿ ಸ್ಥಳದ ಪಿಲ್ಲಹಳ್ಳಿಯನ್ನು, ಹುಲ್ಲಹಳ್ಳಿಯ ಯೋಗಾನರಸಿಂಹಸ್ವಾಮಿಗೆ ಸಮರ್ಪಿಸಿದನು.[೨೧೯] ದಸಕೆಟ್ಟಪ್ಪ ಸೆಟ್ಟಿಯು, ವೀರನಂಜರಾಜ ಒಡೆಯರ ಆಡಳಿತಾವಧಿಯಲ್ಲಿ ಕ್ರಿ.ಶ. ೧೪೪೮ರಲ್ಲಿ, ಮೂಳೂರು ಸ್ಥಳದ ಹಡೆಯಾಲಗ್ರಾಮವನ್ನು ವೈಕುಂಠನಾಥ, ರಾಮಚಂದ್ರ, ಮತ್ತು ಆಳ್ವಾರ್ ಈ ದೇವರುಗಳ ಸೇವೆಗೋಸ್ಕರವಾಗಿ ದಾನ ಮಾಡಿದನು.[೨೨೦] ಹೀಗೆ ಶಾಸನಗಳ ಅಧಿಕಾರದಿಂದ, ಉಮ್ಮತ್ತೂರಿನ ಪಾಳೆಯಗಾರರು ಶೈವ-ವೈಷ್ಣವ ಧರ್ಮಗಳೆರಡನ್ನೂ ಪೋಷಿಸಿದರು ಎಂದು ಹೇಳಬಹುದು. ಆ ಮೇಲೆ ಕಾಲಕ್ರಮದಲ್ಲಿ ಅವರು ವೀರಶೈವಧರ್ಮದಿಂದ ಪ್ರಭಾವಿತರಾದರು. ಆಗ ಪ್ರಚಲಿತವಾಗಿದ್ದ ಪರಿಸ್ಥಿತಿಯ ಒತ್ತಡಕ್ಕೆ ಸಿಕ್ಕಿ ಅವರು ಅದನ್ನು ಅನುಸರಿಸಬೇಕಾಯಿತು ಎಂದು ಹೇಳಬಹುದಾಗಿದೆ. ಆ ಧರ್ಮದ ಮೇಲೆ ಅವರಿಗಿದ್ದ ನಂಬಿಕೆ, ವಿಶ್ವಾಸಗಳ ಜೊತೆಗೆ ರಾಜಕೀಯ, ಆರ್ಥಿಕ ಸಾಮಾಜಿಕ ಮತ್ತಿತರ ಕಾರಣಗಳೂ ಅದಕ್ಕಿದ್ದುವು. ಉಮ್ಮತ್ತೂರಿನ ಅರಸರ ಮೇಲೆ ವೀರಶೈವ ಧರ್ಮದ ಪ್ರಭಾವವಾದುದು ಬಹುಶಃ ೧೪೬೩ರಲ್ಲಿ ಎಂದು ತೋರುತ್ತದೆ. 'ರಾಜಗುರು' ಶ್ರೀ ಗುರು ರುದ್ರಾಕ್ಷಿ ಒಡೆಯರು ೧೪೬೩ರಲ್ಲಿ ಬದುಕಿದ್ದರು. ಅವರು ಈ ಪಾಳೆಯಗಾರರ ಮತ ಪರಿವರ್ತನೆಗೆ ಕಾರಣರಾದರು ಎಂದು ಹೇಳಬಹುದಾಗಿದೆ. ಎರಡುಶಾಸನಗಳ ನಿರ್ದಿಷ್ಟ ಆಧಾರ ಇದಕ್ಕಿದೆ.[೨೨೧] ಇದಾದ ಮೇಲೆ ವೀರಶೈವವು ಉಮ್ಮತ್ತೂರು ಪ್ರಾಂತದ ಪ್ರಧಾನ ಧರ್ಮವಾಗಿ ಬೆಳೆಯಿತು. ಈ ವಂಶದ ಜನಪ್ರಿಯ ರಾಜ ನಂಜರಾದ ಒಡೆಯನು ಶಿವಾಯತ್ರಯಾರ್ಯರಿಂದ 'ವೀರಶೈವದೀಕ್ಷೆ'ಯನ್ನು ಪಡೆದನು. ಶಿವಸಮುದ್ರ ಪಟ್ಟಣವನ್ನು ನಂಜನಗೂಡಿನ ನಂಜುಂಡೇಶ್ವರ ದೇವಾಲಯದ ಬಳಿ ಒಂದು ದೇವಾಲಯವನ್ನು ಕಟ್ಟಿಸಿದನು. ಶಿವಾಯತ್ರಯಾರ್ಯ (ಸುತ್ತೂರು), ಶಿವಪೂಜೆಯಾರ್ಯ (ನಂಜನಗೂಡು), ತೂಗಾಡಿಯ ಬಸವೇಶ್ವರ (ಉಮ್ಮತ್ತೂರು), ಮರುಳಸಿದ್ಧೇಶ್ವರ (ಶಿವನಸಮುದ್ರ) ಮತ್ತು ಬಾಲಬ್ರಹ್ಮಚಾರಿ ಸಾಲೂರು ಶಾಂತೇಶ್ವರ ಇವರುಗಳಿಗಾಗಿ ಮಠಗಳನ್ನು ಕಟ್ಟಿಸಿದನು. ಈ ಮಠಗಳಲ್ಲದೆ, ಯರಗಂಬಳ್ಳಿ ಮಠ, ಸಾಲೂರು ಮಠ ಮೊದಲಾದುವಕ್ಕೆ ವಿಫುಲವಾಗಿ ದಾನಧರ್ಮ ಮಾಡಿದರು. ಸಾಲೂರು ಮಠದ ಶಾಂತವೀರಸ್ವಾಮಿ ಹಾಗೂ ಅವರ ಐವತ್ತು ಶಿಷ್ಯರಿಗೋಸ್ಕರವಾಗಿ ಕುಂತೂರು ಗ್ರಾಮವನ್ನು ಅವರು ದಾನಮಾಡಿದರು.[೨೨೨] ಹೀಗೆ ವೀರಶೈವ ಧರ್ಮಕ್ಕೆ ಪರಿವರ್ತಿತರಾಗಿ, ಮಠಗಳನ್ನು ಕಟ್ಟಿಸಿ ಆ ಧರ್ಮದ ಪ್ರಸಾರಕ್ಕೆ ಬೇಕಾದ ಹಾಗೆ ಕೊಡುಗೆಗಳನ್ನು ನೀಡಿದರೂ ಉಮ್ಮತ್ತೂರಿನ ಅರಸರು 'ಸಕಲ ಧರ್ಮಗಳ ಪೋಷಕರು' ಎಂಬ ಪ್ರಶಂಸೆಯನ್ನು ಪಡೆದರು.[೨೨೩] ಅವರ ಧರ್ಮ ಸಹಿಷ್ಣುತೆಗೆ ಇದು ನಿದರ್ಶನ. ಧರ್ಮವು ಉಮ್ಮತ್ತೂರು ಅರಸರ ಯಶಸ್ಸಿನಲ್ಲಿ ಪ್ರಧಾನ ಪಾತ್ರವಹಿಸಿತ್ತು. ಎಂದು ಹೇಳಬಹುದು. ಪ್ರಾದೇಶಿಕ ಅಥವಾ ಸ್ಥಳೀಯ ರಾಜಕೀಯ ಶಕ್ತಿಯಾಗಿ ಅವರು ಧರ್ಮ-ದಂಡಗಳೆರಡನ್ನೂ ಸಮತೂಕದಲ್ಲಿರಿಸಿಕೊಂಡು ರಾಜ್ಯಭಾರ ಮಾಡಿದರು.

ಇನ್ನು ಸಾಮಾಜಿಕವಾಗಿ ಹೇಳುವುದಾದರೆ, ಉಮ್ಮತ್ತೂರು ಅರಸರು ಸಮಾಜ ವ್ಯವಸ್ಥೆಯಲ್ಲಿ ಮತ್ತು ಸಮಾಜದ ಕೆಲಸಕಾರ್ಯಗಳ ನಿರ್ವಹಣೆಯಲ್ಲಿ ಮೇಲುಗೈ ಆಗಿ ವಿಶೇಷ ಸಾಧನೆ ಮಾಡಿದ್ದರು ಎಂದು ಹೇಳಬಹುದು. ಅಂದರೆ, ಅವರು ಸಾಮಾಜಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಸ್ವೀಕೃತವಾದ ತತ್ವಗಳನ್ನು ಅಳವಡಿಸಿಕೊಡು ತಮ್ಮ ವಿಶಿಷ್ಟ ಪಾತ್ರವನ್ನು ನಿರ್ವಹಿಸಿದರು. ಅವುಗಳನ್ನು ಅವರು ಗೌರವಿಸಿದರು ಮತ್ತು ಪೋಷಿಸಿದರು. ಉಮ್ಮತ್ತೂರಿನ ಅರಸರು ಮತ್ತು ಅವರ ಅಧೀನರು ಬಹು ಜಾಗರೂಕತೆಯಿಂದ ಅಧಿಕಾರದಲ್ಲಿ ಮುಂದುವರಿದರು. ಇದನ್ನು ಮುಂದೆ ಚರ್ಚಿಸಿದೆ. ಬ್ರಾಹ್ಮಣರು ಮತ್ತು ಶೈವ ಗುರುಗಳು ಆ ಸಮಾಜದಲ್ಲಿ ಪ್ರಧಾನವಾದ ಸ್ಥಾನವನ್ನು ಪಡೆದಿದ್ದರು. ಬ್ರಾಹ್ಮಣರಲ್ಲಿ ಶೈವ ಮತ್ತು ವೈಷ್ಣವ ಪಂಗಡಗಳಿದ್ದುವು. ಅಗ್ರಹಾರಗಳಲ್ಲಿ ವಾಸಮಾಡುತ್ತಿದ್ದ ಬ್ರಾಹ್ಮಣರನ್ನು ಮಹಾಜನರು ಎಂದು ಕರೆಯಲಾಗುತ್ತಿತ್ತು. ಇವರು ಸಮಾಜದಲ್ಲಿ ಮೇಲಿನ ಸ್ಥಾನವನ್ನು ಪಡೆದಿದ್ದುದಲ್ಲದೆ ಸಾಂಸ್ಕೃತಿಕ ಪರಂಪರೆಯನ್ನು ಉಳಿಸಿ ಬೆಳೆಸುವ ಹೊಣೆಯನ್ನು ಹೊತ್ತಿದ್ದರು. ಈ ಅಂಶಗಳಿಗೆ ಆಧಾರವಾದ ಕೆಲವು ಶಾಸನಗಳು ಉಮ್ಮತ್ತೂರಿನಲ್ಲಿ ಕಂಡುಬಂದಿವೆ. ರಾಜಮನೆತನದ ವಿಶೇಷ ಮನ್ನಣೆಯನ್ನು ಪಡೆದಿದ್ದ ಬ್ರಾಹ್ಮಣರು ಅವರಿಂದ ಹಲವು ಉಡುಗೊರೆಗಳನ್ನು ದತ್ತಿಗಳನ್ನು ಪಡೆದಿದ್ದರು. ಇದಕ್ಕೆ ತಾರ್ಕಣೆಯಾಗಿ ಅಗ್ರಹಾರಗಳನ್ನು ನಿರ್ಮಿಸಲಾಗುತ್ತಿದ್ದುದು ಮಾತ್ರವಲ್ಲದೆ ಬ್ರಾಹ್ಮಣರು ಬ್ರಹ್ಮದಾಯ ಮತ್ತು ಸರ್ವಮಾನ್ಯಗಳಂತಹ ವಿನಾಯಿತಿಗಳನ್ನು ಪಡೆದಿದ್ದರು. ೧೪೭೬ರ ಒಂದು ಶಾಸನದಂತೆ ದೇವಣ್ಣ ಒಡೆಯನು ತೆರಕಣಾಂಬಿ ಪ್ರಾಂತದ ಪ್ರತಾಪದೇವರಾಯನಪುರ ಅಥವಾ ಸೋಮಹಳ್ಳಿಯನ್ನು ಕೊಂಡು ಅದನ್ನು ೨೪ ವೃತ್ತಿಗಳಾಗಿ ವಿಭಾಗಿಸಿ, ಹತ್ತು ವೃತ್ತಿಗಳನ್ನು ತೆರಕಣಾಂಬಿ ಮತ್ತು ನಂಜನಗೂಡು ಪ್ರಾಂತದ ಬ್ರಾಹ್ಮಣರಿಗೆ ಹಂಚಿದನು.[೨೨೪] ಇನ್ನೊಂದು ಶಾಸನದ ಪ್ರಕಾರ, ವಡಗಲೈ ನಾಮವನ್ನು ಧರಿಸುತ್ತಿದ್ದ ಶ್ರೀ ವೈಷ್ಣವ ಬ್ರಾಹ್ಮಣರು ವಾಸಮಾಡುತ್ತಿದ್ದ, ಕಣೆಯಲನಾಡುವಿನ ತಿಲ್ಲಹಳ್ಳಿಯನ್ನು, ವೀರರಾಜ ಒಡೆಯನ ಕಾಲದಲ್ಲಿ ಸರ್ವಮಾನ್ಯವಾಗಿ ನೀಡಲಾಯಿತು.[೨೨೫] ೧೫೦೬ರ ಮಳವಳ್ಳಿ ಶಾಸನದ ಪ್ರಕಾರ, ಚಿಕ್ಕರಾಯನು ತನ್ನ ಹೆಸರಿನಲ್ಲಿ ಒಂದು ಅಗ್ರಹಾರವನ್ನು ನಿರ್ಮಿಸಿದ್ದನು. ಚಿಕ್ಕರಾಯಸಾಗರ ಎಂಬ ಹೆಸರಿರುವ ಆ ಅಗ್ರಹಾರವಿರುವುದು ತಲಕಾಡುಪ್ರಾಂತದ ದನಗೂರು ಪ್ರದೇಶದ ಮೊನೆಮುತ್ತರಹಳ್ಳಿಯಲ್ಲಿ. ಅದನ್ನು ಅಲಿಕೊಂಡದ ದೊಡ್ಡ ವಿದ್ವಾಂಸ ನಾಗಭಟ್ಟನೆನ್ನುವವನಿಗೆ ಸಾಲು ಆದಾಯಗಳೊಂದಿಗೆ ದತ್ತಿ ಹಾಕಿಕೊಡಲಾಯಿತು.[೨೨೬] ಚೆನ್ನನಂಜರಾಜ ಒಡೆಯನ ಆಳಿಕೆಯಲ್ಲಿ ಮಾದಿಹಳ್ಳಿಯನ್ನು ಚೆನ್ನ ನಂಜರಾಯಪುರ ಅಗ್ರಹಾರ ಎಂದು ಪರಿವರ್ತಿಸಿ ಅದನ್ನು ಸರ್ವಮಾನ್ಯ ಗ್ರಾಮವಾಗಿ ಮಾಡಲಾಯಿತು– ಎಂಬುದಾಗಿ ೧೪೯೭ರ ಒಂದು ಶಾಸನದಿಂದ ತಿಳಿದುಬರುತ್ತದೆ.[೨೨೭] ಗಂಗರಾಜ ಒಡೆಯನ ತಾಯಿ ದೇವರಸಿ ಅಮ್ಮನು ದುಗ್ಗಹಟ್ಟಿ ಗ್ರಾಮವನ್ನು ಮಲ್ಲಿಕಾರ್ಜುನ ದೇವರ ಶಿಷ್ಯ ಸಿದ್ಧಬಸವರಾಜದೇವರಿಗೆ ಕಾಣಿಕೆಯಾಗಿ ನೀಡಿದಳು.[೨೨೮] ವೀರನಂಜರಾಜ ಒಡೆಯನು ಹರವೆಯ ವಿಭೂತಿ ಒಡೆಯನ ಮಗ ನಂಜಿನಾಥ ಒಡೆಯನಿಗೆ ಒಂದು ಮನೆಯನ್ನು ಕಟ್ಟಿಸಿ ದಾನ ಮಾಡಿದನು. ಹೀಗೆ ವೈದಿಕ ಗ್ರಂಥಗಳಾದ ಶೈವ ಮತ್ತು ವೈಷ್ಣವ ಬ್ರಾಹ್ಮಣರು 'ಬ್ರಹ್ಮದಾಯ' 'ಸರ್ವಮಾನ್ಯ' ಮೊದಲಾದ ವಿಶೇಷ ಪ್ರಯೋಜನಗಳನ್ನು ಪಡೆದು ಅಗ್ರಹಾರಗಳಲ್ಲಿ ವಾಸಮಾಡುತ್ತಾ ಧರ್ಮ ಮತ್ತು ಸಂಸ್ಕೃತಿಗಳ ಮೇಲ್ಮೆಗೆ ಶ್ರಮಿಸುತ್ತಾ ಸಮಾಜದಲ್ಲಿ ಉತ್ತಮ ಸ್ಥಾನವನ್ನು ಪಡೆದಿದ್ದರು ಎಂದು ಹೇಳಬಹುದು. ಅದೇ ಸಮಯಕ್ಕೆ ವೀರಶೈವ ಧರ್ಮದ 'ಗುರು'ಗಳೂ ಉಮ್ಮತ್ತೂರು ಅರಸರ ವಿಶೇಷ ಗೌರವಕ್ಕೆ ಪಾತ್ರರಾಗಿದ್ದರು ಎಂದು ಹೇಳುವುದಕ್ಕೆ ಹಲವು ಆಧಾರಗಳು ದೊರಕುತ್ತವೆ. ೧೫೪೦ರ ಒಂದು ಶಾಸನದಂತೆ, ಉಮ್ಮತ್ತೂರಿನ ವೀರಶೈವ ಮಠದ (ಜನಪ್ರಿಯವಾಗಿ ಉಪ್ಪರಿಗೆಯ ಮಠ ಎಂಬ ಹೆಸರಿನ) ಮುಖ್ಯಸ್ಥ ಚೆನ್ನಬಸವರಾಜದೇವರು ಪ್ರಾರ್ಥಿಸಿದ ಮೇರೆಗೆ ಒಂದು ಬಾವಿಯನ್ನು ತೋಡಿಸಲಾಯಿತು.[೨೨೯] ೧೪೭೬ರ ಒಂದು ಶಾಸನದ ಆಧಾರದಿಂದ ಹೇಳುವುದಾದರೆ, ದೇವಣ್ಣ ಒಡೆಯನು ಸೋಮಹಳ್ಳಿ ಗ್ರಾಮವನ್ನು ೨೪ ವೃತ್ತಿಗಳಾಗಿ ವಿಭಜಿಸಿ, ಅವುಗಳಲ್ಲಿ ಕೆಲವನ್ನು ಜಂಗಮರಿಗೆ ದಾನಮಾಡಿದನು.[೨೩೦]

ಕ್ರಿ.ಶ. ೧೪೬೯ರಲ್ಲಿ ದೇವರಾಜ ಒಡೆಯನು ಶಿವಾಚಾರರ (ವೀರಶೈವ) 'ರಾಜಗುರು' ರುದ್ರಾಕ್ಷಿ ಒಡೆಯರಿಗೆ ಗೋವಿನಹಳ್ಳಿ ಗ್ರಾಮವನ್ನು ಕಾಣಿಕೆಯಾಗಿ ನೀಡಿದನು.[೨೩೧] ಹಾಗೆಯೇ ೧೫೧೨ರಲ್ಲಿ ವೀರ ಇಮ್ಮಡಿ ಚಿಕ್ಕವೀರಒಡೆಯನು ವೀರಶೈವ ಗುರು ಶಾಂತದೇವರಿಗೆ ಅಲ್ಲಿನ ಮಠವನ್ನು ನಿರ್ವಹಿಸುವ ಸಲುವಾಗಿ ಭೂಮಿ, ತೋಟಗಳನ್ನು ಎಲ್ಲಾ ಬಗೆಯ ತೆರಿಗೆಗಳೊಂದಿಗೆ ಮತ್ತು ಸಮಸ್ತ ಆದಾಯ ಮೂಲಗಳೊಂದಿಗೆ ಕಾಣಿಕೆ ನೀಡಿದನು.[೨೩೨] ಹೀಗೆ ವೀರಶೈವ ಗುರುಗಳು, ವೀರಶೈವ ಮಠಗಳು ಉಮ್ಮತ್ತೂರು ಅರಸರಿಂದ ಗೌರವ ಮರ್ಯಾದೆಗಳನ್ನು ಸಂಪಾದಿಸಿ ಸಾಮಾಜಿಕ ಪ್ರಜ್ಞೆಯನ್ನು ಮೂಡಿಸಿದ್ದರು. ಈ ಮಠಗಳು ಸಾಮಾಜಿಕ ಚಟುವಟಿಕೆಯ ಕೇಂದ್ರಗಳಾಗಿದ್ದುವು. ಧಾರ್ಮಿಕ ಚಟುವಟಿಕೆಗಳು, ಜನರಲ್ಲಿ ಭಕ್ತಿ-ಜ್ಞಾನ-ವೈರಾಗ್ಯ ಭಾವನೆಗಳನ್ನು ಮೂಡಿಸುವುದು, ಕರ್ತವ್ಯ, (ಕಾಯಕ)ಕ್ಕೆ ಹೆಚ್ಚಿನ ಒತ್ತು ಕೊಡುವುದು, ವಿದ್ಯಾಭ್ಯಾಸದ ಪ್ರಸಾರ ಇಂತಹ ಕೆಲಸಗಳಲ್ಲಿ ಮಠಗಳು ತೊಡಗಿರುತ್ತಿದ್ದುವು. ಸನ್ಯಾಸ, ಚಾತುರ್ಮಾಸ್ಯದಂತಹ ವಿಧಾನಗಳನ್ನು ಅನುಸರಿಸಲಾಗುತ್ತಿತ್ತು 'ವೈದಿಕ ಮಠ'ಗಳಲ್ಲಿನಂತೆಯೇ ಈ ವೀರಶೈವ ಮಠಗಳಲ್ಲಿಯೂ ಸಂಸ್ಕೃತದಲ್ಲಿ ಶಿಕ್ಷಣವನ್ನು ವಿಧಿಸಲಾಗಿತ್ತು. ಒಟ್ಟಿನಲ್ಲಿ ವೀರಶೈವ ಮಠಗಳು ಜನರ ಮೇಲೆ ಶೈಕ್ಷಣಿಕ ಸಂಸ್ಥೆಗಳಾಗಿ, ಪೂಜಾಸ್ಥಳಗಳಾಗಿ, ವೀರಶೈವ ಸಿದ್ಧಾಂತವನ್ನು ಬೋಧಿಸುವ ಕೇಂದ್ರಗಳಾಗಿ, ಸಾಮಾಜಿಕ ಮತ್ತು ಸಾಂಸ್ಕೃತಿಕ ಕೇಂದ್ರಗಳಾಗಿ ಜನತೆಯ ಮೇಲೆ ಪ್ರಭಾವವನ್ನು ಬೀರುತ್ತಿದ್ದುವು. ಇವುಗಳ ಪೈಕಿ ಕೊಮಾರ ಮಠ, ಉಮ್ಮತ್ತೂರು ಮಠ, ಯರಗಂಬಳ್ಳಿ ಮಠ, ಸಾಲೂರು ಮಠ, ಸುತ್ತೂರು ಮಠ, ಶಿವನಸಮುದ್ರ ಮಠ ಇವು ಗಮನಾರ್ಹವಾದವು, ಹೀಗೆ ವೈದಿಕ ಮತ್ತು ವೀರಶೈವ ಪಂಗಡಗಳೆರಡೂ ತಮಗಿದ್ದ ಸಾಮಾಜಿಕ ಮನ್ನಣೆಯನ್ನು ಉಪಯೋಗಿಸಿಕೊಂಡು ಸಾಮಾಜಿಕ ಸುವ್ಯವಸ್ಥೆ, ಶಾಂತಿ ಮತ್ತು ಸ್ಥಿರತೆಗಳಿಗಾಗಿ ಶ್ರಮಿಸಿದುವು. ಈ ಎರಡು ಮುಖ್ಯ ಕೋಮುಗಳಲ್ಲದೆ, ಶೆಟ್ಟಿಗಳು, ಕುಂಬಾರರು, 'ಅವಸರ'ದ ಜನರು, ಕಮ್ಮಾರರು, ಬಡಗಿಗಳು, ನಾಯಿಂದರು, ಅಗಸರು, ಕುರುಬರು, ನಾಯಕರು, ಕೃಷಿಕರು, ನೇಯ್ಗೆಯವರು, ಗಾಣಿಗರು, ಕುದುರೆಯವರು ಮತ್ತಿತರ ಕಸಬು ಪಂಗಡಗಳ ಜನರಿದ್ದರು. ಜಾತಿವ್ಯವಸ್ಥೆಯ ವಿವಿಧ ಶ್ರೇಣಿಗಳಲ್ಲಿದ್ದ ಈ ಜನರು ಎಂದಿನಿಂದಲೂ ಬಂದ ಸಾಮಾಜಿಕ ಪದ್ಧತಿಗಳನ್ನೂ ನಿಯಮಗಳನ್ನೂ ತಮ್ಮ ದೈನಂದಿನ ಜೀವನದಲ್ಲಿ ಪಾಲಿಸುತ್ತಿದ್ದರು. ಉಮ್ಮತ್ತೂರಿನ ಪಾಳೆಯಗಾರರು ಯಾರಾದರೂ ಕವಿಗಳಿಗೆ ಆಶ್ರಯವಿತ್ತಿದ್ದರೆ ! ಅವರ ಕಾಲದಲ್ಲಿ ರಚಿತವಾದ ಕೃತಿಗಳಾವುವು? ಈ ವಿಚಾರವಾದ ಹೆಚ್ಚಿನ ಮಾಹಿತಿ ನಮಗೆ ಸಿಕ್ಕುವುದಿಲ್ಲ. ನಂಜರಾಜ ಒಡೆಯನಿಂದ ಪುರಸ್ಕೃತನಾದ ನೀಲಕಂಠಾಚಾರ್ಯನು 'ಆರಾಧ್ಯಚರಿತ್ರೆ'ಯನ್ನು ಬರೆದಿದ್ದಾನೆ. ಈ ಕೃತಿಯಲ್ಲಿ ನಂಜರಾಜನನ್ನು ಅಪಾರವಾಗಿ ಪ್ರಶಂಸಿಸಲಾಗಿದೆ. ಅಲ್ಲದೆ ಚೆನ್ನಬಸವಪುರಾಣದಲ್ಲೂ ನಂಜರಾಜನನ್ನು ದಾಸೋಹಿ ಅರಸರಲ್ಲಿ ಒಬ್ಬನೆಂದು ಉಲ್ಲೇಖಿಸಲಾಗಿದೆ. ಅವನು ಸಂಸ್ಕೃತದಲ್ಲಿ ಕಣಾದ ಸಂಗ್ರಹವಿವರಣಂ ಎಂಬ ಕೃತಿಯನ್ನು ರಚಿಸಿದನೆಂದು ಉಲ್ಲೇಖಿಸಿದೆ. ಅವನಿಗೆ ಸಾಹಿತಿಗಳ ಸಂಗವೆಂದರೆ ಬಹಳ ಇಷ್ಟವಾಗಿತ್ತು.[೨೩೩] ಅಗ್ರಹಾರಗಳು ಮತ್ತು ವೀರಶೈವ ಮಠಗಳು ವಿದ್ಯಾಭ್ಯಾಸದ ಕೇಂದ್ರಗಳಾಗಿದ್ದುವು. ಜ್ಞಾನ ಸಂಪಾದನೆಯಲ್ಲಿ ಬ್ರಾಹ್ಮಣರು ಮತ್ತು ವೀರಶೈವಗುರುಗಳು ಪ್ರಥಮ ಆದ್ಯತೆಯನ್ನು ಹೊಂದಿದ್ದರು. ಶಿಕ್ಷಣವು ಸಂಸ್ಕೃತ ಮತ್ತು ಕನ್ನಡ ಎರಡರಲ್ಲೂ ದೊರಕುತ್ತಿತ್ತು. ಶಿಕ್ಷಣಕ್ಕಾಗಿ ಉಮ್ಮತ್ತೂರಿನ ಅರಸರು ಮಾಡಿದ ವಿಪುಲ ದಾನಧರ್ಮಗಳನ್ನು ಕುರಿತು ಮೊದಲೇ ಪರಿಶೀಲಿಸಲಾಗಿದೆ. ಅವರ ಆಳ್ವಿಕೆಯಲ್ಲಿ ಜನಕಲ್ಯಾಣ, ಸಾಮಾಜಿಕ ಶಾಂತಿ, ಸುಭದ್ರತೆಗಳ ಜೊತೆಗೆ ಸಾಮಾಜಿಕ ಮತ್ತು ಧಾರ್ಮಿಕ ವ್ಯವಸ್ಥೆಯು ಸುಸ್ಥಿತಿಯಲ್ಲಿದ್ದಿತು, ಸಾಂಸ್ಕೃತಿಕ ಪರಂಪರೆಯ ಮುಂದುವರಿಕೆ ತಡೆಯಿಲ್ಲದೆ ನಡೆದಿತ್ತು ಎಂದು ಹೇಳಬಹುದು.

ಆರ್ಥಿಕ ಪರಿಸ್ಥಿತಿ

ಉಮ್ಮತ್ತೂರು ಪಾಳೆಯಗಾರರ ಆಳಿಕೆಯಲ್ಲಿನ ಆರ್ಥಿಕ ಚಟುವಟಿಕೆಗಳಲ್ಲಿ ಕೃಷಿಗೆ ಪ್ರದಾನ ಸ್ಥಾನವಿತ್ತು. ಈ ರಾಜವಂಶವು ಮೂಲತಃ ಉದಿಸಿದ್ದೇ ಬಯಲು ಸೀಮೆಯ ಪರಿಸರದಲ್ಲಿ. ಕಾವೇರಿ-ಕಪಿಲಾ

ನದೀ ಬಯಲುಗಳ ಹಲವು ಭಾಗಗಳು ಈ ಪಾಳೆಯಗಾರರ ಆಡಳಿತದ ಎಲ್ಲೆಕಟ್ಟಿನೊಳಗಿದ್ದುವು. ಈ ಜನರ ಆರ್ಥಿಕ ಜೀವನವು ಕೃಷಿ ಮತ್ತು ಗ್ರಾಮಾಂತರ ಪ್ರದೇಶದ ಹಿನ್ನೆಲೆಯನ್ನು ಅವಲಂಬಿಸಿದ್ದಿತು. ಆ ಕಾಲದ ಶಾಸನಗಳು ಆರ್ಥಿಕ ಪರಿಸ್ಥಿತಿಯ ಮೇಲೆ ಬೆಳಕು ಚೆಲ್ಲುತ್ತವೆ. ನೆಲದ ಫಲವತ್ತತೆಗನುಗುಣವಾಗಿ ಕೃಷಿ ಭೂಮಿಯನ್ನು ಬಳಸಿಕೊಳ್ಳಲಾಗುತ್ತಿತ್ತು. ಗದ್ದೆ (ತರಿ ಜಮೀನು), ಬೆದ್ದಲು ಅಥವಾ ಹೊಲ (ಖುಷ್ಕಿ ಜಮೀನು) ಮತ್ತು ತೋಟತುಡಿಕೆಗಳೆಂಬ ವಿಭಜನೆಯಿದ್ದಿತು.[೨೩೫] ಕೃಷಿಯೋಗ್ಯ ಭೂಮಿಯನ್ನು, ಗ್ರಾಮದ ನಾಲ್ಕು ಎಲ್ಲೆಗಳನ್ನು ಗುರುತು ಮಾಡುವ ಪದ್ಧತಿಯಿದ್ದಿತು. ಅದಕ್ಕಾಗಿ ಮರಗಳನ್ನು, ಹಳ್ಳಗಳನ್ನು, ದಿಣ್ಣೆಗಳನ್ನು, ನದಿ, ತೊರೆ, ಬೆಟ್ಟಗಳನ್ನೂ ಗಡಿಯ ಗುರುತುಗಳಾಗಿ ಹೇಳಲಾಗುತ್ತಿದ್ದಿತು. ಅಲ್ಲದೆ ಶಂಖಚಕ್ರ ಕಲ್ಲು, ಲಿಂಗಮುದ್ರೆಕಲ್ಲು ಮತ್ತು ವಾಮನಮುದ್ರೆ ಕಲ್ಲುಗಳನ್ನು ನೆಟ್ಟು ಗಡಿಗಳನ್ನು ಗುರುತಿಸಲಾಗುತ್ತಿದ್ದಿತು.[೨೩೬] ಜಮೀನನನ್ನು ಅಳತೆ ಮಾಡಲು ಅಡಿ ಮತ್ತು ಅಳತೆಗೋಲುಗಳನ್ನು ಬಳಸಲಾಗುತ್ತಿದ್ದಿತು.[೨೩೭] ಫಲವತ್ತತೆ ಮತ್ತು ಮಣ್ಣಿನ ಬಣ್ಣ, ನೆಲದ ಉದ್ದಳತೆ, ಬೆಳೆಯುತ್ತಿದ್ದ ಬೆಳೆ, ನೀರಾವರಿಯ ಸೌಲಭ್ಯ, ಬಿತ್ತನೆಯ ಸಾಮರ್ಥ್ಯ–ಇವುಗಳನ್ನು ಅವಲಂಬಿಸಿ ನೆಲವನ್ನು ವರ್ಗೀಕರಿಸಲಾಗುತ್ತಿತ್ತು. ಕರಿಹೊಲ (ಕಪ್ಪು ಬಣ್ಣದ ಒಣ ನೆಲ), ಕೆಬ್ಬೆಗದ್ದೆ (ಕೆಂಪು ಬಣ್ಣದ ಗದ್ದೆ), ಕೆರೆಕೆಳಗಂ ಗದ್ದೆ (ಕೆರೆಯ ಕೆಳಗಿದ್ದು ನೀರು ಪಡೆಯುವ ಗದ್ದೆ), ಬೀಜವರಿ ೨೧೦೦ ಭೂಮಿ (ಬೀಜವರಿ ಎಂದರೆ ಜಮೀನಿನ ಒಂದು ನಿರ್ದಿಷ್ಟ ಭಾಗಕ್ಕೆ ಅಗತ್ಯವಾಗುವ ಬಿತ್ತನೆ ಬೀಜದ ಪ್ರಮಾಣ), ಎಲೆತೋಟ, ಸೊಪ್ಪಿನತೋಟ, ತೆಂಗಿನತೋಟ, ಅಡಿಕೆತೋಟ, ಇತ್ಯಾದಿಗಳು ನೆಲದ ವಿವಿಧ ವರ್ಗಗಳನ್ನು ಸೂಚಿಸುತ್ತಿದ್ದುವು.[೨೩೮] ಗೋಮಾಳ (ಸಾರ್ವಜನಿಕವಾಗಿ ದನಗಳು ಮೇಯುವ ಸ್ಥಳ), ಹಿತ್ತಲು, ಮನೆಗಳು, ಕೆರೆಗಳು, ನಾಲೆಗಳು, ಬ್ರಾಹ್ಮಣರಿಗೆ ಮತ್ತು ಶೂದ್ರರಿಗೆ ವಾಸದ ಮನೆಗಳು, ಅಗ್ರಹಾರಗಳು ಇದ್ದುವು.

ಕೃಷಿಯಲ್ಲಿ ಎರಡು ವಿಧಾನಗಳು ಬಳಕೆಯಲ್ಲಿದ್ದುವು. ಅವು ಕಡಾರಂಬ ಮತ್ತು ನೀರಾರಂಬ. ಬೆದ್ದಲು ಅಥವಾ ಹೊಲಗಳಲ್ಲಿ ಮಳೆಯ ನೀರನ್ನು ಅವಲಂಬಿಸಿದ ಕಡಾರಂಬವು ನಡೆಯುತ್ತಿದ್ದಿತು. ಗದ್ದೆ ಮತ್ತು ತೋಟಗಳಲ್ಲಿ ನೀರಾವರಿಯಿಂದ ನೀರು ಪಡೆಯುವ ನೀರಾರಂಬ ಪದ್ಧತಿಯಿತ್ತು. ನೀರಾವರಿಯು ಕೃಷಿಯ ಅತಿಮುಖ್ಯ ಅಂಗ. ಬಾವಿ, ಕಟ್ಟೆ, ಕೆರೆ, ಕಾಲುವೆಗಳು ನೀರಾವರಿಯ ಮೂಲಗಳು. ಉಮ್ಮತ್ತೂರಿನ ಅರಸರು ಮತ್ತು ಅವರ ಅಧಿಕಾರಿಗಳು ಬೇಕಾದಷ್ಟು ನೀರಾವರಿ ಕಾರ್ಯಗಳನ್ನು ಮಾಡಿದರು. ವೀರನಂಜರಾಜ ಒಡೆಯನ ಮನೆವಾರ್ತೆ ಅಧಿಕಾರಿ ಪರ್ವತಯ್ಯನು ಪ್ರಿಯಂಕಪುರದ (ಗುಂಡ್ಲುಪೇಟೆ ತಾಲೂಕು) ಬೊಮ್ಮನಹಳ್ಳಿಯಲ್ಲಿ ಕ್ರಿ.ಶ. ೧೪೯೨ರಲ್ಲಿ ಕೆರೆಗಳನ್ನು ಕಟ್ಟಿಸಿದನು.[೨೩೯] ವೀರಸೋಮರಾಯ ಒಡೆಯನು ಕ್ರಿ.ಶ. ೧೪೮೨ರಲ್ಲಿ ಉಯ್ಯಮ್ಮಳ್ಳಿಯ ಸೋಮಸಾಗರದಲ್ಲಿ ಒಂದು ಕೆರೆಯನ್ನು ಕಟ್ಟಿಸಿದನು. ಆದರೆ ೧೬ ವರ್ಷಗಳ ನಂತರ ಆ ಕೆರೆಯು ಹೂಳು ತುಂಬಿ ನಿಷ್ಪ್ರಯೋಜಕವಾಗಿರಲು, ಅರಿಕುಠಾರದ (ಚಾಮರಾಜನಗರ) ವೀರಭದ್ರನಾಯಕನ ಮಗ ಭಾಲಲೋಚನ ನಾಯಕನು ಅದನ್ನು ದುರಸ್ತಿ ಪಡಿಸಿದನು.[೨೪೦] ಹಾಗೆ ದುರಸ್ತಿಗೊಂಡ ಕೆರೆಗಳ ನಾಲೆಗಳ ಮೂಲಕ ನೀರು ಹರಿದು ನೆಲವು ನೆನೆದು ಅಚ್ಚುಕಟ್ಟು (ಸ್ಪಷ್ಟವಾಗಿ ಗುರುತಿಸಿದ ಗಡಿಗಳುಳ್ಳ ಕೃಷಿಯೋಗ್ಯ ಭೂಮಿ)ರೂಪುಗೊಳ್ಳುತ್ತಿತ್ತು. ನೀರಾವರಿಯಿಂದಾಗಿ ಉತ್ಪಾದನೆಯು ಅಂದರೆ ಫಸಲು ಅಧಿಕವಾಗುತ್ತಿತ್ತು. ಗುಂಡ್ಲುಪೇಟೆ, ಚಾಮರಾಜನಗರ, ಉಮ್ಮತ್ತೂರು, ಕೊಳ್ಳೇಗಾಲ, ಮತ್ತು ತೆರಕಣಾಂಬಿಗಳಲ್ಲಿ ಕಡಾರಂಬವು ಜಾರಿಯಲ್ಲಿದ್ದರೆ, ಮಳವಳ್ಳಿ, ತಿ. ನರಸೀಪುರ ಮತ್ತು ಯಳಂದೂರುಗಳಲ್ಲಿ ನೀರಾರಂಬವು ಪ್ರಚುರವಾಗಿದ್ದಿತು.

ವರ್ಷದಲ್ಲಿ ಎರಡು ಬೆಳೆ ತೆಗೆಯುತ್ತಿದ್ದರು. ಅವು ಕಾರ್ತೀಕ ಅಥವಾ ಹೈನುಬೆಳೆ ಮತ್ತು ವೈಶಾಖ ಅಥವಾ ಕಾರುಬೆಳೆ. ಹೈನುಬೆಳೆಗೆ ಆಧಾರ ಮೊದಮೊದಲ ಮಳೆಗಳು; ಕಾರುಬೆಳೆಗೆ ಅನಂತರದ ಮಳೆ ಆಧಾರವಾಗುತ್ತಿತ್ತು. ಮುಖ್ಯವಾದ ಬೆಳೆಗಳೆಂದರೆ ಆಹಾರ ಬೆಳೆಗಳು, ತೋಟದ ಬೆಳೆಗಳು, ಎಣ್ಣೆ ಬೀಜಗಳು,

ಹಣ್ಣು ಮತ್ತು ತರಕಾರಿಗಳು, ಸೊಪ್ಪುಗಳು, ವೀಳ್ಯದೆಲೆ, ಸಂಬಾರ ವಸ್ತುಗಳು, ತೆಂಗು, ಅಡಕೆ ಮತ್ತು ಹತ್ತಿ. ಬತ್ತದ ಬೆಳೆ ತೆಗೆಯುವಲ್ಲಿ ಮೂರು ವಿಧಾನಗಳನ್ನು ಅನುಸರಿಸಲಾಗುತ್ತಿತ್ತು. ಬರಭತ್ತ (ಒಣಗಿದ ಬತ್ತವನ್ನು ಬಿತ್ತುವುದು), ಮೊಳೆ ಭತ್ತ (ಮೊಳಕೆ ಬಂದ ಬತ್ತದ ಕಾಳುಗಳನ್ನು ಬಿತ್ತುವುದು), ಹಾಗೂ ನಾಟಿ (ಬತ್ತದ ಸಸಿಗಳನ್ನು ನೆಡುವುದು.[೨೪೧] ಈ ಪ್ರದೇಶದಲ್ಲಿ ಕಪ್ಪುಮಣ್ಣು ಬೆಳೆಗೆ, ವಿಶೇಷವಾಗಿ ಹತ್ತಿಬೆಳೆಗೆ ಬಹಳ ಮಟ್ಟಿಗೆ ಹೊಂದುತ್ತದೆ ಎಂದು ಶಾಸನಗಳೇ ಹೇಳುತ್ತವೆ.[೨೪೨] ಉಮ್ಮತ್ತೂರು ಅರಸರ ಕಾಲದಲ್ಲಿ ವಿವಿಧ ರೀತಿಯ ಭೂ ಒಡೆತನಗಳಿದ್ದುವು. ಬ್ರಹ್ಮದಾಯ, ದೇವದಾಯ ಮತ್ತು ಮಾತಾಪುರಗಳು ಸಾಮಾನ್ಯವಾಗಿದ್ದುವು.[೨೪೩] ಇವುಗಳ ಜೊತೆಗೆ, ಗುತ್ತಿಗ, ಗೇಣಿ, ವಾರ (ಮಾಲೀಕನಿಗೆ ಅರ್ಧಪಾಲು) ಮತ್ತು ಉಂಬಳಿ (ಬಾಡಿಗೆಯಿಲ್ಲದೆ ನೆಲವನ್ನು ಕೊಡುವುದು)ಗಳಿದ್ದುವು. ಬ್ರಹ್ಮದಾಯ (ಬ್ರಾಹ್ಮಣರಿಂದ ವರಮಾನ), ದೇವಾದಾಯ (ದೇವರಿಂದ ವರಮಾನ) ಮತ್ತು ಮಾತಾಪುರ ಭೂಮಿಯಿಂದ ವರಮಾನವನ್ನು ಸಾಮಾನ್ಯವಾಗಿ ಒಪ್ಪಿಕೊಂಡಿದ್ದರೂ, ಗುತ್ತಿಗೆ, ಗೇಣಿ, ವಾರಗಳ ಮೇಲೆ ತೆರಿಗೆಯನ್ನು ವಿಧಿಸಲಾಗುತ್ತಿತ್ತು. ಗುತ್ತಿಗೆಯಲ್ಲೇ ಪುರಗುತ್ತಿಗೆ[೨೪೪] ಶ್ರೋತ್ರಿ ಗುತ್ತಿಗೆ[೨೪೫] ಇತ್ಯಾದಿಗಳು ಪ್ರಚುರವಾಗಿದ್ದುವು. ಮೈಸೂರು ರಾಜ್ಯದಲ್ಲಿ ರೈತರಿಗೆ ಭೂ ಒಡೆತನವಿರಲಿಲ್ಲ ಎಂದು ಬುಕನನ್ ಹೇಳಿದ್ದಾನೆ.[೨೪೬] ತರ್ಕಯುತವಾಗಿ ಆಲೋಚಿಸಿದರೆ ರಾಜನೊಬ್ಬನೇ ಭೂಮಿಯ ಒಡೆಯನಾಗಿದ್ದನು. ಆದರೆ ಭೂಮಿಯು ಖಾಸಗಿ ಒಡೆತನದಲ್ಲಿದ್ದಿತು. ಶಾಸನಗಳು ಭೂಮಿಯ ದಾನವನ್ನು ಅಷ್ಟ-ಭೋಗ-ತೇಜ-ಸ್ವಾಮ್ಯ (ಎಂಟು ಬಗೆಯ ಅನುಭೋಗಗಳ ಹಕ್ಕು)ವನ್ನೂ, ಉಡುಗೊರೆ, ಮಾರಾಟ, ವಿನಿಮಯ ಮತ್ತು ಅಡಮಾನಗಳೆಂಬ ವ್ಯವಹಾರ ಚತುಷ್ಟಯ (ನಾಲ್ಕು ಬಗೆಯ ವ್ಯವಹಾರಗಳು)ಗಳನ್ನೂ ಹೇಳುತ್ತವೆ. ದಾನ ಮಾಡುವವನು ಮೊದಲು ಖಜಾನೆಗೆ ಹಣ ಕಟ್ಟಿ ತಾನು ಅದನ್ನು ಕೊಂಡುಕೊಳ್ಳುತ್ತಿದ್ದನು. ಆಮೇಲೆ ರಾಜನ ಅನುಮತಿಯನ್ನು ಪಡೆದು ಆ ಭೂಮಿಯನ್ನು ದಾನ ಮಾಡುತ್ತಿದ್ದನು.[೨೪೭] ರಾಜನೋ ಅವನ ಅಧಿಕಾರಿಯೋ ಇತರರಿಂದ ಭೂಮಿಯನ್ನು ಕೊಂಡು ಅದನ್ನು ತೆರಿಗೆರಹಿತವಾಗಿ ಬದಲಾಯಿಸಿ ದಾನ ಮಾಡುತ್ತಿದ್ದನು ಎಂದು ಶಾಸನವು ಹೇಳುತ್ತದೆ. ದೇವಣ್ಣ ಒಡೆಯನು ಸೋಮಹಳ್ಳಿ (ವೀರ ಪ್ರಥಮ ದೇವರಾಯನಪುರ, (ತೆರಕಣಾಂಬಿಪ್ರಾಂತ)ಯನ್ನು ತೆರಕಣಾಂಬಿ ಪ್ರದೇಶದಿಂದ ಕೊಂಡು, ಮೊದಲೇ ಹೇಳಿದಂತೆ ಬ್ರಾಹ್ಮಣ ಪಂಡಿತರಿಗೆ ಮತ್ತು ವೀರಶೈವ ಜಂಗಮರಿಗೆ ೧೪೭೮ರಲ್ಲಿ ದಾನಮಾಡಿದನು.[೨೪೮] ಎಂದು ಶಾಸನವು ಹೇಳುತ್ತದೆ.

ಭೂಕಂದಾಯ ಅಥವ ಸಿದ್ಧಾಯವು ರಾಜನ ವರಮಾನದ ಮುಖ್ಯ ಮೂಲವಾಗಿದ್ದಿತು. ಈ ಕಂದಾಯವನ್ನು ಆಹಾರ ಧಾನ್ಯದ ರೂಪದಲ್ಲೇ (ಧನ್ಯದಾಯ) ಇಲ್ಲವೆ, ನಗದು ಹಣದ ರೂಪದಲ್ಲೋ (ದಂತಗಳದಾಯ) ರಾಜನಿಗೆ ಸಲ್ಲಿಸಲಾಗುತ್ತಿತ್ತು.[೨೪೯] ಕೆಲವು ಸನ್ನಿವೇಶಗಳಲ್ಲಿ ಎರಡು ರೀತಿಯಲ್ಲೂ ಪಾವತಿ ಮಾಡಲಾಗುತ್ತಿತ್ತು. ನೆಲಗಂದಾಯವನ್ನು ನಿಗದಿಪಡಿಸುವಾಗ ಭೂಮಿಯ ಫಲವತ್ತು, ನೀರಾವರಿ ಸೌಲಭ್ಯಗಳು ಮತ್ತು ಬೆಳೆಗಳನ್ನು ಪರಿಗಣನೆಗೆ ತೆಗೆದುಕೊಳ್ಳಲಾಗುತ್ತಿತ್ತು. ಉತ್ಪನ್ನದ ಮೂರನೆ ಒಂದು ಪಾಲನ್ನು ಸಿದ್ಧಾಯವಾಗಿ ತೆಗೆದುಕೊಳ್ಳಲಾಗುತ್ತಿತ್ತು. ಕೆಲವು ಪರಿಸ್ಥಿತಿಗಳಲ್ಲಿ ಭೂಕಂದಾಯವು ಉತ್ಪನ್ನದ ಅರ್ಧವಾಗಿರುತ್ತಿದ್ದುದೂ ಉಂಟು. ತೆರಿಗೆ ವಸೂಲು ಮಾಡಲು ಸರ್ವಾಧಿಕಾರಿ ಮತ್ತು ಕರಣಿಕರಲ್ಲದೆ ಅಮಾತ್ಯ, ಅಮೀನ, ಶಿರಸ್ತೆದಾರ, ಗೌಡ ಮತ್ತಿತರ ಅಧಿಕಾರಿಗಳಿರುತ್ತಿದ್ದರು. ಈ ಅಧಿಕಾರಿಗಳ ಮುಖಾಂತರ ರೈತರು ಖಜಾನೆಗೆ ಕಂದಾಯವನ್ನು ಪಾವತಿ ಮಾಡುತ್ತಿದ್ದರು. ರೈತರ ಮೇಲೆ ತೆರಿಗೆಯ ಭಾರವನ್ನು ಕಡಮೆ ಮಾಡಲು ಕೆಲವೊಂದು ರಿಯಾಯಿತಿಗಳನ್ನು ನೀಡುವ ಪರಿಪಾಟವು ಮುಂದುವರಿದಿತ್ತು.[೨೫೦] ಭೂಕಂದಾಯವಲ್ಲದೆ ಇತರ ಕೆಲವು ತೆರಿಗೆಗಳನ್ನು ವಸೂಲು ಮಾಡಲಾಗುತ್ತಿತ್ತು. ಕರ, ಮನೆಸುಂಕ, ಸುವರ್ಣಾದಾಯ (ಚಿನ್ನದ ವರಮಾನ) ಮಗ್ಗದೆರೆ, ಎಲವರು, ಹೊರವರು, ಮೊಟ್ಟೆಸುಂಕ, ಬಿಸಲುಗಾಣ, ಉಭಯ ಮಾರ್ಗಸ್ಥಾನದ ಸುಂಕ, ಮಗ್ಗಮನೆ ಸುಂಕ (ನೇಯ್ಗೆಯವರ ಮನೆಯ ಮೇಲೆ ತೆರಿಗೆ), ಗಾಣಸುಂಕ, ಕಾವಲಿಸುಂಕ, ಮದುವೆ,

ವೊದುವಲು, ಸ್ಥಾವರ, ಸ್ಥಳಸುಂಕ, ಹತ್ತಿಯ ಸುಂಕ, ಕುಂಬಾರದೆರೆ ಇತ್ಯಾದಿ ತೆರಿಗೆಗಳನ್ನು ವಸೂಲು ಮಾಡಲಾಗುತ್ತಿದ್ದಿತು.[೨೫೨] ಹೀಗೆ ವಿವಿಧ ಮೂಲಗಳಿಂದ ಸಂಗ್ರಹವಾದ ವರಮಾನವನ್ನು ಉಮ್ಮತ್ತೂರಿನ ಅರಸರು ಸಾಮಾನ್ಯ ಆಡಳಿತಕ್ಕಾಗಿ, ಸೈನ್ಯವನ್ನು ಪಾಲಿಸುವುದಕ್ಕಾಗಿ ಅರಮನೆಯ ವೆಚ್ಚಗಳಿಗಾಗಿ, ಉಪಯೋಗಿಸುತ್ತಿದ್ದರು. ಜೊತೆಗೆ ಕಾಣಿಕೆಗಳು, ಉಡುಗೊರೆಗಳು, ಜನಕಲ್ಯಾಣದ ಇತರ ಕಾರ್ಯಕ್ರಮಗಳಿಗೆ ನೀಡಿಕೆ ಇವು ಇದ್ದೇ ಇರುತ್ತಿದ್ದುವು. ಅಗ್ರಹಾರಗಳನ್ನು ನಿರ್ಮಿಸಿ ಬ್ರಾಹ್ಮಣರಿಗೆ ದಾನ ಮಾಡುತ್ತಿದ್ದುದನ್ನೂ ದೇವಾಲಯ, ಮಠಗಳಿಗೂ ವೀರಶೈವ ಜಂಗಮರಿಗೂ ಕಾಣಿಕೆಗಳನ್ನು ಅರ್ಪಿಸುತ್ತಿದ್ದುದನ್ನೂ ಶಾಸನಗಳಿಂದ ತಿಳಿದುಕೊಳ್ಳಬಹುದು[೨೫೩] (ಈ ವಿವರಗಳನ್ನು ಮೇಲೆ ಕೊಟ್ಟಿದೆ).

ಈ ಅರಸರ ಕಾಲದಲ್ಲಿ ಕೃಷಿಯಂತೆಯೇ ಗೃಹಕೈಗಾರಿಕೆಯೂ ಒಂದು ಮುಖ್ಯ ಆರ್ಥಿಕ ಚಟುವಟಿಕೆಯಾಗಿತ್ತು. ಹತ್ತಿ ಬಟ್ಟೆ ತಯಾರಿಕೆಯು ಮೈಸೂರು ರಾಜ್ಯದ ಮುಖ್ಯ ಉದ್ಯಮವಾಗಿತ್ತು. ಬುಕನನ್ ಬರೆದ ವರದಿಯ ಪ್ರಕಾರ, ಇಲ್ಲಿಯ ಪ್ರತಿಯೊಂದು ಮನೆಯಲ್ಲೂ ಹತ್ತಿ ಬಟ್ಟೆಯು ತಯಾರಾಗುತ್ತಿದ್ದಿತು. ಹೆಂಗಸರು ಸದಾಕಾಲವೂ ನೂಲುವುದು, ನೇಯುವುದು ಇವೇ ಮೊದಲಾದ ಕೆಲಸಗಳಲ್ಲಿ ತೊಡಗಿರುತ್ತಿದ್ದರು.[೨೫೪] ಉಮ್ಮತ್ತೂರು ಅರಸರ ಶಾಸನಗಳಲ್ಲಿ ಹತ್ತಿ ಮತ್ತು ಕೈಮಗ್ಗಗಳ ಉಲ್ಲೇಖಗಳಿವೆ.[೨೫೫] ಹತ್ತಿಬಟ್ಟೆಯ ತಯಾರಿಕೆಯು ಆರ್ಥಿಕ ಸ್ವಾವಲಂಬನೆಗೆ ಸಹಾಯಕವಾಗಿತ್ತು. ಕೈಗಾರಿಕೆಯ ಇತರ ಬಗೆಗಳೆಂದರೆ ಉಪ್ಪು, ಕಬ್ಬಿನಿಂದ ಸಕ್ಕರೆ ಮತ್ತು ಬೆಲ್ಲಗಳ ತಯಾರಿಕೆ, ಎಣ್ಣೆಯನ್ನು ತೆಗೆಯುವಿಕೆ, ಕಲ್ಲು ಗಣಿಗಾರಿಕೆ, ಸುಣ್ಣವನ್ನು ಸುಡುವುದು, ಚಿನ್ನಬೆಳ್ಳಿಕೆಲಸ, ಕಸೂತಿ ಕಲೆ, ಕಬ್ಬಿಣದಿಂದ ಆಯುಧಗಳನ್ನು ಇತರ ಉಪಕರಣಗಳನ್ನು ತಯಾರಿಸುವುದು, ಕಮ್ಮಾರಿಕೆ, ಮರಗೆಲಸ, ಕುಂಬಾರಿಕೆ, ಬುಟ್ಟಿಗಳನ್ನು ಹೆಣೆಯುವುದು, ಹಗ್ಗವನ್ನು ಹೊಸೆಯುವುದು ಇತ್ಯಾದಿ. ಕೈಗಾರಿಕೆಗಳು, ಪಶುಸಂಗೋಪನೆ, ಗಣಿಗಾರಿಕೆ ಮತ್ತು ಹತ್ತಿಬಟ್ಟೆ ಉದ್ಯಮ ಇವು ರಾಜ್ಯದ ಹಣಕಾಸು ಸ್ಥಿತಿಯನ್ನೂ ಸ್ವಾವಲಂಬನೆಯನ್ನೂ ಉತ್ತಮ ಪಡಿಸಿದ್ದುವು. ವಿವಿಧ ಕೈಗಾರಿಕೆಗಳ ಮೇಲೆ ಮತ್ತು ಕೈಗಾರಿಕೋತ್ಪನ್ನಗಳ ಮೇಲೆ ತೆರಿಗೆ ಹಾಗೂ ಸುಂಕಗಳನ್ನು ವಸೂಲು ಮಾಡುತ್ತಿದ್ದುದರಿಂದ ಭಂಡಾರಕ್ಕೆ ಬರುವ ವರಮಾನವು ಹೆಚ್ಚಿ ರಾಜ್ಯದ ಆರ್ಥಿಕ ಪ್ರಗತಿಗೆ ಸನ್ನಿವೇಶವು ತುಂಬ ಹಿತಕರವಾಗಿತ್ತು. ರಾಜ್ಯದ ಒಳಗಿನ ಹಾಗೂ ಹೊರಗಿನ ವ್ಯಾಪಾರವು ವಿಶೇಷವಾಗಿ ಕೃಷಿ ಉತ್ಪನ್ನಗಳಿಗೆ ಸಂಬಂಧಿಸಿದ್ದರೂ ಕೈಗಾರಿಕೋತ್ಪನ್ನಗಳೂ ವ್ಯಾಪಾರ ವಸ್ತುಗಳಾಗಿದ್ದುವು. ದೇಶದೊಳಗಿನ ವ್ಯಾಪಾರದಲ್ಲಿ ಸಂತೆ (ಸಾಪ್ತಾಹಿಕ ಮಾರುಕಟ್ಟೆ) ಬಹಳ ಮುಖ್ಯವಾದ ಪಾತ್ರವನ್ನು ವಹಿಸುತ್ತಿದ್ದಿತು. ಹಳ್ಳಿಗಳಲ್ಲಿ ಸಂತೆ, ನಗರಗಳಲ್ಲಿ ಬಜಾರುಗಳು/ಮಾರ್ಕೆಟ್ಟುಗಳು ವ್ಯಾಪಾರ ಕೇಂದ್ರಗಳಾಗಿದ್ದುವು. ರೈತರು ಮತ್ತು ವ್ಯಾಪಾರಸ್ಥರು ಈ ಸಂತೆಗಳಲ್ಲಿ ಭಾಗವಹಿಸುತ್ತಿದ್ದರು. ಅರಸರು, ಅಧಿಕಾರಿಗಳು ಮತ್ತು ನಗರದ ಸ್ವಾಮಿಗಳು (ಪಟ್ಟಣಸ್ವಾಮಿ) ಹೊಸ ಸಂತೆಗಳನ್ನು ನಗರಗಳಲ್ಲಿ ಪೇಟೆಗಳನ್ನು ಸ್ಥಾಪಿಸುವುದರಲ್ಲಿಯೂ ಹಳೆಯವನ್ನು ಮತ್ತೆ ಹೊಸದುಗೊಳಿಸುವುದರಲ್ಲಿಯೂ ಆಸಕ್ತರಾಗಿದ್ದರು. ಈ ಉದ್ದೇಶಕ್ಕಾಗಿಯೇ ಅವರು ನೆಲವನ್ನು ಧನವನ್ನು ದಾನ ಮಾಡುತ್ತಿದ್ದರು.[೨೫೬]

ದೇವಾಂಗಶೆಟ್ಟಿಗಳು, ಬಣಜಿಗರು ಮತ್ತು ತೆಲುಗು ಶೆಟ್ಟಿಗಳು ರಾಜ್ಯದೊಳಗಿನ ವ್ಯಾಪಾರದಲ್ಲಿ ನಿರತರಾಗಿದ್ದರು. ಬತ್ತ, ರಾಗಿ, ಜೋಳ, ಹೊಗೆಸೊಪ್ಪು ಹತ್ತಿಬಟ್ಟೆ, ಬೆಲ್ಲ, ಸಕ್ಕರೆ, ನೂಲು, ಉಪ್ಪು, ಉದ್ದು, ವೀಳ್ಯದೆಲೆ, ಅಡಕೆ ಮತ್ತು ಸಂಬಾರ ಜೀನಸುಗಳು ವ್ಯಾಪಾರದ ವಸ್ತುಗಳಾಗಿದ್ದುವು. ವ್ಯಾಪಾರ ದೃಷ್ಟಿಯಿಂದ ಉಮ್ಮತ್ತೂರು, ಯಳಂದೂರು, ತೆರಕಣಾಂಬಿ, ಗುಂಡ್ಲುಪೇಟೆ, ಚಾಮರಾಜನಗರ, ಕಳಲೆ, ತಿ.ನರಸೀಪುರ, ನಂಜನಗೂಡು, ಶ್ರೀರಂಗಪಟ್ಟಣ, ತಲಕಾಡು ಮತ್ತಿತರ ಸ್ಥಳಗಳು ಪರಸ್ಪರ ಸಂಪರ್ಕವನ್ನು ಹೊಂದಿದ್ದುವು. ಸಂತೆಗೆ ಮತ್ತು ಮಾರ್ಕೆಟ್ಟಿಗೆ ಸರಕುಗಳನ್ನು ತಲೆ ಹೊರೆಯಾಗಿಯೋ ಕಾವಡಿಯಲ್ಲೋ ಒಯ್ಯುತ್ತಿದ್ದರು. ಆನೆ, ಎತ್ತು, ಎಮ್ಮೆ, ಕುದುರೆಗಳ ಮೇಲೆ ಹೊರಿಸಿ ಅಥವಾ ಗಾಡಿಗಳಲ್ಲಿ ತುಂಬಿ (ಗುಬ್ಬಿಗಾಡಿ) ಸಾಗಿಸುತ್ತಿದ್ದರು.

ಎರಡೂ ಕಡೆಗಳಲ್ಲಿ ತೆರಿಗೆ ಸಂಗ್ರಹಿಸುವ ಸ್ಥಳಗಳಿರುತ್ತಿದ್ದುವು. ಮಾರಾಟವಾಗುವ ವಸ್ತುಗಳ ಮೇಲೆ ತೆರಿಗೆಯನ್ನು ವಿಧಿಸಿ ಅಲ್ಲಿ ವಸೂಲು ಮಾಡುತ್ತಿದ್ದರು. ಕಾರ್ಯಕರ್ತ ಎಂಬ ಪದನಾಮವಿದ್ದ ಅಧಿಕಾರಿಯು ತೆರಿಗೆಯ ಸಂಗ್ರಹದ ಮೇಲೆ ಹಾಗೂ ಮಾರುಕಟ್ಟೆಯ ಮೇಲೆ ಉಸ್ತುವಾರಿ ನೋಡಿಕೊಳ್ಳುತ್ತಿದ್ದನು. ಹತ್ತಿ, ಹತ್ತಿ ನೂಲು, ಅಡಿಕೆ, ತಂಬಾಕು, ಗಂಧದ ಮರದ ತುಂಡುಗಳು, ಅರಗು, ಜೀರಿಗೆ, ತುಪ್ಪ, ಅಕ್ಕಿ, ಅರಿಶಿನ, ಮೆಣಸು, ಶುಂಠಿ ಮೊದಲಾದವುಗಳಿಗೆ ಒಂದು ಹೇರಿಗೆ (ಬಂಡಿ ಭರ್ತಿ) ಒಂದು ಕಂಠೀರಾಯವರಹ, ಒಂದು ಹಣ, ಮತ್ತು ಒಂದು ಚಿನ್ನದ ಬೇಳೆ-ಈ ದರದಲ್ಲಿ ತೆರಿಗೆ ವಿಧಿಸಲಾಗುತ್ತಿತ್ತು. ವೀಳ್ಯದೆಲೆ, ಬೆಲ್ಲ, ಉಪ್ಪು ಮತ್ತು ಉದ್ದುಗಳಿಗೆ ಒಂದು ಹೇರುವಿಗೆ ಒಂದು ಕಂಠೀರಾಯ ಹಣವನ್ನು ವಿಧಿಸಲಾಗುತ್ತಿತ್ತು.[illegible] ಹೀಗೆ ಮರಾಟತೆರಿಗೆಯನ್ನು (ಮಾಗಮ) ಉಭಯ ಮಾರ್ಗದಾಯ, ಹೊರದಾಯ, ಚರದಾಯಗಳ ರೂಪದಲ್ಲಿ ವಿಧಿಸುತ್ತಿದ್ದುದರಿಂದ ರಾಜ್ಯದ ಬೊಕ್ಕಸವು ವೃದ್ಧಿಯಾಗುತ್ತಿತ್ತು. ಉಮ್ಮತ್ತೂರು ಅರಸರ ಆಳಿಕೆಯಲ್ಲಿ ಆರ್ಥಿಕ ಚಟುವಟಿಕೆಗಳು ಅವಿಚ್ಛಿನ್ನವಾಗಿ ನಡೆಯುತ್ತಿದ್ದುವು. ಕೃಷಿ, ಕೈಗಾರಿಕೆ, ವ್ಯಾಪಾರವಹಿವಾಟು ಇವು ರಾಜ್ಯದ ಆರ್ಥಿಕ ಪ್ರಗತಿಗೂ, ಸ್ವಾವಲಂಬನೆಗೂ ಪೋಷಕವಾಗಿದ್ದುವು, ಸಂಸ್ಕೃತಿಯ ಉಳಿವು ಮತ್ತು ಬೆಳವಣಿಗೆಗಳಿಗೂ ಇವು ಪೂರಕವಾಗಿದ್ದುವೆಂದು ಹೇಳಬಹುದು.

ಕಲೆ ಮತ್ತು ವಾಸ್ತುಶಿಲ್ಪ

ಉಮ್ಮತ್ತೂರು ಅರಸರ ಶಾಸನಗಳಲ್ಲಿ ಕಲೆ ಮತ್ತು ವಾಸ್ತುಶಿಲ್ಪವನ್ನು ಕುರಿತು ದೊರಕುವ ಮಾಹಿತಿ ತುಂಬಾ ಕಡಮೆ. ಆದರೂ ವಾಸ್ತುಶಿಲ್ಪಕ್ಕೆ ಸ್ವಲ್ಪಮಟ್ಟಿನ ಪ್ರೋತ್ಸಾಹವನ್ನು ಈ ಅರಸರು ನೀಡಿದ್ದರು ಎಂದು ಗೊತ್ತಾಗುತ್ತದೆ. ಈ ಅರಸರು ನಿರ್ಮಿಸಿದ ಕಟ್ಟಡದ ಸ್ಮಾರಕಗಳನ್ನು ಉಮ್ಮತ್ತೂರು ಮತ್ತು ಅದರ ಆಸುಪಾಸಿನಲ್ಲಿ ನೋಡಬಹುದು. ಉಮ್ಮತ್ತೂರಿನಲ್ಲಿ ಕಟ್ಟಿಸಲಾಗಿರುವ ದೇವಾಲಯಗಳು ಕಲೆಯ ದೃಷ್ಟಿಯಿಂದ ರಾಜನ ಸ್ಥಾನಮಾನದೊಂದಿಗೆ ಸಮತೋಲನದಲ್ಲಿಲ್ಲವಾದರೂ ಐತಿಹಾಸಿಕ ಪ್ರಾಮುಖ್ಯವನ್ನು ಹೊಂದಿವೆ. ಹಲವು ದೇವಾಲಯಗಳು, ಮಠಗಳು, 'ವೀರರಗುಡಿ'ಗಳು, ವೀರಗಲ್ಲುಗಳು ಮತ್ತು ಬಸದಿಗಳು ಇಲ್ಲಿ ಕಂಡು ಬರುತ್ತವೆ. ಉಮ್ಮತ್ತೂರು ಅರಸರ ಕಾಲದಲ್ಲಿ ನಿರ್ಮಿತವಾದ ದೇವಾಲಯಗಳಲ್ಲಿ ಮುಖ್ಯವಾದವು ರಂಗನಾಥ ಮತ್ತು ಭುಜಂಗೇಶ್ವರ ಆಲಯಗಳು. ಈ ದೊಡ್ಡ ದೇವಾಲಯಗಳನ್ನು ದ್ರಾವಿಡ ಶೈಲಿಯಲ್ಲಿ ನಿರ್ಮಿಸಲಾಗಿದೆ. ಈ ದೇವಾಲಯಗಳೆದುರಿಗೆ ಎತ್ತರವಾದ, ಬೃಹದ್ಗಾತ್ರದ ಗರುಡಗಂಬಗಳು ಇವೆ. ಭಕ್ತ ವಿಗ್ರಹ (ಭಕ್ತನೊಬ್ಬನ ಮೂರ್ತಿ), ಹನುಮಂತ, ಗರುಡ ಮತ್ತು ಪರವಾಸುದೇವ ಮೂರ್ತಿಗಳು ರಂಗನಾಥ ದೇವಾಲಯದ ಗರುಡಗಂಬದ ಕೆಳಭಾಗದ ನಾಲ್ಕು ಪಕ್ಕಗಳಲ್ಲಿವೆ. ಈ ಭಕ್ತ ವಿಗ್ರಹವು ಉಮ್ಮತ್ತೂರಿನ ರಾಜರಲ್ಲಿ ಒಬ್ಬನದಾಗಿರಬಹುದು. ಇದೇ ಬಗೆಯ ಇನ್ನೊಂದು ಭಕ್ತ ವಿಗ್ರಹವನ್ನು ಭುಜಂಗೇಶ್ವರ ದೇವಾಲಯದಲ್ಲೂ ನೋಡಬಹುದು. ಈ ದೇವಾಲಯದಲ್ಲಿರುವ ಪಂಚಲಿಂಗಗಳಲ್ಲೊಂದರ ನೆತ್ತಿಯ ಮೇಲೆ ಜಟೆಯಿದೆ. ಜಟೆಯಲ್ಲಿ ನಾಲ್ಕು ಭುಜಗಳ ದೇವಿ ಗಂಗೆಯಿದ್ದಾಳೆ. ಇದೊಂದು ಬಹು ಅಪರೂಪದ ವಿಗ್ರಹ. ಈ ದೇವಾಲಯದ ಗರುಡಗಂಬದ ಚೌಕಾಕಾರದ ಕೆಳಭಾಗದಲ್ಲಿ ಒಂದು ಮೂಲೆಯ ಮೇಲುಗಡೆ ತೆರೆದಬಾಯಿ, ಮುಂದೆ ಚಾಚಿದ ಹಲ್ಲು, ಉಬ್ಬಿದ ಕಣ್ಣು, ಕೆದರಿದ ತಲೆಗೂದಲು, ಬಾರೀ ದೇಹ ಇರುವ ಒಂದು ವಿಗ್ರಹವಿದೆ. ಇದನ್ನು ಬೇತಾಳ ಎಂದು ಹೇಳುತ್ತಾರೆ. ಆ ಸ್ಥಳದ ಅರಸನು ಭುಜಂಗೇಶ್ವರ ದೇವಾಲಯವನ್ನು ನಿರ್ಮಿಸಿದ ಮೇಲೆ ಬಿಡುಗಡೆ ಹೊಂದಿದನು. ಅದರ ಸಂಕೇತವಾಗಿ ಅವನು ಆ ವಿಗ್ರಹವನ್ನು ಅಲ್ಲಿ ಇರಿಸಿದನು ಎಂದು ಹೇಳುತ್ತಾರೆ. ರಂಗನಾಥನದು ವೈಷ್ಣವ ಆಲಯ, ಭುಜಂಗೇಶ್ವರನದು ಶೈವ ಆಲಯ; ಆದರೆ ಎರಡೂ ದೇವಾಲಯಗಳಲ್ಲಿ ಶೈವ ವೈಷ್ಣವ ವಿಗ್ರಹಗಳೆರಡೂ ಕಂಡುಬರುತ್ತಿರುವುದೀಗ ಕುತೂಹಲಕಾರಿಯಾದ ಸಂಗತಿಯಾಗಿದೆ. ಇದು ಉಮ್ಮತ್ತೂರು ರಾಜರ ಧರ್ಮ ಸಹಿಷ್ಣುತೆಗೆ ಸಾಕ್ಷಿ. ಇವಲ್ಲದೆ ಇಲ್ಲಿ ಸಪ್ತಮಾತೃಕಾ ಹಾಗೂ ವೀರಭದ್ರೇಶ್ವರ ದೇವಾಲಯಗಳೂ ಇವೆ.

ಹಲವು ವೀರಶೈವ ಮಠಗಳನ್ನು ಕಟ್ಟಿಸಲಾಗಿದೆ. ಉಮ್ಮತ್ತೂರು ಉಪ್ಪರಿಗೆ ಮಠ (ಇದಕ್ಕೆ ಉಪ್ಪರಿಗೆ ಸಿಂಹಾಸನ ಮಠ ಎಂದೂ ಹೆಸರು) ಅವುಗಳಲ್ಲಿ ಒಂದು. ಹಾಗೆಯೇ ೧೩ನೆಯ ಶತಮಾನದ ವರ್ಧಮಾನ ಬಸದಿಯೂ ದ್ರಾವಿಡ ಶೈಲಿಯಲ್ಲಿ ನಿರ್ಮಿತವಾದದ್ದು.[೫೮] ಹೊಸದಾಗಿ ದೊಡ್ಡ, ಸಣ್ಣ ದೇವಾಲಯಗಳನ್ನು ಮಠಗಳನ್ನು ನಿರ್ಮಿಸಿರುವುದರ ಜೊತೆಗೆ ಉಮ್ಮತ್ತೂರಿನ ಅರಸರು ಹಳೆಯ, ಶಿಥಿಲವಾದ ದೇವಾಲಯಗಳನ್ನು ಜೀರ್ಣೋದ್ಧಾರ ಮಾಡಿಸಿದರು. ಉದಾಹರಣೆಗೆ, ಕ್ರಿ.ಶ. ೧೫೭೨ರ ಒಂದು ಶಾಸನದ ಪ್ರಕಾರ ಒಂದು ದೇವಾಲಯದ ಗರ್ಭಗುಡಿ, ಸುಕನಾಸಿ (ವಿಗ್ರಹವಿರುವ ಗರ್ಭಗುಡಿಯ ಮುಂದಿರುವ ಸಣ್ಣ ಕೊಠಡಿ) ಮತ್ತು ಇತರ ಭಾಗಗಳನ್ನು ದುರಸ್ತಿಗೊಳಿಸಲಾಯಿತು. ದುರದೃಷ್ಟವಶಾತ್, ಈ ದೇವಾಲಯದ ಹೆಸರು ನಷ್ಟವಾಗಿದೆ.[೫೯] ಉಮ್ಮತ್ತೂರು ದೊರೆಗಳು ಕಟ್ಟಿಸಿದ ಕೋಟೆಯ ಅವಶೇಷಗಳನ್ನು ಈಗಲೂ ನೋಡಬಹುದು. ಇಲ್ಲಿಯ ನೈಋತ್ಯಕ್ಕೆ ಅರಸರು ಕಟ್ಟಿಸಿದ್ದ ಅರಮನೆ ಈಗ ಇಲ್ಲ. ಹೀಗೆ ಈ ಕಟ್ಟಡಗಳು ಈ ಸಣ್ಣ ಪಾಳೆಯಪಟ್ಟಿನ(ಒಬ್ಬ ಪಾಳೆಯಗಾರನ ವಶದಲ್ಲಿರುವ ಒಂದು ಜಿಲ್ಲೆ) ಜನರ ಜೀವನದಲ್ಲಿ ಹೇಗೆ ವೈವಿಧ್ಯವು ಕಂಡುಬರುತ್ತಿದ್ದಿತು ಎನ್ನುವುದನ್ನು ಸೂಚಿಸುತ್ತವೆ.

ಹೀಗೆ ಉಮ್ಮತ್ತೂರಿನ ಕಟ್ಟಡಗಳನ್ನು ನೋಡಿದಾಗ, ಜನರ ಜೀವನ, ಧರ್ಮ, ಕಲೆ ಮೊದಲಾದವುಗಳ ಬಗೆಗೆ ಹಲವು ಅಂಶಗಳು ಹೊರಪಡುತ್ತವೆ. ಉಮ್ಮತ್ತೂರು ಅರಸರ ಕಾಲದ ಕಟ್ಟಡಗಳು ಅತ್ಯುತ್ಕೃಷ್ಟವಾದವೆಂದು ಹೇಳಲಾಗದಿದ್ದರೂ ಅವು ಸಾಂಸ್ಕೃತಿಕವಾಗಿ ಮಹತ್ವಪೂರ್ಣವಾಗಿವೆ. ವೈಷ್ಣವಧರ್ಮ, ಶೈವಧರ್ಮ, ವೀರಶೈವಧರ್ಮ ಮತ್ತು ಶಾಕ್ತ ಧರ್ಮಗಳು ಇಲ್ಲಿ ಸಮರಸವಾಗಿ ಬೆರೆತುಕೊಂಡಿದ್ದುವು, ಅರಸರ ಉದಾರ ಮನೋಧರ್ಮಕ್ಕೆ ಇದೇ ಸಾಕ್ಷಿ. ಪರಾಕ್ರಮ ಸಾಹಸಗಳನ್ನು ವೀರಗಲ್ಲುಗಳು ತೋರ್ಪಡಿಸಿದರೆ, ಮಾಸ್ತಿಕಲ್ಲು ಆ ದಿನಗಳ ಜನಪ್ರಿಯ ಮನೆತನಗಳು ನಡೆಸುತ್ತಿದ್ದ ಸಮಗ್ರ ಜೀವನದ ಮತ್ತು ಗೌರವಗಳನ್ನು ಸೂಚಿಸುತ್ತವೆ. ದೇವಾಲಯಗಳಲ್ಲೂ ಇತರ ಪೂಜಾ ಸ್ಥಳಗಳಲ್ಲೂ ನಾವು ನೋಡುವ ವಿಗ್ರಹಗಳು ಆಗ ಪ್ರಚಲಿತವಾಗಿದ್ದ ಉಡುಗೆಯನ್ನೂ ಆಭರಣಗಳನ್ನೂ ತೋರಿಸುತ್ತವೆ. ಇವೆಲ್ಲ ಉಮ್ಮತ್ತೂರು ಅರಸರ ಕಾಲದ ಸಂಸ್ಕೃತಿಯ ಪ್ರತಿಕೃತಿಗಳಾಗಿವೆ. ಕೊನೆಯದಾಗಿ ಉಮ್ಮತ್ತೂರಿನ ಸ್ಮಾರಕಗಳು ಶಿಥಿಲವಾಗಿ ಹೋಗಿದ್ದರೂ, ಅವು ತಮ್ಮ ವಿಶಿಷ್ಟ ಸೌಂದರ್ಯ ಎಂಥದಿದ್ದಿತೆಂಬುದನ್ನು ಸೂಚಿಸುತ್ತಲಿವೆ.

ಉಮ್ಮತ್ತೂರು ಅರಸರ ಇತಿಹಾಸವನ್ನು ಒಟ್ಟಾಗಿ ಅಧ್ಯಯನ ಮಾಡಿ ಈ ಕೆಲವು ಅಂಶಗಳನ್ನು ತಿಳಿದುಕೊಳ್ಳಬಹುದಾಗಿದೆ:

೧ ವಿಜಯನಗರದಂತಹ ಸಂಸ್ಕೃತಿ-ಒಲವಿದ್ದ ಸಾಮ್ರಾಜ್ಯವನ್ನು ಪ್ರಾದೇಶಿಕ ನೆಲೆಯಲ್ಲಿ ಬಲಪಡಿಸಿದ ಹಲವು ಪಾಳೆಯಗಾರ ವಂಶಗಳಲ್ಲಿ ಉಮ್ಮತ್ತೂರು ವಂಶವೂ ಒಂದು. ಅವರು ಬಯಲು ಪ್ರದೇಶದಲ್ಲಿ ಉದಿಸಿದರು.

೨ ಪ್ರಬಲ ವಿಜಯನಗರದಂತಹ ಸಾಮ್ರಾಜ್ಯದ ಚಕ್ರವರ್ತಿಗಳ ಸಾಂಸ್ಕೃತಿಕ ಪರಂಪರೆಯನ್ನು ಬಲಗೊಳಿಸುವಲ್ಲಿ, ಹಾಗೂ ಆ ಪರಂಪರೆಯನ್ನು ವ್ಯವಸ್ಥಿತ ರೀತಿಯಲ್ಲಿ ಬೆಳೆಸುವುದರಲ್ಲಿ ಉಮ್ಮತ್ತೂರು ಅರಸರು ಬಹು ಮುಖ್ಯವಾದ ಪಾತ್ರವನ್ನು ನಿರ್ವಹಿಸಿ, ಬಯಲುನಾಡಿನ ಸಂಸ್ಕೃತಿ ಪರಂಪರೆಯ ಪೋಷಕರೆಂಬ ಕೀರ್ತಿಗೆ ಪಾತ್ರರಾದರು. ರಾಜಕೀಯ, ಸಂಸ್ಕೃತಿ, ಆರ್ಥಿಕತೆ ಹಾಗೂ ಸಮಾಜ-ಧಾರ್ಮಿಕ ನೆಲೆಗಟ್ಟುಗಳಲ್ಲಿ ಪ್ರಾದೇಶಿಕವಾಗಿ ಜನಬೆಂಬಲವನ್ನು ಪಡೆದು ರಾಜ್ಯವನ್ನು ಕಟ್ಟಿದ ಕೀರ್ತಿ ಈ ಅರಸರಿಗೆ ಸಲ್ಲುತ್ತದೆ.

೩ ಪ್ರಾರಂಭಿಕ ಹಂತದಲ್ಲಿ ವೈದಿಕ ಹಾಗೂ ಜೈನ ಪರಂಪರೆಗಳನ್ನು ಪೋಷಿಸುತ್ತಾ ಅವರು ಹಲವು

ದೇವಾಲಯಗಳನ್ನೂ ಬಸದಿಗಳನ್ನೂ ಕಟ್ಟಿಸಿದರು. ಅವರ ಶೈಲಿ ಪ್ರಾದೇಶಿಕ ಮತ್ತು ಪ್ರಾಂತೀಯವಾಗಿತ್ತು. ವೀರಶೈವಧರ್ಮದ ಅನುಯಾಯಿಗಳಾಗಿ ಅವರ ಆಡಳಿತಾವಧಿಯ ಸುಮಾರು ಮಧ್ಯಭಾಗದಲ್ಲಿ ಮಠಗಳಿಗೂ, ಆ ಧರ್ಮವನ್ನು ಅನುಸರಿಸುವ ಜನರಿಗೂ ಹೆಚ್ಚಿನ ಪೋಷಣೆ ನೀಡಿ ಸುತ್ತಮುತ್ತ 'ಜಂಗಮ ಪರಂಪರೆಯ ಪ್ರಸಾರಕ್ಕೆ ನೆರವಾದರು. ಆಗಲೂ ಇತರ ಧರ್ಮಗಳನ್ನು ಕುರಿತ ಸಹಿಷ್ಣುತೆಯು ಅವರಲ್ಲಿ ಸಹಜವಾಗೇ ರಕ್ತಗತವಾಗಿತ್ತು.

೪. ಇದರಿಂದಾಗಿ ಸಮಕಾಲೀನ ರಾಜವಂಶಗಳಾದ ಮೈಸೂರಿನ ಒಡೆಯರು ಮತ್ತು ಕಳಲೆ ಅರಸರುಗಳೊಂದಿಗೆ ಆಗಾಗ ಘರ್ಷಣೆಗಳಾಗುತ್ತಿದ್ದುದುಂಟು. ಇದರಿಂದಾಗಿ, ಅವರು ಮೈಸೂರಿನ ಒಡೆಯರೊಂದಿಗೆ ಹಾಗೂ ಕಳಲೆಯ ದಳವಾಯಿಗಳೊಂದಿಗೆ ರಾಜಕೀಯ ಮತ್ತು ರಕ್ತ ಸಂಬಂಧವನ್ನು ಬೆಳೆಸಿಕೊಂಡರು. ಮೈಸೂರು ಒಡೆಯರು ಬಲವಾದ ರಾಜ್ಯವನ್ನು ಕಟ್ಟಲು ನೆರವಾದರು. ಅದೇ ಸಮಯಕ್ಕೆ ಹದಿನಾಡು, ಮೂಗೂರು, ವಳಲು, ಮಾಲಂಗಿನಾಡು, ಹೊಂಗಲವಾಡಿ ನಾಡು ಮತ್ತು ಇತರ ಹಲವು ಪ್ರಾಂತೀಯ ಪಾಳೆಯಗಾರರೊಂದಿಗೆ ಮೈತ್ರಿಯುತ ನಿಕಟ ಸಂಬಂಧವನ್ನಿರಿಸಿಕೊಂಡಿದ್ದರು.

೫. ಕೆರೆಗಳು, ಕೋಟೆಗಳು, ಬಸದಿಗಳು, ದೇವಾಲಯಗಳು, ವಿಗ್ರಹಗಳು, ಶಾಸನಗಳು, ಸಾಹಿತ್ಯ, ಕಲೆ, ಜಾನಪದ ಮತ್ತಿತರ ಕ್ಷೇತ್ರಗಳಲ್ಲಿ ಹೆಸರನ್ನು ಉಳಿಸಿದ ಉಮ್ಮತ್ತೂರು ಅರಸರು ಸಾಂಸ್ಕೃತಿಕ ಇತಿಹಾಸದಲ್ಲಿ ಅಮರವಾದ ಸ್ಥಾನವನ್ನು ಪಡೆದಿದ್ದಾರೆ. ಕರ್ನಾಟಕದ ಇತಿಹಾಸ ಮತ್ತು ಸಂಸ್ಕೃತಿಯ ಸರ್ವತೋಮುಖ ಬೆಳವಣಿಗೆಗೆ ತಮ್ಮ ಅನನ್ಯವಾದ ಕೊಡುಗೆಯನ್ನು ನೀಡಿದ್ದಾರೆ.

–ಡಾ. ನಿರ್ಮಲರಾಜ್

ಕಳಲೆ ಮನೆತನದ ದಳವಾಯಿಗಳು

ಮೈಸೂರಿನ ಒಡೆಯರ ಇತಿಹಾಸದಲ್ಲಿ ೧೭೦೪ರಿಂದ ೧೭೬೧ರ ನಡುವಣ ಅವಧಿಯನ್ನು ದಳವಾಯಿ ಆಳಿಕೆಯ ಕಾಲವೆಂದು ಪರಿಗಣಿಸಲಾಗುತ್ತದೆ. ದಳವಾಯಿ ಹುದ್ದೆಯನ್ನು ಮೈಸೂರಿನ ರಾಜಒಡೆಯರು ಕ್ರಿ.ಶ. ೧೬೧೪ರಲ್ಲ ಸೃಷ್ಟಿಸಿದರು.[೨೬೦] ಅವರ ಆಡಳಿತಾವಧಿಯಲ್ಲಿ ರಾಜ್ಯವು ವಿಸ್ತಾರಗೊಂಡಿತು. ಮಾರನಾಯಕನ ಕಾಲದಿಂದಲೂ[೨೬೧] ತಪ್ಪಿಸಿದ್ದ ದಳವಾಯಿ ಹುದ್ದೆಯ ಅಗತ್ಯ ರಾಜ್ಯಕ್ಕೆ ಇದೆ ಎಂದು ಅವರು ಮನಗಂಡರು. ತಮ್ಮ ಸಚಿವರೊಂದಿಗೆ ಚರ್ಚಿಸಿ ದಳವಾಯಿ ಅಥವಾ ಸೇನಾಧಿಕಾರಿಯನ್ನು ನೇಮಕಮಾಡಲು ರಾಜಒಡೆಯರು ನಿರ್ಧರಿಸಿದರು. ಅಕ್ಷರಶಃ ಆ ಪದಕ್ಕೆ ಅರ್ಥ ಸೈನ್ಯದ ಮುಖವಾಣಿ (ದಳವಾಯಿ ಅಥವಾ ಬಾಯಿ) ಎಂದು. ದಂಡನಾಯಕನ ಶ್ರೇಣಿಗೆ ಸಮಾನವಾದ ಹುದ್ದೆಯಾಗಿತ್ತು ಅದು.[೨೬೨] ರಾಜಒಡೆಯರು ತಮ್ಮ ಸೋದರಳಿಯ ಕಳಲೆ ಮನೆತನದ ಕರಿಕಾಲ ಕಲ್ಲರಾಜನನ್ನು ಮೊದಲನೆಯ ದಳವಾಯಿಯನ್ನಾಗಿ ನೇಮಿಸಲು ನಿರ್ಧರಿಸಿದರು. ಕ್ರಿ.ಶ. ೧೬೧೪ರಲ್ಲಿ ರಾಜಒಡೆಯರೂ ಕಳಲೆ ವಂಶದ ಕರಿಕಾಲಮಲ್ಲ ರಾಜನೂ ಒಂದು ಒಪ್ಪಂದ ಮಾಡಿಕೊಂಡರು. ಅದರ ಪ್ರಕಾರ ಎರಡೂ ರಾಜ್ಯಗಳು ಒಂದುಗೂಡಿದುವು. ಕಳಲೆ ಮನೆತನವು ಆನುವಂಶೀಯವಾಗಿ ದಳವಾಯಿ ಅಥವಾ ಸೇನಾ ದಂಡನಾಯಕರಾಗಿರತಕ್ಕದ್ದು, ಒಡೆಯರು ಶ್ರೀರಂಗಪಟ್ಟಣದಲ್ಲಿ ಸಿಂಹಾಸನದಲ್ಲಿರುತ್ತ ರಾಜ್ಯವಾಳತಕ್ಕದ್ದು, ಇದು ಒಪ್ಪಂದ.[೨೬೩] ಕರಿಕಾಲ ಮಲ್ಲರಾಜನು ಅಧಿಕಾರವನ್ನು ಒಪ್ಪಿಕೊಂಡನೇನೋ ನಿಜ, ಆದರೆ ಆಮೇಲೆ ತನ್ನ ರಾಜೀನಾಮೆಯನ್ನು ತನ್ನ ಮೊಮ್ಮಗ ಎಂಟು ವರ್ಷ ವಯಸ್ಸಿನ ನಂದನಾಥಯ್ಯನೊಂದಿಗೆ ಕಳುಹಿಸಿಬಿಟ್ಟನು.[೨೬೪] ಹಾಗೆಯೇ ರಾಜಒಡೆಯರು

ಬೆಟ್ಟದ ಚಾಮರಾಜ ಒಡೆಯರ ತಮ್ಮ ಬೆಟ್ಟದ ಅರಸುವನ್ನು ಕ್ರಿ.ಶ. ೧೬೧೭ರಲ್ಲಿ ತಮ್ಮ ಮೊದಲ ದಳವಾಯಿಯನ್ನಾಗಿ ನೇಮಿಸಿದರು. ಹಾಗೆಯೇ ೧೬೩೬ರ ವರೆಗೂ ಬೇರೆ ಬೇರೆ ವಂಶಗಳಿಗೆ ಸೇರಿದ್ದವರನ್ನು ದಳವಾಯಿಗಳನ್ನಾಗಿ ನೇಮಿಸಲಾಯಿತು.[೨೬೫] ಕಂಠೀರವ ನರಸರಾಜ ಒಡೆಯರ್ ಹಾಗೂ ಚಿಕ್ಕದೇವರಾಜ ಒಡೆಯರ್ ಅವರ ಕಾಲದಲ್ಲಿ ಕಳಲೆ ಮನೆತನದ ಸದಸ್ಯರು ದಳವಾಯಿಗಳಾಗಿ ಸೇವೆ ಸಲ್ಲಿಸಿದರು.[೨೬೬] ಸಾಹಿತ್ಯಕ ಮೂಲಗಳಿಂದ ಮೈಸೂರು ರಾಜಮನೆತನವನ್ನು ಬಲಪಡಿಸಿದವರಲ್ಲಿ ದಳವಾಯಿ ಕುಮಾರಯ್ಯ ಮತ್ತು ಕಳಲೆಯ ದೊಡ್ಡಯ್ಯ ಪ್ರಾಮಾಣಿಕವಾಗಿ ಸೇವೆಸಲ್ಲಿಸಿದವರು ಎಂಬುದಾಗಿ ತಿಳಿದುಬರುತ್ತದೆ.[೨೬೭] (ಮೈಸೂರು ದೊರೆಗಳಿಗೆ ವಂಶೋದ್ಧಾರಕರಾದ). ಕ್ರಿ.ಶ. ೧೭೦೪ರಲ್ಲಿ ಚಿಕ್ಕದೇವರಾಜ ಒಡೆಯರು ನಿಧನ ಹೊಂದುವವರೆಗೂ ದಳವಾಯಿಗಳನ್ನು ಅರಸರು ಸೂಕ್ತವಾಗಿ ಹತೋಟಿಯಲ್ಲಿಟ್ಟುಕೊಂಡಿದ್ದರು. ಆದರೆ ೧೭೦೪ರ ನಂತರ ಕಳಲೆವಂಶದ ದಳವಾಯಿಗಳು ಮೇಲುಗೈ ಆಗಿ ಮೈಸೂರಿನ ಆಡಳಿತವನ್ನುಬಲಾತ್ಕಾರವಾಗಿ ಕಸಿದುಕೊಂಡರು. ೧೭೧೪ರಿಂದ ೧೭೫೯ವರೆಗೆ ದೇವರಾಜಯ್ಯ ಮತ್ತು ಕರಾಚುರಿ ನಂಜರಾಜಯ್ಯ ಮೈಸೂರು ರಾಜ್ಯದ ಸರ್ವೋನ್ನತ ಅಧಿಕಾರಿಗಳಾಗಿ ಆಳಿದುದನ್ನು ನೋಡುತ್ತೇವೆ. ಈ ಕಾಲಾವಧಿಯು ರಾಜಕೀಯ ಕ್ಷೇತ್ರದಲ್ಲಿ ಮಾತ್ರವಲ್ಲ, ಸಾಂಸ್ಕೃತಿಕ ಮತ್ತು ಸಾಮಾಜಿಕ-ಆರ್ಥಿಕ ದೃಷ್ಟಿಯಿಂದಲೂ ಅತ್ಯಂತ ಮಹತ್ವಪೂರ್ಣವೆನಿಸಿತು.

೧೮ನೆಯ ಶತಮಾನದ ಮೊದಲ ಅರ್ಧದಲ್ಲಿ ಕಳಲೆ ವಂಶದ ಸದಸ್ಯರು ಪ್ರವರ್ಧಮಾನರಾದುದಕ್ಕೆ ಹಲವು ಕಾರಣಗಳಿದ್ದುವು. ಎಲ್ಲಕ್ಕಿಂತ ಮೊದಲನೆಯದಾಗಿ, ಕೆಳದಿವಂಶವು ಮೈಸೂರಿನ ಒಡೆಯರೊಂದಿಗೆ ವೈವಾಹಿಕ ಸಂಬಂಧವನ್ನು ಹೊಂದಿದ್ದಿತು.[೨೬೮] ಮೊದಲಿನಿಂದಲೂ ಆರ್ಥಿಕವಾಗಿ ಎರಡೂ ಮನೆತನಗಳು ಸಮಾನವಾದ ನೆಲೆಯನ್ನು ಉಳಿಸಿಕೊಂಡು ಬಂದಿದ್ದುವು. ರಾಜಒಡೆಯರ ಆಳಿಕೆಯಲ್ಲಿ ಮೈಸೂರು ಸಂಸ್ಥಾನದಲ್ಲಿ ೩೩ ಹಳ್ಳಿಗಳಿದ್ದುವು. ಇವುಗಳಿಂದ ವಾರ್ಷಿಕವಾಗಿ ೩೩,೦೦೦ ಗದ್ಯಾಣ ವರಮಾನವಿದ್ದಿತು. ಕಳಲೆ ರಾಜ್ಯದಲ್ಲಿ ೪೦ ಗ್ರಾಮಗಳಿದ್ದುವು, ಒಟ್ಟುವರಮಾನ ೪೦,೦೦೦ ಗದ್ಯಾಣಗಳು.[೨೬೯] ಕಳಲೆ ವಂಶದ ಕರಿಕಾಲ ಮಲ್ಲರಾಜನು ರಾಜಒಡೆಯರ ಸೋದರಳಿಯ.[೨೭೦] ಹಾಗೆಯೇ ಮೈಸೂರಿನ ೧ನೇ ಕಂಠೀರವ ನರಸರಾಜ ಒಡೆಯರ್ ಹಾಗೂ ಚಿಕ್ಕದೇವರಾಜ ಒಡೆಯರ್ ಇಬ್ಬರೂ ಕಳಲೆಮನೆತನದ ಹೆಣ್ಣುಮಕ್ಕಳನ್ನು ಮದುವೆಯಾಗಿದ್ದರು. ೧ನೇ ಕೃಷ್ಣರಾಜ ಒಡೆಯರ್ ಎಂಟು ಜನ ರಾಣಿಯರಲ್ಲಿ (ಅಷ್ಟ ಮಹಿಷಿಯರು) ನಾಲ್ಕು ಜನ ಕಳಲೆ ಮನೆತನದವರು.[೨೭೧] ಮೈಸೂರಿನ ದಳವಾಯಿ ಕರಾಚುರಿ ನಂಜರಾಜನು ತನ್ನ ಮಗಳನ್ನು ೨ನೇ ಕೃಷ್ಣರಾಜ ಒಡೆಯರ್‌ರಿಗೆ ಕ್ರಿ.ಶ. ೧೭೪೬ರಲ್ಲಿ ಮದುವೆ ಮಾಡಿಕೊಟ್ಟನು.[೨೭೨] ಈ ತೆರನಾದ ರಕ್ತ ಸಂಬಂಧದಿಂದಾಗಿ ಅವರು ವೇಗವಾಗಿ ಬೆಳೆಯುವಂತಾಯಿತು.

ಅವರ ಉದಯಕ್ಕೆ ಇನ್ನೊಂದು ಕಾರಣ ಮೈಸೂರಿನ ಅರಸರ ದೇಹದೌರ್ಬಲ್ಯ, ಮತ್ತು ಅಂಗವೈಕಲ್ಯ, ೧೭೦೪ರಲ್ಲಿ ಚಿಕ್ಕದೇವರಾಜ ಒಡೆಯರು ಮೃತರಾದಾಗ ಹುಟ್ಟಿನಿಂದಲೇ ಕಿವುಡರೂ ಮೂಗರೂ ಆಗಿದ್ದ ೨ನೇ ಕಂಠೀರವ ನರಸರಾಜ ಒಡೆಯರ್ ಸಿಂಹಾಸನಕ್ಕೆ ಬಂದರು. ಆಡಳಿತವನ್ನು ಸಮರ್ಥವಾಗಿ ನಡೆಸಲು ಅದು ಬಹುದೊಡ್ಡ ತಡೆಯಾಗಿತ್ತು. ಇದರಿಂದ ರಾಜ್ಯದ ಒಳಗಿನ ಹಾಗೂ ಹೊರಗಿನ ವ್ಯವಹಾರಗಳಲ್ಲಿ ದಳವಾಯಿಗಳು ಸಕ್ರಿಯವಾದ ಪಾತ್ರವನ್ನು ವಹಿಸುವಂತಾಯಿತು. ೧೭೧೪ರಲ್ಲಿ ಕಂಠೀರವ ನರಸರಾಜ ಒಡೆಯರ್ ನಿಧನ ಹೊಂದಲು ಅವರ ಮಗ ೨ನೇ ಕೃಷ್ಣರಾಜ ಒಡೆಯರ್ ಪಟ್ಟಕ್ಕೆ ಬಂದರು. ಅವರಿಗೆ ಆಗ ಕೇವಲ ಹನ್ನೆರಡು ವರ್ಷ ವಯಸ್ಸು. ದಳವಾಯಿ ದೇವರಾಜಯ್ಯನು ತನ್ನ ದಾಯಾದಿ ಸೋದರಿಯನ್ನು ರಾಜನಿಗೆ ಮದುವೆ ಮಾಡಿಕೊಟ್ಟು, ತಾನು ಸುಖವಾಗಿ ಜೀವಿಸಿರಲು ಬೇಕಾದ ಎಲ್ಲಾ ಅನುಕೂಲಗಳನ್ನು ಮಾಡಿಕೊಂಡನು. ಇದರಿಂದ ರಾಜನು ರಾಜ್ಯದ ವ್ಯವಹಾರಗಳಲ್ಲಿ ಅಲಕ್ಷ್ಯ ತೋರಿಸುವಂತಾಯಿತು. ದೇವರಾಜಯ್ಯ ಮತ್ತು

ಅವನ ಸಹೋದರರು ಪ್ರಬಲರಾಗುವಂತಾಯಿತು. ಕ್ರಿ.ಶ. ೧೭೩೨ರಲ್ಲಿ ರಾಜನು ಸಂತಾನವಿಲ್ಲದೆ ಮೃತನಾಗಲು ವಿಧವೆ ರಾಣಿಯು ಚಾಮರಾಜನೆಂಬ ಬಾಲಕನನ್ನು ದತ್ತಕ ಸ್ವೀಕರಿಸಿದಳು. ಇದಕ್ಕೂ ಕಳಲೆ ಮನೆತನದವರೇ ನೆರವಾದರು.[೨೭೩] ಚಾಮರಾಜ ಒಡೆಯರು ಸ್ವತಂತ್ರರಾಗಲು ಬಯಸಿದರು. ಆದರೆ ಕಳಲೆ ಕುಟುಂಬದವರು ಅದಕ್ಕೆ ಆಸ್ಪದ ಕೊಡಲಿಲ್ಲ. ಅವರು ಒಳಸಂಚು ಮಾಡಿ ಅವರನ್ನು ಕುಟುಂಬ ಸಮೇತ ಕಬ್ಬಾಳದುರ್ಗಕ್ಕೆ ಬಲಾತ್ಕಾರದಿಂದ ಕಳುಹಿಸಿದರು.[೨೭೪] ಇದಾದ ಮೇಲೆ ದಳವಾಯಿ ಸೋದರರು ವಿಧವೆರಾಣಿಯನ್ನು ಇನ್ನೊಬ್ಬ ಆರು ವರ್ಷದ ಹುಡುಗನನ್ನು ದತ್ತಕ ಸ್ವೀಕರಿಸುವಂತೆ ಒಪ್ಪಿಸಿದರು. ಅವನು ಚಿಕ್ಕಕೃಷ್ಣರಾಜ ಒಡೆಯರ್ ಅಥವಾ ೨ನೇ ಕೃಷ್ಣರಾಜ ಒಡೆಯರ್ ಎಂಬ ಹೆಸರಿನಿಂದ ಸಿಂಹಾಸನವನ್ನೇರುವಂತೆ ಮಾಡಿದರು. ಇದು ನಡೆದದ್ದು ಕ್ರಿ.ಶ. ೧೭೩೪ರಲ್ಲಿ.

೨ನೇ ಕೃಷ್ಣರಾಜ ಒಡೆಯರ್ ಮೂವತ್ತೆರಡು ವರ್ಷ ಕ್ರಿ.ಶ. ೧೭೩೪ರಿಂದ ೧೭೬೬ರ ವರೆಗೆ ಸಿಂಹಾಸನದ ಮೇಲಿದ್ದರು. ಅವಧಿ ಪೂರ್ತಿಯಾಗಿ ದಳವಾಯಿ ಸಹೋದರರು ಎಲ್ಲಾ ಸೌಲಭ್ಯಗಳನ್ನು ಅನುಭವಿಸುತ್ತಾ ರಾಜ್ಯದ ವ್ಯವಹಾರವನ್ನು ತಮ್ಮ ಸಂಪೂರ್ಣ ಹತೋಟಿಗೆ ತಂದುಕೊಂಡರು.

ರಾಜಕಾರಣದಲ್ಲಿ ಈ ಅವಧಿಯಲ್ಲಿ ದಕ್ಷಿಣಭಾರತಾದ್ಯಂತ ಎಲ್ಲಲ್ಲೂ ಕ್ಷೋಭೆ ಮತ್ತು ಅವ್ಯವಸ್ಥೆಗಳು ಕಂಡುಬಂದುವು. ಅದೊಂದು ವಿಕ್ಷುಬ್ಧ ಸಾಗರದಂತೆ ಕಾಣುಸುತ್ತಿತ್ತು. ಯೂರೋಪಿಯನರು, ಮರಾಠರು, ಹೈದರಾಬಾದಿನ ನಿಜಾಮ, ಮೈಸೂರಿನ ದಳವಾಯಿಗಳು, ಆರ್ಕಾಟಿನ ನವಾಬರು ಎಲ್ಲರು ತಮ್ಮ ತಮ್ಮ ರಾಜ್ಯದ ವಿಸ್ತರಣೆಗಾಗಿ, ಸ್ವಂತದ ಪ್ರಯೋಜನಗಳಿಗಾಗಿ ತಾಕಲಾಡುತ್ತಿದ್ದರು. ನಂಜರಾಜಯ್ಯನು ನೀಡಿದ ಮಹತ್ತರವಾದ ಕೊಡುಗೆ, ಅವನು ಮೈಸೂರಿನ ಮುಂದಿನ ಸರ್ವಾಧಿಕಾರಿ ಹೈದರ್ ಅಲಿ ಎನ್ನುವವನನ್ನು ಗುರುತಿಸಿ ಅವನನ್ನು ರೂಪಿಸಿದ್ದು. ರಾಜ್ಯದ ಮುಂದಿನ ವಿದೇಶಾಂಗ ನೀತಿಯಾಗಿ ಫ್ರೆಂಚ್-ಪರವೂ ಬ್ರಿಟಿಷ್-ವಿರೋಧಿಯೂ ಆದ ನೀತಿಯ ತಳಹದಿಯನ್ನು ಹಾಕಿದ್ದು. ಅವನು ೧೮ನೆಯ ಶತಮಾನದ ರಾಜಕಾರಣದ ಮೇಲಾಟದ ಮುಖ್ಯ ಕೇಂದ್ರವಾದ ತಿರುಚಿನಾಪಳ್ಳಿಯನ್ನು ರಾಜ್ಯಕ್ಕೆ ಸೇರಿಸಿಕೊಳ್ಳಲು ಪ್ರಯತ್ನಿಸಿದನು.

ದಳವಾಯಿ ಸಹೋದರರು ಆಸುಪಾಸಿನ ರಾಜ್ಯಗಳಿಗೆ ಸೇರಿದ ಪ್ರದೇಶಗಳನ್ನು ಸೇರಿಸಿಕೊಂಡು ಮೈಸೂರು ರಾಜ್ಯವನ್ನು ವಿಸ್ತರಿಸಿದರು. ದೇವರಾಜಯ್ಯನು ಮಾಗಡಿ, ಮಿಡಿಗೇಶಿ ಮತ್ತು ಸೆವಂಡಿ ಕೋಟೆ ಇವುಗಳನ್ನು ರಾಜ್ಯಕ್ಕೆ ಸೇರಿಸಿದನು.[೨೭೫] ೧೭೩೬ರಲ್ಲಿ ದೇವರಾಜಯ್ಯನು ಪ್ರಥಮ ದಂಡನಾಯಕನಾಗಿಯೂ ಅವನ ತಮ್ಮ ಕರಾಚುರಿ ನಂಜರಾಜಯ್ಯನು ದ್ವಿತೀಯ ದಂಡನಾಯಕನಾಗಿಯೂ ಚನ್ನಪಟ್ಟಣದ ಬಳಿ ಕೈಲಾಂಚ ಎಂಬಲ್ಲಿ ಮುಗಲರೊಂದಿಗೆ ಯುದ್ಧ ಮಾಡಿದರು.[೨೭೬] ಈ ಸಹೋದರರ ಅಪ್ರತಿಮ ಪರಾಕ್ರಮದ ಫಲವಾಗಿ ಅವರಿಗೆ ಮುಗಲರ ಮೇಲೆ ಜಯವು ಲಭಿಸಿತು. ರಾಜ್ಯಕ್ಕೂ ಅವರಿಗೂ ಅಪಾರವಾದ ಕೀರ್ತಿ ಬಂದಿತು. ದೊರೆ ೨ನೇ ಕೃಷ್ಣರಾಜಒಡೆಯರ್ ಸ್ವತಃ ಈ ಸಹೋದರರನ್ನು ಕಪಿಧ್ವಜ ಮತ್ತು ಶರಭಾಂಕಿತ ಧ್ವಜದೊಂದಿಗೆ ಸ್ವಾಗತಿಸಿ ಅವರ ವಿಜಯದ ಗೌರವಾರ್ಥವಾಗಿ ಒಂದು ಭವ್ಯವಾದ ದರ್ಬಾರನ್ನು ನಡೆಸಿದರು.[೨೭೭]

ಕ್ರಿ.ಶ. ೧೭೩೯ರಲ್ಲಿ ದೇವರಾಜಯ್ಯನು, ಕಳಲೆಮನೆತನದ ಬಸವರಾಜಯ್ಯನ ಪುತ್ರ ಸರ್ವಾಧಿಕಾರಿ ನಂಜರಾಜಯ್ಯನು ಮೃತನಾಗಲು, ಅವನ ಸ್ಥಾನದಲ್ಲಿ ತನ್ನ ತಮ್ಮ ಕರಾಚುರಿ ನಂಜರಾಜಯ್ಯನನ್ನು ಮೈಸೂರಿನ ಸರ್ವಾಧಿಕಾರಿಯನ್ನಾಗಿ ನೇಮಿಸಿದನು. ಅದೇ ವರ್ಷ ಕರಾಚುರಿ ನಂಜರಾಜಯ್ಯನು ಏಕಾಂಗಿಯಾಗಿ ಧಾರಾನಗರದ ಮೇಲೆ ದಂಡೆತ್ತಿಹೋಗಿ ಜಯಗಳಿಸಿದನು. ೧೭೪೯ರಲ್ಲಿ ದೊಡ್ಡಬಳ್ಳಾಪುರದ ಪಾಳೇಗಾರನೊಂದಿಗೆ ಯುದ್ಧಮಾಡಿದನು. ಆಗಲೇ ಹೈದರಲಿಯ ಸಾಮರ್ಥ್ಯ ಅವನ ಗಮನವನ್ನು ಸೆಳೆದದ್ದು.

ನಂಜರಾಜನು ತಿರುಚಿನಾಪಳ್ಳಿಯ ಮೇಲೆ ನಡೆಸಿದ ದಂಡಯಾತ್ರೆ ಅತ್ಯಂತ ಮುಖ್ಯವಾದದ್ದು. ೧೭೫೧-೧೭೫೫ ಅವಧಿಯಲ್ಲಿ ದಕ್ಷಿಣಭಾರತದ ರಾಜಕಾರಣದಲ್ಲಿ ಮೈಸೂರು ಬಹು ಮುಖ್ಯವಾದ ಪಾತ್ರವನ್ನು ವಹಿಸಿತ್ತು. ಸರ್ವಾಧಿಕಾರಿಯಾಗಿ ಕರಾಚುರಿ ನಂಜರಾಜನು, ಕೃಷ್ಣರಾಜ ಒಡೆಯರ ಪರವಾಗಿ ಮುಖ್ಯವಾದ ಪಾತ್ರ ವಹಿಸಿದನು. ತಿರುಚಿನಾಪಳ್ಳಿಯನ್ನು ಗೆಲ್ಲುವುದು ದಳವಾಯಿಯ ಮುಖ್ಯ ಲಕ್ಷ್ಯವಾಗಿತ್ತು. ಅದು ಕರ್ನಾಟಕಕ್ಕೆ ಬಹು ಮಹತ್ವದ ಸ್ಥಳವಾಗಿತ್ತು. ದಕ್ಷಿಣ ಭಾರತದ ಮೇಲೆ ಮೈಸೂರು ಪ್ರಭುತ್ವ ಸಂಪಾದಿಸಬೇಕಾದರೆ, ಅದನ್ನು ಗೆಲ್ಲಲೇಬೇಕು ಎಂಬುದು ಅವನ ದೃಢ ನಿರ್ಧಾರವಾಗಿತ್ತು. ನಂಜರಾಜನು ಈ ದಿಸೆಯಲ್ಲಿ ಜಾಣತನದಿಂದ ವರ್ತಿಸಿದನು. ಮೊಹಮ್ಮದ್ ಅಲಿಯು ತನ್ನ ವಕೀಲ ಶೇಷಗಿರಿ ಪಂತನನ್ನು ಶ್ರೀರಂಗಪಟ್ಟಣದ ಆಸ್ಥಾನಕ್ಕೆ ಕಳುಹಿಸಿ ನಂಜರಾಜಯ್ಯನೊಂದಿಗೆ ಒಂದು ಒಪ್ಪಂದ ಮಾಡಿಕೊಂಡನು. ದುರ್ಗಕ್ಕೆ ಹಾಕಿದ್ದ ಮುತ್ತಿಗೆಯನ್ನು ತೆಗೆಸಲು ಸಹಾಯಮಾಡುವುದಾದರೆ ಅದಕ್ಕೆ ಪ್ರತಿಫಲವಾಗಿ ತಿರುಚಿನಾಪಳ್ಳಿ ಕೋಟೆಯನ್ನು ಅದರ ಜೊತೆಯ ಪ್ರದೇಶಗಳನ್ನು ನಂಜರಾಜನಿಗೆ ಕೊಡುವುದಾಗಿ ಮೊಹಮದಲಿಯು ಒಪ್ಪಿದನು. ೧೭೫೨ರಲ್ಲಿ ನಂಜರಾಜನು ಶ್ರೀರಂಗಕ್ಕೆ ಸೇನಾಸಮೇತನಾಗಿ ಹೋದನು. ಮುರಾರಿರಾಯನೂ ಬಂದನು. ಉಪಾಯಮಾಡಿ ಮೊಹಮದಲಿಯು ಚಂದಾಸಾಹೇಬನ ತಲೆಕಡಿಸಿ ಶ್ರೀರಂಗಪಟ್ಟಣಕ್ಕೆ ಕಳುಹಿಸಿಕೊಟ್ಟನು. ನಂಜರಾಜನು ಒಪ್ಪಂದದಂತೆ ತಿರುಚಿನಾಪಳ್ಳಿಯನ್ನು ಒಪ್ಪಿಸಬೇಕೆಂದು ಒತ್ತಾಯ ಪಡಿಸಿದನು.[೨೨೮] ಆದರೆ ಅವನು ಮೋಸಮಾಡಿ ನಂಜರಾಜನನ್ನೇ ಕಷ್ಟಕ್ಕೆ ಸಿಕ್ಕಿಸಿದನು. ತಿರುಚಿನಾಪಳ್ಳಿಯ ವ್ಯವಹಾರದಿಂದ ಮೈಸೂರಿನ ಬೊಕ್ಕಸಕ್ಕೆ ೩೦೦೦ ರೂಪಾಯಿ ನಷ್ಟವಾಯಿತು. ಅದರ ಜೊತೆಗೇ ದಳವಾಯಿ ನಂಜರಾಜಯ್ಯನ ಅವನತಿ ಪ್ರಾರಂಭವಾಗಿ ಹೈದರಲಿಯು ಮೇಲೇರಿದನು.

ಸಾಂಸ್ಕೃತಿಕ ಕೊಡುಗೆ

ಸಾಹಿತ್ಯ, ಕಲೆ ಮತ್ತು ವಾಸ್ತುಶಿಲ್ಪ ಕ್ಷೇತ್ರಗಳಲ್ಲಿ ಈ ಅವಧಿಯು ಬಹು ಮಹತ್ವದ್ದಾಗಿದೆ. ಸಂಸ್ಕೃತ ಮತ್ತು ಕನ್ನಡಗಳಲ್ಲಿ ವೈವಿಧ್ಯವೂ ಉತ್ತಮ ಗುಣಮಟ್ಟವೂ ಕಂಡು ಅವು ಹುಲುಸಾಗಿ ಬೆಳೆದುವು. ನಂಜರಾಜನು ಒಬ್ಬ ದೊಡ್ಡ ನಿರ್ಮಾತ ಮಾತ್ರವಲ್ಲ, ಕವಿಗಳ ಪೋಷಕನೂ ಆಗಿದ್ದನು. ತಾನೇ ದೊಡ್ಡ ವಿದ್ವಾಂಸನಾಗಿದ್ದು ಸಂಸ್ಕೃತ ಕನ್ನಡ ಮತ್ತು ತೆಲುಗು ಭಾಷೆಗಳಲ್ಲಿ ಹಲವು ಕೃತಿಗಳನ್ನು ರಚಿಸಿದನು, ನುರೇಂದ್ರ, ನರಸಿಂಹ, ನೀಲಕಂಠ, ಕಾಶೀಪತಿ ಪಂಡಿತ, ವೆಂಕಟೇಶ, ರಾಮಸ್ವಾಮಿ ದೀಕ್ಷಿತ, ಲಿಂಗಣ್ಣ, ನಾರಾಯಣ ಸ್ವಾಮಿ ಮೊದಲಾದ ವಿದ್ವಾಂಸರಿಗೆ ಅವನು ಆಶ್ರಯ ನೀಡಿದನು. ೧೮ನೆಯ ಶತಮಾನದ ಮೊದಲ ಭಾಗದಲ್ಲಿ ಈ ವಿದ್ವಾಂಸರು ಸಾಹಿತ್ಯಕ್ಕೆ ನೀಡಿದ ಕೊಡುಗೆಯನ್ನು ಪರಿಶೀಲಿಸುವುದು ಉತ್ತಮ.

ಕನ್ನಡ ಸಾಹಿತ್ಯ

ಕಳಲೆ ಮನೆತನದ ದಳವಾಯಿ ವೀರರಾಜಯ್ಯನು ಆ ಕಾಲದ ಸುಪ್ರಸಿದ್ಧ ವಿದ್ವಾಂಸನಾಗಿದ್ದನು. ಸಕಲ ವೈದ್ಯ ಸಂಹಿತಾ ಸಾರಾರ್ಣವ ಅಥವಾ ವೀರರಾಜೋಕ್ತಿವಿಲಾಸ ಎಂಬ ವೈದ್ಯಶಾಸ್ತ್ರವನ್ನು ಕುರಿತ ಕೃತಿಯನ್ನು ರಚಿಸಿದನು.[೨೨೯] ಅವನ ಮಗ ದಳವಾಯಿ ನಂಜರಾಜಯ್ಯನ ಕೊಡುಗೆಯೂ ಈ ದಿಸೆಯಲ್ಲಿ ಮಹತ್ವದ್ದೇ. ಅವನು ಕನ್ನಡ, ಸಂಸ್ಕೃತ ಮತ್ತು ತೆಲುಗು ಮೂರು ಬಾಷೆಗಳಲ್ಲೂ ಪರಿಣತನಾಗಿದ್ದನು. ಅವನ ಆಶ್ರಿತರು ಅವನನ್ನು ನೂತನ ಭೋಜರಾಜ, ಗೀರ್ವಾಣಾಂಧ್ರ ಕರ್ನಾಟಕಾದಿ ಕಲಾಕೋವಿದ ಎಂದು ಪ್ರಶಂಸಿಸಿದರು.[೨೩೦] ಕನ್ನಡದಲ್ಲೇ ಹದಿನೆಂಟು ಕೃತಿಗಳನ್ನು ಅವನು ರಚಿಸಿದ್ದಾನೆ. ಅವನ ಮೊದಲ ಕೃತಿಗಳಲ್ಲಿ ಹಲವು ಗದ್ಯ ರೂಪಾಂತರಗಳು (ವಚನಕಾವ್ಯ ಟೀಕು) ಇವು ೧೭೩೪-೧೭೪೨ರ ಅವಧಿಗೆ ಸೇರಿದವು. ಸಾಮಾನ್ಯವಾಗಿ ಅವು ನಂಜರಾಜ ವಾಣೀವಿಲಾಸ ಟೀಕು ಎಂಬ ಸರಣಿಗೆ ಸೇರಿವೆ.[೨೩೧] ಶಿವಪುರಾಣಗಳು, ಧರ್ಮಾಚರಣೆಗಳು ಮತ್ತು

ತತ್ವಶಾಸ್ತ್ರಕ್ಕೆ ಸಂಬಂಧಿಸಿವೆ. ಎಲ್ಲರಿಗೂ ಅರ್ಥವಾಗುವಂತಹ ಸುಲಭ ಆಧುನಿಕ ಕನ್ನಡದಲ್ಲಿ ರಚಿಸಿದವಾಗಿವೆ. (ಅಚ್ಚಗನ್ನಡದಲ್ಲಿ ಅಖಿಲರರಿವಂತೆ). ಮುಖ್ಯವಾದ ಕೃತಿಗಳು ಶಿವಗೀತೆ, ಶಿವಧರ್ಮೋತ್ತರ, ಶಿವಭಕ್ತವಿಲಾಸ ದರ್ಪಣ, ಕಕುದ್ಗಿರಿ ಮಹಾತ್ಮೆ, ಹರಿವಂಶ, ಹಾಲಾಸ್ಯಮಹಾತ್ಮ್ಯಂ, ಕಾಶೀಮಹಿಮಾದರ್ಪಣಂ, ಅರವತ್ತಮೂವರ ತ್ರಿವಿಧಿ, ಗರಳಪುರಿಮಾಹತ್ಮ್ಯ ಸೇತುಮಹಿಮಾದರ್ಶ ಇತ್ಯಾದಿ.[೨೮೨] ನಂಜರಾಜಯ್ಯನು ಗರಳ ಪುರಾಧೀಶನ, ಅಂದರೆ ನಂಜನಗೂಡಿನ ಶ್ರೀಕಂಠೇಶ್ವರನ ದೃಢಭಕ್ತನಾಗಿದ್ದನು. ಈ ದೇವರ ಹೆಸರಿನಲ್ಲೇ ಶ್ರೀನಂಜುಂಡ ಶಿವಶಂಭೋಮಹಾದೇವ ಎಂದು ಮುದ್ರಿಕೆಗಳನ್ನು ಮಾಡಿಸಿಕೊಂಡಿದ್ದನು.[೨೮೩] ಗರಳಪುರಿ ಮಾಹಾತ್ಮ್ಯದಲ್ಲಿ ನಂಜುಂಡೇಶ್ವರನ ಮಹಿಮೆಯನ್ನೂ ಸ್ಥಳಪುರಾಣವನ್ನೂ ವರ್ಣಿಸಿದ್ದಾನೆ.[೨೮೪]

ನಂಜರಾಜನು ಕವಿಪ್ರೇಮಿ ಮತ್ತು ಪೋಷಕನಾಗಿದ್ದನು. ವೀರಶೈವ ಕವಿಯಾಗಿದ್ದ ನೂರೊಂದನು ಅವನ ಆಶ್ರಿತನಾಗಿದ್ದು ಕನ್ನಡದಲ್ಲಿ 'ಸೌಂದರಕಾವ್ಯ' ಎಂಬ ೧೩ ಅಧ್ಯಾಯಗಳ ೧೯೭೫ ಪದ್ಯಗಳ ಒಂದು ಕಾವ್ಯವನ್ನು ರಚಿಸಿದ್ದಾನೆ.[೨೮೫] ಇದೊಂದು ಐತಿಹಾಸಿಕ ಕೃತಿ. ರಾಜ ೨ನೇ ಕೃಷ್ಣರಾಜಒಡೆಯರ್ ಹಾಗೂ ದಳವಾಯಿ ದೇವರಾಜಯ್ಯ ಮತ್ತು ನಂಜರಾಜಯ್ಯರ ಸಾಧನೆಗಳನ್ನು ವರ್ಣಿಸುತ್ತದೆ. ಕೃಷ್ಣರಾಜಒಡೆಯರ ಆಸ್ಥಾನವನ್ನೂ ಶ್ರೀರಂಗಪಟ್ಟಣದ ಜನಜೀವನವನ್ನೂ ವಿವರಿಸುತ್ತದೆ. ಕೃಷ್ಣರಾಜರ ಆಳಿಕೆಯ ಅವಧಿಯಲ್ಲಿ ದಳವಾಯಿಗಳು ಮೈಸೂರಿನ ಅಧಿಕಾರದಲ್ಲಿ ಮೇಲೆ ಮೇಲೆ ಏರಿದುದನ್ನು ಚಿತ್ರಿಸುವುದರ ಜೊತೆಗೆ ಆ ಕಾಲದ ಸಾಮಾಜಿಕ ಮತ್ತು ರಾಜಕೀಯ ಇತಿಹಾಸಕ್ಕೆ ಬಹುಮುಖ್ಯವಾದುದಾಗುತ್ತದೆ.

ಕವಿ ವೆಂಕಟೇಶನು ದಳವಾಯಿ ನಂಜರಾಜಯ್ಯನ ಪೋಷಣೆ ಪಡೆದ ಇನ್ನೊಬ್ಬ ಮುಖ್ಯ ವಿದ್ವಾಂಸ. ಅವನು ತನ್ನ ಪೋಷಕನ ಇಚ್ಛೆಯಂತೆ ಕೃತಿ ರಚನೆ ಮಾಡಿದುದಾಗಿ ಪ್ರಾರಂಭದಲ್ಲಿ ಹೇಳಿಕೊಂಡಿದ್ದಾನೆ.[೨೮೬] ಅವನು ಕನ್ನಡದಲ್ಲಿ ಹಾಲಾಸ್ಯಮಾಹಾತ್ಮ್ಯಂ ಎಂಬ ಚಂಪೂಕಾವ್ಯವನ್ನು ರಚಿಸಿದನು. ಆಕಾಲದ ಇತರ ಬರಹಗಾರರೆಂದರೆ, ಬೆಟ್ಟದ ಕೋಟೆಯ ಗೋಪಾಲರಾಜ ಅರಸು. ಇವನು ೨ನೇ ಕೃಷ್ಣರಾಜಒಡೆಯರ್‌ರ ಮಾವ. ಕಮಲಾಚಲಮಾಹಾತ್ಮ್ಯವನ್ನು ಬರೆದಿದ್ದಾನೆ. ಭವಿಷ್ಯೋತ್ತರ ಪುರಾಣದಲ್ಲಿ ನಿರೂಪಿಸಿರುವ ಕಮಲಾಚಲದ ಪೌರಾಣಿಕ ಇತಿಹಾಸವನ್ನು ಕನ್ನಡ ಗದ್ಯದಲ್ಲಿ ಹೇಳಿದೆ. ಕರ್ತೃ ಯಾರೆಂದು ತಿಳಿಯದ ಮೈಸೂರು ದೊರೆಗಳ ಪೂರ್ವೋತ್ತರ (೧೭೪೦), ಕೋನಯ್ಯನ ಗಯ ಚರಿತೆ, ವೆಂಕಾಮಾತ್ಯನ ಇಂದಿರಾಭ್ಯುದಯ ಮತ್ತು ಕರ್ನಾಟಕ ರಾಮಾಯಣ ಇವು ಇತರ ಸಮಕಾಲೀನ ಕೃತಿಗಳು.

ಬರಹಗಾರ್ತಿಯರು ಹೆಚ್ಚುಸಂಖ್ಯೆಯಲ್ಲಿ ಕಾಣಿಸಿಕೊಂಡದ್ದು ಈ ಯುಗದ ವೈಶಿಷ್ಟ್ಯ. ೧ನೇ ಕೃಷ್ಣರಾಜ ಒಡೆಯರ್‌ರ ರಾಣಿ ಚೆಲುವಾಂಬಾ[೨೮೭] ಕಳಲೆ ಮನೆತನಕ್ಕೆ ಸೇರಿದ ಹೆಣ್ಣುಮಗಳು. ಹೆಳವನಕಟ್ಟೆ ಗಿರಿಯಮ್ಮ, ನಂಜನಗೂಡಿನ ರಂಗಮ್ಮ ಕವಿಯಿತ್ರಿಯರು. ಚೆಲುವಾಂಬೆಯು ವರನಂದಿ ಕಲ್ಯಾಣ, ತಲಕಾವೇರಿ ಮಾಹಾತ್ಮ್ಯ, ಅಲಮೇಲು ಮಂಗೆ ಲಾಲಿಪದಗಳು ಎಂಬ ಕೃತಿಗಳನ್ನು ರಚಿಸಿದಳು. ಈ ಕೃತಿಗಳನ್ನು ಒಟ್ಟಾಗಿ ಚೆಲವಾಂಬಾ ವಾಣಿವಿಲಾಸಟೀಕು ಎಂದು ಕರೆಯಲಾಗಿದೆ. ವರನಂದಿ ಕಲ್ಯಾಣದಲ್ಲಿ ಕವಿಯಿತ್ರಿಯು, ದೆಹಲಿಯ ಬಾದಶಹನ ಮಗಳು ವರನಂದಿಯು ಶ್ರೀರಾಮಾನುಜರ ಕಾಲದಲ್ಲಿ ಮೇಲುಕೋಟೆಯ ಚೆಲುವನಾರಾಯಣ ಸ್ವಾಮಿಯನ್ನು ಮದುವೆ ಮಾಡಿಕೊಂಡ ಸಾಂಪ್ರದಾಯಕ ಕಥೆಯನ್ನು ವರ್ಣಿಸಿದ್ದಾಳೆ.[೨೮೮] ಇದು ಸಾಂಗತ್ಯದಲ್ಲಿ ರಚಿತವಾಗಿರುವ ಕಾವ್ಯ. ತಲಕಾವೇರಿ ಮಹಾತ್ಮ್ಯ ಮೂವತ್ತು ಅಧ್ಯಾಯಗಳಲ್ಲಿ ಆಗ್ನೇಯ ಪುರಾಣದಲ್ಲಿ ಹೇಳಿದಂತೆ ಕಾವೇರಿ ನದಿಯು ಹುಟ್ಟುವ ಸ್ಥಳದ ಮಹಿಮೆಯನ್ನು ವರ್ಣಿಸುತ್ತದೆ.

ಹೆಳವನಕಟ್ಟೆ ಗಿರಿಯಮ್ಮನು ಈ ಕಾಲದ ಇನ್ನೊಬ್ಬ ಮುಖ್ಯಳಾದ ಕವಿಯಿತ್ರಿ. ಇವಳು ಉದ್ದಾಲಿಕನ ಕಥೆ, ಚಂದ್ರಹಾಸನ ಕಥೆ ಹಾಗೂ ಹೆಳವನಕಟ್ಟೆ ರಂಗನಾಥನನ್ನು ಕುರಿತ ಹಾಡುಗಳನ್ನು ರಚಿಸಿದ್ದಾಳೆ.

ನಂಜನಗೂಡು ರಂಗಮ್ಮನು ನಂಜುಂಡೇಶ್ವರನನ್ನು ಕುರಿತು ಹಾಡುಗಳನ್ನು ರಚಿಸಿದ್ದಾಳೆ. ದಳವಾಯಿಗಳ ಆಳಿಕೆಯ ಅವಧಿಯಲ್ಲಿ ಬಂದ ಈ ಸಾಹಿತ್ಯ ಕೃತಿಗಳನ್ನು ಗಮನಿಸಿದಾಗ ಈ ಅವಧಿಯು ವಿಪುಲ ಸಾಹಿತ್ಯ ನಿರ್ಮಾಣವನ್ನು ಕಂಡಿತು ಎಂದು ಹೇಳಬಹುದಾಗುತ್ತದೆ.

ಸಂಸ್ಕೃತ ಸಾಹಿತ್ಯ

ಈ ಅವಧಿಯಲ್ಲಿ ಸಂಸ್ಕೃತ ಸಾಹಿತ್ಯದಲ್ಲೂ ಅನ್ಯಾದೃಶವಾದ ಬೆಳವಣಿಗೆಯು ಕಂಡುಬಂದಿತು. ನಂಜರಾಜನು ಸಂಸ್ಕೃತದಲ್ಲಿ ದೊಡ್ಡ ವಿದ್ವಾಂಸನಾಗಿದ್ದನು. ಅಲ್ಲದೆ ಅವನು ನರಸಿಂಹ, ನೀಲಕಂಠ, ವೆಂಕಾಮಾತ್ಯ, ಕಾಶೀಪತಿಪಂಡಿತ, ನಾರಾಯಣಸ್ವಾಮಿ, ರಾಮಕವಿ ಮತ್ತು ರಾಮಸ್ವಾಮಿ ದೀಕ್ಷಿತ ಮೊದಲಾದ ವಿದ್ವಾಂಸರಿಗೆ ಅವನು ಆಶ್ರಯ ನೀಡಿದನು.[೨೮೯] ಸಂಸ್ಕೃತ ಸಾಹಿತ್ಯವು ಗುಣ ಮತ್ತು ವೈವಿಧ್ಯಗಳಿಂದ ಈ ಅವಧಿಯಲ್ಲಿ ಸಮೃದ್ಧವಾಗಿ ಬೆಳೆಯಿತು. ವೆಂಕಾಮಾತ್ಯನು ಕನ್ನಡ-ಸಂಸ್ಕೃತಗಳೆರಡರಲ್ಲೂ ವಿದ್ವಾಂಸನಾಗಿದ್ದು ನಂಜರಾಜಯ್ಯನ ಪೋಷಣೆಯಲ್ಲಿದ್ದನು. ಅವನು ಎಲ್ಲಾ ಸಾಹಿತ್ಯ ಪ್ರಕಾರಗಳಲ್ಲೂ ಸಂಸ್ಕೃತದಲ್ಲಿ ಕೃತಿರಚನೆ ಮಾಡಿರುವುದು ವಿಶೇಷ . ಅದು ಸಂಸ್ಕೃತ ಸಾಹಿತ್ಯದಲ್ಲೊಂದು ದಾಖಲೆಯೇ ಆಗಿದೆ. ವೆಂಕಾಮಾತ್ಯನ ಮುಖ್ಯ ಕೃತಿಗಳು ಕಾಮವಿಲಾಸಭಾಣ. ಕಕ್ಷುಂಭರಿ ಪ್ರಹಸನ, ಅಲಂಕಾರಮಣಿದರ್ಪಣ, ಸೀತಾಕಲ್ಯಾಣ ವೀಥಿ, ವೀರರಾಘವವ್ಯಾಯೋಗ, ಹನುಮತ್‌ಶತಕ, ಸೂರ್ಯಾಷ್ಟಕ ರುಕ್ಮಿಣೀ ಮಾಧವಾಂಕ, ಸುಧಾಜರ್ಯೆ, ಕುಶಲವಚಂಪು, ಮತ್ತು ಮಹೇಂದ್ರವಿಜಯ ಡಿಮ.[೨೯೦] ಆ ಕಾಲದ ಸಂಸ್ಕೃತ ಸಾಹಿತ್ಯದ ಬೆಳವಣಿಗೆಯಲ್ಲಿ ವೆಂಕಾಮಾತ್ಯನ ಕೃತಿಗಳು ಮೈಲುಗಲ್ಲುಗಳಾಗಿವೆ.

ದಳವಾಯಿ ನಂಜರಾಜಯ್ಯನು ಜಯದೇವನ ಗೀತಗೋವಿಂದದ ಮಾದರಿಯಲ್ಲಿ ಶಿವಾಷ್ಟಪದಿ ಅಥವಾ ಸಂಗೀತಗಂಗಾಧರವನ್ನು ರಚಿಸಿದ್ದಾನೆ.[೨೯೧] ಇಲ್ಲಿಯೂ ಅವನು ತನ್ನ ವೀರಶೈವ ಧರ್ಮದ ಬಗೆಗಿನ ಒಲವನ್ನು ವ್ಯಕ್ತಪಡಿಸಿದ್ದಾನೆ. ಈ ಕೃತಿಗೆ ಶಿವನ ಭಿಕ್ಷಾಟನಲೀಲೆಯು ವಸ್ತುವಾಗಿದೆ.[೨೯೨] ಅವನು ಶಿವದಯಾಸಾಹಸು ಎಂಬ ಕೃತಿಯನ್ನೂ ರಚಿಸಿದ್ದಾನೆ. ಅವನ ಆಶ್ರಿತನಾದ ಕಾಶೀಪತಿ ಪಂಡಿತನು ಶ್ರವಣನಂದಿನಿ ಎಂಬ ವ್ಯಾಖ್ಯಾನ ಗ್ರಂಥವನ್ನು ಬರೆದಿದ್ದಾನೆ.[೨೯೩] ಇನ್ನೊಬ್ಬ ಕವಿ ನರಸಿಂಹ. ಇವೂ ನಂಜರಾಜನ ಆಶ್ರಿತ. ಇವನ ಕೃತಿಗಳು ನಂಜರಾಜಯಶೋಭೂಷಣ, ಚಂದ್ರಕಲಾ ಪರಿಣಯ ಮತ್ತು ಶಿವಪಾದರೇಣುಕಾ ಸಹಸ್ರಂ. ಚಂದ್ರಕಲಾ ಪರಿಣಯವು ನಂಜನಗೂಡಿನ ಶ್ರೀಕಂಠೇಶ್ವರನ ಡೋಲೋತ್ಸವ ಸಂದರ್ಭದಲ್ಲಿ ಅಭಿನಯಿಸಿದ ನಾಟಕ.[೨೯೪] ನರಸಿಂಹನ ಸಮಕಾಲೀನನೂ, ನಂಜರಾಜಯ್ಯನ ಆಶ್ರಿತನೂ ಆಗಿದ್ದ ನೆಲ್ಲುಕಂಠನು ನಂಜರಾಜ ಯಶಸಮೋಲ್ಲಾಸ ಚಂಪು ಎಂಬ ಚಂಪೂಕಾವ್ಯವನ್ನು ಬರೆದಿದ್ದಾನೆ. ಇದು ಮತ್ತು ನಂಜರಾಜಯಶೋಭೂಷಣ ಎರಡೂ ಐತಿಹಾಸಿಕ ಕೃತಿಗಳೆಂದು ಪರಿಗಣಿಸಬಹುದು. ದಳವಾಯಿ ನಂಜರಾಜಯ್ಯ, ದೇವರಾಜಯ್ಯ ಹಾಗೂ ೨ನೇ ಕೃಷ್ಣರಾಜ ಒಡೆಯರ್ ಇವರನ್ನು ಕುರಿತು ಹೆಚ್ಚಿನ ಮಾಹಿತಿ ಇವುಗಳಲ್ಲಿ ದೊರಕುತ್ತದೆ.[೨೯೫] ರಾಮಕವಿಯ ಸಂಗೀತ ರಾಘವ ಸಂಗೀತವನ್ನು ಕುರಿತ ಕೃತಿ. ನಾರಾಯಣಸ್ವಾಮಿಯ ಛಂದಸ್ಸುಧಾ ಇನ್ನೊಂದು ಮುಖ್ಯ ಕೃತಿ. ಹೀಗೆ ಸಂಸ್ಕೃತ ಸಾಹಿತ್ಯಕ್ಕೆ ಈ ಅವಧಿಯ ಕೊಡುಗೆ ಗಣನೀಯವಾದದ್ದು.

ತೆಲುಗು ಸಾಹಿತ್ಯ

ಕಳಲೆ ವಂಶದ ವೀರರಾಜನು ಒಂದನೇ ಕೃಷ್ಣರಾಜ ಒಡೆಯರ್‌ರ ದಳವಾಯಿಯಾಗಿದ್ದನು. ಅವನು ದೇವರಾಜ ಮತ್ತು ನಂಜರಾಜರ ತಂದೆ. ೧೮ನೆಯ ಶತಮಾನದ ಮೊದಲಭಾಗದಲ್ಲಿ ಇವನು ತೆಲುಗು ಭಾಷೆಯಲ್ಲಿ ಬರೆಯತೊಡಗಿದನು. ಅವನು ಆಂಧ್ರ ವಚನ ಭಾರತಮು ಎಂಬ ಕೃತಿಯನ್ನು ರಚಿಸಿದನು. ೧೨೦ ಅಧ್ಯಾಯಗಳ ಈ ಬೃಹತ್ ಕೃತಿಯು ಮಹಾಭಾರತದ ತೆಲುಗು ಗದ್ಯರೂಪ. ಸೊಗಸಾದ, ವಿಶೇಷವಾದ

ಸಾಹಿತ್ಯಕ ಗುಣವುಳ್ಳ ಕೃತಿಯಾಗಿದೆ.[೯೬] ತೆಲುಗು ಸಾಹಿತ್ಯಕ್ಕೆ ೧೮ನೇ ಶತಮಾನದ ಆದಿಭಾಗದಲ್ಲಿ ದೊರೆತ ಅಮೂಲ್ಯವಾದ ಕೊಡುಗೆಯಾಗಿದೆ ಇದು. ತೆಲುಗಿನಲ್ಲಿ ರಚನೆಯನ್ನು ಅವನ ಮಗ ನಂಜರಾಜನು ಮುಂದುವರಿಸಿದನು. ಹಾಲಾಸ್ಯ ಮಹಾತ್ಮ್ಯಮು. ಭಾರತ ವಚನಮು[೯೭] ಎಂಬ ಕೃತಿಗಳನ್ನು ತೆಲುಗಿನಲ್ಲಿ ರಚಿಸಿದ್ದಾನೆ.

ಆರ್ಥಿಕ ಪರಿಸ್ಥಿತಿ (೧೭೦೪-೧೭೬೧)

ಆ ಕಾಲದ ಆರ್ಥಿಕ ಪರಿಸ್ಥಿತಿಯನ್ನು ಕುರಿತು ಸಮಕಾಲೀನ ಸಾಹಿತ್ಯಕ ಮೂಲಗಳು ಮತ್ತು ಶಾಸನಗಳು ಬೇಕಾದಷ್ಟು ಮಾಹಿತಿಯನ್ನು ಒದಗಿಸುತ್ತವೆ. ಕೃಷಿ ಬಹುಮುಖ್ಯವಾದ ವೃತ್ತಿಯಾಗಿತ್ತು, ಅನೇಕ ಜನರು ಜೀವಿಕೆಗಾಗಿ ಅದನ್ನು ಅವಲಂಬಿಸಿದ್ದರು. ರಾಜ್ಯದ ಆರ್ಥಿಕತೆಗೆ ಕೃಷಿಯೇ ಮುಖ್ಯ ಆಧಾರವಾಗಿದ್ದಿತು. ರೈತನು ಬೇಸಾಯದ ಸಾಂಪ್ರದಾಯಕ ಪದ್ಧತಿಯನ್ನೇ ಅನುಸರಿಸುತ್ತಿದ್ದನು. ಬಂಜರು ಭೂಮಿಗಳನ್ನು ಕೃಷಿ ಮಾಡಲು ಹೊರಡುವ ರೈತರಿಗೆ ಕಂದಾಯದ ರಿಯಾಯಿತಿ ಕೊಟ್ಟು, ಪ್ರೋತ್ಸಾಹಿಸಲಾಗುತ್ತಿದ್ದಿತು.[೯೮] ಮೂರು ಬಗೆಯ ಬೆಳೆಗಳನ್ನು ತೆಗೆಯುತ್ತಿದ್ದರು. ಖುಷ್ಕಿ(ಹೊಲ) ಬೆಳೆ, ತರಿ(ಗದ್ದೆ)ಬೆಳೆ ಮತ್ತು ತೋಟದ ಬೆಳೆ.[೯೯] ರಾಗಿ, ಜೋಳ, ಕಡಲೆ, ಹೆಸರು, ಉದ್ದು, ಹರಳು, ನೆಲಗಡಲೆ, ಸಾಸಿವೆ, ಎಳ್ಳು, ಹತ್ತಿ, ಹೊಗೆಸೊಪ್ಪು, ಸೆಣಬು ಇವು ಹೊಲದ ಬೆಳೆಗಳಾಗಿದ್ದುವು. ಬತ್ತ ಮತ್ತು ಕಬ್ಬು ಮುಖ್ಯವಾದ ಗದ್ದೆ ಬೆಳೆಗಳು. ಅಡಕೆ, ತೆಂಗು, ಬಾಳೆ, ಬೆಳ್ಳುಳ್ಳಿ, ಶುಂಠಿ, ಮೆಣಸು, ವೀಳ್ಯದೆಲೆ ಇವು ತೋಟದ ಬೆಳೆಗಳು. ಮೈಸೂರಿನಲ್ಲಿ ವರ್ಷಕ್ಕೆ ಎರಡು ಬೆಳೆ ತೆಗೆಯುತ್ತಿದ್ದರು. ಒಂದು ಕಾರು ಮತ್ತು ಹೈನು.[೧೦೦] ಅಕ್ಕಿಯು ಮುಖ್ಯ ಆಹಾರವಾದ್ದರಿಂದ ಬತ್ತವನ್ನು ಬಹಳ ವಿಸ್ತಾರವಾದ ಪ್ರದೇಶದಲ್ಲಿ ಬೆಳೆಯುತ್ತಿದ್ದರು. ಮೈಸೂರು ರಾಜ್ಯದಲ್ಲಿ ಹಲವು ಬಗೆಯ ಬತ್ತವನ್ನು ಬೆಳೆಯಲಾಗುತ್ತಿತ್ತು. ಅವು ಕಣಿವೆ ಸಣ್ಣ, ಗೌರಿಸಣ್ಣ, ಜೀರಿಗೆ ಸಣ್ಣ, ಸೊಗಸು ರಾಜಾನ್ನ, ಸೊಂಸಾಲಿ, ಬಿಳುಮಲ್ಲಿಗೆ, ಕೆಂಬೂದಿ ಇತ್ಯಾದಿ.[೧೦೧] ಬೆಳೆದು ನಿಂತ ಪೈರನ್ನು ರಕ್ಷಿಸಲು ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿತ್ತು. ಪ್ರತಿಗ್ರಾಮಕ್ಕೂ ಒಬ್ಬ ಕಾವಲುಗಾರನಿರುತ್ತಿದ್ದನು. ತೊಂಡುದನಗಳಿಂದಲೂ ಕಾಡುಪ್ರಾಣಿಗಳಿಂದಲೂ ಹಾನಿಯಾಗದಂತೆ ಬೆಳೆಯನ್ನು ಕಾಪಾಡುವುದು ಅವನ ಕರ್ತವ್ಯವಾಗಿತ್ತು.[೧೦೨]

ಗ್ರಾಮೀಣ ಅರ್ಥವ್ಯವಸ್ಥೆಯು ಬಾರಾಬಲೂತಿ ವ್ಯವಸ್ಥೆಯಂತೆ ನಡೆಯುತ್ತಿತ್ತು. ಅದು ಜಾರಿಗೆ ಬಂದದ್ದು ಚಿಕ್ಕದೇವರಾಜ ಒಡೆಯರ ಕಾಲದಲ್ಲಿ.[೧೦೩] ಈ ವ್ಯವಸ್ಥೆಯಲ್ಲಿ ಗ್ರಾಮೀಣ ಅರ್ಥವ್ಯವಸ್ಥೆಯನ್ನು ನಿರ್ವಹಿಸುತ್ತಿದ್ದವರು ಗ್ರಾಮದ ಈ ಕೆಳಗಿನ ಹನ್ನೆರಡು ಜನ ವರ್ಗಗಳು: ಗೌಡ, ಶಾನುಭೋಗ, ಪಂಚಾಂಗದ ಬ್ರಾಹ್ಮಣ, ಕಬ್ಬಿಣದವನು, ಅಕ್ಕಸಾಲೆ, ಕುಂಬಾರ, ಅಗಸ, ಕೆಲಸಿ, ತೋಟಿ, ತಳವಾರ, ಕೆರೆನೀರುಗಂಟಿ ಮತ್ತು ಬಡಗಿ.

ಭೂಮಿಯ ಆಸ್ತಿ ಬಹಳ ಬೆಲೆಯುಳ್ಳ ಆಸ್ತಿಯೆಂದು ಪರಿಗಣಿಸಲಾಗುತ್ತಿತ್ತು. ಜಮೀನಿನ ವ್ಯವಹಾರ ಬಹುಸಾಮಾನ್ಯವಾಗಿದ್ದಿತು. ನೆಲವನ್ನು ಭೋಗ್ಯ, ಮಾರಾಟ, ಉಡುಗೊರೆ ಮತ್ತು ವಿನಿಮಯ ಮಾಡುವುದರ ಮೂಲಕ ಪರಭಾರೆ ಮಾಡಬೇಕಾದರೆ ರಾಜನ ಪೂರ್ವಾನುಮತಿ ಪಡೆದಿರಬೇಕಾಗಿತ್ತು ಎನ್ನುವುದು ಶಾಸನಗಳಿಂದ ತಿಳಿಯುತ್ತದೆ.[೧೦೪] ಭೂಮಿದಾನಗಳು ವೈವಿಧ್ಯಯುತವಾಗಿದ್ದುವು. ಬ್ರಾಹ್ಮಣರಿಗೆ ಸಾಮಾನ್ಯವಾಗಿ ಒಂದು ಹಳ್ಳಿಯಲ್ಲಿ ಅಥವಾ ಹಳ್ಳಿಗಳ ಒಂದು ಗುಂಪಿನಲ್ಲಿ ಅಗ್ರಹಾರಗಳೆಂಬ ಹೆಸರಿನಲ್ಲಿ ಭೂಮಿಯನ್ನು ದಾನ ಮಾಡಲಾಗುತ್ತಿತ್ತು.[೧೦೫]

ನೆಲದೊಡೆತನವನ್ನು ಕುರಿತು ಹೇಳಬೇಕೆಂದರೆ, ಕೃಷಿಕರು ಮತ್ತು ಅವರ ವಂಶಜರು ಎಲ್ಲಿಯವರೆಗೆ ಗೇಣಿಯನ್ನು ತಪ್ಪದೆ ಪಾವತಿ ಮಾಡುತ್ತಿದ್ದರೋ ಅಲ್ಲಿಯವರೆಗೂ ವಶದಲ್ಲಿರಿಸಿಕೊಳ್ಳುವ ಹಕ್ಕು

ಪಡೆದಿರುತ್ತಿದ್ದರು. ಆದರೆ ರೈತನು ಕಷಿ ಮಾಡದೆ, ಗೇಣಿಕೊಡಲು ತಪ್ಪಿದರೆ ಭೂಮಿಯನ್ನು ಅವನಿಂದ ಹಿಂದಕ್ಕೆ ಪಡೆದು ಬೇರೆಯವರಿಗೆ ವಹಿಸಿಕೊಡಲು ಮಾಲೀಕನಿಗೆ ಅಧಿಕಾರವಿತ್ತು.[೬೦೬]

ರೈತರಿಗೆ ನೀರಾವರಿ ಸೌಲಭ್ಯವನ್ನು ಕೊಡಲಾಗಿತ್ತು. ಕೆರೆಗಳು, ಕಟ್ಟೆಗಳು ಕೊಳಗಳು, ಭಾವಿಗಳು, ಕಾಲುವೆಗಳು ಮುಖ್ಯವಾಗಿ ನೀರನ್ನು ಒದಗಿಸುವ ಮೂಲಗಳಾಗಿದ್ದುವು . ಕಾಲುವೆ, ಕೆರೆಗಳು ಇಲ್ಲದ ಕಡೆ ಯಾತವನ್ನೋ ಕಪಿಲೆಯನ್ನೋ ಉಪಯೋಗಿಸಿ ನೀರನ್ನು ಹಾಯಿಸಲಾಗುತ್ತಿತ್ತು.[೬೦೭] ಕೃಷಿಯನ್ನು ಅಭಿವೃದ್ಧಿ ಪಡಿಸಲು ಒಡೆಯರು ಮತ್ತು ದಳವಾಯಿಗಳು ಆಣೆಕಟ್ಟು, ಕಾಲುವೆ , ಕೆರೆ, ಕೊಳಗಳಂತಹ ಅನೇಕ ನೀರಾವರಿ ಯೋಜನೆಗಳನ್ನು ಕೈಗೊಳ್ಳುತ್ತಿದ್ದರು. ದಳವಾಯಿ ದೇವರಾಜಯ್ಯನು ಶ್ರೀರಂಗಪಟ್ಟಣದಲ್ಲಿ ಒಂದು ಸರೋವರವನ್ನೂ ಕೌಂಡಿನಿ ನದಿಗೆ ಅಡ್ಡಲಾಗಿ ಒಂದು ಸೇತುವೆಯನ್ನೂ ಕಟ್ಟಿಸಿದನು.[೬೦೮] ದಳವಾಯಿ ನಂಜರಾಜಯ್ಯನು ಕೃಷ್ಣರಾಜಸ್ಥಳದಲ್ಲಿ ಒಂದು ನಾಲೆಯನ್ನು ತೋಡಿಸಿದನು.[೬೦೯] ಅವನ ಸೇವಕನು ಮಲದೇವನ ಹಳ್ಳಿಯಲ್ಲಿ ಒಂದು ಕೆರೆಯನ್ನು ನಿರ್ಮಿಸಿದನು.[೬೧೦]

ವ್ಯಾಪಾರ ಮತ್ತು ವಾಣಿಜ್ಯ

ಆ ಕಾಲದ ವ್ಯಾಪಾರ ಮತ್ತು ವಾಣಿಜ್ಯ ವಹಿವಾಟನ್ನು ಬಹುತೇಕ ವೈಶ್ಯರು ಮತ್ತು ಬಣಜಿಗರು ನಿಯಂತ್ರಿಸಿದ್ದರು. ತಮ್ಮ ವ್ಯವಹಾರವನ್ನು ಅಭಿವೃದ್ಧಿಪಡಿಸಲು ಅವರು ಸಂಘಗಳನ್ನು ರಚಿಸಿಕೊಂಡಿದ್ದರು.[೬೧೧] ಈ ಅವಧಿಯಲ್ಲಿ ರಾಜಧಾನಿಯಾದ ಶ್ರೀರಂಗಪಟ್ಟಣ, ಬೆಂಗಳೂರು, ಮೈಸೂರು, ಅರಸೀಕೆರೆ, ಗುಬ್ಬಿ, ತುಮಕೂರು ಇವು ಮುಖ್ಯ ವ್ಯಾಪಾರ ಕೇಂದ್ರಗಳಾಗಿದ್ದುವು. ವರ್ತಕರು ಸಾಮಾನ್ಯವಾಗಿ ವಾರಕ್ಕೊಮ್ಮೆ ನಡೆಯುತ್ತಿದ್ದ ಸಂತೆಗಳಲ್ಲಿ ತಮ್ಮ ಸರಕನ್ನು ಮಾರುತ್ತಿದ್ದರು. ಒಂದು ನಿರ್ದಿಷ್ಟ ಸ್ಥಳದಲ್ಲಿ ಹೆಚ್ಚು ಸಂಖ್ಯೆಯಲ್ಲಿ ಮಾರುವವರು ಮತ್ತು ಕೊಳ್ಳುವವರು ಸೇರುವುದೇ ಸಂತೆ.[೬೧೨] ಅಲ್ಲಿ ಮಾರಾಟವಾಗುತ್ತಿದ್ದ ವಸ್ತುಗಳು ಆಹಾರದಾನ್ಯಗಳು, ಹತ್ತಿ, ಹತ್ತಿ ಬಟ್ಟೆ, ಅಡಕೆ, ತೆಂಗು, ಬೆಲ್ಲ, ಅರಿಶಿನ, ಮೆಣಸು, ಉಪ್ಪು ಸಾಸಿವೆ, ಏಲಕ್ಕಿ, ಹಣ್ಣುಗಳು, ದನಕರುಗಳು, ಕುರಿಗಳು ಇತ್ಯಾದಿ.[೬೧೩]

ಚಿಕ್ಕದೇವರಾಜ ಒಡೆಯರ ಆಡಳಿತಾವಧಿಯಲ್ಲಿ ಸುಂಕದ ಕಟ್ಟೆಯನ್ನು ಪುನರ್ ವ್ಯವಸ್ಥೆಗೊಳಿಸಲಾಯಿತು. ಅದೇ ಪದ್ಧತಿಯು ೧೮ನೆಯ ಶತಮಾನದ ಮೊದಲ ಅರ್ಧದಲ್ಲಿಯೂ ಮುಂದುವರಿಯಿತು. ಅಲ್ಲಿಯ ವ್ಯವಹಾರಗಳನ್ನು ನೋಡುಕೊಳ್ಳಲು ಮ್ಯಾನೇಜರ್, ಶಾನುಭೋಗ ಮತ್ತು ಕೋಲುಕಾರರು ನೇಮಕಗೊಂಡರು.[೬೧೪] ಒಳನಾಡಿನಲ್ಲಿಯೂ ಮಾರ್ಗದ ಬದಿಗಳಲ್ಲಿ ಹೆಚ್ಚಿನ ಸುಂಕದ ಮನೆಗಳನ್ನು ಸ್ಥಾಪಿಸಲಾಯಿತು. ಕೆಲವೊಮ್ಮೆ ವಾಣಿಜ್ಯ ವಸ್ತುಗಳ ಮೇಲೆ ಹೆಚ್ಚಿನ ಕರವನ್ನು ವಿಧಿಸಲಾಗುತ್ತಿತ್ತು. ಇದರಿಂದ ಸಂಗ್ರಹವಾದ ಹೆಚ್ಚಿನ ಹಣವನ್ನು ಪುದುವಟ್ಟನ್ನಾಗಿ ಮಾಡಿ ದೇವ-ದೇವಿಯರ ರಥೋತ್ಸವಗಳು, ನೈವೇದ್ಯ, ಪೂಜೆ ಮೊದಲಾದುವಕ್ಕೆ ಉಪಯೋಗಿಸುತ್ತಿದ್ದರು.[೬೧೫] ೧೭೩೩ರ ಒಂದು ಶಾಸನವು ಈ ಸಂಬಂಧವಾಗಿ ಕೆಲವು ವಿವರಗಳನ್ನು ನೀಡುತ್ತದೆ. ತಂಬಾಕು, ತುಪ್ಪ, ಎಣ್ಣೆ, ಬಟ್ಟೆ, ಸೆಣಬು ಮತ್ತು ಹತ್ತಿನೂಲುಗಳಿಗೆ, ಒಂದು ಹೊರೆಗೆ ಒಂದು ತರು (ಕಡಿಮೆ ಪ್ರವಾಹದ ಒಂದು ನಾಣ್ಯ)ವನ್ನೂ ಬತ್ತ, ಅಕ್ಕಿ, ಮತ್ತು ಇತರ ವಸ್ತುಗಳಿಗೆ ೧/೨ ತರುವನ್ನೂ ವಿಧಿಸಲಾಗುತ್ತಿತ್ತು.[೬೧೬]

೧೮ನೆಯ ಶತಮಾನದ ಮೊದಲರ್ಧದಲ್ಲಿ ಸಂಪರ್ಕಸಾಧನಗಳು ಸಾಕಷ್ಟಿರಲಿಲ್ಲ. ಚಕ್ರದ ಬಂಡಿಗಳು, ಕುದುರೆತಟ್ಟು, ಎತ್ತುಗಳು, ಎಮ್ಮೆಗಳು, ಕುದುರೆಗಳು ಮತ್ತು ಕತ್ತೆಗಳು ಇವುಗಳನ್ನು ಬಳಸಿಕೊಂಡು ಸರಕನ್ನು ಸಾಗಿಸುತ್ತಿದ್ದರು. ದೂರ ಕಡಮೆಯಿದ್ದಾಗ ಮನುಷ್ಯರೇ ತಲೆಹೊರೆಯಾಗಿ ಹೊತ್ತೊಯ್ಯುತ್ತಿದ್ದರು. ಇನ್ನು ಅಳತೆ-ತೂಕಗಳ ವಿಷಯಕ್ಕೆ ಬಂದರೆ, ಕೊಳಗ ಸಾಮಾನ್ಯವಾಗಿ ರೂಢಿಯಲ್ಲಿದ್ದ ಅಳತೆಯ ಘಟಕ. ರಾಜ್ಯದಲ್ಲೇ

ಬೇರೆ ಬೇರೆ ಪ್ರದೇಶಗಳಲ್ಲಿ ಅಳತೆಯ ಘಟಕಗಳು ಬೇರೆಯಾಗುತ್ತಿದ್ದುವು. ೮, ೧೨, ೧೫, ಮತ್ತು ೧೬ ಸೇರುಗಳು ಹಿಡಿಸುವ ಬೇರೆ ಬೇರೆ ಕೊಳಗಗಳಿದ್ದುವು. ಪಲ್ಲ ಮತ್ತು ಕಂಡುಗ ಎಂದರೆ ಕೊಳಗಗಳನ್ನು ಸೇರುಗಳಿಂದ ಗುಣಿಸಿದ ಒಟ್ಟು ಮೊತ್ತ. ಮಾನ, ಕೊಳಗ, ಬಳ್ಳ, ಸೇರುಗಳ ಮೇಲೆ ರಾಜಮುದ್ರೆಯನ್ನು ಒತ್ತಿರಲಾಗಿತ್ತು.

ಕೈಗಾರಿಕೆಗಳು

ರಾಜ್ಯದಲ್ಲಿ ಹಲವು ಸಣ್ಣಕೈಗಾರಿಕೆಗಳಿದ್ದುವು.. ಮನೆಬಳಕೆಯ ಪಾತ್ರೆಗಳು, ಹತ್ತಿಬಟ್ಟೆಗಳು, ಮತ್ತು ರೇಷ್ಮೆ ಇವುಗಳನ್ನು ಉತ್ಪಾದಿಸಲಾಗುತ್ತಿತ್ತು. ಬಣ್ಣದವರು, ದೇವಾಂಗದವರು, ಚಿಪ್ಪಿಗರು, ಶಿಲ್ಪಿಗಳು, ಮೇದರು ಮತ್ತಿತರ ಕಸಬುದಾರ ವರ್ಗಗಳಿದ್ದುವು.[೬೧೭] ಸಕ್ಕರೆಯನ್ನು ಬೆಲ್ಲವನ್ನೂ ತಯಾರಿಸಲಾಗುತ್ತಿತ್ತು. ಎಣ್ಣೆಯನ್ನು ಹಿಂಡುವ ಕೆಲಸವನ್ನು ಗಾಣಿಗ ಸಮುದಾಯವು ನಿರ್ವಹಿಸುತ್ತಿದ್ದಿತು. ಸಾಮಾನ್ಯವಾಗಿ ಗಾಣವನ್ನು ಕಲ್ಲಿನಿಂದ ಅಥವಾ ಮರದಿಂದ ತಯಾರಿಸಿದ್ದು, ಜೋಡಿ ಎತ್ತುಗಳು ಅದನ್ನು ತಿರುಗಿಸುತ್ತಿದ್ದುವು..[೬೧೮] ಈ ಕಾಲದಲ್ಲಿ ಲೋಹದ ಉದ್ಯಮವೂ ಬೆಳೆಯಿತು. ಲೋಹ ಉದ್ಯಮ, ಆಭರಣಗಳ ತಯಾರಿಕೆ, ಗೃಹೋಪಯೋಗಿ ವಸ್ತುಗಳು, ಯುದ್ಧಗಳಿಗೆ ಬೇಕಾದ ಶಸ್ತ್ರಗಳು (ಕತ್ತಿಗಳು, ಬಿಲ್ಲು ಬಾಣಗಳು, ಖಡ್ಗಗಳು, ಕೊಡಲಿಗಳು) ಈ ವೃತ್ತಿಗಳಲ್ಲಿ ಅನೇಕ ಜನ ಕುಶಲಕರ್ಮಿಗಳು ನಿರತರಾಗಿದ್ದರು. ರಾಜ್ಯಾದ್ಯಂತ, ಅಕ್ಕಸಾಲಿಗರು, ಬಡಗಿಗಳು, ಗಾರೆಯವರು, ಕಮ್ಮಾರರು, ಕುಂಬಾರರು ಮತ್ತು ತೊಗಲಿನ ಕೆಲಸ ಮಾಡುವವರು ತಮ್ಮ ವಂಶಪರಂಪರೆಯಿಂದ ಬಂದ ಕಸುಬುಗಳನ್ನು ಮುಂದುವರಿಸುತ್ತಿದ್ದರು. ಮರಮುಟ್ಟು ಕುರಿತ ಉದ್ಯಮವೂ ಅಭಿವೃದ್ಧಿಹೊಂದಿತ್ತು. ಅನೇಕಜನ ಕುಶಲಕರ್ಮಿಗಳು ಅದರಲ್ಲಿ ನಿರತರಾಗಿದ್ದರು. ಬಗೆಬಗೆಯ ಪೀಠೋಪಕರಣಗಳನ್ನು ಅವರು ತಯಾರಿಸುತ್ತಿದ್ದರು.[೬೧೯] ಬಂಡಿಗಳು ಮತ್ತು ಪಲ್ಲಕ್ಕಿಗಳನ್ನು ಕೂಡ ಅವರು ನಿರ್ಮಿಸುತ್ತಿದ್ದರು. ಅಪಾರವಾದ ರಾಜಕೀಯ ಒತ್ತಡಗಳು ಮತ್ತು ಧಾಳಿಗಳು ನಡೆಯುತ್ತಿದ್ದರೂ ಆರ್ಥಿಕವಾಗಿ ಶ್ರೀಮಂತವಾದ ರಾಜ್ಯವನ್ನು ನಂಜರಾಜಯ್ಯನು ಬಿಟ್ಟುಹೋದನು.

ಕಲೆ ಮತ್ತು ವಾಸ್ತುಶಿಲ್ಪ

ಒಡೆಯರೂ ದಳವಾಯಿಗಳೂ ರಾಜ್ಯದ ಕಲಾ ಪ್ರತಿಭೆಗೆ ಬೇಕಾದಷ್ಟು ಪ್ರೋತ್ಸಾಹ ನೀಡಿದರು. ವಾಸ್ತುಶಿಲ್ಪ, ಶಿಲ್ಪ , ವರ್ಣಚಿತ್ರ, ಸಂಗೀತ, ನಾಟ್ಯ ಮತ್ತು ನಾಟಕಗಳು ಅಭಿವೃದ್ಧಿ ಹೊಂದಿದುವು. ನಂಜರಾಜನು ವಿದ್ವಾಂಸನಾಗಿದ್ದುದು ಮಾತ್ರವಲ್ಲದೆ, ಕಲೆ ಮತ್ತು ವಾಸ್ತುಶಿಲ್ಪಗಳ ಪ್ರೇಮಿಯೂ ಪೋಷಕನೂ ಆಗಿದ್ದನು. ಮೈಸೂರಿನ ತ್ರಿಣೇಶ್ವರ ದೇವಾಲಯದ ಗೋಪುರವನ್ನು ನಿರ್ಮಿಸಿದ ಲಿಂಗಾಚಾರಿ ಎಂಬ ಕಲಾವಿದನು ನಂಜರಾಜನ ಆಶ್ರಯದಲ್ಲಿದ್ದನು.[೬೨೦] ಕಂಚಿನಿಂದ ಮಾಡಿದ ವಿಗ್ರಹಗಳಂತೂ ಆ ಕಾಲದ ಅಪ್ರತಿಮ ಕೃತಿಗಳು. ದಳವಾಯಿ ನಂಜರಾಜನು ವೀರಶೈವ ಧರ್ಮದ ಅನುಯಾಯಿ. ಶಿಲ್ಪಕ್ಷೇತ್ರದಲ್ಲಿ ಅವನ ಕೊಡುಗೆಯೂ ಇದನ್ನು ಸಮರ್ಥಿಸಿತ್ತು. ಶ್ರೀರಂಗಪಟ್ಟಣದ ಗಂಗಾಧರೇಶ್ವರ ದೇವಾಲಯಕ್ಕೆ ಅವನು ದಕ್ಷಿಣಾಮೂರ್ತಿಯ ಲೋಹದ ವಿಗ್ರಹವನ್ನು ಮಾಡಿಸಿಕೊಟ್ಟನು. ನಂಜನಗೂಡಿನ ಶ್ರೀಕಂಠೇಶ್ವರ ದೇವಾಲಯದಲ್ಲಿ ಕರಾಚುರಿ ನಂಜರಾಜನು ಸ್ಥಾಪಿಸಿದ ೬೪ ಶಿವಶರಣರ ವಿಗ್ರಹಗಳು ಆ ಕಾಲದ ಲೋಹಶಿಲ್ಪಗಳ ಮಾದರಿಗಳಾಗಿವೆ. [೬೨೧] ತಾಂಡವೇಶ್ವರ, ಕಾಮಾಕ್ಷಿಅಮ್ಮ, ಸರ್ವಮಂಗಳ ಅಮ್ಮ ಮತ್ತು ಪಾರ್ವತಿ ಹಾಗೂ ಇತರ ವಿಗ್ರಹಗಳೂ ಲೋಹದಿಂದಾದವು.[೬೨೨]

ಈ ಕಾಲಾವಧಿಯಲ್ಲಿ ಅನೇಕ ಕೆರೆಗಳು, ಕಟ್ಟಡಗಳು, ಕಾಲುವೆಗಳು ಮತ್ತು ದೇವಾಲಯಗಳು ಕೂಡ ನಿರ್ಮಾಣಗೊಂಡುವು. ಸುಬ್ಬಾಪಂಡಿತನು ಬಲಮುರಿಯ ಸಮೀಪದಲ್ಲಿ ಪಾರ್ವತಿದೇವಿಯ ವಿಗ್ರಹವನ್ನು

ಕಟ್ಟಿಸಿದನು.[೬೫೩] ಯಳಂದೂರಿನ ಲಿಂಗರಾಜಒಡೆಯನ ಮಗ ಚಾಮರಾಜ ಒಡೆಯರ್ ಯಳಂದೂರಿನಲ್ಲಿ ಒಂದು ದೇವಾಲಯವನ್ನು ಸ್ಥಾಪಿಸಿ ಅಲ್ಲಿ ಪಂಚಲಿಂಗ ವಿಗ್ರಹವನ್ನು ಸ್ಥಾಪಿಸಿದನು.[೬೫೪] ದಳವಾಯಿ ದೇವರಾಜಯ್ಯನು ಶ್ರೀರಂಗಪಟ್ಟಣದಲ್ಲಿ ಸೀತಾವಿಲಾಸ ರಂಗಮಂಟಪವನ್ನು ನಿರ್ಮಿಸಿದನು.[೬೫೫] ಕರಾಚುರಿ ನಂಜರಾಜನು ಚಾಮರಾಜೇಶ್ವರ ದೇವಾಲಯಕ್ಕೆ ಕಂಚಿನಿಂದ ತಯಾರಿಸಿದ ಒಂದು ಬಾಗಿಲನ್ನು ಮಾಡಿಸಿಕೊಟ್ಟನು.[೬೫೬] ಅವನೇ ಮೈಸೂರಿನ ತೃಣೇಶ್ವರ ದೇವಾಲಯದ ಮುಖ್ಯದ್ವಾರದ ಮೇಲಿನ ಗೋಪುರವನ್ನು ಕಟ್ಟಿಸಿದನು.[೬೫೭] ದಳವಾಯಿ ದೇವರಾಜಯ್ಯನು ಕಪಿನಿ ನದಿಗೆ ನಂಜನಗೂಡಿನ ಬಳಿ ಮಲ್ಲನ ಮೂಲೆಯಲ್ಲಿ ಒಂದು ಸೇತುವೆಯನ್ನು ಕಟ್ಟಿಸಿದರೆ,[೬೫೮] ನಂಜರಾಜಯ್ಯನು ಕನ್ನಂಬಾಡಿಯಲ್ಲಿ ಕಾವೇರಿ ನದಿಗೆ ಸೇತುವೆ ಹಾಕಿಸಿದನು.[೬೫೯] ಅವನ ಸೇವಕನಾದ ವೀರಯ್ಯನು ಮಲೆದೇವನಹಳ್ಳಿಯಲ್ಲಿ ಒಂದು ಕೆರೆಯನ್ನು ನಿರ್ಮಿಸಿದನು.[೬೬೦]

ಮೈಸೂರಿನ ಅರಸರು ನಾಟ್ಯಕಲೆಯನ್ನೂ ಪ್ರೋತ್ಸಾಹಿಸಿದರು. ಮೈಸೂರಿನ ರಾಜಾಸ್ಥಾನದಲ್ಲಿ ನರ್ತಕಿಯರು ಮತ್ತು ನಾಟ್ಯಕಲೆ ಅವಿಭಾಜ್ಯ ಅಂಗವಾಗಿದ್ದುವು. ಸಮಕಾಲೀನ ಲೇಖಕರು ಆ ದಿನಗಳಲ್ಲಿದ್ದ ನಾಟ್ಯಕಲೆಯ ಉತ್ತಮವಾದ ನಿರೂಪಣೆಯನ್ನು ನೀಡಿದ್ದಾರೆ. ರಾಜಾಸ್ಥಾನದಲ್ಲಿ ನರ್ತಕಿಯರದೇ ಈ ಕಲೆಯಲ್ಲಿ ಮೇಲುಗೈ ಆಗಿತ್ತು.[೬೬೧] ಶಾಸ್ತ್ರೀಯ ನಾಟ್ಯವಲ್ಲದೆ ಆ ದಿನಗಳಲ್ಲಿ ಕೆಲವು ಜನಪದ ನೃತ್ಯಗಳೂ ಪ್ರಚುರವಾಗಿದ್ದುವು. ಕೋಲಾಟವು ತುಂಬಾ ಜನಪ್ರಿಯವಾಗಿತ್ತು.[೬೬೨]

ಒಂದು ಕಲೆಯಾಗಿ ನಾಟಕವೂ ಅಧಿಕವಾದ ಪ್ರೋತ್ಸಾಹವನ್ನು ಪಡೆಯಿತು. ಸಂಸ್ಕೃತ, ಕನ್ನಡ ಮತ್ತು ತೆಲುಗುಗಳಲ್ಲಿ ವಿದ್ವಾಂಸನಾಗಿದ್ದ ವೆಂಕಾಮಾತ್ಯನು ಎಂಟು ನಾಟಕಗಳನ್ನು ಬರೆದಿದ್ದಾನೆ, ಅವು ಕಾಮವಿಲಾಸಭಾಣ, ಕುಕ್ಷಂಭರೀ ಪ್ರಹಸನ, ಸೀತಾಕಲ್ಯಾಣ ವೀಥಿ, ರುಕ್ಮಿಣೀ ಮಾಧವಾಂಕ, ಉರ್ವಶೀ ಮೀಹಾಮೃಗ, ಮಹೇಂದ್ರವಿಜಯ ಡಿಮ, ವೀರರಾಘವವ್ಯಾಯೋಗ.[೬೬೩] ನಂಜನಗೂಡಿನ ಶ್ರೀಕಂಠೇಶ್ವರ ಸ್ವಾಮಿಯ ಉತ್ಸವದ ಸಮಯದಲ್ಲಿ ಕವಿ ನರಸಿಂಹಸ್ವಾಮಿಯ ಎದುರಿಗೆ ಕೈತವಚಂದ್ರ ಕೀಲ ಭಾಣ ಎಂಬ ನಾರಾಯಣಸ್ವಾಮಿ ಬರೆದ ನಾಟಕವನ್ನು ಪ್ರದರ್ಶಿಸಲಾಯಿತು. ದಳವಾಯಿ ನಂಜರಾಜಯ್ಯನ ಆಶ್ರಿತನಾದ ನರಸಿಂಹ ಕವಿಯು ಬರೆದ ಚಂದ್ರಕಲಾ ಪರಿಣಯ ಎಂಬುದು ಇನ್ನೊಂದು ನಾಟಕ. ಐದು ಅಂಕಗಳ ಈ ನಾಟಕವು ನಂಜರಾಜಯಶೋಭೂಷಣದಲ್ಲಿ ಬರುತ್ತದೆ. ಇದನ್ನು ನಂಜನಗೂಡಿನ ಶ್ರೀಕಂಠೇಶ್ವರನ ವಂಸತೋತ್ಸವದ ಸಂದರ್ಭದಲ್ಲಿ ಅಭಿನಯಿಸಬೇಕೆಂದು ಉದ್ದೇಶಿಸಲಾಗಿತ್ತು. ಯಕ್ಷಗಾನಕ್ಕೂ ಹೆಚ್ಚಿನ ಪ್ರೋತ್ಸಾಹ ದೊರಕಿತು. ಶ್ರವಣಬೆಳಗೊಳದ ಬಳಿ ವೇಣುಪುರಿಯಲ್ಲಿದ್ದ ಬೊಮ್ಮಣ್ಣ ಕವಿಯ ಮಗ ರಾಯಣ್ಣನೆಂಬ ಜೈನಕವಿಯು ಬರೆದ ಪದ್ಮಾವತಿಯ ಕೊರವಂಜಿ ಅಥವಾ ರಾಮಜನನಮು ಎಂಬ ಯಕ್ಷಗಾನವು ಈ ಅವಧಿಗೆ ಸೇರಿದುದು. ಇದರಲ್ಲಿ ಕವಿಯು ಕೃಷ್ಣರಾಜಒಡೆಯರ್‌ರ ಹೆಸರನ್ನು ಉಲ್ಲೇಖಿಸುತ್ತಾನೆ. ಇವರು ಮೊದಲನೆಯವರೋ ಎರಡನೆಯವರೋ ಎನ್ನುವುದು ತಿಳಿಯುವುದಿಲ್ಲ. ಒಟ್ಟಿನಲ್ಲಿ ಮೈಸೂರಿನ ಒಡೆಯರೂ ದಳವಾಯಿಗಳೂ ೧೮ನೆಯ ಶತಮಾನದ ಈ ಭಾಗದಲ್ಲಿ ಕಲೆಯ ಉದಾರ ಪೋಷಕರಾಗಿದ್ದರು. ರಾಜ್ಯದಲ್ಲಿ ಕಲೆಯ ವಿವಿಧ ವಿಭಾಗಗಳ ಸರ್ವತೋಮುಖ ಅಭಿವೃದ್ಧಿ ಗೋಚರವಾಯಿತು.

ಸಾಮಾಜಿಕ ಪರಿಸ್ಥಿತಿ

ಈ ಅವಧಿಯ ಸಾಮಾಜಿಕ ಜೀವನದ ಚಿತ್ರವು ಹಿಂದಿನ ಯುಗದ ಚಿತ್ರಕ್ಕಿಂತ ವ್ಯತ್ಯಸ್ತವಾದುದೇನೂ ಅಲ್ಲ. ಬ್ರಾಹ್ಮಣ. ಕ್ಷತ್ರೀಯ, ವೈಶ್ಯ ಮತ್ತು ಶೂದ್ರರೆಂಬ ನಾಲ್ಕು ಮುಖ್ಯ ವರ್ಗಗಳು ಅನೇಕಾನೇಕ ಉಪಜಾತಿಗಳಾಗಿ ಪಂಗಡಗಳಾಗಿ ವಿಭಜನೆಗೊಂಡಿದ್ದುವು. ವರ್ಣಾಶ್ರಮಧರ್ಮವನ್ನು ಕಡ್ಡಾಯವಾಗಿ ಪಾಲಿಸಲಾಗುತ್ತಿತ್ತು. ಬ್ರಾಹ್ಮಣರು ಸಮಾಜದಲ್ಲಿ ಎಲ್ಲಾ ಸೌಲಭ್ಯಗಳನ್ನೂ ಪಡೆದಿದ್ದರು. ಮಹಿಳೆಯರ

ಸ್ಥಾನಮಾನದಲ್ಲಿ ಯಾವ ಬದಲಾವಣೆಯೂ ಆಗಿರಲಿಲ್ಲ. ಅವರು ಗೃಹಕೃತ್ಯಕ್ಕೆ ಬಂಧಿತರಾಗಿ ತಮ್ಮ ಜೀವಿಕೆಗೆ ಪುರುಷರನ್ನು ಅವಲಂಬಿಸಿದ್ದರು. ಸಾಹಿತ್ಯಕ್ಷೇತ್ರಕ್ಕೆ ಕೊಡುಗೆ ನೀಡಿದ ವಿದ್ಯಾವತಿಯರಾದ ಸ್ತ್ರೀಯರೂ ಇದ್ದರು. ಮುಖ್ಯವಾಗಿ ಚೆಲುವಾಂಬೆ[೩೩೪], ಹೆಳವನಕಟ್ಟೆ ಗಿರಿಯಮ್ಮ,[೩೩೫] ನಂಜನಗೂಡಿನ ರಂಗಮ್ಮ[೩೩೬] ಹೆಸರಾದವರು. ಬಾಲವಿವಾಹವು ರೂಢಿಯಲ್ಲಿತ್ತು. ಸತಿಪದ್ಧತಿಯಿರಲಿಲ್ಲ. ತೆರ ಅಥವಾ ಕನ್ಯಾಶುಲ್ಕವು ಪ್ರಚಲಿತವಾಗಿತ್ತು[೩೩೭] ಮೇಲುವರ್ಗದ ವಿಧವೆಯರಿಗೆ ಕೆಲವು ಸಾಮಾಜಿಕ ತಡೆಗಳಿದ್ದುವು. ಅವರು ಆಭರಣಗಳನ್ನಾಗಲಿ ಬಳೆಗಳನ್ನಾಗಲಿ ಧರಿಸುವಂತಿರಲಿಲ್ಲ. ಯಾವುದೇ ಸಮಾರಂಭದಲ್ಲಿ ಭಾಗವಹಿಸು ವಂತಿರಲಿಲ್ಲ. ಬ್ರಾಹ್ಮಣರೊಂದಿಗಾಗಲಿ ಇತರ ಮೇಲ್ವರ್ಗಗಳೊಂದಿಗಾಗಲಿ ಪುನರ್ ವಿವಾಹ ಮಾಡಿಕೊಳ್ಳು ವಂತಿರಲಿಲ್ಲ. ಶೂದ್ರರ ಕೆಲವು ವರ್ಗಗಳೊಂದಿಗೆ ಮಾಡಿಕೊಳ್ಳಬಹುದಾಗಿತ್ತು. ಅದನ್ನು ಕೂಡಾವಳಿ ಪದ್ಧತಿ ಎನ್ನುತ್ತಿದ್ದರು.[೩೩೮]

ಉಡುಗೆಯನ್ನು ಕುರಿತು ಹೇಳುವುದಾದರೆ, ರಾಜಮನೆತನಕ್ಕೆ ಸೇರಿದವರು, ಸಚಿವರು, ದಳವಾಯಿಗಳು ರೇಷ್ಮೆಯನ್ನು ಧರಿಸುತ್ತಿದ್ದರು.[೩೩೯] ಬ್ರಾಹ್ಮಣರದು ಸರಳವಾದ ಉಡುಗೆ, ಧೋತಿ ಮತ್ತು ಮೇಲೆ ಹೊದೆಯುವ ಉತ್ತರೀಯ. ಮೇಲುಕೋಟೆಯಲ್ಲಿ ಅಧ್ಯಯನ ಮಾಡುತ್ತಿದ್ದ ವಿದ್ಯಾರ್ಥಿಗಳು ಬಿಳಿಯ ವಸ್ತ್ರವನ್ನು ಧರಿಸಿ ಎದೆಯ ಮೇಲೆ ಕೃಷ್ಣಾಜಿನವನ್ನು ಹಾಕಿಕೊಳ್ಳುತ್ತಿದ್ದರು ಎಂದು ವರ್ಣಿಸಿದೆ.[೩೪೦] ನುರೊಂದನು ಆ ಕಾಲದಲ್ಲಿ ಮಹಿಳೆಯರು ಧರಿಸುತ್ತಿದ್ದ ಉಡುಪನ್ನು ವರ್ಣಿಸಿದ್ದಾನೆ, ಸೀರೆ ಮತ್ತು ರವಿಕೆಗಳ ಸರಳವಾದ ಉಡುಗೆಯನ್ನು ಅವರು ಧರಿಸುತ್ತಿದ್ದರು. ಆಭರಣಗಳನ್ನು ಪುರುಷರು ಮಹಿಳೆಯರು ಇಬ್ಬರೂ ಹಾಕಿಕೊಳ್ಳುತ್ತಿದ್ದರು. ಕೊರಳ ಸರ, ಕೈಕಾಸು, ತೋಳಬಂದಿ, ಉಂಗುರ, ಕಿವಿಯೋಲೆಗಳು ಎಲ್ಲರಿಗೂ ಸಮಾನವಾಗಿದ್ದುವು. ಮೂಗುತಿ, ಬಳೆ, ಕಂಕಣ ಮೊದಲಾದವು ೧೮ನೇ ಶತಮಾನದ ಸ್ತ್ರೀಯರಿಗೆ ಪ್ರಿಯವಾಗಿದ್ದುವು. ಆಹಾರದ ಅಭ್ಯಾಸವೂ ಸಾಂಪ್ರದಾಯಿಕ ವಿಚಾರಗಳು ಮತ್ತು ಜಾತಿ ಕಟ್ಟಲೆಗಳಿಗೆ ಅನುಗುಣವಾಗಿದ್ದುವು. ಬ್ರಾಹ್ಮಣರು, ಜೈನರು ಮತ್ತು ವೀರಶೈವರಿಗೆ ಮಾಂಸಾಹಾರವು ನಿಷಿದ್ಧವಾಗಿತ್ತು. ಹಬ್ಬಗಳು ೧೮ನೆಯ ಶತಮಾನದ ಸಾಮಾಜಿಕ ಜೀವನದ ಲಕ್ಷಣಗಳೇ ಆಗಿದ್ದುವು. ವಿವಿಧ ಸಮುದಾಯಗಳು ಆಚರಿಸುತ್ತಿದ್ದ ವಾರ್ಷಿಕ ಹಬ್ಬಗಳು ಸಂಕ್ರಾಂತಿ, ಮಹಾಶಿವರಾತ್ರಿ, ರಾಮನವಮಿ, ದೀಪಾವಳಿ, ದಸರಾ ಇತ್ಯಾದಿ.[೩೪೧] ಕೆಳಜಾತಿಗಳವರು ತಪ್ಪದೆ ಮಾರಿಜಾತ್ರೆ ನಡೆಸುತ್ತಿದ್ದರು. ಸಮಾಜದಲ್ಲಿ ಶಾಂತಿ ಮತ್ತು ಸ್ಥಿರತೆಗಳನ್ನು ಮೂಡಿಸಲು ದಳವಾಯಿಗಳು ಸಮರ್ಥರಾಗಿದ್ದರು.

ಧರ್ಮ

ಜನರು ಅಧಿಕವಾಗಿ ಧಾರ್ಮಿಕ ಪ್ರವೃತ್ತಿಯವರಾಗಿದ್ದರು. ಅವರ ಬದುಕಿನಲ್ಲಿ ಯಾವುದೇ ಸಮಾರಂಭವು ಧಾರ್ಮಿಕ ಅಂಶವಿಲ್ಲದೆ ನಡೆಯುತ್ತಿರಲಿಲ್ಲ. ಒಡೆಯರು ಮತ್ತು ದಳವಾಯಿಗಳು ರಾಜ್ಯದಲ್ಲಿ ಧರ್ಮ ಸಹಿಷ್ಣುತೆಯನ್ನು ಸ್ಥಾಪಿಸಿದ್ದರು. ಉದಾಹರಣೆಗೆ ೧ನೇ ಕೃಷ್ಣರಾಜ ಒಡೆಯರ್ ಶ್ರೀವೈಷ್ಣವ ಧರ್ಮದ ಅನುಯಾಯಿ, ಅವರ ದಳವಾಯಿ ನಂಜರಾಜಯ್ಯನು ವೀರಶೈವ ಧರ್ಮವನ್ನು ಪಾಲಿಸುತ್ತಿದ್ದನು. ಕರಾಚುರಿ ನಂಜರಾಜಯ್ಯನು ತನ್ನ ಮಗಳನ್ನು ೧೭೪೬ರಲ್ಲಿ ೨ನೇ ಕೃಷ್ಣರಾಜ ಒಡೆಯರ್‌ರಿಗೆ ಮದುವೆ ಮಾಡಿಕೊಟ್ಟನು. ಹೈದರಲಿ ಮುಸ್ಲಿಮನಾಗಿದ್ದರೂ, ಕರಾಚೂರಿ ನಂಜರಾಜಯ್ಯನಿಂದಾಗಿ ಮೇಲೆ ಬಂದು ೨ನೇ ಕೃಷ್ಣರಾಜ ಒಡೆಯರಿಗೆ ಬಹಳ ನಿಕಟವರ್ತಿಯಾದನು. ವೆಂಕಪ್ಪಯ್ಯ ಅಥವಾ ವೆಂಕಾಮಾತ್ಯನು ಬ್ರಾಹ್ಮಣನಾದರೂ ದಳವಾಯಿ ಸೋದರರು ಅವನನ್ನು ಪ್ರಧಾನಿಯನ್ನಾಗಿ ನೇಮಿಸಿದರು. ಅವರು ಹಿಂದೂ ದೇವಾಲಯಗಳಿಗೂ ಇಸ್ಲಾಂ ಧರ್ಮಕ್ಕೂ ಕೊಡುಗೆಗಳನ್ನು ನೀಡಿದರು. ಕೃಷ್ಣರಾಜ ಒಡೆಯರ್ ಕೃಷ್ಣರಾಜ ಸಮುದ್ರವೆಂಬ ಅಗ್ರಹಾರವನ್ನೂ[೩೪೨] ತಮ್ಮ ತಾಯಿಯ ಹೆಸರಿನಲ್ಲಿ ದೇವಾಂಬ ಸಮುದ್ರ ಅಗ್ರಹಾರವನ್ನೂ ನಿರ್ಮಿಸಿದರು.[೩೪೩] ಹಾಗೆಯೇ ಅವರ ಮಂತ್ರಿ, ದಳವಾಯಿಗಳೂ ಕೂಡ ಅಗ್ರಹಾರಗಳನ್ನು ಕಟ್ಟಿಸಿ ಬ್ರಾಹ್ಮಣರಿಗೆ ದಾನ

ಮಾಡಿದರು. ಪ್ರಧಾನ ವೆಂಕಪ್ಪಯ್ಯನೇ ೧೭೪೪ರಲ್ಲಿ ವೆಂಕಟರಾಜ ಸಮುದ್ರವನ್ನು ಕಟ್ಟಿಸಿದನು.[೩೪೪] ದಳವಾಯಿ ನಂಜರಾಜಯ್ಯನೂ ದೇವರಾಜಯ್ಯನೂ ಕ್ರಮವಾಗಿ ೧೭೪೧ರಲ್ಲಿ ನಂಜರಾಜ ಸಮುದ್ರವನ್ನೂ[೩೪೫] ೧೭೪೯ರಲ್ಲಿ ದೇವರಾಜ ಸಮುದ್ರವನ್ನೂ[೩೪೬] ಕಟ್ಟಿಸಿ ವಿವಿಧ ಬ್ರಾಹ್ಮಣ ಸಮುದಾಯಗಳಿಗೆ ದಾನ ಮಾಡಿದರು. ಇಸ್ಲಾಂ ಧರ್ಮಕ್ಕೆ ಪ್ರೋತ್ಸಾಹ ನೀಡುವ ಸಲುವಾಗಿ ೨ನೇ ಕೃಷ್ಣರಾಜಒಡೆಯರ್ ಹೈದರಲಿಗೆ ಭೂಮಿಯನ್ನು ನೀಡಿ ಪತ್ರಮಾಡಿಕೊಟ್ಟರು.[೩೪೭] ಒಟ್ಟಿನಲ್ಲಿ ಈ ಅವಧಿಯು ಮೈಸೂರು ರಾಜ್ಯದಲ್ಲಿ ಸಾಮಾಜಿಕ ಅಭಿವೃದ್ಧಿಯನ್ನೂ ಧಾರ್ಮಿಕ ಸಾಮರಸ್ಯವನ್ನೂ ಕಂಡಿತು.

-ಡಾ. ಬಿ.ವಿ. ಸುಧಾಮಣಿ

ಟಿಪ್ಪಣಿಗಳು

೧ ಎ.ಕ. ೧೧, ಹೊಳಲ್ಕೆರೆ ೧೩೨, ಕ್ರಿ.ಶ. ೧೫೩೩

೨. ಮಹಾಲಿಂಗಂ, ಟಿ.ವಿ.: ಸೌತ ಇಂಡಿಯನ್ ಪಾಲಿಟಿ, ಪು. ೩೨೦

೩ ಎ.ಕ. ೧೧, ದಾವಣಗೆರೆ ೧೦೬, ಕ್ರಿ.ಶ. ೧೫೨೮

೪ ಅದೇ, ೫, ಮಂಜರಾಬಾದ್ ೯, ಕ್ರಿ.ಶ ೧೬೫೪

೫ ಅದೇ, ೧೨, ಸಿರಾ ೧, ಕ್ರಿ.ಶ. ೧೬೦೯

೬ ಅದೇ, ೧೧, ಹಿರಿಯೂರು. ೩೫

೭ ಅದೇ, ೧೦, ಕೋಲಾರ ೧೬೩, ಕ್ರಿ.ಶ. ೧೬೪೨

೮ ಅದೇ, ೫, ಹಾಸನ ೧೩, ಕ್ರಿ.ಶ. ೧೫೨೬

೯ ವಿಲ್ಸನ್ ಗ್ಲಾಸರಿ, ಪು. ೨೧

೧೦ ಕೆಳದಿನೃಪವಿಜಯಂ ಪು. ೧೮-೨೬

೧೧ ಅಯ್ಯಂಗಾರ್, ಎಸ್.ಕೆ.: ದಿ ಸೋರ್ಸಸ್ ಆಫ್‌ದಿ ವಿಜಯನಗರ ಹಿಸ್ಟರಿ, ಪು. ೧೯೫; ಬುಕನನ್; ಎ ಜರ್ನಿ ಫ್ರಂ ಮದ್ರಾಸ್ ಥ್ರೂ ದಿ ಕಂಟ್ರೀಸ್ ಆಫ್ ಮೈಸೂರ್, ಕೆನರಾ ಎಂಡ್ ಮಲಬಾರ್, ಸಂ. ೨, ಲಂಡನ್, ೧೮೦೭, ಪು. ೨೪೯

೧೨ ಶಿವತತ್ವರತ್ನಾಕರ, ತರಂಗ-೫

೧೩ ಲೂಯಿ ರೈಸ್, ಬಿ.: ಮೈಸೂರು ಗೆಜೆಟಿಯರ್ ಸಂ. ೨, ಪು. ೨೧-೨೨

೧೪ ಜೆ.ಎಂ .ಎಸ್, ಸಂ. ೧೪, ಪು. ೭೯

೧೫ ಎಂ. ಎಸ್. ಪುಟ್ಟಣ್ಣ: ಚಿತ್ರದುರ್ಗದ ಪಾಳೆಯಗಾರರು, ೧೯೨೪, ಪು. ೪

೧೬ ಸಿವೆಲ್, ಎ ಫರ್‌ಗಾಟನ್ ಎಂಪೈರ್, ಪು. ೨೫೯-೨೭೦

೧೭ ಅದೇ, ಪು. ೩೭೦

೧೮ ಅದೇ,

೧೯ ಅದೇ,

೨೦ ಅದೇ, ಪು. ೩೬೦

೨೧ ಅದೇ, ಪು. ೩೬೫-೩೭೦

೨೨ ಅದೇ, ಪು. ೩೭೦

೨೩ ಕೆ.ಎಸ್.ಎ., ಪು. ೨೬

೨೪ ಎ.ಕ. ೯, ದೇವನಹಳ್ಳಿ ೫೦, ಕ್ರಿ.ಶ. ೧೩೪೮
೨೫ ಅದೇ, ೫೪, ಕ್ರಿ.ಶ. ೧೪೬೭
೨೬ ಅದೇ, ದೊಡ್ಡಬಳ್ಳಾಪುರ ೫೦, ಕ್ರಿ.ಶ. ೧೫೧೩
೨೭ ಅದೇ, ಚನ್ನಪಟ್ಟಣ ೧೬೪, ಕ್ರಿ.ಶ. ೧೫೧೪
೨೮ ಅದೇ, ೧೧, ಹೊಳಲ್ಕೆರೆ ೧೩೧, ಕ್ರಿ.ಶ. ೧೫೩೩
೨೯ ಅದೇ, ೧೧, ಮಾಗಡಿ ೨೮, ಕ್ರಿ.ಶ. ೧೫೫೮
೩೦ ಸಿವೆಲ್, ಎ ಫರ್ಗಾಟನ್ ಎಂಪೈರ್, ಪು. ೨೬೯
೩೧ ಅದೇ, ಪು. ೨೭೦
೩೨ ಅದೇ, ಪು. ೩೫೪
೩೩ ಅದೇ, ಪು. ೩೫೫
೩೪ ಅದೇ, ನ್ಯೂನಿಜ್, ಪು. ೩೭೦
೩೫ ಶಿವತತ್ವರತ್ನಾಕರ, ಕಲ್ಲೋಲ ೫
೩೬ ಎಂ. ಎಸ್. ಪುಟ್ಟಣ, ಚಿತ್ರದುರ್ಗದ ಪಾಳೆಯಗಾರರು, ೧೯೦೪, ಪು.೪
೩೭ ಎ.ಕ. ೧೧, ಹೊಳಲ್ಕೆರೆ ೬, ಕ್ರಿ.ಶ. ೧೫೬೮ ಎ.ಕ. ೧೦, ಬೆಂಗಳೂರು. ೨೮೧, ೫೭, ೧೨೭
೩೮ ಫರ್ದರ್ ಸೋರ್ಸಸ್ ಆಫ್ ವಿಜಯನಗರ ಹಿಸ್ಟರಿ, ಸಂ. ೧, ಪು. ೨೯೯
೩೯ ಸಿವೆಲ್: ಪೂರ್ವೋಕ್ತ, ಪು. ೨೭೦
೪೦ ಎ.ಕ. ೧೧, ಚಳ್ಳಕೆರೆ ೯, ಕ್ರಿ.ಶ. ೧೮೫೩
೪೧ ಕೆಳದಿನೃಪವಿಜಯಂ, ಪು ೧೦-೧೧
೪೨ ಅದೇ, ಪು. ೧೮-೨೬
೪೩ ಲಿಂಗಣ್ಣಕವಿಯು ಎಂಟು ಮಾಗಣೆಗಳಿವೆಯೆಂದು ಹೇಳುತ್ತಾನೆ. ಆದರೆ ಏಳು ಮಾತ್ರ ಇವೆ.
೪೪ ಕೆಳದಿನೃಪವಿಜಯಂ, ಪು. ೨೮
೪೫ ಸೌ.ಇ.ಇ. ೯-೨, ಪು. ೬೬೬
೪೬ ಎಂ. ಎ. ಆರ್. ೧೯೨೮, ಪು. ೬೬
೪೭ ಕೆಳದಿನೃಪವಿಜಯಂ, ಪು. ೩೩; ಎಸ್. ಕೆ. ಅಯ್ಯಂಗಾರ್, ಪು. ೧೯೫-೧೯೬
೪೮ ಕ್ಯು.ಜೆ. ಎಂ. ಎಸ್. ಸಂ. ೨೧ ಪು. ೩೭೨
೪೯ ರೈಸ್: ಮೈಸೂರು ಗೆಜೆಟಿಯರ್, ಸಂ ೨, ಪು. ೪೫೮
೫೦ ಕೆಳದಿನೃಪವಿಜಯಂ, ಪು. ೨೬
೫೧ ಅದೇ,
೫೨ ಅದೇ, ಪು. ೨೮-೨೯
೫೩ ಅಯ್ಯಂಗಾರ್, ಎಸ್.ಕೆ.: ಸೋರ್ಸಸ್ ಆಫ್ ವಿಜಯನಗರ, ಪು ೧೯೫; ಬುಕ್‌ನನ್, ಪೂರ್ವೋಕ್ತ, ಸಂ. ೨, ಪು. ೨೮೯
೫೪ ಅದೇ, ಪು. ೧೯೫
೫೫ ರೈಸ್, ಪೂರ್ವೋಕ್ತ, ,ಸಂ.೨, ಪು. ೪೩೨
೫೬ ಕ್ಯು ಜೆ ಎಂ ಎಸ್, ಸಂ. ೨೧ ಪು. ೩೭೬; ಹೆರಾಸ್: ಆರವೀಡು, ಪು. ೧೭೮
೫೭ ಹೆರಾಸ್: ಅರವೀಡು, ಪು. ೧೨೯

೫೮ ಅದೇ.

೫೯ ರೈಸ್, ಪೂರ್ವೋಕ್ತ ಸಂ.೨, ಪು.೪೩೨

೬೦ ಅದೇ.

೬೧ ಕ್ಯು.ಜೆ. ಎಂ. ಎಸ್. ಸಂ. ೨೧, ಪು. ೩೭೭

೬೨ ಹೆರಾಸ್, ಪೂರ್ವೋಕ್ತ, ಪು. ೧೨೯; ಕ್ಯು.ಜೆ. ಎಂ ಎಸ್ ಸಂ. ೨೧, ಪು. ೩೭೭; ಎಸ್ ಕೆ ಅಯ್ಯಂಗಾರ್, ಪೂರ್ವೋಕ್ತ, ಪು ೪೫-೪೬, ಕೆಳದಿನೃಪವಿಜಯಂ, ಪು. ೩೩

೬೩ ಕ್ಯು.ಜೆ. ಎಂ. ಎಸ್, ೨೧, ಪು. ೪೫-೪೬

೬೪ ಹೆರಾಸ್: ಅರವೀಡು, ಪು. ೧೭೯

೬೫ ಕ್ಯು.ಜೆ. ಎಂ. ಎಸ್. ೨೧, ಪು. ೩೭೬

೬೬ ಅದೇ, ಪು ೩೭೬-೩೭೭

೬೭ ಹೆರಾಸ್, ಪೂರ್ವೋಕ್ತ, ಪು ೧೨೯; ಕ್ಯುಜೆ ಎಂ ಎಸ್, ೨೧, ಪು. ೩೭೬

೬೮ ಕೆಳದಿನೃಪವಿಜಯಂ, ಪು. ೩೯

೬೯ ಅದೇ.

೭೦ ಅದೇ.

೭೧ ಅದೇ.

೭೨ ಅದೇ.

೭೩ ಸೌ.ಇ.ಇ.೯-೨, ಪು. ೬೬೬

೭೪ ಕೆಳದಿನೃಪವಿಜಯಂ, ಪು. ೩೮

೭೫ ಅದೇ, ಪು. ೩೮

೭೬ ಅಯ್ಯಂಗಾರ್, ಎಸ್.ಕೆ.: ಪೂರ್ವೋಕ್ತ, ಪು. ೧೯೫

೭೭ ಎ.ಕ. ೫, ಎಸ್ ಜಿ. ೫, ಅದೇ ೭, ೨; ಕೆಳದಿನೃಪವಿಜಯಂ, ಪು. ೪೧

೭೮ ಕ್ಯು.ಜೆ. ಎಂ. ಎಸ್, ೨೧, ಪು. ೩೭೯

೭೯ ಅದೇ, ಜೆ. ಎ. ಆರ್. ಎಸ್, ೧೭೧, ಪು. ೧೯೦, ಕೆಳದಿನೃಪವಿಜಯಂ, ಪು. ೬೨ ; ಎಸ್.ಕೆ. ಅಯ್ಯಂಗಾರ್

೮೦ ರೈಸ್: ಮೈಸೂರು ಗೆಜೆಟಿಯರ್, ಸಂ. ೨, ಪು. ೪೩೫

೮೧ ಅಯ್ಯಂಗಾರ್, ಎಸ್.ಕೆ.: ಪೂರ್ವೋಕ್ತ, ಪು. ೩೫೭

೮೨ ಪೀಟರ್ ಮುಂಡಿ: ಟ್ರಾವಲ್ಸ್, ೨, ಪು. ೮೧-೮೨

೮೩ ಚಿಟ್ನಿಸ್ ಕೆ.ಎಸ್: ಕೆಳದಿ ಪಾಲಿಟಿ, ಧಾರವಾಡ, ೧೯೭೪, ಪು. ೨೧೦

೮೪ ಎ.ಕ. ೯, ಹೊಸಕೋಟೆ ೧೧೭, ಕ್ರಿ.ಶ. ೧೩೬೭

೮೫ ಅದೇ, ಸಿ. ಬಿ. ೪೦

೮೬ ಅದೇ ೧೧೭, ಕ್ರಿ.ಶ. ೧೩೬೭

೮೭ ಕ್ಯು.ಜೆ. ಎಂ. ಎಸ್. ೧೪, ಸಂ-೨, ೧೯೨೪

೮೮ ಅದೇ, ಪು. ೭೨೫

೮೯ ಬಿ. ಲೂಯಿ ರೈಸ್: ಮೈಸೂರು, ೨, ಪು. ೨೨

೯೦ ಕ್ಯು.ಜೆ. ಎಂ. ಎಸ್, ೧೪ ಪು. ೭೯

೯೧ ಅದೇ, ಪು. ೭೨೮

೯೨ ಲೂಯಿ ರೈಸ್, ಪೂರ್ವೋಕ್ತ, ೨, ಪು. ೨೧-೨೨

೯೩ ಎ.ಕ. ೯, ಬೆಂಗಳೂರು, ೪೭ ಕ್ರಿ.ಶ. ೧೩೪೬; ಅದೇ ೯೭, ಕ್ರಿ.ಶ. ೧೩೪೭; ಅದೇ ೧೩೨, ಕ್ರಿ.ಶ. ೧೩೭೬; ಅದೇ ೮೦, ಕ್ರಿ.ಶ. ೧೫೧೫; ಅದೇ ೭೮, ಕ್ರಿ.ಶ. ೧೪೯೫; ಅದೇ, ೮೦, ಕ್ರಿ.ಶ. ೧೫೧೫; ಅದೇ ೧೯, ಕ್ರಿ.ಶ. ೧೫೨೪; ಅದೇ ೨೮, ಕ್ರಿ.ಶ. ೧೫೩೦; ಅದೇ ಬೆಂಗಳೂರು ೩೦, ಕ್ರಿ.ಶ ೧೫೪೪

೯೪ ಅದೇ, ದೇವನಹಳ್ಳಿ ೫೦ ಕ್ರಿ.ಶ. ೧೩೪೮; ಅದೇ ೨೯, ಕ್ರಿ.ಶ. ೧೩೫೨; ಅದೇ ೫೬, ಕ್ರಿ.ಶ. ೧೪೬೭

೯೫ ಅದೇ, ದೊಡ್ಡಬಳ್ಳಾಪುರ ೫೦, ಕ್ರಿ.ಶ. ೧೫೧೩; ಅದೇ ೪೦ ಕ್ರಿ.ಶ ೧೫೪೧

೯೬ ಅದೇ, ಚನ್ನಪಟ್ಣ ೧೬೯, ಕ್ರಿ.ಶ. ೧೪೧೪; ಅದೇ ೧೫೮, ಕ್ರಿ.ಶ. ೧೪೭೮; ಅದೇ ೫೨, ಕ್ರಿ.ಶ. ೧೪೯೯; ಅದೇ ೧೫೬,ಕ್ರಿ.ಶ. ೧೫೨೩ ಅದೇ ೧೬೪ ಕ್ರಿ.ಶ. ೧೫೧೪; ಅದೇ ೧೮೧, ಕ್ರಿ.ಶ. ೧೫೩೦; ಅದೇ ೫೩, ಕ್ರಿ.ಶ. ೧೫೩೪; ಅದೇ ೧೮೨, ಕ್ರಿ.ಶ. ೧೫೩೪

೯೭ ಅದೇ ಮಾಗಡಿ ೩೨, ಕ್ರಿ.ಶ. ೧೪೮೪; ಅದೇ ೬೮, ಕ್ರಿ.ಶ. ೧೫೧೬; ಅದೇ, ೧೧, ಕ್ರಿ.ಶ. ೧೫೨೦; ಅದೇ, ೧೫೩೧; ಅದೇ ೬೦. ಕ್ರಿ.ಶ. ೧೫೪೦; ಅದೇ ೭೪, ಕ್ರಿ.ಶ. ೧೫೪೭; ಅದೇ ೬೦, ಕ್ರಿ.ಶ. ೧೫೪೦; ಅದೇ, ೬೭, ಕ್ರಿ.ಶ. ೧೫೫೪, ಅದೇ ೨೮, ಕ್ರಿ.ಶ. ೧೫೫೮

೯೮ ಅದೇ, ನೆಲಮಂಗಲ ೧೯, ಕ್ರಿ.ಶ. ೧೩೪೦; ಅದೇ, ೯. ಕ್ರಿ.ಶ. ೧೩೫೯; ಅದೇ ೩೫, ಕ್ರಿ.ಶ. ೧೪೫೯

೯೯ ಅದೇ, ಹೊಸಕೋಟೆ ೫೧, ಕ್ರಿ.ಶ. ೧೩೪೩; ಅದೇ ೧೧೭, ಕ್ರಿ.ಶ. ೧೩೬೭; ಅದೇ ೧೧೩, ಕ್ರಿ.ಶ. ೧೩೮೦; ಅದೇ ೬೩, ಕ್ರಿ.ಶ ೧೪೧೨; ಅದೇ ೬೧೮, ಕ್ರಿ.ಶ ೧೪೯೧; ಅದೇ ೩೯, ಕ್ರಿ.ಶ. ೧೫೪೯; ಅದೇ ೨, ಕ್ರಿ.ಶ. ೧೫೫೯; ಅದೇ ೭೩, ಕ್ರಿ.ಶ. ೧೫೬೦, ಅದೇ ೧೭, ಕ್ರಿ.ಶ. ೧೬೫೨; ಅದೇ ೧೧೨, ಕ್ರಿ.ಶ. ೧೩೪೩.

೧೦೦ ಪುಟ್ಟಣ್ಣ, ಎಂ.ಎಸ್.: ಚಿತ್ರದುರ್ಗದ ಪಾಳೆಯಗಾರರು, ಪು. ೧

೧೦೧ ಅದೇ, ಪು. ೪

೧೦೨ ರೈಸ್, ಬಿ.ಎಲ್.: ಪೂರ್ವೋಕ್ತ, ಸಂ. ೫, ಪು. ೫೦೦-೫೦೨

೧೦೩ ಎ.ಕ. ೧೧, ಹೊಳಲ್ಕೆರೆ ೭೫, ಕ್ರಿ.ಶ. ೧೪೦೫; ಅದೇ ೮೯, ಕ್ರಿ.ಶ. ೧೪೦೬; ಅದೇ ೨೬, ಕ್ರಿ.ಶ. ೧೪೮೩; ಅದೇ ೧೨೮, ಕ್ರಿ.ಶ. ೧೫೧೫; ಅದೇ ೭೦, ಕ್ರಿ.ಶ. ೧೫೧೭, ಅದೇ ೭೫, ಕ್ರಿ.ಶ. ೧೫೧೮; ಅದೇ ೧೫, ಕ್ರಿ.ಶ. ೧೫೨೫; ಅದೇ ೧೩೨, ಕ್ರಿ.ಶ. ೧೫೩೩; ಅದೇ ೭೧, ಕ್ರಿ.ಶ. ೧೫೪೦; ಅದೇ ೧೧೧, ಕ್ರಿ.ಶ. ೧೫೪೦; ಅದೇ ೧೧೦, ಕ್ರಿ.ಶ. ೧೫೪೬; ಅದೇ ೧೧೪, ಕ್ರಿ.ಶ. ೧೫೫೨; ಅದೇ ೨೧, ಕ್ರಿ.ಶ. ೧೫೯೦; ಅದೇ, ದಾವಣಗೆರೆ ೭೨, ಕ್ರಿ.ಶ. ೧೯೫೦; ಅದೇ ೨೨, ೧೦೭, ಕ್ರಿ.ಶ. ೧೬೧೬; ಅದೇ ೧೪೬, ಕ್ರಿ.ಶ. ೧೫೨೦; ಅದೇ ೧೦೬, ಕ್ರಿ.ಶ. ೧೫೨೮; ಅದೇ ೩೧, ಕ್ರಿ.ಶ. ೧೫೩೧; ಅದೇ ೨೨, ಕ್ರಿ.ಶ. ೧೫೫೪; ಅದೇ , ಕ್ರಿ.ಶ. ೧೫೬೧; ಅದೇ ೩೦, ಕ್ರಿ.ಶ. ೧೫೬೨; ಅದೇ ೪೬, ಕ್ರಿ.ಶ. ೧೫೪೬; ಅದೇ ೯, ಕ್ರಿ.ಶ. ೧೫೫೩; ಅದೇ ೪೭, ಕ್ರಿ.ಶ. ೧೫೫೮; ಅದೇ ಕ್ರಿ.ಶ. ೧೫೬೦, ಅದೇ, ೧೩, ಕ್ರಿ.ಶ. ೧೫೬೦; ಅದೇ ಹೊಳಲ್ಕೆರೆ ೮, ಕ್ರಿ.ಶ. ೧೫೫೧; ಅದೇ ೪, ಕ್ರಿ.ಶ. ೧೫೫೬; ಅದೇ ಮೊಳಕಾಲ್ಮೂರು ೨, ಕ್ರಿ.ಶ. ೧೫೬೨; ಅದೇ ಜಗಲೂರು ೪೧, ಕ್ರಿ.ಶ. ೧೫೨೬; ಅದೇ ಹಿರಿಯೂರು ೩೬, ಕ್ರಿ.ಶ. ೧೫೨೩; ಅದೇ ೩೫, ಕ್ರಿ.ಶ. ೧೫೪೮; ಅದೇ ೨೨, ಕ್ರಿ.ಶ. ೧೫೫೪.

೧೦೪ ನಾರಾಯಣಾಚಾರ್ಯ, ಕೆ.: ಮಧುಗಿರಿಚರಿತ್ರ, ೧೯೪೫, ಪು. ೫-೬

೧೦೫ ಅದೇ, ಪು. ೧೩-೧೪

೧೦೬ ಶ್ರೀನಿವಾಸ್, ಎಂ.ಡಿ.: ಮಧುಗಿರಿ ಇತಿಹಾಸ, ಪು. ೨೪

೧೦೭ ಕಲಬುರ್ಗಿ, ಎಂ.ಎಂ.: ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ, ಪೀಠಿಕೆ ೭

೧೦೮ ಅದೇ, ಪೀಠಿಕೆ ೮

೧೦೯ ಎ.ಕ. ೧೨, ಮಧುಗಿರಿ ೨೧, ಸಿದ್ದಾಪುರ

೧೧೦ ಕಲಬುರ್ಗಿ, ಎಂ. ಎಂ.: ಪೂರ್ವೋಕ್ತ, ೪-೩೭, ೪-೩೮, ೧೪-೨೨

೧೧೧ ಅದೇ, ೧೨-೨೨ ಮತ್ತು ೨೩; ಅದೇ ೧೨೬, ಕ್ರಿ.ಶ. ೧೫೨೧; ಅದೇ ೫೮, ಕ್ರಿ. ಶ. ೧೫೨೭, ಅದೇ ೭೨, ಕ್ರಿ.ಶ. ೧೫೫೧

೧೧೨ ಅದೇ, ಪೀಠಿಕೆ ೧೨-೧೩

೧೧೩ ನಾರಾಯಣಾಚಾರ್ಯ, ಕೆ.: ಮಧುಗಿರಿ ಚರಿತ್ರೆ, ಪು. ೩೯

೧೧೪ ಎಂ. ಎ. ಆ. ೧೯೨೪, ಪು. ೨೪

೧೧೫ ಎಂ. ಎ. ಆರ್. ೧೯೨೩, ಮಧುಗಿರಿ-೮೯

೧೧೬ ಎಂ. ಎ. ಆರ್. ೧೯೪೬, ಪು. ೨೪-೩೦

೧೧೭ ಎ.ಕ. ೧೨, ಮಧುಗಿರಿ ೮, ಜೋಡಿ ದಾಸೇನಹಳ್ಳಿ

೧೧೮ ಅದೇ, ಮಧುಗಿರಿ ೨೧

೧೧೯ ಅದೇ, ತುಮಕೂರು ೬೬

೧೨೦ ಅದೇ, ಮಧುಗಿರಿ ೨೧

೧೨೧ ಅದೇ.

೧೨೨ ಕನ್ನಡ ವಿಷಯ ವಿಶ್ವಕೋಶ: ಕರ್ನಾಟಕ, ಪು. ೧೧೨೩

೧೨೩ ಎ.ಕ. ೧೨, ಮಧುಗಿರಿ ೨೧

೧೨೪ ಪುಟ್ಟಣ್ಣ, ಎಂ.ಎಸ್.: ಹಾಗಲವಾಡಿ ಪಾಳೆಯಗಾರರು, ಬೆಂಗಳೂರು, ೧೯೩೧, ಪು. ೫

೧೨೫ ಅದೇ, ಪು. ೧.

೧೨೬ ಅದೇ, ಪು. ೩.

೧೨೭ ವೆಂಕಟರತ್ನಂ, ಎ. ವಿ.: ಚಿಕ್ಕನಾಯಕನಹಳ್ಳಿ ಪಾಳೆಯಗಾರರು, ಪು. ೨೯೬, ೧೯೮೨

೧೨೮ ಪುಟ್ಟಣ್ಣ, ಎಂ. ಎಸ್.: ಹಾಗಲವಾಡಿ ಪಾಳೆಯಗಾರರರು, ಪು. ೫

೧೨೯ ಅದೇ.

೧೩೦ ಅದೇ, ಪು. ೭

೧೩೧ ಹಾಗಲವಾಡಿ ಪೇಪರ್ ಸ್ಕ್ರಾಲ್ಸ್-ಅಪ್ರಕಟಿತ

೧೩೨ ನರಸಿಂಹಚಾರ್, ಆರ್.: ಕರ್ಣಾಟಕ ಕವಿಚರಿತೆ ಸಂ ೨, ಪು. ೩೨೦, ಬೆಂಗಳೂರು

೧೩೩ ಮೈಸೂರು ದೊರೆಗಳ ಪೂರ್ವಾಭ್ಯುದಯ ವಿವರ, ಭಾ ೨, ೮

೧೩೪ ಚಿಕ್ಕದೇವರಾಯ ವಂಶಾವಳಿ; ಹಯವದನರಾವ್,
ಹಿಸ್ಟರಿ ಆಫ್ ಮೈಸೂರು, ಸಂ. ೧, ಪು, ೯೨, ಬೆಂಗಳೂರು, ೧೯೪೩

೧೩೫ ಪುಟ್ಟಣ್ಣ, ಎಂ. ಎಸ್: ಹಾಗಲವಾಡಿ ಪಾಳೆಯಗಾರರು, ಪು. ೧೪

೧೩೬ ಗೋವಿಂದ ವೈದ್ಯ: ಕಂಠೀರವ ನರಸರಾಜ ವಿಜಯ ಸಂಧಿ ೧೬, ಪದ್ಯ ೫೩, ೧೯೭೧

೧೩೭ ಪುಟ್ಟಣ್ಣ, ಎಂ. ಎಸ್.: ಹಾಗಲವಾಡಿ ಪಾಳೆಯಗಾರರು, ಪು. ೧೬

೧೩೮ ಅದೇ, ೧೮.

೧೩೯ ಮುದ್ವೀರ ತಾರಾವಳಿ, (ಸಂ) ಎಸ್. ಶಿವಣ್ಣ, ಸತ್ಯಶುದ್ಧ ಕಾಯಕ, ಸಂ. ೨-೧.೨ ೧೯೯೧, ಚಿತ್ರದುರ್ಗ

೧೪೦ ಪುಟ್ಟಣ್ಣ, ಎಂ. ಎಸ್.: ಪೂರ್ವೋಕ್ತ, ಪು. ೨೪-೨೫.

೧೪೧ ರೈಸ್, ಬಿ.ಎಲ್.: ಮೈಸೂರು ಗೆಜೆಟಿಯರ್, ಸಂ. ೨ ಪು. ೧೬೭, ಲಂಡನ್, ೧೮೯೭

೧೪೨ ಪುಟ್ಟಣ್ಣ, ಎಂ. ಎಸ್.: ಪೂರ್ವೋಕ್ತ, ಪು ೨೬-೨೯

೧೪೩ ನರಸಿಂಹಾಚಾರ್, ಆರ್.: ಕರ್ಣಾಟಕ ವಿಚರಿತೆ, ಸಂ-೨, ಪು. ೫೩೫

೧೪೪ ಪುಟ್ಟಣ್ಣ, ಎಂ.ಎಸ್.: ಪೂರ್ವೋಕ್ತ, ಪು. ೧೮-೧೯

೧೪೫ ನರಸಿಂಹಾಚಾರ್, ಆರ್.: ಪೂರ್ವೋಕ್ತ, ಸಂ ೨, ಪು. ೩೨೦

೧೪೬. ಅದೇ

೧೪೭ ಅದೇ, ಪು. ೩೨೧

೧೪೮ ಶಿವಣ್ಣ ಎಸ್. ಮುದ್ವೀರ ತಾರಾವಳಿ, ಸತ್ಯ ಶುದ್ಧಕಾಯಕ, ಸಂ. ೨-೧, ೨, ೧೯೯೧

೧೪೯ ವೀರಣ್ಣರಾಜೂರ: ಹಾಗಲವಾಡಿ ಮುದ್ವೀರಸ್ವಾಮಿ ಸ್ವರವಚನಗಳು, ಗದಗ

೧೫೦ ಶಿವತತ್ವ ಸುಜ್ಞಾನಪ್ರದೀಪಿಕೆ (ಅಪ್ರಕಟಿತ) ಎಂ. ಎಸ್. ಸಂಖ್ಯೆ ೫೮೬, ಕನ್ನಡ ಅಧ್ಯಯನ ಪೀಠ, ಧಾರವಾಡ

೧೫೧ ವೀರಣ್ಣರಾಜೂರ: ಪೂರ್ವೋಕ್ತ, ಪು. ೧೦೨, ಸಂಖ್ಯೆ ೧೦೫

೧೫೨ ಪುಟ್ಟಣ್ಣ, ಎಂ. ಎಸ್.: ಪೂರ್ವೋಕ್ತ, ಪು. ೩

೧೫೩ ಅದೇ, ಪು. ೯-೧೦

೧೫೪ ಎ.ಕ. ೧೬, ಸಿಕೆ ೧; ಎಂ.ಎ.ಆರ್. ೧೯೧೮, ಪು. ೫೩

೧೫೫ ಎ.ಕ. ೧೨, ಸಿಕೆ ೩೮

೧೫೬ ಎ.ಕ. ೧೬, ಟಿ.ಪಿ. ೧೦೨, ಎಂ. ಎ.ಆರ್. ೧೯೧೮, ಪು. ೫೨

೧೫೭ ಎ.ಕ. ೧೬, ಸಿ ಕೆ ೧

೧೫೮ ಎ.ಕ. ೧೨, ಜೆಬಿ ೨೮

೧೫೯ ಶಿವದೀಕ್ಷಾ ಸೋಮಶೇಖರ ಆಹ್ವಾನ ಪತ್ರಿಕೆ ೫-೧೧-೧೯೮೪.

೧೬೦ ಸಿದ್ಧಯ್ಯ ಪುರಾಣಿಕ: ಶ್ರೀಮದನಾದಿ ಅಲ್ಲಮಪ್ರಭು, ಪು. ೧೧೪-೧೪೦, ೧೯೩೬; ಫ.ಗು. ಹಳಕಟ್ಟಿ (ಸಂ). ನಿರಂಜನ ವಂಶರತ್ನಾಕರ, ಪು. ೬೦, ಬಿಜಾಪುರ, ೧೯೩೬

೧೬೧ ಮಹಾಂತರುದ್ರಯ್ಯ, ನೊಣವಿನಕೆರೆ ಶ್ರೀ ಸೋಮಕಟ್ಟೆ ಶಿವಾನುಭವ ಸಾಹಿತ್ಯ, ಪು ೨, ಮುರುಘಮಠ, ಧಾರವಾಡ, ೧೯೩೪

೧೬೨ ಎ.ಕ. ೧೬, ಸಿ ಕೆ ೧, ಎಂ.ಎ. ಆರ್, ೧೯೧೮, ಪು. ೫೩

೧೬೩ ಎಂ.ಎ. ಆರ್. ೧೯೧೮, ಪು. ೫೭; ಎ.ಕ. ೧೬, ಟಿಪಿ ೧೦೨

೧೬೪ ಎ.ಕ. ೧೨, ಸಿಕೆ ೩೮

೧೬೫ ಪುಟ್ಟಣ್ಣ, ಎಂ. ಎಸ್.: ಹಾಗಲವಾಡಿ ಪಾಳೆಯಗಾರರು, ಪು. ೧೧ ಮತ್ತು ೨೦

೧೬೬ ಸುವ್ವಿ ಮಲ್ಲ: ತೋಂಟದ ಸಿದ್ಧೇಶ್ವರನ ಸಾಂಗತ್ಯ, ಎಂ. ಎಸ್. ಬಸವರಾಜಯ್ಯ, ಪು. ೪೩, ೪೪, ತಿಪಟೂರು, ೧೯೯೫

೧೬೭ ರಮೇಶ್, ಕೆ.ವಿ.: ತುಳುನಾಡು ಇತಿಹಾಸ, ಗೀತಾ ಬುಕ್ ಹೌಸ್, ಮೈಸೂರು, ಪು. ೧೨೫

೧೬೮ ಅದೇ, ಪು. ೧೨೪

೧೬೯ ಅದೇ, ಪು. ೧೨೫

೧೭೦ ಅದೇ, ಪು. ೧೨೬

೧೭೧ ಎ. ಆರ್. ಎಸ್. ಐ ಇ, ೧೯೨೭-೨೮, ಸಂ. ೪೩೩

೧೭೨ ಗುರುರಾಜಭಟ್ಟ, ಪಿ.: ಸ್ಟಡೀಸ್ ಇನ್ ತುಳುವ ಹಿಸ್ಟರಿ ಎಂಡ್ ಕಲ್ಚರ್, ೧೯೭೫

೧೭೩ ಅದೇ.

೧೭೪ ಕ.ಇ. ೧, ಸಂಖ್ಯೆ ೩೫-೩೬

೧೭೫ ಸೌ.ಇ.ಇ. ೭, ೩೪೯, ಕ್ರಿ.ಶ. ೧೪೧೫

೧೭೬ ಕ.ಇ. ೪೫-೫೦

೧೭೭ ಎ ಆರ್ ಎಸ್ ಐ ಇ, ೧೯೨೮-೨೯, ೪೯೫

೧೭೮ ಕ.ಇ. ೧, ೬೭

೧೭೯ ಅದೇ, ೬೨-೬೪
೧೮೦ ಎ.ಕ. ೯, ಎಂ. ಜಿ. ೪೧
೧೮೧ ಅದೇ, ೬೨
೧೮೨ ಕ. ಐ. ೩, ಭಾಗ-೧, ಸಂಖ್ಯೆ ೯
೧೮೩ ಸೌ.ಇ.ಇ. ೭, ೩೦೪
೧೮೪ ಅದೇ, ೩೪೯
೧೮೫ ಅದೇ, ೨೯೬
೧೮೬ ಎ. ಆರ್. ಎಸ್. ಐ ಇ, ೧೯೨೮-೨೯, ೪೯೪
೧೮೭ ಸೌ.ಇ.ಇ.೯-೨, ಪು. ೬೨೧
೧೮೮ ಸೂರ್ಯನಾಥ ಕಾಮತ್ (ಸಂ): ಕರ್ನಾಟಕ ಗೆಜೆಟಿಯರ್, ಸಂ. ೧, ಪು. ೭೩.
೧೮೯ ರೈಸ್, ಬಿ.ಎಲ್.: ಮೈಸೂರ್ ಎಂಡ್ ಕೂರ್ಗ್ ಫ್ರಂ ದಿ ಇನ್ಸ್ಕ್ರಿಪ್ಷನ್ಸ್, ನವದೆಹಲಿ, ೧೯೮೬, ಪು. ೧೫೫
೧೯೦ ಎ.ಕ. ೩, ಜಿ.ಪಿ. ೧೧, ಪು. ೧೫.
೧೯೧ ಅದೇ ಚೌ. ೩೯೦ ಕ್ರಿ.ಶ. ೧೪೮೨, ಪು. ೨೫೮
೧೯೨ ಕಲಬುರ್ಗಿ ಎಂ ಎಂ (ಸಂ). ಸಾರಂಗ ಶ್ರೀ; ಉಮ್ಮತ್ತೂರು ಅರಸುಮನೆತನ, ಸೀತಾರಾಮ ಜಾಗೀರದಾರ, ಸಿಂದಗಿ, ೧೯೯೪, ಪು. ೨೧೮
೧೯೩ ಕರ್ನಾಟಕ ಗೆಜೆಟಿಯರ್, ಸಂ. ೧, ಪು. ೭೩
೧೯೪ ಎ.ಕ. ೪, ಎನ್. ಜೆ. ೧೮೧, ಕ್ರಿ.ಶ. ೧೪೬೭, ಪು. ೨೮೫
೧೯೫ ಅದೇ, ಜಿ.ಪಿ. ೧೬೬, ಕ್ರಿ.ಶ. ೧೪೪೯, ಪು. ೧೩೮
೧೯೬ ಅದೇ, ಸಿ. ಎಚ್. ೩೦೦, ಕ್ರಿ.ಶ. ೧೪೮೨. ಪು. ೨೫೮
೧೯೭ ಅದೇ.
೧೯೮ ಅದೇ, ಸಿ. ಎಚ್, ೨೭೪. ಕ್ರಿ.ಶ. ೧೪೮೫, ಪು. ೧೬೯
೧೯೯ ಎ.ಕ. ೪, ವೈ ಎಚ್ ೧೩೫, ೧೪೮೩ ಕ್ರಿ.ಶ.
೨೦೦ ಎ.ಕ. ೩, ಜೆ.ಪಿ. ೧೨೦, ಕ್ರಿ.ಶ. ೧೪೮೯, ಪು. ೮೯-೯೦
೨೦೧ ಅದೇ, ಎನ್ ಜೆ ೨೫೪, ಕ್ರಿ.ಶ. ೧೪೯೦, ಪು. ೩೩೯
೨೦೨ ಅದೇ, ಎನ್.ಜೆ. ೩೩೪, ೩೩೫, ೩೩೬, ಪು. ೩೯೫
೨೦೩ ಅದೇ, ಸಿ ಎಚ್ ೭೬, ಕ್ರಿ.ಶ. ೧೫೦೧, ಪು. ೪೪
೨೦೪ ಅದೇ, ಸಿ ಎಚ್. ೩೦೦, ಕ್ರಿ.ಶ. ೧೫೧೧, ಪು. ೧೯೪
೨೦೫ ಅದೇ, ಜೆ.ಪಿ. ೨೬, ಕ್ರಿ.ಶ. ೧೫೦೬, ಪು. ೨೪-೨೬
೨೦೬ ಎ.ಕ. ೪, ಕೆ. ಓ. ಎಲ್, ೭, ೧೫೧೨, ಪು. ೪೦೧-೪೦೩
೨೦೭ ಅದೇ, ವೈ ಎಲ್ ೧೨, ಪು. ೨೮೦-೨೮೧
೨೦೮ ರೈಸ್, ಬಿ.ಎಲ್.: ಪೂರ್ವೋಕ್ತ, ಪು. ೪೮
೨೦೯ ಎ.ಕ. ೩, ಎನ್ ಜೆ. ೩೦೨, ಕ್ರಿ.ಶ. ೧೫೧೨, ಪು. ೩೦೯, ೩೧೨
೨೧೦ ಅದೇ, ಜೆ. ಪಿ. ೧೬೮, ಪು. ೧೩೨
೨೧೧ ಅದೇ, ಎನ್.ಜೆ. ೧೮೧, ಕ್ರಿ.ಶ. ೧೪೬೭, ಪು. ೨೮೫
೨೧೨ ಅದೇ, ಎನ್. ಜೆ. ೩೩೮, ಕ್ರಿ.ಶ. ೧೫೩೦, ಪು. ೩೯೭
೨೧೩ ಅದೇ, ಜೆ.ಪಿ. ೨೪, ಕ್ರಿ.ಶ. ೧೪೩೦, ಪು. ೨೩

೨೧೪ ಅದೇ, ಜೆ.ಪಿ ೩೯, ಕ್ರಿ.ಶ. ೧೫೦೭. ಪು. ೩೨

೨೧೫ ಅದೇ, ಜೆ.ಪಿ ೭೭, ಕ್ರಿ.ಶ. ೧೪೭೬, ಪು. ೬೦

೨೧೬ ಅದೇ, ಜೆ.ಪಿ. ೧೫, ೧೫೧, ಪು. ೧೭, ೧೨೨

೨೧೭ ಅದೇ, ಜೆ.ಪಿ. ೧೬೮, ಕ್ರಿ.ಶ ೧೪೯೭, ಪು. ೧೩೨-೧೩೩

೨೧೮ ಅದೇ, ಎನ್. ಜೆ. ೨೫೯, ಕ್ರಿ.ಶ. ೧೪೯೦, ಪು. ೩೯

೨೧೯ ಅದೇ, ಜೆ.ಪಿ. ೧೧೩, ಪು. ೮೩

೨೨೦ ಅದೇ, ಜೆ.ಪಿ. ೧೨೦, ಕ್ರಿ.ಶ. ೧೪೮೯, ಪು. ೮೯-೯೦

೨೨೧ ಅದೇ ಜೆ.ಪಿ. ೧೫೧-೧೭೬, ಪು. ೧೨೨-೧೩೮

೨೨೨ ಕಲಬುರ್ಗಿ, ಎಂ.ಎಂ. (ಸಂ): ಸಾರಂಗಶ್ರೀ, ಉಮ್ಮತ್ತೂರು ಅರಸುಮನೆತನ, ಎಸ್ ಜಾಗೀರ್‌ದಾರ್, ೧೯೯೪ ಸಿಂದಗಿ, ಪು. ೨೧೭-೨೧೮

೨೨೩ ಎ.ಕ. ೩, ಜೆ.ಪಿ. ೧೧೫, ಪು. ೬೦೪

೨೨೪ ಅದೇ, ಜೆ.ಪಿ. ೭೭, ಕ್ರಿ.ಶ. ೧೪೭೬,; ಅದೇ ಹೊಸಕೋಟೆ-೫೧, ಕ್ರಿ.ಶ. ೧೩೪೩; ಅದೇ, ೧೧೭, ಕ್ರಿ.ಶ. ೧೩೬೭; ಅದೇ ೧೧೩, ಕ್ರಿ.ಶ. ೧೩೮೦; ಅದೇ ೬೩, ಕ್ರಿ. ಶ. ೧೪೧೨; ಅದೇ ೬೧೮, ಕ್ರಿ.ಶ. ೧೪೯೧; ಅದೇ. ೩೯, ಕ್ರಿ.ಶ. ೧೫೪೯; ಅದೇ ೨, ಕ್ರಿ.ಶ. ೧೫೫೯; ಅದೇ ೭೩, ಕ್ರಿ.ಶ. ೧೫೬೦; ಅದೇ ೧೭, ಕ್ರಿ.ಶ. ೧೬೫೨; ಅದೇ ೧೧೨, ಕ್ರಿ.ಶ. ೧೩೪೩

೨೨೫ ಅದೇ, ಜೆ.ಪಿ ೧೧೩

೨೨೬ ಎ.ಕ. ೫, ಎಂ ವಿ, ೧೦೬, ಕ್ರಿ.ಶ. ೧೪೯೭

೨೨೭ ಅದೇ, ಜಿ.ಪಿ. ೧೬೮, ಕ್ರಿ.ಶ. ೧೪೯೭

೨೨೮ ಎ.ಕ. ೪, ವೈ ಎಲ್ ೧೨, ಕ್ರಿ.ಶ. ೧೫೧೧

೨೨೯ ಎ.ಕ. ೩, ಸಿ.ಎಚ್ ೨೩೨, ಕ್ರಿ.ಶ. ೧೫೪೦, ಪು. ೧೪೨

೨೩೦ ಅದೇ, ಜೆ. ಪಿ. ೭೭, ಕ್ರಿ.ಶ. ೧೪೭೬

೨೩೧ ಅದೇ, ಜೆ.ಪಿ ೧೭೬, ಕ್ರಿ.ಶ. ೧೪೬೯

೨೩೨ ಎ.ಕ. ೪, ಕೆ. ಜಿ, ೭, ಕ್ರಿ.ಶ. ೧೫೧೨

೨೩೩ ಜಾಗೀರದಾರ್, ಎಸ್.: ಉಮ್ಮತ್ತೂರು ಅರಸುಮನೆತನ, ಪು. ೨೧೮

೨೩೪ ಎ.ಕ. ೩, ಎನ್. ಜೆ. ೧೮೧, ೧೪೬೭; ಜೆ.ಪಿ. ೩೯, ೧೫೦೭; ಸಿ ಎಚ್. ೨೭೪, ೧೩೮೫

೨೩೫ ಎ.ಕ. ೪, ಕೆ. ಜಿ ೭, ಕ್ರಿ.ಶ. ೧೫೧೨; ವೈ ಎಲ್ ೧೨, ಕ್ರಿ.ಶ. ೧೫೧೨

೨೩೬ ಎ.ಕ. ೫, ಟಿ ಎನ್ ೧೬, ಪು. ೩೪೯-೪೨೦

೨೩೭ ಎ.ಕ. ೩, ಜೆ.ಪಿ. ೧೧೩; ಸಿ. ಎಚ್. ೩೯೦, ೧೪೮೨; ಸಿ.ಎಚ್ ೨೭೪, ೧೪೮೫

೨೩೮ ಅದೇ, ಜೆ. ಪಿ. ೧೩೫, ಕ್ರಿ.ಶ. ೧೪೯೨; ಸಿ ಎಚ್ ೩೦೦, ಕ್ರಿ.ಶ. ೧೫೧೧

೨೩೯ ಅದೇ, ಸಿ ಎಚ್ ೩೯೦, ಕ್ರಿ.ಶ. ೧೪೮೨, ಪು. ೨೫೮

೨೪೦ ಅದೇ, ಸಿ ಎಚ್ ೪೦೫, ಕ್ರಿ.ಶ. ೧೫೬೯, ಪು. ೨೬೬

೨೪೧ ಫ್ರಾನ್ಸಿಸ್ ಬುಕನನ್, ಎಜರ್ನಿ...., ಪು. ೮೩-೮೪

೨೪೨ ಎ.ಕ. ೩, ಎನ್ ಜೆ. ೩೩೮, ಕ್ರಿ.ಶ. ೧೫೩೦; ಎನ್ ಜೆ. ೧೮೧, ಕ್ರಿ.ಶ. ೧೪೬೭

೨೪೩ ಅದೇ, ಎನ್ ಜೆ,. ೨೫೯, ಕ್ರಿ.ಶ. ೧೪೯೦; ಜೆ. ಪಿ. ೩೯, ಕ್ರಿ.ಶ. ೧೫೦೭; ಜೆ. ಪಿ. ೧೧೪, ಕ್ರಿ.ಶ. ೧೫೦೪

೨೪೪ ಅದೇ, ಜೆ. ಪಿ. ೧೩೫, ಕ್ರಿ.ಶ. ೧೪೯೨

೨೪೫ ಅದೇ, ಸಿ. ಎಚ್. ೨೩೬, ಕ್ರಿ.ಶ. ೧೪೯೨, ಪು. ೧೪೫

೨೪೬ ಅದೇ, ಸಿ. ಎಚ್. ೭೬, ಕ್ರಿ.ಶ. ೧೫೦೧, ಪು. ೪೪

೨೪೭ ಬುಕನನ್, ಎ ಜರ್ನಿ..., ಸಂ ೧, ಪು. ೮೪

೨೪೮ ಎ.ಕ. ೫, ವೈ. ಎಲ್. ೧೪೩, ಪು. ೩೫೪

೨೪೯ ಎ.ಕ. ೩, ಜೆಪಿ ೭೭, ಕ್ರಿ.ಶ ೧೪೭೬; ಎ.ಕ. ೫, ಟಿ ಎನ್, ೧೬, ಪು. ೩೪೯-೪೨೦

೨೫೦ ಅದೇ, ಎನ್. ಜೆ. ೧೮೧, ಕ್ರಿ.ಶ. ೧೪೬೭

೨೫೧ ಶಿವಣ್ಣ, ಕೆ. ಎಸ್.(ಸಂ): ಕಳಲೆ ಮನೆತನದ ವೀರಶೈವ ದಳವಾಯಿಗಳು, ಕೆ. ವಿಶ್ವನಾಥ: ಕೃಷಿ, ಕೈಗಾರಿಕೆ ಮತ್ತು ವಾಣಿಜ್ಯ ವ್ಯವಸ್ಥೆ, ೧೦೦೪, ಮೈಸೂರು, ಪು. ೧೯೭.

೨೫೨ ಎ.ಕ. ೩, ಎನ್. ಜೆ. ೧೮೧, ೧೪೬೭; ಎನ್ ಜೆ ೨೫೯, ೧೪೯೦; ಜೆ ಪಿ ೩೯, ೧೫೦೭; ಸಿ ಎಚ್ ೭೬, ೧೫೦೧

೨೫೩ ಅದೇ, ಎನ್. ಜೆ. ೧೮೧, ೧೪೬೭; ಜೆ ಪಿ ೩೯, ೧೫೦೭; ಸಿ ಎಚ್ ೨೩೧, ೧೫೧೨

೨೫೪ ಬುಕನನ್, ಪೂರ್ವೋಕ್ತ, ಪು. ೮೫, ೮೬

೨೫೫ ಎ.ಕ. ೩, ಎನ್. ಜೆ. ೨೫೯, ೧೪೯೦; ಸಿ. ಎಚ್. ೭೬, ೧೫೦೧

೨೫೬ ಅದೇ, ಜೆ. ಪಿ. ೧೩೫, ಕ್ರಿ.ಶ. ೧೪೯೨, ಸಿ. ಎಚ್. ೭೬, ಕ್ರಿ.ಶ. ೧೫೦೧

೨೫೭ ಅದೇ, ಜೆ ಪಿ ೮೦, ಪು. ೬೨-೬೪

೨೫೮ ಕನ್ನಡ ವಿಷಯ ವಿಶ್ವಕೋಶ: ಕರ್ನಾಟಕ, ಮೈಸೂರು, ೧೯೭೯, ಪು. ೯೯

೨೫೯ ಎ.ಕ. ೩, ಸಿ. ಎಚ್. ೧೦೦, ಕ್ರಿ.ಶ. ೧೫೭೨

೨೬೦ ರಾಮಕೃಷ್ಣರಾವ್, ಬಿ.: ಅನಾಲ್ಸ್ ಆಫ್ ಮೈಸೂರು ರಾಯಲ್‌ಫ್ಯಾಮಿಲಿ, ಭಾ-೧, ಬೆಂಗಳೂರು, ೧೯೧೬, ಪು. ೪೪, ಹಯವದನರಾವ್, ಸಿ.: ಹಿಸ್ಟರಿ ಆಫ್ ಮೈಸೂರು, ಸಂ. ೧, ಪು. ೬೯, ೧೯೪೩, ಬೆಂಗಳೂರು

೨೬೧ ಹಯವದನರಾವ್: ಪೂರ್ವೋಕ್ತ, ಪು. ೬೯

೨೬೨ ಅದೇ, ಪು. ೬೯

೨೬೩ ನಂಜುಂಡಾರಾಧ್ಯ, ಕೆ. ಸಿ.: ಕಳಲೆ ಅರಸುಗಳ ವಂಶಾವಳಿ, ಎಂ ಎಸ್: ಕೆ. ಜಿ. ೭೭೬; ಕೆ. ಬಿ. ೫೩೦, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು; ಹಯವದನರಾವ್, ಸಿ: ಪೂರ್ವೋಕ್ತ, ಪು. ೨೬೦-೨೬೨: ರೈಸ್, ಬಿ.ಎಲ್: ಮೈಸೂರು ಗಜೆಟಿಯರ್, ಸಂ. ೧, ಪು. ೨೫೫

೨೬೪ ರಾಮಕೃಷ್ಣರಾವ್, ಬಿ.: ಪೂರ್ವೋಕ್ತ, ಪು. ೪೫

೨೬೫ ಹಯವದನರಾವ್, ಸಿ.: ಪೂರ್ವೋಕ್ತ, ಪು. ೧೫೯, ೨೯೭

೨೬೬ ಅದೇ.

೨೬೭ ಮೈಸೂರು ರಾಜರ ಚರಿತ್ರೆ, ಪು. ೨೮

೨೬೮ ರಾಮಕೃಷ್ಣ ರಾವ್, ಬಿ.: ಪೂರ್ವೋಕ್ತ, ಪು. ೧೫೬; ದೇವಚಂದ್ರ ರಾಜಾವಳೀ ಕಥಾಸಾರ, ಬಿ ಸಣ್ಣಯ್ಯ (ಸಂ), ಮೈಸೂರು ೧೯೮೮; ಸಿ. ಹಯವದನರಾವ್: ಪೂರ್ವೋಕ್ತ, ಪು. ೨೬೦-೨೬೧; ಕೆ. ಸಿ. ನಂಜುಂಡಾರಾಧ್ಯ: ಪೂರ್ವೋಕ್ತ, ಕೆ. ಬಿ. ೭೭೬, ಪು. ೨.

೨೬೯ ಹಯವದನರಾವ್, ಸಿ.: ಪೂರ್ವೋಕ್ತ, ಪು. ೫೧೯, ೨೦; ಕನ್ನಡ ವಿಷಯ ವಿಶ್ವಕೋಶ-ಕರ್ನಾಟಕ, ಪು. ೨೬೪

೨೭೦ ಕ್ಯು ಜೆ ಎಂ ಎಸ್, ಟೂ ಸೆಂಚುರೀಸ್ ಆಫ್ ವೊಡೆಯರ್ಸ್ ರೂಲ್, ಸಂ ೨೩, ಪು. ೧೭೮

೨೭೧ ಹಯವದನರಾವ್, ಸಿ.: ಪೂರ್ವೋಕ್ತ, ಸಂ ೨, ಪು. ೪೩, ಬೆಂಗಳೂರು, ೧೯೪೫

೨೭೨ ರಾಮಕೃಷ್ಣರಾವ್, ಬಿ: ಪೂರ್ವೋಕ್ತ, ಪು. ೧೭೩; ನಂಜುಂಡಾರಾಧ್ಯ ಕೆ ಸಿ, ಪೂರ್ವೋಕ್ತ: ಕೆ.ಬಿ. ೬, ಹಸ್ತಪ್ರತಿ ಕೆ. ಬಿ. ೫೩೦, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು

೨೭೩ ರಾಮಕೃಷ್ಣ ರಾವ್, ಬಿ.: ಪೂರ್ವೋಕ್ತ, ಪು. ೧೬೬ ವಂಶರತ್ನಾಕರ, ಸಂ. ೯, ೨೦. ೧೫೬

೨೭೪ ರಾಮಕೃಷ್ಣರಾವ್, ಬಿ.: ಪೂರ್ವೋಕ್ತ, ಪು. ೧೬೬; ಸಿ. ಹಯವದನರಾವ್, ಪೂರ್ವೋಕ್ತ, ಸಂ. ೨, ಪು. ೪೮

೨೭೫ ನುರೊಂದ: ಸೌಂದರಕಾವ್ಯ, ೧೭೪೦, ಕೆ.ಬಿ. ೨೮೫, ಕ ಅಸಂ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು; ಎ.ಕ. ೫, (ಹೊಸಸರಣಿ), ಕೆ.ಆರ್. ನಗರ ೧೧೭, ಮಚನಹಳ್ಳಿ, ೧೭೪೧

೨೭೬ ಅದೇ, ಅಧ್ಯಾಯ೭; ಹಯವದನರಾವ್ ಸಿ, ಪೂರ್ವೋಕ್ತ, ಸಂ. ೨, ಪು. ೭೭

೨೭೭ ಅದೇ, ಕೆ.ಬಿ. ೨೮೫

೨೭೮ ರಾಮಕೃಷ್ಣರಾವ್, ಪೂರ್ವೋಕ್ತ, ಪು. ೧೭೪; ಹಯವದನರಾವ್, ಪೂರ್ವೋಕ್ತ, ಪು. ೭೮

೨೭೯ ವೀರರಾಜ, ಸಕಲವೈದ್ಯ ಸಂಹಿತಾ ಸಾರಾರ್ಣವ, ೧೭೨೦, ಎಂ. ಎಸ್. ಕೆ. ೧೪೩೦/೨, ಕ ಅಸಂ. ಮೈಸೂರು; ನರಸಿಂಹಾಚಾರ್ ಆರ್. ಕರ್ಣಾಟಕ ಕವಿಚರಿತೆ, ಪು. ೯-೧೦

೨೮೦ ನರಸಿಂಹಕವಿ, ನಂಜರಾಜಯಶೋಭೂಷಣ, ಕೃಷ್ಣಾಚಾರ್ಯ (ಸಂ) ಬರೋಡಾ, ೧೯೩೦, ಪು ೧೪; ನೀಲಕಂಠ, ನಂಜರಾಜಯಶಸ್ಸವೊಲ್ಲಾಸಚಂಪು, ಎಂ. ಎಸ್. ಬಿ. ೯೯೯, ಪು ೪೬೬, ಓ.ಆರ್.ಡಿ. ಮೈಸೂರು

೨೮೧ ದೇವೀರಪ್ಪ, ಎಚ್. (ಸಂ): ಡಿಸ್ಕ್ರಿಪ್ಟಿವ್ ಕ್ಯಾಟಲಾಗ್, ಸಂ. ೩, ಪು. ೧೭೮-೧೮೧ ಭಾರತ ತಾತ್ಪರ್ಯ ಟೀಕು.

೨೮೨ ನರಸಿಂಹ, ಅದೇ, ಪು. ೧೮-೧೯

೨೮೩ ನಂಜುಂಡಾರಾಧ್ಯ, ಕೆ.ಸಿ.: ಕಳಲೆ ಅರಸುಗಳ ವಂಶಾವಳಿ, ೧೯೪೦, ಕೆ. ಬಿ. ೧೭೬, ಕಅಸಂ. ಮೈಸೂರು ವಿಶ್ವದ್ಯಾನಿಲಯ

೨೮೪ ನಾಯಕ, ಎಚ್.ಎಂ.(ಸಂ): ಡಿಸ್ಕ್ರಿಪ್ಟಿವ್ ಕ್ಯಾಟಲಾಗ್, ಸಂ. ೫, ಎಂ ಎಸ್.ಕೆ. ೮೯೩-

೨೮೫ ನೂರೊಂದ, ಸೌಂದರ ಕಾವ್ಯ, ಕೆ. ಬಿ. ೨೮೫, ಕ ಅಸಂ, ಮೈಸೂರು

೨೮೬ ನರಸಿಂಹಾಚಾರ್, ಆರ್.: ಪೂರ್ವೋಕ್ತ, ಪು. ೫೦-೫೪; ಸೂರ್ಯನಾಥ ಯು. ಕಾಮತ್: ಗೆಜೆಟಿಯರ್ ಆಫ್ ಮೈಸೂರು ಡಿಸ್ಟ್ರಿಕ್ಟ್, ಬೆಂಗಳೂರು, ೧೯೮೮, ಪು. ೬೮೨-೬೮೩

೨೮೭ ಕ್ಯು. ಜೆ. ಎಂ. ಎಸ್, ಸಂ. ೧೪, ೧೯೫೪-೫೫, ೧ ಪು. ೧೭, ಎಮಿನೆಂಟ್ ವಿಮಿನ್ ಆಫ್ ಕರ್ನಾಟಕ, ಎನ್. ಲಕ್ಷ್ಮೀನಾರಾಯಣರಾವ್

೨೮೮ ಕ್ಯು. ಜೆ. ಎಂ. ಎಸ್, ಅದೇ, ಪು. ೩; ಶಿವಣ್ಣ ಕೆ ಎಸ್ (ಸಂ) ಕಳಲೆ ಮನೆತನದ ವೀರಶೈವ ದಳವಾಯಿಗಳು, ಎಸ್. ಎಸ್. ತಾರಾನಾಥ, ವಿಚಾರಸಂಕಿರಣ ಮಾಲೆ ಜೆ ಎಸ್ ಎಸ್ ಮಹಾವಿದ್ಯಾಪೀಠ ಮೈಸೂರು, ೧೯೯೪, ಪು. ೧೩೮

೨೮೯ ನಂಜುಂಡಾರಾಧ್ಯ, ಕೆ.ಸಿ.: ಪೂರ್ವೋಕ್ತ, ಕೆ ಬಿ ೭೭೬

೨೯೦ ಕ್ಯು. ಜೆ. ಎಂ. ಎಸ್ ಸಂ. ೩೧, ಪು. ೩೮-೩೯; ಕೃಷ್ಣರಾವ್ ಎಂ. ವಿ. ಮತ್ತು ಕೇಶವ ಭಟ್, ಕರ್ನಾಟಕ ಇತಿಹಾಸ ದರ್ಶನ, ಪು. ೫೧೯-೫೧೦

೨೯೧ ನಂಜರಾಜ, ಸಂಗೀತ ಗಂಗಾಧರ, ಸಾಖರೆ ಎಂ. ಆರ್. (ಸಂ): ಬೆಳಗಾಂ, ೧೯೩೬, ಪು ೭.

೨೯೨ ಶ್ರೀನಿವಾಸ ಅಯ್ಯಂಗಾರ್, ಸಂಸ್ಕೃತ ಕವಿಚರಿತ್ರೆ, ರಾಮಚಂದ್ರರಾವ್, ಪು. ೪೯೨; ನಂಜರಾಜ್, ಅದೇ, ಪು. ೭.

೨೯೩ ಕ್ಯು.ಜೆ. ಎಂ. ಎಸ್, ಸಂ. ೩೧, ಪು. ೪೧೦

೨೯೪ ನರಸಿಂಹ ಕವಿ. ನಂಜರಾಜಯಶೋಭೂಷಣ, ಇ. ಕೃಷ್ಣ ಮಾಚಾರಿ (ಸಂ), ಓರಿಯೆಂಟಲ್ ಇನ್ಸ್‌ಟಿಟ್ಯೂಟ್ ಬರೋಡಾ, ೧೯೩೦, ಪು. ೮೯

೨೯೫ ಕೃಷ್ಣರಾವ್, ಎಂ. ವಿ, ಕೇಶವಭಟ್: ಕರ್ನಾಟಕ ಇತಿಹಾಸ ದರ್ಶನ, ಪೂರ್ವೋಕ್ತ, ಪು. ೫೦೨

೧೯೬. ಸುಬ್ಬರಾಮಪ್ಪ, ಕೆ: ಪ್ರಬುದ್ಧ ಕರ್ಣಾಟಕ, ಸಂ. ೩೬ ಮೈಸೂರು ವಿಶ್ವವಿದ್ಯಾನಿಲಯ, ೧೯೫೪, ಪು. ೬೬-೬೭; ಸೂರ್ಯನಾಥ ಯು. ಕಾಮತ್, ಗೆಜೇಟಿಯರ್, ಪೂರ್ವೋಕ್ತ, ಪು. ೭೦೧

೨೯೭ ಅದೇ, ಪ್ರಬುದ್ಧ ಕರ್ನಾಟಕ, ಪು. ೬೬-೬೭

೨೯೮ ಎಂ ಎ. ಆರ್. ೧೯೨೫ ಡಿ.ಟಿ. ೧೭೬೭ ಪು ೭೦-೭೧; ಎಂ. ಎಸ್.ಕೆ. ೧೩೯೩, ಹಾಳೆ-೯೩; ಕ. ಅ ಸಂ, ಮೈಸೂರು ವಿಶ್ವವಿದ್ಯಾನಿಲಯ

೨೯೯ ಲೂಯಿರೈಸ್, ಬಿ.: ಮೈಸೂರು ಗೆಜೆಟಿಯರ್, ಸಂ, ೧. ಲಂಡನ್ ೧೮೯೭, ಪು. ೧೦೨-೧೦೩

೩೦೦ ಅದೇ, ಸಂ. ೧, ಪು ೧೦೧; ಬುಕ್‌ನನ್, ಎ ಜರ್ನಿ..., ಪೂರ್ವೋಕ್ತ ಸಂ, ೧, ಪು. ೮೩-೮೪

೩೦೧ ಗೋವಿಂದ ವೈದ್ಯ: ಕಂಠೀರವ ನರಸರಾಜ ವಿಜಯಂ, ಮೈಸೂರು, ೧೯೨೬, ಸಂ ೫, ಪು ೬೦-೬೧; ಬೌರಿಂಗ್ ವಿಲ್: ಈಸ್ಟರ್ನ್ ಎಕ್ಸ್‌ಪೀರಿಯೆನ್ಸಸ್, ಲಂಡನ್, ೧೮೭೧, ಪು. ೧೯

೩೦೨ ರಾಮಕೃಷ್ಣರಾವ್ ಬಿ, ಅನಾಲ್ಸ್, ಪೂರ್ವೋಕ್ತ ಭಾ. ೧, ಪು. ೧೧೯-೧೨೦; ಕರ್ನಲ್ ವಿಲ್ಕ್ಸ್: ಹಿಸ್ಟರಿಕಲ್ ಸ್ಕೆಚಸ್ ಆಫ್ ಸೌತ್ ಇಂಡಿಯಾ, ಮೈಸೂರು, ೧೯೩೦, ಸಂ.೧, ಪು. ೭೩; ಲೂಯಿರೈಸ್ ಬಿ, ಪೂರ್ವೋಕ್ತ, ಸಂ ೧, ಪು ೫೭೪-೫೭೫

೩೦೩ ಶಾಮರಾವ್, ಎಂ.: ಮಾಡರ್ನ್ ಮೈಸೂರ್, ಬೆಂಗಳೂರು, ೧೯೩೬, ಪು. ೩೦೫; ಸೂರ್ಯನಾಥ, ಕಾಮತ್: ಪೂರ್ವೋಕ್ತ, ಪು. ೫೯೧-೫೯೨

೩೦೪ ಎ.ಕ. ೩,(೧), ಶ್ರೀರಂಗಪಟ್ಟಣ ೬೪, ೧೭೨೨

೩೦೫ ಎ.ಕ. ೫, (ಹೊಸ ಸರಣಿ) ಕೆ. ಆರ್. ನಗರ ೧೧೭, ೧೭೪೧; ಟಿ. ಎನ್. ೧೬, ೧೭೪೯.

೩೦೬ ಶಾಮರಾವ್, ಎಂ.: ಪೂರ್ವೋಕ್ತ, ಪು. ೨೪೭

೩೦೭ ಅಪ್ಪಾದೊರೈ, ಎ.: ಎಕನಾಮಿಕ್ ಕಂಡೀಷನ್ಸ್ ಇನ್ ಸದರ್ನ್ ಇಂಡಿಯಾ, ಮದರಾಸು ೧೯೩೬, ಪು. ೮೪; ಬುಕನ್: ಪೂರ್ವೋಕ್ತ, ಸಂ. ೧, ಪು. ೨೬೩; ಬೌರಿಂಗ್ ವಿಲ್, ಪೂರ್ವೋಕ್ತ, ಪು. ೨೦

೩೦೮ ನಂಜುಂಡರಾಧ್ಯ, ಕೆ. ಸಿ.: ಪೂರ್ವೋಕ್ತ, ಪು. ೬೯, ೭೨

೩೦೯ ಅದೇ, ಪು. ೮೭

೩೧೦ ಎ.ಕ. ೪, (ಹೊಸ ಸರಣಿ), ಚಾಮರಾಜನಗರ, ೨೨೮, ೧೭೫೮

೩೧೧ ಕ್ಯು. ಜೆ. ಎಂ. ಎಸ್, ಸಂ. ೩೩, ಕರಮರಕರ್, ಎ. ಪಿ.: ಎಕನಾಮಿಕ್ ಕಂಡೀಷನ್ ಇನ್ ಮೆಡೀವಲ್ ಕರ್ನಾಟಕ, ಪು. ೧೬೮

೩೧೨ ಬುಕನನ್: ಪೂರ್ವೋಕ್ತ, ಸಂ, ೧, ಪು. ೧೨೫

೩೧೩ ಅಪ್ಪಾದೊರೈ, ಪೂರ್ವೋಕ್ತ, ಪು. ೪೨೪-೪೩೦; ಬುಕನನ್, ಅದೇ, ಸಂ ೨, ಪು. ೩೧-೩೩

೩೧೪ ಹಿರೇಮಠ, ಬಿ. ಆರ್.: ಶಾಸನಗಳಲ್ಲಿ ಕರ್ನಾಟಕದ ವರ್ತಕರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೮೬, ಪು. ೧೨೮, ರಾಮಕೃಷ್ಣ ರಾವ್ ಬಿ, ಅನಾಲ್ಸ್, ಪೂರ್ವೋಕ್ತ, ಸಂ-೧, ಪು. ೧೨೪; ಕ್ಯು.ಜೆ. ಎಂ. ಎಸ್, ಸಂ. ೨೩, ಸುಬ್ಬರಾವ್, ಎಂ. ಎನ್, ಟೂ ಸೆಂಚುರೀಸ್ ಆಫ್ ವೊಡೆಯರ್ಸ್ ರೂಲ್ ಇನ್ ಮೈಸೂರ್, ಪು. ೪೬೧-೪೬೨

೩೧೫ ಕ್ಯು.ಜೆ. ಎಂ. ಎಸ್, ೨೩, ಪೂರ್ವೋಕ್ತ. ಪು. ೪೬೧-೫೬೨

೩೧೬ ಎ.ಕ. ೫, (ಹೊಸಸರಣಿ) ಚಾಮರಾಜನಗರ, ೧೩೯, ೧೭೩೩

೩೧೭ ಅನಾಲ್ಸ್: ಪೂರ್ವೋಕ್ತ, ಪು. ೧೨

೩೧೮ ಲೂಯಿರೈಸ್, ಬಿ.: ಪೂರ್ವೋಕ್ತ, ಸಂ. ೧, ಪು. ೫೪೧

೩೧೯ ಎ.ಕ. ೫, (ಹೊಸ ಸರಣಿ), ಕೆ. ಆರ್. ನಗರ ೧೧೭, ೧೭೪೧, ಟಿ ಎನ್ ಪುರ, ೧೬, ೧೭೪೯

೩೨೦ ಅದೇ, ೧೭೫೩, ಪು. ೧೯೭-೧೯೮; ಎಂ.ಎ. ಆರ್. ೧೯೦೬-೧೯೧೪, ಪು. ೨೭; ಎಂ ಎಸ್. ಕೆ. ಬಿ. ೫೩೦, ಪು. ೧೮

೩೨೧ ನರಸಿಂಹಾಚಾರ್, ಆರ್.: ಕರ್ನಾಟಕ ಕವಿಚರಿತೆ, ಸಂ.೩, ಪು ೫೦; ನಂಜುಂಡಾರಾಧ್ಯ ಕೆ . ಸಿ, ಪೂರ್ವೋಕ್ತ, ಪು. ೧೨೫

೩೨೨ ಎ.ಕ. ೫, (ಹೊಸ ಸರಣಿ) ೧೮ನೇ ಶತಮಾನ, ಪು. ೫೭೯; ಎ.ಕ. ೫, (ಎನ್ ಎಸ್), ೧೮ನೇ ಶತಮಾನ, ಸು. ೪೭೩.

೩೨೩ ಲೂಯಿರೈಸ್ ಬಿ: ಇನ್‌ಸ್ಕ್ರಿಪ್ಷನ್ಸ್ ಆಫ್ ದಿ ಮೈಸೂರು ಡಿಸ್ಟ್ರಿಕ್ಟ್, ಭಾಗ-೧, ಪು. ೭೯-೮೦, ೧೭೩೪

೨೪ ಎ.ಕ. ೪,:(ಹೊಸ ಸರಣಿ) ೧೮ನೇ ಶತಮಾನ, ಪು. ೪೧೯-೪೨೦

೩೨೫ ವಿಲ್ಕ್ಸ್, ಹಿಸ್ಟರಿ ಆಫ್ ಮೈಸೂರ್, ಸಂ. ೧, ಮದರಾಸು, ೧೯೮೯, ಪು. ೮೪೬

೩೨೬ ನಂಜುಡಾರಾಧ್ಯ, ಕೆ. ಸಿ.: ಪೂರ್ವೋಕ್ತ, ಕೆ.ಬಿ. ೭೭೬

೩೨೭ ಎ.ಕ. ೫, (ಹೊಸ ಸರಣಿ), ೧೭೫೩

೩೨೮ ನಂಜುಂಡಾರಾಧ್ಯ ಕೆ. ಸಿ, ಪೂರ್ವೋಕ್ತ, ಕೆ. ಬಿ. ೧೭೬

೩೨೯ ಅದೇ.

೩೩೦ ಎ.ಕ. (ಹೊಸ ಸರಣಿ), ಚಾಮರಾಜನಗರ-೨೨೮, ೧೭೫೮

೩೩೧ ನುರೊಂದ: ಸೌಂದರಕಾವ್ಯ, ಕೆ. ಬಿ. ೨೮೫, ೧೨ನೇ ಅಧ್ಯಾಯ

೩೩೨ ಗೋವಿಂದ ವೈದ್ಯ: ಕಂಠೀರವ ನರಸರಾಜ ವಿಜಯಂ, VIII-೩೧-೩೨ IX-೬೨, XXI-೧೦೮-೧೧೨, XXII-೩೨

೩೩೩ ನರಸಿಂಹಾಚಾರ್, ಆರ್.: ಪೂರ್ವೋಕ್ತ, ಸಂ.೩, ಪು. ೨೩-೨೪

೩೩೪ ಕ್ಯು. ಜೆ. ಎಂ. ಎಸ್, ೧೪, ಎನ್. ಲಕ್ಷ್ಮೀನಾರಾಯಣರಾವ್, ಎಮಿನೆಂಟ್ ವಿಮಿನ್ ಆಫ್ ಕರ್ನಾಟಕ, ಪು. ೨೮

೩೩೫ ಕ್ಯು. ಜೆ. ಎಂ. ಎಸ್, ಅದೇ, ಪು. ೨೮

೩೩೬ ಅದೇ,

೩೩೭ ಅನಂತಕೃಷ್ಣ ಅಯ್ಯರ್, ಎಚ್. ಕೆ, ನಂಜುಂಡಯ್ಯ ಎಚ್. ವಿ: ದಿ ಮೈಸೂರ್ ಟ್ರೈಬ್ಸ್ ಎಂಡ್ ಕ್ಯಾಸ್ಟ್ಸ್, ಸಂ. ೩, ಪು. ೧೧೮

೩೩೮ ಅದೇ, ಪು. ೨೭; ಉಷಾ ಎಂ ಆಪ್ಟೆ: ದಿ ಸ್ಯಾಕ್ರಮೆಂಟ್ ಆಫ್ ಮ್ಯಾರೇಜ್ ಇನ್ ಹಿಂದೂ ಸೊಸೈಟಿ, ದೆಹಲಿ ೧೯೭೮, ಪು. ೧೫೬

೩೩೯ ನುರೊಂದ: ಪೂರ್ವೋಕ್ತ, ಕೆ.ಬಿ. ೨೮೫, ಸಂ.೫, ಪು. ೬೧-೭೨; ಗೋವಿಂದ ವೈದ್ಯ; ಪೂರ್ವೋಕ್ತ, ಅಧ್ಯಾಯ. ೫, ಪದ್ಯಗಳು ೫೫-೭೦ ಅಧ್ಯಾಯ ೭, ಪದ್ಯ-೮೨

೩೪೦ ತಿರುಮಲಾರ್ಯ: ಚಿಕ್ಕದೇವರಾಜವಂಶಾವಳಿ, ಬೆಂಗಳೂರು; ೧೯೮೧, ೬೯-೭೦

೩೪೧ ಎಂ ನಂಜಮ್ಮಣ್ಣಿ: ಅರಸುಜನಾಂಗ ಒಂದು ಅಧ್ಯಯನ, ೧೯೮೬

೩೪೨ ಎ.ಕ. ೫, (ಹೊಸ ಸರಣಿ), ಕೆ ಆರ್ ನಗರ ೪೬, ಹನಸೋಗೆ, ೧೭೬೧.

೩೪೩ ಅದೇ ೪೭, ಹನಸೋಗೆ, ೧೭೬೧

೩೪೪ ಅದೇ ಚಾಮರಾಜನಗರ-೨೯೧ ಹರದನಹಳ್ಳಿ, ೧೭೪೪.

೩೪೫ ಎ.ಕ. ೫, (ಹೊಸ ಸರಣಿ) ಕೆ ಆರ್. ನಗರ, ೧೧೭, ಮಾತನ ಹಳ್ಳಿ, ೧೭೪೧.

೩೪೬ ಎ.ಕ. ೬, (ಹೊಸ ಸರಣಿ), ಟಿ. ಎನ್. ಪುರ, ೧೬, ೧೭೪೯.

೩೪೭ ಎ.ಕ. ೬, (ಹೊಸ ಸರಣಿ), ಕೆ. ಆರ್. ಪೇಟೆ, ೧೦೨-೧೦೪ ಚಟ್ಟಂಗೆರೆ, ೧೭೫೯

ಅಧ್ಯಾಯ : ಐದು

ಕೃಷಿ ವ್ಯವಸ್ಥೆ

ಒಂದು ಅರ್ಥವ್ಯವಸ್ಥೆಯಲ್ಲಿ ಕೃಷಿಯ ಪ್ರಾಮುಖ್ಯವನ್ನು ಜನರು ಗುರುತಿಸಿದ್ದರು. ಇದನ್ನು ಸರ್ವಜ್ಞನ ಒಂದು ಮಾತಿನಿಂದ ತಿಳಿದುಕೊಳ್ಳಬಹುದು. ಮನುಷ್ಯನು ಕೈಗೊಳ್ಳುವ ಅನೇಕ ವೃತ್ತಿಗಳಲ್ಲಿ ಕೃಷಿಯೇ ಅತ್ಯಂತ ಮುಖ್ಯವಾದುದು, ಏಕೆಂದರೆ ಮಿಕ್ಕೆಲ್ಲ ವೃತ್ತಿಗಳೂ ಅದರ ಮೇಲೆ ನಿಂತಿರುತ್ತವೆ. ಅದಿಲ್ಲದೆ ಯಾವ ದೇಶವೂ ಪ್ರಗತಿ ಹೊಂದಲಾರದು ಎಂದು ಅವನು ಹೇಳುತ್ತಾನೆ.[೧] ಆಕರಗಳಲ್ಲಿ ಕೃಷಿಯನ್ನು ಸೂಚಿಸಲು ಆರಂಬ, ಬೇಸಾಯ, ಮೇಟಿವಿದ್ಯೆ[೨], ವ್ಯವಸಾಯ ಮತ್ತು ಸಾಗುವಳಿ[೩] ಎಂಬ ಪದಗಳನ್ನು ಬಳಸಿದೆ.

ಆ ಕಾಲದ ಪರಿಸ್ಥಿತಿಯ ದೃಷ್ಟಿಯಿಂದ ನೋಡಿದರೆ ಕೃಷಿಯ ಬಗೆಗೆ ತಿಳಿವಳಿಕೆ ಚೆನ್ನಾಗಿಯೇ ಬೆಳೆದಿತ್ತು ಎಂದು ಹೇಳಬಹುದು. ಮಣ್ಣು, ಪರಿಸ್ಥಿತಿ, ಕೃತಕ ನೀರಾವರಿ ಸೌಲಭ್ಯ, ಮಳೆ ಮತ್ತು ಬೆಳೆ – ಇವುಗಳ ಆಧಾರದ ಮೇಲೆ ಕೃಷಿ ಭೂಮಿಯನ್ನು ವೈಜ್ಞಾನಿಕವಾಗಿ ವರ್ಗೀಕರಿಸಿರುವುದರಿಂದ ಇದನ್ನು ತಿಳಿದುಕೊಳ್ಳಬಹುದು. ಕೃಷಿ ಭೂಮಿಯ ವಿವಿಧ ವರ್ಗಗಳಿಗೆ ತೆರಿಗೆಯನ್ನು ನಿಗದಿಪಡಿಸುವಾಗ ಸರಕಾರವು ಈ ವರ್ಗೀಕರಣವನ್ನು ಉಪಯೋಗಿಸಿಕೊಳ್ಳುತ್ತಿತ್ತು.[೪]

ರೈತರಿಗೆ ಬೆಳೆಗಳ ಋತು ಆಧಾರಿತ ವಿಭಜನೆಯ ಉತ್ತಮ ತಿಳಿವಳಿಕೆಯಿತ್ತು. ಆ ಕಾಲದ ಶಾಸನಗಳು ಕಾರ್ತೀಕ ಮತ್ತು ವೈಶಾಖ ಬೆಳೆಗಳನ್ನು ಉಲ್ಲೇಖಿಸುತ್ತವೆ.[೫] ಕಾರ್ತೀಕ ಬೆಳೆಯನ್ನು ನವೆಂಬರ್-ಜನವರಿ ಅವಧಿಯಲ್ಲಿ ಕೊಯ್ಯಲಾಗುತ್ತದೆ. ಇದು ಭಾರತದ ಇತರ ಭಾಗಗಳ ಖಾರಿಫ್ ಬೆಳೆಗೆ ಸಂವಾದಿಯಾಗಿರುತ್ತದೆ.[೬] ವೈಶಾಖ ಬೆಳೆಯು ಏಪ್ರಿಲ್-ಮೇ ತಿಂಗಳಲ್ಲಿ ಕೊಯಲಿಗೆ ಬರುತ್ತಿತ್ತು.[೭] ಇದು ರಬಿ ಬೆಳೆಗೆ ಸಂವಾದಿ. ಹೀಗೆ ಕೃಷಿ ವರ್ಷವು ಎರಡು ಕಾಲಾವಧಿಗಳಾಗಿ ವಿಭಾಗವಾಗಿತ್ತು: ೧) ಜೂನ್‌ನಿಂದ ಅಕ್ಟೋಬರ್ ವರೆಗೆ ನೈಋತ್ಯ ಮುಂಗಾರು ಮಳೆಗೆ ಹೊಂದಿಕೊಳ್ಳುವ ಅವಧಿ; ೨) ಜನವರಿ-ಫೆಬ್ರವರಿ ತಿಂಗಳ ಚಳಿ ಹವೆಯ ಫಸಲು. ನೈಋತ್ಯ ದಿಕ್ಕಿನಿಂದ ಬರುವ ಮುಂಗಾರು ಮೊದಲ ಮಳೆಯೊಂದಿಗೆ ಕಾರ್ತೀಕ ಬೆಳೆಯ ಬಿತ್ತುವಿಕೆ ಪ್ರಾರಂಭ. ಅದು ಮುಂಗಾರು ಎಂದು ಕರೆಯಲ್ಪಡುತ್ತದೆ. ವೈಶಾಖ ಬೆಳೆಯ ಬಿತ್ತುವಿಕೆ ಮಾನ್‌ಸೂನ್ ಕೊನೆಗೆ. ಅದನ್ನು ಹಿಂಗಾರುಮಳೆ ಎಂದು ಕರೆಯುತ್ತಿದ್ದರು.[೮] ವರ್ಷದಲ್ಲಿ ಎರಡು ಬೆಳೆ ತೆಗೆಯುವುದು ಮತ್ತು ಬೆಳೆಯ ಆವರ್ತನ ರೈತರಿಗೆ ತಿಳಿದಿತ್ತು.[೯]

ಕಾಡಿನ ತೆರೆದ ಭಾಗಗಳಲ್ಲಿ ಕುಮರಿ ಅಥವಾ ಸ್ಥಳ ಬದಲಾಯಿಸುವ ಬೇಸಾಯವನ್ನು ನಡೆಸಲಾಗುತ್ತಿತ್ತು.[೧೦] ಕಾಡನ್ನು ಸುಟ್ಟಮೇಲೆ, ಅಲ್ಲಿ ರಾಗಿ, ಬೇಳೆಕಾಳುಗಳು ಮತ್ತು ಎಣ್ಣೆಬೀಜಗಳನ್ನು ಬಿತ್ತುತ್ತಿದ್ದರು.[೧೧] ವಿಸ್ತಾರವಾದ ಅರಣ್ಯ ಪ್ರದೇಶಗಳಿರುವವರೆಗೆ ಈ ಬಗೆಯ ಕುಮ್ರಿ (ಕುಮರಿ) ಬೇಸಾಯ ಹಾನಿಕರವಾಗಿರಲಿಲ್ಲ. ಮುಖ್ಯವಾಗಿ ಇದು ದಕ್ಷಿಣ ಮತ್ತು ಉತ್ತರಕನ್ನಡ ಜಿಲ್ಲೆಗಳಲ್ಲಿ ಹಾಗೂ ಕರ್ನಾಟಕದ ಮಲೆನಾಡು ಪ್ರದೇಶಗಳಲ್ಲಿ ರೂಢಿಯಲ್ಲಿದ್ದಿತೆಂದು ಅನೇಕ ಶಾಸನಗಳಿಂದ ತಿಳಿದುಬರುತ್ತದೆ.[೧೨]

ಕಣಿವೆಯ ಕೆಳಭಾಗದಲ್ಲಿದ್ದು ನದಿಗಳು ಮತ್ತು ನಾಲೆಗಳಿಂದ ನೀರನ್ನು ಪಡೆಯುವ ಜಮೀನುಗಳಿಗೆ ಬೈಲುಭೂಮಿ ಎಂಬ ಹೆಸರಿತ್ತು; ಬೈಲಿಗಿಂತ ಎತ್ತರದಲ್ಲಿರುವುದು ಮೆಜಲು. ಇದಕ್ಕೆ ಸಣ್ಣ ಪುಟ್ಟ ಜಲಾಶಯಗಳಿಂದ ನೀರು ಹರಿಯುತ್ತಿತ್ತು; ಕೊನೆಯದಾಗಿ ಸಣ್ಣ ಜಲಾಶಯಗಳಿಂದ ನೀರು ಪಡೆಯುತ್ತಾ ಸಂಪೂರ್ಣವಾಗಿ ಮಳೆಯನ್ನೇ ಅವಲಂಬಿಸಿದ್ದ ಭೂಮಿ ಮತ್ತು ಬೆಟ್ಟ.[೧೩] ಈ ಕೊನೆಯ ಬಗೆಯು ವೀಳ್ಯದೆಲೆ, ಮೆಣಸು ಮತ್ತು ಏಲಕ್ಕಿ ಬೆಳೆಗಳಿಗೆ ಅತ್ಯಗತ್ಯವಾದ ಸೊಪ್ಪು ಎಲೆಗೊಬ್ಬರವನ್ನು ಒದಗಿಸುತ್ತಿತ್ತು.[೧೪] ಸಾಮಾನ್ಯವಾಗಿ ಕರ್ನಾಟಕದ ಪಶ್ಚಿಮ ಕರಾವಳಿಯಲ್ಲಿ ಈ ಬೆಳೆಗಳು ಬೆಳೆಯುತ್ತಿದ್ದುವು. ಈ ವಿಭಜನೆಯಲ್ಲದೆ, ಅನೇಕ ಶಾಸನಗಳು, ಮಳೆಗಾಲದಲ್ಲಿ ಮಾತ್ರವೇ ಬೇಸಾಯವಾಗುವ ಕಾರುಭೂಮಿಯನ್ನೂ ಉಲ್ಲೇಖಿಸುತ್ತವೆ.[೧೫] ಕೋಲಾರಜಿಲ್ಲೆ ಮುಳಬಾಗಿಲು ತಾಲೂಕಿನ ಒಂದು ಶಾಸನದಲ್ಲಿ ಭೂಮಿಯನ್ನು ಉತ್ತಮ, ಮಧ್ಯಮ ಮತ್ತು ಅಧಮ ಎಂದು ವರ್ಗೀಕರಿಸಿರುವುದನ್ನೂ ನೋಡುತ್ತೇವೆ.[೧೬]

ಬೀಜವನ್ನು ಬಿತ್ತಲು ಜ್ಯೋತಿಷ, ಖಗೋಳ ಶಾಸ್ತ್ರ, ಅದರಲ್ಲೂ ಮುಖ್ಯವಾಗಿ ಕೆಲವು ನಕ್ಷತ್ರಗಳ ಸ್ಥಾನ ಬಹಳ ಮುಖ್ಯವಾಗಿರುತ್ತಿತ್ತು. ರಟ್ಟಮತದ ಕರ್ತೃವು ಬಿತ್ತನೆಯ ವಿಧಾನಗಳನ್ನು ವರ್ಣಿಸುವುದಕ್ಕಾಗಿ ಒಂದು ಅಧ್ಯಾಯವನ್ನೇ ಮೀಸಲಾಗಿಟ್ಟಿದ್ದಾನೆ. ನಕ್ಷತ್ರಗಳು ಬಹು ಮಹತ್ವದವೆಂದು ಭಾವಿಸಲಾಗುತ್ತಿತ್ತು. ಆರಿದ್ರಾ (ಜೂನ್ ೨೨ - ಜುಲೈ), ಮಖಾ (ಆಗಸ್ಟ್ ೧೬ ರಿಂದ ಆಗಸ್ಟ್ ೩೦), ಪುಬ್ಬಾ ಮತ್ತು ಉತ್ತರಾ ಇವು ಯಾವುದೇ ಬೀಜಗಳ ಬಿತ್ತನೆಗೆ ಅತ್ಯಂತ ಪ್ರಶಸ್ತವಾದ ಕಾಲವೆಂದು ಪರಿಗಣಿಸಲಾಗಿತ್ತು.[೧೭] ಬಿತ್ತುವುದಕ್ಕೆ ಮೊದಲು ಕೂರಿಗೆಯನ್ನು ಪೂಜಿಸಲಾಗುತ್ತಿತ್ತು.[೧೮]

ಇಂದು ನೋಡುವವನಿಗೆ ಕರ್ನಾಟಕದಲ್ಲಿ ಉಪಯೋಗವಾಗುತ್ತಿದ್ದ ಕೃಷಿ ಉಪಕರಣಗಳು ಕಚ್ಚಾ ಆದುವು ಎಂಬಂತೆ ತೋರಬಹುದು. ಆದರೆ ಸಮಕಾಲೀನ ವೀಕ್ಷಕರ ದೃಷ್ಟಿಯಲ್ಲಿ ಹಾಗೂ ಜಗತ್ತಿನ , ಅಭಿಪ್ರಾಯದಲ್ಲಿ ಹಾಗಿರಲಿಲ್ಲ. ನೇಗಿಲಿಗೆ ಎತ್ತುಗಳನ್ನೂ ಕೋಣಗಳನ್ನೂ ಕಟ್ಟಲಾಗುತ್ತಿತ್ತು,[೧೯] ಕುದುರೆಗಳನ್ನಲ್ಲ. ''ನಮ್ಮ ಹಾಗೆಯೇ ರೈತರು ಎತ್ತುಗಳನ್ನು ಕೋಣಗಳನ್ನು ಜೊತೆಜೊತೆಯಾಗಿ ಹೂಡಿ ನೆಲವನ್ನು ಉಳುತ್ತಾರೆ'' ಎಂಬುದಾಗಿ ಬಾರ್ಬೋಸಾ ಹೇಳುತ್ತಾನೆ.[೨೦] ಟೆರ್ರಿ[೨೧] ಮತ್ತು ಫ್ರೈಯರ್[೨೨]ರೂ ಭಾರತದ ನೇಗಿಲನ್ನು ಟೀಕಿಸುವುದಿಲ್ಲ. ಕೆಲವು ದೃಷ್ಟಿಗಳಿಂದ ಕರ್ನಾಟಕದ ಕೃಷಿ ವಿಧಾನಗಳು ಪುರಾತನವೆಂದು ಅಲ್ಲಗಳೆಯುವಂತಿರಲಿಲ್ಲ.ಕೂರಿಗೆಯಿಂದ ಬಿತ್ತುವುದು ಕರ್ನಾಟಕದಲ್ಲಿ ರೂಢಿಯಲ್ಲಿದ್ದ ಪದ್ಧತಿ.[೨೩] ರಟ್ಟಮತ ಕೃತಿಯು ಬಿತ್ತನೆಗೆ ಕೂರಿಗೆಯನ್ನು ಹೇಳುತ್ತದೆ. ಬಾರ್ಬೋಸನು ಇದನ್ನು ಹೀಗೆ ವರ್ಣಿಸುತ್ತಾನೆ: ''ನೇಗಿಲಗುಳದಲ್ಲಿ ಒಂದು ತೂತಿದೆ. ಅದರಲ್ಲಿ ಭತ್ತವನ್ನು ತುಂಬಲಾಗುತ್ತದೆ. ನೆಲವನ್ನು ನೀರುಹಾಯಿಸಿ ಹದಗೊಳಿಸಿದ ಮೇಲೆ ನೇಗಿಲಗುಳವು ಉಳುತ್ತಲೇ ಬತ್ತವು ಒಂದೊಂದಾಗಿ ಕೆಳಗಿಳಿದು ಮಣ್ಣಿನಲ್ಲಿ ಹುಗಿದುಕೊಳ್ಳುತ್ತದೆ''.[೨೪] ಉತ್ತರ ಭಾರತದ ಕೆಲವು ಭಾಗಗಳಲ್ಲಿ ಪುರಾತನ ಕೂರಿಗೆಯಿಂದ ಬಿತ್ತುತ್ತಿದ್ದಾಗ, ನೇಗಿಲಗುಳದ ಕೂರಿಗೆಯಿಂದ ಬಿತ್ತುತ್ತಿದ್ದುದು ನಿಜವಾಗಿಯೂ ಪ್ರಶಂಸನೀಯವಾದುದ್ದು.[೨೫] ಫಸಲನ್ನು ತೆಗೆದು ರೇಖಿಸಿದ ನಂತರ ಅದನ್ನು ಕಣಜ ಎಂದು ಕರೆಯುತ್ತಿದ್ದ ಮಣ್ಣಿನ ದೊಡ್ಡ ಗುಡಾಣಗಳಲ್ಲಿ ತುಂಬಿಡುತ್ತಿದ್ದರು.[೨೬]

ಬೆಳೆಯ ಹಂಚಿಕೆ

ಉತ್ತರ ಮತ್ತು ದಕ್ಷಿಣಕನ್ನಡ, ಮಲೆನಾಡು ಮತ್ತು ಮೈಸೂರು ಪ್ರಾಂತ-ಇವು ಬತ್ತ ಬೆಳೆಯುವ ಮುಖ್ಯ ಕೇಂದ್ರಗಳಾಗಿದ್ದುವು ಎನ್ನುವುದು ಶಾಸನಗಳಿಂದಲೂ ವಿದೇಶೀಯರ ವರದಿಗಳಿಂದಲೂ ದೃಢಪಡುತ್ತದೆ.[೨೭] ಕರ್ನಾಟಕದ ಪಶ್ಚಿಮ ಕರಾವಳಿಯು ಸಂಬಾರ ವಸ್ತುಗಳ, ಮುಖ್ಯವಾಗಿ ಮೆಣಸು ಮತ್ತು ಏಲಕ್ಕಿಗಳ ಉತ್ಪಾದನೆಯ ಪ್ರದೇಶವಾಗಿತ್ತು. ಅದರ ಬಹುಭಾಗವು ಹೊರದೇಶಗಳಿಗೆ ರಫ್ತಾಗುತ್ತಿದ್ದಿತು. ಬತ್ತವನ್ನು

ಸ್ಥಳೀಯ ಉಪಯೋಗಕ್ಕೆ ಮಾತ್ರವಲ್ಲದೆ ವಿದೇಶಗಳಿಂದ ಬರುವ ಬೇಡಿಕೆಗಳನ್ನು ಪೂರೈಸಲು ಕೂಡ ಉತ್ಪಾದಿಸುತ್ತಿದ್ದರು.[೨೮]

ಕೋಲಾರವು ಕರ್ನಾಟಕದ ಒಣ ಪ್ರದೇಶಗಳಲ್ಲೊಂದಾದರೂ ಗದ್ದೆ, ಹೊಲ ಮತ್ತು ತೋಟದ ಬೆಳೆಗಳನ್ನು ಅಲ್ಲಿ ತೆಗೆಯಲಾಗುತ್ತಿತ್ತು. ಬಹುಶಃ ತೆಂಗು ಮುಳಬಾಗಿಲು ಮತ್ತು ಗೌರೀಬಿದನೂರು ತಾಲೂಕುಗಳಲ್ಲೂ ಅಡಕೆಯು ಗೌರೀಬಿದನೂರು ಪ್ರದೇಶದಲ್ಲೂ ಮುಖ್ಯವಾಗಿ ಬೆಳೆಯುತ್ತಿದ್ದುವು.[೨೯] ಇಲ್ಲಿಯ ವ್ಯವಸಾಯೋತ್ಪನ್ನಗಳು ಬೆಂಗಳೂರು ಜಿಲ್ಲೆಯ ಉತ್ಪನ್ನಗಳಿಗೆ ಸಮವಾಗಿಯೇ ಇದ್ದರೂ, ಹೆಚ್ಚು ಸಂಖ್ಯೆಯ ಕೆರೆಗಳಿದ್ದುದರಿಂದಾಗಿ ಇಲ್ಲಿ ಗದ್ದೆ ಮತ್ತು ತೋಟದ ಬೇಸಾಯ ಅಧಿಕ ಪ್ರಮಾಣದಲ್ಲಿದ್ದುದನ್ನು ಶಾಸನಗಳು ಹೇಳುತ್ತವೆಂದು ತೋರುತ್ತದೆ.[೩೦] ಮಳೆಯು ಈ ಜಿಲ್ಲೆಯಲ್ಲಿ ಬಹಳ ಏರುಪೇರಾಗುತ್ತಿದ್ದುದರಿಂದ ನೀರಾವರಿಯ ಮುಖ್ಯ ಆಕರವಾದ ಕೆರೆಗಳು ಆಗಾಗ ಬತ್ತಿಹೋಗಿ ಗದ್ದೆ ಬೇಸಾಯವು ಅಸಾಧ್ಯವಾಗುವಂತೆ ಮಾಡಿದ್ದಿರಬೇಕು.

ಕೋಲಾರ ಜಿಲ್ಲೆಯಲ್ಲಿ ಎರಡು ಬೆಳೆ ತೆಗೆಯುತ್ತಿದ್ದರು: (ಅ) ವೈಶಾಖ ಬೆಳೆ ಮತ್ತು (ಆ) ಕಾರ್ತೀಕ ಬೆಳೆ.[೩೧] ಹೊಲಗಳಲ್ಲಿ ರಾಗಿಯನ್ನು ಬಿತ್ತುತ್ತಿದ್ದರು. ಕೆರೆಗಳಿರುವ ಕಡೆಗಳಲ್ಲಿ ಅಡಕೆ, ತೆಂಗು ಮೊದಲಾದ ಖಾಯಂತೋಟ ಬೆಳೆಗಳನ್ನು ನಿರ್ವಹಿಸುತ್ತಿದ್ದರು.[೩೨] ಈ ಜಿಲ್ಲೆಯಲ್ಲಿ, ಈಗಿರುವಂತೆಯೇ ಒಣಬೆಳೆಗಳು ಕೃಷಿ ಉತ್ಪನ್ನಗಳ ಮುಖ್ಯ ಭಾಗವಾಗಿದ್ದುವು. ಅವು ರಾಗಿ ಮತ್ತು ಜೋಳ.[೩೩]

ಶಿವಮೊಗ್ಗ ಜಿಲ್ಲೆಯಲ್ಲಿ ಹೊಲ ಮತ್ತು ಗದ್ದೆ ಬೆಳೆಗಳೆರಡೂ ಬೆಳೆಯುತ್ತಿದ್ದುವು. ಅಲ್ಲಿಯ ವಾಯುಗುಣವು ಎರಡು ಬೆಳೆಗಳ ಉತ್ಪಾದನೆಗೂ ಹಿತಕರವಾಗಿತ್ತು. ಬತ್ತ ಜಿಲ್ಲೆಯ ಮುಖ್ಯ ಬೆಳೆಯಾಗಿದ್ದು ಕೆರೆಗಳ ಆಶ್ರಯದಲ್ಲಿ ಬೆಳೆಯುತ್ತಿತ್ತು. ಅಡಕೆ ಬೆಳೆಗೆ ಜಿಲ್ಲೆಯು ಇಂದಿಗೂ ಪ್ರಸಿದ್ಧವಾಗಿದೆ. ಅದೂ ಒಂದು ಮುಖ್ಯವಾದ ಬೆಳೆಯಾಗಿತ್ತೆಂದು ಶಾಸನಗಳು ಪದೇ ಪದೇ ಉಲ್ಲೇಖಿಸುತ್ತವೆ.[೩೪] ಇನ್ನೊಂದು ಶಾಸನವು ಜಿಲ್ಲೆಯಲ್ಲಿ ಅಡಕೆ, ಮೆಣಸು, ಮುಸುಕಿನಜೋಳ, ತೆಂಗು, ಬತ್ತ, ರಾಗಿ, ಬೇಳೆಕಾಳುಗಳು, ಎಣ್ಣೆ, ತುಪ್ಪ, ಮತ್ತು ಬೆಲ್ಲ ಹೇರಳವಾಗಿ ಉತ್ಪನ್ನವಾಗುತ್ತಿದ್ದುವೆಂದು ಹೇಳುತ್ತದೆ.[೩೫]

ಬತ್ತ, ರಾಗಿ, ಹುಣಿಸೆಹಣ್ಣು, ಬೇಳೆಕಾಳು, ಎಣ್ಣೆ, ತುಪ್ಪ, ತೊಗರಿ, ಬೆಲ್ಲ, ತೆಂಗು, ಕೊಬ್ಬರಿ, ಹೊಗೆಸೊಪ್ಪು, ಖರ್ಜೂರ, ಜೀರಿಗೆ, ಈರುಳ್ಳಿ, ಬೆಳ್ಳುಳ್ಳಿ, ಅರಿಶಿನ, ಅಡಕೆ ಮತ್ತು ಮೆಣಸು-ಇವು ಹಿಂದಿನ ಕಡೂರು ಜಿಲ್ಲೆಯ ಮುಖ್ಯ ಬೆಳೆಗಳು ಮತ್ತು ಉತ್ಪನ್ನಗಳು.[೩೬]

ಮೈಸೂರು ಜಿಲ್ಲೆಯು ಬತ್ತ, ಕಾಳುಗಳು, ಅಡಕೆ, ಕಬ್ಬು, ಹೊಗೆಸೊಪ್ಪು, ಹತ್ತಿ, ಹೆಸರು, ಹುರುಳಿ, ಮತ್ತು ಇತರ ಹೊಲಬೆಳೆಗಳನ್ನು ಒದಗಿಸುತ್ತಿದ್ದಿತು.[೩೭] ಬೆಂಗಳೂರು ಜಿಲ್ಲೆಯಲ್ಲಿ ಧಾನ್ಯಗಳು, ಹಣ್ಣುಗಳು, ಹುಣಿಸೆ (ಇಂದಿಗೂ ಇವು ಪ್ರಖ್ಯಾತವಾಗಿದೆ),ತರಕಾರಿಗಳು, ಸಂಬಾರ ವಸ್ತುಗಳು ಮತ್ತು ಹೊಗೆಸೊಪ್ಪು ಬೆಳೆಯುತ್ತಿದ್ದುವು.[೩೮] ಬತ್ತ, ರಾಗಿ, ತೋಟದ ಬೆಳೆಗಳಾದ ತೆಂಗು ಮತ್ತು ಅಡಕೆ ಇವು ತುಮಕೂರು ಜಿಲ್ಲೆಯ ವೈಶಿಷ್ಟ್ಯಗಳಾಗಿದ್ದುವು.[೩೯] ಕೆರಗಳು ಮತ್ತು ಕಾಲುವೆಗಳ ಕೆಳಗೆ ತೋಟಗಳು ಬೆಳೆದಿದ್ದುವು. ತೋಟಗಳಲ್ಲಿ ಕೆರೆಗಳು ಮತ್ತು ಕಾಲುವೆಗಳ ನೀರಿನಿಂದ ಬೆಳೆಯುವ ೨,೦೦೦ದಿಂದ ೪,೦೦೦ ಮರಗಳು ಇರುತ್ತಿದ್ದುವು ಎಂದು ಕೆಲವು ಶಾಸನಗಳು ಹೇಳುತ್ತವೆ.[೪೦] ಇನ್ನೊಂದು ಶಾಸನವು ಆ ಜಿಲ್ಲೆಯ ಬೆಳೆಗಳನ್ನು ಮೂರಾಗಿ ವರ್ಗೀಕರಿಸುತ್ತದೆ :೧) ದ್ವಿದಳ ಧಾನ್ಯಗಳು: ಅವರೆ, ಉದ್ದು, ಗೋಧಿ ಇತ್ಯಾದಿ; ೨) ಸಂಬಾರ ವಸ್ತುಗಳು: ಮೆಣಸು, ಅಡಕೆ, ಸಾಸಿವೆ, ಮೆಂತ್ಯ, ಜೀರಿಗೆ, ಸಬ್ಬಸಿಗೆ, ಧನಿಯ ಮತ್ತು ಅರಿಶಿನ; ೩) ತೋಟದಬೆಳೆ : ತೆಂಗು.[೪೧]

ಬೆಂಗಳೂರು ಜಿಲ್ಲೆಯ ಮುಖ್ಯವಾದ ಬೇಸಾಯ ಹೊಲ ಬೆಳೆಗಳದ್ದು. ಬೇಳೆಗಳು ಮತ್ತು ಕಾಳುಗಳನ್ನು ಶಾಸನಗಳು ಪದೇ ಪದೇ ಉಲ್ಲೇಖಿಸುತ್ತವೆ.[೪೨] ಜಿಲ್ಲೆಯಲ್ಲಿ ಹತ್ತಿಯನ್ನೂ ಬೆಳೆಯಲಾಗುತ್ತಿತ್ತು[೪೩] ಬಾವಿಗಳು ಮತ್ತು ಕೆರೆಗಳ ಕೆಳಗೆ[೪೪] ಹೊಗೆಸೊಪ್ಪನ್ನು ಬೆಳೆಯುತ್ತಿದ್ದರು.[೪೫] ಜಿಲ್ಲೆಯ ಶಾಸನಗಳು ಕಬ್ಬನ್ನೂ ಕಬ್ಬಿನ ಕಾರ್ಖಾನೆಗಳನ್ನೂ ಉಲ್ಲೇಖಿಸುವುದರಿಂದ ಅಲ್ಲಿ ಹೇರಳವಾಗಿ ಕಬ್ಬು ಬೆಳೆಯುತ್ತಿತ್ತು. ಸಕ್ಕರೆ ತಯಾರಾಗುತ್ತಿತ್ತು ಎಂದು ನಿರ್ಣಯಿಸಬಹುದಾಗಿದೆ.[೪೬] ತರಕಾರಿಗಳ ಜೊತೆಗೆ ಹಣ್ಣುಗಳನ್ನೂ ಅಧಿಕ ಪ್ರಮಾಣದಲ್ಲಿ ಬೆಳೆಯಲಾಗುತ್ತಿತ್ತು. ಇಂದಿಗೂ ಈ ಉತ್ಪನ್ನಗಳಿಗೆ ಈ ಜಿಲ್ಲೆಯು ಪ್ರಸಿದ್ಧವಾಗಿದೆ.

ಕಬ್ಬಿನ ಉತ್ಪನ್ನಗಳಾದ ಸಕ್ಕರೆ ಮತ್ತು ಬೆಲ್ಲ ಹೇರಳವಾಗಿ ಉತ್ಪಾದನೆಯಾಗುತ್ತಿದ್ದು, ಕರ್ನಾಟಕವು ಈ ವಸ್ತುಗಳಲ್ಲಿ ಸ್ವಯಂಪೂರ್ಣವಾಗಿತ್ತು. ಈ ವಸ್ತುಗಳನ್ನು ಇಲ್ಲಿಂದ ಹೊರದೇಶಗಳಿಗೆ ರಫ್ತು ಮಾಡುತ್ತಿದ್ದುದರಿಂದ ಈ ವಿಷಯವು ಸಮರ್ಥನೆ ಪಡೆಯುತ್ತದೆ. ಕಬ್ಬು ಬೆಳೆಗಾರರಿಗೆ ಅಪಾರವಾದ ಲಾಭತರುವ ನಗದುಬೆಳೆಯಾಗಿತ್ತು.[೪೭] ಸಕ್ಕರೆ ಮತ್ತು ಬೆಲ್ಲಗಳನ್ನು ತಯಾರಿಸುತ್ತಿದ್ದ ಕ್ರಮವೂ ನಮ್ಮ ಆಕರಗಳಲ್ಲಿ ವರ್ಣಿತವಾಗಿದೆ. ಬಾರ್ಬೋಸನ ಪ್ರಕಾರ ಕರ್ನಾಟಕದಲ್ಲಿ ಉತ್ಪನ್ನವಾಗುತ್ತಿದ್ದ ಸಕ್ಕರೆಯು ಹುಡಿಯಾಗಿರುತ್ತಿತ್ತು. ಈ ಸಕ್ಕರೆಯ ಒಂದು ಅರೋಬಾ ಸುಮಾರು ಇನ್ನೂರ ನಲವತ್ತು ರೈ ಬೆಲೆ ಬಾಳುತ್ತಿದ್ದಿತೆಂದು ಅವನು ಅಂದಾಜು ಮಾಡುತ್ತಾನೆ.[೪೮] ಇನ್ನೊಬ್ಬ ಪ್ರವಾಸಿ ವರ್ತೆಮಾ, ಭಟ್ಕಳದಲ್ಲಿ "ಸಕ್ಕರೆಯು ಹೇರಳವಾಗಿದ್ದುದನ್ನು" ನೋಡಿದನು ಮತ್ತು "ನಮ್ಮಲ್ಲಿನಂತೆಯೇ ಅದನ್ನು ಗಟ್ಟಿಗೊಳಿಸಲಾಗಿತ್ತು" ಎಂದನು.[೪೯] ಕಬ್ಬಿನಿಂದ ಸಕ್ಕರೆಯನ್ನು ತಯಾರಿಸಲು, ಮೊದಲು ಕಬ್ಬನ್ನು ಸಣ್ಣ ತುಂಡುಗಳಾಗಿ ಕತ್ತರಿಸಿ ಅವುಗಳಿಂದ ರಸವನ್ನು ಹಿಂಡಿ ತೆಗೆದುಕೊಳ್ಳಲಾಗುತ್ತಿತ್ತು. ಆಮೇಲೆ ರಸವನ್ನು ಕುದಿಸಿ ಸಕ್ಕರೆಯನ್ನು ಪಡೆಯಲಾಗುತ್ತಿತ್ತು.[೫೦] ಈ ಸಕ್ಕರೆಯಲ್ಲದೆ ತಾಳೆ ಸಕ್ಕರೆ ಮತ್ತು ಬೆಲ್ಲಗಳನ್ನೂ ಉತ್ಪಾದಿಸುತ್ತಿದ್ದರು. ಹೆಚ್ಚಿನ ಸಿಹಿಗಾಗಿ ಇದು ದೇಶಾದ್ಯಂತ ಅಪಾರ ಬೇಡಿಕೆ ಪಡೆದಿತ್ತು.[೫೧] ವಿದೇಶಿ ಪ್ರವಾಸಿಗರ ವರದಿಗಳನ್ನು ಶಾಸನಗಳು ಸ್ಥಿರಪಡಿಸುತ್ತವೆ, ಕರ್ನಾಟಕದ ಅನೇಕ ಭಾಗಗಳಲ್ಲಿ ಕಬ್ಬಿನ ಗಾಣಗಳಿದ್ದುದನ್ನು ಅವು ಉಲ್ಲೇಖಿಸುತ್ತವೆ.[೫೨] ಕಬ್ಬನ್ನು ಗದ್ದೆಯಲ್ಲೂ ನಿರಾರಂಬ ಭೂಮಿಯಲ್ಲೂ ಬೆಳೆಯಲಾಗುತ್ತಿತ್ತು. ಕಬ್ಬನ್ನು ಬೇಸಿಗೆಯಲ್ಲಿ ಕೊಯಿಲು ಮಾಡುತ್ತಿದ್ದರು, ಗಾಣಗಳು ರಸ ತೆಗೆಯುವುದರಲ್ಲಿ ಬಿರುಸಿನಿಂದ ತೊಡಗಿರುತ್ತಿದ್ದುವು.[೫೩] ತೆಂಗಿನಕಾಯಿಯಿಂದ ಬರುತ್ತಿದ್ದ ಇನ್ನೊಂದು ಮುಖ್ಯ ಉಪ ಉತ್ಪನ್ನ ಎಣ್ಣೆ. ಎಳ್ಳಿನಿಂದ, ಹರಳಿನಿಂದ ಕೂಡ ಎಣ್ಣೆ ತೆಗೆಯುತ್ತಿದ್ದರು. ಗಾಣಗಳನ್ನು ಶಾಸನಗಳಲ್ಲಿ ಉಲ್ಲೇಖಿಸಿದೆ.[೫೪]

ಮೇಲೆ ನಿರೂಪಿಸಿದ ವಿವಿಧ ಬೆಳೆಗಳ ವರ್ಣನೆಯು ಆ ಕಾಲದ ಕನ್ನಡ ಸಾಹಿತ್ಯದಲ್ಲಿ ದೊರಕುತ್ತದೆ.[೫೫] ಈ ಸಂದರ್ಭದಲ್ಲಿ ರಾಮಧಾನ್ಯಚರಿತ್ರೆ ಎಂಬ ಕನ್ನಡ ಕೃತಿಯನ್ನು ಇಲ್ಲಿ ಉಲ್ಲೇಖಿಸಬೇಕು. ಇತರ ಧಾನ್ಯಗಳಿಗೆ ಹೋಲಿಸಿದರೆ ರಾಗಿಯ ಮಹತ್ವವೆಷ್ಟು ಎಂಬುದನ್ನು ತೋರಿಸುವ ಉದ್ದೇಶದಿಂದ ಅದು ರಚಿತವಾಗಿದೆ. ಇದನ್ನು ರಚಿಸಿದವರು ಕನಕದಾಸರು, ಧಾರವಾಡ ಜಿಲ್ಲೆಯಲ್ಲಿದ್ದರು. ೧೬ನೆಯ ಶತಮಾನದಲ್ಲಿ ಇದು ರಚಿತವಾಯಿತು. ಶ್ರೀಮಂತ ವರ್ಗಕ್ಕೆ ಸೇರಿದವರು ರಾಗಿಯನ್ನು ಕೆಳದೃಷ್ಟಿಯಿಂದ ನೋಡುತ್ತಿದ್ದರು. ಅದು ಕರ್ನಾಟಕದ ಜನಸಾಮಾನ್ಯರ ಮುಖ್ಯ ಆಹಾರವಾಗಿತ್ತು. ಭಗವಾನ್ ರಾಮಚಂದ್ರನೇ ತನ್ನ ಹೆಸರನ್ನು ಈ ಧಾನ್ಯಕ್ಕೆ ನೀಡಿದನು, ಇತರ ಧಾನ್ಯಗಳಿಗಿಂತ ಮೇಲಾದುದು, ಉತ್ಕೃಷ್ಟವಾದುದು ಎಂದು ಸೂಚಿಸುವುದಕ್ಕಾಗಿ ರಾಮಧಾನ್ಯ, ರಾಘುವಧಾನ್ಯ ಎಂದು ಕರೆಯಲಾಯಿತು, ಎಂದು ಕನಕದಾಸರು ಹೇಳುತ್ತಾರೆ.[೫೬]

ವಿದೇಶಿ ಪ್ರವಾಸಿಗರು ಕರ್ನಾಟಕದಲ್ಲಿ ಬೆಳೆಯುತ್ತಿದ್ದ ಬೆಳೆಗಳ ವಿವರಣೆಯನ್ನೂ ಕೊಟ್ಟಿದ್ದಾರೆ. ಪೇಸ್ (೧೫೨೦-೨೨), ಬತ್ತ, ಧಾನ್ಯಗಳು, ಕಾಳುಗಳು, ಅಗಾಧ ಪ್ರಮಾಣದ ಹತ್ತಿ, ಹುರುಳಿ, ಗೋಧಿ ಮತ್ತು ನಮ್ಮ ಕಡೆ ಬೆಳೆಯದ ಹಲವು ಇತರ ಬಗೆಯ ಬೆಳೆಗಳನ್ನು ಗಮನಿಸಿದನು.[೫೭] ಎಣ್ಣೆಬೀಜಗಳ ಸಂಸ್ಕರಣ ಮತ್ತು

ಗಾಣಗಳಿಗೆ ಹಾಕಿ ಅವುಗಳಿಂದ ಎಣ್ಣೆ ತೆಗೆಯುವುದನ್ನೂ ಅವನು ನೋಡಿದನು.[೫೮] ವಿಜಯನಗರ ಪಟ್ಟಣದ ಆಸುಪಾಸಿನ ಫಲವತ್ತಾದ ಕಣಿವೆಗಳಲ್ಲಿ ಬತ್ತವೂ, ಕಿತ್ತಳೆ, ನಿಂಬೆ, ಸಿಭಾನ್, ಕೆಂಪು ಮೂಲಂಗಿ ಮತ್ತು ಎಲೆಕೋಸು ಮೊದಲಾದ ತೋಟದ ಬೆಳೆಗಳೂ 'ಪೋರ್ಚುಗಲ್ಲಿನಂತೆಯೇ' ಬೆಳೆಯುತ್ತಿದ್ದುವು.[೫೯] ಆದರೆ ಗೋಧಿ ಇತರ ಧಾನ್ಯಗಳಷ್ಟು ಸಾಮಾನ್ಯವಾಗಿರಲಿಲ್ಲ. ಏಕೆಂದರೆ ''ಮೂರರನ್ನು ಬಿಟ್ಟರೆ ಬೇರೆ ಯಾರೂ ಅದನ್ನು ತಿನ್ನುವುದಿಲ್ಲ.''[೬೦]

ನ್ಯೂನಿಜ್ (೧೫೩೫) ಗಮನಿಸಿದಂತೆ, ಗೋಧಿ, ಕಾಳು, ಬತ್ತ ಮತ್ತು ಜೋಳ ಇವು ಇಲ್ಲಿ ಬೆಳೆಯುತ್ತಿದ್ದುವು. ಅವನ ಪ್ರಕಾರ ಇಲ್ಲಿ ತುಂಬಾ ಉಪಯೋಗವಾಗುತ್ತಿದ್ದ ಧಾನ್ಯ ಜೋಳ. ದೇಶದ ಹೆಚ್ಚಿನ ಭಾಗದಲ್ಲಿ ವೀಳ್ಯದೆಲೆಯ ಬೇಸಾಯ ನಡೆದಿತ್ತು.[೬೧] ನ್ಯೂನಿಜನ ಈ ಹೇಳಿಕೆಯನ್ನು ಪೋಷಿಸುತ್ತಾ ಅಬ್ದುಲ್ ರಜಾಕನು ವೀಳ್ಯದೆಲೆ ಮಾತ್ರವಲ್ಲ, ಅಡಕೆಯನ್ನೂ ವಿಪುಲವಾಗಿ ಬೆಳೆಯಲಾಗುತ್ತಿತ್ತು. ಈ ಉತ್ಪನ್ನಗಳನ್ನು ಹಿಂದೂಸ್ಥಾನದಲ್ಲಿ ಮಾತ್ರವಲ್ಲದೆ ಅನೇಕ ಅರಾಬಿಕ್ ಮತ್ತು ಆರ್ಮಜ್‌ಗಳಲ್ಲಿ ಕೂಡ ಗೌರವದಿಂದ ನೋಡಲಾಗುತ್ತಿತ್ತು- ಎಂದು ಹೇಳುತ್ತಾನೆ.[೬೨] ನ್ಯೂನಿಜನ ಪ್ರಕಾರ, ಕರ್ನಾಟಕದ ಕರಾವಳಿ ಪ್ರದೇಶಗಳಲ್ಲಿ ಮೆಣಸು, ಬತ್ತ ಮತ್ತು ಕಬ್ಬು ಅಗಾಧ ಪ್ರಮಾಣದಲ್ಲಿ ಬೆಳೆಯುತ್ತಿದ್ದುವು. ಆದರೆ ಗೋಧಿ ಬೆಳೆಯುತ್ತಿರಲಿಲ್ಲ.[೬೩] ಉತ್ತರ ಕರ್ನಾಟಕದಲ್ಲಿ ಅಥವಾ ಬಹಮನಿ ಸುಲ್ತಾನರ ಆಡಳಿತಕ್ಕೆ ಸೇರಿದ ಪ್ರದೇಶಗಳಲ್ಲಿ ಹೇರಳವಾಗಿ ಹತ್ತಿ, ಎಳ್ಳು, ಗೋಧಿ ಮತ್ತು ಧಾನ್ಯಗಳ ಬೆಳೆ ತೆಗೆಯುತ್ತಿದ್ದರು.[೬೪] ಬೀದರ್ ನಗರದ ಅಕ್ಕ ಪಕ್ಕದಲ್ಲಿ ರಷ್ಯಾ ಪ್ರವಾಸಿ ನಿಕಿಟಿನ್ ಗೋಧಿ, ಅಕ್ಕಿ, ದ್ವಿದಳಧಾನ್ಯ ಮತ್ತಿತರ ಆಹಾರವಸ್ತುಗಳನ್ನು ಬೆಳೆಯುವುದನ್ನು ಗಮನಿಸಿದನು.[೬೫] ಒಟ್ಟಿನಲ್ಲಿ ದೇಶಾದ್ಯಂತ ಉತ್ತಮ ರೀತಿಯಲ್ಲಿ ಬೇಸಾಯವಾಗುತ್ತಿತ್ತು. ನೆಲ ಫಲವತ್ತಾಗಿತ್ತು[೬೬] ಬತ್ತ, ಕಾಳುಗಳು, ಇತರ ದ್ವಿದಳ ಧಾನ್ಯಗಳು ಹೇರಳವಾಗಿದ್ದುವು.[೬೭] ಜೋಳವು ಮಾತ್ರ ತುಂಬಾ ಅಗ್ಗವಾಗಿತ್ತು.[೬೮] ಉತ್ತರ ಕನ್ನಡ ಪ್ರದೇಶದಲ್ಲಿ ಬೇಸಾಯವಿಲ್ಲದ ಒಂದು ಅಡಿ ಭೂಮಿಯೂ ಇಬನ್ ಬತೂತ(೧೩೪೨)ನಿಗೆ ಕಾಣಿಸಲಿಲ್ಲ.[೬೯]

ವಿಜಯನಗರ ಆಡಳಿತವು ಗದ್ದೆ ಬೆಳೆಗಳ ಬೇಸಾಯಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡುತ್ತಿತ್ತು. ನಗದು ಬೆಳೆಗಳಾದ ಬತ್ತ,ಕಬ್ಬು, ಹತ್ತಿ ಮತ್ತು ಸಂಬಾರವಸ್ತುಗಳು ಹೆಚ್ಚಿನ ವರಮಾನವನ್ನು ತರುತ್ತಿದ್ದುವು. ಕೆರೆಗಳು, ನಾಲೆಗಳು ಮತ್ತು ಬಾವಿಗಳನ್ನು ನಿರ್ಮಿಸುವುದರ ಮೂಲಕ, ಬಂಜರು ನೆಲವನ್ನು ಹೆಚ್ಚು ಹೆಚ್ಚಾಗಿ ಬೇಸಾಯಕ್ಕೆ ಒಳಪಡಿಸುವುದರ ಮೂಲಕ ಆಡಳಿತದ ಪ್ರೋತ್ಸಾಹ ಕಂಡುಬರುತ್ತಿತ್ತು. ಈ ಕೆಲಸದಲ್ಲಿ ದೇವಾಲಯಗಳು, ಗ್ರಾಮಸಭೆಗಳು ಮತ್ತು ಖಾಸಗಿ ವ್ಯಕ್ತಿಗಳೂ ಹಿಂದೆ ಬಿದ್ದಿರಲಿಲ್ಲ. ಈ ಕೆಲಸವನ್ನು ಧರ್ಮಕಾರ್ಯವೆಂದು ಪರಿಗಣಿಸಲಾಗುತ್ತಿತ್ತು. ಬಲವಾದ ಧಾರ್ಮಿಕ ಭಾವನೆ, ವಾಸ್ತವಿಕ ಅಗತ್ಯ ಇವುಗಳ ಆಧಾರವಿದ್ದ ಈ ನೀತಿಯು ಆ ಕಾಲದ ಕೃಷಿ ಅರ್ಥವ್ಯವಸ್ಥೆಯ ಮೇಲೆ ಎರಡು ದಟ್ಟ ಪರಿಣಾಮಗಳನ್ನು ಬೀರಿತು. ಮೊದಲನೆಯದಾಗಿ, ಅವರು ಇಳುವರಿಯನ್ನು ಹೆಚ್ಚಿಸಲು ರೈತರಿಗೆ ನೆರವಾಗುತ್ತಿದ್ದರು. ಎರಡನೆಯದಾಗಿ, ಹೊಲಕ್ಕಿಂತ ಗದ್ದೆಗೆ ಹೆಚ್ಚು ಕಂದಾಯ ಕೊಡಬೇಕಾಗಿದ್ದುದರಿಂದ ಸರಕಾರಕ್ಕೆ ಹೆಚ್ಚಿನ ವರಮಾನ ಬರುತ್ತಿತ್ತು.

ಅಲ್ಲದೆ, ಬತ್ತ, ಕಬ್ಬು, ತೆಂಗು, ಅಡಕೆ, ವೀಳ್ಯದೆಲೆ, ಮೆಣಸು ಮತ್ತು ಏಲಕ್ಕಿಗಳನ್ನು ಗದ್ದೆ, ತೋಟ ಮತ್ತು ನಿರಾರಂಬ ಜಮೀನುಗಳಲ್ಲಿ ಬೆಳೆಯುವುದು, ವರ್ಷಕ್ಕೆ ಎರಡು ಸಾರಿ ಕಾರ್ತೀಕ ಮತ್ತು ವೈಶಾಖ ಬೆಳೆಗಳನ್ನು ತೆಗೆಯುವುದು, ಇದು ಸಾಧ್ಯವಾಗುತ್ತಿದ್ದುದು ವ್ಯಾಪಕವಾದ ನೀರಾವರಿ ಸೌಲಭ್ಯದಿಂದ ಮಾತ್ರ. ಕಬ್ಬು, ಸಂಬಾರ ಬೆಳೆಗಳು, ಮತ್ತು ಬತ್ತಗಳನ್ನು ಹೊರದೇಶಗಳಿಗೆ ರಫ್ತು ಮಾಡುವ ಸಲುವಾಗಿಯೇ

ಹೇರಳವಾಗಿ ಬೆಳೆಯಲಾಗುತ್ತಿದ್ದಿತು ಎನ್ನುವುದೇ ನೀರಾವರಿ ಕಾರ್ಯಗಳ ಮಹತ್ವ ಎಷ್ಟಿದ್ದಿತೆಂಬುದನ್ನು ಸೂಚಿಸುತ್ತದೆ.[೨೦]

ನೀರಾವರಿ

ವಿಜಯನಗರ ಕಾಲದಲ್ಲಿ ಭೂಮಿಯನ್ನು ಅಧಿಕ ಪ್ರಮಾಣದಲ್ಲಿ ಹೊಂದಿರುವುದಕ್ಕಿಂತಲೂ ನೀರಾವರಿ ಹಾಗೂ ಮೂಲ ಉತ್ಪಾದಕರ ಮೇಲಿನ ನಿಯಂತ್ರಣ ಅತ್ಯಂತ ಮುಖ್ಯವಾದುದಾಗಿತ್ತು. ಏಕೆಂದರೆ, ಜಮೀನು ಧಾರಾಳವಾಗಿ ಲಭ್ಯವಿತ್ತು.

ಅರಣ್ಯವನ್ನು ಕಡಿದು ಕೆರೆಯನ್ನು ನಿರ್ಮಿಸಿದಾಗ ಗ್ರಾಮೀಣ ಅರ್ಥವ್ಯವಸ್ಥೆಯು ನೂತನವಾಗಿ ರೂಪುಗೊಂಡಿತು.[೨೧] ಸಹಜವಾಗಿಯೇ ನೀರಾವರಿ ಸೌಲಭ್ಯಗಳು ಉತ್ಸಾಹೀ ರೈತರನ್ನೂ ಕಸಬುದಾರರನ್ನೂ ಆ ಹೊಸನೆಲೆಗಳಿಗೆ ಆಕರ್ಷಿಸಿದುವು.

೧೪ನೆಯ ಶತಮಾನದ ಪ್ರಾರಂಭದಲ್ಲಿ ಕೃಷಿಕರಿಗೆಂದೇ ರಚಿತವಾದ ರಟ್ಟಮತಂ ಎಂಬ ಕೃತಿಯು ಕೆರೆ, ತೊರೆ (ಹೊಳೆ), ಬಾವಿ, ಮತ್ತು ಕೊಳ ಇವು ನೀರಾವರಿಯ ಮೂಲಗಳಾಗಿದ್ದುವು.[೨೨] ಶಿವಮೊಗ್ಗ ಜಿಲ್ಲೆಯ ಒಂದು ಶಾಸನದಲ್ಲಿ ''ಮುರಿದು ಹೋದ ಸಂಸಾರ, ಬಿರುಕು ಬಿಟ್ಟ ಕೆರೆ ಅಥವಾ ಕೊಳ, ಪತನ ಹೊಂದಿದ ರಾಜ್ಯ, ಶಿಥಿಲವಾದ ದೇವಾಲಯ ಇವುಗಳನ್ನು ಜೀರ್ಣೋದ್ಧಾರ ಮಾಡುವವನು ಅಥವಾ ದುರಸ್ತಿ ಪಡಿಸುವವನು ಪುಣ್ಯವನ್ನು ಸಂಪಾದಿಸುತ್ತಾನೆ'' ಎಂದು ಹೇಳಿದೆ.[೨೩]

ಕೆರೆ ಮತ್ತು ಕಟ್ಟೆ ಎಂಬ ಎರಡು ಬಗೆಯ ಜಲಾಶಯಗಳಿದ್ದುವು. ಇವು ಶಾಸನಗಳಲ್ಲಿ ಪ್ರತ್ಯೇಕವಾಗಿಯೇ ಉಲ್ಲೇಖಗೊಳ್ಳುತ್ತವೆ.[೨೪] ಎರಡರ ನಡುವೆ ವ್ಯತ್ಯಾಸವಿದ್ದಿತೆಂಬುದನ್ನು ಇದು ಸೂಚಿಸುತ್ತದೆ. ಸಣ್ಣ ಜಲಾಶಯವು ಕಟ್ಟೆ, ದೊಡ್ಡದು ಕೆರೆ. ಹಳ್ಳವಾಗಿರುವ ನೆಲದ ಅಡ್ಡಲಾಗಿ ಮಣ್ಣಿನ ದಿಣ್ಣೆಯನ್ನು ಅಥವಾ ಅಣೆಯನ್ನು ಕಟ್ಟಿ ಈ ಎರಡನ್ನೂ ನಿರ್ಮಿಸಲಾಗುತ್ತಿತ್ತು.[೨೫] ಮಾನವ ಶಕ್ತಿ ಮತ್ತು ಪ್ರಾಣಿಶಕ್ತಿ[೨೬]ಗಳನ್ನು, ಅದರಲ್ಲೂ ಆನೆಗಳನ್ನು ಈ ಕೆಲಸಗಳಲ್ಲಿ ಉಪಯೋಗಿಸಿಕೊಳ್ಳಲಾಗುತ್ತಿತ್ತು.[೨೭]

ಕೆರೆಗಳು ಮತ್ತು ನಾಲೆಗಳ ನಿರ್ಮಾಣಕ್ಕೆ ಅಗತ್ಯವಾದ ಕಾರ್ಮಿಕ ಶ್ರಮವು ಎಂದಿನಿಂದಲೂ ವಿಶೇಷ ಕಷ್ಟಗಳನ್ನು ಕೊಡುತ್ತಲೇ ಬಂದಿದೆ. ಬಲಾತ್ಕಾರದ ದುಡಿಮೆಗೆ ಸಂಬಂಧಿಸಿದ ನಿಯಮಗಳನ್ನು ಶಾಸನಗಳು ಕಡ್ಡಾಯ ಮತ್ತು ಬಿಟ್ಟಿ ಎಂದು ಕರೆಯುತ್ತವೆ. ಕೆರೆ-ಕಾಲುವೆ ಮೊದಲಾದುವನ್ನು ಸುಸ್ಥಿತಿಯಲ್ಲಿರುವಂತೆ ನೋಡಿಕೊಳ್ಳುತ್ತಿದ್ದ ಅಥವಾ ಹೊಸ ಕೆರೆಗಳನ್ನು ಕಟ್ಟಿಸಿದ ವ್ಯಕ್ತಿಗಳಿಗೆ ರಾಜರು ಮತ್ತು ಗ್ರಾಮಸಭೆಗಳು ಮಾನ್ಯ ಅಥವಾ ತೆರಿಗೆರಹಿತ ಭೂಮಿಯನ್ನು ನೀಡುತ್ತಿದ್ದುವು. ಈ ರೂಢಿಯು ಕರ್ನಾಟಕದಲ್ಲಿ ಬಹುಕಾಲದಿಂದ ಉಳಿದುಬಂದಿತ್ತು. ಕೆರೆಗಳ ಕೆಳಗಿನ ಜಮೀನುಗಳನ್ನು ಹಾಗೆ ಕೊಡುಗೆಯಾಗಿ ನೀಡಿದಾಗ ಅದಕ್ಕೆ ಕಟ್ಟು-ಕೊಡಿಗೆ, ಕೆರೆ-ಕಟ್ಟು-ಕೊಡಿಗೆ, ಕೆರೆ-ಕೊಡಿಗೆ, ಮತ್ತು ದಸವಂದ ಎಂಬ ಹೆಸರುಗಳಿದ್ದುವು.[೨೮] ಕಟ್ಟು-ಕೊಡಿಗೆಯೆಂದರೆ ಕೆರೆಯ ಅಚ್ಚುಕಟ್ಟು (ನೀರಾವರಿಯಿರುವ ಪ್ರದೇಶ)ದಲ್ಲಿ ನೀಡಿದ ಭೂಮಿ, ಕೆರೆ-ಕೊಡಿಗೆಯೆಂದರೂ ಇದೇ ಅರ್ಥ. ಆದರೆ ದಸವಂದ ಎನ್ನುವುದು ಕೆರೆಯನ್ನು ಕಟ್ಟಿದ ನಿರ್ದಿಷ್ಟ ವ್ಯಕ್ತಿಗಳಿಗೆ ಆ ಕೆರೆಯ ಅಚ್ಚುಕಟ್ಟು ಪ್ರದೇಶದಲ್ಲಿ ನೀಡಿದ ನಿರ್ದಿಷ್ಟ ಭೂಮಿ ಎಂಬ ಅರ್ಥ ಕೊಡುತ್ತದೆ.

ಸಾಮಾನ್ಯವಾಗಿ ದಸವಂದ ಎಂದರೆ, ಬಿರುಕು ಬಂದಾಗ ರಿಪೇರಿ ಮಾಡಿಸಿದ, ವಿಸ್ತರಿಸಿದ, ಉಸ್ತುವಾರಿ ನೋಡಿಕೊಂಡ ಅಥವಾ ನಿರ್ಮಿಸಿದ ವ್ಯಕ್ತಿಗೆ ಆ ಕೆರೆಯ ಕೆಳಗೆ ಬೇಸಾಯವಾಗುತ್ತಿದ್ದ ಭೂಮಿಯಲ್ಲಿ ೧/೧೦ ಭೂಮಿಯನ್ನು ನೀಡುವುದು.[೨೯] ದಸವಂದ ನೀಡುವ ಪದ್ಧತಿಯು ೧೮ನೆಯ ಶತಮಾನದವರೆಗೂ ರೂಢಿಯಲ್ಲಿತ್ತು.

ಇದನ್ನು ಕ್ರಿ.ಶ. ೧೭೩೦ರ ಒಂದು ಶಾಸನವು ಸಮರ್ಥಿಸುತ್ತದೆ. ೧೮ನೆಯ ಶತಮಾನದ ಕೊನೆಗೆ ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ ಪ್ರವಾಸ ಮಾಡಿದ ಬುಕನನ್ ಬರೆದ ವರದಿಗಳಿಂದಲೂ ಇದು ತಿಳಿಯುತ್ತದೆ.[೨೧]

ಕೆರೆಗಳ ದುರಸ್ತಿಯೆಂದರೆ ಅದರಲ್ಲಿ ಸಾಮಾನ್ಯವಾಗಿ ಹೂಳು ತೆಗೆಯುವುದು, ಏರಿಗಳಲ್ಲಿ ಬಿರುಕು ಉಂಟಾಗದಂತೆ ನೋಡಿಕೊಳ್ಳುತ್ತಿರುವುದು. ಕೊಳದ ನೀರಾವರಿಯಲ್ಲಿದ್ದ ಒಂದು ದೋಷವೆಂದರೆ, ಅವು ಕ್ರಮೇಣ ಹೂಳು ತುಂಬಿ ನೀರನ್ನು ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯ ಕಡಮೆಯಾಗುವುದು. ಆದ್ದರಿಂದ ಆ ಕಾಲದ ಜಮೀನುದಾರರು ಅಥವಾ ಗ್ರಾಮಪಂಚಾಯಿತಿ ಕೆರೆಗಳ ಹೂಳು ತೆಗೆಯುವುದಕ್ಕೆಂದೇ ವಿಶೇಷವಾಗಿ ಹಣವನ್ನು ದಾನಮಾಡಿದ್ದಾರೆ. ಪ್ರತಿವರ್ಷವೂ ಕೆರೆಯಿಂದ ಹೂಳನ್ನು ತೆಗೆದು ಸ್ವಚ್ಛಗೊಳಿಸುವ ವ್ಯಕ್ತಿಗಳಿಗೆ ಭೂಮಿಯನ್ನು ಕೊಡುಗೆಯಾಗಿ ನೀಡಲಾಗುತ್ತಿತ್ತು.[೨೨] ತೆಗೆದ ಹೂಳನ್ನು ಹಳ್ಳಿಯಿಂದ ಹೊರಕ್ಕೆ ಸಾಗಿಸಲು ಬಂಡಿಗೆ ಎಮ್ಮೆಗಳನ್ನು ಎತ್ತುಗಳನ್ನು ಕಟ್ಟುತ್ತಿದ್ದರು. ಯಲಹಂಕದ ಮುಮ್ಮಡಿ ಕೆಂಪೇಗೌಡನು ಒಂದು ಕೆರೆಯಿಂದ ಹೂಳು ತೆಗೆದವನಿಗೆ ನಾಲ್ಕು ಕೋಣಗಳನ್ನು ದಾನವಾಗಿ ನೀಡಿದನು.[೨೩] ಕೆಲವೊಮ್ಮೆ ಈ ಕಾರ್ಯಕ್ಕಾಗಿ ಬಂಡಿಗಳನ್ನು ಸಿದ್ಧಮಾಡುವುದಕ್ಕಾಗಿಯೇ ಭೂಮಿಯನ್ನು ನೀಡಿಲಾಗುತ್ತಿತ್ತು.[೨೪] ಕೆರೆ ಬಂಡಿಯ ಎಮ್ಮೆಗಳನ್ನು ಕಾಪಾಡುವವನಿಗೆ,ಎಣ್ಣೆಗೆ, ಚಕ್ರಕ್ಕೆ ಹಾಕುವ ಕೀಲೆಣ್ಣೆಗೆ, ಹಾರೆ, ಗುದ್ದಲಿ, ಪಿಕಾಸಿಗಳಿಗೆ, ಇತರ ಅಗತ್ಯವಸ್ತುಗಳಿಗೆ ಬೇಕಾಗಲೆಂದು, ವಸ್ತುಗಳ ಮೇಲಿನ ಸುಂಕದಲ್ಲಿ ಒಂದು ಪಾಲನ್ನು ಬಿಡಲಾಗುತ್ತಿತ್ತು.[೨೫]

ನೀರಾವರಿ ಕಾರ್ಯಗಳ ದುರಸ್ತಿ ಮತ್ತು ಪಾಲನೆಯನ್ನು ಹಲವರು ಸೇರಿ ನಿರ್ವಹಿಸಿದ್ದಾಗ ಆ ನೀರಿನ ಸೂಕ್ತರೂಪದ ಹಂಚಿಕೆಗಾಗಿ ಕೂಡ ನಿಯಮಾಳಿಯನ್ನು ನಿಗದಿಪಡಿಸಲಾಗಿತ್ತು. ಅವರು ವಹಿಸಿಕೊಂಡ ವೆಚ್ಚಕ್ಕೆ ತಕ್ಕ ಪರಿಣಾಮದಲ್ಲಿ ಅವರಿಗೆ ನೀರು ದೊರಕುತ್ತಿದ್ದಿತು. ಕ್ರಿ.ಶ.೧೪೧೧ರ ದಾವಣಗೆರೆಯ ಒಂದು ಶಾಸನವು ನಾಲೆಯ ಕೆಳಗೆ ತೋಡಿಸಿದ ಬಾವಿಗಳು ಮತ್ತು ಕೆರೆಗಳ ವೆಚ್ಚ ಹಾಗೂ ವಾರ್ಷಿಕ ರಿಪೇರಿಗಳ ವೆಚ್ಚವನ್ನು ೨/೩ ಪಾಲು ದೇವಾಲಯದ ದೇವರೂ, ೧/೩ ಬ್ರಾಹ್ಮಣರೂ ವಹಿಸತಕ್ಕದ್ದು. ಆದ್ದರಿಂದ ಆ ನಾಲೆಯ ನೀರಿನಲ್ಲಿ ಅದೇ ಪರಿಮಾಣದಲ್ಲಿ ನೀರನ್ನು ಅವರಿಗೆ ಹಂಚುತಕ್ಕದ್ದು ಎಂದು ಹೇಳುತ್ತದೆ.[೨೬]

ನೀರಾವರಿಯ ಹಕ್ಕುಗಳನ್ನು ಕುರಿತು ಹಳ್ಳಿಗಳ ನಡುವೆ ವಿರಸವುಂಟಾದರೆ ಪಂಚಾಯಿತಿಯ ಮೂಲಕ ಅದನ್ನು ಪರಿಹರಿಸಲಾಗುತ್ತಿತ್ತು. ನಿರ್ಣಯವನ್ನು ಜಾಗರೂಕತೆಯಿಂದ ದಾಖಲು ಪಡಿಸಲಾಗುತ್ತಿತ್ತು. ಒಂದು ಕೆರೆಯ ಮೇಲೆ ಹಕ್ಕು ತಮ್ಮದೆಂದು ಎರಡು ಹಳ್ಳಿಗಳಿಗೆ ಜಗಳವೆದ್ದಾಗ, ಒಂದು ಹಳ್ಳಿಯು ಇನ್ನೊಂದಕ್ಕೆ ಹಣವನ್ನು ಕೊಟ್ಟು ಹಕ್ಕನ್ನು ಕೊಂಡುಕೊಳ್ಳಲು ನಿರ್ಧರಿಸಿತು. ಆ ಹಣವು ಈ ಸಂದರ್ಭದಲ್ಲಾದಂತೆ ಒಂದೇ ಸಾರಿ ಕೊಟ್ಟ ಒಟ್ಟು ಮೊತ್ತವಾಗಬಹುದು ಅಥವಾ ವಾರ್ಷಿಕ ಕೊಡುಗೆಯಾಗಿರಬಹುದಾಗಿತ್ತು.[೨೭]

ಬೇರೆ ಬೇರೆ ಗಾತ್ರದ ಕೆರೆಗಳ ನಿರ್ಮಾಣಕ್ಕೆ ಸಹಜವಾಗಿಯೇ ಹಳ್ಳಿಗಳ ಜನರ ಸಹಕಾರಯುತ ಪ್ರಯತ್ನ ಅಗತ್ಯವಾಗಿತ್ತು. ಜನತೆಗೆ ಸರಕಾರವು ಒದಗಿಸುತ್ತಿದ್ದ ನೀರಾವರಿ ಸೌಲಭ್ಯಗಳನ್ನು ಕುರಿತ ಉಲ್ಲೇಖಗಳು ಶಾಸನಗಳಲ್ಲಿ ಬೇಕಾದಷ್ಟಿವೆ. ಎಲ್ಲ ಸಂದರ್ಭಗಳಲ್ಲೂ ಸರಕಾರವು ಸ್ಥಳೀಯ ಜನರೊಂದಿಗೆ, ಅವರ ಕಲ್ಯಾಣಕ್ಕಾಗಿ, ನಿಕಟವಾದ ಸಾಮರಸ್ಯದಿಂದ ನಡೆದುಕೊಳ್ಳುತ್ತಿದ್ದುದು ವ್ಯಕ್ತವಾಗುತ್ತದೆ.ರಾಜರಿಗೆ ಅಥವಾ ಭೂಮಿಯನ್ನು ವಶಪಡಿಸಿಕೊಂಡವರಿಗೆ ಬಹಳ ಮೊದಲ ಹಂತದಲ್ಲೇ ಜಲಾಶಯಗಳ ನಿರ್ಮಾಣದ ವಿಚಾರ ಮನವರಿಕೆಯಾಗಿರಬಹುದು.

ಕರ್ನಾಟಕದಲ್ಲಿ ಅತ್ಯಂತ ಪ್ರಾಚೀನವಾದ ಕೆರೆಗಳಿರುವುದು ಇಲ್ಲಿನ ಅರಸರು ಈ ಬಗೆಯ ನಿರ್ಮಾಣಕ್ಕೆ ಹೇಗೆ ಪ್ರೋತ್ಸಾಹ ನೀಡುತ್ತಿದ್ದರೆಂಬುದಕ್ಕೆ ಸಾಕ್ಷಿಯಾಗಿ ನಿಂತಿದೆ.[೨೮] ಸರಕಾರದ ಸಂಪನ್ಮೂಲದ ಜೊತೆಗೆ ಈ ಕಾರ್ಯಗಳಿಗಾಗಿ ಖಾಸಗಿ ಹಣವೂ ಧಾರಾಳವಾಗಿ ದೊರಕುತ್ತಿದ್ದಿತು. ಕೆರೆಗಳನ್ನು ಬಹುತೇಕ ಖಾಸಗಿ ಗಣ್ಯರು

ಕಟ್ಟಿಸಿ, ಸಮುದಾಯಗಳು ಜೋಪಾನಗೊಳಿಸಿವೆ. ದೇವಾಲಯಗಳು ಕೂಡ ಹಳ್ಳಿಯ ಕೆರೆಗಳ ದುರಸ್ತಿ ಮತ್ತು ಪಾಲನೆಯನ್ನು ಕೈಗೆತ್ತಿಕೊಂಡಿದ್ದಿದೆ.[೫೯]

ದತ್ತಿಗಳಿಂದಾಗಿ ಅಪಾರವಾದ ಸಂಪತ್ತನ್ನು ಸಂಗ್ರಹಿಸಿಟ್ಟುಕೊಂಡ ದೇವಾಲಯಗಳು ಅನೇಕ ವೇಳೆ ಗ್ರಾಮದ ಜನರ ಸಂಕಷ್ಟವನ್ನು ಪರಿಹರಿಸಲು ಮುಂದಾಗುತ್ತಿದ್ದುವು. ಆ ಕಾಲದ ಜನರ ಕೃಷಿ ಜೀವನದಲ್ಲಿ ಅವು ವಹಿಸಿದ ಪಾತ್ರವನ್ನು ಎಷ್ಟು ಮಾತ್ರಕ್ಕೂ ಇಳಿಕೆಗೈಯಿಯುವಂತಿಲ್ಲ. ೧೩೪೮ರ ಒಂದು ಶಾಸನವು ಒಂದು ಹಳ್ಳಿಯ ಕೆರೆಯು ತೂಬಿನ ಬಳಿಯೇ ಬಿರುಕುಬಿಟ್ಟುದನ್ನು ಹೇಳುತ್ತದೆ. ಅದನ್ನು ದುರಸ್ತಿಪಡಿಸಲು ಸಾಕಾಗುವಷ್ಟು ಹಣ ಇರಲಿಲ್ಲ. ಆ ಕೆರೆಯ ಕೆಳಗಿನ ಜಮೀನು ಸಾಗುವಳಿಯಾಗದೆ ಬಹಳ ಕಾಲ ತಪ್ಪಿಹೋಯಿತು. ಆ ಅಸಹಾಯಕ ಪರಿಸ್ಥಿತಿಯನ್ನು ಮನಗಂಡು ಸ್ಥಳದ ದೇವಾಲಯದ ಅಧಿಕಾರಿಗಳು, ದೇವಾಲಯಕ್ಕೆ ಸೇರಿದ ಭೂಮಿಯ ಒಂದು ಭಾಗವನ್ನು ಮಾರಿ ಆ ಹಣದಿಂದ ಹಳ್ಳಿಗರಿಗೆ ಸಹಾಯ ಮಾಡಿದರು. ಆ ಹಣವನ್ನು ಕೆರೆಯ ಬಿರುಕನ್ನು ಮುಚ್ಚಿ ದುರಸ್ತಿಪಡಿಸಲು ಉಪಯೋಗಿಸಿದರು.[೬೦]

ವಿಜಯನಗರದ ರಾಜರು ರಾಣಿಯರ ನೀರಾವರಿ ಉದ್ದೇಶದಿಂದ ಉತ್ತಮ ರೀತಿಯ ನೀರಿನ ಒದಗಣೆಗಾಗಿ ತೋರಿಸಿದ ಆಸಕ್ತಿ ಅಪಾರವಾಗಿದೆ.[೬೧] ಜೀವನದ ಮೂಲ ಆವಶ್ಯಕತೆಗಳನ್ನು ಸುಧಾರಿಸಲು ಅವರು ಹೇಗೆ ಆಸಕ್ತರಾಗಿದ್ದರೆಂಬುದಕ್ಕೆ ಇವು ಸಾಕ್ಷಿಯಾಗಿವೆ.

ವಡ್ಡವ್ಯವಹಾರಿ, ನಾನಾದೇಶಿಗಳು ಮುಂತಾದ ಹೆಸರುಗಳಿದ್ದ ದೊಡ್ಡ ವರ್ತಕರು ವಿಜಯನಗರ ಕಾಲದಲ್ಲಿ ಭಾರೀ ವೆಚ್ಚದ ನೀರಾವರಿ ಕಾರ್ಯಗಳನ್ನು ನಿರ್ವಹಿಸಲು ಮುಂದಾಗುತ್ತಿದ್ದರು. ಅರಕಲುಗೂಡಿನ ಒಂದು ಶಾಸನವು ಹೇಳುವಂತೆ, ಮಹಾದೇವರಸ ಎಂಬ ಹಿರಿಯ ವಡ್ಡ ವ್ಯವಹಾರಿ ನಾನಾದೇಶಿಗಳ ಎರಡೂ ಪಂಗಡಗಳ ಮುಖ್ಯಸ್ಥನಾಗಿದ್ದವನು ಮೊದಲನೆಯ ಹರಿಹರ(೧೩೩೬-೫೬)ನಿಗೆ ಪ್ರಾರ್ಥನೆ ಸಲ್ಲಿಸಿ, ಹರಿಹರನು ತನ್ನ ತಮ್ಮ ಮೊದಲನೆಯ ಬುಕ್ಕನಿಗೆ ಸಿಂಗಪಟ್ಟಣ-ಚಂಗುನಾಡುನಲ್ಲಿ ಲೋಕೋಪಯೋಗಿ ಕಾರ್ಯಗಳನ್ನು ಕೈಗೊಳ್ಳುವಂತೆ ಆದೇಶ ನೀಡಲು ಒಂದು ಕಾಲುವೆಯನ್ನು ಕಟ್ಟಿಸಿದನು.[೬೨]

ಹಳ್ಳಿಯ ಒಬ್ಬ ಶ್ರೀಮಂತನು ಒಂದು ಕೆರೆಯನ್ನು ಕಟ್ಟಿಸುವ, ಅಥವಾ ಹಳೆಯ ಕೆರೆಯನ್ನು ರಿಪೇರಿ ಮಾಡುವ ಜವಾಬ್ದಾರಿಯನ್ನು ವಹಿಸಿಕೊಂಡರೆ ಆ ಹಳ್ಳಿಯ ಜನರು ಒಟ್ಟುಗೂಡಿ ಅವನಿಗೆ ಭೂಮಿಯನ್ನು ಬಿಟ್ಟುಕೊಡುತ್ತಿದ್ದರು. ತುಮಕೂರು ಜಿಲ್ಲೆ, ಕುಣಿಗಲ್ ತಾಲೂಕಿನ ೧೩೯೯ರ ಒಂದು ಶಾಸನವು ಗ್ರಾಮದ ಸಾರ್ವತ್ರಿಕ ನಿಧಿಯಿಂದ ಒಂದು ಕೆರೆಯನ್ನು ನಿರ್ಮಿಸಲಾಯಿತು ಎಂದು ಹೇಳುತ್ತದೆ.[೬೩] ಕೆಲವೊಮ್ಮೆ ಕೆರೆಗಳನ್ನೋ ದೊಡ್ಡ ನಾಲೆಗಳನ್ನೋ ಕಟ್ಟುವ ಕೆಲಸವನ್ನು ವ್ಯಕ್ತಿಗಳಿಗೆ ಗುತ್ತಿಗೆ ಕೊಡಲಾಗುತ್ತಿತ್ತು. ಕೆಲಸವನ್ನು ಪ್ರಾರಂಭ ಮಾಡುವುದಕ್ಕಿಂತ ಮೊದಲು ಸೂಕ್ತವಾದ ಧಾರ್ಮಿಕ ಆಚರಣೆಗಳನ್ನು ನೆರವೇರಿಸಲಾಗುತ್ತಿತ್ತು.[೬೪] ಮಹಿಳೆಯರೂ ಈ ನಿರ್ಮಾಣಕಾರ್ಯವನ್ನು ನಿರ್ವಹಿಸುತ್ತಿದ್ದರು. ಕೆರೆಗಳನ್ನು, ಬಾವಿಗಳನ್ನು ಕಟ್ಟಿದವರಿಗೆ ಹೇಗೆ ಮಹಿಳೆಯರು ಯಾವುದೇ ತೆರಿಗೆಯಿಲ್ಲದ ಭೂಮಿಯನ್ನು ದಾನಮಾಡಿದರು ಎಂಬುದನ್ನು ತೋರಿಸುವ ಶಾಸನಗಳಿವೆ.[೬೫]

ನೀರಾವರಿ ಕಾರ್ಯಗಳನ್ನು ನಡೆಸಿದ ಶ್ರೀಮಂತ ವ್ಯಕ್ತಿಗಳನ್ನು ಅರಸರು ಪುರಸ್ಕರಿಸುತ್ತಿದ್ದರು. ಬಾಚೆಯಪ್ಪ ಎನ್ನುವವನು ಅನೇಕ ಕೆರೆಗಳನ್ನೂ ಕಾಲುವೆಗಳನ್ನೂ (ಉಲ್ಲೇಖಿಸಿದೆ) ಕಟ್ಟಿಸಿ, ತೋಟಗಳನ್ನು ಬೆಳೆಸಿದುದನ್ನು ಮೆಚ್ಚಿ ವಿಜಯನಗರದ ರಾಜ ಹರಿಹರನು ಅವನಿಗೆ ಚಿನ್ನದ ಪಲ್ಲಕ್ಕಿ, ಚಿನ್ನದ ಚಾಮರಗಳು ಮತ್ತು ಚಿನ್ನದ ಒಂದು ಕೊಡೆಗಳನ್ನು ನೀಡಿ ಪುರಸ್ಕರಿಸಿದನು.[೬೬] ಮಳವಳ್ಳಿ ೨೨ನೆಯ ಶಾಸನವು ಅದನ್ನೂ ಹೇಳಿ ಇನ್ನು ಒಂದು ಮಾತು ಕೂಡಿಸುತ್ತದೆ. ತಾನು ಕಟ್ಟಿಸಿದ ಕೆರೆಗಳಿಗೆ ತಾನೇ ತೂಬುಗಳನ್ನೂ ಮಾಡಿಸಿದನು

ಎಂದು ಹೇಳುತ್ತದೆ.[೯೮] ಹೀಗೆ ನೀರಾವರಿ ಕಾರ್ಯಗಳಲ್ಲಿ ಸಾಮುದಾಯಿಕ ಪರಿಶ್ರಮವನ್ನು ಅರಸರು ಉತ್ತಮ ರೀತಿಯಲ್ಲಿ ಬೆಂಬಲಿಸುತ್ತಿದ್ದರು.

ಈಗ ಪ್ರಸ್ತುತ ಕಾಲದ ವಿಚಾರದಲ್ಲಿರುವ ಅರಸರ ನೀರಾವರಿ ನೀತಿ ಏನಿದ್ದಿತು ಎಂಬುದನ್ನಿಷ್ಟು ನೋಡಬಹುದು. ನೀರಾವರಿ ಕಾರ್ಯಗಳ ನಿರ್ಮಾಣದ ಮೂಲಕ ಕೃಷಿಯ ವಿಸ್ತರಣೆಯಲ್ಲಿ ರಾಜರು ತೀವ್ರವಾದ ಆಸಕ್ತಿ ತೋರಿಸುತ್ತಿದ್ದರು. ಆಗ ಅವರು ನಿರ್ಮಿಸಿದ ಎಷ್ಟೋ ನೀರಾವರಿ ನಿರ್ಮಾಣಗಳು ಇಂದಿಗೂ ಸುಭದ್ರವಾಗಿ ಉಳಿದುಕೊಂಡು ಮೈಲುಗಟ್ಟಲೆ ತೋಟಗಳಿಗೆ ನೀರುಣಿಸುತ್ತಿವೆ. ಇವು ತುಂಗಭದ್ರಾ ನದಿಯ ಉತ್ತರ ದಂಡೆಯ ಮೇಲಿನ ಬಳ್ಳಾರಿಯ ಅತಿ ಶ್ರೀಮಂತ ಭಾಗವಾಗಿವೆ.[೯೯] ೧೯ನೆಯ ಶತಮಾನದ ಸುಪ್ರಸಿದ್ಧ ಬ್ರಿಟಿಷ್ ಆಡಳಿತಗಾರ ಸರ್ ಥಾಮಸ್ ಮುನ್ರೋ ವಿಜಯನಗರ ಸಾಮ್ರಾಜ್ಯದ ಹೃದಯಭಾಗವಾಗಿದ್ದ ಬಳ್ಳಾರಿ ಜಿಲ್ಲೆಯಲ್ಲಿ ಕೈಗೊಳ್ಳಬಹುದಾದ ನೀರಾವರಿ ಕಾರ್ಯಗಳ ಸಾಧ್ಯತೆಗಳನ್ನು ಹೀಗೆ ಹೇಳಿದ: ''ಹೊಸದಾಗಿ ಇಲ್ಲಿ ಕೆರೆಗಳನ್ನು ನಿರ್ಮಿಸಹೋಗುವುದು, ತುಂಬಿ ಹೋಗಿರುವ ಕೆರೆಗಳ ದುರಸ್ತಿ ಕಾರ್ಯ ಕೈಗೊಳ್ಳುವುದಕ್ಕಿಂತ ವ್ಯರ್ಥ ಪ್ರಯೋಗವಾಗುತ್ತದೆ. ಏಕೆಂದರೆ ಸ್ಥಳದ ನಿವಾಸಿಗಳು ಈ ಉದ್ದೇಶಕ್ಕಾಗಿ ಕೆರೆಯನ್ನು ಮಾಡಿಕೊಂಡಿಲ್ಲದ ಒಂದೇ ಒಂದು ಹಳ್ಳಿಯು ನಮಗೆ ಕಾಣಸಿಗುವುದಿಲ್ಲ.''[೧೦೦]

೨ನೇ ಹರಿಹರನು ಅನೇಕ ಕೆರೆಗಳನ್ನು ಕಟ್ಟಿಸಿ ಜನರನ್ನು ಅವರು ತನ್ನ ಮಕ್ಕಳೆಂಬಂತೆ ಕಾಪಾಡಿದನು.[೧೦೧]

೨ನೇ ಹರಿಹರನ ನಂತರ ಪಟ್ಟಕ್ಕೆ ಬಂದ ೨ನೇ ಬುಕ್ಕರಾಯನು, ಇಂದಿನ ಬಳ್ಳಾರಿ ಜಿಲ್ಲೆಯಲ್ಲಿ ತುಂಗಭದ್ರ ನದಿಗೆ ಅಡ್ಡಲಾಗಿ ಅಣೆಕಟ್ಟು ನಿರ್ಮಿಸಿದುದನ್ನು ಫೆರ್ನಾವೋ ನ್ಯೂನಿಜ್ (ಕ್ರಿ.ಶ. ೧೫೩೫) ತನ್ನ ವರದಿಯಲ್ಲಿ ವರ್ಣಿಸಿದ್ದಾನೆ. ರಾಜನು ನದಿಗೆ ಅಣೆಕಟ್ಟು ಹಾಕಲು ನಿರ್ಧರಿಸಿದನು. ''ಭಾರೀ ಬಂಡೆಗಳನ್ನು ನದಿಗೆ ಅಡ್ಡಲಾಗಿ ಹಾಕಿ ಅಣೆಕಟ್ಟು ಕಟ್ಟಿಸಿದನು ..... ಅವುಗಳನ್ನು ಅಲ್ಲಿಗೆ ಆನೆಗಳಿಂದ ಎಳೆಸಿಕೊಂಡು ಹೋಗಲಾಯಿತು. ಆನೆಗಳು ರಾಜ್ಯದಲ್ಲಿ ಬಹುಸಂಖ್ಯೆಯಲ್ಲಿವೆ..... ಈ ನೀರು ತುಂಬಾ ಉಪಯುಕ್ತವಾಯಿತು... ಅದರಿಂದ ಅವನ ವರಮಾನವು ಮುನ್ನೂರ ಐವತ್ತು ಸಾವಿರ ಪರ್ಡೋಗಳಿಗಿಂತ ಹೆಚ್ಚಾಯಿತು.''[೧೦೨] ಈ ನೀರನ್ನು ಬಳಸಿಕೊಂಡು ನಗರದ ಸುತ್ತ ತೋಟ, ಹಣ್ಣಿನ ತೋಟ, ಮರದ ತೋಪುಗಳು, ದ್ರಾಕ್ಷಿ ತೋಟಗಳು ಮೊದಲಾದುವನ್ನು ಬೆಳೆಸಿದರು. ನಿಂಬೆ, ಕಿತ್ತಲೆ ಮತ್ತು ಗುಲಾಬಿ ತೋಟಗಳು ಹೇರಳವಾಗಿ ಬೆಳೆದುವು. ಒಳ್ಳೆಯ ಹಣ್ಣು ಕೊಡುವ ಇತರ ಮರಗಳೂ ಬೆಳೆದುವು. ಆದರೆ ನದಿಯ ನೀರನ್ನು ಹೀಗೆ ತಿರುಗಿಸುವುದಕ್ಕಾಗಿ ರಾಜನು ತನ್ನ ತಂದೆಯಿಂದ ಬಂದಿದ್ದ ಸಮಸ್ತ ಐಶ್ವರ್ಯವನ್ನು ವೆಚ್ಚಮಾಡಿದನು ಎಂದು ಹೇಳುತ್ತಾರೆ. ಅದು ಅಗಾಧವಾದ ಮೊತ್ತವಾಗುತ್ತದೆ.''[೧೦೩]

ನ್ಯೂನಿಜನ ಹೇಳಿಕೆಯನ್ನು ಶಾಸನ ಮತ್ತು ಸಾಹಿತ್ಯಕ ಆಕರಗಳು ಸ್ಥಿರಪಡಿಸುತ್ತವೆ. ೧೩೫೮ರ ಮಳವಳ್ಳಿಯ ಒಂದು ಶಾಸನವು, ಬುಕ್ಕರಾಯನು ಹಲವಾರು ದೊಡ್ಡ ಕೆರೆಗಳನ್ನು ನಿರ್ಮಿಸಿದ ವಿಷಯವನ್ನು ಹೇಳುತ್ತದೆ.[೧೦೪] ಶಕ ೧೭೩೩ರ ನಂತರ ರಚಿತವಾದ ಬುಕ್ಕರಾಯ ಚರಿತೆಯೂ ಅದನ್ನು ಸ್ಥಿರಪಡಿಸುತ್ತದೆ.[೧೦೫] ೨ನೇ ಬುಕ್ಕನು ತುಂಗಭದ್ರೆಗೆ ಅಣೆಕಟ್ಟು ನಿರ್ಮಿಸಿದುದನ್ನು ರಾಬರ್ಟ್ ಸಿವೆಲ್ ಅಂದಾಜು ಮಾಡಿರುವುದು ಸರಿಯಾಗಿದೆ. '' ಅವನು ಕೈಗೊಂಡ ಮಹತ್ತಾದ ಕಾರ್ಯವೆಂದರೆ ತುಂಗಭದ್ರಾ ನದಿಗೆ ಅಡ್ಡಲಾಗಿ ಬಾರೀ ಅಣೆಕಟ್ಟು ನಿರ್ಮಿಸಿದುದು ಮತ್ತು ನದಿಯಿಂದ ಹದಿನೈದು ಮೈಲಿ ಉದ್ದದ ಒಂದು ಮೇಲುಕಾಲುವೆಯನ್ನು ಕಲ್ಲಿನಿಂದ ಕಟ್ಟಿಸಿದುದು. ಅದೊಂದು ಅಸಾಧಾರಣವಾದ ಅದ್ಭುತ ಕಾರ್ಯವಾಗಿದೆ. ಹಲವು ಮೈಲಿಗಳವರೆಗೆ ಈ ಮೇಲು ಕಾಲುವೆಯನ್ನು ಬೆಟ್ಟದ ತಪ್ಪಲಿನ ಗಟ್ಟಿ ಬಂಡೆಯಲ್ಲಿ ಕೊರೆಯಲಾಗಿದೆ. ಭಾರತದಲ್ಲಿ ಕಂಡುಬರುವ ಅತ್ಯಂತ ಅಸಾಧಾರಣವಾದ ನೀರಾವರಿ ಕಾರ್ಯಗಳಲ್ಲಿ ಇದು ಒಂದು.''[೧೦೬]

೨ನೇ ದೇವರಾಯನು ಹರಿದ್ರಾ ನದಿಗೆ ಆ ಹೆಸರಿಟ್ಟು, ಕಾಲುವೆ ಅಥವಾ ನಾಲೆಗಳ ಜಾಲವನ್ನೇ ಅದರಿಂದ ನಿರ್ಮಿಸಿದನು. ಈ ಕಾರ್ಯವನ್ನು ದಂಡನಾಯಕ ಬಸಪ್ಪನು ಉಸ್ತುವಾರಿ ನೋಡಿಕೊಂಡನು.[೧೦೭] ದಾವಣಗೆರೆಯ ಇನ್ನೊಂದು ಶಾಸನವು, ೨ನೇ ದೇವರಾಯನು ತಾನು ನಿರ್ಮಿಸಿದ ನೀರಾವರಿ ಕಟ್ಟಡಗಳ ನೀರಿನ ಹಂಚಿಕೆಯು ಹೇಗಿರಬೇಕೆಂದು ನಿಗದಿಪಡಿಸಿದುದನ್ನು ಹೇಳುತ್ತದೆ. ''ಬ್ರಾಹ್ಮಣರು ತಮ್ಮದೇ ವೆಚ್ಚದಲ್ಲಿ ಹರಿದ್ರಾನದಿಗೆ, ಹರಿಹರ ಕ್ಷೇತ್ರದ ಗಡಿಯೊಳಗೆ ಒಂದು ಅಣೆಯನ್ನು ನಿರ್ಮಿಸಿದರು; ಮೇಲ್ಕಂಡ ನಾಲೆಯಿಂದ ನೀರಾವರಿ ಸೌಲಭ್ಯ ಪಡೆದುಕೊಂಡ ಜಮೀನುಗಳಲ್ಲಿ ಎರಡು ಭಾಗವು (ಮೂರನೆ ಎರಡು) ಭಗವಾನ್ ಹರಿಹರನಿಗೆ ಸಲ್ಲುತ್ತದೆ; ಒಂದು ಭಾಗವು (ಮೂರನೆ ಒಂದು) ತಮ್ಮ ವೆಚ್ಚದಲ್ಲಿ ನಾಲೆಯನ್ನು ನಿರ್ಮಿಸಿದ ಬ್ರಾಹ್ಮಣರಿಗೆ ಸಲ್ಲುತ್ತದೆ. ಈ ನಿಯಮದ ಪ್ರಕಾರ ಯಾವುದೇ ಕರಭಾರವಿಲ್ಲದೆ ಶಾಂತಿಯುತವಾಗಿ ಅವರು ಅನುಭೋಗಿಸಲಿ.''[೧೦೮]

''ರಾಜ್ಯವು ಕೆರೆಗಳನ್ನು ನಿರ್ಮಿಸಿ, ನಾಲೆಗಳನ್ನು ತೋಡಿಸಿ ನೀರಾವರಿ ಸೌಲಭ್ಯಗಳನ್ನು ಒದಗಿಸಬೇಕು'' ಎಂದು ಕೃಷ್ಣದೇವರಾಯನು ಆಮುಕ್ತಮಾಲ್ಯದದಲ್ಲಿ ಹೇಳುತ್ತಾನೆ.[೧೦೯] ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ ಕಂಡುಬರುವ ಅನೇಕ ನೀರಾವರಿ ಕಾರ್ಯಗಳು ಅವನು ಮಾಡಿಸಿರುವನೆಂದು ಹೇಳಲಾಗಿದೆ. ಫೆರ್ನಾವೋ ನ್ಯೂನಿಜ್, ಕೃಷ್ಣದೇವರಾಯನು ಕೈಗೊಂಡ ಒಂದು ಭಾರೀ ಕೆಲಸವನ್ನು ಹೇಳುತ್ತಾನೆ. ರಾಜನ ಕೋರಿಕೆಯಂತೆ ಗೋವೆಯ ಪೋರ್ಚುಗೀಸ್ ಗವರ್ನರ್ ನೀಡಿದ ನೆರವಿನಿಂದ ಅದನ್ನು ನಿರ್ಮಿಸಲಾಯಿತು. ಪೋರ್ಚುಗೀಸ್ ಗಾರೆಯವರನ್ನೂ ಜಾವೋ ಪಾಂಟೆ ಎಂಬ ಸುಪ್ರಸಿದ್ಧ ಕಲ್ಲು ಕೆಲಸಿಗನನ್ನೂ ಅವನು ಕಳುಹಿಸಿಕೊಟ್ಟನು. ಕೃಷ್ಣದೇವರಾಯನು ತಾನು ಉದ್ದೇಶಿಸಿದ ಕಾರ್ಯ ಎಂಥದು ಎಂಬುದನ್ನು ಅವರಿಗೆ ವಿವರಿಸಿದನು. ಆ ಪೋರ್ಚುಗೀಸ್ ಕೆಲಸಗಾರರ ನೆರವಿನಿಂದ ಕೆಲಸವನ್ನು ಪೂರ್ತಿಯಾಗಿ ಮುಗಿಸಲಾಯಿತು. ಅದರಿಂದ ವಿಶಾಲವಾದ ಬತ್ತದ ಗದ್ದೆಗಳು ಮತ್ತು ತೋಟಗಳು ನೀರುಂಡುವು. ಈ ನೀರನ್ನು ಉಪಯೋಗಿಸಿಕೊಂಡು ಹೊಸದಾಗಿ ಸಾಗುವಳಿ ಮಾಡಲು ಬಯಸಿದ ಜನರಿಗೆ ಒಂಬತ್ತು ವರ್ಷ ಕಾಲ ಕಂದಾಯ ವಿನಾಯಿತಿ ನೀಡಿ ಭೂಮಿಯನ್ನು ಕೊಟ್ಟನು. ಇದರಿಂದ ಈಗಾಗಲೆ ವರಮಾನವು ೨೦,೦೦೦ ಪರ್ಡೋವಾ ಆಗಿದೆ.''[೧೧೦]

ಆಮೇಲೆ ಕೃಷ್ಣದೇವರಾಯನು ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ಒಣ ನೆಲಗಳಲ್ಲಿ ನೀರಾವರಿ ಅಧಿಕಗೊಳಿಸಲು ಕ್ರಮಕೈಗೊಂಡನು. ೧೫೨೧ರಲ್ಲಿ ಕೊರ್ರಗಲ್‌ನಲ್ಲಿ ದೊಡ್ಡ ಅಣೆಕಟ್ಟು ಕಟ್ಟಿಸಿದನು, ಬಸವಣ್ಣ ನಾಲೆಯನ್ನು ತೋಡಿಸಿದನು (ಎರಡೂ ಬಳ್ಳಾರಿ ಜಿಲ್ಲೆಯಲ್ಲಿವೆ)[೧೧೧] ಈ ಎರಡೂ ಇಂದಿಗೂ ಉಪಯೋಗದಲ್ಲಿವೆ. ಬಂಕಾಪುರದ ಉತ್ತರಕ್ಕೆ ಐದು ಮೈಲು ದೂರದ ಶಿಗ್ಗಾಂವಿಯಲ್ಲಿ ಒಂದು ಭಾರೀ ಕೆರೆ, ಮತ್ತು ಇತರ ಹಲವು ಸುಂದರವಾದ ಜಲಾಶಯಗಳನ್ನು ಅವನು ನಿರ್ಮಿಸಿದನು.[೧೧೨] ಧಾರವಾಡ ಜಿಲ್ಲೆಯ ಗದಗ್ ಸರೋವರವೂ ವಿಜಯನಗರ ಕಾಲದಲ್ಲಿ ನಿರ್ಮಿತವಾದುದೆಂದು ಹೇಳಲಾಗಿದೆ.

ಇದುವರೆಗೆ ಕೆರೆ ನೀರಾವರಿಯನ್ನು ಕುರಿತು ನೋಡಿದೆವು. ಬಾವಿಗಳೂ ಇದೇ ಉದ್ದೇಶಕ್ಕಾಗಿ ಬಳಕೆಯಾಗುತ್ತಿದ್ದುದನ್ನು ಅಸಂಖ್ಯಾತ ಶಾಸನಗಳು ಹೇಳುತ್ತವೆ. ಸಾಮಾನ್ಯವಾಗಿ ಬಾವಿಗಳನ್ನು ಖಾಸಗಿಯಾಗಿ ಜನರು ಕಟ್ಟಿಸುತ್ತಿದ್ದರು, ಪಾಲಿಸುತ್ತಿದ್ದರು. ಎತ್ತು-ನೀರಾವರಿಯಲ್ಲಿ ಕೆಳಗಿನ ಮಟ್ಟದಿಂದ, ಬೇಸಾಯವಾಗ ಬೇಕಾದ ಜಮೀನಿನ ಮಟ್ಟಕ್ಕೆ ಎತ್ತಲಾಗುತ್ತಿತ್ತು, ಸ್ವತಃ ಕೈಯಾರ ನೀರೆತ್ತಿ ಅಥವಾ ಪ್ರಾಣಿಗಳ ಸಹಾಯದಿಂದ ಎಳೆಸಿ ನೀರನ್ನು ಹರಿಸಿಕೊಳ್ಳಲಾಗುತ್ತಿತ್ತು.

ಜಮೀನಿಗೆ ನೀರು ಹಾಯಿಸುವ ಉದ್ದೇಶಕ್ಕಾಗಿ ಕಪಿಲೆ ಎಂಬ ಹೆಸರಿನ ಒಂದು ನಿರ್ದಿಷ್ಟ ರೂಪದ ಬಾವಿಯನ್ನು ದೇಶಾದ್ಯಂತ ವ್ಯಾಪಕ ಪ್ರಮಾಣದಲ್ಲಿ ಬಳಸಲಾಗುತ್ತಿತ್ತು. ಶಾಸನಗಳು ಇದನ್ನು ಸ್ಥಿರಪಡಿಸುತ್ತವೆ.[೧೧೩] ಈ ಬಾವಿಗಳಿಂದ ಚರ್ಮದ ಚೀಲದ ಮೂಲಕ ನೀರನ್ನು ಎತ್ತಿ ಸುರಿದುಕೊಳ್ಳಲಾಗುತ್ತಿತ್ತು.

ಎರಡು ಎತ್ತುಗಳು ಇಳುಕಲಾದ ನೆಲದಮೇಲೆ ಎಳೆದು ನೀರನ್ನು ಎತ್ತುತ್ತಿದ್ದುವು.[೧೧೪] ಬಳ್ಳಾರಿ ಜಿಲ್ಲೆ ಹಡಗಲಿ ತಾಲೂಕಿನ ೧೪೪೧ರ ಶಾಸನವೊಂದು ನೀರನ್ನು ಎತ್ತಲು ಕಬ್ಬಿಣದ ಬಕೆಟ್‌ನ್ನು ಉಪಯೋಗಿಸುತ್ತಿದ್ದುದನ್ನು ಹೇಳುತ್ತದೆ.[೧೧೫] ಇದರ ಜೊತೆಗೆ ಬಾವಿಯಿಂದ ನೀರೆತ್ತಲು ಯಾತವನ್ನೂ ಉಪಯೋಗಿಸಲಾಗುತ್ತಿತ್ತು.[೧೧೬] ಬುಕನನ್ ಹೇಳುತ್ತಾನೆ. ''ಯಾತಕ್ಕಲ್ಲದೆ ಹೋದರೆ ಇಂತಹ, ಯುರೋಪಿನಲ್ಲಿ ಸಾಮಾನ್ಯವಾಗಿ ತೋಡುವಂತಹ ಸಣ್ಣ ಬಾವಿಗಳನ್ನು ಮೈಸೂರಿನಲ್ಲಿ ತೋಡುವುದಿಲ್ಲ''[೧೧೭] ಸಾಮಾನ್ಯವಾಗಿ ಒಂದು ಬಾವಿಯ ಅಳತೆಯನ್ನು ಕುರಿತ ಮಾಹಿತಿ ನಮ್ಮ ಬಳಿ ಇಲ್ಲ, ಮತ್ತು ಅಂತಹ ಬಾವಿಯಿಂದ ಎಷ್ಟು ಜಮೀನು ಸಾಗುವಳಿಯಾಗಬಹುದಿತ್ತು ಎಂದೂ ತಿಳಿದಿಲ್ಲ. ಆದರೆ ಬಿಜಾಪುರ ಜಿಲ್ಲೆ ಹುನಗುಂದ ತಾಲೂಕಿನ ಶಕ ೧೫೨೬ರ ಶಾಸನವು ನಿರ್ಮಾಣಕ್ಕೆ ಒಂದು ವರ್ಷ, ಏಳು ತಿಂಗಳು ಮತ್ತು ಹತ್ತೊಂಬತ್ತು ದಿನ ತೆಗೆದುಕೊಂಡ ಬಾವಿಯೊಂದನ್ನು ಉಲ್ಲೇಖಿಸುತ್ತದೆ.[೧೧೮] ಅದು ಬಹಳ ದೊಡ್ಡ ಬಾವಿಯೇ ಆಗಿರಬೇಕು. ಇಂದಿನ ಪರಿಸ್ಥಿತಿಯ ಹೋಲಿಕೆಯಿಂದ ಎತ್ತು ನೀರಾವರಿ ಬಾವಿಯು ಒಂದು ಎಕರೆಯಿಂದ ಇಪ್ಪತ್ತಕ್ಕೆ ಮೀರದಷ್ಟು ವಿಸ್ತಾರದ ಜಮೀನಿಗೆ ಸಾಕಾಗುವಷ್ಟು ನೀರು ಪೂರೈಕೆಯಾಗುತಿತ್ತು ಎಂದು ಊಹಿಸಬಹುದು. ಚಿತ್ರದುರ್ಗ, ತುಮಕೂರು, ಕೋಲಾರ, ಬೆಂಗಳೂರು ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿನ ಬಾವಿಗಳ ಬಗೆಗೆ ವ್ಯಾಪಕವಾದ ಉಲ್ಲೇಖಗಳು ದೊರಕುತ್ತವೆ. ಇದರಿಂದ ಕೆರೆಗಳ ಜೊತೆಗೆ ಬಾವಿಗಳ ಮೂಲಕ ನೀರಾವರಿ ಬೇಸಾಯ ನಡೆಯುತ್ತಿತ್ತು ಎಂದು ತಿಳಿಯುತ್ತದೆ.

ನೀರಾವರಿಯಿಂದ ಹೊಲಗಳು ಗದ್ದೆಗಳಾಗಿ ಪರಿವರ್ತಿತವಾಗುತ್ತಿದ್ದರೆ, ಬಂಜರು ಭೂಮಿಯನ್ನು ಸಾಗುವಳಿಗೊಳಪಡಿಸುವುದರ ಮೂಲಕ ಕೃಷಿ ಪ್ರದೇಶವನ್ನು ವಿಸ್ತರಿಸಲಾಗುತ್ತಿತ್ತು. ಜನಸಂಖ್ಯೆಯಲ್ಲಿ ನಿಧಾನವಾಗಿ ಆಗುತ್ತಿದ್ದ ಹೆಚ್ಚಳ ಮತ್ತು ಕೃಷಿ ಉತ್ಪನ್ನಗಳ ಬೇಡಿಕೆಯಲ್ಲಿ ಆಧಿಕ್ಯ ಇವುಗಳಿಂದ ಕೃಷಿಭೂಮಿಯ ವಿಸ್ತರಣೆಗೆ ಇಂಬು ದೊರಕಿತ್ತು. ರಾಜರು, ರಾಜ್ಯದ ಅಧಿಕಾರಿಗಳು, ಅಗ್ರಹಾರಗಳು, ಗ್ರಾಮ ಪಂಚಾಯತಿಗಳು, ದೇವಾಲಯಗಳು, ಮಠಗಳು, ಖಾಸಗಿ ವ್ಯಕ್ತಿಗಳು ನೆಲವನ್ನು ಹೆಚ್ಚು ಹೆಚ್ಚಾಗಿ ಸಾಗುವಳಿಗೊಳಿಪಡಿಸುವುದರಲ್ಲಿ ತೀವ್ರವಾದ ಆಸಕ್ತಿಯನ್ನು ತೋರುತ್ತಿದ್ದರು.[೧೧೯] ನೆಲವು ಸಾಕಷ್ಟು ಪ್ರಮಾಣದಲ್ಲಿ ದೊರಕುತ್ತಿದ್ದುದರಿಂದ, ಅಂದಿನ ಸಮಸ್ಯೆ ಅದನ್ನು ಹೆಚ್ಚು ಹೆಚ್ಚಾಗಿ ಸಾಗುವಳಿಗೊಳಪಡಿಸುವುದಾಗಿತ್ತು. ಈ ಕೆಲಸದಲ್ಲಿ ಸರಕಾರವು ಮುಂದೆ ಬಂದು ನಿರ್ದಿಷ್ಟ ವರ್ಷಗಳ ಕಾಲ ತೆರಿಗೆಗಳ ವಿನಾಯಿತಿ ಮತ್ತಿತರ ರಿಯಾಯಿತಿಗಳನ್ನು ಹೊಸ ನೆಲವನ್ನು ಉಳುಮೆಗೊಳಪಡಿಸಿದವರಿಗೆ ನೀಡುತ್ತಿತ್ತು.[೧೨೦] ಸಾಗುವಳಿ ಮಾಡಬಹುದಾದ ನೆಲವು ಅಗ್ಗವಾಗಿ ದೊರಕುತ್ತಿದ್ದುದರಿಂದಲೂ, ಅದಕ್ಕೆ ಸುಲಭವಾಗಿ ರಿಯಾಯಿತಿಗಳು ದೊರಕುತ್ತಿದ್ದುದರಿಂದಲೂ ಜನರು ಸರಕಾರಕ್ಕೆ ಅಂತಹ ನೆಲವನ್ನು ಮಂಜೂರು ಮಾಡಬೇಕೆಂದು ಅರ್ಜಿ ಹಾಕಿಕೊಳ್ಳುತ್ತಿದ್ದರು.[೧೨೧] ಅಂತಹ ಪರಿಸ್ಥಿತಿಯಲ್ಲಿ ಬಂಜರು ನೆಲವನ್ನು ಉತ್ತು ಬೇಸಾಯ ಮಾಡಿದವರು ತಮ್ಮ ವೆಚ್ಚಗಳನ್ನು ಕಳೆದು ಲಾಭವನ್ನು ಪಡೆಯುವಂತಾಗುವವರೆಗೂ ಸರಕಾರವು ತನ್ನ ಪಾಲನ್ನು ಕೇಳುತ್ತಿರಲಿಲ್ಲ.[೧೨೨] ಬಹು ಕಾಲದಿಂದ ಬೀಳು ಬಿದ್ದಿದ್ದ ನೆಲವನ್ನು ಬೇಸಾಯಕ್ಕೆ ತಂದ ವ್ಯಕ್ತಿಗಳಿಗೆ ಶಿಲಾಸನ್ನದುಗಳನ್ನು ಕೊಡಲಾಗುತ್ತಿದ್ದಿತು.[೧೨೩] ಆ ಸನ್ನದುಗಳು ರೈತರ ಬಳಿ ಇರುತ್ತಿದ್ದುವು. ಅನೇಕ ವೇಳೆ ಬ್ರಾಹ್ಮಣರು ಕಾಡನ್ನು ಕಡಿದು ಸಾಗುವಳಿ ಮಾಡಿಸಿ ಒಂದು ಕೆರೆಯನ್ನು ಕಟ್ಟಿಸಿ ನೂತನ ಗ್ರಾಮಗಳನ್ನು ಸ್ಥಾಪಿಸುತ್ತಿದ್ದುದುಂಟು.[೧೨೪]

ರೈತಾಪಿ ಜಾತಿಗಳನ್ನು ಒಕ್ಕಲಿಗ, ಒಕ್ಕಲು ಮತ್ತು ಗೌಡರು ಎಂದು ಕರೆಯುತ್ತಿದ್ದರು. ಇವರು ತಮ್ಮ ಕಠಿಣ ದೇಹಶ್ರಮ, ಮತ್ತು ಬಂಡವಾಳಗಳಿಂದ ಹೊಸ ವಸತಿಗಳ ತಳಹದಿ ಹಾಕಿ, ಸಾಗುವಳಿ ಭೂಮಿಯನ್ನು ವಿಸ್ತರಿಸಿದರು. ಅದರಿಂದ ಅವರಿಗೂ ಸರಕಾರಕ್ಕೂ ಪ್ರಯೋಜನವಾಗುತ್ತಿತ್ತು. ಸರಕಾರಕ್ಕೆ ವರಮಾನ ಹೆಚ್ಚುತ್ತಿತ್ತು, ರೈತರಿಗೆ ಭೂಮಿಯ ಮೇಲೆ ಪೂರ್ಣ ಹಕ್ಕಿನ ಒಡೆತನ ಲಭ್ಯವಾಗುತ್ತಿತ್ತು. ಆದರೆ ಬ್ರಾಹ್ಮಣರು ಮತ್ತು ಧಾರ್ಮಿಕ ನೆಲೆಗಳನ್ನು ರೂಪಿಸಿದಾಗ, ಸರಕಾರಕ್ಕೆ ತೆರಿಗೆಗಳ ವಿನಾಯಿತಿ ಮೊದಲಾದ ಕ್ರಮಗಳಿಂದಾಗಿ ಅಷ್ಟು ಮಟ್ಟಿಗೆ ವರಮಾನ ನಷ್ಟವಾಗುತ್ತಿತ್ತು. ಜೊತೆಗೆ ಮಧ್ಯವರ್ತಿಗಳ ಒಂದು ವರ್ಗವು ಸೃಷ್ಟಿಯಾಗುವಂತಾಯಿತು. ಹೀಗೆ ಬ್ರಾಹ್ಮಣೇತರ, ಧಾರ್ಮಿಕರಲ್ಲದ ಕೃಷಿ ನೆಲೆಗಳ ಉದಯವು ನೂತನ

ಸಾಮಾಜಿಕ ವಿನ್ಯಾಸವನ್ನು ತೋರಿಸಿತ್ತು. ಅದುವರೆಗೆ ಯಾರ ಬೇಡಿಕೆಯೂ ಇದ್ದಿರದ ಭೂಮಿಯ ಮೇಲೆ ನಿಯಂತ್ರಣವನ್ನು ಸ್ಥಾಪಿಸಿತು. ಬ್ರಾಹ್ಮಣ ಮತ್ತು ಧಾರ್ಮಿಕ ನೆಲೆಗಳು ದೂರದ ಪ್ರದೇಶಗಳಲ್ಲಿ ಆರ್ಯೀಕರಣ ಪರಿಕಲ್ಪನೆಗಳನ್ನು ವಿಸ್ತರಿಸಲು ಸಹಾಯ ಮಾಡಿದುವು. .

ಅಂತಹ ನೆಲೆಗಳ ರಚನೆಗೆ ಒಕ್ಕಲಿಗರು ಮತ್ತು ಗೌಡರು ಮುಖ್ಯ ಜವಾಬ್ದಾರರು. ಸಾಮಾನ್ಯವಾಗಿ ಈ ವಸತಿಗಳ ಗುಂಪನ್ನು ಒಕ್ಕಲು ಎಂದು ಕರೆಯಲಾಗುತ್ತಿತ್ತು. ಅನೇಕವೇಳೆ ಅದಕ್ಕೊಂದು ಸಂಖ್ಯೆ ಇರುತ್ತಿತ್ತು. ಅದು ಗ್ರಾಮಪಂಚಾಯಿತಿಯಲ್ಲಿ ಪ್ರತಿನಿಧಿಸುವ ರೈತ ಕುಟುಂಬಗಳ ಸಂಖ್ಯೆಯನ್ನು ಸೂಚಿಸುತ್ತಿದ್ದಿತು. ಉದಾಹರಣೆಗೆ ಚಕ್ಕರೆಯ ಊರು - ಮೂವತ್ತು ಒಕ್ಕಲು.[೨೫] ಅಂತಹ ವಸತಿಗಳ ಉದಯವು ಕೆಳಕಂಡಂತೆ ಸರ್ವಸಾಮಾನ್ಯವಾದ ಸ್ವರೂಪವನ್ನು ತೋರಿಸುತ್ತಿತ್ತು : ಮೊದಲನೆಯ ಹಂತ-ಕಾಡನ್ನು ಕಡಿಯುವುದು, ನೆಲವನ್ನು ಹಸನುಗೊಳಿಸಿ ಉಳುಮೆಗೆ ಯೋಗ್ಯವಾಗುವಂತೆ ಮಾಡುವುದು; ಎರಡನೆಯ ಹಂತ- ಒಂದು ನೀರಾವರಿ ಕೆರೆಯನ್ನು ಕಟ್ಟಿಸುವುದು; ಮೂರನೆಯ ಹಂತ-ಆರ್ಯೀಕರಣದ ಅಂಗವಾಗಿ ಒಂದು ದೇವಾಲಯವನ್ನು ಕಟ್ಟಿಸುವುದು. ನೆಲೆಗಳನ್ನು ಪವಿತ್ರಗೊಳಿಸುವುದು. ಬ್ರಾಹ್ಮಣರು ಮತ್ತು ಗುರುಗಳ ಆಹ್ವಾನಿಸಲಾಗುತ್ತಿತ್ತು. ಅವರು ಒಂದು ಸೂಕ್ತ ಧಾರ್ಮಿಕ ಕಾರ್ಯಗಳನ್ನು ನೆರವೇರಿಸುತ್ತಿದ್ದರು.

ವಿಜಯನಗರ ಕಾಲದಲ್ಲಿ ವ್ಯಾಪಕ ಪ್ರಮಾಣದಲ್ಲಿ ನೀರಾವರಿ ಕಾರ್ಯಗಳು ನಡೆದಿದ್ದರೂ ಮಳೆ ಆಧಾರಿತ ಕೃಷಿಯು ಒಂದು ಜೂಜಿನಂತಿರುತ್ತಿತ್ತು. ಮಳೆ ವಿಫಲವಾದರೆ, ಕ್ಷಾಮವುಂಟಾಗುತ್ತಿತ್ತು. ಹಲವಾರು ಕಾರಣಗಳಿಂದ ಈ ಪರಿಸ್ಥಿತಿ ನಿರ್ಮಾಣವಾಗಬಹುದು. ಬರ, ನೆರೆ, ಬೆಳೆಯ ವಿಫಲತೆ, ಪ್ಲೇಗು ಮೊದಲಾದ ರೋಗಗಳು, ಇತ್ಯಾದಿ ರಟ್ಟಮತವು ಕ್ಷಾಮಕ್ಕೆ ಹಲವು ಕಾರಣಗಳನ್ನು ಹೇಳುತ್ತದೆ.[೨೬] (ಬರಬರುವಿಕೆ) ಕ್ಷಾಮ ಬಂದುದನ್ನು ಹೇಳುವ ಎರಡು ಶಾಸನಗಳು ದೊರಕಿವೆ.[೨೭] ಚಿತ್ರದುರ್ಗ ಜಿಲ್ಲೆ ದಾವಣಗೆರೆಯ ೧೪೨೪ರ ಒಂದು ಶಾಸನದಿಂದ, ಹರಿದ್ರಾನದಿಗೆ ಎರಡನೆಯ ದೇವರಾಯನು ೧೪೧೦ರಲ್ಲಿ ಕಟ್ಟಿಸಿದ ಅಣೆಕಟ್ಟೆಯಲ್ಲಿ[೨೮] ಬಿರುಕುಂಟಾಗಿ ಇತರ ಜೀವನೋಪಾಯವೆಲ್ಲ ಹಾನಿಗೊಳಗಾಗಿ ಬಹಳ ಕಷ್ಟವುಂಟಾಯಿತು.[೨೯] ಆಮೇಲೆ ಆ ಅಣೆಕಟ್ಟನ್ನು ಒಬ್ಬ ಅಧಿಕಾರಿಯು ದುರಸ್ತು ಪಡಿಸಿದನು. ಜನರಿಗೆ ಬರಬಹುದಾದ ಕಷ್ಟವನ್ನು ಪರಿಹರಿಸಲು ಸರಕಾರವು ಎಷ್ಟು ಜವಾಬ್ದಾರಿ ವಹಿಸುತ್ತಿದ್ದಿತು ಎಂಬುದನ್ನು ಇಂದು ಸೂಚಿಸುತ್ತದೆ. ಕೆರೆಯು ಎರಡೋ ಮೂರೋ ಸಾರಿ ಒಡೆದು ಹೋದರೆ ಬ್ರಾಹ್ಮಣರು ದೇವತೆಗಳ ತೃಪ್ತ್ಯರ್ಥವಾಗಿ ಮನುಷ್ಯ ಅಥವಾ ಪ್ರಾಣಿಬಲಿ ಕೊಡಲು ಹೇಳುತ್ತಿದ್ದರು. ಅದರಂತೆ ನಡೆಸಲಾಗುತ್ತಿತ್ತು ಎಂದು ಪೇಸ್ ಹೇಳುತ್ತಾನೆ.[೩೦]

ಕೃಷಿ ಉತ್ಪಾದನೆಯಲ್ಲಿ ಭೂಮಾಲೀಕರು ಕೂಲಿಕೆಲಸಕಾರರನ್ನೂ ಜೀತದಾಳುಗಳನ್ನೂ ನೇಮಿಸಿಕೊಳ್ಳುತ್ತಿದ್ದರು. ಕೂಲಿ ಕೆಲಸಗಾರರು ಸಾಮಾನ್ಯವಾಗಿ ಶೂದ್ರ ಜಾತಿಗಳಿಗೆ ಸೇರಿದವರಾಗಿರುತ್ತಿದ್ದರು. ಜೀತದಾಳುಗಳನ್ನು ಶಾಸನಗಳಲ್ಲಿ 'ಹೊಲೆಯಲು' ಮತ್ತು 'ಮುಲದ್ಲು' ಎಂದು ಕರೆಯಲಾಗುತ್ತಿತ್ತು. ಇವರು ಸಾಮಾನ್ಯವಾಗಿ ಅಂತ್ಯಜ ಅಥವಾ ಅಸ್ಪೃಶ್ಯ ಜಾತಿಗಳಿಗೆ ಸೇರಿರುತ್ತಿದ್ದರು.

ಜೀತಗಾರಿಕೆ ಚಾಲ್ತಿಯಲ್ಲಿದ್ದ ವಿವಿಧ ಸ್ಥಳಗಳು ಹೀಗಿವೆ

ತಾಲೂಕು	ಜಿಲ್ಲೆ	ವರ್ಷ	ಆಕರ
ಕುಂದಾಪುರ	ದಕ್ಷಿಣ ಕನ್ನಡ	ಕ್ರಿ.ಶ.೧೩೭೭	ಸೌ.ಇ.ಇ. ೯-೨
ಮಳವಳ್ಳಿ	ಮಂಡ್ಯ	೧೩೮೮	ಎ.ಕ.೩. ಎಂ. ಎಚ್. ೨೦
ಕೊಪ್ಪ	ಚಿಕ್ಕಮಗಳೂರು	೧೪೦೩	ಎ.ಕ. ೬, ಕೆಪಿ ೫, ೧
ಶೃಂಗೇರಿ	ಚಿಕ್ಕಮಗಳೂರು	೧೪೦೮	ಎ.ಕ. ೬, ಎಸ್. ಆರ್. ೨೫
ಬಾಗೇಪಲ್ಲಿ	ಕೋಲಾರ	೧೪೩೦	ಎ.ಕ. ೧೦, ಬಿ.ಪಿ. ೭೨
ಚಾಮರಾಜನಗರ	ಮೈಸೂರು	೧೫೪೯	ಎ.ಕ. ೪,ಸಿ.ಎನ್. ೩೮

ಜೀತಗಾರಿಕೆಯು ರೂಪುಗೊಳ್ಳುವುದಕ್ಕೆ ಎರಡು ಬಗೆಯ ಶಕ್ತಿಗಳು ಕಾರಣ ಎಂದು ಶಾಸನಾಧಾರಗಳು ಸೂಚಿಸುತ್ತವೆ. ಮೊದಲನೆಯದಾಗಿ ಹಲವು ಬಗೆಯ ಭೂ ಒಡೆತನವಿದ್ದುದು, ಉಂಬಳಿ, ಕೊಡಗಿ, ಮಾನ್ಯ, ಸರ್ವಮಾನ್ಯ, ಅಗ್ರಹಾರ, ಬ್ರಹ್ಮದಾಯ, ದೇವದಾಯ ಮತ್ತು ಮಾಥಾಪುರ ಎಂಬುದಾಗಿ. ಅರಸರಿಗೂ ಸ್ಥಳದಲ್ಲಿರದ ಜಮೀನುದಾರರಿಗೂ ಭೂಮಿಯ ಒದಗಣೆಗಿಂತಲೂ ಕೂಲಿಯ ಒದಗಣೆಯನ್ನು ಕುರಿತು ಹೆಚ್ಚಿನ ಕಾತರತೆಯಿದ್ದುದು ಎರಡನೆಯ ಕಾರಣ.

ಕೃಷಿಯಲ್ಲಿ ಜಾತಿಗಳು

ಕೃಷಿಯಲ್ಲಿ ನಿರತವಾಗಿದ್ದ ಮುಖ್ಯ ಜಾತಿಗಳೆಂದರೆ, ಶಾಸನಗಳಿಂದ ಕಂಡುಬರುವಂತೆ, ಶೂದ್ರರು, ಗೌಡರು ಅಥವಾ ಒಕ್ಕಲಿಗರು ಮತ್ತು ಹೊಲೆಯರು. ಶೂದ್ರ ಎಂಬ ವರ್ಗದಲ್ಲಿ ಮೇಲು ಮತ್ತು ಕೆಳ ಉಪಜಾತಿಗಳು ಹಲವು. ಕೃಷಿ ಅವರ ಪ್ರಧಾನ ವೃತ್ತಿ. ಒಕ್ಕಲಿಗರು ಅಥವಾ ಗೌಡರು ಸಾಮಾನ್ಯವಾಗಿ ನೆಲವನ್ನು ಉಳುತ್ತಿದ್ದರು. ಕೃಷಿ ಅರ್ಥವ್ಯವಸ್ಥೆಗೆ ಅವರು ಬೆನ್ನೆಲುಬು. ದೇಶದ ಏಳಿಗೆಯು ಬಹುಮಟ್ಟಿಗೆ ಅವರನ್ನು ಅವಲಂಬಿಸಿದ್ದಿತು. ಕರ್ನಾಟಕದ ಅನೇಕ ಪಾಳೆಯಪಟ್ಟುಗಳ ಸ್ಥಾಪಕರು ಕೃಷಿಕರಾಗಿದ್ದರು ಎನ್ನುವುದು ಸ್ವಾರಸ್ಯವಾದ ಸಂಗತಿಯಾಗಿದೆ. ಹೊಲೆಯ ಅಥವಾ ಪರಿಯರು ಕರ್ನಾಟಕದಲ್ಲಿ ಕೃಷಿ ಕಾರ್ಮಿಕರಲ್ಲಿ ಹೆಚ್ಚಿನವರಾಗಿದ್ದರು. ಅವರು ಸಾಮಾನ್ಯವಾಗಿ ಮಣ್ಣಿನೊಂದಿಗೆ ಅತಿ ನಿಕಟ ಸಂಪರ್ಕ ಹೊಂದಿದ್ದರು.[೧೩೧] ಇಷ್ಟರ ಜೊತೆಗೆ ಕೂಲಿ ಕೊಟ್ಟು ನೇಮಿಸಿಕೊಳ್ಳುತ್ತಿದ್ದ ಕಾರ್ಮಿಕರನ್ನೂ ಶಾಸನಗಳು ಉಲ್ಲೇಖಿಸುತ್ತವೆ.[೧೩೨]

ಭೂಮಾಲೀಕತ್ವದ ಸಮಸ್ಯೆ ಎಂದಿನಿಂದಲೂ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯದ ವಿಷಯವಾಗಿಯೇ ಬಂದಿದೆ. ಈ ಬಗೆಗೆ ಎರಡು ಅತಿರೇಕದ ಅಭಿಪ್ರಾಯಗಳು ಮಂಡಿತವಾಗಿವೆ. ವಿನ್ಸೆಂಟ್ ಸ್ಮಿತ್ ಮೊದಲಾದ ಬ್ರಿಟಿಷ್ ಚರಿತ್ರಕಾರರು, ರಾಜನೇ ನೆಲದ ಒಡೆಯ, ಏಕೈಕ ಮಾಲೀಕ ಎಂದು ಭಾವಿಸುತ್ತಾರೆ.[೧೩೩] ಇದಕ್ಕೆ ಎದುರಾಗಿ, ಕೆ.ಪಿ. ಜಯಸ್ವಾಲ್, ಯು. ಎನ್. ಘೋಷಾಲ್ ಮೊದಲಾದ ಭಾರತೀಯ ವಿದ್ವಾಂಸರು ಖಾಸಗಿ ಒಡೆತನದ ಪರವಾಗಿ ವಾದ ಮಾಡುತ್ತಾರೆ.[೧೩೪] ಆದರೆ ಆ ಕಾಲದ ಶಾಸನಗಳು ಮತ್ತು ಸಾಹಿತ್ಯಕ ಆಕರಗಳು ಸರಕಾರದ ಒಡೆತನವೂ ಖಾಸಗಿ ಒಡೆತನವೂ ಜೊತೆಜೊತೆಯಾಗಿ ಇದ್ದುದನ್ನು ದೃಢಪಡಿಸುತ್ತವೆ. ಸಂಪೂರ್ಣವಾಗಿ ರಾಜನ ಒಡೆತನ ಎಂಬುದಿರಲಿಲ್ಲ, ಅಥವಾ ಸಂಪೂರ್ಣವಾಗಿ ಖಾಸಗಿ ಒಡೆತನ ಎಂಬುದಿರಲಿಲ್ಲ. ಆಕಾಲದ ಕರ್ನಾಟಕದಲ್ಲಿದ್ದ ಪರಿಸ್ಥಿತಿ ಅದು. ರಾಜ್ಯದ ಒಡೆತನದ ಕೆಲವು ಅಂಶಗಳನ್ನು ಇಲ್ಲಿ ಪರಿಶೀಲಿಸಲು ಪ್ರಯತ್ನ ಮಾಡಿದೆ.

ನೆಲದ ಮೇಲೆ ಒಡೆತನವಿರುವುದೆಂದರೆ ಮುಖ್ಯವಾಗಿ ತನಗೆ ಇಚ್ಛೆ ಬಂದಂತೆ ಅದನ್ನು ವಿನಿಯೋಗ ಮಾಡುವ ಹಕ್ಕು ಇರಬೇಕು. ಅಂದರೆ ನೆಲವನ್ನು ಮಾರಿಯೋ, ಬೇರಾವುದೇ ರೀತಿಯಲ್ಲಿಯೋ ಪರಭಾರೆ ಮಾಡುವುದು ಒಡೆತನದ ಲಕ್ಷಣವಾಗಿರುತ್ತದೆ. ಮಧ್ಯಕಾಲೀನ ಬಹುತೇಕ ಶಾಸನಗಳಲ್ಲಿ ರಾಜರು ಭೂಮಿಯನ್ನು ಪರಭಾರೆ ಮಾಡಿದ ವಿಷಯವು ಹೇರಳವಾಗಿ ಬರುತ್ತದೆ. ಉಡುಗೊರೆ ಅಥವಾ ಕಾಣಿಕೆಯ ರೂಪದಲ್ಲಿ ನೆಲವನ್ನು ರಾಜರು ವಹಿಸಿಕೊಟ್ಟಾಗ (ಅ) ಪೂರ್ಣ ಒಡೆತನದೊಂದಿಗೆ ಕೊಡುತ್ತಿದ್ದರು. ಪಡೆದವನಿಗೆ ರಾಜನಿಂದ ಪಡೆದ ಆ ಭೂಮಿಯನ್ನು ಮಾರುವ, ಅಡಮಾನ ಮಾಡುವ ಅಥವಾ ಬೇರೊಬ್ಬನಿಗೆ ಕೊಟ್ಟು ಬಿಡುವ ಪೂರ್ತಿ ಅಧಿಕಾರವಿರುತ್ತಿದ್ದಿತು.[೧೩೫] ಈಗಾಗಲೆ ಜನರು ವಾಸವಾಗಿರುವ, ಆಕ್ರಮಿತ ಗ್ರಾಮವನ್ನು ಹೀಗೆ ಪೂರ್ಣ ಒಡೆತನದೊಂದಿಗೆ ರಾಜನು ದಾನ ಮಾಡಲು ಸಾಧ್ಯವಾಗುತ್ತಿರಲಿಲ್ಲ. ಏಕೆಂದರೆ ಆಗ, ಅಲ್ಲಿ ಈಗಾಗಲೆ ಇದ್ದ ಖಾಸಗಿ ಒಡೆತನವನ್ನು ಭಂಗಗೊಳಿಸಿದಂತಾಗುತ್ತಿತ್ತು. ರಾಜನು ಒಂದು ಗ್ರಾಮವನ್ನು ದಾನಮಾಡಿದರೆ ಅದಕ್ಕೆ ಎರಡು ದಾರಿಗಳಿರುತ್ತಿದ್ದುವು. ೧) ರಾಜನು ಅಲ್ಲಿಯ ಖಾಸಗಿ ಆಸ್ತಿಗಳನ್ನೆಲ್ಲ ತಾನು ಕೊಂಡುಕೊಂಡು ಆಮೇಲೆ ಪೂರ್ಣ ಒಡೆತನದ ಹಕ್ಕಿನೊಂದಿಗೆ ದಾನಮಾಡುತ್ತಿದ್ದನು. ವಿಘ್ನೇಶ್ವರನು ತನ್ನ

ಮಿತಾಕ್ಷರದಲ್ಲಿ ರಾಜನು ಯಾವುದೇ ನೆಲವನ್ನು ಯಾರಿಗಾದರೂ ದಾನ ಮಾಡಲು ಇಚ್ಛಿಸಿದರೆ, ಅದೇನಾದರೂ ಖಾಸಗಿ ಒಡೆತನದಲ್ಲಿದ್ದರೆ ಮೊದಲು ಅದನ್ನು ಅವನು ಬೆಲೆ ಕೊಟ್ಟು ಕೊಂಡುಕೊಳ್ಳಬೇಕು ಎಂದು ಹೇಳುತ್ತಾನೆ.[೧೩೬] ''ಭಾರತದ ದೇಶೀಯ ಕಾನೂನು ಸಾಮಾನ್ಯವಾಗಿ ಕೃಷಿ ಭೂಮಿಯೆಲ್ಲವೂ ರಾಜನ ಸೊತ್ತು ಎಂಬುದಾಗಿ ಪರಿಗಣಿಸಿದೆ'' ಎಂಬ ವಿನ್ಸೆಂಟ್ ಸ್ಮಿತ್‌ನ ಅಭಿಪ್ರಾಯವನ್ನು ಪರಿಷ್ಕರಿಸಬೇಕಾಗಿದೆ.[೧೩೭] ಮಧ್ಯಯುಗೀನ ಕರ್ನಾಟಕದ ಅನೇಕ ಶಾಸನಗಳು ವಿಘ್ನೇಶ್ವರನ ಅಭಿಪ್ರಾಯವನ್ನು ಸಮರ್ಥಿಸುತ್ತವೆ. ಅನೇಕಾನೇಕ ಸಂದರ್ಭಗಳಲ್ಲಿ ರಾಜರು ನೆಲವನ್ನು ಕೊಂಡುಕೊಂಡು ಆಮೇಲೆ ಅದನ್ನು ದಾನಮಾಡುತ್ತಿದ್ದರು.[೧೩೮]

೨) ಎರಡನೆಯ ಸಾಧ್ಯತೆ, ರಾಜರು ಹೊಸದಾಗಿ ಗ್ರಾಮಗಳನ್ನು ಸ್ಥಾಪಿಸಿ ಅಲ್ಲಿ ವಾಸಮಾಡಲು ಸಮುದಾಯಗಳಿಗೆ ದಾನಮಾಡುತ್ತಿದ್ದರು. ಬ್ರಾಹ್ಮಣ ಕಾಲೋನಿಗಳನ್ನು ಅಥವಾ ಅಗ್ರಹಾರಗಳನ್ನು ಸ್ಥಾಪಿಸುವ ಸಲುವಾಗಿ ರಾಜರು ಹೊಸದಾಗಿ ಹಳ್ಳಿಗಳನ್ನು ನಿರ್ಮಿಸುತ್ತಿದ್ದರು. ಸಿರಾದ ೧೪೦೩ರ ಒಂದು ಶಾಸನವು, ಕಾಡನ್ನು ಸಮರಿ ಸ್ವಚ್ಛಗೊಳಿಸಿದ ನಂತರ ಅಲ್ಲಿ ಒಂದು ಅಗ್ರಹಾರವನ್ನು ಸ್ಥಾಪಿಸಿರುವುದನ್ನು ಕುರಿತು ಹೇಳುತ್ತದೆ.[೧೩೯] ಇದರಿಂದ ಹೀಗೆ ನಿರ್ಣಯಿಸಬಹುದು. ''ಅನಾಕ್ರಮಿತ, ಕೃಷಿ ಸಾಧ್ಯ ಭೂಮಿಯು'' ಸರಕಾರಕ್ಕೆ ಸೇರಿದ್ದು, ಅಂತಹ ಸಂದರ್ಭದಲ್ಲಿ ಖಾಸಗಿ ಒಡೆತನ ಯಾವುದೂ ಇರುವುದಿಲ್ಲವಾದ್ದರಿಂದ ಪೂರ್ಣ ಒಡೆತನದ ಹಕ್ಕಿನೊಂದಿಗೆ ಅದನ್ನು ದಾನಮಾಡಬಹುದಾಗಿತ್ತು.

ಹೀಗೆ ''ಅನಾಕ್ರಮಿತ ಕೃಷಿ ಸಾಧ್ಯ ಬೀಳು ಭೂಮಿ'ಯ ಜೊತೆಗೆ, ತೆರಿಗೆ ಕೊಡದ ಅಥವಾ ರಾಜದ್ರೋಹದ ಅಥವಾ ಬೇರಾವುದೋ ಕಾರಣದಿಂದ ಮುಟ್ಟುಗೋಲು ಹಾಕಿಕೊಂಡ ಭೂಮಿಯ ಒಡೆತನವೂ ರಾಜನಿಗೆ ಸೇರಿರುತ್ತಿದ್ದಿತು.[೧೪೦] ಯಾವುದೋ ಅಪರಾಧಕ್ಕಾಗಿ ಒಬ್ಬನನ್ನು ಗಡೀಪಾರು ಮಾಡಿದರೆ, ಅವನು ಜಾತಿ ಭ್ರಷ್ಟನಾದರೆ, ಅವನ ಆಸ್ತಿಯೆಲ್ಲವೂ ಸರಕಾರಕ್ಕೆ ಸೇರಿಹೋಗುತ್ತಿತ್ತು.[೧೪೧] ಹೀಗೆ ಭೂಮಾಲೀಕರಾಗಿ ಅದರ ನಿಯಂತ್ರಣದಲ್ಲಿ ಬಹು ವಿಶಾಲವಾದ ಹಿಡುವಳಿ ಇರುತ್ತಿದ್ದಿತು. ಇವು ಬ್ರಿಟಿಷ್ ದೊರೆಗಳ ಡೆಮೆನ್ಸ್ (Demense) ನೆಲವನ್ನು ಹೋಲುತ್ತಿದ್ದುವು. ರಾಜರಿಗೆ ಸೇರಿದ್ದ ಗ್ರಾಮಗಳನ್ನು ಭಂಡಾರಗ್ರಾಮಗಳು ಅಥವಾ ರಾಜಧನತ್ವಕ್ಕೆ ಸೇರಿದ ಗ್ರಾಮಗಳು ಎಂದು ಕರೆಯುತ್ತಿದ್ದರು.[೧೪೨] ಇಂತಹ ಹಳ್ಳಿಗಳ ಮೇಲೆ ರಾಜರಿಗೆ ಸಂಪೂರ್ಣವೂ ಕೊನೆಯೇ ಇಲ್ಲದ್ದೂ ಆದ ಒಡೆತನ ಇರುತ್ತಿದ್ದಿತು. ಯಾವುದೇ ಖಾಸಗಿ ಒಡೆತನಕ್ಕೆ ತೊಂದರೆ ಯುಂಟಾಗುವ ಸಂದರ್ಭವೇ ಇಲ್ಲದೆ ಅವರು ಆ ಹಳ್ಳಿಯನ್ನು ತಮಗೆ ಇಚ್ಛೆಬಂದಂತೆ ವಿನಿಯೋಗ ಪಡಿಸಿಕೊಳ್ಳಬಹುದಾಗಿತ್ತು. ಅಂತಹ ನೆಲದ ಮೇಲೆ ಹಿಂದಿನ ಹಕ್ಕು ಯಾವುದೂ ಇರುತ್ತಿರಲಿಲ್ಲ.

ರಾಜನು ಕೊಂಡುಕೊಳ್ಳುವ ಯಾವ ಪ್ರಸ್ತಾಪವೂ ಇಲ್ಲದೆಯೇ, ಬೇಸಾಯದಲ್ಲಿದ್ದ ಹಳ್ಳಿಗಳನ್ನು ಪರಭಾರೆ ಮಾಡಿರುವುದನ್ನು ಹೇಳುವ ಅನೇಕ ಶಾಸನಗಳಿವೆ. ಅಂತಹ ಸಂದರ್ಭಗಳಲ್ಲಿ ಸರಕಾರವು ಅನುಭೋಗಿಗೆ ತನ್ನ ಹಕ್ಕುಗಳನ್ನು ಪ್ರಧಾನ ಮಾಡುತ್ತಿತ್ತು. ಖಾಸಗಿ ಸೊತ್ತುಗಳ ಮೇಲೆ ರಾಜರಿಗಿದ್ದ ಹಕ್ಕೆಂದರೆ, ಜಮೀನಿನ ಉತ್ಪನ್ನದ ರಾಜಭಾಗವನ್ನು ಪಡೆಯುವ ಹಕ್ಕು, ಇತರ ಸಲ್ಲಿಕೆಗಳನ್ನು, ನಿರ್ದಿಷ್ಟಪಡಿಸಿದ್ದರೆ, ಕೂಡ ದಾನ ಮಾಡಲಾಗುತ್ತಿತ್ತು. ವಿಜಯನಗರದ ರಾಜ ಹರಿಹರನು ಒಂದು ಭೂಮಿಯನ್ನು ದಾನ ಮಾಡಿದಾಗ, ಆ ಹಳ್ಳಿಯಲ್ಲಿ ಇನ್ನು ಮುಂದೆ ಯಾರು ಪಾವತಿಮಾಡುವ ಕಂದಾಯವನ್ನು ಅನುಭೋಗಿಗೆ ಹಸ್ತಾಂತರಿಸ ಬೇಕಾಗುವುದೋ ಅಂತಹ ಜಮೀನುದಾರರ ಪಟ್ಟಿ ತಯಾರಿಸಬೇಕೆಂದು ಸ್ಥಳೀಯ ಅಧಿಕಾರಿಗಳನ್ನು ಕೇಳಿದನು. ಅಂತಹ ಮಾಲೀಕರ ಹೆಸರುಗಳನ್ನು ಶಾಸನವು ಪಟ್ಟಿ ಮಾಡುತ್ತದೆ. ಮೊದಲು ಸರಕಾರಕ್ಕೆ ಕಂದಾಯ ಪಾವತಿಮಾಡುತ್ತಿದ್ದ ಅವರು ಈ ದಾನದ ಅನಂತರ ಅದನ್ನು ಸ್ವೀಕರಿಸಿದ ಅನುಭೋಗಿಗೆ ಪಾವತಿ ಮಾಡಬೇಕಾಗಿತ್ತು.[೧೪೩] ಇಲ್ಲಿ ತೆರಿಗೆ ಸಂಗ್ರಹಿಸುವ ಸರಕಾರದ ಹಕ್ಕನ್ನು ಅನುಭೋಗಿಗೆ ವರ್ಗಾಯಿಸಿದಂತಾಯಿತೇ ಹೊರತು ಒಡೆತನವನ್ನಲ್ಲ.

ಖಾಸಗಿ ಭೂಮಿಯನ್ನು ಪರಭಾರೆ ಮಾಡುವುದಕ್ಕೆ ಮೊದಲು ಸರಕಾರದ ಅಥವಾ ರಾಜನ ಅನುಮತಿ

ಪಡೆಯುವುದು ಅಗತ್ಯವೆ ಎಂಬ ಪ್ರಶ್ನೆಯನ್ನು ಪರಿಶೀಲಿಸುವುದು ಈ ಸಂದರ್ಭದಲ್ಲಿ ಅನುಚಿತವಾಗಲಾರದು. ವಿಘ್ನೇಶ್ವರನು ಅಂತಹ ಸಂದರ್ಭಗಳಲ್ಲಿ ನಗರದ ಗಣ್ಯಜನರು, ಬಂಧುಗಳು, ನೆರೆಯವರು ಮತ್ತು ವಾರಸುದಾರರ ಒಪ್ಪಿಗೆಯನ್ನು ಪಡೆಯಬೇಕೆಂದು ಹೇಳಿದರೂ ರಾಜನ ಪೂರ್ವಾನುಮತಿಯು ಅಗತ್ಯವೆಂದು ಸೂಚಿಸುವುದಿಲ್ಲ.[೧೪೪] ಶಾಸನಗಳೂ ಈ ವ್ಯಾಖ್ಯಾನಕಾರನ ದೃಷ್ಟಿಯನ್ನು ಪೋಷಿಸುತ್ತವೆ. ಭೂಮಿಯ ಖಾಸಗಿ ಪರಭಾರೆಯ ಸಂದರ್ಭದಲ್ಲಿ, ಪುತ್ರರು, ಪತ್ನಿಯರು, ಸೋದರರು, ತಮ್ಮನ ಮಕ್ಕಳು, ಮತ್ತು ಅಳಿಯ ಇವರ ಒಪ್ಪಿಗೆಯನ್ನು ಪಡೆದುಕೊಳ್ಳಲಾಗುತ್ತಿತ್ತೇ ಹೊರತು ರಾಜನ ಒಪ್ಪಿಗೆಯ ಉಲ್ಲೇಖ ಬರುವುದಿಲ್ಲ.[೧೪೫]

ಕೃಷಿಯೋಗ್ಯ ಬೀಳುಭೂಮಿ ಹಾಗೂ ರಾಜನಿಗೆ ಸೇರಿದ ಭೂಮಿ ಎರಡೂ ಸರಕಾರದ ಒಡೆತನದ ವ್ಯಾಪ್ತಿಗೆ ಸೇರಿದುವಾಗಿದ್ದುವು ಎನ್ನುವುದು ಮೇಲಿನ ಚರ್ಚೆಯಿಂದ ಹೊರಪಡುತ್ತದೆ. 'ಆಕ್ರಮಿತ' ಗ್ರಾಮಗಳಲ್ಲಿ ಸರಕಾರವು ನೆಲವನ್ನು ದಾನ ಮಾಡಿದ ಪಕ್ಷದಲ್ಲಿ, ಖಾಸಗಿ ಮಾಲೀಕರಿಂದ ಆ ನೆಲವನ್ನು ಮೊದಲು ಕೊಂಡುಕೊಳ್ಳುತ್ತಿತ್ತು; ಇಲ್ಲವೆ, ಅದರ ಮೇಲಿನ ತೆರಿಗೆಯ ಹಕ್ಕನ್ನು ದಾನ ಮಾಡುತ್ತಿದ್ದಿತೇ ಹೊರತು ಒಡೆತನದ ಅಧಿಕಾರವನ್ನಲ್ಲ ಎಂಬುದು ವೇದ್ಯವಾಗುತ್ತದೆ. ಈ ವಿಧಾನದಿಂದ ರಾಜ್ಯದಲ್ಲಿ ಖಾಸಗಿ ಒಡೆತನಕ್ಕೆ ಸರಕಾರವು ಮರ್ಯಾದೆ ಕೊಡುತ್ತಿತ್ತು. ಕೊನೆಯದಾಗಿ, ಸರಕಾರದ ಒಡೆತನವು ಖಾಸಗಿ ಒಡೆತನದೊಂದಿಗೆ ಎಂದೂ ಸಂಘರ್ಷಿಸುತ್ತಿರಲಿಲ್ಲ.

ಕೃಷಿಯು ಸ್ಥಿರಗತಿಯಲ್ಲಿ ಬೆಳೆದುದರಿಂದ, ಜನಸಂಖ್ಯೆ, ಜನರ ಸಾಮಾನ್ಯ ಪುರೋಭಿವೃದ್ಧಿ, ಸಾಗುವಳಿಯೋಗ್ಯ ಭೂಮಿಗೆ ಬೇಡಿಕೆ ಇವು ಬಹುಶಃ ಗಾಢವಾಗಿ ಅನುಭವಕ್ಕೆ ಬಂದಿರಬೇಕು. ಇದರ ಫಲವಾಗಿ ಗ್ರಾಮಸ್ಥರು ಮತ್ತು ಸರಕಾರಿ ಅಧಿಕಾರಿಗಳು ಸೂಕ್ತವಾದ ಗಡಿಗುರುತುಗಳನ್ನು ಪಾಲಿಸಲು ವಿಶೇಷವಾದ ಜಾಗರೂಕತೆ ವಹಿಸಿದರು. ಆ ಕಾಲದ ಅಸಂಖ್ಯಾತ ಕನ್ನಡ ಶಾಸನಗಳಿಂದ ಖಾಸಗಿ ಆಸ್ತಿಯ ನಿವೇಶನ ಹಾಗೂ ಗಡಿಗಳು ಹೆಚ್ಚು ಕರಾರುವಾಕ್ಕಾದುವು, ಹೆಚ್ಚು ವಿವರಪೂರ್ಣವಾದುವು ಎಂಬುದು ತಿಳಿಯುತ್ತದೆ, ಸ್ಥಳೀಯ ಪ್ರಭಾವೀ ಗಣ್ಯರ ಎದುರಿಗೆ ದಾಖಲೆ ಇಡುವ ಅಧಿಕಾರಿಗಳು ನೆಲವನ್ನು ಅಳತೆಮಾಡಿ ಎಚ್ಚರಿಕೆಯಿಂದ ಗುರುತು ಮಾಡುತ್ತಿದ್ದರು. ಕೃಷಿಭೂಮಿಗೆ ಹೆಚ್ಚಿನ ಬೇಡಿಕೆಯಿರುವ ಸ್ಥಳಗಳಲ್ಲಿ, ಅಷ್ಟೆಲ್ಲ ಎಚ್ಚರಿಕೆಯಿಂದ ಗುರುತಿಸಿದ್ದರೂ ಗಡಿವಿವಾದಗಳು ಏಳುತ್ತಿದ್ದುವು. ಕೃಷಿ ಭೂಮಿಯ ಎಲ್ಲೆಕಟ್ಟನ್ನು ಗುರುತಿಸಲು ಬಾವಿಗಳು, ಕೆರೆಗಳು, ಹೊಂಡಗಳು, ದೊಡ್ಡ ಮರಗಳು, ತೋಟಗಳು, ದೇವಾಲಯಗಳು, ತೊರೆಗಳು, ಕಲ್ಲಿನ ರಾಶಿ, ಕೃತಕವಾದ ದಿಣ್ಣೆಗಳು, ಇಳುಕಲು, ಬೆಟ್ಟ ಇವೆಲ್ಲವೂ ಉಪಯೋಗಕ್ಕೆ ಬರುತ್ತಿದ್ದುವು.[೧೪೬]

ಜಮೀನಿನ ಗಡಿಕಲ್ಲುಗಳನ್ನು ಎಲ್ಲೆಕಟ್ಟುವಶಿಲೆಗಳೆಂದು ಕರೆಯುತ್ತಿದ್ದರು. ಧಾರ್ಮಿಕ ಸಂಸ್ಥೆಗಳಿಗೆ ದಾನಮಾಡಿದ ಭೂಮಿಯ ಗಡಿಕಲ್ಲುಗಳ ಮೇಲೆ ಸಾಮಾನ್ಯವಾಗಿ ತ್ರಿಶೂಲ, ವಾಮನಮುದ್ರೆ, ಶಂಖಮುದ್ರೆ, ಶಂಖಚಕ್ರ ಮತ್ತು ಲಿಂಗಮುದ್ರೆ ಇರುತ್ತಿದ್ದುವು. ಅವು ದಾನ ಮಾಡಿದವನ ಧಾರ್ಮಿಕ ನಂಬಿಕೆಯನ್ನು ಸೂಚಿಸುತ್ತಿದ್ದುವು. ಲಿಂಗ, ತ್ರಿಶೂಲದಂತಹ ಗುರುತುಗಳು ಶಿವನನ್ನೂ ಶೈವಧರ್ಮವನ್ನೂ ಸೂಚಿಸಿದರೆ, ವಾಮನ, ಶಂಖ-ಚಕ್ರಗಳಂತಹ ಗುರುತುಗಳು ವಿಷ್ಣುವನ್ನು, ವೈಷ್ಣವ ಧರ್ಮವನ್ನು ಸೂಚಿಸುತ್ತಿದ್ದುವು.

ಗಡಿವಿವಾದಗಳನ್ನು ನಿವಾರಿಸಲು ಹಳ್ಳಿಯ ಮತ್ತು ಅಲ್ಲಿಯ ಭೂ ಹಿಡುವಳಿಗಳ ಗಡಿಗಳನ್ನು ಗುರುತಿಸುವ ಕಾರ್ಯವನ್ನು ನಾಲ್ಕೂ ದಿಕ್ಕಿನ ಹಳ್ಳಿಗಳಲ್ಲಿ ವಾಸಮಾಡುವ ಗಣ್ಯ ಜನರ ಸಮ್ಮುಖದಲ್ಲಿ ಮಾಡಲಾಗುತ್ತಿತ್ತು.[೧೪೮] ಕೆಲವೊಮ್ಮೆ ಗಡಿಕಲ್ಲುಗಳನ್ನು ನೆಡಲು ಒಬ್ಬ ಅಧಿಕಾರಿಯನ್ನು ಕಳುಹಿಸಿಕೊಡಲಾಗುತ್ತಿತ್ತು.[೧೪೯]

ನಾಡು ಜನರು ಗಡಿಕಲ್ಲುಗಳ ದುರುಪಯೋಗವು ನಡೆಯದಂತೆ ಜಾಗರೂಕತೆಯಿಂದ ನೋಡಿಕೊಳ್ಳುತ್ತಿದ್ದರು. ಅಂತಹ ಸಂದರ್ಭ ಬಂದರೆ ವಿವರವಾದ ವಿಚಾರಣೆ ನಡೆಸಲಾಗುತ್ತಿತ್ತು. ತೀರ್ಥಹಳ್ಳಿಯ ೧೪೦೦ರ ಒಂದು ಶಾಸನವು; ''ಕಲ್ಲುಗಳನ್ನು ಅನ್ಯಾಯವಾದ ರೀತಿಯಲ್ಲಿ ಹಾಕಿದಾಗ'' ನಾಡು ಜನರು ಅದಕ್ಕೆ ಆಸ್ಪದಕೊಡಬಾರದೆಂದೂ, ಗಡಿಕಲ್ಲುಗಳನ್ನು ಸರಿಯಾಗಿ ನೆಟ್ಟ ನಂತರವೇ ಧರ್ಮವು ನೆಲೆಗೊಂಡಂತಾಗುವುದೆಂದೂ ನಿರ್ಧರಿಸಿದರು.[೧೫೦]

ಭೂ ಕಂದಾಯ

ವಿಜಯನಗರದ ಅರಸರು ಪೂರ್ವಮರ್ಯಾದೆಯನ್ನು ಪಾಲಿಸುವವರು ಎಂದು ಶಾಸನಗಳಲ್ಲಿ ಹೇಳಿಕೊಂಡಿದ್ದಾರೆ. ಅವರು ಕರ್ನಾಟಕದಲ್ಲಿ ಹಿಂದಿನವರ ಸಂಪ್ರದಾಯಗಳನ್ನು ಪಡೆದುಕೊಂಡಿದ್ದುದು ಮಾತ್ರವಲ್ಲದೆ, ನೂತನ ತತ್ವಗಳನ್ನು ವಿಕಾಸಗೊಳಿಸಿ, ವ್ಯವಸ್ಥೆಯನ್ನು ಸಮರ್ಪಕವಾಗುವಂತೆ ಮಾಡುತ್ತಿದ್ದರು. ಕೆಳದಿ ಮತ್ತು ಮೈಸೂರು ಅರಸರ ಭೂಕಂದಾಯ ಆಡಳಿತ ವ್ಯವಸ್ಥೆಯ ಮೇಲೆ ಅವರ ಪ್ರಭಾವವನ್ನು ನೋಡಬಹುದು. ತೆರಿಗೆಯ ಯಾವುದೇ ವ್ಯವಸ್ಥಿತ ಪದ್ಧತಿಯಂತೆ, ವಿಜಯನಗರ ಸಾಮ್ರಾಜ್ಯದ ಭೂಕಂದಾಯ ವ್ಯವಸ್ಥೆಯಲ್ಲೂ ಎರಡು ಹಂತಗಳಿದ್ದುವು. ಮೊದಲನೆಯದು ಕಂದಾಯದ ನಿಗದಿ, ಎರಡನೆಯದು ಕಂದಾಯದ ವಸೂಲಿ. ಭೂಕಂದಾಯ ನಿಗದಿಯ ಯಾವುದೇ ಪದ್ಧತಿಯಲ್ಲಿ ಮೊದಲನೆಯ ತತ್ವ, ಕೃಷಿಕನು ಕೊಡಬೇಕಾದ ತೆರಿಗೆಯನ್ನು ಮುಖ್ಯವಾಗಿ ಮಣ್ಣಿನ ವರ್ಗ ಮತ್ತು ಬೇಸಾಯದ ಪರಿಸ್ಥಿತಿ ಇವುಗಳ ಆಧಾರದಿಂದಲೇ ನಿರ್ಣಯಿಸಬೇಕು ಎನ್ನುವುದು. ವಿಜಯನಗರ ಕಾಲದಲ್ಲಿಯೂ ಈ ನಿಯಮವನ್ನೇ ಅನುಸರಿಸುತ್ತಿದ್ದರು. ಅದಕ್ಕಾಗಿ ನಾಲ್ಕು ಬಗೆಯ ಬೇಸಾಯವನ್ನು ಪರಿಗಣಿಸಲಾಗುತ್ತಿತ್ತು. ಶಾಸನಗಳಲ್ಲಿ ಪದೇ ಪದೇ ಇವುಗಳ ಉಲ್ಲೇಖ ಬರುತ್ತದೆ. ಅವು ಕಡಾರಂಬ (ಒಣ ಬೇಸಾಯ), ನೀರಾರಂಬ (ಗದ್ದೆ ಬೇಸಾಯ), ತೋಟಾರಂಬ ಮತ್ತು ಕುಮರಿ (ಸ್ಥಳ ವರ್ಗಾಯಿಸುವ ಬೇಸಾಯ). ಶಾಸನಗಳಲ್ಲಿ ಇವುಗಳನ್ನು ಬೇರೆ ಬೇರೆಯಾಗಿ ಉಲ್ಲೇಖಿಸುವುದರಿಂದ ಅವಕ್ಕೆ ಬೇರೆ ಬೇರೆ ದರಗಳಲ್ಲಿ ಕಂದಾಯ ನಿಗದಿಯಾಗುತ್ತಿದ್ದಿತೆಂದು ನಿರ್ಣಯಿಸಬಹುದು.[೧೫೧] ಯಾವ ಬಗೆಯ ಭೂಮಿಗೆ ಸೇರಿದೆ ಎನ್ನುವುದರ ಮೇಲೂ ಅದು ನಿಗದಿಯಾಗುತ್ತಿದ್ದಿತು. ಗದ್ದೆಗಳನ್ನು ಉತ್ತಮ, ಮಧ್ಯಮ, ಕನಿಷ್ಠ ಎಂದು ಮೂರು ಬಗೆಯಾಗಿ ವಿಂಗಡಿಸಲಾಗಿತ್ತು.[೧೫೨] ತೋಟದ ಭೂಮಿಗೆ ಸಂಬಂಧಿಸಿದಂತೆ ಕಂದಾಯ ನಿಗದಿಪಡಿಸುವ ಮೊದಲು ಅಲ್ಲಿಯ ಉತ್ಪನ್ನಗಳನ್ನು ಗಣನೆಗೆ ತೆಗೆದುಕೊಳ್ಳುತ್ತಿದ್ದರು. ತೆಂಗು, ಅಡಕೆ, ಹಲಸು, ಮಾವಿನ ಮರಗಳು, ಬಾಳೆಮರಗಳು ಮತ್ತು ವೀಳೆಯದೆಲೆ ಹಂಬುಗಳನ್ನು ಪ್ರತ್ಯೇಕವಾಗಿ ಉಲ್ಲೇಖಿಸುತ್ತಿದ್ದರು. ಗದ್ದೆಯಲ್ಲೂ ಅಷ್ಟೆ. ಕಬ್ಬು ಮತ್ತು ದಾನ್ಯಗಳಿಗೆ ಪ್ರತ್ಯೇಕವಾಗಿ ತೆರಿಗೆಯಿರುತ್ತಿದ್ದಿತು.[೧೫೩] ಹೀಗೆ ವಿಜಯನಗರ ಅರಸರು ಪ್ರತ್ಯೇಕ ತೆರಿಗೆ ಪದ್ಧತಿಯನ್ನು, ಕೃಷಿ ಭೂಮಿಗೆ ಸಂಬಂಧಿಸಿದಂತೆ, ಅನುಸರಿಸುತ್ತಿದ್ದರು ಎಂದು ವೇದ್ಯವಾಗುತ್ತದೆ.

ಕಂದಾಯ ನಿಗದಿಯ ವ್ಯವಸ್ಥಿತ ರೂಪದ ಎರಡನೆಯ ನಿಯಮ, ರೈತರೊಂದಿಗೆ ಕಂದಾಯವನ್ನು ಕುರಿತು ಇತ್ಯರ್ಥ ಮಾಡಿಕೊಳ್ಳುವುಕ್ಕೆ ಮುಂಚೆ ಅದನ್ನು ಸರ್ವೆ ಮಾಡಿ ಅಳತೆ ಮಾಡಬೇಕು ಎನ್ನುವುದು. ತೆರಿಗೆ ನಿಗದಿಗಾಗಿ ಜಮೀನನ್ನು ಅಳತೆ ಮಾಡುವುದು ಕರ್ನಾಟಕದಲ್ಲಿ ಹಿಂದಿನಿಂದಲೂ ಬಂದ ಪದ್ಧತಿ. ವಿಜಯನಗರ ಕಾಲಕ್ಕಿಂತ ಮುಂಚೆಯೂ ಇಲ್ಲಿ ಜಮೀನು ಅಳತೆಯ ಅನೇಕ ಘಟಕಗಳು ಚಾಲ್ತಿಯಲ್ಲಿದ್ದುವು. ಕದಂಬರ ಕಾಲದಲ್ಲಿ ನಿರ್ತನ, ಮತ್ತರು ಮತ್ತು ಮಣ್ಣು ನೆಲ ಅಳತೆಯ ಮಾನಕಗಳಾಗಿದ್ದುವು. ಇವುಗಳಲ್ಲಿ ಕೊನೆಯದು ಅತ್ಯಂತ ಚಿಕ್ಕದಾಗಿತ್ತೆಂದು ತೋರುತ್ತದೆ.[೧೫೪] ಗಂಗರ ಶಾಸನಗಳಲ್ಲಿ ಭೇರುಂಡಕೋಲು[೧೫೫] ಗಂಗಕೋಲು[೧೫೬] ಕಚ್ಛವಿ ಕೋಲು[೧೫೭] ಮತ್ತು ಏರಿಸೈಕ್ಕೋಲು[೧೫೮] ರಾಜನಮಟ್ಟದ ದಂಡ ಅಥವಾ ಕೋಲು[೧೫೯] ಇವುಗಳ ಉಲ್ಲೇಖವಿದೆ. ಇವಲ್ಲದೆ ೧೮ ಮೊಳ ಅಳತೆ[೧೬೦] ೩೬ ಹೆಜ್ಜೆ ಮತ್ತು ೪೮ ಹೆಜ್ಜೆ ಅಳತೆಗಳಿರುತ್ತಿದ್ದುವು.[೧೬೧]

ವಿಜಯನಗರ ರಾಜರು ಆಗಲೆ ಸ್ಥಾಪಿತವಾಗಿದ್ದ ಪದ್ಧತಿಯನ್ನು ಅನುಸರಿಸಿದುದು ಮಾತ್ರವಲ್ಲ, ತಮ್ಮದೇ ಆದ ಪದ್ಧತಿಯನ್ನು ರೂಪಿಸಿಕೊಂಡರು. ಹಳೆಯ ಅಳತೆಗಳ ಜೊತೆಗೆ ಈ ಕಾಲದಲ್ಲಿ ಕೆಲವು ಹೊಸ ಅಳತೆಗಳನ್ನು ಜಾರಿಗೆ ತಂದರು. ಆ ಸಮಯದಲ್ಲಿ ೧೮ ಪಾದ ಉದ್ದವಿದ್ದ ಮಾನದಂಡ ಎಂಬ ಅಳತೆಯಕೋಲು ಪ್ರಚಲಿತವಾಗಿತ್ತು. ಇದು ಹಳೆಯ ಅಳತೆಯೇ.[೧೬೨] ಆದರೆ ಈ ಅಳತೆ ಕೋಲಿನ ಉದ್ದ ಬೇರೆ ಬೇರೆಯಾಯಿತು[೧೬೩]

ಮೈಸೂರು ಜಿಲ್ಲೆಯಲ್ಲಿ ಕಂಡುಬಂದ, ಕೃಷ್ಣದೇವರಾಯನ ಕಾಲದ ಒಂದು ಶಾಸನವು ಹಿಂದಿನ ಅಳತೆಯ ಪ್ರಕಾರ ಒಂದು ನೆಲವನ್ನು ದಾನಮಾಡಿದುದನ್ನು ಹೇಳುತ್ತದೆ. ಅಂದರೆ, ಆ ಸಮಯದಲ್ಲಿ ಹಳೆಯದೊಂದು, ಹೊಸದೊಂದು ಹೀಗೆ ಎರಡು ಅಳತೆಗಳಿದ್ದುವು ಎಂದು ತೋರುತ್ತದೆ. ಹೊಸದು ಕೃಷ್ಣದೇವರಾಯನ ಆಳಿಕೆಯ ಪ್ರಾರಂಭ ವರ್ಷಗಳಲ್ಲಿ ಚಾಲ್ತಿಗೆ ಬಂದಿರಬಹುದು.[೧೬೪] ರಾಯ-ರೇಖ ಎನ್ನುವುದು ಈ ಹೊಸ ಅಳತೆಯೇ ಆಗಿದ್ದಿರಬೇಕು.

ಸಾಮಾನ್ಯವಾಗಿ ಎರಡು ಬಗೆಯಾಗಿ ಕಂದಾಯ ನಿಗದಿಯಾಗುತ್ತಿದ್ದಿತು. ರಾಯ-ರೇಖ[೧೬೫] ಮತ್ತು ಬೀಜವರಿ [೧೬೬] ರಾಯರೇಖದ ಅಳತೆಕೋಲುಗಳು ಗದಗ್, ನವಲಗುಂದ, ಅಣ್ಣೀಗೇರಿ, ಅಮಿನಭಾವಿ ಮತ್ತು ಬೆಬ್ಬಿಗಳಲ್ಲಿ ಕಂಡುಬಂದಿವೆ. ಆದರೆ ಅವುಗಳ ಉದ್ದ ಬೇರೆ ಬೇರೆಯಾಗುತ್ತದೆ.[೧೬೭] ಇದಕ್ಕೆ ಕಾರಣ ಬೇರೆ ಬೇರೆ ರಾಜರು ಬೇರೆಬೇರೆ ಅಳತೆಗಳನ್ನು ಉಪಯೋಗಿಸಿದುದಿರಬೇಕು. ರಾಯರೇಖ ನಿಗದಿಯ ಮಹತ್ವವೇನೆಂದರೆ, ಅದು ಕರ್ನಾಟಕದಲ್ಲಿ ಆಳುತ್ತಿದ್ದ ಬಿಜಾಪುರ (೧೫೭೩-೧೬೮೬), ಸವಣೂರು (೧೬೮೬-೧೭೫೨) ಮತ್ತು ಮರಾಠಾ (೧೭೫೨-೧೮೧೭) ಸರಕಾರಗಳಲ್ಲಿ ಜಾರಿಯಲ್ಲಿದ್ದ ಕಂದಾಯ ನಿಗದಿಯ ವ್ಯವಸ್ಥೆಗೆ ತಳಹದಿಯನ್ನು ಹಾಕಿದುದು.[೧೬೮]

ಬೀಜವರಿ ನಿಗದಿ ಎನ್ನುವುದು ಒಂದು ಜಮೀನು ಉತ್ಪಾದಿಸಬಹುದೆಂದು ಅಂದಾಜು ಮಾಡಿರುವ, ಅಥವಾ ಒಂದು ಜಮೀನಿಗೆ ಎಷ್ಟು ಬಿತ್ತನೆಬೀಜ ಬೇಕು ಎನ್ನುವುದರ ಆಧಾರದ ಮೇಲೆ ಕಂದಾಯವನ್ನು ನಿಗದಿ ಪಡಿಸುವುದು.ಜಮೀನಿನ ಬಿತ್ತನೆ ಸಾಮರ್ಥ್ಯವನ್ನು ಅಳೆಯುವ ಮಾನಕಗಳು ಸ್ಥಳದಿಂದ ಸ್ಥಳಕ್ಕೆ ಬೇರೆಯಾಗುತ್ತಿದ್ದುವು. ಖಂಡುಗ[೧೬೯], ಕೊಳಗ[೧೭೦], ಸಲಗೆ[೧೭೧] ಬಳ್ಳ[೧೭೨], ಮತ್ತು ಮುಡೆ[೧೭೩](ಮುಡಿ) ಇತ್ಯಾದಿ. ಒಂದು ಖಂಡುಗದ ಜಮೀನು ಎಂದರೆ, ಒಂದು ಖಂಡುಗ ಧಾನ್ಯವು ಉತ್ಪಾದನೆಯಾಗಬಹುದೆಂದು ಅಂದಾಜು ಮಾಡಿದ ನೆಲ. ಆದ್ದರಿಂದ ಇದು ಅಂದಾಜು ಅಳತೆಯೇ ಹೊರತು ರಾಯರೇಖ ಪದ್ಧತಿಯಂತೆ ವಾಸ್ತವ ಅಳತೆಯ ಪದ್ಧತಿಯಲ್ಲ. ಇದರ ಅನುಕೂಲಗಳೆಂದರೆ ವೆಚ್ಚವು ಕಡಮೆಯಾಗುತ್ತಿದ್ದುದು ಹಾಗೂ ನಷ್ಟವನ್ನು ಸರಕಾರವೂ ರೈತನೂ ಸಮವಾಗಿ ಹಂಚಿಕೊಳ್ಳುತ್ತಿದ್ದುದು. ಒಂದು ನಿರ್ದಿಷ್ಟ ತಾಕು ಒಂದುಹಳ್ಳಿಯಲ್ಲಿ ಒಂದು ಖಂಡುಗ ಎಂದು ಪರಿಗಣಿಸಲ್ಪಟ್ಟಿದ್ದರೆ, ಮುಂದಿನ ಹಳ್ಳಿಯಲ್ಲಿ ಅದೇ ಆಗಿರಬೇಕೆಂಬ ನಿಯಮವಿರಲಿಲ್ಲ. ಕಂಬ[೧೭೪] ದಂತಹ ಒಂದು ಅಳತೆಯಿದ್ದಾಗಲೂ ಕೂಡ, ಕಂಬದ ಮೊಳಗಳ ಅಳತೆ ಬೇರೆ ಬೇರೆಯಾಗುತ್ತಿತ್ತು. ತೋಟಗಳ ಕಂದಾಯ ನಿಗದಿಗೆ. ಮರಗಳ ಸಂಖ್ಯೆಯನ್ನು ಗಣನೆಗೆ ತೆಗೆದುಕೊಳ್ಳಲಾಗುತ್ತಿತ್ತು.[೧೭೫]

ವಿಜಯನಗರ ಸಾಮ್ರಾಜ್ಯದಲ್ಲಿ ಸರಕಾರವು ವಸೂಲು ಮಾಡುತ್ತಿದ್ದ ಭೂ-ಕಂದಾಯದ ಪ್ರಮಾಣವನ್ನು ಕುರಿತು ಅತಿರೇಕದ ಅಭಿಪ್ರಾಯಗಳಿವೆ. ಅನಾದಿಕಾಲದಿಂದ ಬಂದಿರುವ, ರಾಜನು ರೈತರಿಂದ ಉತ್ಪನ್ನದ ೧/೬ ಭಾಗವನ್ನು ತೆಗೆದುಕೊಳ್ಳಬೇಕು ಎಂಬ ತತ್ವವನ್ನೇ ಚನ್ನಬಸವಪುರಾಣ[೧೭೬] ಮತ್ತು ರಾಜಾವಳೀಕಥೆ[೧೭೭] ಮೊದಲಾದ ಕನ್ನಡ ಕಾವ್ಯಗಳೂ ಪುನರುಚ್ಚರಿಸಿವೆ. ಶಾಸನಗಳೂ ಕೂಡ ವಕ್ಕಲಪಾಲು ಅಥವಾ ರೈತನಿಗೆ ಸಲ್ಲುವ ಭಾಗ, ಮತ್ತು ರಾಜಪಾಲು ಅಥವಾ ರಾಜನಿಗೆ ಸಲ್ಲುವ ಭಾಗ ಎಂದು ಪ್ರತ್ಯೇಕಿಸುತ್ತವೆ.[೧೭೮] ಆದರೆ ಸಾಹಿತ್ಯ ಕೃತಿಗಳು ಕಂದಾಯ ವ್ಯವಸ್ಥೆಯ ತತ್ವವನ್ನು ಮುಖ್ಯವಾಗಿ ಹೇಳುತ್ತವೆಯೇ ಹೊರತು ಅದರ ವಾಸ್ತವ ಪ್ರಯೋಗವನ್ನು ಕುರಿತು ಹೇಳುವುದಿಲ್ಲ. ತತ್ವವನ್ನು ನೋಡುವುದಾದರೆ ಪ್ರಾಚೀನ ಕಾಲದಿಂದಲೂ ಗೌರವಿಸುತ್ತಾ ಬಂದಿರುವ ಮನುವಿನ ಹೇಳಿಕೆಯೇ ಇದೆ. ರಾಜನು ಜಮೀನಿನ ಒಟ್ಟು ಉತ್ಪನ್ನದ ಒಂದು ಭಾಗಕ್ಕೆ ಅರ್ಹನು. ಸಾಮಾನ್ಯವಾಗಿ ಆರನೆಯ ಒಂದು ಭಾಗವೆಂದು ನಿಗದಿಪಡಿಸಿರುವ ರಾಜನ ಭಾಗವು ಕೆಲವು ಸಂದರ್ಭಗಳಲ್ಲಿ ಹನ್ನೆರಡನೆಯ ಒಂದು ಕೂಡ ಆಗಬಹುದು.[೧೭೯] ಮೊದಲನೆಯ ಬುಕ್ಕನ ಸಚಿವರಾಗಿದ್ದ ಮಾಧವಾಚಾರ್ಯರು ತಮ್ಮ 'ಪರಾಶರ-ಮಾಧವೀಯಂ' ಕೃತಿಯಲ್ಲಿ ಈ ಕೆಳಗಿನ ಬುದ್ಧಿವಾದವನ್ನು ನೀಡುತ್ತಾರೆ. ಇದು ವಿಜಯನಗರ

ಕಾಲದಲ್ಲಿದ್ದ ವ್ಯವಸ್ಥೆಯನ್ನು ನಿರ್ದೇಶಿಸುತ್ತದೆ. ''ಹೂದೋಟದಲ್ಲಿ ಮಾಲೆಗಾರನು ಗಿಡದಿಂದ ಹೂವುಗಳನ್ನು ಮತ್ತೆ ಮತ್ತೆ ಬಿಡಿಸಿಕೊಳ್ಳುತ್ತಾನೆಯೇ ಹೊರತು ಗಿಡವನ್ನೇ ಕೀಳುವುದಿಲ್ಲ. ಹಾಗೆಯೇ ರಾಜನು ತನ್ನ ಪ್ರಜೆಗಳಿಂದ ವಾಸ್ತವ ಉತ್ಪನ್ನದ ಆರನೆಯ ಒಂದುಪಾಲನ್ನು ತೆಗೆದುಕೊಳ್ಳಬೇಕು. ಆದರೆ ಇದ್ದಿಲು ಮಾಡುವವನಾದರೋ ಮರಗಳನ್ನೇ ಕಡಿದು ಸುಡುತ್ತಾನೆ, ರಾಜನು ಆ ರೀತಿ ಪ್ರಜೆಗಳನ್ನು ನಾಶ ಮಾಡಬಾರದು''.[೧೮೦] ಮನುವಾಗಲಿ ಮಾಧವಾಚಾರ್ಯರಾಗಲಿ ಭೂಕಂದಾಯ ವಸೂಲಿ ವಿಷಯದಲ್ಲಿ ವಿಜಯನಗರ ಕಾಲಕ್ಕೆ ಸಂಬಂಧಿಸಿದಂತೆ ಹೇಳಿದ ಮಾತುಗಳನ್ನು ಆಧುನಿಕ ಸರಕಾರದ ಶಾಸನಬದ್ಧ ಕಾನೂನು ಎಂಬಂತೆ ಪರಿಗಣಿಸುವುದು ಸಲ್ಲದು. ಈ ಕೃತಿಗಳಿಗೆ ಕಾನೂನು ಪುಸ್ತಕಗಳ ಶಾಸನಬದ್ಧತೆ ಇರಲಿಲ್ಲ. ಈ ವಿಷಯದಲ್ಲಿ ಗಣ್ಯರಾದವರ ಆಲೋಚನೆ ಏನಿತ್ತು ಎಂಬುದನ್ನು ಅವು ತಿಳಿಸುತ್ತವೆ ಅಷ್ಟೆ. ವಿಜಯನಗರ ಅರಸರಾಗಲಿ ಅವರ ನಂತರದವರಾಗಲಿ, ನಿರಂತರ ಯುದ್ಧ, ಅಗಾಧವಾದ ಸೈನ್ಯದ ಪೋಷಣೆ, ಅವರ ಅಗತ್ಯಗಳು, ಸುಖ ಭೋಗಗಳು ಇವಕ್ಕೆ ಅಪಾರವಾದ ಹಣ ಬೇಕಾಗಿದ್ದುದರಿಂದ ಈ ನಿಯಮಗಳನ್ನೇನೂ ಕರಾರುವಾಕ್ಕಾಗಿ ಪಾಲಿಸಲಿಲ್ಲ. ಈ ರೀತಿ ಪರೋಕ್ಷವಾದ ಮತ್ತು ಕಡಮೆ ವಿಶ್ವಸನೀಯವಾದ ಆಧಾರಗಳಿಗೆ ಸಮಕಾಲೀನ ಶಾಸನಗಳ ಸಮರ್ಥನೆ ದೊರಕದೆ ಹೋದರೆ ಅವುಗಳ ಬೆಲೆಯನ್ನು ಒಪ್ಪಿಕೊಳ್ಳುವುದು ಕಷ್ಟ.

ಪೋರ್ಚುಗೀಸ್ ಪ್ರವಾಸಿ ನ್ಯೂನಿಜ್ ಹೀಗೆ ಬರೆಯುತ್ತಾನೆ: ''ನೆಲವೆಲ್ಲವೂ ರಾಜನಿಗೆ ಸೇರಿದೆ. ಅವನಿಂದ ದಂಡನಾಯಕರು ಅದನ್ನು ಪಡೆಯುತ್ತಾರೆ, ಅವರು ರೈತರಿಗೆ ವಹಿಸಿಕೊಡುತ್ತಾರೆ. ರೈತರು ದಂಡನಾಯಕರಿಗೆ ಉತ್ಪನ್ನದ ಹತ್ತನೆ ಒಂಬತ್ತು ಪಾಲನ್ನು ಸಲ್ಲಿಸುತ್ತಾರೆ, ಅವರು ರಾಜನಿಗೆ ಅರ್ಧವನ್ನು ಸಲ್ಲಿಸುತ್ತಾರೆ.''[೧೮೧] ಹಯವದನರಾವ್ ಅವರ ಪ್ರಕಾರ ವಿಜಯನಗರ ಕಾಲದಲ್ಲಿ ಕಂದಾಯವು ೫೦% ಆಗಿತ್ತು.[೧೮೨] ಅನೇಕ ಕಾರಣಗಳಿಂದ ಈ ಅಭಿಪ್ರಾಯಗಳನ್ನು ಒಪ್ಪಿಕೊಳ್ಳುವುದು ಕಷ್ಟವಾಗುತ್ತದೆ.

ಮೊದಲನೆಯದಾಗಿ, ವಿಜಯನಗರವು, ಸಮಕಾಲೀನ ವಿದೇಶಿ ಪ್ರವಾಸಿಗರಾದ ರಜಾಕ್, ಕಾಂಟಿ, ಪೇಸ್ ಮತ್ತು ಬಾರ್ಬೋಸಾ ಮೊದಲಾದವರು ಕಣ್ಣಿಗೆ ಕಟ್ಟುವ ಹಾಗೆ ಚಿತ್ರಿಸಿರುವಂತೆ ತನ್ನ ವೈಭವವನ್ನು ಉಳಿಸಿಕೊಳ್ಳಬೇಕಾಗಿದ್ದರೆ ಸಾಂಪ್ರದಾಯಿಕವಾದ ೧/೬ ಪಾಲಿನಿಂದ ಖಂಡಿತವಾಗಿಯೂ ಸಾಧ್ಯವಾಗುತ್ತಿರಲಿಲ್ಲ, ಸಾಮ್ರಾಜ್ಯಕ್ಕೆ, ವೈರಿಗಳಿಂದ ತನ್ನನ್ನು ಕಾಪಾಡಿಕೊಳ್ಳಲು ಅಪಾರವಾದ ಜನಬಲ ಮತ್ತು ಹಣಬಲವನ್ನು ಪಡೆಯುವ ಸಮಸ್ಯೆಯಿದ್ದಿತು. ವಾಸ್ತವವಾಗಿ ವಿಜಯನಗರ ಸಾಮ್ರಾಜ್ಯದ ರಾಜಕೀಯ ಇತಿಹಾಸವು ವಿವಿಧ ಶತ್ರುಗಳೊಂದಿಗೆ ನಿರಂತರವಾಗಿ ನಡೆಸಿದ ರಕ್ತಪಾತದ, ಬಹುದುಬಾರಿಯ, ವಿನಾಶಕರವಾದ ಯುದ್ಧಗಳ ಸರಣಿಯೇ ಸರಿ. ಅದು ಕರ್ನಾಟಕದೊಳಗೆ ಮಾತ್ರವಲ್ಲ ಕರ್ನಾಟಕದ ಹೊರಗಿನ ಶತ್ರುಗಳೊಂದಿಗೂ ನಡೆದ ಯುದ್ಧಗಳು. ಪರಿಸ್ಥಿತಿ ಹೀಗಿದ್ದಾಗ ವಿಜಯನಗರದ ಅರಸರು ಹಿಂದೂ ಶಾಸನವನ್ನು ಅಕ್ಷರಶಃ ಅನುಸರಿಸಿ ಉತ್ಪನ್ನದ ಕೇವಲ ೧/೬ ಪಾಲನ್ನು ರೈತರಿಂದ ವಸೂಲು ಮಾಡುತ್ತಿದ್ದರು ಎಂದು ಒಪ್ಪುವುದು ಸಾಧ್ಯವೇ ಇಲ್ಲ. ಎರಡನೆಯದಾಗಿ, ರಾಜ್ಯವು ತೆರಿಗೆಯನ್ನು ಉತ್ಪನ್ನದ ೧/೨ ಅಥವಾ ೯/೧೦ ಎಂದು ನಿಗದಿಪಡಿಸಿದ್ದರೆ ಕೇವಲ ಅರ್ಧದಿಂದ ಅಥವಾ ಕೇವಲ ೧/೧೦ ದಿಂದ ಜೀವಿಸಿರುವುದೇ ಸಾಧ್ಯವಾಗುತ್ತಿರಲಿಲ್ಲ. ಇಂತಹ ದುಬಾರಿ ವಸೂಲಿ ಮತ್ತು ದಬ್ಬಾಳಿಕೆಗಳಿಂದ ಸಾಮ್ರಾಜ್ಯವು ಸುಮಾರು ಮೂರು ಶತಮಾನಗಳ ಕಾಲ ಉಳಿದಿರುತ್ತಿರಲಿಲ್ಲ.

ಈ ಸಂಬಂಧವಾಗಿ ಒಂದು ಮುಖ್ಯವಾದ ಅಂಶವನ್ನು ಗಮನಿಸಬೇಕು. ಬೇಸಾಯಕ್ಕೆ ಭೂಮಿಯು ಧಾರಾಳವಾಗಿ ದೊರಕುತ್ತಿದ್ದಿತು. ಆದ್ದರಿಂದ ಸರಕಾರದ ಮುಖ್ಯವಾದ ಗುರಿ ರೈತರು ದೊರಕುವ ಎಲ್ಲ ಭೂಮಿಯನ್ನೂ ಸಾಗುವಳಿ ಮಾಡುವಂತೆ ನೋಡಿಕೊಳ್ಳುವುದಾಗಿತ್ತು. ಬೀಳು ಭೂಮಿಯನ್ನು ಬೇಸಾಯಕ್ಕೊಳಪಡಿಸುವವರಿಗೆ ಬೇಕಾದಷ್ಟು ರಿಯಾಯಿತಿಗಳನ್ನು ತೋರಿಸಿ, ಅಂತಹ ಭೂಮಿಗೆ ಕ್ರಮಾಗತವಾಗಿ ನಿಧಾನವಾಗಿ

ಕಂದಾಯದ ದರವನ್ನು ನಿಗದಿಪಡಿಸುವ ವ್ಯವಸ್ಥೆಮಾಡಿ ಪ್ರೋತ್ಸಾಹಿಸುತ್ತಿದ್ದರು[೧೮೩] ಈ ನೀತಿಯು ರೈತರಿಗೆ ಮಾತ್ರವಲ್ಲದೆ ಸರಕಾರಕ್ಕೂ ಸಹಾಯಕವಾಗಿತ್ತು. ಹೀಗಿರುವಾಗ ಒಂದೇ ಸಮನೆ ಪ್ರಜೆಗಳನ್ನು ಸುಲಿಗೆ ಮಾಡಿ ಸಾಮ್ರಾಜ್ಯವು ಬದುಕಿರುವುದು ಸಾಧ್ಯವಿರಲಿಲ್ಲ. ಹಾಗೆ ಮಾಡಿದ್ದರೆ ರೈತರು ನೆಲವನ್ನು ಉಳುವ ಬದಲು ಎಲ್ಲಿಗಾದರೂ ಓಡಿಬಿಡುತ್ತಿದ್ದರು.

ರೈತರ ಚಲನೆಯೂ ಆ ಕಾಲದಲ್ಲಿ ಕಂಡುಬರುತ್ತಿದ್ದ ಇನ್ನೊಂದು ಅಂಶವಾಗಿತ್ತು. ಇಂದು ಈ ಅಭ್ಯಾಸ ಸ್ವಲ್ಪವೂ ಕಾಣುವುದಿಲ್ಲ. ಉತ್ತಮತರವಾದ ಪರಿಸ್ಥಿತಿಗಳನ್ನು ಅರಸಿಕೊಂಡು ರೈತರು ವಲಸೆ ಹೋಗುತ್ತಿದ್ದುದು ದಬ್ಬಾಳಿಕೆಯ ವಿರುದ್ಧವಾಗಿ ಅವರ ಬಳಿಯಿದ್ದ ಶಕ್ತಿಯುತವಾದ ಆಯುಧವಾಗಿತ್ತು. ಸಾಗುವಳಿ ಯಾಗಬಹುದಾದ ನೆಲವು ಧಾರಾಳವಾಗಿ ಎಲ್ಲಾ ಕಡೆಯೂ ಲಭ್ಯವಿದ್ದುದರಿಂದ ಈ ಪರಿಸ್ಥಿತಿ ಹುಟ್ಟಿತ್ತು. ಅನೇಕ ಶಾಸನಗಳು ಇದನ್ನು ಸಮರ್ಥಿಸುತ್ತವೆ.[೧೮೪] ಬಳ್ಳಾರಿ ಜಿಲ್ಲೆಯ ಕೌತಾಳಂ ಎಂಬ ಹಳ್ಳಿಯ ಹನುಮಾನ್ ದೇವಾಲಯದಲ್ಲಿ ಕಂಡುಬಂದ, ವಿಜಯನಗರಕಾಲದ ಶಾಸನವೊಂದು ಸ್ವಾರಸ್ಯವಾಗಿದೆ. ರಾಜನು ಅವರಿಂದ ವಿಪರೀತವಾಗಿ ತೆರಿಗೆವಸೂಲಿ ಮಾಡಿದುದರಿಂದ ಅನೇಕ ರೈತರು ಒಟ್ಟಾಗಿ ತುಂಗಭದ್ರೆಯನ್ನು ದಾಟಿ ವಲಸೆ ಹೋದರು. ಆಗ ರಾಜನು ಅವರು ಹಿಂದಿರುಗಿ ಬಂದು ಮತ್ತೆ ತಮ್ಮ ಜಮೀನುಗಳನ್ನು ಸಾಗುವಳಿ ಮಾಡಿದ್ದೇ ಆದರೆ ಅವರನ್ನುಅಂತಹ ಶೋಷಕ ಕ್ರಮಗಳಿಂದ ರಕ್ಷಿಸುವುದಾಗಿ ಭರವಸೆ ಕೊಟ್ಟನು[೧೮೫] ಅಲ್ಲದೆ, ನೆಲದ ಬೇಡಿಕೆಯ ಪರಿಕಲ್ಪನೆಯೇ ಬಹುಮುಖ್ಯವಾಗಿತ್ತು. ಕೃಷಿ ಉದ್ದೇಶಗಳಿಗಾಗಿ ಬಳಸುವ ನೆಲಕ್ಕೆ ವಿಪರೀತ ಬೇಡಿಕೆಯಿರುತ್ತಿದ್ದಿತೆಂದು ಆ ಕಾಲದ ಶಾಸನಗಳು ಹೇಳುತ್ತವೆ. ಅವುಗಳಲ್ಲಿ ದಾಖಲಾಗಿರುವಂತೆ ಸಾಗುವಳಿಗೊಳಪಡಿಸಿದ ದಾಖಲೆಗಳು, ಭೋಗ್ಯಪತ್ರಗಳು ಇವೆಲ್ಲ ಆ ದಿನಗಳಲ್ಲಿ ಕೃಷಿ ಭೂಮಿಗಿದ್ದ ಮಹತ್ವವನ್ನು ಸಾರಿ ಹೇಳುತ್ತವೆ.[೧೮೬] ತೆರಿಗೆ ಅಧಿಕವಾಗಿದ್ದು ವಸೂಲಿಯು ಬಲಾತ್ಕಾರದಿಂದ ನಡೆಯುತ್ತಿದ್ದರೆ, ಯಾರೂ ನೆಲವನ್ನು ಉಳುತ್ತಲೇ ಇರಲಿಲ್ಲ. ಅದು ಆರ್ಥಿಕ ಮೌಲ್ಯವನ್ನು ಕಳೆದುಕೊಳ್ಳುತ್ತಿದ್ದಿತು. ವಿಜಯನಗರ ಕಾಲದ ಭೂಕಂದಾಯದ ದರವು ಮಧ್ಯಗಾಮಿ ಸ್ವರೂಪದ್ದಾಗಿದ್ದುದರಿಂದ ನೆಲಕ್ಕೆ ಬೇಡಿಕೆಯಿದ್ದಿತು, ಜನರು ಸಂತುಷ್ಟರಾಗಿದ್ದರು. ವಿಜಯನಗರ ಕಾಲದಲ್ಲಿ ಕರ್ನಾಟಕದ ಜನರು ''ತೆರಿಗೆಗಳ ಮತ್ತು ಸುಂಕಗಳ ಸಂಖ್ಯೆಯಿಂದ ಮತ್ತು ಭಾರದಿಂದ ನಲುಗಿಹೋಗಿದ್ದರು'' ಎಂಬಂತಹ ಅಸ್ಪಷ್ಟವಾದ ಹೇಳಿಕೆಗಳನ್ನು ಒಪ್ಪುವುದು ಸಾಧ್ಯವಿಲ್ಲ. ಏಕೆಂದರೆ ಅಂತಹ ಹೇಳಿಕೆಗಳಿಗೆ ಸಾಕ್ಷ್ಯಾಧಾರಗಳಿಲ್ಲ. ಒಂದು ತೆರಿಗೆಯು ಭಾರವಾಗಿದೆಯೆ, ಹೊರೆಯಾಗಿದೆಯೆ ಇಲ್ಲವೆ ಎಂಬುದನ್ನು ತಿಳಿಯಬೇಕಾದರೆ ಮೊದಲು ಹಣದ ಕೊಳ್ಳುವ ಸಾಮರ್ಥ್ಯ ಎಷ್ಟಿದೆಯೆಂಬುದನ್ನು ನೋಡಬೇಕು. ಅದೃಷ್ಟವಶಾತ್ ನ್ಯೂನಿಜನ ಹೇಳಿಕೆಯು ನಮ್ಮ ನೆರವಿಗೆ ಬರುತ್ತದೆ. ವಿಜಯನಗರ ಕಾಲದಲ್ಲಿ ಹಣದ ಕೊಳ್ಳಿಕೆಯ ಸಾಮರ್ಥ್ಯ ಅಧಿಕವಾಗಿತ್ತು ಎಂದು ಅವನು ಹೇಳುತ್ತಾನೆ. ''ಮಾರುಕಟ್ಟೆಗಳಲ್ಲಿ ಒಂದು ಪರ್ದಾವೋ ಕೊಟ್ಟರೆ ಹನ್ನೆರಡು ಕುರಿಗಳನ್ನು ಕೊಡುತ್ತಾರೆ, ಬೆಟ್ಟಗಳಲ್ಲಿ ಒಂದು ಪರ್ದಾವೋಗೆ ೧೪ ಅಥವಾ ೧೫ ಕುರಿಗಳೂ ದೊರಕುತ್ತವೆ''[೧೮೭] ಪರ್ದಾವೋ ಅಥವಾ ಪಗೋಡ ೪.೫ ರೂಪಾಯಿಗಳಿಗೆ ಸಮನಾಗಿತ್ತು. ಆದ್ದರಿಂದ ಆಧುನಿಕ ಕರೆನ್ಸಿಯ ದೃಷ್ಟಿಯಿಂದ ಆಗ ಹಣದ ಕೊಳ್ಳುವ ಶಕ್ತಿ ಬಹು ಅಧಿಕವಾಗಿತ್ತು. ಆದ್ದರಿಂದ ಸಂಗ್ರಹಿಸುತ್ತಿದ್ದ ಭೂ ಕಂದಾಯದ ಮೊತ್ತದ ಮೇಲೆ ಅದರ ಪರಿಣಾಮವೂ ಅಧಿಕವಾಗಿತ್ತು. ಹಣವು ವಿರಳವಾಗಿತ್ತು, ವಸ್ತುಗಳ ಬೆಲೆ ಕಡಮೆಯಿತ್ತು. ಇದರಿಂದಾಗಿ ಸರಕಾರದ ಪಾಲಿನ ಮೌಲ್ಯವೂ ಹೆಚ್ಚಿತ್ತು. ವಿಜಯನಗರ ಸರಕಾರವು ಭೂಕಂದಾಯವನ್ನು ನಗದಾಗಿ ಸಂಗ್ರಹಿಸುತ್ತಿದ್ದುದೂ ಇದನ್ನು ಪೋಷಿಸುತ್ತಿದ್ದಿತು.

ತೆರಿಗೆಯು ಹೊರಲಾರದ ಭಾರವಾಗಿತ್ತು ಎಂದು ಭಾವಿಸುವ ವಿದ್ವಾಂಸರು ಇನ್ನೊಂದು ಮುಖ್ಯವಾದ ಅಂಶವನ್ನು ಮರೆಯುತ್ತಾರೆ. ನಿರ್ದಿಷ್ಟ ಉದ್ದೇಶಗಳಿಗೆಂದು ನಿಗದಿಯಾದ ತೆರಿಗೆಗಳನ್ನೂ ಭೂಕಂದಾಯದ

ಜೊತೆಯಲ್ಲೇ ವಸೂಲಿ ಮಾಡಿದಾಗ ಒಟ್ಟಾರೆ ಸರಕಾರಕ್ಕೆ ಸಂದ ತೆರಿಗೆ ಹೆಚ್ಚಾಗಿತ್ತು ಎಂಬ ಲೆಕ್ಕ ಸಿಕ್ಕಬಹುದು. ಆದರೆ ಭೂಕಂದಾಯವು ಅದರ ಒಂದು ಭಾಗವಾಗಿತ್ತು, ಸಂಗ್ರಹಿತ ತೆರಿಗೆಯ ಒಟ್ಟು ಮೊತ್ತದ ಒಂದು ಮುಖ್ಯವಾದ ಭಾಗವೇ ಆಗಿತ್ತು.

ಹೀಗಾಗಿ, ವಿಜಯನಗರ ಸರಕಾರವು ರೈತರಿಂದ ಕೇಳುತ್ತಿದ್ದ ಭೂಕಂದಾಯವು ಸಾಂಪ್ರದಾಯಕವಾದ ೧/೬ ಅಥವಾ ೧/೩ ಆಗಿರಲಿಲ್ಲ; ಅಥವಾ ಪೋರ್ಚುಗೀಸ್ ಪ್ರವಾಸಿ ನ್ಯೂನಿಜ್ ಹೇಳಿದಂತೆ ೯/೧೦ ಕೂಡ ಆಗಿರಲಿಲ್ಲ, ಬಹುಶಃ ಅದು ೧/೨ ಪ್ರಮಾಣವಾಗಿದ್ದಿರಬಹುದು. ದೆಹಲಿಯ ಸುಲ್ತಾನರೂ ಕೂಡ, ತಮ್ಮ ಅತ್ಯಧಿಕ ಪ್ರಾಬಲ್ಯದ ಕಾಲದಲ್ಲಿಯೂ, ಅಲ್ಲಾವುದ್ದೀನ್ ಖಿಲ್ಜಿಯೊಬ್ಬನ ಹೊರತು ಮಿಕ್ಕವರು, ತೆರಿಗೆಯನ್ನು ಅರ್ಧಕ್ಕಿಂತ ಕಡಮೆಗೆ ನಿಗದಿಪಡಿಸಿದ್ದರು.[೧೮೮]

ಹಳ್ಳಿಯು ಹೊರುತ್ತಿದ್ದ ತೆರಿಗೆಯ ಭಾರವು ಪೂರ್ತಿ ಭೂಕಂದಾಯವಾಗಿರಲಿಲ್ಲ.[೧೮೯] ಅದರ ಜೊತೆಗೆ ಸಂಗ್ರಹಿಸುತ್ತಿದ್ದ ಇತರ ಅನೇಕ ಗ್ರಾಮೀಣ ತೆರಿಗೆಗಳನ್ನು ಶಾಸನಗಳು ದಾಖಲಿಸಿವೆ. ಮುಖ್ಯವಾಗಿ ಬೇಸಾಯದಿಂದ ಬರುತ್ತಿದ್ದ ಹಳ್ಳಿಯ ಉತ್ಪನ್ನದ ಪಾಲು ತೆಗೆದುಕೊಂಡು ಅರಸರು ತೃಪ್ತರಾಗುತ್ತಿರಲಿಲ್ಲ. ಹಣದ ಅಗತ್ಯಗಳು, ರಾಜಕೀಯ ಅಗತ್ಯಗಳು ಇತ್ಯಾದಿಗಳನ್ನು ನಿರ್ವಹಿಸುವ ಸಲುವಾಗಿ, ಆಗ ಕರ್ನಾಟಕದಲ್ಲಿ ಪ್ರಚುರವಾಗಿದ್ದ ರೀತಿಯಲ್ಲಿ ಅನೇಕ ಸುಂಕಗಳನ್ನು ವಿಧಿಸುತ್ತಿದ್ದರು. ಮಧ್ಯಕಾಲೀನ ಭಾರತದಲ್ಲಿ ಇದು ಅಸಾಧಾರಣವಾದ ಪದ್ಧತಿಯೇನೂ ಆಗಿರಲಿಲ್ಲ. ಫಿರೋಜ್, ಅಕ್ಬರ್ ಮತ್ತು ಔರಂಗಜೇಬ್ ಅಂಥವರು ಕೂಡ ಅಂತಹ ಹಲವು ಸುಂಕಗಳನ್ನು ರದ್ದುಪಡಿಸಿದರೆಂದು ಹೇಳಲಾಗಿದೆ.[೧೯೦] ಅವು ಮುಖ್ಯವಾಗಿ ಗ್ರಾಮೀಣ ತೆರಿಗೆಗಳಾಗಿದ್ದುವು.

ವಿಜಯನಗರ ಕಾಲದಲ್ಲಿ ಅರಸರು ಹಲವು ಗ್ರಾಮೀಣ ತೆರಿಗೆಗಳನ್ನು ವಸೂಲು ಮಾಡುತ್ತಿದ್ದರು. ಅವುಗಳಲ್ಲಿ ಹಲವು ಹಿಂದಿನ ರಾಜಮನೆತನಗಳು ವಿಧಿಸಿದ್ದುದನ್ನೇ ಮುಂದುವರಿಸಿದ ಸಂದರ್ಭಗಳು, ಕೆಲವು ಇವರು ಹೊಸದಾಗಿ ವಿಧಿಸಿದುವೂ ಇದ್ದುವು. ಈ ತೆರಿಗೆಗಳನ್ನು ಸಾಮಾನ್ಯವಾಗಿ ದೆರೆ, ಸುಂಕಣೆ ಎಂದು ಕರೆಯಲಾಗುತ್ತಿತ್ತು.[೧೯೧] ಗ್ರಾಮದ ರೈತರು ಮತ್ತು ಇತರ ನಿವಾಸಿಗಳು ತಮ್ಮ ಮನೆಗಳ ಮೇಲೆ ತೆರಿಗೆ ಕೊಡಬೇಕಾಗಿತ್ತು. ಅದನ್ನು ಹೊದಕೆ[೧೯೨] ಅಥವಾ ಹೊದಿಸಿದ ಮಾಡು, ಬಿದರ[೧೯೩] ಮತ್ತು ಮಹೆವನ[೧೯೪] ಎಂದು ಬೇರೆ ಬೇರೆ ಹೆಸರುಗಳಿಂದ ಕರೆಯುತ್ತಿದ್ದರು. ಅವರ ನೇಗಿಲು[೧೯೫] ಎತ್ತುಗಳು[೧೯೬] ಬಂಡಿಗಳು[೧೯೭] ಬಿತ್ತನೆ ಬೀಜ[೧೯೮] ಇವೂ ತೆರಿಗೆಯಿಂದ ಮುಕ್ತವಾಗಿರಲಿಲ್ಲ. ದನಗಳನ್ನುಮೇಯಿಸುವ ಹುಲ್ಲುಗಾವಲ ತೆರಿಗೆ ಮತ್ತು ಮದುವೆಯ ಮೇಲೆ ತೆರಿಗೆಯನ್ನೂ ಕೊಡಬೇಕಾಗಿತ್ತು.[೧೯೯]

ಈಗ ನಾವು ಕಂದಾಯ ವಿಭಾಗಗಳನ್ನು, ಭೂಕಂದಾಯ ಮತ್ತಿತರ ತೆರಿಗೆಗಳ ವಸೂಲಿಯ ಕ್ರಮವನ್ನೂ ಈಗ ನೋಡೋಣ. ಭೂ-ಕಂದಾಯವನ್ನು ಸುವರ್ಣದಾಯ, ಕುಳಪಾಲು ಮತ್ತು ಕಂದಾಯ ಎಂಬ ಬೇರೆ ಬೇರೆ ಹೆಸರುಗಳಿಂದ ಕರೆಯುತ್ತಿದ್ದರು.[೨೦೦] ನೆಲದೆರಿಗೆಯನ್ನು ಸೂಚಿಸುವ ಕೊನೆಯ ಪದವು ಈಗಲೂ ಬಳಕೆಯಲ್ಲಿದೆ. ಸುವರ್ಣದಾಯವೆಂದರೆ ನಗದಾಗಿ ಸಲ್ಲಿಸಿದ ತೆರಿಗೆ, ಕುಳಪಾಲು ರೈತರು ಸರಕಾರಕ್ಕೆ ಸಲ್ಲಿಸಬೇಕಾದ ಭಾಗವನ್ನು ಸೂಚಿಸುತ್ತದೆ. ಸರಕಾರದ ಭೂಕಂದಾಯ ವಿಭಾಗವನ್ನು ಅಟ್ಟವಣೆ ಎನ್ನುತ್ತಿದ್ದರು.[೨೦೧] ಗ್ರಾಮ ಅಥವಾ ಹಳ್ಳಿಯು ಭೂತೆರಿಗೆ ಆಡಳಿತ ನಿರ್ವಹಣೆಯ ಮೂಲ ಘಟಕವಾಗಿತ್ತು. ಪ್ರತಿಯೊಂದು ಹಳ್ಳಿಯಲ್ಲೂ ಒಂದೋ ಹಲವೋ ಕೊಪ್ಪಲುಗಳಿರುತ್ತಿದ್ದುವು. ಗ್ರಾಮದಿಂದ ಮೇಲ್ಪಟ್ಟು ಸೀಮೆ ಅಥವಾ ನಾಡು, ಸ್ಥಲ,ವೆಂತೆ, ಚಾವಡಿ ಮತ್ತು ಮಾಗಣೆಗಳಿದ್ದುವು.[೨೦೨] ಪ್ರಾಂತಗಳನ್ನು ರಾಜ್ಯ ಅಥವಾ ಮಂಡಲ ಎಂದು ಕರೆಯುತ್ತಿದ್ದರು.

ಅನಾದಿಕಾಲದಿಂದಲೂ ಸರಕಾರದ ಪರವಾಗಿ ಭೂಕಂದಾಯ ಮತ್ತು ಇತರ ತೆರಿಗೆಗಳನ್ನು ಹಳ್ಳಿಯ

ಗೌಡ ಮತ್ತು ಸೇನಬೋವ ಎಂಬಿಬ್ಬರು ಆಡಳಿತಾಧಿಕಾರಿಗಳು ವಸೂಲು ಮಾಡುತ್ತಿದ್ದರು. ವಿಜಯನಗರ ಕಾಲದಲ್ಲಿ ಮತ್ತು ನಂತರದ ಕಾಲದಲ್ಲೂ ಇವರು ಬಹು ಮಹತ್ವದ ಪಾತ್ರ ನಿರ್ವಹಿಸುತ್ತಿದ್ದರು. ಭೂಕಂದಾಯದ ಇಡೀ ಆಡಳಿತಯಂತ್ರವು ಇವರ ಮೇಲೆ ನಿಂತಿತ್ತು ಎಂದರೆ ತಪ್ಪಾಗದು.

ಗೌಡಿಕೆ ಅಥವಾ ಗ್ರಾಮ ಮುಖ್ಯಸ್ಥನ ಅಧಿಕಾರವನ್ನು ಸಾರ್ವಜನಿಕ ಸೇವೆಮಾಡಿ, ಅದರಲ್ಲೂ ಹಳ್ಳಿಯಲ್ಲಿ, ಹೆಸರಾದವನೊಬ್ಬನಿಗೆ ರಾಜನೋ, ಅಧಿಕಾರಿಗಳೋ, ಅಥವಾ ಗ್ರಾಮದ ಜನರೋ ಅಥವಾ ನಾಡುಗಳ ಜನರೋ ವಹಿಸಿಕೊಡುತ್ತಿದ್ದರು.[೨೦೩] ಗೌಡನು ಜನತೆಯ ಪ್ರತಿನಿಧಿಯಾಗಿಯೂ, ಸರಕಾರದ ಮಧ್ಯವರ್ತಿಯಾಗಿಯೂ ಕೆಲಸಮಾಡುತ್ತಿದ್ದನು. ಅವನ ಮುಖ್ಯವಾದ ಕೆಲಸವೇ ಭೂ-ಕಂದಾಯವನ್ನೂ ಇತರ ತೆರಿಗೆಗಳನ್ನೂ ವಸೂಲು ಮಾಡುವುದು. ಈ ಸೇವೆಗಾಗಿ ಅವನಿಗೆ ಗೌಡಗೊಡಿಗೆ,[೨೦೪] ತೆರಿಗೆರಹಿತ ಭೂಮಿ ದೊರಕುತ್ತಿತ್ತು. ಅವನ ಪದವಿಯು ಆನುವಂಶಿಕವಾಗಿತ್ತು. ಒಬ್ಬ ಮಹಿಳೆಯು ಸಾರ್ವಜನಿಕ ಸೇವೆಗಾಗಿ ಇಬ್ಬರು ವ್ಯಕ್ತಿಗಳಿಗೆ ಗೌಡಿಕೆ ನೀಡಿದುದನ್ನೂ, ಅವರು ಅದನ್ನು ಹಂಚಿಕೊಂಡಿದ್ದುದನ್ನೂ ಹೇಳುವ ಒಂದು ಸಂದರ್ಭವಿದೆ.[೨೦೫] ಒಂದು ಸ್ಥಳದಲ್ಲಿ ಒಬ್ಬನಿಗಿಂತ ಹೆಚ್ಚು ಗೌಡರಿದ್ದ ಸಂದರ್ಭಗಳೂ ಇವೆ.[೨೦೬]

ವಿಜಯನಗರ ಕಾಲದಲ್ಲಿ ಸ್ಥಳಗೌಡ, ಒಂದು ಸ್ಥಳದ ಮುಖ್ಯಸ್ಥನಿದ್ದುದನ್ನು ಗಮನಿಸುತ್ತೇವೆ. ಆಗಿನ ಶಾಸನಗಳಲ್ಲಿ ಸ್ಥಳ ಎಂಬ ಶಬ್ದವು ಒಂದು ಉಪವಿಭಾಗ ಅಥವಾ ಗ್ರಾಮಗಳ ಒಂದು ಗುಂಪು ಎಂಬ ಅರ್ಥಕೊಡುವುದನ್ನು ನೋಡಬಹುದು. ಸಾಮಾನ್ಯ ಗೌಡನ ಕರ್ತವ್ಯಗಳು ಒಂದು ಹಳ್ಳಿಗೆ ಸೀಮಿತವಾಗಿದ್ದರೆ ಸ್ಥಳ ಗೌಡನ ಕರ್ತವ್ಯಗಳು ಸ್ಥಳಕ್ಕೆ ವಿಸ್ತೃತವಾಗಿದ್ದುವು ಎಂದು ಭಾವಿಸಬಹುದು.[೨೦೭] ಆ ಕಾಲದ ಅಗತ್ಯಗಳನ್ನು ಪೂರೈಸಲು, ಭೂಕಂದಾಯ ಆಡಳಿತವನ್ನು ಉಪವಿಭಾಗದ ಮಟ್ಟದಲ್ಲಿ ವ್ಯವಸ್ಥಿತಗೊಳಿಸಲು ವಿಜಯನಗರ ಆಡಳಿತವು ಈ ಹುದ್ದೆಯನ್ನು ಸೃಷ್ಟಿಸಿರಬಹುದು.

ಸೇನಬೋವ ಅಥವಾ ಶಾನಭೋಗ ಹಳ್ಳಿಯ ಲೆಕ್ಕಪತ್ರಗಳನ್ನಿಡುವವನು. ಹಳ್ಳಿಯಲ್ಲಿ ಪ್ರಭಾವಶಾಲಿಯಾದ ವ್ಯಕ್ತಿ. ಇದೂ ಒಂದು ಪ್ರಾಚೀನವಾದ ಹುದ್ದೆಯೇ. ಕ್ರಿ.ಶ. ೧೯೮೩-ಆರ ಪಶ್ಚಿಮ ಚಾಲುಕ್ಯ ಶಾಸನವು ಅದನ್ನು ಉಲ್ಲೇಖಿಸುತ್ತದೆ.[೨೦೮] ಇವನು ಹಳ್ಳಿಯ ತೆರಿಗೆಗಳ ದಾಖಲಾತಿಯನ್ನು ಇಟ್ಟುಕೊಂಡಿರುತ್ತಿದ್ದನು. ಕೃಷಿಯೋಗ್ಯ ಮತ್ತು ಬಂಜರುಭೂಮಿ, ಕೃಷಿಯಾಗುತ್ತಿರುವ ಹಾಗೂ ಬೀಳುಬಿದ್ದಿರುವ ಭೂಮಿ ಇವುಗಳ ವಿಸ್ತೀರ್ಣ, ಗದ್ದೆ ಮತ್ತು ಹೊಲ ಬೇಸಾಯಗಳ ವಿವರ ಮಾಹಿತಿ, ತೆರಿಗೆ ಹಾಕಿರುವ ಮತ್ತು ತೆರಿಗೆ ವಿನಾಯಿತಿ ಪಡೆದಿರುವ ಭೂಮಿಗಳ ವಿವರ, ಬೆಳೆಗಳ ಅಂದಾಜು, ಹಿಂದಿನ ಮತ್ತು ಈಗಿನ ಸರಕಾರಗಳು ಗದ್ದೆ ಮತ್ತು ಹೊಲ ಬೆಳೆಗಳಿಗೆ ವಿಧಿಸಿರುವ ಕಂದಾಯ ವಿವರ, ಹಳ್ಳಿಯ ಬ್ರಹ್ಮಾದಾಯ, ದೇವಾದಾಯ ಮತ್ತು ಮಾತಾಪುರ ಭೂಮಿಗಳ ವಿಸ್ತೀರ್ಣ, ವಿವಿಧ ಗ್ರಾಮಸೇವೆಗಳು, ಸಾರ್ವಜನಿಕ ಸೇವೆಯೂ ಸೇರಿದಂತೆ ಹಳ್ಳಿಯ ಆಡಳಿತಕ್ಕೆ ಸಂಬಂಧಿಸಿದ ಸಮಸ್ತ ಮಾಹಿತಿಗಳು ಇವೆಲ್ಲವೂ ಸೇನಬೋವನ ಬಳಿ ದಾಖಲೆಯಲ್ಲಿರುತ್ತಿದ್ದುವು. ಅವನು ಕಂದಾಯ ವಿವರಗಳನ್ನು ಬರೆದಿಡುತ್ತಿದ್ದ ಪಟ್ಟಿಯನ್ನು ಪಟ್ಟೆ ಎಂದು ಕರೆಯುತ್ತಿದ್ದರು. ಗ್ರಾಮಸ್ಥರು ಸರಕಾರಕ್ಕೆ ಪಾವತಿ ಮಾಡಬೇಕಾದ ಭೂಕಂದಾಯವನ್ನು ಅದರಲ್ಲಿ ದಾಖಲೆ ಮಾಡಿಡುತ್ತಿದ್ದರು.[೨೦೯] ಸೀಮೆಯ ಹಂತದಲ್ಲಿ ಪಟ್ಟೆಯನಾಯಕ ಎಂಬೊಬ್ಬ ಅಧಿಕಾರಿ ಇರುತ್ತಿದ್ದನು. ಇವನು ಸ್ಥಳಗೌಡನಂತೆಯೇ ಉಪವಿಭಾಗಮಟ್ಟದಲ್ಲಿ ಲೆಕ್ಕಪತ್ರಗಳನ್ನು ಇಟ್ಟುಕೊಳ್ಳುತ್ತಿದ್ದನು.[೨೧೦] ಅವನನ್ನು[೨೧೧] ಕುಲಕರ್ಣಿ ಅಥವಾ ಕರಣಂ ಎಂದೂ ಕರೆಯುತ್ತಿದ್ದಂತೆ ತೋರುತ್ತದೆ. ಇಲ್ಲಿ ಕುಲ ಎನ್ನುವುದು 'ಆನುವಂಶಿಕ' ಎಂಬರ್ಥವನ್ನು ಕೊಡುತ್ತಿದ್ದಿತು. ಅಂದರೆ ಕುಲಕರ್ಣಿ ಆನುವಂಶಿಕ ಲೆಕ್ಕಾಧಿಕಾರಿ, ಎಂದರ್ಥವಾಗಬಹುದು. ಸೇನಬೋವನ ಪದವಿ ಆನುವಂಶಿಕವಾಗಿದ್ದಿತೆಂಬುದನ್ನು ಶಾಸನಗಳೇ ದೃಢಪಡಿಸುತ್ತವೆ.[೨೧೨] ಗೌಡ ಮತ್ತು ಶಾನುಭೋಗರ ಒಪ್ಪಿಗೆಯಿಲ್ಲದೆ ಗ್ರಾಮದ ಪರವಾಗಿ ನಡೆದ ಯಾವುದೇ ವ್ಯವಹಾರಕ್ಕೆ ಬೆಲೆಯಿರಲಿಲ್ಲ, ಅದು

ಊರ್ಜಿತವಾಗುತ್ತಿರಲಿಲ್ಲ, ಅಕ್ರಮವಾಗುತ್ತಿತ್ತು. ಅವನಿಗೂ ಈ ಸೇವೆಗಾಗಿ ಕಂದಾಯ ರಹಿತ ಭೂಮಿಯು ಸರಕಾರದಿಂದ ದೊರಕುತ್ತಿದ್ದಿತು. ಪ್ರತಿಯೊಬ್ಬ ಸೇನಬೋವನಿಗೂ ಅವನ ಅಧಿಕಾರವ್ಯಾಪ್ತಿಯಲ್ಲಿ ಒಂದಕ್ಕಿಂತ ಹೆಚ್ಚು ಹಳ್ಳಿಗಳಿರುತ್ತಿದ್ದುವು. ಸೇನಬೋವನೊಬ್ಬನ ಅಧಿಕಾರ ವ್ಯಾಪ್ತಿಯಲ್ಲಿ ಆರು ಹಳ್ಳಿಗಳೂ ಐದು ಕೊಪ್ಪಲುಗಳೂ ಇದ್ದುದನ್ನು ಒಂದು ಶಾಸನವು ಹೇಳುತ್ತದೆ.[೨೧೩]

ವಿಜಯನಗರ ಸರಕಾರವು ಭೂಕಂದಾಯ ಸಂಗ್ರಹದಲ್ಲಿ ಮೂರು ವಿಧಾನಗಳನ್ನು ಅನುಸರಿಸುತ್ತಿದ್ದಿತು. ೧) ನೇರವಾಗಿ ರೈತರಿಂದ ೨) ಪರೋಕ್ಷವಾಗಿ ಮಧ್ಯವರ್ತಿಗಳ ಮೂಲಕ ಹಾಗೂ ೩) ಒಟ್ಟಾಗಿ ಹಳ್ಳಿಯಿಂದ. ವಿಜಯನಗರ ಸರಕಾರವು ರೈತರೊಂದಿಗೆ ನೇರವಾಗಿ ವ್ಯವಹರಿಸುತ್ತಿದ್ದಿತು ಎನ್ನುವುದು ಅನೇಕ ಶಾಸನಗಳಿಂದ ದೃಢಪಡುತ್ತದೆ. ಅವು ಹಳ್ಳಿಯ ಜಮೀನುದಾರನ ಹೆಸರು, ಅವನು ಭೂಕಂದಾಯವಾಗಿ ಕೊಡಬೇಕಾದ ಹಣಗಳನ್ನು ಪಟ್ಟಿಮಾಡುತ್ತವೆ. ಕೊಪ್ಪ ತಾಲೂಕಿನ ಒಂದು ಶಾಸನದಲ್ಲಿ ಭೂಮಾಲೀಕರ ಪಟ್ಟಿ ಇದೆ. ಸರಕಾರಕ್ಕೆ ಕಂದಾಯ ಸಲ್ಲಿಸುವವರನ್ನು ಕುಳಗಳೆಂದು ಕರೆದಿದೆ:

೧.	ಸಣ್ಣಪ್ಪ ಹೆಗ್ಗಡೆ	...	೬ ಹೊನ್ನು
೨.	ಬಮ್ಮಿಯಕ್ಕ	...	೩ ಹೊನ್ನು
೩.	ಯಲ್ಲಪ್ಪ ಹೆಗ್ಗಡೆ	...	೪ ಹೊನ್ನು ೨ ಪಣ
೪.	ಕಾಮಕ್ಕ ಹೆಗ್ಗಡತಿ	...	೧ ಹೊನ್ನು ೨ ಪಣ [೨೧೪]

ತೆರಿಗೆಯನ್ನು ಮಧ್ಯವರ್ತಿಗಳ ಮೂಲಕವೂ ಸಂಗ್ರಹಿಸಲಾಗುತ್ತಿದ್ದಿತು. ಸರಕಾರಕ್ಕೆ ವ್ಯಕ್ತಿಗಳ ಬಳಿಗೆ ಹೋಗಿ ತೆರಿಗೆ ಸಂಗ್ರಹಿಸುವ ಕಷ್ಟ ಇದರಿಂದ ತಪ್ಪುತ್ತಿದ್ದಿತು. ಮಧ್ಯವರ್ತಿಗಳು ಆ ಕೆಲಸಮಾಡಿ, ನಿರ್ದಿಷ್ಟಪಡಿಸಿದ ಮೊತ್ತವನ್ನು ಖಜಾನೆಗೆ ಕಟ್ಟಿಬಿಡುತ್ತಿದ್ದರು. ಅಸಂಖ್ಯಾತ ಶಾಸನಗಳಲ್ಲಿ ನಾಯಕ ಎಂಬ ಹೆಸರಿನ ಹುದ್ದೆಯು[೨೧೫] ಕಾಣಿಸಿಕೊಳ್ಳುತ್ತದೆ. ರಾಜ್ಯದ ಬೇರೆ ಬೇರೆ ಘಟಕಗಳನ್ನು ಅವರಿಗೆ ವಹಿಸಿಕೊಡುವುದು, ಅವರು ಕಂದಾಯ ಆಡಳಿತವನ್ನು ತಮ್ಮದೇ ವಿಧಾನದಿಂದ ನಡೆಸಿಕೊಳ್ಳುವುದು, ಮೊದಲೇ ನಿಗದಿಪಡಿಸಿದ ಪಾಲನ್ನು ಸರಕಾರಕ್ಕೆ ಕಟ್ಟಿಬಿಡುವುದು ಈ ಪದ್ಧತಿಯು ಕರ್ನಾಟಕದಲ್ಲಿ ಬೆಳೆದಿತ್ತು ಎನ್ನುವುದನ್ನು ಇದು ಸೂಚಿಸುವಂತೆ ತೋರುತ್ತದೆ. ಈ ನಾಯಕರೇ ನ್ಯೂನಿಜ್ ಹೇಳುವ 'ಕ್ಯಾಪ್ಟನ್'ಗಳು ಎಂದು ಗುರುತಿಸಬಹುದು, ಅವನ ಪ್ರಕಾರ ಅಂತಹ ೨೦೦ ನಾಯಕರಿದ್ದರು.[೨೧೬] ಈ ನಾಯಕರು ರಾಜನಿಗೆ ತಮ್ಮ ಭಾಗದ ಕಂದಾಯ ಸಂಗ್ರಹದ ಮೊತ್ತವನ್ನುತಲುಪಿಸಲು ನವರಾತ್ರಿ ಉತ್ಸವದ ಸಮಯದಲ್ಲಿ ರಾಜಧಾನಿಗೆ ಬರುತ್ತಿದ್ದರು. ಆಗ ಅವರನ್ನು ಸತ್ಕರಿಸಲಾಗುತ್ತಿತ್ತು.[೨೧೭] ತಮ್ಮ ಕಂದಾಯ ಪ್ರದೇಶವ್ಯಾಪ್ತಿಯಲ್ಲಿ ರಾಜರಂತೆಯೇ ಇರುತ್ತಿದ್ದ ಈ ಕ್ಯಾಪ್ಟನ್‌ಗಳ ವಿವರವಾದ ನಿರೂಪಣೆಯನ್ನು ನ್ಯೂನಿಜ್ ಕೊಟ್ಟಿದ್ದಾನೆ. ಅವರ ಪೈಕಿ ವಿಶೇಷ ಉಲ್ಲೇಖಕ್ಕೆ ಅರ್ಹರಾದವರು ಕರ್ನಾಟಕದ ಬಂಕಾಪುರ, ಕಳಲೆ, ಮಂಗಳೂರು ಮತ್ತು ಬೂದಿಹಾಳಿನವರು.[೨೧೮] ನಾಯಕರು ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ವಿಫಲರಾದ ಪಕ್ಷದಲ್ಲಿ ಅವರನ್ನು ಶಿಕ್ಷಿಸಲಾಗುತ್ತಿತ್ತು. ರಾಜರು ಅವರಿಗೆ ಕೊಟ್ಟಿದ್ದ ಭೂಮಿಯನ್ನೂ ಸಕಲಸೊತ್ತುಗಳನ್ನೂ ಮುಟ್ಟುಗೋಲು ಹಾಕಿಕೊಳ್ಳಲಾಗುತ್ತಿತ್ತು.[೨೧೯] ಆದರೆ ಸಣ್ಣಪುಟ್ಟ ಸುಂಕಗಳನ್ನು ಗುತ್ತಿಗೆದಾರರಿಗೆ ವಹಿಸಿಬಿಡಲಾಗುತ್ತಿತ್ತು. ನ್ಯೂ ನಿಜ್‌ನ ಪ್ರಕಾರ ರಾಜಧಾನಿಯ ಹೆಬ್ಬಾಗಿಲಲ್ಲಿ ಸುಂಕಸಂಗ್ರಹಣೆಯನ್ನು ೧೨,೦೦೦ ಪಗೋಡಗಳಿಗೆ ಗುತ್ತಿಗೆ ಕೊಡಲಾಗಿತ್ತು. ಆದರೆ ಅಲ್ಲಿರುತ್ತಿದ್ದ ಗುತ್ತಿಗೆದಾರನು ಮುಗ್ಧರಾದ 'ಗ್ರಾಮಜನರಿಂದ' ಇನ್ನೂ ಬೇಕಾದಷ್ಟು ಸುಂಕಗಳನ್ನು ವಸೂಲು ಮಾಡುತ್ತಿದ್ದನು. ಹೀಗೆ ಮಧ್ಯವರ್ತಿಗಳ ಮೂಲಕ ತೆರಿಗೆ ಸಂಗ್ರಹಿಸುವುದು ವಿಜಯನಗರ ಕಾಲದಲ್ಲಿ ರೂಢಿಯಲ್ಲಿದ್ದ ಪದ್ಧತಿಯಾಗಿತ್ತು.

ಒಂದು ಹಳ್ಳಿಗೆ ಸೇರಿದ ಕಂದಾಯವನ್ನು ಒಟ್ಟಾಗಿ ವಸೂಲು ಮಾಡುವುದೂ ರೂಢಿಯಲ್ಲಿತ್ತು.

ಹಳ್ಳಿಯು ಒಟ್ಟಾಗಿ ಇಂತಿಷ್ಟು ತೆರಿಗೆಯನ್ನು ನಗದಾಗಿ ಸಲ್ಲಿಸಬೇಕೆಂದು ಉಲ್ಲೇಖಿಸಿರುವ ಅನೇಕ ಶಾಸನಗಳನ್ನು ನಾವು ನೋಡುತ್ತೇವೆ.[೨೨೦] ಇಂತಹ ಸಂದರ್ಭದಲ್ಲಿ ಎರಡು ದಾರಿಗಳನ್ನು ಅನುಸರಿಸಬಹುದಾಗಿತ್ತು. ಒಟ್ಟು ಹಳ್ಳಿಯಿಂದ ಇಂತಿಷ್ಟು ಕಂದಾಯ ಬರಬೇಕೆಂದು ನಿಗದಿಪಡಿಸಿ ಪ್ರತಿಯೊಬ್ಬನಿಗೂ ಅವನವನ ಪಾಲನ್ನು ತಿಳಿಸುವುದು ಒಂದು ಕ್ರಮ; ಪ್ರತಿಯೊಬ್ಬರೂ ಸಲ್ಲಿಸಬೇಕಾದ ಕಂದಾಯವನ್ನು ಒಟ್ಟುಗೂಡಿಸಿ ಇಡೀ ಹಳ್ಳಿಯು ಆ ಮೊತ್ತವನ್ನು ಪಾವತಿ ಮಾಡಬೇಕೆಂದು ಹೇಳುವುದು ಇನ್ನೊಂದು ಕ್ರಮ ಆಗಿತ್ತು.

ವಿಜಯನಗರ ಸರಕಾರವು ಧಾರ್ಮಿಕ ಸಂಸ್ಥೆಗಳಿಗೆ ಮತ್ತು ವ್ಯಕ್ತಿಗಳಿಗೆ ಭೂಕಂದಾಯವನ್ನು ದಾನವಾಗಿ ವಹಿಸಿಕೊಡುತ್ತಿದ್ದುದೂ ಉಂಟು. ಹಾಗೆ ವಹಿಸಿದುದನ್ನು ಹೇಳುವ ಬೇಕಾದಷ್ಟು ಶಾಸನಗಳು ಕಂಡುಬರುತ್ತವೆ. ಯಾರಿಗೆ ವಹಿಸಿಕೊಡಲಾಗಿದೆಯೋ ಅವರು ನೇರವಾಗಿ ರೈತನೊಂದಿಗೆ ವ್ಯವಹಾರ ಮಾಡಿಕೊಳ್ಳಬಹುದಾಗಿತ್ತು. ರೈತನೊಂದಿಗೆ ನೇರವಾಗಿ ವ್ಯವಹರಿಸುವ ಅನುಭೋಗಿಯು ಕಂದಾಯ ವಸೂಲಿಗಾಗಿ ತನ್ನದೇ ವ್ಯವಸ್ಥೆ ಮಾಡಿಕೊಳ್ಳಬೇಕಾಗಿತ್ತು. ದಾನ ಮಾಡುವವರೆಗೆ ರೈತರು ತನಗೆ ಯಾವ ಮೊತ್ತವನ್ನು ಸಲ್ಲಿಸುತ್ತಿದ್ದರೊ ಅದೇ ಮೊತ್ತವನ್ನು ಅಲ್ಲಿಂದ ಮುಂದಕ್ಕೆ ಆತನಿಗೆ ಸಲ್ಲಿಸಬೇಕೆಂದು ರಾಜನು ಅಪ್ಪಣೆ ಮಾಡುತ್ತಿದ್ದನು. ಸರಕಾರವು ಇದಕ್ಕೆ ಸೂಕ್ತವಾದ ವ್ಯವಸ್ಥೆ ಮಾಡುತ್ತಿತ್ತು. ಕೊಪ್ಪ ತಾಲೂಕಿನ ಒಂದು ಶಾಸನವು ಹೀಗೆ ಭೂಕಂದಾಯ ವಸೂಲಿಯ ಅಧಿಕಾರವನ್ನು ದಾನ ಮಾಡಿದ ಸಂದರ್ಭವನ್ನು ವರ್ಣಿಸುತ್ತದೆ. ಅಂತಹ ಸಂದರ್ಭಗಳಲ್ಲಿ ದಾನ ಪರಿಗ್ರಹಿಸಿದವನಿಗೆ ಚಕ್ರವರ್ತಿಯ ಆಜ್ಞಾನುಸಾರವಾಗಿ ಪ್ರಾಂತದ ಗವರ್ನರನು ಕುಳವಿವ್ರದ ಶಾಸನವೊಂದನ್ನು ನೀಡುತ್ತಿದ್ದನು. ನಿರ್ದಿಷ್ಟಗ್ರಾಮಗಳ ಭೂಕಂದಾಯವನ್ನು ವಸೂಲಿ ಮಾಡಿಕೊಳ್ಳುವ ಅಧಿಕಾರವನ್ನು ನೀಡಿದಾಗ ಬೇರೆ ಸ್ಥಳಗಳ ಭೂಕಂದಾಯವು ಅದರೊಂದಿಗೆ ಬೆರೆತುಹೋಗದಂತೆ ಎಚ್ಚರ ವಹಿಸಲಾಗುತ್ತಿತ್ತು. ಆ ನಿರ್ದಿಷ್ಟ ಸ್ಥಳದ ಭೂಕಂದಾಯದ ವಿವರವನ್ನು ಸ್ಪಷ್ಟಪಡಿಸಿ ತಿಳಿಸಲಾಗುತ್ತಿತ್ತು. ಅದೇ ಪ್ರಕಾರವಾಗಿ, ಅನುಭೋಗಿಯು ಗ್ರಾಮ ಮುಖ್ಯಸ್ಥನ ನೆರವಿನಿಂದ ಆ ಸ್ಥಳದ ಕಂದಾಯವನ್ನು ಪ್ರತ್ಯೇಕಗೊಳಿಸುತ್ತಿದ್ದನು. ಹೀಗೆ ಬೇರ್ಪಡಿಸಿದ ಸೂಕ್ಷ್ಮ ವಿವರಗಳು, ಅಲ್ಲಿಂದ ಮುಂದಕ್ಕೆ ಅನುಭೋಗಿಗೆ ಕಂದಾಯದ ಮೊತ್ತವನ್ನು ಪಾವತಿ ಮಾಡಬೇಕಾಗಿರುವ ರೈತರ ಹೆಸರುಗಳು ಇವೆಲ್ಲ ಸ್ಪಷ್ಟವಾಗಿ ನಮೂದಾಗುತ್ತಿದ್ದುವು. ಕಂದಾಯದ ಆಡಳಿತ ನಿರ್ವಹಣೆಯು ವಿಜಯನಗರ ಸಾಮ್ರಾಜ್ಯ ಕಾಲದ ಕರ್ನಾಟಕದಲ್ಲಿ ಹೇಗೆ ಸಮರ್ಪಕವಾಗಿದ್ದಿತೆಂಬುದನ್ನು ಇದು ತೋರಿಸುತ್ತದೆ.[೨೨೧]

ಭೂಕಂದಾಯ ಮತ್ತಿತರ ತೆರಿಗೆಗಳನ್ನು ಯಾವ ರೂಪದಲ್ಲಿ ಪಾವತಿ ಮಾಡುತ್ತಿದ್ದರು ಎನ್ನುವುದನ್ನು ಸೂಚಿಸುವ ಕೆಲವು ಸ್ವಾರಸ್ಯವಾದ ಸಂಗತಿಗಳು ಶಾಸನಗಳಲ್ಲಿವೆ. ಭೂಕಂದಾಯವನ್ನು ನಗದಾಗಿಯೂ ವಸ್ತುರೂಪದಲ್ಲೂ ಸಂಗ್ರಹಿಸಲಾಗುತ್ತಿತ್ತು.[೨೨೨] ಗದ್ಯಾಣ, ಹೊನ್ನು, ವರಹ ಮತ್ತು ಪಣ ಎಂಬ ನಾಣ್ಯಗಳ ರೂಪದಲ್ಲಿ ನಗದು ಪಾವತಿ ನಡೆಯುತ್ತಿತ್ತು.[೨೨೩] ಈ ಸಂಬಂಧವಾಗಿ ವಿಜಯನಗರದ ರಾಜರು ಸ್ಥಳೀಯ ರೂಢಿಗಳನ್ನೂ ಸಂಪ್ರದಾಯಗಳನ್ನೂ ಅನುಸರಿಸುತ್ತಿದ್ದರೆಂದು ತೋರುತ್ತದೆ. ಪೋರ್ಚುಗೀಸ್ ಪ್ರವಾಸಿಗಳು ಪರ್ಡಾವೋ ಅಥವಾ ಪಗಡೋ ಎಂಬ ನಾಣ್ಯಗಳನ್ನು ಉಲ್ಲೇಖಿಸುತ್ತಾರೆ.[೨೨೪] ಹದಿನಾಲ್ಕನೆಯ ಶತಮಾನದಿಂದ ಮುಂದಕ್ಕೆ ಹೊಲ, ಗದ್ದೆಗಳೆರಡಕ್ಕೂ ಕಂದಾಯವನ್ನು ನಗದಾಗಿ ಪಾವತಿ ಮಾಡುವುದೇ ಹೆಚ್ಚು ಪ್ರಾಚುರ್ಯಕ್ಕೆ ಬಂದಿತು. ಮಾಧವಾಚಾರ್ಯರು ವಿಜಯನಗರ ಸರಕಾರವನ್ನು ಧಾನ್ಯದಿಂದ ಹಣಪಾವತಿಯ ಕಡೆಗೆ ಪರಿವರ್ತಿಸುವ ವಿಷಯವಾಗಿ ಹೇಳುವಾಗ ಅವರ ಅರ್ಥ ಇದೇಯೆ. ''ಭೂಮಿಯ ವಿಸ್ತೀರ್ಣ, ಅಗತ್ಯವಾದ ಬೀಜವರಿ, ಫಸಲಿನ ಸರಾಸರಿ ಹೆಚ್ಚಳ ಮತ್ತು ಮೌಲ್ಯ–ಇವುಗಳ ಆಧಾರದ ಮೇಲೆ ಈ ಪರಿವರ್ತನೆಗೆ'' ಅವರು ನಿರ್ದಿಷ್ಟ ನಿಯಮಗಳನ್ನು ರಚಿಸಿದರು.[೨೨೫] ದಕ್ಷಿಣಕನ್ನಡ ಮತ್ತು ಉತ್ತರಕನ್ನಡ ಜಿಲ್ಲೆಗಳಲ್ಲಿ ಭೂಕಂದಾಯವನ್ನು ಧಾನ್ಯರೂಪದಿಂದ ಹಣದ ರೂಪಕ್ಕೆ ಪರಿವರ್ತನೆ ಮಾಡುವಾಗ ಇಟ್ಟುಕೊಂಡ ದರ ಒಂದು ರೂಪಾಯಿಗೆ ೩೦

ಸೇರುಗಳು ಎಂದೂ ತಿಳಿದುಬರುತ್ತದೆ.[೨೨೬] ಕರ್ನಾಟಕದಲ್ಲಿ ರೂಢಿಗೆ ಬರುತ್ತಿದ್ದ ನಗದುರೂಪದ ಕಂದಾಯ ಪಾವತಿ ಪದ್ಧತಿಯನ್ನು ಮಾಧವಾಚಾರ್ಯರು ವ್ಯವಸ್ಥಿತಗೊಳಿಸಿದರು. ೧೪ ಮತ್ತು ೧೫ನೆಯ ಶತಮಾನಗಳಲ್ಲಂತೂ ಸಾಮಾನ್ಯವಾಗಿ ಕಂದಾಯವನ್ನು ನಗದಾಗಿ ಪಾವತಿ ಮಾಡಲಾಗುತ್ತಿದ್ದಿತು ಎಂದು ನಾವು ಹೇಳಬಹುದು. ಕಂದಾಯವನ್ನು ವರ್ಷಕ್ಕೊಮ್ಮೆ ವಸೂಲು ಮಾಡಲಾಗುತ್ತಿತ್ತು.[೨೨೭] ಆದರೆ ಆಚರಣೆಯಲ್ಲಿ ಈ ನಿಯಮವನ್ನು ಅತ್ಯಂತ ಕಟ್ಟುನಿಟ್ಟಾಗಿ ಏನೂ ಪಾಲಿಸುತ್ತಿರಲಿಲ್ಲವೆಂದು ತೋರುತ್ತದೆ. ಕೆಲವೊಮ್ಮೆ ರೈತರಿಗೆ ಸಹಾಯ ಮಾಡುವ ದೃಷ್ಟಿಯಿಂದ ಕಂದಾಯವನ್ನು ಕಂತುಗಳಲ್ಲಿ ಪಡೆಯಲಾಗುತ್ತಿತ್ತು. ಒಂದು ಶಾಸನವು ಮುಕ್ಕಂದಾಯ ಅಂದರೆ ಕಂದಾಯವನ್ನು ಮೂರು ಕಂತುಗಳಲ್ಲಿ ನಗದಾಗಿ ಪಡೆದುದನ್ನು ಉಲ್ಲೇಖಿಸುತ್ತದೆ.[೨೨೮] ಕೆಲವೊಮ್ಮೆ ರೈತರು ಮಾಡುವ ನಗದು ಪಾವತಿಯನ್ನು ಕುಳಗಂದಾಯ - ರೈತನ ಬಳಿ ಎಷ್ಟು ನೇಗಿಲುಗಳಿವೆ ಎನ್ನುವುದರ ಆಧಾರದ ಮೇಲೆ ವಿಧಿಸಿದ ಕಂದಾಯ, ಎಂದು ಕರೆಯಲಾಗುತ್ತಿತ್ತು.[೨೨೯] ವಸ್ತುರೂಪದ ಕಂದಾಯ ಪಾವತಿಯಲ್ಲಿ ಧಾನ್ಯ ಮತ್ತು ದವಸಗಳಿರುತ್ತಿದ್ದುವು.[೨೩೦] ಧಾನ್ಯ ಎಂದರೆ ಸಾಮಾನ್ಯವಾಗಿ ಅಕ್ಕಿ. ಆದರೆ ಒಂಬತ್ತು ಮುಖ್ಯವಾದ ಧಾನ್ಯಗಳನ್ನು ಪಟ್ಟಿ ಮಾಡಲಾಗಿದೆ.[೨೩೧] ಗದ್ದೆಗಳಿಂದ ಬರುವುದು, ಸಾಮಾನ್ಯವಾಗಿ ಧಾನ್ಯಗಳು ಎಂದು ಹೇಳಬಹುದು.[೨೩೨] ಅಕ್ಕಿ, ಗೋಧಿ, ರಾಗಿ, ಜೋಳ ಮತ್ತು ದ್ವಿದಳ ಧಾನ್ಯಗಳು ಇದರಲ್ಲಿ ಸೇರುತ್ತಿದ್ದುವು. ಆದ್ದರಿಂದ ಧಾನ್ಯವಾಯ ಎಂದರೆ ಧಾನ್ಯರೂಪದಲ್ಲಿ ಸರಕಾರವು ಪಡೆಯುವ ವರಮನ; ದವಸ ಎನ್ನುವುದು ಎಣ್ಣೆ ಕಾಳುಗಳು ಮತ್ತು ಮೆಣಸು ಮೊದಲಾದವುಗಳಿಂದ ಪಡೆಯುವುದಾಗಿತ್ತು.

ಈ ಮೂಲಗಳು ಸರಕಾರಕ್ಕೆ ಗಣನೀಯ ಮೊತ್ತದ ಆದಾಯವನ್ನು ಕೊಡುತ್ತಿದ್ದಿರಬೇಕು. ವಿಜಯನಗರ ಸರಕಾರವು ಈ ವರಮಾನದ ಬಹುಭಾಗವನ್ನು ಸಾಮ್ರಾಜ್ಯದ ಅದ್ದೂರಿ ಆಡಂಬರಗಳಿಗಾಗಿ ವೆಚ್ಚ ಮಾಡುತ್ತಿದ್ದಿತು, ಅರಮನೆಯ ಹಾಗೂ ಸೈನ್ಯ ಪೋಷಣೆಯ ವೆಚ್ಚಗಳಿಗೂ ನಿರ್ವಾಹವಾಗುತ್ತಿದ್ದಿತು. ಇದರಿಂದ ವಿಜಯನಗರ ಸರಕಾರವು ಮಿಲಿಟರಿ ರಾಜ್ಯವಾಗಿತೆಂದು ಅರ್ಥವಲ್ಲ. ರಾಜರು ಅನೇಕ ಪ್ರಜಾ ಕಲ್ಯಾಣ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತಿದ್ದರು. ಜನರ ಪ್ರಧಾನ ಜೀವಾಳವಾದ ಕೃಷಿಯನ್ನು ಉತ್ತಮವಾದ ನೀರಾವರಿ ಯೋಜನೆಯಿಂದ ಪ್ರೋತ್ಸಾಹಿಸಲಾಗುತ್ತಿತ್ತು.[೨೩೩] ಹೊಸದಾಗಿ ತಾಕುಗಳನ್ನು ಕೃಷಿಗೆ ಒಳಪಡಿಸಲಾಗುತ್ತಿತ್ತು.[೨೩೪] ದೇಶದ ಅರ್ಥವ್ಯವಸ್ಥೆಯ ಬೆನ್ನೆಲುಬಾದ ರೈತರ ಸಂಕಷ್ಟಗಳನ್ನು ಪರಿಹರಿಸಲು ರಾಜರು ಸದಾ ಸಿದ್ಧರಾಗಿರುತ್ತಿದ್ದರು. ಸರಕಾರದ ಅಧಿಕಾರಿಗಳು ರೈತರಿಗೆ ಕಿರುಕುಳ ಕೊಟ್ಟಾಗ ಅವರು ರೈತರನ್ನು ರಕ್ಷಿಸುತ್ತಿದ್ದರು. ಮಲ್ಲಿಕಾರ್ಜುನನ ಕಾಲದ ಕ್ರಿ.ಶ. ೧೧೪೬ರ ಒಂದು ಶಾಸನವು ಸ್ವಾರಸ್ಯವಾಗಿದೆ. ಆಕ್ರಮವಾಗಿ ತೆರಿಗೆ ವಸೂಲಿಮಾಡುತ್ತಿದ್ದ ಒಂದು ಘಟನೆ ಅಲ್ಲಿದೆ. ರಾಜ್ಯದ ಕೆಲವು ಮಂತ್ರಿಗಳು ''ರೈತದಿಂದ ಬಲಾತ್ಕಾರವಾಗಿ ಕಾಣಿಕೆಗಳನ್ನು ಪಡೆಯುತ್ತಿದ್ದರು. ಇದರಿಂದ ಕಿರುಕುಳಕ್ಕೊಳಗಾದ ರೈತರೆಲ್ಲರೂ ಒಟ್ಟಾಗಿ ಬೇರೆ ದೇಶಗಳಿಗೆ ಓಡಿಹೋಗಿಬಿಟ್ಟರು.'' ಇದು ತಿಳಿದೊಡನೆ ಮಲ್ಲಿಕಾರ್ಜುನನು, ಮಂತ್ರಿಗಳು ನಡೆಸುತ್ತಿದ್ದ ಈ ವಸೂಲಿಯನ್ನು ಆ ಕ್ಷಣದಿಂದಲೇ ರದ್ದುಪಡಿಸಿದನು, ಬಡ ರೈತರ ಹೊರೆಯನ್ನು ತಪ್ಪಿಸಿದನು.[೨೩೫] ಅಧಿಕಾರಿಗಳು ಪ್ರಜೆಗಳನ್ನು ಹಿಂಸೆಮಾಡಬಾರದು, ಅದರಿಂದ ರಾಜನಿಗೆ ಏಳಿಗೆಯಾಗುವುದಿಲ್ಲ ಎಂದು ಇದೇ ಭಾವನೆಯನ್ನೇ ಆಮುಕ್ತಮಾಲ್ಯದಲ್ಲಿ ಕೃಷ್ಣದೇವರಾಯನು ವ್ಯಕ್ತಪಡಿಸಿದ್ದಾನೆ. ರಾಜನ ಅಭ್ಯುದಯವು ಸರಕಾರದ ಅಧಿಕಾರಿಗಳ ಪ್ರಾಮಾಣಿಕತೆಯ ಮೇಲೆ ನಿಂತಿದೆ.[೨೩೬] ಅಧಿಕಾರಿಗಳು ಜನರಿಗೆ ಹಿಂಸೆಕೊಡುತ್ತಿರುವುದು ರಾಜನಿಗೆ ಗೊತ್ತಾದರೆ, ಒಡನೆಯೇ ಅವರನ್ನು ಉಗ್ರವಾಗಿ ಶಿಕ್ಷಿಸುತ್ತಿದ್ದನು ಎಂಬುದಾಗಿ ಡ್ಯೂರೇಟ್ ಬಾರ್ಬೋಸಾ ಹೇಳುತ್ತಾನೆ.[೨೩೭] ಕೆಲವು ಸಾರಿ ಪ್ರಜೆಗಳು ತಮಗೆ ಅಧಿಕಾರಿಗಳಿಂದ ಅನ್ಯಾಯವಾದಾಗ ಸರಕಾರಕ್ಕೆ ಮನವಿ ಸಲ್ಲಿಸುತ್ತಿದ್ದರು. ಶ್ರೀರಂಗಪಟ್ಟಣದ ಕೆಲವು ಹಳ್ಳಿಗಳಲ್ಲಿ ಕಣ್ಣಪ್ಪನಾಯಕನೆಂಬ ಪಾರುಪತ್ಯಗಾರನು ಹಿಂದಿನ ರೂಢಿಗೆ ವ್ಯತಿರಿಕ್ತವಾಗಿ ಅಡಕೆ ಮರಗಳ ಮೇಲೆ ತೆರಿಗೆಯನ್ನು ವಿಧಿಸಿ, ಬಾಕಿಯನ್ನುಪಾವತಿಮಾಡಬೇಕೆಂದು ಬಲಾತ್ಕಾರ ಮಾಡಿದಾಗ ಎಲ್ಲರೂ ಒಟ್ಟಾಗಿ ಅದನ್ನು ಪ್ರತಿಭಟಿಸಿದುದರ ಉಲ್ಲೇಖನವನ್ನು ೧೫೪೨ರ ಶಾಸನವೊಂದರಲ್ಲಿ ನೋಡುತ್ತೇವೆ.[೨೩೮]

ಕಟ್ಟುನಿಟ್ಟಾದ ಮೇಲ್ವಿಚಾರಣೆ ಮತ್ತು ವಿವರಗಳಿಗೆ ಗಮನ - ಇವು ವಿಜಯನಗರ ಸಾಮ್ರಾಜ್ಯದ ಭೂಕಂದಾಯ ಆಡಳಿತ ನಿರ್ವಾಹಣೆಯ ಉತ್ತಮ ಗುಣಗಳಾಗಿದ್ದುವು. ಅನೇಕ ಕಾರಣಗಳಿಂದ ವಿಜಯನಗರ ಸರಕಾರವು ತೆರಿಗೆ ವಿನಾಯಿತಿಗಳನ್ನು ಘೋಷಿಸುತ್ತಿದ್ದಿತು. ನೀರಿನ ಅಭಾವ, ಪ್ರವಾಹ, ಸುಲಿಗೆ-ಲೂಟಿ, ಗ್ರಾಮದ ಹಾನಿಗೊಂಡ ಪರಿಸ್ಥಿತಿ, ರೈತರು ಜಮೀನನ್ನು ಬೀಳು ಬಿಡುವುದು, ಮತ್ತು ರಾಜನ ಪಟ್ಟಾಭಿಷೇಕದಂತಹ ಉತ್ಸವದ ಸಂದರ್ಭ-ಇಂತಹ ಸಮಯಗಳಲ್ಲಿ ತೆರಿಗೆಯ ವಿನಾಯಿತಿಯನ್ನು ಪ್ರಕಟಿಸಲಾಗುತ್ತಿತ್ತು. ಹೀಗಿರುವಾಗ ಹುಲ್ಟ್ಜ್ ಅವಿಚಾರಪೂರ್ವಕವಾಗಿ ''ಆ ಕಾಲದಲ್ಲಿ ತೆರಿಗೆ ವಿನಾಯಿತಿ ತಿಳಿದೇ ಇರಲಿಲ್ಲ; ಮಾನವ ನಿಯಂತ್ರಣಕ್ಕೆ ಮೀರಿದ ಕಾರಣಗಳಿಂದ ಬೆಳೆಗಳು ಹಾಳಾಗಿದ್ದರೂ ತೆರಿಗೆಯ ವಿನಾಯಿತಿ ನೀಡುತ್ತಿರಲಿಲ್ಲ'' ಎಂದು ಹೇಳಿದ್ದಾನೆ.[೨೬೯] ಈ ಹೇಳಿಕೆಯನ್ನು ಸ್ವಲ್ಪವೂ ವಿಮರ್ಶಿಸದೆ ಒಪ್ಪಿಕೊಂಡಿರುವ ಹಯವದನರಾವ್ ಅವರ ಅಭಿಪ್ರಾಯವನ್ನು[೨೭೦] ಒಪ್ಪುವುದು ಸಾಧ್ಯವಿಲ್ಲ.

ಅಲ್ಲದೆ ಜೀವನಾಗತ್ಯ ವಸ್ತುಗಳು ಸಮೃದ್ಧವಾಗಿಯೂ ಅಗ್ಗದ ಬೆಲೆಯಲ್ಲೂ ದೊರಕುತ್ತಿದ್ದುವು ಎಂಬುದಾಗಿ ಆ ಕಾಲದ ವಿದೇಶಿ ಪ್ರವಾಸಿಗರ ಬರವಣಿಗೆಗಳಲ್ಲಿ ವ್ಯಕ್ತವಾಗುತ್ತದೆ.[೨೭೧] ಪರ್ಷಿಯನ್ ರಾಯಭಾರಿ ಅಬ್ದುಲ್ ರಜಾಕ್ ಹೇಳುತ್ತಾನೆ: ''ಮೇಲಿನವರು ಕೆಳಗಿನವರು ಎಂಬ ಭೇದವಿಲ್ಲದೆ ಎಲ್ಲ ಜನರೂ ಕೊನೆಗೆ ಮಾರುಕಟ್ಟೆಗಳಲ್ಲಿ ಕೆಲಸಮಾಡುವವರೂ ಕೂಡ ತಮ್ಮ ಕಿವಿ, ಕೊರಳು, ತೋಳು, ಮುಂಗೈಮತ್ತು ಬೆರಳುಗಳಲ್ಲಿ ಆಭರಣಗಳನ್ನು ಧರಿಸುತ್ತಿದ್ದರು.''[೨೭೨] ಇದು ಆ ಕಾಲದ ಜನರ ಲೌಕಿಕ ಸ್ಥಿತಿಗತಿಯನ್ನು ಸೂಚಿಸುತ್ತದೆ. ಹಾಗಾಗಿ, ಶ್ರೀಮಂತರಿಗೂ ಬಡವರಿಗೂ ನಡುವೆ ಅಗಲವಾದ ಕಂದಕವಿದ್ದರೂ ರೈತರಿಗೆ ಕೂಡ ತಿಂದು ಬದುಕಿರಲು ಏನಾದರೊಂದು ಇರುತ್ತಿತ್ತು. ಕಿರುಕುಳ ಮತ್ತು ದಬ್ಬಾಳಿಕೆಗಳಿಗೆ ಒಳಗಾದ ರೈತರು ಎಂದೂ ಒಂದು ಸಾಮ್ರಾಜ್ಯವು ಮುನ್ನೂರು ವರ್ಷಗಳ ಕಾಲ ಉಳಿದಿರಲು ಬಿಟ್ಟಿಲ್ಲ. ಮೆಕೆಂಜೀ ಹಸ್ತಪ್ರತಿಗಳನ್ನು ಅಧ್ಯಯನ ಮಾಡಿದ ನಂತರ ಬಿ.ಎಲ್.ರೈಸ್ ಅವರು, ವಿಜಯನಗರ ಸಾಮ್ರಾಜ್ಯದ ಕಂದಾಯ ಆಡಳಿತವು, ''ಪ್ರಜೆಗಳಿಗೆ ತೊಂದರೆಯಾಗದಂತೆ ನಿಧಾನವಾಗಿ ವಾರ್ಷಿಕವಾಗಿ ಏರಿಸಿ ರಾಜ್ಯದ ವರಮಾನವನ್ನು ಉತ್ತಮ ಪಡಿಸುವಂತೆ ಲೆಕ್ಕ ಹಾಕಲಾಗಿತ್ತು'' ಎಂಬ ತೀರ್ಮಾನಕ್ಕೆ ಬಂದರು.[೨೭೩] ವಿಜಯನಗರ ಅರಸರು ಭೂ ಕಂದಾಯ ಆಡಳಿತ ತತ್ವಗಳನ್ನು ತಮ್ಮ ಪೂರ್ವಜರಿಂದ ಎರವಲು ಪಡೆದುದಲ್ಲದೆ, ತಮ್ಮವೇ ಸುಧಾರಣೆಗಳನ್ನು ಜಾರಿಗೆ ತಂದರು. ಈ ಸಂದರ್ಭದಲ್ಲಿ ಸಾಲತೊರೆಯವರು ಪರಸ್ಪರ ವಿರೋಧಿ ಹೇಳಿಕೆಗಳನ್ನು ನೀಡುತ್ತಾರೆ. ''ವಿಜಯನಗರದ ರಾಜರು ಕಂದಾಯಾಡಳಿತದ ಸಂಪ್ರದಾಯವನ್ನು ತಮಿಳು ರಾಜರಿಂದ ಪಡೆದಿರಬೇಕು ಎಂದು ಖಚಿತವಾಗಿ ಹೇಳಿದರೆ ಅದು ಸತ್ಯದೂರವಾಗುವುದಿಲ್ಲ. ಆದರೆ, ಕರ್ನಾಟಕದಲ್ಲಿ ಅವರು ಚಾಲುಕ್ಯ ಚಕ್ರವರ್ತಿಗಳ ವ್ಯವಸ್ಥೆಯಿಂದ ನಿಸ್ಸಂದೇಹವಾಗಿ ಪ್ರಯೋಜನ ಪಡೆದರು.''[೨೭೪] ಆದರೆ ೧೯೧ನೆಯ ಪುಟದಲ್ಲಿ ಅವರೇ ಹೀಗೆ ನಿರ್ಣಯಿಸುತ್ತಾರೆ: ವಿಜಯನಗರ ರಾಜರು ''ತಮ್ಮ ಪೂರ್ವಜರು ಹಾಕಿಕೊಟ್ಟಿದ್ದ ಮಾದರಿಯನ್ನು ತಿರಸ್ಕರಿಸಿದರು, ಸರಕಾರದ ಅಧಿಕೃತ ಭಾಗವಾಗಿ ಆರನೆಯ ಒಂದು ಪಾಲನ್ನು ಪಡೆಯುವ ಪ್ರಾಚೀನ ಪದ್ಧತಿಯನ್ನು ಅವರು ಪಾಲಿಸಲಿಲ್ಲ.''[೨೭೫] ನಮ್ಮ ಅಧ್ಯಯನ ವಿಷಯವಾಗಿರುವ ಕಾಲಾವಧಿಯ ಪ್ರವೃತ್ತಿಯನ್ನೂ ಸನ್ನಿವೇಶವನ್ನು ಅವರು ಪರಿಗಣನೆಗೆ ತೆಗೆದುಕೊಳ್ಳದೆ ಹೋದುದೇ ಅದಕ್ಕೆ ಕಾರಣ.

ಕ್ರಿ.ಶ. ೧೫೬೫ರ ಮಹತ್ವಪೂರ್ಣವಾದ ತಾಳಿಕೋಟೆ ಯುದ್ಧವಾದ ನಂತರ ವಿಜಯನಗರದ ಅವನತಿಯದಿನಗಳಲ್ಲಿ, ಕರ್ನಾಟಕದಲ್ಲಿ ವಿವಿಧ ಪಾಳೆಯಗಾರರು ಮತ್ತು ನಾಯಕರು ತಲೆಯೆತ್ತಿ ಪ್ರಾಮುಖ್ಯ ಪಡೆದರು. ಅವರಲ್ಲಿ ಮೈಸೂರಿನ ಒಡೆಯರು ಮತ್ತು ಕೆಳದಿ ಅಥವಾ ಇಕ್ಕೇರಿಯ ನಾಯಕರು ಮುಖ್ಯರಾದವರು. ಇಕ್ಕೇರಿ ರಾಜ್ಯದಲ್ಲಿ, ಫಲವತ್ತಾದ ಶಿವಮೊಗ್ಗ,ಚಿಕ್ಕಮಗಳೂರು, ಕಾರವಾರ, ದಕ್ಷಿಣಕನ್ನಡ ಮತ್ತು

ಧಾರವಾಡ ಪ್ರದೇಶಗಳು ಸೇರಿದ್ದುವು. ಸುಮಾರು ಮೂರು ಶತಮಾನಗಳ ಕಾಲ ಇಕ್ಕೇರಿಯ ಕೆಲವು ನಾಯಕರು ಮಾದರಿ ಆಡಳಿತಗಾರರೆಂದು ಸುಪ್ರಸಿದ್ಧರಾಗಿದ್ದರು. ಅವರ ಭೂಕಂದಾಯ ಪದ್ಧತಿಯು ಇಡೀ ಭಾರತಕ್ಕೇ ಮಾದರಿಯಾಗಿದ್ದಿತು. ಹಾಗಾಗಿ ಪರಿಶೀಲನಾವಧಿಯ ಕರ್ನಾಟಕದ ಕೃಷಿವ್ಯವಸ್ಥೆಯನ್ನು ಕುರಿತ ಯಾವುದೇ ಚರ್ಚೆಯು ಅವರ ಭೂಕಂದಾಯ ವ್ಯವಸ್ಥೆಯ ಉಲ್ಲೇಖವಿಲ್ಲದೆ ಅಪೂರ್ಣವಾಗಿ ಉಳಿಯುತ್ತದೆ.

ಇದುವರೆಗೂ ಈ ರಾಜವಂಶವನ್ನು ಕುರಿತ ಸಾಮಾನ್ಯ ಇತಿಹಾಸ ಕೃತಿಗಳು ಕೆಲವು ಈಚೆಗೆ ಪ್ರಕಟವಾಗಿದ್ದರೂ, ಅವರ ಭೂಕಂದಾಯ ಪದ್ಧತಿಯ ವ್ಯವಸ್ಥಿತ ಅಧ್ಯಯನ ಮಾತ್ರ ನಡೆದಿರಲಿಲ್ಲ. ಕೆ.ಡಿ. ಸ್ವಾಮಿನಾಥನ್ ಅವರು ಈಚೆಗೆ ಹೊರತಂದ ಕೃತಿ 'ದಿ ನಾಯಕ್ಸ್ ಆಫ್ ಇಕ್ಕೇರಿ' ಯಲ್ಲಿ ಈ ಸಮಸ್ಯೆಯನ್ನು ಕುರಿತು ಏನೂ ಇಲ್ಲ. ಅಲ್ಲದೆ ಈ ಲೇಖಕರ ಸಾಮಾನ್ಯ ನಿರ್ಣಯವೂ ತಪ್ಪುದಾರಿಗೆಳೆಯುವುದಾಗಿದೆ. ಅವರು ಹೇಳುತ್ತಾರೆ, ''ಕೆಳದಿಯ ಅರಸರು ಉತ್ತಮವಾದ ತೆರಿಗೆ ವ್ಯವಸ್ಥೆಯನ್ನು ಹೊಂದಿದ್ದರು. ಅದು ಅವರದೇ ಮೂಲ ಸೃಷ್ಟಿಯೇನಲ್ಲ. ಏಕೆಂದರೆ ಅವರ ಪ್ರಭುಗಳಾದ ವಿಜಯನಗರ ಚಕ್ರವರ್ತಿಗಳಂತೆಯೇ ಅವರೂ ಕೂಡ ಪೂರ್ವಮರ್ಯಾದೆಯನ್ನು ಪಾಲಿಸುತ್ತಿದ್ದರು.''[೨೬೬] ಈ ಹೇಳಿಕೆ ಭಾಗಶಃ ಸತ್ಯ. ಕೆಳದಿಯ ಅರಸರು ಕರ್ನಾಟಕದ ಮತ್ತು ಅವರ ಪೂರ್ವಜರ ಪದ್ಧತಿಯನ್ನು ಅನುಸರಿಸಿದರು ಎಂಬಷ್ಟು ಮಟ್ಟಿಗೆ ಅದು ಸರಿ; ಆದರೆ ಅದು ತಮ್ಮ ಸ್ವಂತ ಸೃಷ್ಟಿಯೆಂದು ಅವರು ಹೇಳಿಕೊಳ್ಳಲಿಲ್ಲವೆಂಬ ಅವರ ನಿರ್ಣಯ ತಪ್ಪು. ಏಕೆಂದರೆ ಪ್ರಚಲಿತ ಪದ್ಧತಿಗೆ ಅವರು ತಮ್ಮದೇ ಕೊಡುಗೆಯನ್ನು ನೀಡಿದರು. ಅದನ್ನು ಮುಂದೆ ಪರಿಶೀಲಿಸಲಾಗುತ್ತದೆ.

ವಿಜಯನಗರ ಸರಕಾರದಂತೆಯೇ ಕೆಳದಿ ಸರಕಾರದ ಮುಖ್ಯ ಕಾಳಜಿಗಳಲ್ಲಿ ಒಂದು ಕಂದಾಯದ ನಿಗದಿ ಮತ್ತು ಸಂಗ್ರಹಣೆ. ಇಲ್ಲಿ ಕೆಳದಿಯ ರಾಜರು ವಿಜಯನಗರದ ರೇಖಾ ನಿಗದಿ ಪದ್ಧತಿಯನ್ನು ಅನುಸರಿಸಿದರು. ಈ ವಿಷಯದಲ್ಲಿ ಕೆಳದಿಯ ಶಿವಪ್ಪನಾಯಕನ (೧೬೪೫-೬೦) ಪಾತ್ರವು ಅನ್ಯಾದೃಶವಾದದ್ದು. ನಾಡಿನಲ್ಲಿ ಸ್ಥಿರವಾದ ರಾಜಕೀಯ ಹತೋಟಿ ಇರಬೇಕಾದರೆ ಸಂತುಷ್ಟರೂ ತೃಪ್ತರೂ ಆದ ರೈತಾಪಿವರ್ಗ ಅತ್ಯಗತ್ಯ ಎಂದು ನಂಬಿದ್ದ ರಾಜರುಗಳು ಅವರು. ಅದಕ್ಕೆ ಹಿತಕಾರಿಯಾಗುವಂತಹ ಒಂದು ಕಂದಾಯ ಪದ್ಧತಿಯನ್ನು ಅವರು ರೂಪಿಸಿದರು. ಪ್ರಜೆಗಳ ಮುಖ್ಯ ಜೀವಿಕೆಯಾದ ಕೃಷಿಯ ವಿಸ್ತರಣಕ್ಕೆ ಅವರು ಆದ್ಯತೆ ನೀಡಿದರು.

ಕೆಳದಿಯ ಅರಸರ ಕಾಲದಲ್ಲಿ ಮೂರು ಬಗೆಯಾಗಿ ತೆರಿಗೆ ನಿಗದಿ ನಡೆಯುತ್ತಿದ್ದಿತು ೧) ರೇಖಾ ನಿಗದಿ[೨೬೭] ೨) ಬೀಜವರಿ[೨೬೮] ಅಥವಾ ಬಿತ್ತನೆಯ ಆಧಾರದ ನಿಗದಿ ಮತ್ತು ೩) ಶಿಸ್ತುನಿಗದಿ.[೨೬೯] ಈ ಕೊನೆಯದನ್ನು ಶಿವಪ್ಪನಾಯಕನು ಜಾರಿಗೆ ತಂದನು. (೧೬೪೫-೬೦) ಕೆಳದಿ ರಾಜವಂಶದ ಅತ್ಯಂತ ಶ್ರೇಷ್ಠ ರಾಜನೆನಿಸಿದ ಇವನನ್ನು ಇಂದಿಗೂ ಭೂಕಂದಾಯ ನಿಗದಿಯನ್ನು ವ್ಯವಸ್ಥೆಗೊಳಿಸಿದವನು ಎಂದು ಹೆಸರಿಸಲಾಗುತ್ತದೆ. ಅವನ ಶಿಸ್ತುನಿಗದಿ ಪದ್ಧತಿಯು ೧೬೬೦ರಿಂದ ಮೂವತ್ತೊಂಬತ್ತು ವರ್ಷ ಕಾಲ ಮುಂದುವರಿಯಿತು.[೨೭೦]

ರಾಯ-ರೇಖಾ ನಿಗದಿಗೆ ಸಂಬಂಧಿಸಿದಂತೆ ಕೆಳದಿಯ ರಾಜರು ವಿಜಯನಗರದ ಅರಸರು ಹಿಡಿದ ದಾರಿಯನ್ನೇ ಅನುಸರಿಸಿದರು ಎಂದು ಹೇಳಬಹುದು. ಕೊನೆಯವರೆಗೂ ಈ ಪದ್ಧತಿಯನ್ನು ಅವರು ಮುಂದುವರಿಸಿದರು.ಆದರೆ ವಿಜಯನಗರದರಸರು ವಿಧಿಸಿದ್ದ ದರವನ್ನು ಸಾರಾಸಗಟಾಗಿ ಅವರು ಇಟ್ಟುಕೊಳ್ಳಲಿಲ್ಲ. ಅನೇಕ ಅಂಶಗಳನ್ನು ಅದಕ್ಕೆ ಕೂಡಿಸಿ ರೇಖಾ-ನಿಗದಿಯನ್ನು ಹೆಚ್ಚಿಸಿದರು. ಅನೇಕ ಶಾಸನಗಳು ಇದನ್ನು ಸಮರ್ಥಿಸುತ್ತವೆ ಯಾವ ಹೆಚ್ಚಳವೂ ಇರದ ಹಿಂದಿನ ತೆರಿಗೆ ದರವನ್ನು ಶಾಸನಗಳಲ್ಲಿ ಪುರು-ರೇಖಾ ಎಂದು ಕರೆದಿದೆ. ರೇಖಾ ನಿಗದಿಯಂತೆ ೬೭.೫ ಗದ್ಯಾಣಗಳನ್ನು ಮೂಲಕಂದಾಯವಾಗಿ ಪಾವತಿ ಮಾಡಬೇಕಾಗಿದ್ದ ಒಂದು ಹಳ್ಳಿಯ ಬಗೆಗೆ ಒಂದು ಶಾಸನವು ಹೇಳಿದೆ. ಈ ಮೂಲ ರೇಖಾ-ನಿಗದಿಗೆ

ಬೀರದ (ಶಾಸನಗಳಲ್ಲಿ ಸಾಮಾನ್ಯವಾಗಿ ಉಕ್ತವಾಗುತ್ತದೆ), ದುರ್ಗದ ಭತ್ತ ಮೊದಲಾದ ಹೆಚ್ಚುವರಿಗಳು ಸೇರುತ್ತಿದ್ದುವು.[೨೫೧] ಇದರಿಂದ ಹೊರಪಡುವ ವಿಷಯವೇನೆಂದರೆ, ಎಲ್ಲಿ ರಾಯರೇಖಾ ಪದ್ಧತಿಯ ತೆರಿಗೆ ನಿಗದಿಯು ಜಾರಿಯಲ್ಲಿದ್ದಿತೋ ಅಲ್ಲೆಲ್ಲ ಅದನ್ನು ಹಾಗೆಯೇ ಒಪ್ಪಿಕೊಂಡರು. ವಿವರಗಳನ್ನು ತಿಳಿದುಕೊಳ್ಳಲು ಪ್ರಯತ್ನಿಸಲಿಲ್ಲ. ಹೆಚ್ಚಿನ ಮೇಲು ಸುಂಕಗಳನ್ನು ಹಾಕಿದರು.

ಕೆಳದಿಯ ರಾಜರು ಬೀಜವರಿ ಪದ್ಧತಿಯ ನಿಗದಿಯನ್ನೂ ಅನುಸರಿಸಿದರು. ಒಂದು ಜಮೀನಿಗೆ ಎಷ್ಟು ಬಿತ್ತನೆ ಬೇಕು ಎನ್ನುವುದರ ಆಧಾರದ ಮೇಲೆ ಕಂದಾಯ ನಿಗದಿಯನ್ನು ನಿರ್ಧರಿಸಲಾಗುತ್ತಿತ್ತು. ಜಮೀನನ್ನು ಅಳತೆ ಮಾಡುತ್ತಿರಲಿಲ್ಲ, ಆದರೆ ಅವರ ಸಾಮರ್ಥ್ಯವನ್ನು ಅಂದಾಜು ಮಾಡಲಾಗುತ್ತಿತ್ತು. ಅನೇಕ ಶಾಸನಗಳಲ್ಲಿ, ಜಮೀನಿನ ಬಿತ್ತನೆಯ ಸಾಮರ್ಥ್ಯವನ್ನು ವಸ್ತುರೂಪದ ತೆರಿಗೆಯನ್ನೂ ಉಲ್ಲೇಖಿಸಲಾಗಿದೆ. ಆಮೇಲೆ ಅದನ್ನು ನಗದುರೂಪಕ್ಕೆ ಪರಿವರ್ತಿಸಲಾಗುತ್ತಿತ್ತು. ಒಂದು ಖಂಡುಗ ಧಾನ್ಯದ ಮಾರುಕಟ್ಟೆಯ ಬೆಲೆಯನ್ನೂ ಸೂಚಿಸುತ್ತಿದ್ದರು. ಒಂದು ಶಾಸನದಲ್ಲಿ ಉಕ್ತವಾಗಿರುವಂತೆ, ೨.೫ ಖಂಡುಗ ಬತ್ತದ ಬಿತ್ತನೆ ಸಾಮರ್ಥ್ಯವಿದ್ದ ಒಂದು ಗದ್ದೆಗೆ ೧೫ ಖಂಡುಗ ಬತ್ತವನ್ನು ಕಂದಾಯವಾಗಿ ಪಾವತಿಮಾಡಲಾಗುತ್ತಿತ್ತು. ಅದರ ಮೌಲ್ಯ ೧.೫ ವರಹ ಆಗಿತ್ತು.[೨೫೨] ಇನ್ನೊಂದು ಶಾಸನವು ಹೀಗೆ ದಾಖಲಿಸುತ್ತದೆ. ೫ ಖಂಡುಗದ ಬತ್ತದ ಗದ್ದೆಗಳು ಕಂದಾಯವಾಗಿ ೯ ವರಹಗಳನ್ನು ಸಲ್ಲಿಸುತ್ತಿತ್ತು. ಅಂದಿನ ಮಾರುಕಟ್ಟೆ ಬೆಲೆ ಖಂಡುಗಕ್ಕೆ ೧.೫ವರಹ ಮತ್ತು ೩ ಹಣ. ೨ ಖಂಡುಗ ಬಿತ್ತನೆ ಸಾಮರ್ಥ್ಯವಿದ್ದ ಇನ್ನೊಂದು ಗದ್ದೆಯು ಖಂಡುಗಕ್ಕೆ ೨ ವರಹ ಮತ್ತು ೨ ಹಣದಂತೆ ೪ ವರಹ ಮತ್ತು ೪ ಹಣಗಳನ್ನು ಕಂದಾಯವಾಗಿ ಪಾವತಿ ಮಾಡುತ್ತಿದ್ದಿತೆಂದೂ ಅದೇ ಶಾಸನವು ಹೇಳುತ್ತದೆ.[೨೫೩] ಇದರಿಂದ ನಾವು ನಿರ್ಣಯಿಸಬಹುದಾದುದೇನೆಂದರೆ, ಕೆಳದಿಯ ರಾಜರು ಮಾರುಕಟ್ಟೆಯ ಬೆಲೆಯ ಏರಿಳಿತಗಳನ್ನು ಗಮನದಲ್ಲಿ ಇಟ್ಟುಕೊಂಡು ಅದಕ್ಕೆ ಹೊಂದಿಕೆಯಾಗುವಂತೆ ತಮ್ಮ ಕಂದಾಯ ನಿಗದಿಯನ್ನು ನಿರ್ವಹಿಸುತ್ತಿದ್ದರು ಎಂಬುದು. ಹೀಗೆ ಅವರು ಯಾವಾಗಲೂ ನ್ಯಾಯಸಮ್ಮತವಾದ ರೀತಿಯಲ್ಲಿ ಕಂದಾಯವನ್ನು ವಸೂಲಿ ಮಾಡುತ್ತಿದ್ದರು.

ಶಿವಪ್ಪನಾಯಕ (೧೬೪೫-೬೦) ಕೆಳದಿ ರಾಜವಂಶದ ಅತ್ಯಂತ ಶ್ರೇಷ್ಠನಾದ ಅರಸ. ಭೂಕಂದಾಯ ಮಾಪನವನ್ನು ಕ್ರಮಬದ್ಧಗೊಳಿಸಿದವನೆಂದು ಈಗಲೂ ಅವನನ್ನು ನೆನೆಯಲಾಗುತ್ತದೆ. ಆತ ಮಾಡಿದ ಮೌಲ್ಯ ಮಾಪನಕ್ಕೆ 'ಶಿವಪ್ಪನಾಯಕನ ಶಿಸ್ತು' ಎಂದೇ ಹೆಸರು. ಕಂದಾಯಾಡಳಿತ ವಿಷಯದಲ್ಲಿ ಪ್ರಾಯೋಗಿಕವಾದ ಸ್ವಭಾವದ ಮನುಷ್ಯನಾಗಿದ್ದವನು. ಅವನು ಏನನ್ನೂ ಹೀಗಿದ್ದಿರಬಹುದು ಎಂದು ಊಹಿಸಿಕೊಳ್ಳಲಿಲ್ಲ. ವಿವಿಧ ಬೆಳೆಗಳನ್ನು ಬೆಳೆದು, ಉತ್ಪಾದನೆಯನ್ನು ಮಾರುಕಟ್ಟೆಯ ಬೆಲೆಯನ್ನೂ ಪರೀಕ್ಷಿಸಿ ಪ್ರತಿಯೊಂದು ವರ್ಣನೆಯ ಮಣ್ಣಿನ ಸಾಮರ್ಥ್ಯದ ಬಗೆಗೆ ಖಚಿತವಾದ ಅಭಿಪ್ರಾಯವನ್ನು ರೂಢಿಸಿಕೊಂಡಿದ್ದನು. ಇದರಿಂದ ನ್ಯಾಯ ಸಮ್ಮತವಾದ ರೀತಿಯಲ್ಲಿ ಕಂದಾಯವನ್ನು ನಿಗದಿಪಡಿಸಲು ಅವನಿಗೆ ಸಾಧ್ಯವಾಯಿತು. ಈ ದೃಷ್ಟಿಯಿಂದ ಶಿವಪ್ಪನಾಯಕನ ಶಿಸ್ತು ನಿಗದಿಯು ಅತ್ಯಾಧುನಿಕ ಸ್ವರೂಪದ್ದು. ಸುಮಾರು ೧೮೦೦ರಲ್ಲಿ ರಚಿತವಾದ ಚರಿತ್ರೆಗಳು ಅವನ ವ್ಯವಸ್ಥೆಯ ಬಗೆಗೆ ನಮಗೆ ತಿಳಿಸಿಕೊಡುತ್ತವೆ. ಪೂರ್ವದಿಂದ ಪಶ್ಚಿಮಕ್ಕೆ ೧೮ ಹೆಜ್ಜೆ, ಉತ್ತರದಿಂದ ದಕ್ಷಿಣಕ್ಕೆ ೧೮ ಹೆಜ್ಜೆ, ನಾಲ್ಕು ಮೂಲೆಗಳ ನಡುವಣ ಎಷ್ಟು ನೆಲವು ಒಂದು ಅಡಕೆ ಮರಕ್ಕೆ ಬೇಕಾದ ನೆಲ ಎಂದು ಇಟ್ಟುಕೊಂಡು ಇಂತಹ ಒಂದು ಮರಕ್ಕೆ ಸರಕಾರಕ್ಕೆ ಈ ದರದಲ್ಲಿ ನಿಶ್ಚಿತ ತೆರಿಗೆಯನ್ನು ಪಾವತಿ ಮಾಡಬೇಕು ಎಂದು ನಿಗದಿ ಪಡಿಸಲಾಗುತ್ತಿತ್ತು.[೨೫೪] ಈ ಅರಸರ ಅನೇಕ ಶಾಸನಗಳು ಈ ಪದ್ಧತಿಯನ್ನು ದೃಢೀಕರಿಸುತ್ತವೆ.[೨೫೫] ಹಾಗಾಗಿ ಬಾಗಾಯಿತು ಜಮೀನಿನ ಶಿಸ್ತಿನಲ್ಲಿ ಕೆಲವು ಮುಖ್ಯವಾದ ಅಂಶಗಳನ್ನು ಪರಿಗಣಿಸಲಾಗುತ್ತಿತ್ತು. ನೆಟ್ಟಿರುವ ಮರಗಳ ಬಗೆಗಳು, ಮರಗಳ ಸಂಖ್ಯೆ, ಹಾಗೂ ಅವುಗಳಿಂದ ಬರುತ್ತಿದ್ದ ಹುಟ್ಟುವಳಿ ಇತ್ಯಾದಿ. ೨೧೮೨ ಅಡಕೆ ಮರಗಳಿದ್ದ ಒಂದು ಬಾಗಾಯ್ತು ಜಮೀನಿಗೆ ಶಿಸ್ತು ನಿಗದಿಯಾಗಿ ೨೪ ವರಹ ತೆರಿಗೆಯನ್ನು ಪಾವತಿ ಮಾಡಲಾಗುತ್ತಿತ್ತು.[೨೫೬]

ರೈಸ್ ಇದಕ್ಕಿಂತ ಸ್ವಲ್ಪ ಭಿನ್ನವಾಗಿರುವ ಚಿತ್ರವನ್ನು ಕೊಡುತ್ತಾನೆ. ''ಒಂದೇ ಸಮನಾಗಿ ೧೨ ವರ್ಷ ರಾಜನು ಬೇರೆ ಬೇರೆ ಬಗೆಯ ಒಂದೊಂದು ಜಮೀನನ್ನು ಪ್ರತಿ ಗ್ರಾಮದಲ್ಲೂ ತಾನೇ ತನ್ನ ವೆಚ್ಚದಲ್ಲಿ ಸಾಗುವಳಿ ಮಾಡಿಸಿದನು. ಬಿತ್ತಿದ ಬಿತ್ತನೆ, ಮಾಡಿದ ವೆಚ್ಚ, ಫಸಲಿನ ಪ್ರಮಾಣ ಮತ್ತು ಮೌಲ್ಯ ಇವುಗಳ ಕರಾರುವಾಕ್ಕಾದ ಲೆಕ್ಕವನ್ನಿಟ್ಟನು. ಉತ್ಪನ್ನ ಮತ್ತು ಬೆಲೆಗಳ ಸರಾಸರಿಯನ್ನು ಕಂಡುಹಿಡಿದು, ಒಂದು ಖಂಡುಗ (೫೦ ಸೇರು)ದ ಬೆಲೆ ಒಂದು ಫನಂ (fanam) ಎಂದೂ, ಸರಕಾರದ ಪಾಲು ಒಟ್ಟಾರೆ ಉತ್ಪನ್ನದ ಮೂರನೆಯ ಒಂದು ಭಾಗವೆಂದೂ ನಿಗದಿಪಡಿಸಿದನು. ನೆಲವನ್ನು ಐದು ವರ್ಗಗಳಾಗಿ ವಿಭಜಿಸಿ, ಒಂದೊಂದಕ್ಕೂ ಎರಡೆರಡು ಬೆಲೆಗಳನ್ನು ನಿಗದಿಪಡಿಸಲಾಯಿತು''.[೨೦೬] ತೋಟಗಳನ್ನು ೧೮ಅಡಿ ೬ ಅಂಗುಲ ಉದ್ದವಾದ ಅಳತೆಯ ಸಲಾಕಿಗಳಿಂದ ಅಳೆಯಲಾಗುತ್ತಿದ್ದಿತು. ಈ ಅಳತೆಯು ಇಕ್ಕೇರಿ ಅಘೋರೇಶ್ವರ ದೇವಾಲಯದ ಕಲ್ಲು ಮೆಟ್ಟಿಲುಗಳ ಅಳತೆಗೆ ಹೊಂದುತ್ತಿದ್ದಿತು.[೨೦೭] ಜಮೀನುಗಳನ್ನು ಅಳತೆ ಮಾಡುತ್ತಿದ್ದುದು ಮಾತ್ರವಲ್ಲದೆ, ಹಳ್ಳಿಗಳಲ್ಲಿ ಜಮೀನುಗಳ ಗಡಿಗಳನ್ನು ಗುರುತಿಸಲು ಕೂಡ ವಿಶೇಷವಾದ ಕ್ರಮಗಳನ್ನು ಕೈಗೊಳ್ಳಲಾಗುತ್ತಿತ್ತು. ಗಡಿವ್ಯಾಜ್ಯವನ್ನು ತಪ್ಪಿಸುವ ಸಲುವಾಗಿ ನಾಲ್ಕೂ ಕಡೆಯ ಹಳ್ಳಿಗಳ ಜನರ ಎದುರಿಗೆ ಗುರುತು ಮಾಡಲಾಗುತ್ತಿತ್ತು.[೨೦೮] ಹೀಗೆ, ಕೆಳದಿಯರಸರ ಕಾಲದಲ್ಲಿ ಗದ್ದೆ, ಹೊಲ, ಬಾಗಾಯಿತು, ಅರಣ್ಯ ಮತ್ತು ಕುಮ್ರಿ ಹೀಗೆ ಐದು ಬಗೆಯ ಸಾಗುವಳಿ ಭೂಮಿಗಳ ಕಂದಾಯವನ್ನು ನಿಗದಿಪಡಿಸಲಾಗುತ್ತಿತ್ತು.[೨೧೦] ಆ ಸಂದರ್ಭದಲ್ಲಿ ಮಣ್ಣಿನ ಪರಿಸ್ಥಿತಿ, ಸನ್ನಿವೇಶ, ಫಸಲಿನ ಮೌಲ್ಯ, ಮಾರುಕಟ್ಟೆಯ ಬೆಲೆ ಇವೆಲ್ಲ ಅಂಶಗಳನ್ನೂ ಗಣನೆಗೆ ತೆಗೆದುಕೊಳ್ಳಲಾಗುತ್ತಿತ್ತು.[೨೧೧]

ಕಂದಾಯಾಡಳಿತವನ್ನು ಕುರಿತಂತೆ ಶಾಸನಗಳಲ್ಲಿ ಇನ್ನೂ ಕೆಲವು ವಿವರಗಳಿವೆ. ಅತಿದೊಡ್ಡ ಆಡಳಿತೀಯ ಘಟಕವಾದ ಸೀಮೆಯನ್ನು ಕಂದಾಯಾಡಳಿತದಲ್ಲಿಯೂ ಉಳಿಸಿಕೊಳ್ಳಲಾಗಿತ್ತು. ವಿಜಯನಗರ ಕಾಲದಲ್ಲಿ ಕರ್ನಾಟಕದಲ್ಲೂ ಈ ಘಟಕವನ್ನು ಉಪಯೋಗಿಸಲಾಗುತ್ತಿತ್ತು. ಅನೇಕ ಹಳ್ಳಿಗಳು ಕೂಡಿ ಒಂದು ಸೀಮೆ. ಒಂದು ನಿರ್ದಿಷ್ಟ ಸೀಮೆಯಲ್ಲಿ ಪ್ರತಿಯೊಂದು ಹಳ್ಳಿಯ ಆದಾಯವನ್ನೂ ಇಂತಿಷ್ಟೆಂದು ಸ್ಪಷ್ಟವಾಗಿ ದಾಖಲಿಸಲಾಗುತ್ತಿತ್ತು. ಪುಟ್ಟಗುಪ್ಪೆ ಸೀಮೆಯ ಚೌಡಿ ಸೆಟ್ಟಿ ಕೊಪ್ಪವೆಂಬ ಒಂದು ಹಳ್ಳಿಯಲ್ಲಿ, ವೀರಭದ್ರನಾಯಕನ ಕಾಲದಲ್ಲಿ ಕೆಳದಿ ಸರಕಾರಕ್ಕೆ ೧೬ ವರಹ ೮ ಹಣ ತೆರಿಗೆ ಕೊಡುತ್ತಿದ್ದ ಜಮೀನುಗಳಿದ್ದುವು.[೨೧೨]

ಹಳ್ಳಿಯು ಆಡಳಿತದ ಮೂಲ ಘಟಕ. ಕೆಳದಿ ಅರಸರ ಭೂಕಂದಾಯಾಡಳಿತದಲ್ಲಿ ಶಾನುಭೋಗ ಅಥವಾ ಗ್ರಾಮದ ಲೆಕ್ಕಿಗ ಬಹುಮುಖ್ಯವಾದ ವ್ಯಕ್ತಿ. ಭೂಮಿ ದಾನ, ಉತ್ತಾರ, ಉಂಬಳಿ ಇತ್ಯಾದಿ ಯಾವುದೇ ಸರಕಾರಿ ವ್ಯವಹಾರವಾಗಲಿ ಶಾನುಭೋಗವೇ ಅದನ್ನು ದಾಖಲಿಸುತ್ತಿದ್ದನು. ಈ ವ್ಯವಹಾರದ ಪತ್ರಕ್ಕೆ ಕಾಗದ ಎಂದು ಹೆಸರು. ಅದನ್ನು ಸೇನಬೋವನ ಕಡಿತದಲ್ಲಿ ದಾಖಲುಪಡಿಸಿ, ಮೂಲವನ್ನು ದಾನ ಸ್ವೀಕರಿಸಿದವನಿಗೆ, ಅಂದರೆ ಅನುಭೋಗಿಗೆ ಕೊಡುತ್ತಿದ್ದರು.[೨೧೩] ಅವನು ಸ್ಥಳೀಯ ಸಂಸ್ಥೆಗಳ ಹಿತವನ್ನು ರಕ್ಷಿಸುತ್ತಿದ್ದನು, ರಾಜರ ಕಡೆಯಿಂದಾದ ದಾನಗಳನ್ನು ಅಮಲುಗೊಳಿಸುತ್ತಿದ್ದನು.[೨೧೪]

ಗೌಡ, ಗ್ರಾಮದ ಇನ್ನೊಬ್ಬ ಮುಖ್ಯ ಕಂದಾಯಾಧಿಕಾರಿ. ನೇರವಾಗಿ ರಾಜನೇ ಗೌಡಿಕೆಯನ್ನು ನೀಡುತ್ತಿದ್ದನು. ಆದ್ದರಿಂದ ಅವನು ಕೆಳದಿ ಸರಕಾರದ ಅಧಿಕಾರಿ. ಆದರೂ ಯಾರನ್ನಾದರೂ ಗೌಡನನ್ನಾಗಿ ರಾಜನು ಆರಿಸಬೇಕಾದರೆ ಅದನ್ನು ಜನರು ಸೂಕ್ತವಾಗಿ ಬೆಂಬಲಿಸಬೇಕಾಗಿತ್ತು. ಆದ್ದರಿಂದಲೇ ಗೌಡಿಕೆಯನ್ನು ನೀಡುವ ಸಂದರ್ಭದಲ್ಲಿ ಎಲ್ಲಾ ಅಧಿಕಾರಿಗಳು ಮತ್ತು ಸ್ಥಳದ ಗಣ್ಯ ಜನರು ಹಾಜರಿರಬೇಕಾಗಿತ್ತು. ಗೌಡನು ಗ್ರಾಮದ ಕಂದಾಯವನ್ನು ವಸೂಲು ಮಾಡುತ್ತಿದ್ದನು.[೨೧೫] ಆದ್ದರಿಂದ ಈ ನೇಮಕಾತಿಯನ್ನು ಸಾರ್ವಜನಿಕವಾಗಿ, ವಿಶೇಷತಃ ಜವಾಬ್ದಾರಿಯುಳ್ಳ ಸರಕಾರಿ ಅಧಿಕಾರಿಗಳ ಸಮ್ಮುಖದಲ್ಲಿ ಮಾಡುತ್ತಿದ್ದರು. ಇದರಿಂದ ಸರಕಾರದ ಹಿತ ಹಾಗೂ ಸ್ಥಳದ ಹಿತ ಎರಡೂ ಸಾಧನೆಯಾಗುತ್ತಿದ್ದುವು. ಗ್ರಾಮದ ಒಟ್ಟು ಕಂದಾಯ ನಿಗದಿಯಲ್ಲಿ ಗೌಡನ ವೇತನವನ್ನು ಕಳೆಯಲಾಗುತ್ತಿತ್ತು.[೨೧೬]

ಭೂ-ಕಂದಾಯವನ್ನು ನಗದಾಗಿ ಸಂಗ್ರಹಿಸಲಾಗುತ್ತಿತ್ತು. ವರಹ, ಗದ್ಯಾಣ ಮತ್ತು ಹಣ ಮೊದಲಾದ ನಾಣ್ಯಗಳಲ್ಲಿ ಅದನ್ನು ಕೊಡುತ್ತಿದ್ದರು.[೨೬೭] ಕಂದಾಯವನ್ನು ಕೆಲವು ಸಲ ಗುತ್ತಿಗೆಗೆ ಕೊಟ್ಟುಬಿಡುತ್ತಿದ್ದುಂಟು. ಹಳ್ಳಿಗಳ ರೇಖಾ-ಸಿದ್ಧಾಯ ಮತ್ತು ರೇಖಾ-ಕುಳ ಎಂಬ ಪದಗಳು ಶಾಸನಗಳಲ್ಲಿ ಪದೇ ಪದೇ ಕಾಣಿಸಿಕೊಳ್ಳುತ್ತವೆ. ಎರಡಕ್ಕೂ ನಡುವೆ ಒಂದು ವ್ಯತ್ಯಾಸವಿದೆ. ಗ್ರಾಮವನ್ನು ನಿಶ್ಚಿತವಾದ ಕಂದಾಯಕ್ಕೆಂದು ಗುತ್ತಿಗೆಗೆ ಕೊಡಲಾಗಿದೆ ಎಂಬುದನ್ನು ಮೊದಲನೆಯದು ಸೂಚಿಸಿದರೆ, ಎರಡನೆಯದು ಅದನ್ನೂ ಬೇರೆ ಬೇರೆ ವ್ಯಕ್ತಿಗಳಿಂದ ವಸೂಲು ಮಾಡುತ್ತಿದ್ದರು ಎಂಬುದನ್ನು ಸೂಚಿಸುತ್ತದೆ.[೨೬೮] ಕಂದಾಯ ಕೊಡಲು ವಿಳಂಬ ಮಾಡುವುದನ್ನು ಕೆಳದಿಯ ರಾಜರು ಬಹು ಗಂಭೀರವಾದ ಅಪರಾಧವನ್ನಾಗಿ ಪರಿಗಣಿಸುತ್ತಿದ್ದರು. ಮಂಗಳೂರು-ಸೀಮೆಯ ಶೃಂಗೇರಿಮಠದ ಕೆಲವು ಗುತ್ತಿಗೆದಾರರು ಬಾಕಿ ಪಾವತಿ ಮಾಡದೆ ತಂಟೆ ಮಾಡುತ್ತಿದ್ದರೆಂಬ ವಿಷಯವು ಹೇಗೆ ತಿಳಿದುಬಂದಿತು ಎಂಬುದನ್ನು ಹೇಳಿ ಶಿವಪ್ಪನಾಯಕನು ತನ್ನ ಅಳಿಯ ಕೆಂಚಣ್ಣನಿಗೆ, ಒಡನೆಯೇ ಅವರನ್ನು ಕರೆಸಿ ಸಲ್ಲಬೇಕಾದ ಬಾಕಿಯನ್ನು ವಸೂಲು ಮಾಡುವಂತೆ ಪತ್ರ ಬರೆದು ಹೇಳಿದನು.[೨೬೯]

ಭೂಕಂದಾಯದ ಜೊತೆಗೆ, ತಮ್ಮ ಹಿಂದಿನವರಂತೆಯೇ ಕೆಳದಿಯ ರಾಜರೂ, ಕೃಷಿ ಉತ್ಪನ್ನಗಳಾದ ಬತ್ತ, ಅಕ್ಕಿ, ರಾಗಿ; ಉಪ್ಪು, ಹುಣಸೆಹಣ್ಣು, ಬೇಳೆಕಾಳುಗಳು; ಬೂಸ (ಗೋಧಿಯ ಹೊಟ್ಟು), ಎಣ್ಣೆ, ತುಪ್ಪ, ಧಾಲ್, ಬೆಲ್ಲ, ತೆಂಗಿನಕಾಯಿಗಳು, ಒಣಕೊಬ್ಬರಿ, ಬಟ್ಟೆ, ತಂಬಾಕು, ಖರ್ಜೂರ ಒಣಗಿಸಿದ್ದು ಅಥವಾ ಹಸಿಯದು, ಇಂಗು, ಜೀರಿಗೆ, ಈರುಳ್ಳಿ, ಬೆಳ್ಳುಳ್ಳಿ, ಅರಿಶಿನ, ಶುಂಠಿ, ಅಡಕೆ ಮತ್ತು ಮೆಣಸು ಈ ಮೊದಲಾದ ವಸ್ತುಗಳ ಮೇಲೆ ಸಣ್ಣ ಪ್ರಮಾಣದ ಸುಂಕಗಳನ್ನು ವಿಧಿಸುತ್ತಿದ್ದರು.[೨೭೦] ಕೃಷಿಯೇತರ ತೆರಿಗೆಗಳಾದ ಬೀರದ, ನೀರಾವರಿ, ವರದ, ಕೊಂಡ, ಮಾಸಾವರಿ, ವಂಚನೆ, ವಟ್ಟಿ, ಕಂಚ, ಹೊರನಿಲ (Horanila), ತಾರೆ, ಮತ್ತು ಸನ್ನವಿತ (Sanlavita) ಗಳನ್ನೂ ವಿಧಿಸಲಾಗುತ್ತಿತ್ತು.[೨೭೧] ಆದರೆ ಶಿವಪ್ಪನಾಯಕನು ಈ ಸುಂಕಗಳನ್ನು ರದ್ದುಪಡಿಸಿ ರೈತರನ್ನು ಹೊರೆಯಿಂದ ಮುಕ್ತಗೊಳಿಸಿದನು.[೨೭೨]

ಭೂಕಂದಾಯದ ಜೊತೆಗೆ ಮೇಲು ಕಂದಾಯವನ್ನು (ಸೆಸ್‌ಗಳನ್ನು) ವಿಧಿಸುವ ತತ್ವವನ್ನು ಕೆಳದಿ ರಾಜರು ತಮ್ಮ ಪೂರ್ವಜರಿಂದ ಪಡೆದುಕೊಂಡರು. ಆದರೆ ಅನೇಕ ಗ್ರಾಮೀಣ ತೆರಿಗೆಗಳನ್ನು ಹೊಸದಾಗಿ ಸೇರಿಸಿದರು. ರಾಜ್ಯವು ಬಹು ವೇಗವಾಗಿ ವಿಸ್ತಾರಗೊಂಡದ್ದು, ಅದರ ಪಾಲನೆಗೆ ತಗಲುವ ವೆಚ್ಚದಲ್ಲಿ ಹೆಚ್ಚಳ, ಇವುಗಳಿಂದ ವರಮಾನವನ್ನು ಹೆಚ್ಚಿಸಿಕೊಳ್ಳುವ ದಾರಿಗಳನ್ನು, ವಿಧಾನಗಳನ್ನು ಅವರು ಹುಡುಕಬೇಕಾಯಿತು. ಬಲಿಷ್ಠವಾದ ಸೈನ್ಯದ ಪಾಲನೆ, ಆತ್ಮರಕ್ಷಕ ಹಾಗೂ ಆಕ್ರಮಣಶೀಲ ಯುದ್ಧಗಳ ವೆಚ್ಚ, ರಾಜಾಸ್ಥಾನಕ್ಕೆ ಸಂಬಂಧಪಟ್ಟ ವೆಚ್ಚದಲ್ಲಿ ಏರಿಕೆ ಇವು ಒಂದೊಂದೂ ರಾಜ್ಯದ ಆದಾಯದಲ್ಲಿ ಪಾಲು ಕೇಳುತ್ತಿದ್ದುವು. ಆದ್ದರಿಂದ ಬೊಕ್ಕಸವನ್ನು ತುಂಬಲು ರಾಜರು ಹೊಸ ಹೊಸ ತೆರಿಗೆಗಳನ್ನು ವಿಧಿಸಲೇಬೇಕಾಗುತ್ತಿತ್ತು, ರೈತರು ಹೊರೆಯನ್ನು ಹೊತ್ತುಕೊಳ್ಳಲೇಬೇಕಾಗುತ್ತಿತ್ತು. ದಿನದಿಂದ ದಿನಕ್ಕೆ ಅದು ಹೆಚ್ಚು ಹೆಚ್ಚು ಭಾರವಾಗುತ್ತಿದ್ದಂತೆ ತೋರುತ್ತದೆ. ಕೃಷಿ ಮತ್ತು ಕೃಷಿಯೇತರ ರೂಪದ ಈ ತೆರಿಗೆಗಳನ್ನು ನಗದಾಗಿಯೇ ವಸ್ತುರೂಪದಲ್ಲೇ ಪಾವತಿ ಮಾಡುತ್ತಿದ್ದರು.

ಸಂತುಷ್ಟ ಮತ್ತು ಸಂತೃಪ್ತ ರೈತಸಮುದಾಯವೇ ಸ್ಥಿರವಾದ ರಾಜಕೀಯ ಶಕ್ತಿಗೆ ಅತ್ಯಗತ್ಯವಾದ ಆಧಾರ ಎಂಬುದು ಕೆಳದಿ ಭೂಕಂದಾಯ ಪದ್ಧತಿಯ ಮುಖ್ಯ ತತ್ವವಾಗಿತ್ತು ಎನ್ನುವುದನ್ನು ಮೊದಲೇ ನೋಡಿದ್ದೇವೆ. ಇದು ಕೇವಲ ತತ್ವವಾಗಿರದೆ ಆಚರಣೆಯಲ್ಲಿದ್ದಿತು ಎನ್ನುವುದನ್ನು ಆ ಕಾಲದ ಶಾಸನಗಳು ಹಾಗೂ ಕನ್ನಡ ಕೃತಿಗಳು ದೃಢಪಡಿಸುತ್ತವೆ. ಈ ವ್ಯವಸ್ಥೆಯ ಎರಡು ಲಕ್ಷಣಗಳು ಹೀಗಿದ್ದುವು: ೧) ಕೃಷಿಯ ವಿಸ್ತರಣ ೨) ರೈತರ ಅಹವಾಲುಗಳನ್ನು ಕೇಳಿ ಅವರಿಗೆ ಅನ್ಯಾಯವಾಗಿದ್ದರೆ ಒಡನೆಯೇ ಸರಿಪಡಿಸುವುದು.

ಕೆಳದಿನೃಪವಿಜಯವು ಶಿವಪ್ಪನಾಯಕನನ್ನು ಕೆಳದಿಯ ರಾಜರಲ್ಲಿ ಅತ್ಯಂತ ಶ್ರೇಷ್ಠನಾದವನು ಎಂದು

ವರ್ಣಿಸುತ್ತದೆ. ಅವನ ಭೂಕಂದಾಯ ನೀತಿಯು ಎರಡು ಮುಖವಾಗಿದ್ದಿತು. ೧) ಅದು ಬೇಸಾಯವನ್ನು ವಿಸ್ತರಿಸುವುದಾಗಿತ್ತು ೨) ಅಗತ್ಯವಾದ ಸೌಲಭ್ಯಗಳನ್ನು ಒದಗಿಸಿಕೊಟ್ಟು ರೈತರನ್ನು ಪ್ರೋತ್ಸಾಹಿಸುವುದಾಗಿತ್ತು.

> ಪ್ರಜೆಗಳು ಸಿರ್ವ ಬಿನ್ನಪವನಾಲಿಸಿಯೊಳ್ಗಿರೆ ಕಾಳ್ಪುರಂಗಳಂ
> ಸೃಜಿಯಿಸಿ ಮೇಣವರ್ಗೆ ಕರಮೂಲ ಧನಂಗಳ ನಿತ್ತು ಬಿತ್ತುಮಂ
> ನಿಜಮೆನಲಿತ್ತು ಗೋಷ್ಪದ ದನಿತ್ತಿಳೆಯಂ ಮಿಗೆ ಬೀಳಲೀಯದಾ
> ದ್ವಿಜ ಸಾರಪಾದಪಂ ಶಿವನೃಪಂ ಮಿಗೆ ಗೆಯ್ಮೆಗೆ ತಂದ ನಳ್ತಿಯಂ ||[೨೭೩]

ಪ್ರಜೆಗಳ ದೂರುಗಳನ್ನು ಆಲಿಸಲು ಶಿವಪ್ಪನಾಯಕನು ಸದಾ ಸಿದ್ಧವಾಗಿದ್ದನು. ಹೊಸದಾಗಿ ನೆಲವನ್ನು ಉಳುಮೆಗೆ ಒಳಪಡಿಸುವ ರೈತರಿಗೆ ಹಣ, ಬಿತ್ತನೆ ಬೀಜಗಳನ್ನು ಮುಂಗಡವಾಗಿ ಕೊಡುವುದರ ಮೂಲಕ, ಕೆರೆ, ಕಾಲುವೆ ಮೊದಲಾದ ನೀರಾವರಿ ಕಾರ್ಯಗಳನ್ನು ನಿರ್ಮಿಸುವುದರ ಮೂಲಕ ಪ್ರೋತ್ಸಾಹ ಕೊಡುತ್ತಿದ್ದನು. ಹೀಗೆ ಬೇಸಾಯವಾಗಬಹುದಾದ ನೆಲವೆಲ್ಲವನ್ನೂ ಅವನು ಕೃಷಿಗೊಳಪಡಿಸಿದನು. ರಾಜ್ಯದಲ್ಲಿ ಗೋಷ್ಪದ, ಹಸುವಿನ ಹೆಜ್ಜೆಗುರುತಿನಷ್ಟು ಜಾಗವೂ ಬೇಸಾಯವಾಗದೆ ಉಳಿಯಲಿಲ್ಲ. ಇದನ್ನೇ ಈ ರಾಜವಂಶವನ್ನು ಕುರಿತು ರಚಿತವಾಗಿರುವ ಇನ್ನೊಂದು ಕೃತಿಯೂ ಸಮರ್ಥಿಸುತ್ತದೆ.[೨೭೪] ಹೊರೆ ಎಂದು ಭಾವಿಸಲಾದ ಅನ್ಯಾಯದ ಗ್ರಾಮೀಣ ತೆರಿಗೆಗಳೆಲ್ಲವನ್ನೂ ಅವನು ರದ್ದುಪಡಿಸಿದನು.[೨೭೫] ಆದರ್ಶಗಳಿಗೆ ತಕ್ಕಂತೆ ನಡೆದು ಶಿವಪ್ಪನಾಯಕನು ತನ್ನ ಮುಂದಿನವರಿಗೂ ಇತರರಿಗೂ ಮಾದರಿ ರಾಜನಾದನು.

ಮುಂದಾಗಿ ನಿರೀಕ್ಷಿಸಲಾಗದ ಸನ್ನಿವೇಶಗಳು ಉಂಟಾಗಿ ಬೆಳೆ ಹಾಳಾಗಿ ರೈತರು ಸಲ್ಲಿಸಬೇಕಾದ ಪೂರ್ತಿ ಕಂದಾಯವನ್ನು ಸಲ್ಲಿಸಲು ಸಾಧ್ಯವಾಗದೆ ಹೋದ ಸಂದರ್ಭಗಳಲ್ಲಿ ಕೆಳದಿ ರಾಜರು ವಸೂಲಾತಿಯಲ್ಲಿ ಬಹು ಜಾಗರೂಕತೆಯಿಂದ ಸೂಕ್ತ ಪ್ರಮಾಣದ ಕಡಿತವನ್ನು ಮಾಡುತ್ತಿದ್ದರು. ಶಾಸನಗಳು ಅಂತಹ ವಿನಾಯಿತಿ ಸಂದರ್ಭಗಳು ಹಲವನ್ನು ಉಲ್ಲೇಖಿಸುತ್ತವೆ. ಚಂಡಿಸೆಟ್ಟಿ ಕೊಪ್ಪ ಎಂಬ ಗ್ರಾಮದ ಒಟ್ಟುತೆರಿಗೆಯಲ್ಲಿ, ಶ್ರಯ (ಬೆಳೆಕುಸಿತ) ಕಾರಣವಾಗಿ ನಷ್ಟವಾಗಿದ್ದುದರಿಂದ, ೨ ಗದ್ಯಾಣ ೨.೫ ಹಣಗಳನ್ನು ಕಡಮೆ ಮಾಡಲಾಯಿತು ಎಂಬುದಾಗಿ ಒಂದು ಶಾಸನವು ಹೇಳುತ್ತದೆ. ಪ್ರವಾಹ ಬಂದು ನಷ್ಟವಾದುದರಿಂದ ಇನ್ನೊಂದು ೫ ಗದ್ಯಾಣವನ್ನು ಕಳೆಯಲಾಯಿತು.[೨೭೬] ಇತರ ಹಲವು ಶಾಸನಗಳೂ ಇದನ್ನು ಸ್ಥಿರಪಡಿಸುತ್ತವೆ.[೨೭೭] ನದೀ ಪ್ರವಾಹ ಬಂದು ಜಮೀನು ಮುಳುಗಡೆಯಾಗಿ ನಷ್ಟವಾದಾಗ ಅಂತಹ ರೈತರಿಗೆ ಬೇರೆ ಜಮೀನುಗಳನ್ನು ಮಂಜೂರು ಮಾಡಿ ನಷ್ಟವನ್ನು ಭರ್ತಿ ಮಾಡಲಾಗುತ್ತಿತ್ತು. ಇಂತಹ ಜಮೀನಿಗೆ 'ನಷ್ಟಕ್ಕೆ ನಿಲಿಸಿದ ಭೂಮಿ' ಎಂಬ ಹೆಸರಿತ್ತು.[೨೭೮]

ರಾಜಕೀಯ ದೃಷ್ಟಿಯಿಂದ ಕೆಳದಿ ರಾಜವಂಶದ ಇತಿಹಾಸವು ವಿಜಯನಗರದಂತೆ ಅಥವಾ ಕರ್ನಾಟಕದ ಮೈಸೂರು ರಾಜಮನೆತನದಂತೆ ವೈಭವೋಪೇತವೂ ಸಾರ್ವಭೌಮವೂ ಆದುದಲ್ಲ. ಆದರೆ ಕರ್ನಾಟಕದ ಕೃಷಿಗೆ ಅವರು ನೀಡಿದ ಕೊಡುಗೆಯನ್ನು ಮಾತ್ರ ಮರೆಯಲು ಸಾಧ್ಯವೇ ಇಲ್ಲ. ಅವರ ಭೂ-ಕಂದಾಯ ವ್ಯವಸ್ಥೆಯು ಸುಭದ್ರವಾದ ತತ್ವಗಳನ್ನು ಅವಲಂಬಿಸಿದ್ದು, ಇಡೀ ವ್ಯವಸ್ಥೆಯೇ ಆಧುನಿಕವಾಗಿತ್ತು. ಆದ್ದರಿಂದಲೇ ಈ ವಂಶದ ಅನೇಕ ಅರಸರನ್ನು ವಿಶೇಷವಾಗಿ ಶಿವಪ್ಪನಾಯಕನನ್ನು, ಇತರರಿಗೆ ಮಾದರಿಯಾಗಬಲ್ಲ ಆದರ್ಶ ಆಡಳಿತಗಾರರೆಂದು ಕೊಂಡಾಡಲಾಗಿದೆ.

ಮೈಸೂರು ರಾಜವಂಶದ ಕೈಕೆಳಗೆ ಭೂಕಂದಾಯ ಆಡಳಿತವು ಯಾವುದೇ ತೀವ್ರ ಬದಲಾವಣೆಯನ್ನು ಕಾಣಲಿಲ್ಲ. ಮುಖ್ಯವಾಗಿ ಅವರು ವಿಜಯನಗರದ ಹೆಜ್ಜೆ ಗುರುತುಗಳಲ್ಲೇ ನಡೆದರು. ''ಯಾವ ಮೈಸೂರು ರಾಜನೂ ಹಿಂದೂ ಸ್ಮೃತಿಗಳನ್ನೂ ಶಾಸ್ತ್ರಗಳನ್ನು ಅತಿಕ್ರಮಿಸಿ ನಡೆಯಲಿಲ್ಲ'' ಎಂದು ವಿಲ್ಕ್ಸ್ ಹೇಳುತ್ತಾನೆ. ಈ ಮಾತನ್ನು ಒಪ್ಪುವುದು ಸಾಧ್ಯವಿಲ್ಲ.[೨೭೯] ಏಕೆಂದರೆ ಅವರು ಶಾಸ್ತ್ರಗಳಲ್ಲಿ ಮತ್ತು ಸ್ಮೃತಿಗಳಲ್ಲಿ ಏನಿತ್ತೋ

ಅದನ್ನೇ ಚಾಚು ತಪ್ಪದೆ ಪಾಲಿಸುತ್ತಿದ್ದರು ಎಂದು ತೋರಿಸಿಕೊಡುವ ಆಧಾರ ಯಾವುದೂ ಇಲ್ಲ. ತಮ್ಮ ಪೂರ್ವಜರಂತೆಯೇ, ಧರ್ಮವು ಅಂಗೀಕಾರ ನೀಡಿದ್ದುದಕ್ಕಿಂತ ಹೆಚ್ಚಾಗಿಯೇ ಅವರೂ ಸಂಗ್ರಹಿಸಿದರು. ಉತ್ಪಾದನೆಯ ೧/೬ ಭಾಗವನ್ನು ಸರಕಾರದ ಭಾಗವಾಗಿ ಪಡೆದುಕೊಳ್ಳಬೇಕು ಎನ್ನುವುದು ಅನ್ವಯಿಸಲಾಗದ ಮತ್ತು ವಾಸ್ತವಿಕವಲ್ಲದ ತತ್ವವಾಗಿತ್ತು.

ಈ ವಂಶದ ಅರಸರು ಮೊದಲು ವಿಜಯನಗರದ ಸಾಮಂತರಾಗಿದ್ದರು. ಸಾಮ್ರಾಜ್ಯವು ಪತನಗೊಂಡ ನಂತರ ಸ್ವಾತಂತ್ರ್ಯವನ್ನು ಸಾರಿಕೊಂಡುದಲ್ಲದೆ, ೧೭ನೆಯ ಶತಮಾನದಲ್ಲಿ ದಕ್ಷಿಣ ಕರ್ನಾಟಕದಲ್ಲಿ ಅವರು ವಿಜಯನಗರದ ವಾರಸುದಾರರಾಗಿ ಬೆಳೆದರು. ಸಾಮಂತ ರಾಜರಾಗಿದ್ದಾಗಿನಿಂದಲೂ ಭೂಕಂದಾಯ ಆಡಳಿತ ಹಾಗೂ ಸಂಸ್ಕೃತಿಯ ಇತರ ಕ್ಷೇತ್ರಗಳಲ್ಲಿ ಕೂಡ ಆ ಪರಂಪರೆಯನ್ನೇ ಮುಂದುವರಿಸಿಕೊಂಡು ಬಂದರು.

ಈ ರಾಜರ ಭೂಕಂದಾಯ ನಿಗದಿಗೆ ಆಧಾರವಾಗಿದ್ದದ್ದು ಮುಖ್ಯವಾಗಿ ನೆಲದ ಫಲವತ್ತು. ಭೂಕಂದಾಯ ವ್ಯವಸ್ಥೆಗೆ ತಳಹದಿ ಹಾಕಿದವರು ಚಿಕ್ಕದೇವರಾಜ ಒಡೆಯರ್. ಜಮೀನನ್ನು ಉತ್ತಮ (ಮೇಲುಮಟ್ಟದ್ದು), ಮಧ್ಯಮ (ಮಧ್ಯವರ್ತಿ) ಹಾಗೂ ಕನಿಷ್ಟ (ಕೆಳಮಟ್ಟದ್ದು) ಎಂದು ಮೂರಾಗಿ ವಿಂಗಡಿಸಿದ್ದರು.[೨೮೦] ಕೃಷಿ ಭೂಮಿಯ ಈ ಬಗೆಯ ವರ್ಗೀಕರಣ ಕರ್ನಾಟಕಕ್ಕೆ ಹೊಸದಲ್ಲ. ವಿಜಯನಗರ ಕಾಲದಲ್ಲೇ ಅದಿತ್ತು.[೨೮೧] ಕಪ್ಪು ಮಣ್ಣಿನ ನೆಲ, ತೋಟಗಳು, ಬಂಜರು ಭೂಮಿ, ಹಿತ್ತಲುಗಳು, ಉಪ್ಪು ಮಣ್ಣಿನ ನೆಲ – ಇವೆಲ್ಲವನ್ನೂ ಚಿಕ್ಕ ದೇವರಾಜ ಒಡೆಯರ ಕಾಲದಲ್ಲಿ ಪರೀಕ್ಷಿಸಿ ಕಂದಾಯ ನಿಗದಿ ಮಾಡಲಾಯಿತು.[೨೮೨] ಅವರು ೨೦೦ ಕುಂಬ ನೆಲಕ್ಕೆ ೬, ೪ ಮತ್ತು ೨ ಹಣಗಳನ್ನು ಸರಕಾರೀ ಭಾಗವಾಗಿ ನಿಗದಿಪಡಿಸಿದರು.[೨೮೩] ನಿಗದಿಯ ಸಮಯದಲ್ಲಿ ನೆಲದ ಫಲವಂತಿಕೆ ಮತ್ತಿತರ ಪರಿಸ್ಥಿತಿಗಳನ್ನು ಗಣನೆಗೆ ತೆಗೆದುಕೊಂಡು ಅವಕ್ಕೆ ತಕ್ಕಂತೆ ಬದಲಾವಣೆ ಮಾಡಲಾಗುತ್ತಿತ್ತು.

ಮೈಸೂರು ಅರಸರು ಈ ವಿಷಯದಲ್ಲಿ ವಿಜಯನಗರದ ಪರಂಪರೆಯನ್ನುಮುಂದುವರಿಸಿದರು ಎಂದೆವು. ರಾಯ-ರೇಖಾ ನಿಗದಿ ಪದ್ಧತಿಯನ್ನು ಅವರು ಅನುಸರಿಸಿದರು.[೨೮೪] ಹಲವು ಬಗೆಯ ಅಳತೆಗೋಲುಗಳಿದ್ದುವು, ಅವೂ ವಿಜಯನಗರ ಕಾಲದಿಂದಲೇ ಬಂದವು. ಕಂಬದಂತಹ ಘಟಕಗಳು, ನೆಲದ ಬಿತ್ತನೆ ಸಾಮರ್ಥ್ಯವನ್ನು ಖಂಡುಗ ಕೊಳಗಗಳಲ್ಲಿ ನಿರ್ಧರಿಸುವುದು ಹಾಗೆಯೇ ಮುಂದುವರಿದಿದ್ದುವು.[೨೮೫] ಗ್ರಾಮಗಳು ಮತ್ತು ಭೂ ಹಿಡುವಳಿಗಳ ಎಲ್ಲೆಗಳನ್ನು ಅತ್ಯಂತ ಸೂಕ್ಷ್ಮವಾಗಿ ಗುರುತಿಸಿರುವುದು, ಸರಕಾರವೂ ಜನರೂ ಅಳತೆಗೆ ಹಾಗೂ ಎಲ್ಲೆಯನ್ನು ಕರಾರುವಾಕ್ಕಾಗಿ ಪಾಲಿಸುವುದಕ್ಕೆ ಎಷ್ಟು ಮಹತ್ವ ಕೊಡುತ್ತಿದ್ದರು ಎಂಬುದನ್ನು ಸೂಚಿಸುತ್ತದೆ.[೨೮೬] ಅರಸರು ಜಮೀನುಗಳನ್ನು ದೇವಾಲಯಗಳಿಗೆ ದತ್ತಿಯಾಗಿ ಕೊಟ್ಟಾಗ ಅಂತಹ ಜಮೀನುಗಳ ಗಡಿ ಕಲ್ಲುಗಳ ಮೇಲೆ ಲಿಂಗವನ್ನು ಕೆತ್ತಿರುತ್ತಿದ್ದರು.[೨೮೭] ಅದು ಕಂದಾಯರಹಿತ ಭೂಮಿ ಎಂಬುದನ್ನು ಅದು ಸೂಚಿಸುತ್ತಿದ್ದಿತು. ಚಿತ್ರದುರ್ಗದ ಒಂದು ಶಾಸನವು ಕೃಷ್ಣರಾಜ ಹರಿದಾರಿ ಎಂಬ ವ್ಯಾಪ್ತಿಯನ್ನು ೫,೪೯೦ ಗಜ ಎಂದು ಹೇಳುತ್ತದೆ.[೨೮೮]

ಕಂದಾಯ ಸಂಗ್ರಹಣೆ ವಸ್ತು- ಮತ್ತು ನಗದು ಎರಡು ರೂಪಗಳಲ್ಲೂ ಇರುತ್ತಿತ್ತು. ಕಂದಾಯ ರೈತರಂತಹ ಮಧ್ಯವರ್ತಿಗಳ ಮೂಲಕ ಅದನ್ನು ವಸೂಲು ಮಾಡಲಾಗುತ್ತಿತ್ತು. ಹಳ್ಳಿಯ ಅಧಿಕಾರಿಗಳ ಮೂಲಕವಂತೂ ನಡೆದೇ ಇರುತ್ತಿತ್ತು. ನಗದಾಗಿ ಪಾವತಿ ಮಾಡುವ ಕಂದಾಯವನ್ನು ಸುವರ್ಣದಾಯ ಎಂದೂ,[೨೮೯] ವಸ್ತುರೂಪದ ಪಾವತಿಯನ್ನು ದವಸದಾಯವೆಂದೂ ಕರೆಯುತ್ತಿದ್ದರು.[೨೯೦] ರೈತರಿಗೆ ಸುಲಭವಾಗಲೆಂದು ಕಂದಾಯವನ್ನು ಮೂರು ಕಂತುಗಲ್ಲಿ ವಸೂಲು ಮಾಡುತ್ತಿದ್ದರು. ಮಾಡಬಹುದಾದ ವಂಚನೆಯನ್ನು ತಡೆಗಟ್ಟಲು ಉಗ್ರಕ್ರಮಗಳನ್ನು ಕೈಗೊಳ್ಳಲಾಗುತ್ತಿತ್ತು.[೨೯೧] ಗತ್ತಿಗೆ ಮಾಡುವುದು ಮತ್ತು ಹಂಚಿಕೊಳ್ಳುವುದು ಎರಡೂ ದಕ್ಷಿಣದಲ್ಲಿ ಹಿಂದೂ ಕೃಷಿ ಪದ್ಧತಿಯ ಅಂಗವಾಗಿದ್ದು ಅದು ಮೈಸೂರು

ರಾಜವಂಶದ ಕಾಲದಲ್ಲೂ ಮುಂದುವರಿಯಿತು, ವಿಶೇಷವಾಗಿ ಚಿಕ್ಕದೇವರಾಜ ಒಡೆಯರ ಕಾಲದಲ್ಲಿ. ಸರಕಾರದ ಅಧಿಕಾರಿಗಳು ರಾಜ್ಯದ ವಿವಿಧ ಜಿಲ್ಲೆಗಳನ್ನು ಕಂದಾಯ ಗುತ್ತಿಗೆಗೆ ಕೊಡುತ್ತಿದ್ದರು, ಇಲ್ಲವೆ ಗುತ್ತಿಗೆದಾರರು ಬಿಡ್ ಮಾಡಿ ಪಡೆದುಕೊಳ್ಳುತ್ತಿದ್ದರು. ಗುತ್ತಿಗೆ ರೈತರು ಒಂದು ಪ್ರದೇಶದ ಉತ್ಪನ್ನವನ್ನು, ಅಂದಾಜು ಮತ್ತು ವಾಸ್ತವಿಕಗಳನ್ನು ಸರಕಾರಕ್ಕೆ ವರದಿ ಮಾಡಬೇಕಾಗಿತ್ತು. ಸರಕಾರವು ವಿಧಿಸಿದ ಮಿತಿಯನ್ನು ಮೀರಿದ ಯಾವುದೇ ಆದಾಯವನ್ನು ಒಡನೆಯೇ ಖಜಾನೆಗೆ ಕಟ್ಟಿಬಿಡಬೇಕಾಗಿತ್ತು. ಆದರೆ ಗುತ್ತಿಗೆದಾರನಿಗೆ ನಷ್ಟವುಂಟಾದರೆ ಆಗ ಸಾರ್ವಜನಿಕರೂ, ಖಜಾನೆಯೂ ಆ ಕೊರತೆಯನ್ನು ತುಂಬಬೇಕಾಗಿತ್ತು.[೬೨] ಫಸಲನ್ನು ಸರಕಾರದ ಪಾಲು,ಬೆಳೆದ ರೈತರ ಪಾಲು ಎಂದು ಕಣದಲ್ಲಿಯೇ ಬೇರೆ ಬೇರೆ ರಾಶಿಯಾಗಿ ಒಟ್ಟಲಾಗುತ್ತಿತ್ತು. ವಾರ ಎಂಬ ಪದವು ಈ ಬಗೆಯ ಸಂಗ್ರಹಣ ಪದ್ಧತಿಯಿದ್ದುದನ್ನು ಸೂಚಿಸುತ್ತದೆ.[೬೩]

ಕಂದಾಯದ ಗುತ್ತಿಗೆಯಲ್ಲಿ ಹಲವು ಅಪಾಯಗಳಿದ್ದುವು. ಸರಕಾರದ ಎಚ್ಚರವು ಸ್ವಲ್ಪ ಮಂದಗತಿಯಾದರೆ, ನಿಜವಾಗಿ ಭೂಮಿಯಲ್ಲಿ ಆಸಕ್ತಿಯಿರದ ಗುತ್ತಿಗೆದಾರರು, ಸರಕಾರವು ನಿಗದಿಪಡಿಸಿದುದಕ್ಕಿಂತ ಅಧಿಕವಾಗಿ ಸಂಗ್ರಹಿಸಿ ಬಿಡುತ್ತಿದ್ದರು. ಇದರಿಂದ ಸಹಜವಾಗಿ ರೈತರು ಶೋಷಣೆಗೆ ಬಲಿಯಾಗುತ್ತಿದ್ದರು. ಸರಕಾರಕ್ಕೆ ಸುಳ್ಳು ಲೆಕ್ಕಗಳನ್ನು ತೋರಿಸುವ ಮೂಲಕ, ಒಳ ಅನೈತಿಕ ವ್ಯವಹಾರಗಳ ಮೂಲಕ ಗುತ್ತಿಗೆದಾರರು ಸರಕಾರಕ್ಕೆ ಮೋಸಮಾಡಲು ಅವಕಾಶವಿರುತ್ತಿದ್ದಿತು. ಭೂಕಂದಾಯ ವಸೂಲಾತಿಗಾಗಿ ಸಿಬ್ಬಂದಿಗಳ ನೇಮಕದ ವೆಚ್ಚವನ್ನು ಕಡಮೆ ಮಾಡುತ್ತಿದ್ದುದರಿಂದ ಈ ಗುತ್ತಿಗೆ ಪದ್ಧತಿ ಸ್ವಾಗತಾರ್ಹವಾಗಿದ್ದರೂ, ಅದು ಯಾವಾಗಲೂ ರೈತರಿಗೆ ಅನುಕೂಲಕರವಾಗಿರಲಿಲ್ಲ.

ಆದರೆ ಹಂಚಿಕೆಯು ಒಂದು ಸರಳವಾದ ವಿಧಾನವಾಗಿದ್ದು, ಅಗೋಚರ ಸನ್ನಿವೇಶಗಳಿಂದೊದಗುವ ಆಪತ್ತನ್ನು ಸರಕಾರ ಮತ್ತು ರೈತ ಇಬ್ಬರೂ ಸಮಾನವಾಗಿ ಹಂಚಿಕೊಳ್ಳುತ್ತಿದ್ದರು. ರೈತರು ಕಡಮೆ ಬೆಳೆದರೆ, ಕಡಮೆ ಕೊಡುತ್ತಿದ್ದರು, ಏನೂ ಬೆಳೆಯದೆ ಹೋದರೆ ಅವರು ಏನನ್ನೂ ಕೊಡಬೇಕಾಗಿರಲಿಲ್ಲ.

ವಿಜಯನಗರ ಕಾಲದಲ್ಲಿನಂತೆಯೇ ಕಂದಾಯ ವಿಭಾಗವನ್ನು ಅಟ್ಟವಣೆ ಎಂದು ಕರೆಯುತ್ತಿದ್ದರು.[೬೪] ೧೬ ಮತ್ತು ೧೭ನೆಯ ಶತಮಾನಗಳಲ್ಲಿ ಕರ್ನಾಟಕದ ಅತಿಮುಖ್ಯ ಇಲಾಖೆಗಳಲ್ಲಿ ಒಂದಾಗಿತ್ತು. ಚಿಕ್ಕದೇವರಾಜಒಡೆಯರ ಕಾಲದಿಂದ ೧೭೬೧ರವರೆಗೆ ಅದನ್ನು ವಿಚಾರಚಾವಡಿ ಎಂದು ಕರೆಯುತ್ತಿದ್ದರು.[೬೫] ಈ ವಿಭಾಗಕ್ಕೆ ಮುಖ್ಯನಾಗಿದ್ದವನು ಪ್ರಧಾನಿ ಅಥವಾ ಸರ್ವಾಧಿಕಾರಿ. ಪ್ರಧಾನಿಗೆ ಸಹಾಯಮಾಡಲು ವಿವಿಧ ಅಧಿಕಾರಿಗಳಿದ್ದರು. ಅವರಲ್ಲಿ ಮುಖ್ಯನಾದವನು ಕರಣಿಕ, ಅಥವಾ ಲೆಕ್ಕಾಧಿಕಾರಿ. ಎಲ್ಲಾ ಬಗೆಯ ಲೆಕ್ಕಗಳನ್ನಿಡುವುದು ಅವನ ಕೆಲಸ. ಮುಖ್ಯ ಕರಣಿಕನೊಬ್ಬನಿದ್ದನು. ಇಡೀ ರಾಜ್ಯದ ಆದಾಯ - ವೆಚ್ಚಗಳ ಮೇಲುಸ್ತುವಾರಿ ಅವನ ಕರ್ತವ್ಯವಾಗಿತ್ತು. ಕಂದಾಯ ಇಲಾಖೆಯ ಹುದ್ದೆಗಳ ಏಣಿಯಲ್ಲಿ ಮೇಲುಮೇಲಕ್ಕೆ ಬಡ್ತಿ ಪಡೆಯಲು ಕರಣಿಕನ ಸ್ಥಾನ ಮೊದಲನೆಯ ಮೆಟ್ಟಿಲಾಗಿತ್ತು. ಅವನ ಸ್ಥಾನಕ್ಕೆ ಎಂತಹ ಗೌರವ ಇದ್ದಿತೆಂದರೆ ಎಷ್ಟೋ ಸಂದರ್ಭಗಳಲ್ಲಿ ಮುಖ್ಯಕರಣಿಕನು ಮಂತ್ರಾಲೋಚನ ಸಭೆಯ, ಅಂದರೆ ಮಂತ್ರ ಪರಿಷತ್ತಿನ ಸದಸ್ಯನಾಗಿ ಕಾರ್ಯನಿರ್ವಹಿಸುತ್ತಿದ್ದನು. ಉದಾಹರಣೆಗೆ ಚಿಕ್ಕದೇವರಾಜಒಡೆಯರ ಮುಖ್ಯಕರಣಿಕನಾಗಿದ್ದ ಲಿಂಗಣ್ಣಯ್ಯನು ಮಂತ್ರಾಲೋಚನ ಸಭೆಯ ಸದಸ್ಯನಾಗಿದ್ದನು.

ಚಿಕ್ಕದೇವರಾಜಒಡೆಯರು ಭೂಕಂದಾಯಡಳಿತವನ್ನು ಆಮೂಲಾಗ್ರವಾಗಿ ವ್ಯವಸ್ಥೆಗೊಳಿಸಿದರು. ಅವರು ಮಾಡಿದ ವ್ಯವಸ್ಥೆಯು ನಮ್ಮ ಅಧ್ಯಯನಾವಧಿಯ, ಅಂದರೆ ೧೭೬೧ ರ ಕೊನೆಯವರೆಗೂ ಮುಂದುವರಿಯಿತು. ಸಮಸ್ತ ಆಡಳಿತವನ್ನು ೧೮ ಇಲಾಖೆಗಳನ್ನಾಗಿ ಅವರು ರೂಪಿಸಿದರು, ಅಠಾರಾ ಕಚೇರಿ ಎನ್ನುವುದು ಅದೇ. ಈ ಪದವು ಇಂದಿಗೂ ಮೈಸೂರಿನಲ್ಲಿ ಜನಪ್ರಿಯವಾಗಿದೆ. ಈ ಸಂಬಂಧದಲ್ಲಿ, ಚಿಕ್ಕದೇವರಾಜ ಒಡೆಯರು ಮೊಗಲ್ ಚಕ್ರವರ್ತಿ ಔರಂಗಜೇಬನ ಆಸ್ಥಾನಕ್ಕೆ ಒಂದು ನಿಯೋಗವನ್ನು ಕಳಿಸಿದ್ದರು. ಅಲ್ಲಿಂದ

ಆ ನಿಯೋಗವು ಹಿಂದಿರುಗಿದ ನಂತರವೇ ರಾಜನು ಆಡಳಿತವನ್ನು ಪುನರ್‌ವ್ಯವಸ್ಥೆಗೊಳಿಸಿದ್ದು. ಇದು ಚಿಕ್ಕದೇವರಾಜಒಡೆಯರ ಆಡಳಿತದ ಮೇಲೆ ಮೊಗಲ್ ವ್ಯವಸ್ಥೆಯ ಪ್ರಭಾವವು ಸ್ವಲ್ಪಮಟ್ಟಿಗೆ ಆದುದನ್ನು ಇದು ಸೂಚಿಸುತ್ತದೆ. ಅಲ್ಲದೆ, ಆ ವೇಳೆಗೆ ಮೈಸೂರು ರಾಜ್ಯವು ಅಪಾರವಾಗಿ ಬೆಳೆದುಬಿಟ್ಟಿತ್ತು. ಇದರಿಂದ ಕೆಲವು ಇಲಾಖೆಗಳ ಪುನರ್‌ವ್ಯವಸ್ಥೆ ಮತ್ತು ಅವುಗಳ ಕಾರ್ಯಕ್ಷಮತೆಯನ್ನು ಹೆಚ್ಚಿಸುವುದು ಅತ್ಯಗತ್ಯವಾಗಿ ಪರಿಣಮಿಸಿತ್ತು. ಈ ಹಿನ್ನೆಲೆಯಲ್ಲಿ ಚಿಕ್ಕದೇವರಾಜ ಒಡೆಯರು ೧೮ ಚಾವಡಿಗಳನ್ನು ಅಥವಾ ಇಲಾಖೆಗಳನ್ನು ಸ್ಥಾಪಿಸಿದರು.

ಇವುಗಳಲ್ಲಿ ಮೈಸೂರು ಹೋಬಳಿ ವಿಚಾರಚಾವಡಿ ಪಟ್ಟಣದ ಹೋಬಳಿ ವಿಚಾರದ ಚಾವಡಿ, ಪಟ್ಟಣದ ಹೋಬಳಿ ಅಷ್ಟಗ್ರಾಮದ ಚಾವಡಿ, ಮೈಸೂರು ಹೋಬಳಿ ಅಷ್ಟಗ್ರಾಮದ ಚಾವಡಿ ಇವು ವಿಶೇಷವಾಗಿ ಸ್ವಾರಸ್ಯವಾದವು. ಈ ಚಾವಡಿಗಳು ಒಂದು ಸ್ತವನ ಅಥವಾ ಕಂದಾಯ ಇಲಾಖೆಗೆ ಸೇರಿದ್ದುವು. ಸುಭದ್ರವೂ ಸಮೃದ್ಧವೂ ಆದ ಖಜಾನೆಯ ಅಗತ್ಯದಲ್ಲಿ ನಂಬಿಕೆಯಿದ್ದ ಚಿಕ್ಕದೇವರಾಜ ಒಡೆಯರು ಸರ್ಕಾರವು ನಿರ್ಮಿಸಿದ ಶಾಲೆಗಳ ಕೆಳಗಿನ ಜಮೀನುಗಳಿಂದ ಕಂದಾಯವನ್ನು ವಸೂಲುಮಾಡಲು ಪ್ರತ್ಯೇಕ ಇಲಾಖೆಗಳನ್ನೇ ಸ್ಥಾಪಿಸಿದ್ದರು. ಈ ಇಲಾಖೆಗಳು ಸಂಪೂರ್ಣವಾಗಿ ಚಿಕ್ಕದೇವರಾಜರದೇ ಸೃಷ್ಟಿ. ಕಾವೇರಿ ನದಿಯ ಎರಡೂ ದಂಡೆಗಳಲ್ಲಿ ನೀರಾವರಿಯಾಗುತ್ತಿದ್ದ ಜಮೀನುಗಳು, ಚಿಕ್ಕದೇವರಾಜಸಾಗರ ನಾಲೆಗಳು, ದೇವರಾಜ ನಾಲೆ, ಮತ್ತು ಹೇಮಾವತಿ ನಾಲೆ ಇವುಗಳಿಂದ ಬೇಸಾಯವಾಗುತ್ತಿದ್ದ ಜಮೀನುಗಳು ಸರ್ಕಾರಕ್ಕೆ ಗಣನೀಯ ಪ್ರಮಾಣದ ಕಂದಾಯವನ್ನು ಒದಗಿಸುತ್ತಿದ್ದುವು. ಈ ಪ್ರದೇಶಗಳ ವಿಶೇಷ ಪ್ರಾಮುಖ್ಯದಿಂದಾಗಿ ರಾಜನು ಇಲ್ಲಿಯ ಕಂದಾಯ ವಸೂಲಾತಿಗೆಂದೇ ಪ್ರತ್ಯೇಕ ಇಲಾಖೆಯನ್ನು ತೆರೆದಿದ್ದನು. ಪ್ರತಿಯೊಂದು ಚಾವಡಿಯಲ್ಲಿ ಒಬ್ಬ ಗೊತ್ತುಗಾರ ಅಥವಾ ಮ್ಯಾನೇಜರು, ಮೂವರು ದಫ್ತೆದಾರರು ಅಥವಾ ದಾಖಲೆ ಇಡುವವರು ಅಥವಾ ಸೇವಕರು, ಕಾವಲಿಗಾರರು ಮತ್ತು ದೀವಟಿಗೆಯವರು ಅಥವಾ ಪಂಜು ಹಿಡಿಯುವವರು ಇರುತ್ತಿದ್ದರು. ಅವರವರ ಶ್ರೇಣಿ ಮತ್ತು ಹೊಣೆಗಾರಿಕೆಗಳಿಗೆ ತಕ್ಕಂತೆ ಅವರ ವೇತನವನ್ನು ನಿಗದಿಪಡಿಸಲಾಗುತ್ತಿತ್ತು. ವೇತನವನ್ನು ಅರ್ಧಭಾಗ ಧಾನ್ಯ ರೂಪದಲ್ಲೂ ಇನ್ನರ್ಧಭಾಗ ನಗದಾಗಿಯೂ ಕೊಡಲಾಗುತ್ತಿದ್ದಿತು. ಈ ಇಲಾಖೆಗಳ ಆಡಳಿತವನ್ನು ಕುರಿತು ರಹಸ್ಯವಾದ ವರದಿಗಳನ್ನು ತರಿಸಿಕೊಳ್ಳಲು ಗೂಢಾಚಾರರನ್ನು ನೇಮಿಸಲಾಗುತ್ತಿದ್ದಿತು. ಮೊದಮೊದಲ ಒಡೆಯರು $^{1}/_{4}$ ಪಾಲನ್ನು ಸಂಗ್ರಹಿಸುತ್ತಿದ್ದರು. ಚಿಕ್ಕದೇವರಾಜ ಒಡೆಯರು ಸಾಮಾನ್ಯವಾಗಿ $^{1}/_{3}$ ಅಥವಾ $^{1}/_{2}$ ಭಾಗವನ್ನು ಸಂಗ್ರಹಿಸಿದರು. ಹೊಸದಾಗಿ ಗೆದ್ದುಕೊಂಡ ರಾಜ್ಯಗಳ ಜನರಲ್ಲಿ ತನ್ನ ಬಗೆಗೆ ವಿಶ್ವಾಸ ಮೂಡಿಸಲು, ಜನಪ್ರಿಯವಾಗಲು ಅಲ್ಲಿ ಕಂದಾಯ ದರವನ್ನು ತಗ್ಗಿಸಿರಬಹುದು. ಭೂಕಂದಾಯ ಲೆಕ್ಕಪತ್ರಗಳನ್ನು ವರಹಗಳಾಗಿ ದಾಖಲಿಸಲಾಗುತ್ತಿತ್ತು. ಉದಾಹರಣೆಗೆ 'ಎರಡು ವರಹಗಳ ಭೂಮಿ' ಎಂದರೆ ಎರಡು ವರಹ ವರಮಾನವನ್ನು ತಂದುಕೊಡುವ ಭೂಮಿ ಎಂದರ್ಥವಾಗುತ್ತಿತ್ತು. ಕಂದಾಯವನ್ನು ನಗದಾಗಿಯೂ ವಸ್ತುರೂಪದಲ್ಲೂ ಕೊಡಬಹುದಾಗಿತ್ತು. ರಾಜನು ಜಮೀನಿನ ಸರ್ವೆ ಮಾಡಿಸುತ್ತಿದ್ದನು. ಮಣ್ಣಿನ ಫಲವತ್ತತೆಯ ಆಧಾರದ ಮೇಲೆ ಕಂದಾಯವನ್ನು ನಿಗದಿಪಡಿಸಲಾಗುತ್ತಿತ್ತು. ಮಣ್ಣಿನ ಫಲವತ್ತತೆಗೆ ಅನುಗುಣವಾಗಿ ನಿಗದಿ ಆಗುತ್ತಿತ್ತು. ಹೊಲ (ಖುಷ್ಕಿ), ಗದ್ದೆ (ತರಿ) ಮತ್ತು ತೋಟ (ಬಾಗಾಯಿತು) ಗಳೆಂದು ಮೂರು ಬಗೆಯಾಗಿ ವಿಂಗಡಿಸಿದ್ದರು. ಕಂದಾಯವನ್ನು ಸುವರ್ಣದಾಯ ಅಥವಾ ಧನಾದಾಯವೆಂದು ಕರೆಯುತ್ತಿದ್ದರು. ಅದನ್ನು ನಗದಾಗಿಯೂ ವಸ್ತುರೂಪದಲ್ಲೂ ಪಾವತಿ ಮಾಡಬಹುದಾಗಿತ್ತು. ಸರಕಾರೀ ಮೂಲಗಳಿಂದ ನೀರು ಪಡೆಯುವ ಜಮೀನುಗಳು ಅಣೆ ಮತ್ತು ಅಚ್ಚುಕಟ್ಟು ಎಂಬ ವಿಶೇಷ ಕಂದಾಯ ಸಲ್ಲಿಸಬೇಕಾಗಿತ್ತು. ಕೆಲವು ಉಂಬಳಿ ಜಮೀನುಗಳು ಜೋಡಿಕಂದಾಯವನ್ನು ತೆರಬೇಕಾಗಿದ್ದಿತು. ಹುಲ್ಲು ಅಥವಾ ದನದ ಮೇಲಿನ ಮೇಲೆ ಹುಲ್ಲುಹಣ ಎಂಬ ತೆರಿಗೆಯನ್ನೂ ಸಂಗ್ರಹಿಸಲಾಗುತ್ತಿತ್ತು. ಸೀಗೆಮರಗಳು ಮತ್ತು ಶ್ರೀಗಂಧದ ಮರಗಳ ಮೇಲೆ ತೆರಿಗೆಯಿದ್ದಿತು.

ಕಾಡುಗಳ ನಡುವೆ ಹುಲ್ಲುಗಾವಲುಗಳೂ ಸರಕಾರಕ್ಕೆ ವರಮಾನವನ್ನು ಕೊಡುತ್ತಿದ್ದುವು. ಅಷ್ಟಗ್ರಾಮ ವಿಭಾಗದಲ್ಲಿ ಭತ್ತ, ಕಬ್ಬು ಮೊದಲಾದವನ್ನು ಬೆಳೆಯುವ ಗದ್ದೆಗಳಿಗೆ ನಿಗದಿಯಾದ ಕಂದಾಯಕ್ಕೆ ಅರ್ಧಾವ್ರ ಅಥವಾ ಒಟ್ಟು ಉತ್ಪನ್ನದ $^1/_2$ ಭಾಗ ಎಂದು ಹೆಸರಿತ್ತು. ಅಷ್ಟಗ್ರಾಮದಲ್ಲಿ ವಾಸಮಾಡುತ್ತಿದ್ದ ರೈತರಿಗೆ ಇದು ಬಹಳ ಹೆಚ್ಚಿನ ಭಾರವೆನಿಸಿ ಅವರೆಲ್ಲ ಒಟ್ಟಾಗಿ ಚಿಕ್ಕದೇವರಾಜರಿಗೆ ಮನವಿ ಸಲ್ಲಿಸಿದರು. ಆಗ ರಾಜನು ಇಡೀ ವಿಷಯವನ್ನು ಆಮೂಲಾಗ್ರ ವಿಚಾರ ಮಾಡಿದನು. ಒಟ್ಟು ಫಸಲನ್ನು ಮೂರು ಭಾಗವಾಗಿ ಮಾಡಿದನು. ಒಂದು ಭಾಗವು ಕೃಷಿಯ ವೆಚ್ಚಕ್ಕೆ ಹೋಗತಕ್ಕದು, ಎರಡನೆಯ ಭಾಗವು ರೈತರ ಮನೆ ಬಳಕೆಗೆ ಸಲ್ಲಿಸತಕ್ಕದು, ಮೂರನೆಯ ಭಾಗವನ್ನು ಸರಕಾರಕ್ಕೆ ನೀಡತಕ್ಕದ್ದು ಎಂದು ನಿಗದಿಪಡಿಸಿದನು.[೨೯೬] ಕೆಲವು ವರ್ಷಗಳ ಕಾಲ ಇದು ಹೀಗೆಯೇ ಮುಂದುವರಿಯಿತು. ಜಮೀನಿನ ಉತ್ಪನ್ನ ಹೆಚ್ಚಾದ ಮೇಲೆ ಮತ್ತೆ ಅವುಗಳ ಮೇಲೆ ಅರ್ಧವಾರವನ್ನು ನಿಗದಿ ಪಡಿಸಲಾಯಿತು. ನೀರಾವರಿ ಜಮೀನುಗಳಲ್ಲಿ ಬಹುತೇಕ ಭತ್ತವೇ ಬೆಳೆಯುವಂತೆ ಅವನು ನೋಡಿಕೊಂಡನು.

ಚಿಕ್ಕದೇವರಾಜ ಒಡೆಯರು ರೈತರಿಗೆ ಬೇಕಾದಷ್ಟು ವಿನಾಯಿತಿಗಳನ್ನು ನೀಡಿ ಅವರು ಬಂಜರು ಭೂಮಿಯನ್ನೂ ಸಾಗುವಳಿಗೆ ಹೊಸದಾಗಿ ತರಲು ಪ್ರೋತ್ಸಾಹಿಸಿದರು. ಅಂತಹ ನೆಲವನ್ನು ಉತ್ತು ''ಹನ್ನೆರಡು ಹಣ''ಕ್ಕೆ ಸಮನಾಗುವಷ್ಟು ಫಸಲನ್ನು ಪಡೆದರೆ ಅಂತಹ ರೈತರಿಂದ ಚಿಕ್ಕದೇವರಾಜರು ಮುಂದಿನ ಮೂರು ವರ್ಷಗಳ ಕಾಲ ಉತ್ಪನ್ನದ ೧/೯ ಪಾಲನ್ನು ಸರಕಾರದ ಭಾಗವಾಗಿ ಪಡೆದುಕೊಳ್ಳುತ್ತಿದ್ದರು. ಮಧ್ಯಮಗುಣದ ಜಮೀನು '೧೬ ಹಣ' ಉತ್ಪನ್ನವನ್ನು ನೀಡುತ್ತಿದ್ದರೆ, ೫ ವರ್ಷಗಳ ಕಾಲ ೧/೪ ಭಾಗವನ್ನು ಕಂದಾಯವಾಗಿ ಪಾವತಿ ಮಾಡಬೇಕಾಗಿತ್ತು. ಅದಾದ ಮೇಲೆ ಮಾಮೂಲು ದರದಲ್ಲಿ ತೆರಿಗೆ ವಸೂಲಾಗುತ್ತಿತ್ತು. ತೋಟಗಳಿಗೆ ಪ್ರತ್ಯೇಕವಾಗಿ ನಿಗದಿಯಾಗುತ್ತಿತ್ತು. ಒಂದು ಸಾವಿರ ಮರಗಳಿದ್ದ ಒಂದು ತೋಟವು ವಾರ್ಷಿಕ ೧೫ರಿಂದ ೨೮ ವರಹ ಕಂದಾಯವನ್ನು ಪಾವತಿ ಮಾಡುತ್ತಿತ್ತು. ಹೊಲಗಳಲ್ಲಿ ಬೆಳೆದ ಹಲಸು ಮತ್ತು ಹುಣಿಸೆ ಮರಗಳು ೨ ಹಣ ಕಂದಾಯವನ್ನು, ಕೆರೆಗಳು ಮತ್ತು ನಾಲೆಗಳ ನೀರಾವರಿಯಿರುವ ಗದ್ದೆಗಳು ಪಸಲಿನ $^1/_2$ವನ್ನು ಕಂದಾಯವಾಗಿಯೂ ಪಾವತಿ ಮಾಡುತ್ತಿದ್ದುವು.[೨೯೭]

ಚಿಕ್ಕದೇವರಾಜ ಒಡೆಯರ ಆಳ್ವಿಕೆಯಲ್ಲಿ ರಾಜ್ಯದ ವಾರ್ಷಿಕ ಆದಾಯ ೭,೨೦,೦೦೦ ಪಗೋಡಾಗಳು. ಹಣಕಾಸು ಸಚಿವನು ಪ್ರತಿದಿನ ಮಧ್ಯಾಹ್ನದೊಳಗೆ ಬೊಕ್ಕಸಕ್ಕೆ ೨೦೦೦ ಪಗೋಡಗಳನ್ನು ಜಮಾ ಮಾಡಬೇಕಾಗಿತ್ತು. ಅದಾಗುವವರೆಗೆ ಮಹಾರಾಜನು ಬೆಳಗಿನ ಉಪಹಾರ ಸ್ವೀಕರಿಸುತ್ತಿರಲಿಲ್ಲ. ಹೀಗೆ ಬಹು ಜಾಗರೂಕತೆಯಿಂದ ಪೋಷಿಸಿ ಚಿಕ್ಕದೇವರಾಜ ಒಡೆಯರು ರಾಜ್ಯದ ಬೊಕ್ಕಸದಲ್ಲಿ ಒಂಬತ್ತು ಕೋಟಿ ಪಗೋಡಗಳನ್ನು ಸಂಗ್ರಹಿಸಿದರು. ಪ್ರಜೆಗಳು ಅವರನ್ನು ನವಕೋಟಿ ನಾರಾಯಣ ಎಂದು ಕೊಂಡಾಡಿದರು. ಅವರು ಸ್ಥಾಪಿಸಿದ ಈ ವ್ಯವಸ್ಥೆಯು ೧೭೬೧ರ ವರೆಗೂ ಮುಂದುವರೆದಿತ್ತು.

ಚಿಕ್ಕದೇವರಾಜ ಒಡೆಯರ ಭೂಕಂದಾಯ ನೀತಿಯು ಭೂಮಿಯಿಂದ ವರಮಾನವನ್ನು ಅಧಿಕಗೊಳಿಸಿಕೊಳ್ಳಬೇಕೆಂಬ ವಿಚಾರದಿಂದ ಮುಖ್ಯವಾಗಿ ಪ್ರೇರಿತವಾದದ್ದು. ಹೊಸ ಹೊಸದಾಗಿ ನೆಲವನ್ನು ಉಳುಮೆಗೊಳಪಡಿಸಲು ಅವರು ರೈತರನ್ನು ಪ್ರೋತ್ಸಾಹಿಸಿದರು. ಅದಕ್ಕಾಗಿ ನಿರ್ದಿಷ್ಟ ವರ್ಷಗಳ ಕಾಲ ತೆರಿಗೆ ಮನ್ನಾ ಮಾಡುತ್ತಿದ್ದನು, ಅದೂ ಆ ಜಮೀನಿನ ಫಲವತ್ತತೆಗನುಗುಣವಾಗಿ. ಉತ್ತಮ ಭೂಮಿಗೆ, ಪೂರ್ತಿ ನಿಗದಿಯ ಮೂರನೆ ಎರಡು ಭಾಗ ಐದು ವರ್ಷಗಳವರೆಗೆ; ಮಧ್ಯಮ ಭೂಮಿಗೆ, ನಿಗದಿಯ ನಾಲ್ಕನೆ ಒಂದು ಭಾಗ.[೨೯೮]

೧೮ನೆಯ ಶತಮಾನದ ಮೊದಲರ್ಧದಲ್ಲಿ ನಮ್ಮ ಗಮನಕ್ಕೆ ಬರುವ ಮುಖ್ಯವಾದೊಂದು ಬೆಳವಣಿಗೆ ಕಂದಾಯದ ಜೊತೆಗೆ ಸರಕಾರವು ಸಂಗ್ರಹಿಸುತ್ತಿದ್ದ ಸಣ್ಣ ಪುಟ್ಟ ಸುಂಕಗಳ ಸಂಖ್ಯೆಯಲ್ಲಿ ಆದ ಹೆಚ್ಚಳ.

ರಾಜಾವಳೀ ಕಥೆಯು ಚಿಕ್ಕದೇವರಾಜಒಡೆಯರ ಕಾಲದಲ್ಲಿ ವಿಧಿಸಲಾಗಿದ್ದ ಲಂಕ್ಕಿಂತಲೂ ಹೆಚ್ಚು ಮೇಲುಸುಂಕಗಳನ್ನು ಉಲ್ಲೇಖಿಸುತ್ತದೆ.[೯೯] ೧೭೯೯ರ ಕೃಷ್ಣರಾಜಒಡೆಯರ ಒಂದು ಶಾಸನವು ೨೮ ಸೆಸ್‌ಗಳನ್ನು ಪಟ್ಟಿಮಾಡುತ್ತದೆ. ತೋಟ, ತುಡಿಕೆ, ಅಣೆ (ಕಾಲುವೆಗಳಿಂದ ನೀರಾವರಿಗೊಂಡ ಜಮೀನು), ಅಚ್ಚುಕಟ್ಟು (ಕೆರೆಗಳಿಂದ ನೀರಾವರಿಯಾಗುತ್ತಿದ್ದ ಜಮೀನು), ಕೆರೆಕಟ್ಟೆ, ಕಾಲ್ವೆ, ಕೊಂಡಾರರು, ಮಗ್ಗ, ಮನೆವನ, ಸುಂಕ, ಸುವರ್ಣದಾಯ, ತೆರಿಗೆ, ಈಚಲು ಕಂದಾಯ, ಬಾಲದೆರಿಗೆ (ಎಲ್ಲಾ ಬಗೆಯ ಪ್ರಾಣಿಗಳ ಮೇಲೆ), ಹೊರದಾಯ, ಚರದಾಯ ಜೋಡಿ, ಬೇಡಿಗೆ, ಹುಲ್ಲುಹಣ, ಬ್ರಾಹ್ಮಣ ನಿವೇಶನ, ಶೂದ್ರ ನಿವೇಶನ, ಹಟ್ಟಿ ಪೊಮ್ಮು, ಮಾರ್ಗಸುಂಕ, ದೇವರಾಯವಟ್ಟ, ಪಟ್ಟ-ಕಾಣಿಕೆ, ಮೆಂಡ್ರೆ ಕಾಣಿಕೆ, ಸೊಪ್ಪಿನ ತೋಟ, ಚಿತುವನ ಪೈರು.[೧೦೦] ಹೀಗೆ ಮೇಲು ಸುಂಕಗಳ ಸಂಖ್ಯೆಯಲ್ಲಿ ಆದ ಹೆಚ್ಚಳವು ೧೮ ನೇ ಶತಮಾನದ ಮೊದಲರ್ಧದಲ್ಲಿ ಮೈಸೂರು ರಾಜ್ಯದ ರಾಜಕೀಯ ಪರಸ್ಥಿತಿಯ ಪ್ರತಿಬಿಂಬವಾಗಿದೆ. ಅದು ಯುದ್ಧಗಳು ಮತ್ತು ಅಕ್ರಮಣಗಳ ಬಿರುಗಾಳಿ ಬೀಸುತ್ತಿದ್ದ ಕಾಲ. ಸಾಧ್ಯವಾದಷ್ಟು ಮೂಲಗಳನ್ನು ಹುಡುಕಿ ರೈತರಿಂದ ತೆರಿಗೆಯನ್ನು ವಸೂಲು ಮಾಡಲು ಸರಕಾರವು ಯತ್ನಿಸುತ್ತಿದ್ದಿತು. ಇದರ ಜೊತೆಗೆ ಬ್ರಾಹ್ಮಣರಿಗೆ, ದೇವಾಲಯಗಳಿಗೆ ಹಳ್ಳಿಗಳನ್ನೇ ದತ್ತಿಯಾಗಿ ಕೊಟ್ಟುಬಿಡುತ್ತಿದ್ದುದು ರಾಜ್ಯದ ಬೊಕ್ಕಸದ ಮೇಲೆ ಪರಿಣಾಮವನ್ನು ಉಂಟುಮಾಡಿರಲೇಬೇಕು. ಈ ಸಂದರ್ಭದಲ್ಲಿ ಎರಡು ಶಾಸನಗಳನ್ನು ಉದ್ಧರಿಸಬಹುದು. ಒಂದು ೧೭೯೯ ರಲ್ಲಿ ೧೨೦ ಬ್ರಾಹ್ಮಣರ ಸಮುದಾಯಕ್ಕೆ ೧೪ ಹಳ್ಳಿಗಳನ್ನು ದತ್ತಿಯಾಗಿ ನೀಡಿದ ಸಂದರ್ಭ.[೧೦೧] ಇನ್ನೊಂದು ಕ್ರಿ. ಶ. ೧೭೨೨ ರ ಶಾಸನ, ೨೦ ಹಳ್ಳಿಗಳನ್ನು ದಾನವಾಗಿ ನೀಡಿದ್ದನ್ನು ಹೇಳುವುದು. ೨೦ ಗ್ರಾಮಗಳನ್ನು ೧೧೨ ವೃತ್ತಿಗಳಾಗಿ ವಿಭಾಗಿಸಿ ಬ್ರಾಹ್ಮಣ ವೃತ್ತಿದಾರರಿಗೆ ದಾನ ಮಾಡಲಾಯಿತು. ಈ ಹಳ್ಳಿಗಳು ''ಫಲವತ್ತಾಗಿದ್ದುವು, ಜನನಿಬಿಡವಾಗಿದ್ದುವು, ಸೇತುವೆಗಳು ಉತ್ತಮವಾದ ಕೆರೆಗಳು ಮೊದಲಾದ ಸೌಲಭ್ಯಗಳಿಂದ ಕೂಡಿದ್ದುವು.'' ಇದೆಲ್ಲ ಭತ್ತ, ಕಬ್ಬು ಮತ್ತು ತೋಟದ ಬೆಳೆಗಳನ್ನು ಬೆಳೆಯಲು ಉತ್ತಮವಾದ ಮಣ್ಣುಳ್ಳ ನೆಲದೊಂದಿಗೆ.

ಪ್ರತಿಯೊಬ್ಬ ವೃತ್ತಿದಾರನಿಗೂ ಅತ್ಯುತ್ತಮ, ಮಧ್ಯಮ, ಕನಿಷ್ಠ ಹೀಗೆ ಮೂರೂ ಬಗೆಯ ನೆಲದ ಸಮ ಪಾಲಿತ್ತು. ಬ್ರಾಹ್ಮಣರಿಗಾಗಿ ಉತ್ತಮರಾದ ಗಾರೆಯವರು ೧೧೨ ಸೊಗಸಾದ ಮನೆಗಳನ್ನು ಕಟ್ಟಿದರು. ಆ ಮನೆಗಳಿಗೆ ಅಗಲವಾದ, ವಿಹಿತವಾದ ಬಾಗಿಲುಗಳಿದ್ದುವು. ಮನೆಗಳಲ್ಲಿ ಪೀಠೋಪಕರಣಗಳನ್ನು ದವಸ ಧಾನ್ಯಗಳನ್ನೂ ತುಂಬಲಾಗಿತ್ತು. ಅಲ್ಲದೆ, ಹಾಲು ಕರೆಯುವ ಒಂದು ಹಸು, ಕರುಗಳನ್ನು ಪ್ರತಿಯೊಂದು ಮನೆಗೂ ಒದಗಿಸಲಾಗಿತ್ತು. ಪ್ರತಿ ಕುಟುಂಬಕ್ಕೂ ಎರಡು ರೇಷ್ಮೆ ಅಂಗಿ, ಶಾಲುಗಳು, ಕರ್ಣಾಭರಣಗಳು, ಕೈ ಬೆರಳಿಗೆ ಉಂಗುರಗಳು ಮೊದಲಾದುವನ್ನು ಕೊಟ್ಟರು. ಈ ಬಗೆಯ ದಾನದಿಂದ ರಾಜ್ಯಕ್ಕೆ ಎಷ್ಟು ವೆಚ್ಚ ತಗಲುತ್ತಿದ್ದಿತೆಂಬುದು ಸುವ್ಯಕ್ತವೇ ಆಗಿದೆ. ಇದರ ಫಲವಾಗಿ ಸರಕಾರವು ಹೆಚ್ಚು ಮೇಲು ಸುಂಕಗಳನ್ನು ವಿಧಿಸಲೇಬೇಕಾಯಿತು, ಏರುತ್ತಲೇ ಇದ್ದ ವೆಚ್ಚಗಳನ್ನು ನಿರ್ವಹಿಸಲು ರೈತರ ಮೇಲೆ ಭಾರವನ್ನು ಹೊರಿಸಲೇ ಬೇಕಾಯಿತು.[೧೦೨]

ಕೃಷಿ ವಲಯದಲ್ಲೇ ಭೂಕಂದಾಯ ಮತ್ತು ಇತರ ತೆರಿಗೆಗಳಿಂದ ವಿನಾಯಿತಿ ಪಡೆದ ಕೆಲವು ವರ್ಗಗಳಿದ್ದುವು. ಅವರಲ್ಲಿ ಹಲವರು ಅಷ್ಟ-ಭೋಗ-ತೇಜ-ಸ್ವಾಮ್ಯ ಗಳೆಂಬ ಹೆಸರಿನಲ್ಲಿ ಒಂಬತ್ತು ಹಕ್ಕುಗಳೊಂದಿಗೆ ಪೂರ್ತಿ ಒಡೆತನವನ್ನು, ವ್ಯವಹಾರ ಚತುಷ್ಟಯ (ನಾಲ್ಕು ಬಗೆಯ ಹಕ್ಕುಗಳು) ಗಳನ್ನು ಅನುಭವಿಸುತ್ತಿದ್ದರು. ಅವರು ನೇರವಾಗಿ ನೆಲವನ್ನು ಉಳುತ್ತಿರಲಿಲ್ಲ. ಹೀಗೆ ಅವರು ಜಮೀನುದಾರ ಮಧ್ಯವರ್ತಿಗಳಾದರು. ನಮ್ಮ ಅಧ್ಯಯನದ ಅವಧಿಯಲ್ಲಿ ಊಳಿಗಮಾನ್ಯತೆ, ಊಳಿಗದ ಶೋಷಣೆ ಇವು ಹೆಚ್ಚಾಗಿ ನಿರ್ದಿಷ್ಟ ಕಾಲಾವಧಿಯ ಗುತ್ತಿಗೆ ಕ್ರಮವು ಜಾರಿಗೆ ಬಂದಿತ್ತು. ಬ್ರಹ್ಮದಾಯ, ದೇವದಾಯ, ಮಠಪುರದಂತಹ ಲಾಭದಾಯಕ ಹಿಡುವಳಿಗಳು ಬ್ರಾಹ್ಮಣರು, ದೇವಾಲಯಗಳು ಮತ್ತು ಮಠಗಳಿಗೆ ಭೂಮಿಯನ್ನು ದಾನಮಾಡುವುದು

ಪುಣ್ಯ ಪ್ರದವಾದದ್ದು ಎಂಬ ನಂಬಿಕೆಯ ಫಲವಾಗಿದ್ದುವು. ಧರ್ಮದ ವಿಸ್ತರಣ, ಪಾಲನೆ ಮತ್ತು ಬೆಳವಣಿಗೆಗಳ ಹೊಣೆಹೊತ್ತವರಿಗೆ ಲೌಕಿಕವಾದ ಆಧಾರವನ್ನು ಒದಗಿಸುವ ಮೂಲಕ ಹಿಂದೂಧರ್ಮವನ್ನು ಬೆಳಸಬೇಕೆಂಬ ಅವರ ಆಸೆಯನ್ನು ತೋರಿಸುತ್ತಿದ್ದುವು. ಈ ಪ್ರಯೋಜನ ಪಡೆದ ವ್ಯಕ್ತಿಗಳು ಮತ್ತು ಸಂಸ್ಥೆಗಳು ಸರಕಾರಕ್ಕೆ ಯಾವುದೇ ಕಂದಾಯವನ್ನಾಗಲಿ ಇತರ ತೆರಿಗೆಯನ್ನಾಗಲಿ ಕಟ್ಟದೆ, ಜಮೀನಿನ ಪೂರ್ಣಫಲವನ್ನು ಅನುಭವಿಸುತ್ತಿದ್ದರು. ಇದಕ್ಕೆ ಸರ್ವಮಾನ್ಯ ಎಂಬ ಹೆಸರಿತ್ತು.

ವ್ಯಾಪಕವಾಗಿ ಹಣದ ಬಳಕೆ ಇರದುದು; ಕೃಷಿಯೋಗ್ಯ ಭೂಮಿಯು ಧಾರಾಳವಾಗಿ ದೊರಕುತ್ತಿದ್ದುದು; ಸರಕಾರಗಳ ಆಡಳಿತೀಯ ಅಗತ್ಯ; ಸರಕಾರಕ್ಕೂ ಸಮಾಜಕ್ಕೂ ವ್ಯಕ್ತಿಗಳು ವಿವಿಧ ಸ್ವರೂಪದ ಸೇವೆಗಳನ್ನು ಸಲ್ಲಿಸುವ ಅದಕ್ಕಾಗಿ ದಾನಗಳನ್ನು ನೀಡುತ್ತಿದ್ದುದು, ಇವೆಲ್ಲ ಕೂಡಿ ನಿರ್ದಿಷ್ಟ ಸೇವಾವರ್ಗ ಸ್ಥಾಪನೆಗೆ ದಾರಿಯಾಯಿತು. ಅಮರನಾಯಕ ಹುದ್ದೆ ಅಂತಹ ಸೇವಾವರ್ಗಗಳಲ್ಲಿ ಒಂದು. ಸದಾ ಕಾಲವೂ ಉತ್ತರದಲ್ಲಿ ನೆರೆಯ ರಾಜ್ಯಗಳೊಂದಿಗೆ ಯುದ್ಧನಿರತವಾಗಿರುತ್ತಿದ್ದ ವಿಜಯನಗರವು ಅದರ ಅಗತ್ಯವನ್ನು ಕಂಡುಕೊಂಡಿತು. ಅಗತ್ಯವಾಗಿದ್ದ ಬೃಹತ್ ಸೈನ್ಯವನ್ನು ವಿವಿಧ ಶ್ರೇಣಿಗಳು ಮತ್ತು ವರ್ಗಗಳಿಗೆ ಸೇರಿದ ಅಮರನಾಯಕರು ಪಾಲಿಸುತ್ತಿದ್ದರು. ಅವರಿಗೆ ವಹಿಸಿಕೊಟ್ಟ ರಾಜ್ಯದ ಭಾಗಗಳಿಂದ ವಸೂಲು ಮಾಡಿದ ಕಂದಾಯ ಮತ್ತು ಇತರ ತೆರಿಗೆಗಳನ್ನು ಇದಕ್ಕಾಗಿ ಅವರು ವೆಚ್ಚ ಮಾಡುತ್ತಿದ್ದರು.

ಕೃಷಿಯೇತರ ವರ್ಗಗಳೂ, ವಿದ್ವಾಂಸರಾದ ಬ್ರಾಹ್ಮಣರು, ಇತರ ಧಾರ್ಮಿಕ ವ್ಯಕ್ತಿಗಳು ಹಿಡುವಳಿ ಹೊಂದಿದ್ದು ಅವನ್ನು ರೈತರಿಗೆ ಗುತ್ತಿಗೆ, ಗೇಣಿ, ಗಾದಿ, ವಾರ, ಸಿದ್ಧಾಯಗಳ ಆಧಾರದ ಮೇಲೆ ಬೇಸಾಯ ಮಾಡಲು ವಹಿಸಿಕೊಡುತ್ತಿದ್ದರು.

ಮೇಲಿನ ಚರ್ಚೆಯಿಂದ ನಾವು ಈ ಕೆಳಗಿನ ನಿರ್ಣಯಗಳಿಗೆ ಬರಬಹುದು. ಮೊದಲನೆಯದಾಗಿ, ಪರಿಶೀಲನಾವಧಿಯಲ್ಲಿ ಕರ್ನಾಟಕದಲ್ಲಿ ಆಳಿದ ರಾಜರು, ವಿಜಯನಗರ, ಕೆಳದಿ, ಒಡೆಯರು ಮೊದಲಾದವರು, ರೈತರಿಂದ ೧/೬ ಪಾಲನ್ನು ಪಡೆಯಬೇಕು. ಎಂಬ ಪ್ರಾಚೀನ ಸಂಪ್ರದಾಯವನ್ನು ಕೈಬಿಟ್ಟಿದ್ದರು. ಆದರೆ ಸುಧೀರ್ಘ ಆಡಳಿತಾವಧಿಯಲ್ಲಿ ಅವರು ರೈತರ ಮೇಲೆ ದಮನಕಾರಿ ತೆರಿಗೆ ಪದ್ಧತಿಯನ್ನು ಹೇರಲು ಸಾಧ್ಯವಿರಲಿಲ್ಲ. ಏಕೆಂದರೆ ಅಂತಹ ನೀತಿಯಿಂದ ರೈತರು ಬೇರೆ ಕಡೆಗೆ ಓಡಿಹೋಗಿಬಿಡುತ್ತಿದ್ದರು. ಅದು ಅರಸರಿಗೆ ಪೇಕ್ಷಣೀಯವಾಗಿರಲಿಲ್ಲ. ಅಲ್ಲದೆ ಎಲ್ಲಾ ಕಡೆಯೂ ಧಾರಾಳವಾಗಿ ನೆಲವು ದೊರಕುತ್ತಿದ್ದುದರಿಂದ, ನೆಲದ ಮೇಲೆ ಜನರ ಒತ್ತಡ ಇರಲಿಲ್ಲವಾದ್ದರಿಂದ, ಅತಿರೇಕದ ತೆರಿಗೆ ವಿಧಿಸಿದರೆ ರೈತರು ಬೇಸತ್ತು ಬೇರೆ ಕಡೆಗೆ ಹೋಗಿಬಿಡಬಹುದು ಎಂದು ಭೀತಿ ರಾಜರಲ್ಲಿ ಇರುತ್ತಿತ್ತು. ಆದ್ದರಿಂದ ರೈತರು ಅಲ್ಲೇ ಉಳಿಯುವಂತೆ ಮಾಡಿ ಕೃಷಿಯನ್ನು ವಿಸ್ತರಿಸಿ ತಮ್ಮ ಉದ್ದೇಶವನ್ನು ಅವರು ಪೂರೈಸಿಕೊಳ್ಳುತ್ತಿದ್ದರು.

ಎರಡನೆಯದಾಗಿ, ಈ ಕಾಲಾವದಿಯ ರಾಜರು ಒಂದಲ್ಲೊಂದು ಬಗೆಯಾಗಿ ನೆಲ ಅಳತೆಮಾಡುವ ವಿಧಾನವನ್ನು ರೂಪಿಸಿಕೊಂಡಿದ್ದರು. ಹಲವು ಅಳತೆಕೋಲುಗಳು, ಉಪಕರಣಗಳು ದೊರಕಿವೆ, ಮೇಲಿನ ಮಾತನ್ನು ಸಮರ್ಥಿಸಿವೆ. ಕರ್ನಾಟಕದಲ್ಲಿ ಆಗಲೆ ಇದ್ದ ಅಳತೆಗಳನ್ನು ಬಳಸುವುದು ಮಾತ್ರವಲ್ಲದೆ ಹೊಸ ಅಳತೆಗಳನ್ನು ಪರಿಚಯಗೊಳಿಸಲಾಗಿತ್ತು.

ಮೂರನೆಯದಾಗಿ ಈ ಅವಧಿಯಲ್ಲಿ ಅರಸರು ಬೇಧಾತ್ಮಕ ತೆರಿಗೆ ಪದ್ಧತಿಯನ್ನು ಅನುಸರಿಸಿದರು. ಅಂದರೆ ಗದ್ದೆಗಳು ಹೊಲಗಳಿಗಿಂತ ಹೆಚ್ಚಿನ ಕಂದಾಯ ಕೊಡಬೇಕಾಗಿತ್ತು. ಗದ್ದೆಗಳನ್ನು ವಿವಿಧ ವರ್ಗಗಳನ್ನಾಗಿ ವಿಭಜಿಸಲಾಗಿತ್ತು. ಕರ್ನಾಟಕದ ಇತರ ಭಾಗಗಳಲ್ಲೂ ಮಣ್ಣಿನ ಲಕ್ಷಣ, ಫಲವಂತಿಕೆ ಮತ್ತು ಪರಿಸ್ಥಿತಿಗಳ ಆಧಾರದಿಂದ ಕೃಷಿ ಭೂಮಿಯನ್ನು ವಿಭಜಿಸುವ ಪದ್ಧತಿಯಿತ್ತು. ಅಂದರೆ, ಅವರು ಎಲ್ಲಾ ಜಮೀನುಗಳಿಗೂ ಒಂದೇ ಬಗೆಯಾಗಿ ಕಂದಾಯ ನಿಗದಿ ಮಾಡುತ್ತಿರಲಿಲ್ಲ ಎಂಬುದು ಇದರಿಂದ ಸೂಚಿತವಾಗುತ್ತದೆ.

ಕೊನೆಯದಾಗಿ, ವಿವಿಧ ರಾಜವಂಶಗಳು ತಮ್ಮದೇ ತೆರಿಗೆ ದರವನ್ನು ನಿಗದಿಪಡಿಸಿಕೊಂಡಿದ್ದರು. ಉದಾಹರಣೆಗೆ ವಿಜಯನಗರದ ಅರಸರು ರೇಖಾ ಪದ್ಧತಿಯನ್ನು ರೂಪಿಸಿಕೊಂಡರೆ, ಕೆಳದಿಯ ಅರಸರು ಶಿಸ್ತು ಪದ್ಧತಿಯನ್ನು ವಿಕಾಸಪಡಿಸಿದರು. ಸರಕಾರದ ಅಗತ್ಯಗಳು, ಕೃಷಿಯೇತರ ವರ್ಗಗಳು ಮತ್ತು ಮೂಲ ಬೆಳೆಗಾರರು ಇವರುಗಳ ಅಗತ್ಯಗಳನ್ನು ಪೂರೈಸಿದ ಮೇಲೂ ಕರ್ನಾಟಕವು ಕೃಷಿ ಉತ್ಪನ್ನಗಳನ್ನು ಹೆಚ್ಚುವರಿಯಾಗಿಯೇ ಉತ್ಪಾದಿಸುತ್ತಿದ್ದಿತು. ಅದನ್ನು ವ್ಯಾಪಾರದ ಮೂಲಕ ವಿನಿಯೋಗ ಮಾಡಲಾಗುತ್ತಿತ್ತು.

ಟಿಪ್ಪಣಿಗಳು

೧ ''ಕೋಟಿ ವಿದ್ಯೆಗಳಲ್ಲಿಮೇಟಿ ವಿದ್ಯವೆ ಮೇಲು ಮೇಟಿಯಿಂ ರಾಟಿ ನಡೆದುದಲ್ಲದೆ ದೇಶ ದಾಟಿವೆ ಕೆಡುಗು ಸರ್ವಜ್ಞ'' ಚೆನ್ನಪ್ಪ ಉತ್ತಂಗಿ, ಸರ್ವಜ್ಞ, ಪು. ೧೬೨, ಪದ್ಯ ೧೨೯

೨ ಅದೇ,ಪು. ೫, ಪದ್ಯ ೩೮, ಪು. ೧೬೨-೧೬೩, ಪದ್ಯ ೧೨೭, ೧೨೩೪, ೧೨೩೫

೩ ಎ.ಕ. ೧೦, ಮುಳಬಾಗಿಲು. ೧೭೨, ಪಠ್ಯ, ಭಾಗ-೨, ಪು. ೧೧೨-೧೧೩; ಅದೇ, ಎಂ. ಬಿ ೭

೪ ಎಂ.ಎ.ಆರ್ ೧೯೨೭, ಪು. ೭೯; ಎ.ಕ. ೧೧, ೩೯೫ ಮತ್ತು ೪೦೩; ಅದೇ, ೨೨೫, ೨೨೯ ಮತ್ತು ೩೪೦ ಇತ್ಯಾದಿ

ಎಂ.ಎ.ಆರ್. ೧೯೩೩, ಪು. ೪೬; ಕರ್ನಾಟಕ ಇನ್‌ಸ್ಕ್ರಿಪಷನ್ಸ್, ಸಂ ೩-೧, ನಂ. ೯; ಎಂ.ಎ.ಆರ್ ೧೦೨೭, ಪು. ೭೯; ಅದೇ ೧೯೨೩ಪು. ೪೪ ಇತ್ಯಾದಿ.

ಕರ್ನಾಟಕ ಇನ್‌ಸ್ಕ್ರಿಪ್‌ಷ್‌ನ್ಸ್, ಸಂ ೩-೧, ೧೭; ಎಂ.ಎ.ಆರ್. ೧೯೨೩, ಪು.೧೧೧ ಇತ್ಯಾದಿ.

ಬುಕನನ್: ಎ ಜರ್ನಿ ಫ್ರಂ ಮಲಬಾರ್ ಥ್ರೂ ಮದರಾಸ್, ಮೈಸೂರ್ ಎಂಡ್ ಕೆನರಾ, ಸಂ. ೨, ಪು. ೨೨೮-೨೯. ಅದೇ.

ಎಂ.ಎ.ಆರ್, ೧೯೨೩, ಪು. ೧೧೧; ಎಸ್ ಐ.ಐ, ಸಂ.೭, ೨೫೨, ಪು. ೧೨೮; ಕರ್ನಾಟಕ ಇನ್‌ಸ್ಕ್ರಿಪ್ಷನ್ಸ್ ೩, ೧, ೯, ಪು. ೯. ಕ್ಯು.ಜೆ.ಎಂ.ಎಸ್, ಸಂ. ೩೧, ಪು.೪೫೦

ಎ.ಕ. ೪, ನಂ, ೧; ಎಸ್.ಐ.ಐ. ೭,ನಂ. ೨೨೩, ಪು. ೧೧೨

೫ ಎ.ಕ. ೯, ಎಚ್. ಕೆ. ೧೦೫, ಪಠ್ಯ, ಪು. ೨೨೨; ಎ.ಕ. ೧೦, ಕೋಲಾರ. ೨೦೭, ಪದ್ಯ, ಭಾಗ-೨, ಪು. ೪೮

೬ ವಿಲ್ಸನ್: ಗ್ಲಾಸರಿ, ಪು. ೨೬೫

೭ ಅದೇ, ೫೩೯

೮ ಗುಬ್ಬಿಮಲ್ಲಣಾರ್ಯ: ಭಾವಚಿಂತಾರತ್ನ, ಪು.೪೫, ಪದ್ಯ ೨

೯ ಎ.ಕ.೧೨, ಎಂ.ಜಿ. ೧; ಮುಂಗಾರು ಮತ್ತು ಹಿಂಗಾರು ಅಥವಾ ಮೊದಲು ಮತ್ತು ಆಮೇಲೆ ಬೆಳೆಯುವ ಬೆಳೆಗಳನ್ನು ರಟ್ಟಮತದಲ್ಲಿ ಉಲ್ಲೇಖಿಸಿದೆ, ಅಧ್ಯಾಯ ೪, ಪು. ೧೩-೧೭; ಬಾರ್ಬೋಸಾ ಸಂ.೧, ಪು. ೧೯೨ ವರ್ಷದಲ್ಲಿ ಎರಡು ಬೆಳೆಗಳು ಬರುತ್ತಿದ್ದುವೆಂದು ಹೇಳಿದ್ದಾನೆ.

೧೦ ಕರ್ನಾಟಕ ಇನ್‌ಸ್ಕ್ರಿಪ್ಷನ್ಸ್, ಸಂ.೩- ೧, ೬ ಪು. ೧೦, ೧೧ ಮತ್ತು ೧೨; ಎ.ಕ. ೪, ಕೆ.ಪಿ. ೫೧

೧೧ ಬುಕನನ್: ಜರ್ನಿ ಥ್ರೂ ನಾರ್ದರ್ನ್ ಪಾರ್ಟ್ಸ ಆಫ್ ಕೆನರಾ, ಕಾರವಾರ, ೧೯೪೬, ಪು.೨೧

೧೨ ಕರ್ನಾಟಕ ಇನ್‌ಸ್ಕ್ರಿಪ್ಷನ್ಸ್, ಪೂರ್ವೋಕ್ತ

೧೩ ಬುಕನನ್: ಪೂರ್ವೋಕ್ತ

೧೪ ಇಂಪೀರಿಯಲ್ ಗೆಜೆಟ್, ಸಂ.೧೪, ಪು. ೩೪೮

೧೫ ಎಂ. ಎ.ಆರ್. ೧೯೩೪, ನಂ. ೨೧; ಎ.ಕ.೬, ಕೆ.ಪಿ. ೫೧; ಅದೇ ಎಂ.ಜಿ.೨೧

೧೬ ಎ.ಕ.೧೧, ಮುಳಬಾಗಿಲು, ೧೭೨

೧೭ ರಟ್ಟಮತಂ ಅಧ್ಯಾಯ ೧೨, ಪದ್ಯಗಳು ೮,೯,೧೦ ೧೧ ಮತ್ತು ೪೫

೧೮ ಅದೇ, ಸರ್ವಜ್ಞ, ಪು. ೧೮೯, ೧೯೦, ೧೯೧, ೧೯೨

೧೯ ಬಾರ್ಬೋಸಾ ಸಂ. ೧ ಪು. ೨೦೦; ಸರ್ವಜ್ಞ, ಪು. ೧೬೨, ಪದ್ಯ ೧೨೩೦

ನಲ್ಲೆತ್ತು ಭಂಡಿ ಬಲವಿಲ್ಲದಾರಂಬ

ಕಲ್ಲು ಕಳೆಗಳನು ಬಿತ್ತುವನು ಹೊಲದೊಳಗೆ

ಹುಲ್ಲನೆ ಬೆಳೆವ - ಸರ್ವಜ್ಞ

ಅದೇ, ಪು. ೧೬೨, ಪದ್ಯ ೧೨೩೨

ದಂಡು ಇಲ್ಲದ ಅರಸು ಕೊಂಡವಿಲ್ಲದ ಹೋಮ

ಬಂಡಿಯಿಲ್ಲದವನ ಬೇಸಾಯ

ತಲೆಹೋದ ಮುಂಡನಂತಿಕ್ಕು ಸರ್ವಜ್ಞ''

ಅದೇ, ಪು. ೧೬೩, ಪದ್ಯ ೧೨೩೪

೨೦ ಬಾರ್ಬೋಸಾ, ಸಂ.೧, ಪು. ೧೯೨

೨೧ ಅರ್ಲಿಟೆರ್‍ರಿ, ಪು. ೨೯೮

೨೨ ಫಾಯರ್: ಈಸ್ಟ್ ಇಂಡಿಯಾ ಎಂಡ್ ಪರ್ಷಿಯಾ, ಸಂ.೨, ಪು. ೧೦೮

೨೩ ರಟ್ಟ ಕವಿ: ರಟ್ಟಮತಂ, ಸಂ: ಶೇಷಯ್ಯಂಗಾರ್, ಮದರಾಸು ೧೯೨೯, ಅಧ್ಯಾಯ ೧೧ ; ಬಾಂಬೇ ಗೆಜೆಟ್, ಸಂ.೨೧, ಅಧ್ಯಾಯ ೪, ಪು.೨೩೭

೨೪ ಬಾರ್ಬೋಸಾ, ಸಂ. ೧, ಪು. ೧೯೨

೨೫ ಅದೇ, ಸಂಪಾದಕರ ಟಿಪ್ಪಣಿ

೨೬ ವಿರೂಪಾಕ್ಷ ಪಂಡಿತ: ಚೆನ್ನಬಸವ ಪುರಾಣ, ಪು. ೫೨, ಪದ್ಯ ೫೦, ೧೬ನೇ ಶತಮಾನ

೨೭ ಬಾರ್ಬೋಸಾ, ಸಂ ೧, ಪು, ೧೮೫-೧೮೬

೨೮ ಕೃಷಿ ಮಾರಾಟದ ವಿಷಯವಾಗಿ ರಾಲ್ಫ್ ಫಿಚ್ (೧೫೮೩-೯೧) ಅರ್ಲಿ ಟ್ರಾವೆಲ್ಸ ಇನ್ ಇಂಡಿಯಾ (೧೫೮೩-೧೬೧೯),ಪು. ೪೫-೪೬, ಒಟ್ಟಿನ ಮೇಲೆ ಪಶ್ಚಿಮ ಕರಾವಳಿಯಲ್ಲಿ ಸಾಂಬಾರ ವಸ್ತುಗಳ ಉತ್ಪಾದನೆಯ ಬಗೆಗೆ

೨೯ ಎಂ.ಎ.ಆರ್. ೧೯೨೭, ನಂ ೯೧ ಎಂ.ಜಿ.

೩೦ ಅದೇ, ನಂ ೭೭ ಪು. ೭೧ (ಟಿಪ್ಪಣಿ) ಬೌರಿಂಗ್‌ಪೇಟೆ; ಎಂ.ಎ.ಆರ್ ೧೯೨೫ ನಲ್ಲಿ ಬತ್ತ, ಕಬ್ಬು, ಶುಂಠಿ, ಅಡಕೆ, ತೆಂಗು ಮತ್ತು ಬಾಳೆ ಮೊದಲಾದವನ್ನು ಉಲ್ಲೇಖಿಸುತ್ತದೆ. ನಂ ೩೨ ಪು. ೨೦೫ ಚಿಕ್ಕ ಬಳ್ಳಾಪುರ; ಎ.ಕ.೧೦, ೧೭೩; ಎ.ಕ. ೧೦, ೯೬ ಮುಳಬಾಗಿಲು ಪು.೮೧ (ಟಿಪ್ಪಣಿ) ಮುಳಬಾಗಿಲು, ಎಂ.ಎ.ಆರ್. ೧೯೨೫

೩೧ ಎ.ಕ. ೧೦, ಕೆ.ಎಲ್, ೨೦೭

೩೨ ಅದೇ, ಎಂ.ಬಿ. ೧೯೭೨

೩೩ ಅದೇ, ಪಠ್ಯ ಭಾ-೨, ಪು. ೧೧೨-೧೧೩; ಅದೇ, ಎಂ.ಬಿ. ೭, ಪು. ೬೯

೩೪ ಎ.ಕ. ೮, ಎಸ್.ಬಿ. ೧೮, ಪಠ್ಯ ಪು.೮ ಇತ್ಯಾದಿ

೩೫ ಎಂ.ಎ.ಆರ್. ೧೯೪೩, ಪು ೧೧೫; ಅದೇ, ಪು ೧೨೪; ಅದೇ ೧೯೨೩, ೧೦೧; ಅದೇ ಪು. ೧೦೫

೩೬ ಎಂ.ಎ.ಆರ್. ೧೯೩೬, ಪು. ೯೮; ಅದೇ ೧೯೩೩, ಪು. ೧೧೦; ಅದೇ ಪು. ೧೭೮; ಅದೇ ೧೯೩೪, ನಂ ೨೭

೩೭ ಎಂ.ಎ.ಆರ್. ೧೯೪೪, ಪು. ೧೪೨; ಎ.ಕ. ೩,ಮೈ. ೬; ಎ.ಕ. ೬, ಕೆ.ಆರ್. ೨೧; ಎ.ಕ. ೩, ಎಸ್. ಆರ್. ೧೦೦; ಅದೇ ಎಂ.ಎಲ್. ೯೫

೩೮ ಎ.ಕ.೫, ಎಚ್. ಎನ್. ೨

೩೯ ಎಂ.ಎ.ಆರ್, ೧೯೨೭ ಪು. ೩೪
೪೦ ಎ.ಕ. ೧೨, ಎಂ.ಎಲ್. ೨೦; ಅದೇ ಟಿ. ಎಂ. ೪೮; ಎಂ.ಎ.ಆರ್. ೧೯೨೩, ಪು. ೧೨೨
೪೧ ಎ.ಕ. ೧೨, ಪಿ.ಜಿ. ೧೨; ೩, ಎಸ್.ಐ.ಐ. ಸಂ. ೭ ಪು. ೧೨೪
೪೨ ಎ.ಕ. ೯, ಕೆ.ಎನ್. ೮೯
೪೩ ಎಂ.ಎ.ಆರ್. ೧೯೧೪-೧೫,೧೧೦
೪೪ ಎಂ.ಎ.ಆರ್, ೧೯೨೭, ನಂ. ೨
೪೫ ಎ.ಕ. ೯, ಕೆ.ಎನ್. ೮೯
೪೬ ಎಂ.ಎ.ಆರ್, ೧೯೨೭, ನಂ. ೨; ಎಂ.ಎ.ಆರ್. ೧೯೧೪-೧೫, ನಂ. ೧೧೦
೪೭ 'ಕೃಷಿ ಉತ್ಪನ್ನಗಳ ವ್ಯಾಪಾರ ವಹಿವಾಟು' ಕುರಿತ ಅಧ್ಯಾಯ ನೋಡಿ
೪೮ ಬಾರ್ಬೋಸಾ ೧, ಪು ೧೮೫; ಅದೇ ೨, ಪು. ೧೯೧
೪೯ ವರ್ಥಮಾ, ಪು. ೪೯
೫೦ ವಿರೂಪಾಕ್ಷ ಪಂಡಿತ: ಚೆನ್ನಬಸವಪುರಾಣ, ಪು. ೧೧೯, ಪದ್ಯ ೧೧
೫೧ ಬಾರ್ಬೋಸಾ ಪು. ೧೮೫; ಅದೇ ೨, ಪು. ೧೯೧
೫೨ ಎ.ಕ. ೩, ಎಂ.ಎಲ್.೬೫; ಎ.ಕ. ೨, ಕೆ.ಪಿ. ೨೧; ಅದೇ-೨೨;
ಎಂ.ಎ.ಆರ್. ೧೯೨೭, ನಂ. ೨; ಅದೇ ೧೯೧೪-೧೫, ನಂ. ೧೧೦
೫೩ ಆಮುಕ್ತ ಮೌಲ್ಯದ, ೨,ಪು.೭೦
೫೪ ರಾಬರ್ಟ್ ಸಿವೆಲ್: ಎ ಫರ್‌ಗಾಟನ್ ಎಂಪೈರ್, ಪು. ೨೩೮
೫೫ ನರಸಿಂಹಾಚಾರ್ ಆರ್: ಕರ್ಣಾಟಕ ಕವಿಚರಿತೆ, ಸಂ. ೧, ಪು.೪೫೭, ೪೬೬, ೪೮೮; ಸಂ ೨,ಪು. ೧೯೪ ೧೮೧, ೧೪೦, ೨೦೬, ೩೭೨, ೩೭೪
೫೬ ಪಂಚಲಿಂಗೇಗೌಡ ಕೆ.ಸಿ. (ಸಂ): ರಾಮಧಾನ್ಯ ಚರಿತ್ರೆ, ಮೈಸೂರು ಪು.೧೫ ೧೯೬೩
೫೭ ಎ ಫರ್‌ಗಾಟನ್ ಎಂಪೈರ್, ಪು. ೨೩೭
೫೮ ಅದೇ, ಪು. ೨೩೮
೫೯ ಅದೇ, ಪು. ೨೪೩
೬೦ ಅದೇ, ಪು. ೨೫೭
೬೧ ಅದೇ, ಪು. ೩೬೬
೬೨ ಎಲಿಯಟ್ ಮತ್ತು ಡೋಸನ್: ಹಿಸ್ಟರಿ ಆಫ್ ಇಂಡಿಯಾ ಆ್ಯಸ್ ಟೋಲ್ಡ್ ಬೈ ಇಟ್ಸ್ ಓನ್ ಹಿಸ್ಟೋರಿಯನ್ಸ್; ಸಂ. ೪, ಪು. ೧೧೪
೬೩ ನ್ಯೂನಿಜ್, ಸಿವೆಲ್: ಪೂರ್ವೋಕ್ತ, ಪು. ೩೮೮
೬೪ ಅದೇ. ಪು. ೩೮೬
೬೫ ನಿಕಿಟಿನ್: ನಿಕಿಟಿನ್ಸ್ ವಾಯೇಜ್ ಬಿಯಾಂಡ್ ತ್ರೀ ಸೀಸ್, ಮಾಸ್ಕೋ ೧೯೬೦, ಪು. ೧೧೦
೬೬ ಎಲಿಯಟ್ ಮತ್ತು ಡೋಸನ್: ಪೂರ್ವೋಕ್ತ ಸಂ. ೬, ಪು.೧೦೫, ಅಬ್ದುರ್ ರಜಾಕ್.
೬೭ ಬಾರ್ಬೋಸಾ, ಸಂ. ೧, ಪು. ೨೦೦
೬೮ ಸಿವೆಲ್: ಪೂರ್ವೋಕ್ತ, ಪು. ೨೫೭
೬೯ ಲೀ, ಇಬ್ನ್ ಬತೂತ, ಪು. ೧೬೪, ೧೬೬, ೧೬೭, ೧೭೪
೭೦ ಕೃಷಿ ಉತ್ಪನ್ನಗಳ ವ್ಯಾಪಾರ ವಹಿವಾಟು ಕುರಿತ ಅಧ್ಯಾಯ ನೋಡಿ
೭೧ ಸೌ.ಇ.ಇ. ೯-೨, ನಂ. ೪೪೦

೭೨ ರಟ್ಟಕವಿ: ರಟ್ಟಮತಂ, (ಸಂ.) ಶೇಷ್ಯಂಗಾರ್, ಮದರಾಸು ೧೯೨೯, ಅಧ್ಯಾಯ ೧, ಪು. ೭

೭೩ ಎ.ಕ. ೮, ಎಸ್.ಎಚ್ ೩೦, ಕ್ರಿ.ಶ. ೧೪೧೩

೭೪ ಎ.ಕ. ೧೨, ಗುಬ್ಬಿ ೨೮, ಕ್ರಿ.ಶ. ೧೬೯೬

೭೫ ಬುಕನನ್: ಪೂರ್ವೋಕ್ತ, ಸಂ.೧, ಪು. ೨೩

೭೬ ಎ.ಕ. ೧೨, ಟಿ.ಎಂ. ೨೪, ಕ್ರಿ.ಶ. ೧೭೨೦

೭೭ ಸಿವೆಲ್: ಪೂರ್ವೋಕ್ತ, ಪು. ೩೦೧-೩೦೨

೭೮ ಎ.ಕ. ೧೧, ಎಂ.ಕೆ. ೬; ಎ.ಕ. ೫, ಎಚ್. ಎನ್. ೫೨; ರಾಜಾವಳೀ ಕಥೆ (ಹಸ್ತಪ್ರತಿ) ಪು. ೮೬

೭೯ ಎ.ಕ. ೧೦, ಎಂ.ಬಿ. ೧೩೧, ಕ್ರಿ.ಶ. ೧೪೦೭; ಎ.ಕ.೧೨, ಎಸ್.ಎಲ್, ೧೫೭; ಎ.ಕ. ೧೦, ಜಿ.ಡಿ. ೪೨ ಮತ್ತು ೪೩; ಅದೇ ಸಿ.ಬಿ. ೫೨; ಎ.ಕ. ೯, ಎಚ್.ಕೆ. ೧೫; ಎ.ಕ. ೧೦, ಬಿ.ಜಿ. ೭೧ ಇತ್ಯಾದಿ

೮೦ ಎ.ಕ. ೧೦, ಬಿ.ಜಿ. ೭೧; ಎ.ಕ. ೧೦, ಸಿ.ಬಿ. ೯

೮೧ ಎ.ಕ. ೧೦, ಎಂ.ಬಿ. ೨೫೯; ಅದೇ, ೧೭೨; ಕೆರೆಗಳ ಗಾತ್ರವನ್ನು ಅನುಸರಿಸಿ ನೀರ್ಗುಂಟಿಗಳಿಗೆ ಕೊಡುಗೆ ನೀಡಲಾಗುತ್ತಿತ್ತು. ನೋಡಿ, ಎ.ಕ. ೧೦, ಸಿ.ಬಿ. ೯; ಬುಕನನ್, ಪೂರ್ವೋಕ್ತ, ಸಂ.೨, ೫೨೦

೮೨ ಎ.ಕ. ೮, ಎಸ್.ಕೆ. ೨೩೪; ಎ.ಕ. ೯, ಎಚ್.ಟಿ. ೮೧

೮೩ ಎಂ.ಎ.ಆರ್, ೧೯೧೪-೧೫, ಪು. ೬೩, ನಂ. ೧೦೪

೮೪ ಎ.ಕ. ೯, ಬಿ.ಎನ್. ೮೦; ಎ.ಕ. ೫, ಎ.ಜಿ. ೨೩೮; ಎ.ಕ. ೧೫, ಎಚ್.ಎನ್ ೧೭

೮೫ ಎ.ಕ. ೫, ಎ.ಕೆ. ೧೧೫, ಕ್ರಿ.ಶ. ೧೩೬೭

೮೬ ಎ.ಕ. ೧೧, ಡಿ.ಜಿ. ೨೩

೮೭ ಎ.ಕ. ೪, ಎನ್.ಜಿ. ೪೯

೮೮ ವಿಜಯನಗರ ಅರಸರು ಕೈಗೊಂಡ ನೀರಾವರಿ ಕಾರ್ಯಗಳಿಗೆ ನೋಡಿ: ಡಬ್ಲ್ಯು ಫ್ರಾನ್ಸಿಸ್, ಬೆಳ್ಳಾರಿ (ಮದರಾಸು ೧೯೦೪) ಪು. ೯೦-೯೨

೮೯ ಎ.ಕ. ೧೦, ಎಂ.ಬಿ. ೭; ಎಂ.ಎ.ಆರ್ ೧೯೦೭, ನಂ ೨೪೧, ೨೫೧ ಕ್ರಿ.ಶ. ೧೯೦೬

೯೦ ಎಕ. ೧೦, ಜಿ.ಡಿ. ೬; ಅದೇ, ಬಾಗೆಪಲ್ಲಿ ೧೦

೯೧ ಎ.ಕ. ೧೧, ಡಿ.ಜಿ. ೨೯

೯೨ ಎ.ಕ. ೫, ಎ.ಜಿ. ೬೮

೯೩ ಎ.ಕ.೧೦, ಎಂ.ಬಿ. ೭೯

೯೪ ಎ.ಕ.೧೨, ಕೆ.ಜಿ. ೧೮

೯೫ ಎ.ಕ.೧೦, ಬಿ.ಜಿ. ೧೦

೯೬ ಎಂ.ಎ.ಆರ್. ೧೯೩೩, ಪು. ೨೭೧, ನಂ ೬೪; ಇನ್ಸ್ಕ್ರಿಪ್ಷನ್ಸ್ ಆಫ್ ಮದರಾಸ್ ಪ್ರೆಸಿಡೆನ್ಸಿ, ಸಂ. ೧, ಮದರಾಸು ೧೯೧೯, ಬಳ್ಳಾರಿ ಪು. ೨೬೯, ನಂ. ೧೦೯; ಎ.ಆರ್.ಎಸ್. ಐ.ಇ. ೧೯೩೮, ನಂ. ೭೬. ಪು. ೨೦೬ ಇಂಡಿ ತಾಲೂಕು (ಬಿಜಾಪುರ ಜಿಲ್ಲೆ) ಕ್ರಿ.ಶ. ೧೫೯೩

೯೭ ಎ.ಕ. ೩, ಎಂ.ಎಲ್. ೨೧. ಕ್ರಿ.ಶ. ೧೩೮೨

೯೮ ಅದೇ.

೯೯ ಬಾಂಬೆ ಗೆಜೆಟಿಯರ್ ಸಂ. ೨೨, ಪು. ೨೫೮

೧೦೦ ಗಿಬ್ಬಿಯ ಹಿಸ್ಟರಿ ಆಫ್ ಡೆಕ್ಕನ್‌ನಲ್ಲಿ ಉದ್ಧೃತ, ಸಂ.೧, ಪು. ೧೮೮

೧೦೧ ಎ.ಕ. ೫, ಸಿ.ಎನ್. ೨೫೭; ಎ.ಕ. ೫, ಬಿ.ಎಲ್. ೭೫

೧೦೨ ಪಗೋಡಾಗಳು. ಒಂದು ಪಗೋಡ ೩½ ರೂಪಾಯಿಗಳಿಗೆ ಸಮ

೧೦೩ ರಾಬರ್ಟ್ ಸಿವೆಲ್: ಎ ಫರ್‌ಗಾಟನ್ ಎಂಪೈರ್, ಪು. ೩೦೧-೩೦೨

೧೦೪ ಎ.ಕ. ೩, ಎಂ.ಎಲ್. ೨೨

೧೦೫ ಬುಕ್ಕರಾಯಚರಿತ್ರ (ಹಸ್ತಪ್ರತಿ) ಪು. ೧

೧೦೬ ರಾಬರ್ಟ್ ಸಿವೆಲ್: ಎ ಫರ್‌ಗಾಟನ್ ಎಂಪೈರ್, ಪು. ೫೦

೧೦೭ ಎ.ಕ. ೧೧, ಡಿ.ಜಿ. ೨೯

೧೦೮ ಅದೇ, ಡಿ.ಜಿ. ೨೩, ಕ್ರಿ.ಶ. ೧೪೧೦

೧೦೯ ವಿಜಯನಗರ ಸೆಕ್ಸೆಂಟಿನರಿ ಕಮೆಮೊರೇಷನ್ ವಾಲ್ಯೂಮ್, ಪು. ೨೧೭; ಆಮುಕ್ತ ಮಾಲ್ಯದ, ಸಂ: ವೆಂಕಟರಾಯ ಶಾಸ್ತ್ರಿ, (ಮೊದಲ ಆವೃತ್ತಿ ಮದರಾಸು ೧೯೨೭) ಪು. ೪೭೩, ಪದ್ಯ ೨೩೬. ''ದೇಶ ವೈಶಾಲ್ಯ ಮರ್ಥಸಿದ್ಧಿ ನಿಕೆ ಮೂಲ, ಮಿ ಯೋಕಿಂತ್ಯನ, ಗುಂಟ ಕಲವಲು ರಚಿಂಚಿ, ನಯಮು ಪೆದಕು ನರಿವೊಗರ್ದನು ನೊಸಂಗಿ, ಪ್ರಬಲಂ ಜೇಸಿನ ನಾರ್ಥ ಧರ್ಮಮುಲು ವೆರ್ನುಗು''.

೧೧೦ ಸಿವೆಲ್, ಪೂರ್ವೋಕ್ತ, ಪು. ೩೬೪-೩೬೫

೧೧೧ ಬಳ್ಳಾರಿ ಡಿಸ್ಟ್ರಿಕ್ಟ ಮ್ಯಾನ್ಯುಯಲ್ (ಕೆಲ್ ಸಾಲ್), ಪು. ೨೩೧

೧೧೨ ಬಾಂಬೇ ಗೆಜೆಟಿಯರ್, ಸಂ. ೨೨, ಪು. ೨೫೮

೧೧೩ ಎ.ಕ. ೯, ಬಿ.ಎನ್. ೧೧೮, ಕ್ರಿ.ಶ. ೧೭೦೫

೧೧೪ ಬುಕನನ್: ಸಂ. ೧, ಪು. ೧೩೨, ೩೦೦

೧೧೫ ಇನ್‌ಸ್ಕ್ರಿಪ್ಷನ್ಸ್ ಇನ್ ಮದರಾಸ್ ಪ್ರೆಸಿಡೆನ್ಸ್, ಸಂ.೧, ಮದರಾಸು ೧೯೧೯ ಪು. ೨೭೬. ನಂ. ೧೫೨

೧೧೬ ಎಂ.ಎ.ಆರ್. ೧೯೨೩, ನಂ. ೭, ಪು. ೪೪ ಬೌರಿಂಗ್‌ಪೇಟೆ; ಎ.ಕ. ೯ ಬಿ.ಎನ್ ೧೧೮, ಕ್ರಿ.ಶ. ೧೭೦೫; ಬುಕನನ್, ಸಂ.೧, ಪು. ೨೦೪ ಕೂಡ

೧೧೭ ಬುಕನನ್: ಸಂ.೧, ಪು ೧೩೨

೧೧೮ ಎ.ಆರ್.ಎಸ್.ಐ (೧೯೨೯) ನಂ. ೭೦, ಪು ೪೬

೧೧೯ ವೆಂಕಟರಾಯ ಶಾಸ್ತ್ರಿ (ಸಂ): ಆಮುಕ್ತಮಾಲ್ಯದ, ಪು. ೪೯೬; ಎ.ಕ. ೯, ಎಚ್.ಟಿ. ೫೦; ಎಂ.ಎ.ಆರ್ ೧೯೨೫, ಪು. ೨೧; ಎ.ಕ. ೪, ಜಿ.ಯು ೩೯; ಸೌ.ಇ.ಇ. ೯-೨, ನಂ. ೪೪೦; ಎಂ.ಎ. ಆರ್. ೧೯೨೮, ಪು. ೪೮; ಎ.ಕ. ೮, ಎಸ್.ಬಿ. ೩೫೪; ಎ.ಆರ್‌ಎಸ್. ಐ. ಪು. ೩೨

೧೨೦ ಎ.ಕ. ೯, ಎಚ್.ಟಿ. ೫೦; ಎ.ಕ. ೮, ಟಿ.ಎಲ್. ೫; ಎ.ಕ. ೬, ಎಸ್.ಜಿ. ೧೧

೧೨೧ ಎ.ಕ. ೮, ಎಸ್.ಬಿ. ೩೫೪

೧೨೨ ಎ.ಕ. ೯, ಎಚ್.ಕೆ. ೫೦; ಎಂ.ಎ.ಆರ್ ೧೯೨೩, ಪು. ೬೨; ಎ.ಆರ್. ಎಸ್.ಐ.ಇ, ೧೯೧೩ ನಂ. ೫೬

೧೨೩ ಎ.ಕ. ೪, ಜಿ.ಯು. ೩೯

೧೨೪ ಸೌ.ಇ.ಇ. ೯-೨, ನಂ. ೪೪೦

೧೨೫ ಅದೇ, ನಂ. ೪೦೭

೧೨೬ ರಟ್ಟಮತಂ, ಅಧ್ಯಾಯ ೪, ಪು. ೧೩-೧೪; ಅಧ್ಯಾಯ ೩, ಪದ್ಯ ೪

೧೨೭ ಎ.ಆರ್.ಎಸ್.ಐ.ಇ. ನಂ. ೫೩, ೧೯೦೭ ಮತ್ತು ೬೦, ೧೯೫೫

೧೨೮ ಎ.ಕ. ೧೧, ಡಿ.ಜಿ. ೨೩ ಮತ್ತು ೨೯

೧೨೯ ಅದೇ, ೩೮

೧೩೦ ಸಿವೆಲ್: ಎ ಫರ್‌ಗಾಟನ್ ಎಂಪೈರ್, ಪು. ೨೪೪-೨೪೫

೧೩೧ ಎ.ಕ. ೪, ಸಿ.ಎಚ್.೩೮; ಎ.ಕ. ೬, ಕೆ.ಪಿ. ೫೧; ಅದೇ ಕೆ.ಪಿ ೫೨, ಪಠ್ಯ ಪು. ೩೩೫, ಪಂಕ್ತಿ ೧೭

೧೩೨ ಎ.ಕ. ೪, ಜಿ.ಯು. ೩೨

೧೩೩ ವಿನ್ಸೆಂಟ್ ಸ್ಮಿತ್: ಅರ್ಲಿ ಹಿಸ್ಟರಿ ಆಫ್ ಇಂಡಿಯ (೪ನೇ ಆವೃತ್ತಿ) ಪು. ೧೩೭-೧೩೮

೧೩೪ ಜಯಸ್ವಾಲ್, ಪಿ: ಹಿಂದೂ ಪಾಲಿಟಿ (೨ನೇ ಆವೃತ್ತಿ ಪು. ೩೪೯); ಯು.ಎನ್.ಘೋಷಾಲ್: ದಿ ಅಗ್ರೇರಿಯನ್ ಸಿಸ್ಟಮ್ ಇನ್ ಏನ್ಷಂಟ್ ಇಂಡಿಯಾ, ಪು. ೮೯

೧೩೫ ಇ.ಆ. ಸಂ. ೧, ಪು. ೩೯೮

೧೩೬ ದಿ ಮಿತಾಕ್ಷರ, ಪು. ೧೧-೧೭

೧೩೭ ವಿನ್ಸೆಂಟ್ ಸ್ಮಿತ್: ಅರ್ಲಿ ಹಿಸ್ಟರಿ ಆಫ್ ಇಂಡಿಯಾ, (೪ನೇ ಆವೃತ್ತಿ) ಪು. ೧೩೮-೧೩೯

೧೩೮ ಎ.ಕ. ೩, ಎಸ್.ಆರ್ ೮೯; ಅದೇ, ಎಸ್.ಆರ್.೧೩; ಎಂ.ಎ.ಆರ್. ೧೯೨೯, ನಂ. ೮೯ ಇತ್ಯಾದಿ

೧೩೯ ಎ.ಕ. ೧೨, ಎಸ್.ಐ. ೯೫; ಇತರ ಉದಾಹರಣೆಗಳಿಗೆ ನೋಡಿ ಸೌ.ಇ.ಇ.೯-೨, ನಂ. ೫೦೪; ಅದೇ, ನಂ. ೪೪೦; ಎ.ಕ. ೪, ಜಿ.ಯು. ೮೯; ಎ.ಕ. ೫, ಎಚ್.ಎನ್. ೩೫

೧೪೦ ಎ.ಕ. ೮, ಟಿ.ಎಲ್. ೫

೧೪೧ ಎ.ಕ. ೩, ಕೆ.ಪಿ. ೫೦

೧೪೨ ಎ.ಕ. ೫, ಎಚ್.ಎನ್. ೧೬; ಅದೇ, ಟಿ.ಕೆ. ೧೬

೧೪೩ ಎ.ಕ. ೬, ಕೆ.ಪಿ. ಜಮೀನುದಾರರ ಪಾಲಿಗೆ ನೋಡಿ ಪಠ್ಯ, ಪು. ೩೩೧

೧೪೪ ದಿ ಮಿತಾಕ್ಷರ, ಪು. ೭೬

೧೪೫ ಕರ್ಣಾಟಕ ಇನ್‌ಸ್ಕ್ರಿಪ್ಷನ್ಸ್, ಸಂ. ೩-೧, ನಂ. ೧೫; ಎಂ.ಎ.ಆರ್. ೧೯೨೭, ನಂ. ೧೨೯; ಎ.ಕ. ೫, ಎಸ್. ಕ್ಯು ೨೫; ಇತ್ಯಾದಿ

೧೪೬ ದಿ ಮೈಸೂರ್ ಟ್ರೈಬ್ಸ್ ಅಂಡ್ ಕ್ಯಾಸ್ಟ್ಸ್, ಸಂ. ೨ ಪು. ೯೯-೧೦೦, ಮೈಸೂರು-೧೯೨೮

೧೪೭ ಎ.ಕ. ೫, ಬಿ.ಎಲ್. ೭೫, ಕ್ರಿ.ಶ. ೧೩೮೨

೧೪೮ ಅದೇ, ಪಠ್ಯ ಪು. ೨೦೧

೧೪೯ ಅದೇ,

೧೫೦ ಅದೇ, ಪಠ್ಯ, ಪು. ೧೯೯-೨೦೦

೧೫೧ ಸೌ.ಇ.ಇ. ೯-೨ ನಂ. ೪೪೦; ಎ.ಕ. ೧೨ , ಟಿ.ಎಂ. ೫೯; ಎ.ಕ.೮, ಎಸ್. ಜಿ. ೧೬೩ ಪಠ್ಯ, ಪು. ೩೩೭; ಎಂ. ಎ. ಆರ್, ೧೯೨೭, ನಂ. ೭೧, ಪಠ್ಯ ಪು. ೭೯; ಎಂ ಎ ಆರ್. ೧೯೩೩, ನಂ ೪೬; ಪಂಚಮುಖಿ: ಕರ್ನಾಟಕ ಇನ್‌ಸ್ಕ್ರಿಪ್ಷನ್ಸ್, ಸಂ. ೩, ಭಾ-೧, ನಂ. ೯; ಎಂ ಎ ಆರ್ ೧೯೨೩, ನಂ. ೭; ಎ. ಕ. ೬, ಕೆ. ಪಿ. ೫೧. ಇತ್ಯಾದಿ.

೧೫೨ ಎ.ಕ.೧೦, ಎಂ ಬಿ. ೧೭೨, ಪಠ್ಯ ಬಾಗ-೨, ಪು.೧೧೨; ಎ ಎಸ್ ಐ ೧೯೧೪-೧೫ ಭಾ-೧, ಪು.೩೦

೧೫೩ ಸೌ.ಇ.ಇ. ೯-೨, ನಂ.೪೪೦ (ಎ. ಆರ್. ನಂ. ೨೮೩, ೧೯೧೮) ಹರಪನಹಳ್ಳಿ

೧೫೪ ಎ.ಕ. ೫, ಬಿ. ಎಲ್. ೨೪೫; ಅದೇ ೭ ಎಸ್. ಕೆ. ೧೨೦ ಇತ್ಯಾದಿ

೧೫೫ ಎ.ಕ. ೭, ಎಸ್.ಕೆ. ೧೨೦

೧೫೬ ಅದೇ, ೬, ಟಿ.ಎಂ. ೪೫

೧೫೭ ಅದೇ, ಎಸ್. ಬಿ. ೩೧೭

೧೫೮ ಅದೇ ೧೦, ಕೆ. ಎಲ್. ೪೪

೧೫೯ ಅದೇ ೭, ಸಿ. ಐ. ೬೪

೧೬೦ ಎ.ಕ. ೧೦, ಎಂ. ಬಿ. ೪೯

೧೬೧ ಅದೇ ೫, ಎ ಕೆ ೧೨-೧೩

೧೬೨ ರೈಸ್: ಮೈಸೂರು ಗೆಜೆಟಿಯರ್, ಸಂ. ೧, ಪು. ೫೭೭

೧೬೩ ಎ.ಕ.೧೦, ಎಂ. ಬಿ. ೪೯ (ಎ)

೧೬೪ ಎ.ಕ.೩, ಎನ್ ಜೆ. ೧೯೫

೧೬೫ ಎ.ಕ. ೭, ಎಸ್ ಎಚ್, ೮೪

೧೬೬ ಸೌ.ಇ.ಇ. ೭, ಪು. ೧೨೯, ನಂ. ೨೫೬ (ಎ. ಆರ್. ನಂ. ೭೯, ೧೯೦೧) ದಕ್ಷಿಣ ಕನ್ನಡ

೧೬೭ ಇ.ಆ. ೧೫, ಪು. ೨೬೯

೧೬೮ ಬಿ. ಜೆ. ಎಂ. ವಿ ಜೆಡ್. ೨೨ ಪು. ೪೩೯; ವಿಲ್ಲಿಸ್, ಇ.ಆ. ೧೫, ಪು. ೨೬೯-೭೦

೧೬೯ ಎಂ ಎ ಆರ್ ೧೯೩೪, ಪು. ೧೧೮. ಕೆಡಿ; ೧ ಖಂಡುಗ = ೨೦ ಕೊಳಗಗಳು

೧೭೦ ಎ.ಕ. ೨೨, ಎಸ್ ಐ ೧೫, ೮ ಸೇರಿಗೆ ಸಮನಾದ ಅಳತೆಯ ಮಾನಕ

೧೭೧ ಎಂ ಎ ಆರ್ ೧೯೩೪, ಪು. ೧೦೧, ಮೂಡಿಗೆರೆ

೧೭೨ ಇನ್‌ಸ್ಕ್ರಿಪ್ಷನ್ಸ್ ಇನ್ ಮದರಾಸ್ ಪ್ರೆಸಿಡೆನ್ಸಿ. ಸಂ. ೧ ಪು. ೨೬೯, ನಂ. ೧೧೪. ಬಳ್ಳಾರಿ ಜಿಲ್ಲೆ; ೧ ಬಳ್ಳ = ೨ ಸೇರು

೧೭೩ ಕರ್ನಾಟಕ ಇನ್‌ಸ್ಕ್ರಿಪ್ಷನ್ಸ್ ೩-೧, ನಂ. ೬, ಪು. ೧೦ ಭಟ್ಕಳ; ೧ ಮುಡಿ = ೪೦ ಪಕ್ಕಾ ಸೇರುಗಳು

೧೭೪ ಎಂ ಎ ಆರ್ ೧೯೨೮, ಪು. ೨೪, ಹಾಸನ ಜಿಲ್ಲೆ ಅದೇ ೧೯೪೪ ಪು. ೪೯ ಕೆಡಿ

೧೭೫ ಸೌ.ಇ.ಇ. ೧, ನಂ. ೧೧೯; ಎಂ ಎ ಆರ್ ೧೯೯೩, ಪು. ೨೬೯ ಮೈಸೂರು ಜಿಲ್ಲೆ; ಸೌ.ಇ.ಇ. ೭, ನಂ. ೨೧೦ (ಎ ಆರ್. ನಂ ೪೦, ೧೯೦೧) ಪು. ೧೦೬ ಮೂಡಬಿದ್ರ

೧೭೬ ವಿರೂಪಾಕ್ಷ ಪಂಡಿತ: ಚೆನ್ನಬಸವ ಪುರಾಣ, ೧೬ ನೇ ಶತಮಾನ, ಪದ್ಯ ೧೦ ಪು. ೮೨

೧೭೭ ದೇವಚಂದ್ರ: ರಾಜಾವಳೀ ಕಥೆ (ಹಸ್ತ ಪ್ರತಿ), ಪು. ೬

೧೭೮ ಸೌ.ಇ.ಇ. ೯ -೨, ನಂ. ೬೪೨ (ಎ ಆರ್. ನಂ. ೭೩೪, ೧೯೨೨), ಹೊಸಪೇಟೆ ತಾಲೂಕು, ಪಠ್ಯ ಪಂಕ್ತಿಗಳು ೧೭-೧೮

೧೭೯ ಮನು: ಧರ್ಮಶಾಸ್ತ್ರ (ಪಠ್ಯ), ಅಧ್ಯಾಯ ೭, ೧೩೦-೧೩೧

೧೮೦ ಪರಾಶರ ಮಾಧವ ೧, ಪು ೪೦೩

೧೮೧ ನ್ಯೂನಿಜ್, ಸಿವಿಲ್: ಎ ಫರ್‌ಗಾಟನ್ ಎಂಪೈರ್, ಪು. ೩೭೯

೧೮೨ ಇಂಡಿಯನ್ ಆಂಟಿಕ್ವೆರಿ, ಸಂ. ೪೦, ಪು. ೨೭೧-೨೭೨

೧೮೩ ಎ.ಕ. ೯, ಎಚ್ ಟಿ. ೫೦; ಎಂ ಎ ಆರ್ ೧೯೨೩, ಎಂ ಬಿ. ಪು. ೬೨; ಎ ಆರ್ ಎಸ್ ಐ ಇ, ೧೯೧೩, ನಂ. ೫೬.

೧೮೪ ಎಂ. ಎ ಆರ್, ೧೯೦೬-೦೭, ಪ್ಯಾರಾ ೫೫; ಎ ಎಸ್ ಐ ೧೯೦೭-೦೮, ಪು. ೨೪೭, ಅಡಿ ಟಿಪ್ಪಣಿ ೧; ಎಂ ಎ ಆರ್. ೧೯೧೮, ಪ್ಯಾರಾ ೭೯, ನಂ. ೧೦೩, ೧೯೧೮

೧೮೫ ಸೌ.ಇ.ಇ. ೯-೨, ನಂ. ೫೫೪ (ಎ ಆರ್ ನಂ. ೪೯೨, ೧೯೧೫), ಆದೋನಿ ತಾಲೂಕು, ಕ್ರಿ ಶ. ೧೫೩೩ (ಅಚ್ಯುತರಾಯ)

೧೮೬ ಎ.ಕ. ೪, ಎಸ್ ಜಿ ೨೫; ಅದೇ ೮, ಟಿ ಎಲ್. ೨ ಇತ್ಯಾದಿ

೧೮೭ ನ್ಯೂನಿಜ್, ಸಿವಿಲ್: ಎ ಫರ್‌ಗಾಟನ್ ಎಂಪೈರ್, ಪು. ೩೭೫

೧೮೮ ಡಬ್ಲ್ಯು. ಎಚ್. ಮೋರ್‌ಲ್ಯಾಂಡ್: ದಿ ಅಗ್ರೇರಿಯನ್ ಸಿಸ್ಟಮ್ ಆಫ್ ಮುಸ್ಲಿಂ ಇಂಡಿಯಾ, ಅಧ್ಯಾಯ - ೨, ಪು. ೩೮, ೬೨

೧೮೯ ಎ.ಕ. ೧೫, ಎ ಜೆ ೧೧೨; ಅದೇ ೧೧, ಎಂ.ಕೆ. ೯೦; ಅದೇ, ಬಿ ಎನ್ ೭೫; ಅದೇ, ೩, ಎನ್ ಜಿ. ೧೧೮; ಅದೇ ೪, ಕೆ ಆರ್ ೨೧-೨೨; ಅದೇ ೫, ಎಚ್ ಎನ್ ೨೨ ಮತ್ತು ೨೪೫; ಸೌ.ಇ.ಇ. ೧, ನಂ.೧೧೯; ಅದೇ ೯-೨, ನಂ.೪೪೦; ಎಂ ಎ ಆರ್, ೧೯೩೪, ನಂ. ೨೭; ಪು. ೧೨೦ ಇತ್ಯಾದಿ.

೧೯೦ ಡಬ್ಲ್ಯು. ಎಚ್. ಮೋರ್‌ಲ್ಯಾಂಡ್: ದಿ ಅಗ್ರೇರಿಯಸ್‌ಸಿಸ್ಟಂ.... ಪು. ೬೧, ೧೩೮.

೧೯೧ ಎ.ಕ. ೧೫, ಎ ಜೆ ೧೧೨ ಇತ್ಯಾದಿ

೧೯೨ ಎಂ ಎ ಆರ್ ೧೯೩೩, ಪು. ೧೩೬, ಕೆಡಿ

೧೯೩ ಕ್ಯು ಜೆ ಎಂ ಎಸ್ ೧೨, ನಂ. ೧, ಅಕ್ಟೋಬರ್ ೧೯೨೧

೧೯೪ ಎಂ ಎ ಆರ್, ೧೯೨೮, ಸಿ ಎಚ್. ಪ್ಯಾರಾ ನಂ. ೩೭

೧೯೫ ಎ.ಕ. ೫, ಬೇಲೂರು ೨೫೯

೧೯೬ ನ್ಯೂನಿಜ್, ಸಿವಿಲ್: ಪು. ೩೬೬; ಎಂ ಎ ಆರ್ ೧೯೩೪, ಪು. ೧೨೦ ಕೆ ಡಿ

೧೯೭ ಎಂ ಎ ಆರ್ ೧೯೨೦, ಪು. ೩೫ ಎಂ ಎಚ್

೧೯೮ ಎ.ಕ. ೫, ಎಚ್ ಎಸ್. ೨

೧೯೯ ಎ.ಕ. ೧೧, ಎಚ್.ಕೆ. ೧೧೦; ಅದೇ ೧೧, ಡಿ ಜಿ. ೧೦೭; ಅದೇ ಎಚ್.ಕೆ. ೧೭ ಮತ್ತು ೧೧೧.

೨೦೦ ಎಂ ಎ ಆರ್ ೧೯೩೬, ಪು. ೮೭ ಹಾಸನ; ಎ.ಕ. ೧೬ ಬಿ ಎನ್ ಪುರ ೪೨; ಸೌ.ಇ.ಇ. ೭, ಪು. ೧೭೭ ನಂ. ೨೩೦ ಮೂಡಬಿದರೆ

೨೦೧ ಎ.ಕ. ೩, ಎಸ್ ಆರ್. ೧೦೫; ಅದೇ ೧೧ ಜಗಲೂರು ೭; ಸೌ.ಇ.ಇ. ೭, ನಂ. ೩೪೦; ಎ.ಕ. ೧೬, ಎಸ್. ಆರ್. ೧೪೯

೨೦೨ ಎ.ಕ. ೩, ಎಸ್ ಆರ್. ೬; ಎ.ಕ. ೧೧, ಡಿ ಎಸ್. ೨೮.

೨೦೩ ಎ.ಕ. ೧೨, ಟಿ ಎಂ ೫೪ (ಕ್ರಿ ಶ. ೧೪೮೬); ಎಂ ಎ ಆರ್ ೧೯೨೮, ಪು. ೪೮, (೧೫೦೧); ಎ.ಕ. ೧೧. ಎಚ್ ಆರ್ ೧೩ (೧೬೨೦); ಎ.ಕ. ೧೧, ಸಿ.ಡಿ. ೪೮ (೧೫೮೧)

೨೦೪ ಎ.ಕ. ೯, ಸಿ ಪಿ ೧೬೯ (೧೪೧೬); ಅದೇ ೧೦, ಎಸ್ ಡಿ ೧೫ (೧೫೨೮); ಎಂ ಎ ಆರ್, ೧೯೨೦ ಪ್ಯಾರಾ ೨೮ (೧೫೪೨); ಸೌ.ಇ.ಇ. ೯-೨, ೬೭೬ (೧೫೬೨).

೨೦೫ ಎಂ ಎ ಆರ್ ೧೯೨೯ ನಂ. ೯೭. ಪು. ೧೮೧ (೧೪೬೪)

೨೦೬ ಅದೇ, ನಂ. ೬೭೦ (೧೪೦೮).

೨೦೭ ಎ.ಕ. ೧೧ ಎಚ್ ಆರ್ ೬ (೧೫೩೩); ಅದೇ ಎಚ್ ಆರ್. ೩೯

೨೦೮ ಫ್ಲೀಟ್: ಇಂಡಿಯನ್ ಆಂಟಿಕ್ವರಿ, ೫, ಪು. ೩೪೪

೨೦೯ ಎ.ಕ. ೪, ಚಾಮರಾಜನಗರ, ೩೮; ಎಂ ಎ ಆರ್, ೧೯೩೨, ಪು. ೨೧೧-೨೧೨.

೨೧೦ ಎ.ಕ. ೬, ಚಿಕ್ಕಮಗಳೂರು, ೮೦, ೫ ಮತ್ತು ೪; ಅದೇ ೩ ಎಸ್ ಆರ್. ೬

೨೧೧ ಎ.ಕ. ೬. ಕೆ ಪಿ ೫೨ ಮತ್ತು ೪೪

೨೧೨ ಎ.ಕ. ೭ ಸಿ ಐ. ೬೨ (೧೫೬೫)

೨೧೩ ಎ.ಕ. ೬ ಕೆ ಪಿ ೫೨

೨೧೪ ಎ.ಕ. ೬ ಕೆ.ಪಿ. ೪೯. ಪತ್ರ, ಪು. ೩೩೧

೨೧೫ ಎ.ಕ. ೯, ಬೆಂಗಳೂರು ೧೨೭, ಪತ್ರ, ಪು. ೪೭; ಅದೇ, ೧೪, ಜಿಯು ೧೧೩, ಪು. ೧೯; ಅದೇ ೧೪೯; ಅದೇ ೧೧, ಸಿ ಡಿ ೪೫; ಅದೇ, ಜೆ ಎಲ್ ೪೧; ಎ.ಕ. ೧೨, ಟಿವಿ ೧೨೯; ಇತ್ಯಾದಿ.

೨೧೬ ನ್ಯೂನಿಜ್, ಸಿವೆಲ್: ಪೂರ್ವೋಕ್ತ, ಪು. ೩೮೯

೨೧೭ ಅದೇ, ಪು. ೩೭೬

೨೧೮ ಅದೇ, ಪು. ೨೮೩ - ೨೮೫

೨೧೯ ಅದೇ, ಪು. ೩೭೪

೨೨೦ ಎ.ಕ. ೧೬, ಜಿ ಯು ೧೨೮; ಅದೇ ೧೧, ಎಂ ಕೆ. ೩೧

೨೨೧ ಎ.ಕ. ೬, ಕೆ ಪಿ, ೪೯; ಎಂ ಎ ಆರ್, ೧೯೩೨, ಕೊಪ್ಪ ತಾಲೂಕು, ಪು. ೨೧೧-೨೧೨; ಎ.ಕ., ೩, ಎಸ್ ಆರ್. ೮೯ ಇತ್ಯಾದಿ.

೨೨೨ ಎಂ ಎ ಆರ್ ೧೯೩೪, ನಂ. ೩೦, ಪು. ೧೨೮

೨೨೩ ಎ.ಕ. ೧೧, ಎಂ ಕೆ; ಅದೇ, ೬, ಕೆ ಪಿ ೪೯; ಎಂ ಎ ಆರ್ ೧೯೩೩ ನಂ. ೨೩ ಪು. ೧೩೬ ಇತ್ಯಾದಿ

೨೨೪ ನ್ಯೂನಿಜ್, ಸೆವೆಲ್: ಪೂರ್ವೋಕ್ತ, ಪು. ೩೬೬

೨೨೫ ವಿಲ್ಕ್ಸ್: ಹಿಸ್ಟರಿಕಲ್ ಸ್ಕೆಚಸ್, ಪು. ೯೪-೯೮, ೧೨೬

೨೨೬ ಮನ್ರೋ: ಮಿನಟ್ಸ್ ೧, ಪು. ೬೩

೨೨೭ ಎ.ಕ. ೫, ಎ ಕೆ. ೬೭

೨೨೮ ಎ.ಕ. ೬ ಕೆ ಪಿ. ೫೨

೨೨೯ ಎ.ಕ. ೬, ಜಿ ಯು

೨೩೦ ವಿಲ್ಸನ್ ಎಚ್ ಎಚ್, ಗ್ಲಾಸರಿ, ಪು. ೧೩೬

೨೩೧ ಅದೇ

೨೩೨ ಅದೇ, ಪು. ೧೩೦

೨೩೩ ನ್ಯೂನಿಜ್, ಸಿವೆಲ್: ಪು. ೩೦೧-೩೦೨; ಅದೇ, ಪು. ೩೬೪-೩೬೫; ಅದೇ, ಸಿವೆಲನ ಟಿಪ್ಪಣಿಗಳು, ಪು. ೫೦; ಅದೇ. ಪೇಸ್, ಪು. ೨೪೪-೨೪೫; ಇ.ಆ. ೫೭ ೧೯೨೮, ಪು. ೮೪; ಎ.ಕ. ೧೧, ದಾವಣಗೆರೆ ೨೬೯; ಬಾಂಬೆ ಗೆಜೆಟಿಯರ್ ೨೨, ಪು.೨೫೯.

೨೩೪ ಎ.ಕ. ೯ ಎಚ್ ಟಿ ೫೦; ಎಂ ಎ ಆರ್. ೧೯೨೩, ಎಂ ಬಿ ಪು. ೬೨; ಎ ಆರ್ ಎಸ್ ಐ ಇ ೧೯೧೩, ನಂ. ೫೬

೨೩೫ ಎಂ ಎ ಆರ್ ೧೯೦೬-೦೭ ಪ್ಯಾರಾ ೫೫; ಎ ಎಸ್ ಐ, ೧೯೦೭-೦೮ ಪು. ೨೪೭, ಅಡಿಟಿಪ್ಪಣಿ-೧ ; ಎ.ಕ. ೩, ಎಸ್ ಆರ್. ೬

೨೩೬ ವೆಂಕಟರಾಯಶಾಸ್ತ್ರಿ (ಸಂ): ಆಮುಕ್ತಮಾಲ್ಯದ, ಮದರಾಸು ೧೯೨೧, ಪು. ೪೭೪, ಕಾವ್ಯ ೨೩೨

೨೩೭ ಬಾರ್ಬೋಸಾ ೧, ಪು. ೨೦೯

೨೩೮ ಎ.ಕ. ೩, ಎಸ್ ಆರ್. ೬

೨೩೯ ಸೌತ್ ಇಂಡಿಯನ್ ಫೈನಾನ್ಸ್, ಇ. ಆ. ೪೦ ಪು. ೨೬೮, ೨೮೭

೨೪೦ ಎ ಆರ್ ಇ ೧೯೦೦, ಪ್ಯಾರಾ ೨೪

೨೪೧ ನ್ಯೂನಿಜ್, ಸಿವೆಲ್: ಪು. ೩೭೫; ಅದೇ, ಪೇಸ್, ಪು ೨೩೭, ೨೫೭, ೨೫೮, ೨೫೯, ೫೫೫; ಬಾರ್ಬೋಸಾ, ೧ ಪು.೨೦೦

೨೪೨ ಎಲಿಯಟ್ ಮತ್ತು ಡಾಸನ್: ಹಿಸ್ಟರಿ ಆಫ್ ಇಂಡಿಯಾ ಆ್ಯಸ್ ಟೋಲ್ಡ್ ಬೈ ಇಟ್ಸ ಓನ್ ಹಿಸ್ಟೋರಿಯನ್ಸ್, ಸಂ. ೪, ಪು. ೧೦೯

೨೪೩ ರೈಸ್: ಮೈಸೂರು ಗೆಜೆಟಿಯರ್, ನಂ. ೪, ಪು. ೧೦೯

೨೪೪ ಸಾಲೆತೊರ: ಸೋಷಿಯಲ್ ಎಂಡ್ ಪೊಲಿಟಿಕಲ್ ಲೈಫ್ ಇನ್ ವಿಜಯನಗರ ಎಂಪೈರ್, ಮದರಾಸು, ೧೯೩೪ ಪು. ೧೬೨

೨೪೫ ಅದೇ, ಪು. ೧೯೧

೨೪೬ ಕೆ.ಡಿ. ಸ್ವಾಮಿನಾಥನ್: ದಿ ನಾಯಕ್ಸ್ ಆಫ್ ಇಕ್ಕೇರಿ, ಪು-೧೭೩

೨೪೭ ಎ.ಕ. ೮, ಎಸ್ ಬಿ ೩೫೪ ಮತುತ ೪೫೧; ಅದೇ, ಎಸ್ ಎ. ೧೦೮. ಪಠ್ಯ, ಪು. ೩೦೩; ಅದೇ, ಟಿ ಎಲ್ ೩.೪.೫.೬.೭.೪೩ ಮತ್ತು ೪೧; ಇತ್ಯಾದಿ

೨೪೮ ಎಂ ಎಆರ್ ೧೯೩೩, ನಂ. ೩೦, ಪು. ೧೯೬ ಕಡೂರು ಜಿಲ್ಲೆ; ಎ.ಕ. ೮ ಎಸ್ ಜಿ ೧೦೮, ಪಠ್ಯ, ಪು. ೩೦೩

೨೪೯ ಹೊಳೆಹೊನ್ನೂರು ಕೈಫಿಯತ್ (ಕನ್ನಡ ಹಸ್ತಪ್ರತಿ) ಪು ೯, ೧೦; ಕೆಳದಿನೃಪವಿಜಯಂ, ಪು. ೧೧೩

೨೫೦ ಮೈಸೂರು ಗೆಜೆಟಿಯರ್, ಸಂ. ೧, ಪು. ೫೯೩

೨೫೧ ಎಂ ಎ ಆರ್ ೧೯೨೩, ನಂ. ೧೧೦, ಪು. ೧೦೯; ಎಂ ಎ ಆರ್ ೧೯೩೩ ನಂ. ೩೦ ಪು. ೧೯೬ ಇತ್ಯಾದಿ

೨೫೨ ಎಂ ಎ ಆರ್ ೧೯೩೩, ನಂ. ೩೦ ಪು. ೧೯೬, ಕಡೂರು, ಕ್ರಿ ಶ. ೧೭೩೦

೨೫೩ ಎಂ ಎ ಆರ್ ೧೯೩೬, ನಂ. ೬೦, ಪು. ೧೫೨, ಧಾರವಾಡ ಜಿಲ್ಲೆ

೨೫೪ ಎಕ್ಸಾಟ್ರಕ್ಟ್ಸ್ ಫ್ರಂ ಕ್ರಾನಿಕಲ್ಸ್ ಕಂಪೈಲ್ಡ್ ಅಬೌಟ್ ೧೮೨೦, ಅನುವಾದ: ಶಾಮಾಶಾಸ್ತ್ರಿ. ಆರ್, ಕ್ಯು ಜೆ ಎಂ ಎಸ್, ಸಂ. ೧೨, ಅಕ್ಟೋಬರ್ (೧೯೨೧) (೧) ಪು. ೪೮

೨೫೫ ಎ.ಕ. ೮. ಟಿ ಸಿ ೩,೪,೫,೬,೭, ೩೪

೨೫೬ ಎ.ಕ. ೬ ಎಸ್ ಜಿ, ೧೭; ಅದೇ ೮, ಟಿ ಎಲ್. ೩೪

೨೫೭ ಮೈಸೂರು ಗೆಜೆಟಿಯರ್, ಸಂ. ೧, ಪು. ೫೯೩

೨೫೮ ಅದೇ

೨೫೯ ಎ.ಕ. ೮, ಎಸ್ ಬಿ. ೩೫೪

೨೬೦ ಎಂ ಎ ಆರ್ ೧೯೨೩, ನಂ. ೧೧೦, ಪು. ೧೧೯; ಎ.ಕ. ೮, ಟಿ ಎಲ್. ೭೭

೨೬೧ ಎ.ಕ. ೮, ಟಿ ಎಲ್. ೭೭

೨೬೨ ಎಂ ಎ ಆರ್ ೧೯೩೩, ನಂ. ೨೮, ಪು. ೧೭೮ ಕಡೂರು ಜಿಲ್ಲೆ

೨೬೩ ಎ.ಕ. ೮, ಎಸ್ ಬಿ. ೫೪೮; ಅದೇ, ಎಸ್ ಎ ೧೬ ಮತ್ತು ೧೭

೨೬೪ ಎಂ ಎ ಆರ್ ೧೯೧೬, ಕ್ರಿ ಶ. ೧೬೫೬

೨೬೫ ಎ.ಕ. ೮, ಎಸ್ ಬಿ. ೨೬೬

೨೬೬ ಎಂ ಎ ಆರ್ ೧೯೨೩, ನಂ. ೧೦೭, ಪು ೧೦೪

೨೬೭ ಎಂ ಎ ಆರ್. ೧೯೩೩, ನಂ. ೨೮, ಪು. ೧೭೮; ಎಂ ಎ ಆರ್. ೧೯೩೩, ನಂ. ೨೮, ಪು. ೧೮೦; ಇತ್ಯಾದಿ

೨೬೮ ಎ.ಕ. ೮, ಟಿ ಎಲ್. ೪೭

೨೬೯ ಎಂ ಎ ಆರ್ ೧೯೧೬, ಪು. ೬೬

೨೭೦ ಎಂ ಎ ಆರ್ ೧೯೩೬, ನಂ ೨೬. ಪು. ೯೮ ಕಡೂರು ಜಿಲ್ಲೆ; ಅದೇ, ೧೯೩೩, ನಂ. ೨೮, ಪು. ೧೭೮ ಕಡೂರು ಜಿಲ್ಲೆ; ಅದೇ, ೧೯೪೩, ನಂ ೩೭. ಪು. ೧೧೫ ಶಿವಮೊಗ್ಗ ಜಿಲ್ಲೆ; ಅದೇ, ನಂ. ೪೦, ಪು. ೧೨೪, ಶಿವಮೊಗ್ಗ ಜಿಲ್ಲೆ; ಅದೇ. ೧೯೨೩, ನಂ. ೧೦೪, ಪು. ೧೦೧, ಶಿವಮೊಗ್ಗ ಜಿಲ್ಲೆ; ಅದೇ. ನಂ. ೧೦೮, ಪು. ೧೦೫, ಶಿವಮೊಗ್ಗ ಜಿಲ್ಲೆ ಇತ್ಯಾದಿ.

೨೭೧ ಎಂ ಎ ಆರ್ ೧೯೧೯, ನಂ. ೯೭, ಪು. ೩೮ ತೀರ್ಥಹಳ್ಳಿ ತಾಲೂಕು; ಎ.ಕ. ೫ ಹಾಸನ ೧೭೨; ಅದೇ, ಮಜರಾಬಾದ್ ೫೨; ಕೆಳದಿನೃಪವಿಜಯಂ ಪು. ೧೧೨

೨೭೨ ಅದೇ, ಪು. ೧೧೨-೧೧೩

೨೭೩ ಕೆಳದಿನೃಪವಿಜಯಂ, ಪು ೧೧೨

೨೭೪ ಕೆಳದಿಸಂಸ್ಥಾನದರಾಯರ ವಂಶಾವಳಿ (ಹಸ್ತಪ್ರತಿ), ಪು. ೪೪

೨೭೫ ಅದೇ, ಪು. ೪೪-೪೫; ಕೆಳದಿನೃಪವಿಜಯಂ, ಪು ೧೧೨-೧೧೩

೨೭೬ ಎಂ ಎ ಆರ್. ೧೯೩೩, ನಂ. ೨೮, ಪು. ೧೭೮, ಕಡೂರು ಜಿಲ್ಲೆ; ಅದೇ, ೧೯೨೩, ನಂ. ೧೧೦, ಪು. ೧೧೯, ಶಿವಮೊಗ್ಗ ಜಿಲ್ಲೆ

೨೭೭ ಎ.ಕ. ೮, ಟಿ ಎಲ್. ೩-೪-೫-೬-೭-೪೪ ಮತ್ತು ೪೭

೨೭೮ ಎಂ ಎ ಆರ್ ೧೯೩೩, ಸಂ.೨೮, ಪು. ೧೭೮. ಕಡೂರು ಜಿಲ್ಲೆ; ಅದೇ ೧೯೨೩, ನಂ. ೧೧೦, ಪು. ೧೧೯, ಶಿವಮೊಗ್ಗ ಜಿಲ್ಲೆ

೨೭೯ ವಿಲ್ಕ್ಸ್: ಹಿಸ್ಟರಿಕಲ್ ಸ್ಕೆಚಸ್, ಸಂ. ೧, ಪು. ೨೧೪

೨೮೦ ಮೆಕೆಂಜೀ ಕಲೆಕ್ಷನ್ಸ್, ಜನರಲ್, ಸಂ. ೪೬, ಪು. ೩೦೦ ರಾಜಾವಳೀ ಕಥೆ (ಹಸ್ತಪ್ರತಿ) ಪು. ೨೮೯; ಎ.ಕ. ೫, ಎಂ. ಬಿ. ೧೭೨, ಪಠ್ಯ, ಭಾ-೨, ಶಕ, ೧೪೮೯

೨೮೧ ಶಿವಣ್ಣ ಕೆ. ಎಸ್: ದಿ ಅಗ್ರೇರಿಯನ್ ಸಿಸ್ಟಮ್ ಆಫ್ ಕರ್ನಾಟಕ (೧೩೩೬-೧೭೬೧), ಅಧ್ಯಾಯ ೧, ಪು. ೧-೩

೨೮೨ ರಾಜಾವಳೀ ಕಥೆ (ಹಸ್ತಪ್ರತಿ), ಪು. ೪೨೫

೨೮೩ ಅದೇ, ಪು. ೨೮೯

೨೮೪ ಎ.ಕ. ೧೨, ಟಿ ಪಿ ೧೧೨, ಕ್ರಿ.ಶ. ೧೭೬೨, ಕೃಷ್ಣರಾಜ ಒಡೆಯರ್

೨೮೫ ರಾಜಾವಳೀ ಕಥೆ, ಪು. ೨೮೯; ಮೆಕೆಂಜೀ ಕಲೆಕ್ಷನ್ಸ್. ಪೂರ್ವೋಕ್ತ, ಸಂ. ೪೬, ಪು. ೩೦೦

೨೮೬ ಎ.ಕ. ೩, ಟಿ ಎನ್. ೬೩ (೧೭೪೮)

೨೮೭ ಎ.ಕ. ೩, ಎನ್ ಜೆ. ೮೧ (೧೬೬೨)

೨೮೮ ಎ.ಕ. ೧೧, ಸಿ ಡಿ ೬೧ (ಸಂ. ೧೮೦೦)

೨೮೯ ಮೆಕೆಂಜೀ ಕಲೆಕ್ಷನ್ಸ್, ಪೂರ್ವೋಕ್ತ, ಪು. ೩೦೧; ಎ.ಕ. ೩, ಎನ್ ಜೆ ೧೫

೨೯೦ ಎ.ಕ. ೩, ಎನ್ ಜೆ. ೧೫

೨೯೧ ಮೆಕೆಂಜೀ ಕಲೆಕ್ಷನ್ಸ್, ಪೂರ್ವೋಕ್ತ ಪು. ೩೦೧

೨೯೨ ಅದೇ, ಪು. ೩೦೦, ೩೦೨, ೨೧೧; ನೆಲವನ್ನು ನಿಗದಿತ ಕಂದಾಯಕ್ಕೆ ಗುತ್ತಿಗೆ ಕೊಡಲಾಗುತಿದ್ದಿತೆನ್ನುವುದನ್ನು ಸಿದ್ಧಾಯ ಎಂಬ ಪದವು ಸೂಚಿಸುತ್ತದೆ. ನೋಡಿ; ರಾಜಾವಳೀ ಕಥೆ, ಪು. ೨೮೯

೨೯೩ ಮೆಕೆಂಜೀ ಕಲೆಕ್ಷನ್ಸ್, ಪೂರ್ವೋಕ್ತ, ಪು. ೩೦೧; ಅದೇ, ಪು. ೨೧೧

೨೯೪ ಎ.ಕ. ೫, ಅರಸೀಕೆರೆ, ೯೫-೯೬; ಎ.ಕ. ೩, ಶ್ರೀರಂಗಪಟ್ಟಣ ೧೦೦; ರಾಜಾವಳೀ ಕಥೆ (ಹಸ್ತಪ್ರತಿ), ಪು. ೪೨೫; ಎ.ಕ. ೯, ನೆಲಮಂಗಲ ೮, ಪಠ್ಯ ಪು. ೫೭ ಇತ್ಯಾದಿ

೨೯೫ ಎ.ಕ. ೩, ಎನ್. ಜೆ. ೧೫, ಕ್ರಿ ಶ ೧೭೬೧; ಎ.ಕ. ೫ ಎ ಕ ೯೫-೯೬; ಎ.ಕ. ೯, ಎಸ್ ಎಲ್, ೮, ಪಠ್ಯ, ಪು. ೫೭; ರಾಜಾವಳೀ ಕಥೆ, ಪು. ೪೨೫

೨೯೬ ಶ್ರೀಮನ್ಮಹಾರಾಜರ ವಂಶಾವಳಿ, ಪು. ೮೦

೨೯೭ ಮಜೆಂಜೀ ಕಲೆಕ್ಷನ್ಸ್, ಪೂರ್ವೋಕ್ತ, ಪು. ೨೯೮-೩೦೫

೨೯೮ ಅನಾಲ್ಸ್ ಸಂ. ೧, ಪು. ೧೨೨

೨೯೯ ರಾಜಾವಳೀ ಕಥೆ (ಹಸ್ತಪ್ರತಿ) ಪು. ೪೨೫-೪೨೬

೩೦೦ ಎ.ಕ. ೩, ಟಿ ಎನ್. ೬೩

೩೦೧ ಅದೇ.

೩೦೨ ಎ.ಕ. ೩, ಎಸ್ ಆರ್, ೬೪

ಅಧ್ಯಾಯ : ಆರು

ವಿಜಯನಗರದಲ್ಲಿ ಕೃಷಿಯೇತರ ತೆರಿಗೆ

ಸಾಮಾನ್ಯವಾಗಿ ಭಾರತದಲ್ಲಿ, ವಿಶೇಷವಾಗಿ ದಖ್ಖನಿನಲ್ಲಿ ಕೃಷಿಯೇತರ ಅರ್ಥವ್ಯವಸ್ಥೆಯು ೧೪ನೆಯ ಶತಮಾನದಿಂದ ಒಂದು ಮುಖ್ಯ ಬೆಳವಣಿಗೆಯಾಗಿಯೂ ಆರ್ಥಿಕ ಪರಿವರ್ತನೆಯಾಗಿಯೂ ರೂಪುಗೊಳ್ಳತೊಡಗಿತು. ಇದರ ಅರ್ಥ, ಕೃಷಿಯೇತರ ಉತ್ಪಾದನೆ ಅಥವಾ ಚಟುವಟಿಕೆ ಕೃಷಿ ಅರ್ಥವ್ಯವಸ್ಥೆಯನ್ನು ಮುಚ್ಚಿಹಾಕಿ ಸಂಪೂರ್ಣ ಪ್ರಾಧಾನ್ಯ ಪಡೆಯಿತು ಎಂದಲ್ಲ. ಕೃಷಿ ಆರ್ಥಿಕತೆಗೆ ಪೂರಕವಾಗಿ ಕೃಷಿಯೇತರ ಉತ್ಪಾದನಾ ಚಟುವಟಿಕೆಯು ಕ್ರಮೇಣ ಕಾಣಿಸಿಕೊಂಡಿತು. ಬೆಳೆಯುತ್ತಿದ್ದ ಅದರ ಪಾತ್ರ, ರಾಜ್ಯದ ಬೊಕ್ಕಸಕ್ಕೆ ವರಮಾನವನ್ನು ಹರಿಸುವ ಕ್ಷೇತ್ರವಾಗಿ ಅದರ ಪ್ರಾಮುಖ್ಯ ಕಣ್ಣಿಗೆ ಕಾಣುವಂತಹ ಆರ್ಥಿಕ ಬೆಳವಣಿಗೆಯಾಯಿತು.

ವಾಣಿಜ್ಯ ಮತ್ತು ವ್ಯಾಪಾರ ಕ್ರಮೇಣ ಉದಿಸಿದ್ದು, ವಸ್ತುಗಳ ಉತ್ಪಾದನೆ, ಕಸಬುಗಳು ಹರಳುಗಟ್ಟಿದುದು, ರಾಜ್ಯದ ಅರ್ಥವ್ಯವಸ್ಥೆಯು ಉತ್ತಮಗೊಂಡದ್ದು, ನಗರೀಕರಣ ಇವು ಹಳೆಯ, ಆವೃತ, ಕೃಷಿ ಅರ್ಥ ವ್ಯವಸ್ಥೆಯು ವಿಶಾಲತರವಾದ, ಕೃಷಿಯೇತರ ಮಾರುಕಟ್ಟೆಯನ್ನಾಧರಿಸಿದ ಅರ್ಥವ್ಯವಸ್ಥೆಯಾಗಿ ಬೆಳೆದುದರ ಸ್ಪಷ್ಟ ಕುರುಹುಗಳಾಗಿದ್ದುವು. ಈ ಬದಲಾವಣೆ ದಿಢೀರನೆ ಆದದ್ದಲ್ಲ. ಅಥವಾ ಯೂರೋಪಿನಲ್ಲಿ ಕಂಡುಬಂದಂತೆ ರೋಮಾಂಚಕರವೂ ಆದುದಲ್ಲ. ಯೂರೋಪಿನಲ್ಲೂ ಹೀಗೆಯೇ ಆವೃತ ಕೃಷಿ ಅರ್ಥವ್ಯವಸ್ಥೆಯಿಂದ ಮುಕ್ತ ಕೃಷಿಯೇತರ ಅರ್ಥವ್ಯವಸ್ಥೆಯ ಕಡೆಗೆ ಬೆಳವಣಿಗೆ ಕಂಡುಬಂದಿತು. ಅದೇ ರೀತಿಯಲ್ಲಿ ದಕ್ಷಿಣ ಭಾರತದಲ್ಲಿಯೂ ಮುಖ್ಯವಾಗಿ ಬಂಡವಾಳಶಾಹಿ ಅರ್ಥವ್ಯವಸ್ಥೆಯು ವಿಕಾಸಗೊಂಡ ಕುರುಹುಗಳು ಗೋಚರಿಸುತ್ತವೆ. ಆದರೆ ಹೋಲಿಕೆಯನ್ನು ಇದಕ್ಕಿಂತಲೂ ಮುಂದಕ್ಕೆ ಎಳೆಯುವುದು ಸಾಧ್ಯವಿಲ್ಲ. ಏಕೆಂದರೆ ಎರಡೂ ದೇಶಗಳ ಸನ್ನಿವೇಶ ಬೇರೆ, ಆರ್ಥಿಕ, ರಾಜಕೀಯ , ಜನಸಂಖ್ಯಾ ಸ್ವರೂಪಗಳು ಬೇರೆ ಬೇರೆ. ಒಂದು ಅಂಶ ಮಾತ್ರ ಸ್ಪಷ್ಟವಾಗಿ ಗೋಚರಿಸುತ್ತದೆ, ಯೂರೋಪಿಯನ್ ಅರ್ಥವ್ಯವಸ್ಥೆಯಲ್ಲಿ ಊಳಿಗಮಾನ್ಯ ವ್ಯವಸ್ಥೆಯಿಂದ ಬಂಡವಾಳಶಾಹಿ ಹಂತಕ್ಕೆ, ಅಲ್ಲಿಂದ ಮುಂದೆ ಔದ್ಯೋಗಿಕ ಅರ್ಥವ್ಯವಸ್ಥೆಯ ನೆಲೆಗೆ ಪರಿವರ್ತನೆ ಕಂಡುಬಂದುದು ೧೪ ಮತ್ತು ೧೫ನೆಯ ಶತಮಾನಗಳಿಂದ. ಯೂರೋಪು ಮತ್ತು ದಕ್ಷಿಣ ಭಾರತಗಳ ನಡುವೆ ಪೂರ್ಣವಾದ ನೇರ ಹೋಲಿಕೆ ಸಾಧ್ಯವಿಲ್ಲವಾದರೂ, ಆವೃತ ಅರ್ಥವ್ಯವಸ್ಥೆಯೊಂದರಿಂದ ಮುಕ್ತವಾದ ಬಂಡವಾಳಗಾರಿಕೆಯ ಅರ್ಥವ್ಯವಸ್ಥೆಯಾಗಿ ಪರಿವರ್ತನೆ ಹೊಂದಿದುದು ಮಾತ್ರ ಸುವ್ಯಕ್ತವಾಗಿದೆ.

ಹಾಗೆ ನೋಡಿದರೆ, ಕೃಷಿಯೇತರ ಆರ್ಥಿಕತೆಯ ಬೆಳವಣಿಗೆ ಮತ್ತು ಉತ್ಪಾದನೆ ಒಂದು ಪ್ರದೇಶದ ಅರ್ಥವ್ಯವಸ್ಥೆಯ ಸಾಮಾನ್ಯ ಬೆಳವಣಿಗೆಯ ಕುರುಹು ಎಂದಿಟ್ಟುಕೊಳ್ಳಬಹುದು. ಆಧುನಿಕ ಪೂರ್ವಸ್ಥಿತಿಯಿಂದ ಆಧುನಿಕ ಸ್ಥಿತಿಗೆ, ಊಳಿಗಮಾನ್ಯ, ಆವೃತ, ಜೀವನೋಪಾಯದ ಆರ್ಥಿಕತೆಯಿಂದ ವಿಶಾಲತರವಾದ ಮಾರುಕಟ್ಟೆಯ ಗುರಿಯುಳ್ಳ ಮುಕ್ತ ಅರ್ಥವ್ಯವಸ್ಥೆಗೆ, ಬಂಡವಾಳಶಾಹಿ ಆರ್ಥಿಕತೆಯ ಕಡೆಗೆ ಚಲನೆಯು ಅನಿವಾರ್ಯವಾದ ಐತಿಹಾಸಿಕ ಪ್ರಕ್ರಿಯೆ ಆಗಿ ಬದಲಾಯಿತು. ಸಂಪೂರ್ಣವಾಗಿ ಕೃಷಿ ಆಧಾರಿತ ಆರ್ಥಿಕ

ರಚನೆಯು ಬದಲಾಗುವ ಆರ್ಥಿಕ ವಿನ್ಯಾಸದ ವಿವಿಧ ಹಂತಗಳ ಮೂಲಕ ಬೆಳೆಯಿತು. ವಾಸ್ತವವಾಗಿ ಯೂರೋಪಿನಲ್ಲಿ ಅಂಥದೊಂದು ಮಹತ್ವದ ಪರಿವರ್ತನೆಯನ್ನು ಯೂರೋಪಿನ ಆಧುನಿಕ ಆರ್ಥಿಕ ರಚನೆಯ ಮತ್ತು ಬಂಡವಾಳಶಾಹಿಯ ಕಡೆಗೆ ಕಂಡುಬಂದ ಒಂದು ಮುಖ್ಯವಾದ ಹೆಜ್ಜೆಯೆಂದು ಪರಿಗಣಿಸಲಾಯಿತು. ಇದು ಯೂರೋಪಿನ ಅರ್ಥವ್ಯವಸ್ಥೆಗೆ ಮಾತ್ರ ಅನ್ವಯಿಸಿದ ಲಕ್ಷಣವಲ್ಲ. ಏಷ್ಯಾಪ್ರಾಂತಗಳ ಆರ್ಥಿಕ ಇತಿಹಾಸವನ್ನು ಕುರಿತು ಕೆಲಸ ಮಾಡುತ್ತಿರುವ ವಿದ್ವಾಂಸರು ೧೪ರಿಂದ ೧೮ನೆಯ ಶತಮಾನಗಳವರೆಗಿನ ಕಾಲಾವಧಿಯಲ್ಲಿ ಏಷ್ಯಾ ಖಂಡವು ಕೂಡ, ಮೂಲ ಬಂಡವಾಳಶಾಹಿಯ ಹೊಸ್ತಿಲಲ್ಲಿತ್ತು. ಆವೃತ್ತ ಸ್ವಯಂ ಪೂರ್ಣ ಗ್ರಾಮೀಣ ಆರ್ಥಿಕತೆಯಿಂದ ಬಂಡವಾಳಶಾಹಿ ಆರ್ಥಿಕತೆಯ ಕಡೆಗೆ ಬದಲಾವಣೆ ಹೊಂದುತ್ತಿದ್ದಿತು. ವಸಾಹತುಶಾಹಿ ಪೂರ್ವ ಏಷ್ಯಾಖಂಡದ ಆರ್ಥಿಕ ಇತಿಹಾಸವನ್ನು ಗಂಭೀರವಾಗಿ ಅಧ್ಯಯನ ಮಾಡಿದರೆ ಇದು ವೇದ್ಯವಾಗುತ್ತದೆ.[೧]

ಮೇಲೆ ಆಗಲೆ ಉಲ್ಲೇಖಿಸಿರುವಂತೆ, ಕೃಷಿಯೇತರ ಉತ್ಪಾದನೆಯ ಚಟುವಟಿಕೆ ಮತ್ತು ಕಸಬುಗಳು ದಕ್ಷಿಣದಲ್ಲಿ ೧೪ನೆಯ ಶತಮಾನದಿಂದಲೂ ವೃದ್ಧಿಗೊಂಡುದನ್ನು ನೋಡಬಹುದು. ಅದಕ್ಕಿಂತ ಅಂದರೆ ೧೪ನೇ ಶತಮಾನಕ್ಕಿಂತಲೂ ಹಿಂದೆ ಉತ್ಪಾದನಾ ಚಟುವಟಿಕೆ ಇರಲೇ ಇಲ್ಲ ಎಂದರ್ಥವಲ್ಲ. ಆದರೆ ಇಲ್ಲಿ ಮುಖ್ಯವಾಗುವ ವಿಚಾರ ೧೪ನೆಯ ಶತಮಾನದಿಂದೀಚೆಗೆ ಕೃಷಿಯೇತರ ಚಟುವಟಿಕೆಯಲ್ಲಿ, ಉತ್ಪಾದನೆಯಲ್ಲಿ ಮತ್ತು ಕಸಬುಗಳಲ್ಲಿ ಹೆಚ್ಚಳ ಸ್ಪಷ್ಟವಾಗಿ ಕಂಡುಬಂದದ್ದು. ಇದು ಆ ಪ್ರದೇಶದ ಆರ್ಥಿಕತೆಯ ಬೆಳವಣಿಗೆ ಮತ್ತು ವಿಸ್ತರಣಗಳನ್ನು ಪೋಷಿಸಿತು. ಕೈಗಾರಿಕೆ ಮತ್ತು ವಾಣಿಜ್ಯಗಳಲ್ಲಿ ಹೆಚ್ಚಿನ ಹಣವನ್ನು ಉಪಯೋಗಿಸಲಾಯಿತು. ನಗರೀಕರಣವೂ ಅಧಿಕಗೊಂಡಿತು. ಇದು ಬದಲಾಗುವ ಅರ್ಥವ್ಯವಸ್ಥೆಯ ಸೂಚಕಗಳಾದುವು.

ಊಳಿಗಪದ್ಧತಿಯೂ ಆವೃತ, ಸ್ವಯಂಪೂರ್ಣ ಕೃಷಿ ಆರ್ಥಿಕತೆಯೂ ಮುರಿದು, ಬಲವಾದ ಕೃಷಿಯೇತರ ಆರ್ಥಿಕತೆಯ ಬಂಡವಾಳಶಾಹಿಯ ಬೆಳವಣಿಗೆಗೆ ಎಡೆಗೊಟ್ಟು, ಒಟ್ಟಾರೆ ಸಾಮಾಜಿಕ-ಆರ್ಥಿಕ ಬದಲಾವಣೆಯ ಮೇಲೆ ಪರಿಣಾಮವನ್ನುಂಟುಮಾಡಿದ್ದು ಎರಡನೆಯ ಮಹಾಯುದ್ಧದ ಕಾಲದಿಂದಲೂ ವಿದ್ವಾಂಸರಲ್ಲಿ ಚರ್ಚೆಯ ಗ್ರಾಸವಾಗಿದೆ. ಊಳಿಗಮಾನ್ಯಪದ್ಧತಿಯು ಬಂಡವಾಳಶಾಹಿಯಾಗಿ ಪರಿವರ್ತನೆಗೊಂಡ ವಿಷಯವನ್ನು ಕುರಿತ ವಿಮರ್ಶೆಯನ್ನು ಚುರುಕುಗೊಳಿಸಿ ವಿಶ್ಲೇಷಣೆಗೊಳಪಡಿಸುವ ಕೆಲಸ ಪ್ರಾರಂಭವಾದದ್ದು ಮಾರಿಸ್ ಡಾಬ್ ಅವರ 'ಸ್ಟಡೀಸ್ ಇನ್ ದಿ ಡೆವಲಪ್‌ಮೆಂಟ್ ಆಫ್ ಕ್ಯಾಪಿಟಲಿಸಂ' ಕೃತಿಯಿಂದ. ಅದು ೧೯೪೬ರಲ್ಲಿ ಲಂಡನಿನಲ್ಲಿ ಪ್ರಕಟವಾಯಿತು. ಡಾಬ್‌ನ ಈ ವಿದ್ವತ್ಪೂರ್ಣ ಕೃತಿಯನ್ನು ಕಾರ್ಲ್‌ಪೊಲಾನಿ ವಿಮರ್ಶೆ ಮಾಡಿದನು.[೨] ಅದರ ಹಿಂದೆಯೇ ಆರ್.ಎನ್. ಟಾನಿಯ ಕೃತಿಯು ಪ್ರಕಟವಾಯಿತು.[೩] ಅಲ್ಲಿಂದೀಚೆಗೆ ಆಗಾಗ ವಿಮರ್ಶಕರ ಅಭಿಪ್ರಾಯಗಳು, ಚರ್ಚೆಗಳು, ಈ ವಿಷಯದ ಮೇಲೆ ಬರುತ್ತಲೇ ಇವೆ. ಕೃಷಿಯೇತರ ಅರ್ಥವ್ಯವಸ್ಥೆಯು ಹೇಗೆ ಆರ್ಥಿಕ ರಚನೆಯಲ್ಲಿ ಕ್ರಾಂತಿಕಾರಕ ಬದಲಾವಣೆಯನ್ನುಂಟು ಮಾಡಿತೆನ್ನುವುದನ್ನು ತೋರಿಸಿವೆ. ಆಮೇಲೆ ಊಳಿಗಪದ್ಧತಿಯು ಕೃಷಿಯೇತರ ಅರ್ಥವ್ಯವಸ್ಥೆಯಾಗಿ ಪರಿವರ್ತನೆಗೊಂಡುದನ್ನು ಕುರಿತ ಇನ್ನೊಂದು ವಿದ್ವತ್ಪೂರ್ಣವೂ ಶೈಕ್ಷಣಿಕವೂ ಆದ ಚರ್ಚಾ ಸರಣಿ ಪ್ರಾರಂಭವಾಯಿತು. ಅದು 'ಸೈನ್ಸ್ ಎಂಡ್ ಸೊಸೈಟಿ'ಯ ಪುಟಗಳಲ್ಲಿ ೧೯೫೦ ರ ಪ್ರಾರಂಭದಿಂದಲೇ ಪ್ರಕಟವಾಗತೊಡಗಿತು. ಇದು ವಿದ್ವದ್ವಲಯದಲ್ಲಿ ಬಹಳ ಕುತೂಹಲಕ್ಕೆಡೆಗೊಟ್ಟಿತು. ವಿಪುಲವಾದ ಆಧಾರ ಸಾಮಗ್ರಿ, ಸಮಸ್ಯೆಯ ತಾತ್ವಿಕ ವಿವರಣೆ ಇವುಗಳನ್ನು ಅಮೆರಿಕನ್ ಮತ್ತು ಯೂರೋಪಿಯನ್[೪] (ಇಂಗ್ಲಿಷ್, ಫ್ರೆಂಚ್, ಜರ್ಮನ್ ಮತ್ತು ಇಟಾಲಿಯನ್ ವಿದ್ವಾಂಸರು)ವಿದ್ವಾಂಸರು ಬರೆದರು. ಅಷ್ಟೇ ಅಲ್ಲದೆ ಏಷ್ಯಾದ ವಿದ್ವಾಂಸರನ್ನೂ ದೂರ ಪ್ರಾಚ್ಯ, ಜಪಾನುಗಳಲ್ಲಿನ ವಿದ್ವಾಂಸರನ್ನೂ ಇದು ಆಕರ್ಷಿಸಿತು.[೫]

ಈ ಸಮಸ್ಯೆಯನ್ನುಕುರಿತ ಚರ್ಚೆಗಳು, ವಾದವಿವಾದಗಳು ಕೆಲವು ಬೆಲೆಬಾಳುವ ಸೂಚನೆಗಳನ್ನು ನೀಡಿವೆ. ಕತ್ತಲಯುಗದಿಂದ ಮಧ್ಯಯುಗಕ್ಕೆ, ಅಲ್ಲಿಂದ ಆಧುನಿಕ ಯುಗಕ್ಕೆ ಆದ ಬದಲಾವಣೆಗಳನ್ನು, ಅವು ಪರಿವರ್ತಿಸಿದ ಸಾಮಾಜಿಕ - ರಾಜಕೀಯ ವಿನ್ಯಾಸಗಳನ್ನು ಕುರಿತು, ನೂತನ ಸಮಾಜಗಳನ್ನೂ, ಉತ್ಪಾದನೆಯ ನೂತನ ವಿಧಾನಗಳು ಮತ್ತು ನಿರ್ಧಾರಕ ಅಂಶಗಳನ್ನು ಕುರಿತು ಈ ಸಲಹೆಗಳು ಬಂದಿವೆ. ಸಾಮಾನ್ಯವಾಗಿ ಒಪ್ಪಿಗೆಯಾಗಿರುವ ವಿಚಾರವೆಂದರೆ, ಆಧುನಿಕ ಬಂಡವಾಳ ವ್ಯವಸ್ಥೆಯು ಹಂತಹಂತವಾಗಿ ಬೆಳೆಯಿತು. ಮಧ್ಯಯುಗದಲ್ಲಿ ಬೆಳವಣಿಗೆಯು ಸುಮಾರು ೧೧ ಮತ್ತು ೧೨ನೆಯ ಶತಮಾನಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಕಾಣಿಸಿತು. ಊಳಿಗಪದ್ಧತಿಯು ಕುಸಿದು, ಹಿಂದಿನ ಆವೃತ ಗ್ರಾಮೀಣ ಅರ್ಥವ್ಯವಸ್ಥೆಯ ಬದಲಿಗೆ ಮಾರುಕಟ್ಟೆಗಳ ಹೆಚ್ಚು ಮುಕ್ತವಾದ ಅರ್ಥವ್ಯವಸ್ಥೆಗೆ ದಾರಿ ಮಾಡಿತು. ಹೆಚ್ಚುವರಿ ಉತ್ಪಾದನೆ, ಅಂದರೆ ''ತಮ್ಮ ಉಪಯೋಗಕ್ಕಾಗಿ ಉತ್ಪಾದನೆ'' ಗಿಂತ ''ಮಾರುಕಟ್ಟೆಗಾಗಿ[೬] ಅಥವಾ ವಿನಿಮಯಕ್ಕಾಗಿ ಉತ್ಪಾದನೆ'' ಅಧಿಕಗೊಂಡದ್ದೂ ಕ್ರಾಂತಿಕಾರಕ ಬದಲಾವಣೆಯೇ. ಇದಕ್ಕೆ ಇಂಬುಗೊಟ್ಟಂತೆ ಉತ್ಪಾದನೆಯ ತಾಂತ್ರಿಕತೆಯಲ್ಲಿ ಬದಲಾವಣೆಗಳೂ[೭] ಆರ್ಥಿಕ ಪರಿವರ್ತನೆಯನ್ನು ಚುರುಕುಗೊಳಿಸಿದುವು.

ಆದ್ದರಿಂದ ಒಟ್ಟಿನಲ್ಲಿ ಈ ಪರಿವರ್ತನೆಯು ಊಳಿಗಮಾನ್ಯ ಸ್ಥಿತಿಯಿಂದ ಬಂಡವಾಳಗಾರಿಕೆಯ ಸ್ಥಿತಿಗೆ ಹಂತಹಂತಗಳಲ್ಲಿ ಬದಲಾಯಿತು, ಅಲ್ಲಿಂದ ಮುಂದಕ್ಕೂ ಹೋಯಿತು ಎಂಬುದನ್ನು ಒಪ್ಪಿಕೊಳ್ಳಬಹುದು. ಈ ಪರಿವರ್ತನೆಗೆ ಕಾರಣವಾದ ಅಂಶಗಳು ಹೆಚ್ಚುವರಿ ಉತ್ಪಾದನೆಗೆ ಅನುಕೂಲಕರವಾದ ಪರಿಸ್ಥಿತಿಗಳು, ಕೃಷಿಯೇತರ ಆರ್ಥಿಕತೆಯ ಬೆಳವಣಿಗೆ, ಒಳನಾಡಿನಲ್ಲೂ ಸಾಗರದಾಚೆಗೂ ದೂರಸ್ಥಳಗಳಿಗೆ ವ್ಯಾಪಾರ ವಹಿವಾಟು ಹೆಚ್ಚಿದ್ದು, ಹಿಂದಿದ್ದ ಬಾರ್ಟರ್ ಪದ್ಧತಿಗೆ ವಿರುದ್ಧವಾಗಿ ಹಣವನ್ನು ಹೆಚ್ಚು ಹೆಚ್ಚು ಪ್ರಮಾಣದಲ್ಲಿ ಉಪಯೋಗಿಸಿ ಅಧಿಕವಾಗುತ್ತಿದ್ದ ವಹಿವಾಟನ್ನು ನಿರ್ವಹಿಸತೊಡಗಿದುದು, ವ್ಯಾಪಾರವನ್ನು ಹೆಚ್ಚಿಸಿದ ಹೊಸ ಮಾರುಕಟ್ಟೆಗಳು ಮತ್ತು ವ್ಯಾಪಾರ ನಗರಗಳು ಉದಯಿಸಿದ್ದು, ನಗರೀಕರಣವು ಹೆಚ್ಚಿ ನಗರ ಆರ್ಥಿಕತೆಗೂ, ಶ್ರಮದ ವಿಭಜನೆ ಹಾಗೂ ಚಲನೆಗೂ ಎಡೆಗೊಟ್ಟು, ಅದರ ಫಲವಾಗಿ ಸುಧಾರಿತ ತಾಂತ್ರಿಕತೆ ಮತ್ತು ಔದ್ಯೋಗೀಕರಣಗಳಲ್ಲಿ ಫಲಿತವಾದುದು ಇತ್ಯಾದಿ. ಇದು ತನ್ನ ಸರದಿಯಲ್ಲಿ ವರ್ತಕ ಬಂಡವಾಳವನ್ನೂ ಔದ್ಯಮಿಕ ಬಂಡವಾಳದ ವಿಕಾಸವನ್ನೂ ಹೆಚ್ಚಿಸಿತು.

ಈ ಕೃಷಿಯೇತರ ಬೆಳವಣಿಗೆಯನ್ನೂ ಚಟುವಟಿಕೆಯನ್ನೂ ಅಧ್ಯಯನ ಮಾಡಬೇಕಾದರೆ ಶಾಸನಗಳು,[೮] ಸಮಕಾಲೀನ ಸಾಹಿತ್ಯ ಕೃತಿಗಳು ಮತ್ತು ೧೪ ಮತ್ತು ೧೬ನೆಯ ಶತಮಾನಗಳ ನಡುವಣ ಅವಧಿಯಲ್ಲಿ ದಖ್ಖನಿಗೆ ಬಂದ ವಿದೇಶಿ ಪ್ರವಾಸಿಗರ ವರದಿಗಳು[೯] ಈ ರೂಪದಲ್ಲಿ ವಿಫುಲವಾದ ಸಾಮಗ್ರಿ ದೊರಕುತ್ತದೆ. ಈ ಸಮೃದ್ಧ ಮಾಹಿತಿಯು ೧೪-೧೬ನೆಯ ಶತಮಾನಗಳ ನಡುವೆ ಈ ಪ್ರದೇಶದಲ್ಲಿ ಇದ್ದ ಸಾಮಾಜಿಕ-ಆರ್ಥಿಕ ಸ್ಥಿತಿಗತಿಯ ಮೇಲೆ ಬೇಕಾದಷ್ಟು ಬೆಳಕು ಚೆಲ್ಲುತ್ತದೆ. ಈ ಮೂಲಗಳಲ್ಲಿ ಹೆಚ್ಚಿನವು ಪರೋಕ್ಷವಾದ ಉಲ್ಲೇಖಗಳನ್ನು ಹೊಂದಿವೆ. ಈ ಮಾತು ಶಾಸನ ಸಾಮಗ್ರಿಗೆ ಹೆಚ್ಚಾಗಿ ಅನ್ವಯವಾಗುತ್ತದೆ. ಏಕೆಂದರೆ ಶಾಸನಗಳ ಮುಖ್ಯ ಉದ್ದೇಶ ಧರ್ಮವನ್ನು ಪ್ರಸರಿಸುವುದು, ರಾಜನ ಅಧಿಕಾರ ಹಾಗೂ ರಾಜ್ಯ ವಿಸ್ತರಣಗಳನ್ನು ದಾಖಲಿಸುವುದು ಆಗಿತ್ತೇ ಹೊರತು ಆರ್ಥಿಕ ಪರಿವರ್ತನೆ ಅಥವಾ ಬೆಳವಣಿಗೆಯನ್ನು ಕುರಿತು ಹೇಳುವುದಲ್ಲ. ಆದ್ದರಿಂದ ಅರ್ಥವ್ಯವಸ್ಥೆಯನ್ನು ಕುರಿತ ಉಲ್ಲೇಖಗಳು ಇಲ್ಲಿ ಗೌಣವಾಗಿರುತ್ತವೆ. ಆದರೆ ಅವು ಎಷ್ಟೇ ಗೌಣವಾಗಿದ್ದರೂ ಆ ಕಾಲದ ಆರ್ಥಿಕ ಸ್ವರೂಪವನ್ನು ಕುರಿತು ಅವುಗಳಿಂದ ಸಾಧಾರವಾಗಿ ಖಚಿತವಾಗಿಯೇ ಊಹಿಸಬಹುದು. ಇದಕ್ಕೆ ಸಣ್ಣದೊಂದು ಉದಾಹರಣೆಯನ್ನು ನೋಡುವುದಾದರೆ, ಕೃಷಿಯೇತರ ಉತ್ಪಾದನೆ ಮತ್ತು ಕಸಬುಗಳ ಮೇಲೆ ತೆರಿಗೆಗಳನ್ನು ಸುಂಕಗಳನ್ನೂ ವಿಧಿಸಿದುದನ್ನು ಹೇಳುವ ಶಾಸನಗಳ ಸಂಖ್ಯೆಯು[೧೦] ೧೪ನೆಯ ಶತಮಾನದ ಮೊದಲು ಇದ್ದುದಕ್ಕಿಂತ ಹೇರಳವಾಗಿರುವುದನ್ನು ನೋಡಬಹುದು. ಕೃಷಿಯೇತರ

ಚಟುವಟಿಕೆಗಳ ಮೇಲಿನ ತೆರಿಗೆಗಳನ್ನು ಸೂಚಿಸುವ ಶಾಸನಗಳ ಹೆಚ್ಚಳಕ್ಕೆ ಕಾರಣ, ೧೫ನೆಯ ಶತಮಾನದಿಂದ ಮುಂದಕ್ಕೆ ಕೃಷಿಯೇತರ ಚಟುವಟಿಕೆ ಹೆಚ್ಚಿದುದು, ಸಹಜವಾಗಿಯೇ ಸರಕಾರದ ಗಮನವು ಆ ಕಡೆಗೆ ಸೆಳೆದು ಅವುಗಳ ಮೇಲೆ ಕ್ರಮಬದ್ಧವಾದ ತೆರಿಗೆಗಳನ್ನು ವಿಧಿಸುವಂತಾದುದು. ಶಾಸನಗಳ ಜೊತೆಗೆ ಸಮಕಾಲೀನ ಸಾಹಿತ್ಯ ಕೃತಿಗಳೂ ವಿದೇಶಿ ಪ್ರವಾಸಿಗರ ವರದಿಗಳೂ ದೇಶೀಯ, ಸಾಗರೋತ್ತರ ವಾಣಿಜ್ಯ, ಸಂತೆಗಳು, ಮಾರುಕಟ್ಟೆಗಳು, ನಗರ ಕೇಂದ್ರಗಳು, ವರ್ತಕ ಬಂಡವಾಳ,[೧೧] ಶ್ರೀಮಂತ ವಣಿಕವರ್ಗ ಇತ್ಯಾದಿಗಳನ್ನು ಕುರಿತು ವೈವಿಧ್ಯಪೂರ್ಣವಾದ ಮಾಹಿತಿಯನ್ನು ಒದಗಿಸುತ್ತವೆ.[೧೨]

ದಖ್ಖನಿನಲ್ಲಿ ೧೫ನೆಯ ಶತಮಾನದ ಪ್ರಾರಂಭದಿಂದ ಕೃಷಿಯೇತರ ಉತ್ಪಾದನಾ ಚಟುವಟಿಕೆಯಲ್ಲಿ ಅಪಾರವಾದ ಆಧಿಕ್ಯವನ್ನು ಗಮನಿಸಬಹುದಾಗಿದೆ.[೧೩] ಕೈಗಾರಿಕೆ ಮತ್ತು ಕೃಷಿಯೇತರ ಕಸಬುಗಳ ಮೇಲೆ ತೆರಿಗೆ ವಿಧಿಸುವುದರಲ್ಲಿ ಹೆಚ್ಚಳವನ್ನೂ ನೋಡಬಹುದು.[೧೪] ಕೈಗಾರಿಕೆ ಮತ್ತು ಕೃಷಿಯೇತರ ಕಸಬುಗಳ ವೃದ್ಧಿ ಕಾರಣವಾಗಿ, ಹತ್ತಿ ನೂಲುವುದು, ಬಟ್ಟೆ ನೇಯುವುದು, ಎಣ್ಣೆ ತೆಗೆಯುವುದು, ಸಕ್ಕರೆ ಮತ್ತು ಬೆಲ್ಲ ತಯಾರಿಸುವುದು, ಇಟ್ಟಿಗೆ ತಯಾರಿಕೆ, ಉಪ್ಪು ಮಾಡುವುದು, ಅದಿರು ಕರಗಿಸಿ ಕಬ್ಬಿಣ ತಯಾರಿಸುವುದು, ಮರಗೆಲಸ, ಗೊಂಬೆಗಳು ಮತ್ತು ಪೌರ್ವಾತ್ಯ ಕಲಾವಸ್ತುಗಳ ತಯಾರಿಕೆ ಇವೆಲ್ಲ ಸ್ಥಳೀಯ ಮಾರುಕಟ್ಟೆಗಾಗಿ ಮಾತ್ರವಲ್ಲ, ಹೊರಕ್ಕೆ ರಫ್ತು ಮಾಡುವ ಪ್ರಮಾಣದಲ್ಲಿ ಬೆಳೆದುವು. ಇದರಿಂದಾಗಿ ಈ ಉತ್ಪಾದನೆ ವಾಣಿಜ್ಯ ದೃಷ್ಟಿಯಿಂದ ಲಾಭದಾಯಕವಾಯಿತು.[೧೫]

ಬದಲಾಗುತ್ತಿದ್ದ ತೆರಿಗೆ ವಿನ್ಯಾಸದ ಇನ್ನೊಂದು ಸ್ವಾರಸ್ಯವಾದ ಲಕ್ಷಣ ಇದು. ಲಾಭದಾಯಕ ವಸ್ತುಗಳ ಉತ್ಪಾದನೆಯ ಪ್ರತಿಯೊಂದು ಹಂತದ ಮೇಲೆಯೂ ಸರಕಾರವು ತೆರಿಗೆಯನ್ನು ವಿಧಿಸುತ್ತಿತ್ತು. ಇದರಿಂದ ಶ್ರಮದ ಹಂಚಿಕೆಯೂ, ಉತ್ಪಾದನೆಯ ವಿಶಿಷ್ಟತೆಯೂ ಇದ್ದುದು ವ್ಯಕ್ತವಾಗುತ್ತದೆ. ಉದಾಹರಣೆಗೆ, ಕುಶಲವಸ್ತು ಉದ್ಯಮದ ಮಾಲೀಕನು ತೆರಿಗೆ ಕೊಡಬೇಕಾಗಿತ್ತು. ಉದ್ಯಮದ ಮೇಲೆಯೇ ಒಂದು ತೆರಿಗೆಯಿತ್ತು, ಬಳಸಿದ ಯಂತ್ರಗಳ ಮೇಲೆ ಮತ್ತು ಉತ್ಪಾದನೆಯ ವಿವಿಧ ಹಂತಗಳ ಮೇಲೆ ತೆರಿಗೆಗಳಿದ್ದುವು.[೧೬] ಕುಶಲ ಪರಿಶ್ರಮದ ವೃತ್ತಿಗೂ ತೆರಿಗೆಯಿತ್ತು.[೧೭] ತಾಂತ್ರಿಕತೆಯಲ್ಲಿ ಬದಲಾವಣೆ ಮತ್ತು ಸುಧಾರಣೆಗಳಾಗುತ್ತಿದ್ದುದೂ ಗಮನಕ್ಕೆ ಬರುತ್ತದೆ.[೧೮] ಮೇಲ್ಕಂಡ ಅಂಶಗಳಲ್ಲಿ ಹಲವನ್ನು ಹತ್ತಿ ಬಟ್ಟೆ ಉದ್ಯಮದಲ್ಲಿ ಮುಖ್ಯವಾಗಿ ನೋಡಬಹುದಾಗಿದೆ. ಅದೊಂದು ಮುಖ್ಯವಾದ ಉದ್ಯಮವಾಗಿದ್ದು, ಬಹುವಾಗಿ ಬೇಡಿಕೆಯಿದ್ದ ವಸ್ತುವಾಗಿತ್ತು. ದೇಶೀಯ ಮಾರುಕಟ್ಟೆಗೂ, ಹೊರದೇಶಗಳಿಗೆ ರಫ್ತು ಮಾಡುವುದಕ್ಕೂ[೧೯] ಹೆಚ್ಚು ಪ್ರಮಾಣದಲ್ಲಿ ಬೇಕಾಗಿತ್ತು. ವಾಣಿಜ್ಯ ಮಟ್ಟದಲ್ಲಿ ಕೃಷಿಯೇತರ ಉತ್ಪಾದನೆ ಮತ್ತು ಬೆಳೆಯುತ್ತಿದ್ದ ಔದ್ಯಮೀಕರಣ ೧೫ನೇ ಶತಮಾನದಲ್ಲೂ ಹಿಂದೆಯೂ ಕಂಡುಬಂದಿತು ಎಂಬುದನ್ನು ಇದು ಸೂಚಿಸುತ್ತದೆ.[೨೦]

ಹೀಗೆಯೇ ಒಳನಾಡ ಹಾಗೂ ಸಾಗರೋತ್ತರ ವಾಣಿಜ್ಯ ವಹಿವಾಟಿನಲ್ಲಿ ಗಮನಾರ್ಹ ಹೆಚ್ಚಳವುಂಟಾದುದು, ಕಾಲಬದ್ಧ ಸಂತೆಗಳು ಮತ್ತು ಮಾರುಕಟ್ಟೆಗಳು ಹೆಚ್ಚಿದುದು, ವ್ಯಾಪಾರ ನಗರಗಳು ಮತ್ತು ನಗರೀಕರಣದ ಆಧಿಕ್ಯ ಇವೂ ಈ ಅವಧಿಯಲ್ಲಿ ಗೋಚರವಾದುವು. ಇವು ಎಲ್ಲವೂ ಕೂಡಿ, ವಿಸ್ತಾರಗೊಳ್ಳುತ್ತಿದ್ದ ನಗರ ಆರ್ಥಿಕತೆಯ ಹೆಚ್ಚಳಕ್ಕೆ ಸಹಾಯ ಮಾಡಿದುವು. ನಡೆಯುತ್ತಿದ್ದ ಅಗಾಧ ಪ್ರಮಾಣದ ವ್ಯಾಪಾರ ವಹಿವಾಟನ್ನು ನಿರ್ವಹಿಸಲು ವಸ್ತು ವಿನಿಮಯ (ಬಾರ್ಟರ್) ವ್ಯವಸ್ಥೆ ಎಷ್ಟು ಮಾತ್ರಕ್ಕೂ ಶಕ್ತವಾಗಿರಲಿಲ್ಲವಾದ್ದರಿಂದ, ಹಣದ ಉಪಯೋಗದಲ್ಲಿಯೂ ಹೆಚ್ಚಳವುಂಟಾಯಿತು. ಈ ಅವಧಿಯಲ್ಲಿ ಬದಲಾಗುತ್ತಿದ್ದ ಆರ್ಥಿಕತೆಯ ಹಂತಗಳನ್ನು ಸೂಚಿಸಲು ಇದೊಂದೇ ಸಾಕು. ಒಳನಾಡ ವ್ಯಾಪಾರವೂ ಸಂತೆ ಮತ್ತು ಮಾರುಕಟ್ಟೆಗಳ ಬಾಹುಳ್ಯವೂ ಪರಸ್ಪರ ಪೂರಕಗಳು.[೨೧] ಸಂತೆಗಳನ್ನು ಮಾರುಕಟ್ಟೆಗಳನ್ನು ರಾಜರು, ಸ್ಥಳೀಯ ವ್ಯವಹಾರ ಗಣ್ಯರು, ಸರಕಾರದ ಅಧಿಕಾರಿಗಳು, ವಿವಿಧ ಮಂಡಲಿಗಳು, ವೃತ್ತಿ ಪಂಗಡಗಳು

ಮುಂದೆ ಬಂದುದು ಮಾರುಕಟ್ಟೆಗಳ ಪ್ರಾಧಾನ್ಯ, ವ್ಯಾಪಾರ ವರ್ಧನೆಯಲ್ಲಿ ಅವುಗಳ ಪಾತ್ರಗಳಿಗೆ ಸೂಚಕವಾಗಿದೆ.[೨೨] ಸಾಗರೋತ್ತರ ವಾಣಿಜ್ಯವೂ ವರ್ಧಿಸುತ್ತಿತ್ತು. ದಕ್ಷಿಣ ಭಾರತದ ಪೂರ್ವ ಮತ್ತು ಪಶ್ಚಿಮ ಕರಾವಳಿಯ ಅನೇಕ ಬಂದರುಗಳ ಮೂಲಕ ಬೇಕಾದ ಹಾಗೆ ಆಮದು ಮತ್ತು ರಫ್ತು ಚಟುವಟಿಕೆ ನಡೆಯುತ್ತಿತ್ತು. ಅರಬ್, ಕ್ಲಿಂಗ್ (ತಮಿಳು) ಮತ್ತು ಚೈನಾ ಹಡಗುಗಳು ಪರ್ಷಿಯನ್ ಖಾರಿ ಮತ್ತು ದಕ್ಷಿಣ ಚೈನಾಗಳ ನಡುವೆ ಓಡಿಯಾಡುತ್ತಾ, ದಕ್ಷಿಣ ಭಾರತದ ಬಂದರುಗಳಲ್ಲಿ ಹಲವಾರು ಸರಕುಗಳನ್ನು ಸಂಗ್ರಹಿಸಿಕೊಂಡು, ಹಲವಾರು ವಸ್ತುಗಳನ್ನು ಇಳಿಸಿ ಹೋಗುತ್ತಿದ್ದುದನ್ನು ನಾವು ನೋಡುತ್ತೇವೆ. ವಾಸ್ತವವಾಗಿ ಪರ್ಷಿಯನ್ ಕೊಲ್ಲಿ, ಹಿಂದೂ ಮಹಾಸಾಗರ, ದಕ್ಷಿಣ ಚೈನಾ ಸಮುದ್ರಗಳ ನಡುವೆ ಸಂಚರಿಸಿ ಪ್ರಾದೇಶಿಕ ವ್ಯಾಪಾರ ವಾಣಿಜ್ಯದಲ್ಲಿ ನಿರತರಾಗಿದ್ದ ಏಷ್ಯಾದ ಖಾಸಗಿ ವರ್ತಕರು ಮತ್ತು ದಲ್ಲಾಳಿಗಳ ವರಮಾನಕ್ಕೆ ಹೋಲಿಸಿದರೆ ೧೬ನೆಯ ಶತಮಾನದಲ್ಲಿ ಯೂರೋಪಿನ ಈಸ್ಟ್ ಇಂಡಿಯಾ ಕಂಪೆನಿಯ ಬಂಡವಾಳ ಮೂಲವು ಅತ್ಯಂತ ಕಡಮೆಯಾಗಿತ್ತು.[೨೩] ಇದು ಭಾರತದಲ್ಲಿಯೂ ಕೃಷಿಯೇತರ ಅರ್ಥವ್ಯವಸ್ಥೆ ಮತ್ತು ಚಟುವಟಿಕೆಯ ಮೂಲಕ ವರ್ತಕ ಬಂಡವಾಳ ಹೂಡಿಕೆಗೆ ಬಲವಾದ ಆಧಾರ ಬೆಳೆಯಲು ಅವಕಾಶವಿದ್ದಿತು ಎಂಬುದು ಸಮರ್ಥಿತವಾಗುತ್ತದೆ.

ಹದಿನಾಲ್ಕನೆಯ ಶತಮಾನ ಪೂರ್ವದ ಗ್ರಾಮ ಪ್ರಧಾನ ದೃಶ್ಯಕ್ಕೆ ವಿರುದ್ಧವಾಗಿ ವ್ಯಾಪಾರ ನಗರಗಳು ಮತ್ತು ನಗರ ಕೇಂದ್ರಗಳಲ್ಲಿಯೂ ಬೆಳವಣಿಗೆಯನ್ನು ನೋಡಬಹುದು.[೨೪] ಪಟ್ಟಣಗಳು ಹೀಗೆ ಬೆಳೆದುದರಿಂದ ಆರ್ಥಿಕತೆಯ ನಗರೀಕರಣವೂ ಹೆಚ್ಚಿತು. ಅದರಿಂದಾಗಿ ವಾಣಿಜ್ಯ ಚಟುವಟಿಕೆ ಇನ್ನೂ ಅಧಿಕಗೊಂಡಿತು. ಇದರಿಂದ, ವಿನಿಮಯ ಮಾಧ್ಯಮವಾಗಿ ನಾಣ್ಯರೂಪದ ಹಣದ ಬಳಕೆ ಹೆಚ್ಚಿತು, ಹಿಂದೆ ಇದ್ದ ಸರಳ ವಸ್ತು ವಿನಿಮಯ ಪದ್ಧತಿಗೆ ವಿರುದ್ಧವಾಗಿ ಪ್ರಧಾನ ಸ್ಥಾನವನ್ನು ಪಡೆಯಿತು. ಹಣದ ಅರ್ಥ ರಚನೆಯು ಹೆಚ್ಚಿದುದನ್ನು ಇದು ಸೂಚಿಸುತ್ತದೆ. ೧೪ನೆಯ ಶತಮಾನದಿಂದ ಮುಂದಕ್ಕೆ ನಾಣ್ಯಗಳ ಬಳಕೆ ಮತ್ತು ಚಲಾವಣೆ ಅಧಿಕಗೊಂಡುದನ್ನು ನೋಡಬಹುದು.[೨೫] ಈ ಅವಧಿಯಲ್ಲಿ ಬಗೆಬಗೆಯ ನಾಣ್ಯಗಳನ್ನುವಿನಿಮಯ ಮಾಧ್ಯಮವಾಗಿಯೂ, ವ್ಯಾಪಾರಕ್ಕೆ ಬೇಕಾದ ಹಣವನ್ನು ಒದಗಿಸಲಿಕ್ಕಾಗಿಯೂ, ಬಡ್ಡಿಯ ಮೇಲೆ ಸಾಲ ಕೊಡುವುದಕ್ಕಾಗಿಯೂ ಉಪಯೋಗಿಸುತ್ತಿದ್ದುದನ್ನು ನೋಡುತ್ತೇವೆ.[೨೬] ನಾಣ್ಯಗಳು ದೊರಕುವ ಪ್ರಮಾಣ, ಮತ್ತು ಅವುಗಳ ವೈವಿಧ್ಯ,[೨೭] ಚಿನ್ನದಿಂದ ತಾಮ್ರದವರೆಗೆ ವಿವಿಧ ಲೋಹಗಳ ಬಳಕೆ ಇವುಗಳಿಂದಲೂ ನಾಣ್ಯ ಹಣದ ಬಳಕೆ ಹೆಚ್ಚಾಯಿತೆನ್ನುವುದು ಸೂಚಿತವಾಗುತ್ತದೆ.

ಆದ್ದರಿಂದ ಕೃಷಿಯೇತರ ಅರ್ಥವ್ಯವಸ್ಥೆಯನ್ನು ನಾವು ಹೆಚ್ಚುವರಿ ಉತ್ಪಾದನೆಯ ಆದಿಕ್ಯ, ವ್ಯಾಪಾರ-ವಾಣಿಜ್ಯಗಳಲ್ಲಿ ಹೆಚ್ಚಳ (ಒಳನಾಡು ಮತ್ತು ಸಾಗರೋತ್ತರ), ಸುಧಾರಿತ ನಾಣ್ಯ ಪದ್ಧತಿ (ವಸ್ತು ವಿನಿಮಯಕ್ಕೆ ಬದಲಾಗಿ), ಕೃಷಿಯೇತರ ಕುಶಲವಸ್ತು ಉತ್ಪಾದನೆ, ಪರಿಶ್ರಮದ ಹಂಚಿಕೆ ಮತ್ತು ಚಲನೆ, ಮತ್ತು ನಗರೀಕರಣ-ಈ ದೃಷ್ಟಿಗಳಿಂದ ಅಧ್ಯಯನ ಮಾಡಬೇಕು. ಆದ್ದರಿಂದ ಇಲ್ಲಿ ೧೪ನೆಯ ಶತಮಾನದಿಂದ ದಖ್ಖನಿನಲ್ಲಿ ಕಂಡುಬಂದ ಕೃಷಿಯೇತರ ಅರ್ಥ ವ್ಯವಸ್ಥೆಯ ಬೆಳವಣಿಗೆಯನ್ನು ಕುರಿತು, ಮೇಲ್ಕಂಡ ಎಲ್ಲಾ ಕ್ಷೇತ್ರಗಳಲ್ಲೂ ಆದ ಬದಲಾದ ವಿನ್ಯಾಸಗಳನ್ನು ತೋರಿಸುವ ಉದಾಹರಣೆಗಳನ್ನು ಕೊಟ್ಟು ಪರಿಶೀಲಿಸಲು ಪ್ರಯತ್ನಿಸಲಾಗಿದೆ.

ಮೇಲೆ ಗಮನಿಸಿದಂತೆ, ೧೪ನೆಯ ಶತಮಾನದಿಂದ ಕಂಡುಬಂದ ಆರ್ಥಿಕ ಪರಿವರ್ತನೆಯ ಕುರುಹುಗಳು ಕೃಷಿಯೇತರ ಚಟುವಟಿಕೆ ಮತ್ತು ಉತ್ಪಾದನೆಗಳಿಗೆ ಸಂಬಂಧಿಸಿದಂತೆ ಹೆಚ್ಚು ಹೆಚ್ಚು ಪ್ರಧಾನವಾದುವು. ಅರ್ಥ ವ್ಯವಸ್ಥೆಯು ವಿಸ್ತಾರಗೊಳ್ಳುತ್ತಿದ್ದುದಕ್ಕೆ ಮೊದಲನೆಯ ಸಾಕ್ಷಿಯನ್ನು ಉತ್ಪಾದನೆ ಮತ್ತು ಬಳಕೆಯ ವಿನ್ಯಾಸದಲ್ಲಾದ ಪರಿವರ್ತನೆಯಲ್ಲಿ ಗಮನಿಸಬಹುದು. ಅಂದರೆ ''ತಮ್ಮ ಅನುಭೋಗಕ್ಕಾಗಿ ಉತ್ಪಾದನೆ''ಯು

''ಮಾರುಕಟ್ಟೆಗಾಗಿ ಉತ್ಪಾದನೆ'' ಆಯಿತು. ಅಂದರೆ, ತಮ್ಮ ಬಳಕೆಗಾಗಿ ಅಲ್ಲದೆ, ವಿನಿಮಯಕ್ಕಾಗಿ ಉತ್ಪಾದಿಸುವ ಕ್ರಮವು ಹೆಚ್ಚಿತು. ಇದೇ ಒಂದು ಕ್ರಾಂತಿಕಾರಕ ಬದಲಾವಣೆ. ಇದರಿಂದಾದ ಅತಿ ಮುಖ್ಯವಾದೊಂದು ಬೆಳವಣಿಗೆಯೆಂದರೆ, ೧೪ನೆಯ ಶತಮಾನದಲ್ಲಿ ವ್ಯಕ್ತವಾದಂತೆ ಒಳನಾಡು ಮತ್ತು ಹೊರನಾಡುಗಳ ವ್ಯಾಪಾರ ವಹಿವಾಟು ಪ್ರಮಾಣದಲ್ಲಿ ಆಧಿಕ್ಯವುಂಟಾದದ್ದು. ಇದು ವಿಸ್ತಾರಶೀಲ ಅರ್ಥವ್ಯವಸ್ಥೆಗೆ ಪೂರಕವಾಗುವಂತೆ ಸಂತೆಗಳು ಮತ್ತು ಮಾರುಕಟ್ಟೆಗಳು ಹೆಚ್ಚಲು ಅವಕಾಶ ಮಾಡಿತು. ಈ ವಾಣಿಜ್ಯ ಚಟುವಟಿಕೆಯನ್ನು ರಾಜರು, ಸ್ಥಳೀಯ ಉದ್ಯಮಿಗಳು, ಸರಕಾರಿ ಅಧಿಕಾರಿಗಳು, ಮಂಡಲಿಗಳು ಮತ್ತು ಕಸಬು ಪಂಗಡಗಳು ಪ್ರತ್ಯಕ್ಷ- ಪರೋಕ್ಷ ರೀತಿಯಲ್ಲಿ ಪ್ರೋತ್ಸಾಹಿಸಿದರು.[೨೮] ಇದೇ ಒಂದು ಸ್ವಾರಸ್ಯವಾದ ವಿಷಯವಾಗಿದೆ. ೧೪ನೆಯ ಶತಮಾನದಿಂದ ಮುಂದಕ್ಕೆ ಕೃಷಿಯೇತರ ತೆರಿಗೆಯಲ್ಲಾದ ಗಮನಾರ್ಹ ಹೆಚ್ಚಳವು ವಿವಿಧ ಕಸಬುಗಳು ಮತ್ತು ಕೃಷಿಯೇತರ ಚಟುವಟಿಕೆಯ ಆಧಿಕ್ಯದ ಸೂಚಕವಾಗಿದೆಯೆಂದು ಪರಿಗಣಿಸಬಹುದು.

ಈ ಬದಲಾವಣೆಗೆ ಕಾರಣ ಆರ್ಥಿಕ ರಚನೆಯಲ್ಲಿ ಒಂದು ಹಂತದಿಂದ ಇನ್ನೊಂದಕ್ಕೆ ಆದ ಸಹಜ ವಿಕಾಸ. ವಾಣಿಜ್ಯದ ಪ್ರಮಾಣದಲ್ಲಿ ಆದ ಹೆಚ್ಚಳವೇ ಈ ಕಾಲದಲ್ಲಿ ಬದಲಾಗುತ್ತಿದ್ದ ಆರ್ಥಿಕತೆಯ ಹಂತಗಳಿಗೆ ಸೂಚಕವಾಗಿತ್ತು. ಅಂದರೆ, ಒಂದು ಕಡೆ ಹೆಚ್ಚುವರಿ ಉತ್ಪಾದನೆ ಕಂಡುಬಂದಿತು, ಇನ್ನೊಂದು ಕಡೆ ವಿಸ್ತಾರಗೊಳ್ಳುತ್ತಿದ್ದ ಮಾರುಕಟ್ಟೆಯ ಅರ್ಥವ್ಯವಸ್ಥೆಯಿತ್ತು. ವ್ಯಾಪಾರದ ಹೆಚ್ಚಳವು ಒಳನಾಡಿನ ಹಾಗೂ ಸಾಗರೋತ್ತರ ವ್ಯಾಪಾರ ಚಟುವಟಿಕೆಯಲ್ಲಿ ಕಂಡುಬಂದಿತು. ಉದಾಹರಣೆಗೆ ಸಂತೆಗಳು ಮತ್ತು ಮಾರುಕಟ್ಟೆಗಳ ಆಧಿಕ್ಯವೂ ಅದಕ್ಕೆ ಸರಕಾರದಿಂದ ಮತ್ತು ಸ್ಥಳೀಯ ಗಣ್ಯರಿಂದ ದೊರಕುತ್ತಿದ್ದ ಪ್ರೋತ್ಸಾಹವೂ ಒಳನಾಡ ವ್ಯಾಪಾರದ ಜನಪ್ರಿಯತೆಗೆ ಸಮರ್ಥನೆ. ''ಸ್ಥಳೀಯ ಮತ್ತು ದೂರದ ಸ್ಥಳಗಳೊಂದಿಗಿನ ವ್ಯಾಪಾರ ಪರಿಸ್ಥಿತಿಗಳು ಹಿಂದಿಗಿಂತ ಚೆನ್ನಾಗಿಯೇ ಉತ್ತಮಗೊಂಡುವು. ರಾಜರೇ ಈ ವ್ಯಾಪರದ ಅಗತ್ಯವನ್ನೂ ಪ್ರಯೋಜನವನ್ನೂ ಗುರುತಿಸಿದ್ದರು ಎನ್ನುವುದನ್ನು ಈ ಸುಧಾರಣೆಯು ಪ್ರತಿಬಿಂಬಿಸಿತು. ಸಮೀಪದ ನಗರಗಳ ವ್ಯಾಪಾರೀ ಸಂಘಗಳು ಪಟ್ಟಣಸ್ವಾಮಿಯ ಮಾರ್ಗದರ್ಶನದಲ್ಲಿ ಸಂತೆಗಳಲ್ಲಿ ವ್ಯಾಪಾರ ವಹಿವಾಟನ್ನು ನಿರ್ವಹಿಸುತ್ತಿದ್ದುವು. ನಾಡು ಮುಖ್ಯಸ್ಥನಾದ ಗೌಡ ಅಥವಾ ಮಹಾಮಂಡಲೇಶ್ವರ ಇವರ ಅನುಮತಿಯನ್ನು ಪಡೆದು ಸಂತೆಗಳನ್ನು ಏರ್ಪಡಿಸಲಾಗುತ್ತಿತ್ತು.[೨೯]

ದಖ್ಖನಿನಲ್ಲೂ ಇನ್ನೂ ದೂರದ ದಕ್ಷಿಣದಲ್ಲೂ ವರ್ಧಿಸುತ್ತಿದ್ದ ವ್ಯಾಪಾರದ ವರ್ಣನೆಗಳು ಹೇರಳವಾಗಿವೆ. ಸ್ಥಳೀಯ ಉತ್ಪಾದನೆಗಳನ್ನು ಒಳನಾಡಿನ ಬೇರೆ ಬೇರೆ ಕಡೆಯೂ, ಸಾಗರೋತ್ತರ ದೇಶಗಳಲ್ಲೂ ಮಾರಾಟ ಮಾಡುವುದಕ್ಕಾಗಿ ಲಾಭದಾಯಕವಾದ ವಹಿವಾಟು, ವ್ಯಾಪಾರ ಮಾರ್ಗಗಳು, ಮಾರುಕಟ್ಟೆಗಳು ಮತ್ತು ಮೇಳಗಳ ಜಾಲವನ್ನು ಇವು ಸಮರ್ಥಿಸುತ್ತವೆ.[೩೦] ಅನೇಕ ವಿದೇಶಿ ಪ್ರವಾಸಿಗರು ಕೂಡ ಇಲ್ಲಿನ ವಾಣಿಜ್ಯ-ವಹಿವಾಟನ್ನು ವಿಸ್ತಾರವಾಗಿ ಕಣ್ಣಿಗೆ ಕಟ್ಟುವಂತೆ ವರ್ಣಿಸಿದ್ದಾರೆ. ವಿಜಯನಗರ ಪಟ್ಟಣದಲ್ಲೇ ನಡೆಯುತ್ತಿದ್ದ ಅಪಾರವಾದ ವ್ಯಾಪಾರವನ್ನು ಬಾರ್ಬೋಸಾ ವರ್ಣಿಸಿದ್ದಾನೆ. ಅಲ್ಲಿ ಕೆಂಪು ಬಟ್ಟೆಯಿಂದ ಹಿಡಿದು ರೇಷ್ಮೆ, ಆಭರಣಗಳು, ಮುತ್ತುಗಳು, ವಜ್ರಗಳು ಮತ್ತು ಹವಳಗಳು ದೂರ ಮತ್ತು ಹತ್ತಿರದ ಸ್ಥಳಗಳಿಂದ ಬಂದು ಮಾರಾಟವಾಗುತ್ತಿದ್ದುವು.[೩೧]

ಈ ಕಾಲದ ಆಕರಗಳಲ್ಲಿ ಹೊಸ ಸಂತೆಗಳು ಮತ್ತು ಮಾರುಕಟ್ಟೆಗಳಿಗೆ ಪ್ರೋತ್ಸಾಹ, ಒಂದು ಕಡೆ ವ್ಯಾಪಾರ ವರ್ಧನೆ, ಇನ್ನೊಂದು ಕಡೆ ವ್ಯಾಪಾರ ಮಾರ್ಗಗಳ ಸ್ಥಾಪನೆ ಈ ಎರಡರಲ್ಲೂ ಅವು ವಹಿಸುತ್ತಿದ್ದ ಪಾತ್ರ ವ್ಯಕ್ತವಾಗಿವೆ. ಇವು ಆರ್ಥಿಕ ಪರಿಸ್ಥಿತಿಯ ಪ್ರವೃತ್ತಿಯಲ್ಲಿ ಒಂದು ಮಹತ್ತರ ಬದಲಾವಣೆಯನ್ನು

ಸೂಚಿಸಿದುವು. ವಿಶಾಲತರವಾದ ಮಾರುಕಟ್ಟೆಗಾಗಿ ಉತ್ಪಾದನೆ ಹೆಚ್ಚಿತು. ಅದಿನ್ನು ಮುಂದೆ ಹಳ್ಳಿಯ ಸಣ್ಣ ಪ್ರದೇಶಕ್ಕೆ ಸೀಮಿತವಾಗಿ ಉಳಿಯಲಿಲ್ಲ. ಶಾಸನಗಳು ಮತ್ತು ಸ್ಥಳೀಯ ಲೇಖಕರ ಬರಹಗಳಿಂದ ಮೊದಲುಗೊಂಡು ವಿದೇಶಿ ಪ್ರವಾಸಿಗರ ವರದಿಗಳವರೆಗೆ, ಸಂತೆಗಳು ಮತ್ತು ಮಾರುಕಟ್ಟೆಗಳ ಮೂಲಕ ವ್ಯಾಪಾರ ವಹಿವಾಟಿಗೆ ದೊರೆತ ಅಪಾರ ಪ್ರೋತ್ಸಾಹವನ್ನು ಆಕರಗಳು ಸೂಚಿಸುತ್ತವೆ. ''ಪ್ರತಿಯೊಂದು ಹಳ್ಳಿಯಲ್ಲೂ ಅದರದ್ದೇ ಒಂದು ಸಂತೆಯಿರುತ್ತಿದ್ದಿತು''[೬೨] ಈ ಸಂತೆಗಳು ಮತ್ತು ಮಾರುಕಟ್ಟೆಗಳು ಸರಕುಗಳ ಮಾರಾಟದ ಮೇಲೆ ವಿಧಿಸಿದ ಕರದಿಂದ, ಸಂತೆಗಳಲ್ಲಿ ಸಂಗ್ರಹಿಸಿದ ಪ್ರವೇಶ ಸುಂಕಗಳಿಂದ ರಾಜ್ಯ ಸರಕಾರದ ವರಮಾನಕ್ಕೆ ಗಣನೀಯವಾದ ಕೊಡುಗೆ ಸಲ್ಲಿಸುತ್ತಿದ್ದುವು.[೬೩] ಸಂತೆಗಳಲ್ಲಿ ವಿಧಿಸುತ್ತಿದ್ದ ತೆರಿಗೆಗಳನ್ನು ಸೂಚಿಸುವ ಶಾಸನಗಳಿಂದ ಇದು ಸ್ಪಷ್ಟವಾಗುತ್ತದೆ. ವಿವಿಧ ಮೂಲಗಳಲ್ಲಿ ಮತ್ತು ಆಮುಕ್ತಮಾಲ್ಯದಲ್ಲಿ ಉಲ್ಲೇಖಿಸಿರುವ ಸಾಪ್ತಾಹಿಕ ಸಂತೆಗಳ ಸಂಖ್ಯಾಬಾಹುಳ್ಯವು ಗ್ರಾಮೀಣ ಆರ್ಥಿಕತೆಯ ಸ್ವಯಂಪೂರ್ಣ ಲಕ್ಷಣವನ್ನು ದುರ್ಬಲಗೊಳಿಸುವಲ್ಲಿ ಮಹತ್ವದ ಪಾತ್ರವನ್ನು ವಹಿಸಿರಲೇಬೇಕು.[೬೪] ೧೪-೧೭ನೇ ಶತಮಾನಗಳ ನಡುವಣ ಅವಧಿಯಲ್ಲಿ ಬೇಕಾದಷ್ಟು ಹೊಸ ಮೇಳಗಳು ಮತ್ತು ಸಂತೆಗಳನ್ನು ಸ್ಥಾಪಿಸಲಾಯಿತು.[೬೫]

ಸಂತೆಗಳು ಮತ್ತು ಮಾರುಕಟ್ಟೆಗಳ ಬಾಹುಳ್ಯವು ಸಹಜವಾಗಿಯೇ ವ್ಯಾಪಾರಿ ಹಿತಾಸಕ್ತಿಗಳನ್ನು ಆಕರ್ಷಿಸಿತು, ಬಹುಬೇಗ ಅವು ದೊಡ್ಡ ವ್ಯಾಪಾರ ಕೇಂದ್ರಗಳಾಗಿ ಬೆಳೆದುವು, ಅವುಗಳ ಸುತ್ತ ನೂತನ ಪಟ್ಟಣಗಳು ಮತ್ತು ನಗರ ಕೇಂದ್ರಗಳು ಹುಟ್ಟಿಕೊಂಡುವು. ಇದು ನಗರ ಅರ್ಥವ್ಯವಸ್ಥೆಯನ್ನು ಬೆಳೆಯಿಸಿತು. ಈ ಕಾಲದ ಆಕರಗಳು ಬಹುಸಂಖ್ಯೆಯಲ್ಲಿ ಪಟ್ಟಣಗಳು ಮತ್ತು ನಗರ ಕೇಂದ್ರಗಳು ಬೆಳೆದುದನ್ನು ಸೂಚಿಸುತ್ತವೆ. ೧೪ನೇ ಶತಮಾನಪೂರ್ವದ ಗ್ರಾಮ ಆಧಾರಿತ ಅರ್ಥವ್ಯವಸ್ಥೆಗೆ ವಿರುದ್ಧವಾಗಿ ಉದಯೋನ್ಮುಖವಾಗಿದ್ದ ನಗರೀಕರಣ ಮತ್ತು ನಗರ ಅರ್ಥವ್ಯವಸ್ಥೆಯನ್ನು ದೃಢಪಡಿಸುತ್ತವೆ. ಈ ಕಾಲದಲ್ಲಿ ಬಹಮನಿ ಮತ್ತು ವಿಜಯನಗರ ಪ್ರದೇಶಗಳಲ್ಲಿ ಕಂಡುಬಂದ ಮುಖ್ಯನಗರಗಳು ಅವುಗಳ ಮಹತ್ವ ಎಷ್ಟಿದ್ದಿತೆಂಬುದನ್ನು ಸಾರುತ್ತವೆ. ಉದಾಹರಣೆಗೆ ಬಲವಾದ ನಗರ ಆರ್ಥಿಕ ಕೇಂದ್ರಗಳಾಗಿದ್ದವು ಬೀದರ್, ಗುಲ್ಬರ್ಗ, ಬಿಜಾಪುರ, ಗೋಲ್ಕೊಂಡ, ವರಂಗಲ್, ನಲಗೊಂಡ, ಕೊಂಡಪಲ್ಲಿ, ಅಮ್ರೋಟಿ, ದೇವರಕೊಂಡ, ರಾಯಚೂರು, ಬಾಗಲಕೋಟೆ, ಬೆಳಗಾಂವಿ, ಕೊಲ್ಹಾಪುರ, ಮೀರಜ್, ಸತಾರಾ, ಶೋಲಾಪುರ, ಕಲ್ಯಾಣಿ, ಗಂಧಾರ, ಅಹಮದ್‌ನಗರ, ಬೀರ್, ಜುನ್ನಾರ್, ದೌಲತಾಬಾದ್, ಬೀರಾರ್ ಇತ್ಯಾದಿ.[೬೬] ಇವುಗಳ ದಕ್ಷಿಣಕ್ಕೆ ವಿಜಯನಗರ ಪ್ರದೇಶದಲ್ಲಿ, ವಿಜಯನಗರ ಪಟ್ಟಣ, ದ್ವಾರಸಮುದ್ರ, ಗುತ್ತಿ, ಆದೋನಿ, ಹೊನ್ನಾವರ, ಚಂದ್ರಗುತ್ತಿ, ಪೆನುಗೊಂಡ, ಉದಯಗಿರಿ, ಆನೆಗೊಂದಿ, ಇಕ್ಕೇರಿ, ಮಂಗಳೂರು, ಬಾರಕೂರು, ಅಣ್ಣಿಗೇರಿ, ಹುಲಿಗೆರೆ, ಶ್ರೀರಂಗಪಟ್ಟಣ, ಶಿವನಸಮುದ್ರ, ಅಂಕೋಲ, , ಮೀರ್‌ಜಾನ್, ಬಂಕಾಪುರ, ಹರಿಹರ, ಅರಗ, ಉದಯಗಿರಿ ಇತ್ಯಾದಿ.[೬೭]

ಮೇಲೆ ಉಲ್ಲೇಖಿಸಿದ ನಗರಗಳು ಕೇವಲ ನಗರ ವ್ಯಾಪಾರ ಕೇಂದ್ರಗಳಾಗಿರಲಿಲ್ಲ. ಒತ್ತಾದ ಜನ ಸಂಖ್ಯೆಯಿಂದ ಕೂಡಿದ ಇಲ್ಲಿ ಜನತೆಗೆ ಉತ್ತಮ ಸೌಲಭ್ಯಗಳಿದ್ದುವು.[೬೮] ಕರಾವಳಿಯಲ್ಲಿದ್ದ ನಗರಗಳು ಉತ್ತಮ ಬಂದರುಗಳ ಸಾಲಾಗಿದ್ದುವು. ಚುರುಕಾದ ಆಮದು ಮತ್ತು ರಫ್ತು ಇಲ್ಲಿಂದ ನಡೆಯುತ್ತಿತ್ತು. ಉದಾಹರಣೆಗೆ ಪಶ್ಚಿಮ ಕರಾವಳಿಯ ಉತ್ತರಭಾಗದಲ್ಲಿ ಸಾಗರೋತ್ತರ ವಾಣಿಜ್ಯದಲ್ಲಿ ತೊಡಗಿದ್ದ ಬಂದರುಗಳು ದಾಮನ್, ಬೆಸ್ಸೀನ್, ಮಾಹಿಂ, ದಭಾಲ್, ಗೋವಾ (ಇವೆಲ್ಲ ಬಹಮನಿ ಪ್ರದೇಶಕ್ಕೆ ಸೇರಿದ್ದುವು), ಕಾರವಾರ, ಅಂಕೋಲಾ, ಮೀರ್‌ಜಾನ್, ಹೊನ್ನಾವರ, ಭಟ್ಕಳ, ಬಸ್ರೂರು, ಬಾರಕೂರು, ಮಂಗಳೂರು, ಮಂಜೇಶ್ವರ, ಕುಂಬಳ, ಮತ್ತು ನೀಲೇಶ್ವರ (ಇವೆಲ್ಲ ವಿಜಯನಗರ ಪ್ರದೇಶದವು), ಇನ್ನೂ ದಕ್ಷಿಣಕ್ಕೆ ಕ್ವಿಲಾನ್, ಕ್ಯಾಲಿಕಟ್, ಮತ್ತು ಕೊಚಿನ್. ಪೂರ್ವ ಕರಾವಳಿಯಲ್ಲಿ ಪುಲಿಕಾಟ್, ಮೈಲಾಪುರ,

ಮಲಿಪಟಿನ್, ಮತ್ತು ನಾಗಪಟನ್.[೬೯] ಈ ಬಂದರುಗಳಿಂದ ನಡೆಯುತ್ತಿದ್ದ ಆಮದು-ರಫ್ತುಗಳ ಒಂದು ಪಟ್ಟಿಯನ್ನು ೧೪-೧೭ನೇ ಶತಮಾನಗಳಿಗೆ ಸಂಬಂಧಿಸಿದಂತೆ, ಇಲ್ಲಿ ಕೊಟ್ಟಿದೆ.

ದಕ್ಷಿಣ ಭಾರತದ ಮುಖ್ಯ ಬಂದರುಗಳು, ಮತ್ತು ಅಲ್ಲಿಂದ ರಫ್ತಾಗುತ್ತಿದ್ದ ಮತ್ತು ಆಮದಾಗುತ್ತಿದ್ದ ಸರಕುಗಳು, ಎಲ್ಲಿಗೆ ಹೋಗುತ್ತಿದ್ದುವು ಎಂಬುದನ್ನು ತೋರಿಸುವ ಪಟ್ಟಿಕೆ (೧೪ರಿಂದ ೧೭ನೇ ಶತಮಾನ).[೭೦]

ಕ್ರ.ಸಂ.	ಕರಾವಳಿ	ಬಂದರು	ರಫ್ತು	ಆಮದು	ಎಲ್ಲಿಗೆ
೧.	ಪಶ್ಚಿಮ	ಸೂರತ್	೧ ಬಟ್ಟೆ	೧. ಅರಬ್ಬೀ ಕುದುರೆಗಳು	ಓರಾಜ್
			೨. ತೇಗ ಮತ್ತು ಶ್ರೀಗಂಧ	೨. ವೆಲ್ವೆಟ್	ಯೆಮೆನ್ ಮಾಲ್ಡೀವ್ಸ್
			೩. ಕೃಷಿ ವಸ್ತುಗಳು	೩. ಸ್ಯಾಟಿನ್	ಚೈನಾ
				೪. ಚೈನಾ ತುಣುಕುಗಳು	
				೫. ಕೇಸರಿ ಮತ್ತು ಕೆಂಪು ಹರಳು	
೨.	-''-	ದಾಮನ್ ಮತ್ತು ಬೆಸ್ಸೀನ್	-''-	-''-	-''-
೩.	-''-	ಮಾಹಿಂ	-''-	-''-	-''-
೪.	-''-	ದಭೋಲ್	-''-	-''-	-''-
೫.	-''-	ಗೋವಾ	-''-	-''-	-''-
೬.	-''-	ಅಂಕೋಲಾ	ಬಟ್ಟೆ	-''-	ಪೋರ್ಚುಗಲ್
೭.	-''-	ಹೊನ್ನಾವರ	೧ ಶ್ರೀಗಂಧ	ಕಾಗದ	೧ ಪರ್ಷಿಯ ಮತ್ತು ಅರೇಬಿಯ
			೨ ಶುಂಠಿ		೨ ಪರ್ಷಿಯ ಮತ್ತು ಯೆಮೆನ್
			೩ ಬಟ್ಟೆ		೩ ಪೋರ್ಚುಗಲ್
೮.	-''-	ಭಟ್ಕಳ	೧ ಬಿಳಿ ಅಕ್ಕಿ		೧ ಮತ್ತು
			೨ ಹುಡಿಮಾಡಿದ ಸಕ್ಕರೆ		೨ ಓರ್ನಾಜ್‌ಗೆ
			೩ ಕಬ್ಬಿಣದ ಅದುರು		೩ ಮೆಕ್ಕಾ ಮತ್ತು
		ಏಡನ್	೪ ಮೆಣಸು ಮತ್ತು ಸಂಬಾರ ವಸ್ತುಗಳು		೪ ಮಾಲ್ಡೀವ್‌ದ್ವೀಪ
೯.	-''-	ಬಸೂರು	ಅಕ್ಕಿ	-''-	ಓರ್ಮುಜ್, ಏಡನ್ ಮತ್ತು ಮಾಲ್ಡೀವ್ಸ್
೧೦.	-''-	ಬಾರಕೂರು	-''-	-''-	-''- -''-
೧೧.	-''-	ಮಂಗಳೂರು	ಅಕ್ಕಿ ಮತ್ತು ತೇಗದಮರ	ಕಾಗದ	-''-
೧೨.	-''-	ಮಂಜೇಶ್ವರ	-''-	-''-	-''-
೧೩.	-''-	ಕುಂಬ್ಳ	-''-	-''-	-''-

೧೪.	-"-	ನೀಲೇಶ್ವರ	-"-	-"-	-"-
೧೫.	-"-	ಕೈಲಾಸ್	ಬಟ್ಟೆ ಮತ್ತು ಕೃಷಿ ವಸ್ತುಗಳು	-"-	-"-
೧೬.	-"-	ಕ್ಯಾಲಿಕಟ್	ಹತ್ತಿ ಬಟ್ಟೆ, ಮರ ಮತ್ತು ಕೃಷಿ ಉತ್ಪನ್ನಗಳು		
೧೭.	-"-	ಕೊಚ್ಚಿನ್	-"-	-"-	-"-
೧೮.	-"-	ಪುಲಿಕಾಟ್	ಮುದ್ರಿತ ಬಟ್ಟೆಗಳು	-"-	ಮಲಕ್ಕಾ ಮತ್ತು ಸುಮಾತ್ರಾ
೧೯.	ಪೂರ್ವ	ಮೈಲಾಪುರ	ಮುದ್ರಿತ ಬಟ್ಟೆ	-"-	
೨೦.	-"-	ಮಲ್ಲಿಪಟ್ಟಣ	ಅಕ್ಕಿ	-"-	ಮಾಲ್ಡೀವ್ ದ್ವೀಪಗಳು
೨೧.	-"-	ನಾಗಪಟ್ಟಣ	-"-	-"-	-"-

೧೪ರಿಂದ ೧೭ನೇ ಶತಮಾನಗಳಲ್ಲಿ ದಕ್ಷಿಣ ಭಾರತದ ಮುಖ್ಯವಾದ ಆಮದು ಮತ್ತು ರಫ್ತುಗಳು[೪೧]

ಕ್ರ. ಸಂ.	ಆಮದು	ರಫ್ತು
೧.	ಕರ್ಪೂರ	ಅಕ್ಕಿ
೨.	ಮುತ್ತುಗಳು	ಹುಡಿಮಾಡಿದ ಸಕ್ಕರೆ
೩.	ಹವಳ	ಮೆಣಸು ಮತ್ತು ಸಂಬಾರ ಜೀನಸುಗಳು
೪.	ಕುಂಕುಮ	ಶುಂಠಿ
೫.	ಚೈನಾ ರೇಷ್ಮೆ	ಬಟ್ಟೆ
೬.	ವೆಲ್ವೆಟ್	ಶ್ರೀಗಂಧದ ಮರ
೭.	ಸೀಸ	ತೇಗದ ಮರ
೮.	ತವರ	ಮುದ್ರಿತ ಬಟ್ಟೆ
೯.	ಕಬ್ಬಿಣ ಮತ್ತು ಹಿತ್ತಾಳೆ	ಕೇಸರಿ
೧೦.	ಪಾದರಸ ಮತ್ತು ಗಾಜು	ನೀಲಿ
೧೧.	ಬಣ್ಣಗಳು	ವೈದ್ಯಕೀಯ ಮೂಲಿಕೆಗಳು
೧೨.	ಚಿನ್ನ (ಏಡನ್ ಮತ್ತು ಚೈನಾದಿಂದ)	ಕೃಷಿ ಉತ್ಪನ್ನಗಳು
೧೩.	ಕುದುರೆಗಳು (ಅರೇಬಿಯ, ಮತ್ತು ಉತ್ತರ ಆಫ್ರಿಕಾಗಳಿಂದ ಪೋರ್ಚುಗೀಸರ ಮೂಲಕ)	
೧೪.	ಆನೆಗಳು (ಸಿಲೋನ್)	
೧೫.	ಮದ್ದುಗುಂಡುಗಳು, ಶಸ್ತ್ರಾಸ್ತ್ರಗಳು (ಅರಬ್ಬರು ಮತ್ತು ಪೋರ್ಚುಗೀಸರಿಂದ)	
೧೬.	ಕಾಗದ	

ಇಷ್ಟು ಬಿರುಸಾದ ವ್ಯಾಪಾರವಿದ್ದುದರಿಂದ ಈ ಪಟ್ಟಣಗಳನ್ನೂ ನಗರ ಕೇಂದ್ರಗಳನ್ನೂ ಒಂದುಗೂಡಿಸುವ ಉತ್ತಮವಾದ ವ್ಯಾಪಾರ ಮಾರ್ಗಗಳು ಕೂಡ ಇದ್ದುದು ಸಹಜ. ಬಹು ವ್ಯಾಪಕವಾಗಿ ಉಪಯೋಗವಾಗುತ್ತಿದ್ದ ಕೆಲವು ವ್ಯಾಪಾರ ಮಾರ್ಗಗಳು ಇವು:[೪೨] ೧) ವಿಜಯನಗರ ಪಟ್ಟಣದಿಂದ ಬಂಕಾಪುರದ ಮೂಲಕ ಗೋವಾಕ್ಕೆ, ೨) ಬಂಕಾಪುರದಿಂದ ಹೊನ್ನಾವರದ ಮೂಲಕ ಭಟ್ಕಳಕ್ಕೆ, ೩) ಬೀದರ್ ಮತ್ತು ಗೋಲ್ಕೊಂಡಗಳ ಮಾರ್ಗವಾಗಿ ದೌಲತಾಬಾದಿನಿಂದ ಗುಲ್ಬರ್ಗಕ್ಕೆ, ೪) ಬಂಕಾಪುರದಿಂದ ಬಿಜಾಪುರ ಮತ್ತು ಗುಲ್ಬರ್ಗಾ ಮಾರ್ಗವಾಗಿ ಗೋಲ್ಕೊಂಡಕ್ಕೆ, ೫) ವಿಜಯನಗರ ಪಟ್ಟಣದಿಂದ ಪೆನುಕೊಂಡಾ, ಚಂದ್ರಗಿರಿ, ತಿರುಪತಿ ಮತ್ತು ಪುಲಿಕೋಟೆ ಹಾದು ಮೈಲಾಪುರಕ್ಕೆ, (ನಿಕೋಲೋ ಕಾಂಟಿಯು ಹೋದ ಮಾರ್ಗ), ೬) ವಿಜಯನಗರದಿಂದ ಆದೋನಿ, ರಾಯಚೂರುಗಳಿಗೆ, ೭) ವಿಜಯನಗರದಿಂದ ಶಿವನಸಮುದ್ರಕ್ಕೆ ಮತ್ತು ಶ್ರೀರಂಗಪಟ್ಟಣಕ್ಕೆ. ಇಲ್ಲಿ ಕೊಟ್ಟಿರುವುದು ಕೆಲವು ಮಾದರಿಗಳು ಮಾತ್ರ. ಇವುಗಳನ್ನು ಪದೇ ಪದೇ ಉಲ್ಲೇಖಿಸಲಾಗಿದೆ.[೪೩] ಇನ್ನೂ ಅನೇಕ ಉಪ ವ್ಯಾಪಾರ ಮಾರ್ಗಗಳಿದ್ದಿರಬಹುದು. ಒಂದಿಲ್ಲೊಂದು ಕಾರಣದಿಂದ ಅವುಗಳನ್ನು ಗುರುತಿಸಲು ಸಾಧ್ಯವಾಗಿಲ್ಲ. ಇಲ್ಲಿ ಸ್ವಾರಸ್ಯವಾದ ವಿಚಾರವೇನೆಂದರೆ ಈ ವ್ಯಾಪಾರ ಮಾರ್ಗಗಳು ವಿಂಧ್ಯದ ದಕ್ಷಿಣಕ್ಕೆ ಬಹಮನಿ ಮತ್ತು ವಿಜಯನಗರ ರಾಜ್ಯಗಳ ಪ್ರದೇಶಗಳನ್ನು ಪೂರ್ತಿಯಾಗಿ ಆವರಿಸಿಕೊಂಡಿದ್ದುವು. ಈ ವ್ಯಾಪಾರ ಮಾರ್ಗಗಳು ವಹಿವಾಟನ್ನು ಹೆಚ್ಚು ಮಾಡಿ, ನಗರ ಕೇಂದ್ರಗಳನ್ನು ವ್ಯಾಪಾರ ಕೇಂದ್ರಗಳಾಗಿಯೋ ದೇವಾಲಯ ನಗರಗಳನ್ನಾಗಿಯೋ ಬೆಳೆಸಿದ್ದುವು. ಸಹಜವಾಗಿಯೇ ಇದರಿಂದ ನಗರ ಅರ್ಥವ್ಯವಸ್ಥೆಯೂ ಸಮಾಜವೂ ವರ್ಧಿಸಿದುವು. ದಕ್ಷಿಣ ಭಾರತದಲ್ಲಿ ಸಾಮಾಜಿಕ-ಆರ್ಥಿಕ ಪರಿವರ್ತನೆ ಮತ್ತು ನಗರಗಳ ಬೆಳವಣಿಗೆಗಳಿಗೆ ಸಂಬಂಧಿಸಿದಂತೆ ೧೩ನೆಯ ಶತಮಾನ ಬಹು ಮಹತ್ವದ ಕಾಲವಾಗಿತ್ತು. ''ಕ್ರಿಸ್ತಶಕದ ಪ್ರಾರಂಭದ ಶತಕಗಳಲ್ಲಿ, ತಮಿಳು ಕಾವ್ಯ ಸಂಕಲನಗಳ ಪ್ರಾಚೀನ ಕಾಲದಿಂದಲೂ ನಗರಗಳು ೧೩ನೆ ಶತಮಾನದ ನಂತರ ಪಡೆದ ಪ್ರಾಮುಖ್ಯವನ್ನು ಬೇರೆ ಯಾವಾಗಲೂ ಪಡೆದಿರಲಿಲ್ಲ.'' ೧೩ನೇ ಶತಮಾನದಲ್ಲಿ ಪ್ರಾರಂಭವಾದ ಆರ್ಥಿಕತೆ ಮತ್ತು ನಗರೀಕರಣಗಳಲ್ಲಿನ ಈ ಪರಿವರ್ತನೆಯು ೧೬-೧೭ನೇ ಶತಮಾನಗಳ ವೇಳೆಗೆ ದಕ್ಷಿಣಭಾರತದ ಜನಜೀವನದಲ್ಲಿ ಹಿಂದೆಂದೂ ಇರದ ಪ್ರಮಾಣದಲ್ಲಿ ಸಂಯೋಜನೆಗೊಂಡಿತ್ತು.[೪೪]

ಹಾಗೆ ಬೆಳೆಯುವ ಬಿರುಸಾದ ವ್ಯಾಪಾರ ವಹಿವಾಟಿಗೆ ಪೂರಕವಾದ ಇನ್ನೊಂದು ಅಂಶವೆಂದರೆ, ಅತ್ಯಂತ ಅನುಕೂಲಕರವಾದ ವಿನಿಮಯ ಮಾಧ್ಯಮ. ಹಿಂದಿದ್ದ ಬಾರ್ಟರ್ ಅಥವಾ ವಸ್ತು ವಿನಿಮಯ ಪದ್ಧತಿಯಿಂದ ಈ ಸೌಲಭ್ಯ ಸಾಧ್ಯವಿರಲಿಲ್ಲ. ವ್ಯಾಪಾರ ಅಷ್ಟು ಅಗಾಧ ಪ್ರಮಾಣದಲ್ಲಿತ್ತು. ಆದ್ದರಿಂದ ವಿನಿಮಯ ಮಾಧ್ಯಮವಾಗಿ ಸುಭದ್ರವಾದೊಂದು ಹಣದ ವ್ಯವಸ್ಥೆ ನಿಧಾನವಾಗಿ ಪ್ರಾಮುಖ್ಯ ಪಡೆಯಿತು. ೧೪ರಿಂದ ೧೭ನೆಯ ಶತಮಾನಗಳ ಅವಧಿಯಲ್ಲಿ ವ್ಯಾಪಾರ ವಹಿವಾಟಿನಲ್ಲಿ ಹಣಕ್ಕಿದ್ದ ಪ್ರಾಮುಖ್ಯ ನಮಗೆ ಸ್ಪಷ್ಟವಾಗಿ ಗೊತ್ತಾಗುತ್ತದೆ. ಇದು ೧೪ನೆಯ ಶತಮಾನದ ಪೂರ್ವಕ್ಕಿದ್ದ ಹಣಕಾಸು ಪದ್ಧತಿಗೆ ಹೋಲಿಸಿದರೆ ಗುಣ ಮತ್ತು ಪ್ರಮಾಣ ಎಲ್ಲಾ ದೃಷ್ಟಿಗಳಿಂದಲೂ ಅತ್ಯಂತ ಮೇಲು ಮಟ್ಟದ್ದಾಗಿತ್ತು.

ಹೀಗೆ ಒಳನಾಡು ಮತ್ತು ಸಾಗರೋತ್ತರ ವಾಣಿಜ್ಯದಲ್ಲಿ ಉಂಟಾದ ಅಪಾರ ಹೆಚ್ಚಳ, ಸಂತೆಗಳು ಮತ್ತು ಮಾರುಕಟ್ಟೆಗಳ ವಿಸ್ತರಣ, ವ್ಯಾಪಾರ ಕೇಂದ್ರಗಳು, ಹೊಸ ಪಟ್ಟಣಗಳು ಹಾಗೂ ನಗರಗಳ ಉದಯ-ಇವು ಬಿರುಸಾಗಿ ಬೆಳೆಯುತ್ತಿದ್ದ ಒಂದು ಹಣ ಆಧಾರಿತ ಅರ್ಥವ್ಯವಸ್ಥೆಯನ್ನು ಸೂಚಿಸುತ್ತವೆ. ವೈವಿಧ್ಯಪೂರ್ಣವಾದ ನಾಣ್ಯಗಳು ವ್ಯಾಪಕವಾಗಿ ಚಲಾವಣೆಯಲ್ಲಿದ್ದುದು ಹಣವಿನಿಮಯ, ಸಾಲಗಳ ಮೇಲೆ ಬಡ್ಡಿ, ಇತರ ಹಣ ಆಧಾರಿತ ಅರ್ಥವ್ಯವಸ್ಥೆಯ ಕಾರ್ಯಗಳನ್ನು ಸೂಚಿಸುತ್ತವೆ. ನಾಣ್ಯಗಳನ್ನು ಸಂಗ್ರಹಿಸಿಟ್ಟುಕೊಳ್ಳುವುದಕ್ಕಿಂತ ವಿನಿಮಯ ಮಾಧ್ಯಮವಾಗಿ ಬಳಸುವುದು ಅಧಿಕವಾಗಿ ರೂಢಿಯಲ್ಲಿತ್ತೆಂಬುದಕ್ಕೆ ಇದು ಸ್ಪಷ್ಟವಾದ ಸಾಕ್ಷಿಯಾಗಿದೆ.

ವಿಜಯನಗರ ಕಾಲದ ಅನೇಕ ಶಾಸನಗಳು ಆಗ ಚಲಾವಣೆಯಲ್ಲಿದ್ದ ಹಲವಾರು ನಾಣ್ಯಗಳನ್ನು ಉಲ್ಲೇಖಿಸುತ್ತವೆ. ಗದ್ಯಾಣ, ಹೊನ್ನು, ವರಹ ಇತ್ಯಾದಿ. ಪೀಟರ್ ಮಂಡಿಯು ಭಟ್ಕಳದಲ್ಲಿ ತಾನು ಗಮನಿಸಿದ ಈ ನಾಣ್ಯಗಳನ್ನು ಉಲ್ಲೇಖಿಸುತ್ತಾನೆ:[೩೫] (ಅ) ಪಗೋಡ (ಆ) ಘನಂ. ಇದು ಪಗೋಡದ ೧೫ ೧/೩ ಯಷ್ಟು ಎಂದು ಲೆಕ್ಕ ಹಿಡಿಯಲಾಗುತ್ತಿತ್ತು (ಇ) ತಾರ್. ಇದು ಘನಂ ನ ಹದಿಮೂರನೆ ಒಂದು ಭಾಗ(ಈ) ಕಾಸ್ ಇದು ಒಂದು ತಾರ್‌ನ ನಾಲ್ಕನೆಯ ಒಂದು. ಪಗೋಡ ಅಥವಾ ವರಹ ದಖ್ಖನಿನ ಪ್ರಮಾಣಯುತ ನಾಣ್ಯವಾಗಿತ್ತು. ವಿಜಯನಗರ ಕಾಲದಲ್ಲಿ ಅದರ ತೂಕ ಐವತ್ತೆರಡು ಗ್ರೇನ್ ಚಿನ್ನವಾಗಿತ್ತು.

ಟಿಪ್ಪಣಿಗಳು

೧ ಏಷ್ಯಾವೂ ಯೂರೋಪಿನಂತೆಯೇ ೧೪-೧೮ನೇ ಶತಮಾನಗಳಲ್ಲಿ ಮೂಲಬಂಡವಾಳ ಅರ್ಥವ್ಯವಸ್ಥೆಯಾಗಿ ವಿಕಾಸಗೊಳ್ಳುವ ಸತ್ವವನ್ನು ಹೊಂದಿದ್ದಿತು ಎಂಬುದಾಗಿ ಎ.ಜೆ. ಕೈಸರ್, ವಿ.ಐ. ಪಾವ್‌ಲೋವ್, ಇರ್ಫಾನ್ ಹಬೀಬ್, ಸೈಮನ್ ಡಿಗ್ರಿ, ಬಿಪಿನ್ ಚಂದ್ರ, ಎ. ಜೆ. ಚೆರೋವ್, ಬರ್ಟನ್ ಸ್ಟೀನ್ ಮೊದಲಾದ ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ.

೨ ಮಾರಿಸ್‌ಡಾಬ್ ಅವರ 'ಸ್ಟಡೀಸ್ ಇನ್‌ದಿ ಡೆವಲಪ್‌ಮೆಂಟ್ ಆಫ್ ಕ್ಯಾಪಿಟಲಿಸಂ' ಕೃತಿಯನ್ನು ಕುರಿತು ಕಾರ್ಲ್ ಪೋಲಾನ್ಸಿ ಬರೆದ ವಿಮರ್ಶೆ, ''ಜರ್ನಲ್ ಆಫ್ ಎಕನಾಮಿಕ್ ಹಿಸ್ಟರಿ'', ೧೯೪೮

೩ ಡಾಬ್ ಅವರ ಕೃತಿಯನ್ನು ಕುರಿತು ಆರ್.ಎಚ್. ಟಾನಿ ಅವರು ''ಎಕನಾಮಿಕ್ ಹಿಸ್ಟರಿ ರಿವ್ಯೂ'' ೧೯೫೦ರಲ್ಲಿ ಬರೆದ ವಿಮರ್ಶೆ

೪ ಈ ಚರ್ಚೆಗೆ ಪಶ್ಚಿಮದೇಶಗಳಲ್ಲಿ ಮುಖ್ಯವಾದ ಕೊಡುಗೆ ನೀಡಿದವರು ಅಮೆರಿಕನ್ ಆದ ಪಾಲ್ ಸ್ವೀಜೀ, ಯೂರೋಪಿಯನ್ನರಾದ ಮಾರಿಸ್‌ಡಾಬ್, ಕ್ರಿಸ್ಟೋಫರ್ ಹಿಲ್, ರಾಡ್ನಿ ಹಿಲ್ಟನ್, ಗಿಯೂಲಿಯಾನೋ ಪ್ರೊಕಾಚಿ, ಎರಿಕ್ ಹಾಬ್ಸ್‌ಬಾರತ ಮತ್ತು ಜಾನ್ ಮೆರ್ರಿಂಗ್‌ಟನ್

೫ ಕೊಹಾಚಿರೊ ತಕಹಶಿ

೬ ಕೊಹಾಚಿರೊ ತಕಹಶಿ: ಎ ಕಾಂಟ್ರಿಬ್ಯೂಷನ್ ಟು ದಿ ಡಿಸ್‌ಕಷನ್; ರಾಡ್ನಿಹಿಟ್ಟನ್ (ಸಂ), ದಿ ಟ್ರಾನ್ಸಿಷನ್ ಫ್ರಂ ಫ್ಯೂಡಲಿಸಂ ಟು ಕ್ಯಾಪಿಟಲಿಸಂ, ಲಂಡನ್, ೧೯೭೮, ಪು ೭೦ ಮತ್ತು ೭೪

೭ ಮೋಲಿಗಿಬ್ಸ್: ಫ್ಯೂಡಲ್ ಆರ್ಡರ್, ಲಂಡನ್, ೧೯೪೯, ಪು. ೫-೭

೮. ಈ ಅಂಶದ ಮೇಲೆ ಬೆಳಕು ಚೆಲ್ಲುವ ಬಹುತೇಕ ಶಾಸನಗಳನ್ನು ಇವುಗಳಲ್ಲಿ ನೋಡಬಹುದು: ೧)ಎಪಿಗ್ರಾಫಿಯ ಇಂಡಿಕ (ಎ.ಇ), ೨)ಸೌತ್ ಇಂಡಿಯನ್ ಇನ್‌ಸ್ಕ್ರಿಪ್‌ಷನ್ಸ್ (ಸೌ.ಇ.ಇ.), ೩)ಎಪಿಗ್ರಾಫಿಯ ಕರ್ನಾಟಕ (ಎ.ಕ.), ೪)ಎ ಕಲೆಕ್ಷನ್ ಆಫ್ ದಿ ಇನ್ಸ್‌ಕ್ರಿಪ್ಷನ್ಸ್ ಇನ್‌ದಿ ನೆಲ್ಲೂರ್ ಡಿಸ್ಟ್ರಿಕ್ಟ್, ೫)ಎ.ಎಸ್. ಐ. ಎಸ್.ಐ.ಇ., ಎಂ. ಎ.ಆರ್. ಇವುಗಳ ವಾರ್ಷಿಕ ವರದಿಗಳು, ೬)ಮೆಕೆಂಜಿ ಹಸ್ತ ಪ್ರತಿಗಳು, ೭)ಇನ್ಸ್‌ಕ್ರಿಪ್ಷನ್ಸ್ ಆಫ್ ದಿ ಡೆಕ್ಕನ್ ಇತ್ಯಾದಿ.

೯ ದಿ ಬುಕ್ ಆಫ್ ಡ್ಯುರೆಟ್ ಬಾರ್ಬೋಸ್, ಅನುವಾದ: ಮ್ಯಾನ್ಯುಯೆಲ್ ಲಾಂಗ್‌ವರ್ತ್ ಡೇಮ್ಸ್; ದಿ ರೆಹ್ಲಾ ಆಫ್ ಇಬನ್ ಬತೂತ, ಸಂ. ಮೆಹ್ದಿ ಹುಸೇಯ್ನ್; ಟ್ರಾವೆಲ್ಸ್ ಇನ್ ಯೂರೋಪ್ ಎಂಡ್ ಏಷ್ಯಾ, ಪೀಟರ್ ಮಂಡಿ; ಟ್ರಾವೆಲ್ಸ್ ಇನ್ ಇಂಡಿಯಾ, ಪೀಟರ್ ಡೆಲ್ಲಾ ವಲ್ಲೆ, ಅನುವಾದ: ಎಡ್ವರ್ಡ್ ಗ್ರೇ; ಡೊಮಿಂಗೋ ಪೇಸ್ ಮತ್ತು ಫರ್ನಾಮೋ ನ್ಯೂನಿಜ್‌ರ ಬರಹಗಳು, ರಾಬರ್ಟ್ ಸಿವೆಲ್ಲರ ಎ ಫರ್‌ಗಾಟನ್ ಎಂಪೈರ್ ಕೃತಿಯಲ್ಲಿ: ಅಬ್ದುಲ್ ರಜಾಕನ ವರದಿಗಳು, ಎಲಿಯಟ್ ಮತ್ತು ಡಾಸನ್ನರ ಹಿಸ್ಟರಿ ಆಫ್ ಇಂಡಿಯಾ ಸಂ ೪; ಆರ್. ಸಿ. ಟೆಂಪಲ್, ದಿ ಇಟನಿರರಿ ಆಫ್ ಲುಡೊವಿಕೊ ವರ್ಥನಾ ಆಫ್ ಬೊಲೋನಾ; ಟ್ರಾವೆಲ್ಸ್ ಎಂಡ್ ಟ್ರಾವೆಲರ್ಸ್ ಇನ್ ಇಂಡಿಯಾ, ಜೇಮ್ಸ್ ಓಟನ್

೧೦ ನೊಬುರು ಕರಾಶಿಮ ಮಾಡಿದ ಹಾಗೆ, ಸೌತ್ ಇಂಡಿಯನ್ ಹಿಸ್ಟರಿ ಎಂಡ್ ಸೊಸೈಟಿ, ಸ್ಟಡೀಸ್ ಫ್ರಂ ಇನ್‌ಸ್ಕ್ರಿಪ್ಷನ್ಸ್ ಎ.ಡಿ. ೮೫೦-೧೮೦೦ ದೆಹಲಿ ೧೯೮೪

೧೧ ಕೈಸರ್ ಎ.ಜೆ.: ''ದಿ ರೋಲ್ ಆಫ್ ಬ್ರೊಕರ್ಸ್ ಇನ್ ಮಿಡೀವಲ್ ಇಂಡಿಯಾ'', ಇಂಡಿಯನ್ ಹಿಸ್ಟಾರಿಕಲ್ ರಿವ್ಯೂ ಸಂ. ೧, ಸಂಚಿಕೆ-೨

೧೨ ಮೆಹತಾ ಎಂ.ಜೆ.: ಸಮ್ ಆ್ಯಸ್ಪೆಕ್ಟ್ಸ್ ಆಫ್ ಸೂರತ್ ಆ್ಯಸ್ ಎ ಟ್ರೇಡಿಂಗ್ ಸೆಂಟರ್ ಇನ್‌ದಿ ಸೆವೆಂಟೀನ್ತ್ ಸೆಂಚುರಿ'', ಐ.ಎಚ್.ಆರ್. ಸಂ. ೧, ಸಂಚಿಕೆ ೨. ಮೆಹತಾ ತುಂಬ ಶ್ರೀಮಂತನಾಗಿದ್ದ ಅಬ್ದುಲ್ ಗಫೂರ್ ಎಂಬ ವರ್ತಕನ ಉದಾಹರಣೆಯನ್ನು ನೀಡುತ್ತಾರೆ. ಅವನು ಪಶ್ಚಿಮ ಕರಾವಳಿಯಿಂದ ಸಾಗರೋತ್ತರ ವಾಣಿಜ್ಯ ವಹಿವಾಟನ್ನು ನಡೆಸುತ್ತಿದ್ದನು. ಅವನು ೨೦ ಹಡಗುಗಳ ಒಡೆಯನಾಗಿದ್ದನು. ಅಲೆಗ್ಸಾಂಡರ್ ಹ್ಯಾಮಿಲ್ಟನ್ ಎಂಬ ಇಂಗ್ಲಿಷ್ ವ್ಯಾಪಾರಿಯು ಈ ಅಬ್ದುಲ್‌ಗಫೂರನನ್ನು ಬಲ್ಲವನಾಗಿದ್ದು ಅವನ ಬಗೆಗೆ ''ಅಬ್ದುಲ್ ಗಫೂರ್‌ನ ವಹಿವಾಟು, ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪೆನಿಯ ವಹಿವಾಟಿಗೆ ಸರಿಸಮವಾಗಿತ್ತು'' ಎಂದು ಬರೆಯುತ್ತಾನೆ.

೧೩ ಬಾರಿ ಎಸ್.ಎ.: ನಾನ್ ಅಗ್ರೇರಿಯನ್ ಟ್ಯಾಕ್ಸೇಷನ್ ಇನ್ ಕರ್ನಾಟಕ ಅಂಡರ್ ವಿಜಯನಗರ ೧೩೩೬-೧೫೬೫-ಎ ಸ್ಟಡಿ ಇನ್ ಇಕನಾಮಿಕ್ ಟ್ರಾನ್ಸ್ ಫಾರ್ಮೇಷನ್ ಬೇಸ್ಡ್ ಆನ್ ಫಿಸ್ಕಲ್ ಸಿಸ್ಟಮ್ಸ್ ಅದರ್ ದ್ಯಾನ್ ಲ್ಯಾಂಡ್ ರೆವಿನ್ಯೂ, ಅಪ್ರಕಟಿತ ಪಿ.ಎಚ್.ಡಿ. ನಿಬಂಧ, ಅಧ್ಯಾಯ ೨, ಪು ೨೫-೩೬

೧೪ ಅದೇ, ಪು. ೩೭-೪೩

೧೫ ಪಾಲ್‌ಲೋವ್ ವಿ.ಐ.: ಹಿಸ್ಟಾರಿಕಲ್ ಪ್ರಮೈಸಸ್ ಫಾರ್ ಇಂಡಿಯಾಸ್ ಟ್ರಾನ್ಸಿಷನ್ ಟು ಕ್ಯಾಪಿಟಲಿಸಂ; ಫ್ರಾಂಕ್ ಪರ್ಲಿನ್, ಪ್ರೋಟೋ ಇಂಡಸ್ಟ್ರಿಯಲೈಸೇಷನ್ ಎಂಡ್ ಪ್ರೀ-ಕಲೋನಿಯಲ್ ಸೌತ್ ಏಷ್ಯಾ; ಎ.ಕ. (ಹೊಸ ಸರಣಿ): ೩,೪,೫,೬,ಎ.ಇ. ೩,೫,೯,೨೦, ಎ.ಐ. ಎ.ಆರ್.ಎಸ್. ಐ. ೯; ಅಪ್ಪಾದೊರೈ, ಎಕನಾಮಿಕ್ ಕಂಡೀಷನ್ಸ್ ಇನ್ ಸೌತ್ ಇಂಡಿಯಾ

೧೬ ಬಾರಿ ಎಸ್.ಎ.: ಪೂರ್ವೋಕ್ತ, ಪು. ೩೫, ೩೮

೧೭ ಮಹಾಲಿಂಗಂ ಟಿ.ವಿ.: ಸೌತ್ ಇಂಡಿಯನ್ ಪಾಲಿಟಿ; ಅಪ್ಪಾದೊರೈ, ಪೂರ್ವೋಕ್ತ

೧೮ ಇರ್ಫಾನ್ ಹಬೀಬ್: ಕೇಂಬ್ರಿಜ್ ಎಕನಾಮಿಕ್ ಹಿಸ್ಟರಿ ಆಫ್ ಇಂಡಿಯ, ಸಂ.೧, ಅಧ್ಯಾಯ-೩, ಪು. ೭೮

೧೯ ವಿಜಯ ರಾಮಸ್ವಾಮಿ: ಟೆಕ್ಸ್‌ಟೈಲ್ಸ್ ಎಂಡ್ ವೀವರ್ಸ್ ಇನ್ ಮೆಡೀವಲ್ ಸೌತ್ ಇಂಡಿಯಾ

೨೦ ಹೀರಾಲಾಲ್ ಗುಪ್ತ, ''ಇಕನಾಮಿಕ್ ಇಂಪ್ಯಾಕ್ಟ್ ಆಫ್ ದಿ ವೆಸ್ಟ್ ಆನ್ ಇಂಡಿಯನ್ ಇಂಡಸ್ಟ್ರೀಸ್'', ಜರ್ನಲ್ ಆಫ್ ಇಂಡಿಯನ್ ಹಿಸ್ಟರಿ, ಸಂ.೩೮, ಭಾಗ-೧(೧೯೬೦), ಪು ೭೭

೨೧ ಮಹಾಲಿಂಗಂ ಟಿ.ವಿ.: ಎಕನಾಮಿಕ್ ಲೈಫ್ ಇನ್ ವಿಜಯನಗರ, ಪು. ೧೪೨-೧೪೩; ಸೌ.ಇ.ಇ. ೯-೨, ೪೯; ಎ.ಕ.೧೧, ಸಿ.ಟಿ. ೯೫

೨೨ ಸತ್ಯನಾರಾಯಣ ಕೆ.ಎಸ್.: ಹಿಸ್ಟರಿ ಎಂಡ್ ಕಲ್ಚರ್ ಆಫ್‌ದಿ ಆಂಧ್ರಾಸ್ ಸಂಪುಟ-೨, ಪು ೩೬೦-೩೬೫

೨೩ ಎ.ಜೆ. ಕೈಸರ್, ಪೂರ್ವೋಕ್ತ; ಎಂ. ಜೆ. ಮೆಹತಾ, ಪೂರ್ವೋಕ್ತ; ಸೈಮನ್ ಡಿಗ್ರಿ, ''ದಿ ಮ್ಯಾರಿ ಟೈಮ್ ಟ್ರೇಡ್ ಆಫ್ ಇಂಡಿಯಾ'', ದಿ ಕೇಂಬ್ರಿಜ್ ಎಕನಾಮಿಕ್ ಹಿಸ್ಟರಿ ಆಫ್ ಇಂಡಿಯಾ, ಸಂ. ೧, ಅಧ್ಯಾಯ-೫, ಪು. ೧೩೪-೧೩೫

೨೪ ಡಬ್ಲ್ಯು ಎಚ್. ಮೋರ್‌ಲ್ಯಾಂಡ್, ಇಂಡಿಯಾ ಅಟ್ ದಿ ಡೆತ್ ಆಫ್ ಅಕ್ಬರ್, ಪು. ೧೯೮-೨೦೦

೨೫ ಬರ್ಟನ್ ಸ್ಟೀನ್: ಕೇಂಬ್ರಿಜ್ ಎಕನಾಮಿಕ್ ಹಿಸ್ಟರಿ ಆಫ್ ಇಂಡಿಯಾ, ಸಂ-೧, ಪು.೩೬ ಮತ್ತು ಅಧ್ಯಾಯ ೪, ಪು. ೧೨೦-೧೨೧; ಇರ್‌ಫಾನ್ ಹಬೀಬ್, ಕೇಂಬ್ರಿಜ್ ಎಕನಾಮಿಕ್ ಹಿಸ್ಟರಿ ಆಫ್ ಇಂಡಿಯಾ, ಸಂ.೧, ಪು. ೮೨; ಪೀಟರ್ ಮಂಡಿ, ಟ್ರಾವೆಲ್ಸ್ ಇನ್ ಯೂರೋಪ್ ಎಂಡ್ ಏಷ್ಯಾ; ಆರ್.ಎಚ್. ಮೇಜರ್, ಇಂಡಿಯಾ ಇನ್ ದಿ ಫಿಫ್ಟೀನ್ ಸೆಂಚುರಿ

೨೬ ವೆಂಕಟಸ್ವಾಮಿ ಅಯ್ಯರ್: ''ಮೆಡೀವಲ್ ಟ್ರೇಡ್, ಕ್ರಾಫ್ಟ್, ಎಂಡ್ ಮರ್ಚೆಂಟ್ ಗಿಲ್ಡ್ಸ್ ಇನ್ ಸೌತ್ ಇಂಡಿಯಾ,'' ಜರ್ನಲ್ ಆಫ್ ಇಂಡಿಯನ್ ಹಿಸ್ಟರಿ, ಸಂ.೨೫, ೧೯೪೭ ಬರ್ಟನ್ ಸ್ಟೀನ್, ಕೋರಮಂಡಲ್

ಟ್ರೇಡ್ ಇನ್ ಮಡೀವಲ್ ಇಂಡಿಯಾ, ಜಾನ್ ಪಾರ್ಕರ್ (ಸಂ) ಮರ್ಚೆಂಟ್ಸ್ ಎಂಡ್ ಸ್ಕಾಲರ್ಸ್; ಎ.ಜೆ. ಕೈಸರ್, ಪೂರ್ವೋಕ್ತ

೨೭ ದೀಕ್ಷಿತ್ ಜಿ.ಎಸ್.: ''ಡೆಕ್ಕನ್ ನ್ಯೂಮಿಸ್ಮಾ ಟಿಕ್ಸ್'', ವಿಜಯನಗರ ಸೆಕ್ಸೆಂಟಿನರಿ ವಾಲ್ಯೂಮ್; ಎ.ವಿ. ನರಸಿಂಹಮೂರ್ತಿ, ಕಾಯಿನ್ಸ್ ಆಫ್ ಇಂಡಿಯಾ.

೨೮ ಸತ್ಯನಾರಾಯಣ ಕೆ.: ಪೂರ್ವೋಕ್ತ

೨೯ ಬರ್ಟನ್ ಸ್ಟೀನ್: ಕೇಂಬ್ರಿಜ್ ಎಕನಾಮಿಕ್ ಹಿಸ್ಟರಿ ಆಫ್ ಇಂಡಿಯಾ, ಸಂ. ೧, ಪು. ೧೨೧

೩೦ ಬರ್ಟನ್ ಸ್ಟೀನ್, ಪೂರ್ವೋಕ್ತ.; ಟಿ.ವಿ. ಮಹಾಲಿಂಗಂ, ಎಕನಾಮಿಕ್ ಲೈಫ್ ಇನ್ ವಿಜಯನಗರ; ದೀಪಕ್ ರಂಜನ್ ದಾಸ್, ಎಕನಾಮಿಕ್ ಹಿಸ್ಟರಿ ಆಫ್ ದಿ ಡೆಕ್ಕನ್; ಮೋರ್‌ಲ್ಯಾಂಡ್, ಇಂಡಿಯಾ ಎಟ್ ದಿ ಡೆತ್ ಆಫ್ ಅಕ್ಬರ್, ಇತ್ಯಾದಿ.

೩೧ ರಾಬರ್ಟ್ ಸಿವೆಲ್: ಎ ಫರ್‌ಗಾಟನ್ ಎಂಪೈರ್, ಪು. ೧೨೫ ಕೃತಿಯಲ್ಲಿ ಬಾರ್ಬೋಸಾನ ವರದಿ

೩೨ ಸತ್ಯನಾರಾಯಣ ಕೆ.: ಹಿಸ್ಟರಿ ಎಂಡ್ ಕಲ್ಚರ್ ಆಫ್ ದಿ ಆಂಧ್ರಾಸ್, ಸಂ. ೨, ಪು. ೩೬೧; ಎ.ಕ.೧೦, ಸಿ.ಟಿ.೯೫; ಎ.ಕ.೧೦, ಎಸ್.ಡಿ.೧೧೨ ಇತ್ಯಾದಿ

೩೩ ಎ.ಕ. ಸಂಪುಟಗಳನ್ನು ನೋಡಿ.

೩೪ ಸತ್ಯನಾರಾಯಣ ಕೆ.: ಪೂರ್ವೋಕ್ತ, ಪು. ೩೧೬

೩೫ ಈ ಹೊಸ ಸಂತೆಗಳ ಪಟ್ಟಿಗಾಗಿ ನೋಡಿ, ಎಸ್.ಎ. ಬಾರಿ, ನಾನ್ ಅಗ್ರೇರಿಯನ್ ಟ್ಯಾಕ್ಸೇಷನ್ ಇನ್ ಕರ್ನಾಟಕ ಅಂಡರ್ ವಿಜಯನಗರ, ಪೂರ್ವೋಕ್ತ, ಪು. ೧೨೫

೩೬ ಶೇರ್ವಾನಿ ಎಚ್.ಕೆ.: ದಿ ಬಹಮನೀಸ್ ಆಫ್ ದಿ ಡೆಕ್ಕನ್

೩೭ ಬಾರಿ ಎಸ್.ಎ.: ಪೂರ್ವೋಕ್ತ

೩೮ ಅದೇ.

೩೯ ಶೇರ್ವಾನಿ ಎಚ್.ಕೆ.: ಪೂರ್ವೋಕ್ತ: ಎಸ್.ಎ. ಬಾರಿ, ಪೂರ್ವೋಕ್ತ

೩೯ ಬಾರಿ ಎಸ್.ವಿ.: ಪೊಟೆನ್ಶಿಯಾಲಿಟೀಸ್ ಆಫ್ ದಿ ಡೆವಲಪ್‌ಮೆಂಟ್ ಆಫ್ ಕ್ಯಾಪಿಟಲಿಸಂ ಇನ್ ಪ್ರಿ-ಕಲೋನಿಯಲ್ ಏಷ್ಯಾ (ಎ ಕೇಸ್ ಸ್ಟಡಿ ಆಫ್ ಸೌತ್ ಇಂಡಿಯಾ). ೧೨ನೆಯ ಐ.ಎ. ಎಚ್.ಎ. ಸಮ್ಮೇಳನದಲ್ಲಿ ಮಂಡಿಸಿದ ಪ್ರಬಂಧ, ಹಾಂಗ್‌ಕಾಂಗ್ ವಿಶ್ವವಿದ್ಯಾನಿಲಯ, ಹಾಂಕಾಂಗ್, ೧೯೯೧,

೪೧ ಬಾರಿ ಎಸ್.ಎ.: ಪೂರ್ವೋಕ್ತ, ಪು ೧೨೮

೪೨ ಬರ್ಟನ್ ಸ್ಟೀನ್: ಕೇಂಬ್ರಿಜ್ ಎಕನಾಮಿಕ್ ಹಿಸ್ಟರಿ ಆಫ್ ಇಂಡಿಯಾ, ಸಂ. ೧, ಪು. ೩೬

೪೩ ಎ.ಕ. (ಎನ್.ಎಸ್), ೮ ಎನ್ ಎ, ೬೯; ಎ.ಇ.೮, ಪು ೧೩೦; ಎ.ಆರ್. ಎಸ್ ಐ.ಇ, ೧೯೨೭ರ ೩೭೬; ಸೌ.ಇ.ಇ. ೯-೨, ೪೦೯

೪೪ ಮೈಸೂರು ಸರಕಾರದ ಶಾಸನತಜ್ಞರಾಗಿದ್ದ ಡಾ. ಶಾಮಶಾಸ್ತ್ರಿ ಅವರ ಅಭಿಪ್ರಾಯ, ಎಂ.ಎ.ಆರ್. ೧೯೩೨ ಪು. ೭೮

೪೫ ಪೀಟರ್ ಮಂಡಿ: ಟ್ರಾವೆಲ್ಸ್ ಇನ್ ಯೂರೋಪ್ ಎಂಡ್ ಏಷ್ಯಾ, ಭಾ-೧, ಪು. ೧೦೧-೧೦೨

ಅಧ್ಯಾಯ : ಏಳು

ಕೈಗಾರಿಕೆ, ವ್ಯಾಪಾರ ಮತ್ತು ವಾಣಿಜ್ಯ

ಹದಿನಾರನೆಯ ಶತಮಾನದಲ್ಲಿ ಭಾರತ ಮತ್ತು ಯೂರೋಪುಗಳ ಕೈಗಾರಿಕಾ ಪರಿಸ್ಥಿತಿ ಆತ್ಮೀಯ ನೆರೆಹೊರೆಯ ಸಂಬಂಧದ್ದಾಗಿತ್ತು. ಮೋರ್‌ಲ್ಯಾಂಡನ ಪ್ರಕಾರ, ಪಶ್ಚಿಮ ಯೂರೋಪಿನೊಂದಿಗೆ ಇಂದಿನ ಸ್ಥಿತಿ ಏನಿದೆಯೋ ಅದಕ್ಕಿಂತ ಮುಂದುವರಿದ ಸ್ಥಿತಿಯಾಗಿತ್ತು ಎಂಬುದನ್ನು ಕೈಗಾರಿಕೆಯ ಕ್ಷೇತ್ರಕ್ಕೆ ಅನ್ವಯಿಸಿ ನಾನು ಹೇಳಬಹುದು. ನನ್ನ ಮನಸ್ಸಿಗೆ ಅದು ವಿವಾದಾಸ್ಪದವಾಗಿಲ್ಲ.[೧] ಇಂದಿನ ಮತ್ತು ಮಧ್ಯಯುಗೀನ ಕೈಗಾರಿಕಾ ವ್ಯವಸ್ಥೆಯ ನಡುವೆ ಕಂಡುಬಂದ ಒಂದು ಮುಖ್ಯವಾದ ವ್ಯತ್ಯಾಸವೆಂದರೆ, ಆಹಾರ ವಸ್ತುಗಳ ಹೊರತು ತಮ್ಮ ಮಿಕ್ಕೆಲ್ಲ ಅಗತ್ಯಗಳಿಗೆ ಭಾರತದ ಜನರು ಇತರ ದೇಶಗಳನ್ನು ಈಗ ಅತಿಯಾಗಿ ಅವಲಂಬಿಸಿದ್ದಾರೆ. ಆದರೆ ಮಧ್ಯಯುಗದಲ್ಲಿ ಭಾರತವು ಸ್ವಯಂಪೂರ್ಣವಾಗಿತ್ತು. ಆಗ ಬಹುವಾಗಿ ಆಮದು ಮಾಡಿಕೊಳ್ಳುತ್ತಿದ್ದುದು ಯುದ್ಧಕ್ಕಾಗಿ ಕುದುರೆಗಳನ್ನು ಹಾಗೂ ರಾಜರ ಆಸ್ಥಾನಗಳಿಗಾಗಿ ವೈಭವದ ವಸ್ತುಗಳನ್ನು. ಜನಸಾಮಾನ್ಯರ ಜೀವನವು ವಿದೇಶೀಯ ಆಮದುಗಳಿಂದಾಗಿ ಬಾಧೆಗೊಂಡಿರಲಿಲ್ಲ.

ಉತ್ಪಾದನೆಯ ಕೇಂದ್ರಗಳು ಮತ್ತು ವಿಧಾನಗಳ ಬಗೆಗೆ ನಮಗೆ ದೊರಕುವ ಮಾಹಿತಿ ಬಹುಸ್ವಲ್ಪ. ವಿದೇಶಿ ಲೇಖಕರು ಬಹುವಾಗಿ ವಿದೇಶಿ ವ್ಯಾಪಾರವನ್ನು ಕುರಿತು ಮಾಹಿತಿ ಒದಗಿಸಿದರೆ, ದೇಶೀಯ ಲೇಖಕರು ಪರಿಸ್ಥಿತಿಯು ಹೇಗಿತ್ತೋ ಹಾಗೆ ನಿರೂಪಿಸುವಷ್ಟರಲ್ಲಿ ತೃಪ್ತರಾದರು.

ಕಲ್ಲೀಕೋಟೆಯಿಂದ ೧೬೭ ಮೈಲು ದೂರದಲ್ಲಿದ್ದ ಕನ್-ಪಾ-ಮೈ (ಕೊಯಮತ್ತೂರು ಎಂದು ಗುರುತಿಸಲಾಗಿದೆ) ಹತ್ತಿ ತಯಾರಿಕೆಯ ಮುಖ್ಯ ಕೇಂದ್ರವಾಗಿತ್ತು. ಆ ಸ್ಥಳದಲ್ಲಿಯೂ ಅದರ ಸುತ್ತು ಮುತ್ತಲೂ ಚಿಟ್-ಲಿ (ಚಿಟ-ಲಿಪ) ಎಂದು ಕರೆಯುತ್ತಿದ್ದ ಒಂದು ಬಗೆಯ ಬಟ್ಟೆಯು ತಯಾರಾಗುತ್ತಿದ್ದಿತು. ಅದು ಅಲ್ಲಿ ೮-೧೦ ಚಿನ್ನದ ನಾಣ್ಯಗಳಿಗೆ ಒಂದರಂತೆ ಮಾರಾಟವಾಗುತ್ತಿದ್ದಿತು. ಬೇರೆ ಬೇರೆ ಬಣ್ಣಕಟ್ಟಿದ ಕಚ್ಚಾರೇಷ್ಮೆಯನ್ನು ಹೂವುಗಳ ವಿನ್ಯಾಸವುಳ್ಳ ಬಟ್ಟೆಯಾಗಿ ನೇಯ್ದು ೪ ರಿಂದ ೫ ಅಡಿ ಅಗಲ ಮತ್ತು ೧೨ ರಿಂದ ೧೩ ಅಡಿ ಉದ್ದವಿರುವ ತುಂಡುಗಳಾಗಿ ಮಾಡುತ್ತಿದ್ದರು. ಅಂತಹ ಒಂದೊಂದು ತುಂಡೂ ಒಂದು ನೂರು ಚಿನ್ನದ ನಾಣ್ಯಗಳಿಗೆ ದೊರಕುತ್ತಿದ್ದಿತು.[೨]

ಹತ್ತಿಬಟ್ಟೆ ಉತ್ಪಾದನೆಯ ಇನ್ನೊಂದು ದೊಡ್ಡ ಕೇಂದ್ರ ಪುಲಿಕಾಟ್. ಮಲಕ್ಕಾ, ಪೆಗು, ಸುಮಾತ್ರಾ, ಗುಜರಾತ್ ಮತ್ತು ಮಲಬಾರ್‌ಗಳಲ್ಲಿ ತುಂಬ ಬೆಲೆಬಾಳುತ್ತಿದ್ದ ಮುದ್ರಿತ ಹತ್ತಿಬಟ್ಟೆಗಳು ವಿಪುಲವಾಗಿ ತಯಾರಾಗುತ್ತಿದ್ದುವು.[೩] ತುಂಬಾ ನಯವಾದ ಬಟ್ಟೆಯನ್ನು ಗೋವಾದ ಬಳಿ ತಯಾರಿಸಲಾಗುತ್ತಿತ್ತು.[೪]

ವಜ್ರಗಳು :

ವಿಜಯನಗರಕ್ಕೆ ಬಹುತೇಕ ವಜ್ರಗಳು ಬರುತ್ತಿದ್ದುದು ಗೂಟಿಯ ನೈರುತ್ಯಕ್ಕೆ ಸುಮಾರು ೨೦ಮೈಲು ದೂರದಲ್ಲಿದ್ದ ವಜ್ರಕುರೂರಿನಿಂದ. ಗೂಟಿಯ ಗವರ್ನರನು ತೂಕದಲ್ಲಿ ಮಾಂಗೆಲಿನ್‌ಗಿಂತ ಹೆಚ್ಚಾದ ಎಲ್ಲಾ ವಜ್ರಗಳನ್ನೂ ರಾಜನಿಗೆ ಕೊಟ್ಟುಬಿಡಬೇಕಾಗಿತ್ತು.[೫] ೧೫೩೪ರಲ್ಲಿ ಭಾರತಕ್ಕೆ ಬಂದಿದ್ದ ಗಾರ್ಸಿಯ ಡಿ ಓರ್ಟಾ, ವಿಜಯನಗರದಲ್ಲಿ ಅನೇಕ ವಜ್ರಗಳನ್ನು ಕೊಡುತ್ತಿದ್ದ ೨ ಅಥವಾ ೩ ಬಂಡೆಗಳಿದ್ದುವು ಎಂದು ಹೇಳುತ್ತಾನೆ. ಅವನು ದಖ್ಖನಿನಲ್ಲಿ ಇನ್ನೂ ಒಂದು ವಜ್ರದ ಗಣಿಯನ್ನು ಪತ್ತೆ ಹಚ್ಚಿದನು.[೬] ನಕಲಿ ವಜ್ರಗಳು, ಕೆಂಪು ಮಾಣಿಕ್ಯಗಳು, ಗೋಮೇಧಿಕಗಳು ಮತ್ತು ಇಂದ್ರ ನೀಲಗಳನ್ನು ತಯಾರಿಸಲಾಗುತ್ತಿದ್ದಿತು. ಇವು ನಿಜವಾದ ಪ್ರಶಸ್ತ ಶಿಲೆಗಳ ಬಹಳ ಉತ್ತಮವಾದ ನಕಲುಗಳಾಗಿದ್ದುವು.[೭] ಇಂದ್ರನೀಲಗಳು ಕ್ಯಾಲಿಕಟ್ ಬಳಿ ದೊರಕುತ್ತಿದ್ದುವು.[೮]

ಲೋಹಗಳು :

ವಿಜಯನಗರ ಪಟ್ಟಣದಲ್ಲಿ ಮಿಶ್ರಿತ ಹಾಗೂ ಅಮಿಶ್ರಿತ ಲೋಹಗಳು, ವಿಪುಲವಾಗಿ ತಾಮ್ರ ಮತ್ತು ಪಾದರಸ ಕಂಡುಬಂದಿದ್ದುವು.[೯] ಹೇರುಗಟ್ಟಲೆ ಕಬ್ಬಿಣವನ್ನು ಭಟ್ಕಳದಿಂದ ರಫ್ತು ಮಾಡಲಾಗುತ್ತಿತ್ತು.[೧೦]

ಲೋಹದ ಕೆಲಸ : ಅ) ಆಭರಣಗಳ ತಯಾರಿಕೆ, ಆ) ಯುದ್ಧದ ಆಯುಧಗಳ ತಯಾರಿಕೆ ಮತ್ತು ಇ) ಮನೆ ಬಳಕೆಯ ವಸ್ತುಗಳು.

ಅ) ಆಭರಣಗಳು: ೧. ದೇವಾಲಯಗಳಿಗೆ, ೨. ರಾಜರ ಆಸ್ಥಾನಗಳಿಗೆ, ೩. ಯೋಧರಿಗೆ ಮತ್ತು ೪. ಜನ ಸಾಮಾನ್ಯರಿಗೆ ಅಗತ್ಯವಾಗಿದ್ದುವು. ಕೃಷ್ಣದೇವರಾಯನು ದೇವಾಲಯಗಳಿಗೆ ಆಭರಣಗಳನ್ನು ಬಹು ಉದಾರವಾಗಿ ಅರ್ಪಿಸುತ್ತಿದ್ದನು. ಒಂದು ಉದಾಹರಣೆಯನ್ನು ಕೊಡಬಹುದು: ಕಾಳಹಸ್ತೀಶ್ವರನಿಗೆ ಅವನು ಅಮೂಲ್ಯವಾದ ಹರಳುಗಳನ್ನು ಕಟ್ಟಿದ ಒಂದು ಹಾರವನ್ನೂ, ಪೂಜಾ ಸಾಮಗ್ರಿಗಳನ್ನೂ, ಅಮೂಲ್ಯ ರತ್ನಗಳು ತುಂಬಿದ ಒಂದು ಚಿನ್ನದ ಪ್ರಭಾವಳಿಯನ್ನೂ ಅರ್ಪಿಸಿದನು.[೧೧]

ಆಸ್ಥಾನಕ್ಕೆ ಸೇರಿದ ನೃತ್ಯ ಕಲಾವಿದೆಯರು ತುಂಬಾ ಶ್ರೀಮಂತರಾಗಿದ್ದರು. ಅವರು ಚಿನ್ನ, ರತ್ನ, ವಜ್ರ, ಮಾಣಿಕ್ಯ, ಮುತ್ತುಗಳಿಂದ ತಯಾರಿಸಿದ ಆಭರಣಗಳನ್ನು ತಲೆಯಿಂದ ಕಾಲಿನವರೆಗೆ ಅಲಂಕರಿಸಿಕೊಳ್ಳುತ್ತಿದ್ದರು. ಪ್ರತಿಯೊಂದೂ ಆಭರಣವನ್ನು ಸೂಕ್ಷ್ಮವಾಗಿ ವರ್ಣಿಸಿದ ಮೇಲೆ ಪೇಸ್ ಉದ್ಗರಿಸುತ್ತಾನೆ: ''ಈ ಒಬ್ಬೊಬ್ಬ ಹೆಂಗಸೂ ತನ್ನ ಮೈಮೇಲೆ ಧರಿಸಿರುವ ಆಭರಣಗಳ ಮೌಲ್ಯವನ್ನು ಬೆಲೆಯನ್ನು ಯಾರು ತಾನೆ ಅಳೆಯ ಬಲ್ಲರು?''[೧೨]

ದೇಹವನ್ನು ಅಲಂಕರಿಸಿಕೊಳ್ಳುವ ಅಭ್ಯಾಸ ಎಷ್ಟು ಬಲವಾಗಿದ್ದಿತೆಂದರೆ, ಯೋಧರು, ಆನೆಗಳು ಮತ್ತು ಕುದುರೆಗಳನ್ನೂ ಸಹ ಅಲಂಕರಿಸುತ್ತಿದ್ದರು. ಕುದುರೆ ಮತ್ತು ಆನೆಗಳ ಹಣೆಯ ಮೇಲೆ ಬೆಳ್ಳಿ ಅಥವಾ ಚಿನ್ನದ ಪಟ್ಟಿಗಳನ್ನು ಕಟ್ಟುತ್ತಿದ್ದರು. ಅದರಲ್ಲಿ ದಪ್ಪ ಪ್ರಶಸ್ತ ಹರಳುಗಳನ್ನು ಕಟ್ಟಿರಲಾಗುತ್ತಿತ್ತು. ಅಶ್ವಾರೋಹಿಗಳ ಕವಚಗಳಿಗೆ ಒಳಗೂ ಹೊರಗೂ ಮೆರುಗು ಕೊಡಲಾಗುತ್ತಿದ್ದಿತು.[೧೩]

ಪುರುಷರು ಸಣ್ಣ ಮುತ್ತುಗಳಿಂದ ತಯಾರಿಸಿದ ಕರ್ಣಾಭರಣಗಳನ್ನು ಮಾತ್ರ ಧರಿಸುತ್ತಿದ್ದರು. ಆದರೆ ಮಹಿಳೆಯರು ಮೂಗುತಿ, ಕುಂಡಲ, ಚಿನ್ನದ ಸರಗಳು, ರತ್ನಾಭರಣಗಳು, ಬಹು ಸುಂದರವಾದ ಹವಳದ ಮಣಿಗಳು, ಚಿನ್ನ ಹಾಗೂ ಪ್ರಶಸ್ತ ಶಿಲೆಗಳಿಂದ ತಯಾರಿಸಿದ ಕಂಕಣಗಳು ಮೊದಲಾದ ಆಭರಣಗಳನ್ನು ಧರಿಸುತ್ತಿದ್ದರು.[೧೪]

ಆ) ಆಯುಧಗಳು : ಆಶ್ವಾರೋಹಿಗಳ ಆಯುಧ ಕತ್ತಿ, ಯುದ್ಧಗೊಡಲಿ, ಭರ್ಜಿ ಮತ್ತು ಈಟಿಗಳು. ಕೃಷ್ಣನ ಸೈನ್ಯದಲ್ಲಿದ್ದ ಮುಸ್ಲಿಂ ಯೋಧರ ಬಳಿ ಭರ್ಜಿಗಳು, ಟರ್ಕಿಯ ಬಿಲ್ಲು ಬಾಣಗಳು, ಅನೇಕ ಸಿಡಿಗುಂಡುಗಳು, ಈಟಿಗಳು ಮತ್ತು ಅಗ್ನಿ ಕ್ಷಿಪಣಿಗಳು ಇದ್ದುವು. ಬಿಲ್ಲುಗಳಿಗೆ ಚಿನ್ನ ಮತ್ತು ಬೆಳ್ಳಿಯ ಮೆರುಗು ಕೊಡಲಾಗಿತ್ತು. ಬಾಣಗಳು ನೀಟಾಗಿದ್ದುವು, ಉತ್ತಮವಾದ ಗರಿಗಳಿಂದ ಕೂಡಿದ್ದುವು.[೧೫] ಅವನ ಸೈನ್ಯವು ಸಾಮಾನ್ಯವಾಗಿ ಹತ್ತು ಲಕ್ಷ ಯೋಧರಿಂದ ಕೂಡಿರುತ್ತಿದ್ದಿತು. ಕೆಲವು ಸಂದರ್ಭಗಳಲ್ಲಿ ಸಂಖ್ಯೆಯು ಇಪ್ಪತ್ತು ಲಕ್ಷವಾಗುತ್ತಿದ್ದಿತು ಎಂಬುದನ್ನು ನೆನೆದಾಗ ಲೋಹಕಾರರಿಗೆ ಅಂದು ಎಷ್ಟು ಕೆಲಸವಿರುತ್ತಿದ್ದಿತು ಎನ್ನುವುದು ತಿಳಿಯುತ್ತದೆ.[೧೬]

ಇ) ಮನೆ ಬಳಕೆಯ ವಸ್ತುಗಳು : ಅಡಿಗೆಗೆ ಲೋಹದ ಪಾತ್ರೆಗಳನ್ನು ಉಪಯೋಗಿಸುತ್ತಿದ್ದರು. ಗ್ರಾಮೀಣ ಜನರು ಅಡಿಗೆ ಪಾತ್ರೆ ಮತ್ತು ಇತರ ಪಾತ್ರೆಗಳಿಗಾಗಿ ತುಂಬಾ ತಾಮ್ರವನ್ನು ಉಪಯೋಗಿಸುತ್ತಿದ್ದರೆಂದು ಬಾರ್ಬೋಸಾ ಹೇಳುತ್ತಾನೆ.[೧೭] ದೇವರ ಪೂಜೆಗೂ ಲೋಹದ ಪಾತ್ರೆಗಳನ್ನು ಬಳಸಲಾಗುತ್ತಿತ್ತು. ಈ ಕಾಲದ ಪ್ರಸಿದ್ಧ ಸಂತ ಪುರಂದರದಾಸರು 'ಉದರ ವೈರಾಗ್ಯವಿದು' ಎಂಬ ಹಾಡಿನಲ್ಲಿ ವಂಚಕ ಬ್ರಾಹ್ಮಣನ ಪೂಜಾ ಸಲಕರಣೆಗಳ ರಾಶಿಯನ್ನು ಕಂಚುಗಾರರ ಅಂಗಡಿಗೆ ಹೋಲಿಸುತ್ತಾರೆ.[೧೮]

ಸಣ್ಣ ಕೈಗಾರಿಕೆಗಳಲ್ಲೊಂದಾದ ಸುಗಂಧ ದ್ರವ್ಯಗಳೂ ತಯಾರಾಗುತ್ತಿದ್ದುವು. ಈ ಯುಗದ ಜನರಿಗೆ ಪರಿಮಳ ದ್ರವ್ಯಗಳು ಮತ್ತು ಹೂವುಗಳ ಮೇಲೆ ಅಪಾರ ಪ್ರೀತಿಯಿದ್ದಿತು. ಗುಲಾಬಿ ಪನ್ನೀರು, ಕರ್ಪೂರ, ಕಸ್ತೂರಿ ಮತ್ತು ಸುವಾಸನಾ ದ್ರವ್ಯಗಳು ವಿಜಯನಗರದಲ್ಲಿ ದೊರಕುತ್ತಿದ್ದುವು.[೧೯] ಗುಲಾಬಿ ಅತ್ತರನ್ನು ಪುಲಿಕಾಟ್‌ನಲ್ಲೂ ಪಡೆಯಬಹುದಾಗಿತ್ತು.[೨೦]

ಕೂಲಿಗಳು :

ಮುಸ್ಲಿಮರಲ್ಲಿ ಮತ್ತು ಭಾರತೀಯರಲ್ಲಿ ರೂಢಿಯಾಗಿದ್ದ ಪದ್ಧತಿ, ಕೆಲಸಗಾರರು ಬೆಳಗ್ಗೆ ಕೆಲಸ ಮಾಡಲು ಬಂದಾಗ ಮೊದಲು ಅವರಿಗೆ ತಿನ್ನಲು ಒಂದು ನಿರ್ದಿಷ್ಟ ಪ್ರಮಾಣದ ಅನ್ನವನ್ನು ಕೊಡುವುದು; ಆಮೇಲೆ ಕೆಲಸ ಮುಗಿಸಿ ರಾತ್ರಿ ಅವರು ಹಿಂದಿರುಗುವಾಗ ತಲಾ ಒಂದೊಂದು ಫನಂ ಕೊಡುವುದು ಎಂದು ಬಾರ್ಬೋಸಾ ಹೇಳುತ್ತಾನೆ.[೨೧] ಪ್ರತಿದಿನವೂ ಕೂಲಿಯನ್ನು ಪಾವತಿ ಮಾಡಲಾಗುತ್ತಿತ್ತು ಎಂದು ಬಾರ್ಬೋಸನ ಅಭಿಪ್ರಾಯವನ್ನು ನೂನಿಜ್ ಕೂಡ ಸ್ಥಿರಪಡಿಸುತ್ತಾನೆ: ''ಅವನ ಬಳಿ ಕುದುರೆಗಳಿಗೆ ಮಾಲೀಸು ಮಾಡುವ ೧೬೦೦ ಜನರಿದ್ದಾರೆ, ತರಬೇತಿ ಕೊಡುವ ೩೦೦ ಜನರಿದ್ದಾರೆ ಮತ್ತು ೨೦೦೦ ಜನ ಕುಶಲಕರ್ಮಿಗಳಿದ್ದಾರೆ. ಅವರು ಕಮ್ಮಾರರು, ಗಾರೆಯವರು, ಬಡಗಿಗಳು ಹಾಗೂ ರಾಜನ ಬಟ್ಟೆಗಳನ್ನು ಒಗೆದು ಶುಚಿ ಪಡಿಸುವ ಅಗಸರು. ಇವರಿಗೆಲ್ಲ ರಾಜನು ಪ್ರತಿದಿನವೂ ಕೂಲಿಯನ್ನು ಪಾವತಿ ಮಾಡುತ್ತಾನೆ. ಅರಮನೆಯ ಹೆಬ್ಬಾಗಿಲ ಮುಂದೆ ಎಲ್ಲರಿಗೂ ಅವರವರ ಕೂಲಿಯನ್ನು ವಿತರಿಸುತ್ತಾನೆ.''[೨೨]

೧೫ನೆಯ ಶತಮಾನದಲ್ಲಿ ದಕ್ಷಿಣ ಭಾರತದ ವಿದೇಶ ವ್ಯಾಪಾರ

ಹದಿನೈದನೆಯ ಶತಮಾನದಲ್ಲಿ ದಕ್ಷಿಣಭಾರತದಲ್ಲಿ ನಡೆಯುತ್ತಿದ್ದ ವಿದೇಶ ವ್ಯಾಪಾರದ ಮುಖ್ಯ ಲಕ್ಷಣವೆಂದರೆ, ವ್ಯವಹಾರವು ಪಶ್ಚಿಮ ಕರಾವಳಿಯಲ್ಲಿ ಕೇಂದ್ರೀಕರಿಸಿದುದು. ಅದರಲ್ಲೂ ಕಲ್ಲೀಕೋಟೆಯು ಪ್ರಮುಖವಾಗಿದ್ದ ಮಲಬಾರಿನ ಬಂದರು.[೨೩] ದಕ್ಷಿಣ ಆಫ್ರಿಕಾ, ಅಬಿಸೀನಿಯ ಮತ್ತು ಅರೇಬಿಯಗಳ ವರ್ತಕರು ಭಾರತಾದ್ಯಂತ ಹರಡುವುದಕ್ಕಾಗಿ ವಿವಿಧ ವಸ್ತುಗಳನ್ನು ಈ ಬಂದರಿಗೆ ತರುತ್ತಿದ್ದರು.[೨೪] ಪೆಗು ಮತ್ತು ಮಲಕ್ಕಾದಿಂದ ಹೊರಟು ಹಡಗುಗಳು ಕೆಂಪುಸಮುದ್ರದ ಹಾದಿಯಲ್ಲಿ ಕಲ್ಲಿಕೋಟೆಯಲ್ಲಿ

ತಂಗುತ್ತಿದ್ದುವು, ಬೇರೆ ಬೇರೆ ದಿಕ್ಕುಗಳಿಗೆ ಹರಡುವ ಸಲುವಾಗಿ ಭಾರತೀಯ ಸರಕುಗಳನ್ನು ಒಯ್ಯುತ್ತಿದ್ದುವು. ಹಾಗಾಗಿ ಮಲಬಾರ್ ಒಂದು ದೊಡ್ಡ ವಾಣಿಜ್ಯ ಕೇಂದ್ರವಾಗಿತ್ತು. ಈ ಇಡೀ ಮಾರ್ಗವು ಮುಸ್ಲಿಮರ ಕೈಯಲ್ಲಿತ್ತು. ಅವರು ಹಿಂದೂಮಹಾಸಾಗರದಲ್ಲಿ ಮಡಗಾಸ್ಕರಿನಿಂದ ಮಲಕ್ಕಾದವರೆಗೆ ಎಲ್ಲಾ ಪ್ರಮುಖ ಬಂದರುಗಳಲ್ಲೂ ನೆಲೆಸಿದ್ದರು.[೫೫] ಹದಿನೈದನೇ ಶತಮಾನವು ಮುಗಿಯುವ ವೇಳೆಗೆ ಪೋರ್ಚುಗೀಸರ ಆಗಮನದಿಂದಾಗಿ, ಭಾರತದ ವ್ಯಾಪಾರವನ್ನು ನಿರ್ವಹಿಸುತ್ತಿದ್ದ ಮುಸ್ಲಿಮರ ಏಕಸ್ವಾಮ್ಯವು ಮುರಿಯಿತು.

೧೬ನೆಯ ಶತಮಾನದಲ್ಲಿ ವಿದೇಶ ವ್ಯಾಪಾರ

೧೫೦೪ ಮತ್ತು ೧೫೧೫ರ ನಡುವೆ ರಚಿತವಾದ ಬಾರ್ಬೋಸಾನ ನಿರೂಪಣೆಯು, ಹೇಗೆ ಭಾರತದ ವಾಣಿಜ್ಯವು ಮುಸ್ಲಿಮರ ಕೈಗಳಿಂದ ಪೋರ್ಚುಗೀಸರ ಕೈಗೆ ಸರಿಯುತ್ತಿತ್ತು ಎಂಬುದನ್ನು ವಿವರಿಸುತ್ತದೆ. ''ಆರ್ಮುಸ್ ಹಡಗುಗಳು ಇಲ್ಲಿಗೆ (ಭಟ್ಕಳ) ಪ್ರತಿವರ್ಷವೂ ಬರುತ್ತವೆ. ಬಹುಸಂಖ್ಯೆಯಲ್ಲಿ ಕುದುರೆಗಳನ್ನೂ ಮುತ್ತುಗಳನ್ನೂ ತರುತ್ತವೆ. ಅವುಗಳನ್ನು ಅವರು ನರಸಿಂಗನ ರಾಜ್ಯದಲ್ಲಿ ಮಾರಾಟ ಮಾಡುತ್ತಾರೆ. ಆದರೆ ಈಗ ನಮ್ಮ ಸೈನ್ಯ ಇರುವುದರಿಂದ ಇತರ ಹಲವು ಸರಕುಗಳೊಂದಿಗೆ ಅವುಗಳನ್ನು ಗೋವಾಕ್ಕೆ ಕೊಂಡೊಯ್ಯಲಾಗುತ್ತದೆ. ಮೂರರಿಗೆ ಸೇರಿದ ಕೆಲವು ಹಡಗುಗಳು ಸಂಬಾರ ಪದಾರ್ಥಗಳನ್ನು ಹೇರಿಕೊಳ್ಳಲು ಈ ಸ್ಥಳಕ್ಕೆ (ಭಟ್ಕಳ) ಬರುವ ಸಾಹಸ ಮಾಡುತ್ತವೆ. ಅವರು ಬರಕೂಡದೆಂದು ನಮ್ಮ ಜನರು ಕಟ್ಟಾಜ್ಞೆ ಮಾಡಿದ್ದರೂ ಅವರು ಬರುವುದುಂಟು.''[೫೬]

ಆಲ್ಬುಕರ್ಕ್‌ನು ಗೋವಾವನ್ನು ವಶಪಡಿಸಿಕೊಂಡದ್ದು[೫೭] ಮಲಬಾರ್ ಬಂದರುಗಳು ನಡೆಸುತ್ತಿದ್ದ ವಾಣಿಜ್ಯದ ಮೇಲೆ ದುಷ್ಪರಿಣಾಮವನ್ನು ಉಂಟುಮಾಡಿತು. ಬಿಜಾಪುರ ಮತ್ತು ವಿಜಯನಗರಗಳು ತಮ್ಮ ವಿದೇಶಿ ವಸ್ತುಗಳ ಬೇಡಿಕೆಗಾಗಿ ಸಂಪೂರ್ಣವಾಗಿ ಪೋರ್ಚುಗೀಸರನ್ನು ಅವಲಂಬಿಸುವಂತಾಯಿತು. ವಿಶೇಷವಾಗಿ ಅರೇಬಿಯ ಮತ್ತು ಪರ್ಷಿಯ ದೇಶಗಳ ಕುದುರೆಗಳನ್ನು ಅವರು ಒದಗಿಸುತ್ತಿದ್ದರು.

ವಿದೇಶ ವ್ಯಾಪಾರದ ವಸ್ತುಗಳು

ರಫ್ತು : ಇಲ್ಲಿಂದ ರಫ್ತಾಗುತ್ತಿದ್ದ ಸರಕುಗಳೆಂದರೆ, ಬಟ್ಟೆ, ಅಕ್ಕಿ, ಕಬ್ಬಿಣ, ಪೆಟ್ಲುಪ್ಪು, ಸಕ್ಕರೆ ಮತ್ತು ಸಂಬಾರ ವಸ್ತುಗಳು.[೫೮] ಪೋರ್ಚುಗೀಸರು ವಿಜಯನಗರದ ವರ್ತಕರಿಂದ ಬಟ್ಟೆಯನ್ನು ಅಂಕೋಲಾದಲ್ಲಿ ಅಥವಾ ಹೊನ್ನಾವರದಲ್ಲಿ ಕೊಳ್ಳುತ್ತಿದ್ದರು.[೫೯] ಪುಲಿಕಾಟ್ ಅಧಿಕ ಪ್ರಮಾಣದಲ್ಲಿ ಮುದ್ರಿತ ಬಟ್ಟೆಯನ್ನು ಮಲಕ್ಕಾಗೆ ರಫ್ತು ಮಾಡುತ್ತಿತ್ತು. ಪೆಗು ಮತ್ತು ಸುಮಾತ್ರಾಗಳಿಗೂ ಅಲ್ಲಿಂದ ಬಟ್ಟೆ ಹೋಗುತ್ತಿದ್ದಿತು.[೬೦] ಅಕ್ಕಿ (ಬಹುಮಟ್ಟಿಗೆ ದಪ್ಪಕ್ಕಿ) ಬಸರೂರು, ಬಾರಕೂರು ಮತ್ತು ಮಂಗಳೂರುಗಳಿಂದ ಮಲಬಾರ್, ಮಾಲ್ಡೀವ್ಸ್ ಆರ್ಮುಸ್ ಮತ್ತು ಏಡನ್‌ಗಳಿಗೆ ರವಾನೆಯಾಗುತ್ತಿತ್ತು.[೬೧] ಕಬ್ಬಿಣದ ಹೇರುಗಳನ್ನು ಮಲಬಾರಿನ ಜನ ಭಟ್ಕಳದಿಂದ ಕೊಳ್ಳುತ್ತಿದ್ದರು.[೬೨] ವಿಜಯನಗರದ ವರ್ತಕರಿಂದ ಪೋರ್ಚುಗೀಸರೂ ಕಬ್ಬಿಣವನ್ನು ಕೊಳ್ಳುತ್ತಿದ್ದರು.[೬೩] ಪುಡಿಮಾಡಿದ ಸಕ್ಕರೆಯನ್ನು ಭಟ್ಕಳದಿಂದ ಆರ್ಮುಸ್‌ಗೆ ಕಳುಹಿಸಲಾಗುತ್ತಿತ್ತು.[೬೪] ಮೆಕ್ಕಾದಿಂದ ಹಡಗುಗಳು ಸಂಬಾರ ಪದಾರ್ಥಗಳಿಗಾಗಿ ಭಟ್ಕಳಕ್ಕೆ ಬರುತ್ತಿದ್ದುವು.[೬೫]

ಆಮದು : ಕುದುರೆಗಳು, ಆನೆಗಳು, ಮುತ್ತುಗಳು, ತಾಮ್ರ, ಹವಳ, ಪಾದರಸ, ಕುಂಕುಮ, ಚೈನಾಸಿಲ್ಕ್, ಮತ್ತು ವೆಲ್ವೆಟ್ ಇವು ಸಾಮ್ರಾಜ್ಯಕ್ಕೆ ಆಮದಾಗಿ ಬರುತ್ತಿದ್ದ ವಸ್ತುಗಳು.

ಆನೆಗಳು ಸಿಲೋನಿನಿಂದ ಬರುತ್ತಿದ್ದುವು.[೬೬] ಮುತ್ತುಗಳು ಆಮದಾಗುತ್ತಿದ್ದುದು ಆರ್ಮುಸ್‌ನಿಂದ.[೬೭] ಪೋರ್ಚುಗೀಸ್ ವರ್ತಕರು ತಾಮ್ರ, ಹವಳ, ಕುಂಕುಮ ಇವುಗಳನ್ನು ವಿಜಯನಗರಕ್ಕೆ ಪೂರೈಸುತ್ತಿದ್ದರು.[೬೮]

ಚೈನಾ ರೇಷ್ಮೆ ಬಟ್ಟೆಗಳನ್ನು ಪೋರ್ಚುಗೀಸರ ಮುಖಾಂತರವಾಗಿಯೂ ಸಂಬಾರಗಳು ಮತ್ತು ಔಷಧಿಗಳನ್ನು ಮುಸ್ಲಿಮರ ಮೂಲಕವಾಗಿಯೂ ಒದಗಿಸುತ್ತಿದ್ದಿತು.[೩೯] ಬಂಗಾಳ ಮತ್ತು ಮಲಕ್ಕಾಗಳು ವಿಜಯನಗರಕ್ಕೆ ಸಂಬಾರ ಮತ್ತು ಔಷಧಿಗಳನ್ನು ರಫ್ತು ಮಾಡುತ್ತಿದ್ದುವು.[೪೦] ವೆಲ್ವೆಟ್ ಬಟ್ಟೆಯು ಮೆಕ್ಕಾದಿಂದ ಬರುತ್ತಿದ್ದಿತು.[೪೧]

ಕರಾವಳಿ ಮತ್ತು ಒಳನಾಡು ವ್ಯಾಪಾರ

ಕರಾವಳಿ ಮತ್ತು ಒಳನಾಡುಗಳಲ್ಲಿ ವ್ಯಾಪಾರದಲ್ಲಿ ನಿರತರಾಗಿದ್ದವರಲ್ಲಿ ಪ್ರಮುಖರು ಮುಸ್ಲಿಮರು, ಮಲಬಾರಿಗಳು ಮತ್ತು ಚೆಟ್ಟಿಗಳು ಅಥವಾ ಸೆಟ್ಟಿಗಳು. ಮುಸ್ಲಿಮರೂ ಮಲಬಾರಿಗಳೂ ಕರಾವಳಿಯಲ್ಲಿ ಹೆಚ್ಚು ಚಟುವಟಿಕೆಯಿಂದಿದ್ದರೆ, ಚೆಟ್ಟಿ ಅಥವಾ ಸೆಟ್ಟಿಗಳು ಒಳನಾಡಿಗೆ ತಮ್ಮ ವಹಿವಾಟನ್ನು ಸೀಮಿತಗೊಳಿಸಿಕೊಂಡಿದ್ದರು.

ವರ್ತಕ ಜನಾಂಗವಾಗಿ ಮುಸ್ಲಿಮರಿಗೆ ಹಿನ್ನಡೆಯುಂಟಾದದ್ದು ನಾವು ಪರಿಶೀಲಿಸುತ್ತಿರುವ ಕಾಲದಲ್ಲಿ ಪೋರ್ಚುಗೀಸರು ಬಂದುದರಿಂದ. ಆದರೂ ಅವರು ಭಾರತದ ಕರಾವಳಿಯ ವ್ಯಾಪಾರ ವಹಿವಾಟನ್ನು ಬಹುಮಟ್ಟಿಗೆ ತಮ್ಮ ನಿಯಂತ್ರಣದಲ್ಲಿಟ್ಟುಕೊಂಡಿದ್ದರು. ಭಾರತೀಯ ಕರಾವಳಿಯ ಪ್ರತಿಯೊಂದು ಮುಖ್ಯ ಬಂದರಿನಲ್ಲೂ ಅವರನ್ನು ನೋಡಬಹುದಾಗಿತ್ತು. ಅವರು ಏಳಿಗೆ ಹೊಂದುತ್ತಿದ್ದ ಜನಾಂಗವಾಗಿದ್ದರು.[೪೨] ಪಶ್ಚಿಮ ಕರಾವಳಿಯಲ್ಲಿ ವಿದೇಶಿ ವಾಣಿಜ್ಯವು ತಮ್ಮ ಕೈಯಿಂದ ವೇಗವಾಗಿ ಜಾರಿ ಹೋಗುತ್ತಿರಲು, ಪೂರ್ವ ಕರಾವಳಿಯಲ್ಲಿ ತಮ್ಮ ಸ್ಥಾನವನ್ನು ಉಳಿಸಿಕೊಳ್ಳಲು ಅವರು ಹೋರಾಡುತ್ತಿದ್ದರು. ಅವರು ಮಲಕ್ಕಾ, ಚೈನಾ ಮತ್ತು ಬಂಗಾಳಗಳಿಂದ ಕೋರಮಂಡಲ ಕರಾವಳಿಗೆ ಸರಕುಗಳನ್ನು ತರುತ್ತಿದ್ದರು.[೪೩]

ಮಲಬಾರಿಗಳು ಬಹಳ ಉದ್ಯಮಶೀಲರಾದ ಜನ. ತಮ್ಮ ಪ್ರದೇಶದಲ್ಲಿ ಬೆಳೆಯುವ ಸಂಬಾರ ವಸ್ತುಗಳು, ತೆಂಗಿನ ಉತ್ಪನ್ನಗಳು, ತಾಳೆ ಸಕ್ಕರೆ ಮತ್ತು ತಾಳೆ ಮದ್ಯ ಇವುಗಳನ್ನು ಕೆನರಾ ಕರಾವಳಿಗೆ ಒದಗಿಸಿ, ಅಲ್ಲಿಂದ ದಪ್ಪಕ್ಕಿಯನ್ನೂ, ಕಬ್ಬಿಣವನ್ನೂ ಒಯ್ಯುತ್ತಿದ್ದರು.[೪೪]

ಕನ್ನಡ ಮತ್ತು ತೆಲುಗು ದೇಶಗಳ ಸೆಟ್ಟಿಗಳು ಮತ್ತು ತಮಿಳುದೇಶದ ಚೆಟ್ಟಿಗಳು ಸಾಮ್ರಾಜ್ಯದ ಒಳನಾಡ ವ್ಯಾಪಾರವನ್ನು ನಿರ್ವಹಿಸುತ್ತಿದ್ದರು.[೪೫] ತಮಿಳುನಾಡಿನ ಚೆಟ್ಟಿಗಳು ಉತ್ತಮ ಮಟ್ಟದ ವರ್ತಕರು. ಅಮೂಲ್ಯವಾದ ಹರಳುಗಳು ಮತ್ತು ಮುತ್ತುಗಳನ್ನು ವಿಪುಲವಾಗಿ ಮಾರಾಟ ಮಾಡುತ್ತಿದ್ದರು.[೪೬] ಸರಕು ಸಾಗಣೆಯಲ್ಲಿ ಎಲ್ಲಾ ಬಗೆಯ ಚಾಣಾಕ್ಷತೆ, ಕುಟಿಲತೆಗಳಿಗೂ ಅವರು ಪ್ರಸಿದ್ಧರಾಗಿದ್ದರು.[೪೭]

ಒಳನಾಡ ವ್ಯಾಪಾರದ ವಸ್ತುಗಳು

ನಾದಿಂಡ್ಲ ಗೋಪನ ಕೊಂಡವೀಡು ಶಾಸನಗಳು ಒಳನಾಡ ವ್ಯಾಪಾರದ ಮುಖ್ಯವಸ್ತುಗಳ ಪಟ್ಟಿಯನ್ನು ಒದಗಿಸುತ್ತವೆ.[೪೮] ಮುಖ್ಯವಾಗಿ ಆಹಾರ ವಸ್ತುಗಳು (ಅಕ್ಕಿಯ ಹೊರತು), ಬೇಳೆ, ಕಾಳು, ಗೋಧಿ, ತರಕಾರಿ, ಉಪ್ಪು, ಹುಣಿಸೆಹಣ್ಣು, ಸಂಬಾರ ಪದಾರ್ಥಗಳು, ತೆಂಗಿನಕಾಯಿ, ತುಪ್ಪ, ಬೆಲ್ಲ, ಸಕ್ಕರೆ, ವೀಳೆಯದೆಲೆ, ಅಡಕೆ, ಡಾಮರ್ (dammer) ಮತ್ತು ಅಣಿಲೆಕಾಯಿಯಂತಹ ಬಣ್ಣಕೊಡುವ ವಸ್ತುಗಳು, ಕಬ್ಬಿಣ, ಸೀಸ, ತವರ ಮತ್ತು ತಾಮ್ರದಂತಹ ಲೋಹಗಳು, ಹತ್ತಿಯಂತಹ ಕಚ್ಚಾ ಸಾಮಗ್ರಿ, ಉಕ್ಕಿನ ಉಳಿಗಳು, ಹತ್ತಿನೂಲು ಮತ್ತು ಗೋಣಿಚೀಲಗಳು.

ಸಂಪರ್ಕ ವಿಧಾನಗಳು ಮತ್ತು ರಸ್ತೆಗಳು

ಗಾಡಿಗಳು ಪ್ರಸಿದ್ಧವಾಗಿದ್ದುವು. ಆದರೆ ರಸ್ತೆಗಳ ಕೆಟ್ಟಸ್ಥಿತಿಯಿಂದಾಗಿ ಅವು ಹೆಚ್ಚಾಗಿ ಉಪಯೋಗವಾಗುತ್ತಿರಲಿಲ್ಲ. ಬಂಡಿಚಕ್ರದ ಸಂಚಾರವಿದ್ದುದನ್ನು ಪೇಸ್ ಸ್ಥಿರಪಡಿಸುತ್ತಾನೆ: ''ವಿಜಯನಗರ

ಪಟ್ಟಣದ ಈ ಬಯಲಿನಲ್ಲಿ ಸರಕುಗಳನ್ನು ಇನ್ನೂ ಹಲವು ವಸ್ತುಗಳನ್ನು ತುಂಬಿದ ಬಂಡಿಗಳು ಮತ್ತು ಇತರ ಸಾಗಣೆಗಳು ಹಾದು ಹೋಗುತ್ತವೆ.''[೩೯] ಹೇರು ಹೊತ್ತ ಪ್ರಾಣಿಗಳು ಮತ್ತು ಕೂಲಿಗಳು ಸಾಮಾನ್ಯವಾಗಿ ಸಾಗಣೆ ನಿರ್ವಹಿಸುತ್ತಿದ್ದರು. ಮೇಲೆ ಹೇಳಿದ ಕೊಂಡವೀಡು ಶಾಸನವು ಕಾವಡಿಗಳಲ್ಲಿ ಸರಕು ಸಾಗಣೆ ನಡೆಯುತ್ತಿದ್ದಿತು ಎಂದು ಹೇಳುತ್ತದೆ. ತಲೆಹೊರೆಗಳು, ಕುದುರೆ ಮತ್ತು ಎತ್ತುಗಳ ಮೇಲೆ ಮತ್ತು ಕತ್ತೆಗಳ ಮೇಲೆ ಹೇರಿದ ಹೇರುಗಳು ಪ್ರಚಲಿತವಾಗಿದ್ದುವು.[೪೦] ಕತ್ತೆಗಳು ಮತ್ತು ಎತ್ತುಗಳ ಮೇಲೆ ಹೇರಿಕೊಂಡು ಮಲಬಾರಿನಿಂದ ವಿಜಯನಗರಕ್ಕೆ ಮೆಣಸನ್ನು ಸಾಗಿಸಿಕೊಂಡು ತರುತ್ತಿದ್ದರು ಎಂದು ಬಾರ್ಬೋಸಾ ಹೇಳುತ್ತಾನೆ.[೪೧] ಐದಾರುಸಾವಿರ ಎತ್ತಿನ ಹೇರುಗಳು, ವಿವಿಧ ಸರಕುಗಳನ್ನು ವಿಜಯನಗರದಿಂದ ಭಟ್ಕಳಕ್ಕೆ ಒಯ್ಯುತ್ತಿದ್ದುದನ್ನು ಪೇಸ್ ಹೇಳುತ್ತಾನೆ.[೪೨] ಇಂತಹ ೨೦ ಮತ್ತು ೩೦ ಎತ್ತುಗಳನ್ನು ನೋಡಿಕೊಳ್ಳಲು ಒಬ್ಬ ಚಾಲಕನಿರುತ್ತಿದ್ದನು.[೪೩]

ವಿಜಯನಗರವು ದಕ್ಷಿಣ ಭಾರತದ ಕೇಂದ್ರವಾಗಿತ್ತು. ವಿಜಯನಗರದಿಂದ ಒಂದು ರಸ್ತೆಯು ಬಂಕಾಪುರದ ಮೂಲಕ ಗೋವಾಕ್ಕೆ ಹೋಗುತ್ತಿತ್ತು.[೪೪] ಇನ್ನೊಂದು ರಸ್ತೆಯು ಬಂಕಾಪುರದಿಂದ ಭಟ್ಕಳಕ್ಕೆ ಹೊನ್ನಾವರದ ಮೂಲಕ ಹೋಗುತ್ತಿತ್ತು.[೪೫] ಪೇಸ್ ಭಟ್ಕಳದಿಂದ ವಿಜಯನಗರಕ್ಕೆ ಬಂದನು; ಆದರೆ ನಡುವಣ ಸ್ಥಳಗಳಲ್ಲಿ ಯಾವುದನ್ನೂ ಅವನು ಸರಿಯಾಗಿ ಗುರುತಿಸಿಲ್ಲ. ವಿಜಯನಗರದಿಂದ ಮೈಲಾಪುರಕ್ಕೆ ಪೆನುಗೊಂಡಾ, ಚಂದ್ರಗಿರಿ, ತಿರುಪತಿ ಮತ್ತು ಪುಲಿಕಾಟ್‌ಗಳ ಮೂಲಕ ಹಾದುಹೋಗುವ ಒಂದು ಮುಖ್ಯ ಮಾರ್ಗವಿದ್ದಂತೆ ತೋರುತ್ತದೆ.[೪೬]

ಕೃಷ್ಣದೇವರಾಯನ ಸೇನಾ ಕಾರ್ಯಾಚರಣೆಗಳೂ ಧಾರ್ಮಿಕ ಪ್ರವಾಸಗಳೂ ಈ ಕೆಳಗಿನ ಸಂಚಾರಮಾರ್ಗಗಳಿದ್ದುದನ್ನು ಸೂಚಿಸುತ್ತವೆ:

೧. ವಿಜಯನಗರದಿಂದ ಶಿವನಸಮುದ್ರ ಮತ್ತು ಶ್ರೀರಂಗಪಟ್ಟಣ.[೪೭]

೨. ವಿಜಯನಗರದಿಂದ ಆದವಾನಿ ಮತ್ತು ರಾಯಚೂರುಗಳಿಗೆ.[೪೮]

೩. ವಿಜಯನಗರದಿಂದ ಉದಯಗಿರಿ, ಕೊಂಡವೀಡು, ಕೊಂಡಪಲ್ಲಿ ಮತ್ತು ಕರಾವಳಿಯ ಸಿಂಹಾಚಲ ಮತ್ತು ಶ್ರೀಕೂರ್ಮಂಗಳಿಗೆ.[೪೯]

೪. ತಿರುಪತಿ ಮತ್ತು ಕಾಳಹಸ್ತಿಯಿಂದ ಕಾಂಚಿ, ಚಿದಂಬರಂ, ಮಧುರೆ, ರಾಮೇಶ್ವರ ಮತ್ತು ಧನುಷ್ಕೋಟಿಗಳಿಗೆ. [೫೦]

ಬಾರ್ಬೋಸನ ಪ್ರಕಾರ, ರಾಜಧಾನಿಯಲ್ಲಿ ''ಅವಿರತವಾಗಿ ವ್ಯಾಪಾರ ನಡೆಯುತ್ತಿತ್ತು.''[೫೧] ರಾಜ್ಯದಲ್ಲಿ, ಅನೇಕ ವಜ್ರಗಳು ಕಾಣಸಿಕ್ಕುತ್ತವೆ. ಏಕೆಂದರೆ, ನರಸಿಂಗನ ರಾಜ್ಯದಲ್ಲಿ ವಜ್ರದ ಗಣಿಯೊಂದಿದೆ. ಇನ್ನೊಂದು ಗಣಿಯು ದಖ್ಖನಿ ರಾಜ್ಯದಲ್ಲಿದೆ. ಅನೇಕ ಮುತ್ತುಗಳು ಮತ್ತು ಸೀರುಮುತ್ತುಗಳು (Seed pearls) ಅಲ್ಲಿ ದೊರಕುತ್ತವೆ. ಇವುಗಳನ್ನು ರೇಷ್ಮೆ ಬಟ್ಟೆಗಳು, ವೆಲ್ವೆಟ್ ಬಟ್ಟೆಗಳು ಹಾಗೂ ಹವಳಗಳನ್ನು ಆರ್ಮೆಜ್‌ನಿಂದ ತರಿಸಲಾಗುತ್ತದೆ. [೫೨]

ನದಿಗಳು ಮತ್ತು ತೊರೆಗಳು ಚಿನ್ನವನ್ನೂ ಪ್ರಶಸ್ತ ಶಿಲೆಗಳನ್ನೂ ಕೊಡುತ್ತಿದ್ದುವು; ಕಣಿವೆಗಳಲ್ಲಿ ವಜ್ರಗಳನ್ನು ಅಗೆದು ತೆಗೆಯಲಾಗುತ್ತಿತ್ತು. ಈ ಎಲ್ಲಾ ಸಂಪತ್ತು ನೆರೆಯ ವಿಜಯನಗರ ಪಟ್ಟಣಕ್ಕೆ ಬಂದು ಸುರಿಯುತ್ತಿತ್ತು. ಹದಿನೈದನೆಯ ಶತಮಾನಕ್ಕೆ ಸರಿಹೊಂದುವ ಕಾಲಾವಧಿಯು ವಿಜಯನಗರ ಚಕ್ರಾಧಿಪತ್ಯದ ಅತ್ಯುತ್ತಮವಾದ ಕಾಲ. ನೆತ್ತಮಲದ ತಪ್ಪಲಿನಲ್ಲಿ ಆಗ ವಜ್ರದ ಗಣಿಗಾರಿಕೆಯು ವ್ಯಾಪಕವಾಗಿ ನಡೆಯುತ್ತಿದ್ದಿತು. ಗಣಿಗಳು ಮುಖ್ಯವಾಗಿ ಕರ್ನೂಲು ಮತ್ತು ಅನಂತಪುರ ಜಿಲ್ಲೆಗಳಲ್ಲಿದ್ದುವು. ವಿಶೇಷವಾಗಿ ವಜ್ರಕರೂರಿನಲ್ಲಿ ೧೫೮೩–೧೫೮೮ರ ಅವಧಿಯಲ್ಲಿ ದಖ್ಖನಿನಲ್ಲಿದ್ದ ಜಾನ್ ಹಿಂಗೆನ್ ಲಿನ್ಸ್ಕೋಟೆನ್‌ಹೀಗೆ ಬರೆದನು:

''ಅವು (ವಜ್ರಗಳು) ದಖ್ಖನಿನ ದೇಶಗಳಲ್ಲಿ, ಬಲ್ಲಾಗೇಟ್‌ನ ಹಿಂದೆ ಬೆಳೆಯುತ್ತವೆ. ಬಿಸ್ನಗರದ ತಿರುವಿನಲ್ಲಿ ಎರಡೋ ಮೂರೋ ಬೆಟ್ಟಗಳಿವೆ. ಅಲ್ಲಿ ಅವನ್ನು ಅಗೆಯಲಾಗುತ್ತದೆ. ಅದರಿಂದ ಬಿಸ್ನಾಗರದ ರಾಜನು ತುಂಬಾ ಲಾಭ ಮಾಡಿಕೊಳ್ಳುತ್ತಾನೆ. ಏಕೆಂದರೆ ಅವುಗಳನ್ನು ಎಚ್ಚರಿಕೆಯಿಂದ ಕಾವಲು ಕಾಯಲು ಆಮೇಲೆ ಅವುಗಳನ್ನು ಸರಿಯಾದ ರೂಪಕ್ಕೆ ತರಲು ಅವನು ಏರ್ಪಾಟು ಮಾಡಿದ್ದಾನೆ. ಇಪ್ಪತ್ತೈದು ಮಾಂಗೆಲಿನ್‌ಗಳಿಗಿಂತ ಹೆಚ್ಚಿನ ತೂಕವಿರುವ ವಜ್ರಗಳೆಲ್ಲ ರಾಜನ ಸ್ವಂತ ಉಪಯೋಗಕ್ಕೆ ಹೋಗುತ್ತವೆ'' (ಒಂದು ಮಾಂಗೆಲಿನ್ ನಾಲ್ಕು ಗ್ರೇನ್ ತೂಗುತ್ತದೆ).[೬೩]

೧೫೩೪ರಲ್ಲಿ ದಕ್ಷಿಣದಲ್ಲಿದ್ದ ಗಾರ್ಸಿಯ ದ ಕೋಸ್ತ, ವಿಜಯನಗರದಲ್ಲಿ ಒಂದು ಕೋಳಿಮೊಟ್ಟೆಯ ಗಾತ್ರದ ವಜ್ರವಿತ್ತು ಎಂದು ಹೇಳಿದ್ದಾನೆ. ಇತರ ಮೂರು ವಜ್ರಗಳು ೧೨೦, ೧೭೮, ೨೫೦ ಮಾಂಗೆಲಿನ್ ತೂಗುತ್ತಿದ್ದುವು. ಇವು ಕ್ರಮವಾಗಿ ೧೫೦, ೧೭೫ ಮತ್ತು ೩೧೨½ ಕ್ಯಾರೆಟ್ ತೂಕವಾಗುತ್ತಿತ್ತು.

೧೫೬೫ರಲ್ಲಿ ರಾಜಧಾನಿಯು ಪತನಹೊಂದಿದ ಮೇಲೆಯೂ ಚಕ್ರವರ್ತಿಯೂ ಚಂದ್ರಗಿರಿಯಲ್ಲಿ ಮೂರು ದೊಡ್ಡ ಪೆಟ್ಟಿಗೆಗಳ ತುಂಬ ವಜ್ರಗಳನ್ನು ಇಟ್ಟುಕೊಂಡಿದ್ದನು.

ವಿಜಯನಗರದ ಅತ್ಯಂತ ಮುಖ್ಯವಾದ ಆಮದುಗಳೆಂದರೆ, ಅರೇಬಿಯ ಮತ್ತು ಪರ್ಷಿಯಾದಿಂದ ಕುದುರೆಗಳು, ಸಿಲೋನ್ ಮತ್ತು ಬರ್ಮಾಗಳಿಂದ ಆನೆಗಳು, ಈಸ್ಟ್ ಇಂಡೀಸ್‌ನಿಂದ ಸಂಬಾರ ವಸ್ತುಗಳು, ಜಿದ್ದಾ-ಏಡನ್ ಮತ್ತು ಚೈನಾಗಳಿಂದ ವೆಲ್ವೆಟ್, ದಮಾಸ್ ಮತ್ತು ಸ್ಯಾಟಿನ್ ಅಂತಹ ಭಾರವಾದ ಬಟ್ಟೆಗಳು. ಮುಖ್ಯವಾಗಿ ರಫ್ತಾಗುತ್ತಿದ್ದ ವಸ್ತುಗಳೆಂದರೆ, ಹತ್ತಿಬಟ್ಟೆ, ಮುದ್ರಣ ಮಾಡಿದ ಚೀಟಿಬಟ್ಟೆ, ನೀಲಿ ಮತ್ತು ಮೈರೋಬಾಲಿನ್‌ನಂತಹ ರಂಗುಗಳು, ಅಕ್ಕಿ, ಸಕ್ಕರೆ, ತೆಂಗಿನಕಾಯಿ ತೇಗ ಮತ್ತು ಶ್ರೀಗಂಧದ ಮರ; ಇವಲ್ಲದೆ ಮೆಣಸು, ಲವಂಗ, ಶುಂಠಿ ಮತ್ತು ದಾಲಚಿನ್ನಿಯಂತಹ ಸಂಬಾರ ಪದಾರ್ಥಗಳು. ಸಂಬಾರ ವಸ್ತುಗಳನ್ನು, ಹತ್ತಿಬಟ್ಟೆಗಳನ್ನು ತರಿಸಿ ಮತ್ತೆ ಕಳಿಸಲಾಗುತ್ತಿತ್ತು. ಆಮದು-ರಫ್ತುಗಳ ನಡುವಣ ಅಂತರವು ಭಾರತಕ್ಕೆ ಅನುಕೂಲಕರವಾಗಿದ್ದುದರಿಂದ ಚಿನ್ನ ಮತ್ತು ಬೆಳ್ಳಿಗಟ್ಟಿಗಳೂ ನಮ್ಮ ಆಮದಿನ ಭಾಗವಾಗಿದ್ದುವು.

ಆಮುಕ್ತಮಾಲ್ಯದವು ವಿಜಯನಗರದ ಬಂದರುಗಳಿಗೆ ಕುದುರೆಗಳು, ಆನೆಗಳು, ಅಮೂಲ್ಯವಾದ ರತ್ನಗಳು, ಶ್ರೀಗಂಧ ಮತ್ತು ಮುತ್ತುಗಳು ಆಮದಾಗಿ ಬರುತ್ತಿದ್ದುದನ್ನು ಉಲ್ಲೇಖಿಸುತ್ತದೆ.[೬೪]

ವೆನಿಸ್ಸಿನ ಪ್ರವಾಸಿ ಸೀಸರ್ ಫ್ರೆಡರಿಕ್ ೧೫೬೩-೧೫೮೧ರಲ್ಲಿ ವಿಜಯನಗರದಲ್ಲಿದ್ದನು. ಸಾಮ್ರಾಜ್ಯವು ನಡೆಸುತ್ತಿದ್ದ ವಿಪುಲವಾದ ವಿದೇಶಿ ವ್ಯಾಪಾರವನ್ನು ಅವನು ಹೀಗೆ ವರ್ಣಿಸಿದ್ದಾನೆ:

''ಗೋವಾದಿಂದ ಬೆಜೆನಗರಕ್ಕೆ ಹೋಗುತ್ತಿದ್ದ ವಸ್ತುಗಳು ಅರೇಬಿಯದ ಕುದುರೆಗಳು, ವೆಲ್ವೆಟ್, ದಮಾಸ್ ಮತ್ತು ಸ್ಯಾಟಿನ್ ಬಟ್ಟೆಗಳು, ಪೋರ್ಚುಗಲ್ಲಿನಿಂದ ಆರ್ಮೆಸಿಂಕ್ (Armesinc) ಚೈನಾದಿಂದ ಬಟ್ಟೆಗಳು, ಕೇಸರಿ ಮತ್ತು ಕೆಂಪುರತ್ನಗಳು. ಬೆಜೆನಗರದಿಂದ ಆಭರಣಗಳನ್ನು, ಪಗೋಡಗಳನ್ನು ತರಿಸಿಕೊಳ್ಳುತ್ತಿದ್ದರು''.[೬೫]

ನಾಗಪಟ್ಟಣದಿಂದ ವಿಶಾಖಪಟ್ಟಣದವರೆಗೆ ಹಾದುಹೋಗಿದ್ದ ಕೋರಮಂಡಲ ಕರಾವಳಿಯು ಸಮೃದ್ಧವೂ ಅಭಿವೃದ್ಧಿಶೀಲವೂ ಆದ ವ್ಯಾಪಾರದಲ್ಲಿ ತೊಡಗಿತ್ತು. ಬಾರ್ಬೋಸಾ ಬರೆಯುತ್ತಾನೆ: ''ಮಲಬಾರಿನಿಂದ ಅನೇಕ ಹಡಗುಗಳು ಅಕ್ಕಿಯನ್ನು ತುಂಬಿಕೊಳ್ಳಲು ಇಲ್ಲಿಗೆ ಬರುತ್ತವೆ. ಅವು ಕ್ಯಾಂಬೆಯಿಂದ ಅನೇಕ ಪದಾರ್ಥಗಳನ್ನು ತರುತ್ತವೆ: ತಾಮ್ರ, ಪಾದರಸ, ಕುಂಕುಮ, ಮೆಣಸು ಮತ್ತಿತರ ವಸ್ತುಗಳು. ಈ ಕೋಲ್ಯಾಂಡರ ಉದ್ದಕ್ಕೂ (ಚೋಳಮಂಡಲ ಅಥವಾ ಕೋರಮಂಡಲ) ಬಹುಪಾಲು ಸಂಬಾರ ವಸ್ತುಗಳು

ಮತ್ತು ಔಷಧಿಗಳು, ಮಲಕ್ಕಾ ಚೈನಾ ಮತ್ತು ಬಂಗಾಳಗಳಿಂದ ವಿವಿಧ ಪದಾರ್ಥಗಳು ಬೇರೆ ಬೇರೆ ದೇಶಗಳಿಂದ ಮೂರರ ಹಡಗುಗಳಲ್ಲಿ ಇಲ್ಲಿಗೆ ಬರುತ್ತವೆ. ಪೋರ್ಚುಗೀಸರ ಹೆದರಿಕೆಯಿಂದಾಗಿ ಅವರು ಮಲಬಾರನ್ನು ದಾಟಿ ಹೋಗುವ ಸಾಹಸ ಮಾಡುವುದಿಲ್ಲ.[೬೬]

ನೆಲ್ಲೂರಿನ ದಕ್ಷಿಣಕ್ಕಿದ್ದ ಪುಲಿಕಾಟ್ ನಡೆಸುತ್ತಿದ್ದ ವ್ಯಾಪಾರ ವಹಿವಾಟು ಉನ್ನತ ಮಟ್ಟದ್ದಾಗಿತ್ತು. ಹತ್ತಿ ಬಟ್ಟೆಗಳು ಮಲಕ್ಕಾ, ಪೆಗು ಸುಮಾತ್ರಾಗಳಲ್ಲೂ ಗುಜರಾತು ಮತ್ತು ಮಲಬಾರ್‌ಗಳಲ್ಲೂ ಅಪಾರ ಪ್ರಮಾಣದ ಲಾಭವನ್ನು ದೊರಕಿಸಿಕೊಡುತ್ತಿದ್ದುವು. ಇವಲ್ಲದೆ ತಾಮ್ರ, ಪಾದರಸ, ಕುಂಕುಮ, ರಂಗುಗಳು, ವೆಲ್ವೆಟ್ ಹಾಗೂ ಗುಲಾಬಿ ಅತ್ತರುಗಳನ್ನು ದೂರದೇಶಗಳಿಗೆ ರಫ್ತು ಮಾಡಲಾಗುತ್ತಿತ್ತು.

ವಿಜಯನಗರದ ಪತನದಿಂದ ಪೋರ್ಚುಗೀಸ್ ಅಧಿಕಾರವೂ ಕುಂಠಿತವಾಯಿತು. ಏಕೆಂದರೆ ಅದು ನಿಂತಿದ್ದುದು ವಿಜಯನಗರದೊಂದಿಗೆ ನಡೆಸುತ್ತಿದ್ದ ವ್ಯಾಪಾರದ ಮೇಲೆ.

ಪೋರ್ಚುಗೀಸ್ ಶಕ್ತಿಯು ಕ್ಷೀಣಿಸಿದುದಕ್ಕೆ ಸಸ್ಸೆಟ್ಟಿಯು ಇನ್ನೂ ಒಂದು ಕಾರಣವನ್ನು ಕೊಡುತ್ತಾನೆ. ಕ್ರೈಸ್ತಧರ್ಮದ ಹೊರತು ಮಿಕ್ಕೆಲ್ಲ ಧರ್ಮಗಳನ್ನು ವಿಚಾರಣೆಗೊಳಪಡಿಸುವ ಹೇಯಕೃತ್ಯವದು.

ಹೊರದೇಶದೊಂದಿಗೆ ವ್ಯಾಪಾರವನ್ನು ನಿರ್ವಹಿಸಲು ವಿಜಯನಗರದ ರಾಜರು ವಿಫಲವಾದುದರಿಂದ ಹಿಂದೂಮಹಾಸಾಗರದಲ್ಲಿ ಪೋರ್ಚುಗೀಸರು ಕ್ರಮೇಣ ಪ್ರಾಧಾನ್ಯ ಪಡೆದರು. ಕಡಲುಗಳ್ಳತನದಲ್ಲಿ ಅವರು ನಿಪುಣರಾಗಿದ್ದರು. ಭಾರತೀಯ ನೌಕೆಗಳನ್ನೂ ಹಡಗುಗಳನ್ನೂ ಲೂಟಿಮಾಡಿ ಮುಳುಗಿಸಿಬಿಡುತ್ತಿದ್ದರು. ನಾವಿಕರನ್ನು ಅಪಹರಿಸಿಕೊಂಡು ಹೋಗಿ ಕೊಂದುಹಾಕುತ್ತಿದ್ದರು, ಇಲ್ಲವೆ ಗುಲಾಮರನ್ನಾಗಿ ಮಾರುತ್ತಿದ್ದರು. ಅವರ ಅನುಮತಿಯಿಲ್ಲದೆ ಯಾವುದೇ ಹಡಗು ಸಮುದ್ರದಲ್ಲಿ ಚಲಿಸುವಂತಿರಲಿಲ್ಲ. ಈಸ್ಟ್ ಇಂಡೀಸಿಗೂ ನುಗ್ಗಿ ಅಲ್ಲಿಯ ವ್ಯಾಪಾರ-ವಾಣಿಜ್ಯವನ್ನು ತಮ್ಮದಾಗಿಸಿಕೊಂಡರು. ಕರಾವಳಿಯಲ್ಲೇ ಮುಂದೆಸಾಗಿ ಚೈನಾದ ತೀರವನ್ನು ಅವರು ತಲುಪಿದರು.

ವಿಜಯನಗರದ ಅರಸರು ಕುದುರೆಗಳನ್ನು ಸಂಗ್ರಹಿಸಿಕೊಳ್ಳುವ ಆತುರದಲ್ಲಿ ಪೋರ್ಚುಗೀಸರ ವಿಸ್ತರಣೆಯ ಹಂಚಿಕೆಗಳನ್ನು ಅರ್ಥಮಾಡಿಕೊಳ್ಳದಾದರು. ತಮ್ಮ ಶತ್ರುಗಳನ್ನು ನಾಶಮಾಡಲು ಹೋಗಿ ತಮ್ಮ ಚಕ್ರಾಧಿಪತ್ಯವನ್ನೇ ಅವರು ಕಳೆದುಕೊಂಡರು. ತಮ್ಮ ಬಂದರುಗಳಲ್ಲಿ ಅತ್ಯಂತ ಮುಖ್ಯವಾದುವನ್ನು ಒಪ್ಪಿಸಿಕೊಟ್ಟರು, ಕರಾವಳಿ ವ್ಯಾಪಾರದ ಮೇಲೆ ತಮ್ಮ ಹಿಡಿತವನ್ನು ಕಳೆದುಕೊಂಡರು, ತಮ್ಮ ಪ್ರಜೆಗಳ ಪ್ರಾಣವನ್ನು ಆಸ್ತಿಪಾಸ್ತಿಗಳನ್ನು ರಕ್ಷಿಸುವಲ್ಲಿ ವಿಫಲರಾದರು. ಅವರ ಧರ್ಮಕ್ಕೆ ಪೋಷಣೆಯನ್ನು ನೀಡಿದರು. ಪರದೇಶದ ಲೂಟಿಕೋರರಾದ ಅವರನ್ನು ತಮ್ಮ ಸರಿಸಮಾನರನ್ನಾಗಿಸುವಂತಹ ಒಂದು ಒಪ್ಪಂದವನ್ನು ಮಾಡಿಕೊಂಡರು. ಒಪ್ಪಂದಕ್ಕೆ ಸಹಿಮಾಡಿದವರು ಪೋರ್ಚುಗಲ್ಲಿನ ರಾಜ ಹಾಗೂ ವಿಜಯನಗರದ ಚಕ್ರವರ್ತಿ. ಇಬ್ಬರೂ "ಮಿತ್ರರಲ್ಲಿ ಮಿತ್ರರಾಗಿ, ಶತ್ರುಗಳಲ್ಲಿ ಶತ್ರುಗಳಾಗಿ ಇರಲು ಒಡಂಬಟ್ಟರು. ಅಗತ್ಯ ಬಂದಾಗ ಭಾರತದ ಎಲ್ಲಾ ರಾಜರ ಮತ್ತು ಪ್ರಭುಗಳ ಎದುರಾಗಿ ಪರಸ್ಪರ ಸೇನಾಸಹಾಯ ಮಾಡಲು ಒಪ್ಪಿದರು."[೬೭] ಇದರ ಪರಿಣಾಮವಾಗಿ ವಿಜಯನಗರವು ಆಮದು ಮತ್ತು ರಫ್ತುಕಾರನಾಗಿ ಅಪಾರ ನಷ್ಟವನ್ನು ಅನುಭವಿಸಿತು. ಪೋರ್ಚುಗಲ್ ಆದರೋ ರಫ್ತು ಮತ್ತು ಆಮದು ವ್ಯವಹಾರದಲ್ಲಿ ಏಕಸ್ವಾಮ್ಯವನ್ನು ಸ್ಥಾಪಿಸಿಕೊಂಡಿತು.

ಹೀಗೆ ನಗರಗಳು ರಾಜಕೀಯ ಶಕ್ತಿಯ ಕೇಂದ್ರಗಳಾಗಿದ್ದುವಲ್ಲದೆ ವ್ಯಾಪಾರ ಮತ್ತು ಕೈಗಾರಿಕೆಗಳ ಕೇಂದ್ರಗಳೂ ಆಗಿದ್ದುದನ್ನು ನೋಡುತ್ತೇವೆ. ಅನೇಕ ಹಳ್ಳಿಗಳು ಸರಕಾರಕ್ಕೆ ತೆರಿಗೆ ಸಲ್ಲಿಸುತ್ತಾ ತಮಗಾಗಿ ಬೆಳೆಯುವುದಕ್ಕೆ ಬದಲಾಗಿ ಮಾರುಕಟ್ಟೆಗೋಸ್ಕರವಾಗಿ ಉತ್ಪಾದಿಸುವುದನ್ನು ನೋಡುತ್ತೇವೆ. ಅಲವಕೊಂಡದ ರಾಯರೇಖಾದ ಉಲ್ಲೇಖವನ್ನು ಬೇರೊಂದು ಕಡೆ ಮಾಡಿದೆ. ಅದರಲ್ಲಿ ಸರಕಾರಕ್ಕೆ ತೆರಿಗೆಯನ್ನು ಪಾವತಿ

ಮಾಡುತ್ತಿದ್ದ ಅಂಗಡಿಗಳು ಮತ್ತು ಮಗ್ಗಗಳ ಬಗೆಗೆ ವಿವರಗಳು ದೊರಕುತ್ತದೆ.ಸ್ಥಳದಲ್ಲಿದ್ದ ಹನ್ನೆರಡು ಗ್ರಾಮಗಳಲ್ಲಿ ಒಟ್ಟು ೪೫೩ ಮಗ್ಗಗಳಿದ್ದುವು. ಬಣ್ಣದ ಬಟ್ಟೆಗಳನ್ನು ಇಲ್ಲಿ ನೇಯಲಾಗುತ್ತಿತ್ತು. ಗ್ರಾಹಕರಿಗೆ ವಸ್ತುಗಳನ್ನು ಮಾರುತ್ತಿದ್ದ ೪೩ ಅಂಗಡಿಗಳಿದ್ದುವು. ಸ್ಥಳದ ಒಟ್ಟು ವರಮಾನದಲ್ಲಿ ಅರ್ಧಕ್ಕಿಂತ ಹೆಚ್ಚು ಭಾಗವು ಅಂಗಡಿಗಳು ಮತ್ತು ಕೈಮಗ್ಗಗಳ ಮೇಲೆ ವಿಧಿಸುತ್ತಿದ್ದ ತೆರಿಗೆಯಿಂದ ಬರುತ್ತಿದ್ದಿತು. ಭೂಕಂದಾಯವು ಒಟ್ಟು ವರಮಾನದ ಕೇವಲ ಆರನೆಯ ಒಂದು ಪಾಲಿತ್ತು.

ಉಪ್ಪಿನ ಕೈಗಾರಿಕೆಯು ಕರಾವಳಿಯಲ್ಲಿ ಮಾತ್ರವಲ್ಲದೆ ಒಳನಾಡಿನಲ್ಲೂ ಹಲವು ಜನರನ್ನು ಒಳಗೊಂಡಿದ್ದಿತು. ಅದು ಸರಕಾರದ ಏಕಸ್ವಾಮ್ಯವಾಗಿಯೇ ಮುಂದುವರಿಯಿತು. ಬಳ್ಳಾರಿ ಜಿಲ್ಲೆಯ ಆಲೂರುತಾಲೂಕಿನ ೧೫೨೧ರ ಒಂದು ಶಾಸನವು ಆ ಪ್ರದೇಶದಲ್ಲಿ ಉಪ್ಪುತಯಾರಿಸುವುದನ್ನು ಕುರಿತು ಇಬ್ಬರು ಅಧಿಕಾರಿಗಳು ಹೊರಡಿಸಿದ ಆಜ್ಞೆಗಳನ್ನು ದಾಖಲಿಸುತ್ತದೆ.[೧೮] ಅದೇ ಜಿಲ್ಲೆಯ ಬೇರೊಂದು ತಾಲೂಕಿನ ಮತ್ತೊಂದು ಶಾಸನವು ಒಂದು ಧರ್ಮಸಂಸ್ಥೆಗೆ ನಿರ್ದಿಷ್ಟ ಉಪ್ಪುತಯಾರಕರು ವರ್ಷಕ್ಕೆ ಎರಡು ಚೀಲ ಉಪ್ಪನ್ನು ಕೊಡಲು ನಿರ್ಧರಿಸಿದುದನ್ನು ಹೇಳುತ್ತದೆ.[೧೯] ಉಪ್ಪು ತಯಾರಕರು ಬಂಜರು ಭೂಮಿಯಿಂದ ಉಪ್ಪುಮಣ್ಣನ್ನು ತೆಗೆದು, ಇದಕ್ಕಾಗೇ ತಯಾರಿಸಿದ ವಿಶೇಷವಾದ ರೀತಿಯ ತಟ್ಟೆಗಳ ಮೇಲೆ ಹರಡಿ ಅವುಗಳ ಮೇಲೆ ನೀರು ಹಾಯಿಸುತ್ತಿದ್ದರು. ಕ್ರಮೇಣ ನೀರು ಇಂಗಿ, ಉಪ್ಪಿನ ಹರಳುಗಳು ರೂಪುಗೊಳ್ಳುತ್ತಿದ್ದುವು.

ಕೈಗಾಣದಲ್ಲಿ ಕಬ್ಬನ್ನು ಹಿಂಡಿ, ರಸವನ್ನು ಕುದಿಸಿ ಬೆಲ್ಲವನ್ನೂ ಸಕ್ಕರೆಯನ್ನೂ ತಯಾರಿಸುತ್ತಿದ್ದರು. ತಾಳೆಮರಗಳಿಂದ ತಾಳೆಸಕ್ಕರೆಯನ್ನು ತಯಾರಿಸಲಾಗುತ್ತಿತ್ತು. ಅತ್ಯಂತ ಕಡಮೆ ವೆಚ್ಚ ಕಾರಣವಾಗಿ ಇದು ಬಹಳ ಜನಪ್ರಿಯವಾಗಿದ್ದಿರಬೇಕು. ಶ್ರಮ ಮತ್ತು ಬಂಡವಾಳ ಎರಡೂ ದೃಷ್ಟಿಗಳಿಂದ ಇದು ಅಗ್ಗವಾಗಿತ್ತು.

ಕಬ್ಬಿಣದ ಅದಿರು ಇರುವ ಕಲ್ಲುಗಳಿಂದಲೂ, ನದೀ ಪಾತ್ರಗಳಲ್ಲಿ ಸಂಚಯಗೊಂಡ ಕಣಗಳಿಂದಲೂ ಕಬ್ಬಿಣವನ್ನು ಉತ್ಪಾದಿಸಲಾಗುತ್ತಿತ್ತು. ಈ ಉತ್ಪಾದನಾಕಾರ್ಯವನ್ನು ಕಾಡುಗಳಲ್ಲಿ ಅಧಿಕ ಪ್ರಮಾಣದಲ್ಲಿ ನಡೆಸಲಾಗುತ್ತಿತ್ತು. ಕೃಷಿ ಉಪಕರಣಗಳು, ಯುದ್ಧದ ಆಯುಧಗಳು ಮತ್ತು ಕಟ್ಟಡ ಸಾಮಗ್ರಿಗಳಿಗಾಗಿ ಕಬ್ಬಿಣ ಉಪಯೋಗವಾಗುತ್ತಿತ್ತು.

ರಾಜಾಶ್ರಯವನ್ನು ಪಡೆದ ವರ್ತಕರು ಶ್ರೀಮಂತರಾಗಿದ್ದರು, ಉದ್ಯಮಶೀಲರಾಗಿದ್ದರು. ಸಮಾಜದಲ್ಲಿ ಅಪಾರವಾದ ಪ್ರಭಾವವನ್ನು ಬೀರುತ್ತಿದ್ದರು. ಆರ್ಥಿಕ ಶಕ್ತಿಯು ಅವರಿಗೆ ರಾಜಕೀಯ ಶಕ್ತಿಯನ್ನು ಕೊಟ್ಟಿತ್ತು. ಅವರು ಸಂಘಗಳನ್ನು ರಚಿಸಿಕೊಂಡಿದ್ದರು. ರಾಜಸಭೆಗಳಲ್ಲೂ ಅವರಿಗೆ ಮುಖ್ಯವಾದ ಸ್ಥಾನವಿರುತ್ತಿತ್ತು. ಅವರ ಈ ಅಧಿಕಾರವು ಅವರ ಸಂಚಾರಶೀಲತೆಯ ಕಷ್ಟವನ್ನು ನೀಗಿಸುವಂಥದಾಗಿತ್ತು. ಕುಶಲಕರ್ಮಿಗಳೂ ಕೂಡ ಸಂಘಟಿತರಾಗಿದ್ದರು. ಆದರೆ ಅವರದು ಕೆಳಮಟ್ಟದ ಸ್ಥಾನವಾಗಿತ್ತು. ಏಕೆಂದರೆ ಅವರು ತಯಾರಿಸಿದ ವಸ್ತುಗಳ ಮೇಲೆ ವರ್ತಕ ಸಂಘಗಳು ಪರಿಣಾಮಕಾರಿಯಾದ ಪ್ರಭಾವ ಹೊಂದಿದ್ದುವು. ನಗರದಲ್ಲಿ ಎರಡು ಬಗೆಯ ಸಂಘಗಳಿದ್ದುದನ್ನು ಅಬ್ದುಲ್‌ರಜಾಕ್ ಗಮನಿಸಿದನು. ಅವನು ಬರೆದನು:

''ಬೇರೆ ಬೇರೆ ಸಂಘಗಳ ಅಥವಾ ಕಸಬುಗಳ ವರ್ತಕರು ತಮ್ಮ ವ್ಯಾಪಾರ ಮಳಿಗೆಗಳನ್ನು ಪಕ್ಕ ಪಕ್ಕದಲ್ಲೇ ಇಟ್ಟುಕೊಂಡಿರುತ್ತಾರೆ.''[೨೦]

ಡೊಮಿಂಗೋ ಪೇಸ್, ''ಎಲ್ಲಾ ಕಸಬುಗಳ ಮತ್ತು ವರ್ತಕರ ಸಂಘಗಳು, ನಮ್ಮ ಕಡೆ ಇರುವ ಕನ್‌ಫ್ರಾಟಿಮಿಟೋಗಳಂತೆ (Confratemitoes) ಇಲ್ಲೂ ಇವೆ.''[೨೧]

ವರ್ತಕ ಸಂಘಗಳಿಗೆ ಒಳ್ಳೆಯ ಹೆಸರು ಪಡೆದ ವ್ಯಕ್ತಿಗಳು ಅಧ್ಯಕ್ಷರಾಗಿರುತ್ತಿದ್ದರು. ಇವರನ್ನು ಸೆಟ್ಟಿ ಪಟ್ಟಣಸ್ವಾಮಿಗಳೆಂದು ಕರೆಯಲಾಗುತ್ತಿತ್ತು.[೨೨] ಅಹೋಬಿಲದ ಒಂದು ಶಾಸನವು, ದೇವಾಲಯದ ಕೆಲವು

ಅಗತ್ಯಗಳನ್ನು ಒಂದು ವರ್ತಕ ಸಂಘವು ಪೂರೈಸಿದುದನ್ನು ಹೇಳುತ್ತದೆ. ಆ ಸಂಘದ ಸದಸ್ಯರು ವಾಸವೀ ಕನ್ಯೆಯ ಭಕ್ತರಾಗಿದ್ದರು. ಅವರ ಮುಂದಾಳುಗಳಾಗಿದ್ದ ಒಂದುನೂರ ಐವತ್ತು ಜನರಿಗೆ ಪುಣ್ಯ ಬರಲೆಂದು ಈ ಧರ್ಮಕಾರ್ಯವನ್ನು ಮಾಡಲಾಯಿತು.[೨೩] ಸಂಘದ ಅಧ್ಯಕ್ಷನೇ ಅದರ ಕಾರ್ಯ ನಿರ್ವಾಹಕನೂ ಆಗಿದ್ದನು. ಸಂಘವು ಸಾಮಾನ್ಯವಾಗಿ ದೇವಾಲಯದಲ್ಲಿ ಸಭೆ ಸೇರಿ ಕಲಾಪಗಳನ್ನು ನಡೆಸುತ್ತಿದ್ದಿತು. ಸದಸ್ಯರ ನಡುವೆ ಅಹಿತಕರ ಸ್ಪರ್ಧೆಯನ್ನು ತಪ್ಪಿಸುವುದು, ಶಿಸ್ತಿನ ಕೆಲವು ನಿಯಮಗಳನ್ನು ಜಾರಿಗೆ ತರುವುದು, ಸದಸ್ಯರ ಸಮಾನ ಹಿತಾಸಕ್ತಿಗಳನ್ನು ಕಾಪಾಡುವುದು ಇವಕ್ಕಾಗಿ ಸಂಘವು ಶ್ರಮಿಸುತ್ತಿದ್ದಿತು. ತನ್ನದೇ ನಾಣ್ಯಗಳನ್ನು ಟಂಕಿಸಿಕೊಳ್ಳಲು ಕೂಡ ಸಂಘಕ್ಕೆ ಅಧಿಕಾರವಿದ್ದಿತು. ತನ್ನ ಸದಸ್ಯರಿಂದ ಸರಕಾರಕ್ಕೆ ಸಲ್ಲಬೇಕಾದ ತೆರಿಗೆಯನ್ನು ಸಂಗ್ರಹಿಸಿಕೊಡುವ ಹೊಣೆಯೂ ಸಂಘದ್ದೇ. ಅಧ್ಯಕ್ಷನು ಅವುಗಳನ್ನು ಸಂಗ್ರಹಿಸಿ ಭಂಡಾರಕ್ಕೆ ಕಟ್ಟಿಬಿಡುತ್ತಿದ್ದನು. ರಾಜನೋ ಅಥವಾ ಅವನ ಅಧೀನ ಅಧಿಕಾರಿಯೋ ಈ ತೆರಿಗೆಗಳನ್ನು ಯಾವುದಾದರೊಂದು ದೇವಾಲಯಕ್ಕೆ ದಾನಮಾಡಲು ಇಚ್ಛಿಸಿದರೆ ಅವನು ವರ್ತಕ ಸಂಘದ ಅಥವಾ ಅದರ ಅಧ್ಯಕ್ಷನ ಅನುಮತಿಯನ್ನು ಪಡೆಯಬೇಕಾಗಿತ್ತು. ಒಬ್ಬ ಮಂತ್ರಿಯ ಪ್ರತಿನಿಧಿಯಾಗಿದ್ದ ಅಬ್ಬರಾಜ ತಿಮ್ಮಪ್ಪನೆನ್ನುವವನು, ದೇವಾಲಯಕ್ಕೆ ''ಗ್ರಾಮಗಳ ಸೆಟ್ಟಿ ಪಟ್ಟಣಸ್ವಾಮಿಗಳ ಅನುಮತಿಯನ್ನು ಪಡೆದು'' ಮೂಲವೀಸವನ್ನು ದಾನಮಾಡಿದನು.[೨೪] ಬಳ್ಳಾರಿಜಿಲ್ಲೆಯ ಕುರುಗೋಡದ ಇನ್ನೊಂದು ಶಾಸನವು ''ಗೌಡ, ಸೇನಬೋವ ಮತ್ತು ಪಟ್ಟಣಸ್ವಾಮಿಗಳ ಅನುಮತಿಯಿಂದ'' ಮಾಡಿದ ದಾನವನ್ನು ಉಲ್ಲೇಖಿಸುತ್ತದೆ.[೨೫]

ವರ್ತಕ ಸಂಘಗಳು ತಮ್ಮ ಸದಸ್ಯರು ಮಾರಾಟಮಾಡುತ್ತಿದ್ದ ವಸ್ತುಗಳ ಮೇಲೆ ತೆರಿಗೆಯನ್ನು ವಿಧಿಸಬಹುದಾಗಿತ್ತು. ಗುತ್ತಿ ತಾಲೂಕಿನ ವೆಲ್ಪಮಡುಗದ ಒಂದು ಶಾಸನವು ಸೆಟ್ಟಿಗಳು, ಸೇನಬೋವರು ಮತ್ತು ಸ್ಥಳೀಯ ಹಾಗೂ ಪರಸ್ಥಳದ ವರ್ತಕರಿಗೆ, ''ಹೊಸ ಅಂಗಡಿ ಬೀದಿಯಲ್ಲಿ ಕೊಡಬೇಕಾದ ತೆರಿಗೆಗಳನ್ನು ನಿಗದಿ ಪಡಿಸಿ'' ಸಂಘವು ಆದೇಶ ಹೊರಡಿಸಿದುದನ್ನು ಹೇಳುತ್ತದೆ.[೨೬]

ಬಹುಸಂಖ್ಯೆಯಲ್ಲಿ ವರ್ತಕರು ಗುಂಪುಗೂಡಿ ಕಾಡುಗಳ ಮೂಲಕ ಪ್ರಯಾಣಮಾಡುವ ಸಂದರ್ಭವಿದ್ದರೆ ಅವರು ತಮ್ಮ ಪ್ರಾಣ ಮತ್ತು ಸೊತ್ತುಗಳ ರಕ್ಷಣೆಗಾಗಿ ಕಾವಲುಗಾರರು ಇಲ್ಲವೆ ಪಾಳೇಗಾರರೊಂದಿಗೆ ಕರಾರು ಮಾಡಿಕೊಳ್ಳುತ್ತಿದ್ದರು.

ವರ್ತಕ ಸಂಘಗಳಿಗೆ ನ್ಯಾಯಾಧಿಕಾರವೂ ಇದ್ದಿತು. ಮೊಕದ್ದಮೆಗಳನ್ನು ವಿಚಾರಣೆ ಮಾಡಿ, ವ್ಯಾಜ್ಯ ಪರಿಹಾರ ಮಾಡುತ್ತಿದ್ದರು. ಅಪರಾಧಿಗೆ ಶಿಕ್ಷೆಯನ್ನು ವಿಧಿಸುತ್ತಿದ್ದರು. ಅನಂತಪುರ ಜಿಲ್ಲೆಯ ಕದಿರಿಯ ಒಂದು ಶಾಸನವು, ನರಸಿಂಹದೇವರ ದೇವಸ್ಥಾನದಲ್ಲಿ ಸಭೆ ಸೇರಿದ ಒಂದು ವರ್ತಕ ಸಂಘವು ಅಸ್ಪೃಶ್ಯರಾದ ಮಾಲರು ಮತ್ತು ಮಾದಿಗರಿಗೂ ಸ್ಥಳೀಯ ರೈತರಿಗೂ ಉಂಟಾಗಿದ್ದ ವ್ಯಾಜ್ಯವನ್ನು ಹೇಗೆ ಪರಿಹರಿಸಿತು ಎಂಬುದನ್ನು ವರ್ಣಿಸುತ್ತದೆ. ಮಾಲರಿಗೆ ತೆರಿಗೆ ಪಾವತಿಯಿಂದ ವಿನಾಯಿತಿ ದೊರಕಿತು. ವಿವಾಹ ಸಂದರ್ಭಗಳಲ್ಲಿ ಚಪ್ಪರ ಹಾಕುವ ಕೆಲಸಕ್ಕೆ ಮಾದಿಗರಿಗೆ ಅನುಮತಿ ನೀಡಲಾಯಿತು.[೨೭] ನ್ಯಾಯದ ಪರಿಣತ ಜ್ಞಾನದ ಆವಶ್ಯಕತೆಯುಂಟಾದಾಗ, ಸ್ಥಳೀಯ ನಾಯಕನು ಅಥವಾ ಅಧಿಕಾರಿಯು ಒಂದು ಧರ್ಮಾಸನವನ್ನು, ಅಂದರೆ ನ್ಯಾಯಪೀಠವನ್ನು ನೇಮಿಸುತ್ತಿದ್ದನು. ಅದರಲ್ಲಿ ಅಗ್ರಹಾರದವರು, ಹಳ್ಳಿಯ ಅಧಿಕಾರಿಗಳು ಮತ್ತು ವರ್ತಕ ಸಂಘದ ಮುಖ್ಯಸ್ಥರು ಇರುತ್ತಿದ್ದರು.

ಕಸಬು ಮಂಡಳಿಗಳನ್ನು ಕುರಿತು ಆಮುಕ್ತಮಾಲ್ಯದವು ರೇಷ್ಮೆ ನೇಕಾರರ, ಹತ್ತಿ ನೇಕಾರರ ಮತ್ತು ಅಕ್ಕಸಾಲಿಗರ ಸಂಘಗಳನ್ನೂ ಚೀಲ ತಯಾರಿಸುವವರ ಮತ್ತು ಬುಟ್ಟಿ ಹೆಣೆಯುವವರ ಸಂಘಗಳನ್ನೂ ಉಲ್ಲೇಖಿಸುತ್ತದೆ.[೨೮] ಅನೇಕ ಶಾಸನಗಳು ಪಾಂಚಾಲಯರು ಎಂಬ ಹೆಸರಿನ ಕುಶಲಕರ್ಮಿಗಳ ಸಂಘಗಳನ್ನು

ಹೇಳುತ್ತವೆ. ಐದು ತೆರನಾದ ಕಸಬುದಾರರ ಸಂಘಗಳು ಅವು. ಅನಂತಪುರ ಜಿಲ್ಲೆಯ ಗುನಿವಾರಿಪಲ್ಲಿಯ ೧೪೧೮ರ ಒಂದು ಶಾಸನವು, ಎತ್ತುಗಳ ಮೇಲೆ, ಎಮ್ಮೆಗಳು ಹಾಗೂ ಬಂಡಿಗಳ ಮೇಲೆ ಕೊಡುವ ತೆರಿಗೆಯನ್ನು ಸಂಘವು ಕೊಡಬೇಕಾಗಿಲ್ಲವೆಂದು ವಿನಾಯಿತಿ ಕೊಟ್ಟಿದ್ದನ್ನು ಸ್ಥಿರೀಕರಿಸುತ್ತದೆ. ರಾಜನ ಸಿಂಹಾಸನವನ್ನು ತಯಾರಿಸಿಕೊಟ್ಟಿದ್ದಕ್ಕೆ ಉಡುಗೊರೆಯಾಗಿ ಇದನ್ನು ಘೋಷಿಸಲಾಯಿತು.[೨೯]

ನೇಯ್ಗೆಯು ಅತ್ಯಂತ ವ್ಯಾಪಕವಾಗಿ ಹರಡಿದ್ದ ಉದ್ಯಮಗಳಲ್ಲಿ ಒಂದು. ಭಾರೀ ಸಂಖ್ಯೆಯಲ್ಲಿ ಜನಸಾಮಾನ್ಯರ ಅಗತ್ಯಗಳನ್ನು ಅದು ಪೂರೈಸುತ್ತಿತ್ತು. ಪ್ರತಿಯೊಂದು ನೇಕಾರ ಕುಟುಂಬವೂ, ತಾನು ನಡೆಸುತ್ತಿದ್ದ ಕೈಮಗ್ಗಗಳ ಸಂಖ್ಯೆಗೆ ಅನುಗುಣವಾಗಿ ಲೆಕ್ಕ ಹಾಕಿ ರಾಜ್ಯದ ಸರಕಾರಕ್ಕೆ ತೆರಿಗೆಯನ್ನು ಸಲ್ಲಿಸುತ್ತಿದ್ದಿತು. ಇದನ್ನು ಮಗ್ಗರಿ ಎಂದು ಕರೆಯುತ್ತಿದ್ದರು.[೩೦] ಅಥರ್ವಣತಂತ್ರದ ಪ್ರಕಾರ ಪ್ರತಿ ಮಗ್ಗದ ಮೇಲಿನ ತೆರಿಗೆಯು ನೇಕಾರನ ಜಾತಿಯನ್ನು ಅವಲಂಬಿಸಿರುತ್ತಿತ್ತು.

ಎಣ್ಣೆ ತೆಗೆಯುವವರು ಕೊಡುವ ತೆರಿಗೆಗೆ ಗಾಣಗರಿ ಎಂಬ ಹೆಸರು.[೩೧]

ಹೀಗೇಯೇ ಚಿನಿವಾರರು, ಕುಂಬಾರರು, ಕಮ್ಮಾರರು, ಹೆಂಡ ಇಳಿಸುವವರು ಇವರೆಲ್ಲರೂ ಸರಕಾರಕ್ಕೆ ತೆರಿಗೆಯನ್ನು ಕೊಡುತ್ತಿದ್ದರು.

ವರ್ತಕ ಸಂಘಗಳು ಕಸಬು ಸಂಘಗಳ ಮೇಲೆ ಒಂದು ರೀತಿಯ ಅಧಿಕಾರವನ್ನು ಚಲಾಯಿಸುತ್ತಿದ್ದವು ಎಂಬುದನ್ನು ಕೆಲವು ಶಾಸನಗಳು ಸೂಚಿಸುತ್ತವೆ. ಬಹುಶಃ ವರ್ತಕ ಸಂಘವು ಕಸಬುದಾರರಿಗೆ ಹಣವನ್ನು ಸಾಲವಾಗಿ ಕೊಟ್ಟು, ನಿರ್ದಿಷ್ಟ ಪ್ರಮಾಣ ವಸ್ತುಗಳನ್ನು ನಿರ್ದಿಷ್ಟ ಸಮಯದೊಳಗೆ ಪೂರೈಸಬೇಕೆಂದು ವಿಧಿಸುತ್ತಿದ್ದಂತೆ ತೋರುತ್ತದೆ.

ವರ್ತಕರು ವ್ಯಕ್ತಿಗತವಾಗಿ ಹಾಗೂ ಸಂಘದ ಸದಸ್ಯರಾಗಿ, ದೇವಾಲಯಗಳಿಗೆ ಅಪಾರವಾದ ದಾನಧರ್ಮಗಳನ್ನು ಮಾಡುತ್ತಿದ್ದರು. ತಮ್ಮ ಲಾಭದ ಒಂದು ಭಾಗವನ್ನು ಪುಣ್ಯ ಸಂಪಾದನೆಗಾಗಿ ಮೀಸಲಾಗಿಡುತ್ತಿದ್ದರು. ಸರಕಾರಕ್ಕೆ ಬಗೆಬಗೆಯಾದ ತೆರಿಗೆಯನ್ನು ಸಲ್ಲಿಸುತ್ತಾ ಸಾಮ್ರಾಜ್ಯದ ಸಂಪತ್ತಿಗೂ ಅಭ್ಯುದಯಕ್ಕೂ ತಮ್ಮ ಕೊಡುಗೆಯನ್ನು ಸಲ್ಲಿಸುತ್ತಿದ್ದರು.

ವರ್ತಕರು ಸರಕಾರಕ್ಕೆ ಕೊಡುತ್ತಿದ್ದ ತೆರಿಗೆಗೆ ಮೂಲವೀಸೆ ಎಂದು ಹೆಸರು. ಅದು ಬಂಡವಾಳದ ೧/೧೬ ಭಾಗ. ಇದನ್ನು ಒಂದು ಮೊತ್ತವಾಗಿ ಸಂಗ್ರಹಿಸುವುದಕ್ಕೆ ಬದಲಾಗಿ ಮಾರುಕಟ್ಟೆಯಲ್ಲಿ ಮಾರುತ್ತಿದ್ದ ವಸ್ತುಗಳ ಮೇಲಿನ ಸುಂಕದ ರೂಪದಲ್ಲಿ ಸಂಗ್ರಹಿಸುತ್ತಿದ್ದರು.[೩೨] ರಾಜನೋ ಅವನ ಅಧೀನಾಧಿಕಾರಿಯೋ ತೆರಿಗೆಯನ್ನು ಒಂದು ದೇವಾಲಯಕ್ಕೋ ಮಠಕ್ಕೋ ದಾನ ಮಾಡಿದಾಗ ಅದಕ್ಕೆ ವರ್ತಕರ ಅನುಮತಿಯನ್ನು ಪಡೆಯುತ್ತಿದ್ದನು.

ಸುಂಕವೆನ್ನುವುದು ಒಂದು ಸ್ಥಳದಿಂದ ಇನ್ನೊಂದಕ್ಕೆ ಸಾಗುತ್ತಿದ್ದ ಎಲ್ಲಾ ಚಿಲ್ಲರೆ ಮಾರಾಟದ ಮೇಲೂ ಕೊಡಬೇಕಾಗಿದ್ದ ಎಕ್ಸೈಸ್ ತೆರಿಗೆ.[೩೩]

ಬೇರೊಂದು ಕಡೆಯಿಂದ ಆಮದು ಮಾಡಿಕೊಂಡ ವಸ್ತುಗಳ ಮೇಲೆ ವಿಧಿಸುತ್ತಿದ್ದ ಎಕ್ಸೈಸ್ ತೆರಿಗೆಯೇ ಸ್ಥಳಸುಂಕ. ಇವು ಏಕರೂಪದ್ದಾಗಿರಲಿಲ್ಲ. ಏಕೆಂದರೆ, ತೆರಿಗೆ ಕೊಡುತ್ತಿದ್ದ ರೈತರು ವರ್ತಕರೊಂದಿಗೆ ಸೇರಿಕೊಂಡು ತಮಗೆ ಅನುಕೂಲಕರವಾದ ರೀತಿಯಲ್ಲಿ ದರವನ್ನು ನಿಗದಿಪಡಿಸುತ್ತಿದ್ದರು.

ಲೋಹಗಳ ಪೈಕಿ ಕಬ್ಬಿಣ ಮತ್ತು ಉಕ್ಕಿನ ಮೇಲಿನ ತೆರಿಗೆಯು ಸೀಸದ ಮತ್ತು ತಾಮ್ರ ಹಾಗೂ ತವರದ

ಮೇಲಿನ ತೆರಿಗೆಯ ಮೂರನೆ ಒಂದರಷ್ಟಿತ್ತು. ಇದರಿಂದ ಕೊನೆಯ ಮೂರೂ ತುಂಬಾ ವಿರಳವಾಗಿ ದೊರಕುತ್ತಿದ್ದುವು ಎಂಬುದು ಸೂಚಿತವಾಗುತ್ತದೆ. ಕಾಳು-ಬೇಳೆಗಳ ಮೇಲೆ ತೆರಿಗೆ ಹಗುರವಾಗಿತ್ತು. ಹತ್ತಿಗೆ ತೆರಿಗೆ ಕಡಮೆಯಿತ್ತು (ಒಂದು ಚೀಲಕ್ಕೆ ಒಂದು ಪೆರಿಕಾ). ಆದರೆ ಹತ್ತಿಯ ನೂಲಿಗೆ ಬಹುಪಟ್ಟು ಹೆಚ್ಚಾಗಿತ್ತು (ಚೀಲಕ್ಕೆ ನಾಲ್ಕು ದಮ್ಮಗಳು). ಎಲ್ಲ ಕಡೆಯೂ ಚೀಲದ ಅಳತೆ ಒಂದೇ ರೂಪದಲ್ಲಿದ್ದಿತೆ ಎನ್ನುವುದು ನಮಗೆ ತಿಳಿಯದು.

ಈ ಸುಂಕಗಳನ್ನು ವಸಂತಗರುವುಲು, ನೀರಿನ ನೆಲೆಗಳು, ಮಾರುಕಟ್ಟೆಗಳು, ಯಾತ್ರಾಸ್ಥಳಗಳಿಗೆ ಹೋಗುವ ರಸ್ತೆಗಳು ಮೊದಲಾದ ಅನುಕೂಲವಾದ ಎಡೆಗಳಲ್ಲಿ ವಸೂಲು ಮಾಡುತ್ತಿದ್ದರು.[೬೫]

ಮಾಳಿಗೆ ಸುಂಕ, ಅಡ್ಡಗದ ಸುಂಕ, ಕಾರಸುಂಕ, ಮಾರ್ಗಾದಾಯ, ವಿರಳಂ ಇತ್ಯಾದಿ ಅನೇಕ ತೆರಿಗೆಗಳನ್ನು ಶಾಸನಗಳು ಉಲ್ಲೇಖಿಸುತ್ತವೆ. ಸಂಗ್ರಹಿಸುತ್ತಿದ್ದ ತೆರಿಗೆಗಳ ವೈವಿಧ್ಯವನ್ನೂ ಬಹುಳ್ಯತೆಯನ್ನು ಕುರಿತು ವೆಂಕಟರಮಣಯ್ಯ ಹೇಳುತ್ತಾರೆ: ''ಮೇಲೆ ಹೇಳಿದ ಮಾತುಗಳಿಂದ, ಜನರ ಆರ್ಥಿಕ ಜೀವನವು ಸಂಪೂರ್ಣವಾಗಿ ಬೆಗಡುಗೊಳಿಸುವ ತೆರಿಗೆಗಳ ವೈವಿಧ್ಯ ಬಹುಳತೆಯ ಅಡ್ಡಗೋಡೆಗಳಿಂದ ಆವೃತ್ತವಾಗಿತ್ತು ಎಂಬುದು ತಿಳಿಯುತ್ತದೆ. ಈ ಪರಿಸ್ಥಿತಿಯಲ್ಲೂ ವ್ಯಾಪಾರ ವಹಿವಾಟು ವಿಪುಲವಾಗಿದ್ದುದು ಹೇಗೆ ಎನ್ನುವುದೇ ಆಶ್ಚರ್ಯದ ಸಂಗತಿಯಾಗಿದೆ.''[೬೬]

ಕೃಷಿ ಉತ್ಪನ್ನಗಳ ವ್ಯಾಪಾರ

೧೩೩೬-೧೭೬೧ ಈ ಅವಧಿಯಲ್ಲಿ ಜನತೆಯ ಬಹುಭಾಗವು ಗ್ರಾಮಾಂತರ ಪ್ರದೇಶಗಳಲ್ಲಿ ವಾಸಮಾಡುತ್ತಿದ್ದಿತು. ಹಳ್ಳಿಯು ಬಹುಮಟ್ಟಿಗೆ ಸ್ವಯಂಪೂರ್ಣವಾಗಿದ್ದಿತು, ಜೀವನದ ಅಗತ್ಯಗಳನ್ನೆಲ್ಲ ತಾನೇ ಪೂರೈಸಿಕೊಳ್ಳುತ್ತಿದ್ದಿತು. ಆದರೂ ಕೃಷಿ ಉತ್ಪನ್ನಗಳಿಗೆ ವ್ಯಾಪಕವಾದ ಮಾರುಕಟ್ಟೆಯಿದ್ದಿತು. ವಾಸ್ತವವಾಗಿ ಈಗ ಪರಿಶೀಲಿಸುತ್ತಿರುವ ಕಾಲಾವಧಿಯಲ್ಲಿ ಕೃಷಿ ಉತ್ಪನ್ನಗಳ ವ್ಯಾಪಾರ ವಹಿವಾಟು ಒಂದು ಮುಖ್ಯವಾದ ಪರಿವರ್ತನೆಯನ್ನು ಕಂಡಿತು. ಈ ಬದಲಾವಣೆಗೆ ಕಾರಣ ಹಣದ ಪ್ರಸರಣವು ಹೆಚ್ಚಾದುದು, ಸಂಬಾರ ಪದಾರ್ಥಗಳು, ಅದರಲ್ಲೂ ಮುಖ್ಯವಾಗಿ ಮೆಣಸು, ಕಬ್ಬು ಮತ್ತು ಹತ್ತಿ ಮೊದಲಾದ ನಗದು ಬೆಳೆಗಳ ಉತ್ಪಾದನೆ ಅಧಿಕಗೊಂಡುದು ಮತ್ತು ಕರ್ನಾಟಕದ ಕರಾವಳಿಗೆ ಯೂರೋಪಿಯನ್ ವರ್ತಕರು ಬಂದಿಳಿದುದು. ಅದರಿಂದಾಗಿ ವಿಶಾಲ ಮಾರುಕಟ್ಟೆಗಳ ಬೆಳವಣಿಗೆ. ಇದರ ಜೊತೆಗೆ ಗ್ರಾಮಾಂತರ ಪ್ರದೇಶಗಳಲ್ಲಿ ಸ್ಥಳೀಯ ಮಾರುಕಟ್ಟೆಗಳಿದ್ದುದನ್ನು ಶಾಸನಗಳು ಮತ್ತು ಸಾಹಿತ್ಯಕ ಮೂಲಗಳು ಸ್ಥಿರಪಡಿಸುತ್ತವೆ. ಇವುಗಳಿಂದ ರೈತರಿಗೂ ವರ್ತಕರಿಗೂ ನಡುವೆ ಕೃಷಿ ಉತ್ಪನ್ನಗಳು ಧಾರಾಳವಾಗಿ ವಿನಿಮಯಗೊಳ್ಳಲು ಅವಕಾಶವಾಯಿತು. ಸಕ್ರಿಯವಾಗಿದ್ದ ಈ ವ್ಯಾಪಾರದಿಂದಾಗಿ, ಹಳ್ಳಿಗಳಿಗೆ ನಗದು ಹಣವು ಹರಿದುಬಂದಿತು. ರೈತರಿಗೆ ಸರಕಾರಕ್ಕೆ ಕಂದಾಯವನ್ನು, ಜಮೀನುದಾರರಿಗೆ ಬಾಡಿಗೆಯನ್ನು ನಗದಾಗಿ ಪಾವತಿ ಮಾಡಲು ರೈತರಿಗೆ ಸಾಧ್ಯವಾಯಿತು. ತಾವು ಹಳ್ಳಿಗಳಲ್ಲಿ ಉತ್ಪಾದಿಸಲು ಸಾಧ್ಯವಿರದಿದ್ದ ಉಪ್ಪು, ಬಟ್ಟೆಗಳು, ಮತ್ತು ಸಾಂಪ್ರದಾಯಿಕ ಚಿನ್ನಾಭರಣಗಳು ಇತ್ಯಾದಿಗಳನ್ನು ಅವರು ನಗದು ಹಣಕೊಟ್ಟು ಕೊಂಡುಕೊಳ್ಳುವ ಹಾಗಾದರು. ಎಲ್ಲಕ್ಕಿಂತ ಮಿಗಿಲಾಗಿ. ಅನ್ಯಥಾ ರಾಜಕೀಯ ಅನೈಕ್ಯದ ಚಿತ್ರವನ್ನು ಕೊಡುತ್ತಿದ್ದ ಕರ್ನಾಟಕದ ಬೇರೆ ಬೇರೆ ಪ್ರದೇಶಗಳ ನಡುವೆ ಈ ವ್ಯಾಪಾರ ವಹಿವಾಟು ಒಂದು ಪರಿಣಾಮಕಾರಿಯಾದ ಕೊಂಡಿಯಂತೆ ವರ್ತಿಸಿತು. ಹಾಗಾಗಿ ಪರಿಶೀಲನೆಯ ಕಾಲಾವಧಿಗೆ ಸಂಬಂಧಿಸಿದಂತೆ ಕೃಷಿ ಆರ್ಥಿಕತೆಯ ಗಂಭೀರ ಅಧ್ಯಯನದ ಅಗತ್ಯವಿದೆ. ಅದಕ್ಕೆ ಕೃಷಿ ಉತ್ಪನ್ನಗಳಿಗಿದ್ದ ಮಾರುಕಟ್ಟೆಯ ವ್ಯವಸ್ಥೆ ಮತ್ತು ವ್ಯಾಪ್ತಿಗಳನ್ನು ನಾವು ತಿಳಿದುಕೊಳ್ಳಬೇಕು. ಈ ಅಧ್ಯಾಯವನ್ನು ಎರಡು ಭಾಗವಾಗಿ ಮಾಡಬಹುದು. ಅ) ಆಂತರಿಕ ವ್ಯಾಪಾರ, ಆ) ಹೊರಗಿನ (ವಿದೇಶ)

ವ್ಯಾಪಾರ. ಕೃಷಿ ಉತ್ಪನ್ನಗಳ ದೇಶೀಯ ವ್ಯಾಪಾರದಲ್ಲಿ ಸಂತೆಗಳು ಮುಖ್ಯವಾಗಿದ್ದುವು. ರೈತರು ಅಲ್ಲಿ ತಮ್ಮ ವಸ್ತುಗಳನ್ನು ಮಾರಾಟ ಮಾಡುತ್ತಿದ್ದರು.

ಕೃಷಿ ಉತ್ಪನ್ನಗಳ ವ್ಯಾಪಾರವು ಹೆಚ್ಚಿದುದರಿಂದ ಸಂತೆಗಳ ಸ್ಥಾಪನೆಗೆ ಅವಕಾಶವಾಯಿತು. ಅವು ಮಧ್ಯಯುಗೀನ ಕರ್ನಾಟಕದಲ್ಲಿ ನಗರಗಳ ಬೆಳವಣಿಗೆಗೆ ಎಡೆಮಾಡಿಕೊಟ್ಟುವು. ಈ ಸಂತೆಗಳೇ ಒಳನಾಡು ವ್ಯಾಪಾರ ಮುಖ್ಯ ಮಾರ್ಗಗಳಾಗಿದ್ದುವು. ಮಾರುವವರೂ ಕೊಳ್ಳುವವರೂ ನಿರ್ದಿಷ್ಟ ಸ್ಥಳದಲ್ಲಿ ನಿರ್ದಿಷ್ಟ ಸಮಯದಲ್ಲಿ ಸೇರುವುದೇ ಸಂತೆ. ಆದ್ದರಿಂದ ಅದು ಮುಖ್ಯವಾದ ವ್ಯವಹಾರ ಕೇಂದ್ರವಾಗಿತ್ತು. ಸಂತೆಗಳು ನಡೆಯುತ್ತಿದ್ದ ನಗರಗಳು ವರ್ತಕರಿಗೆ ಮತ್ತು ರೈತರಿಗೆ ಕೆಲವು ಅನುಕೂಲಗಳನ್ನು ಮಾಡಿಕೊಡುತ್ತಿದ್ದುವು. ಒಳ್ಳೆಯ ರಸ್ತೆ, ಸಮೃದ್ಧವಾಗಿ ನೀರು, ಇತ್ಯಾದಿ. ಸಂತೆಗೆ ಸಂಬಂಧಪಟ್ಟ ವೆಚ್ಚಗಳನ್ನು ನಿರ್ವಹಿಸಲು ಸುಂಕವನ್ನು ಸಂಗ್ರಹಿಸಲಾಗುತ್ತಿದ್ದಿತು. ಕೆಲವು ವೇಳೆ ವಸ್ತುಗಳು ಊರಿಗೆ ಪ್ರವೇಶ ಮಾಡುವಾಗ ವಸ್ತುರೂಪದಲ್ಲೇ ನಗದಾಗಿಯೇ ಪಡೆದುಕೊಳ್ಳಲಾಗುತ್ತಿತ್ತು. ಇನ್ನು ಕೆಲವು ಸಂರ್ಭಗಳಲ್ಲಿ ಮಾರಿದ ಮತ್ತು ಕೊಂಡ ವಸ್ತುಗಳ ಮೇಲೆ ವಿಧಿಸಲಾಗುತ್ತಿತ್ತು. ವರ್ತಕರು ಈ ಸುಂಕಗಳನ್ನು ಪಾವತಿ ಮಾಡುತ್ತಿದ್ದರು. ಹೀಗೆ ಸಂತೆಯನ್ನು ಏರ್ಪಡಿಸುವ ವ್ಯಕ್ತಿಗಳಿಗೆ ರೈತರು ಮತ್ತು ವರ್ತಕರು ಸೇರಿ ಭೂಮಿಯನ್ನು ಬಿಟ್ಟುಕೊಡುತ್ತಿದ್ದರು ಅಥವಾ ಕೆಲವು ರಿಯಾಯಿತಿಗಳನ್ನು ಘೋಷಿಸುತ್ತಿದ್ದರು. ಕೆಲವೊಮ್ಮೆ ವರ್ತಕ ಸಂಘದ ಮುಖ್ಯಸ್ಥನಿಗೆ ಸಂತೆಯನ್ನು ಏರ್ಪಡಿಸುವಂತೆ ಕೋರಿ ಒಂದು ತುಂಡು ಜಮೀನನ್ನು ನೀಡುತ್ತಿದ್ದುದುಂಟು. ಮಾರುಕಟ್ಟೆಯನ್ನು ಪೇಟೆ, ಸಂತೆ ಅಥವಾ ಸಂತೆಪೇಟೆ ಎಂದು ಕರೆಯುತ್ತಿದ್ದರು. ಇವುಗಳನ್ನು ನಾಡಗೌಡರೂ ಪ್ರಾರಂಭಿಸುತ್ತಿದ್ದರು ಅಥವಾ ನಿಂತುಹೋಗಿದ್ದರೆ ಮತ್ತೆ ಚಾಲನೆಗೊಳಿಸುತ್ತಿದ್ದರು. ಪ್ರಾಂತೀಯ ಗವರ್ನರ್‌ನ ಅಥವಾ ಮಂತ್ರಿಯ ಆದೇಶದಂತೆ ಗೌಡನು ತಾನೇ ಹಳೆಯ ಸಂತೆಯನ್ನು ಚಾಲ್ತಿಗೆ ತರುತ್ತಿದ್ದುದೂ ಉಂಟು.

ಒಂದು ಮುಖ್ಯ ವರ್ತಕ ಸಮುದಾಯವಾದ ಸಾಲುಮೂಲೆ ಬಣಜಿಗ ವರ್ತಕರು ಕೃಷಿ ಉತ್ಪನ್ನಗಳ ವಹಿವಾಟನ್ನೇ ಮುಖ್ಯವಾಗಿ ನಿರ್ವಹಿಸುತ್ತಿದ್ದರು. ಇವರು ವಿಜಯನಗರ ಸಾಮ್ರಾಜ್ಯದ ೨೬ ನಗರಗಳಲ್ಲಿ ಸಂತೆಗಳನ್ನು ಸ್ಥಾಪಿಸಿದ್ದರು: ಅವು, ೧. ವಿಜಯನಗರಿ, ೨. ಹಸ್ತಿನಾವತಿ, ೩. ದೋರಸಮುದ್ರ, ೪ ಗುತ್ತಿ, ೫. ಪೆನುಕೊಂಡಾ, ೬. ಆದವಾನಿ, ೭. ಉದಯಗಿರಿ, ೮. ಚಂದ್ರಗಿರಿ, ೯. ಮುಳುವಾಯಿ ಅಥವಾ ಮುಳಬಾಗಿಲು, ೧೦. ಕಂಚಿ, ೧೧. ಪಡೆವೀಡು. ೧೨. ಚದುರಂಗಪಟ್ಟಣ, ೧೩. ಮಂಗಳೂರು, ೧೪. ಬಾರಕೂರು, ೧೫. ಹೊನ್ನಾವರ, ೧೬. ಚಂದಾವರ, ೧೭. ಚಂದ್ರಗುತ್ತಿ, ೧೮. ಅಣ್ಣಿಗೇರಿ, ೧೯. ಹುಲಿಗೆರೆ, ೨೦. ನಿಡುಗಲ್ಲು, ೨೧. ಚಿಮತನಕಲ್ಲು, ೨೨. ತರಿಯಕಲ್ಲು, ೨೩. ಆನೆವಿಡ್ಡ, ೨೪. ಸರಿಕಲ್ಲೆಯ ೨೫. ತೆಲಕಲಾಂಬಿ ಅಥವಾ ತೆರಕಣಾಂಬಿ, ಮತ್ತು ೨೬. ಸಿಂಗಪಟ್ಟಣ.[೬೭] ಈ ಪಟ್ಟಿಯಿಂದ ನಾವು ಬಳ್ಳಾರಿ, ಹಾಸನ, ಕೋಲಾರ, ದಕ್ಷಿಣ ಕನ್ನಡ, ಉತ್ತರ ಕನ್ನಡ, ಶಿವಮೊಗ್ಗ, ಧಾರವಾಡ, ತುಮಕೂರು, ಚಿತ್ರದುರ್ಗ ಮತ್ತು ಮೈಸೂರು ಜಿಲ್ಲೆಗಳು ವಿಜಯನಗರ ಕಾಲದಲ್ಲಿ ಬಹುಮುಖ್ಯ ವ್ಯಾಪಾರ ಕೇಂದ್ರಗಳಾಗಿದ್ದುವು ಎಂದು ಹೇಳಬಹುದು. ಕರ್ನಾಟಕವಲ್ಲದೆ, ಸಾಲುಮೂಲೆ ಬಣಜಿಗರು ತಮಿಳುನಾಡು ಮತ್ತು ಆಂಧ್ರಗಳೊಂದಿಗೂ ಸಂಪರ್ಕವಿರಿಸಿಕೊಂಡಿದ್ದರು. ಈ ಪಟ್ಟಿಯಲ್ಲಿ ೧೦, ೧೧ ಮತ್ತು ೧೨ನೆಯ ಶತಮಾನಗಳಲ್ಲಿ ಪ್ರಸಿದ್ಧ ವ್ಯಾಪಾರ ಕೇಂದ್ರಗಳಾಗಿದ್ದ ಐಹೊಳೆ ಮತ್ತು ಬಳ್ಳಿಗಾಮೆಗಳು ಕಾಣಿಸುತ್ತಿಲ್ಲ. ವಿಜಯನಗರ ಕಾಲಕ್ಕೆ ಇವು ತಮ್ಮ ಪ್ರಾಮುಖ್ಯವನ್ನು ಕಳೆದುಕೊಂಡಿರಬಹುದೆಂದು ಇದರಿಂದ ಸೂಚಿತವಾಗುತ್ತದೆ.

ಈ ಇಪ್ಪತ್ತಾರು ನಗರಗಳ ಸಂತೆಗಳು ಬತ್ತ, ಜೋಳ, ರಾಗಿ, ಬಾರ್ಲಿ, ಬರಗು, ಸಾವೆ, ಗೋಧಿ, ಕಡಲೆ, ಎಳ್ಳು, ಅಗಸೆ, ಕುಸುಬೆ, ಹೆಸರು, ಉದ್ದು, ತೊಗರಿ, ಹುರುವಳ್ಳಿ, ಅಕ್ಕಿ, ಸಕ್ಕರೆ, ಎಣ್ಣೆ, ತುಪ್ಪ, ಉಪ್ಪು, ಬೆಲ್ಲ,

ಅಡಕೆ, ವೀಳ್ಯದೆಲೆ, ಮೆಣಸು, ಅರಿಶಿನ, ಈರುಳ್ಳಿ, ಜೀರಿಗೆ, ಮೆಂತ್ಯ, ಸಬ್ಬಸಿಗೆ, ಸಾಸಿವೆ ಮತ್ತು ಕಬ್ಬು[೮೮] ಮೊದಲಾದ ಕೃಷಿ ಉತ್ಪನ್ನಗಳ ಹಂಚಿಕೆ ಮತ್ತು ಸಂಗ್ರಹಣೆಗಳ ಸಂದರ್ಭ ಮತ್ತು ವಿಧಾನಗಳಾಗಿದ್ದುವು. ಈ ಸಂತೆಗಳಲ್ಲಿ ವಸ್ತುಗಳು ಭಾರೀ ಪ್ರಮಾಣದಲ್ಲಿ ವಿನಿಮಯವಾಗುತ್ತಿದ್ದುವು. ಸುತ್ತುಮುತ್ತಲ ಗ್ರಾಮಾಂತರ ಪ್ರದೇಶಗಳಿಂದ ಬಂದ ರೈತಾಪಿ ಜನರು ಕರ್ನಾಟಕದ ದೂರದೂರದ ಸ್ಥಳಗಳಿಂದ ಬಂದು, ವಿಧವಿಧವಾದ ಉಡುಗೆಗಳಿಂದ ಆಕರ್ಷಕರಾಗಿದ್ದ ಮಾರಾಟಗಾರರನ್ನು ನೋಡುತ್ತಿದ್ದರು. ಅವರು ಮಾರುತ್ತಿದ್ದ ಬಟ್ಟೆಗಳು, ಧಾನ್ಯಗಳು, ಸಂಬಾರ ವಸ್ತುಗಳು ಮತ್ತು ಸುಗಂಧ ದ್ರವ್ಯಗಳು ಅವರ ಮನ ಸೆಳೆಯುತ್ತಿದ್ದುವು.[೮೯] ಹಳ್ಳಿಯಿಂದ ಎಷ್ಟೋ ಮೈಲಿಗಳಾಚೆ ನಡೆಯುತ್ತಿದ್ದ ಘಟನೆಗಳ ಬಗೆಗೆ ಅಲ್ಲಿ ಅವರಿಗೆ ತಿಳಿಯುತ್ತಿತ್ತು. ತಮ್ಮಲ್ಲೂ ನೆರೆಹೊರೆಯಲ್ಲೂ ದೊರಕದ ವಸ್ತುಗಳನ್ನು ಕೊಳ್ಳಲು ಈ ಸಂತೆಗಳು ಅವರಿಗೆ ಏಕೈಕ ಅವಕಾಶವಾಗಿದ್ದುವು. ಅದಕ್ಕಿಂತ ಮುಖ್ಯವಾಗಿ, ರೈತರು ಹಳ್ಳಿಗಳಲ್ಲಿ ನಡೆಸುತ್ತಿದ್ದ ತಮ್ಮ ಜೀವನಕ್ಕಿಂತ ಹೊರಗಿನ ವ್ಯವಹಾರಗಳ ಬಗೆಗೆ ತಿಳುವಳಿಕೆ ಪಡೆಯುತ್ತಿದ್ದರು.

ಕೃಷಿ ಉತ್ಪನ್ನಗಳ ಮಾರಾಟದ ಪ್ರಮಾಣ ಎಷ್ಟಿತೆಂದರೆ, ಅದು ವರ್ತಕ ಸಂಘಗಳ ಬೆಳವಣಿಗೆಗೆ ಮಹತ್ವದ ಕೊಡುಗೆಯನ್ನು ನೀಡಿತ್ತು. ಇಂತಹ ಸಂಘಗಳ ಅಸ್ತಿತ್ವವನ್ನು ರಜಾಕ್ ಮತ್ತು ಪೇಸ್ ಅಂತಹ ವಿದೇಶೀ ಪ್ರವಾಸಿಗರು ಸಮರ್ಥಿಸಿದ್ದಾರೆ.[೯೦] ಅವರಿಗೆ ಬೇರೆ ಬೇರೆ ಹೆಸರುಗಳಿದ್ದುವು. ಬಣಜಿಗರು, ನಾನಾದೇಶಿಗಳು ಉಭಯ-ನಾನಾದೇಶಿಗರು, ನಖರರು, ವೈಶ್ಯರು, ಸೆಟ್ಟಿಗಳು, ಸೆಟ್ಟಿಗುಟ್ಟರು, ವೀರಬಣಜಿಗರು ಇತ್ಯಾದಿ. ಈ ಸಂಘಗಳ ಮುಖ್ಯಸ್ಥರು ವಾಣಿಜ್ಯ ಕೇಂದ್ರಗಳ ಮುಖ್ಯಸ್ಥರೂ ಆಗಿರುತ್ತಿದ್ದು ಬೇರೆ ಬೇರೆ ಹೆಸರುಗಳಿಂದ ಕರೆಯಲ್ಪಡುತ್ತಿದ್ದರು. ಉಭಯ ನಾನಾದೇಸಿ, ಪಟ್ಟಣಸ್ವಾಮಿ, ಮಹಾ ವಡ್ಡವ್ಯವಹಾರಿ, ವಡ್ಡವ್ಯವಹಾರಿ, ಪಟ್ಟ ವ್ಯಾಪಾರಿ, ಸೆಟ್ಟಿ, ಸ್ವಾಮಿ, ಪೃಥ್ವೀಸೆಟ್ಟಿ, ಸೆಟ್ಟಿ ಪಟ್ಟಣಸ್ವಾಮಿ, ಸೆಟ್ಟಿತನ, ಪುರಪತಿ, ನಗರೇಶ್ವರ, ಪಟ್ಟಣಾಧೀಶ್ವರ ಹಾಗೂ ಮಹಾಪ್ರಭು.[೯೧] ಈ ವರ್ತಕ ಸಮುದಾಯಗಳಲ್ಲಿ, ಪರಿಶೀಲನೆಯ ಕಾಲಾವಧಿಯಲ್ಲಿ ಸಾಲುಮೂಲೆ ಬಣಜಿಗರು ಮುಖ್ಯರಾಗಿದ್ದರು. ಅವರ ಸಂಘಟನೆಯನ್ನು ಕುರಿತು ಸ್ವಾರಸ್ಯವಾದ ವಿವರಗಳು ನಮಗೆ ದೊರಕುತ್ತವೆ.

ವಿಜಯನಗರ ಕಾಲದ ಶಾಸನಗಳು ವಿಶೇಷವಾಗಿ ಸಾಲುಮೂಲೆ ಬಣಜಿಗರನ್ನು ಉಲ್ಲೇಖಿಸುತ್ತವೆ. ಸಾಲುಮೂಲೆ ಎಂಬ ಪದವು ಬಹುಶಃ ಬಣಜಿಗ ಸಮುದಾಯದಲ್ಲೇ ಬಹು ಪ್ರಧಾನವಾಗಿದ್ದ ಉಪಜಾತಿಯೊಂದನ್ನು ಸೂಚಿಸುತ್ತಿರಬಹುದು. ಇದು ತಕ್ಕಮಟ್ಟಿಗೆ ವಿಹಿತವಾದ ನಿರ್ಣಯವೆಂಬಂತೆ ತೋರುತ್ತದೆ. ಏಕೆಂದರೆ ೨ನೇ ಹರಿಹರನ ಬೇಲೂರು ಶಾಸನವು, ವಿಜಯನಗರ ಸರಕಾರದೊಂದಿಗೆ ತೆರಿಗೆ ಒಪ್ಪಂದ ಮಾಡಿಕೊಳ್ಳುತ್ತಿದ್ದ ಸಮಯದಲ್ಲಿ ''ಅವರನ್ನು ಅವಲಂಬಿಸಿದ್ದ ವಿವಿಧ ಪಂಗಡ''ಗಳನ್ನು ಸೂಚಿಸುತ್ತದೆ.[೯೨] ಬಣಜಿಗ ಸಮುದಾಯವು ಅನೇಕ ಉಪಪಂಗಡಗಳನ್ನು ಹೊಂದಿದ್ದಿತು ಎಂಬುದನ್ನು ಸಾಲುಮೂಲೆ ಬಣಜಿಗರು ಅವರಲ್ಲಿ ಬಹುಮುಖ್ಯರಾಗಿದ್ದರು ಎಂಬುದನ್ನೂ ಇದು ತೋರಿಸುತ್ತದೆ. ಇದಕ್ಕೆ ಕಾರಣ ಸಾಲುಮೂಲೆ ಬಣಜ ಸಮುದಾಯದಲ್ಲಿ ಅಪಾರ ಧನವಿದ್ದುದೋ ಇತರರು ಅವರನ್ನು ತಮ್ಮ ಮುಖಂಡರನ್ನಾಗಿ ಆರಿಸಿಕೊಂಡುದೋ ಆಗಿರಬಹುದು. ಅವರು ಮೂಲ ಭದ್ರೇಶ್ವರನ ಸಂತತಿಯವರಾದುದರಿಂದ ಸಾಲುಮೂಲೆ ಎಂಬ ವಿಶೇಷಣವು ಬಂದಿರಬಹುದು.[೯೩] ವೀರಬಣಜಿಗರು ೧೧ ಮತ್ತು ೧೨ನೆಯ ಶತಮಾನಗಳಲ್ಲಿ ವಿಶೇಷತಃ ಉತ್ತರ ಕರ್ನಾಟಕದಲ್ಲಿ ಪ್ರಧಾನರಾಗಿದ್ದರು.[೯೪] ೧೪ನೆಯ ಶತಮಾನದ ಅನಂತರ ಸಾಲುಮೂಲೆ ಬಣಜಿಗರು ಮಹತ್ವವನ್ನು ಪಡೆದರು. ಆದ್ದರಿಂದ ಅವರು ಆ ಕಾಲದ ಶಾಸನಗಳಲ್ಲಿ ಪ್ರಧಾನವಾಗಿ ಕಾಣಿಸಿಕೊಳ್ಳುತ್ತಾರೆ. ಸಾಲುಮೂಲೆ ಬಣಜಿಗರು ವಿಜಯಗರ ಸಾಮ್ರಾಜ್ಯದ ೨೬ ನಗರಗಳಲ್ಲಿ ಸಂತೆಗಳನ್ನು ಸ್ಥಾಪಿಸಿದ್ದರು, ಕೃಷಿ ಉತ್ಪನ್ನಗಳ ಮಾರಾಟವನ್ನು ಹೆಚ್ಚಿಸುವ ಸಲುವಾಗಿ.

೨ನೇ ಹರಿಹರನ ಬೇಲೂರು ಶಾಸನವು ಸಾಲುಮೂಲೆ ಬಣಜಿಗ ವರ್ತಕರ ದೊಡ್ಡದೊಂದು ಸಭೆಯನ್ನು ದಾಖಲಿಸುತ್ತದೆ. ಅವರನ್ನು ಅವಲಂಬಿಸಿದ್ದ ಹೊಲಿಯರು, ನಖರ ಪರಿವಾರದವರು, ಮುಮ್ಮರಿದಂಡರು, ಪಟ್ಟಣಸೆಟ್ಟಿಗಳು, ಬಿಲ್ಲರು ಇವರುಗಳನ್ನು ಒಳಗೊಂಡ ಆ ಮಹಾಸಭೆಯು ವಿಜಯನಗರ ಪಟ್ಟಣದಲ್ಲಿ ಕ್ರಿ.ಶ. ೧೩೮೨ರಲ್ಲಿ ನಡೆಯಿತು. ಇದಕ್ಕೆ ಅಧ್ಯಕ್ಷನಾಗಿದ್ದವನು ವಿಜಯನಗರ ಸರಕಾರದಲ್ಲಿ ತೆರಿಗೆಗಳ ಮೇಲ್ವಿಚಾರಕ ಅಧಿಕಾರಿಯಾಗಿದ್ದ ಮುದ್ದೆಯ ದಣ್ಣಾಯಕನೆಂಬುವನು. ಸಭೆಯ ಉದ್ದೇಶ, ಸಾಲುಮೂಲೆ ಬಣಜಿಗರು ಸಂಗ್ರಹಿಸಿ ವಿಜಯನಗರ ಸರಕಾರಕ್ಕೆ ಸಲ್ಲಿಸಬೇಕಾದ ತೆರಿಗೆಯ ದರವನ್ನು ನಿಗದಿ ಪಡಿಸುವುದು.[೯೫] ವಿಸ್ತಾರವಾಗಿ ಚರ್ಚೆ ನಡೆಸಿದ ಮೇಲೆ ಸಾಲುಮೂಲೆ ಬಣಜಿಗರು ಒಪ್ಪಂದ ಮಾಡಿಕೊಂಡರು. ಔಷಧಿಗಳು, ಬಿಡಿ ವಸ್ತುಗಳು, ಧಾನ್ಯಗಳು, ಪ್ರಾಣಿಗಳು, ವೇಶ್ಯೆಯರು ಅಥವಾ ದಾಸಿಯರ ಮೇಲೆ ಕೊಡಬೇಕಾದ ತೆರಿಗೆಯನ್ನು ನಿರ್ಧರಿಸಿದರು. ತೆರಿಗೆ ವಿಭಾಗದಲ್ಲಿ ಅತ್ಯುನ್ನತ ಅಧಿಕಾರಿಯಾಗಿದ್ದ ಮುದ್ದೆಯ ದಣ್ಣಾಯಕನಿಗೆ ಪೃಥ್ವೀಸೆಟ್ಟಿತನದ ಬಿರುದನ್ನು ನೀಡಿ ಗೌರವಿಸಿದರು. ಸರಕಾರದ ಅತ್ಯುನ್ನತ ಅಧಿಕಾರಕ್ಕೆ ಅವರು ಸೂಚಿಸುವ ಮರ್ಯಾದೆಯ ಕುರುಹಾಗಿತ್ತು ಇದು.[೯೬]

ಒಪ್ಪಂದವಾಗುತ್ತಿದ್ದ ಸಮಯದಲ್ಲಿ ಹೊಲಿಯರು[೯೭] ಹಾಜರಿದ್ದರು ಎಂದು ಶಾಸನವು ಹೇಳುತ್ತದೆ. ಬಣಜಿಗ ಸಮುದಾಯವು ಮಾಡಿಕೊಂಡ ಈ ಒಪ್ಪಂದವು ಸಾಮಾನ್ಯ ಸ್ವರೂಪದ್ದಾಗಿದ್ದುದರಿಂದ, ಸಮಾಜದ ಪ್ರತಿಯೊಂದು ವರ್ಗದ ಮೇಲೂ ಅದರ ಪರಿಣಾಮವಾಗುತ್ತಿದ್ದುದರಿಂದ, ಎಲ್ಲ ಜನರೂ ಉಪಯೋಗಿಸುವ ಕೃಷಿ ವಸ್ತುಗಳ ಮೇಲೆ ತೆರಿಗೆ ದರ ನಿಗದಿಪಡಿಸುವಾಗ ಎಲ್ಲ ವರ್ಗಗಳ ಪ್ರತಿನಿಧಿಗಳೂ ಹಾಜರಿದ್ದರೆಂದು ಭಾವಿಸಬಹುದು. ಆದ್ದರಿಂದ ಹೊಲಿಯರು ಎಂಬ ಪದವು ವಿಶಾಲಾರ್ಥದಲ್ಲಿ ರೈತರು, ಕುಶಲಕರ್ಮಿಗಳು ಮತ್ತು ಇತರರನ್ನು ಒಳಗೊಳ್ಳುತ್ತಿತ್ತು ಎಂದು ತೋರುತ್ತದೆ.[೯೮]

ಸಾಲುಮೂಲೆ ಬಣಜಿಗರು ವಿಜಯನಗರ ಸರಕಾರದೊಂದಿಗೆ ಮಾಡಿಕೊಂಡ ಈ ಒಪ್ಪಂದದ ಒಂದು ಪ್ರತಿಯು ಇದ್ದ ತಾಮ್ರಫಲಕವು ದೊರಕಿದೆ. ಇದಕ್ಕೆ ಮಹತ್ವವಿದೆ. ರಾಜಧಾನಿಯಲ್ಲಿ ಬಣಜಿಗರ ಮುಖಸ್ಥರು ಮಾಡಿಕೊಂಡ ಈ ಒಪ್ಪಂದವನ್ನು ಹಲವಾರು ತಾಮ್ರಫಲಕಗಳ ಮೇಲೆ ಪ್ರತಿಮಾಡಿಸಿ ವಿವಿಧ ವ್ಯಾಪಾರ ಕೇಂದ್ರಗಳಿಗೆ ಕಳುಹಿಸಲಾಯಿತೆಂದು ತೋರುತ್ತದೆ (೨೬ ವ್ಯಾಪಾರ ಕೇಂದ್ರಗಳನ್ನು ಶಾಸನದಲ್ಲಿ ಹೇಳಿದೆ). ತೆರಿಗೆಯ ದರಗಳನ್ನು ಕುರಿತು ಇತ್ತೀಚೆಗೆ ಮಾಡಿಕೊಂಡ ಕರಾರಿನ ಮಾಹಿತಿಯು ಎಲ್ಲಾ ವ್ಯಾಪಾರ ಕೇಂದ್ರಗಳಿಗೆ ತಿಳಿದಿರಬೇಕೆನ್ನುವುದು ಅದರ ಉದ್ದೇಶ. ಅಲ್ಲಿಂದ ಮುಂದಕ್ಕೆ ಆ ಹೊಸದರದಲ್ಲಿ ಜನರಿಂದ ತೆರಿಗೆಗಳನ್ನು ಅವರು ಸಂಗ್ರಹಿಸಬೇಕಾಗಿತ್ತು. ಹಾಸನಜಿಲ್ಲೆ ಬೇಲೂರಿನ ಬಳಿಯ ದೋರಸಮುದ್ರವು ಅಂಥದೊಂದು ವ್ಯಾಪಾರ ಕೇಂದ್ರವಾಗಿತ್ತೆಂದು ಶಾಸನವು ಹೇಳುತ್ತದೆ.[೯೯]

ವಿಜಯನಗರ ಕಾಲದಲ್ಲಿ ಸಾಲುಮೂಲೆ ಬಣಜಿಗರು ಉತ್ತಮ ರೀತಿಯಲ್ಲಿ ಸಂಘಟಿತರಾಗಿದ್ದರು. ಅವರು ಒಟ್ಟುಗೂಡಿ ಸರಕಾರದೊಂದಿಗೆ ಒಪ್ಪಂದ ಮಾಡಿಕೊಂಡರು. ವರ್ತಕನೊಬ್ಬನು ವೈಯಕ್ತಿಕವಾಗಿ ಸರಕಾರದೊಂದಿಗೆ ಸಂಪರ್ಕವಿರಿಸಿಕೊಳ್ಳುವುದಕ್ಕೆ ಬದಲಾಗಿ, ಈ ಸಂದರ್ಭದಲ್ಲಿ, ಇಡೀ ಸಮುದಾಯವೇ ಸಂಪರ್ಕವನ್ನು ಸ್ಥಾಪಿಸಿಕೊಂಡಿತು. ವ್ಯಕ್ತಿಗತವಾಗಿ ಹೋದರೆ ಅಧಿಕಾರಿಗಳು ಅಷ್ಟಾಗಿ ಮರ್ಯಾದೆ ಕೊಡುತ್ತಿರಲಿಲ್ಲವೋ ಏನೋ, ಆದರೆ ಈಗ ಸಮುದಾಯದಲ್ಲಿ ಒಬ್ಬನಾದ್ದರಿಂದ ಅಧಿಕಾರಿಗಳ ಕಣ್ಣಿನಲ್ಲಿ ಅವನ ಗೌರವ ಹೆಚ್ಚಿತು. ಹೀಗೆ ಕರ್ನಾಟಕದ ಇಡೀ ವ್ಯಾಪಾರ-ವಹಿವಾಟು ಸುಸಂಘಟಿತವಾಗಿದ್ದುದನ್ನೂ, ಸ್ವ-ನಿಯಂತ್ರಿತವಾಗಿದ್ದುದನ್ನೂ ಆ ಕಾಲದಲ್ಲಿ ನೋಡಬಹುದಾಗಿತ್ತು. ೨೬ ವ್ಯಾಪಾರ ಕೇಂದ್ರಗಳಿಗೆ ಸೇರಿದ ಬಣಜಿಗ ವರ್ತಕರು ತಮ್ಮ ಹಿತವನ್ನು ರಕ್ಷಿಸಿಕೊಳ್ಳುವ ಸಲುವಾಗಿ ಹಾಗೂ ವಿಜಯನಗರ ಸರಕಾರದೊಂದಿಗೆ ವ್ಯವಹರಿಸುವ ಸಲುವಾಗಿ ಹೀಗೆ ಒಕ್ಕೂಟವನ್ನು ಮಾಡಿಕೊಂಡದ್ದು ನಮಗೆ ಮಧ್ಯಕಾಲದ ಜರ್ಮನಿಯಲ್ಲಿ

ಹೆಚ್ಚುಕಡಮೆ ಇದೇ ಉದ್ದೇಶದಿಂದ ಅಸ್ತಿತ್ವಕ್ಕೆ ಬಂದಿದ್ದ ಹನ್ಸಿಯಾಟಿಕ್ ಲೀಗ್ ಅನ್ನು ನೆನಪಿಗೆ ತರುತ್ತದೆ. ಬಣಜಿಗ ಸಮುದಾಯವು ಶ್ರೀಮಂತವಾಗಿತ್ತು, ಬಲಿಷ್ಠವಾಗಿತ್ತು. ವಿಜಯನಗರಿಯಲ್ಲಿ ಸಭೆ ಸೇರಿದ ವರ್ತಕರು ಒಟ್ಟಾಗಿ ವಿರೂಪಾಕ್ಷದೇವರಿಗೆ ನವರತ್ನಗಳು ಮೆಟ್ಟಿದ ಒಂದು ಅಮೂಲ್ಯವಾದ ಚಾಮರವನ್ನು ಅರ್ಪಿಸಿದರು ಎನ್ನುವುದರಿಂದ ಈ ಸಮುದಾಯದ ಶ್ರೀಮಂತಿಕೆಯ ಸೂಚನೆ ನಮಗೆ ದೊರಕುತ್ತದೆ.[೧೦೦] ಅದು ೧೪ ರಿಂದ ೧೬ನೆಯ ಶತಮಾನದವರೆಗೂ ಪ್ರಮುಖವಾಗಿ ಕಾಣಿಸಿಕೊಳ್ಳುತ್ತಿತ್ತು.[೧೦೧]

ರಾಜಧಾನಿಯಾಗಿದ್ದುದಲ್ಲದೆ ವಿಜಯನಗರ ಪಟ್ಟಣವು ದೊಡ್ಡ ವ್ಯಾಪಾರಕೇಂದ್ರವೂ, ಕರ್ನಾಟಕದ ವಾಣಿಜ್ಯ ಚಟುವಟಿಕೆಗಳಿಗೆ ಕೇಂದ್ರಸ್ಥಾನವೂ ಆಗಿತ್ತು. ಇದನ್ನು ರಷ್ಯಾ, ಪರ್ಷಿಯಾ, ಇಟಲಿ ಮತ್ತು ಪೋರ್ಚುಗಲ್ಲುಗಳಿಂದ ೧೫ ಮತ್ತು ೧೬ನೆಯ ಶತಮಾನಗಳಲ್ಲಿ ಬಂದ ಪ್ರವಾಸಿಗರು ಸ್ಥಿರಪಡಿಸಿದ್ದಾರೆ.[೧೦೨] ಪೇಸ್‌ನ ಪ್ರಕಾರ, ''ಈ ನಗರದಲ್ಲಿ ಜಗತ್ತಿನ ಪ್ರತಿಯೊಂದು ರಾಷ್ಟ್ರದಿಂದ ಬಂದ ವಿವಿಧ ಜನರನ್ನು ನೋಡಬಹುದು. ಅದಕ್ಕೆ ಕಾರಣ ಅಲ್ಲಿ ನಡೆಯುವ ಭಾರೀ ಪ್ರಮಾಣದ ವ್ಯಾಪಾರ-ವಹಿವಾಟು''.[೧೦೩] ಬೇರೊಂದು ಕಡೆ ಅವನೇ ಹೇಳುತ್ತಾನೆ, ವಿಜಯನಗರದಲ್ಲಿ ೧೦೦,೦೦೦ ಮನೆಗಳಿದ್ದುವು; ಸರಾಸರಿ ಒಂದು ಮನೆಗೆ ಐದು ಜನರಂತೆ ಲೆಕ್ಕ ಹಾಕಿದರೆ, ೧೬ನೆಯ ಶತಮಾನದ ಪ್ರಾರಂಭದಲ್ಲಿ ಈ ವ್ಯಾಪಾರಿ ಕೇಂದ್ರದ ಜನಸಂಖ್ಯೆ ೫೦೦,೦೦೦ ಆಗುತ್ತಿತ್ತು. ಕೃಷಿ ಉತ್ಪನ್ನಗಳ ವ್ಯಾಪಾರವನ್ನು ಮುಖ್ಯವಾಗಿ ನಿರ್ವಹಿಸುತ್ತಿದ್ದ ಸಾಲುಮೂಲೆ ಬಣಜಿಗರ ಸಭೆಯ ಬಗೆಗೆ ಹೇಳುವ ಶಾಸನವು ವಿಜಯನಗರ ಪಟ್ಟಣವು ಒಂದು ದೊಡ್ಡ ವ್ಯಾಪಾರ ಕೇಂದ್ರವಾಗಿತ್ತು ಎನ್ನುವುದನ್ನೂ ದಾಖಲಿಸುತ್ತದೆ.[೧೦೪]

ನಗರದಲ್ಲಿ ಬೇರೆ ಬೇರೆ ಬಡಾವಣೆಗಳಿದ್ದುವು. ಪ್ರತಿ ಬಡಾವಣೆಯೂ ಸ್ವಯಂಪೂರ್ಣವಾದ ಘಟಕವಾಗಿತ್ತು. ಮುಖ್ಯವಾದೊಂದು ದೇವಾಲಯ, ಸಂತೆಬೀದಿ, ಅದರದೇ ನೀರು ಸರಬರಾಜು ವ್ಯವಸ್ಥೆ ಇತ್ಯಾದಿಗಳಿದ್ದುವು. ವಿರೂಪಾಕ್ಷ ದೇವಾಲಯದ ಎದುರಿಗೆ ಒಂದು ಸಂತೆಪೇಟೆಯಿತ್ತು. ಅನೇಕ ವೇಳೆ ದೇವಾಲಯವು ಕರ್ನಾಟಕದ ವಿವಿಧ ಭಾಗಗಳಿಂದ ಬಂದ ವರ್ತಕರು ಸಂಧಿಸುವ ಸ್ಥಳವಾಗುತ್ತಿತ್ತು.[೧೦೫] ವಿಜಯನಗರ ಪಟ್ಟಣದ ಒಂದು ಪೇಟೆಬೀದಿಗೆ ಅಚ್ಯುತರಾಯನ ಹೆಸರಿನ ಮೇಲೆ ಅಚ್ಯುತರಾಯಪೇಟೆ ಎಂದೇ ಹೆಸರಿತ್ತು.[೧೦೬] ಇನ್ನೊಂದು ಪೇಟೆಯೂ ಕೃಷ್ಣದೇವರಾಯನ ಹೆಸರಿನ ಮೇಲಿದ್ದು, ಅಲ್ಲಿ ಧಾನ್ಯಗಳ ಅಂಗಡಿಗಳಿದ್ದುವೆಂದು ಶಾಸನವು ಹೇಳುತ್ತದೆ.[೧೦೭] ಇದೆಲ್ಲ ಕೃಷಿ ಉತ್ಪನ್ನಗಳ ಮಾರಾಟದ ವಿಷಯದಲ್ಲಿ ವಿಜಯನಗರದ ಅರಸರು ಹೊಂದಿದ್ದ ತೀವ್ರವಾದ ಆಸಕ್ತಿಯನ್ನು ತೋರಿಸುತ್ತದೆ. ನಗರ ಪ್ರದೇಶಗಳ ಪೇಟೆಬೀದಿಗಳು ಗ್ರಾಮ ಪ್ರದೇಶಗಳ ಸಂತೆಗಳಿಗೆ ಸಂವಾದಿಯಾಗಿದ್ದುವು ಎಂದು ಹೇಳಬಹುದು.

೧೬ನೆಯ ಶತಮಾನದಲ್ಲಿ ಕರ್ನಾಟಕಕ್ಕೆ ಭೇಟಿ ನೀಡಿದ ಪೋರ್ಚುಗೀಸ್ ಪ್ರವಾಸಿ ನ್ಯೂನಿಜ್, ಈ ಮಾರುಕಟ್ಟೆಗಳಲ್ಲಿ ಸದಾಕಾಲವೂ ಸಮೃದ್ಧವಾಗಿ ಹಣ್ಣುಹಂಪಲುಗಳು ತುಂಬಿದ್ದುದನ್ನು ಗಮನಿಸಿದನು. ದ್ರಾಕ್ಷಿ, ಕಿತ್ತಳೆ, ನಿಂಬೆ, ದಾಳಿಂಬೆ, ಹಲಸು ಮತ್ತು ಮಾವಿನಹಣ್ಣುಗಳು ಸಮೃದ್ಧವಾಗಿದ್ದುವು ಮತ್ತು ಈ ಹಣ್ಣುಗಳು ತುಂಬಾ ಅಗ್ಗವೂ ಆಗಿದ್ದುವು.[೧೦೮] ವಿಜಯನಗರ ಪಟ್ಟಣದಲ್ಲಿ ಪ್ರತಿ ಸಂಜೆಯೂ ಸಂತೆ ನಡೆಯುತ್ತಿತ್ತು, ಈ ಎಲ್ಲಾ ವಸ್ತುಗಳು ಅಲ್ಲಿ ದೊರಕುತ್ತಿದ್ದುವು.[೧೦೯] ವಸ್ತುಗಳ ಪ್ರಮಾಣ ನ್ಯೂನಿಜ್‌ನನ್ನು ಬೆರಗಾಗಿಸಿತು. ಪ್ರತಿದಿನವೂ ಮಾರುಕಟ್ಟೆಯಲ್ಲಿ ದೊರಕುತ್ತಿದ್ದ ಬೆಣ್ಣೆ, ಹಾಲು ಮತ್ತು ಎಣ್ಣೆಗಳ ಉತ್ತಮ ಗುಣಮಟ್ಟವನ್ನು ವಿಶೇಷವಾಗಿ ಉಲ್ಲೇಖಿಸದೆ ಇರಲು ಅವನಿಗೆ ಸಾಧ್ಯವಾಗಲಿಲ್ಲ.[೧೧೦]

ಕೃಷಿ ಉತ್ಪನ್ನಗಳ ಮೇಲೆ ವಿಧಿಸುತ್ತಿದ್ದ ಸಾರಿಗೆ ಸುಂಕವು ಕರ್ನಾಟಕದಲ್ಲಿ ರಾಜ್ಯ ವರಮಾನದ ಮುಖ್ಯವಾದೊಂದು ಮೂಲವಾಗಿತ್ತು. ಎತ್ತುಗಳ ಮೇಲೆ ಹೇರಿಕೊಂಡು ಮೆಣಸು, ಅಡಕೆ, ರೇಷ್ಮೆ, ಮರಮುಟ್ಟು, ಅಕ್ಕಿ, ಬತ್ತ, ರಾಗಿ, ಉಪ್ಪು, ಧಾನ್ಯ, ಎಣ್ಣೆ, ತುಪ್ಪ, ಬೇಳೆಕಾಳುಗಳು, ಬೆಲ್ಲ, ಹಣ್ಣುಗಳು, ತೆಂಗಿನ ತಿರುಳು, ಹತ್ತಿ

ಬಟ್ಟೆ, ಹೊಗೆಸೊಪ್ಪು, ಜೀರಿಗೆ, ಸಾಸಿವೆ, ಈರುಳ್ಳಿ, ಬೆಳ್ಳುಳ್ಳಿ, ಅರಿಶಿನ, ಶುಂಠಿ ಮತ್ತಿತರ ವಸ್ತುಗಳನ್ನು ಸಾಗಿಸುತ್ತಿದ್ದುದನ್ನು ಶಾಸನಗಳು ಉಲ್ಲೇಖಿಸುತ್ತವೆ.[೧೧೧]

ಎಲ್ಲಾ ಬಗೆಯ ಕೃಷಿ ಉತ್ಪನ್ನಗಳ ಮೇಲೂ ಈ ಸಾಗಣೆ ಸುಂಕವನ್ನು ವಿಧಿಸಿದ್ದರು. ಒಂದು ಶಾಸನವು ವಿಜಯನಗರ ಸಾಮ್ರಾಜ್ಯದ ವ್ಯಾಪಾರ ಕೇಂದ್ರಗಳಲ್ಲಿ ಹೀಗೆ ಕೊಡಬೇಕಾದ ಸುಂಕಗಳ ದರವನ್ನು, ವಸ್ತುಗಳ ಪಟ್ಟಿಯನ್ನು ಕೊಡುತ್ತದೆ.[೧೧೨] ಹೀಗೆ ಕರ್ನಾಟಕದಲ್ಲಿ ಕೃಷಿ ಉತ್ಪನ್ನಗಳ ಅನೇಕ ವ್ಯಾಪಾರ ಕೇಂದ್ರಗಳು ಬೆಳೆದುದು ಒಳನಾಡ ವ್ಯಾಪಾರಕ್ಕೆ ತುಂಬಾ ಅನುಕೂಲಕರವಾಗಿ ಪರಿಣಮಿಸಿತು. ಆ ಕೇಂದ್ರಗಳಲ್ಲಿ ರೈತರು ತಂದ ವಸ್ತುಗಳು ಮಾರಾಟವಾಗುತ್ತಿದ್ದುವು, ಕೆಲವೊಮ್ಮೆ ವಿನಿಮಯಗೊಳ್ಳುತ್ತಿದ್ದುವು. ಆದರೆ ಹೆಚ್ಚುವರಿ ಉತ್ಪಾದನೆಯ ಬಹುಪಾಲನ್ನು ನಗರಗಳಲ್ಲಿದ್ದ ವರ್ತಕರಿಗೆ ಒದಗಿಸಲಾಗುತ್ತಿತ್ತು. ಅಲ್ಲಿಂದ ಕರ್ನಾಟಕದ ಇತರ ವ್ಯಾಪಾರಕೇಂದ್ರಗಳಿಗೆ ರವಾನೆಯಾಗುತ್ತಿದ್ದಿತು, ಇಲ್ಲವೆ ಬೇರೆ ದೇಶಗಳಿಗೆ ರಫ್ತಾಗುತ್ತಿದ್ದಿತು.

ಕೃಷಿ ಉತ್ಪಾದನೆಗಳ ವಿದೇಶವ್ಯಾಪಾರಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ, ಕರ್ನಾಟಕದ ಭಟ್ಕಳ, ಮಂಗಳೂರು, ಹೊನ್ನಾವರ ಬಂದರುಗಳಿಂದ ರಫ್ತಾಗುತ್ತಿದ್ದ ಅತ್ಯಂತ ಮುಖ್ಯವಾದ ವಸ್ತು ಮೆಣಸು. ಅದಕ್ಕೆ ಭಾರತದಲ್ಲೂ ಹೊರದೇಶದಲ್ಲೂ ಒಳ್ಳೆಯ ಮಾರುಕಟ್ಟೆಯಿದ್ದಿತು.

ಒಳನಾಡ ವ್ಯಾಪಾರದಲ್ಲೂ ಪಶ್ಚಿಮ ದೇಶಗಳೊಂದಿಗೆ ಸಾಗರೋತ್ತರ ವಾಣಿಜ್ಯದಲ್ಲೂ ಕರ್ನಾಟಕವು ವಿಶಿಷ್ಟವಾದ ಪಾತ್ರವನ್ನು ನಿರ್ವಹಿಸುತ್ತಿದ್ದಿತು. ಹೀಗೆ ವ್ಯಾಪಾರವಾಗುತ್ತಿದ್ದ ಕೃಷಿ ಉತ್ಪನ್ನಗಳ ಬಹುಪಾಲು ಮೆಣಸು ಮತ್ತು ಇತರ ಸಂಬಾರ ವಸ್ತುಗಳು, ಪರ್ಯಾಯದ್ವೀಪದ ಪಶ್ಚಿಮದಲ್ಲಿ ಸೊಗಸಾದ ಉದ್ದನೆಯ ಕರಾವಳಿಯಿದ್ದು ಕರ್ನಾಟಕವು ಪಶ್ಚಿಮ ದೇಶಗಳೊಂದಿಗೆ ಸಂಪರ್ಕ ಕಲ್ಪಿಸುವ ಸಮುದ್ರಮಾರ್ಗಗಳ ಮೇಲೆ ಹಿಡಿತವನ್ನಿಟ್ಟುಕೊಂಡಿದ್ದವು. ಕರ್ನಾಟಕವು ವಿದೇಶಗಳೊಂದಿಗೆ ನಡೆಸುತ್ತಿದ್ದ ವಾಣಿಜ್ಯವು ನಮ್ಮ ಪರಿಶೀಲನೆಯ ಅವಧಿಯಲ್ಲಿ ತುಂಬಾ ಹೆಚ್ಚಿತ್ತು ಎಂದು ಕಾಣುತ್ತದೆ. ಅಬ್ದುಲ್ ರಜಾಕನ ಪ್ರಕಾರ, ವಿಜಯನಗರ ಸಾಮ್ರಾಜ್ಯದಲ್ಲಿ ೩೦೦ ಬಂದರುಗಳಿದ್ದುವು. ಹಿಂದೂಮಹಾಸಾಗರದ ದ್ವೀಪಗಳು, ಮಲಯ, ಬರ್ಮಾ, ಚೈನಾ, ಅರೇಬಿಯ, ಪರ್ಷಿಯ, ದಕ್ಷಿಣ ಆಫ್ರಿಕಾ, ಅಬಿಸೀನಿಯ, ಮತ್ತು ಪೋರ್ಚುಗಲ್‌ಗಳೊಂದಿಗೆ ವ್ಯಾಪಾರ ಸಂಬಂಧಗಳನ್ನು ಬೆಳೆಸಿಕೊಂಡಿದ್ದಿತು.[೧೧೩] ಒಳಭಾಗಗಳಿಂದ ಪಶ್ಚಿಮ ಕರಾವಳಿಯ ಅಂಕೋಲ, ಮಿರ್ಜಾನ್, ಹೊನ್ನಾವರ, ಭಟ್ಕಳ, ಬೈಂದೂರು, ಬಾರಕೂರು, ಬಸ್ರೂರು, ಮಂಗಳೂರು ಮತ್ತು ಕುಂಬ್ಳೆ ಮೊದಲಾದ ಪಟ್ಟಣಗಳಿಗೆ ಕೃಷಿ ಉತ್ಪನ್ನಗಳು ಕಾವಡಿಗಳ ಮೂಲಕ ಸಾಗುತ್ತಿದ್ದುವು. ಒಂದು ಉದ್ದನೆಯ ಕೋಲಿಗೆ ಎರಡೂ ತುದಿಗಳಲ್ಲಿ ಹಗ್ಗದಿಂದ ಸರಕನ್ನು ನೇತುಹಾಕಿ, ಹೆಗಲ ಮೇಲೆ ಹೊತ್ತು ಒಯ್ಯುವುದೇ ಕಾವಡಿ. ತಲೆ ಹೊರೆಗಳು, ಕುದುರೆ ಹೇರುಗಳು, ಎತ್ತಿನ ಹೇರುಗಳು, ಬಂಡಿಗಳು ಮತ್ತು ಹೇರು ಕತ್ತೆಗಳೂ ಉಪಯೋಗವಾಗುತ್ತಿದ್ದುವು.[೧೧೪] ಕರ್ನಾಟಕದ ಈ ಬಂದರುಗಳಲ್ಲಿ ಪೋರ್ಚುಗೀಸ್ ವರ್ತಕರು ಅಕ್ಕಿ, ಸಕ್ಕರೆ, ಸಂಬಾರ ವಸ್ತುಗಳು, ಹತ್ತಿಯಬಟ್ಟೆ ಮೊದಲಾದವನ್ನು ಕೊಂಡು ವಿದೇಶಿಗಳಿಗೆ ಹಡಗುಗಳ ಮೂಲಕ ರವಾನಿಸುತ್ತಿದ್ದರು.[೧೧೫] ಬಸ್ರೂರು, ಬಾರಕೂರು ಮತ್ತು ಮಂಗಳೂರು ಬಂದರುಗಳಿಂದ ಮಾಲ್ಡೀವ್ ದ್ವೀಪಗಳು, ಏಡನ್ ಮತ್ತು ಆರ್ಮುಜ್‌ಗಳಿಗೆ ಅಕ್ಕಿಯು ರಫ್ತಾಗುತ್ತಿತ್ತು.[೧೧೬] ಕೃಷ್ಣದೇವರಾಯನ ಸಮಕಾಲೀನರಾದ ಕನಕದಾಸರು ತಮ್ಮ ಮೋಹನತರಂಗಿಣಿಯಲ್ಲಿ, ಕೃಷಿ ಉತ್ಪನ್ನಗಳನ್ನು ವಿದೇಶಗಳಿಗೆ ಕಳಿಸಿ ವ್ಯಾಪಾರ ಮಾಡುತ್ತಿದ್ದವರ ಸಂಪತ್ತು ಎಷ್ಟಿರುತ್ತಿದ್ದಿತೆಂದರೆ, ಅವರು ಕುಬೇರನಿಗೂ ಸಾಲ ಕೊಡಬಲ್ಲವರಾಗಿದ್ದರು, ತಮ್ಮ ಅಂಗಡಿ ಮಳಿಗೆಗಳಲ್ಲಿ ಚಿನ್ನದ ಮತ್ತು ಹಣದ ರಾಶಿಯ ಮೇಲೆ ಕುಳಿತಿರುತ್ತಿದ್ದರು ಎಂದು ಹೇಳುತ್ತಾರೆ.[೧೧೭]

ಸಂಬಾರ ಪದಾರ್ಥಗಳೇ ಪ್ರಮುಖವಾಗಿದ್ದ ವಿದೇಶವ್ಯಾಪಾರ ವಹಿವಾಟು ಹೆಚ್ಚುಕಡಮೆ ಪೂರ್ತಿಯಾಗಿ, ವಿಜಯನಗರದ ಕಾಲದಲ್ಲಿ (೧೩೩೬-೧೫೬೫) ಅರಬ್ಬರು ಮತ್ತು ಪೋರ್ಚುಗೀಸರ ಕೈಗಳಲ್ಲಿತ್ತು. ಭಾರತೀಯ ಮಾರುಕಟ್ಟೆಯಿಂದ ಪೋರ್ಚುಗೀಸರು ಅರಬ್ಬರನ್ನು ಯಶಸ್ವಿಯಾಗಿ ಓಡಿಸಿದರು. ಪೋರ್ಚುಗೀಸರಿಗೆ ಮಂಗಳೂರು, ಬಾರ್ಸೆಲೂರು ಮತ್ತು ಹೊನ್ನಾವರಗಳಲ್ಲಿಗೋದಾಮುಗಳಿದ್ದುವು. ಪೇಸ್ ತನ್ನ ವರದಿಯಲ್ಲಿ ಹೀಗೆ ಬರೆಯುತ್ತಾನೆ: ''ಈ ರಾಜ್ಯಕ್ಕೆ ಭಾರತದ ಕರಾವಳಿಯಲ್ಲಿ ಹಲವು ಬಂದರುಗಳಿವೆ. ನಾವು ಶಾಂತಿಯಿಂದಿರುವ ಕೆಲವು ಬಂದರುಗಳಿವೆ, ಇನ್ನು ಕೆಲವದರಲ್ಲಿ ನಮ್ಮ ಫ್ಯಾಕ್ಟರಿಗಳಿವೆ. ಅಂಕೋಲ, ಮಿರ್ಜಿಯೋ, ಹೊನೋರ್, ಬೆಟೆಕಲ್ಲ, ಮಂಗಳೂರು, ಬಾರ್ಸೆಲೂರು ಮತ್ತು ಬಾಕನೂರು ಇತ್ಯಾದಿ''. [೧೧೮]

೧೫೦೩ರಲ್ಲಿ ವಾಸ್ಕೋಡಗಾಮನು ಅನೇಕ ಮೂರಿಷ್ ಹಡಗುಗಳು ಭಟ್ಕಳ ಬಂದರಿನಲ್ಲಿ ಲಂಗರು ಹಾಕಿ ನಿಂತಿರುವುದನ್ನು ಗಮನಿಸಿದನು. ಅದು ಭಾರತದ ಎಲ್ಲಾ ಕಡೆಗೂ ಅಕ್ಕಿ ಮತ್ತು ಸಕ್ಕರೆಗಳನ್ನು ರಫ್ತುಮಾಡುವ ಸ್ಥಳ. ಡಗಾಮನು ಮೂರರನ್ನು ಓಡಿಸಿ, ಭಟ್ಕಳದಲ್ಲಿ ಅಗಾಧ ಪ್ರಮಾಣದ ಅಕ್ಕಿಯನ್ನೂ ಸಕ್ಕರೆಯನ್ನೂ ಪಡೆದನು. ಭಟ್ಕಳದ ನಾಯಕನ ಪ್ರತಿನಿಧಿಗೆ ಅವನು ವಿಧಿಸಿದ ನಾಲ್ಕು ಷರತ್ತುಗಳು ಹೀಗಿದ್ದುವು: ೧) ಅವನು ಪೋರ್ಚುಗೀಸರಿಗೆ ಕಪ್ಪವನ್ನು ಕೊಡಬೇಕು, ೨) ಅವನು ಬೇರೆ ಯಾರೊಂದಿಗೂ ಮೆಣಸನ್ನು ವ್ಯಾಪಾರ ಮಾಡಕೂಡದು, ೩) ನಾಯಕನು ಟರ್ಕರನ್ನು ಕರೆತರಬಾರದು, ೪) ಅವನು ಕಲ್ಲೀಕೋಟೆಯೊಂದಿಗೆ ಯಾವುದೇ ಸಂಪರ್ಕ ಇರಿಸಿಕೊಳ್ಳಕೂಡದು.[೧೧೯] ವಾಸ್ಕೋಡಗಾಮ ವಿಧಿಸಿದ ಎರಡನೆ ಷರತ್ತು ಸ್ವಾರಸ್ಯವಾಗಿದೆ. ಏಕೆಂದರೆ ಅತ್ಯಂತ ಅಮೂಲ್ಯವಾಗಿದ್ದು ಅಪಾರ ಲಾಭವನ್ನು ತರುತ್ತಿದ್ದ ಮೆಣಸನ್ನು ಸಂಗ್ರಹಿಸಿಕೊಳ್ಳಲು ಹೇಗೆ ಪೋರ್ಚುಗೀಸರು ಮೊದಲಿನಿಂದಲೂ ಕಾತರರಾಗಿದ್ದರು ಎಂಬುದನ್ನು ಅದು ಸೂಚಿಸುತ್ತದೆ. ಆದ್ದರಿಂದ ಭಾರತದ ಪಶ್ಚಿಮ ಕರಾವಳಿಯಲ್ಲಿ ಮೆಣಸಿನ ವ್ಯಾಪಾರದ ಏಕಸ್ವಾಮ್ಯವನ್ನು ಸ್ಥಾಪಿಸುವುದೇ ಪೋರ್ಚುಗೀಸರ ನೀತಿಯಾಗಿತ್ತು. ಆದರೆ ಅವರೇ ಪ್ರಧಾನ ಶಕ್ತಿಗಳಾಗಿರುವವರೆಗೆ ಇದು ನಡೆಯಿತು. ಡಚ್ ಮತ್ತು ಇಂಗ್ಲಿಷರೂ ಮೆಣಸನ್ನು ಸಂಗ್ರಹಿಸಲು ಕರ್ನಾಟಕದ ಕರಾವಳಿಗೆ ಭೇಟಿ ಕೊಡಲು ತೊಡಗಿದಾಗ ಸ್ಪರ್ಧೆ ಅನಿವಾರ್ಯವಾಯಿತು. ಅನೇಕ ವೇಳೆ ಈ ಸ್ಪರ್ಧೆಗೆ ಕರ್ನಾಟಕದ ರಾಜಕಾರಣವೂ ಸೇರಿಕೊಂಡುಬಿಟ್ಟಿತು. ಈಗ ಅದನ್ನು ಸ್ವಲ್ಪ ಪರಿಶೀಲಿಸಬಹುದು.

ವರ್ತೆಮನೂ ೧೫೦೫ ರಲ್ಲಿ ಅಕ್ಕಿ ಮತ್ತು ಸಕ್ಕರೆ ಭಟ್ಕಳದಿಂದ ರಫ್ತಾಗುತ್ತಿದ್ದುದನ್ನು ಗಮನಿಸಿದ್ದನು.[೧೨೦] ಹದಿನಾರನೆಯ ಶತಮಾನದ ಪ್ರಾರಂಭದಲ್ಲಿ ಪೋರ್ಚುಗೀಸರು ಅಕ್ಕಿ ಮತ್ತು ಲವಂಗಗಳನ್ನು ಹೇರಳವಾಗಿ ಉತ್ಪಾದಿಸುವ ಭಟ್ಕಳದೊಂದಿಗೆ ನಿಕಟವಾದ ಸಂಪರ್ಕವನ್ನು ಹೊಂದಿದ್ದರು. ಅವರ ಹಡಗುಗಳು ಈ ವಸ್ತುಗಳನ್ನು ಭಟ್ಕಳದಿಂದ ಹೊರಕ್ಕೆ ಸಾಗಿಸುತ್ತಿದ್ದುವು. ಅಲ್ಲಿ ಅವರ ಕೋಠಿಗಳಿದ್ದುವು.[೧೨೧] ಬಾರ್ಬೋಸನ ಪ್ರಕಾರ, ಭಟ್ಕಳದಲ್ಲಿ ಹಲವು ಬಗೆಯ ವಸ್ತುಗಳು ಮಾರಾಟವಾಗುತ್ತಿದ್ದುವು ; ಮೂರರು ಮತ್ತು ''ಹೀದನರು'' ವ್ಯಾಪಾರದಲ್ಲಿ ನಿರತರಾಗಿದ್ದರು.[೧೨೨] ಪ್ರತಿವರ್ಷವೂ ಕರ್ನಾಟಕದ ಅತ್ಯಂತ ಪ್ರಸಿದ್ಧವಾದ ಈ ಬಂದರಿನಿಂದ ಮೆಣಸು, ಸಂಬಾರ ವಸ್ತುಗಳು, ಹುಡಿ ಮಾಡಿದ ಸಕ್ಕರೆ ಮತ್ತು ಬಿಳಿ ಅಕ್ಕಿಗಳನ್ನು ಕೊಂಡೊಯ್ಯಲು ಆರ್ಮುಸ್‌ನಿಂದ ಹಡಗುಗಳು ಬರುತ್ತಿದ್ದುವು. ಬಂದರಿನಲ್ಲಿ ಈ ವಸ್ತುಗಳು ಭಾರೀ ಪ್ರಮಾಣದಲ್ಲಿ ದಾಸ್ತಾನಿದ್ದುವು.[೧೨೩] ಮೈರೋಬಲಮ್ ಅವನ್ನು ಭಟ್ಕಳದ ವರ್ತಕರು ವಿಶೇಷವಾಗಿ ಕೂಡಿಡುತ್ತಿದ್ದರು. ಏಕೆಂದರೆ ಅದಕ್ಕೆ ಅರೇಬಿಯ ಮತ್ತು ಪರ್ಷಿಯಗಳಲ್ಲಿ ಒಳ್ಳೆಯ ಮಾರುಕಟ್ಟೆಯಿದ್ದಿತು. ಮೂರರು ಈ ವ್ಯಾಪಾರಕ್ಕೆ ದಲ್ಲಾಳಿಗಳಾಗಿದ್ದರು. ಪೋರ್ಚುಗೀಸರು ಬರುವುದಕ್ಕೆ ಮುಂಚೆ ಕರ್ನಾಟಕದ ವರ್ತಕರಿಗೂ ವಿದೇಶಿ ಗ್ರಾಹಕರಿಗೂ ನಡುವೆ ಅವರು ಮಧ್ಯವರ್ತಿಗಳಾಗಿದ್ದರು.[೧೨೪] ೧೫೩೦ರಲ್ಲಿ ಕೊಚ್ಚಿಯ ಕ್ಯಾಪ್ಟನ್ ಆಗಿದ್ದ ಅಫಾನ್ಸೋ ಮೆಕ್ಸಿಯಾ ಬರೆದ ವರದಿಯ ಒಂದು ಭಾಗವನ್ನು ಉದ್ಧರಿಸುವುದು ಸೂಕ್ತವಾಗುತ್ತದೆ.

ಅವನು ೧೫೩೦ ಜನವರಿ ೧೫ರಂದು ಪೋರ್ಚುಗಲ್ಲಿನ ರಾಜನಿಗೆ ಬರೆದನು: ''ಬೆಟಿಕಾಲಿಯ ಮತ್ತು ಗೋವಾ ನಡುವೆ ಓನೋರ್, ಮೆರ್ಜಿನ್ ಮತ್ತು ಅಂಕೋಲಾ ಎಂಬ ಹೆಸರಿನ ಸ್ಥಳಗಳಿವೆ. ಇಲ್ಲಿಂದ ಪ್ರತಿವರ್ಷವೂ ೫೦೦೦ ಕ್ರುಸೆಡೋ ಬೆಲೆಯ ಮೆಣಸು ದಿಯ್ಯೂ, ಆರ್ಮೆಜ್ ಮತ್ತು ಜೆಡ್ಡಾಗಳಿಗೆ ಹಡಗಿನಲ್ಲಿ ಹೋಗುತ್ತದೆ. ಮೂರರ ಹಡಗುಗಳು ಅದನ್ನು ಒಯ್ಯುತ್ತವೆ. ಈ ಸ್ಥಳಗಳು ಗೇರುಸೊಪ್ಪೆಯ ರಾಣಿಯ ಅಧಿಕಾರಕ್ಕೆ ಒಳಪಟ್ಟಿವೆ. ಅವಳು ನರಸಿಂಗರಾಜನ (ವಿಜಯನಗರ) ಅಧೀನಳಾಗಿದ್ದಾಳೆ. ಈ ಮೆಣಸು ಕೊಚ್ಚಿನ್‌ನಲ್ಲಿ ದೊರಕುವುದಕ್ಕಿಂತಲೂ ದೊಡ್ಡದು, ಆದರೆ ಅದರಷ್ಟು ಖಾರವಿಲ್ಲ. ನಾವು ಇದನ್ನು ಸಂಗ್ರಹಿಸಬೇಕೆಂದು ತೋರುತ್ತದೆ. ರಾಣಿಯೊಂದಿಗೆ ಒಂದು ಒಪ್ಪಂದ ಮಾಡಿಕೊಂಡು ಅದನ್ನು ಮಾಡಬಹುದು.''[೧೨೫] ಹೀಗೆ ಪೋರ್ಚುಗೀಸರು ಮೊದಲಿನಿಂದಲೂ ಕರ್ನಾಟಕದ ರಾಜಕೀಯ ಶಕ್ತಿಗಳೊಂದಿಗೆ ಸಂಪರ್ಕವಿರಿಸಿಕೊಂಡಿದ್ದರು, ಅವರ ಉದ್ದೇಶ ಮೆಣಸು ವ್ಯಾಪಾರದ ಸ್ವಾಮ್ಯವನ್ನು ಸಾಧಿಸಿಕೊಳ್ಳುವುದು. ಕರ್ನಾಟಕದ ವರ್ತಕರಿಂದ ಅತ್ಯಂತ ಕಡಮೆ ಬೆಲೆಗೆ ಮೆಣಸನ್ನು ಕೊಂಡು ಭಾರತದ ಇತರ ಭಾಗಗಳಲ್ಲೂ ಪರ್ಷಿಯದಲ್ಲೂ ಅದನ್ನು ಅತಿ ಹೆಚ್ಚು ಬೆಲೆಗೆ ಮಾರುತ್ತಿದ್ದರು.[೧೨೬]

ಸಾಮಾನ್ಯವಾಗಿ ಕರ್ನಾಟಕದ ಉತ್ತರ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳು ಮೆಣಸು, ಏಲಕ್ಕಿ ಮತ್ತಿತರ ಸಂಬಾರ ಪದಾರ್ಥಗಳ ಉತ್ಪಾದನೆಗೆ ಪ್ರಸಿದ್ಧವಾಗಿದ್ದುವು. ಈ ಸ್ಥಳಗಳ ಹವೆಯು ಮೆಣಸಿನ ಬೆಳೆಗೆ ಅನುಕೂಲಕರವಾಗಿದ್ದಿತು. ಹಾಗಾಗಿ ಈ ಪ್ರದೇಶಗಳಿಂದ ಮುಖ್ಯವಾಗಿ ಈ ವಸ್ತುಗಳು ರಫ್ತಾಗುತ್ತಿದ್ದುವು. ಉತ್ತರಕನ್ನಡ ಜಿಲ್ಲೆಯ ಸೂಂದಾ ಹದಿನೇಳನೆಯ ಶತಮಾನದ ಇಂಗ್ಲಿಷರ ಕೋಠಿಯ ವರದಿಗಳಲ್ಲಿ ಮೆಣಸು ಬೆಳೆಯುವ ಪ್ರಸಿದ್ಧ ಕೇಂದ್ರವಾಗಿ ಕಾಣಿಸಿಕೊಳ್ಳುತ್ತದೆ. ಕೆನರಾದ ಹಾಗಲ್ಲದೆ ಇಲ್ಲಿ ಮೆಣಸು ಸೂಂದಾ ರಾಜರ ಸ್ವಾಮ್ಯವಾಗಿರಲಿಲ್ಲ. ತಮಗೆ ಇಚ್ಛೆ ಬಂದ ಕಡೆಗೆ ಅದನ್ನು ಸಾಗಿಸಲು ವರ್ತಕರಿಗೆ ಮುಕ್ತ ಅವಕಾಶವಿದ್ದಿತು. ಅದರ ಮೇಲೆ ಸುಂಕವನ್ನು ಕೊಟ್ಟರೆ ತೀರಿತು ಅಷ್ಟೆ. ಹಾಗೆಯೇ ಮೆಣಸಿನ ಉತ್ಪಾದನೆಗೂ, ಯಾವುದೇ ಮಿತಿಯನ್ನು ವಿಧಿಸಿರಲಿಲ್ಲ.[೧೨೭] ಮೆಣಸು ಬೆಳೆಯುವ ಪ್ರದೇಶವು ಉತ್ತರ ಕನ್ನಡದ ಸೂಂದಾ ನಾಯಕನಿಗೆ ಪ್ರತಿವರ್ಷವೂ ೧,೦೦,೦೦೦ ಡಾಲರು (೩೦ ಲಕ್ಷ ಪಗೋಡಗಳು) ವರಮಾನ ಬರುತ್ತಿದ್ದಿತು. ಫ್ರೈಯರ್ ಹೇಳುತ್ತಾನೆ: ''ಜಗತ್ತಿನಲ್ಲಿ ಅತ್ಯುತ್ತಮವಾದ ಮೆಣಸು ಸೂಂದಾದಲ್ಲಿ ಬೆಳೆಯುವಂಥದು.'' ಮೆಣಸಿನ ರಫ್ತು ಒಂದರಿಂದಲೇ ಸೂಂದಾದ ರಾಜನಿಗೆ ಅಗಾಧವಾದ ಲಾಭವನ್ನು ತಂದುಕೊಟ್ಟಿದರಲ್ಲಿ ಏನೂ ಆಶ್ಚರ್ಯವಿಲ್ಲ.[೧೨೮]

ಕರ್ನಾಟಕದ ಪಶ್ಚಿಮ ಕರಾವಳಿಯಲ್ಲಿದ್ದ ಇನ್ನೊಂದು ಮುಖ್ಯವಾದ ಬಂದರು ಕಾರವಾರ. ಪರಿಶೀಲನೆಯ ಅವಧಿಯಲ್ಲಿ ಮೆಣಸಿನ ವ್ಯಾಪಾರದಲ್ಲಿ ಇದು ಅತ್ಯಂತ ಪ್ರಸಿದ್ಧವಾದ ಬಂದರಾಗಿತ್ತು. ಯೂರೋಪಿನ ದೇಶಗಳಲ್ಲಿ, ಅದರಲ್ಲೂ ಇಂಗ್ಲೆಂಡಿನಲ್ಲಿ ಕಾರವಾರದ ಮೆಣಸು ಎಷ್ಟು ಪ್ರಸಿದ್ಧವಾಗಿತ್ತೆಂದರೆ, ''ಕಾರವಾರ್ ಪೆಪ್ಪರ್'' ತುಂಬಾ ಜನಪ್ರಿಯವಾಗಿತ್ತು.[೧೨೯] ತುಂಬಾ ಬೆಲೆ ಸಿಕ್ಕಿರುದರಿಂದ ಸೂಂದಾದ ರಾಜನು ತನ್ನಬಳಿ ದಾಸ್ತಾನಿದ್ದ ಮೆಣಸೆಲ್ಲವನ್ನೂ ಮಾರಿಬಿಟ್ಟನು. ಅದರಿಂದ ಯೂರೋಪಿನಲ್ಲಿ ಅದರ ಅಭಾವ ಉಂಟಾಯಿತು.[೧೩೦] ೧೬೭೦ರಲ್ಲಿ ಮುಂಬಯಿ ಮತ್ತು ಸೂರತ್‌ಗಳಲ್ಲಿ ಉಂಟಾದ ಮಹಾ ಕುಸಿತದಿಂದಾಗಿ ಕಾರವಾರವು ಸಂಪದ್ಭರಿತವಾದಂತೆ ತೋರುತ್ತದೆ. ಮೊದಲನೆಯ ಸಾರಿಗೆ ಅದು ಇಂಗ್ಲೆಂಡಿನೊಂದಿಗೆ ವ್ಯಾಪಾರವನ್ನು ನಿರ್ವಹಿಸಿತು.[೧೩೧] ಈಸ್ಟ್ ಇಂಡಿಯಾ ಕಂಪೆನಿಯ ದಾಖಲೆಗಳಲ್ಲಿ ಕಾರವಾರವು ಮೆಣಸು ವ್ಯಾಪಾರದ ಪ್ರಸಿದ್ಧ ಕೇಂದ್ರವಾಗಿ ಕಂಡುಬರುತ್ತದೆ. ಹದಿನೆಂಟನೆಯ ಶತಮಾನದ ಪ್ರಾರಂಭದಲ್ಲಿ ಇಂಗ್ಲಿಷರು ಕಾರವಾರದೊಂದಿಗೆ ವ್ಯಾಪಾರ ಸಂಬಂಧಗಳನ್ನು ಹೊಂದಿದ್ದರು.[೧೩೨]

ಪರಿಶೀಲನೆಯ ಅವಧಿಯಲ್ಲಿ ಕರ್ನಾಟಕವು ಹಲವು ಬಗೆಯ ಮೆಣಸನ್ನು ಉತ್ಪಾದಿಸುತ್ತಿದ್ದಿತು. ಹದಿನೇಳನೆಯ ಶತಮಾನದಲ್ಲಿ ಭಾರತಕ್ಕೆ ಬಂದಿದ್ದ ಪ್ರವಾಸಿ ಟ್ರಾವರ್ನಿಯರ್ ಚಿಕ್ಕದು ಮತ್ತು ದಪ್ಪನೆಯದು

ಎಂದು ಎರಡು ಬಗೆಯಾಗಿ ಮೆಣಸು ಇದ್ದಿತೆಂದು ಹೇಳುತ್ತಾನೆ. ಮುಖ್ಯವಾಗಿ ಅವನ್ನು ಪಶ್ಚಿಮ ಕರಾವಳಿಯಿಂದಲೂ (ಕರ್ನಾಟಕದ ಬಂದರುಗಳೂ ಸೇರಿದಂತೆ) ಬಿಜಾಪುರ ರಾಜ್ಯದಿಂದಲೂ ಸಂಗ್ರಹಿಸಲಾಗುತ್ತಿತ್ತು. ಅದು ರಾಜಾಪುರದಲ್ಲಿ (ಮಹಾರಾಷ್ಟ್ರದ ರತ್ನಗಿರಿ ಜಿಲ್ಲೆ) ಮಾರಾಟವಾಗುತ್ತಿತ್ತು. ಅದು ದಪ್ಪಮೆಣಸು. ಗುಣಮಟ್ಟ ಬಹಳ ಉತ್ತಮವಾಗಿದ್ದ ಅದನ್ನು ಯೂರೋಪಿಗೆ ರಫ್ತು ಮಾಡಲಾಗುತ್ತಿತ್ತು. ಡಚ್ಚರು ನೇರವಾಗಿ ಮಲಬಾರಿಗಳಿಂದ ಕೊಂಡುಕೊಳ್ಳುತ್ತಿದ್ದರು. ಅವರು ಬಹುಶಃ ಕರ್ನಾಟಕದ ಬಂದರುಗಳಿಂದ ಕೊಂಡೊಯ್ದು ಡಚ್ಚರಿಗೆ ಮಾರುತ್ತಿದ್ದಂತೆ ತೋರುತ್ತದೆ, ಅದು ತಮ್ಮದೇ ದೇಶದಲ್ಲಿ ಬೆಳೆಯುತ್ತಿದ್ದ ಮೆಣಸಿನ ಫಸಲಿನ ಜೊತೆಗೆ.[೧೩೩]

ಕರ್ನಾಟಕದಿಂದ ನಮ್ಮ ಪರಿಶೀಲನೆಯ ಅವಧಿಯಲ್ಲಿ ಪಡೆಯಬಹುದಾಗಿದ್ದ ವಸ್ತುಗಳಲ್ಲಿ ಮೆಣಸು ಎಷ್ಟು ಅಮೂಲ್ಯವಾದ ವಸ್ತುವಾಗಿತ್ತೆಂದರೆ ಅದಕ್ಕಾಗಿ ಪೋರ್ಚುಗೀಸರು, ಇಂಗ್ಲಿಷರು, ಡಚ್ಚರು, ಕೊನೆಗೆ ಫ್ರೆಂಚರು ಕೂಡ ಕರ್ನಾಟಕದ ದೇಶೀಯ ಅರಸರೊಂದಿಗೆ ಸ್ನೇಹಯುತ ವ್ಯಾಪಾರ ಸಂಬಂಧಗಳನ್ನು ಹೊಂದಿರಲು ಉತ್ಸುಕರಾಗಿದ್ದರು. ಈ ನೀತಿಯೇ ಮುಂದುವರಿದು ಒಬ್ಬರ ವಿರುದ್ಧವಾಗಿ ಇನ್ನೊಬ್ಬರಿಗೆ ಸಶಸ್ತ್ರ ಸೇನಾ ಸಹಾಯ ಕೊಡುವುದರವರೆಗೂ ಹೋಗುತ್ತಿತ್ತು.

ಹದಿನೇಳನೆಯ ಶತಮಾನದ ಮೊದಲ ಪಾದದಲ್ಲಿ ಪೋರ್ಚುಗೀಸರು ಇನ್ನಿಬ್ಬರು ಪಾಶ್ಚಿಮಾತ್ಯ ಶಕ್ತಿಗಳನ್ನು, ಅಂದರೆ ಇಂಗ್ಲಿಷರು ಮತ್ತು ಡಚ್ಚರನ್ನು ಮೀರಿಸಿ ಮೆಣಸಿನ ವ್ಯಾಪಾರದ ಸ್ವಾಮ್ಯವನ್ನು ಪಡೆಯಲು ಕಾತರರಾಗಿದ್ದರು. ಇಕ್ಕೇರಿಯ ನಾಯಕನಿಂದ ಆ ಸ್ವಾಮ್ಯವನ್ನು ಅವರು ಪಡೆಯಬೇಕಾಗಿತ್ತು. ಈ ಉದ್ದೇಶದಿಂದ ಪೋರ್ಚುಗೀಸ್ ವೈಸರಾಯಿಯು ೧೬೨೩ರಲ್ಲಿ ವೆಂಕಟಪ್ಪನಾಯಕನ ಬಳಿಗೆ ಒಂದು ರಾಯಭಾರವನ್ನು ಕಳುಹಿಸಿದನು.[೧೩೪] ವಾಸ್ತವವಾಗಿ ಪೋರ್ಚುಗೀಸರು ''ಮೆಣಸಿನ ರಾಣಿ (pepper queen) ಎಂದು ಕರೆಯುತ್ತಿದ್ದ ಗೇರುಸೊಪ್ಪೆಯ ರಾಣಿಯ ಮೇಲೆ ವೆಂಕಟಪ್ಪನಾಯಕನು ಆಕ್ರಮಣ ಮಾಡಿದ ಉದ್ದೇಶವೇ ಅವಳ ಅಧೀನದಲ್ಲಿದ್ದು ಒಳ್ಳೆಯ ಮೆಣಸನ್ನು ಕೊಡುತ್ತಿದ್ದ ಫಲವತ್ತಾದ ಭೂಪ್ರದೇಶವನ್ನು ತನ್ನ ಅಧೀನ ಪಡಿಸಿಕೊಳ್ಳುವುದು. ಗೇರುಸೊಪ್ಪೆಯ ಈ ರಾಣಿ ಭೈರಾದೇವಿಯು ಬಿಜಾಪುರ ರಾಜ್ಯದ ಸಾಮಂತರಾಣಿಯಾಗಿದ್ದಳು.[೧೩೫] ಇಕ್ಕೇರಿಯ ವೆಂಕಟಪ್ಪನಾಯಕನು ಒಬ್ಬರ ಮೇಲೆ ಇನ್ನೊಬ್ಬರನ್ನು ಬಿಟ್ಟು ಆಟವಾಡುತ್ತಿದ್ದನು. ಮೆಣಸಿನ ವ್ಯಾಪಾರದ ಏಕಸ್ವಾಮ್ಯವನ್ನು ಪೋರ್ಚುಗೀಸರಿಗೆ ಕೊಡಲು ಇಚ್ಛೆ ತೋರಿಸುತ್ತಿದ್ದರೂ ರಹಸ್ಯವಾಗಿ ಇಂಗ್ಲಿಷರೊಂದಿಗೆ ಅದೇ ವಿಷಯವಾಗಿ ವ್ಯವಹಾರ ನಡೆಸಿದ್ದನು. ವಿಲಿಯಂ ಹೋರ್ ಎನ್ನುವವನು ಕಂಪೆನಿಗೆ ಬರೆದ ಒಂದು ಪತ್ರದಿಂದ ಇದು ವ್ಯಕ್ತಪಡುತ್ತದೆ. ಪತ್ರದ ಕಾಲ ಮೇ ೧೬೨೦.[೧೩೬]

ಹದಿನೇಳನೆಯ ಶತಮಾನದ ಉತ್ತರಾರ್ಧದಲ್ಲಿ ವ್ಯಾಪಾರ ಸಂಬಂಧಗಳನ್ನು ಕುರಿತು ಪೋರ್ಚುಗೀಸರಿಗೂ ಬಿಜಾಪುರದ ರಾಜರಿಗೂ ನಡುವೆ ಹೋರಾಟವಾಯಿತು. ಬಿಜಾಪುರದ ರಾಜರು ಯಾವಾಗಲೂ ಪೋರ್ಚುಗೀಸರನ್ನು ದ್ವೇಷಿಸುತ್ತಿದ್ದರು. ಮೆಕ್ಕಾ ಮತ್ತು ಪರ್ಷಿಯಾಗಳಿಗೆ ಮೆಣಸನ್ನು ಕೊಂಡೊಯ್ಯುತ್ತಿದ್ದ ಬಿಜಾಪುರದ ಹಡಗುಗಳನ್ನು ಪೋರ್ಚುಗೀಸರು ವಶಪಡಿಸಿಕೊಳ್ಳುತ್ತಿದ್ದರು. ಕರ್ನಾಟಕದ ಮೆಣಸು ವಹಿವಾಟಿನಲ್ಲಿ ಡಚ್ಚರು ಪೋರ್ಚುಗೀಸರಿಗೆ ವೈರಿಗಳಾಗಿದ್ದರು. ಅವರು ಕರ್ನಾಟಕದಲ್ಲಿ ವ್ಯಾಪಾರ ಸಂಬಂಧಗಳನ್ನು ಕುದುರಿಸಲು 'ದಿ ನೆದರ್‌ಲ್ಯಾಂಡ್ ಕಂಪೆನಿ'' ಎಂಬ ಸಂಸ್ಥೆಯನ್ನು ಕಟ್ಟಿಕೊಂಡಿದ್ದರು. ಬಿಜಾಪುರದ ರಾಜರು ಪೋರ್ಚುಗೀಸರಿಗೆ ಎದುರಾಗಿ ಡಚ್ಚರ ಈ ಕಂಪೆನಿಗೆ ಪೋಷಣೆ ನೀಡಿದರು.[೧೩೭] ತಾಳೀಕೋಟೆ ಯುದ್ಧವು ೧೫೬೫ರಲ್ಲಿ ನಡೆದು ವಿಜಯನಗರಕ್ಕೆ ಮರಣಾಂತಿಕ ಆಘಾತವನ್ನು ಕೊಟ್ಟಿತು. ಅದಾದಮೇಲೆ ಕರ್ನಾಟಕದಲ್ಲಿ ಪೋರ್ಚುಗೀಸರ ವ್ಯಾಪಾರ ವಹಿವಾಟು ಕ್ಷೀಣವಾಯಿತು. ಬಿಜಾಪುರದ

ಅರಸರು ಪ್ರಬಲರಾಗಿ ಮೆಣಸಿನ ಪೂರೈಕೆಯನ್ನು ನಿಯಂತ್ರಿಸಿದರು. ಹಾಗಾಗಿ ಪೋರ್ಚುಗೀಸರ ಮೆಣಸು ವ್ಯಾಪಾರ ಕುಂಠಿತವಾಯಿತು. ೧೬೩೮ರಲ್ಲಿ ಬಿಜಾಪುರಕ್ಕೆ ಭೇಟಿ ನೀಡಿದ ಮಾಡೆಲ್‌ಸೋ ದಾಖಲು ಪಡಿಸುತ್ತಾನೆ. ಬಿಜಾಪುರ ರಾಜ್ಯದ ಮುಖ್ಯ ರಫ್ತು ಸಾಮಗ್ರಿ ಮೆಣಸು. ಅಲ್ಲಿಂದ ಅದು ಮಧ್ಯಪ್ರಾಚ್ಯ ಮತ್ತು ಯೂರೋಪು ದೇಶಗಳಿಗೂ ಗುಜರಾತಿನ ಸೂರತ್ತಿಗೂ ಹೋಗುತ್ತಿತ್ತು.[೧೩೮] ಬಿಜಾಪುರ ರಾಜ್ಯಕ್ಕೆ ಬೆಳಗಾಂ ಜಿಲ್ಲೆಯಲ್ಲಿ ಮೆಣಸು ಮತ್ತು ಏಲಕ್ಕಿಗಳಿಗಾಗಿ ಎರಡು ಮಾರುಕಟ್ಟೆಗಳಿದ್ದುವು..[೧೩೯] ಮೆಣಸಿನ ಜೊತೆಗೆ ಬಿಜಾಪುರವು ಅಕ್ಕಿ, ಗೋಧಿ ಮತ್ತು ಇತರ ಆಹಾರ ಸಾಮಗ್ರಿಯನ್ನು ಗೋವಾ ಮತ್ತು ಹಿಂದೂಸ್ತಾನಗಳಿಗೆ ರಫ್ತು ಮಾಡುತ್ತಿತ್ತು. ಧಾನ್ಯದ ವ್ಯಾಪಾರವು ''ವಂಜಾರಿ''ಗಳೆಂಬ ಹೆಸರಿನ ಜನವರ್ಗದ ಕೈಗಳಲ್ಲಿ ಇದ್ದಿತು ಎಂದು ಮಾಡೆಲ್‌ಸೋ ಬರೆಯುತ್ತಾನೆ.[೧೪೦] ಕರ್ನಾಟಕದ ಮೆಣಸು ಆಗ್ರಾದವರೆಗೂ ಹೋಗುತ್ತಿತ್ತು.

ಕರ್ನಾಟಕದಲ್ಲಿ ಮೆಣಸು ಮತ್ತು ಏಲಕ್ಕಿಗಳ ಬೆಲೆಯಲ್ಲಿ ಏರಿಕೆ ಮತ್ತು ಕುಸಿತ ಉಂಟಾಗುತ್ತಿದ್ದುದು ಇಂಗ್ಲಿಷರ ಆ ವಸ್ತುಗಳ ವಹಿವಾಟಿನ ಮೇಲೆ ಪರಿಣಾಮವನ್ನುಂಟುಮಾಡುತ್ತಿದ್ದಿತೆನ್ನುವುದು ಸ್ವಾರಸ್ಯವಾದ ವಿಚಾರವಾಗಿದೆ. ಉದಾಹರಣೆಗೆ ೧೬೪೯ರಲ್ಲಿ ಮೆಣಸಿನ ಪೂರೈಕೆ ತುಂಬಾ ಕಡಮೆಯಾಗಿತ್ತು. ಆ ವರ್ಷ ಅದರ ವ್ಯಾಪಾರ ಲಾಭಕರವಲ್ಲವೆಂದು ಭಾವಿಸಿದುದರಿಂದ ಈಸ್ಟ್ ಇಂಡಿಯಾ ಕಂಪೆನಿಯು ಅದನ್ನು ಇಂಗ್ಲೆಂಡಿಗೆ ಕಳಿಸಲೇ ಇಲ್ಲ. ಆದರೆ ಅದೇ ವರ್ಷ ಆಗ್ರಾದಲ್ಲಿ ಮೆಣಸಿನ ಅಭಾವವುಂಟಾಗಿ ವ್ಯಾಪಾರವು ತುಂಬ ಲಾಭ ತರುತ್ತದೆ ಎನಿಸಿದ್ದರಿಂದ ಅಲ್ಲಿಗೆ ಕಂಪೆನಿಯು ಮೆಣಸನ್ನು ಕಳುಹಿಸಿತು.[೧೪೧]

ಕರ್ನಾಟಕ ಕರಾವಳಿಯಲ್ಲಿ ವ್ಯಾಪಾರ ನಿರತರಾಗಿದ್ದ ವಿದೇಶಿ ವರ್ತಕರ ಸಾಲಿಗೆ ಇಂಗ್ಲಿಷರು ಸೇರಿಕೊಂಡುದರಿಂದ ಅವರ ನಡುವೆ ವೈರವು ಹೊಸರೂಪವನ್ನು ಪಡೆಯಿತು. ಇಂಗ್ಲಿಷರೂ ಡಚ್ಚರೂ ಮಲಬಾರ್ ಅರಸರ ಮತ್ತು ಕೆಳದಿಯ ನಾಯಕರ ನಡುವೆ ಪಕ್ಷ ಬದಲಾಯಿಸುತ್ತಿದ್ದರು. ಉದಾಹರಣೆಗೆ ಸೋಮಶೇಖರನಾಯಕನ ಆಳಿಕೆಯಲ್ಲಿ (೧೬೬೪-೧೬೭೧) ಡಚ್ಚರಿಗೆ ಕೆಳದಿಯ ಆಸ್ಥಾನದಲ್ಲಿ ಹೆಚ್ಚಿನ ಪಕ್ಷಪಾತ ದೊರಕಿದ್ದಂತೆ ತೋರುತ್ತದೆ. ಆದರೆ ಯುದ್ಧದಲ್ಲಿ ಡಚ್ಚರು ಮಲಬಾರಿನ ಅರಸನಿಗೆ ಬೆಂಬಲ ತೋರಿಸಿರುವುದರಿಂದ ನಾಯಕನು ಅವರನ್ನು ತಿರಸ್ಕರಿಸಿದನು. ಮತ್ತೆ ಬಸವಪ್ಪನಾಯಕನ ಕಾಲದಲ್ಲಿ (೧೬೯೬-೧೭೧೪) ಮೆಣಸು ಮತ್ತು ಅಕ್ಕಿ ವ್ಯಾಪಾರದ ಸ್ವಾಮ್ಯವನ್ನು ಪಡೆಯಲು ಬಹಳ ತೀವ್ರವಾದ ಪ್ರಯತ್ನ ಮಾಡಿದರು. ಇದು ಬಸವಪ್ಪನಾಯಕನು ಗೋವಾದ ಗವರ್ನರನೊಂದಿಗೆ ೧೭೦೭ರಲ್ಲಿ ಮಾಡಿಕೊಂಡ ಒಪ್ಪಂದದಿಂದ ತಿಳಿದುಬರುತ್ತದೆ. ಅವನ ಮಗ ಸೋಮಶೇಖರನೂ (೧೭೧೪-೧೭೩೯) ಡಚ್ ಮತ್ತು ಇಂಗ್ಲಿಷರ ನಡುವಣ ವ್ಯಾಪಾರ ವೈಮನಸ್ಸುಗಳನ್ನು ಎದುರಿಸಬೇಕಾಯಿತು.[೧೪೨]

೧೭ನೆಯ ಶತಮಾನದ ಪ್ರಾರಂಭದಲ್ಲಿ ಈಸ್ಟ್ ಇಂಡಿಯಾ ಕಂಪೆನಿಯು ಕೆಳದಿಯ ನಾಯಕರೊಂದಿಗೆ ಮೆಣಸು ವ್ಯಾಪಾರದ ಸಂಬಂಧಗಳನ್ನು ಹೊಂದಿರಲು ಪ್ರಯತ್ನಿಸಿತು. ಮಲಬಾರಿಗೂ ಕರ್ನಾಟಕದ ಬಂದರುಗಳಿಗೂ ನಡುವೆ ಮೆಣಸು ದರದಲ್ಲಿ ವ್ಯತ್ಯಾಸವಿದ್ದುದರಿಂದ ಇಂಗ್ಲಿಷರು ಈ ಪ್ರದೇಶದತ್ತ ಆಕರ್ಷಿತರಾದರು.[೧೪೩] ಹಾಗಾಗಿ ೧೭ನೇ ಶತಮಾನದ ಕೊನೆಯ ವೇಳೆಗೆ ಮೆಣಸು ವ್ಯಾಪಾರವೂ ಬಹಳ ಮಹತ್ವದ್ದಾಗಿತ್ತು. ಮಲಬಾರ್ ಮತ್ತು ಕರ್ನಾಟಕ ಕರಾವಳಿಯಲ್ಲಿ ಅದರ ಸ್ವಾಮ್ಯವನ್ನು ಸಾಧಿಸಲು ಅವರು ದೃಢನಿರ್ಧಾರ ಮಾಡಿದ್ದರು. ಇಂಗ್ಲೆಂಡಿನಿಂದ ಬಂದ ಒಂದು ಪತ್ರವು ಹೀಗೆ ಹೇಳಿತ್ತು: ''ಮಲಬಾರ್ ಕರಾವಳಿಯಲ್ಲಿ ನಮಗೆ ಒಂದು ಸಣ್ಣ ಕೋಟೆಯಿಲ್ಲದ್ದರಿಂದ ನೀವು ಮೆಣಸು ವ್ಯಾಪಾರವನ್ನು ಸ್ವಲ್ಪ ಕಳೆದುಕೊಳ್ಳಬೇಕಾಗಿ ಬಂದಿದೆ''.[೧೪೪] ಹದಿನೆಂಟನೆಯ ಶತಮಾನದ ಪ್ರಾರಂಭದಲ್ಲಿ ಉತ್ತರಕನ್ನಡ ಜಿಲ್ಲೆಯ ಸೋಂದಾ ಮೆಣಸು ವ್ಯಾಪಾರದ ಪ್ರಸಿದ್ಧ ಕೇಂದ್ರವಾಗಿ ಪ್ರಾಮುಖ್ಯ ಪಡೆಯಿತು. ಉತ್ತರಕನ್ನಡ ಜಿಲ್ಲೆಯ ಮೆಣಸನ್ನು ತಾವೇ ಸಂಗ್ರಹಿಸಿಕೊಳ್ಳಬೇಕೆಂದು ಇಂಗ್ಲಿಷರಿಗೂ ಪೋರ್ಚುಗೀಸರಿಗೂ ತೀವ್ರವಾದ ಸ್ಪರ್ಧೆ

ಯುಂಟಾಯಿತು. ಕೆಲವು ಸಾರಿ ಪೋರ್ಚುಗೀಸರು ಎಲ್ಲವನ್ನೂ ಕೊಂಡು ಇಂಗ್ಲಿಷರಿಗೆ ನಷ್ಟವಾಗುತ್ತಿತ್ತು. ಉತ್ತರಕನ್ನಡ(ಸೋಂದಾ)ದಿಂದ ಪೋರ್ಚುಗೀಸರು ಮೆಣಸನ್ನು ಯೂರೋಪಿಗೆ ಕಳಿಸುತ್ತಿದ್ದರು.[೧೪೫]

ಇದುವರೆಗೆ ಮೆಣಸಿನ ವ್ಯಾಪಾರವನ್ನು ಕುರಿತು ಚರ್ಚಿಸಿದ್ದೇವೆ. ಅದರ ಜೊತೆಗೆ ಇತರ ದೇಶಗಳಿಗೆ ರಫ್ತಾಗುತ್ತಿದ್ದ ಇನ್ನೊಂದು ಮುಖ್ಯವಾದ ಕೃಷಿ ಉತ್ಪನ್ನ ಅಕ್ಕಿ. ಕರ್ನಾಟಕದ ಉತ್ತರ ಮತ್ತು ದಕ್ಷಿಣಕನ್ನಡ ಜಿಲ್ಲೆಗಳಲ್ಲಿ ಅಕ್ಕಿಯು ವಿಪುಲವಾಗಿ ಉತ್ಪಾದನೆಯಾಗುತ್ತಿತ್ತು. ನಮ್ಮ ಅಧ್ಯಯನಾವಧಿಯಲ್ಲಿ ಅವು ಇತರ ದೇಶಗಳಿಗೆ ಅಕ್ಕಿಯನ್ನು ರಫ್ತು ಮಾಡುತ್ತಿದ್ದುವು. ಮಂಗಳೂರು, ಭಟ್ಕಳ, ಕಾರವಾರ ಮತ್ತು ಹೊನ್ನಾವರ ಬಂದರುಗಳಿಂದ ಈ ವ್ಯಾಪಾರ ನಡೆಯುತ್ತಿದ್ದಿತು. ಬಡಜನರು ಉಪಯೋಗಿಸುತ್ತಿದ್ದ ಒರಟಾದ ದಪ್ಪ ಅಕ್ಕಿಗೆ ಹದಿನಾರನೆಯ ಶತಮಾನದಲ್ಲಿ ಮಲಬಾರಿಗಳಿಂದ ಅಪಾರವಾಗಿ ಬೇಡಿಕೆಯಿದ್ದಿತು. ಮಲಬಾರಿಗಳು ಮಿರ್ಜಾನ್‌ನಿಂದ ಆ ಅಕ್ಕಿಯನ್ನು ಒಯ್ಯುತ್ತಿದ್ದರು. ಈ ಕಪ್ಪು ಅಕ್ಕಿಗೆ ಪ್ರತಿಯಾಗಿ ಅವರು ತೆಂಗಿನಕಾಯಿ ತೆಂಗಿನೆಣ್ಣೆಗಳನ್ನು, ಬೆಲ್ಲವನ್ನು ತರುತ್ತಿದ್ದರು. ಸ್ಥಳೀಯ ಉತ್ಪಾದನೆ ಸಾಲುತ್ತಿರಲಿಲ್ಲವಾದ್ದರಿಂದ ಈ ವಸ್ತುಗಳನ್ನು ಮಲಬಾರಿನಿಂದ ತರಿಸಿಕೊಳ್ಳುತ್ತಿದ್ದಂತೆ ತೋರುತ್ತದೆ. ಮೆಣಸು, ತಾಳೆ ಸಕ್ಕರೆ, ತಾಳೆ ಮದ್ಯ ಮೊದಲಾದ ವಸ್ತುಗಳನ್ನು ದೂರದೇಶಗಳಿಗೆ ಹೊನ್ನಾವರದಿಂದ ಕಳಿಸಿಕೊಡಲಾಗುತ್ತಿತ್ತು. ಉತ್ಪಾದನೆಯ ಬಹುಪಾಲನ್ನು ಮಲಬಾರ್ ಪಡೆಯುತ್ತಿದ್ದಿತು.[೧೪೬] ಕರ್ನಾಟಕದ ವ್ಯಾಪಾರ ವಹಿವಾಟಿನ ಇನ್ನೊಂದು ಮುಖ್ಯಕೇಂದ್ರ ಉತ್ತರಕನ್ನಡದ ಅಂಕೋಲಾ. ೧೬ನೆಯ ಶತಮಾನದಲ್ಲಿ ವ್ಯಾಪಾರದ ಉದ್ದೇಶದಿಂದ ಪೋರ್ಚುಗೀಸರು ಅಂಕೋಲಕ್ಕೆ ಬರುತ್ತಿದ್ದರು.[೧೪೭] ಶಿವಾಜಿಯು ಈ ನಗರವನ್ನು ನಾಶಮಾಡಿದನು.[೧೪೮] ಆಮೇಲೆ ಅದು ಮರಳಿ ಚೇತರಿಸಿಕೊಳ್ಳಲೇ ಇಲ್ಲ. ಬುಕನನ್ ೧೮೦೦ರಲ್ಲಿ ಅದು ಹಾಳಾಗಿದ್ದ ಸ್ಥಿತಿಯನ್ನು ನೋಡಿದನು.[೧೪೯] ಈಸ್ಟ್‌ಇಂಡಿಯಾ ಕಂಪೆನಿಯ ದಾಖಲೆಗಳಲ್ಲಿ, ಹದಿನೇಳು ಮತ್ತು ಹದಿನೆಂಟನೆಯ ಶತಮಾನಗಳಲ್ಲಿ ಮಂಗಳೂರು ದೇಶದ ಇತರ ಭಾಗಗಳಿಗೆ ಅಕ್ಕಿಯನ್ನು ರಫ್ತು ಮಾಡುತ್ತಿದ್ದ ಕೇಂದ್ರವಾಗಿ ಕಂಡುಬರುತ್ತದೆ.[೧೫೦] ಆದರೆ ಹದಿನೆಂಟನೆಯ ಶತಮಾನದಲ್ಲಿ ಕೂಡ ಕರ್ನಾಟಕದ ಪಶ್ಚಿಮ ಕರಾವಳಿಯಲ್ಲಿ ಫ್ರೆಂಚರು ಅಕ್ಕಿ ಮತ್ತು ಇತರ ವಸ್ತುಗಳನ್ನು ಸಂಗ್ರಹಿಸುವುದರಲ್ಲಿ ಚುರುಕಾಗಿ ಕೆಲಸಮಾಡುತ್ತಿದ್ದರು. ಫ್ರೆಂಚ್ ಹಡಗುಗಳು, ''ಮಂಗಳೂರಿನಿಂದ ೨೫ನೆಯ ತಾರೀಕು ಬಿಟ್ಟುವು. ಕಡಲತೀರದಲ್ಲಿ ಇನ್ನು ಹಲವು ಅಕ್ಕಿತುಂಬಿದ ಹಡಗುಗಳು ಇದ್ದುವು, ಪೋರ್ಚುಗೀಸರಿಗೆ ಸೇರಿದವೂ ಇದ್ದುವು.''[೧೫೧] ಫ್ರೆಂಚ್ ಹಡಗುಗಳು ಸರಕು ತುಂಬಿಸಿಕೊಳ್ಳಲು ೧೭೪೭ರಲ್ಲಿ ಅಲ್ಲಿಗೆ ಬರುತ್ತಿದ್ದುವು[೧೫೨] ದಕ್ಷಿಣಕನ್ನಡ ಜಿಲ್ಲೆಯ ಬಸ್ರೂರು ಮತ್ತು ಬಾರಕೂರುಗಳಲ್ಲಿ ಬಹಳ ಸೊಗಸಾದ ಸಣ್ಣಕ್ಕಿ ದೊರಕುತ್ತಿದ್ದಿತು. ಈ ಅಕ್ಕಿಯನ್ನು ಅರ್ಮೆಜ್, ಏಡನು, ಯಾರ್, ಕಣ್ಣಾನೂರು ಮತ್ತು ಕಲ್ಲಿಕೋಟೆಗಳಿಗೆ ಕೊಂಡೊಯ್ಯುವ ಸಲುವಾಗಿ ವಿದೇಶಗಳಿಂದ ಹಲವು ಹಡಗುಗಳು ಬರುತ್ತಿದ್ದವು. ಈ ಅಕ್ಕಿಯನ್ನು ತಾಮ್ರ, ತೆಂಗಿನಕಾಯಿ, ತೆಂಗಿನೆಣ್ಣೆ ಮತ್ತು ಕಾಕಂಬಿಗಳಿಗೆ ವಿನಿಮಯ ಮಾಡಿಕೊಳ್ಳುತ್ತಿದ್ದರು.[೧೫೩] ಬಿಳಿ ಅಕ್ಕಿಗಿಂತ ಕಡಮೆ ಬೆಲೆಯದಾದ ಕಪ್ಪಕ್ಕಿಯನ್ನು ಮಂಗಳೂರು ರಫ್ತು ಮಾಡುತ್ತಿದ್ದಿತು. ಅದನ್ನು ಮಲಬಾರಿಗೆ ಮಾತ್ರವಲ್ಲದೆ, ಏಡನ್ನಿಗೂ ಕಳಿಸಲಾಗುತ್ತಿತ್ತು. ಅಲ್ಲಿಗೆ ಮೂರರು ಕೊಂಡೊಯ್ಯುತ್ತಿದ್ದರು. ಈ ವ್ಯಾಪಾರದ ಫಲವಾಗಿ ರಾಜ್ಯಕ್ಕೆ ಅಧಿಕ ವರಮಾನವು ಬರುತ್ತಿದ್ದಿತು.[೧೫೪]

ಹೀಗೆ ಈ ಅಧ್ಯಯನದಿಂದ ಪ್ರಸ್ತುತ ಪರಿಶೀಲನೆಯ ಕಾಲಾವಧಿಯಲ್ಲಿ ಕೃಷಿವಸ್ತುಗಳು ವಿತರಣೆಯಾಗುತ್ತಿದ್ದುವು ಎನ್ನುವುದು ತಿಳಿಯುತ್ತದೆ. ಈ ಕೆಲಸ ಮಾಡುತ್ತಿದ್ದ ಅನೇಕ ವ್ಯಾಪಾರಕೇಂದ್ರಗಳಿದ್ದುವು. ವಾರಕ್ಕೊಮ್ಮೆ ನಡೆಯುತ್ತಿದ್ದ ಸಂತೆಗಳು ರೈತರಿಗೆ ತಮ್ಮಲ್ಲಿರುವ ಹೆಚ್ಚುವರಿ ಉತ್ಪಾದನೆಯನ್ನು ಮಾರಲು ಅವಕಾಶ ಮಾಡಿಕೊಟ್ಟಿದ್ದುವು. ಅವರು ಅನೇಕವೇಳೆ ತಮ್ಮ ಕೃಷಿ ಉತ್ಪನ್ನಗಳನ್ನು ಇತರ ಕೆಲವು ವಸ್ತುಗಳೊಂದಿಗೆ ವಿನಿಮಯ ಮಾಡಿಕೊಳ್ಳುತ್ತಿದ್ದರು.

ಆದರೆ ಕೃಷಿ ಮತ್ತು ಮಾರಾಟವು ಹಳ್ಳಿಯ ಸಂತೆಗಳಿಗೆ ಮಾತ್ರವೇ ಸೀಮಿತವಾಗಿರಲಿಲ್ಲ. ನಗರಗಳು ಮತ್ತು ಪಟ್ಟಣಗಳೂ ಹೆಚ್ಚುವರಿ ವಸ್ತುಗಳ ವಿತರಕಗಳಾಗಿ ವರ್ತಿಸುತ್ತಿದ್ದುವು. ಹೀಗೆ ಹೆಚ್ಚುವರಿ ಕೃಷಿ ಮತ್ತು ಮಾರಾಟದಲ್ಲಿ ನುರಿತಿದ್ದ ವಿಶಿಷ್ಟ ವರ್ಗದ ವರ್ತಕರೇ ಇದ್ದರು. ಆದರೆ ಪರಿಣಾಮಕಾರಿಯಾದ ಸಾರಿಗೆಯಾಗಲಿ, ಸಂಪರ್ಕವಾಗಲಿ ಇರದುದರಿಂದ ಹೆಚ್ಚುವರಿ ವಸ್ತುಗಳ ಸಾಗಣೆ ಕುಂಠಿತವಾಗುತ್ತಿತ್ತು. ಆಗ ಇದ್ದ ಏಕೈಕ ಸಾಗಣೆ ವಿಧಾನವೆಂದರೆ ಪ್ರಾಣಿ ಹೇರುಗಳು. ಆದ್ದರಿಂದ ಇದ್ದದ್ದರಲ್ಲಿ ಹಗುರವೂ ಬೆಲೆ ಬಾಳುವುದೂ ಆದ ಕೃಷಿ ಉತ್ಪಾದನೆಗಳನ್ನು ಮಾತ್ರ ದೂರದ ಸ್ಥಳಗಳಿಗೆ ಹೇರುಗಳ ಮೂಲಕ ಸಾಗಿಸುತ್ತಿದ್ದರು.

ಕೃಷಿ ವಸ್ತುಗಳ ವಿದೇಶವ್ಯಾಪಾರ-ವಹಿವಾಟಿನ ಬಹುಪಾಲನ್ನು ಕಾರವಾರ, ಹೊನ್ನಾವರ, ಮಂಗಳೂರು ಮತ್ತು ಭಟ್ಕಳಗಳು ನಿರ್ವಹಿಸುತ್ತಿದ್ದುವು. ಕರ್ನಾಟಕದ ಕರಾವಳಿ ಜಿಲ್ಲೆಗಳಾದ ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಸಂಬಾರ ಪದಾರ್ಥಗಳು, ವಿಶೇಷವಾಗಿ ಮೆಣಸು ಮತ್ತು ಅಕ್ಕಿ ಬೆಳೆಯುತ್ತಿದ್ದುವು. ತುಂಬಾ ಬೇಡಿಕೆಯಿದ್ದ ವಸ್ತುಗಳಾಗಿದ್ದುದರಿಂದ ಈ ಎರಡು ವಸ್ತುಗಳನ್ನು ಕರ್ನಾಟಕದ ಹೊರಗೆ ಬೇರೆ ಸ್ಥಳಗಳಿಗೆ ಮಾತ್ರವಲ್ಲದೆ ವಿದೇಶಗಳಿಗೂ ರಫ್ತು ಮಾಡಲಾಗುತ್ತಿತ್ತು. ಕರ್ನಾಟಕದ ಮೆಣಸು ಯೂರೋಪಿನ ದೇಶಗಳಲ್ಲಿ ತುಂಬಾ ಜನಪ್ರಿಯವಾಗಿದ್ದಿತು. ಏಕೆಂದರೆ ಅಲ್ಲಿಯ ಜನರ ಆಹಾರದಲ್ಲಿ ಅದು ಮುಖ್ಯವಾಗಿ ಸೇರುವ ವಸ್ತುವಾಗಿದ್ದಿತು. ಈ ಅಮೂಲ್ಯವಾದ ಕೃಷಿ ವಸ್ತುವನ್ನು ಪಡೆಯಲು ಪೋರ್ಚುಗೀಸ್, ಡಚ್, ಇಂಗ್ಲಿಷ್ ಮತ್ತು ಫ್ರೆಂಚ್ ಈ ಯೂರೋಪಿಯನ್ ಜನರುಗಳು ಕರ್ನಾಟಕದ ಕರಾವಳಿಯ ಬಂದರುಗಳಿಗೆ ಪದೇ ಪದೇ ಭೇಟಿ ನೀಡುತ್ತಿದ್ದರು. ಅನೇಕ ಸಮಯಗಳಲ್ಲಿ ಅವರ ನಡುವೆ ಬಹು ತೀವ್ರವಾದ ಪೈಪೋಟಿಯಿರುತ್ತಿದ್ದಿತು. ಈ ವ್ಯಾಪಾರದಲ್ಲಿ ಏಕಸ್ವಾಮ್ಯವನ್ನು ಸಂಪಾದಿಸಿಕೊಳ್ಳುವ ಕಾತುರದಲ್ಲಿ ಈ ಪಾಶ್ಚಾತ್ಯರು ರಾಜಕೀಯ ಚಾಣಾಕ್ಷತೆಯನ್ನೂ ಮುತ್ಸದ್ದಿತನವನ್ನೂ ಬಳಸಲು ಹಿಂಜರಿಯುತ್ತಿರಲಿಲ್ಲ. ಒಬ್ಬರ ಮೇಲೊಬ್ಬರು ಅಥವಾ ದೇಶೀಯ ಅರಸರ ವಿರುದ್ಧವಾಗಿ ಯುದ್ಧ ಮಾಡುತ್ತಿದ್ದುದೂ ಉಂಟು.

ಆದರೆ ಚಿತ್ರವು ಯಾವಾಗಲೂ ಉತ್ತಮವಾಗಿಯೇ ಇರುವುದಿಲ್ಲ. ಹದಿನೆಂಟನೆಯ ಶತಮಾನದ ಉತ್ತರಾರ್ಧದಲ್ಲಿ ಕರ್ನಾಟಕದ ಬಂದರುಗಳ ಚಟುವಟಿಕೆಗಳಲ್ಲಿ ಕುಸಿತವುಂಟಾಯಿತು. ಆಗಿನ ವಿನಾಶಕಾರಕ ಯುದ್ಧಗಳು, ರಾಜಮನೆತನಗಳ ಆತ್ಮಘಾತಕ ನೀತಿ, ಭಯಂಕರವಾದ ಸೇನಾಚಲನೆ ಮತ್ತು ಅಗತ್ಯಕ್ಕಿಂತ ಹೆಚ್ಚಾದಲ್ಲಿ ಇನ್ನೊಬ್ಬನನ್ನು ಅಳಿಯುವಿಕೆ-ಇವೆಲ್ಲ ಒಂದುಗೂಡಿ ಕರ್ನಾಟಕದ ಕೃಷಿವಸ್ತು ಮಾರಾಟದ ವಿರುದ್ಧವಾಗಿ ಕೆಲಸ ಮಾಡಿದುವು. ನಾವು ಅಧ್ಯಯನ ಮಾಡುತ್ತಿರುವ ಕಾಲಾವಧಿಯ ಕೊನೆಯಲ್ಲಿ ಹಿಂದೊಮ್ಮೆ ಸಂಪದ್ಭರಿತವಾಗಿದ್ದ ಬಂದರುಗಳು ಮತ್ತು ನಗರಗಳು ಸಂಪೂರ್ಣವಾಗಿ ನಾಶವಾದುವು. ಹದಿನೆಂಟನೆಯ ಶತಮಾನದ ಉತ್ತರಾರ್ಧದಲ್ಲಿ ಸಂಭವಿಸಿದ ಈ ಆಘಾತದಿಂದ ಮತ್ತು ಭಯಾನಕ ಸ್ಥಿತಿಯಿಂದ ಚೇತರಿಸಿಕೊಳ್ಳಲು ತುಂಬಾ ಸಮಯ ಬೇಕಾಯಿತು. ಒಟ್ಟಿನಲ್ಲಿ ಹೇಳುವುದಾದರೆ, ಭಾರತೀಯ ವ್ಯಾಪಾರ-ವಾಣಿಜ್ಯಗಳಿಗೆ ಕರ್ನಾಟಕದ ಕೊಡುಗೆ ತೃಪ್ತಿಕರವಾಗಿದ್ದುದರಲ್ಲಿ ಸಂದೇಹವೇ ಇಲ್ಲ. ಅನೇಕ ದೃಷ್ಟಿಗಳಿಂದ ಕರ್ನಾಟಕವು, ಪರಿಶೀಲನಾವಧಿಯಲ್ಲಿ ಹೆಚ್ಚುವರಿ ಉತ್ಪಾದನೆಯ ಸ್ಥಿತಿಯಲ್ಲಿತ್ತು ಮತ್ತು ಆ ಹೆಚ್ಚುವರಿಯನ್ನು ವ್ಯಾಪಾರ ವಿಧಾನಗಳ ಮೂಲಕ ಜಾಣತನದಿಂದ ವಿನಿಯೋಗ ಪಡಿಸುತ್ತಿತ್ತು.

ಟಿಪ್ಪಣಿಗಳು

೧ ಇಂಡಿಯಾ ಅಟ್ ದಿ ಡೆತ್ ಆಫ್ ಅಕ್ಬರ್, ಪು. ೧೫೫-೫೬

೨ ಮಹೌನ್ ಜೆ.ಎ.ಆರ್.ಎಸ್., ೧೮೯೬, ಪು. ೩೪೫

೩ ಬಾರ್ಬೋಸಾ ೨, ಪು. ೧೩೨

೪ ನ್ಯೂನಿಜ್ ಎಫ್. ಇ. ಪು ೩೮೬

೫ ಅದೇ, ಪು. ೩೮೮ ಮತ್ತು ೩೮೯

೬ ಬಾರ್ಬೋಸಾ ೧, ಪು. ೨೨೬ ಡೇಮ್ಸನ ಅಡಿಟಿಪ್ಪಣಿ

೭ ಅದೇ, ೨, ಪು. ೨೨೧

೮ ಅದೇ, ೨, ಪು. ೨೨೩

೯ ಅದೇ, ೧, ಪು. ೨೦೩

೧೦ ಅದೇ, ೧, ಪು. ೧೮೯

೧೧ ೧೯೨೪ರ ೧೫೦ ಹಾಗೂ ೧೯೨೨ರ ೧೮೦

೧೨ ಎಫ್.ಇ., ೨೭೩ ಮತ್ತು ೨೭೪

೧೩ ಅದೇ, ಪು. ೨೭೬ ಮತ್ತು ೨೭೭

೧೪ ಬಾರ್ಬೋಸಾ ೧, ೨೦೫; ೨೦೭-೮

೧೫ ಎಫ್.ಇ. ಪು. ೨೭೬ ಮತ್ತು ೨೭೭

೧೬ ಅದೇ ಪು. ೨೭೯ ಮತ್ತು ೨೮೦

೧೭ ಬಾರ್ಬೋಸಾ ೧,ಪು. ೧೯೧

೧೮ ಪುರಂದರದಾಸರ ಪದಗಳು, ಸಂ. ೨, ಪು. ೨೬ ಅವರು ವ್ಯಾಸರಾಯರ ಸಮಕಾಲೀನರಾಗಿದ್ದರು. ಅದೇ ೨೧೪, ೨೧೫ ಮತ್ತು ೨೧೬, ಭಾಗ-೧

೧೯. ಬಾರ್ಬೋಸಾ, ೧, ಪು. ೨೦೩

೨೦. ಅದೇ ೨, ಪು. ೧೩೨

೨೧ ಅದೇ ೨, ಪು. ೯೯

೨೨ ಎಫ್.ಇ. ೩ ಪು. ೩೮೧

೨೩ ಮೋರ್‌ಲ್ಯಾಂಡ್, ಪು. ೧೯೯

೨೪ ಅಬ್ದುಲ್ ರಜಾಕ್, ಪು. ೧೩

೨೫ ಮೋರ್‌ಲ್ಯಾಂಡ್, ಪು. ೧೯೮-೨೦೦

೨೬ ಸಂಪುಟ, ೧, ಪು. ೧೮೯

೨೭ ಕಾಮೆಂಟರೀಸ್ - ೨, ಪು. ೧೦೦-೧೧೧

೨೮ ಹೆರಾಸ್,: ಅರವೀಡು ಪು. ೬೨ ಮತ್ತು ೬೩; ಬಾರ್ಬೋಸಾ, ೧, ಪು. ೧೮೯-೧೯೮

೨೯ ಅದೇ, ಪು. ೬೨ ಮತ್ತು ೬೩

೩೦ ಬಾರ್ಬೋಸಾ, ೨, ಪು. ೧೩೨.

೩೧ ಅದೇ ೧, ಪು. ೧೮೯-೧೯೮

೩೨ ಅದೇ, ಪು. ೧೮೯

೩೩ ಹೆರಾಸ್, ಪು. ೬೧ ಮತ್ತು ೬೨

೩೪ ಬಾರ್ಬೋಸಾ ೨, ಪು. ೧೮೯

೩೫ ಅದೇ, ಪು. ೧೮೮

೩೬ ಅದೇ ೨, ಪು. ೧೧೩

೩೭ ಅದೇ, ೧, ಪು. ೧೮೯

೩೮ ಹೆರಾಸ್, ಪು. ೬೨ ಮತ್ತು ೬೩

೩೯ ಅದೇ, ಮತ್ತು ಬಾರ್ಬೋಸಾ ೨, ಪು. ೧೨೯

೪೦ ಬಾರ್ಬೋಸಾ ೨, ಪು. ೧೨೫

೪೧ ಎಫ್.ಇ. ಪು. ೨೭೬

೪೨ ಇ. ಮತ್ತು ಡಿ ಎನ್. ಪು. ೧೦೧

೪೩ ಬಾರ್ಬೋಸಾ, ೨, ಪು. ೧೨೫

೪೪ ಅದೇ ೧, ಪು. ೧೮೬-೧೮೭, ೧೯೭

೪೫ ಅದೇ ೨, ಪು. ೧೨೫ ಚೆಟ್ಟಿಗಳು, ಲಿಂಗಾಯತರು ಮತ್ತು ಬ್ರಾಹ್ಮಣರೂ ವ್ಯಾಪಾರದಲ್ಲಿ ತೊಡಗಿದ್ದರು. ಮೊದಲಿನದಕ್ಕೆ ನೋಡಿ. ಬಾರ್ಬೊಸಾ ೨, ಪು. ೧೨೫, ಕೊನೆಯದಕ್ಕೆ ಎಫ್.ಇ. ಪು ೩೯೦

೪೬ ಬಾರ್ಬೋಸಾ ೨, ಪು. ೧೨೩

೪೭ ಅದೇ ೨, ಪು. ೧೨೬

೪೮ ಎ.ಇ೦. ೪, ಪು. ೨೩೦-೩೯

೪೯ ಎಫ್‌ಇ.ಪು. ೨೫೪ ನೋಡಿ: ಅಪ್ಪಾದೊರೈ ಎಕನಾಮಿಕ್ ಕಂಡಿಷನ್ಸ್ ಇನ್ ಸೌತ್ ಇಂಡಿಯಾ ದಕ್ಷಿಣ ಭಾರತದಲ್ಲಿ ಬಂಡಿಗಳು ಇದ್ದುದಕ್ಕೆ ಸಾಹಿತ್ಯಕ ಮತ್ತು ಶಾಸನ ಆಧಾರಗಳನ್ನು ಉದ್ಧರಿಸಿದೆ. ದಕ್ಷಿಣಭಾರತದಲ್ಲಿ ಬಂಡಿಗಳು ಪರಿಚಯವಾಗಿರಲಿಲ್ಲ ಎಂಬ ಮೋರ್‌ಲ್ಯಾಂಡನ ಅಭಿಪ್ರಾಯವು (ಪು.೭) ಬದಲಾಗಬೇಕಾಗಿದೆ.

೫೦. ಅದೇ, ಪು. ೨೩೦-೨೩೯

೫೧ ಅದೇ, ಪು. ೨೦೩

೫೨. ಅದೇ, ಪು. ೨೩೭

೫೩ ಬಾರ್ಬೋಸಾ, ೧, ಪು. ೧೬೩.

೫೪ ಬಂಕಾಪುರವು ಗೋವಾದಿಂದ ವಿಜಯನಗರಕ್ಕೆ ಹೋಗುವ ದಾರಿಯಲ್ಲಿ ಇದ್ದಿತು ಎಂದು ಬರೋಸ್ ಹೇಳುತ್ತಾನೆ. ನೋಡಿ: ಎಫ್.ಇ.ಪು. ೧೨೨ ಟಿಪ್ಪಣಿ.

೫೫ ಅದೇ,

೫೬ ನಿಕೋಲೋಕಾಂಟಿಯು ಅನುಸರಿಸಿದ ದಾರಿ ಇದು. ಮೇಜರ್, ಪು. ೭

೫೭ ಸೋರ್ಸಸ್, ಪು. ೧೧೨ ಮತ್ತು ೧೧೩

೫೮ ಎಫ್.ಇ. ಪು. ೩೨೩.

೫೯ ಎಫ್.ಇ. ಪು ೩೧೬-೩೧೯ ಸಿಮಂಡ್ರಿಯು ರಾಜಮಹೇಂದ್ರಿಯಲ್ಲ, ಸಿಂಹಾದ್ರಿ ಅಥವಾ ಸಿಂಹಾಚಲ. ಶ್ರೀ ಕೂರ್ಮಕ್ಕಾಗಿ ನೋಡಿ, ೧೯೧೨ರ ೫೬.

೬೦ ರಾಯವಾಚಕಮು, ಪು ೧೧೬

೬೧ ರಾಬರ್ಟ್‌ಸಿವೆಲ್: ಎ. ಫರ್‌ಗಾಟನ್ ಎಂಪೈರ್, ನವದೆಹಲಿ, ೧೯೭೦, ಪು. ೧೨೫

೬೨ ಅದೇ, ಪು. ೧೨೫

೬೩ ಅದೇ, ಪು. ೩೭೧

೬೪ ಕೃಷ್ಣದೇವರಾಯ: ಆಮುಕ್ತಮಾಲ್ಯದ, ಸಿಕಂದರಾಬಾದ್, ೧೯೭೦, ಪು. ೧೨೫

೬೫ ರಾಬರ್ಟ್ ಸಿವೆಲ್, ಪೂರ್ವೋಕ್ತ, ಪು. ೨೦೨.

೬೬ ಇಜೆ ಸ್ಟಾನ್ಲಿ: ಡ್ಯೂರೆಟ್ ಬಾರ್ಬೋಸಾ, ಲಂಡನ್-೧೮೬೫ ಪು. ೧೭೪

೬೭ ರಾರ್ಟ್ ಸಿವೆಲ್, ಪೂರ್ವೋಕ್ತ, ಪು. ೧೮೦

೬೮ ಸೌ.ಇ.ಇ. ೯, ೫೧೩

೬೯ ಟೋಪೋಗ್ರಾಫಿಕಲ್ ಲಿಸ್ಟ್, ಸಂ. ೧, ೧೫೨ ಬಳ್ಳಾರಿ ಜಿಲ್ಲೆ

೭೦ ಎಲಿಯಟ್ ಮತ್ತು ಡಾಸನ್: ದಿ ಹಿಸ್ಟರಿ ಆಫ್ ಇಂಡಿಯಾ ಆಸ್ ಟೋಲ್ಡ್ ಬೈ ಇಟ್ಸ್ ವೋನ್ ಹಿಸ್ಟೋರಿಯನ್ಸ್ ಅಲಹಾಬಾದ್ ೧೯೬೪, ಸಂ. ೪ ಪು. ೧೦೭

೭೧ ರಾಬರ್ಟ್ ಸಿವೆಲ್, ಪೂರ್ವೋಕ್ತ, ಪು.೨೪೭

೭೨ ಟೋಪೋಗ್ರಾಫಿಕಲ್ ಲಿಸ್ಟ್, ಸಂ. ೧, ೫೭, ಅನಂತಪುರ ಜಿಲ್ಲೆ. ಎಸ್.ಎಂ. ಸಂ. ೯, ೬೧೮

೭೩ ಅದೇ ಸಂ. ೧, ೫೮೧ ಕರ್ನೂಲು ಜಿಲ್ಲೆ

೭೪ ಸೌ.ಇ.ಇ. ೯,೫೩, ಎ.ರ್.ಎಸ್. ಐ.ಇ, ೧೯೨೨, ೬೮೧

೭೫ ಅದೇ, ೬೧೮

೭೬ ಅದೇ, ೫೧೬

೭೭ ಅದೇ, ೧೬, ೨೪

೭೮ ಕೃಷ್ಣದೇವರಾಯ, ಪೂರ್ವೋಕ್ತ, ಪು. ೭೦, ೨, ೩೫

೭೯ ಸೌ.ಇ.ಇ. ೯, ೪೩೯

೮೦ ಅದೇ, ೧೪, ೧೦೩ ೧೧೩ ಟೋಪೋಗ್ರಾಫಿಕಲ್ ಲಿಸ್ಟ್, ೨, ೧೧೪೬ ಕಡಪಾ ಜಿಲ್ಲೆ

೮೧ ಸೌ.ಇ.ಇ. ೧೬, ೭೯, ೧೦೩, ೧೧೨, ೨೦೧

೮೨ ಟೋಪೋಗ್ರಾಫಿಕಲ್ ಲಿಸ್ಟ್, ೨, ೬೨೦ ಗುಂಟೂರು ಜಿಲ್ಲೆ

೮೩ ಎ.ಆರ್.ಎಸ್.ಐ.ಇ. ೧೯೨೨, ೬೮೧; ಸೌ.ಇ.ಇ. ೯, ಅದೇ ೧೬, ೨೪೫

೮೪ ಸೌ.ಇ.ಇ. ೯ ೪೩೪, ೪೩೮, ೫೮೪, ೫೯೩, ೬೧೬; ಅದೇ ಸಂ ೧೬, ೬೩

೮೫ ಟೋಪೋಗ್ರಾಫಿಕಲ್ ಲಿಸ್ಟ್, ಸಂ. ೨, ೨೦೮, ಗುಂಟೂರು ಜಿಲ್ಲೆ

೮೬ ವೆಂಕಟರಮಣಯ್ಯ, ಎನ್.: ಸ್ಟಡೀಸ್ ಇನ್ ಹಿಸ್ಟರಿ ಆಫ್ ದಿ ಥರ್ಡ್ ಡೈನಾಸ್ಟಿ ಆಫ್ ವಿಜಯನಗರ ಮದರಾಸು, ೧೯೩೫

೮೭ ಎ.ಕ. ೫, ಅರಸೀಕೆರೆ ೬೮, ಪಠ್ಯ ಪು. ೨೦೧

೮೮ ಅದೇ,

೮೯ ಅದೇ,

೯೦ ಎಲಿಯಟ್: ಹಿಸ್ಟರಿ ಆಫ್ ಇಂಡಿಯಾ ಸಂ. ೪ ಪು. ೧೦೭; ಸಿವೆಲ್, ಪೂರ್ವೋಕ್ತ, ಪು ೨೪೬-೨೪೭

೯೧ ಎಂ.ಎ.ಆರ್., ೧೯೨೫, ೩೬; ಅದೇ ೧೯೧೯ ಪು. ೩೩ ಪ್ಯಾರಾ ೮೫; EC, IX, An ೪೪; ೬೪; EC, IX, Ht. 128; EC, X, Bg, 72; EC, X Bg. 83; EC, X Mr. 4; SII, IX (ii) 516, 618; Ec, X KL 73; EC V, Ag. 68; EC, IX, Bn. 56; EC, IX, Cp 37; MAR, 1928, 88; EC, IX, Bn 59; EC IX, Bn 96; EC XI, HK 17, EC X Sd. 122; EC, IX, AN 14; EC, VIII, Sb 18; EC X Bl. 6; Ec, VIII, Sb 428; MAR, 1926, 119, ಅದೇ 1928, 37; EC, IX, Bn. 96, EC. X, KL 73

೯೨ ಎ.ಕ. ೫, ಬೇಲೂರು, ೭೫

೯೩ ಅದೇ.

೯೪ EI XI ಪು. ೩೩; IA, X ೧೮೮

೯೫ ಎ.ಕ. ೫, ಬೇಲೂರು, ೭೫

೯೬ ಅದೇ.

೯೭ ಅದೇ, ಹೊಲಿಯ ಜಂಗುಳಿ ಸಹಿತ: ಪತ್ರ ಪು. ೨೦೧ ಪಂಕ್ತಿ ೬೭
೯೮ ಅದೇ.
೯೯ ಅದೇ.
೧೦೦ ಅದೇ.
೧೦೧ ಎ.ಕ. ೧೨, ಚಿಕ್ಕನಾಯಕನ ಹಳ್ಳಿ, ೭; ಎ.ಕ. ೮, ಸೊರಬ, ೪೨೮ ೪೨೮ ಪು. ೭೫
೧೦೨ ಸಿವೆಲ್, ಪೂರ್ವೋಕ್ತ, ಪು. ೮೦, ೮೬, ೨೪೩, ೨೪೭
೧೦೩ ಅದೇ.
೧೦೪ ಎ.ಕ. ೫, ಬೇಲೂರು, ೭೫
೧೦೫ ಅದೇ.
೧೦೬ ಸೌ.ಇ.ಇ. ೯-೨, ೫೬೪
೧೦೭ ಸೌ.ಇ.ಇ. ೪, ೨೬೨
೧೦೮ ನ್ಯೂನಿಜ್ ಸಿವೆಲ್, ಪೂರ್ವೋಕ್ತ ಪು. ೩೭೫
೧೦೯ ಅದೇ.
೧೧೦. ಅದೇ, ಪು. ೨೫೫
೧೧೧ ಎ.ಕ. ೮, ಟಿ.ಎಲ್, ೪೨; ಅದೇ ೭೨
೧೧೨ ಎ.ಕ. ೫, ಬೇಲೂರು ೭೫
೧೧೩ ಸಿವೆಲ್, ಪೂರ್ವೋಕ್ತ, ಪು. ೮೬
೧೧೪ ಅದೇ, ದಿ ಬುಕ್ ಆಫ್ ಡ್ಯೂರೆಟ್ ಬಾರ್ಬೋಸಾ ಸಂ. ೧ ಪು. ೧೮೨-೧೯೭
೧೧೫ ಹೆರಾಸ್, ಎಚ್.: ದಿ ಅರವೀಡು ಡೈನಾಸ್ಟಿ, ಪು ೬೨-೬೩; ಬಾರ್ಬೋಸಾ ೧, ಪು ೧೮೯-೧೯೮
೧೧೬ ಬಾರ್ಬೋಸಾ ೧, ಪು ೧೮೯-೧೯೮
೧೧೭ ಕಟ್ಟಿ ಶೇಷಾಚಾರ್, ಕವಿ ಕನಕದಾಸ, ಪು. ೬೨-೬೩ ಮತ್ತು ಎ.ಕ. ೪, ಬೇಲೂರು ೭೩
೧೧೮ ಸಿವೆಲ್, ಪೂರ್ವೋಕ್ತ, ಪು. ೨೩೯
೧೧೯ ವಾಸ್ಕೋಡಗಾಮಾಸ್ ತ್ರೀ ವೋಯೆಜೆಸ್, ಪು. ೩೧೦-೩೧೨
೧೨೦ ಚೋಡ್ವರ್ ವರ್ದೆಮಾ, ಪು. ೧೧೯-೧೨೦
೧೨೧ ಕಾಮೆಂಟರೀಸ್ ಆಫ್ ಅಲ್ಬುಕರ್ಕ್ ೯, ಸಂ. ೨, ಪು. ೫೩ ೨೨೬
೧೨೨ ದಿ ಬುಕ್ ಆಫ್ ಡ್ಯೂರೆಟ್ ಬಾರ್ಬೋಸಾ, ಪು. ೧೮೭-೧೮೮
೧೨೩ ಅದೇ.
೧೨೪ ಅದೇ, ಪು. ೧೮೯
೧೨೫ ದಿ ಪೋರ್ಚುಗೀಸ್ ಇನ್ ಇಂಡಿಯಾ, ಸಂ. ೧, ಪು. ೪೧೧
೧೨೬ ಇಂಗ್ಲಿಷ್ ಫ್ಯಾಕ್ಟರೀಸ್, ಪು. ೯೩-೯೪ (೧೬೩೭-೪೧)
೧೨೭ ಅದೇ, ೧೬೬೮-೬೯, ಪು. ೧೧೨
೧೨೮ ಫ್ರೈಯರ್ ಈಸ್ಟ್ ಇಂಡಿಯಾ ಅಂಡ್ ಪರ್ಷಿಯಾ, ೮, ಪು. ೪೨, ೫೯
೧೨೯ ಅದೇ ಪು. ೪೩
೧೩೦ ಅದೇ.
೧೩೧ ಬಾಂಬೆ ಗೆಜೆಟಿಯರ್, ಸಂ. ೧೩, ಪು ೪೮೦; ಟ್ರಾವೆನಿಯರ್ ಟ್ರಾವೆಲ್ಸ್ ಇನ್ ಇಂಡಿಯಾ, ಸಂ. ೨, ಪು. ೮, ೧೩, ೧೪.

೧೩೨ ರಕಾರ್ಡ್ ಆಫ್ ಫೋರ್ಟ್ ಸೇಂಟ್ ಜಾರ್ಜ್: ಡೈರಿ ಅಂಡ್ ಕನ್ಸಲ್ಟೇಷನ್ಸ್ ೧೬೯೧, ೫೧; ಅದೇ, ಲೆಟರ್ ಟು ಫೋರ್ಟ್ ಸೇಂಟ್ ಜಾರ್ಜ್, ಪು. ೨೧ (ಕ್ರಿ.ಶ. ೧೭೧೮), ಡಿಸ್‌ಪ್ಯಾಚೆಸ್ ಫ್ರಂ ಇಂಗ್ಲೆಂಡ್, ೧೭೧೭-೧೭೨೧, ಪು. ೧೫೦-೧೫೧

೧೩೩ ಟ್ರಾವರ್ನಿಯರ್, ಟ್ರಾವೆಲ್ಸ್ ಇನ್ ಇಂಡಿಯಾ, ಸಂಪುಟ ೨, ಪು. ೮, ೧೩, ೧೪

೧೩೪ ಮೈಸೂರ್ ಅಂಡ್ ಕೂರ್ಗ್ ಫ್ರಂ ಇನ್‌ಸ್ಕ್ರಿಪ್ಷನ್ಸ್, ಬಿ.ಎಲ್.ರೈಸ್, ಪು.೧೫೭-೧೫೮

೧೩೫ ಅದೇ, ಪು ೧೫೭: ಐ.ಸಿ. ಎಚ್.ಆರ್, ಸಂ. ೧೮, ಜನವರಿ ೧೯೪೨ ಪು. ೬೩; ಪೋರ್ಚುಗೀಸರು ಮತ್ತು ಡಚ್ಚರು ಇಕ್ಕೇರಿಯೊಂದಿಗೆ ಹೊಂದಿದ್ದ ಸಂಬಂಧಗಳಿಗಾಗಿ ನೋಡಿ: ಇಂಗ್ಲಿಷ್ ಫ್ಯಾಕ್ಟರೀಸ್, ೧೬೬೧-೧೬೬೪, ಪು. ೩೪೨-೩೪೪, ೩೪೯-೩೫೦

೧೩೬ ಫಾಸ್ಟರ್,: ದಿ ಇಂಗ್ಲಿಷ್ ಫ್ಯಾಕ್ಟರೀಸ್ ಇನ್ ಇಂಡಿಯಾ, ೧೬೧೮-೧೬೨೧ ಪು. ೭೦

೧೩೭ ಬಾಂಬೆ ಗೆಜೆಟಿಯರ್, ಸಂ. ೨೩, ಪು. ೪೨೮

೧೩೮ ಹ್ಯಾರಿಸ್,: ವೊಯೇಜೆಸ್ ಅಂಡ್ ಟ್ರಾವೆಲ್ಸ್, ಸಂ. ೨, ೧೩೦

೧೩೯ ಅದೇ, ಪು. ೩೬೦

೧೪೦ ಅದೇ, ಪು. ೧೩೦

೧೪೧ ಫಾಸ್ಟರ್, ಪೂರ್ವೋಕ್ತ, ೧೬೪೬-೧೬೫೦, ಪು. ೨೫೫

೧೪೨ ಡಿಸ್‌ಪ್ಯಾಚೆಸ್ ಫ್ರಂ ಇಂಗ್ಲೆಂಡ್, ೧೭೧೭-೧೭೨೧, ಪು. ೨೦

೧೪೩ ಅದೇ

೧೪೪ ಅದೇ, ೧೬೮೬-೯೨, ಪು. ೬೩

೧೪೫ ರಕಾರ್ಡ್ ಆಫ್ ಫೋರ್ಟ್ ಸೇಂಟ್ ಜಾರ್ಜ್: ಡೈರಿ ಆಫ್ ದಿ ಸೇಂಟ್ ರಟ್ಸ್ ಕಮೀಷನ್, ೧೭೧೪-೧೫, ೧೨

೧೪೬ ದಿ ಬುಕ್ ಆಫ್ ಡ್ಯೂರೆಟ್ ಬಾರ್ಬೋಸಾ, ಸಂ. ೧, ಪು. ೧೮೪-೧೮೬

೧೪೭ ಸೀಸರ್ ಫ್ರೆಡರಿಕ್,: ಹಕ್ಲುಯಾಕ್ ವೋಯಜೆಸ್, ಸಂ. ೨, ಪು. ೩೪೯

೧೪೮ ಫ್ರೈಯರ್,: ಈಸ್ಟ್ ಇಂಡಿಯಾ ಅಂಡ್ ಪರ್ಷಿಯಾ (೧೬೭೬) ಪು ೧೭೮

೧೪೯ ಬುಕ್‌ಮನ್,: ಪೂರ್ವೋಕ್ತ ಸಂ. ೨, ಪು. ೧೭೬

೧೫೦ ರಕಾರ್ಡ್ಸ್ ಆಫ್ ಫೋರ್ಟ್ ಸೇಂಟ್ ಜಾರ್ಜ್: ಲೆಟರ್ ಫ್ರಂ ಫೋರ್ಟ್ ಸೇಂಟ್ ಜಾರ್ಜ್; ೧೯೮೬-೮೭, ಪು. ೧೦೮; ಅದೇ. ಪು. ೬೨; ಅದೇ ೧೭೨೩, ಪು. ೪೫

೧೫೧ ಅದೇ, ಡಿಸ್‌ಪ್ಯಾಚೆಸ್ ಫ್ರಂ ಇಂಗ್ಲೆಂಡ್, ೧೭೧೧-೧೭೧೪, ಪು. ೪೫

೧೫೨ ಅದೇ, ಲೆಟರ್ ಟು ಪ್ಲೇಟ್ ಸೇಂಟ್ ಡೇವಿಡ್, ೧೭೪೭, ಪು. ೪೭, ೧೨

೧೫೩ ಬಾರ್ಬೋಸಾ, ಪೂರ್ವೋಕ್ತ, ೧, ಪು. ೧೯೪

೧೫೪ ಅದೇ, ಪು. ೧೯೫-೧೯೬

ಅಧ್ಯಾಯ : ಎಂಟು

ವಿಜಯನಗರ ಕಾಲದ ಸಮಾಜ

ಪೀಠಿಕೆ

ವಿಜಯನಗರ ಕಾಲದ ಜಾತಿವ್ಯವಸ್ಥೆಯು ಹಿಂದೂ ಸಮಾಜದ ವಿಶಿಷ್ಟ ಲಕ್ಷಣವಾಗಿತ್ತು. ವಿವಿಧ ಆಕರಗಳಲ್ಲಿ ಸೂಚಿಸಿರುವಂತೆ ಕರ್ನಾಟಕದಲ್ಲಿ ಹಲವು ಪ್ರಾದೇಶಿಕ ಜಾತಿಗಳೂ ಉಪಜಾತಿಗಳೂ ಇದ್ದುವು. ರಿಸ್ಲಿಯ ಪ್ರಕಾರ ಜಾತಿ ಎನ್ನುವುದು ಮಾನವನೋ, ದೇವನೋ, ಪೌರಾಣಿಕ ವ್ಯಕ್ತಿಯೋ ಆದ ಒಬ್ಬ ಮೂಲ ಪುರುಷನಿಂದ ಬಂದ ಕುಟುಂಬಗಳ ಒಂದು ಗುಂಪು ಅಥವಾ ವರ್ಗ. ಆನುವಂಶಿಕವಾಗಿ ಬಂದ ವೃತ್ತಿಯನ್ನೇ ಅವರು ಅನುಸರಿಸುತ್ತಿದ್ದರು. ಅದೊಂದು ಸಮಾನ ಲಕ್ಷಣವುಳ್ಳ ಕುಟುಂಬಗಳ ಸಮುದಾಯ. ಧಾರ್ಮಿಕ ಆಚರಣೆಗಳು, ಸಾಮಾಜಿಕ ಸ್ಥಾನಮಾನ, ಪರಿಶುದ್ಧತೆ-ಮಲಿನತೆಗಳ ಮಟ್ಟ ಇವುಗಳ ಆಧಾರದಿಂದ ಸಮಾಜದಲ್ಲಿ ವರ್ಗಗಳನ್ನು ಅನುಕ್ರಮಿಕ ಶ್ರೇಣಿಯಲ್ಲಿರಿಸಲಾಗುತ್ತಿತ್ತು. ಆಚರಣೆಗಳು, ನಂಬಿಕೆಗಳು, ಅಭ್ಯಾಸಗಳು,ರೂಢಿಗಳು ವೃತ್ತಿಗಳು, ಎಲ್ಲಕ್ಕಿಂತ ಮಿಗಿಲಾಗಿ ಸಂಪ್ರದಾಯಗಳ ವಿಶಿಷ್ಟ ಲಕ್ಷಣಗಳನ್ನು ಕೂಡ ಅದು ಒಳಗೊಳ್ಳುತ್ತಿತ್ತು.

ಉಡುಗೆ-ತೊಡುಗೆ ಮತ್ತು ಮದುವೆಗಳಿಗೆ ಹಾಗೂ ಅಂತ್ಯಸಂಸ್ಕಾರಗಳಿಗೆ ಸಂಬಂಧಿಸಿದ ವಿಧಿಗಳು ಜಾತಿಯಿಂದ ಜಾತಿಗೆ ಬೇರೆಯಾಗುತ್ತಿದ್ದುವು. ಪ್ರತಿಯೊಂದು ಜಾತಿಯಲ್ಲೂ ಧರ್ಮ, ಪ್ರದೇಶ ಭಾಷೆ ಮತ್ತು ಬಳಕೆಗಳನ್ನು ಆಧರಿಸಿ ಹಲವು ಉಪಜಾತಿಗಳಿರುತ್ತಿದ್ದುವು. ಉದಾಹರಣೆಗೆ ಚಿನ್ನದ ಕೆಲಸ ಮಾಡುವ ಕುಶಲಕಾರ್ಮಿಕರು ಕಬ್ಬಿಣದ ಕೆಲಸ ಮಾಡುವವರಿಗಿಂತ ತಾವು ಬೇರೆ ಜಾತಿ ಎಂದು ಭಾವಿಸುತ್ತಿದ್ದರು.

ವಿಜಯನಗರ ಕಾಲದಲ್ಲಿ ಕರ್ನಾಟಕದಲ್ಲಿ ವಿವಿಧ ಧರ್ಮ, ಜಾತಿ, ಪಂಗಡ ಆಧಾರಿತ ಜಾತಿ ವರ್ಗಗಳಿದ್ದುವು. ಕನ್ನಡವಲ್ಲದೆ ಬೇರೆ ಭಾಷೆಗಳನ್ನೂ ಆಡುತ್ತಿದ್ದ ಸ್ಥಳೀಯ ಬ್ರಾಹ್ಮಣರಿದ್ದರು. ಉತ್ತರ ಕನ್ನಡದ ನವಾಯತ ಮುಸ್ಲಿಮರು ಕೊಂಕಣಿ ಮಾತನಾಡುತ್ತಿದ್ದರು. ವಿಜಯನಗರ ಕಾಲದಲ್ಲಿ ಮತ್ತು ಅನಂತರ ಅನೇಕ ಕಾರಣಗಳಿಂದ ಪೋರ್ಚುಗೀಸ್ ಗೋವಾದಿಂದ ಬಂದು ನೆಲೆಸಿದ ಕೊಂಕಣಿ ಮಾತಾಡುವ ಕ್ರಿಶ್ಚಿಯನ್ನರಿದ್ದರು. ಕರ್ನಾಟಕದ ಕರಾವಳಿ ಪ್ರದೇಶ ಹಾಗೂ ಮೈಸೂರು ಮತ್ತು ಹಾಸನ ಜಿಲ್ಲೆಗಳ ಭಾಗಗಳಲ್ಲಿ ಮುಖ್ಯವಾಗಿ ವಾಸವಾಗಿದ್ದ ಜೈನರಿದ್ದರು. ಕುಡಿಯರು ಮತ್ತು ಸೋಲಿಗರಂತಹ ವಿವಿಧ ಆದಿವಾಸಿ ಜನರು ಹಾಗೂ ಕೊಡವ ಮತ್ತು ಹಾಲಕ್ಕಿ ಒಕ್ಕಲುಗಳಂತಹ ಜನರು, ವಿಶೇಷವಾಗಿ ವರ್ಣರಂಜಿತವಾದ ಮಹಿಳೆಯರ ಉಡುಗೆ ತೊಡುಗೆಗಳಿಂದಾಗಿ ಸಮಕಾಲಿಕ ಜೀವನಕ್ಕೆ ವರ್ಣವೈವಿಧ್ಯವನ್ನೂ ಬೆಡಗನ್ನೂ ತಂದಿತ್ತಿದ್ದುವು. ಮೂಲತಃ ಆಫ್ರಿಕಾದಿಂದ ಬಂದ ಸಿದ್ದಿಗಳು, ವಿಜಯನಗರ ಸಾಮ್ರಾಜ್ಯದ ಉತ್ತರಕನ್ನಡ ಪ್ರದೇಶದಲ್ಲಿ ಅಧಿಕ ಸಂಖ್ಯೆಯಲ್ಲಿ ನೆಲೆಸಿದ್ದರು. ಸಾಮ್ರಾಜ್ಯವು ಮಾನವಕುಲ ವೈವಿಧ್ಯವನ್ನು ಬಿತ್ತರಿಸುವ ಚಿತ್ರಶಾಲೆಯಂತೆ ತೋರುತ್ತಿದ್ದಿತು. ಈ ಸಾಮಾಜಿಕ ವರ್ಗಗಳು ಅನುಕ್ರಮವಾದ ಒಂದು ಶ್ರೇಣಿಯಲ್ಲಿ ಜೋಡಣೆಗೊಂಡಿದ್ದುವು.

ಸಾಮಾಜಿಕ ರಚನೆ

ರಾಜಕೀಯ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ಸಂರಕ್ಷಣೆ ಮತ್ತು ಪಾಲನೆ ಸತ್ಯವಾಗಿತ್ತು. ಆದರೆ, ಸಮಾಜದ ರಚನೆ ಮತ್ತು ಸಾಹಿತ್ಯಕ ಪ್ರಗತಿಯ ದೃಷ್ಟಿಯಿಂದ ಅದು ಸತ್ಯವಾಗಿರಲಿಲ್ಲ. ಚಲನಶೀಲವೂ ಪ್ರಗತಿಯುತವೂ ಆದ ಶಕ್ತಿಗಳು ಸಾಂಪ್ರದಾಯಿಕ ಸಾಮಾಜಿಕ ಸ್ತರೀಕರಣವನ್ನು ಬದಲಾಯಿಸುತ್ತಿದ್ದುವು. ವಿಜಯನಗರದ ಅರಸರು ವರ್ಣಧರ್ಮ-ಆಶ್ರಮಧರ್ಮಗಳನ್ನು ರಕ್ಷಿಸಲು ಪ್ರಯತ್ನಿಸುತ್ತಿದ್ದರು. ಟಿ.ವಿ. ಮಹಾಲಿಂಗಂ ಹೀಗೆ ಅಭಿಪ್ರಾಯಪಡುತ್ತಾರೆ: "ಹಿಂದೂಗಳ ಸಾಮಾಜಿಕ ಐಕ್ಯತೆಯನ್ನು ಪರಿಪಾಲಿಸಲು ಅರಸರಿಗಿದ್ದ ಕಾಳಜಿ ಅವರು ಧರಿಸಿದ ಬಿರುದುಗಳಿಂದ ಸ್ಪಷ್ಟವಾಗಿ ಗೋಚರವಾಗುತ್ತದೆ: ನಾಲ್ಕುಜಾತಿಗಳು ಮತ್ತು ವರ್ಣಗಳ ಪೋಷಕ, ವರ್ಣಾಶ್ರಮ ಧರ್ಮದ ರಕ್ಷಕ, ಎಲ್ಲಾ ಜಾತಿಗಳ ಕರ್ತವ್ಯಗಳನ್ನು ಎತ್ತಿ ಹಿಡಿಯುವವನು, ಸಾಮ್ರಾಜ್ಯದ ಸಕಲ ಜಾತಿಗಳ ರಕ್ಷಕ, ಇತ್ಯಾದಿ."[೧]

ತತ್ವತಃ ವರ್ಣಾಶ್ರಮಧರ್ಮವೇ ಸಮಾಜದ ಮೂಲ ಆಧಾರವಾಗಿತ್ತು ಎನ್ನುವುದರಲ್ಲಿ ಸಂದೇಹವಿಲ್ಲ. ಆದರೆ ಆಚರಣೆಯಲ್ಲಿ ಮಾತ್ರ ಅವುಗಳನ್ನು ಉಲ್ಲಂಘಿಸುವುದು ಸಾಮಾನ್ಯವಾಗಿತ್ತು. ಸಮಾಜ ಜೀವನದಲ್ಲಿ ಜಾತಿಯು ತನ್ನ ಸಾಂಗತ್ಯವನ್ನು ಕಳೆದುಕೊಂಡಿದ್ದಿತು. ಕೆಲವು ಜಾತಿಗಳು ಸಾಮಾಜಿಕ ಸ್ಥಾನಮಾನದಲ್ಲಿ ಮೇಲಕ್ಕೆ ಏರಲು ಪ್ರಯತ್ನ ಪಡುತ್ತಿದ್ದರು. ಹಿಂದಿನ ಅವಧಿಯಂತಲ್ಲದೆ, ವಿಜಯನಗರದ ಕಾಲದಲ್ಲಿ ಈ ಪ್ರವೃತ್ತಿಯು ಹೆಚ್ಚಾಗಿ ವ್ಯಕ್ತವಾಯಿತು. ಅದಕ್ಕೆ ಕಾರಣ ದಕ್ಷಿಣ ಭಾರತದಲ್ಲಿ ಇಸ್ಲಾಂ ನೆಲೆಗೊಳ್ಳತೊಡಗಿದುದು; ಸಾಮಾಜಿಕ ಸಮಾನತೆ ಮತ್ತು ಹೊಂದಾಣಿಕೆಗಳಿಗೆ ಒತ್ತು ಕೊಟ್ಟು ಆಚರಣೆಯಲ್ಲಿ ತೋರಿಸತೊಡಗಿದುದು. ಸಾಂಪ್ರದಾಯಿಕ ಜಾತಿ ಪದ್ಧತಿಯು ಮುಂಚಿನಷ್ಟು ಬಿಗಿಯಾಗಿ ಉಳಿಯಲಿಲ್ಲ. ಅರಸರ ನೀತಿಯೇನೋ ಇದ್ದ ವ್ಯವಸ್ಥೆಯನ್ನು ದುರ್ಬಲಗೊಳಿಸದೆ ರಕ್ಷಿಸುವುದೇ ಆಗಿದ್ದರೂ ಕೂಡ ಪ್ರತಿಯೊಂದು ಜಾತಿಯ ಹಕ್ಕು ಬಾಧ್ಯತೆಗಳನ್ನೂ ಕರ್ತವ್ಯಗಳನ್ನೂ ಕಟ್ಟುನಿಟ್ಟಾಗಿ ಅನುಸರಿಸುತ್ತಿರಲಿಲ್ಲ. ಆಗ ಕಂಡುಬಂದ ಇನ್ನೊಂದು ಬೆಳವಣಿಗೆಯೆಂದರೆ, ಬೇಕಾದಷ್ಟು ಉಪಜಾತಿಗಳು ಮತ್ತು ಅವುಗಳಲ್ಲಿ ಎಡಗೈ ಮತ್ತು ಬಲಗೈ ಎಂಬ ಭೇದಗಳು ಕಾಣಿಸಿಕೊಂಡದ್ದು.

ಆ ಕಾಲದ ಸಾಮಾಜಿಕ ರಚನೆಯಲ್ಲಿ ಬ್ರಾಹ್ಮಣರು ಹಿಂದೂಸಮಾಜದ ಅತ್ಯಂತ ಎತ್ತರದ, ಪ್ರಧಾನವಾದ ಸ್ಥಾನದಲ್ಲಿದ್ದರು. ಬ್ರಾಹ್ಮಣರ ಪೈಕಿ ಎರಡು ಮುಖ್ಯವಾದ ವಿಭಾಗಗಳಿದ್ದುವು:

೧. ಉತ್ತರದ ಪಂಚಗೌಡ

೨. ದಕ್ಷಿಣದ ಪಂಚದ್ರಾವಿಡ

ಈ ಕಾಲದ ಕರ್ನಾಟಕದ ಬ್ರಾಹ್ಮಣರು ಪಂಚದ್ರಾವಿಡ ವರ್ಗಕ್ಕೆ ಸೇರಿದವರು. ಅವರಲ್ಲಿ ಕೊನೆಯ ಪಕ್ಷ ಆರು ಭಾಷಾವರ್ಗಗಳಿದ್ದುವು. ಕನ್ನಡ, ತಮಿಳು, ತೆಲುಗು, ಮರಾಠಿ, ಕೊಂಕಣಿ ಮತ್ತು ತುಳುಭಾಷೆಗಳನ್ನು ಅವರು ಆಡುತ್ತಿದ್ದರು. ಕೊಂಕಣಿ ಬ್ರಾಹ್ಮಣರು ಪೋರ್ಚುಗೀಸ್ ಗೋವಾದಿಂದ ವಲಸೆ ಬಂದವರು, ತುಳು ಬ್ರಾಹ್ಮಣರು ಬಹಳ ಹಿಂದೆಯೇ ಕರಾವಳಿ ಪ್ರದೇಶಕ್ಕೆ ಹೋಗಿ ನೆಲೆಸಿದವರು. ವಿಜಯನಗರದ ಅರಸರು ಸ್ಥಾಪಿಸಿದ ಅಗ್ರಹಾರಗಳಿಂದಾಗಿ ನದಿತೀರದ ತೀರ್ಥಕ್ಷೇತ್ರಗಳಾದ ನಂಜನಗೂಡು, ಸೋಸಲೆ, ಟಿ.ನರಸೀಪುರ, ಮಿರ್ಲೆ, ಸಾಲಿಗ್ರಾಮಗಳಲ್ಲಿ, ಕೆರೆ-ಕಾಲುವೆ ಮೊದಲಾದವುಗಳ ನೀರಾವರಿಯಿರುವ ಸ್ಥಳಗಳಲ್ಲಿ ಹಾಗೂ ಮೇಲುಕೋಟೆ-ತೊಣ್ಣೂರುಗಳಂತಹ ಪ್ರಾಚೀನ ಸ್ಥಳಗಳಲ್ಲಿ ಬ್ರಾಹ್ಮಣರು ನೆಲೆಸುವುದಕ್ಕೆ ಅವಕಾಶವಾಯಿತು. ಆ ಕಾಲದ ಬ್ರಾಹ್ಮಣರೆಲ್ಲರೂ ತ್ರಿಮತಗಳಲ್ಲೊಂದಕ್ಕೆ, ಅಂದರೆ ಸ್ಮಾರ್ತ, ಮಾಧ್ವ ಅಥವಾ ಶ್ರೀವೈಷ್ಣವ ಮತಕ್ಕೆ ಸೇರಿದವರು. ಇವರು ಕ್ರಮವಾಗಿ ಶಂಕರಾಚಾರ್ಯ, ಮಧ್ವಾಚಾರ್ಯ ಮತ್ತು ರಾಮಾನುಜಾಚಾರ್ಯರ

ಅನುಯಾಯಿಗಳಾಗಿದ್ದವರು. ಈ ವರ್ಗಗಳಲ್ಲಿ, ಧಾರ್ಮಿಕ ಅಧ್ಯಯನಾದಿಗಳನ್ನು ನಡೆಸುತ್ತಿದ್ದ ವೈದಿಕರು, ವೃತ್ತಿಜೀವಿಗಳು, ಅಧಿಕಾರಿಗಳು, ನೌಕರರು, ಜಮೀನುದಾರರು, ವರ್ತಕರು, ವಿವಿಧ ಕಸಬುಗಳನ್ನು ನಡೆಸುತ್ತಿದ್ದವರು ಸೇರಿದ ಲೌಕಿಕರೂ ಇರುತ್ತಿದ್ದರು. ಇವುಗಳಲ್ಲಿ ಹಲವಾರು ಉಪಪಂಗಡಗಳಿರುತ್ತಿದ್ದುವು.

ಸ್ಮಾರ್ತರು ಅದ್ವೈತ ಸಿದ್ಧಾಂತವನ್ನು ಒಪ್ಪಿಕೊಂಡವರು. ಅವರಲ್ಲಿ ಸೀರುನಾಡು, ಬಡಗನಾಡು, ಮುಲುಕುನಾಡು, ಬಬ್ಬೂರು ಕಮ್ಮೆ, ಉಲುಚುಕಮ್ಮೆ, ಕರ್ಹಾಡಿ, ಚಿತ್ಪಾವನ, ಹವೀಕ, ಹೊಯ್ಸಳ ಕರ್ನಾಟಕ, ಮೂಗೂರು ಅಥವಾ ಹಳೆ ಕರ್ನಾಟಕ, ತೈಯರ್ ಇತ್ಯಾದಿ ವಿಭಾಗಗಳಿದ್ದುವು. ಸಾಮ್ರಾಜ್ಯದ ದಕ್ಷಿಣ ಕರ್ನಾಟಕ ಪ್ರದೇಶದಲ್ಲಿ, ವಿಶೇಷವಾಗಿ ಈಗಿನ ಮೈಸೂರು ಜಿಲ್ಲೆಯ ಭಾಗದಲ್ಲಿ ಮೂಗೂರು ಕರ್ನಾಟಕರು ಪ್ರಮುಖರಾಗಿದ್ದರು. ಮಾಧ್ವರು ಮಧ್ವಾಚಾರ್ಯರ ದ್ವೈತ ದರ್ಶನದ ಅನುಯಾಯಿಗಳು. ಇವರಲ್ಲಿ ಬಡಗನಾಡು, ಅರವೇಲು, ಅರವತ್ತುವಕ್ಕಲು, ದೇಶಸ್ಥ ಇತ್ಯಾದಿ ಉಪಪಂಗಡಗಳಿದ್ದುವು. ಅವರ ಮುಖ್ಯ ಕೇಂದ್ರವಾದ ಉಡುಪಿಯಲ್ಲಿ ಎಂಟು ಮಠಗಳಿದ್ದುವು. ಅವುಗಳ ಶಾಖೆಗಳು ನಂಜನಗೂಡು, ಸೋಸಲೆ ಮತ್ತು ದಕ್ಷಿಣ ಕರ್ನಾಟಕದ ಇತರ ಕೆಲವು ಭಾಗಗಳಲ್ಲಿ ಇದ್ದುವು. ಶ್ರೀವೈಷ್ಣವರು ರಾಮಾನುಜಾಚಾರ್ಯರ ವಿಶಿಷ್ಟಾದ್ವೈತ ದರ್ಶನದ ಅನುಯಾಯಿಗಳು. ವಿಜಯನಗರ ಕಾಲದಲ್ಲಿ ಇವರಲ್ಲಿ ಎರಡು ಮುಖ್ಯವಾದ ವರ್ಗಗಳಿದ್ದುವು: ತೆಂಗಲೈ (ದಕ್ಷಿಣದವರು) ಮತ್ತು ವಡಗಲೈ (ಉತ್ತರದವರು). ವಿದ್ಯಾರಣ್ಯರ ಸಮಕಾಲೀನರಾದ ವೇದಾಂತ ದೇಶಿಕರು ಎರಡೂ ಪಂಗಡಗಳನ್ನು ಒಂದುಗೂಡಿಸಲು ಪ್ರಯತ್ನಿಸಿದರು. ಆದರೂ ಕಾಲದಲ್ಲಿ ಎರಡೂ ಪಂಗಡಗಳ ನಡುವೆ ವಿವಾಹ ಮತ್ತು ಸಹಪಂಕ್ತಿ ಭೋಜನ ಮೊದಲಾದ ಸಾಮಾಜಿಕ ಸಂಪರ್ಕವು ತುಂಬಾ ಕಡಮೆಯಾಗಿತ್ತು. ಕರ್ನಾಟಕದ ಶ್ರೀವೈಷ್ಣವರಲ್ಲಿ ಹಲವರು ತಮಿಳನ್ನೂ ಕೆಲವರು ತೆಲುಗನ್ನೂ ಮನೆಮಾತಾಗಿ ಆಡುತ್ತಿದ್ದರು. ಕಂಚಿ ಮತ್ತು ಶ್ರೀರಂಗಂಗಳು ಅವರ ಪವಿತ್ರ ಕ್ಷೇತ್ರಗಳಾಗಿದ್ದುವು. ಹೆಬ್ಬಾರ್, ಮಂಡ್ಯತ್ತಾರ್, ಹೆಮ್ಮಿಗೆಯಾರ್, ತಿರುಮಲೈಯಾರ್, ಕೀಳ್ನಾತ್ತರ್, ಮತ್ತು ಸ್ವಯಮಾಚಾರ್ಯರ್ ಇವು ಶ್ರೀವೈಷ್ಣವರಲ್ಲಿದ್ದ ಉಪಪಂಗಡಗಳು. ಆಗ ಅಹೋಬಲ ಮಠ ಮತ್ತು ಪರಕಾಲ ಮಠಗಳು ಅವರ ಮುಖ್ಯ ಮಠಗಳಾಗಿದ್ದುವು.

ಎಲ್ಲ ಬ್ರಾಹ್ಮಣರು ಗೋತ್ರ ಮತ್ತು ಪ್ರವರಗಳಿಗನುಗುಣವಾಗಿ ಬೇರೆ ಬೇರೆ ಗುಂಪುಗಳಾಗುತ್ತಿದ್ದರು. ಬ್ರಾಹ್ಮಣರಿಗೆ ೧೬ ನಿತ್ಯ ಸಂಸ್ಕಾರಗಳಾಗಿರಬೇಕಾಗಿತ್ತು. ಅವುಗಳಲ್ಲಿ ಮುಖ್ಯವಾದದ್ದು ಉಪನಯನ. ಅದು ಬಾಲಕನಿಗೆ ವೇದಾಧ್ಯಯನಕ್ಕೆ ದೀಕ್ಷೆಯನ್ನು ಕೊಡುತ್ತಿದ್ದಿತು. ಇದಲ್ಲದೆ ೨೪ ನೈಮಿತ್ತಿಕ ಸಂಸ್ಕಾರಗಳೂ ಇರುತ್ತಿದ್ದುವು. ವಿಧವೆಯರ ತಲೆಯನ್ನು ಬೋಳಿಸಲಾಗುತ್ತಿತ್ತು. ಆಹಾರ ಪದ್ಧತಿಗಳು, ಅಷ್ಟೇಕೆ ತರಕಾರಿಗಳ ಬಳಕೆಯಲ್ಲೂ ಎಷ್ಟೆಷ್ಟೋ ನಿಷೇಧಗಳಿರುತ್ತಿದ್ದುವು. ಅವರದು ಸಾಂಪ್ರದಾಯಿಕ ಶೈಲಿಯ ವಿವಾಹ. ಹಲವಾರು ಆಚರಣೆಗಳಿಂದ ಹಲವು ದಿನಗಳ ಕಾಲ ನಡೆಯುತ್ತಿದ್ದ ವಿಸ್ತಾರವಾದ ಮದುವೆಯ ಸಮಾರಂಭವಾಗಿರುತ್ತಿತ್ತು. ವಿವಾಹ ವಿಚ್ಛೇದನಕ್ಕಾಗಲಿ, ವಿಧವಾ ಪುನರ್ವಿವಾಹಕ್ಕಾಗಲಿ ಅವಕಾಶವಿರಲಿಲ್ಲ. ಅವು ನಿಷಿದ್ಧವಾಗಿದ್ದುವು. ಬ್ರಾಹ್ಮಣರು ಸತ್ತವರನ್ನು ಸುಡುತ್ತಿದ್ದರು, ಹತ್ತು ದಿನಗಳ ಮೈಲಿಗೆಯನ್ನು ಆಚರಿಸುತ್ತಿದ್ದರು. ಅಂತ್ಯಕ್ರಿಯೆಗಳು ಮತ್ತು ಸಂಬಂಧಿತ ಅಪರಕರ್ಮಗಳು ಹದಿನಾಲ್ಕು ದಿನಗಳ ಕಾಲ ನಡೆಯುತ್ತಿದ್ದುವು. ಸಾಂಪ್ರದಾಯಕವಾಗಿ ಅವರ ವೃತ್ತಿ ವೇದ, ಶಾಸ್ತ್ರ, ಪುರಾಣಗಳ ಅಧ್ಯಯನ, ಯಜ್ಞಯಾಗಾದಿಗಳ ಆಚರಣೆ, ದೇವಾಲಯಗಳಲ್ಲಿ ಪೂಜೆ ಮಾಡುವುದು ಮತ್ತು ಅಗ್ರಹಾರಗಳಲ್ಲಿ ಬೋಧಿಸುವುದು. ಬ್ರಾಹ್ಮಣರ ಸಾಮಾಜಿಕ ಜೀವನದ ಮಾದರಿಯನ್ನು ವೀರಶೈವರು ಹೊರತಾಗಿ ಇತರ ಅನೇಕ ಕೆಳಜಾತಿಗಳವರು ಹೆಚ್ಚುಕಡಮೆ ಅನುಸರಿಸುತ್ತಿದ್ದರು.

ಬ್ರಾಹ್ಮಣರು ಪ್ರಾಚೀನ ಶಾಸ್ತ್ರಗಳು ವಿಧಿಸಿರುವಂತೆ ಕಟ್ಟುನಿಟ್ಟಾಗಿ ತಮ್ಮ ಕರ್ತವ್ಯಗಳನ್ನು ಪಾಲಿಸುತ್ತಿರಲಿಲ್ಲ. ಪೇಸ್‌ನ ಪ್ರಕಾರ ಬ್ರಾಹ್ಮಣರಲ್ಲಿ ನಾಲ್ಕು ವರ್ಗಗಳಿದ್ದುವು-ಪುರೋಹಿತರು, ಅಧಿಕಾರಿಗಳು, ವ್ಯವಹಾರಸ್ಥರು ಮತ್ತು ಆನುವಂಶಿಕ ಜಮೀನುದಾರರು.

ನ್ಯೂನಿಜನೂ ಬ್ರಾಹ್ಮಣರನ್ನು ನಾಲ್ಕು ವರ್ಗಗಳಾಗಿ ವಿಭಾಗಿಸಿದ್ದನು, ಆದರೆ ಅವನ ವರ್ಗೀಕರಣ ತುಸು ಬೇರೆ ರೀತಿಯದು. ರಾಜಪುರೋಹಿತರು ಸಾವಿರಾರು ಸಂಖ್ಯೆಯಲ್ಲಿದ್ದರು, '' ದಾನವಾಗಿ ಬೇಕಾದಷ್ಟು ಹಣವನ್ನು... ಪಡೆಯುತ್ತಿದ್ದರು; ಅವರ ಬಳಿ ಯಾವಾಗಲೂ ತುಂಬಾ ಹಣವಿರುತ್ತದೆ. ಅವರು ಎಷ್ಟು ಉದ್ಧತರಾಗಿರುತ್ತಾರೆಂದರೆ, ಬಾಗಿಲು ಕಾಯುವವರು ಪೆಟ್ಟು ಕೊಟ್ಟರೂ ಅವರನ್ನು ತಡೆಯಲು ಸಾಧ್ಯವಾಗುವುದಿಲ್ಲ''೨

ನ್ಯೂನಿಜನ ಪ್ರಕಾರ ಎರಡನೆಯ ಗುಂಪಿನ ಬ್ರಾಹ್ಮಣರು ''ಪ್ರಾಮಾಣಿಕರಾದ ಜನ, ವ್ಯಾಪಾರವನ್ನು ನಡೆಸುವವರು, ಸೂಕ್ಷ್ಮಮತಿಗಳು, ಬುದ್ಧಿವಂತರು, ಲೆಕ್ಕಾಚಾರದಲ್ಲಿ ನಿಪುಣರು.... ಇವುಗಳಿಂದಾಗಿ ಮತ್ತು ತಮ್ಮ ಕರ್ತವ್ಯ ಪಾಲನೆಯಿಂದಾಗಿ ರಾಜ್ಯದ ಆಡಳಿತವು ಸಮರ್ಪಕವಾಗಿ ನಡೆಯುವಂತೆ ನೋಡಿಕೊಳ್ಳುತ್ತಾರೆ. ಇನ್ನೊಂದು ವರ್ಗದವರಿದ್ದಾರೆ, ಇವರು ಕನರೀಸ್ ಜನರು. ಇವರ ಬಳಿ ಪಗೋಡಗಳಿರುತ್ತವೆ. ಅವುಗಳ ಮೇಲೆ ಕೋತಿಗಳ ಮತ್ತು ಹಸುಗಳ ಚಿತ್ರವನ್ನು ಕೆತ್ತಿರುತ್ತದೆ.''೩

ಹೀಗೆ ಬ್ರಾಹ್ಮಣರು ದೇವಾಲಯದ ಪುರೋಹಿತರು, ಅಧಿಕಾರಿಗಳು, ವ್ಯಾಪಾರಸ್ಥರು ಮತ್ತು ಅಗ್ರಹಾರವನ್ನು ಪಡೆದವರು ಎಂದು ನಾಲ್ಕು ಪಂಗಡವಾಗಿದ್ದರು. ಅರಮನೆಯ ಪುರೋಹಿತರು ಅರಮನೆಗೇ ಸೀಮಿತವಾದ ಕರ್ತವ್ಯಗಳನ್ನು ಹೊಂದಿದ್ದರು. ಜೊತೆಗೆ ಎಲ್ಲರಿಗೂ ನ್ಯಾಯವಿತರಣೆಯ ಅಧಿಕಾರವೂ ಇದ್ದಿತು. ಬ್ರಾಹ್ಮಣರಲ್ಲಿ ತುಂಬಾ ಪ್ರಭಾವಶಾಲಿಗಳಾಗಿದ್ದವರು ವಿದ್ವಾಂಸರು, ಜ್ಯೋತಿಷ್ಯರು, ಸಾಹಿತಿಗಳು, ವೈದ್ಯರು, ನ್ಯಾಯವನ್ನು ವ್ಯಾಖ್ಯಾನಿಸಬಲ್ಲವರು, ನ್ಯಾಯತೀರ್ಮಾನ ಮಾಡುವವರು ಆಗಿರುತ್ತಿದ್ದರು. ಅವರು ಪೂರ್ಣ ಸಸ್ಯಾಹಾರಿಗಳು. ಕೌಟುಂಬಿಕ ಜೀವನದಲ್ಲಿ ಏಕಪತ್ನೀವ್ರತಸ್ಥರು. ಇತರರು, ವಿಶೇಷವಾಗಿ ರಾಜಪುರೋಹಿತರು ಮತ್ತು ಸರಕಾರಿ ಅಧಿಕಾರಿಗಳು ಜನರ ಕಣ್ಣಿನಲ್ಲಿ ಕೆಳಮಟ್ಟದವರಾಗಿದ್ದರು. ನ್ಯೂನಿಜ್ ಮೊದಲಿನ ವರ್ಗದವರನ್ನು ಅಧಮರೆಂದು ಕರೆದಿದ್ದಾನೆ. ಇತರ ಅನೇಕರೂ ಅದೇ ಬಗೆಯಾಗಿದ್ದರು. ಅವರನ್ನು ಚೆನ್ನಾಗಿ ಬಲ್ಲವನಾಗಿದ್ದ ಕೃಷ್ಣದೇವರಾಯನು ತನ್ನ ಕೃತಿಯಲ್ಲಿ ಅವರ ರೀತಿನೀತಿಗಳನ್ನು ವರ್ಣಿಸಿದ್ದಾನೆ.

ರಾಜಗುರುಗಳಲ್ಲಿ ಕೆಲವರು ದೊಡ್ಡ ವಿದ್ವಾಂಸರಾಗಿದ್ದರೂ, ಅನೈತಿಕ ವರ್ತನೆಗಳಿಂದ ಮುಕ್ತರಾಗಿರಲಿಲ್ಲ. ಜೆಸೂಯಿಟ್ ಪಾದ್ರಿಗಳಲ್ಲಿ ಒಬ್ಬನಾದ ಫಾದರ್ ಬಿ. ಕುಟಿನ್ಹೋಗೆ ''ಸೆ ತಾತುಚರೆ'' ಎಂಬ ಪ್ರಸಿದ್ಧ ರಾಜಗುರುವಿನ ನಿಕಟ ಪರಿಚಯವಿದ್ದಿತು. ಆತನು ಒಂದು ಪತ್ರದಲ್ಲಿ ಹೀಗೆ ಬರೆದನು: ''ಆತನು ತನ್ನ ಕೆಟ್ಟ ಗುಣಗಳಿಂದಾಗಿ ಆ ಹುದ್ದೆಗೆ ಅನರ್ಹನಾಗಿದ್ದಾನೆ.... ಅವನಿಗೆ ಮನೆಯಲ್ಲಿ ಅನೇಕ ಪತ್ನಿಯರಿದ್ದಾರೆ. ಅವರಲ್ಲಿ ಒಬ್ಬಳು ಒಂಟೆಗಳನ್ನು ನುಂಗಿ ಸೊಳ್ಳೆಗಳಿಗೆ ನಾಚಿಕೊಳ್ಳುವವಳು... ಅನೇಕ ಕೆಲಸಕ್ಕೆ ಬಾರದ ಶಾಸ್ತ್ರ ಆಧಾರವೇ ಇಲ್ಲದ ಆಚರಣೆಗಳಿಂದ ಜನರನ್ನು ವಂಚಿಸಿ ಪ್ರಕೃತಿನಿಯಮದ ಮೂಲಾಗತ್ಯಗಳನ್ನು ಮರೆಯುವವಳು...''೪

ಪೇಸ್ ಮತ್ತು ನ್ಯೂನಿಜ್ ಇಬ್ಬರೂ ವ್ಯಾಪಾರವನ್ನು ನಿರ್ವಹಿಸುತ್ತಿದ್ದ ಬ್ರಾಹ್ಮಣರನ್ನು ಕುರಿತು ಬರೆದಿದ್ದಾರೆ. ದಕ್ಷಿಣ ಭಾರತದಲ್ಲಿ ಪೋರ್ಚುಗೀಸ್ ಕಾಲೋನಿಗಳು ಸ್ಥಾಪನೆಗೊಂಡ ಮೇಲೆ ವ್ಯಾಪಾರವು ಲಾಭದಾಯಕ ವೃತ್ತಿಯಾಗಿದೆ ಎಂಬುದನ್ನು ಮನಗಂಡ ಕೆಲವು ಬ್ರಾಹ್ಮಣರು ಅದಕ್ಕೆ ಸಂಕೋಚಪಡದೆ ಕೈ ಹಾಕಿದರು. ತನ್ನ ಆರ್ಥಿಕ ಸಂಕಷ್ಟಗಳನ್ನು ನಿವಾರಿಸಿಕೊಳ್ಳುವ ಸಲುವಾಗಿ ಬ್ರಾಹ್ಮಣನು ಯಾವ ವೃತ್ತಿಯನ್ನು ಬೇಕಾದರೂ ಹಿಡಿಯಬಹುದಾಗಿತ್ತು. ಅದಕ್ಕೆ ಶಾಸ್ತ್ರಗಳ ವಿರೋಧವೇನಿರಲಿಲ್ಲ.

ವಿಪ್ರವಿನೋದಿಗಳು ಬ್ರಾಹ್ಮಣ ಐಂದ್ರಜಾಲಿಕರಾಗಿದ್ದರು. ಬ್ರಾಹ್ಮಣ ಜಾತಿಗಳಲ್ಲೇ ಅವರದೊಂದು ಉಪಜಾತಿಯಾಯಿತು. ತಮ್ಮ ಕೈಚಳಕವನ್ನು ಪ್ರದರ್ಶಿಸುತ್ತಾ ಅವರು ಸಂಚರಿಸಿ, ಬ್ರಾಹ್ಮಣರಿಂದ ವಾರ್ಷಿಕವಾಗಿ ಸಂಭಾವನೆ ಪಡೆದು ಹೊಟ್ಟೆ ಹೊರೆದುಕೊಳ್ಳುತ್ತಿದ್ದರು. ಅವರಿಗೂ ದೊಮ್ಮರರಿಗೂ ವ್ಯತ್ಯಾಸವಿದ್ದದ್ದು

ಒಂದೇ ವಿಷಯದಲ್ಲಿ. ಅವರು ಮನೆಯೊಳಗೆ ತಮ್ಮ ಕೈಚಳಕವನ್ನು ಪ್ರದರ್ಶಿಸುತ್ತಿದ್ದರು. ಸರಕಾರೀ ನೌಕರಿಗಳನ್ನು ಪಡೆದಿದ್ದವರನ್ನು ನಿಯೋಗಿಗಳೆಂಬ ಉಪಪಂಗಡವಾಗಿ ಪರಿಗಣಿಸಲಾಗುತ್ತಿತ್ತು. ಇವರು ರಾಜ್ಯಾಡಳಿತದಲ್ಲಿ ಬಹುಮುಖ್ಯರಾಗಿದ್ದರು. ವೆಂಕಟರಮಣಯ್ಯ ಹೇಳುತ್ತಾರೆ: ''ವಿದ್ಯಾವಂತ ಬ್ರಾಹ್ಮಣರಲ್ಲಿ ಬಹುತೇಕ ಜನರು ಸರಕಾರೀ ಸೇವೆಯನ್ನು ಕೈಗೊಳ್ಳಲು ಬಯಸುತ್ತಿದ್ದರು, ಅವರಿಗೆ ಅದರಲ್ಲಿ ಉಜ್ವಲವಾದ ಭವಿಷ್ಯವಿತ್ತು. ಉತ್ತಮ ಲೆಕ್ಕಪತ್ರತಜ್ಞರೂ ಆಡಳಿತ ನಿಪುಣರೂ ಆಗುವಂತೆ ಅವರಿಗೆ ತರಬೇತಿ ನೀಡಲಾಗುತ್ತಿತ್ತು. ಕೇಂದ್ರ ಆಡಳಿತದ ಸಚಿವಾಲಯದಲ್ಲಿ ಈ ವರ್ಗದ ಜನರೇ ತುಂಬಿರುತ್ತಿದ್ದರು. ಈ ವರ್ಗದ ಬ್ರಾಹ್ಮಣರು ಧಾರ್ಮಿಕ ಆಚರಣೆಗಳಲ್ಲಿ ಅಷ್ಟಾಗಿ ಸಂಪ್ರದಾಯಬದ್ಧವಾಗಿರಲಿಲ್ಲ ಎಂದು ನಂಬಲು ಕಾರಣಗಳಿವೆ. ಅವರು ಸಚಿವರಾಗುತ್ತಿದ್ದರು. ಸೇನಾ ದಂಡನಾಯಕರಾಗುತ್ತಿದ್ದರು ಮತ್ತು ಪ್ರಾಂತಗಳ ರಾಜ್ಯಪಾಲರಾಗುತ್ತಿದ್ದರು.''[೫] ವಿವಿಧ ಆಡಳಿತ ವಿಭಾಗಗಳಿಗೆ ಕಂದಾಯ ಸಂಬಂಧವಾದ ಹುದ್ದೆಗಳನ್ನು ಈ ವರ್ಗದ ಸದಸ್ಯರು ನಿರ್ವಹಿಸುತ್ತಿದ್ದರು. ಹಾಗಾಗಿ ರಾಜ್ಯದ ಅಧಿಕಾರಶಾಹಿಯು ಕ್ಷತ್ರಿಯರ ಏಕಸ್ವಾಮ್ಯವಾಗಿ ಉಳಿದಿರಲಿಲ್ಲ. ಬ್ರಾಹ್ಮಣರು ಅದರಲ್ಲಿ ಒಂದು ಪಾಲನ್ನು ಪಡೆಯತೊಡಗಿದ್ದರು.

ಮಿಲಿಟರಿ ಮತ್ತು ಪೌರನೌಕರಿಗಳಲ್ಲಿ ಬಹುಮುಖ್ಯವಾದುವನ್ನು ಹಿಡಿದಿದ್ದ ಬ್ರಾಹ್ಮಣರಿಗೆ ವಿರೋಧವೇ ಇರಲಿಲ್ಲ. ಆ ಹುದ್ದೆಗಳಿಗೆ ಬ್ರಾಹ್ಮಣರನ್ನೇ ಆಯ್ಕೆಮಾಡಿಕೊಳ್ಳುತ್ತಿದ್ದರು. ಅದಕ್ಕೆ ಕಾರಣ ಸಮಾಜದಲ್ಲಿ ಅವರಿಗೆ ಅತ್ಯುನ್ನತವಾದ ಸ್ಥಾನವಿದ್ದಿತೆಂಬುದಲ್ಲ, ಅವರ ವಿಶ್ವಾಸಾರ್ಹತೆಯೇ ಅದಕ್ಕೆ ಕಾರಣ. ವಾಸ್ತವವಾಗಿ ಕೃಷ್ಣದೇವರಾಯನ ಕಾಲದಲ್ಲಿ ಇಂತಹ ನೇಮಕಾತಿಗಳು ಅಧಿಕವಾಗಿದ್ದುವು. ಸರಕಾರದ ಅತಿಮುಖ್ಯವಾದ ಹುದ್ದೆಗಳಿಗೆ ಬ್ರಾಹ್ಮಣರನ್ನು ನೇಮಿಸುವುದಕ್ಕೆ ಕೃಷ್ಣದೇವರಾಯನು ಕೊಟ್ಟ ಕಾರಣಗಳು ಇವು: ''ಏಕೆಂದರೆ ಒಬ್ಬ ಬ್ರಾಹ್ಮಣನು ಎಂತಹ ಆಪತ್ತಿನ ಸಮಯದಲ್ಲೂ ಕರ್ತವ್ಯಬದ್ಧನಾಗಿರುತ್ತಾನೆ. ಕ್ಷತ್ರಿಯ ಅಥವಾ ಶೂದ್ರನೊಬ್ಬನ ಅಧೀನನಾಗಿ ಕೆಲಸ ಮಾಡಬೇಕಾಗಿ ಬಂದರೂ ಅವನು ಸೇವೆಯಲ್ಲಿ ಮುಂದುವರಿಯುತ್ತಾನೆ. ಆದ್ದರಿಂದ ತನಗೆ ನಿಷ್ಠೆಯಿಂದಿರುವ ಹಾಗೂ ಅನೇಕ ಕಲೆ ಮತ್ತು ವಿಜ್ಞಾನಗಳಲ್ಲಿ ಪರಿಣತರಾಗಿರುವ, ಧರ್ಮದಿಂದ ನಡೆಯುವ, ಪರಾಕ್ರಮಿಗಳಾದ ಬ್ರಾಹ್ಮಣರನ್ನು ತನ್ನ ಕೋಟೆಗಳ ರಕ್ಷಣೆಗೆ ನೇಮಿಸುವ ರಾಜನು ಎದೆಯ ಮೇಲೆ ಕೈಯಿರಿಸಿಕೊಂಡು ನಿರಾಳವಾಗಿ ನಿದ್ದೆಮಾಡಬಹುದು. ಅವರು ತಮ್ಮ ಕಾಲಕ್ಕಿಂತಲೂ ಹಿಂದಿನಿಂದಲೂ ಸೇವೆಯಲ್ಲಿದ್ದು ಕೋಟೆಗಳಲ್ಲಿ ಹುಲಿಯ ಗಿಣ್ಣನ್ನೂ (ಪಾಲಿಜುನ್ನ) ಇತರ ಅಪೂರ್ವ ವಸ್ತುಗಳನ್ನೂ ಅನೇಕ ಪೀಳಿಗೆಗಳವರೆಗೆ ಸಂಗ್ರಹಿಸಿಟ್ಟಿರುತ್ತಾರೆ... ವರಮಾನವನ್ನು ಅಧಿಕಗೊಳಿಸಿ ಅವನ ಕೋಶವನ್ನು ದ್ವಿಗುಣಗೊಳಿಸುತ್ತಾರೆ, ವೆಚ್ಚವನ್ನು ಕಡಮೆ ಮಾಡುತ್ತಾರೆ, ಜನರು ಯಾವುದೇ ಕಷ್ಟಗಳಿಲ್ಲದೆ ಸುಖವಾಗಿರುವಂತೆ ನೋಡಿಕೊಳ್ಳುತ್ತಾರೆ. ರಾಜನಾಗಲಿ, ಪ್ರಜೆಗಳಾಗಲಿ ತೊಂದರೆ ಪಡದೆ ಕೇವಲ ಶತ್ರುಗಳನ್ನು ಕಾಡುವಹಾಗೆ ನೋಡಿಕೊಳ್ಳುತ್ತಾರೆ.''[೬]

ವಿಜಯನಗರ ಇತಿಹಾಸದಲ್ಲಿ ಕ್ಷತ್ರಿಯನು ಕಾಣಿಸಿಕೊಳ್ಳುವುದಿಲ್ಲ. ಸೇನಾಪತಿಗಳನ್ನು ಅವರ ಸಾಧನೆಗಳಿಂದ ಪ್ರಸಂಸಿಸಲಾಗುತ್ತಿತ್ತೇ ಹೊರತು, ಅವರ ಕ್ಷತ್ರಿಯ ವಂಶದಿಂದಲ್ಲ. ಅವರ ಕ್ಷತ್ರಿಯ ಹಕ್ಕುಗಳನ್ನು ಅಲಕ್ಷಿಸಿ ಅವರನ್ನು ಮಹಾಮಂಡಲೇಶ್ವರ ಮೊದಲಾದ ಬಿರುದುಗಳಿಂದ ಕರೆಯುವುದು ಪದ್ಧತಿಯಾಗಿತ್ತು. ಸಾಮ್ರಾಜ್ಯವನ್ನು ಸ್ಥಾಪಿಸಿದವನು ನಾಲ್ಕನೆಯ ಜಾತಿಗೆ ಸೇರಿದವನು ಎನ್ನುವುದು ನಮಗೆ ಖಚಿತವಾಗಿ ತಿಳಿದಿದೆ. ಧಾರ್ಮಿಕ ಆಚರಣೆಗಳಿಂದ, ಬ್ರಾಹ್ಮಣರಿಗೆ ಮಾಡಿದ ದಾನಧರ್ಮಗಳಿಂದ ಅವರು ರಾಜರಾದರು. ಇದಕ್ಕಿಂತ ಆಚೆಗೆ ನಮಗೆ ಏನೂ ತಿಳಿಯುವುದಿಲ್ಲ. ವರ್ಣ ಕಟ್ಟುಪಾಡುಗಳಲ್ಲಿ ಶಿಥಿಲತೆಯಿತ್ತು ಎಂದು ಮಾತ್ರ ಸೂಚಿತವಾಗಬಹುದು.

ವಿಜಯನಗರವನ್ನು ಕ್ಷತ್ರಿಯರು ಸ್ಥಾಪಿಸಲಿಲ್ಲ; ಭಾರತೀಯ ಇತಿಹಾಸದ ಪ್ರಾಚೀನ ಕ್ಷತ್ರಿಯೇತರ ರಾಜವಂಶಸ್ಥಾಪಕರ ಹಾಗೆಯೇ ವಿಜಯನಗರದ ಅರಸರೂ ಕೂಡ ಕ್ಷತ್ರಿಯ ಸ್ಥಾನಮಾನವನ್ನು ಪಡೆಯಲು ಪ್ರಯತ್ನಿಸಿದರು. ತಮ್ಮ ಮೂಲವನ್ನು ಸೂರ್ಯನಿಗೋ ಚಂದ್ರನಿಗೋ ಗುರುತಿಸಿಕೊಂಡರು. ಅವರ ಇತಿಹಾಸದಲ್ಲಿ ಒಂದು ನಿರ್ದಿಷ್ಟ ಜಾತಿಯಾಗಿ ನಿರ್ದಿಷ್ಟ ಉಲ್ಲೇಖ ಬರುವುದಿಲ್ಲ. ಬಿ.ಎ. ಸಾಲೆತೊರೆಯವರು ಸೂಚಿಸಿರುವ ಹಾಗೆ, ಗಣ್ಯಜನರನ್ನು, ಉನ್ನತ ವ್ಯಕ್ತಿಗಳನ್ನು ಅವರು ಹುಟ್ಟಿನಿಂದ ಕ್ಷತ್ರಿಯರಾಗಿಲ್ಲವಾದರೂ, ಅವರ ಪರಾಕ್ರಮ ಮತ್ತು ದಕ್ಷತೆಗಳಿಂದಾಗಿ ಕ್ಷತ್ರಿಯವರ್ಗಕ್ಕೆ ಸೇರಿಸಲಾಗುತ್ತಿತ್ತು. ವಾಣಿಜ್ಯ ಮತ್ತು ಕೃಷಿವರ್ಗದ ಚಟುವಟಿಕೆಗಳಿಂದ ಸತ್ವವು ತುಂಬಿಕೊಳ್ಳುತ್ತಿತ್ತು. ವಿಜಯನಗರದ ಭವ್ಯತೆಗೆ, ವೈಭವಕ್ಕೆ ಮಧ್ಯಜಾತಿಗಳು ಮುಖ್ಯವಾಗಿ ಕಾರಣವಾಗಿದ್ದುವು.

ವೈಶ್ಯ ಅಥವಾ ಕುಮಟಿ ಜಾತಿಯವರು ವ್ಯಾಪಾರ ನಡೆಸುತ್ತಿದ್ದರು. ಅದೊಂದೇ ಅವರಿಗೆ ಲಭ್ಯವಿದ್ದ ವೃತ್ತಿ. ಬ್ರಾಹ್ಮಣರಲ್ಲೂ ಲಿಂಗಾಯತರು ಮತ್ತು ಬಂಜಾರರಲ್ಲೂ ಕೆಲವರು, ಜೊತೆಗೆ ಮಹಮದೀಯರು ಈ ವಿಷಯದಲ್ಲಿ ಅವರಿಗೆ ಸ್ಪರ್ಧಿಗಳಾಗಿದ್ದರು. ವೈಶ್ಯರು ಸಮರ್ಥವಾದ ಸಂಘಗಳನ್ನು ಸ್ಥಾಪಿಸಿಕೊಂಡು ರಾಜ್ಯದ ಆಡಳಿತದಲ್ಲೂ ಸಮಾಜದಲ್ಲೂ ಅಪಾರವಾದ ಪ್ರಭಾವವನ್ನು ಹೊಂದಿರುತ್ತಿದ್ದರು. ಅವರಿಗೆ ಕಂದಾಯ ಹಾಗೂ ನ್ಯಾಯ ವಿತರಣ ಅಧಿಕಾರಗಳೂ ಇರುತ್ತಿದ್ದುವು. ಅಪೂರ್ವ ಕೌಶಲದಿಂದ ಅವುಗಳನ್ನು ಅವರು ನಿರ್ವಹಿಸುತ್ತಿದ್ದರು. ದೇವಾಲಯಗಳಿಗೋ, ಧರ್ಮ ಸಂಸ್ಥೆಗಳಿಗೋ ದಾನಮಾಡಬೇಕಾದರೆ ಉನ್ನತಾಧಿಕಾರಿಗಳು ಕೂಡ ಅವರ ಅನುಮತಿಯನ್ನು ಕೇಳಬೇಕಾಗಿತ್ತು. ಬಾರ್ಬೋಸಾನ ಪ್ರಕಾರ, ಅಮೂಲ್ಯವಾದ ಹರಳುಗಳು, ಮುತ್ತುಗಳು, ಚಿನ್ನ ಬೆಳ್ಳಿ ಹವಳ ಮೊದಲಾದ ಬೆಲೆಬಾಳುವ ವಸ್ತುಗಳ ವ್ಯಾಪಾರ ಮಾಡುತ್ತಾ ಅವರು ತುಂಬಾ ಶ್ರೀಮಂತರಾಗಿದ್ದರು. ''ಇದೇ ಅವರ ಮುಖ್ಯ ವೃತ್ತಿ. ತಮಗೆ ಅನುಕೂಲವಾಗುವಂತೆ ವಸ್ತುಗಳ ಬೆಲೆಯನ್ನು ಅವರು ಅನೇಕಪಟ್ಟು ಏರಿಸುತ್ತಾರೆ ಅಥವಾ ಇಳಿಸುತ್ತಾರೆ.''[೬] ಅವರು ತಮ್ಮ ವ್ಯವಹಾರಗಳನ್ನು ತಾವೇ ನೋಡಿಕೊಳ್ಳುತ್ತಾರೆ. ''ಅವರ ಅಪರಾಧಗಳನ್ನೂ ರಾಜರು ವಿಚಾರಣೆ ಮಾಡಬೇಕಾಗಿಲ್ಲ. ರಾಜನಿಗೆ ತೃಪ್ತಿಯಾಗುವ ರೀತಿಯಲ್ಲಿ ಅವರೇ ಅದನ್ನು ನ್ಯಾಯವಿಚಾರಣೆ ಮಾಡಿಕೊಳ್ಳುತ್ತಾರೆ.''[೭] ರಾಜಾಶ್ರಯವಿದ್ದರೂ ವರ್ತಕರು ಬೆಲೆಬಾಳುವ ಉಡುಗೊರೆಗಳನ್ನು ಕೊಟ್ಟು ರಾಜನನ್ನು ಮೆಚ್ಚಿಸಬೇಕಾಗಿತ್ತು. ತಮ್ಮ ವ್ಯವಹಾರವು ಸರಾಗವಾಗಿ ನಡೆಯಬೇಕಾದರೆ ಅವನ ಅಧಿಕಾರಿಗಳಿಗೆ ಲಂಚ ಕೊಟ್ಟು ತೃಪ್ತಿಪಡಿಸಬೇಕಾಗಿತ್ತು.

ಶೂದ್ರರದು ಶ್ರೇಣಿಯಲ್ಲಿ ಕೊನೆಯದಾದ ಒಂದು ಸಂಕೀರ್ಣ ಜಾತಿ. ಅವರಲ್ಲಿ ಹಲವು ಉಪಜಾತಿಗಳಿದ್ದುವು. ಒಂದೊಂದರಲ್ಲೂ ಕಡ್ಡಾಯವಾಗಿ ಪಾಲಿಸುತ್ತಿದ್ದ ನಿಯಮಗಳಿದ್ದುವು. ಅವರಿಗೆ ವಿದ್ಯಾಭ್ಯಾಸಕ್ಕೆ ಅರ್ಹತೆಯಿರಲಿಲ್ಲ; ಸಂಸ್ಕೃತಿಯಿಂದ ಅವರನ್ನು ವಂಚಿಸಲಾಗಿತ್ತು. ಪ್ರತಿಯೊಂದು ಉಪಜಾತಿಯಲ್ಲೂ ಸದಸ್ಯರು ತಮ್ಮದೇ ಸೀಮಿತ ಪಂಗಡದೊಳಗೆ ಮದುವೆಮಾಡಿಕೊಳ್ಳುತ್ತಿದ್ದರು. ಬೇಕಾದಷ್ಟು ಮಿತಿಗಳೊಂದಿಗೆ ಅವರ ನಡುವೆ ಸಹಪಂಕ್ತಿ ಭೋಜನಕ್ಕೆ ಅವಕಾಶವಿತ್ತು. ಬಹುಸಂಖ್ಯೆಯ ಶೂದ್ರರು ಗೇಣಿದಾರರು ಅಥವಾ ಕೃಷಿ ಕಾರ್ಮಿಕರು. ''ಅವರು ರಾಷ್ಟ್ರದ ಬೆನ್ನುಮೂಳೆಯಾಗಿದ್ದರು; ದೇಶದ ಅಭ್ಯುದಯವು ಅವರ ಮೇಲೆ ಬಹುಮಟ್ಟಿಗೆ ಅವಲಂಬಿಸಿತ್ತು.''[೮] ರೆಡ್ಡಿಗಳು ಮತ್ತು ಗೌಡರು ಮುಖ್ಯವಾಗಿ ಈ ವರ್ಗಕ್ಕೆ ಸೇರಿದವರು. ನಾಯಕರು ಯೋಧರು. ಅವರ ಮುಖ್ಯ ವೃತ್ತಿ ಯುದ್ಧ ಮಾಡುವುದು. ಅವರಿಗೂ ಜಮೀನು ಇರುತ್ತಿದ್ದಿತು. ಅದನ್ನು ಅವರು ಇತರರಿಂದ ಬೇಸಾಯ ಮಾಡಿಸುತ್ತಿದ್ದರು. ಕೆಲವು ಬಲಿಜ ತಂಡಗಳು, ಅವರ ವೃತ್ತಿ ವ್ಯಾಪಾರವಾದರೂ ಅವರ ಮಾದರಿಯನ್ನೇ ಅನುಸರಿಸುತ್ತಿದ್ದರು. ಈ ಉಪಜಾತಿಗಳ ಗಣ್ಯರನ್ನೇ ಮುಖ್ಯವಾಗಿ ಅಮರನಾಯಕರನ್ನಾಗಿ, ಗೇಣಿ ರೈತರಾಗಿ ಕಾವಲುಗಾರರಾಗಿ ನೇಮಕ ಮಾಡಲಾಗುತ್ತಿತ್ತು. ಕುರುಬರು ಮತ್ತು ಗೊಲ್ಲರು ಕುರಿ ಕಾಯುತ್ತಿದ್ದರು. ನೇಯುತ್ತಿದ್ದವರು ಮುಖ್ಯವಾಗಿ

ಪದ್ಮಸಾಲಿಗಳು. ಮಡಕೆ ಮಾಡುವವರು ಕುಂಬಾರರು, ಭೂಮಿ ಅಗೆಯುವವರು ವಡ್ಡರು, ಉಪ್ಪು ತಯಾರಿಸುವವರು ಉಪ್ಪಲಿಗರು, ಕ್ಷೌರ ಮಾಡುವವರನ್ನು ನಾಯಿಂದರೆಂದು ಕರೆಯುತ್ತಿದ್ದರು. ಪ್ರತಿಯೊಂದು ಉಪಜಾತಿಯ ಮುಖ್ಯಸ್ಥನು ಹಿರಿಯರ ಒಂದು ಮಂಡಲಿಯ ಮೂಲಕ ಕಾರ್ಯನಿರ್ವಹಿಸುತ್ತಿದ್ದನು.

ಲಿಂಗಾಯತರು ಅಥವಾ ವೀರಶೈವರು ವಿಜಯನಗರ ಸಾಮ್ರಾಜ್ಯದಲ್ಲಿ ಇನ್ನೊಂದು ಬಹುಮುಖ್ಯ ಪಂಗಡವಾಗಿದ್ದರು. ೧೨ನೆಯ ಶತಮಾನದ ಕ್ರಾಂತಿಯ ನಂತರ ಈ ಪಂಗಡವು ಬಹಳ ಪ್ರಾಧಾನ್ಯ ಪಡೆಯಿತು. ಸಾಮ್ರಾಜ್ಯದಾದ್ಯಂತ ವೀರಶೈವ ಮಠಗಳು ತಲೆಯೆತ್ತಿದುವು. ಅನೇಕ ವೀರಶೈವರು ರಾಜ್ಯದ ಗಣ್ಯ ಅಧಿಕಾರಿಗಳಾದರು. ಉದಾಹರಣೆಗೆ ಲಕ್ಕಣ್ಣದಂಡೇಶನು ೨ನೇ ದೇವರಾಯನ ಕಾಲದಲ್ಲಿ ಖ್ಯಾತಿ ಪಡೆದ ದಂಡನಾಯಕನಾಗಿದ್ದನು. ವೀರಶೈವ ದರ್ಶನವನ್ನು ಕುರಿತು ಅವನು ಕೃತಿರಚನೆಯನ್ನೂ ಮಾಡಿದನು. ಹಾಗೆಯೇ ಕೆಳದಿಯ ನಾಯಕರು ವೀರಶೈವರಾಗಿದ್ದರು. ಆ ಕಾಲದ ಅನೇಕ ಪಾಳೆಯಗಾರರು ಮತ್ತು ಅಮರನಾಯಕರು ವೀರಶೈವ ಧರ್ಮದ ಅನುಯಾಯಿಗಳಾಗಿದ್ದರು. ಒಂದು ರೀತಿಯಲ್ಲಿ ದೇಶಾದ್ಯಂತ ಎಲ್ಲ ಕಡೆಯೂ ಅಂಗೀಕೃತವಾಗಿದ್ದ ಮತ್ತು ಹೇರಲ್ಪಟ್ಟಿದ್ದ ವೈದಿಕ ಬ್ರಾಹ್ಮಣ ಸಂಸ್ಕೃತಿಗೆ ಬದಲಿ ಸಾಮಾಜಿಕ ಮಾದರಿಯನ್ನು ಅದು ಒದಗಿಸಿತು.

ತತ್ವತಃ ಅವರು ಜಾತಿಪದ್ಧತಿಗೆ ವಿರುದ್ಧವಾಗಿದ್ದರು. ಅವರಿಗೆ ಒಬ್ಬ ದೇವರಲ್ಲಿ ನಂಬಿಕೆಯಿತ್ತು. ಯಜ್ಞ ಯಾಗಾದಿಗಳನ್ನಾಗಲಿ, ಉಪವಾಸ ವ್ರತಗಳನ್ನಾಗಲಿ ಮಾಡುವ ಅಗತ್ಯವಿಲ್ಲ. ದೇವಾಲಯಗಳಿಗೆ ಹೋಗುವುದಾಗಲಿ, ದೇವಾಲಯಗಳನ್ನು ಕಟ್ಟಿಸುವುದಾಗಲಿ ಅಗತ್ಯವಿಲ್ಲ. ಶಿವಲಿಂಗವನ್ನು ಅವರು ಧರಿಸುತ್ತಿದ್ದರು. ಅದು ಸದಾಕಾಲವೂ ತಮ್ಮನ್ನು ಪರಿಶುದ್ಧವಾಗಿಡುವುದರಿಂದ ಜನನ - ಮರಣಗಳ ಮೈಲಿಗೆ ಅಂಟುವುದಿಲ್ಲ ಎಂದು ಭಾವಿಸುತ್ತಿದ್ದರು. ವಿವಾಹ ಮತ್ತು ಇತರ ಸಂಸ್ಕಾರಗಳಲ್ಲಿ ವೈದಿಕ ವಿಧಾನಕ್ಕಿಂತ ತುಂಬಾ ಬೇರೆಯಾದ ಪದ್ಧತಿಯನ್ನು ಅನುಸರಿಸುತ್ತಿದ್ದರು. ಅವರ ಪುರೋಹಿತರು ಜಂಗಮರು ಮತ್ತು ಗುರುಗಳಿಗೆ ರಾಜ್ಯದಾದ್ಯಂತ ಮಠಗಳಿರುತ್ತಿದ್ದುವು. ಅವರು ಸಸ್ಯಾಹಾರಿಗಳು. ವಿಧವಾ ವಿವಾಹವನ್ನಾಗಲಿ, ವಿಚ್ಛೇದನವನ್ನಾಗಲಿ ಅವರು ನಿಷೇಧಿಸಲಿಲ್ಲ. ಆ ಕಾಲದ ಕನ್ನಡ ವೀರಶೈವಸಾಹಿತ್ಯವು ಈ ಅಂಶಗಳನ್ನು ಸ್ಪಷ್ಟವಾಗಿ ಚಿತ್ರಿಸಿದೆ. ಅವರು ಸಂಸ್ಕೃತದಲ್ಲೂ ಬರೆಯತೊಡಗಿದರು. ಈ ಕಾಲದ ವೀರಶೈವ ಅರಸರು ಸಹಿಷ್ಣುತೆ ಮತ್ತು ಬಹುಳತೆಯ ಸಂರಕ್ಷಣೆಯ ಸಾಮಾಜಿಕ ನೀತಿಯನ್ನು ಅನುಸರಿಸಿದರು. ವಾಸ್ತವವಾಗಿ ಪೋರ್ಚುಗೀಸ್ ಕ್ರಿಶ್ಚಿಯನರ ಹಿಂಸೆಯನ್ನು ತಾಳಲಾರದೆ ಕೊಂಕಣಿ ಕ್ರಿಶ್ಚಿಯನ್ನರು ಗೋವಾದಿಂದ ವಲಸೆ ಬಂದಾಗ ಅವರಿಗೆ ಆಶ್ರಯಕೊಟ್ಟವರು ಕೆಳದಿಯ ನಾಯಕರು. ಅವರು ಮೃತದೇಹಗಳನ್ನು ಹೂಳುತ್ತಿದ್ದರು, ಬ್ರಾಹ್ಮಣರಂತೆ ವಾರ್ಷಿಕ ಶ್ರಾದ್ಧಕಾರ್ಯವನ್ನು ಮಾಡುತ್ತಿರಲಿಲ್ಲ. ಅವರಲ್ಲಿ ಅನೇಕ ಒಳಪಂಗಡಗಳಿದ್ದುವು: ಜಂಗಮರು, ಬಂಜಾರರು (ಶೆಟ್ಟಿ), ಆರಾಧ್ಯರು, ಸರ್ದಾರ, ನೊಣಬ ಇತ್ಯಾದಿ. ಅವರು ಕೃಷಿ, ವ್ಯಾಪಾರ ಕೈಗಾರಿಕೆ, ಸಾರ್ವಜನಿಕ ಆಡಳಿತ, ಇತರ ಸೇವೆಗಳು ಮತ್ತು ವಿದ್ಯಾಸಂಬಂಧವಾದ ವೃತ್ತಿಗಳಲ್ಲಿ ನಿರತರಾಗಿದ್ದರು.

ಅಸ್ಪೃಶ್ಯರನ್ನು ಐದನೆಯ ವರ್ಗಕ್ಕೆ ನೂಕಲಾಗಿತ್ತು. ಅವರನ್ನು ಅಂತ್ಯಜರು ಅಥವಾ ಹೊಲೆಯರು ಎಂದು ಕರೆಯುತ್ತಿದ್ದರು. ಅವರು ನಾಗರಿಕ ಸಮಾಜದ ಚೌಕಟ್ಟಿನಿಂದ ಹೊರಗಿದ್ದರು. ಹಳ್ಳಿಯ ಹೊರವಲಯದಲ್ಲಿಯೇ ಅವರು ವಾಸಮಾಡಬೇಕಾಗಿತ್ತು. ಮೇಲುಜಾತಿಗಳ ಜನರು ಅವರನ್ನು ದುರುಪಯೋಗ ಪಡಿಸಿಕೊಳ್ಳುತ್ತಿದ್ದರು, ಅಪಮಾನಿಸುತ್ತಿದ್ದರು. ಅವರು ಕಡ್ಡಾಯವಾಗಿ ದುಡಿಯಬೇಕಾಗಿತ್ತು. ಮಿಕ್ಕ ಎಲ್ಲರನ್ನೂ ಕುರಿತು ಪರಮ ವಿಧೇಯತೆಯಿಂದ ನಡೆದುಕೊಳ್ಳಬೇಕಾಗಿತ್ತು, ಅವರ ಆದೇಶಗಳನ್ನು ಪಾಲಿಸಬೇಕಾಗಿತ್ತು. ಅತಿಸಣ್ಣ ಅಪರಾಧಗಳಿಗೂ ಅವರಿಗೆ ಅತ್ಯಂತ ಕ್ರೂರವಾದ ದಂಡನೆ ಕೊಡಲಾಗುತ್ತಿತ್ತು. ಇತರರ ಬಾವಿಗಳಿಂದ ಅವರು ನೀರು ಸೇದಿಕೊಳ್ಳುವ ಹಾಗಿರಲಿಲ್ಲ. ಇತರರ ಮನೆಗಳಿಗೆ ಹೋಗುವಂತಿರಲಿಲ್ಲ. ಇತರರ

ದೇವಾಲಯಗಳಿಗೆ ಪ್ರವೇಶಿಸಿ ವಿಗ್ರಹವನ್ನು ಪೂಜಿಸುವಂತಿರಲಿಲ್ಲ. ಅವರಲ್ಲೂ ಎರಡು ಉಪಪಂಗಡಗಳಿದ್ದುವು: ಮಾಲರು ಮತ್ತು ಮಾದಿಗರು. ಈ ಎರಡು ಪಂಗಡಗಳ ನಡುವೆ ವಿವಾಹಸಂಪರ್ಕ ಇರಲಿಲ್ಲ. ಎರಡಕ್ಕೂ ಬೇರೆ ಬೇರೆ ಮುಖ್ಯಸ್ಥನಿದ್ದನು, ಆಡಳಿತ ಮಂಡಳಿಯಿತ್ತು, ನಿಯಮ ನಿಬಂಧನೆಗಳಿದ್ದುವು. ಕೃಷಿ ಕಾರ್ಮಿಕರಲ್ಲಿ ಬಹಳ ಜನ ಮೂಲವರ್ಗಕ್ಕೆ ಸೇರಿದವರು; ಉಪಕಸುಬಾಗಿ ಅವರು ನೇಯ್ಗೆ ಮಾಡುತ್ತಿದ್ದರು. ಯಾವುದೇ ನಾಗರಿಕ ಅಥವಾ ಸೈನ್ಯ ಹುದ್ದೆಗಳಿಗೆ ಅವರನ್ನು ಸೇರಿಸುತ್ತಿರಲಿಲ್ಲವಾದ್ದರಿಂದ ಅವರಲ್ಲಿ ಅನೇಕರು ಹೆದ್ದಾರಿ ದರೋಡೆಕೋರರಾಗಿದ್ದರು. ದಟ್ಟವಾದ ಅರಣ್ಯಗಳಲ್ಲಿ ಸಾಗುತ್ತಿರುವ ಯಾತ್ರಿಗಳ ತಂಡ ಅಥವಾ ವರ್ತಕರ ಕಾರವಾನ್‌ಗಳ ಮೇಲೆ ಆಕ್ರಮಣ ಮಾಡಿ ದೋಚಿಕೊಂಡು ಓಡಿಬಿಡುತ್ತಿದ್ದರು. ಮಾದಿಗರು ಮುಖ್ಯವಾಗಿ ಕುಶಲಕರ್ಮಿಗಳು. ಪಾದರಕ್ಷೆಗಳನ್ನೂ, ಬಾವಿಯಿಂದ ನೀರೆತ್ತಲು ತೊಗಲಿನ ಹಗ್ಗವನ್ನೂ, ಬಕೆಟ್ಟುಗಳನ್ನೂ ಅವರು ತಯಾರಿಸುತ್ತಿದ್ದರು.

ಇದರಿಂದ ನಮಗೆ ಸ್ಪಷ್ಟವಾಗುವುದೇನೆಂದರೆ ಮೇಲಿನ ಮೂರು ಜಾತಿಗಳಲ್ಲಿ ನಿಯಮಗಳನ್ನು ಅಷ್ಟೊಂದು ಕಟ್ಟುನಿಟ್ಟಾಗಿ ಅನುಸರಿಸುತ್ತಿರಲಿಲ್ಲ; ಮತ್ತು ಅವರು ಸರಕಾರದೊಂದಿಗೆ ನಿಕಟವಾದ ಸಹಯೋಗವನ್ನು ಹೊಂದಿದ್ದರು. ಅಧಿಕ ಉತ್ಪಾದನೆ, ಅಧಿಕ ವ್ಯಾಪಾರ-ವಾಣಿಜ್ಯ ಮತ್ತು ಹೊಸಹೊಸದಾಗಿ ರಾಜ್ಯವನ್ನು ಗೆದ್ದು ವಿಸ್ತರಿಸುವುದು ಇವು ಮುಖ್ಯವಾದ ಆಸಕ್ತಿಗಳಿಗಾದ್ದುವು. ಇವರಲ್ಲಿ ಭಿನ್ನಾಭಿಪ್ರಾಯಗಳು ಕಂಡುಬಂದರೂ ಒಬ್ಬರನ್ನೊಬ್ಬರು ಅವಲಂಬಿಸಿದ್ದರು. ಪ್ರತಿಯಾದ ಶಕ್ತಿಯಾಗಿ ಸಮತೋಲನ ಸಾಧಿಸುತ್ತಿದ್ದರು, ಒಬ್ಬರ ಮೇಲೊಬ್ಬರು ಸ್ಪರ್ಧಿಸುತ್ತಿದ್ದರು. ಮುಖ್ಯವಾಗಿ ಆಗಾಗ ಭಿನ್ನಮತ ಕಾಣಿಸಿಕೊಂಡರೂ ಅವರ ಹಿತಗಳು ಪರಸ್ಪರ ವಿರುದ್ಧವಾಗಿರಲಿಲ್ಲ.

ವಿಪ್ರವಿನೋದಿಗಳೆಂಬ ನೂತನ ಸಮುದಾಯವೊಂದು ತಲೆಯೆತ್ತಿದ್ದು, ನಾಯಿಂದ ಸಮುದಾಯವು ಪಡೆದಿದ್ದ ವಿಶೇಷ ಸವಲತ್ತುಗಳು,ಕೈಕ್ಕೋಲರು ಮತ್ತು ರೆಡ್ಡಿಗಳೇ ಮೊದಲಾದ ಪಂಗಡಗಳು ಬೀರುತ್ತಿದ್ದ ಪ್ರಭಾವ, ಹರಿಹರ ಮತ್ತು ಬುಕ್ಕರು ಕುರುಬರೊಂದಿಗೆ ನಡೆಸಿದ ವೈವಾಹಿಕ ಸಂಬಂಧಗಳು[೨೦] ಇವೆಲ್ಲವೂ ವಿವಿಧ ಮತಗಳ ನಡುವೆ ಸಾಮಾಜಿಕ ಐಕ್ಯತೆಯನ್ನು ಬಲಪಡಿಸುವ ಸಲುವಾಗಿ ನೂತನ ಸಮಾಜವೊಂದರ ಪುನರ್ನಿರ್ಮಾಣವಾದುದನ್ನು ತೋರಿಸುತ್ತವೆ. ಬಲಗೈ (ವಲಂಗೈ) ಮತ್ತು ಎಡಗೈ(ಇಡಂಗೈ)ಗಳ ನಡುವೆ ನಡೆಯುತ್ತಿದ್ದ ಸಂಘರ್ಷಗಳು ಸಮಾಜದ ಉದಾರ ಪ್ರವೃತ್ತಿಗಳನ್ನು ಹಾಳುಮಾಡುವಷ್ಟು ಕ್ರೂರವಾಗಿರಲಿಲ್ಲ.

ಜಾತಿಪದ್ಧತಿಯ ವೈಫಲ್ಯ, ಮಾನವನ ಮನಸ್ಸಿನ ಮೇಲೆ ಅದರ ದುಷ್ಪರಿಣಾಮ, ಅದರ ಬೆಂಬಲಿಗರು ತೋರ್ಪಡಿಸುತ್ತಿದ್ದ ಕಪಟ-ವಂಚನೆ, ಇವು ಸಮಾಜದಲ್ಲಿ ಅಸಮಾಧಾನವನ್ನು ಕೆರಳಿಸಿದುವು. ಕನಕದಾಸ, ಪುರಂದರದಾಸರಂತಹ ಸಂತಶ್ರೇಷ್ಠರು, ಹದಿನೇಳನೆಯ ಶತಮಾನದ ಸರ್ವಜ್ಞ ಕವಿ ಇವರೆಲ್ಲ ಸರಳವಾದ ಹಾಡು ಮತ್ತು ವಚನಗಳ ರೂಪದಲ್ಲಿ ಭಕ್ತಿಯನ್ನು ಪ್ರಸಾರಮಾಡಿದರು. ಆ ಮಾತುಗಳಲ್ಲಿ ಹಲವು ವ್ಯಾಪಕ ಬಳಕೆಯಿಂದಾಗಿ ಗಾದೆಗಳೇ ಆದುವು; ಅವುಗಳಲ್ಲಿ ಕೆಲವು ಇಂದಿಗೂ ಸಂಗತವಾಗುವಷ್ಟು ಶಕ್ತಿಯುತವಾಗಿವೆ.

ಅವರು ಎಲ್ಲಾ ಜಾತಿಗಳ, ಐದನೆಯ ಜಾತಿಯಾದ ಅಸ್ಪೃಶ್ಯರೂ ಸೇರಿದಂತೆ, ಸಮಾನತೆಯನ್ನು ಸಾರಿದರು. ಸಾಮಾಜಿಕ ಸಂಬಂಧಗಳಲ್ಲಿ ಇಬ್ಬಂದಿ ನೀತಿಯನ್ನು ಅನುಸರಿಸುತ್ತಿದ್ದುದಕ್ಕಾಗಿ ಅವರು ಬ್ರಾಹ್ಮಣರನ್ನು ಖಂಡಿಸಿದರು. ಶೂದ್ರರಿಗೆ ಸಮಾಜದ ಚೌಕಟ್ಟಿನಲ್ಲಿ ಎತ್ತರದ ಸ್ಥಾನವನ್ನು ಕೊಟ್ಟರು. ಎಲ್ಲಾ ಧರ್ಮಗಳ ಸಮಾನತೆಯನ್ನು ಸಾರಿ, ಧರ್ಮಕಾರಣವಾದ ಕಲಹಗಳನ್ನು ಖಂಡಿಸಿ, ಭಗವಂತನು ಒಬ್ಬನೇ ಎಂದು ಸಾರಿದರು.

ಅವರು ಸಾಮಾಜಿಕ ಐಕ್ಯತೆ ಮತ್ತು ಸಾಮರಸ್ಯಗಳಿಗೆ ಕರೆಕೊಟ್ಟರು. ಹರಿದಾಸರಲ್ಲಿ ವ್ಯಾಸಕೂಟ ಮತ್ತು ದಾಸಕೂಟ ಎಂಬ ಎರಡು ವಿಭಾಗಗಳಿದ್ದುವೆ ಅಥವಾ ಅವೆರಡೂ ಒಂದೇಯೆ ಎಂಬ ಚರ್ಚೆಯನ್ನು

ಒತ್ತಟ್ಟಿಗಿಟ್ಟರೆ, ಹರಿದಾಸ ಆಂದೋಳನದ ಹಿಂದಿನ ಮುಖ್ಯ ಪ್ರೇರಕಶಕ್ತಿ ಪುರಂದರದಾಸರು ಎನ್ನುವುದರಲ್ಲಿ ಸಂದೇಹವೇ ಇಲ್ಲ. ಈ ಆಂದೋಲನದ ಬೆಳಕಿನಂತಿದ್ದ ಇಬ್ಬರು ಮಹನೀಯರೂ ಬ್ರಾಹ್ಮಣರಲ್ಲ. ನೂತನ ಸಾಮಾಜಿಕ ಜಾಗೃತಿಯು ವಿಜಯನಗರ ಸಮಾಜದ ಕುರುಹಾಗಿತ್ತು. ಸಮಾಜದಲ್ಲಿ ತೀರಾ ಕೆಳಗಿನ ಸ್ತರದಲ್ಲಿದ್ದವರೂ ಕೂಡ ಜಾತಿ-ವರ್ಗಭೇದವಿಲ್ಲದ ಉದಾರ ಸಮಾಜನಿರ್ಮಾಣಕ್ಕಾಗಿ ಶ್ರಮಿಸುತ್ತಿದ್ದರು ಎಂಬುದು ಗೊತ್ತಾಗುತ್ತದೆ.

ಕನಕದಾಸರು (೧೫೦೯-೧೬೦೭) ವಿಜಯನಗರ ಕಾಲದ ಒಬ್ಬ ಸಂತ, ಸಮಾಜ ಸುಧಾರಕ ಮತ್ತು ಕವಿ. ಅವರು ಕರ್ನಾಟಕದಲ್ಲೆಲ್ಲಾ ವ್ಯಾಪಕವಾಗಿ ಸಂಚಾರ ಮಾಡಿದರು. ಬೇಲೂರು, ಸೋಸಲೆ, ಹಾಳೂರು, ಶ್ರೀರಂಗಪಟ್ಟಣ, ತಿರುಪತಿ ಮತ್ತು ಉಡುಪಿಗಳಿಗೆ ಹೋಗಿದ್ದರು. ಧಾರವಾಡ ಜಿಲ್ಲೆಯಲ್ಲಿದ್ದ ಅವರ ಇಷ್ಟದೈವ ಕಾಗಿನೆಲೆ ಆದಿಕೇಶವ (ಕಾಗಿನೆಲೆ ಧಾರವಾಡ ಜಿಲ್ಲೆಯ ಒಂದು ಹಳ್ಳಿ). ಈ ಅಂಕಿತದಲ್ಲಿ ಅವರು ಕನ್ನಡದಲ್ಲಿ ನೂರಾರು ಭಕ್ತಿಗೀತೆಗಳನ್ನು ರಚಿಸಿದರು. ಈ ಹಾಡುಗಳಲ್ಲದೆ ರಾಮಧಾನ್ಯಚರಿತ್ರೆ ಎಂಬ ಕಾವ್ಯವನ್ನೂ ಅವರು ರಚಿಸಿದರು.[೧೧] ಸಾಮಾಜಿಕ ವಸ್ತುವಿನಿಂದಲೂ ತನ್ನ ಕಾಲದ ಸಾಮಾಜಿಕ ಸ್ಥಿತಿಯನ್ನು ನಿರೂಪಿಸಲು ಬಳಸಿದ ತಂತ್ರದಿಂದಲೂ ಈ ಕೃತಿ ಮಹತ್ವದ್ದಾಗಿದೆ. ನಿಕೊಲೋ ಕಾಂಟಿ, ಅಬ್ದುಲ್‌ರಜಾಕ್, ಬಾರ್ಬೋಸಾ, ಪೇಸ್, ನ್ಯೂನಿಜ್‌ಮೊದಲಾದ ಅನೇಕ ವಿದೇಶೀ ಪ್ರವಾಸಿಗರು ಕೊಟ್ಟಿರುವ ಕಣ್ಣು ಕೋರೈಸುವ ಚಿತ್ರದ ಅಡಿಯಲ್ಲಿಯೇ ಸಾಮಾಜಿಕ ಅನ್ಯಾಯ, ವಂಚನೆ, ಅಸಮಾನತೆ, ದಬ್ಬಾಳಿಕೆ, ಶೋಷಣೆಗಳೂ ಇದ್ದುವು. ಗುಲಾಮಗಿರಿ, ಅಸ್ಪೃಶ್ಯತೆ, ಬಹುಪತ್ನಿತ್ವ, ಸೂಳೆಗಾರಿಕೆ, ದೇವದಾಸಿ ಮತ್ತು ಸತಿಪದ್ಧತಿಗಳು ದೇಶೀಯ-ವಿದೇಶೀಯ ಮೂಲಗಳು ದಾಖಲಿಸುವ ಕೆಲವು ಸಾಮಾಜಿಕ ಪಿಡುಗುಗಳು. ಈ ವಾಸ್ತವ ಸಮಸ್ಯೆಗಳ ವಿರುದ್ಧವಾಗಿ ಕನಕದಾಸರು ಬಂಡೆದ್ದರು. ತಮ್ಮದೇ ಸಾಮಾಜಿಕ ದರ್ಶನವೊಂದನ್ನು ಮಂಡಿಸಿ ಅವುಗಳನ್ನು ಸುಧಾರಿಸಲು ಪ್ರಯತ್ನಿಸಿದರು. ಅವರ ಮೋಹನ ತರಂಗಿಣಿಯು ಆ ಕಾಲದ ಭೋಗಜೀವನದ ಮಟ್ಟವನ್ನು ಪರೋಕ್ಷವಾಗಿ ಸೂಚಿಸುತ್ತಿದ್ದರೆ ರಾಮಧಾನ್ಯಚರಿತೆ ಮತ್ತು ಹಾಡುಗಳು ವಿಜಯನಗರ ಸಮಾಜದಲ್ಲಿ ಪ್ರಚಲಿತವಾಗಿದ್ದ ಅಸಮತೆ-ಅನ್ಯಾಯಗಳನ್ನು ನಿರೂಪಿಸುತ್ತವೆ. ಆದ್ದರಿಂದ ರಾಮಧಾನ್ಯಚರಿತೆಯ ಮುಖ್ಯ ಅಂಶಗಳನ್ನು, ಕೆಲವು ಹಾಡುಗಳ ಸಾರಾಂಶವನ್ನೂ ಅವು ಒಳಗೊಂಡಿರುವ ಸಮಕಾಲಿಕ ಸಮಾಜದ ವಿಮರ್ಶೆಯ ದೃಷ್ಟಿಯಿಂದ ಇಲ್ಲಿ ತೋರಿಸಿಕೊಡಲು ಪ್ರಯತ್ನಿಸಲಾಗಿದೆ.

ಚಿಕ್ಕದಾದರೂ ಗುಣದಲ್ಲಿ ಉತ್ತಮವಾದ ರಾಮಧಾನ್ಯಚರಿತೆಯು ಕನ್ನಡಸಾಹಿತ್ಯದಲ್ಲೇ ವಿಶಿಷ್ಟವಾದೊಂದು ಕೃತಿ. ೧೫೬ ಭಾಮಿನೀ ಷಟ್ಪದಿಗಳಿಂದ ಅದು ರಚಿತವಾಗಿದೆ. ಅಕ್ಕಿ ಮತ್ತು ರಾಗಿ ಇವುಗಳ ನಡುವೆ ಯಾವುದು ಮೇಲು ಎಂದು ಘರ್ಷಣೆಯುಂಟಾದದ್ದೇ ಅದರ ವಸ್ತು. ಪುರಾಣ ಘಟನೆಗಳ ಹಿನ್ನೆಲೆಯಲ್ಲಿ ಕನಕದಾಸರು ಈ ಮೇಲಾಟವನ್ನು ಚಿತ್ರಿಸಿದ್ದಾರೆ. ಕೃತಿಯ ಸಾರಾಂಶ ಹೀಗಿದೆ:[೧೨] ರಾಮಾಯಣದ ನಾಯಕನಾದ ರಾಮನು ರಾವಣನನ್ನು ಸಂಹರಿಸಿ ಅಯೋಧ್ಯೆಗೆ ಹಿಂದಿರುಗುತ್ತಿರುವಾಗ ಗೌತಮಋಷಿಯ ಆಶ್ರಮದಲ್ಲಿ ಅವನಿಗೆ ಒಂದು ಔತಣವನ್ನು ನೀಡಲಾಯಿತು. ಅಂದಿನ ಅಡುಗೆಯನ್ನು ನವಧಾನ್ಯಗಳಿಂದ ಮಾಡಲಾಗಿತ್ತು. ಆ ಒಂಬತ್ತು ಧಾನ್ಯಗಳು ನರದೆಲಗ (ರಾಗಿ), ನೆಲ್ಲು (ಅಕ್ಕಿ), ಹಾರಕ, ಬರಗು, ಜೋಳ, ಕಂಬ, ಸಾಮೆ, ನವಣೆ ಮತ್ತು ಗೋಧಿ, ಅವುಗಳಲ್ಲಿ ಯಾವ ಧಾನ್ಯವು ಅತ್ಯುತ್ತಮವಾದದ್ದು ಎಂದು ರಾಮನು ಕೇಳಲು ಅಲ್ಲಿ ನೆರೆದಿದ್ದವರೊಬ್ಬರೂ ಒಂದೊಂದು ಧಾನ್ಯವನ್ನು ಹೆಸರಿಸಿದರು. ಆ ಸಮಯದಲ್ಲಿ ಅಕ್ಕಿ ಮತ್ತು ರಾಗಿಗಳ ನಡುವೆ ಬಿಸಿ ಬಿಸಿ ವಾಗ್ವಾದವು ನಡೆಯಿತು.

ಅಕ್ಕಿ ಹೇಳಿತು: ‘‘ಈ ಭೂಮಿಯ ಮೇಲೆ ನನ್ನನ್ನು ಬ್ರಾಹ್ಮಣರು ವಿವಿಧ ಧಾರ್ಮಿಕ ಸಮಾರಂಭಗಳಲ್ಲಿ ಉಪಯೋಗಿಸುತ್ತಾರೆ. ಉಪನಯನದಂತಹ ಪವಿತ್ರ ಮಂಗಳ ಕಾರ್ಯದಲ್ಲೂ ನನ್ನನ್ನು ಬಳಸುತ್ತಾರೆ. ಹಬ್ಬಗಳಲ್ಲಿ

ಔತಣದಡಿಗೆ ಮಾಡುವಾಗ, ಶುಭಕಾರ್ಯಗಳಲ್ಲಿ ಮಂತ್ರಾಕ್ಷತೆ ಮಾಡುವಾಗ ನಾನು ಬೇಕು. ಹಾಗಾಗಿ ನಾನು ಎಲ್ಲ ಕಡೆಯೂ ಶೋಭಿಸುತ್ತೇನೆ. ನಾನು ದೇವತೆಗಳಿಗೂ ಪ್ರಿಯನಾಗಿದ್ದೇನೆ. ಜನರಿಗೆ, ಮಕ್ಕಳಿಗೆ, ಬ್ರಾಹ್ಮಣರ ಭೋಜನ ಕೂಟಗಳಿಗೆ, ಮಕ್ಕಳಿಗೆ ವಿದ್ಯಾಭ್ಯಾಸದ ದೀಕ್ಷೆ ಕೊಡುವಾಗ, ಎಲ್ಲಾ ಮನೆಗಳಲ್ಲೂ ಹಬ್ಬ ಹರಿದಿನಗಳಲ್ಲಿ ನಾನು ಉಪಯುಕ್ತನಾಗುತ್ತೇನೆ. ನೀನೊಬ್ಬ ಅಸಮರ್ಥ ಭ್ರಷ್ಟ. ನನ್ನ ಕಣ್ಣಿಗೆ ಬೀಳದಂತೆ ತೊಲಗಿಹೋಗು. ಈ ಭೂಮಂಡಲದಲ್ಲಿ ಯಾರೂ ನನಗೆ ಸಮರಲ್ಲ. ಪ್ರತಿಯೊಬ್ಬರೂ, ಪ್ರತಿಯೊಂದು ಸಂದರ್ಭದಲ್ಲೂ ನನ್ನ ಅಸ್ತಿತ್ವವನ್ನು ಅಪೇಕ್ಷಿಸುತ್ತಾರೆ. ಗೃಹ ಪ್ರವೇಶವಿರಬಹುದು, ಮದುವೆಯಿರಬಹುದು, ಅಥವಾ ಆಯುಧಪೂಜೆಯಿರಬಹುದು. ಬ್ರಾಹ್ಮಣರ ಹಣೆಯ ಮೇಲೆ ಗಂಧಾಕ್ಷತೆಯಾಗಿ ನಾನು ಶೋಭಿಸುತ್ತೇನೆ.''

ರಾಗಿ ವಾದಿಸಿತು: ''ಎಲೋ ಅಕ್ಕಿಯೇ, ಮೂಢನಂಬಿಕೆಗಳಿಂದ ಕೂಡಿದ ನೀನು ಉದ್ಧತನೂ ಸ್ವಾರ್ಥಿಯೂ ಆಗಿದ್ದೀಯೆ. ಸಮಾಜದಲ್ಲಿ ನೀನು ಶ್ರೀಮಂತಿಕೆಯ ಮೂರ್ತರೂಪ. ಬಡವರನ್ನು ಮತ್ತು ಶೋಷಿತರನ್ನು ನೀನು ಎಂದೂ ಕಾಳಜಿಯಿಂದ ನೋಡಿಲ್ಲ. ಯಾವಾಗಲೂ ಸಮಾಜದಲ್ಲಿ ಹಣವುಳ್ಳವರನ್ನು ಮಾತ್ರವೇ ನೀನು ಬೆಂಬಲಿಸುತ್ತೀಯೆ. ನೀನು ಮಕ್ಕಳಿಗೆ ಜನ್ಮಕೊಟ್ಟ ತಾಯಂದಿರಿಗೆ, ರೋಗಿಗಳಿಗೆ ಹಾಗೂ ಮೃತದೇಹದ ಬಾಯಿಗೆ ಸುರಿಯುವುದಕ್ಕೆ ಮಾತ್ರವೇ ಉಪಯುಕ್ತನಾಗಿದ್ದೀಯೆ, ನಿನ್ನ ಜೀವನವೇ ವ್ಯರ್ಥ. ಮಳೆ ವಿಫಲವಾದಾಗ, ಬೆಳೆಗಳು ಬರದೆಹೋದಾಗ, ಕ್ಷಾಮವು ಕಾಲಿಟ್ಟಾಗ, ಜನರು ಮತ್ತು ಪ್ರಾಣಿಗಳು ಆಹಾರವಿಲ್ಲದೆ ಬಳಲುತ್ತಿರುವಾಗ ನಾನು ಅವರನ್ನು ಕಾಪಾಡುತ್ತೇನೆ. ನೀನು, ನಿನ್ನ ಅನುಯಾಯಿಗಳು ಅಂತಹ ಆಪತ್ತಿನ ಸಮಯದಲ್ಲಿ ಎಲ್ಲಿಗೆ ಹೋಗಿದ್ದಿರಿ? ನವಧಾನ್ಯಗಳಲ್ಲಿ ಯಾವುದೂ ನನಗೆ ಸಮನಲ್ಲ. ಹಿರಿಯರ ಶ್ರಾದ್ಧಗಳಲ್ಲಿ ಹಾಗೂ ಮಕ್ಕಳಿಗೆ ತಿನ್ನಿಸಲು ಮಾತ್ರ ನಿನ್ನನ್ನು ಬಳಸುತ್ತಾರೆ ಅಷ್ಟೆ.'' [೧೬]

ಚರ್ಚೆ ಇತ್ಯರ್ಥವಾಗದೆ ಬಿಕ್ಕಟ್ಟಿಗೆ ಸಿಕ್ಕಿಕೊಂಡಿತು. ಆಗ ರಾಮನು ಈ ಎರಡೂ ಧಾನ್ಯಗಳ ಶಕ್ತಿಯನ್ನು ಪರೀಕ್ಷಿಸಲೆಂದು ಗೌತಮ ಋಷಿಗಳಿಗೆ ಹೇಳಿ ಎರಡನ್ನೂ ಕೆಲಕಾಲ ಸೆರೆಗೆ ಹಾಕಿಸಿದನು. ಆಮೇಲೆ ಅವನು ಅಯೋಧ್ಯೆಗೆ ಬಂದನು. ಪಟ್ಟಾಭಿಷೇಕವು ನಡೆಯಿತು. ಬಂಧನದಲ್ಲಿಟ್ಟಿದ್ದ ಎರಡೂ ಧಾನ್ಯಗಳನ್ನು ಬಂಧಮುಕ್ತಗೊಳಿಸುವಂತೆ ರಾಮನು ಆಜ್ಞೆಮಾಡಿದನು. ದೀರ್ಘಕಾಲದ ಸೆರೆವಾಸದಿಂದಾಗಿ ಅಕ್ಕಿಯು ಕೊಳೆತುಹೋಗಿತ್ತು, ರಾಗಿ ಮಾತ್ರ ಎಂದಿನಂತೆಯೇ ಶುದ್ಧವಾಗಿ ಉಳಿದಿತ್ತು. ರಾಮನ ಆಸ್ಥಾನದಲ್ಲಿ ನೆರೆದಿದ್ದ ಎಲ್ಲಾ ಗಣ್ಯರೂ ರಾಗಿಯ ಶಕ್ತಿಯನ್ನು ಕೊಂಡಾಡಿದರು. ಗೌತಮ ಋಷಿಯು ಅದರ ಅತ್ಯುತ್ಕೃಷ್ಟತೆಯನ್ನು ಘೋಷಿಸಿದನು. ದೇವೇಂದ್ರನು ನವಧಾನ್ಯಗಳಲ್ಲಿ ರಾಗಿಗೆ ಗೌರವದ ಸ್ಥಾನವನ್ನು ನೀಡಿದನು. ಸ್ವರ್ಗದ ದೇವತೆಗಳೆಲ್ಲರೂ ರಾಗಿಯೇ ತಮ್ಮ ಶಕ್ತಿಯ ಮೂಲವೆಂದು ಒಪ್ಪಿಕೊಂಡರು. ತನಗೆ ರಾಗಿಯ ಮೇಲುಂಟಾದ ಪ್ರೀತಿ ವಾತ್ಸಲ್ಯಗಳ ಕುರುಹಾಗಿ ರಾಮನು ಅದಕ್ಕೆ ರಾಮಧಾನ್ಯ, ರಾಘವಧಾನ್ಯ ಎಂದು ಹೆಸರಿಟ್ಟನು. ಇಷ್ಟಾದರೂ ರಾಗಿ ಮಾತ್ರ ಗರ್ವ ಪಡಲಿಲ್ಲ. ಅದಕ್ಕೆ ಬದಲು ತನ್ನ ಪಕ್ಕದಲ್ಲಿ ನಿಂತಿದ್ದ ಅಕ್ಕಿಯನ್ನು ಅದು ಸಮಾಧಾನ ಪಡಿಸಿತು. ನಾಚಿಕೆಯಿಂದ ತಲೆ ತಗ್ಗಿಸಿ ನಿಂತಿದ್ದ ಅದಕ್ಕೆ, ಇಬ್ಬರೂ ಸಮಾಜದ ಸೇವೆ ಮಾಡುವುದರಲ್ಲಿ ಸಮಾನರು ಮತ್ತು ಪರಸ್ಪರ ಪೂರಕರಾದವರು ಎಂದು ಹೇಳಿತು. ಎರಡೂ ಗೆಳೆಯರಾದುವು.

ರಾಮಧಾನ್ಯಚರಿತೆಯು ಸಮಕಾಲೀನ ವಿಜಯನಗರ ಸಮಾಜವನ್ನು ಕುರಿತು ಬರೆದ ಪರೋಕ್ಷ ವ್ಯಾಖ್ಯಾನ. ಶ್ರೀಮಂತರಿಗೂ ಬಡವರಿಗೂ ನಡುವೆ, ಮೇಲಿನವರಿಗೂ ಕೆಳಗಿನವರಿಗೂ ನಡುವೆ ಇದ್ದ ಅಗಲವಾದ ಕಂದಕವನ್ನು ಅದು ತೋರಿಸಿತು. ಕನಕದಾಸರು ಶೂದ್ರವರ್ಣದ ಕುರುಬ ಜಾತಿಯಲ್ಲಿ ಹುಟ್ಟಿದವರು. ಬಡತನ, ಅಪಮಾನ, ದುಃಖಗಳನ್ನು ಅನುಭವಿಸಿದರು. ಸಮಾಧಾನಪಡಿಸಲು ಅವರಿಗೆ ಪತ್ನಿಯಾಗಲಿ ಬೇರಾವುದೇ ಒಂದು ಜೀವವಾಗಲಿ ಇರಲಿಲ್ಲ. ದುರದೃಷ್ಟ ಅವರನ್ನು ಒಂದೇ ಸಮನೆ ಕಾಡಿತು.

ಉದಾಹರಣೆಗೆ ಒಂದು ಕಥೆ ಜನಪ್ರಿಯವಾಗಿದೆ. ಕೆಳಜಾತಿಗೆ ಸೇರಿದ್ದರಿಂದ ಅವರನ್ನು ಉಡುಪಿಯಲ್ಲಿ ಶ್ರೀಕೃಷ್ಣ ದೇವಾಲಯವನ್ನು ಪ್ರವೇಶಿಸಲು ಬಿಡಲಿಲ್ಲ. ಪ್ರಾಕಾರದ ಸುತ್ತಲೂ ನಡೆದು ದೀನರಾಗಿ ದರ್ಶನ ಕೊಡುವಂತೆ ಹಲುಬಿದಾಗ, ದೇವರ ವಿಗ್ರಹವು ಹಿಂದು ಮುಂದಾಗಿ ತಿರುಗಿಕೊಂಡಿತು, ಗೋಡೆಯಲ್ಲಿ ಕಂಡಿಯುಂಟಾಯಿತು. ಅವರಿಗೆ ಕುಳಿತ ಕಡೆಯಲ್ಲೇ ಭಗವಂತನ ದರ್ಶನವಾಯಿತು. ಕುರುಬರಾಗಿದ್ದರೂ ಅವರು ನಾಯಕಸ್ಥಾನ ಪಡೆದಿದ್ದರು. ಒಳ್ಳೆಯ ಸಾಹಿತ್ಯಕ ಅಭಿರುಚಿಯೂ ಧಾರ್ಮಿಕ ನಿಷ್ಠೆಯೂ ಅವರಲ್ಲಿದ್ದುವು. ಅಂತಹ ಸುಸಂಸ್ಕೃತ ವ್ಯಕ್ತಿತ್ವವಿದ್ದರೂ ಅವರ ಗುರುಗಳಾದ ವ್ಯಾಸರಾಯ ಹಾಗೂ ತಾತಾಚಾರ್ಯರ ಶಿಷ್ಯರು ಅವರನ್ನು ಪದೇ ಪದೇ ತಿರಸ್ಕರಿಸುತ್ತಿದ್ದರು. ಅವರ ನೋವುಗಳೂ ಕೆಳಜಾತಿಯ ವ್ಯಕ್ತಿಗಳು ಮೋಕ್ಷ ಪಡೆಯಲು ಅರ್ಹರಲ್ಲವೆ ಎಂಬ ಪ್ರಶ್ನೆಯೂ ರಾಮಧಾನ್ಯ ಚರಿತೆಯಲ್ಲಿ ಕಾವ್ಯಮಯವಾಗಿ ನಿರೂಪಿತವಾಗಿವೆ. ಈ ಕೃತಿಯಲ್ಲಿ ರಾಗಿಯು ಬಡವರನ್ನೂ ಕೆಳಜಾತಿಯ ಜನರನ್ನೂ, ಅಕ್ಕಿಯು ಸಮಾಜದ ಶ್ರೀಮಂತರನ್ನೂ ಮೇಲುಜಾತಿಯ ಜನರನ್ನೂ ಪ್ರತಿನಿಧಿಸುತ್ತವೆ.

ಈ ವಿಶಿಷ್ಟ ಪರಿಕಲ್ಪನೆಯು ಭಗವಂತನ ಅವತಾರವಾಗುವುದು. ಬಡವರೂ ತುಳಿಯಲ್ಪಟ್ಟವರೂ ಆದ ಜನರನ್ನು ಉದ್ಧಾರಮಾಡುವ ಸಲುವಾಗಿಯೇ ಎಂಬ ಕನಕದಾಸರ ವಿಚಾರವನ್ನು ತೋರಿಸುತ್ತದೆ. ಭಗವಂತನ ಎದುರಿಗೆ ಮೇಲು-ಕೀಳು ಎಂಬ ಭೇದವಿಲ್ಲ. ನರಳುತ್ತಿರುವ ಮಾನವ ಜನಾಂಗಕ್ಕೆ ಅವನು ವಾಸ್ತವವಾಗಿ ತಾರಕಶಕ್ತಿ. ಭಗವಂತನಲ್ಲಿ ಭಕ್ತಿ ಮತ್ತು ಕರ್ತವ್ಯನಿಷ್ಠೆ ಇವೆರಡೇ ವ್ಯಕ್ತಿಯನ್ನು ಉನ್ನತ ನೆಲೆಗಳಿಗೆ ಕೊಂಡೊಯ್ಯಬಲ್ಲುವು. ಪೊಳ್ಳುಮೌಲ್ಯಗಳನ್ನು ಅಕ್ಕಿಯ ಪಾತ್ರದ ಮೂಲಕವಾಗಿಯೂ, ಸರ್ವೇಜನಾಃ ಸುಖಿನೋಭವಂತು ಎಂಬ ಸಮಾನತಾ ಪರಿಕಲ್ಪನೆಯನ್ನು ರಾಗಿಯ ಪಾತ್ರದ ಮೂಲಕವಾಗಿಯೂ ಕನಕದಾಸರು ಚಿತ್ರಿಸಿದರು.

ಕನಕದಾಸರು ಮಾಡಿದ ಸಮಾಜವಿಮರ್ಶೆಯ ದೃಷ್ಟಿಯಿಂದ ನರದೆಲಗ ಅಥವಾ ರಾಗಿಯು ವಿಜಯನಗರ ಸಮಾಜದ ದಲಿತ, ದಮಿತ ವರ್ಗಗಳನ್ನು ಪ್ರತಿನಿಧಿಸುತ್ತದೆ. ತನ್ನ ಕಾಲದ ಸಾಮಾಜಿಕ ಅನ್ಯಾಯವನ್ನು ಪ್ರತಿಭಟಿಸುವ ಸಾಧನವಾಗಿ ಕನಕದಾಸರು ಈ ಧಾನ್ಯವನ್ನು ಉಪಯೋಗಿಸಿದರು. ನರದೆಲಗದ ಪಾತ್ರವು ಕನಕದಾಸರಿಗಿದ್ದ ಸಾಮಾಜಿಕ ಅರಿವನ್ನೂ ತೋರಿಸುತ್ತದೆ. ಬಹುಸಾಮಾನ್ಯವಾದ ಉಪಮೆಗಳನ್ನು ಬಳಸಿ, ಕಾವ್ಯ ಮಾಧ್ಯಮದ ಮೂಲಕ, ಸರಳಭಾಷೆ ಮತ್ತು ನಿರೂಪಣೆಗಳಿಂದ ತಮ್ಮ ಸಮಾಜ ದರ್ಶನವನ್ನು ಜನತೆಗೆ ಮುಟ್ಟಿಸಬಹುದು, ಸಮಕಾಲೀನ ಸಮಾಜದ ಜಾತಿ ಸಮಸ್ಯೆಯನ್ನು ಬಯಲಿಗೆಳೆಯಬಹುದು ಎಂದು ಕನಕದಾಸರು ದೃಢವಾಗಿ ನಂಬಿದ್ದರು. ಸಂದೇಶವನ್ನು ಜನಸಾಮಾನ್ಯರಿಗೆ ಮುಟ್ಟಿಸಲು ಅದೇ ಸರಿಯಾದ ದಾರಿಯೆಂದು ಅವರು ಯೋಚಿಸಿದರು.

ಆರ್ಥಿಕ ದೃಷ್ಟಿಯಿಂದಲೂ ರಾಮಧಾನ್ಯಚರಿತೆಯು ಮುಖ್ಯವಾದುದಾಗಿದೆ. ಕನಕದಾಸರ ಕಾಲದಲ್ಲಿ ಶ್ರೀಮಂತರು ಮತ್ತು ಮೇಲುಜಾತಿಗಳಿಗೆ ಸೇರಿದವರು ತಮ್ಮ ದಿನನಿತ್ಯದ ಆಹಾರದಲ್ಲಿ ಅಕ್ಕಿಯನ್ನು ಬಳಸುತ್ತಿದ್ದರು. ಅದು ಸಾಮಾನ್ಯ ಮನುಷ್ಯನ ಕೈಯಳವಿಗೆ ಬರುತ್ತಿರಲಿಲ್ಲ ಎಂಬುದನ್ನು ಸೂಚಿಸುತ್ತದೆ. ಔತಣಕೂಟಗಳಲ್ಲಿ ಅಕ್ಕಿಯಿಂದ ತಯಾರಿಸಿದ ವಸ್ತುಗಳಿಗೆ ಬಹುಮುಖ್ಯವಾದ ಸ್ಥಾನವನ್ನು ನೀಡಲಾಗುತ್ತಿತ್ತು. ರಾಗಿ ಮತ್ತು ಇತರ ಧಾನ್ಯಗಳು ಬಡವರ, ದಲಿತರ, ಕೆಳಜಾತಿಯ ಜನಗಳ ಆಹಾರವೆಂದು ಪರಿಗಣಿಸಲಾಗುತ್ತಿದ್ದಿತು. ಸಮಾಜದ ಗಣ್ಯ ಜನರಿಗೆ ಈ ಧಾನ್ಯಗಳು ರುಚಿಸುತ್ತಿರಲಿಲ್ಲ .

ಅನಾದಿಕಾಲದಿಂದಲೂ ದಕ್ಷಿಣ ಕರ್ನಾಟಕವು ರಾಗಿಯ ವಲಯವಾಗಿದೆ[೧೪] ಮತ್ತು ಬಡವನ ಅಮೂಲ್ಯ ಆಹಾರವಾಗಿದೆ. ಅದು ಪುಷ್ಟಿಕರವಾದದ್ದೂ ಹೌದು. ಭಾರವಾದ ಮಣ್ಣಿನಲ್ಲಿ ಅದನ್ನು ಒಣಬೇಸಾಯವಾಗಿ ಬೆಳೆಯಬಹುದು. ಅಲ್ಲಿ ಅದರ ಫಸಲು ಅಧಿಕ. ಕರ್ನಾಟಕದಲ್ಲಿ ಅಕ್ಕಿಗಿಂತ ರಾಗಿ

ಬೆಳೆಯುವ ಪ್ರದೇಶ ವಿಸ್ತಾರ ಅಧಿಕವಾದುದು. ಫಸಲು ಸುಮಾರು ನಾಲ್ಕು ತಿಂಗಳಿಗೇ ಬರುವುದರಿಂದ ವಿಶೇಷವಾಗಿ ಅದು ಬೆಲೆಬಾಳುವ ಬೆಳೆಯಾಗಿದೆ.

ಅಕ್ಕಿ ಮತ್ತು ರಾಗಿಗಳ ನಡುವೆ ನಡೆಯುವ ಬಿರುಸಿನ ವಾಗ್ವಾದ ತುಂಬಾ ಸ್ವಾರಸ್ಯವಾಗಿದೆ. ಒಂದು ಹಂತದಲ್ಲಿ ಅಕ್ಕಿಯು ರಾಗಿಯ ಕೆಳಮಟ್ಟವನ್ನು ಟೀಕಿಸುತ್ತಾ ಮೇಲುವರ್ಗಗಳು ಅದನ್ನು ತಿರಸ್ಕರಿಸಿದುದರಿಂದ ಅದು ಶೂದ್ರಾನ್ನವಾಯಿತು ಎಂದು ಹೇಳುತ್ತದೆ. ಈ ಅಂಶವು ಏಕೆ ಸ್ವಾರಸ್ಯವೆಂದರೆ, ೧೬ನೆಯ ಶತಮಾನದಲ್ಲೂ ಕೂಡ ರಾಗಿಯು ಉತ್ಪಾದಕ ವರ್ಗದಲ್ಲಿ ಬಹುಭಾಗವಾಗಿದ್ದ ಶೂದ್ರರ ಮುಖ್ಯ ಆಹಾರವಾಗಿತ್ತು. ಕೃಷಿ ಗೇಣಿದಾರರು, ಕೂಲಿಗೆ ನೇಮಿಸಿಕೊಂಡವರು, ಬಾಡಿಗೆದಾರರು ಇವರೆಲ್ಲರೂ ಅಕ್ಕಿಗಿಂತ ಅಗ್ಗವಾಗಿದ್ದ ರಾಗಿಯನ್ನೇ ಮುಖ್ಯವಾಗಿ ಅವಲಂಬಿಸಿದ್ದರು. ಕರ್ನಾಟಕದ ಗ್ರಾಮೀಣ ಜನತೆಯ ಶ್ರಮಿಕವರ್ಗವನ್ನು ಅದು ಪೋಷಿಸುತ್ತಿದ್ದಿತು. ಅವರ ಮೇಲೆ ಮೂರು ಮೇಲುವರ್ಣಗಳ ಅಭ್ಯುದಯವು ನಿಂತಿದ್ದಿತು. ಅಕ್ಕಿಯ ಬಾಯಲ್ಲಿ ಶೂದ್ರಾನ್ನ ಎಂಬ ಪದವನ್ನು ಹಾಕಿ ಮಧ್ಯಕಾಲೀನ ಕರ್ನಾಟಕದ ಆಹಾರ ವಿನ್ಯಾಸದ ಅತಿಮುಖ್ಯ ಅಂಶವೊಂದನ್ನು ಕನಕದಾಸರು ಸೂಚಿಸಿದರು. ಎರಡೂ ಧಾನ್ಯಗಳ ನಡುವಣ ಚರ್ಚೆಯು, ಇಂದಿನಂತೆಯೇ ೧೬ನೆಯ ಶತಮಾನದಲ್ಲೂ ಕೂಡ, ಅಕ್ಕಿಯು ಶ್ರೀಮಂತರು ಮತ್ತು ಸುಸಂಸ್ಕೃತರಿಗೆ ಮೀಸಲಾದದ್ದು, ರಾಗಿಯು ಮುಖ್ಯವಾಗಿ ಬಡವರಿಗೆ ಮತ್ತು ಗ್ರಾಮೀಣ ಜನತೆಗೆ ಮೀಸಲಾದದ್ದು ಎಂಬ ಪರಿಕಲ್ಪನೆಯು ವ್ಯಾಪಕವಾಗಿದ್ದುದನ್ನು ಸೂಚಿಸುತ್ತದೆ. ಅಕ್ಕಿ ತಿನ್ನುವವರು ಹಕ್ಕಿಯಂತಾಗುತ್ತಾರೆ, ರಾಗಿ ತಿನ್ನುವವರು ರೋಗ ಮುಕ್ತರಾಗುತ್ತಾರೆ ಎಂಬ ಗಾದೆ ಮಾತು ಈ ಕಲ್ಪನೆಯನ್ನು ಪೋಷಿಸಿತು.

ಕನಕದಾಸರು ಆಶಾವಾದಿಯಾಗಿದ್ದು, ಗೊಡ್ಡು ಆಚಾರವಂತಿಕೆಯನ್ನು ವ್ಯಂಗ್ಯ ತುಂಬಿದ ದನಿಯಲ್ಲಿ ಖಂಡಿಸಿದರು. ಅವರ ಕೀರ್ತನೆಗಳ ತುಂಬ ನಿರ್ಮಲವಾದ ಭಕ್ತಿ, ಜೀವನದರ್ಶನ, ಸಮಾಜವಿಮರ್ಶೆ, ಲೋಕಾನುಭವಗಳು ತುಂಬಿಕೊಂಡಿವೆ. ಧಾರ್ಮಿಕ ವಿಚಾರಗಳಲ್ಲಿ ಕನಕದಾಸರು ಅತಿರೇಕವನ್ನು ನಿವಾರಿಸಿ ಮಧ್ಯ ಮಾರ್ಗವನ್ನು ಹಿಡಿದರು. ಸಂಸಾರದಲ್ಲಿ ಅಥವಾ ಲೌಕಿಕ ಜಗತ್ತಿನಲ್ಲಿ ಇದ್ದುಕೊಂಡೇ, ಭಕ್ತಿಯಿಂದ ಭಗವಂತನ ನಾಮಸ್ಮರಣೆ ಮಾಡುವುದರ ಮೂಲಕ ಮೋಕ್ಷವನ್ನು ಗಳಿಸಬಹುದು ಎಂದು ಅವರು ಘೋಷಿಸಿದರು. ವೈರಾಗ್ಯವಾಗಲಿ, ವಿವಿಧ ಆಚರಣೆಗಳನ್ನು ನಡೆಸುವುದಾಗಲಿ, ಶಾಸ್ತ್ರಾಧ್ಯಯನವಾಗಲಿ, ತೀರ್ಥಯಾತ್ರೆಯಾಗಲಿ ವ್ಯಕ್ತಿಗೆ ಮೋಕ್ಷಸಾಧಕವಾಗುವುದಿಲ್ಲ.

''ಸಂಸಾರವೆಂಬ ಸಾಗರವನ್ನು ಉತ್ತರಿಸುವದೆ'' ಎಂಬ ಹಾಡಿನಲ್ಲಿ ಅವರು, ಸಕಲವಿಧವಾದ ಧರ್ಮಾಚರಣೆಗಳನ್ನೂ ಯಾಗಯಜ್ಞಗಳನ್ನೂ ಮಾಡಿದ ಗರ್ವವಾಗಲಿ, ಸಕಲ ಶ್ರುತಿ-ಸ್ಮೃತಿ ಸಾಹಿತ್ಯವನ್ನು ಅಧ್ಯಯನ ಮಾಡಿದ ಹೆಮ್ಮೆಯಾಗಲಿ, ವ್ಯಕ್ತಿಗೆ ಸಂಸಾರವನ್ನು ದಾಟಲು ಸಾಲವು. ಹೆಂಡತಿ ಮಕ್ಕಳನ್ನು ತೊರೆದು, ಬೆಟ್ಟದ ತುದಿಯಲ್ಲಿ ಬಂಡೆಯ ಮೇಲೆ ನಿಂತು ತಪಸ್ಸು ಮಾಡುತ್ತಾ ದೇಹವನ್ನು ದಂಡಿಸುವುದರಿಂದಲೂ ಏನೂ ಪ್ರಯೋಜನವಿಲ್ಲ. ಹಾಗೆಯೇ ಸದಾಕಾಲವೂ ತಣ್ಣೀರಿನಲ್ಲಿ ಮುಳುಗಿದ್ದರೂ ಫಲವಿಲ್ಲ. ಸಂಸಾರದ ಸಾಗರವನ್ನು ದಾಟಲು ಭಗವಂತನ ನಾಮವೊಂದು ಸಾಕು.

ಮಾನವನ ಸಮಸ್ತ ಚಟುವಟಿಕೆಗಳ ಏಕೈಕವಾದ ಗುರಿ ಲೌಕಿಕ ಪ್ರಯೋಜನಗಳನ್ನು ಪಡೆಯುವುದಾಗಿದೆ. ವಿಶೇಷವಾಗಿ ಹೊಟ್ಟೆ ತುಂಬಿಕೊಳ್ಳಲು, ಒಂದು ತುಂಡು ಬಟ್ಟೆ ಪಡೆಯಲು ನಡೆಯುತ್ತದೆ. ಈ ಭಾವವನ್ನು ಬಹು ಸುಂದರವಾಗಿ ಕನಕದಾಸರು, ''ಎಲ್ಲಾರು ಮಾಡುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ'' ಎಂಬ ಸುಪ್ರಸಿದ್ಧವಾದ ಹಾಡಿನಲ್ಲಿ ನಿರೂಪಿಸಿದ್ದಾರೆ.[illegible] ಪಂಡಿತರು, ಜ್ಯೋತಿಷಿಗಳು, ಯೋಧರು, ವರ್ತಕರು, ರೈತರು, ವಂಚಕರು, ವಿವಿಧ ಪಂಗಡಗಳ ಬೈರಾಗಿಗಳು, ಕಳ್ಳರು, ರಾಜರು-ಹೀಗೆ ಅಸಂಖ್ಯ ವೇಷಗಳು ಸೋಗುಗಳು. ಆದರೆ ಎಲ್ಲವುಗಳ ಮೂಲ ಉದ್ದೇಶ ಒಂದೇ, ಒಂದು ತುಂಡು ಬಟ್ಟೆ, ಒಂದು ತುತ್ತು ಅನ್ನ.

ಆದರೆ ನಿಜವಾದ ಭಕ್ತನಾದರೆ, ಆನಂದ ಮತ್ತು ಮೋಕ್ಷಗಳನ್ನು ಪಡೆಯುವ ಏಕೈಕ ಉದ್ದೇಶದಿಂದ ಭಗವಂತನನ್ನು ಪೂಜಿಸುತ್ತಾನೆ.

ಸುವ್ಯವಸ್ಥೆ ಮತ್ತು ಸ್ಥಿರತೆಯು ನಿಲ್ಲುವುದು ಪ್ರಚಲಿತ ಸಾಮಾಜಿಕ ರಚನೆಯನ್ನು ಪಾಲಿಸುವುದರ ಮೇಲೆ, ಅದನ್ನು ಮೇಲುವರ್ಣಗಳ ವ್ಯಕ್ತಿಗಳು ಸೂಕ್ಷ್ಮವಾಗಿ ನಿಯಂತ್ರಿಸುತ್ತಾರೆ ಎಂಬ ಪ್ರಚಲಿತ ನಂಬಿಕೆಯನ್ನು ಕನಕದಾಸರು ಒಪ್ಪಲಿಲ್ಲ. ಒಬ್ಬ ವ್ಯಕ್ತಿಯ ಸತ್ಯವಂತಿಕೆ ಮತ್ತು ಸಚ್ಚಾರಿತ್ರವು ಮುಖ್ಯವೇ ಹೊರತು ಅವನ ಜಾತಿಯಲ್ಲ ಎಂದು ಅವರು ಬೋಧಿಸಿದರು. ''ಕುಲಕುಲವೆನ್ನುತಿಹರು'' ಎಂಬ ಪ್ರಸಿದ್ಧವಾದ ಹಾಡಿನಲ್ಲಿ[೨೬] ಜಾತಿಪದ್ಧತಿಯನ್ನು ಅವರು ಖಂಡಿಸಿದರು. ಈ ಹಾಡಿನಲ್ಲಿ ಎರಡು ಮೂಲಭೂತ ಪ್ರಶ್ನೆಗಳನ್ನು ಅವರು ಎತ್ತುತ್ತಾರೆ. ದೇವರು ಯಾವುದಾದರೂ ಮಾನವ ನಿರ್ಮಿತ ಜಾತಿಗೆ ಸೇರಿದ್ದಾನೆಯೆ? ಆತ್ಮ ಅಥವಾ ಜೀವದ, ಇಂದ್ರಿಯಗಳ ಜಾತಿ ಯಾವುದು? ಸಮಕಾಲೀನ ಸಮಾಜದ ರಚನೆ ಮತ್ತು ಪ್ರವೃತ್ತಿಯು ಮುಖ್ಯವಾಗಿ ಆಚಾರವಂತಿಕೆ ಮತ್ತು ಶ್ರೇಣೀಕರಣಗಳ ಕಡೆಗೆ ಒಲವು ಹೊಂದಿತ್ತು. ಅದನ್ನು ಕನಕದಾಸರು ಉಗ್ರವಾಗಿ ಖಂಡಿಸಿದರು.

ಸದ್ಗತಿಗೆ ಒಬ್ಬ ಪುತ್ರನು ಹುಟ್ಟುವುದು ಆವಶ್ಯಕ ಎಂಬ ಯುಗಯುಗಾಂತರದಿಂದ ಬಂದ ನಂಬಿಕೆಯನ್ನು ''ಮಗನಿಂದ ಗತಿ ಉಂಟೆ'' ಎಂಬ ಹಾಡಿನಲ್ಲಿ ಅಪಹಾಸ್ಯ ಮಾಡಿದ್ದಾರೆ. ಮಗನು ದುಷ್ಟನಾದರೆ, ಸ್ವಾಶ್ರಮವನ್ನು ತೊರೆದು ಹಿರಿಯರು, ಗುರುಗಳನ್ನು ನಿಂದಿಸಿ, ಕೀಳು ಹೆಂಗಸರ ಸಂಪರ್ಕ ಮಾಡಿದರೆ ಅಂತಹ ಮಗನು ಸ್ವರ್ಗಕ್ಕೆ ಬದಲು ನರಕಕ್ಕೆ ದಾರಿಯನ್ನು ನಿರ್ಮಿಸುತ್ತಾನೆ. ಇಂತಹ ಮಗನಿಲ್ಲದೆ ಹೋದರೆ ಅದು ಖಂಡಿತವಾಗಿಯೂ ನಷ್ಟವಲ್ಲ. ಅದಕ್ಕೆ ಬದಲು ಸತ್ಯ, ಶಾಂತಿ, ಆತ್ಮಸಂಯಮ ಮತ್ತು ಸ್ಥಿರಚಿತ್ತಗಳೆಂಬ ನಾಲ್ವರು ಪುತ್ರರನ್ನು ಹೊಂದಿದ್ದರೆ ಅದು ಸಾಕು. ಭಗವಂತನನ್ನು ಧ್ಯಾನಿಸುವವರಿಗೆ ಮೋಕ್ಷವನ್ನು ಕೊಡದಿರುವುದಿಲ್ಲ.

ಹೀಗೆ ಕನಕದಾಸರ ಸಾಮಾಜಿಕ ದರ್ಶನವು ಅವರ ಕೃತಿಗಳಲ್ಲಿ ಸುವ್ಯಕ್ತವಾಗಿದ್ದು, ಅದರ ಮುಖ್ಯ ಲಕ್ಷಣ ವರ್ಗವ್ಯವಸ್ಥೆ, ಜಾತಿಪದ್ಧತಿ, ಮೇಲು-ಕೀಳು, ಅಸ್ಪೃಶ್ಯತೆ, ಅರ್ಥಶೂನ್ಯ ಆಚರಣೆಗಳು, ವಂಚನೆ, ಇವುಗಳನ್ನು ಅವರು ಉಗ್ರವಾಗಿ ಖಂಡಿಸಿದ್ದು. ಭಗವಂತನಲ್ಲಿ ನಿರ್ಮಲವಾದ ಭಕ್ತಿ ಮತ್ತು ಶ್ರದ್ಧೆ (ಯಾವುದೇ ಮಧ್ಯವರ್ತಿಗಳಿಲ್ಲದೆ) ಇಹ (ಈ ಲೋಕ) ಮತ್ತು ಪರ(ಮುಂದಿನ ಲೋಕ)ಗಳ ಸಮತೋಲನ ಹಾಗೂ ಅತಿರೇಕಗಳಿಲ್ಲದ ಮಧ್ಯಮಾರ್ಗದ ಅನುಸರಣೆಗಳನ್ನು ಅವರು ಸಾರಿದರು. ಅವರ ನಿರೂಪಣಾ ವಿಧಾನ, ವಿಜಯನಗರ ಸಮಾಜದ ಸದಸ್ಯರೇ ಆಗಿ ತಮ್ಮ ಸ್ವಂತದ ಅನುಭವಗಳನ್ನು ಚಿತ್ರಿಸಿರುವ ಪರಿ ತುಂಬಾ ಸ್ವಾರಸ್ಯವಾಗಿದೆ.

ಹದಿನಾರನೆಯ ಶತಮಾನದ ಕರ್ನಾಟಕದಲ್ಲಿ ಕನಕದಾಸರು ಆಸೆ ತುಂಬಿದ ಪ್ರವಾದಿಯಾಗಿದ್ದರು. ನಿರಾಸೆಯ ಪ್ರಪಾತದೊಳಗೆ ಆಸೆಯನ್ನು ಕಟ್ಟಲು ಅವರು ಪ್ರಯತ್ನಿಸಿದರು. ತಮ್ಮ ಸಮಕಾಲೀನರಿಗೆ ತಮ್ಮ ತಮ್ಮ ಅಂತಸ್ಸಾಕ್ಷಿಗಳನ್ನು ಪರೀಕ್ಷಿಸಿಕೊಂಡು ತಮ್ಮ ನೈತಿಕ ಹೊಣೆಗಾರಿಕೆಗಳನ್ನು ಕಂಡುಕೊಳ್ಳಬೇಕೆಂದು ಅವರು ಕರೆಯಿತ್ತರು. ಮಾನವಗೌರವ ಎಂಬ ಹೆಸರಿನಲ್ಲಿ ನೈತಿಕ ಮತ್ತು ಆಧ್ಯಾತ್ಮಿಕ ಸಮಾನತೆಯೊಂದೇ ಮನುಷ್ಯನನ್ನು ಇತರ ಕ್ಷೇತ್ರಗಳ ಲೌಕಿಕ ಪ್ರಗತಿಯ ಯಂತ್ರಗಳಿಗಿಂತ ಮೇಲಿನ ಸ್ಥಾನದಲ್ಲಿ ಇರಿಸಬಲ್ಲುದು ಎಂದವರು ಭಾವಿಸಿದರು.

ನಮ್ಮನ್ನು ನಾವು ಬದಲಾಯಿಸಿಕೊಳ್ಳಲು ಧರ್ಮವು ಸಹಾಯ ಮಾಡುತ್ತದೆ. ಧರ್ಮವು ಸಮಾಜಕ್ಕೆ ಎಂದಿಗೂ ಅಸಂಗತವಲ್ಲ. ಅದು ನಮಗೆ ನಿರ್ದೇಶನವನ್ನೂ ನೆರವನ್ನೂ ನೀಡುತ್ತದೆ. ಜೀವಂತವಾದ ದೈವಶ್ರದ್ಧೆ ಮಾತ್ರವೇ ಮನುಷ್ಯನಿಗೆ ಹತಾಶೆಯ ಧನುರ್ವಾಯುವನ್ನು ಗೆದ್ದು ಹಿಂದಿಗಿಂತ ಕಡಮೆ ಅಪರಿಪೂರ್ಣ

ಸಮಾಜದ ರಚನೆಗೆ ನೆರವು ನೀಡುತ್ತದೆ. ಕರ್ನಾಟಕದ ಸಮಕಾಲೀನ ಸಮಾಜವನ್ನು ಕಡಮೆ ಅಪರಿಪೂರ್ಣಗೊಳಿಸಲೆತ್ನಿಸಿದ ಕನಕದಾಸರ ಸಂದೇಶ ಇದೇಯೆ.

ಒಂದು ಧರ್ಮದ ಅನುಯಾಯಿಗಳು ಇನ್ನೊಂದು ಧರ್ಮದ ಅನುಯಾಯಿಗಳನ್ನು ಸಾಮಾಜಿಕವಾಗಿ ಟೀಕಿಸಲು ಸಾಕಷ್ಟು ಸ್ವಾತಂತ್ರ್ಯ ಇದ್ದಿತು ಎನ್ನುವುದು ಜೈನ ಕವಿಯೊಬ್ಬನ ಒಂದು ಕನ್ನಡ ಕೃತಿಯಿಂದ ತಿಳಿದುಬರುತ್ತದೆ. ಅವನು ವೃತ್ತವಿಲಾಸ ಎಂಬ ಕವಿ. ಅವನು ಬರೆದ ಚಂಪೂರೂಪದ ವಿಡಂಬನ ಕಾವ್ಯ ಧರ್ಮಪರೀಕ್ಷೆ.[೧೯] ಅದರ ಕಾಲ ಕ್ರಿ.ಶ. ೧೩೬೦. ವೃತ್ತವಿಲಾಸನಿಗೆ ಕಾವ್ಯವನ್ನು ಬರೆಯಲು ಎರಡು ಉದ್ದೇಶಗಳಿದ್ದುವು. ೧) ಪ್ರಾಚೀನ ವೈದಿಕ-ಪೌರಾಣಿಕ ಕಥೆಗಳನ್ನು ವಿಮರ್ಶಾತ್ಮಕವಾಗಿಯೂ ವಿಚಾರಪೂರ್ವಕವಾಗಿಯೂ ನೋಡುವುದು. ೨) ಜೈನಧರ್ಮದ ಮೇಲ್ಮೆಯನ್ನು ಎತ್ತಿ ಹಿಡಿಯುವುದು. ಇದನ್ನು ನಿರ್ವಹಿಸಲು ಅವನಿಗೆ ಎರಡೂ ದಾರಿಗಳಿದ್ದುವು. ಒಂದು ಪ್ರತ್ಯಕ್ಷ ವಿಮರ್ಶೆಯ ಮೂಲಕ ನಡೆಸುವುದು. ಇನ್ನೊಂದು ನಿದರ್ಶನಗಳು, ಕತೆಗಳು, ಉದಾಹರಣೆಗಳ ಮೂಲಕ ಪರೋಕ್ಷವಾಗಿ ನಡೆಸುವುದು. ಎರಡೂ ವಿಧಾನಗಳ ಉದ್ದೇಶ ಒಂದೇ ಆದರೂ ಎರಡನೆಯ ವಿಧಾನವು ಹೆಚ್ಚು ಪರಿಷ್ಕೃತ ಎಂದು ಭಾವಿಸಲಾಗುತ್ತದೆ. ಇತರರನ್ನು ಅದು ನೇರವಾಗಿ ಚುಚ್ಚಿ ನೋಯಿಸುವುದಿಲ್ಲ. ವೃತ್ತವಿಲಾಸನು ಆ ಕಾಲದ ಹಿಂದೂ ಧಾರ್ಮಿಕ ನಂಬಿಕೆಗಳನ್ನೂ ಆಚರಣೆಗಳನ್ನು ವಿಮರ್ಶಿಸುವಾಗ ಈ ಎರಡನೆಯ ಮಾರ್ಗವನ್ನು ಅನುಸರಿಸಿದನು.

ಕರ್ನಾಟಕದಲ್ಲಾಗಲಿ ಭಾರತದ ಬೇರೆಡೆಗಳಲ್ಲಾಗಲಿ ಆಚರಣೆಯಲ್ಲಿದ್ದ ವೈದಿಕ ನಂಬಿಕೆಗಳ ಮೇಲೆ ವಿಡಂಬನೆಯ ಮೂಲಕ ಆಕ್ರಮಣ ಮಾಡಿದವರಲ್ಲಿ ವೃತ್ತವಿಲಾಸನು ಮೊದಲನೆಯ ಜೈನ ಬುದ್ಧಿಜೀವಿಯೇನಲ್ಲ. ಕ್ರಿ.ಶ. ೯೮೮ರಲ್ಲಿ ಹರಷೇಣನು ಅಪಭ್ರಂಶದಲ್ಲಿ ಧರ್ಮಪರೀಕ್ಷೆಯನ್ನು ಬರೆದಿದ್ದನು. ಮಾಧವಸೇನನ ಶಿಷ್ಯ ಅಮಿತಗತಿಯೂ ಅದೇ ಹೆಸರಿನ ಒಂದು ಕೃತಿಯನ್ನು ಕ್ರಿ.ಶ. ೧೦೧೪ರಲ್ಲಿ ರಚಿಸಿದನು. ಅದು ಸಂಸ್ಕೃತ ಕಾವ್ಯ. ಕರ್ನಾಟಕದಲ್ಲಿ ಕ್ರಿ.ಶ. ೧೧೧೨ರಲ್ಲಿ ನಯಸೇನನು ಧರ್ಮಾಮೃತವನ್ನು ಬರೆದನು. ಬ್ರಹ್ಮಶಿವನ ಸಮಯ ಪರೀಕ್ಷೆಯು ೧೧೯೦ರಲ್ಲಿ ರಚಿತವಾಯಿತು. ವೃತ್ತವಿಲಾಸನು ತನ್ನ ಕೃತಿಗೆ ಹರಿಷೇಣನ ಧರ್ಮಪರೀಕ್ಷೆಗೆ ಆಭಾರಿಯಾಗಿದ್ದನಾದರೂ ಅದನ್ನು ಕೃತಿಯಲ್ಲಿ ನಮೂದಿಸಿಲ್ಲ. ಆದರೆ ವೃತ್ತವಿಲಾಸನ ಕೃತಿಯು ಹರಿಷೇಣನ ಕೃತಿಯ ಅನುವಾದವಲ್ಲ.[೨೦]

ಉದ್ದೇಶಿತ ಕಾರ್ಯವನ್ನು ನಿರ್ವಹಿಸಲು ಸಾಕಷ್ಟು ಪರಿಣತಿ ಕವಿಗೆ ಇದ್ದಿತೆನ್ನುವುದು ಆಂತರಿಕ ಆಧಾರಗಳಿಂದ ಸೂಚಿತವಾಗುತ್ತದೆ. ಅವನಿಗೆ ಹಿಂದೂ ಪುರಾಣಗಳು, ಶಾಸ್ತ್ರಗಳು ಮತ್ತು ವೇದಗಳ ಆಳವಾದ ಜ್ಞಾನವಿದ್ದಿತು. ಜೈನನಾಗಿದ್ದರೂ ಹಿಂದೂ ಧರ್ಮವನ್ನು ಕುರಿತ ಅವನ ಜ್ಞಾನ ಉನ್ನತವಾಗಿತ್ತು. ಪುರಾಣಕತೆಗಳಿಗೆ ಸಮಾನಾಂತರವಾಗಿ ಅರ್ಥರಹಿತ ಪೊಳ್ಳುಕತೆಗಳನ್ನು ಹೆಣೆದು ಅವುಗಳ ಅವಾಸ್ತವಿಕ ಸನ್ನಿವೇಶಗಳನ್ನು ಘಟನೆಗಳನ್ನು ವೃತ್ತವಿಲಾಸನು ಗೇಲಿ ಮಾಡಿದ್ದಾನೆ.

ಈ ಚಂಪೂಕಾವ್ಯದ ನಾಯಕ ಮನೋವೇಗ. ಅವನು ವೈಜಯಂತಿಯ ರಾಜನ ಮಗ. ಅವನು ವಿದ್ವಾಂಸರಾದ ಬ್ರಾಹ್ಮಣರಿಗೆ ಪೊಳ್ಳು ಕಥೆಗಳನ್ನು ಹೇಳಿ ಪುರಾಣ ಕಥೆಗಳು ಮತ್ತು ನಂಬಿಕೆಗಳ ಪೊಳ್ಳುತನವನ್ನು ತೋರಿಸಿಕೊಡುತ್ತಾನೆ. ಅಂತಿಮವಾಗಿ ಬ್ರಾಹ್ಮಣರನ್ನು ಸೋಲಿಸಿ ಅವರಿಂದ ಜಯಪತ್ರವನ್ನು ಪಡೆಯುತ್ತಾನೆ. ಕೊನೆಯಲ್ಲಿ ತಮ್ಮ ಧಾರ್ಮಿಕ ನಂಬಿಕೆಗಳ ಅರ್ಥಶೂನ್ಯತೆಯನ್ನು ಮನಗಂಡು ಅವರು ಜೈನರಾಗಿ ಪರಿವರ್ತಿತರಾಗುತ್ತಾರೆ.

ಒಂದು ಉದಾಹರಣೆಯನ್ನು ನೋಡಬಹುದು. ವಿಷ್ಣುವಿನ ಅವತಾರಗಳನ್ನು ಕುರಿತು ಮನೋವೇಗನು ಹೀಗೆ ಗೇಲಿ ಮಾಡುತ್ತಾನೆ: ''ಲಕ್ಷ್ಮೀಪತಿ, ವಿಶ್ವದ ಪ್ರಭು, ಸಮಸ್ತ ಗೌರವಕ್ಕೆ ಪಾತ್ರನಾದವನು. ಕೌಸ್ತುಭ ರತ್ನವನ್ನು ಧರಿಸಿದವನು ಒಬ್ಬ ಸಾಮಾನ್ಯ ಗೊಲ್ಲನಾಗಿದ್ದನೆಂದು ನಂಬುವುದು ಹಾಸ್ಯಾಸ್ಪದವಲ್ಲವೆ? ಅಯ್ಯೋ ಪಾಪ ನಂದನ ಪ್ರೀತಿಯ ಮಗುವಾಗಿ ಅವನು ಅತಿ ಹೀನಾಯವಾದ ಕೆಲಸ ಮಾಡಬೇಕಾಯಿತು. ಸಾಮಾನ್ಯ ಮನುಷ್ಯನೊಬ್ಬನ ರಥದ ಸಾರಥಿಯಾಗಿ ಕೆಲಸ ಮಾಡಿದನು. ಅಲ್ಲದೆ ಪಾಂಡವರ ದೂತನಾಗಿ ದುರ್ಯೋಧನನ ಬಳಿಗೆ ಹೋದನು. ಸಕಲ ಜೀವಿಗಳ ಪಾಲಕನು ಗೌರವಕ್ಕೆ ಕುಂದಾದ ಅಂತಹ ಕೆಲಸಗಳನ್ನು ಮಾಡಿದುದು ಎಷ್ಟು ಹೀನಾಯ! ನಿಮ್ಮ ದೇವರು ಜನನ - ಮರಣಗಳ ಬಂಧನದಿಂದ ಮುಕ್ತನು ಎಂದು ನೀವು ಹೇಳುತ್ತೀರಿ. ಆದರೆ ಅದೇ ದೇವರು, ಮೀನಾಗಿ, ಆಮೆಯಾಗಿ, ಹಂದಿಯಾಗಿ, ಸಿಂಹವಾಗಿ ಹುಟ್ಟಿದನು ಎಂದು ಹೇಳುತ್ತೀರಿ. ಅಂತಹ ಕೆಲಸಗಳೇನು ಬಹು ರಂಜನೀಯವಾಗಿರುತ್ತವೋ, ದಯವಿಟ್ಟು ಹೇಳಿ. ನಮಗೆ ಒಳ್ಳೆಯ ನಡವಳಿಕೆಯಿಲ್ಲ ಎಂದು ಹೇಳಲು ನೀವು ಸಾಕಷ್ಟು ಮಾಡಿದ್ದೀರಿ.''[೨೧]

ಈ ರೀತಿ ಮನೋವೇಗನು ಬ್ರಾಹ್ಮಣರ ಧಾರ್ಮಿಕ ನಂಬಿಕೆಗಳನ್ನು ಟೀಕಿಸುತ್ತಾನೆ. ಕಾವ್ಯದುದ್ದಕ್ಕೂ ವಿಡಂಬನೆ ಉಪಯೋಗವಾಗಿದೆ. ಧರ್ಮಪರೀಕ್ಷೆ ಒಂದು ಉತ್ತಮ ವಿಡಂಬನ ಕಾವ್ಯವಾಗಿದೆ.

ಕವಿಯು ಕುರುಡುನಂಬಿಕೆಗಳನ್ನು ಅಂಧಶ್ರದ್ಧೆಗಳನ್ನು ಉಗ್ರವಾಗಿ ವಿರೋಧಿಸುತ್ತಾನೆ. ಅವುಗಳನ್ನು ಅವನು ಎರಡು ಗುಂಪಾಗಿ ವರ್ಗೀಕರಿಸುತ್ತಾನೆ. ಲೋಕಮೂಢತೆ ಅಥವಾ ಸಾಮಾಜಿಕ ಆಚರಣೆಗಳಲ್ಲಿ ಬೇರು ಬಿಟ್ಟ ಮೂಢನಂಬಿಕೆಗಳು ಮತ್ತು ದೇವಮೂಢತೆ ಅಥವಾ ದೇವರುಗಳನ್ನು ಕುರಿತ ಕುರುಡು ನಂಬಿಕೆಗಳು.[೨೨]

ಲೋಕಮೂಢತೆ ಇವು:

೧. ಗಂಗಾನದಿಯು ಪವಿತ್ರವಾದುದೆಂದು ತಿಳಿದುಕೊಳ್ಳುವುದು.

೨. ವ್ಯಕ್ತಿಯ ಮರಣಾನಂತರ ಅವನ ಮೂಳೆಗಳನ್ನು ಗಂಗಾನದಿಯಲ್ಲಿ ಮುಳುಗಿಸಿದರೆ ಅವನಿಗೆ ಸದ್ಗತಿ ದೊರಕುವುದೆಂಬ ನಂಬಿಕೆ.

೩. ಸತಿ ಆಚರಣೆ ಪವಿತ್ರವೆಂದು ಸಾರುವುದು.

೪. ಗ್ರಹಗಳ ದುಷ್ಪರಿಣಾಮಗಳಿಂದ ರಕ್ಷಿಸಲು ಮಕ್ಕಳಿಗೆ ತಾಯಿತ ಕಟ್ಟುವುದು.

೫. ಬಾವಿ, ಕೆರೆಯನ್ನೋ ಅಥವಾ ಮನೆಯ ಹೊಸ್ತಿಲನ್ನೋ, ಒನಕೆಯನ್ನೋ ಪೂಜಿಸುವುದು.

೬. ಧರ್ಮದ ಹೆಸರಿನಲ್ಲಿ ಜಟೆ ಬೆಳೆಸುವುದು.

೭. ದೇವರ ಹೆಸರಿನಲ್ಲಿ ಛತ್ರಿ, ಚಾಮರ, ದೇವಾಲಯವನ್ನು ಅರ್ಪಿಸುವುದು.

೮. ದೇವರ ಹೆಸರಿನಲ್ಲಿ ಜಾಗರಣೆ ಮಾಡುವುದು, ರಾತ್ರಿಯಿಡಿ ಎಚ್ಚರವಾಗಿರುವುದು.

೯. ಅನ್ನ, ಆಯುಧ, ಮರ, ಗ್ರಹಗಳು ಮತ್ತು ಅಗ್ನಿ ಇವುಗಳನ್ನು ಪೂಜಿಸುವುದು.

ದೇವಮೂಢತೆಗಳು ಇವು ಎಂದು ವೃತ್ತವಿಲಾಸನು ಪರಿಗಣಿಸುತ್ತಾನೆ:

೧. ಕಾಮ, ಕ್ರೋಧಗಳನ್ನು ವ್ಯಕ್ತಪಡಿಸುವ, ಕೈಯಲ್ಲಿ ವಿವಿಧ ಆಯುಧಗಳನ್ನು ಧರಿಸಿರುವ ದೇವರುಗಳನ್ನು ವಿಧೇಯತೆಯಿಂದ ಪೂಜಿಸುವುದು.

೨ ಈ ಜಗತ್ತಿನಲ್ಲಿ ಸಮಸ್ತವೂ ಭಗವಂತನ ಇಚ್ಛೆಯಿಂದ ನಿಯಂತ್ರಿತವಾಗಿದೆ ಎಂದು ನಂಬುವುದು, ಒಳ್ಳೆಯದು ಮತ್ತು ಕೆಟ್ಟದ್ದು ಎರಡೂ ಅವನಿಂದ ಪ್ರೇರಿತವಾಗಿವೆ ಎಂಬ ನಂಬಿಕೆಯಿಂದ ಕೆಲಸಮಾಡುವುದು.

೧೪ನೆಯ ಶತಮಾನದ ಐತಿಹಾಸಿಕ ಸಂದರ್ಭದಲ್ಲಿ ವೃತ್ತವಿಲಾಸನ ಕೃತಿಗೆ ಮಹತ್ವವಿದೆ. ಅದು ವಿಜಯನಗರ ಸಾಮ್ರಾಜ್ಯದ ಉದಯಕಾಲ. ಹಿಂದೂ ಧಾರ್ಮಿಕಪಂಥಗಳು ಪ್ರತ್ಯಕ್ಷವಾಗೋ ಪರೋಕ್ಷವಾಗೋ ಸಂಗಮ ರಾಜವಂಶದ ಆಶ್ರಯವನ್ನು ಪಡೆದುವು. ವಿಜಯನಗರ-ಪೂರ್ವಕಾಲಕ್ಕೆ ಹೋಲಿಸಿದ ಪಕ್ಷದಲ್ಲಿ ದಕ್ಷಿಣಕನ್ನಡ ಪ್ರದೇಶದಲ್ಲಿ ಅಲ್ಲಲ್ಲಿ ಕೇಂದ್ರೀಕೃತವಾಗಿದ್ದುದೇ ಹೊರತು ಜೈನಧರ್ಮವು ಒಟ್ಟಾರೆ ಕ್ಷೀಣಿಸಿದ್ದ ಕಾಲವದು. ಇದನ್ನು ಮನಸ್ಸಿನಲ್ಲಿ ಇಟ್ಟುಕೊಂಡೇ ವೃತ್ತವಿಲಾಸನ ವಿಡಂಬನ ಕಾವ್ಯವನ್ನು ಅಧ್ಯಯನ ಮಾಡಬೇಕು.

೧೪ನೆಯ ಶತಮಾನವು ಜೈನ-ವೈಷ್ಣವ ಸಂಘರ್ಷವನ್ನು ಕಂಡಿತು. ದಕ್ಷಿಣಕರ್ನಾಟಕದ ಜೈನ ಯಾತ್ರಾಕೇಂದ್ರದ ಹೃದಯ ಶ್ರವಣಬೆಳಗೊಳದಲ್ಲೇ ಈ ಪ್ರವೃತ್ತಿಯು ಬೆಳೆಯುತ್ತಿತ್ತು. ಅಲ್ಲಿನ ಕ್ರಿ.ಶ. ೧೩೬೮ರ ಒಂದು ಶಾಸನವು[೨೬] ಆ ಪ್ರದೇಶದ ಧಾರ್ಮಿಕ ಜೀವನದಲ್ಲಾದ ಈ ಬೆಳವಣಿಗೆಗೆ ಸ್ಪಷ್ಟ ಸೂಚನೆಗಳನ್ನು ಕೊಡುತ್ತದೆ. ಜೈನರಿಗೂ ಶ್ರೀವೈಷ್ಣವರಿಗೂ ನಡುವೆ ಎದ್ದಿದ್ದ ವ್ಯಾಜ್ಯವನ್ನು ಬಗೆಹರಿಸಲು ಚಕ್ರವರ್ತಿ ಮೊದಲನೆಯ ಬುಕ್ಕನೇ ಮಧ್ಯ ಪ್ರವೇಶ ಮಾಡಬೇಕಾಯಿತು ಎನ್ನುವುದು ಪರಿಸ್ಥಿತಿಯ ಗಂಭೀರತೆಯನ್ನು ತೋರಿಸುತ್ತದೆ.

ವಾಸ್ತವವಾಗಿ ವೃತ್ತವಿಲಾಸನ ಕೃತಿರಚನೆಯಾದದ್ದು ಈ ಶ್ರವಣಬೆಳಗೊಳ ಶಾಸನವನ್ನು ನೆಡುವುದಕ್ಕೆ ಸುಮಾರು ಎಂಟು ವರ್ಷಗಳ ಮೊದಲು ಎನ್ನುವುದು ಸ್ವಾರಸ್ಯವಾದ ಸಂಗತಿ. ಆದ್ದರಿಂದ ೧೪ನೆಯ ಶತಮಾನದಲ್ಲಿದ್ದ ಧಾರ್ಮಿಕ ಬಿಕ್ಕಟ್ಟನ್ನು ವೃತ್ತವಿಲಾಸನ ಕೃತಿಯು ತೋರಿಸುತ್ತದೆ. ಪ್ರಾಚೀನ ಜೈನ ಬುದ್ಧಿಜೀವಿಯು ತನ್ನ ಧರ್ಮದ ರಕ್ಷಣೆಗೆ ತೋರಿಸಿದ ಪ್ರತಿಕ್ರಿಯೆಯನ್ನು, ವ್ಯಕ್ತಪಡಿಸುತ್ತದೆ. ಅದು ಹಿಂದೂ ಪಂಥಗಳು, ವಿಶೇಷವಾಗಿ ಶ್ರೀವೈಷ್ಣವ ಧರ್ಮವು ಅವನ ಧರ್ಮದ ಮೇಲೆ ಮಾಡಿದ ಆಕ್ರಮಣವಾಗಿದ್ದು ಅದರಿಂದ ಅವನು ಅದನ್ನು ರಕ್ಷಿಸಿಕೊಳ್ಳಬೇಕಾಗಿತ್ತು. ಧರ್ಮಪರೀಕ್ಷೆಯನ್ನು ವಿವರವಾಗಿ ಓದಿದರೆ ಕವಿಯು ಹೇಗೆ ಧಾರ್ಮಿಕ ನಂಬಿಕೆಗಳನ್ನೂ ದೇವಾಲಯಗಳ ಸಾಧನೆಗಳನ್ನೂ ಅವಹೇಳನ ಮಾಡಿದ್ದಾನೆ ಎನ್ನುವುದು ಗೊತ್ತಾಗುತ್ತದೆ. ಕಾವ್ಯದ ನಾಯಕ ಮನೋವೇಗನು ಹೇಳುವ ಕಥೆಗಳಲ್ಲಿ ಮುಖ್ಯವಾಗಿ ವಿಷ್ಣುವಿಗೆ ಮತ್ತು ಅವನ ಅವತಾರಗಳಿಗೆ ಸಂಬಂಧಪಟ್ಟ ಸಂಕೇತಗಳು ಮತ್ತು ನಂಬಿಕೆಗಳೇ ಹೆಚ್ಚು. ಆದ್ದರಿಂದ ೧೩೬೦ರ ವೃತ್ತವಿಲಾಸನ ಕೃತಿಯನ್ನೂ ೧೩೬೮ರ ಶ್ರವಣಬೆಳಗೊಳ ಶಾಸನವನ್ನೂ ಒಟ್ಟಿಗೆ ಅಧ್ಯಯನ ಮಾಡುವುದರಿಂದ ೧೪ನೆಯ ಶತಮಾನದಲ್ಲಿ ಪ್ರಚಲಿತವಿದ್ದ ಧಾರ್ಮಿಕ ವಿಮರ್ಶೆಯ ಸ್ಪಷ್ಟಚಿತ್ರವು ದೊರಕುತ್ತದೆ ಎಂದು ಹೇಳಬಹುದು.

ಮೇಲ್ಕಂಡ ಶಾಸನವು ಜೈನರಿಗೂ ಶ್ರೀವೈಷ್ಣವರಿಗೂ ನಡುವೆ ಇದ್ದ ಧಾರ್ಮಿಕ ಕಲಹವನ್ನು ದಾಖಲಿಸುತ್ತದೆ. ಪರಿಸ್ಥಿತಿಯು ಎಷ್ಟು ಗಂಭೀರವಾಗಿದ್ದಿತೆಂದರೆ, ಎಲ್ಲಾ ನಾಡುಗಳ ಜೈನರು ಒಂದುಗೂಡಿ, ವಿಜಯನಗರ ಅರಸನಾದ ಬುಕ್ಕಮಹಾರಾಜನಿಗೆ ಒಂದು ಮನವಿಯನ್ನು ಒಪ್ಪಿಸಿದರು. ತಮಗಾಗಿರುವ ಅನ್ಯಾಯಗಳನ್ನು ಪರಿಹರಿಸಿ, ಶ್ರೀವೈಷ್ಣವರ ಕಿರುಕುಳದಿಂದ ತಮ್ಮನ್ನುಕಾಪಾಡಬೇಕೆಂದು ಕೇಳಿಕೊಂಡರು. ರಾಜನೇ ಮಧ್ಯಪ್ರವೇಶಮಾಡಬೇಕಾಗಿಬಂದದ್ದು ಸಮಸ್ಯೆಯ ಗಂಭೀರ ಆಯಾಮವನ್ನು ತೋರಿಸುತ್ತದೆ.

ಸ್ವತಃ ವೈಷ್ಣವನಾಗಿದ್ದ ಬುಕ್ಕನು ರಾಜಾಜ್ಞೆಯನ್ನು ಹೊರಡಿಸಿದನು. ಅದರ ಮುಖ್ಯಾಂಶಗಳು ಹೀಗಿವೆ:

೧. ವೈಷ್ಣವದರ್ಶನಕ್ಕೂ ಜೈನದರ್ಶನಕ್ಕೂ ವ್ಯತ್ಯಾಸವಿಲ್ಲ.

೨. ಜೈನದರ್ಶನಕ್ಕೆ ೫ ಮಹಾ ಸಂಗೀತವಾದ್ಯಗಳನ್ನೂ ಕಲಶವನ್ನೂ ಹೊಂದಿರುವ ಹಕ್ಕಿದೆ.

೩. ಜೈನರಿಗಾಗಿರುವ ನಷ್ಟವನ್ನು ವೈಷ್ಣವರು ತುಂಬಿಕೊಡತಕ್ಕದ್ದು.

೪ ಈ ರಾಜಾಜ್ಞೆಯನ್ನು ಒಳಗೊಂಡ ಶಾಸನಗಳನ್ನು ಶ್ರೀವೈಷ್ಣವರು ರಾಜ್ಯದ ಎಲ್ಲಾ ಬಸದಿಗಳಲ್ಲಿ ಹಾಕಿಸಬೇಕು.

ವೈಷ್ಣವ ಚಕ್ರವರ್ತಿಯೊಬ್ಬನ ಈ ಆಜ್ಞೆಯು, ಧಾರ್ಮಿಕ ಬಹುಸಂಖ್ಯಾತರು ಅಲ್ಪಸಂಖ್ಯಾತರನ್ನು ಹಿಂಸೆಗೊಳಪಡಿಸುವುದನ್ನು ವಿಜಯನಗರ ರಾಜ್ಯವು ಎಂದೂ ಸಹಿಸುತ್ತಿರಲಿಲ್ಲ ಎಂಬುದನ್ನು ತೋರಿಸುತ್ತದೆ. ಸಾಮ್ರಾಜ್ಯದ ಶಾಂತಿ ಮತ್ತು ಸುಭದ್ರತೆಗಳಿಗೆ ಧಾರ್ಮಿಕ ಸಾಮರಸ್ಯದ ನೀತಿ ಅತ್ಯಗತ್ಯವಾಗಿತ್ತು. ''ಹಿಂದೂ ಧರ್ಮದ ಪುನರುಜ್ಜೀವನ'' ಕಾಲದಲ್ಲಿಯೂ ಧಾರ್ಮಿಕ ಅಸಹಿಷ್ಣುತೆ ಒಂದು ಖಾಸಗಿ ನೀತಿಯಾಗಿ ಇರಲೇ ಇಲ್ಲ ಎಂದು ಇದರರ್ಥವಲ್ಲ. ಎರಡೂ ಸಮುದಾಯಗಳು ಪರಸ್ಪರ ಕೆಸರು ಎರಚುವ ಕೆಲಸದಲ್ಲಿ ತೊಡಗಿದ್ದುವು. ತನ್ನದೇ ಧರ್ಮದ ಮೇಲ್ಮೆಯ ಹೆಸರಿನಲ್ಲಿ ಅನ್ಯಧರ್ಮವನ್ನು ಅವಹೇಳನ ಮಾಡುತ್ತಿದ್ದುವು ಎಂಬುದು ಖಾಸಗಿ ನೀತಿಗೂ ಸಾರ್ವಜನಿಕ ಆದರ್ಶಗಳಿಗೂ ನಡುವೆ ಸದಾಕಾಲವೂ ಇರುತ್ತಿದ್ದ ತೆರಪನ್ನು ತೋರಿಸುತ್ತಿದ್ದಿತು. ಈ ಬೆಳಕಿನಲ್ಲಿ ವೃತ್ತವಿಲಾಸನ ಧರ್ಮಪರೀಕ್ಷೆಯೂ, ಮೇಲೆ ಹೇಳಿದ ಶ್ರವಣಬೆಳಗೊಳ ಶಾಸನವೂ ಕರ್ನಾಟಕ ಪರಂಪರೆಯ ಎರಡು ಮಹತ್ವದ ದಾಖಲೆಗಳಾಗಿ ಪ್ರಾಧಾನ್ಯ ಪಡೆಯುತ್ತವೆ. ವಿಜಯನಗರದ ಉದಯಕ್ಕೆ ಕಾರಣವಾದ ಆಂದೋಲನವನ್ನು ಹಿಂದೂ ಅಲ್ಲದ ಎಲ್ಲದರ ವಿರುದ್ಧವಾಗಿ ''ಹಿಂದೂ ಆಗಿರುವ ಎಲ್ಲದರ ರಕ್ಷಣೆ''ಯಾಗಿತ್ತು ಎಂದು ಹೇಳಲಾಗಿದೆ.[೨೪] ಇದು ನಿಜವಾಗಿದ್ದ ಪಕ್ಷದಲ್ಲಿ, ಪ್ರತಿಯೊಂದು ಹಿಂದೂಯೇತರ ಧಾರ್ಮಿಕ ಪಂಗಡವೂ, ಜೈನರೂ ಕೂಡಿ, ಅನೇಕ ವಿಧಾನಗಳಿಂದ ತನ್ನ ತತ್ತ್ವ-ಸಿದ್ಧಾಂತಗಳ ರಕ್ಷಣೆಯಲ್ಲಿ ತೊಡಗಿದ್ದಿತು. ಅಂತಹ ಒಂದು ವಿಧಾನ ಆಕ್ರಮಣ. ಆಕ್ರಮಣವೇ ಆತ್ಮರಕ್ಷಣೆಯ ಅತ್ಯುತ್ತಮ ಮಾರ್ಗವಾಗಿರಬಹುದು. ಮೇಲಿನ ಎರಡೂ ದಾಖಲೆಗಳು ಇದನ್ನು ಸೂಚಿಸುತ್ತವೆ.

ದಾಸರ, ವಿಶೇಷವಾಗಿ ಕನಕದಾಸರ, ಕೆಲವು ಭಕ್ತಿಗೀತೆಗಳಲ್ಲಿ, ಜನರಿಗೆ ಮಗಳಿಗಿಂತ ಮಗನ ಬಗೆಗೆ ವಿಶೇಷವಾದ ಒಲವಿತ್ತು ಎಂಬ ಸೂಚನೆ ದೊರಕುತ್ತದೆ. ಒಬ್ಬ ಹೆಂಗಸು ಅಥವಾ ತಂದೆ ತಾಯಿ ಸಂತಾನವಿಲ್ಲದೆ ಇರುವುದು ಒಂದು ಸಾಮಾಜಿಕ ದುಃಖವಾಗಿತ್ತು.

ಈ ಕಾಲಾವಧಿಯಲ್ಲಿ ಒಟ್ಟಿನ ಮೇಲೆ ಸ್ತ್ರೀಯರ ಸ್ಥಿತಿಗತಿಯಲ್ಲಿ ಯಾವ ವ್ಯತ್ಯಾಸವೂ ಇರಲಿಲ್ಲ. ರಾಜರು ಮತ್ತು ಅವರ ಸಾಮಂತ ನಾಯಕರು ತಮಗಿಷ್ಟ ಬಂದಷ್ಟು ಜನ ಹೆಂಡರನ್ನು ಹೊಂದಿರುತ್ತಿದ್ದರು. ಇನ್ನೆಷ್ಟೋ ಜನರನ್ನು ದಾಸಿಯರನ್ನಾಗಿ ನೇಮಿಸಿಕೊಳ್ಳುತ್ತಿದ್ದರು. ಕೃಷ್ಣದೇವರಾಯನ ಅರಮನೆಯಲ್ಲಿದ್ದ ಸ್ತ್ರೀಯರ ಸಂಖ್ಯೆ ೧೨,೦೦೦. ಕೆಲವರು ಕತ್ತಿವರಸೆಯಲ್ಲಿ ಪರಿಣತರು, ಇನ್ನು ಕೆಲವರು ಮಲ್ಲಯುದ್ಧದಲ್ಲಿ ನಿಪುಣೆಯರು. ಕೆಲವರು ಕಹಳೆ ಊದುವವರು, ಇನ್ನಿತರ ಕೆಲವರು ಕೊಳಲೂದುವವರು. ಅನೇಕ ಮಹಿಳೆಯರು ಪಲ್ಲಕ್ಕಿ ಹೊರುತ್ತಿದ್ದರು. ಅಚ್ಯುತರಾಯನ ಸೇವೆಯಲ್ಲಿ ೪೦೦ ಸ್ತ್ರೀಯರಿದ್ದರು. ಅವರಲ್ಲಿ ನರ್ತಕಿಯರು, ಮಲ್ಲಯುದ್ಧ ಪಟುಗಳು, ಪಲ್ಲಕ್ಕಿ ಹೊರುವವರು, ಕಣಿ ಹೇಳುವವರು, ಜ್ಯೋತಿಷಿಗಳು, ಲೆಕ್ಕತಜ್ಞರು ಸೇರಿದ್ದರು.

ಆರ್ಥಿಕವಾಗಿಯೂ, ಬೇರೆ ದೃಷ್ಟಿಯಿಂದಲೂ ಈ ಕಾಲದ ಸ್ತ್ರೀಯರು ಸ್ವತಂತ್ರರಾಗಿರಲಿಲ್ಲವಾದ್ದರಿಂದ, ತಮ್ಮನ್ನು ಭಗವಂತನು ಹುಟ್ಟಿಸಿರುವುದೇ ಪುರುಷರ ಸೇವೆ ಮಾಡುವುದಕ್ಕಾಗಿ ಎಂದು ನಂಬುವಂತೆ

ಬೋಧಿಸಲಾಗುತ್ತಿತ್ತು. ಆಶ್ಚರ್ಯದ ಸಂಗತಿಯೆಂದರೆ ಇದು ಹೆಚ್ಚಾಗಿ ಅನ್ವಯವಾಗುತ್ತಿದ್ದುದು ಗಣ್ಯವರ್ಗದ ಸ್ತ್ರೀಯರಿಗೆ. ತಮ್ಮ ಬಹುತೇಕ ಸಮಯವನ್ನು ಅವರು ಪರದೆಯ ಹಿಂದೆ ಕಳೆಯುತ್ತಿದ್ದರು. ತಮ್ಮ ಪ್ರಭುವನ್ನು ಆಕರ್ಷಿಸಲು ವಿಧಾನಗಳನ್ನು ಹುಡುಕುವುದು, ಅವನ ಮೆಚ್ಚುಗೆ ಪಡೆಯಲು ಒಬ್ಬರಿಗೆದುರಾಗಿ ಇನ್ನೊಬ್ಬರು ಸಂಚು ಮಾಡುವುದು, ಸುಖ ಭೋಗಗಳಲ್ಲಿ ಮನರಂಜನೆಯಲ್ಲಿ ಕಾಲ ನೂಕುವುದು ಇಷ್ಟೇ ಅವರಿಗಿದ್ದ ಕೆಲಸ. ಓದುವುದು, ಬರೆಯುವುದು, ಗಾಯನ, ನರ್ತನ ಇವುಗಳಲ್ಲಿ ಅವರಿಗೆ ತರಬೇತಿ ನೀಡಲಾಗುತ್ತಿತ್ತು. ಕೃಷ್ಣದೇವರಾಯ, ಅಚ್ಯುತರಾಯ ಮತ್ತು ರಾಮರಾಯರು ತಮ್ಮ ಜನಾನಾದ ಸ್ತ್ರೀಯರಿಗೆ ಗಾಯನವನ್ನು ಕಲಿಸಲು ಪ್ರಖ್ಯಾತ ಸಂಗೀತ ವಿದ್ವಾಂಸರನ್ನು ನೇಮಿಸಿಕೊಳ್ಳುತ್ತಿದ್ದರು. ಅಚ್ಯುತರಾಯನ ಅರಮನೆಯಲ್ಲಿ ಚಿತ್ರಮಯವಾದ ಒಂದು ನರ್ತನಶಾಲೆಯಿದ್ದಿತು. ಅಲ್ಲಿ ರಾಣಿಯರು ಮತ್ತು ವೇಶ್ಯೆಯರಿಗೆ ಸಂಗೀತ-ನರ್ತನಗಳನ್ನು ಕಲಿಸಲಾಗುತ್ತಿದ್ದಿತು. ವಿಹಾರಕ್ಕೆ ಉದ್ಯಾನಗಳು, ಮೀಯಲು ಕೊಳಗಳು ಈ ಸ್ತ್ರೀಯರಿಗಾಗಿ ನಿರ್ಮಿತವಾಗುತ್ತಿದ್ದುವು. ವಿಜಯನಗರ ರಾಜರು, ಪಾಳೆಯಗಾರರು, ಗಣ್ಯವರ್ಗ, ಶ್ರೀಮಂತರು ಸಾಮಾನ್ಯವಾಗಿ ಬಹುಪತ್ನಿತ್ವವನ್ನು ಆಚರಿಸುತ್ತಿದ್ದರು. ಸಾಮಾನ್ಯವಾಗಿ ಪಿತೃಪ್ರಧಾನ ಕುಟುಂಬವಿದ್ದರೂ, ಕರ್ನಾಟಕದ ಕರಾವಳಿ ಪ್ರದೇಶದಲ್ಲಿ ಮಾತೃಪ್ರಧಾನ ಕುಟುಂಬ ಪದ್ಧತಿಯಿತ್ತು. ಅಳಿಯಸಂತಾನ ಎಂದು ಅದನ್ನು ಕರೆಯುತ್ತಿದ್ದರು. ಒಟ್ಟು ಕುಟುಂಬ ಪದ್ಧತಿಯು ರೂಢಿಯಲ್ಲಿದ್ದಿತು.

ಗಣ್ಯವರ್ಗದ ಸ್ತ್ರೀಯರು ಅವರ ಪತಿಯು ಸತ್ತಾಗ ಅಥವಾ ಯುದ್ಧದಲ್ಲಿ ಕೊಲೆಯಾದಾಗ ಸತಿಯನ್ನಾಚರಿಸುತ್ತಿದ್ದರು. ಇತರ ಸಮುದಾಯಗಳ ಮಹಿಳೆಯರೂ ಅವರ ಮಾದರಿಯನ್ನು ಅನುಸರಿಸುತ್ತಿದ್ದರು. ಅದು ತಮಗೆ ದೊಡ್ಡ ಗೌರವ, ಪುಣ್ಯಪ್ರದವಾದ ಕಾರ್ಯ ಎಂದು ಅವರು ಭಾವಿಸುತ್ತಿದ್ದರು. ಆದರೆ ಕೆಳಜಾತಿಗಳಲ್ಲಿ ಸತಿ ಆಚರಣೆ ಇರಲಿಲ್ಲ. ಅನೇಕ ಜಾತಿಗಳು ವಿಧವಾ ವಿವಾಹವನ್ನು ಪ್ರೋತ್ಸಾಹಿಸುತ್ತಿದ್ದುದೂ ಉಂಟು. ವಧುದಕ್ಷಿಣೆ ಅಥವಾ ತೆರ ರೂಢಿಯಲ್ಲಿತ್ತು. ವೀರಶೈವರು ತಮ್ಮ ಸ್ತ್ರೀಯರನ್ನು ಮೈಲಿಗೆಯೆಂದು ಭಾವಿಸದೆ ಬಹು ಉದಾರವಾಗಿ ನಡೆಸಿಕೊಳ್ಳುತ್ತಿದ್ದರು.

ಶ್ರೀಮಂತ ಗಣ್ಯವರ್ಗಕ್ಕೆ ಸೇರದ ಬಹುತೇಕ ಮಹಿಳೆಯರು ತಮ್ಮ ಗೃಹಕೃತ್ಯಕ್ಕಷ್ಟೇ ಸೀಮಿತರಾಗದೆ ಕುಟುಂಬದ ಇತರ ಸದಸ್ಯರೊಂದಿಗೆ ಸಂಸಾರಕ್ಕೆ ಸಂಬಂಧಿಸಿದ ಎಲ್ಲಾ ಚಟುವಟಿಕೆಗಳಲ್ಲೂ ಪಾಲು ಗೊಳ್ಳುತ್ತಿದ್ದರು. ಹೆಣ್ಣುಮಕ್ಕಳು ಕಟ್ಟುನಿಟ್ಟಾಗಿ ಪಾಲಕರ ಹತೋಟಿಯಲ್ಲಿ ಇರುತ್ತಿದ್ದರು. ತಂದೆತಾಯಿಗಳಿಗೆ ತಮ್ಮ ಹೆಣ್ಣುಮಕ್ಕಳು ಹೊರೆಯಿದ್ದ ಹಾಗೆ, ಆದಷ್ಟು ಬೇಗ ತಮಗೆ ಇಷ್ಟಬಂದವನಿಗೆ ಅವಳನ್ನು ಕೊಟ್ಟು ಮದುವೆಮಾಡಿ ಆ ಭಾರವನ್ನು ಕಳಚಿಕೊಳ್ಳಬೇಕು ಎಂಬ ಭಾವನೆಯಿತ್ತು. ಅದರಲ್ಲಿ ಪರಿಗಣಿಸುತ್ತಿದ್ದುದು ಜಾತಿ ಮತ್ತು ಆಸ್ತಿ ಎರಡನ್ನೇ. ವರನ ಪಾಲಕರಿಗೆ ವರದಕ್ಷಿಣೆ ನೀಡುವುದು ವಿಶೇಷವಾಗಿ ಮೇಲುಜಾತಿಯ ಕುಟುಂಬಗಳಲ್ಲಿದ್ದ ರೂಢಿಯಾಗಿತ್ತು. ಕೆಳಜಾತಿಗಳಲ್ಲಿ ಪರಿಸ್ಥಿತಿ ಅದಕ್ಕೆ ವಿರುದ್ಧವಾಗಿತ್ತು. ಇಂತಹ ಪರಿಸ್ಥಿತಿಯಲ್ಲಿ ಇಂಥವರು ತನ್ನ ಪತಿಯಾಗಬೇಕೆಂದು ಆಶಿಸುವ ಪ್ರವೃತ್ತಿಯೇ ಅವರಲ್ಲಿರುತ್ತಿರಲಿಲ್ಲ, ಆ ಸ್ವಾತಂತ್ರ್ಯವೂ ಅವರಿಗಿರಲಿಲ್ಲ. ಬಹುಪತ್ನಿತ್ವವು ರೂಢಿಯಲ್ಲಿದ್ದುದರಿಂದ ಪ್ರೇಮವು ಮದುವೆಗೆ ಆಧಾರವಾಗಲು ಸಾಧ್ಯವಿರಲಿಲ್ಲ.

ರಾಣಿಯರಲ್ಲಿ ಕೆಲವರು ಪ್ರತಿಭಾವಂತ ಮಹಿಳೆಯರಾಗಿದ್ದರು. ರಾಮರಾಯನ ಪತ್ನಿ ತಿರುಮಲಾಂಬಾ ಕವಯಿತ್ರಿ. 'ಮಾರೀಚ ಪರಿಣಯಂ' ಎಂಬ ಶೃಂಗಾರಕಾವ್ಯವನ್ನು ಆಕೆ ರಚಿಸಿದಳು. ಗಣ್ಯವರ್ಗಕ್ಕೆ ಸೇರಿದ ಒಬ್ಬ ಮಹಿಳೆ ರಾಮಭದ್ರಾಂಬೆಯು 'ರಘುನಾಥಾಭ್ಯುದಯಂ' ಎಂಬ ಕೃತಿಯನ್ನು ರಚಿಸಿದಳು. ಅದರಲ್ಲಿ ಅವಳು ಆಸ್ಥಾನಗಳಲ್ಲಿರುತ್ತಿದ್ದ ಕೆಲವು ಮಹಿಳೆಯರ ಪ್ರತಿಭೆಗಳನ್ನು ವರ್ಣಿಸಿದ್ದಾಳೆ. ಅವರು ಚಿತ್ರ, ಬಂಧ ಮತ್ತು ಗರ್ಭಗಳಲ್ಲಿ ಪರಿಣತೆಯರಾಗಿದ್ದರು. ಶತಲೇಖಿನಿ ಕಲೆಯಲ್ಲಿ ನುರಿತಿದ್ದರು. ಎಂಟು ಭಾಷೆಗಳಲ್ಲಿ ಕಾವ್ಯರಚನೆ

ಮಾಡಬಲ್ಲವರಾಗಿದ್ದರು. ಕರ್ನಾಟಕ ಹಾಗೂ ದೇಶೀ ಸಂಗೀತದ ರಹಸ್ಯಗಳನ್ನು ವಿವರಿಸುತ್ತಿದ್ದರು. ಅವರ ಈ ಪ್ರತಿಭೆ ಪ್ರಶಂಸನೀಯವಾಗಿದ್ದರೂ ಅವರಿಗೆ ಸಾಮಾಜಿಕ ಸ್ಥಾನಮಾನದಲ್ಲಿ ಸಮಾನತೆಯಿತ್ತು ಎಂದು ಅದರಿಂದ ಸಾಧಿತವಾಗುವುದಿಲ್ಲ.

ಗೃಹಿಣಿಯರಿಗೆ, ಅವರು ಯಾವುದೇ ಸಮುದಾಯಕ್ಕೆ ಸೇರಿದವರಾಗಿರಲಿ, ಪತಿಯೇ ದೈವ ಮತ್ತು ಉದ್ಧಾರಕ. ಅವನನ್ನು ಮೆಚ್ಚಿಸಲು ಎಲ್ಲವನ್ನು ಮಾಡಬೇಕು, ಅವನಿಲ್ಲದೆ ಬದುಕಿರುವ ಅಗತ್ಯವೇ ಇಲ್ಲ ಎಂದು ಕಲಿಸುತ್ತಿದ್ದರು. ಸಮಾಜದಲ್ಲಿ ವಿಧವೆಯ ಸ್ಥಾನ ಎಷ್ಟು ಯಾತನಾಮಯವಾಗಿದ್ದಿತೆಂದರೆ, ಅದಕ್ಕಿಂತ ಆತ್ಮಾರ್ಪಣೆಯೇ ಉತ್ತಮವಾದ ಬದಲಿಮಾರ್ಗ ಎಂದು ವಿವೇಕಿಯಾದ ಹೆಣ್ಣು ಭಾವಿಸುತ್ತಿದ್ದಳು.

ಕೆಳಜಾತಿಯ ಹೆಂಗಸರು ಕೇವಲ ಜೀವಿಕೆಗಾಗಿ ತಮ್ಮ ಗಂಡಸರೊಂದಿಗೆ ಸಮಸಮವಾಗಿ ಬಹು ಕಷ್ಟಪಟ್ಟು ದುಡಿಯಬೇಕಾಗಿತ್ತು. ಆದರೆ ಸಂಪ್ರದಾಯವು ಎಲ್ಲರನ್ನೂ, ಶ್ರಮಜೀವಿಗಳು ಮತ್ತು ಪರಾವಲಂಬಿಗಳು ಎಲ್ಲರನ್ನೂ ಸಮಾನವಾಗಿ ಮಾಡಿಬಿಡುತ್ತಿದ್ದಿತು. ವರ್ಗದ ನೈತಿಕತೆಯು ಸಮಾಜದ ನೈತಿಕತೆಯಾಗಿತ್ತು. ವೇಶ್ಯೆಯರಿಗೂ ಗೃಹಿಣಿಯರಿಗೂ ಸಮಾನವಾದ ಅಂಶ ಯಾವುದೂ ಇರಲಿಲ್ಲ. ಅವರು ಆರ್ಥಿಕವಾಗಿ ಸ್ವತಂತ್ರರೂ ಸಾಮಾಜಿಕವಾಗಿ ಗೌರವಾನ್ವಿತರೂ ರಾಜಕೀಯವಾಗಿ ಸವಲತ್ತುಗಳನ್ನು ಪಡೆದವರೂ ಆಗಿರುತ್ತಿದ್ದರು. ಅವರ ವೃತ್ತಿಯು ಬೇರೆ ಯಾವುದೇ ವೃತ್ತಿಯಂತೆ ಶಾಸನಬದ್ಧವಾದ ವೃತ್ತಿಯಾಗಿತ್ತು. ಅವರೂ ಸರಕಾರಕ್ಕೆ ತೆರಿಗೆಯನ್ನು ಕಟ್ಟುತ್ತಿದ್ದರು. ಸೈನ್ಯದೊಂದಿಗೆ ಯುದ್ಧಭೂಮಿಗೆ ಹೋಗುತ್ತಿದ್ದರು, ದೇವದೇವತೆಯರ ಅನುಗ್ರಹವನ್ನು ಪಡೆಯುತ್ತಿದ್ದರು. ಅವರಲ್ಲಿ ಕೆಲವರು ದೇವಾಲಯಗಳಿಗೆ ಅಥವಾ ಮಠಗಳಿಗೆ ಸೇರಿದವರು; ಯಾವುದೇ ಸಂಸ್ಥೆಗೆ ಸೇರದವರು ಇನ್ನು ಕೆಲವರು. ದೇವಾಲಯಗಳಿಗೆ ಸೇರಿದ್ದವರಿಗೆ ಉಡುಗೊರೆಯ ರೂಪದಲ್ಲಿ ತುಂಬಾ ಆಸ್ತಿಪಾಸ್ತಿ ದೊರಕುತ್ತಿತ್ತು. ಇತರರೂ ಹಣವಂತ ರಾಗಿರುತ್ತಿದ್ದರು. ಯಾವುದೇ ವರ್ಗಕ್ಕೆ ಸೇರಿರಲಿ, ಆಕೆಯು ತನ್ನ ವೃತ್ತಿಯನ್ನು ಕ್ರಮಯುತವಾಗಿ ನಡೆಸಿಕೊಂಡು ಹೋಗುತ್ತಿದ್ದಳು. ಯಾರೂ ಆಕ್ಷೇಪಿಸುವಂಥದೇನೂ ಅದರಲ್ಲಿರುತ್ತಿರಲಿಲ್ಲ. ಅವಳ ವೃತ್ತಿಯು ವ್ಯಾಪಾರ, ದೇಹದ ವ್ಯಾಪಾರ. ಎಲ್ಲಾ ವರ್ಗಗಳಿಗೆ ಜಾತಿಗಳಿಗೆ ಸೇರಿದ ಸದಸ್ಯರು ಆಕೆಯ ಗ್ರಾಹಕರು. ಆಕೆಯು ಯಾವುದೇ ಭೇದ ಕಲ್ಪಿಸುತ್ತಿರಲಿಲ್ಲ. ಮೇಲು-ಕೀಳು ಎಂದು ನೋಡಿ ಆರಿಸಿಕೊಳ್ಳುತ್ತಿರಲಿಲ್ಲ. ಶ್ರೀಮಂತ ಕುಟುಂಬಗಳಿಗೆ ಸೇರಿದ ಹೆಣ್ಣುಮಕ್ಕಳು ಸಾಮಾಜಿಕ ಶೋಷಣೆಯಿಂದ ತಪ್ಪಿಸಿಕೊಳ್ಳಲು ಆಕೆಯ ಆಶ್ರಯವನ್ನು ಕೋರುತ್ತಿದ್ದರು; ಇನ್ನು ಬಡಕುಟುಂಬಗಳಿಗೆ ಸೇರಿದ ಹೆಣ್ಣುಮಕ್ಕಳನ್ನು ಆಕೆಯ ಬಳಿಗೆ ತಂದುಬಿಟ್ಟು ಬದಲಿಯಾಗಿ ಹಣವನ್ನು ಪಡೆದುಕೊಳ್ಳುತ್ತಿದ್ದರು. ಹಾಗೆ ರಕ್ಷಿತರಾದ ಹೆಣ್ಣುಮಕ್ಕಳಿಗೆ ಕಲೆ ಮತ್ತು ಸಾಹಿತ್ಯದಲ್ಲಿ ಒಳ್ಳೆಯ ಶಿಕ್ಷಣ ಅಲ್ಲಿ ದೊರಕುತ್ತಿದ್ದಿತು. ಅದರಲ್ಲೂ ನರ್ತನ ಮತ್ತು ಗಾಯನಗಳಿಗೆ ಹೆಚ್ಚಿನ ಪ್ರಾಮುಖ್ಯವಿರುತ್ತಿದ್ದಿತು.

ಜನರು ಎಷ್ಟುಮಟ್ಟಿಗೆ ಮೂಢನಂಬಿಕೆಗಳಲ್ಲಿ ಮುಳುಗಿಹೋಗಿದ್ದರೆಂದರೆ, ದುರ್ಗೆಯ ಅನುಗ್ರಹದಿಂದ ಪವಾಡಸದೃಶ ಶಕ್ತಿಗಳು ತಮಗೆ ಸಿದ್ಧಿಸುತ್ತವೆಂದು ಅವರು ನಂಬುತ್ತಿದ್ದರು. ಅದಕ್ಕಾಗಿ ಬಗೆಬಗೆಯ ದೇಹದಂಡನೆಯನ್ನು ಅನುಭವಿಸುತ್ತಿದ್ದರು, ಆತ್ಮಾಹುತಿ ಮಾಡಿಕೊಳ್ಳುತ್ತಿದ್ದುದೂ ಉಂಟು. ಈ ಭೂಮಿಯ ಮೇಲೆ ಸಂತೋಷ ಕೊಡುವ ಸಾಧನಗಳು ದೊರಕದಾಗ, ಜನರು ಕಲ್ಪನಾ ಜಗತ್ತಿನಲ್ಲಿ ಅದನ್ನು ಹುಡುಕುತ್ತಿದ್ದರು. ಅದನ್ನು ಸಾಧಿಸಿಕೊಳ್ಳಲು ಅವರು ಕಂಡುಕೊಂಡಿದ್ದ ಒಂದು ಮಾರ್ಗ ದೇಹದಂಡನೆ. ದುರ್ಗೆಯ ಅನುಗ್ರಹವನ್ನು ಪಡೆಯಲು ಬೆನ್ನಿನ ಚರ್ಮಕ್ಕೆ ಸಿಡಿಕೊಕ್ಕೆಯನ್ನು ಸಿಕ್ಕಿಸಿಕೊಂಡು ಗಾಳಿಯಲ್ಲಿ ತೇಲಾಡುವುದು ರಾಜ್ಯದ ಎಲ್ಲಾ ಕಡೆ ಕಂಡುಬರುತ್ತಿದ್ದ ಒಂದು ಪದ್ಧತಿ. ಕೆಲವು ಪೋರ್ಚುಗೀಸ್ ಪ್ರವಾಸಿಗರು ಇದನ್ನು ನೋಡಿ ಬೆರಗಾಗಿ ವಿಸ್ತಾರವಾಗಿ ಅದನ್ನು ವರ್ಣಿಸಿದ್ದಾರೆ.

ಈ ಕಾಲಾವಧಿಯಲ್ಲಿ ಪ್ರಚಲಿತವಾಗಿದ್ದ ಅತ್ಯಂತ ಹೇಯವಾಗಿದ್ದ ಆಚರಣೆಗಳಲ್ಲೊಂದು ಸತಿ ಅಥವಾ ಸತಿಧರ್ಮ: ಮಡಿದ ಗಂಡನ ಚಿತೆಯ ಮೇಲೆ ಕುಳ್ಳಿರಿಸಿ ಜೀವಂತವಾಗಿ ಸುಟ್ಟುಬಿಡುವುದು. ಈ ಪದ್ಧತಿಯು ಕೆಳಜಾತಿಗಿಂತ ಮೇಲುಜಾತಿಯ ಕುಟುಂಬಗಳಲ್ಲಿ ಸಾಮಾನ್ಯವಾಗಿತ್ತು. ಅಚ್ಯುತರಾಯನು ಮಡಿದಾಗ ಅವನ ಐದುನೂರಕ್ಕೂ ಹೆಚ್ಚು ಪತ್ನಿಯರು ಹಾಗೆ ಆತ್ಮಾಹುತಿ ಮಾಡಿಕೊಂಡರು ಎಂಬುದಾಗಿ ನ್ಯೂನಿಜ್ ಬರೆದನು. ಸ್ವಯಂಪ್ರೇರಿತಳಾಗಿ ಸತಿಯನ್ನು ಆಚರಿಸಿದ ಪ್ರತಿಯೊಬ್ಬ ವಿಧವೆಯೂ ಮರಣಾನಂತರ ತಾನು ಪತಿಯನ್ನು ಮರಳಿ ಸೇರುವುದಾಗಿ ಪ್ರಾಮಾಣಿಕವಾಗಿ ನಂಬುತ್ತಿದ್ದಳು. ಅವನೊಂದಿಗೆ ತಾನು ಸ್ವರ್ಗಲೋಕದ ಆನಂದವನ್ನು ಸವಿಯಬಹುದು; ಹಾಗೆ ಮಾಡದೆಹೋದರೆ ವಿಧವೆಯ ಬದುಕು ಈ ಪ್ರಪಂಚದಲ್ಲಿ ನರಕಕ್ಕಿಂತ ಅಸಹನೀಯವಾಗಿರುತ್ತಿದ್ದಿತು.

ಸಹಗಮನ ಸಮಾರಂಭವೊಂದನ್ನು ವರ್ಣಿಸುತ್ತಾ ನ್ಯೂನಿಜ್ ಹೀಗೆ ಬರೆದನು: ''ಕೊನೆಗೆ ಅವಳು ಎಲ್ಲರಿಂದ ಬೀಳ್ಕೊಂಡು ತನ್ನ ತಲೆಯ ಮೇಲೆ ಎಣ್ಣೆಯು ತುಂಬಿದ ಗಡಿಗೆಯನ್ನುಹೊತ್ತು ಎಂಥ ಧೈರ್ಯದಿಂದ ಆಕೆಯು ಬೆಂಕಿಗೆ ನೆಗೆಯುತ್ತಿದ್ದಳೆಂದರೆ ಅದು ಅತ್ಯಾಶ್ಚರ್ಯಕರವಾಗಿದೆ. ಆಕೆಯು ಚಿತೆಗೆ ಹಾರಿದೊಡನೆಯೇ ಕೈಯಲ್ಲಿ ಕಟ್ಟಿಗೆಗಳನ್ನು ಹಿಡಿದುಕೊಂಡು ಕಾದಿರುತ್ತಿದ್ದ ಬಂಧುಗಳು ಸರಸರನೆ ಅವುಗಳನ್ನು ಎಸೆದು ಅವಳ ದೇಹವನ್ನು ಮುಚ್ಚಿಬಿಡುತ್ತಾರೆ. ಇಷ್ಟು ಮಾಡಿದ ಮೇಲೆ ಎಲ್ಲರೂ ಜೋರಾಗಿ ಅಳತೊಡಗುತ್ತಾರೆ.''

ಇತಿಹಾಸಕಾರನ ಈ ನಿರೂಪಣೆಯಿಂದ ಇಷ್ಟು ಊಹಿಸಬಹುದು. ಹಿಂದೂ ವಿಧವೆಯರು ಸಮಾಜದಲ್ಲಿ ಅನುಭವಿಸಬೇಕಾಗಿದ್ದ ದುಃಖ ಸಂಕಟಗಳು ಎಷ್ಟಿರುತ್ತಿದ್ದುವೆಂದರೆ, ಕೆಲವರಾದರೂ ಈ ಭಯಂಕರ ಆತ್ಮಾರ್ಪಣೆಯೇ ಅದಕ್ಕಿಂತ ಮೇಲು ಎಂದು ಭಾವಿಸಿರಬಹುದು. ಹಿಂದೂ ವಿಧವೆಯು ನಿರಂತರ ದುಃಖದಲ್ಲಿ ಬದುಕಬೇಕು; ಮನೆಯಲ್ಲಿ ಬದುಕಿಸುವವರೆಗೂ ಅವಳಿಗೆ ಹೀನಾಯ, ಅಪಮಾನ; ತಲೆ ಬೋಳಿಸಿಕೊಂಡಿರಬೇಕು. ದಿನಕ್ಕೆ ಒಂದು ಸಾರಿ ಮಾತ್ರ ಆಹಾರ. ಎಲ್ಲರಿಂದಲೂ ಅವಹೇಳನ, ತಿರಸ್ಕಾರ. ಅವಳು ಬಂದರೆ ಎಲ್ಲರೂ ಮೂಗು ಮುರಿಯುವರು, ಅವಳ ಮಾತನ್ನು ಅಪಹಾಸ್ಯ ಮಾಡುವರು, ಅವಳ ಸಲಹೆಯನ್ನು ನಿರಾಕರಿಸುವರು. ಬಹುಶಃ ಸ್ವರ್ಗಸುಖವನ್ನು ಪತಿಯೊಂದಿಗೆ ಅನುಭವಿಸುತ್ತೇನೆ ಎಂಬ ಆಸೆ, ಹುತಾತ್ಮತೆಯ ಬೆನ್ನಿಗೇ ಬರುವ ಗೌರವ ಇವು ಕೂಡಿ ಕೆಲವಾರು ಈ ದಾರಿ ಹಿಡಿಯುವಂತೆ ಪ್ರೇರಿಸುತ್ತಿದ್ದಿರಬಹುದು. ಆದರೂ ಆ ಕಾಲದಲ್ಲಿ ಅನೇಕ ಸಾಮಾಜಿಕ ದುಷ್ಟಕಾರ್ಯಗಳು ಸಾಮಾನ್ಯವಾಗಿ ಮೇಲುವರ್ಗದ ಸ್ತ್ರೀಗೆ ಸಂಬಂಧಿಸಿದಂತೆ ನಡೆಯುತ್ತಿದ್ದರೂ ಕೂಡ, ಕೊನೆಯಪಕ್ಷ ಕರ್ನಾಟಕದ ಕೆಲವು ಭಾಗಗಳಲ್ಲಿ ಮಾತೃಪರಂಪರೆಯ ಹಕ್ಕುಗಳನ್ನು ಎತ್ತಿ ಹಿಡಿಯಲಾಗಿತ್ತು. ಸ್ತ್ರೀಯರೇ ರಾಣಿಯರಾಗಿ ಆಡಳಿತ ನಿರ್ವಹಿಸುತ್ತಿದ್ದರು. ಕರಾವಳಿ ಕರ್ನಾಟಕದ ಅಳಿಯ ಸಂತಾನದ ಪದ್ಧತಿ ಇದಕ್ಕೆ ಸ್ಪಷ್ಟ ನಿದರ್ಶನವಾಗಿದೆ.

ವಿಜಯನಗರ ಕಾಲದ ಕರ್ನಾಟಕದ ಕರಾವಳಿ ಭಾಗದಲ್ಲಿ ವಿಜಯನಗರ ಮತ್ತು ಕೆಳದಿ ಅರಸರಿಗೆ ಸಾಮಂತರಾದ ಅನೇಕ ನಾಯಕರಿದ್ದರು, ಅನೇಕ ಸಾಮಾಜಿಕ ವರ್ಗಗಳಿದ್ದುವು. ಅಗಸರು, ಅಂಡೆಕೊರಗರು, ಕರಿನ್ನಾರರು (ಪರಯರ ಒಂದು ವರ್ಗ), ಕುಂಬಾರರು, ಕ್ಷೌರಿಕರು, ದೇವಡಿಗರು (ದೇವಾಲಯಗಳಲ್ಲಿ ಹೊರಸುತ್ತಿನ ಕೆಲಸಗಳನ್ನು ಮಾಡಿಕೊಡುತ್ತಿದ್ದ ಸೇವಕವರ್ಗ), ಹಳೇ ಪೈಕರು (ಬಿಲ್ಲವರಂತೆಯೇ), ಹರಿಚಟ್ಟಿಗಳು (ಕೋಮಟಿಗಳಿಗೆ ಸಮರಾದ ವರ್ತಕರು), ಹೊಲೆಯರು, ಬಂಟರು (ಜಮೀನುದಾರರು), ಪಾಂಚಾಲರು (ಕುಶಲಕರ್ಮಿಗಳು), ಸಾಲಿಯಾನರು (ನೇಯ್ಗೆಯವರು) ಮತ್ತು ಇತರರು ಅಳಿಯಸಂತಾನ ಪದ್ಧತಿಯನ್ನು ಅದರ ಎಲ್ಲಾ ಕಟ್ಟುಕಟ್ಟಳೆಗಳೊಂದಿಗೆ ಆಚರಿಸುತ್ತಿದ್ದರು.[೨೫] ಅದು ತುಳುನಾಡಿನ (ದಕ್ಷಿಣ ಕನ್ನಡ) ಸಮಾಜ ವ್ಯವಸ್ಥೆಯ ವಿಶಿಷ್ಟ ಲಕ್ಷಣವಾಗಿತ್ತು. ಅದು ಸ್ತ್ರೀ ಪರಂಪರೆಯಿಂದ ಕುಟುಂಬದ ಆಸ್ತಿಗೆ ಆನುವಂಶಿಕ ವಾರಸುದಾರಿಕೆಯನ್ನು ಗುರುತಿಸುವ ಪದ್ಧತಿ. ಇದನ್ನೇ ಹೋಲುವ ಮರುಮಕ್ಕತಾಯಂ ಎಂಬ ಪದ್ಧತಿಯು ಮಲಬಾರಿನಲ್ಲಿತ್ತು. ಅದರ ಮೂರು ಮುಖ್ಯಲಕ್ಷಣಗಳು ಹೀಗಿದ್ದುವು:

ಅ. ಕುಟುಂಬದಲ್ಲಿ ಬಂಧುತ್ವವನ್ನು ಮಹಿಳಾ ಪೂರ್ವಜರಿಂದ ಗುರುತಿಸುವುದು.

ಆ. ಕುಟುಂಬದ ಚೌಕಟ್ಟಿನೊಳಗೆ ವಿವಾಹವನ್ನು ಅಂಗೀಕರಿಸದಿರುವುದು.

ಇ. ಆಸ್ತಿಯನ್ನು ಕಡ್ಡಾಯವಾಗಿ ಭಾಗ ಮಾಡುವುದನ್ನಾಗಲಿ, ಪರಭಾರೆ ಮಾಡುವುದನ್ನಾಗಲಿ ನಿಷೇಧಿಸುವುದು.[೨೬]

ದಕ್ಷಿಣ ಕನ್ನಡದ ಅರಸರಾಗಿ ಕೂಡ ವಿಜಯನಗರದ ಕಾಲದಲ್ಲಿ ಅರಸೊತ್ತಿಗೆಯ ಸೋದರಳಿಯಂದಿರ ಮೂಲಕ ಇಳಿದುಬರುವ ತತ್ವವನ್ನು ಮಾನ್ಯ ಮಾಡಿದ್ದರು. ಕಾರ್ಕಳ, ಮೂಡಬಿದರೆಗಳ ರಾಜರು, ಚೌಟ, ಬಂಗ, ಅಜಿಲ ಮತ್ತು ಇತರರು ಅಳಿಯಸಂತಾನ ಪದ್ಧತಿಯನ್ನು ಅನುಸರಿಸಿದರು.[೨೭]

ಪಿ. ಗುರುರಾಜ ಭಟ್ ಅವರ ಪ್ರಕಾರ, ''ಸಾಂಪ್ರದಾಯಿಕ ಇತಿಹಾಸವನ್ನು ಒತ್ತಟ್ಟಿಗಿಟ್ಟರೂ, ಇಡೀ ತುಳುನಾಡನ್ನು ಸುಮಾರು ಮುನ್ನೂರು-ನಾನೂರು ವರ್ಷಗಳ ಕಾಲ (೧೨ ರಿಂದ ೧೬ನೇ ಶತಮಾನ) ಜೈನ ಅರಸರು ಆಳುತ್ತಿದ್ದರು. ಬ್ರಾಹ್ಮಣಧರ್ಮದ ಕಡೆಗೆ ಅವರ ಒಲವಿರಲಿಲ್ಲ, ಅಳಿಯಸಂತಾನ ಪದ್ಧತಿಯನ್ನು ಅನುಸರಿಸುತ್ತಿದ್ದರು.''[೨೮] ವಿಜಯನಗರ ಕಾಲದ ತುಳುನಾಡಿನಲ್ಲಿ ಸಮಾಜದ ಒಂದು ವರ್ಗವು ಮಹಿಳೆಯರಿಗೆ ನೀಡಿದ ಗೌರವದ ಸ್ಥಾನವನ್ನು ಸೂಚಿಸುತ್ತದೆ. ಕೆಳದಿ ರಾಜವಂಶವು ಆಳುತ್ತಿದ್ದ ಪ್ರದೇಶದಲ್ಲೂ ಅನೇಕ ವೀರ ಮಹಿಳೆಯ ಕೊಡುಗೆ ಸಂದಿದೆ. ಭೈರವದೇವಿ, ಅಬ್ಬಕ್ಕದೇವಿ, ಚೆನ್ನಮ್ಮಾಜಿ ಮತ್ತು ವೀರಮ್ಮಾಜಿ ಇವರು ಇಂತಹ ಅಸಾಮಾನ್ಯ ಮಹಿಳೆಯರು. ಇವರಲ್ಲಿ ಮೊದಲಿನಿಬ್ಬರು ಜೈನರು, ಕೊನೆಯ ಇಬ್ಬರು ಲಿಂಗಾಯತರು.

ಹಿಂದುಗಳ ಜೊತೆಗೆ ವಿಜಯನಗರದಲ್ಲಿ ಜೈನ, ಮುಸ್ಲಿಂ ಮತ್ತು ಕ್ರಿಶ್ಚಿಯನ್ ಸಮುದಾಯಗಳಿಗೆ ಸೇರಿದವರಿದ್ದರು. ಜೈನರು ಮುಖ್ಯವಾಗಿ ಕರಾವಳಿ ಕರ್ನಾಟಕದ ಭಾಗದಲ್ಲಿ ಕೇಂದ್ರೀಕೃತವಾಗಿದ್ದರು. ಅವರು ಆ ಪ್ರದೇಶದ ಆಳುವ ವರ್ಗವಾಗಿದ್ದರು. ಉದಾಹರಣೆಗೆ ಮೂಡಬಿದರೆ ಮತ್ತು ಕಾರ್ಕಳಗಳಿಂದ ಆಳುತ್ತಿದ್ದ ಅಜಿಲರು ಮತ್ತು ಚೌಟರು ಜೈನರು. ಅಲ್ಲದೆ ದೊಡ್ಡ ದೊಡ್ಡ ಜಮೀನುದಾರರೂ ಈ ಸಮುದಾಯಕ್ಕೆ ಸೇರಿದ್ದರು. ಅವರಲ್ಲಿ ಅಳಿಯಸಂತಾನ ಪದ್ಧತಿಯಿತ್ತು. ಸಾಮಾಜಿಕ ಜೀವನದಲ್ಲಿ, ಸಮುದಾಯದೊಳಗೆಯೇ ಆಗಲಿ, ಮಹಿಳೆಗೆ ಸಾಕಷ್ಟು ಸ್ವಾತಂತ್ರ್ಯವನ್ನು ನೀಡಲಾಗಿತ್ತು. ಜೈನರಲ್ಲಿ ದಿಗಂಬರ ಮತ್ತು ಶ್ವೇತಾಂಬರ ಎಂಬ ಎರಡು ಪಂಗಡಗಳಿದ್ದುವು. ಶ್ರವಣಬೆಳಗೊಳವು ಜೈನರ ಮುಖ್ಯ ಕೇಂದ್ರಗಳಲ್ಲೊಂದಾಗಿತ್ತು. ಅವರು ಪೂರ್ಣ ಸಸ್ಯಾಹಾರಿಗಳು.

ನಮ್ಮ ಈ ಅಧ್ಯಯನದ ಕಾಲಾವಧಿಯಲ್ಲಿ ಮುಸ್ಲಿಮರು ಬಿಜಾಪುರ, ಬೀದರ್ ಮತ್ತು ಗುಲ್ಬರ್ಗಾಗಳಲ್ಲಿ ಬಹುಪ್ರಮಾಣದಲ್ಲಿ ಕೇಂದ್ರೀಕರಿಸಿದ್ದರೂ ವಿಜಯನಗರ ಸಾಮ್ರಾಜ್ಯದ ಕೆಲವು ಭಾಗಗಳಲ್ಲಿ ಅವರು ಸಾಕಷ್ಟು ಚುರುಕಾಗಿದ್ದರು. ಹಂಪೆಯಲ್ಲಿ ನಡೆದಿರುವ ಇತ್ತೀಚಿನ ಪುರಾತತ್ವಶೋಧನೆಗಳು ವಿಜಯನಗರ ಪಟ್ಟಣದಲ್ಲಿ ಮುಸ್ಲಿಂ ನೆಲೆಗಳು ಇದ್ದುದನ್ನು ತೋರಿಸಿವೆ. ದೇಶದ ಒಳಗೂ ಮತ್ತು ಹೊರದೇಶಗಳೊಂದಿಗೂ ಅವರು ವ್ಯಾಪಾರಗಳಲ್ಲಿ ತೊಡಗಿರುತ್ತಿದ್ದರು ಎಂಬುದನ್ನು ಅನೇಕ ಕನ್ನಡ ಕೈಫಿಯತ್ತುಗಳು ಸ್ಪಷ್ಟಪಡಿಸಿವೆ. ವಿಜಯನಗರದ ಸೈನ್ಯದಲ್ಲಿ ಅವರನ್ನು ನೇಮಿಸಿಕೊಳ್ಳಲಾಗುತ್ತಿತ್ತು. ತಮ್ಮ ರೂಢಿ, ಸಂಪ್ರದಾಯಗಳನ್ನು ಅವರು ಆಚರಿಸಿಕೊಂಡು ಹೋಗಲು ಸರಕಾರವು ಅವರಿಗೆ ತಡೆಯೊಡ್ಡುತ್ತಿರಲಿಲ್ಲ.

ಕೊಂಕಣಿ ಕ್ರಿಶ್ಚಿಯನರು ಕರ್ನಾಟಕದ ಕರಾವಳಿ ಪ್ರದೇಶದಲ್ಲಿ ಬಹುಮುಖ್ಯ ಸಾಮಾಜಿಕ ವರ್ಗವಾಗಿ ಕಾಣಿಸಿಕೊಂಡದ್ದು ವಿಜಯನಗರ ಕಾಲದಲ್ಲಿ. ಅನೇಕ ಕಾರಣಗಳಿಂದಾಗಿ ಅವರು ಪೋರ್ಚುಗೀಸ್ ಆಕ್ರಮಿತ ಗೋವಾದಿಂದ ಈ ಪ್ರದೇಶಕ್ಕೆ ವಲಸೆ ಬಂದರು. ಆ ಕಾರಣಗಳಲ್ಲಿ ಬಹುಮುಖ್ಯವಾದದ್ದು ಮಠೀಯ ವಿಚಾರಣೆಗಳ ಮೂಲಕ ಪೋರ್ಚುಗೀಸ್ ಕ್ರಿಶ್ಚಿಯನರು ಇವರ ಬಗೆಗೆ ತೋರಿಸಿದ ಧಾರ್ಮಿಕ ಅಸಹಿಷ್ಣುತೆ

ಮತ್ತು ಕಿರುಕುಳ. ಕೆಳದಿಯ ನಾಯಕರು ಕೊಂಕಣಿ ಕ್ರಿಶ್ಚಿಯನರನ್ನು ಸ್ವಾಗತಿಸಿದರು. ಅವರು ಹಣಕಾಸು, ವ್ಯಾಪಾರ, ಬ್ಯಾಂಕಿಂಗ್ ಮತ್ತು ಕೃಷಿಗಳಲ್ಲಿ ನುರಿತಿದ್ದರು. ಕೆಳದಿಯ ನಾಯಕರು ಅವರಿಗೆ ಕೃಷಿ ಮಾಡಿ ಜೀವಿಸಲು ನೆಲವನ್ನು ಕೊಟ್ಟರು. ಕರಾವಳಿಯುದ್ದಕ್ಕೆ ಅವರು ತಮ್ಮ ಪ್ಯಾರಿಷ್‌ಗಳನ್ನು, ಚರ್ಚುಗಳನ್ನು ಸ್ಥಾಪಿಸಿಕೊಂಡರು. ಅವರಿಗೆ ಭಾರತೀಯರೇ ಆದ ಪ್ರೀಸ್ಟ್‌ಗಳು ಮತ್ತು ವಿಕಾರ್ (Vicar) ಗಳು ಇದ್ದರು. ಈ ಕಾಲಾವಧಿಯಲ್ಲಿ ಫಾದರ್ ಥಾಮಸ್ ಸ್ಟೀಫನ್ ಎನ್ನುವವನು ಕೊಂಕಣಿ ಭಾಷೆಯಲ್ಲಿ ಕ್ರಿಸ್ತಪುರಾಣವನ್ನು ರಚಿಸಿದನು.[೨೯]

ಹೀಗೆ ಪ್ರಸ್ತುತ ಅಧ್ಯಯನದ ಅವಧಿಯ ಕರ್ನಾಟಕದಲ್ಲಿ ಧರ್ಮ, ಭಾಷೆ, ವಸತಿ, ಭಿನ್ನಗೋತ್ರವಿವಾಹ, ಸ್ವಗೋತ್ರ ವಿವಾಹ ಪದ್ಧತಿಗಳು, ಆಹಾರದ ಅಭ್ಯಾಸಗಳು, ಮೃತದೇಹದ ವಿನಿಯೋಗ ಪದ್ಧತಿ, ವಿವಿಧ ಕಸುಬುಗಳು ಇವೆಲ್ಲ ಸಾಮಾಜಿಕ ವರ್ಗಗಳ ವಿಶಿಷ್ಟತೆ ತೋರಿಸುವ ಅಂಶಗಳಾಗಿದ್ದುವು. ಈ ಅಂಶಗಳು ಸಮಾಜಕ್ಕೆ ಒಂದು ಕಟ್ಟುನಿಟ್ಟಿನ ರೂಪವನ್ನು ಕೊಟ್ಟಿದ್ದರೂ ಸಾಮಾಜಿಕ ಚಲನೆಗೆ ಅವಕಾಶಗಳು ಪೂರ್ತಿಯಾಗಿ ಇಲ್ಲವಾಗಿರಲಿಲ್ಲ. ಕೆಲವು ವ್ಯಕ್ತಿಗಳು ಮತ್ತು ಜಾತಿಗಳು, ಐಶ್ವರ್ಯವನ್ನು ಗಳಿಸಿದ್ದರಿಂದಲೋ ಅಧಿಕಾರವನ್ನು ಗ್ರಹಿಸಿದ್ದರಿಂದಲೋ ಸಾಮಾಜಿಕ ಶ್ರೇಣಿಯಲ್ಲಿ ಮೇಲಕ್ಕೆ ಚಲಿಸಿ ಮನ್ನಣೆಯನ್ನೂ ಶಾಸನಬದ್ಧತೆಯನ್ನೂ ಸಂಪಾದಿಸಿದ್ದರು. ಉದಾಹರಣೆಗೆ, ಆ ಕಾಲದ ಯೋಧವರ್ಗಕ್ಕೆ ಮತ್ತು ಆಳುವವರ್ಗಕ್ಕೆ ಸಮಾಜದ ವಿವಿಧ ಕೆಳಜಾತಿಗಳಿಂದ ನೇಮಿಸಿಕೊಳ್ಳಲಾಗುತ್ತಿತ್ತು. ಹಾಗೆಯೇ ಸಮಾಜದಲ್ಲಿ ಕೆಳಮುಖವಾದ ಚಲನೆಯೂ ಅಪರೂಪವಾಗಿರಲಿಲ್ಲ. ಒಟ್ಟಿನಲ್ಲಿ ವಿಜಯನಗರ ಕಾಲದ ಸಮಾಜವು ಬಹುಳತೆ ಮತ್ತು ಜಾತ್ಯತೀತತೆಯ ಲಕ್ಷಣಗಳನ್ನು ಹೊಂದಿದ್ದು, ಅದರಲ್ಲಿ ಅಸಮತೆ, ಅನ್ಯಾಯ ಮತ್ತು ಅಧೀನರ ಶೋಷಣೆ ಸೇರಿದ್ದುವು.

ಟಿಪ್ಪಣಿಗಳು

೧ ಮಹಾಲಿಂಗಂ, ಟಿ.ವಿ.: ಅಡ್ಮಿನಿಸ್ಟ್ರೇಷನ್ ಎಂಡ್ ಸೋಷಿಯಲ್ ಲೈಫ್ ಅಂಡರ್ ವಿಜಯನಗರ, ಭಾಗ-೨, ಸೋಷಿಯಲ್ ಲೈಫ್, ಪು ೧೪-೧೫

೨ ರಾಬರ್ಟ್ ಸಿವೆಲ್: ಎ ಫರ್‌ಗಾಟನ್ ಎಂಪೈರ್, ನವದೆಹಲಿ, ೧೯೭೦, ಪು. ೩೬೦

೩ ಅದೇ, ಪು. ೩೭೦-೩೭೧

೪ ಕುಟಿನ್ಹೋನ ಪತ್ರ, ಎಚ್. ಹೆರಾಸ್ ಉದ್ಧರಿಸಿದ್ದು: ದಿ ಆರವೀಡು ಡೈನಾಸ್ಟಿ ಆಫ್ ವಿಜಯನಗರ, ಮದರಾಸು, ೧೯೨೭, ಸಂ.೧, ಪು. ೩೦೫-೩೦೬

೫ ವೆಂಕಟರಮಣಯ್ಯ, ಎನ್: ಸ್ಟಡೀಸ್ ಇನ್ ದಿ ಹಿಸ್ಟರಿ ಆಫ್ ದಿ ಥರ್ಡ್ ಡೈನಾಸ್ಟಿ ಆಫ್ ವಿಜಯನಗರ, ಮದರಾಸು ೧೯೩೫, ಪು. ೩೫೪-೩೫೫

೬ ಮಹಾಲಿಂಗ, ಟಿ.ವಿ.: ಪೂರ್ವೋಕ್ತ, ಪು. ೧೬-೧೭

೭ ಡೇಮ್ಸ್ ಎಂ.ಎಲ್: ದಿ ಬುಕ್ ಆಫ್ ಬಾರ್ಬೋಸಾ, ಸಂಪುಟ ೧, ಬಿ. ಎ. ಸಾಲತೊರೆಯವರ ಉದ್ಧೃತ. ಸೋಷಿಯಲ್ ಎಂಡ್ ಪೊಲಿಟಿಕಲ್ ಲೈಫ್ ಇನ್ ದಿ ವಿಜಯನಗರ ಎಂಪೈರ್, ಮದರಾಸು, ೧೯೩೪, ಸಂಪುಟ ೨, ಪು. ೩೪

೮ ಅದೇ, ಸಂ. ೨, ಪು ೨೫-೨೬ ಬಿ.ಎ. ಸಾಲತೊರೆ ಅವರಿಂದ ಉದ್ಧೃತ, ಪೂರ್ವೋಕ್ತ, ಪು. ೮೫

೯ ವೆಂಕಟರಮಣಯ್ಯ, ಎನ್ : ಪೂರ್ವೋಕ್ತ, ಪು. ೩೬೦

೧೦ ಮಜುಂದಾರ್ ಆರ್.ಸಿ.: (ಸಂ), ದಿ ದೆಹಲಿ ಸುಲ್ತಾನೇಟ್, ಭಾರತೀಯ ವಿದ್ಯಾಭವನ ಪ್ರಕಟಣೆ, ಪು. ೩೨೨

೧೧ ಕನಕದಾಸ,ರಾಮಧಾನ್ಯಚರಿತೆ (ಸಂ): ಪಂಚಲಿಂಗೇಗೌಡ ಮೈಸೂರು, ೧೯೬೩

೧೨ ಡಿ. ಜವರೇಗೌಡರ ಆವೃತ್ತಿ ಪದ್ಯ ಸಂಖ್ಯೆ ೨೮-೫೬, ೫೭-೧೨೨

೧೩ ನರಸಿಂಹಾಚಾರ್, ಆರ್: ಕರ್ಣಾಟಕ ಕವಿಚರಿತೆ, ಸಂ.೨, (ಪರಿಷ್ಕೃತ ೨ನೇ ಆವೃತ್ತಿ) ಬೆಂಗಳೂರು, ೧೯೭೩, ಪು. ೧೪೯-೧೯೦

೧೪ ರಾಗಿ ಎಂಬ ಪದವು ಮೊದಲು ಕಾಣಸಿಕೊಳ್ಳುವುದು ಮಂಗರಾಜನು ಬರೆದ ಖಗೇಂದ್ರ ಮಣಿದರ್ಪಣ (ಕ್ರಿ.ಶ. ೧೩೫೦) ಎಂಬ ಕೃತಿಯಲ್ಲಿ. ಆದ್ದರಿಂದ ಕನಕದಾಸರ ಕಾಲಕ್ಕಿಂತ ಬಹಳ ಹಿಂದಿನಿಂದಲೇ ಆ ಪದವು ಬಳಕೆಯಲ್ಲಿ ಇದ್ದಿತು. ೧೪೯೭ರ ಮುಳಬಾಗಿಲಿನ ಒಂದು ಶಾಸನವೂ (ನಂ. ೧೭೨) ರಾಗಿಯನ್ನು ಉಲ್ಲೇಖಿಸುತ್ತದೆ.

೧೫ ಶಿವಮೂರ್ತಿಶಾಸ್ತ್ರಿ ಬಿ. ಮತ್ತು ಡಾ. ಕೆ.ಎಂ. ಕೃಷ್ಣರಾವ್ (ಸಂ): ಕನಕದಾಸರ ಕೀರ್ತನೆಗಳು, ಮೈಸೂರು ಸರಕಾರ, ಬೆಂಗಳೂರು, ೧೯೬೫, ಸಂಖ್ಯೆ ೧೦೯, ಪು. ೯೭

೧೬ ಅದೇ, ಸಂಖ್ಯೆ ೧೬೭, ಪು. ೧೪೯-೧೫೦

೧೭ ಅದೇ, ಸಂಖ್ಯೆ ೭೭, ಪು. ೬೭

೧೮ ಅದೇ, ಸಂಖ್ಯೆ ೭೬, ಪು. ೬೬

೧೯ ರಾಘವೇಂದ್ರರಾವ್ ಕೆ. : (ಸಂ): ಧರ್ಮಪರೀಕ್ಷೆ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೮೨

೨೦ ಅದೇ,

೨೧ ಕರ್ನಾಟಕ ಸಾಹಿತ್ಯ ಚರಿತ್ರೆ, ನಂ.೫, ಮೈಸೂರು ವಿಶ್ವವಿದ್ಯಾನಿಲಯ, ೧೯೮೧, ಪು. ೪೬೧-೪೮೮

೨೨ ರಾಘವೇಂದ್ರರಾವ್ ಕೆ.: (ಸಂ): ಪೂರ್ವೋಕ್ತ, ಪು. ೧೫೭

೨೩ ಎ.ಕ. ೨, ಎಸ್. ಬಿ. ೩೪೪

೨೪ ಕೃಷ್ಣಸ್ವಾಮಿಅಯ್ಯಂಗಾರ್: ಸಮ್ ಕಾಂಟ್ರಿಬ್ಯೂ ಷನ್ಸ್ ಆಫ್ ಸೌತ್ ಇಂಡಿಯಾ ಟು ಇಂಡಿಯನ್ ಕಲ್ಚರ್, ಪು. ೨೯೮-೯೯

೨೫ ಗುರುರಾಜಭಟ್, ಪಿ. : ಸ್ಟಡೀಸ್ ಇನ್ ತುಳುವ ಹಿಸ್ಟರಿ ಎಂಡ್ ಕಲ್ಚರ್, ಮಣಿಪಾಲ ೧೯೭೫, ಪು. ೨೬೬-೬೭

೨೬ ಅದೇ, ಪು. ೨೫೬

೨೭ ಅದೇ, ಪು. ೨೬೦

೨೮ ಅದೇ, ಪು. ೨೬೫

೨೯ ಪಯಸ್ ಎಫ್ ಪಿಂಟೋ: ಹಿಸ್ಟರಿ ಆಫ್ ಕ್ರಿಶ್ಚಿಯಾನಿಟಿ ಅಂಡರ್ ದಿ ವಿಜಯನಗರ ಎಂಡ್ ನಾಯಕ್ಸ್ ಆಫ್ ಕೆಳದಿ, (೧೫೬೦-೧೭೬೩) ಅಪ್ರಕಟಿತ ಪಿಎಚ್.ಡಿ. ನಿಬಂಧ, ಮೈಸೂರು ವಿಶ್ವವಿದ್ಯಾನಿಲಯಕ್ಕೆ ಒಪ್ಪಿಸಲಿರುವ ನಿಬಂಧ.

ಅಧ್ಯಾಯ : ಒಂಬತ್ತು

ಮೈಸೂರು ಒಡೆಯರ ಇತಿಹಾಸ
(ಕ್ರಿ.ಶ. ೧೩೯೯ - ೧೭೬೧)

ದಕ್ಷಿಣ ಭಾರತದ ಇತಿಹಾಸದಲ್ಲಿ ಮೈಸೂರು ಒಡೆಯರ ವಂಶದ ಅರಸರು ಒಂದು ಮಹತ್ವದ ಪಾತ್ರವನ್ನು ನಿರ್ವಹಿಸಿದರು. ವಿಜಯನಗರದ ಅವಶೇಷಗಳಿಂದ ಈ ರಾಜಮನೆತನವು ಮೇಲೆ ಬಂದಿತು. ತಾಳಿಕೋಟೆ ಕದನದ ನಂತರ ವಿಜಯನಗರ ಸಾಮ್ರಾಜ್ಯವು ಬಹು ಬಿಕ್ಕಟ್ಟಿನ ಅವಧಿಯನ್ನು ಕಾಣಬೇಕಾಯಿತು. ಅನಾಯಕತ್ವ ಮತ್ತು ಅತೃಪ್ತಿಗಳಿಂದಾಗಿ ಅನೇಕ ಸಾಮಂತರಾಜರು ಸ್ವತಂತ್ರ ರಾಜ್ಯಗಳನ್ನು ರೂಪಿಸಿಕೊಂಡರು. ಸಾಮ್ರಾಜ್ಯದ ಕಷ್ಟಕಾಲದಲ್ಲಿ ಹಾಗೆ ಅಸ್ತಿತ್ವಕ್ಕೆ ಬಂದ ಸಂಸ್ಥಾನಗಳಲ್ಲಿ ಒಂದು ಮೈಸೂರು. ಆದ್ದರಿಂದ ಮೈಸೂರು ರಾಜ್ಯವು ತಾಳಿಕೋಟೆ ಘಟನೆಯ ನಂತರದ ಕಾಲಕ್ಕೆ ಸೇರಿದ್ದು. ಅದರ ಸರಿಯಾದ ಇತಿಹಾಸವು ಪ್ರಾರಂಭವಾಗುವುದು ಕ್ರಿ.ಶ. ೧೬೧೦ರಲ್ಲಿ ರಾಜಒಡೆಯರು ಶ್ರೀರಂಗಪಟ್ಟಣವನ್ನು ಆಕ್ರಮಿಸಿಕೊಂಡಾಗಿನಿಂದ ಎಂದು ಹೇಳಬಹುದು. ಕರ್ನಾಟಕದ ಶ್ರೀರಂಗಪಟ್ಟಣ ಅರಸೊತ್ತಿಗೆಯಲ್ಲಾದ ಈ ಬದಲಾವಣೆಯು ಮೈಸೂರಿನ ಇತಿಹಾಸದಲ್ಲಿ ಒಂದು ಮುಖ್ಯವಾದ ಅಧ್ಯಾಯ. ಅದು ಸ್ವತಂತ್ರ ರಾಜ್ಯವಾಗಿ ಮೈಸೂರಿನ ಉದಯವನ್ನು ಗುರುತಿಸುತ್ತದೆ. ಶ್ರೀರಂಗಪಟ್ಟಣವನ್ನು ವಶಪಡಿಸಿಕೊಂಡ ನಂತರ ರಾಜಒಡೆಯರು ಮತ್ತು ಅವರ ಉತ್ತರಾಧಿಕಾರಿಗಳು ವಿಜಯನಗರದ ಕಷ್ಟಪರಿಸ್ಥಿತಿಯ ಉಪಯೋಗ ಪಡೆದುಕೊಂಡು ಸ್ಥಿರಗತಿಯಲ್ಲಿ ತಮ್ಮ ರಾಜ್ಯವನ್ನು ವಿಸ್ತರಿಸಿ ಅದನ್ನು ಬಲಪಡಿಸಿದರು. ಕೊನೆಗೆ ಸಾಮ್ರಾಜ್ಯವು ನಾಶವಾದಾಗ, ಕರ್ನಾಟಕದ ಈ ಭಾಗದಲ್ಲಿ ವಿಜಯನಗರ ಚಕ್ರವರ್ತಿಗಳ ರಾಜಕೀಯ ವಾರಸುದಾರರಾಗಿ ಅಧಿಕಾರದಲ್ಲಿದ್ದ ಒಡೆಯರ್ ಅರಸರು ಶ್ರೀರಂಗಪಟ್ಟಣದ ಕಡೆಗೆ ರಾಜಕೀಯ ಕೇಂದ್ರವು ಕ್ರಮೇಣ ವಾಲಿತು. ಈ ವಂಶವು ಅಧಿಕಾರಕ್ಕೆ ಬಂದದ್ದು ದಕ್ಷಿಣಭಾರತದ ಇತಿಹಾಸದಲ್ಲಿ ಒಂದು ಸ್ವಾರಸ್ಯವಾದ ಅಧ್ಯಾಯವಾಗಿದೆ.

ಈ ವಂಶದ ಮೂಲವು ಒಂದು ತೊಡಕಿನ ಪ್ರಶ್ನೆಯಾಗಿದೆ. ಈ ವಿಷಯವಾಗಿ ಸಾಕಷ್ಟು ಸಾಕ್ಷ್ಯಾಧಾರಗಳು ದೊರಕದಿರುವುದೇ ಇದಕ್ಕೆ ಕಾರಣ. ವಿದ್ವಾಂಸರು ಈ ವಿಚಾರವಾಗಿ ಭಿನ್ನಮತವನ್ನು ವ್ಯಕ್ತಪಡಿಸಿದ್ದಾರೆ. ಒಡೆಯರ ಮೂಲವು ಪುರಾಣಗಳಲ್ಲಿ ಬರುವ ದ್ವಾರಕೆಯ ಯದುವಂಶ - ಶ್ರೀಕೃಷ್ಣ ಜನಿಸಿದ ವಂಶ- ಎಂದು ಗುರುತಿಸುವ ಒಂದು ಸಂಪ್ರದಾಯವಿದೆ. ಯದುಗಳದು ಚಂದ್ರವಂಶ. ಒಡೆಯರ್ ಮನೆತನದ ಮೂಲಪುರುಷರಲ್ಲಿ ಒಬ್ಬನಾದ ಯದುರಾಯನು ತಮ್ಮ ಸೋದರ ಕೃಷ್ಣರಾಯನೊಂದಿಗೆ ಈ ಪ್ರಾಂತಕ್ಕೆ ಬಂದು ಆಳತೊಡಗಿದನೆಂದು ಹೇಳಲಾಗಿದೆ. ಆದರೆ ಕೆಲವು ಆಧುನಿಕ ವಿದ್ವಾಂಸರು ಹೇಳುವುದೇ ಬೇರೆ. ಒಡೆಯರ್ ವಂಶದ ಮೂಲಪುರುಷರಿಗೆ ಚಂದ್ರವಂಶಕ್ಕೆ ಸೇರಿದ ಕೆಲವು ದಕ್ಷಿಣ ಭಾರತೀಯ ರಾಜಮನೆತನಗಳೊಂದಿಗೆ ಸಂಬಂಧವಿದ್ದಿತು. ಹೊಯ್ಸಳ ರಾಜಮನೆತನವು ಕ್ಷಯಿಸಿದ ಮೇಲೆ ಓಡಿಹೋಗಿದ್ದ ಕೆಲವು ರಾಜಪುರುಷರೇ ಇವರು ಎಂದೂ, ಅವರ ರಾಜಧಾನಿ ದ್ವಾರಾವತಿ ಅಥವಾ ದ್ವಾರಸಮುದ್ರವಾಗಿದ್ದಿತೆಂದೂ ಅಥವಾ ತಾವೂ ಚಂದ್ರವಂಶದವರೆಂದು

ಹೇಳಿಕೊಳ್ಳುವ ಕಾಕತೀಯ ಮನೆತನಕ್ಕೆ ಸೇರಿದವರೆಂದೂ ಎಸ್.ಕೆ. ಅಯ್ಯಂಗಾರ್ ಊಹಿಸುತ್ತಾರೆ.[೨] ವಿಲ್ಕ್ಸ್‌ರು ಅವರನ್ನು ವಿಜಯನಗರ ಆಸ್ಥಾನದಿಂದ ಓಡಿಹೋದ ಯಾದವ ನಿರಾಶ್ರಿತರೊಂದಿಗೆ ಸಂಬಂಧಿಸುತ್ತಾರೆ.[೩] ಮೈಸೂರು ಅರಮನೆ ದಾಖಲೆಗಳಲ್ಲಿ ನಮೂದಿಸಿರುವಂತೆ ಸಾಂಪ್ರದಾಯಿಕವಾಗಿ ರಾಜವಂಶದ ಸ್ಥಾಪನೆಯಾದುದು ಕ್ರಿ.ಶ. ೧೩೯೯ರಲ್ಲಿ.

ಆದರೆ ಹೊರಗಿನ ಮೂಲವನ್ನು ಹೇಳುವ ಈ ಸಿದ್ಧಾಂತಗಳಿಗೆ ಸಾಕಷ್ಟು ಪ್ರಮಾಣದ ಸ್ಥಿರೀಕರಣವು ದೊರಕುವುದಿಲ್ಲ. ಏಕೆಂದರೆ, ಪ್ರಾಚೀನ ಕಾಲದಲ್ಲೂ ಮೈಸೂರು ಒಂದು ಪುಟ್ಟ ಭೌಗೋಳಿಕ ಘಟಕವಾಗಿ ಅಥವಾ ಒಂದು ಸಣ್ಣ ಸಾಮಂತ ಪ್ರಾಂತವಾಗಿ ಮೈಸುನಾಡು, ಮೈಸೂರುನಾಡು ಎಂಬ ಹೆಸರಿನಿಂದ ಪ್ರಸಿದ್ಧವಾಗಿದ್ದುದು ಶಾಸನಗಳಿಂದ ತಿಳಿದುಬರುತ್ತದೆ. ವಿಶೇಷವಾಗಿ ಹದಿನಾಲ್ಕು ಮತ್ತು ಹದಿನೈದನೆಯ ಶತಮಾನಗಳಲ್ಲಿ ಈ ಪ್ರದೇಶದ ರಾಜಕೀಯ ಭೂಗೋಳವನ್ನು ಗಮನಿಸಿದರೆ ಇಲ್ಲಿನ ಬೇರೆಬೇರೆ ಭಾಗಗಳಲ್ಲಿ ಹೊಯ್ಸಳ ಮತ್ತು ವಿಜಯನಗರ ರಾಜಮನೆತನಗಳ ಪ್ರತಿನಿಧಿಗಳೂ ಸ್ಥಳೀಯ ನಾಯಕರೂ ವಿಜಯನಗರದ ಅಧೀನರಾಗಿ ಆಳುತ್ತಿದ್ದುದು ತಿಳಿಯುತ್ತದೆ. ಹೊರಗಿನಿಂದ ಒಂದು ರಾಜವಂಶವು ಇಲ್ಲಿಗೆ ಬಂದು ನೂತನ ರಾಜ್ಯವನ್ನು ಸ್ಥಾಪಿಸಿದುದಕ್ಕೆ ನಮಗೆ ಸಾಕ್ಷ್ಯಾಧಾರಗಳು ದೊರಕುವುದಿಲ್ಲ. ವಂಶದ ಸ್ಥಾಪಕರು ಬಹುಶಃ ಮಣ್ಣಿನ ಮಕ್ಕಳಾಗಿದ್ದರು. ಹೆಚ್ಚು ಸಂಭವನೀಯತೆಯೆಂದರೆ, ಅವರು ಪರಾಭವಗೊಂಡ ಹೊಯ್ಸಳ ಮನೆತನಕ್ಕೆ ಸೇರಿದ್ದು, ಕ್ರಿ.ಶ. ೧೩೨೭ರಲ್ಲಿ ದ್ವಾರಸಮುದ್ರವು ಪತನ ಹೊಂದಿದಾಗ ದುರ್ಬಲರಾಗಿ ತೊಣ್ಣೂರಿಗೆ ಬಂದು ನೆಲೆಸಿದರು. ಮೇಲುಕೋಟೆಗೆ ಅಷ್ಟು ಸಮೀಪದ ತೊಣ್ಣೂರಿನಲ್ಲಿ ಸುಮಾರು ಎಪ್ಪತ್ತು ವರ್ಷ ನೆಲೆಸಿದ್ದ ಅವರು ಮೂಲತಃ ತಮ್ಮ ವಂಶಜ ವಿಷ್ಣುವರ್ಧನನು ಮೇಲುಕೋಟೆಯಲ್ಲಿ ಪ್ರತಿಷ್ಠೆ ಮಾಡಿದ ನಾರಾಯಣ ದೇವರಿಗೆ ವಿಶೇಷ ಸೇವೆ ಸಲ್ಲಿಸುತ್ತಾ ಪೋಷಿಸುತ್ತಾ ಬಂದುದರಲ್ಲಿ ಆಶ್ಚರ್ಯವೇನೂ ಇಲ್ಲ. ಹೊಯ್ಸಳರೂ ಚಂದ್ರವಂಶಕ್ಕೆ ಸೇರಿದವರು. ಅವರ ವಂಶಾವಳಿಯನ್ನು ನಿರೂಪಿಸುವ ಶಾಸನಗಳಿಂದ ಇದು ತಿಳಿದುಬರುತ್ತದೆ.[೪] ಯಾದವಪುರ ಅಥವಾ ಯದುಗಿರಿ ಎಂದೂ ಹೆಸರಿದ್ದ ಮೇಲುಕೋಟೆಯ ಭಗವಾನ್ ನಾರಾಯಣನೊಂದಿಗೆ ಹೀಗೆ ನಿಕಟ ಸಂಪರ್ಕವಿದ್ದುದರಿಂದ ಮುಂದಿನ ಲೇಖಕರು ಒಡೆಯರ್ ವಂಶದ ಸ್ಥಾಪಕನನ್ನು ಯದುರಾಯ ಎಂದು ಕರೆದಿರಬಹುದು; ವಂಶಕ್ಕೆ ಪ್ರಾಚೀನತೆಯ ಮರ್ಯಾದೆಯನ್ನು ಕೊಡುವುದಕ್ಕಾಗಿ ಪೌರಾಣಿಕ ಯದುವಂಶಕ್ಕೆ ಸೇರಿದವರು ಎಂದು ಉತ್ಪ್ರೇಕ್ಷಿಸಿ ಹೇಳಿರಬಹುದು. ಆದ್ದರಿಂದ ಹೀಗೆ ಹೇಳುವುದು ನ್ಯಾಯವಾಗಿ ಸಂಭವನೀಯವೆಂದು ತೋರುತ್ತದೆ; ಯದುವು ಈ ರಾಜಮನೆತನದ ಐತಿಹಾಸಿಕ ಸ್ಥಾಪಕ. ನಿರಾಶ್ರಿತನಾಗಿದ್ದ ರಾಜಕುಮಾರ ಯದು ಮತ್ತು ಅವನ ತಮ್ಮ ಕೃಷ್ಣ ಇಬ್ಬರೂ ಈ ಮೈಸೂರಿಗೆ ಬಂದದ್ದು ಇಲ್ಲಿ ಹೊಗೆಯಾಡುತ್ತಿದ್ದ ಒಂದು ಬಂಡಾಯವನ್ನು ಅಡಗಿಸುವ ಸಲುವಾಗಿ. ಪರಿಸ್ಥಿತಿ ಅವರನ್ನು ಹೀಗೆ ಬರುವಂತೆ ಮಾಡಿತು. ಆಗ ಮೈಸೂರಿನಲ್ಲಿ ಚಾಮರಾಜ ಒಡೆಯರೆಂಬುವರು ಪತ್ನಿಯನ್ನೂ ಏಕೈಕ ಪುತ್ರಿಯನ್ನೂ ಬಿಟ್ಟು ನಿಧನರಾಗಿದ್ದರು. ದಳವಾಯಿಯಾಗಿದ್ದ ಮಾರನಾಯಕನೆಂಬುವನು ಅಧಿಕಾರವನ್ನು ಕಿತ್ತುಕೊಂಡು ತಾನೇ ಅರಸನಾಗಲು ಪ್ರಯತ್ನಿಸುತ್ತಿದ್ದನು. ವಿಧವೆ ರಾಣಿಯೂ ಆಕೆಯ ಮಗಳೂ ತುಂಬಾ ಅಸಹಾಯಕ ಪರಿಸ್ಥಿತಿಯಲ್ಲಿದ್ದರು. ತನ್ನ ಅಧಿಕಾರಾಕ್ರಮಣವನ್ನು ನ್ಯಾಯಬದ್ಧಗೊಳಿಸಲು ತಾನೇ ರಾಜಕುಮಾರಿಯನ್ನು ಮದುವೆ ಮಾಡಿಕೊಳ್ಳಲು ಸಹ ಹಂಚಿಕೆ ಹಾಕಿದ್ದನು. ಬಹುಶಃ ಈ ಬಿಕ್ಕಟ್ಟಿನ ಸಮಯದಲ್ಲಿ ಯದುವು ಸಹೋದರ ಕೃಷ್ಣರಾಯನೊಂದಿಗೆ ರಾಣಿಯನ್ನೂ ರಾಜಕುಮಾರಿಯನ್ನೂ ಅಪಮಾನ ಭೀತಿಯಿಂದ ಕಾಪಾಡಲು ಬಂದನು. ಮಾರನಾಯಕನನ್ನು ಕೊಲ್ಲಲು ಹಂಚಿಕೆ ನಡೆಸಿದ್ದ ಅರಮನೆಯ ತಂಡದೊಂದಿಗೆ ಸೇರಿಕೊಂಡನು. ಸಂಚಿಗೆ ಸಂಬಂಧಪಟ್ಟಂತೆ ಮಧ್ಯವರ್ತಿಯಾಗಿದ್ದ ಒಬ್ಬ ಜಂಗಮ ಪುರೋಹಿತನೊಂದಿಗೆ ಯದುವು ಅರಮನೆಗೆ ಹೋಗಿ ದಳವಾಯಿಯನ್ನು ಇರಿದು ಕೊಂದು ಮಹಾರಾಣಿ ಮತ್ತು ರಾಜಕುಮಾರಿ ಇವರ ಗೌರವವನ್ನು ಕಾಪಾಡಿದನು. ಹೀಗೆ ಕಷ್ಟದಿಂದ ಪಾರಾದ ರಾಜಕುಮಾರಿಯು ತನ್ನ ರಕ್ಷಕನಾದ ಯದುವನ್ನು ವಿವಾಹವಾಗುವ ಇಚ್ಛೆಯನ್ನು ವ್ಯಕ್ತಪಡಿಸಿದಳು.

ಯದು ಅಥವಾ ವಿಜಯನು ಅರಮನೆಯ ಆಸ್ತಿಪಾಸ್ತಿಗೆ ಹಕ್ಕುದಾರನಾದನು. ಹೀಗೆ ಮೈಸೂರಿನಲ್ಲಿ ನೂತನ ರಾಜವಂಶವನ್ನು ಸ್ಥಾಪಿಸಿದನು. ಒಡೆಯರ್ ವಂಶದ ಮೂಲವು ಹೀಗೆ ಒಂದು ಪ್ರೇಮ ಪ್ರಸಂಗದ ಸ್ಪರ್ಶವನ್ನೂ ಒಳಗೊಂಡಿದೆ.

ಯದುವು ಆಳುತ್ತಿದ್ದ ಮೈಸೂರು ಒಂದು ಪುಟ್ಟ ಹಳ್ಳಿ. ಅರಮನೆಯ ದಾಖಲೆಗಳ ಪ್ರಕಾರ, ಅವನು ೧೩೯೯ ರಿಂದ ೧೪೨೩ರ ವರೆಗೆ ಆಳಿದನು.[೫] ಪತ್ನಿ ದೇವಾಜಮ್ಮಣ್ಣಿಯಿಂದ ಯದುವಿಗೆ ಇಬ್ಬರು ಮಕ್ಕಳಾದರು. ಹಿರಿಯ ಬೆಟ್ಟದ ಚಾಮರಾಜ ಒಡೆಯರ್ ಹಾಗೂ ಚಾಮರಾಜ ಒಡೆಯರ್.[೬] ಈ ಮೊದಮೊದಲ ಅರಸರ ಹೆಸರುಗಳು ತಕ್ಕಮಟ್ಟಿಗೆ ತಿಳಿದಿವೆ. ಅವರನ್ನು ಕುರಿತು ಬೇರೆ ಯಾವ ದಾಖಲೆಗಳೂ ದೊರಕುವುದಿಲ್ಲ. ಯದುವಿನ ನಂತರ ಹಿರಿಯಮಗ ಹಿರಿಯ ಬೆಟ್ಟದ ೧ನೇ ಚಾಮರಾಜ ಒಡೆಯರ್ ರಾಜನಾದನು. ಆಮೇಲೆ ಅವನ ಮಗ ತಿಮ್ಮರಾಜ ಒಡೆಯರ್ ೧೪೫೯ ರಿಂದ ೧೪೭೮ರ ವರೆಗೆ ೧೯ ವರ್ಷ ರಾಜ್ಯವಾಳಿದನು. ಅವನ ಮಗ ಹಿರಿಯ ೨ನೇ ಚಾಮರಾಜ ಒಡೆಯರ್ ೧೪೭೮ ರಲ್ಲಿ ಸಿಂಹಾಸನವನ್ನೇರಿದನು. ಇವರೆಲ್ಲರೂ ವಿಜಯನಗರ ಚಕ್ರವರ್ತಿಗಳ ಸಾಮಂತ ರಾಜರಾಗಿದ್ದರು. ತೆರಕಣಾಂಬಿಯಲ್ಲಿದ್ದ ವಿಜಯನಗರದ ಪ್ರತಿನಿಧಿಯ ಆಡಳಿತೀಯ ಹತೋಟಿಯಲ್ಲಿದ್ದರು. ಅವರ ರಾಜ್ಯ ಬಹು ಚಿಕ್ಕದು. ಅದು ಈಗಿನ ಮೈಸೂರು ನಗರದ ಹೆಚ್ಚುಕಡಿಮೆ ಅರ್ಧದಷ್ಟಿತ್ತು. ಹಾಗಾಗಿ ಸಾಮಂತರಾಗಿಯೂ ಅವರು ತೀರಾ ಅಮುಖ್ಯರಾದ ನಾಯಕರಾಗಿದ್ದರು. ಅವರಿಗಿದ್ದ ಏಕೈಕ ಕರ್ತವ್ಯ ತಮ್ಮ ಪ್ರಭಾವದ ವಲಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆಯನ್ನು ಪಾಲಿಸುವುದು, ಯುದ್ಧ ಸಮಯದಲ್ಲಿ ತಮ್ಮ ಪ್ರಭುವಾದ ವಿಜಯನಗರ ಚಕ್ರವರ್ತಿಗೆ ಸೇನಾ ನೆರವು ನೀಡುವುದು. ಹಿರಿಯ ಬೆಟ್ಟದ ೨ನೇ ಚಾಮರಾಜನ ನಂತರ ಅವನ ಮಗ ೩ನೇ ಬೆಟ್ಟದ ಚಾಮರಾಜ ಒಡೆಯರ್ ಪಟ್ಟಕ್ಕೆ ಬಂದನು.

೩ನೇ ಬೆಟ್ಟದ ಚಾಮರಾಜ ಒಡೆಯರ್ ಸಿಂಹಾಸನವನ್ನೇರಿದ್ದು ಕ್ರಿ.ಶ. ೧೫೧೩ರಲ್ಲಿ. ಯದುವಿನ ಅನಂತರ ಬಂದ ಅರಸರ ಪೈಕಿ ಶಾಸನಗಳಲ್ಲಿ ಮತ್ತು ತಾಮ್ರಫಲಕಗಳಲ್ಲಿ ಉಲ್ಲೇಖಗೊಳ್ಳುವ ಗೌರವ ಪಡೆದವನು ಇವನೇ.[೭] ಯದುರಾಯ ಮತ್ತು ೩ನೇ ಬೆಟ್ಟದ ಚಾಮರಾಜ ಇವರ ನಡುವಣ ಅರಸರ ಹೆಸರುಗಳನ್ನು ಈ ಶಾಸನಗಳಲ್ಲಿ ಕೈಬಿಡಲಾಗುತ್ತದೆ. ಹಾಗಾಗಿ ಅಧಿಕೃತವಾಗಿ ಇತಿಹಾಸಕ್ಕೆ ತಿಳಿದಿರುವ ಮೊದಲನೆಯ ಮೈಸೂರು ಅರಸ ಈತ. ಮೈಸೂರು ಅರಮನೆಯ ದಾಖಲೆಗಳಲ್ಲಿ (Mysore Palace Records) ಬೆಟ್ಟದ ಚಾಮರಾಜನು ಮೈಸೂರಿನಲ್ಲಿ ದೊಡ್ಡಕೆರೆ(ಹಿರಿಕೆರೆ)ಯೊಂದನ್ನು ಕಟ್ಟಿಸಿದನೆಂದು ಹೇಳಲಾಗಿದೆ. ಅವನಿಗೆ ಮೂವರು ಪುತ್ರರಿದ್ದರು: ತಿಮ್ಮರಾಜ, ಕೃಷ್ಣರಾಜ ಮತ್ತು ಚಾಮರಾಜ. ಇವನಿಗೆ ಬೋಳ ಚಾಮರಾಜ ಎಂದೂ ಹೆಸರು.

ಮೊದಲೇ ಚಿಕ್ಕದಾಗಿದ್ದ ರಾಜ್ಯವನ್ನು ಬೆಟ್ಟದ ಚಾಮರಾಜನು ತನ್ನ ಮೂವರು ಪುತ್ರರಿಗೆ ವಿಭಜಿಸಿಕೊಟ್ಟನೆಂದು ವಿಲ್ಕ್ಸ್ ಉಲ್ಲೇಖಿಸುತ್ತಾನೆ. ಹಿರಿಯವನಾಗಿದ್ದ ತಿಮ್ಮರಾಜನಿಗೆ ಹೆಮ್ಮನಹಳ್ಳಿಯನ್ನೂ, ಕೃಷ್ಣರಾಜನಿಗೆ ಕೆಂಬಾಳ ಮತ್ತು ಇತರ ಕೆಲವು ಹಳ್ಳಿಗಳನ್ನೂ, ಮೂರನೆಯವನಾದ ಚಾಮರಾಜನಿಗೆ ಮೈಸೂರನ್ನೂ ವಹಿಸಿಕೊಟ್ಟನು.[೮] ಆದರೆ ಎಸ್.ಕೆ. ಅಯ್ಯಂಗಾರ್ ಅವರು ಇದು ಸಂಪ್ರದಾಯದಂತೆ ಮಾಡಿದ ಆಸ್ತಿ ಹಂಚಿಕೆಯೇ ಹೊರತು ರಾಜ್ಯದ ವಿಭಜನೆಯಲ್ಲ, ಮಿಕ್ಕವರೂ ಮೈಸೂರಿನ ಅರಸನ ಅಧೀನದಲ್ಲೇ ಇದ್ದರು. ಎಂಬುದಾಗಿ ಅಭಿಪ್ರಾಯ ಪಡುತ್ತಾರೆ.[೯] ತಂದೆಯ ನಂತರ ತಿಮ್ಮರಾಜನು ಪಟ್ಟಕ್ಕೆ ಬರಬೇಕೆಂದೂ ಅವನ ನಂತರ ಬೋಳ ಚಾಮರಾಜನು ರಾಜ್ಯವನ್ನಾಳಬೇಕೆಂದೂ ವ್ಯವಸ್ಥೆ ಮಾಡಲಾಯಿತು. ಕೃಷ್ಣರಾಜನನ್ನೇಕೆ ಈ ಉಯಿಲಿನಿಂದ ಕೈಬಿಡಲಾಯಿತು ಎಂಬುದನ್ನು ದಾಖಲೆಗಳು ಹೇಳುವುದಿಲ್ಲ. ಎಸ್.ಕೆ. ಅಯ್ಯಂಗಾರ್ ಊಹಿಸುವಂತೆ ತಂದೆ ಮತ್ತು ಸಹೋದರರಿಗಿಂತ ಮೊದಲೇ ಆತನು ಮೃತನಾದನು. ಆದ್ದರಿಂದಲೇ ಬೆಟ್ಟದ

ಚಾಮರಾಜನ ಉಯಿಲು ದಾಖಲೆಯಲ್ಲಿ ಕೃಷ್ಣರಾಜನ ಹೆಸರು ಬರುವುದಿಲ್ಲ.[೧೦] ೩ನೇ ಬೆಟ್ಟದ ಚಾಮರಾಜನಿಗೆ ಅವನ ಪರಾಕ್ರಮದಿಂದಾಗಿ ಬಿರುದಂತೆಂಬರ ಗಂಡ ಎಂಬ ಹೆಸರು ಬಂದಿತ್ತು ಎಂಬುದನ್ನು ಇಲ್ಲಿ ಉಲ್ಲೇಖಿಸಬೇಕು.[೧೧]

ಈ ರಾಜನ ನಂತರ ೧೫೫೩ರಲ್ಲಿ ಅವನ ಮಗ ತಿಮ್ಮರಾಜನು ಅಧಿಕಾರ ವಹಿಸಿಕೊಂಡನು. ೨ನೇ ಬೆಟ್ಟದ ಚಾಮರಾಜನ ಆಳಿಕೆಯಲ್ಲಿ ಸಂದೇಹದ ವಿಷಯವಾಗಿದ್ದ ಬಿರುದಂತೆಂಬರ ಗಂಡ ಎಂಬ ಬಿರುದಿಗೆ ಏಕೈಕ ಹಕ್ಕುದಾರನಾಗಿ ತಿಮ್ಮರಾಜನು ತನ್ನ ಪರಾಕ್ರಮವನ್ನು ಮೆರೆದನು.[೧೨]

ತಿಮ್ಮರಾಜನಾದ ಮೇಲೆ ಅವನ ತಮ್ಮ ಚಾಮರಾಜ ಒಡೆಯರ್ ಅಥವಾ ಬೋಳ ಚಾಮರಾಜ ಪಟ್ಟಕ್ಕೆ ಬಂದನು. ೧೫೭೨ ರಿಂದ ೧೫೭೬ರ ವರೆಗೆ ನಾಲ್ಕು ವರ್ಷ ಇವನು ರಾಜ್ಯವಾಳಿದನು.[೧೩] ಅವನಿಗೆ ನಾಲ್ಕು ಜನ ಮಕ್ಕಳು. ಹಿರಿಯ ಪತ್ನಿ ವೀರಾಜಮ್ಮಣ್ಣಿಯಿಂದ ರಾಜಒಡೆಯರ್ ಮತ್ತು ಬೆಟ್ಟದ ಚಾಮರಾಜ ಒಡೆಯರ್; ಕಿರಿಯರಾಣಿ ದೇವಾಜಮ್ಮಣ್ಣಿಯಿಂದ ದೇವರಾಜ ಒಡೆಯರ್ (ಮುಪ್ಪಿನ ದೇವರಾಜ ಒಡೆಯರ್) ಹಾಗೂ ಚನ್ನರಾಜ ಒಡೆಯರ್.[೧೪] ಬೋಳ ಚಾಮರಾಜನು ವಿಜಯನಗರದ ಅರಸರಾದ ೧ನೇ ತಿರುಮಲ (ಕ್ರಿ.ಶ ೧೫೭೦-೭೩) ಹಾಗೂ ೧ನೇ ಶ್ರೀರಂಗ(ಕ್ರಿ.ಶ. ೧೫೭೩-೮೬)ರ ಸಮಕಾಲೀನನಾಗಿದ್ದನು. ತಿರುಮಲನ ಮಗ ರಾಮ ಅಥವಾ ರಾಮರಾಜಯ್ಯದೇವ(೩ನೇ ರಾಮ)ನು ಹೊಸದಾಗಿ ೧೫೭೦ ರಲ್ಲಿ ೧ನೇ ತಿರುಮಲನು ರೂಪಿಸಿದ ಶ್ರೀರಂಗಪಟ್ಟಣ ಅರಸೊತ್ತಿಗೆಯ ಗವರ್ನರ್ ಆಗಿದ್ದನು. ಇವನು ಕರ್ನಾಟಕದಲ್ಲಿ ಬೋಳ ಚಾಮರಾಜ ಒಡೆಯನ ಸಮಕಾಲೀನನೂ ಆಗಿದ್ದನು. ೧೫೭೦ರಲ್ಲಿ ತಿರುಮಲನು ಪೆನುಗೊಂಡಾದಲ್ಲಿ ರಾಜನಾಗಿ ಪಟ್ಟಕ್ಕೆ ಬಂದನು. ಕ್ರಿ.ಶ. ೧೫೬೫ರಲ್ಲಿ ತಾಳಿಕೋಟೆ ಕಾಳಗವಾದ ಮೇಲೆ ಇನ್ನು ಹತ್ತುವರ್ಷವೂ ಆಗಿರಲಿಲ್ಲ. ಸಿಂಹಾಸನಕ್ಕೆ ಬಂದೊಡನೆಯೇ ವಿಜಯನಗರ ಸಾಮ್ರಾಜ್ಯವನ್ನು ಹೆಚ್ಚುಕಡಮೆ ಭಾಷಾವಾರು ಆಧಾರದಿಂದ ಮೂರು ಉಪವಲಯಗಳನ್ನಾಗಿ ಮಾಡಿ ಅವುಗಳನ್ನು ತನ್ನ ಮಕ್ಕಳಿಗೆ ಅರೆ-ಸ್ವತಂತ್ರ ಸ್ಥಾನಮಾನ ಕೊಟ್ಟು ವಹಿಸಿದನು. ಅದರ ಪ್ರಕಾರ ಹಿರಿಯ ಮಗನಾದ ಶ್ರೀರಂಗನು ಪೆನುಗೊಂಡೆಯನ್ನು ಕೇಂದ್ರವನ್ನಾಗಿಟ್ಟುಕೊಂಡು ತೆಲುಗು ಪ್ರಾಂತದ ಅರಸನಾದನು; ಎರಡನೆಯ ಮಗನಾದ ೩ನೇ ರಾಮನು ಕರ್ನಾಟಕವನ್ನು ಶ್ರೀರಂಗಪಟ್ಟಣದಿಂದ ಆಳತೊಡಗಿದನು. ಮೂರನೆಯ ಮಗ ವೆಂಕಟಪತಿಯು ತಮಿಳು ಪ್ರಾಂತದ (ತುಂಡೀರ, ಚೋಳ ಮತ್ತು ಪಾಂಡ್ಯ ರಾಜ್ಯಗಳು) ರಾಜನಾದನು. ಬಹುಶಃ ತಂಜಾವೂರು, ಮಧುರೆ ಮತ್ತು ಜಿಂಜಿಗಳ ನಾಯಕರು ಅವನ ಆಡಳಿತ ವ್ಯಾಪ್ತಿಗೆ ಸೇರಿದರು. ಮೈಸೂರಿನ ಒಡೆಯರು ಹಾಗೂ ಇಕ್ಕೇರಿಯ ನಾಯಕರು ಕರ್ನಾಟಕ ಪ್ರಾಂತದ ಗವರ್ನರ್ ಆದ ೩ನೇ ರಾಮನ ಅಧೀನರಾದರು.[೧೫] ಉಪಲಬ್ಧ ದಾಖಲೆಗಳಿಂದ, ರಾಜಪ್ರತಿನಿಧಿಯೂ ಬೋಳ ಚಾಮರಾಜ ಒಡೆಯನೂ ಪರಸ್ಪರ ಮೈತ್ರಿಯಿಂದಿರಲಿಲ್ಲ ಎಂದು ತಿಳಿಯುತ್ತದೆ. ಚಾಮರಾಜನು ವೈಸರಾಯಿಗೆ ಕಾಣಿಕೆ ಕೊಡುವುದನ್ನು ನಿಲ್ಲಿಸಿದನೆಂದು ಹೇಳಲಾಗುತ್ತದೆ.[೧೬] ಅಷ್ಟೇ ಅಲ್ಲ, ತನ್ನ ರಾಜ್ಯವನ್ನು ವಿಸ್ತರಿಸಿಕೊಳ್ಳಲೂ ಅವನು ಪ್ರಯತ್ನ ನಡೆಸಿದನು.[೧೭] ಬೋಳ ಚಾಮರಾಜನ ಈ ವರ್ತನೆಗಳಿಂದ ಕುಪಿತನಾಗಿ ರಾಮರಾಜನು ಅವನ ಮೇಲೆ ದಳವಾಯಿ ವೆಂಕಟಾದ್ರಿನಾಯಕನ ಕೈಕೆಳಗೆ ಒಂದು ಸೈನ್ಯವನ್ನು ಕಳುಹಿಸಿದನು. ಆದರೆ ಯುದ್ಧದಲ್ಲಿ ಬೋಳ ಚಾಮರಾಜನು ವೈಸರಾಯಿಯನ್ನು ಸೋಲಿಸಿದನು. ಕಾಲುವೆ ಕೊತ್ತಗಾಲವನ್ನು ಮೈಸೂರಿಗೆ ವಹಿಸಿಕೊಟ್ಟು ವೈಸರಾಯಿ ಸಂಧಿ ಮಾಡಿಕೊಳ್ಳಬೇಕಾಯಿತು.[೧೮] ಇವೆಲ್ಲ ರಾಜಪ್ರತಿನಿಧಿ ಆಡಳಿತದಲ್ಲಿದ್ದ ಶಿಥಿಲತೆಯನ್ನೂ ಅಸಾಮರ್ಥ್ಯವನ್ನೂ ತೋರಿಸುತ್ತದೆ. ಈ ವಿಜಯದಿಂದ ಉತ್ಸಾಹಿತನಾದ ಬೋಳ ಚಾಮರಾಜನು ರಾಜ್ಯವನ್ನು ಗಣನೀಯವಾಗಿ ವಿಸ್ತರಿಸಿದನು.[೧೯] ಹೀಗೆ ಕರ್ನಾಟಕದ ಮೇಲೆ ಆಧಿಪತ್ಯವನ್ನು ಸ್ಥಾಪಿಸಲು ಮೈಸೂರು ನಡೆಸಿದ ಹೋರಾಟವು ಬೋಳ ಚಾಮರಾಜ ಒಡೆಯನ ಕಾಲದಲ್ಲೇ ಪ್ರಾರಂಭವಾಯಿತು ಎಂಬುದನ್ನು ನೋಡುತ್ತೇವೆ. ಅವನ ಮಗ ರಾಜಒಡೆಯನು ಈ ಹೋರಾಟವನ್ನು ಇನ್ನಷ್ಟು ತೀವ್ರಗೊಳಿಸಿ ಮೈಸೂರಿನ ಅಭಿವೃದ್ಧಿಗೆ ತಳಹದಿ ಹಾಕಿದನು.

ಬೋಳ ಚಾಮರಾಜನು ೧೫೭೬ರಲ್ಲಿ ನಿಧನ ಹೊಂದಿದನು. ೩ನೇ ಬೆಟ್ಟದ ಚಾಮರಾಜ ಒಡೆಯರ್‌ನ ಹಿರಿಯಮಗ ತಿಮ್ಮರಾಜ ಒಡೆಯನ ಮಗ ಬೆಟ್ಟದ ಒಡೆಯರ್ ಈಗ ಸಿಂಹಾಸನಕ್ಕೆ ಬಂದನು. ಸುಮಾರು ಎರಡು ವರ್ಷ, ೧೫೭೮ರ ವರೆಗೆ ಅಸಾಮರ್ಥ್ಯ ಕಾರಣವಾಗಿ ನಾಡ ಹಿರಿಯರು ಅವನನ್ನು ಅಧಿಕಾರದಿಂದ ಕೆಳಗಿಳಿಸಿದರು.[೨೦]

ಈ ಸಮಯದಲ್ಲಿ ಅಕ್ಬರನು ತಾನು ಹೆಚ್ಚುಕಡಮೆ ಇಡೀ ಹಿಂದೂಸ್ಥಾನದ ಚಕ್ರವರ್ತಿ ಎಂದು ಭಾವಿಸಿದ್ದನು. ತನ್ನ ಗಮನವನ್ನು ವಿಂಧಪರ್ವತಗಳ ದಕ್ಷಿಣದ ಕಡೆಗೆ ಹರಿಸುತ್ತಿದ್ದನು. ಈ ಹೊಸ ಅಪಾಯ ಮತ್ತು ದಖ್ಖನಿನ ಮಹಮದೀಯ ಅರಸರು ಅದಕ್ಕೆ ತೋರಿಸಿದ ಪ್ರತಿರೋಧ ಇವುಗಳಿಂದಾಗಿ ದೂರ ದಕ್ಷಿಣವು ತಕ್ಕಮಟ್ಟಿಗೆ ಶಾಂತವಾಗಿತ್ತು. ಬಿಜಾಪುರ ಮತ್ತು ಗೋಲ್ಕೊಂಡ ಅರಸರೂ ಮುಗಲರು ಆಕ್ರಮಿಸಿಕೊಂಡು ಬರುತ್ತಿರುವ ಕಡೆಗೆ ತಮ್ಮ ಗಮನವನ್ನು ಹರಿಸಬೇಕಾಯಿತು. ವಿಜಯನಗರ ಅರಸರ ಬಲಹೀನತೆಯು ಒಡೆಯರಿಗೆ ದೊಡ್ಡ ಶಕ್ತಿಯಾಗಿ ಬೆಳೆಯಲು ಅವಕಾಶವನ್ನು ಕೊಟ್ಟಿತು.

ಬೆಟ್ಟದ ಒಡೆಯರ್ ಸ್ಥಾನಭ್ರಷ್ಟನಾದ ಮೇಲೆ ಬೋಳ ಚಾಮರಾಜ ಒಡೆಯನ ಹಿರಿಯಮಗ ರಾಜ ಒಡೆಯರ್ ೧೫೭೮ ರಲ್ಲಿ ಸಿಂಹಾಸನವನ್ನೇರಿದನು. ರಾಜಒಡೆಯನ ಆಳಿಕೆ ಮೈಸೂರಿನ ಇತಿಹಾಸದಲ್ಲಿ ತುಂಬಾ ಮುಖ್ಯವಾದದ್ದು; ಏಕೆಂದರೆ, ಕ್ಷಯಿಸುತ್ತಿದ್ದ ಶ್ರೀರಂಗಪಟ್ಟಣದ ಅರಸೊತ್ತಿಗೆಯನ್ನು ಸ್ವಲ್ಪಮಟ್ಟಿಗೆ ಕ್ರೋಢೀಕರಿಸಿ ಮೈಸೂರಿನ ಮುಂದಿನ ಹಿರಿಮೆಗೆ ಅವನು ತಳಹದಿಯನ್ನು ಹಾಕಿದನು. ರಾಜಒಡೆಯ ವಿಜಯನಗರದ ಅರಸರಾದ ೧ನೇ ಶ್ರೀರಂಗ (೧೫೭೨-೧೫೮೬) ಮತ್ತು ೨ನೇ ವೆಂಕಟಪತಿ (೧೫೮೬-೧೬೧೪) ಇವರ ಸಮಕಾಲೀನ. ಹಾಗೆಯೇ ಶ್ರೀರಂಗಪಟ್ಟಣದ ರಾಜಪ್ರಾತಿನಿಧ್ಯದಲ್ಲಿದ್ದ ೩ನೇ ರಾಮ ಮತ್ತು ಅವನ ಮಗ ೨ನೇ ತಿರುಮಲ ಇಬ್ಬರೂ ರಾಜಒಡೆಯರ ಸಮಕಾಲೀನರು. ಶಾಸನಗಳ ಆಧಾರದಿಂದ ಹೇಳುವುದಾದರೆ, ೩ನೇ ರಾಮನು ೧೫೮೦ರಲ್ಲಿ ೨ನೇ ತಿರುಮಲ ಮತ್ತು ೩ನೇ ರಂಗ ಎಂಬ ಇಬ್ಬರು ಹಸುಳೆಗಳನ್ನು ಬಿಟ್ಟು ಮೃತನಾದನು. ಆ ಮಕ್ಕಳನ್ನು ಪೆನುಗೊಂಡೆಯಲ್ಲಿದ್ದ ಅವರ ಚಿಕ್ಕಪ್ಪ ೨ನೇ ವೆಂಕಟನು ಸಾಕಿ ಬೆಳೆಸಿದನು. ಶ್ರೀರಂಗಪಟ್ಟಣದ ರಾಜಪ್ರತಿನಿಧಿಯಾಗಿ ದಳವಾಯಿ ರೇಮಟಿ ವೆಂಕಟಯ್ಯನು ೧೫೮೪ರ ವರೆಗೂ ನಿರ್ವಹಿಸುತ್ತಿದ್ದನು.

ರಾಜಒಡೆಯರ ವಿಜಯಗಳು

ತಿರುಮಲರಾಯನ ಅಲ್ಪಬಲವು ರಾಜಒಡೆಯರಿಗೆ ತಮ್ಮ ರಾಜ್ಯವಿಸ್ತಾರ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಲು ಸಾಕಷ್ಟು ಅವಕಾಶ ನೀಡಿತು. ತಿರುಮಲನು ವೈಸರಾಯಿ ಆಗಿ ಅಧಿಕಾರ ಸ್ವೀಕರಿಸಿದ್ದು ಸುಮಾರು ೧೫೮೫ರಲ್ಲಿ. ಪ್ರಾರಂಭದಿಂದಲೇ ಪೆನುಗೊಂಡೆಯಲ್ಲಿದ್ದ ರಾಜನು ವೈಸರಾಯ್ ಬಗೆಗೆ ಒಂದು ಬಗೆಯ ತಟಸ್ಥ ಮನೋಭಾವವನ್ನು ಹೊಂದಿದ್ದನು. ರಾಜಒಡೆಯನ ಸಾಹಸಕಾರ್ಯಗಳ ಪಟ್ಟಿಯನ್ನು ನೋಡಿದರೆ, ಸ್ಥಳೀಯವಾಗಿ ಅನೇಕ ಪ್ರಬಲ ಪಾಳೆಯಗಾರರಿದ್ದರು, ಅವರು ರಾಜಒಡೆಯರಂತೆಯೇ ಕರ್ನಾಟಕದ ಮೇಲೆ ಪ್ರಭುತ್ವ ಪಡೆಯಲು ಸ್ಪರ್ಧಿಸುತ್ತಿದ್ದರು ಎಂಬುದು ಗೊತ್ತಾಗುತ್ತದೆ. ತಲಕಾಡು, ಅಮ್ಮಚವಾಡಿ, ಕನ್ನಂಬಾಡಿ, ಕಾರುಗಹಳ್ಳಿ ಮುಂತಾದ ಸ್ಥಳಗಳ ಪಾಳೆಯಗಾರರು ಇಂಥವರು. ಇವರು ರಾಜಒಡೆಯರ ಕೈಗೆ ಸಿಕ್ಕಿ ಬಹಳ ಕಷ್ಟಪಡಬೇಕಾಯಿತು. ಹಾಗೆಯೇ ಇತರ ದುರ್ಬಲರಾಗಿದ್ದ ಬಿಳಿಕೆರೆ, ಹುರಾ, ಹುಲ್ಲಹಳ್ಳಿ, ಮೂಗೂರು, ಕೆಂಬಾಳ ಮೊದಲಾದ ಸ್ಥಳಗಳ ನಾಯಕರನ್ನು ಒಡೆಯರು ಸುಲಭವಾಗಿ ಗೆದ್ದರು. ಈ ಎರಡೂ ವರ್ಗಗಳ ಸದಸ್ಯರು ಸ್ವತಂತ್ರರಾಗಿದ್ದರು, ವೈಸರಾಯಿಯಿಂದ ನೆರವನ್ನು ಕೋರುತ್ತಿರಲಿಲ್ಲ ಎನ್ನುವುದು ಅವರೇ ಪರಸ್ಪರ ಮಾಡಿಕೊಂಡ ಕರಾರುಗಳಿಂದ ತಿಳಿದುಬರುತ್ತದೆ. ಪ್ರತಿಯೊಬ್ಬನೂ ತನಗೆ ವೈಸರಾಯಿಯು ಅವಕಾಶ ಕೊಟ್ಟಷ್ಟು ಮಟ್ಟಿಗೆ ಹೆಸರನ್ನೂ ಘನತೆಯನ್ನೂ ಬೆಳೆಸಿಕೊಳ್ಳಲು ಪ್ರಯತ್ನಿಸುತ್ತಿದ್ದನು. ಅಂದರೆ,

ಇದರಿಂದ ಕರ್ನಾಟಕ ವಲಯದಲ್ಲಿ ತನ್ನ ಸಾಮಂತರ ಮೇಲೆ ರಾಜಪ್ರತಿನಿಧಿಗೆ ಹತೋಟಿಯಿರಲಿಲ್ಲ ಎನ್ನುವುದು ವ್ಯಕ್ತವಾಗುತ್ತದೆ. ತಿರುಮಲನ ದುರ್ಬಲ ಆಡಳಿತ, ೨ನೇ ವೆಂಕಟ ಮತ್ತು ಅವನ ಸೋದರಳಿಯ ಇವರ ನಡುವಣ ಅಸಮಾಧಾನ ಇವು ರಾಜಒಡೆಯರಿಗೆ ತನ್ನ ವಿಸ್ತರಣ ಯೋಜನೆಗಳನ್ನು ಜಾರಿಗೆ ತರಲು ಒಳ್ಳೆಯ ಅವಕಾಶ ಕಲ್ಪಿಸಿತು. ಆಳಿಕೆಯ ಪ್ರಾರಂಭದ ವೇಳೆಗೇ ರಾಜಒಡೆಯರು ೩೩ಹಳ್ಳಿಗಳ ಪ್ರಭುವಾಗಿದ್ದರು ಎಂದು ಮೈಸೂರು ದೊರೆಗಳ ವಂಶಾವಳಿಯು ಹೇಳುತ್ತದೆ.[೨೨] ವೆಚ್ಚವನ್ನು ನಿರ್ವಹಿಸಲು ಆತನಿಗಿದ್ದ ಮುಖ್ಯ ವರಮಾನ ಮೂಲಗಳು ಈ ಹಳ್ಳಿಗಳಿಂದ ಬಂದ ತೆರಿಗೆ, ಯುದ್ಧಗಳಲ್ಲಿ ದೊರಕುತ್ತಿದ್ದ ಕೊಳ್ಳೆ ಹಾಗೂ ತನ್ನ ಅಧೀನರಿಂದ ಬರುತ್ತಿದ್ದ ಕಪ್ಪಕಾಣಿಕೆಗಳು. ಈ ಮೂಲಗಳನ್ನು ರೂಢಿಸಿಕೊಂಡು, ತನಗೆ ಹಿತಕರವಾಗಿದ್ದ ಪರಿಸ್ಥಿತಿಗಳ ಪ್ರಯೋಜನವನ್ನು ಪಡೆದು, ರಾಜಒಡೆಯರು ನಿಧಾನವಾಗಿ ವ್ಯವಸ್ಥಿತ ರೀತಿಯಲ್ಲಿ ತನ್ನ ಸಂಸ್ಥಾನವನ್ನು ವಿಸ್ತರಿಸುತ್ತಾ ಹೋದರು. ಶ್ರೀರಂಗಪಟ್ಟಣದ ರಾಜಪ್ರಾತಿನಿಧ್ಯಕ್ಕೆ ಸೇರಿದ್ದ ಕೆಲ ಪ್ರಬಲ ನಾಯಕರನ್ನು ರಾಜಒಡೆಯರು ಸೋಲಿಸಿದರು. ಯಳಂದೂರಿನ ಭಾಲಲೋಚನ ನಾಯಕ, ಉಮ್ಮತ್ತೂರಿನ ಮಲ್ಲರಾಜಯ್ಯ ಇಂತಹ ನಾಯಕರು, ಇವರ ಪಾಳೆಯಪಟ್ಟುಗಳನ್ನು ರಾಜಒಡೆಯರು ರಾಜ್ಯಕ್ಕೆ ಸೇರಿಸಿಕೊಂಡರು. ವೆಂಕಟನ ಗಮನವು ಅವನ ಆಡಳಿತ ಪ್ರದೇಶಕ್ಕೇ ಸೀಮಿತವಾಗಬೇಕಾಗಿ ಬಂದು, ಮುಳುಗುತ್ತಿದ್ದ ಸೋದರಳಿಯನ ಕಡೆಗೆ ಅವನು ಗಮನ ಕೊಡಲು ಸಾಧ್ಯವಾಗಲಿಲ್ಲ. ತಿರುಮಲನು ಎಷ್ಟು ದುರ್ಬಲನಾಗಿದ್ದನೆಂದರೆ, ತನ್ನ ಸಾಮಂತ ನಾಯಕರಿಗೆ ರಕ್ಷಣೆ ಕೊಡುವುದಾಗಲಿ, ತನ್ನ ರಾಜ್ಯವನ್ನು ರಾಜಒಡೆಯರು ಒತ್ತುವರಿ ಮಾಡಿಕೊಳ್ಳುವುದನ್ನು ತಡೆಯಲಾಗಲಿ ಅವನಿಂದ ಸಾಧ್ಯವಿರಲಿಲ್ಲ. ೧೫೮೫ರಲ್ಲಿ ರಾಜಒಡೆಯರು ವೈಸರಾಯಿ ಆಗಿದ್ದ ತಿರುಮಲರಾಜಯ್ಯನಿಂದ ರಂಗಸಮುದ್ರವನ್ನೂ ಅದಕ್ಕೆ ಅಧೀನವಾಗಿದ್ದ ಎಲ್ಲಾ ಗ್ರಾಮಗಳನ್ನೂ ಕಿತ್ತು ತಮ್ಮ ವಶಕ್ಕೆ ತಂದುಕೊಂಡರು.[೨೩]

ಚಿಕ್ಕದೇವರಾಜ ಒಡೆಯರ ಆಸ್ಥಾನಕವಿಯಾಗಿದ್ದ ತಿರುಮಲಾರ್ಯನಿಂದ ನಮಗೆ ತಿಳಿದುಬರುವ ವಿಷಯವೇನೆಂದರೆ, ಒಮ್ಮೆ ವೆಂಕಟಪತಿಯು ಮಧುರೆಯಲ್ಲಿ ಎದ್ದಿದ್ದ ಒಂದು ದಂಗೆಯನ್ನು ಅಡಗಿಸಲು ವೈಸರಾಯಿ ತಿರುಮಲನ ಕೈಕೆಳಗೆ ಒಂದು ಸೈನ್ಯವನ್ನು ಕಳಿಸಿಕೊಟ್ಟನು. ಇದು ಸುಮಾರು ೧೫೯೨ ಮತ್ತು ೧೫೯೫ರ ನಡುವೆ ನಡೆದ ಘಟನೆ. ತನಗೆ ವಹಿಸಿದ್ದ ಕರ್ತವ್ಯವನ್ನು ನಿರ್ವಹಿಸುವುದಕ್ಕೆ ಬದಲಾಗಿ ತಿರುಮಲನು ಮಧುರೆಯ ವೀರಪ್ಪನಾಯಕನೊಂದಿಗೆ ಷಾಮೀಲಾದನು. ಅವನಿಂದ ಲಂಚವನ್ನು ಪಡೆದು ಶ್ರೀರಂಗಪಟ್ಟಣಕ್ಕೆ ಬಂದು ತನ್ನ ಚಿಕ್ಕಪ್ಪನ ಮೇಲೆ ಹಗೆ ಮಸೆಯುತ್ತಾ ಆದರೆ ಬಹಿರಂಗವಾಗಿ ತೋರಿಸಿಕೊಳ್ಳದೆ ಆಳತೊಡಗಿದನು.[೨೪] ಅವನ ನಡವಳಿಕೆಯಿಂದ ರಾಜವೆಂಕಟಪತಿಗೆ ತುಂಬಾ ಅಸಮಾಧಾನವಾಯಿತು. ಅಂತಿಮವಾಗಿ ತಿರುಮಲನು ವೈಸರಾಯಿತ್ವವನ್ನು ಕಳೆದುಕೊಳ್ಳಬೇಕಾಯಿತು. ಇತರರಿಗೆ ಈ ಘಟನೆಯು ಸಾಮ್ರಾಜ್ಯದ ಆಡಳಿತದಲ್ಲಿದ್ದ ಪೊಳ್ಳನ್ನು ತೋರಿಸಿಕೊಟ್ಟಿತು. ಕಾರುಗಹಳ್ಳಿ, ಕನ್ನಂಬಾಡಿ, ಅಮ್ಮಚಾವಡಿ ಮತ್ತು ತಲಕಾಡುಗಳ ಪಾಳೆಯಗಾರರು ತಿರುಮಲನು ಇಲ್ಲದಾಗ ರಾಜಒಡೆಯರಿಂದ ಬಹಳ ಕಷ್ಟವನ್ನು ಅನುಭವಿಸಿದರು. ಅವರೆಲ್ಲರೂ ತಿರುಮಲನ ಆಸ್ಥಾನದಲ್ಲಿ ಸೇರಿ ಒಳಸಂಚು ಮಾಡಿದರು. ಇದರ ಫಲವಾಗಿ ೧೫೯೬ರಲ್ಲಿ ತಿರುಮಲನು ಮೈಸೂರಿಗೆ ಸೇರಿದ್ದ ಕೆಸರೆಯ ಮೇಲೆ ವಿಫಲ ಆಕ್ರಮಣ ಮಾಡಲು ಎಡೆಗೊಟ್ಟಿತು. ಇದರಿಂದ ರಾಜಒಡೆಯರ ಉತ್ಸಾಹ ಇಮ್ಮಡಿಸಿತು. ತಿರುಮಲನು ಕೆಸರೆಯಲ್ಲಿ ತನ್ನ ಸಾಮಂತನಿಗೇ ಸೋತುಕೊಂಡದ್ದು ಅವನ ಘನತೆಯನ್ನು ಸಾಕಷ್ಟು ಕುಗ್ಗಿಸಿತು. ವೆಂಕಟರಮಣಯ್ಯನವರು ಹೇಳುವಂತೆ, ಒಮ್ಮೆ ತಿರುಮಲನು ವೆಂಕಟಪತಿಗೆ ನೆರವಿಗಾಗಿ ಕೋರಿದನು. ಆದರೆ ಅವನು ಮನವಿಯನ್ನು ತಿರಸ್ಕರಿಸಿದನು.[೨೫] ವೈಸರಾಯಿಯು ಮಧುರೆಯಲ್ಲಿ ಅಪ್ರಾಮಾಣಿಕತೆಯಿಂದ ನಡೆದುಕೊಂಡುದಕ್ಕೆ ವೆಂಕಟನು ಅವನ ಬಗೆಗೆ ತೋರಿಸಿದ ತಿರಸ್ಕಾರವೇ ಕಾರಣವಿರಬಹುದು. ಅಲ್ಲದೆ ಒಂದು ಸಾರಿ ತಿರುಮಲನು ಶ್ರೀರಂಗಪಟ್ಟಣಕ್ಕೆ ಹಿಂದಿರುಗುತ್ತಾ ದಾರಿಯಲ್ಲಿ ಹೊಳೆನರಸೀಪುರದ ಮೂಲಕ ಹೋಗುತ್ತಿದ್ದಾಗ ಅಲ್ಲಿಯ ನಾಯಕನಾದ ನರಸಿಂಹನಾಯಕನು ಅವನನ್ನು

ಸೆರೆಹಿಡಿದನು. ಮತ್ತೆ ಈಗಲೂ ಘಟನೆಗಳು ರಾಜಒಡೆಯರಿಗೆ ಅನುಕೂಲವಾಗಿ ನಡೆದುವು. ತಿರುಮಲನ ಸ್ಥಿತಿ ಎಷ್ಟು ಚಿಂತಾಜನಕವಾಯಿತೆಂದರೆ, ಅವನು ರಾಜಒಡೆಯರ ಸಹಾಯವನ್ನು ಕೋರಬೇಕಾಯಿತು.[೨೬]

ರಾಜಒಡೆಯರು ವೈಸರಾಯಿಯ ಮೇಲೆ ಮಾಡುತ್ತಿದ್ದ ಆಕ್ರಮಣಗಳನ್ನು ಇದುವರೆಗೂ ಸದ್ದಿಲ್ಲದೆ ಗಮನಿಸುತ್ತಿದ್ದ ವೆಂಕಟನು ಈಗ ಬಹಿರಂಗವಾಗಿ, ವಿಜಯನಗರ ಸಾಮ್ರಾಜ್ಯಕ್ಕೆ ಸಲ್ಲಿಸಿದ ಸೇವೆಗಾಗಿ ರಾಜಒಡೆಯರಿಗೆ ಸನ್ಮಾನ ಮಾಡಲು ಮುಂದಾದನು. ತಿರುಮಲನನ್ನು ನರಸಿಂಹಪುರದ ಬಂಧನದಿಂದ ಬಿಡುಗಡೆಮಾಡಿಸುವಲ್ಲಿ ರಾಜಒಡೆಯರು ನೀಡಿದ ನೆರವನ್ನು ಗುರುತಿಸಿ ಅವರಿಗೆ ಉಮ್ಮತ್ತೂರು ಮತ್ತು ಬನ್ನೂರು ಪ್ರದೇಶಗಳಲ್ಲಿ ಉದಾರವಾಗಿ ಭೂಮಿಯನ್ನು ಉಡುಗೊರೆಯಾಗಿ ನೀಡಿದರು.

ಶ್ರೀರಂಗಪಟ್ಟಣದ ಪತನ

ತಿರುಮಲನು ಆಡಳಿತ ನಡೆಸಲು ಅನರ್ಹನಾಗಿದ್ದಾನೆ ಎಂಬುದು ಈ ವೇಳೆಗೆ ವೆಂಕಟನಿಗೆ ಮನವರಿಕೆಯಾಗಿತ್ತು. ಆದ್ದರಿಂದ ಅಲಕ್ಷ್ಯ ಮಾಡುವ ಮೂಲಕವೇ ಅವನನ್ನು ಕಿತ್ತೊಗೆಯಬೇಕೆಂದು ಉಪಾಯ ಹೂಡಿದ್ದಂತೆ ತೋರುತ್ತದೆ. ತಿರುಮಲನಿಗೆ ಅವನು ಯಾವುದೇ ಬಗೆಯ ನೆರವನ್ನು ನೀಡಲಿಲ್ಲ ಮಾತ್ರವಲ್ಲ, ರಾಜಒಡೆಯರ ಬಂಡಾಯ ಚಟುವಟಿಕೆಗಳನ್ನು ತಡೆಯಲು ಯಾವುದೇ ಕ್ರಮ ತೆಗೆದುಕೊಳ್ಳಲಿಲ್ಲ. ಸಾಲದ್ದಕ್ಕೆ ನರಸಿಂಹಪುರದ ಬಂಧನದಿಂದ ತಿರುಮಲನನ್ನು ಬಿಡಿಸಲು ನೆರವು ನೀಡಿದ ಕ್ರಮವನ್ನು ಮೆಚ್ಚಿ ವೆಂಕಟನು ಅವನಿಗೆ ಬೇಕಾದಷ್ಟು ಭೂಮಿಯನ್ನು ಉಡುಗೊರೆಯಾಗಿ ಕೊಟ್ಟಿದ್ದು ಆಯಿತು.[೨೭] ಹೀಗೆ ಆಗಲೆ ವೈಸರಾಯಿಯ ಕೈಯಿಂದ ಜಾರಿಹೋಗತೊಡಗಿದ್ದ ವೈಸರಾಯಿತ್ವವನ್ನು ಕಿತ್ತುಕೊಳ್ಳಲು ಶ್ರೀರಂಗಪಟ್ಟಣದಲ್ಲಿ ಪರಿಸ್ಥಿತಿಯು ಹದಗೆಡುವುದಕ್ಕೆ ವೆಂಕಟನು ತಾನಾಗಿಯೇ ಬಿಟ್ಟನು ಎನ್ನುವುದೂ ಸಂಭವನೀಯವಾಗಿ ತೋರುತ್ತದೆ. ಈ ಮಧ್ಯೆ ರಾಜಒಡೆಯರು ಅದುವರೆಗೆ ತಾವು ವಶಪಡಿಸಿಕೊಂಡಿದ್ದ ಎಲ್ಲಾ ಗಳಿಕೆಗೂ ವಿಜಯನಗರ ಚಕ್ರವರ್ತಿಯ ಮಂಜೂರಾತಿ ದೊರಕಿಸಿಕೊಳ್ಳುವ ರೀತಿಯಲ್ಲಿ ಪರಿಸ್ಥಿತಿಯನ್ನು ನಿರ್ವಹಿಸಿದರು. ವಾಸ್ತವವಾಗಿ ಕರ್ನಾಟಕದ ರಾಜಪ್ರಾತಿನಿಧ್ಯವನ್ನು ರಕ್ಷಿಸುವಲ್ಲಿ ಅವರೇ ಸಮರ್ಥರು ಎಂಬ ಭಾವನೆಯೂ ಚಕ್ರವರ್ತಿಯಲ್ಲಿ ಮೂಡಿತು.

ಹೀಗೆ ವೆಂಕಟನು ಪ್ರಾಂತಮುಖ್ಯನಾಗಿ ತಿರುಮಲನ ನಡವಳಿಕೆಯಿಂದ ಎಂದೂ ತೃಪ್ತನಾಗಲಿಲ್ಲ ಎಂದು ತೋರುತ್ತದೆ. ಶ್ರೀರಂಗಪಟ್ಟಣದಲ್ಲಿ ತಿರುಮಲನ ಅತಿ ದುರ್ಬಲ ಆಡಳಿತವಿದ್ದರೆ ಅದರಿಂದ ಆಕ್ರಮಣಶೀಲರಾದ ಬಿಜಾಪುರಿಗಳು ಇನ್ನು ದಕ್ಷಿಣಕ್ಕೆ ವಿಜಯನಗರ ಸಾಮ್ರಾಜ್ಯದ ಕಡೆಗೆ ನುಗ್ಗಿಬರಲು ಆಮಿಷವನ್ನೊಡ್ಡಬಹುದು ಎಂಬ ಭಯವು ವೆಂಕಟನನ್ನು ಕಾಡಿತು. ರೆವರೆಂಡ್ ಹೆರಾಸ್ ಬರೆಯುವಂತೆ, ''ಚಕ್ರವರ್ತಿಯ ದೃಷ್ಟಿಯಿಂದ ಶ್ರೀರಂಗಪಟ್ಟಣದ ರಾಜಪ್ರಾತಿನಿಧ್ಯವು ಆಶಾಯುತ ಸ್ಥಳೀಯ ನಾಯಕನ ಕೈಯಲ್ಲೂ ಹೆಚ್ಚು ಸುಭದ್ರವಾಗಿರುತ್ತಿತ್ತು. ಅವನ ದೇಶಭಕ್ತಿಯು ಆಕ್ರಮಣಕಾರರಾದ ಮಹಮ್ಮದೀಯರನ್ನು ದೂರವಿರಿಸುತ್ತಿದ್ದಿತು.''[೨೮] ಈ ಪರಿಸ್ಥಿತಿಯಲ್ಲಿ, ಮೈಸೂರು ದೊರೆಗಳ ಪೂರ್ವಾಭ್ಯುದಯ ವಿವರದಿಂದ ತಿಳಿದುಬರುವಂತೆ ವೆಂಕಟಪತಿಯು ೧೬೧೦ರಲ್ಲಿ ಒಂದು ಆದೇಶವನ್ನು (ರಾಜನಿರೂಪ) ಹೊರಡಿಸಿ, ತಿರುಮಲನು ಅಧಿಕಾರದಿಂದ ಕೆಳಗಿಳಿಯಬೇಕೆಂದೂ ಅವನ ಬದಲಿಗೆ ಮೈಸೂರಿನ ರಾಜಒಡೆಯರು ರಾಜಪ್ರತಿನಿಧಿಯಾಗಿ, ಅಂದರೆ ವೈಸರಾಯಿಯಾಗಿ ಅಧಿಕಾರವನ್ನು ವಹಿಸಿಕೊಳ್ಳಬೇಕೆಂದೂ, ಎಲ್ಲಾ ಬಗೆಯ ರಕ್ಷಣೆಯನ್ನೂ ಅವರಿಗೆ ನೀಡಲಾಗುವುದೆಂದೂ (ಅಭಯಹಸ್ತ ನಿರೂಪ) ತಿಳಿಸಿದನು.[೨೯] ೧೬೧೨ರಲ್ಲಿ ವೆಂಕಟಪತಿಯು ಶ್ರೀರಂಗಪಟ್ಟಣವನ್ನು ರಾಜಒಡೆಯರಿಗೆ ಆನುವಂಶಿಕ ಸೊತ್ತಾಗಿ ನೀಡುವ ಒಂದು ತಾಮ್ರಫಲಕ ಸನ್ನದನ್ನು ಹೊರಡಿಸಿದನು. ದುರದೃಷ್ಟವಶಾತ್ ಈ ಶಾಸನವು ನಮಗೆ ದೊರೆತಿಲ್ಲ. ಆದರೆ ಸುದೈವದಿಂದ ಜನೇ ಚಾಮರಾಜ ಒಡೆಯರ್ (೧೬೧೭-೧೬೩೭) ಆಳಿಕೆಗೆ ಸಂಬಂಧಿಸಿದ ೧೬೨೨ರ ಒಂದು ದಾನಶಾಸನದಲ್ಲಿ

ಅದನ್ನು ಉಲ್ಲೇಖಿಸಲಾಗಿದೆ.[೬೦] ಹೆರಾಸ್ ಮುಂದುವರಿದು ಬರೆಯುತ್ತಾನೆ: ''ಕೊನೆಗೆ ತನ್ನ ಆಸ್ಥಾನಿಕರ ಸಲಹೆಯನ್ನು ಒಪ್ಪಿಕೊಂಡು, ಖಾಸಗಿಯಾಗಿ ವೆಂಕಟನಿಂದ ಚೆನ್ನಾಗಿ ಛೀಮಾರಿ ಹಾಕಿಸಿಕೊಂಡು ತಿರುಮಲನು ಸದ್ದಿಲ್ಲದೆ ತಲಕಾಡನ್ನು ಸೇರಿಬಿಟ್ಟನು.''[೬೧] ಸನ್ನಿವೇಶಗಳ ಈ ಹಿನ್ನೆಲೆಯಲ್ಲಿ ಮೈಸೂರು ರಾಜ್ಯವು ಉದಿಸಿತು, ಚಕ್ರವರ್ತಿಯಿಂದ ಅಭ್ಯುದಯದ ಹರಕೆಯನ್ನು ಪಡೆಯಿತು.

ಹೀಗೆ ಶಾಂತಿಯುತವಾಗಿ ಶ್ರೀರಂಗಪಟ್ಟಣದ ಕರ್ನಾಟಕ ರಾಜಪ್ರಾತಿನಿಧ್ಯವು ಮೈಸೂರಿನ ರಾಜರ ಹಸ್ತಗತವಾಯಿತು. ತಿರುಮಲನು ತಲಕಾಡಿಗೆ ಹೋಗಿ ನೆಲಸಿದ ಮೇಲೆ ರಾಜಒಡೆಯರು ಚಕ್ರವರ್ತಿಯ ಅನುಮತಿಯನ್ನು ಪಡೆದು ಶ್ರೀರಂಗಪಟ್ಟಣವನ್ನು ತಮ್ಮ ವಶಕ್ಕೆ ತೆಗೆದುಕೊಂಡು ಅಲ್ಲಿ ಉಂಟಾಗಿದ್ದ ತೆರಪನ್ನು ತುಂಬಿದರು. ಶ್ರೀರಂಗಪಟ್ಟಣದ ಪತನಾನಂತರವೂ ರಾಜಒಡೆಯರ ಪ್ರಭುತ್ವವನ್ನು ಒಪ್ಪಿಕೊಳ್ಳಲು ನಿರಾಕರಿಸಿದ ಹದಿನಾಡಿನ ನಂಜರಾಜಯ್ಯನನ್ನು ಸೋಲಿಸಿ ರಾಜಒಡೆಯರು ಅದನ್ನು ವಶಪಡಿಸಿಕೊಂಡರು. ೧೬೧೪-೧೫ ರಲ್ಲಿ ಹದಿನಾಡು ಪ್ರಾಂತದಲ್ಲಿ ಹಲವಾರು ವಿಜಯಯಾತ್ರೆಗಳನ್ನು ಮಾಡಿ ಈ ಪಾಳೆಯಪಟ್ಟನ್ನು ಅವಲಂಬಿಸಿಕೊಂಡಿದ್ದ ಹಲವು ಮುಖ್ಯಸ್ಥಳಗಳನ್ನು ಗೆದ್ದರು. ಉಮ್ಮತ್ತೂರು, ತೆರಕಣಾಂಬಿ, ಹರದನಹಳ್ಳಿ, ಮೂಗೂರು, ರಾಮಸಮುದ್ರ ಮೊದಲಾದ ಈ ಸ್ಥಳಗಳು ಮೈಸೂರು ರಾಜ್ಯಕ್ಕೆ ಸೇರಿಹೋದುವು.

ಕರ್ನಾಟಕದ ರಾಜಪ್ರಾತಿನಿಧ್ಯಕ್ಕೆ ಇಕ್ಕೇರಿ ಪ್ರಾಂತವೂ ಚನ್ನಪಟ್ಟಣದ ಪಾಳೆಯಪಟ್ಟೂ ಸೇರಿದ್ದುವು . ಶ್ರೀರಂಗಪಟ್ಟಣವನ್ನು ಆಕ್ರಮಿಸಿಕೊಂಡ ಮೇಲೆ ಮೈಸೂರು ಅರಸನು ಈ ಎರಡು ಪ್ರದೇಶಗಳನ್ನೂ ಗೆಲ್ಲಲು ಬಯಸಿದನು. ಆದ್ದರಿಂದ ಈ ದಿಕ್ಕಿನಲ್ಲಿ ಮೊದಲನೆಯ ಹೆಜ್ಜೆಯಾಗಿ, ಮೈಸೂರು ದೊರೆಗಳ ವಂಶಾವಳಿಯಿಂದ ತಿಳಿಯುವಂತೆ, ರಾಜಒಡೆಯರು ೧೬೧೫ರಲ್ಲಿ ಚನ್ನಪಟ್ಟಣದ ಜಗದೇವರಾಯನಿಂದ ನೇರಲಕೆರೆ, ಮತ್ತಿಕೆರೆ, ಚಿಣ್ಯ, ದುದ್ದ ಮತ್ತು ಪಂಪಾಪುರ ಇಂತಹ ಅನೇಕ ಮುಖ್ಯವಾದ ನಗರಗಳನ್ನು ವಶಪಡಿಸಿಕೊಂಡರು. ಇವೆಲ್ಲ ಇಂದಿನ ಮಂಡ್ಯ ಜಿಲ್ಲೆ ನಾಗಮಂಗಲ ತಾಲೂಕಿನಲ್ಲಿರುವ ಊರುಗಳು.[೬೨] ಅದೇ ವರ್ಷದ ಕೊನೆಗೆ ರಾಜಒಡೆಯರು ಚನ್ನಪಟ್ಟಣ ಸಂಸ್ಥಾನದ ಒಳಭಾಗಕ್ಕೆ ನುಗ್ಗಿದರು. ಕಿಕ್ಕೇರಿ ಮತ್ತು ಹೊಸಹೊಳಲುಗಳನ್ನು ಗೆದ್ದುಕೊಂಡರು.[೬೩] ೧೬೧೭ರಲ್ಲಿ ಪಿರಿಯಾಪಟ್ಟಣದ ನಂಜುಂಡ ಅರಸನಿಂದ ಮಾವತ್ತೂರನ್ನು ಗೆದ್ದುಕೊಂಡರು. ಹೀಗೆ ಇಕ್ಕೇರಿಯ ದಿಕ್ಕಿನಲ್ಲಿ ಸೇನಾ ಕ್ರಮವನ್ನು ಉದ್ಘಾಟಿಸಿದರು.

ಸೇನಾನಿರ್ವಹಣ ಜಾಣ್ಮೆ ಹಾಗೂ ರಾಜಕೀಯ ನೈಪುಣ್ಯಗಳಿಂದ ರಾಜಒಡೆಯರು, ರಾಜಕೀಯ ಗುಂಪುಗುಳಿತನದಿಂದ ಹರಿದು ಚೂರಾಗಿದ್ದ ಪ್ರಸ್ತುತ ಮೈಸೂರು ಜಿಲ್ಲೆಯ ಬಹುಭಾಗವನ್ನು ತಮ್ಮ ನಿಯಂತ್ರಣಕ್ಕೆ ತಂದುಕೊಳ್ಳುವಲ್ಲಿ ಸಮರ್ಥನಾದರು. ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡಲು ಸಮರ್ಥವಾದ ಆಡಳಿತೀಯ ಯಂತ್ರವನ್ನೂ ವ್ಯವಸ್ಥೆ ಮಾಡಿದರು. ಮೈಸೂರು ರಾಜ್ಯದ ಗಡಿಗಳನ್ನು ವಿಸ್ತರಿಸಿ ಅದರ ಮುಂದಿನ ಬೆಳವಣಿಗೆಯ ತಳಹದಿಯನ್ನು ಹಾಕಿದ ಶ್ರೇಯಸ್ಸು ರಾಜಒಡೆಯರಿಗೆ ಸಲ್ಲಬೇಕು. ೧೬೧೭ ಜೂನ್ ೨೦ ರಂದು ಅವರು ಮೇಲುಕೋಟೆಯಲ್ಲಿ ನಿಧನ ಹೊಂದಿದರು. ಬದುಕಿರುವಾಗಲೇ ಅವರ ಮೂವರು ಬೆಳೆದ ಮಕ್ಕಳೂ ತೀರಿಕೊಂಡುಬಿಟ್ಟಿದ್ದರು. ಕೊನೆಯವನಾದ ಇಮ್ಮಡಿ ರಾಜ ಇನ್ನೂ ಎಳೆ ಹಸುಳೆ. ಆದ್ದರಿಂದ ರಾಜಒಡೆಯರ ನಂತರ ಅವರ ಹಿರಿಯ ಮಗ ನರಸರಾಜ ಒಡೆಯನ ಮಗ ೯ನೇ ಚಾಮರಾಜ ಒಡೆಯರ್ ಪಟ್ಟಕ್ಕೆ ಬಂದನು.

೯ನೇ ಚಾಮರಾಜ ಒಡೆಯರ್ (೧೬೧೭-೧೬೩೭)

೧೬೧೭ರಲ್ಲಿ ರಾಜಒಡೆಯರ ನಂತರ ಸಿಂಹಾಸನಕ್ಕೆ ಬಂದ ಚಾಮರಾಜ ಒಡೆಯರ್ ತನ್ನ ತಾತನ ರಾಜ್ಯ ಸಂಘಟನಾ ಕಾರ್ಯವನ್ನು ಮುಂದುವರಿಸಿ ಇನ್ನೊಂದು ಹಂತಕ್ಕೆ ತಂದನು. ರಾಮದೇವರಾಯನ (೧೬೧೫-

೧೬೩೫) ಕಾಲದಲ್ಲಿ ವಿಜಯನಗರಕ್ಕೆ ಒದಗಿದ್ದ ಸಂಕಟಕರ ಪರಿಸ್ಥಿತಿಯನ್ನು ಇವನು ಸರಿಯಾಗಿ ಉಪಯೋಗಿಸಿಕೊಂಡನು. ಕಾವೇರಿಯಿಂದ ಆಚೆಗೆ ವಿಜಯವನ್ನು ವಿಸ್ತರಿಸಿ, ಹಲವು ಯುದ್ಧಗಳನ್ನು ಮಾಡಿ ೧೬೩೦ರ ವೇಳೆಗೆ ವಸ್ತುತಃ ಚನ್ನಪಟ್ಟಣ ವೈಸರಾಯಿ ವಲಯವನ್ನು ಪೂರ್ತಿಯಾಗಿ ಗೆದ್ದುಕೊಂಡನು. ವಿಜಯನಗರದ ಅರಸನಿಂದ ಅದಕ್ಕೆ ಪ್ರತಿಭಟನೆಯ ಸೊಲ್ಲು ಕೂಡ ಬರಲಿಲ್ಲ. ಚನ್ನಪಟ್ಟಣದ ರಾಜಪ್ರಾತಿನಿಧ್ಯವು ೧೫೮೦ರಲ್ಲಿ ಅಸ್ತಿತ್ವಕ್ಕೆ ಬಂದಿತು. ಪೆನುಗೊಂಡೆಯ ಮೇಲೆ ನಡೆದ ಕುತುಬ್‌ಶಾಹಿ ಧಾಳಿಗಳಲ್ಲಿ ೧೫೮೦ರಲ್ಲಿ ರಾಜನಾದ ಶ್ರೀರಂಗನು ಗೋಲ್ಕೊಂಡಾದ ಸೈನ್ಯಕ್ಕೆ ಸೆರೆಸಿಕ್ಕಿದನು. ಅವನನ್ನು ಶ್ರೀರಂಗನ ನಂಬಿಗಸ್ಥ ಸೇವಕನಾಗಿದ್ದ ರಾಜಾ ಪೆದ್ದ ಜಗದೇವರಾಯನು ಕಷ್ಟಪಟ್ಟು ಸೆರೆಯಿಂದ ಬಿಡಿಸಿದನು. ವಿಜಯನಗರ ಸಾಮ್ರಾಜ್ಯಕ್ಕೆ ಅವನು ಸಲ್ಲಿಸಿದ ಸೇವೆಗಾಗಿ ಜಗದೇವರಾಯನಿಗೆ ಒಂದು ಆಡಳಿತ ಘಟಕವನ್ನು ಉಡುಗೊರೆಯಾಗಿ ಕೊಡಲಾಯಿತು. ಮಂಡ್ಯ, ಬೆಂಗಳೂರು ಮತ್ತು ಬಾರಾಮಹಲ್ ಜಿಲ್ಲೆಗಳನ್ನು ಅದು ಒಳಗೊಂಡಿತ್ತು. ಅದರ ಕೇಂದ್ರ ಚನ್ನಪಟ್ಟಣ. ವಿಜಯನಗರವು ಈಗ ಈ ಪ್ರಾಂತವನ್ನು ಕಳೆದುಕೊಂಡಿತು. ಇನ್ನು ಮುಂದೆ ಜಗದೇವರಾಯನ ಅಧಿಕಾರ ಬಾರಾಮಹಲ್ ಜಿಲ್ಲೆಗಳಿಗೆ ಮಾತ್ರ ಸೀಮಿತವಾಯಿತು. ಆದರೆ ಚನ್ನಪಟ್ಟಣ ಪ್ರಾಂತವನ್ನು ಮೈಸೂರಿನೊಂದಿಗೆ ಕೂಡಿಸಿದುದರಿಂದ ಆಕ್ರಮಣಕಾರಿಗಳಾಗಿದ್ದ ಬಿಜಾಪುರದವರು ಮುಂದೆ ನುಗ್ಗದ ಹಾಗೆ ಪ್ರಬಲವಾದ ಶಕ್ತಿಯನ್ನು ಸ್ಥಾಪಿಸಿದಂತಾಯಿತು.

ಶ್ರೀರಂಗಪಟ್ಟಣ ಮತ್ತು ಚನ್ನಪಟ್ಟಣ ರಾಜಪ್ರಾತಿನಿಧ್ಯ ವಲಯಗಳು ಪತನಗೊಂಡುದರಿಂದಾಗಿ, ಕರ್ನಾಟಕದ ರಾಜಕೀಯ ರಂಗದಲ್ಲಿ ಮೂರು ಶಕ್ತಿಗಳು ಸ್ಪಷ್ಟವಾಗಿ ಉದಿಸಿದುದನ್ನು ನೋಡುತ್ತೇವೆ. ಅವು ಮೈಸೂರು, ಮಧುರೆ ಮತ್ತು ಬಿಜಾಪುರ. ಇಕ್ಕೇರಿಯೂ ಕೂಡಿ ಮಧುರೆ ಮತ್ತು ಇಕ್ಕೇರಿಗಳು ಪ್ರವರ್ಧಮಾನಕ್ಕೆ ಬರುತ್ತಿದ್ದ ಮೈಸೂರನ್ನು ಕಂಡು ಹೊಟ್ಟೆಕಿಚ್ಚು ಪಡುತ್ತಿದ್ದುವು. ಹೇಗಾದರೂ ಮಾಡಿ ಅದನ್ನು ಅಡಗಿಸಬೇಕೆಂದು ಸಾಧ್ಯವಿರುವ ಎಲ್ಲಾ ಪ್ರಯತ್ನಗಳನ್ನೂ ಮಾಡುತ್ತಿದ್ದರು. ಅನೇಕ ವೇಳೆ ಈ ಪ್ರಯತ್ನದಲ್ಲಿ ಅವರು ಒಂದುಗೂಡುತ್ತಿದ್ದರು. ಆದರೆ ಅವರು ಯಾವಾಗಲೂ ಮೈಸೂರು ಪ್ರದೇಶದ ಸ್ಥಳೀಯ ಪಾಳೆಯಗಾರರನ್ನು ಪ್ರಚೋದಿಸಿ ಅವರನ್ನು ಮೈಸೂರಿನ ಮೇಲೆ ಎತ್ತಿ ಕಟ್ಟುತ್ತಿದ್ದರು. ಹೀಗೆ ಒಮ್ಮೆ ಚಾಮರಾಜನು ಚನ್ನಪಟ್ಟಣದೊಂದಿಗೆ ಯುದ್ಧ ಮಾಡುತ್ತಿದ್ದಾಗ, ಮೈಸೂರಿನ ದಕ್ಷಿಣದ ತುದಿಯ ದಣಾಯಕನಕೋಟೆ, ಅರಿಕುಠಾರ (ಚಾಮರಾಜನಗರ), ಹೆಗ್ಗಡದೇವನಕೋಟೆ, ಕಟ್ಟೆಮಳಲವಾಡಿ ಮೊದಲಾದ ಸ್ಥಳಗಳ ಪಾಳೆಯಗಾರರು ಬಂಡಾಯದ ಬಾವುಟವನ್ನು ಹಾರಿಸಿದರು. ಅವಕ್ಕೆ ಪ್ರಚೋದನೆ ಬಂದದ್ದು ಮಧುರೆಯ ನಾಯಕನಿಂದ. ಬೆಳೆಯುತ್ತಿರುವ ಮೈಸೂರಿನ ಶಕ್ತಿಯಿಂದ ಅವನು ಹೆದರಿದ್ದನು. ದಕ್ಷಿಣದ ಅಂಚಿನ ಪಾಳೆಗಾರರನ್ನು ಎತ್ತಿಕಟ್ಟಿ ಮೈಸೂರನ್ನು ಅಸ್ಥಿರಗೊಳಿಸಲು ಅವನು ಸದಾ ಪ್ರಯತ್ನಿಸುತ್ತಿದ್ದನು. ಆ ಪ್ರದೇಶದಲ್ಲಿ ಅಭದ್ರತೆಯ ಪರಿಸ್ಥಿತಿಯನ್ನು ಉಂಟುಮಾಡುತ್ತಿದ್ದನು. ಮುಂದೆ ಒಂದು ದಿನ ಮೈಸೂರಿನವರ ಕಣ್ಣು ಮಧುರೆಯ ಮೇಲೆ ಬೀಳಬಹುದೆಂಬುದು ಅವನಿಗಿದ್ದ ಹೆದರಿಕೆ. ಆ ಕಾಲದ ರಾಜಕೀಯ ಘಟನೆಗಳ ಅತಿಮುಖ್ಯ ಪ್ರೇರಕಶಕ್ತಿ ರಾಜ್ಯವಿಸ್ತರಣ ನೀತಿ. ಆಗಿನ ರಾಜಕೀಯ ಇತಿಹಾಸದ ಬಹುಭಾಗವು ಯುದ್ಧ ಚಟುವಟಿಕೆಗಳಿಂದಲೇ ತುಂಬಿದೆ. ಹೆಚ್ಚು ವಿಸ್ತಾರವಾದ ರಾಜ್ಯವನ್ನು ಹೊಂದಿರಬೇಕೆಂಬ ಆಸೆ, ದ್ವೇಷ, ಮಾತ್ಸರ್ಯ, ಬಲ, ಪರಸ್ಪರ ಮಾರಕವಾದ ಕಾಳಗಗಳು ಇವು ಆಗಿನ ರಾಜಕಾರಣದ ಮುಖ್ಯ ಲಕ್ಷಣಗಳಾಗಿರುತ್ತಿದ್ದುವು. ರಾಜನ ಈ ಬಂಡಾಯಗಳನ್ನು ದಕ್ಷಿಣದಲ್ಲಿ ಅಡಗಿಸಿ, ಅದೇ ಸಮಯಕ್ಕೆ ಇಕ್ಕೇರಿಯ ನಾಯಕನಿಂದ ಪ್ರಚೋದಿತವಾಗಿದ್ದ ಇನ್ನೊಂದು ದಂಗೆಯನ್ನು ಅಡಗಿಸಲು ಉತ್ತರಕ್ಕೆ ಪಿರಿಯಾಪಟ್ಟಣದ ಕಡೆಗೆ ನಡೆದು, ಚಾಮರಾಜನು ಪಿರಿಯಾಪಟ್ಟಣದ ಕೋಟೆಗೆ ಮುತ್ತಿಗೆ ಹಾಕಿದನು. ನಂಜುಂಡಅರಸು ದೀರ್ಘಕಾಲ ಯುದ್ಧಮಾಡಿದ ಮೇಲೆ ಬೇರೆ ದಾರಿಯಿಲ್ಲದೆ ಮೈಸೂರಿನೊಂದಿಗೆ ಸಂಧಿ

ಮಾಡಿಕೊಳ್ಳಬೇಕಾಯಿತು. ಪ್ರತಿವರ್ಷ ಅವನು ಮೈಸೂರಿಗೆ ೩೦೦೦ ವರಹಗಳನ್ನು ಕಾಣಿಕೆಯಾಗಿ ಕೊಡಲು ಒಪ್ಪಿದನು. ಮೈಸೂರು ಸೈನ್ಯವು ಪಿರಿಯಾಪಟ್ಟಣದ ನಾಯಕನ ನೆರವಿಗೆ ಬಂದಿದ್ದ ಇಕ್ಕೇರಿಯ ಸೇನಾಧಿಪತಿ ಸಿಂಗಳಾರ್ಯನೆಂಬುವನನ್ನು ಯುದ್ಧರಂಗದಲ್ಲಿ ಸೆರೆಹಿಡಿದು ಅವನ ಮೂಗು ಕೊಯ್ಯಿಸಿ ಅಟ್ಟಿದನು. ಹೀಗೆ ಮಧುರೆ ಮತ್ತು ಇಕ್ಕೇರಿಗಳು ಜೊತೆಗೂಡಿ ಎಬ್ಬಿಸಿದ್ದ ದಂಗೆಗಳನ್ನು ಅತಿ ಸುಲಭವಾಗಿ ಅಡಗಿಸಿದ್ದಾಯಿತು. ಆ ಪ್ರಾಂತಗಳು ನೇರವಾಗಿ ಮೈಸೂರಿನ ಮೇಲೆ ಯುದ್ಧಕ್ಕೆ ಬರದಿದ್ದರೂ ಮೈಸೂರಿನ ದಕ್ಷಿಣದಲ್ಲಿ ಹಾಗೂ ವಾಯವ್ಯದಲ್ಲಿ ಒಂದು ಬಗೆಯ ಶೀತಲಸಮರ ನಡೆಯುತ್ತಲೇ ಇದ್ದುದನ್ನು ನೋಡುತ್ತೇವೆ. ನಮ್ಮ ಅಧ್ಯಯನದ ಅವಧಿಯ ರಾಜಕೀಯ ಇತಿಹಾಸದ ಸಾಮಾನ್ಯ ಲಕ್ಷಣ ಇದೇ. ಆದರೆ ಮೈಸೂರು ತನ್ನ ಗಡಿಗಳನ್ನು ವಿಸ್ತರಿಸಿಕೊಳ್ಳಲು ಆಕ್ರಮಣಕಾರಿ ಯುದ್ಧಗಳನ್ನು ಮುಂದುವರಿಸಿಯೇ ಇತ್ತು.

ಶ್ರೀರಂಗಪಟ್ಟಣದ ರಾಜಪ್ರಾತಿನಿಧ್ಯ ವಲಯದಲ್ಲಿ ಚನ್ನಪಟ್ಟಣ ಮತ್ತು ಇಕ್ಕೇರಿ ಈ ಎರಡೂ ಸಂಸ್ಥಾನಗಳು ಸೇರಿದ್ದುವು. ಈಗ ಚನ್ನಪಟ್ಟಣವನ್ನು ಗೆದ್ದುಕೊಂಡಾದ ಬಳಿಕ ಮೈಸೂರಿನ ರಾಜರು ಇಕ್ಕೇರಿಯನ್ನೂ ಸಂಪಾದಿಸಲು ಬಯಸಿದರು. ಅದಿಲ್ಲದೆ ಶ್ರೀರಂಗಪಟ್ಟಣದ ವೈಸರಾಯಿತ್ವವು ಪೂರ್ಣವಾಗುತ್ತಿರಲಿಲ್ಲ. ರಾಜಒಡೆಯರು ಆಗಲೆ ೧೬೧೭ರಲ್ಲೇ ಇಕ್ಕೇರಿಯ ದಿಕ್ಕಿನಲ್ಲಿ ತಮ್ಮ ರಾಜ್ಯವಿಸ್ತರಣ ನೀತಿಯನ್ನು ಕಾರ್ಯಗತಗೊಳಿಸಲು ತೊಡಗಿದ್ದು ಆಗಿತ್ತು. ಪಿರಿಯಾಪಟ್ಟಣದ ರಾಜ ನಂಜುಂಡಅರಸುವನ್ನು ಸೋಲಿಸಿ ಅವನಿಂದ ಮಾವತ್ತೂರನ್ನು ಗೆದ್ದುಕೊಂಡಿದ್ದರು. ಇದು ಇಕ್ಕೇರಿಯ ದಿಕ್ಕಿನಲ್ಲಿ ಮೈಸೂರಿನ ಮೊದಲನೆಯ ಹೆಜ್ಜೆಯಾಗಿತ್ತು. ಇಕ್ಕೇರಿಯನ್ನು ಪಡೆಯುವುದಕ್ಕೆ ಮುಂಚೆ ಪಿರಿಯಾಪಟ್ಟಣ, ಹೊಳೆನರಸೀಪುರ, ಬೇಲೂರು ಮೊದಲಾದ ಸ್ಥಳಗಳನ್ನು ಗೆಲ್ಲಬೇಕಾಗಿತ್ತು. ಚಾಮರಾಜನು ತನ್ನ ಪೂರ್ವಜರ ನೀತಿಯನ್ನೇ ಮುಂದುವರಿಸಿ, ಪಿರಿಯಾಪಟ್ಟಣದಲ್ಲಿ ನಂಜುಂಡಅರಸುವನ್ನು ಪರಾಭವಗೊಳಿಸಿ ತನ್ನ ದಳವಾಯಿ ವಿಕ್ರಮರಾಯನ ನೇತೃತ್ವದಲ್ಲಿ ಸೇನೆಯನ್ನು ಬೇಲೂರಿನ ಮೇಲೆ ಕಳುಹಿಸಿದನು. ವಿಕ್ರಮರಾಯನು ಅಸಮಾನ ಪರಾಕ್ರಮಿ, ಧೈರ್ಯಶಾಲಿ. ದಾರಿಯಲ್ಲಿ ಹೊಳೆನರಸೀಪುರವನ್ನು ಗೆದ್ದುಕೊಂಡು, ಬೇಲೂರಿನ ಅಧೀನದಲ್ಲಿದ್ದ ಹಲವು ಸ್ಥಳಗಳನ್ನು ವಶಕ್ಕೆ ತೆಗೆದುಕೊಂಡು ಬೇಲೂರುರಾಜ್ಯವನ್ನು ಪ್ರವೇಶಿಸಿದನು. ಅಲ್ಲಿಯ ಮುಖ್ಯ ಕೋಟೆಗಳಲ್ಲೊಂದಾದ ಚನ್ನರಾಯಪಟ್ಟಣಕ್ಕೆ ಮುತ್ತಿಗೆ ಹಾಕಿದನು. ಬೇಲೂರಿನ ರಾಜ ವೆಂಕಟಾದ್ರಿನಾಯಕನಿಗೆ ಈ ಧಾಳಿಯನ್ನು ತಡೆಯಲು ಸಾಧ್ಯವಾಗದೆ ಶರಣಾಗತನಾದನು. ಚನ್ನರಾಯಪಟ್ಟಣವನ್ನು ಮೈಸೂರಿಗೆ ಒಪ್ಪಿಸಿ ಯುದ್ಧವನ್ನು ಕೊನೆಗೊಳಿಸಿದನು.

ಮೊದಲನೆಯ ಸಲವಾಗಿ ಮೈಸೂರು ವಾಯವ್ಯದಲ್ಲಿ ರಾಜ್ಯವಿಸ್ತರಣೆಯನ್ನು ಉದ್ದೇಶವಾಗಿಟ್ಟುಕೊಂಡು ಇಕ್ಕೇರಿಯತ್ತ ಸಾಗಿದುದನ್ನು ನೋಡುತ್ತೇವೆ. ಚಾಮರಾಜ ಒಡೆಯನ ಕಾಲದಲ್ಲಿ ಮೈಸೂರಿನ ಸೈನ್ಯವು ಬೇಲೂರಿನವರೆಗೂ ಹೋಯಿತು. ಆದರೆ ತನ್ನ ಕನಸನ್ನು ಈಡೇರಿಸಿಕೊಳ್ಳಲು ಅವನು ಬದುಕಲಿಲ್ಲ. ಆ ಕಾರ್ಯವನ್ನು ತನ್ನ ಉತ್ತರಾಧಿಕಾರಿಗಳಿಗೆ ವಹಿಸಿ ೧೬೩೭ ಮೇ ೨ರಂದು ಕೊನೆಯುಸಿರೆಳೆದನು.

ಕಂಠೀರವ ನರಸರಾಜ ಒಡೆಯರ್ (೧೬೩೮-೧೬೫೯)

೫ನೇ ಚಾಮರಾಜ ಒಡೆಯರ್ ನಂತರ ಆತನ ದಾಯಾದಿ ಕಂಠೀರವ ನರಸರಾಜ ಒಡೆಯರ್ ಪಟ್ಟಕ್ಕೆ ಬಂದನು. ಅವನು ಬೆಟ್ಟದ ಚಾಮರಾಜ ಒಡೆಯನಿಗೆ ಹುರಾದ ಗುರುವಾಜಮ್ಮಣ್ಣಿಯಿಂದ ಜನಿಸಿದ ಮಗ (ರಾಜಒಡೆಯರ ತಮ್ಮ).

ಕಂಠೀರವನು ಸಿಂಹಾಸನವನ್ನೇರುವ ವೇಳೆಗೆ ದಕ್ಷಿಣದ ರಾಜಕೀಯ ಚಿತ್ರವು ಸಂಪೂರ್ಣವಾಗಿ ಬದಲಾಗಿತ್ತು. ಈ ಬದಲಾವಣೆಗಳು ಮೈಸೂರಿನ ರಾಜಕೀಯ ಅದೃಷ್ಟದ ಮೇಲೆ ಗಾಢವಾದ ಪ್ರಭಾವವನ್ನು

ಬೀರಿದ್ದುವು. ಮೊಗಲರು ದೌಲತಾಬಾದನ್ನು ವಶಪಡಿಸಿಕೊಂಡು ದಖ್ಖಿನ್ ಪ್ರಾಂತವನ್ನು ಸ್ಥಾಪಿಸಿದ್ದರು.[೬೪] ೧೬೩೬ರಲ್ಲಿ ಷಹಜಹಾನನು ಬಿಜಾಪುರ ಮತ್ತು ಗೋಲ್ಕೊಂಡಾಗಳೊಂದಿಗೆ ಒಂದು ಕರಾರು ಮಾಡಿಕೊಂಡನು. ಈ ಒಪ್ಪಂದವು ಈ ಎರಡೂ ದಖಿನ್ ಸುಲ್ತಾನಿಗಳನ್ನು ತತ್ಕಾಲಕ್ಕಾದರೂ ಮುಗಲರ ಹಿಡಿತದಿಂದ ತಪ್ಪಿಸಿತ್ತು. ಮುಗಲರಿಗೆ ಸಂಬಂಧಿಸಿದಂತೆ ಬಿಜಾಪುರಕ್ಕೆ ಶಾಂತಿಯ ಭರವಸೆ ದೊರಕಿತು. ಉತ್ತರದಲ್ಲಿ ಬೇರೆ ಯಾವುದೇ ಚಟುವಟಿಕೆಗಳಿಗೆ ಆಸ್ಪದವಿಲ್ಲದೆ ಹೋದರೂ ಬಿಜಾಪುರವು ದಕ್ಷಿಣದಲ್ಲಿ ಸೇನಾ ಚಟುವಟಿಕೆ ನಡೆಸಲು ಅಡ್ಡಿಯಿರಲಿಲ್ಲ. ಮುಗಲರಿಗೂ ದಖಿನ್ ಸುಲ್ತಾನರಿಗೂ ನಡುವೆ ವೈರವು ನಿಲುಗಡೆಯಾದದ್ದು ೧೭ನೇ ಶತಮಾನದ ಮೊದಲರ್ಧದಲ್ಲಿ ಕರ್ನಾಟಕದ ರಾಜಕಾರಣದ ಮೇಲೆ ದೂರಸ್ಪರ್ಶಿಯಾದ ಪರಿಣಾಮವನ್ನು ಉಂಟುಮಾಡಿತು. ಮುಗಲರ ದಾಳಿಗಳಿಂದ ತಪ್ಪಿಸಿಕೊಂಡ ದಖಿನ್ ಸುಲ್ತಾನರು ತಮ್ಮ ಗಮನವನ್ನು ದಕ್ಷಿಣಕ್ಕೂ ಪೂರ್ವಕ್ಕೂ ಹರಿಸಿದರು. ಇಬ್ಬರು ಸುಲ್ತಾನರೂ ಕೂಡಿ ಪೂರ್ವ ಮತ್ತು ಪಶ್ಚಿಮಗಳಿಂದ ವಿಜಯನಗರದ ಮೇಲೆ ಆಕ್ರಮಣಮಾಡಲು ಒಪ್ಪಂದ ಮಾಡಿಕೊಂಡರು: ಪೂರ್ವದಿಂದ ಗೋಲ್ಕೊಂಡಾ, ಪಶ್ಚಿಮದಿಂದ ಬಿಜಾಪುರ. ಹಿಂದೊಮ್ಮೆ ವಿಜಯನಗರ ಸಾಮ್ರಾಜ್ಯದ ಭಾಗವಾಗಿದ್ದ ಎಲ್ಲಾ ಪ್ರದೇಶಗಳನ್ನೂ ಆಕ್ರಮಿಸಿಕೊಂಡುಬಿಡಬೇಕೆನ್ನುವುದು ಅವರ ಉದ್ದೇಶವಾಗಿತ್ತು.[೬೫] ೩ನೇ ವೆಂಕಟ(೧೬೩೫-೧೬೪೨) ಸಿಂಹಾಸನದ ಮೇಲಿರುವವರೆಗೆ ಪೆನುಗೊಂಡ ರಾಜ್ಯವು ಸುಭದ್ರವಾಗಿತ್ತು. ಆದರೆ ಅವನ ನಂತರ ಬಂದ ೩ನೇ ಶ್ರೀರಂಗ (೧೬೪೨-೧೬೭೮)ನು ತನ್ನ ಸಾಮಂತರ ದಂಗೆಗಳನ್ನು ಅಡಗಿಸಲಿಕ್ಕಾಗಿ, ತನ್ನ ರಾಜ್ಯದ ಮೇಲೆ ಆಗುತ್ತಿದ್ದ ಶಾಹಿ ಧಾಳಿಗಳನ್ನು ತಡೆಯುವುದಕ್ಕಾಗಲಿ ಸಮರ್ಥನಾಗಿರಲಿಲ್ಲ. ಆಗ ಕಂಡುಬಂದ ಇನ್ನೊಂದು ಮುಖ್ಯವಾದ ಬೆಳವಣಿಗೆಯೆಂದರೆ, ಕಂಠೀರವನು ಪಟ್ಟಕ್ಕೆ ಬಂದುದರಿಂದ, ಮೈಸೂರಿನ ಚಟುವಟಿಕೆಗಳು ದಕ್ಷಿಣದಲ್ಲಿ ಹೆಚ್ಚು ಚುರುಕುಗೊಂಡುವು. ಅವನು ತನ್ನ ರಾಜ್ಯದ ದಕ್ಷಿಣದ ಗಡಿಯನ್ನು ಘಟ್ಟದ ಕೆಳಕ್ಕೆ ಒಯ್ದು ಮಧುರೆಯೊಂದಿಗೆ ಮುಖಾಮುಖಿಯಾಗುವ ಹಂತಕ್ಕೆ ತಂದನು. ಮೈಸೂರಿಗೂ ಮಧುರೆಗೂ ನಿರಂತರ ಯುದ್ಧ ಸರಣಿಯ ಕಾಲವು ಪ್ರಾರಂಭಗೊಂಡಿತು. ತಮ್ಮತಮ್ಮಲ್ಲೇ ಒಳಜಗಳಗಳಿಂದ ದಕ್ಷಿಣದ ನಾಯಕರು ಶಾಹಿ ಸುಲ್ತಾನರನ್ನು ಪ್ರತಿಭಟಿಸಲು ಅಶಕ್ತರಾದರು. ತಾವು ವಿಜಯನಗರದ ಅಂಕೆಯಲ್ಲಿರದೆ ಸ್ವತಂತ್ರರೆಂದು ಘೋಷಿಸಿದ್ದ ಕೆಲವು ನಾಯಕರು ತಾವಾಗಿ ಶಾಹಿ ಸುಲ್ತಾನರನ್ನು ಆಹ್ವಾನಿಸಿದ್ದೂ ಉಂಟು. ತಮ್ಮನ್ನು ರಕ್ಷಿಸಿಕೊಂಡು ಹೊರನೆರವಿನಿಂದ ತಮ್ಮ ರಾಜ್ಯವನ್ನು ವಿಸ್ತರಿಸಿಕೊಳ್ಳಲು ಪ್ರಯತ್ನಿಸಿದುದೂ ಉಂಟು.[೬೬]

ಅದಿಲ್‌ಶಾಹನ ಕರ್ನಾಟಕ ವಿಜಯ

ಮೊದಲೇ ಒಪ್ಪಂದವಾಗಿದ್ದ ಪ್ರಕಾರ ಗೋಲ್ಕೊಂಡಾ ಪೂರ್ವದಿಕ್ಕಿನಿಂದ ಧಾಳಿಯನ್ನು ಆರಂಭಿಸಿತು. ವಾಸ್ತವವಾಗಿ ಕೃಷ್ಣದೇವರಾಯ ನಿಧನಹೊಂದಿದಾಗಲೇ ಗೋಲ್ಕೊಂಡವು ತನ್ನ ಚಟುವಟಿಕೆಗಳನ್ನು ಪ್ರಾರಂಭಿಸಿಯಾಗಿತ್ತು. ಆಗ ಪೂರ್ವದಲ್ಲಿದ್ದ ದುರ್ಭೇದ್ಯವೂ ಘನತೆಯದೂ ಆದ ಕೊಂಡವೀಡುದುರ್ಗವನ್ನು ಅದು ಗೆದ್ದುಕೊಂಡಿತ್ತು. ಆಮೇಲೆ ನಿಧಾನವಾಗಿ ಎರಡು ದಿಕ್ಕುಗಳಲ್ಲಿ ತನ್ನ ರಾಜ್ಯವನ್ನು ವಿಸ್ತರಿಸತೊಡಗಿತ್ತು. ಒಂದು, ಪೂರ್ವದ ಕರಾವಳಿಯುದ್ದಕ್ಕೆ, ಇನ್ನೊಂದು ಒಳನಾಡಿನಲ್ಲಿ. ರಾಜಮಹೇಂದ್ರಿಯಿಂದ ದಕ್ಷಿಣದ ಕಾಳಹಸ್ತಿ ಮತ್ತು ಗಂಡಿಕೋಟವರೆಗೆ ಇಡೀ ಪ್ರಾಂತದ ಮೇಲೆ ತನ್ನ ಅಧಿಕಾರವನ್ನು ಅದು ಸ್ಥಾಪಿಸಿಕೊಂಡಿತ್ತು. ಗೋಲ್ಕೊಂಡಾದ ಈ ರಾಜ್ಯವಿಸ್ತರಣವು ಶ್ರೀರಂಗನ ಸ್ಥಿತಿಯನ್ನು ಚಂದ್ರಗಿರಿಯಲ್ಲೆ, ತುಂಬಾ ಅಪಾಯಕಾರಿಯನ್ನಾಗಿಸಿ, ರಾಜಧಾನಿಯನ್ನು ಅವನು ಮತ್ತೆ ವೆಲ್ಲೂರಿಗೆ ವರ್ಗಾಯಿಸಬೇಕಾಯಿತು. ಹಿಂದೆ ೧೫೯೨ರಲ್ಲಿ ಇಬ್ರಾಹಿಂ ಅದಿಲ್‌ಶಹಾನು ಪೆನುಗೊಂಡೆಯ ಮೇಲೆ ಮುತ್ತಿಗೆ ಹಾಕಿದ್ದನು. ಆಗ ವೆಂಕಟನು ಅದನ್ನು ಯಶಸ್ವಿಯಾಗಿ ವಿಫಲಗೊಳಿಸಿ ಅವರನ್ನು ಹಿಂದಕ್ಕಟ್ಟಿದ್ದನು. ಆದರೆ ತನ್ನ ಸಮಸ್ತ ಸಂಪತ್ತನ್ನೂ ಪೆನುಗೊಂಡೆಯನ್ನೂ ತನ್ನ ಸಮರ್ಥ ದಂಡನಾಯಕನಾಗಿದ್ದ ಮಾಟ್ಲ ಅನಂತ ಎನ್ನುವವನಿಗೆ ವಹಿಸಿಕೊಟ್ಟು

ಚಂದ್ರಗಿರಿಗೆ ಹೋಗಿ ಅಲ್ಲಿರುವುದು ಉತ್ತಮ ಎಂದು ಭಾವಿಸಿದನು.[೩೭] ಈಗ ಪೂರ್ವದಿಂದ ವಿಜಯನಗರದೊಳಕ್ಕೆ ಕುತುಬ್‌ಶಾಹಿಯು ನುಗ್ಗಿಬರುವಾಗ, ಶ್ರೀರಂಗನು ವೆಲ್ಲೂರಿನಲ್ಲಿ ರಕ್ಷಣೆ ಪಡೆಯಬೇಕಾಯಿತು. ಬಿಜಾಪುರವು ದಕ್ಷಿಣ ಮರಾಠಾ ಪ್ರದೇಶದಲ್ಲಿ ತನ್ನ ರಾಜ್ಯವನ್ನು ವಿಸ್ತರಿಸಿಕೊಂಡು ವಿಜಯನಗರದ ಮಲೆನಾಡು ಮತ್ತು ತುಳು ಪ್ರದೇಶಗಳ ಮೂಲಕ ಪಶ್ಚಿಮ ಕರಾವಳಿಯ ಮೇಲೆ ಹಿಡಿತವನ್ನು ಸಾಧಿಸಿಕೊಂಡಿತು. ಬಿಜಾಪುರಿಗಳು ಈ ಪ್ರದೇಶದಲ್ಲಿ ಮಂಗಳೂರಿನವರೆಗೂ ಯಶಸ್ವಿಯಾಗಿ ವಿಸ್ತರಿಸಿಕೊಂಡರು. ಆಮೇಲೆ ಮೈಸೂರಿನ ಮೈದಾನ ಪ್ರದೇಶವನ್ನು ಪ್ರವೇಶಿಸಿ ಸಿರಾವನ್ನು ವಶಪಡಿಸಿಕೊಂಡು ತುಮಕೂರಿನ ಮೂಲಕ ಸಾಗಿ ೧೬೩೮ರಲ್ಲಿ ಬೆಂಗಳೂರಿಗೆ ಮುತ್ತಿಗೆ ಹಾಕಿದರು. ಬೆಂಗಳೂರಿನಲ್ಲಿ ಆಳುತ್ತಿದ್ದ ೨ನೇ ಕೆಂಪೇಗೌಡನು ಯುದ್ಧದಲ್ಲಿ ಸೋತನು. ಬಿಜಾಪುರ ಸೈನ್ಯದ ದಳಪತಿಯಾಗಿದ್ದ ರಣದುಲ್ಲಾಖಾನನು ಬೆಂಗಳೂರನ್ನು ಆಕ್ರಮಿಸಿ ಕೆಂಪೇಗೌಡನನ್ನು ಬೆಂಗಳೂರಿನ ಪಶ್ಚಿಮಕ್ಕೆ ಒಳನಾಡಿನಲ್ಲಿರುವ ಮಾಗಡಿಗೆ ಕಳುಹಿಸಿದನು. ಅಲ್ಲಿ ಅವನು ಬಿಜಾಪುರ ಸುಲ್ತಾನನ ಸಾಮಂತನಾಗಿ ಆಳಿಕೊಂಡಿರಲು ಅವಕಾಶ ಕೊಟ್ಟನು.[೩೮] ಅದಿಲ್‌ಶಾಹನು ಬೆಂಗಳೂರಿನ ಜವಾಬ್ದಾರಿಯನ್ನು ಶಾಹಜಿಯ ವಶಕ್ಕೆ ಒಪ್ಪಿಸಿ ಶ್ರೀರಂಗಪಟ್ಟಣದ ಕಡೆಗೆ ಸಾಗಿದನು. ೧೬೩೮ ಡಿಸೆಂಬರಿನಲ್ಲಿ ಉಗ್ರವಾದ ಕಾಳಗವು ನಡೆಯಿತು. ಮಹಮದೀಯ ಮೂಲಗಳು ಯುದ್ಧದಲ್ಲಿ ರಣದುಲ್ಲಾಖಾನನಿಗೆ ವಿಜಯ ದೊರಕಿತೆಂದು ಹೇಳಿದರೆ,[೩೯] ಹಿಂದೂ ಮೂಲಗಳು ಅದಕ್ಕೆ ವ್ಯತಿರಿಕ್ತವಾಗಿ ಹೇಳುತ್ತವೆ.[೪೦] ಮೂಲಗಳನ್ನು ಸರಿಯಾಗಿ ವಿಮರ್ಶೆಮಾಡಿ ನೋಡಿದರೆ ಹಿಂದೂ ದಾಖಲೆಗಳು ಪಕ್ಷಪಾತ ಮಾಡಿವೆಯೆಂದು ತೋರುತ್ತದೆ. ಕಂಠೀರವನು ಯುದ್ಧದಲ್ಲಿ ಅಪಾರವಾಗಿ ನಷ್ಟವನ್ನನುಭವಿಸಿದನು. ಅದಿಲ್‌ಶಾಹನಿಗೆ ಕಾವೇರಿ ನದಿಯ ಉತ್ತರಕ್ಕಿದ್ದ ಪ್ರದೇಶವನ್ನು ಒಪ್ಪಿಸಿ,[೪೦] ಬಿಜಾಪುರಕ್ಕೆ ವಾರ್ಷಿಕ ಕಪ್ಪಕೊಡುವುದಾಗಿ ಒಪ್ಪಿ ಸಂಧಿಮಾಡಿಕೊಂಡನು.

ಆದರೆ ಕಂಠೀರವನು ಬೇಗ ಚೇತರಿಸಿಕೊಂಡನು. ಮಾರನೆಯ ವರ್ಷವೇ ಅದಿಲ್‌ಶಾಹನು ಎರಡನೆಯ ಸಾರಿ ಶ್ರೀರಂಗಪಟ್ಟಣದ ಮೇಲೆ ಧಾಳಿ ಮಾಡಿದಾಗ ಅವನನ್ನು ಸೋಲಿಸಿದನು.[೪೨] ೧೬೩೯ ರಿಂದ ೧೬೪೨ರ ವರೆಗೆ ಮತ್ತೆ ಮತ್ತೆ ಅದಿಲ್‌ಶಾಹನ ಆಕ್ರಮಣಗಳನ್ನು ಬಲವಾಗಿ ಎದುರಿಸಿ ಹಿಮ್ಮೆಟ್ಟಿಸಿದನು. ಶ್ರೀರಂಗಪಟ್ಟಣದ ರಾಜ್ಯದಲ್ಲಿ ಒಂದು ಚೂರನ್ನೂ ಕಬಳಿಸಲು ಸುಲ್ತಾನನಿಗೆ ಅವಕಾಶ ಕೊಡಲಿಲ್ಲ. ಹೀಗೆ ಮೈಸೂರು ರಾಜ್ಯದ ಮೇಲೆ ಪದೇ ಪದೇ ನಡೆದ ಅದಿಲ್‌ಶಾಹನ ಧಾಳಿಗಳಲ್ಲಿ ಕಂಠೀರವನು ಬಹು ಪರಾಕ್ರಮದಿಂದ ಶ್ರೀರಂಗಪಟ್ಟಣವನ್ನು ರಕ್ಷಿಸಿದ್ದು ಮೈಸೂರಿನ ಇತಿಹಾಸದಲ್ಲಿಯೇ ಒಂದು ರೋಮಾಂಚಕ ವಿಷಯವಾಗಿದೆ.

ಈ ಮಧ್ಯೆ ಅದಿಲ್‌ಶಾಹನು ತುಮಕೂರು, ಬೆಂಗಳೂರು ಮತ್ತು ಕೋಲಾರ ಜಿಲ್ಲೆಗಳ ಮೇಲೆ ತನ್ನ ಪ್ರಭುತ್ವವನ್ನು ಸ್ಥಾಪಿಸಿದ್ದನು. ಕೋಲಾರದ ಮೂಲಕ ಕರ್ನಾಟಕ ಪ್ರದೇಶವನ್ನು ಪ್ರವೇಶಿಸಿ ವೆಲ್ಲೂರಿನಲ್ಲಿ ಶ್ರೀರಂಗನ ಮೇಲೆ ಧಾಳಿಮಾಡಲು ಅನುಕೂಲ ಮಾಡಿಕೊಂಡನು. ವಾಸ್ತವವಾಗಿ ಮೈಸೂರು ಪ್ರದೇಶದಲ್ಲಿ ಅದಿಲ್‌ಶಾಹನು ನಡೆಸಿದ ಸೇನಾ ಕಾರ್ಯಕ್ರಮಗಳ ಮುಖ್ಯವಾದ ಗುರಿ ಅದೇ ಆಗಿತ್ತು. ಬೆಂಗಳೂರು ಅವನಿಗೆ ಬಿಜಾಪುರಕ್ಕೂ ಕರ್ನಾಟಕ ಪ್ರಾಂತಕ್ಕೂ ನಡುವೆ ಕೇಂದ್ರವಾಗಿ ಅಥವಾ ಹೆದ್ದಾರಿಯಾಗಿ ಪರಿಣಮಿಸಿತ್ತು. ಅಂಥದೊಂದು ನೆಲೆಯನ್ನು ಗೆದ್ದುಕೊಂಡದ್ದು ಅದಿಲ್‌ಶಾಹನ ದೊಡ್ಡ ಸಾಧನೆಯಾಗಿತ್ತು. ಕರ್ನಾಟಕದಲ್ಲಿ ಅವನು ನಡೆಸಿದ ಯುದ್ಧ ಚಟುವಟಿಕೆಗಳಿಗೆ ಅದರಿಂದ ತುಂಬಾ ಸಹಾಯವಾಯಿತು. ಆದರೆ ಕಂಠೀರವನನ್ನು ಸೋಲಿಸಿ ಬಿಜಾಪುರದ ಸಾಮಂತನನ್ನಾಗಿಸಲು ವಿಫಲನಾದುದರಿಂದ ಸುಲ್ತಾನನಿಗೆ ಬಹುಶಃ ತುಂಬಾ ದೊಡ್ಡ ನಿರಾಶೆಯಾಗಿರಬೇಕು. ಸರಿಯಾದ ಸಮಯದಲ್ಲಿ ಮೇಲೆರಗಿ ಕಂಠೀರವನ ಬೆಳೆಯುತ್ತಿದ್ದ ಶಕ್ತಿಯನ್ನು ಮೊಟಕುಮಾಡಲು ಅವನು ಹೊಂಚುಹಾಕುತ್ತಿದ್ದನು.

ಬಿಜಾಪುರದ ಸೈನ್ಯಗಳ ಮೇಲೆ ಕಂಠೀರವನು ಸಾಧಿಸಿದ ಯಶಸ್ಸು ಮಧುರೆಯ ನಾಯಕನಿಗೂ ಕಣ್ಣು ಕಿಸುರಾಯಿತು. ಕಂಠೀರವನು ಬಿಜಾಪುರದ ಸುಲ್ತಾನನ ಮೇಲೆ ಯುದ್ಧನಿರತನಾಗಿರುವಾಗ ಮೈಸೂರಿನ

ದಕ್ಷಿಣ ಭಾಗದಲ್ಲಿ ಒಂದು ಬಂಡಾಯವೆದ್ದಿತು. ಎಂದಿನಂತೆ ಇದು ಮಧುರೆಯ ನಾಯಕನ ಕುತಂತ್ರವಾಗಿತ್ತು. ಕಂಠೀರವನ ಗಮನವನ್ನು ಬೇರೆ ಕಡೆಗೆ ಸೆಳೆಯುವುದು ಅದರ ಉದ್ದೇಶ. ಆದಿಲ್‌ಶಾಹಿ ಸೈನ್ಯಗಳನ್ನು ಹಿಮ್ಮೆಟ್ಟಿಸಿದ ಮೇಲೆ ಕಂಠೀರವನು ಕರ್ನಾಟಕದ ಬೆಳವಣಿಗೆಗಳ ಕಡೆಗೆ ಗಮನ ಹರಿಸಿದನು. ಮಧುರೆಯ ನಾಯಕನ ಅಪ್ರಚೋದಿತ ಕುಕಾರ್ಯಗಳಿಂದ ರಾಜ್ಯವನ್ನು ಮುಕ್ತಗೊಳಿಸಲು ಕಂಠೀರವನು ಸಂಪೂರ್ಣವಾಗಿ ನಿರ್ಧರಿಸಿದ್ದನು. ಸಾಂಬಳ್ಳಿಯ ಘಟ್ಟ ಮುದಲಿಯಾರನ ಹಿರಿಯಮಗ ಪಟ್ಟದಯ್ಯನು ಮಧುರೆಯ ತಿರುಮಲ ನಾಯಕನ ಬೆಂಬಲದಿಂದ ಮೈಸೂರಿನ ಮೇಲೆ ಬಂಡಾಯವೆದ್ದು ಮೈಸೂರಿಗೆ ಸೇರಿದ ಡಣಾಯಕನಕೋಟೆಯ ಮೇಲೆ ಧಾಳಿ ಮಾಡಿದನು. ಕಂಠೀರವನು ೧೬೪೨ರಲ್ಲಿ ಈ ದಂಗೆಯನ್ನು ದಮನ ಮಾಡಿ ಮಧುರೆಯ ಸೈನ್ಯವನ್ನು ತಿರುಚಿನಾಪಳ್ಳಿಯವರೆಗೂ ಅಟ್ಟಿಸಿಕೊಂಡು ಹೋದನು. ದಾರಿಯಲ್ಲಿ ಮಧುರೆ ರಾಜ್ಯದ ಉತ್ತರದ ಗಡಿಯ ನಲ್ಲೂರು, ಚೆಂಗಪ್ಪಾಡಿ, ತಿರುಚೆಂಗೋಡು ಮೊದಲಾದ ಕೋಟೆಗಳನ್ನು ಗೆದ್ದುಕೊಂಡನು.

ಹಾಗೆಯೇ ಹೊಳೆನರಸೀಪುರದ ನಾಯಕನೂ ಪಿರಿಯಾಪಟ್ಟಣದ ರಾಜನೂ ಬಿಜಾಪುರ ಸುಲ್ತಾನನ ಪ್ರಚೋದನೆಗೆ ಸಿಕ್ಕಿ ಹಾಗೂ ಇಕ್ಕೇರಿಯ ನಾಯಕನೊಂದಿಗೆ ಸೇರಿಕೊಂಡು ಮೈಸೂರಿಗೆ ವಾರ್ಷಿಕ ಕಪ್ಪಕೊಡಲು ನಿರಾಕರಿಸಿದರು. ಕಂಠೀರವನನ್ನು ಸೋಲಿಸಲು ಮಾಡಿದ ಪ್ರಯತ್ನಗಳೆಲ್ಲವೂ ವಿಫಲವಾಗಿ ಆದಿಲ್‌ಶಾಹನೂ ಈ ಪ್ರದೇಶದಲ್ಲಿ ಶಾಂತಿಯನ್ನು ಹಾಳು ಮಾಡಿ ಅಭದ್ರತೆಯ ಪರಿಸ್ಥಿತಿಯನ್ನು ಉಂಟುಮಾಡಲು ಹವಣಿಸಿದನು. ಕಂಠೀರವನ ಆಸ್ಥಾನಕವಿ ಗೋವಿಂದವೈದ್ಯನು ಇದನ್ನು ಕುರಿತು ಬರೆಯುತ್ತಾನೆ: ಕರ್ನಾಟಕದ ಎಲ್ಲಾ ರಾಜಾಸ್ಥಾನಗಳಲ್ಲೂ ಆದಿಲ್‌ಶಾಹಿಯ ಏಜೆಂಟರು ಸೇರಿಕೊಂಡು ದೊರಕುವ ಪ್ರತಿಯೊಂದು ಅವಕಾಶವನ್ನೂ ಸ್ಥಳೀಯ ಪಾಳೆಯಗಾರರ ನೆರವಿನಿಂದ ಕಂಠೀರವನನ್ನು ಅಡಗಿಸಲು ಉಪಯೋಗಿಸಿಕೊಳ್ಳಲು ಚುರುಕಾಗಿ ಕೆಲಸ ಮಾಡುತ್ತಿದ್ದರು. ಹೀಗೆ ಕಂಠೀರವನು ಎಲ್ಲಾ ಕಡೆಗಳಿಂದಲೂ ಸಮಸ್ಯೆಗಳನ್ನು ಎದುರಿಸಬೇಕಾಗಿಬಂದರೂ ಧೈರ್ಯ ಪರಾಕ್ರಮಗಳಿಂದ ಈ ಸಮಸ್ಯೆಗಳನ್ನು ಯಶಸ್ವಿಯಾಗಿ ಎದುರಿಸಿ ತನ್ನ ಉಜ್ವಲ ವ್ಯಕ್ತಿತ್ವವನ್ನು ಮೆರೆದನು. ಹೊಳೆನರಸೀಪುರದ ನಾಯಕನು ಬಂಡಾಯವೆದ್ದುದು ೧೬೪೪ರಲ್ಲಿ. ಮೈಸೂರಿನ ದಳವಾಯಿ ನಂಜರಾಜಯ್ಯನು ಅದನ್ನು ಅಡಗಿಸಿದನು. ನಾಯಕನು ಕೊನೆಗೆ ಕಂಠೀರವನಿಗೆ ಶರಣಾಗಿ ಮೈಸೂರಿಗೆ ಪ್ರತಿವರ್ಷವೂ ಕಪ್ಪಕೊಡಲು ಸಮ್ಮತಿಸಿ ಅಕ್ಕಿಹೆಬ್ಬಾಳನ್ನು ಒಪ್ಪಿಸಿದನು.[೪೩]

ಪಿರಿಯಾಪಟ್ಟಣದ ನಂಜುಂಡ ಅರಸು ೧೬೪೫ರಲ್ಲಿ ದಂಗೆಯೆದ್ದನು. ಇದಕ್ಕೂ ಪ್ರಚೋದನೆ ಬಂದದ್ದು ಇಕ್ಕೇರಿಯ ಪಾಳೆಯಗಾರ ಮತ್ತು ಬಿಜಾಪುರದ ಸುಲ್ತಾನ ಇವರಿಂದ. ಸುಲ್ತಾನನು ಪಿರಿಯಾಪಟ್ಟಣದ ನೆರವಿಗೆ ಅಂಕುಶಖಾನ, ವೇದೋಜಿ, ಶಾಹಜಿ ಮೊದಲಾದವರ ನಾಯಕತ್ವದಲ್ಲಿ ಸೇನೆಯನ್ನು ಕಳುಹಿಸಿಕೊಟ್ಟನು.[೪೪] ಕಂಠೀರವನು ಸೇನೆಯೊಂದಿಗೆ ೧೬೪೫ ಏಪ್ರಿಲ್‌ನಲ್ಲಿ ದಳವಾಯಿ ನಂಜರಾಜಯ್ಯನನ್ನು ಕಳುಹಿಸಿಕೊಟ್ಟನು. ಒಂಬತ್ತು ತಿಂಗಳ ಕಾಲ ಬಿರುಸಾದ ಯುದ್ಧವು ನಡೆಯಿತು. ಮೈಸೂರು ಸೈನ್ಯವು ನಂಜುಂಡಅರಸುವನ್ನು ಅಲ್ಲಿಂದಿತ್ತ ಇಲ್ಲಿಂದತ್ತ ಅಟ್ಟಾಡಿ ಕೊನೆಗೆ ಸೋಲಿಸಿತು. ಪಿರಿಯಾಪಟ್ಟಣದ ಕೋಟೆಯನ್ನು ವಶಪಡಿಸಿಕೊಂಡು ೧೬೪೬ ಅಕ್ಟೋಬರ್ ೭ರಂದು ಮೈಸೂರಿನ ವಿಜಯಧ್ವಜವನ್ನು ಅಲ್ಲಿ ಹಾರಿಸಲಾಯಿತು.[೪೫] ನಂಜುಂಡ ಅರಸು ಯುದ್ಧ ಮಾಡುತ್ತಾ ಮೃತನಾದನು. ಕಂಠೀರವನು ಪಿರಿಯಾಪಟ್ಟಣವನ್ನು ಮೈಸೂರಿಗೆ ಸೇರಿಸಿಕೊಂಡನು.

ಹೊಳೆನರಸೀಪುರ ಮತ್ತು ಪಿರಿಯಾಪಟ್ಟಣಗಳ ಪತನದಿಂದ ಕಂಠೀರವನ ಮನಸ್ಸು ಹಗುರವಾಯಿತು. ರಾಜ್ಯದೊಳಗಿನ ಕಷ್ಟಗಳು ಹೀಗೆ ಪರಿಹಾರಗೊಂಡ ಮೇಲೆ ಅವನು ಉತ್ತರದ ಗಡಿಪ್ರದೇಶಗಳನ್ನು ಬಲಪಡಿಸುವ ಕಡೆಗೆ ಆಸಕ್ತಿವಹಿಸಿದನು. ಆದಿಲ್‌ಶಾಹನು ಶ್ರೀರಂಗನ ಮೇಲೆ ಯುದ್ಧ ಮಾಡಲು ಕರ್ನಾಟಕ ಪ್ರಾಂತದ ಮೇಲೆ ಮತ್ತೆ ಹೋಗಲಿದ್ದಾನೆ ಎಂದು ಕಂಠೀರವನು ಗ್ರಹಿಸಿದ್ದೇ ಈ ಆಸಕ್ತಿಗೆ ಕಾರಣವಾಗಿರಬೇಕು. ಈ ಸೇನಾಚಲನೆಯಲ್ಲಿ ಕರ್ನಾಟಕ ಪ್ರಾಂತಕ್ಕೆ ಹೋಗುವ ಮಧ್ಯೆ ಬಿಜಾಪುರವು ಮತ್ತೆ ಮೈಸೂರಿನ ಮೇಲೆ

ಆಕ್ರಮಣ ಮಾಡುವ ಸಾಧ್ಯತೆ ಇತ್ತು. ಆದ್ದರಿಂದ ಬಿಜಾಪುರವು ಮೈಸೂರಿನ ದಿಕ್ಕಿನಲ್ಲಿ ಹೆಜ್ಜೆಯಿಡದ ಹಾಗೆ ರಾಜ್ಯದ ಉತ್ತರದಿಕ್ಕಿನ ಗಡಿಗಳನ್ನು ಭದ್ರಪಡಿಸಲು ಅವನು ಬಯಸಿದನು. ಮೈಸೂರಿನ ವಿದೇಶನೀತಿಯ ಮೊದಲನೆಯ ಅನುಚ್ಛೇದವೇ ಬಿಜಾಪುರದ ಗಡಿಯುದ್ದಕ್ಕೂ ಎಚ್ಚರದಿಂದ ಗಮನಿಸುತ್ತಿರಬೇಕು ಎನ್ನುವುದು; ಈ ಕಡೆಯಿಂದ ಅದಿಲ್‌ಶಾಹಿ ಆಕ್ರಮಣವಾಗದ ಹಾಗೆ ಜಾಗರೂಕತೆ ವಹಿಸುವುದು. ಒಮ್ಮೆ ಆಂತರಿಕ ಸಮಸ್ಯೆಗಳು ಪರಿಹಾರವಾದ ಮೇಲೆ ಕಂಠೀರವನು ತನ್ನ ಸೈನ್ಯವನ್ನು ೧೬೪೬ ಏಪ್ರಿಲ್ ತಿಂಗಳಲ್ಲಿ ಉತ್ತರ ದಿಕ್ಕಿಗೆ ಕಳುಹಿಸಿ ಮೂರು ಅತಿಮುಖ್ಯ ಕೇಂದ್ರಗಳನ್ನು ವಶಪಡಿಸಿಕೊಂಡನು. ಮೈಸೂರಿನ ಉತ್ತರಕ್ಕಿದ್ದ, ಬಿಜಾಪುರಕ್ಕೆ ಸೇರಿದ ಕಡಬ, ಕಲ್ಲೂರು ಮತ್ತು ಮಾಯಿಸಮುದ್ರ (ಮಾಯಿಸಂದ್ರ) ಇವೇ ಆ ಮೂರು ಸ್ಥಳಗಳು. ಇದರಿಂದ ಮೈಸೂರಿನ ಉತ್ತರದ ಗಡಿಯು ತಕ್ಕಮಟ್ಟಿಗೆ ಸುಭದ್ರವಾಯಿತು.[೪೬]

ಕರ್ನಾಟಕದ ಈ ಬೆಳವಣಿಗೆಗಳು ಅದಿಲ್‌ಶಾಹನಿಗೆ ತುಂಬಾ ನಿರುತ್ಸಾಹಕರವಾಗಿದ್ದುವು. ರಾಜ್ಯ ಭಾಗಗಳ ನಷ್ಟ, ಕಂಠೀರವನ ಪ್ರಾಮುಖ್ಯವು ಹೆಚ್ಚುತ್ತಿದ್ದುದು, ಇವು ಸುಲ್ತಾನನಿಗೆ ಅಪಮಾನವಾದಂತೆ ಅನ್ನಿಸಿದುವು, ಅವನ ಪೂರ್ಣ ಗಮನವನ್ನು ಸೆಳೆದುವು.[೪೭] ಕಂಠೀರವನನ್ನು ಸೋಲಿಸಲು ಇನ್ನೊಂದು ಪ್ರಯತ್ನ ಮಾಡಬೇಕೆಂದು ಸುಲ್ತಾನನಿಗೆ ಆಸೆಯನ್ನು ಹುಟ್ಟಿಸಿದ ಇನ್ನೊಂದು ಅಂಶವೂ ಇತ್ತು. ಕಂಠೀರವನು ಆಗಲೆ ಇದನ್ನು ಮುಂದಾಗಿ ನಿರೀಕ್ಷಿಸಿ ಅವನ ಚಲನೆಯನ್ನೇ ತಡೆಗಟ್ಟುವುದಕ್ಕೆ ಬೇಕಾದ ಅಗತ್ಯ ಕ್ರಮಗಳನ್ನು ಕೈಗೊಂಡಿದ್ದನು. ಈ ವೇಳೆಗೆ ಇಬ್ಬರೂ ಸುಲ್ತಾನರು ಪೂರ್ವ ಮತ್ತು ಪಶ್ಚಿಮಗಳಲ್ಲಿ ಶ್ರೀರಂಗನ ಇಡೀ ರಾಜ್ಯವನ್ನು ಕಬಳಿಸಿದ್ದರು. ಈಗ ಶ್ರೀರಂಗನನ್ನು ಬಾರಾಮಹಲ್ ಪ್ರದೇಶದಲ್ಲಿ ಅಲುಗಾಡಿಸಲು ಅದಿಲ್‌ಶಾಹನು ಕರ್ನಾಟಕ ಪ್ರಾಂತಕ್ಕೆ ಹೋಗಬೇಕಾಗಿತ್ತು. ದಾರಿಯಲ್ಲಿ ಅವನು ತನ್ನ ದಳಪತಿ ಮುಸ್ತಫಾಖಾನನ ಕೈಕೆಳಗಿದ್ದ ೬೦,೦೦೦ ಬಲದ ಭಾರೀ ಸೇನೆಯೊಂದಿಗೆ ತುರುವೇಕೆರೆಯನ್ನು ಮುತ್ತಿದನು. ಈ ಸುದ್ದಿಯನ್ನು ಕೇಳಿ ಕಂಠೀರವನು ನಂಜರಾಜಯ್ಯನ ನೇತೃತ್ವದಲ್ಲಿ ಸೇನೆಯನ್ನು ಕಳುಹಿಸಿದನು. ಎರಡೂ ಸೈನ್ಯಗಳು ೧೬೪೭ರಲ್ಲಿ ತುರುವೇಕೆರೆಯ ಪಕ್ಕದಲ್ಲಿ ಎದುರಾದುವು. ಘೋರಯುದ್ಧವು ನಡೆದು ಅದಿಲ್‌ಶಾಹನ ಸೈನ್ಯವು ನಿರ್ನಾಮವಾಯಿತು. ಇದು ಶ್ರೀರಂಗಪಟ್ಟಣದ ರಾಜ್ಯದಲ್ಲಿ ನೆಲವನ್ನು ಗೆಲ್ಲಲು ಅದಿಲ್‌ಶಾಹನು ಮಾಡಿದ ಕೊಟ್ಟಕೊನೆಯ ಪ್ರಯತ್ನ. ಅಲ್ಲಿಂದ ಮುಂದಕ್ಕೆ ಕಂಠೀರವನ ಮೇಲೆ ಅವನು ಯುದ್ಧಕ್ಕೆ ಬರಲಿಲ್ಲ. ಆ ಸಮಯದಲ್ಲಿ ಶ್ರೀರಂಗಪಟ್ಟಣಕ್ಕೆ ಭೇಟಿನೀಡಿದ್ದ ಸಿನ್ನಾಮಿ ಎಂಬ ಇಟಲಿಯ ಮಿಶನರಿಯು ಬರುತ್ತಾನೆ: ''ಅವನು (ಕಂಠೀರವ) ದುರ್ಬಲರ ಮೇಲೆ ಮಾತ್ರ ಯುದ್ಧಮಾಡಲಿಲ್ಲ, ತುಂಬ ಬಲಶಾಲಿಗಳಾಗಿದ್ದ ಮುಸಲ್ಮಾನರ ಮೇಲೆಯೂ ಯುದ್ಧ ಮಾಡಿದನು. ಇದಲ್‌ಖಾನನ (ಅದಿಲ್‌ಶಾಹ) ಸಮೀಪ ಬಂಧುವೂ ಅವನ ಸೇನಾಪತಿಯೂ ಆಗಿದ್ದ ಮುಸ್ತಫಾಖಾನನು ೬೦,೦೦೦ ಪದಾತಿ ಸೇನೆಯೊಂದಿಗೆ ಮೆಸ್ಸೂರಿನ (ಮೈಸೂರು) ಮೇಲೆ ಯುದ್ಧಕ್ಕೆ ಬಂದನು; ಆದರೆ ಸೋತು ಎಲ್ಲಿಂದ ಬಂದಿದ್ದನೋ ಅಲ್ಲಿಗೆ ಹಿಮ್ಮೆಟ್ಟಿ ಓಡಬೇಕಾಯಿತು.'' ಸಿನ್ನಾಮಿ ಬರೆದಿರುವ ಈ ಮಾತನ್ನು ಕಂಠೀರವ ನರಸರಾಜನ ಆಸ್ಥಾನಕವಿ ಗೋವಿಂದವೈದ್ಯನು ಸ್ಥಿರೀಕರಿಸಿದ್ದಾನೆ.[೪೮]

೧೬೪೭ರಲ್ಲಿ ಅದಿಲ್‌ಶಾಹನು ತುರುವೇಕೆರೆಯಲ್ಲಿ ಸೋತುದರಿಂದ, ಬಿಜಾಪುರದ ಸೈನ್ಯವು ಕಂಠೀರವನ ರಾಜ್ಯಕ್ಕೆ ಪ್ರವೇಶ ಮಾಡುವುದು ತಪ್ಪಿತು. ಆದರೆ ಆ ಸೈನ್ಯಕ್ಕಿದ್ದ ಮುಖ್ಯ ಉದ್ದೇಶ ವೆಲ್ಲೂರಿನ ಮೇಲೆ ಸಾಗಿ ಶ್ರೀರಂಗನನ್ನು ಗೆಲ್ಲುವುದು. ಆದ್ದರಿಂದ ತುರುವೇಕೆರೆಯ ಸೋಲಿನಿಂದ ವಿಚಲಿತನಾಗದೆ ಅದಿಲ್‌ಶಾಹನು ಶಿವಗಂಗೆಯ ಮೂಲಕ ಸಾಗಿ ಜಗದೇವರಾಯನ ರಾಜ್ಯದ ಮೇಲೆ ಧಾಳಿ ಮಾಡಿದನು. ಜಗದೇವರಾಯನ ರಾಜ್ಯವು ಬೆಂಗಳೂರಿನ ಆಗ್ನೇಯಕ್ಕಿದ್ದು, ವೀರಭದ್ರದುರ್ಗ, ಕನಕಗಿರಿ, ರಾಯದುರ್ಗ, ಕಾವೇರಿಪಟ್ಟಣಂ, ರತ್ನಗಿರಿ, ಅರ್ಜುನಕೋಟೆ, ಪೆನ್ನಾಗರ, ಡೆಂಕಣಿಕೋಟೆ, ಧರ್ಮಪುರಿ ಮೊದಲಾದ ಕೋಟೆಗಳನ್ನು

ಒಳಗೊಂಡಿದ್ದಿತು. ಜಗದೇವರಾಯನು ಶ್ರೀರಂಗನ ನಿಷ್ಠಾವಂತ ಸಾಮಂತನಾಗಿ ಇನ್ನೂ ಉಳಿಸಿಕೊಂಡಿದ್ದ ಪ್ರಾಂತ ಇಷ್ಟೇ. ೧೬೩೦ರಲ್ಲಿ ಚನ್ನಪಟ್ಟಣವು ಪತನ ಹೊಂದಿದ ಮೇಲೆ ಜಗದೇವರಾಯನ ಅಧಿಕಾರ ಇಷ್ಟಕ್ಕೆ ಸೀಮಿತವಾಗಿತ್ತು. ಅದಿಲ್‌ಶಾಹನು ಈ ಪ್ರಾಂತವನ್ನು ಗೆದ್ದು ಶ್ರೀರಂಗನನ್ನು ನಿರ್ನಾಮ ಮಾಡಿಬಿಡಲು ಬಹು ಕಾತರನಾಗಿದ್ದನು. ಮುಸ್ತಫಾಖಾನನು ೧೬೪೭ರಲ್ಲಿ ೧,೦೦,೦೦೦ ಸೈನಿಕರು ಮತ್ತು ೧೨,೦೦೦ ಕುದುರೆಗಳಿದ್ದ ಭಾರೀ ಸೈನ್ಯದೊಂದಿಗೆ ಮಾಸ್ತಿಗೆ ಬಂದನು. ಶ್ರೀರಂಗನು ತನಗೆ ಬಹಳ ವಿರೋಧವಾಗಿದ್ದ ಪರಿಸ್ಥಿತಿಯಲ್ಲಿ ಯುದ್ಧ ಮಾಡಬೇಕಾಯಿತು. ಈ ಬಿಕ್ಕಟ್ಟಿನ ಸಮಯದಲ್ಲೇ ಅವನ ಸಾಮಂತರಾಗಿದ್ದ ತಂಜಾವೂರು, ಮಧುರೆ ಮತ್ತು ಜಿಂಜಿಗಳ ನಾಯಕರು ಅವನನ್ನು ತೊರೆದುಹೋದರು. ಅವರಲ್ಲಿ ಕೆಲವರು ಶತ್ರುವಿನೊಂದಿಗೆ ಸೇರಿಕೊಂಡರು, ಕಂಠೀರವನು ತಟಸ್ಥನಾಗಿ ಉಳಿದನು. ಬಹುಶಃ ಅವನು ರಾಜಕೀಯ ಸ್ವಾತಂತ್ರ್ಯವನ್ನು ತನ್ನ ಲಕ್ಷ್ಯವನ್ನಾಗಿ ಹೊಂದಿದ್ದನು ಎಂದು ತೋರುತ್ತದೆ. ಶ್ರೀರಂಗನು ತನ್ನ ಸೈನ್ಯದೊಂದಿಗೆ ಯುದ್ಧರಂಗಕ್ಕೆ ನುಗ್ಗಿದನು. ಆದರೆ ಮಾಸ್ತಿ ಮತ್ತು ವೀರಭದ್ರದುರ್ಗಗಳಲ್ಲಿ ಸಂಪೂರ್ಣವಾಗಿ ಸೋಲನ್ನು ಅನುಭವಿಸಬೇಕಾಯಿತು.[೪೯] ಈ ಮಧ್ಯೆ ಪೂರ್ವ ಕರಾವಳಿಯಲ್ಲಿ ಬರುತ್ತಿದ್ದ ಗೋಲ್ಕೊಂಡಾದ ಸೇನೆಯು ವಿನುಕೊಂಡಾ, ಉದಯಗಿರಿ, ಮಸಲಿಪಟ್ಟಣ, ಓನ್‌ಗೋಲ್, ನೆಲ್ಲೂರು ಮತ್ತು ಚಿತ್ತೂರುಗಳನ್ನು ಗೆದ್ದು ಶ್ರೀರಂಗನ ರಾಜ್ಯವನ್ನು ಪ್ರವೇಶಿಸಿತು. ಹೀಗೆ, ಆ ವೇಳೆಗೆ ವೆಲ್ಲೂರು ಮತ್ತು ಚಂದ್ರಗಿರಿಗಳ ಸುತ್ತಣ ಪ್ರದೇಶಕ್ಕೆ ಕುಗ್ಗಿ ಹೋಗಿದ್ದ ವಿಜಯನಗರ ರಾಜ್ಯವನ್ನು ಸುತ್ತುಗಟ್ಟಿ ಎರಡೂ ಸೈನ್ಯಗಳು ೧೬೪೭ ಫೆಬ್ರವರಿಯಲ್ಲಿ ವೆಲ್ಲೂರಿನ ಮೇಲೆ ಮುಗಿಬಿದ್ದುವು. ಅಲ್ಲಿ ನಡೆದ ನಿರ್ಣಾಯಕ ಯುದ್ಧದಲ್ಲಿ ಶ್ರೀರಂಗನು ಸಂಪೂರ್ಣವಾಗಿ ಸೋತುಹೋದನು. ಯುದ್ಧದ ನಷ್ಟಕ್ಕಾಗಿ ೨೦ಲಕ್ಷ ಹಣವನ್ನೂ ೧೫೦ ಆನೆಗಳನ್ನೂ ಅದಿಲ್‌ಶಾಹನಿಗೆ ಕೊಡಲು ಸಮ್ಮತಿಸಿ ಸಂಧಿ ಮಾಡಿಕೊಂಡನು. ಈ ಯುದ್ಧವು ನಿಜವಾಗಿ ಶ್ರೀರಂಗನಿಗೆ ಮಾರಕವಾಗಿ ಪರಿಣಮಿಸಿತು. ಜಗದೇವರಾಯನ ಪ್ರಾಂತವನ್ನು ಅವನು ಸಂಪೂರ್ಣವಾಗಿ ಕಳೆದುಕೊಂಡನು. ಹೀಗೆ ಕರ್ನಾಟಕದ ಮತ್ತು ಬಾರಾಮಹಲ್‌ನ ಅನೇಕ ನಾಯಕರು, ಶ್ರೀರಂಗನೂ ಸೇರಿ ಅದಿಲ್‌ಶಾಹನಿಗೆ ಅಧೀನರಾದರೂ ಕೂಡ ಕಂಠೀರವನು ಮೈಸೂರಿನ ಘನತೆ ಗೌರವವನ್ನು ಉಳಿಸಿಕೊಳ್ಳುವುದರಲ್ಲಿ ಯಶಸ್ವಿಯಾದನು. ಮೈಸೂರಿನ ಮೇಲೆ ನಡೆದ ಅದಿಲ್‌ಶಾಹಿ ದಾಳಿಗಳನ್ನು ಹಿಮ್ಮೆಟ್ಟಿಸಿದನು. ಒಮ್ಮೆ ದೊಡ್ಡ ಸಾಮ್ರಾಜ್ಯದ ಚಕ್ರವರ್ತಿಯಾಗಿದ್ದ ವಿಜಯನಗರದ ಅರಸನು ಈಗ ಬಿಜಾಪುರ ಸುಲ್ತಾನನ ಸಾಮಂತನಾದನು.

ಸಾಮ್ರಾಜ್ಯವನ್ನು ಮರಳಿ ಗಳಿಸಲು ಶ್ರೀರಂಗನ ಪ್ರಯತ್ನಗಳು

ಜೆಸೂಟ್ ಪತ್ರಗಳ ಪ್ರಕಾರ, ಈ ಬಿಕ್ಕಟ್ಟಿನ ಸಮಯದಲ್ಲಿ ಶ್ರೀರಂಗನು ಗತ ಸಾಮ್ರಾಜ್ಯದ ಸಾಮಂತರೆಲ್ಲರನ್ನೂ ಒಂದುಗೂಡಿಸಿ ಒಂದು ಒಕ್ಕೂಟವನ್ನು ರಚಿಸುವ ಪ್ರಯತ್ನ ಮಾಡಿದನು. ಆದರೆ ಮಧುರೆಯ ತಿರುಮಲನಾಯಕನು ಶ್ರೀರಂಗನಿಗೆ ಬೆಂಬಲ ನೀಡುವುದಕ್ಕೆ ಬದಲಾಗಿ, ಸಾಮ್ರಾಜ್ಯವನ್ನು ಪುನರುಜ್ಜೀವನಗೊಳಿಸುವ ಅವನ ಪ್ರಯತ್ನಕ್ಕೆ ಭಂಗತಂದನು. ಬಿಜಾಪುರ ಸುಲ್ತಾನನ ಮಾತು ಕೇಳಿಕೊಂಡು ವೈರವನ್ನೇ ಸಾಧಿಸಿದನು. ಇದರ ತತ್‌ಕ್ಷಣದ ಪರಿಣಾಮ ಜಿಂಜಿಯನ್ನು ಬಿಜಾಪುರವು ವಶಪಡಿಸಿಕೊಂಡದ್ದು ಅದಿಲ್‌ಶಾಹನ ವಿಶ್ವಾಸಘಾತಕತೆ ವ್ಯಕ್ತವಾಯಿತು.

ವಾಸ್ತವವಾಗಿ ಬಿಜಾಪುರ ಮತ್ತು ಗೋಲ್ಕೊಂಡಗಳಿಗೆ ವಿರುದ್ಧವಾಗಿ ಔರಂಗಜೇಬನು ಬಿರುಸಿನ ಕಾರ್ಯಾಚರಣೆ ಪ್ರಾರಂಭಿಸಿದ್ದ ಕಾಲ ಅದು. ಶ್ರೀರಂಗನು ಕಲ್ಪಿಸಿದ್ದಂತೆ ಹಿಂದೂ ಅರಸರ ಒಂದು ಒಕ್ಕೂಟವು ನಿಜವಾಗಿ ಒಳ್ಳೆಯ ಫಲವನ್ನು ಕೊಡಬಹುದಾಗಿತ್ತು. ಏಕೆಂದರೆ ದಖ್ಖನಿನ ಸುಲ್ತಾನರು ಔರಂಗಜೇಬನಿಂದ ಬಂದಿದ್ದ ಹೆಚ್ಚಿನ ಅಪಾಯದ ಕಡೆಗೆ ಗಮನ ಹರಿಸಬೇಕಾಗಿತ್ತು. ದಖ್ಖನಿನ ಸುಲ್ತಾನರಿಗೆ ಬಂದೊದಗಿದ್ದ ಅಪಾಯದ ಸ್ಪಷ್ಟ ಅರಿವು ಮೈಸೂರಿನ ಅರಸರಿಗಾಗಲಿ ಮಧುರೆಯ ನಾಯಕರಿಗಾಗಲಿ ಇರಲಿಲ್ಲವೆಂದು

ಯೋಚಿಸುವುದೇ ಕಷ್ಟವಾಗುತ್ತದೆ. ಹಿಂದೂ ಅರಸರ ಐಕ್ಯವು ನಿಜವಾಗಿಯೂ ಗೆಲುವಿನ ಅವಕಾಶಗಳನ್ನು ಹೊಂದಿತ್ತು. ಅಂಥದ್ದೊಂದು ಒಕ್ಕೂಟಕ್ಕೆ ವಿರುದ್ಧವಾಗಿದ್ದ ನಿಜವಾದ ಕಷ್ಟವೆಂದರೆ, ಮೈಸೂರಿಗೂ ಮಧುರೆಗೂ ನಡುವೆ ಇದ್ದ ವಿರಸ. ಮೈಸೂರು ವಿಜಯನಗರದ ಬಗೆಗೆ ಮತ್ತು ಶ್ರೀರಂಗನ ಅಪೇಕ್ಷೆಯ ಬಗೆಗೆ ಎಳ್ಳಷ್ಟೂ ಸಹಾನುಭೂತಿಯಿರದ ನೀತಿಯನ್ನು ಅನುಸರಿಸಿತ್ತು. ಮಧುರೆಯ ನಾಯಕನು ಕಂಠೀರವ ನರಸರಾಜನ ಆಕ್ರಮಣದ ಭೀತಿಯಿಂದ ಶ್ರೀರಂಗನ ಶತ್ರುಗಳಿಗೆ ಸಕ್ರಿಯ ಬೆಂಬಲವನ್ನು ನೀಡುವ ನೀತಿಯನ್ನು ಅನುಸರಿಸುತ್ತಿದ್ದನು. ಹಾಗಾಗಿ ವಿಜಯನಗರ ಸಾಮ್ರಾಜ್ಯಕ್ಕೂ ಅವನಿಗೂ ಹಿತಾಸಕ್ತಿಗಳ ವಿರೋಧವುಂಟಾಗಿತ್ತು. ಹೀಗೆ ಮೈಸೂರು, ಮಧುರೆ ಇಬ್ಬರೂ ತಮ್ಮ ಆಸಕ್ತಿ ಹೇಗೆ ಪ್ರಚೋದಿಸಿತೋ ಹಾಗೆ ನಡೆದುಕೊಂಡರು. ಇದು ವಿಜಯನಗರ ಸಾಮ್ರಾಜ್ಯದ ಪುನರುಜ್ಜೀವನ ಯೋಜನೆಗೆ ಅಡ್ಡಿಯಾಯಿತು. ಹೀಗಾಗಿ, ಶ್ರೀರಂಗನಿಗೆ ತಾನು ಯೋಚಿಸಿದ್ದನ್ನು ಕಾರ್ಯಗತಗೊಳಿಸಲು ಅವನ ಸಾಮಂತರಿಂದ ವಾಸ್ತವವಾಗಿ ಸೂಕ್ತ ಪ್ರತಿಕ್ರಿಯೆ ದೊರಕಲೇ ಇಲ್ಲ.

ಕಂಠೀರವನ ಆಸ್ಥಾನಕ್ಕೆ ಶ್ರೀರಂಗನ ಪಲಾಯನ

ಯಾರೂ ತನಗೆ ಹೃತ್ಪೂರ್ವಕ ಬೆಂಬಲ ಕೊಡದುದನ್ನು ನೋಡಿ ಶ್ರೀರಂಗನು, ತಂಜಾವೂರಿನ ಉತ್ತರಕ್ಕಿದ್ದ ಕಳ್ಳರ ಕಾಡಿನಲ್ಲಿ (ಕಳ್ಳನ್) ತನ್ನ ಆಸ್ಥಾನವನ್ನು ಸ್ಥಾಪಿಸಿದನು. ಬೇಕಾದಷ್ಟು ಅನನುಕೂಲಗಳನ್ನು ಅನುಭವಿಸಿದನು. ಆಸ್ಥಾನಿಕರೆಲ್ಲರೂ ಬೇಗನೆ ಅವನನ್ನು ತೊರೆದು ಹೊರಟುಹೋದರು. ಹಿಂದೊಮ್ಮೆ ಭಾರತದಲ್ಲಿ ಅತ್ಯಂತ ಶ್ರೀಮಂತನಾಗಿದ್ದ ಈ ಮಹಾನ್ ಚಕ್ರವರ್ತಿಯು, ಇಂದು ತನ್ನ ಸಿಂಹಾಸನಕ್ಕೆ ಸಾಮಂತನಾಗಿದ್ದ ಮೈಸೂರು ಅರಸನ ಬಳಿ ನೆಲವನ್ನು ಕೋರಬೇಕಾದ ಸ್ಥಿತಿ ಬಂದಿತು.[೬೦] ಕಂಠೀರವನು ಶ್ರೀರಂಗನಿಗೆ ಆಶ್ರಯವನ್ನು ಕೊಟ್ಟು ಕೆಲವು ವರ್ಷಗಳ ಕಾಲ ಅವನನ್ನು ಚೆನ್ನಾಗಿ ನೋಡಿಕೊಂಡನು. ಅದು ಅವನ ಧ್ಯೇಯವನ್ನು ಈಡೇರಿಸುವುದಕ್ಕಾಗಿಯಲ್ಲ, ತನ್ನದೇ ಆಶೋತ್ತರಗಳನ್ನು ಪೂರೈಸಿಕೊಳ್ಳುವ ಸಲುವಾಗಿ,[೬೧] ಹೀಗೆ ಶ್ರೀರಂಗನು ನೆಲೆಯಿಲ್ಲದೆ ಅಲೆಯುತ್ತಿರುವಾಗ ದಖ್ಖನಿನ ಸುಲ್ತಾನರು ಅವನ ರಾಜ್ಯವನ್ನು ಪೂರ್ತಿ ಗೆದ್ದುಕೊಂಡರು. ಕಂಠೀರವನು ತನ್ನ ರಾಜ್ಯದಲ್ಲಿ ಶ್ರೀರಂಗನು ಇರುವ ಪರಿಸ್ಥಿತಿಯ ಸದುಪಯೋಗ ಮಾಡಿಕೊಳ್ಳಲು ಬಯಸಿದನು. ಸಿರಾದ ಸಿದ್ದಿ ರೈಹಾನನೊಂದಿಗೆ ಅವನು ಮೈತ್ರಿ ಒಪ್ಪಂದ ಮಾಡಿಕೊಂಡನು. ಇಷ್ಟರಲ್ಲಿ ಬಿಜಾಪುರ ಮತ್ತು ಗೋಲ್ಕೊಂಡಾ ಯುದ್ಧದ ಫಲಗಳ ಹಂಚಿಕೆಯ ವಿಷಯದಲ್ಲಿ ಭಿನ್ನಾಭಿಪ್ರಾಯ ಬಂದು ಬೇರೆ ಬೇರೆಯಾಗಿದ್ದರು. ಶ್ರೀರಂಗನು ಬಿಜಾಪುರಿಗಳನ್ನು ಕರ್ನಾಟಕದಿಂದ ಸಂಪೂರ್ಣವಾಗಿ ಹೊಡೆದಟ್ಟುವ ದೃಢನಿರ್ಧಾರ ಮಾಡಿದ್ದ ಮೀರ್‌ಜುಮ್ಲಾನನ್ನು ಕೂಡಿಕೊಂಡನು.[೬೨] ಕಂಠೀರವನು ಈ ಅವಕಾಶವನ್ನು ಉಪಯೋಗಿಸಿಕೊಂಡು ನವೆಂಬರ್ ೧೬೫೨ ಮತ್ತು ಜನವರಿ ೧೬೫೩ರ ನಡುವೆ ಕರ್ನಾಟಕದ ಮೇಲೆ ದಂಡಯಾತ್ರೆ ಮಾಡಿದನು. ಜಗದೇವರಾಯನ ರಾಜ್ಯಕ್ಕೆ ಸೇರಿದ್ದ ರತ್ನಗಿರಿ, ವೀರಭದ್ರದುರ್ಗ, ಮೇಲಗಿರಿ, ಡೆಂಕಣಿಕೋಟೆ, ಧರ್ಮಪುರಿ ಮೊದಲಾದ ಎಲ್ಲಾ ಕೋಟೆಗಳನ್ನು ಗೆದ್ದು ಸ್ವಾಧೀನಪಡಿಸಿಕೊಂಡನು. ಮಿತ್ರರ ನೆರವಿನಿಂದ ಮಧುರೆಯ ಹಾದಿಯನ್ನು ಸುಗಮಗೊಳಿಸಿಕೊಳ್ಳುವುದು ಅವನ ಉದ್ದೇಶವೆನ್ನುವುದು ಸ್ಪಷ್ಟವಾಗಿತ್ತು.

ಬಾರಾಮಹಲ್‌ನಲ್ಲಿ ಕಂಠೀರವನ ಆಕ್ರಮಣದ ಸುದ್ದಿ ಕೇಳಿ ಭೀತನಾದ ತಿರುಮಲನಾಯಕನು ಆದಿಲ್‌ಶಾಹನಿಗೆ ಒಂದು ಮನವಿ ಕಳಿಸಿ ಶ್ರೀರಂಗನ ಮೇಲೆ ಯುದ್ಧವನ್ನು ಘೋಷಿಸಬೇಕೆಂದು ಕೇಳಿಕೊಂಡನು.[೬೩] ಬಿಜಾಪುರ ಸೈನ್ಯವು, ಕಂಠೀರವನು ಗೆದ್ದುಕೊಂಡಿದ್ದ ಎಲ್ಲಾ ಸ್ಥಳಗಳನ್ನು ವಶಪಡಿಸಿಕೊಂಡಿತು. ಯುದ್ಧದಲ್ಲಿ ಕಂಠೀರವನ ದಳವಾಯಿ ಹಂಸರಾಜಯ್ಯ ಮೃತನಾದನು. ಬಿಜಾಪುರದ ಸೇನಾಪತಿ ಖಾನ್ ಮುಹಮ್ಮದ್ ಕೃಷ್ಣಗಿರಿಯಲ್ಲಿ ಕಂಠೀರವನ ಮೇಲೆ ಎಂತಹ ಪೆಟ್ಟುಕೊಟ್ಟನೆಂದರೆ ಅವನು ಜೀವವುಳಿಸಿಕೊಳ್ಳಲು ಓಡಬೇಕಾಯಿತು.[೬೪]

ಮೀರ್‌ಜುಮ್ಲಾನೊಂದಿಗೆ ಶ್ರೀರಂಗನು ಮಾಡಿಕೊಂಡ ಮೈತ್ರಿಯು ಅದಿಲ್‌ಶಾಹನನ್ನು ಕೆರಳಿಸಿತು. ಅವನು ೧೬೪೭ರಲ್ಲಿ ವೆಲ್ಲೂರಿನಲ್ಲಿ ಶ್ರೀರಂಗನ ಮೇಲೆ ಆಕ್ರಮಣ ಮಾಡಿದನು. ಆತ್ಮರಕ್ಷಣೆಗೆ ಸಾಧನವಿಲ್ಲದೆ ಶ್ರೀರಂಗನು ಸಂಪೂರ್ಣವಾಗಿ ಸೋತು ವೆಲ್ಲೂರನ್ನು ಬಿಜಾಪುರಕ್ಕೆ ಒಪ್ಪಿಸಿಕೊಡಬೇಕಾಯಿತು. ಅದಕ್ಕೆ ಪ್ರತಿಯಾಗಿ ಶ್ರೀರಂಗನಿಗೆ ಚಂದ್ರಗಿರಿಯನ್ನೂ ಅದರ ಅಧೀನ ಪ್ರದೇಶಗಳನ್ನೂ ಅದಿಲ್‌ಶಾಹನು ಕೊಟ್ಟನು. ವಿಜಯನಗರದ ಹೆಸರನ್ನೇ ಅಳಿಸಿಹಾಕಿ ಅದರ ಸ್ಥಳದಲ್ಲಿ ಬಿಜಾಪುರದ ಧ್ವಜವನ್ನು ಹಾರಿಸಬೇಕೆಂಬ ಅವನ ಬಯಕೆ ಈಡೇರಿತು. ೧೬೪೭ ಶ್ರೀರಂಗನ ಅದೃಷ್ಟದ ಅತ್ಯಧೋಗತಿಯ ವರ್ಷವಾಯಿತು ಎಂದು ಹೇಳಬಹುದು. ಹಾಗೆಯೇ ಕರ್ನಾಟಕದಲ್ಲಿ ಬಿಜಾಪುರದ ವಿಸ್ತರಣ ಚಟುವಟಿಕೆಗಳ ಅತಿ ಎತ್ತರದ ಜಲ ಚಿಹ್ನೆ ಕೂಡ ಅದೇ ಆಯಿತು. ಹೀಗೆ ವ್ಯವಸ್ಥಿತ ದಂಡಯಾತ್ರೆಗಳ ಒಂದು ನೀತಿಯಿಂದ ಬಿಜಾಪುರ ಮತ್ತು ಗೋಲ್ಕೊಂಡಾ ಸುಲ್ತಾನರು ದಕ್ಷಿಣದಲ್ಲಿ, ವಿಜಯನಗರ ಸಾಮ್ರಾಜ್ಯದ ಅಳಿದುಳಿದ ಚೂರುಪಾರುಗಳನ್ನು ಗೆದ್ದು ಮುಗಿಸಿದರು. ೧೬೪೬ರಲ್ಲಿ ಆದ ಒಂದು ಕರಾರಿನಂತೆ ಬಿಜಾಪುರವು ಇಡೀ ಬಾರಾಮಹಲ್ ಪ್ರದೇಶ ಹಾಗೂ ಮೈಸೂರಿನ ಸ್ವಲ್ಪ ಭಾಗವನ್ನು ಪಡೆಯಿತು. ಗೋಲ್ಕೊಂಡವು ಬಾರಾಮಹಲಿನ ಪೂರ್ವಕ್ಕೆ ಇದ್ದ ಪ್ರದೇಶ, ಚಿತ್ತೂರು, ಚಂದ್ರಗಿರಿ, ಗೂಟಿ, ಗುರ್ರಮಕೊಂಡ, ಕಾಂಜೀವರಂ ಮೊದಲಾದ ಸ್ಥಳಗಳನ್ನು ಪಡೆಯಿತು. ಮೈಸೂರಿನ ಉತ್ತರಭಾಗದಲ್ಲಿದ್ದ ಬೆಂಗಳೂರು, ಕೋಲಾರ, ದೊಡ್ಡಬಳ್ಳಾಪುರ, ತುಮಕೂರಿನ ಉತ್ತರಭಾಗ ಮತ್ತು ಸಿರಾ ಇವು ಕೂಡಿದ ಭಾಗವನ್ನು ಕರ್ನಾಟಕ ಬಿಜಾಪುರ ಬಲಘಾಟ್ ಎಂದು ಕರೆದರೆ, ಘಟ್ಟದ ಕೆಳಗಿನ ಜಗದೇವರಾಯನಿಗೆ ಸೇರಿದ್ದ ಪ್ರದೇಶಗಳನ್ನು ಮೈಸೂರಿನ ಆಗ್ನೇಯ ಗಡಿಭಾಗವನ್ನು ಸೇರಿಸಿ ಕರ್ನಾಟಕ ಹೈದರಾಬಾದ್ ಬಲಘಾಟ್ ಎಂದು ಕರೆಯಲಾಯಿತು.[೪೪]

ಚಂದ್ರಗಿರಿಯ ಪತನ

ದುರದೃಷ್ಟವಶಾತ್ ಶ್ರೀರಂಗನು ಚಂದ್ರಗಿರಿಯನ್ನೂ ಹೆಚ್ಚುಕಾಲ ಉಳಿಸಿಕೊಳ್ಳಲಾಗಲಿಲ್ಲ. ಅದಿಲ್‌ಶಾಹನ ರಾಜಕಾರಣ ನೈಪುಣ್ಯ ಹಾಗೂ ಕುಟಿಲತೆಗಳು ಅದಕ್ಕೆ ಕಾರಣ. ಬಿಜಾಪುರ ಮತ್ತು ಗೋಲ್ಕೊಂಡಗಳ ನಡುವೆ ೧೬೪೭ರಲ್ಲಿ ಆದ ಒಪ್ಪಂದದಂತೆ ವಿಜಯನಗರ ಸಾಮ್ರಾಜ್ಯದ ಭಾಗಗಳ ಹಂಚಿಕೆಯಲ್ಲಿ ಚಂದ್ರಗಿರಿಯು ಗೋಲ್ಕೊಂಡಕ್ಕೆ ಸೇರಿತು. ಚಂದ್ರಗಿರಿ ಇರುವುದು ಕರ್ನಾಟಕ ಹೈದರಾಬಾದ್ ಬಲಘಾಟ್‌ನಲ್ಲಿ. ಅದು ಗೋಲ್ಕೊಂಡದ ಕುತುಬ್‌ಶಾಹಾನ ಪಾಲಿಗೆ ಬಂದಿತ್ತು. ಆದರೆ ಕುತುಬ್‌ಶಾಹನಿಗೆ ತನ್ನ ರಾಜ್ಯದಲ್ಲಿ ಎಲ್ಲಿಯೂ ಶ್ರೀರಂಗನು ಇರುವುದು ಸಮ್ಮತವಿರಲಿಲ್ಲ. ಆದ್ದರಿಂದ ಗೋಲ್ಕೊಂಡ ಸುಲ್ತಾನನು ೧೬೪೮ರಲ್ಲಿ ಶ್ರೀರಂಗನ ಮೇಲೆ ಯುದ್ಧಮಾಡಿ, ೧೬೪೭ರಲ್ಲಿ ಅದಿಲ್‌ಶಾಹನು ಅವನಿಗೆ ಕೊಟ್ಟಿದ್ದ ಒಂದೇ ಒಂದು ಸ್ಥಳ ಚಂದ್ರಗಿರಿಯನ್ನೂ ಕಿತ್ತುಕೊಂಡುಬಿಟ್ಟನು. ಈ ಯುದ್ಧದ ಫಲವಾಗಿ ವಿಜಯನಗರ ಸಾಮ್ರಾಜ್ಯದ ಕೊಟ್ಟಕೊನೆಯ ತುಣುಕೂ ನಾಶವಾಯಿತು. ಶ್ರೀರಂಗನು ಮತ್ತೆ 'ರಾಜ್ಯವಿಲ್ಲದ ರಾಜ'ನಾದನು. ಅವನಿಗೆ ಇಕ್ಕೇರಿಯ ಶಿವಪ್ಪನಾಯಕನು ಆಶ್ರಯಕೊಟ್ಟನೆಂದು ಚಿಕ್ಕದೇವರಾಜ ವಂಶಾವಳಿಯಿಂದ ನಮಗೆ ತಿಳಿದುಬರುತ್ತದೆ.[೪೫]

ಇಲ್ಲೂ ಅಷ್ಟೆ, ಶಿವಪ್ಪನಾಯಕನು ಶ್ರೀರಂಗನನ್ನು ತನ್ನ ವೈಯಕ್ತಿಕ ಹಿತಗಳನ್ನು ಸಾಧಿಸಿಕೊಳ್ಳಲು ಉಪಕರಣವನ್ನಾಗಿ ಬಳಸಿದನು. ಅವನ ಬಗೆಗೆ ಸಹಾನುಭೂತಿಯಾಗಲಿ, ಸಾಮ್ರಾಜ್ಯದ ಉಳಿವಿನ ಬಗೆಗೆ ಉದಾರ ಆಸಕ್ತಿಯಾಗಲಿ ಅವನಿಗಿರಲಿಲ್ಲ. ಶ್ರೀರಂಗನನ್ನು ಅವನು ಇಕ್ಕೇರಿ ಸಂಸ್ಥಾನದ ಒಳಗೆ ಇರಿಸಲೇ ಇಲ್ಲ, ಬದಲಿಗೆ ಆಗ ಬಿಜಾಪುರದವರ ಹಸ್ತಗತವಾಗಿದ್ದ ಬೇಲೂರಿನಲ್ಲಿ ಇರಿಸಿದನು. ಬೇಲೂರು ಬಿಜಾಪುರಕ್ಕೂ ಮೈಸೂರಿಗೂ ನಡುವೆ ತುಂಬಾ ವಿವಾದಾಸ್ಪದವಾಗಿದ್ದ ಸ್ಥಳವಾಗಿತ್ತು. ಇಕ್ಕೇರಿಯನ್ನು ಸದೆಬಡಿಯಲು ಬೇಲೂರನ್ನು ಗೆಲ್ಲಬೇಕೆಂಬುದು ಮೈಸೂರಿನ ಅಪೇಕ್ಷೆಯಾದರೆ, ಅದಿಲ್‌ಶಾಹನು ತನ್ನ ಮಿತ್ರರಾಜ್ಯವಾಗಿದ್ದ ಇಕ್ಕೇರಿಯನ್ನು ಮೈಸೂರಿನ ಬೆದರಿಕೆಯಿಂದ ತಪ್ಪಿಸಲು ಅದನ್ನು ಪಡೆಯಲು ಇಚ್ಛಿಸಿದ್ದನು. ಒಂದು ರೀತಿಯಲ್ಲಿ


ಮೈಸೂರಿಗೂ, ಇಕ್ಕೇರಿಗೂ ನಡುವೆ ಬೇಲೂರನ್ನು ಒಂದು ತಡೆಗೋಡೆಯಂತೆ ಮಾಡಿ ತನ್ನನ್ನು ಮೈಸೂರಿನ ಬೆದರಿಕೆಯಿಂದ ರಕ್ಷಿಸಿಕೊಳ್ಳಲು ಶಿವಪ್ಪನಾಯಕನು ಬಯಸಿದನು.

ದೇವರಾಜ ಒಡೆಯರ್ (೧೬೫೯-೧೬೭೩)

ಈ ಮಧ್ಯೆ ಕಂಠೀರವನು ೧೬೫೯ರಲ್ಲಿ ಮೃತನಾಗಲು[೫೭] ಮುಪ್ಪಿನ ದೇವರಾಜ ಒಡೆಯನ ಮೂರನೆಯ ಮಗ ದೊಡ್ಡ ದೇವರಾಜ ಒಡೆಯನು ಸಿಂಹಾಸನವನ್ನೇರಿದನು.[೫೮] ಮೈಸೂರಿನಲ್ಲಿ ಅರಸರ ಬದಲಾವಣೆಯಾದುದರ ಪ್ರಯೋಜನವನ್ನು ಪಡೆದು, ಬೇಲೂರಿನಲ್ಲಿ ಶ್ರೀರಂಗನ ಇರುವಿಕೆಯಿಂದ ಉತ್ಸಾಹಗೊಂಡು ಇಕ್ಕೇರಿಯ ಶಿವಪ್ಪನಾಯಕನು ಕಂಠೀರವನ ರಾಜಧಾನಿಯಾಗಿದ್ದ ಶ್ರೀರಂಗಪಟ್ಟಣಕ್ಕೆ ಮುತ್ತಿಗೆ ಹಾಕಿದನು. ಆದರೆ ದೊಡ್ಡದೇವರಾಜನು ರಾಜಧಾನಿಯನ್ನು ರಕ್ಷಿಸಿ, ಶಿವಪ್ಪನು ಮುತ್ತಿಗೆಯನ್ನೆತ್ತಿ ವೇಗವಾಗಿ ಪಲಾಯನ ಮಾಡುವಂತೆ ಮಾಡಿದನು. ಹಿಮ್ಮೆಟ್ಟುತ್ತಿದ್ದ ಇಕ್ಕೇರಿಯ ಸೈನ್ಯವನ್ನು ಮೈಸೂರು ಸೈನ್ಯವು ಕರ್ನಾಟಕ ಬಿಜಾಪುರ ಬಲಘಾಟ್(ತುಮಕೂರು ಜಿಲ್ಲೆಯ ಉತ್ತರದ ಭಾಗ)ವರೆಗೂ ಅಟ್ಟಿಸಿಕೊಂಡು ಹೋಗಿ, ಬಹುಮುಖ್ಯವಾಗಿದ್ದ ಚಿಕ್ಕನಾಯಕನಹಳ್ಳಿ ಕೋಟೆಯನ್ನೂ ಅದರ ಅಧೀನ ಪ್ರದೇಶಗಳನ್ನೂ ಇಕ್ಕೇರಿಯಿಂದ ಗೆದ್ದುಕೊಂಡಿತು. ಈ ವಿಜಯದಿಂದ ಉತ್ಸಾಹಿತನಾಗಿ ದೊಡ್ಡದೇವರಾಜನು ಬೇಲೂರಿನಲ್ಲಿದ್ದ ಶ್ರೀರಂಗನ ಮೇಲೆ ಆಕ್ರಮಣ ಮಾಡಿ ಅವನನ್ನು ಕರ್ನಾಟಕದಿಂದ ಹೊರಗಟ್ಟಲು ತೀರ್ಮಾನಿಸಿದನು. ೧೬೬೩ರಲ್ಲಿ ಅವನಿಂದ ಹಾಸನ ಮತ್ತು ಸಕ್ಕರೆಪಟ್ಟಣ ಈ ಎರಡು ಬಲವಾಗಿದ್ದ ಹಾಗೂ ಪ್ರಸಿದ್ಧವಾಗಿದ್ದ ಕೋಟೆಗಳನ್ನೂ ಗೆದ್ದನು. ಸಕ್ಕರೆಪಟ್ಟಣವು ಕರ್ನಾಟಕದಲ್ಲಿ ಶ್ರೀರಂಗನ ಅತ್ಯಂತ ಪ್ರಬಲವಾದ ಕೋಟೆಯಾಗಿತ್ತು. ಈ ಗೆಲುವು ದೇವರಾಜಒಡೆಯನ ಅತಿದೊಡ್ಡ ಸಾಧನೆ. ಒಂದು ಸಣ್ಣ ಸಂಸ್ಥಾನದ ರಾಜನು ಒಂದು ಭವ್ಯ ಸಾಮ್ರಾಜ್ಯದ ಮಾಜೀ ಚಕ್ರವರ್ತಿಯನ್ನು ಸೋಲಿಸಿದ್ದು ಸಾಮಾನ್ಯವಾದ ಸಂಗತಿಯಾಗಿರಲಿಲ್ಲ. ದೇವರಾಜನ ಈ ಗೆಲುವಿನ ಹಿಂದೆಯೇ ದಳವಾಯಿ ನಂಜನಾಥಯ್ಯನ ನೇತೃತ್ವದಲ್ಲಿದ್ದ ಮೈಸೂರು ಸೈನ್ಯವು ಮಲೆನಾಡಿನ ಕಡೆಗೆ ತಿರುಗಿ, ದಾರಿಯಲ್ಲಿ ಕಳಸ, ಕಂಡೆಯ, ದನಿವಾಸ, ಹೆಬ್ಬೆ, ಜಾಗರ, ಬಿದರೂರು(ಬಿದನೂರು) ಮೊದಲಾದ ಹಲವು ಕೋಟೆಗಳನ್ನು ಕೈವಶಪಡಿಸಿಕೊಂಡು ಕೊನೆಗೆ ಸೋಮಶೇಖರನಾಯಕನ ರಾಜಧಾನಿ ಇಕ್ಕೇರಿಗೆ ಮುತ್ತಿಗೆ ಹಾಕಿತು. ಮೈಸೂರು ಸೈನ್ಯದ ಧಾಳಿಯನ್ನು ಇಕ್ಕೇರಿಯ ನಾಯಕನು ತಡೆದುಕೊಳ್ಳಲಾಗಲಿಲ್ಲ. ದೇವರಾಜ ಒಡೆಯನಿಗೆ ಪ್ರತಿವರ್ಷವೂ ಕಪ್ಪವನ್ನು ಸಲ್ಲಿಸುವುದಾಗಿ ಒಪ್ಪಿ ಮೈಸೂರಿಗೆ ಶರಣಾಗತನಾದನು.[೫೯]

ಹಾಸನ ಮತ್ತು ಸಕ್ಕರೆಪಟ್ಟಣಗಳ ಪತನದಿಂದ ಬೇಲೂರಿನಲ್ಲಿ ಶ್ರೀರಂಗನ ಬಲ ಇನ್ನೂ ಕುಗ್ಗಿಹೋಯಿತು. 'ಸಾಮ್ರಾಜ್ಯದ ಏಕತೆ' ಎಂಬ ಕಲ್ಪನೆ ಅವನಿಂದ ಮಾಯವಾಯಿತು. ಇಕ್ಕೇರಿಯ ಬಲವೇ ಕ್ಷೀಣಿಸತೊಡಗಿದಾಗ ಅದರ ನೆರವು ಹೇಗೆ ಬಂದೀತು? ಕೊನೆಗೆ ಶ್ರೀರಂಗನು ಮಧುರೆಯ ನಾಯಕನ ಆಸ್ಥಾನದಲ್ಲಿ ಆಶ್ರಯವನ್ನು ಕೋರಿದನು. ಮೈಸೂರಿನವರು ''ಚಕ್ರವರ್ತಿಯ ಕಡೆಯಿಂದ ಗೆದ್ದ ಜಿಲ್ಲೆಗಳ ಕಪ್ಪವನ್ನು ಆ ವರ್ಷ ಮತ್ತು ಅದರ ಮುಂದಿನ ನಾಲ್ಕು ವರ್ಷ ಪಡೆದರು. ಅದಾದನಂತರ ವಿಜಯನಗರ ಮನೆತನದ ಶ್ರೀರಂಗರಾಯನ ಹೆಸರೇ ಕೇಳಿಬರಲಿಲ್ಲ'' ಎಂದು ವಿಲ್ಕ್ಸ್ ಬರೆಯುತ್ತಾನೆ.[೬೦] ಹಾಸನ ಮತ್ತು ಸಕ್ಕರೆಪಟ್ಟಣಗಳ ಗಳಿಕೆ ''ಹಿಂದೊಮ್ಮೆ ಅತ್ಯಂತ ವೈಭವಯುತವಾಗಿದ್ದ ವಿಜಯನಗರ ರಾಜವಂಶದ ಮುಕ್ತಾಯ''ವನ್ನು ಹಾಡಿತು.[೬೧]

ದೇವರಾಜ ಒಡೆಯನ ಇನ್ನೊಂದು ಸಾಧನೆ ಹೊಳೆನರಸೀಪುರದ ಪಾಳೆಯಗಾರನ ಪರಾಭವ ಮತ್ತು ೧೬೬೬ರಲ್ಲಿ ಮೈಸೂರು ರಾಜ್ಯಕ್ಕೆ ಹೊಳೆನರಸೀಪುರದ ಸೇರ್ಪಡೆ.[೬೨] ಅವನು ಮಾಗಡಿಯ ಮೇಲೂ ಅನೇಕ ಸಲ ದಂಡೆತ್ತಿಹೋಗಿ, ಎರಡು ಹಂತಗಳಲ್ಲಿ, ಮುಮ್ಮಡಿ ಕೆಂಪೇಗೌಡನ ಅಧೀನ ಸ್ಥಳಗಳಾಗಿದ್ದ ಕುಣಿಗಲ್, ಹುಲಿಯೂರುದುರ್ಗ, ಮೊದಲಾದವನ್ನು ಗೆದ್ದನು. ಕೊನೆಗೆ ೧೭೨೦ರಲ್ಲಿ ೧ನೇ ಕೃಷ್ಣರಾಜ ಒಡೆಯನು ಮಾಗಡಿಯನ್ನು ಮೈಸೂರಿಗೆ ಸೇರಿಸಿಕೊಳ್ಳುವುದಕ್ಕೆ ಹಾದಿಯನ್ನು ಸುಗಮಗೊಳಿಸಿದನು.[೬೩]



ದೊಡ್ಡ ದೇವರಾಜನ ಆಳ್ವಿಕೆಯಲ್ಲಿ ಮೈಸೂರು ರಾಜ್ಯ (೧೬೫೯-೧೬೭೩)

ಸಾಮ್ರಾಜ್ಯ ಪುನರುಜ್ಜೀವನದ ಆಸೆಗಳೆಲ್ಲ ಹಾಸನ ಮತ್ತು ಸಕ್ಕರೆಪಟ್ಟಣಗಳ ಪತನದಿಂದ ನುಚ್ಚುನೂರಾದ ಮೇಲೆ ಶ್ರೀರಂಗನು ೧೬೬೩ರಲ್ಲಿ ಬೇಲೂರನ್ನು ತೊರೆದು ಮಧುರೆಯ ಚೊಕ್ಕನಾಥನಾಯಕನ ಆಶ್ರಯವನ್ನು ಕೋರಿದಂತೆ ತೋರುತ್ತದೆ. ಶ್ರೀರಂಗನು ಮೈಸೂರಿನಿಂದ ಮಧುರೆಗೆ ಓಡಿಹೋದದ್ದು ಪರಾಧೀನತೆಯ ನೊಗವನ್ನು ಕಿತ್ತೆಸೆಯಲು ದೇವರಾಜನಿಗೆ ಸೂಚನೆ ಕೊಟ್ಟಿತು. ಇದಾದ ನಂತರ ದೇವರಾಜನು ದೊಡ್ಡ ಬಿರುದುಗಳನ್ನು ಧರಿಸಿ ಮೈಸೂರಿನ ಸ್ವತಂತ್ರರಾಜನಾಗಿ ಆಳಿದುದನ್ನು ನೋಡುತ್ತೇವೆ.[೬೪]

೧೬೬೭ರಲ್ಲಿ ಮಧುರೆಯಲ್ಲಿ ಸಾಮ್ರಾಜ್ಯದ ಬೇರೆ ಬೇರೆ ನಾಯಕರು ಒಂದಾಗಿ ಕೂಡಿದರು. ಮಧುರೆಯ ಚೊಕ್ಕನಾಥನಾಯಕನು ಈ ಕೂಟವನ್ನು ರಚಿಸಿದನು. ಶ್ರೀರಂಗನಿಗಾಗಿ ಹೋರಾಡಲು ಅವರು ನಿರ್ಧರಿಸಿ ಎಲ್ಲರೂ ಒಟ್ಟಾಗಿ ಮೈಸೂರಿನ ಮೇಲೆ ಮುಗಿಬಿದ್ದರು. ಹಲವು ಕಾರ್ಯಚರಣೆಗಳಾದುವು. ಕೊನೆಗೆ, ದೇವರಾಜ ಒಡೆಯನ ಆಳಿಕೆಯ ಉತ್ತರಾರ್ಧದಲ್ಲಿ, ಈ ಜಂಟಿ ಸೈನ್ಯವು ಈರೋಡಿನಲ್ಲಿ ಪರಾಭವವನ್ನು ಅನುಭವಿಸಿತು. ಈ ಯುದ್ಧದಲ್ಲಿ ಮೈಸೂರು ಒಂದರ ಹೊರತು ಸಾಮ್ರಾಜ್ಯದ ಮಿಕ್ಕ ನಾಯಕರೆಲ್ಲರೂ ಕಾಣೆಸಿಕೊಂಡರು. ಮೈಸೂರಿಗೆ ದೊರೆತ ವಿಜಯವು ಶ್ರೀರಂಗನ ಆಶೋತ್ತರಗಳನ್ನು ಮಣ್ಣುಪಾಲುಮಾಡಿತು. ಈ ಯುದ್ಧವಾದ ನಂತರ ಇನ್ನೂ ಕೆಲವು ವರ್ಷಗಳ ಬದುಕಿದ್ದರೂ ತಾನು ಜೀವನದಲ್ಲಿ ಹಾಕಿಕೊಂಡಿದ್ದ ಗುರಿಯ ಹತ್ತಿರಕ್ಕೆ ಹೋಗಲು ಅವನಿಗೆ ಸಾಧ್ಯವಾಗಲೇ ಇಲ್ಲ.[೬೫]

ಹೀಗೆ ತಾಳಿಕೋಟೆ ನಂತರದ ವಿಜಯನಗರದ ಇತಿಹಾಸದ ಹಿನ್ನೆಲೆಯಲ್ಲಿ ಮೈಸೂರನ್ನು ಅಧ್ಯಯನ ಮಾಡುವುದರಿಂದ ಹೇಗೆ ವಿಜಯನಗರದ ಅವನತಿಯು ಕರ್ನಾಟಕದಲ್ಲಿ ಪ್ರಬಲವಾದ ಒಂದು ಸ್ವತಂತ್ರ ಶಕ್ತಿಯಾಗಿ ಮೈಸೂರಿನ ಉದಯಕ್ಕೆ ದಾರಿಮಾಡಿತು ಎಂಬುದು ಗೊತ್ತಾಗುತ್ತದೆ. ಅದು ಮುಂದೆ ದಕ್ಷಿಣ ಭಾರತದ ರಾಜಕಾರಣದಲ್ಲಿ ಮಹತ್ವದ ಪಾತ್ರವನ್ನು ನಿರ್ವಹಿಸಲಿತ್ತು.

ಚಿಕ್ಕದೇವರಾಜ ಒಡೆಯರ್ (೧೬೭೩-೧೭೦೪)

ನಾಗರಿಕ ಉದ್ದೇಶಗಳಿಗಾಗಿ ದೇವರಾಜನು ರಾಜ್ಯದಲ್ಲಿ ಪ್ರವಾಸ ಮಾಡುತ್ತಿದ್ದಾಗ ಕಾಯಿಲೆ ಬಿದ್ದು ಚಿಕ್ಕನಾಯಕನಹಳ್ಳಿಯಲ್ಲಿ ೧೬೭೩ ಫೆಬ್ರವರಿ ೧೧ ರಂದು ನಿಧನ ಹೊಂದಿದನು.[೬೬]

ದೊಡ್ಡದೇವನ ನಂತರ ಅವನ ದಾಯಾದಿ ಚಿಕ್ಕದೇವರಾಜ ಒಡೆಯರ್ ಪಟ್ಟಕ್ಕೆ ಬಂದನು. ಮುಪ್ಪಿನ ದೇವರಾಜ ಒಡೆಯನ ಹಿರಿಯಮಗ ದೊಡ್ಡದೇವರಾಜ ಒಡೆಯನ ಮಗ ಚಿಕ್ಕದೇವರಾಜ.[೬೭] ಈತನ ಆಳಿಕೆಯಲ್ಲಿ ಮೈಸೂರು ರಾಜವಂಶವು ತನ್ನ ವೈಭವದ ಶಿಖರವನ್ನು ಮುಟ್ಟಿತು. ಕಾರ್ಯಾಚರಣೆಗಳು ಮತ್ತು ರಾಜಕಾರಣ ಕೌಶಲಗಳಿಂದ ತುಂಬಿ ಈ ಅವಧಿಯು ಬಹು ರೋಮಾಂಚಕಾರಕವಾಗಿದೆ. ರಾಷ್ಟ್ರಮಟ್ಟದಲ್ಲಿ ಔರಂಗಜೇಬ್ ಹಾಗೂ ಶಿವಾಜಿ ದಕ್ಷಿಣ ಭಾರತದ ರಂಗವನ್ನು ಪ್ರವೇಶಿಸಿ ಮಹತ್ವದ ಪಾತ್ರವನ್ನು ನಿರ್ವಹಿಸಿದ ಅತಿ ಮುಖ್ಯವಾದ ಅವಧಿ ಇದು. ಚಿಕ್ಕದೇವರಾಜನು ಶಿವಾಜಿಗೆ ಮುಖಾಮುಖಿಯಾಗಿ ನಿಂತು ಮರಾಠರೊಂದಿಗೆ ಹಲವಾರು ಉಗ್ರಕಾಳಗಗಳನ್ನು ನಡೆಸಿದನು. ಮೈಸೂರಿನ ಮೇಲೆ ಅವರು ಮಾಡಿದ ಆಕ್ರಮಣಗಳನ್ನು ಯಶಸ್ವಿಯಾಗಿ ಹಿಮ್ಮೆಟ್ಟಿಸಿ ರಾಜ್ಯಕ್ಕೆ ಹೊರಗಿನಿಂದ ಅಪಾಯ ಭೀತಿಯಿಲ್ಲದಂತೆ ಮಾಡಿದನು. ಮರಾಠರೊಂದಿಗೆ ಯುದ್ಧ ನಿರತನಾಗಿದ್ದಾಗ ಚಿಕ್ಕದೇವರಾಜನು ಮೊಗಲರನ್ನು ಮಿತ್ರರನ್ನಾಗಿ ಮಾಡಿಕೊಂಡು ಮೊಗಲ್ ಸಾಮ್ರಾಜ್ಯದೊಂದಿಗೆ ಉತ್ತಮ ರಾಜಕಾರಣ ಸಂಬಂಧವನ್ನು ಬೆಳೆಸಿದನು. ಅವನ ಆಳ್ವಿಕೆಯ ಮೂವತ್ತೊಂದು ವರ್ಷಗಳಲ್ಲಿ, ಅವನು ಹಲವು ಯುದ್ಧಗಳನ್ನು ಮಾಡಿದ್ದರೂ ರಾಜ್ಯದಲ್ಲಿ ಸ್ಥಿರವಾದ ಸರಕಾರವು ನೆಲೆಸಿತ್ತು.

ವೈಭವದ ಮತ್ತು ವಿಪುಲ ಐಶ್ವರ್ಯದ ಶಿಖರವನ್ನು ಮುಟ್ಟಿತು. ಚಿಕ್ಕದೇವರಾಜ ಒಬ್ಬ ಹುಟ್ಟಾ ಯೋಧ, ದೊಡ್ಡ ವಿದ್ವಾಂಸ, ಅಸಾಧಾರಣ ಸಾಮರ್ಥ್ಯವಿದ್ದ ಆಡಳಿತಗಾರ. ಮುಂದಿನ ಪೀಳಿಗೆಗಳು ಅವನನ್ನು "ಇಂಗ್ಲೆಂಡಿನ ಎಲಿಜಬೆತ್ ರಾಣಿಯಂತೆ, ಫ್ರಾನ್ಸಿನ ಹದಿನಾಲ್ಕನೇ ಲೂಯಿಯಂತೆ, ರೋಮಿನ ಅಗಸ್ಟಸನಂತೆ, ದೆಹಲಿಯ ಅಕ್ಬರನಂತೆ ಮತ್ತು ವಿಜಯನಗರದ ಕೃಷ್ಣದೇವರಾಯನಂತೆ, ವಂಶದ ಅತ್ಯಂತ ಶ್ರೇಷ್ಠ ಅರಸನೆಂದು" ನೆನಪಿನಲ್ಲಿ ಉಳಿಸಿಕೊಡಿರುತ್ತವೆ.[೬೪]

ಬಿಜಾಪುರದ ಸುಲ್ತಾನನು ಮೊದಲಿನಿಂದಲೂ ಮೈಸೂರಿಗೆ ಕಿರುಕುಳ ಕೊಡುತ್ತಿದ್ದ ನೆರೆಯಾಗಿದ್ದನು. ಒಂದಿಲ್ಲ ಒಂದು ಕಾರಣದಿಂದ ಬಿಜಾಪುರವು ಮೈಸೂರಿನ ಮೇಲೆ ಪದೇ ಪದೇ ಆಕ್ರಮಣ ಮಾಡುತ್ತಿದ್ದಿತು. ಅನೇಕ ವೇಳೆ ಒಡೆಯರ ವ್ಯವಹಾರಗಳಲ್ಲಿ ಮೂಗು ತೂರಿಸುತ್ತಿದ್ದಿತು. ಆದರೆ ಈಗ ಬಿಜಾಪುರ-ಗೋಲ್ಕೊಂಡಗಳೆರಡೂ ತಮ್ಮ ಶಕ್ತಿ ಸಮಸ್ತವನ್ನೂ ದಕ್ಷಿಣದತ್ತ ನುಗ್ಗುತ್ತಿದ್ದ ಮೊಗಲರನ್ನು ತಡೆಯಲು ಬಳಸಬೇಕಾಗಿತ್ತು. ಅಲ್ಲದೆ ಒಮ್ಮೆ ತಮ್ಮ ಅಧೀನರಾಗಿದ್ದವರ ನಡುವಣಿಂದಲೇ ಇನ್ನೂ ಹೆಚ್ಚು ಅಪಾಯಕಾರಿ ಶತ್ರುಗಳಾದ ಮರಾಠರು ಉದಿಸಿದ್ದರು. ಅಂತಹ ಸಮಯದಲ್ಲಿ ಚಿಕ್ಕದೇವರಾಜನು ಪಟ್ಟಕ್ಕೆ ಬಂದನು. ಅತ್ಯಂತ ಪ್ರಾಮಾಣಿಕವಾಗಿ ಮತ್ತು ಜಾಣತನದಿಂದ ರಾಜ್ಯವನ್ನು ಕ್ರೋಢೀಕರಿಸುವುದಕ್ಕೆ ತೊಡಗಿದನು.

ಆಳಿಕೆಯ ಮೊದಲ ಇಪ್ಪತ್ತು ವರ್ಷಗಳಲ್ಲಿ ತನ್ನ ಪೂರ್ವಜರು ಗೆದ್ದಿದ್ದ ಭಾಗಗಳನ್ನು ಕ್ರೋಢೀಕರಿಸಿದನು. ಅವರಿವರು ಹಿಂದಕ್ಕೆ ಕಿತ್ತುಕೊಂಡಿದ್ದ ಭಾಗಗಳನ್ನು ಮರಳಿ ಗೆದ್ದುಕೊಂಡನು. ಅವನ ರಾಜ್ಯವಿಸ್ತರಣ ಕಾರ್ಯವು ಮುಖ್ಯವಾಗಿ ಎರಡು ದಿಕ್ಕುಗಳಲ್ಲಿ ನಡೆಯಿತು. ದಕ್ಷಿಣದಲ್ಲಿ ತಿರುಚಿನಾಪಳ್ಳಿಯವರೆಗೆ ವಿಸ್ತರಿಸಿದನು; ವಾಯವ್ಯದಲ್ಲಿ ತನ್ನ ನೆರೆಯ ರಾಜ್ಯಗಳೊಳಗೆ ಮೈಸೂರಿನ ಗಡಿಗಳನ್ನು ನೂಕಿದನು. ತುಮಕೂರು ಮತ್ತು ಕಡೂರು ಜಿಲ್ಲೆಗಳ ಬಹುಭಾಗವು ಅವನ ರಾಜ್ಯಕ್ಕೆ ಸೇರಿತು. ಚಿಕ್ಕದೇವರಾಜನು ಮೈಸೂರಿನ ಸಿಂಹಾಸನವನ್ನು ಏರಿದ್ದು ಅದರ ಇತಿಹಾಸದ ಅತ್ಯಂತ ಬಿಕ್ಕಟ್ಟಿನ ಸಮಯದಲ್ಲಿ, ಮರಾಠರು ಕರ್ನಾಟಕದ ಮೇಲೆ ತಮ್ಮ ಅಧಿಕಾರವನ್ನು ಹೇರಲು ಬದ್ಧಕಂಕಣರಾಗಿದ್ದರು. ಆಂತರಿಕ ಸಮಸ್ಯೆಗಳಿಂದಲೂ ಔರಂಗಜೇಬನ ಭೀತಿಯಿಂದಲೂ ಬಿಜಾಪುರವು ಕರ್ನಾಟಕದ ರಾಜಕೀಯದಿಂದ ದೂರ ಉಳಿಯಬೇಕಾಯಿತು. ಅವರ ಬದಲಿಗೆ ಮರಾಠರ ಶಕ್ತಿಯೊಂದು ಬೆಳೆದು ನಿಂತಿತ್ತು. ಪುಣೆಯು ಕೇಂದ್ರವಾದ ಮರಾಠಾ ರಾಜ್ಯವು ಕರ್ನಾಟಕದ ಮೇಲೆ ಪ್ರಭುತ್ವ ಸ್ಥಾಪಿಸಲು ಪ್ರಬಲಸ್ಪರ್ಧಿಯಾಗಿತ್ತು, ಬಿಜಾಪುರವು ದೂರವಾಗಿ ಇಕ್ಕೇರಿಗೆ ಮಿತ್ರನಿಲ್ಲದಂತಾಗಿತ್ತು. ಈಗ ವರ್ಧಿಸುತ್ತಿದ್ದ ಮೈಸೂರಿನ ಶಕ್ತಿಯನ್ನು ಅಡಗಿಸಲು ಇಕ್ಕೇರಿಯು ಮರಾಠರನ್ನು ಆಶ್ರಯಿಸಬೇಕಾಯಿತು.

ಚಿಕ್ಕದೇವನ ೧೬೭೫ರ ಒಂದು ಶಾಸನವು ಅವನ ಮೊದಮೊದಲ ವಿಜಯಗಳ ಒಳ್ಳೆಯ ನಿರೂಪಣೆಯನ್ನು ಒದಗಿಸುತ್ತದೆ.[೬೫] ಇದೊಂದು ಸಮಕಾಲೀನ ದಾಖಲೆಯಾಗಿದ್ದು ಆ ಕಾಲದ ಸಾಹಿತ್ಯಕ ಮತ್ತು ಶಾಸನಿಕ ಆಧಾರಗಳಿಂದ ಸ್ಥಿರಪಡುತ್ತದೆ. ಪೂರ್ವದಿಕ್ಕಿನಲ್ಲಿ ಪಾಂಡ್ಯ ದೊರೆ ಚೊಕ್ಕನಾಥನನ್ನು ಯುದ್ಧದಲ್ಲಿ ಸೋಲಿಸಿ, ಅವನಿಂದ ಮಧುರೆಯ ಕೆಲವು ಅತಿಮುಖ್ಯ ದುರ್ಗಗಳನ್ನೂ ಕೋಟೆಗಳನ್ನೂ ವಶಪಡಿಸಿಕೊಡನು. ಪರಮಾತ್ರಿಪುರ, ಮಳಲಿ, ಮುತ್ತನ್‌ಚೆಟ್ಟಿ, ಶಾಲ್ಯ (ಸೇಲಂ), ಸದಮಂಗಲಂ, ಅನಂತಗಿರಿ, ತೊರೆನಾಡು, ಅರಿಯಲೂರು, ಧಾರಾಪುರಂ ಇವೇ ಮೊದಲಾದ ಸ್ಥಳಗಳು ಅವನ ಕೈವಶವಾದವು. ಬೇಕಾದಷ್ಟು ಕೊಳ್ಳೆಯೊಂದಿಗೆ ಅವನು ಮೈಸೂರಿಗೆ ಹಿಂದಿರುಗಿದನು. ವಾಯವ್ಯದಲ್ಲಿ ಬಿಜಾಪುರ ಸುಲ್ತಾನನಿಂದ ಕೇತಸಮುದ್ರ, ಕಂಡಿಕೆರೆ, ಹಂದಲಗೆರೆ, ಗೂಳೂರು, ತುಮಕೂರು ಮತ್ತು ಹೊನ್ನವಳ್ಳಿಗಳನ್ನು ಗೆದ್ದುಕೊಂಡನು. ಆಮೇಲೆ ಮುಷ್ಟಿಕ ಎಂಬ ಬಿರುದು ಧರಿಸಿ, ಮೊರಸು ಪಾಳಿಯಗಾರರು ಮತ್ತು ಕಿರಾತರ (ತುಮಕೂರು ಮತ್ತು ಬೆಂಗಳೂರು ಪ್ರದೇಶಗಳ ಆದಿವಾಸಿ ಜನ) ಸಹಾಯವನ್ನು ಪಡೆದ ಜಡಕನದುರ್ಗದ ಪಾಳೆಯಗಾರ ನರಸಪ್ಪ ಒಡೆಯರ್ ಎಂಬುವನನ್ನು ಸೋಲಿಸಿ ಅವನು ಶರಣಾಗತನಾಗುವಂತೆ ಮಾಡಿದನು. ಜಡಕನದುರ್ಗವನ್ನು ವಶಪಡಿಸಿಕೊಂಡು ಅದಕ್ಕೆ

ದೇವರಾಯನದುರ್ಗ ಎಂಬ ನೂತನ ನಾಮಕರಣ ಮಾಡಿದನು. ಮದ್ದಗಿರಿಯನ್ನು, ಅದರ ಅಧೀನ ಪ್ರದೇಶಗಳಾದ ಮಿಡಿಗೇಶಿ, ಬಿಜ್ಜಾವರ, ಚೆನ್ನರಾಯದುರ್ಗ ಮೊದಲಾದ ಸ್ಥಳಗಳನ್ನು ಪಾಳೆಯಗಾರ ಚಿಕ್ಕಪ್ಪಗೌಡನಿಂದ ಗೆದ್ದನು.

ಒಡೆಯರ್‌ರ ಇಡೀ ಇತಿಹಾಸವೇ ಯುದ್ಧೋದ್ಯೋಗಗಳಿಂದ ತುಂಬಿಹೋಗಿದೆ ಎಂಬುದನ್ನು ಗಮನಿಸಬೇಕು. ಪ್ರತಿಯೊಬ್ಬ ಒಡೆಯನ ಬದುಕಿನ ಬಹುಭಾಗವು ಅರಮನೆಗಿಂತ ಹೆಚ್ಚಾಗಿ ಯುದ್ಧರಂಗದಲ್ಲಿ ಕಳೆದುಹೋಗುತ್ತಿತ್ತು ಎಂಬ ಭಾವನೆ ನಮಗೆ ಬರುತ್ತದೆ. ಒಂದೇ ಸಮನೆ ನಡೆಯುತ್ತಿದ್ದ ಈ ಸೈನ್ಯ ಕಾರ್ಯಾಚರಣೆಗಳಿಂದಾಗಿ ಮೈಸೂರು ಅರಸರು ಪರಾಕ್ರಮಿಗಳಾದ ನಾಯಕರಾಗಿ ರೂಪುಗೊಳ್ಳಲು ಅವಕಾಶವಾಯಿತು. ಈ ಅಂಶವನ್ನು ಸ್ಥಿರಪಡಿಸಲು ಒಂದು ನಿದರ್ಶನವನ್ನು ಕೊಟ್ಟರೆ ಸಾಕು. ಶಿವಾಜಿಯಂತಹ ಯಾರಿಗೂ ಕಡಮೆಯಿಲ್ಲದ ಅಸಮಾನ ಸಾಹಸಿಯು ೧೬೭೭ರಲ್ಲಿ ಕರ್ನಾಟಕದ ಮೇಲೆ ಆಕ್ರಮಣ ಮಾಡಿದನು. ಫಲ ಏನಾಯಿತು? ಶ್ರೀರಂಗಪಟ್ಟಣದ ಉಗ್ರ ಕಾಳಗದಲ್ಲಿ ಚಿಕ್ಕದೇವನು ಶಿವಾಜಿಯನ್ನು ಸೋಲಿಸಿದನು. ಶಿವಾಜಿಯು ಚಿಕ್ಕದೇವರಾಜನನ್ನು ಕರ್ನಾಟಕದ ನಿರ್ವಿವಾದಿತ ಪ್ರಭುವೆಂದು ಕೊಂಡಾಡಿ, ಯುದ್ಧರಂಗದಿಂದ ಹಿಮ್ಮೆಟ್ಟಬೇಕಾಯಿತು.[೨೦] ಶಿವಾಜಿಯ ದೊಡ್ಡತನವನ್ನು ಇತಿಹಾಸವು ಗುರುತಿಸಿದೆ. ಅಪ್ರತಿಮ ಧೈರ್ಯ ಮತ್ತು ದಿಟ್ಟ ಯೋಜನೆಗಳನ್ನು ಅವನ ಹೆಸರು ನಮ್ಮ ಮನಸ್ಸಿಗೆ ತರುತ್ತವೆ. ಅಂತಹ ನಾಯಕನೂ ಒಡೆಯರ್ ಅರಸನಿಗೆ ಬಿಟ್ಟುಕೊಡಬೇಕಾಯಿತು. ಈ ಅಂಶವನ್ನು ಇತಿಹಾಸದಲ್ಲಿ ಅಷ್ಟಾಗಿ ಗಮನಿಸಲಿಲ್ಲ.

ಇತರ ಮರಾಠಾ ನಾಯಕರಿಗೂ ಇದೇ ಗತಿ ಕಾದಿತ್ತು. ಸಿರಾದ ಬಳಿ ಹೊಸೂರಿನಲ್ಲಿ ನಡೆದ ಯುದ್ಧದಲ್ಲಿ ಏಕೋಜಿಯು ಚಿಕ್ಕದೇವರಾಜ ಒಡೆಯರಿಗೆ ಸಮನಾಗಲಿಲ್ಲ. ೧೬೭೮ರಲ್ಲಿ ನಡೆದ ಯುದ್ಧದಲ್ಲಿ ಯಶವಂತರಾಯನನ್ನು ಕೊಲ್ಲಲಾಯಿತು. ದಾದಾಜಿ ಕಾಕಡೆ, ನಿಂಬಾಜಿ, ಜೈಹಜಿ ಮೊದಲಾದ ಇತರ ಮರಾಠಾ ಸರದಾರರು ಯುದ್ಧದಲ್ಲಿ ಉತ್ತಮ ಸಾಹಸವನ್ನೇನೂ ತೋರಿಸಲಿಲ್ಲ. ೧೬೮೧ರಲ್ಲಿ ಮಂಡ್ಯದ ಬಳಿ ನಡೆದ ಯುದ್ಧದಲ್ಲಿ ದಾದಾಜಿ ಮತ್ತು ನಿಂಬಾಜಿಯವರನ್ನು ಸೆರೆಹಿಡಿದು ವಧಿಸಲಾಯಿತು.[೨೧]

ಮರಾಠರು ತಾವು ಮಾತ್ರವೇ ಹೋದರೆ ಮೈಸೂರನ್ನು ಗೆಲ್ಲುವುದು ಸಾಧ್ಯವಿಲ್ಲ ಎಂದು ಅರ್ಥಮಾಡಿಕೊಂಡರು. ಸಂಭಾಜಿಯು ಇಕ್ಕೇರಿಯ ಬಸಪ್ಪನಾಯಕ ಹಾಗೂ ಗೋಲ್ಕೊಂಡದ ಕುತುಬ್‌ಶಾಹರ ನೆರವನ್ನು ಪಡೆದು ಮೈಸೂರಿನ ಮೇಲೆ ಆಕ್ರಮಣ ಮಾಡಲು ಬಯಸಿದನು. ಬೇರೆ ಮಾತುಗಳಲ್ಲಿ ಹೇಳುವುದಾದರೆ, ಮೈಸೂರು ಆ ಕಾಲದ ಅತ್ಯಂತ ಪ್ರಬಲವಾದ ಶಕ್ತಿಯಾದ ಮರಾಠರೂ ಏಕಾಂಗಿಯಾಗಿ ಸವಾಲು ಹಾಕಲು ಹೆದರುವ ಮಟ್ಟಿಗೆ ಬಲವಾದ ಶಕ್ತಿಯಾಗಿ ಬೆಳೆದಿತ್ತು. ಹೀಗೆ ಸಂಚುಮಾಡಿ ಮುಕ್ಕೂಟವೊಂದನ್ನು ರಚಿಸಿಕೊಂಡು ಮೈಸೂರನ್ನು ಮುತ್ತಿದರು. ಆದರೆ ಫಲವೇನೂ ಹಿಂದಿನದಕ್ಕಿಂತ ಉತ್ತಮವಾಗಲಿಲ್ಲ. ಚಿಕ್ಕದೇವರಾಜನು ೧೬೮೨ರಲ್ಲಿ ಬಾಣಾವರದಲ್ಲಿ ವೈರಿಗಳಿಗೆ ಬಲವಾದ ಪೆಟ್ಟುಕೊಟ್ಟು ಸೋಲಿಸಿದನು[೨೨] ಈ ಸೋಲಿನಿಂದಾಗಿ ಮೈಸೂರಿನ ಮೇಲೆ ಪ್ರಭುತ್ವವನ್ನು ಸ್ಥಾಪಿಸಬೇಕೆಂಬ ಮರಾಠರ ಆಸೆ ಮಣ್ಣುಪಾಲಾಯಿತು.

ಆದರೆ ಚಿಕ್ಕದೇವರಾಜನ ಆಡಳಿತ ನೀತಿಯಲ್ಲಿ ಇನ್ನೂ ಹೆಚ್ಚು ಸ್ವಾರಸ್ಯವಾದ ಅಂಶವೆಂದರೆ, ಒಂದು ಮಹಾ ಸಾಮ್ರಾಜ್ಯದ ಅವನತಿಯ ಪ್ರಾರಂಭಕ್ಕೆ ಕಾರಣನಾದ ಚಕ್ರವರ್ತಿ ಔರಂಗಜೇಬನೊಂದಿಗೆ ಅವನು ಇಟ್ಟುಕೊಂಡ ಸಂಬಂಧಗಳು. ಇಲ್ಲೂ ಮೈಸೂರಿನದು ಬೇರೆಯೇ ನಿಲುವಾಯಿತು. ಪ್ರತಿಯೊಂದು ರಾಜ್ಯವನ್ನೂ ಸೋಲಿಸಿ ಸಮಸ್ತ ಭಾರತವನ್ನು ತನ್ನ ಮುಷ್ಟಿಗೆ ತಂದುಕೊಳ್ಳಲು ಯುದ್ಧಪ್ರವೃತ್ತನಾಗಿದ್ದ ಔರಂಗಜೇಬನ ಆಸೆಗೆ ಮಿತಿಯೇ ಇರಲಿಲ್ಲ, ಇಂತಹ ದೃಢನಿರ್ಧಾರದ ವೈರಿಯೊಂದಿಗೆ ದ್ವೇಷ ಕಟ್ಟಿಕೊಳ್ಳುವುದರಿಂದ ಯಾವ ಪ್ರಯೋಜನವೂ ಇಲ್ಲ ಎಂದು ಚಿಕ್ಕದೇವರಾಜನು ಅರ್ಥಮಾಡಿಕೊಡನು. ಬಿಜಾಪುರ, ಗೋಲ್ಕೊಂಡ, ಮರಾಠರು, ಇನ್ನೂ ಅನೇಕಾನೇಕ ಪ್ರಾಂತಗಳು ಸೋತುಕೊಂಡಿದ್ದಾಗ ಇತರರು ಪರೀಕ್ಷಿಸಿದ್ದನ್ನೇ ಮತ್ತೆ

ಪರೀಕ್ಷಿಸುವುದಾದರೂ ಏಕೆ? ಎಂದು ಅವನಿಗೆ ತೋರಿತು. ಚಿಕ್ಕದೇವರಾಜನಿಗೆ ವಿವೇಚನೆಯು ಪರಾಕ್ರಮದ ಸಮಭಾಗವಾಗಿತ್ತು. ಅಲ್ಲದೆ ಮರಾಠರು ಮತ್ತು ಬಿಜಾಪುರಿಗಳು ಮೈಸೂರಿನ ಬದ್ಧವೈರಿಗಳಾಗಿ ಸದಾಕಾಲವೂ ಬಾಗಿಲಲ್ಲೇ ಕಾದಿರುತ್ತಿದ್ದರು. ಒಂದೇ ಏಟಿಗೆ ಎರಡು ಹಣ್ಣುಗಳನ್ನು ಉದುರಿಸಿಕೊಳ್ಳುವ ಒಂದು ಅವಕಾಶವು ಚಿಕ್ಕದೇವರಾಜನಿಗೆ ಈಗ ದೊರಕಿತ್ತು. ಮೈಸೂರಿನ ಅರಸನು ಮುಗಲ್ ಚಕ್ರವರ್ತಿಯ ಮಿತ್ರನಾದರೆ ಮೈಸೂರಿನ ಪರಂಪರಾಗತ ವೈರಿಗಳಿಗೆ ತಡೆಯೊಡ್ಡಿದಂತಾಗುತ್ತಿತ್ತು. ವಿರೋಧವಾಗಿ ನಿಂತರೆ ಹೇಗೂ ಔರಂಗಜೇಬನು ಮೈಸೂರನ್ನು ಅಡಗಿಸಿಬಿಡುತ್ತಿದ್ದನು. ಮೈತ್ರಿಯಿಂದ ಅವನನ್ನೇ ತನ್ನ ಗೆಳೆಯನನ್ನಾಗಿಸಿಕೊಂಡು ರಾಜ್ಯವನ್ನು ರಕ್ಷಿಸಿಕೊಂಡಂತಾಗುತ್ತಿತ್ತು.

ಮುಂದೆ ಭಾರತದ ನಕ್ಷೆಯನ್ನೇ ಬದಲಿಸಿದ ಕ್ಲೈವ್ ಮತ್ತು ಡೂಪ್ಲೆ ಇವರನ್ನು ನೆನಪಿಗೆ ತರುವಂತಹ ಉನ್ನತಮಟ್ಟದ ಮುತ್ಸದ್ದಿತನ ಇದು. ಸಂಭಾಜಿಯು ಒಂದೇ ಸಮನಾಗಿ ಕಾಟ ಕೊಡುತ್ತಿರುವಾಗ, ತಂಜಾವೂರು ಮಧುರೆ ಮತ್ತು ಜಿಂಜಿಗಳ ನಾಯಕರು ಮಲೆತು ನಿಂತಿದ್ದಾಗ, ಚಿಕ್ಕದೇವರಾಜನು ಔರಂಗಜೇಬನ ಸದ್ಭಾವನೆಯನ್ನು ಗಳಿಸುವುದು ಸೂಕ್ತ ಎಂದು ಅರ್ಥಮಾಡಿಕೊಂಡನು. ರಾಜಕೀಯದಲ್ಲಿ ತತ್ವ ನಿಷ್ಠೆಗೆ ಎಡೆಯಿಲ್ಲ. ಔರಂಗಜೇಬನು ಬಿಜಾಪುರ ಮತ್ತು ಗೋಲ್ಕೊಂಡಗಳ ಮೇಲೆ ಮುತ್ತಿಗೆ ಹಾಕುವಲ್ಲಿ ಚಿಕ್ಕದೇವನು ತನ್ನ ನೆರವನ್ನು ಚಕ್ರವರ್ತಿಗೆ ನೀಡಿದನು(ಇವು ೧೬೮೬ ಸೆಪ್ಟೆಂಬರ್ ಮತ್ತು ೧೬೮೭ ಸೆಪ್ಟೆಂಬರ್‌ಗಳಲ್ಲಿ ಪತನ ಹೊಂದಿದುವು). ಮಹಾನ್ ಚಕ್ರವರ್ತಿಯು ಒಬ್ಬ ಸಣ್ಣ ರಾಜನಿಂದ ಸಹಾಯವನ್ನು ಪಡೆಯುವುದು ತನಗೆ ಅವಮಾನವೆಂದೇನೂ ಭಾವಿಸಲಿಲ್ಲ. ಆದರೆ ಅದರಿಂದ ಮಹತ್ತರವಾದೊಂದು ಐತಿಹಾಸಿಕ ಘಟನೆ ನಡೆದುಹೋಯಿತು. ದಖ್ಖನಿನ ಶಾಹಿಗಳ ಅಂತ್ಯವಾಯಿತು. ಆದರೆ ಮೈಸೂರು ಸುಭದ್ರವಾಗಿ ಉಳಿದುಕೊಂಡು ದಕ್ಷಿಣದ ರಾಜಕಾರಣದಲ್ಲಿ ಬಹುಮುಖ್ಯವಾದ ಪಾತ್ರ ನಿರ್ವಹಿಸಲು ನಿಂತಿತು.

ಚಿಕ್ಕದೇವರಾಜನ ದೂರದೃಷ್ಟಿಯಿಂದಾಗಿ ಲೆಕ್ಕವಿಲ್ಲದಷ್ಟು ಪ್ರಯೋಜನಗಳು ಪ್ರಾಪ್ತವಾದವು. ಸಂಭಾಜಿಯು ಮತ್ತೆ ೧೬೮೬ರಲ್ಲಿ ಮೈಸೂರಿನ ಮೇಲೆ ಯುದ್ಧಕ್ಕೆ ಬಂದಾಗ ಔರಂಗಜೇಬನು ತನ್ನ ದಳಪತಿ ಖಾಸಿಂಖಾನ್‌ನನ್ನು ಸೇನಾಸಮೇತ ಕಳುಹಿಸಿದನು. ಅವನು ತುಮಕೂರನ್ನು ಗೆದ್ದು ಚಿಕ್ಕದೇವರಾಜನಿಗೆ ಒಪ್ಪಿಸಿದನು. ತನ್ನ ಕಿರುಬೆರಳನ್ನು ಅಲುಗಿಸದೆ ಚಿಕ್ಕದೇವರಾಜನು ಸಂಭಾಜಿಯ ಅಪಾಯವನ್ನು ತಪ್ಪಿಸಿಕೊಂಡನು, ಜೊತೆಗೆ ತುಮಕೂರನ್ನು ಗಳಿಸಿದನು. ಅದಕ್ಕಿಂತ ಮಿಗಿಲಾಗಿ, ಮೊಗಲ್ ನೆರವು ಅವನಿಗೆ ೧೬೮೭ರಲ್ಲಿ ಬೆಂಗಳೂರಿಗೆ ಮುತ್ತಿಗೆ ಹಾಕಲು ಧೈರ್ಯ ಕೊಟ್ಟಿತು. ಕೈವಶವಾದ ಬೆಂಗಳೂರು ಅವನಿಗೆ ದೊರೆತ ಬಹುದೊಡ್ಡ ಉಡುಗೊರೆಯಾಯಿತು. ಬೆಂಗಳೂರಿನ ನಷ್ಟವು ಮರಾಠರಿಗೆ ಬಹುದೊಡ್ಡ ಆಘಾತವಾಯಿತು, ಚಿಕ್ಕದೇವರಾಜ ಒಡೆಯನ ಉತ್ಸಾಹವನ್ನು ಅಧಿಕಗೊಳಿಸಿತು.

ಮೊಗಲ್ ಸಂಪರ್ಕದಿಂದಾಗಿ ಇತರ ಕೆಲವು ಪ್ರಯೋಜನಗಳೂ ಬಂದುವು. ೧೬೮೮ರಲ್ಲಿ ಮುಗಲರು ಸಿರಾದುರ್ಗವನ್ನು ಗೆದ್ದು ಖಾಸಿಂಖಾನನು ಅದರ ಗವರ್ನರ್ ಆಗಿ ಬಂದುದು ಬಹುದೊಡ್ಡ ಸಮಾಧಾನದ ಸಂಗತಿಯಾಯಿತು. ಏಕೆಂದರೆ ಈಗ ಮೈಸೂರಿನ ಗಡಿ ಪ್ರದೇಶಗಳು ಮೈಸೂರಿನ ಮಿತ್ರರ ವಶದಲ್ಲಿದ್ದುವು. ಆಗಾಗ ಮರಾಠರು ನುಗ್ಗುತ್ತಿದ್ದುದಕ್ಕೆ ಈಗ ತಡೆಯೊದಗಿತ್ತು. ಯಾವುದೇ ರಾಜ್ಯದ ಉಳಿವು, ಕ್ರೋಢೀಕರಣ, ವಿಸ್ತರಣ ಮತ್ತು ಬಲವರ್ಧನೆಗಳು ಸೇನಾಬಲದಷ್ಟೇ ಮಟ್ಟಿಗೆ ರಾಜಕೀಯ ಚಾಣಾಕ್ಷತೆಯನ್ನೂ ಅವಲಂಬಿಸುತ್ತವೆ. ಔರಂಗಜೇಬನೊಂದಿಗೆ ಸಖ್ಯ ಬೆಳೆಸಿ, ಮರಾಠರು ಔರಂಗಜೇಬನನ್ನು ಎದುರಿಸಿ ನಿಲ್ಲಲು ಸಾಧ್ಯವೇ ಆಗದೆ ಹೋದರೆ ಮೈಸೂರನ್ನು ತಾವು ಹಿಮ್ಮೆಟ್ಟಿ ಆಶ್ರಯ ಪಡೆಯುವ ಸ್ಥಳವನ್ನಾಗಿ ಮಾಡಿಕೊಳ್ಳಬಹುದು ಎಂದು ಊಹಿಸಿದನು. ಅಂಥದೊಂದು ಪರಿಸ್ಥಿತಿಗೆ ಚಿಕ್ಕದೇವರಾಜನು ಅವಕಾಶವನ್ನು ಕೊಡಲಿಲ್ಲ. ಮರಾಠರು ಸ್ವಲ್ಪವೂ ಬಿಡುವು ಕೊಡದಿದ್ದ ಸಮಯದಲ್ಲಿ ಮೊಗಲರೊಂದಿಗೆ ಯುದ್ಧ ಮಾಡಲು

ಹವಣಿಸಿದ್ದರೆ ಅವನು ಇಬ್ಬರು ಪ್ರಬಲರಾದ ವೈರಿಗಳ ವಿರೋಧವನ್ನು ಕಟ್ಟಿಕೊಂಡಂತಾಗುತ್ತಿತ್ತು, ಅದರ ಪರಿಣಾಮ ಘೋರವಾಗಿರುತ್ತಿತ್ತು. ಒಬ್ಬ ಅರಸನ ಬುದ್ಧಿಶಕ್ತಿಗೆ ಪರೀಕ್ಷೆ ಬರುವುದು ಅಂತಹ ಬಿಕ್ಕಟ್ಟಿನ ಸಮಯಗಳಲ್ಲಿಯೇ. ಸಮಾಧಾನ ಚಿತ್ತವನ್ನು ಕಾಪಾಡಿಕೊಳ್ಳುವ ತನ್ನ ಹುಟ್ಟುಗುಣದಿಂದಾಗಿ ಚಿಕ್ಕದೇವನು ತನಗೆ ಅತ್ಯಂತ ಹಿತಕರವಾಗುವ ದಾರಿಯಲ್ಲಿ ಹೆಜ್ಜೆಯನ್ನಿಡಲು ತೀರ್ಮಾನಿಸಿದನು. ಔರಂಗಜೇಬನೊಂದಿಗೆ ಯುದ್ಧಮಾಡುವುದನ್ನು ತಪ್ಪಿಸಿಕೊಂಡು ಅದರಲ್ಲೂ ತನಗೆ ಅನುಕೂಲವಾಗುವಂತೆ ಮಾಡಿಕೊಂಡ ಭಾರತೀಯ ರಾಜ ಚಿಕ್ಕದೇವರಾಜನೊಬ್ಬನೇ ಎಂದು ತೋರುತ್ತದೆ. ಚಿಕ್ಕದೇವರಾಜ ಒಡೆಯನ ನಿಷ್ಠೆಯನ್ನು ಮೆಚ್ಚಿ ಔರಂಗಜೇಬನು ಅವನಿಗೆ 'ರಾಜಾ ಜಗದೇವ' ಎಂದು ಬಿರುದನ್ನು ನೀಡಿ ಸತ್ಕರಿಸಿದನು. ಕರ್ನಾಟಕದ ಮೇಲೆ ಚಿಕ್ಕದೇವರಾಜನ ಪ್ರಭುತ್ವವನ್ನು ಗೌರವಿಸಿ ಒಂದು ಫರ್ಮಾನು ಹೊರಡಿಸಿದನು.

ಆ ಕಾಲದ ರಾಜಕೀಯ ಶಬ್ದಕೋಶದಲ್ಲಿ ಮುಗಲ್ ಪ್ರಭಾವವಿದ್ದ ಭಾರತದ ಪ್ರತಿಯೊಂದು ಭಾಗದ ನ್ಯಾಯಧಿಕಾರವೂ ಮುಗಲರ ಕೈಗಳಲ್ಲಿತ್ತು ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಯಾರೇ ಇದನ್ನು ಪ್ರತಿಭಟಿಸಿದರೂ ಮುಗಲರ ಕ್ರೋಧಕ್ಕೆ ತುತ್ತಾಗುತ್ತಿದ್ದರು. ಶಿವಾಜಿಯು ಆ ಪರಿಸ್ಥಿತಿಯನ್ನು ಒಪ್ಪಲಿಲ್ಲ, ಆದ್ದರಿಂದ ಮುಗಲರೊಂದಿಗೆ ಅವನು ಕಾದುತ್ತಿರಬೇಕಾಯಿತು. ಔರಂಗಜೇಬನಿಗೆ ಅವಿಧೇಯತೆ ತೋರಿಸಿದ ರಾಜನನ್ನು ಉಗ್ರವಾಗಿ ಶಿಕ್ಷಿಸಲಾಗುತ್ತಿತ್ತು. ಅಂತಹ ಪರಿಸ್ಥಿತಿಯಲ್ಲಿ ಔರಂಗಜೇಬನಿಗೆ ಮಿತ್ರನಾಗಿ ಅವನ ನಿಕಟ ಸಂಪರ್ಕಕ್ಕೆ ಬರುವುದು ಚಿಕ್ಕದೇವರಾಜನ ಜಾಣತನದ, ರಾಜಕೀಯ ಚಾಣಾಕ್ಷತೆಯ, ಸಕಾಲಿಕವಾದ ನಡೆಯಾಯಿತು. ೧೬೯೯ರಲ್ಲಿ ಕರಣಿಕ ಲಿಂಗಣ್ಣಯ್ಯನ ಕೈಕೆಳಗೆ ಚಿಕ್ಕದೇವರಾಜನು ಔರಂಗಜೇಬನ ದರ್ಬಾರಿಗೆ ರಾಯಭಾರವನ್ನು ಕಳುಹಿಸಿದನು. ರಾಯಭಾರಿಗೆ ಆತ್ಮೀಯವಾದ ಸ್ವಾಗತ ದೊರೆಯಿತು. ಚಿಕ್ಕದೇವರಾಜ ಒಡೆಯನು ಕಳಿಸಿಕೊಟ್ಟಿದ್ದ ಉಡುಗೊರೆಗಳನ್ನು ಸಂತೋಷದಿಂದ ಸ್ವೀಕರಿಸಿದ ಚಕ್ರವರ್ತಿಯು ಅವನಿಗೆ 'ರಾಜ ಚಿಕ್ಕದೇವರಾಜ ಅಹಮದ್ ಶಾಹಿ' ಎಂಬ ಬರಹವನ್ನು ಕೆತ್ತಿದ್ದ ಒಂದು ರಾಜಮುದ್ರೆಯನ್ನು ಉಡುಗೊರೆಯಾಗಿ ನೀಡಿದನು. ಮುಂದೆ ಅಧಿಕೃತ ಪತ್ರವ್ಯವಹಾರಗಳಲ್ಲಿ ಮತ್ತು ದಾಖಲೆಗಳಲ್ಲಿ ಅದನ್ನು ಒತ್ತಬೇಕಾಗಿತ್ತು. ಅದು ಮೊಗಲ್ ಪ್ರಭುತ್ವವನ್ನು ಒಪ್ಪಿಕೊಂಡಂತಾಗುತ್ತಿತ್ತು. ಅದನ್ನು ಒಪ್ಪಿಕೊಳ್ಳಲು ಚಿಕ್ಕದೇವರಾಜನಿಗೆ ಸಂಕೋಚವೇನೂ ಆಗಲಿಲ್ಲ. ಪ್ರಾಸಂಗಿಕವಾಗಿ ಹೇಳುವುದಾದರೆ, ಈ ಮುದ್ರಿಕೆಯನ್ನು ಬಹಳ ಕಾಲ, ಮೈಸೂರು ಬ್ರಿಟಿಷ್ ಪರಮಾಧಿಕಾರಕ್ಕೆ ಬಂದ ಮೇಲೂ ಬಳಸಲಾಗುತ್ತಿತ್ತು. ಔರಂಗಜೇಬನು ಬೇರೆ ಕಡೆ ಅನ್ವಯಿಸಿದ್ದ ಆಕ್ರಮಣ ನೀತಿಯ ಸಾಮಾನ್ಯ ವಿನ್ಯಾಸದಿಂದ ಬೇರೆಯಾದ ರೀತಿಯಲ್ಲಿ ಮೈಸೂರು, ಮೊಗಲ್ ಸಂಬಂಧವು ಬೆಳೆಯಿತು. ಚಿಕ್ಕದೇವರಾಜನಿಗೂ ಇದು ತನ್ನ ನೆರೆಯವರೊಂದಿಗೆ ಯುದ್ಧ ಮಾಡುತ್ತಿದ್ದ ನೀತಿಗಿಂತ ಅನ್ಯವಾದ ರಾಜಕೀಯ ಸಂಬಂಧವಾಗಿತ್ತು. ಇಬ್ಬರಿಗೂ ತಮ್ಮ ಹಿತವು ಎಲ್ಲಿದೆ ಎಂಬುದು ತಿಳಿದಿತ್ತು. ಇಬ್ಬರೂ ಒಬ್ಬರಿಗೊಬ್ಬರು ಸಹಕರಿಸಲು ಪ್ರಯತ್ನಿಸಿದರು.

ಚಿಕ್ಕದೇವರಾಜ ಒಡೆಯರ್ ಕಳಿಸಿದ ನಿಯೋಗವು ೧೮ನೆಯ ಶತಮಾನದ ಪ್ರಾರಂಭದಲ್ಲಿ ಮೈಸೂರಿನ ರಾಜಕೀಯ ಸ್ಥಾನಮಾನದ ಮೇಲೆ ಒಳ್ಳೆಯ ಪ್ರಭಾವ ಬೀರಿತು. ಔರಂಗಜೇಬನು ಕರ್ನಾಟಕದ ಮೇಲೆ ಚಿಕ್ಕದೇವರಾಜ ಒಡೆಯನ ಪ್ರಭುತ್ವವನ್ನು ಮಾನ್ಯ ಮಾಡಿದನು. ಈ ಮನ್ನಣೆಯಿಂದಾಗಿ ಮೈಸೂರು ಕೃಷ್ಣಾ ನದಿಯ ದಕ್ಷಿಣಕ್ಕೆ ಸ್ವತಂತ್ರ ರಾಜ್ಯವಾಗಿ ಪ್ರಾಧಾನ್ಯ ಪಡೆಯಿತು. ಭಾರತದ ಅತ್ಯಂತ ಬಲಿಷ್ಠ ಶಕ್ತಿಯಾದ ಮುಗಲರೊಂದಿಗೆ ಉತ್ತಮ ರಾಜಕಾರಣ ಸಂಬಂಧಗಳನ್ನು ಬೆಳೆಸಿಕೊಂಡು ಅದರ ಘನತೆ ಹೆಚ್ಚಿತು.

ಚಕ್ರವರ್ತಿಯಿಂದಲೇ ಗೌರವವನ್ನೂ ಸತ್ಕಾರವನ್ನೂ ಪಡೆದುದರಿಂದ ಪ್ರಜೆಗಳ ಕಣ್ಣಿನಲ್ಲಿ ಚಿಕ್ಕದೇವರಾಜನ ಘನತೆ ಅಪಾರವಾಗಿ ಹೆಚ್ಚಿತು. ಅವನ ಆಳಿಕೆಯು ಅತ್ಯಂತ ಕೀರ್ತಿವಂತವಾಯಿತು. ಮೈಸೂರಿನ ಇತಿಹಾಸದಲ್ಲಿ ಅತ್ಯಂತ ಸ್ಮರಣೀಯವಾದುದಾಯಿತು.

ಮೂವತ್ತೊಂದು ವರ್ಷಗಳ ಕಾಲ ಆಡಳಿತ ನಡೆಸಿ ಚಿಕ್ಕದೇವರಾಜನು ಗೌರವ, ಪ್ರಸಿದ್ಧಿ ಮತ್ತು ಮಹಿಮೆಗಳಿಂದ ತುಂಬಿದ ಜೀವನ ನಡೆಸಿ ೧೭೦೪ರಲ್ಲಿ ವಿಧಿವಶನಾದನು. ಅವನು ಮೈಸೂರಿನ ರಾಜರಲ್ಲಿ ಅತ್ಯಂತ ಪ್ರಸಿದ್ಧನಾದವನು. ಸುವ್ಯವಸ್ಥಿತವಾದ ಸರಕಾರವನ್ನೂ ಉತ್ತಮ ರಾಜ್ಯಾಂಗವನ್ನೂ ಅವನು ಪ್ರೀತಿಸುತ್ತಿದ್ದನು. ಇದು ಅವನು ಜಾರಿಗೆ ತಂದ ಆಡಳಿತ ಸುಧಾರಣೆಗಳಿಂದಲೂ, ಆಡಳಿತ ಯಂತ್ರವನ್ನು ಹದಿನೆಂಟು ವಿಭಾಗಗಳನ್ನಾಗಿ ವ್ಯವಸ್ಥೆಗೊಳಿಸಿದುದರಿಂದಲೂ ತಿಳಿಯುತ್ತದೆ. ಈ ಕಚೇರಿಗೆ ಕೊಟ್ಟ ಅಠಾರಾ ಕಚೇರಿ ಎಂಬ ಹಿಂದೂಸ್ತಾನಿ ಹೆಸರು ಕನ್ನಡದಲ್ಲಿ ಸಾಮಾನ್ಯ ಬಳಕೆಯ ಪದವಾಯಿತು. ಬೆಂಗಳೂರಿನ ಸಾರ್ವಜನಿಕ ಕಚೇರಿಗಳಿರುವ ಕಟ್ಟಡವನ್ನು ಇಂದಿಗೂ ಅಠಾರಾ ಕಚೇರಿ ಎಂದೇ ಸಾರ್ವಜನಿಕರು ಕರೆಯುತ್ತಾರೆ. ತನ್ನ ಪರಾಕ್ರಮದಿಂದ ಅವನು ರಾಜ್ಯದ ಗಡಿಗಳನ್ನು ಕಾಪಾಡಿದನು, ಅಪ್ರತಿಮವೀರ ಎಂದೂ ವೀರನರಪತಿ ಎಂದೂ ಕರೆಸಿಕೊಂಡನು.

ವಂಶದ ಅವನತಿ

ಚಿಕ್ಕದೇವರಾಜನ ಉತ್ತರಾಧಿಕಾರಿಗಳು ಗಣ್ಯರಲ್ಲದ ದುರ್ಬಲ ರಾಜರು. ಇದರ ಫಲವಾಗಿ ರಾಜ್ಯದ ಅಧಿಕಾರವು ದಳವಾಯಿಗಳ ಹಸ್ತಗತವಾಯಿತು. ಚಿಕ್ಕದೇವರಾಜನ ಮಗ ೨ನೇ ಕಂಠೀರವನು ಕಿವುಡಿನಿಂದ ಬಳಲುತ್ತಿದ್ದನು. ಒಂಬತ್ತು ವರ್ಷ ಅವನ ಹೆಸರಿನಲ್ಲಿ ಬೇರೆಯವರು ಆಡಳಿತ ನಡೆಸಿದರು. ಈ ಅವಧಿಯಲ್ಲಿ ಇಬ್ಬರು ಅಸಾಧಾರಣ ವ್ಯಕ್ತಿಗಳು ಮೈಸೂರು ರಾಜಕಾರಣದಲ್ಲಿ ಕಾಣಿಸಿಕೊಂಡರು. ಅವರು ದೇವರಾಜಯ್ಯ ಮತ್ತು ಅವನ ದಾಯಾದಿ ನಂಜರಾಜಯ್ಯ. ಕ್ರಮವಾಗಿ ಇವರು ದಳವಾಯಿ (ಸೇನಾಧಿಪತಿ) ಹಾಗೂ ಸರ್ವಾಧಿಕಾರಿ (ಪೌರ ಹಾಗೂ ಕಂದಾಯ ಆಡಳಿತದ ಮುಖ್ಯಸ್ಥ) ಆಗಿದ್ದರು. ಈ ಇಬ್ಬರು ರಾಜ್ಯದ ವಾಸ್ತವಿಕ ಅರಸರಾಗಿದ್ದರು ಎನ್ನಬಹುದು. ಹಾಗೆ ನೋಡಿದರೆ ೧೮ನೆಯ ಶತಮಾನವು ಬೇರೆ ಎಲ್ಲಾ ಕಡೆಗಳಂತೆಯೇ ಭಾರತದಲ್ಲೂ ಕಷ್ಟ ಕೋಟಲೆಗಳು ಕಾಣಿಸಿಕೊಂಡ ಕಾಲ. ಭಾರತದಲ್ಲಿ ರಾಜ್ಯವನ್ನು ಬಲಾತ್ಕಾರದಿಂದ ಆಕ್ರಮಿಸಿಕೊಳ್ಳುವವರು, ರಾಜನಿರ್ಮಾಪಕರು ಮೆರೆದ ಕಾಲ. ಇದನ್ನು ದೆಹಲಿ, ಪೂನಾ ಮತ್ತು ಮೈಸೂರುಗಳಲ್ಲೂ ಕಾಣಬಹುದಾಯಿತು. ಶಾಸನಾಧಿಕಾರದಿಂದ ವಾಸ್ತವಾಧಿಕಾರದ ಕಡೆಗೆ ಹೊರಳಿದುದನ್ನು ಈ ಅವಧಿಯಲ್ಲಿ ಕಾಣುವಂತಾಯಿತು.[೨೪]

೨ನೇ ಕಂಠೀರವನ ನಂತರ ೧೭೧೪ರಲ್ಲಿ ಅವನ ಮಗ ಕೃಷ್ಣರಾಜ ಒಡೆಯರ್ ಪಟ್ಟಕ್ಕೆ ಬಂದನು. ಸಂತಾನವಿಲ್ಲದೆ ಅವನು ಮೃತನಾಗಲಾಗಿ ೧೭೩೨ರಲ್ಲಿ ದೇವರಾಜಯ್ಯನು ವಿಧವೆ ರಾಣಿ ದೇವಾಜಮ್ಮಣ್ಣಿಯನ್ನು ಚಾಮರಾಜನೆಂಬುವನನ್ನು ದತ್ತಕ ಸ್ವೀಕಾರ ಮಾಡುವುದಕ್ಕೆ ಒಪ್ಪಿಸಿದನು. ಚಾಮರಾಜನು ಅರಸು ಮನೆತನಕ್ಕೆ ದೂರದ ಸಂಬಂಧಿಯಾಗಿದ್ದವನು. ಚಾಮರಾಜನು (ಆರನೆಯ ಚಾಮರಾಜ) ಸಿಂಹಾಸನಕ್ಕೆ ಬರಲು, ಮೈಸೂರು ರಾಜವಂಶದ ಮುಪ್ಪಿನ ದೇವರಾಜ ಒಡೆಯನ ವಂಶ ಪರಂಪರೆಯು ಕೊನೆಗೊಂಡಿತು. ಈ ಚಾಮರಾಜನು ದಳವಾಯಿಗಳ ಕೈಗೊಂಬೆಯಾದನು. ಆ ಒಪ್ಪಂದದ ಮೇಲೆಯೇ ಅವನಿಗೆ ಆ ಅಧಿಕಾರ ದೊರಕಿದ್ದು ಕೂಡ. ಆದ್ದರಿಂದ ಕೆಲಸಮಯದ ನಂತರ ಅವನನ್ನು ಒಳಸಂಚಿಗೆ ಬಲಿಪಶುವನ್ನಾಗಿ ಮಾಡಿ ಕಬ್ಬಾಳದುರ್ಗದ ಸೆರೆಮನೆಯಲ್ಲಿ ಇರಿಸಲಾಯಿತು. ಅನಾಮಧೇಯನಾಗಿ ಖೈದಿಯಂತೆ ಕಾಲ ಕಳೆಯುತ್ತಾ ಅನತಿಕಾಲದಲ್ಲೇ ಅಲ್ಲಿಯ ಅಹಿತಕರ ಹವೆಯಿಂದಾಗಿ ಆರೋಗ್ಯ ಕೆಟ್ಟು ಮೃತನಾದನು. ಹಿಂದಿನ ಅನುಭವವಿದ್ದ ದಳವಾಯಿಗಳು ೧೭೩೪ರಲ್ಲಿ ಮತ್ತೊಂದು ದತ್ತಕ ಸ್ವೀಕಾರಕ್ಕೆ ಏರ್ಪಾಟು ಮಾಡಿದರು. ನಾಲ್ಕುವರ್ಷದ ಬಾಲಕನಾಗಿದ್ದ ೨ನೇ ಕೃಷ್ಣರಾಜ ಒಡೆಯರ್ ಪಟ್ಟಕ್ಕೆ ಬಂದನು. ಇದರಿಂದಾಗಿ ದಳವಾಯಿಗಳ ಅಧಿಕಾರ ಅಬಾಧಿತವಾಗಿ ಮುಂದುವರಿಯಿತು. ಹೀಗೆ ''ಮೈಸೂರಿನ ಸಿಂಹಾಸನಕ್ಕೆ ಮುಂದಿನ ವರ್ಷಗಳಲ್ಲೂ ಅಣಕು ನಾಯಕತ್ವವು ವಿಶಿಷ್ಟ ಲಕ್ಷಣವಾಯಿತು.''[೨೫]

೧೭೪೮ರಲ್ಲಿ ನಂಜರಾಜನು ದೇವನಹಳ್ಳಿಯ ಕೋಟೆಗೆ ಮುತ್ತಿಗೆ ಹಾಕಿದ್ದಾಗ ಮೈಸೂರಿನ ಒಬ್ಬ ತರುಣ ಯೋಧನ ಉತ್ಸಾಹವನ್ನೂ ಸಾಮರ್ಥ್ಯವನ್ನು ಗಮನಿಸಿ ಅವನಿಗೆ ಪ್ರೋತ್ಸಾಹಕೊಟ್ಟನು. ಆ ಯೋಧನೇ ಹೈದರ್‌ಅಲಿ. ಮುಂದಿನ ವರ್ಷಗಳಲ್ಲಿ ದಕ್ಷಿಣ ಭಾರತದ ರಾಜಕಾರಣದಲ್ಲಿ ತಾನೇ ತಾನಾಗಿ ಮೆರೆದ ಅದೃಷ್ಟ ಅವನದಾಯಿತು.

ಹೈದರಾಬಾದಿನ ನಿಜಾಮನೂ ಮರಾಠರೂ ಮೈಸೂರಿನ ಮೇಲೆ ತಮ್ಮ ಹಕ್ಕನ್ನು ಘೋಷಿಸುತ್ತಾ ಚೌಥ್ ಹಾಗೂ ಸರದೇಶಮುಖಿಗಳ ಹೆಸರಿನಲ್ಲಿ ಪದೇ ಪದೇ ಮೈಸೂರಿನ ಮೇಲೆ ದಂಡೆತ್ತಿ ಬರುತ್ತಿದ್ದ ಕಾಲವದು. ನಿಜಾಮನು ಮೈಸೂರೂ ಕೂಡಿದಂತೆ ಸಮಗ್ರ ದಕ್ಷಿಣಭಾರತಕ್ಕೆ ತಾನೇ ಒಡೆಯನೆಂದು ಸಾರುತ್ತಿದ್ದನು. ಹಾಗೆಯೇ ಮರಾಠರಿಗೂ ಮೈಸೂರಿನ ಮೇಲೆ ಕಣ್ಣು. ಷಾಜಿಯು ಬೆಂಗಳೂರನ್ನು ಜಾಗೀರಾಗಿ ಪಡೆದದ್ದರಿಂದ ಮೈಸೂರು ತಮ್ಮ 'ಪವಿತ್ರ ಪಿತ್ರಾರ್ಜಿತ ಆಸ್ತಿ' ಎಂದು ಅವರು ಹೇಳಿಕೊಳ್ಳುತ್ತಿದ್ದರು.

೧೭೫೧ರಲ್ಲಿ ನಂಜರಾಜಯ್ಯನು ಹೈದರನನ್ನೂ ಕರೆದುಕೊಂಡು ತಿರುಚಿನಾಪಳ್ಳಿಗೆ ಹೋದನು. ಆರ್ಕಾಟಿನ ನವಾಬಗಿರಿಯನ್ನು ಪಡೆಯಲು ಮುಹಮ್ಮದಲಿಗೆ ಸಹಾಯ ಮಾಡುವುದು ಅದರ ಉದ್ದೇಶವಾಗಿತ್ತು. ಅವನು ನಂಜರಾಜಯ್ಯನನ್ನು ನೆರವಿಗಾಗಿ ಕೋರಿದ್ದನು. ತಿರುಚಿನಾಪಳ್ಳಿಯ ಮುತ್ತಿಗೆ ಬಹಳ ದೀರ್ಘಕಾಲ ಎಳೆಯಿತು. ೧೭೫೪ರಲ್ಲಿ ಒಂದು ಕರಾರಿನೊಂದಿಗೆ ಮುಗಿಯಿತು. ಕರಾರು ಮುಹಮ್ಮದಲಿಯ ಮಿತ್ರರಾದ ಮೈಸೂರಿಗೂ ಫ್ರೆಂಚರಿಗೂ ಅನುಕೂಲವಾಗಿರಲಿಲ್ಲ. ಮುಹಮ್ಮದಲಿಯ ವಿಶ್ವಾಸಘಾತುಕತೆಯಿಂದಾಗಿ ತಿರುಚಿನಾಪಳ್ಳಿಯನ್ನು ಪಡೆಯುವ ಪ್ರಯತ್ನದಲ್ಲಿ ವಿಫಲನಾದ ನಂಜರಾಜಯ್ಯನು ೧೭೫೫ರಲ್ಲಿ ಅಪಾರವಾದ ಹಣ, ಕಾಲಗಳನ್ನು ವ್ಯಯಿಸಿ, ಅನೇಕ ಯೋಧರ ರಕ್ತ ಹರಿಸಿ ಬರಿಕೈಯಲ್ಲಿ ಶ್ರೀರಂಗಪಟ್ಟಣಕ್ಕೆ ಹಿಂದಿರುಗಿದನು. 'ತಿರುಚಿನಾಪಳ್ಳಿಯ ಮೋಸ' ಸ್ಪಷ್ಟವಾಗಿ ವ್ಯಕ್ತವಾಯಿತು.

ಆದರೆ ತಿರುಚಿನಾಪಳ್ಳಿಯು ಹೈದರನಿಗೆ ಒಳ್ಳೆಯ ತರಬೇತಿ ಕೊಟ್ಟ ಕ್ಷೇತ್ರವಾಯಿತು. ಜೊತೆಗೆ ಅವನಿಗೆ ನಿಜಾಮನ ಅಪಾರ ಧನವು ಲೂಟಿಯಾಗಿ ದೊರಕಿತು. ಫ್ರೆಂಚರು ನಡೆಸಿದ ಕ್ಷಿಪ್ರ ಕಾರ್ಯಾಚರಣೆಯಿಂದಾದ ಗೊಂದಲದಲ್ಲಿ ಹೈದರನು ಆ ಸಂಪತ್ತನ್ನು ತನ್ನದಾಗಿಸಿಕೊಂಡನು. ಅವನಿಗೆ ಯುದ್ಧಕಲೆಯಲ್ಲಿ ಅಪಾರವಾದ ಅನುಭವವೂ ಇಲ್ಲಿ ದೊರಕಿತು. ಮಿಂಚಿನ ವೇಗದ ಕಾರ್ಯಾಚರಣೆ ಮತ್ತು ರಕ್ಷಣೆಗಳ ಪಾಶ್ಚಾತ್ಯ ವಿಧಾನವನ್ನು ಅವನು ಅರ್ಥಮಾಡಿಕೊಂಡನು. ಹೈದರನು ಕ್ಲೈವನ ಚಾಣಾಕ್ಷತೆ ಮತ್ತು ಧೈರ್ಯಗಳನ್ನೂ ಲಾರೆನ್ಸನ ಸಾಮರ್ಥ್ಯ ಮತ್ತು ಉತ್ಸಾಹಗಳನ್ನೂ ಗಳಿಸಿಕೊಂಡನು.[೨೧]

ನಂಜರಾಜಯ್ಯನು ತಿರುಚಿನಾಪಳ್ಳಿಯಿಂದ ಹಿಂದಿರುಗುತ್ತಿದ್ದ ಹಾಗೆಯೇ ದಿಂಡುಗಲ್‌ನಲ್ಲಿ ದಂಗೆಯೆದ್ದಿತು. ಹೈದರನ ಸಾಮರ್ಥ್ಯವನ್ನು ಅರಿತಿದ್ದ ನಂಜರಾಜಯ್ಯನು ಅವನನ್ನು ೧೭೫೪ರಲ್ಲಿ ದಿಂಡುಗಲ್ಲಿನ ಫೌಜುದಾರನನ್ನಾಗಿ ನೇಮಕಮಾಡಿ, ಅಲ್ಲಿ ಎದ್ದಿದ್ದ ದಂಗೆಯನ್ನು ಅಡಗಿಸಿ, ಕಾನೂನು ಸುವ್ಯವಸ್ಥೆಗಳನ್ನು ಸ್ಥಾಪಿಸುವಂತೆ ಹೇಳಿ ಕಳುಹಿಸಿದನು. ಹೈದರನು ಅಲ್ಲಿಗೆ ೫೦೦೦ ಪದಾತಿಗಳು, ೨೫೦೦೦ ಅಶ್ವಾರೋಹಿಗಳು ಮತ್ತು ಆರು ಬಂದೂಕುಗಳೊಂದಿಗೆ ಹೋದನು. ೧೭೫೫ ರಿಂದ ೧೭೫೭ರ ವರೆಗೆ ಎರಡು ವರ್ಷಕಾಲ ದಿಂಡುಗಲ್ ಪ್ರದೇಶವನ್ನು ಕಬ್ಬಿಣದ ಮುಷ್ಟಿಯಿಂದ ಆಳಿ, ಅಲ್ಲಿ ಶಾಂತಿಯನ್ನು ನೆಲೆಗೊಳಿಸಿದನು. ಬಾಕಿ ಬರಬೇಕಾಗಿದ್ದ ತೆರಿಗೆಯನ್ನೆಲ್ಲ ವಸೂಲು ಮಾಡಿದನು. ''ಯೋಧ ಹೈದರನು ಆಡಳಿತಗಾರ ಹೈದರನಾಗಿ ಬೆಳೆದಿದ್ದನು.''[೨೨]

ದಿಂಡುಗಲ್ಲಿನಿಂದ ಒಡನೆಯೇ ಶ್ರೀರಂಗಪಟ್ಟಣಕ್ಕೆ ಬರಲು ಹೈದರನಿಗೆ ಕರೆಬಂದಿತು. ಹರಿಪಂತ ಫಡಕೆ ಹಾಗೂ ಆನಂದರಾವ್ ರಾಸ್ತೆ ಅವರ ನೇತೃತ್ವದಲ್ಲಿ ಮರಾಠಾ ಸೈನ್ಯವು ೧೭೫೮ರಲ್ಲಿ ಶ್ರೀರಂಗಪಟ್ಟಣಕ್ಕೆ

ಮುತ್ತಿಗೆ ಹಾಕಿತ್ತು. ಅದ್ಭುತವಾದ ಹಿಂಚೂಣಿ ಕಾರ್ಯಾಚರಣೆಗಳಿಂದ ಹೈದರನು ಮರಾಠರಿಗೆ ಮಣ್ಣು ಮುಕ್ಕಿಸಿದನು. ಅವರ ಸಂಪರ್ಕ ಮಾರ್ಗವನ್ನು ಆಹಾರ ಪೂರೈಕೆಯನ್ನೂ ನಾಶ ಮಾಡಿದನು. ಕೊನೆಗೆ ಮರಾಠರು ಹಿಮ್ಮೆಟ್ಟಬೇಕಾಯಿತು. ಮೈಸೂರು ೨೩ ಲಕ್ಷ ರೂಪಾಯಿಗಳನ್ನು ಕೊಡಬೇಕೆಂದು ಕರಾರು ವಿಧಿಸಿದರು. ಮೈಸೂರಿನ ಭಂಡಾರವು ಖಾಲಿಯಾಗಿದ್ದುದರಿಂದ ನಂಜರಾಜಯ್ಯನು ಕೆಲವು ಜಿಲ್ಲೆಗಳನ್ನು ಆ ಮೊತ್ತಕ್ಕೆ ಈಡಾಗಿ ಇಡಬೇಕಾಯಿತು. ಆದರೆ ಹೈದರನನ್ನು ಈ ಈಡು ಜಿಲ್ಲೆಗಳ ಅಧಿಕಾರಿಯಾಗಿ ನೇಮಿಸಿ ಅವನ ಖಾಸಗಿ ಭರವಸೆಯನ್ನು ಮರಾಠಾ ಬ್ಯಾಂಕರುಗಳು ಒಪ್ಪಿಕೊಳ್ಳುವಂತೆ ಮಾಡಿದನು. ಹೀಗೆ ಹೈದರನು ತನ್ನ ವರ್ಚಸ್ಸನ್ನು ಅತ್ಯಂತ ವೇಗವಾಗಿ ಬೆಳೆಸಿಕೊಂಡನು. ಹೈದರನು ವಿಜಯಶಾಲಿಯಾಗಿ ಶ್ರೀರಂಗಪಟ್ಟಣಕ್ಕೆ ಹಿಂದಿರುಗಿದಾಗ ರಾಜ ಕೃಷ್ಣರಾಜ ಒಡೆಯರ್ ಅವನಿಗೆ 'ಫತೇ ಹೈದರ್ ಬಹಾದುರ್' ಎಂದು ಬಿರುದನ್ನು ನೀಡಿ ಸನ್ಮಾನಿಸಿದನು. ಅವನು ರಾಜ್ಯಕ್ಕೆ ಸಲ್ಲಿಸಿದ ಸೇವೆಯನ್ನು ಮೆಚ್ಚಿ ಅವನಿಗೆ ಬೆಂಗಳೂರು ನಗರವನ್ನು ಸ್ವಂತದ ಜಾಗೀರು ಎಂದು ನೀಡಿದನು.[೨೫]

ಈ ಮಧ್ಯೆ ಅರಮನೆಯವರು ಹೈದರಲಿ ಹಾಗೂ ಅವನ ಪ್ರತಿನಿಧಿ ಖಂಡೇರಾವ್ ಇವರೊಂದಿಗೆ ರಹಸ್ಯವಾಗಿ ಸಂಚು ನಡೆಸಿ ನಂಜರಾಜಯ್ಯನನ್ನು ಅಧಿಕಾರದಿಂದ ಕೆಳಗಿಳಿಸಲು ಹಂಚಿಕೆ ಹಾಕಿದ್ದರು. ಮೈಸೂರಿನ ಸೈನ್ಯಕ್ಕೆ ಸ್ವಲ್ಪಕಾಲದಿಂದ ವೇತನವನ್ನು ಕೊಟ್ಟಿರಲಿಲ್ಲ. ಸೈನ್ಯಗಳು ನಂಜರಾಜಯ್ಯನ ಅರಮನೆಯ ಮುಂದೆ ಧರಣಿ ಕುಳಿತುಕೊಳ್ಳುವಂತೆ ಏರ್ಪಾಟು ಮಾಡಲಾಯಿತು. ತನ್ನ ವೈಫಲ್ಯಗಳಿಂದ ಆಗಲೆ ತುಂಬ ಬೇಸತ್ತಿದ್ದ ನಂಜರಾಜಯ್ಯನು ಈ ಸಾಮೂಹಿಕ ಬಂಡಾಯವನ್ನು ಎದುರಿಸಲು ಶಕ್ತನಾಗದೆ ತನ್ನ ರಾಜೀನಾಮೆಯನ್ನು ಸಲ್ಲಿಸಿದನು. ರಾಜನೊಂದಿಗೆ ಮಾತನಾಡಿ ಹೈದರನು ಸೈನಿಕರಿಗೆ ವೇತನ ಬಾಕಿಯನ್ನು ಶೀಘ್ರದಲ್ಲೇ ಸಲ್ಲಿಸುವುದು ತನ್ನ ಸ್ವಂತ ಜವಾಬ್ದಾರಿಯಾಗಿದೆ ಎಂದು ಭರವಸೆ ಕೊಟ್ಟು ಸಮಾಧಾನ ಪಡಿಸಿದನು. ನಂಜರಾಜಯ್ಯನು ಸತ್ಯಮಂಗಲಕ್ಕೆ ಹೋಗಿ ಅಲ್ಲಿ ೧೭೭೩ರಲ್ಲಿ ನಿಧನ ಹೊಂದಿದನು.

ಈಗ ಹೈದರ್ ಮೈಸೂರು ರಾಜ್ಯದಲ್ಲಿ ಅತ್ಯಂತ ಹೆಚ್ಚು ಅಧಿಕಾರವುಳ್ಳ ಸಮರ್ಥ ವ್ಯಕ್ತಿಯಾಗಿದ್ದನು. ರಾಜ್ಯದ ಹಣಕಾಸಿನ ಹೊಣೆಗಾರಿಕೆ ಅವನದಾಗಿತ್ತು. ರಾಜನು ಇನ್ನೂ ರಕ್ಷಣೆಯಲ್ಲಿದ್ದನು. ಹಾಗಾಗಿ ಹೈದರನು ಮೈಸೂರು ರಾಜ್ಯದ ಅನಭಿಷಿಕ್ತ ಚಕ್ರವರ್ತಿಯೇ ಆದನು.

೧೭೬೧ರಲ್ಲಿ ತನ್ನನ್ನು ಅಧಿಕಾರದಿಂದ ತೆಗೆಯಲು ಅರಮನೆಯು ಖಂಡೇರಾಯನೊಂದಿಗೆ ಸೇರಿ ನಡೆಸಿದ ಸಂಚನ್ನು ಅಡಗಿಸಿದ ಮೇಲೆ ಹೈದರನ ಅಧಿಕಾರ ಮತ್ತಷ್ಟು ಬಲಗೊಂಡಿತು. ಒಂದು ಕಾಲದಲ್ಲಿ ತನ್ನ ಗೆಳೆಯನೂ, ತಾತ್ವಿಕನೂ, ಮಾರ್ಗದರ್ಶಿಯೂ ಆಗಿದ್ದ ಖಂಡೇರಾಯನನ್ನು ಅಮಾನವೀಯ ಅಪಮಾನ ಮತ್ತು ಕ್ಲೇಶಗಳಿಗೆ ಒಳಪಡಿಸಿದನು.[೨೬] ದುರ್ಬಲನಾಗಿದ್ದ ರಾಜ ಕೃಷ್ಣರಾಜ ಒಡೆಯನನ್ನು ಕಟ್ಟೆಚ್ಚರದ ಕಾವಲಿನಲ್ಲಿರಿಸಿದನು. ಹಾಗಾಗಿ ಅವನಿಗೆ ವಿರೋಧವೇ ಇಲ್ಲದಂತಾಯಿತು. ೧೭೬೧ ರಿಂದ ೧೭೮೨ರಲ್ಲಿ ಮರಣ ಹೊಂದುವವರೆಗೆ ಹೈದರನು ಕಿರೀಟ ಧರಿಸದ ರಾಜನಾಗಿ, ಮೈಸೂರಿನ ವಾಸ್ತವಿಕ ಅರಸನಾಗಿ, ದಕ್ಷಿಣ ಭಾರತದ ರಾಜಕಾರಣದಲ್ಲಿ ಕೇಂದ್ರವ್ಯಕ್ತಿಯಾಗಿ ಮೆರೆದನು. ಮದರಾಸಿನಲ್ಲಿ ಬ್ರಿಟಿಷರ ಬಾಗಿಲಲ್ಲೇ ಅವರಿಗೆ ಕರಾರು ವಿಧಿಸಿ, ಸ್ವಲ್ಪಕಾಲ ಭಾರತದಲ್ಲಿ ಬ್ರಿಟಿಷ್ ಶಕ್ತಿಯ ತಳಹದಿಯನ್ನೇ ನಡುಗಿಸಿದನು.

ಟಿಪ್ಪಣಿಗಳು

೧ ರಾಮಕೃಷ್ಣರಾವ್,ಬಿ. (ಸಂ.): ಅನ್ನಲ್ಸ್ ಆಫ್ ದಿ ಮೈಸೂರ್ ರಾಯಲ್ ಫ್ಯಾಮಿಲಿ, ಪು. ೪-೧೦

೨ ಅಯ್ಯಂಗಾರ್, ಎಸ್.ಕೆ.: ಏನ್ಸಂಟ್ ಇಂಡಿಯಾ, ೧೯೧೧, ಪು. ೨೭೫

೩ ಹಯವದನರಾವ್, ಸಿ.: ಹಿಸ್ಟರಿ ಆಫ್ ಮೈಸೂರ್, ಸಂ.೧, ಪು. ೩೮
೪ ಎ.ಕ. ೬, ನಂಜನಗೂಡು ೮೧ ಇತ್ಯಾದಿ
೫ ಅನ್ನಲ್ಸ್ - ೧, ಪು. ೧೧
೬ ಅದೇ, ಪು. ೧೨
೭ ಎ.ಕ. ೬, ಪು. ೨೧೪; ೯೯,೨೧೫; ಶ್ರೀರಂಗಪಟ್ಟಣ ೨೪, ೫, ಮೈಸೂರು ೯೯ ಇತ್ಯಾದಿ
೮ ಹಿಸ್ಟರಿ ಆಫ್ ಮೈಸೂರ್, ಸಂ.೧, ಪು. ೪೧; ಅನ್ನಲ್ಸ್ - ೧, ಪು. ೧೪-೧೫
೯ ಏನ್ಸ್ಂಟ್ ಇಂಡ್ರಿಯಾ, ಪು. ೨೭೭
೧೦ ಅದೇ, ಪು. ೨೭೮
೧೧ ತಿರುಮಲಾರ್ಯ: ಚಿಕ್ಕದೇವರಾಜ ವಂಶಾವಳಿ, ಪು. ೩೪-೩೫
೧೨ ಏನ್ಸ್ಂಟ್ ಇಂಡಿಯಾ, ಪು. ೨೭೭-೨೭೮; ಕಮಂಡಕನೀತಿ, ಪು. ೭; ಕಮಲಾಚಲ ಮಾಹಾತ್ಮ್ಯ ಪು. ೧೭; ಹಸ್ತಗಿರಿ ಮಾಹಾತ್ಮ್ಯ, ಪು. ೭; ಎ.ಕ. ೬, ಶ್ರೀರಂಗಪಟ್ಟಣ, ೨೪
೧೩ ಮೈಸೂರು ದೊರೆಗಳ ಪೂರ್ವಾಭ್ಯುದಯ, ಸಂ. ೧, ಪು. ೩-೯; ಅನ್ನಲ್ಸ್ - ೧, ಪು. ೧೬-೧೭
೧೪ ವೆಂಕಟರಮಣಯ್ಯ: ಮೈಸೂರು ರಾಜರ ಚರಿತ್ರೆ, ಪು. ೧೭; ಅನ್ನಲ್ಸ್ - ೧, ಪು.೧೬; ಮೈಸೂರು ದೊರೆಗಳ ವಂಶಾವಳಿ, ಪು. ೫
೧೫ ಚಿಕ್ಕದೇವರಾಜ ವಂಶಾವಳಿ, ಪು.೧೬; ಚಿಕ್ಕದೇವರಾಜ ವಿಜಯ, ಪು. ೨೫; ಎ.ಕ. ೬, ಪು. ೫೦; ಎ.ಕ. ೩, ಗುಂಡ್ಲು ಪೇಟೆ ೭೫; ಎ.ಕ. ೪, ಚಾಮರಾಜನಗರ ೭೨; ಎ.ಕ. ೬, ಪು. ೨೧೩ ಇತ್ಯಾದಿ.
೧೬ ಮೈಸೂರು ದೊರೆಗಳ ಪೂರ್ವಾಭ್ಯುದಯ, ಸಂ. ೧, ಪು. ೩-೭; ಮಾರ್ಕ್ಸ್ ವಿಲ್ಕ್ಸ: ಹಿಸ್ಟಾರಿಕಲ್ ಸ್ಕೆಚ್‌ಸ್ ಆಫ್ ಸೌತ್‌ಇಂಡಿಯಾ ಇನ್ ಆನ್ ಅಟೆಮ್ಟ್ ಟು ಟ್ರೇಸ್ ದಿ ಹಿಸ್ಟರಿ ಆಫ್ ಮೈಸೂರ್, ಪು. ೪೪; ಮೈಸೂರು ರಾಜರ ಚರಿತ್ರೆ, ಪು. ೧೭; ರಿಚರ್ಡ್ಸ್: ಸೇಲಂ ಗೆಜೆಟಿಯರ್, ಪು. ೬೭
೧೭ ಮೈಸೂರು ದೊರೆಗಳ ಪೂರ್ವಾಭ್ಯುದಯ, ಪೂರ್ವೋಕ್ತ
೧೮ ಮೈಸೂರು ರಾಜರ ಚರಿತ್ರೆ, ಪು. ೧೭; ಅನ್ನಲ್ಸ್ - ೧, ಪು. ೧೭; ಮೈಸೂರು ದೊರೆಗಳ ವಂಶಾವಳಿ, ಪು. ೧೦; ಏನ್ಸ್ಂಟ್ ಇಂಡಿಯಾ, ಪು ೨೭೮
೧೯ ಮೈಸೂರು ದೊರೆಗಳ ಪೂರ್ವಾಭ್ಯುದಯ, ಸಂ. ೧, ಪು. ೬-೭; ಎಂ.ಎ.ಆರ್. ೧೯೨೪, ಪು. ೨೩; ಎ.ಕ. ೩, ನಂಜನಗೂಡು ೨೧೨
೨೦. ಮೈಸೂರು ದೊರೆಗಳ ಪೂರ್ವಾಭ್ಯುದಯ, ಸಂ. ೧, ಪು. ೩; ವಿಲ್ಕ್ಸ್-ಹಿಸ್ಟರಿ, ಪು. ೪೪
೨೧ ಮೈಸೂರು ದೊರೆಗಳ ಪೂರ್ವಾಭ್ಯುದಯ, ಸಂ. ೧, ಪು. ೧೩; ಅನ್ನಲ್ಸ್ - ೧, ಪು. ೧೮
೨೨ ಮೈಸೂರು ದೊರೆಗಳ ವಂಶಾವಳಿ, ಪು. ೬-೭; ಚಿಕ್ಕದೇವರಾಜ ವಂಶಾವಳಿ, ಪು. ೨೬
೨೩ ಮೈಸೂರು ದೊರೆಗಳ ಪೂರ್ವಾಭ್ಯುದಯ, ಸಂ. ೧, ಪು. ೭೩; ಅನ್ನಲ್ಸ್ - ೧, ಪು. ೪೩; ವಿಲ್ಕ್ಸ್-ಹಿಸ್ಟರಿ, ಪು.೫೩
೨೪ ಚಿಕ್ಕದೇವರಾಜ ವಂಶಾವಳಿ, ಪು. ೨-೩; ಅಯ್ಯಂಗಾರ್, ಎಸ್. ಕೆ.: ಸೋರ್ಸ್‌ಸ್ ಆಫ್ ಕರ್ನಾಟಕ ಹಿಸ್ಟರಿ, ಪು. ೧೯
೨೫ ಮೈಸೂರು ರಾಜರ ಚರಿತ್ರೆ, ಪು.೧೯
೨೬ ಅದೇ.
೨೭ ಅನ್ನಲ್ಸ್ - ೧, ಪು. ೨೨-೨೩
೨೮ ಅಯ್ಯಂಗಾರ್, ಎಸ್.ಕೆ.: ಮೈಸೂರು ಅಂಡ್ ದಿ ಡಿಕ್ಲೇನ್ ಆಫ್ ವಿಜಯನಗರ ಎಂಪೈರ್, ಕ್ಯು ಜೆ.ಎಂ. ಎಸ್. ೧೩, ಪು. ೬೨೭
೨೯ ಮೈಸೂರು ದೊರೆಗಳ ಪೂರ್ವಾಭ್ಯುದಯ, ಪು, ೫೪-೫೫
೩೦ ಎ.ಕ. ೫, ಟಿ. ನರಸಿಪುರ ೧೫; ಅದೇ, ಕೊಳ್ಳೇಗಾಲ ೫೨; ಎ.ಕ. ೭, ಅರಕಲಗೂಡು ೯೭

೩೧ ಅರವೀಡು ಡೈನಾಸ್ಟಿ, ಪು. ೪೨೦

೩೨ ಮೈಸೂರು ದೊರೆಗಳ ವಂಶಾವಳಿ, ಪು. ೧೭-೧೮

೩೩ ಮೈಸೂರು ದೊರೆಗಳ ಪೂರ್ವಾಭ್ಯುದಯ, ಪು. ೮೧-೮೨; ಅನ್ನಲ್ಸ್ - ೧, ಪು. ೪೫

೩೪ ಶೆರ್ವಾನಿ, ಎಚ್.ಕೆ.: ತಾರಿಖ್ ಇ ಡೆಕ್ಕನ್, ಪು. ೮೨-೮೩

೩೫ ರೈಸ್: ಮೈಸೂರು ಗೆಜೆಟಿಯರ್, ಸಂ. ೧, ಪು. ೩೫-೩೭

೩೬ ಫರೂಹಿ ಅಸ್ರಬಾದಿ: ಫುತುಹತ್-ಐ-ಆದಿಲ್‌ಶಾಹಿ, ೩೭೫ ಬಿ, ೩೭೬ ಎ; ವಿಲ್ಕ್ಸ್-ಹಿಸ್ಟರಿ, ಪು. ೭೮

೩೭ ಸೋರ್ಸ್‌ಸ್ ಆಫ್ ಕರ್ನಾಟಕ ಹಿಸ್ಟರಿ, ಪು. ೨೪೮-೨೪೯; ಬ್ರಿಗ್ಸ್: ಫೆರಿಸ್ತಾ, ಪು. ೧೪೧

೩೮ ಮೊಹಮ್ಮದ್ ನಾಮಾ, (ಶಿವಾಜಿ ನಿಬಂಧಾವಳಿ, ಪು.೯೯)ಕಂಠೀರವ ನರಸರಾಜ ವಿಜಯಂ, XI, ೬೧

೩೯ ಅದೇ, ಪು. ೯೯-೧೦೦; ಶಿವಭಾರತ ೯, ೩೯-೪೪; ಶಿವತತ್ತ್ವರತ್ನಾಕರ ೨, ಪು. ೧೭೧

೪೦ ಎ.ಕ. ೩, ನಂಜನಗೂಡು, ೨೧೨; ಅನ್ನಲ್ಸ್ - ೧, ಪು. ೭೨-೭೪

೪೧ ಗೋವಿಂದವೈದ್ಯ: ಕಂಠೀರವ ನರಸರಾಜ ವಿಜಯಂ, ಪು. ೩೪೩; ವರ್ಮ: ಹಿಸ್ಟರಿ ಆಫ್ ಬಿಜಾಪುರ, ಪು. ೧೪೦; ಏನ್ಸ್‌ಂಟ್ ಇಂಡಿಯಾ, ಪು. ೨೯೩

೪೨ ಕಂಠೀರವ ನರಸರಾಜ ವಿಜಯಂ, ಪು.೩೨-೮೨, ೮೫-೯೬; ಹಿಸ್ಟರಿ ಆಫ್ ಮೈಸೂರ್, ಪು.೧೨೬-೧೨೭

೪೩ ಕಂಠೀರವ ನರಸರಾಜ ವಿಜಯಂ, ಪು. ೨ ರಿಂದ ೧೭; ಮೈಸೂರು ದೊರೆಗಳ ಪೂರ್ವಾಭ್ಯುದಯ, ಪು. ೧೩-೧೪; ಅನ್ನಲ್ಸ್ - ೧, ಪು. ೬೯

೪೪ ಕಂಠೀರವ ನರಸರಾಜ ವಿಜಯಂ, ಪು. ೮೦-೮೧, ೮೩-೮೪, ೧೧೩-೧೧೭

೪೫ ಅದೇ, ೨೦-೪೮; ೫೧-೮೧, ೮೪-೯೩; ೧೧೩-೧೧೭; ೧೭೭, ೧೮೨; ಅನ್ನಲ್ಸ್ - ೧, ಪು. ೭೦-೭೨

೪೬ ಅದೇ, ೩೩-೩೪, ಅನ್ನಲ್ಸ್ - ೧, ಮೈಸೂರ್ ಮರಾಠಾ ರಿಲೇಷನ್ಸ್ ಇನ್ ದಿ ಸೆವೆಂಟಿನ್ತ್ ಸೆಂಚುರಿ, ಪು ೨೭-೩೦; ಮೈಸೂರು ದೊರೆಗಳ ಪೂರ್ವಾಭ್ಯುದಯ, ಪು. ೧೫-೧೭

೪೭ ಕಂಠೀರವ ನರಸರಾಜ ವಿಜಯಂ, ಪು. ೨-೧೦

೪೮ ಅದೇ, ೧-೮೨

೪೯ ಶಿವಾಜಿ ನಿಬಂಧಾವಳಿ, ಪು. ೧೧೫-೧೧೮

೫೦ ಸತ್ಯನಾಥ ಅಯ್ಯರ್, ಆರ್.: ಹಿಸ್ಟರಿ ಆಫ್ ದಿ ನಾಯಕ್ಸ್ ಆಫ್ ಮಧುರಾ, ಪು. ೨೬೫-೨೬೬

೫೧ ಅದೇ, ಪು. ೨೬೫; ವಿಲಿಯಂ ಫಾಸ್ಟರ್: ಇಂಗ್ಲಿಷ್ ಫ್ಯಾಕ್ಟರೀಸ್ ಇನ್ ಇಂಡಿಯಾ ಪು. ೨೫

೫೨ ಶಿವಾಜಿ ನಿಬಂಧಾವಳಿ, ಪು. ೫೧೨

೫೩ ಹಿಸ್ಟರಿ ಆಫ್ ದಿ ನಾಯಕ್ಸ್ ಆಫ್ ಮಧುರಾ, ಪು. ೩೬೭

೫೪ ಶಿವಾಜಿ ನಿಬಂಧಾವಳಿ, ಪು. ೧೩೩; ಹಿಸ್ಟರಿ ಆಫ್ ಬಿಜಾಪುರ, ಪು. ೧೪೭; ಹಿಸ್ಟರಿ ಆಫ್ ಮೈಸೂರ್, ಪು. ೧೪೭-೧೪೮ ; ಮೈಸೂರ್ ಮರಾಠಾ ರಿಲೇಷನ್ಸ್, ಪು. ೪೩

೫೫ ಆರ್ಮೆ: ಹಿಸ್ಟಾರಿಕಲ್ ಫ್ರಾಗ್‌ಮೆಂಟ್ಸ್, ಪು. ೬೨

೫೬ ಚಿಕ್ಕದೇವರಾಜ ವಂಶಾವಳಿ, ಪು. ೧೯೧

೫೭ ಮೈಸೂರು ದೊರೆಗಳ ಪೂರ್ವಾಭ್ಯುದಯ, ಪು. ೫೦; ಮೈಸೂರು ರಾಜರ ಚರಿತ್ರೆ, ಪು. ೨೫

೫೮ ಎ.ಕ. ೧೨, ಕುಣಿಗಲ್ ೩೭; ಎ.ಕ. ೪, ಯಳಂದೂರ್ ೫೪; ಅದೇ, ಚಾ.ನಗರ ೧೧; ಎ.ಕ. ೬, ಶ್ರೀ.ಪಟ್ಟಣ ೨೪

೫೯ ಮೈಸೂರು ದೊರೆಗಳ ಪೂರ್ವಾಭ್ಯುದಯ, ಪು. ೨೬; ಮೈಸೂರು ರಾಜರ ಚರಿತ್ರೆ, ಪು. ೨೬; ಎ.ಕ. ೬, ಶ್ರೀರಂಗಪಟ್ಟಣ ೨೪; ಚಿಕ್ಕದೇವರಾಜ ವಿಜಯ, ಪು. ೧೦೫; ಏನ್ಸ್‌ಂಟ್ ಇಂಡಿಯಾ, ಪು. ೨೯೭; ಡೈನಸ್ಟಿ ಆಫ್ ಕಳಲೆ (ಎಂ.ಎ.ಆರ್. ೧೯೪೨) ಪು. ೮೯

೬೦ ಹಿಸ್ಟರಿ ಆಫ್ ಮೈಸೂರ್, ಪು ೬೯

೬೧ ಏನ್ಷೆಂಟ್ ಇಂಡಿಯಾ, ಪು. ೨೯೭

೬೨ ಮೈಸೂರು ದೊರೆಗಳ ಪೂರ್ವಾಭ್ಯುದಯ, ಪು. ೨೭-೨೮, ಅನ್ನಲ್ಸ್ - ೧, ಪು. ೯೮; ಮೈಸೂರು ರಾಜರ ಚರಿತ್ರೆ ಪು. ೨೫; ಎ.ಕ. ೧೫, ಎ.ಜಿ. ೧೦೬; ಎ.ಕ. ೫, ಕೆ.ಎನ್ ೮೭; ಎ.ಕ. ೪, ಯಳಂದೂರು ೫೪

೬೩ ಚಿಕ್ಕ ದೇವರಾಜ ವಿಜಯ, ಪು. ೧೧೫-೧೧೬; ೯೩-೯೬; ಮೈಸೂರು ರಾಜರ ಚರಿತ್ರೆ ಪು. ೨೬; ಅನ್ನಲ್ಸ್- ೧, ಪು. ೯೭; ಮೈಸೂರು ದೊರೆಗಳ ಪೂರ್ವಾಭ್ಯುದಯ, ಪು. ೨೯

೬೪ ಎ.ಕ. ೬, ಶ್ರೀರಂಗಪಟ್ಟಣ ೨೩; ಎ.ಕ. ೫, ಟಿ. ನರಸೀಪುರ ೨೧೮

೬೫ ಚಿಕ್ಕದೇವರಾಜ ವಿಜಯ, ಪು. ೧೦೭; ಎ.ಕ. ೬, ಶ್ರೀರಂಗಪಟ್ಟಣ, ೨೪; ಎಸ್.ಕೆ. ಅಯ್ಯಂಗಾರ್ ಪೂರ್ವೋಕ್ತ, ಪು. ೭೫೦-೭೫೧; ವಿಲ್ಕ್ಸ್-ಹಿಸ್ಟರಿ, ೬೯-೭೦; ಹಿಸ್ಟರಿ ಆಫ್ ದಿ ನಾಯಕ್ಸ್ ಆಫ್ ದಿ ಮಧುರಾ, ಪು.೨೬, ೧೭೨

೬೬ ಮೈಸೂರು ದೊರೆಗಳ ಪೂರ್ವಾಭ್ಯುದಯ, ಪು.೫೭; ಮೈಸೂರು ರಾಜರ ಚರಿತ್ರೆ, ಪು. ೨೭

೬೭ ಚಿಕ್ಕದೇವರಾಜ ವಂಶಾವಳಿ, ಪು. ೧೭೨, ೮೪; ಚಿಕ್ಕದೇವರಾಜ ವಿಜಯ, ಪು. ೯೩-೧೪೯; ಮೈಸೂರು ದೊರೆಗಳ ಪೂರ್ವಾಭ್ಯುದಯ , ಪು. ೫೭; ಅನ್ನಲ್ಸ್ - ೧, ಪು. ೯೫; ಎ.ಕ. ೪, ಚಾಮರಾಜನಗರ ೯೨; ಎ.ಕ. ೩, ೧೫೧

೬೮ ಜೋಸ್ಯರ್, ಜಿ.ಆರ್.: ಹಿಸ್ಟರಿ ಆಫ್ ಮೈಸೂರು ಅಂಡ್ ದಿ ಯಾದವ ಡೈನಾಸ್ಟಿ, ಪು. ೪೧,೪೨

೬೯ ಎ.ಕ. ೪, ಚಾಮರಾಜನಗರ ೧೧; ಎ.ಕ. ೩, ಶ್ರೀರಂಗಪಟ್ಟಣ ೧೫೧

೭೦ ಸರ್ಕಾರ್: ಶಿವಾಜಿ ಅಂಡ್ ಹಿಸ್ ಟೈಮ್ಸ್, ಪು. ೩೦೩; ಹಿಸ್ಟಾರಿಕಲ್ ಫ್ರಾಗ್‌ಮೆಂಟ್ಸ್, ಪು. ೨೩೪; ಎಡ್ವರ್ಡ್ ಸ್ಕಾಟ್ ವಾರಿಂಗ್ಸ್: ಹಿಸ್ಟರಿ ಆಫ್ ದಿ ಮರಾಠಾಸ್, ಸಂ. ೧, ಪು. ೩೮೯; ಹಿಸ್ಟರಿ ಆಫ್ ದಿ ನಾಯಕ್ಸ್ ಆಫ್ ಮಧುರಾದಲ್ಲಿ ಉದ್ಧೃತ. ಸರ್ಕಾರ್: ಶಿವಾಜಿ, ಪು. ೪೦೦; ಶೆರ್ವಾನಿ ಮತ್ತು ಜೋಶಿ (ಸಂ): ಹಿಸ್ಟರಿ ಆಫ್ ಮೆಡಿವಲ್ ಡೆಕ್ಕನ್, ಪು. ೩೮೯; ವಿಲ್ಕ್ಸ್-ಹಿಸ್ಟರಿ, ಪು. ೧೦೯; ಕ್ಯು.ಜೆ.ಎಂ.ಎಸ್ ಸಂ. ೨೩, ಪು. ೨೭-೩೭; ಹಿಸ್ಟರಿ ಆಫ್ ಮೈಸೂರ್, ಪು. ೨೮೩-೨೮೫; ಮುದ್ದಾಚಾರಿ: ಮೈಸೂರ್ ಮರಾಠಾ ರಿಲೇಷನ್ಸ್, ಪು. ೮೦-೮೨; ಸೇತುಮಾಧವರಾವ್ ಪಗಡಿ: ಛತ್ರಪತಿ ಶಿವಾಜಿ, ಪು. ೨೯೦

೭೧ ತಿರುಮಾಲಾರ್ಯ: ಅಪ್ರತಿಮವೀರಚರಿತಂ, ಸಂ. ೩, ಪು. ೯೫,೧೨೩,೧೬೬,೧೭೨,೧೯೧; ಎ.ಕ. ೬, ಎಸ್.ಆರ್. ೨೪

೭೨ ಅನ್ನಲ್ಸ್ - ೧, ಪು. ೧೧೪-೧೧೫; ಮೈಸೂರು ರಾಜರ ಚರಿತ್ರೆ, ಪು. ೨೯; ಅಪ್ರತಿಮವೀರಚರಿತಂ-೧, ಪು. ೨೨-೨೩; ಸಂ. ೨, ಪು. ೧೯-೨೦; ಸಂ. ೩, ಪು. ೫೯,೮೬,೧೩೩; ಸಂ. ೪, ಪು. ೮; ಎ.ಕ. ೬ ಎಸ್.ಆರ್ ೨೪; ಎ.ಕ.೫, ಮೈಸೂರು ೯೯ ಇತ್ಯಾದಿ

೭೩ ಅಪ್ರತಿಮವೀರಚರಿತಂ, ಸಂ. ೩, ಪು. ೨೧; ಎ.ಕ. ೬, ಎಸ್.ಆರ್. ೨೪; ಎ.ಕ. ೫, ಮೈಸೂರು ೯೯; ಎ.ಕ. ೭, ಪು. ೯೯ ಇತ್ಯಾದಿ

೭೪ ಷೇಕ್ ಅಲಿ, ಬಿ.: ಬ್ರಿಟಿಷ್ ರಿಲೇಷನ್ಸ್ ವಿತ್ ಹೈದರ್‌ಅಲಿ, ಪು. ೧

೭೫ ವಿಲ್ಕ್ಸ್-ಹಿಸ್ಟರಿ, ಪು. ೨೫೬

೭೬ ಸಿನ್ಹಾ, ಎಸ್.ಕೆ.: ಹೈದರ್‌ಅಲಿ, ಪು. ೧೦

೭೭ ಪ್ರಾಕ್ಸಿ ಫರ್ನಾಂಡಿಸ್: ಟೈಗರ್ ಆಫ್ ಮೈಸೂರು, ಪು. ೨೨

೭೮ ಅನ್ನಲ್ಸ್ - ೧, ಪು. ೧೯೦; ಟೈಗರ್ಸ್ ಆಫ್ ಮೈಸೂರ್, ಪು. ೨೩; ಬೌರಿಂಗ್: ಹೈದರ್‌ಅಲಿ ಅಂಡ್ ಟಿಪ್ಪುಸುಲ್ತಾನ್, ಪು. ೩೦

೭೯ ಅನ್ನಲ್ಸ್ - ೧, ಪು. ೧೯೨-೧೯೪; ಟೈಗರ್ಸ್ ಆಫ್ ಮೈಸೂರ್, ಪು. ೨೪; ಬೌರಿಂಗ್: ಪೂರ್ವೋಕ್ತ, ಪು. ೩೦

ಅಧ್ಯಾಯ : ಹತ್ತು

ವಿಜಯನಗರೋತ್ತರ ಕಾಲದ ರಾಜ್ಯಾಡಳಿತ (ಕ್ರಿ.ಶ. ೧೬೦೦-೧೭೬೧)

ರಾಜ

ಧರ್ಮಶಾಸ್ತ್ರಗಳಲ್ಲಿ ಮತ್ತು ನೀತಿಶಾಸ್ತ್ರದಲ್ಲಿ ಪ್ರಾಚೀನ ಕೃತಿಕಾರರು ವಿವರಿಸಿರುವ ರಾಜಧರ್ಮವು ರಾಜ್ಯಾಡಳಿತದ ಆಧಾರವಾಗಿತ್ತು. ಸರಕಾರದ ನಿರ್ದಿಷ್ಟ ಸ್ವರೂಪವು ಚಕ್ರಾಧಿಪತ್ಯವಾಗಿತ್ತು. ಒಂದು ಚಕ್ರಾಧಿಪತ್ಯಕ್ಕೆ ಆಧಾರಸ್ತಂಭಗಳು ಎರಡು, ರಾಜಧರ್ಮ ಮತ್ತು ರಾಜನ ವ್ಯಕ್ತಿತ್ವ. ಆಳುವವನ ಮತ್ತು ಆಳಲ್ಪಡುವವರ ಹಿತಾಸಕ್ತಿಗಳು ಸಮಾನವೇ ಆದವು ಎಂದು ಪರಿಗಣಿಸಲಾಗಿತ್ತು. ಆಡಳಿತದಲ್ಲಿ ರಾಜನು ಪರಮೋನ್ನತನು. ಅವನು ಪರಮಾಧಿಕಾರವನ್ನು ಚಲಾಯಿಸಬಲ್ಲನು. ಆದರೂ ಅವನು ಒಬ್ಬ ಜ್ಞಾನಿಯೂ. ಅನುಗ್ರಹಶೀಲನೂ, ಸಾಮಾಜಿಕ ಜೀವನದ ಕಟ್ಟುಕಟ್ಟಳೆಗಳಿಂದ ಹದಗೊಂಡವನೂ ಆದ ನಿರಂಕುಶಾಧಿಕಾರಿಯಾಗಿದ್ದನು. ಚಿಕ್ಕದೇವರಾಜ ಒಡೆಯರು ಮತ್ತು ಅವರ ವಂಶಜರ ಕಾಲದಲ್ಲಿ ರಾಜತ್ವದ ವಿಚಾರವು ಪ್ರಾಮುಖ್ಯ ಪಡೆಯಿತು.

ರಾಜನು ಬೇರೆ ಬೇರೆ ಬಗೆಯ ಕರ್ತವ್ಯಗಳನ್ನು ನಿರ್ವಹಿಸಬೇಕಾಗಿದ್ದಿತು. ಅವುಗಳಲ್ಲಿ ಅತ್ಯಂತ ಮುಖ್ಯವಾದವು ಧರ್ಮಾನುಸರಣೆ. ಪ್ರಜೆಗಳನ್ನೂ, ಅವರ ಧರ್ಮಗಳನ್ನೂ ರಕ್ಷಿಸುವುದು, ಸಮಾಜವ್ಯವಸ್ಥೆಯನ್ನು ಜತನವಾಗಿ ಕಾಪಾಡುವುದು ನ್ಯಾಯದ ಆಡಳಿತ, ಶಿಷ್ಟರನ್ನು ರಕ್ಷಿಸಿ ದುಷ್ಟರನ್ನು ದಂಡಿಸುವುದು, ಜನರ ಆರ್ಥಿಕ ಯೋಗಕ್ಷೇಮವನ್ನು ನೋಡಿಕೊಳ್ಳುವುದು. ಧರ್ಮಶಾಸ್ತ್ರಗಳು ಹೇಳುವಂತೆ ಸಾರ್ವಜನಿಕ ಉಪಯೋಗಿ ಕಾರ್ಯಕ್ರಮಗಳನ್ನು ಕೈಗೊಳ್ಳುವುದು, ಇತ್ಯಾದಿ. ಹದಿನೇಳನೆಯ ಶತಮಾನದ ಕರ್ನಾಟಕವನ್ನು ಅಲಂಕರಿಸಿದ್ದ ಚಕ್ರವರ್ತಿಗಳು ಈ ಕರ್ತವ್ಯಗಳನ್ನು ಕರಾರುವಾಕ್ಕಾಗಿ ಪರಿಪಾಲಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸಿದರು. ದಾಖಲೆಗಳೇನೋ ಒಟ್ಟಿನಲ್ಲಿ ಆ ರಾಜರು ಧರ್ಮಿಷ್ಠರಾಗಿದ್ದರು ಎಂದು ಹೇಳುತ್ತವೆ. ರಾಜಒಡೆಯರ ಆಳಿಕೆಯು ಧರ್ಮತತ್ವಗಳ ಮೇಲೆ ಆಧಾರಗೊಂಡಿದ್ದಿತು. ಕಂಠೀರವ ನರಸರಾಜರ ಆಳಿಕೆಯು ಧರ್ಮದಲ್ಲಿ ಆಳವಾಗಿ ಬೇರುಬಿಟ್ಟಿತ್ತು. ಧರ್ಮಾಚರಣೆಯಿಂದಾಗಿ ದೇವರಾಜ ಒಡೆಯರ ಮುಖವು ಆಧ್ಯಾತ್ಮಿಕ ಕಾಂತಿಯಿಂದ ಶೋಭಿಸುತ್ತಿತ್ತು.[೧]

ಅರಸರು ತಮ್ಮ ಪ್ರಜೆಗಳನ್ನೂ ಸಮಾಜವ್ಯವಸ್ಥೆಯನ್ನೂ ನೆರೆಯ ರಾಜ್ಯಗಳ ಧಾಳಿಗಳಿಂದ ರಕ್ಷಿಸಲು ಸೂಕ್ತವಾದ ಎಲ್ಲಾ ಕ್ರಮಗಳನ್ನು ಕೈಗೊಂಡಿದ್ದರು. ಶಾಂತಿ-ಸುವ್ಯವಸ್ಥೆಯನ್ನು ಕಾಪಾಡುತ್ತಿದ್ದರು, ಪ್ರಜೆಗಳಿಗಾದ ಅನ್ಯಾಯವನ್ನು ಪರಿಹರಿಸುತ್ತಿದ್ದರು ಮತ್ತು ತಮ್ಮ ರಾಜ್ಯದ ಎಲ್ಲೆಗಳನ್ನು ವಿಸ್ತರಿಸಲು ಪ್ರಯತ್ನ ನಡೆಸುತ್ತಿದ್ದರು.[೨] ಅವರು ಯಜ್ಞಯಾಗಾದಿಗಳನ್ನು ಆಚರಿಸುತ್ತಿದ್ದರು. ಕಾಲಪುರುಷ ಮತ್ತು ತುಲಾಪುರುಷ

ದಾನಗಳನ್ನುಮಾಡುತ್ತಿದ್ದರು.[೬] ಹೊಸ ದೇವಾಲಯಗಳನ್ನು ಕಟ್ಟಿ, ಹಳೆಯವನ್ನು ಜೀರ್ಣೋದ್ಧಾರ ಮಾಡಿಸಿ, ದೇವಾಲಯಗಳಿಗೂ ಬ್ರಾಹ್ಮಣರಿಗೂ ಭೂಮಿಯನ್ನೂ, ಗ್ರಾಮಗಳನ್ನೂ ದಾನಮಾಡಿ ವಿವಿಧ ಧರ್ಮಗಳನ್ನು ಪೋಷಿಸುತ್ತಿದ್ದರು.

ಮೈಸೂರಿನ ರಾಜಒಡೆಯರು ಲಕ್ಷ್ಮೀಕಾಂತಸ್ವಾಮಿಗಾಗಿ ಸಂಕ್ರಾಂತಿಮಂಟಪವನ್ನು ಕಟ್ಟಿಸಿದರು, ರಾಮಾನುಜಕೂಟಕ್ಕೆ ಭೂಮಿಯನ್ನು ದಾನಮಾಡಿದರು. ಬೆಳಗುಳದಲ್ಲಿ ಜನಾರ್ಧನಸ್ವಾಮಿಯ ದೇವಾಲಯಕ್ಕೆ ಸೇರಿದಂತೆ ಒಂದು ಅನ್ನಸತ್ರವನ್ನು ಕಟ್ಟಿಸಿದರು. ೨೮ ಬ್ರಾಹ್ಮಣರಿಗೆ ಮತ್ತಿಗೆರೆ(ನೃಸಿಂಹಪುರ) ಗ್ರಾಮದ ೫೦ ಭಾಗಗಳನ್ನುಹಂಚಿಕೊಟ್ಟರು. ಚಾಮರಾಜ ಒಡೆಯರು ಬ್ರಾಹ್ಮಣರಿಗಾಗಿ ಚಾಮರಾಜಸಮುದ್ರವೆಂಬ ಒಂದು ಅಗ್ರಹಾರವನ್ನು ಸ್ಥಾಪಿಸಿದರು. ಒಂದು ಭಾಗವನ್ನು ಭಗವಾನ್ ಗಂಜಾ ನರಸಿಂಹಸ್ವಾಮಿಗೆ ಅರ್ಪಿಸಿದರು. ೧ನೇ ಕಂಠೀರವ ನರಸರಾಜ ಒಡೆಯರು ವೈದಿಕ ಬ್ರಾಹ್ಮಣರ ಹಾಗೂ ನರಸಿಂಹ ಸ್ವಾಮಿಗಾಗಿ ನರಸರಾಜಪುರ ಎಂಬ ಹೆಸರಿನಲ್ಲಿ ಗೆಜ್ಜಿಗನಹಳ್ಳಿ ಗ್ರಾಮವನ್ನು ನೀಡಿದನು. ಅಲ್ಲದೆ ತೆರಕಣಾಂಬಿಯ ಹನುಮಂತದೇವರ ಪೂಜೆಗೂ ಬ್ರಾಹ್ಮಣರಿಗೆ ಒಂದು ಅನ್ನಛತ್ರವನ್ನು ನಡೆಸುವುದಕ್ಕೂ ಪಟ್ಟಣಪುರ ಎಂಬ ಗ್ರಾಮವನ್ನು ದಾನಮಾಡಿದನು. ದೇವರಾಜ ಒಡೆಯರು ನಲ್ಲೂರು ಎಂಬ ಗ್ರಾಮಕ್ಕೆ ದೇವರಾಜಪುರ ಎಂದು ನಾಮಕರಣ ಮಾಡಿ ದೇವರ ನೈವೇದ್ಯಕ್ಕೂ ಬ್ರಾಹ್ಮಣ ಭೋಜನಕ್ಕೂ ಒದಗಲೆಂದು ರಾಘವೇಂದ್ರತೀರ್ಥ ಶ್ರೀ ಪಾದಸ್ವಾಮಿಗಳಿಗೆ ದಾನವಾಗಿ ನೀಡಿದರು. ಚಿಕ್ಕದೇವರಾಜ ಒಡೆಯರು ಮೊದಲ ನಾಡಿನಲ್ಲಿ ಭಗವಾನ್ ಪರವಾಸುದೇವನ ಆಲಯವನ್ನು ಕಟ್ಟಿಸಿದರು ಮತ್ತು ಅದಕ್ಕೆ ರಥವನ್ನೂ, ಅಂಗಳವನ್ನೂ, ಗೋಪುರವನ್ನೂ ನಿರ್ಮಿಸಿದರು. ಹರದನಹಳ್ಳಿಯ ಗೋಪಾಲಕೃಷ್ಣಸ್ವಾಮಿ ದೇವಾಲಯವೂ ವರಕೋಡಿನ ವರದರಾಜಸ್ವಾಮಿ ದೇವಾಲಯವೂ ಅವರು ಕಟ್ಟಿಸಿದವೇ. ಅವರು ಮೇಲುಕೋಟೆಯ ನಾರಾಯಣಸ್ವಾಮಿ ದೇವಾಲಯದಲ್ಲಿ ಎರಡೂ ನಾಚಿಯಾರ್ ವಿಗ್ರಹಗಳಿಗೆ ಸ್ವರ್ಣಾಭರಣಗಳನ್ನು ಅರ್ಪಿಸಿದರು.[೭] ಕೆಳದಿಯ ವೆಂಕಟಪ್ಪನಾಯಕನು ಬಾರಕೂರು ಪ್ರಾಂತದ ಕೋಟೀಶ್ವರ ದೇವಾಲಯವನ್ನು ಜೀರ್ಣೋದ್ಧಾರ ಮಾಡಿಸಿದನು. ಗಣಪತಿ ಮತ್ತು ವಿಶ್ವೇಶ್ವರ ದೇವಾಲಯಗಳನ್ನು ಕಟ್ಟಿಸಿದನು, ಹಾಗೂ ವಿಶ್ವನಾಥಪುರವೆಂಬ ಅಗ್ರಹಾರವನ್ನು ಸ್ಥಾಪಿಸಿದನು. ಸುಪ್ರಸಿದ್ಧವಾದ ಶೃಂಗೇರಿಮಠವನ್ನು ಮರಳಿ ಕಟ್ಟಿಸಿದ ಕೀರ್ತಿಯೂ ಅವನಿಗೆ ಸಲ್ಲುತ್ತದೆ. ಶಿವಪ್ಪನಾಯಕನು ಧಾರಾಳವಾಗಿ ದಾನಮಾಡುತ್ತಾ ಬ್ರಾಹ್ಮಣರನ್ನು ತೃಪ್ತಿಪಡಿಸುತ್ತಿದ್ದನು. ದೇವಾಲಯಗಳು ಮತ್ತು ಮಠಗಳಿಗೆ ಸರಕುಗಳನ್ನು ಹೊತ್ತೊಯ್ಯುವ ಎತ್ತುಗಳ ಮೇಲೆ ತೆರಿಗೆಯನ್ನು ಕೆಳದಿ ಅರಸರು ಮನ್ನಾ ಮಾಡಿದ್ದರು.

ಧರ್ಮಸಹಿಷ್ಣುತೆ ಆ ಕಾಲದ ರಾಜ್ಯಾಡಳಿತದ ಮುಖ್ಯ ಲಕ್ಷಣವಾಗಿತ್ತು. ಶೈವಧರ್ಮ, ವೈಷ್ಣವಧರ್ಮ, ಶ್ರೀವೈಷ್ಣವಧರ್ಮ, ಜೈನಧರ್ಮ, ವೀರಶೈವಧರ್ಮ, ಕೊನೆಗೆ ಇಸ್ಲಾಂಧರ್ಮ ಎಲ್ಲವೂ ರಾಜರಿಂದ ಪೋಷಣೆಯನ್ನೂ ಮನ್ನಣೆಯನ್ನೂ ಪಡೆಯುತ್ತಿದ್ದುವು. ದೇವರಾಜ ಒಡೆಯರು ನಂಜನಗೂಡಿನ ಬಳಿ ವಿರಕ್ತಮಠವನ್ನು ಕಟ್ಟಿಸಿದರು. ಅದಕ್ಕೆ ಅನೇಕ ಹಳ್ಳಿಗಳನ್ನು ದಾನವಾಗಿತ್ತರು. ಗಾವುಡಹಳ್ಳಿಯನ್ನು ತೆರಿಗೆ ರಹಿತವಾಗಿ ಚಾಮುಂಡೇಶ್ವರಿಯ ಸೇವೆಗಾಗಿ ಬಿಟ್ಟುಕೊಟ್ಟರು. ಮದನೆಹಳ್ಳಿಯನ್ನು ಚಾರುಕೀರ್ತಿ ಪಂಡಿತಾಚಾರ್ಯರ ದಾನಶಾಲೆಯಲ್ಲಿ ಜೈನಸನ್ಯಾಸಿಗಳಿಗೆ ನಡೆಯುವ ಭೋಜನಕ್ಕಾಗಿ ಅರ್ಪಿಸಿದರು. ಸುಪ್ರಸಿದ್ಧ ಜೈನಗುರುಗಳಾದ ಚಾರುಕೀರ್ತಿ ಪಂಡಿತಯೋಗೀಂದ್ರರು ಶ್ರವಣಬೆಳಗೊಳಕ್ಕೆ ಬಂದು ಅಲ್ಲಿಯ ಮಠದಲ್ಲಿ ನಿಂತು ತಮ್ಮ ಧರ್ಮಾಚರಣೆಯನ್ನು ಯಾವುದೇ ತಡೆಗಳಿಲ್ಲದಂತೆ ನಡೆಸಿಕೊಂಡು ಹೋಗಲು ಸಕಲ ಸೌಲಭ್ಯಗಳನ್ನು ಕಲ್ಪಿಸಿದ ಕೀರ್ತಿ ೫ನೇ ಚಾಮರಾಜ ಒಡೆಯರಿಗೆ ಸೇರಿದ್ದು. ಗೊಮ್ಮಟೇಶ್ವರನ ಸನ್ನಿಧಿಯಲ್ಲಿ ಬೇಕಾದಷ್ಟು ಅವು ದಾನಗಳನ್ನು ಮಾಡಿದುದಲ್ಲದೆ ದೇವಾಲಯದ ಜಮೀನುಗಳ ಮೇಲಿದ್ದ ಎಲ್ಲಾ ಅಡಮಾನ ಸಾಲಗಳನ್ನು ತೀರಿಸಿ, ದೇವಾಲಯದ ಆಸ್ತಿಯನ್ನು ಭಗವಂತನ ಪೂಜೆಗಾಗಿ ಬಳಸಲು

ಸ್ಥಾನಿಕರಿಗೆ ಅಧಿಕಾರ ಕೊಟ್ಟರು. ಕೆಳದಿಯ ವೆಂಕಟಪ್ಪ ನಾಯಕನು ವೀರಶೈವ ಮಠಗಳು ಮತ್ತು ಪವಿತ್ರ ಸ್ಥಾನಗಳಿಗೆ ಮಾತ್ರವಲ್ಲದೆ, ರಾಮಾನುಜಕೂಟಕ್ಕೆ, ಶೃಂಗೇರಿಯ ಅದ್ವೈತ ಮಠಕ್ಕೆ, ಮುಸ್ಲಿಂ ಮಸೀದಿಗಳಿಗೂ ಉದಾರವಾಗಿ ದಾನನೀಡಿದನು. ತನ್ನ ಆಳಿಕೆಯ ಅವಧಿಯಲ್ಲಿ ಕ್ರೈಸ್ತಧರ್ಮವೂ ಗರಿಗಟ್ಟಿಕೊಂಡು ಬೆಳೆಯಲು ಶಿವಪ್ಪನಾಯಕನು ಪ್ರೋತ್ಸಾಹವಿತ್ತನು. ಕೆಳದಿಯ ರಾಜರಿಗೆ ವಿಶುದ್ಧ ವೈದಿಕಾದ್ವೈತ ಸಿದ್ಧಾಂತ ಪ್ರತಿಷ್ಠಾಪಕ, ಶಿವಗುರು ಭಕ್ತಿ ಪರಾಯಣ ಇತ್ಯಾದಿ ಬಿರುದುಗಳು ಇದ್ದುವು.[೫] ಧರ್ಮಪ್ರೇರಿತರಾಗಿ ಆ ಕಾಲದ ರಾಜರು ತಮ್ಮ ಆಸ್ಥಾನಗಳಲ್ಲಿ ಧರ್ಮಪ್ರವಚನ ಕಾರ್ಯಕ್ರಮಗಳನ್ನೂ ಏರ್ಪಡಿಸುತ್ತಿದ್ದರು.[೬]

ಪವಿತ್ರ ತೀರ್ಥಕ್ಷೇತ್ರಗಳಿಗೆ ಯಾತ್ರೆ ಹೋಗುವುದು, ಆ ಮೂಲಕ ನಾಡಿನ ಧಾರ್ಮಿಕ ಸಂಪ್ರದಾಯವನ್ನು ಪಾಲಿಸುವುದು ತಮ್ಮ ಕರ್ತವ್ಯಗಳಲ್ಲೊಂದೆಂದು ಕರ್ನಾಟಕದ ಅರಸರು ಭಾವಿಸಿದ್ದರು. ರಾಜಒಡೆಯರ ಸೋದರರಾದ ಬೆಟ್ಟದ ಚಾಮರಾಜ ಒಡೆಯರ್ ಮತ್ತು ಮುಪ್ಪಿನ ದೇವರಾಜ ಒಡೆಯರ್ ಇಬ್ಬರೂ ಮೇಲುಕೋಟೆ, ತಿರುಪತಿ, ಕಂಚಿ, ಕುಂಭಕೋಣಂ, ಶ್ರೀರಂಗಂ, ರಾಮೇಶ್ವರಂ ಮತ್ತಿತರ ಪವಿತ್ರ ಸ್ಥಳಗಳಿಗೆ ಯಾತ್ರೆ ಹೋಗಿಬಂದರು. ಚಿಕ್ಕದೇವರಾಜ ಒಡೆಯರ ತಂದೆ ದೊಡ್ಡ ದೇವರಾಜ ಒಡೆಯರ್ ಅರಮನೆಯ ಸಕಲ ಸುಖಭೋಗಗಳನ್ನು ತ್ಯಾಗ ಮಾಡಿ ಕೌಂಡಿನಿ ನದಿಯ ದಂಡೆಗೆ ಹೊರಟುಹೋದರು.[೭] ಕೆಳದಿಯ ರಾಜರ ಪೈಕಿ ೧ನೇ ವೆಂಕಟಪ್ಪನಾಯಕ ಹಾಗೂ ಚೆನ್ನಮ್ಮಾಜಿ ಇಬ್ಬರೂ ವಿವಿಧ ಉದ್ದೇಶಗಳಿಂದ ತೀರ್ಥಯಾತ್ರೆ ಮಾಡಿದರು.[೮]

ಜನರಿಗೆ ಅವರ ಆರ್ಥಿಕ, ಔದ್ಯಮಿಕ ಹಾಗೂ ವಾಣಿಜ್ಯ ಚಟುವಟಿಕೆಗಳಲ್ಲಿ ನೆರವು ಮತ್ತು ಪ್ರೋತ್ಸಾಹಗಳನ್ನು ನೀಡಿ ರಾಜರು ಪ್ರಜೆಗಳ ಯೋಗಕ್ಷೇಮವು ತಮ್ಮ ಆದ್ಯಕರ್ತವ್ಯವೆಂಬುದನ್ನು ನಿರೂಪಿಸಿದ್ದರು. ಅರಣ್ಯಗಳನ್ನು ಕಡಿದು ಹೊಸ ಹೊಸದಾಗಿ ಭೂಮಿಯನ್ನು ಸಾಗುವಳಿಗೆ ಒಳಪಡಿಸಲು ಅವರು ಕ್ರಮಗಳನ್ನು ಕೈಗೊಳ್ಳುತ್ತಿದ್ದರು. ನೀರಾವರಿ ಸೌಲಭ್ಯ ಒದಗಿಸುತ್ತಿದ್ದರು. ಕರ್ನಾಟಕದ ಹೊರಗಿನ ರಾಜ್ಯಗಳೊಂದಿಗೆ ಹಾಗೂ ವಿದೇಶಗಳೊಂದಿಗೆ ವ್ಯಾಪಾರವನ್ನು ಪ್ರೋತ್ಸಾಹಿಸುತ್ತಿದ್ದರು. ವಿದೇಶೀ ವರ್ತಕರಿಗೆ ರಕ್ಷಣೆಯನ್ನು ಒದಗಿಸುತ್ತಿದ್ದರು. ಹತ್ತಿರಕ್ಕೂ ದೂರಕ್ಕೂ ವರ್ತಕರನ್ನು ಆಕರ್ಷಿಸಲು ಹೊಸದಾಗಿ ಮಾರುಕಟ್ಟೆಗಳನ್ನು ಸ್ಥಾಪಿಸುತ್ತಿದ್ದರು. ವಿವಿಧ ಸರಕುಗಳ ಮೇಲೆ ನ್ಯಾಯಯುತವಾದ ತೆರಿಗೆಯನ್ನು ವಿಧಿಸುತ್ತಿದ್ದರು. ೫ನೇ ಚಾಮರಾಜ ಒಡೆಯರ್ ಶ್ರೀರಂಗಪಟ್ಟಣದ ಬಳಿ ಕಾವೇರಿ ನದಿಯ ನಾಲೆಯನ್ನು ಕಟ್ಟಿಸಿದರು, ನದಿಗೆ ಒಂದು ಸೇತುವೆಯನ್ನೂ ಕಟ್ಟಿಸಿದರು. ಹೊಸದಾಗಿ ಕೃಷಿಗೆ ತಂದ ಜಮೀನುಗಳನ್ನು ಹೊಸ-ಬಯಲು ಎಂದು ಕರೆದರು. ಕಂಠೀರವ ನರಸರಾಜ ಒಡೆಯರೂ ಕಾವೇರಿಗೆ ಸೂಕ್ತವಾದ ಸ್ಥಳಗಳಲ್ಲಿ ಅಣೆ ಹಾಕಿಸಿ, ಸಂಗ್ರಹಿಸಿದ ನೀರನ್ನು ಕಾಲುವೆಯ ಮೂಲಕ ರಾಜಧಾನಿಗೆ ತರುವ ವ್ಯವಸ್ಥೆ ಮಾಡಿದರು. ಅವರು ತೋಡಿಸಿದ ಬಂಗಾರದೊಡ್ಡಿ ನಾಲೆ, ದೇವರಾಜ ಒಡೆಯರ ದೇವರಾಜನಾಲೆ, ಚಿಕ್ಕದೇವರಾಜ ಒಡೆಯರ ಚಿಕ್ಕದೇವರಾಜಸಾಗರನಾಲೆ ಇವು ತಮ್ಮ ಮಂಜುಳ ದನಿಯಲ್ಲಿ ಆ ರಾಜರು ಜನರಿಗೆ ನೀರಾವರಿ ಸೌಲಭ್ಯಗಳನ್ನು ಕಲ್ಪಿಸಲು ತೋರಿಸುತ್ತಿದ್ದ ಕಾಳಜಿಯನ್ನು ಸಾರುತ್ತಿದ್ದುವು.[೯] ಯಾವುದೇ ಅಧಿಕಾರಿಗಳಾಗಲಿ, ಹೊರಗಿನವರಾಗಲಿ ತನ್ನ ಪ್ರಜೆಗಳನ್ನು ಹಿಂಸಿಸದಂತೆ, ಅವರಿಗೆ ಕಿರುಕುಳ ಕೊಡದಂತೆ ಜಾಗರೂಕತೆಯಿಂದ ವೀರಭದ್ರನಾಯಕನು ನೋಡಿಕೊಳ್ಳುತ್ತಿದ್ದನು. ಅವನ ಕೃಪಾಛತ್ರದಡಿಯಲ್ಲಿ ಬಿದನೂರಿನ ವರ್ತಕರು ಮತ್ತು ವಣಿಕ ಸಂಘಗಳು ತಮ್ಮ ಪೌರಹಕ್ಕುಗಳನ್ನೂ ಇತರ ಸೌಲಭ್ಯಗಳನ್ನೂ ಅನುಭವಿಸುತ್ತಿದ್ದರು.[೧೦]

ಹೀಗೆ ರಾಜನ ಅಧಿಕಾರದ ಮೂಲವು ಅವನು ದೇವರಿಗೆ ಮತ್ತು ಬ್ರಾಹ್ಮಣರಿಗೆ ಮಾಡುತ್ತಿದ್ದ ಸೇವೆಯಲ್ಲಿ ಮಾತ್ರವಲ್ಲದೆ, ಪ್ರಜೆಗಳಿಗೆ ಮಾಡುತ್ತಿದ್ದ ಸೇವೆಯಲ್ಲೂ ಇದ್ದಿತು. ಅಖಿಲ ರಾಜಧರ್ಮ ನಿದಾನಂ ಆಗಿರಬೇಕಾದ ರಾಜನ ಉದಾತ್ತವ್ಯಕ್ತಿತ್ವ ತನ್ನ ಪ್ರಜೆಗಳ ಸರ್ವತೋಮುಖ ಯೋಗಕ್ಷೇಮಕ್ಕಾಗಿ ಅವನ

ಕಾಳಜಿ ಇವು, ದೊಡ್ಡದೇವರಾಜನು ತನ್ನ ತಮ್ಮ ದೇವರಾಜನಿಗೆ ಅವನ ಪಟ್ಟಾಭಿಷೇಕ ಸಮಯದಲ್ಲಿ ನೀಡಿದ ಈ ಬುದ್ಧಿವಾದದ ಮಾತುಗಳಲ್ಲಿ ಬಹು ಸ್ಪಷ್ಟವಾಗಿ ನಿರೂಪಿತವಾಗಿವೆ: ''.... ನಿನ್ನನ್ನು ಕುರಿತು ನನಗಿರುವ ಪ್ರೀತಿಯ ಬಲದಿಂದಾಗಿ ನಿನಗೆ ಈ ಮಾತುಗಳನ್ನು ಹೇಳುತ್ತಿದ್ದೇನೆ. ನಿನ್ನ ಸ್ವಂತದ ಯೋಗಕ್ಷೇಮಕ್ಕಾಗಿ ವಿಪರೀತ ಗಮನಕೊಡದೆ ಮೊದಲು ದೇವರು ಮತ್ತು ಬ್ರಾಹ್ಮಣರ ಸೇವೆಮಾಡು. ಪ್ರಜೆಗಳಿಗೆ ತಂದೆ ತಾಯಿಗಳ ಪ್ರೀತಿಯನ್ನೂ ಸಹಾನುಭೂತಿಯನ್ನೂ ತೋರಿಸಿ ಅವರನ್ನು ಕಾಪಾಡು. ಹಾಗೆ ಮಾಡುವುದರಿಂದ ನಿನ್ನ ಅಭ್ಯುದಯ, ಐಶ್ವರ್ಯ, ಕೀರ್ತಿ ಎಲ್ಲವೂ ಹೆಚ್ಚುತ್ತವೆ.'' ದೇವರಾಜನು ತನ್ನ ರಾಜ್ಯವನ್ನು ನಾಲ್ಕು ಭಾಗಗಳನ್ನಾಗಿ ಮಾಡಿ, ಮೊದಲನೆಯದನ್ನು ಬ್ರಾಹ್ಮಣರಿಗೂ, ಎರಡನೆಯದನ್ನು ದೇವರಿಗೂ, ಮೂರನೆಯದನ್ನು ದಾನಧರ್ಮಗಳಿಗೂ ಕೊಟ್ಟು, ನಾಲ್ಕನೆಯದನ್ನು ತನ್ನ ಉಪಯೋಗಕ್ಕಾಗಿ ಉಳಿಸಿಕೊಂಡನು ಎಂದು ಹೇಳಲಾಗಿದೆ. ಹೀಗೆ ಸ್ಮೃತಿಗಳಲ್ಲಿ ಉಕ್ತವಾದ ಧರ್ಮದಿಂದ ಅವನು ರಾಜ್ಯವಾಳಿದನು (ಸ್ಮೃತ್ಯುಕ್ತ ಧರ್ಮದಿಂದಾಳ್ದು).[೧೧]

ಯುವರಾಜ

ರಾಜ್ಯಗಳು ವಿಸ್ತಾರಗೊಂಡು, ಅಧಿಕಾರ, ಸ್ಥಾನಮಾನ, ಹೊಣೆಗಾರಿಕೆಗಳು ಅಧಿಕಗೊಂಡಾಗ ರಾಜ್ಯಾಡಳಿತದಲ್ಲಿ ಯುವರಾಜ ಸ್ಥಾನ ಮುಖ್ಯವಾಯಿತು. ರಾಜತ್ವವು ಬಹುತೇಕ ಆನುವಂಶಿಕವಾಗಿತ್ತು. ಸಾಮಾನ್ಯವಾಗಿ ಹಿರಿಯ ಮಗನನ್ನು ಯುವರಾಜನನ್ನಾಗಿ ಮಾಡುತ್ತಿದ್ದರೂ ಕೆಲವೊಮ್ಮೆ ಸೋದರ, ಸೋದರಳಿಯ, ಚಿಕ್ಕಪ್ಪ, ಮೊಮ್ಮಗ ಇವರನ್ನೂ ವಿಶೇಷ ಸನ್ನಿವೇಶಗಳಲ್ಲಿ ಯುವರಾಜನನ್ನಾಗಿ ನೇಮಿಸಲಾಗುತ್ತಿತ್ತು. ದೇವರಾಜ ಒಡೆಯರು ತಮ್ಮ ತಂಗಿಯ ಮಗ (ಸೋದರಳಿಯ) ಚಿಕ್ಕದೇವರಾಜ ಒಡೆಯರನ್ನು ಯುವರಾಜನನ್ನಾಗಿ ನೇಮಿಸಿದರು. ಕೆಳದಿಯಲ್ಲಿ ವೆಂಕಟಪ್ಪನಾಯಕನು ತನ್ನ ಅಣ್ಣನ ಇಬ್ಬರು ಪುತ್ರರಿದ್ದರೂ ಅವರಿಗೆ ಬದಲು ತನ್ನ ಮೊಮ್ಮಗ ವೀರಭದ್ರನಾಯಕನನ್ನು ಈ ಸ್ಥಾನಕ್ಕೆ ಆರಿಸಿದನು.[೧೨] ಮುಂದೆ ಸಿಂಹಾಸನಕ್ಕೆ ಬರುವವನಾದ್ದರಿಂದ ಯುವರಾಜನ ಶಿಕ್ಷಣಕ್ಕೆ ಮತ್ತು ತರಬೇತಿಗೆ ವಿಶೇಷ ಗಮನವನ್ನು ನೀಡಲಾಗುತ್ತಿತ್ತು. ೧ನೇ ಕಂಠೀರವ ನರಸರಾಜ ಒಡೆಯರ್‌ರಿಗೆ ಜ್ಞಾನದ ಎಲ್ಲಾ ಶಾಖೆಗಳಲ್ಲೂ ಶಿಕ್ಷಣ ದೊರಕಿತು. ಜೊತೆಗೆ ಕುದುರೆ ಸವಾರಿ, ಆನೆ ಸವಾರಿ, ಧನುರ್ವಿದ್ಯೆ, ಆಕ್ರಮಣ ಮತ್ತು ಆತ್ಮರಕ್ಷಣಗಳಿಗೆ ಬೇಕಾಗುವ ಎಲ್ಲಾ ಬಗೆಯ ಶಸ್ತ್ರಾಸ್ತ್ರಗಳ ತರಬೇತಿ ದೊರಕಿತು. ಚಿಕ್ಕದೇವರಾಜರಿಗೆ ತತ್ವಶಾಸ್ತ್ರ, ಧರ್ಮಶಾಸ್ತ್ರಗಳು, ದಂಡನೀತಿ, ಪುರಾಣಗಳು, ಭಾಷಾವಿಜ್ಞಾನ, ನಾಟಕ, ಛಂದಸ್ಸು, ಕಾವ್ಯ, ಸಂಗೀತ,ಕಸರತ್ತು, ಧನುರ್ವಿದ್ಯೆ, ಕತ್ತಿಕಾಳಗ, ಅಶ್ವ-ಗಜಾರೋಹಣಗಳು, ಧಾರ್ಮಿಕವೂ ಲೌಕಿಕವೂ ಆದ ಇನ್ನು ಅನೇಕ ವಿಷಯಗಳನ್ನು ಕಲಿಸಲಾಯಿತು. ಚೆನ್ನಮ್ಮಾಜಿಯು ೧ನೇ ಬಸವಪ್ಪನಾಯಕನಿಗೆ ಅಶ್ವ-ಗಜಾರೋಹಣಗಳು, ಮಲ್ಲವಿದ್ಯೆ ಮತ್ತು ಇತರ ಕಲೆಗಳಲ್ಲಿ ತರಬೇತಿ ಕೊಟ್ಟು, ಜನರ ಪ್ರೀತಿ ವಿಶ್ವಾಸಗಳನ್ನು ಗೆಲ್ಲಲು ಹೇಗೆ ನಡೆದುಕೊಳ್ಳಬೇಕು, ಅರ್ಹರನ್ನು ಹೇಗೆ ಗೌರವಿಸಬೇಕು, ಉದಾತ್ತವೂ ಆದರ್ಶಯುತವೂ ಆದ ಜೀವನವನ್ನು ಹೇಗೆ ನಡೆಸಬೇಕು ಎಂಬುದನ್ನು ಕಲಿಸಿದಳು.[೧೩] ಯುವರಾಜನು ಅರಸನಿಗೆ ಆಡಳಿತದಲ್ಲೂ ಯುದ್ಧದಲ್ಲೂ ಸಹಾಯ ಮಾಡುತ್ತಿದ್ದನು. ಈರೋಡಿನ ಮುತ್ತಿಗೆಯಲ್ಲಿ ಸಕ್ರಿಯ ಪಾತ್ರ ನಿರ್ವಹಿಸಿ ಚಿಕ್ಕದೇವರಾಜ ಒಡೆಯರು ಚಿಕ್ಕಪ್ಪನಿಂದ ಧೈರ್ಯ ಪರಾಕ್ರಮಗಳಿಗಾಗಿ ಪ್ರಶಂಸೆ ಪಡೆದರು. ಕೆಳದಿಯ ಆಡಳಿತ ವ್ಯವಹಾರಗಳಲ್ಲಿ ಯುವರಾಜ ವೀರಭದ್ರನಾಯಕನು ತಾತ ವೆಂಕಟಪ್ಪನಾಯಕನಿಗೆ ಸಹಾಯ ಮಾಡಿದನು.[೧೪]

ವಾರಸುದಾರಿಕೆಯ ಪ್ರಶ್ನೆ

ವಾರಸುದಾರಿಕೆಯ ಪ್ರಶ್ನೆಯನ್ನು ಪರಿಹರಿಸಿ ಸಿಂಹಾಸನಕ್ಕೆ ಅಪಾಯವನ್ನು ನಿವಾರಿಸುವ ಸಲುವಾಗಿ ಯುವರಾಜ ಪದವಿಯನ್ನು ಸೃಷ್ಟಿಸಲಾಯಿತು. ಸಾಮಾನ್ಯವಾಗಿ ಸಂತಾನ ಪ್ರಾಧಾನ್ಯ ತತ್ವವನ್ನು

ಆಳವಡಿಸಿಕೊಳ್ಳಲಾಗುತ್ತಿತ್ತು. ಆದರೆ ಮೃತನಾದ ರಾಜನಿಗೆ ಮಗನಿಲ್ಲದೆ ಹೋದರೆ, ಅಥವಾ ಮಕ್ಕಳು ಅನರ್ಹರೆಂದು ಸಾಬೀತಾಗಿದ್ದರೆ, ಆಗ ತಮ್ಮಂದಿರೋ, ಮೊಮ್ಮಕ್ಕಳೋ, ಚಿಕ್ಕಪ್ಪಂದಿರೋ, ಸೋದರಳಿಯಂದಿರೋ ಮುಂದಿನ ರಾಜರೆಂದು ಆರಿಸಲಾಗುತ್ತಿತ್ತು. ರಾಜಒಡೆಯರ್ ನಂತರ ಮೊದಲು ಅವರ ಮೊಮ್ಮಗ ೫ನೇ ಚಾಮರಾಜ ಒಡೆಯರ್ ಪಟ್ಟಕ್ಕೆ ಬಂದರು, ಆಮೇಲೆ ಕಿರಿಯ ಮಗ, ಅವರ ಕಿರಿಯ ಮಗ ಇಮ್ಮಡಿ ರಾಜಒಡೆಯರ್ ಪಟ್ಟಕ್ಕೆ ಬಂದರು. ಕೆಳದಿಯಲ್ಲಿ ರಾಮರಾಜನಾಯಕನಿಗೆ ಇಬ್ಬರು ಗಂಡುಮಕ್ಕಳಿದ್ದರೂ, ಅವನ ಸಹೋದರ ೧ನೇ ವೆಂಕಟಪ್ಪನಾಯಕನು ವಾರಸುದಾರನಾದನು. ಅವನು ತನ್ನ ಮೊಮ್ಮಗ ವೀರಭದ್ರನಾಯಕನನ್ನು ತನ್ನ ವಾರಸುದಾರನನ್ನಾಗಿ ನೇಮಕ ಮಾಡಿದನು.[೧೫] ನೇರವಾದ ಸಂತಾನವಿಲ್ಲದಾಗ ಹೀಗೆ ಪೂರಕವಾದ ವಾರಸುದಾರಿಕೆಗೆ ಅವಕಾಶವಾಗುತ್ತಿತ್ತು. ಎಷ್ಟೋ ಸಾರಿ ಹೀಗೆ ನೇರವೂ ಪೂರಕವೂ ಆದ ವಾರಸುದಾರಿಕೆಯೂ ಇಲ್ಲದೆ ದೂರದ ವ್ಯಕ್ತಿಯನ್ನು ನೇಮಿಸಬೇಕಾಗುತ್ತಿತ್ತು. ವೀರಭದ್ರನಾಯಕನು ತನ್ನ ವಾರಸುದಾರನನ್ನಾಗಿ ತನ್ನ ಚಿಕ್ಕಪ್ಪನೂ ದಂಡನಾಯಕನೂ ಆದ ಶಿವಪ್ಪನಾಯಕನನ್ನು ನೇಮಕಮಾಡಿದನು. ಅರ್ಹರಾದ ವಾರಸುದಾರರಿಲ್ಲದಾಗ ವಿಧವೆ ರಾಣಿಯೇ ಸಿಂಹಾಸನವನ್ನೇರುತ್ತಿದ್ದಳು. ಚೆನ್ನಮ್ಮಾಜಿಯು ತನ್ನ ಪತಿ ೧ನೇ ಸೋಮಶೇಖರನಾಯಕನ ಮರಣಾನಂತರ ಮಾಡಿದ ಹಾಗೆ.[೧೬]

ಕರ್ನಾಟಕದ ಅರಸರು ಅನುಸರಿಸಿದ ಇನ್ನೊಂದು ವಿಧಾನ ದತ್ತಕ ಸ್ವೀಕಾರ. ಇದೂ ಸಂಪ್ರದಾಯದ ಮುಂದುವರಿಕೆಯೇ ಆಗಿತ್ತು. ಕಂಠೀರವ ನರಸರಾಜ ಒಡೆಯರ್ ತಮ್ಮ ಸಂಬಂಧಿ ದೇವರಾಜ ಒಡೆಯನನ್ನು ದತ್ತಕ ಪಡೆದುಕೊಂಡರು. ಚೆನ್ನಮ್ಮಾಜಿಯು ಬಸಪ್ಪನಾಯಕನನ್ನು ದತ್ತು ಸ್ವೀಕರಿಸಿ ಮೊದಲನೆಯ ಹಿರಿಯ ಬಸಪ್ಪನಾಯಕ ಎಂಬ ಹೆಸರಿನಿಂದ ಅವನು ತನ್ನ ವಾರಸುದಾರನೆಂದು ಘೋಷಿಸಿದಳು.[೧೭] ಕೂಡು ಆಡಳಿತ ಹಾಗೂ ರೀಜೆನ್ಸಿ ಅಥವಾ ರಾಜಪ್ರತಿನಿಧಿತ್ವಗಳೂ ಸಿಂಹಾಸನಕ್ಕೆ ಎದುರಾಗುವ ಅಪಾಯಗಳನ್ನು ನಿವಾರಿಸುವಲ್ಲಿ ನೆರವಾಗುತ್ತಿದ್ದುವು. ಬೆಟ್ಟದ ಚಾಮರಾಜ ಒಡೆಯರು ತಮ್ಮ ಸಹೋದರ ರಾಜಒಡೆಯರೊಂದಿಗೆ ಶ್ರೀರಂಗಪಟ್ಟಣವನ್ನು ವಶಪಡಿಸಿಕೊಳ್ಳುವ ಮೊದಲೂ ಆಮೇಲೂ ಕೂಡು ಆಡಳಿತ ನಡೆಸುತ್ತಿದ್ದರು ಎಂದು ಆ ಕಾಲದ ಸಾಹಿತ್ಯಕ ಮೂಲವು ಸೂಚಿಸುತ್ತದೆ. ದೊಡ್ಡದೇವರಾಜ ಒಡೆಯರು ಕಂಠೀರವನ ಕೈಕೆಳಗೆ ಮೈಸೂರಿನಲ್ಲಿ ಸೇವೆಸಲ್ಲಿಸುತ್ತಿದ್ದುದು ಮಾತ್ರವಲ್ಲ, ಅವರೊಂದಿಗೆ ಜಂಟಿಯಾಗಿ ಆಡಳಿತ ನಡೆಸುತ್ತಿದ್ದರು (ಅರಸುಗೆಯ್ಯುತ್ತಿರೆ). ಕೆಳದಿಯಲ್ಲಿ ಭದ್ರಪ್ಪನಾಯಕನೂ ೧ನೇ ಸೋಮಶೇಖರ ನಾಯಕನೂ ಕೂಡು ಆಡಳಿತ ನಡೆಸುತ್ತಿದ್ದರು, ಅದರಲ್ಲಿ ಚೆನ್ನಮ್ಮಾಜಿಯು ಸಹಾಯ ಮಾಡುತ್ತಿದ್ದಳು ಎಂಬುದಾಗಿ ಶಾಸನಗಳು ತಿಳಿಸುತ್ತವೆ. ೫ನೇ ಚಾಮರಾಜ ಒಡೆಯರ್ ಇನ್ನೂ ಪ್ರೌಢರಾಗಿಲ್ಲದಾಗ ಅವರ ಪರವಾಗಿ ಮೈಸೂರನ್ನು ಆಳುತ್ತಿದ್ದವನು ದಳವಾಯಿ ಬೆಟ್ಟದ ಅರಸು. ಚೆನ್ನಮ್ಮಾಜಿಯು ತನ್ನ ಪತಿಯ ರಾಜಪ್ರತಿನಿಧಿಯಾಗಿ ಕಾರ್ಯ ನಿರ್ವಹಿಸಿದಳು. ಅವನಿಗೆ ಮನೋವೈಕಲ್ಯವುಂಟಾದಾಗ ದತ್ತುಸ್ವೀಕಾರಮಾಡಿ, ಅವನು ಇನ್ನೂ ಬಾಲಕನಾಗಿದ್ದುದರಿಂದ ತಾನು ಪ್ರತಿನಿಧಿಯಾಗಿ ರಾಜ್ಯಭಾರ ಮಾಡಿದಳು. ಆ ಕಾಲದ ರಾಜ್ಯಾಡಳಿತದಲ್ಲಿ ಪಿತ್ರಾರ್ಜಿತತ್ವಕ್ಕೂ ಅವಕಾಶವಿತ್ತು. ರಾಜಒಡೆಯರು ರಾಜಮನೆತನದ ಸದಸ್ಯರಿಗೆ ಬೇರೆ ಬೇರೆ ಪ್ರದೇಶಗಳ ಮೇಲೆ ಅಧಿಕಾರವನ್ನು ನೀಡಿ ಅವರಿಗೆ ದಾರಿಮಾಡಿ ಕೊಟ್ಟದು. ವಾರಸುದಾರಿಕೆಗೆ ಕಲಹವಾಗದಿರಲೆಂಬ ಕಾರಣದಿಂದ ತಾವಾಗಿ ಸಿಂಹಾಸನ ತ್ಯಾಗಮಾಡುವ ಪದ್ಧತಿಯೂ ಇತ್ತು. ವೀರಭದ್ರನಾಯಕನಿಗೆ ರಾಜಕಾರಣದಲ್ಲಿ ಎಷ್ಟುಮಟ್ಟಿಗೆ ಜುಗುಪ್ಸೆಯುಂಟಾಯಿತೆಂದರೆ ಅವನು ತನ್ನ ಚಿಕ್ಕಪ್ಪ ಶಿವಪ್ಪನಾಯಕನಿಗೆ ಅಧಿಕಾರ ಸೂತ್ರಗಳನ್ನು ವಹಿಸಿಕೊಟ್ಟುಬಿಟ್ಟನು. ತೀರ್ಥಯಾತ್ರೆಗಳನ್ನು ಕೈಗೊಂಡು, ರಾಜಕೀಯ ಪರಿಸ್ಥಿತಿಗಳನ್ನು ಅಧ್ಯಯನ ಮಾಡಿ, ಅಲ್ಲಲ್ಲಿ ಏಳುವ ದಂಗೆಯನ್ನು ಅಡಗಿಸಲು ತಕ್ಕ ಕ್ರಮಗಳನ್ನುಕೈಗೊಳ್ಳಲಾಗುತ್ತಿತ್ತು. ಜನಸಾಮಾನ್ಯರೊಂದಿಗೆ ನೇರಸಂಪರ್ಕ ಪಡೆದು ಅವರ ತೊಂದರೆಗಳನ್ನು ಪರಿಹರಿಸಬಹುದಾಗಿದ್ದಿತು. ಹೀಗೆ ತೀರ್ಥಯಾತ್ರೆಗೆ ಧರ್ಮ-ರಾಜಕಾರಣ ಎರಡೂ ಉದ್ದೇಶಗಳಿರುತ್ತಿದ್ದುವು.[೧೮]

ಪಟ್ಟಾಭಿಷೇಕ ಮತ್ತು ರಾಜನ ಆಸ್ಥಾನ

ಜೊತೆಗೆ, ಜನರ ಮೇಲೆ ಪ್ರಭಾವ ಬೀರಿ, ಅವರ ಮೆಚ್ಚುಗೆ, ಬೆಂಬಲ, ಪ್ರೀತಿ, ನಿಷ್ಠೆಗಳನ್ನು ಗಳಿಸಲು, ಹಾಗೆಯೇ ದುಷ್ಟರಿಗೆ ಎಚ್ಚರಿಕೆ ನೀಡಲು ಇತರ ಹಲವು ತಂತ್ರಗಳನ್ನೂ ಅನುಸರಿಸಲಾಗುತ್ತಿದ್ದಿತು. ರಾಜನ ಪಟ್ಟಾಭಿಷೇಕವು ಭವ್ಯವಾದ ರೀತಿಯಲ್ಲಿ, ಕಾಲಾನುಕಾಲದಿಂದ ಬಂದ ಶಾಸ್ತ್ರವಿಹಿತ ವಿಸ್ತಾರವಾದ ಆಚರಣೆಗಳೊಂದಿಗೆ, ಸಮಾಜದ ಗಣ್ಯರೆಲ್ಲರೂ ಭಾಗವಹಿಸಿರಲು, ಅವರ ಸಮ್ಮುಖದಲ್ಲಿ ಅದ್ದೂರಿಯಾಗಿ ನಡೆಯುತ್ತಿದ್ದಿತು. ಸದಾ ರಾಜನಿಗೆ ವೈಭವ ಮತ್ತು ಗಾಂಭೀರ್ಯ ಜೊತೆಯಾಗಿರುತ್ತಿದ್ದುವು. ವೈಭವೋಪೇತವಾದ ಅರಮನೆಯಲ್ಲಿ ರಾಜನು ಸಕಲ ಅದ್ದೂರಿ, ಆಡಂಬರ ಮತ್ತು ಅಧಿಕಾರ ಸಂಕೇತಗಳನ್ನು ಪ್ರದರ್ಶಿಸುತ್ತಾ ದರ್ಬಾರು ನಡೆಸುತ್ತಿದ್ದನು. ಅವನು ವ್ಯವಹಾರವನ್ನು ನಿರ್ವಹಿಸುತ್ತಿದ್ದ ಗಂಭೀರವಾದ ರೀತಿ, ವಿದೇಶೀ ರಾಯಭಾರಿಗಳನ್ನೂ ಮಾನ್ಯ ಅತಿಥಿಗಳನ್ನೂ ಸ್ವಾಗತಿಸುತ್ತಿದ್ದ ವಿಧಾನ, ಅವನ ಕ್ರೀಡೆ, ಮನರಂಜನೆ, ವಿಹಾರಗಳು, ಆಸ್ಥಾನದ ವೈಭವ ಎಲ್ಲವೂ ಬಹು ಪ್ರಭಾವಕಾರಿಯಾಗಿದ್ದುವು. ಅವನ ಮೂಲವನ್ನು ಸೂರ್ಯನಿಂದಲೋ ಚಂದ್ರನಿಂದಲೋ ಅಥವಾ ಯಾರಾದರೊಬ್ಬ ಪೌರಾಣಿಕ ವೀರನಿಂದಲೋ ಗುರುತಿಸಿ ಪುರೋಹಿತರು ಅವನ ಗೌರವ ಪ್ರತಿಷ್ಠೆಗಳನ್ನು ಇನ್ನಷ್ಟು ಹೆಚ್ಚಿಸುತ್ತಿದ್ದರು. ರಾಜನಾಗಿ ಅವನ ಸ್ಥಾನವನ್ನು ಶಾಸನಬದ್ಧಗೊಳಿಸುತ್ತಿದ್ದರು. ರಾಜಒಡೆಯರು ಮಹಾನವಮಿ (ನವರಾತ್ರಿ) ದರ್ಬಾರು ನಡೆಸುತ್ತಿದ್ದದ್ದು; ೫ನೇ ಚಾಮರಾಜ ಒಡೆಯರ ಆಸ್ಥಾನದ ವೈಭವ; ಕಂಠೀರವ ನರಸರಾಜ ಒಡೆಯರ್ ಪ್ರತಿದಿನವೂ ನಡೆಸುತ್ತಿದ್ದ ಅತ್ಯಂತ ಪ್ರಬಾವಶಾಲೀ ದರ್ಬಾರು; ದೇವರಾಜ ಒಡೆಯರ ಐಶ್ವರ್ಯ ಮತ್ತು ಅದ್ದೂರಿ; ಕಾಲದ ಅತ್ಯುತ್ತಮ ಅಭಿರುಚಿ ಮತ್ತು ಸುಂದರ ಸಂಸ್ಕೃತಿಯ ಸಂಕೇತವಾಗಿದ್ದ ಚಿಕ್ಕದೇವರಾಜರ ಆಸ್ಥಾನ; ಪಿಟ್ರೋ ದಲ್ಲಾವಿಲ್ಲೆ ಪ್ರತ್ಯಕ್ಷದರ್ಶಿಯಾಗಿದ್ದು ವರ್ಣಿಸಿರುವ ಕೆಳದಿ ಆಸ್ಥಾನದ ವೈಭವ- ಇವೆಲ್ಲವೂ ಆ ಕಾಲದ ಉದಾತ್ತ ಚೇತನದ ಸಂಪೂರ್ಣ ಅಭಿವ್ಯಕ್ತಿಯಾಗಿದ್ದುವು.[೧೯]

ಆದರೆ ಈ ವಿವಿಧ ತಂತ್ರಗಳು ಅರಮನೆಯ ಅಂತಃಕಲಹಗಳನ್ನಾಗಲಿ, ಇತರರು ಸಿಂಹಾಸನವನ್ನು ಕಿತ್ತುಕೊಳ್ಳಲು ಯತ್ನಿಸುವುದನ್ನಾಗಲಿ ಸಂಪೂರ್ಣವಾಗಿ ತಡೆಯದಾದುವು. ದಳವಾಯಿ ಬೆಟ್ಟದ ಅರಸುವಿನ ತಮ್ಮನೂ, ಅವನ ಮಗನೂ ಸೇರಿ ೫ನೇ ಚಾಮರಾಜ ಒಡೆಯರನ್ನು ಸಂಹರಿಸಲು ಒಳಸಂಚು ಮಾಡಿದರು. ಆದರೆ ತಮಗೇ ಮರಣದಂಡನೆ ತಂದುಕೊಂಡರು. ದಳವಾಯಿ ವಿಕ್ರಮರಾಜನು ದುಷ್ಟ ಸಂಚು ನಡೆಸಿ ಇಮ್ಮಡಿ ರಾಜಒಡೆಯರಿಗೆ ವಿಷ ತಿನ್ನಿಸಿದನು. ಕೆಳದಿಯಲ್ಲಿ ಸಂಚುಕೋರ ದುಷ್ಟರು ಶಿವಪ್ಪನಾಯಕ ಮತ್ತು ೧ನೇ ವೆಂಕಟಪ್ಪನಾಯಕರನ್ನು ಬಂಧನಕ್ಕೆ ಹಾಕಿಸಿದರು. ೨ನೇ ವೆಂಕಟಪ್ಪನಾಯಕನು ಅಂತಃಕಲಹಗಳಿಗೆ ಬಲಿಯಾದರೆ, ಭದ್ರಪ್ಪನಾಯಕನು ವಾರಸುದಾರಿಕೆಗಾಗಿ ನಡೆದ ಯುದ್ಧದಲ್ಲಿ ಅಸುನೀಗಿದನು. ೧ನೇ ಸೋಮಶೇಖರನ ಕೊಲೆಯಾಗಲು ವಾರಸುದಾರಿಕೆಗಾಗಿ ಬೇಕಾದಷ್ಟು ಕಲಹಗಳು ಭುಗಿಲೆದ್ದುವು. ಚೆನ್ನಮ್ಮಾಜಿಯ ಕಾಲದಲ್ಲೂ ಪತಿಯ ಭಾವಮೈದುನನು ಸಿಂಹಾಸನವನ್ನು ಆಕ್ರಮಿಸಲು ವಿಫಲ ಪ್ರಯತ್ನ ಮಾಡಿದನು.[೨೦]

ಹೀಗೆ ಸಿಂಹಾಸನಕ್ಕೆ ಗಂಡಾಂತರಗಳಿದ್ದರೂ, ರಾಜತ್ವವು ಆ ಕಾಲದಲ್ಲಿ ಅನುಗ್ರಹಶೀಲವೂ ಜ್ಞಾನ ಸಂಪನ್ನವೂ ಅದ ನಿರಂಕುಶಾಡಳಿತವಾಗಿತ್ತು. ಅಧಿಕಾರ ಮತ್ತು ರಾಜವೈಭವದ ಅನುಭೋಗಗಳಿಗೆ ಪೂರ್ವಾಗತ್ಯವಾಗಿ ರಾಜನು ಪ್ರಜೆಗಳಿಗೆ ತನ್ನ ಕರ್ತವ್ಯಗಳನ್ನು ಧಾರ್ಮಿಕವಾದ ಮನೋಧರ್ಮದಿಂದ ನಿರ್ವಹಿಸಬೇಕಾಗಿತ್ತು. ಸಮಾಜದ ಅತ್ಯುನ್ನತವಾದ ಒಳಿತು ಮತ್ತು ಪ್ರಜೆಗಳ ಸಂಪೂರ್ಣ ತೃಪ್ತಿ ಅದರಿಂದ ಒದಗುತ್ತಿತ್ತು.

ಮಂಡಳಿ

ರಾಜ್ಯಾಡಳಿತ ವ್ಯವಸ್ಥೆಯಲ್ಲಿ ರಾಜನಿಗೆ ಸಾಂಪ್ರದಾಯಿಕವಾದ ರೀತಿಯಲ್ಲಿ ನೆರವು ನೀಡುತ್ತಿದ್ದ ಮಂಡಳಿ (ಮಂತ್ರಾಲೋಚನ ಸಭೆ) ಮುಖ್ಯವಾದ ಒಂದು ಆಧಾರಸ್ತಂಭವಾಗಿತ್ತು. ಅದರ ರಚನೆ, ಲಕ್ಷಣಗಳು, ಕರ್ತವ್ಯಗಳು ಪ್ರಚಲಿತ ರಾಜಕಾರಣ ಸನ್ನಿವೇಶಗಳನ್ನವಲಂಬಿಸಿ ಕಾಲದಿಂದ ಕಾಲಕ್ಕೆ ಬೇರೆಯಾಗುತ್ತಿದ್ದುವು. ಶ್ರೀರಂಗಪಟ್ಟಣವನ್ನು ವಶಪಡಿಸಿಕೊಂಡ ಸಂದರ್ಭದಲ್ಲಿ ಉಂಟಾದ ತೊಂದರೆಗಳ ನಿವಾರಣೆಗಾಗಿ ರಾಜಒಡೆಯರ ಕೈಕೆಳಗೆ ಅವರ ಸೋದರರಾದ ಬೆಟ್ಟದ ಚಾಮರಾಜ ಒಡೆಯರ್, ಚೆನ್ನರಾಜ ಮತ್ತು ದೇವರಾಜರಸರು ಒಂದು ಸಲಹಾ ಮಂಡಳಿಯನ್ನು ರೂಪಿಸಿಕೊಂಡರು. ಹೊನ್ನಲಗೆರೆ ತಾಮ್ರಫಲಕ ಶಾಸನವೊಂದು ೫ನೇ ಚಾಮರಾಜ ಒಡೆಯನ ಮಂತ್ರಿಯೆಂದು ರಾಮಾ(ನು)ಜೀಯ ವಿರೂಪಾಕ್ಷೈಯ ಗೋವಿಂದಯ್ಯನನ್ನು ಉಲ್ಲೇಖಿಸುತ್ತದೆ. ರಾಜಕೀಯ ಸಲಹೆ ಕೊಡುವುದರಲ್ಲಿ ಪರಿಣತನಾದ, ಮಂತ್ರೀಶ ತಿಮ್ಮರಸ, ಹಣಕಾಸು ಸಚಿವ ಲೆಪ್ಪವರಸ, ಬೊಕ್ಕಸದ ಬಸವೈಯ, ಲಿಪಿಕಾರ ನರಸಿಂಹ ಉಪಾಧ್ಯಾಯ, ಶ್ರೀರಂಗಪಟ್ಟಣದ ನಗರಮುಖ್ಯ ಲಿಂಗೇಗೌಡ, ಸಾಲಿಗ್ರಾಮದಲ್ಲಿದ್ದ ಪ್ರತಿನಿಧಿ ಕೊಟ್ಟೂರಯ್ಯ ಇವರೆಲ್ಲರೂ ಕಂಠೀರವನಿಗೆ ಸಹಾಯ ಮಾಡುತ್ತಿದ್ದ ಮಂತ್ರಿಗಳು ಮತ್ತು ಅಧಿಕಾರಿಗಳು. ಇವೇ ಮಂತ್ರಿಗಳು ಮತ್ತು ಅಧಿಕಾರಿಗಳು ದೇವರಾಜ ಒಡೆಯರಿಗೂ ಸೇವೆಯನ್ನು ಮುಂದುವರಿಸಿದ್ದರು. ಲಿಪಿಕನ ಹುದ್ದೆಗೆ ಜೈನ ಲಕ್ಷ್ಮೀಪತಿ ಎನ್ನುವವನನ್ನು ನೇಮಕ ಮಾಡಲಾಗಿತ್ತು ಎಂದು ತೋರುತ್ತದೆ. ಚಿಕ್ಕದೇವರಾಜ ಒಡೆಯರು ಒಂದು ಮಂತ್ರಿ ಪರಿಷತ್ತನ್ನು - ಸಚಿವ ಸಂಪುಟವನ್ನು-ರಚಿಸಿಕೊಂಡಿದ್ದರು. ಜೈನಬ್ರಾಹ್ಮಣ ವಿಶಾಲಾಕ್ಷ ಪಂಡಿತನು ಅದರಲ್ಲಿ ಪ್ರಧಾನಮಂತ್ರಿಯಾಗಿದ್ದನು. ಶ್ರೀವೈಷ್ಣವ ಬ್ರಾಹ್ಮಣರಾದ ತಿರುಮಲೆ ಅಯ್ಯಂಗಾರ್, ಚಿಕುಪಾಧ್ಯಾಯ, ವೀರಶೈವ (ಆರಾಧ್ಯ)ಬ್ರಾಹ್ಮಣ ಷಡಕ್ಷರಯ್ಯ, ಸ್ಮಾರ್ತ ಬ್ರಾಹ್ಮಣನಾಗಿದ್ದ ಕರಣಿಕ ಲಿಂಗಣ್ಣಯ್ಯ ಇವರು ಸದಸ್ಯರಾಗಿದ್ದರು. ಇದು ಸಾಕಷ್ಟು ಸಮರ್ಥವಾದ ಅಂಗವಾಗಿತ್ತು. ರಾಜನಿಗೆ ಆಡಳಿತದ ಎಲ್ಲಾ ವ್ಯವಹಾರಗಳಲ್ಲಿ ಬಹು ಸಕ್ರಿಯವಾದ ನೆರವನ್ನು ನೀಡುತ್ತಿದ್ದಿತು. ಶಿವತತ್ವರತ್ನಾಕರದಲ್ಲಿ ವಿಧಿಸಿದ ಕಟ್ಟಳೆಗಳಿಗನುಗುಣವಾಗಿ ಕೆಳದಿಯ ಅರಸರು ತಮ್ಮ ಮಂಡಳಿಯನ್ನು ರಚಿಸಿಕೊಂಡಿದ್ದರು. ಅದರಲ್ಲಿ ರಾಜಗುರು, ಪ್ರಧಾನಿ, ಹುಜೂರ್ ಪ್ರಧಾನಿ, ಸರ್ವಾಧಿಕಾರಿ, ದಳವಾಯಿ, ಬೊಕ್ಕಸದ ಮಂತ್ರಿ ಮತ್ತು ಮಂತ್ರಿ ಇರುತ್ತಿದ್ದರು. ಅಲ್ಲದೆ ನಿರ್ದಿಷ್ಟ ಖಾತೆಗಳಿಲ್ಲದ ಸಚಿವರೂ ಕೆಲವು ಗಣ್ಯರೂ ಇರುತ್ತಿದ್ದರು. ವೀರಭದ್ರನಾಯಕನ ಚಿಕ್ಕಪ್ಪ ೨ನೇ ವೆಂಕಟಪ್ಪನಾಯಕನು ಅವನ ಬೊಕ್ಕಸದ ಮಂತ್ರಿಯಾಗಿದ್ದನು ಎಂಬುದು ಸ್ವಾರಸ್ಯವಾದ ವಿಚಾರವಾಗಿದೆ. ಚೆನ್ನಮ್ಮಾಜಿಯು ಶ್ರೀನಿವಾಸಯ್ಯನೆಂಬುವನ ಜೊತೆಗೆ ಇನ್ನೂ ಇಬ್ಬರು ಬೊಕ್ಕಸದ ಮಂತ್ರಿಗಳನ್ನು ಹೊಂದಿದ್ದಂತೆ ತೋರುತ್ತದೆ. ಪ್ರಧಾನಿ ಅವಿನಹಳ್ಳಿ ನರಸಪ್ಪಯ್ಯನನ್ನು ರಾಜ್ಯದಲ್ಲಿ ಶಾಂತಿ ಮತ್ತು ಸುವ್ಯವಸ್ಥೆಗಳನ್ನು ಕಾಪಾಡಲು ಅಸಮರ್ಥನಾದುದರಿಂದ, ತೆಗೆದುಹಾಕಿ ಅವನ ಬದಲಿಗೆ ಗುರುಬಸಪ್ಪದೇವರು ಎನ್ನುವವನನ್ನು ನೇಮಕ ಮಾಡಿದಳು. ಮಂತ್ರಿಗಳನ್ನು ಕೇವಲ ಅರ್ಹತೆಯ ಆಧಾರದಿಂದ ಆರಿಸಿಕೊಳ್ಳಲಾಗುತ್ತಿತ್ತು. ವಿಷಯಗಳನ್ನು ಸಭೆಯಲ್ಲಿ ಆಮೂಲಾಗ್ರವಾಗಿ ತಿಂಗಳುಗಟ್ಟಲೆ ಚರ್ಚೆ ಮಾಡಿ ಕೊನೆಗೆ ಖಚಿತವಾದ ನಿರ್ಣಯಗಳನ್ನು ಕೈಗೊಳ್ಳುತ್ತಿದ್ದರು.[೨೨] ಈ ಮಂಡಳಿಯು ವಾಸ್ತವ ಆಡಳಿತಕ್ಕಿಂತ ಹೆಚ್ಚು ಮಟ್ಟಿಗೆ ಒಂದು ಸಲಹಾ ಮಂಡಳಿಯಾಗಿ ಕಾರ್ಯನಿರ್ವಹಿಸುತ್ತಿದ್ದಿತು. ಆದ್ದರಿಂದ ಅದು ಈ ಕಾಲಾವಧಿಯಲ್ಲಿ ರಾಜನಿಗೆ ಅಧೀನವಾಗಿತ್ತು.

ಪೌರ ಮತ್ತು ನ್ಯಾಯಾಡಳಿತ

ಪೌರಾಡಳಿತವನ್ನು ನೋಡಿಕೊಳ್ಳಲು ಒಂದು ಅಧಿಕಾರಿಗಳ ಶ್ರೇಣಿಯಿತ್ತು. ಕರಣಿಕ (ಕಂದಾಯದ ಲೆಕ್ಕಿಗ)ನೇ ದೇವಾಲಯಗಳ ಆಡಳಿತವನ್ನೂ ನೋಡಿಕೊಳ್ಳುತ್ತಿದ್ದನು. ಬೊಕ್ಕಸದ ಅಧಿಕಾರಿ, ತೆರಿಗೆ

ಸಂಗ್ರಾಹಕರು, ಠಾಣಾದಾರರು (ವಿಭಾಗೀಯ ಪೌರ ಮತ್ತು ಸೈನ್ಯ ಇಲಾಖೆಗಳ ಉಸ್ತುವಾರಿ ಹೊತ್ತವರು), ಹೋಬಳಿದಾರರು, ಓಲೇಕಾರರು(ಪತ್ರಗಳನ್ನು ಒಯ್ಯುವವರು) ಮತ್ತಿತರ ಅಧಿಕಾರಿಗಳಿದ್ದರು. ನಗರಮುಖ್ಯ (ಮೇಯರ್), ಖಜಾನೆಯ ಅಧಿಕಾರಿ, ಲೆಕ್ಕಪತ್ರ ತಜ್ಞ, ಕರಣಿಕ ಹಾಗೂ ಇತರ ಮಾಮೂಲು ಅಧಿಕಾರಿಗಳೇ ಇರುತ್ತಿದ್ದರು. ಕಂಠೀರವನು ಟಂಕಸಾಲೆಗಳನ್ನು ನೋಡಿಕೊಳ್ಳಲು ಒಬ್ಬ ಅಧಿಕಾರಿಯನ್ನು ನೇಮಿಸಿದ್ದನು. ಇತರ ಕೆಲವು ಖಾಸಾ ಸೇವಕರು ಅವನ ತಾಂಬೂಲದ ಚೀಲ ಒಯ್ಯುವವನು, ಪೀಕದಾನಿ ಒಯ್ಯುವವನು, ಔಪಚಾರಿಕ ಉಡುಗೆ ತೊಡುಗೆಗಳನ್ನೂ ಖಡ್ಗವನ್ನೂ ತರುವವನು, ಆಭರಣಗಳನ್ನು ತೆಗೆದು ಕೊಡುವವನು, ಕೊಳಲು ನುಡಿಸುವವನು, ಕವಿ, ವಿದೂಷಕ, ಕನ್ನಡಿ-ಚೌರಿ-ಬೀಸಣಿಗೆಗಳನ್ನು ಹಿಡಿಯಲು ಸೇವಕರು, ಅವಸರದ ಹೋಬಳಿಯ ಮುಖ್ಯಸ್ಥ (ಅರಮನೆಯ ಅವಸರದ ಕರೆಗಳಿಗೆ ಗಮನ ಕೊಡುವ ವಿಭಾಗ), ಖಾಸಗಿ ಸೇವಕರು ಮತ್ತು ಜವಾನರನ್ನು ನೇಮಿಸಲಾಗಿತ್ತು. ಕೆಳದಿ ರಾಜ್ಯದಲ್ಲಿಯೂ ಸಚಿವಾಲಯದಲ್ಲಿ ಒಬ್ಬ ಕಾರ್ಯದರ್ಶಿ, ಅವನ ಕೈಕೆಳಗೆ ಅನೇಕ ಅಧಿಕಾರಿಗಳು, ಇತರ ನೌಕರರು, ಕರಣಿಕ, ವಾಣಿಜ್ಯ ಸಂಬಂಧವಾದ ವ್ಯವಹಾರಗಳನ್ನು ನೋಡಿಕೊಳ್ಳುವ ಅಧಿಕಾರಿಗಳು ಇರುತ್ತಿದ್ದರು. ಆಸ್ಥಾನದ ವಣಿಕರು, ರಾಯಭಾರಿಗಳು, ಸುಂಕದ ಅಧಿಕಾರಿಗಳು ಇರುತ್ತಿದ್ದರು. ಇವರೆಲ್ಲರೂ ನೇರವಾಗಿ ರಾಜನಿಗೆ ಉತ್ತರ ಕೊಡಬೇಕಾಗಿತ್ತು.[೨೨]

ಮೈಸೂರಿನಲ್ಲಿ ರಾಜಒಡೆಯರ ಕಾಲದಿಂದ ಚಿಕ್ಕದೇವರಾಜ ಒಡೆಯರ ಕಾಲದವರೆಗೂ ಮೂಲ ಪಾಳೇಗಾರ ಆಡಳಿತ ಪದ್ಧತಿಯೇ ಮುಂದುವರಿದಿತ್ತು. ರಾಜ್ಯಗಳನ್ನು ಗೆಲ್ಲುವುದು, ಸೇರಿಸಿಕೊಳ್ಳುವುದು, ಮತ್ತು ತಮ್ಮ ರಾಜ್ಯದ ಗಡಿಗಳ ವಿಸ್ತಾರ ಇವೇ ಅವರ ಮುಖ್ಯ ಆಸಕ್ತಿಗಳಾಗಿದ್ದುವು; ಉದ್ದೇಶಗಳೂ ಚಟುವಟಿಕೆಗಳೂ ಅವೇ ಆಗಿದ್ದುವು. ಅವರು ಶ್ರೀರಂಗಪಟ್ಟಣದ ಕಾರ್ಯಕರ್ತರೂ ಆಗಿದ್ದುದರಿಂದ ವಿಜಯನಗರದ ಆಡಳಿತ ಪದ್ಧತಿಯನ್ನು ಬೆಳೆಯುತ್ತಿದ್ದ ರಾಜ್ಯದ ಅಗತ್ಯಗಳಿಗನುಗುಣವಾಗಿ ಅಲ್ಪಸ್ವಲ್ಪ ಬದಲಾವಣೆಯೊಂದಿಗೆ ಅಳವಡಿಸಿಕೊಂಡರು. ರಾಜಒಡೆಯರು ಸೂಕ್ತ ಅಧಿಕಾರಿಗಳನ್ನು ನೇಮಕಮಾಡಿ ರಾಜ್ಯದ ಶಾಂತಿಯುತ ಆಡಳಿತ ನಿರ್ವಹಣೆಗೆ ತಕ್ಕ ನಿಯಮ ನಿಬಂಧನೆಗಳನ್ನು ಹಾಕಿಕೊಟ್ಟರು. ಕಂಠೀರವ ನರಸರಾಜ ಒಡೆಯರು ಬೊಕ್ಕಸವನ್ನು ವ್ಯವಸ್ಥೆಗೊಳಿಸುವುದು, ಹಣಕಾಸಿನ ಕರಾರುವಾಕ್ಕಾದ ಲೆಕ್ಕಪತ್ರಗಳನ್ನಿಡುವುದು ಈ ಕಡೆಗೆ ಗಮನಕೊಟ್ಟರು. ನಾಣ್ಯಚಲಾವಣೆಯನ್ನು ಪುನರ್‌ವ್ಯವಸ್ಥೆಗೊಳಿಸಿದರು. ಸ್ವತಂತ್ರ ಟಂಕಸಾಲೆಗಳನ್ನು ಸ್ಥಾಪಿಸಿ ನಾಣ್ಯಗಳನ್ನು ಟಂಕಿಸಿದ ಕೀರ್ತಿಗೆ ಪಾತ್ರರಾದರು. ದೇವರಾಜ ಒಡೆಯರು ಆಡಳಿತ ವ್ಯವಸ್ಥೆಯಲ್ಲಿ ಅಂತಹ ಬದಲಾವಣೆಯನ್ನೇನೂ ಮಾಡಲಿಲ್ಲ. ಪಾಳೆಯಗಾರರಿಗೆ ಕೆಲವು ಜಹಗೀರು ಜೋಡಿ ಗ್ರಾಮಗಳನ್ನು ಕೊಟ್ಟು ಅವರೊಂದಿಗೆ ಉತ್ತಮ ಸಂಬಂಧಗಳನ್ನು ಸ್ಥಾಪಿಸಿಕೊಂಡರು. ಇತರರಿಂದ ಕ್ರಮತಪ್ಪದೆ ಕಪ್ಪಕಾಣಿಕೆಗಳನ್ನು ವಸೂಲು ಮಾಡಿದರು. ಮರಾಠಾ ರಾಜ್ಯಾಡಳಿತದೊಂದಿಗೆ ಅವರಿಗೆ ತುಸು ಸಂಪರ್ಕವೇರ್ಪಟ್ಟುದರ ಫಲವಾಗಿ ಇಲ್ಲಿಯೂ ಸುಂಕ ಕಾರಕೂನರು (ಸುಂಕ ವಸೂಲು ಮಾಡುವ ಗುಮಾಸ್ತರು), ರಾವುತರು ಮತ್ತು ರಾಣುವೆಯರನ್ನು (ಪೌರ ಸಂಸ್ಥೆಗಳನ್ನು ರಕ್ಷಿಸುವ ಸಶಸ್ತ್ರ ದಳಗಳು) ಆಡಳಿತ ವ್ಯವಸ್ಥೆಗೆ ಸೇರಿಸಲಾಯಿತು.[೨೩]

ಚಿಕ್ಕದೇವರಾಜ ಒಡೆಯರು ಆಡಳಿತ ಸೂತ್ರಗಳನ್ನು ತಮ್ಮ ಕೈಗೆತ್ತಿಕೊಳ್ಳುವ ವೇಳೆಗೆ ಮೈಸೂರು ರಾಜ್ಯವು ವಿಜಯನಗರ ಸಾಮ್ರಾಜ್ಯದ ಅಧೀನತೆಯ ನೊಗವನ್ನು ಕಳಚಿಕೊಂಡಿತ್ತು. ದೇವರಾಜರ ಆಳಿಕೆಯ ಕೊನೆಯ ವೇಳೆಗೆ ಪಾಳೆಯಗಾರರ ಸಮಸ್ಯೆಗಳೂ ಪರಿಹಾರವಾಗಿದ್ದುವು. ಮರಾಠರೊಂದಿಗೆ ಆಗಾಗ ಸಂಪರ್ಕವಿರುತ್ತಿತ್ತು. ದಖ್ಖನಿ ಮಹಮ್ಮದೀಯರು ಮತ್ತು ಮೊಗಲರೊಂದಿಗೂ ಸಂಪರ್ಕಗಳಿದ್ದುವು.[೨೪] ದಂಗೆಕೋರ ಪಾಳೆಯಗಾರರನ್ನು ನಿಯಂತ್ರಿಸುವ ದೃಷ್ಟಿಯಿಂದ ಸ್ಥಾಪನೆಗೊಂಡಿದ್ದ ಹಿಂದಿನ ಆಡಳಿತ ವ್ಯವಸ್ಥೆಯನ್ನು ಈಗ ಪ್ರಚಲಿತ ಸಂಕೀರ್ಣ ಪರಿಸ್ಥಿತಿಗೆ ಹೆಚ್ಚು ಹೊಂದಿಕೊಳ್ಳುವ ಹಾಗೆ ಅದಕ್ಕೆ ಹೊಸ ಆಕಾರ ಕೊಡಬೇಕಾಗಿತ್ತು. ಗೆದ್ದ ಎಲ್ಲ ರಾಜ್ಯಗಳನ್ನೂ ಕ್ರೋಢೀಕರಿಸಿ, ರಾಜಕೀಯ ಸ್ಥಿರತೆಯನ್ನೂ, ಶಾಂತಿ ಮತ್ತು

ಅಭ್ಯುದಯಗಳ ಕಾಲವನ್ನೂ ತೊಡಗಬೇಕಾಗಿದ್ದುದರಿಂದ ಅದನ್ನು ಭದ್ರವಾದ ತಳಹದಿಯ ಮೇಲೆ ಸ್ಥಾಪಿಸಬೇಕಾಗಿತ್ತು. ಚಿಕ್ಕದೇವರಾಜರು ಮೊದಲು ಕೆಲವು ಪಾಳೆಯಗಾರರಿಗೆ ಜಹಗೀರುಗಳನ್ನೂ ಉಂಬಳಿಗಳನ್ನೂ ಕೊಟ್ಟು, ಇತರರಿಂದ ಬರಬೇಕಾದ ಖಂಡಣೆಯನ್ನು ನಿಗದಿಪಡಿಸಿದರು. ಅನಂತರ ಅದುವರೆಗೆ ಗೆದ್ದಿದ್ದ ಮತ್ತು ಒತ್ತುವರಿ ಮಾಡಿಕೊಂಡಿದ್ದ ಭೂಪ್ರದೇಶವೆಲ್ಲವನ್ನೂ ಆಳ ಆಡಳಿತೀಯ ಘಟಕಗಳನ್ನು (ಗಡಿ) ಸ್ಥಾಪಿಸಿದರು. ಪ್ರತಿಯೊಂದು ಘಟಕದಲ್ಲೂ ಒಬ್ಬ ಸುಬೇದಾರ, ಒಬ್ಬ ಮ್ಯಾನೇಜರು, ಒಬ್ಬ ಸಹಾಯಕ (ಚಿಕ್ಕ ಪಾರುಪತ್ಯಗಾರ), ಮೂವರು ದಾಖಲೆ ಬರೆಯುವವರು, ಆರು ಜನ ಲೆಕ್ಕಿಗರು (ಗುಮಾಸ್ತೆಯರು), ಒಬ್ಬ ಲಿಪಿಕಾರ, ಒಬ್ಬ ಅಂಚೆಯವ (ಅಂಚೆ ಹರಿಕಾರ) ಇವರು ಮುಖ್ಯ ಆಡಳಿತೀಯ ಸಿಬ್ಬಂದಿಯಾಗಿದ್ದರು. ಅವರ ಕೈಕೆಳಗೆ ಇತರ ಕಿರಿಯ ನೌಕರರಾದ ಮುಖ್ಯ ಸೇವಕ (ದಫೇದಾರ), ಕಾಲೂಳಿಗದವರು, ಖಜಾನೆಯ ನೌಕರರು (ಹಸ್ತಾಂತ್ರಿ, ಗೊಲ್ಲ), ತಳವಾರ, ಇಬ್ಬರು ಚಾವಡಿ ಕಾವಲುಗಾರರು, ಒಬ್ಬ ದೀವಟಿಗೆಯ ಜನ ಇರುತ್ತಿದ್ದರು. ಇವರ ಸಂಖ್ಯೆಯು ಪ್ರತಿಘಟಕದ ಸ್ಥಾನಮಾನ ಮತ್ತು ಅಗತ್ಯಗಳಿಗನುಗುಣವಾಗಿ ಬದಲಾಗುತ್ತಿತ್ತು.

ರಾಜನಿಗೆ ಸಂಬಂಧಿಸಿದ ಜಮೀನು ಮತ್ತು ಆಸ್ತಿಯನ್ನು ನೋಡಿಕೊಳ್ಳಲು ಒಬ್ಬ ವಿಶೇಷ ಸುಬೇದಾರನನ್ನು ನೇಮಿಸಲಾಗಿತ್ತು. ಆ ಭೂಮಿಯ ಸಾಗುವಳಿಯನ್ನು ಅವನು ಉಸ್ತುವಾರಿ ನೋಡಿಕೊಳ್ಳಬೇಕಾಗಿತ್ತು. ಅವನ ಕೈಕೆಳಗೆ ಶಿರಸ್ತೆದಾರ, ಲೆಕ್ಕಿಗ, ನಗದು ಮತ್ತು ವಸ್ತುರೂಪದ ಆದಾಯಗಳ ಲೆಕ್ಕಪತ್ರಗಳನ್ನು ಬರೆದಿಡಲು ಲಿಪಿಕರು ಇರುತ್ತಿದ್ದರು. ಕಂದಾಚಾರ ಸೇವೆಯಿಂದ ಪಡೆದ ಕಿಲ್ಲೇದಾರ, ಠಾಣಾದಾರ ಮೊದಲಾದ ಅಧಿಕಾರಿಗಳ ಕಾವಲು ಕೆಲಸದ ಸೇವಾ ವಿಭಾಗವೂ ಇತ್ತು. ಈ ನೇಮಕಾತಿಗಳನ್ನುಮಾಡಲು ಸಂಬಂಧಿತ ವ್ಯಕ್ತಿಗಳ ಬುದ್ಧಿಶಕ್ತಿ, ಪ್ರಾಮಾಣಿಕತೆ ಮತ್ತು ದಕ್ಷತೆಗಳನ್ನು ಆಧಾರವಾಗಿ ಇಟ್ಟುಕೊಳ್ಳುತ್ತಿದ್ದರು. ಈ ನೌಕರರು ಮತ್ತು ಅಧಿಕಾರಿಗಳು ಹೊಂದಿದ್ದ ಜವಾಬ್ದಾರಿಗಳ ಆಧಾರದ ಮೇಲೆ ಅವರ ವೇತನವನ್ನು ನಗದಿ ಪಡಿಸುತ್ತಿದ್ದರು. ಅದರಲ್ಲಿ ಅರ್ಧವನ್ನು ನಗದಾಗಿಯೂ ಇನ್ನರ್ಧವನ್ನು ವಸ್ತುರೂಪದಲ್ಲೂ ಕೊಡುತ್ತಿದ್ದರು. ಕಂದಾಚಾರದ ಓಲೇಕಾರರಿಗೆ ವೇತನ ಅರ್ಧವರಹದಿಂದ ಒಂದು ವರಹ, ನಗದು ಮತ್ತು ವಸ್ತು ಸಮಪ್ರಮಾಣದಲ್ಲಿ. ಈ ವೆಚ್ಚವನ್ನು ಅವರಿಗೆ ಕೊಟ್ಟು, ಜಮೀನಿನ ಉತ್ಪನ್ನದಿಂದ ನಿರ್ವಹಿಸಲಾಗುತ್ತಿತ್ತು. ಕಾಣಿಕೆ ಕಡ್ಡಾಯ (ಕಡ್ಡಾಯವಾಗಿ ಕೊಡಲೇಬೇಕಾದ ತೆರಿಗೆ), ಮನೆದೆರಿಗೆ (ಮನೆಗಂದಾಯ) ಮೊದಲಾದ ತೆರಿಗೆಗಳ ವಿನಾಯಿತಿ ತೋರಿಸಿ ಅಧಿಕಾರಿಗಳಿಗೆ ಅವರ ಕೆಲಸವು ಆಕರ್ಷಕವಾಗುವಂತೆ ಮಾಡಲಾಗುತ್ತಿದ್ದಿತು.

ಮೊಗಲ್ ಚಕ್ರವರ್ತಿ ಔರಂಗಜೇಬನ ಆಸ್ಥಾನಕ್ಕೆ ಕಳುಹಿಸಿದ್ದ ತಮ್ಮ ಸುಪ್ರಸಿದ್ಧ ರಾಯಭಾರ ನಿಯೋಗವು ಹಿಂದಿರುಗಿದ ಸ್ವಲ್ಪದರಲ್ಲೇ ಚಿಕ್ಕದೇವರಾಜ ಒಡೆಯರು ಇನ್ನಷ್ಟು ಆಡಳಿತೀಯ ಸುಧಾರಣೆಗಳನ್ನು ಮಾಡಿದರು. ಆಡಳಿತವು ಆಧುನಿಕವೂ, ಪರಿಣಾಮಕಾರಿಯೂ, ಶಾಶ್ವತವೂ ಆಗಿರುವಂತೆ ಮೊಗಲ್ ಮಾದರಿಯಲ್ಲಿ ಪರಿಷ್ಕರಿಸಲು ಪ್ರಯತ್ನಿಸಿದರು. ಅದರ ಫಲವೇ ಈ ಕೆಳಕಂಡ ಸುಪ್ರಸಿದ್ಧ ಹದಿನೆಂಟು ವಿಭಾಗಗಳ, ಚಾವಡಿಗಳ ಸ್ಥಾಪನೆ:

೧. ನಿರೂಪದ ಚಾವಡಿ: ಸಾರ್ವಜನಿಕರಿಂದ ಮನವಿಗಳನ್ನೂ ಅಹವಾಲುಗಳನ್ನೂ ಸ್ವೀಕರಿಸುವ, ದಾಖಲು ಪಡಿಸುವ, ಅಧಿಕೃತ ವರದಿಗಳನ್ನು ತಯಾರಿಸುವ, ಖಚಿತ ಆದೇಶಗಳ ರೂಪದಲ್ಲಿ ಅವುಗಳ ವಿಲೇವಾರಿ ಮಾಡುವ ಇಲಾಖೆ (ನಿರೂಪ).

೨. ಆಯಕಟ್ಟಿನ ಚಾವಡಿ: ಸಿವಿಲ್ ಮತ್ತು ಮಿಲಿಟರಿ ಲೆಕ್ಕ ಪತ್ರ ಇಲಾಖೆ. ಆಳ ಆಡಳಿತೀಯ ಘಟಕಗಳಿಗೆ, ಕೇಂದ್ರ ಬೊಕ್ಕಸಕ್ಕೆ ಹಾಗೂ ಅರಮನೆಯ ಆಯವ್ಯಯಕ್ಕೆ ಸಂಬಂಧಪಟ್ಟ ಲೆಕ್ಕಗಳನ್ನಿಡುವ ವಿಭಾಗ.

೩. ಮೈಸೂರು ಹೋಬಳಿ ವಿಚಾರದ ಚಾವಡಿ: ಕಾವೇರಿನದಿಯ ದಕ್ಷಿಣದ ಆಡಳಿತೀಯ ಘಟಕಗಳ ವ್ಯವಹಾರದ ಮೇಲೆ ವ್ಯಾಪ್ತಿಯುಳ್ಳ ವಿಚಾರಣಾ ಇಲಾಖೆ.

೪. ಪಟ್ಟಣದ ಹೋಬಳಿ ವಿಚಾರದ ಚಾವಡಿ:. ಕಾವೇರಿನದಿಯ ಉತ್ತರದ ಆಡಳಿತೀಯ ಘಟಕಗಳ ವ್ಯವಹಾರದ ಮೇಲೆ ವ್ಯಾಪ್ತಿಯುಳ್ಳ ವಿಚಾರಣಾ ಇಲಾಖೆ.

೫. ಸೀಮೆಯ ಕಂದಾಚಾರದ ಚಾವಡಿ: ಆಡಳಿತ ಘಟಕಗಳಲ್ಲಿ ಪೌರ ಹಾಗೂ ಮಿಲಿಟರಿ ಸ್ಥಾವರಗಳ ಲೆಕ್ಕಪತ್ರಗಳನ್ನಿಡುವುದು; ಆಯಾ ಘಟಕಗಳನ್ನು ಸಜ್ಜುಗೊಳಿಸಲು ಅಗತ್ಯವಾದ ಶಸ್ತ್ರಾಸ್ತ್ರಗಳು ಮತ್ತು ಮದ್ದುಗುಂಡುಗಳ ವ್ಯವಹಾರ.

೬. ಬಾಗಿಲ ಕಂದಾಚಾರದ ಚಾವಡಿ: ಮಿಲಿಟರಿ ಮತ್ತು ಪೌರ ಹುಜೂರ್ ಅಧಿಕಾರಿಗಳು ಮತ್ತು ಪಾಳೆಯಗಾರರಿಗೆ ಸಂಬಂಧಪಟ್ಟ ಲೆಕ್ಕಪತ್ರಗಳನ್ನಿಡುವ ಇಲಾಖೆ.

೭. ಸುಂಕದ ಚಾವಡಿ: ಸರಕು ಸಾಗಾಣಿಕೆಯ ದಾರಿಸುಂಕದ ಒಟ್ಟು ಲೆಕ್ಕ, ಆಮದು ಮತ್ತು ರಫ್ತು, ತೆರಿಗೆಗಳು ಇತ್ಯಾದಿ.

೮. ಪೊಮ್ಮಿನ ಚಾವಡಿ: ವಿಶೇಷವಾದೊಂದು ತೆರಿಗೆ ಇಲಾಖೆ. ಬ್ರಾಹ್ಮಣರು ಮತ್ತು ಅಧಿಕಾರಿಗಳೇ ಮೊದಲಾದ ವಿಶೇಷ ವರ್ಗದ ಜನರು ಕೊಳ್ಳುವ ಮತ್ತು ಮಾರುವ ಸರಕುಗಳ ಮೇಲೆ ನಿರ್ದಿಷ್ಟ ಮೊತ್ತದ ತೆರಿಗೆ ಸಂಗ್ರಹಿಸುವ ಇಲಾಖೆ.

೯. ತೋಡಾಯದ ಚಾವಡಿ: ಶ್ರೀರಂಗಪಟ್ಟಣದ ಕೆಲವು ನಿರ್ದಿಷ್ಟ ವರ್ಗಗಳಿಂದ ಮಾತ್ರ ಸುಂಕಗಳನ್ನಾಗಿ ಪ್ರವೇಶತೆರಿಗೆಯನ್ನು ವಸೂಲು ಮಾಡುವುದಕ್ಕೆ ಸಂಬಂಧಿಸಿದ ಇಲಾಖೆ.

೧೦. ಪಟ್ಟಣದ ಹೋಬಳಿ ಅಷ್ಟಗ್ರಾಮದ ಚಾವಡಿ: ಚಿಕ್ಕದೇವರಾಜಸಾಗರ ನಾಲೆಯ ಕೆಳಗೆ ಹೊಸದಾಗಿ ರೂಪಿಸಿದ ಎಂಟು ಹೋಬಳಿಗಳ (ಗಡಿಯ ಉಪವಿಭಾಗಗಳು) ಅಧಿಕಾರವ್ಯಾಪ್ತಿಯುಳ್ಳ ಇಲಾಖೆ.

೧೧. ಮೈಸೂರು ಹೋಬಳಿ ಅಷ್ಟಗ್ರಾಮದ ಚಾವಡಿ: ದೇವರಾಜನಾಲಾ ಕೆಳಗೆ ಹೊಸದಾಗಿ ರೂಪಿಸಿದ ಎಂಟು ಹೋಬಳಿಗಳ ಮೇಲೆ ಅಧಿಕಾರ ವ್ಯಾಪ್ತಿಯುಳ್ಳ ಇಲಾಖೆ. ಈ ಎರಡೂ ಇಲಾಖೆಗಳಿಗೆ ಕಾವೇರಿ ಮತ್ತು ಹೇಮಾವತಿ ನದಿಗಳ ಅಣೆಕಟ್ಟುಗಳನ್ನೂ ನಾಲೆಗಳನ್ನೂ ನೋಡಿಕೊಳ್ಳುವುದು, ದುರಸ್ತಿಪಡಿಸುವುದು, ಅಲ್ಲಿ ಬೆಳೆದ ಬೆಳೆಯ ಅರ್ಧಪಾಲು ಸರಕಾರಕ್ಕೆ ಬರುವಂತೆ ನೋಡಿಕೊಳ್ಳುವುದು, ಅದರ ಲೆಕ್ಕಪತ್ರ ವಿವರ ಇತ್ಯಾದಿ ಹೊಣೆಗಾರಿಕೆಗಳು ಸೇರಿದ್ದುವು.

೧೨. ಬೆಣ್ಣೆಯ ಚಾವಡಿ: ಅರಮನೆಗೆ ಸಂಬಂಧಿಸಿದ ದನಕರುಗಳ ಸಾಕಾಣಿಕೆ, ಪ್ರತಿದಿನವೂ ಡೈರಿ ಉತ್ಪನ್ನಗಳ ಸಂಗ್ರಹಣೆ ಮತ್ತು ವಿನಿಯೋಗ, ಅವಕ್ಕೆ ಸಂಬಂಧಿಸಿದ ಲೆಕ್ಕಪತ್ರಗಳು.

೧೩. ಪಟ್ಟಣದ ಚಾವಡಿ: ಅರಮನೆ, ಕೋಟೆ ಕೊತ್ತಲಗಳು, ಬತ್ತೇರಿಗಳು, ಉಗ್ರಾಣಗಳು, ಆಯುಧಾಗಾರ ಇತ್ಯಾದಿಗಳನ್ನು ಸುಸ್ಥಿತಿಯಲ್ಲಿ ಇಟ್ಟುಕೊಳ್ಳುವ ಇಲಾಖೆ. ಶ್ರೀರಂಗಪಟ್ಟಣ ರಾಜಧಾನಿಯಲ್ಲಿ ಕಾನೂನು-ಸುವ್ಯವಸ್ಥೆಯನ್ನು ಕಾಪಾಡುವುದೂ ಈ ಇಲಾಖೆಯ ಹೊಣೆಯಾಗಿದೆ.

೧೪. ಬೇಹಿನ ಚಾವಡಿ: ಇದು ಗುಪ್ತಚಾರ ಇಲಾಖೆ. ಬೇರೆ ಬೇರೆ ಆಡಳಿತ ಘಟಕಗಳಿಂದ ಘಟನೆಗಳನ್ನು ಕುರಿತು ಮಾಹಿತಿಯನ್ನೂ ವರದಿಯನ್ನೂ ಅತ್ಯಂತ ತುರ್ತಾಗಿ ಅಂಚೆ ಹರಿಕಾರರ ಮೂಲಕ ರಾಜಧಾನಿಗೆ

ಕಳುಹಿಸುವುದು, ರಾಜಾಜ್ಞೆಗಳನ್ನು (ನಿರೂಪ) ಸ್ಥಳೀಯ ಆಡಳಿತ ಘಟಕಗಳಿಗೆ ತಲುಪಿಸುವುದು ಈ ಇಲಾಖೆಯ ಕರ್ತವ್ಯ.

೧೫. ಸಮ್ಮುಖದ ಚಾವಡಿ: ರಾಜಮನೆತನದ ಸದಸ್ಯರು, ಅರಮನೆಯ ವಿವಿಧ ವಿಭಾಗಗಳ ಅಧೀನ ಸಿಬ್ಬಂದಿ ಇವರುಗಳನ್ನು ಕುರಿತಾದ ಲೆಕ್ಕಪತ್ರಗಳನ್ನಿಡುವುದು, ನೇರವಾಗಿ ರಾಜನ ಗಮನಕ್ಕೆ ತರಬೇಕಾದ ವಿಷಯಗಳು ಈ ಇಲಾಖೆಯ ಹೊಣೆ.

೧೬. ದೇವಸ್ಥಾನದ ಚಾವಡಿ: ಎಲ್ಲಾ ದೇವಾಲಯಗಳ ನಿರ್ವಹಣೆ, ಅವುಗಳ ಆದಾಯ ಮತ್ತು ವೆಚ್ಚದ ಉಸ್ತುವಾರಿಗೆ ಸಂಬಂಧಿಸಿದ ಇಲಾಖೆ.

೧೭. ಕಬ್ಬಿಣದ ಚಾವಡಿ: ಕಬ್ಬಿಣದ ಗಣಿಗಳು, ಕಚ್ಚಾ ಕಬ್ಬಿಣವನ್ನು ಕೊಳ್ಳುವಿಕೆ, ಕಬ್ಬಿಣದ ಉಪಕರಣಗಳ ತಯಾರಿಕೆ ಮತ್ತು ಮಾರಾಟ ಇವುಗಳಿಗೆ ಸಂಬಂಧಿಸಿದ ವ್ಯವಹಾರಗಳ ಇಲಾಖೆ.

೧೮. ಹೊಗೆಸೊಪ್ಪಿನ ಚಾವಡಿ: ಶ್ರೀರಂಗಪಟ್ಟಣದಲ್ಲಿ ಹೊಗೆಸೊಪ್ಪು ಕೊಳ್ಳುವುದು ಮತ್ತು ಮಾರುವುದನ್ನು ಕುರಿತ ಇಲಾಖೆ.

ಈ ಒಂದೊಂದು ವಿಭಾಗದಲ್ಲೂ ಒಬ್ಬ ಮೇಲ್ವಿಚಾರಕನಾದ ಗೊತ್ತುಗಾರ, ಮೂವರು ದಫ್ತರದವರು (ದಾಖಲೆಗಳನ್ನಿಡುವವರು), ಗುಮಾಸ್ತೆಯರು, ರಾಯಸದವರು (ಬರೆಯುವವರು), ಒಬ್ಬ ದಫೇದಾರ, ಊಳಿಗದವರು, ಗೊಲ್ಲ, ಕಾವಲುಗಾರ ಮತ್ತು ದೀವಟಿಗೆಯವನು ಇರುತ್ತಿದ್ದರು. ಇವರುಗಳ ವೇತನವನ್ನು ಅವರ ಕರ್ತವ್ಯ ಮತ್ತು ಹೊಣೆಗಾರಿಕೆಗಳನ್ನವಲಂಬಿಸಿ ನಿಗದಿಮಾಡಲಾಗುತ್ತಿತ್ತು. ಅರ್ಧ ನಗದಾಗಿ ಮತ್ತು ಅರ್ಧ ವಸ್ತುರೂಪದಲ್ಲಿ ಪಾವತಿಯಾಗುತ್ತಿತ್ತು. ಅವರು ತಮ್ಮ ಹೊಣೆಗಾರಿಕೆಗಳನ್ನು ಚಾಚು ತಪ್ಪದೆ ನಿರ್ವಹಿಸಬೇಕಾಗಿತ್ತು. ಪ್ರತಿದಿನ ಬೆಳಗ್ಗೆ ರಾಜನಿಗೆ ಹಿಂದಿನ ದಿನ ತಮ್ಮ ಚಾವಡಿಯಲ್ಲಿ ಏನಾಯಿತು ಎಂಬುದರ ವರದಿ ಒಪ್ಪಿಸಿ ಆಜ್ಞೆಯನ್ನು ಪಡೆದುಕೊಳ್ಳಬೇಕಾಗಿತ್ತು. ಈ ಚಾವಡಿಗಳ ಕಾರ್ಯವಿಧಾನ, ಅಲ್ಲಿಗೆ ಸಂಬಂಧಿಸಿದ ಗೋಪ್ಯವಿವರಗಳನ್ನು ರಾಜನಿಗೆ ವರದಿಮಾಡಲು ಬೇಹುದಳವೊಂದಿರುತ್ತಿತ್ತು. ಅದರಿಂದಾಗಿ ಈ ಇಲಾಖೆಗಳ ಕಾರ್ಯ ವಿಧಾನದಲ್ಲಿ ಏನಾದರೂ ಕೊರತೆ ಕಂಡುಬಂದರೆ ಒಡನೆಯೇ ಸರಿಪಡಿಸಲು ಸಾಧ್ಯವಾಗುತ್ತಿತ್ತು.

ಈ ಹದಿನೆಂಟು ಇಲಾಖೆಗಳ ಸ್ಥಾಪನೆಯ ವಿಚಾರ ಮೊಗಲ್ ವ್ಯವಸ್ಥೆಯಿಂದ ರೂಪುದಳೆದದ್ದು. ಆದರೆ ಚಿಕ್ಕದೇವರಾಜ ಒಡೆಯರು ಅವುಗಳ ವಿವರಗಳನ್ನು ರೂಪಿಸಿ, ಸ್ಥಳೀಯ ಅಗತ್ಯಗಳಿಗೆ ಮತ್ತು ಪರಿಸ್ಥಿತಿಗಳಿಗೆ ಅಳವಡುವಂತೆ ಮಾಡಿದರು. ಹಿಂದೆ ಇದ್ದ ರಾಜಕೀಯ ಸಂಸ್ಥೆಗಳನ್ನು ಪರಿಷ್ಕರಿಸಿ ಅವು ತಮ್ಮ ಕಾಲಕ್ಕೆ ಹೊಂದಿಕೊಳ್ಳುವಂತೆ ಮಾಡಿದರು. ಆಡಳಿತದಲ್ಲಿ ಲಂಚಗಾರಿಕೆ ಮತ್ತು ಭ್ರಷ್ಟಾಚಾರಗಳಿಗೆ ಎಡೆಯಿಲ್ಲದಂತೆ ಮಾಡಿದರು. ಆಡಳಿತವು ಹೆಚ್ಚು ವ್ಯವಸ್ಥಿತವೂ ಅಧುನೀಕತನವೂ ಆಗುವಂತೆ, ಅಧಿಕಾರಿಗಳು ಪ್ರಾಮಾಣಿಕತೆ ಮತ್ತು ದಕ್ಷತೆಗಳಿಂದ ಕೆಲಸಮಾಡುವಂತೆ ಏರ್ಪಡಿಸಿದರು. ಬಹುಪಾಲು ಅಧಿಕಾರವನ್ನು ಕೇಂದ್ರಸ್ಥಾನದಲ್ಲಿ ಉಳಿಸಿಕೊಂಡಿದ್ದರೂ ಸ್ಥಳೀಯ ಅಧಿಕಾರಿಗಳಿಗೆ ಅವರ ಕರ್ತವ್ಯ ನಿರ್ವಹಣೆಗೆ ಅಗತ್ಯವಾಗುವಷ್ಟು ಅಧಿಕಾರವನ್ನು ಕೊಟ್ಟಿದ್ದರು.[೫]

ವೆಂಕಟಪ್ಪನಾಯಕನೂ ಶಿವಪ್ಪನಾಯಕನೂ ಕೆಳದಿರಾಜ್ಯವನ್ನು ವಿಸ್ತರಿಸಿದುದರಿಂದ, ರಾಜ್ಯವನ್ನು ಆಡಳಿತ ಅನುಕೂಲತೆಗೋಸ್ಕರವಾಗಿ ಹಲವು ವಿಭಾಗಗಳನ್ನಾಗಿ ಮಾಡಬೇಕಾಯಿತು. ಮೊದಲು ಕೆಳದಿಯು ವಿಜಯನಗರದ ಸಾಮಂತ ಸಂಸ್ಥಾನವಾಗಿತ್ತು. ಮೂಲತಃ ಆರಗ, ಗುತ್ತಿ, ತುಳುರಾಜ್ಯ, ಬಾರಕೂರು ಮತ್ತು ಮಂಗಳೂರು ಈ ಜಿಲ್ಲೆಗಳನ್ನು ವಿಜಯನಗರದ ಸದಾಶಿವ ಮಹಾರಾಯನಿಂದ ಅಮರಮಾಗಣಿಯಾಗಿ

ಪಡೆದರು. ಈ ಎಂಟು ಮಾಗಣೆಗಳೇ ಕೆಳದಿ ರಾಜ್ಯದ ಮೂಲ. ಆ ಮೇಲೆ ರಾಜರು ಹೆಚ್ಚು ಪ್ರಬಲರಾದಂತೆ ಪ್ರಾಂತೀಯ ಆಡಳಿತಕ್ಕೆ ಹೆಚ್ಚಿನ ಗಮನ ನೀಡಿದರು. ವಿಜಯನಗರದ ಮಾದರಿಯನ್ನು ಅನುಸರಿಸಿ ನಾಡನ್ನು ವಿಭಾಗಿಸಿದರು. ರಾಜ್ಯ ಅತಿದೊಡ್ಡ ಆಡಳಿತೀಯ ವಿಭಾಗ, ಅನೇಕ ಪಾಳುಗಳನ್ನೊಳಗೊಂಡ ಸೀಮೆಯಲ್ಲಿ ಅನೇಕ ಹಳ್ಳಿಗಳು ಸೇರುತ್ತಿದ್ದುವು. ವೇಂಠೆ ಎಂಬ ವಿಭಾಗವೂ ಇತ್ತು. ವಿಶೇಷವಾಗಿ ಆರಗ ಸೀಮೆಯಲ್ಲಿ ಪ್ರತಿ ವೇಂಠೆಯಲ್ಲೂ ಕೆಲವು ನಾಡುಗಳು, ನಾಡುವಿನಲ್ಲಿ ನಿರ್ದಿಷ್ಟ ಸಂಖ್ಯೆಯ ಸೀಮೆಗಳು. ಮಂಡಲ ಎಂಬ ವಿಭಾಗವನ್ನೂ ಶಾಸನಗಳು ಉಲ್ಲೇಖಿಸುತ್ತವೆ. ವಿಜಯನಗರದಲ್ಲಿ ಹೇಗೋ ಹಾಗೆ ಕೆಳದಿಯಲ್ಲೂ ಪ್ರಾಂತೀಯ ರಾಜ್ಯಪಾಲರನ್ನು ನೇಮಕ ಮಾಡಲಾಗಿತ್ತು. ಅವರು ನೇರವಾಗಿ ರಾಜನಿಗೆ ಉತ್ತರದಾಯಿಗಳಾಗಿದ್ದರು. ಸಾಮಂತರು ಚಕ್ರವರ್ತಿಗೆ ವಾರ್ಷಿಕವಾಗಿ ಕಾಣಿಕೆಯನ್ನು ಸಲ್ಲಿಸುತ್ತಿದ್ದರು. ಹೀಗೆ ಆರಗ, ಮಂಗಳೂರು, ಹೊನ್ನಾವರ, ಭಟ್ಕಳ, ಇತ್ಯಾದಿ ಪ್ರಾಂತಗಳ ಆಡಳಿತ ನೋಡಿಕೊಳ್ಳುವ ರಾಜ್ಯಪಾಲರಿರುತ್ತಿದ್ದರು. ಅವರಿಗೆ ಸಲಹಾಮಂಡಳಿಗಳು ಮತ್ತು ಸಚಿವಾಲಯದ ನೆರವು ದೊರಕುತ್ತಿತ್ತು. ಪಶ್ಚಿಮ ಕರಾವಳಿಯಲ್ಲಿ ಸ್ಥಳದ ಪ್ರಾಮುಖ್ಯ ಮತ್ತು ವಾಣಿಜ್ಯ ಪ್ರಾಮುಖ್ಯಗಳು ಕಾರಣವಾಗಿ ಅಲ್ಲಿನ ಪ್ರಾಂತಗಳಿಗೆ ರಾಜನು ಬಹಳ ದಕ್ಷರಾದವರನ್ನೇ ವೈಸರಾಯಿಗಳನ್ನಾಗಿ ನೇಮಿಸುತ್ತಿದ್ದನು. ಹೊರದೇಶದ ವರ್ತಕರೊಂದಿಗೆ ಒಪ್ಪಂದಗಳನ್ನು ಶಾಂತಿಯುತವಾಗಿ ಮಾಡಿಕೊಳ್ಳುವ ಹೆಚ್ಚಿನ ಅಧಿಕಾರವನ್ನೂ ಅವರಿಗೆ ನೀಡಿದ್ದನು. ಮಂಗಳೂರಿನ ರಾಜ್ಯಪಾಲನು ತನ್ನ ಪ್ರಾಂತದ ಸೇವಾದಂಡನಾಯಕನೂ ಆಗಿದ್ದು ಹೆಚ್ಚಿನ ಅಧಿಕಾರ ಪಡೆದಿದ್ದನು. ಆದರೂ ಎಲ್ಲಾ ವೈಸರಾಯರೂ ರಾಜ್ಯಪಾಲರೂ ಕೇಂದ್ರ ಸರಕಾರದ ನೇರ ಉಸ್ತುವಾರಿಯಲ್ಲೇ ಕೆಲಸ ಮಾಡಬೇಕಾಗಿತ್ತು. ಅಲ್ಲದೆ ನಾಯಕರು ಅಥವಾ ಬಲ್ಲಾಳರು ಇದ್ದರು. ಅವರು ಕೆಳದಿಯ ಪ್ರಭುತ್ವವನ್ನು ಒಪ್ಪಿಕೊಂಡು ವಾರ್ಷಿಕವಾಗಿ ಕಾಣಿಕೆಯನ್ನು ಸಲ್ಲಿಸುತ್ತಿದ್ದರು. ಹೀಗೆ ಕೆಳದಿಯ ರಾಜರೂ ಪ್ರಾಂತೀಯ ಆಡಳಿತದಲ್ಲಿ ವಿಜಯನಗರದ ಮಾದರಿಯನ್ನೇ ಸೂಕ್ತ ಪರಿಷ್ಕರಣಗಳೊಂದಿಗೆ ಅಳವಡಿಸಿಕೊಂಡಿದ್ದರು.[೨೬]

ಕಾನೂನು ಮತ್ತು ಸುವ್ಯವಸ್ಥೆಯ ಪಾಲನೆಗೆ ಅತಿ ಹೆಚ್ಚಿನ ಗಮನ ಕೊಡಲಾಗಿತ್ತು. ಠಾಣಾದಾರ (ಸುಬಾದಾರನಿಗೆ ಸೇನಾ ಸಹಾಯಕ), ಗುರಿಕಾರ, ಶಿರಸ್ತೆದಾರ (ವಿಭಾಗ ಕಚೇರಿಯ ಮುಖ್ಯಸ್ಥ), ಗುಮಾಸ್ತರು, ಹೋಬಳಿದಾರ, ಓಲೇಕಾರ, ಕೊಂಬಿನವ, ತಮ್ಮಟೆಯವ, ಇತರ ಕಂದಾಚಾರದ ಅಧಿಕಾರಿಗಳು ಜನವಸತಿಗಳಲ್ಲಿ ಗಸ್ತು ತಿರುಗುತ್ತಿದ್ದರು; ಅಪರಾಧಗಳ ಸಂಖ್ಯೆ ಕಡಮೆಯಾಗುವಂತೆ ಕಾನೂನು ಮತ್ತು ಸುವ್ಯವಸ್ಥೆಯನ್ನು ಪಾಲಿಸುತ್ತಿದ್ದರು. ಸಾರ್ವಜನಿಕ ಸೇವೆಗೆ ಒದಗಲು ಓಲೇಕಾರರು, ದಫೇದಾರರು ಮತ್ತು ಹೋಬಳಿದಾರರು ಸದಾ ಮದ್ದುಗುಂಡುಗಳೊಂದಿಗೆ ಸಿದ್ಧವಾಗಿರುತ್ತಿದ್ದರು. ಹೀಗೆ ಸ್ಥಳೀಯ ಅಧಿಕಾರಿಗಳು ಯುದ್ಧಕಾಲದಲ್ಲೂ ಶಾಂತಿಕಾಲದಲ್ಲೂ ಒಂದೇ ಸಮನಾಗಿ ಉಪಯೋಗಕ್ಕೆ ಬರುತ್ತಿದ್ದರು. ಈ ಕಂದಾಚಾರ ಸೇವೆಯ ಜೊತೆಗೆ ಪ್ರತಿಯೊಂದು ಘಟಕದಲ್ಲೂ ಒಬ್ಬ ಠಾಣಾದಾರ, ಒಬ್ಬ ಗುರಿಕಾರ, ಮೂವರು ಗುಮಾಸ್ತರು, ಹೋಬಳಿದಾರರು, ದಫೇದಾರರು, ಕೊಂಬಿನವನು, ತಮಟೆಯವನು ಇದ್ದೂ ಆ ಘಟಕದಲ್ಲಿ ಗಸ್ತು ಹೊಡೆಯುತ್ತಿರುವುದು, ಸ್ಥಳೀಯ ಖಜಾನೆಯನ್ನು ರಕ್ಷಿಸುವುದು, ಯುದ್ಧಕಾಲದಲ್ಲಿ ಮದ್ದುಗುಂಡುಗಳನ್ನು ಪೂರೈಸುವುದು ಈ ಕೆಲಸ ಮಾಡುತ್ತಿದ್ದರು. ಹೀಗೆ ರಾಜ್ಯದ ನಾಗರಿಕ ಹಾಗೂ ಸೈನಿಕ ಆಡಳಿತಗಳಲ್ಲಿ, ಘಟಕವು ಬಹು ಪ್ರಯೋಜನಕಾರಿಯಾಗಿತ್ತು. ಅಪರಾಧಗಳಿಗೆ ಸಂಬಂಧಿಸಿದ ಬೇಹುಗಳನ್ನು ಸಂಗ್ರಹಿಸಿ ಅತಿ ಶೀಘ್ರವಾಗಿ ರವಾನಿಸುವ ವ್ಯವಸ್ಥೆಯಿತ್ತು. ಪ್ರಜೆಗಳ ನಡವಳಿಕೆಯನ್ನು ಕುರಿತು ಓಲೇಕಾರರು ವರದಿ ಮಾಡಬೇಕಾಗಿತ್ತು. ಒಳನಾಡು ಪ್ರದೇಶಗಳಲ್ಲಿ, ಹೆದ್ದಾರಿ ಪಕ್ಕಗಳಲ್ಲಿ ನಡೆಯುವ ಎಲ್ಲಾ ಘಟನೆಗಳನ್ನು ಅವರು ಕೇಂದ್ರ ಸರಕಾರಕ್ಕೆ ವರದಿ ಮಾಡಬೇಕಾಗಿತ್ತು. ಮುಖ್ಯ ಪ್ರದೇಶಗಳಲ್ಲಿ ಮತ್ತು ಘಟಕ ಕೇಂದ್ರಗಳಲ್ಲಿ ಕೊತ್ವಾಲ, ಶಾನಭೋಗ, ಪೇಟೆಸೆಟ್ಟಿ, ಯಜಮಾನ, ದೇಶದ ಶಾನಭೋಗ, ಕೊಂಬಿನವನು, ತಮಟೆಯವನು, ಕಳ್ಳಬಂಟರು (ಪತ್ತೆದಾರರು) ಮತ್ತು ಊಳಿಗದವರನ್ನು ಒಳಗೊಂಡ ವಿಶೇಷ ಸಿಬ್ಬಂದಿವರ್ಗವಿರುತ್ತಿತ್ತು. ಸ್ಥಳೀಯ ಜನರು

ತಮ್ಮ ತಮ್ಮ ಜಾತಿ ಕಟ್ಟುಪಾಡುಗಳನ್ನು, ನಿಯಮ ನಿಬಂಧನೆಗಳನ್ನು ಉಲ್ಲಂಘಿಸದಂತೆ, ವರ್ತಕರು ನಿಯಮಗಳಿಗನುಗುಣವಾಗಿ ತಮ್ಮ ವ್ಯವಹಾರ ಮಾಡುವಂತೆ ನೋಡಿಕೊಳ್ಳುವುದು ಅವರ ಹೊಣೆಗಾರಿಕೆಯಾಗಿತ್ತು. ರಾತ್ರಿವೇಳೆ ಕಾವಲು ಗಸ್ತು ತಿರುಗುವುದು, ಕಳ್ಳತನ ಮತ್ತಿತರ ಅಪರಾಧಗಳು ನಡೆಯದಂತೆ ಜಾಗರೂಕರಾಗಿರುವುದು ಕೂಡ ಅವರ ಕರ್ತವ್ಯ. ಸಣ್ಣಪುಟ್ಟ ಸ್ಥಳೀಯ ವ್ಯಾಜ್ಯಗಳನ್ನು ವಿಚಾರಣೆಮಾಡಿ ದಂಡ ವಿಧಿಸಲು ಕೊತ್ವಾಲ, ಪೇಟೆಸೆಟ್ಟಿ ಮತ್ತು ಯಜಮಾನರಿಗೆ ಅಧಿಕಾರವಿದ್ದಿತು. ಆದರೆ ಗುರುತರವಾದ ಶಿಕ್ಷೆಯಾಗಬೇಕಾದ ಗಂಭೀರ ಅಪರಾಧಗಳನ್ನು ಒಡನೆಯೇ ಅವರು ರಾಜನಿಗೆ ವರದಿಮಾಡಬೇಕಾಗಿತ್ತು. ಒಳನಾಡಿನಲ್ಲಿ ತುಂಬಾ ಮಹತ್ವದ ಸ್ಥಳಗಳಲ್ಲಿ, ಹೊಸದಾಗಿ ಗೆದ್ದುಕೊಂಡ ಸ್ಥಳಗಳಲ್ಲಿ ಹಾಗೂ ಗಡಿಗಳಲ್ಲಿ ಆಡಳಿತವು ಕಾರ್ಯಕರ್ತರು, ಗುರಿಕಾರರು ಮತ್ತು ಪಾರುಪತ್ಯೆಗಾರರು ಈ ನಾಗರಿಕ ಹಾಗೂ ಇತರ ಸೇವಾ ಅಧಿಕಾರಿಗಳ ಕೈಯಲ್ಲಿರುತ್ತಿತ್ತು. ಅವರು ನೇರವಾಗಿ ಕೇಂದ್ರ ಸರಕಾರಕ್ಕೆ ಉತ್ತರದಾಯಿಯಾಗಿದ್ದರು.[೨೨]

ಅದೇ ರೀತಿ, ಕರ್ನಾಟಕದ ಕೆಳದಿ ಮತ್ತಿತರ ರಾಜ್ಯಗಳಲ್ಲಿ ನ್ಯಾಯವಿತರಣೆ ಮಾಡುವಲ್ಲಿ ರಾಜನ ಕರ್ತವ್ಯಕ್ಕೆ ವಿಶೇಷ ಮಹತ್ವವಿದ್ದಿತು. ಕೆಳದಿಯಲ್ಲಿ ಪಾರಂಪರಿಕವಾದ ಕಾನೂನನ್ನು ಪಾಲಿಸಲಾಗುತ್ತಿತ್ತು. ರಾಜನು ತಜ್ಞರೊಂದಿಗೆ ವಿಚಾರಮಾಡಿ ನಿಯಮಾವಳಿಗಳನ್ನು ರೂಪಿಸುತ್ತಿದ್ದನು. ರಾಜದ್ರೋಹ, ವಿಶ್ವಾಸ ಘಾತಗಳಿಗೆ ಸಂಬಂಧಪಟ್ಟ ಕಾನೂನುಗಳನ್ನು ಸರಕಾರವು ವಿಧಿಸುತ್ತಿದ್ದಿತು. ಅರಸನು ಧರ್ಮದ ಮೂಲಸೆಲೆ. ಅವನು ಪೂರ್ವಮರ್ಯಾದೆಯನ್ನು ಪಾಲಿಸುತ್ತಿದ್ದನು. ಪ್ರಾಂತೀಯ ಅರಸರು ತಮ್ಮವೇ ನ್ಯಾಯಾಲಯಗಳನ್ನು ನಡೆಸುತ್ತಿದ್ದರು. ಪಂಚಾಯಿತಿಗಳು, ಜಾತಿಯ ಹಿರಿಯರು, ಮಠದಗುರುಗಳು, ಸಂಘಗಳ ಮಹಾಜನರು, ದೇವಾಲಯ ಅಧಿಕಾರಿಗಳು ಇವರಿಗೆ ಅವರವರ ಕ್ಷೇತ್ರಗಳಲ್ಲಿ ನ್ಯಾಯ ವಿತರಣೆಮಾಡಲು ಸಾಕಷ್ಟು ಅಧಿಕಾರವಿರುತ್ತಿದ್ದಿತು. ಕೆಲವೊಮ್ಮೆ ರಾಜ್ಯದ ಹಿರಿಯ ಮಂತ್ರಿಯೊಬ್ಬನು ನ್ಯಾಯವಿಚಾರಣೆಗೆ ಅಧ್ಯಕ್ಷನಾಗಿ ಕುಳಿತು ಆಲಿಸುತ್ತಿದ್ದನು. ಅವನು ಕೆಲವು ಸದಸ್ಯರೊಂದಿಗೆ ಒಂದು ವಿಶೇಷ ನ್ಯಾಯಾಲಯವಾಗಿ, ವಿಶೇಷ ಸಂದರ್ಭಗಳಲ್ಲಿ ಹಳ್ಳಿಗಳಿಗೆ ಭೇಟಿಕೊಟ್ಟು, ನ್ಯಾಯ ತೀರ್ಮಾನ ಮಾಡುತ್ತಿದ್ದನು. ಅದು ಒಂದು ಬಗೆಯಲ್ಲಿ ಸಂಚಾರೀ ನ್ಯಾಯಾಲಯವಾಗಿರುತ್ತಿತ್ತು. ಸಾಕ್ಷಿಗಳನ್ನು ವಿಚಾರಣೆಮಾಡಿ, ತೀರ್ಪು ನೀಡಿ, ಬಹುತೇಕ ಅವರ ಸಮ್ಮುಖದಲ್ಲೇ ಅದನ್ನು ಜಾರಿಗೊಳಿಸಲಾಗುತ್ತಿತ್ತು. ಈ ಸಂಬಂಧವಾಗಿ ಸರಕಾರಕ್ಕೆ ಕೋರ್ಟು ಶುಲ್ಕವೆಂಬ ಹೆಸರಿನಲ್ಲಿ ಒಂದಿಷ್ಟು ಹಣ ಸಲ್ಲುತ್ತಿತ್ತು. ಕೆಲವು ವೇಳೆ ದುರುಪಯೋಗದ ನಿರ್ದಿಷ್ಟ ಸಂದರ್ಭಗಳಲ್ಲಿ ರಾಜರು ತಾವೇ ಖುದ್ದಾಗಿ ವಿಚಾರಣೆ ನಡೆಸುತ್ತಿದ್ದರು. ಶೃಂಗೇರಿ ಮಠ, ಅಗ್ರಹಾರ ಮತ್ತು ದೇವಾಲಯಗಳಿಗೆ ನೀಡಿದ್ದ ಭೂಮಿಯನ್ನು ಅಕ್ರಮವಾಗಿ ಆಕ್ರಮಿಸಿಕೊಂಡದ್ದನ್ನು ಶಿವಪ್ಪನಾಯಕನು ತಾನೇ ಖುದ್ದಾಗಿ ಕುಳಿತು ನ್ಯಾಯ ವಿಚಾರಣೆ ಮಾಡಿದನು. ಅಪರಾಧಿಗಳಿಗೆ ಉಗ್ರವಾದ ದಂಡನೆ ವಿಧಿಸಿ, ಆ ಭೂಮಿಯೆಲ್ಲವನ್ನೂ ಮಠಕ್ಕೆ ಮರಳಿ ವಹಿಸಿಕೊಟ್ಟನು. ಈ ಮಠದ ವ್ಯವಹಾರಗಳನ್ನು ನೋಡಿಕೊಳ್ಳುವ ಹೊಣೆಯನ್ನು ಹೊತ್ತಿದ್ದ ತನ್ನ ಪ್ರತಿನಿಧಿ ತಿರುಮಲಭಟ್ಟನು ಕರ್ತವ್ಯಪಾಲನೆಯಲ್ಲಿ ವಿಫಲನಾದಾಗ ಶಿವಪ್ಪನಾಯಕನು ಅವನಿಗೂ ಸೇನಬೋವರಿಗೂ ಒಂದು ನಿರೂಪ ಕಳಿಸಿ, ತಕ್ಷಣವೇ ಆ ನಷ್ಟವನ್ನು ಭರ್ತಿಮಾಡಬೇಕೆಂದೂ, ಇದೇ ಬಗೆಯ 'ದುಷ್ಟ ನಡವಳಿಕೆಯಲ್ಲೇ' ಮುಂದುವರಿದರೆ ಉಗ್ರವಾಗಿ ಶಿಕ್ಷಿಸಲಾಗುವುದೆಂದೂ ತಿಳಿಸಿದನು. ಸಾಲಗಳು, ವಂಚನೆ, ಲಂಚ, ಸುಳ್ಳು, ಕಳವು, ಮೋಸ, ರಾಜ್ಯಕ್ಕೆ ವಿರುದ್ಧವಾಗಿರುವುದು, ಭ್ರಷ್ಟಾಚಾರ, ವ್ಯಭಿಚಾರ, ಸಾಹುಕಾರರು ಅನ್ಯಾಯವಾದ ದರದಲ್ಲಿ ಬಡ್ಡಿ ಕೇಳುವುದು ಇಂತಹ ಮೊಕದ್ದಮೆಗಳನ್ನು ತಾವೇ ವಿಚಾರಣೆ ನಡೆಸುತ್ತಿದ್ದರು. ಸಾಮಾನ್ಯವಾಗಿ ಅಪರಾಧಿಗಳಿಗೆ ಅಂಗಚ್ಛೇದ, ಕಾರಾಗೃಹವಾಸ, ಗಡೀಪಾರು, ದಂಡಗಳು ಮತ್ತು ಬಹುಶಃ ಮರಣದಂಡನೆ ಇವು ವಿಧಿಸುತ್ತಿದ್ದ ಶಿಕ್ಷೆಗಳು. ಕೆಳದಿರಾಜರ ನ್ಯಾಯದೃಷ್ಟಿ, ಶಾಂತಿ, ಕಾನೂನು ಸುವ್ಯವಸ್ಥೆಗಳ ಪಾಲನೆಯಲ್ಲಿ ಕಾಳಜಿ ಎಷ್ಟು ಉತ್ಕಟವಾಗಿರುತ್ತಿದ್ದಿತೆಂದರೆ ಅವರು ದುಷ್ಟಜನರನ್ನು

ಮಾತ್ರವಲ್ಲದೆ, ದುಷ್ಟ ಪ್ರಾಣಿಪಕ್ಷಿಗಳನ್ನೂ ಶಿಕ್ಷಿಸುತ್ತಿದ್ದರು. ಜನರಿಗೆ ಸೇರಿದ ವಸ್ತುಗಳನ್ನು ಕದಿಯುತ್ತಿದ್ದ ಒಂದು ದುಷ್ಟನರಿಯನ್ನು ಹಿಡಿಸಿ ಶಿವಪ್ಪನಾಯಕನು ಶಿಕ್ಷಿಸಿದನು. ತಾನೇ ಅಹವಾಲುಗಳನ್ನು ಆಲಿಸಿ, ದುಷ್ಟರನ್ನು ಶಿಕ್ಷಿಸಿ ಶಿಷ್ಟರನ್ನು ಅಸಹಾಯಕರನ್ನು ರಕ್ಷಿಸುತ್ತಿದ್ದನು (ದುಷ್ಟ ನಿಗ್ರಹ, ಶಿಷ್ಟ ಪರಿಪಾಲನ). ಅಲ್ಲದೆ ರಾಜ್ಯದಲ್ಲಿ ಶಾಂತಿ ಕಲಕುವ ದುಷ್ಟರನ್ನು ನಿವಾರಿಸಲು ಸಹಾಯ ಮಾಡಿದ ವ್ಯಕ್ತಿಗಳಿಗೆ ಅರಸರು ಪುರಸ್ಕಾರ ನೀಡುತ್ತಿದ್ದರು. ಸೋಮಶೇಖರನಾಯಕನು ಕೋಡಿಹಳ್ಳಿ ಬಸವ ಎನ್ನುವವನಿಗೆ, ಮಂಚೆ ಬರಮ ಎಂಬ ದುಷ್ಟನನ್ನು ಕೊಂದು ಸತ್ಕಾರ್ಯ ಮಾಡಿದುದಕ್ಕಾಗಿ ಉತ್ತರ-ಉಂಬಳಿ ಭೂಮಿಯನ್ನು ಕೊಡುಗೆಯಾಗಿ ನೀಡಿದನು. ದಕ್ಷ ನ್ಯಾಯವಿತರಣೆಯಿಂದಾಗಿ ಜನರು ಕಾನೂನಿಗೆ ಬದ್ಧರಾಗಿರುತ್ತಿದ್ದರು. ಹಾಗಾಗಿ ಅಪರಾಧಗಳ ಸಂಖ್ಯೆ ಕಡಮೆಯಾಗಿತ್ತು. ಕೆಳದಿರಾಜ್ಯಕ್ಕೆ ಭೇಟಿನೀಡಿದ ವಿದೇಶೀಯರು ಈ ಪರಿಸ್ಥಿತಿಯನ್ನು ಪ್ರಶಂಸಿಸಿದ್ದಾರೆ. ಅಲೆಗ್ಸಾಂಡರ್ ಹ್ಯಾಮಿಲ್ಟನ್ ಹೇಳಿದನು: ''ಈ ದೇಶದ ಪ್ರಜೆಗಳು ಎಷ್ಟು ಚೆನ್ನಾಗಿ ಕಾನೂನಿಗೆ ಬದ್ಧರಾಗಿರುತ್ತಾರೆಂದರೆ, ಇವರಲ್ಲಿ ದರೋಡೆ, ಕೊಲೆ ಎನ್ನುವುದು ಕೇಳಿಬರುವುದೂ ಇಲ್ಲ. ಅಪರಿಚಿತನೊಬ್ಬನು ಎಲ್ಲಿಗೆ ಹೋಗುತ್ತಿದ್ದಾನೆ, ಅವನಿಗೇನು ಕೆಲಸ ಎಂದು ಯಾರೂ ಕೇಳಿದೆಯೇ ನಿರಾಳವಾಗಿ ಹೋಗಬಹುದು.''[೨೬]

ಸೈನ್ಯಾಡಳಿತ

ರಾಜ್ಯಾಡಳಿತದ ಅತಿಮುಖ್ಯ ಆಧಾರ ಸ್ತಂಭಗಳಲ್ಲಿ ಒಂದು ಮಿಲಿಟರಿ ಅಥವಾ ಸೈನ್ಯ ಆಡಳಿತ ವ್ಯವಸ್ಥೆ. ಹಾಗಾಗಿ ಆ ಕಾಲದ ರಾಜ್ಯಾಡಳಿತ ವ್ಯವಸ್ಥೆಯಲ್ಲಿ ಚಕ್ರವರ್ತಿಯ ನಂತರದ ಸ್ಥಾನ ದಂಡನಾಯಕನದು (ದಳವಾಯಿ). ಮೈಸೂರು ರಾಜ್ಯದಲ್ಲಿ ದಳವಾಯಿ ಸ್ಥಾನದ ಸ್ಥಾಪನೆ ವಿಶಿಷ್ಟವಾಗಿತ್ತು. ಈ ವ್ಯವಸ್ಥೆಯ ಮೂಲವನ್ನು ಕುರಿತು ಕೆಲವು ಸ್ವಾರಸ್ಯವಾದ ವೃತ್ತಾಂತಗಳಿವೆ. ರಾಜಒಡೆಯರು ತಮ್ಮ ಸಲಹಾಮಂಡಳಿಯ ಸದಸ್ಯರನ್ನುದ್ದೇಶಿಸಿ ಹೇಳಿದರು, ''ನಮ್ಮ ರಾಜ್ಯವನ್ನು ವಿಸ್ತರಿಸಬೇಕೆಂದರೆ ನಮ್ಮಲ್ಲಿರುವ ಸೈನ್ಯವು ಸಾಲುವುದಿಲ್ಲ. ಸೈನ್ಯದ ಸಂಖ್ಯಾಬಲವನ್ನು ಹೆಚ್ಚಿಸಿದ್ದೇ ಆದರೆ ಅದೇ ಸಮಯಕ್ಕೆ ಅದರ ಸೂಕ್ತ ಆಡಳಿತಕ್ಕೆ ಏರ್ಪಾಟು ಮಾಡಬೇಕು. ಅದಕ್ಕೆ ಪ್ರಾಮಾಣಿಕನಾದ ದಂಡನಾಯಕನ ಅಗತ್ಯ ಹೆಚ್ಚಾಗಿದೆ. ನಮ್ಮ ಪೂರ್ವಜರಾದ ಯದುರಾಯರ ಕಾಲದಲ್ಲಿದ್ದ ದಳವಾಯಿ ಮಾರನಾಯಕನು ಕೆಟ್ಟದಾರಿ ಹಿಡಿದುದರಿಂದ ಕೊಲೆಯಾಗಬೇಕಾಯಿತು. ಅಂದಿನಿಂದ ನಮ್ಮ ಪೂರ್ವಜರು ಯಾರೂ ದಳವಾಯಿಯನ್ನು ನೇಮಕ ಮಾಡಿಲ್ಲ.'' ಹೀಗೆ ಆಲೋಚನೆ ಮಾಡಿ, ತನ್ನ ಸೋದರಳಿಯನೇ ಆಗಿದ್ದ ಕರಿಕಾಲ ಮಲ್ಲರಾಜಯ್ಯನನ್ನು ದಳವಾಯಿಯನ್ನಾಗಿ ನೇಮಕಮಾಡಿದರು. ಅವನಿಂದ ಒಂದು ಭಾಷಾಪತ್ರವನ್ನು ಮಾಡಿಸಿಕೊಂಡರು. ರಾಜಒಡೆಯರು ಮತ್ತು ಅವರ ವಂಶಜರು ಶ್ರೀರಂಗಪಟ್ಟಣ, ಮೈಸೂರು, ಕಳಲೆ ಮತ್ತು ಆಗಾಗ ಗೆದ್ದು ರಾಜ್ಯಕ್ಕೆ ಸೇರಿಸಿಕೊಳ್ಳುವ ಭಾಗಗಳ ಮೇಲೆ ಪ್ರಭುತ್ವ ಹೊಂದಿ ಆಳುತ್ತಿರಲು, ಮಲ್ಲರಾಜಯ್ಯ ಮತ್ತು ಅವನ ವಂಶೀಕರು ಸರ್ವಾಧಿಕಾರಿ ಮತ್ತು ದಳವಾಯಿ ಆಗಿ ಇರತಕ್ಕುದು ಎಂಬುದೇ ಆ ಭಾಷಾಪತ್ರ. ಹುದ್ದೆಯನ್ನು ವಹಿಸಿಕೊಂಡ ಮೇಲೆ ಮಲ್ಲರಾಜಯ್ಯನು ಕಳಲೆಗೆ ಹಿಂದಿರುಗಿ ಹೋಗಿ ತನ್ನ ಮೊಮ್ಮಗ ನಂದಿನಾಥಯ್ಯನ ಮೂಲಕ ರಾಜೀನಾಮೆಯನ್ನೂ, ಪದವಿ ಸೂಚಕ ವಸ್ತುಗಳನ್ನೂ ಹಿಂದಕ್ಕೆ ಕಳುಹಿಸಿಬಿಟ್ಟನು. ಆಗ ರಾಜಒಡೆಯರು ತನ್ನ ತಮ್ಮ ಬೆಟ್ಟದ ಅರಸುವನ್ನು ದಳವಾಯಿಯನ್ನಾಗಿ ನೇಮಿಸಿದರು. ಇನ್ನೊಂದು ಪಾಠದ ಪ್ರಕಾರ, ''ತಿರುಮಲನು ಶ್ರೀರಂಗಪಟ್ಟಣವನ್ನು ತ್ಯಜಿಸಿ ಮಾಲಿಂಗಿಗೆ ಹೋದ ನಂತರ ಉಮ್ಮತ್ತೂರಿನ ನಾಯಕನು ಸುತ್ತಮುತ್ತಣ ಪಾಳೆಯಗಾರರ ನೆರವು ಪಡೆದು ಶ್ರೀರಂಗಪಟ್ಟಣದ ಮೇಲೆ ದಂಡೆತ್ತಿ ಬಂದನು. ಪರಿಸ್ಥಿತಿಯನ್ನು ನಿಭಾಯಿಸಲು ತಕ್ಕಷ್ಟು ದೊಡ್ಡ ಸೈನ್ಯವು ರಾಜಒಡೆಯರ ಬಳಿ ಇರಲಿಲ್ಲ. ಆದ್ದರಿಂದ ತನ್ನ ಸೋದರಳಿಯ ಕಳಲೆ ೪೦,೦೦೦ ನಾಡಿನ ನಾಯಕ ಕರಿಕಾಲ ಮಲ್ಲರಾಜಯ್ಯನ ನೆರವನ್ನು ಕೋರಿದರು. ಚಾಮುಂಡೇಶ್ವರಿ ದೇವಾಲಯದ ಮುಂದೆ ಅವನಿಂದ ಭಾಷೆ ಪಡೆದರು. ಇನ್ನುಮುಂದೆ ರಾಜಒಡೆಯರ ಸಂತತಿಯವರು ಶ್ರೀರಂಗಪಟ್ಟಣ,

ಮೈಸೂರು, ಕಳಲೆಗಳನ್ನೂ ಆಗಿಂದಾಗ ಗೆದ್ದು ರಾಜ್ಯಕ್ಕೆ ಸೇರಿಸಿಕೊಳ್ಳುವ ಭಾಗಗಳನ್ನೂ ಆಳುವುದು, ಕಳಲೆ ಮಲ್ಲರಾಜಯ್ಯನ ವಂಶಸ್ಥರು ಸರ್ವಾಧಿಕಾರಿ ಹಾಗೂ ದಳವಾಯಿ ಆಗಿರುವುದು ಎಂದೂ ಒಪ್ಪಂದವಾಯಿತು. ಈ ವಿಷಯವನ್ನೊಳಗೊಂಡ ಒಂದು ಭಾಷಾಪತ್ರ ಸಿದ್ಧವಾಯಿತು. ವೃತ್ತಾಂತದ ಪಾಠವ್ಯತ್ಯಾಸಗಳು ಏನೇ ಇರಲಿ ಆಗ ದಳವಾಯಿ ಎಂಬ ಹುದ್ದೆ ಔಪಚಾರಿಕವಾಗಿ ಸ್ಥಾಪನೆಗೊಂಡು ಮುಂದುವರಿಯಿತು. ಮೈಸೂರು ವೈರಿಗಳಿಂದ ರಕ್ಷಣೆ ಪಡೆದುಕೊಳ್ಳುವುದು ಅದು ಅತ್ಯಗತ್ಯವಾಗಿತ್ತು.[೫೯]

ಸಾಮಾನ್ಯವಾಗಿ ದಂಡನಾಯಕನದು ರಾಜನ ನಂತರದ ಅಧೀನ ಸ್ಥಾನ. ಆದರೆ ವಾಸ್ತವವಾಗಿ ಅವನು ಇಡೀ ಸೈನ್ಯವನ್ನು ನಿಯಂತ್ರಿಸುತ್ತಿದ್ದುದು ಮಾತ್ರವಲ್ಲ, ರಾಜನ ಬಲಗೈ ಆಗಿ ಸಾಮಾನ್ಯ ಆಡಳಿತದ ಮೇಲೂ ಗಣನೀಯ ಪ್ರಭಾವವನ್ನು ಬೀರುತ್ತಿದ್ದನು. ಕೆಲವೊಮ್ಮೆ ಆಡಳಿತದಲ್ಲಿ ತಾನೇ ಸರ್ವಶಕ್ತನಾಗಬೇಕೆಂಬ ಅತ್ಯಾಶೆಯಿಂದಾಗಿ ಅವನು ಸ್ಥಾನವನ್ನೇ ಕಳೆದುಕೊಳ್ಳಬೇಕಾಗಿ ಬಂದುದೂ ಉಂಟು. ಬೆಟ್ಟದ ಅರಸು ಜನೇ ಚಾಮರಾಜ ಒಡೆಯರನ್ನು ಕೊಲೆಮಾಡಲು ಸಂಚು ಮಾಡಿದ್ದರಿಂದ ಅವನ ಕಣ್ಣುಗಳನ್ನು ಕೀಳಿಸಿ ಕಾರಾಗೃಹಕ್ಕೆ ದೂಡಲಾಯಿತು. ಮುಪ್ಪು, ಅದಕ್ಷತೆ, ನಿಷ್ಠೆಯಿಲ್ಲದ್ದು ಇವೆಲ್ಲ ಅಧಿಕಾರವನ್ನು ರದ್ದುಪಡಿಸಲು ಕಾರಣಗಳಾಗಿದ್ದುವು. ದಳವಾಯಿ ತಿಮ್ಮರಾಜಯ್ಯನು ಹತಮಾರಿಯೆಂದು ಸಾಬೀತಾದುದರಿಂದ ಕಂಠೀರವನು ಅವನನ್ನು ಅಧಿಕಾರದಿಂದ ತೆಗೆದುಹಾಕಿದನು. ಆಗಲೆ ಪುನರ್ನೇಮಿತನಾಗಿದ್ದ ಹಂಪರಾಜಯ್ಯನು, ಸರಕಾರದ ತೆರಿಗೆ ಹಣವನ್ನು ದುರುಪಯೋಗಪಡಿಸಿಕೊಂಡುದರಿಂದ, ದೇವರಾಜ ಒಡೆಯರು ಅವನನ್ನು ಅಧಿಕಾರದಿಂದ ವಜಾ ಮಾಡಿದರು.[೬೦]

ಮೈಸೂರು ರಾಜಮನೆತನಕ್ಕೂ ದಳವಾಯಿ ಕುಟುಂಬಕ್ಕೂ ವೈವಾಹಿಕ ಸಂಬಂಧಗಳೂ ಇದ್ದುವು. ಕಂಠೀರವನ ದಳವಾಯಿಗಳಲ್ಲಿ ಒಬ್ಬನಾದ ದಾಸರಾಜಯ್ಯನು ಅವನ ಮಾವನೂ ಆಗಿದ್ದನು. ಇನ್ನಿಬ್ಬರು ದಳವಾಯಿಗಳು ಹುರಾದ ನಂಜರಾಜಯ್ಯ ಮತ್ತು ಲಿಂಗರಾಜಯ್ಯ, ಕಂಠೀರವನಿಗೆ ತಾಯಿಯ ಕಡೆಯಿಂದ ಸಂಬಂಧಿಗಳು. ಹೀಗೆ ಅರಸರ ಆಸ್ಥಾನದಲ್ಲಿ ಹಾಜರಿದ್ದು, ಕಾಣಿಕೆಗಳನ್ನು ಒಪ್ಪಿಸುವುದಲ್ಲದೆ, ವೈವಾಹಿಕ ಸಂಬಂಧಗಳನ್ನು ಬೆಳೆಸಿಯೂ ಸ್ಥಳೀಯ ನಾಯಕರು ರಾಜರ ಕೃಪೆಯನ್ನೂ ಬೆಂಬಲವನ್ನೂ ಗಳಿಸಿಕೊಳ್ಳಲು ಪ್ರಯತ್ನಿಸುತ್ತಿದ್ದರು. ಹಾಗೆಯೇ ತಾಯ್ನಾಡಿಗಿಂತ ದೂರವಾಗಿದ್ದ ಪ್ರದೇಶಗಳ ಮೇಲೆ ತಮ್ಮ ಪ್ರಭಾವವನ್ನು ವಿಸ್ತರಿಸುವ ಉದ್ದೇಶದಿಂದಲೂ ಇಂತಹ ಸಂಬಂಧಗಳನ್ನು ರಾಜರು ಬೆಳೆಸುತ್ತಿದ್ದರು. ಯಾರು ತಮ್ಮ ನೆರವಿಗೆ ಬರಬಲ್ಲರೋ, ಅಧಿಕಾರದ ಹೋರಾಟದಲ್ಲಿ ಯಾರ ಬೆಂಬಲ ತುಂಬಾ ಅಗತ್ಯವಾಗಿದೆ ಎನಿಸುತ್ತದೆಯೋ ಅಂತಹ ಸ್ಥಳೀಯ ನಾಯಕರೊಂದಿಗೆ ಮಾತ್ರ ಸಂಬಂಧಗಳು ಸ್ಥಾಪಿತವಾಗುತ್ತಿದ್ದುವು.

ಈ ಕಾಲಾವಧಿಯಲ್ಲಿ ಕರ್ನಾಟಕದ ರಾಜ್ಯಗಳ ಏಕೈಕ ಉದ್ದೇಶ, ಇರುವುದನ್ನು ಉಳಿಸಿಕೊಳ್ಳುವುದು. ಸ್ವತಂತ್ರ ರಾಜರೆಲ್ಲರೂ ತಮ್ಮ ತಮ್ಮ ಪ್ರಭಾವ ವಲಯವನ್ನು ವಿಸ್ತರಿಸಿಕೊಳ್ಳಲು ಶಕ್ತಿಮೀರಿ ಶ್ರಮಿಸುತ್ತಿದ್ದುವು. ರಕ್ಕಸತಂಗಡಿ ಯುದ್ಧವಾದ ಬಳಿಕ ಸಂಕೀರ್ಣ ರಾಜಕೀಯ ವಾತಾವರಣವು ಕವಿದಿದ್ದಾಗ, ಅರ್ಹನಿಗೆ ಮಾತ್ರ ಉಳಿವು ಎಂಬ ವಿಚಾರವು ಪ್ರಧಾನವಾಗಿತ್ತು. ಹಾಗಾಗಿ ವಿಶೇಷವಾಗಿ ಮೈಸೂರಿನಲ್ಲಿ ಬೃಹತ್ ಸೈನ್ಯದ ರಚನೆ ಮತ್ತು ಪಾಲನೆಗಳಿಗೆ ಒತ್ತುಬಂದಿತ್ತು. ಪ್ರಾರಂಭದಲ್ಲಿ, ರಾಜನ ಖಾಸಾ ಸೇವೆಯಲ್ಲಿದ್ದ ಕೆಲವು ಯೋಧರು, ಆನೆಗಳು ಮತ್ತು ಕುದುರೆಗಳನ್ನು ಬಿಟ್ಟರೆ ವ್ಯವಸ್ಥಿತವಾದ ಸೈನ್ಯವೆನ್ನುವುದು ಇದ್ದಂತೆ ತೋರುವುದಿಲ್ಲ. ಯುದ್ಧ ಮತ್ತಿತರ ತುರ್ತು ಸಂದರ್ಭಗಳಲ್ಲಿ ಮಿತ್ರರಾದ ಪಾಳೆಯಗಾರರೋ ಸಾಮಂತರೋ ಕಳುಹಿಸಿಕೊಡುವ ಸೈನ್ಯವನ್ನು ರಾಜನು ಅವಲಂಬಿಸಿರುತ್ತಿದ್ದನು. ಮೈಸೂರಿನಲ್ಲಿ ಅಂಥದೊಂದು ಸೈನ್ಯದ ಗಮನಾರ್ಹ ಲಕ್ಷಣವೆಂದರೆ, ಅನುಭವಿಗಳಾದ ಹಳೆಪೈಕನಾಯಕರು ದಂಡನಾಯಕರ ನಿರ್ದೇಶನದಲ್ಲಿ ತರಬೇತಿ ಕೊಟ್ಟಿದ್ದುದು. ಇದು ರಾಜಒಡೆಯರು ಮತ್ತು ಅವರ ಸೋದರರಿಗೆ, ತಿರುಮಲನು ಕೆಸರೆಯ ಮೇಲೆ ಆಕ್ರಮಣ ಮಾಡಿದಾಗ

ತುಂಬಾ ಪ್ರಯೋಜನಕ್ಕೆ ಬಂದಿತು. ಉತ್ತಮ ತರಬೇತಿ ಪಡೆದ ಖಾಯಂ ಆದ ಸೇನಾದಳವೊಂದರ ಅವಶ್ಯಕತೆಯನ್ನು ಮನಗಂಡು ರಾಜಒಡೆಯರು ಒಬ್ಬ ದಳವಾಯಿಯೊಂದಿಗೆ ಒಂದು ಸೇನಾ ವಿಭಾಗವನ್ನು ಸ್ಥಾಪಿಸಿದರು. ಅದರಿಂದ ಅವರಿಗೂ ಅವರ ವಂಶಸ್ಥರಿಗೂ ವಿಸ್ತಾರವಾದ ರಾಜ್ಯವನ್ನು ಕಟ್ಟುವುದರಲ್ಲಿ ತುಂಬಾ ಸಹಾಯವಾಯಿತು. ಧೈರ್ಯಶಾಲಿಗಳೂ, ದೇಶಭಕ್ತರೂ ಆದ ಯೋಧರುಗಳಿದ್ದ ಪದಾತಿದಳ, ಅಶ್ವದಳ, ಆಯುಧಗಳಿಂದ ಸಜ್ಜುಗೊಂಡ ಆನೆಪಡೆ, ಒಂಟೆಗಳು ಸೈನ್ಯದ ಮುಖ್ಯ ಅಂಶಗಳಾಗಿದ್ದುವು. ಸ್ವರೂಪದಲ್ಲಿ ವೈವಿಧ್ಯಪೂರ್ಣವಾಗಿದ್ದ ಈ ಸೇನೆಗೆ ಸೋತ ಪಾಳೆಯಗಾರರು, ಮಾಂಡಲಿಕರು, ನಾಯಕರು, ಇತರ ಸ್ಥಳೀಯ ಆಡಳಿತ ಘಟಕಗಳ ಮುಖ್ಯರು ಒದಗಿಸುತ್ತಿದ್ದ ಸೇನಾ ತುಕಡಿಗಳು ಸೇರಿಕೊಳ್ಳುತ್ತಿದ್ದುವು. ಸೇನೆಯ ಅತಿಮುಖ್ಯವಾದ ಒಂದು ಅಂಗ ಹಳೆಪೈಕ ಯೋಧರ ವರ್ಗ. ಎಲ್ಲಾ ಯುದ್ಧಗಳಲ್ಲೂ ಅವರು ಅತ್ಯಂತ ಮಹತ್ವದ ಪಾತ್ರ ನಿರ್ವಹಿಸುತ್ತಿದ್ದರು. ಹಾಗೆಯೇ ಬೇಹುಗಾರರು ಮತ್ತು ಸುದ್ದಿ ರವಾನಿಸುವವರು (ಚಾರರು ಮತ್ತು ಬೇಹಿನವರು), ವಿಶೇಷವಾಗಿ ಯುದ್ಧ ಸಮಯದಲ್ಲಿ ಬಹು ಉಪಯುಕ್ತವೂ ಪ್ರಶಂಸನೀಯವೂ ಆದ ಸೇವೆ ಸಲ್ಲಿಸುತ್ತಿದ್ದರು. ಸ್ಥಳೀಯ ನಾಯಕರು ಸೇನೆಯ ತರಬೇತಿ ಮೊದಲಾದ ವಿಷಯಗಳಿಗೆ ಗಮನ ಕೊಟ್ಟರೆ, ದಂಡನಾಯಕನು ಅವರನ್ನು ನಿಯಂತ್ರಿಸುತ್ತಿದ್ದನು. ಆದರೆ ಅವನು ಕೂಡ ನೇರವಾಗಿ ರಾಜನಿಗೆ ಉತ್ತರದಾಯಿಯಾಗಿದ್ದನು.[೩೧]

ಹಿಂದೆ ಯುದ್ಧದಲ್ಲಿ ಖಡ್ಗಗಳು, ಬಿಲ್ಲು-ಬಾಣ, ಭರ್ಜಿ, ಈಟಿ, ಕಠಾರಿ, ಗದೆ, ಚಕ್ರ, ಹರಿತವಾದ ಚೂರಿ ಈ ಆಯುಧಗಳನ್ನು ಉಪಯೋಗಿಸುತ್ತಿದ್ದರು. ಸೈನಿಕ ಶಿಕ್ಷಣದಲ್ಲಿ ಕತ್ತಿಗಾಳಗ ಒಂದು ಮುಖ್ಯವಾದ ಅಂಗವಾಗಿತ್ತು. ಸ್ಥಳೀಯ ದಂಡುಗಳು ಯಾವುದೇ ಯುದ್ಧವಾಗಲಿ ಲಾಠಿಗಳನ್ನು ಧಾರಾಳವಾಗಿ ಉಪಯೋಗಿಸುತ್ತಿದ್ದುವು. ಸುಡುಮದ್ದು, ಕವಣೆಕಲ್ಲು ಮತ್ತು ಕುದಿಯುವ ಎಣ್ಣೆಗಳೂ ಸಾಮಾನ್ಯವಾಗಿದ್ದುವು. ತೋಪುಗಳು (ಶತಘ್ನಿ, ಫಿರಂಗಿ) ಮತ್ತು ಮದ್ದುಗಳ ಬಳಕೆಯು ಬಂದದ್ದು ಹದಿನೇಳನೆಯ ಶತಮಾನದ ನಾಲ್ಕನೇ ದಶಕದ ವೇಳೆಗೆ. ಕಂಠೀರವನ ಕಾಲದಲ್ಲಿ ರಾಮಬಾಣ, ಭೂತನಾಥ, ಲಂಕೆಯ ನಿರ್ಧಾಮಧೂಮ, ಹನುಮಂತ, ಚಾಮುಂಡಿ, ಸಿಡಲ ಜಂಗುಳಿ, ಮೇಘನಾದ, ಕೋಟೆ ಕೋಲಾಹಲ, ಕಲಿ ವೀರಭದ್ರ, ಲೂಟಿಯ ರಣಭೈರವ, ಮೀಟಿನ ರಂಗನಾಥ ಇತ್ಯಾದಿ ಸ್ವಾರಸ್ಯವಾದ ಹೆಸರುಗಳನ್ನುಳ್ಳ ತೋಪುಗಳನ್ನು ಉಲ್ಲೇಖಿಸಿದೆ. ಯುದ್ಧದಲ್ಲಿ ಹಿಂದಿನ ಶಕ್ತಿವಂತರ ಹೆಸರುಗಳನ್ನು ಹೇಳಿಕೊಂಡು ಉತ್ಸಾಹ ಪಡೆದುಕೊಳ್ಳುವ ಅಭ್ಯಾಸವನ್ನು ಇದು ಸೂಚಿಸುತ್ತದೆ. ಜೊತೆಗೆ ನಾಡಿನ ಪರಂಪರೆಗೆ ಹೊಂದಿಕೊಳ್ಳುವುದಾಗಿದೆ. ತ್ರಿಶೂಲ, ಕವಣೆ-ಗರಗಸ, ಹರಿತವಾದ ಕಲ್ಲುಗಳು, ಸ್ಪ್ರಿಂಗು ಇರುವ ಉಕ್ಕಿನ ಹರಿತವಾದ ಆಯುಧಗಳು, ಚೇಳುಬಾಣ, ಉರಿಪೊಟ್ಟಣ, ಗುಂಡುಗಲ್ಲು, ವಿಷಪೂರಿತ ಸುಡುಮದ್ದು ಇತ್ಯಾದಿಗಳನ್ನು ರಾಜಧಾನಿಯ ಹೊರವಲಯದ ಕೋಟೆಯಲ್ಲಿ ಸಂಗ್ರಹಿಸಿಟ್ಟಿದ್ದು, ಯುದ್ಧಕ್ಕೆ ಸದಾ ಸಿದ್ಧವಾಗಿರುತ್ತಿದ್ದರು. ಅಲಗಿನ ಚಾವಡಿ, ಅಲಗುವನೆ, ಆಯುಧಶಾಲೆ ಇವು ಚಾಮರಾಜ ಒಡೆಯರ್ ಸ್ಥಾಪಿಸಿದ ಮಹತ್ವದ ಸಂಸ್ಥೆಗಳು. ಇಲ್ಲಿ ಪಾಳೆಯಗಾರರಿಂದಲೋ ಇತರ ವೈರಿಗಳಿಂದಲೋ ಗೆದ್ದು ವಶಪಡಿಸಿಕೊಂಡ ಆಯುಧಗಳನ್ನು ಇಡುತ್ತಿದ್ದುದಲ್ಲದೆ. ಹೊಸ ಆಯುಧಗಳ ತಯಾರಿಕೆಗೂ ವ್ಯವಸ್ಥೆ ಮಾಡಲಾಯಿತು. ಫಿರಂಗಿಗಳನ್ನಿಡುವ ಕೊತ್ತಲ ಸರ್ವೇಸಾಮಾನ್ಯವಾಗಿತ್ತು. ಇವುಗಳನ್ನು ಮುಂದೆ ಇತರ ರಾಜರು ಬೆಳೆಸಿದರು. ಕಲ್ಲಿನಿಂದ ಕೋಟೆಗಳನ್ನು ಕಟ್ಟುವುದಕ್ಕೂ, ಇರುವ ಕೋಟೆಗಳನ್ನು ದುರಸ್ತುಪಡಿಸಿ ಬಲಗೊಳಿಸುವುದಕ್ಕೂ ವಿಶೇಷ ಗಮನ ನೀಡಲಾಯಿತು. ಸೈನ್ಯಕ್ಕಾಗಿ ಆನೆಗಳನ್ನು ಹಿಡಿಸಿ ಅಥವಾ ಕೊಂಡು ತರಿಸಿ ತರಬೇತಿ ಕೊಡುವುದಕ್ಕೆ ಕೂಡ ೫ನೇ ಚಾಮರಾಜ ಒಡೆಯರ್ ಕ್ರಮಗಳನ್ನು ಕೈಗೊಂಡರು ಎಂದೂ ಹೇಳಲಾಗಿದೆ.[೩೨]

ಮೈಸೂರು ಯುದ್ಧವಿಧಾನದ ವಿಶೇಷ ಲಕ್ಷಣಗಳೆಂದರೆ, ಅತಿವೇಗದ ಸೇನಾಚಲನೆ; ಅನಿರೀಕ್ಷಿತವಾದ ಇರುಳು ಆಕ್ರಮಣಗಳು; ವೈರಿಗಳ ಮೂಗುಗಳನ್ನು ಕೊಯ್ಯಿಸುವುದು; ಎತ್ತುಗಳ ಕೋಡುಗಳಿಗೆ ಪಂಜುಗಳನ್ನು ಕಟ್ಟಿ, ಉರಿಸಿ ಅವುಗಳನ್ನು ರಾತ್ರಿ ವೇಳೆ ನಡೆಸಿ ವೈರಿಗೆ ಭಾರೀ ಸೇನೆ ಬರುತ್ತಿದೆಯೆಂಬ ಭೀತಿ ಹುಟ್ಟುವಂತೆ

ಮಾಡುವುದು. ಶತ್ರುಗಳ ಮೂಗು ಕೊಯ್ಯಿಸುವ ಪರಿಪಾಟ ಬಂದದ್ದು ರಾಜಒಡೆಯರ ಕಾಲದಲ್ಲಿ. ಮೈಸೂರು ರಾಜರ ವಿರೋಧ ಕಟ್ಟಿಕೊಳ್ಳಬಾರದೆಂದು ವೈರಿಗಳಿಗೆ ಎಚ್ಚರಿಕೆ ಕೊಡುವ ಸಲುವಾಗಿ ಈ ಶಿಕ್ಷೆ. ಮೈಸೂರು ಸೈನ್ಯವು ಹದಿನೇಳನೆಯ ಶತಮಾನದಲ್ಲಿ ನಡೆದ ಯುದ್ಧಗಳೆಲ್ಲದರಲ್ಲೂ ಈ ಕ್ರಮವನ್ನು ತಪ್ಪದೆ ಆಚರಿಸಿತು. ಎತ್ತುಗಳ ಕೋಡುಗಳಿಗೆ ಉರಿಯುವ ಪಂಜು ಕಟ್ಟಿ ಶತ್ರು ಶಿಬಿರದ ಕಡೆಗೆ ಅವುಗಳನ್ನು ನುಗ್ಗಿಸುವುದು ಇನ್ನೊಂದು ಮುಖ್ಯವಾದ ಪದ್ಧತಿಯಾಗಿತ್ತು. ಶತ್ರುವನ್ನು ಗಾಬರಿಗೊಳಿಸಿ, ಗೊಂದಲದಲ್ಲಿ ಕೆಡವಿ ದಿಢೀರನೆ ಅವನ ಮೇಲೆ ದಾಳಿ ಮಾಡುವುದು, ಯುದ್ಧಕ್ಕೆ ಮೊದಲು ಮತ್ತು ಅನಂತರ ವಿಜಯವನ್ನು ಕೋರಿ ದೇವದೇವತೆಗಳನ್ನು ಪೂಜಿಸುವುದು, ಪ್ರಾರ್ಥಿಸುವುದು, ಇನ್ನಿತರ ಧಾರ್ಮಿಕ ಆಚರಣೆಗಳು ರೂಢಿಯಲ್ಲಿದ್ದುವು. ಆಗಿನ ಯುದ್ಧದ ಇನ್ನೊಂದು ಪ್ರಶಂಸನೀಯ ಅಂಶವೆಂದರೆ, ಯುದ್ಧದ ಸಮಯದಲ್ಲಿ ಹೆಂಗಸರಿಗೆ ಯಾವ ತೊಂದರೆಯೂ ಆಗದಂತೆ ನೋಡಿಕೊಳ್ಳುತ್ತಿದ್ದುದು. ರಾಜಒಡೆಯರು ಶ್ರೀರಂಗಪಟ್ಟಣವನ್ನು ಗೆದ್ದುಕೊಂಡಾಗ ಅವರು ಮೊದಲು ಮಾಡಿದ ಕೆಲಸ ತಿರುಮಲನ ರಾಣಿ ರಂಗಮ್ಮನನ್ನು ಸಕಲ ಗೌರವಗಳೊಡನೆ, ಸೂಕ್ತ ಕಾವಲಿನಲ್ಲಿ ಮಾಲಿಂಗಿಗೆ ಕಳುಹಿಸಿಕೊಟ್ಟದ್ದು.[೬೬] ಒಟ್ಟಿನ ಮೇಲೆ ಮೈಸೂರಿನ ಸೈನ್ಯವು ದಕ್ಷತೆ, ಶಿಸ್ತು, ನಿಷ್ಠೆ, ನಾಯಕನ ಬಗೆಗೆ ಹೃತ್ಪೂರ್ವಕ ಭಕ್ತಿ ಇವುಗಳಿಂದ ಕೂಡಿದ್ದಿತು.

ಕೆಳದಿಯ ಸೈನ್ಯದಲ್ಲೂ ಪದಾತಿದಳದ ನಾಲ್ಕು ವಿಭಾಗಳಿದ್ದುವು. ಕತ್ತಿಕಾಳಗದವರು, ಭರ್ಜಿಯವರು, ಬಿಲ್ಗಾರರು, ಬಂದೂಕುಧಾರಿಗಳು, ಖಡ್ಗ-ಗುರಾಣಿಗಳನ್ನು ಹಿಡಿದು ಯುದ್ಧಮಾಡುವವರು, ಉತ್ತಮವಾದ ಕುದುರೆಗಳಿದ್ದ ಅಶ್ವದಳ, ಆನೆಗಳು, ಮದ್ದುಗುಂಡುಗಳು, ಹೇರುಪ್ರಾಣಿಗಳಾಗಿ ಎತ್ತುಗಳು ಇರುತ್ತಿದ್ದುವು. ಪೋರ್ಚುಗೀಸರಿಗೆ ಮತ್ತು ಇಂಗ್ಲಿಷರಿಗೆ ಮೆಣಸನ್ನೂ ಹಣವನ್ನೂಕೊಟ್ಟು ಕುದುರೆಗಳನ್ನು ಕೊಳ್ಳುತ್ತಿದ್ದರು. ಈಟಿ, ಭರ್ಜಿ, ಕತ್ತಿ, ಬಿಲ್ಲು-ಬಾಣ, ಫಿರಂಗಿಗಳ ಜೊತೆಗೆ ಕೈ ಕೋವಿಯನ್ನೂ ಬಳಸಲಾಗುತ್ತಿತ್ತು. ಸೇನೆಯಲ್ಲಿ ಮುಖ್ಯರಾದ ಅಧಿಕಾರಿಗಳೆಂದರೆ ದಂಡನಾಯಕ, ಸಬ್ಬುನೀಸ ಅಥವಾ ಸಬ್ನೀಸ್ (ಸೇನೆಯ ಯೋಧರ ಹಾಜರಿಪಟ್ಟಿ ಬರೆಯುವುದು ಮತ್ತು ವೇತನ ಬಿಲ್ಲುಗಳನ್ನು ತಯಾರಿಸುವುದು ಇವನ ಕೆಲಸ) ಸುಬೇದಾರ ಮತ್ತು ಜಮಾದಾರ. ಮುಸ್ಲಿಂ ಜಮಾದಾರರೂ ಇದ್ದರು. ಪ್ರಾಂತೀಯ ಗವರ್ನರುಗಳು ಸೇನಾಪತಿಗಳೂ ಆಗಿರುತ್ತಿದ್ದರು. ಕೋಟೆಗಳ ಜವಾಬ್ದಾರಿ ಹೊತ್ತ ಅಧಿಕಾರಿಗಳಿಗೆ ಕೆಲವು ವೇಳೆ ಸೇನಾನಾಯಕತ್ವವನ್ನೂ ವಹಿಸಲಾಗುತ್ತಿತ್ತು. ಮೂರು ಬಗೆಯ ದುರ್ಗಗಳಿರುತ್ತಿದ್ದುವು: ಕೆಳದಿ ಮತ್ತು ಇಕ್ಕೇರಿಯಂತಹ ಭೂದುರ್ಗಗಳು; ಬಿದನೂರು ಮತ್ತು ಕವಲೆದುರ್ಗಗಳಂತಹ ಗಿರಿದುರ್ಗಗಳು; ಬೇಕಲ ಮತ್ತು ಹೊನ್ನಾವರಗಳಂತಹ ಕರಾವಳಿದುರ್ಗಗಳು. ಆಗಲೇ ಸ್ಥಾಪಿತ ತತ್ವಗಳಿಗನುಗುಣವಾಗಿ ಯುದ್ಧಕ್ರಿಯೆಯು ನಡೆಯುತ್ತಿದ್ದಿತು. ಟ್ರೆಂಚ್‌ಯುದ್ಧ ಮತ್ತು ಏಕಕಾಲ ಆಕ್ರಮಣಗಳು ಮುಖ್ಯ ಲಕ್ಷಣಗಳಾಗಿದ್ದುವು. ಕೋಟೆಗೋಡೆಯ ಬಳಿ ಕಂದಕವನ್ನು ತೋಡುವುದು, ಕೋಟೆಯ ಹೊರಗೆ ಜಗಲಿ ಕಟ್ಟಿ ಫಿರಂಗಿಗಳನ್ನು ಅದರ ಮೇಲಿಡುವುದು ಅಥವಾ ಕೋಟೆಯ ಹೊರಗೆ ನೈಸರ್ಗಿಕವಾಗಿರುವ ದಿಣ್ಣೆಯ ಮೇಲೆ ಏರಿಸುವುದು, ಫಿರಂಗಿಗಳಿಂದ ಉಡಾಯಿಸಿ ಅಥವಾ ಮೈನುಗಳನ್ನು ಸಿಡಿಸಿ ಕೋಟೆಯನ್ನು ಮುರಿಯಲೆತ್ನಿಸುವುದು ರೂಢಿ. ಕೆಳದಿಯ ನೌಕಾಪಡೆಯನ್ನು ಕುರಿತೂ ಅಲ್ಲಲ್ಲಿ ಉಲ್ಲೇಖಗಳಿವೆ. ಒಟ್ಟಿನಲ್ಲಿ ಆತ್ಮರಕ್ಷಣೆ ಮತ್ತು ವಿಸ್ತರಣಗಳು ಆ ಕಾಲದ ರಾಜರ ಉದ್ದೇಶವಾಗಿದ್ದುದರಿಂದ ಸೈನ್ಯ ವ್ಯವಸ್ಥೆಗೆ ಸಾಕಷ್ಟು ಗಮನವನ್ನು ನೀಡಲಾಗುತ್ತಿತ್ತು.[೬೭]

ರಾಜನೈತಿಕ ಸಂಬಂಧಗಳು

ಪ್ರಚಲಿತ ರಾಜಕೀಯ ಸ್ಥಿತಿಗಳಿಗನುಗುಣವಾಗಿ ಮೈಸೂರಿನ ಒಡೆಯರು, ಇಕ್ಕೇರಿಯ ನಾಯಕರು ಮತ್ತು ಇತರ ರಾಜರುಗಳ ನಡುವೆ ಬೆಳೆದ ರಾಯಭಾರ ಸಂಬಂಧಗಳ ಲಕ್ಷಣವಾಗಿ ಮೈತ್ರಿ-ವೈರ ಅದಲುಬದಲಾಗುತ್ತಿದ್ದುವು. ೧೬೧೪ರಲ್ಲಿ ಸಿಂಹಾಸನವನ್ನು ವಶಪಡಿಸಿಕೊಳ್ಳಲು ಅರವೀಡು ಮನೆತನದ ಗಣ್ಯರನ್ನು ಒಳಗೊಂಡಂತೆ ನಡೆದ ಕಲಹದಲ್ಲಿ ಭಾಗವಹಿಸದೆ ಅವರು ತಟಸ್ಥರಾಗಿದ್ದರು. ಕರ್ನಾಟಕದ

ಪ್ರದೇಶಗಳ ಮೇಲೆ ತಮ್ಮ ಹಿಡಿತವನ್ನು ಬಲಪಡಿಸಿಕೊಳ್ಳಲು ಪ್ರಯತ್ನಿಸಿದರು. ವಿಜಯನಗರದ ಪ್ರಭುತ್ವದಿಂದ ತಮ್ಮ ಸ್ವಾತಂತ್ರ್ಯವನ್ನು ಅವರು ಸಾರಿದರೂ ಕೆಲವು ವರ್ಷಗಳ ಕಾಲ ಔಪಚಾರಿಕವಾಗಿ ಅಧೀನತೆಯನ್ನು ಒಪ್ಪಿಕೊಂಡೇ ಇದ್ದರು. ರಾಜಕಾರಣ ತಂತ್ರಕ್ಕೆ ಹಾಗೆ ಮಾಡುವ ಅಗತ್ಯವಿತ್ತು. ಚಕ್ರವರ್ತಿಯ ಅಧಿಕಾರವನ್ನು ಅವರು ನಿರಾಕರಿಸಿದರೂ, ಆತನೇ ತಮ್ಮ ಪ್ರಭು ಎಂದು ಹೇಳಿಕೊಳ್ಳುತ್ತಿದ್ದರು. ಅದು ಸಿಂಹಾಸನವನ್ನುಕುರಿತು ಅವರಿಗಿದ್ದ ನಿಷ್ಠೆಯ ಕುರುಹಾಗಿತ್ತು. ವಿಜಯನಗರ ಅರಸರೂ ಅವರನ್ನು ಮಾನ್ಯಮಾಡಿದ್ದರು. ೧೬೩೫ರಲ್ಲಿ ವೆಂಕಟನು ಪೆನುಗೊಂಡೆಯಲ್ಲಿ ರಾಜನಾಗಿ ಪೀಠಾರೋಹಣ ಮಾಡಿದ ಸಮಯದಲ್ಲಿ ಹಾಜರಿದ್ದ ಸ್ಥಳೀಯ ರಾಜರ ಪ್ರತಿನಿಧಿಗಳ ಪೈಕಿ ೫ನೇ ಚಾಮರಾಜ ಒಡೆಯರ್ ಮುಖ್ಯನಾದವನು. ಶ್ರೀರಂಗನ ವಿರುದ್ಧವಾಗಿ ದಕ್ಷಿಣದ ಸಾಮಂತರಾಜರು ಒಕ್ಕೂಟ ರಚಿಸಿಕೊಂಡಾಗ ಕಂಠೀರವನು ಅದಕ್ಕೆ ಸೇರಲಿಲ್ಲ. ಅದೇ ಸಮಯದಲ್ಲಿ ತನ್ನ ಹೆಸರಿನಲ್ಲಿ ನಾಣ್ಯಗಳನ್ನು ಹಾಕಿಸಿ ತನ್ನ ಸ್ವತಂತ್ರ ಪ್ರವೃತ್ತಿಯನ್ನು ವ್ಯಕ್ತಪಡಿಸಿದನು. ಮೈಸೂರಿನ ಸಮಗ್ರತೆಯನ್ನು ಪಾಲಿಸಿ, ವಿಜಾಪುರದ ಆಕ್ರಮಣಗಳಿಂದ ರಕ್ಷಿಸುವ ಕಡೆಗೆ ಅವನು ಹೆಚ್ಚು ಆಸಕ್ತನಾಗಿದ್ದುದರಿಂದ ೧೬೪೭-೧೬೫೦ರ ಕೇಂದ್ರದ ಬಿಕ್ಕಟ್ಟಿನಲ್ಲಿ ತಟಸ್ಥನಾಗಿದ್ದುಬಿಟ್ಟನು. ಅವನ ಧ್ಯೇಯ, ದಕ್ಷಿಣದಲ್ಲಿ ಮತ್ತು ಆಗ್ನೇಯದಲ್ಲಿ ಮುಸ್ಲಿಂ ಧಾಳಿಯಿಂದ ತನ್ನ ದೇಶವನ್ನು ರಕ್ಷಿಸಿಕೊಳ್ಳುವುದು. ಅಷ್ಟರ ಜೊತೆಗೆ, ವಿಶಾಲವಾದ ಅರ್ಥದಲ್ಲಿ ವಿಜಯನಗರ ಸಾಮ್ರಾಜ್ಯಕ್ಕಾಗಿ ಅವನು ಅಸಾಧಾರಣ ಸೇವೆಯನ್ನು ಸಲ್ಲಿಸಿದನು. ಚಕ್ರವರ್ತಿಯು ತನ್ನ ಮೇಲಿರಿಸಿದ್ದ ವಿಶ್ವಾಸಕ್ಕೆ ಹೃತ್ಪೂರ್ವಕವಾಗಿ ಕೃತಜ್ಞತೆ ತೋರಿಸಿದನು. ದೇವರಾಜ ಒಡೆಯರು ತಮಗಿದ್ದ ಕರ್ತ ಮತ್ತು ಮಹಾಮಂಡಲೇಶ್ವರ ಎಂಬ ಪದವಿಗಳನ್ನು ಉಳಿಸಿಕೊಂಡರೂ ವಿಜಯನಗರದ ರಾಜಕೀಯ ವಾರಸುದಾರರು ತಾವು ಎಂಬ ಪ್ರವೃತ್ತಿಯನ್ನು ತೋರಿಸಿದರು.[೬೯]

ಕರ್ನಾಟಕದ ರಾಜರು ಒಂದು ಕಡೆ ಸಣ್ಣಪುಟ್ಟ ರಾಜರ ಮೇಲೆ ಪ್ರಭುತ್ವವನ್ನು ಉಳಿಸಿಕೊಳ್ಳಲು ಹೋರಾಡಬೇಕಾಗಿತ್ತು; ಇನ್ನೊಂದು ಕಡೆ, ಬಿಜಾಪುರ ಮುಸ್ಲಿಮರ ಆಕ್ರಮಣಗಳನ್ನು ಎದುರಿಸಲು ಇತರ ನಾಯಕರ ಸಹಾಯದಿಂದ ಹೋರಾಡಬೇಕಾಗಿತ್ತು. ಆದ್ದರಿಂದ ಆ ಕಾಲದ ಅಂತಃಕಲಹಗಳ ವಿಷಯದಲ್ಲಿ ಬಹು ಜಾಗರೂಕತೆಯಿಂದ ಅವರು ತಪ್ಪಿಸಿಕೊಳ್ಳುತ್ತಿದ್ದರು. ಕೆಲವೊಮ್ಮೆ ಅವರಿಗೂ ಸ್ಥಳೀಯ ನಾಯಕರಿಗೂ ನಡುವೆ ಅಧಿಕಾರವು ಹಂಚುತ್ತಿತ್ತು; ಒಂದು ಬಗೆಯ ದಾಯಾದವೇರ್ಪಡುತ್ತಿತ್ತು. ಹೊರಶಕ್ತಿಗಳೊಡನೆ ರಾಜನೈತಿಕ ಸಂಬಂಧಗಳನ್ನು ಉಳಿಸಿಕೊಳ್ಳಲು, ಒಳಗೆ ಶಾಂತಿ ಸುವ್ಯವಸ್ಥೆಯನ್ನು ಸ್ಥಾಪಿಸಲು ಅವರು ಧರ್ಮ ಮತ್ತು ದಂಡಗಳನ್ನು ವಿಹಿತವಾಗಿ ಉಪಯೋಗಿಸುತ್ತಿದ್ದರು. ಪ್ರಾಚೀನ ಭಾರತೀಯ ದಂಡನೀತಿಯಲ್ಲಿ ಹೇಳಿರುವ ಆರು ಬಗೆಯ ವಿದೇಶನೀತಿಗಳನ್ನು ಅವರು ಅನುಸರಿಸುತ್ತಿದ್ದರು: ೧) ಶಾಂತಿ, ೨) ಆಶ್ರಯ ಕೋರಿಕೆ, ೩) ಕಾಲಹರಣ, ೪) ಯುದ್ಧ, ೫) ಆಕ್ರಮಣ, ೬) ವಂಚನೆ. ಸ್ಥಳೀಯ ನಾಯಕರ ವಿಷಯದಲ್ಲಿ ಅವರು ನಿರ್ಮೂಲನ, ಪ್ರತಿಷ್ಠಾಪನ ಮತ್ತು ಸಮುದ್ಧರಣ ನೀತಿಗಳನ್ನು ಅನುಸರಿಸಿದರು. ರಾಜಒಡೆಯರು ಅಶ್ವಾರೋಹಿಯಾಗಿ ಕಾರುಗಹಳ್ಳಿಯ ವೀರರಾಜಯ್ಯನೊಂದಿಗೆ ಯುದ್ಧ ಮಾಡುತ್ತಾ ಅವನ ಮೂಗನ್ನು ಕೊಯ್ದು, ಕೋಟೆಯನ್ನೂ ನಗರವನ್ನೂ ನೆಲಸಮಮಾಡಿ ಹರಳುಬೀಜವನ್ನು ಬಿತ್ತಿಸಿದರು. ಚಿಕ್ಕದೇವರಾಜ ಒಡೆಯರು ಬಂಡುಕೋರ ಪಾಳೆಯಗಾರರನ್ನು ಕ್ರಮೇಣ ಅವರ ನಾಯಕಸ್ಥಾನದಿಂದ ಆಸ್ಥಾನಿಕನ ಸ್ಥಾನಕ್ಕೆ ಇಳಿಸಿ ಸದಾ ತಮ್ಮೆದುರಿಗೆ ಶ್ರೀರಂಗಪಟ್ಟಣದಲ್ಲಿ ಹಾಜರಿರುವಂತೆ ಮಾಡಿಬಿಟ್ಟರು. ಹದಿನಾಡುಸೀಮೆಯ ನಂಜರಾಜ ಒಡೆಯರನ್ನು ಸಂಹರಿಸಿ, ಒಡೆತನವನ್ನು ಅವರ ತಮ್ಮ ಚಂದ್ರಶೇಖರ ಒಡೆಯನಿಗೆ ವಹಿಸಿಕೊಟ್ಟರು. ಕೆಳದಿಯ ರಾಜರು ತಾವು ಗೆದ್ದ ರಾಜರ ಬಗೆಗೆ ಸಹಾನುಭೂತಿಯಿಂದ ನಡೆದುಕೊಂಡರು. ವೈರಿಗಳಿಂದ ಕಷ್ಟಕ್ಕೊಳಗಾದವರಿಗೆ, ನ್ಯಾಯವಾದ ಆಸ್ತಿಯನ್ನು ನೆರೆಯವರು ಕಿತ್ತುಕೊಂಡಿರುವವರಿಗೆ ಸಹಾಯ ಮಾಡುತ್ತಿದ್ದರು. ೨ನೇ ವೆಂಕಟಪ್ಪನಾಯಕನು, ಹಿರಿಯ ಹನುಮಪ್ಪನಾಯಕನ ಕಿರಿಯ ಮಗನಿಂದ ಕಡೂರು ಕೋಟೆಯನ್ನು ಕಿತ್ತುಕೊಂಡು ಅದರ ನ್ಯಾಯವಾದ ವಾರಸುದಾರನಾದ ಹಿರಿಯ ಮಗನಿಗೆ

ವಹಿಸಿಕೊಟ್ಟನು. ಹಿರಿಯ ಮರಾಠಾ ಚಕ್ರವರ್ತಿ ಶಿವಾಜಿಯ ಮಗ ರಾಜಾರಾಮನಿಗೆ ಆಶ್ರಯಕೊಟ್ಟು ಚೆನ್ನಮ್ಮಾಜಿಯು ಅಮರಳಾದಳು; ಔರಂಗಜೇಬನ ಭಯಂಕರ ಮೊಗಲ್ ಸೇನೆಗೆ ಸರಿಯಾದ ಉತ್ತರಕೊಟ್ಟು ಕಳುಹಿಸಿದಳು. ಕರ್ನಾಟಕದ ರಾಜರು ಮೂರು ವರ್ಗದ ರಾಯಭಾರಿಗಳ ಮೂಲಕವಾಗಿ ಯೂರೋಪಿಯನ್ನರೊಂದಿಗೆ ರಾಜನೈತಿಕ ಸಂಬಂಧಗಳನ್ನು ಉಳಿಸಿಕೊಂಡರು. ಕರಾವಳಿಯ ಗವರ್ನರರಂತೆ ವ್ಯಾಪಕವಾದ ಅಧಿಕಾರಗಳಿದ್ದವರು; ರಾಜನಿಗೂ ವಿದೇಶೀಯರಿಗೂ ನಡುವೆ ಮಧ್ಯವರ್ತಿಗಳಾಗಿ ರಾಜಕೀಯ ಕರಾರುಗಳು, ವಾಣಿಜ್ಯ ಒಪ್ಪಂದಗಳು ಮೊದಲಾದುವನ್ನು ಮಾಡಿಕೊಳ್ಳಲು ನೆರವಾಗುತ್ತಿದ್ದವರು; ಹಾಗೂ ತಾತ್ಕಾಲಿಕವಾದ ನಿರ್ದಿಷ್ಟ ಉದ್ದೇಶದಿಂದ ರಾಯಭಾರ ನಿರ್ವಹಿಸಿದವರು. ಅವರು ವಿದೇಶಿ ರಾಯಭಾರಿಗಳನ್ನು ಗೌರವದಿಂದ ನಡೆಸಿಕೊಂಡು ಅವರನ್ನು ಸತ್ಕರಿಸುತ್ತಿದ್ದರು. ಪೋರ್ಚುಗೀಸರು ಮಂಗಳೂರು, ಬಸರೂರು ಮತ್ತು ಹೊನ್ನಾವರಗಳಲ್ಲಿ ತಮ್ಮ ಕೋಠಿಗಳನ್ನು ಕಟ್ಟಿಕೊಳ್ಳಲು ಅವಕಾಶಕೊಟ್ಟರು. ಅವರು, ವಿಶೇಷವಾಗಿ ಸೋಮಶೇಖರನಾಯಕನು, "ಈ ಕೋಠಿಗಳಿಗೆ ಎರಡು ಸುತ್ತು ಗೋಡೆಗಳಿರಕೂಡದು, ಕೊತ್ತಲಗಳನ್ನಾಗಲಿ ಬುರುಜುಗಳನ್ನಾಗಲಿ ಕಟ್ಟಕೂಡದು" ಎಂದು ವಿಧಿಸಿದ್ದನು. "ದೇಶೀಯ ಅಳತೆ ಮತ್ತು ತೂಕಗಳನ್ನೇ ಉಪಯೋಗಿಸತಕ್ಕದ್ದು, ಯಾರೊಬ್ಬನನ್ನೂ ಅವನ ಇಚ್ಛೆಗೆ ವಿರುದ್ಧವಾಗಿ ಕ್ರಿಶ್ಚಿಯನನ್ನಾಗಿ ಮತಾಂತರಿಸುವಂತಿಲ್ಲ; ಗೋವನ್ನಾಗಲಿ ಬ್ರಾಹ್ಮಣನನ್ನಾಗಲಿ ವಧಿಸಕೂಡದು" ಎಂದು ಆಜ್ಞೆ ಮಾಡಿದ್ದನು. ಇದರಿಂದ ಅವರು ವಿದೇಶೀಯರ ಉದ್ದೇಶಗಳನ್ನು ಅರ್ಥಮಾಡಿಕೊಂಡಿದ್ದರು, ಅವರಿಂದ ಬ್ರಾಹ್ಮಣರಿಗಾಗಲಿ ತಮ್ಮ ಧರ್ಮಕ್ಕಾಗಲಿ ಯಾವುದೇ ಚ್ಯುತಿ ಬಾರದಂತೆ ರಕ್ಷಿಸಲು ಕ್ರಮಗಳನ್ನು ಕೈಗೊಂಡಿದ್ದರು ಎಂಬುದು ವೇದ್ಯವಾಗುತ್ತದೆ. ಸೇನಾಸಹಾಯ, ಮೈತ್ರಿ ನಿರ್ಮಾಣ, ಸೋತು ತಮಗೆ ವಶವಾದ ಪ್ರದೇಶಗಳ ಮೇಲೆ ಒಡೆತನ ಸ್ಥಾಪನೆ, ರಾಜರ ನಡುವೆ ಆತ್ಮೀಯ ಸಂಬಂಧಗಳು, ಗಡಿ ವಿವಾದಗಳನ್ನು ಕುರಿತ ನಿರ್ಣಯ ಮತ್ತು ವಿದೇಶೀಯ ನೌಕಾಶಕ್ತಿಗಳ ಸೌಹೃದವನ್ನು ಸಂಪಾದಿಸಿ, ಅವರು ಮೂಗು ಹಾಯಿಸುವಿಕೆಯನ್ನು ತಡೆಯುವುದು- ಈ ಬಗೆಯ ವಿವಿಧ ಉದ್ದೇಶಗಳಿಗೆ ಕರಾರುಗಳನ್ನು ಮಾಡಿಕೊಳ್ಳುತ್ತಿದ್ದರು.[೬೬]

ಟಿಪ್ಪಣಿಗಳು

೧ ತಿರುಮಲಾರ್ಯ: ಚಿಕ್ಕದೇವರಾಯ ವಂಶಾವಳಿ, ಪುಯಿಲನೆಸಗುವಲ್ಲಿಯುಂ ಪೊಡವಿಯಂ ಪೊರೆವಲ್ಲಿಯಂ ಧರ್ಮಮನಾರೈದು ನಡೆಪುದೆಂದು ಬುದ್ಧಿವೇಳ್ವ.... ೩೨; ೧೩,೧೨, ಕೂಡ, ೧೮೬, ೧೮೮-೧೯೮ಗೋವಿಂದ ವೈದ್ಯ, ಕಂಠೀರವ ನರಸರಾಜವಿಜಯ, I ೨೦, ೨೪; IV ೧೦೭; IX೩; XX ೧; XXVI ೪೦; ಗಮನಿಸಬೇಕಾದ ಉಕ್ತಿಗಳು ಧರ್ಮದಿರವ, ಸ್ತ್ರೀ ಧರ್ಮಮಾರ್ಗದೊಳಗೆ, ಸುಧರ್ಮವ ತಳೆದು, ಧರ್ಮಾರ್ಥಂ ಇತ್ಯಾದಿ, ಪು. ೬, ೭, ೬೩, ೧೫೫, ೩೭೯, ೪೯೮; ಎ.ಕ. ೫.(೧) ಮತ್ತು (೨) ಎಸ್.ಜಿ ೬೪; ತಿರುಮಲಾರ್ಯ, ಚಿಕ್ಕದೇವರಾಜ ವಿಜಯಂ. ಕರ್ನಾಟಕ ಕಾವ್ಯ ಮಂಜರಿ ಸೀರೀಸ್ ನಂ ೧೭, ಮೈಸೂರು. ೧೮೯೬, ೫ ೪-೧೦, ಎ.ಕ. ೪, (೨) ವೈಡಿ ೫೪, ಪು. ೧೫೭ (ಪಠ್ಯ) ಹೋಲಿಸಿ, ಮನು ೭, ೨೬, ೩೦, ೩೧, ೪೪,ಪು ೨೨೦-೨೨, ೩, ೧೧೦, ಪು. ೨೧೬ ಮತ್ತು ೨೩೩, ೯, ೩೦೮ ಪು. ೩೯೭,; ೯ ೩೦೪, ಪು. ೩೯೬; ಗೌತಮ XI,೨ ಮತ್ತು ೪, ಪು. ೨೩೧-೩೨, XI, ೨೮, ಪು. ೨೩೫; ವಸಿಷ್ಠ XIX, ೧, ಪು. ೯೬, XIX, ೭, ಪು. ೯೬; ಬೌಧಯನ ೧, ೧೯ನೇ ಕಂಡಿಕೆ; ಆಪಸ್ತಂಬ II, ೧೦, ಖಂಡ ೨೬, ೧ ಇತ್ಯಾದಿ

೨ ಪೀಟ್ರೋ ಡೆಲ್ಲಾವಲ್ಲೆ: ದಿ ಟ್ರಾವೆಲ್ಸ್ ಇನ್ ಇಂಡಿಯಾ (ಅನುವಾದ: ಜಿ ಹೇವರ್ಸ್, ಲಂಡನ್ ೧೮೯೨, I, ಪು. ೧೯೧); ರೈಸ್ ಬಿ. ಲೂಯಿ: ಮೈಸೂರು ಇನ್‌ಸ್ಕ್ರಿಪ್ಷನ್ಸ್, ಬೆಂಗಳೂರು, ೧೮೭೯, ೨, ಪು. ೪೩೪; ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್, ದಿ ಸೋರ್ಸಸ್ ಆಫ್ ವಿಜಯನಗರ ಹಿಸ್ಟರಿ,ಮದರಾಸು ೧೯೧೯,ಪು. ೧೯೪; ಕ್ಯು ಜೆ.ಎಂ. ಎಸ್.೨೨, ಪು. ೮೧; ಲಿಂಗಣ್ಣಕವಿ, ಕೆಳದಿನೃಪ ವಿಜಯಂ, ಪು. ೧೧೮-೨೧; ಎ.ಕ. ೬, ಎಸ್.ಜಿ. ೨; ಎಂ.ಎ. ಆರ್. ೧೯೧೬, ಪು. ೬೬

೩ ಲಿಂಗಣ್ಣ ಕವಿ, ಪೂರ್ವೋಕ್ತ, ಪು. ೮೬; ಎಸ್ ಕೃಷ್ಣಸ್ವಾಮಿ ಅಯ್ಯಂಗಾರ್, ಪೂರ್ವೋಕ್ತ, ಪು. ೩೪೫, III; ಅನಾಲ್ಸ್ ಆಫ್ ದಿ ಮೈಸೂರು ಸೂರು ರಾಯಲ್ ಫ್ಯಾಮಿಲಿ, ಸಂ. ಬಿ. ರಾಮಕೃಷ್ಣರಾವ್, ಮೈಸೂರು ೧೯೧೬, I, ೧೦೦-೧೦೧; ತಿರುಮಲಾರ್ಯ, ಪೂರ್ವೋಕ್ತ, V-೯೬; ಎ.ಕ. ೧೨, ಕೆ.ಜಿ. ೩೭, ಅದೇ ೨, ೭೨, ೭೪-೭೯, ಅದೇ ೪, (೨) ವೈಡಿ ೫೩, ೧೫-೧೬; ೫೪ ಪು. ೧೫೬-೧೫೭ (ಪಠ್ಯ)

೪ ವೆಂಕಟರಾಮಯ್ಯ, : ಪೂರ್ವೋಕ್ತ, ಆಧ್ಯಾಯ ೨೦; ರಾಮಕೃಷ್ಣರಾವ್ ಬಿ. ಪೂರ್ವೋಕ್ತ, I ೪೦-೪೨; ಎ.ಕ. ೩ (೧) ಎಂ.ವೈ ೪; ೩ (೧) ಟಿ.ಎನ್ ೬೨, ಎನ್.ಜೆ. ೧೯೮; ೪, (೨) ಜಿ.ಯು ೧೦; ಮೈಸೂರು ಡಿಸ್ಟ್ರಿಕ್ಟ್ ಸಪ್ಲಿಮೆಂಟರಿ ವಾಲ್ಯೂಮ್ ೨, ೧೨೦-೧೩೨; ಎಸ್. ಆರ್. ೨೮೭; ಎಂ.ಆ.ಆರ್. ೧೯೦೮, ಪು. ೨೩, ಪ್ಯಾರಾ ೭೬, ೧೯೧೭, ಪು. ೫೮-೫೯, ಪ್ಯಾರಾ ೧೪೩.

೫ ಲಿಂಗಣ್ಣಕವಿ, ಪೂರ್ವೋಕ್ತ, ಪು. ೮೬; ಎ.ಕ. ೬, ಎಸ್.ಜಿ. ೫, ೧೧, ಕೆ.ಪಿ. ೬೧; ೭ ಎಸ್.ಎ. ೧೨೩, ಎಸ್ ಎಚ್ ೨; ೮, ಟಿ.ಇ. ೧೫೬ ೪೨, ೪೯, ೫೬, ೩೮, ೧೬೬, ಎನ್.ಜಿ. ೭೯, ಎಸ್.ಎಚ್ ೨೬೬; ೪ (೨) ಜಿ.ಯು. ೬೪, ೬೫, ೫, (೧) ಮತ್ತು (೨) ಎಚ್. ಎನ್. ೮, ಸಿ.ಎನ್. ೨೭೩; ೨, ಎಸ್. ಬಿ. ೨೫೦ ಮತ್ತು ೩೫೨; ರೈಸ್ ಬಿ ಲೂಯಿ, ಮೈಸೂರ್ ಅಂಡ್ ಕೂರ್ಗ್ ಫ್ರಮ್ ಇನ್‌ಸ್ಕ್ರಿಪ್ಷನ್ಸ್, ಪು. ೧೫೯; ಚಿದಾನಂದ, ಮುನಿವಂಶಾಭ್ಯುದಯ (ಸು. ೧೭೦೦) ಹಸ್ತಪ್ರತಿ ಸಂಖ್ಯೆ ಎ ೧೯೮, ಪು. ೨-೨೦

೬ ದೇವಚಂದ್ರ, : ರಾಜಾವಳೀ ಕಥೆ ಹಸ್ತಪ್ರತಿ ಎ-೬೫ , XII, ೪೭೪-೪೭೫ ಲಿಂಗಣ್ಣಕವಿ, ಪೂರ್ವೋಕ್ತ, ಪು. ೮೮-೮೯ ಕ್ಯುಜೆ. ಎಂ.ಎಸ್ ೨೨, ಪು. ೭೮

೭ ತಿರುಮಲಾರ್ಯ, ಪೂರ್ವೋಕ್ತ, ಪು. ೫೩, ೧೬೬-೧೮೮, ಚಿಕ್ಕದೇವ ರಾಜವಿಜಯಂ IV, ೫೧-೧೮೦

೮ ಲಿಂಗಣ್ಣಕವಿ, ಪೂರ್ವೋಕ್ತ, ಪು. ೧೩೫, ೧೬೭, ೧೮೫-೧೮೬ ೧೯೪-೧೯೫

೯ ಮೆಕಂಂಜೀ ಕಲೆಕ್ಷನ್ಸ್, ಹಸ್ತ ಪ್ರತಿ ಸಂ . ೧೮-೧೫, ೨೦, ಪು. ೩೦;
ರಾಮಕೃಷ್ಣ ರಾವ್, ಬಿ.: ಪೂರ್ವೋಕ್ತ, ೧೪೦-೧೪೨; ವೆಂಕಟರಮಣಯ್ಯ, ಪೂರ್ವೋಕ್ತ, ೩೧, ಪ್ಯಾಲೆಸ್ ಹಿಸ್ಟರಿ, ೧೩೩-೫೨

೧೦ ತಿರುಮಲಾರ್ಯ, ಪೂರ್ವೋಕ್ತ, ೧೮೬; ವಿಲ್ಕ್, ಪೂರ್ವೋಕ್ತ ೫-೭೦, ಆನ್ಯುಯಲ್ ರಿಪೋರ್ಟ್ ಆನ್ ಸೌತ್ ಇಂಡಿಯನ್ ಎಪಿಗ್ರಫಿ, ಸಿ.ಪಿ. ನಂ. ೮, ೧೯೪೦-೪೧; ಎ.ಕ. ೩ (೧) ಎಸ್.ಆರ್. ೧೫೧, ೧೦೩, ಟಿ.ಎನ್. ೬೨; ೧೨ ಕೆ.ಜಿ. ೩೭ ಇತ್ಯಾದಿ ದೇವಬ್ರಾಹ್ಮಣ ಪೂಜಾರ್ಥಂ ಸಾಮ್ರಾಜ್ಯ ಪ್ರತಿಪಾಲಯನ್.

೧೧ ತಿರುಮಲಾರ್ಯ, ಪೂರ್ವೋಕ್ತ, ಪು ೧೮೯-೧೭೦; ಎ.ಕ. ೪ (೨) ವೈಡಿ ೫೪; ೩ (೧) ಎಸ್.ಆರ್ ೧೪

೧೨ ತಿರುಮಲಾರ್ಯ, ಪೂರ್ವೋಕ್ತ, ೧೭೨-೧೮೪, ದೇವಚಂದ್ರ, ಪೂರ್ವೋಕ್ತ, ೧೨, ೪೭೪-೪೭೫, ಪೀಟ್ರೋದೆಲ್ಲಾವಲೆ ಪೂರ್ವೋಕ್ತ ೨; ಎ.ಕ. ೭, ಎಸ್.ಎಚ್. ೨; ಲಿಂಗಣ್ಣಕವಿ, ಪೂರ್ವೋಕ್ತ, ಪು. ೭೫, ೯೩; ಚಿಕ್ಕದೇವರಾಜವಿಜಯಂ ೪, ೧೦೩-೧೪೯

೧೩ ಅದೇ, ಪು. ೧೩೨; ಗೋವಿಂದವೈದ್ಯ, ಪೂರ್ವೋಕ್ತ, ಅಧ್ಯಾಯ ೪, ೮೪-೮೬

೧೪ ವಿಜಯನಗರ ಸೆಕ್ಸೆಂಟಿನರಿ ಕಮೆಮೊರೇಷನ್ ವಾಲ್ಯೂಮ್, ೧೯೩೬ ಪು. ೨೬೩; ಎನ್. ಕೃಷ್ಣಸ್ವಾಮಿ ಅಯ್ಯಂಗಾರ್, ಪೂರ್ವೋಕ್ತ, ಪು. ೩೪೬

೧೫ ಲಿಂಗಣ್ಣಕವಿ, ಪೂರ್ವೋಕ್ತ, ಪು. ೭೦, ತಿಮ್ಮಪ್ಪಯ್ಯ ಮತ್ತು ಇತರರು, ಪೂರ್ವೋಕ್ತ, ೧-೪೪, ೨-೫೫; ವೆಂಕಟರಮಣಯ್ಯ ಪೂರ್ವೋಕ್ತ, ೨೨

೧೬ ಅನಾಲ್ಸ್ ಆಫ್ ದಿ ಮೈಸೂರು ರಾಯಲ್ ಫ್ಯಾಮಿಲಿ, ೧ ೧೭-೧೮, ೧೦೨-೧೦೩; ವಿಲ್ಕ್, ಪೂರ್ವೋಕ್ತ ೧ ೬೭-೬೮; ಎಸ್ ಕೃಷ್ಣ ಸ್ವಾಮಿ ಅಯ್ಯಂಗಾರ್: ಏನ್ಷಂಟ್ ಇಂಡಿಯಾ, ಪು. ೨೯೫; ಲಿಂಗಣ್ಣಕವಿ, ಪೂರ್ವೋಕ್ತ, ಪು. ೧೨೪, ೧೧೮, ೧೩೦

೧೭ ಅದೇ, ಪು. ೧೩೨ ಅನಾಲ್ಸ್ ಆಫ್ ದಿ ಮೈಸೂರು ರಾಯಲ್ ಫ್ಯಾಮಿಲಿ, ೧-೯೩

೧೮ ಗೋವಿಂದವೈದ್ಯ, ಪೂರ್ವೋಕ್ತ, ಅಧ್ಯಾಯಗಳು ೩-೪; ಚಿದಾನಂದ, ಪೂರ್ವೋಕ್ತ ೩-೧೮; ತಿರುಮಲಾರ್ಯ, ಪೂರ್ವೋಕ್ತ ೧೩೮-೧೬೦; ಚಿಕ್ಕದೇವರಾಜ ವಿಜಯಂ, ೩-೧೨೯-೧೪೫; ಎಂ.ಎ.ಆರ್ ೧೯೩೦ ನಂ. ೨೫,

೧೯೨೭; ನಂ. ೧೭೦, ಪು ೧೪೫; ಎ.ಕ. ೩ (೧) ಎಂ. ವೈ.ಟಿ ೨- ೧೦-೧೧; ತಿಮ್ಮಪ್ಪಯ್ಯ ಮತ್ತು ಇತರರು, ಪೂರ್ವೋಕ್ತ, ೧-೫೭; ಎ.ಕ. ೩ (೧) ಎಸ್.ಆರ್ ೩೬; ಬುಕನನ್, ಪೂರ್ವೋಕ್ತ, ೩, ಪು. ೧೨೭, ೧೩೪; ಲಿಂಗಣ್ಣಕವಿ, ಪೂರ್ವೋಕ್ತ, ಪು. ೭೯,೧೩೫,೧೬೭,೧೮೫-೮೬,೧೯೪-೯೫; ಎಸ್ ಕೃಷ್ಣಸ್ವಾಮಿ ಅಯ್ಯಂಗಾರ್, ಪೂರ್ವೋಕ್ತ, ಪು. ೩೪೬

೧೯ ಅನಾಲ್ಸ್ ಆಫ್ ದಿ ಮೈಸೂರು ರಾಯಲ್ ಫ್ಯಾಮಿಲಿ, ೧, ೩೩-೪೦; ಗೋವಿಂದವೈದ್ಯ, ಪೂರ್ವೋಕ್ತ, ೭, ೩೦-೪೩, ೨೪, ೨೨ ೫೧೫, ೧೮-೪೮, ೫೧-೭೪, ೨೨ ೫೯, ೬೦, ೬೧, ೮೨; ೨೩, ೭೯-೮೧, ೮೩-೮೯, ೨೫ ೭೯, ೮೬, ೧೦೦,೧೦೨ ಇತ್ಯಾದಿ. ಎ.ಕ. ೫, (೧) ಮತ್ತು (೨) ಎ.ಜಿ. ೬೪; ಎ.ಕ. ಮೈಸೂರು ಡಿಸ್ಟ್ರಿಕ್ಟ್ಸ್ ಸಪ್ಲಿಮೆಂಟರಿ ವಾಲ್ಯೂಮ್. ಎಂ ವೈ ೧೧೪ ೨, ೩-೩೨; ಪೀಟ್ರೋ ದೆಲ್ಲಾ ವಿಲ್ಲೆ, ಪೂರ್ವೋಕ್ತ ೨, ಪು. ೨೫೧-೫೭, ೮೪, ೨೬೫; ಟಿ.ವಿ. ಮಹಾಲಿಂಗಂ, ಸೌತ್ ಇಂಡಿಯನ್ ಪಾಲಿಟಿ, ಪು. ೬೬

೨೦ ಎ.ಕ. ೩, ಎಸ್.ಆರ್. ೩೬: ಅನಲ್ಸ್ ಆಫ್ ದಿ ಮೈಸೂರು ರಾಯಲ್ ಫ್ಯಾಮಿಲಿ, ೧೬೮; ತಿಮ್ಮಪ್ಪಯ್ಯ ಮತ್ತು ಇತರರು, ೨, ೪೬-೪೭; ವಿಲ್ಕ್ಸ್ ೨, ೫೬; ಲಿಂಗಣ್ಣಕವಿ, ಪೂರ್ವೋಕ್ತ, ಪು. ೧೦೨, ೧೭೭, ೧೨೮; ಜನರಲ್ ಆಫ್ ದಿ ಬಾಂಬೇ ಹಿಸ್ಟಾರಿಕಲ್ ಸೊಸೈಟಿ, ೧೯೩೦, ೩-೨, ಪು. ೨೬೭-೨೬೮; ಕ್ಯುಜೆ ಎಂ.ಎಸ್. ೧೨, ಪು. ೪೯

೨೧ ತಿರುಮಲಾರ್ಯ, ಪೂರ್ವೋಕ್ತ, ಪು. ೨೩; ಎ.ಕ. ಮೈಸೂರು ಡಿಸ್ಟ್ರಿಕ್ಟ್ಸ್ ಸಪ್ಲಿಮೆಂಟರಿ ವಾಲ್ಯೂಮ್, ಎಂ.ಡಿ. ೧೭, ೨, ೬-೯; ಗೋವಿಂದವೈದ್ಯ, ಪೂರ್ವೋಕ್ತ ೨೫, ೮೪, ೮೨, ೭೪, ೮೫, ೫೬; ಎ.ಕ. ೫ (೧) ಮತ್ತು (೨), ಸಿ.ಎನ್. ೧೮೫; ೮, ಟಿ.ಐ. ೧೮೦; ಲಿಂಗಣ್ಣಕವಿ ಪೂರ್ವೋಕ್ತ, ಪು.೧೯೬ ಇತ್ಯಾದಿ

೨೨ ಗೋವಿಂದವೈದ್ಯ, ಪೂರ್ವೋಕ್ತ, XXV ೫೪-೫೯,೭೫-೭೭. ೮೦, ೮೬-೮೭, ೯೧, ೭೮, ೮೩ ಮೆಕೆಂಜೀ ಕಲೆಕ್ಷನ್ಸ್, ೧೬೦೯ರ ಶಾಸನ; ಎಂ.ಎಸ್ ೧೮-೧೫-೨೦, ಎಫ್ ಓ ಎಲ್ ೨೩-೨೪; ಎ.ಕ. ೩ (೧) ಟಿ.ಎನ್. ೬೨ ಲಿಂಗಣ್ಣಕವಿ, ಪೂರ್ವೋಕ್ತ, ಪು. ೯೬ ೯೦; ಎಂ.ಎ.ಆರ್, ೧೯೧೬, ಪ್ಲೀಟ್ ೧೫, ೧, ೬೭, ೧೯೨೩, ಪು. ೮೮, ೧೯೧೬, ಪು. ೬೬; ಎ.ಕ. ೮, ಟಿ.ಐ. ೧೧೮

೨೩ ಅದೇ, ೯, ಕೆ.ಎನ್. ೯೪ ಪ್ಯಾಲೆಸ್ ಹಿಸ್ಟರಿ ಪು. ೫೪, ೭೦-೭೨, ೧೦೨-೧೦೩

೨೪ ಕ್ಯು ಜೆ ಎಂ ಎಸ್, ೨೩, ಪು. ೨೬-೨೭

೨೫ ಅನಲ್ಸ್ ಆಫ್ ದಿ ಮೈಸೂರು ರಾಯಲ್ ಫ್ಯಾಮಿಲಿ ೧, ೧೪೬-೧೫೦

೨೬ ಎ.ಆರ್.ಎನ್.ಐ. ಇ ೧೯೨೮-೨೯, ನಂ. ೪೮೭ ಪು. ೪೬; ಎ.ಕ. ೬, ಕೆ.ಪಿ. ೬೧, ೮, ಟಿ.ಐ, ೧೬೫, ೮೯, ೪೭, ೬೪, ೧೮೦ ಇತ್ಯಾದಿ. ಎನ್. ಆರ್. ೧; ೭ ಎಸ್.ಎಚ್ ೨ ಇತ್ಯಾದಿ

೨೭ ಅನಾಲ್ಸ್ ಆಫ್ ದಿ ಮೈಸೂರು ರಾಯಲ್ ಫ್ಯಾಮಿಲಿ, ೧, ೧೧೬-೧೧೭ ಬಾರಾಮಹಲ್ ರಿಕಾರ್ಡ್ಸ್ ಕೂಡ ನೋಡಿ.

೨೮ ಲಿಂಗಣ್ಣಕವಿ, ಪೂರ್ವೋಕ್ತ, ಪು. ೧೨೮, ೧೧೨-೧೩; ಎಂ.ಎ.ಆರ್ ೧೯೩೦, ನಂ. ೬೫, ಪು. ೨೧೯, ೧೯೪೩, ನಂ. ೩೧, ಪು ೧೦೮, ೧೯೧೬, ಪು. ೬೬; ಎ.ಕ. ೮, ಎಸ್.ಬಿ. ೨೬೬, ಪು. ೧೧೪-೧೧೫, ಹ್ಯಾಮಲ್ಟಿನ್ ಅಲೆಗ್ಸಾಂಡರ್, ಎ ನ್ಯೂ ಅಕೌಂಟ್ ಆಫ್ ದಿ ಈಸ್ಟ್ ಇಂಡಿಯಾಸ್,ಲಂಡನ್, ೧೯೩೦, ೧, ಪು. ೧೫೮; ಎ.ಕ. ೭, ಎಸ್.ಕೆ. ೨೧೦

೨೯ ಪ್ಯಾಲೆಸ್ ಹಿಸ್ಟರಿ, ಪು. ೫೪

೩೦ ಅದೇ, ಪು. ೬೪, ೮೧-೮೨, ೧೧೪, ೧೩೩ ಇತ್ಯಾದಿ. ಅನಾಲ್ಸ್ ಆಫ್ ದಿ ಮೈಸೂರು ರಾಯಲ್ ಫ್ಯಾಮಿಲಿ ೧, ೫೫

೩೧ ತಿರುಮಲಾರ್ಯ, ಪೂರ್ವೋಕ್ತ, ೨, ೭೦-೭೧, ಮೈಸೂರು ದೊರೆಗಳ ವಂಶಾವಳಿ, ಪು. ೨೬; ವೆಂಕಟರಮಣಯ್ಯ, ಪೂರ್ವೋಕ್ತ ಪು. ೨೧

೩೨ ಅನಾಲ್ಸ್ ಆಫ್ ದಿ ೧, ೫೮-೫೯; ಮೈಸೂರು ಯೂನಿವರ್ಸಿಟಿ ಜರ್ನಲ್ ೩-೨; ಗೋವಿಂದವೈದ್ಯ, ಪೂರ್ವೋಕ್ತ, ಅಧ್ಯಾಯ ೨೫, ೬, ೭ ; ಪ್ಯಾಲೇಸ್ ಹಿಸ್ಟರಿ, ಪು. ೧೨೮-೧೩೨; ವಿಲ್ಕ್ಸ್, ಪೂರ್ವೋಕ್ತ, ಪು ೯೫-೯೬; ಎ.ಕ. ೧೨, ಕೆ.ಜಿ. ೪೬, ೨ ಎನ್.ಜೆ. ೧೯೮, ಎಸ್.ಆರ್ ೧೦೩ ಇತ್ಯಾದಿ

೩೩ ಅನಾಲ್ಸ್ ಆಫ್ ದಿ ಮೈಸೂರು ರಾಯಲ್ ಫ್ಯಾಮಿಲಿ ೧, ೩೦-೩೨

೩೪ ಪೀಟ್ರೋದೆಲ್ಲಾ ವಿಲ್ಲೆ, ಪೂರ್ವೋಕ್ತ, ೨, ಪು ೨೨೫-೨೬, ೨೬೦-೬೧ ೨೪೯,೧೯೪,೨೪೯, ೨೨೭; ಲಿಂಗಣ್ಣಕವಿ, ಪೂರ್ವೋಕ್ತ, ಪು-೯೦, ೧೧೪-೧೫, ೮೪, ಇತ್ಯಾದಿ

೩೫ ಎ.ಕ. ೨, ಮೈಸೂರು ಡಿಸ್ಟ್ರಿಕ್ಟ್ ಸಪ್ಲಿಮೆಂಟರಿ ವಾಲ್ಯೂಮ್, ಎನ್ .ಆರ್ ೧೯೮, ಮೈಸೂರು ಗೆಜೆಟಿಯರ್, ೨-೩,: ೨೩೮೪; ಹೋಲಿಸಿ, ಎ.ಕ. ೪ (೨) ವೈಡಿ, ೫೪, ಪು. ೧೫೬ (ಪಠ್ಯ), ಭದ್ರ ಪೀಠಾಧಿಪಃ

೩೬ ತಿರುಮಲಾರ್ಯ, ಪೂರ್ವೋಕ್ತ, ೮; ಗೋವಿಂದವೈದ್ಯ ೩, ೧೭; ತಿಮ್ಮಪ್ಪಯ್ಯ ಮತ್ತು ಇತರರು, ಪೂರ್ವೋಕ್ತ, ೧, ೭೭-೭೮; ಲಿಂಗಣ್ಣಕವಿ, ಪೂರ್ವೋಕ್ತ ಪು. ೯೦, ೯೬,೯೮, ೧೦೫, ಟಿಪ್ಪಣಿ, ೯೮-೯೯, ೧೨೫, ೧೬೯ ಎನ್, ೧೭೪,೧೭೭, ೧೩೫-೧೩೬, ೧೬೧-೧೬೩, ೧೬೬

ಅಧ್ಯಾಯ : ಹನ್ನೊಂದು

ವಿಜಯನಗರೋತ್ತರ ಕಾಲದ ಸಾಮಾಜಿಕ ಒಲವುಗಳು
(ಕ್ರಿ.ಶ. ೧೬೦೦-೧೭೬೧)

೧

ವಿಜಯನಗರಾನಂತರದ ಕಾಲದಲ್ಲಿ ಸಮಾಜವು ಸ್ತರೀಕೃತ ವ್ಯವಸ್ಥೆಯಾಗೇ ಮುಂದುವರಿದಿತ್ತು. ತತ್ವತಃ ಅದು ವರ್ಣಾಶ್ರಮ ಧರ್ಮವನ್ನು ಅನುಸರಿಸಿದ್ದಿತಾದರೂ[೧] ವಾಸ್ತವವಾಗಿ ಅದು ಜಾತಿ ವ್ಯವಸ್ಥೆಯಾಗಿತ್ತು. ಅದಕ್ಕಿದ್ದ ಮೂರು ಮೂಲಾಂಶಗಳು, ಅನುಕ್ರಮಿಕತೆ, ವಿಶೇಷತೆ ಮತ್ತು ಪ್ರತ್ಯೇಕತೆಗಳು. ಆದರೂ ಸಮಾಜವು ನಿಂತ ನೀರಾಗಿರಲಿಲ್ಲ. ಪರಸ್ಪರ ಪ್ರತಿಕ್ರಿಯಿಸುವ, ವೈವಿಧ್ಯಪೂರ್ಣವಾಗಿರುವಂತೆ ತೋರಿದರೂ ಆಂತರಿಕವಾಗಿ ಏಕರೂಪದ್ದಾದ ಆನುವಂಶಿಕ ತಂಡಗಳನ್ನು ಸ್ಥಾನಮಾನದ ಅನುಕ್ರಮಿಕತೆಗೆ ಅಳವಡಿಸಿ ಕ್ರೋಢೀಕರಿಸಲು ಅದು ಪ್ರಯತ್ನಿಸಿತು. ಸಂಕೀರ್ಣವಾದ ವೃತ್ತಿಗೌರವವು, ಈ ವಿಸ್ತೃತವಾಗುತ್ತಿರುವ ಸಮಾಜಕ್ಕೆ ಅತ್ಯಗತ್ಯವಾಯಿತು. ಆದ್ದರಿಂದ ವ್ಯಕ್ತಿಯ ವಿವಿಧ ಚಟುವಟಿಕೆಗಳನ್ನು ಸಾಮಾನ್ಯ ಉದ್ಯಮಗಳನ್ನಾಗಿ ಪರಿವರ್ತಿಸಲು, ಹಾಗೆಯೇ ವಿಭಿನ್ನ ಉದ್ಯಮಗಳನ್ನು ಒಟ್ಟಾರೆ ಬೃಹತ್ ಕಾರ್ಯವ್ಯವಸ್ಥೆಯಾಗಿ ಕ್ರೋಢೀಕರಿಸಲು ಪ್ರಯತ್ನ ಮಾಡಲಾಯಿತು. ವಿಶೇಷವಾಗಿ ಇದು ನಡೆದದ್ದು ಚಿಕ್ಕದೇವರಾಜ ಒಡೆಯರ ಕಾಲದಲ್ಲಿ. ಒಂದು ಕಾರ್ಯತಂತ್ರವಾಗಿ ಸಮಾಜವು, ಹಿಂದಿನ ಕಾಲಗಳಲ್ಲಿನಂತೆಯೇ ತನ್ನ ಸದಸ್ಯರಿಗೆ ಬೇರೆ ಬೇರೆ ಸ್ಥಾನಗಳನ್ನು ಹಂಚಿ, ಸಂಬಂಧಿತ ಕರ್ತವ್ಯಗಳನ್ನು ಅವರು ತಪ್ಪದೆ ಆಚರಿಸುವಂತೆ ಮಾಡಿತ್ತು. ಕೆಲವು ಸ್ಥಾನಗಳು ಹೆಚ್ಚು ಮುಖ್ಯವಾಗಿದ್ದುವು, ಕೆಲವು ಕೆಲಸಗಳು ನಿರ್ವಹಿಸಲು ಉಳಿದುವಕ್ಕಿಂತ ಕಷ್ಟವಾಗಿದ್ದುವು. ಆದ್ದರಿಂದ ಪ್ರತಿಫಲಗಳೂ ಬೇರೆಬೇರೆಯಾಗಿರುತ್ತಿದ್ದುವು. ಯಾರು ಕರ್ತವ್ಯಗಳನ್ನು ಉತ್ತಮತರವಾಗಿ ಆಚರಿಸಬಲ್ಲರೋ ಅವರು ಸಂಯೋಜಕ ಸ್ಥಾನಗಳನ್ನು ಪಡೆದುಕೊಂಡುದರಿಂದ ಅವರ ಅಧಿಕಾರ, ಅಂತಸ್ತುಗಳೂ ಹೆಚ್ಚಿದುವು. ಅವರು ನಿರ್ದೇಶನಕ್ಕಾಗಿ ತಮ್ಮ ಕಡೆ ನೋಡುವ ವ್ಯಕ್ತಿಗಳ ನಡವಳಿಕೆಯನ್ನು ನಿಯಂತ್ರಿಸುವುದು ಮಾತ್ರವಲ್ಲದೆ, ರಾಜಕೀಯ ಆರ್ಥಿಕ-ಸಾಮಾಜಿಕ-ಶೈಕ್ಷಣಿಕ-ಧಾರ್ಮಿಕ ಈ ಹಲವು ಸೇವೆಗಳನ್ನು ನಿಯಂತ್ರಿಸುತ್ತಿದ್ದರು. ಇವರ ಫಲವಾಗಿ ಸಾಮಾಜಿಕ ಅಸಮತೆ ಮತ್ತು ವಿವಿಧ ವಸ್ತು-ಸೇವೆಗಳ ವ್ಯತ್ಯಸ್ತ ಹಂಚಿಕೆಗಳು ಈ ಅರ್ಥದಲ್ಲಿ ಕ್ರಿಯಾಪರವಾದುವು. ಸ್ಥಾನ-ಮಾನದಲ್ಲಿ ವ್ಯತ್ಯಾಸಗಳಿಗೆ ಕೆಲವು ವಿಭಿನ್ನ ಕರ್ತವ್ಯಗಳ ನಿರ್ವಹಣೆಯೊಂದಿಗೆ ಸಂಬಂಧವಿತ್ತು. ವರ್ಗದ ಉಳಿವಿಗೆ, ಅದರಲ್ಲೂ ಆ ಕಾಲದ ಬೆಳೆಯುತ್ತಿರುವ ಸಮಾಜದ ಸ್ಥಿತಿಗತಿಗೆ ಅದು ಅಗತ್ಯವೂ ಆಗಿತ್ತು.

ಬ್ರಾಹ್ಮಣರು, ಕ್ಷತ್ರಿಯರು ಮತ್ತು ವೈಶ್ಯರು ವಿವಿಧ ಅಧಿಕಾರ ಮೂಲಗಳನ್ನು ನಿಯಂತ್ರಿಸುತ್ತಾ, ಸಮಾಜದಲ್ಲಿ ಲಭ್ಯವಿರುವ ಸರಕು ಮತ್ತು ಸೇವೆಗಳ ಬಹುದೊಡ್ಡ ಪಾಲನ್ನು ಪಡೆಯುತ್ತಿದ್ದರು. ಸಮಾಜದಲ್ಲಿ ಬ್ರಾಹ್ಮಣರಿಗೆ ಗೌರವದ ಸ್ಥಾನವಿದ್ದುದರ ಜೊತೆಗೆ ಧಾರ್ಮಿಕಾಚರಣೆಯ ಸ್ಥಾನವೂ ಅವರದೇ ಆಗಿತ್ತು. ಶಾಸನಗಳು ಮತ್ತಿತರ ದಾಖಲೆಗಳು ಬ್ರಾಹ್ಮಣರನ್ನು ದೊಡ್ಡ ಮಾತುಗಳಲ್ಲಿ ಪ್ರಶಂಸಿಸುತ್ತವೆ.[೨] ಅವರು

ವ್ಯಕ್ತಪಡಿಸುವ ಬುದ್ಧಿ ಮತ್ತು ಹೃದಯಗಳ ಅನ್ಯಾದೃಶ ಸಮಾನತೆಯನ್ನು ಹೊಗಳುತ್ತವೆ. ಈ ಉತ್ಪ್ರೇಕ್ಷಿತ ವರ್ಣನೆಗಳನ್ನು ಸ್ವಲ್ಪ ಬಿಗಿ ಧೋರಣೆಯಿಂದಲೇ ಸ್ವೀಕರಿಸಬೇಕು. ಏಕೆಂದರೆ, ಈ ಶಾಸನಗಳ ಕರ್ತೃಗಳಲ್ಲಿ ಬಹುತೇಕ ಜನ ಈ ಕಾಲಕ್ಕೆ ಸೇರಿದವರೇ. ಅಂದಮಾತ್ರಕ್ಕೆ, ಕೆಲವು ಬ್ರಾಹ್ಮಣ ವ್ಯಕ್ತಿಗಳು ಹೆಚ್ಚು ಚುರುಕಾದ ಬುದ್ಧಿಯನ್ನೂ, ಹೆಚ್ಚು ದಯಾರ್ದ್ರ ಹೃದಯವನ್ನೂ ಹೊಂದಿದ್ದುದನ್ನು ಅಲ್ಲಗಳೆಯುವುದಲ್ಲ. ಬ್ರಾಹ್ಮಣರು ಮಾತ್ರವೇ ಆಚರಿಸಬೇಕಾಗಿದ್ದ ಆರು ಕರ್ಮಗಳನ್ನು ಶಾಸನಗಳು ಹೇಳುತ್ತವೆ. ಅವರನ್ನು ಷಟ್ಕರ್ಮ ನಿರತಾಃ ಎಂದು ವರ್ಣಿಸುತ್ತವೆ. ಆ ಆರು ಕರ್ಮಗಳು: ಓದುವುದು (ಅಧ್ಯಯನ),ಕಲಿಸುವುದು (ಅಧ್ಯಾಪನ), ಯಾಗಗಳನ್ನು ಮಾಡುವುದು (ಯಜನ), ಯಾಗ ಮಾಡಿಸುವುದು (ಯಾಜನ), ದಾನ ಕೊಡುವುದು (ದಾನ), ದಾನವನ್ನು ಸ್ವೀಕರಿಸುವುದು (ಪರಿಗ್ರಹ). ಈ ವರ್ಗದ ವ್ಯಕ್ತಿಗಳಿಗೆ ಮಾತ್ರವೆ ಪುರೋಹಿತರಾಗಲು ಅರ್ಹತೆಯಿದ್ದುದರಿಂದ ಅವರಿಗೆ ಧಾರ್ಮಿಕವಾಗಿಯೂ ಸಾಮಾಜಿಕವಾಗಿಯೂ ಹೆಚ್ಚಿನ ಸ್ಥಾನಮಾನವಿದ್ದಿತು. ರಾಜರು ಹಲವು ಯಾಗಗಳನ್ನು ಆಚರಿಸುತ್ತಿದ್ದುದರಿಂದ ಬ್ರಾಹ್ಮಣರ ಸೇವೆ ಅನಿವಾರ್ಯವಾಗುತ್ತಿತ್ತು. ಉದಾಹರಣೆಗೆ, ಮೈಸೂರಿನ ದೇವರಾಜ ಒಡೆಯರು ಮತ್ತು ಕೆಳದಿಯ ೧ನೇ ವೆಂಕಟಪ್ಪನಾಯಕ ವಾಜಪೇಯ[೬] ಯಾಗ ಮಾಡಿದರು. ಅದರಲ್ಲಿ ಬ್ರಾಹ್ಮಣ ಪುರೋಹಿತರದ್ದು ಬಹುದೊಡ್ಡ ಪಾತ್ರವಾಗಿತ್ತು. ಹೀಗೆ ಧಾರ್ಮಿಕಾಚರಣೆಗಳನ್ನು ನಿರ್ವಹಿಸುವ ಶಕ್ತಿಯ ಆನುಕ್ರಮಿಕತೆಯು ಪುರೋಹಿತರಾಗಿ ಬ್ರಾಹ್ಮಣರ ಸಾಮಾಜಿಕ ಸ್ಥಾನವನ್ನು ನಿಗದಿಪಡಿಸುವಲ್ಲಿ ಬಹುಮುಖ್ಯವಾದ ಪಾತ್ರವಹಿಸಿತ್ತು.

ಇದರ ಜೊತೆಗೆ ಆರ್ಥಿಕ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ಕೂಡ ವರ್ತಕರಾಗಿ, ಲಿಪಿಕರಾಗಿ, ಮಂತ್ರಿಗಳಾಗಿ, ಶಾನಭೋಗರಾಗಿ ಕಾರ್ಯನಿರ್ವಹಿಸುತ್ತಾ ಹಲವು ಜವಾಬ್ದಾರಿಗಳನ್ನು ಹೊತ್ತಿದ್ದರು. ಕೆಳದಿ ರಾಜರ ಬೆಂಬಲವನ್ನು ಪಡೆದಿದ್ದ ಕೊಂಕಣಿ ಬ್ರಾಹ್ಮಣರು ಅಥವಾ ಗೌಡ ಸಾರಸ್ವತರು ಪರಿಣತರಾದ ವ್ಯಾಪಾರಿಗಳಾಗಿದ್ದರು.[೭] ನರಸಿಂಹ ಉಪಾಧ್ಯಾಯ ಅಥವಾ ನರಸಿಂಹರಾಯನು ಕಂಠೀರವ ನರಸರಾಜ ಒಡೆಯರ್ ಬಳಿ ಲಿಪಿಕನಾಗಿ ಸೇವೆ ಸಲ್ಲಿಸುತ್ತಿದ್ದನು.[೮] ಹೊನ್ನಲಗೆರೆ ತಾಮ್ರಫಲಕ ಶಾಸನವು ಚಾಮರಾಜ ಒಡೆಯರ ಮಂತ್ರಿಯಾಗಿದ್ದ ಒಬ್ಬ ಬ್ರಾಹ್ಮಣನಿಗೆ ದಾನಕೊಟ್ಟುದನ್ನು ಹೇಳುತ್ತದೆ.[೯] ಚಿಕ್ಕದೇವರಾಜ ಒಡೆಯರ ಮಂತ್ರಾಲೋಚನಸಭೆಯಲ್ಲಿ ಈ ಗಣ್ಯರಿದ್ದರು: ಜೈನ ಬ್ರಾಹ್ಮಣನಾದ ಯಳಂದೂರಿನ ದೊಡ್ಡ ಪಂಡಿತ, ವಿದ್ವತ್ತಿಗೂ ಕಾರ್ಯಕ್ಷಮತೆಗೂ ಹೆಸರಾದ ವಿಶಾಲಾಕ್ಷಪಂಡಿತ, ಆಳವಾದ ಪಾಂಡಿತ್ಯ,ರಾಜಕಾರಣ ಮತ್ತು ಆಡಳಿತ ಜ್ಞಾನಗಳನ್ನು ಹೊಂದಿದ್ದ ಶ್ರೀವೈಷ್ಣವ ತಿರುಮಲೈಯಂಗಾರ್ ಅಥವಾ ತಿರುಮಲಾರ್ಯ, ಷಡಕ್ಷರಯ್ಯನೆಂಬ ಹೆಸರಿನ ಒಬ್ಬ ವೀರಶೈವ ಆರಾಧ್ಯ ಬ್ರಾಹ್ಮಣ, ಕವಿ, ತತ್ವಜ್ಞಾನಿ, ಗಣಿತ ತಜ್ಞ, ರಾಜಕೀಯ, ಮುತ್ಸದ್ದಿತನ, ಹಣಕಾಸು, ಲೆಕ್ಕಾಚಾರ ಇವುಗಳಲ್ಲಿ ಕೋವಿದನೆನಿಸಿದ್ದ ಇನ್ನೊಬ್ಬ ಶ್ರೀವೈಷ್ಣವ ಲಕ್ಷ್ಮೀಪತಿ ಚಿಕ್ಕುಪಾಧ್ಯಾಯ, ಕರಣಿಕನೂ, ರಾಜ್ಯದ ಸಾರ್ವಜನಿಕ ಲೆಕ್ಕ ಪತ್ರಗಳ ಉಸ್ತುವಾರಿ ಹೊತ್ತಿದ್ದವನೂ ಆದ ಸ್ಮಾರ್ತಬ್ರಾಹ್ಮಣ ಲಿಂಗಣ್ಣಯ್ಯ. ಕೆಳದಿಯ ರಾಜ ವೀರಭದ್ರನಾಯಕನ ಬಳಿ ಅವನ ಮಂತ್ರಿಯಾಗಿ ರಾಮಕೃಷ್ಣ ಎಂಬ ಬ್ರಾಹ್ಮಣನೊಬ್ಬನು ಸೇವೆಸಲ್ಲಿಸುತ್ತಿದ್ದನು.[೧೦] ದಳವಾಯಿ ನಂಜರಾಜಯ್ಯನ ಕಾಲದಲ್ಲಿ ವೆಂಕಪ್ಪಯ್ಯನೆಂಬ ಬ್ರಾಹ್ಮಣನು ಸೇನಾದಂಡನಾಯಕನಾಗಿ ಸೇವೆಸಲ್ಲಿಸುತ್ತಿದ್ದನು. ಇವನು ಹೈದರಲಿಯ ಕಾಲದಲ್ಲೂ ಸೇವೆಯಲ್ಲಿದ್ದನು.[೧೧] ಹೀಗೆ ಸಮಾಜದ ಆಧಾರವಾದ ಮೌಲ್ಯವ್ಯವಸ್ಥೆಯನ್ನು ಕಾಪಾಡುವುದರ ಜೊತೆಗೆ ಬ್ರಾಹ್ಮಣರು ಲೌಕಿಕವಾಗಿಯೂ ಅಧಿಕಾರವನ್ನು ಚಲಾಯಿಸುತ್ತಿದ್ದರು.

ಈ ಸಂದರ್ಭದಲ್ಲಿ ಬ್ರಾಹ್ಮಣರ ಧಾರ್ಮಿಕ ಸ್ಥಾನಮಾನಕ್ಕೂ ರಾಜಕೀಯ-ಆರ್ಥಿಕ ಸ್ಥಾನಮಾನಕ್ಕೂ ನಡುವೆ ನಿಕಟವಾದ ಸಂಬಂಧಗಳಿದ್ದುವು ಎನ್ನುವುದನ್ನು ಗಮನಿಸಬೇಕು. ಅವರಿಗೆ ಬಗೆ ಬಗೆಯಾದ ಉಡುಗೊರೆ, ಕಾಣಿಕೆಗಳನ್ನು ಭೂಮಿದಾನವನ್ನು ನೀಡುತ್ತಿದ್ದವರು ರಾಜರು ಮತ್ತು ಅವರ ಅಧಿಕಾರಿಗಳು

ಮಾತ್ರವೇ ಅಲ್ಲ, ಜನಸಾಮಾನ್ಯರೂ ನೀಡುತ್ತಿದ್ದರು. ಬ್ರಾಹ್ಮಣರಿಗೆ ಸೇವೆ ಮಾಡಿದರೆ, ಅವರಿಗೆ ಕಾಣಿಕೆಯನ್ನರ್ಪಿಸಿದರೆ ಪುಣ್ಯ ಬರುತ್ತದೆ ಎಂಬ ನಂಬಿಕೆ ಜನರಲ್ಲಿತ್ತು. ಅವರೊಂದಿಗಿನ ಸಹಯೋಗದಿಂದ ಹೆಚ್ಚಿನ ಮರ್ಯಾದೆ, ಗೌರವ ಬರುತ್ತಿತ್ತು. ಅವರ ಬುದ್ಧಿವಾದಗಳನ್ನು ಕೇಳುವುದರಿಂದ ಮೋಕ್ಷವನ್ನು ಪಡೆಯಬಹುದು - ಇವು ಆ ಕಾಲದ ಜನರು ತಮಗೆ ತಾವೇ ಹೇರಿಕೊಂಡಿದ್ದ ಕೆಲವು ನಿಯಮಗಳು. ಆದ್ದರಿಂದ ಅಧಿಕಾರ, ಅಂತಸ್ತು, ವರಮಾನ, ಮತ್ತಿತರ ಸರಕುಗಳು ಮತ್ತು ಸೇವೆಗಳನ್ನು ಬ್ರಾಹ್ಮಣರು ಅನುಭವಿಸುತ್ತಾ ಸಮಾಜದಲ್ಲಿ ವಿಚ್ಛಿದ್ರಕಾರಕ ಬಿಕ್ಕಟ್ಟುಗಳಿಗೆ ಅವಕಾಶಕೊಡದುದರಿಂದ ಜನರು ಅವು ಶಾಸನಬದ್ಧವಾದವು ಎಂದು ಒಪ್ಪಿಕೊಂಡಿದ್ದರು.

ಹೀಗೆ ಭೇದಕಾರಕವಾದರೂ, ಮನ್ನಣೆ-ಗೌರವ ಕೊಡುವಂತಹ ಪರಿಸ್ಥಿತಿಯು ಸಾಮಾಜಿಕ ಚಲನೆಯ ಪ್ರಕ್ರಿಯೆಗಳಿಗೆ ಎಡೆಗೊಟ್ಟಿತು. ಜನರು ಅವರೊಂದಿಗೆ ಸಾಮಾಜಿಕವಾಗಿ ಪ್ರತಿಕ್ರಿಯಿಸಲು ಇಷ್ಟಪಡುತ್ತಿದ್ದುದರಿಂದ ಅವರಿಗೂ ಅಂಥವೇ ಒಲವುಗಳಿದ್ದುವು. ಅಂದರೆ ಹೆಚ್ಚುಕಡಮೆ ಒಂದೇ ಸಾಮಾಜಿಕ ಸ್ತರದ ವ್ಯಕ್ತಿಗಳು ಒಟ್ಟಿಗೆ ಕಾಣಸಿಕ್ಕುತ್ತಿದ್ದರು. ಈ ಬಗೆಯ ಸಾಮಾಜಿಕ ವಿನಿಮಯದಲ್ಲಿ ಪಾಲುಗೊಳ್ಳಲು ಬ್ರಾಹ್ಮಣರು ಬಯಸುತ್ತಿದ್ದರು. ಅದು ಅವರ ಸಾಮಾಜಿಕ ಸ್ಥಾನಕ್ಕೆ ಬಲಕೊಡುತ್ತಿದ್ದಿತು. ಅದರಿಂದ ಅವರಿಗೆ ಹೆಚ್ಚಿನ ಪ್ರೇರಣೆಗಳೊದಗುತ್ತಿದ್ದುವು. ಏಕೆಂದರೆ ಎಲ್ಲಾ ದೃಷ್ಟಿಗಳಿಂದಲೂ ಪ್ರತಿಫಲವು ಉತ್ತಮತರವಾಗಿತ್ತು. ಬ್ರಾಹ್ಮಣರು ಗಣ್ಯ ಜನವರ್ಗವಾಗಿದ್ದರು. ರಾಜನಿಗೆ ಸೇವೆ ಸಲ್ಲಿಸುತ್ತಾ ಪ್ರಜೆಗಳಿಗೆ ಬೆಂಬಲ ಕೊಡುತ್ತಾ ಬೇರೆ ಬೇರೆ ಸಂದರ್ಭಗಳಲ್ಲಿ ಇತರರಿಗೆ ಮಾದರಿಯಾಗುತ್ತಿದ್ದರು. ಈ ದೃಷ್ಟಿಯಿಂದ ಸಂಸ್ಕೃತೀಕರಣದ ಪ್ರಕ್ರಿಯೆ ತುಂಬಾ ಪ್ರಯೋಜನಕಾರಿಯಾಗಿತ್ತು. ಹೀಗೆ ಅವರ ಧಾರ್ಮಿಕ ಸ್ಥಾನವು ಅವರ ರಾಜಕೀಯ ಮತ್ತು ಆರ್ಥಿಕ ನೆಲೆಯ ಪ್ರತಿಬಿಂಬವಾಗಿತ್ತು ಎಂದು ಹೇಳಬಹುದು.

ಸ್ಥಳೀಯ ನಾಯಕರು ತಮ್ಮದು ಕ್ಷತ್ರಿಯ ಸ್ಥಾನಮಾನವೆಂದು ಹೇಳಿಕೊಂಡರು. ಪುರೋಹಿತರು ಮತ್ತು ವಂಶಾವಳಿ ಹೇಳುವವರು ಅವರ ಬೇಡಿಕೆಯನ್ನು ಶಾಸನಬದ್ಧಗೊಳಿಸಿದರು. ಅವರ ವಂಶದ ಮೂಲವನ್ನು ಸೂರ್ಯನಿಂದಲೋ ಚಂದ್ರನಿಂದಲೋ ರಾಮ ಅಥವಾ ಕೃಷ್ಣನಂತಹ ಪೌರಾಣಿಕ ನಾಯಕನಿಂದಲೋ ಗುರುತಿಸಿ ಅದಕ್ಕೆ ಮಾನ್ಯತೆ ತಂದುಕೊಟ್ಟರು. ಉದಾಹರಣೆಗೆ ಸಾಂಪ್ರದಾಯಿಕ ನಿರೂಪಣೆಗಳ ಪ್ರಕಾರ ಮೈಸೂರಿನ ಒಡೆಯರು ಚಂದ್ರವಂಶದವರು; ಯಾದವ ಮೂಲದಿಂದ ಬಂದವರು. ಭಗವಾನ್ ಕೃಷ್ಣನ ಜೀವಿತದ ಕೊನೆಯ ವರ್ಷಗಳಿಂದ ಯದುವಂಶದ ರಾಜರು ಮಹಿಷಪುರ(ಮೈಸೂರು)ದಲ್ಲಿ ನೆಲೆಸಿದ್ದರು. ಅವರಿಗೆ ಆಗ ಅಧಿಕಾರವಿರಲಿಲ್ಲವಾದ್ದರಿಂದ ವಿಜಯನಗರ ಚಕ್ರವರ್ತಿಗಳು ದಕ್ಷಿಣಕ್ಕೆ ಹೋಗಿ ಮೈಸೂರಿನಲ್ಲಿ ತಮ್ಮ ಅಧಿಕಾರ ಸ್ಥಾಪಿಸಲು ಅವರಿಗೆ ಅನುಮತಿ ನೀಡಿದರು. (ಮೈಸೂರು - ಮಯಿಸೂರು, ಮಹಿಷ ಊರು, ಎಮ್ಮೆಯ ಊರು). ಆಗ ಅದು ತೆರಕಣಾಂಬಿ(ತ್ರಿಯಂಬಕಪುರ)ಯಲ್ಲಿದ್ದ ವಿಜಯನಗರದ ರಾಜ್ಯಪಾಲನ ನೇರ ಹತೋಟಿಯಲ್ಲಿತ್ತು.[೨೨] ಹೀಗೆ ರಾಜಕೀಯ ಅಧಿಕಾರವು ಶಾಸನಬದ್ಧಗೊಂಡು ಅವರು ಕ್ರಮೇಣ ಬಲಗೊಂಡರು; ಕಾಲದ ಸ್ತರೀಕೃತ ಸಮಾಜ ವ್ಯವಸ್ಥೆಯ ಮೌಲ್ಯಗಳನ್ನು ರಕ್ಷಿಸುವ ಮೂಲವಾದರು.

ಸಾಮಾನ್ಯವಾಗಿ ವ್ಯಾಪಾರ-ವಾಣಿಜ್ಯಗಳನ್ನು ನೋಡಿಕೊಳ್ಳುತ್ತಿದ್ದ ವೈಶ್ಯವರ್ಗಕ್ಕೆ ತನ್ನ ನೆಲೆಯ ಸ್ಪಷ್ಟ ಅರಿವಿದ್ದಿತು. ಅನೇಕವೇಳೆ ಈ ವ್ಯಾಪಾರಿಗಳು ರಾಜರಿಗೆ ಬ್ಯಾಂಕರುಗಳಾಗಿ ಹಣಕಾಸು ಮುಂಗಡ ಕೊಟ್ಟು ಪಡೆಯುವ ವರ್ಗವಾಗಿ ವರ್ತಿಸಿದುದೂ ಉಂಟು. ರಾಜರು ಕೃಷಿ ಮಾತ್ರವಲ್ಲ, ತಮ್ಮ ಬೊಕ್ಕಸವನ್ನು ಬಲಪಡಿಸಲು ವ್ಯಾಪಾರ-ವಾಣಿಜ್ಯ-ಉದ್ದಿಮೆಗಳನ್ನು ಪ್ರೋತ್ಸಾಹಿಸುವುದೂ ಅಗತ್ಯ ಎಂಬುದನ್ನು ಮನಗಂಡಿದ್ದರು. ಅದರಲ್ಲೂ ಯುದ್ಧಗಳು ಪದೇ ಪದೇ ಘಟಿಸುತ್ತಿದ್ದ ಕಾಲದಲ್ಲಿ ರಾಜರ ಆರ್ಥಿಕ ಬಲವು ದೇಶದ ಒಳಗೂ ಹೊರಗೂ ನಡೆಯುತ್ತಿದ್ದ ವ್ಯಾಪಾರವನ್ನು ಅವಲಂಬಿಸಿದ್ದಿತು. ಆಸ್ಥಾನದಲ್ಲಿ ವೈಶ್ಯರು

ಬಹುಮುಖ್ಯವಾದ ಪಾತ್ರವನ್ನು ನಿರ್ವಹಿಸುತ್ತಿದ್ದರು. ರಾಜರ ಪರಿವಾರದಲ್ಲಿ ಅವರು ಇದ್ದೇ ಇರುತ್ತಿದ್ದರು. ಸಮಕಾಲೀನ ಶಾಸನಗಳು ವೀರಸೆಟ್ಟಿ ಮತ್ತು ನರಸಿಂಹದಾಸು ಎಂಬ ಇಬ್ಬರು ಮುಖ್ಯ ವರ್ತಕರನ್ನು ಹೆಸರಿಸುತ್ತವೆ.[೨೧] ರಾಜ್ಯದ ಹಣಕಾಸು ವ್ಯವಹಾರ ನಿರ್ವಹಣೆಯಲ್ಲಿ, ಸೇವಸಂಬಂಧದ ಕಾರ್ಯಾಚರಣೆಗಳಲ್ಲಿ, ಸಾರ್ವಜನಿಕ ಕಟ್ಟಡಗಳ ನಿರ್ಮಾಣದಲ್ಲಿ ಇತ್ಯಾದಿ ಎಲ್ಲಾ ವಿಚಾರಗಳಲ್ಲಿ ರಾಜನು ನಾಡಿನ ವ್ಯಾಪಾರ ವ್ಯವಹಾರಗಳನ್ನು ಬಲ್ಲ ಪರಿಣತ ವರ್ತಕರ ಸಲಹೆಯನ್ನು ಪಡೆಯುತ್ತಿದ್ದನು. ವರ್ತಕ ಜನಾಂಗದ ಹಿತಾಸಕ್ತಿಗಳನ್ನು ಸಮುದಾಯದ ನಾಯಕನು ಆಸ್ಥಾನದಲ್ಲಿ ಪ್ರತಿನಿಧಿಸುತ್ತಿದ್ದನು. ತಮ್ಮ ವಹಿವಾಟಿನ ಮೇಲೆ ಪರಿಣಾಮವುಂಟುಮಾಡುವಂತಹ ಆಡಳಿತ ನೀತಿಗಳು ರೂಪುಗೊಂಡಿವೆಯೆ ಎಂಬುದನ್ನು ಅವನು ಗಮನಿಸುತ್ತಿದ್ದನು. ಈ ಸಾಮಾಜಿಕ ವರ್ಗಗಳು ತಾವೇ ಅಧಿಕಾರದ ಮೂಲಗಳಾಗಿದ್ದುವು; ಇಲ್ಲವೆ, ಆ ಮೂಲಕ್ಕೆ ಅತಿ ಸನಿಹದಲ್ಲಿರುತ್ತಿದ್ದುವು.

ಇತರ ಸಾಮಾನ್ಯ ಜಾತಿ ಪಂಗಡಗಳೂ ಇರುತ್ತಿದ್ದುವು. ಒಕ್ಕಲಿಗರು, ಬೋಗಾರರು (ಲೋಹದ ಕೆಲಸ ಮಾಡುವವರು), ತಿಲಗಟಕರು (ಗಾಣಿಗರು), ತಾಮ್ರ ಮರ್ದಕರು (ತಾಮ್ರದ ಕೆಲಸ ಮಾಡುವವರು), ಸೇಲಿಗರು (ನೇಯುವವರು), ನಾಯಿಂದರು (ಕ್ಷೌರಿಕರು), ಚಿಪ್ಪಿಗರು (ದರ್ಜಿಗಳು), ಮುಚ್ಚುಗರು (ತೊಗಲು ಕೆಲಸದವರು), ಕೊಟ್ಟಿಗೆಯವರು (ದನ ಕರು ಸಾಕುವವರು) ಇವರು ಗ್ರಾಮ ಮತ್ತು ನಗರ ಪ್ರದೇಶಗಳಲ್ಲಿ ಬೇರೆ ಬೇರೆ ಬೀದಿಗಳಲ್ಲಿ ವಾಸಮಾಡುತ್ತಿದ್ದರು. ಅವರ ಹೆಸರನ್ನೇ ಆ ಬೀದಿಗಳಿಗೆ ಕೇರಿಗಳಿಗೆ ಕೊಡಲಾಗುತ್ತಿತ್ತು. ಒಕ್ಕಲಿಗರ ಕೇರಿ, ಬ್ರಾಹ್ಮಣರ ಕೇರಿ, ಉಪ್ಪಾರ ಬೀದಿ, ಸೆಟ್ಟರ ಬೀದಿ ಇತ್ಯಾದಿ. ಇವರಲ್ಲಿ ಒಂದೊಂದು ಜಾತಿಗೂ ಒಂದೋ ಎರಡೋ ವೃತ್ತಿ ಪರಿಣತಿಯಿರುತ್ತಿದ್ದಿತು. ಆದ್ದರಿಂದ ಈ ಸಮಾಜವ್ಯವಸ್ಥೆಯು ವಿಸ್ತಾರವಾದ ಶ್ರಮದ ಹಂಚಿಕೆಯ ಆಧಾರದ ಮೇಲೆ ರೂಪುಗೊಂಡಿದ್ದಿತು. ಪ್ರತಿಯೊಂದು ವರ್ಗವೂ ತನ್ನದೇ ಮಿತಿಯೊಳಗೆ ತನ್ನ ಜೀವನ ಶೈಲಿಯನ್ನು ರೂಪಿಸಿಕೊಂಡಿದ್ದಿತು. ಅದು ಅವರ ಉಡುಗೆ, ಆಹಾರ, ಆಚರಣೆ ಮುಂತಾದುವುಗಳಲ್ಲಿ ಪ್ರತಿಬಿಂಬಿಸಿ ಆ ಪ್ರದೇಶದ ಸಾಮಾಜಿಕ ಅನುಕ್ರಮಿಕತೆಯಲ್ಲಿ ಅವರ ನೆಲೆಯ ಸೂಚಕಗಳಾಗುತ್ತಿದ್ದುವು. ಈ ಜಾತಿ ವರ್ಗಗಳು ಸಣ್ಣಪುಟ್ಟ ಸ್ಥಳೀಯ ಏಕರೂಪ ಘಟಕಗಳೇನಲ್ಲ. ಅವುಗಳಲ್ಲೂ ಹಲವಾರು ಉಪಘಟಕಗಳು, ಅಧಿಕಾರ, ಅಂತಸ್ತು, ಐಶ್ವರ್ಯಗಳ ಆಧಾರರಿಂದ ಶ್ರೇಣೀಕರಣ ಕಂಡುಬರುತ್ತಿದ್ದಿತು. ಉದಾಹರಣೆಗೆ ಅರಮನೆಯಲ್ಲಿ ವಿವಿಧ ವೃತ್ತಿಗಳಿಗೆ ಸಂಬಂಧಪಟ್ಟಂತಹ ವಿವಿಧ ಜಾತಿಗಳಿದ್ದುವು. ಊಳಿಗದವರು, ಮಾಹುತರು, ದೀವಟಿಗರು ಇತ್ಯಾದಿ. ಅರಮನೆಯೊಂದಿಗೆ ಸಂಬಂಧವಿದ್ದುದರಿಂದ ಇವರಿಗೆ ಸ್ವಲ್ಪ ಮೇಲಿನ ಸ್ಥಾನವಿರುತ್ತಿದ್ದಿತು.[೨೨] ಇಡೀ ವ್ಯವಸ್ಥೆಗೆ ಶಾಸನಬದ್ಧತೆಯಿತ್ತು, ಧಾರ್ಮಿಕ ಅನುಮತಿಯಿತ್ತು.

ಜಾತಿಪದ್ಧತಿಯ ಪ್ರಕಾರ ಒಬ್ಬ ಸದಸ್ಯನು ಆನುವಂಶಿಕವಾಗಿ ಒಂದು ವೃತ್ತಿಗೆ ಅಥವಾ ಕಸುಬಿಗೆ ಬದ್ಧನು. ಏಕೆಂದರೆ ಜಾತಿಗೂ ನಿರ್ದಿಷ್ಟ ವೃತ್ತಿ ಅಥವಾ ಕಸುಬಿಗೂ ಸ್ಪಷ್ಟ ಸಂಬಂಧವಿರುತ್ತಿದ್ದಿತು. ಆದರೆ ಬೇರೆ ಬೇರೆ ಜಾತಿಗೆ ಸೇರಿದವರೂ ಅದೇ ವೃತ್ತಿಯನ್ನು ಅನುಸರಿಸುತ್ತಿದ್ದುದನ್ನು ಈ ಕಾಲದ ಮೂಲಗಳು ಸ್ಪಷ್ಟವಾಗಿ ವ್ಯಕ್ತಪಡಿಸುತ್ತವೆ. ಬ್ರಾಹ್ಮಣ ವಂಶದ ಮಂತ್ರಿಗಳು ಮತ್ತು ವರ್ತಕರ ಬಗೆಗೆ ಉಲ್ಲೇಖಗಳು ದೊರಕುತ್ತವೆ. ವೃತ್ತಿಗಳ ಆನುವಂಶಿಕ ಏಕಸ್ವಾಮ್ಯವನ್ನು ಕಟ್ಟುನಿಟ್ಟಾಗಿ ಸದಾಕಾಲವೂ ಪಾಲಿಸುತ್ತಿರಲಿಲ್ಲ ಎಂಬುದನ್ನು ಅವು ಸ್ಪಷ್ಟಪಡಿಸುತ್ತವೆ. ತಮಗೆ ಅಧಿಕೃತವಾಗಿ ಏನು ನಿಗದಿಯಾಗಿದೆಯೋ ಅದರಿಂದಾಚೆಯ ಬೇರೊಂದು ವೃತ್ತಿಯನ್ನು ಅನುಸರಿಸುವ ಜನರ ಸಂಖ್ಯೆಯು ಹೆಚ್ಚಿದಂತೆ ವೃತ್ತಿ ಸಂಚಲನೆಯೂ, ಸ್ಥಾನಮಾನ ವ್ಯತ್ಯಾಸವೂ ಕಂಡುಬಂದುವು, ನಿಜ. ಸಂಪನ್ಮೂಲಗಳನ್ನು ನಿಯಂತ್ರಿಸುತ್ತಿದ್ದ ಪ್ರಧಾನ ಪಂಗಡಗಳು ಬೇರೆ ಬೇರೆ ಪ್ರತಿಫಲವುಳ್ಳ ಅವಲಂಬಿಗಳನ್ನು ಸೃಷ್ಟಿಸುವುದು, ಅಂತರ್ಜಾತಿವರ್ಗಗಳನ್ನು ರೂಪಿಸುವುದು ಈ ವಿಧಾನಗಳ ಮೂಲಕ ದೇಶಕ್ಕೆ ಆಪತ್ತಿನ ಭೀತಿಯನ್ನು ನಿವಾರಿಸುತ್ತಿದ್ದುವು. ಧಾರ್ಮಿಕ ವ್ಯವಸ್ಥೆಗಳು ತಾತ್ವಿಕ ವಿಚಾರಗಳು ಅದನ್ನು

ಸಮರ್ಥಿಸುತ್ತಿದ್ದುವು. ಉದಾಹರಣೆಗೆ, ಸಚ್ಛೂದ್ರಾಚಾರನಿರ್ಣಯದಂತಹ ಸಾಹಿತ್ಯಕ ಕೃತಿಯಲ್ಲಿ, ಪ್ರತಿಯೊಬ್ಬ ವ್ಯಕ್ತಿಯ ಸಾಮಾನ್ಯ ಕರ್ತವ್ಯವಾದ ಸತ್ಯ, ದಯೆ ಮೊದಲಾದವುಗಳನ್ನು ಒತ್ತಿ ಹೇಳಿರುವುದಲ್ಲದೆ, ವಿವಿಧ ಜಾತಿಗಳಿಗೆ ನಿಗದಿಪಡಿಸಿರುವ ವಿವಿಧ ಕರ್ತವ್ಯಗಳಾವುವು ಎಂಬುದನ್ನೂ ಹೇಳಿದೆ. ಇತರರನ್ನು ಕುರಿತು ಒಳ್ಳೆಯ ಶೂದ್ರನ ಆಚಾರ (ನಡವಳಿಕೆ) ಹೇಗಿರಬೇಕು ಎಂಬುದನ್ನು ನಿರೂಪಿಸಿದೆ.[೭೬] ಆದರೂ ಈ ಕಾಲದಲ್ಲಿ, ಸಾಮಾಜಿಕ ಸಂಬಂಧಗಳು ಸಾಮರಸ್ಯದಿಂದ ಕೂಡಿದ ಸಹಬಾಳ್ವೆಯ ಸಂಬಂಧಗಳಾಗಿದ್ದುವೆಂದು ನಂಬಲು ಸಾಧ್ಯವಿಲ್ಲ. ತಾತ್ವಿಕಮಟ್ಟದಲ್ಲಿ ಮೌಲ್ಯವ್ಯವಸ್ಥೆಗಳ ಬಗೆಗೆ ಘರ್ಷಣೆಗಳಾಗುತ್ತಿದ್ದುದು ಮಾತ್ರವಲ್ಲ, ಅಸಮತೆಗಳಿಂದಾಗಿ ಘರ್ಷಣೆಯ ಬಿಗುವಿನ ಪರಿಸ್ಥಿತಿ ಕಂಡುಬರುತ್ತಿದ್ದಿತು. ಆದರೆ ಅವು ರಾಜ್ಯಕ್ಕೆ ಅಪಾಯವನ್ನುಂಟುಮಾಡುವ ಹಂತವನ್ನು ಮುಟ್ಟರಲಿಲ್ಲ. ಏಕೆಂದರೆ, ರಾಜನಿಗೆ, ಬ್ರಾಹ್ಮಣನಿಗೆ ನಿಷ್ಠೆ ಭಕ್ತಿ ತೋರಿಸಬೇಕು ಎಂಬ ಭಾವನೆ ಜನರ ಮನಸ್ಸಿನಲ್ಲಿ ಬೇರೂರಿದ್ದಿತು. ಆದ್ದರಿಂದ ಈ ಸಮಾಜದಲ್ಲಿ ಸಂಘರ್ಷವು ಜನಭಿಪ್ರಾಯದಷ್ಟೇ ಮುಖ್ಯವಾಗಿದ್ದಿತು. ಈ ದೃಷ್ಟಿಯಿಂದ ಪ್ರಭುತ್ವ ಮತ್ತು ಪರಾಧೀನತೆಗಳು ಸಾಮಾಜಿಕ ಬೆಸುಗೆಗೆ ಮುಖ್ಯ ಅಂಶಗಳಾಗಿದ್ದುವು.

೨

ಕುಟುಂಬ, ವಿವಾಹ ಈ ಮೂಲ ವ್ಯವಸ್ಥೆಗಳು ಬಹುಮಟ್ಟಿಗೆ ಸಾಂಪ್ರದಾಯಿಕ ವಿಧಿಗಳನ್ನು ಆಧರಿಸಿರುತ್ತಿದ್ದುವು. ಶಾಸನಾಧಾರಗಳಿಂದ, ಕುಟುಂಬವು ಪಿತೃಪ್ರಧಾನವಾಗಿತ್ತು, ವಿಸ್ತೃತ ಕುಟುಂಬ ಮತ್ತು ಕೂಡು ಕುಟುಂಬ ಮಾದರಿಗಳು ಪ್ರಚಲಿತವಾಗಿದ್ದುವು ಎಂಬುದು ವ್ಯಕ್ತವಾಗುತ್ತದೆ. ಇದು ಗ್ರಾಮಾಂತರ ಪ್ರದೇಶಗಳಲ್ಲಿ ಹೆಚ್ಚಾಗಿತ್ತು. ಸಹಕಾರೀ ಕೃಷಿ ಮತ್ತು ಇತರ ಕೂಡು ಚಟುವಟಿಕೆಗಳನ್ನು ಮನೆಯ ಸದಸ್ಯರೇ ಸೇರಿ ನಿರ್ವಹಿಸುತ್ತಿದ್ದುದನ್ನು ಜಾನಪದಗೀತೆಗಳು ಚಿತ್ರಿಸುತ್ತವೆ.[೭೭] ಜಾತಿಗಳು ಸ್ವಗೋತ್ರ ವಿವಾಹ ಪದ್ಧತಿಯನ್ನು ಹೊಂದಿದ್ದರೂ, ಮೇಲುಜಾತಿಗಳಲ್ಲಿ ಭಿನ್ನ ಗೋತ್ರ ವಿವಾಹಗಳು ಪ್ರಚುರವಾಗಿದ್ದುವು. ಈ ಬುಡಕಟ್ಟುಗಳನ್ನು ಗೋತ್ರಗಳೆಂದು ಕರೆಯುತ್ತಿದ್ದರು. ತಮ್ಮ ಮೂಲವನ್ನು ಆಂಗಿರಸ, ಅತ್ರಿ, ಭಾರದ್ವಾಜ, ಭೃಗು, ಗೌತಮ, ಜಮದಗ್ನಿ, ಕಾಶ್ಯಪ, ಕೌಂಡಿನ್ಯ, ಕೌಶಿಕ, ಶಾಂಡಿಲ್ಯ, ಶ್ರೀವತ್ಸ , ವಸಿಷ್ಠ, ವಿಶ್ವಾಮಿತ್ರ ಇತ್ಯಾದಿ ಋಷಿಗಳಿಗೆ ಗುರುತಿಸಿ ಅವರ ಹೆಸರಿನ ಮೇಲೆ ತಮ್ಮ ಗೋತ್ರವನ್ನು ಹೇಳಿಕೊಳ್ಳುವುದು; ಋಗ್, ಯಜುರ್, ಸಾಮ ಶಾಖೆಗಳು; ಆಪಸ್ತಂಬ, ಆಶ್ವಲಾಯನ ಇತ್ಯಾದಿ ಸೂತ್ರಗಳು ಇವನ್ನು ಆ ಕಾಲದ ಬ್ರಾಹ್ಮಣ ಮತ್ತು ಇತರ ಸಮುದಾಯಗಳು ಅನುಸರಿಸುತ್ತಿದ್ದುವು ಎಂಬುದನ್ನು ಶಾಸನಗಳು ಸಮರ್ಥಿಸುತ್ತವೆ. ಜೊತೆಗೆ, ನಾಲ್ಕನೆಯ ಗೋತ್ರವನ್ನು ಕುರಿತ ಉಲ್ಲೇಖಗಳೂ ಇವೆ.[೭೮]

ಜಾತಿಯ ಜನರಲ್ಲಿ ತಮ್ಮ ಜಾತಿಯೊಳಗೇ ವಿವಾಹ ಬೆಳೆಸುವುದು ಸಾಮಾನ್ಯವಾಗಿದ್ದ ಪದ್ಧತಿ. ಹಾಗಾಗಿ ವಿವಾಹಗಳು ಸಾಮಾನ್ಯವಾಗಿ ಸ್ವಗೋತ್ರವಾಗಿದ್ದುವು. ತನಗಿಂತ ಕೆಳಜಾತಿಯೊಂದಿಗೆ ವಿವಾಹ ಮಾಡಿಕೊಳ್ಳುವುದನ್ನು ಖಂಡಿಸಲಾಗುತ್ತಿತ್ತು. ಸಮಾಜವು ಅಂತರ್ಜಾತೀಯ ವಿವಾಹಗಳನ್ನು ಒಪ್ಪಿಕೊಳ್ಳಲು ಆಗಿನ್ನೂ ಸಿದ್ಧವಾಗಿರಲಿಲ್ಲ. ಚಿಕ್ಕದೇವರಾಜ ಒಡೆಯರು ಅರಸು ಕುಟುಂಬಗಳಲ್ಲಿ ವರ್ಣ ಸಂಕರವಾಗುವುದನ್ನು ತಪ್ಪಿಸಲು ಕೈಗೊಂಡ ಕ್ರಮಗಳಿಂದ ಇದು ವ್ಯಕ್ತವಾಗುತ್ತದೆ. ಅರಮನೆಗೆ ಸಂಬಂಧಿಸಿದ ಕೆಲವು ಅರಸು ಕುಟುಂಬಗಳು ಅವರಿಗೆ ನಿಗದಿಯಾದ ಕರ್ತವ್ಯಗಳನ್ನು ಸರಿಯಾಗಿ ಆಚರಿಸುತ್ತಿಲ್ಲ, ತಮಗಿಂತ ಕೆಳಮಟ್ಟದ ಸಾಮಾಜಿಕ ನೆಲೆಯುಳ್ಳವರೊಂದಿಗೆ ವಿವಾಹ ಸಂಬಂಧಗಳನ್ನು ಬೆಳೆಸುತ್ತಿದ್ದಾರೆ, ಅಂತಹ ಸಂಬಂಧಗಳನ್ನು ಇಟ್ಟುಕೊಂಡಿದ್ದಾರೆ ಎಂದು ತಿಳಿದಾಗ ಚಿಕ್ಕದೇವರಾಜ ಒಡೆಯರು ಒಡನೆಯೇ ಈ ವಿಷಯದಲ್ಲಿ ವಿಚಾರಣೆಗೆ ಆಜ್ಞೆ ಮಾಡಿದರು. ವರದಿಯನ್ನು ಪಡೆದ ಮೇಲೆ ಸಂದೇಹಾಸ್ಪದವಾದ ಕುಟುಂಬಗಳು ಮತ್ತು ಶುದ್ಧರಕ್ತವನ್ನು ಉಳಿಸಿಕೊಂಡು ಬಂದಿರುವ ಕುಟುಂಬಗಳು ಎಂದು ಬೇರೆ ಬೇರೆ ಗುಂಪು ಮಾಡಿ ಮೊದಲನೆಯ ವರ್ಗವನ್ನು

ಅವರವರು ಯಾವ ವಂಶಗಳೊಂದಿಗೆ ಸಂಬಂಧವಿರಿಸಿಕೊಂಡಿದ್ದರೋ ಆ ವಂಶಗಳಿಗೇ ಸೇರಿಸಿಬಿಟ್ಟರು. ಶುದ್ಧರಾಗಿದ್ದವರನ್ನು ೩೧ ಕುಟುಂಬಗಳಾಗಿ ಗುಂಪು ಮಾಡಿದರು. ಅವರಲ್ಲೂ ೧೩ ಕುಟುಂಬಗಳು ಅತ್ಯಂತ ಪರಿಶುದ್ಧವಾಗಿವೆಯೆಂದು ಪರಿಗಣಿಸಲಾಯಿತು. ಈ ಕುಟುಂಬಗಳಲ್ಲಿ ವಿವಾಹವು ಅತ್ಯಂತ ಕಟ್ಟುನಿಟ್ಟಾಗಿ ಸ್ವಗೋತ್ರ ವಿವಾಹವಾಗಿರತಕ್ಕದ್ದು, ೧೩ ಕುಟುಂಬಗಳ ಗಂಡಸರು ಮಿಕ್ಕ ೧೮ ಕುಟುಂಬಗಳ ಹೆಣ್ಣುಮಕ್ಕಳನ್ನು ಎರಡನೆಯ ಅಥವಾ ಮೂರನೆಯ ಪತ್ನಿಯಾಗಿ ಮದುವೆ ಮಾಡಿಕೊಳ್ಳಬಹುದು ಎಂದಾಯಿತು. ಹೀಗೆ ಶುದ್ಧವಾಗಿದ್ದ೧೩ ಕುಟುಂಬಗಳಿಗೆ ಮಾತ್ರ ಅನುಲೋಮ ವಿವಾಹವನ್ನು ಅನುಮತಿಸಿದರು, ಹಾಗೂ ಬಹು ಪತ್ನೀತ್ವವನ್ನು ಪ್ರೋತ್ಸಾಹಿಸಿದರು. ಇದು ಒಂದು ರೀತಿಯಲ್ಲಿ, ವಿಶೇಷ ರಾಜವಿವಾಹ ಶಾಸನವಾಗಿತ್ತು. ಈ ವ್ಯವಸ್ಥೆಗಳನ್ನು ನೋಡಿಕೊಳ್ಳಲು ವಿಶೇಷ ಹುಜೂರ್ ಅಧಿಕಾರಿಗಳನ್ನು ನೇಮಿಸಲಾಯಿತು.[೧೬] ಹಾಗೆಯೇ ೧ನೇ ಕೃಷ್ಣರಾಜ ಒಡೆಯರ್ ಕೂಡ ಅರಸು ಕುಟುಂಬಗಳಿಗೆಂದೇ ವಿಶಿಷ್ಟವಾದ ಕೆಲವು ನಿಯಮಾವಳಿಗಳನ್ನು ರೂಪಿಸಿದ್ದರು. ಗಾಣಗನೂರು ತಿಮ್ಮರಾಜನ ಕುಟುಂಬವು ಸೇಲಂನ ಚೆನ್ನರಾಜನ ಕುಟುಂಬದೊಂದಿಗೆ ಇಟ್ಟುಕೊಳ್ಳಬೇಕಾದ ಸಂಬಂಧಗಳನ್ನು ಕುರಿತೇ ಕಟ್ಟಳೆಗಳಿದ್ದುವು.[೧೭]

ರಾಜರು ಕೈಗೊಂಡ ಈ ಕ್ರಮಗಳಿಂದ, ಸಮಾಜವು ಅಂತರ್ಜಾತೀಯ ವಿವಾಹಕ್ಕೆ ಸಂಬಂಧಿಸಿದಂತೆ ಬಹಳ ಬಿಗಿಯಾಗಿತ್ತು, ಸಡಿಲವಾಗಿರಲಿಲ್ಲ ಎಂಬುದು ವೇದ್ಯವಾಗುತ್ತದೆ. ರಾಜನಿಗೆ ಜನರ ಮನೋಧರ್ಮ ಹಾಗೂ ಕಾಲದ ಲಕ್ಷಣಗಳು ತಿಳಿದಿದ್ದುವು. ಅರಮನೆಗೆ ಸಂಬಂಧಪಟ್ಟ ಕುಟುಂಬಗಳಲ್ಲೇ ಈ ರೀತಿ ಅಡ್ಡದಾರಿ ಹಿಡಿದಿರುವುದಾದರೆ, ಇತರ ಜಾತಿಗಳ ಜನರು ಅದನ್ನೇ ಅನುಸರಿಸುತ್ತಾರೆ, ಎಲ್ಲೆಲ್ಲೂ ಗೊಂದಲ, ಅನ್ಯಾಯಕತ್ವ ಉಂಟಾಗಿ ದೇಶದ ಸ್ಥಿರತೆಗೆ ಭಂಗಬರಬಹುದು. ಈ ಕಾಲದಲ್ಲಿ ವಂಶದ ಶುದ್ಧಿ, ಅಶುದ್ಧಿಗಳ ವಿಚಾರವು ಬಹು ಸ್ಪಷ್ಟವಾಗಿದ್ದಂತೆ ತೋರುತ್ತದೆ. ಸಾಮಾನ್ಯಜನರಲ್ಲಿ ಏಕಪತ್ನೀ ವಿವಾಹ ಕ್ರಮವು ಪ್ರಚುರವಾಗಿತ್ತಾದರೂ, ರಾಜರು ಮತ್ತು ಅವರ ಸಂಬಂಧಿಗಳು ಮಾತ್ರ ಬಹುಪತ್ನೀತ್ವವನ್ನು ಆಚರಿಸುತ್ತಿದ್ದರು. ಈ ಕಾಲಾವಧಿಯ ಹೆಚ್ಚು ಕಡಮೆ ಪ್ರತಿಯೊಬ್ಬ ರಾಜನಿಗೂ ಇಬ್ಬರಿಗಿಂತ ಹೆಚ್ಚು ರಾಣಿಯರಿದ್ದರು ಎಂಬುದು ಶಾಸನಗಳಿಂದ ತಿಳಿಯುತ್ತದೆ. ಜೊತೆಗೆ ಅರ್ಕ ವಿವಾಹ ಪದ್ಧತಿಯೂ ರೂಢಿಯಲ್ಲಿತ್ತು. ಕಂಠೀರವ ನರಸರಾಜ ಒಡೆಯರಿಗೆ ಹತ್ತು ಜನ ರಾಣಿಯರಿದ್ದರು. ಅವರಲ್ಲಿ ಕೊನೆಯ ಎಂಟು ಜನರನ್ನು ಗಾಂಧರ್ವ ಪದ್ಧತಿಗೆ ವಿರುದ್ಧವಾಗಿ ಅರ್ಕ ಪದ್ಧತಿಯಂತೆ ವಿವಾಹವಾಗಿದ್ದರು.[೧೮] ಪಾಳೆಯಗಾರರಲ್ಲಿ, ಅದರಲ್ಲೂ ತೋಟಿಯೆರ್ ಜಾತಿಯವರಲ್ಲಿ, ಹಲವು ಸೋದರರು ಒಬ್ಬಳೇ ಪತ್ನಿಯನ್ನು ಹೊಂದಿರುವ ಪದ್ಧತಿ ಇದ್ದಂತೆ ತೋರುತ್ತದೆ.[೧೯] ವಿವಾಹ ವಿಚ್ಛೇದನವನ್ನು ಕುರಿತು ಮೂಲಗಳು ಸ್ಪಷ್ಟವಾಗಿ ಹೇಳುವುದಿಲ್ಲವಾದರೂ, ಮಾನವ ಸ್ವಭಾವಕ್ಕನುಗುಣವಾಗಿ ಈ ಕಾಲದಲ್ಲೂ ವಿಚ್ಛೇದನಗಳಿದ್ದುವೆಂದು ಹೇಳಬಹುದು. ಪತ್ನಿಯು ಬಂಜೆಯಾಗಿದ್ದರೆ, ಚಾರಿತ್ರಹೀನಳಾದರೆ, ತುಂಬಾ ರೋಗ ಪೀಡಿತಳಾಗಿದ್ದರೆ, ಅವಳನ್ನು ವಿಚ್ಛೇದನ ಮಾಡಿಕೊಂಡು ಗಂಡಸು ಸುಲಭವಾಗಿ ಪುನರ್ವಿವಾಹ ಮಾಡಿಕೊಳ್ಳುತ್ತಿದ್ದನು. ಆದರೆ ಅಂತಹ ಸಂದರ್ಭಗಳು ವಿರಳ. ಏಕೆಂದರೆ ಸಮಾಜೀಕರಣ ಪ್ರಕ್ರಿಯೆಗಳು ಹೇಗಿದ್ದುವೆಂದರೆ ಮನೆಯ ಯುವಜನರಿಗೆ ಶತಮಾನಗಳ ಕಾಲದಿಂದ ಬಂದ ಮೌಲ್ಯಗಳನ್ನು ನಂಬಲು,ಎತ್ತಿ ಹಿಡಿಯಲು ಕಲಿಸಲಾಗುತ್ತಿತ್ತು. ಶೂದ್ರರಲ್ಲಿ ಕೂಡಿಕೆ (ಒಬ್ಬ ಗಂಡಸು ಮತ್ತು ಒಬ್ಬ ವಿಧವೆ ಯಾವುದೇ ಧಾರ್ಮಿಕಾಚರಣೆಗಳಿಲ್ಲದೆ ಒಟ್ಟಿಗೆ ಬದುಕುವುದು) ಚಾಲ್ತಿಯಲ್ಲಿತ್ತು. ಇದು ಈಗಲೂ ರೂಢಿಯಲ್ಲಿದೆ.

೩

ಮಗಳಾಗಿ, ಪತ್ನಿಯಾಗಿ, ತಾಯಿಯಾಗಿ ಮಹಿಳೆಗೆ ಗೌರವದ ಸ್ಥಾನವಿತ್ತು. ತಾಯಿಯನ್ನು ಗೌರವಿಸುವ ಸಂಪ್ರದಾಯ ಜೀವಂತವಾಗಿತ್ತು. ಆದರೂ ಕುಟುಂಬ ವ್ಯವಸ್ಥೆಯಲ್ಲಿ ತಂದೆಗೆ ಪ್ರಧಾನ ಸ್ಥಾನ. ತಂದೆ ತಾಯಿಗಳಿಗೂ ಪಿತೃಗಳಿಗೂ ಅಂತ್ಯಕ್ರಿಯೆಗಳನ್ನು ಶ್ರಾದ್ಧಗಳನ್ನು ಮಾಡುವುದಕ್ಕೆ ಮಗನಿಗೆ ಮಾತ್ರವೇ

ಅಧಿಕಾರ ಎಂದು ಜನರು ನಂಬಿದ್ದರು. ಮಗನಿಲ್ಲದ ತಂದೆ ತಾಯಿ ಸದ್ಗತಿ ಪಡೆಯಲಾರರು. ಆದ್ದರಿಂದ ಪುತ್ರ ಜನನ ಸದಾ ಸ್ವಾಗತಾರ್ಹವಾಗಿತ್ತು. ಬ್ರಾಹ್ಮಣರು, ಅರಸುಗಳು ಮತ್ತು ವೈಶ್ಯರಲ್ಲಿ ಬಾಲ್ಯವಿವಾಹ, ಕನ್ಯಾವಿವಾಹಗಳಿಗೇ ಹೆಚ್ಚಿನ ಒಲವಿತ್ತು. ವೊಕ್ಕಲಿಗರ ಕೆಲವು ಉಪಜಾತಿಗಳಲ್ಲಿ ಮಗಳು ಹುಟ್ಟಿದ ಕೆಲವೇ ತಿಂಗಳಲ್ಲಿ ಅವಳ ವಿವಾಹ ನಿಶ್ಚಿತಾರ್ಥವನ್ನು ಮಾಡಿಬಿಡುವ ಪದ್ಧತಿಯಿತ್ತು. ಕನ್ಯಾವಿವಾಹವೂ ಚಾಲ್ತಿಯಲ್ಲಿತ್ತು.[೨೨] ರಾಜಕುಟುಂಬಗಳಲ್ಲಿ ಬಹುಪತ್ನೀತ್ವ ವಿವಾಹಗಳು ಸಾಮಾನ್ಯವಾಗಿದ್ದುವು. ವರದಕ್ಷಿಣೆ ಮತ್ತು ವಧುದಕ್ಷಿಣೆ (ತೆರ) ರೂಢಿಯಲ್ಲಿದ್ದುವು.[೨೩] ಸತೀ ಪದ್ಧತಿಯೂ ಇತ್ತು. ಶಾಸನಗಳು ಸೂಚಿಸುವಂತೆ ಅದು ಬಹುತೇಕ ರಾಜಮನೆತನಗಳಿಗೆ ಸೀಮಿತಗೊಂಡಿದ್ದಿತು. ಜನೇ ಚಾಮರಾಜ ಒಡೆಯರ್, ಕಂಠೀರವ ನರಸರಾಜ ಒಡೆಯರ್ ಮತ್ತು ದೇವರಾಜ ಒಡೆಯರ್ ಇವರ ರಾಣಿಯರು ಸತಿಯನ್ನಾಚರಿಸಿದುದಕ್ಕೆ ಶಾಸನಗಳಲ್ಲಿ ಉಲ್ಲೇಖವಿದೆ.[೨೪] ವಿಧವೆಗೆ ತಲೆಯನ್ನು ಬೋಳಿಸುತ್ತಿದ್ದರು. ಅವಳನ್ನು ನೋಡುವುದೇ ಅಮಂಗಳ ಎಂಬ ನಂಬಿಕೆಯಿತ್ತು. ಈಗಲೂ ಅದು ಸ್ವಲ್ಪಮಟ್ಟಿಗೆ ಇದೆ. ಒಟ್ಟಿನಲ್ಲಿ ವಿಧವೆಗೆ ಬದುಕು ದುಃಖಮಯವಾಗಿತ್ತು, ಭಾರವಾಗಿತ್ತು. ಸಂಬಂಧಿತ ಕುಟುಂಬದವರೆಯೇ ಬದುಕಿರುವವರೆಗೆ ಆಕೆಯನ್ನು ನೋಡಿಕೊಂಡು, ಸತ್ತಾಗ ಅಂತ್ಯಕ್ರಿಯೆಗಳನ್ನು ಮಾಡಿಬಿಡುತ್ತಿದ್ದರು. ಬಾಲ್ಯವಿವಾಹ ಮತ್ತು ಇತರ ಅಡ್ಡಿಗಳಿಂದಾಗಿ, ಉನ್ನತ ಶಿಕ್ಷಣ ಅವರಿಗೆ ಲಭ್ಯವಿರಲಿಲ್ಲ.

ಸಮಾಜದಲ್ಲಿ ಮಹಿಳೆಯರು ತಮ್ಮ ಪಾತ್ರವನ್ನು ನಿರ್ವಹಿಸಲು ಇಷ್ಟೆಲ್ಲ ದುಷ್ಟಪದ್ಧತಿಗಳ ತಡೆಗಳು, ಸೀಮಿತಗಳು ಇದ್ದರೂ ಕೂಡ, ಅವರು ಮುಂದುವರಿಯಲು ವಿಶೇಷವಾದ ಅರ್ಹತೆಯ ತಡೆಯೇನೂ ಇರಲಿಲ್ಲ. ಸಾಮಾಜಿಕ ವಾತಾವರಣ ಹೇಗಿದ್ದಿತೆಂದರೆ, ಸ್ತ್ರೀ ಶಿಕ್ಷಣ, ಆಕೆಯ ಸ್ಥಾನಮಾನ ಸುಧಾರಣೆ ಈ ವಿಷಯಗಳಲ್ಲಿ ಬದಲಾವಣೆ, ಸುಧಾರಣೆ ಸ್ವಾಗತಾರ್ಹವಾಗಿತ್ತು. ಚಿಕ್ಕದೇವರಾಜ ಒಡೆಯರ ಊಳಿಗದವಳಾಗಿದ್ದ ಸಂಚಿಯ ಹೊನ್ನಮ್ಮನೇ ಇದಕ್ಕೆ ಉದಾಹರಣೆ. ಆಕೆ ಕವಿತಾ ಶಕ್ತಿಯಿದ್ದ ಊಳಿಗದವಳಾಗಿದ್ದರೂ ತಿಳಿವಳಿಕೆಯುಳ್ಳ ಸ್ತ್ರೀ. ಸುಪ್ರಸಿದ್ಧವಾದ ಸಾಂಗತ್ಯ ಕೃತಿ ಹದಿಬದೆಯ ಧರ್ಮವನ್ನು ಅವಳು ಬರೆದಿದ್ದಾಳೆ. ಒಬ್ಬ ಪತಿವ್ರತೆಯಾದ, ಸುಶೀಲೆಯಾದ ಹೆಣ್ಣಿನ ಕರ್ತವ್ಯಗಳು ಯಾವುವು ಎಂಬುದನ್ನು ಅವಳು ಬರೆದಿದ್ದಾಳೆ. ಸಮಾಜವು ಮಹಿಳೆಯರಿಂದ ಏನನ್ನು ನಿರೀಕ್ಷಿಸುತ್ತಿದ್ದಿತು ಎಂಬುದು ಇದರಿಂದ ವೇದ್ಯವಾಗುತ್ತದೆ. ಬಹುಶಃ ಆಕೆ ಹಿಂದೂ ಸಮಾಜದ ನಾಲ್ಕನೆಯ ವರ್ಣಕ್ಕೆ ಸೇರಿದವಳು. ಆದರೂ ತನ್ನ ಗುರು ಅಳಸಿಂಗಾರ್ಯರ ಪ್ರೋತ್ಸಾಹ-ಪ್ರೇರಣೆಗಳಿಂದ ಆಕೆ ಸಾಹಿತ್ಯಕವಾಗಿ ಎತ್ತರಕ್ಕೆ ಏರಿದಳು.[೨೫] ಉತ್ತಮ ಜಾತಿಗೆ ಸೇರಿದ ಒಬ್ಬ ವ್ಯಕ್ತಿ, ಮಡಿ-ಮೈಲಿಗೆಗಳನ್ನು ಕಟ್ಟುನಿಟ್ಟಾಗಿ ಆಚರಿಸುತ್ತಿದ್ದರೂ, ಒಬ್ಬ ಕೆಳಜಾತಿಯ ವ್ಯಕ್ತಿಯಲ್ಲಿ, ಅದರಲ್ಲೂ ಒಬ್ಬ ಮಹಿಳೆಯಲ್ಲಿ ಪ್ರತಿಭೆಯನ್ನು ಗುರುತಿಸಿ, ಅವಳು ಒಂದು ಕೃತಿರಚನೆ ಮಾಡುವಂತೆ ಪ್ರೇರಿಸಿ ಅವಳ ಹೆಸರನ್ನು ಅಮರವಾಗಿಸಿದ್ದು ಗಮನಾರ್ಹವಾದ ಸಂಗತಿ. ಜಾತಿ ಕಟ್ಟುಪಾಡುಗಳು ಅಷ್ಟೊಂದು ಗಡುಸಾಗಿರಲಿಲ್ಲ; ಪ್ರತಿಭಾವಂತ ಮಹಿಳೆಯರಿಗೆ ತಮ್ಮ ಪ್ರತಿಭಾ ಪ್ರದರ್ಶನಕ್ಕೆ ಮುಕ್ತ ಅವಕಾಶಗಳಿದ್ದುವು ಎನ್ನುವುದು ಇದರಿಂದ ತಿಳಿಯುತ್ತದೆ. ಹೊನ್ನಮ್ಮನಿಗೇನೋ ಅರಮನೆಯೊಂದಿಗೆ ಸಂಬಂಧವೆಂಬ ಹೆಚ್ಚಿನ ಅನುಕೂಲವಿತ್ತು. ಚಿಕ್ಕದೇವರಾಜರ ಆಸ್ಥಾನದಲ್ಲಿದ್ದ ಇನ್ನೊಬ್ಬ ಕವಯಿತ್ರಿ ಶ್ರೀರಂಗಮ್ಮ ಎಂಬ ಬ್ರಾಹ್ಮಣ ಮಹಿಳೆ. ಅವಳು ಪದ್ಮಿನೀ ಕಲ್ಯಾಣ ಎಂಬ ಕೃತಿಯನ್ನು ರಚಿಸಿದಳು.[೨೬] ತಿರುಪತಿಯ ಶ್ರೀನಿವಾಸನು ಪದ್ಮಿನಿಯೊಂದಿಗೆ ವಿವಾಹಮಾಡಿಕೊಂಡದ್ದು ಇದರ ವಸ್ತು. ಆಸ್ಥಾನದಲ್ಲಿದ್ದ ಮಹಿಳೆಯರು ಸುಶಿಕ್ಷಿತೆಯರೂ, ಜ್ಯೋತಿಷ ,ಕಾವ್ಯ, ನಾಟಕ, ಗಾಯನ, ನರ್ತನಗಳಲ್ಲಿ ಹಾಗೂ ವಿವಿಧ ಶಾಸ್ತ್ರಗಳಲ್ಲಿ ಕೋವಿದೆಯರೂ ಆಗಿದ್ದರು.[೨೭]

ಒಟ್ಟಿನ ಮೇಲೆ ಈ ಕಾಲಾವಧಿಯ ಬಹುತೇಕ ಮಹಿಳೆಯರು ಸುಸಂಸ್ಕೃತೆಯರಾಗಿದ್ದರು. ಹೆಣ್ಣುಮಕ್ಕಳಿಗೆ ಮಿಕ್ಕ ವಿದ್ಯೆಗಳ ಜೊತೆಗೆ ಸಂಗೀತ ಮತ್ತು ನರ್ತನಗಳನ್ನು ಕಲಿಸಲಾಗುತ್ತಿತ್ತು. ಕೆಲವರು ಗಾಯನ-ನರ್ತನಗಳಲ್ಲಿ

ಅಪೂರ್ವ ಸಾಧನೆ ಮಾಡಿದ್ದರು. ಉದಾತ್ತ ಚಾರಿತ್ರ್ಯ, ದೈವಭಕ್ತಿ, ಧರ್ಮಪರತೆ, ದಾನಪರಾಯಣತ್ವ ಇವುಗಳಿಗೆ ಹೆಸರಾಗಿದ್ದರು. ದೇವಾಲಯಗಳಿಗೆ, ಬ್ರಾಹ್ಮಣರಿಗೆ ಅವರು ಅನೇಕ ಕಾಣಿಕೆಗಳನ್ನೂ ಕೊಡುಗೆಗಳನ್ನೂ ನೀಡಿರುವುದು ಶಾಸನಗಳಿಂದ ವೇದ್ಯವಾಗುತ್ತದೆ. ಪತಿಯು ಆಚರಿಸುವ ಯಾವುದೇ ಧಾರ್ಮಿಕ ವಿಧಿಯಲ್ಲಿ ಅವಳು ಭಾಗವಹಿಸುವುದು ಕಡ್ಡಾಯವಾಗಿತ್ತು. ಎಲ್ಲಾ ಬಗೆಯ ಸಾಮಾಜಿಕ-ಧಾರ್ಮಿಕ ಉತ್ಸವಗಳಲ್ಲಿ, ಸಮಾರಂಭಗಳಲ್ಲಿ, ರಥೋತ್ಸವಗಳು, ದಸರಾ ಮೆರವಣಿಗೆ, ಸಾಮುದಾಯಿಕ ಮನರಂಜನೆ- ಇವುಗಳಲ್ಲಿ ಭಾಗವಹಿಸಲು ಹೆಂಗಸರಿಗೆ ಸ್ವಾತಂತ್ರ್ಯವಿದ್ದಿತು. ಕೆಳಜಾತಿಯ ಹೆಂಗಸರು ಜೀವಿಕೆಗಾಗಿ ದುಡಿಯುತ್ತಿದ್ದರು. ಮಾರುಕಟ್ಟೆಗಳಲ್ಲಿ ವಿವಿಧ ವಸ್ತುಗಳನ್ನು ಮಾರುವ-ಕೊಳ್ಳುವ ಚಟುವಟಿಕೆಗಳಲ್ಲಿ ಅವರು ನಿರತರಾಗಿರುತ್ತಿದ್ದರು. ಆದರೂ ನಿಷ್ಠಾವಂತ ಗೃಹಿಣಿಯಾಗಿ ಹೆಂಗಸರ ಕರ್ತವ್ಯಗಳು ಮತ್ತು ಹೊಣೆಗಾರಿಕೆಗಳಿಗೆ ಸಂಬಂಧಿಸಿದ ನೀತಿ ಸಂಹಿತೆ ಬಹು ಉನ್ನತವಾಗಿಯೇ ಮುಂದುವರಿದಿತ್ತು. ರಾಜಕಾರಣ ರಂಗದಲ್ಲೂ ಮಹಿಳೆ ತನ್ನ ಮುದ್ರೆಯನ್ನು ಉಳಿಸಿದ್ದಳು. ಮೊಗಲ್ ಸೇನೆಯೇ ಸೋಲಿನ ಕಹಿಯನ್ನುಣ್ಣುವಂತೆ ಮಾಡಿದ ವೀರಮಹಿಳೆ ಕೆಳದಿಯ ಚೆನ್ನಮ್ಮಾಜಿಯೇ ಇದಕ್ಕೆ ನಿದರ್ಶನ.[೨೬]

ಈ ಕಾಲದ ಸಾಹಿತ್ಯಕ ಕೃತಿಗಳು,[೨೭] ವ್ಯಭಿಚಾರವನ್ನು ಬೆಳೆಯುತ್ತಿದ್ದ ದುಷ್ಟ ಅಭ್ಯಾಸವಾಗಿ ಚಿತ್ರಿಸಿವೆ. ಗಣಿಕೆಯರನ್ನು ನಾಯಕಸಾನಿಯರು, ಅಂತಃಪುರ ಸ್ತ್ರೀಯರು ಎಂದು ಕರೆಯಲಾಗುತ್ತಿತ್ತು. ಅರಮನೆಯೊಂದಿಗೆ ಸಂಬಂಧವಿದ್ದುದರಿಂದ ಅವರಿಗೆ ಸಮಾಜದಲ್ಲಿ ಬಹು ಉನ್ನತವಾದ ಸ್ಥಾನಮಾನವಿದ್ದಿತು. ದೇವಾಲಯಗಳಲ್ಲಿ ಸೇವೆ ಸಲ್ಲಿಸುತ್ತಿದ್ದ ದೇವದಾಸಿಯರು, ಲಿಂಗಬಸವಿ, ವಿಷ್ಣುಬಸವಿ ಎಂಬ ಎರಡು ವರ್ಗದ ಬಸವಿಯರು ಮತ್ತು ವೃತ್ತಿನಿರತ ಸೂಳೆಯರು ಇರುತ್ತಿದ್ದರು.[೨೮] ಕಂಠೀರವ ನರಸರಾಜ ವಿಜಯದಲ್ಲಿ ವೇಶ್ಯಾವಾಟಿಕೆಗಳ ಮತ್ತು ಸೂಳೆಯರ ವರ್ಣನೆಯಿಂದ ಗಣಿಕೆಯರಿಗೂ ಸಮಾಜದಲ್ಲಿ ನಿರ್ದಿಷ್ಟ ಸ್ಥಾನವಿದ್ದಿತು, ಅವರವೇ ಹಕ್ಕುಗಳು ಮತ್ತು ಕರ್ತವ್ಯಗಳಿದ್ದುವು ಎಂಬುದು ತಿಳಿದುಬರುತ್ತದೆ. ಮೇಲುವರ್ಗದ ಗಣಿಕೆಯರಂತೆಯೇ ಕೆಳವರ್ಗದ ಸೂಳೆಯರೂ ಇದ್ದರು. ಅವರು ತುಂಬಾ ನಿಪುಣೆಯರೂ ಕಲಾ ಕೋವಿದೆಯರೂ ಆಗಿದ್ದರು. ಅದರಲ್ಲೂ ನರ್ತನ-ಗಾಯನಗಳಲ್ಲಿ ಮತ್ತು ಸಂಗೀತವಾದ್ಯಗಳನ್ನು ನುಡಿಸುವುದರಲ್ಲಿ ಪರಿಣತಿ ಗಳಿಸಿದ್ದರು. ಪಗಡೆ ಮತ್ತು ಚದುರಂಗದ ಆಟಗಳಲ್ಲಿ ನಿಪುಣೆಯರು. ಪ್ರತಿದಿನವೂ ಅವರು ರಾಜನ ಆಸ್ಥಾನದಲ್ಲಿ ಹಾಜರಿದ್ದು, ರಾಜನನ್ನೂ ಆಸ್ಥಾನಿಕರನ್ನೂ ತಮ್ಮ ಗಾನ-ನರ್ತನಗಳಿಂದ ರಂಜಿಸಬೇಕಾಗಿತ್ತು. ಎಲ್ಲಾ ಉತ್ಸವಗಳಲ್ಲೂ ಲೌಕಿಕ-ಧಾರ್ಮಿಕ ಮೆರವಣಿಗೆಗಳಲ್ಲೂ ಭಾಗವಹಿಸಬೇಕಾಗಿತ್ತು. ಇದು ಈ ಶತಮಾನದ ಒಂಬತ್ತನೇ ದಶಕದವರೆಗೂ ಮುಂದುವರಿದು ಬಂದಿದೆ. ಮೈಸೂರು ಅರಮನೆಯ ಕೃಷ್ಣಸ್ವಾಮಿ ದೇವಾಲಯದಲ್ಲಿ ಶ್ರೀಕೃಷ್ಣ ಜನ್ಮಾಷ್ಟಮಿ ಉತ್ಸವಗಳಲ್ಲಿ ಅವರು ಮಂಗಳದ್ರವ್ಯಗಳನ್ನು ಹಿಡಿದುಕೊಂಡು ಮೆರವಣಿಗೆಯ ಮುಂಚೂಣಿಯಲ್ಲಿರುತ್ತಿದ್ದರು. ರಾಜರ ಅಂತಃಪುರದಲ್ಲಿ ಪರಿಚಾರಿಕೆಯರಾಗಿಯೂ, ರಾಜನಿಗೆ ಆಪ್ತಸಹಾಯಕರಾಗಿಯೂ ಕೆಲಸಮಾಡುತ್ತಿದ್ದರು. ಅವರಲ್ಲಿ ಕೆಲವರು ರಾಜಕುಟುಂಬದ ಮಹಿಳೆಯರಿಗಾಗಿ ಕಾವ್ಯಗಳನ್ನೂ ಪುರಾಣಗಳನ್ನೂ ಓದುತ್ತಿದ್ದರು. ಮೇಲುವರ್ಗಗಳ ಪುರುಷರು ಮಾತ್ರವಲ್ಲ, ಸಾಮಾನ್ಯರೂ ಕೂಡ ಅವರ ಸಹವಾಸಕ್ಕಾಗಿ ಹಂಬಲಿಸುತ್ತಿದ್ದರು. ವಿಟಪುರುಷರ ಉಲ್ಲೇಖಗಳಿವೆ. ಒಟ್ಟಿನಲ್ಲಿ ಸಾಹಿತ್ಯಕ ಆಧಾರಗಳಿಂದ ತಿಳಿದುಬರುವುದೇನೆಂದರೆ, ಈ ಕಾಲದಲ್ಲಿ ಸೂಳೆಗಾರಿಕೆಯು ಸಮಾಜದಲ್ಲಿ ಚೆನ್ನಾಗಿ ಸ್ಥಾಪಿತವಾಗಿತ್ತು. ಆದರೆ ಸಮಾಜವೇನೋ ಅದನ್ನು ದುರದೃಷ್ಟಕರವೆಂದು ಕೆಳಗಣ್ಣಿನಿಂದಲೇ ನೋಡುತ್ತಿತ್ತು. ವೆಂಕಾಮಾತ್ಯನು ತನ್ನ ಕುಕ್ಷಿಂಭರ ಪ್ರಹಸನದಲ್ಲಿ ಗುಹ್ಯರೋಗಗಳ ಬಗೆಗೆ ಉಲ್ಲೇಖಿಸಿದ್ದಾನೆ.

ಇದರ ಜೊತೆಗೆ ಕನ್ಯೆಯರನ್ನು ದೇವಾಲಯಗಳಿಗೆ ದೇವದಾಸಿಯರನ್ನಾಗಿ, ಬಸವಿಯರನ್ನಾಗಿ ಬಿಡುವ ಸಂಪ್ರದಾಯವೂ ಇತ್ತು. ಅವರನ್ನು ಮದುವೆಯಾಗಲು ಯಾರೂ ಮುಂದೆ ಬರುತ್ತಿರಲಿಲ್ಲ. ತಂದೆತಾಯಿಗಳು ಈ ದುಷ್ಟಪದ್ಧತಿಯನ್ನು ಒಂದು ಹರಕೆ ತೀರಿಸುವ ಸಲುವಾಗಿ ಎಂಬಂತೆ ಬಿಟ್ಟುಬಿಡುತ್ತಿದ್ದರು. ಇದನ್ನೇ ಕೆಳವರ್ಗದ ಸಾಮಾಜಿಕ ಸ್ತರಕ್ಕೆ ಸೇರಿದ ಜನರೂ ಅನುಸರಿಸುತ್ತಿದ್ದರು.[೨೯]

೪

ಸಾಮುದಾಯಿಕ ಜೀವನವೂ ಚಟುವಟಿಕೆಗಳೂ ಗ್ರಾಮಪ್ರದೇಶಗಳಲ್ಲಿ ಉಚ್ಛ್ರಾಯದಲ್ಲಿದ್ದುವು. ಹಳ್ಳಿಯ ಮಠ, ಸತ್ರ, ದೇವಾಲಯ, ರಾಮಾನುಜಕೂಟ, ಜಂಗಮಕೂಟದಂತಹ ಕೂಟಗಳು, ಗ್ರಾಮದ ಚಾವಡಿ ಇವು ಸಾಮುದಾಯಿಕ ಚಟುವಟಿಕೆಯ ಕೇಂದ್ರಗಳಾಗಿದ್ದುವು. ವಿವಿಧ ಗೋತ್ರ, ಶಾಖೆ, ಸೂತ್ರಗಳಿಗೆ ಸೇರಿದ ಬ್ರಾಹ್ಮಣರಿಗೆ ಕೊಟ್ಟ ಅಗ್ರಹಾರಗಳು, ವೃತ್ತಿಗಳು ಅಥವಾ ಹಳ್ಳಿಯ ಭೂಮಿಯ ಪಾಲು ಸಾಮುದಾಯಿಕ ಜೀವನದ ಘಟಕಗಳಾಗಿದ್ದುವು. ಅದರಲ್ಲೂ ಧರ್ಮಾಚರಣೆಗಳು, ಸಂಪ್ರದಾಯದ ಮೌಲ್ಯಗಳನ್ನು ಉಳಿಸುವ ಕಾರ್ಯಕ್ರಮಗಳಿಗೆ ಅವು ಕೇಂದ್ರಗಳಾಗಿದ್ದುವು. ಮೈಸೂರು ಮತ್ತು ಕೆಳದಿಯ ರಾಜರು ಮತ್ತು ಅವರ ಕೆಲವು ಅಧಿಕಾರಿಗಳು ಹಲವು ಗ್ರಾಮಗಳನ್ನು ಅಗ್ರಹಾರಗಳನ್ನಾಗಿ ಪರಿವರ್ತಿಸಿ, ಎಷ್ಟೋ ವೇಳೆ ಬ್ರಾಹ್ಮಣರನ್ನು ಆಹ್ವಾನಿಸಿ ಅವರಿಗೆ ಅರ್ಪಿಸುತ್ತಿದ್ದರು. ಭೂಮಿಯ ಖಾಸಗಿ ಒಡೆತನವು ಆನುವಂಶಿಕವಾಗಿ ಮುಂದುವರಿಯುತ್ತಿತ್ತು. ಎಲ್ಲಾ ತರಿ, ಖುಷ್ಕಿ ಜಮೀನುಗಳಿಗೆ, ಬಾಗಾಯ್ತುಗಳಿಗೆ ಕೃಷಿ ಹಕ್ಕುಗಳು, ನೀರಾವರಿ ಸೌಲಭ್ಯಗಳು, ನದಿಗಳು, ತೊರೆಗಳು, ಕೆರೆಗಳು, ಮರಗಳು, ಬೆಟ್ಟಗಳು, ಇತ್ಯಾದಿಗಳ ಹಕ್ಕನ್ನು ಪೂರ್ತಿಯಾಗಿ ವಹಿಸಿಕೊಡಲಾಗುತ್ತಿತ್ತು. ಜೊತೆಗೆ ಎಂಟು ಬಗೆಯ ಹಕ್ಕುಗಳು, ಭೂಮಿಯ ಮೇಲಾಗಲಿ, ಒಳಗಾಗಲಿ ದೊರಕುವ ನಿಧಿಯನ್ನು ಭೋಗಿಸುವ ಅಧಿಕಾರ, ನೀರಿನ ಒರತೆಗಳು, ಖನಿಜಗಳು, ಹಾಳಾಗದ ವಸ್ತುಗಳು, ಸಿದ್ಧವಾಗಿರುವ ವರಮಾನ, ಗ್ರಾಮದ ನಾಲ್ಕೂ ಗಡಿಗಳೊಳಗೆ ಬರಲಿರುವ ವರಮಾನದ ಸಾಧ್ಯತೆ ಇತ್ಯಾದಿಗಳೆಲ್ಲವನ್ನೂ ವಹಿಸಿಕೊಡುತ್ತಿದ್ದರು.[೬೨] ರಾಜಮನೆತನಕ್ಕೆ ಬ್ರಾಹ್ಮಣರ ಬೆಂಬಲವನ್ನು ಖಚಿತಪಡಿಸಲಾಗುತ್ತಿತ್ತು. ದಾನಗಳನ್ನು ಆನುವಂಶಿಕವಾಗಿ ಅವರ ಪುತ್ರ ಪೌತ್ರರಾದಿಯಾಗಿ ಅನುಭವಿಸಬಹುದು ಎಂದು ನಿರ್ದಿಷ್ಟಪಡಿಸಿ ವೃತ್ತಿಗಳನ್ನು ಅವರಿಗೆ ನೀಡುತ್ತಿದ್ದರು. ಈ ದಾನಗಳು ತೆರಿಗೆರಹಿತವಾಗಿದ್ದುವು. ಅದಕ್ಕೆ ಬದಲು ಆ ಹಳ್ಳಿಗಳಿಂದ ವಿವಿಧ ತೆರಿಗೆಗಳನ್ನೂ ಕಾಣಿಕೆಗಳನ್ನೂ ಸಂಗ್ರಹಿಸುವ ಹಕ್ಕನ್ನು ದಾನಪ್ರತಿಗ್ರಹಿಗಳಿಗೆ ನೀಡಲಾಗುತ್ತಿತ್ತು. ಇವುಗಳಿಂದಾಗಿ ಬ್ರಾಹ್ಮಣರು ಗ್ರಾಮಗಳ ಒಡೆಯರೇ ಆದಂತಾಗಿ, ರಾಜನಿಗೆ ಬೆಂಬಲವಾಗುವ ಆಧಾರವಾಗುತ್ತಿದ್ದರು. ಭೂಮಾಲೀಕರಾಗಿ ಅವರು ಆಡಳಿತೀಯ ಮತ್ತು ಕಂದಾಯದ ಹಕ್ಕುಗಳೊಂದಿಗೆ ಸ್ವಯಮಾಡಳಿತವನ್ನು ಅನುಭವಿಸುತ್ತಿದ್ದರು. ಇದರಿಂದಾಗಿ ಅವರು ಬೌದ್ಧಿಕ ಮತ್ತು ಆಧ್ಯಾತ್ಮಿಕ ಅಧಿಕಾರದ ಜೊತೆಗೆ ಆರ್ಥಿಕ ಮತ್ತು ರಾಜಕೀಯ ಅಧಿಕಾರವನ್ನೂ ಅವರು ಚಲಾಯಿಸುತ್ತಿದ್ದರು. ರಾಜಕೀಯ ಚೌಕಟ್ಟಿನಲ್ಲಿ ಅವರು ಒಂದು ರೀತಿಯಾಗಿ ಸಾಮಂತ ಲಕ್ಷಣಗಳನ್ನು ಪ್ರದರ್ಶಿಸುತ್ತಿದ್ದರು. ಸಾಮಾಜಿಕ ರಚನೆಯನ್ನು ಬಲಪಡಿಸುತ್ತಿದ್ದರು.

ಉಂಬಳಿ ಅಥವಾ ತೆರಿಗೆರಹಿತ ಆಸ್ತಿ ಅಥವಾ ಗ್ರಾಮ, ಕೊಡಗಿ ಅಥವಾ ಸಾಮಾನ್ಯವಾದ ನೆಲದ ಉಡುಗೊರೆ, ಜೋಡಿ ಅಥವಾ ಸರಕಾರವು ತೆರಿಗೆಯನ್ನು ಮನ್ನಾಮಾಡಿದ ನೆಲ, ಸರ್ವಮಾನ್ಯ ಅಥವಾ ಎಲ್ಲಾ ತೆರಿಗೆಗಳಿಂದ ಮುಕ್ತ ಇತ್ಯಾದಿ ದಾನಗಳನ್ನು ಸೈನಿಕರಿಗೆ ಅಥವಾ ಮಹತ್ಕಾರ್ಯ ಮಾಡಿದ ಇತರರಿಗೆ ಕೊಡಲಾಗುತ್ತಿತ್ತು. ಉದಾಹರಣೆಗೆ, ದೇವರಾಜ ಒಡೆಯರು ೧೬೬೦ರಲ್ಲಿ ಹಂಗಳದ ಗಂಗೆಬಸವೇಗೌಡ ಎಂಬುವನಿಗೆ ತೆರಿಗೆರಹಿತವಾಗಿ ಭೂಮಿಯನ್ನು ದಾನಮಾಡಿದರು.[೬೩] ಈ ತೆರನಾದ ಭೂದಾನಗಳು, ಅವುಗಳ ಜೊತೆ ಜೊತೆಗೇ ಹೆಚ್ಚಿನ ದಾನಗಳು ಕೂಡಿ ಗ್ರಾಮಾಂತರ ಪ್ರದೇಶಗಳಲ್ಲೂ ಬ್ರಾಹ್ಮಣೇತರ ಭೂಮಾಲೀಕ ವರ್ಗವೊಂದು ಸೃಷ್ಟಿಯಾಯಿತು, ಸಾಮಾಜಿಕ ರಚನೆಯನ್ನು ಸಂಕೀರ್ಣಗೊಳಿಸಿತು. ಇತರ ಮೇಲುಜಾತಿಗಳಲ್ಲದ ಉಪವಿಭಾಗಗಳನ್ನೂ ಇಲ್ಲಿ ಗುರುತಿಸಬಹುದಾಗಿತ್ತು. ಈ ವರ್ಗದಲ್ಲಿ ಅತ್ಯಂತ ಮೇಲಿನ ವಿಭಾಗದಲ್ಲಿ ವ್ಯಕ್ತಿಗಳು, ಕೆಲವೊಮ್ಮೆ ರೈತರು ಭೂ ಹಿಡುವಳಿದಾರರಾಗಿದ್ದರು. ಶಾಸನಗಳಲ್ಲಿ ಶ್ರೀಮಂತ ರೈತರ ಬಗೆಗೆ

ಉಲ್ಲೇಖಗಳಿವೆ. ಉದಾಹರಣೆಗೆ, ಚಿಕ್ಕದೇವರಾಜ ಒಡೆಯರ ಆಳಿಕೆಯಲ್ಲಿ ಕೆಲವು ಶ್ರೀಮಂತರಾಗಿದ್ದ ರೈತರು ಭೂಕಂದಾಯವನ್ನು ಇತರ ತೆರಿಗೆಗಳನ್ನೂ ಸರಕಾರಕ್ಕೆ ಸಲ್ಲಿಸುವುದನ್ನು ಪ್ರತಿಭಟಿಸಿದರು, ನಿಯಮ ನಿಬಂಧನೆಗಳನ್ನು ಅವರು ಉಲ್ಲಂಘಿಸಿದರು.[೬೫] ರಾಜನಿಷ್ಠೆಯಂತಹ ಮೌಲ್ಯಗಳು ಪ್ರಧಾನವಾಗಿದ್ದರೂ ಕೆಲವರು ಆಗಾಗ ಅಧಿಕಾರಿಗಳನ್ನು ಪ್ರತಿಭಟಿಸುತ್ತಿದ್ದರು. ಅವರು ಕೈಗೊಂಡ ಕ್ರಮಗಳು ತಮಗೂ ತಮ್ಮ ಹಳ್ಳಿಗೂ ತೊಂದರೆ ಕೊಡುವಂತಿದ್ದಾಗ ಹೀಗೆ ಪ್ರತಿಭಟಿಸುತ್ತಿದ್ದರು. ಇಂತಹ ಒಡೆಯನೇ ಬೇಸಾಯ ಮಾಡುವ ಸಂದರ್ಭಗಳಲ್ಲಿ ಭೂ ಒಡೆತನವೂ ಇತರ ಸಂಬಂಧಿತ ಹಕ್ಕುಗಳೂ ಅವನ ಶಕ್ತಿಯ ಮೂಲಗಳಾಗಿದ್ದುವು. ಕೆಲವೊಮ್ಮೆ ಅವರು ರಾಜಕೀಯವಾಗಿಯೂ ಪ್ರಭಾವ ಬೀರುತ್ತಿದ್ದುದುಂಟು. ಅವರ ಕೆಳಗಿನ ಸ್ತರದಲ್ಲಿ ಗುತ್ತಿಗೆಗೆ ಪಡೆದು ಬೇಸಾಯ ಮಾಡುವ ರೈತರಿದ್ದರು. ಕುಶಲಕರ್ಮಿಗಳು, ಇತರ ಸೇವಾವೃತ್ತಿ, ಕಸುಬುವರ್ಗಗಳಿದ್ದುವು. ಇವರಿಗೆ ನೆಲವಾಗಲಿ, ರಾಜಕೀಯ-ಸಾಮಾಜಿಕ ಅಧಿಕಾರವಾಗಲಿ ಇರಲಿಲ್ಲ. ಹಲವು ವೇಳೆ ಭೂ ಹಿಡುವಳಿದಾರರ ಆರ್ಥಿಕ ಮತ್ತು ರಾಜಕೀಯ ಹತೋಟಿಗೆ ಇವರು ಒಳಪಟ್ಟಿರುತ್ತಿದ್ದರು. ಹೀಗೆ ಧಾರ್ಮಿಕರ ಮತ್ತು ಲೌಕಿಕ ವ್ಯಕ್ತಿಗಳಿಗೆ ಭೂಮಿಯನ್ನೂ ತೆರಿಗೆ ಹಕ್ಕುಗಳನ್ನೂ ದಾನಮಾಡುತ್ತಿದ್ದುದರಿಂದಾಗಿ, ಕೃಷಿ ವ್ಯವಸ್ಥೆಯಲ್ಲಿ ಸ್ಪಷ್ಟವಾಗಿ ಗೋಚರಿಸುವಂತಹ ಮುಖ್ಯವಾದ ಬದಲಾವಣೆಗಳಾದುವು.

ಇಲ್ಲಿ ವಿಶೇಷವಾಗಿ ಗಮನಿಸಬೇಕಾದದ್ದು ಸ್ವಯಮಾಡಳಿತವಿದ್ದ ಬಾರಾಬಲೂತಿ ವ್ಯವಸ್ಥೆ. ಈ ಕಾಲಾವಧಿಯುದ್ದಕ್ಕೂ ಇದು ಗ್ರಾಮ ಸಮುದಾಯದ ಒಂದು ಸಾಮಾನ್ಯ ಲಕ್ಷಣವಾಗಿತ್ತು. ಈ ವ್ಯವಸ್ಥೆಯಲ್ಲಿ ಗೌಡ (ಗ್ರಾಮದ ಮುಖ್ಯಸ್ಥ), ಶಾನಭೋಗ (ಗ್ರಾಮದ ಲೆಕ್ಕಿಗ), ಪಂಚಾಂಗದ ಬ್ರಾಹ್ಮಣ (ಜ್ಯೋತಿಷಿ), ಕಬ್ಬಿಣದ ಕೆಲಸದವನು(ಕಮ್ಮಾರ), ಅಕ್ಕಸಾಲೆ (ಚಿನ್ನ ಬೆಳ್ಳಿ ಕೆಲಸದವನು), ಕುಂಬಾರ (ಮಡಕೆ ಮಾಡುವವನು), ಅಗಸ (ಬಟ್ಟೆ ಒಗೆಯುವವನು), ಕೆಲಸಿ (ಕ್ಷೌರಿಕ), ತೋಟಿ (ಜಲಗಾರ), ತಳವಾರ (ಕಾವಲಿನವನು), ಕೆರೆ-ನೀರುಗಂಟಿ (ಕೆರೆಯ ತೂಬುಗಳನ್ನು ನಿಯಂತ್ರಿಸುವವನು) ಮತ್ತು ಓಜರವನು (ಬಡಗಿ) - ಇವರು ಗ್ರಾಮದ ಆಡಳಿತವನ್ನೂ, ಸಾಮುದಾಯಿಕ ಜೀವನದ ಇತರ ಎಲ್ಲಾ ವಿಭಾಗಗಳನ್ನೂ ನೋಡಿಕೊಳ್ಳುತ್ತಿದ್ದರು. ಅವರ ಸ್ಥಾನಮಾನ ಮತ್ತು ಹೊಣೆಗಾರಿಕೆಗಳಿಗೆ ಅನುಗುಣವಾಗಿ, ಈ ಅಧಿಕಾರಿಗಳಿಗೆ ವೇತನವನ್ನು ಸಾಮಾನ್ಯವಾಗಿ ವಸ್ತುರೂಪದಲ್ಲಿ ನೀಡಲಾಗುತ್ತಿದ್ದಿತು. ಗೌಡ ಮತ್ತು ಶಾನಭೋಗರು ಗ್ರಾಮಸ್ಥರು ಬೆಳೆದ ಬೆಳೆಗಳಲ್ಲಿ ಒಂದು ಹೆಚ್ಚಿನ ಪಾಲನ್ನು ತೆಗೆದುಕೊಳ್ಳಬಹುದಾಗಿತ್ತು (ಸನಯ ಮುದ್ರೆ). ಗ್ರಾಮಕ್ಕೆ ಸಂಬಂಧಿಸಿದ ಕಡತಗಳಲ್ಲಿ ಕಂದಾಯದ ವಿವರಗಳನ್ನು, ವಸೂಲು ಮಾಡಿದ್ದು, ಸರಕಾರಕ್ಕೆ ಕಟ್ಟಿದ್ದು ಮೊದಲಾದ ಅಂಶಗಳನ್ನು ನಮೂದು ಮಾಡುವುದಕ್ಕಾಗಿ ಕಡತದ ಕಾಣಿಕೆಯ ಹಣ ಎಂದು ಹೆಚ್ಚಿನ ಶುಲ್ಕವನ್ನು ರೈತರಿಂದ ಶಾನುಭೋಗನು ಪಡೆಯುತ್ತಿದ್ದನು. ಮಿಕ್ಕವರಿಗೆ ಬಿಡಿ ರೈತರು ತಲಾ ಒಂದು ಹೊರೆ ತೆನೆ ಸಮೇತವಾದ ಹುಲ್ಲು, ಒಂದು ಕೊಳಗ ಧಾನ್ಯವನ್ನು ಕೊಡುತ್ತಿದ್ದರು, ಅವರು ಸಲ್ಲಿಸುವ ಸೇವೆಗಾಗಿ. ತೋಟಿ ಮತ್ತು ತಳವಾರರ ಹೊರತು ಮಿಕ್ಕವರಿಗೆ ರೈತರಿಂದ ನಿರ್ದಿಷ್ಟ ಪ್ರಮಾಣದ ಧಾನ್ಯವು ಹೆಚ್ಚಿನ ಭತ್ಯೆಯಾಗಿ (ಹಡದೆ) ಪ್ರತಿಯೊಬ್ಬ ಬೇಸಾಯಗಾರನಿಂದಲೂ ದೊರಕುತ್ತಿದ್ದಿತು. ಇತರ ವರಮಾನಗಳ ಜೊತೆಗೆ, ಜ್ಯೋತಿಷಿ,ತೋಟಿ, ತಳವಾರ, ನೀರುಗಂಟಿ ಇವರು ತಮ್ಮ ಜೀವನಕ್ಕಾಗಿ ಕಂದಾಯಮುಕ್ತ ಭೂಮಿಯನ್ನು (ಮಾನ್ಯ ಭೂಮಿ) ಪಡೆಯುತ್ತಿದ್ದರು.[೬೬] ಹಾಗಾಗಿ ಬೇಸಾಯಗಾರನು ಭಾರವಾದ ಹೊರೆಯನ್ನೇ ಹಂಚಿಕೊಳ್ಳಬೇಕಾಗಿತ್ತು. ಆದರೂ ಗಣ್ಯವರ್ಗವು ಅಂತರಕ್ರಿಯೆಗಳಲ್ಲಿ ಸಮರ್ಥವಾಗಿ ಹೊಂದಿಸಿಕೊಂಡದ್ದರಿಂದ, ಅದನ್ನು ಧಾರ್ಮಿಕಗೊಳಿಸಿದ್ದರಿಂದ ಗಮನಾರ್ಹವಾದ ಗಲಭೆಗಳೇನೂ ಸಂಭವಿಸುತ್ತಿರಲಿಲ್ಲ.

ಇದರಿಂದ ಗ್ರಾಮಗಳಲ್ಲಿ ಸಾಮುದಾಯಿಕ ಜೀವನವು ಸರಾಗವಾಗಿ ನಡೆಯುವಂತಾಗಿತ್ತು. ಗ್ರಾಮದ ಜನರು ಜವಾಬ್ದಾರಿಗಳನ್ನು ಹಂಚಿಕೊಂಡು, ತಮ್ಮ ಹಳ್ಳಿಯ ಒಳಿತಿಗಾಗಿ ಧಾರ್ಮಿಕ ಹಾಗೂ ಲೌಕಿಕ

ಕಾರ್ಯಕ್ರಮಗಳನ್ನು ಹಾಕಿಕೊಂಡು ಒಟ್ಟಾಗಿ ನಿರ್ವಹಿಸುತ್ತಿದ್ದರು. ಎಲ್ಲಾ ಬಗೆಯ ಒಳಾಂಗಣ-ಹೊರಾಂಗಣ ಕ್ರೀಡೆಗಳು, ಗ್ರಾಮದೇವತೆಯ ಉತ್ಸವಗಳು, ಕೃಷಿ ಸಂಬಂಧವಾದ ಹಬ್ಬಗಳು, ಗ್ರಾಮಜೀವನಕ್ಕೇ ಅನನ್ಯವಾದ ಇತರ ಮನರಂಜನೆಗಳು ಬಹುತೇಕ ಸಾಮೂಹಿಕತೆಯ ಲಕ್ಷಣಗಳನ್ನು ಹೊಂದಿರುತ್ತಿದ್ದುವು. ಮನರಂಜನೆ ಮಾತ್ರವಾಗಿರದೆ ಅವು ಸಾಮುದಾಯಿಕ ಬೆಸುಗೆಗಳನ್ನೂ ಪರಸ್ಪರ ಅವಲಂಬನವನ್ನೂ ಬಲಗೊಳಿಸಲು ನೆರವಾಗುತ್ತಿದ್ದುವು. ಗಮನಿಸಬೇಕಾದ ಇನ್ನೊಂದು ಮುಖ್ಯ ವಿಚಾರ, ಈ ಬಗೆಯ ಎಲ್ಲಾ ಕಾರ್ಯ ಚಟುವಟಿಕೆಗಳಲ್ಲಿ ಮಹಿಳೆಯರು ಮುಕ್ತವಾಗಿ ಪಾಲುಗೊಳ್ಳುತ್ತಿದ್ದುದು. ರೋಗರುಜಿನಗಳು ಮತ್ತಿತರ ಆಪತ್ತುಗಳಿಗೆ ಸಂಬಂಧಿಸಿಂತೆ ಅವರು ಹೇಗೆ ಮೂಢನಂಬಿಕೆಯುಳ್ಳವರಾಗಿದ್ದರು ಎಂಬುದನ್ನೂ ಇದು ತೋರಿಸುತ್ತಿದ್ದಿತು. ಗ್ರಾಮದೇವತೆಗೆ ಪ್ರಾಣಿಬಲಿ ಕೊಡುವುದು, ಕೆಂಡದ ಮೇಲೆ ನಡೆಯುವುದು ಇವುಗಳಿಂದ ದುಷ್ಟಶಕ್ತಿಗಳ ದುಷ್ಪರಿಣಾಮಗಳನ್ನು ನಿವಾರಿಸಿಕೊಳ್ಳಬಹುದು ಎಂದು ಅವರು ನಂಬುತ್ತಿದ್ದರು. ಮೋಳೂರು ಸೀಮೆಯಲ್ಲಿ ಪ್ರಜೆಗಳು ಮೋಳೂರಿನ ಲಕ್ಷ್ಮೀಕಾಂತ ದೇವರಿಗೆ ಒಂದು ದೀಪಮಾಲಾ ಸ್ತಂಭವನ್ನು ಅರ್ಪಿಸಿದರು. ಸ್ಥಳೀಯ ಶಾನಭೋಗರು ಮತ್ತು ಆನೆ ಬಾಗೂರಿನ ಅರಮನೆ ಶಾನಭೋಗರು, ಸಾಲಿಗ್ರಾಮದಲ್ಲಿ ರಾಜನ ಕಾರ್ಯಕರ್ತನಾಗಿದ್ದ (ಪ್ರತಿನಿಧಿ) ಕೊಟ್ಟೂರಯ್ಯನ ಮಗ ನಂಜಯ್ಯನಿಗೆ, ಆ ಸ್ಥಳದ ಗೋಪಾಲದೇವರ ದೇವಾಲಯದಲ್ಲಿ ಒಂದು ನವರಂಗ ಪಟ್ಟಸಾಲೆಯನ್ನೂ ಸುತ್ತುಗೋಡೆಯನ್ನೂ ನಿರ್ಮಿಸಲು ಸಹಾಯ ಮಾಡಿದರು. ಸಾರ್ವಜನಿಕ ಒಳಿತಿಗಾಗಿ ಇನ್ನೂ ಅನೇಕ ಸತ್ಕಾರ್ಯಗಳಿಗೆ ಅವರು ನೆರವಾದರು. ಹೆಮ್ಮರ ಜಾಲದ ಕೆಲವು ಗೌಡರು ಬೀರೇದೇವರ ದೇವಾಲಯದ ದುರಸ್ತಿಕಾರ್ಯವನ್ನು ಕೈಗೆತ್ತಿಕೊಂಡರು. ಆಮೇಲೆ ಮುಂದೆ ಬೋಳ ಬೀರೇಗೌಡ ಮತ್ತು ಪಾರಸಿಗೌಡರ ವಾರಸುದಾರರು ಬಡತನದಿಂದಾಗಿ ತಮ್ಮ ಎರಡು ಪಾಲಿಗೆ ಸಲ್ಲಬೇಕಾದ ಹಣವನ್ನು ಸಲ್ಲಿಸಲು ಅಸಮರ್ಥರಾಗಿರುವುದಾಗಿ ಹೇಳಿಕೊಂಡರು. ಆಗ ದೊಡ್ಡ ಬೀರೇಗೌಡನು ''ಹಾಗೆ ಮಾಡಬೇಡಿ'' ಎಂದು ಅವರಿಗೆ ಬುದ್ಧಿಹೇಳಿ, ದೇವಸ್ಥಾನದ ಧೂಪ ದೀಪಗಳ ವೆಚ್ಚವನ್ನು ತಾನೇ ವಹಿಸಿಕೊಂಡು ಅವರಿಗೆ ನೆರವಾದನು. ಇದಕ್ಕೆ ಸಾಕ್ಷಿಗಳಾಗಿ ಸ್ಥಳದ ಅಧಿಕಾರಿಗಳು, ರೈತರು, ಸಾರ್ವಜನಿಕ ಸೇವಕರು, ತೆರಕಣಾಂಬಿಯ ಜನರು, ಕಳಲೆ ಮತ್ತು ಹಂಪಾಪುರದ ಜನರು,ಕುಳಲೆ ಜಾತಿಯವರು, ಒಟ್ಟಿನಲ್ಲಿ ಸಮಾಜದ ಎಲ್ಲಾ ಭಾಗಗಳ ಜನರೂ ಇದ್ದರು. ಮೊಳಗಾಲದ ಮಹದೇಶ್ವರ ದೇವರ ನೈವೇದ್ಯ, ದೀಪ, ರಥೋತ್ಸವ ಮತ್ತಿತರ ಸೇವೆಗಳಿಗಾಗಿ ಪ್ರತಿವರ್ಷವೂ ಅಲ್ಲಿನ ಗುರಿಕಾರರು, ಪಾರುಪತ್ಯಗಾರರು, ಸುಂಕ ಮನಿಹ್ಯಗಾರರು, ಸೇನಬೋವರು, ರಾವುತರು, ರಾಣುವೆಗಳು ಮತ್ತು ಕಾಣಿಕಾರ ಹಳ್ಳಿ ಸೀಮೆಯಲ್ಲಿನ ಗಡಿಗಳ ಪ್ರಜೆಗಳು ಕೊಡುಗೆ ನೀಡಬೇಕಾಗಿದ್ದಂತೆ ತೋರುತ್ತದೆ. ಪತ್ಯಬನವೊಡೆಯ ನೆನ್ನುವವನು ಬೇಲೂರು ಸೀಮೆಗೆ ಸೇರಿದ ಚಬನಹಳ್ಳಿ ಗ್ರಾಮವನ್ನು ಕರಿಯ ಒಡೆಯನಿಗೆ ಉಂಬಳಿ ಕಣಾಚಿಯಾಗಿ ನೀಡಿದನು. ಈ ಸತ್ಕಾರ್ಯಕ್ಕೆ ಅವನು ಆ ಸೀಮೆಯ ಹೆಬ್ಬಾರರು, ಗೌಡರು ಮತ್ತು ಸೇನಬೋವರ ಅನುಮತಿಯನ್ನು ಪಡೆದಿದ್ದನು. ಪಾಯಣ್ಣ ಮತ್ತು ಇನ್ನೊಬ್ಬ ಸೇರಿ ಶ್ರೀರಂಗಪಟ್ಟಣದ ಆದೀಶ್ವರ ಬಸದಿಯಲ್ಲಿ ಸೇವಾಕಾರ್ಯಗಳಿಗಾಗಿ ಹಣವನ್ನು ದತ್ತಿಯಾಗಿ ಹಾಕಿದರು. ಸೀತಾಳಮಳಿಗೆಯ ಸದಸ್ಯರು ಆ ದತ್ತಿಯಿಂದ ಬರುವ ಬಡ್ಡಿಹಣದಿಂದ ಮೇಲ್ಕಂಡ ಸೇವಾಕಾರ್ಯಗಳನ್ನು ನಿರ್ವಹಿಸುವ ಜವಾಬ್ದಾರಿಯನ್ನು ಹೊತ್ತರು. ಓಜಮಂಗಲದ ಪ್ರಜೆ-ಗೌಡರು (ನಿವಾಸಿಗಳು) ಹರತನೆನ್ನುವವನ ಮಗನಿಗೆ ಒಂದು ಭೂಮಿಯನ್ನು ಉಡುಗೊರೆಯಾಗಿ ನೀಡಿದರು.[೩೬] ದಾನಮಾಡುವಾಗ ಗೌರವಾನ್ವಿತವಾದ ಪದ್ಧತಿ ಸ್ಥಳದ ಹಿರಿಯರ, ಬಹುಶಃ ಅಲ್ಲಿಯ ಮಹಾಜನರ ಅನುಮತಿಯನ್ನು ಪಡೆಯುವುದಾಗಿತ್ತು. ಇದರಿಂದಾಗಿ ಆ ದಾನಕಾರ್ಯವು ಎಲ್ಲರಿಗೂ ಗೊತ್ತಾಗುತ್ತಿದ್ದಿತು. ಆ ದಾನವನ್ನು ಪರಿಪಾಲಿಸುವ ಹೊಣೆಯು ಸ್ಥಳದ ಜವಾಬ್ದಾರಿಯುತ ವ್ಯಕ್ತಿಗಳ ಹೆಗಲ ಮೇಲಿರುತ್ತಿದ್ದಿತು. ವ್ಯಕ್ತಿಯು ಹಳ್ಳಿಯಲ್ಲಿ ಅಜ್ಞಾತನಾಗಿ ಒಂಟಿಯಾಗಿ ಇರಲು ಸಾಧ್ಯವೇ ಇರಲಿಲ್ಲ, ಗ್ರಾಮಜೀವನವು ಪರಸ್ಪರ ವಿಶ್ವಾಸ, ಅರಿವು ಮತ್ತು ಸಹಕಾರಗಳಿಂದ ತುಂಬಿದ್ದಿತು ಎನ್ನುವುದು ಇದರಿಂದ

ವೇದ್ಯವಾಗುತ್ತದೆ. ಹೀಗೆ ಗ್ರಾಮಸ್ಥರು ಸರಕಾರಕ್ಕೆ ಹಲವು ಬಗೆಯ ತೆರಿಗೆಗಳನ್ನು ಪಾವತಿಮಾಡುತ್ತಿದ್ದರೂ ಕೂಡ, ವಾಸ್ತವಿಕವಾಗಿ, ಅವರು ಹೆಚ್ಚುಕಡಮೆ ಅನಿರ್ಬಂಧಿತವಾದ, ಸಹಕಾರಯುತವಾದ, ಸ್ವಯಂ ಪೂರ್ಣವಾದ ಸಾಮುದಾಯಿಕ ಜೀವನವನ್ನು ನಡೆಸುತ್ತಿದ್ದರು ಎಂದು ಹೇಳಬಹುದು. ವ್ಯಕ್ತಿಗಳು ಸಮುದಾಯದೊಂದಿಗೆ ತಮ್ಮನ್ನು ಸಂಪೂರ್ಣವಾಗಿ ಸಮೀಕರಿಸಿಕೊಂಡಿದ್ದರು. ಶಾಸನಗಳು ಆರೋಗ್ಯಕರವಾದ ಜನಸಾಮಾನ್ಯ ಜೀವನದ ಚಿತ್ರವನ್ನು ಒದಗಿಸುತ್ತವೆ. ಸಾಮೂಹಿಕ ಹೊಣೆಗಾರಿಕೆ, ಸಮುದಾಯಾಧಾರಿತ, ಸಂಪ್ರದಾಯದತ್ತ ಒಲವುಳ್ಳ, ಪರಸ್ಪರ ಬೆಂಬಲಿಸುವ ಸಂಬಂಧಗಳನ್ನುಳ್ಳ, ಸಮೂಹರೂಪದ ಚಟುವಟಿಕೆಗಳ ಚಿತ್ರ ಅದು.

೫

ಪ್ರಸ್ತುತ ಕಾಲಾವಧಿಯಲ್ಲಿ ಹೊಸ ಪಟ್ಟಣಗಳು, ದೇವಾಲಯ, ನಗರಗಳು ಮತ್ತು ರಾಜಧಾನಿ ನಗರಗಳು ರಾಜರ ಮತ್ತು ಪ್ರಜೆಗಳ ಸಕಲ ಚಟುವಟಿಕೆಗಳ ಮುಖ್ಯ ಕೇಂದ್ರಗಳಾಗಿ ಬೆಳೆದುವು. ಈ ನಗರ ಕೇಂದ್ರಗಳನ್ನು ಕುರಿತು ವಿಸ್ತಾರವಾದ ನಿರೂಪಣೆಯು ನಮಗೆ ಸಮಕಾಲೀನ ಮೂಲಗಳಲ್ಲಿ ದೊರಕುತ್ತದೆ.[೨೫]

ಶಾಸನಗಳು ಮತ್ತು ಸಾಹಿತ್ಯಕ ಮೂಲಗಳಿಂದ ನಮಗೆ ಆ ಶತಮಾನದ ನಗರ ಮತ್ತು ನಗರ ಜೀವನಗಳ ಚಿತ್ರವು ದೊರಕುತ್ತದೆ. ಅದು ಸ್ವಲ್ಪಮಟ್ಟಿಗೆ ಆದರ್ಶಯುತವಾಗಿದ್ದರೂ ವಾಸ್ತವ ಪರಿಸ್ಥಿತಿಗಳಿಂದ ಬಹುದೂರವಾಗಿಲ್ಲ. ಶ್ರೀಮಂತರ ಅನೇಕ ಅಂತಸ್ತುಗಳ ಭವ್ಯ ಸೌಧಗಳು (ಹರ್ಮ್ಯ, ಉಪ್ಪರಿಗೆ ಅಥವಾ ಕರುಮಾಡ); ಚಪ್ಪಟೆ ಚಾವಣಿಯ, ಗಾರೆ ಕೆಲಸದ ಮಧ್ಯಮವರ್ಗದ ಜನರ ನಿವಾಸಗಳು (ಮಾಳಿಗೆ) ಮತ್ತು ಸಾಮಾನ್ಯ ಕೆಳವರ್ಗದ ಜನರ ಸಾಮಾನ್ಯ ಮನೆಗಳು ಇವೆಲ್ಲವೂ ಇರುತ್ತಿದ್ದು, ನಗರಗಳು ಸಮಾಜದ ಎಲ್ಲಾ ಸ್ತರಗಳ ಸದಸ್ಯರನ್ನೂ ಆಕರ್ಷಿಸಿದ್ದುವು ಎಂಬುದನ್ನು ಸ್ಪಷ್ಟಪಡಿಸುತ್ತದೆ. ಗೋವಿಂದವೈದ್ಯನು ಕೊಟ್ಟಿರುವ ಚಿತ್ರಗಳು ಸ್ವಾರಸ್ಯವಾಗಿವೆ. ಆನೆಗಳು, ಕುದುರೆಗಳು ರಸ್ತೆಗಳಲ್ಲಿ ಅತ್ತಿಂದಿತ್ತ ಸಂಚರಿಸುತ್ತಿದ್ದುದು, ಅಶ್ವಾರೋಹಣ, ಗಜಾರೋಹಣ ಮಾಡುವ ರಾಜಕುಮಾರರು ಇತರ ಗಣ್ಯರು ಪ್ರಾಣಿಪಕ್ಷಿಗಳ ಕಾಳಗಗಳನ್ನು ಏರ್ಪಡಿಸುತ್ತಿದ್ದುದು, ಪಲ್ಲಕ್ಕಿಗಳಲ್ಲಿ ಕುಳಿತು ರಾಜಕುಮಾರಿಯರು ವಿಹಾರ ಹೋಗುತ್ತಿದ್ದುದು, ಸುಂದರವಾಗಿ ಅಲಂಕರಿಸಿಕೊಂಡ ಸ್ತ್ರೀಪುರುಷರು ಮುಖ್ಯಮಾರ್ಗಗಳಲ್ಲಿ ನಡೆದಾಡುತ್ತಿದ್ದುದು, ವಿವಿಧ ಕಸಬುದಾರ ವರ್ಗಗಳು ತಮ್ಮ ತಮ್ಮ ರಸ್ತೆಗಳಲ್ಲಿ ತಮ್ಮ ವೃತ್ತಿಗಳಲ್ಲಿ ನಿರತರಾಗಿದ್ದುದು ಇತ್ಯಾದಿ. ಹೀಗೆ ನಗರಗಳು, ವಿಶೇಷವಾಗಿ ರಾಜಧಾನಿಗಳು ಬಗೆ ಬಗೆಯ ಸಾಮಾಜಿಕ ಚಟುವಟಿಕೆಗಳಿಂದ ಗಿಜಿಗುಟ್ಟುತ್ತಿದ್ದುವು. ಸುತ್ತಲೂ ಆಳವಾದ ಕಂದಕದೊಂದಿಗೆ ಕೋಟೆಯಿದ್ದ ಮಳವಳ್ಳಿ, ಕೌಂಡಿನೀ ನದಿಯ ದಂಡೆಯ ಮೇಲೆ ನಿಂತ ಸ್ವಯಂಪೂರ್ಣ ಸಾಂಸ್ಕೃತಿಕ ಕೇಂದ್ರ ದೇವನಗರ,[೨೬] ವಾಣಿಜ್ಯ ಕೇಂದ್ರಗಳಾಗಿದ್ದ ಬೆಂಗಳೂರು, ಗುಬ್ಬಿ ಮತ್ತು ತುರುವೇಕೆರೆ ಇಂತಹ ಬೆಳೆದ ನಗರಗಳಿದ್ದುವು. ಜನಸಾಮಾನ್ಯದಲ್ಲಿ ಮಹಾಕಾವ್ಯಗಳು ಮತ್ತು ಪುರಾಣಗಳು ಜನಪ್ರಿಯವಾಗಿದ್ದುವು. ಹಾಗೆಯೇ ಕಾವ್ಯ, ಸಂಗೀತ, ನೃತ್ಯಗಳು ಆ ಕಾಲದ ಸಮಾಜಕ್ಕೆ ಅನಿವಾರ್ಯವಾದ ಅಂಶಗಳಾಗಿದ್ದುವು.[೨೭] ಧರ್ಮ ಮತ್ತು ಲೌಕಿಕ ಜ್ಞಾನವೂ ಸಾಹಿತ್ಯವೂ ನಗರಕೇಂದ್ರಗಳಲ್ಲಿ ಚೆನ್ನಾಗಿ ಬೆಳೆದಿತ್ತು ಎನ್ನುವುದಕ್ಕೆ ಶಾಸನಗಳು ಮತ್ತು ಸಾಹಿತ್ಯಕ ಕೃತಿಗಳು ಸಮರ್ಥನೆ ಕೊಡುತ್ತವೆ.

ರಾಜರು ತಮ್ಮ ಸುಂದರವಾದ ಅರಮನೆಗಳ ಭವ್ಯ ದರ್ಬಾರು ಸಭಾಂಗಣದಲ್ಲಿ ಪ್ರತಿದಿನವೂ ದರ್ಬಾರು ನಡೆಸುತ್ತಿದ್ದರು. ಅಲ್ಲಿ ವ್ಯಕ್ತವಾಗುತ್ತಿದ್ದ ಆಸ್ಥಾನಿಕ ಸಂಸ್ಕೃತಿ ನಗರಗಳಲ್ಲಿನ ಸಾಮಾಜಿಕ ಜೀವನದ ಒಂದು ಮುಖ್ಯ ಅಂಶವಾಗಿತ್ತು, ವಿಜಯನಗರ ಪರಂಪರೆಯ ಮುಂದುವರಿಕೆಯಾಗಿತ್ತು. ಮೈಸೂರಿನ ಒಡೆಯರ ಆಸ್ಥಾನವು ಭವ್ಯತೆಗೆ ಸುಪ್ರಸಿದ್ಧವಾಗಿತ್ತು. ಆ ಕಾಲದ ಸುಸಂಸ್ಕೃತ ಅಭಿರುಚಿ ಮತ್ತು ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತಿದ್ದಿತು. ಅರಮನೆಯ ತಾಮ್ರಶಾಸನವು ದೇವರಾಜ ಒಡೆಯರ ಆಸ್ಥಾನದ ಐಶ್ವರ್ಯ ಮತ್ತು

ವೈಭವಗಳನ್ನು ಚಿತ್ರಿಸುತ್ತದೆ.[೬೮] ಅರಮನೆಯ ಭವ್ಯವಾದ ದರ್ಬಾರು ಸಭಾಂಗಣದಲ್ಲಿ ರಾಜರು ಪ್ರತಿದಿನವೂ ಓಲಗ ನಡೆಸುತ್ತಿದ್ದರು (ನಿತ್ಯೋತ್ಸವದೋಲಗ). ಆ ಸಭಾಂಗಣಕ್ಕೆ ಆಸ್ಥಾನಮಂಟಪ, ಸಭಾಮಂಟಪ, ಶತಕುಂಭಸ್ತಂಭಾಲಯ ಎಂಬ ಹೆಸರುಗಳು. ಆಸ್ಥಾನಿಕರು ಉತ್ತಮವಾದ ಬಟ್ಟೆಬರೆ ಧರಿಸಿ, ಅಮೂಲ್ಯ ಆಭರಣಗಳನ್ನು ತೊಟ್ಟು ದರ್ಬಾರಿನಲ್ಲಿ ಭಾಗವಹಿಸುತ್ತಿದ್ದರು. ರಾಜನ ರಕ್ತಸಂಬಂಧಿಗಳೂ ಸೇರಿದಂತೆ ಗಣ್ಯರು ಅರಸು ಕುಟುಂಬಗಳ ಕಿರಿಯ ಸದಸ್ಯರು, ಹಿತೈಷಿಗಳು, ಸನ್ಮಾನ್ಯರು, ಸಾಮಂತರು ಅಧೀನರಾಜರು, ಆಪ್ತ ಸಚಿವರು; ಪೌರ ಹಾಗೂ ಸೈನ್ಯ ಅಧಿಕಾರಿಗಳು, ಮಂತ್ರಿಗಳು, ಕೌನ್ಸಿಲರುಗಳು, ಹಣಕಾಸು ವ್ಯವಹಾರವುಳ್ಳವರು, ಲೆಕ್ಕಿಗರು, ದಂಡನಾಯಕರು, ಸಾಮಾನ್ಯ ಆಡಳಿತ ಘಟಕಗಳ ಅಧಿಕಾರಿಗಳು, ವಿದೇಶಗಳಿಂದ ಬಂದ ರಾಯಭಾರಿಗಳು, ರಾಜಕಾರಣಕ್ಕೆ ಸಂಬಂಧಪಟ್ಟ ವ್ಯಕ್ತಿಗಳು, ಕಾರ್ಯಕರ್ತರು, ಸುದ್ದಿ ಒಯ್ಯುವವರು, ದುಭಾಷಿಗಳು, ಇತರ ರಾಜಕೀಯ ಗಣ್ಯರು; ಬ್ರಾಹ್ಮಣ ವಿದ್ವಾಂಸರು, ಬೌದ್ಧಿಕ ಮತ್ತು ಆಧ್ಯಾತ್ಮಿಕ ವಿಚಾರಗಳಲ್ಲಿ ತಜ್ಞರು, ವೇದ, ಸ್ಮೃತಿ, ಶಾಸ್ತ್ರ, ಕಾವ್ಯ, ಪುರಾಣ, ವಿವಿಧ ಆಗಮ ಮೊದಲಾದವುಗಳಲ್ಲಿ ಪರಿಣತರಾದವರು, ವೈಯಾಕರಣರು, ಕಾವ್ಯಮೀಮಾಂಸೆ ಮತ್ತು ಕಲೆಗಳಲ್ಲಿ ಕೋವಿದರು, ಕವಿಗಳು, ವಿವಿಧ ಕಲೆಗಳು, ವಿಜ್ಞಾನಗಳು ಮತ್ತು ಸಾಹಿತ್ಯದಲ್ಲಿ ತಜ್ಞರು, ಭಾರತವಾಚನ ಮಾಡುವವರು, ಧಾರ್ಮಿಕ ಚರ್ಚೆ ನಡೆಸುವವರು, ಭಾಷಣಕಾರರು; ವೃತ್ತಿಗಣ್ಯರಾದ ಪುರೋಹಿತರು, ಜ್ಯೋತಿಷಿಗಳು, ವೈದ್ಯರು, ಲಿಪಿಕರು, ವೇಶ್ಯೆಯರು, ಗಾಯಕಿಯರು, ವೇಣುವಾದಕರು, ನರ್ತಕಿಯರು, ಮಲ್ಲಯುದ್ಧ ನಿಪುಣರು, ವಿದೂಷಕರು, ವಂದಿಮಾಗಧರು ಇತ್ಯಾದಿ; ಯೋಧರು, ಗಜಾರೋಹಣ ನಿಪುಣರು, ಅಶ್ವಾರೋಹಣ ತಜ್ಞರು; ಬಾಗಿಲು ಕಾಯುವವರು, ದಂಡಧಾರಿಗಳು, ಸೇವಕಿಯರು, ಛತ್ರಿ-ಚಾಮರ-ತಾಂಬೂಲ-ಸುಗಂಧ ದ್ರವ್ಯ, ಹೂದಂಡೆ, ವೀಳ್ಯದೆಲೆಯ ಸಂಚಿ, ಖಡ್ಗ, ಚೌರಿ ಮತ್ತಿತರ ರಾಜವೈಭವ ಸೂಚಕ ವಸ್ತುಗಳನ್ನು ಹಿಡಿದವರು ದರ್ಬಾರಿನಲ್ಲಿ ಭಾಗವಹಿಸುತ್ತಿದ್ದರು.[೬೯] ಸಮಾಜದ ಎಲ್ಲಾ ಸ್ತರಗಳೂ ಅಲ್ಲಿ ಪ್ರಾತಿನಿಧ್ಯ ಪಡೆಯುತ್ತಿದ್ದುದರಿಂದ ರಾಜರು ನಡೆಸುತ್ತಿದ್ದ ದೈನಿಕ ದರ್ಬಾರು ಒಂದು ಕಿರು ಸಮಾಜವೇ ಆಗಿರುತ್ತಿತ್ತು.

ದೈನಿಕ ದರ್ಬಾರು ಕಾರ್ಯಕ್ರಮಗಳು ಕೇವಲ ರಾಜಕೀಯವಾಗಿರದೆ, ಆಧ್ಯಾತ್ಮಿಕ, ಬೌದ್ಧಿಕ, ಸಾಹಿತ್ಯಕ, ಕಲಾತ್ಮಕ ಹಾಗೂ ಮನೋರಂಜಕ ಸ್ವರೂಪದವಾಗಿರುತ್ತಿದ್ದುವು. ಪ್ರತಿದಿನವೂ ಮಂತ್ರಿಗಳು, ದಳವಾಯಿ, ಸಾಮಂತರು ಇತರ ಅಧಿಕಾರಗಳು ರಾಜನಿಗೆ ವರದಿ ಒಪ್ಪಿಸಬೇಕಾಗಿತ್ತು. ಇತರ ಅಧೀನ ರಾಜರು ಕಪ್ಪಕಾಣಿಕೆಗಳನ್ನು ಅರ್ಪಿಸಬೇಕಾಗಿತ್ತು. ಜೊತೆಗೆ ಬ್ರಾಹ್ಮಣ, ವೀರಶೈವ ಮತ್ತು ಜೈನಧರ್ಮಗಳು ದರ್ಶನ, ಕಾವ್ಯ ಪುರಾಣಗಳು ಈ ವಿಷಯಗಳ ಮೇಲೆ ಮಾತ್ರವಲ್ಲದೆ, ನಾಟಕ, ರಾಜಕೀಯ, ಆರ್ಥಿಕತೆ, ತರ್ಕ ಮತ್ತಿತರ ವಿಷಯಗಳ ಮೇಲೂ ವಿದ್ವಾಂಸರು ವಿದ್ವತ್‌ಚರ್ಚೆ ನಡೆಸುತ್ತಿದ್ದರು. ಧಾರ್ಮಿಕ ಸಾಹಿತ್ಯ ಹಾಗೂ ಲೌಕಿಕ ವಿಚಾರಗಳನ್ನು ಕುರಿತ ವಿದ್ವತ್ಪೂರ್ಣ ಚರ್ಚೆಗಳು ಮತ್ತು ಪ್ರವಚನಗಳು ಸಾಮಾನ್ಯವಾಗಿದ್ದುವು. ಕಾವ್ಯವಾಚನ ವಿರುತ್ತಿದ್ದಿತು. ಗಾಯನ ಮತ್ತು ವಾದ್ಯಸಂಗೀತ, ಪಂಚಮಹಾವಾದ್ಯಗಳ ಮೇಳನ, ನರ್ತಕಿಯರಿಂದ ನೃತ್ಯ ಇವು ಕಲಾ ಕಾರ್ಯಕ್ರಮಗಳಾಗಿದ್ದುವು. ಒಡ್ಡೋಲಗದ ಸೌಂದರ್ಯ, ವೈಭವ, ಅದ್ದೂರಿಗಳಿಗೆ ಇಂಬು ಗೊಡುತ್ತಿದ್ದುವು. ವಂದಿಗಳು ಜೋರುದನಿಯಲ್ಲಿ ರಾಜನ ಬಿರುದುಗಳನ್ನೂ ಪರಾಕನ್ನೂ ಘೋಷಿಸುತ್ತಿದ್ದರು. ದರ್ಬಾರಿಗಳಿಗೆ ಅಥವಾ ಆಸ್ಥಾನಿಕರಿಗೆ ಬಟ್ಟೆ, ವೀಳೆಯ, ಸುಗಂಧ ದ್ರವ್ಯ, ಹೂವುಗಳನ್ನು ಹಂಚಿ ಸತ್ಕರಿಸುವುದರೊಂದಿಗೆ ದರ್ಬಾರು ಸಮುಚಿತವಾಗಿ ಮುಗಿಯುತ್ತಿತ್ತು. ವಿದ್ವಾಂಸರು, ನರ್ತಕಿಯರು ಸಂಗೀತಗಾರರು ಮೊದಲಾದವರಿಗೆ ಆಭರಣಗಳನ್ನೂ ಬಟ್ಟೆಗಳನ್ನೂ ಇತ್ತು ಪುರಸ್ಕರಿಸಲಾಗುತ್ತಿತ್ತು. ಆಮೇಲೆ ರಾಜನು ತನ್ನ ವಾಸದ ಕೊಠಡಿಗೆ ಹಿಂದಿರುಗಿ ಹೋಗಿ ವಿಶ್ರಾಂತಿ ಪಡೆಯುತ್ತಿದ್ದನು.[೭೦]

ಇಟಲಿಯ ಪ್ರವಾಸಿ ಪೀತ್ರೋ ದೆಲ್ಲಾವಲ್ಲೆ ಹಾಗೂ ಇಂಗ್ಲಿಷ್ ಪ್ರವಾಸಿ ಪೀಟರ್ ಮಂಡಿ ಇಬ್ಬರೂ ಕೆಳದಿಯ ನಾಯಕರ ಆಸ್ಥಾನವನ್ನೂ ಅದರ ವೈಭವವನ್ನೂ ವರ್ಣಿಸಿದ್ದಾರೆ.[೪೧]

ಹೀಗೆ ಈ ಕಾಲದ ಆಸ್ಥಾನ ಸಂಸ್ಕೃತಿಯು ವಿಜಯನಗರ ಸಾಮ್ರಾಜ್ಯದ ಅದ್ದೂರಿ ಆಡಂಬರಗಳನ್ನು ಮುಂದುವರಿಸಿತು. ಜೊತೆಗೆ ಈ ರಾಜರು ದರ್ಬಾರನ್ನು ಕ್ರಮತಪ್ಪದೆ ಶಿಸ್ತಿನಿಂದ ನಡೆಸುತ್ತಿದ್ದರು. ಉದಾಹರಣೆಗೆ ಚಿಕ್ಕದೇವರಾಜ ಒಡೆಯರು ಅರಮನೆ ಅಧಿಕಾರಿಗಳು, ಪಾಳೆಯಗಾರರು, ಬ್ರಾಹ್ಮಣರು, ವಿದ್ವಾಂಸರು, ಸಂಗೀತಗಾರರು, ವೈದ್ಯರು, ನರ್ತಕಿಯರು ಮತ್ತಿತರರಿಗೆ ಸಂಬಂಧಿಸಿದ ಲೆಕ್ಕಾಚಾರಗಳನ್ನು ಕರಾರುವಾಕ್ಕಾಗಿ ಇರಿಸುವಂತೆ ಆಜ್ಞೆಮಾಡಿದ್ದರು. ಅರಮನೆಯಲ್ಲಿ ನಿತ್ಯವೂ ನಡೆಯುವ ದರ್ಬಾರಿನಲ್ಲಿ ವಿದ್ವಾಂಸರು ತಪ್ಪದೆ ಹಾಜರಿರಬೇಕಾಗಿತ್ತು. ಆಸ್ಥಾನಿಕರು ಮದುವೆ ಮೊದಲಾದ ವಿಶೇಷ ಸಂದರ್ಭಗಳಲ್ಲಿ ಏನಾದರೂ ಕಾರಣದಿಂದ ದರ್ಬಾರಿಗೆ ಹಾಜರಾಗಲು ಸಾಧ್ಯವಿಲ್ಲವಾದರೆ ಅದನ್ನು ರಾಜರ ಗುಡಿಕಾರರಾದ ಸೋಮರಾಜಯ್ಯ ಮತ್ತು ಅಪ್ಪಾಜಯ್ಯ ಇವರ ಮೂಲಕ ಮನವಿ ಸಲ್ಲಿಸಿ ರಾಜರ ಗಮನಕ್ಕೆ ತರಬೇಕಾಗಿತ್ತು. ಈ ಆಸ್ಥಾನ ಸಂಸ್ಕೃತಿಯ ವೈಭವದ ಶಿಖರ, ರಾಜರೂ ಜನರೂ ಪೋಷಿಸುತ್ತಿದ್ದ ಸಾಹಿತ್ಯಕ ಚಟುವಟಿಕೆಗಳು. ಜ್ಞಾನದ ಸಕಲ ಶಾಖೆಗಳಲ್ಲೂ ಅಸಾಮಾನ್ಯ ಕೃತಿಗಳನ್ನು ಸೃಷ್ಟಿಸಿ ಅದು ಆ ಕಾಲದ ಸಾಮಾಜಿಕ ಜೀವನವನ್ನು ಶ್ರೀಮಂತಗೊಳಿಸಿತ್ತು, ಬಲಗೊಳಿಸಿತ್ತು.[೪೨]

ಜನರು ಹೂವುಗಳನ್ನು ಸುಗಂಧ ದ್ರವ್ಯಗಳನ್ನು ಪ್ರೀತಿಸುತ್ತಿದ್ದರು. ಸಾಮಾನ್ಯವಾಗಿ ಪ್ರತಿಯೊಂದು ಮನೆಯಲ್ಲೂ ಒಂದು ಹೂದೋಟವಿರುತ್ತಿತ್ತು. ಕನ್ನೈದಿಲೆ, ಕೆಂದಾವರೆ, ತಾವರೆ, ಮಲ್ಲಿಗೆ, ಸಂಪಿಗೆ, ಸುರಗಿ, ಸುರಹೊನ್ನೆ, ಮೊಲ್ಲೆ, ಲಾಮಂಚ, ಬೆಳ್ದಾವರೆ, ಕೇದಗೆ, ಸೇವಂತಿಗೆ, ಪಾರಿಜಾತ, ನಂದ್ಯಾವರ್ತ, ಜಾಲ, ಪಾದರಿ, ಬಕುಳ, ಸುಗಂಧರಾಜ, ಮರುಗ, ಕಸ್ತೂರಿ, ಜಾಜಿ, ಕೆಂಜಾಜಿ ಇತ್ಯಾದಿ ಹೂವುಗಳು ರಾಜಧಾನಿಯ ತುಂಬ ಅಲಂಕಾರವಾಗಿದ್ದುವು: ದಂಪತಿಗಳು ಇವುಗಳ ನಡುವೆ ಸಂಜೆ ಹೊತ್ತು ಆನಂದವಾಗಿ ವಾಯುವಿಹಾರ ಮಾಡುತ್ತಿದ್ದರು. ಸ್ತ್ರೀ ಪುರುಷರಿಬ್ಬರೂ ಹೂವು ಮುಡಿದುಕೊಳ್ಳುತ್ತಿದ್ದರು. ಹೂಮಾಲೆಗಳನ್ನು ಕಟ್ಟಿ ಮಾರುವ ಹೂವಾಡಗಿತ್ತಿಯರಿದ್ದರು. ಆ ಜಾತಿಯ ಹೆಂಗಸರಿಗೆ ಹೂವಿನ ವ್ಯವಹಾರದಲ್ಲಿ ನಿರತರಾಗುವಷ್ಟು ಸ್ವಾತಂತ್ರ್ಯ ಇದ್ದಿತು ಎಂಬುದನ್ನು ಇದು ಸೂಚಿಸಬಹುದು. ಗಂಧ, ಕರ್ಪೂರ, ಕಸ್ತೂರಿ ಮೊದಲಾದ ಸುಗಂಧ ದ್ರವ್ಯಗಳನ್ನು ದೇಹವನ್ನು ತಂಪಾಗಿ ಇರಿಸಿಕೊಳ್ಳಲು ಉಪಯೋಗಿಸುತ್ತಿದ್ದರು. ಬೇಸಿಗೆಯಲ್ಲಿ ಹಾಸಿಗೆಯ ಮೇಲೆ, ತಣ್ಣಗಿರಲೆಂದು ಹೂವುಗಳನ್ನು ಹರಡುತ್ತಿದ್ದರು. ವಯಸ್ಸಾದವರೂ ಗಣಿಕೆಯರನ್ನು ಆಕರ್ಷಿಸಲು ಶೃಂಗಾರ ಸಾಧನಗಳನ್ನು ಬಳಸುತ್ತಿದ್ದರು.

ಹಾಗೆಯೇ ಆಹಾರ ಮತ್ತು ಜನರ ಆಹಾರ ಸೇವನೆಯಲ್ಲೂ ವೈವಿಧ್ಯವಿತ್ತು. ಅಕ್ಕಿ, ರಾಗಿ, ಮುಸುಕಿನ ಜೋಳ ಮತ್ತು ಬೇಳೆಕಾಳುಗಳು ಮುಖ್ಯವಾದ ಬೆಳೆಗಳಾಗಿದ್ದುವು. ಇವುಗಳ ಬೆಲೆ ತುಂಬಾ ಕಡಮೆಯಿದ್ದು, ಸಮಕಾಲೀನ ಸಾಹಿತ್ಯಕ ಮೂಲದ ಪ್ರಕಾರ ಮಾರುಕಟ್ಟೆಯಲ್ಲಿ ಹೆಚ್ಚುವರಿ ಧಾನ್ಯವು ತುಂಬಿ ತುಳುಕುತ್ತಿದ್ದಿತು. ಗೋವಿಂದವೈದ್ಯನ ಕೃತಿಯು ಮೈಸೂರು ಪ್ರದೇಶದಲ್ಲಿ ಬೆಳೆಯುತ್ತಿದ್ದ ಬತ್ತದ ವೈವಿಧ್ಯವನ್ನು ವರ್ಣಿಸುತ್ತದೆ – ಮುಗುಳುಹೊಡೆ, ಅರೆಹೊಡೆ, ಪಸುರ್ವೊಡೆ, ಹಾಲುದುಂಬುದೆನೆ ಇತ್ಯಾದಿ. ಅಕ್ಕಿಯಲ್ಲಿ ಕಣಿವೆಯ ಸಣ್ಣ, ಸತ್ಯಗಾಲದ ಅಕ್ಕಿ, ಗೋಲೆಯ ಸಣ್ಣ, ಪುನುಗುವಾಸನೆಯ ಸಣ್ಣ, ಪಿರಿಯರಾಜಾನ್ನ, ಜೀರಿಗೆರಾಜಾನ್ನ, ಸೊಗಸುರಾಜಾನ್ನ, ಕಸ್ತೂರಿರಾಜಾನ್ನ, ಸೋಮಸಾಲಿ, ಬೀಳುಮಲ್ಲಿಗೆ, ಕೆಂಬೂತಿ, ಹೇಮವರ್ಣ, ಕೊನೆವಾಲೆ, ಪುಷ್ಪಮಂಜರಿ, ಕೊಡಗು ಮಳಲಕಂತೆ, ಭೈರಾವಳಿ, ಚಂದ್ರೋದಯ, ಕೆಂದಲಗ, ಕಸ್ತೂರಿವರ್ಣ ಮೊದಲಾದ ಮೇಲುದರ್ಜೆಯ ಅಕ್ಕಿಗಳಿದ್ದುವು. ಬಡವರೇ ಇರಲಿಲ್ಲವೆಂದು ಇದರರ್ಥವಲ್ಲ. ಬಡವರಿದ್ದರು, ಗುಡಿಸಲುಗಳಿದ್ದುವು. ಉತ್ಪಾದನೆಯ ಹೆಚ್ಚುವರಿಯು ರಾಜನ ಭಂಡಾರಕ್ಕೆ ಸೇರುತ್ತಿತ್ತು. ಶ್ರೀಮಂತರು, ಗಣ್ಯರು,

ಮತ್ತಿತರ ಮೇಲುಜಾತಿಗಳ ಜನರು ಅದನ್ನು ಬಳಸಿಕೊಳ್ಳುತ್ತಿದ್ದರು. ಜನರಲ್ಲಿ ಮಾಂಸಾಹಾರಿಗಳೂ ಇದ್ದರು. ಅವರು ಕೋಳಿ, ಕುರಿ, ಟಗರು, ಹಂದಿ ಮೊದಲಾದ ಪ್ರಾಣಿಗಳ ಮಾಂಸವನ್ನು ತಿನ್ನುತ್ತಿದ್ದರು. ಸಾಮಾನ್ಯ ಜನರಿಗೆ ರಾಗಿ ಮುಖ್ಯವಾದ ಆಹಾರವಾಗಿತ್ತು. ಜೊತೆಗೆ ದಿನನಿತ್ಯದ ಆಹಾರದಲ್ಲಿ ಹಣ್ಣುಗಳು ಮತ್ತು ತರಕಾರಿಗಳು ಸೇರುತ್ತಿದ್ದುವು. ಅವುಗಳನ್ನೂ ಬೃಹತ್ ಪ್ರಮಾಣದಲ್ಲಿ ಬೆಳೆಯಲಾಗುತ್ತಿತ್ತು. ಗೋವಿಂದ ವೈದ್ಯನು ರಸವಾಳೆ, ಪುಟ್ಟವಾಳೆ,ರಾಜವಾಳೆ, ಸಕ್ಕರೆ ವಾಳೆ, ಕಬ್ಬಾಳೆ, ಪಚ್ಚವಾಳೆ, ನಾಡವಾಳೆ, ಮಧುರಂಗವಾಳೆ ಈ ಬಾಳೆಹಣ್ಣುಗಳ ಬಗೆಗಳನ್ನು, ಕಿತ್ತಲೆ, ಮಾವು, ದ್ರಾಕ್ಷಿ, ಖರ್ಜೂರ, ತೆಂಗಿನಕಾಯಿ, ಕದಳಿ, ದಾಳಿಂಬೆ, ನೇರಿಳೆ ಮತ್ತಿತರ ಹಣ್ಣುಗಳನ್ನು ವರ್ಣಿಸಿದ್ದಾನೆ. ಅಡಿಗೆಯ ಕಲೆ ಚೆನ್ನಾಗಿ ಬೆಳೆದಿತ್ತು. ಅರಮನೆಯ ಅಡಿಗೆಯವರು ಈ ಕಲೆಯಲ್ಲಿ ಬಹು ನಿಷ್ಣಾತರಾಗಿದ್ದರು. ರಾಜನಿಗೆ ಮಾಡಿ ಬಡಿಸುತ್ತಿದ್ದ ಆಹಾರದಲ್ಲಿ ಅಪಾರ ವೈವಿಧ್ಯವಿತ್ತು. ರಾಜಭೋಜನವು ಒಂದು ವೈಭವದ ಭೋಗವಾಗಿತ್ತು. ರಾಜರಿಗೆ ಚಿನ್ನದ ತಟ್ಟೆಗಳಲ್ಲಿ ಆಹಾರವನ್ನು ಬಡಿಸಿದರೆ, ಸಾಮಾನ್ಯರು ಮಣ್ಣಿನ ಮತ್ತು ತಾಮ್ರದ ಪಾತ್ರೆಗಳನ್ನು ಬಳಸುತ್ತಿದ್ದರು. ಬ್ರಾಹ್ಮಣರಿಗಾದರೆ ಬಾಳೆಎಲೆಗಳ ಮೇಲೆ ಆಹಾರವನ್ನು ಬಡಿಸಲಾಗುತ್ತಿತ್ತು.

ವೀಳೆಯದೆಲೆ, ಅಡಕೆ, ಸುಣ್ಣ, ಸುಗಂಧ ವಸ್ತುಗಳು ಇತ್ಯಾದಿಗಳನ್ನು ಪ್ರತಿ ಊಟದ ನಂತರವೂ ನೀಡುತ್ತಿದ್ದರು, ಸ್ವೀಕರಿಸುತ್ತಿದ್ದರು. ಶುಭ ಸಮಾರಂಭಗಳಲ್ಲಿ ಮತ್ತು ಅತಿಥಿಗಳಿಗೆ, ವಿವಾಹಿತ ಸ್ತ್ರೀಯರಿಗೆ, ಇತರರಿಗೆ ಪ್ರತಿದಿನವೂ ತಾಂಬೂಲ ಕೊಡುವುದು ಪುಣ್ಯಕರವಾದ ಕಾರ್ಯವೆಂದು ಪರಿಗಣಿಸಲಾಗಿತ್ತು. ಸಾಮಾಜಿಕ ಸಮಾರಂಭಗಳಲ್ಲಿ, ಹಬ್ಬ ಹರಿದಿನಗಳಲ್ಲಿ, ಉತ್ಸವಗಳಲ್ಲಿ ವೀಳೆಯ ಕಡ್ಡಾಯವಾಗಿತ್ತು. ನೂತನವಾಗಿ ನೇಮಿತರಾದ ಅಧಿಕಾರಿಗಳಿಗೆ, ವಿದ್ವಾಂಸರಿಗೆ, ಕ್ರೀಡಾಪಟುಗಳಿಗೆ, ಕಲಾವಿದರಿಗೆ ಮತ್ತು ಯೋಧರಿಗೆ ವೀಳೆಯವನ್ನು ನೀಡುತ್ತಿದ್ದರು. ಪ್ರತಿದಿನವೂ ದರ್ಬಾರು ಮುಗಿದ ನಂತರ ಹಾಗೂ ವಿಶೇಷ ಸಮಾರಂಭಗಳಲ್ಲಿ, ಔತಣಕೂಟಗಳಲ್ಲಿ ಆಸ್ಥಾನಿಕರಿಗೆ ವೀಳೆಯವನ್ನು ಕೊಡುತ್ತಿದ್ದುದು ರೂಢಿ. ಹೀಗೆ ಜನಜೀವನದಲ್ಲಿ ತಾಂಬೂಲಕ್ಕೆ ವಿಶೇಷ ಮಹತ್ವವಿದ್ದಿತು. ಅದು ಮಂಗಳಕರವೆಂದು ಜನರು ಪರಿಗಣಿಸಿದ್ದರು. ದೈಹಿಕ ಶುದ್ಧಿಗೆ ಜನರು ಹೆಚ್ಚಿನ ಗಮನ ಕೊಡುತ್ತಿದ್ದುದನ್ನು, ಕಾವೇರಿ ನದಿಯಲ್ಲಿ ಸ್ತ್ರೀಪುರುಷರು ಮೀಯುತ್ತಿದ್ದುದನ್ನು ವರ್ಣಿಸಿ ಸೂಚಿಸಿದ್ದಾರೆ.[೪೬]

ಮನರಂಜನೆಯಲ್ಲೂ ವೈವಿಧ್ಯವಿದ್ದಿತು. ಒಡೆಯರ ಆಳಿಕೆಯಲ್ಲಿ ಕುಸ್ತಿ ಅಥವಾ ಮಲ್ಲಯುದ್ಧವು ಬಹಳ ಜನಪ್ರಿಯವಾಗಿತ್ತು. ದಸರಾ ಉತ್ಸವದಲ್ಲಿ ಮಲ್ಲಯುದ್ಧ ಪ್ರದರ್ಶನವೂ ಒಂದು ಮುಖ್ಯವಾದ ಅಂಶವಾಗಿತ್ತು. ನವರಾತ್ರಿಯ ಒಂಬತ್ತು ದಿನವೂ ನವರತ್ನ ಸಿಂಹಾಸನದ ಮೇಲೆ ಮಂಡಿಸಿದ ರಾಜನ ಸಮ್ಮುಖದಲ್ಲಿ ಮಲ್ಲಗಾಳಗದ ಪಟುಗಳು ತಮ್ಮ ಕಲೆಯ ಪ್ರದರ್ಶನ ನೀಡಿ ಸಂತೋಷಪಡಿಸುತ್ತಿದ್ದರು. ಆಟ ಮುಗಿದ ಮೇಲೆ ರಾಜನು ಅವರಿಗೆ ವೀಳೆಯವನ್ನು ನೀಡಿ ತನ್ನ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತಿದ್ದನು. ಕೆಲವು ಸಂದರ್ಭಗಳಲ್ಲಿ ಮಲ್ಲರು ಬಹು ಅಪಾಯಕಾರಿಯಾದ ಕಾಳಗಗಳಲ್ಲಿ ತೊಡಗುತ್ತಿದ್ದರು. ಆನೆಗಳು, ಹುಲಿ, ಚಿರತೆ ಮತ್ತಿತರ ವನ್ಯಮೃಗದ ಮೇಲೆ ಗುದ್ದಾಡುತ್ತಿದ್ದರು. ರಾಜಕುಮಾರರಿಗೆ ಗಜಾರೋಹಣ, ಅಶ್ವಾರೋಹಣ, ಹುಲಿಸವಾರಿ ಬಹಳ ಪ್ರಿಯವಾಗಿದ್ದುವು. ರಾಜಧಾನಿ ಶ್ರೀರಂಗಪಟ್ಟಣದ ಹೆದ್ದಾರಿಗಳಲ್ಲಿ ರಾಜಕುಮಾರರು ಮತ್ತು ಇತರ ಗಣ್ಯರ ಮಕ್ಕಳು ಕುದುರೆಗಳನ್ನು ನಡೆಸಿಕೊಂಡು ಹೋಗುವುದು, ಕಿರಿಯ ಆನೆಗಳ ಮೇಲೆ ಕುಳಿತು ಸವಾರಿ ಮಾಡುವುದು ಸಾಮಾನ್ಯವಾಗಿ ದಿನವೂ ಕಂಡುಬರುವ ದೃಶ್ಯವಾಗಿತ್ತು. ಬೇಟೆ ಅವರ ಇನ್ನೊಂದು ಕ್ರೀಡೆಯಾಗಿತ್ತು. ವಾಸ್ತವವಾಗಿ ಯಶಸ್ವಿಯಾಗಿ ಬೇಟೆ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರುವುದು ರಾಜರಿಗೆ, ಗಣ್ಯರಿಗೆ ಗೌರವದ ಪ್ರತಿಷ್ಠೆಯ ವಿಷಯವಾಗಿದ್ದಿತು. ಇದೂ ಪ್ರಾಚೀನ ರಾಜಸಂಪ್ರದಾಯದ ಮುಂದುವರಿಕೆಯಾಗಿದ್ದಂತೆ ತೋರುತ್ತದೆ. ಮೈಸೂರಿನ ಚಾಮರಾಜ ಒಡೆಯರ್ ಕ್ರಿ.ಶ. ೧೬೨೬ರಲ್ಲಿ ಕಟ್ಟೆಮಳಲವಾಡಿಯನ್ನು ಆಳುತ್ತಿದ್ದ ಚೆನ್ನರಾಜ ಒಡೆಯರ್ ಎಂಬುವನೊಂದಿಗೆ, ತಮ್ಮ ಸೇನೆಗೆ ಬೇಕಾಗಿದ್ದ

ಆನೆಗಳನ್ನು ಹಿಡಿಯಲು ಮತ್ತು ಕೊಳ್ಳಲು ವ್ಯವಸ್ಥೆ ಮಾಡಿಕೊಂಡಿದ್ದರು. ಆದ್ದರಿಂದಲೇ ಅವರಿಗೆ ಗಜ ಬೇಂಟೆಕಾರ ಎಂಬ ಬಿರುದಿತ್ತು.[೪೪]

ಕೋಳಿ ಅಂಕ, ಟಗರು ಕಾಳಗ, ಗೂಳಿಕಾಳಗ, ಆನೆಕಾಳಗ ಮತ್ತಿತರ ಹಕ್ಕಿಪಕ್ಷಿಗಳ ಕಾಳಗಗಳು ಎಲ್ಲಾ ಜನರೂ ಸಂತೋಷಪಡುತ್ತಿದ್ದ ಜನಪ್ರಿಯ ಮನರಂಜನೆಗಳಾಗಿದ್ದುವು. ಸಮಾಜದ ಎಲ್ಲಾ ಸ್ತರಗಳಲ್ಲೂ ಚದುರಂಗ, ಪಗಡೆ ಮೊದಲಾದ ಒಳಾಂಗಣ ಕ್ರೀಡೆಗಳು ಸಾಮಾನ್ಯವಾಗಿದ್ದುವು. ಜೂಜೂ ನಡೆಯುತ್ತಿತ್ತು. ವಿಶೇಷವಾಗಿ ಗಣಿಕೆಯರು ತಮ್ಮ ಶ್ರೀಮಂತ ಗ್ರಾಹಕರನ್ನು ಗಾನ ನರ್ತನಗಳಿಂದ ಮಾತ್ರವಲ್ಲದೆ ಜೂಜಿನಿಂದಲೂ ರಂಜಿಸುತ್ತಿದ್ದರು. ಇತರ ಮನರಂಜನೆಗಳೆಂದರೆ ಜಲಕ್ರೀಡೆ ಮತ್ತು ವನವಿಹಾರ ಇತ್ಯಾದಿ. ಶ್ರೀಮಂತ ಮಹಿಳೆಯರು ವಸಂತ ಕಾಲದಲ್ಲಿ ತಮ್ಮ ಉದ್ಯಾನಗಳಲ್ಲಿ ಉಯ್ಯಾಲೆಗಳನ್ನು ತೂಗಿಕೊಳ್ಳುತ್ತಾ ಸುಖಿಸುತ್ತಿದ್ದರು. ವಾಸ್ತವವಾಗಿ ಹೆಚ್ಚುಕಡಮೆ ಪ್ರತಿಯೊಂದು ಮನೆಯಲ್ಲೂ ಉಯ್ಯಾಲೆ ಇರುತ್ತಿದ್ದಿತು. ಅರಮನೆಗಳಲ್ಲಿನಂತಲ್ಲದೆ ಅವು ಸಾಮಾನ್ಯವಾದ ಉಯ್ಯಾಲೆಗಳು. ನಾಟಕಶಾಲೆಗಳೂ ಇದ್ದುವು. ಮಹಾನವಮಿ ಹಬ್ಬದ ಸಮಯದಲ್ಲಿ ಪ್ರತಿದಿನವೂ ದರ್ಬಾರ್ ಸಭಾಂಗಣದಲ್ಲಿ ಕಂಠೀರವ ನರಸರಾಜ ಒಡೆಯರ ಸಮ್ಮುಖದಲ್ಲಿ ಭಾಗವತರು ವಿಷ್ಣುವಿನ ದಶಾವತಾರ ನಾಟಕವನ್ನು ಪ್ರದರ್ಶಿಸುತ್ತಿದ್ದರು. ಸಿಂಗರಾರ್ಯನು ಬರೆದ ಮಿತ್ರಾವಿಂದ ಗೋವಿಂದ ಎಂಬ ನಾಟಕವನ್ನು ಚಿಕ್ಕದೇವರಾಜ ಒಡೆಯರೆದುರಿಗೆ, ರಂಗನಾಥನ ವಸಂತೋತ್ಸವದ ಸಮಯದಲ್ಲಿ ಅಭಿನಯಿಸಲಾಯಿತು. ಅಪಾರ ಸಂಖ್ಯೆಯ ಜನರು ಅದನ್ನು ನೋಡಿ ಸವಿದರು. ಅನುಕ್ರಮಿಕ ಶ್ರೇಣಿ ವ್ಯವಸ್ಥೆಯಿದ್ದರೂ ಕೂಡ ವಿಶೇಷ ಧಾರ್ಮಿಕ, ಲೌಕಿಕ ಉತ್ಸವಾದಿ ಸಮಾರಂಭಗಳಲ್ಲಿ ಜನಸಾಮಾನ್ಯರು ಮೇಲುವರ್ಗದವರೊಂದಿಗೆ ಮುಕ್ತವಾಗಿ ಬೆರೆಯಲು ಅವಕಾಶವಿರುತ್ತಿತ್ತು. ರಾಜಮನೆತನದ ಹಬ್ಬಗಳು ಜನಸಾಮಾನ್ಯರ ಹಬ್ಬಗಳೂ ಆಗುತ್ತಿದ್ದುವು. ಬಹುಶಃ ಯಕ್ಷಗಾನ ಮತ್ತು ತೊಗಲುಗೊಂಬೆ ಕುಣಿತಗಳೂ ಸಾಮಾನ್ಯರ ಮನರಂಜನೆಯಾಗಿದ್ದುವು.

ರಾಜರ ದಿನನಿತ್ಯದ ಒಡ್ಡೋಲಗದಲ್ಲಿ ಕಲಾವಿದರಿಂದ ಗಾಯನ ವಾದ್ಯವಾದನಗಳು, ನಾಯಕ ಸಾನಿಯರಿಂದ ನರ್ತನ, ಒಳ್ಳೆಯ ಅಭಿರುಚಿಯಿಂದ ಅಲಂಕರಿಸಿಕೊಂಡ ಸುಂದರಿಯರಾದ ಹುಡುಗಿಯರಿಂದ ಕೋಲಾಟ, ಕಾವ್ಯರಚನೆ ಮತ್ತು ವಾಚನ, ಜ್ಞಾನದ ಎಲ್ಲಾ ಶಾಖೆಗಳಲ್ಲೂ ವಿದ್ವಾಂಸರಿಂದ ಚರ್ಚೆ–ಇವು ಸಾಮಾನ್ಯವಾಗಿ ಇದ್ದೇ ಇರುತ್ತಿದ್ದ ಮನರಂಜನೆಗಳು. ಇವು ಭಾಗವಹಿಸಿದವರಿಗೂ, ನೋಟಕರಿಗೂ ಲಾಭಕರವಾಗಿದ್ದುವು.

ರಾಜರಿಗೂ ಪ್ರಜೆಗಳಿಗೂ ಸಮಾನವಾಗಿರುತ್ತಿದ್ದ ಇನ್ನೊಂದು ಮುಖ್ಯ ವಿಷಯವೆಂದರೆ ಕೆಲವು ಹಬ್ಬಗಳ ಆಚರಣೆಗಳು. ಮಹಾಶಿವರಾತ್ರಿ, ಕಾಮನಹಬ್ಬ, ರಾಮನವಮಿ, ಶ್ರೀರಾಮಾನುಜಾಚಾರ್ಯರ ಜನ್ಮದಿನ, ಕೃಷ್ಣಜಯಂತಿ, ದೀಪಾವಳಿ ಇವು ಎಲ್ಲರಿಗೂ ಸಮಾನವಾಗಿದ್ದ ಕೆಲವು ಹಬ್ಬಗಳಾಗಿದ್ದುವು.[೪೫] ಗ್ರಾಮಾಂತರ ಪ್ರದೇಶಗಳಲ್ಲಿ ಕೃಷಿಸಂಬಂಧವಾದ ಹಬ್ಬಗಳು ಮತ್ತು ಗ್ರಾಮದೇವತೆಯ ಉತ್ಸವಗಳು ಜಾನಪದ ನೃತ್ಯಗಳು, ಜಾನಪದ ಗೀತಗಾಯನಗಳಿಂದ ಕೂಡಿದ್ದು ಗ್ರಾಮಜೀವನದಲ್ಲಿ ಅತಿ ರಂಜನೀಯ ಅಂಶಗಳಾಗಿದ್ದುವು.

ಅತ್ಯಂತ ಮಹತ್ವದ ಹಬ್ಬ ಮಹಾನವಮಿ (ನವರಾತ್ರಿ). ಮೈಸೂರಿನ ಒಡೆಯರು ಬಹು ವೈಭವೋಪೇತವಾಗಿ ಅದನ್ನು ಆಚರಿಸುತ್ತಿದ್ದರು. ವಿಜಯನಗರದ ಪರಂಪರೆಯ ಮುಂದುವರಿಕೆಯಾಗಿ ಈ ಉತ್ಸವವನ್ನು ಆಚರಿಸತೊಡಗಿದ ಕೀರ್ತಿ ರಾಜಒಡೆಯರಿಗೆ ಸಲ್ಲುವುದೆಂದು ಹೇಳಲಾಗಿದೆ. ಮೊದಲಸಾರಿಗೆ ಅವರು ೧೬೧೦ನೆಯ ವರ್ಷದ ಸೆಪ್ಟೆಂಬರ್ ೮ ರಿಂದ ೧೭ರ ವರೆಗೆ ಆಚರಿಸಿದರು. ಕಂಠೀರವ ನರಸರಾಜ ಒಡೆಯರ ಆಳಿಕೆಯಲ್ಲಿ ರಾಜಧಾನಿ ಶ್ರೀರಂಗಪಟ್ಟಣದಲ್ಲಿ ಅದ್ದೂರಿಯಾಗಿ ಮಹಾನವಮಿಯನ್ನು

ಆಚರಿಸಿದುದನ್ನು ಕಣ್ಣಾರೆ ನೋಡಿ ಗೋವಿಂದವೈದ್ಯನು ಅದನ್ನು ವರ್ಣಿಸಿದ್ದಾನೆ. ವಿಜಯನಗರದ ಅರಸರು ಆಚರಿಸುತ್ತಿದ್ದ ಈ ಆರೋಗ್ಯಕರ ಸಂಪ್ರದಾಯವನ್ನು ತನ್ನ ಪೂರ್ವಜರಂತೆಯೇ ತಾವೂ ಪ್ರತಿವರ್ಷ ಸೆಪ್ಟೆಂಬರ್-ಅಕ್ಟೋಬರ್ ತಿಂಗಳಲ್ಲಿ ಆಚರಿಸುತ್ತಿದ್ದರು. ಕಂಠೀರವರು ತಮ್ಮ ಅಧಿಕಾರದ ಮತ್ತು ವೈಭವದ ಶಿಖರವನ್ನು ಮುಟ್ಟಿದ್ದಾಗ ೧೬೪೭ ಸೆಪ್ಟೆಂಬರಿನಲ್ಲಿ ನಡೆಸಿದ ಈ ಅದ್ದೂರಿಯ ಹಬ್ಬವನ್ನು ಗೋವಿಂದವೈದ್ಯನು ಕಾವ್ಯಸೌಂದರ್ಯ ಸಮೇತವಾಗಿ ಚಿತ್ರಿಸಿದ್ದಾನೆ. ಕಂಠೀರವನರಸರಾಜವಿಜಯದಲ್ಲಿ ಇದನ್ನು ನೋಡಬಹುದು.[೪೭] ಬಹುಶಃ ತನ್ನ ಅಧಿಕಾರ ಶಕ್ತಿಯನ್ನೂ ಪ್ರಭುತ್ವವನ್ನೂ ಪ್ರದರ್ಶಿಸುವ ಸಲುವಾಗಿ ಆತನು ಇದನ್ನು ಆಚರಿಸುತ್ತಿದ್ದಿರಬಹುದು.

ಈ ಶಾಸನ-ಸಾಹಿತ್ಯಕ ಆಧಾರಗಳಿಂದ ಈ ಕಾಲಾವಧಿಯ ನಗರ ಕೇಂದ್ರಗಳ ಹಾಗೂ ನಗರ ಜೀವನದ ಪರಿಸ್ಥಿತಿ ಏನಿತ್ತು ಎಂಬುದನ್ನು ತಿಳಿದುಕೊಳ್ಳಲು ಸಹಾಯವಾಗುತ್ತದೆ. ನಗರದ ಜನತೆಯು ಬಹುವಾಗಿ ಅವಲಂಬಿಸಿದ್ದುದು ರೈತರು ಬೆಳೆದ ಹೆಚ್ಚುವರಿ ಬೆಳೆ, ವಿವಿಧ ಕಸಬುದಾರ ವರ್ಗಗಳು ಮತ್ತು ವರ್ತಕರು ಸಂಪಾದಿಸಿ ಕೊಡಿಟ್ಟ ಐಶ್ವರ್ಯದ ಮೇಲೆ. ರೈತರು ಮತ್ತು ಇತರರು ಹೆಚ್ಚುವರಿಯನ್ನು ರಾಜನಿಗೆ ತೆರಿಗೆಯ ರೂಪದಲ್ಲಿ ಪಾವತಿ ಮಾಡುತ್ತಿದ್ದರು. ಗದ್ದೆ, ಹೊಲ ಮತ್ತು ತೋಟಗಳ ಮೇಲಿನ ಕಂದಾಯ, ಒಣಹುಲ್ಲು, ನೇಗಿಲು, ಕೃಷಿ ಉಪಕರಣಗಳು, ಮಗ್ಗಗಳು, ಮೀನುಗಾರಿಕೆ, ಉಪ್ಪಿನ ಗುಡ್ಡೆಗಳು, ದನಕರುಗಳ ಮಾರಾಟ, ಕುರಿಗಳು, ಕಾಡಿನಲ್ಲಿ ಮೇಯಿಸುವುದು, ಇತ್ಯಾದಿ. ಸೀಗೆಪುಡಿ, ಶ್ರೀಗಂಧ ಮತ್ತಿತರ ಮರಗಳಿಂದ ಬಂದ ವರಮಾನದ ಮೇಲೆ ತೆರಿಗೆ, ಕೃಷಿ ಮೇಲುತೆರಿಗೆ, ಅಬಕಾರಿ ತೆರಿಗೆ, ನಗದು ವರಮಾನದ ಮೇಲೆ ತೆರಿಗೆ, ಧಾನ್ಯಗಳ ಮೇಲೆ ತೆರಿಗೆ, ಗ್ರಾಮದ ಒಟ್ಟು ವರಮಾನದ ಮೇಲೆ ತೆರಿಗೆ, ವೃತ್ತಿತೆರಿಗೆಗಳು, ಮನೆಗಳ ಮೇಲೆ, ಮನೆಗಳಲ್ಲಿ ಹಾಕಿದ ಅಂಗಡಿ ಮಳಿಗೆಗಳ ಮೇಲೆ ತೆರಿಗೆ, ಕಾರ್ಖಾನೆಗಳು, ಬಟ್ಟೆ ಒಗೆಯುವುದು ಮೊದಲಾದವುಗಳ ಮೇಲೆ ತೆರಿಗೆ, ಸಾಮಾಜಿಕ ರೂಢಿಗಳು, ಸಭೆ, ಜಾತಿ ಸೌಲಭ್ಯಗಳು, ವಿವಾಹ ಇವುಗಳ ಮೇಲೆಯೂ ತೆರಿಗೆಗಳಿರುತ್ತಿದ್ದುವು.[೪೮] ಪಟ್ಟಿಯು ತೆರಿಗೆ ಸಾಕಷ್ಟು ಭಾರವಾಗಿತ್ತೆಂಬುದನ್ನು ಸೂಚಿಸುತ್ತದೆ. ಆದರೆ ರಾಜನಿಗೆ ಒಂದೇ ಸಮನೆ ನಡೆಯುತ್ತಿದ್ದ ಯುದ್ಧಗಳ ವೆಚ್ಚವನ್ನು ಹೊಂದಿಸಲು ಅದು ಅತ್ಯಗತ್ಯವೇ ಆಗಿತ್ತು. ತೆರಿಗೆಯ ಭಾರ ಅತಿಯಾಯಿತೆಂದು ಜನರು ಗೊಣಗಿದುದು, ಕೆಲವೊಮ್ಮೆ ಪ್ರತಿಭಟಿಸಿದುದು ಕೂಡ ಶಾಸನಗಳಲ್ಲಿ ದಾಖಲಾಗಿದೆ.

ಬುದ್ಧಿಜೀವಿಗಳು, ಯೋಧರು ಮತ್ತಿತರ ಗಣ್ಯರು ಭೂಮಿಯ ನೇರ ಒಡೆತನ ಹೊಂದುವಂತಾದದ್ದೂ ಉತ್ಪಾದನೆಯ ಹೆಚ್ಚುವರಿಯನ್ನು ನಿಯಂತ್ರಿಸಲು ಅವಕಾಶ ಮಾಡಿತ್ತು. ಅನೇಕ ಕಸಬುದಾರರು ಮತ್ತು ವರ್ತಕರು ದೊಡ್ಡ ಮಾರುಕಟ್ಟೆ ನಗರಗಳೊಂದಿಗೂ ಇತರ ಹಳ್ಳಿಗಳೊಂದಿಗೂ ಸಂಪರ್ಕವನ್ನು ಇಟ್ಟುಕೊಂಡಿದ್ದರು. ಅಂತರ-ನಗರ ಮತ್ತು ಅಂತರ-ಸಮಾಜ ವ್ಯಾಪಾರವನ್ನು ನಿರ್ವಹಿಸುತ್ತಾ ಅವರು ಬೇರೆ ಬೇರೆ ಕಡೆಗಳಿಂದ ಭೋಗವಸ್ತುಗಳನ್ನು ತರುತ್ತಿದ್ದರು. ರಾಜರು ಮತ್ತು ಗಣ್ಯರು ಅಪಾರ ಬೆಲೆತೆತ್ತು ಅವುಗಳನ್ನು ಕೊಳ್ಳುತ್ತಿದ್ದರು. ಈ ''ಸ್ಪಷ್ಟ ಬಳಕೆ''ಯಿಂದಾಗಿ[೪೯] ರಾಜರು ಮತ್ತು ಇತರ ಗಣ್ಯವರ್ಗಗಳು ತಮ್ಮ ಅಧಿಕಾರವನ್ನು ವ್ಯಾಪಕ ಜನತೆಯ ಮೇಲೆ ಬೀರಿ, ಹೆಚ್ಚುವರಿಯ ಇನ್ನಷ್ಟು ಪಾಲನ್ನು ಪಡೆಯಲು ಸಹಾಯವಾಗುತ್ತಿತ್ತು. ಸದಾಕಾಲವೂ ನಗರಗಳಿಂದ ಗ್ರಾಮಗಳಿಗೆ, ಅಲ್ಲಿಂದ ಇಲ್ಲಿಗೆ ಸಂಚಾರಮಾಡುತ್ತಿದ್ದ ಸಣ್ಣಪುಟ್ಟ ವರ್ತಕರು ಜನಸಾಮಾನ್ಯರಿಗೆ ಅಗತ್ಯವಾಗಿದ್ದ ಸರಕುಗಳನ್ನು ಒಯ್ಯುತ್ತಿದ್ದುದರ ಜೊತೆಗೆ, ಸಂಪರ್ಕ ಮಾಧ್ಯಮವಾಗಿಯೂ ವರ್ತಿಸುತ್ತಿದ್ದರು. ಜನರಿಗೆ ಅವರ ಜಾತಿಯವರೇ ವಿವಾಹವಯಸ್ಕ ಹುಡುಗ-ಹುಡುಗಿಯರ ಬಗ್ಗೆ, ಜನನ-ಮರಣಗಳ ಬಗ್ಗೆ, ಅವರಿಗೆ ಸಂಬಂಧಪಟ್ಟ ಇತರ ಘಟನೆಗಳ ಬಗ್ಗೆ ಮಾಹಿತಿಯನ್ನು ಒದಗಿಸುತ್ತಾ ರಾಜ್ಯದ ವಿವಿಧ ಪ್ರದೇಶಗಳ ನಡುವೆ ಸಂಪರ್ಕ ಬೆಸೆಯುವ ಕೊಂಡಿಯಾಗಿ ವರ್ತಿಸುತ್ತಿದ್ದರು. ಇವೆಲ್ಲ ಸೇರಿ ಹೆಚ್ಚುವರಿಯು ನಗರಗಳ ಕಡೆಗೆ

ಹರಿಯಲು ಎಡೆಗೊಡುತ್ತಿತ್ತು. ಅಲ್ಲಿ ಆಗುತ್ತಿದ್ದ ಸಂಗ್ರಹವು ಅರಮನೆ, ದೇವಾಲಯ ಮೊದಲಾದ ಬೃಹತ್ ಸೌಧಗಳ ನಿರ್ಮಾಣದ ರೂಪದಲ್ಲಿ ಕಾಣಿಸಿಕೊಳ್ಳುತ್ತಿತ್ತು. ಒಡ್ಡೋಲಗಗಳ ಮೂಲಕ ಕಲಾತ್ಮಕ ಅಭಿವ್ಯಕ್ತಿಗೆ ಹೊಸ ದಿಕ್ಕುದೆಸೆ ದೊರಕುತ್ತಿದ್ದಿತು. ಈ ನಗರ ಕೇಂದ್ರಗಳು ಹೆಚ್ಚುವರಿಗೆ ಸಂಗ್ರಹಸ್ಥಳವಾಗಿ ಪರಿಣಮಿಸಿದುದು ಮಾತ್ರವಲ್ಲ, ಕಟ್ಟಡಗಳು, ಸೈನ್ಯ ವಿಸ್ತರಣ ಮತ್ತು ರಾಜವೈಭವಗಳಿಗೆ ಸಂಬಂಧಿಸಿದ ವೆಚ್ಚಗಳಿಗೂ ದಾರಿ ತೋರಿಸಿದ್ದುವು. ಐಶ್ವರ್ಯವು ಸಂಚಯಗೊಂಡುದರಿಂದ ಇವು ವಿಸ್ತರಣನೀತಿಯ ಪ್ರತಿಪಾದಕಗಳಾದುದು ಮಾತ್ರವಲ್ಲದೆ ಹೊರಗಿನ ದಾಳಿಗಳಿಗೆ ಗುರಿಗಳಾದುವು. ಆದ್ದರಿಂದ ಕೋಟೆಯ ನಿರ್ಮಾಣ ಅಗತ್ಯವಾಯಿತು. ಶಾಸನಗಳು ಮತ್ತು ಸಾಹಿತ್ಯಮೂಲಗಳು, ಶ್ರೀರಂಗಪಟ್ಟಣ, ಮೈಸೂರು, ಚಿತ್ರದುರ್ಗ, ಬೇಕಲ್, ಭುವನಗಿರಿ ದುರ್ಗ, ಚಂದ್ರಗಿರಿ, ಹರಪನಹಳ್ಳಿ, ಹೊನ್ನಾವರ, ಕಡೂರು, ಶಿವಮೊಗ್ಗ ಇತ್ಯಾದಿ ಕೋಟೆಗಳನ್ನು ಉಲ್ಲೇಖಿಸುತ್ತವೆ.[೯೯] ಸಂಗ್ರಹವಾಗಿ ಹೇಳಬೇಕೆಂದರೆ, ಈ ಶತಮಾನದ ಪಟ್ಟಣಗಳು ನಗರ ಕೇಂದ್ರಗಳ ಲಕ್ಷಣಗಳೆಲ್ಲವನ್ನೂ ಈ ಕೆಳಗಿನಂತೆ ಹೊಂದಿದ್ದುವು:

೧. ಕೋಟೆಯ ನಿರ್ಮಾಣ
೨. ಜನರ ವೈವಿಧ್ಯ ಮತ್ತು ಒತ್ತಡ
೩. ಬೇರೆ ಬೇರೆ ಜಾತಿ/ವರ್ಗಗಳ ಜನರು ಬೇರೆ ಬೇರೆ ಸ್ಥಳಗಳಲ್ಲಿರುವುದು
೪. ಸಾಮಾಜಿಕ ವ್ಯತ್ಯಾಸ ಮತ್ತು ಸ್ತರೀಕರಣ
೫. ಚಲನೆ ಮತ್ತು ಅಂತರ್-ಕ್ರಿಯೆಯ ರೂಪಗಳು
೬. ರಾಜಕೀಯ ಮತ್ತು ಬೌದ್ಧಿಕ ಗಣ್ಯರು
೭. ದೇವಾಲಯಗಳು ಮತ್ತು ಧಾರ್ಮಿಕ ವ್ಯಕ್ತಿಗಳು
೮. ಅರಮನೆಗಳು, ಅಧಿಕಾರ ಪೀಠಗಳು ಮತ್ತು ವಿವಿಧ ಆಡಳಿತೀಯ ಅಂಗಗಳು
೯. ಸೈನ್ಯ ಸ್ಥಾವರಗಳು
೧೦. ಕಸಬುಗಳು ಮತ್ತು ವೃತ್ತಿಗಳು
೧೧. ಲಲಿತ ಕಲೆ
೧೨. ಕೆರೆಗಳು, ಸಾರ್ವಜನಿಕ ಉದ್ಯಾನಗಳು, ತೋಟಗಳು ಇತ್ಯಾದಿ
೧೩. ರಸ್ತೆ ವ್ಯವಸ್ಥೆ
೧೪. ವ್ಯಾಪಾರ ಮತ್ತು ವ್ಯಾಪಾರಿ ಸಂಘಗಳು
೧೫. ಹಳ್ಳಿ, ಪಟ್ಟಣ, ರಾಜಧಾನಿ-ಹೀಗೆ ಆರೋಹಣ ಕ್ರಮದಲ್ಲಿ ಪರಸ್ಪರ ಅವಲಂಬನದ ಸ್ಥಿರ ಸಂಬಂಧ
೧೬. ಕೇಂದ್ರಗಳ ಪ್ರಾಮುಖ್ಯವನ್ನೂ ವೈಭವವನ್ನೂ ವಿಸ್ತರಿಸುವ ಹಬ್ಬಗಳು, ಉತ್ಸವಗಳು.

ಹೀಗೆ ಬಾಹ್ಯ ಪರಿಸ್ಥಿತಿಗಳು, ಆಂತರಿಕ ಒತ್ತಾಯಗಳು, ಜೊತೆಗೆ ಅಂತರ್ಗತವಾದ ಮೌಲ್ಯಗಳು ಇವೆಲ್ಲ ಸೇರಿ ಪಟ್ಟಣಗಳು ಮತ್ತು ನಗರಗಳು ರೂಪುಗೊಳ್ಳುವುದಕ್ಕೆ, ಬೆಳೆಯುವುದಕ್ಕೆ ಅವುಗಳ ಪ್ರಾದೇಶಿಕ, ಸಾಮಾಜಿಕ, ರಾಜಕೀಯ, ಧಾರ್ಮಿಕ ಮತ್ತು ಆರ್ಥಿಕ ಅಂಶಗಳಿಗೆ ನಿರ್ಧಾರಕ ಕಾರಣವಾದುವು. ನಿರಂತರ ಬದಲಾವಣೆಯ ಶಕ್ತಿಗಳ ಒತ್ತಡದಿಂದಾಗಿ, ಹಲವು ಬಗೆಯ ನಗರ ಕೇಂದ್ರಗಳು ತಲೆಯೆತ್ತಿದುವು. ಅವುಗಳ ಉಚ್ಛ್ರಾಯ ಮತ್ತು ಅವನತಿ, ರಾಜಕೀಯ-ಧಾರ್ಮಿಕ ವ್ಯವಸ್ಥೆಗಳ ಬಲ ಮತ್ತು ದೌರ್ಬಲ್ಯಗಳೊಂದಿಗೆ ನಿಕಟ ಸಂಬಂಧ ಹೊಂದಿದ್ದುವು..

೬

ಈ ಶತಮಾನದಲ್ಲಿಯೂ ಧರ್ಮವೇ ಸಮಾಜದ ಸ್ಥಿರವೂ ವಿಹಿತವೂ ಆದ ತಳಹದಿಯು ಆಧಾರ ಸ್ತಂಭವೂ ಆಗಿ ಪರಿಣಮಿಸಿತ್ತು. ಜನಜೀವನವು ಸಾಮಾಜಿಕ-ಧಾರ್ಮಿಕ ಸ್ವರೂಪದ್ದಾಗಿತ್ತು. ಪ್ರಾರಂಭದಿಂದಲೂ ದೇವಾಲಯಗಳು ಅಂತಹ ಜೀವನದ ಖಚಿತ ಅಭಿವ್ಯಕ್ತಿಯಾಗಿದ್ದುವು.[೯೦] ದೇವಾಲಯ ನಿರ್ಮಾಣ, ದೇವರಿಗೆ, ದೇವಾಲಯಗಳಿಗೆ, ಅಲ್ಲಿಯ ಸಿಬ್ಬಂದಿಗೆ, ಬ್ರಾಹ್ಮಣರಿಗೆ ಬಗೆಬಗೆಯ ಕಾಣಿಕೆ, ಉಡುಗೊರೆಗಳನ್ನು ನೀಡುವುದೇ ಮೊದಲಾದ ವೈವಿಧ್ಯಪೂರ್ಣ ಚಟುವಟಿಕೆಗಳಿಂದ ಜೀವನವು ತುಂಬಿತ್ತು. ಈ ಸಂಪ್ರದಾಯವನ್ನೇ ರಾಜರು ಮತ್ತು ಅವರ ಪ್ರಜೆಗಳು ಈ ಶತಮಾನದಲ್ಲಿಯೂ ಮುಂದುವರಿಸಿದರು.

ಈ ಶತಮಾನದ ಆದಿಯಲ್ಲಿ ವೀರಶೈವ ಧರ್ಮವು, ಜಂಗಮ ಪಂಥದ ಜನಪ್ರಿಯ ರೂಪದೊಂದಿಗೆ ಕರ್ನಾಟಕದ ಮೈಸೂರು ಮತ್ತು ಇಕ್ಕೇರಿ ರಾಜ್ಯಗಳಲ್ಲಿ ಪ್ರಮುಖವಾಗಿದ್ದಿತು. ಈ ಧರ್ಮವನ್ನು ಅವಲಂಬಿಸಿದ ರಾಜರು ಸಾಮಾನ್ಯವಾಗಿ ತಮ್ಮನ್ನು ಒಡೆಯರು (ವೊಡೆಯರು, ಯಜಮಾನರು, ಪ್ರಭುಗಳು ಎಂಬರ್ಥ) ಎಂದು ಕರೆದುಕೊಂಡರು. ತಮ್ಮ ಗುರುಗಳ ಆಧ್ಯಾತ್ಮಿಕ ಮಾರ್ಗದರ್ಶಕರ ಬಿರುದು ಅದು. ಅದನ್ನೇ ತಮ್ಮ ವಂಶನಾಮವನ್ನಾಗಿ ಮೈಸೂರು, ಉಮ್ಮತ್ತೂರು, ತಲಕಾಡು, ಅಮ್ಮಚವಾಡಿ ಇತ್ಯಾದಿ ರಾಜ್ಯಗಳ ರಾಜರು ಇಟ್ಟುಕೊಂಡರು.[೯೧]

ಮೈಸೂರಿನ ಒಡೆಯರು ಜಂಗಮ ಪಂಥದ ಅನುಯಾಯಿಗಳೆಂಬಂತೆ ತೋರಿದರೂ ಭಗವಾನ್ ವಿಷ್ಣುವಿನ ಪಂಥದ ಕಡೆಗೆ ಅವರ ಒಲವು ಹೆಚ್ಚಾಗಿ ಹರಿಯಿತು. ವಿಶೇಷವಾಗಿ ರಾಜಒಡೆಯರು ೧೬೧೦ರಲ್ಲಿ ಶ್ರೀರಂಗಪಟ್ಟಣವನ್ನು ವಶಪಡಿಸಿಕೊಂಡ ಮೇಲೆ. ಚಾಮರಾಜ ಒಡೆಯರು ಪ್ರತಿದಿನವೂ ವಿಷ್ಣುವನ್ನು ಆರಾಧಿಸುತ್ತಿದ್ದರು. ಅವರ ನಂತರದ ಇಮ್ಮಡಿ ರಾಜಒಡೆಯರು ವಿಷ್ಣುವಿನ ಮಹಾಭಕ್ತರೂ, ಹಿಂದಿನ ಸಂಪ್ರದಾಯಗಳ ಪಾಲಕರೂ ಆಗಿದ್ದರು. ಕಂಠೀರವ ನರಸರಾಜ ಒಡೆಯರು ಪಟ್ಟಕ್ಕೆ ಬರುವ ವೇಳೆಗೆ ರಾಜನೇ ಪ್ರತ್ಯಕ್ಷದೈವ ಎಂಬ ಭಾವನೆ ರೂಢವಾಗಿತ್ತು. ಕಂಠೀರವರು ಹುಟ್ಟಿದ್ದು ಮಹಾಜಯಂತಿಯ ದಿನ. ಆದ್ದರಿಂದ ಅವರು ನರಹರಿಯ ಅವತಾರ ಎಂಬ ನಂಬಿಕೆ ಜನರಲ್ಲಿ ಬಲಿಯಿತು. ಅದೇ ಸಮಯಕ್ಕೆ ಅವರು ತಮ್ಮೆಲ್ಲ ಹೊಣೆಗಾರಿಕೆಗಳನ್ನು ಭಗವಾನ್ ನರಹರಿಯ ಪದಕಮಲಗಳಲ್ಲಿ ಅರ್ಪಿಸಿದರು.[೯೨] ರಾಜನ ಪಾರಮ್ಯವನ್ನೂ ಪ್ರಭಾವವನ್ನೂ ಎತ್ತಿ ಹಿಡಿಯಲು, ಯಾರೂ ಅವನನ್ನು ಎದುರಿಸಬಾರದು, ಗೌರವಿಸಬೇಕು ಎಂಬ ಭಾವನೆಯನ್ನು ಬಲಿಸಲು ಈ ವಿಚಾರವು ಅನುಕೂಲಕರವಾಗಿತ್ತು. ವೈಷ್ಣವಧರ್ಮಕ್ಕೆ ಸೇರಿದ ಕೆಲವು ವಿಶಿಷ್ಟ ವಿಧಿಗಳನ್ನು ಕಂಠೀರವ ನರಸರಾಜರು ತಪ್ಪದೆ ಆಚರಿಸುತ್ತಿದ್ದರು. ವೈಷ್ಣವದೀಕ್ಷಾ (ನಿರ್ದಿಷ್ಟಕಾಲ ತಲೆಗೂದಲನ್ನು ಕತ್ತರಿಸದೆ ಬೆಳೆಸುವುದು), ಭಾಗವತ-ಪುರಾಣ-ಪ್ರಸಂಗ (ಶ್ರದ್ಧೆಯಿಂದ ಭಾಗವತ ಪುರಾಣವನ್ನು ಆಲಿಸುವುದು), ಹರಿಪೂಜೆ, ಹರಿಧ್ಯಾನ, ನಿತ್ಯದಾನ (ಪ್ರತಿದಿನವೂ ದಾನ ಮಾಡುವುದು), ಕ್ಷೀರಾಂಬುಧಿ (ಹಾಲನ್ನು ಹಂಚುವುದು), ಬೃಂದಾವನ ಸೇವೆ (ವಿಷ್ಣುವಿನ ನೆಲೆಯಾದ ಬೃಂದಾವನವನ್ನು ಪೂಜಿಸುವುದು), ಏಕಾದಶಿ ಮತ್ತು ದ್ವಾದಶಿ ವ್ರತಗಳು ಇತ್ಯಾದಿಗಳನ್ನು ಅವರು ಆಚರಿಸುತ್ತಿದ್ದರು. ಒಂದು ಶಿಲಾಶಾಸನವು ಹೀಗೆ ಹೇಳಿದೆ: ''ಜನರು ಹಣದ ಲೋಭದಿಂದ ವಿಷ್ಣುವನ್ನು ಮರೆತಿರುವುದನ್ನು ನೋಡಿ, ಬುದ್ಧಿವಂತ ಅರಸನಾದ ಕಂಠೀರವನು ಆ ಹಣದಿಂದಲೇ ನರಹರಿಯನ್ನು ಮಾಡಿ ಜನರನ್ನು ಕಾಪಾಡಿದನು. ... ವೇದ, ಸ್ಮೃತಿಗಳು ಹೇಳುವುದನ್ನು ವಿಚಾರಮಾಡಿ, ಸಕಲಶಾಸ್ತ್ರಗಳ ಅರ್ಥವನ್ನುಗ್ರಹಿಸಿ, ಅವುಗಳ ಧ್ಯೇಯನುಗುಣವಾಗಿ ಸಕಲರೂ ಏಕಾದಶಿಯ ದಿನ ಲಕ್ಷ್ಮೀ ನರಹರಿಯ ದಿವ್ಯ ಪಾದಗಳನ್ನು ಪೂಜಿಸುವಂತೆ ಮಾಡಿದನು. ಅವನು ಏಕಾದಶೀ ವ್ರತವನ್ನು ಅಂಬರೀಷ ಮೊದಲಾದ ರಾಜರ ಹಾಗೆ ನೆರವೇರಿಸಿದನು.'' ಹೀಗೆ ಕಂಠೀರವನು ಜನಸಾಮಾನ್ಯರು ಈ ಧರ್ಮವನ್ನು ಅನುಸರಿಸುವಂತೆ ಏಕಾದಶೀವ್ರತ ಮಾಡುವಂತೆ ಒತ್ತಾಯಪಡಿಸಿ ಹೇಳಿದ್ದು ಮಾತ್ರವಲ್ಲದೆ ಲಕ್ಷ್ಮೀನರಸಿಂಹನ ಮೂರ್ತಿಯಿದ್ದ ನಾಣ್ಯಗಳನ್ನು ಹಾಕಿಸಿದನು.[೯೩]

ಮುಂದಿನ ಅರಸ ದೇವರಾಜ ಒಡೆಯರೂ ನಿಷ್ಠಾವಂತ ವೈಷ್ಣವರಾಗಿದ್ದರು. ಶ್ರೀರಂಗಪಟ್ಟಣದ ಸ್ವಾಮಿ ರಂಗನಾಥನ ಅಪ್ರತಿಮ ಭಕ್ತರಾಗಿದ್ದರು. ಪ್ರತಿದಿನ ಬೆಳಗಿನ ಜಾವವೇ ಎದ್ದು, ಮಿಂದು, ಶುಭ್ರವಸ್ತ್ರಗಳನ್ನು ಧರಿಸಿ, ಹಣೆಗೆ ಕಸ್ತೂರಿ ತಿಲಕವನ್ನಿಟ್ಟುಕೊಂಡು ವಿಷ್ಣುವನ್ನು ಪೂಜಿಸುತ್ತಿದ್ದರು. ವಿಷ್ಣು ಸಹಸ್ರನಾಮವನ್ನು ಪಠಿಸುತ್ತಿದ್ದರು. ಹೋಮಾದಿಗಳನ್ನು ನೆರವೇರಿಸಿ ಬ್ರಾಹ್ಮಣರಿಗೆ ಧನವನ್ನೂ ಗೋವುಗಳನ್ನೂ ದಾನಮಾಡಿ, ಪುರಾಣಗಳನ್ನು ಆಲಿಸುತ್ತಿದ್ದರು. ಅವರ ಕಾಲದಲ್ಲಿ ಶ್ರೀವೈಷ್ಣವಧರ್ಮವು ಕರ್ನಾಟಕದಲ್ಲಿ ತುಂಬಾ ಪ್ರಾಮುಖ್ಯವನ್ನು ಪಡೆಯಿತು. ಮೈಸೂರು ರಾಜ್ಯವು ದಕ್ಷಿಣಭಾರತದಲ್ಲಿ ಅಗ್ರಮಾನ್ಯ ಶಕ್ತಿಯಾಗಿ ವೇಗವಾಗಿ ಬೆಳೆಯುತ್ತಿತ್ತು. ರಾಜಕೀಯ ಗುರುತ್ವಕೇಂದ್ರವು ಪೆನುಗೊಂಡೆಯಿಂದ ಶ್ರೀರಂಗಪಟ್ಟಣಕ್ಕೆ ವರ್ಗಾವಣೆಗೊಂಡಿತ್ತು. ಸಾಮಾಜಿಕ-ಧಾರ್ಮಿಕ ಜೀವನದ ಮುಖ್ಯ ಕೇಂದ್ರವಾಗಿ, ವಿಜಯನಗರದ ಸಾಮಾಜಿಕ-ಧಾರ್ಮಿಕ ಆದರ್ಶಗಳು ಮತ್ತು ಪರಂಪರೆಗಳನ್ನು ಮೈಸೂರಿನ ರಾಜರು ಅಳವಡಿಸಿಕೊಂಡು ಮುಂದುವರಿಸಿ ರಾಜ್ಯವನ್ನು ದಕ್ಷಿಣದ ನವರತ್ನ ಸಿಂಹಾಸನವಾಗಿ ಮಾಡಿದರು. ವಿಜಯನಗರದಲ್ಲಿ ಶ್ರೀವೈಷ್ಣವ ರಾಜಗುರುಗಳಾಗಿದ್ದ ಸುಪ್ರಸಿದ್ಧ ತಾತಾಚಾರ್ಯ ಕುಟುಂಬವು ಶ್ರೀರಂಗಪಟ್ಟಣಕ್ಕೆ ವಲಸೆಬಂದು ಇಲ್ಲಿ ನೆಲೆಸಿದ್ದು, ದೇವರಾಜ ಒಡೆಯರ ರಾಜಗುರುಗಳಾದದ್ದು ಶ್ರೀವೈಷ್ಣವಧರ್ಮ ಪ್ರಸಾರಕ್ಕೆ ಇಂಬುಗೊಟ್ಟಿತು. ಈ ಘಟನೆಯು ವಿಜಯನಗರದ ಮಾಯವಾಗುತ್ತಿದ್ದ ವೈಭವವನ್ನು ಸ್ವಲ್ಪಮಟ್ಟಿಗಾದರೂ ಇಲ್ಲಿ ಪುನಶ್ಚೇತನಗೊಳಿಸಲು ಸಹಾಯಮಾಡಿತು.[೯೪]

ಅವರ ನಂತರದ ಚಿಕ್ಕದೇವರಾಜ ಒಡೆಯರ ಆಳಿಕೆಯ ಪ್ರಾರಂಭವು ಜಂಗಮಪಂಥದ ಕಡೆಗೆ ಒಲವು ತೋರಿಸಿದರೂ ೧೬೭೩ ರಿಂದ ಮುಂದಕ್ಕೆ ಶ್ರೀವೈಷ್ಣವಧರ್ಮವು ಅವರ ಖಾಸಗಿ ಧರ್ಮವಾಯಿತು. ರಾಜನು ಹರದನಹಳ್ಳಿಯ ಅಪ್ರತಿಮ ರಾಜಗೋಪಾಲ, ದೇವನಗರದ ಪರವಾಸುದೇವ, ಕಂಜಗಿರಿಯ ಗೋಪಾಲ, ಶ್ರೀರಂಗಪಟ್ಟಣದ ರಂಗೇಶ ಹಾಗೂ ಮೇಲುಕೋಟೆಯ ನಾರಾಯಣರ ನಿಷ್ಠಾವಂತ ಭಕ್ತನಾಗಿದ್ದನೆಂದು ಶಾಸನಗಳು ಹೇಳುತ್ತವೆ. ಉಷಃಕಾಲದಲ್ಲಿ ಏಳುವುದು, ವಿಷ್ಣುವನ್ನು ಕುರಿತು ಧ್ಯಾನ, ಸ್ನಾನಾದಿಗಳು, ಔಪಚಾರಿಕ ಉಡುಗೆ ತೊಡುಗೆ ಧರಿಸುವುದು, ಗಂಧ ಮತ್ತು ಶ್ರೀವೈಷ್ಣವ ಲಾಂಛನಗಳನ್ನು ಧರಿಸುವುದು (ನಾಮತೀರ್ಥಂ), ಸಂಧ್ಯಾವಂದನೆ ಮಾಡುವುದು, ವಿಷ್ಣುವನ್ನು ಪೂಜಿಸುವುದು, ಸಹಸ್ರನಾಮ ಪಠಣ, ತೀರ್ಥಪ್ರಸಾದ ಸ್ವೀಕಾರ, ಹೋಮ, ಗೋದಾನ, ಹಿರಣ್ಯದಾನಗಳನ್ನು ಅರ್ಹರಾದ ಬ್ರಾಹ್ಮಣರಿಗೆ ನೀಡಿ ಅವರ ಆಶೀರ್ವಾದಗಳನ್ನು ಪಡೆಯುವುದು, ಶ್ರೀವೈಷ್ಣವ ಧರ್ಮಗ್ರಂಥಗಳನ್ನು ಓದಿಸಿ ಕೇಳುವುದು, ಧಾರ್ಮಿಕ ವಿಷಯಗಳನ್ನು ಕುರಿತು ಮಾತನಾಡುವುದು, ಇತ್ಯಾದಿ ರಾಜನ ದೈನಂದಿನ ಕಾರ್ಯಕ್ರಮಗಳೂ ನಮಗೆ ಶಾಸನಗಳಿಂದ ತಿಳಿಯುತ್ತದೆ. ಅವರು ಏಕಾದಶಿಯನ್ನು ಕಟ್ಟುನಿಟ್ಟಾಗಿ ಆಚರಿಸುತ್ತಿದ್ದರು. ಅದರ ಮರುದಿನ, ಅಂದರೆ ದ್ವಾದಶಿಯಂದು ಬ್ರಾಹ್ಮಣರಿಗೆ ಬೇಕಾದಷ್ಟು ದಾನಮಾಡುತ್ತಿದ್ದರು. ಹಲವು ಮುಖ್ಯ ಯಾತ್ರಾಸ್ಥಳಗಳಿಗೆ ಹೋಗಿಬರುತ್ತಿದ್ದರು.[೯೫] ಇದಕ್ಕೆ ಕಾರಣ ಬಹುಶಃ ಸುಪ್ರಸಿದ್ಧ ಶ್ರೀವೈಷ್ಣವಗುರು ಅಳಸಿಂಗರಾರ್ಯ, ತಿರುಮಲಾರ್ಯ ಮತ್ತು ವಿಶೇಷವಾಗಿ ಚಿಕ್ಕಉಪಾಧ್ಯಾಯ ಇವರು ಬೀರಿದ ಪ್ರಭಾವವಿರಬೇಕು. ರಾಜನು ತನ್ನನ್ನು ಶ್ರೀವೈಷ್ಣವ ಮತ ಪ್ರತಿಷ್ಠಾಪಕ ಎಂದು ಕರೆದುಕೊಂಡನು. ೧೬೯೩ರ ವೇಳೆಗೆ ಅವರ ಧರ್ಮಕ್ಕೆ ಮತಾಂತರಗೊಳಿಸುವ ಪ್ರವೃತ್ತಿ ಆಸ್ಥಾನವಲಯದಲ್ಲೂ ಹೊರಗೂ ವ್ಯಕ್ತವಾಗಿತ್ತು. ತಮ್ಮ ಆಸ್ಥಾನಕ್ಕೆ ಸೇರಿದ ಬೇರೆ ಬೇರೆ ಧರ್ಮಗಳ ವಿದ್ವಾಂಸರು, ಪುರೋಹಿತರು ಎಲ್ಲರೂ ಅರಮನೆಗೆ ತಮ್ಮ ನಾಮತೀರ್ಥಂ ಸಮಯಕ್ಕೆ ಬರುವಾಗ ಹಣೆಗೆ ಶ್ರೀವೈಷ್ಣವ ಚಿಹ್ನೆಗಳನ್ನು ಧರಿಸಿಯೇ ಬರಬೇಕು ಎಂದು ಚಿಕ್ಕದೇವರಾಜರು ಅಪೇಕ್ಷೆಪಟ್ಟಿದ್ದಂತೆ ಶಾಸನಗಳು ಸೂಚಿಸುತ್ತವೆ. ಹದಿಮೂರು ಅರಸು ಕುಟುಂಬಗಳು ಮೈಸೂರು ರಾಜಮನೆತನದ ಜೊತೆ ರಕ್ತಸಂಬಂಧವನ್ನು ಹೇಳಿಕೊಳ್ಳಬೇಕಾದರೆ ಶ್ರೀವೈಷ್ಣವಧರ್ಮವನ್ನು ಅವಲಂಬಿಸಬೇಕು, ಅದರ ಬಾಹ್ಯಾಚರಣೆಗಳನ್ನು ತಪ್ಪದೆ ಪಾಲಿಸಬೇಕು ಎಂದು ಒತ್ತಾಯಪಡಿಸಿದರು.[೯೬] ಇದು ಒಂದು ರೀತಿಯಲ್ಲಿ ರಾಜನ ಧಾರ್ಮಿಕ ಅಸಹಿಷ್ಣುತೆಯನ್ನು ಸೂಚಿಸಿದರೂ, ರಾಜನು ಕೊಟ್ಟ ಸೂಚನೆಯಾಗಲಿ, ಮಾಡಿದ ಒತ್ತಾಯವಾಗಲಿ ರಾಜಮನೆತನದೊಂದಿಗೆ

ನಿಕಟವಾದ ಬಾಂಧವ್ಯವಿದ್ದ ಅರಸು ಕುಟುಂಬಗಳಿಗೆ ಮಾತ್ರ ಸೀಮಿತವಾಗಿದ್ದುವು ಎಂಬುದನ್ನೂ ಗಮನಿಸಬೇಕು. ಬೇರೆ ಬೇರೆ ಮನೆದೇವರುಗಳನ್ನು ಪೂಜಿಸುತ್ತಿದ್ದ ಈ ಕುಟುಂಬಗಳಿಗೆ ಇದರಿಂದ ಕಷ್ಟವುಂಟಾಯಿತು. ಅವರು ರಾಜನಿಗೆ ಮನವಿ ಸಲ್ಲಿಸಿ, ತಾವು ರಾಜನು ವಿಧಿಸಿದಂತೆಯೇ ಶ್ರೀವೈಷ್ಣವ ಆಚರಣೆಗಳೆಲ್ಲವನ್ನೂ ನೆರವೇರಿಸುವುದಾಗಿಯೂ, ಆದರೆ ಕುಲದೈವಗಳ ಪೂಜೆಯನ್ನು ಮಾತ್ರ ಎಂದಿನಂತೆ ಮಾಡಿಕೊಂಡಿರಲು ಅನುಮತಿ ಕೊಡಬೇಕೆಂದೂ ಕೇಳಿಕೊಂಡರು. ರಾಜನು ಅವರಿಗೆ ಕೇಳಿಕೊಂಡಂತೆಯೇ ಅನುಮತಿ ನೀಡಿದನು.[೫೭] ಅವರ ಸೀಮಿತಗಳನ್ನು ಅರ್ಥಮಾಡಿಕೊಳ್ಳುವಷ್ಟು ಔದಾರ್ಯ ರಾಜನಲ್ಲಿತ್ತು. ಅಲ್ಲದೆ ಆ ಕಾಲದ ಜನರ ಧಾರ್ಮಿಕ ಜೀವನದ ವೈವಿಧ್ಯದ ಸ್ವರೂಪವೂ ತಿಳಿದಿತ್ತು.

ಆದ್ದರಿಂದ ಪ್ರಸ್ತುತ ಕಾಲಾವಧಿಯ ಧಾರ್ಮಿಕ ಜೀವನದ ಪ್ರಶಂಸನೀಯವಾದ ಗುಣವೆಂದರೆ, ಆರೋಗ್ಯಕರವಾದ ಧರ್ಮಸಹಿಷ್ಣುತೆ. ಅದು ತನ್ನದಲ್ಲದ ಬೇರೊಂದು ಧರ್ಮವನ್ನು ಅಲಕ್ಷಿಸುವುದಲ್ಲ. ಅವುಗಳನ್ನು ಅರ್ಥಮಾಡಿಕೊಂಡು, ಅವುಗಳ ಬಗೆಗೂ ಅವು ನೀಡಿರುವ ಕೊಡುಗೆಯ ಬಗೆಗೂ ವಿಶ್ವಾಸ ತಳೆದು ಮೆಚ್ಚುವ ಗುಣ. ಪರಸ್ಪರ ಗೌರವ, ವಿಶ್ವಾಸ, ಪ್ರೇಮ, ಸಹಕಾರ, ಐಕ್ಯತೆ, ಸಾಮರಸ್ಯ, ಬದುಕು – ಬದುಕಲು ಬಿಡು, ಒಟ್ಟಾಗಿ ಬೆಳೆ ಎಂಬ ತತ್ವ, ಇವು ಈ ಕಾಲಾವಧಿಯಲ್ಲಿ ಸ್ಪಷ್ಟವಾಗಿ ಕಾಣಿಸಿದ ಧಾರ್ಮಿಕ ಲಕ್ಷಣಗಳು. ರಾಜರ ಮತ್ತು ಪ್ರಜೆಗಳ ಧಾರ್ಮಿಕ ಜೀವನ ಹಾಗೂ ಚಟುವಟಿಕೆಗಳ ಆಧಾರಶ್ರುತಿ, ವಿಶಾಲಾರ್ಥದಲ್ಲಿ ಸಹಿಷ್ಣುತೆಯಾಗಿತ್ತು. ರಾಜ್ಯದ ಧರ್ಮ ಎಂಬುದೊಂದಿರಲಿಲ್ಲ. ರಾಜರಿಗೆ ತಮ್ಮದೇ ಧರ್ಮದ ಆಯ್ಕೆಗಳಿದ್ದರೂ ಅವರು ತಮ್ಮ ಧರ್ಮವನ್ನು ಪ್ರಜೆಗಳ ಮೇಲೆ ಹೇರಲಿಲ್ಲ. ಬದಲು, ಸಮಾಜದಲ್ಲಿ ನಿಜವಾದ ಧಾರ್ಮಿಕ ಸ್ವಾತಂತ್ರ್ಯವು ಇರುವಂತೆ ನೋಡಿಕೊಂಡರು.

ರಾಜರು ಮಾತ್ರವಲ್ಲ, ಸಮಾಜದ ಎಲ್ಲಾ ಸ್ತರಗಳ ಸದಸ್ಯರೂ ಎಲ್ಲ ಧರ್ಮಗಳಿಗೂ ಉದಾರ ಪೋಷಣೆಯನ್ನು ನೀಡಿದ್ದರಲ್ಲಿ ಆಶ್ಚರ್ಯವಿಲ್ಲ. ಈ ಆರೋಗ್ಯಕರ ಧಾರ್ಮಿಕ ಮನೋಭಾವವು, ದೇವಾಲಯಗಳ ನಿರ್ಮಾಣ ಮತ್ತು ದುರಸ್ತಿ, ಬೇಕಾದಷ್ಟು ದಾನಧರ್ಮಗಳ ನೀಡಿಕೆ, ಮಠಗಳಿಗೆ ದತ್ತಿಗಳು, ಭೂಮಿದಾನ, ಕೊಡುಗೆಗಳನ್ನು ಮಠಗಳಿಗೆ ಹೇರಳವಾಗಿ ನೀಡುತ್ತಿದ್ದದ್ದು, ಬ್ರಾಹ್ಮಣರಿಗೆ ಅಗ್ರಹಾರಗಳು ಮತ್ತಿತರ ದಾನಗಳನ್ನು ಕೊಡುವುದು, ಸತ್ರಗಳು, ಕೊಳಗಳು ಮೊದಲಾದ ಸಾರ್ವಜನಿಕ ಉಪಯೋಗದ ಕಾರ್ಯಗಳನ್ನು ಕೈಗೊಳ್ಳುವುದು ಮೊದಲಾದವುಗಳ ಮೂಲಕ ವ್ಯಕ್ತವಾಗುತ್ತಿತ್ತು. ಇದಕ್ಕೆ ಶಾಸನಗಳು ಮತ್ತು ಸಾಹಿತ್ಯಕ ಮೂಲಗಳು ಬೇಕಾದಷ್ಟು ಆಧಾರವನ್ನು ಒದಗಿಸುತ್ತವೆ. ರಾಜರು ಮತ್ತು ಅವರ ಅಧಿಕಾರಿಗಳು ಕಟ್ಟಿಸಿದ ಎಲ್ಲಾ ಧರ್ಮಗಳಿಗೆ ಸೇರಿದ ಪವಿತ್ರ ಮಂದಿರಗಳನ್ನು ಕುರಿತು ಶಾಸನಗಳು ಕೊಂಡಾಡುತ್ತವೆ. ಅವರು ನೀಡಿದ ಅಮೂಲ್ಯ ಉಡುಗೊರೆಗಳು, ಕಟ್ಟಿಸಿದ ಅಗ್ರಹಾರಗಳು, ಬ್ರಾಹ್ಮಣರಿಗೆ ನೀಡಿದ ವಿವಿಧ ದಾನಗಳು, ಮತ್ತಿತರ ಜನೋಪಯೋಗಿ ಕಾರ್ಯಗಳನ್ನು ಅವು ಪ್ರಶಂಸಿಸುತ್ತವೆ. ಹಣಕಾಸಿನ ದೃಷ್ಟಿಯಿಂದ ಅವರು ಉತ್ತಮ ಸ್ಥಿತಿಯಲ್ಲಿದ್ದರು. ಆದರೆ ತಮ್ಮ ಐಶ್ವರ್ಯವನ್ನು ಜನಕಲ್ಯಾಣಕ್ಕಾಗಿ ಬಳಸಬೇಕೆಂಬ ಬಯಕೆ ಅವರಲ್ಲಿದ್ದದು ನಿಜವಾಗಿ ಪ್ರಶಂಸನೀಯ. ಅವರ ಸಂಪತ್ತಿನ ಮೂಲವೂ ಸಾಮಾನ್ಯ ಜನರ ದುಡಿಮೆ ತಾನೆ![೫೮]

ಮುಸ್ಲಿಮರಿಗೆ ರಾಜರು ನೀಡಿದ ದಾನಗಳನ್ನು ಇಲ್ಲಿ ಗಮನಿಸುವುದು ಸೂಕ್ತ. ೧ನೇ ವೆಂಕಟಪ್ಪನಾಯಕನು ಭುವನಗಿರಿದುರ್ಗದಲ್ಲಿ ಒಂದು ಮಸೀದಿಯನ್ನು ಕಟ್ಟಿಸಿ ಅದಕ್ಕೆ ದಾನಗಳನ್ನು ನೀಡಿದನು. ವೀರಭದ್ರನಾಯಕನು ಆನಂದಪುರ ಸೀಮೆಯ ಮಳಲಗೋಪದ ತಾವರಗೆರೆಕೊಳದ ಬಳಿಯ ಮಸೀದಿಯಲ್ಲಿ ಧಾರ್ಮಿಕ ಆಚರಣೆಗಳಿಗಾಗಿ ಯಡೆಹಳ್ಳಿ ಗ್ರಾಮದಲ್ಲಿ ಉಭಯಂ ಆಗಿ ೧೨ ವಾರಗಳ ಒಂದು ತುಂಡು ಭೂಮಿಯನ್ನು ದಾನ ನೀಡಿದನು. ಕ್ರೈಸ್ತಧರ್ಮವೂ ಇಲ್ಲಿ ಬೆಳೆಯಿತು. ಶಿವಪ್ಪನಾಯಕನ ಪ್ರಜೆಗಳಲ್ಲಿ ೩೦,೦೦೦ಕ್ಕೂ ಹೆಚ್ಚು ಜನ ಕ್ರಿಶ್ಚಿಯನ್ನರಿದ್ದರು. ಕ್ರೈಸ್ತಪಾದ್ರಿಗಳು ಧರ್ಮಬೋಧೆ ಮಾಡಲು ಶಿವಪ್ಪನಾಯಕನು ಅನುಮತಿ

ನೀಡಿದ್ದನು. ಮಂಗಳೂರಿನಲ್ಲಿ ಮಿಲಾಗ್ರೆಸ್ ಚರ್ಚನ್ನು ಕಟ್ಟಲು ರಾಣಿ ಚೆನ್ನಮ್ಮಾಜಿಯು ಭೂಮಿಯನ್ನು ದಾನ ಮಾಡಿದಳು.[೫೯]

ಧಾರ್ಮಿಕ ಪ್ರವೃತ್ತಿಗೆ ಸಂಬಂಧಿಸಿದಂತೆ ಯಥಾರಾಜ ತಥಾಪ್ರಜಾ, ರಾಜನು ಹೇಗೋ ಪ್ರಜೆಗಳೂ ಹಾಗೇ ಎಂಬ ಉಕ್ತಿ ಬಹುಮಟ್ಟಿಗೆ ಸತ್ಯವಾಗಿತ್ತು. ರಾಜರ ಸೇವಕ ದೊಡ್ಡದೇವಯ್ಯನೆನ್ನುವವನು ಶ್ರೀರಂಗಪಟ್ಟಣದಲ್ಲಿ ಸೀತಾ ಲಕ್ಷ್ಮಣ ಸಮೇತ ಶ್ರೀ ಕೋದಂಡರಾಮನನ್ನು ಪ್ರತಿಷ್ಠಿಸಿ, ಪೂಜಾದಿಗಳಿಗೂ ಉತ್ಸವಾದಿ ಆಚರಣೆಗಳಿಗೂ ಅವ್ವೆರಹಳ್ಳಿ ಗ್ರಾಮವನ್ನು ಅರ್ಪಿಸಿದನು. ಬೀರೋಜ, ವೊಡುವಸೆಟ್ಟಿ, ತಿಮ್ಮಸೆಟ್ಟಿ ಮೊದಲಾದ ಸಾಮಾನ್ಯರು ಬಿಂಡಿಗನವಿಲೆಯ ಕೇಶವ ದೇವಾಲಯದಲ್ಲಿ ಸ್ತಂಭಗಳನ್ನು ಹಾಕಿಸಿದರು. ಮಲ್ಲಯನೆನ್ನುವವನು ಹಲ್ಸಿಯ ಮಲ್ಲೇಶ್ವರ ದೇವಾಲಯದ ಮುಖ್ಯ ಪ್ರವೇಶದ್ವಾರದ ಬಾಗಿಲನ್ನು ಮಾಡಿಸಿದನು. ರಾಮಚಂದ್ರ-ಹೆಬ್ಬಾರುವ, ದುದ್ದದ ನಂಜಪುರುವ ಮತ್ತು ತುರುದೇವ ಇವರು ದುದ್ದದ ಕೆರೆಗೆ ಮೂರು ಗಾಡಿಗಳನ್ನು ಒದಗಿಸುವ ಸಲುವಾಗಿ, ಬೀಚನಹಳ್ಳಿ ಗ್ರಾಮವನ್ನು ದಾನವಾಗಿತ್ತರು. ಕಿಕ್ಕೇರಿಯ ಬ್ರಹ್ಮೇಶ್ವರ ದೇವಾಲಯದಲ್ಲಿ ಸೀಳುಬಿಟ್ಟಿದ್ದ ಒಂದು ತೊಲೆಗೆ ಆಧಾರವಾಗಿ ಒಂದು ಕಂಬವನ್ನು, ಕೊಟ್ಟೂರು ಬಸವಪ್ಪನಾಯಕನ ಅಳಿಯನು ನೀಡಿದನು. ಅಪ್ಪಣನಾಯಕನೆಂಬ ಸೇವಕನು ಲಿಂಗಣಯತಿಗಳಿಗೆ ಒಂದು ಗ್ರಾಮವನ್ನು ಕಾಣಿಕೆಯಿತ್ತನು. ಬೆಂಟಿಗಸೆಟ್ಟಿ ಎನ್ನುವವನು ಕನ್ನಂಬಾಡಿಯ ಗೋಪಾಲಕೃಷ್ಣದೇವರಿಗೆ ಪ್ರತಿದಿನವೂ ನೈವೇದ್ಯ ಮಾಡಲು ಒಂದು ಪಡಿ ಅಕ್ಕಿ ಒದಗುವಂತೆ ಭೂಮಿಯನ್ನು ದಾನ ಮಾಡಿದನು. ಚಿಕ್ಕಯ್ಯನು ಮೇಲುಕೋಟೆಯಲ್ಲಿ ಒಂದು ಕೊಳವನ್ನು ಕಟ್ಟಿಸಿದನು. ಮೇಲುಕೋಟೆಯ ದೇವರು ಚಲಪತಿ ರಾಯನಿಗೆ ಚೆಂಗಾಳನೀರಮಡು ಸೇವೆಸಲ್ಲಿಸುವುದಕ್ಕಾಗಿ ಚಿಕ್ಕ ಸಿಂಗರಾಯನಿಗೆ ಅದಟರಾಯನು ಕೆರೆ ಮತ್ತು ನಾಲೆಗಳ ಕೆಳಗಿನ ಎರಡು ಖಾ ಭೂಮಿಯನ್ನು ದಾನ ಮಾಡಿದನು. ಚಾರುಕೀರ್ತಿ ಪಂಡಿತಾಚಾರ್ಯರ ಶಿಷ್ಯರು, ಪಾಯಣ್ಣ ಎಂಬ ಒಬ್ಬ ಮತ್ತು ಇನ್ನೊಬ್ಬ ಸೇರಿ, ಶ್ರೀರಂಗಪಟ್ಟಣದ ಆದೀಶ್ವರ ಬಸದಿಯಲ್ಲಿ ಕೈಂಕರ್ಯ ನಡೆಸಲು ಧನವನ್ನು ದತ್ತಿಯಾಗಿ ನೀಡಿದರು. ಲಕ್ಷ್ಮೀಸೇನಾಚಾರ್ಯರು ಬೆಳ್ಳೂರು ಬಸದಿಯಲ್ಲಿ ವಿಮಲನಾಥನ ವಿಗ್ರಹವನ್ನು ಪ್ರತಿಷ್ಠಿಸಿದಾಗ, ಸರ್ಕರನೆಂಬ ಒಬ್ಬ ವರ್ತಕನು ಅದೇ ಸ್ಥಳದಲ್ಲಿ ಒಂದು ಜಿನಮಂದಿರವನ್ನು ಕಟ್ಟಿಸಿದನು. ನಿಯೋಗಿ ಭಾಣೋಜಿ ಪಂಡಿತನೆನ್ನುವವನು ಮಹಾನವಮಿ ಉತ್ಸವದ ಸಮಯದಲ್ಲಿ ಬ್ರಾಹ್ಮಣರಿಗೆ ಭೋಜನದ ವ್ಯವಸ್ಥೆ ಮಾಡಿದನು. ಅಣತಿಯಲ್ಲಿ ತಿರುಮಲನಾಯಕನು ಲಕ್ಷ್ಮೀಕಾಂತ ದೇವರಿಗೆ ಒಂದು ದೀಪ ಮಾಲಾಕಂಬವನ್ನು ನೆಡಿಸಿದನು. ಶೃಂಗೇರಿಯಲ್ಲಿ ಶಿಷ್ಯನೊಬ್ಬನು ದೇವಾಲಯಕ್ಕೆ ಅಡಕೆಮರಗಳಿದ್ದ ತೋಟವನ್ನು ದಾನಮಾಡಿದುದಲ್ಲದೆ, ಬ್ರಾಹ್ಮಣರಿಗಾಗಿ ಒಂದು ಅಗ್ರಹಾರವನ್ನೂ ನಿರ್ಮಿಸಿದನು.

ದಾನಧರ್ಮಾದಿ ಸತ್ಕಾರ್ಯಗಳಲ್ಲಿ ಮಹಿಳೆಯರೂ ತೊಡಗಿದ್ದರು ಎಂಬುದಕ್ಕೆ ಶಾಸನಗಳು ಸ್ಪಷ್ಟ ಆಧಾರಗಳನ್ನು ಕೊಡುತ್ತವೆ. ಮೈಸೂರಿನ ದೇವರಾಜ ಒಡೆಯರ ರಾಣಿ ಅಮೃತಾಂಬೆಯು ಹಂಗಳದ ಅರಮನೆಯಲ್ಲಿ ಒಂದು ಕಲ್ಲಿನ ಮಠವನ್ನು ಕಟ್ಟಿಸಿದಳು. ಅಲ್ಲದೆ ಮರಳ ಬಸವಲಿಂಗದೇವರಿಗಾಗಿ ಒಂದು ಸ್ವತಂತ್ರವಾದ ಮಠವನ್ನು ಕಟ್ಟಿಸಿ, ಹೊರಕೇರಿ ಬಾಚಹಳ್ಳಿಗ್ರಾಮವನ್ನು ಅದಕ್ಕೆ ದತ್ತಿಯಾಗಿ ನೀಡಿದಳು. ಚಿಕ್ಕದೇವರಾಜ ಒಡೆಯರ ಕಿರಿಯ ರಾಣಿ ಗೌರಮ್ಮ, ಮದ್ದಗಿರಿ ನಗರದ ದಕ್ಷಿಣಕ್ಕೆ ತಳಕು ಎಂಬಲ್ಲಿರುವ ದೇವಿಗೆ (ಅಮ್ಮನಿಗೆ) ಗೋಪಾಲ ಸರಸ್ಸು ಎಂಬ ಕೊಳವನ್ನು ಕಟ್ಟಿಸಿದಳು. ಜಂಬೂರಿನ ಜಕ್ಕೇಶ್ವರಸ್ವಾಮಿ ಎಂಬುವನ ಪತ್ನಿ ಕಮಲಾಂಬಿಕೆ ಎನ್ನುವವಳು ಬಸವಯ್ಯ ಮಾಡಿದ ಧರ್ಮಕಾರ್ಯವನ್ನು ರಕ್ಷಿಸಿದಳು. ಚಿನ್ನಗೌಡನ ಪತ್ನಿ ಚೆನ್ನಮ್ಮನು ಮಂಜರಾಬಾದ್ ತಾಲೂಕಿನಲ್ಲಿ ಬಸವನ ಸೇವೆಗಾಗಿ ದೇವಾಲಯವನ್ನೂ ವೇದಿಕೆಯನ್ನೂ ಕಟ್ಟಿಸಿದಳು. ನಾರಿಯ ಗೋಪಾಲಕೃಷ್ಣ ಮತ್ತು ವಿಶ್ವೇಶ್ವರ ದೇವರಿಗಾಗಿ, ಲಕ್ಷಮ್ಮ ಎಂಬ ಒಬ್ಬ ಮಹಿಳೆಯು ೧೫೧/೨ ವರಹಗಳನ್ನು ದಾನವಾಗಿತ್ತಳು. ತನ್ನ ಚಿನ್ನದ ಉಂಗುರದಿಂದ ಪಡೆದ ಹಣದಿಂದ ಸೂರಪ್ಪಜೋಯಿಸರಿಂದ ಪಡೆದ ೮ ವರಹಗಳಿಂದ ಆಕೆ ಈ ಹಣವನ್ನು ಪಡೆದಳು.[೬೦]

ಅಡಕವಾಗಿ ಹೇಳಬೇಕೆಂದರೆ ದೇವಾಲಯವು ಜನರ ಧಾರ್ಮಿಕ ಜೀವನದ ಸಂಕೇತವಾಗಿತ್ತು. ಅದು ಕೇವಲ ಒಂದು ಪೂಜಾಸ್ಥಾನವಾಗಲಿ, ಧಾರ್ಮಿಕ ಸಂಸ್ಥೆಯಾಗಲಿ ಆಗಿರದೆ, ಸಂಕೀರ್ಣವಾದ ಸಾಮಾಜಿಕ-ಆರ್ಥಿಕ ಸಂಸ್ಥೆಯಾಗಿತ್ತು, ಜನಜೀವನದಲ್ಲಿ ಮಹತ್ತರವಾದ ಪಾತ್ರವನ್ನು ನಿರ್ವಹಿಸುತ್ತಿತ್ತು. ದೈನಿಕ, ಸಾಪ್ತಾಹಿಕ, ಮಾಸಿಕ, ವಾರ್ಷಿಕ ಹಾಗೂ ವಿಶೇಷ ಸಮಾರಂಭಗಳನ್ನು ಅಲ್ಲಿ ನಡೆಸಲಾಗುತ್ತಿತ್ತು. ಸಾಮೂಹಿಕ ಉತ್ಸವಗಳನ್ನು ಏರ್ಪಡಿಸಲಾಗುತ್ತಿತ್ತು. ಜನರು ಒಂದೆಡೆ ಸೇರಲು ಇದರಿಂದ ಅವಕಾಶವಾಗುತ್ತಿತ್ತು. ಎಲ್ಲಾ ಜಾತಿಗಳ ಜನರೂ ಸೇರಿ ತಮಗೆ ಇಷ್ಟಬಂದಂತೆ ಪೂಜಿಸಲು ಅವಕಾಶ ಕೊಡುತ್ತಿದ್ದುದರಿಂದ ಅದು ಪ್ರಜಾಸತ್ತಾತ್ಮಕ ಲಕ್ಷಣವನ್ನು ಹೊಂದಿತ್ತು. ಅದು ಕಲೆ ಮತ್ತು ಶಿಕ್ಷಣದ ಕೇಂದ್ರವಾಗಿತ್ತು. ಸಂಗೀತ, ನರ್ತನ, ಶಿಲ್ಪ ಮತ್ತು ವರ್ಣ ಚಿತ್ರ ಮೊದಲಾದ ಕಲೆಗಳಿಗೆ ದೇವಾಲಯವು ಆಶ್ರಯ ಕೊಟ್ಟಿತ್ತು. ಅಲ್ಲಿನ ದೇವದಾಸಿಯರು ತಮ್ಮ ಕಲೆಯ ಮೂಲಕ ಜನರಿಗೆ ಹೆಚ್ಚಿನ ಲೌಕಿಕ ಮನರಂಜನೆಯನ್ನು ನೀಡುತ್ತಿದ್ದರು. ಆರಿಸಿದ ವಿದ್ಯಾರ್ಥಿಗಳಿಗೆ ಅಲ್ಲಿ ಶಿಕ್ಷಣ ನೀಡಲಾಗುತ್ತಿದ್ದುದಲ್ಲದೆ ಹರಿಕಥೆ, ಪ್ರವಚನಗಳ ಮೂಲಕ ಸಾರ್ವಜನಿಕರಿಗೂ ಶಿಕ್ಷಣ ನೀಡಲಾಗುತ್ತಿತ್ತು. ಧರ್ಮಸಂಸ್ಥೆಗಳನ್ನು ನಡೆಸುತ್ತಿದ್ದಿತು. ವಿದ್ಯಾರ್ಥಿಗಳು ಮತ್ತು ಬ್ರಾಹ್ಮಣರಿಗೆ ಮಾತ್ರವಲ್ಲದೆ ಯಾತ್ರಾರ್ಥಿಗಳಾಗಿ ಬಂದವರಿಗೂ ಬಡವರಿಗೂ ಅನ್ನದಾನ ಮಾಡಲಾಗುತ್ತಿತ್ತು. ಅನೇಕ ಸಂದರ್ಭಗಳಲ್ಲಿ ನ್ಯಾಯಾಲಯವಾಗಿಯೂ ವರ್ತಿಸುತ್ತಿದ್ದಿತು. ಎಲ್ಲಕ್ಕಿಂತ ಮಿಗಿಲಾಗಿ, ಆಯಾ ಬಡಾವಣೆಯಲ್ಲಿ ದೇವಾಲಯವು ಆರ್ಥಿಕ ಆಧಾರವಾಗಿ ಪರಿಣಮಿಸಿತ್ತು. ಉದಾರವಾದ ದಾನ, ದತ್ತಿ, ದೇಣಿಗೆಗಳನ್ನು ಪಡೆದು ದೇವಾಲಯವು ಜಮೀನುದಾರ ಸ್ಥಾನ ಪಡೆದಿತ್ತು. ಭಾರೀ ಸಂಪತ್ತಿನ ಸಂಗ್ರಹವಿತ್ತು. ಸಾಲಗಳನ್ನು ಕೊಡುವುದರ ಮೂಲಕ ಬ್ಯಾಂಕು ಆಗಿ ವರ್ತಿಸುತ್ತಿತ್ತು. ಅನೇಕರಿಗೆ ಕೆಲಸಗಳನ್ನು ಒದಗಿಸುತ್ತಿತ್ತು. ಅಂತಹ ಉದ್ಯೋಗಗಳಿಗೆ ಹೆಚ್ಚಿನ ಮನ್ನಣೆ ಇರುತ್ತಿತ್ತು. ಒಂದೇ ಜಾತಿಗೆ ಸೇರಿದ ಜನರು ಅರಮನೆಯಲ್ಲಿ, ದೇವಾಲಯಗಳಲ್ಲಿ ಮತ್ತು ಹೊರಗೆ ಅದೇ ಉದ್ಯೋಗ ಮಾಡುತ್ತಿದ್ದರೂ ಅರಮನೆ ಮತ್ತು ದೇವಾಲಯಗಳಲ್ಲಿ ಕೆಲಸ ಮಾಡುವುದು ಹೆಚ್ಚಿನ ಮರ್ಯಾದೆ ಎಂಬ ಭಾವನೆ ಇತ್ತು. ಏಕೆಂದರೆ ಆ ಸ್ಥಳಗಳು ವಿಶೇಷ ಅಧಿಕಾರ, ಗೌರವ, ಪ್ರತಿಷ್ಠೆಗಳ ಸ್ಥಳಗಳಾಗಿದ್ದುವು. ವ್ಯಕ್ತಿಯು ಮಾಡುತ್ತಿದ್ದ ಕೆಲಸಕ್ಕಿಂತ ಎಲ್ಲಿ ಆ ಕೆಲಸ ಮಾಡುತ್ತಿದ್ದಾನೆ ಎಂಬುದರ ಮೇಲೆ ಸ್ಥಾನಮಾನವು ನಿರ್ಣಯವಾಗುತ್ತಿದ್ದಿತು.

ಹೀಗೆ ದೇವಾಲಯವು ಸುವ್ಯವಸ್ಥಿತವಾದ ಧಾರ್ಮಿಕ, ಸಾಮಾಜಿಕ, ನ್ಯಾಯಿಕ, ಆರ್ಥಿಕ, ಶೈಕ್ಷಣಿಕ ಮತ್ತು ಸೌಂದರ್ಯಾತ್ಮಕ ಸಂಸ್ಥೆಯಾಗಿತ್ತು. ಅದರವೇ ನಿಯಮ-ನಿಬಂಧನೆಗಳು, ಹಕ್ಕು-ಬಾಧ್ಯತೆಗಳು, ಕಾರ್ಯನಿರತ ಸಿಬ್ಬಂದಿ, ಆಡಳಿತವನ್ನು ನೋಡಿಕೊಳ್ಳಲು ಸಮಿತಿಗಳು ಮತ್ತು ವಿಶ್ವಸ್ಥರು ಇರುತ್ತಿದ್ದರು. ಜನರ ಜೀವನದ ಪ್ರತಿಯೊಂದು ಮುಖದೊಂದಿಗೆ ದೇವಾಲಯಕ್ಕೆ ನಿಕಟವಾದ ಸಂಬಂಧವಿತ್ತು. ಜಾತ್ರೆಗಳು ಮತ್ತು ಉತ್ಸವಗಳ ಮೂಲಕ ಎಲ್ಲಾ ಜಾತಿಗಳಿಗೆ ಸೇರಿದ ಜನರನ್ನು ಒಟ್ಟಿಗೆ ಕಲೆ ಹಾಕಿ ಅವರ ಸಮಾನತೆಯನ್ನು ಮನವರಿಕೆ ಮಾಡಿಕೊಡುವ ಮಹತ್ಕಾರ್ಯ ನಡೆಯುತ್ತಿತ್ತು. ಒಂದು ಬಗೆಯ ಸಾಮಾಜಿಕ-ಧಾರ್ಮಿಕ ಸಾಮರಸ್ಯವು ಅಲ್ಲಿ ನೆಲೆಸಿತ್ತು. ಧಾರ್ಮಿಕಾಚರಣೆಗಳ ಮೂಲಕ ಸಮುದಾಯದ ಸಾಮಾಜಿಕ-ಧಾರ್ಮಿಕ ಪರಂಪರೆಯನ್ನು ಪುನಶ್ಚೇತನಗೊಳಿಸುತ್ತಿತ್ತು. ಅದೇ ಸಮಯಕ್ಕೆ ದೇವಾಲಯವು ರಾಜತ್ವವನ್ನೂ ಪುರೋಹಿತಶಾಹಿಯನ್ನೂ ಬಲಪಡಿಸುತ್ತಿತ್ತು. ಪ್ರಸ್ತುತ ಕಾಲಾವಧಿಯ ಸಮಾಜದ ಊಳಿಗಮಾನ್ಯ ವಿನ್ಯಾಸದ ಎರಡು ಆಧಾರ ಸ್ತಂಭಗಳಾಗಿ ಅವು ಬಲಗೊಳ್ಳುತ್ತಿದ್ದುವು.

ವ್ಯಾಜ್ಯಗಳಲ್ಲಿ ತನ್ನ ನಿರಪರಾಧಿತ್ವವನ್ನು ಸಾಬೀತು ಮಾಡಲು ವ್ಯಕ್ತಿಯು ದಿವ್ಯಗಳನ್ನಾಚರಿಸುವ ರೂಢಿ ಮತ್ತು ಅದರಲ್ಲಿ ನಂಬಿಕೆ ಆ ಕಾಲದಲ್ಲಿತ್ತು. ಉದಾಹರಣೆಗೆ ಮೈಸೂರಿನ ಚಿಕ್ಕದೇವರಾಜ ಒಡೆಯರು ಅರಕಲಗೂಡಿನ ಹಂಪಯ್ಯನಿಗೆ ಹೀಗೆ ನಿರೂಪ ಕಳಿಸಿದರು: ''ಅರಕಲಗೂಡು ಅಷ್ಟವನೆ ಸ್ಥಳದ ಶಾನುಭೋಗ

ಪದವಿಯು ರಾಜರು ನೀಡಿದ ಉಡುಗೊರೆಯಾಗಿ ಭೈರೇಹೆಬ್ಬಾರುವನ (ಮಗ) ವೆಂಕಟಪತಿಗೆ ವಂಶಪರಂಪರೆಯಿಂದ ಬಂದಿರುತ್ತದೆ. ಮೊದಲಿನವನ ಅಧೀನ ಅಧಿಕಾರಿ ನರಸಪ್ಪನ ಮಗ ನಂಜಪ್ಪನು ಈ ಅಧಿಕಾರವು ವೆಂಕಟಪತಿಗೆ ಸೇರಕೂಡದೆಂದೂ, ಅವನು ರಾಜನಿಗೆ ದ್ರೋಹ ಮಾಡಿದ್ದನೆಂದೂ ಅರ್ಜಿ ಸಲ್ಲಿಸಿದನು. ಆಜ್ಞೆಯ ಪ್ರಕಾರ, ಈ ವೆಂಕಟಪತಯ್ಯನು ಅರ್ಕೇಶ್ವರದೇವರ ಎದುರಿಗೆ ನೇರವಾಗಿ ನಿಂತು ಭಗವಂತನನ್ನು ಪ್ರದಕ್ಷಿಣೆ ಮಾಡಿ, ''ಈ ಅಧಿಕಾರವು ನನಗೆ ಹಿಂದಿನಿಂದ ಬಂದಿರುತ್ತದೆ, ರಾಜರು ನೀಡಿದ ಉಡುಗೊರೆಯಾಗಿದೆ, ನಾನು ರಾಜದ್ರೋಹ ಮಾಡಿಲ್ಲ'' ಎಂದು ಹೇಳುತ್ತಾ ಕೊತಕೊತನೆ ಕುದಿಸಿದ ತುಪ್ಪದೊಳಕ್ಕೆ ತನ್ನ ಕೈಯನ್ನು ಮುಳುಗಿಸಿದನು. ದಿವ್ಯದಲ್ಲಿ ಅವನು ಜಯಶಾಲಿಯಾದನು. ಆದ್ದರಿಂದ ಮೊದಲಿದ್ದಂತೆಯೇ ಅಧಿಕಾರವೂ, ಅದಕ್ಕೆ ಸಂಬಂಧಿಸಿದ ಆಸ್ತಿ (ಮನೆಗಳು ಮತ್ತು ಜಮೀನುಗಳು)ಯೂ ಭೈರೇಹೆಬ್ಬಾರುವನ ಮಗ ವೆಂಕಟಪತಿಗೆ ಸೇರಿದ್ದೆಂದು ಸ್ಥಿರೀಕರಿಸಲಾಗಿದೆ. ಅದಕ್ಕೆ ತಕ್ಕ ಕಡಿತವನ್ನು ಅವನಿಗೆ ನೀಡಲಾಗುತ್ತದೆ...''[೬೧] ನ್ಯಾಯದ ಎದುರಿಗೆ ಎಲ್ಲರನ್ನೂ ಸಮಾನವಾಗಿ ಪರಿಗಣಿಸಲಾಗುತ್ತಿತ್ತು ಎಂಬುದನ್ನು ಈ ಘಟನೆಯು ಸೂಚಿಸುತ್ತದೆ.

ಧಾರ್ಮಿಕ ವಿಧಾನಗಳಿಂದ ಧನವನ್ನು ಸಂಪಾದಿಸುವುದು, ದೇವಾಲಯ ನಿರ್ಮಾಣಕ್ಕಾಗಿ ಅದನ್ನು ಬಳಸುವುದು, ದೇವರಿಗೆ ಬ್ರಾಹ್ಮಣರಿಗೆ ಬೇರೆ ಬೇರೆ ರೂಪಗಳಲ್ಲಿ ಅದನ್ನು ವಿತರಿಸುವುದು, ಭಗವಂತನ ಹೆಸರಿನಲ್ಲಿ ಸಾರ್ವಜನಿಕ ಕಲ್ಯಾಣಕಾರ್ಯಗಳಿಗೆ ವಿನಿಯೋಗಿಸುವುದು, ಇವು ಪ್ರಸ್ತುತ ಕಾಲಾವಧಿಯಲ್ಲಿ ಎತ್ತಿ ಹಿಡಿದ ಸಾಮಾಜಿಕ-ಧಾರ್ಮಿಕ ಆದರ್ಶಗಳಾಗಿದ್ದುವು. ಜನರು ತುಂಬಾ ಬೆಲೆಕೊಡುತ್ತಿದ್ದ ಮೌಲ್ಯಗಳಾಗಿದ್ದುವು. ದಾನ ಮಾಡುವುದರಿಂದ ಪುಣ್ಯ ಬರುತ್ತದೆ, ಸಾಮಾಜಿಕ ಮನ್ನಣೆ ಹೆಚ್ಚುತ್ತದೆ ಎಂಬ ದೃಢವಾದ ನಂಬಿಕೆ ಅವರಲ್ಲಿ ಇರುತ್ತಿತ್ತು. ಈ ಪವಿತ್ರ ಕಾರ್ಯದಿಂದ ಮೋಕ್ಷವನ್ನು ಸಾಧಿಸಬಹುದು ಎಂಬ ಭಾವನೆ ಈ ಚಟುವಟಿಕೆಗಳ ಆಧಾರವಾಗಿತ್ತು.

ಈ ಕಾಲಾವಧಿಯ ಸಾಮಾಜಿಕ ಜೀವನವನ್ನು ಸಂಬಂಧಿತ ಶಾಸನಗಳು ಮತ್ತು ಸಾಹಿತ್ಯಕ ದಾಖಲೆಗಳ ಆಧಾರದಿಂದ ವಿಶ್ಲೇಷಣೆ ಮಾಡಿನೋಡಿದರೆ, ಹಿಂದಿನ ಸಾಮಾಜಿಕ ಆದರ್ಶಗಳು, ನಂಬಿಕೆಗಳು, ಜೀವನ ವಿಧಾನಗಳು, ಸಂಸ್ಥೆಗಳು ಇವೆಲ್ಲ ಈ ಶತಮಾನದಲ್ಲಿಯು ಹಾಗೆಯೇ ಮುಂದುವರಿದುದು ಕಂಡುಬರುತ್ತದೆ. ಜೊತೆಗೆ ಯೂರೋಪಿಯನ್ ಶಕ್ತಿಗಳೊಂದಿಗೆ ಸಂಪರ್ಕ ಬೆಳೆದಂತೆ ಅವುಗಳ ಮಧ್ಯಕಾಲೀನ ರೂಪವು ಆಧುನಿಕ ರೂಪವಾಗಿ ಮಾರ್ಪಡುವ ಸೂಚನೆಗಳೂ ಕಂಡುಬರುತ್ತದೆ. ದೇವರಾಜ ಒಡೆಯರ ಆಳಿಕೆಯಲ್ಲಿ ಯೂರೋಪಿಯನ್ ದೇಶಗಳಿಗೂ ಮೈಸೂರಿಗೂ ಸಂಪರ್ಕ ಪ್ರಾರಂಭವಾಯಿತು. ಕೆಳದಿಯ ರಾಜರು ಪೋರ್ಚುಗೀಸ್, ಇಂಗ್ಲಿಷ್, ಡಚ್ ಮತ್ತು ಸ್ಪೇನಿಯಾರ್ಡ್ಸ್ ಜೊತೆ ರಾಜನೈತಿಕ ಸಂಬಂಧಗಳನ್ನು ಹೊಂದಿದ್ದರು.[೬೨] ಈ ನಂಬಿಕೆಗಳು, ಸಾಮಾಜಿಕ ವರ್ತನ ವಿನ್ಯಾಸಗಳು, ಚಟುವಟಿಕೆಗಳು, ಸಂಸ್ಥೆಗಳು ಒಬ್ಬ ವ್ಯಕ್ತಿ ಅಥವಾ ಕೆಲವೇ ವ್ಯಕ್ತಿಗಳಿಗೆ ಸೇರಿದವಾಗಿರಲಿಲ್ಲ. ಅವು ವಿಶಾಲಾರ್ಥದಲ್ಲಿ ಸಾಮಾಜಿಕ-ಮನೋವೈಜ್ಞಾನಿಕವೂ ಆಗಿದ್ದುವು. ಅವಕ್ಕೆ ಮಾಹಿತಿ, ಪ್ರೇರಣೆ, ಸಾಮಾಜಿಕ ಬೆಂಬಲಗಳಿದ್ದುದನ್ನು ನೋಡಬಹುದು. ಅವುಗಳ ಸುಪ್ತ ಚಟುವಟಿಕೆಯು ಮುಂದಿನ ಪೀಳಿಗೆಗಳ ಸದಸ್ಯರ ನಂಬಿಕೆಗಳು, ಪ್ರವೃತ್ತಿಗಳು, ಚಟುವಟಿಕೆಗಳಿಗೆ ಅಗತ್ಯವಾದ ಮಾಹಿತಿಯ ಪರಿಸರವೊಂದನ್ನು ನಿರ್ಮಾಣ ಮಾಡಿದುವು. ಸಮಾಜೀಕರಣ ಪ್ರಕ್ರಿಯೆಯು ಹೇಗಿತ್ತೆಂದರೆ, ಅದು ಅವುಗಳ ಬಗೆಗೆ ಗ್ರಹಣ ಸಾಧ್ಯವಾದ ಪ್ರೇರಕಶಕ್ತಿಯನ್ನು ಬಲಪಡಿಸಿತು. ಈ ಪ್ರವೃತ್ತಿಗಳನ್ನು ಎಬ್ಬಿಸುವ, ಚುರುಕುಗೊಳಿಸುವ ಪರಿಸ್ಥಿತಿಗಳೂ ಕಾರ್ಯೋನ್ಮುಖವಾಗಿದ್ದುವು. ಜನರ ನಂಬಿಕೆಗಳು, ಮೌಲ್ಯಗಳು, ಆದರ್ಶಗಳು, ಚಟುವಟಿಕೆಗಳು ಸಾಮಾಜಿಕ ಬೆಂಬಲವನ್ನು ಅವಲಂಬಿಸಿದ್ದುವು. ತಮ್ಮ ಸುತ್ತಮುತ್ತಣವರೊಂದಿಗೆ ಹಂಚಿಕೊಳ್ಳುವುದರಿಂದ ಜನರ ಅಭಿಪ್ರಾಯಗಳು ಬಲಗೊಳ್ಳುತ್ತಿದ್ದುವು. ಈ ಬಗೆಯ ಸಾಮಾಜಿಕ ಬೆಂಬಲವು ಇತರರೊಂದಿಗೆ ಅವರ ಸಂಬಂಧಗಳು ಉತ್ತಮ ಸ್ಥಿತಿಯಲ್ಲಿದ್ದುದಕ್ಕೆ ಸಾಕ್ಷಿಯಾಗಿದ್ದಿತು. ತಾವು

ಅಳವಡಿಸಿಕೊಂಡಿರುವ ಸಾಮಾಜಿಕ ಜೀವನದ ವಿನ್ಯಾಸ ಶಾಸನಬದ್ಧವಾಗಿದೆ, ಜನಮನ್ನಣೆಗಳಿಸುವಂಥದಾಗಿದೆ ಎಂಬುದನ್ನು ಸ್ಪಷ್ಟಪಡಿಸುತ್ತಿತ್ತು. ಹೀಗೆ ವ್ಯಕ್ತಿಗತವಾದ ಮತ್ತು ಸಾಮಾಜಿಕವಾದ ಲಂಗರುಗಳಿದ್ದುವು. ಅವುಗಳ ಸುತ್ತ ಸಮಾಜ ಜೀವನದ ವಿನ್ಯಾಸ ರೂಪುಗೊಳ್ಳುತ್ತಿತ್ತು. ಈ ನಂಬಿಕೆಗಳು, ಪ್ರವೃತ್ತಿಗಳು, ವರ್ತನ ವಿನ್ಯಾಸಗಳು, ಸಂಸ್ಥೆಗಳು ಅರಿವಿಗೆ ಬರುವಂತೆ ಹರಳುಗಟ್ಟಿ ಸಾಮಾಜಿಕ ರಚನೆಯು ಒಂದುಮಟ್ಟಕ್ಕೆ ಸ್ಥಿರಗೊಳ್ಳುತ್ತಿತ್ತು.

ಧಾರ್ಮಿಕ ಮತ್ತು ರಾಜಕೀಯ ಸಂಸ್ಥೆಗಳಲ್ಲಿ ಜನರು ಎಷ್ಟುಮಟ್ಟಿಗೆ ವಿಶ್ವಾಸವಿರಿಸಿದ್ದರು ಎನ್ನುವುದು ಈ ಕಾಲಾವಧಿಯಲ್ಲೂ ಬಹುಮುಖ್ಯವಾದ ವಿಚಾರವಾಗಿತ್ತು. ಈ ಸಂಸ್ಥೆಗಳನ್ನು ಅವರು ಶಾಸನಬದ್ಧ ಮತ್ತು ವಿಶ್ವಾಸಾರ್ಹ ಎಂದು ಪರಿಗಣಿಸಿದರು. ಜನರು ಅವುಗಳ ಬಗೆಗೆ ತೋರಿಸಿದ ವಿಧೇಯತೆಯೇ ಅವುಗಳ ಶಾಸನಬದ್ಧತೆಗೆ ದ್ಯೋತಕವಾಗಿತ್ತು. ಯಾವುದಾದರೂ ರೀತಿಯಲ್ಲಿ ಸದಸ್ಯರು ಅವುಗಳಲ್ಲಿ ಖುದ್ದಾಗಿ ತೊಡಗಿಕೊಂಡಿರುತ್ತಿದ್ದರು. ವ್ಯವಸ್ಥೆಯ ನಿಯಮಾವಳಿಗಳನ್ನೂ ಪ್ರಮಾಣಗಳನ್ನೂ ಅವರು ಒಪ್ಪಿಕೊಂಡಿದ್ದರು. ಗ್ರಾಮದ ಮಟ್ಟದಲ್ಲಿ ಜಾತಿ, ಮಹಾಜನರು ಮತ್ತು ಜಾತಿಯ ಹಿರಿಯರು ದುರ್ನಡವಳಿಕೆಯನ್ನು ಶಿಕ್ಷಿಸುವ ಅಧಿಕಾರವನ್ನು ಹೊಂದಿದ್ದರು. ವ್ಯವಸ್ಥೆಯು ಮುಕ್ತವಾಗಿತ್ತು. ಅಂದರೆ, ಮೇಲ್ಮುಖವಾದ ಸಾಮಾಜಿಕ ಚಲನೆಗೆ ಅಲ್ಲಿ ಅವಕಾಶವಿತ್ತು. ಜನರಿಗೆ ಅಗತ್ಯವೆನಿಸಿದರೆ, ತಮ್ಮ ವೃತ್ತಿಯನ್ನು ಬದಲಾಯಿಸಲು ಗಣನೀಯವಾದ ಸ್ವಾತಂತ್ರ್ಯವಿದ್ದಿತು. ಎಲ್ಲಾ ದೇವದೇವತೆಗಳನ್ನು ಪೂಜಿಸಲು, ಎಲ್ಲಾ ದೇವರ ಆಲಯಗಳಿಗೆ ಬಗೆಬಗೆಯ ಕಾಣಿಕೆಗಳನ್ನು ಅರ್ಪಿಸಲು ಅವರು ಸ್ವತಂತ್ರರಾಗಿದ್ದರು.

ಒಟ್ಟಿನಲ್ಲಿ, ಈ ಕಾಲಾವಧಿಯ ಸಾಮಾಜಿಕ ಆದರ್ಶಗಳು, ಮೌಲ್ಯಗಳು, ನಂಬಿಕೆಗಳು, ಜೀವನ ವಿಧಾನ, ವರ್ತನೆ, ಸಾಂಸ್ಥಿಕ ವ್ಯವಸ್ಥೆ ಇವೆಲ್ಲವೂ ಧಾರ್ಮಿಕವಾದ ತೃಪ್ತಿಯ ಭಾವನೆಯನ್ನು ಕೊಟ್ಟಿದ್ದುದು ಮಾತ್ರವಲ್ಲ, ಗ್ರಹಣಶೀಲ, ಪ್ರಚೋದಕ ಪುನರ್‌ವ್ಯವಸ್ಥೆ, ಆತ್ಮಗೌರವ ಮತ್ತು ಸಾಮಾಜಿಕ ಬೆಂಬಲ ಇವುಗಳನ್ನು ಕೊಡುತ್ತಿದ್ದುವು. ಆ ಕಾಲದ ಶಿಲಾಶಾಸನಗಳು ಮತ್ತು ಸಾಹಿತ್ಯಕ ಆಧಾರಗಳು ರಾಜರು ಮಾತ್ರವಲ್ಲದೆ ಸಮಾಜದ ಎಲ್ಲಾ ಸ್ತರಗಳ ಸದಸ್ಯರು ಕೈಗೊಂಡ ಬಗೆಬಗೆಯಾದ ಸತ್ಕಾರ್ಯಗಳನ್ನು ಮತ್ತು ಜನಕಲ್ಯಾಣ ಕಾರ್ಯಗಳನ್ನು ಹೇಳುತ್ತವೆ. ಕೆಲವು ದೇವಾಲಯಗಳಲ್ಲಿ ನಿಲ್ಲಿಸಿದ ರಾಜರ ಭಕ್ತ ವಿಗ್ರಹಗಳು ಸಮಾಜೀಕರಣ ಮತ್ತು ಸಂವಹನದ ಅನೌಪಚಾರಿಕವೂ ಪರೋಕ್ಷವೂ ಆದ ಮಾಧ್ಯಮಗಳಾಗಿ ವರ್ತಿಸಿದುವು ಎಂದು ಹೇಳಬಹುದು. ಅದರಿಂದ ಸಾಮಾಜಿಕ-ಧಾರ್ಮಿಕ ಆದರ್ಶಗಳು, ಮೌಲ್ಯಗಳು, ಚಟುವಟಿಕೆಗಳು ಮೊದಲಾದವುಗಳ ಪ್ರಸಾರಕ್ಕೆ ದಾರಿಯಾಯಿತು. ರಾಜರು ತಮ್ಮದಲ್ಲದ ಅನ್ಯಧರ್ಮಗಳ ವಿಚಾರಗಳು ಮತ್ತು ಆಚರಣೆಗಳ ಬಗೆಗೆ ಸಹಿಷ್ಣುತೆಯುಳ್ಳ ಉದಾರ ಮನೋಭಾವವನ್ನು ಹೊಂದಿದ್ದರು. ಅದರಿಂದ ವಿವಿಧ ಸಂಪ್ರದಾಯಗಳ ಸಂಯೋಜನೆ ಸಾಧ್ಯವಾಗಿತ್ತು. ಉದಾಹರಣೆಗೆ ಮೈಸೂರಿನ ಒಡೆಯರು ಭಗವತಿ ಚಾಮುಂಡೇಶ್ವರಿಯನ್ನು ತಮ್ಮ ಕುಲದೇವತೆಯನ್ನಾಗಿ ಪೂಜಿಸುತ್ತಿದ್ದರು. ಆಕೆಯು ಶೈವ, ವೈಷ್ಣವ ಮತ್ತು ಶಾಕ್ತಪಂಥಗಳ ಸಂಯೋಜನೆಯನ್ನು ಪ್ರತಿನಿಧಿಸುವ ದೇವತೆಯಾದ್ದರಿಂದ ರಾಜರು ಆಕೆಯನ್ನು ಆರಾಧಿಸುವ ಮೂಲಕ ಈ ಮೂರೂ ಪಂಥಗಳಿಗೆ ಸೇರಿದ ಪ್ರಜೆಗಳಲ್ಲೂ ಸಾಮರಸ್ಯವನ್ನು ಸಾಧಿಸಿದ್ದರು. ಬ್ರಾಹ್ಮಣ ಕೋವಿದರನ್ನು ಈ ದೇವಾಲಯದ ಅರ್ಚಕರನ್ನಾಗಿ ನೇಮಿಸಿ ಒಡೆಯರು ಸಂಸ್ಕೃತ ಸಂಪ್ರದಾಯವನ್ನು ಪ್ರವೇಶಗೊಳಿಸಿದರು. ಜೊತೆಗೆ ಪೂಜಾವಿಧಾನಗಳಲ್ಲಿ, ಧಾರ್ಮಿಕ ಆಚರಣೆಗಳಲ್ಲಿ, ಸಾಂಪ್ರದಾಯಿಕ ಪುರೋಹಿತಶಾಹಿ ಹಾಗೂ ಸ್ವಲ್ಪಮಟ್ಟಿಗೆ ಜಾನಪದ ಸಂಪ್ರದಾಯಗಳ ಸಹಯೋಗವು ಸಾಧಿತವಾಗುವಂತೆ ಮಾಡಿದರು. ಇದರಿಂದ ಬೇರೆ ಬೇರೆ ಜಾತಿಗಳ ಜನರು ಚಾಮುಂಡೇಶ್ವರಿ ಆರಾಧನೆಯ ತೆಕ್ಕೆಗೆ ಬರುವಂತಾಯಿತು.[೬೬] ಈ ಸಹಿಷ್ಣುತೆಯು ಸಾಮಾಜಿಕ ಜೀವನಕ್ಕೆ ಒಂದು ಲೌಕಿಕ ರಂಗನ್ನು ಕೊಟ್ಟಿತು, ಸಾಮಾಜಿಕ ಸಾಮರಸ್ಯ ಮತ್ತು ಶಾಂತಿಗೆ ದಾರಿ ಮಾಡಿತು. ಈ ಸಾಮಾಜಿಕ ಸಂಬಂಧದ ಮತ್ತು ಸಾಂಸ್ಥಿಕವಾದ ಬಿಂಬವು ಬಹುತೇಕ ಕೌಟುಂಬಿಕ ಸ್ವರೂಪವನ್ನು ಹೊಂದಿದ್ದಿತು.

ಟಿಪ್ಪಣಿಗಳು

೧ ಗೋವಿಂದವೈದ್ಯ, : ಕಂಠೀರವ ನರಸರಾಜವಿಜಯಂ, ಸಂ: ಆರ್. ಶಾಮಶಾಸ್ತ್ರಿ, ೧೯೭೧, I; II ೭೪, ೧೦೯; IV ೧೦೦, ೧೦೮; V-೫೦, ೫೬-೫೭; ೪೧, ೫೬-೬೨; IX ೩; XXVI ೩೦, ೩೨, ೩೪, ೩೮, ೪೦; ತಿರುಮಲಾರ್ಯ, ಚಿಕ್ಕದೇವರಾಜ ವಂಶಾವಳಿ ೩೭-೩೮, ೧೫೨-೧೫೩, ೧೬೦-೧೬೧; ಚಿಕ್ಕದೇವರಾಜವಿಜಯಂ, V ೧೭೦; ಎ.ಕ.೩, ಎಸ್.ಆರ್. ೧೦೩, ಎನ್.ಜೆ. ೧೯೮; ೪ ವೈಡಿ ೫; ೫-೧ ಮತ್ತು (೨) ಎಜಿ. ೬೪

೨ ಎ.ಕ. ೫, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ೯೯, ಪು. ೭೮೪, ೭೮೫ ಪಂಕ್ತಿಗಳು ೧೩೩-೧೩೭, ೧೭೯-೧೭೩, ಪು. ೨೨೭, ೨೨೮

೩ ಎ.ಕ. ೧೨, ಕೆ.ಜಿ. ೩೭, ಎ.ಕ. ೨, ಎ.ಕ. ೭೨, ೭೪-೭೯; ಎ.ಕ. ೪, ೨ ವೈ ಡಿ ೫೩ ೧೫-೧೬; ೫೪ ಪು. ೧೫೬-೧೫೭ (ಪಠ್ಯ: ಚಿಕ್ಕುಪಾಧ್ಯಾಯ ಹಸ್ತಿಗಿರಿ ಮಾಹಾತ್ಮ್ಯ, ಎಂ.ಎಸ್.ನಂ. ಬಿ. ೬೧, ಪು೧, ೬೮; ರಾಮಕೃಷ್ಣರಾವ್ ಬಿ: ಅನಾಲ್ಸ್ ಆಫ್ ದಿ ಮೈಸೂರು ರಾಯಲ್ ಫ್ಯಾಮಿಲಿ ಭಾಗ ೧. ೧೦೦-೧೦೧; ವೆಂಕಟರಮಣಯ್ಯ ಮೈಸೂರು ರಾಜರ ಚರಿತ್ರೆ, ೨೬-೨೭; ಕೆಳದಿ ಗುಂಡಾಜೋಯಿಸ್, (ಸಂ) ಕೆಳದಿನೃಪವಿಜಯ, ೧೯೭೬, ಪು. ೧೩೨; ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್, ಸೋರ್ಸಸ್ ಆಫ್ ವಿಜಯನಗರ ಹಿಸ್ಟರಿ, ೧೯, ಪು. ೩೪೫

೪ ದೀಕ್ಷಿತ್, ಜಿ.ಎಸ್.: (ಸಂ): ಸ್ಟಡೀಸ್ ಇನ್ ಕೆಳದಿ ಹಿಸ್ಟರಿ, ೧೯೮೧, ಪು. ೯೫; ಎಂ.ಎ ನಾರಾಯಣ ಅಯ್ಯಂಗಾರ್ ಮತ್ತು ಎಂ. ಎ. ಶ್ರೀನಿವಾಸಾಚಾರ್, ದಿ ಮೈಸೂರು ಪ್ರಧಾನ್ಸ್, ೧೯೦೨

೫ ಎ.ಕ. ೩, ೧೭, ಎನ್.ಜೆ. ೧೯೮; ೨, ೧೨೭-೧೨೮

೬ ಎ.ಕ. ೧, (ಮೈಸೂರು ಡಿಸ್ಟ್ರಿಕ್ಸ್ ಸಪ್ಲಿಮೆಂಟರಿ ವಾಲ್ಯೂಮ್ II,) ೧೩-೧೬ ೭೨, ಎಂ.ಡಿ. ೧೭ (ಪರಿಷ್ಕೃತ II ೬-೯) ಇತ್ಯಾದಿ

೭ ದೇವಚಂದ್ರ: ರಾಜಾವಳೀ ಕಥೆ, XII ೪೭೪; ಅನಂತಕವಿ ಬೆಳಗೊಳದ ಗೊಮ್ಮಟೇಶ್ವರ ಚರಿತ್ರೆ, ಎಂ.ಎಸ್.ನಂ ಎ. ೨೦೨ ಪು. ೪, ೧೦-೧೮; ಎ.ಕ. ೩ (ಜೆ) ಎನ್.ಜೆ. ೪೧, ಅದೇ ೨, ೮-೯ ಅದೇ, ೫-೨, ಅಧ್ಯಾಯ ೯೨, ೨ ೧೦೫-೧೦೭ ತಿರುಮಲಾರ್ಯ ಪೂರ್ವೋಕ್ತ, ೧೬೩-೧೬೬, ೧೭೦-೧೭೨; ಚಿಕ್ಕದೇವರಾಜ ವಿಜಯಂ IV, ೧೯, ೮೭-೮೮, V ೯೭-೧೦೪, VI, ೧೬೪; ನರಸಿಂಹಾಚಾರ್ ಆರ್. ಕರ್ಣಾಟಕ ಕವಿಚರಿತೆ, ೨, ೧೯೧೯, ೪೪೨ ಅದೇ, II ೪೬೭-೪೬೮, ೪೯೦; ಚಿಕ್ಕುಪಾಧ್ಯಾಯ, ಶ್ರೀರಂಗ ಮಾಹಾತ್ಮ್ಯ, ಎಂ.ಎಸ್.ನಂ. ಬಿ. ೨೭೦, ಪು. ೧. ೪೦, ೫೧-೫೨; ಕಮಲಾಚಲ ಮಹಾತ್ಮ್ಯ, ಎಂ.ಎಸ್.ನಂ. ೨೦ ೩೮ ಮತ್ತು ೪೨ III; ವೆಂಕಟಗಿರಿ ಮಾಹಾತ್ಮ್ಯ, ಎಂ.ಎಸ್.ನಂ. ೧೮-೪-೧೮, I, ೧೯ ಇತ್ಯಾದಿ; ರಾಮಕೃಷ್ಣರಾವ್.ಬಿ, ಪೂರ್ವೋಕ್ತ, I. ೧೦೫

೮ ಎ.ಕ. ೫, ಕೆ.ಆರ್. ೧೧೭; ಚೆನ್ನಯ್ಯ, ಪದ್ಮಿನೀ ಪರಿಣಯ ಸಂ: ಪಿ.ವಿ. ನಾರಾಯಣ, ೧೯೮೧. ಪು. ೪೬

೯ ಶ್ರೀನಿವಾಸ್, ಎಂ.ಎನ್.: ಕ್ಯಾಸ್ಟ್ ಇನ್ ಮಾಡರ್ನ್ ಇಂಡಿಯಾ ಎಂಡ್ ಅದರ್ ಎಸ್ಸೇಸ್

೧೦ ನರಸಿಂಹಾಚಾರ್, ಆರ್.: ಪೂರ್ವೋಕ್ತ, ಪೀಠಿಕೆ, ೨೧; ಎಂ.ಎ.ಆರ್ ೧೯೨೨, ಪು. ೨, ಪ್ಯಾರಾ ೮; ೧೯೧೮, ಪ್ಯಾರಾ ೩೮; ೧೯೧೧-೧೯೧೨, ಪು. ೫೨; ಗೋವಿಂದವೈದ್ಯ, ಪೂರ್ವೋಕ್ತ, V-೭೨; ಎ.ಕ. ೩, ೧ ಮೈ, ೧೬, ೧೮ ಎನ್.ಜೆ. ೧೯೮, IV ೨ ಜಿ.ಯು. ೨; ಮೈಸೂರು ನಗರದ ಪೂರ್ವೋತ್ತರ, ಎಂ.ಎಸ್. ನಂ. ೧೮-೧೫-೧೮, ಪು. ೨೪-೨೬, ಮೈಸೂರು ದೊರೆಗಳ ವಂಶಾವಳಿ, ಎಂ.ಎಸ್. ನಂ. ೬೨, ಪಿ.ಎಚ್ ನಂ. ೩೩೬, ಎಫ್, ಎಫ್, ೨; ದೇವಚಂದ್ರ ಪೂರ್ವೋಕ್ತ ೪೪೬-೪೭೫, X ೨೮೫-೨೮೮ ಇತ್ಯಾದಿ; ವೆಂಕಟರಮಣಯ್ಯ ಪೂರ್ವೋಕ್ತ, ಪು. ೧೫; ತಿರುಮಲಾರ್ಯ, ಪೂರ್ವೋಕ್ತ, ಪು. ೧೧-೧೨; ರೈಸ್, ಮೈಸೂರು ಗೆಜೆಟಿಯರ್ -೧, ೩೬೧ ಇತ್ಯಾದಿ.

೧೧ ಎ.ಕ. ೩, ಎನ್.ಜೆ. ೩೧೬-೩೧೮, ೧೦೯; ಅದೇ ೪, ವೈಸಿ, ೧೪೫; ಅದೇ ೮, ಎಚ್.ಎನ್, ೧೭೦; ಎಂ.ಎ.ಆರ್ ೧೯೨೮ ಪು. ೫೨-೫೩

೧೨ ಗೋವಿಂದವೈದ್ಯ: ಪೂರ್ವೋಕ್ತ, IV, ೪೧-೭೪, ೯೧, ೯೩, ೧೯೮; VII, ೧-೯ ಇತ್ಯಾದಿ

೧೩ ಚಿಕ್ಕದೇವರಾಜ: ಸಚ್ಛುದ್ರಾಚಾರ ನಿರ್ಣಯ, ಎಂ.ಎಸ್.ನಂ, ಎಂ ೪೨೧ ಪು. ೧೨-೧೩; ಮನು, ೬, ೯೨

(ಬುಲರನ ಅನುವಾದ); ವಿಷ್ಣುಪುರಾಣ, III, ೭; ಭಗವದ್ಗೀತಾ ೧೮, ೪೭-೫೦ III, ೩೫, IX ೨೩-೨೫, IX ೩೦-೩೩; ವಿಲ್ಸನ್, ವಿಷ್ಣುಪುರಾಣ, III, ೭೫-೭೯ ಇತ್ಯಾದಿ

೧೪ ಮಾಸ್ತಿ ವೆಂಕಟೇಶ್ ಅಯ್ಯಂಗಾರ್: ಪಾಪ್ಯುಲರ್ ಕಲ್ಚರ್ ಇನ್ ಕರ್ನಾಟಕ, ೧೯೩೭, ಪು.೧೨೨

೧೫ ಗೋತ್ರಗಳನ್ನು "ವೇದಋಷಿಗಳ ಹೆಸರಿನಿಂದ ಕರೆದ ಇಪೋನಿಮಸ್ ಗುಂಪುಗಳು" ಎಂದು ವಿವರಿಸಲಾಗಿದೆ. ಪ್ರತಿಯೊಂದು ಗುಂಪೂ ಭಿನ್ನಗೋತ್ರವಿವಾಹ ಪದ್ಧತಿಯನ್ನು ಉಳ್ಳದು, "ಭಿನ್ನ ಗೋತ್ರ ಪಿತೃ ಪರಂಪರಾ ರಕ್ತ ಸಂಬಂಧ" ಎಂದೂ ಹೇಳಿದೆ. ಗೋತ್ರದ ಸದಸ್ಯರು ತಮ್ಮ ಮೂಲವನ್ನು ಒಬ್ಬ ಸಮಾನ ಪೂರ್ವಜನಲ್ಲಿಗೆ ಗುರುತಿಸುತ್ತಾರೆ. ದಿ ಅರ್ಲಿ ಬ್ರಾಹ್ಮನಿಕಲ್ ಸಿಸ್ಟಂ ಆಫ್ ಗೋತ್ರ ಪ್ರವರ, ಪುರುಷೋತ್ತಮ ಪಂಡಿತನ ದಿ ಗೋತ್ರ ಪ್ರವರ ಮಂಜರಿಯ ಅನುವಾದ. ಮುನ್ನುಡಿ: ಜಾನ್ ಬರೋ; ಎ.ಕ. ೧೨, ಕೆ.ಎಸ್. ೧೨, ಪು.೩೪. ಚತುರ್ಥ ಗೋತ್ರ ಯಲಹಂಕನಾಡ ಪ್ರಭು, ಪು. ೫೫

೧೬ ರಾಮಕೃಷ್ಣರಾವ್, ಬಿ.:ಪೂರ್ವೋಕ್ತ, II ೧೨೯-೧೩೧; ದೇವಚಂದ್ರ, ಪೂರ್ವೋಕ್ತ, ೩೦, ೪೭೭-೪೭೯, XI, ೩೮೮-೩೮೯

೧೭ ವಿಲ್ಕ್ಸ್: ಹಿಸ್ಟರಿ ಆಫ್ ಮೈಸೂರು, ಸಂ, ೧, ಪು. ೨೪

೧೮ ರಾಮಕೃಷ್ಣರಾವ್, ಬಿ.: ಪೂರ್ವೋಕ್ತ, ೬೫-೬೬; ಗೋವಿಂದವೈದ್ಯ, ಪೂರ್ವೋಕ್ತ, VII, ೬೯-೭೦, XX, ೩೭, XXIV, ೩-೪; ದೇವಚಂದ್ರ, ಪೂರ್ವೋಕ್ತ, XXX, ೪೭೨. ಸೂರ್ಯ ಸಸ್ಯವೆನಿಸಿದ ಅರ್ಕ ಗಿಡದೊಂದಿಗೆ ಮದುವೆ. ಯಜ್ಞಕಾರ್ಯಗಳಲ್ಲಿ ಇದರ ಎಲೆಯನ್ನು ಉಪಯೋಗಿಸುತ್ತಾರೆ. ಮೂರನೆಯ ಮದುವೆ ಮಾಡಿಕೊಡಬೇಕೆಂದು ಬಯಸುವವನು ಮೊದಲು ಈ ಗಿಡದೊಂದಿಗೆ ಮದುವೆಮಾಡಿಕೊಂಡು, ಕನ್ಯೆಯೊಂದಿಗಿನ ಮದುವೆಯನ್ನು ನಾಲ್ಕನೆಯದೆಂದು ಪರಿಗಣಿಸಬೇಕು. (ಹೋಲಿಸಿ, ಮನು III, ೨೧; ಯಜ್ಞವಲ್ಕ್ಯ, I, ೫೮-೬೧)

೧೯ ವಿಲ್ಕ್ಸ್: ಪೂರ್ವೋಕ್ತ, I, ಪು. ೩೪೧, ಟಿಪ್ಪಣಿ-೩೨

೨೦ ಡುಬಿಯೋಸ್ ಅಬ್ಬೆ, ಜೆ: ಹಿಂದೂ ಮ್ಯಾನರ್ಸ್, ಕಸ್ಟಮ್ಸ್ ಎಂಡ್ ಸೆರೆಮನೀಸ್, ೧೯೦೬. ಪು ೨೧೨; ಚಂದ್ರಶೇಖರ ಕಂಬಾರ, ಜನಪದ ಸಾಹಿತ್ಯ ೧೯೭೮.

೨೧ ಸೂರ್ಯನಾಥ ಕಾಮತ್: ಗೆಜೆಟಿಯರ್, ೧೯೮೮, ಪು. ೧೭೧

೨೨ ಹೊನ್ನಮ್ಮ: ಹದಿಬದೆಯ ಧರ್ಮ, ಕರ್ಣಾಟಕ ಕಾವ್ಯ ಮಂಜರಿ ಸೀರೀಸ್, ನಂ.೪, ೧೮೯೩, ೯. ೫೭; ಆರ್. ನರಸಿಂಹಾಚಾರ್: ಪೂರ್ವೋಕ್ತ, ೨, ೫೦೫-೫೦೬; ರಾಮಕೃಷ್ಣರಾವ್ ಬಿ. ಪೂರ್ವೋಕ್ತ I ೬೦, ೬೩, ೯೩, ೧೦೩ ಇತ್ಯಾದಿ.

೨೩ ಹೊನ್ನಮ್ಮ: ಪೂರ್ವೋಕ್ತ I, ೯-೧೯, ೨೦-೩೯; ೫೩, ೫೫-೫೬

೨೪ ಅದೇ, II, ೫೧೬-೧೭

೨೫ ಗೋವಿಂದವೈದ್ಯ: ಪೂರ್ವೋಕ್ತ, VII, ೪೪; ೮, ೮೧; ೨೪, ೫ ಇತ್ಯಾದಿ

೨೬ ಕೆಳದಿ ಗುಂಡಾಜೋಯಿಸ್: ಪೂರ್ವೋಕ್ತ, ಪು. ೧೯೦-೨೪೩

೨೭ ಗೋವಿಂದವೈದ್ಯ: ಪೂರ್ವೋಕ್ತ, I, II ೭೪, ೮೩-೧೦೯; IV, ೧೦೦, ೧೦೭; V ೫೦, ೫೬, ೫೭, ೩೨, ೪೧, ೫೦-೫೨, ೬೪-೭೦, ೭೪-೮೧, ೧೪೧-೧೫೧, ೧೫೪-೧೫೫, ೨೩೭-೨೩೯, ೨೬೩, ೨೭೪-೨೮೫; IX ಮತ್ತು X, XXVI, ೩೦, ೩೨, ೩೪, ೩೮ ೪೦; ತಿರುಮಲಾರ್ಯ, ಪೂರ್ವೋಕ್ತ, ೩೭-೩೮, ೧೫೨-೧೫೩, ೧೬೦-೧೬೧; ಎ.ಕ. ೩, ಎನ್.ಆರ್ ೧೦೩, ಎನ್.ಜೆ. ೧೯೮; ೪, ೨ ವೈಡಿ ೫; ೫, ೧ ಮತ್ತು ೨, ಎ.ಜಿ. ೬೪; ಚಿಕ್ಕದೇವರಾಜ ವಿಜಯಂ, ೬ನೆಯ ಸರ್ಗ; ಮೈಸೂರು ಗೆಜೆಟಿಯರ್ II, ii, ೧೨೯೫-೧೨೯೭

೨೮ ಕ್ಯು.ಜೆ.ಎಂ. ಎಸ್, ಸಂ. XIII ಪು ೬೭೯-೬೮೧; ಕೆ.ಆರ್. ಬಸವರಾಜು, ಹಿಸ್ಟರಿ ಎಂಡ್ ಕಲ್ಚರ್ ಆಫ್ ಕರ್ನಾಟಕ, ೧೯೮೪, ಪು. ೪೫೯

೨೯ ಇನ್‌ಸ್ಕ್ರಿಪ್ಷನ್ಸ್ ಆಫ್ ಮೆಕೆಂಜೀ ಕಲೆಕ್ಷನ್ಸ್, ನಂ ೧೯-೧-೧೯೫೨, ಪು. ೧೦

೩೦ ಅದೇ.

೩೧ ಕ್ಯು. ಜೆ.ಎಂ.ಎಸ್, ಜುಲೈ ೧೯೩೨, ಪು. ೩೩; ಬಿ. ರಾಮಕೃಷ್ಣರಾವ್, ಪೂರ್ವೋಕ್ತ, I ೧೨೩-೧೨೪.

೩೨ ಅದೇ, ೧೧೯-೧೨೦

೩೩ ಎ.ಕ. ೪, ೨ ಎಚ್.ಜಿ. ೨೧; ೫. ೧. ಸಿ.ಎನ್ ೧೮೫; ೪, ೨ ಎನ್.ಜೆ. ೧೦೬; ೯ ಕೆ.ಎನ್ ೯೪; ೭ ಎನ್.ಜಿ. ೧೦೨; ೬ ಎಸ್.ಆರ್ ೩೮; ೫ ಎಂ. ವೈ ೧೨೨, ಎಂ.ಡಿ. ಸೀರೀಸ್, ಸಿ.ಎನ್. ೨೧೪, ಪು. ೨೧೮

೩೪ ಗೋವಿಂದವೈದ್ಯ: VI, ೧-೧೯೯; VII, ೧-೧೧೬; XXII ೫೬-೬೦; II ೨೫-೮೨, ೧೦೭, ೧೧೯-೧೧೧; ತಿರುಮಲಾರ್ಯ, ಪೂರ್ವೋಕ್ತ, ೪೫-೪೬; ಬಿ. ರಾಮಕೃಷ್ಣರಾವ್, I, ೭೯-೮೦ ಮಲ್ಲಿಕಾರ್ಜುನ, ಶ್ರೀರಂಗಮಹಾತ್ಮ್ಯ, ಎಂ.ಎಸ್ ನಂ. ಬಿ. ೫೨ ಪಿ. II, ೪೬-೪೮, I, ೧೦೩-೧೦೮; ಎ.ಕ.೪ ೨ ಎಂ.ಎಲ್ ೬೧, ಮಲ್ಲಿಕಾರ್ಜುನ, ಅದೇ, I ೧೨೮-೧೩೨; ತಿರುಮಲಾರ್ಯ, ಪೂರ್ವೋಕ್ತ, ೧೧೭,೧೨೧, ೧೨೫-೧೩೫, ೧೩೮, ೧೪೭, ೧೪೯, ೧೫೨, ೧೫೬ ಇತ್ಯಾದಿ; ಕೆಳದಿ ಗುಂಡಾಜೋಯಿಸ್, ಪೂರ್ವೋಕ್ತ, ಪು. ೧೩೧-೧೩೨

೩೫ ಗೋವಿಂದವೈದ್ಯ: ಪೂರ್ವೋಕ್ತ, ೨ ೬೩-೭೫, ೮೨, ೮೬-೮೯, ೬, ೩೬-೪೦, ೪೩-೪೬, ೫೧, ೫೪-೬೨ ಇತ್ಯಾದಿ; ಎ.ಕ. ೩, ೧, ಎಂ.ಎಲ್ ೬೧, ೧೧೫; ಅದೇ ಮೈಸೂರು ಡಿಸ್ಟ್ರಿಕ್ಸ್ ಸಪ್ಲಿಮೆಂಟರಿ ವಾಲ್ಯೂಮ್, ಮೈಸೂರು, ೧೧೫, ೨, ೧೮೫-೧೯೦; ಅದೇ, ಎಂ ೧೬೧, ೨, ೧೦-೧೧, ಗೋವಿಂದವೈದ್ಯ: ಪೂರ್ವೋಕ್ತ, ೬, ೪೧; ೨, ೭೨; ಎ.ಕ. ಅದೇ, ೨, ೧೫-೧೬; ಅದೇ ಮೈ.ಡಿ ಸಪ್ಲಿಮೆಂಟರಿ ವಾಲ್ಯುಮ್, ೧೧೫, ೨, ೧೩೩-೩೬; ತಿರುಮಲಾರ್ಯ: ಪೂರ್ವೋಕ್ತ, ೧೧೫, ೧೫೨-೧೫೩ ೪೫-೪೮

೩೬ ಅದೇ, ೧೬೦; ಗೋವಿಂದವೈದ್ಯ: ಪೂರ್ವೋಕ್ತ ೨, ೭೧-೭೩; ೫, ೫-೬೦; ೬, ೪೨, ೪೮, ೫೬, ೧೭೬-೧೭೭; ೮, ೧೯, ೩೩-೩೬, ೫೫-೬೯; ೧೮, ೧೪೨-೧೪೩, ೬೪-೮೮, ೧೦೮-೧೧೬, ೧೧೮-೧೨೨ ಇತ್ಯಾದಿ

೩೭ ಎ.ಕ. ಮೈ.ಡಿ. ಸಪ್ಲಿಮೆಂಟರಿ ವಾಲ್ಯೂಮ್, ೧೧೪, ೧೧, ೩೧-೩೨; ಅದೇ, ೫, ಜೆ ಮತ್ತು ೨, ಎ.ಜಿ. ೬೪, ಪು. ೭೬೭, ಪತ್ರ್ಯಕ್ಕೆ ೨; ಗೋವಿಂದವೈದ್ಯ, ಪೂರ್ವೋಕ್ತ, VIII ೧-೯೫, XI ೮. ೧೨೫; ೧೧೯; XXVII ಇತ್ಯಾದಿ; ಮಲ್ಲಿಕಾರ್ಜುನ, ಪೂರ್ವೋಕ್ತ, ೨ ೫೮; ಚಿಕ್ಕದೇವರಾಯ ವಂಶಾವಳಿ ಪು. ೨೪

೩೮ ಅದೇ, ಪು. ೨೪-೨೫, ಸಂ. ೧೨೩-೧೩೦, ಪು ೨೯, ಹಸ್ತಿಗಿರಿ ಮಾಹಾತ್ಯ, ಎಂ.ಎಸ್. ನಂ. ಬಿ. ೬೧ ಪಿ, -I ೯೮ ಪಶ್ಚಿಮ ರಂಗಮಾಹಾತ್ಮ್ಯ, ಎಂ.ಎಸ್ ನಂ. ೧೮-೬-೧೧, ಪಿ.ಎಲ್ -I ೫೦; ಯಾದವಗಿರಿ ಮಾಹಾತ್ಮ್ಯ, ಎಂ ಎಸ್. ನಂ ೧೮-೨೧-೧೬, ಪಿ.ಎಲ್ -II, ೬೯-೭೬; ವೆಂಕಟಗಿರಿ ಮಾಹಾತ್ಮ್ಯ, ಎಂ.ಎಸ್.ನಂ. ೧೮-೪-೧೮, ಪಿ.ಎಲ್. -I, ೫೬-೫೯; ಕಮಲಾಚಲ ಮಾಹಾತ್ಮ್ಯ, ಎಂ.ಎಸ್.ನಂ ಬಿ. ೩೮ ಮತ್ತು ೪೨ ಪಿ -III ೨೦, ೨೨-೨೮ ಇತ್ಯಾದಿ

೩೯ ಶ್ರೀರಂಗ ಮಾಹಾತ್ಮ್ಯ, ಎಂ.ಎಸ್. ನಂ. ಬಿ ೨೭೦ ಪಿ -II, ೬೮; ಮೈಸೂರಿನ ಒಡೆಯರ ಬಿರುದುಗಳು ಹೀಗಿದ್ದುವು: ಬಿರುದಂತೆಂಬರ ಗಂಡ, ಶ್ರೀಮದ್ರಾಜಾಧಿರಾಜ ರಾಜ ಪರಮೇಶ್ವರ ಅಪ್ರತಿಮ ವೀರ, ಕಠಾರಿಯ ಸಾಳ್ವ, ವೈರಿಗಜ ಗಂಡಭೇರುಂಡ, ಗಜ ಬೇಂಬೆಕಾರ, ಧರಣಿವರಾಹ, ಕರ್ಣಾಟಕ ಚಕ್ರೇಶ್ವರ, ಆಂಧ್ರ ಬಲ ಸಂಗ ಕರಿಕುಲ, ಆರ್ರ್ಯಾಂಧ್ರನೃಪ ಗರ್ವ ಪರ್ವತ ಕಲಿಶಾಯುಧ, ತಿರುಮಲ ನಾಯಕ ಚತುರಂಗ ಬಲ ವಲ್ಲರೀ ಲವಿತ್ರ, ಪರಬಲ ಮೇಘಾನಿಲ, ರಿಪುರಾಯ ನಕ್ರ ಶರಭ ಭೇರುಂಡ, ಸಮಸ್ತೋರ್ವೀಶ ಮಕುಟ ಮಣಿಗಣ ರಂಜಿತ ಪಾದ ಪದ್ಮ, ಸಂಗರ ವಿಜಯ ವಧೂಟೀಶ, ಕೋಟೆ, ಕೋಲಾಹಲ, ಕರ್ಣಾಟ ಸಿಂಹಾಸನಾಧೀಶ್ವರ, ವೀರ ಪ್ರತಾಪಶಾಲಿ ಚಕ್ರವರ್ತಿ ಕ್ಷಣ ಸಿಂಹಾಸನ ಶ್ರೀರಂಗಪಟ್ಟಣಕ್ಕೆ ಕರ್ತ, ಮಲೆಪನೃಪ ಮದಮರ್ದನ, ಅದ್ಭುತ ಪರಾಕ್ರಮ, ಸಂಗರ ಭೀಮ, ಹಿಂದೂ ರಾಯ ಸುರತ್ರಾಣ, ಆಂಧ್ರ ಕ್ಷಿತೀಂದ್ರ ಹೃದಯ ಶೂಲ, ದಕ್ಷಿಣಾ ದಿಕ್ ಚಕ್ರವರ್ತಿ, ತೆಂಕವಾರಾಯ, ಕರ್ಣಾಟಕ ಭೂ ಮಂಡಲಾಧೀಶ್ವರ, ಶ್ರೀರಂಗ ಕರ್ಣಾಟ ಚಕ್ರ, ಶೃಂಗಾರ ಕರ್ಣಾಟಕ ಚಕ್ರ, ಮಹಿಷ ಪುರವರಾಧೀಶ್ವರ, ಪಶ್ಚಿಮ ರಂಗಪುರೀ ಸಿಂಹಸನಾಧಿಷ್ಠಿತ, ಇತ್ಯಾದಿ; ೩, ಜೆ, ಎಸ್.ಆರ್ ೧೦೩; ಎ.ಕ. ೩ ಎಸ್.ಬಿ. ೨೫೦, ೩೫೨; ೩ ಜೆ. ಎಸ್.ಆರ್, ೧೦೩, ೯೪; ೪-೨ ವೈಡಿ ೪೩; ೨ ೧೬೬-೧೬೭, ಸಿ.ಎಚ್, ೪೨, ೯೨; ಎಚ್.ಜಿ, ೪೯; ೫-೧ ಮತ್ತು ೨ ಸಿ.ಎಚ್, ೧೬೦, ೧೬೫; ಗೋವಿಂದವೈದ್ಯ,

ಪೂರ್ವೋಕ್ತ, I, ೨೧-೩, ೨೬-೭; XIII, ೩೫, ೩೯; XIV ೪೯, III; XVIII, ೧೭೪; XIV, ೭೯; XXI, ೧೨೫; XXV, ೧೩ ಇತ್ಯಾದಿ ಚಿಕ್ಕುಪಾಧ್ಯಾಯ, ಶ್ರೀರಂಗಮಾಹಾತ್ಮ್ಯ, I ಎಫ್ ಎಫ್ ೨, II ೬೦; ಮಲ್ಲಿಕಾರ್ಜುನ, ಶ್ರೀರಂಗ ಮಾಹಾತ್ಮ್ಯ, II, ೫೮; ತಿಮ್ಮ ಕವಿ, ವೆಂಕಟಗಿರಿ ಮಹಾತ್ಮ್ಯ, II ೫೮, I ೫೬, ೬೦-೬೧, ಯಾದವ ಗಿರಿಮಾಹಾತ್ಮ್ಯ II, ೭೯-೮೦; III, ೪, ಪಶ್ಚಿಮರಂಗ ಮಹಾತ್ಮ್ಯ, I, ೫೩-೫೪

೪೦ ಪೀತ್ರೋ ದೆಲ್ಲಾ ವಲ್ಲೆ: ದಿ ಟ್ರಾವೆಲ್ಸ್ ಇನ್ ಇಂಡಿಯಾ (ಅನುವಾದ: ಜಿ. ಹೇವ್ಸ್) ೧೮೯೨, ೨ ಪು. ೨೫೧-೨೫೨, ೨೫೫-೨೫೭; ಪೀಟರ್ ಮಂಡಿ, ಟ್ರಾವೆಲ್ಸ್ ೩, ಭಾಗ-೧, ಪು. ೮೧-೮೩

೪೧ ಗೋವಿಂದವೈದ್ಯ: ಪೂರ್ವೋಕ್ತ, XXII ೫೯, ೬೦-೬೧; XXIV ೫೧-೭೪; ಕಮಲಾಚಲ ಮಾಹಾತ್ಮ್ಯ, III, ೧೬-೧೮, ೨೧; ಯಾದವಗಿರಿ ಮಹಾತ್ಮ್ಯ, II, ೬೪-೬೬, ೬೮; ಹಸ್ತಿಗಿರಿ ಮಾಹಾತ್ಮ್ಯ I, ೯೭; ವೆಂಕಟಗಿರಿಮಾಹಾತ್ಮ್ಯ, I, ೫೫; ಶ್ರೀರಂಗ ಮಾಹಾತ್ಮ್ಯ II, ೫೭-೫೯; ಪಶ್ಚಿಮ ರಂಗ ಮಹಾತ್ಮ್ಯ, I, ೪೯ ಗೋವಿಂದವೈದ್ಯ: ಪೂರ್ವೋಕ್ತ, XXII, ೮೨; XXIII ೮೪-೮೯; XXV, ೭೯, ೮೩, ೮೬, ೧೦೦, ೭೦೨ ಇತ್ಯಾದಿ; ಯಾದವಗಿರಿ ಮಾಹಾತ್ಮ್ಯ II, ೭೧-೭೪; ಗೋವಿಂದವೈದ್ಯ: ಪೂರ್ವೋಕ್ತ, II, ೯೧-೯೫, ೯೮-೯೯, VI, ೫೫, ೬೬-೬೮, ೭೦, ೧೦೨-೧೦೪; VIII, ೮೨; IX, ೭೧; IX, ೭೧-೭೬, X, ೨೦-೨೧; XXI, ೧೪-೧೭, ೧೧೨; XXII, ೧೯, ೫೮, ೭೨; XXIII, ೮೦-೮೬; XXIV, ೧೮-೭೬, XXV, ೫೯, ೭೩-೮೬, ೯೦-೯೧, ೧೦೦-೧೦೧, ೧೩೪ ಇತ್ಯಾದಿ; ಎಂ.ವಿ. ಕೃಷ್ಣರಾವ್ ಮತ್ತು ಎಂ. ಕೇಶವಭಟ್ಟ: ಕರ್ನಾಟಕ ಇತಿಹಾಸ ದರ್ಶನ, ೧೯೭೦, ಪು. ೧೦೦೦; ಎ.ಕ. ೫, ಕಅಸಂ, ಮೈಸೂರು ೯೯,. ಪು ೭೦೯, ೭೮೬, ಪಂಕ್ತಿ ೧೯೦-೧೯೧, ಪು. ೨೨೮

೪೨ ಗೋವಿಂದವೈದ್ಯ, V, ೯೧-೧೧೦: II, ೮೨; V, ೪೮-೬೦, ೬೭-೭೪, ೭೮-೮೦; VIII, ೮೩-೯೧; XXI ೧೩೦ ಇತ್ಯಾದಿ

೪೩ ರಾಮಕೃಷ್ಣರಾವ್, ಬಿ.: ಪೂರ್ವೋಕ್ತ, I, ೫೮-೫೯

೪೪ ಗೋವಿಂದವೈದ್ಯ: ಪೂರ್ವೋಕ್ತ, II, ೭೬, ೯೬-೯೭; VI, ೧೧೭-೧೨೦, ೧೯೭; VIII, ೩೧-೩೬, ಎ.ಕ. ೩, ೧ ಎಸ್.ಆರ್. ೧೪, II, ೯೪-೧೦೪; ಎಂ.ವೈ. ೭೧, ೨೬ ಬಿ. ರಾಮಕೃಷ್ಣರಾವ್, I, ೧೫೧

೪೫ ಗೋವಿಂದವೈದ್ಯ: ಪೂರ್ವೋಕ್ತ, XX, XXI, XXII, ಪು. ೩೭೯-೪೩೩; ಕ್ಯು.ಜೆ.ಎಂ. ಎಸ್. ಸಂಪುಟ XI, ಪು. ೩೧೦-೧೧, ಹೋಲಿಸಿ, ಸಿವೆಲ್: ಎ ಫರ್‌ಗಾಟನ್ ಎಂಪೈರ್, ೧೯೧೨, ಪು. ೨೬೫-೨೭೯

೪೬ ರಾಮಕೃಷ್ಣ ರಾವ್ ಬಿ.: ಪೂರ್ವೋಕ್ತ I, ೧೨೪; ಎ.ಕ. ೯, ಬಿ.ಎನ್. ೧೧೮; ಎಂ.ಎ.ಆರ್, ೧೯೧೪-೧೫, ಪು. ೬೪-೧೯೨೩, ಪು. ೪೧-೪೪

೪೭ ಥಾರ್‌ಸ್ಟೀನ್ ವೆಬ್ಲೆನ್: ದಿ ಥಿಯರಿ ಆಫ್ ದಿ ಲೀಷರ್‌ಕ್ಲಾಸ್, ೧೯೩೪, ಪು. ೭೫

೪೮ ಗೋವಿಂದವೈದ್ಯ: ಪೂರ್ವೋಕ್ತ, II ೫೮-೬೧; VI, ೫-೬; ರೈಸ್, ಮೈಸೂರ್ II, ಪು. ೪೫೭, ೪೫೮, ೪೮೩ ಕೆ.ಎನ್. ಚಿಟ್ನಿಸ್: ಕೆಳದಿ ಪಾಲಿಟಿ, ೧೯೭೪, ಪು. ೧೭೪-೧೭೫ ಇತ್ಯಾದಿ

೪೯ ದಿ ರಾಷನಲಿಸ್ಟ್, ಸಂ. ೧೦, ನಂ. ೪೯, ಪು. ೪

೫೦ ವಿರೂಪಾಕ್ಷ ಪಂಡಿತ: ಚೆನ್ನಬಸವ ಪುರಾಣ, V, ೧೦, ಪು. ೪೨೩, ೪೨೫; ತಿರುಮಲಾರ್ಯ, ಪೂರ್ವೋಕ್ತ, ಪು. ೯-೧೧

೫೧ ಎ.ಕ. ೩, ಜೆ.ಎನ್.ಜಿ. ೧೯೮, ೫, ಕೆ, ಎನ್.ಜಿ, ೬೪

೫೨ ಅದೇ, ಪು. ೭೬೮ ಪಠ್ಯ, ಎಂ.ಎ. ಆರ್. ೧೯೨೯, ಪು. ೩೧-೩೨

೫೩ ಅದೇ, ಮೈ. ಡಿ. ಸಪ್ಲಿಮೆಂಟರಿ ವಾಲ್ಯೂಮ್, ಮೈ ೧೧೪, ೧೩೨; ೧೨, ಕೆ.ಜಿ. ೩೭; II, ೬೮-೭೦; III, ಎಸ್.ಆರ್ ೧೪; II, ೪೩-೪೬; ಟಿ.ಎನ್. ೨೩, ೧೩೭; ಬಿ. ರಾಮಕೃಷ್ಣರಾವ್, ಪೂರ್ವೋಕ್ತ, I, ೧೦೨; ವೆಂಕಟರಮಣಯ್ಯ, ಪೂರ್ವೋಕ್ತ. ಪು. ೨೬

೫೪ ಚಿಕ್ಕದೇವರಾಜ ಒಡೆಯರ್: ಪೂರ್ವೋಕ್ತ, I, ೪೭-೪೯, ೬೩; ಎ.ಕ. ೩, ಜೆ. ಆರ್ ೧೪; II, ೫೯-೬೩, ೭೪-೭೫, ಎಸ್.ಆರ್. ೧೫೧; ಎಸ್.ಆರ್. ೬೪; II ೮೭-೯೦; IV ಸಿ.ಎಚ್. ೯೨; ಹಸ್ತಿಗಿರಿ ಮಾಹಾತ್ಮ್ಯ I,

೯೨-೯೭; ಕಮಲಾಚಲ ಮಹಾತ್ಮ್ಯ ೩, ೮-೧೫; ವೆಂಕಟಗಿರಿ ಮಾಹಾತ್ಮ್ಯ I, ೫೨-೫೫; ಪಶ್ಚಿಮರಂಗಮಾಹಾತ್ಮ್ಯ I, ೪೮-೪೯; ಯಾದವಗಿರಿ ಮಾಹಾತ್ಮ್ಯ II, ೬೩-೬೯, ೬೭-೬೮; ಶ್ರೀರಂಗಮಾಹಾತ್ಮ್ಯ II, ೪೮, ೧೧೮-೧೯೯ ಇತ್ಯಾದಿ

೫೫ ಚಕ್ರಾಂಕನ: ಊರ್ಧ್ವ ಪುಂಡ್ರ ಧಾರಣ, ದಶ, ನವ, ಮೂಲಮಂತ್ರೋಪಾಸನ, ನಾರಾಯಣ ಪೂಜಾ.

೫೬ ಪ್ಯಾಲೇಸ್ ಹಿಸ್ಟರಿ, ಪು. ೧೩೨-೧೩೪

೫೭ ಎ.ಕ. ೩, ೧ ಎಂವೈ, ಎನ್.ಆರ್ ೧೫೦, ೧೫೭, ಟಿ.ಎನ್, ೧೫೬; ಮೈ.ಡಿ. ಸ. ವಾಲ್ಯೂಮ್, ಎಸ್.ಆರ್. ೧೯೮, ಎಂ.ವೈ ೯೬; II, ೨-೩; ಎಂ.ಎ.ಆರ್ ೧೯೨೦, ಪು. ೩, ಪ್ಯಾರಾ ೧೦, ೧೯೧೮, ಪು. ೫೮ ಪ್ಯಾಲೆಸ್ ಹಿಸ್ಟರಿ ಪು. ೪೦-೪೧

ಮೈ.ಡಿ.ಸ. ವಾಲ್ಯೂಮ್ ೧೫೫, ೧೭; ಎ.ಕ. ೩, ಜೆ. ಎಂ.ಡಿ. ೧೭೪; ಟಿ.ಎನ್ ೬೨, ೧೩; ಎನ್ ಆರ್, ೩೬ ೧೦೩; ೪, ೨ ಕೆ.ಪಿ. ವೈಡಿ. ೫, ೧೫, ಜಿಯು ೧೦, ಕೆ.ಪಿ. ೩೯, ಸಿ.ಎಚ್. ೪೨, ೨, ಎಸ್. ಬಿ. ೨೫೦, ೩೫೨; ಎಂ.ಎ. ಆರ್. ೧೯೦೮ ಪು. ೨೩, ಪ್ಯಾರಾ ೭೫, ೧೯೨೪, ಪು. ೨೨-೨೩, ನಂ. ೬, ೫ ಜೆ.ಎಜಿ. ೬೪; ತಿರುಮಲಾರ್ಯ, ಪೂರ್ವೋಕ್ತ ಪು. ೩೭, ಗೋವಿಂದವೈದ್ಯ, ಪೂರ್ವೋಕ್ತ, XXVI, ಪು. ೪೯೪-೪೯೫, ಪ್ಯಾಲೆಸ್ ಹಿಸ್ಟರಿ. ಪು ೯೧-೯೨ ಎ.ಕ. ೩, ಎಸ್.ಆರ್. ೧೦೩, ಎನ್. ಜೆ. ೧೯೮; ೪-೨ ಕೆ.ಆರ್. ೩೯, ಜಿ.ಯು ೧೦, ಸಿ.ಎಚ್ ೪೨; ೯ ಸಿ.ಪಿ ೨೩. ಮತ್ತು ೨ ಎ.ಬಿ. ೬೪; ಬಿ. ರಾಮಕೃಷ್ಣರಾವ್, ಪೂರ್ವೋಕ್ತ, ೯೩, ೯೦, ೭೯, ೮೨-೮೩, ೮೯-೯೩, ಎಂ.ಎ.ಆರ್ ೧೯೧೪-೧೯೧೫, ಪು. ೬೩, ಪ್ಯಾರಾ ೧೦೭, ೧೯೧೨, ಪು. ೫೬ ಪ್ಯಾರಾ ೧೨೫, ೧೯೧೮, ಪು. ೫೮, ಪ್ಯಾರಾ ೧೩೦ ಇತ್ಯಾದಿ ಹೋಲಿಸಿ: ಮೈಸೂರು ಗೆಜೆಟಿಯರ್, ೧೯೯೬, ಐಯ್ಯಂಗಾರ್ ಸೋರ್ಸಸ್, ೧೪೨-೧೪೩, ೭, ೧೦೯, ೧೧೦, ೨೨-೨೩, ೫೧-೫೮ ಇತ್ಯಾದಿ. ಆರ್.ಎಸ್. ಹುಕ್ಕೇರಿಕರ್, ಕರ್ನಾಟಕ ದರ್ಶನ, ೧೯೫೫. ಪು. ೩೧೨-೩೧೩; ಎಂ.ಎ. ಆರ್, ೧೯೯, ಪು. ೨೬; ೧೯೧೨ ಪು. ೫೬; ೧೯೧೭ ಪು. ೫೮-೫೯; ೧೯೧೦-೧೧, ಪು. ೫೪-೫೬; ೧೯೩೧ ನಂ. ೩೩, ಪು. ೧೨೯-೧೩೧, ; ೧೯೩೩ ನಂ. ೪೯, ಪು. ೨೫೨-೨೫೬, ೧೯೩೦, ನಂ. ೨೪, ಪು. ೧೬೧-೧೬೩; ನಂ. ೨೫, ಪು. ೧೬೩-೧೬೬; ೧೯೨೦, ಪು. ೪೦; ಮೆಕೆಂಜೀ ಕಲೆಕ್ಷನ್ಸ್, ನಂ. ೧೮-೧೫. ೨೦, ಪು. ೪೩; ಮದ್ರಾಸ್ ಎಪಿಗ್ರಾಪಿಸ್ಟ್ಸ್ ರಿಪೋರ್ಟ್, ೧೯೧೦, ನಂ. ೧೮೧; ಎ.ಕ. ೩, ಎಸ್.ಆರ್ ೧೪; ಟಿ.ಎನ್ ೨೩, ೫೪; ಎಂ.ಡಿ. ೧೧೪, ೫೧; ಎಂ.ಎಲ್. ೩೮, ೬೩; ಎನ್ ಜೆ. ೧೯೧; ೪, ಕೆ.ಆರ್ ೬೭; ಎಚ್.ಟಿ. ೮೫, ೧೦೭; ಜಿ.ಯು. ೬೪. ೬೫; ವೈಡಿ, ೫೩, ೫೪, ೪೩; ಎನ್.ಜೆ. ೪೪; ಎಚ್.ಎಸ್ ೨೨; ೫, ೧ ಮತ್ತು ೨, ಸಿ.ಎಚ್. ೨೧೮, ೧೬೮, ೨೭೩; ಎಚ್.ಎನ್. ೮; ೯ ಸಿ.ಪಿ. ೫೬, ಪಿ.ಎನ್. ೯೫; ೧೨ ಕೆ.ಜಿ. ೩೩, ೩೭, ೩೮, ೪೬, ; ದೇವಚಂದ್ರ, ೧೨-೪೭೨; ರಾಮಕೃಷ್ಣ ರಾವ್, ಪೂರ್ವೋಕ್ತ, I, ೯೯-೧೦೧; ಚಿದಾನಂದ, ಮುನಿವಂಶಾಭ್ಯುದಯ, ಕೆ.ಎಸ್ ನಂ. ಎ ೧೯೮, ಪು. ೨, ೭೮-೭೯ ಇತ್ಯಾದಿ. ಮಹಾದಾನಗಳು ಇವು. ಹಿರಣ್ಯಗರ್ಭ, ಬ್ರಹ್ಮಾಂಡ, ಸಪ್ತಾಂಬುಧಿ, ತುಲಾಪುರುಷ, ಗೋಸಹಸ್ರ, ಕಲ್ಪವಲ್ಲಿ, ಕಾಮಧೇನು, ರಥ, ಗೋ-ಸುವರ್ಣ ಭೂ-ಸುವರ್ಣ ಗರ್ಭ, ಪಂಚ ಫಲ ಅಥವಾ ಲಾಂಗಲ, ಕಲ್ಪವೃಕ್ಷ, ಕನಕರಥಿಭಾಸ್ವ ಮತ್ತು ವಿಶ್ವಚಕ್ರ

೫೮ ಕೆಳದಿ ಗುಂಡಾಜೋಯಿಸ್: ಪೂರ್ವೋಕ್ತ, ಪು. ೧೧೭-೧೧೯, ೧೨೧, ೧೨೭, ೧೨೯-೧೩೭, ೧೪೪-೧೬೭, ೧೭೭-೧೮೧, ೧೯೫, ೨೪೧-೨೪೩; ಎಸ್.ಐ.ಐ.೭, ನಂ. ೨೯೭, ಸಿ.ಪಿ. ನಂ. ೮; ಎ.ಆರ್ಎಸ್ ಐ ಇ. ೧೯೪೦-೪೧, ಸಿ.ಪಿ. ೪ ಮತ್ತು ೧೯೨೮ರ ೩೯೭; ಜಿ.ಎಂ. ಐಗಳ, ಕೆಳದಿಯ ನಾಯಕರು, ಕಸಾಪಪತ್ರಿಕೆ ೧೧, ಪು ೧೪೬, ೧೫೩; ಕೆ.ಎನ್ ಚಿಟ್ನಿಸ್, ವೀರಶೈವ ಮಠಾಸ್ ಇನ್ ಕೆಳದಿ ಕಿಂಗ್‌ಡಮ್, ಕರ್ನಾಟಕ ಯೂನಿವರ್ಸಿಟಿ ಜರ್ನಲ್, ಸೋಷಲ್ ಸೈನ್ಸಸ್, ಸಂ, ೩. ಪು. ೧೨೪-೩೨; ಬಿ.ಎ. ಸಾಲೆತೂರೆ, ಕನ್ನಡ ನಾಡಿನ ಚರಿತ್ರೆ, ಭಾ-೧. ಪು. ೮೪. ಬಾಂಬೇ ಗೆಜೆಟಿಯರ್. ಕನರಾ ೨೦, ಭಾಗ-೨, ಪು. ೧೩೩; ಕೆ.ಆರ್. ವೆಂಕಟರಾಮನ್: ದಿ ಥ್ರೋನ್ ಆಫ್ ಟ್ರಾನ್ಸೆಂಡಂಟಲ್ ವಿಸ್‌ಡಮ್, ೧೯೬೭, ೯೯, ೪೫, ೪೭, ೪೮, ೫೧; ಎ.ಕ. ೭ ಎಸ್.ಜಿ. ೫, ೧೧, ಎಸ್.ಎಚ್. ೨೮ ಎಸ್.ಎ. ೧೨೩, ಎಸ್.ಕೆ. ೨೭; ೮,೧೫೬, ೮೧, ೮೨, ೮೩, ೮೪, ೮೯, ೯೭, ೪೭, ೭, ೩೮೧, ೫೧, ೫೬ ಮತ್ತು ಶೃಂಗೇರಿ ರಿಕಾರ್ಡ್ಸ್ ೧,೧೧,೧೨,೧೬, ೧೮ ಇತ್ಯಾದಿ

೫೯ ಎ.ಕ. ೪, ಎಚ್.ಜಿ. ೪೯: ೧೧ ಟಿ.ಎಂ. ೪೫; ಮೆಕೆಂಜೀ ಕಲೆಕ್ಷನ್ಸ್, ನಂ. ೧೮-೧೫-೨೦, ಪು. ೫೫-೫೬; ಇನ್‌ಸ್ಕ್ರಿಪ್ಷನ್ಸ್ ಆಫ್ ಮದರಾಸ್ ಪ್ರಸಿಡೆನ್ಸಿ ೨, ೧೨೧೬, ಎನ್.ಎ. ೧೦೭, ಇತ್ಯಾದಿ; ಎ.ಕ. ೩, ಮೈ ೨, ೧೧

ಕೆ.ಜಿ. ೭; ಮೈ.ಡಿ.ಸ. ವಾಲ್ಯೂಮ್, ಟಿ.ಎಸ್. ೨೦೩; ಎಂ.ಎ.ಆರ್. ೧೦೧೨, ಪು. ೫೭, ಪ್ಯಾರಾ ೧೨೮ ಮದರಾಸ್ ಎಪಿಗ್ರಾಫಿಸ್ಟ್ಸ್ ರಿಪೋರ್ಟ್, ೧೯೩೦, ಪು. ೫೧, ಎ ಪಿ ಪಿ ಬಿ. ನಂ. ೫೧೨, ೧೯೧೯, ಪು. ೭೫, ಎ ಪಿ ಪಿ ಸಿ.ನಂ. ೩೧೬, ಇತ್ಯಾದಿ. ಎ.ಕ. ೩ ಎಸ್.ಆರ್. ೧೪ ಅದೇ, ೭, ಐಕೆವಸ್, ಎನ್‌ಜಿ. ೫೧, ೫೨, ೫೩, ೧೪೦, ೯೨, ೯೩ ಎಂ.ಡಿ. ೨೪, ೬, ಕೆ.ಆರ್ ೨೪, ೫೫; ಪು ೨೯, ೨೧೧; ಎಸ್ ಆರ್. ೧೦೧, ೩೮; ಎಂ.ಜೆ. ೨೦೧, ಪು. ೨೧೦, ೬ ಎಸ್ ಆರ್. ೨, ೩, ಪು. ೯೨, ೯೩, ಇತ್ಯಾದಿ. ಅದೇ, ೬, ಕೆ.ಪಿ. ೫೯; ೫ ಬಿ.ಎಲ್. ೨೫೮, ಪು. ೨೫೪, ಎಂ.ಜೆ. ೬, ಪು. ೨೬೪

೬೦ ಅದೇ, ೧೧, ಎಂ.ಡಿ. ೧೫, ಎಂ.ಎ.ಆರ್ ೧೯೩೦, ನಂ ೨೫, ಪು. ೧೬೩-೧೬೬ ತಿರುಮಲಾರ್ಯ ಪೂರ್ವೋಕ್ತ,, ೩೯. ಚಿಕ್ಕದೇವರಾಜವಿಜಯಂ ೩, ೨೪-೨೬

೬೧ ಆರ್ಮ್, ರಾಬರ್ಟ್: ಹಿಸ್ಟಾರಿಕಲ್ ಫ್ರಾಗ್‌ಮೆಂಟ್ಸ್ ಆಫ್ ದಿ ಮೊಗಲ್ ಎಂಪೈರ್, ಆಫ್ ದಿ ಮರಾಟಾಸ್ ಎಂಡ್ ಆಫ್ ದಿ ಇಂಗ್ಲಿಷ್ ಕನ್‌ಸರ್ನ್ಸ್ ಇನ್ ಇಂಡೋಸ್ತಾನ್, ೧೮೦೫, ಪು. ೧೭೪-೧೭೫, ಟಿಪ್ಪಣಿ ೭-೫ ಕೆ.ಎನ್. ಚಿಟ್ನಿಸ್, ಪೂರ್ವೋಕ್ತ. ಪು. ೧೯೨

೬೨ ಶಿವಣ್ಣ, ಕೆ.ಎಸ್.: ವಾಸ್ ವಾಸ್ತುಶಿಲ್ಪ ಟ್ರಾಡಿಷನ್ ಎಮಿಯರ್ ಸಿಂಥನೆಸ್ ಆಫ್ ಸೈನ್ಸ್ ಎಂಡ್ ಸ್ಪಿರಿಚುಯಾಲಿಟಿ?, ಜರ್ನಲ್ ಆಫ್ ಹಿಸ್ಟಾರಿಕಲ್ ಸ್ಟಡೀಸ್, ಮೈಸೂರು ವಿಶ್ವವಿದ್ಯಾನಿಲಯ, ೧೯೯೩, ಪು. ೩೨.

ಅಧ್ಯಾಯ : ಹನ್ನೆರಡು

ವಿಜಯನಗರ ಕಾಲದ ಧಾರ್ಮಿಕ ಸ್ಥಿತಿ-ಗತಿಗಳು

ಕರ್ನಾಟಕದ ಚರಿತ್ರೆಯಲ್ಲಿ ಕ್ರಿ.ಶ. ೧೩೩೬ರಲ್ಲಿ ನೆಲೆಗೊಂಡ ವಿಜಯನಗರ ಸಾಮ್ರಾಜ್ಯವು ತನ್ನದೇ ಆದ ಪ್ರಾಮುಖ್ಯತೆಯನ್ನು ಗಳಿಸಿದೆ. ಈ ಕಾಲಘಟ್ಟದ ಅನೇಕ ವಿಶೇಷತೆಗಳು ಪ್ರವಾಸಿಗರ, ವಿದ್ವಾಂಸರ ಹಾಗೂ ಚರಿತ್ರಕಾರರ ಚರ್ಚೆಗಳಿಗೆ ಅನುವು ಮಾಡಿಕೊಡುತ್ತಿವೆ. ಅಂಥ ವಿಶೇಷತೆಗಳಲ್ಲಿ ಅಂದಿನ ಧಾರ್ಮಿಕ ಸಂಗತಿಗಳು ಮುಖ್ಯವಾದುವು. ಧಾರ್ಮಿಕ ವಲಯದಲ್ಲಿ ಆದಂಥ ಅವಸ್ಥಾಂತರಗಳು ಭಾರತೀಯರನ್ನಷ್ಟೇ ಅಲ್ಲದೆ ವಿಶ್ವದ ಅನೇಕರನ್ನು ಕುತೂಹಲಕ್ಕೆ ಈಡುಮಾಡಿವೆ. ಅಂದರೆ ಆ ಮೂಲಕ ಅನೇಕ ಸಾಂಸ್ಕೃತಿಕ ವಿಚಾರಗಳನ್ನು, ಒಳನೋಟಗಳನ್ನು ಅಭಿವ್ಯಕ್ತಿಸಲು ಕಾರಣವಾಗಿವೆ. ಸಾಂಸ್ಕೃತಿಕ ಅಂಶಗಳಲ್ಲಿ 'ಧರ್ಮ'ದ ಪರಿಕಲ್ಪನೆಯೂ ಒಂದು. 'ಧರ್ಮ' ಎಂಬುದಕ್ಕೆ ಯಾವುದೇ ನಿರ್ದಿಷ್ಟ ವ್ಯಾಖ್ಯೆ ಅಥವಾ ವಿವರಣೆಗಳು ಇಲ್ಲ. ಬದಲಾಗಿ ಇದೊಂದು ಮಾನವನ ಜೀವನದ ಅವಿಭಾಜ್ಯ ಅಂಶವೂ ಹೌದು. ಆದ್ದರಿಂದ ಇಲ್ಲಿ 'ಧರ್ಮ'ವನ್ನು ಒಂದು ಜನಸಮುದಾಯದ 'ಜೀವನ ಮಾಡುವ ಕ್ರಮ ಅಥವಾ ವಿಧಾನ' ಎಂದು ಪರಿಗಣಿಸಲು ಸಾಧ್ಯವಿದೆ. ಅಂದರೆ ಆ ಮೂಲಕ ಒಂದು ಚಾರಿತ್ರಿಕ ಕಾಲಘಟ್ಟದ ಸಾಂಸ್ಕೃತಿಕ ವಿಚಾರಗಳ ಗ್ರಹಿಕೆ ಹಾಗೂ ವಿಶ್ಲೇಷಣೆಗಳು ಸುಲಭ.

ಚರಿತ್ರಕಾರರಲ್ಲಿ ವಿಜಯನಗರ ಸಾಮ್ರಾಜ್ಯದ ಹುಟ್ಟು, ಬೆಳವಣಿಗೆಗಳ ಬಗ್ಗೆ ಅನೇಕ ವಾಗ್ವಾದ, ತಾತ್ವಿಕ ಚರ್ಚೆಗಳು ನಡೆದಿವೆ. ಇಂಥ ಚರ್ಚೆಗಳಲ್ಲಿ ಧರ್ಮದ ಬೆಸುಗೆಹಾಕಿ ನೋಡಿರುವ ನೋಟಗಳೇ ಹೆಚ್ಚು. ಅಂದರೆ ಈ ನೋಟಗಳಿಗೆ ಅವರು ಆಯ್ಕೆ ಮಾಡಿಕೊಂಡ ಪರಿಕರಗಳು ಹಾಗೂ ಪಾಶ್ಚಾತ್ಯ ಚಿಂತನೆ-ವಿಧಾನಗಳೇ ಕಾರಣ. ಇದರಿಂದ ಕೋಮುವಾದಿ ದೃಷ್ಟಿಕೋನದ ಅಧ್ಯಯನಗಳು ನಡೆದವು. ಅಷ್ಟೇ ಅಲ್ಲದೆ 'ಹಿಂದೂ' ಹಾಗೂ 'ಇಸ್ಲಾಂ' ಧರ್ಮಗಳನ್ನು ಮುಖಾಮುಖಿಯನ್ನಾಗಿಸುವ ಹುನ್ನಾರಗಳು ನಡೆದಿವೆ. ಆದರೆ ಧರ್ಮದ ಹಿನ್ನೆಲೆಯ ವಾಸ್ತವ ಸ್ಥಿತಿ-ಗತಿಗಳೇ ಬೇರೆ. ವಿಜಯನಗರವನ್ನಾಳಿದ ರಾಜಮನೆತನಗಳು ವಿಭಿನ್ನ ಮತ-ಧರ್ಮ-ಪಂಥಗಳನ್ನು ಕುರಿತು ತಾರತಮ್ಯದಿಂದ ನಡೆದುಕೊಂಡದ್ದರ ಬಗ್ಗೆ ಉದಾಹರಣೆ, ಆಧಾರಗಳು ಇಲ್ಲ. ಬದಲಾಗಿ ಸಹಿಷ್ಣುತೆಯ, ಸೌಹಾರ್ದದ ಧೋರಣೆಗಳನ್ನು ವ್ಯಕ್ತಪಡಿಸಿರುವುದೇ ಹೆಚ್ಚು. ಹೀಗಿರುವಾಗ ಕೇವಲ ಹಿಂದೂ-ಇಸ್ಲಾಂ ಧರ್ಮಗಳಷ್ಟೇ ಅಲ್ಲದೆ ಬೌದ್ಧ, ಜೈನ, ಕ್ರೈಸ್ತ ಮೊದಲಾದ ಮತ-ಧರ್ಮಗಳು ಸಹ ಒಟ್ಟೊಟ್ಟಿಗೆ ಸಾಗಿಬಂದ ಚಾರಿತ್ರಿಕ ಸನ್ನಿವೇಶ ಅದಾಗಿದೆ. ಇಂಥ ಸಹನೆಯ ಪರಿಸರದ ಸಾಂಸ್ಕೃತಿಕ ಅಂಶಗಳನ್ನು ವಿಶ್ವದ ಅನೇಕ ಪ್ರವಾಸಿಗರನ್ನು ತಮ್ಮ ಕಥನಗಳಲ್ಲಿ ದಾಖಲಿಸುವಂತೆ ಮಾಡಿದೆ. ಅಂದಿನ ಧಾರ್ಮಿಕ ಪರಿಸರವನ್ನು ಪುನರ್ರಚಿಸಲು, ಗ್ರಹಿಕೆಗೆ ತೆಗೆದುಕೊಳ್ಳಲು ಪ್ರವಾಸಿ ಕಥನಗಳ ಜೊತೆಗೆ ಸಮಕಾಲೀನ ಸಾಹಿತ್ಯ, ಶಾಸನಗಳು, ನಾಣ್ಯಗಳು, ವಾಸ್ತು- ಶಿಲ್ಪ ಹಾಗೂ ಸಾಂಪ್ರದಾಯಿಕ ದಾಖಲೆಗಳು ಆಕರಗಳಾಗಿ ಸಹಕರಿಸುತ್ತವೆ.

ಉತ್ತರದಲ್ಲಿ ಬಹುಪಾಲು ಭೂಪ್ರದೇಶಗಳು ಮುಸ್ಲಿಮ್ ನವಾಬರ ಹಿಡಿತದಲ್ಲಿದ್ದವು. ದಕ್ಷಿಣದ ಮೇರೆಗಳನ್ನು ವಿಸ್ತರಿಸುವ ತೀವ್ರತೆ ಅಲ್ಲಾವುದ್ದೀನ್ ಖಿಲ್ಜಿಯಿಂದ ಆರಂಭಗೊಂಡಿತ್ತು. ಯಾದವರ ದೇವಗಿರಿಯು ನವಾಬರ ತೆಕ್ಕೆಗೆ ಬಂದ ಮೇಲೆ ಕ್ರಮೇಣ ಹೊಯ್ಸಳರ ಅಧಿಪತ್ಯವು ಸಹ ಸೇರಿಕೊಂಡಿತು. ಇಂಥ ಸಂದರ್ಭದಲ್ಲಿಯೇ

ವಿಜಯನಗರ ಸಾಮ್ರಾಜ್ಯವು ಸ್ಥಾಪನೆಯಾಗಿ (ಕ್ರಿ.ಶ. ೧೩೩೬) ಹೊಸದೊಂದು ಆಡಳಿತಕ್ರಮ ಜಾರಿಗೆ ಬಂದದ್ದು. ರಾಜಕೀಯವಾದ ಏರು-ಪೇರುಗಳಿದ್ದ ಈ ಸನ್ನಿವೇಶದಲ್ಲಿಯೇ ಧರ್ಮ-ಪಂಥಗಳ, ವಚನ-ದಾಸ, ಶೈವ-ವೈಷ್ಣವ, ಶ್ರೀವೈಷ್ಣವ-ಜೈನ, ಜೈನ-ಬೌದ್ಧ, ಕ್ರೈಸ್ತ-ಇಸ್ಲಾಂ ಮೊದಲಾದ ಮತ-ಧರ್ಮಗಳ ವಿಚಾರಗಳು, ತಾತ್ವಿಕ ನಿಲುವುಗಳು ಸಂಘರ್ಷಾತ್ಮಕವಾದ ಸಂಕೀರ್ಣತೆಯನ್ನು ಸೃಷ್ಟಿಸಿದ್ದವು.. ಇದರಿಂದ ಕೇವಲ ಹಿಂದೂ-ಇಸ್ಲಾಂಗಳ ಸಂಘರ್ಷವನ್ನೇ ಪ್ರಧಾನ ಧಾರೆಯನ್ನಾಗಿ ಪರಿಗಣಿಸುವ ಅಗತ್ಯ ಬೇಕಿಲ್ಲ. ಮೂರ್ತ-ಅಮೂರ್ತಗಳ ಈ ಪರಿಸರವನ್ನು ಗ್ರಹಿಕೆಗೆ ತೆಗೆದುಕೊಳ್ಳಲಾಗದ ಪೂರ್ವಾಗ್ರಹಪೀಡಿತ ಮನಸ್ಸುಗಳು ಕೋಮುವಾದಿ ನಿಲುವುಗಳ ಸೃಷ್ಟಿಗೆ ಪರಿಮಿತಗೊಂಡುವು ಎಂಬುದು ಸ್ಪಷ್ಟವಾಗುತ್ತದೆ. ಆದ್ದರಿಂದ ಅಂದಿನ ಧಾರ್ಮಿಕ ಸ್ಥಿತಿಗತಿಗಳನ್ನು ಅರಿಯುವುದಕ್ಕೆ ಮೊದಲು ಚಾಲ್ತಿಯಲ್ಲಿ ಇದ್ದ ಧರ್ಮ-ಪಂಥಗಳ ಹಾಗೂ ಉಪಪಂಥಗಳ (ಬಣಗಳ) ಸ್ವರೂಪವನ್ನು ತಿಳಿದುಕೊಳ್ಳುವುದು ಮುಖ್ಯ. ಈ ಹಿನ್ನೆಲೆಯಲ್ಲಿ ಅಂದಿನ ಐದು ಪ್ರಮುಖ ಮತ-ಧರ್ಮಗಳನ್ನು ಹಿಂದೂ (ವೈದಿಕ), ಜೈನ, ಬೌದ್ಧ, ಇಸ್ಲಾಂ ಹಾಗೂ ಕ್ರೈಸ್ತ ಎಂದು ಗುರುತಿಸಿಕೊಳ್ಳಬಹುದು. ಅಲ್ಲದೆ ಈ ಮತ-ಧರ್ಮಗಳ ಆಂತರ್ಯದಲ್ಲಿಯೇ ಇದ್ದ ಅನೇಕ ಉಪವಿಭಾಗಗಳ ಸ್ವರೂಪ-ತಾರತಮ್ಯಗಳನ್ನು ಸಹ ಗ್ರಹಿಸುವ ಅಗತ್ಯವಿದೆ.

ಹಿಂದೂ (ವೈದಿಕ) ಧರ್ಮ

'ಹಿಂದೂ' ಅಥವಾ 'ವೈದಿಕ' ಎನ್ನುವ ಧರ್ಮದ ಬಗ್ಗೆ ಅನೇಕ ರೀತಿಯ ಚರ್ಚೆಗಳು ಆಗಿವೆ. ಆದರೆ ಅವು ಇಲ್ಲಿ ಅಪ್ರಸ್ತುತ. ಇಲ್ಲಿ ವಿಜಯನಗರ ಕಾಲದ 'ಹಿಂದೂಧರ್ಮ'ವು ಎರಡು ಪ್ರಮುಖ ಪಂಥಗಳಲ್ಲಿ ವಿಭಜಿತವಾಗಿತ್ತು ಎಂಬುದು ಮಾತ್ರ ಮುಖ್ಯ. ಅಂದರೆ ಆರಾಧನೆಯ ನೆಲೆಯಲ್ಲಿ 'ಶೈವ' ಹಾಗೂ ವೈಷ್ಣವ' ಅನುಯಾಯಿಗಳ ಎರಡು ಪಂಥಗಳಿದ್ದವು. 'ಶಿವ'ನನ್ನು ಆರಾಧಿಸುವ ಶೈವರಿಗೂ 'ವಿಷ್ಣು'ವನ್ನು ಆರಾಧಿಸುವ ವೈಷ್ಣವರಿಗೂ ಆಚಾರ-ವಿಚಾರಗಳಲ್ಲಿ ತಾರತಮ್ಯಗಳಿವೆ. ಈ ಎರಡೂ ಪಂಥೀಯರಲ್ಲಿಯೇ ಉಪವಿಭಾಗ ಕ್ರಮಗಳು, ಆಚಾರ-ಧೋರಣೆಗಳು ಇಲ್ಲದಿಲ್ಲ. ಅವು ಸಂಘರ್ಷಗಳಾಗುವಷ್ಟರಮಟ್ಟಿಗೆ ಗಾಢವಾಗಿದ್ದವು. ಇವುಗಳನ್ನು ವಿಂಗಡಿಸಿ ಅರಿತುಕೊಳ್ಳುವ ಅಗತ್ಯ ಇದೆ.

ಶೈವ ಪಂಥ

ವಿಜಯನಗರವನ್ನಾಳಿದ ಮೊದಲ ರಾಜವಂಶಜರಾದ ಸಂಗಮರು ಶೈವಪಂಥಿಯರು. ಶಿವನ ಆರಾಧಕರಾಗಿದ್ದ ಹರಿಹರ ಮತ್ತು ಬುಕ್ಕರಾಯರು ಈ ಪಂಥದ ವಿಚಾರಗಳಿಂದ ಪ್ರಭಾವಿತರಾಗಿದ್ದರು. ಆದರೆ ರಾಜ್ಯಾಡಳಿತದ ಜೊತೆಗೆ ಧರ್ಮವನ್ನು ಬೆರೆಸಿದವರಲ್ಲ, ಬದಲಾಗಿ ಎಲ್ಲ ಮತ-ಧರ್ಮ-ಪಂಥಗಳಿಗೆ ಸಮಾನ ದೃಷ್ಟಿಯನ್ನು ಹರಿಸಿದ್ದರು. ಸಂಗಮರ ಕಾಲವು ಹೆಚ್ಚಿನ ಮಟ್ಟಿಗೆ ಶೈವ ಪಂಥ ಹಾಗೂ ಅದರ ತಾತ್ವಿಕ ವಿಚಾರಗಳ ಪಾಲನೆಯಲ್ಲಿ ಪ್ರಾಮುಖ್ಯತೆ ಪಡೆದಿತ್ತು. ಗಮನಾರ್ಹ ಅಂಶವೆಂದರೆ ಶೈವರಲ್ಲಿ ಲಕುಲೀಶ ಪಾಶುಪತ, ಕಾಳಾಮುಖ, ವೀರಶೈವ, ಅದ್ವೈತ, ಶ್ರೀಕಾಂತ ಶೈವಾಗಮ, ಶೈವ ಸಿದ್ಧಾಂತಿ ಮೊದಲಾದ ಉಪಶಾಖೆಗಳು ಇದ್ದವು. ಈ ಉಪಶಾಖೆಯವರು ತಮ್ಮ ವಿಚಾರವೈಶಿಷ್ಟ್ಯಗಳ ಮೂಲಕ ಭಿನ್ನವಾಗಿ ಗುರುತಿಸಿಕೊಳ್ಳುತ್ತಿದ್ದರು.

ಲಕುಲೀಶ ಮತ್ತು ಕಾಳಾಮುಖರಲ್ಲಿನ ಕೆಲವು ಆಚಾರ-ವಿಚಾರ, ಪೂಜಾವಿಧಾನಗಳ ಮಧ್ಯೆಯಿದ್ದ ತಾರತಮ್ಯಗಳು ಅವರನ್ನು ಪ್ರತ್ಯೇಕಿಸುತ್ತಿದ್ದವು. ಲಕುಲೀಶನಿಂದ ಸ್ಥಾಪನೆಗೊಂಡ ಈ ಉಪಶಾಖೆಯು 'ಪಾಶುಪತೀ'ಯ ಅನುಯಾಯಿಗಳಾಗಿ ಗುರುತಿಸಿಕೊಳ್ಳುವಂತೆ ಮಾಡಿದೆ. ಅಂದರೆ ಇವರು ಕಾರ್ಯ, ಕಾರಣ,

ಯೋಗ, ವಿಧಿ ಹಾಗೂ ದುಃಖಾಂತ ಎಂಬ ಐದು ಸೂತ್ರಗಳನ್ನು ಅನುಸರಿಸುವವರು. ಪಾಶುಪತ ಆಚಾರ್ಯರು ಈ ಸೂತ್ರಗಳ ಪರಿಪಾಲನೆಗೆ ಕರೆಕೊಡುತ್ತಿದ್ದುದುಂಟು. ಅಂತೆಯೇ ಕಾಳಾಮುಖ ಶೈವರಿಗೂ ತಮ್ಮ ಧರ್ಮದ ಆಚರಣೆಗಾಗಿ ಆರು ಮುಖ್ಯವಾದ ಮುದ್ರೆಗಳಿದ್ದವು. ಊಟೋಪಚಾರ, ಪೂಜಾವಿಧಾನಗಳಿಗೆ ಸಂಬಂಧಿಸಿದ ಈ ಮುದ್ರೆಗಳನ್ನು ಕಾಳಾಮುಖ ಶಾಖೆಯವರು ಪಾಲಿಸುತ್ತಿದ್ದರು. ಆದರೆ ಈ ಎರಡೂ ಗುಂಪಿನವರು ಆರಾಧಿಸುತ್ತಿದ್ದ ದೈವ ಮಾತ್ರ 'ಶಿವ'ನೇ. ಶವಸಂಸ್ಕಾರದಂಥ ಕೆಲವು ವಿಧಿ-ವಿಧಾನಗಳಲ್ಲಿ ಈ ಎರಡೂ ಶಾಖೆಗಳವರು ಏಕರೂಪತೆಯನ್ನು ಕಂಡುಕೊಂಡಿದ್ದರು.

ಶೈವ ಪಂಥೀಯರಲ್ಲಿ 'ವೀರಶೈವ'ರು ಅಥವಾ 'ಶಕ್ತಿ-ವಿಶಿಷ್ಟಾದ್ವೈತಿ'ಗಳು ಹಾಗೂ ಅವರ ಆಚರಣೆಗಳು ವಿಜಯನಗರ ಕಾಲಘಟ್ಟದಲ್ಲಿ ಮಹತ್ವವನ್ನು ಪಡೆದಿದ್ದವು. ಈ ಶಾಖೆಯವರು 'ಶಿವ' ಹಾಗೂ 'ಜೀವ'ಗಳನ್ನು ಒಂದೇ ಎಂದು ತಿಳಿಯುತ್ತಾರೆ. ಅಲ್ಲದೆ ಶಿವನು 'ಶಕ್ತಿ'ಯೊಂದಿಗೆ ಬೆರೆತಿದ್ದಾನೆ ಎಂಬುದು ಇವರ ವಾದ. ವೀರಶೈವರಲ್ಲೂ ಶಿವಜ್ಞಾನ, ಶಿವಭಕ್ತಿ, ಶಿವಧ್ಯಾನ, ಶಿವವ್ರತ ಮತ್ತು ಶಿವಾರ್ಚನಗಳೆಂಬ 'ಶಿವಯೋಗ'ದ ಐದು ಪ್ರಕ್ರಿಯೆಗಳನ್ನು ಗುರುತಿಸಬಹುದು. ಈ ಕಾಲದ ವೀರಶೈವ (ಶಕ್ತಿ-ವಿಶಿಷ್ಟಾದ್ವೈತಿಗಳಲ್ಲಿ) ರಲ್ಲಿ ಎರಡು ಮುಖ್ಯ ಉಪವಿಭಾಗಗಳಿದ್ದವು. ಅವರನ್ನು 'ಆರಾಧ್ಯ'ರು ಹಾಗೂ 'ಲಿಂಗಾಯಿತ' ರೆಂದು ಗುರುತಿಸಲಾಗಿದೆ. ಆರಾಧ್ಯ ಶೈವರು ಲಿಂಗ ಮತ್ತು ಜನಿವಾರವನ್ನು ಧರಿಸಿ ಶಿವನನ್ನು ಆರಾಧಿಸುತ್ತಾರೆ. ಆದರೆ ಲಿಂಗಾಯಿತ ಶೈವರು 'ವೀರಭದ್ರ'ನ ಆರಾಧಕರಾಗಿದ್ದು ಲಿಂಗ, ವಿಭೂತಿ, ರುದ್ರಾಕ್ಷಿ, ಪಂಚಾಕ್ಷರಿ, ಜಂಗಮ, ತೀರ್ಥ ಮತ್ತು ಪ್ರಸಾದಗಳೆಂಬ 'ಅಷ್ಟಾವರ್ಣ' ಗಳಿಗೆ ಹೆಚ್ಚಿನ ಮಹತ್ವವನ್ನು ಕೊಡುವವರು. ಲಿಂಗಾಯಿತರಲ್ಲಿ ಜಂಗಮ, ಶೀಲವಂತ, ಬಣಜಿಗ ಹಾಗೂ ಪಂಚಮಶಾಲಿಗಳೆಂಬ ನಾಲ್ಕು ಜಾತಿಗಳು ಮುಖ್ಯವಾದುವು. ಇವರಲ್ಲಿ ಜಂಗಮರಿಗೆ ಮೊದಲ ಆದ್ಯತೆ. ಏಕೆಂದರೆ ವಿವಿಧ ಶೈವಮಠಗಳೊಂದಿಗೆ ಗುರುತಿಸಿಕೊಳ್ಳುವ ಈ ಜಂಗಮರು ದೀಕ್ಷೆಯನ್ನು ನೀಡುವ ಪೂಜ್ಯರಾಗಿರುತ್ತಾರೆ.

'ಅದ್ವೈತಿ'ಗಳೆಂಬ ಇನ್ನೊಂದು ಶಾಖೆ ಶೈವಪಂಥದಲ್ಲಿದೆ. ಶಂಕರಾಚಾರ್ಯರಿಂದ ಪ್ರತಿಪಾದಿತವಾದ 'ಅದ್ವೈತ ಸಿದ್ಧಾಂತ'ವು 'ಬ್ರಹ್ಮ ನಿರ್ಜೀವ; ಜಡವಸ್ತುವಲ್ಲ' ಎಂಬ ವಾದವನ್ನು ಮಂಡಿಸುತ್ತದೆ. 'ಬ್ರಹ್ಮಸೂತ್ರ' ಭಾಷ್ಯದಿಂದ ಆರಂಭಗೊಂಡ ವಿದ್ಯಾರಣ್ಯರ ವಿಚಾರಧಾರೆಯವರೆಗೂ 'ಅದ್ವೈತಿ' ಶೈವರು ತಾತ್ವಿಕ ಚರ್ಚೆ ನಡೆಸಿದ್ದರು. ಸಂಗಮ ವಂಶಜರಿಗೆ ಈ ತಾತ್ವಿಕರ ಮಾರ್ಗದರ್ಶನ ದೊರೆತಿತ್ತು. ಅದರಲ್ಲೂ ವಿದ್ಯಾರಣ್ಯರ ಪ್ರೇರಣೆಯು ಸಾಮ್ರಾಜ್ಯದ ಸ್ಥಾಪನೆ ಹಾಗೂ ಬೆಳವಣಿಗೆಗೆ ಕಾರಣವಾಯಿತು. ಅಷ್ಟೇ ಅಲ್ಲದೆ ವಿದ್ಯಾತೀರ್ಥ ಅಥವಾ ವಿದ್ಯಾಶಂಕರರ ಆಶೀರ್ವಚನಗಳು ಇಲ್ಲಿ ಮುಖ್ಯ ಅನ್ನಿಸಿಕೊಳ್ಳುತ್ತವೆ. ಅದ್ವೈತಿಗಳು ಶಿವ(ಶಂಕರ)ನ ಸಂದೇಶವನ್ನು ಜನರಿಗೆ ಮುಟ್ಟಿಸುವವರಾಗಿದ್ದರು. ಶೃಂಗೇರಿಯ ಮಠವು ಶಕ್ತಿವಿಶಿಷ್ಟಾದ್ವೈತಿಗಳ ಪವಿತ್ರ ಕ್ಷೇತ್ರವೆಂದು ಪರಿಗಣಿತವಾಗಿದೆ.

ಶ್ರೀಕಾಂತ ಶೈವಾಗಮ ಮತ್ತು ಶೈವ ಸಿದ್ಧಾಂತಿಗಳೆಂಬ ಎರಡು ಶೈವ ಪಂಥೀಯ ಶಾಖೆಗಳಿವೆ. ಆಗಮ ಹಾಗೂ ವೇದಾಂತಗಳ ಮೂಲಕ ಶಿವನನ್ನು ಗುರುತಿಸಿ, ಪೂಜಿಸುವ ಪರಿಪಾಠ ಈ ವಿಭಾಗದವರದು. ವಿಜಯನಗರವನ್ನಾಳಿದ ತುಳುವ ಮತ್ತು ಅರವೀಡು ಮನೆತನಗಳ ಕಾಲದಲ್ಲಿ ಇವರುಗಳು ಪ್ರಾಶಸ್ತ್ಯ ಪಡೆದಿದ್ದರು.

ವೈಷ್ಣವ ಪಂಥ

ವಿಷ್ಣು ಹಾಗೂ ಅವನ ಇತರೆ ಅವತಾರಗಳಲ್ಲಿ ನಂಬಿಕೆಯಿಟ್ಟು ಆರಾಧಿಸುವವರನ್ನು 'ವೈಷ್ಣವ'ರೆಂದು ಕರೆಯುತ್ತಾರೆ. ಈ ಪಂಥದವರಿಗೆ ಹರಿ, ನಾರಾಯಣ, ಕೃಷ್ಣ, ಗೋವಿಂದ, ವೆಂಕಟೇಶ್ವರ, ಪುರುಷೋತ್ತಮ,

ಮಾಧವ, ಲಕ್ಷ್ಮಿ(ಪ್ರಕೃತಿ) ಮೊದಲಾದ ರೂಪಗಳಲ್ಲಿ ವಿಷ್ಣುವನ್ನು ಆರಾಧಿಸುವ ಕ್ರಮವಿದೆ. ವೈಷ್ಣವರು 'ಹರಿಯೇ ಪರಮ ಸತ್ಯ; ಜಗತ್ತು ಮಿಥ್ಯವಲ್ಲ, ಸತ್ಯವೇ' ಎಂಬ ಸಿದ್ಧಾಂತವನ್ನು ಮಂಡಿಸುತ್ತಾರೆ. ಹೊಯ್ಸಳ ಕಾಲದಲ್ಲಿದ್ದ ಮಧ್ವಾಚಾರ್ಯರು (ಕ್ರಿ.ಶ.೧೨೩೮-೧೩೧೭) ಈ ಪಂಥದ ಮೂಲ ಸ್ಥಾಪಕ. ವಿಜಯನಗರವನ್ನಾಳಿದ ಎರಡನೆ ರಾಜಮನೆತನವಾದ ಸಾಳುವರ ಕಾಲಕ್ಕೆ ಈ ಪಂಥವು ಹೆಚ್ಚಿನ ಪ್ರಾಶಸ್ತ್ಯ ಪಡೆಯಿತು. ಅಂದರೆ ಅಲ್ಲಿಯವರೆಗೂ ಪ್ರಚಲಿತದಲ್ಲಿದ್ದ ಶೈವ ಪಂಥದ ಸ್ಥಾನವನ್ನು ಅಲಂಕರಿಸಿತು. ಅಲ್ಲದೆ ಶೈವ ಪಂಥದಷ್ಟೆ ಜನಮನ್ನಣೆ ಗಳಿಸಿತು.

ವಿಷ್ಣುವಿನ ಆರಾಧಕರಲ್ಲೂ ಎರಡು ಪ್ರಮುಖ ಬಣಗಳಿವೆ. ಈ ಬಣಗಳ ಆಚಾರ-ವಿಚಾರಗಳು ಅಂದಿನ ಧಾರ್ಮಿಕ ಪರಿಸರದ ಮೇಲೆ ಪ್ರಭಾವ ಬೀರಿವೆ. ಈ ಎರಡು ಬಣಗಳವರನ್ನು 'ದ್ವೈತಿ'ಗಳು ಹಾಗೂ 'ವಿಶಿಷ್ಟಾದ್ವೈತಿ'ಗಳೆಂದು ಕರೆಯುತ್ತಾರೆ. ದ್ವೈತಿಗಳನ್ನು 'ವೈಷ್ಣವ'ರೆಂದು ಹಾಗೂ ವಿಶಿಷ್ಟಾದ್ವೈತಿಗಳನ್ನು 'ಶ್ರೀವೈಷ್ಣವ'ರೆಂದು ಕರೆಯುವ ಪರಿಪಾಠವೂ ಇದೆ. ದ್ವೈತಿಗಳು ತಮ್ಮ ಪಂಥದ ಮೂಲಪ್ರವರ್ತಕರನ್ನಾಗಿ ಮಧ್ವಾಚಾರ್ಯರನ್ನು ಗುರುತಿಸಿಕೊಂಡು ಅವರ ಅನುಯಾಯಿಗಳಾಗಿ ಧರ್ಮಪ್ರಚಾರವನ್ನು ಮಾಡಿದರು. ವಿಜಯನಗರ ಕಾಲದಲ್ಲಿ ಪದ್ಮನಾಭತೀರ್ಥ, ನರಹರಿತೀರ್ಥ, ಮಾಧವತೀರ್ಥ, ಅಕ್ಷೋಭ್ಯತೀರ್ಥ, ಜಯತೀರ್ಥ, ವ್ಯಾಸತೀರ್ಥ, ವಾದಿರಾಜತೀರ್ಥ ಮೊದಲಾದವರು ದ್ವೈತ(ಮಾಧ್ವ) ಸಿದ್ಧಾಂತವನ್ನು ಪ್ರಚುರಪಡಿಸಿದರು. 'ಎಲ್ಲ ಜೀವಗಳು ಹರಿಯನ್ನೇ ಆಶ್ರಯಿಸಿವೆ' ಎಂಬುದನ್ನು ನಂಬುವ ಈ ಪಂಥದವರು ವೇದಗಳ ಮೂಲಕ ಪೂಜಿಸುತ್ತಾರೆ. ಈ ಪಂಥದವರು 'ಪುರಿ'(ಜಗನ್ನಾಥನ ಸನ್ನಿಧಿ)ಯನ್ನು ತಮ್ಮ ಮುಖ್ಯ ಧಾರ್ಮಿಕ ಕ್ಷೇತ್ರವನ್ನಾಗಿ ಪರಿಗಣಿಸುತ್ತಾರೆ.

ರಾಮಾನುಜಾಚಾರ್ಯರನ್ನು ಮುಖ್ಯ ಪ್ರವರ್ತಕರೆಂದು ತಿಳಿದು ಅವರ ತತ್ವಗಳನ್ನು ಅನುಸರಿಸುವ 'ವಿಶಿಷ್ಟಾದ್ವೈತಿ'ಗಳು ಕರ್ನಾಟಕದಲ್ಲಿ ಹೊಯ್ಸಳಕಾಲದಿಂದಲೇ ಕಾಣಿಸಿಕೊಳ್ಳುತ್ತಾರೆ. ವಿಜಯನಗರವನ್ನಾಳಿದ ಕೃಷ್ಣದೇವರಾಯ, ಅಚ್ಯುತ, ಸದಾಶಿವ, ರಾಮರಾಯನ ಕಾಲದವರೆಗೂ ಶ್ರೀವೈಷ್ಣವರು ಹೆಚ್ಚಿನ ಪ್ರಾಬಲ್ಯವನ್ನು ಪಡೆದಿದ್ದರು. ಈ ಕಾಲದಲ್ಲಿ ವೇದಾಂತ ದೇಶಿಕರು, ತಾತಾಚಾರ್ಯ ಮನೆತನದವರು ಶ್ರೀವೈಷ್ಣವ ಧರ್ಮವನ್ನು ಪ್ರಚುರಪಡಿಸಿದರು. ಈ ಪಂಥದವರಿಗೆ ತಿರುಮಲ(ವೆಂಕಟೇಶ್ವರ)ವು ಮುಖ್ಯ ಆರಾಧನ ಕ್ಷೇತ್ರ.

ಹರಿದಾಸ ಪರಂಪರೆ

ಮಧ್ಯಕಾಲೀನ ಚಾರಿತ್ರಿಕ ಘಟ್ಟದಲ್ಲಿ ವಿಜಯನಗರ ಸಾಮ್ರಾಜ್ಯದ ಸ್ಥಾಪನೆಗೆ ಮೊದಲು ಹಾಗೂ ಅನಂತರದ ಬೆಳವಣಿಗೆಯ ಪ್ರಕ್ರಿಯೆಗಳಲ್ಲಿ ವಚನ ಹಾಗೂ ದಾಸ ಚಳವಳಿಗಳ ಮಹತ್ವ ಹಾಸುಹೊಕ್ಕಾಗಿದೆ. ಅಂದರೆ ಕ್ರಿ.ಶ. ಹನ್ನೆರಡರಿಂದ ಹದಿನೇಳನೆಯ ಶತಮಾನದವರೆಗೂ ಧರ್ಮ ಮತ್ತು ಸಂಸ್ಕೃತಿಗಳ ಸಂಕೀರ್ಣವಾದ ಘಟ್ಟವಾಗಿ ಪರಿಗಣಿತವಾಗಿದೆ. ಶೈವ ಪಂಥೀಯರಲ್ಲಿ ಕಾಣಿಸಿಕೊಂಡ ಪ್ರಗತಿಪರ ನಿಲುವುಗಳು 'ವಚನ ಚಳವಳಿ' ರೂಪದಲ್ಲಿ ಹೊರಹೊಮ್ಮಿದರೆ; ವೈಷ್ಣವರಲ್ಲಿ ಅದು 'ದಾಸ ಚಳವಳಿ'ಯಾಗಿ ಅಭಿವ್ಯಕ್ತಗೊಂಡಿತು. ಅಂದರೆ ಮಧ್ಯಕಾಲೀನ ಧಾರ್ಮಿಕ ಸುಧಾರಣೆಗಳಲ್ಲಿ ವಚನಕಾರರ ಉತ್ತರಾಧಿಕಾರಿಗಳಾಗಿ ಹರಿದಾಸರು ಕಾಣಿಸಿಕೊಂಡಿದ್ದಾರೆ. ಈ ಎರಡೂ ಚಳವಳಿಗಳ ಆರಾಧಕರು ಬೇರೆ ಬೇರೆಯವರಾಗಿದ್ದರೂ ಇವರ ಆಶಯ ಮತ್ತು ಗುರಿ ಒಂದೇ ಆಗಿತ್ತು. ಅಂದರೆ ಸರಳವಾದ ಭಾಷೆಯಲ್ಲಿ ಜನರು ಪಾರಮಾರ್ಥಿಕ ವಿಚಾರಗಳನ್ನು ಗ್ರಹಿಕೆಗೆ ತೆಗೆದುಕೊಳ್ಳುವಂತೆ ಆಗಬೇಕೆಂಬುದು. ಅಲ್ಲದೆ ಆ ಮೂಲಕ ಸಮಾಜದಲ್ಲಿನ ಮೂಢನಂಬಿಕೆ, ಕಂದಾಚಾರ, ಅನಿಷ್ಟಗಳನ್ನು ತೊಡೆದುಹಾಕುವುದು.

ವೈಷ್ಣವರಲ್ಲಿ ಅಸ್ತಿತ್ವಕ್ಕೆ ಬಂದ ಹರಿದಾಸ ಪರಂಪರೆಯು 'ಭಕ್ತಿ' ಯ ಮೂಲಕ ಹರಿಯನ್ನು ಆರಾಧಿಸುವ ಮಾರ್ಗ. ಹರಿಯನ್ನು ಆರಾಧಿಸುವ ದಾಸರಲ್ಲೂ ಎರಡು ಪ್ರಮುಖ ಬಣಗಳಾದವು. ಅವುಗಳನ್ನು

'ವ್ಯಾಸಕೂಟ' ಹಾಗೂ 'ದಾಸಕೂಟ'ಗಳೆಂದು ಗುರುತಿಸಲಾಗಿದೆ. ವ್ಯಾಸಕೂಟದಲ್ಲಿ ವ್ಯಾಸರಾಯ, ಶ್ರೀಪಾದರಾಯ, ರಾಘವೇಂದ್ರಸ್ವಾಮಿ ಮೊದಲಾದವರು ಪ್ರಮುಖರು. ಅಂತೆಯೇ ದಾಸಕೂಟದಲ್ಲಿ ಪುರಂದರ, ಕನಕ, ವಿಜಯ, ಗೋಪಾಲದಾಸ ಮೊದಲಾದವರು ಪ್ರಮುಖರಾಗಿದ್ದಾರೆ. ವಿಜಯನಗರ ಕಾಲದಲ್ಲಿ ಈ ಎರಡೂ ಕೂಟಗಳು ಧಾರ್ಮಿಕ ಪರಿಸರವನ್ನು ಪ್ರಭಾವಿತವನ್ನಾಗಿಸಿದ್ದವು. ವ್ಯಾಸ ಹಾಗೂ ದಾಸಕೂಟದ ಅನುಯಾಯಿಗಳಲ್ಲಿ ಕೆಲವು ಭಿನ್ನತೆಗಳಿವೆ. ಅಂದರೆ ವ್ಯಾಸಕೂಟದವರು ಸಂಸ್ಕೃತ ಶ್ಲೋಕಗಳ ಮೂಲಕ ಹರಿಯನ್ನು ಧ್ಯಾನಿಸಿದರೆ; ದಾಸಕೂಟದವರು ಅಚ್ಚಕನ್ನಡದಲ್ಲಿ ಸರಳವಾಗಿ ಕೀರ್ತನೆಗಳನ್ನು ಕಟ್ಟಿ ಹಾಡಲಾರಂಭಿಸಿದರು. ಈ ಹಿನ್ನೆಲೆಯಲ್ಲಿ ದಾಸಪರಂಪರೆಯು ತನ್ನ ಹಾಡುವ ಧಾಟಿ, ಲಯಕ್ಕೆ ಸಂಗೀತದ ಶೈಲಿ(ಕರ್ನಾಟಕ)ಯೊಂದನ್ನೇ ಹುಟ್ಟುಹಾಕಿತು.

ವೈಷ್ಣವರಲ್ಲಿ ಕೃಷ್ಣನ ಆರಾಧನೆಯ ಪಂಥವೊಂದು ಮಹಾರಾಷ್ಟ್ರದ ಪಂಢರಾಪುರದಿಂದ ವಿಜಯನಗರಕ್ಕೆ ಧಾವಿಸಿತು. ಅಲ್ಲಿನ 'ವಿಠೋಬ'(ವಿಠಲ)ನನ್ನು ಪೂಜಿಸುವ ಪರಂಪರೆಯು ಇಲ್ಲಿನ ಅರಸರನ್ನು ವಿಜಯವಿಠಲ ದೇವಾಲಯ(ಹಂಪಿ)ದ ನಿರ್ಮಾಣಕ್ಕೆ ಪ್ರೇರಣೆ ನೀಡಿತ್ತು.

ಜೈನಧರ್ಮ

ಅಹಿಂಸೆಯನ್ನೇ ಪ್ರಧಾನ ತಿರುಳನ್ನಾಗಿಸಿಕೊಂಡ ಜೈನಧರ್ಮ ಶತಮಾನಗಳಷ್ಟು ಹಳೆಯದು. ಇದರ ಸಂಸ್ಥಾಪಕ ಮಹಾವೀರ. ಜೈನರಲ್ಲೂ 'ಶ್ವೇತಾಂಬರಿ' ಹಾಗೂ 'ದಿಗಂಬರಿ'ಗಳೆಂಬ ಎರಡು ಬಣಗಳಿವೆ. ವಿಜಯನಗರ ಸ್ಥಾಪನೆಯ ವೇಳೆಗೆ ಈ ಧರ್ಮವು ಕರ್ನಾಟಕವನ್ನು ಪ್ರವೇಶಿಸಿ ಪಸರಿಸಿತ್ತು. ಸಮಕಾಲೀನ ಆಕರಗಳು ವಿಜಯಗರದ ಅರಸರು ಜೈನಧರ್ಮಕ್ಕೆ ಹಾಗೂ ಅದರ ಅನುಯಾಯಿಗಳಿಗೆ ಸಲ್ಲಬೇಕಿದ್ದ ಪ್ರೋತ್ಸಾಹವನ್ನು ನೀಡಿದ್ದರು ಎಂಬುದನ್ನು ಹೇಳುತ್ತವೆ. ಅಲ್ಲದೆ ಇದರ ಮಾಂಡಲೀಕರಾಗಿದ್ದ ಚೌಟರು, ಅಜಿಲರು, ಬೈರರು(ಕಾರ್ಕಳ) ಜೈನಧರ್ಮಕ್ಕೆ ಆಶ್ರಯದಾತರಾಗಿ ಗುರುತಿಸಿಕೊಂಡಿದ್ದಾರೆ. ಅಂದರೆ ಬಸದಿ-ಮಂದಿರಗಳ ನಿರ್ಮಾಣ, ಯತಿಗಳಿಗೆ ಗೌರವ-ಸನ್ಮಾನ, ದಾನ-ದತ್ತಿಗಳ ಕೊಡುಗೆ ಇತ್ಯಾದಿಗಳನ್ನು ನೀಡಿ ಪ್ರತಿಕ್ರಿಯಿಸಲಾಗಿದೆ. ಅಷ್ಟೇ ಅಲ್ಲದೆ ವಿಜಯನಗರದ ಸೈನ್ಯದಲ್ಲಿ ಹಾಗೂ ಮಾಂಡಲೀಕರ ಸೈನ್ಯ ಆಡಳಿತದಲ್ಲಿ ಜೈನಧರ್ಮಿಯರಿಗೆ ಉನ್ನತ ಹುದ್ದೆಗಳನ್ನು ನೀಡಲಾಗಿತ್ತು. ಉದಾಹರಣೆಗೆ ಲಕ್ಕಣ್ಣದಂಡನಾಥನು ಮುಖ್ಯ ಸೇನಾನಿಯಾಗಿದ್ದುದನ್ನು (ಪ್ರೌಢದೇವರಾಯನಿಗೆ) ಗಮನಿಸಬಹುದು. ಇರುಗಪ್ಪ ದಂಡನಾಥ, ಮಧುರ, ನೇಮಿಚಂದ್ರ, ವಿದ್ಯಾನಂದ ಮೊದಲಾದ ಜೈನಕವಿಗಳು ವಿಜಯನಗರ ಅರಸರಿಂದ ಪ್ರೋತ್ಸಾಹಿತರಾಗಿದ್ದಾರೆ. ಕಾರ್ತಿಕ ಹುಣ್ಣಿಮೆಯನ್ನು ವಿಶೇಷದಿನವನ್ನಾಗಿ ಆಚರಿಸುವ ಜೈನರು ಶ್ರವಣಬೆಳಗೊಳ(ಗೊಮ್ಮಟೇಶ್ವರ)ವನ್ನು ಪವಿತ್ರ ತೀರ್ಥಕ್ಷೇತ್ರವನ್ನಾಗಿ ಪರಿಗಣಿಸುತ್ತಾರೆ.

ಬೌದ್ಧಧರ್ಮ

ಗೌತಮಬುದ್ಧನಿಂದ ಪ್ರತಿಪಾದಿತವಾದ 'ಬೌದ್ಧಧರ್ಮ'ವು ಸಹ ಶತಮಾನಗಳಷ್ಟೇ ಹಳೆಯದು. 'ಆಸೆಯೇ ದುಃಖಕ್ಕೆ ಮೂಲ' ಎಂದು ಹೇಳುವ ಈ ಧರ್ಮವು 'ನಿರ್ವಾಣ'ದಲ್ಲಿ ತನ್ನ ಪರಿಸಮಾಪ್ತಿಯನ್ನು ಕಂಡುಕೊಳ್ಳುತ್ತದೆ. ಬೌದ್ಧರಲ್ಲಿ 'ಹೀನಯಾನ' ಹಾಗೂ 'ಮಹಾಯಾನ'ಗಳೆಂಬ ಎರಡು ಬಣಗಳಿವೆ. ವಿಜಯನಗರವು ಅಸ್ತಿತ್ವಕ್ಕೆ ಬರುವ ಮೊದಲೇ ಈ ಧರ್ಮವು ಕರ್ನಾಟಕವನ್ನು ಪ್ರವೇಶಿಸಿ ಹರಡಿತ್ತು. ಆದರೆ ಜೈನಧರ್ಮದಷ್ಟು ಪ್ರಾಬಲ್ಯ ಪಡೆದಿರಲಿಲ್ಲ. ಈ ಧರ್ಮದಲ್ಲಿ ಅಂದು ಪ್ರಚಲಿತದಲ್ಲಿತ್ತು ಎಂಬುದಕ್ಕೆ ಅನೇಕ ಸ್ಮಾರಕ, ಶಿಲ್ಪಗಳು ಸಾಕ್ಷಿಯಾಗಿವೆ. ವಿಜಯನಗರ ಕಾಲದಲ್ಲಿ ಕಾಂಚಿಪುರಂ, ನಾಗಪಟ್ಟಣಂ ಹಾಗೂ ಕಲಾವತಿಗಳಲ್ಲಿ ವಿಶೇಷವಾಗಿ ಸ್ಮಾರಕಗಳನ್ನು ಕಾಣಬಹುದು. ಸಮಕಾಲೀನ ಶಾಸನಗಳು ಬುದ್ಧನ

ಆರಾಧನೆಗಾಗಿ ದಾನ-ದತ್ತಿಗಳಾಗಿ ನೀಡಿದ್ದ ಗ್ರಾಮಗಳ ಬಗ್ಗೆ ಮಾಹಿತಿಗಳನ್ನು ನೀಡುತ್ತವೆ. ಚಂದ್ರಗಿರಿಯ ಕೋದಂಡರಾಮಸ್ವಾಮಿ ದೇವಾಲಯದಲ್ಲಿನ ಮುಖಮಂಟಪವೊಂದರಲ್ಲಿ ವ್ಯಾಖ್ಯಾನಮುದ್ರೆಯಲ್ಲಿರುವ ಬುದ್ಧನ ಮೂರ್ತಿ ಇದೆ. ಕೃಷ್ಣದೇವರಾಯನು ತನ್ನ 'ಆಮುಕ್ತಮಾಲ್ಯದ' ಕೃತಿಯಲ್ಲಿ ಬುದ್ಧನನ್ನು ವಿಷ್ಣುವಿನ ಅವತಾರ ಎಂದು ಚಿತ್ರಿಸಿದ್ದಾನೆ.

ಇಸ್ಲಾಂ ಧರ್ಮ

ದಕ್ಷಿಣಭಾರತದಲ್ಲಿ ಮುಸ್ಲಿಮ್ ನವಾಬರು ರಾಜ್ಯ ವಿಸ್ತರಣೆಯ ಆಶಯವನ್ನು ಸಾಕಾರವನ್ನಾಗಿಸಲು ಪ್ರಯತ್ನಿಸುತ್ತಿರುವಾಗಲೇ ವಿಜಯನಗರ ಸಾಮ್ರಾಜ್ಯವು ಅಸ್ತಿತ್ವಕ್ಕೆ ಬಂದಿತ್ತು. ಆದರೆ ಇಂಥ ಸಂದರ್ಭದಲ್ಲೂ ಇಸ್ಲಾಂ ಧರ್ಮಕ್ಕೆ ಹಾಗೂ ಆಚರಿಸುವವರಿಗೆ ಯಾವುದೇ ಅಡ್ಡಿ-ಆತಂಕಗಳು ಕಾಣಿಸಿಕೊಂಡದ್ದರ ಬಗ್ಗೆ ಉದಾಹರಣೆಗಳು ದೊರೆಯುವುದಿಲ್ಲ. ಬದಲಾಗಿ ವಿಜಯನಗರದ ಅರಸರು ಮುಸ್ಲಿಮರಿಗೆ ಜಹಗೀರುಗಳನ್ನು ನೀಡಿದ ಉದಾಹಣೆಗಳಿವೆ. ಅಲ್ಲದೆ ಮಸೀದಿ, ದರ್ಗಾಗಳನ್ನು ಕಟ್ಟಿಸಿಕೊಟ್ಟಿರುವುದು ತಿಳಿದುಬರುತ್ತದೆ. ಇದಕ್ಕೆ ಸಂಗಮರ ಕಾಲದಲ್ಲಿ ಒಬ್ಬ ಮುಸ್ಲಿಮ್ ಫಕೀರನಿಗಾಗಿ ಕಟ್ಟಿಸಲಾದ ಪೆನುಗೊಂಡಾದ ಬಾಬಯ್ಯನ ದರ್ಗಾವು ಒಳ್ಳೆಯ ಉದಾಹರಣೆ.

೨ನೇ ದೇವರಾಯನ ಕಾಲದಲ್ಲಿ ಇಸ್ಲಾಂ ಧರ್ಮಕ್ಕೆ ಹಾಗೂ ಮುಸ್ಲಿಮರಿಗೆ ಹೆಚ್ಚಿನ ಪ್ರಾಶಸ್ತ್ಯ ದೊರೆತಿತ್ತು. ಸೈನ್ಯ-ಆಡಳಿತಗಳಲ್ಲಿ ಅಮೀರ್‌ಖಾನ್, ಐನ್-ಉಲ್-ಮುಲ್ಕ್-ಗಿಲಾನಿ, ದಿಲಾ-ಉವರ್-ಖಾನ್ ಮೊದಲಾದ ಉನ್ನತ ಅಧಿಕಾರಿಗಳಿದ್ದ ಉಲ್ಲೇಖಗಳು ದೊರೆಯುತ್ತವೆ. ಇಸ್ಲಾಂ ಧರ್ಮಕ್ಕೆ ಮನ್ನಣೆ ನೀಡಿದ್ದ ೨ನೇ ದೇವರಾಯನು ತನ್ನ ಆಸನದ ಬಳಿಯೇ ಅವರ ಪವಿತ್ರಗ್ರಂಥವಾದ 'ಕುರಾನ್'ನ್ನು ಇರಿಸಿದ್ದನು. ಹಿಂದೂಗಳ ಜೀವನದ ಮುಖ್ಯಧಾರೆಯೊಳಗೆ ಇಸ್ಲಾಮಿಯರು ಬೆರೆತಿದ್ದುದರಿಂದ ರಾಜ್ಯದಲ್ಲಿ ಬಂದು ನೆಲೆಸುವುದರ ಬಗ್ಗೆ ಪ್ರತಿಬಂಧಕಗಳಿರಲಿಲ್ಲ. ರಾಜಧಾನಿಯಲ್ಲಿ ಹಿಂದೂ-ಮುಸ್ಲಿಮ್ (ಇಂಡೋ-ಸಾರಸೆನಿಕ್, ವಾಸ್ತುಶಿಲ್ಪದ ಅನೇಕ ಕಟ್ಟಡಗಳ ನಿರ್ಮಾಣಕ್ಕೆ ಅವಕಾಶ ಇತ್ತು. ದೇವರಾಯನ ಉದಾರಗುಣಕ್ಕೆ ಅಹ್ಮದ್‌ಖಾನ್ ಎಂಬ ಮುಸ್ಲಿಮ್ ಅಧಿಕಾರಿಯು ರಾಜಧಾನಿಯಲ್ಲಿ ಮಸೀದಿಯೊಂದನ್ನು ಕಟ್ಟಿಸಿ ಅರಸನಿಗೆ ಒಳಿತನ್ನು ಬಯಸಿದ್ದನು. ಇಸ್ಲಾಂ ಧರ್ಮೀಯರು ಮಹಮ್ಮದ್ ಪೈಗಂಬರನನ್ನು ತಮ್ಮ ಪ್ರತಿಪಾದಕನೆಂದು ಆರಾಧಿಸುತ್ತಾರೆ. ಹಿಂದೂ-ಮುಸ್ಲಿಮರಿಗೆ ಮತೀಯ ತಾರತಮ್ಯ, ಸಂಘರ್ಷಗಳಾದ ಉದಾಹರಣೆಗಳಿಲ್ಲ. ಅಳಿಯ ರಾಮರಾಯನ ಮಗನು ತೀರಿಕೊಂಡಾಗ ರಾಣಿಯು ಅಲಿ ಅದಿಲ್‌ಷಾನನ್ನು ಮಗನನ್ನಾಗಿ ಪರಿಗಣಿಸಿದ್ದ ಉದಾಹರಣೆಯು ಇಸ್ಲಾಮಿಯರ ಬಗ್ಗೆ ಯಾವುದೇ ಭಿನ್ನತೆಯನ್ನು ಮಾಡಿರಲಿಲ್ಲ ಎಂಬುದನ್ನು ತಿಳಿಸುತ್ತದೆ.

ಕ್ರೈಸ್ತ ಧರ್ಮ

ವಿಜಯನಗರದ ಅರಸರು ಮುಸ್ಲಿಮರಿಗೆ ನೀಡಿದ್ದ ರಕ್ಷಣೆ-ಪ್ರೋತ್ಸಾಹಗಳನ್ನೇ ಕ್ರೈಸ್ತರಿಗೂ ನೀಡಿದ್ದರು. ಅದರಲ್ಲೂ ಕಡಲತೀರದಲ್ಲಿದ್ದ ರೋಮನ್ ಕ್ಯಾಥೋಲಿಕ್ ಮಿಷನರಿಗಳಿಗೆ ಯಾವುದೇ ಅಡ್ಡಿ ಆತಂಕಗಳು ಇರಲಿಲ್ಲ. ಮತಾಂತರದ ಪ್ರಕ್ರಿಯೆಗಳನ್ನು ನಡೆಸಿದ್ದ ಅಂದಿನ ಕ್ರೈಸ್ತ ಮಿಷನರಿಗಳು ಸೇಂಟ್ ಥೋಮ್ ಹಾಗೂ ನಾಗಪಟ್ಟಣಂಗಳಲ್ಲಿ ಚರ್ಚುಗಳನ್ನು ನಿರ್ಮಿಸಿದ್ದರು. ತದನಂತರ ಬಂದ ಜೆಸ್ಯುಟರು ಸಹ ಇದೇ ನಿಲುವನ್ನೇ ಅನುಸರಿಸಿದ್ದರು. ಆದರೆ ಇವಾವುದಕ್ಕೂ ಉದ್ವೇಗಗೊಳ್ಳದ ವಿಜಯನಗರದ ಅರಸರು ವಿದೇಶಿಯರನ್ನು ಪ್ರೀತಿ ಗೌರವಗಳಿಂದ ಕಂಡಿರುವುದು ತಿಳಿದುಬರುತ್ತದೆ. ಬಾರ್ಬೋಸನು ಹೇಳುವ ಪ್ರಕಾರ ವಿದೇಶಿಯರಿಗೆ ಸಾಮ್ರಾಜ್ಯದಲ್ಲಿ ಸ್ವಾತಂತ್ರ್ಯವಿತ್ತು. ಅಲ್ಲದೆ ಎಲ್ಲ ಕ್ರೈಸ್ತರಿಗೆ, ಕ್ರೈಸ್ತರಲ್ಲದವರಿಗೆ, ಮೂರರಿಗೆ, ಜ್ಯೂಗಳಿಗೆ ಹಾಗೂ ಪೋರ್ಚುಗೀಸ್ ಮೊದಲಾದವರಿಗೆ ಸಮಾನ ರೀತಿಯ ನೋಟ, ನ್ಯಾಯವಿತರಣೆಗಳನ್ನು ಮಾಡಲಾಗುತ್ತಿತ್ತು ಎನ್ನಲಾಗಿದೆ.

ವಿಜಯನಗರದ ಅರಸರು ತಮ್ಮ ಸಾಂಪ್ರದಾಯಿಕ ಧರ್ಮ-ಆಚರಣೆಗಳ ಜೊತೆಗೆ ಇತರೆ ಮತ-ಧರ್ಮಗಳವರಿಗೂ ಮನ್ನಣೆ ನೀಡುವ ಧೋರಣೆಯನ್ನು ಅನುಸರಿಸಿದ್ದರು. ಬೇರೆ ಧರ್ಮದ ಹಾಗೂ ಒಂದೇ ಧರ್ಮದ ಉಪಪಂಗಡಗಳೊಂದಿಗೆ ಸೌಹಾರ್ದವಾಗಿ ನಡೆದುಕೊಳ್ಳುವ ಆಶಯವನ್ನು ಹೊಂದಿದ್ದರು.

ದೇವಾಲಯ ಮತ್ತು ಮಠಗಳು

ಕರ್ನಾಟಕದಲ್ಲಿ ದೇವಾಲಯಗಳ ನಿರ್ಮಾಣಕ್ಕೆ ಪ್ರೇರಣೆ ದೊರೆತದ್ದು ಲಕುಲೀಶ ಪಾಶುಪತ ಶೈವಗುರುಗಳಿಂದ. ಮಠಗಳು ತಾವು ನಡೆದುಕೊಳ್ಳುತ್ತಿದ್ದ ದೇವಾಲಯಗಳಿಂದ ಗುರುತಿಸುವಂತಾದವು. ಅಂದರೆ ಕ್ರಿ.ಶ. ಆರು ಅಥವಾ ಏಳನೆಯ ಶತಮಾನಗಳಿಂದೀಚೆಗೆ ದೇವಾಲಯಗಳ ಅಂಗಸಂಸ್ಥೆಗಳಾಗಿ ಮಠಗಳು ಕಾಣಿಸಿಕೊಂಡಿವೆ. ದೇವಾಲಯ ಮತ್ತು ಮಠಗಳ ಪರಂಪರೆ ವಿಜಯನಗರ ಸ್ಥಾಪನೆಯ ವೇಳೆಗೆ ಸಾಕಷ್ಟು ಬೆಳೆದುಬಂದಿತ್ತು. ರಾಜಮನೆತನವಷ್ಟೇ ಅಲ್ಲದೆ ಪ್ರಜೆಗಳು, ಶ್ರೇಣಿಗಳು, ಅಧಿಕಾರಿಗಳು ದಾನ-ದತ್ತಿಗಳನ್ನು ನೀಡಿ ಪ್ರೋತ್ಸಾಹಿಸುತ್ತಿದ್ದರು. ಅಂದು ದೇವಾಲಯ- ಮಠಗಳು ಕೇವಲ ಧಾರ್ಮಿಕ ಸಂಸ್ಥೆಗಳಾಗಿಯೇ ಉಳಿದಿರಲಿಲ್ಲ. ಬದಲಾಗಿ ಶೈಕ್ಷಣಿಕ, ಆರ್ಥಿಕ ಹಾಗೂ ಸಾಮಾಜಿಕ ಘಟಕಗಳಾಗಿಯೂ ರೂಪು ತಳೆದಿದ್ದವು. ನ್ಯಾಯಾಲಯಗಳಾಗಿಯೂ ಗುರುತಿಸಿಕೊಂಡಿವೆ. ಶಾಸ್ತ್ರ-ಪುರಾಣಗಳನ್ನು ಕಲಿಸುತ್ತಿದ್ದ ಈ ಸಂಸ್ಥೆಗಳು ಶೈವ ಹಾಗೂ ವೈಷ್ಣವ ಪಂಥಗಳ ಮುಖ್ಯ ಪ್ರಾತಿನಿಧಿಕ ಕೇಂದ್ರಗಳಾಗಿ ಕೆಲಸ ಮಾಡುತ್ತಿದ್ದವು. ವಿಜಯನಗರ ಕಾಲದಲ್ಲಿ ದೇವಾಲಯಗಳಲ್ಲಿ ದೇವದಾಸಿಯರು ಅಂಗ-ರಂಗ ಭೋಗಗಳನ್ನು ನೀಡಿ ದೇವರಸೇವೆ ಮಾಡುತ್ತಿದ್ದರು. ಹೀಗಾಗಿ ದೇವಾಲಯ-ಮಠಗಳು ಸಾಂಸ್ಕೃತಿಕ ಕೇಂದ್ರಗಳೂ ಆಗಿದ್ದವು ಎನ್ನಬಹುದು. ಅಂದು ರೂಪುತಳೆದ ಇಂಥ ಅನೇಕ ದೇವಾಲಯ-ಮಠಗಳು ಇಂದಿಗೂ ಜೀವಂತವಾಗಿವೆ. ಅಷ್ಟೇ ಅಲ್ಲದೆ ತಮ್ಮ ಹಿಂದಿನ ಸಾಂಪ್ರದಾಯಿಕ ಧರ್ಮ-ಆಚರಣೆಗಳನ್ನು ಮುಂದುವರೆಸಿಕೊಂಡು ಬರುತ್ತಿವೆ.

ಜನಪ್ರಿಯ ಸಂಸ್ಕೃತಿ ಹಾಗೂ ಆಚರಣೆಗಳು

ಶೈವ ಹಾಗೂ ವೈಷ್ಣವ ಪಂಥಗಳ ರೀತಿಯಲ್ಲಿ ಸಾಂಸ್ಕೃತಿಕ ರೂಪ ತಳೆಯದ ಜನಸಾಮಾನ್ಯರ ಅನೇಕ ಆಚಾರ - ವಿಚಾರಗಳು ವಿಜಯನಗರ ಕಾಲದಿಂದಲೂ ಮುಂದುವರೆದುಕೊಂಡು ಬಂದಿವೆ. ಧಾರ್ಮಿಕ ಪರಿಸರದಲ್ಲಿ ಕಾಣಿಸಿಕೊಂಡಿದ್ದ ಇಂಥ ಅನೇಕ ಆಚರಣೆಗಳು ಸಾಂಸ್ಕೃತಿಕವಾಗಿ ಹೆಚ್ಚಿನ ಮಹತ್ವ ಪಡೆದಂಥವು. ಅವುಗಳಲ್ಲಿ ಗ್ರಾಮದೇವತೆಗಳ ಆಚರಣೆಯೂ ಒಂದು. ಗ್ರಾಮಿಕರು ಪ್ರಕೃತಿಯ ವಿಕೋಪ, ರೋಗ-ರುಜಿನ ಮೊದಲಾದ ಆತಂಕಗಳಿಂದ ತಮ್ಮನ್ನು ತಾವು ರಕ್ಷಿಸಿಕೊಳ್ಳಲು ಈ ಗ್ರಾಮದೇವತೆಗಳಿಗೆ ಮೊರೆಹೋಗುತ್ತಿದ್ದರು. ಈ ರೀತಿಯ ಆರಾಧನೆ, ಆಚರಣೆಗಳು ಇಂದಿಗೂ ಗ್ರಾಮೀಣ ಪರಿಸರದಲ್ಲಿ ಚಾಲ್ತಿಯಲ್ಲಿವೆ. ವಿಜಯನಗರ ಕಾಲದ ಶಾಸನಾಧಾರಗಳ ಹಿನ್ನೆಲೆಯಲ್ಲಿ ಎಲ್ಲಮ್ಮ (ಸವದತ್ತಿ), ಚೌಡೇಶ್ವರಿ (ಚೋಳಸಮುದ್ರಂ), ಇರುಕುಲಮ್ಮ (ನೆಲ್ಲೂರು), ಪೋಲಲದೇವಿ (ಮಂಗಳೂರು), ಮೂಕಾಂಬಿಕೆ (ಕೊಲ್ಲೂರು) ಮೊದಲಾದ ಹೆಣ್ಣುದೇವತೆಗಳಿಗೆ ಮಾತ್ರ ದೇವಾಲಯಗಳನ್ನು ನಿರ್ಮಿಸಲಾಗಿದೆ. ಉಳಿದಂತೆ ಅನೇಕ ದೇವತೆಗಳಿಗೆ ಸಾಂಪ್ರದಾಯಿಕ ದೇವಾಲಯಗಳೇನೂ ಇರಲಿಲ್ಲ. ಅಂಕಲಾದೇವಿ, ಮಾಂಕಾಳಮ್ಮ, ನೂಕಲಪರಮೇಶ್ವರಿ, ನಾಂಚರಮ್ಮ, ಗಾಳೆಮ್ಮ, ಎಕ್ಕಲಾದೇವಿ, ಮಾರಮ್ಮ, ದುರ್ಗಮ್ಮ, ಚೌಡಿ ಮೊದಲಾದ ದೇವತೆಗಳ ಆರಾಧನೆಯೂ ಇತ್ತು. ಆದರೆ ಆರಾಧನೆಯ ಸ್ವರೂಪ ಭಿನ್ನವಾಗಿದ್ದು, ಕ್ರೂರವಾಗಿರುತ್ತಿತ್ತು. ಈ ಕಾಲಘಟ್ಟದಲ್ಲಿ ಶಕ್ತಿದೇವತೆಗಳ ಉಪಾಸನೆಗಾಗಿ (ಒಲಿಸಿಕೊಳ್ಳಲು) ಜನರು ತಮ್ಮ ದೇಹಗಳನ್ನು ಉಗ್ರವಾಗಿ ಖಂಡಿಸುತ್ತಿದ್ದರು. ಜನರಲ್ಲಿ ಶಕುನ, ಕನಸು, ಸ್ವರ್ಗ-ನರಕ, ಮರುಜನ್ಮ ಮೊದಲಾದವುಗಳಲ್ಲಿ ಧಾರ್ಮಿಕ ನಂಬಿಕೆಗಳನ್ನು ಇಟ್ಟುಕೊಂಡಿದ್ದುದೂ ಉಂಟು. ಚಂಡಿ, ಚಾಮುಂಡಿ, ಭೈರವಿ, ಕೌಮಾರಿ, ಕಾಳಿ, ಕರ್ನಮೋಟಿ

ಮೊದಲಾದ ಚಂಡದೇವತೆಗಳ ಆರಾಧನೆಯ ಹೆಸರಿನಲ್ಲಿ ಪ್ರಾಣಿಬಲಿಯ ಪರಿಪಾಠ ಬೆಳೆದಿತ್ತು. ಅಲ್ಲದೆ ಗಂಡ ಸತ್ತ ಮೇಲೆ 'ಸತಿ' ಹೋಗುವ (ಬೆಂಕಿಗೆ ಹಾರುವ), ಆತ್ಮಬಲಿ (ಆತ್ಮಹತ್ಯೆ)ಯ ಆಚರಣೆಗಳು ಜಾರಿಯಲ್ಲಿದ್ದವು. ಬೆರಳನ್ನು ಕತ್ತರಿಸಿಕೊಳ್ಳುವ, ರಕ್ತವನ್ನು ಅರ್ಪಿಸುವ ರೂಢಿಗಳು ಸಹ ಚಾಲ್ತಿಯಲ್ಲಿ ಇದ್ದವು. 'ನಾಗರಕಾಟ'ವನ್ನು ತಪ್ಪಿಸಿಕೊಳ್ಳಲು 'ನಾಗಪೂಜೆ'ಯನ್ನು ಮಾಡುತ್ತಿದ್ದರು. ಆಲ, ಬೇವು ಇತ್ಯಾದಿ ಮರ-ಗಿಡಗಳನ್ನು ಪೂಜಿಸಲಾಗುತ್ತಿತ್ತು. ದಾನ-ಧರ್ಮ ಮೊದಲಾದ ಪದ್ಧತಿಗಳು ಸಹ ಧಾರ್ಮಿಕ ವಲಯದಲ್ಲಿ ಮನ್ನಣೆ ಪಡೆದಿದ್ದುದು ತಿಳಿದುಬರುತ್ತದೆ.

ಹಬ್ಬಗಳು

ವಿಜಯನಗರದ ಕಾಲದಲ್ಲಿ ಹಬ್ಬಗಳ ಆಚರಣೆ ಜನರ ಧಾರ್ಮಿಕ ಜೀವನದ ಸಂಕೇತವಾಗಿ ಪರಿಗಣಿತವಾಗಿದ್ದವು. ಸಾಂಸ್ಕೃತಿಕವಾಗಿ ಹಬ್ಬಗಳ ಆಚರಣೆ ಮಹತ್ವದ್ದು. ಸಮಾಜದ ನಾಲ್ಕುವರ್ಣಗಳ (ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ) ಜನರು ಹಬ್ಬಗಳಲ್ಲಿ ಪಾಲ್ಗೊಳ್ಳುತ್ತಿದ್ದರು. ಹಬ್ಬಗಳಲ್ಲಿ ಕೆಲವನ್ನು ನಾಡಹಬ್ಬ (ರಾಜಮನೆತನದ ಮುಂದಾಳತ್ವದಲ್ಲಿ), ಸಾರ್ವಜನಿಕ ಹಬ್ಬ, ಶೈವ-ವೈಷ್ಣವರ ಹಬ್ಬ, ದೇವಾಲಯಗಳೇ ಆಚರಿಸುವ ಹಬ್ಬಗಳನ್ನಾಗಿ ಗುರುತಿಸಬಹುದು. ಹಬ್ಬಗಳು ಕೆಡುಕನ್ನು (ದುಷ್ಟಶಕ್ತಿ)ಮೆಟ್ಟಿಹಾಕುವ ಜಯದ ಸಂಕೇತಗಳಾಗಿ ಪರಿಗಣಿತವಾಗಿವೆ. ಸಮಕಾಲೀನ ಶಾಸನಾಧಾರ, ವಿದೇಶಿ ಪ್ರವಾಸಿಗರ ಕಥನ ಹಾಗೂ ಸಾಹಿತ್ಯ ಕೃತಿಗಳಲ್ಲಿ ಶಿವರಾತ್ರಿ, ನವರಾತ್ರಿ (ವಿಜಯದಶಮಿ), ದೀಪಾವಳಿ, ವಸಂತೋತ್ಸವ(ಕಾಮನ ಅಥವಾ ಹೋಳಿ), ಯುಗಾದಿ, ಸಂಕ್ರಾಂತಿ, ರಥಸಪ್ತಮಿ, ಶ್ರೀಜಯಂತಿ, ರಾಮನವಮಿ, ಏಕಾದಶಿ, ಚತುರ್ಮಾಸ ವ್ರತ, ಧನುರ್ಮಾಸ ವ್ರತ, ಕಾರ್ತೀಕ ವ್ರತ, ಸೋಮವಾರ ವ್ರತ, ಹುಣ್ಣಿಮೆ-ಅಮಾವಾಸ್ಯೆ ಮೊದಲಾದ ಹಬ್ಬಗಳನ್ನು ಜನರು ಆಚರಿಸುತ್ತಿದ್ದರು ಎಂಬ ಉಲ್ಲೇಖಗಳಿವೆ.

ಕನಕದಾಸರು ತಮ್ಮ 'ಮೋಹನ ತರಂಗಿಣಿ'ಯಲ್ಲಿ ಹೋಳಿಹಬ್ಬ ಹಾಗೂ ವಸಂತೋತ್ಸವಗಳ ಬಗ್ಗೆ ವಿಶೇಷವಾಗಿ ವರ್ಣಿಸಿದ್ದಾರೆ. ವಿದೇಶಿ ಪ್ರವಾಸಿಗರು ಯುಗಾದಿ, ದೀಪಾವಳಿ, ನವರಾತ್ರಿ ಹಾಗೂ ಹೋಳಿ ಹಬ್ಬಗಳನ್ನು ಪ್ರಮುಖ ಹಬ್ಬಗಳೆಂದು ಉಲ್ಲೇಖಿಸಿದ್ದಾರೆ. ವಿಜಯನಗರದ ಅರಸರು ನವರಾತ್ರಿ ಉತ್ಸವವನ್ನು ಧಾರ್ಮಿಕವಾಗಿಯಷ್ಟೇ ಅಲ್ಲದೆ ರಾಜಕೀಯ ಪ್ರತಿಷ್ಠೆಯ ಸಂಕೇತವಾಗಿಯೂ ಪರಿಗಣಿಸಿದ್ದರು.

ಅರಸರು ಮತ್ತು ಅವರ ಧಾರ್ಮಿಕ ನಿಲುವುಗಳು

ವಿಜಯನಗರ ಸಾಮ್ರಾಜ್ಯವು ಅಸ್ತಿತ್ವಕ್ಕೆ ಬಂದದ್ದು ಪ್ರಸಿದ್ಧ ಧಾರ್ಮಿಕ ಕೇಂದ್ರವೆನಿಸಿದ್ದ ವಿರೂಪಾಕ್ಷನ ಸಾನ್ನಿಧ್ಯದ ಹಂಪೆಯಲ್ಲಿ. ಹರಿಹರ-ರಾಘವಾಂಕ ಈ 'ಪಂಪಾಕ್ಷೇತ್ರ'ವನ್ನು ಧರ್ಮದ ಪ್ರತೀಕವಾಗಿ ಪರಿಗಣಿಸಿ ವಿರೂಪಾಕ್ಷ(ಶಿವ)ನನ್ನು 'ಹಂಪೆಯರಸ'ನನ್ನಾಗಿ ಸ್ತುತಿಸಿದ್ದಾರೆ. ಈ ಧಾರ್ಮಿಕ ಕ್ಷೇತ್ರದಲ್ಲಿ ಸಂಗಮ ಮನೆತನದ ಹರಿಹರ ಮತ್ತು ಬುಕ್ಕರಾಯರು ರಾಜ್ಯವನ್ನು ನೆಲೆಗೊಳಿಸಿದ್ದರು. ಇವರ ಕಾಲದಿಂದ (ಸಂಗಮರು) ಅಳಿಯ ರಾಮರಾಯ(ಅರವೀಡು)ನ ಕಾಲದವರೆಗೂ ವಿವಿಧ ಮತ-ಧರ್ಮ, ಪಂಥ-ಉಪಪಂಥಗಳು ಒಟ್ಟೊಟ್ಟಿಗೆ ಸಹಬಾಳ್ವೆ ನಡೆಸುವ ಸೌಹಾರ್ದ ವಾತಾವರಣವನ್ನು ಅರಸರು ಒದಗಿಸಿಕೊಟ್ಟಿದ್ದರು. ಇವರ ಉದಾರವಾದಿ ಧಾರ್ಮಿಕ ಧೋರಣೆಗಳು ವಿದ್ಯಾರಣ್ಯ ಹಾಗೂ ಮಧ್ವಾಚಾರ್ಯ(ಶೈವ ಹಾಗೂ ವೈಷ್ಣವ)ರು ತಮ್ಮ ತಮ್ಮ ಪಂಥಗಳ ವಿಚಾರಗಳನ್ನು ಮಂಡಿಸಿ, ಆಚರಿಸಲು ಮುಕ್ತ ಅವಕಾಶಗಳನ್ನು ನೀಡಲಾಗಿತ್ತು. ಅರಸರ ಸಹಿಷ್ಣುತೆಯ ಭಾವನೆಗಳು 'ಹರಿ-ಹರ' (ಹರಿ-ವಿಷ್ಣು; ಹರ-ಶಿವ) ಪರಂಪರೆಯನ್ನು ಹಾಗೂ 'ತ್ರಿಮೂರ್ತಿ' (ಬ್ರಹ್ಮ-ವಿಷ್ಣು-ಮಹೇಶ್ವರರು ಒಂದೇ ಎಂಬುದು) ಭಾವವನ್ನು ರೂಪಿಸಿಕೊಟ್ಟಿದ್ದವು. ಇಲ್ಲಿ ಶೈವ ಮತ್ತು ವೈಷ್ಣವರಿಗೆ ಸರಿಸಮಾನವಾದ ದೃಷ್ಟಿಯನ್ನು ಹರಿಸಲಾಗಿತ್ತು. ಆರಂಭದಿಂದ ಕೊನೆಯವರೆವಿಗೂ

ವಿಜಯನಗರ ಸಾಮ್ರಾಜ್ಯದ ರಾಜಮುದ್ರೆ(ಚಿಹ್ನೆ)ಗಳಲ್ಲೂ 'ಶ್ರೀವಿರೂಪಾಕ್ಷ' (ಶಿವ) ಮತ್ತು 'ಶ್ರೀರಾಮ' (ವಿಷ್ಣುವಿನ ಅವತಾರ) ಎಂದೇ ಪ್ರಚುರಪಡಿಸಲಾಗಿದೆ.

ಕ್ರಿ.ಶ. ೧೩೬೮ರ ಶಾಸನದ ಉಲ್ಲೇಖದ ಪ್ರಕಾರ ಸಂಗಮರ ಕಾಲದಲ್ಲಿ ಭವ್ಯರ (ಜೈನರ) ಮತ್ತು ಭಕ್ತರ (ಶ್ರೀವೈಷ್ಣವರ) ನಡುವೆ ತಾತ್ವಿಕವಾದ ವಿವಾದವೊಂದು ಸಂಘರ್ಷಕ್ಕೆ ಎಡೆ ಮಾಡಿಕೊಟ್ಟಿತ್ತು. ಇದನ್ನು ಅಂದಿನ ಅರಸ ಬುಕ್ಕರಾಯನು ಮತೀಯ ದ್ವೇಷ ತಲೆದೋರುವುದಕ್ಕೆ ಮೊದಲೇ ಬಗೆಹರಿಸಿದ ಉದಾಹರಣೆ ಇದೆ. ಈ ರಾಜ್ಯವನ್ನಾಳಿದ ನಾಲ್ಕು ರಾಜಮನೆತನಗಳು ಮತೀಯ ಭಿನ್ನತೆಗಳನ್ನು, ಜಗಳಗಳನ್ನು ಹುಟ್ಟಿಹಾಕಿಸಿದ್ದುದರ ಬಗ್ಗೆ ಆಧಾರಗಳಿಲ್ಲ. ಎಲ್ಲ ದೇವಾಲಯ, ಮಠ, ಬಸದಿ, ಚೈತ್ಯ, ಚರ್ಚ್, ಮಸೀದಿ, ದರ್ಗಾಗಳಿಗೆ ಸರಿಸಮಾನ ದಾನ-ದತ್ತಿಗಳನ್ನು ನೀಡಿರುವುದು ತಿಳಿಯುತ್ತದೆ. ೨ನೇ ದೇವರಾಯನು ಹಿಂದೂ-ಮುಸ್ಲಿಮರು ಸಹಬಾಳ್ವೆ ನಡೆಸಲು ಅನುವು ಮಾಡಿಕೊಟ್ಟವನು. ಕ್ರೈಸ್ತರಿಗೂ ಸಮಾನ ಅವಕಾಶಗಳನ್ನು ನೀಡಿದ್ದುದರ ಬಗ್ಗೆ ಅಬ್ದುಲ್ ರಜಾಕನು ದಾಖಲಿಸಿದ್ದಾನೆ. ವಿಜಯನಗರದ ಅರಸರು ಹಂಪಿ, ಚಿದಂಬರಂ, ಕಾಳಹಸ್ತಿ, ತಿರುಮಲ, ಕಂಚಿ, ಶ್ರೀಶೈಲಂ, ತಿರುವಣ್ಣಾಮಲೈ, ಹರಿಹರ, ಸಂಗಮ, ಅಹೋಬಿಲಂ, ಶ್ರೀರಂಗಂ, ಕುಂಭಕೋಣಂ, ಮಹಾನದಿ, ಗೋಕರ್ಣ, ರಾಮೇಶ್ವರ ಮೊದಲಾದ ಧಾರ್ಮಿಕ ಕ್ಷೇತ್ರಗಳಿಗೆ ದಾನ-ದತ್ತಿಗಳನ್ನು ನೀಡಿ ಧಾರ್ಮಿಕ ಪರಿಸರವನ್ನು ಪ್ರೋತ್ಸಾಹಿಸಿರುವುದು ದಾಖಲಾಗಿವೆ.

ವಿಜಯನಗರದ ಅರಸರು ಆಳ್ವಿಕೆ ನಡೆಸುತ್ತಿದ್ದ ಸಂದರ್ಭದಲ್ಲಿ, ಅವರ ಮಾಂಡಲೀಕರಲ್ಲೂ ಧರ್ಮ ಸಹಿಷ್ಣುತೆಯ ವಾತಾವರಣವನ್ನು ಕಾಯ್ದಿರಿಸಲಾಗಿತ್ತು. ಅಲ್ಲದೆ ವಿಜಯನಗರೋತ್ತರದ ಪಾಳೆಯಗಾರರಲ್ಲಿ ಹಾಗೂ ಸಣ್ಣ-ಪುಟ್ಟ ಸಂಸ್ಥಾನಿಕರಲ್ಲಿ ಅನೇಕ ಧಾರ್ಮಿಕ ಆಚರಣೆಗಳು ಮುಂದುವರೆದುಕೊಂಡು ಬಂದುದರ ಬಗ್ಗೆ ಉಲ್ಲೇಖಗಳು ದೊರೆಯುತ್ತವೆ.

ಆಕರಗಳು

೧ 'ಆರ್ಕ್ಯಾಲಾಜಿಕಲ್ ಸರ್ವೆ ಆಫ್ ಮೈಸೂರ್' ವಾರ್ಷಿಕ ವರದಿಗಳು

೨ 'ಎಪಿಗ್ರಾಫಿಯಾ ಇಂಡಿಕಾ' ಸಂಪುಟಗಳು

೩ 'ಎಪಿಗ್ರಾಫಿಯಾ ಕರ್ನಾಟಿಕಾ' ಸಂಪುಟಗಳು

೪ 'ಸೌತ್ ಇಂಡಿಯನ್ ಇನ್ಸ್‌ಕ್ರಿಪ್ಷನ್ಸ್' ಸಂಪುಟಗಳು

೫ ಸೌತ್ ಇಂಡಿಯನ್ ಟೆಂಪಲ್ ಇನ್ಸ್‌ಕ್ರಿಪ್ಷನ್ಸ್ (ಸಂ: ಟಿ.ಎಸ್.ಸುಬ್ರಹ್ಮಣ್ಯಂ)

೬ ಇಂಡಿಯನ್ ಆ್ಯಂಟಿಕ್ವರಿ

೭ ಲಿಸ್ಟ್ ಆಫ್ ಆ್ಯಂಟಿಕ್ವಿಟೀಸ್ - ರಾಬರ್ಟ್‌ಸಿವೆಲ್

೮ ದಿ ಹಿಸ್ಟಾರಿಕಲ್ ಇನ್ಸ್‌ಕ್ರಿಪ್ಷನ್ಸ್ ಆಫ್ ದಿ ಸದರ್ನ್ ಇಂಡಿಯಾ - ರಾಬರ್ಟ್‌ಸಿವೆಲ್

೯ 'ಕ್ವಾಟರ್ಲಿ ಜರ್ನಲ್ ಆಫ್ ದಿ ಮಿಥಿಕ್ ಸೊಸೈಟಿ' ಸಂಪುಟಗಳು

೧೦ ವಿಜಯನಗರ ಸಿಕ್ಸ್‌ಸೆಂಟಿನರಿ ಕಮಮೊರೇಷನ್ ವಾಲ್ಯೂಂ, ೧೩೩೬

೧೧ ಸಿವೆಲ್, ರಾಬರ್ಟ್: ಎ ಫಾರ್‌ಗಾಟನ್ ಎಂಪೈರ್, ನ್ಯೂದಿಲ್ಲಿ ೧೯೭೦

೧೨ ಬಾರ್ಥ್, ಜೆ.: ಹಿಸ್ಟರಿ ಆಫ್ ರಿಲಿಜನ್ಸ್ ಇನ್ ಇಂಡಿಯಾ, ಲಂಡನ್, ೧೮೮೨

೧೩ ಬರ್ಟನ್ ಸ್ಟೈನ್: ಸೌತ್ ಇಂಡಿಯನ್ ಟೆಂಪಲ್ಸ್, ನ್ಯೂದಿಲ್ಲಿ, ೧೯೭೮

೧೪ ಹೆರಾಸ್, ರೆವರೆಂಡ್, ಎಚ್.: ಬಿಗಿನಿಂಗ್ಸ್ ಆಫ್ ವಿಜಯನಗರ ಹಿಸ್ಟರಿ, ಬಾಂಬೆ, ೧೯೩೪

೧೫ ಬ್ರೌನ್, ಪರ್ಸಿ: ಇಂಡಿಯನ್ ಆರ್ಕಿಟೆಕ್ಚರ್ (ಬುದ್ದಿಸ್ಟ್ ಅಂಡ್ ಹಿಂದು), ಬಾಂಬೆ, ೧೯೫೬

೧೬ ಸಾಲತೊರೆ, ಬಿ.ಎ.: ಮಿಡೈವಲ್ ಜೈನಿಸಂ ವಿತ್ ರೆಫರೆನ್ಸ್ ಟು ವಿಜಯನಗರ್, ಬಾಂಬೆ, ೧೯೩೮

೧೭ ಸರೋಜಿನಿದೇವಿ, ಕೊಂದೂರಿ: ರಿಲಿಜನ್ ಇನ್ ವಿಜಯನಗರ್ ಎಂಪೈರ್, ನ್ಯೂದಿಲ್ಲಿ, ೧೯೯೦

೧೮ ಮಹಾಲಿಂಗಂ, ಟಿ.ವಿ.: ಅಡ್ಮಿನಿಸ್ಟ್ರೇಷನ್ ಅಂಡ್ ಸೋಷಿಯಲ್ ಲೈಫ್ ಅಂಡರ್ ವಿಜಯನಗರ್, ಮದ್ರಾಸ್, ೧೯೪೦

೧೯ ಕರಮರ್‌ಕರ್, ಎ.ಪಿ.: ಕಲ್ಚರಲ್ ಹಿಸ್ಟರಿ ಆಫ್ ಕರ್ನಾಟಕ, ಧಾರವಾಡ, ೧೯೪೭

೨೦ ಹಯವದನರಾವ್,ಸಿ.: ಮೈಸೂರ್ ಗೆಜೆಟಿಯರ್, ಮೈಸೂರ್, ೧೯೩೦

೨೧ ಐಯ್ಯಂಗಾರ್, ಎಸ್.ಕೆ.: ದಿ ಸೋರ್ಸಸ್ ಆಫ್ ವಿಜಯನಗರ್ ಹಿಸ್ಟರಿ, ಮದ್ರಾಸ್, ೧೯೧೯

೨೨ ನೀಲಕಂಠಶಾಸ್ತ್ರಿ, ಕೆ.ಎ., ಮತ್ತು ವೆಂಕಟರಮಣಯ್ಯ, ಎನ್ (ಸಂ):ಫರ್ದರ್ ಸೋರ್ಸಸ್ ಆಫ್ ವಿಜಯನಗರ್ ಹಿಸ್ಟರಿ (ಸಂ: ೧-೩), ಮದ್ರಾಸ್, ೧೯೪೬

೨೩ ಭಂಡಾರ್ಕರ್, ಆರ್.ಜಿ.: ವೈಷ್ಣವಿಸಂ, ಶೈವಿಸಂ ಅಂಡ್ ಅದರ್ ಮೈನರ್ ರಿಲಿಜನ್ಸ್ ಸೆಕ್ಟ್ಸ್, ಪೂನಾ, ೧೯೩೮

೨೪ ದೇಸಾಯಿ,ಪಿ.ಬಿ.: ಜೈನಿಸಂ ಇನ್ ಸೌತ್ ಇಂಡಿಯಾ ಅಂಡ್ ಸಮ್ ಜೈನ್ ಎಪಿಗ್ರಾಫ್ಸ್, ಸೋಲಾಪುರ್, ೧೯೫೭

೨೫ ಕೃಷ್ಣಸ್ವಾಮಿ ಅಯ್ಯಂಗಾರ್, ಎಸ್.: ಸೌತ್ ಇಂಡಿಯಾ ಅಂಡ್ ಹರ್ ಮಹಮದನ್ ಇನ್ವೇಡರ್ಸ್, ಮದ್ರಾಸ್, ೧೯೨೧

೨೬ ಕೃಷ್ಣಶಾಸ್ತ್ರಿ, ಎಚ್.: ಸೌತ್ ಇಂಡಿಯನ್ ಇಮೇಜಸ್ ಆಫ್‌ಗಾಡ್ಸ್ ಅಂಡ್ ಗಾಡೆಸೆಸ್, ಮದ್ರಾಸ್, ೧೯೧೬

೨೭ ನಂದಿ, ಆರ್.ಎನ್.: ರಿಲಿಜಿಯಸ್ ಇನ್ಸಿಟ್ಯೂಷನ್ ಅಂಡ್ ಕಲ್ಟ್ಸ್ ಇನ್ ದಿ ಡೆಕ್ಕನ್, ದೆಹಲಿ, ೧೯೭೩

೨೮ ಪಂಚಮುಖಿ, ಆರ್.ಎಸ್.: ಹರಿದಾಸ್ ಸಾಹಿತ್ಯ ಆಫ್ ಕರ್ನಾಟಕ, ಬೆಂಗಳೂರು, ೧೯೫೭

೨೯ ಮುಗಳಿ, ಆರ್.ಎಸ್.: ಕನ್ನಡ ಸಾಹಿತ್ಯ ಚರಿತ್ರೆ, ಮೈಸೂರು, ೧೯೫೫

೩೦ ನೀಲಕಂಠಶಾಸ್ತ್ರಿ, ಎಸ್.: ಎ ಹಿಸ್ಟರಿ ಆಫ್ ಸೌತ್ ಇಂಡಿಯಾ, ೧೯೫೮

೩೧ ಶಾನ್‌ಭಾಗ್, ಡಿ.ಎನ್.: ಗಂಗಾದೇವಿಯ ಮದುರಾವಿಜಯಂ, ಧಾರವಾಡ, ೧೯೮೪

೩೨ ಬಸಪ್ಪ, ಎಸ್. (ಸಂ): ಶಿವತತ್ತ್ವ ಚಿಂತಾಮಣಿ, ಮೈಸೂರು, ೧೯೮೦

೩೩ ನಾಗೇಗೌಡ, ಎಚ್.ಎಲ್. (ಸಂ): ಪ್ರವಾಸಿ ಕಂಡ ಇಂಡಿಯಾ (ಸಂ-೨), ಮೈಸೂರು, ೧೯೬೬

೩೪ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಪರಂಪರೆ (ಸಂ-೨), ಬೆಂಗಳೂರು, ೧೯೯೨

೩೫ ಚಿದಾನಂದ ಮೂರ್ತಿ, ಎಂ.: ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಮೈಸೂರು, ೧೯೬೬

೩೬ ಶ್ರೀಕಂಠಶಾಸ್ತ್ರಿ, ಕೆ.: ವಿಜಯನಗರ ಕಾಲದ ಕನ್ನಡ ಸಾಹಿತ್ಯದಲ್ಲಿ ಜನಜೀವನ ಚಿತ್ರ, ಮೈಸೂರು, ೧೯೮೭

೩೭ ದೀಕ್ಷಿತ್, ಜಿ.ಎಸ್. (ಸಂ): ಸಂಗಮರ ಕಾಲದ ವಿಜಯನಗರ: ಅದರ ಇತಿಹಾಸ ಮತ್ತು ಸಂಸ್ಕೃತಿಗಳ ಅಧ್ಯಯನ, ಬೆಂಗಳೂರು, ೧೯೯೧

೩೮ ಭೂಸನೂರಮಠ, ಸಂ.ಶಿ.: ವಿಜಯ ಕಲ್ಯಾಣ, ಹಂಪೆ, ೧೯೮೮

೩೯ ಶ್ರೀ ಮನ್ಮಧ್ವ ಸಿದ್ಧಾಂತಿ ಗ್ರಂಥಾಲಯ (ಸಂ): ಕನಕದಾಸ ಕೀರ್ತನೆಗಳು, ಉಡುಪಿ, ೧೯೪೮

೪೦ – ” – (ಸಂ), ಪುರಂದರದಾಸರ ಕೀರ್ತನೆಗಳು, ಉಡುಪಿ

೪೧ ಪಂಚಲಿಂಗೇಗೌಡ (ಸಂ): ರಾಮಧಾನ್ಯಚರಿತೆ, ಮೈಸೂರು

೪೨ ವರದರಾಜರಾವ್, ಜಿ. (ಸಂ): ಶ್ರೀಪಾದರಾಯರ ಕೀರ್ತನೆಗಳು, ಮೈಸೂರು, ೧೯೭೩

೪೩ ಕೃಷ್ಣಶರ್ಮ, ಬೆಟಗೇರಿ: ಕರ್ನಾಟಕ ಜನಜೀವನ, ಧಾರವಾಡ, ೧೯೫೫

ಅಧ್ಯಾಯ : ಹದಿಮೂರು

ಕಲೆ ಮತ್ತು ವಾಸ್ತುಶಿಲ್ಪ

ವಿಜಯನಗರ ರಾಜರು ಹೆಚ್ಚುಕಡಮೆ ಇಡೀ ದಕ್ಷಿಣಭಾರತವನ್ನು ಆಳಿದರು. ಕಲೆ ಮತ್ತು ವಾಸ್ತು ಶಿಲ್ಪಗಳ ಕ್ಷೇತ್ರದಲ್ಲಿ ಅವರ ಕೊಡುಗೆ ಮಹತ್ವದ್ದಾಗಿದೆ. ದಕ್ಷಿಣ ಭಾರತಾದ್ಯಂತ ಹರಡಿಕೊಂಡಿರುವ ಈ ಕಾಲದ ವಾಸ್ತುಶಿಲ್ಪೀಯ ಅವಶೇಷಗಳನ್ನು ನಾಲ್ಕು ಬಗೆಗಳಾಗಿ ವಿಂಗಡಿಸಬಹುದು. ೧. ದೇವಾಲಯ ವಾಸ್ತು ಶಿಲ್ಪ, ೨. ಇಸ್ಲಾಮಿಕ್ ವಾಸ್ತುಶಿಲ್ಪ, ೩. ಪೌರ ವಾಸ್ತುಶಿಲ್ಪ, ಹಾಗೂ ೪. ಸೇನಾ ಸಂಬಂಧವಾದ ವಾಸ್ತುಕಲೆ.

೧. ದೇವಾಲಯ ವಾಸ್ತುಶಿಲ್ಪ

ವಿಜಯನಗರದ ರಾಜರು ಮೊದಲು, ಮುಸ್ಲಿಮರ ಧಾಳಿಗಳಿಂದ ಹಾನಿಗೊಳಗಾದ ದೇವಾಲಯಗಳನ್ನು ಜೀರ್ಣೋದ್ಧಾರಗೊಳಿಸುವ ಕಾರ್ಯವನ್ನು ಕೈಗೊಂಡರು. ಹೊಯ್ಸಳರು ಕಟ್ಟಿಸಿ, ಮುಸ್ಲಿಂ ಧಾಳಿಯಿಂದ ಹಾನಿಗೊಂಡ ಸುಪ್ರಸಿದ್ಧ ಚೆನ್ನಕೇಶವ ದೇವಾಲಯವು ೨ನೇ ಹರಿಹರನ ಕಾಲದಲ್ಲಿ ಗುಂಡ ದಂಡನಾಥನು ದುರಸ್ತಿಗೊಳಿಸಿದ ಅಂಥದೊಂದು ದೇವಾಲಯ.[೧] ದುರಸ್ತಿಗಾಗಿ ಮತ್ತು ಪೂಜೆಪುನಸ್ಕಾರಗಳನ್ನು ತಪ್ಪದೆ ನಡೆಸುವುದಕ್ಕಾಗಿ ದೇವಾಲಯಗಳಿಗೆ ಹಲವು ದಾನಗಳನ್ನು ಮಾಡಲಾಯಿತು. ಈ ಅವಧಿಯಲ್ಲಿ ಹಲವು ಹೊಸ ಬಗೆಯ ಪೂಜೆಗಳನ್ನು ಪ್ರಾರಂಭ ಮಾಡಿಸಲಾಯಿತು. ಹಿಂದಿನ ಕಾಲದ ಸಣ್ಣ ದೇವಾಲಯಗಳು ಈ ಪೂಜೆಗಳನ್ನು ನಡೆಸಲು ಸಾಕಾಗುತ್ತಿರಲಿಲ್ಲ. ಇರುವ ದೇವಾಲಯಗಳಿಗೆ ಹೊಸ ಮಂಟಪಗಳನ್ನು ಸೇರಿಸಲಾಯಿತು, ವಿಶಾಲವಾದ ಹೆಚ್ಚು ಸಂಖ್ಯೆಯ ಮಂಟಪಗಳಿದ್ದ ಹೊಸ ದೇವಾಲಯಗಳನ್ನು ನಿರ್ಮಿಸಲಾಯಿತು. ದೇವಾಲಯ ಪೂಜಾಕ್ರಮದಲ್ಲಿ ನೃತ್ಯ ಮತ್ತು ಸಂಗೀತ ಪ್ರದರ್ಶನಗಳಿಗೆ ಹೆಚ್ಚಿನ ಪ್ರಾಮುಖ್ಯ ನೀಡಲಾಯಿತು. ಹಂಪಿಯಲ್ಲಿ ಮಾಧವನಿಗಾಗಿ, ನೃತ್ಯ, ಗೀತ ಮತ್ತು ವಾದ್ಯಗಳಿಗೆ ಹೊಂದುವಂತಹ ಇಪ್ಪತ್ತೈದು ಅಂಕಣಗಳ ಒಂದು ರಂಗಮಂಟಪವನ್ನು ಕಟ್ಟಿಸಲಾಯಿತು ಎಂದು ಒಂದು ಶಾಸನವು ಸ್ಪಷ್ಟವಾಗಿ ಹೇಳುತ್ತದೆ.[೨] ಹಿಂದೆ ಚಾಲುಕ್ಯರು ಮತ್ತು ಹೊಯ್ಸಳರ ಕಾಲದಲ್ಲಿ ಈ ಸಭಾಂಗಣವು ಕೇವಲ ಒಂಭತ್ತು ಅಂಕಣಗಳದ್ದಾಗಿತ್ತು.

ದೇವಾಲಯಗಳಲ್ಲಿ ನಡೆಸುತ್ತಿದ್ದ ಪೂಜೆಗಳು ಮತ್ತು ಉತ್ಸವಗಳು ಹೀಗಿದ್ದುವು: ನಿತ್ಯೋತ್ಸವ, ಪಕ್ಷೋತ್ಸವ (ಹದಿನೈದು ದಿನಗಳಿಗೊಮ್ಮೆ ನಡೆಯುವುದು), ಮಾಸೋತ್ಸವ (ತಿಂಗಳಿಗೊಮ್ಮೆ ನಡೆಯುವುದು), ಸಂವತ್ಸರೋತ್ಸವ (ವರ್ಷಕ್ಕೊಮ್ಮೆ ನಡೆಯುವುದು) ಚೈತ್ರ, ಫಾಲ್ಗುಣ, ವೈಶಾಖ, ಸಂಕ್ರಮಣ ಇತ್ಯಾದಿ ಬೇರೆ ಬೇರೆ ಸಂದರ್ಭಗಳಲ್ಲಿ ನಡೆಯುತ್ತಿದ್ದ ರಥೋತ್ಸವಗಳು. ಮಹಾರಂಗಮಂಟಪ (ನೃತ್ಯ-ಸಂಗೀತ ಕಾರ್ಯಕ್ರಮಗಳಿಗಾಗಿ), ಕಲ್ಯಾಣಮಂಟಪ (ಮದುವೆ ನಡೆಯುವ ಸಭಾಂಗಣ), ಉಯ್ಯಾಲೆ ಮಂಟಪ, ವಸಂತ ಮಂಟಪ, ರಥೋತ್ಸವ ಮಂಟಪ, ಕನ್ನಡಿ ಮಂಟಪ ಇತ್ಯಾದಿ ಹೊಸ ಮಂಟಪಗಳನ್ನು ಸೇರಿಸುವುದು ಅಗತ್ಯವಾಯಿತು.

ಸಾಮಾನ್ಯ ಉದ್ದ್ವಳತೆಯ, ಅಂಗಗಳನ್ನುಳ್ಳ ದೇವಾಲಯವೆಂದರೆ, ಗರ್ಭಗುಡಿ, ಅದರ ಪಕ್ಕದ ಕೋಣೆ, ಇನ್ನೊಂದು ಕೊಠಡಿ, ೪ ಅಥವಾ ೧೬ ಕಂಬಗಳ ಹಜಾರ, ಮತ್ತು ಹಲವು ಕಂಬಗಳ ಹಜಾರ ಇರುತ್ತಿದ್ದುವು. ಇವುಗಳನ್ನು ಸಮಕಾಲೀನ ಶಾಸನಗಳಲ್ಲಿ ಗರ್ಭಗೃಹ, ಸುಕನಾಸಿ/ಅಂತರಾಳ, ಅಂತರಾಳ, ರಂಗಮಂಟಪ ಮತ್ತು ಮಹಾರಂಗಮಂಟಪ ಎಂದು ಉಲ್ಲೇಖಿಸಿದೆ.[೬] ಆದರೆ ಅನೇಕ ವಿದ್ವಾಂಸರು ಮೇಲ್ಕಂಡ ಭಾಗಗಳನ್ನು ವರ್ಣಿಸಲು ಅರ್ಧಮಂಟಪ, ನವರಂಗ, ಮಹಾಮಂಡಪ ಮತ್ತು ಅಗ್ರಮಂಡಪ ಎಂಬ ಪದಗಳನ್ನು ಉಪಯೋಗಿಸಿದ್ದಾರೆ. ವಿಜಯನಗರ ಕಾಲದ ದೇವಾಲಯಗಳನ್ನು ವರ್ಣಿಸಲು ಇವು ಸರಿಯಾದ ಪದಗಳಲ್ಲ.

ಈ ದೇವಾಲಯಗಳು ನಂತರದ ಚಾಲುಕ್ಯರು ಹಾಗೂ ಹೊಯ್ಸಳರ ಕಾಲದ ಕೆತ್ತನೆಗಳನ್ನು ಒಳಗೊಂಡಿವೆ. ರಚನೆಗೆ ಗ್ರಾನೈಟ್ ಶಿಲೆಯನ್ನು ಬಳಸಲಾಗಿದೆ. ಚೋಳರು ಮತ್ತು ಪಾಂಡ್ಯರ ದೇವಾಲಯಗಳಲ್ಲಿ ಕಂಡುಬರುವಂತೆ, ಮಹಾದ್ವಾರಗಳ ಮೇಲೆ ಗೋಪುರಗಳು, ಉಪಪೀಠ ಅಥವಾ ಎರಡು ಅಧಿಷ್ಠಾನ, ಎತ್ತರವಾದ ಕಂಬಗಳಿಂದ ಕೂಡಿದ ವಿಶಾಲವಾದ ಮಂಟಪಗಳು, ದೇವಿಯ ವಿಗ್ರಹಕ್ಕಾಗಿ ಪ್ರತ್ಯೇಕ ಗರ್ಭಗೃಹ ಇವುಗಳನ್ನೂ ನೋಡಬಹುದು.

ವಿಜಯನಗರ ಕಾಲದ ಮೊದಮೊದಲ ದೇವಾಲಯಗಳಲ್ಲಿ ಶೃಂಗೇರಿಯ ವಿದ್ಯಾಶಂಕರ ದೇವಾಲಯವೂ ಒಂದು ಎಂಬುದಾಗಿ ಕೆಲವು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ.[೭] ಆದರೆ ಇನ್ನೂ ಬಹಳ ಮುಂದಿನ ಕಾಲದಲ್ಲಿ ವಿಜಯನಗರ ದೇವಾಲಯಗಳಲ್ಲಿ ಅಳವಡಿಸಿದ ಸಂಕೀರ್ಣ ಸ್ವರೂಪದ ಕಂಬಗಳು ಈ ದೇವಾಲಯದಲ್ಲಿವೆ. ದೇವಾಲಯಗಳಿಗೆ ಸಂಬಂಧಿಸಿದಂತೆ ಕಂಬಗಳ ಸ್ವರೂಪದ ವಿಕಾಸವನ್ನು ಕುರಿತು ಮುಂದೆ ಚರ್ಚಿಸಲಾಗಿದೆ. ಈ ವಿಕಾಸವನ್ನು ಮೂರು ಹಂತಗಳಲ್ಲಿ ಗುರುತಿಸಬಹುದು:

ಮೊದಲನೆಯ ಹಂತ: ೧೩೩೬–೧೪೦೦

ಮೊದಲನೆಯ ಹಂತದ ದೇವಾಲಯಗಳಲ್ಲಿ ಒಂದು ಗರ್ಭಗೃಹ, ಒಂದು ಸುಕನಾಸಿ, ಒಂದು ಅಂತರಾಳ ಮತ್ತು ಒಂದು ರಂಗಮಂಟಪ, ಒಂಟಿ ಅಧಿಷ್ಠಾನ, ಗರ್ಭಗೃಹದ ಮೇಲೆ ಕಲ್ಲಿನ ಕಟ್ಟಡ, ಹಾಗೂ ಚೌಕಾಕಾರದ ಕಂಬಗಳು ಇರುತ್ತವೆ. ಅಹಮದ್‌ಖಾನ ಧರ್ಮಶಾಲೆಯ ಬಳಿ ಇರುವ ಕೃಷ್ಣ ದೇವಸ್ಥಾನ, ಕೋಟಿಲಿಂಗದ ಬಳಿಯ ನರಸಿಂಹ ದೇವಸ್ಥಾನ ಮತ್ತು ಗಾಣಿಗಿತ್ತಿ ಜೈನ ದೇವಾಲಯ, ಎಲ್ಲವೂ ಹಂಪಿಯಲ್ಲೇ, ಈ ಹಂತಕ್ಕೆ ಸೇರಿದವು. ಇವೆಲ್ಲವುಗಳಲ್ಲೂ ಗರ್ಭಗೃಹದ ಮೇಲೆ ಕಲ್ಲಿನ ಕಟ್ಟಡ, ಒಂಟಿ ಅಧಿಷ್ಠಾನ, ಕೆಳಗೆ ಚೌಕಾಕಾರವಾಗಿರುವ ಕಂಬಗಳು, ಸಂಪರ್ಕಕಲ್ಪಿಸುವ ೧೬-೮-೧೬ ಪಾರ್ಶ್ವ ಪಟ್ಟಿಕೆಗಳು, ಮೇಲಿನ ಚೌಕಾಕಾರ, ಮಡಕೆಯ ಮೇಲುಭಾಗದಂತೆ ಕಾಣುವ ಮೇಲುಭಾಗ, ಚಕ್ರಾಕಾರದ ಬೋದಿಗೆ ಇವೆ. ಮಧ್ಯಭಾಗದಲ್ಲಿ ಕೆಳಭಾಗವು ಹೊರಬಾಗಿದ ಆಕಾರವುಳ್ಳ ಇಳಿಜಾರಾದ ಚಾಚುಗಳಿಂದ ಕೂಡಿದ ಚೌಕಟ್ಟು ಕಾಣಿಸುತ್ತದೆ. ಹೊರಗೆ ಚಾಲುಕ್ಯ ಮತ್ತು ಹೊಯ್ಸಳ ದೇವಾಲಯಗಳಲ್ಲಿನಂತೆ ಪ್ರದಕ್ಷಿಣ ಪಥವಿದೆ. ಸುಮಾರು ಕ್ರಿ.ಶ. ೧೩೭೯ರಲ್ಲಿ ೨ನೇ ಹರಿಹರನ ಆಳಿಕೆಯಲ್ಲಿ ಕಟ್ಟಿಸಿದ ನರಸಿಂಹ ದೇವಾಲಯ.[೮] ಅದೇ ರಾಜನ ಆಳಿಕೆಯ ಅವಧಿಯಲ್ಲಿ ಕ್ರಿ.ಶ. ೧೩೮೫ರಲ್ಲಿ ಇರುಗ ದಂಡನಾಯಕನು ಕಟ್ಟಿಸಿದ ಗಾಣಿಗಿತ್ತಿ ಜೈನ ದೇವಾಲಯ (ಕುಂಥುಜಿನನಾಥನ ಚೈತ್ಯಾಲಯ).[೯] ಈ ಎರಡರಲ್ಲೂ ಸರಳವಾದ ಗೋಡೆಗಳು ಮತ್ತು ಕಳಿಂಗಶೈಲಿಯ ಮೇಲುರಚನೆ, ಪಿರಮಿಡ್ ಆಕಾರದಲ್ಲಿ ಮೆಟ್ಟಿಲು ಮೆಟ್ಟಿಲಾಗಿರುವಂತೆ ರಚಿತವಾಗಿರುವುದನ್ನು ನೋಡಬಹುದು. ಅಹಮದ್‌ಖಾನನ ಧರ್ಮಶಾಲೆಯ ಬಳಿ ಇರುವ ಕೃಷ್ಣ ದೇವಾಲಯವು ಚೋಳ ದೇವಾಲಯಗಳಲ್ಲಿನಂತೆ ಒಂದು ಉಪಪೀಠದ ಮೇಲೆ ನಿರ್ಮಿತವಾಗಿದೆ. ಅದರ ಗೋಡೆಗಳಲ್ಲಿ ಗೋಡೆ ಕಂಬಗಳಿವೆ. ಕುಂಭ ಪಂಜರಗಳು ಮತ್ತು ದೇವಕೋಷ್ಠಗಳು (ಅರೆಗಳು ಅಥವಾ ಗೂಡುಗಳು) ಇವೆ. ಗರ್ಭಗೃಹದ ಹಾರ ಭಾಗದಲ್ಲಿ ಸಾಲ,

ಕೂಟ ಮತ್ತು ಪಂಜರಗಳಿವೆ. ಶುದ್ಧ ದಕ್ಷಿಣ ಭಾರತೀಯ ಶೈಲಿಯಲ್ಲಿ, ಅಂದರೆ ದ್ರಾವಿಡಶೈಲಿಯಲ್ಲಿ ರಚಿತವಾದ ಈ ದೇವಾಲಯದ ಮೇಲುರಚನೆಯಲ್ಲಿ ಇನ್ನೊಂದು ತಲ (ಮಾಳಿಗೆ) ಇದೆ. ಅದರ ಗೋಡೆಯೂ ಗೋಡೆಗಂಬಗಳಿಂದ ಅಲಂಕೃತವಾಗಿದೆ. ಮೇಲೆ ಗ್ರೀವ ಮತ್ತು ಚೌಕಾಕಾರದ ಶಿಖರ ಇವೆ. ಈ ದೇವಾಲಯವು ೧೪ನೆಯ ಶತಮಾನದ ಕೊನೆಯ ಪಾದಕ್ಕೆ ಸೇರಿದುದೆಂದು ಹೇಳಬಹುದು.[೭] ಮಾಳಿಗೆಗಳುಳ್ಳ ಗೋಪುರವಿರುವ ಮಹಾದ್ವಾರವನ್ನು ನರಸಿಂಹ ದೇವಾಲಯದಲ್ಲಿ ನೋಡಬಹುದು. ಈ ಸಂಕೀರ್ಣದಲ್ಲಿ ಮುಖ್ಯದೇವರ ಪತ್ನಿಗಾಗಿ ಪ್ರತ್ಯೇಕವಾದ ಗರ್ಭಗೃಹವಿರುತ್ತದೆ. ಈ ದೇವಾಲಯಗಳ ಛಾವಣಿಯಲ್ಲಿ ಒಂದಕ್ಕಿಂತ ಒಂದು ಸಣ್ಣದಾದ ಚೌಕಗಳು, ಅವುಗಳ ನಡುವೆ ತಲೆಕೆಳಗಾದ ತಾವರೆ ಆಕಾರ ಇರುತ್ತದೆ.

ಎರಡನೆಯ ಹಂತ : ೧೪೦೦-೧೫೦೦

ಮೊದಲನೆಯ ಹಂತದ ಮಾದರಿಯ ದೇವಾಲಯಗಳ ನಿರ್ಮಾಣವು ಈಗಲೂ ಮುಂದುವರಿಯುತ್ತದೆ. ಕ್ರಿ.ಶ. ೧೪೨೬ರಲ್ಲಿ ೨ನೇ ದೇವರಾಯನು ಹಂಪಿಯಲ್ಲಿ ಕಟ್ಟಿಸಿದ ಪಾರ್ಶ್ವನಾಥ ದೇವಾಲಯ ಅಂತಹ ಒಂದು ಮಾದರಿಯಾಗಿದೆ.[೮] ಆದರೆ ಈ ಹಂತದಲ್ಲಿ ಹಲವಾರು ನೂತನ ಅಂಶಗಳು ಸೇರ್ಪಡೆಗೊಂಡಿವೆ. ಚೌಕಾಕಾರದ ಕಂಬ ಹಾಗೆಯೇ ಉಳಿದಿದೆ. ಆದರೆ ಮೇಲುಭಾಗದ ಅರ್ಧ ಮಡಕೆಯಾಕಾರಕ್ಕೆ ಬದಲು ಅಲ್ಲೂ ಒಂದು ಚೌಕವಿದೆ. ಹಾಗಾಗಿ ಇಲ್ಲಿ ಅಷ್ಟಕೋನಾಕೃತಿಯ ಮತ್ತು ೧೬ ಪಾರ್ಶ್ವಗಳುಳ್ಳ ಪಟ್ಟಿಕೆಗಳಿಂದ ಸಂಪರ್ಕಗೊಂಡ ಮೂರು ಚೌಕವಾದ ಘನಾಕೃತಿಗಳನ್ನು ಜೋಡಿಸಿದಂತೆ ಕಾಣುವ ಕಂಬಗಳನ್ನು ನೋಡಬಹುದು. ಈ ಚೌಕಗಳ ನಾಲ್ಕೂ ಮುಖಗಳಲ್ಲಿ ಶಿಲ್ಪಗಳನ್ನು ಅಲಂಕರಿಸಿದೆ. ಹೊರಗೆ ಜೋಡಿ ಅಧಿಷ್ಠಾನಗಳು ಒಂದರ ಮೇಲೊಂದನ್ನು ಇರಿಸಿದಂತೆ ಕಾಣುತ್ತವೆ. ಗೋಡೆಗಂಬಗಳು, ಕುಂಭಪಂಜರಗಳು ಮತ್ತು ಅರೆಗಳು ಸರ್ವೇಸಾಮಾನ್ಯವಾದ ಲಕ್ಷಣಗಳಾಗುತ್ತವೆ. ದಕ್ಷಿಣ ಭಾರತೀಯ ವಿಮಾನ ಮಾದರಿಯ ಇಟ್ಟಿಗೆಯ ಮೇಲುಕಟ್ಟಡವನ್ನು ಇಲ್ಲಿ ಪರಿಚಯಗೊಳಿಸಿದೆ. ದೇವಾಲಯದ ಸುತ್ತ ಪ್ರಾಕಾರವಿದೆ ಮತ್ತು ಒಂದು ಮಹಾದ್ವಾರವಿದೆ. ೧ನೇ ದೇವರಾಯನ ಕಾಲದಲ್ಲಿ (ಕ್ರಿ.ಶ. ೧೪೦೬-೧೪೨೨) ಕಟ್ಟಿಸಿದ ರಾಮಚಂದ್ರ (ಹಜಾರರಾಮ) ದೇವಾಲಯವು ಈ ಹಂತದ ಒಂದು ಮುಖ್ಯವಾದ ದೇವಾಲಯ.[೯] ಪೂರ್ವಾಭಿಮುಖವಾಗಿರುವ ಮುಖ್ಯ ದೇವಾಲಯದಲ್ಲಿ ಒಂದು ಗರ್ಭಗೃಹವಿದೆ. ಸುಕನಾಸಿ, ಅಂತರಾಳ, ರಂಗಮಂಟಪ ಮತ್ತು ಮುಖಮಂಟಪಗಳು ಉತ್ತರ, ದಕ್ಷಿಣ ಮತ್ತು ಪೂರ್ವಗಳಲ್ಲಿವೆ. ಪೂರ್ವದ ಮುಖಮಂಟಪವು ಈಚಿನದು. ರಂಗಮಂಟಪದಲ್ಲಿ ಕರಿಯಕಲ್ಲಿನ ನಾಲ್ಕು ಚೌಕಾಕಾರದ ಸ್ತಂಭಗಳಿವೆ. ಪ್ರತಿಯೊಂದು ಕಂಬದಲ್ಲೂ ಮೂರು ಚೌಕನಾದ ಘನಗಳಿವೆ. ಪ್ರತಿಚೌಕದ ನಾಲ್ಕೂ ಮುಖಗಳಲ್ಲಿ ಶಿಲ್ಪದ ಅಲಂಕಾರವಿದೆ. ಬಹು ನಯವಾದ ಕೆತ್ತನೆ ಮಾಡಿ ಮೆರುಗು ಕೊಡಲಾಗಿದೆ. ಇಲ್ಲಿ ಕೆತ್ತಿರುವ ಶಿಲ್ಪಗಳಲ್ಲಿ ವಿಷ್ಣುವಿನ ೧೦ ಅವತಾರಗಳು ಮತ್ತು ೨೪ ರೂಪಗಳು ಸೇರಿವೆ. ಈ ಕಂಬಗಳ ಮೇಲಿರುವ ಬೋದಿಗೆಗಳು ಗುಂಡಗೆ ಬಾಗಿದ್ದು ಮೊಗ್ಗಿನ ಆಕಾರದಲ್ಲಿ ನೇತಾಡುತ್ತವೆ (ಪುಷ್ಪ ಬೋದಿಗೆ). ಹೊರಗಡೆ ಗೋಡೆಗಳ ಮೇಲೆ ರಾಮಾಯಣದ ಕಥೆಯನ್ನು ಚಿತ್ರಿಸುವ ಉಬ್ಬುಶಿಲ್ಪ ಪಟ್ಟಿಕೆಗಳನ್ನು ಜೋಡಿಸಿ ಅಲಂಕರಿಸಿದೆ. ದೇವಿಯ ಗರ್ಭಗುಡಿಯು ಮುಖ್ಯ ಗರ್ಭಗುಡಿಯ ವಾಯವ್ಯ ದಿಕ್ಕಿನಲ್ಲಿದೆ. ಮುಖ್ಯ ಆಲಯದಿಂದ ಪ್ರತ್ಯೇಕಗೊಂಡ ಎರಡು ಮಂಟಪಗಳಿವೆ. ಒಂದು ಈಶಾನ್ಯಕ್ಕೆ ಇನ್ನೊಂದು ನೈಋತ್ಯಕ್ಕೆ. ಇವು ಆಮೇಲಿನ ಸೇರ್ಪಡೆಗಳು. ಈಶಾನ್ಯ ಮಂಟಪದ ಗೋಡೆಯ ಮೇಲಿರುವ ಶಾಸನದ ಕಾಲ ಕ್ರಿ.ಶ. ೧೫೧೩. ಅದು ಕೃಷ್ಣದೇವರಾಯನ ಆಡಳಿತಾವಧಿಗೆ ಸೇರಿದ್ದು.[೧೦] ಒಳಗಡೆ ಪ್ರಾಕಾರಗೋಡೆಯ ಒಂದು ಭಾಗದಲ್ಲಿ ರಾಮಾಯಣದ ದೃಶ್ಯಗಳನ್ನು ಚಿತ್ರಿಸಿರುವ ಉಬ್ಬುಶಿಲ್ಪ ಪಟ್ಟಿಕೆಗಳಿವೆ. ಹೊರಗೆ ಆನೆಗಳು, ಕುದುರೆಗಳು, ಯೋಧರು ಕೋಲಾಟವಾಡುವ ಹೆಂಗಸರು ಇವರ ಮೆರವಣಿಗೆಯನ್ನು ಚಿತ್ರಿಸುವ ಶಿಲ್ಪಗಳಿವೆ. ಇವು ಮಹಾನವಮಿ ಉತ್ಸವದ ಸಮಯದಲ್ಲಿ ನಡೆಯುತ್ತಿದ್ದ ವೈಭವದ ಮೆರವಣಿಗೆಯನ್ನು ನಮ್ಮ ನೆನಪಿಗೆ ತರುತ್ತವೆ.

ಹಂಪಿಯ ಬಳಿ ನಿಂಬಾಪುರದಲ್ಲಿ ೨ನೇ ದೇವರಾಯನು ಕ್ರಿ.ಶ. ೧೪೫೦ರಲ್ಲಿ ಕಟ್ಟಿಸಿದ ಸೌಮ್ಯ ಸೋಮೇಶ್ವರ ದೇವಾಲಯದಲ್ಲಿ ಮೊದಲನೆಯ ಹಂತದ ಒಂಟಿ ಅಧಿಷ್ಠಾನ, ಚೌಕಾಕಾರದ ಸ್ತಂಭಗಳು ಇವೆ. ಅವುಗಳ ಕೆಳಗಿನ ಮತ್ತು ಮೇಲಿನ ಚೌಕಗಳಲ್ಲಿ ಶಿಲ್ಪಗಳ ಅಲಂಕಾರವಿದೆ.[೧೧] ಬೋದಿಗೆಗಳು ಪುಷ್ಪಬೋದಿಗೆ ಮಾದರಿಯವೇ. ಎರಡನೆಯ ಹಂತದ ಇಟ್ಟಿಗೆಯ ಮೇಲುಕಟ್ಟಡ ಇಲ್ಲಿಯೂ ಇದೆ. ಮುಖ್ಯ ಆಲಯದ ಉತ್ತರಕ್ಕೆ ಸಂಧ್ಯಾಮಂಟಪ ಇದೆ.

ನಗರದ ನೈಋತ್ಯ ಭಾಗದ ಕೋಟೆಯ ದೊಡ್ಡ ಬಾಗಿಲಿನ ಬಳಿ ಒಂದು ಸಣ್ಣ ಕೃಷ್ಣ ದೇವಸ್ಥಾನವಿದೆ. ಅದು ಈ ಹಂತದ ಅಸಾಧಾರಣವೆನಿಸುವ ಸಣ್ಣ ದೇವಾಲಯ. ಅದನ್ನು ಕಟ್ಟಿಸಿದವನು ಮಲ್ಲಿಕಾರ್ಜುನನ ಚೌರಿ ಹಿಡಿಯುವವನಾದ ಶ್ರೀರಂಗು ಎನ್ನುವವನು. ದೇವಾಲಯದಲ್ಲಿ ಶ್ರೀರಂಗು ಹಾಗೂ ಮಲ್ಲಿಕಾರ್ಜುನ (೧೪೪೭-೧೪೬೫) ಇವರ ಕೆತ್ತಿದ ಶಿಲ್ಪಗಳಿವೆ. ಗರ್ಭಗೃಹದ ಬಾಗಿಲ ಪಕ್ಕದಲ್ಲಿ ಇವುಗಳನ್ನು ಕೆತ್ತಿದೆ.[೧೨] ಈ ದೇವಾಲಯದಲ್ಲಿ ಒಂದು ಗರ್ಭಗೃಹ ಮತ್ತು ಒಂದು ಸಣ್ಣ ಮಂಟಪ ಇವೆ. ಕಂಬಗಳು ಮೂರು ಚೌಕಗಳು ಶಿಲ್ಪಗಳ ಅಲಂಕಾರ ಮತ್ತು ಪುಷ್ಪಬೋದಿಗೆಗಳಿಂದ ಕೂಡಿವೆ.

ಮೇಲುಕೋಟೆಯ ನಾರಾಯಣಸ್ವಾಮಿ ದೇವಾಲಯದ ರಂಗಮಂಟಪವು ೧೫ನೆಯ ಶತಮಾನದ ಉತ್ತರಾರ್ಧದಲ್ಲಿ ನಿರ್ಮಿತವಾದದ್ದು. ಮೂರು ಚೌಕಗಳಿಂದ ಕೂಡಿದ, ಹಾಗೂ ಎರಡು ಚೌಕಗಳು ಮತ್ತು ಮೇಲೆ ಮಡಕೆಯಾಕಾರಗಳಿಂದ ಕೂಡಿದ ಕಂಬಗಳನ್ನು ಇಲ್ಲಿ ನೋಡಬಹುದು. ಸೂಕ್ಷ್ಮವಾದ ಕೆತ್ತನೆಗಳಿಂದ ಈ ಕಂಬಗಳನ್ನು ಅಲಂಕರಿಸಿದೆ.[೧೩] ಕೆಲವು ಕಂಬಗಳ ಮೇಲಿನ ಎರಡು ಚೌಕಗಳನ್ನು ಮೂಲೆಗಳಲ್ಲಿ ಬಿಡಿಯಾದ ಸಣ್ಣ ಕಂಬಗಳಿಂದ ಅಲಂಕರಿಸಿದೆ. ಕೆಲವು ಕಂಬಗಳಲ್ಲಿ ಬಿಡಿಯಾದ ಪ್ರಾಣಿಗಳ ಮತ್ತು ಮಾನವರ ವಿಗ್ರಹಗಳನ್ನು ಮೂಲೆಗಳಲ್ಲಿ ಕೆತ್ತಿ ಅಲಂಕರಿಸಿದೆ. ಇವುಗಳನ್ನೇ ಮೂರನೆಯ ಹಂತದ ಸಮಗ್ರವಾದ ಸ್ತಂಭಗಳಲ್ಲಿ ದೊಡ್ಡ ಆಕಾರದಲ್ಲಿ ನೋಡಬಹುದು.

ಮೂರನೆಯ ಹಂತ: ೧೫೦೦-೧೫೬೫

ಈ ಹಂತವು ವಾಸ್ತುಶಿಲ್ಪದ ಪರಾಕಾಷ್ಠೆಯನ್ನು ತೋರಿಸುತ್ತದೆ. ಈ ಹಂತದ ದೇವಾಲಯಗಳಲ್ಲಿ ಒಂದು ಮುಖ್ಯ ಗರ್ಭಗೃಹ, ದೇವಿಯ ಗರ್ಭಗೃಹ, ಹಲವು ಪ್ರತ್ಯೇಕ ಮಂಟಪಗಳು, ಕಲ್ಯಾಣ ಮಂಟಪ, ಉಯ್ಯಾಲೆ ಮಂಟಪ, ವಸಂತೋತ್ಸವ ಮಂಟಪಗಳು ಇವೆ. ವಾಹನಗಳನ್ನಿಡಲು ಒಂದು ಮಂಟಪ, ಎತ್ತರವಾದ ಗೋಪುರ ಇರುತ್ತವೆ. ಮಹಾದ್ವಾರದ ಮೇಲಿರುವ ಈ ಗೋಪುರವನ್ನು ರಾಯಗೋಪುರವೆಂದು ಕರೆಯುವುದು ರೂಢಿ. ಕೆಲವು ದೇವಾಲಯಗಳ ಎದುರಿಗೆ ಉದ್ದವಾದ ರಥವೀಧಿಯಿದ್ದು ಅದರ ಎರಡೂ ಪಕ್ಕಗಳಲ್ಲಿ ಸಾಲಾಗಿ ಮಂಟಪಗಳನ್ನು ಕಟ್ಟಿದೆ. ದೇವಾಲಯದ ಈಶಾನ್ಯ ದಿಕ್ಕಿನಲ್ಲಿ ಕೆಲವು ಉತ್ಸವಗಳಿಗಾಗಿ ದೇವಾಲಯದ ಸರೋವರವಿರುತ್ತದೆ.

ಮುಖ್ಯ ದೇವಾಲಯದಲ್ಲಿ ಗರ್ಭಗೃಹ, ಒಂದು ಸುಕನಾಸಿ, ಒಂದು ಅಂತರಾಳ, ಒಂದು ಪ್ರದಕ್ಷಿಣ ಪಥ, ಒಂದು ರಂಗಮಂಟಪ ಮತ್ತು ಒಂದು ಮಹಾರಂಗಮಂಟಪ ಇವು ಇರುತ್ತವೆ. ಒಳಗೇ ಇರುವ ಪ್ರದಕ್ಷಿಣ ಪಥ ಹಾಗೂ ಮಹಾರಂಗಮಂಟಪಗಳು ಬೃಹತ್ ದೇವಾಲಯಗಳ ಸಾಮಾನ್ಯ ಲಕ್ಷಣಗಳಾಗಿವೆ. ನಾಲ್ಕು ಕಂಬಗಳಿಂದಾದ, ಒಂಬತ್ತು ಅಂಕಣಗಳ ಸಣ್ಣ ರಂಗಮಂಟಪವು ಹದಿನಾರು ಕಂಬಗಳ ಇಪ್ಪತ್ತೈದು ಅಂಕಣಗಳ ಮಂಟಪವಾಗಿ ದೊಡ್ಡದಾಗುತ್ತದೆ. ರಂಗಮಂಟಪದ ಎದುರಿಗೆ ಹೊಸದಾಗಿ ಮಹಾರಂಗ ಮಂಟಪವೊಂದು ಸೇರ್ಪಡೆಯಾಗಿದೆ. ಇದು ಹಲವು ಕಂಬಗಳಿಂದ ಕೂಡಿದ ವಿಶಾಲವಾದ ಮಂಟಪ. ಮಧ್ಯದಲ್ಲಿ ವಿಶಾಲವಾದ ಅಂಕಣವಿದ್ದು ಕಿರಿದಾದ ಪಾರ್ಶ್ವ ಅಂಕಣಗಳಿಂದ ಕೂಡಿರುತ್ತದೆ. ಸಾಲು ಸಾಲಾದ ಕಂಬಗಳಿಂದ ಅಂಕಣವು ಆಯಾಕಾರವಾಗಿರುತ್ತದೆ. ಅಲ್ಲಿ ನೃತ್ಯ, ನಾಟಕ, ಸಂಗೀತಗಳನ್ನು ನೋಡಲು,

ಕೇಳಲು ಸೇರುವ ಜನರಿಗೆ ಸಾಕಷ್ಟು ಗಾಳಿ-ಬೆಳಕು ಬರುವಂತೆ ಮಹಾರಂಗಮಂಟಪದ ಪಾರ್ಶ್ವಗಳು ತೆರೆದಿರುತ್ತವೆ. ಪೂಜೆಯ ಅಂಗವಾಗಿ ಕಲಾವಿದರು ಈ ಕಲೆಗಳನ್ನು ಅಲ್ಲಿ ಪ್ರದರ್ಶಿಸುತ್ತಿದ್ದರು. ಕಲಾತ್ಮಕವಾದ ಸಂಕೀರ್ಣ ಸ್ತಂಭಗಳಿಂದ ಈ ಮಂಟಪದ ಸೌಂದರ್ಯವು ವರ್ಧಿಸುತ್ತದೆ. ಈ ಕಂಬಗಳಲ್ಲಿ ಚೌಕಾಕಾರದ ಒಂದು ಮುಖ್ಯ ಭಾಗ, ಅದರಲ್ಲಿ ಮೂರು ಚೌಕಾಕೃತಿಗಳು. ಇವುಗಳ ಪ್ರತಿಮುಖದಲ್ಲೂ ವಿಗ್ರಹ, ಯಾಳಿ ಅಥವಾ ಸವಾರನಿರುವ ಯಾಳಿ ಅಥವಾ ಒಂದು ಕಿರುಕಂಬ ಮುಂದಕ್ಕೆ ಉಬ್ಬಿಕೊಂಡಿರುತ್ತವೆ. ಕೆಲವು ಕಂಬಗಳಲ್ಲಿ ಒಂದೇ ಕಿರುಕಂಬವಿದ್ದು, ಇನ್ನು ಕೆಲವದರಲ್ಲಿ ಮೂರು ಇರುತ್ತವೆ. ಈ ಸ್ತಂಭಗಳ ಮೇಲು ಮತ್ತು ಕೆಳಭಾಗಗಳು ಅಖಂಡವಾಗಿದ್ದು, ಮಧ್ಯಭಾಗವು ಎರಡು, ನಾಲ್ಕು, ಮತ್ತು ಹದಿನಾರು ಭಾಗಗಳಾಗಿ ವಿಭಾಗಗೊಳ್ಳುತ್ತದೆ. ಮಿಡಿದಾಗ ಸಂಗೀತ ಸ್ವರಗಳನ್ನು ಹೊಮ್ಮಿಸುವ ಈ ಕಿರುಕಂಬಗಳು ಬಹಳ ಸ್ವಾರಸ್ಯವಾಗಿವೆ.

ಮಹಾರಂಗಮಂಟಪಗಳನ್ನು ಕಟ್ಟಲು ತೊಡಗಿದವನು ಕೃಷ್ಣದೇವರಾಯ (ಕ್ರಿ.ಶ. ೧೫೧೦-೧೫೨೯). ಮಹಾದ್ವಾರದ ಮೇಲಣಗೋಪುರ ನಿರ್ಮಾಣವನ್ನು ಅವನ ಹಿಂದಿನವರೇ ಪ್ರಾರಂಭಿಸಿದ್ದರೂ ಅವನ ಆಳಿಕೆಯಲ್ಲಿ ಸಾಮ್ರಾಜ್ಯದಾದ್ಯಂತ ಅನೇಕ ಗೋಪುರಗಳನ್ನು ಕಟ್ಟಿಸಲಾಯಿತು. ಸಿಂಹಾಸನಾರೋಹಣದ ದಿನವೇ ಹಂಪಿಯ ವಿರೂಪಾಕ್ಷದೇವಾಲಯದಲ್ಲಿ ಮಹಾರಂಗಮಂಟಪವನ್ನು ಕಟ್ಟಿಸಿದನು. ಅದರೆದುರಿಗೆ ಸಣ್ಣ ಗೋಪುರವನ್ನು ನಿರ್ಮಿಸಿ, ದೊಡ್ಡ ಗೋಪುರವನ್ನು ದುರಸ್ತಿಗೊಳಿಸಿದನು.[೧೪] ಅವನು ಕ್ರಿ.ಶ. ೧೫೧೩ರಲ್ಲಿ ಹಂಪಿಯಲ್ಲಿ ಕೃಷ್ಣ ದೇವಾಲಯವನ್ನು ಕಟ್ಟಿಸಿ, ಉದಯಗಿರಿಯಿಂದ ತರಿಸಿದ ಕೃಷ್ಣ ವಿಗ್ರಹವನ್ನು ಅಲ್ಲಿ ಪ್ರತಿಷ್ಠೆ ಮಾಡಿಸಿದನು.[೧೫] ಕ್ರಿ.ಶ. ೧೫೧೬ರಲ್ಲಿ ಹಂಪಿಯಲ್ಲೇ ವಿಠ್ಠಲ ದೇವಾಲಯದ ಸಾವಿರ ಕಂಬಗಳ ಮಂಟಪವನ್ನು ನಿರ್ಮಿಸಿದನು.[೧೬] ತನ್ನ ಮಗನ ಗೌರವಾರ್ಥವಾಗಿ ಹೊಸಪೇಟೆಯ ಬಳಿ ಸಾಲೆ ತಿರುಮಲ ಮಹಾರಾಯಪುರವನ್ನು ನಿರ್ಮಿಸಿದನು. ಈಗ ಅದನ್ನು ಅನಂತಶಯನಗುಡಿ ಎಂದು ಕರೆಯುತ್ತಾರೆ. ಅಲ್ಲಿ ಕ್ರಿ.ಶ. ೧೫೨೪ರಲ್ಲಿ ಅನಂತಪದ್ಮನಾಭ ದೇವರಿಗಾಗಿ ದೇವಾಲಯವನ್ನು ಕಟ್ಟಿಸಿದನು.[೧೭] ಲಕ್ಷ್ಮೀನರಸಿಂಹನ ಬೃಹತ್ ಏಕಶಿಲಾ ವಿಗ್ರಹವನ್ನೊಳಗೊಂಡ ದೇವಾಲಯವೇ ಈ ಶ್ರೇಷ್ಠರಾಜನು ರಾಜಧಾನಿಗೆ ಸೇರಿಸಿದ ಹೊಸ ಸೇರ್ಪಡೆ. ಇದನ್ನು ಕ್ರಿ.ಶ. ೧೫೨೮ರಲ್ಲಿ ಕಟ್ಟಿಸಿದನು.[೧೮] ಹಂಪಿಯ ತಿರುವೆಂಗಲನಾಥ (ಅಚ್ಯುತರಾಯ ದೇವಾಲಯವೆಂದು ಜನಪ್ರಿಯವಾಗಿದೆ) ದೇವಾಲಯವು ಕ್ರಿ.ಶ. ೧೫೩೪ರಲ್ಲಿ ಅಚ್ಯುತರಾಯನ ಆಳಿಕೆಯಲ್ಲಿ ನಿರ್ಮಾಣವಾಯಿತು.[೧೯] ವಿಠ್ಠಲ ದೇವಾಲಯದ ಸಮೀಪದಲ್ಲೇ ತಿರುಮಂಗೈ ಆಳ್ವಾರ್ ದೇವಸ್ಥಾನವನ್ನು ಸದಾಶಿವರಾಯನು ಕ್ರಿ.ಶ. ೧೫೫೬ರಲ್ಲಿ ಕಟ್ಟಿಸಿದನು.[೨೦]

ಹಂಪಿಯ ವಿರೂಪಾಕ್ಷ ದೇವಾಲಯದಲ್ಲಿ ಒಂದು ಮುಖ್ಯವಾದ ಗುಡಿ, ಅದರಲ್ಲಿ ಗರ್ಭಗೃಹ, ಪ್ರದಕ್ಷಿಣ ಪಥ, ಸುಕನಾಸಿ, ಅಂತರಾಳ, ರಂಗಮಂಟಪ ಮತ್ತು ಮಹಾರಂಗ ಮಂಟಪಗಳಿವೆ. ಹಲವಾರು ಸಣ್ಣ ಗುಡಿಗಳಿವೆ. ದಕ್ಷಿಣದಲ್ಲಿ ವಿಶಾಲವಾದೊಂದು ಕಂಬಗಳ ಮಂಟಪವಿದೆ. ಇದೆಲ್ಲವನ್ನೂ ಆವರಿಸಿದ ಪ್ರಾಕಾರವಿದೆ. ನಾಲ್ಕೂ ದಿಕ್ಕುಗಳಲ್ಲಿ ಬಾಗಿಲುಗಳಿವೆ. ಇನ್ನೊಂದು ಪ್ರಾಕಾರವು ಪೂರ್ವದಲ್ಲಿ ಸಣ್ಣಗುಡಿಗಳನ್ನು ಹಲವು ಮಂಟಪಗಳನ್ನು ಸುತ್ತುವರಿದಿದೆ. ದೇವಾಲಯದೆದುರಿಗೆ ದೇವರನ್ನು ತೇರಿನ ಮೇಲೆ ಕುಳ್ಳಿರಿಸಿ ಉತ್ಸವ ಮಾಡಲು ರಥವೀಥಿಯಿದೆ. ೩೫ ಮೀಟರ್ ಅಗಲ, ೭೨೦ ಮೀಟರ್ ಉದ್ದವಿರುವ ಈ ರಥಬೀದಿಯ ಪಕ್ಕದಲ್ಲಿ ಸಾಲುಸಾಲಾಗಿ ಮಂಟಪಗಳಿವೆ. ಅದರ ಪೂರ್ವದ ತುದಿಯಲ್ಲಿ ಉತ್ಸವಮೂರ್ತಿಯನ್ನು ಪೂಜಿಸಲು ಒಂದು ಮಂಟಪವಿದೆ. ಇದರ ಹಿಂದೆಯೇ ದೊಡ್ಡ ನಂದಿಯ ವಿಗ್ರಹವಿರುವ ಇನ್ನೊಂದು ಮಂಟಪವಿದೆ.

ವಿಜಯನಗರ ಸಾಮ್ರಾಜ್ಯದ ಸ್ಥಾಪನೆಗಿಂತಲೂ ಮೊದಲಿನಿಂದಲೇ ವಿರೂಪಾಕ್ಷ ದೇವಾಲಯವಿದ್ದಿತು. ಅದು ಹಲವಾರು ಜೀರ್ಣೋದ್ಧಾರಗಳನ್ನು ಕಂಡಿದೆ. ಮುಖ್ಯ ದೇವಾಲಯದ ಉತ್ತರಕ್ಕಿರುವ ಪಂಪಾದೇವಿ ಮತ್ತು ಭುವನೇಶ್ವರಿ ಆಲಯಗಳಲ್ಲಿ ಸುಮಾರು ೧೧-೧೨ನೆಯ ಶತಮಾನದ ವಾಸ್ತುಲಕ್ಷಣಗಳನ್ನು

ನೋಡಬಹುದು. ಮಹಾರಂಗಮಂಟಪದ ಒಳಚಾವಣಿಯಲ್ಲಿ ವರ್ಣಚಿತ್ರಗಳನ್ನು ಬಿಡಿಸಲಾಗಿದೆ. ಇಲ್ಲಿ ಚಿತ್ರಿತನಾಗಿರುವ ಶಿವ, ಕಲ್ಯಾಣಸುಂದರ, ಕಾಮದಹನ ಮೂರ್ತಿ ಮತ್ತು ತ್ರಿಪುರಾಂತಕ. ಜೊತೆಗೆ ವಿಷ್ಣುವಿನ ದಶಾವತಾರಗಳು, ಅಷ್ಟದಿಕ್ಪಾಲರು, ಅರ್ಜುನನು ಪ್ರತಿಬಿಂಬವನ್ನು ನೋಡಿ ಮೀನಿಗೆ ಗುರಿಯಿಟ್ಟು ಬಾಣ ಬಿಡುತ್ತಿರುವುದು, ಮೆರವಣಿಗೆಯಲ್ಲಿ ಒಬ್ಬ ಮುನಿಯನ್ನು ಒಯ್ಯುತ್ತಿರುವುದು ಇತ್ಯಾದಿ ಚಿತ್ರಗಳಿವೆ. ಒಳ ಪ್ರಾಕಾರದ ಪೂರ್ವದಿಕ್ಕಿನ ದ್ವಾರದ ಮೇಲೆ ಕೃಷ್ಣದೇವರಾಯನು ಕಟ್ಟಿಸಿದ ಮೂರು ಅಂತಸ್ತಿನ ಗೋಪುರವಿದೆ. ಉತ್ತರದ್ವಾರದ ಗೋಪುರ ಐದು ಅಂತಸ್ತಿನದಾಗಿದ್ದು ಕನಕಗಿರಿ ಗೋಪುರ ಎಂದು ಖ್ಯಾತವಾಗಿದೆ. ಹೊರ ಪ್ರಾಕಾರದ ಪೂರ್ವದ ಮಹಾದ್ವಾರದ ಮೇಲೆ ೫೨ ಮೀಟರ್ ಎತ್ತರವಾದ ಒಂಭತ್ತು ಅಂತಸ್ತಿನ ಗೋಪುರವಿದೆ. ಈ ಗೋಪುರಗಳ ಕೆಳ ಅಂತಸ್ತು ಕಲ್ಲಿನಿಂದಾಗಿದ್ದು, ಮೇಲಿನ ಅಂತಸ್ತುಗಳು ಇಟ್ಟಿಗೆ ಮತ್ತು ಗಾರೆಗಳಿಂದ ರಚಿತವಾಗಿವೆ. ಮೇಲು ಅಂತಸ್ತುಗಳಲ್ಲಿ ವಿಗ್ರಹಗಳು, ಅರೆಗಳು, ತಿಳಿಗಚ್ಚಿನಿಂದ ಮಾಡಿದ ಗೋಡೆಗಂಬಗಳು ಅಲಂಕಾರವಾಗಿವೆ.

ಹಂಪಿಯ ವಿಠ್ಠಲ ದೇವಾಲಯದಲ್ಲಿ ಮುಖ್ಯ ಗುಡಿ, ದೇವಿಯ ಗುಡಿ, ಕಲ್ಯಾಣ ಮಂಟಪ, ಉತ್ಸವ ಮಂಟಪ, ನೂರುಕಂಬದ ಹಜಾರ ಮತ್ತು ಕಲ್ಲಿನ ರಥ ಇವೆ. ಇವೆಲ್ಲವನ್ನೂ ಸುತ್ತುವರಿದ ಪ್ರಾಕಾರವಿದೆ. ಪೂರ್ವ, ಉತ್ತರ ಮತ್ತು ದಕ್ಷಿಣ ದಿಕ್ಕುಗಳ ಮಹಾದ್ವಾರಗಳ ಮೇಲೆ ಮೂರು ಗೋಪುರಗಳಿವೆ. ಪೂರ್ವದ ಗೋಪುರ ದೆದುರಿಗೆ ಎತ್ತರವಾದ ದೀಪಸ್ತಂಭವೊಂದಿದ್ದು ಈಗ ಅದು ತುಂಡುತುಂಡಾಗಿದೆ. ಇಲ್ಲೂ ಎರಡೂ ಕಡೆ ಮಂಟಪಗಳು ರಚಿತವಾಗಿರುವ ಉದ್ದವಾದ ರಥಬೀದಿಯಿದೆ. ೨ನೇ ದೇವರಾಯನ ಕಾಲದಲ್ಲೇ ಈ ದೇವಾಲಯವಿತ್ತು.[೨೨] ಈ ಸಂಕೀರ್ಣದ ಹಲವು ಮಂಟಪಗಳನ್ನು ಮೂರನೆಯ ಹಂತದಲ್ಲಿ ನಿರ್ಮಿಸಲಾಯಿತು.

ಮುಖ್ಯ ದೇವಸ್ಥಾನದಲ್ಲಿ ಗರ್ಭಗೃಹ, ಸುಕನಾಸಿ, ಅಂತರಾಳ, ಪ್ರದಕ್ಷಿಣಪಥ, ಹದಿನಾರು ಕಂಬಗಳಿರುವ ಒಂದು ರಂಗಮಂಟಪ, ಪಾರ್ಶ್ವಗಳಲ್ಲಿ ಎರಡು ಮುಖಮಂಟಪಗಳು ಮತ್ತು ಒಂದು ವಿಶಾಲವಾದ ಮಹಾರಂಗಮಂಟಪ ಇವೆ. ಮಹಾರಂಗಮಂಟಪವು ಅಲಂಕೃತವಾದ ಒಂದು ಅಧಿಷ್ಠಾನದ ಮೇಲೆ ನಿರ್ಮಿತವಾಗಿದೆ. ಕುದುರೆಗಳು ಮತ್ತು ಯೋಧರ ಸ್ತಬ್ಧಚಿತ್ರಗಳು, ಹಂಸಗಳು, ವಿಷ್ಣುವಿನ ದಶಾವತಾರ ವಿಗ್ರಹಗಳನ್ನು ಒಳಗೊಂಡ ವಿಮಾನ ವಿಗ್ರಹಗಳು ಅಧಿಷ್ಠಾನವನ್ನು ಅಲಂಕರಿಸಿವೆ. ಈ ಮಂಟಪದಲ್ಲಿ ಐವತ್ತಾರು ಕಂಬಗಳು ಬಹು ಸುಂದರವಾಗಿದ್ದು, ಮಧ್ಯಾಂಗಣವನ್ನು ರೂಪಿಸಿವೆ. ಅದರ ಮೂರೂ ಕಡೆ ಕಿರುದಾರಿಯಿದೆ. ಪ್ರತಿಯೊಂದು ಕಂಬವೂ ಭಾರೀ ಸಂಕೀರ್ಣ ಘಟಕವಾಗಿದ್ದು ಅದರಲ್ಲಿ ಹಲವಾರು ಕಿರುಕಂಬಗಳು, ಯಾಳಿಗಳು ಅಥವಾ ಬೇರೆ ಬೇರೆ ಮೂರ್ತಿಗಳು ಇವೆ. ಮೆಟ್ಟಿಲುಗಳ ಎರಡೂ ಪಕ್ಕದಲ್ಲಿರುವ ಎರಡು ಕಂಬಗಳು ಯಾಳಿಯ ಆಕಾರದಲ್ಲಿವೆ. ದಕ್ಷಿಣದ ಒಳಕಂಬಗಳೂ ಯಾಳಿಯಾಕಾರದಲ್ಲಿವೆ. ಉತ್ತರದ ಕಡೆಯ ಕಂಬಗಳ ಮೇಲೆ ನರಸಿಂಹನ ವಿವಿಧ ಆಕೃತಿಗಳಿವೆ. ಪೂರ್ವದಲ್ಲಿರುವ ಕಂಬಗಳ ಮೇಲೆ ಹೆಂಗಸರು, ನರ್ತಕಿಯರು, ಮೃದಂಗವಾದಕರು ಮೊದಲಾದ ವಿಗ್ರಹಗಳನ್ನು ಕೆತ್ತಿದೆ. ಕಂಬಗಳ ಮೇಲೆ ಭಾರಿಯಾದ ಪುಷ್ಪ ಬೋದಿಗೆಗಳು ಚಾಚಿಕೊಂಡಿವೆ. ಚಾವಣಿಯನ್ನು ಹಲವು ಭಾಗಗಳಾಗಿ ವಿಭಜಿಸಿದೆ. ಕೆಲವು ವಿಭಾಗಗಳಲ್ಲಿ ಅಗಲವಾದ ಹಲವು ದಳಗಳ ತಾವರೆಯನ್ನು ಚಿತ್ರಿಸಿದ್ದರೆ, ಇನ್ನು ಕೆಲವದರಲ್ಲಿ ತಾವರೆ ಹೂವಿನ ದಳಗಳು ಮತ್ತು ಮೊಗ್ಗು ಕಾಣುತ್ತದೆ. ಪೂರ್ವದಲ್ಲಿ ಒಂದು ಎತ್ತರವಾದ ಗುಮ್ಮಟ, ತಾವರೆಯ ಪಾದಕ ಮತ್ತು ಅದನ್ನು ಕುಟುಕುತ್ತಿರುವ ಗಿಳಿಗಳು ಚಿತ್ರಿತವಾಗಿವೆ. ಮಧ್ಯದ ಅಗಲವಾದ ಅಂಗಣದ ಚಾವಣಿ, ಬಹಳ ಉದ್ದವಾದ ಚಪ್ಪಡಿಗಳನ್ನು ಹಾಸಿದ ಚಪ್ಪಟೆಚಾವಣಿಯಾಗಿತ್ತು. ಈಗಲೂ ಅಂತಹ ಒಂದು ಚಪ್ಪಡಿ ಅಲ್ಲೇ ಇದೆ, ಇನ್ನೊಂದು ಮುರಿದು ಕೆಳಗೆ ಬಿದ್ದಿದೆ. ಈ ಮಂಟಪ ಮತ್ತು ಈ ದೇವಾಲಯದ ಇತರ ಎಲ್ಲಾ ಮಂಟಪಗಳ ಕಪೋತಗಳು (ಸೂರುಗಳು) ಅಗಲವಾಗಿದ್ದು ಆಳವಾಗಿಯೂ ಇವೆ. ಮೂಲೆಗಳಲ್ಲಿ ದಪ್ಪವಾದ ಕಲ್ಲಿನ ಬಳೆಗಳಿವೆ. ಈ ಬಳೆಗಳಿಂದ ನೇತು ಬಿಟ್ಟಿದ್ದ ಕಲ್ಲಿನ ಸರಪಣಿಗಳು ಈಗ ಕಾಣೆಯಾಗಿವೆ.

ಕಲ್ಲಿನ ರಥವು ಒಂದು ಸಣ್ಣಗುಡಿಯಂತಿದೆ, ಅದರಲ್ಲಿ ಗರುಡನ ವಿಗ್ರಹವಿದೆ. ಮರದ ರಥವೋ ಎಂಬಂತೆ ಸೂಕ್ಷ್ಮವಾದ ಕುಸುರಿಕೆತ್ತನೆ ಮಾಡಲಾಗಿದೆ. ಕಲ್ಲಿನ ಚಕ್ರಗಳು ತಿರುಗುತ್ತವೆ. ಮೊದಲು ಅದರ ಮೇಲೆ ವಿಮಾನದ ರೂಪದಲ್ಲಿ ಇಟ್ಟಿಗೆಯ ಒಂದು ಮೇಲು ರಚನೆಯಿದ್ದಿತು.

ಅನಂತಶಯನಗುಡಿಯ ಅನಂತಪದ್ಮನಾಭ ದೇವಾಲಯವು ಒಂದು ಬೃಹತ್ ಸಂಕೀರ್ಣವಾಗಿದೆ. ದೊಡ್ಡದಾದ ಆಯತಾಕಾರದ ಗರ್ಭಗೃಹಕ್ಕೆ ಮೂರು ಬಾಗಿಲುಗಳಿವೆ. ಭಗವಂತನ ದಿವ್ಯದೇಹದ ಮೂರು ಭಾಗಗಳನ್ನು ಭಕ್ತನು ಈ ಬಾಗಿಲುಗಳ ಮೂಲಕ ದರ್ಶನ ಮಾಡಬಹುದು. ಮೇಲುರಚನೆಯು ಹತ್ತು ಮೀಟರ್ ಎತ್ತರದ ಗುಮ್ಮಟಾಕಾರವಾಗಿದೆ. ದೇವಾಲಯದ ಪೂರ್ವಕ್ಕೆ ಕಲ್ಯಾಣಮಂಟಪವಿದೆ. ಪ್ರಾಕಾರವು ಸುತ್ತುವರಿದಿದೆ, ಮಹಾದ್ವಾರವು ಉತ್ತರಕ್ಕಿದೆ.

ಹಂಪಿಯಲ್ಲಿರುವ ಬೃಹದಾಕಾರದ ಲಕ್ಷ್ಮೀನರಸಿಂಹನ ಏಕಶಿಲಾಮೂರ್ತಿಯೂ ಸುಮಾರು ೬.೭ ಮೀಟರ್ ಎತ್ತರವಾಗಿದೆ. ಸೊಗಸಾಗಿ ಕೆತ್ತಿದ ವಿಗ್ರಹ. ನರಸಿಂಹನು ಯೋಗಾಸನದಲ್ಲಿ ಕುಳಿತಿದ್ದಾನೆ, ಅವನ ಎಡತೊಡೆಯ ಮೇಲೆ ಲಕ್ಷ್ಮಿಯಿದ್ದಾಳೆ. ದೊಡ್ಡ ಮಕರತೋರಣವು ವಿಗ್ರಹದ ಚೌಕಟ್ಟಿನಲ್ಲಿದೆ, ಮೇಲುತುದಿಯಲ್ಲಿ ಕೀರ್ತಿ ಮುಖವಿದೆ. ತಲೆಯ ಮೇಲೆ ಏಳುಹೆಡೆಯ ಸರ್ಪವಿದೆ.

೨. ಇಸ್ಲಾಮಿಕ್ ವಾಸ್ತುಶಿಲ್ಪ

ದೌಲತಾಬಾದ್ ಮತ್ತು ಗುಲ್ಬರ್ಗಾಗಳಲ್ಲಿ ರಾಜಧಾನಿಗಳಿದ್ದ ಮುಸ್ಲಿಂ ರಾಜ್ಯಗಳು ವ್ಯಾಪಕ ಪ್ರಮಾಣದಲ್ಲಿ ಕಟ್ಟಡ ನಿರ್ಮಾಣಕಾರ್ಯವನ್ನು ಕೈಗೊಂಡಿದ್ದುವು. ಕಮಾನಗಳು, ಗುಮ್ಮಟಗಳು ಮತ್ತು ಸ್ತಂಭಗೋಪುರಗಳು (ಮಿನರೆಟ್ಟುಗಳು) ಕೂಡಿದ ಇಸ್ಲಾಮಿಕ್ ಶೈಲಿಯ ನಿರ್ಮಾಣ ಕಾರ್ಯ ನಡೆದಿತ್ತು. ಇದು ಸಹಜವಾಗಿಯೇ ನಗರದಲ್ಲಿ ಎರಡು ಬಗೆಯ ಕಟ್ಟಡಗಳ ಮೇಲೆ ಪ್ರಭಾವ ಬೀರಿತು. ಮೊದಲನೆಯದು ಕಮಾನುಗಳು, ಗುಮ್ಮಟಗಳು, ಕಚ್ಚುಗಾರೆಯ ಅಲಂಕರಣಗಳು ತುಂಬಿದ ಹಿಂದೂ ಕಟ್ಟಡಗಳು; ಎರಡನೆಯದು, ನಗರದಲ್ಲಿ ವಾಸಮಾಡುತ್ತಿದ್ದ ಶ್ರೀಮಂತ ಮುಸ್ಲಿಮರು ಕಟ್ಟಿಸಿದ ಕಟ್ಟಡಗಳು. ಎರಡನೆಯ ಮಾದರಿಯನ್ನು ಮಾತ್ರ ಇಲ್ಲಿ ಚರ್ಚಿಸಿದೆ.

ಅರಮನೆಯ ಪ್ರದೇಶದ ಈಶಾನ್ಯಕ್ಕೆ ಇರುವ ಒಂದು ಸಣ್ಣ ಪ್ರದೇಶವನ್ನು ಮುಸ್ಲಿಂ ಬಡಾವಣೆ ಎಂದು ಹೇಳಲಾಗಿತ್ತು. ಮಾಲ್ಯವಂತ ಬೆಟ್ಟವೇ ಅದರ ಪೂರ್ವದ ಗಡಿ. ಇಲ್ಲಿ ಹಲವಾರು ಸಮಾಧಿಗಳು, ಗೋರಿಗಳು, ಬಾವಿಗಳು, ಕೆರೆಗಳು ಮತ್ತು ಮಸೀದಿಗಳಿವೆ.[೨೨] ಸಮಾಧಿಗಳು ಎರಡು ಬಗೆಯಾಗಿವೆ, ಚಪ್ಪಟೆ ಚಾವಣಿಯುಳ್ಳವು ಹಾಗೂ ಗುಮ್ಮಟವಿರುವಂಥವು. ಗೋರಿಗಳ ಗೋಡೆಗಳು ದೊಡ್ಡ, ಸಣ್ಣ, ಅರೆಗಳಿಂದ ಕೂಡಿ ಅಲಂಕೃತವಾಗಿ ಮೇಲೆ ಕಮಾನಗಳನ್ನು ಹೊಂದಿವೆ. ಚಪ್ಪಟೆ ಚಾವಣಿಯ ಗೋರಿಗಳು ಆಯತಾಕಾರವಾಗಿವೆ. ಇದಕ್ಕೆ ಕೋನಾಕೃತಿಯ ಸೂರುಗಳಿವೆ. ಕುಳ್ಳಾದ ಕೈಪಿಡಿಗೋಡೆಯಿದ್ದು ನಡುನಡುವೆ ತೆನೆಗಳಿವೆ. ಮೇಲೆ ಗುಮ್ಮಟವಿದೆ. ನಾಲ್ಕು ಗೋಡೆಗಳ ಚೌಕದ ಮೇಲೆ ರೂಪುಗೊಂಡ ಅಷ್ಟಮುಖರಚನೆಯ ಮೇಲೆ ಗುಮ್ಮಟವು ಮೇಲೆದ್ದಿದೆ.

ಒಂದು ಮಸೀದಿಯನ್ನು ಅದರ ಒಂದು ತೊಲೆಯ ಮೇಲೆ ಕೆತ್ತಿದ ಶಾಸನವೊಂದರಲ್ಲಿ ಧರ್ಮಶಾಲಾ ಎಂದು ಕರೆದಿದೆ. ಶಾಸನದ ಕಾಲ ಕ್ರಿ.ಶ. ೧೪೩೯ ಸೆಪ್ಟೆಂಬರ್ ೧೮, ೨ನೇ ದೇವರಾಯನ ಆಡಳಿತ ಕಾಲ. ಬಹುಶಃ ದಂಡವನ್ನು ಹಿಡಿಯುತ್ತಿದ್ದ ಒಬ್ಬ ಅಧಿಕಾರಿ ಅಹಮದ್‌ಖಾನ್ ಎನ್ನುವವನು ಇದನ್ನೂ ಒಂದು ಬಾವಿಯನ್ನೂ ತನ್ನ ಒಡೆಯ ದೇವರಾಯನ ಪುಣ್ಯಕ್ಕಾಗಿ ನಿರ್ಮಿಸಿದನು.[೨೩] ಕಲ್ಲಿನಿಂದ ಕಟ್ಟಿರುವ ಈ ಕಟ್ಟಡವು ೫ x ೩ ಅಂಕಣಗಳುಳ್ಳ ಒಂದು ಆಯತಾಕಾರವಾದ ಹಜಾರವಾಗಿದೆ, ಪೂರ್ವಕ್ಕೆ ಮುಖವಾಗಿದೆ.

ಸಾದಾಗೋಡೆಗಳಿದ್ದು, ಕಂಬಗಳು ದೇವಾಲಯಗಳಲ್ಲಿರುವಂತೆಯೇ ಇವೆ. ಮುಂಭಾಗದಲ್ಲಿ ಕೋನಾಕಾರದ ಸೂರು ಇಳಿಬಿದ್ದಿದೆ. ಪಶ್ಚಿಮದ ಗೋಡೆಯ ಮಧ್ಯದಲ್ಲಿ ಒಂದು ಗೂಡು ನಿರ್ಮಿತವಾಗಿದೆ. ಅದರ ಮೇಲೆ ಗುಂಡಗೆ ಅಲಂಕರಿಸಿರುವ ಕಮಾನಿದೆ.

ಮೊದಲನೆಯ ಮಸೀದಿಯ ಆಗ್ನೇಯಕ್ಕೆ ಸುಮಾರು ಅರ್ಧ ಕಿಲೋಮೀಟರು ದೂರದಲ್ಲಿ ಇನ್ನೊಂದು ಮಸೀದಿಯಿದೆ. ಇದು ತುಂಬಾ ಶಿಥಿಲವಾಗಿದೆ. ಇದರಲ್ಲೂ ಒಂದು ಆಯತಾಕಾರದ ಹಜಾರವಿದೆ. ಕೆಲವು ಕಂಬಗಳು ಮತ್ತು ಗೋಡೆಗಳು ಹಾಗೆಯೇ ಉಳಿದಿವೆ. ಮಿಕ್ಕವು ಬಿದ್ದುಹೋಗಿವೆ. ಪೂರ್ವದ ಗೋಡೆಯ ನಡುವೆ ಒಂದು ಬಾಗಿಲೂ ಒಂದೂ ಗೂಡೂ ಇವೆ.

ಇಸ್ಲಾಮಿಕ್ ಬಡಾವಣೆಯಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಮುಸ್ಲಿಮರಿದ್ದರೂ, ಅಂತಹ ಇನ್ನೂ ಕೆಲವು ಸಣ್ಣ ಬಡಾವಣೆಗಳಿದ್ದುವು. ನಗರದ ದಕ್ಷಿಣಕ್ಕೆ ಕಮಲಾಪುರದ ಬಳಿ ಒಂದು ರುದ್ರಭೂಮಿಯಿರುವ ಪ್ರದೇಶವಿದೆ. ಕಡ್ಡಿರಾಂಪುರದ ನೈಋತ್ಯಕ್ಕೆ ಗುಮ್ಮಟವಿಲ್ಲದ (ಶಿಥಿಲವಾಗಿರುವ) ಒಂದು ಗೋರಿ, ಗುಮ್ಮಟವಿರುವ ಇನ್ನೊಂದು ಚಿಕ್ಕ ಗೋರಿ, ವಿಸ್ತಾರವಾದ ಹೂಳುಭೂಮಿಯ ಅವಶೇಷಗಳು ಇವೆ. ತಿರುಮಲದೇವಿಪಟ್ಟಣ ಅಂದರೆ ಆಧುನಿಕ ಹೊಸಪೇಟೆಯಲ್ಲೂ ಎರಡು ಗೋರಿಗಳು, ಒಂದು ಗುಮ್ಮಟವು (ಶಿಥಿಲವಾದ), ಇನ್ನೊಂದು ಗುಮ್ಮಟ ಸಹಿತವಾದವು, ಕಂಡುಬರುತ್ತವೆ.[೨೪] ಕಮಲಾಪುರದ ಪೂರ್ವಕ್ಕೆ ೪.೫ ಕಿ.ಮೀ. ದೂರದ ನಲ್ಲಾಪುರ ಎಂಬ ಗ್ರಾಮದಲ್ಲಿಯೂ ಒಂದು ಗುಮ್ಮಟ ಸಹಿತವಾದ ಗೋರಿಯಿದೆ.

೩. ಪೌರ ವಾಸ್ತುಶಿಲ್ಪ

ವಿಜಯನಗರ ರಾಜಧಾನಿಯಲ್ಲಿ ಇಂದಿಗೂ ಆಗ ನಿರ್ಮಿಸಿದ ಸರಕಾರಿ ಕಟ್ಟಡಗಳು, ರಾಜರ ವಾಸದ ಮನೆಗಳು, ಮನರಂಜನೆಯ ಪೆವಿಲಿಯನ್‌ಗಳು, ಜಲಾಗಾರಗಳು, ಸರೋವರಗಳು, ಬಾವಿಗಳು ಇತ್ಯಾದಿ ಪೌರ ನಿರ್ಮಿತಿಗಳನ್ನು ನೋಡಬಹುದು. ಕೋಟೆ ಪ್ರದೇಶದಲ್ಲಿ ಕೇಂದ್ರೀಕೃತವಾದ ಬಹುಸಂಖ್ಯೆಯ ಈ ನಿರ್ಮಿತಿಗಳಿಗೆ ಸುತ್ತ ಎತ್ತರವಾದ ಪೌಳಿಗೋಡೆಗಳಿವೆ. ಎಲ್ಲೋ ಕೆಲವು ಮಾತ್ರ ತಮ್ಮ ಮೂಲರೂಪದಲ್ಲಿ ಉಳಿದಿವೆ, ಮಿಕ್ಕವುಗಳ ಕಲ್ಲಿನ ತಳಪಾಯಗಳು ಮಾತ್ರ ಈಗ ಕಣ್ಣಿಗೆ ಬೀಳುತ್ತವೆ. ಅವುಗಳನ್ನು ಗುರುತಿಸುವುದು ತುಂಬಾ ಕಷ್ಟ. ರಾಬರ್ಟ್ ಸಿವೆಲ್[೨೫] ಮತ್ತು ಎ.ಎಚ್. ಲಾಂಗ್‌ಹರ್ಸ್ಟ್[೨೬] ಅವಕ್ಕೆ ಕೆಲವು ಹೆಸರುಗಳನ್ನೇನೋ ಕೊಟ್ಟಿದ್ದಾರೆ, ಆದರೆ ಅವು ಒಪ್ಪುವಂಥವಾಗಿಲ್ಲ.

'ಟಂಕಸಾಲೆಯ ಆವರಣ' ಎಂದು ಕರೆದಿರುವ ಪ್ರದೇಶದಲ್ಲಿ ನಡೆಸಿದ ಭೂಶೋಧನೆಗಳಿಂದ ಅದೊಂದು ವಾಸದ ಅರಮನೆಯಾಗಿದ್ದಿತೆಂದು ತಿಳಿದುಬರುತ್ತದೆ. 'ಜನಾನಾ ಆವರಣ' ಎನ್ನುವುದರಲ್ಲಿ ಅತ್ಯಂತ ದೊಡ್ಡದಾದ ಅರಮನೆಯೊಂದರ ತಳಪಾಯವು ಕಂಡುಬಂದಿದೆ. ಅದನ್ನು ರಾಜರ ಅರಮನೆಯೆಂದು ಗುರುತಿಸಿದೆ. 'ರಾಜರ ಆವರಣ', 'ದಣಾಯಕರ ಆವರಣ' 'ಗಣ್ಯರ ಮನೆಗಳ ಸ್ಥಳ' ಇತ್ಯಾದಿ ಎಡೆಗಳಲ್ಲಿಯೂ ಭಾರೀ ಅರಮನೆಯಂತಹ ಕಟ್ಟಡಗಳ ಅವಶೇಷಗಳು ಗೋಚರಿಸುತ್ತವೆ. ಇವುಗಳ ಅಧ್ಯಯನದಿಂದ ಈ ಕೆಲವು ಸಾಮಾನ್ಯ ಲಕ್ಷಣಗಳನ್ನು ಗುರುತಿಸಬಹುದು:[೨೭]

೧. ಅರಮನೆಗಳೆಲ್ಲವೂ ಪೂರ್ವಕ್ಕೆ ಅಥವಾ ಉತ್ತರಕ್ಕೆ ಮುಖವಾಗಿವೆ.
೨. ಪ್ರತಿಯೊಂದು ಅರಮನೆಯ ಅಥವಾ ಅರಮನೆಗಳ ಗುಂಪಿನ ಸುತ್ತಲೂ ಭಾರೀ ಗಾತ್ರದ, ಮೇಲಕ್ಕೆ ಕಿರಿದಾಗುತ್ತಾ ಹೋಗುವ ಕಲ್ಲಿನ ಗೋಡೆಗಳ ಆವರಣವಿದೆ.
೩. ಮುಂಚಾಚು, ಒಳಚಾಚುಗಳ ಸಮರೂಪದ ರಚನೆಗಾಗಿ ದೊಡ್ಡ ಅರಮನೆಗಳಲ್ಲಿ ಪಾರ್ಶ್ವದಲ್ಲಿ ಮುಂಚಾಚಿದ ಭಾಗಗಳಿವೆ.

೪. ಪ್ರತಿಯೊಂದು ಅರಮನೆಯೂ ಒಂದು, ಎರಡು ಅಥವಾ ಮೂರು ಗ್ರಾನೈಟ್ ಕಲ್ಲುಗಳ ತಳಹದಿಯ ಮೇಲೆ ನಿಂತಿದೆ. ಈ ತಳಪಾಯವನ್ನು ಅನೇಕ ವೇಳೆ ಹೂವು, ಎಲೆ, ಕೀರ್ತಿ ಮುಖಗಳು, ಹಕ್ಕಿಗಳು, ಪ್ರಾಣಿಗಳು, ಕೆಲವೊಮ್ಮೆ ಮಾನವರು ಈ ವಿಗ್ರಹಗಳಿಂದ ಅಲಂಕರಿಸಿದೆ. ಮೊದಲಲ್ಲಿ ತಳಪಾಯಕ್ಕೆ ಸುಣ್ಣಗಾರೆಯನ್ನು ಹಾಕಿದ್ದಂತೆ ಕಾಣುತ್ತದೆ. ಈಗಲೂ ಅಲ್ಲಲ್ಲಿ ಆ ಗಾರೆಯ ಗುರುತು ಉಳಿದಿರುವುದು ಕಾಣಿಸುತ್ತದೆ.

೫. ಅರಮನೆಗಳ ಒಳಗೆ ಮತ್ತು ಹೊರಗೆ ನೆಲವನ್ನು ದಪ್ಪ ಕಾಂಕ್ರೀಟಿನಿಂದ ಮಾಡಿದೆ. ಅದರ ಮೇಲೆ ಸುಣ್ಣಗಾರೆ ಹಾಕಿದೆ. ಒಂದರ ಮೇಲೊಂದರಂತೆ ಗಾರೆಯ ಹಲವು ಲೇಪಗಳು ಕಾಣಿಸುವುದರಿಂದ ಹಲವು ಸಾರಿ ಅವು ದುರಸ್ತಿಗೊಂಡಿವೆಯೆಂಬುದು ಸೂಚಿತವಾಗುತ್ತದೆ.

೬. ಗೋಡೆಗಳು ಕಚ್ಚಾಕಲ್ಲು ಮತ್ತು ಮಣ್ಣಿನಿಂದ ನಿರ್ಮಿಸಿದವು. ಮಣ್ಣು ಮತ್ತು ಸುಣ್ಣವನ್ನು ಮೆತ್ತಿದೆ. ಅರೆಗಳಿಗೆ, ಚಾಚುಗಳಿಗೆ, ತೆರಪುಗಳಿಗೆ ಇಟ್ಟಿಗೆಗಳನ್ನು ಬಳಸಿದೆ.

೭. ಕಂಬಗಳು, ತೊಲೆಗಳು ಮತ್ತು ಅಡ್ಡಪಟ್ಟಿಗಳು ಮರದವು (ಶೋಧನೆಯಲ್ಲಿ ಇದ್ದಿಲು, ಬೂದಿ ಮತ್ತು ಕಬ್ಬಿಣದ ಮೊಳೆಗಳು ಕಂಡುಬಂದಿವೆ).

೮. ಚಾವಣಿಗೆ ಇಟ್ಟಿಗೆ ಮತ್ತು ಸುಣ್ಣಗಾರೆಯನ್ನು ಬಳಸಲಾಗಿದೆ.

೯. ಅರಮನೆಗಳಿಗೆ ತಾಮ್ರದ ಅಥವಾ ದಂತದ ಕಲಶಗಳಿರುತ್ತಿದ್ದುವು (ಅಂತಹ ನಾಲ್ಕು ಶೋಧಿತ ಮಾದರಿಗಳನ್ನು ಇದುವರೆಗೆ ದಾಖಲಿಸಲಾಗಿದೆ).

೧೦. ಅರಮನೆಯ ಒಳಭಾಗವು ಬೇರೆ ಬೇರೆ ಎತ್ತರಗಳಲ್ಲಿದ್ದು ಒಂದೊಂದಕ್ಕೂ ಗಟ್ಟಿಯಾದ ಆಧಾರವಿದೆ; ಅತ್ಯಂತ ಎತ್ತರವಾದ ಭಾಗ ಹಿಂಬದಿಯಲ್ಲಿದೆ (ಪಶ್ಚಿಮ ಅಥವಾ ದಕ್ಷಿಣ).

೧೧. ಪ್ರತಿಯೊಂದು ಎತ್ತರದ ಹಂತಕ್ಕೂ ಮೆಟ್ಟಿಲುಗಳು ಮತ್ತು ಆಲಂಕಾರಿಕ ಕೈಪಿಡಿಗಳು ಇವೆ.

೧೨. ಕೆಳಗಿನ ಹಂತದಲ್ಲಿ ಅಂಗಳ, ಅದರ ಮೂರೂ ಪಕ್ಕಗಳಲ್ಲಿ ವರಾಂಡಾಗಳಿದ್ದು 'U' ಆಕಾರವನ್ನು ರೂಪಿಸಿವೆ. ಅತ್ಯಂತ ಎತ್ತರದ ಹಂತದಲ್ಲಿ ಒಂದು ಅಥವಾ ಹಲವು ಕೊಠಡಿಗಳಿವೆ.

೧೩. ಬಹುತೇಕ ಕಟ್ಟಡಗಳು ಬೆಂಕಿಯಿಂದ ನಾಶವಾದುವು. ದೊರಕಿರುವ ಬೂದಿ ಮತ್ತು ಇದ್ದಿಲುಗಳ ಪ್ರಮಾಣದಿಂದ ಇದನ್ನು ಹೇಳಬಹುದು. ಅಲ್ಲಲ್ಲೇ ಕಲ್ಲಿನ ಕೆಲಸದಲ್ಲಿ ಬಿರುಕು ಉಂಟಾಗಿರುವುದನ್ನೂ ಶೋಧನೆಯಿಂದ ತಿಳಿಯಬಹುದು.

ವಿದೇಶಿ ಸಂದರ್ಶಕರು ಮಾಡಿರುವ ವರ್ಣನೆಗಳಿಂದ ಈ ಅರಮನೆಗಳನ್ನು ಕುರಿತು ಹೆಚ್ಚಿನ ವಿವರಗಳನ್ನು ತಿಳಿದುಕೊಳ್ಳಲು ನಮಗೆ ಸಹಾಯವಾಗುತ್ತದೆ. ಅಚ್ಯುತರಾಯನ ಆಡಳಿತ ಕಾಲದಲ್ಲಿ ರಾಜಧಾನಿಗೆ ಬಂದಿದ್ದ ಫೆರ್ನಾವೋ ನ್ಯೂನಿಜ್ ಅರಮನೆಗಳನ್ನು ಹೀಗೆ ವರ್ಣಿಸುತ್ತಾನೆ: "ರಾಜನ ಅರಮನೆಗಳು ವಿಶಾಲವಾದ ಕೊಠಡಿಗಳಿಂದ ಕೂಡಿ ಬಹು ದೊಡ್ಡವಾಗಿವೆ. ಅವುಗಳಲ್ಲಿ ಮಠಗಳಲ್ಲಿರುವಂತೆ ಕೊಠಡಿಗಳಿವೆ. ಒಂದೊಂದೂ ರಾಜನ ಒಬ್ಬೊಬ್ಬ ಪತ್ನಿಗೆ ಸೇರಿದುದು. ಆಕೆಯೊಂದಿಗೆ ಆಕೆಯ ದಾಸಿಯೂ ಇರುತ್ತಾಳೆ. ರಾಜನು ವಿಶ್ರಾಂತಿಗೆ ತೆರಳುವಾಗ ಈ ಕೊಠಡಿಗಳ ಮುಂದೆ ಹಾದುಹೋಗುತ್ತಾನೆ. ಆಗ ಅವನ ಪತ್ನಿಯರು ಬಾಗಿಲಲ್ಲಿ ನಿಂತಿದ್ದು ಅವನನ್ನು ಒಳಕ್ಕೆ ಬರಲು ಆಹ್ವಾನಿಸುತ್ತಾರೆ. ಇವರೆಲ್ಲ ಮುಖ್ಯರಾದ ರಾಣಿಯರಲ್ಲ; ಅವರು ದೇಶದ ನಾಯಕರು ಮತ್ತು ಗಣ್ಯರ ಹೆಣ್ಣುಮಕ್ಕಳು."[೨೮]

ಈ ವರ್ಣನೆಯು ಹಲವು ಅರಮನೆಗಳಿಗೆ ಹೊಂದಿಕೆಯಾಗುತ್ತದೆ. ಅದರಲ್ಲೂ ವಿಶೇಷವಾಗಿ 'ಟಂಕಸಾಲೆಯ ಆವರಣ' ಮತ್ತು ೨ನೇ ಸಂಖ್ಯೆಯ ಅರಮನೆಗಳಿಗೆ ಸರಿಹೊಂದುತ್ತದೆ. ಬಹುಶಃ ಈ ಅರಮನೆಗಳು ಅಚ್ಯುತರಾಯನ ಕಾಲಕ್ಕೆ ಸೇರಿದವಾಗಿರಬಹುದು.

ಅರಮನೆಗಳ ವರ್ಣನೆಯನ್ನು ಡೊಮಿಂಗೋ ಪೇಸ್ ಹೀಗೆ ಕೊಡುತ್ತಾನೆ: ''ಒಳಕ್ಕೆ ಪ್ರವೇಶಿಸಿದ ಕೂಡಲೆ ಎಡಪಕ್ಕದಲ್ಲಿ ಒಂದರ ಮೇಲೊಂದು ಎರಡು ಕೊಠಡಿಗಳಿವೆ. ಕೆಳಗಿನದು ನೆಲಮಟ್ಟಕ್ಕಿಂತ ಎರಡು ಮೆಟ್ಟಿಲುಗಳಷ್ಟು ಕೆಳಗಿದೆ. ತಾಮ್ರದ ತಗಡು ಹಾಸಿದೆ. ಅಲ್ಲಿಂದ ಮೇಲುತುದಿಯವರೆಗೆ ಚಿನ್ನದ ತಗಡು ಹೊದಿಸಿದೆ (ನಾನು ಚಿನ್ನದ ಮೆರುಗು ಕೊಟ್ಟಿದೆ ಎಂದು ಹೇಳುತ್ತಿಲ್ಲ, ಚಿನ್ನದ ತಗಡು ಹಾಸಿದೆ ಎನ್ನುತ್ತಿದ್ದೇನೆ). ಹೊರಗೆ ಗುಮ್ಮಟದ ಆಕಾರದಲ್ಲಿದೆ. ನಾಲ್ಕೂ ಪಕ್ಕಗಳಲ್ಲಿ ಬೆತ್ತದಿಂದ ಕೈಪಿಡಿಯನ್ನು ಮಾಡಿ ಅದರಲ್ಲಿ ಮಾಣಿಕ್ಯ, ವಜ್ರಗಳಿಂದ ಮತ್ತಿತರ ಅಮೂಲ್ಯ ಹರಳುಗಳಿಂದ ಅಲಂಕಾರದ ಕೆಲಸ ಮಾಡಿದೆ. ಕೈಪಿಡಿಯ ಮೇಲೆ ಚಿನ್ನದ ಎರಡು ದೊಡ್ಡ ಫಲಕಗಳಿವೆ. ಅಮೂಲ್ಯ ಹರಳುಗಳ ರಚನೆಯೆಲ್ಲವೂ ಹೃದಯ ಆಕಾರದಲ್ಲಿದ್ದು ಒಂದಕ್ಕೊಂದು ಹೆಣೆದುಕೊಂಡಿವೆ. ಗುಮ್ಮಟದಲ್ಲೂ ಅಂತಹ ಫಲಕಗಳಿವೆ...''[೨೯]

ಬಾವಿ, ನೀರು ತುಂಬುವ ತೊಟ್ಟಿ, ಅರೆಯುವ ಕಲ್ಲು ಮತ್ತು ಬೀಸುವ ಕಲ್ಲುಗಳಿರುವ ಅರಮನೆಗಳು ವಾಸಕ್ಕಾಗಿ ನಿರ್ಮಿತವಾಗಿದ್ದಂತೆ ತೋರುತ್ತದೆ. ಇನ್ನು ಕೆಲವು ಮೇಲಿನ ಹಂತದಲ್ಲಿ ಒಂಟಿ ಕೊಠಡಿಯುಳ್ಳವು ಅರಮನೆಯ ಕಚೇರಿಗಳಾಗಿದ್ದಿರಬೇಕು.

ರಾಜರ ಬಡಾವಣೆಯು ಅತ್ಯಂತ ವಿಶಾಲವಾದ ನಿವೇಶನವುಳ್ಳದ್ದು. ವಿವಿಧ ಎತ್ತರದ ವೇದಿಕೆಗಳು, ಬಾವಿಗಳು, ಕೊಳಗಳು, ಸಾಲೆಗಳು, ಒಳಚರಂಡಿಗಳು ಇಲ್ಲಿವೆ. ಇವುಗಳಲ್ಲಿ ತುಂಬಾ ಮುಖ್ಯವಾದವು ಎಂದರೆ ಮಹಾನವಮಿದಿಬ್ಬ, ನೂರುಕಂಬಗಳ ಹಜಾರ ಮತ್ತು ನೀರಿನತೊಟ್ಟಿ. ಮಹಾನವಮಿ ದಿಬ್ಬಕ್ಕೆ[೩೦] ಸಿಂಹಾಸನದ ವೇದಿಕೆ ಎಂದೂ ಹೆಸರು. ಮಹಾನವಮಿ ಅಥವಾ ಒಂಬತ್ತು ದಿನಗಳ ಉತ್ಸವದೊಂದಿಗೆ ಇದು ಸಂಬಂಧಪಟ್ಟಿದೆ. ಆವರಣದ ಈಶಾನ್ಯ ಮೂಲೆಯಲ್ಲಿ ದೊಡ್ಡದಾದ, ಕಲ್ಲಿನಿಂದ ನಿರ್ಮಿಸಿದ ವೇದಿಕೆಯಿದು. ನೆಲದಳತೆ ೨೨ಮೀ. ಚದರಕ್ಕಿಂತ ಹೆಚ್ಚು, ೧೦ ಮೀ. ಎತ್ತರ. ಮೊದಲು ಇದನ್ನು ೧೪ನೆಯ ಶತಮಾನದ ಮಧ್ಯೆ ನಿರ್ಮಿಸಲಾಯಿತು. ೧೬ನೇ ಶತಮಾನದವರೆಗೂ ಹಲವು ಸಾರಿ ದುರಸ್ತಿ ಕಂಡಿದೆ.ನಿರ್ಮಾಣದ ಮೂರು ಹಂತಗಳು ಸ್ಪಷ್ಟವಾಗಿ ಕಾಣಿಸುತ್ತವೆ.ಎರಡು ಬೃಹದಾಕಾರದ ತೀರಾ ಕೆಳಗಿನ ತಳಹದಿಗಳು ಮೊದಲನೆಯ ಹಂತ. ಇವುಗಳ ಪಾರ್ಶ್ವಗಳು ನಯವಾಗಿದ್ದು ಮೇಲ್ಮುಖವಾಗಿ ಕಿರಿದಾಗುತ್ತಾ ಹೋಗಿವೆ. ದೊಡ್ಡ ಕಲ್ಲುಗಳನ್ನು ಕೋಚುಕೋಚಾಗಿ ಕತ್ತರಿಸಿ, ಆದರೆ ನಯಗೊಳಿಸಿ ಕಟ್ಟಿದೆ. ಆನೆಗಳು, ಒಂಟೆಗಳು, ಕುದುರೆಗಳು, ಸವಾರರೊಂದಿಗೆ, ಚಾಕರರೊಂದಿಗೆ, ಬಾತುಕೋಳಿಗಳ ಸಾಲು, ಬೇಟೆಯ ದೃಶ್ಯ, ಕಾಡಿನ ದೃಶ್ಯಗಳು ಮೊದಲಾದವುಗಳ ಉಬ್ಬು ಕೆತ್ತನೆಯಿಂದ ಅಲಂಕಾರ ಮಾಡಿದೆ. ಮೊದಲನೆಯ ಹಂತದ ಮೇಲಿನ ಸ್ತರದ ಮೇಲೆ ಇನ್ನೊಂದು ಎರಡು ಸ್ತರದ ವೇದಿಕೆಯಿದೆ. ಕೆಳಗಿನ ಸ್ತರದ ಕೆಳಸಾಲಿನಲ್ಲಿ ಆನೆಗಳು, ಬಾತುಗಳು, ನರ್ತಕರು ಮತ್ತು ಕಂಥ ಅಥವಾ ಹಿಗ್ಗಲಿಸಿದ ಮುಖಗಳು ಇವೆ. ಫಲಕಗಳು, ಹಂಸಗಳು, ಕುಂಭಗಳು ಮತ್ತು ಕಿರುಗುಡಿಗಳು ಕೆತ್ತನೆಗೊಂಡಿವೆ. ಕೆಳಗಿನ ಸ್ತರದ ಮಿಕ್ಕ ಅಚ್ಚುಗಳು ಮತ್ತು ಮೇಲಿನ ಸ್ತರದ ಎಲ್ಲಾ ಅಚ್ಚುಗಳು ಸೂಕ್ಷ್ಮವಾಗಿ ನಯವಾಗಿ ಕಂಡರಿಸಿದವಾಗಿವೆ. ಮೊದಲನೆಯ ಹಾಗೂ ಎರಡನೆಯ ಹಂತದ ವೇದಿಕೆಗಳು ಗ್ರಾನೈಟ್ ಕಲ್ಲಿನದಾದರೆ ಮೂರನೆಯ ವೇದಿಕೆಯು ಕ್ಲೋರೈಟ್‌ನಿಂದಾಗಿದೆ. ಇದು ಮುಂಚಿನ ಗ್ರಾನೈಟ್ ತಳಹದಿಯನ್ನು ಮುಚ್ಚಿಕೊಂಡಿದೆ. ಈ ತಳಹದಿಯ ಕೆಳಗಿನ ಪಟ್ಟಿಕೆಯಲ್ಲಿ ಆನೆಗಳು, ಕುದುರೆಗಳು, ಸವಾರರು, ಯೋಧರು, ಯುದ್ಧ ದೃಶ್ಯಗಳು, ನರ್ತಕಿಯರು, ಗಾಯಕಿಯರು, ರಾಜದಂಪತಿಗಳು, ಯಾಳಿಗಳು, ಸಿಂಹಗಳು, ತಾವರೆಯಾಕಾರದ ಆಭರಣಗಳು ಜೋಡಣೆಗೊಂಡಿವೆ. ಮೇಲುಸ್ತರವು ಗೋಡೆಕಂಬಗಳು, ಕುಂಭ ಪಂಜರಗಳು ಮತ್ತು ಅರೆಗಳನ್ನು ಹೊಂದಿದೆ. ವೇದಿಕೆಗೆ ಪಶ್ಚಿಮ, ದಕ್ಷಿಣ ಮತ್ತು ಪೂರ್ವಗಳಲ್ಲಿ ಮೆಟ್ಟಿಲುಗಳಿವೆ. ಪೂರ್ವದ ಮೆಟ್ಟಿಲುಗಳು ಒಂದು ಸಣ್ಣ ಆವರಣದಲ್ಲಿ ಮರೆಯಾಗಿವೆ.

ರಾಜನ ಸಭಾಭವನವೆನ್ನಲಾದ ನೂರುಕಂಬಗಳ ಹಜಾರವು[೩೧] ರಾಜಬಡಾವಣೆಯ ವಾಯವ್ಯ ಮೂಲೆಯಲ್ಲಿದೆ. ಈ ಕಟ್ಟಡದ ತಳಹದಿ ಮಾತ್ರ ಈಗ ಉಳಿದುಕೊಂಡಿದೆ. ನಯವಾಗಿ ಕೆತ್ತಿದ ಅಚ್ಚುಗಳಿಂದಾದ

ಎರಡು ಸ್ತರಗಳಿಂದಾಗಿದೆ ಈ ತಳಹದಿ. ಮೇಲಿನದು ಕೆಳಗಿನ ಸ್ತರಕ್ಕಿಂತ ಒಂದು ಮೀಟರಿನಷ್ಟು ಒಳಗಿದೆ. ಮೇಲೆ ನೆಲದಳತೆ ೪೦ ಚದರ ಮೀಟರ್‌ಗಿಂತಲೂ ಹೆಚ್ಚು. ೧೦x೧೦ ದೂರದಲ್ಲಿ ಸಾಲಾಗಿ ಜೋಡಿಸಿದ ಕಂಬಗಳ ಕಲ್ಲಿನ ಬುಡ ಮಾತ್ರ ಈಗ ಕಾಣಿಸುತ್ತದೆ. ಒಂದೊಂದೂ ಚೌಕಾಕಾರದ ದೊಡ್ಡ ಕುಳಿಯಾಗಿದ್ದು, ಮರದ ಕಂಬಗಳನ್ನು ಅದರೊಳಗೆ ಜೋಡಿಸಲು ತಕ್ಕುದಾಗಿದೆ.

೨೨ ಚದರ ಮೀಟರ್ ಉದ್ದಗಲದ, ೭ ಮೀಟರ್ ಆಳದ ಒಂದು ಕೊಳವನ್ನು ನಯವಾಗಿ ಕೆತ್ತಿದ ಬಸಾಲ್ಟ್ ಕಲ್ಲಿನ ಅಚ್ಚುಗಳಿಂದ ಕಟ್ಟಿದೆ. ಮಹಾನವಮಿದಿಬ್ಬದ ದಕ್ಷಿಣಕ್ಕೆ ಈ ಕೊಳವನ್ನು ಈಚೆಗೆ ಶೋಧಿಸಲಾಯಿತು. ನಾಲ್ಕೂ ಕಡೆ ಮೆಟ್ಟಿಲುಗಳನ್ನು ಕಟ್ಟಿದೆ. ಒಟ್ಟು ಐದು ನಿಲ್ಲುವ ಸ್ಥಳಗಳಿದ್ದು ಒಂದೊಂದೂ ಸುಮಾರು ೧.೫ ಮೀ. ಅಗಲವಾಗಿದೆ. ಪ್ರತಿಯೊಂದಕ್ಕೂ ಮೆಟ್ಟಿಲು ಸಾಲು ಪಿರಮಿಡ್ ಆಕಾರದಲ್ಲಿ ಜೋಡಣೆಗೊಂಡಿದೆ. ಈ ಮೆಟ್ಟಿಲುಗಳು ಕೊಳಕ್ಕೆ ಬಹು ಸುಂದರವಾದ ಆಕಾರವನ್ನು ಕೊಟ್ಟಿವೆ. ಕೊಳದ ಮಧ್ಯಕುಳಿಯು ೨. ೪೫ ಮೀ. ಆಳವಾಗಿದೆ.[೩೨]

'ಜನಾನಾ ಆವರಣ'ದ ಕಮಲಮಹಲ್[೩೩] ಎಂಬುಂದು, ಎರಡು ಮಹಡಿಗಳ ಪೆವಿಲಿಯನ್. ಅದೊಂದು ಚೌಕಾಕಾರದ ರಚನೆ, ಪಾರ್ಶ್ವದಲ್ಲಿ ಮುಂಚಾಚುಗಳು ಅದನ್ನು ಹದಿಮೂರು ಅಂಕಣಗಳನ್ನಾಗಿ ಮಾಡಿದೆ. ತಳಹದಿಯು ನಯವಾಗಿ ಕೆತ್ತಿದ ಕಲ್ಲಿನ ಅಚ್ಚುಗಳಿಂದ ಕೂಡಿದೆ. ಕೆಳಗಿನ ಮಹಡಿಯಲ್ಲಿ ೨೪ ಆಸರೆಗಳಿವೆ. ಎಲ್ಲಾ ಕಡೆಗಳಿಂದಲೂ ತೆರೆದ ಕಮಾನುಗಳಿವೆ. ಕಮಾನುಗಳಿಗೆ ಬಳ್ಳಿಗಳು, ಹೂವುಗಳು, ಹಂಸಗಳು, ರೇಖಾಗಣಿತ ವಿನ್ಯಾಸಗಳು ಮೊದಲಾದ ಗಾರೆ ಕೆಲಸದ ಅಲಂಕಾರವಿದೆ. ಮೇಲೆ ಕೋನಾಕೃತಿಯ ಸೂರು ಇದೆ. ಈಶಾನ್ಯ ಮೂಲೆಯಲ್ಲಿ ಮಹಡಿ ಮೆಟ್ಟಿಲುಗಳಿವೆ. ಮೇಲುಮಾಳಿಗೆಗೆ ನಾಲ್ಕು ಮತ್ತು ಎಂಟು ಆಸರೆಗಳಿವೆ. ಮೇಲಿನ ಈ ಮಾಳಿಗೆಯು ಎಲ್ಲಾ ಕಡೆಯೂ ಮುಚ್ಚಿದ್ದು, ಕಮಾನುಗಳಿರುವ ಕಿಟಕಿಗಳಿವೆ. ಮೇಲುರಚನೆಯಲ್ಲಿ ಒಂಬತ್ತು ಗೋಪುರಗಳಿವೆ. ದೇವಾಲಯಗಳ ಮೇಲುರಚನೆಯನ್ನೇ ಹೋಲುವ ಕೋನಾಕೃತಿಯ ಸೂರುಗಳು ಮತ್ತು ಚಾವಣಿಗಳಿವೆ.

'ರಾಣಿಯ ಸ್ನಾನಗೃಹ'[೩೪] ಎನ್ನುವುದು ರಾಜರ ಆವರಣ ಬಳಿ ಇರುವ ಚೌಕಾಕಾರದ ನೀರಿನ ಅಂಗಳ. ಇದಕ್ಕೆ ನಾಲ್ಕೂ ಕಡೆ ಸಾಲೆಯು ಹರಿದಿದೆ. ಪೂರ್ವದಲ್ಲಿರುವ ಕಂಡಿಯ ಮೂಲಕ ಒಂದು ನಳಿಕೆಯು ಕಾಲುವೆಯಿಂದ ನೀರನ್ನು ಒಳಕ್ಕೆ ವಿಶಾಲವಾದ ಚೌಕಾಕಾರದ ಬೋಗುಣಿಯಂತಹ ಮಧ್ಯಭಾಗಕ್ಕೆ ಹರಿಸುತ್ತಿತ್ತು. ಈ ಬೋಗುಣಿಯ ಸುತ್ತಲೂ ಆಸರೆಗಳ ಮೇಲೆ ಕಟ್ಟಿದ ಕಮಾನು ಅಂಕಣಗಳಿವೆ. ಮೂರೂ ಪಕ್ಕಗಳ ಮಧ್ಯದ ಅಂಕಣಗಳು ತೆರೆದವು. ಆದರೆ ದಕ್ಷಿಣದಲ್ಲಿ ನಾಲೆಯ ಮೇಲೆ ಚಾಚಿಕೊಂಡ ಒಂದು ಉಪ್ಪರಿಗೆಯ ಮೊಗಸಾಲೆಯಿದೆ. ಈ ಮೊಗಸಾಲೆಯ ಪಕ್ಕದಲ್ಲಿ ಒಳಕ್ಕೆ ಬರುವ ಬಾಗಿಲು. ಇಡೀ ಕಟ್ಟಡದ ಹೊರಭಾಗವು ಸಾದಾ ಆಗಿದೆ. ನಡವೆಯ ಒಳಭಾಗವು ಬೋಗುಣಿಗೆ ತೆರೆದಿದ್ದು ಕಮಾನುಗಳಿಂದ ಕೂಡಿದೆ. ಈ ಮೊಗಸಾಲೆಗಳಲ್ಲಿ ಸಣ್ಣ ಕಮಾನುಗಳು, ಕಿಟಕಿಗಳು ಮತ್ತು ಕೋನಾಕೃತಿಯ ಸೂರು ಇವೆ. ಬಾಲ್ಕನಿಗಳ ಹೊರಭಾಗ ಅಂದರೆ ಬಯಲಿಗೆ ತೆರೆದ ಮುಂಭಾಗಕ್ಕೆ ರೇಖಾಗಣಿತೀಯ ಚಿತ್ರಗಳು ಮತ್ತು ಹೂವು-ಎಲೆಗಳ ಅಲಂಕಾರ ಮಾಡಿದೆ. ನಡವೆಯ ಮೇಲುಚಾವಣಿಯಲ್ಲಿ ಬೇರೆ ಬೇರೆ ವಾಸ್ತುಶಿಲ್ಪ ಮತ್ತು ಕಲಾಶೈಲಿಗಳ ಮಿಶ್ರಣ ಕಂಡುಬರುತ್ತದೆ. ವಾಸ್ತು ಯೋಜನೆಯಲ್ಲೂ ಅಲಂಕಾರ ವಿವರಗಳಲ್ಲೂ ಒಂದು ಚಾವಣಿ ಇನ್ನೊಂದಕ್ಕಿಂತ ಬೇರೆಯಾಗಿರುತ್ತದೆ. ಗಾರೆಯ ತಾವರೆ ಮೊಗ್ಗುಗಳು, ಹಂಸಗಳು, ಯಾಳಿಗಳು, ಗಿಣಿಗಳು, ಹೂವಿನ ದಳಗಳು, ವಿಲಕ್ಷಣವಾದ ಹೂಬಳ್ಳಿಗಳು ಇವುಗಳ ಅಲಂಕಾರವಿದೆ. ಆಗ್ನೇಯ ಮೂಲೆಯಲ್ಲಿ ಕಟ್ಟಡದ ಮೇಲಕ್ಕೆ ಹತ್ತಿ ಹೋಗಲು ಮೆಟ್ಟಿಲುಗಳಿವೆ.

'ಜನಾನಾ ಆವರಣ' ಎನಿಸಿಕೊಳ್ಳುವುದರ ಸಮೀಪದಲ್ಲೇ ಆನೆ ಲಾಯವಿದೆ. ಅದೊಂದು ದೊಡ್ಡ ಆಯಾಕಾರದ ಕಟ್ಟಡ. ೮೫ ಮೀ.ಗಿಂತಲೂ ಹೆಚ್ಚು ಉದ್ದವಾಗಿದೆ. ಅದರಲ್ಲಿ ಹನ್ನೊಂದು ಚೌಕವಾದ ಕೊಠಡಿಗಳು ಸಾಲಾಗಿ ಪಶ್ಚಿಮಕ್ಕೆ ಮುಖವಾಗಿ ಇವೆ. ಪ್ರತಿ ಕೊಠಡಿಗೂ ಕಮಾನು ಪ್ರವೇಶವಿದೆ. ಇದರ ಎರಡೂ ಪಕ್ಕಗಳಲ್ಲಿ ಕಮಾನಿರುವ ಎರಡು ಗೂಡುಗಳಿವೆ. ಅವುಗಳ ಸುತ್ತಲೂ ಆಯಾಕಾರದ ಚೌಕಟ್ಟು ಇದೆ. ಅದರ ಮೇಲೆ ಮೂರು ಸಣ್ಣಗೂಡುಗಳಿವೆ. ಅದರ ಮೇಲೆ ಸಾಲಾಗಿ ಬೋದಿಗೆಗಳಿವೆ. ಅವುಗಳ ಮೇಲಿರುವ ಸೂರು ಚಪ್ಪಡಿಗಳು ಈಗ ಕಾಣೆಯಾಗಿವೆ. ಫಲಕಗಳು, ಹೂವುಗಳು, ವಿಚಿತ್ರವಾದ ಬಳ್ಳಿಗಳು ಮೊದಲಾದ ಅಲಂಕಾರವನ್ನು ಗಾರೆಯಿಂದ ಮಾಡಿದ ಕುರುಹುಗಳಿವೆ. ಆವರಣಗಳಿಗೆ ಬೇರೆ ಬೇರೆ ಬಗೆಯಾದ, ಸಮರೂಪದಲ್ಲಿ ಜೋಡಣೆಗೊಂಡ ಗುಮ್ಮಟಗಳಿವೆ. ಮಧ್ಯದ ಆವರಣಕ್ಕೆ ಎರಡು ಮೇಲು ಮಾಳಿಗೆಗಳಿವೆ.

ಹೊಸ ಪೇಟೆ-ಹಂಪಿ ರಸ್ತೆಯಲ್ಲಿರುವ ಮಲಪನಗುಡಿಯ ಬಳಿ ಇರುವ ಮೆಟ್ಟಿಲಬಾವಿಯನ್ನು ಶಾಸನದಲ್ಲಿ ಮಾಳಿಗೆ-ಕೂಪ-ಆರಾಮ ಎಂದು ಕರೆದಿದೆ.[೩೫] ಅದರ ಅರ್ಥ ಮೇಲುಚಾವಣಿಯಿರುವ ಬಾವಿ ಎಂಬುದಾಗಿ. ಅದರ ಸುತ್ತಲೂ ಒಂದು ತೋಪು ಇದೆ. ಅದನ್ನು ಕ್ರಿ.ಶ. ೧೪೦೫ರಲ್ಲಿ ನಿರ್ಮಿಸಲಾಯಿತು. ಬಾವಿಯ ಕಟ್ಟಡ ಚದರಕಲ್ಲುಗಳಿಂದಾದದ್ದು. ತೀರಾ ಸಾಮಾನ್ಯವಾದ ಗೋಡೆಯ ಏಕತಾನತೆಯನ್ನು ಹೋಗಲಾಡಿಸಲು ಚೂಪಾದ ತುದಿಯುಳ್ಳ ಕಮಾನುಗಳನ್ನು ಜೋಡಿಸಲಾಗಿದೆ. ಇದರಿಂದ ಬಾವಿಯ ವಾಸ್ತುಸೌಂದರ್ಯ ಹೆಚ್ಚಿದೆ. ನಡವೆಯ ಚಾವಣಿಯು ನೆಲಮಟ್ಟಕ್ಕಿರುವುದರಿಂದ ದೂರಕ್ಕೆ ಕಾಣಿಸುವುದಿಲ್ಲ. ಬಾವಿಯನ್ನು ಲಂಬವಾಗಿ ಮೂರು ವಿಭಾಗಗಳನ್ನಾಗಿ ಮಾಡಿದೆ. ಎರಡು ಮೇಲು ವಿಭಾಗಗಳು ಅಷ್ಟಮೂಲೆಯವಾಗಿವೆ. ಕೆಳಗಿನದು ಚೌಕವಾಗಿದೆ, ಮೂಲೆಗಳಲ್ಲಿ ಕಮಾನುಗಳಿವೆ. ಎಲ್ಲಕ್ಕಿಂತ ಮೇಲಿನ ವಲಯಕ್ಕೆ ಕಂಬಗಳಿರುವ ನಡವೆಯೂ ಅದಕ್ಕೆ ಕಮಾನುಚಾವಣಿಯೂ, ಕಮಾನುಮುಂಭಾಗವೂ ಇವೆ. ಚಾವಣಿಯಿರುವ ಈ ನಡವೆಯನ್ನು ಮಾಳಿಗೆ ಎಂದು ಶಾಸನದಲ್ಲಿ ವರ್ಣಿಸಿದೆ. ಅಷ್ಟಮುಖ ನಡವೆಯ ಪ್ರತಿಯೊಂದು ಪಾರ್ಶ್ವದಲ್ಲೂ ಬಾವಿಗೆ ತೆರೆದಿರುವ ಒಂದು ಕಮಾನು ಇದೆ.

ಮೆಟ್ಟಿಲು ಸಾಲುಗಳು ಮತ್ತು ಬದಲಿ ಇಳಿದಾಣಗಳಿಂದ ಕೂಡಿದ ಸರಣಿಯು ಪೂರ್ವದಿಕ್ಕಿನಲ್ಲಿದೆ. ಬಾವಿಗೆ ಪ್ರವೇಶವು ಅಷ್ಟಮುಖ ನಡವೆಯ ಕೆಳಗಿದೆ. ಅದರ ಪೂರ್ವಕ್ಕೆ ಒಂದು ಎತ್ತರವಾದ ಕಮಾನೂ ಪಶ್ಚಿಮಕ್ಕೆ ಒಂದರ ಮೇಲೊಂದು ಕಮಾನುಗಳೂ ಇವೆ. ಪ್ರವೇಶದಿಂದ ನಡವೆಗೆ ಬರುವ ಹಾದಿ ನಾಲ್ಕನೆಯ ಇಳಿದಾಣದಿಂದ.

೪. ಮಿಲಿಟರಿ ವಾಸ್ತುಶಿಲ್ಪ

ಬೇರೆ ಯಾವುದೇ ರಾಜಧಾನಿಯಂತೆ ವಿಜಯನಗರವನ್ನು ಹಲವು ಕೋಟೆಗೋಡೆಗಳು ಸುತ್ತುವರಿದಿವೆ. ನಗರದ ಸುತ್ತ ಇರುವ ಬೆಟ್ಟಗಳು ಪ್ರಾಕೃತಿಕವಾದ ಕೋಟೆಯಾಗಿವೆ. ಈ ಬೆಟ್ಟಗಳ ನಡುವಣ ತೆರಪಿನಲ್ಲಿ ಗೋಡೆಗಳನ್ನು ನಿರ್ಮಿಸಲಾಗಿದೆ. ಕೆಲವು ವೇಳೆ ಗೋಡೆಯು ಬೆಟ್ಟದ ಮೇಲೆ ಏರಿಸುವುದೂ ಉಂಟು. ಸಂಪ್ರದಾಯವೂ ವಿದೇಶಿ ಸಂದರ್ಶಕರೂ ಹೇಳುವಂತೆ ನಗರದ ಸುತ್ತಲೂ ಒಟ್ಟು ಏಳುಸಾಲು ಕೋಟೆ ಗೋಡೆಯಿದ್ದಿತು. ಇವುಗಳಲ್ಲಿ ತೀರಾ ಒಳಗಿನದನ್ನು ದಕ್ಷಿಣ ಭಾಗದಲ್ಲಿ ಸಂರಕ್ಷಿಸಲಾಗಿದೆ, ಪೂರ್ವದಲ್ಲಿ ಭಾಗಶಃ ಉಳಿದಿದೆ. ಇನ್ನೊಂದು ಸಾಲು, ಎಲ್ಲಕಡೆಯೂ ಹೆಚ್ಚುಕಡಮೆ ಭದ್ರವಾಗಿ ಉಳಿದಿದ್ದು ನಗರವನ್ನು ಸುತ್ತುಗಟ್ಟಿದೆ. ಈ ಎರಡು ಸಾಲುಗಳ ನಡುವೆ ಇನ್ನೊಂದು ಸಾಲು ಸ್ವಲ್ಪಮಟ್ಟಿಗೆ ಆಗ್ನೇಯ ದಿಕ್ಕಿನಲ್ಲಿ ಕಂಡುಬರುತ್ತದೆ. ತೀರಾ ಹೊರಗಿನ ಕೋಟೆಗೋಡೆಯು ಭಾಗಶಃ ಆಗ್ನೇಯದಲ್ಲೂ, ನೈರುತ್ಯದಲ್ಲೂ ಉಳಿದಿದೆ.

ಹೊರಗೋಟೆಯನ್ನು ಕುದುರೆಕಲ್ಲುಗಳಿಂದ ನಿರ್ಮಿಸಲಾಗಿತ್ತು. ಇವು ಕುದುರೆಗಳ ಚಲನೆಯನ್ನು ತಡೆಗಟ್ಟುವುದಕ್ಕಾಗಿ ಸಾಲಾಗಿ ಜೋಡಿಸಿದ ದೊಡ್ಡ ಗಾತ್ರದ ಕಲ್ಲುಗಳು. ಇಂದು ಈ ಕಲ್ಲುಗಳು ವಿಜಯನಗರದಲ್ಲಿ ಕಾಣಿಸುವುದಿಲ್ಲ. ಆದರೆ ಇಂಥವೇ ಕಲ್ಲುಗಳನ್ನು ಕಂಪಿಲದೇವನ ಕುಮ್ಮಟದುರ್ಗದಲ್ಲಿ ಇಂದಿಗೂ ನೋಡಬಹುದು.[೬೬] ವಿಜಯನಗರದಲ್ಲಿ ಕುದುರೆ ಕಲ್ಲುಗಳಿದ್ದುವೆಂದು ವಿದೇಶಿ ಸಂದರ್ಶಕರ ನಿರೂಪಣೆಗಳಿಂದ ಸ್ಥಿರಪಡುತ್ತದೆ. ಪರ್ಷಿಯದ ಪ್ರವಾಸಿ ಅಬ್ದುಲ್ ರಜಾಕ್ ಕ್ರಿ.ಶ. ೧೪೪೨-೪೩ರಲ್ಲಿ ನಗರಕ್ಕೆ ಭೇಟಿ ನೀಡಿದ್ದನು. ಅವನು ನಗರವನ್ನು ಹೀಗೆ ವರ್ಣಿಸಿದ್ದಾನೆ: ''ಬಿಜನಗರದ ಪಟ್ಟಣವು ಹೇಗಿದೆಯೆಂದರೆ, ಕಣ್ಣು ಅಂಥದೊಂದು ನಗರವನ್ನು ಎಂದೂ ನೋಡಿಲ್ಲ. ಅದಕ್ಕೆ ಸಮನಾದ ಇನ್ನೊಂದು ನಗರವು ಇಡೀ ಜಗತ್ತಿನಲ್ಲೇ ಬೇರೊಂದಿದೆಯೆಂದು ಕಿವಿಗೂ ಬಿದ್ದಿಲ್ಲ. ಏಳು ಕೋಟೆಗೋಡೆಗಳು ನಗರವನ್ನು ಸುತ್ತುಗಟ್ಟಿರುವಂತೆ ನಿರ್ಮಿಸಲಾಗಿದೆ. ಮೊದಲನೆಯ ಕೋಟೆಯ ಸುತ್ತಲೂ ಆಳೆತ್ತರದ ಬಂಡೆಗಲ್ಲುಗಳನ್ನು ಅರ್ಧದವರೆಗೆ ನೆಲದಲ್ಲಿ ಹೂಳಿ ನಿಲ್ಲಿಸಿದೆ. ಇವುಗಳನ್ನು ಒಂದರ ಪಕ್ಕದಲ್ಲೊಂದು ಹೇಗೆ ಜೋಡಿಸಿದೆಯೆಂದರೆ, ಯಾವುದೇ ಕುದುರೆಯಾಗಲಿ, ಯೋಧನಾಗಲಿ ಸುಲಭವಾಗಿ ಕೋಟೆಯ ಸಮೀಪಕ್ಕೆ ಬರುವ ಧೈರ್ಯ ಮಾಡಲಾರನು.''[೬೭] ಪೋರ್ಚುಗೀಸ್ ಪ್ರವಾಸಿ ಡೊಮಿಂಗೋ ಪೇಸ್ ೧೫೨೦ರಲ್ಲಿ ವಿಜಯನಗರಕ್ಕೆ ಬಂದಿದ್ದನು. ಅವನೂ ಇಂಥದೇ ವರ್ಣನೆಯನ್ನು ಕೊಡುತ್ತಾನೆ: ''ಬಿಸ್ನಾಗಾ ಪಟ್ಟಣಕ್ಕೆ ಹಿಂದಿರುಗುವಾಗ, ಹೆಬ್ಬಾಗಿಲಿಗೆ ಬರುವುದಕ್ಕೆ ಮೊದಲು ಇನೊಂದು ಬಾಗಿಲೂ, ಅದಕ್ಕೆ ತಾಗಿದ ಗೋಡೆಯೂ ಇದೆ ಎಂಬುದನ್ನು ನೀವು ನೆನಪಿನಲ್ಲಿಟ್ಟುಕೊಳ್ಳಬೇಕು. ಇದು ನಗರದ ಎಲ್ಲಾ ಕೋಟೆಗಳನ್ನೂ ಸುತ್ತುಗಟ್ಟಿರುವ ಹೊರಕೋಟೆ. ಇದು ಬಹಳ ಬಲವಾಗಿದೆ, ಭಾರೀ ಕಲ್ಲುಗಳಿಂದ ನಿರ್ಮಿತವಾಗಿದೆ. ಆದರೆ ಈಗ ಕೆಲವು ಕಡೆ ಅದು ಶಿಥಿಲವಾಗಿದೆ. ಈ ಗೋಡೆಯ ಸುತ್ತ ಕೆಲವು ಕಡೆ ಅಗಳು ತೋಡಲಾಗಿದೆ. ಅದರಲ್ಲಿ ನೀರು ಹರಿಯುತ್ತದೆ. ಇದಲ್ಲದೆ ಕೋಟೆಗೆ ಇನ್ನೂ ಒಂದು ರಕ್ಷಣೆ ಇದೆ. ಎತ್ತರವಾದ ಮೊನಚಾದ ಭಾರೀ ಕಲ್ಲುಗಳನ್ನು ಮನುಷ್ಯನ ಎದೆ ಮಟ್ಟಕ್ಕೆ ಬರುವಂತೆ ಹೂಳಿದ್ದಾರೆ. ಅವು ಅಗಲದಲ್ಲಿ ಒಂದೂವರೆ ಭರ್ಜಿಯಷ್ಟು ಇರುತ್ತವೆ. ಕೋಟೆಗೋಡೆಗೂ ಆ ಕಲ್ಲುಗಳಿಗೂ ನಡುವೆ ಅಷ್ಟೇ ಅಗಲದ ತೆರಪು ಇರುತ್ತದೆ. ಈ ಗೋಡೆಯು ಕೆಳಮಟ್ಟದಲ್ಲಿ ಮೇಲೆದ್ದು ಯಾವುದಾದರೂ ಬೆಟ್ಟದವರೆಗೆ ಹೋಗುತ್ತದೆ.''[೬೮]

ಎತ್ತರವಾದ ಕೋಟೆಗೋಡೆಗಳನ್ನು ಭಾರೀ ಕಲ್ಲುಗಳಿಂದ ಕಟ್ಟಲಾಗಿದೆ. ಗೋಡೆಗಳ ಹೊರಮೈ ಮೇಲ್ಮುಖವಾಗಿ ಕಿರಿದಾಗಿರುವ ಚಿತ್ರವನ್ನು ಕೊಡುತ್ತದೆ. ಕಲ್ಲುಗಳು ಬೆಣೆಯಾಕಾರದಲ್ಲಿದ್ದು ಅಗಲವಾದ ನುಣುಪು ಮಾಡಿದ ಹೊರಮೈ, ಕಿರಿದಾಗುತ್ತ ಹೋಗುವ ಒಳಮೈ ಹೊಂದಿವೆ. ಹೊರಗಡೆ ಕಲ್ಲುಗಳನ್ನು ಕೂಡಿಸಿರುವ ರೀತಿ ಎಷ್ಟು ಕರಾರುವಾಕ್ಕಾಗಿದೆಯೆಂದರೆ, ಯಾವುದೇ ಗಾರೆಯ ಸಹಾಯವೂ ಇಲ್ಲದೆ ಅಚ್ಚುಕಟ್ಟಾಗಿ, ಭದ್ರವಾಗಿ ಅವು ಕುಳಿತಿವೆ. ಗೋಡೆಗಳ ಒಳಭಾಗದಲ್ಲಿ ಉದ್ದಕ್ಕೂ ಮಣ್ಣಿನ ದಂಡೆಯಿದೆ. ಅರಮನೆಯಿರುವ ಕೇಂದ್ರಭಾಗದ ದಕ್ಷಿಣಕ್ಕೆ ಕೋಟೆಯ ಗೋಡೆ ಸು. ೬ ಮೀಟರ್ ಎತ್ತರವಿದೆ. ಗೋಡೆಗಳ ಸುತ್ತಲೂ ಅಗಳುಗಳಿದ್ದುವು, ಆದರೆ ಈಗ ಅವುಗಳನ್ನು ಕೃಷಿಗೋಸ್ಕರವಾಗಿ ಮುಚ್ಚಿಬಿಡಲಾಗಿದೆ.

ಕೋಟೆಗೋಡೆಗಳಿಗಿರುವ ದ್ವಾರಗಳಲ್ಲಿ ಸಜ್ಜಗಳು ಮತ್ತು ತೊಲೆಗಳಿಂದ ಕೂಡಿದ ಬಾಗಿಲಿದೆ. ಮುಂದಕ್ಕೆ ಚಾಚಿದ ಕೊತ್ತಲಗಳೆರಡರ ನಡುವೆ ಬಾಗಿಲಿದೆ. ಬಾಗಿಲಿನೊಳಗೆ ಓಡಾಡುವ ದಾರಿಯ ಬದಿಗೆ ಎರಡು ಕಡೆಯೂ ಜಗಲಿಗಳಿವೆ. ಅವು ಕಂಬಸಾಲುಗಳಿಗೆ ಆಧಾರವಾಗಿವೆ. ಕೆಲವೊಮ್ಮೆ ಇಲ್ಲಿ ಕೊಠಡಿಯೂ ಇರುವುದುಂಟು. ಹೊರಗಿನ ದ್ವಾರವೆನ್ನುವುದು ಒಂದು ದೊಡ್ಡ ಆವರಣ, ಬೃಹದಾಕಾರದ ಗೋಡೆಗಳಿಂದ ರಕ್ಷಿತವಾಗಿದೆ. ಕೆಲವು ಆವರಣಗಳಲ್ಲಿ ದೇವಾಲಯಗಳಿವೆ. ಕೆಲವೊಮ್ಮೆ ಇವು ''L''ಆಕಾರದಲ್ಲಿ ತಿರುಗಿಕೊಂಡು ಒಳಬರುವಂತೆ ಮಾಡುತ್ತವೆ. ಹೀಗೆ ಬಾಗಿದ ಪ್ರವೇಶ ಕ್ರಮವು ವೈರಿ ಸೈನ್ಯಗಳನ್ನು ದಿಕ್ಕು ತಪ್ಪಿಸುವುದಕ್ಕಾಗಿದೆ.

ಕೆಲವು ಬಾಗಿಲುಗಳ ಮೇಲೆ ಕಮಾನುಗಳಿವೆ, ಒಂದು ಕಡೆ ಗುಮ್ಮಟವೂ ಇದೆ. ಕೆಲವು ಬಾಗಿಲುಗಳಲ್ಲಿ ಸಣ್ಣದಾದ "L" ಅಥವಾ "U" ಆಕಾರದ ತುರ್ತು ನಿರ್ಗಮನದ ದಾರಿಗಳಿವೆ. ಇವು ಗೋಡೆಗಳ ನಡುವೆಯೇ ಬಾಗಿಲ ಪಕ್ಕದಲ್ಲಿ ಹಾದುಹೋಗುತ್ತವೆ. ಮುಖ್ಯವಾದ ಬಾಗಿಲನ್ನು ಮುಚ್ಚಿದ್ದಾಗ ಇವುಗಳನ್ನು ತುರ್ತುಸಂದರ್ಭಗಳಲ್ಲಿ ಉಪಯೋಗಿಸಲಾಗುತ್ತಿತ್ತು. ಬಾಗಿಲುಗಳ ಕಂಬತೋಳುಗಳ ಮೇಲೆ ದ್ವಾರಪಾಲಕರ ವಿಗ್ರಹಗಳನ್ನು ಕೆತ್ತಲಾಗಿರುತ್ತದೆ.[೬೯]

ನಗರದ ಎಲ್ಲ ದ್ವಾರಗಳಿಗೂ ಹೆಸರುಗಳಿದ್ದುವೆಂಬ ವಿವರ ವಿದ್ವಾಂಸರಿಗೆ ತಿಳಿದಿರಲಿಲ್ಲ. ಈಚೆಗೆ ದೊರಕಿದ ಕೆಲವು ಶಾಸನಗಳು ಬೇರೆ ಬೇರೆ ಬಾಗಿಲುಗಳನ್ನು ಗುರುತಿಸಲು ಸಹಾಯಮಾಡಿವೆ. ಕೋಟಿ ಶಂಕರದೇವರ ಬಾಗಿಲು, ಜಡೆಯ ಶಂಕರದೇವರ ದಿಡ್ಡಿ, ಹಂಪಾದೇವಿಯ ದಿಡ್ಡಿ, ಹೊಡೆಯ ಬಾಗಿಲು, ಮತಂಗೇಶ್ವರದೇವರ ದಿಡ್ಡಿ, ಸಿಂಗಾರದ ಹೆಬ್ಬಾಗಿಲು, ಸೋಮವಾರದ ಬಾಗಿಲು, ಅರೆಶಂಕರ ಬಾಗಿಲು, ರೆಮ್ಮುದಿಡ್ಡಿ, ಬೇಟೆಕಾರರ ಹೆಬ್ಬಾಗಿಲು, ಸ್ವಾಮಿದೇವರ ಬಾಗಿಲು, ಉಪ್ಪರಿಗೆ ಬಾಗಿಲು, ಉದಗಿರಿಯ ಬಾಗಿಲು, ಕೊಠಾರದ ಬಾಗಿಲು, ಹೂವಿನ ಬಾಗಿಲು, ಮತ್ತು ಪೆನುಕೊಂಡೆ ಬಾಗಿಲು.[೭೦]

ಕೋಟೆ ಬಾಗಿಲುಗಳು ಗಾತ್ರದಲ್ಲಿ ಒಂದೇ ತೆರನಾಗಿಲ್ಲ, ಮತ್ತು ಅವುಗಳ ಕರ್ತವ್ಯವೂ ಬೇರೆ ಬೇರೆ. ಅವುಗಳ ಗಾತ್ರ ಮತ್ತು ಉದ್ದೇಶಗಳನ್ನು ಗಮನದಲ್ಲಿಟ್ಟುಕೊಂಡು ಮೂರುಗುಂಪುಗಳನ್ನಾಗಿ ವಿಂಗಡಿಸಿದೆ: ಹೆಬ್ಬಾಗಿಲು, ಬಾಗಿಲು ಮತ್ತು ದಿಡ್ಡಿ. ಶಾಸನಗಳು ಈ ವರ್ಗೀಕರಣವನ್ನು ಸಮರ್ಥಿಸುತ್ತವೆ, ಅವು ಈ ಪ್ರತ್ಯಯಗಳನ್ನು ಸೂಕ್ತವಾಗಿ ಸೇರಿಸುತ್ತವೆ. ಹೆಬ್ಬಾಗಿಲು ಪ್ರಧಾನವಾದ ದೊಡ್ಡಬಾಗಿಲು. ಸಿಂಗಾರದ ಹೆಬ್ಬಾಗಿಲು ಮತ್ತು ಬೇಟೆಕಾರರ ಹೆಬ್ಬಾಗಿಲು ಅಂತಹ ಎರಡು. ಇತರ ದ್ವಾರಗಳಿಗೆ ಹೋಲಿಸಿದರೆ ಇವು ಗಾತ್ರದಲ್ಲಿ ಬಹು ದೊಡ್ಡವು. ಒಳಕೋಟೆಯಲ್ಲಿ ಮುಖ್ಯರಸ್ತೆಗಿರುವ ಸಿಂಗಾರದ ಹೆಬ್ಬಾಗಿಲು ಪೂರ್ವದಿಕ್ಕಿನಿಂದ ನಗರಕ್ಕೆ ಪ್ರವೇಶವನ್ನು ಕೊಡುತ್ತದೆ. ಹೊರಕೋಟೆಯ ಬೇಟೆಕಾರರ ಹೆಬ್ಬಾಗಿಲೂ ಪೂರ್ವದಿಂದಲೇ ನಗರಕ್ಕೆ ಪ್ರವೇಶವನ್ನು ಕೊಡುತ್ತದೆ. ಸಾಮಾನ್ಯ ಸ್ವರೂಪದ ದ್ವಾರಗಳನ್ನು ಬಾಗಿಲು ಎಂದು ಕರೆದಿದ್ದಾರೆ. ಸೋಮವಾರದ ಬಾಗಿಲು, ಉಪ್ಪರಿಗೆ ಬಾಗಿಲು, ಅರೆಶಂಕರ ಬಾಗಿಲು, ಪೆನುಕೊಂಡೆ ಬಾಗಿಲು, ಕೋಟಿಶಂಕರದೇವರ ಬಾಗಿಲು, ಹೊಡೆಯ ಬಾಗಿಲು, ಕೊಠಾರದ ಬಾಗಿಲು, ಮತ್ತು ಹೂವಿನ ಬಾಗಿಲು ಈ ವರ್ಗಕ್ಕೆ ಸೇರುತ್ತವೆ. ಇನ್ನು ದಿನದ ಕೆಲಸ ಕಾರ್ಯಗಳನ್ನು ಮುಗಿಸಿಕೊಂಡು ಬೇರೆಬೇರೆ ದಿಕ್ಕುಗಳಿಂದ ನಗರಕ್ಕೆ ಹಿಂದಿರುಗುವ ಜನರಿಗೆ ಪ್ರವೇಶವನ್ನು ಒದಗಿಸುವ ಸಣ್ಣದ್ವಾರಗಳು ದಿಡ್ಡಿ ಎಂಬ ಹೆಸರಿನವು. ಇವು ತುರ್ತು ನಿರ್ಗಮನದ ಬಾಗಿಲುಗಳು ಆಗಿದ್ದುವು. ಜಡೆಯ ಶಂಕರದೇವರ ದಿಡ್ಡಿ, ಹಂಪಾದೇವಿಯ ದಿಡ್ಡಿ ಮತಂಗೇಶ್ವರದೇವರ ದಿಡ್ಡಿ, ಮತ್ತು ರೆಮ್ಮುದಿಡ್ಡಿ ಈ ವರ್ಗದವು.

ಕೋಟೆಗೋಡೆಗಳಲ್ಲಿ ಹಲವು ಚೌಕಾಕರದ ಕೊತ್ತಳಗಳು ಗೋಡೆಯಿಂದ ಮುಂದಕ್ಕೆ ಚಾಚಿಕೊಂಡಿರುತ್ತಿದ್ದುವು. ಇವು ಗೋಡೆಯನ್ನು ಬಲಪಡಿಸುವ ಬತೇರಿಗಳಾಗಿದ್ದುದು ಮಾತ್ರವಲ್ಲದೆ ಸೈನಿಕರನ್ನು ರಕ್ಷಿಸುವುದಕ್ಕೂ ಅನುಕೂಲವಾಗಿದ್ದುವು. ಅಲ್ಲದೆ ಅವೇ ಕಾವಲುಗೋಪುರಗಳಾಗಿಯೂ ಕಾರ್ಯನಿರ್ವಹಿಸುತ್ತಿದ್ದುವು. ಅವುಗಳಲ್ಲಿ ಕೆಲವದರಲ್ಲಿ ಕಂಬಗಳು ಕಂಡುಬಂದಿವೆ. ಅಲ್ಲಿ ಕಾವಲುಗಾರರ ನೆಲೆಯಿದ್ದಿತು ಎಂದು ಅದು ಸೂಚಿಸುತ್ತದೆ. ಎರಡು ಕೊತ್ತಳಗಳ ನಡುವೆ ತುಂಬಾ ದೂರ ಬಿಟ್ಟಿರುವುದಿಲ್ಲ. ಎರಡರ ನಡುವೆ ಸುಲಭವಾಗಿ ಸಂಪರ್ಕ ಸಾಧ್ಯ. ಬೆಟ್ಟಗಳ ಮೇಲೆ ಕೆಲವು ಪ್ರಾಕೃತಿಕವಾಗಿಯೇ ಎತ್ತರವಾದ ಸ್ಥಳಗಳನ್ನು ಬತೇರಿಗಳಾಗಿ ಅಥವಾ ಕಾವಲು ಗೋಪುರಗಳಾಗಿ ಉಪಯೋಗಿಸಲಾಗುತ್ತಿತ್ತು. ಅಂತಹ ಬತೇರಿಗಳ ಹೆಸರುಗಳನ್ನು ಕೊಡುವ ಕೆಲವು ಶಾಸನ ಪಟ್ಟಿಕೆಗಳಿಂದ ಇದು ಸ್ಥಿರಪಡುತ್ತದೆ.

ನಗರದ ಹೆಚ್ಚುಕಡಮೆ ಎಲ್ಲಾ ಕೊತ್ತಳಗಳಿಗೂ ಸುಲಭವಾಗಿ ಗುರುತಿಸಲು ಅನುಕೂಲವಾಗುವಂತೆ ಹೆಸರುಗಳಿದ್ದುವು. ಹೆಸರುಗಳನ್ನು ಕೆತ್ತಿರುವ ಕೆಲವು ಕೊತ್ತಳಗಳನ್ನು ಈಗಲೂ ನೋಡಬಹುದು. ಆದರೆ ಈ ಶಾಸನ ಬರಹವಿರುತ್ತಿದ್ದ ಮೇಲ್ತುದಿಯು ಅನೇಕ ಕೊತ್ತಳಗಳಲ್ಲಿ ಮುರಿದು ನಷ್ಟವಾಗಿ ಹೋಗಿದೆ. ಕೋಟೆಗೋಡೆಗಳ ಪಕ್ಕದಲ್ಲೇ ಭಾರೀ ಕಲ್ಲುಬಂಡೆಗಳ ಮೇಲೆ ಕೆತ್ತಿದ ಕೆಲವು ಶಾಸನಗಳು ಈಗಲೂ ಸಂಶೋಧಕರ ಹಿಡಿತಕ್ಕೆ ಸಿಕ್ಕಿಲ್ಲ. ಆದರೂ ದೊರಕಿರುವ ಕೆಲವು ಶಾಸನಗಳಲ್ಲಿ ಕೊತ್ತಳಗಳ ಹೆಸರುಗಳಿವೆ: ಪ್ರತಾಪ ಕೊತ್ತಳ, ಸ್ವಾಮಿದ್ರೋಹರಗಂಡನ ಕೊತ್ತಳ, ಮತಂಗದೇವರ ಕೊತ್ತಳ, ಮಳಲ ವಿನಾಯಕ ಕೊತ್ತಳ, ಜಲಸೇನದೇವರ ಕೊತ್ತಳ, ಮದನ ಕೊತ್ತಳ, ಮೂಸರಗಂಡನ ಕೊತ್ತಳ, ಆನೆಗೊಂದಿಯ ಕೊತ್ತಳ ಮತ್ತು ಸೋಮಯದೇವರ ಕೊತ್ತಳ.[೪೧]

ಕೆಳದಿನಾಯಕರ ಕಲೆ ಮತ್ತು ವಾಸ್ತುಶಿಲ್ಪ

ಕೆಳದಿಯ ನಾಯಕರು ವಿಜಯನಗರ ಸಾಮ್ರಾಜ್ಯದ ಸಾಮಂತರಾಗಿದ್ದರು. ಅವರು ಕೆಳದಿ, ಇಕ್ಕೇರಿ, ಹಳೆ ನಗರ, ಮತ್ತು ಕವಲೆದುರ್ಗಗಳಲ್ಲಿ ವಿಜಯನಗರ ಶೈಲಿಯಲ್ಲಿ ಕಟ್ಟಿಸಿದ ದೇವಾಲಯಗಳು ಕಮಾನಗಳು, ಸ್ತಂಭಗೋಪುರಗಳು, ತೆನೆಗಳು ಮತ್ತು ಗುಮ್ಮಟಗಳಂತಹ ಹೊಸ ಅಂಶಗಳನ್ನು ತೋರ್ಪಡಿಸುತ್ತವೆ.

ಕ್ರಿ.ಶ. ೧೫೧೨ರಲ್ಲಿ ನಿರ್ಮಿತವಾದ ಕೆಳದಿಯ ರಾಮೇಶ್ವರ ದೇವಾಲಯದಲ್ಲಿ[೪೨] ಗರ್ಭಗೃಹ, ಸುಕನಾಸಿ, ಪ್ರದಕ್ಷಿಣ ಪಥ, ಎರಡು ಕಂಬಗಳಿರುವ ಸಣ್ಣದೊಂದು ನವರಂಗ ಮತ್ತು ಒಂದು ದೊಡ್ಡಮಂಟಪ ಇವೆ. ಅದರ ಅಧಿಷ್ಠಾನವನ್ನು ಮೃದಂಗ ನುಡಿಸುವವರು, ನರ್ತಕರು ಮೊದಲಾದ ವಿಗ್ರಹಗಳಿಂದ ಅಲಂಕರಿಸಲಾಗಿದೆ. ಗರ್ಭಗೃಹದ ಗೋಡೆಗಳ ಮೇಲೆ ಕಣ್ಣಪ್ಪ, ಗರುಡ ಮತ್ತು ಹನುಮಂತನು ಹಣ್ಣಿಗಾಗಿ ಕಾದಾಡುತ್ತಿರುವುದು, ಒಂಟೆ, ಆನೆ, ಯಾಳಿ, ಆನೆಯು ಮನುಷ್ಯನನ್ನು ಕೊಲ್ಲುತ್ತಿರುವುದು, ರಾಮೇಶ್ವರ, ವೀರಭದ್ರ, ಭೈರವ, ತಾಂಡವೇಶ್ವರ, ವೇಣುಗೋಪಾಲ, ಕಾಳಿಂಗಮರ್ದನ, ಪಾರ್ವತಿ, ಮೋಹಿನಿ ಇತ್ಯಾದಿ ಶಿಲ್ಪಗಳಿವೆ. ದೊಡ್ಡಮಂಟಪದ ಕಕ್ಷಾಸನದಲ್ಲಿ ಗೋಡೆಗಂಬಗಳ ಸಾಲು, ಅವುಗಳ ಮೇಲೆ ಬುರುಜು ಈ ಅಲಂಕಾರವಿದೆ. ಕೆಳಗೆ ಸಣ್ಣ ಶಿಲ್ಪಗಳಿವೆ. ಈ ಮಂಟಪವು ನಾಲ್ಕು ಅಂಕಣ ಉದ್ದ, ಮೂರು ಅಂಕಣ ಅಗಲ ಇದೆ. ಆರು ದೊಡ್ಡ ಕಂಬಗಳೂ ಹನ್ನೆರಡು ಚಿಕ್ಕ ಕಂಬಗಳೂ ಇವೆ. ಅದರ ಸುತ್ತ ಕಕ್ಷಾಸನವಿದೆ. ಪಶ್ಚಿಮದ ತುದಿಯಲ್ಲಿ ಎರಡು ಗೋಪುರಗಳಿರುವ ಗೂಡುಗಳಿವೆ. ಅವುಗಳಲ್ಲಿ ಗಣೇಶ ಮತ್ತು ಮಹಿಷಾಸುರಮರ್ದಿನಿ ವಿಗ್ರಹಗಳಿವೆ. ಈ ಮಂಟಪದ ಮಧ್ಯ ಚಾವಣಿಯು ಒಂಬತ್ತು ಕಮಲಗಳಿಂದ ಅಲಂಕೃತವಾಗಿದೆ. ನವರಂಗದ ಬಾಗಿಲಿನಲ್ಲಿ ಶೈವ ದ್ವಾರಪಾಲರಿದ್ದಾರೆ, ಸೆಜ್ಜದ ಮೇಲೆ ಗಣೇಶ ವಿಗ್ರಹವಿದೆ. ಗರ್ಭಗೃಹದ ಬಾಗಿಲ ಸೆಜ್ಜದ ಮೇಲೆ ಶಿವ ಲಿಂಗವಿದೆ.

ಕ್ರಿ.ಶ. ೧೫೩೦-೧೫೪೦ರ ನಡುವೆ ನಿರ್ಮಿಸಿದ ಕೆಳದಿಯ ವೀರಭದ್ರ ದೇವಾಲಯವು[೪೩] ರಾಮೇಶ್ವರ ದೇವಾಲಯವನ್ನೇ ಹೋಲುತ್ತದೆ. ಆದರೆ ಇದರ ನವರಂಗದಲ್ಲಿ, ಕೆಳಮಟ್ಟದ ಒಂದು ಪಟಲಾಂಕಣವಿದೆ. ಗರ್ಭಗೃಹದ ಅಧಿಷ್ಠಾನದಲ್ಲಿ ಅಧಿಕ ಸಂಖ್ಯೆಯ ಉಬ್ಬುಶಿಲ್ಪಗಳಿವೆ. ಗೋಡೆಯಲ್ಲಿ ಹೆಚ್ಚು ಸಂಖ್ಯೆಯ ಗೋಡೆಗಂಬಗಳಿವೆ. ಪಶ್ಚಿಮದ ಗೋಡೆಯ ಮೇಲೆ ಸಾಮಾನ್ಯವಾಗಿ ವಾಸ್ತುಪುರುಷ ಎಂದು ಕರೆಯುವ ವಿಗ್ರಹವಿದೆ. ಅವನ ಕಾಲುಗಳು ಆನೆಯ ಕಾಲುಗಳಂತೆಯೂ, ಕೈಗಳು ಆನೆಯ ಸೊಂಡಿಲಿನಂತೆಯೂ ಇವೆ. ಅವನ ಮುಖವು ಸಿಂಹದಂತಿದೆ. ಅವನ ಬಲಗಡೆಗೆ ಒಬ್ಬ ಗಂಡಸು, ಒಬ್ಬ ಹೆಂಗಸು ಮತ್ತು ಒಂದು ಮಗು ಇದ್ದಾರೆ, ಎಡಗಡೆ ಮೋಹಿನಿ ಮತ್ತು ಭಸ್ಮಾಸುರರಿದ್ದಾರೆ. ದೊಡ್ಡ ಮಂಟಪದ ಕಕ್ಷಾಸನದಲ್ಲಿ ಅಧಿಕ ಸಂಖ್ಯೆಯ ಸಣ್ಣ ಶಿಲ್ಪಗಳಿವೆ. ಅದರ ಮುಂಭಾಗದಲ್ಲೊಂದು ಸಣ್ಣ ಕೈಸಾಲೆಯಿದೆ. ನವರಂಗದಲ್ಲಿ ದೊಡ್ಡದಾದ

ಪಟಲಾಂಕಣವಿದೆ. ಪಶ್ಚಿಮದ ಬಾಗಿಲಿಗೆದುರಾಗಿ ದಕ್ಷಬ್ರಹ್ಮ ಮತ್ತು ನರಸಿಂಹರ ಎರಡು ದೊಡ್ಡ ವಿಗ್ರಹಗಳಿವೆ. ದೊಡ್ಡಮಂಟಪದ ಎಂಟು ಕಂಬಗಳ ಪೈಕಿ ಆರು ಚೌಕವಾಗಿದ್ದು ಇನ್ನೆರಡು ಹದಿನಾರು ಮುಖಗಳನ್ನು ಹೊಂದಿವೆ. ಕಂಬಗಳಲ್ಲಿ ಆನೆಯ ಮುಖವಿರುವ ಸಿಂಹ, ಆರು ಕೋತಿಗಳು ಪೂಜಿಸುತ್ತಿರುವ ಸಾಧು, ಗಡ್ಡವಿರುವ ಒಬ್ಬ ನಾಯಕ ವಿಗ್ರಹಗಳಿವೆ. ಚಾವಣಿಗಳನ್ನು ಕಮಲಗಳಿಂದಲೂ ಹೆಣಿಕೆಗಳಿಂದಲೂ ಸುಂದರವಾಗಿ ಅಲಂಕರಿಸಲಾಗಿದೆ. ಮಧ್ಯ ಚಾವಣಿಯ ಹಲಗೆಯ ಮೇಲೆ ಸೂರ್ಯ, ಅವನ ಸುತ್ತ ಇತರ ಗ್ರಹಗಳು ಜಿಂಕೆ, ಆನೆ, ಸಿಂಹ, ಹೂವು, ವ್ಯಾಳ, ಬೇಲ, ಮಾನವ ಮತ್ತು ಎತ್ತುಗಳ ಮೇಲೆ ಸವಾರಿ ಮಾಡುತ್ತಿರುವರಂತೆ ಕೆತ್ತಿದೆ. ಮಧ್ಯದ ಹಲಗೆಯ ಪೂರ್ವಕ್ಕಿರುವ ಚಾವಣಿಯಲ್ಲಿ ಗಂಡಭೇರುಂಡದ ದೊಡ್ಡ ಉಬ್ಬುಕೆತ್ತನೆಯಿದೆ. ನವರಂಗದ್ವಾರದ ಕಂಬತೋಳುಗಳಲ್ಲಿ ಗೋಡೆಗಂಬಗಳು, ಕೆಳಭಾಗದಲ್ಲಿ ಆನೆ ಮತ್ತು ಸಿಂಹಗಳು, ಸೆಜ್ಜದ ಮೇಲೆ ಗಣೇಶ ಇವುಗಳಿಂದ ಮಾಡಿದ ಅಲಂಕಾರವಿದೆ. ಮೇಲೆ ಐದು ಗೋಪುರಗಳಿಂದ ಕೂಡಿದ ಮೇಲುಕಟ್ಟು ಇದೆ. ನವರಂಗದ ಚಾವಣಿಯನ್ನು ದೊಡ್ಡದಾದ ಸುಂದರವಾದ ಒಂದು ಕಮಲವು ಅಲಂಕರಿಸಿದೆ. ಗರ್ಭಗೃಹದಲ್ಲಿ ಸಣ್ಣದಾದ ಒಂದು ವೀರಭದ್ರ ಮೂರ್ತಿಯಿದೆ. ಪೂರ್ವದ ಕೈಸಾಲೆಯ ಮುಂದೆ ಕ್ರಿ.ಶ. ೧೬೮೧ರಲ್ಲಿ ನಿಲ್ಲಿಸಿದ ದೊಡ್ಡಸ್ತಂಭವಿದೆ. ಅದರ ತಳಭಾಗವು ಚೌಕವಾಗಿದ್ದು, ಮಧ್ಯೆ ಅಷ್ಟಮುಖವಾಗಿದ್ದು ತುದಿಯಲ್ಲಿ ವೃತ್ತಾಕಾರವಾಗಿದೆ. ಮೇಲುತುದಿಯಲ್ಲಿ ಒಂದು ಚೌಕವಿದೆ. ಅದರೊಳಗೊಂದು ನಂದಿ ವಿಗ್ರಹವಿದೆ. ಕೆಳಗಿನ ಚೌಕಾಕಾರದ ನಾಲ್ಕು ಮುಖಗಳಲ್ಲಿ ಶಿಲ್ಪಗಳಿವೆ. ಪಶ್ಚಿಮದ ಮುಖದಲ್ಲಿ ಗಣೇಶ ಹಾಗೂ ಐವರು ರಾಜಪುರುಷರ ವಿಗ್ರಹಗಳೂ, ದಕ್ಷಿಣದಲ್ಲಿ ಶಿವ ಮತ್ತು ನಂದಿ ವಿಗ್ರಹಗಳೂ, ಉತ್ತರದಲ್ಲಿ ಭೈರವಮೂರ್ತಿಯೂ ಇವೆ. ಪೂರ್ವದಲ್ಲಿ ಪಾರ್ವತಿಯ ವಿಗ್ರಹವಿದೆ.

ಇಕ್ಕೇರಿಯ ಅಘೋರೇಶ್ವರ ದೇವಾಲಯವು[೪೪] ಸು. ಕ್ರಿ.ಶ. ೧೫೨೦ರಲ್ಲಿ ನಿರ್ಮಾಣಗೊಂಡಿತು. ಇದು ಕೆಳದಿಯ ನಾಯಕರು ಕಟ್ಟಿಸಿದ ಅತಿ ದೊಡ್ಡ ಮತ್ತು ಸುಂದರವಾದ ದೇವಾಲಯ. ಅದರಲ್ಲಿ ಹೊಯ್ಸಳ ದೇವಾಲಯಗಳ ಲಕ್ಷಣವಾದ ಎತ್ತರವಾದ ಜಗಲಿ, ಕಲ್ಲಿನ ಗೋಪುರ, ವೃತ್ತಾಕಾರದ ಮತ್ತು ಹದಿನಾರು ಮುಖದ ಕಂಬಗಳು, ಗೋಡೆಗಳ ಮೇಲೆ ಅಲಂಕಾರಗಳು ಮತ್ತು ಶಿಲ್ಪಗಳು, ಗೋಪುರದಲ್ಲಿ ದ್ರಾವಿಡ ಶೈಲಿಯಂತೆ ಅಂತಸ್ತುಗಳು ಮತ್ತು ದ್ವಾರಗಳು, ಗರ್ಭಗೃಹದ ಸುತ್ತ ಪ್ರದಕ್ಷಿಣ ಪಥ ಹಾಗೂ ಎರಡು ಸುಕನಾಸಿಗಳು ಇವೆ. ಕಮಾನುಗಳ ಇಂಡೋ ಸಾರ್ಸೆನಿಕ್ ಲಕ್ಷಣವನ್ನು ನೋಡಬಹುದು. ದೇವಾಲಯದಲ್ಲಿ ಒಂದು ಗರ್ಭಗೃಹ ಪ್ರದಕ್ಷಿಣ ಪಥದೊಂದಿಗೆ, ಎರಡು ಸುಕನಾಸಿಗಳು ಮತ್ತು ದೊಡ್ಡದಾದ ಒಂದು ನವರಂಗಗಳಿವೆ. ಎತ್ತರವಾದ ಜಗಲಿಯ ಮೇಲೆ ಐದು ಅಚ್ಚುಗಳಿದ್ದು ಅವುಗಳಲ್ಲಿ ಎರಡು ಕೀರ್ತಿ ಮುಖಗಳಿಂದಲೂ, ಎದ್ದುನಿಂತ ಸಿಂಹಗಳಿಂದಲೂ ಅಲಂಕೃತವಾಗಿವೆ. ಈ ಜಗಲಿಯ ಗರ್ಭಗೃಹಕ್ಕೆ ಮಾತ್ರ ಕಾಣಿಸುತ್ತದೆ. ಮಿಕ್ಕ ಭಾಗಗಳ ಅಧಿಷ್ಠಾನವೂ ಆ ಜಗಲಿಯಂತೇ ಇದ್ದರೂ ಅದರಲ್ಲಿ ವಿಭಜನೆಗಳಿಲ್ಲ. ಗರ್ಭಗೃಹದ ಗೋಡೆಗಳು ಸರಳವಾಗಿವೆ. ಪ್ರತಿಗೋಡೆಯಲ್ಲೂ ಒಂದೊಂದು ದೊಡ್ಡ ಗೂಡು, ಅದಕ್ಕೊಂದು ಗೋಪುರ ಇವೆ. ಗೋಡೆಯ ಮೇಲೆ 'S' ಆಕಾರದಲ್ಲಿ ಮುಂದೆ ಚಾಚಿದ ಸೂರುಗಳಿವೆ. ಗೋಪುರದಲ್ಲಿ ಎರಡು ಅಂತಸ್ತುಗಳಿದ್ದು ಸಣ್ಣಗೋಪುರಗಳಿಂದಲೂ ನಿಂತ ಸಿಂಹಗಳಿಂದಲೂ ಅಲಂಕೃತವಾಗಿದೆ. ಕೆಲ ಅಂತಸ್ತಿನಲ್ಲಿ ಒಂದು ದ್ವಾರವಿದ್ದು ಅದರಿಂದ ಗೋಪುರದ ಒಳಗಿನ ವಿಶಾಲವಾದೊಂದು ಕೋಣೆಗೆ ಹೋಗಬಹುದು. ಗೋಪುರದ ಮೇಲಿನ ಶಿಖರವು ಗುಮ್ಮಟಾಕಾರದಲ್ಲಿದ್ದು ಅದರ ನಾಲ್ಕು ಪಕ್ಕಗಳಲ್ಲೂ ನಾಲ್ಕು ಕೀರ್ತಿಮುಖಗಳಿವೆ. ನವರಂಗದ ಗೋಡೆಯಲ್ಲಿ ಆರು ಸಾಲು ಶಿಲ್ಪಗಳಿವೆ. ತೀರಾ ಕೆಳಗಿನ ಸಾಲಿನಲ್ಲಿ ಹಂಸಗಳು, ಸಿಂಹಗಳು, ಕೋತಿಗಳು, ಶೃಂಗಾರ ವಿಗ್ರಹಗಳು ಇತ್ಯಾದಿ ಇವೆ. ಎರಡನೆಯದರಲ್ಲಿ ತುಸು ಒಳಸರಿದ ಚೌಕಾಕಾರದ ಗೋಡೆಗಂಬಗಳಿವೆ. ಪ್ರತಿಯೊಂದರ ಮೇಲೂ ಒಂದು ಸಣ್ಣ ಗೋಪುರವಿದೆ. ಮೂರನೆಯದರಲ್ಲಿ ಕಮಾನಿರುವ ಗೂಡುಗಳು, ಚಾಲರಿಗಳಿರುವ ತೆರೆ ಇವೆ. ಗೂಡುಗಳ ಕೆಳಗೆ, ಯಕ್ಷ,

ದಿಕ್ಪಾಲರು, ದೇವತೆಗಳು, ನರ್ತಕರು ಲಿಂಗವನ್ನು ಪೂಜಿಸುವ ಪುರುಷಾಮೃಗ, ಪ್ರಾಣಿಗಳು, ಮಿಥುನಗಳು ಇತ್ಯಾದಿ ಶಿಲ್ಪಗಳಿರುವ ಎರಡು ಸಾಲುಗಳಿವೆ. ಐದನೆಯದು ಹೂವುಗಳ ಸಾಲು, ಆರನೆಯದರಲ್ಲಿ ಎಲೆ ಆಕಾರದ ತೆರೆಗಳುಳ್ಳ ಕೈಪಿಡಿಯ ಮಾದರಿ ಇದೆ.

ಈ ದೇವಾಲಯದ ದ್ವಾರದ ಕಂಬ ತೋಳುಗಳಲ್ಲಿ ಭವ್ಯವಾದ ಶೈವ ದ್ವಾರಪಾಲ ವಿಗ್ರಹಗಳು, ಗೋಡೆಗಂಬಗಳು, ಹೂವು ಎಲೆಗಳ ಪಟ್ಟಿಗಳು ಇವೆ. ಒಂದೊಂದು ಕಂಬತೋಳಿನ ಹೊರಗೂ ಮಕರದ ಮೇಲೆ ನಿಂತ ಹೆಣ್ಣು ಉದ್ದವಾದೊಂದು ಕಾಗದ ಸುರುಳಿಯನ್ನು ಹಿಡಿದುಕೊಂಡಂತೆ ವಿಗ್ರಹವಿದೆ. ಸೆಜ್ಜದ ಮೇಲೆ ಗಜಲಕ್ಷ್ಮಿಯ ವಿಗ್ರಹವಿದೆ. ನವರಂಗ ಒಳಭಾಗದಲ್ಲಿ ಸುತ್ತಲೂ ಸಣ್ಣ ಜಗಲಿಯಿದೆ. ಅದರ ಮೇಲೆನಿಂತ ಹದಿನಾಲ್ಕು ಕಂಬಗಳು ಅಲ್ಪಸ್ವಲ್ಪ ವ್ಯತ್ಯಾಸಗಳನ್ನು ಹೊಂದಿವೆ. ಹೊರಗಿನ ಚೌಕದಲ್ಲಿರುವ ಹನ್ನೆರಡು ಕಂಬಗಳೂ ಬೇರೆ ಆಕಾರದವು. ಮಧ್ಯದ ನಾಲ್ಕು ಕಂಬಗಳು ಹೊಯ್ಸಳ ಸ್ತಂಭಗಳಂತೆ ವೃತ್ತಾಕಾರದವು. ದಕ್ಷಿಣದ ಗೋಡೆಯಲ್ಲಿ ನಾಲ್ಕು ಗೋಪುರವುಳ್ಳ ಗೂಡುಗಳಿವೆ. ಇವುಗಳಲ್ಲಿ ಷಣ್ಮುಖ, ಗಣೇಶ, ಮಹಿಷಾಸುರ ಮರ್ದಿನಿ ಮತ್ತು ಭೈರವರ ವಿಗ್ರಹಗಳಿವೆ. ನವರಂಗದ ಮಧ್ಯದ ಚಾವಣಿಯಲ್ಲಿ ಸುಂದರವಾಗಿ ಕೆತ್ತಿದ ಕಮಲ, ನವಿಲುಗಳು ಸುತ್ತುವರಿದ ಒಂದು ಫಲಕ ಇವೆ. ಗರ್ಭಗೃಹದಲ್ಲಿ ದೊಡ್ಡ ಪೀಠದ ಮೇಲೆ ಚಿಕ್ಕ ಪೀಠವಿದ್ದು ಅದರ ಮೇಲೆ ಒಂದು ಸಣ್ಣ ಲಿಂಗವನ್ನು ಪ್ರತಿಷ್ಠೆ ಮಾಡಿದೆ. ಮೊದಲು ದೊಡ್ಡ ಪೀಠದ ಮೇಲೆ ದೊಡ್ಡದಾದ ಲಿಂಗವಿದ್ದಿತು. ಈ ಪೀಠವು ಕುಳಿತ ದುರ್ಗೆಯರ ೩೨ ಮೂರ್ತಿಗಳಿಂದ ಅಲಂಕೃತವಾಗಿದೆ.

ಮುಖ್ಯ ದೇವಾಲಯದ ಪಶ್ಚಿಮಕ್ಕೆ ಅದೇ ಶೈಲಿಯಲ್ಲಿ ಕಟ್ಟಿದ ಸಣ್ಣ ಅಳತೆಯ ಪಾರ್ವತಿ ದೇವಾಲಯವಿದೆ. ಮುಖ್ಯ ದೇವಾಲಯದೆದುರಿಗೆ ನಂದಿ ಮಂಟಪವಿದೆ. ಈ ಮಂಟಪಕ್ಕೆ ನಾಲ್ಕೂ ಪಕ್ಕಗಳಲ್ಲಿ ಕಮಾನಿರುವ ಪ್ರವೇಶವಿದೆ. ತೆನೆಯುಳ್ಳ ಕೈಪಿಡಿ ಗೋಡೆಯು ಇಸ್ಲಾಮಿಕ್ ವಾಸ್ತುಶಿಲ್ಪದ ವಿಶಿಷ್ಟ ಲಕ್ಷಣವಾಗಿದೆ.

ಕವಲೆದುರ್ಗದ ವಿಶ್ವೇಶ್ವರ ದೇವಾಲಯವೂ ಕಮಾನಿರುವ ಪ್ರವೇಶದ್ವಾರವುಳ್ಳ ಸಣ್ಣ ದೇವಾಲಯ. ಅದೇ ಸ್ಥಳದಲ್ಲಿರುವ ಇನ್ನೊಂದು ಸಣ್ಣ ದೇವಾಲಯದಲ್ಲಿ ಕೈಪಿಡಿಗಳೂ ಮೂಲೆಗಳಲ್ಲಿ ಸಣ್ಣ ಸ್ತಂಭಗೋಪುರಗಳೂ ಇವೆ. ಕಮಾನು ಪ್ರವೇಶದ್ವಾರವಿದೆ.[೪೫]

ಶಿವಮೊಗ್ಗದ ಶಿವಪ್ಪನಾಯಕನ ಅರಮನೆ [೪೬] ಒಂದು ದೊಡ್ಡ ಕಟ್ಟಡ. ಅದಕ್ಕೆ ಕಂಬಗಳಿರುವ ಮುಂಭಾಗವಿದೆ. ಕಟ್ಟಡದ ಮುಂದಿನಭಾಗದಲ್ಲಿ ವಿಶಾಲವಾದ ಹಜಾರವಿದೆ, ಎತ್ತರವಾದ ಮರದ ಕಂಬಗಳಿವೆ. ಹಿಂಭಾಗದಲ್ಲಿ ಎರಡು ಅಂತಸ್ತುಗಳಿವೆ. ಎರಡರಲ್ಲೂ ಮಧ್ಯೆ ಕಂಬಗಳಿರುವ ಒಂದು ಹಜಾರ, ಎರಡೂ ಪಕ್ಕಗಳಲ್ಲಿ ಒಂದೊಂದು ಕೊಠಡಿ ಇವೆ. ಮುಂಭಾಗದ ಎತ್ತರವಾದ ಕಂಬಗಳ ತಳಹದಿಯು ಅಷ್ಟದಳ ತಾವರೆಯ ಆಕಾರದಲ್ಲಿದೆ. ದಂಡವು ಮೇಲಕ್ಕೆ ಕಿರಿದಾಗುತ್ತಾ ಹೋಗುತ್ತದೆ. ಬೋದಿಗೆಗಳು ಹೂವಿನಂತಿವೆ (ಪುಷ್ಪ-ಬೋದಿಗೆ). ಹಿಂಭಾಗದ ಕಂಬಗಳು ಚಿಕ್ಕವು, ಸರಳವಾದವು. ದಂಡವು ನಾಲ್ಕು ಮಡಿಕೆಯ ರೂಪದಲ್ಲಿದೆ. ಎರಡೂ ಪಕ್ಕಗಳಲ್ಲಿರುವ ಮರದ ಮೆಟ್ಟಿಲುಗಳನ್ನೇರಿ ಮೇಲಿನ ಅಂತಸ್ತಿಗೆ ಹೋಗಬಹುದು. ಮೇಲಿನ ಅಂತಸ್ತಿನ ಮುಂಭಾಗದಲ್ಲಿ ಕೆತ್ತನೆಗಳಿಂದ ಕೂಡಿದ ಮರದ ಕಟಕಟೆಯಿದೆ. ಮೇಲಂತಸ್ತಿನ ಕಂಬಗಳ ನಡುವೆ ಗರಗಸದಂತೆ ಕಚ್ಚುಕಚ್ಚಾದ ಕಮಾನುಗಳಿವೆ. ಈ ಅರಮನೆಯ ನಿರ್ಮಾಣದಲ್ಲಿ ಹೆಚ್ಚಾಗಿ ಮರವನ್ನೇ ಬಳಸಿದೆ.

ಕೆಳದಿನಾಯಕರ ವಾಸ್ತುಶಿಲ್ಪವು ಇಸ್ಲಾಮಿಕ್ ಶೈಲಿಯಿಂದ ಅಳವಡಿಸಿಕೊಂಡ ಕಮಾನುಗಳು, ಗುಮ್ಮಟಗಳು, ಕೈಸಾಲೆಗಳು ಮತ್ತು ಸ್ತಂಭಗೋಪುರಗಳನ್ನು ಹೊಂದಿದ್ದು, ಹೊಸಮಾದರಿಯ ವಾಸ್ತು ಶೈಲಿಯನ್ನು ಕೊಡುಗೆಯಾಗಿ ನೀಡಿದೆ.

ಯಲಹಂಕ ಪಾಳೆಯಗಾರರ ಕಲೆ ಮತ್ತು ವಾಸ್ತುಶಿಲ್ಪ

ಯಲಹಂಕ ಪಾಳೆಯಗಾರರು ಮೊದಲು ವಿಜಯನಗರ ರಾಜರ ಸಾಮಂತರಾಗಿದ್ದು ಆಮೇಲೆ ಸ್ವತಂತ್ರ ರಾಜರಾದರು. ಬೆಂಗಳೂರಿನ ಗವೀಪುರದಲ್ಲಿರುವ ಗಂಗಾಧರೇಶ್ವರ ಗುಹಾದೇವಾಲಯವು[೪೭] ೧ನೇ ಕೆಂಪೇಗೌಡನ ಕಾಲದಲ್ಲಿ ನಿರ್ಮಾಣವಾದದ್ದು. ಗುಹೆಯನ್ನು ಶಿವಾಲಯ ಮತ್ತು ಪಾರ್ವತೀ ಆಲಯವಾಗಿ ವಿಭಜಿಸಲಾಗಿದೆ. ಪ್ರತಿ ಆಲಯಕ್ಕೂ ಕಿರಿದಾದ ಪ್ರದಕ್ಷಿಣ ಪಥವಿದೆ. ಆಮೇಲೆ ಎರಡನ್ನೂ ಸೇರಿಸಿ ಇನ್ನೊಂದು ಪ್ರದಕ್ಷಿಣ ಪಥವಿದೆ. ಗರ್ಭಗೃಹದ ಮುಂದೆ ವಿವಿಧ ಆಕಾರದ ಸ್ತಂಭಗಳಿವೆ. ಕಂಬಗಳಿಂದ ಕೂಡಿದ ಮುಖಮಂಟಪವನ್ನು ಮುಂದೆ ಕಟ್ಟಲಾಗಿದೆ. ಗರ್ಭಗೃಹಗಳ ಮೇಲೆ ಎರಡೂ ಇಟ್ಟಿಗೆಯ ಗೋಪುರಗಳಿವೆ. ಈ ದೇವಾಲಯದಲ್ಲಿ ಭಾರದ್ವಜ, ಷಣ್ಮುಖ, ಚಂಡಿಕೇಶ್ವರ, ದಕ್ಷಿಣಾಮೂರ್ತಿ, ಸೂರ್ಯನಾರಾಯಣ, ಯಜ್ಞೇಶ್ವರ, ಸಪ್ತಮಾತೃಕೆಯರು, ಕಾಲಭೈರವ, ವೀರಭದ್ರ, ಹೊನ್ನಾದೇವಿ ಮತ್ತು ಗಣೇಶ ವಿಗ್ರಹಗಳಿವೆ. ದೇವಾಲಯದ ಅಂಗಳದಲ್ಲಿ ನಾಲ್ಕು ಭಾರೀ ಶಿಲೆಗಳಿವೆ. ಅವುಗಳಲ್ಲಿ ಎರಡು ಕಲ್ಲಿನ ಕಂಬಗಳ ಮೇಲೆ ಅಳವಡಿಸಿದ ಚಕ್ರಗಳು, ಇನ್ನೆರಡು ತ್ರಿಶೂಲ ಮತ್ತು ಡಮರುಗಳು. ಇವು ಕಲ್ಲಿನ ಕಂಬಗಳ ಮೇಲಿವೆ. ಅದೇ ರೀತಿಯ ಒಂದು ಕಲ್ಲಿನ ಕೊಡೆಯು ಬೆಟ್ಟದ ಮೇಲುಭಾಗದಲ್ಲಿದೆ.

ಬೆಂಗಳೂರಿನ ಬಸವನಗುಡಿಯ ಬಸವದೇವಾಲಯವೂ ಅದೇ ಕಾಲಕ್ಕೆ ಸೇರಿದುದು.[೪೮] ಇದರಲ್ಲಿ ದೊಡ್ಡ ಕಂಬಗಳಿರುವ ಗರ್ಭಗೃಹ ಮತ್ತು ಒಂದು ಮುಖಮಂಟಪ ಇವೆ. ಹಜಾರದಂತಿರುವ ಗರ್ಭಗೃಹದಲ್ಲಿ ಸುಮಾರು ೧೦ ಅಡಿ ಎತ್ತರ, ೧೫ ಅಡಿ ಉದ್ದ ಇರುವ ಬೃಹತ್ತದ ನಂದಿಯ ಏಕಶಿಲಾ ವಿಗ್ರಹವಿದೆ. ಆದರೆ ಅಷ್ಟೇನೂ ನಯವಾದ ಕಲೆಗಾರಿಕೆ ಇದರಲ್ಲಿಲ್ಲ. ದೇವಾಲಯದೆದುರಿಗೆ ಸುಮಾರು ೪೫ ಅಡಿ ಎತ್ತರದ ಒಂದು ಏಕಶಿಲಾ ಸ್ತಂಭವಿದೆ.

ಬೆಂಗಳೂರಿನಲ್ಲಿ ಕೆಂಪೇಗೌಡನು ಕಟ್ಟಿಸಿದ ನಾಲ್ಕು ಕಾವಲು ಗೋಪುರಗಳಿವೆ.[೪೯] ಪಶ್ಚಿಮದ ಗೋಪುರವು ಗವೀಪುರದ ನೈರುತ್ಯಕ್ಕೆ ಕೆಂಪಾಂಬುಧಿಕೆರೆಯ ಬಳಿ ಗುಡ್ಡದ ಮೇಲಿದೆ. ದಕ್ಷಿಣದ ಕಾವಲು ಗೋಪುರವು ಲಾಲ್‌ಬಾಗಿನ ಪೂರ್ವಕ್ಕೆ ಒಂದು ಭಾರೀ ಬಂಡೆಯ ಮೇಲಿದೆ. ಪೂರ್ವದ ಗೋಪುರವು ಹಲಸೂರು ಕೆರೆದಂಡೆಯ ಬಳಿ ಇದೆ. ನಾಲ್ಕನೆಯ ಉತ್ತರ ದಿಕ್ಕಿನದು ಹೆಬ್ಬಾಳದ ಸಮೀಪದಲ್ಲಿದೆ. ಪ್ರತಿಗೋಪುರವೂ ನಾಲ್ಕು ಕಂಬಗಳ ಅಂಗಳವಾಗಿದ್ದು ಮೇಲೆ ಇಟ್ಟಿಗೆಯ ಗೋಪುರವಿದೆ.

ಕೆಂಪೇಗೌಡನು ಶಿವಗಂಗೆಯ ಗಂಗಾಧರೇಶ್ವರ ದೇವಾಲಯದ ನವರಂಗಕ್ಕೆ ಮಾಡು ಹೊದೆಸಿದನು.[೫೦] ಈ ದೇವಾಲಯದಲ್ಲಿ ಕೆಂಪೇಗೌಡನ ಒಂದು ಲೋಹದ ಮೂರ್ತಿಯಿದೆ. ಅದರ ಕೆಳಗೆ ಕ್ರಿ.ಶ. ೧೬೦೮ ಎಂದು ವರ್ಷವನ್ನು ನಮೂದಿಸಿದೆ. ಧೋತಿಯನ್ನುಟ್ಟು ಕೆಂಪೇಗೌಡನು ಕೈ ಮುಗಿದುಕೊಂಡು ನಿಂತಿದ್ದಾನೆ, ಸೊಂಟದಲ್ಲಿ ಖಡ್ಗವು ನೇತಾಡುತ್ತಿದೆ.[೫೧] ಬೆಂಗಳೂರಿನ ಬಳಿಯ ಹಲಸೂರಿನಲ್ಲಿ ಎತ್ತರವಾದ ಗೋಪುರವುಳ್ಳ ಸೋಮೇಶ್ವರ ದೇವಾಲಯದಲ್ಲೂ ಅವನ ಒಂದು ವಿಗ್ರಹವಿದೆ. ಈ ದೇವಾಲಯವನ್ನು ಅವನೇ ಕಟ್ಟಿಸಿದನು.[೫೨]

ಇಮ್ಮಡಿ ಕೆಂಪೇಗೌಡನು ಮಾಗಡಿಯಲ್ಲಿ, ಅಗಳಿನ ಸಮೇತ ಬಲವಾದ ಒಂದು ಕೋಟೆಯನ್ನು ಕಟ್ಟಿಸಿದನು. ಮಾಗಡಿಯ ರಂಗನಾಥ ದೇವಾಲಯವನ್ನು, ಸಾವನದುರ್ಗದ ವೀರಭದ್ರ ದೇವಾಲಯವನ್ನೂ ಅಭಿವೃದ್ಧಿಪಡಿಸಿದನು.

ಮೈಸೂರು ಒಡೆಯರ ಕಾಲದ ಕಲೆ ಮತ್ತು ವಾಸ್ತುಶಿಲ್ಪ

ವಿಜಯನಗರವು ಪತನ ಹೊಂದಿದ ನಂತರ ಅದರ ಕಲೆ ಮತ್ತು ವಾಸ್ತುಶಿಲ್ಪ ಶೈಲಿಯನ್ನು ಮೈಸೂರಿನ ಒಡೆಯರು ಮುಂದುವರಿಸಿದರು. ಆದರೆ ಈ ದೇವಾಲಯಗಳಲ್ಲಿ ಅಲಂಕಾರ ಕಡಮೆ.

ರಾಜಒಡೆಯರು ಮೈಸೂರಿನ ಕೋಟೆಯೊಳಗೆ ಲಕ್ಷ್ಮೀರಮಣ ದೇವಾಲಯದ ಮಹಾದ್ವಾರದ ಮೇಲಿನ ಗೋಪುರವನ್ನು ಕಟ್ಟಿಸಿದರು.[೫೩] ಈ ದೇವಾಲಯದಲ್ಲಿ ರಾಜರ ಕೈಮುಗಿದು ನಿಂತ ವಿಗ್ರಹವಿದೆ.

ಶ್ರೀರಂಗಪಟ್ಟಣದ ನರಸಿಂಹ ದೇವಾಲಯವನ್ನು[೫೪] ಕಂಠೀರವ ನರಸರಾಜ ಒಡೆಯರು (ಕ್ರಿ.ಶ.೧೬೩೮-೧೬೫೯) ಕಟ್ಟಿಸಿದರು. ಈ ದೇವಾಲಯದಲ್ಲಿ ಒಂದು ಗರ್ಭಗೃಹ, ಉದ್ದುದ್ದವಾದ ಒಂದು ಸುಕನಾಸಿ, ಅನೇಕ ಕಂಬಗಳಿರುವ ನವರಂಗ ಇವೆ. ನವರಂಗವು ಉತ್ತರದಿಕ್ಕಿಗೆ ವಿಸ್ತರಿಸಿದೆ. ಇಲ್ಲಿ ರಾಜನ ಒಂದು ವಿಗ್ರಹವನ್ನಿರಿಸಿದೆ. ಸೊಗಸಾಗಿ ಕೆತ್ತಿರುವ ಈ ವಿಗ್ರಹದಲ್ಲಿ ರಾಜನು ಒಂದು ಲಾಂಗ್‌ಕೋಟು, ಮೊಗಲ್ ರಾಜರ ಮಾದರಿಯ ಸೊಂಟಪಟ್ಟಿ ಧರಿಸಿದ್ದಾನೆ. ತಲೆಗೂದಲನ್ನು ಓರಣವಾಗಿ ಬಲಗಡೆಗೆ ಹಿಂದಿನ ಹಿಂದೂ ವಿನ್ಯಾಸದಂತೆ ಗಂಟುಕಟ್ಟಿದೆ. ಉದ್ದವಾದ ಮೀಸೆಗಳು, ನೇರವಾದ ಮೂಗು, ಅಗಲವಾದ ಕಣ್ಣುಗಳು ಇವೆ. ಭಕ್ತಿಯಿಂದ ಕೈಗಳನ್ನು ಜೋಡಿಸಿಕೊಂಡು ನಿಂತಿದ್ದಾನೆ. ಈ ವ್ಯಕ್ತಿಶಿಲ್ಪವು ದಕ್ಷಿಣ ಭಾರತೀಯ ವ್ಯಕ್ತಿಶಿಲ್ಪಗಳಿಗೆ ಒಂದು ಉತ್ತಮವಾದ ಮಾದರಿಯಾಗಿದೆ. ಕತ್ತಲಾದ ಪ್ರದಕ್ಷಿಣ ಪಥ, ಮುಚ್ಚಿದ ಪ್ರಾಕಾರವುಳ್ಳ ಪಟಲಾಂಕಣ, ಪ್ರಾಕಾರದ ನಾಲ್ಕೂ ಮೂಲೆಗಳಲ್ಲಿ ಗುಡಿಗಳು ಆಮೇಲೆ ದೊಡ್ಡ ದೇವರಾಜ ಅಥವಾ ಚಿಕ್ಕದೇವರಾಜರ ಕಾಲದಲ್ಲಿ ಸೇರ್ಪಡೆಗೊಂಡುವು.

ದೊಡ್ಡದೇವರಾಜ ಒಡೆಯರು ಚಾಮುಂಡಿ ಬೆಟ್ಟಕ್ಕೆ ಒಂದು ಸಾವಿರ ಮೆಟ್ಟಿಲುಗಳನ್ನು ಕಟ್ಟಿಸಿದರು. ಮೆಟ್ಟಿಲ ದಾರಿಯ ಸುಮಾರು ಮೂರನೆ ಎರಡರಷ್ಟು ಎತ್ತರದಲ್ಲಿ ಒಂದು ಬೃಹತ್ ನಂದಿಯನ್ನು ಕೆತ್ತಿಸಿದರು. ಒಂದೇ ಬಂಡೆಯಿಂದ ಕಡೆದಿರುವ ಈ ಬೃಹತ್ ನಂದಿಯು ಭವ್ಯವಾಗಿದೆ. ಸುಮಾರು ೧೬ ಅಡಿ ಎತ್ತರವಾಗಿರುವ ಈ ನಂದಿಯು ಕುಳಿತು ತಲೆಯೆತ್ತಿರುವ ಭಂಗಿಯಲ್ಲಿದೆ, ಗಂಟೆಸರ ಮೊದಲಾದ ಅಲಂಕಾರಗಳಿಂದ ಕೂಡಿದೆ.[೫೫]

ಬೆಂಗಳೂರಿನ ಕೋಟೆಯಲ್ಲಿರುವ ವೆಂಕಟರಮಣಸ್ವಾಮಿ ದೇವಾಲಯವು[೫೬] ಚಿಕ್ಕದೇವರಾಜ ಒಡೆಯರ ಕಾಲದಲ್ಲಿ ನಿರ್ಮಿತವಾಯಿತು. ಅದರಲ್ಲಿ ಒಂದು ಗರ್ಭಗೃಹ, ಎರಡು ಸುಕನಾಸಿಗಳು ಮತ್ತು ಒಂದು ನವರಂಗ ಇವೆ. ನವರಂಗದ ಕಂಬಗಳಲ್ಲಿ ಸಿಂಹಗಳು, ಆನೆಗಳ ಮೇಲೆ ಕುಳಿತ ಮಾಹುತರ ಶಿಲ್ಪಗಳಿವೆ. ಈ ದೇವಾಲಯದ ಹೊರಗಿನ ಗೋಡೆಯು ವೈಷ್ಣವಿ, ಬ್ರಹ್ಮ, ವಿಷ್ಣು, ಶಿವ, ರುದ್ರರು, ದಿಕ್ಪಾಲರು, ಸಪ್ತ ಋಷಿಗಳು, ಶಿವನ ವಿವಾಹ, ಸಪ್ತಮಾತೃಕೆಯರು ಈ ಶಿಲ್ಪಗಳಿಂದ ಅಲಂಕೃತವಾಗಿದೆ.

ಗುಂಡ್ಲುಪೇಟೆಯ ಪರವಾಸುದೇವ ದೇವಾಲಯವನ್ನೂ ಚಿಕ್ಕದೇವರಾಜರು ಕಟ್ಟಿಸಿದರು.[೫೭] ದೇವಾಲಯದಲ್ಲಿ ಗರ್ಭಗೃಹ, ಸುಕನಾಸಿ, ಪ್ರದಕ್ಷಿಣ ಪಥ, ಶಿಲುಬೆಯಾಕಾರದ ದೊಡ್ಡ ನವರಂಗ ಇವೆ. ನವರಂಗದ ಉತ್ತರ ಮತ್ತು ದಕ್ಷಿಣದಲ್ಲಿ ಗೂಡುಗಳಿವೆ. ಒಂದು ಮುಖಮಂಟಪವಿತ್ತು, ಅದೀಗ ಕಾಣಿಸುವುದಿಲ್ಲ. ಗರ್ಭಗೃಹದ ಗೋಡೆಗಳ ಮೇಲೆ ಸರಳವಾದ ಗೋಡೆಗಂಬಗಳು, ತೆನೆಗಳಿರುವ ಕಮಾನು ಇವೆ. ನವರಂಗದ ಸಣ್ಣ ಕಂಬಗಳು ಮೂರು ಚೌಕಾಕಾರದ ಘನಗಳಾಗಿದ್ದು, ನಡುವೆ ಹದಿನಾರು ಮುಖದ ಪಟ್ಟಿಗಳಿಂದ ಜೋಡಣೆಗೊಂಡಿವೆ. ಕಂಬಗಳ ಮೇಲೆ ವಿಷ್ಣುವಿನ ದಶಾವತಾರಗಳು, ಹನುಮಂತ, ಸಿಂಹಗಳು, ಗಣೇಶ, ರಾಮ, ಋಷಿಗಳು, ಇತ್ಯಾದಿ ವಿಗ್ರಹಗಳಿವೆ. ಸುಕನಾಸಿ ದ್ವಾರದ ನೈರುತ್ಯಕ್ಕಿರುವ ಎರಡನೆಯ ಕಂಬದಲ್ಲಿ ಚಿಕ್ಕದೇವರಾಜರು ತಮ್ಮ ಆ ಸ್ಥಾನಿಕರ ನಡುವೆ ಕುಳಿತಿರುವ ಶಿಲ್ಪವಿದೆ. ದ್ವಾರಗಳನ್ನು ಸುಂದರವಾಗಿ

ಕೆತ್ತಲಾಗಿದೆ. ಕಂಬತೋಳಿನ ಮೇಲೆ ಚೌರಿ ಹಿಡಿದಿರುವವನು ಮತ್ತು ಯಾಳಿಯ ಮೇಲೆ ನಿಂತಿರುವವನು ಈ ವಿಗ್ರಹಗಳಿವೆ. ಪ್ರತಿಯೊಂದರ ಪಕ್ಕದಲ್ಲೂ ದ್ವಾರಪಾಲ ವಿಗ್ರಹಗಳಿವೆ. ಸೆಜ್ಜದ ಮೇಲೆ ಗಜಲಕ್ಷ್ಮಿಯ ಮೂರ್ತಿಯಿದೆ. ಗರ್ಭಗೃಹದಲ್ಲಿ ಪರವಾಸುದೇವನು ಅನಂತನ ಮೇಲೆ ಆಸೀನನಾಗಿರುವ ವಿಗ್ರಹವಿದೆ. ಅನಂತನ ಹೆಡೆ ದೇವರ ನೆತ್ತಿಯ ಮೇಲೆ ಹರಡಿಕೊಂಡಿದೆ. ಸುಖಾಸನದಲ್ಲಿ ಕುಳಿತಿರುವ ಮೂರ್ತಿಯ ಕೆಳಬಲಗೈಯನ್ನು ಮಂಡಿಯ ಮೇಲಿಟ್ಟು ಕೆಳ ಎಡಗೈಯನ್ನು ಅನಂತನ ಮೇಲೆ ಊರಿದೆ. ಮೇಲು ಬಲ ಮತ್ತು ಎಡಗೈಯನ್ನು ಅನಂತನ ಮೇಲೆ ಊರಿದೆ. ಮೇಲು ಬಲ ಮತ್ತು ಎಡಗೈಗಳಲ್ಲಿ ಕ್ರಮವಾಗಿ ಚಕ್ರ ಮತ್ತು ಶಂಖಗಳಿವೆ. ಈ ವಿಗ್ರಹಕ್ಕೆ ಪ್ರಭಾವಳಿಯಿಲ್ಲ.

ಟಿಪ್ಪಣಿಗಳು

೧ ಎ.ಕ. (ಎಪಿಗ್ರಾಫಿಯ ಕರ್ನಾಟಿಕ) ಸಂ.೫, ಬೇಲೂರು ೩

೨ ಸೌ.ಇ.ಇ. (ಸೌತ್ ಇಂಡಿಯನ್ ಇನ್‌ಸ್ಕ್ರಿಪ್ಷನ್ಸ್) ಸಂ.೪, ೨೪೮

೩ ಪಾಟೀಲ ಚನ್ನಬಸಪ್ಪ, ಎಸ್.: ''ಟೆಂಪಲ್ ಆರ್ಕಿಟೆಕ್ಚರಲ್ ಟರ್ಮ್ಸ್ ಇನ್ ವಿಜಯನಗರ ಇನ್‌ಸ್ಕ್ರಿಪ್ಷನ್ಸ್'', ವಿಜಯನಗರ ಪ್ರೋಗ್ರೆಸ್ ಆಫ್ ರೀಸರ್ಚ್ ೧೯೮೪-೮೭, ಸಂಪಾದಕರು: ಡಿ.ವಿ. ದೇವರಾಜ್ ಮತ್ತು ಚನ್ನಬಸಪ್ಪ ಎಸ್.ಪಾಟೀಲ, ಮೈಸೂರು, ೧೯೯೧, ಪು. ೧೬೭-೧೭೩

೪ ಕೃಷ್ಣ, ಎಂ.ಎಚ್.: ''ದಿ ವಿದ್ಯಾಶಂಕರ ಟೆಂಪಲ್ ಶೃಂಗೇರಿ, ಎನ್ ಎಗ್ಸಾಂಪಲ್ ಆಫ್ ಅರ್ಲಿ ವಿಜಯನಗರ ಆರ್ಕಿಟೆಕ್ಚರ್'', ವಿಜಯನಗರ ಸೆಕ್ಸೆಂಟಿನರಿ ಕಮೆಮೊರೇಷನ್ ವಾಲ್ಯೂಮ್, ಧಾರವಾಡ, ೧೯೩೬, ಪು. ೨೮೯-೨೯೪; ಶ್ರೀನಿವಾಸನ್, ಕೆ.ಆರ್.: ''ದಿ ವಿದ್ಯಾಶಂಕರ ಟೆಂಪಲ್, ಶೃಂಗೇರಿ'', ಶೃಂಗೇರಿ ವಿಗ್ನೆಟ್; ರಾಮನ್, ಕೆ.ವಿ.: ''ಆರ್ಕಿಟೆಕ್ಚರ್ ಇನ್ ದಿ ವಿಜಯನಗರ ಪೀರಿಯೆಡ್'', ಸೌತ್ ಇಂಡಿಯನ್ ಸ್ಟಡೀಸ್ (ಡಾ. ಟಿ.ವಿ. ಮಹಾಲಿಂಗಂ ಕಮೆಮೋರೇಷನ್ ವಾಲ್ಯೂಮ್, ಸಂಪಾದಕರು: ಎಚ್.ಎಂ. ನಾಯಕ್ ಮತ್ತು ಬಿ.ಆರ್. ಗೋಪಾಲ್), ಗೀತಾ ಬುಕ್‌ಹೌಸ್, ಮೈಸೂರು, ೧೯೯೦

೫ ತಲವಾರ್, ಎಚ್.ಟಿ.: ''ನರಸಿಂಹ ಟೆಂಪಲ್'', ವಿಜಯನಗರ ಪ್ರೋಗ್ರೆಸ್ ಆಫ್ ರೀಸರ್ಚ್ ೧೯೮೪-೮೭, ಸಂ: ಡಿ.ವಿ. ದೇವರಾಜ್ ಮತ್ತು ಚನ್ನಬಸಪ್ಪ ಎಸ್. ಪಾಟೀಲ, ಮೈಸೂರು, ೧೯೯೧, ಪು. ೧೭೪-೭೬

೬ ಸೌ.ಇ.ಇ. ೧, ೧೫೨, ಪು. ೧೫೫-೧೬೦; ಜಾರ್ಜ್ ಮಿಚೆಲ್, '' ಟೂ ಟೆಂಪಲ್ಸ್ ಫ್ರಂ ದಿ ಅರ್ಲಿ ವಿಜಯನಗರ ಪೀರಿಯಡ್: ಸ್ಟಡೀಸ್ ಇನ್ ಮಾನ್ಯುಮೆಂಟಲ್ ಆರ್ಕೀಯಿಸಂ'', ಕುಸುಮಾಂಜಲಿ: ನ್ಯೂ ಇಂಟರ್‌ಪ್ರಿಟೇಷನ್ ಆಫ್ ಇಂಡಿಯನ್ ಆರ್ಟ್ ಎಂಡ್ ಕಲ್ಚರ್, ಶ್ರೀ ಸಿ. ಶಿವರಾಮಮೂರ್ತಿ ಕಮೆಮೊರೇಷನ್ ವಾಲ್ಯೂಂ, ಸಂ: ಎಂ.ಎಸ್. ನಾಗರಾಜ್‌ರಾವ್, ದೆಹಲಿ, ೧೯೮೭, ಪು. ೨೧೩-೨೧೬

೭. ಪಾಟೀಲ, ಸಿ.ಎಸ್.: ''ಕೃಷ್ಣ ಟೆಂಪಲ್'', ವಿಜಯನಗರ ಪ್ರೋಗ್ರೆಸ್ ಆಫ್ ರೀಸರ್ಚ್, ೧೯೭೯-೮೩, ಸಂ: ಎಂ.ಎಸ್. ನಾಗರಾಜರಾವ್, ಮೈಸೂರು, ೧೯೮೩, ಪು. ೬೦-೬೩

೮ ಸೌ.ಇ.ಇ. ೧, ೧೫೩, ಪು. ೧೬೦-೧೬೭; ಮಿಚೆಲ್, ೧೯೮೭, ಪೂರ್ವೋಕ್ತ, ಪು. ೨೧೩-೨೧೬

೯ ದಲ್ಲಾಪಿಕ್ಕೋಲಾ ಅನ್ನಾ ಎಲ್., ಫ್ರಿಟ್ಜ್ ಜಾನ್ ಎಂ., ಮಿಚೆಲ್ ಜಾರ್ಜ್ ಮತ್ತು ರಾಜಶೇಖರ, ಎಸ್.: ದಿ ರಾಮಚಂದ್ರ ಟೆಂಪಲ್ ಅಟ್ ವಿಜಯನಗರ, ನವದೆಹಲಿ, ೧೯೯೧

೧೦ ಸೌ.ಇ.ಇ. ೪, ೨೫೩

೧೧ ಸೌ.ಇ.ಇ. ೯-೨, ೪೫೩; ಸಂ. ೧೭, ೨೬; ಮಂಜುನಾಥಯ್ಯ ಟಿ.ಎಂ.: ''ಸೌಮ್ಯ ಸೋಮೇಶ್ವರ ಟೆಂಪಲ್ ನಿಂಬಪುರ'', ವಿಜಯನಗರ: ಪ್ರೋಗ್ರೆಸ್ ಆಫ್ ರೀಸರ್ಚ್ ೧೯೮೭-೮೮, ಪು. ೧೬೫-೧೬೭

೧೨ ಲಕ್ಷ್ಮೀನಾರಾಯಣರಾವ್ ಎನ್.: ''ಪೋಟ್ರೇಟ್ ಸ್ಕಲ್ಪ್‌ಚರ್ ಆಫ್ ದಿ ವಿಜಯನಗರ ಕಿಂಗ್ ಮಲ್ಲಿಕಾರ್ಜುನ'', ಸ್ಟಡೀಸ್ ಇನ್ ಇಂಡಿಯನ್ ಹಿಸ್ಟರಿ ಎಂಡ್ ಕಲ್ಚರ್, ಸಂ: ಎಸ್ ರಿತ್ತಿ ಮತ್ತು ಬಾ ರಾ ಗೋಪಾಲ್, ಧಾರವಾಡ

೧೯೭೧, ಪು ೧೮೧-೧೮೨; ಮಿಚೆಲ್ ಜಾರ್ಜ್: '' ಎ ಸ್ಮಾಲ್ ಡೇಟೆಡ್ ಟೆಂಪಲ್ ಎಟ್ ವಿಜಯನಗರ'', ವಿಜಯನಗರ: ಪ್ರೋಗ್ರೆಸ್ ಆಫ್ ರೀಸರ್ಚ್, ೧೯೭೯-೮೩, ಪು. ೪೫-೪೯

೧೩ ವಸಂತ, ಆರ್.: ದಿ ನಾರಾಯಣ ಸ್ವಾಮಿ ಟೆಂಪಲ್ ಎಟ್ ಮೇಲುಕೋಟೆ, ಮೈಸೂರು, ೧೯೯೧

೧೪ ಎ.ಇ. (ಎಪಿಗ್ರಾಫಿಯ ಇಂಡಿಕ) ಸಂ. ೧, ಪು. ೩೬೧; ಸೌ.ಇ.ಇ. ೪, ೨೫೮

೧೫ ಸೌ.ಇ.ಇ.೪, ೨೫೪-೨೫೫

೧೬ ಅದೇ, ೯-೨, ೫೦೨; ೧೬, ೫೬

೧೭ ಎ.ಆರ್.ಐ.ಇ. (ಆನ್ಯುಯಲ್ ರಿಪೋರ್ಟ್ ಆನ್ ಇಂಡಿಯನ್ ಎಪಿಗ್ರಾಫಿ), ೧೯೨೨, ೬೮೩

೧೮ ಎ.ಇ. ೧, ಪು. ೩೮

೧೯ ಸೌ.ಇ.ಇ. ೯-೨, ೫೬೪

೨೦ ಅದೇ, ೪, ೨೮೦

೨೧ ದೇವಕುಂಜರಿ, ಡಿ.: ಹಂಪಿ, ನವದೆಹಲಿ, ೧೯೮೩, ಪು. ೬೩

೨೨ ಮಿಚೆಲ್ ಜಾರ್ಜ್: ''ಆರ್ಕಿಟೆಕ್ಚರ್ ಆಫ್ ದಿ ಮುಸ್ಲಿಂ ಕ್ವಾರ್ಟರ್ಸ್ ಅಟ್ ವಿಜಯನಗರ'', ವಿಜಯನಗರ: ಪ್ರೋಗ್ರೆಸ್ ಆಫ್ ರೀಸರ್ಚ್, ೧೯೮೩-೮೪, ಪು. ೧೦೧-೧೧೮

೨೩ ಸೌ.ಇ.ಇ.೯-೨, ೪೪೭; ನಾಗರಾಜರಾವ್, ಎಂ.ಎಸ್.: ''ಅಹಮದ್ ಖಾನ್ಸ್ ಧರ್ಮಸಾಲಾ'', ವಿಜಯನಗರ: ಪ್ರೋಗ್ರೆಸ್ ಆಫ್ ರೀಸರ್ಚ್ ೧೯೭೯-೮೩, ಪು. ೬೪-೬೫

೨೪ ಮಿಚೆಲ್ ಜಾರ್ಜ್: ''ಟೂ ಟೂಂಬ್ಸ್ ಎಟ್ ಹೊಸಪೇಟೆ'' ವಿಜಯನಗರ: ಪ್ರೋಗ್ರೆಸ್ ಆಫ್ ರೀಸ್‍ರ್ಚ್, ೧೯೮೭-೮೮, ಪು. ೧೮೭-೧೯೦

೨೫ ಸಿವೆಲ್, ರಾಬರ್ಟ್: ಎ ಫರ್‌ಗಾಟನ್ ಎಂಪೈರ್, ನವದೆಹಲಿ, ೧೯೮೨

೨೬ ಲಾಂಗ್‌ಹರ್ಸ್ಟ್,ಎ.ಎಚ್.: ಹಂಪಿ ಹೂಯಿನ್ಸ್, ನವದೆಹಲಿ, ೧೯೮೨

೨೭ ಪಾಟೀಲ್ ಸಿ.ಎಸ್.: ಪ್ಯಾಲೆಸ್ ಆರ್ಕಿಟೆಕ್ಚರ್ ಅಟ್ ವಿಜಯನಗರ'', ವಿಜಯನಗರ: ಪ್ರೋಗ್ರೆಸ್ ಆಫ್ ರೀಸರ್ಚ್ ೧೯೮೩-೮೪, ಪು. ೧೧೯-೧೩೨

೨೮ ಸಿವೆಲ್, ಪೂರ್ವೋಕ್ತ, ಪು. ೩೭೧

೨೯ ಅದೇ, ಪು. ೨೮೫

೩೦ ಫ್ರಿಟ್ಜ್ ಜಾನ್ ಎಂ, ಮಿಚೆಲ್ ಜಾರ್ಜ್ ಎಂಡ್ ಎಂ.ಎಸ್. ನಾಗರಾಜ ರಾವ್ (ಸಂ.): ದಿ ರಾಯಲ್ ಸೆಂಟರ್ ಅಟ್ ವಿಜಯನಗರ, ಪ್ರಿಲಿಮಿನರಿ ರಿಪೋರ್ಟ್, ಮೆಲ್‌ಬೋರ್ನ್ ವಿಶ್ವವಿದ್ಯಾಲಯ, ೧೯೮೪, ಪು. ೯೯-೧೦೨

೩೧ ಅದೇ, ಪು. ೧೦೨-೧೦೩

೩೨ ಇಂಡಿಯನ್ ಆರ್ಕಿಯಾಲಜಿ ೧೯೮೪-೮೫ ಎ ರಿವ್ಯೂ, ನವದೆಹಲಿ ಪು. ೨೭

೩೩ ಫ್ರಿಟ್ಜ್ ಮಿಚೆಲ್ ಮತ್ತು ರಾವ್: ಪೂರ್ವೋಕ್ತ, ಪು. ೧೩೬-೧೩೭, ಮಿಚೆಲ್ ಜಾರ್ಜ್: ದಿ ವಿಜಯನಗರ, ಕೋರ್ಟಲಿ ಸ್ಟೈಲ್, ನವದೆಹಲಿ, ೧೯೯೨, ಪು. ೧೩-೧೫

೩೪ ಫ್ರಿಟ್ಜ್, ಮಿಚೆಲ್ ಮತ್ತು ರಾವ್: ಪೂರ್ವೋಕ್ತ, ಪು. ೧೨೪-೧೨೬, ಪೂರ್ವೋಕ್ತ, ಪು. ೧೭-೧೯

೩೫ ದೇವರಾಜ್ ಡಿ.ವಿ. ಮತ್ತು ಪಾಟೀಲ ಚನ್ನಬಸಪ್ಪ ಎಸ್. (ಸಂ), ವಿಜಯನಗರ ಪ್ರೋಗ್ರೆಸ್ ಆಫ್ ರೀಸರ್ಚ್ ೧೯೮೪-೮೭, ೧೯೯೧, ಪು. ೧೭೭-೧೮೨

೩೬ ಪಾಟೀಲ ಚನ್ನಬಸಪ್ಪ ಎಸ್: ''ಕುಮ್ಮಟ'', ವಿಜಯನಗರ: ಪ್ರೋಗ್ರೆಸ್ ಆಫ್ ರೀಸರ್ಚ್ ೧೯೮೭-೮೮, ಪು. ೧೯೯-೨೧೬

೩೭ ಸಿವೆಲ್, ಪೂರ್ವೋಕ್ತ, ಪು. ೮೮

೩೮ ಅದೇ, ಪು. ೨೫೩

೩೯ ಪಾಟೀಲ್, ಸಿ.ಎಸ್.: ''ಡೋರ್‌ಗಾಡಿಯನ್ಸ್ ಆಫ್ ವಿಜಯನಗರ ಸಿಟಿ'', ವಿಜಯನಗರ: ಪ್ರೋಗ್ರೆಸ್ ಆಫ್ ರೀಸರ್ಚ್ ೧೯೮೩-೮೪, ಪು. ೬೬-೭೭

೪೦ ನಾಗರಾಜರಾವ್ ಎಂ.ಎಸ್. ಮತ್ತು ಪಾಟೀಲ್ ಸಿ.ಎಸ್.: ''ಎಪಿಗ್ರಾಫಿಕಲ್ ರೆಫರೆನ್ಸಸ್ ಟು ಸಿಟಿಗೇಟ್ಸ್ ಎಂಡ್ ವಾಚ್ ಟವರ್ಸ್ ಆಫ್ ವಿಜಯನಗರ'', ವಿಜಯನಗರ: ಪ್ರೋಗ್ರೆಸ್ ಆಫ್ ರಿಸರ್ಚ್ ೧೯೮೩-೮೪, ಪು. ೯೬-೧೦೦; ಪಾಟೀಲ ಚನ್ನಬಸಪ್ಪ ಎಸ್.: ''ಫರ್ದರ್ ಎಪಿಗ್ರಾಫಿಕಲ್ ರೆಫರೆನ್ಸಸ್ ಟು ಸಿಟಿ ಗೇಟ್ಸ್ ಎಂಡ್ ವಾಚ ಟವರ್ಸ್ ಆಫ್ ವಿಜಯನಗರ'', ವಿಜಯನಗರ ಪ್ರೋಗ್ರೆಸ್ ಆಫ್ ರೀಸರ್ಚ್ ೧೯೮೪-೮೭, ಪು. ೯೧-೧೯೪

೪೧ ಅದೇ.

೪೨ ಮೈಸೂರು ಪ್ರಾಚ್ಯಶಾಸ್ತ್ರ ವಿಭಾಗದ ೧೯೩೨ನೆಯ ವರ್ಷದ ವಾರ್ಷಿಕ ವರದಿ, ಪು. ೪೫-೪೭

೪೩ ಅದೇ, ಪು. ೪೭-೪೯

೪೪ ಅದೇ, ಪು. ೩೯-೪೫

೪೫ ಸುಂದರ, ಎ.: ಕೆಳದಿ ಅರಸರ ಕಾಲದ ವಾಸ್ತು ಮತ್ತು ಮೂರ್ತಿಶಿಲ್ಪ, ಸಂ. ೧, ರಾಜಕೀಯ ಮತ್ತು ಸಾಂಸ್ಕೃತಿಕ ಹಿನ್ನೆಲೆ, ಮೈಸೂರು, ೧೯೮೬, ಪು. ೩೧-೩೩

೪೬ ಸುಂದರ, ಎ.: ದಿ ಕೆಳದಿ ನಾಯಕ ಆರ್ಕಿಟೆಕ್ಚರ್ ಎಂಡ್ ಆರ್ಟ್, ಸಂ. ೫, ಭಾಗ-೨, ದಿ ಶಿವಪ್ಪನಾಯಕ ಪ್ಯಾಲೆಸ್ ಇನ್ ಶಿವಮೊಗ್ಗ, ಮೈಸೂರು, ೧೯೮೭

೪೭ ಮೈಸೂರು ಪ್ರಾಚ್ಯ ಸಂಶೋಧನ ವಿಭಾಗದ ೧೯೩೫ನೆಯ ವರ್ಷದ ವಾರ್ಷಿಕ ವರದಿ, ಪು. ೨೫-೨೬

೪೮ ಅದೇ, ಪು. ೨೭

೪೯ ಅದೇ, ಪು. ೨೬-೩೦

೫೦ ಅದೇ, ೧೯೩೪, ಪು. ೮

೫೧ ಅದೇ, ೧೯೧೫, ಪು. ೧೧

೫೨ ಅದೇ, ೧೯೧೧, ಪು. ೨

೫೩ ಹಯವದನರಾವ್, ಸಿ.: ಮೈಸೂರು ಗಜೆಟಿಯರ್, ಸಂ.೫, ಪು. ೭೫೪-೭೫೫

೫೪ ಮೈಸೂರು ಪ್ರಾಚ್ಯ ಸಂಶೋಧನ ವಿಭಾಗದ ೧೯೩೫ರ ವಾರ್ಷಿಕ ವರದಿ, ಪು. ೫೮-೫೯

೫೫ ಹಯವದನರಾವ್: ಪೂರ್ವೋಕ್ತ, ಪು.೬೫೪

೫೬ ಮೈ ಪ್ರಾ. ಸಹಿ ವಿಭಾಗ ೧೯೩೫ರ ವಾರ್ಷಿಕ ವರದಿ, ಪು ೨೩-೨೪

೫೭ ಅದೇ, ೧೯೩೪, ಪು. ೫೧-೫೩

ಅಧ್ಯಾಯ : ಹದಿನಾಲ್ಕು

ಕನ್ನಡ ಸಾಹಿತ್ಯ

ವಿಜಯನಗರದ ಅರಸರು ಮತ್ತು ಕನ್ನಡ ಸಾಹಿತ್ಯ

೧

ವಿಜಯನಗರ ಕಾಲದ ಕನ್ನಡ ಸಾಹಿತ್ಯ ಎಂದರೆ ವಿಜಯನಗರ ಸ್ಥಾಪನೆಗೊಂಡು, ಅದು ಅವನತಿಯಾದ ಕಾಲದವರೆಗಿನ ಕನ್ನಡ ಸಾಹಿತ್ಯ. ಇತಿಹಾಸಕಾರರ ಅಭಿಪ್ರಾಯದಂತೆ ವಿಜಯನಗರ ಸ್ಥಾಪನೆಗೊಂಡುದು ೧೩೩೬ರ ಏಪ್ರಿಲ್ ೧೮ರಂದು; ಅದರ ಅವನತಿಯ ನಿರ್ಣಾಯಕ ಯುದ್ಧವಾದುದು ೧೫೬೫ರ ಜನವರಿ ೨೩ರಂದು. ಸಾಮ್ರಾಜ್ಯ ಸ್ಥಾಪಿಸಿದವನು ೧ನೇ ಹರಿಹರ; ನಿರ್ಣಾಯಕ ಯುದ್ಧದಲ್ಲಿ ಸೋತವನು ಅಳಿಯ ರಾಮರಾಯ. ವಿಜಯನಗರವನ್ನು ಅಖಂಡವಾಗಿ, ನಿರಂತರವಾಗಿ ಆಳಿದ್ದು ಒಂದೇ ರಾಜವಂಶವಲ್ಲ. ಸಂಗಮ, ಸಾಳುವ, ತುಳುವ ಹಾಗೂ ಅರವೀಡು ಮನೆತನದ ಹಲವಾರು ಅರಸರು ಈ ರಾಜ್ಯವನ್ನು ಆಳಿದರು. ಎರಡೂಕಾಲು ಶತಮಾನಗಳ ಈ ಅವಧಿಯ ಚರಿತ್ರೆ ಸಾಹಸ, ಸಾಧನೆ, ವೈಭವ, ಔನ್ನತ್ಯಗಳ ಗಾಥೆ. ಈ ಅವಧಿಯ ಸಾಹಿತ್ಯ ಚರಿತ್ರೆ ಕೂಡ ಪ್ರಯೋಗ, ಪರಿಣತಿ, ವೈವಿಧ್ಯ, ಉತ್ತುಂಗತೆಗಳ ಸಾಂಗತ್ಯ ಇಲ್ಲವೇ ಷಟ್ಪದಿಗಳ ಝೇಂಕಾರ. ಸಮೃದ್ಧಿ, ಸರ್ವತೋಮುಖತೆಗಳು ಈ ಅವಧಿಯ ಸಾಹಿತ್ಯದಲ್ಲಿ ಎದ್ದುಕಾಣುವ ಗುಣಗಳು.

ವಿಜಯನಗರವನ್ನು ದೀರ್ಘಕಾಲ ಆಳಿದ್ದು ಸಂಗಮ ವಂಶ. ಚರಿತ್ರಕಾರರು ಗುರುತಿಸಿರುವಂತೆ ೧೩೩೬ರ ೧ನೇ ಹರಿಹರನಿಂದ ೧೪೮೬ರ ಇಮ್ಮಡಿ ವಿರೂಪಾಕ್ಷನವರೆಗೆ ಈ ವಂಶದ ಆಳ್ವಿಕೆಯ ಕಾಲ. ಎಂದರೆ ಒಂದೂವರೆ ಶತಮಾನ ಅಥವಾ ೧೫೦ ವರ್ಷ. ೧ನೇ ಮತ್ತು ೨ನೇ ನರಸಿಂಹರು ಮಾತ್ರ ಪಟ್ಟವೇರಿದ ಸಾಳುವ ವಂಶದ ಕಾಲಾವಧಿ ಎರಡು ದಶಕ (೧೪೮೫-೧೫೦೫). ತುಳುವ ವಂಶದಲ್ಲಿ ಸಿಂಹಾಸನವೇರಿದ ಮೊದಲ ದೊರೆ ವೀರನರಸಿಂಹ (೧೫೦೫). ವಿಜಯನಗರದ ಪತನಾನಂತರವೂ ಬದುಕಿದ್ದ ಅರವೀಡು ರಾಮರಾಯ, ಅವನ ತಮ್ಮ ತಿರುಮಲರ ಕೈಗೊಂಬೆಯಾಗಿದ್ದ ಸದಾಶಿವರಾಯ ತೀರಿಕೊಂಡದ್ದು ೧೫೭೦ರಲ್ಲಿ. ಎಂದರೆ ಆರೂವರೆ ದಶಕ ಅಥವಾ ೬೫ ವರ್ಷ ಈ ವಂಶದ ಆಳ್ವಿಕೆಯ ಕಾಲ. ಅರವೀಡು ರಾಜರಿಗೆ ವಿಜಯನಗರದ ಬದಲು ಪೆನುಗೊಂಡೆ ರಾಜಧಾನಿಯಾಯಿತು. ೧ನೇ ತಿರುಮಲನ ಆರಂಭ ಕಾಲವಾದ ೧೫೭೦ರಿಂದ ಕೊನೆಯ ದೊರೆ ರಾಮದೇವನ ಅಂತ್ಯವರ್ಷವಾದ ೧೬೩೨ರ ವರೆಗೂ-ಎಂದರೆ ೬೦ವರ್ಷ- ತೀವ್ರ ಅಂತಃಕಲಹ, ಆಕ್ರಮಣದ ಕಾಲ.

ಒಂದು ಎಣಿಕೆಯಂತೆ ವಿಜಯನಗರ ಕಾಲದಲ್ಲಿದ್ದ ಕನ್ನಡ ಕವಿಗಳ ಸಂಖ್ಯೆ ಇನ್ನೂರನ್ನು ತಲಪುತ್ತದೆ. ಆದರೆ ಈ ಎಲ್ಲ ಕವಿಗಳೂ ರಾಜಾಶ್ರಯ ಪಡೆದವರೇನೂ ಅಲ್ಲ; ಎಲ್ಲ ರಾಜರೂ ಕವಿಗಳಿಗೆ ಆಶ್ರಯ

ನೀಡಿದವರೇನಲ್ಲ. ಹೊಸ ಸಾಮ್ರಾಜ್ಯದ ಸ್ಥಾಪನೆಯಲ್ಲಿ ತೊಡಗಿಕೊಂಡಿದ್ದ ಆರಂಭಕಾಲೀನ ರಾಜರು, ಸಾಮ್ರಾಜ್ಯ ವಿನಾಶಗೊಳ್ಳುತ್ತಿದ್ದ ಕಾಲದಲ್ಲಿ ಅದನ್ನು ಉಳಿಸಿಕೊಳ್ಳಲು ಹೋರಾಡುತ್ತಿದ್ದ ರಾಜರು ಸಾಹಿತ್ಯ-ಸಂಸ್ಕೃತಿಗಳ ಪೋಷಣೆಯೆಡೆ ಗಮನಹರಿಸುವುದು ಸಹಜವಾಗಿಯೇ ತೊಡಕಿನದು. ಸಾಹಿತ್ಯದ ನೇರ ಪೋಷಣೆಗೆ ಕಾರಣರಾದ ರಾಜರ ಪಟ್ಟಿ ಹೀಗಿದೆ: ೧) ೨ನೇ ಹರಿಹರ (೧೩೭೭-೧೪೦೪) ಇವನ ಮಹಾಮಂತ್ರಿಯಾದ ಮುದ್ದದಂಡೇಶನ ಆಶ್ರಯದಲ್ಲಿ ಮಧುರಕವಿಯಿದ್ದ. ೨) ಪ್ರೌಢದೇವರಾಯ (೧೪೨೨-೧೪೪೬). ಲಕ್ಕಣದಂಡೇಶ, ಕುಮಾರಬಂಕನಾಥ, ಕರಸ್ಥಲದ ನಾಗಿದೇವ, ಮಗ್ಗೆಯ ಮಾಯಿದೇವ, ಚಾಮರಸ, ಗುರುಬಸವ, ಕಲ್ಲುಮಠದ ಪ್ರಭುದೇವ, ಚಂದ್ರಕವಿ, ಜಕ್ಕಣಾರ್ಯ ಇವನ ಆಶ್ರಿತರು. ೩) ಮಲ್ಲಿಕಾರ್ಜುನ ಅಥವಾ ೩ನೇ ದೇವರಾಯ (೧೪೪೬-೧೪೬೬). ಜನವಶ್ಯದ ಕಲ್ಲರಸ ಇವನ ಪೋಷಣೆ ಪಡೆದಿದ್ದ. ೪) ಸಾಳುವ ನರಸಿಂಹನು (೧೪೮೫-೧೪೯೧) ಶ್ರೀಪಾದರಾಜರಿಗೆ ಆಶ್ರಯ ನೀಡಿರಲಿಲ್ಲವಾದರೂ, ಅವರನ್ನು ಅರಮನೆಗೆ ಕರೆಯಿಸಿಕೊಂಡು, ಸಿಂಹಾಸನದ ಮೇಲೆ ಕೂರಿಸಿ ಸನ್ಮಾನಿಸಿದ್ದ. ೫) ತುಳುವ ಕೃಷ್ಣದೇವರಾಯನ (೧೫೦೯-೧೫೨೯) ಆಸ್ಥಾನದಲ್ಲಿ ತಿಮ್ಮಣ್ಣನಿದ್ದ; ವ್ಯಾಸರಾಯ ಇವನ ಸಮಕಾಲೀನ ೬) ಅಚ್ಯುತ ದೇವರಾಯನನ್ನು (೧೫೨೯-೧೫೪೨) ಚಾಟುವಿಠಲನಾಥ ತನ್ನ ಭಾಗವತದಲ್ಲಿ ''ಸದಮಳಾಚ್ಯುತ ಕೃಷ್ಣರಾಯನ'' ''ನಿರುಪಮಾಚ್ಯುತ ಕೃಷ್ಣರಾಯನ'' ಎಂದು ಉಲ್ಲೇಖಿಸುತ್ತಾನೆ. ವಿಜಯನಗರವನ್ನು ಆಳಿದ ಅರಸರು ೧೭ ಮಂದಿ; ಅರವೀಡು ದೊರೆಗಳು ೭ ಜನ. ಇಪ್ಪತ್ತನಾಲ್ಕು ಅರಸರಲ್ಲಿ ಆಶ್ರಯ – ಪೋಷಣೆಗಳ ಸ್ಪಷ್ಟ ಉಲ್ಲೇಖ ದೊರೆಯುವುದು ಆರು ರಾಜರಿಗೆ ಸಂಬಂಧಿಸಿದಂತೆ ಮಾತ್ರ. ಇತರ ಅರಸರು ಕವಿಗಳಿಗೆ ಆಶ್ರಯ ನೀಡಲಿಲ್ಲವೇ? ಸಾಹಿತ್ಯವನ್ನು ಪೋಷಿಸಲಿಲ್ಲವೇ? ಪೋಷಿಸಿರಬೇಕು. ಆದರೆ ನೇರಪೋಷಣೆಯಾಗಿದ್ದ ಅವರ ಕಾಲದ ಸಾಹಿತ್ಯ ನಮ್ಮವರೆಗೂ ಉಳಿದುಬಂದಿದ್ದಿರಲಾರದು, ಅಷ್ಟೆ. ನಿದರ್ಶನಕ್ಕೆ ೨ನೇ ಹರಿಹರನಿಗೆ ''ಕರ್ನಾಟಕ ವಿದ್ಯಾವಿಲಾಸ'' ಎಂಬ ಬಿರುದಿತ್ತು. ಅವನ ನೇರ ಆಶ್ರಯದ ಕವಿ, ಕೃತಿಗಳು ಬೆಳಕಿಗೆ ಬಂದಿಲ್ಲ. ಈ ಮನೆತನದ ಅರಸರಲ್ಲಿ, ಅವರ ಬಂಧುಗಳಲ್ಲಿ ಕೆಲವರು ಸ್ವತಃ ಸಾಹಿತ್ಯರಚನೆ ಮಾಡಿರುವುದೂ ಉಂಟು-ಆದರೆ ಅದು ವಿಶೇಷವಾಗಿ ಸಂಸ್ಕೃತ ಮತ್ತು ತೆಲುಗುಗಳಲ್ಲಿ. ಬುಕ್ಕರಾಯನ ಸೊಸೆ ಗಂಗಾದೇವಿ ಸಂಸ್ಕೃತದಲ್ಲಿ 'ಮಧುರಾವಿಜಯ' ಅಥವಾ 'ವೀರಕಂಪಣರಾಯ ಚರಿತ' ಬರೆದಿದ್ದಾಳೆ. ಸಾಳುವ ನರಸಿಂಹನು (೧೪೮೫-೧೪೯೧) 'ರಾಮಾಭ್ಯುದಯ'ವೆಂಬುದನ್ನೂ ಕೃಷ್ಣದೇವರಾಯನು 'ಮದಾಲಸ ಚರಿತ್ರಂ', 'ರಸಮಂಜರಿ', 'ಜ್ಞಾನಚಿಂತಾಮಣಿ', 'ಸತ್ಯವಧೂ ಸಾಂತ್ವನ' ಎಂಬುವನ್ನೂ, ಆತನ ಮಗಳು ತಿರುಮಲಾಂಬಾ 'ವರದಾಂಬಿಕಾ ಪರಿಣಯ'ವನ್ನೂ ರಚಿಸಿದ್ದಾರೆ. ಈ ಅರಸರಲ್ಲಿ ಇನ್ನು ಕೆಲವರು ಶಾಸ್ತ್ರಗ್ರಂಥ ರಚನೆ ಮಾಡಿದ್ದಾರೆ. ಈ ಸಂಗತಿ ಕೂಡ ವಿಜಯನಗರ ಕಾಲದಲ್ಲಿ ಕವಿಜನ ಪೋಷಣೆಗೆ, ಸಾಹಿತ್ಯಾಶ್ರಯಕ್ಕೆ ಒಲವು ಒತ್ತಾಸೆ ನೀಡಿರಬೇಕು. ಈಗ ದೊರೆತಿರುವಷ್ಟು ವಿಜಯನಗರ ಕಾಲದ ಸಾಹಿತ್ಯ – ಅದು ಸಂಸ್ಕೃತದ್ದಾಗಿರಲಿ, ಕನ್ನಡದ್ದಾಗಿರಲಿ, ತೆಲುಗಿನದಾಗಲಿ-ಅದಕ್ಕೆ ಹಿಂದಣ ಕಾಲಗಳೊಂದಿಗೆ ಹೋಲಿಸಿದಾಗ ಶ್ರೀಮಂತವೇ ಸರಿ. ಆದರೆ ಆ ಸಾಮ್ರಾಜ್ಯದ ವೈಭವ, ಔನ್ನತ್ಯಗಳಿಗೆ ಇದು ತೂಗುವಂಥದೇನೂ ಅಲ್ಲ. ಅದು ಇನ್ನೂ ಸಮೃದ್ಧ, ಬಹುಮುಖಿ ಹಾಗೂ ವೈಶಿಷ್ಟ್ಯಪೂರ್ಣವಾಗಿತ್ತು. ಆದರೆ ಆ ಸಾಮ್ರಾಜ್ಯದ ನಾಶದೊಂದಿಗೆ, ಆ ಕಾಲದ, ಆ ಮನೆತನಗಳಿಂದ ಪೋಷಿತವಾದ ಸಾಹಿತ್ಯದ ಬಹುಭಾಗ ನಾಶವಾಗಿದೆ. ಉಳಿದು ಬಂದಿರುವುದು ಆ ಚಿನ್ನದ ಖನಿಯ ಅದಿರು ಮಾತ್ರ, ಅಷ್ಟೆ.

೨

ವಿಜಯನಗರದ ಅರಸರು ಧರ್ಮ ಮತ್ತು ಭಾಷೆಗಳ ನಡುವೆ ಭೇದವೆಣಿಸಲಿಲ್ಲ. ಎಲ್ಲ ಧರ್ಮಗಳಿಗೂ ಎಲ್ಲ ಭಾಷೆಗಳಿಗೂ ಸಮಾನವಾದ ಪ್ರೋತ್ಸಾಹ ನೀಡಿದರು. ಸಂಸ್ಕೃತ, ಕನ್ನಡ ಮತ್ತು ತೆಲುಗು ಭಾಷಾ ಸಾಹಿತ್ಯಗಳು ವೃದ್ಧಿಸಿದ್ದು ಇದರಿಂದಲೇ. ಈ ಕಾಲದ ಅನೇಕರು ಉಭಯಭಾಷಾ ವಿಶಾರದರು. ಕನ್ನಡದಲ್ಲಿ

ಟೀಕೆ, ವ್ಯಾಖ್ಯಾನ ಬರೆದ ಕೇಶವವರ್ಣಿ (೧೩೫೯), ಅಭಿನವ ಶ್ರುತಮುನಿ (೧೩೬೫), ಯಶಃಕೀರ್ತಿ (ಸು. ೧೪೦೦)ಯರನ್ನು ಇಲ್ಲಿ ಉಲ್ಲೇಖಿಸಬಹುದು. ಸಂಸ್ಕೃತ ಕೃತಿಗಳಿಗೆ ಕನ್ನಡದಲ್ಲಿ ಟೀಕೆ ಬರೆದಿರುವುದರಿಂದ ಇವರಿಗೆ ಸಂಸ್ಕೃತ-ಕನ್ನಡ ಪರಿಚಯವಿತ್ತೆಂಬುದು ಸ್ವತಃ ಸಿದ್ಧ. ಪಾಲ್ಕುರಿಕೆ ಸೋಮನಾಥ (ಸು. ೧೩೦೦) ಸಂಸ್ಕೃತ, ತೆಲುಗು, ಕನ್ನಡಗಳಲ್ಲಿ ಕೃತಿರಚನೆ ಮಾಡಿದ್ದಾನೆ. ಸ್ವತಃ ಕೃಷ್ಣದೇವರಾಯನೇ ತೆಲುಗು ಸಂಸ್ಕೃತಗಳೆರಡರಲ್ಲೂ ಕೃತಿ ರಚಿಸಿದ್ದ. ಇಮ್ಮಡಿ ದೇವರಾಯನ ಆಸ್ಥಾನದಲ್ಲಿದ್ದ ೧ನೇ ಅರುಣಗಿರಿನಾಥನಿಗೆ ''ಅಷ್ಟಭಾಷಾಪರಮೇಶ್ವರ'' ಎಂಬ ಬಿರುದೇ ಇತ್ತು! ಈಶ್ವರನಿಗೆ ಎಂಟು ಮುಖಗಳಿದ್ದಂತೆ, ಈತನಿಗೆ ಎಂಟುಭಾಷೆಗಳಲ್ಲಿ ಪ್ರಭುತ್ವವಿತ್ತು. ಆದ್ದರಿಂದಲೇ ಈ ಕಾಲದ ಕವಿಗಳಲ್ಲಿ ಪ್ರತಿಭೆಯೊಂದಿಗೆ ಪಾಂಡಿತ್ಯವೂ ಇದೆ. ತಮ್ಮ ಕಾವ್ಯಗಳಲ್ಲಿ ಚಿತ್ರಕಾವ್ಯದ ಹಲವು ಮಾದರಿಗಳನ್ನು ಈ ಕಾಲದ ಕವಿಗಳು ಪ್ರಯೋಗಿಸಿರುವುದು ಇದಕ್ಕೆ ಪೋಷಕವಾಗಿದೆ.

ಒಂದು ವಾದದಂತೆ ವಿಜಯನಗರ ಸಾಮ್ರಾಜ್ಯ ಸ್ಥಾಪಿತವಾದದ್ದು ಹಿಂದೂಧರ್ಮದ ಪುನರುತ್ಥಾನದ ದೃಷ್ಟಿಯಿಂದಲೇ ಹೊರತು, ಸಾಮ್ರಾಜ್ಯ ಸ್ಥಾಪನೆಗಾಗಿಯಲ್ಲ. ಇದರ ಸತ್ಯಾಸತ್ಯತೆಗಳ ಚರ್ಚೆ ಇಲ್ಲಿ ಅನವಶ್ಯಕ. ಆದರೆ ಆಪತ್ತಿನಲ್ಲಿದ್ದ, ಔತ್ತರೇಯ ದೊರೆಗಳ ಆಕ್ರಮಣಕ್ಕೆ ಸಿಲುಕಿ ಸರ್ವನಾಶವೇ ಆಗಿಬಿಡಬಹುದು ಎಂಬಂತಿದ್ದ ಹಿಂದೂಧರ್ಮವನ್ನು ಈ ಮನೆತನದ ರಾಜರು ವಿಶೇಷವಾಗಿ ಪ್ರೋತ್ಸಾಹಿಸಿದರು, ಪುನರುಜ್ಜೀವಿಸಿದರು ಎಂಬುದು ಸುಳ್ಳೇನಲ್ಲ. ಬುಕ್ಕರಾಯ ಜೈನ-ವೈಷ್ಣವರ ನಡುವಣ ವಿದ್ವೇಷವನ್ನು ರಾಜಿಮಾರ್ಗದಿಂದ ಪರಿಹರಿಸಿದ. 'ಹಿಂದುರಾಯ ಸುರತ್ರಾಣ' (=ದೇವೇಂದ್ರನಂತೆ ಹಿಂದು ರಾಜರ ಪಾಲಕ) ಎಂಬ ಬಿರುದು ಈ ಸಾಮ್ರಾಜ್ಯವನ್ನಾಳಿದ ಅನೇಕ ಅರಸರಿಗಿದೆ. ನಾನಾಧರ್ಮ, ವರ್ಣ, ಜಾತಿ, ಮತ, ಪಂಗಡ, ಪಂಥಗಳ ವಿಷಮತೆಯಿಂದ ಹಿಂದೂಸಮಾಜ ಹರಿದು ಹಂಚಿಹೋಗಿದ್ದುದನ್ನು ಈ ಅರಸರು ಮನಗಂಡಿದ್ದರು. ಆದ್ದರಿಂದಲೇ ಮತೀಯ ಸೌಹಾರ್ದ, ಧಾರ್ಮಿಕ ಸಾಮರಸ್ಯ ಅಥವಾ ಸರ್ವಧರ್ಮ ಸಮನ್ವಯ ಈ ಅರಸರ ರಾಜ್ಯಾಡಳಿತದ ಹಸ್ತಸೂತ್ರವಾಗಿತ್ತು. ಆದ್ದರಿಂದಲೇ ವಿವಿಧ ಧರ್ಮಗಳು, ಅವುಗಳ ಸಾಹಿತ್ಯ ಈ ಅರಸರ ಕಾಲದಲ್ಲಿ ಬೆಳಗಿತು. ಸಂಗಮ ವಂಶದ ಅರಸರು ವೈದಿಕ ಹಾಗೂ ವೀರಶೈವ ಧರ್ಮಗಳೆಡೆಯೂ, ಸಾಳುವ, ತುಳುವ ಮತ್ತು ಅರವೀಡು ಅರಸರು ವೈದಿಕ ಹಾಗೂ ವೈಷ್ಣವ ಧರ್ಮಗಳೆಡೆಯೂ ಒಲವು ತೋರಿದರು. ಜೈನ ಧರ್ಮದೆಡೆ ಈ ಅರಸರು ಬಾಗಲಿಲ್ಲವಾದರೂ, ಆ ಧರ್ಮ ಸಾಹಿತ್ಯಗಳು ತಮ್ಮ ದನಿಯನ್ನು ಉಳಿಸಿಕೊಳ್ಳುವಲ್ಲಿ ಸಫಲವಾದುವು. ಆದ್ದರಿಂದಲೇ ವಿಜಯನಗರ ಕಾಲದ ಕನ್ನಡ ಸಾಹಿತ್ಯದಲ್ಲಿ ಎಲ್ಲ ಧರ್ಮಗಳೂ ಪ್ರಾತಿನಿಧ್ಯ, ಪ್ರಾಶಸ್ತ್ಯ ಪಡೆದಿವೆ. ಹಿಂದಿನ ಜೈನ ಹಾಗೂ ವೀರಶೈವ ಸಾಹಿತ್ಯಗಳೊಂದಿಗೆ ವೈದಿಕ ಸಾಹಿತ್ಯವೂ ಈ ಅವಧಿಯಲ್ಲಿ ಎಡೆ ಪಡೆದಿದೆ. ಮಧುರ (ಸು. ೧೩೮೫), ಭಾಸ್ಕರ (೧೪೨೪), ಕಲ್ಯಾಣ ಕೀರ್ತಿ (೧೪೩೯), ತೆರಕಣಾಂಬಿ ಬೊಮ್ಮರಸ (ಸು. ೧೪೮೫), ಆದಿಯಪ್ಪ (೧೪೬೦), ಸಾಳ್ವ (೧೪೮೦), ಮಂಗರಸ (೧೫೦೮), ದೇವಪ್ಪ (೧೫೪೦), ಪದ್ಮಕವಿ (೧೫೨೮), ರತ್ನಾಕರವರ್ಣಿ (೧೫೫೭), ನೇಮಣ್ಣ (೧೫೫೯), ದೊಡ್ಡಣಾಂಕ (೧೫೭೮)-ಈ ಅವಧಿಯ ಪ್ರಮುಖ ಜೈನಕವಿಗಳು. ಭೀಮಕವಿ(೧೩೬೯), ಗುಬ್ಬಿಯ ಮಲ್ಲಣ್ಣ (ಸು .೧೪೩೦), ಲಕ್ಕಣದಂಡೇಶ(೧೪೨೪), ಕರಸ್ಥಲದ ನಾಗಿದೇವ (ಸು. ೧೪೩೦), ಮಗ್ಗೆಯ ಮಾಯಿದೇವ (ಸು. ೧೪೩೦), ಚಾಮರಸ (ಸು. ೧೪೩೦), ಸಪ್ತಕಾವ್ಯದ ಗುರುಬಸವ (ಸು. ೧೪೩೦), ಬೊಮ್ಮರಸ (ಸು. ೧೪೫೦), ಸಿಂಗಿರಾಜ (ಸು. ೧೫೦೦), ಸುರಂಗ (ಸು. ೧೫೦೦), ಶಂಕರದೇವ (ಸು. ೧೫೦೦), ನಂಜುಂಡ (ಸು. ೧೫೨೫), ಚೆನ್ನಬಸವಾಂಕ (ಸು. ೧೫೫೦), ಕಿಕ್ಕೇರಿಯಾರಾಧ್ಯ ನಂಜುಂಡ (ಸು. ೧೫೫೦), ವಿರೂಪಾಕ್ಷ ಪಂಡಿತ (೧೫೮೪) – ಈ ಅವಧಿಯ ಗಣ್ಯ ವೀರಶೈವ ಕವಿಗಳು. ಕುಮಾರವ್ಯಾಸ (ಸು. ೧೪೩೦), ಕುಮಾರವಾಲ್ಮೀಕಿ, (ಸು. ೧೫೦೦), ಶ್ರೀಪಾದರಾಜ (ಸು. ೧೫೦೦), ತಿಮ್ಮಣ್ಣ (೧೫೧೦), ವ್ಯಾಸರಾಜ (ಸು. ೧೫೨೦), ಚಾಟುವಿಠಲನಾಥ (ಸು. ೧೫೩೦), ಗೋವಿಂದಕವಿ

(೧೫೮೧)-ಈ ಅವಧಿಯ ಮುಖ್ಯ ಬ್ರಾಹ್ಮಣ ಕವಿಗಳು. ವಚನ ಸಾಹಿತ್ಯದ ಅನಂತರ, ಸಾಹಿತ್ಯ ಮತ್ತು ಸಂಸ್ಕೃತಿಗಳ ದೃಷ್ಟಿಯಿಂದ ಮುಖ್ಯರೆನಿಸುವ ಮಧ್ಯಕಾಲದ ಮಹತ್ವಪೂರ್ಣಕವಿಗಳು ಇಲ್ಲಿ ಎಡೆಪಡೆದಿರುವುದು ಸಾಮಾನ್ಯವಾದ ಸಂಗತಿಯೇನಲ್ಲ. ಇದರೊಂದಿಗೆ ರತ್ನಾಕರವರ್ಣಿ, ಚಾಮರಸ ಮತ್ತು ಕುಮಾರವ್ಯಾಸರಂಥ ಪ್ರಮುಖ ಕವಿಗಳು ಮೂರು ಭಿನ್ನಧರ್ಮಗಳ ಹಿನ್ನೆಲೆಯಲ್ಲಿ ಶ್ರೇಷ್ಠ ಕೃತಿರಚನೆ ಮಾಡಿರುವುದನ್ನು ಗಮನಿಸಬೇಕು.

ಜೈನ, ವೀರಶೈವ ಹಾಗೂ ವೈದಿಕಧರ್ಮದ ಕವಿಗಳು ಕಾಣಿಸಿಕೊಂಡಿದ್ದಾರೆಂಬುದು ಸರಿ. ಆದರೆ ಈ ಧರ್ಮಗಳ ಇತರ ಕವಿಗಳು ರಚಿಸಿದ ಕೃತಿಗಳು ಎಂಥವು? ತಮ್ಮ ಧರ್ಮಪ್ರಸಾರಕ್ಕೆ ಅನುಕೂಲಿಸುವಂಥ ಕೃತಿಗಳು. ಕೇಶವವರ್ಣಿ (೧೩೫೯) 'ಗೊಮ್ಮಟ ಸಾರ' 'ಶ್ರಾವಕಾಚಾರ'ಗಳ ಮೇಲೆ, ಅಭಿನವ ಶ್ರುತಮುನಿ (ಸು. ೧೩೬೫), 'ಸಜ್ಜನ ಚಿತ್ತವಲ್ಲಭ'ದ ಮೇಲೆ ಯಶಃ ಕೀರ್ತಿ (ಸು. ೧೫೦೦) 'ಧರ್ಮ ಶರ್ಮಾಭ್ಯುದಯ'ದ ಮೇಲೆ ಟೀಕೆ-ವ್ಯಾಖ್ಯಾನ ರಚಿಸಿದರು. ಇವರೆಲ್ಲ ಜೈನಧರ್ಮೀಯರು. ವೀರಶೈವ ಕವಿಗಳಲ್ಲಿ ಗುಬ್ಬಿಯ ಮಲ್ಲಣ್ಣ (ಸು. ೧೪೩೦) ವಾತೂಲತಂತ್ರಕ್ಕೆ, ಮಹಾಲಿಂಗದೇವ (ಸು. ೧೪೨೫) 'ಷಟ್ಸ್ಥಲ ಜ್ಞಾನಚಾರಿತ್ರ' ಕುಮಾರ ಬಂಕನಾಥ ಪ್ರಭುದೇವರ ವಚನಗಳಿಗೆ, ಕಲ್ಲುಮಠದ ಪ್ರಭುದೇವ ಅಲ್ಲಮನ 'ಮಂತ್ರಗೋಪ್ಯ'ಕ್ಕೆ, ಗುರುನಂಜ ಭಟ್ಟಭಾಸ್ಕರನ ಯಜುರ್ವೇದ ಭಾಷ್ಯಕ್ಕೆ, ಲಿಂಗಣಾರಾಧ್ಯ (ಸು. ೧೫೦೦) 'ಶಬ್ದ ಮಣಿದರ್ಪಣ'ಕ್ಕೆ ಟೀಕೆ ವ್ಯಾಖ್ಯಾನ ಬರೆದಿದ್ದಾರೆ. ವಾದಿರಾಜರು (ಸು. ೧೫೭೦) 'ಭಾರತ ತಾತ್ಪರ್ಯ ನಿರ್ಣಯ ಟೀಕೆ' ರಚಿಸಿದರು. ಟೀಕೆ-ವ್ಯಾಖ್ಯಾನಗಳ ಬಗೆಗಿನ ಈ ಕಾಲದ ಆಸ್ಥೆ-ಆಸಕ್ತಿಗಳನ್ನು ಇವು ವಿದಿತಗೊಳಿಸುತ್ತವೆ. ಇದು ಈ ಅವಧಿಯ ಒಂದು ಸಾಹಿತ್ಯಿಕ ವೈಶಿಷ್ಟ್ಯವಾಗಿಯೇ ರೂಪುಗೊಂಡಿದೆ. ಇದಕ್ಕೆ ಕಾರಣ ಊಹಿಸುವುದು ಸುಲಭ. ವಿಜಯನಗರ ಸ್ಥಾಪನೆಯ ಮರುವರ್ಷಗಳಲ್ಲೇ ಮೂಲಧರ್ಮದ ತಿರುಳು ಸಾಮಾನ್ಯ ಜನರಿಗೆ ಮುಟ್ಟಬೇಕೆಂದು ವೇದಗಳಿಗೆ, ಬ್ರಾಹ್ಮಣಗಳಿಗೆ, ಪುರಾಣಗಳಿಗೆ ಸಾಯಣ - ಮಾಧವರು ಟೀಕೆ, ವ್ಯಾಖ್ಯಾನ, ಭಾಷ್ಯ ಬರೆದರು. ವೇದಗಳ ಸಮಗ್ರ ವ್ಯಾಖ್ಯಾನವಾದ 'ವೇದಾರ್ಥ ಪ್ರಕಾಶ'. ಪರಾಶರಸ್ಮೃತಿಯ ವ್ಯಾಖ್ಯಾನವಾದ 'ಪರಾಶರ ಮಾಧವೀಯ' ಸೂತಸಂಹಿತೆಯ ಮೇಲಣ 'ತಾತ್ಪರ್ಯ ದೀಪಿಕೆ' ಉಲ್ಲೇಖಿಸಬಹುದಾದ ಇವರ ಕೆಲವು ಸಂಸ್ಕೃತ ಕೃತಿಗಳು. ರಾಜನಾಗಿದ್ದ ಪ್ರೌಢದೇವರಾಯನೇ ಬ್ರಹ್ಮಸೂತ್ರದ ಮೇಲೆ ವೃತ್ತಿ ಬರೆದಿದ್ದ. ಇವುಗಳ ಮುಖ್ಯ ಉದ್ದೇಶ ವೈದಿಕ ಧರ್ಮದ ಪುನಃ ಸ್ಥಾಪನೆ ಹಾಗೂ ಧಾರ್ಮಿಕ ತತ್ತ್ವಗಳ ಸರಳ ನಿರೂಪಣೆ. ಮೂಲ ಸಂಸ್ಕೃತ ಕೃತಿಗಳಿಗೆ ಸಮರ್ಥ ಕೈಪಿಡಿ ತಯಾರಿಕೆಯೂ ಇವುಗಳ ದೃಷ್ಟಿಯಾಗಿತ್ತು. ಈ ಎಲ್ಲದರಿಂದ ಧಾರ್ಮಿಕ ಪುನರುಜ್ಜೀವನ ಸಾಧ್ಯವೆಂದು ನಂಬಲಾಗಿತ್ತು. ಇದೇ ಕ್ರಮವನ್ನೇ ಕನ್ನಡದ ವಿವಿಧ ಧರ್ಮೀಯ ಕವಿಗಳು ಅನುಸರಿಸಿ ಕನ್ನಡದ ವ್ಯಾಖ್ಯಾನ ಸಂಪತ್ತನ್ನು ವರ್ಧಿಸಿದರು; ತಮ್ಮ ತಮ್ಮ ಧರ್ಮಗಳ ಮೂಲಕೃತಿಗಳನ್ನು ಟೀಕೆ-ವ್ಯಾಖ್ಯಾನಗಳ ಮೂಲಕ ತಮ್ಮ ಧಾರ್ಮಿಕ ವಲಯದಲ್ಲಿ ಸ್ಥಾಪಿಸಲು ಪ್ರಯತ್ನಿಸಿದರು. ಇದರಿಂದ ಕನ್ನಡದ ಶಾಸ್ತ್ರವಾಙ್ಮಯದ ಟೀಕೆ-ವ್ಯಾಖ್ಯಾನ ಕ್ಷೇತ್ರ ಸ್ವಲ್ಪ ಶ್ರೀಮಂತವಾಯಿತು.

ಧರ್ಮ ಸಂಸ್ಥಾಪನೆಯ ಪ್ರಯತ್ನದಲ್ಲಿ ಅಸ್ತವ್ಯಸ್ತವಾಗಿದ್ದ, ಚೆದುರಿಹೋಗಿದ್ದ ಧಾರ್ಮಿಕ ಗ್ರಂಥಗಳನ್ನು ಕಲೆಹಾಕುವುದೂ ವಿಜಯನಗರದ ಮೊದಲ ಅರಸರ ಗುರಿಯಾಗಿತ್ತು. ಸಾಯಣರದೆನ್ನಲಾಗಿರುವ 'ಸರ್ವದರ್ಶನ ಸಂಗ್ರಹ', ಭಾರತೀತೀರ್ಥರ 'ವೈಯಾಸಿಕ ನ್ಯಾಯಮಾಲಾ', ವಿದ್ಯಾರಣ್ಯರ 'ಅನುಭೂತಿ ಪ್ರಕಾಶ' ಹಾಗೂ 'ವಿವರಣ ಪ್ರಮೇಯ ಸಂಗ್ರಹ' ಈ ನಿಟ್ಟಿನಲ್ಲಿ ಉಲ್ಲೇಖಿಸಬಹುದಾದ ಕೆಲವು ಕೃತಿಗಳು. ಮೊದಲನೆಯದರಲ್ಲಿ ಹದಿನಾರು ದರ್ಶನಗಳು. ಉಳಿದವುಗಳಲ್ಲಿ ವೇದ, ಬ್ರಹ್ಮಸೂತ್ರ, ಉಪನಿಷತ್ತುಗಳನ್ನು ಸಂಗ್ರಹಿಸಿ ಅವುಗಳ ಉದ್ದೇಶ - ಉಪದೇಶ-ವಿಮರ್ಶೆ ಮಾಡಿದೆ. ಇದರಿಂದಲೇ ಪ್ರೇರಿತರಾಗಿ ಪ್ರೌಢದೇವರಾಯನ ಕಾಲದಲ್ಲಿ ವಚನಗಳ ಸಂಕಲನ, ಪರಿಷ್ಕರಣ, ವ್ಯಾಖ್ಯಾನ ಕಾರ್ಯಗಳು ಜರುಗಿದುವು. ಕಲ್ಯಾಣದ ಕ್ರಾಂತಿಯ ಅನಂತರ ವಚನ ಸಾಹಿತ್ಯ ವಿಚ್ಛಿದ್ರಗೊಂಡಿತ್ತು; ಚೆದುರಿಹೋಗಿತ್ತು. ಸಾವಿರಾರು ಹಸ್ತಪ್ರತಿಗಳಿಂದ ಅವನ್ನು ವಿವಿಧ

ರೂಪಗಳಲ್ಲಿ ಸಂಕಲಿಸುವ, ಸಂಗೋಪನೆ ಮಾಡುವ ಕಾರ್ಯ ಜರುಗಿತು. ಲಕ್ಕಣದಂಡೇಶ, ಜಕ್ಕಣಾರ್ಯರಂಥ ಅಧಿಕಾರಿಗಳು ಇದಕ್ಕೆ ನೇತಾರರೂ ಪ್ರೋತ್ಸಾಹಕರೂ ಆದರು. ವಚನ ಸಂಬಂಧವಾದ ಸಂರಕ್ಷಣಾಕಾರ್ಯಕ್ಕೆ, ಪಾಂಡಿತ್ಯಪೂರ್ಣ ಕೆಲಸಗಳಿಗೆ ವಿಜಯನಗರ ಕೇಂದ್ರವಾಯಿತು. ಏಕೋತ್ತರ ಶತಸ್ಥಲಗಳನ್ನು ಮಗ್ಗೆಯ ಮಾಯಿದೇವ ಷಟ್ಪದಿಯಲ್ಲಿ, ಮಹಾಲಿಂಗದೇವ ವಚನಗಳಲ್ಲಿ, ಜಕ್ಕಣಾರ್ಯ ಸ್ವರವಚನಗಳಲ್ಲಿ, ಕುಮಾರಬಂಕನಾಥ ಸ್ವರವಚನ ಟೀಕೆಯಲ್ಲಿ ಸಂಕಲಿಸಿದರು; ನಿರೂಪಿಸಿ ವಿವರಿಸಿದರು. ಕಲ್ಲುಮಠದ ಪ್ರಭುದೇವನ 'ಲಿಂಗಲೀಲಾವಿಲಾಸ ಚಾರಿತ್ರ'ದಲ್ಲಿ ೩೬ ವಚನಕಾರರ ೭೯ ವಚನಗಳು, ಗುಬ್ಬಿಯ ಮಲ್ಲಣ್ಣನ 'ಗಣಭಾಷಿತ ರತ್ನಮಾಲೆ'ಯಲ್ಲಿ ೩೮ ವಚನಕಾರರ ೪೮೫ ವಚನಗಳು, ಚೆನ್ನವೀರಾಚಾರ್ಯನ 'ವಿಶೇಷಾನುಭವ ಷಟ್ಸ್ಥಲ'ದ ೧೫ ಸ್ಥಲಗಳಲ್ಲಿ ೪೦೦ಕ್ಕೂ ಹೆಚ್ಚಿನ ವಚನಗಳು ದೊರೆಯುತ್ತವೆ. ಶಿವಗಣಪ್ರಸಾದಿ, ಹಲಗೆಯಾರ್ಯ, ಗುಮ್ಮಳಾಪುರದ ಸಿದ್ಧಲಿಂಗ 'ಶೂನ್ಯ ಸಂಪಾದನೆ'ಯಂಥ ವಿಶಿಷ್ಟ ಸಂಕಲನ ಗ್ರಂಥ ಸಿದ್ಧಗೊಳಿಸಿದರು. 'ಆಚರಣೆಯ ವಚನ', 'ಮಿಶ್ರ ಸ್ತೋತ್ರದ ವಚನ' ಎಂಬ ಸಂಗ್ರಹಗಳಿರುವಂತೆ ಸಿಂಗಳದ ಸಿದ್ಧಬಸವರಾಜದೇವ ಸಂಗ್ರಹಿಸಿ ವ್ಯಾಖ್ಯಾನಿಸಿದ ಬೆಡಗಿನ ವಚನಗಳ ಸಂಗ್ರಹವೇ ಇದೆ. ವಚನಗಳ ಸಂಕಲನ, ವ್ಯವಸ್ಥಾಪನ ಮತ್ತು ವ್ಯಾಖ್ಯಾನದ ಬಹುಮುಖತೆಗೆ, ವೈಶಿಷ್ಟ್ಯಕ್ಕೆ ಇವು ಸಾಕ್ಷಿ. ಸಂಕಲನ, ಸಂಪಾದನಗಳ ತೀವ್ರ ಚಟುವಟಿಕೆಗೂ ಇವು ನಿದರ್ಶನ. ವಚನ ಸಂಪಾದನೆಯ ಕಾರ್ಯದಲ್ಲೇ ಆ ಕಾಲದಲ್ಲಿ ಕೆಲವರು ನಿಯುಕ್ತರಾಗಿದ್ದರು. ಈ ದೃಷ್ಟಿಯಿಂದ ಸಂಪಾದನೆಯ ಚೆನ್ನಂಜೆದೇವ ಎಂಬಾತ ಪ್ರಸಿದ್ಧ. ಜೈನಕವಿಗಳೂ ತತ್ತ್ವ ಮತ್ತು ನೀತಿ ನಿಯಮ ಪ್ರತಿಪಾದಿಸಲು ಹಿಂದಿನವರ ಗ್ರಂಥಗಳನ್ನು ಆಧರಿಸಿ ಸಂಗ್ರಹರೂಪದ ಕೃತಿಗಳನ್ನು ರಚಿಸಿದರು. ಆಯತವರ್ಮನ(ಸು. ೧೪೦೦)'ರತ್ನ ಕರಂಡಕ', ಚಂದ್ರಕೀರ್ತಿಯ 'ಪರಮಾಗಮಸಾರ', ಕಲ್ಯಾಣಕೀರ್ತಿ ಮತ್ತು ವಿಜಯಣ್ಣರ (೧೪೪೮) ಅನುಪ್ರೇಕ್ಷೆಯನ್ನು ಕುರಿತ ರಚನೆಗಳು ಜೈನಧರ್ಮದ ಆಚಾರ-ವಿಚಾರ ವಿವರಿಸುವ ಕೃತಿಗಳು. ಖಿಲವಾಗುತ್ತಿದ್ದ, ರಾಜಾಶ್ರಯದಿಂದ ದೂರ ಸರಿಯುತ್ತಿದ್ದ ಜೈನಧರ್ಮವನ್ನು ಪ್ರತಿಷ್ಠಾಪಿಸಲು ಇಂಥ ಕ್ಷೀಣ ಪ್ರಯತ್ನಗಳು ನಡೆದುವು. ಇದೇನಿದ್ದರೂ ಇವೆಲ್ಲವುಗಳ ಮೂಲ ಉದ್ದೇಶ ಧರ್ಮ ಪ್ರಸಾರವೇ.

೩

ಧರ್ಮದ ಮೂಲತತ್ವಗಳನ್ನು ತಿಳಿಸುವ ಗ್ರಂಥಗಳ ಅನುವಾದಗಳನ್ನೊ, ಟೀಕೆಗಳನ್ನೊ ರಚಿಸಿದಂತೆ ಸಾಹಿತ್ಯದ ಮಾಧ್ಯಮದಲ್ಲಿ ಕೂಡ ಅದನ್ನು ಹರಡಲು ಈ ಕಾಲದ ಕವಿಗಳು ಪ್ರಯತ್ನಿಸಿದರು. ಮಧುರ, ಬಾಹುಬಲಿ (೧೫ನೆಯ ತೀರ್ಥಂಕರನಾದ ಧರ್ಮನಾಥ) ೩ನೇ ಮಂಗರಸ, ಸಾಳ್ವ (೨೨ನೇ ತೀರ್ಥಂಕರ ನೇಮಿನಾಥ), ಪದ್ಮಕವಿ (೨೪ನೇ ತೀರ್ಥಂಕರ ವರ್ಧಮಾನ), ದೊಡ್ಡಣಾಂಕ (೮ನೇ ತೀರ್ಥಂಕರ ಚಂದ್ರಪ್ರಭ) ಮುಂತಾದ ಜೈನ ಧರ್ಮೀಯ ಕವಿಗಳು ತೀರ್ಥಂಕರ ಚರಿತೆಯ ಸಂಪ್ರದಾಯ ಮುಂದುವರಿಸಿದರು. ಭಾಷೆ ಶೈಲಿ ಛಂದಸ್ಸುಗಳನ್ನುಳಿದು ಇವುಗಳಲ್ಲಿ ಮತ್ತಾವ ಹೊಸತೂ ಇರಲಿಲ್ಲ. ಆದ್ದರಿಂದ ಈ ಕಾಲದ ಕವಿಗಳು ನೂತನವಾಗಿ ಆರಿಸಿಕೊಂಡದ್ದು ಕಥೆಗಳನ್ನು, ಉಪಾಖ್ಯಾನಗಳನ್ನು. ಹಾಗೆ ನೋಡಿದರೆ ಇದು ಜೈನೋಪಾಖ್ಯಾನ ಹಾಗೂ ವೈದಿಕೋಪಾಖ್ಯಾನಗಳ ಸುಗ್ಗಿಯ ಕಾಲ. ನೀತಿಯನ್ನು, ಮತೀಯ ತತ್ತ್ವಗಳನ್ನು ಮನಸ್ಸಿಗೆ ಹಿಡಿಸುವಂತೆ ಕಥಾ ನಿರೂಪಣೆ ಮಾಡುವುದು ಇವುಗಳ ಉದ್ದೇಶವಾಗಿತ್ತು. ಭಾಸ್ಕರ (೧೪೨೪), ಬೊಮ್ಮರಸ (೧೪೮೫), ಕೋಟೀಶ್ವರರು (ಸು. ೧೫೦೦) ಜೀವಂಧರನ ಕಥೆಯನ್ನು ಹೇಳಿದರು. ಮುಕ್ಕಾಲು ಶತಮಾನದ ಅವಧಿಯಲ್ಲಿ ಈ ಕಥೆ ಮೂವರಿಂದ ಹೇಳಲ್ಪಟ್ಟಿರುವುದು ಕುತೂಹಲಕರ. ಕಲ್ಯಾಣಕೀರ್ತಿಯ 'ಜ್ಞಾನಚಂದ್ರಾಭ್ಯುದಯ' ಬೊಮ್ಮರಸನ 'ಸನತ್ಕುಮಾರನ ಕಥೆ', ಬಾಹುಬಲಿಯ (ಸು. ೧೫೬೦) 'ನಾಗಕುಮಾರನ ಕಥೆ', ಶ್ರುತಕೀರ್ತಿಯ 'ವಿಜಯಕುಮಾರಿ ಕಥೆ' ಇದೇ ಪ್ರಕಾರಕ್ಕೆ ಸೇರುವಂಥವು. ಜೀವಂಧರನ ಕಥೆಯಲ್ಲಿ ಕರ್ಮ-ವಿಧಿಗಳ ಪರಿಣಾಮದ ಚಿತ್ರಣವಿದೆ.

ವೀರಶೈವ ಕವಿಗಳು ಕೂಡ ಕಥಾಸಾಹಿತ್ಯದ ಕೋಟೆಗೆ ಲಗ್ಗೆಯಿಟ್ಟರು. ಶಿವಪುರಾಣಗಳಲ್ಲಿದ್ದ ಕಥೆ-ಉಪಕಥೆಗಳನ್ನು ಅವರು ಗಮನಿಸಿದ್ದರು; ಅವುಗಳಲ್ಲಿ ಒಂದೆರಡನ್ನು ಈ ಹಿಂದಿನ ಕವಿಗಳು ಆಗಲೇ ಅಳವಡಿಸಿದ್ದರು; ಸ್ವತಂತ್ರ ಕೃತಿಗಳಾಗಿಸಿದ್ದರು. ಇಂಥ ಕಥೆಗಳಲ್ಲಿ ತುಂಬ ಜನಪ್ರಿಯವಾದುದು ಹರಿಶ್ಚಂದ್ರನ ಕಥೆ. ರಾಘವಾಂಕ ಸಮರ್ಥವಾಗಿ ನಿರೂಪಿಸಿದ್ದ ಈ ಕಥೆಯನ್ನು ಓದುವಗಿರಿಯ (ಸು. ೧೫೨೫), ಬೊಂಬೆಯ ಲಕ್ಕ (೧೫೩೮) ಸಾಂಗತ್ಯದಲ್ಲಿ ಮತ್ತೆ ಹೇಳಿದರು. ಸ್ಕಾಂದ ಪುರಾಣದ 'ಸಾನಂದ ಗಣೇಶನ ಕಥೆ'ಯನ್ನು, ಆ ಮೂಲಕ ಪಂಚಾಕ್ಷರೀ ಮಂತ್ರದ ಮಹಿಮೆಯನ್ನು ಓದುವಗಿರಿಯನೇ ಇನ್ನೊಂದು ಕಾವ್ಯವಾಗಿಸಿದ. ವೀರಭದ್ರರಾಜ (ಸು. ೧೫೩೦) ತನ್ನ 'ವೀರಭದ್ರ ವಿಜಯ'ದಲ್ಲಿ, ಗುರುಲಿಂಗವಿಭು (ಸು. ೧೫೫೦) ತನ್ನ 'ಭಿಕ್ಷಾಟನ ಚರಿತೆ'ಯಲ್ಲಿ ಶಿವನ ೨೫ ಲೀಲೆಗಳಲ್ಲಿ ಒಂದೆರಡನ್ನು ತಮ್ಮ ಕಾವ್ಯಗಳಿಗೆ ಆರಿಸಿಕೊಂಡರು. ಬೊಮ್ಮರಸ (ಸು. ೧೪೫೦), ವಿರೂಪರಾಜ (೧೫೧೯), ಚೇರಮ (೧೫೨೬) ಕವಿಗಳು ಪುರಾತನರಾದ ನಂಬಿಯಣ್ಣ, ಚೇರಮಾಂಕರ ಕಥೆಯನ್ನು ನಿರೂಪಿಸಿದರು. ಶಿವಭಕ್ತ ಶಿಶುವನ್ನು ನಿರುದ್ದೇಶವಾಗಿ ಕೊಂದುದರ ಪಾಪ, ಅದರ ಪ್ರಾಯಶ್ಚಿತ್ತ, 'ಪಂಚಾಕ್ಷರೀ ಮಂತ್ರ ಮಹಿಮೆ' ಹೇಳುವ ಕೃತಿಗಳು ಗುಬ್ಬಿಯ ಮಲ್ಲಣಾರ್ಯನ 'ಭಾವಚಿಂತಾರತ್ನ' ಮತ್ತು ಲಿಂಗಕವಿಯ 'ಚೋಳರಾಜ ಸಾಂಗತ್ಯ'. ಸತ್ಯ, ಶಿವಲೀಲೆ, ಪಂಚಾಕ್ಷರಿ ಮಂತ್ರ ಮಹಿಮೆ ಮುಂತಾದವನ್ನು ಉಜ್ವಲೀಕರಿಸುವುದರ ಮೂಲಕ ಜನರನ್ನು ಸೆಳೆಯಲು ಈ ಕವಿಗಳು ಪ್ರಯತ್ನಿಸಿದರು. ಭೀಮಕವಿ, ಲಕ್ಕಣದಂಡೇಶ, ಸಿಂಗಿರಾಜರು ಬಸವಣ್ಣನನ್ನು ಕೇಂದ್ರವಾಗಿರಿಸಿಕೊಂಡು ಆತನ ಸಮಕಾಲೀನರ ಹಾಗೂ ಪುರಾತನರ ಕಥೆಗಳನ್ನು ಇನ್ನೊಂದು ಬಗೆಯಲ್ಲಿ ನಿರೂಪಿಸಿದರು. ಇವು ''ವೀರಶೈವ ಸತ್ಪುರುಷರ ಕಥೆಗಳ ಜ್ಞಾನದ ಕಣಜ'' ಎಂಬ ಕೀರ್ತಿಗೆ ಪಾತ್ರವಾಗಿವೆ. ಕಿಕ್ಕೇರಿಯಾರಾಧ್ಯ ನಂಜುಂಡನ 'ಭೈರವೇಶ್ವರ ಕಾವ್ಯ', ಗುಬ್ಬಿಯ ಮಲ್ಲಣಾರ್ಯನ (೧೫೧೩) 'ವೀರಶೈವಾಮೃತ ಮಹಾಪುರಾಣ' ವೀರಶೈವ ಪೌರಾಣಿಕ ಕಥಾಸಂಗ್ರಹಗಳೆಂದೇ ಖ್ಯಾತವಾಗಿವೆ. ಈ ಎಲ್ಲದರ ಮೂಲಕ ವೀರಶೈವಧರ್ಮದ ಪ್ರಸಾರ, ಪ್ರಚಾರ, ಪ್ರಭಾವಗಳಾದುವು.

ಬ್ರಾಹ್ಮಣ ಕವಿಗಳು ಕೂಡ ಕಥಾಸಾಗರಕ್ಕೇ ದುಮುಕಿದರು. ನಾರಣಪ್ಪ, ಕುಮಾರ ವಾಲ್ಮೀಕಿ ಭಾರತ-ರಾಮಾಯಣಗಳನ್ನು ಹೇಳಿದರು. ಕಥೆಗಳ ಭಂಡಾರವೇ ಆದ ಭಾಗವತವನ್ನು ತುಂಬ ಸರಳವಾಗಿ ಚಾಟು ವಿಠಲನಾಥ ನಿರೂಪಿಸಿದ. ಆಧ್ಯಾತ್ಮಿಕವಾಗಿ ಶ್ರೇಷ್ಠ ಬ್ರಾಹ್ಮಣನಿಗಿಂತ ಮಿಗಿಲಾದ ಕನಕದಾಸರು ವೈದಿಕ ಪರಂಪರೆಯ ನಳೋಪಾಖ್ಯಾನ, ಪ್ರದ್ಯುಮ್ನ ಚರಿತ್ರೆ, ರಾಗಿ-ಬತ್ತದ ವಾಗ್ವಾದದ ಕಥೆ ಆಯ್ದು ನಿರೂಪಿಸಿದರು. ಬತ್ತೀಸ ಪುತ್ತಳಿ ಕಥೆಯ ತೊರೆಯನ್ನು ಮೊದಲಬಾರಿಗೆ ಕನ್ನಡ ಸಾಹಿತ್ಯವಾಹಿನಿಗೆ ಸೇರಿಸಿದ್ದು ರಾಮೇಂದ್ರ (ಸು. ೧೫೫೦). ಆತನ 'ಸೌಂದರ್ಯಕಥಾ ರತ್ನ' ವಿಶಿಷ್ಟ ಕಥೆಗಳ ಸಂಗ್ರಹ. ಗೋಪಕವಿ (ಗೋವಿಂದ ಕವಿ) 'ಚಿತ್ರಭಾರತ'ವನ್ನು, ನಂದಿ ಮಾಹಾತ್ಮ್ಯವನ್ನು ಹೇಳಿದ. ಕತೆಗಳ ಮೂಲಕ ಧರ್ಮ ಪ್ರಸರಿಸುವ ಈ ಸ್ಪರ್ಧೆಯಲ್ಲಿ ಎಲ್ಲ ಧರ್ಮಗಳ ಕವಿಗಳೂ ಚುರುಕುತನ ಚಟುವಟಿಕೆಗಳಿಂದ ಭಾಗವಹಿಸಿದ್ದಾರೆ.

ಕಥಾ ಸಾಹಿತ್ಯದ ಈ ಪ್ರಾಚುರ್ಯ, ವೈಪುಲ್ಯಗಳಿಗೆ ಕಾರಣವೇನು? ಈ ಅವಧಿಯೇ ಸರಳತೆ, ನೇರತೆ, ಸ್ಪಷ್ಟತೆಗಳ ಸಾಹಿತ್ಯದ ಕಾಲ. ಗತಾನುಗತಿಕವಾದ ಆಗಮ ಗ್ರಂಥಗಳ ರಚನೆ, ತೀರ್ಥಂಕರ ಚರಿತೆ-ಪುರಾಣಗಳ ಸೃಷ್ಟಿಗಳಿಂದ ಧರ್ಮ ಪ್ರಸಾರ ಅಸಾಧ್ಯವೆಂಬುದು ಎಲ್ಲರಿಗೂ ತಿಳಿದಿತ್ತು. ಕಠಿಣ ಧಾರ್ಮಿಕ ಗ್ರಂಥಗಳಿಗೇ ಸರಳವಾದ ಟೀಕೆ-ವ್ಯಾಖ್ಯಾನಗಳು ರಚಿತವಾದುದನ್ನು ಕವಿಗಳೂ ಗಮನಿಸಿದ್ದರು. ಆದ್ದರಿಂದ ಕಥಾ ಮಾಧ್ಯಮವನ್ನು ಅವಲಂಬಿಸಿದ ಸಾಮಾನ್ಯಜನರನ್ನು ತಲಪುವ ಪ್ರಯತ್ನವನ್ನು ಕವಿಗಳು ಮಾಡಿದರು. ಈ ಅವಧಿಯಲ್ಲೇ ರಚಿತವಾಗಿದ್ದ ಸಂಸ್ಕೃತ ಸಾಹಿತ್ಯದ 'ಭೋಜ ಪ್ರಬಂಧ' (ಸು. ೧೫೬೦) ನಾರಾಯಣನ 'ಹಿತೋಪದೇಶ' (ಸು. ೧೩೭೦) ಮುಂತಾದುವೂ ಇದಕ್ಕೆ ಪರೋಕ್ಷ ಪ್ರೇರಣೆಯಿತ್ತಿರಬಹುದು.

೪

ಈ ಅರಸರ ಕಾಲದ ಮತ್ತೊಂದು ಸಾಹಿತ್ಯಕ ವೈಶಿಷ್ಟ್ಯ ಭಕ್ತಿಗೀತೆಗಳ ರಚನೆ , ಭಕ್ತಿ ಸಾಹಿತ್ಯದ ಸೃಷ್ಟಿ. ಅದ್ವೈತ ಬ್ರಹ್ಮಕ್ಕಿಂತ, ಪ್ರಾರ್ಥಿಸಿ ಅರ್ಚಿಸಬಹುದಾದ ಇಷ್ಟ ದೈವದ ಬಯಕೆ ಜನಸಾಮಾನ್ಯರಿಗೆ ತೀವ್ರವಾಗಿತ್ತು. ರಾಮಾನುಜಾಚಾರ್ಯ ಹಾಗೂ ಮಧ್ವಾಚಾರ್ಯರ ವಿಶಿಷ್ಟಾದ್ವೈತ ಮತ್ತು ದ್ವೈತ ಸಿದ್ಧಾಂತಗಳು ದೈವವೇ ಪರಮ, ಅದರ ಸಂಕಲ್ಪದಿಂದಲೇ ಸೃಷ್ಟಿ ಹಾಗೂ ಅದರ ಸಮಸ್ತ ವ್ಯಾಪಾರ ಎಂದು ಪ್ರತಿಪಾದಿಸಿದ್ದುವು. ಇದರಿಂದ ರಾಮ, ಕೃಷ್ಣರೇ ಅರ್ಚನಾ ದೈವಗಳಾದರು. ಪ್ರಾರ್ಥನೆ, ಅನನ್ಯ ಪ್ರಪತ್ತಿ, ಉಪವಾಸಗಳಿಂದ ದೈವಕೃಪೆ ಹೊಂದುವ ಪ್ರಯತ್ನ ಚಾಲ್ತಿಯಾಯಿತು. ಭಕ್ತಿಪಂಥದ ಅನುಯಾಯಿಗಳು ತಮ್ಮ ತತ್ತ್ವ ಹಾಗೂ ಉಪದೇಶಗಳನ್ನು ಜನಸಮೂಹಕ್ಕೆ ಕೊಂಡೊಯ್ಯಲು, ಅಲ್ಲಿ ಹರಡಲು ಉದ್ದೇಶಿಸಿದರು. 'ಜನಸಮೂಹ' ಎಂದ ಕೂಡಲೆ ಸರಳ ಭಾಷೆ, ನೇರ ಅಭಿವ್ಯಕ್ತಿ. ಸರಳವಾದ ಭಾಷೆ, ಶೈಲಿ, ಛಂದಸ್ಸುಗಳಿಂದ ಕೂಡಿದ 'ಕೀರ್ತನೆ'ಗಳನ್ನು ಹರಿದಾಸರು ಜನಾದರಣೀಯ ಧಾಟಿಗಳಲ್ಲಿ ರಚಿಸಿ ವಾದ್ಯದ ನೆರವಿನೊಂದಿಗೆ ಹಾಡತೊಡಗಿದರು. ಇದರಿಂದ ಭಕ್ತಿ, ಸಾಹಿತ್ಯ, ಸಂಗೀತಗಳ ತ್ರಿವೇಣಿ ಸಂಗಮವಾಯಿತು. ಶಿವಪಾರಮ್ಯ ಘೋಷಿಸಿ, ವೀರಶೈವ ಷಟ್ಸ್ಥಲ ಸಿದ್ಧಾಂತವನ್ನು ಪೋಷಿಸಿ ಶಿವಶರಣರು ವಚನ ಸಾಹಿತ್ಯ ರಚಿಸಿದ್ದುದು ಈ ಹರಿದಾಸರ ದೃಷ್ಟಿಯಲ್ಲಿದ್ದಿರಬೇಕು. ಆದ್ದರಿಂದಲೇ ಇವರು ಹರಿಸರ್ವೋತ್ತಮತ್ವ ಹೇಳಿ, ಪಂಚಭೇದ ತಾರತಮ್ಯಾದಿ ದ್ವೈತತತ್ತ್ವ ವಿವರಿಸಿ ಕೀರ್ತನ ಸಾಹಿತ್ಯ ಸೃಷ್ಟಿಸಿದರು. ಎರಡೂ ಪಂಥಗಳಲ್ಲಿ ಭಕ್ತಿ, ನೀತಿ, ಶುದ್ಧ ಜೀವನಗಳಿಗೇ ಪ್ರಾಧಾನ್ಯ. ಈ ಭಕ್ತಿ ಪಂಥ ಹಾಗೂ ಕೀರ್ತನ ರಚನೆ ಕೇವಲ ಭಾಗವತ ಪಂಥದವರಿಗೆ ಮತ್ತು ವೈದಿಕರಿಗೆ ಮಾತ್ರ ಸೀಮಿತಗೊಳ್ಳಲಿಲ್ಲ. ಅನ್ಯಧರ್ಮೀಯರೂ ಇದರಲ್ಲಿ ಸಕ್ರಿಯವಾಗಿ ಪಾಲ್ಗೊಂಡರು. ವೀರಶೈವರಲ್ಲಿ ಗುರುಪುರದ ಮಲ್ಲಯ್ಯ (ಸು. ೧೪೩೦), ಮಹಾಲಿಂಗದೇವ (ಸು. ೧೪೨೫), ಕರಸ್ಥಲದ ನಾಗಿದೇವ (ಸು. ೧೪೩೦), ಮಗ್ಗೆಯ ಮಾಯಿದೇವ (ಸು. ೧೪೩೦), ಜಕ್ಕಣಾರ್ಯ (ಸು. ೧೪೩೦) ಮುಂತಾದವರು ತೊಡಗಿಕೊಂಡರು. ಉಲ್ಲೇಖಿಸಲೇಬೇಕಾದ್ದು ಎಂದರೆ ನಿಜಗುಣಶಿವಯೋಗಿಯ (ಸು. ೧೫೦೦) 'ಕೈವಲ್ಯ ಪದ್ಧತಿ'. ಅದ್ವೈತದ ಛಾಯೆಯಿರುವ ಈ ಹಾಡುಗಳು ವೀರಶೈವ ವಲಯದಲ್ಲಿ ತುಂಬ ಜನಪ್ರಿಯವಾಗಿವೆ. ಜೈನಧರ್ಮೀಯನಾಗಿದ್ದರೂ ರತ್ನಾಕರವರ್ಣಿ ಇದರ ಪ್ರಭಾವಕ್ಕೆ ಸಿಲುಕಿ ಹಾಡುಗಳನ್ನು ಬರೆದಿದ್ದಾನೆ. ಈ ಎಲ್ಲದರಲ್ಲೂ ಭಕ್ತಿ, ದೈವಶರಣಾಗತಿ ಮೂಲಶ್ರುತಿಯಾಗಿದೆ. ಇದೇನಿದ್ದರೂ ಲೋಕ ನೀತಿ, ಸಮಾಜೋಪದೇಶ, ದೈವಶ್ರದ್ಧೆಗಳು ಈ ಕೀರ್ತನೆಗಳ ಉದ್ದೇಶವಾಗಿತ್ತೆ ವಿನಾ, ಅವು ನಿರ್ದಿಷ್ಟತತ್ತ್ವದ ಮುಖವಾಣಿಯಾಗಲಿಲ್ಲ.

ಈ ಅವಧಿಯಲ್ಲಿ ಬರುವ ನಾಲ್ವರು ಹರಿದಾಸರು: ಶ್ರೀಪಾದರಾಜ (ಸು. ೧೫೦೦), ವ್ಯಾಸರಾಯ (ಸು. ೧೫೨೦), ಪುರಂದರದಾಸ (ಸು. ೧೫೪೦), ಕನಕದಾಸ (ಸು. ೧೫೫೦). ಈ ನಾಲ್ವರಿಗೂ ವಿಜಯನಗರದ ಸಂಪರ್ಕವಿದೆ. ವೀರನರಸಿಂಹ ಶ್ರೀ ಪಾದರಾಜರನ್ನು ವಿಜಯನಗರಕ್ಕೆ ಕರೆಸಿ ಸನ್ಮಾನಿಸಿದ್ದ; ಕೃಷ್ಣದೇವರಾಯನಿಗಿದ್ದ ಕುಹೂಯೋಗದ ನಿವಾರಣೆಗೆ ವ್ಯಾಸರಾಜರೇ ಸಿಂಹಾಸನ ಏರಿದ್ದರು ಎಂಬ ಪ್ರತೀತಿಯಿದೆ; ಹಂಪೆಯಲ್ಲಿ ಪುರಂದರ ಮಂಟಪವಿದೆ, ಪುರಂದರದಾಸರ ವಿಗ್ರಹ ದೊರೆತಿದೆ; ಕನಕದಾಸರ ಮೋಹನ ತರಂಗಿಣಿಯ ಕೃಷ್ಣ ಕೃಷ್ಣದೇವರಾಯನೇ ಎಂದೂ ಅಲ್ಲಿನ ದೇಶ-ಪುರ, ವಸಂತೋತ್ಸವ, ಸೂಳೆಗೇರಿ ವರ್ಣನೆಗಳು ವಿಜಯನಗರದ್ದೇ ಎಂದೂ ಸಾಮಾನ್ಯವಾಗಿ ತಿಳಿಯಲಾಗಿದೆ.

ಈ ಎಲ್ಲ ದಾಸರ ಕೀರ್ತನೆಗಳ ಒಂದು ಲಕ್ಷಣ ಭಗವಂತನ ಸರ್ವೋತ್ತಮತ್ವ, ಸರ್ವಶಕ್ತತೆಗಳ ಪ್ರತಿಪಾದನೆ ''ಹರಿ ನಡೆಯದಿರಲು ನಡೆಯಲಿಲ್ಲೀ ಜಗವು ಹರಿ ನುಡಿಯದಿರಲು ನುಡಿಯಲಿಲ್ಲೀ ಜಗವು ಹರಿ ನೋಡದಿರಲು ನೋಡಲಿಲ್ಲೀ ಜಗವು ಹರಿ ಮಾಡದಿರಲು ಮಾಡಲಿಲ್ಲೀ ಜಗವು''-ಎಂಬ ಕೀರ್ತನೆಯ ಚರಣ ಇದನ್ನು ಸಮರ್ಥವಾಗಿ ಹೇಳುತ್ತದೆ. ''ಇಟ್ಹಾಂಗೆ ಇರುವೆನೊ ಹರಿಯೆ'' ''ಸಕಲಗ್ರಹಬಲ ನೀನೆ''

''ಆದದ್ದೆಲ್ಲ ಒಳಿತೇ ಆಯಿತು'' ''ಹರಿ ನಿನ್ನೊಲುಮೆಯು ಆಗುವತನಕ ಅರಿತು ಸುಮ್ಮನಿರುವುದು ಲೇಸು'' ಎಂಬ ಉಲ್ಲೇಖಗಳು ದಾಸರು ನಂಬಿದ್ದ ''ವಿಧಿಭಾವ''ವನ್ನು ತಿಳಿಸುತ್ತವೆ. ದೈವಪಾರಮ್ಯ ಹಾಗೂ ವಿಧಿವಾದಗಳನ್ನು ಒಟ್ಟಿನಲ್ಲಿ ಇಂಥ ಕೀರ್ತನೆಗಳು ಎತ್ತಿ ಹಿಡಿದಿವೆ.

ದೈವಪಾರಮ್ಯ, ವಿಧಿವಾದಗಳು ಈ ಕಾಲದ ಇತರ ಕೃತಿಗಳಲ್ಲಿ ಕೂಡ ಕಾಣುತ್ತದೆ. ''ವೀರನಾರಾಯಣನೆ ಕವಿ, ಲಿಪಿಕಾರ ಕುವರವ್ಯಾಸ'' ಎಂದು ತನ್ನ ಕೃತಿ ರಚನೆಗೆ ದೈವವೇ ಕಾರಣವೆಂದು ಕುಮಾರವ್ಯಾಸನ ನಂಬುಗೆ. 'ತಿಳಿಯ ಹೇಳುವ ಕೃಷ್ಣ ಕಥೆಯನು' ಎಂದು ಭಾರತವನ್ನು ಆತ ಕೃಷ್ಣಕಥನವಾಗಿಸುತ್ತಾನೆ. ''ಎತ್ತಲೊಲೆವುದು ಧರ್ಮಬಲ ತಾನತ್ತಲೊಲೆವುದು ದೈವ'' ''ಕಾವನಾತನೆ ಕೊಲುವನಾತನೆ'' ಎಂಬುವೂ ಆತನ ಮಾತುಗಳೇ. ಮೊದಲ ಐದು ಪರ್ವಗಳಲ್ಲಿ ಸಾಹಸ, ಪ್ರೌಢಿಮೆಗಳನ್ನು ಮೆರೆವ ಪಾಂಡವರು, ಬಳಿಕಣ ಐದು ಪರ್ವಗಳಲ್ಲಿ ಕೃಷ್ಣನಿಂದಾಗಿ ಗೆಲ್ಲುವ ಪಾಂಡವರಾಗುತ್ತಾರೆ. ಜೀವಂಧರ ಚರಿತೆಯಲ್ಲಿ ಬರುವ ಕಥೆಯಾದರೂ ಕರ್ಮ, ವಿಧಿ ನಿಯಮಗಳನ್ನೇ ಹೇಳುತ್ತದೆ. ವಿಜಯನಗರ ಕಾಲದ ಸಾಹಿತ್ಯದಲ್ಲಿ ಈ ಭಾವ ಕೆಲವೊಮ್ಮೆ ವ್ಯಕ್ತವಾಗಿ, ಮತ್ತೆ ಕೆಲವೊಮ್ಮೆ ಅವ್ಯಕ್ತವಾಗಿ ಹರಿದಿದೆ. ಹೀಗೇಕೆ? ವಿಜಯನಗರ ಸಾಮ್ರಾಜ್ಯ ಸುತ್ತಲೂ, ಮುಸ್ಲಿಂರಾಜ್ಯಗಳಿಂದ ಆವೃತವಾಗಿತ್ತು. ನಿರಂತರ ಕದನ, ಕಲಹ, ಆಕ್ರಮಣ, ಪ್ರತ್ಯಾಕ್ರಮಣಗಳು ವಿಜಯನಗರದ ಮೇಲೆ ನಡೆಯುತ್ತಿದ್ದುವು. ಒಮ್ಮೆ ಸೋಲು, ಒಮ್ಮೆ ಗೆಲವು; ಒಮ್ಮೆ ದುಃಖ, ಮತ್ತೊಮ್ಮೆ ಸಂತೋಷ. ಹೀಗೆ ಸೋಲು-ಗೆಲವುಗಳ ಉಯ್ಯಾಲೆಯಲ್ಲಿ ಇಡೀ ಸಾಮ್ರಾಜ್ಯ ತೂಗಾಡುತ್ತಿತ್ತು. ದೈವ ನಂಬಿ ಬದುಕುವುದು ಅನಿವಾರ್ಯವಾಗಿತ್ತು. ಗೆಲುವಾದಾಗ ದೈವಬಲವಿದೆಯೆಂದೂ, ಸೋಲಾದಾಗ ಹಣೆಯ ಬರೆಹವೆಂದೂ ಜನ ಭಾವಿಸುತ್ತಿದ್ದರು. ಈ ಭಾವನೆಯೇ ಭಕ್ತಿ, ಜ್ಞಾನ, ವೈರಾಗ್ಯಗಳ ಸಂಗಮಗಳಾದ ಶತಕಗಳ ರೂಪಗಳಲ್ಲಿ ಆ ಕಾಲದ ಸಾಹಿತ್ಯದಲ್ಲಿ ಇನ್ನೊಂದು ಪ್ರಕಾರವಾಗಿಯೂ ವ್ಯಕ್ತಗೊಂಡಿದೆ.

೫

ಈ ಅವಧಿಯ ಧಾರ್ಮಿಕೇತರ ಸಾಹಿತ್ಯ ಕೂಡ ವಿಶಿಷ್ಟವಾಗಿದೆ. ಇದು ಲೌಕಿಕರೂಪದಲ್ಲಿ, ಲೌಕಿಕ ಶಾಸ್ತ್ರರೂಪದಲ್ಲಿ, ಇತರ ಬಗೆಗಳಲ್ಲಿ ವ್ಯಕ್ತಗೊಂಡಿದೆ. ಐತಿಹಾಸಿಕ ಕೃತಿಗಳನ್ನು ಧಾರ್ಮಿಕ ಹಾಗೂ ಚಾರಿತ್ರಿಕ ನೆಲೆಗಟ್ಟಿನಲ್ಲಿ ಈ ಅವಧಿಯ ಕವಿಗಳು ಸೃಜಿಸಿದರು. ಇದರಲ್ಲಿ ಪರಂಪರೆಯ ಮುಂದುವರಿಕೆ ಹಾಗೂ ಹೊಸ ಉಪಕ್ರಮಗಳಿವೆ. ಪದ್ಮಣಾಂಕ (ಸು. ೧೩೮೫) ಕೆರೆಯ ಪದ್ಮರಸನ ಚರಿತೆಯನ್ನು 'ಪದ್ಮರಾಜ ಪುರಾಣ'ದಲ್ಲಿ ಭೀಮಕವಿ, ಸಿಂಗಿರಾಜರು ಬಸವೇಶ್ವರನ ಚರಿತೆಗಳನ್ನು, ಚಾಮರಸ ಅಲ್ಲಮನ ಚರಿತೆಯನ್ನು 'ಪ್ರಭುಲಿಂಗಲೀಲೆ' ಯಲ್ಲಿ, ವಿರಕ್ತ ತೋಂಟದಾರ್ಯ (ಸು. ೧೫೬೦) ಪಾಲ್ಕುರಿಕೆ ಸೋಮನಾಥನ ಜೀವನವನ್ನು 'ಸೋಮೇಶ್ವರ ಪುರಾಣ'ದಲ್ಲಿ ರಚಿಸಿದರು. ಇದು ವಿರೂಪಾಕ್ಷಪಂಡಿತ ಚೆನ್ನಬಸವನ ಚರಿತೆಯನ್ನು ಹೇಳುವವರೆಗೂ ಮುಂದುವರಿಯಿತು. ಧರ್ಮ ಮತ್ತು ವ್ಯಕ್ತಿ ಚರಿತ್ರೆಗಳು ಇಲ್ಲಿ ಮಿಶ್ರಣಗೊಂಡಿವೆ. ನಂಜುಂಡ (ಸು. ೧೫೨೫) ತನ್ನ 'ರಾಮನಾಥ ಚರಿತೆ'ಯಲ್ಲಿ ಸಂಪೂರ್ಣ ಹಾಗೂ ಸ್ವತಂತ್ರ ಐತಿಹಾಸಿಕ ಕಾವ್ಯ ಪರಂಪರೆಗೆ ಕನ್ನಡದಲ್ಲಿ ನಾಂದಿ ಹಾಡಿದನು. ಈ ಕೃತಿಗಳು ವ್ಯಕ್ತಿ ಚರಿತೆಗಳು; ಸಮಾಜ ಜೀವನದ ದಾಖಲೆಗಳು; ಸಾಂಸ್ಕೃತಿಕ ಸಂಗತಿಗಳು ಸಾಕ್ಷ್ಯಗಳು. ಚರಿತ್ರೆ, ಜೀವನಚರಿತ್ರೆ, ಸಾಂಸ್ಕೃತಿಕ ಚರಿತ್ರೆಗಳ ಆಕರಗಳಾಗುವ ಇಂಥ ಕಾವ್ಯಗಳ ಉಪಯುಕ್ತತೆ ಹಲವು ತೆರನಾದದ್ದು. ಇವನ್ನು ಬಳಸುವಾಗ ಮಾತ್ರ ಸಂಶೋಧಕರು ತುಂಬ ಎಚ್ಚರರಾಗಿರಬೇಕು. ಇಂಥ ಕೃತಿಗಳ ರಚನೆ, ಪ್ರೇರಣೆಗಳಿಗೆ ತತ್ಕಾಲೀನ ಸಂಸ್ಕೃತ ಸಾಹಿತ್ಯದ ಚಟುವಟಿಕೆಗಳು ಪರೋಕ್ಷವಾಗಿ ಪೋಷಕವಾಗಿರಬೇಕು. ವಿದ್ಯಾರಣ್ಯರ 'ಶಂಕರವಿಜಯ', ಗಂಗಾದೇವಿಯ 'ಮಧುರಾವಿಜಯಂ', ಗಂಗಾಧರನ 'ಗಂಗಾದಾಸ ಪ್ರತಾಪ ವಿಲಾಸ' ಡಿಂಡಿಮರಾಜನಾಥನ 'ಸಾಳುವಾಭ್ಯುದಯ', ಅನಂತಭಟ್ಟನ 'ವ್ಯಾಸಯೋಗಿ ಚರಿತ' ಇಲ್ಲಿ ಉಲ್ಲೇಖಿಸಬಹುದಾದ ಇಂಥ ಕೆಲವು ಸಂಸ್ಕೃತ ಕೃತಿಗಳು. ಈ ಎಲ್ಲ ಕವಿಗಳೂ ತಾವು ಆರಾಧ್ಯ

ಪುರುಷರೆಂದು ಭಾವಿಸಿದ ಧರ್ಮದ್ರಷ್ಟಾರರನ್ನೂ, ಸಾಮ್ರಾಜ್ಯಾಧಿಪತಿಗಳನ್ನೂ ಕುರಿತು ಚರಿತರೂಪದ ಕೃತಿ ರಚಿಸಿದ್ದಾರೆ. ಇದು ಆ ಕಾಲದ ಒಂದು ಪ್ರಧಾನ ಸಾಹಿತ್ಯ ಲಕ್ಷಣವಾಗಿಯೇ ಎದ್ದುತೋರಿದೆ.

ಇಲ್ಲಿಯೇ ಹೇಳಬೇಕಾದ ಒಂದು ವಿಷಯ: ಇದು ಹಿಂದೂ ಧರ್ಮದ ಪುನರುತ್ಥಾನದ ಯುಗವಾದಂತೆ, ಸಂಗ್ರಾಮಕಾಲವೂ ಹೌದು. ಮುಸ್ಲಿಮರ ಆಕ್ರಮಣದಿಂದ ನಾಶವಾಗುತ್ತಿದ್ದ ಹಿಂದೂಧರ್ಮವನ್ನು ಭಕ್ತಿಸಾಹಿತ್ಯದ ಮೂಲಕ ಈ ಅವಧಿಯ ವೀರಶೈವ, ಭಾಗವತ ಕವಿಗಳು ಹಾಗೂ ಹರಿದಾಸರು ಎತ್ತಿ ಹಿಡಿದರು. ಅದರ ರಕ್ಷಣೆಗೆ ಧರ್ಮಪ್ರಚಾರಕರ ತಂಡವೇ ಸಿದ್ಧವಾಯಿತು. ಹಾಗೆಯೇ ಸಾಮ್ರಾಜ್ಯ ಸ್ಥಾಪನೆಗೆ, ರಕ್ಷಣೆಗೆ ಅರಸರು ಟೊಂಕಕಟ್ಟಿ ನಿಂತರು. ಭಕ್ತಿ-ವೀರಗಳು ಸಹಜವಾಗಿಯೇ ಸಂಗಮಿಸಿದುವು. ನಾರಣಪ್ಪನ 'ಗದುಗಿನ ಭಾರತ', ಲಕ್ಷ್ಮೀಶನ 'ಜೈಮಿನಿಭಾರತ' ಈ ಸಂಗಮದ ಶ್ರೇಷ್ಠ ಸಾಹಿತ್ಯಾಭಿವ್ಯಕ್ತಿಗಳು. ಭಕ್ತಿಯಿಂದ ಜನರ ಮನಕರಗಿಸುವಲ್ಲಿ, ಕಥನಮೋಡಿಯಿಂದ ಅವರ ಮನಸೆಳೆಯುವಲ್ಲಿ, ಶೌರ್ಯೋತ್ಕಟ ಪ್ರಸಂಗಗಳನ್ನು ನಿರೂಪಿಸಿ ಅವರನ್ನು ಹುರಿದುಂಬಿಸುವಲ್ಲಿ ಈ ಎರಡೂ ಕೃತಿಗಳು ಸಫಲವಾದುವು. ಈ ಎರಡರಲ್ಲೂ ಕೃಷ್ಣನ ಸ್ತುತಿಗಾನವಿದೆ; ಹಾಗೆಯೇ ಕಥಾನಾಯಕರ ವೀರಜೀವನವಿದೆ. ಶ್ರದ್ಧೆ, ಭಕ್ತಿ, ಧೈರ್ಯ, ಸಾಹಸಗಳು ಈ ಕಾವ್ಯಗಳಲ್ಲಿ ಮಡುಗಟ್ಟಿವೆ. ಇವಕ್ಕೆ ಭಿನ್ನವಾಗಿ ನಂಜುಂಡನ 'ರಾಮನಾಥಚರಿತೆ' ಒಂದು ವೀರಕಾವ್ಯವಾಗಿಯೇ ಪರಿಣಮಿಸಿದೆ. ಒಟ್ಟಿನಲ್ಲಿ ಈ ಕೃತಿಗಳಲ್ಲಿ ಯುಗದ ಧ್ವನಿಯಿದೆ.

ಪಾರಮಾರ್ಥಿಕ ಕೃತಿಗಳ ಬಗ್ಗೆ ಟೀಕೆ-ವ್ಯಾಖ್ಯಾನಗಳ ಮಹಾಪೂರ ಹರಿದಂತೆ, ಲೌಕಿಕ ವಿದ್ಯಾಶಾಸ್ತ್ರಗಳೂ ಈ ಅವಧಿಯಲ್ಲಿ ಪೋಷಣೆ ಪಡೆಯಿತು. ಕಾವ್ಯ ಸಾಮ್ರಾಜ್ಯ ಕಟ್ಟಲು, ಸಮಾಜಜೀವನ ನಡೆಯಲು ಅತ್ಯಗತ್ಯವಾದ ಕೆಲವು ಕೃತಿಗಳೇ ರಚಿತವಾದುವು. ಅಲಂಕಾರ, ನಿಘಂಟು, ಮನುಷ್ಯ ವೈದ್ಯ, ಪಶುವೈದ್ಯ ಜ್ಯೋತಿಷ, ಕಾಮಶಾಸ್ತ್ರ, ಪಾಕಶಾಸ್ತ್ರ ಕುರಿತ ಗ್ರಂಥಗಳೇ ಇವೆ. ಅಲಂಕಾರ ಶಾಸ್ತ್ರಕ್ಕೆ ಸಂಬಂಧಿಸಿದಂತೆ ಸಾಳ್ವನ 'ರಸರತ್ನಾಕರ', 'ಶಾರದಾವಿಲಾಸ', ಈಶ್ವರನ (ಸು. ೧೫೦೦) 'ಕವಿಜಿಹ್ವಾ ಬಂಧನ', ಮಾಧವನ (ಸು. ೧೫೦೦) 'ಮಾಧವಾಲಂಕಾರ' ಉಲ್ಲೇಖನೀಯ ಕೃತಿಗಳು. ಈ ಸಾಮ್ರಾಜ್ಯ ಸ್ಥಾಪಿತವಾದಾಗ ಸಾಯಣರೇ 'ಅಲಂಕಾರ ಸುಧಾನಿಧಿ' ರಚಿಸಿದ್ದರು; ಅದು ಈಗ ಚೂರುಪಾರಾಗಿ ಮಾತ್ರ ಸಿಕ್ಕಿದೆ. ಇಮ್ಮಡಿ ದೇವರಾಯನ ರಾಜಪ್ರತಿನಿಧಿ ಗೋಪತಿಪ್ಪ ಭೂಪಾಲ ವಾಮನನ 'ಕಾವ್ಯಾಲಂಕಾರ ಸೂತ್ರವೃತ್ತಿ'ಗೆ 'ಕಾಮಧೇನು' ಎಂಬ ವ್ಯಾಖ್ಯಾನ ರಚಿಸಿದ್ದ. ಸ್ವತಃ ಕೃಷ್ಣದೇವರಾಯನೇ 'ರಸಮಂಜರಿ'ಯನ್ನೂ ರಚಿಸಿದ್ದಾನೆ. ಈ ಎಲ್ಲ ತತ್ಕಾಲೀನ ಸಂಸ್ಕೃತ ಶಾಸ್ತ್ರವಾಙ್ಮಯ ಚಟುವಟಿಕೆ ಕನ್ನಡ ಕವಿಗಳನ್ನೂ ಆ ಹಾದಿ ತುಳಿಯಲು ಪ್ರೇರೇಪಿಸಿರಬೇಕು.

ಸಾಯಣರ 'ಆಯುರ್ವೇದ ಸುಧಾನಿಧಿ' ಎಂಬ ವೈದ್ಯಕೃತಿ, ವಿದ್ಯಾರಣ್ಯರ ಜ್ಯೋತಿಷಕೃತಿ, 'ಕಾಲಮಾಧವ',ವಿದ್ಯಾಮಾಧವ ಸೂರಿಯ 'ವಿದ್ಯಾಮಾಧವೀಯ', ಪ್ರೌಢದೇವರಾಯನ ಕಾಮಶಾಸ್ತ್ರ ಕೃತಿ 'ರತಿರತ್ನ ಪ್ರದೀಪಿಕಾ' ತದನಂತರದ ಕನ್ನಡ ಕವಿಗಳನ್ನು ಈ ಕ್ಷೇತ್ರಗಳಲ್ಲಿ ಕೃತಿ ರಚನೆ ಮಾಡಲು ಪ್ರೇರೇಪಿಸಿರಬೇಕು. ಶ್ರೀಧರದೇವ 'ವೈದ್ಯಾಮೃತ'ವನ್ನು, ಸಾಳ್ವ 'ವೈದ್ಯ ಸಾಂಗತ್ಯ'ವನ್ನು, ಮಂಗರಾಜ 'ಖಗೇಂದ್ರಮಣಿದರ್ಪಣ'ವನ್ನು, ಅಭಿನವ ಚಂದ್ರ 'ಅಶ್ವಶಾಸ್ತ್ರ'ಗಳನ್ನು ಬರೆದರು. ವಿಜಯನಗರದ ಕಾಲವೆಂದರೆ, ಯುದ್ಧಗಳ ಕಾಲ. ಯುದ್ಧದಲ್ಲಿ ಗಾಯಗೊಂಡ ಸೈನಿಕರ ವ್ರಣಗಳಿಗೆ, ಸೈನಿಕರ ಜಡ್ಡು ರೋಗಗಳಿಗೆ, ಸಂಗ್ರಾಮಕ್ಕೆ ಆಯುವ ಕುದುರೆಗಳ ಲಕ್ಷಣ ತಿಳಿಯುವುದಕ್ಕೆ ಇಂಥ ಕೃತಿಗಳು ತಕ್ಕಮಟ್ಟಿಗೆ ನೆರವಾಗಿವೆ. ರಾಜರ ಕಾರ್ಯಕಲಾಪಗಳು ಶುಭಮುಹೂರ್ತದಲ್ಲಿ ಜರುಗಲಿ ಎಂದೇ ಹಲವಾರು ಜ್ಯೋತಿಷ ಕೃತಿಗಳೂ ಈ ಅವಧಿಯಲ್ಲಿ ಹೊರಬಂದಿವೆ. ತತ್ಕಾಲೀನವಾಗಿದ್ದ ನಂಬಿಕೆಗಳ ಪ್ರಪಂಚ ಕೂಡ ಇದರಿಂದ ಗೊತ್ತಾಗುತ್ತದೆ. ವೈಜ್ಞಾನಿಕ ದೃಷ್ಟಿ ಹಾಗೂ ಆಧುನಿಕತೆಗಳ ಹಿನ್ನೆಲೆಯಲ್ಲಿ ಈ ಲೌಕಿಕ ವಿದ್ಯಾಶಾಸ್ತ್ರಕೃತಿಗಳು ತುಂಬ ಪ್ರಯೋಜನಕರವಲ್ಲದಿದ್ದರೂ, ತತ್ಕಾಲೀನ ಆಸಕ್ತಿ ಹಾಗೂ ಸಮಾಜಜೀವನಗಳೆಡೆ ಬೆರಳುಮಾಡಬಲ್ಲವಾಗಿವೆ.

೬

ಈ ಕಾಲದ ಕನ್ನಡ ಸಾಹಿತ್ಯದ ಅತಿ ಮುಖ್ಯ ಲಕ್ಷಣ ಮಾರ್ಗದಿಂದ ದೇಸಿಗೆ ತಿರುಗಿದ್ದು. ಜೈನ ಕವಿಗಳ ಚಂಪು ಈ ಹೊತ್ತಿಗೆ ನಿಸ್ತೇಜಗೊಂಡಿತ್ತು; ಹಳಗನ್ನಡ ಆಡುಮಾತಿನ ವಲಯದಿಂದ ಹಿಂದೆ ಸರಿದಿತ್ತು; ಸಂಸ್ಕೃತ ವೃತ್ತಗಳ ನಾದ, ಲಯಗಳು ಏಕತಾನತೆ ಹೊಂದಿತ್ತು; ಪಾಂಡಿತ್ಯ ಜನಸಮೂಹವನ್ನು ತಲುಪಲಾರದಾಗಿತ್ತು. ಈ ಅವಧಿಯ ಬಹುತೇಕ ಕವಿಗಳು ತಮ್ಮ ಕೃತಿಗಳಿಗೆ ಆಡುನುಡಿಯನ್ನು ಅಥವಾ 'ದೇಸಿಭಾಷೆ'ಯನ್ನು ಬಳಸಿದರು. ಕುಮಾರವ್ಯಾಸ, ಚಾಮರಸ, ರತ್ನಾಕರರ ಕಾವ್ಯಗಳು ಮಹಾಕೃತಿಗಳು; ವೀರಶೈವ ಕವಿಗಳ ಪುರಾಣಗಳು, ಕಾವ್ಯಗಳು, ಕಥೆಗಳು, ಧಾರ್ಮಿಕ ಕಾವ್ಯಗಳು; ಹರಿದಾಸರ ರಚನೆಗಳು ಬೀದಿವಾಡುಗಳು; ಈ ಎಲ್ಲ ಕೃತಿಗಳ ಭಾಷೆ ತುಂಬ ಸುಲಭ, ಸರಳ, ಸ್ಪಷ್ಟ. ಇವನ್ನು ಓದಿ ಅರ್ಥಮಾಡಿಕೊಳ್ಳುವುದು ಅಸಾಧ್ಯವಲ್ಲ. ಈ ಕೃತಿರಚಕರ ಮುಖ್ಯ ಉದ್ದೇಶ ಜನಸಮೂಹಕ್ಕೆ ಕೃತಿರಚಿಸುವುದು. ಕುಮಾರವ್ಯಾಸನ ಕೃತಿಯ ಗಮಕವಾಚನ, ಭೀಮಕವಿ, ಚಾಮರಸರ ಕೃತಿಗಳಲ್ಲಿ ಪ್ರತಿ ಸಂಧಿಯ ಆರಂಭದಲ್ಲಿ ಬರುವ ರಾಗಸೂಚನೆ, ಹರಿದಾಸರ-ನಿಜಗುಣರ-ರತ್ನಾಕರರ ಹಾಡುಗಳಿಗೆ ಇರುವ ವಿವಿಧ ರಾಗ- ಮಟ್ಟುಗಳ ಸಾಧ್ಯತೆ ಇವುಗಳ ರಚನೋದ್ದೇಶ ಸ್ಪಷ್ಟಪಡಿಸುತ್ತವೆ. ಜನಾಂತರಂಗದಲ್ಲಿ ಸ್ಥಾಪಿತವಾಗಲು ಈ ಕವಿಗಳು ಜನಸಾಮಾನ್ಯರ ಕಸುವಿನ, ಹೊಸಶಕ್ತಿಯ ಭಾಷೆ ಬಳಸಿದರು. ಆದ್ದರಿಂದಲೇ ಈ ಅವಧಿಯ ಹಲವಾರು ಕೃತಿಗಳನ್ನು ಇಂದಿಗೂ ಹಳ್ಳಿಹಳ್ಳಿಗಳಲ್ಲಿ ವಾಚನ ಮಾಡುವುದು, ಹಾಡುವುದು. ಇದಕ್ಕನುಗುಣವಾಗಿ ಛಂದೋಮಾಧ್ಯಮವನ್ನೂ ಕವಿಗಳು ಬದಲಿಸಿದರು, ಭಿನ್ನವಾಗಿ ಪ್ರಯೋಗಿಸಿದರು. ಖ್ಯಾತಕರ್ಣಾಟಕಗಳ ಜಾಗದಲ್ಲಿ ಆರು ಷಟ್ಪದಿಗಳು ಬಂದವು; ಕಂದದ ಬದಲು ತ್ರಿಪದಿ ಪ್ರಯೋಗಗೊಂಡಿತು; ಸಾಂಗತ್ಯವೆಂಬ ಹೊಸ ಛಂದಸ್ಸು, ಜನರೂಢಿಯ ಮಟ್ಟುಗಳು ಧರ್ಮಪ್ರಸಾರದ ಹೊಸಸಾಧನಗಳಾದುವು. ಶರಕುಸುಮ ಭೋಗಭಾಮಿನಿ ಪರಿವರ್ಧಿನಿ ವಾರ್ಧಕಷಟ್ಪದಿಗಳು, ತ್ರಿಪದಿ ಸಾಂಗತ್ಯ ಚೌಪದ ವಚನ ಹಾಡುಗಳು ಸಾಹಿತ್ಯ ಮಾಧ್ಯಮಗಳಾದುವು. ಛಂದಃ ಪ್ರಭೇದಗಳೇ ಸಾಹಿತ್ಯ ರೂಪಗಳಾಗಿ ಪ್ರಯೋಗಗೊಂಡವು. ನೋಂಪಿ ಕಥೆಗಳಲ್ಲಿ ಗದ್ಯವನ್ನು ಬಳಸಿದರು. ಈ ಎಲ್ಲವೂ ದೇಸಿಯ ಕಡೆ ಆ ಕಾಲದ ಕವಿಗಳಿಗಿದ್ದ ಒಲವು ತೋರುತ್ತವೆ. ವಿಜಯನಗರ ಸಾಮ್ರಾಜ್ಯ ಕನ್ನಡಿಗರ, ಕರ್ಣಾಟಕತ್ವದ ಸಾಮ್ರಾಜ್ಯ. ಕನ್ನಡತನ ತತ್ಕಾಲೀನ ಸಾಹಿತ್ಯದಲ್ಲೂ ವ್ಯಕ್ತಗೊಂಡಿದೆ. ಕರ್ಣಾಟಕದ ಮಹಾಪುರುಷರಾದ ಬಸವಾದಿಗಳ ಚರಿತೆಯ ನಿರೂಪಣೆ, ಬಸವಾದಿಗಳ ವಚನ ಸಂಗ್ರಹಗಳೇ ಇದಕ್ಕೆ ಸಾಕ್ಷಿ. ರಾಮ ಕೃಷ್ಣರಂತೆ ಅಲ್ಲಮ ಬಸವರೂ ಮಹಿಮಾನ್ವಿತರೆಂಬುದನ್ನು ಈ ಕಾಲದ ಕೃತಿಗಳು ಸಾರಿವೆ. ಭಾಷೆ, ಛಂದಸ್ಸು, ವಸ್ತುಗಳಲ್ಲಿ ಪರಿವರ್ತನೆಯಾದುದು ಈ ಅವಧಿಯ ಇನ್ನೊಂದು ಲಕ್ಷಣ. ಇದು ಶರಣರ ಕಾಲದ ಮುಂದುವರಿಕೆಯೆಂಬುದು ದಿಟ, ಆದರೆ ವ್ಯತ್ಯಾಸಗಳೂ ಇವೆ.

೭

ಈ ಅವಧಿಯ ರಾಜರಲ್ಲೆಲ್ಲ ಸಾಹಿತ್ಯ ಪೋಷಣೆಯ ದೃಷ್ಟಿಯಿಂದ ಪ್ರಖ್ಯಾತರಾದವರು ಇಬ್ಬರು: ಒಬ್ಬ ಸಂಗಮವಂಶದ ಪ್ರೌಢದೇವರಾಯ, ಇನ್ನೊಬ್ಬ ತುಳುವಂಶದ ಕೃಷ್ಣದೇವರಾಯ. ಪ್ರೌಢದೇವರಾಯ 'ವೀರಶೈವಾಗಮ ಸಾರಸಂಪನ್ನ'ನೆಂದು ಹೆಸರಾದರೆ, ಕೃಷ್ಣದೇವರಾಯ 'ಆಂಧ್ರ ಭೋಜರಾಜ'ನೆಂದು ಪ್ರಖ್ಯಾತನಾಗಿದ್ದ. ಇಬ್ಬರೂ ಸ್ವತಃ ಕವಿಗಳು: ಪ್ರೌಢದೇವರಾಯ ಬ್ರಹ್ಮಸೂತ್ರ ವೃತ್ತಿ, ಮಹಾನಾಟಕ ಸುಧಾನಿಧಿ ಕೃತಿಗಳ ಕರ್ತೃ; ಆಮುಕ್ತಮಾಲ್ಯದ, ಜಾಂಬವತೀ ಕಲ್ಯಾಣ, ರಸಮಂಜರಿಗಳನ್ನು ಕೃಷ್ಣದೇವರಾಯ ರಚಿಸಿದ. ಇಬ್ಬರ ಆಸ್ಥಾನಗಳಲ್ಲೂ ಸಂಸ್ಕೃತ, ತೆಲುಗು, ಕನ್ನಡ ಕವಿಗಳಿದ್ದರು. ಜಕ್ಕಣಾರ್ಯ, ಲಕ್ಕಣದಂಡೇಶರು

ಪ್ರೌಢದೇವರಾಯನ ಅಮಾತ್ಯರು, ವೀರಶೈವ ಸಾಹಿತ್ಯದ ಪುನರುಜ್ಜೀವನದ ನೇತಾರರು. ಪುರಂದರದಾಸರು, ವ್ಯಾಸರಾಯರು, ಕೃಷ್ಣದೇವರಾಯನ ಕಾಲದ ಪ್ರಮುಖ ಹರಿದಾಸರು, ರಾಜಗೌರವ ಪಾತ್ರರು. ಪ್ರೌಢದೇವರಾಯನ ಆಸ್ಥಾನದಲ್ಲಿ ಶಾಸ್ತ್ರ, ಸಾಹಿತ್ಯಗಳ ಸಂವಾದಗೋಷ್ಠಿ ಜರುಗುತ್ತಿತ್ತು; ಕೃಷ್ಣದೇವರಾಯನ ಆಸ್ಥಾನದಲ್ಲಿ ಅಷ್ಟದಿಗ್ಗಜಗಳೆಂದು ಪ್ರಸಿದ್ಧರಾದ ಕವಿಗಣವೇ ಇತ್ತು. ಶ್ರೀನಾಥ ಮತ್ತು ಅಲ್ಲಸಾನಿ ಪೆದ್ದನರು ಕ್ರಮವಾಗಿ ಈ ಇಬ್ಬರು ರಾಜರ ಆಶ್ರಯದಲ್ಲಿದ್ದು ತೆಲುಗು ಸಾಹಿತ್ಯವನ್ನು ಉಜ್ಜೀವಿಸಿದರು. ವಚನ ಸಂಕಲನ ಸಂಗ್ರಹ. ವೀರಶೈವ ಕಾವ್ಯಗಳ ರಚನೆ ಪ್ರೌಢದೇವರಾಯನ ಕಾಲದ ಸಾಹಿತ್ಯಿಕ ವೈಶಿಷ್ಟ್ಯ; ಭಕ್ತಿಗೀತೆಗಳ ಪ್ರಸಾರ, ಪ್ರಚಾರ, ಭಾಗವತ ಕಾವ್ಯಗಳ ರಚನೆ ಕೃಷ್ಣದೇವರಾಯನ ಕಾಲದ ಸಾಹಿತ್ಯಿಕ ವೈಶಿಷ್ಟ್ಯ. 'ಪ್ರೌಢದೇವರಾಯನ ಕಾವ್ಯ'ವನ್ನು ಅದ್ರಿಶ ಕವಿ (ಸು. ೧೫೪೦) ರಚಿಸಿದ್ದರೆ, 'ಕರ್ಣಾಟ ಕೃಷ್ಣರಾಜ ಭಾರತ'ವನ್ನು ತಿಮ್ಮಣ್ಣಕವಿ (ಸು. ೧೫೧೦) ರಚಿಸಿದ್ದಾನೆ. ಕ್ರಿಯಾಶಕ್ತಿ ರಾಜಗುರುವಾಗಿದ್ದ ಪ್ರೌಢದೇವರಾಯ ವೀರಶೈವ; ವ್ಯಾಸರಾಯರು ರಾಜಗುರುವಾಗಿದ್ದ ಕೃಷ್ಣದೇವರಾಯ ವೈಷ್ಣವ. ಸಹಜವಾಗಿಯೇ ಈ ಇಬ್ಬರೂ ತಾವು ಅನುಸರಿಸಿದ ಧರ್ಮ, ಸಾಹಿತ್ಯಗಳನ್ನು ವಿಶೇಷವಾಗಿ ಪೋಷಿಸಿದರು. ಇಬ್ಬರ ಆಳ್ವಿಕೆಯ ಅವಧಿಯೂ ಹೆಚ್ಚುಕಡಮೆ ಸಮಾನವೇ: ಪ್ರೌಢದೇವರಾಯನದು ಕಾಲುಶತಮಾನ (೧೪೨೪-೧೪೪೬) ಕೃಷ್ಣದೇವರಾಯನದು ಎರಡು ದಶಕ (೧೫೦೯-೧೫೨೯).

ಸಮಾರೋಪ

ರಾಷ್ಟ್ರಕೂಟ-ಕಲ್ಯಾಣಚಾಲುಕ್ಯರ ಕಾಲ ಮಾರ್ಗ ಸಾಹಿತ್ಯ ಅಥವಾ ಪ್ರೌಢಕಾವ್ಯಗಳ ಕಾಲ; ವಿಜಯನಗರದ ಅರಸರ ಕಾಲ ದೇಸಿ ಪ್ರಾಚುರ್ಯ ಕಾಲ. ಈ ಹಿಂದಿನ ರಾಜವಂಶದ ಸಾಹಿತ್ಯ ಜೈನ, ವೀರಶೈವ ಎಂಬ ವರ್ಗೀಕರಣಕ್ಕೆ ದೊರೆಯುತ್ತಿತ್ತು. ಈ ಕಾಲದಲ್ಲಿ ಜೈನ, ವೀರಶೈವ ಮತ್ತು ವೈದಿಕ-ಮೂರೂ ಧರ್ಮೀಯ ಸಾಹಿತ್ಯಗಳಿವೆ. ಇದಕ್ಕೆ ಈ ಅರಸರ ಧರ್ಮಸಮನ್ವಯವೇ ಕಾರಣ. ಈ ಯುಗದ ಭಾಷೆ, ಶೈಲಿ, ಛಂದಸ್ಸುಗಳು ಸರಳ; ಆದರೆ ವಸ್ತು ಮಾತ್ರ ಸಂಕೀರ್ಣ. ಬಹುಮುಖವಾದ ವಸ್ತು ಈ ಅವಧಿಯ ಸಾಹಿತ್ಯದಲ್ಲಿ ಕಾಣುತ್ತದೆ. ದೇಸಿ ಸಾಹಿತ್ಯದ ಮುಖ್ಯ ಧೋರಣೆಯಾದ ಜನತಾದೃಷ್ಟಿ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ ಈ ಕಾಲದ ಪ್ರಧಾನ ಸಾಹಿತ್ಯಿಕ ಲಕ್ಷಣ.

ಈ ಕಾಲದ ಸಾಹಿತ್ಯ ಜನಸಮ್ಮುಖವಾದದ್ದು. ಕುಮಾರವ್ಯಾಸ, ಚಾಮರಸ ಮುಂತಾದ ಕವಿಗಳು ಪುರಂದರ-ಕನಕರಂಥ ಹರಿದಾಸರು, ನಿಜಗುಣಶಿವಯೋಗಿಯಂಥ ತತ್ತ್ವಪದ ರಚನಕಾರರು-ಎಲ್ಲರೂ ಜನಪರ ಸಾಹಿತ್ಯ ನಿರ್ಮಿತಿಗೆ ತೊಡಗಿದರು. ಸುಲಭಧರ್ಮಮಾರ್ಗಕ್ಕೆ ತಕ್ಕದಾದ ಸರಳ ಸಾಹಿತ್ಯ ಶೈಲಿಯನ್ನು ಕವಿಗಳು ರೂಢಿಸಿದರು, ಅಳವಡಿಸಿದರು. ಫಲವಾಗಿ ಆಡುಭಾಷೆಯ ಬಳಕೆ. ಸಾಂಗತ್ಯ-ಷಟ್ಪದಿಗಳ ಪ್ರಯೋಗ ಅವಿರತವಾಗಿ ನಡೆಯಿತು. ವೀರಶೈವದ ಪುನರುಜ್ಜೀವನ, ಭಾಗವತ ಧರ್ಮದ ಪ್ರಾಶಸ್ತ್ಯ ಶ್ರೀವೈಷ್ಣವದ ಅಂಕುರ, ಜೈನಧರ್ಮದ ಉಳಿವು ಈ ಕಾಲದ ಸಾಹಿತ್ಯದಲ್ಲಿ ಗೋಚರಿಸುತ್ತದೆ. ಮತೀಯ ಕೃತಿಯಿರಲಿ, ಕಾವ್ಯವಿರಲಿ, ಶಾಸ್ತ್ರವಿರಲಿ, ಕಥೆಯಿರಲಿ, ಧರ್ಮವಿರಲಿ ಅದನ್ನು ಜನಸುಲಭವಾಗಿಸಿ ಲೋಕಪ್ರಿಯ ಗೊಳಿಸಬೇಕೆಂಬ ಕವಿಕಾವ್ಯಸಂಕಲ್ಪ ಈ ಕಾಲದ ಸಾಹಿತ್ಯವನ್ನು ಮುನ್ನಡೆಸಿದೆ.

ಮೈಸೂರು ಅರಸರು ಮತ್ತು ಕನ್ನಡ ಸಾಹಿತ್ಯ

೧

ಮೈಸೂರನ್ನು ಆಳಿದವರು ಯದುವಂಶದ ಅರಸರು. ಮೈಸೂರು ಅರಸರು ಎಂದರೆ ಯದುವಂಶದ ಅರಸರು. ಇವರಲ್ಲಿ ಮೊದಲನೆಯವರು ಯದುರಾಯರು. ಕೊನೆಯವರು ಜಯಚಾಮರಾಜೇಂದ್ರ ಒಡೆಯರ್ ಅವರು. ಇವರ ಕಾಲಾವಧಿಯನ್ನು ೧೩೯೯ರಿಂದ ೧೯೭೪ರವರೆಗೆ ಎಂದು ಚರಿತ್ರಕಾರರು ಗುರುತಿಸಿದ್ದಾರೆ. ಇವರಲ್ಲಿ ೨೫ ಜನ ರಾಜರು ಆಗಿಹೋಗಿದ್ದಾರೆ. ಯದುರಾಯರಿಂದ ಬೆಟ್ಟದ ಚಾಮರಾಜ ಒಡೆಯರ್ ಸೇರಿದಂತೆ ಈ ವಂಶದ ಮೊದಲ ೮ ದೊರೆಗಳ ಬಗ್ಗೆ ಹೆಚ್ಚು ವಿವರಗಳು ತಿಳಿದಿಲ್ಲ. ೧೫೭೮ರಿಂದ ರಾಜ ಒಡೆಯರ ಆಳ್ವಿಕೆ ಆರಂಭವಾಯಿತು. ಈ ಮನೆತನ ಮತ್ತು ರಾಜ್ಯ ಸುಸ್ಥಾಪಿತವಾದದ್ದು ಇವರ ಕಾಲದಲ್ಲೇ. ಇವರ ಕಾಲದಿಂದ ಒಟ್ಟು ೧೭ ದೊರೆಗಳು ರಾಜ್ಯವಾಳಿದರು. ಇವರಲ್ಲಿ ೧೨ ಮಂದಿ ಕನ್ನಡ ಸಾಹಿತ್ಯಕ್ಕೆ, ಕವಿಗಳಿಗೆ ಆಶ್ರಯ ಕೊಟ್ಟಿದ್ದಾರೆ. ಅವರ ಹೆಸರು, ಆಳ್ವಿಕೆಯ ಅವಧಿ ಈ ಮುಂದಿನಂತಿವೆ. : ೧) ೧ನೇ ರಾಜ ಒಡೆಯರ್ (೧೫೭೮-೧೬೧೭), (೨) ೬ನೇ ಚಾಮರಾಜ ಒಡೆಯರ್ (೧೬೧೭-೧೬೩೭), ೩) ರಣಧೀರ ಕಂಠೀರವ ನರಸರಾಜ ಒಡೆಯರ್ (೧೬೩೮-೧೬೫೯), ೪) ದೊಡ್ಡದೇವರಾಜ ಒಡೆಯರ್ (೧೬೫೯-೧೬೭೩), ೫) ಚಿಕ್ಕದೇವರಾಜ ಒಡೆಯರ್ (೧೬೭೩-೧೭೦೪), ೬) ದೊಡ್ಡ ಕೃಷ್ಣರಾಜ ಒಡೆಯರ್ (೧೭೧೪-೧೭೩೨), ೭) ೨ನೇ ಕೃಷ್ಣರಾಜ ಒಡೆಯರ್ (೧೭೩೪-೧೭೬೬), ೮) ಬೆಟ್ಟದ ಚಾಮರಾಜ ಒಡೆಯರ್ (೧೭೭೦-೧೭೭೬), ೯) ಮುಮ್ಮಡಿ ಕೃಷ್ಣರಾಜ ಒಡೆಯರ್ (೧೭೯೯-೧೮೬೮), ೧೦) ಚಾಮರಾಜೇಂದ್ರ ಒಡೆಯರ್ (೧೮೬೮-೧೮೯೪), ೧೧) ನಾಲ್ವಡಿ ಕೃಷ್ಣರಾಜ ಒಡೆಯರ್ (೧೮೯೫-೧೯೪೦), ೧೨) ಜಯಚಾಮರಾಜೇಂದ್ರ ಒಡೆಯರ್ (೧೯೪೦-೧೯೭೪). ಉಳಿದ ರಾಜರಲ್ಲಿ ಇಮ್ಮಡಿ ರಾಜ ಒಡೆಯರ್ (೧೬೩೭-೧೬೩೮), ೭ನೇ ಚಾಮರಾಜ ಒಡೆಯರ್ (೧೭೩೨-೧೭೩೪), ನಂಜರಾಜ ಒಡೆಯರ್ (೧೭೬೬-೧೭೭೦)- ಇಂಥ ಕೆಲವು ರಾಜರ ಆಳ್ವಿಕೆಯ ಕಾಲ ೧, ೨, ೪, ವರ್ಷಗಳಂತೆ ಅತ್ಯಂತ ಕಡಮೆ ಅವಧಿಯವು. ಇದಕ್ಕೆ ಒಂದೇ ಅಪವಾದ ಖಾಸಾ ಚಾಮರಾಜ ಒಡೆಯರ್ ಅವರ ೨೦ ವರ್ಷಗಳ ಆಳ್ವಿಕೆಯ ಕಾಲ (೧೭೭೬-೧೭೯೬). ಆದರೆ ಇವರ ಕಾಲದಲ್ಲಿ ಹೈದರ್, ಟೀಪೂಸುಲ್ತಾನರ ಆಳ್ವಿಕೆ, ಪ್ರಾಬಲ್ಯಗಳು ಅಧಿಕವಾಗಿತ್ತು. ಆಳ್ವಿಕೆಯ ಕಾಲಾವಧಿಯ ಹ್ರಸ್ವತೆ ಅಥವಾ ಅನ್ಯರ ಪ್ರಾಬಲ್ಯದ ಆಧಿಕ್ಯ ಕಾರಣವಾಗಿ ಪೂರ್ವೋಕ್ತ ೪ ದೊರೆಗಳ ಸಾಹಿತ್ಯಪೋಷಣೆಯ ವಿಚಾರ ಅನುಕ್ತಗೊಂಡಿದೆ. ಈ ವಿವರಗಳು ಹೇಗಿದ್ದರೂ ಪ್ರಸ್ತುತ ಇಮ್ಮಡಿ ಕೃಷ್ಣರಾಜ ಒಡೆಯರವರೆ ಗಣ-ಎಂದರೆ ೧೭೬೬ರ ವರೆಗಣ ಸಾಹಿತ್ಯವನ್ನು ಇಲ್ಲಿ ಅವಲೋಕಿಸಿದೆ.

ಕನ್ನಡ ಸಾಹಿತ್ಯವನ್ನು ಪೋಷಿಸಿ ಬೆಳೆಸಿದ ೧೨ ದೊರೆಗಳಲ್ಲಿ ಪ್ರಸ್ತುತ ಇಬ್ಬರು ದೊರೆಗಳು ಸ್ವತಃ ಸಾಹಿತಿಗಳು. ಅವರು ಇಮ್ಮಡಿ ಚಾಮರಾಜ ಒಡೆಯರ್ ('ವಾಲ್ಮೀಕಿ ರಾಮಾಯಣ ಟೀಕೆ', 'ಬ್ರಹ್ಮೋತ್ತರ ಖಂಡ ಟೀಕೆ'), ಚಿಕದೇವರಾಜ ಒಡೆಯರ್ ('ಚಿಕದೇವರಾಜ ಬಿನ್ನಪ', 'ಭಾಗವತ ಟೀಕೆ', 'ಭಾರತ ಟೀಕೆ', 'ಶೇಷಧರ್ಮ ಟೀಕೆ'). ಈ ರಾಜರಲ್ಲದೆ ಇವರ ಕುಟುಂಬಕ್ಕೆ ಸೇರಿದ ಇತರರೂ ಕೃತಿಗಳನ್ನು ರಚಿಸಿದ್ದಾರೆ. ದೊಡ್ಡ ಕೃಷ್ಣರಾಜರ ಪತ್ನಿ ಚೆಲುವಾಂಬೆ ('ವರನಂದೀಕಲ್ಯಾಣ', 'ತುಲಾಕಾವೇರೀ ಮಾಹಾತ್ಮ್ಯ ಟೀಕೆ', 'ವೆಂಕಟಾಚಲ ಮಾಹಾತ್ಮ್ಯ ಲಾಲೀಪದ' 'ಅಲಮೇಲುಮಂಗೈ ಲಾಲೀಪದ'), ಕಳಲೆ ವೀರರಾಜ ('ಸಕಲವೈದ್ಯಸಂಹಿತ ಸಾರಾರ್ಣವ ') ಕಳಲೆ ನಂಜರಾಜ ('ಕಕುದ್ಗಿರಿ ಮಾಹಾತ್ಮ್ಯ', 'ಗರಳಪುರಿ

ಮಹಿಮಾದರ್ಶ', 'ಶಿವಭಕ್ತ ವಿಲಾಸ', 'ಹರಿವಂಶ', 'ಲಿಂಗಪುರಾಣ' ಇತ್ಯಾದಿ). ಇಮ್ಮಡಿ ಕೃಷ್ಣರಾಜನ ಮಾವ ಕತ್ತಿ ಗೋಪಾಲರಾಜ ಅರಸು ('ಕಮಲಾಚಲ ಮಾಹಾತ್ಮ್ಯ') – ಈ ಮುಂತಾದವರು ಸಾಹಿತ್ಯ ರಚನೆ ಮಾಡಿದ್ದಾರೆ. ಆಶ್ರಿತ ಕವಿಗಳಲ್ಲದೆ ಈ ರಾಜರ ಆಸ್ಥಾನದಲ್ಲಿ ಬೇರೆ ಬೇರೆ ಹುದ್ದೆಗಳಲ್ಲಿದ್ದವರೂ ಸಾಹಿತ್ಯರಚನೆಯಲ್ಲಿ ಆಸಕ್ತಿ ತೋರಿಸಿದ್ದಾರೆ. ಚಿಕ್ಕದೇವರಾಜರಲ್ಲಿ ಮಂತ್ರಿಗಳಾಗಿದ್ದ ತಿರುಮಲಾರ್ಯ, ಚಿಕುಪಾಧ್ಯಾಯ, ಅಲ್ಲೇ ಊಳಿಗದಲ್ಲಿದ್ದ ಹೊನ್ನಮ್ಮ-ಶೃಂಗಾರಮ್ಮ, ದೊಡ್ಡ ಕೃಷ್ಣರಾಜರ ಸೇನಾಧಿಪತಿಯಾಗಿದ್ದ ರಂಗಯ್ಯ, ಮಂತ್ರಿ ವೆಂಕಾಮಾತ್ಯ, ಬೆಟ್ಟದ ಚಾಮರಾಜರ ಗುರು ಸಿಂಗರಾಚಾರ್ಯ ಕೂಡಲೇ ನೆನಪಿಗೆ ಬರುವ ಹೆಸರುಗಳು. ತಿರುಮಲಾರ್ಯ, ಚಿಕುಪಾಧ್ಯಾಯ, ಕಳಲೆ ನಂಜರಾಜರಂಥ ಪ್ರಭಾವಶಾಲಿ ವ್ಯಕ್ತಿಗಳು ತಾವೇ ಇತರರಿಗೆ ಪ್ರೇರಣೆ ಆಶ್ರಯಗಳನ್ನಿತ್ತು ಆ ಇತರರಿಂದಲೂ ಗ್ರಂಥ ಕೃಷಿ ಮಾಡಿಸಿದ್ದಾರೆ. ಹೀಗೆ ಮೈಸೂರು ದೊರೆಗಳು, ಅವರ ಕುಟುಂಬ ವರ್ಗ, ಅವರ ಆಸ್ಥಾನ ಪ್ರಮುಖರು ಕನ್ನಡ ಸಾಹಿತ್ಯನಿರ್ಮಾಣ, ಪೋಷಣೆಗಳಲ್ಲಿ ಪಾಲ್ಗೊಂಡಿದ್ದಾರೆ.

ಈಗಿರುವಂತೆ ಮೈಸೂರು ಅರಸರ ಕಾಲದ ಸಾಹಿತ್ಯ ಶ್ರೀಮಂತವಾದದ್ದು; ಈ ಕಾಲದ ಲಭ್ಯಕೃತಿಗಳ ಸಂಖ್ಯೆ ಹೆಚ್ಚಾದದ್ದು. ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯ, ಹೊಯ್ಸಳ ಹಾಗೂ ವಿಜಯನಗರ ಕಾಲದ ಕನ್ನಡ ಸಾಹಿತ್ಯಕ್ಕಿಂತ ಈ ಕಾಲದ ಸಾಹಿತ್ಯ ಸಮೃದ್ಧವಾದದ್ದು, ಸಂಪದ್ಯುಕ್ತವಾದದ್ದು! ಕಾರಣವೇನು? ಈ ಅರಸರ ಕಾಲಮಾನ ನಮ್ಮ ಈ ಕಾಲಕ್ಕೆ ತೀರ ಸಮೀಪವಾಗಿದೆ. ಹಾಗಾಗಿ ಅವರ ಸಾಹಿತ್ಯದ ಬಹುಪಾಲು ನಮಗೆ ಉಳಿದುಬಂದಿದೆ. ಇದಕ್ಕೆ ವ್ಯತಿರಿಕ್ತವಾಗಿ ಉಳಿದ ರಾಜಮನೆತನಗಳ ಕಾಲಮಾನ ನಮಗೆ ದೂರದ್ದೇ. ಆಯಾ ರಾಜಮನೆತನಗಳ ಕೊನೆಯೊಂದಿಗೆ ಆ ಮನೆತನಗಳ ಕಾಲದ ಸಾಹಿತ್ಯ – ಅದೆಷ್ಟೇ ಸಂಪದ್ಯುಕ್ತವಾಗಿದ್ದರೂ – ಅದರ ಬಹುಪಾಲು ನಾಶವಾಗಿರಬೇಕು. ಒಡೆಯರ ಮನೆತನ ಇಂದಿಗೂ ಉಳಿದುಬಂದಿದೆ. ತನ್ನ ಮನೆತನದ ಸಾಹಿತ್ಯದ ಬಹುಭಾಗವನ್ನು ಸಹಜವಾಗಿಯೇ ಅದು ಉಳಿಸಿಕೊಂಡು ಬಂದಿದೆ.

೨

೧೩೯೯ರಿಂದ ೧೫೭೮ರ ವರೆಗೆ ಆಳಿದ ಮೊದಲ ೮ ಮೈಸೂರು ರಾಜರು ವಿಜಯನಗರದ ಅರಸರ ಸಾಮಂತರಾಗಿದ್ದರು. ವಿಜಯನಗರದ ಅರಸರು – ಅದರಲ್ಲೂ ಕೃಷ್ಣದೇವರಾಯ – ಕನ್ನಡ ಸಾಹಿತ್ಯದೊಂದಿಗೆ ತೆಲುಗು, ಸಂಸ್ಕೃತ ಸಾಹಿತ್ಯಗಳಿಗೂ ಪೋಷಣೆಯಿತ್ತಿದ್ದರು. ಆ ಕಾಲದಲ್ಲಿ ಕೆಲವು ದೇಶಭಾಷಾಕವಿಗಳೇ ಸಂಸ್ಕೃತದಲ್ಲೂ ಕೃತಿರಚನೆಮಾಡಿ ಉಭಯಕವಿಗಳೆನಿಸಿಕೊಂಡಿದ್ದುಂಟು. ಇದೇ ಪದ್ಧತಿ ಮೈಸೂರರಸರ ಕಾಲದಲ್ಲೂ ಕಾಣುತ್ತದೆ. 'ಚಿಕ್ಕದೇವರಾಯ ವಿಲಾಸಮು', 'ಚಿಕದೇವರಾಯೋದಾಹರಣಮು', 'ಚಿಕದೇವರಾಯ ಚಾಟುಪದ್ಯಾಲು' ಎಂಬ ಕೃತಿಗಳು ಚಿಕದೇವರಾಜನ ಬಗ್ಗೆ ತೆಲುಗಿನಲ್ಲಿ ರಚಿತವಾಗಿವೆ. ಚಿಕದೇವರಾಜನ ಮಗನಾದ ಕಂಠೀರವ ನರಸಿಂಹರಾಜ 'ಲಕ್ಷ್ಮೀವಿಲಾಸಮು','ಕಲಾವಾಣೀ ವಿಲಾಸಮು' 'ನಾಟ್ಯವಿದ್ಯಾವಿಲಾಸಮು', 'ವಸಂತೋತ್ಸವ ವಿಲಾಸಮು' ಮುಂತಾದ ೧೨ ಕೃತಿಗಳನ್ನು ತೆಲುಗಿನಲ್ಲಿ ಬರೆದಿದ್ದಾನೆ. 'ಹಾಲಾಸ್ಯಮಾಹಾತ್ಮ್ಯಮು', 'ಕಾಶೀಮಹಿಮಾರ್ಥಮಾಹಾತ್ಮ್ಯಮು' ಎಂಬ ಕೃತಿಗಳ ಕರ್ತೃ ಕಳಲೆ ವೀರರಾಜ. ಇದು ವಿಜಯನಗರದ ಅರಸರು ಹಾಕಿಕೊಟ್ಟಿದ್ದ ಬಹುಭಾಷಾಸಾಹಿತ್ಯ ಪೋಷಣಪದ್ಧತಿಯ ಮುಂದುವರಿಕೆಯ ಕುರುಹು. ಚಿಕದೇವರಾಜನ ಪ್ರಧಾನಿ ತಿರುಮಲಾರ್ಯ ಶ್ರೀಶೈಲಸೂರಿ ಎಂಬ ಸಂಸ್ಕೃತ ಹೆಸರಿನಾತ 'ಶ್ರೀಯದುಗಿರಿನಾರಾಯಣಸ್ತವ', 'ಶ್ರೀಯದುಗಿರಿ ನಾಯಕಿಸ್ತವ', 'ಶ್ರೀ ಲಕ್ಷ್ಮೀನೃಸಿಂಹಸ್ತವ', 'ಶ್ರೀಪರವಾಸುದೇವಸ್ತವ' ಎಂಬ ಸಂಸ್ಕೃತ ಕೃತಿಗಳ ರಚಕ. ೮ನೇ ಚಾಮರಾಜ ಒಡೆಯರ್ ಕಾಲದಲ್ಲಿ (೧೬೩೨-೧೬೩೪) ಅವಿನಾಶೀಶ್ವರ ರಚಿಸಿದ 'ಶ್ರೀರಂಗರಾಜತಿಲಕ ಭಾಣ' ಇನ್ನೊಂದು ಸಂಸ್ಕೃತ ಕೃತಿ. ಕಳಲೆ ನಂಜರಾಜ 'ಸಂಗೀತಗಂಗಾಧರ'ವನ್ನಲ್ಲದೆ ಈಗ ದೊರೆಯದ ಇನ್ನೂ ಹಲವಾರು ಸಂಸ್ಕೃತಕೃತಿಗಳನ್ನು

ರಚಿಸಿದ್ದ. ತ್ರಿಭಾಷಾಸಾಹಿತ್ಯಪೋಷಣೆ ಮೈಸೂರರಸರ ದೃಷ್ಟಿಯಲ್ಲಿತ್ತೆನ್ನಲು ಇದು ಗಟ್ಟಿ ಆಧಾರಗಳು. ಈ ಪದ್ಧತಿಯ ಅಳವಡಿಕೆಗೆ ವಿಜಯನಗರದ ಅರಸರ ಪ್ರಭಾವ, ಅನುಕರಣೆಗಳೇ ಕಾರಣ.

ಮೈಸೂರರಸರ ಆರಂಭಕಾಲದ ಸಾಹಿತ್ಯ ರಾಜರ ವ್ಯಕ್ತಿಮಹಿಮಾವಿಶೇಷ, ವಿಜಯ ವೃತ್ತಾಂತಗಳನ್ನು ಕುರಿತ ಕೃತಿಗಳಾಗಿವೆ. ಗೋವಿಂದವೈದ್ಯನ 'ಕಂಠೀರವನರಸರಾಜ ವಿಜಯ', ತಿರುಮಲಾರ್ಯನ 'ಚಿಕದೇವರಾಜ ವಿಜಯ', 'ಚಿಕದೇವರಾಯವಂಶಾವಳಿ', 'ಚಿಕದೇವರಾಜ ಬಿನ್ನಪ', 'ಚಿಕದೇವರಾಜಶತಕ' ಹಾಗೂ ಚಾಮಯ್ಯನ 'ದೇವರಾಜೇಂದ್ರ ಸಾಂಗತ್ಯ' ಈ ಬಗೆಯ ಕೃತಿಗಳು. ಇಂಥ ವಿಜಯ, ಅಭ್ಯುದಯ ಕಾವ್ಯಗಳು ವಿಜಯನಗರದ ಅರಸರ ಕಾಲದಲ್ಲೇ ಕಾಣುತ್ತವೆ. ಬುಕ್ಕರಾಯನ ರಾಣಿ ಗಂಗಾದೇವಿಯ 'ಮಧುರಾವಿಜಯ' (೧೩೭೯), ಡಿಂಡಿಮಕವಿಸಾರ್ವಭೌಮನೆಂದು ಖ್ಯಾತನಾಗಿದ್ದ ೨ನೇ ರಾಜನಾಥನ 'ಸಾಳುವಾಭ್ಯುದಯ' (ಸು. ೧೪೩೦), ೩ನೇ ರಾಜನಾಥನ 'ಅಚ್ಯುತರಾಯಾಭ್ಯುದಯ' (ಸು. ೧೫೪೦) ಕೆಲವು ಉಲ್ಲೇಖನಯೋಗ್ಯ ಕೃತಿಗಳು. ಇವು ಕ್ರಮವಾಗಿ ವೀರಕಂಪಣರಾಯ, ಸಾಳುವ ನಾರಸಿಂಹ ಹಾಗೂ ಅಚ್ಯುತರಾಯರ ಸಾಧನೆ ಸಾಹಸ ಪರಾಕ್ರಮಗಳನ್ನು ವರ್ಣಿಸುತ್ತವೆ. ಕುಮಾರ ಧೂರ್ಜಟಿಯ 'ಕೃಷ್ಣದೇವರಾಯ ವಿಜಯ' ಕೂಡ ಈ ಗುಂಪಿಗೆ ಸೇರುವಂಥದೇ. ಇನ್ನು ಮೇಲೆ ಹೇಳಿದ ಕನ್ನಡದ ಕೃತಿಗಳಾದರೂ ಈ ಬಗೆಯವೇ ಆಗಿವೆ. ಈ ಪರಂಪರೆಯ ಹುಟ್ಟಿಗೆ ವಿಜಯನಗರ ಕಾಲದ ವಿಜಯ ಕಾವ್ಯ, ಅಭ್ಯುದಯಕಾವ್ಯ ರಚನಾಪದ್ಧತಿಯೇ ಕಾರಣ. ಮೈಸೂರರಸರ ಆಶ್ರಿತಕವಿಗಳು ತಾವು ರಚಿಸಿದ ಮಾಹಾತ್ಮ್ಯ ಹಾಗೂ ಇತರ ಕೃತಿಗಳ ಆರಂಭದಲ್ಲಿ ಆ ರಾಜವಂಶದ ಉಗಮ, ವಂಶಾವಳಿ, ರಾಜರ ಸಾಧನೆ – ಸಾಹಸ ಕುರಿತಂತೆ ಗಮನಾರ್ಹವಾದ ಪ್ರತ್ಯೇಕ ಪ್ರಸ್ತಾಪಗಳನ್ನು ಗ್ರಂಥಾರಂಭದಲ್ಲಿ ತಪ್ಪದೇ ತಂದಿದ್ದಾರೆ. ಇದು ಈ ಪದ್ಧತಿಯ ಇನ್ನೊಂದು ಮುಖದ ಬೆಳವಣಿಗೆಯೇ. ಇಂಥ ವಿಜಯ ಇಲ್ಲವೆ ಅಭ್ಯುದಯ ಕಾವ್ಯಗಳು ಅರಸರ ಬಗ್ಗೆ ಮಾತ್ರವಲ್ಲ, ತತ್ಕಾಲೀನ ಆಡಳಿತದ ಪ್ರಭಾವಶಾಲಿ ವ್ಯಕ್ತಿಗಳ ಬಗೆಗೂ ಬಂದಿವೆ. ಕೃಷ್ಣರಾಜನ ದಳವಾಯಿಗಳಾದ ಕಳಲೆ ದೇವರಾಜ, ನಂಜರಾಜರನ್ನು ಕುರಿತ ನೂರೊಂದಯ್ಯನ 'ಸೌಂದರಕಾವ್ಯ' ಇದಕ್ಕೊಂದು ನಿದರ್ಶನ. ಮುಂದಿನ ಮುಮ್ಮಡಿ ಕೃಷ್ಣರಾಜರ ಕಾಲದಲ್ಲಿ ಇಂಥ ಕೃತಿಗಳ ಮಹಾಪೂರವೇ ಹರಿದಿದೆ.

ಇಂಥ ಕೃತಿಗಳು ಏಕೆ ರಚಿತವಾದುವು ? ಹೊಸ ರಾಜಮನೆತನವೊಂದು ಅಧಿಕಾರಕ್ಕೆ ಬಂದಾಗ, ತನ್ನ ದೃಢವಾದ ಸ್ಥಾಪನೆಗೆ ಸಾಹಿತ್ಯವನ್ನು ಒಂದು ಉಪಕರಣವಾಗಿ ಬಳಸಿಕೊಳ್ಳುತ್ತದೆ. ಮನೆತನಕ್ಕೆ ಪ್ರಾಚೀನತೆ ಮತ್ತು ಜನಾದರಣೆ ದೊರಕಿಸಿಕೊಡಲು ಹಿಂದಣ ರಾಜರ ವೈಭವ – ವಿಕ್ರಮಗಳನ್ನು ಐತಿಹ್ಯದೊಂದಿಗೆ ಬೆರೆಸಿ ಜನ ಬೆರಗಾಗುವಂತೆ ಬಣ್ಣಿಸಲು ಸಾಹಿತ್ಯದ ನೆರವನ್ನು ಆಶ್ರಯಿಸುತ್ತದೆ. ಚಿಕ್ಕದೇವರಾಜ ಪಟ್ಟಕ್ಕೆ ಬಂದದ್ದು ೧೬೭೩ರಲ್ಲಿ. ಮೈಸೂರು ಅರಸರು ಆಳಲು ತೊಡಗಿದ್ದು ೧೫೭೬ರಲ್ಲಿ. ಎಂದರೆ ಮನೆತನ ನೆಲೆಯೂರಿ ಸುಮಾರು ಒಂದು ಶತಮಾನವಾಗಿತ್ತು. ಮನೆತನದ ಕೀರ್ತನೆಗೆ ಇಂಥ ಕೃತಿಗಳನ್ನು ಆರಂಭಕಾಲದಲ್ಲಿ ರಚಿಸಿದರು. ಮುಮ್ಮಡಿ ಕೃಷ್ಣರಾಜರ ಆಳ್ವಿಕೆಯಲ್ಲೂ ಇಂಥವೇ ಕೃತಿಗಳು ಅಧಿಕವಾಗಿದ್ದುವು. ಆಳ್ವಿಕೆಯ ದೃಷ್ಟಿಯಿಂದ ಅದು ಅಸ್ಥಿರವಾದ ಕಾಲ. ಟೀಪು, ಪಾಳೆಯಗಾರರು, ಫೌಜುದಾರರು, ಬ್ರಿಟಿಷ್ ಕಮೀಷನರ ಹಸ್ತಕ್ಷೇಪ ಕಾರಣವಾಗಿ ಕೃಷ್ಣರಾಜರ ಆಳ್ವಿಕೆ ಚೆನ್ನಿರಲಿಲ್ಲ. ರಾಜ್ಯದಲ್ಲೆಲ್ಲ ಆಂತರಿಕ ದಂಗೆ, ಆರ್ಥಿಕ ದುಃಸ್ಥಿತಿ ತಾಂಡವವಾಡುತ್ತಿತ್ತು. ಹಾಗಾಗಿ ಬ್ರಿಟಿಷ್ ಆಳ್ವಿಕೆಯೇ ಪರೋಕ್ಷವಾಗಿ ರಾಜ್ಯ ನಡೆಸಿತು. ಆದರೆ ಜನರಿಗೆ ಕೃಷ್ಣರಾಜರೇ ದೊರೆಗಳು ಎಂಬುದನ್ನು ಮನವರಿಕೆ ಮಾಡಿಕೊಡಬೇಕಾಗಿತ್ತು. ಆದ್ದರಿಂದ ಸಾಹಿತ್ಯವನ್ನು ಇನ್ನೊಮ್ಮೆ ಉಪಕರಣವಾಗಿಸಿಕೊಂಡು ಅದನ್ನು ಕವಿಗಳು ಮತ್ತೆ ಮತ್ತೆ ಹೇಳಿದರು.

ಈ ಅವಧಿಯ ಚಾರಿತ್ರಿಕ ಕಾವ್ಯಗಳ ಪ್ರತ್ಯೇಕತೆಯ ಬಗೆಗೂ ಹೇಳಬೇಕು. ಪಂಪ, ಪೊನ್ನ, ರನ್ನರ ಕೃತಿಗಳಲ್ಲಿ ಚಾರಿತ್ರಿಕಾಂಶಗಳು ಕಥಾವಸ್ತುವಿನೊಂದಿಗೆ ಕಲಸಿಹೋಗಿವೆ. ಆಶ್ರಯದಾತ ರಾಜನನ್ನು

ಪುರಾಣಪುರುಷರೊಂದಿಗೆ ಸಮೀಕರಿಸಿದ್ದರಿಂದ ಆ ಕಾವ್ಯಗಳು ಶುದ್ಧಚರಿತ್ರೆಗಳಾಗಿಲ್ಲ. ಮಣ್ಣಿನಿಂದ ಹೊನ್ನಿನ ಕಣ ತೆಗೆಯುವಂತೆ ಅಲ್ಲಿ ಚಾರಿತ್ರಿಕಾಂಶ ತೆಗೆಯಬೇಕು. ನಂಜುಂಡ, ಪಾಂಚಾಳಗಂಗರನ್ನು ಬಿಟ್ಟರೆ ನೇರವೂ ಸವಿವರವೂ ಆದ ಚಾರಿತ್ರಿಕ ಕಾವ್ಯಗಳು ಬಂದುದು ಈ ಅವಧಿಯಲ್ಲೇ. ಇದು 'ಕಂಠೀರವ ನರಸರಾಜ ವಿಜಯ' ದಿಂದ ಆರಂಭವಾಗಿ 'ಸೌಂದರಕಾವ್ಯ' ದವರೆಗೂ ವ್ಯಾಪಿಸಿದೆ. ತಿರುಮಲಾರ್ಯ, ಚಾಮಯ್ಯ, ತಮ್ಮಯ್ಯ, ಈ ಬಗೆಯ ಒಂದಕ್ಕಿಂತ ಹೆಚ್ಚು ಕೃತಿಗಳ ಕರ್ತೃಗಳು. ರಾಜಾಶ್ರಿತಕವಿಗಳು ತಮ್ಮ ಗ್ರಂಥಾರಂಭದಲ್ಲಿ ಮೈಸೂರು ಅರಸರ ಇತಿಹಾಸ ಹೇಳುವುದು ಮುಂದೆ ಒಂದು ಪರಂಪರೆಯೇ ಆಯಿತು.

೩

ಒಡೆಯರ ಕಾಲದ ಸಾಹಿತ್ಯದಲ್ಲಿ ಶ್ರೀವೈಷ್ಣವಧರ್ಮದ ಕೃತಿಗಳು ಹೆಚ್ಚು. ಚಿಕ್ಕದೇವರಾಜನ ಹಿಂದಣ ಮುಂದಣ ಅವಧಿಯ ಸಾಹಿತ್ಯದಲ್ಲಂತೂ ಇದರದೇ ಆಧಿಕ್ಯ. ಚಿಕ್ಕದೇವರಾಜನ ಹೆಸರಿನಲ್ಲಿರುವ 'ಚಿಕ್ಕದೇವರಾಜಬಿನ್ನಪ', 'ಗೀತಗೋಪಾಲ', ಚಿಕುಪಾಧ್ಯಾಯನ ಕಮಲಾಚಲ, ಯದುಗಿರಿ, ವೆಂಕಟಗಿರಿ, ಶ್ರೀರಂಗ, ಪಶ್ಚಿಮರಂಗ ಮಾಹಾತ್ಮ್ಯಗಳು, ಆತನದೇ ಆದ 'ದಿವ್ಯಸೂರಿಚರಿತೆ', 'ತಿರುವಾಯ್ಮೊಳಿ ಟೀಕೆ'ಗಳು, ತಿಮ್ಮ, ಮಲ್ಲಿಕಾರ್ಜುನ ಹಾಗೂ ವೆಂಕಟಾಚಾರ್ಯ ಶಿಷ್ಯರು ಬರೆದ ಯಾದವಗಿರಿ, ಶ್ರೀರಂಗ, ವೆಂಕಟಗಿರಿ ಮಾಹಾತ್ಮ್ಯಗಳು, ಚೆನ್ನಯ್ಯ-ಚೆಲುವಾಂಬೆಯರ 'ಪದ್ಮಿನೀ ಪರಿಣಯ', 'ವರನಂದೀ ಕಲ್ಯಾಣ' ಗಳು ತತ್ಕಾಲೀನ ಶ್ರೀವೈಷ್ಣವ ಧರ್ಮ ಪ್ರಾಬಲ್ಯದ ಕುರುಹುಗಳು; ಈ ಕಾಲದಲ್ಲಿ ಭಾಗವತ, ಶ್ರೀನಿವಾಸಕಲ್ಯಾಣ, ಕೃಷ್ಣಕೇಂದ್ರಿತ ವಸ್ತುವಿನ ಕೃತಿಗಳದೇ ಮೇಲಾಟ. ಕಳಲೆ ದಳವಾಯಿಗಳ ಪ್ರವೇಶದವರೆಗೂ ಈ ಪ್ರವೃತ್ತಿ ಕಾಣುತ್ತದೆ. ಶ್ರೀವೈಷ್ಣವಧರ್ಮ ಕರ್ನಾಟಕವನ್ನು ಪ್ರವೇಶಿಸಿದ್ದು ೧೧ನೆಯ ಶತಮಾನದಲ್ಲಿ. ೧೭ನೆಯ ಶತಮಾನದವರೆಗೆ ಕನ್ನಡ ಸಾಹಿತ್ಯ ಚಟುವಟಿಕೆಗಳಲ್ಲಿ ಆ ಧರ್ಮೀಯರು ತಟಸ್ಥರಾಗಿದ್ದರು. ಈಗ ಒಮ್ಮೆಲೆ ಆ ಧರ್ಮದ ಸಾಹಿತ್ಯ ಕನ್ನಡದಲ್ಲಿ ಚಿಮ್ಮಲು ಕಾರಣವೇನು?

ಈ ಹಿಂದೆಯೇ ಹೇಳಿದಂತೆ ಮೈಸೂರರಸರು ವಿಜಯನಗರದ ಅರಸರ ಪರಂಪರೆ, ಪದ್ಧತಿ ಮುಂದುವರಿಸಿಕೊಂಡು ಬಂದರು. ತುಳುವವಂಶದ ಕೃಷ್ಣದೇವರಾಯನೇ ಶ್ರೀವೈಷ್ಣವಪಕ್ಷಪಾತಿ. ವೆಂಕಟರಮಣ ಸ್ವಾಮಿಯಿದ್ದ ತಿರುಪತಿ, ವರದರಾಜ ಸ್ವಾಮಿಯಿದ್ದ ಕಂಚಿ, ನರಸಿಂಹದೇವರಿದ್ದ ಸಿಂಹಾಚಲಕ್ಕೆ ಆತ ಹಲವು ಬಾರಿ ಹೋಗಿದ್ದ. ಗೋದಾದೇವಿ ರಂಗನಾಥರ ಕಲ್ಯಾಣ ಹೇಳುವ 'ಆಮುಕ್ತಮಾಲ್ಯದ' ರಚಿಸಿದ್ದ. ಅಳಿಯರಾಮರಾಯನ ಕಾಲದ ಮರಿಗಂಟಿ ಸಿಂಗನಾಚಾರ್ಯ 'ವರದರಾಜಸ್ತುತಿ', 'ಚಕ್ರಲಾಂಛನವಿಧಿ', 'ಶ್ರೀ ರಂಗಶತಕ', 'ರಾಮಕೃಷ್ಣವಿಜಯ', 'ಶ್ರೀಕೃಷ್ಣ ಶತಾನಂದೀಯ' ಕೃತಿಗಳ ಕರ್ತೃ. ಇವೆಲ್ಲ ಶ್ರೀವೈಷ್ಣವಪರ ರಚನೆಗಳು. ಇದರೊಂದಿಗೆ ಕೃಷ್ಣದೇವರಾಯ, ಅಚ್ಯುತರಾಯ, ಸದಾಶಿವರಾಯ, ಅರವೀಡು ಮನೆತನದ ಮೊದಲನೆಯ ಶ್ರೀರಂಗರಾಯರು ಮೇಲುಕೋಟೆಯ ಚೆಲುವನಾರಾಯಣಸ್ವಾಮಿಗೆ ದಾನ-ದತ್ತಿ ನೀಡಿದ್ದಾರೆ. ಎಂದರೆ ವಿಜಯನಗರದ ಅರಸರು ಶ್ರೀವೈಷ್ಣವ ಧರ್ಮಕ್ಕೆ ಯಥೇಚ್ಛವಾದ ಪೋಷಣೆ ಪ್ರೋತ್ಸಾಹ ನೀಡಿದರು. ಮೈಸೂರರಸರಿಗೆ ಸಾಮ್ರಾಜ್ಯ, ಸಂಪತ್ತು, ಸಿಂಹಾಸನ ದೊರೆತದ್ದೇ ಅರವೀಡು ಮನೆತನದವರಿಂದ. ಸಹಜವಾಗಿಯೇ ಅವರ ದೈವಪರಂಪರೆ, ಕ್ರಮ ಇವರೂ ಮುಂದುವರಿಸಿದರು. ಇದರೊಂದಿಗೆ ಒಡೆಯರ ಆ ಕಾಲದ ರಾಜಧಾನಿ ಶ್ರೀರಂಗಪಟ್ಟಣ. ಇದಕ್ಕೆ ಮೇಲುಕೋಟೆ, ಮಂಡ್ಯ, ಮದ್ದೂರು ಮುಂತಾದ ಶ್ರೀವೈಷ್ಣವ ಕ್ಷೇತ್ರಗಳು ತೀರ ಸಮೀಪವೇ. ಶ್ರೀರಂಗಪಟ್ಟಣದ ಅಧಿದೈವವಾದರೂ ಶ್ರೀವೈಷ್ಣವರ ಆರಾಧ್ಯದೈವ ವಾದ ಶ್ರೀರಂಗನಾಥನೇ. ಈ ಎಲ್ಲ ಕಾರಣಗಳಿಂದ ಮೈಸೂರರಸರ ಮೇಲೆ, ಅವರ ಆಶ್ರಿತರ ಚಟುವಟಿಕೆಗಳ ಮೇಲೆ ಶ್ರೀವೈಷ್ಣವಧರ್ಮದ ಪ್ರಭಾವ ಅನಿವಾರ್ಯವಾಗಿ ಆಯಿತು.

ಸಾಹಿತ್ಯದಲ್ಲಿ ಇದು ವ್ಯಕ್ತಗೊಳ್ಳಲೂ ವಿಶಿಷ್ಟವಾದ ಹಿನ್ನೆಲೆಯಿದೆ. ಚಿಕ್ಕದೇವರಾಜನ ಆಶ್ರಯದಲ್ಲಿದ್ದ ತಿರುಮಲಾರ್ಯ, ಚಿಕುಪಾಧ್ಯಾಯರೆಂಬ ಮಂತ್ರಿ ಸಾಹಿತಿಗಳು ಹುಟ್ಟಾ ಶ್ರೀವೈಷ್ಣವರು. ಇವರ ಪೂರ್ವಿಕರು ತಮಿಳುನಾಡಿನವರು. ಮೈಸೂರರಸರ ವಂಶಕ್ಕೆ ಪುರಾಣ ಪರಿವೇಷ ಸೃಜಿಸಿಕೊಟ್ಟದ್ದು ಇವರೇ. ದ್ವಾರಕಾಮೂಲ, ಬ್ರಹ್ಮ-ಅತ್ರಿ-ಚಂದ್ರ-ಬುಧ-ಪುರೂರವರಿರುವ ಯದುವಂಶದ ವಾಂಶಿಕ ಅನುಕ್ರಮ, ಯದುರಾಯ - ಕೃಷ್ಣರಾಯರಿಂದ ಮನೆತನದ ಆರಂಭ ಕಲ್ಪಿಸಿಕೊಟ್ಟದ್ದು ಇವರೇ. ಸಮುದ್ರದಲ್ಲಿ ದ್ವಾರಾವತಿ ಮುಳುಗಿದಾಗ ಕೃಷ್ಣ ತನ್ನ ಅನುಜಾತೆಯಾದ ಚಾಮುಂಡಿಗೆ ''ನಮ್ಮ ಕುಲದೈವ ಯದುಶೈಲದಲ್ಲಿದೆ. ನನ್ನ ವಂಶದ ಮುಂದಿನ ದೊರೆಗಳನ್ನು ಆ ಪರ್ವತದ ದಕ್ಷಿಣಭಾಗದಲ್ಲಿ ನಿಲ್ಲಿಸು'' ಎಂದ. ಯಾದವರನ್ನು ಮೈಸೂರಿನಲ್ಲಿ ನೆಲೆಗೊಳಿಸಿ, ಚಾಮುಂಡಿ ತಾನು ಸಮೀಪದ ಬೆಟ್ಟದಲ್ಲಿ ನೆಲಸಿ ನಿಂತಳು. ಇಂಥ ಪೌರಾಣಿಕ ಘಟನೆಯನ್ನೂ ಇವರೇ ಕಲ್ಪಿಸಿಕೊಟ್ಟರು. ದ್ವಾರಕೆ, ಯದು, ಕೃಷ್ಣ ಯಾದವವಂಶ, ಯದುಶೈಲ - ಈ ಸಂಗತಿಗಳಿಂದ ಪುಷ್ಟಗೊಂಡ ಪೌರಾಣಿಕ ಹಿನ್ನೆಲೆ ಶ್ರೀವೈಷ್ಣವಧರ್ಮಾನುಸಾರವಾಗಿಯೇ ಇತ್ತು. ಕೃಷ್ಣಕೇಂದ್ರಿತ ಕೃತಿಗಳಲ್ಲಿ ಒಂದೆಡೆ ಶ್ರೀವೈಷ್ಣವಧರ್ಮವನ್ನೂ ಇನ್ನೊಂದೆಡೆ ತತ್ಕಾಲೀನ ದೊರೆಗಳ ಗುಣಸ್ವಭಾವಗಳನ್ನೂ ಆಯಾ ಕಾಲದ ಕವಿಗಳು ಧ್ವನಿಪೂರ್ವಕವಾಗಿಯೂ ನೇರವಾಗಿಯೂ ವ್ಯಕ್ತಗೊಳಿಸಿದರು. ನಂಜರಾಜ, ದೇವರಾಜ ಎಂಬುವರನ್ನುಳಿದರೆ ಇತರ ಮೈಸೂರು ದೊರೆಗಳ ಹೆಸರುಗಳೆಲ್ಲ ಶ್ರೀವೈಷ್ಣವಪರವಾಗಿದ್ದುದೂ ಇದಕ್ಕೆ ಪೋಷಕವೇ ಆಯಿತು. ತಿಮ್ಮರಾಜ (=ತಿರುಮಲರಾಜ), ಚಾಮರಾಜ (=ಶ್ಯಾಮ, ಕೃಷ್ಣರಾಜ), ಕೃಷ್ಣರಾಜ, ನರಸರಾಜ (=ನರಸಿಂಹರಾಜ) ಎಂಬಲ್ಲೆಲ್ಲ ಕೃಷ್ಣ, ಶ್ರೀನಿವಾಸ, ನರಸಿಂಹ ಎಂಬ ಶ್ರೀವೈಷ್ಣವ ದೈವನಾಮಗಳೇ ಬಂದಿವೆ. ಕೃಷ್ಣರಾಜ, ಚಾಮರಾಜ ಎಂಬುವಂತೂ ಮತ್ತೆ ಮತ್ತೆ ರಾಜನಾಮಗಳಾಗಿ ಬಂದಿವೆ. ಮನೆತನವನ್ನು ದೃಢಗೊಳಿಸಿದ ರಾಜಒಡೆಯರು ಅರವೀಡು ಮನೆತನದಂತೆ ಮೇಲುಕೋಟೆಗೆ ನಡೆದುಕೊಂಡರು; ಚೆಲುವನಾರಾಯಣಸ್ವಾಮಿಗೆ 'ರಾಜಮುಡಿ' ಯನ್ನಿತ್ತರು. ಈ ಎಲ್ಲ ಹಿನ್ನೆಲೆಗಳಲ್ಲಿ ಮೈಸೂರರಸರ ಸಾಹಿತ್ಯದಲ್ಲಿ ಶ್ರೀವೈಷ್ಣವಪ್ರವಾಹ ಸಹಜವಾಗಿಯೇ ಗೋಚರಿಸಿತು.

ಒಡೆಯರ ಕಾಲದ ಶ್ರೀವೈಷ್ಣವಪರವಾದ ಅಲೆಗೆ ಪ್ರತಿಯಾಗಿ ಶೈವಪರವಾದ ಅಲೆ ಬಂದದ್ದು ಕಳಲೆಯ ನಂಜರಾಜನ ಕಾಲದಲ್ಲಿ. ಆತ ಮತ್ತು ಆತನ ಆಶ್ರಿತಕವಿಗಳು ಹಲವಾರು ಶೈವಪರ ಕೃತಿಗಳನ್ನು ರಚಿಸಿದರು. ಶಿವಗಂಗೆ, ನಂಜನಗೂಡು, ಭದ್ರಗಿರಿಗಳ ಮೇಲೆ ಮಾಹಾತ್ಮ್ಯ ಕೃತಿಗಳನ್ನು ನಂಜರಾಜ ಬರೆದ. ತ್ರಿಷಷ್ಟಿಪುರಾತನರ ಬಗ್ಗೆ 'ಶಿವಭಕ್ತ ವಿಲಾಸದರ್ಪಣ' ರಚಿಸಿ - ಆಳ್ವಾರರ ಚರಿತ್ರೆಗೆ ಪ್ರತಿಯಾಗಿ - ನಾಯನ್ಮಾರರ ಚರಿತೆ ಕನ್ನಡಿಸಿದ; ಹಾಲಾಸ್ಯಮಾಹಾತ್ಮ್ಯದ ಮೂಲಕ ಶಿವಲೀಲಾಕೀರ್ತನವನ್ನು ವರ್ಧಿಸಿದ. 'ಶಿವಗೀತೆ', 'ಲಿಂಗಪುರಾಣ', 'ಕಾಶೀಕಾಂಡ', 'ಶಿವಧರ್ಮೋತ್ತರಟೀಕು' ಈತನ ರಚನೆಗಳೇ. ಆಶ್ರಿತಕವಿಗಳಾದ ವೆಂಕಟೇಶ ಹಾಗೂ ಕಳಲೆ ಲಿಂಗರಾಜರು ಕ್ರಮವಾಗಿ 'ಹಾಲಾಸ್ಯ ಮಾಹಾತ್ಮ್ಯ', 'ಲಿಂಗಪುರಾಣ'ಗಳನ್ನು ರಚಿಸಿದರು. ವೈಷ್ಣವಧರ್ಮ-ಸಾಹಿತ್ಯಗಳ ಪ್ರತಿಸ್ಪರ್ಧಿಯಾಗಿ ಶೈವಧರ್ಮ ಹಾಗೂ ಸಾಹಿತ್ಯಗಳು ಬೆಳೆದದ್ದು ಈ ದಳವಾಯಿಯ ಕಾಲದಲ್ಲೇ. ಈ ತಿರುವು ಮುಂದೆ ದೇವಲಾಪುರದ ನಂಜುಂಡ ಮತ್ತಿತರರಿಗೆ ಹಿನ್ನೆಲೆಯಾಯಿತು.

೪

ಒಡೆಯರ ಕಾಲದ ಸಾಹಿತ್ಯದಲ್ಲಿ ಕೆಲವು ವೈಶಿಷ್ಟ್ಯಗಳು ಎದ್ದು ಕಾಣುತ್ತವೆ. ಟೀಕೆ-ವ್ಯಾಖ್ಯಾನ ಸಾಹಿತ್ಯ, ಮಾಹಾತ್ಮ್ಯ ಸಾಹಿತ್ಯ, ಪರಿಣಯ ಕಾವ್ಯ, ಕೃತಿವಸ್ತು ನಾವೀನ್ಯ ಒಡನೆಯೇ ಕಾಣುವ ಕೆಲವು ವೈಶಿಷ್ಟ್ಯಗಳು. ಇವನ್ನು ಸ್ವಲ್ಪ ವಿವರದಲ್ಲಿ ನೋಡಬಹುದು. ಮೊದಲಿಗೆ ಟೀಕೆ-ವ್ಯಾಖ್ಯಾನಗಳ ಬಗ್ಗೆ:

ಚಾಮರಾಜ ಒಡೆಯರ ಕಾಲದಿಂದ ಇಮ್ಮಡಿ ಕೃಷ್ಣರಾಜ ಒಡೆಯರ ಕಾಲದವರೆಗೆ ನೂರಾರು ಸಂಸ್ಕೃತಕೃತಿಗಳಿಗೆ ಟೀಕೆ, ವ್ಯಾಖ್ಯಾನ, ತಾತ್ಪರ್ಯ, ಅರ್ಥವಿವರಣ, ಅನುವಾದ ಕಾರ್ಯಗಳು ನಡೆದಿವೆ. ರಾಮಾಯಣ, ಭಾರತ, ಭಾಗವತ, ಸ್ಮೃತಿ, ಪುರಾಣ, ಧರ್ಮಶಾಸ್ತ್ರಗ್ರಂಥಗಳು ಇದರಲ್ಲಿ ಸ್ಥಾನಪಡೆದಿವೆ; 'ವಾಲ್ಮೀಕಿರಾಮಾಯಣ', 'ಬ್ರಹ್ಮೋತ್ತರಖಂಡ'ಗಳಿಗೆ ಚಾಮರಾಜ ಒಡೆಯರು, 'ಭಾಗವತ', 'ಶೇಷಧರ್ಮ', 'ಭಾರತ' (ಶಾಂತಿಪರ್ವಾನಂತರ) ಗಳಿಗೆ ಚಿಕ್ಕದೇವರಾಜ, 'ಕಾಮಂದಕೀಯ', 'ತಿರುವಾಯ್ಮೊಳಿ' ಗಳಿಗೆ ಚಿಕುಪಾಧ್ಯಾಯ, 'ತುಲಾಕಾವೇರಿ ಮಾಹಾತ್ಮ್ಯ'ಕ್ಕೆ ಚೆಲುವಾಂಬೆ, 'ಶಿವಧರ್ಮೋತ್ತರ' ಕ್ಕೆ ಕಳಲೆ ವೀರರಾಜ, 'ಮಾರ್ಕಂಡೇಯ ಪುರಾಣ', 'ಲಿಂಗಪುರಾಣ'ಗಳಿಗೆ ಕಳಲೆ ನಂಜರಾಜರು ಟೀಕೆ ಇಲ್ಲವೆ ವ್ಯಾಖ್ಯಾನ ರಚಿಸಿದ್ದಾರೆ. ಬೃಹತ್ ಕೃತಿಗಳಿಗೆ ಈ ಟೀಕಾಕಾರ್ಯ ನಡೆದಿದೆ. ಹೆಚ್ಚುಕಡಮೆ ಇವೆಲ್ಲ ವೈದಿಕ ಸಂಸ್ಕೃತಿಯನ್ನು ಪ್ರತಿನಿಧಿಸುವ ಕೃತಿಗಳೇ. ಟೀಕೆ-ವ್ಯಾಖ್ಯಾನ ಬರೆದು ವೈದಿಕ ಸಂಸ್ಕೃತಿಯನ್ನು ಪುನರುಜ್ಜೀವಿಸುವ ಕೆಲಸವನ್ನು ವಿಜಯನಗರದ ಅರಸರೇ ಕೈಗೊಂಡಿದ್ದರು. ಸಾಯಣ-ಮಾಧವರ ವೇದಭಾಷ್ಯ, ವಿದ್ಯಾರಣ್ಯರ ಪರಾಶರಸ್ಮೃತಿ ವ್ಯಾಖ್ಯಾನ, ಮಾಧವಮಂತ್ರಿಯ ಸೂತಸಂಹಿತಾ ತಾತ್ಪರ್ಯ ದೀಪಿಕೆ, ನರಹರಿಯ ನೈಷಧದೀಪಿಕೆ, ಈಶ್ವರದೀಕ್ಷಿತನ ರಾಮಾಯಣ ವ್ಯಾಖ್ಯಾನ, ವಿಜಯಧ್ವಜತೀರ್ಥರ ಭಾಗವತ ವ್ಯಾಖ್ಯಾನ ಬಂದುದು ಅವರ ಕಾಲದಲ್ಲೇ. ಒಡೆಯರು ಆ ಪರಂಪರೆ ಪದ್ಧತಿಗಳನ್ನೇ ಅನುಸರಿಸಿದರು. ಫಲವಾಗಿ ಟೀಕೆ-ವ್ಯಾಖ್ಯಾನ ಸಾಹಿತ್ಯಕ್ಕೆ ವಿಶೇಷ ಪ್ರೋತ್ಸಾಹ ನೀಡಿದರು.

ಒಡೆಯರ ಕಾಲದ ಇನ್ನೊಂದು ವೈಶಿಷ್ಟ್ಯ, ಮಾಹಾತ್ಮ್ಯಸಾಹಿತ್ಯ ರಚನೆ. ಮೇಲುಕೋಟೆ, ಯಾದವಗಿರಿ, ಶ್ರೀರಂಗಪಟ್ಟಣ, ಪಶ್ಚಿಮರಂಗ, ಹಿಮವದ್ಗೋಪಾಲಸ್ವಾಮಿಬೆಟ್ಟ, ಕಮಲಾಚಲ, ಶ್ರೀರಂಗ, ತಿರುಪತಿ/ವೆಂಕಟಗಿರಿ ಕ್ಷೇತ್ರಗಳ ಬಗ್ಗೆ ಮಾಹಾತ್ಮ್ಯ ಕೃತಿಗಳು ಬಂದಿವೆ. ಇವುಗಳ ಮೇಲೆ ಕ್ರಮವಾಗಿ ೪,೩,೨,೪, ಆರಂತೆ ಒಟ್ಟು ೧೭ ಕೃತಿಗಳು ರಚಿತವಾಗಿವೆ. ಚಿಕುಪಾಧ್ಯಾಯ, ತಿಮ್ಮ, ಗೋಪಾಲರಾಜ, ರಂಗಾಚಾರ್ಯ, ಮಲ್ಲಿಕಾರ್ಜುನ, ಸಿಂಗರಾರ್ಯ, ಚೆಲುವಾಂಬೆ, ವೆಂಕಕವಿಗಳು ಇವುಗಳ ರಚನೆಯಲ್ಲಿ ಪಾಲುದಾರರು; ಬ್ರಹ್ಮಾಂಡ-ನಾರದೀಯ-ಭವಿಷ್ಯೋತ್ತರ ಪುರಾಣಗಳ ತೀರ್ಥಕಾಂಡಗಳಿಂದ ಈ ಮಾಹಾತ್ಮ್ಯಕಥೆ, ವಸ್ತುಗಳನ್ನು ಆರಿಸಿದೆ. ಕ್ಷೇತ್ರಗಳ ಭೌಗೋಳಿಕ ವರ್ಣನೆ, ತತ್ ಕೇಂದ್ರಿತ ವೈಷ್ಣವ ಸಮುದಾಯ ಕಥೆಗಳ ನಿರೂಪಣೆ ಇವುಗಳ ಉದ್ದೇಶ. ವೈಷ್ಣವ ದೇವತೆಗಳ, ಆಳ್ವಾರರ, ಕ್ಷೇತ್ರಾಧಿಷ್ಠಾನ ದೈವಸ್ತುತಿಗಳಿಂದ ಗ್ರಂಥಾರಂಭ; ಬಳಿಕ ಮೈಸೂರರಸರ ವಂಶಾವಳಿ, ತತ್ಕಾಲೀನ ರಾಜರ ಗುಣಶೀಲನಿರೂಪಣೆ- ಇದು ಈ ಕೃತಿಗಳ ಸಾಮಾನ್ಯವಾದ ಆರಂಭ. ಇವುಗಳ ಮಾಧ್ಯಮ ಚಂಪು ಅಥವಾ ಗದ್ಯ. ಈ ಮಾಹಾತ್ಮ್ಯ ಸಾಹಿತ್ಯ ಕೂಡ ತೆಲುಗಿನಿಂದಲೇ ಪ್ರೇರಿತವಾಗಿದೆ. ತೆಲುಗಿನ ಪ್ರಸಿದ್ಧ ಕವಿ ಶ್ರೀನಾಥನ ಭಾವಮೈದುನ ದಗ್ಗುಪಲ್ಲಿ ದುಗ್ಗನ. ಆತನ 'ಶಿವಕಾಂಚೀಮಾಹಾತ್ಮ್ಯ' ದಿಂದ ಈ ಪರಂಪರೆ ತೆಲುಗಿನಲ್ಲಿ ಮೊದಲಾಯಿತು. ಬಳಿಕ ಕೃಷ್ಣದೇವರಾಯನ ಆಸ್ಥಾನದಲ್ಲಿದ್ದ ಧೂರ್ಜಟಿ 'ಶ್ರೀಕಾಳಹಸ್ತೀಶ್ವರ ಮಾಹಾತ್ಮ್ಯ'ವನ್ನು, ಕೃಷ್ಣದೇವರಾಯನ ಕಿರಿಯ ಸಮಕಾಲಿಕ ರಾಮಕೃಷ್ಣನು 'ಪಾಂಡುರಂಗಮಾಹಾತ್ಮ್ಯ', 'ಘಟಿಕಾಚಲ ಮಾಹಾತ್ಮ್ಯ'ಗಳನ್ನು, ವೆಲಗಪೂಡಿ ವೆಂಗನ್ನ 'ಸೇತುಮಾಹಾತ್ಮ್ಯ'ವನ್ನು, ಲಿಂಗಮಗುಟು ರಾಮಯ್ಯ 'ಆನಂದಕಾನನಮಾಹಾತ್ಮ್ಯ'ವನ್ನು ರಚಿಸಿದರು. ಇವೆಲ್ಲ ೧೫-೧೬ನೆಯ ಶತಮಾನದ ರಚನೆಗಳು. ಇವಕ್ಕೆ ವಾಯು-ಸ್ಕಾಂದ-ಪದ್ಮ ಪುರಾಣಗಳು ಆಕರ. ಇವುಗಳಲ್ಲಿ ಬಹುಪಾಲು ಶೈವಪರವಾದವು ಎಂಬುದನ್ನುಳಿದರೆ ಕನ್ನಡ ಮಾಹಾತ್ಮ್ಯಗಳಿಗೆ ಇವೇ ಮಾದರಿ, ಮಾರ್ಗ. ರಾಮಾನುಜಾಚಾರ್ಯರು ಭೇಟಿಯಿತ್ತಿದ್ದ ಸ್ಥಳಗಳನ್ನು ಪ್ರಬಲ ಶ್ರೀವೈಷ್ಣವಕ್ಷೇತ್ರಗಳಾಗಿ ಬೆಳೆಸಬೇಕಿತ್ತು. ಹಾಗಾಗಿ ಇಂಥ ಸಾಹಿತ್ಯ ರಚನೆಯಾಯಿತು.

ಪರಿಣಯಕಾವ್ಯಗಳ ವೈಪುಲ್ಯ ಈ ಅವಧಿಯ ಇನ್ನೊಂದು ವೈಲಕ್ಷಣ್ಯ. ಸ್ತ್ರೀ-ಪುರುಷ ಲೇಖಕರಿಬ್ಬರೂ ಇಂಥ ಕೃತಿಗಳನ್ನು ರಚಿಸಿದ್ದಾರೆ. ಶೃಂಗಾರಮ್ಮನ 'ಪದ್ಮಿನೀಕಲ್ಯಾಣ', ಚೆಲುವಾಂಬೆಯ 'ವರನಂದೀಕಲ್ಯಾಣ',

– ಉಲ್ಲೇಖಿಸಬಹುದಾದ ಕೆಲ ಕೃತಿಗಳು. ಇವುಗಳಲ್ಲದೆ 'ಪ್ರಭಾವತೀ ಪರಿಣಯ', 'ಮದಾಲಸಾ ಪರಿಣಯ', 'ತಪತೀ ಪರಿಣಯ'ಗಳೂ ಇವೆ. ಈ ಪರಿಣಯ ಕಾವ್ಯಪರಂಪರೆ ಕಾಣಿಸಿಕೊಳ್ಳಲು ಮತ್ತೆ ವಿಜಯನಗರದ ಅರಸರ ಹಾಗೂ ತೆಲುಗು ಕವಿಗಳ ಪ್ರಭಾವವೇ ಕಾರಣ. ಕೃಷ್ಣದೇವರಾಯನ ಸಂಸ್ಕೃತದ 'ಜಾಂಬವತೀಪರಿಣಯ' 'ಉಷಾಪರಿಣಯ'ಗಳು, ಆತನ ಮಗಳು ಮೋಹನಾಂಬೆಯ 'ಮಾರೀಚೀಪರಿಣಯ', ಅಚ್ಯುತರಾಯನ ಪತ್ನಿ ತಿರುಮಲಾಂಬೆಯ 'ವರದಾಂಬಿಕಾಪರಿಣಯ'ಗಳು ಈ ಹಾದಿಯ ಮಾದರಿ ಕಾವ್ಯಗಳು; ತೆಲುಗಿನಲ್ಲಿ ಸುಮಾರು ೧೫೫೦ರಿಂದ ಪೆನುಮತ್ಸ ವೆಂಕಟಾದ್ರಿ, ಅನಂತಕವಿ, ಕುಮಾರ ಧೂರ್ಜಟಿ, ತೆನಾಲಿ ರಾಮಭದ್ರ, ಪೋಲೂರಿ ಗೋವಿಂದಕವಿ ಅಜ-ಇಂದುಮತಿಯರ ವೃತ್ತಾಂತ ಆಧರಿಸಿದ 'ಇಂದುಮತೀಪರಿಣಯ' ಕೃತಿರಚಕರಾಗಿದ್ದಾರೆ. ಇಂಥ ಕೃತಿಗಳೇ ಕನ್ನಡದ ಪರಿಣಯ ಕಾವ್ಯಪರಂಪರೆಗೆ ಮಾರ್ಗದರ್ಶಿಯಾಗಿವೆ.

ಇತರ ಕೆಲವು ಸಂಗತಿಗಳಲ್ಲಿಯೂ ವಿಜಯನಗರದ ಅರಸರ ಹಾಗೂ ತೆಲುಗು ಸಾಹಿತ್ಯಗಳ ಪ್ರಭಾವವಿದೆ. ನಿದರ್ಶನಕ್ಕೆ ಕೃಷ್ಣಾರ್ಜುನರ ಕಾಳಗದ ನವೀನ ಕಥಾವಸ್ತು ಕೋನಯ್ಯ, ವೆಂಕಟರಮಣಯ್ಯ ಹಾಗೂ ಇನ್ನೊಂದಿಬ್ಬರು ಕನ್ನಡ ಲೇಖಕರನ್ನು ಆಕರ್ಷಿಸಿದೆ. ಕನ್ನಡ ಭಾರತ, ಭಾಗವತಗಳಲ್ಲಿ ಕಾಣದ ವಿಲಕ್ಷಣ ಕಥಾವಸ್ತುವಿದು. ಬ್ರಹ್ಮಾಂಡಪುರಾಣದ ಈ ಕಥಾವಸ್ತುವನ್ನು ಕೃಷ್ಣದೇವರಾಯನ ಆಸ್ಥಾನಕವಿ ಚರಿಗೊಂಡಧರ್ಮನ ಮೊದಲ ಬಾರಿಗೆ ಬಳಸಿ 'ಚಿತ್ರಭಾರತಂ' ಎಂಬ ಜನಪ್ರಿಯಕೃತಿ ರಚಿಸಿದ. ಬಳಿಕ ನಾದೆಂಡ್ಲ ಗೋಪಮಂತ್ರಿ ಈತನನ್ನು ಅನುಸರಿಸಿದ. ಕನ್ನಡ ಕವಿಗಳು ಇದರಿಂದಲೇ 'ಕೃಷ್ಣಾರ್ಜುನ ಕಾಳಗ', 'ಕೃಷ್ಣಾರ್ಜುನಸಂಗರ' ಕೃತಿಗಳನ್ನು ರಚಿಸಿದ್ದಾರೆ. ರಾಮಾಯಣ-ಭಾರತ-ಭಾಗವತಗಳನ್ನು ಆಧರಿಸಿಯೇ ರಚಿತವಾಗುತ್ತಿದ್ದ ಕನ್ನಡ ಕೃತಿಗಳು ವಸ್ತುವಿಗಾಗಿ ಬ್ರಹ್ಮಾಂಡ - ನಾರದೀಯ-ಸ್ಕಾಂದ-ಭವಿಷ್ಯೋತ್ತರ ಪುರಾಣಗಳೆಡೆ ಹೊರಳಿದ್ದು ಮೈಸೂರು ಅರಸರಕಾಲದಲ್ಲೇ. ಈ ತಿರುವಿಗಾದರೂ ವಿಜಯನಗರದ ಅರಸರ ಕಾಲದ ತೆಲುಗು ಕವಿಗಳ ಪ್ರಭಾವವೇ ಕಾರಣ.

ಅಲಂಕಾರಶಾಸ್ತ್ರ ಗ್ರಂಥರಚನೆಯಲ್ಲೂ ಈ ತೆಲುಗು ಪ್ರಭಾವವನ್ನು ಕಾಣಬಹುದು. ಆಳಿಯ ರಾಮರಾಯನ ಸೋದರಳಿಯ ನರಸರಾಜ. ಭಟ್ಟುಮೂರ್ತಿ ಈತನನ್ನು ಕುರಿತ ಸ್ತುತಿಪದ್ಯಗಳಿರುವ 'ನರಸಭೂಪಾಲೀಯಮು' ತೆಲುಗುಕೃತಿ ರಚಿಸಿದ್ದಾನೆ. ೫ ಆಶ್ವಾಸಗಳ ಅಲಂಕಾರ ಗ್ರಂಥವಿದು. ೪ ಪ್ರಕರಣಗಳ ತಿರುಮಲಾರ್ಯನ 'ಅಪ್ರತಿಮವೀರಚರಿತೆ', ೩ ಉಲ್ಲಾಸಗಳ ಅಳಿಯ ಲಿಂಗರಾಜನ 'ನರಪತಿಚರಿತೆ' ಈ ಮಾದರಿಯವೇ. ಎರಡೂ ಚಿಕ್ಕ ಅಲಂಕಾರಶಾಸ್ತ್ರಕೃತಿಗಳೇ. ಮೊದಲನೆಯದರಲ್ಲಿ ಚಿಕದೇವರಾಜನ ಸ್ತುತಿರೂಪದ ಉದಾಹರಣ ಪದ್ಯಗಳಿವೆ. ವಿಜಯನಗರ ಕಾಲದ ತೆಲುಗು ಸಾಹಿತ್ಯದ ಪ್ರೇರಣೆ, ಪ್ರಭಾವ ಇಂಥ ಚಿಕ್ಕವಿಷಯಗಳಲ್ಲೂ ಗೋಚರಿಸುತ್ತದೆ. ಇವು ಆ ಪ್ರಭಾವದ, ಪ್ರಾಬಲ್ಯದ ಕುರುಹು.

೫

ಚಿಕದೇವರಾಜ ಮುಮ್ಮಡಿ ಕೃಷ್ಣರಾಜರು ಮೈಸೂರು ಅರಸರಲ್ಲಿ ಪ್ರತ್ಯೇಕ ಕಾರಣಗಳಿಗಾಗಿ ಹೆಸರಾಗಿದ್ದಾರೆ. ರಾಜ್ಯದ ಸುಭದ್ರತೆ, ಸ್ಥಿರತೆ, ಸುಧಾರಣೆಗಳಿಗೆ ಚಿಕದೇವರಾಜ ಹೆಸರಾದ; ವ್ಯತಿರಿಕ್ತವಾಗಿ ಅಭದ್ರತೆ, ಆರ್ಥಿಕ ದುಃಸ್ಥಿತಿ, ಆಡಳಿತ ಹಸ್ತಾಂತರಗಳಿಗೆ ಮುಮ್ಮಡಿಯವರು ಕಾರಣರಾದರು. ಆದರೆ ಕನ್ನಡಸಾಹಿತ್ಯದ ದೃಷ್ಟಿಯಿಂದ ಈ ಇಬ್ಬರ ಆಡಳಿತಾವಧಿ ಪರ್ವಕಾಲ; ಸಂಖ್ಯಾಬಾಹುಳ್ಯಕಾಲ. ಚಿಕ್ಕದೇವರಾಜ ಸ್ವತಃ ಸಾಹಿತಿ, ಜತೆಗೆ ಸಾಹಿತಿಗಳ ಪಡೆಯನ್ನೇ ನಿರ್ಮಿಸಿದ. ತಿರುಮಲಾರ್ಯ, ಸಿಂಗರಾರ್ಯ, ಚಿಕುಪಾಧ್ಯಾಯ, ತಿಮ್ಮಕವಿ, ಮಲ್ಲಿಕಾರ್ಜುನ, ಶೃಂಗಾರಮ್ಮ ಹೊನ್ನಮ್ಮರಿಗೆ ಈತ ಆಶ್ರಯ ಕೊಟ್ಟ; ಅವರ ಸಾಹಿತ್ಯಕ್ಕೆ ಪೋಷಣೆಯನ್ನಿತ್ತ. 'ನೂತನ ಸಾಹಿತ್ಯಬ್ರಹ್ಮ' ಎಂದು ಈತನನ್ನು ಆ ಕಾಲದ ಸಾಹಿತಿಗಳು ಕೀರ್ತಿಸಿದ್ದಾರೆ. ಈತನ ಕಾಲದಲ್ಲಿ ಚಿಕುಪಾಧ್ಯಾಯ ತಿಮ್ಮರು ಶ್ರೀವೈಷ್ಣವಧರ್ಮದ ಸೈದ್ಧಾಂತಿಕ ಕೃತಿಗಳನ್ನು ರಚಿಸಿದರು; ಸಿಂಗರಾರ್ಯ ಕನ್ನಡದ ಉಪಲಬ್ಧ

ನಾಟಕಗಳಲ್ಲಿ ಮೊದಲನೆಯದಾದ 'ಮಿತ್ರವಿಂದಾ ಗೋವಿಂದ'ವನ್ನು ಬರೆದ; ಊಳಿಗದಲ್ಲಿದ್ದ ಹೊನ್ನಮ್ಮ 'ಹದಿಬದೆಯಧರ್ಮ'ವನ್ನು ರಚಿಸಿ ಮಾರ್ಗಪರಂಪರೆಯ ಲೇಖಕಿಯರಿಗೆ ನಾಂದಿ ಹಾಡಿದಳು. ಚಾರಿತ್ರಿಕ ಕಾವ್ಯಸೃಷ್ಟಿ, ಚಂಪೂವಿನ ಪುನರುಜ್ಜೀವನ, ಗದ್ಯಪ್ರಕಾರ ಪ್ರಯೋಗ, ಲೇಖಕಿಯರಿಗೆ ಪ್ರೋತ್ಸಾಹ ಚಿಕ್ಕದೇವರಾಜನ ಕಾಲದ ವೈಶಿಷ್ಟ್ಯಗಳು. ಒಬ್ಬನೇ ಲೇಖಕನ ವಿಪುಲಕೃತಿರಚನಾ ನಿರ್ಮಾಣ, ವೈವಿಧ್ಯಪೂರ್ಣ ಗದ್ಯದ ಬಳಕೆ, ಯಕ್ಷಗಾನದ ಆಧಿಕ್ಯ, ಹೊಸಗನ್ನಡ ಸಾಹಿತ್ಯದ ಅರುಣೋದಯ ಮುಮ್ಮಡಿಯವರ ಕಾಲದ ವೈಶಿಷ್ಟ್ಯಗಳು.

ಮೈಸೂರರಸರ ಕನ್ನಡ ಸಾಹಿತ್ಯದ ಕಾಲವಿಸ್ತಾರ ನಿಡಿದಾದದ್ದು; ಮೂರು ಶತಮಾನಗಳ ಇತಿಹಾಸದ್ದು. ಈ ಮನೆತನದ ಮೊದಲ ದೊರೆಗಳು ಪರಂಪರೆಯ ಪುನರುಜ್ಜೀವಕರು. ವಿಜಯನಗರದ ಅರಸರ ಕಾಲದ ಸಾಹಿತ್ಯಿಕ ಧೋರಣೆ, ಚಂಪುವಿನ ಪುನರುದಯ, ವೈದಿಕ ಸಂಸ್ಕೃತಿಯ ಪ್ರಚಾರ, ಭಕ್ತಿಪ್ರಧಾನ ಸಾಹಿತ್ಯಸೃಷ್ಟಿ, ಹಳಗನ್ನಡ ಭಾಷಾ-ಶೈಲಿಗಳ ಬಳಕೆ, ಆಶ್ರಯದಾತರ ಸ್ತವನ, ಚಾರಿತ್ರಿಕ ಕಾವ್ಯಗಳ ಹೆಚ್ಚಳ ಇವು ಚಾಮರಾಜ, ಕಂಠೀರವ ನರಸರಾಜ, ಚಿಕದೇವರಾಜ, ಇಮ್ಮಡಿ ಕೃಷ್ಣರಾಜರ ಕಾಲದಲ್ಲಿ ಗೋಚರಿಸುವ ಸಂಗತಿಗಳು. ಇವು ಪರಂಪರೆ ಹಾಗೂ ಮಾರ್ಗದೀಕ್ಷೆಗಳ ಪ್ರೌಢಪ್ರಯತ್ನಗಳೇ. ಈ ಮನೆತನದ ಕೊನೆಯ ದೊರೆಗಳು ಪರಿವರ್ತನೆಯ ಹರಿಕಾರರು. ಚಂಪುವಿನ ಅಸ್ತ, ಗದ್ಯದ ವಿಜೃಂಭಣೆ, ಮೊದಲ ನಾಟಕ ಮತ್ತು ಯಕ್ಷಗಾನಗಳ ಬಹುಪ್ರಯೋಗ, ಸಾಂಗತ್ಯದ ಸರಳ ಭಾಷಾಶೈಲಿ, ಕಥನಕೃತಿಗಳ ಅಂಕುರಾರ್ಪಣ ಇವು ಬಳಿಕಣ ರಾಜರ ಕಾಲದ ಸಾಹಿತ್ಯಿಕ ವೈಶಿಷ್ಟ್ಯಗಳು. ಇವು ಹೊಸ ಸಾಹಿತ್ಯಕ್ಕೆ ಅಗತ್ಯವಾದ ಸಾಂಸ್ಕೃತಿಕ, ಸಾಹಿತ್ಯಿಕ ವಾತಾವರಣದ ಹಿನ್ನೆಲೆ ಕಲ್ಪಿಸಿಕೊಟ್ಟುವು. ಒಟ್ಟಿನಲ್ಲಿ ಪರಂಪರೆಯ ಪುನರುಜ್ಜೀವನ, ನವೋದಯದ ಪ್ರವರ್ತನೆ ಎರಡು ತುದಿಗಳಾಗಿರುವ ಈ ಮನೆತನದ ಸಾಹಿತ್ಯ ಇನ್ನೂ ವಿಸ್ತಾರವಾದ ಅಧ್ಯಯನಕ್ಕೆ, ಸೂಕ್ಷ್ಮವಾದ ವಿಶ್ಲೇಷಣೆಗೆ ಪಾತ್ರವಾಗಬೇಕಾಗಿದೆ.

ಕಳಲೆಯ ದಳವಾಯಿಗಳು ಮತ್ತು ಕನ್ನಡ ಸಾಹಿತ್ಯ

೧

ಕಳಲೆ ಅರಸುಗಳ ವಂಶಾವಳಿಯ ಪ್ರಕಾರ ಕಳಲೆ ಅರಸುಗಳ ಮನೆತನದ ಇತಿಹಾಸ ೧೬ನೆಯ ಶತಮಾನದಿಂದ ಆರಂಭವಾಗುತ್ತದೆ. ಈ ಮನೆತನಕ್ಕೆ ಮೈಸೂರು ಒಡೆಯರ ಮನೆತನಕ್ಕೆ ಸಂಪರ್ಕ ಸಂಬಂಧಗಳು ಕೂಡ ಒಂದು ರೀತಿಯಲ್ಲಿ ಈ ಶತಮಾನದಿಂದಲೇ ಆಗಿದೆ. ೧೬೧೫ರಿಂದ ೧೬೪೪ರ ವರೆಗೆ ಇದ್ದ ಇಮ್ಮಡಿ ಕಲಿಕಾಲ ಮಲ್ಲರಾಜ ಒಡೆಯರ್ ರಾಜಒಡೆಯರ ಕಾಲದಲ್ಲಿ ಮೈಸೂರರಸರಲ್ಲಿ ಮೊದಲ ದಳವಾಯಿಯಾಗಿದ್ದ. ಬಳಿಕ ೩ನೇ ಮಲ್ಲರಾಜ ಹಾಗೂ ಅವನ ತಮ್ಮಂದಿರಾದ ನಂದಿನಾಥಯ್ಯ, ಕುಮಾರಯ್ಯ (ಸು. ೧೬೬೬ ರಿಂದ ೧೬೭೩), ೧ನೇ ಸಂಜರಾಜಯ್ಯನ ಮಗ ಕಾಂತಯ್ಯ - ಈ ಮುಂತಾದವರು ದೇವರಾಜ ಒಡೆಯರ ಕಾಲದಲ್ಲಿ ದಳವಾಯಿಗಳಾಗಿದ್ದರು. ಮೈಸೂರರಸರಿಗೆ ತಮ್ಮ ಕುಟುಂಬದ ಹೆಣ್ಣು ಮಕ್ಕಳನ್ನು ಮದುವೆ ಮಾಡಿಸಿಕೊಡುವುದರ ಮೂಲಕ ಅಲ್ಲಿನ ಸಂಬಂಧ, ಅಧಿಕಾರಗಳನ್ನು ಈ ಅವಧಿಯಲ್ಲೇ ಅವರು ಸ್ಥಿರಪಡಿಸಿಕೊಂಡರು. ಮೈಸೂರರಸರಲ್ಲೇ ತುಂಬ ಪ್ರಸಿದ್ಧನಾದ ಚಿಕ್ಕದೇವರಾಜ ಒಡೆಯರ ಒಬ್ಬ ಪತ್ನಿಯಾದ ದೇವಮ್ಮ ಕಳಲೆ ಮನೆತನದ ದಳವಾಯಿ ಕುಮಾರಯ್ಯನ ಮಗಳು ಎಂಬುದನ್ನು ಇಲ್ಲಿ ಉಲ್ಲೇಖಿಸಬೇಕು. ಇವು ಹೇಗಿದ್ದರೂ ಇಮ್ಮಡಿ ಕಂಠೀರವ ನರಸರಾಜ ಒಡೆಯರ ಕಾಲದಲ್ಲಿಯೇ ಮೈಸೂರರಸರ ಆಳ್ವಿಕೆಯಲ್ಲಿ ಕಳಲೆಯ ದಳವಾಯಿಗಳ ಆಧಿಪತ್ಯ ಪ್ರಬಲವಾದುದು; ಎದ್ದು ಕಾಣುವಂಥಾದುದು. ಕುಮಾರಯ್ಯನ ಮಗನಾದ ೪ನೇ ಮಲ್ಲರಾಜ (೧೬೭೯-೧೭೧೯), ಮುಪ್ಪಿನ ಕಾಂತಯ್ಯನ ಮೊಮ್ಮಗನಾದ ಬಸವರಾಜಯ್ಯ,

ಈತನ ಭಾವಮೈದುನನಾದ ಇಮ್ಮಡಿ ನಂಜರಾಜಯ್ಯ (೧೭೦೮-೧೭೧೪), ಮುಪ್ಪಿನ ಕಾಂತಯ್ಯನ ಮತ್ತೊಬ್ಬ ಮೊಮ್ಮಗನಾದ ವೀರರಾಜಯ್ಯ ಈ ಎಲ್ಲರೂ ಅಲ್ಪಾವಧಿಯ ಮೇರೆಗೆಯಾದರೂ ಇಮ್ಮಡಿ ಕಂಠೀರವ ನರಸರಾಜ ಒಡೆಯರ ಕಾಲದಲ್ಲಿ ದಳವಾಯಿಗಳಾಗಿದ್ದರು. ಬಸವರಾಜಯ್ಯ ತನ್ನ ಮಗಳಾದ ಚಲುವಾಜಮ್ಮನನ್ನು ಕಂಠೀರವ ನರಸರಾಜರಿಗೆ ಕೊಟ್ಟು ಸಂಬಂಧ ಬೆಳೆಸುವುದರ ಮೂಲಕ ಕಳಲೆ ಮನೆತನದ ಹಿಂದಿನ ಸಂಪ್ರದಾಯವನ್ನು ಮುಂದುವರಿಸಿದನು; ಎರಡೂ ಮನೆತನಗಳ ಬೆಸುಗೆಯನ್ನು ಭದ್ರಗೊಳಿಸಿದನು. ಚಲುವಾಜಮ್ಮನ ಮಗನಾದ ಮೊದಲನೆಯ ಕೃಷ್ಣರಾಜ ಅಥವಾ ದೊಡ್ಡ ಕೃಷ್ಣರಾಜ ಒಡೆಯರಿಗೇ (೧೭೧೪-೧೭೨೨) ಪಟ್ಟ ದೊರೆಯುವಂತೆ ನೋಡಿಕೊಂಡನು. ದೊಡ್ಡ ಕೃಷ್ಣರಾಜ ಪಟ್ಟಕ್ಕೆ ಬಂದಾಗ ಆತನಿಗೆ ಕೇವಲ ೧೨ ವರ್ಷ (೧೭೦೨ ಜನನ). ಈ ಸಂದರ್ಭದಲ್ಲಿಯೇ ಕಳಲೆಯ ತಿಮ್ಮರಾಜ ಒಡೆಯರ ಮಗನೂ ಚಲುವಾಜಮ್ಮನ ಸಂಬಂಧಿಯೂ 'ಮೈಸೂರು ನಗರದ ಹೋಬಳಿ ವಿಚಾರ ಸೀಮೆಯ' ಅಧಿಕಾರಿಯೂ ಆದ ಚಲುವಯ್ಯನು ಸರ್ವಾಧಿಕಾರಿಯಾಗಿ ನೇಮಕಗೊಂಡನು. ಹಿಂದೆ ಹೇಳಿದ ಮುಪ್ಪಿನ ಕಾಂತಯ್ಯನ ಮೊಮ್ಮಗನೂ ದೊಡ್ಡಯ್ಯನ ಮಗನೂ ಆದ ವೀರರಾಜಯ್ಯ ದಳವಾಯಿಯಾಗಿ ಮುಂದುವರಿದ. ಕನ್ನಡ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಕಳಲೆಯ ದಳವಾಯಿಗಳ ಕಂಠೋಕ್ತ ಉಲ್ಲೇಖ, ನೇರ ಪ್ರಸ್ತಾಪ ದೊರೆಯುವುದು ಈ ವೀರರಾಜನಿಂದಲೇ. ೧೭ನೆಯ ಶತಮಾನದಲ್ಲಿ ಈ ಮನೆತನದ ದಳವಾಯಿಗಳಿದ್ದರಾದರೂ ಅವರಾರೂ ಕನ್ನಡ ಸಾಹಿತ್ಯಕ್ಕೆ ಪ್ರತ್ಯಕ್ಷವಾಗಿ ಪ್ರೋತ್ಸಾಹವಿತ್ತುದಾಗಲಿ, ಸಾಕ್ಷಾತ್ತಾಗಿ ಕೃತಿರಚನೆಗೆ ತೊಡಗಿದುದಾಗಲಿ ಕಂಡುಬರುವುದಿಲ್ಲ. ಆ ಅವಧಿಯ ಕನ್ನಡ ಸಾಹಿತ್ಯಕ್ಕೆ ಮೈಸೂರು ಒಡೆಯರೇ ಪ್ರೋತ್ಸಾಹಿಗಳೂ ಮಾರ್ಗದರ್ಶಕರೂ ಆಗಿದ್ದರು. ಆದ್ದರಿಂದ ಕನ್ನಡ ಸಾಹಿತ್ಯಕ್ಕೆ ಕಳಲೆಯ ದಳವಾಯಿಗಳ ಪ್ರೋತ್ಸಾಹ, ಕೊಡುಗೆಗಳು ದೊರೆತದ್ದು ೧೮ನೆಯ ಶತಮಾನದ ಪೂರ್ವಾರ್ಧದಲ್ಲಿ ಎನ್ನಬೇಕು ಅಷ್ಟೆ. ಈ ದಿಕ್ಕಿನಲ್ಲಿ ಹೆಸರಿಸಬಹುದಾದವರು ಕಳಲೆಯ ವೀರರಾಜ (೧೭೧೪-೧೭೨೪), ಕಳಲೆಯ ದೇವರಾಜ (೧೭೨೪-೧೭೫೯) ಹಾಗೂ ೪ನೇ ನಂಜರಾಜನೆಂದೂ, ಕರಾಚೂರಿ ನಂಜರಾಜಯ್ಯನೆಂದೂ ಹೆಸರಾಗಿದ್ದ ಕಳಲೆಯ ನಂಜರಾಜ (೧೭೩೯-೧೭೫೯). ಈ ಕರಾಚೂರಿ ನಂಜರಾಜಯ್ಯನೇ ಮೊದಲಿಗೆ ಕಿರಿಯ ದಳವಾಯಿಯಾಗಿದ್ದು, ಬಳಿಕ ಸರ್ವಾಧಿಕಾರಿಯ ಅಧಿಕಾರ ವಹಿಸಿಕೊಂಡನು. ಈತನ ಅಧಿಕಾರಾವಧಿಯಲ್ಲೇ ಕಳಲೆಯ ದಳವಾಯಿಗಳ ಅಧಿಕಾರದ ವೈಭವೋನ್ನತಿಗಳು, ಸಾಹಿತ್ಯದ ಕಾಣಿಕೆ ಪ್ರಗತಿಗಳು ಶಿಖರಸ್ಥಾನವನ್ನೇರಿ ಈತನ ಅಂತ್ಯದೊಂದಿಗೆ ಒಮ್ಮೆಲೇ ಅವಸಾನಗೊಂಡವು.

೨

ಕಳಲೆಯ ದಳವಾಯಿಗಳಲ್ಲಿ ಸ್ವತಃ ಕೃತಿರಚನೆ ಮಾಡಿದವರು ಇಬ್ಬರೇ: ಒಬ್ಬ ಕಳಲೆಯ ವೀರರಾಜ; ಮತ್ತೊಬ್ಬ ಈತನ ಕಿರಿಯ ಮಗ ಕರಾಚೂರಿ ನಂಜರಾಜ. ಚೆನ್ನಯ್ಯ, ಚೆಲುವಾಂಬೆ, ರಂಗಯ್ಯ, ನೂರೊಂದಯ್ಯ, ವೆಂಕಟೇಶ, ಲಿಂಗರಾಜ – ಈ ಮನೆತನದ ಸಂಪರ್ಕಕ್ಕೆ ಬಂದ ಇತರ ಕವಿಗಳು. ಈ ಎಲ್ಲ ಕವಿಗಳೂ ನೇರವಾಗಿ ದಳವಾಯಿಗಳಿಂದ ಪ್ರೋತ್ಸಾಹಿತರಾಗಿಯೋ, ಪೋಷಿತರಾಗಿಯೋ ಕೃತಿಗಳನ್ನು ರಚಿಸಿದರು. ಇದಕ್ಕೆ ಅಪವಾದವೆಂದರೆ ಕಳಲೆಯ ವೀರರಾಜನ ತಮ್ಮನ ಮಗಳೂ ದೊಡ್ಡ ಕೃಷ್ಣರಾಜನ ಪತ್ನಿಯೂ ಪಟ್ಟಮಹಿಷಿಯೂ ಆದ ಚೆಲುವಾಂಬೆ. ಈಕೆ ಈ ಅವಧಿಯ ಏಕೈಕ ಸ್ತ್ರೀ ಸಾಹಿತಿ. 'ಪದ್ಮಿನೀ ಪರಿಣಯ' ಬರೆದ ಚೆನ್ನಯ್ಯ ಕಳಲೆಯ ವೀರರಾಜನ ಆಶ್ರಿತನಾದರೆ, ಭಾಮಿನೀ ಷಟ್ಪದಿಯಲ್ಲಿ 'ಕಾವೇರೀ ಮಾಹಾತ್ಮ್ಯ' ಬರೆದ ರಂಗಯ್ಯ ಕಳಲೆಯ ದೇವರಾಜನ ಆಶ್ರಿತ. ಕಳಲೆಯ ದಳವಾಯಿಗಳ ಸಾಹಸ ವೃತ್ತಾಂತಗಳನ್ನು ಬಣ್ಣಿಸುವ 'ಸೌಂದರಕಾವ್ಯ' ಬರೆದ ನೂರೊಂದ, ಚಂಪೂ ಪ್ರಕಾರದಲ್ಲಿ 'ಹಾಲಾಸ್ಯ ಮಾಹಾತ್ಮ್ಯ' ಬರೆದ ವೆಂಕಟೇಶ, ಈಗ ಅಲಭ್ಯವಾಗಿರುವ 'ಲಿಂಗಪುರಾಣ' ರಚಕನಾದ ಕಳಲೆಯ ಲಿಂಗರಾಜ ಕರಾಚೂರಿ ನಂಜರಾಜಯ್ಯನ ಆಶ್ರಿತ ಕವಿಗಳು. ಹೀಗಾಗಿ

ದಳವಾಯಿಗಳ ಆಳ್ವಿಕೆಗೆ ಒಳಪಟ್ಟು ಕನ್ನಡ ಸಾಹಿತ್ಯಕ್ಕೆ ಸಂಬಂಧಿಸಿದಂತೆ ನೇರವಾಗಿ ದೊರೆಯುವ ಈ ಮನೆತನದ ಸಂಪರ್ಕವಿರಿಸಿಕೊಂಡಿರುವ ಕನ್ನಡ ಲೇಖಕರು ಒಟ್ಟು ೮ ಮಂದಿ. ಚೆನ್ನಯ್ಯ, ಚೆಲುವಾಂಬೆ, ಕಳಲೆ ನಂಜರಾಜರನ್ನುಳಿದು ಇತರರೆಲ್ಲರೂ ಒಂದೊಂದು ಕೃತಿಯನ್ನು ಮಾತ್ರ ರಚಿಸಿದ್ದಾರೆ. ಅಧಿಕಾರದಲ್ಲಿದ್ದ ವೀರರಾಜ, ಚೆಲುವಾಂಬೆ, ನಂಜರಾಜರ ಕೃತಿಗಳು ಗದ್ಯಕೃತಿಗಳಾಗಿದ್ದು ಸಂಸ್ಕೃತ ಮೂಲಗಳನ್ನು ಹೊಂದಿದ್ದು ಅವನ್ನು ಕ್ರಮವಾಗಿ ವೀರರಾಜೋಕ್ತಿ ವಿಲಾಸ, ಚೆಲುವಾಂಬಿಕಾ ವಾಣೀವಿಲಾಸ, ನಂಜರಾಜ ವಾಣೀವಿಲಾಸಗಳೆಂದು ಕರೆಯಲಾಗಿದೆ. ಈ ಎಲ್ಲ ಕವಿಗಳ ಕಾಲವನ್ನು ಕವಿಚರಿತಕಾರರು ಸು. ೧೭೨೦ರಿಂದ ಸು. ೧೭೪೦ರ ವರೆಗೆ ಗುರುತಿಸಿದ್ದಾರೆ. ಈ ಕಾಲಾವಧಿ ಮೊದಲೇ ಹೇಳಿದ ೧೮ನೆಯ ಶತಮಾನದ ಪೂರ್ವಾರ್ಧಕ್ಕೆ ಬರುತ್ತದೆ.

೩

ಈ ಮನೆತನದ ಸಾಹಿತ್ಯಿಕ ಪರಿಶೀಲನೆಯನ್ನು ಎರಡು ಹಂತಗಳಲ್ಲಿ ಪರಿಶೀಲಿಸಬಹುದು. ಮೊದಲ ಹಂತ ಕಳಲೆಯ ವೀರರಾಜ, ದೇವರಾಜರ ಕಾಲದ ಸಾಹಿತ್ಯ. ಎರಡನೆಯ ಹಂತ ಕಳಲೆಯ ನಂಜರಾಜನ ಕಾಲದ ಸಾಹಿತ್ಯ. ಕಳಲೆಯ ವೀರರಾಜ, ದೇವರಾಜರ ಕಾಲಕ್ಕೆ ಬರುವವರು ಕಳಲೆಯ ವೀರರಾಜ, ಚೆನ್ನಯ್ಯ, ಚೆಲುವಾಂಬೆ ಮತ್ತು ರಂಗಯ್ಯ – ಈ ನಾಲ್ವರು ಲೇಖಕರು ಮಾತ್ರ. ಈ ಹಂತದ ಸಾಹಿತ್ಯ ವೈಷ್ಣವ ಪರವಾಗಿಯೇ ಇದೆ. ಕಳಲೆಯ ವೀರರಾಜ ತನ್ನ ವೈದ್ಯಗ್ರಂಥದಲ್ಲಿ ಶಿವನೊಂದಿಗೆ ಪಶ್ಚಿಮ ರಂಗ ಮತ್ತು ಶ್ರೀರಾಮರನ್ನು ನೆನೆಯುತ್ತಾನೆ. ತನ್ನ ತೆಲುಗಿನ 'ಆಂಧ್ರವಚನ ಭಾರತಮು'ವಿನ ಸಭಾ ಮತ್ತು ಭೀಷ್ಮ ಪರ್ವಗಳಲ್ಲಿ ಆರಂಭದಲ್ಲಿ ಮನೆದೇವರಾದ ಲಕ್ಷ್ಮೀಕಾಂತಸ್ವಾಮಿಯನ್ನು ಮಾತ್ರವೇ ನೆನೆಯುತ್ತಾನೆ. ಈತನ ತಮ್ಮ ದೇವರಾಜನಂತೂ ಶ್ರೀರಾಮಚಂದ್ರನ ಪರಮಭಕ್ತ; ನಿಷ್ಠಾವಂತ ಅನುಯಾಯಿ. ಮಲ್ಲನ ಮೂಲೆಯ ಬಳಿ ಕಪಿನಿ ನದಿಗೆ ಕಟ್ಟಿಸಿದ ರಾಮಸೇತುವೆ, ಶ್ರೀರಂಗಪಟ್ಟಣದ ರಂಗನಾಥ ದೇವಾಲಯದ ರಂಗಮಂಟಪಕ್ಕೆ ಕೊಟ್ಟ ಹೆಸರಾದ ಸೀತಾವಿಲಾಸ, ಈತ ತೆಗೆಸಿದ ಸೀತಾಸರೋವರ ಕಾಲುವೆ, ನರಸೀಪುರದ ದಕ್ಷಿಣಕ್ಕೆ ನಿರ್ಮಿಸಿದ ರಾಮಚಂದ್ರಪುರ ಎಂಬ ಅಗ್ರಹಾರ – ಈತನ ರಾಮಭಕ್ತಿಯನ್ನು ನಿದರ್ಶಿಸುವ ಕುರುಹುಗಳು. ಈ ಹಿನ್ನೆಲೆಯಲ್ಲಿ, ಜೊತೆಗೆ ದೊಡ್ಡ ಕೃಷ್ಣರಾಜನ ಅಪ್ರತಿಮ ಹಾಗೂ ಅವಿಚಲಿತ ಶ್ರೀವೈಷ್ಣವ ನಿಷ್ಠೆಗಳು ಕಾರಣವಾಗಿ ಈ ದಳವಾಯಿಗಳ ಕಾಲದ ಕನ್ನಡ ಸಾಹಿತ್ಯ ವೈಷ್ಣವ – ಇನ್ನೂ ಖಚಿತವಾಗಿ ಹೇಳುವುದಾದರೆ – ಶ್ರೀವೈಷ್ಣವ ಪರವಾಗಿದೆ. ಚೆನ್ನಯ್ಯನ 'ಪದ್ಮಿನೀ ಪರಿಣಯ', ಚೆಲುವಾಂಬೆಯ 'ವೆಂಕಟಾಚಲ ಮಾಹಾತ್ಮ್ಯ ಲಾಲೀಪದ' 'ಅಲಮೇಲು ಮಂಗೆ ಲಾಲೀಪದ' ತಿರುಪತಿಯ ಶ್ರೀನಿವಾಸನನ್ನು ಕುರಿತ ಸಾಹಿತ್ಯ ಕೃತಿಗಳು; ಚೆಲುವಾಂಬೆಯದೇ ಆದ 'ವರನಂದೀ ಕಲ್ಯಾಣ' 'ಮಂಗಳಾರತಿ ಪದ' ಮೇಲುಕೋಟೆಯ ಚೆಲುವರಾಯನನ್ನು ಕುರಿತ ರಚನೆಗಳು; ಚೆಲುವಾಂಬೆಯದೇ ಎಂದು ಸಾಮಾನ್ಯವಾಗಿ ಪ್ರಚಲಿತವಾಗಿರುವ ಗದ್ಯಕೃತಿ 'ತುಲಾಕಾವೇರೀ ಮಾಹಾತ್ಮ್ಯ', ರಂಗಯ್ಯನ ಭಾಮಿನೀ ಷಟ್ಪದಿ ಕೃತಿ 'ಕಾವೇರೀ ಮಾಹಾತ್ಮ್ಯ' ಶ್ರೀರಂಗನಾಥನನ್ನು ಆವರಿಸಿರುವ ಕಾವೇರಿ ನದಿಯ ಪೌರಾಣಿಕ ಮಹಿಮೆ ವಿವರಿಸಿರುವ ಕೃತಿ. ಇವು ಕೂಡ ನಾರಾಯಣ ಪರವಾಗಿಯೇ ಇವೆ. ಅನ್ಯ ಕಾವೇರೀ ಮಾಹಾತ್ಮ್ಯಗಳಲ್ಲಿ ಶಿವ–ಕಾವೇರಿ–ಅಗಸ್ತ್ಯರ ಪ್ರಾಮುಖ್ಯವಿದ್ದರೆ, ಇಲ್ಲಿ ಅದನ್ನು ಉದ್ದೇಶಪೂರ್ವಕವಾಗಿ ವಿಷ್ಣು–ಕಾವೇರಿ–ಅಗಸ್ತ್ಯರ ಪರವಾಗಿ ಬದಲಿಸಿದೆ. ಈ ಬದಲಾವಣೆಯಷ್ಟೇ ಆ ಕಾಲದ ವೈಷ್ಣವಧರ್ಮ ಪ್ರಾಬಲ್ಯಸೂಚಿಯಾಗಿದೆ. ದೊಡ್ಡ ಕೃಷ್ಣರಾಜ ತಿರುಪತಿಯಿಂದ ಪರಕಾಲ ಗುರುವಾದ ಶ್ರೀನಿವಾಸ ಯತೀಂದ್ರನನ್ನು ಬರಮಾಡಿಕೊಂಡು ಶ್ರೀವೈಷ್ಣವ ಮತದ ಮುದ್ರೆ–ಲಾಂಛನಗಳನ್ನು ಧರಿಸಿದ್ದ; ತಿರುಪತಿಯ ವೆಂಕಟಾಚಲಪತಿಗೆ ಬಂಗಾರಬಣ್ಣದ ಛತ್ರಿ, ರಜತಕರಂಡಕ ಮತ್ತು ರಜತಹಸ್ತಿಗಳನ್ನೂ ಕಂಠೀವರಹಗಳನ್ನೂ ದಾನವಾಗಿತ್ತಿದ್ದ; ಮೇಲುಕೋಟೆಯ ಚೆಲುವನಾರಾಯಣ ಹಾಗೂ ಶ್ರೀರಂಗಪಟ್ಟಣದ

ರಂಗನಾಥರಿಗೂ ಬಗೆಬಗೆಯ ದತ್ತಿ, ದಾನಗಳನ್ನು ನೀಡಿದ್ದ. ಈ ಹಿನ್ನೆಲೆಯಲ್ಲಿ ಈ ಕಾಲದ ಸಾಹಿತ್ಯ ಶ್ರೀನಿವಾಸ, ಚಲುವನಾರಾಯಣ ಹಾಗೂ ಕಾವೇರಿ ನದಿಗಳನ್ನು ಕೇಂದ್ರೀಕರಿಸಿ ರಚಿತವಾಗಿರುವುದು ಸಹಜವಾಗಿಯೇ ಇದೆ. ಇದಕ್ಕೊಂದೇ ಅಪವಾದವೆಂದರೆ ಕಳಲೆಯ ವೀರರಾಜನ 'ಸಕಲವೈದ್ಯ ಸಂಹಿತ ಸಾರಾರ್ಣವ'. ಇದರ ಬಗ್ಗೆ ಕೆಲವು ಮಾತುಗಳನ್ನಾಡಿ, ಬಳಿಕ ಈ ಕಾಲದ ಇತರ ಕೃತಿಗಳೆಡೆ ಹೊರಳಬಹುದು.

'ಸಕಲವೈದ್ಯ ಸಂಹಿತ ಸಾರಾರ್ಣವ' ಈಗ ಅಚ್ಚಾಗಿರುವಂತೆ ಎರಡು ಸಂಪುಟಗಳಲ್ಲಿದೆ. ಸುಮಾರು ಒಂದು ಸಾವಿರ ಪುಟಗಳ ವ್ಯಾಪ್ತಿಯಿರುವ ಗಣ್ಯಗಾತ್ರದ ಕೃತಿಯಿದು. ಗ್ರಂಥಾರಂಭದ ದೈವಸ್ತುತಿಯ ವೃತ್ತ ಕಂದಗಳನ್ನುಳಿದರೆ ಉಳಿದ ಕೃತಿಭಾಗವೆಲ್ಲ ಗದ್ಯದಲ್ಲಿಯೇ ಇದೆ. ನಾಡೀ ಪರೀಕ್ಷೆಯಿಂದ ಆರಂಭವಾಗುವ ಕೃತಿ ವಿಷರೋಗನಿದಾನದಿಂದ ಅಂತ್ಯಗೊಂಡಿದೆ. ಕೃತಿರಚನೆಯ ಸಂದರ್ಭದಲ್ಲಿ ವೀರರಾಜ 'ಮಹಾಸಂಹಿತಾ ದುಗ್ಧ ರತ್ನಾಕರ', 'ಭೋಜರಾಜ ಸಂಹಿತೆ', ವೈದ್ಯಕಲ್ಪತರು' ಈ ಕೆಲವನ್ನು ಬಳಸಿಕೊಂಡಿದ್ದಾನೆ. ಜ್ವರ, ಸನ್ನಿಪಾತ, ಅಸ್ತಿಸ್ರಾವ, ಕ್ಷಯರೋಗ, ಹೃದ್ರೋಗ, ಆರ್ಶರೋಗ, ಉದಾವರ್ತ, ಅತಿಸಾರ, ಮೇಹರೋಗ, ಗುಲ್ಮರೋಗ, ಕಾಮಾಲೆ, ಅಪಸ್ಮಾರ ಮುಂತಾದ ವ್ಯಾಧಿಪ್ರಪಂಚ ವರ್ಣನೆಯಿದೆ. ಪ್ರತಿಯೊಂದು ರೋಗ, ಅದರ ಲಕ್ಷಣ, ಆ ರೋಗದ ಭೇದಗಳು ಅವಕ್ಕೆ ಔಷಧರೂಪವಾಗಿ ಸಂಹಿತೆ, ಕಲ್ಕ, ಕಷಾಯ, ಚೂರ್ಣ, ತೈಲ ಅಥವಾ ಘೃತ, ಲೇಪ, ಲೋಹಸಿಂಧೂರ, ಅಂಜನ, ಪಥ್ಯ, ಅನುಪಾನ - ಈ ಪರಿಹಾರಕ್ರಮಗಳಲ್ಲಿ ಅಗತ್ಯವಿರುವಷ್ಟನ್ನು ವರ್ಣಿಸುತ್ತಾನೆ. ಈ ವರ್ಣನೆ ಸಣ್ಣ ಸಣ್ಣ ಗದ್ಯ ಖಂಡಗಳಲ್ಲಿದ್ದು ಚೂರ್ಣಿಕಾ ಗದ್ಯದ ಮಾದರಿಯಲ್ಲಿದೆ. ನೇರವೂ ಭಾವರಹಿತವೂ ಆದದ್ದು ಈ ಗದ್ಯ. ಒಂದು ವಾಕ್ಯದಿಂದ ಹಿಡಿದು ಒಂದೂವರೆಪುಟದವರೆಗೆ ಈ ಗದ್ಯ ವ್ಯಾಪಿಸಿದೆ. ನಡುನಡುವೆ 'ಭೋಜರಾಜಸಂಹಿತೆ' ಮುಂತಾದ ಕೃತಿವಿವರಗಳನ್ನು ಅನ್ಯವಾದ ಅಥವಾ ಮತಾಂತರ ಎಂದು ನಿರೂಪಿಸಿದೆ. ರೋಗವು ವಾತ, ಪಿತ್ತ, ಕಫಗಳನ್ನಾಧರಿಸಿದ್ದರೆ, ಚಿಕಿತ್ಸೆಯು ಧಾನ್ಯ, ವನಸ್ಪತಿ ಮತ್ತು ಪ್ರಾಣಿಜ ವಸ್ತುಗಳನ್ನು ಅವಲಂಬಿಸಿದೆ. ಪ್ರತಿರೋಗಕ್ಕೂ ಚಿಕಿತ್ಸಾಕಾಲದ ಅವಧಿ ಮತ್ತು ಔಷಧ ಪ್ರಮಾಣಗಳನ್ನು ಸೂಚಿಸಿದೆ. ವೀರರಾಜನಿಗೆ ತೆಲುಗು ಭಾಷೆಯ ಪರಿಚಯವಿದ್ದುದರಿಂದಲೋ ಏನೋ ಕೃತಿಯಲ್ಲಿ ಹಲವೆಡೆ ತೆಲುಗಿನ ವಾಕ್ಯಖಂಡಗಳು ಅಲ್ಲಲ್ಲಿ ಸೇರ್ಪಡೆಗೊಂಡಿವೆ.

ಚೆನ್ನಯ್ಯನನ್ನು ಕವಿಚರಿತಕಾರರು 'ಪದ್ಮಿನೀ ಪರಿಣಯ' ದ ಕರ್ತೃವಾಗಿ ಮಾತ್ರ ಗುರುತಿಸಿದ್ದಾರೆ. ಆದರೆ ಈತ 'ಭಗವದ್ಗೀತೆ'ಯ ಮೊದಲ ೧೫ ಅಧ್ಯಾಯಗಳಿಗೆ ಕನ್ನಡ ಟೀಕನ್ನು ರಚಿಸಿರುವುದನ್ನು ಸಿ. ಹಯವದನರಾಯರು ಪ್ರಸ್ತಾಪಿಸಿದ್ದಾರೆ. ಈಗ ಸುಲಭವಾಗಿ ನೋಡಲು ದೊರೆಯದ ಈ ಟೀಕಿನ ಭಾಷೆ ತಿಳಿಯಾದ ಹೊಸಗನ್ನಡದಲ್ಲಿದೆಯೆಂದು ಅವರು ಸೂಚಿಸುತ್ತಾರೆ. ಚೆನ್ನಯಾಮಾತ್ಯನ ಮೊಮ್ಮಗನಾದ ಈತ ಗಾರ್ಗ್ಯಗೋತ್ರದ ಹೊಯ್ಸಳ ಕರ್ನಾಟಕ ಕುಲದ ಬೇಲೂರು ನಿವಾಸಿ. ೨೫೦೦ ಪದ್ಯಗಳಿರುವ 'ಪದ್ಮಿನೀ ಪರಿಣಯ' ೧೮ ಸಂಧಿ ೩ ಆಶ್ವಾಸಗಳ ತಕ್ಕಪ್ರಮಾಣದ ಕಾವ್ಯ. ಪ್ರತಿಸಂಧಿಯ ಆದ್ಯಂತಗಳಲ್ಲಿ ಚೆನ್ನಕೇಶವನ ಸ್ತುತಿ, ಸಂಧ್ಯಂತಗಳಲ್ಲಿ ವೀರರಾಜನನ್ನು ಉದ್ದೇಶಿಸಿ ಒಪ್ಪಿಸುವ ಗ್ರಂಥ ಪ್ರಮಾಣ ಸೂಚನೆ, ಆಶ್ವಾಸಾಂತಗಳಲ್ಲಿ ೩ ವಾರ್ಧಕ ನಿಯತವಾಗಿ ಬಂದಿವೆ. ಕವಿ ಕಥೆಯನ್ನು 'ವಾರಾಹಾ ಪುರಾಣ'ದಿಂದ ಆಯ್ದುಕೊಂಡಿದ್ದೇನೆ ಎಂದು ಸೂಚಿಸಿದ್ದರೂ (೧-೧-೫೮) ಕಥಾ ವೃತ್ತಾಂತ ಅಲ್ಲಿಲ್ಲ; ಬದಲಿಗೆ ಸ್ಕಾಂದಪುರಾಣದ ವೆಂಕಟಾಚಲ ಮಾಹಾತ್ಮ್ಯ ಭಾಗದಲ್ಲಿ ಕಾಣುತ್ತದೆ. ಪದ್ಮಾವತಿ-ವೆಂಕಟೇಶ್ವರರ ವಿವಾಹ ಕೃತಿವಸ್ತು. ಗೌಣ ವ್ಯತ್ಯಾಸಗಳನ್ನುಳಿದರೆ ಕಥೆ ಸ್ಕಾಂದಪುರಾಣದ ಹಳಿಯ ಮೇಲೆಯೇ ಹರಿದಿದೆ. ಪುರ, ಆಸ್ಥಾನ, ವಂಧ್ಯಾ ಸಂತಾಪ, ಪದ್ಮಿನಿಯ ಬಾಲಲೀಲೆ, ರಾತ್ರೀ ವಿಹಾರ, ಪುಷ್ಪಾಪಚಯ, ಜಲಕೇಳಿ, ಕಾಂತಾರ, ಮೃಗಯಾವಿಹಾರ, ವಸಂತೋತ್ಸವ, ವರ್ಷಕಾಲ - ಶರತ್ಕಾಲವೇ ಮುಂತಾದ ಬಗೆಬಗೆಯ ವರ್ಣನೆಗಳಿಂದ ಚೆನ್ನಯ್ಯ ಕಾವ್ಯವನ್ನು ತುಂಬಿಸಿದ್ದಾನೆ. ಕಾವ್ಯದ ಮುಕ್ಕಾಲು ಪಾಲು ವರ್ಣನೆ, ಕಾಲುಪಾಲು ಕಥೆ. ಗ್ರಂಥಾಂತ್ಯದಲ್ಲಿ ಕವಿ 'ಇದು

ಶೃಂಗಾರಾಂಗನೆಯಲಂಕೃತಿ ಕೇಳಿದು ಕನ್ನಡದೊಳುನುಡಿಯಸದನವಕ್ಕಬಿಬೀಡು....'(೩-೪-೨೯೧) ಎಂದು ಹೇಳಿಕೊಂಡಿರುವುದಕ್ಕೆ ಅನುಗುಣವಾಗಿದೆ ಕೃತಿಯ ವಸ್ತುವಿನ್ಯಾಸ, ಶೈಲಿಗಳು. ಕೃತಿನಿರ್ವಹಣೆ ಮೊದಲ ಓದಿಗೇ ಅರ್ಥವಾಗುವಷ್ಟು ಸುಭಗವಾಗಿದೆ.

ದೊಡ್ಡ ಕೃಷ್ಣರಾಜನ ಪತ್ನಿ ಚೆಲುವಾಂಬೆಯ ಕೃತಿಗಳು ಈಗಿನ ತಿಳಿವಳಿಕೆಯಮಟ್ಟಿಗೆ ಐದು. ಅವು ಕ್ರಮವಾಗಿ 'ವರನಂದೀ ಕಲ್ಯಾಣ', 'ವೆಂಕಟಾಚಲಮಾಹಾತ್ಮ್ಯಲಾಲೀಪದ', 'ಆಲಮೇಲುಮಂಗೆ ಲಾಲೀಪದ', 'ಮಂಗಳಾರತಿ ಪದ' ಮತ್ತು 'ತುಲಾಕಾವೇರೀ ಮಾಹಾತ್ಮ್ಯ'. ಈಕೆ ಲೀಲಾಶುಕನ ಕೃಷ್ಣಕರ್ಣಾಮೃತಕ್ಕೆ ಒಂದು ಕನ್ನಡ ಟೀಕನ್ನು ಬರೆದಿದ್ದಳು ಎಂದೂ ಕೆಲವರು ಹೇಳಿದ್ದಾರೆ. ಆದರೆ ಅದೀಗ ಅನುಪಲಬ್ಧ : ತುಲಾಕಾವೇರಿ ಮಾಹಾತ್ಮ್ಯ, ಇವಳದಲ್ಲವೆಂದು ಈಚೆಗೆ ಕೆಲವರು ಶಂಕಿಸಿ ಹಸ್ತಪ್ರತಿಯ ಅಂತ್ಯವೊಂದರಲ್ಲಿ ಬರುವ ಸಂಸ್ಕೃತದ ಶಾರ್ದೂಲ ವಿಕ್ರೀಡಿತವನ್ನು ಆಧರಿಸಿ ಈ ಗದ್ಯಕೃತಿ ಮೌದ್ಗಲ ಗೋತ್ರದ, ವೆಂಕಟಾರ್ಯನ ಮಗ ಶ್ರೀನಿವಾಸನದಿರಬಹುದೆಂದು ಶಂಕಿಸಿದ್ದಾರೆ. ಈ ಶಂಕೆಯನ್ನು ಪೋಷಿಸುವ ಇತರ ಆಧಾರಗಳಾವುವೂ ಎಲ್ಲೂ ಇಲ್ಲ. ಪ್ರತಿಯಾಗಿ ಈ ಕೃತಿಯ ೩೦ ಅಧ್ಯಾಯಗಳಲ್ಲಿ ಇದು ಚೆಲುವಾಂಬೆಯದೇ ಎಂದೂ, ಇದಕ್ಕೆ ಚೆಲುವಾಂಬಿಕಾ ವಾಣೀವಿಲಾಸವೆಂದು ಹೆಸರಿದೆಯೆಂದೂ ಉಲ್ಲೇಖಿಸಿದೆ. ಆದ್ದರಿಂದ ಇದನ್ನು ಚೆಲುವಾಂಬೆಯ ರಚನೆಯೆಂದು ಗ್ರಹಿಸುವುದೇ ಸೂಕ್ತ.

'ತುಲಾಕಾವೇರೀ ಮಾಹಾತ್ಮ್ಯ'ವನ್ನುಳಿದು ಚೆಲುವಾಂಬೆಯ ಇತರ ರಚನೆಗಳೆಲ್ಲವೂ ಪದ್ಯಕೃತಿಗಳೇ. ಚೆಲುವಾಂಬೆಯ ಕೃತಿಗಳಲ್ಲೆಲ್ಲ 'ತುಲಾಕಾವೇರೀ ಮಾಹಾತ್ಮ್ಯ' ದೊಡ್ಡದಾದರೆ, ಪದ್ಯಕಾವ್ಯಗಳಲ್ಲಿ 'ವರನಂದೀ ಕಲ್ಯಾಣ' ವೇ ದೊಡ್ಡದು. 'ವರನಂದೀಕಲ್ಯಾಣ'ದಲ್ಲಿ ೭ ಸಂಧಿ ೮೮೧ ಪದ್ಯಗಳಿವೆ; 'ವೆಂಕಟಾಚಲ ಮಾಹಾತ್ಮ್ಯ ಲಾಲೀಪದ'ದಲ್ಲಿ ೨೦೩ ಚೌಪದಿಗಳಿವೆ; ಅಮ್ಮನವರ ಮೇಲಣ ಲಾಲೀಪದದಲ್ಲಿ ೩೫ ಚೌಪದಿಗಳಿವೆ; ಚೆಲುವನಾರಾಯಣನ ಕಥೆಯನ್ನು ಮಂಗಳಾರತಿ ಪದಗಳಲ್ಲಿ ಹೇಳಿರುವ ೫ ಪದ್ಯಗಳ ಮಂಗಳಾರತಿ ಪದವೇ ಚೆಲುವಾಂಬೆಯ ಅತ್ಯಂತ ಚಿಕ್ಕ ಕೃತಿ. ಚೆಲುವಾಂಬೆಯು ವಿದ್ವತ್ ಕವಯಿತ್ರಿಯೇನಲ್ಲ; ಸಾಂಗತ್ಯ, ಚೌಪದ, ಶೋಭಾನೆ ಪದಗಳನ್ನು ಸೃಜಿಸಬಲ್ಲ ಸಾಮರ್ಥ್ಯವುಳ್ಳ ಲೇಖಕಿ. ಬಿಡಿಬಿಡಿಯಾದ ಕನ್ನಡ ಪದ, ಸರಳವಾದ ಶೈಲಿ, ಅರ್ಥವ್ಯಕ್ತಿಯಿರುವ ನಿರೂಪಣೆ ಈಕೆಯ ಕೃತಿಗಳ ಗುಣಗಳು. 'ವರನಂದೀ ಕಲ್ಯಾಣ'ದ ವಸ್ತುವಿನ ಆಯ್ಕೆ, ನಾವೀನ್ಯ ಉಲ್ಲೇಖನ ಯೋಗ್ಯ. ನಳಿನಿಯಿಲ್ಲದ ತಂಗೊಳ, ಹೆಣ್ದುಂಬಿ ಬಳಸದ ಹೂದೋಟ, ಕಳಹಂಸೆಯಿಲ್ಲದ ಕಮಳದಂತೆ ''ಮನೆಕಂಗೊಳಿಸದು ಸುತೆಯಿಲ್ಲದಿರಲು''.(೧-೨೬)ಎಂಬ ಕಲ್ಪನೆಯ ತಿರುವಾಗಲಿ, ''ಈ ಮದನನು ಹೆಂಗೊಲೆಗೆಂದೇ ಪುಟ್ಟಿದನೇ... (೫-೨೮). ''ಅಂತಕ ಕಂತುಗಳಿಗೆ ಭೇದಮಿನಿತು। ಟೆಂತೆನೆ ಪಾಪಿ ಮಾತ್ರನನು ಕುಂತದಿಂ ಯಮನು ಕೊಲ್ವನು ಮಾರನು। ಪುಣ್ಯವಂತರೆನ್ನದೆ ಸದೆಯುವನು'' (೫-೨೯) ಎಂಬ ವರನಂದಿಯ ವಿರಹಕಲ್ಪನಾಚಿತ್ರಗಳಾಗಲಿ ಕವಯಿತ್ರಿಯ ಪ್ರತಿಭಾದ್ಯೋತಕವಾಗಿದೆ. ವರನಂದಿಯ ಯೌವನವನ್ನು ವರ್ಣಿಸುವಾಗ ''ನೋಡುವ ನೈದಿಲುಗಳೊ ಕಂಗಳೊ ಮಾತಾಡುವ ಮುಕರವೊ ಮೊಗವೊ'' ''ಪಾಡುತಿರುವ ಪೊಂಬಣ್ಣದ ಶಂಖವೋ ಗಾಡಿಕಾತಿಯ ನುಗ್ಗೊರಲೊ'' (೧-೬೯) ಎಂಬ ವರ್ಣನೆ ಪೂರ್ವಕಾವ್ಯಗಳನ್ನು ಎಷ್ಟೇ ನೆನಪಿಗೆ ತಂದರೂ ಕಣ್ಸೆಳೆವುದು ಮಾತ್ರ ದಿಟ. ತಿರುಪತಿ ಬೆಟ್ಟದ ಭೂಗೋಳದ ವರ್ಣನೆ, ಅಲಮೇಲಮ್ಮನ ನಖಶಿಖಾಂತ ವರ್ಣನೆ ಅವಳ ಎರಡು ಲಾಲಿಪದಗಳ ವಸ್ತು. ಈಕೆ ತನ್ನ ಕೃತಿಗಳಲ್ಲಿ ಸ್ತ್ರೀಯ ಅಡಿ-ನಡು-ಮುಡಿಗಳನ್ನು ನಿಸ್ಸಂಕೋಚವಾಗಿ ದೀರ್ಘವಾಗಿ ವರ್ಣಿಸಿರುವುದು ಸ್ತ್ರೀಸಾಹಿತಿಯಾಗಿಯೂ ಈಕೆಗೆ ಸಂಕೋಚ, ಮುಜುಗರ ಕಾಡಲಿಲ್ಲವೇ ಎನಿಸುತ್ತದೆ. ಸಂಪ್ರದಾಯ ಶರಣೆಯಾಗಿದ್ದೇನೆ ಎಂದು ಎಷ್ಟೇ ಹೇಳಿದರೂ ಹೊನ್ನಮ್ಮನಂತೆ ಹೊರಳುವ ದಾರಿಯಲ್ಲಿ ಹೋಗಲವಕಾಶವಿತ್ತೆಂಬುದಂತೂ ದಿಟ. ಆಗ್ನೇಯ ಪುರಾಣೋಕ್ತ ಸಂಸ್ಕೃತದ 'ತುಲಾಕಾವೇರೀ ಮಾಹಾತ್ಮ್ಯ'ದ

ಕನ್ನಡ ಟೀಕು ಈಕೆಯ ಮಾಹಾತ್ಮ್ಯದ ಗದ್ಯಕೃತಿ. ಮೂಲಾನುಸಾರಿಯೂ ವಿಷಯನಿಷ್ಠವೂ ಆಗಿರುವ ಈ ಗದ್ಯ ತತ್ಕಾಲದ ವ್ಯಾಖ್ಯಾನಗದ್ಯಕ್ಕೆ ಅನುಸಾರವಾಗಿದೆ. ಮುನಿಯೊಬ್ಬನು ಶಿಷ್ಯವೃಂದಕ್ಕೆ ಕಥೆ ಹೇಳುವ ಧಾಟಿಯಲ್ಲೇ, ಶೌನಕಮುನಿ ಸೂತಪುರಾಣಿಕನಿಗೆ ನಿರೂಪಿಸುವ ವಿಧಾನದಲ್ಲಿ ಇಲ್ಲಿಯ ಕೃತಿ ನಿರ್ವಹಿತವಾಗಿದೆ. 'ಬನ್ನಿರೈ ಋಷಿಗಳಿರಾ', ಕೇಳೌ ಅರಸೆ, ಬಾರೈ ಸರ್ಪವೆ, ಕೇಳೌ ದ್ರೌಪದಿಯೆ, ಬಾರೈ ಕ್ರೀಡಾಸಕ್ತೆಯಾಗಿರುವಂಥ ಕಾವೇರಿಯೇ ಇತ್ಯಾದಿ ಸಂಬೋಧನ ವಾಚಕಗಳು ಕೃತಿಯುದ್ದಕ್ಕೂ ಯಥೇಷ್ಟವಾಗಿವೆ. ಪಾಂಡವರ, ರಾಮನ, ಅಗಸ್ತ್ಯನ, ಏಕಾದಶಿವ್ರತ ಮಹಿಮೆಯ, ಸ್ವರ್ಗ-ನರಕಗಳ ಹೀಗೆ ಅಸಂಬಂಧಿತವಾದ ವಿಷಯಗಳನ್ನು ಹೇಗೋ ಕೊಂಡಿಗೊಳಿಸಿ ಪುರಾಣಪ್ರಪಂಚದ ವಿವರ ತರಲಾಗಿದೆ. ಸಾವಧಾನ ಚಿತ್ತದಿಂದಿರು, ಸಾವಧಾನನಾಗು, ಸಾವಧಾನವಾಗಿ ಹೇಳುವೆ- ಈ ಮಾತುಗಳು ಕೃತಿಯ ಮಂದಗತಿಸೂಚಕವಾಗಿವೆ. ಇದಕ್ಕೆ ವಿರುದ್ಧವಾಗಿ ರಂಗಯ್ಯ ತನ್ನ 'ಕಾವೇರಿ ಮಾಹಾತ್ಮ್ಯ' ಷಟ್ಪದೀ ಕೃತಿಯಲ್ಲಿ ''ಶೃಂಗಾರಾದಿ ರಸೋಜ್ವಲ ಭಾವಗರ್ಭಿತ ಲಲಿತಪದ ವಿಶಿಷ್ಟಾದಶವರ್ಣನಾತ್ಮಕ ವೃತ್ತಿರೀತಿ ಗುಣಾಲಂಕಾರ ಲಕ್ಷಣಲಕ್ಷಿತ ಮುಕ್ತಪದಗ್ರಸ್ತ ಸರ್ವಲಘು ಪ್ರಶಸ್ತ ಯುಗಳೋಚ್ಚರಣ ಪ್ರಾಕೃತಪ್ರತ್ಯಯ ಪ್ರಾಸಾನುಪ್ರಾಸಭೇದ ವಿಸಂಧಿ ಪೌನುರುಕ್ತ್ಯಾದಿ ದೋಷ ವಿವರ್ಜಿತಾರ್ಥಗೌರವಶಬ್ದ ಶ್ಲೇಷೋತ್ಪ್ರೇಕ್ಷಾದಿಮೋಹನೀಕೃತ'' ವಾಗಿದೆ - ಎಂದು ಪ್ರಶಂಸಿಸಿಕೊಂಡಿದ್ದಾನೆ. ಇದು ಕೃತಿಯ ಒಳಹೊಕ್ಕು ಪರಿಶೀಲಿಸಬೇಕಾದ ಸಂಗತಿ.

೪

ಕಳಲೆಯ ದಳವಾಯಿಗಳಲ್ಲಿ ಎಲ್ಲ ದೃಷ್ಟಿಗಳಿಂದಲೂ ಪ್ರತ್ಯೇಕ ಉಲ್ಲೇಖ ಹಾಗೂ ಪರಿಶೀಲನೆಗಳಿಗೆ ಅರ್ಹನಾದವನು ನಾಲ್ಕನೆಯ ನಂಜರಾಜ. ಈತ ಇತಿಹಾಸದಲ್ಲಿ ಕರಾಚೂರಿ ನಂಜರಾಜಯ್ಯನೆಂದು ಖ್ಯಾತನಾಗಿದ್ದರೆ ಕನ್ನಡ ಸಾಹಿತ್ಯದಲ್ಲಿ ಕಳಲೆಯ ನಂಜರಾಜನೆಂದೇ ಹೆಸರಾಗಿದ್ದಾನೆ. ಸ್ವತಃ ಸಾಹಿತಿಯಾಗಿದ್ದ ಈತ ಕವಿಜನ ಪೋಷಕನೂ ಆಗಿದ್ದ. 'ಸೌಂದರಕಾವ್ಯ' ಬರೆದ ನೂರೊಂದಯ್ಯ, ಚಂಪೂ ಪ್ರಕಾರದಲ್ಲಿ 'ಹಾಲಾಸ್ಯ ಮಾಹಾತ್ಮ್ಯ' ಬರೆದ ವೆಂಕಟೇಶ, ಪ್ರಾಯಶಃ 'ಲಿಂಗಪುರಾಣ' ಬರೆದ ಕಳಲೆ ಲಿಂಗರಾಜ ಈತನ ಆಶ್ರಿತರಾದ ಕನ್ನಡ ಕವಿಗಳು. 'ಸೌಂದರಕಾವ್ಯ' ವನ್ನುಳಿದು ಇತರರ ಕೃತಿಗಳು ಈಗ ನಮಗೆ ದೊರೆಯದಾಗಿವೆ. ಕಳಲೆಯ ನಂಜರಾಜನ ಸಾಹಿತ್ಯವೇ ಈ ಮನೆತನದ ಸಾಹಿತ್ಯಕ ಪರಿಶೀಲನೆಯ ಎರಡನೆಯ ಹಂತ. ಸಕಲಕಲಾನಿಧಿ, ಸಾರಾಸಾರವಿವೇಚನಾಚತುರ, ಶ್ರೀ ನಂಜರಾಜೋ ನವ ಭೋಜರಾಜಃ, ನೂತನ ಭೋಜರಾಜ ಎಂದು ಸಂಸ್ಕೃತ ಕೃತಿಗಳಲ್ಲಿ ಈತನನ್ನು ಹೊಗಳಿದ್ದರೆ, ಉಭಯ ಕವಿತಾ ವಿಶಾರದ, ಗೀರ್ವಾಣಾಂಧ್ರ ಕರ್ಣಾಟಕಾದಿ ಕಲಾಕೋವಿದ, ನೂತನ ಭೋಜರಾಜ, ನಾನಾ ಭಾಷಾ ವಿಶೇಷಕಾವ್ಯರಚನಾ ಚಾತುರೀಧುರೀಣ, ಶಿವಾಗಮ ನಿಗಮುದರ್ಥವನರಿದವ, ಗರಳ ಪುರಾಧಿನಾಥ ಚರಣಾರವಿಂದ ಸೇವಾ ಸಮಾಸಾದಿತ ಎಂದು ಈತನನ್ನು ಕನ್ನಡ ಕೃತಿಗಳು ಹೊಗಳಿವೆ. ಈ ಹೊಗಳಿಕೆಗನುಗುಣವಾಗಿ ಈತನ ಹೆಸರಿನಲ್ಲಿ ಹಲವಾರು ಕನ್ನಡ ಕೃತಿಗಳು ದೊರೆತಿವೆ.

ಕಳಲೆ ನಂಜರಾಜನ ಕೃತಿಗಳ ವಿಷಯದಲ್ಲಿರುವ ದೊಡ್ಡ ಸಮಸ್ಯೆ ಆತನ ಕೃತಿ ಸಂಖ್ಯೆಯ ನಿಶ್ಚಯ. ಕವಿಚರಿತೆಕಾರರು ಈತನ ೧೭ ಕೃತಿಗಳನ್ನು ಹೆಸರಿಸಿದ್ದರೂ ಕೃತಿಸಂಖ್ಯೆಯ ಬಗ್ಗೆ ಏನೂ ಹೇಳಿಲ್ಲ. ೧೭೩೪-೪೨, ೧೭೪೨-೧೭೫೧, ೧೭೫೧-೧೭೬೧ ಹೀಗೆ ಮೂರು ಹಂತಗಳಲ್ಲಿ ಈತ ತನ್ನ ಕೃತಿಗಳನ್ನು ರಚಿಸಿರಬೇಕು ಎಂದು ಪ್ರತಿಕಾಲಾವಧಿಯ ಕೃತಿಗಳನ್ನು ಉಲ್ಲೇಖಿಸಿರುವ ಹಯವದನರಾಯರು ಕೂಡ ಈತನ ಒಟ್ಟು ಕೃತಿಗಳನ್ನು ಹೇಳಿಲ್ಲ. ಅವರು ಭಾರತದ ಬೇರೆ ಬೇರೆ ಪರ್ವಗಳನ್ನು ಒಳಗೊಂಡಂತೆ ೧೮ ಕೃತಿಗಳನ್ನು ಉಲ್ಲೇಖಿಸಿರುತ್ತಾರೆ. ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿ ವಿಭಾಗದಲ್ಲಿ ಸಂಗ್ರಹಿತವಾಗಿರುವ ಕೃತಿಸಂಖ್ಯೆಯಾದರೂ ಇಷ್ಟೇ ಆಗಿದೆ. ಆದರೆ ಇದಕ್ಕೆ ವ್ಯತಿರಿಕ್ತವಾಗಿ ಕೆ.ಸಿ. ನಂಜುಂಡಾರಾಧ್ಯರು ತಾವು

೧೯೪೦ರಲ್ಲಿ ಬರೆದ 'ಕಳಲೆ ಅರಸುಗಳ ವಂಶಾವಳಿ'ಯಲ್ಲಿ ಈತನ ೩೫ ಕನ್ನಡ ಕೃತಿಗಳನ್ನು ಪಟ್ಟಿ ಹಾಕಿದ್ದಾರೆ; ೧೪ ತೆಲುಗಿನ ಕೃತಿಗಳನ್ನೂ ೨ ಸಂಸ್ಕೃತ ಕೃತಿಗಳನ್ನೂ ಪಟ್ಟಿ ಹಾಕಿದ್ದಾರೆ. ಇದನ್ನು ಅವರು ಹೇಗೆ ನಿರ್ಣಯಿಸಿದರೋ ತಿಳಿಯುವುದಿಲ್ಲ; ಇವನ ಹೆಸರಿನಲ್ಲಿ ಅವರು ಪಟ್ಟಿ ಹಾಕಿರುವ ದಕ್ಷಾಧ್ವರ ಕಥೆ, ದಾನವ ವ್ರತಕಥೆ, ದ್ರೌಪದೀಕಾವ್ಯ, ದೂರ್ವಾಸಭೋಜನ, ವೆಂಕಟೇಶ ಮಾಹಾತ್ಮ್ಯ, ಶ್ರೀರಂಗ ಚರಿತ್ರೆ, ಸಮುದ್ರ ಮಥನ, ಹರಿವಂಶ ಮುಂತಾದವಾವೂ ಈಗ ದೊರೆಯುತ್ತಿಲ್ಲ. ಈಗಿನ ಮಟ್ಟಿಗೆ ಈತನ ೧೮ ಕೃತಿಗಳು ಲಭ್ಯವಾಗಿವೆ. ಅವುಗಳಲ್ಲಿ 'ಹಾಲಾಸ್ಯ ಮಾಹಾತ್ಮ್ಯ'ವೊಂದನ್ನುಳಿದು ಬೇರೆ ಯಾವ ಕೃತಿಯೂ ಮುದ್ರಣಭಾಗ್ಯ ಪಡೆದಿಲ್ಲ. ಇದೊಂದು ವ್ಯಥೆಯ ಸಂಗತಿಯೇ ಸರಿ.

ದೊರೆತಿರುವ ನಂಜರಾಜನ ಕೃತಿಗಳನ್ನು ಮೂರು ಗುಂಪುಗಳಾಗಿ ಹೀಗೆ ವರ್ಗೀಕರಿಸಬಹುದು: I ಕ್ಷೇತ್ರಮಾಹಾತ್ಮ್ಯಗಳು: ೧) ಕಕುದ್ಗಿರಿ ಮಾಹಾತ್ಮ್ಯ ೨) ಗರಳಪುರಿ ಮಹಿಮಾದರ್ಶ ೩) ಭದ್ರಗಿರಿ ಮಾಹಾತ್ಮ್ಯ ೪) ಸೇತುಮಹಿಮಾದರ್ಶ ೫) ಕಾಶೀಮಹಿಮಾರ್ಥ ದರ್ಪಣ; II ಶಿವನ ಅಥವಾ ಶಿವಭಕ್ತರ ಮಾಹಾತ್ಮ್ಯ ಚರಿತ್ರೆಗಳು : ೧) ಭಕ್ತವಿಲಾಸ ದರ್ಪಣ ೨) ಶಿವಭಕ್ತ ವಿಲಾಸ ದರ್ಪಣ ೩) ಹರದತ್ತಾಚಾರ್ಯ ಚಾರಿತ್ರ ೪) ಹಾಲಾಸ್ಯ ಮಾಹಾತ್ಮ್ಯ ೫) ಅರುವತ್ತು ಮೂವರ ತ್ರಿವಿಧಿ; III ಟೀಕೆ, ವ್ಯಾಖ್ಯಾನಗಳು: ೧) ಭಾರತ ತಾತ್ಪರ್ಯ ಟೀಕೆ, ೨) ಮಾರ್ಕಂಡೇಯ ಪುರಾಣಾರ್ಥ ದೀಪಿಕೆ ೩) ಶಿವಧರ್ಮೋತ್ತರ ಟೀಕು ೪) ವಿಘ್ನೇಶ್ವರ ವ್ರತಕಲ್ಪದ ಟೀಕು ೫) ಶಿವಗೀತೆ ೬) ಲಿಂಗಪುರಾಣ ೭) ಹರಿವಂಶ. ಈ ಕೃತಿ ಸಮೂಹದಲ್ಲಿ ಅರುವತ್ತು ಮೂವರ ತ್ರಿವಿಧಿಯೊಂದನ್ನುಳಿದ ಇತರ ಕೃತಿಗಳೆಲ್ಲವೂ ಗದ್ಯರೂಪದಲ್ಲಿವೆ. ಅರವತ್ತು ಮೂವರ ತ್ರಿವಿಧಿಯಾದರೂ ತ್ರಿಪದಿಯಲ್ಲಿಲ್ಲದೆ ಚೌಪದಿಯಲ್ಲಿದೆ. ಶೈವ ಸಾಹಿತ್ಯದಲ್ಲಿ ಈ ತ್ರಿವಿಧಿ ನಂಜರಾಜನ ಅತ್ಯಂತ ಕಿರುಕೃತಿ; ೧೫೮ ಅಧ್ಯಾಯಗಳಿರುವ 'ಲಿಂಗಪುರಾಣ' ಆತನ ಅತ್ಯಂತ ದೊಡ್ಡ ಕೃತಿ. ಆತನ ಇತರ ಕೃತಿಗಳಾದರೂ ಗಾತ್ರದಲ್ಲಿ ಗಣ್ಯವಾದವೇ. 'ಶಿವಭಕ್ತವಿಲಾಸದರ್ಪಣ' ೯೦ ಅಧ್ಯಾಯಗಳ ಕೃತಿ, ಹಾಲಾಸ್ಯ ಮಾಹಾತ್ಮ್ಯ ೭೧ ಅಧ್ಯಾಯಗಳ ಕೃತಿ, ಸೇತುಮಹಿಮಾದರ್ಶ ೫೨ ಅಧ್ಯಾಯಗಳ ಕೃತಿ, ಶಿವಧರ್ಮೋತ್ತರ ವಚನ ೫೦ ಅಧ್ಯಾಯಗಳ ವ್ಯಾಖ್ಯಾನ. ವಿಷ್ಣು ಪರವಾದ ಕೃತಿಗಳಲ್ಲಿ 'ಭಾರತತಾತ್ಪರ್ಯಟೀಕೆ', ಆದಿ,ಸಭಾ, ದ್ರೋಣ, ಶಲ್ಯ, ಸೌಪ್ತಿಕ, ಅನುಶಾಸನ ಪರ್ವಗಳ ಮೂನ್ನೂರಕ್ಕೂ ಮೀರಿದ ಅಧ್ಯಾಯಗಳ ವ್ಯಾಖ್ಯಾನವಾಗಿದೆ. ಹರಿವಂಶದ್ದು ೧೦೧ ಅಧ್ಯಾಯಗಳ ವ್ಯಾಖ್ಯಾನ. ಕ್ಷೇತ್ರ ಮಾಹಾತ್ಮ್ಯಗಳು ೧೨ರಿಂದ ೨೦ ಅಧ್ಯಾಯಗಳವರೆಗೆ ವ್ಯಾಪಿಸಿವೆ. ಈ ಕೃತಿಗಳ ಗ್ರಂಥ ಪ್ರಮಾಣ ಕೊಡುವ ಉದ್ದೇಶವಿಷ್ಟೆ: ನಂಜರಾಜನ ಸಾಹಿತ್ಯದ ಸೇವೆಯ ಗಾತ್ರ, ವ್ಯಾಪ್ತಿಗಳು ಘನೋದ್ದೇಶವಾದುವು - ಎಂಬುದನ್ನು ತಿಳಿಸಲು.

ನಂಜರಾಜ ಈ ಕೃತಿಗಳಿಗೆ ಖಚಿತವಾದ ಸಂಸ್ಕೃತ ಮೂಲಗಳನ್ನು ಹೊಂದಿದ್ದಾನೆ. ಈತನ ಬಹುಪಾಲು ಕೃತಿಗಳಿಗೆ ಸ್ಕಾಂದಪುರಾಣ ಮೂಲವಾಗಿದೆ. ಹಾಲಾಸ್ಯ, ಭದ್ರಗಿರಿ, ಸೇತುಮಹಿಮೆ, ಶಿವಧರ್ಮೋತ್ತರ, ವಿಘ್ನೇಶ್ವರ ವ್ರತ ಕಲ್ಪವನ್ನು ಕುರಿತ ಕೃತಿ ಮೂಲಗಳು ಸ್ಕಾಂದಪುರಾಣದಲ್ಲಿವೆ. ಪದ್ಮಪುರಾಣ, ಭವಿಷ್ಯೋತ್ತರ ಪುರಾಣಗಳಿಂದ ಶಿವಗೀತೆ ಹಾಗೂ ಹರದತ್ತಾಚಾರ್ಯ ಚಾರಿತ್ರಗಳನ್ನು ಕನ್ನಡಿಸಿದ್ದಾನೆ. ನಂಜರಾಜನ ಈ ಕೃತಿಗಳೇ ಆತನ ಶಿವಪರ ಮನೋಧರ್ಮವನ್ನು, ಆತನ ಶಿವನಿಷ್ಠೆಯನ್ನೂ ಪ್ರಕಟಪಡಿಸುತ್ತವೆ. ನಂಜನಗೂಡಿನಲ್ಲಿ ೬೩ ಪುರಾತನರ ವಿಗ್ರಹಗಳನ್ನು ನಿರ್ಮಿಸಿದ್ದು, ಬೆಟ್ಟದಪುರದ ಮಲ್ಲಿಕಾರ್ಜುನ ದೇವಾಲಯದಲ್ಲಿ ತಾಂಡವೇಶ್ವರ ಚಂಡಿಕಾಂಬಿಕೆಯರ ವಿಗ್ರಹಗಳನ್ನು ಸ್ಥಾಪಿಸಿದ್ದು, ಇಂಥವನ್ನೇ ತಲಕಾಡಿನ ವೈದ್ಯೇಶ್ವರ ದೇವಾಲಯದಲ್ಲಿ ನಿರ್ಮಿಸಿದ್ದು, ಹರದನಹಳ್ಳಿಯ ದಿವ್ಯಲಿಂಗೇಶ್ವರ ದೇವಾಲಯದ ಮನೋನ್ಮಣಿದೇವಿ ಹಾಗೂ ತಿರುಮಕೂಡಲಿನ ಅಗಸ್ತ್ಯೇಶ್ವರ ದೇವಾಲಯದ ಸರ್ವಮಂಗಳಾದೇವಿಗೆ ಬಿಟ್ಟ ದತ್ತಿಗಳು ನಂಜರಾಜನ ಶೈವಧರ್ಮ ಪೋಷಣೆಯ ಕುರುಹಾಗಿವೆ. ಆದ್ದರಿಂದ ನಂಜರಾಜನ ಕೃತಿ ಸಮೂಹದಲ್ಲಿ ಶಿವಪ್ರಾಧಾನ್ಯ ವಸ್ತು ದೊರೆವುದು ಸಹಜವಾಗಿವೆ.

ನಂಜರಾಜನ ಗದ್ಯ ಕೃತಿಗಳು ಟೀಕು, ವ್ಯಾಖ್ಯಾನ, ಕರ್ಣಾಟಕ ಟಿಪ್ಪಣಿ ಎಂದೆಲ್ಲ ಕರೆಸಿಕೊಂಡಿದ್ದರೂ ಬಲುಮಟ್ಟಿಗೆ ಅವು ಸಂಸ್ಕೃತ ಕೃತಿಗಳ ನೇರಾನುವಾದವೋ, ಸಂಗ್ರಹಾನುವಾದವೋ ಆಗಿವೆ ಎನ್ನಲಡ್ಡಿಯಿಲ್ಲ. ಇತರ ಪುರಾಣಗಳು, ಪುರಾಣಭಾಗಗಳು ಇರುವಂತೆಯೇ ಇವೂ ಇವೆ. ವಿಪ್ರರನ್ನೂ, ಮುನಿಗಳನ್ನೂ, ಶಿಷ್ಯವೃಂದವನ್ನೂ ಉದ್ದೇಶಿಸಿ ನಾರದನೋ ಬ್ರಹ್ಮನೋ ವೃತ್ತಾಂತ ನಿರೂಪಣೆ ಮಾಡುವಂತೆಯೇ ಸೂತಪುರಾಣಿಕ ಶೌನಕಾದಿ ಮಹಾಮುನಿಯನ್ನು ಉದ್ದೇಶಿಸಿ ವೃತ್ತಾಂತ ನಿರೂಪಣೆ ಮಾಡುವಂತೆಯೇ ಈ ಕೃತಿಗಳ ಚೌಕಟ್ಟಿರುತ್ತವೆ. ಸಂಬೋಧನೆಯ ವಾಚಕಗಳು, ಕಥೋಪಕಥೆಗಳು ಇಲ್ಲಿ ಅರ್ಥಪೂರ್ಣವಾಗಿಯೂ ನಿರರ್ಥಕವಾಗಿಯೂ ಸೇರಿಬಂದಿರುವುದುಂಟು. ಬಗೆಬಗೆಯಾದ ಸ್ಥಳಪುರಾಣಗಳೂ, ಐತಿಹ್ಯಗಳೂ, ದಂತಕಥೆಗಳೂ, ಸ್ವಕಪೋಲಕಲ್ಪನೆಗಳೂ ಕೃತಿಗಳಲ್ಲಿ ಇಡಿಕಿರಿದಿವೆ. 'ಕಕುದ್ಗಿರಿ ಮಾಹಾತ್ಮ್ಯ'ದ ಪಾಂಚಾಲರಾಯನ ವೃತ್ತಾಂತ, ಗರಳಪುರಿ ಮಾಹಾತ್ಮ್ಯದ ಸಗರನ ಕಥೆ, ಲಕ್ಷ್ಮೀನಾರಾಯಣ ವಿವಾಹ ವೃತ್ತಾಂತ, ಭದ್ರಗಿರಿ ಮಾಹಾತ್ಮ್ಯದ ದೀರ್ಘಜಿಹ್ವ-ಜಾಂಬವಂತರ ಸಮರಗಳನ್ನು ಇಲ್ಲಿ ನಿದರ್ಶನಾರ್ಥ ಉಲ್ಲೇಖಿಸಬಹುದು. ಇಲ್ಲಿಯ ನಿರೂಪಣ ಭಾಗ ಹೇಗಿರುತ್ತದೆನ್ನಲು 'ಭದ್ರಗಿರಿ ಮಾಹಾತ್ಮ್ಯ'ದ ಈ ಭಾಗ ಉಲ್ಲೇಖಿಸಬಹುದು:

ವೃಷಭಾಕಾರವಾಗಿ ಮುಂಭಾಗದಲ್ಲಿ ಉನ್ನತ ಸುವರ್ಣಶಿಖರಗಳಿಂದ ಯುಕ್ತವಾಗಿ ಈ ಗಿರಿ ಕಾಣುತ್ತದೆ. ಆದರಿಂದ ವೃಷಭಾಚಲವೆಂದು ಪ್ರಖ್ಯಾತವಾಗಿ ಈಗಲೂ ಎರಡು ಯೋಜನೆ ಚಂಪಾಕಾರಣ್ಯವಿರುತ್ತದೆ. ಈ ಗಿರಿಯ ಮೇಲುಭಾಗದಲ್ಲಿಯೂ ಚಂಪಕ ವೃಕ್ಷಗಳಿರುವುದರಿಂದ ಈ ಗಿರಿ ಚಂಪಾಕಾಚಲವೆಂದು ಹೇಳಲ್ಪಡುವುದು. ಒಂದು ಸಾರಿ ದರ್ಶನ ಮಾತ್ರದಿಂದಲೇ ಸಕಲ ಪ್ರಾಣಿಗಳಿಗೆ ಪುಣ್ಯವುಂಟುಮಾಡುವದಾದ ಕಾರಣ ಭದ್ರಾದ್ರಿಯೆಂದು ಹೇಳಲ್ಪಡುವುದು. ಪರಮೇಶ್ವರನು ಕೃಪೆಯಿಂದ ಕಿವುಡನಿಗೆ ಪ್ರಸನ್ನನಾದನು ಈ ಪರ್ವತದಲ್ಲಿ. ಅದು ಕಾರಣ ಈ ಗಿರಿ ಬಧಿರಾದ್ರಿಯೆಂದು ಹೇಳಲ್ಪಡುವುದು. ಈ ಪರ್ವತದಲ್ಲಿಯೇ ಶಿವನು ಗಾಥೇಯ ರೂಪದಿಂದ ಲೀಲೆಯಿಂದಾಕ್ರೀಡಿಸುವನು. ಅದು ಕಾರಣ ಪರ್ವತಗಳಲ್ಲಿ ಈ ಗಿರಿ ಗಾಥೇಯ ಪರ್ವತವೆಂದು ಹೇಳಲ್ಪಡುವುದು. ವೃಷಭಾಚಲವೆಂದು ಚಂಪಕಾದ್ರಿಯೆಂದು ಬಧಿರಾಚಲವೆಂದು ಗಾಥೇಯಾದ್ರಿಯೆಂದು ಆ ಗಿರಿ ಐದು ನಾಮಗಳಿಂದ ಪ್ರಖ್ಯಾತವಾಗಿಹುದು (ಪು. ೨೦).

ಕಪಿಲ ಮುನಿಯಿಂದ ಕಪಿಲಾನದಿ ಜನಿಸಿತೆಂಬ ಗರಳಪುರಿ ಮಹಿಮೆಯ ಭಾಗವಾದರೂ ಹೀಗೆಯೇ: ''ಆಗಾ ಕಪಿಲಮುನಿಯು ಅಮೃತಸಮನಾದ ಶಿವನ ವಚನಮಂ ಕೇಳಿ ಆಗ ಸ್ವಸ್ವರೂಪವಂ ಧ್ಯಾನಿಸಿ ಹರ್ಷವಂ ಪಡೆದನು. ಬಳಿಕಾ ಧ್ಯಾನದಿಂದಾ ಮುನಿಯು ಅಮೃತಕುಂಭವಂ ಪಡೆದು ಆ ಅಮೃತದಿಂದ ಸರ್ವಾಂಗವು ನೆನೆದುದು. ಆ ಅಮೃತಭೂಮಿಯೊಳಿದ್ದ ಆ ದಿವ್ಯಮಾದ ಅಮೃತವು ಮಹತ್ತಾದ ತುಲಶೀದ್ರಲವಾದುದು. ಆ ತುಲಸೀ ಮೂಲದಲ್ಲಿ ಒಂದಾನೊಂದು ಶುಭ ಜಲವುಳ್ಳ ಉತ್ತಮವಾದ ನದಿ ಜನಿಸಿತು. ಅದು ಶಿವಪ್ರಸಾದದಿಂದ ಕಪಿಲೆಯೆಂಬ ಪೆಸರುಳ್ಳುದು. ಮುಕ್ತಿಪ್ರದವಾದುದೂ ಆ ನಿತ್ಯದಲ್ಲಿಯೂ ಪೂರ್ಣಮಾದ ಜಲವುಳ್ಳದ್ದು, ಪುಣ್ಯಪ್ರದಮಾದುದು ಸಕಲಪಾಪಂಗಳ ಸಮೂಹವ ಪರಿಹರಿಪುದು.....''

ಗರಳಪುರಿ ಮಹಿಮೆಯನ್ನು ನಿರೂಪಿಸುವ ಈ ಕೃತಿಗೆ ಸ್ಕಾಂದಪುರಾಣವೇ ಮೂಲ. ಉಮಾಮಹೇಶ್ವರ ಸಂವಾದ, ಕಪಿಲೋತ್ಪತ್ತಿ ವರ್ಣನ, ಕಪಿಲಾನದಿ ಪ್ರಭಾವಕಥನ, ಕೌಂಡಿನೀ ನದಿಯ ವ್ಯುತ್ಪತ್ತಿ ಕಥನ, ಮಣಿಕರ್ಣಿಕಾ ಮಹತ್ವ ವರ್ಣನೆ, ಲಕ್ಷ್ಮೀನಾರಾಯಣ ವಿವಾಹ, ಪರಶುರಾಮೋಪಾಖ್ಯಾನ, ಪರಶುರಾಮ ಕ್ಷೇತ್ರಕಥನ, ಗೌತಮಕ್ಷೇತ್ರ ವರ್ಣನೆಗಳಿಂದ ಈ ಮಾಹಾತ್ಮ್ಯವನ್ನು ಕವಿಯು ಉದ್ದೇಶಪೂರ್ವಕವಾಗಿ ಕನ್ನಡಿಸಿರುವಂತಿದೆ. ಏಕೆಂದರೆ ಸು. ೧೭೬೩ ರ ಹೊತ್ತಿಗೆ ಆರಂಭಿಸಿದ ನಂಜರಾಜ ತಿರುನಾಳ್ ಹಬ್ಬದ ನೆನಪಿಗಾಗಿ ನಂಜರಾಜ ಇದನ್ನು ಪೂರೈಸಿರಬೇಕು. ಇದೇನಿದ್ದರೂ ಶುದ್ಧ ಸಾಹಿತ್ಯ ಮೌಲ್ಯದ ದೃಷ್ಟಿಯಿಂದ ಈ ಕೃತಿಗಳು ಮಹತ್ವಪೂರ್ಣವೆನಿಸಿಕೊಳ್ಳುವುದಿಲ್ಲ.

ಈ ದಿಕ್ಕಿನಲ್ಲಿ ನಿಜಕ್ಕೂ ತಪ್ಪದೆ ಉಲ್ಲೇಖಿಸಬೇಕಾದ ಒಂದು ಕೃತಿಯೆಂದರೆ 'ಲಿಂಗಪುರಾಣ'. ಸುಮಾರು ೧೬೦ ಅಧ್ಯಾಯಗಳ ಈ ಬೃಹತ್ಕೃತಿಯನ್ನು ಶೈವಾಗಮ ವಿಶ್ವಕೋಶ ಎಂದು ಬಣ್ಣಿಸಬಹುದು. ಪರಮೇಶ್ವರ ಸ್ವರೂಪ, ಕಾಲನಿರ್ಣಯ, ಅನೇಕರುದ್ರೋತ್ಪತ್ತಿ, ಯೋಗಸಿದ್ಧಿ, ಶಿವನ ಪಂಚಮುಖ ಆವಿರ್ಭಾವ, ಮನ್ವಂತರಗಳು, ಯೋಗಸ್ಥಾನಲಕ್ಷಣ, ಲಿಂಗಾರ್ಚನೆ, ಲಿಂಗಪೂಜಾವಿಧಿ, ಮಾನಸಪೂಜಾಕ್ರಮವೇ ಮುಂತಾದ ವಿಷಯಗಳನ್ನು ಇಲ್ಲಿ ಪದರಪದರವಾಗಿ ವಿವರಿಸಿದೆ. ನಿರಂತರವಾಗಿ ಹರಿಯುವ ಗದ್ಯಪ್ರವಾಹ, ಇಡಿಕಿರಿದಿರುವ ಶೈವಾಗಮ ವರ್ಣನ ಪ್ರಪಂಚ, ಸೂಕ್ಷ್ಮಾತಿಸೂಕ್ಷ್ಮಸಂಗತಿಗಳ ಉಲ್ಲೇಖ, ಕೃತಿಯ ಸಾವಧಾನ ಗತಿ - ಇವುಗಳಿಂದ ಇದೊಂದು ವಿಶಿಷ್ಟರಚನೆ ಎನಿಸಿಕೊಂಡಿದೆ. ನಂಜರಾಜನ ವ್ಯಾಖ್ಯಾನ ಪ್ರತಿಭೆಗೆ ಇದೊಂದು ಉಜ್ವಲ ಉದಾಹರಣೆ. ಇದೇನಿದ್ದರೂ ನಂಜರಾಜನ ಈ ಕೃತಿ ಸಮಸ್ತವನ್ನೂ ನೋಡಿದಾಗ ಅವನ ಶೈವಾಗಮದ ತಿಳಿವು, ಅಪಾರಜ್ಞಾನಸಂಗ್ರಹ, ಕನ್ನಡೀಕರಿಸುವ ಗದ್ಯಾನುವಾದದ ದೈತ್ಯಪ್ರತಿಭೆ ಎಂಥವರನ್ನೂ ದಿಙ್ಮೂಢರನ್ನಾಗಿಸುತ್ತವೆ. ಇವುಗಳ ಉಪಯುಕ್ತತೆ, ಸಾಹಿತ್ಯಿಕ ಮೌಲ್ಯಗಳನ್ನು ಕುರಿತ ಚರ್ಚೆ ಏನೇ ಇರಲಿ ರಾಜಕೀಯ ಮತ್ತು ಆಡಳಿತಗಳಲ್ಲಿ ತನ್ನನ್ನು ಸಂಪೂರ್ಣವಾಗಿ ತೊಡಗಿಸಿಕೊಂಡಿದ್ದ ಒಬ್ಬ ವ್ಯಕ್ತಿಯ ಈ ಬಗೆಯ ಪ್ರಚಂಡ ಸಾಹಿತ್ಯ ಸೃಷ್ಟಿ ಮೆಚ್ಚುಗೆಗೆ ತಕ್ಕುದಾಗಿದೆ.

ಮರೆಯದೆ ಪ್ರಸ್ತಾಪಿಸಬೇಕಾದ ಒಂದು ಕೃತಿ ನೂರೊಂದಯ್ಯನ 'ಸೌಂದರಕಾವ್ಯ'. ಈವರೆಗೂ ಅಚ್ಚಾಗಿಲ್ಲದ ಈ ಕೃತಿಯಲ್ಲಿ ೧೩ ಸಂಧಿಗಳಾಗಿ ವಿಭಜಿತವಾಗಿರುವ ೧೪೭೫ ಪದ್ಯಗಳಿವೆ. ಕೃತಿಯ ನಿರ್ವಹಣಾ ಛಂದಸ್ಸು ಸಾಂಗತ್ಯ. ಕೃತಿಯ ಮೊದಲ ಮೂರು ಸಂಧಿಗಳಲ್ಲಿ ಕೃಷ್ಣರಾಜನ ಆಸ್ಥಾನ ವರ್ಣನೆಯಿದೆ. ತರುವಾಯದ ಸಂಧಿಗಳಲ್ಲಿ ಕವಿ ಕಳಲೆ ದೇವರಾಜನ ಮಾಗಡಿಯ ಆಕ್ರಮಣ, ಕಳಲೆ ನಂಜರಾಜ ಚನ್ನಪಟ್ಟಣದ ಬಳಿ ಮುಸ್ಲಿಮರೊಡನೆ ಯುದ್ಧಮಾಡಿ ವಿಜಯಪಡೆದ ವೃತ್ತಾಂತಗಳಿವೆ. ಮಹಾನವಮಿ-ವಿಜಯದಶಮಿಗಳ ವರ್ಣನಾವಿವರ ಸಂಧಿಗಳೊಂದಿಗೆ ಗ್ರಂಥ ಅಂತ್ಯಗೊಳ್ಳುತ್ತದೆ. ಈ ಕೃತಿಯ ಒಟ್ಟು ವಿನ್ಯಾಸ ಗೋವಿಂದವೈದ್ಯನ 'ಕಂಠೀರವ ನರಸರಾಜ ವಿಜಯ'ದಂತೆಯೇ ಇದೆ. ಅಲ್ಲಿ ೨೬ ಸಂಧಿಗಳಿದ್ದರೆ ಇಲ್ಲಿ ಅದರ ಅರ್ಧವಾದ ೧೩ ಸಂಧಿಗಳು. ಅಲ್ಲಿಯಂತೆಯೇ ಇಲ್ಲಿಯೂ ರಾಜಾಸ್ಥಾನ ವರ್ಣನೆ, ನರ್ತಕಿಯರ ಲಾಸ-ವಿಲಾಸ, ರಾಜನ ದರ್ಬಾರು, ಮುಸ್ಲಿಮ್ ಶತ್ರುಗಳೊಡನೆ ಯುದ್ಧ, ದಸರೆಯ ವರ್ಣನೆ ಇವು ಅನುಕ್ರಮವಾಗಿ ಬಂದಿವೆ. ಅಲ್ಲಿ ಕಂಠೀರವನ ಪ್ರತಾಪಗಳಿದ್ದರೆ, ಇಲ್ಲಿ ದಳವಾಯಿಗಳಾದ ದೇವರಾಜ-ನಂಜರಾಜರ ಸಾಹಸ ಪರಾಕ್ರಮಗಳ ಬಣ್ಣನೆಯಿದೆ. ಗ್ರಂಥದ ಹಲವು ವರ್ಣನೆಗಳು ಗೋವಿಂದವೈದ್ಯನ ಪದ್ಯಗಳನ್ನು ನೆನಪಿಗೆ ತರುತ್ತವೆ. ಸಾಹಿತ್ಯಮೌಲ್ಯದ ದೃಷ್ಟಿಯಿಂದ ಅಷ್ಟೇನೂ ಗಣ್ಯಕೃತಿಯೇನಲ್ಲ.

ಈ ಎರಡೂ ಹಂತಗಳಲ್ಲಿ ರಚಿತವಾದ ಕನ್ನಡ ಸಾಹಿತ್ಯದ ಬಗ್ಗೆ ವಿಶ್ಲೇಷಣಾತ್ಮಕವಾದ ಕೆಲವು ಮಾತುಗಳನ್ನು ಈಗ ಆಡಬಹುದು. ಚಿಕ್ಕದೇವರಾಜನ ಕಾಲದಲ್ಲಿ ಆರಂಭವಾದ ವೈಷ್ಣವಪರವಾದ ಸಾಹಿತ್ಯರಚನೆಯೇ ಕಳಲೆಯ ವೀರರಾಜನ ಕಾಲದಲ್ಲಿ ಕೂಡ ಮುಂದುವರಿದಿದೆ. ಅವನ ಕಾಲದಲ್ಲಿ ಚಿಕುಪಾಧ್ಯಾಯ ಮತ್ತು ತಿಮ್ಮ ಕವಿಗಳು ತಿರುಪತಿ, ಶ್ರೀರಂಗಪಟ್ಟಣ, ಮೇಲುಕೋಟೆ ಕ್ಷೇತ್ರ ಹಾಗೂ ಅವುಗಳ ಅಧಿದೈವಗಳನ್ನು ಆಧರಿಸಿ ಕೃತಿ ರಚಿಸಿದಂತೆ ವೀರರಾಜನ ಅವಧಿಯಲ್ಲಿ ಕೂಡ ಚೆಲುವಾಂಬೆ, ರಂಗಯ್ಯರು ಆ ಕ್ಷೇತ್ರಗಳನ್ನು ಆಧರಿಸಿಯೇ ಕೃತಿ ರಚಿಸಿದ್ದಾರೆ. ಆತನ ಅವಧಿಯಲ್ಲೇ ಕಾಣಬಂದ ಮಾಹಾತ್ಮ್ಯ ಮತ್ತು ಪರಿಣಯ ಕಾವ್ಯಗಳ ಪರಂಪರೆಯೇ ವೀರರಾಜನ ಅವಧಿಯಲ್ಲೂ ಮುಂದುವರಿದಿದೆ. ಶೃಂಗಾರಮ್ಮನ 'ಪದ್ಮಿನೀ ಕಲ್ಯಾಣ' ವೇ ಚೆನ್ನಯ್ಯನ ' 'ಪದ್ಮಿನೀ ಪರಿಣಯ'ವಾಗಿದೆ; ಚೆಲುವಾಂಬೆಯ ವರನಂದೀ

ಕಲ್ಯಾಣದಲ್ಲಿ ವಸ್ತುನಾವೀನ್ಯ ಪಡೆದುಕೊಂಡಿದೆ. ಚಿಕ್ಕದೇವರಾಜನ ಕಾಲದ ವೆಂಕಟಗಿರಿ ಮಾಹಾತ್ಮ್ಯವೇ ಚೆಲುವಾಂಬೆಯ ವೆಂಕಟಾಚಲ ಮಾಹಾತ್ಮ್ಯ ಲಾಲೀಪದವಾಗಿ ಕಾಣಿಸಿಕೊಂಡಿದೆ; ಆಕೆಯದೇ ಆದ 'ತುಲಾ ಕಾವೇರಿ ಮಾಹಾತ್ಮ್ಯ'ದ ಮೂಲಕ ನದಿಯ ಮಹಿಮೆ ಹೇಳುವ ಹೊಸ ತಿರುವು ಪಡೆದುಕೊಂಡಿದೆ. ಈ ಮಾಹಾತ್ಮ್ಯ ಮತ್ತು ಪರಿಣಯ ಕಾವ್ಯಗಳ ಪ್ರವೇಶ ಕನ್ನಡಕ್ಕೆ ತೆಲುಗಿನಿಂದ ಆಯಿತು ಎಂಬುದನ್ನು ಈ ಹಿಂದೆಯೇ ತೋರಿಸಿಕೊಟ್ಟಿದೆ. ವೀರರಾಜನಿಗಿದ್ದ ತೆಲುಗು ಭಾಷೆ, ಸಾಹಿತ್ಯಗಳ ಪರಿಚಯ ಆ ಪರಂಪರೆಯನ್ನು ಮುಂದುವರಿಸಲು ಇಂಬುಗೊಟ್ಟಿರಬೇಕು. ಕಳಲೆ ದಳವಾಯಿಗಳ ಮನೆದೇವರು ಲಕ್ಷ್ಮೀಕಾಂತ ಸ್ವಾಮಿಯಾದುದರಿಂದಲೂ, ಸಂಬಂಧ ಬೆಳೆಸಿದ ಮೈಸೂರರಸರು ವೈಷ್ಣವಧರ್ಮೀಯರಾಗಿದ್ದುದರಿಂದಲೂ ವೀರರಾಜ-ದೇವರಾಜರ ಕಾಲದಲ್ಲಿ ಕೂಡ ಆ ಧರ್ಮೀಯ ಸಾಹಿತ್ಯವೇ ಮುಂದುವರಿಯಿತು.

ಕಳಲೆ ದಳವಾಯಿಗಳಲ್ಲಿ ದಿಟಕ್ಕೂ ಎಲ್ಲ ರೀತಿಗಳಲ್ಲಿ ಬದಲಾವಣೆ ತಂದವನು ನಂಜರಾಜಯ್ಯ. ಸಾಹಿತ್ಯದಲ್ಲಿ ವೈಷ್ಣವಪರವಾಗಿದ್ದ ಅಲೆಯನ್ನು ಶೈವಪರವಾಗಿಸಲು ಈತ ಸ್ವತಃ ತಾನೇ ಪ್ರಯತ್ನಿಸಿದ. ಈ ಹಿಂದೆ ಚಿಕ್ಕದೇವರಾಜನ ಕಾಲದಲ್ಲಿ ಚಿಕುಪಾಧ್ಯಾಯ, ತಿಮ್ಮ ಮುಂತಾದವರು ಶ್ರೀವೈಷ್ಣವ ಕ್ಷೇತ್ರಗಳಾದ ತಿರುಪತಿ, ಮೇಲುಕೋಟೆ ಮತ್ತು ಶ್ರೀರಂಗಪಟ್ಟಣಗಳ ಬಗ್ಗೆ ಮಾಹಾತ್ಮ್ಯ ಬರೆದರೆ ಈತ ಶೈವಕ್ಷೇತ್ರಗಳಾದ ಶಿವಗಂಗೆ, ನಂಜನಗೂಡು, ಭದ್ರಗಿರಿಗಳ ಬಗ್ಗೆ ಮಾಹಾತ್ಮ್ಯ ಬರೆದ. ಚಿಕುಪಾಧ್ಯಾಯ ತಮಿಳುನಾಡಿನ ಆಳ್ವಾರರ ಬಗ್ಗೆ 'ದಿವ್ಯಸೂರಿ ಚರಿತ್ರೆ'ಯನ್ನು ರಚಿಸಿದರೆ ಈತ ೬೩ ಪುರಾತನರ ವಿಗ್ರಹ ಸ್ಥಾಪಿಸಿ ಅವರ ಬಗ್ಗೆ ತ್ರಿವಿಧಿಯನ್ನು ಬರೆದ; ಶಿವಭಕ್ತವಿಲಾಸ ದರ್ಪಣವೇ ಮುಂತಾದ ಗದ್ಯರೂಪದ ಕೃತಿಗಳನ್ನು ಕನ್ನಡಿಸಿದ. ಚಿಕ್ಕದೇವರಾಜನ ಕಾಲದಲ್ಲಿ ವೈಷ್ಣವ ಧರ್ಮೀಯರಿಗೆ ಅಗತ್ಯವಾಗಿದ್ದ 'ಕಾಮಂದಕ ಟೀಕೆ', 'ತಿರುವಾಯ್ಮೊಳಿ ಟೀಕೆ', ವಿಶಿಷ್ಟಾದ್ವೈತಮತ ತತ್ತ್ವ ನಿರೂಪಿಸುವ 'ಸಾತ್ತ್ವಿಕ ಬ್ರಹ್ಮ ವಿದ್ಯಾವಿಲಾಸ', 'ವಿಷ್ಣುಪುರಾಣ' ಕೃತಿಗಳು ಹೊರಬಂದುವಾದರೆ, ನಂಜರಾಜ ಸ್ವತಃ ತಾನೇ 'ಶಿವಧರ್ಮೋತ್ತರ ಟೀಕು, 'ಶಿವಗೀತೆ', 'ಲಿಂಗಪುರಾಣ'ಗಳನ್ನು ಕನ್ನಡಕ್ಕೆ ತಂದುದಲ್ಲದೆ ಶಿವನ ಲೀಲೆಗಳನ್ನು ನಿರೂಪಿಸುವ 'ಹಾಲಾಸ್ಯ ಮಾಹಾತ್ಮ್ಯ' ಪ್ರಕಾರವನ್ನು ಕನ್ನಡದಲ್ಲಿ ಆರಂಭಿಸಿದ. ಚಿಕ್ಕದೇವರಾಜನ ಕಾಲದ ಕನ್ನಡ ಸಾಹಿತ್ಯದ ಪ್ರಕಾರಗಳಾದ ಮಾಹಾತ್ಮ್ಯ, ಪರಿಣಯ, ಟೀಕು-ವ್ಯಾಖ್ಯಾನಗಳೇ ಈತನ ಕಾಲದಲ್ಲಿ ಕೂಡ ಇದ್ದಿತಾದರೂ ವೈಷ್ಣವಧರ್ಮ ಪ್ರತಿಸ್ಪರ್ಧಿಯಾಗಿ ಶೈವಧರ್ಮ ಸಾಹಿತ್ಯವನ್ನು ಬೆಳೆಸಿದ. ಚಿಕ್ಕದೇವರಾಜ ರಚಿತ ಗದ್ಯ ಕೃತಿಗಳನ್ನು ಚಿಕ್ಕದೇವರಾಜ ಸೂಕ್ತಿ ವಿಲಾಸ ಎಂದು ಕರೆದಿರುವಂತೆ ವೀರರಾಜ-ನಂಜರಾಜರ ಕೃತಿಗಳನ್ನು ವೀರರಾಜ ಸೂಕ್ತಿ ವಿಲಾಸ, ನಂಜರಾಜ ವಾಣೀವಿಲಾಸಗಳೆಂದು ಕರೆಯಲಾಗಿದೆ. ಚಿಕ್ಕದೇವರಾಜನನ್ನು ನೂತನ ಸಾಹಿತ್ಯ ಬ್ರಹ್ಮಾಂಗಾನುಪಮ ಭೂಪತಿ ಎಂದು ಆತನ ಕಾಲದ ಕವಿಗಳು ಕೀರ್ತಿಸಿದ್ದರೆ, ನಂಜರಾಜನನ್ನು ನವಭೋಜರಾಜೇಂದ್ರ ಎಂದು ಈತನಕಾಲದ ಕವಿಗಳು ಸ್ತುತಿಸಿದ್ದಾರೆ. ನಂಜರಾಜ ಚಿಕ್ಕದೇವರಾಜನನ್ನು ಎಷ್ಟರಮಟ್ಟಿಗೆ ತನ್ನ ಮನಸ್ಸಿನಲ್ಲಿಟ್ಟುಕೊಂಡಿದ್ದ ಎಂದರೆ ಚಿಕ್ಕದೇವರಾಜ ಶಲ್ಯ ಗದಾ, ಶಾಂತಿ, ಆಸ್ತಿಕ, ಸ್ತ್ರೀ, ಮೌಸಲ, ಮಹಾಪ್ರಸ್ಥಾನ, ಸ್ವರ್ಗಾರೋಹಣ ಪರ್ವಗಳಿಗೆ ಭಾರತವಚನದ ಕನ್ನಡ ಟೀಕು ಬರೆದಿದ್ದರೆ ಈತ ಆದಿ, ಸಭಾ, ಕರ್ಣ, ದ್ರೋಣ, ಪೌಲೋಮ ಹಾಗೂ ಅನುಶಾಸನ ಪರ್ವಗಳಿಗೆ ಭಾರತವಚನ ಟೀಕು ಬರೆದಿದ್ದಾನೆ. ಚಿಕ್ಕದೇವರಾಜ ಭಾಗವತಕ್ಕೆ ಟೀಕೆ ಬರೆದಿದ್ದರೆ, ಈತ ಹರಿವಂಶಕ್ಕೆ ಟೀಕೆ ಬರೆದು ಅದನ್ನು ಕನ್ನಡಿಸಿದ್ದಾನೆ. ಚಿಕ್ಕದೇವರಾಜನ ಮೇಲೆ ಚಿಕ್ಕದೇವರಾಜ ವಿಜಯ, ಚಿಕ್ಕದೇವರಾಜ ವಂಶಾವಳಿ ಕೃತಿಗಳು ಕನ್ನಡದಲ್ಲಿ ಬಂದಿದ್ದರೆ ನಂಜರಾಜನ ಬಗ್ಗೆ ಸಂಸ್ಕೃತದಲ್ಲಿ 'ನಂಜರಾಜಯಶಸ್ಸಮೋಲ್ಲಾಸ ಚಂಪು' ಎಂಬುದೂ, 'ಸೌಂದರಕಾವ್ಯ'ವೆಂಬುದೂ ಬಂದಿವೆ. ತಿರುಮಲಾರ್ಯ ತನ್ನ 'ಅಪ್ರತಿಮ ವೀರಚರಿತ' ಅಲಂಕಾರ ಕೃತಿಯನ್ನು ಚಿಕ್ಕದೇವರಾಜನನ್ನು ಕುರಿತು ಕನ್ನಡದಲ್ಲಿ ಬರೆದಿರುವಂತೆ, ನರಸಿಂಹಕವಿ 'ನಂಜರಾಜ ಯಶೋಭೂಷಣ'

ಸಂಸ್ಕೃತ ಅಲಂಕಾರ ಕೃತಿಯನ್ನು ನಂಜರಾಜನ ಬಗ್ಗೆ ರಚಿಸಿದ್ದಾನೆ. ಚಿಕ್ಕದೇವರಾಜನ ಬಗೆಗಿನ ಚಿಕ್ಕದೇವರಾಯ ವಿಲಾಸಮು, ಚಿಕ್ಕದೇವರಾಯೋದಾಹರಣಮು, ಚಿಕದೇವರಾಯ ಚಾಟು ಪದ್ಯಾಲು ತೆಲುಗಿಗೆ ಬಂದಿರುವಂತೆ 'ನಂಜರಾಜಯಶೋಭೂಷಣಮು' ತೆಲುಗು ಪದ್ಯದಲ್ಲಿದೆ. ಚಿಕ್ಕದೇವರಾಜನ ಕಾಲದಲ್ಲಿ ಶ್ರೀವೈಷ್ಣವ ಧರ್ಮೀಯ ಕೃತಿಗಳು ಬ್ರಹ್ಮಾಂಡ ಪುರಾಣವನ್ನಾಧರಿಸಿ ರಚಿತವಾದರೆ, ನಂಜರಾಜ ಸ್ಕಾಂದಪುರಾಣವನ್ನು ಪ್ರಧಾನವಾಗಿ ಆಧರಿಸಿ ತನ್ನ ಕೃತಿಗಳನ್ನು ರಚಿಸಿದ. ಸ್ವತಃ ಈತನಿಗೆ ತೆಲುಗು, ಭಾಷೆ ಸಾಹಿತ್ಯಗಳ ಪರಿಚಯವಿದ್ದುದರಿಂದ ಅಲ್ಲಿಯ ಶೈವಕ್ಷೇತ್ರ ಮಾಹಾತ್ಮ್ಯ ಹಾಗೂ ಶಿವಲೀಲೆಯ ಮಾದರಿಗಳನ್ನು ಈತ ಕನ್ನಡಿಸಿಕೊಳ್ಳಲು ತೊಡಕೇನಾಗಲಿಲ್ಲ. ಚಿಕ್ಕದೇವರಾಜನಲ್ಲಿದ್ದ ರಾಜಕೀಯ ಮಹತ್ವಾಕಾಂಕ್ಷೆಗಳು, ಯುದ್ಧ ಸಂಬಂಧದ ನಿರ್ಣಯಗಳು, ವಿಜಯನಗರದವರಿತ್ತ ಪರಂಪರೆಯನ್ನು ಉಳಿಸಿಕೊಂಡು ಬರುವ ಪ್ರಯತ್ನಗಳೇ ನಂಜರಾಜನಲ್ಲೂ ಕಾಣುತ್ತವೆ ಎಂದು ಚರಿತ್ರಕಾರರು ಸೂಚಿಸುತ್ತಾರೆ. ಆತನ ಸಾಹಿತ್ಯಕ ಸೃಷ್ಟಿಯ ಉದ್ದೇಶಗಳಾದರೂ ಈ ದಿಕ್ಕಿನದೇ ಆಗಿದ್ದು ಅವರ ಸೂಚನೆಗೆ ಪೋಷಕವಾಗಿವೆ.

ಕೆಳದಿ ಅರಸರು ಮತ್ತು ಕನ್ನಡ ಸಾಹಿತ್ಯ

೧

ಈ ಅವಧಿಯ ಕೆಳದಿಯ ಅರಸರ ಕಾಲದ ಸಾಹಿತ್ಯವನ್ನು ಈಗ ಪ್ರತ್ಯೇಕವಾಗಿ ಪರಿಶೀಲಿಸ ಬಹುದು. ಚೌಡಪ್ಪನಾಯಕನಿಂದ ೩ನೇ ಸೋಮಶೇಖರ ನಾಯಕನ ವರೆಗೆ ಕೆಳದಿಯನ್ನು ಆಳಿದ ಅರಸರು ಇಪ್ಪತ್ತು ಮಂದಿ. ಇವರ ಕಾಲಾವಧಿ ೧೫೦೦ ರಿಂದ ೧೭೬೩ರ ವರೆಗೆ. ಇವರಲ್ಲಿ ೬ ಅರಸರು ಮಾತ್ರ ಕನ್ನಡ ಸಾಹಿತ್ಯಕ್ಕೆ ಕನ್ನಡ ಕವಿಗಳಿಗೆ ನೇರವಾದ ಆಶ್ರಯ, ಪೋಷಣೆ ನೀಡಿದ್ದಾರೆ. ಸಾಮ್ರಾಜ್ಯ ಸ್ಥಾಪಿಸಿದ ಚೌಡಪ್ಪನಾಯಕ (೧೫೦೦-೧೫೧೪), ಸಾಮ್ರಾಜ್ಯ ವಿಸ್ತರಿಸಿದ ಸದಾಶಿವನಾಯಕ (೧೫೧೪-೧೫೩೩) ಹಾಗೂ ಇಮ್ಮಡಿ ಸದಾಶಿವನಾಯಕರ (ಭದ್ರಪ್ಪನಾಯಕ) (೧೫೩೩-೧೫೪೬) ಆಸ್ಥಾನದಲ್ಲಿ, ನೇರ ಪೋಷಣೆಯಲ್ಲಿ ಕನ್ನಡ ಸಾಹಿತ್ಯ ಅಭಿವೃದ್ಧಿಗೊಂಡಂತಿಲ್ಲ. ರಾಜ್ಯಸ್ಥಾಪನೆಯಂಥ ಗುರುತರವಾದ, ತುಂಬ ಜವಾಬ್ದಾರಿಯಾದ ಕಾರ್ಯದಲ್ಲಿ ಈ ರಾಜರು ತೊಡಗಿಕೊಂಡಿದ್ದಿರಬೇಕು. ಫಲವಾಗಿ ಕವಿಪೋಷಣೆ, ಕಲಾಪೋಷಣೆಗಳ ಬಗ್ಗೆ ಗಮನ ಹರಿಸಿರಲಾರರು. ಇಲ್ಲವೇ ವಿರಳ ಸಂಖ್ಯೆಯ ಕವಿಗಳಿದ್ದು, ತನಿಯಾದ ಕೃತಿಗಳು ರಚಿತವಾಗಿ ಅವು ನಮ್ಮವರೆಗೆ ಬರದೆ ಹೋಗಿರುವ ಸಾಧ್ಯತೆಗಳೂ ಇವೆ. ದೊಡ್ಡ ಸಂಕಣ್ಣನಾಯಕನಿಂದ (೧೫೪೬-೧೫೭೦) ಈ ಮನೆತನದಲ್ಲಿ ಕನ್ನಡ ಸಾಹಿತ್ಯ ಪೋಷಣೆ ಆರಂಭವಾಗುತ್ತದೆ. ಅದು ನಿರಂತರ ವಾಹಿನಿಯಾಗಿ ಹರಿದಿಲ್ಲ. ಅನೇಕ ಬಗೆಯ ಅಡೆತಡೆಗಳನ್ನು ಎದುರಿಸಿದೆ. ದೊಡ್ಡ ಸಂಕಣ್ಣನಾಯಕನ ಬಳಿಕ ಒಡನೆಯೇ ಪಟ್ಟಕ್ಕೆ ಬಂದ ಚಿಕ್ಕ ಸಂಕಣ್ಣನಾಯಕನ ಕಾಲದ ಕನ್ನಡ ಕವಿಗಳು ಉಕ್ತರಾಗಿಲ್ಲ. ಬಿಜಾಪುರ, ಅಹಮ್ಮದ್‌ನಗರ, ಗೋಲ್ಕೊಂಡ ನಗರಗಳ ಮುಸ್ಲಿಂ ಅರಸರ ನಡುವೆ ನಡೆದ ಯುದ್ಧದಲ್ಲಿ ಆತ ತೀವ್ರವಾಗಿ ತನ್ನನ್ನು ತೊಡಗಿಸಿಕೊಂಡಿದ್ದುದು ಇದಕ್ಕೆ ಕಾರಣವಿದ್ದಿರಬಹುದು. ಮನೆತನದ ೮ನೆಯ ದೊರೆಯಾದ ವೀರಭದ್ರನಾಯಕನ ಕಾಲ (೧೬೨೯-೧೬೪೬) ನೀಡಿದಾದದ್ದು. ಆದರೆ ಅದು ಉಗ್ರ ಅಂತಃಕಲಹದ, ತೀವ್ರ ಜ್ಞಾತಿಕಲಹದ ಕಾಲ. ೧೦, ೧೧ ನೆಯ ತಲೆಮೊರೆಯ ದೊರೆಗಳಾದ ಕಿರಿಯ ವೆಂಕಟಪ್ಪನಾಯಕ (೧೬೬೧-೧೬೬೨), ಭದ್ರಪ್ಪನಾಯಕರ (೧೬೬೨-೧೬೬೪) ಆಳ್ವಿಕೆಯ ಕಾಲವೇ ಹ್ರಸ್ವವಾದದ್ದು. ಹಿರಿಯ ಸೋಮಶೇಖರ ನಾಯಕ (೧೬೬೪-೧೬೭೨) ಕುತ್ಸಿತ ಶಿವಪ್ಪನಾಯಕ, ಚನ್ನಮ್ಮಾಜಿ (೧೬೭೨-೧೬೯೭) - ಇವರು ೧೨,೧೩,೧೪ನೆಯ ಅರಸರಾಗುತ್ತಾರೆ. ಆಡಳಿತ ವ್ಯವಸ್ಥೆ ಹದಗೆಟ್ಟು, ಔರಂಗಜೇಬನ ಆಕ್ರಮಣಕ್ಕೆ ಕೆಳದಿ ಗುರಿಯಾಗಿದ್ದ

ಕಾಲವಿದು. ಸಹಜವಾಗಿಯೇ ಕಲೆ, ಸಾಹಿತ್ಯಗಳ ವರ್ಧನೆಗೆ ಅಗತ್ಯವಾದ ವಾತಾವರಣ ಇಲ್ಲದ ಕಾಲ. ಅವನತಿಯ ಕಾಲವಾದ ಚನ್ನಬಸವಪ್ಪನಾಯಕ (೧೭೫೫-೧೭೫೮), ಚೆನ್ನವೀರಮ್ಮಾಜಿ ಮತ್ತು ೩ನೇ ಸೋಮಶೇಖರನಾಯಕರ (೧೭೫೮-೧೭೬೩) ಅವಧಿಯಲ್ಲಿ ಕೂಡ ಸಹಜವಾಗಿಯೇ ಸಾಹಿತ್ಯ ಪೋಷಣೆ ಆಗಿಲ್ಲ. ಇವರ ಆಳ್ವಿಕೆಯ ಅವಧಿ ಕೂಡ ಕಿರಿದಾದುವೇ. ಇದರಿಂದ ಈ ಮನೆತನದ ಆರಂಭದ ಮತ್ತು ಅಂತ್ಯ ಕಾಲದ ಅರಸರ ಅವಧಿಯಲ್ಲಿ ಕನ್ನಡ ಸಾಹಿತ್ಯ ಪೋಷಣೆ ಕಾಣುವುದಿಲ್ಲವೆಂಬುದು ಸ್ಪಷ್ಟ. ನಡುವಣ ರಾಜ್ಯ ವಿಸ್ತರಣೆ ಮತ್ತು ರಾಜ್ಯೋನ್ನತಿಯ ಕಾಲದಲ್ಲಿ ಮಾತ್ರ ಕವಿಗಳು, ಸಾಹಿತ್ಯ ಕಾಣುತ್ತದೆ.

ಈ ಹಿಂದೆಯೇ ಹೇಳಿದಂತೆ ಕೆಳದಿಯ ಆರು ಅರಸರು ಕನ್ನಡ ಸಾಹಿತ್ಯ ಪೋಷಕರಾಗಿದ್ದಾರೆ. ಅವರ ವಿವರ ಹೀಗಿದೆ: ೧) ದೊಡ್ಡ ಸಂಕಣ್ಣನಾಯಕ (೧೫೪೬-೧೫೭೫) ಕಾಶೀಕಾಂಡದ ಚೆನ್ನವೀರ ಇವನ ಕಾಲದ ಶಾಸ್ತ್ರಕವಿ ೨) ಹಿರಿಯ ವೆಂಕಟಪ್ಪನಾಯಕ (೧೫೮೩-೧೬೩೦) ಕರ್ನಾಟಕ ಶಿವಗೀತೆಯ ತಿರುಮಲಭಟ್ಟ ಇವನ ಕಾಲದವನು ೩) ಶಿವಪ್ಪನಾಯಕ (೧೬೪೬-೧೬೬೧). ಚರಮೂರ್ತಿ ಬಸವಲಿಂಗದೇವರು ವೀರಮಾಹೇಶ್ವರಾಚಾರ ಸುಧಾವಾರ್ಧಿಗೆ ಭಾಷ್ಯ ಬರೆದ ೪) ಹಿರಿಯ ಬಸವಪ್ಪನಾಯಕ (೧೬೯೮-೧೭೧೫) ಬಹುವಿದ್ಯಾಪಾರಂಗತ, ಸ್ವತಃ ಉಭಯಭಾಷಾಕವಿ. ಸಂಸ್ಕೃತ ಭಾಷೆಯಲ್ಲಿರುವ ಇವನ 'ಸುಭಾಷಿತ ಸುರದ್ರುಮ' ನೀತಿಗ್ರಂಥ; 'ಶಿವತತ್ತ್ವ ರತ್ನಾಕರ' ಬೃಹತ್ ವಿಶ್ವಕೋಶ. ಇವನ 'ಸೂಕ್ತಿ ಸುಧಾಕರ' ಕನ್ನಡ ಮತ್ತು ಸಂಸ್ಕೃತ ಭಾಷೆಗಳೆರಡರ ಬಳಕೆಯಿರುವ ದ್ವಿಭಾಷಾಕೃತಿ. 'ಶುಕಸಪ್ತತಿ'ಯ ಶರಜಾನಾಗಪ್ಪಯ್ಯ, ಹಾಡುಗಳನ್ನು ಬರೆದಿರುವ ಅಪ್ಪಯ್ಯ (ಲಕ್ಷ್ಮಣ), 'ಕೆಳದಿ ರಾಜಾಭ್ಯುದಯಮ್'ನ ಗಂಗಾದೇವಿ ಇವನ ಕಾಲದ ಇತರ ಕನ್ನಡಕವಿಗಳು. ೫) ಕಿರಿಯ ಸೋಮಶೇಖರ ನಾಯಕ (೧೭೧೫-೧೭೪೦) ಸಾಹಿತ್ಯಾಭಿಮಾನಿ. ಇವನ ಮಾವ ನಿರ್ವಾಣಯ್ಯ. ಕನ್ನಡ-ಸಂಸ್ಕೃತ ಭಾಷೆಗಳಲ್ಲಿ ಹಲವು ಗ್ರಂಥಗಳ ಕರ್ತೃ. 'ಶಿವಪೂಜಾ ವಿಧಾನ' ಇವನ ಕನ್ನಡ ಕೃತಿ ೬) ಕಿರಿಯ ಬಸವಪ್ಪನಾಯಕ (೧೭೪೦-೧೭೫೫) ಪ್ರಕಾಂಡ ಪಂಡಿತ, ಕವಿ ಕಲಾವಿದರ ಆಶ್ರಯದಾತ. ಈತನ ಆಡಳಿತದ ಅವದಿಯನ್ನು 'ಕೆಳದಿ ಸಾಹಿತ್ಯದ ಸುಗ್ಗಿಯ ಕಾಲ' ಎಂದು ಸಾ.ಶಿ. ಮರುಳಯ್ಯ ಸರಿಯಾಗಿ ಗುರುತಿಸಿದ್ದಾರೆ. 'ಕೆಳದಿನೃಪವಿಜಯ' 'ಪಾರ್ವತೀಪರಿಣಯ' ಮುಂತಾದ ಕೃತಿಗಳನ್ನು ರಚಿಸಿದ ಲಿಂಗಣ್ಣ ಈತನ ಕಾಲದವ; 'ನರಹರಿ ವಿಜಯ'ದ ವೆಂಕಕವಿ, 'ರುಕ್ಮಿಣೀ ಸ್ವಯಂವರ'ದ ಸುಬ್ಬ ಈ ಕಾಲದಲ್ಲೇ ಇದ್ದವರು.

೨

ಕೆಳದಿ ಅರಸರ ಕಾಲದ ಕನ್ನಡ ಸಾಹಿತ್ಯ ಪರಿಶೀಲಿಸುವ ಮುನ್ನ, ಈ ಅರಸರಿಗೆ ವಿಜಯನಗರದ ಅರಸರೊಂದಿಗಿದ್ದ ಸಂಬಂಧವನ್ನು ನೋಡಬೇಕು. ಈ ಮನೆತನದ ಸಂಸ್ಥಾಪಕ ಚೌಡಪ್ಪನಾಯಕನಿಗೆ ನಿಧಿ ದೊರೆಯುತ್ತದೆ; ವಿಜಯನಗರದ ಸಾರ್ವಭೌಮನಿಗೆ ಈ ವಿಷಯ ತಿಳಿಯುತ್ತದೆ. ಆತ ತನ್ನ ಮಹಾಸಾಮ್ರಾಜ್ಯದ ಉತ್ತರಗಡಿಯ ಸಂರಕ್ಷಕನೆಂದು ಭಾವಿಸಿ ಚೌಡಪ್ಪನಿಗೆ ಛತ್ರ ಚಾಮರ ಕೊಟ್ಟು ಗೌರವಿಸುತ್ತಾನೆ; ಪುರಸ್ಕರಿಸುತ್ತಾನೆ; ಪ್ರೋತ್ಸಾಹಿಸುತ್ತಾನೆ. ಕೆಳದಿಯ ಅರಸರು ವಿಜಯನಗರದ ಅರಸರಿಗೆ ಅಂದಿನಿಂದ ಎಂದರೆ ಆರಂಭದಿಂದಲೇ ನಡೆದುಕೊಳ್ಳುತ್ತಾರೆ. ಬಳಿಕಣ ಸದಾಶಿವನಾಯಕ ಅಹಮ್ಮದ್‌ನಗರ, ಗೋಲ್ಕೊಂಡ, ಬಿಜಾಪುರದ ಅರಸರನ್ನು ಕೃಷ್ಣದೇವರಾಯನ ಆಣತಿಯಂತೆ ಸದೆಬಡಿಯುತ್ತಾನೆ. ಅನಂತರದ ದೊಡ್ಡ ಸಂಕಣ್ಣನಾಯಕ. ಹಿರಿಯ ವೆಂಕಟಪ್ಪ ನಾಯಕರು ಕೂಡ ಹೀಗೆಯೇ ವಿಜಯನಗರದ ಅರಸರಿಗೆ ನಡೆದುಕೊಳ್ಳುತ್ತಾರೆ. ಸದಾಶಿವರಾಯನಿಂದ ಸದಾಶಿವಪುರವೆಂಬ ಅಗ್ರಹಾರ ಹಾಗೂ ಸದಾಶಿವಸಾಗರವೆಂಬ (ಈಗಿನ ಸಾಗರ) ಪಟ್ಟಣದ ನಿರ್ಮಾಣ, ಹಿರಿಯವೆಂಕಟಪ್ಪ ನಾಯಕನಿಂದ ಆನಂದಾಪುರ, ವಿಶ್ವನಾಥಪುರ, ವೀರಾಂಬಾಪುರಗಳ ನಿರ್ಮಾಣ, ಚನ್ನಮ್ಮಾಜಿಯಿಂದ ಸೋಮಶೇಖರಪುರದ ರಚನೆಯೇ ಮುಂತಾದುವು ವಿಜಯನಗರ ಅರಸರ ಅನುಸರಣೆ.

ಹಾಗೆಯೇ ಚೌಡಪ್ಪನಾಯಕನಿಂದ ರಾಮೇಶ್ವರಾಲಯದ ಜೀರ್ಣೋದ್ಧಾರ. ಸದಾಶಿವನಾಯಕನಿಂದ ಇಕ್ಕೇರಿಯ ಶಿವಾಲಯ ರಚನೆ, ದೊಡ್ಡಸಂಕಣ್ಣನಿಂದ ಇಕ್ಕೇರಿಯ ಅಘೋರೇಶ್ವರ ಪ್ರತಿಷ್ಠಾಪನೆ, ಚನ್ನಮ್ಮಾಜಿಯಿಂದ ವೀರಭದ್ರ ದೇವಾಲಯಕ್ಕೆ ಶಿಖರ-ರಂಗಮಂಟಪ-ಧ್ವಜಸ್ತಂಭ ಸ್ಥಾಪನೆ ವಿಜಯನಗರದ ಅರಸರ ಪರಂಪರೆಗೆ ಅನುಗುಣವಾದದ್ದೇ. ಹಿರಿಯ ವೆಂಕಟಪ್ಪನಾಯಕನ ಕರ್ನಾಟಕದ ನವಭೋಜ, ಸಾಹಿತ್ಯರತ್ನಾಕರ, ಬುಧನುತ ಎಂಬ ಬಿರುದುಗಳೂ ಹಿರಿಯಬಸವರಾಜನ ಸೂರಿನಿಕರ ಕಲ್ಪದ್ರುಮವೆಂಬ ಬಿರುದೂ ವಿಜಯನಗರದ ಅರಸರ ಇದೇ ಬಗೆಯ ಬಿರುದುಗಳನ್ನು ನೆನಪಿಸುತ್ತವೆ. ಈ ಮನೆತನದ ಅರಸರು ಹಾಕಿಸಿದ ಶಾಸನಗಳಲ್ಲಿ ''ಪೂರ್ವಮರಿಯಾದೆ'' ಎಂಬ ಮಾತು ಮೇಲಿಂದ ಮೇಲೆ ಬರುತ್ತದೆ (ಎ.ಕ. ೮, ಟಿವಿಲ್. ೩೪,೯೨,೯೯, ೧೦೧, ೧೪೪ ಇ) ಇದು ವಿಜಯನಗರದ ಪರಂಪರೆಯನ್ನು ಉದ್ದೇಶಿಸಿರುವ ಮಾತೆಂಬುದು ಸ್ಪಷ್ಟ. ಆದ್ದರಿಂದ ಈ ಮನೆತನದ ಅರಸರ ಸಾಮಾಜಿಕ, ಸಾಹಿತ್ಯಕ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ವಿಜಯನಗರ ಅರಸರ ಪ್ರಭಾವ ಕಾಣುವುದು ತುಂಬ ಸಹಜವೇ ಆಗಿದೆ.

೩

ಕೆಳದಿಯ ಅರಸರ ಕಾಲದ ಸಾಹಿತ್ಯ ಪ್ರಧಾನವಾಗಿ ಧಾರ್ಮಿಕವಾದದ್ದು, ಶಾಸ್ತ್ರರೂಪದ್ದು, ಟೀಕೆ-ವ್ಯಾಖ್ಯಾನ ಬಗೆಯದು, ಆನುಷಂಗಿಕವಾಗಿ ಲೌಕಿಕರೂಪದ್ದು. ಈ ಅರಸರಲ್ಲಿ ಹಲವರು ವೀರಶೈವ ಧರ್ಮೀಯರು; ಇನ್ನು ಕೆಲವರು ವಿಶುದ್ಧ ವೈದಿಕಾದ್ವೈತ ಸಿದ್ಧಾಂತ ಪ್ರತಿಷ್ಠಾಪಕ, ಶಿವಗುರುಭಕ್ತಿ ಪರಾಯಣ, ಗೋದೇವಬ್ರಾಹ್ಮಣ ಪ್ರತಿಪಾಲಕ ಎಂದು ತಮ್ಮನ್ನು ಕೀರ್ತಿಸಿಕೊಂಡಿದ್ದಾರೆ. ಷಡ್ದರ್ಶನ ಎಂಬ ಮಾತು ಇವರ ಶಾಸನಗಳಲ್ಲಿ ಪದೇಪದೇ ಕಾಣುತ್ತದೆ. ಹಿರಿಯ ವೆಂಕಟಪ್ಪನಾಯಕ, ಹಿರಿಯ ಸೋಮಶೇಖರನಾಯಕ, ರಾಣಿ ಚನ್ನಮ್ಮಾಜಿ, ಹಿರಿಯ ಬಸವಪ್ಪನಾಯಕರು ಶೃಂಗೇರಿಯ ಶಾರದಾಪೀಠಕ್ಕೆ ಅತ್ಯಂತ ಶ್ರದ್ಧೆ ಭಕ್ತಿಗಳಿಂದ ನಡೆದುಕೊಂಡಿದ್ದಾರೆ. ಈ ಎಲ್ಲದರ ಫಲವಾಗಿ ಈ ಅರಸರ ಕಾಲದಲ್ಲಿ ಅದ್ವೈತ ಸಿದ್ಧಾಂತದ ಹಾಗೂ ವೀರಶೈವಧರ್ಮದ ಹಿನ್ನೆಲೆಯ ಕೃತಿಗಳು ಹುಟ್ಟಿವೆ. ನಿದರ್ಶನಕ್ಕೆ ದೊಡ್ಡಸಂಕಣ್ಣನ ರಾಜಗುರು, ಮಠಾಧಿಪತಿಯಾಗಿದ್ದ ಚೆನ್ನವೀರಮಾಹೇಶ್ವರನ (ಸು.೧೫೫೦) ರಚನೆಗಳು. ಈತ ಪುರುಷಸೂಕ್ತ, ಶ್ರೀರುದ್ರಗಳಿಗೆ ಕರ್ನಾಟಕ ಟೀಕೆ ರಚಿಸಿದ್ದಾನೆ; ಈತನ ಕಾಶೀಕಾಂಡದ ಕನ್ನಡಾವೃತ್ತಿ, ವೀರಮಾಹೇಶ್ವರ ತಂತ್ರದ ಟೀಕೆ ಈವರೆಗೂ ಲಭ್ಯವಾಗಿಲ್ಲ. ಈತ ವ್ಯಾಕರಣತಜ್ಞನೂ ಹೌದು. ಶಬ್ದಮಣಿ ಅಥವಾ ಸಾರಸ್ವತ ಕರ್ಣಾಟಕ ಟೀಕಾ ಎಂಬುದನ್ನೂ, ಕಾಶಕೃತ್ಸ್ನ ಶಬ್ದಕಲಾಪದ ಧಾತುಪಾಠವನ್ನೂ ರಚಿಸಿದ್ದಾನೆ. ಈತ ಕವಿ, ತತ್ತ್ವಶಾಸ್ತ್ರಜ್ಞ, ಹಾಗೂ ವೈಯಾಕರಣ. ಟೀಕೆ ವ್ಯಾಖ್ಯಾನ ರಚಿಸುವ ಇವನ ಹುಮ್ಮಸ್ಸು, ಸಂಸ್ಕೃತದ ಪ್ರಧಾನ ಕೃತಿಗಳಿಗೆ ಕನ್ನಡ ಟೀಕೆ ಬರೆಯುವ ಇವನ ಪ್ರಯತ್ನ ಬುಕ್ಕರಾಯನ ಆಸ್ಥಾನದ ಸಾಯಣ - ಮಾಧವರ ಪ್ರಯತ್ನಗಳನ್ನು ನೆನಪಿಸುತ್ತವೆ. ಸಾಯಣರ 'ವೇದಾರ್ಥ ಪ್ರಕಾಶ', 'ಧಾತುವೃತ್ತಿ' ರಚನೆ ಇದೇ ಬಗೆಯದು. ಚೆನ್ನವೀರ ಉಭಯಭಾಷಾಪಂಡಿತ, ವೇದ ವಿಶಾರದ; ಕೆಳದಿ ಅರಸರ ಕನ್ನಡ ಸಾಹಿತ್ಯದಲ್ಲಿ ವಿಜಯನಗರದ ಪರಂಪರೆಯ ಮೊದಲ ದನಿಯನ್ನು ಎತ್ತಿದವ. ತಿರುಮಲಭಟ್ಟನ (ಸು.೧೬೦೦) ೧೬ ಸಂಧಿ, ೩೭೭ ವಾರ್ಧಕ ಷಟ್ಪದಿಗಳ 'ಶಿವಗೀತೆ' ಈ ಪರಂಪರೆಯ ಕೃತಿಯೇ. ಇದು ಭಗವದ್ಗೀತೆಯಂತೆ ಮೋಕ್ಷಮಾರ್ಗ ಕೈಪಿಡಿ; ಇದೂ ಅಧ್ಯಾತ್ಮಭೂಯಿಷ್ಠ, ನೀತಿ ಮಾರ್ಗಬೋಧಕ. ಕೃತಿಯ ಆರಂಭದಲ್ಲಿ ತಿರುಮಲಭಟ್ಟ ಕೆಳದಿಯ ವರ್ಣನೆ, ಆ ಅರಸರ ವಂಶಾವಳಿ ಕೂಡ ಕೊಟ್ಟಿದ್ದಾನೆ. ಶಿವಪ್ಪನಾಯಕನ ಸೂಚನೆಯ ಮೇರೆಗೆ ೧೬೫೦ರಲ್ಲಿದ್ದ ಚರಮೂರ್ತಿ ಬಸವಲಿಂಗದೇವ 'ವೀರಮಾಹೇಶ್ವರಾಚಾರ ಸುಧಾವಾರಿಧಿ'ಗೆ ಟೀಕು ಬರೆದ. ಗುರು-ಲಿಂಗ-ಜಂಗಮ, ಪ್ರಸಾದ-ಪಾದೋದಕ-ವಿಭೂತಿ-ರುದ್ರಾಕ್ಷಿಗಳ ಮಹಿಮೆ ತಿಳಿಸುವ ಈ ಕೃತಿಯಲ್ಲಿ ೧೩ ಸ್ಥಲಗಳಿವೆ. ಈ ಅರಸರ ವೀರಶೈವ ಧರ್ಮಾವಲಂಬನೆಯ ಕುರುಹು ಈ ಕೃತಿ. ನಿರ್ವಾಣಯ್ಯನ (ಸು.೧೭೨೫) 'ಶಿವಪೂಜಾ ವಿಧಾನ' ಸಂಸ್ಕೃತ

ಕ್ರಿಯಾಸಾರದ ಕೆಲವು ಅಧ್ಯಾಯಗಳ ವ್ಯಾಖ್ಯಾನ, ನಿರ್ವಾಣಯ್ಯನ ಮಗನಾದ ಸಂಗನಬಸಪ್ಪನ (ಸು.೧೭೫೦) ಅಲಭ್ಯವಾದ 'ವೀರಶೈವ ಸುಧಾನಿಧೀ ಟೀಕು' ಈ ಗುಂಪಿಗೇ ಬರುತ್ತವೆ. ಐದು ಆಶ್ವಾಸ, ೪೮೫ ಸಂಖ್ಯೆಯ ಲಿಂಗಣ್ಣನ 'ಶಿವಪೂಜಾದರ್ಪಣ' ಹಾಗೂ ಇವನ ಮಗ ವೆಂಕನ (ಸು.೧೭೭೦) ೧೦೧ ಪದ್ಯಗಳ 'ಗಣ ಸಹಸ್ರನಾಮ' ನಿತ್ಯಪೂಜೆಯ ಸಹಾಯಕ ಸಾಮಗ್ರಿ. ವಿಜಯನಗರದ ಅರಸರ ಕಾಲದಲ್ಲಿ ನಡೆದ ಟೀಕೆ-ವ್ಯಾಖ್ಯಾನಗಳ ಚಟುವಟಿಕೆಯನ್ನೇ ಕೆಳದಿ ಅರಸರ ಆಶ್ರಿತರಾದ ಈ ಕವಿಗಳ ಚಟುವಟಿಕೆ ನೆನಪಿಸುತ್ತದೆ.

ಈ ಅರಸರ ಕಾಲದ ಕವಿಗಳ ಇತರ ರಚನೆಗಳು ಶಿವಕೇಂದ್ರಿತವೇ ಆಗಿವೆ. ಭಟ್ಕಳದ ಅಪ್ಪಯ್ಯನ (ಸು. ೧೭೦೫) ಮೂಕಾಂಬಿಕೆಯ ಹಾಡು, ಲಿಂಗಣ್ಣ ಕವಿಯ ಐದು ಉಲ್ಲಾಸಗಳ 'ದಕ್ಷಾಧ್ವರ ವಿಜಯ', ೧೮ ಆಶ್ವಾಸಗಳ 'ಶಿವಕಲ್ಯಾಣ', ವಸ್ತುಕ ಕೃತಿಯಾದ 'ಪಾರ್ವತೀ ಪರಿಣಯ', ವೆಂಕನ ಹಾಡುಗಳು ಶಿವಪಾರಮ್ಯ ಹೇಳುವ ಸೃಜನೆಗಳಾಗಿವೆ. ಕವಿ ಲಿಂಗಣ್ಣನಂತೂ ಶಿವಪುರಾಣದ ವಸ್ತುವನ್ನು ಮೂರು ಕಾವ್ಯಗಳಾಗಿ ವಿಭಜಿಸಿ ಕೃತಿ ರಚಿಸಿದ್ದಾನೆ. ಕೆಳದಿಯ ಅರಸರ ಗುರುಗಳು ರೇಣುಕಾದಿ ಜಗದ್ಗುರು ಪಂಚಪೀಠಕ್ಕೆ ಸೇರಿದವರು; ಶಕ್ತಿ ವಿಶಿಷ್ಟಾದ್ವೈತದ ಬಲವುಳ್ಳವರು. ಆದ್ದರಿಂದಲೇ ಈ ಮನೆತನದ ಆಶ್ರಿತ ವೀರಶೈವ ಕವಿಗಳಲ್ಲಿ ಬಸವಾದಿಗಳ ಮಾರ್ಗಕ್ಕಿಂತ, ಶಿವಯೋಗಿ ಶಿವಾಚಾರ್ಯನ ಛಾಯೆಯೇ ಹೆಚ್ಚು. ಇವೂ, ಮೇಲೆ ಉಲ್ಲೇಖಿಸಿರುವ ಟೀಕೆ-ವ್ಯಾಖ್ಯಾನಗಳ ವಸ್ತು-ದೃಷ್ಟಿಗಳೂ ಪ್ರೌಢದೇವರಾಯನ ಕಾಲದ ಶಕ್ತಿ ವಿಶಿಷ್ಟಾದ್ವೈತ ಚಟುವಟಿಕೆಗಳಿಗೆ ಸಮೀಪವಾಗಿದೆ.

ಸುಭಾಷಿತ, ನೀತಿಸಾಹಿತ್ಯ ಕೂಡ ಈ ಅರಸರ ಆಶ್ರಿತ ಕವಿಗಳಿಂದ ರಚಿತವಾಗಿದೆ. ಹಿರಿಯ ಬಸವಪ್ಪನಾಯಕ (ಸು. ೧೭೦೦) ಸಂಸ್ಕೃತದಲ್ಲಿ ಸುಭಾಷಿತ ಸುರದ್ರುಮವೆಂಬ ನೀತಿಸೂಕ್ತಿ ಭಾಂಡಾಗಾರದ ಕರ್ತೃ. ಕನ್ನಡ-ಸಂಸ್ಕೃತಗಳ ಮಿಶ್ರಣವಿದ್ದ-ಪ್ರಾಯಃ ಸಂಸ್ಕೃತ ಸುಭಾಷಿತಗಳ ಕನ್ನಡ ವ್ಯಾಖ್ಯಾನವಾದ-ಈತನ ಸೂಕ್ತಿಸುಧಾಕರ ಈಗ ಅಲಭ್ಯ. ಶರಜಾ ನಾಗಪ್ಪಯ್ಯ (ಸು. ೧೭೦೦) ಶುಕ ಸಪ್ತತಿ ರಚಿಸಿದ್ದರೂ ಅದು ಶೃಂಗಾರ ಕಥೆಗಳ ಗೊಂಚಲಲ್ಲ; ರಾಜನೀತಿ ಶುಕಸಪ್ತತಿ. ೭೨ ಸಂಧಿ, ೭೦ ಕಥೆ, ೬೧೨೦ ಪದ್ಯಗಳ ಇದು ಒಂದು ನೀತಿಬೋಧಕ ಕೃತಿ. ಪಾರ್ವತೀವಲ್ಲಭ ಎಂಬ ಅಂಕಿತದಿಂದ ಅಂತ್ಯಗೊಳ್ಳುವ ವೆಂಕನ ಪಾರ್ವತೀವಲ್ಲಭಶತಕ ಕೂಡ ಇದೇ ಬಗೆಯದು. ಧರ್ಮ, ಅರ್ಥ, ಕಾಮ, ಮೋಕ್ಷಗಳನ್ನು ಈ ಕೃತಿಗಳು ಕುರಿತಿದ್ದು, ಕೆಲವು ಸಂಭಾಷಣಾ ಶೈಲಿಯಲ್ಲಿವೆ. ಇವು ಕೂಡ ಸಂಗಮರಾಜಕುಮಾರನಿಗೆ ನೀತಿಬೋಧಿಸಲೆಂದು ರಚಿಸಿದ ಸಾಯಣರ 'ಸುಭಾಷಿತ ಸುಧಾನಿಧಿ'ಯನ್ನು ಮನದಲ್ಲಿ ಸುಳಿಸುತ್ತದೆ.

ಈ ಮನೆತನದ ಸಾಹಿತ್ಯದ ಎರಡು ಮುಖ್ಯ ಕೃತಿಗಳು: ಒಂದು ಸು. ೧೭೦೦ರ ಕೆಳದಿ ಗಂಗಾದೇವಿಯ 'ಕೆಳದಿ ರಾಜಾಭ್ಯುದಯಮ್'; ಎರಡು ಸು. ೧೭೫೦ರ ಲಿಂಗಣ್ಣ ಕವಿಯ 'ಕೆಳದಿನೃಪವಿಜಯಂ'. ಮೊದಲನೆಯದು ಎರಡು ಅಧ್ಯಾಯಗಳಲ್ಲಿ ಅಸಮಗ್ರವಾಗಿ ಲಭ್ಯವಾಗಿರುವ ಕೃತಿ. ಎರಡನೆಯದು ಹನ್ನೆರಡು ಆಶ್ವಾಸಗಳ ಸಮಗ್ರ ಕೃತಿ. ಮೊದಲನೆಯದು ಹಿರಿಯ ಬಸಪ್ಪನಾಯಕನ ಕಾಲದ್ದು; ಎರಡನೆಯದು ಕಿರಿಯ ಬಸಪ್ಪನಾಯಕನ ಕಾಲದ್ದು. ಲಿಂಗಣ್ಣ ಕವಿಯ ಕೃತಿಯೇ ಈಗ ಕೆಳದಿ ಅರಸರ ಇತಿಹಾಸ, ಸಂಸ್ಕೃತಿಗಳ ಪುನಾರಚನೆಯ ಪ್ರಧಾನ ಆಕರ; ಕಾವ್ಯಾಂಶ ಚರಿತ್ರಾಂಶಗಳೆರಡೂ ಬೆರೆತಿರುವ ಕೃತಿ. ಗಂಗಾದೇವಿಯ 'ವೀರ ಕಂಪರಾಯ ಚರಿತ' ಹಾಗೂ ಮೂರನೆಯ ರಾಜನಾಥನ 'ಅಚ್ಯುತರಾಯಾಭ್ಯುದಯ'ಗಳನ್ನು ಮೇಲಣ ಕೆಳದಿ ಗಂಗಾದೇವಿ ಹಾಗೂ ಲಿಂಗಣ್ಣರ ಪ್ರಯತ್ನಗಳು ಸ್ಮೃತಿಗೆ ತರುತ್ತವೆ. ಒಟ್ಟಿನಲ್ಲಿ ವಿಜಯನಗರದ ಅರಸರ ಕಾಲದಲ್ಲಿ ಕಾಣುವ ಧಾರ್ಮಿಕ ಪುನರುಜ್ಜೀವನದ ಟೀಕೆ ವ್ಯಾಖ್ಯಾನಗಳು, ದೈವಪಾರಮ್ಯ ಉದ್ಘೋಷಿಸುವ ಶಿವಕಾವ್ಯಗಳು, ನೀತಿಬೋಧೆ ಮಾಡುವ ಸುಭಾಷಿತ ರಚನೆಗಳು, ಮನೆತನದ ಹಿರಿಮೆ-ಮಹಿಮೆ ಕೀರ್ತಿಸುವ ಐತಿಹಾಸಿಕ ಕಾವ್ಯಗಳೇ ಕೆಳದಿ ಅರಸರ ಕಾಲದ ಕನ್ನಡ ಸಾಹಿತ್ಯದಲ್ಲಿ ಕೂಡ ಕಾಣುವುದು.

ಸಮಾರೋಪ

ವಿಜಯನಗರೋತ್ತರ ಕಾಲ ಎಂದರೆ ಒಡೆಯರ ಆಳ್ವಿಕೆ; ಅವರ ಅಂಕೆಯಲ್ಲಿದ್ದ ಪಾಳೆಯಗಾರರ ಆಳ್ವಿಕೆ. ಈ ಅವಧಿಯ ಸಾಹಿತ್ಯ ಅದು ಒಡೆಯರದಾಗಿರಲಿ, ಕಳಲೆಯ ದಳವಾಯಿಗಳದಾಗಿರಲಿ, ಕೆಳದಿಯ ಅರಸರದಾಗಿರಲಿ ಅದರ ಮೇಲೆ ವಿಜಯನಗರ ಕಾಲದ ಅರಸರ, ಸಾಹಿತ್ಯದ ದಟ್ಟವಾದ ಪ್ರಭಾವವಿದೆ. ಕೆಳದಿಯ ಅರಸರ ಆಡಳಿತ ಶೈಲಿ, ಸಾಹಿತ್ಯ ರಚನಾಕ್ರಮ, ಸಾಂಸ್ಕೃತಿಕ ಕಾರ್ಯಗಳು, ಕಡೆಗೆ ಬಿರುದುಗಳು ಕೂಡ ವಿಜಯನಗರ ಕಾಲದ ಮಾದರಿಯದಾಗಿವೆ. ಒಡೆಯರ ಸಾಹಿತ್ಯ ವೈಷ್ಣವ ಪರವಾದದ್ದಾದರೆ, ಕಳಲೆ ದಳವಾಯಿ ಹಾಗೂ ಕೆಳದಿಯರಸರದು ವೀರಶೈವ ಮತ್ತು ಶೈವ ಪರವಾದದ್ದು. ರಾಜಾಶ್ರಯ ಪಡೆದ ಕವಿಗಳ ಸಂಖ್ಯೆ, ವಿಜಯನಗರ ಅರಸರ ಕಾಲದ ಕವಿಗಳ ಸಂಖ್ಯೆಗಿಂತ ಹೆಚ್ಚು. ಕನ್ನಡ, ಸಂಸ್ಕೃತ ಮತ್ತು ತೆಲುಗು – ಎಂದರೆ ತ್ರಿಭಾಷಾ ಸಾಹಿತ್ಯ ಪೋಷಣೆ ವಿಜಯನಗರೋತ್ತರ ಕಾಲದಲ್ಲೂ ಮುಂದುವರಿದಿದೆ. ಉಭಯಭಾಷಾ ವಿಶಾರದರು, ಉಭಯ ಸಾಹಿತ್ಯರಚಕರು ಈ ಮೂರೂ ಮನೆತನಗಳ ಆಶ್ರಿತ ಕವಿಗಳಲ್ಲಿದ್ದಾರೆ. ಟೀಕೆ – ವ್ಯಾಖ್ಯಾನ, ಪರಿಣಯ, ಮಾಹಾತ್ಮ್ಯ, ಚರಿತ್ರಕಾವ್ಯಗಳು ಮೂರೂ ಮನೆತನಗಳ ಸಾಹಿತ್ಯದಲ್ಲಿದ್ದು ವಿಜಯನಗರ ಪರಂಪರೆಯ ಮುಂದುವರಿಕೆಯಾಗಿದೆ. ಅಭಿವ್ಯಕ್ತಿ ಮಾಧ್ಯಮವಾಗಿ ಪದ್ಯದೊಂದಿಗೆ ಗದ್ಯವೂ ಸಮಸ್ಪರ್ಧೆಯಲ್ಲಿದೆ. ಸಾಹಿತ್ಯರೂಪದಲ್ಲಿ ಚಂಪು ಹಿಂದಕ್ಕೆ ಸರಿದಿದ್ದು, ಷಟ್ಪದಿ ಅದಕ್ಕಿಂತ ಹೆಚ್ಚಾಗಿ ಸಾಂಗತ್ಯ ಮೇಲುಗೈ ಪಡೆದಿದೆ. ಟೀಕಾಗದ್ಯ, ವ್ಯಾಖ್ಯಾನಗದ್ಯ, ಕಥನಗದ್ಯ, ಸಂವಾದಗದ್ಯ, ನಿರೂಪಣಗದ್ಯ – ಹೀಗೆ ಗದ್ಯದ ವೈವಿಧ್ಯವಿದೆ. ಹೊಸ ಸಾಹಿತ್ಯ ಪ್ರಕಾರಗಳಾಗಿ ನಾಟಕ – ಯಕ್ಷಗಾನಗಳು. ಪದ್ಯಪ್ರಕಾರಗಳಾಗಿ ಲಾಲೀಪದ – ಚೌಪದಿಗಳು ಪ್ರಯೋಗಗೊಂಡಿವೆ. ವ್ಯಾಕರಣ, ಅಲಂಕಾರ, ಸಂಗೀತ, ವೈದ್ಯ ಮುಂತಾದ ಶಾಸ್ತ್ರಕೃತಿಗಳಿಗೆ ಕನ್ನಡ ಟೀಕೆ ಬರೆಯುವ ಹಲವಾರು ಪ್ರಯತ್ನಗಳಾಗಿವೆ. ಆಶ್ರಿತಕವಿಗಳೊಂದಿಗೆ ಆಳುವ ದೊರೆಗಳೂ ಸಾಹಿತ್ಯರಚನೆ ಮಾಡಿ ಕನ್ನಡ ಸಾಹಿತ್ಯವನ್ನು ಮುನ್ನಡೆಸಿದ್ದಾರೆ. ವಿಜಯನಗರೋತ್ತರ ಕಾಲೀನ ಕನ್ನಡ ಸಾಹಿತ್ಯ ಸಮೃದ್ಧವಾಗಿ, ಸಂಪದ್ಯುಕ್ತವಾಗಿ, ಸರ್ವತೋಮುಖವಾಗಿ ಬೆಳೆದು ಬೆಲೆಬಾಳುವಂಥಾಗಿರುವುದು ಕನ್ನಡ ಸಾಹಿತ್ಯದ ಒಂದು ಅಪೂರ್ವ ಸಂಗತಿ.

ಅಧ್ಯಾಯ : ಹದಿನೈದು

ಸಂಸ್ಕೃತ ಸಾಹಿತ್ಯ

ವಿಜಯನಗರದ ಉಚ್ಛ್ರಾಯ ಸ್ಥಿತಿ ಹಾಗೂ ಅದರ ಅವನತ ಸ್ಥಿತಿಯು-ಮಧ್ಯಕಾಲೀನ ಸಂಸ್ಕೃತ ಸಾಹಿತ್ಯವನ್ನು ತಿಳಿಯಲು ಅವಕಾಶ ಮಾಡಿಕೊಡುತ್ತದೆ. ಸಂಸ್ಕೃತ ಸಾಹಿತ್ಯವು ಅಭಿಜಾತ ಗುಣವನ್ನು ಕಳೆದುಕೊಂಡು ಇಳಿಬಿದ್ದ ಕಾಲ; ಅತ್ಯುತ್ತಮ ರಚನೆಗಳೇ ಇಲ್ಲದ ಕಾಲ. ದೇಶೀಭಾಷೆಗಳು ಹುಲುಸಾಗಿ ಬೆಳೆದಿದ್ದವು. ಆ ಕಾಲದಲ್ಲಿ ಸಂಸ್ಕೃತ ಕಾವ್ಯ, ಗದ್ಯ, ನಾಟಕ, ರೂಪಕಗಳು ಅಲ್ಲೊಂದು ಇಲ್ಲೊಂದು ಸಾಮಾನ್ಯರೂಪದಲ್ಲಿ ಅವತರಿಸುತ್ತಿದ್ದುವು. ಒಂದು ವಿಶೇಷವೆಂದರೆ: ನಾಟಕಗಳಿಗಿಂತ ಡಿಮ, ಪ್ರಹಸನ ವ್ಯಾಯೋಗ, ಭಾಣ ಈ ಬಗೆಯ ರೂಪಕಗಳೇ ಹೆಚ್ಚು. ಪೌರಾಣಿಕ ಮಾದರಿಯ ಗದ್ಯಕಥೆಗಳು ಅಲ್ಲೊಂದು ಇಲ್ಲೊಂದು ರಚನೆಗೊಂಡದ್ದನ್ನು ನಾವಿಲ್ಲಿ ಕಾಣುತ್ತೇವೆ. ಸೃಜನಶೀಲ ಬರೆಹಗಳಿಗಿಂತ ಸೃಜನೇತರ ಬರೆಹಗಳೇ ಹೆಚ್ಚು. ಅದರಲ್ಲೂ ಬುಕ್ಕ ಮತ್ತು ಇಮ್ಮಡಿ ಹರಿಹರ ಇವರ ಆಳ್ವಿಕೆಯ ಸಂದರ್ಭದಲ್ಲಿ ವೇದ, ಉಪನಿಷತ್ತು, ಬ್ರಾಹ್ಮಣ ಮತ್ತು ಆರಣ್ಯಕ ಗ್ರಂಥಗಳಿಗೆ ಭಾಷ್ಯ ಹಾಗೂ ಸ್ಮೃತಿ ಗ್ರಂಥಗಳಿಗೆ ವ್ಯಾಖ್ಯಾನ ಅಥವಾ ಕೈಪಿಡಿ ರೂಪದ ಗ್ರಂಥಗಳ ರಚನೆಗಳದೇ ಸಿಂಹಪಾಲು. ಸೃಜನಶೀಲ ಬರೆಹಗಳಿಗಿಂತ ಸೃಜನೇತರ ಶಾಸ್ತ್ರಬರೆಹಗಳು ಹೆಚ್ಚಾಗಲು ಕಾರಣವೇನು? ಈ ಬಗೆಯ ಪ್ರಶ್ನೆಯನ್ನು ಹಾಕಿಕೊಳ್ಳುವುದು ಅನಿವಾರ್ಯ. ಇದನ್ನು ತುಸು ಸಾಂಸ್ಕೃತಿಕ ಚರಿತ್ರೆಯ ಪರಿಪ್ರೇಕ್ಷ್ಯದಲ್ಲಿಟ್ಟು ನೋಡುವುದು ಒಳಿತು!

ಮಧ್ಯಕಾಲೀನ ದಕ್ಷಿಣಭಾರತವು ಮೇಲೆ ಹೇಳಿದ ಸೃಜನೇತರ ಶಾಸ್ತ್ರಬರೆಹಗಳ ಒಂದು ಬಗೆಯ ಸಂಕೀರ್ಣಸ್ಥಿತಿಯ ನೆಲೆಯಲ್ಲಿ ಇದ್ದದ್ದು ಸರಿಯಷ್ಟೆ. ಆಗ ರಾಜಕೀಯ ಸುಭದ್ರತೆಯೂ ಇಲ್ಲವಾಗಿತ್ತು. ಹಲವಾರು ಬಗೆಯ ಸಣ್ಣಪುಟ್ಟ ಯುದ್ಧಗಳು; ಒಳಜಗಳಗಳು; ಹಂಚಿ-ಹರಿದುಹೋದ ತುಂಡು ಪ್ರದೇಶಗಳು; ಮುಸ್ಲಿಮ್ ಹಾಗೂ ಹಿಂದೂಗಳ ಆಳ್ವಿಕೆಗೆ ಒಳಪಟ್ಟ ಪ್ರದೇಶಗಳು; ವಿಭಿನ್ನ ಮತಗಳ ಸಂಘರ್ಷ; ಭಕ್ತಿಪಂಥದ ಮೇಲ್ಮೆ-ಇವುಗಳೆಲ್ಲ ಏಕಕಾಲದಲ್ಲಿ ಇದ್ದದ್ದು ಆಗಲೇ. ಇದು ಆ ಕಾಲದ ಸಾಂಸ್ಕೃತಿಕ ಸಂಕೀರ್ಣ ಸ್ಥಿತಿಯನ್ನು ಎತ್ತಿ ತೋರಿಸುತ್ತದೆ. ಈ ಸಂಕೀರ್ಣ ಸ್ಥಿತಿ ರಾಜಕೀಯದಲ್ಲಿ ಮಾತ್ರವಲ್ಲ; ಸಾಮಾಜಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ರಂಗಗಳಲ್ಲೂ ಇತ್ತು. ಹಲವು ಬಗೆಯ ಆಲೋಚನೆಗಳು, ಹಲವು ಬಗೆಯ ಸಿದ್ಧಾಂತಗಳು ಮೇಲೆವರಿದು ನಿಂತದ್ದು ಆಗಲೇ. ಇಂಥ ಕಾಲಸಂದರ್ಭವು ಸೃಜನಶೀಲ ನೆಲೆಗಿಂತ ಸೃಜನೇತರ ನೆಲೆಗಳಿಗೆ ಹೆಚ್ಚು ಅವಕಾಶ ಮಾಡಿಕೊಡುತ್ತದೆ. ಒಂದು ವಿಚಿತ್ರವೆಂದರೆ: ಆಯಾ ದೇಶೀಯ ಭಾಷೆಗಳು ಉದಾಹರಣೆಗೆ ಕನ್ನಡ, ತಮಿಳು, ಮಲೆಯಾಳಂ ಮತ್ತು ತೆಲುಗು ಅತ್ಯುತ್ತಮ ಸೃಜನಶೀಲ ನೆಲೆಯನ್ನು ಮೈಗೂಡಿಸಿಕೊಂಡು ನಿಂತಿದ್ದವು. ಆದರೆ, ಮಾರ್ಗವಾದ ಸಂಸ್ಕೃತವು ತನ್ನ ಎಲ್ಲ ಬಗೆಯ ಸೃಜನಶೀಲ ನೆಲೆಯನ್ನು ಕಳೆದುಕೊಂಡು ನಿಂತಿದ್ದನ್ನು, ಕಾಣುತ್ತೇವೆ. ಈ ಹಿನ್ನೆಲೆಯಲ್ಲಿ ವಿಜಯನಗರ ಕಾಲದ ಕನ್ನಡ ಸಾಹಿತ್ಯವು ಹಲವು ಅತ್ಯುತ್ತಮ ಬರೆಹಗಳಿಗೆ ಸಾಕ್ಷ್ಯವನ್ನು ಒದಗಿಸುತ್ತದೆ. ಸಂಸ್ಕೃತ ಸಾಹಿತ್ಯವು ಅದಕ್ಕೆ ವಿಮುಖವಾಗಿ ಶಾಸ್ತ್ರಸಾಹಿತ್ಯ ನಿರ್ಮಾಣದಲ್ಲಿ ನೆಲೆನಿಂತಿದ್ದನ್ನು ನಾವು ಕಾಣುತ್ತೇವೆ.

ಈ ಹಿನ್ನೆಲೆಯಲ್ಲಿ ನೋಡಿದರೆ, ವಿಜಯನಗರ ಕಾಲದ ಸಂಸ್ಕೃತ ಸಾಹಿತ್ಯದ ದಿಕ್ಕುಗಳು ಬಹುಮುಖ್ಯವಾಗಿ ಶಾಸ್ತ್ರನಿರ್ಮಾಣ ಮತ್ತು ವ್ಯಾಖ್ಯಾನ ನಿರ್ಮಾಣಗಳ ಕಡೆ ಮುಖಮಾಡಿದ್ದುವು. ಹಾಗಾಗಿ, ಈ ಕಾಲಸಂದರ್ಭವನ್ನು 'ಸಂಸ್ಕೃತ ಸಾಹಿತ್ಯ' ಎಂದು ಕರೆಯುವುದರ ಬದಲು 'ಸಂಸ್ಕೃತ ಶಾಸ್ತ್ರಸಾಹಿತ್ಯ'ವೆಂದು ಕರೆಯುವುದು ಸೂಕ್ತವೇನೋ? ಈ ಕಾಲದ ಮುಖ್ಯ ರಚನೆಗಳು ಶಾಸ್ತ್ರ ಹಾಗೂ ವ್ಯಾಖ್ಯಾನ ನಿರ್ಮಾಣದಂಥವುಗಳೇ. ಈ ನೆಲೆಗಳೇ ಏಕೆ ಮುಖ್ಯವಾದುವು ಎಂಬ ಸಂಗತಿಯನ್ನು ಚಾರಿತ್ರಿಕ ಹಿನ್ನೆಲೆಯಲ್ಲಿ ಪರಿಭಾವಿಸುವುದು ಸೂಕ್ತ.[೨]

ಮಧ್ಯಕಾಲೀನ ಸಂಸ್ಕೃತ ಸಾಹಿತ್ಯದ ರಚನೆಗಳು (ವಿಶಾಲವಾದ ಅರ್ಥದಲ್ಲಿ) ಮುಖ್ಯವಾಗಿ ನಾಲ್ಕು ಅಂಶಗಳನ್ನು ನೆಮ್ಮಿಕೊಂಡಿದ್ದುವು.

ಅ) ವೇದ, ಉಪನಿಷತ್ತು, ಹಾಗೂ ಸ್ಮೃತಿಗ್ರಂಥಗಳಿಗೆ ಭಾಷ್ಯ, ವ್ಯಾಖ್ಯಾನಗಳು

ಆ) ವ್ಯಾಕರಣ, ಜ್ಯೋತಿಷ್ಯ, ಅಲಂಕಾರ ಮೊದಲಾದ ಔಪಯೋಗಿಕ ರಚನೆಗಳು

ಇ) ಶಬ್ದಕೋಶ, ವಿಶ್ವಕೋಶದಂಥ ರಚನೆಗಳು

ಈ) ಕಾವ್ಯ, ಗದ್ಯಸಾಹಿತ್ಯ ಮತ್ತು ರೂಪಕಗಳ ರಚನೆಗಳು

ಈ ನಾಲ್ಕು ಅಂಶಗಳನ್ನು ಕುರಿತು ವಿವರಿಸಿಕೊಳ್ಳುವ ಮೊದಲು ಈ ಬಗೆಯ ರಚನೆಗಳಿಗೆ ಕಾರಣವಾದ ಸಾಂಸ್ಕೃತಿಕ ನೆಲೆಗಳು ಯಾವುವೆಂಬುದು ಕುತೂಹಲಕರ. ಈ ದೃಷ್ಟಿಯಿಂದ ಸಾಂಸ್ಕೃತಿಕ ಚರಿತ್ರೆಯ ಪರದೆಯನ್ನು ತುಸು ಸರಿಸಿ ನೋಡಬೇಕು. ನಡುಗಾಲದ ಕರ್ನಾಟಕಕ್ಕೆ ಆಗಾಗಲೇ ಒಂದು ಕಡೆ ವೀರಶೈವ-ಶೈವ ಪರಂಪರೆಗಳು; ಮತ್ತೊಂದು ಕಡೆ ಮಹಾರಾಷ್ಟ್ರದ ವಾರಕರಿ ಸಂಪ್ರದಾಯದ ಪ್ರಭಾವಕ್ಕೆ ಒಳಗಾಗಿ ಬಂದ ಭಾಗವತ ಸಂಪ್ರದಾಯ ಹಾಗೂ ಮಾಧ್ವ ಸಂಪ್ರದಾಯದ ಪರಂಪರೆಗಳು; ಬಿಜಾಪುರ-ಗುಲ್ಬರ್ಗದ ಸುತ್ತಮುತ್ತಣ ಅನುಭಾವಿಕವಿಗಳು ಹಾಗೂ ರೂಢಿ ಪರಂಪರೆಗಳು; ಇವುಗಳ ಜತೆ ಮೌಖಿಕ ಸಂಪ್ರದಾಯಕ್ಕೆ ಸೇರಿದ ಹತ್ತಾರು ಆನುಭಾವಿಕ ಜಗತ್ತುಗಳ ವಿವಿಧ ಪಂಥಗಳು; ಇವೆಲ್ಲವೂ ಒಂದಕ್ಕೊಂದು ಮಿಳಿತಗೊಂಡು ನಿಂತಿದ್ದವು. ಈ ಸಂದರ್ಭವು ಹಲವು ಬಗೆಯ ವ್ಯಾಖ್ಯಾನಗಳಿಗೂ ವಿಚಿತ್ರಬಗೆಯ ಸಾಂಸ್ಕೃತಿಕ ಮನಃಸ್ಥಿತಿಗೂ ಕಾರಣವಾಗಿತ್ತು. ಇಲ್ಲಿ ಚತುರ್ವರ್ಗ ಪುರುಷಾರ್ಥಗಳಿಗೆ ಸೇರಿದ ಬರೆಹಗಳೇ ಹೆಚ್ಚು. ಈ ಬಗೆಯ ಬರೆಹಗಳಿಗೂ ತತ್‌ಕಾಲ ಸಂದರ್ಭಕ್ಕೂ ವಿಚಿತ್ರ ಬಗೆಯ ತಾಳಮೇಳಗಳಿದ್ದವು. ಇವೆರಡನ್ನು ಪ್ರತ್ಯೇಕಿಸಿ ನೋಡುವ ಕ್ರಮವೊಂದು ಉಂಟು! ಆದರೆ, ಇವೆರಡನ್ನು ಅಕ್ಕಪಕ್ಕದಲ್ಲಿಟ್ಟು ನೋಡಿದರೆ ನಮಗೆ ಕೆಲವೊಂದು ವಿಶಿಷ್ಟ ಸಂಗತಿಗಳು ಕಾಣಿಸುತ್ತವೆ. 'ವೈದಿಕ' ಮತ್ತು 'ಅವೈದಿಕ'ವೆಂಬ ಪರಿಭಾಷೆಗಳಲ್ಲಿ ಮಾತ್ರ ಈ ಬಗೆಯ ಸಾಂಸ್ಕೃತಿಕ ಒಳಸತ್ಯಗಳನ್ನು ತಿಳಿಯಲು ಸಾಧ್ಯ.

ವಿಜಯನಗರ ಕಾಲ, ವೈದಿಕ ಪರಂಪರೆಯ ಪುನರುಜ್ಜೀವನ ಕಾಲವೆಂದು ಖಚಿತವಾಗಿ ಹೇಳಬಹುದು. ಈ ಕಾಲಘಟ್ಟದಲ್ಲಿ ನೂರಾರು ವೈದಿಕವಿದ್ವಾಂಸರು, ವೈದಿಕ ಶಾಸ್ತ್ರಸಾಹಿತ್ಯವನ್ನು ನೆಮ್ಮಿ ನಿಂತರು. ಅವರಿಗೆ ಪ್ರಾಮುಖ್ಯವಾಗಿ ಅವೈದಿಕ ಚಟುವಟಿಕೆಗಳ ಎದುರು ವೈದಿಕ ವ್ಯಾಖ್ಯಾನಗಳನ್ನು ನಿಲ್ಲಿಸುವ ಆಗತ್ಯವಿತ್ತು. ಅವರು ಅದನ್ನು ಸಮರ್ಥವಾಗಿ ಮಾಡಿದರು. ಆ ಕಾಲದ ಸಾಯಣ, ಮಾಧವ, ವಿದ್ಯಾರಣ್ಯ ಮೊದಲಾದ ವೈದಿಕ ವಿದ್ವಾಂಸರನ್ನೂ ತತ್ತ್ವಚಿಂತಕರನ್ನೂ ಮುಖ್ಯವಾಗಿ ಹೆಸರಿಸಬಹುದು.[೩] ಈ ಅಂಶವನ್ನು ಇನ್ನಷ್ಟು ವಿಸ್ತರಿಸಿಕೊಂಡು ಹೇಳಬಹುದಾದರೆ: ಆ ಕಾಲಘಟ್ಟದ ಸೃಜನಶೀಲ ಸಾಹಿತ್ಯವು ವೈದಿಕ ಪರಿಭಾಷೆಗಳಿಂದ ಪಾರಾಗಿರಲಿಲ್ಲ. ಅವು ಒಂದರ್ಥದಲ್ಲಿ ಅವುಗಳ ಉಪಉತ್ಪತ್ತಿಗಳಾಗಿದ್ದುವು. ವೇದಭಾಷ್ಯಗಳ ರಚನೆಗೆ ಪೂರಕವಾಗಿ ಸ್ಮೃತಿ ವ್ಯಾಖ್ಯಾನಗಳೂ ಅವುಗಳ ಕೈಪಿಡಿಗಳೂ ಅವುಗಳಿಗೆ ಪೂರಕವಾಗಿ ರೂಪಕಗಳ ರಚನೆಗಳೂ

ಒಂದಕ್ಕೊಂದು ಪಾರಸ್ಪರಿಕ ಸಂಬಂಧವನ್ನು ಪ್ರಸ್ಥಾಪಿಸಿಗೊಂಡಿದ್ದವು. ಉದಾ: ತೈತ್ತಿರೀಯಸಂಹಿತಾ ಭಾಷ್ಯ (ಕೃಷ್ಣಯಜುರ್ವೇದ) ಮತ್ತು ಕಾಣ್ವಸಂಹಿತಾ ಭಾಷ್ಯ (ಶುಕ್ಲ ಯಜುರ್ವೇದ) ಇವುಗಳಿಗೆ ಪೂರಕವಾಗಿ 'ಯಜ್ಞತಂತ್ರ ಸುಧಾನಿಧಿ' ಎಂಬ ಸ್ವತಂತ್ರಕೃತಿಯೊಂದು ಹುಟ್ಟಿಕೊಂಡಿತು. ಇದು ಯಜ್ಞಕರ್ಮ ವಿಧಾನಗಳನ್ನು ಸರಳವಾಗಿ ನಿರೂಪಿಸುವ ಕೃತಿಯಾಗಿದೆ. ಇದೇ ತತ್ತ್ವವನ್ನು ಕೃಷ್ಣಮಿಶ್ರನ 'ಪ್ರಬೋಧ ಚಂದ್ರೋದಯ' ಮತ್ತು ವೇಂಕಟನಾಥನ 'ಸಂಕಲ್ಪ ಸೂರ್ಯೋದಯ' ನಾಟಕಗಳು ತಾತ್ತ್ವಿಕವಾಗಿ ಮುಂದುವರೆಸಿದುವು.

ಈ ಹಿನ್ನೆಲೆಯಲ್ಲಿ ನೋಡಿದರೆ ಹಲವು ಬಗೆಯ ರಚನೆಗಳಿಂದ ಕೂಡಿದ ಸಂಸ್ಕೃತ ಬರೆಹಗಳನ್ನು ಇಲ್ಲಿ ಕಾಣುತ್ತೇವೆ. ಈ ರಚನೆಗಳಲ್ಲಿ ಭಾಷ್ಯ ಮತ್ತು ವ್ಯಾಖ್ಯಾನಗಳದೇ ಮೇಲುಗೈ. ದಕ್ಷಿಣಭಾರತದಲ್ಲಿ ಭಾಷ್ಯ ಮತ್ತು ವ್ಯಾಖ್ಯಾನಗಳು ರಚನೆಗೊಳ್ಳುತ್ತಿದ್ದರೆ; ಉತ್ತರಭಾರತದಲ್ಲಿ ವ್ಯಾಖ್ಯಾನ ಮತ್ತು ಟಿಪ್ಪಣಿಗಳು ರಚನೆಗೊಳ್ಳುತ್ತಿದ್ದುವು. ಮುಖ್ಯವಾಗಿ ತರ್ಕ, ಜ್ಯೋತಿಷ್ಯ, ಅಲಂಕಾರಗಳ ಹೊಸರಚನೆಗಳು ಮತ್ತು ವ್ಯಾಖ್ಯಾನಗಳನ್ನು ಈ ಹೊತ್ತಿನಲ್ಲಿ ಕಾಣುತ್ತೇವೆ. ವಿಜಯನಗರ ಕಾಲದ ಸಂಸ್ಕೃತಬರೆಹಗಳನ್ನು ಮುಖ್ಯವಾಗಿ ನಾಲ್ಕು ಸಂಗತಿಗಳಾಗಿ ಮಾಡಿಕೊಂಡು ನೋಡುವುದು ಅಧ್ಯಯನದ ದೃಷ್ಟಿಯಿಂದ ಹೆಚ್ಚು ಸೂಕ್ತ. ಪ್ರಸ್ತುತ ಸಮೀಕ್ಷೆಯು ಕೃತಿ ವಿವರಗಳ ಜೊತೆಜೊತೆಗೆ ಅವುಗಳಿಗೆ ಹಿನ್ನೆಲೆಯಾದ ತಾತ್ತ್ವಿಕ ಸಂದರ್ಭವನ್ನು ಮತ್ತು ಸಾಂಸ್ಕೃತಿಕ ಸಂಗತಿಗಳನ್ನು ತಿಳಿಯುವ ಆಸಕ್ತಿಯನ್ನು ಹೊಂದಿದೆ.

ವೇದ, ಉಪನಿಷತ್ತು ಹಾಗೂ ಸ್ಮೃತಿ ಗ್ರಂಥಗಳಿಗೆ ಭಾಷ್ಯ-ವ್ಯಾಖ್ಯಾನಗಳು

ಆ ಕಾಲಘಟ್ಟದ ಸಂಸ್ಕೃತಶಾಸ್ತ್ರ ಸಾಹಿತ್ಯವು ವಿಪುಲವಾಗಿದೆ. ನೂರಾರು ವಿದ್ವಾಂಸರು ಸಂಸ್ಕೃತದ ಕಡೆ ಮನಸ್ಸನ್ನು ಹೊರಳಿಸಿದ್ದಾರೆ. ಅದರಲ್ಲೂ ವೇದೋಪನಿಷತ್ತುಗಳ ಮೇಲೆ ಬಂದ ವ್ಯಾಖ್ಯಾನಗಳಿಗೆ ಕಡಮೆಯಿಲ್ಲ. ಉಪನಿಷತ್ತುಗಳಲ್ಲೂ ಋಗ್ವೇದ, ಯಜುರ್ವೇದ ಮತ್ತು ಸಾಮವೇದಗಳಿಗೆ ಸೇರಿದ ಹಲವು ಉಪನಿಷತ್ತುಗಳಿಗೆ ವ್ಯಾಖ್ಯಾನಗಳು ಉಂಟು. ಈ ಕಾಲದ ಮುಖ್ಯ ಭಾಷ್ಯಕಾರರು ಶ್ರೀಸಾಯಣರೇ. ಅವರು ಬರೆದ 'ವೇದಾರ್ಥ ಪ್ರಕಾಶ' ಈ ಕಾಲದ ಸರ್ವೋತ್ತಮ ಕೃತಿ. ಶ್ರೀಸಾಯಣರು ವಿದ್ಯಾರಣ್ಯರ ಸೋದರರರಷ್ಟೇ. ಹಾಗೆ ನೋಡಿದರೆ ಶ್ರೀಸಾಯಣರೊಬ್ಬರೇ ಕೃತಿಗಳ ರಚನೆ ಮಾಡಿದಂತಿಲ್ಲ. ಅವರಿಗೆ ಸಹಾಯಕರಾಗಿ ಪಂಚಾಗ್ನಿ ಮಾಧವ, ನರಹರಿ ಸೋಮಯಾಜಿ, ನಾರಾಯಣ ವಾಜಪೇಯಿ, ಪಂಢರಿದೀಕ್ಷಿತ, ನಾಗಾಭರಣ, ಮತ್ತು ವಾಮನ ಭಟ್ಟ ಇವರೆಲ್ಲ ಇದ್ದರೆಂಬುದು ಅನ್ಯಸಾಕ್ಷ್ಯಾಧಾರಗಳಿಂದ ತಿಳಿದುಬರುತ್ತದೆ. 'ವೇದಾರ್ಥ ಪ್ರಕಾಶ'ವು ನಾಲ್ಕು ವೇದಗಳಿಗೆಲ್ಲ ಕೀಲಿಕೈಯಂತೆ ಇದೆ. ಒಂದು ಅರ್ಥದಲ್ಲಿ ಇದು ಸಮಗ್ರ ವೇದಕ್ಕೆಲ್ಲ ಸಂಪೂರ್ಣ ವ್ಯಾಖ್ಯಾನ. ಅವರು ತಮ್ಮ ಭಾಷ್ಯಭೂಮಿಕೆಯಲ್ಲಿ ವೈದಿಕ ತತ್ತ್ವದ ಮಹತ್ತ್ವವನ್ನೂ ಅದರ ಪ್ರಯೋಜನ-ಉದ್ದೇಶಗಳನ್ನೂ ಹೇಳಿದ್ದಾರೆ. ಅವರು ಮಾಡಿದ ಸಂಪೂರ್ಣ ಭಾಷ್ಯಗ್ರಂಥಗಳು ಹದಿನೆಂಟಕ್ಕೂ ಮಿಕ್ಕಿವೆ. ಇವೆಲ್ಲವೂ ಬುಕ್ಕನ ಆಳ್ವಿಕೆಯಲ್ಲಿ ರಚಿತವಾಗಿವೆ. ಅವರು ರಚಿಸಿದ ಅಥರ್ವಸಂಹಿತಾಭಾಷ್ಯ ಮತ್ತು ಶತಪಥ ಬ್ರಾಹ್ಮಣಕ್ಕೆ ಬರೆದ ಭಾಷ್ಯಗಳು ಇಮ್ಮಡಿ ಹರಿಹರನ ಕಾಲಕ್ಕೆ ರಚಿತವಾದಂತೆ ತೋರುತ್ತವೆ. ಉಳಿದ ಗ್ರಂಥಗಳು ಹೀಗಿವೆ. ೧) ತೈತ್ತಿರೀಯಸಂಹಿತಾ ಭಾಷ್ಯ ೨) ತೈತ್ತಿರೀಯಬ್ರಾಹ್ಮಣ ಭಾಷ್ಯ ೩) ತೈತ್ತಿರೀಯಆರಣ್ಯಕ ಭಾಷ್ಯ ೪) ಋಕ್ಸಂಹಿತಾ ಭಾಷ್ಯ ೫) ಐತರೇಯಬ್ರಾಹ್ಮಣ ಭಾಷ್ಯ ೬) ಐತರೇಯಆರಣ್ಯಕ ಭಾಷ್ಯ ೭) ಸಾಮಸಂಹಿತಾ ಭಾಷ್ಯ ೮) ತಾಂಡ್ಯ ಮಹಾಬ್ರಾಹ್ಮಣ ಭಾಷ್ಯ ೯) ಷಡ್ವಿಂಶಬ್ರಾಹ್ಮಣ ಭಾಷ್ಯ ೧೦)ಸಾಮವಿಧಾನ ಬ್ರಾಹ್ಮಣ ಭಾಷ್ಯ ೧೧) ಆರ್ಷೇಯಬ್ರಾಹ್ಮಣ ಭಾಷ್ಯ ೧೨) ದೇವತಾಧ್ಯಾಯ ೧೩) ಉಪನಿಷದ್‌ಬ್ರಾಹ್ಮಣ ಭಾಷ್ಯ ೧೪) ಸಂಹಿತೋಪನಿಷದ್ ಬ್ರಾಹ್ಮಣ ಭಾಷ್ಯ ೧೫) ವಂಶಬ್ರಾಹ್ಮಣ ಭಾಷ್ಯ ೧೬) ಕಾಣ್ವಸಂಹಿತಾ ಅಥವಾ

ಶುಕ್ಲ ಯಜುರ್ವೇದ ಭಾಷ್ಯ,ಇವೇ ಮುಂತಾದುವು. ಪ್ರತಿಯೊಂದು ಸಂಹಿತಾಭಾಷ್ಯಗಳಿಗೂ ವಿಸ್ತಾರವಾದ ಪೀಠಿಕೆ ಇದೆ. ಈ ಪೀಠಿಕೆಯು ಗದ್ಯರೂಪದಲ್ಲಿದೆ. ಆಯಾ ಗ್ರಂಥಗಳ ಸ್ವರೂಪ, ಉದ್ದೇಶ, ಪ್ರಯೋಜನವೆಂಬ ಅನುಬಂಧ ಚತುಷ್ಟಯಗಳನ್ನು ಈ ಪೀಠಿಕೆಗಳು ನಮಗೆ ಮನವರಿಕೆ ಮಾಡಿಕೊಡುತ್ತವೆ. ಅವರು ವೇದವಾಕ್ಯಗಳನ್ನು ಎಷ್ಟು ಬಗೆಗಳಲ್ಲಿ ತಿಳಿಯಬಹುದೆಂಬುದನ್ನು ಮನಗಾಣಿಸಿಕೊಟ್ಟಿದ್ದಾರೆ. ಶ್ರೀಸಾಯಣರು ಮುಖ್ಯವಾಗಿ ಯಾಜ್ಞಿಕಪರವಾದ ಅರ್ಥವನ್ನು ಮಾಡಿರುವುದು ಗಮನಿಸಬೇಕಾದ ಸಂಗತಿ. ಶ್ರೀಸಾಯಣರ ಗದ್ಯವು ಗಂಭೀರವಾಗಿದೆ. ಹಿತ-ಮಿತವೂ ತರ್ಕ ಸಮ್ಮತವೂ ಆಗಿದೆ. ವೇದಗಳಿಗೆ ತಕ್ಕುದಾದ ಸಂಸ್ಕೃತ ಭಾಷೆಯು ಇಲ್ಲಿ ಗಂಭೀರವಾಗಿ ಹರಿಯುತ್ತದೆ.[೪] ಅವರು ಪ್ರತಿಯೊಂದು ಋಕ್ಕುಗಳಿಗೂ ಒಂದು ಸಣ್ಣ ಪೀಠಿಕೆ ಬರೆದು ದೇವತಾ ವಿಚಾರ, ಛಂದಸ್ಸಿನ ವಿಚಾರ, ವಿನಿಯೋಗಗಳನ್ನು ಹೇಳಿ ಮಂತ್ರಭಾಗವನ್ನು ನೀಡುತ್ತಾರೆ. ಅದಾದ ಮೇಲೆ ತಮ್ಮ ಭಾಷ್ಯದಲ್ಲಿ ಮಂತ್ರದ ಅಂತರಾರ್ಥವನ್ನು ತಿಳಿಸುತ್ತಾರೆ. ಆ ಭಾಷ್ಯವು ಅರ್ಥವಿಚಾರ, ಶಬ್ದವಿಚಾರ, ವ್ಯಾಕರಣ ರೂಪ, ಧರ್ಮಶಾಸ್ತ್ರದ ಹಿನ್ನೆಲೆ, ದೈವತ ಕತೆಗಳು ಹೀಗೆ ಹಲವು ಬಗೆಯ ವಿವರಗಳನ್ನು ಒಳಗೊಂಡಿದೆ. ಅನೇಕ ತೊಡಕಿನ ಭಾಗಗಳನ್ನು ವಿವರಿಸಿಕೊಟ್ಟಿರುವ ಬಗೆಯು ನಮ್ಮ ಗಮನವನ್ನು ಸೆಳೆಯುತ್ತದೆ.

ಶ್ರೀಸಾಯಣರ ಸಮಕಾಲೀನರು ಅವರ ಅನಂತರದವರು ಧರ್ಮಶಾಸ್ತ್ರದ ಮೇಲೆ ವ್ಯಾಖ್ಯಾನಗಳನ್ನು ಬರೆದರು. ವಿದ್ಯಾರಣ್ಯರ ಪರಾಶರಮಾಧವೀಯ ವ್ಯಾಖ್ಯಾನವು ನಮ್ಮ ಗಮನವನ್ನು ಸೆಳೆಯುತ್ತದೆ. ಶ್ರೀಸಾಯಣರ ಪ್ರಾಯಶ್ಚಿತ್ತ ಸುಧಾನಿಧಿ ಮತ್ತು ಪುರುಷಾರ್ಥ ಸುಧಾನಿಧಿ-ಇವೆರಡೂ ಈ ಕಾಲದ ಅತ್ಯುತ್ತಮ ಸ್ವತಂತ್ರ ವ್ಯಾಖ್ಯಾನ ಗ್ರಂಥಗಳು. ಶ್ರೀಸಾಯಣರು ವೇದಗಳಿಗೆ ಭಾಷ್ಯ ಬರೆದ ಮೇಲೆ ಸ್ಮೃತಿಗಳಿಗೆ ಸಂಬಂಧಿಸಿದ ಕೆಲವೊಂದು ವಿಚಾರಗಳನ್ನು ಮಂಡಿಸಬೇಕೆಂಬ ಇಚ್ಛೆ ಇತ್ತು. ಇವೆರಡು ಕೃತಿರಚನೆಗಳ ಮೂಲಕ ಅದನ್ನು ಆಗುಗೊಳಿಸಿದರು. ಇದೇ ಬಗೆಯ ಇನ್ನೊಂದೆರಡು ರಚನೆಗಳನ್ನು ರೇವಣ್ಣಭಟ್ಟನ 'ಸ್ಮೃತಿಚಂದ್ರಿಕೆ' ವರದಾಚಾರ್ಯರ ಮಗ ನರಹರಿಯ 'ಸ್ಮೃತಿಕೌಸ್ತುಭ' ಗಳಲ್ಲಿ ನಾವು ಕಾಣುತ್ತೇವೆ. ಇವು ಶ್ರೀಸಾಯಣರ ಗ್ರಂಥರಚನಾ ಮಾದರಿಯನ್ನೆ ಹೋಲುತ್ತವೆ. ಶ್ರೀಸಾಯಣರ ಮತ್ತೊಂದು ಗ್ರಂಥ 'ಯಜ್ಞತಂತ್ರ ಸುಧಾನಿಧಿ'. ಇದು ಯಜ್ಞಗಳಲ್ಲಿ ನಡೆಸುವ ಕರ್ಮವಿಧಾನಗಳನ್ನು ವಿವರಿಸುವ ಕೈಪಿಡಿ. ಶ್ರೀಸಾಯಣರು ಇದನ್ನು ಇಮ್ಮಡಿ ಹರಿಹರನ ಆಳಿಕೆಯಲ್ಲಿ ರಚಿಸಿದರು. ಶ್ರೀಸಾಯಣರ ಪ್ರಸ್ತುತ ಕೃತಿಯು ಅವರು ವೇದೋಪನಿಷತ್ತುಗಳಿಗೆ ಬರೆದ ಭಾಷ್ಯಕ್ಕೆ ಪೂರಕಭಾಗದಂತಿದೆ. ಶ್ರೀಸಾಯಣರ ಪ್ರಾಯಶ್ಚಿತ್ತ ಸುಧಾನಿಧಿ, ಪುರುಷಾರ್ಥ ಸುಧಾನಿಧಿ ಮತ್ತು ಯಜ್ಞತಂತ್ರ ಸುಧಾನಿಧಿ-ಇವು ಮೂರು ವೈದಿಕ ಆಲೋಚನೆಗಳ ಕೈಪಿಡಿಗಳಂತಿವೆ. ಇವುಗಳ ಜೊತೆಗೆ ಹಿಂದೆ ಪ್ರಸ್ತಾವಿಸಿದ 'ಪರಾಶರ ಮಾಧವೀಯ' ಎಂಬ ಕೃತಿಯನ್ನೂ ನೋಡಬಹುದು. ಇದು 'ಪರಾಶರಸ್ಮೃತಿ'ಗೆ ವಿದ್ಯಾರಣ್ಯರು ರಚಿಸಿದ ವ್ಯಾಖ್ಯಾನ. 'ವ್ಯವಹಾರ ಮಾಧವೀಯ' ಇದರ ಒಂದು ಭಾಗವಾಗಿರುವುದು ಸ್ವಾರಸ್ಯದ ಸಂಗತಿ. ಇದು ಒಟ್ಟು ಗ್ರಂಥದ ನಾಲ್ಕನೆಯ ಒಂದು ಭಾಗವಾಗಿದೆ. ಇದು ಆಚಾರಕಾಂಡದಲ್ಲಿರುವ ಕೆಲವು ಶ್ಲೋಕಗಳ ಮೇಲೆ ರಚಿಸಿರುವ 'ವ್ಯವಹಾರ' ವಿಷಯವಾದ ಒಂದು ಸ್ವತಂತ್ರ ಪ್ರಬಂಧ.

ವೇದ, ಬ್ರಾಹ್ಮಣ, ಆರಣ್ಯಕ ಹಾಗೂ ಸ್ಮೃತಿಗ್ರಂಥಗಳ ಮೇಲೆ ಈ ಕಾಲದಲ್ಲಿ ಬಂದ ಗ್ರಂಥಗಳು ಅಪಾರವಷ್ಟೆ. ಇವುಗಳ ಹಿನ್ನೆಲೆಯಲ್ಲಿ ಹಲವು ಪ್ರಸ್ಥಾನಗಳು ಹಲವು ಕವಲುಗಳಾಗಿ ಬೆಳೆದುಬಂದುವು. ಅವುಗಳಲ್ಲಿ ಅದ್ವೈತ ಮತ್ತು ದ್ವೈತ ಪ್ರಸ್ಥಾನಗಳು ಮುಖ್ಯ. ಅದ್ವೈತ ಪ್ರಸ್ಥಾನಕ್ಕೆ ಸಂಬಂಧಿಸಿದ ಗ್ರಂಥಗಳು ಅಪಾರವಾಗಿ ಬಂದುವು. ನಡುಗಾಲದ ಅದ್ವೈತ ಗ್ರಂಥಗಳೆಂದರೆ ಅವು ಸ್ವಯಂಪೂರ್ಣ ರಚನೆಗಳೇ. ಶಂಕರರು ಉಪನಿಷತ್, ಗೀತೆ ಮತ್ತು ಬ್ರಹ್ಮಸೂತ್ರಗಳಿಗೆ ಭಾಷ್ಯ ಬರೆದರಷ್ಟೆ. ಅವರ ಭಾಷ್ಯಗಳಿಗೆ ವಿವೃತ್ತಿಗಳೂ ಟಿಪ್ಪಣಿಗಳೂ ಬಂದುವು. ಆದರೆ, ವಿಜಯನಗರ ಕಾಲದಲ್ಲಿ ವಿವೃತ್ತಿ ಮತ್ತು ಟಿಪ್ಪಣಿಗಳಿಗಿಂತ ಸ್ವತಂತ್ರ

ಗ್ರಂಥರಚನೆಗಳ ಪ್ರಮಾಣವೇ ಹೆಚ್ಚು. ವಿದ್ಯಾರಣ್ಯರ ಗುರುಗಳು ಭಾರತೀತೀರ್ಥರು; ಇವರು ಅದ್ವೈತಿಗಳು. ಇವರು 'ವೈಯಾಸಿಕ ನ್ಯಾಯಮಾಲಾ'ವನ್ನು ಬರೆದರು. ಇದು ಬ್ರಹ್ಮಸೂತ್ರಗಳ ಸಾರಸಂಗ್ರಹ. ಇದರಲ್ಲಿ ನಾಲ್ಕು ಅಧ್ಯಾಯಗಳಿವೆ. ಅವರು 'ವಿಸ್ತಾರ'ವೆಂಬ ಹೆಸರಿನ ಗದ್ಯವ್ಯಾಖ್ಯಾನವನ್ನು ಇದರೊಂದಿಗೆ ಸೇರಿಸಿದ್ದಾರೆ. ಭಾರತೀತೀರ್ಥರ ಶಿಷ್ಯರಾದ ವಿದ್ಯಾರಣ್ಯರ ಹೆಸರು ಚಿರಸ್ಥಾಯಿಯಾದದ್ದು. ಅವರ 'ಜೀವನ್ಮುಕ್ತಿವಿವೇಕ' 'ಪಂಚದಶೀ' ಇವೆರಡೂ ಅದ್ವೈತವೇದಾಂತಕ್ಕೆ ಸೇರಿದ. ಪ್ರಕರಣ ಗ್ರಂಥಗಳು. 'ಜೀವನ್ಮುಕ್ತಿವಿವೇಕ'ವು ಅದ್ವೈತದ ಹಿನ್ನೆಲೆಯಲ್ಲಿ 'ಜೀವನ್ಮುಕ್ತಿ' ಪರಿಕಲ್ಪನೆಯನ್ನು ವಿವರಿಸುತ್ತದೆ. ಪ್ರಾಸಂಗಿಕವಾಗಿ ಇದರಲ್ಲಿ ಸಂನ್ಯಾಸ ಮತ್ತು ವಿದೇಹ ಮುಕ್ತಿಗಳ ವಿಷಯವನ್ನು ಚರ್ಚಿಸುತ್ತದೆ. 'ಪಂಚದಶೀ' ಹೆಸರೆ ಸೂಚಿಸುವಂತೆ ಇದರಲ್ಲಿ ಹದಿನೈದು ಅಧ್ಯಾಯಗಳಿವೆ. ಅದ್ವೈತ ವೇದಾಂತದ ಮುಖ್ಯ ಸಿದ್ಧಾಂತಗಳನ್ನು ವಿಶದವಾಗಿ ಈ ಕೃತಿಯು ನಿರೂಪಿಸುತ್ತದೆ. ವಿದ್ಯಾರಣ್ಯರ ಮತ್ತೊಂದು ಕೃತಿ 'ಅನುಭೂತಿ ಪ್ರಕಾಶ'. ಇದು ಉಪನಿಷತ್ತುಗಳ ತಿರುಳನ್ನು ಸಂಗ್ರಾಹ್ಯವಾಗಿ ನಿರೂಪಿಸುತ್ತದೆ. ಈ ಗ್ರಂಥವು ಐತರೇಯ, ಛಾಂದೋಗ್ಯ, ಮುಂಡಕ, ಕೌಶೀತಕೀ, ಮೈತ್ರಾಯಿಣೀ, ಕಠ, ಶ್ವೇತಾಶ್ವತರ, ಬೃಹದಾರಣ್ಯಕ, ತಲವಕಾರ(ಕೇನ) ಈ ಉಪನಿಷತ್ತುಗಳ ಆಧಾರದ ಮೇಲೆ ರಚಿತವಾಗಿದೆ.

ನಡುಗಾಲದ ದ್ವೈತಾದ್ವೈತ ದರ್ಶನಗಳ ಕೃತಿಗಳು ಇರುವಂತೆ ಶಕ್ತಿವಿಶಿಷ್ಟಾದ್ವೈತದರ್ಶನದ ಕೃತಿಗಳೂ ಉಂಟು. ಆದರೆ, ಅವು ವಿರಳವಾಗಿವೆ. ಮಾಧವ ಮಂತ್ರಿಯು 'ಶೈವಾಮ್ನಾಯಸಾರ' ವೆಂಬ ಗ್ರಂಥವನ್ನು ಸಂಕಲಿಸಿದನು. ೧೫ನೆಯ ಶತಮಾನದ ಅಂತ್ಯಭಾಗದಲ್ಲಿದ್ದ ವೀರಣ್ಣಾರಾಧ್ಯ ಎಂಬುವನು 'ಪಂಚರತ್ನ' ಎಂಬ ಗ್ರಂಥವನ್ನು ರಚಿಸಿದನು. ಈ ಗ್ರಂಥಕ್ಕೆ ರೇವಣಾರಾಧ್ಯ ಎಂಬುವನು ವ್ಯಾಖ್ಯಾನವನ್ನು ಬರೆದಿದ್ದಾನೆ. ವೀರಶೈವ ದರ್ಶನದಲ್ಲಿ ಪಾಲ್ಕುರಿಕೆ ಸೋಮನಾಥನದು ದೊಡ್ಡ ಹೆಸರಷ್ಟೆ. ಅವನು 'ಸೋಮನಾಥ ಭಾಷ್ಯ'ವನ್ನು ಬರೆದನು. ವೇದಗಳಿಗೆ ಶ್ರೀಸಾಯಣರ ಭಾಷ್ಯಗಳಿದ್ದಂತೆ ಈ ಕಾಲದಲ್ಲಿ ಪಾಲ್ಕುರಿಕೆ ಸೋಮನಾಥನು ವೀರಶೈವದರ್ಶನವನ್ನು ವಿವರಿಸಲು ಭಾಷ್ಯವನ್ನು ಬರೆದನು. ಇವನು ರುದ್ರಭಾಷ್ಯ, ಅಷ್ಟಕ, ಪಂಚಕ, ನಮಸ್ಕಾರಗದ್ಯ, ಅಕ್ಷರಾಂತಗದ್ಯ, ಚತುರ್ವೇದ, ತಾತ್ಪರ್ಯಸಂಗ್ರಹ ಇವೇ ಮೊದಲಾದ ಗ್ರಂಥಗಳನ್ನು ಬರೆದಿದ್ದಾನೆ. ಪಾಲ್ಕುರಿಕೆ ಸೋಮನಾಥನಂತೆ ಶಕ್ತಿವಿಶಿಷ್ಟಾದ್ವೈತ ದರ್ಶನವನ್ನು ವಿವರಿಸಲು ಶ್ರೀಪತಿಪಂಡಿತನು 'ಶ್ರೀಕರ ಭಾಷ್ಯ'ವನ್ನು ಬರೆದನು. ಇದು ಶಕ್ತಿ ವಿಶಿಷ್ಟಾದ್ವೈತ ದರ್ಶನದ ಮಹಾಗ್ರಂಥವೆಂದು ಸನ್ಮಾನಿತವಾಗಿದೆ. ಇದು 'ಬ್ರಹ್ಮಸೂತ್ರ'ಕ್ಕೆ ಬರೆದ ಭಾಷ್ಯ.

ಸಂಹಿತೆ, ಬ್ರಾಹ್ಮಣ, ಆರಣ್ಯಕ, ಉಪನಿಷತ್ತು, ಸ್ಮೃತಿಗ್ರಂಥಗಳಲ್ಲದೆ; ನ್ಯಾಯ, ಮೀಮಾಂಸಾ, ಮೊದಲಾದ ದರ್ಶನ ಕೃತಿಗಳಿಗೆ ನೂರಾರು ವ್ಯಾಖ್ಯಾನಗಳೂ ವೃತ್ತಿಗಳೂ ವಿವೃತ್ತಿಗಳೂ ಟಿಪ್ಪಣಿಗಳೂ ರಚನೆಗೊಂಡವು. ಭಾರತ, ಭಾಗವತ, ರಾಮಾಯಣಗಳಿಗೆ ವ್ಯಾಖ್ಯಾನಗಳೂ ಸ್ವತಂತ್ರಗ್ರಂಥ ರಚನೆಗಳೂ ಆದುವು. ವ್ಯಾಸರಾಯರ ಸಮಕಾಲೀನರಾದ ವರದರಾಜಾಚಾರ್ಯರ 'ವರದರಾಜೀಯ'ವು ಆನಂದತೀರ್ಥರ 'ಮಹಾಭಾರತ ತಾತ್ಪರ್ಯ ನಿರ್ಣಯ'ಕ್ಕೆ ಬರೆದ ಬೃಹದ್ ವ್ಯಾಖ್ಯಾನ ಗ್ರಂಥ ಉಡುಪಿಯ ಪೇಜಾವರಮಠದ ವಿಜಯಧ್ವಜ ತೀರ್ಥರು ಕ್ರಿ.ಶ. ೧೩೭೮-೧೪೩೮ರಲ್ಲಿ ಭಾಗವತಕ್ಕೆ ವ್ಯಾಖ್ಯಾನವೊಂದನ್ನು ಬರೆದರು. ಶ್ರೀಕೃಷ್ಣದೇವರಾಯನ ಪ್ರೇರಣೆಯಿಂದ ಈಶ್ವರ ದೀಕ್ಷಿತನೆಂಬುವನು ಶ್ರೀಮದ್ರಾಮಾಯಣದ ಮೇಲೆ ಎರಡು ವ್ಯಾಖ್ಯಾನಗಳನ್ನು ಬರೆದಿದ್ದಾನೆ. ಶ್ರೀಕೃಷ್ಣದೇವರಾಯನ ಆಸ್ಥಾನದಲ್ಲಿದ್ದ ದಿವಾಕರನೆಂಬ ಪಂಡಿತನು ಮಹಾಭಾರತದ ಉಪಕಥೆಗಳನ್ನು ಆಧರಿಸಿ 'ಪಾರಿಜಾತಾಪಹರಣ', 'ದೇವೀಸ್ತುತಿ', 'ರಸಮಂಜರಿ' ಮತ್ತು 'ಭಾರತಾಮೃತ'ಗಳನ್ನು ರಚಿಸಿದ್ದಾನೆ. ಇವು ವ್ಯಾಖ್ಯಾನಗಳು ಅಲ್ಲದಿದ್ದರೂ ಸ್ವತಂತ್ರ ಬಗೆಯ ರಚನೆಗಳೇ ಆಗಿರುವುದು ಒಂದು ವೈಶಿಷ್ಟ್ಯ.

ವ್ಯಾಕರಣ, ಅಲಂಕಾರ, ಜ್ಯೋತಿಷ್ಯ, ಹಾಗೂ ಔಪಯೋಗಿಕ ಶಾಸ್ತ್ರಗ್ರಂಥಗಳು

ವ್ಯಾಕರಣಶಾಸ್ತ್ರಕ್ಕೆ ಶ್ರೀಸಾಯಣರಿಂದ ಅಮೂಲ್ಯ ಕೊಡುಗೆಯಾಗಿರುವುದನ್ನು ಮೊದಲೆ ನೆನೆಪಿಸಿಕೊಳ್ಳಬೇಕು. ಅವರ 'ಧಾತುವೃತ್ತಿ' ಪಾಣಿನಿಯ ಧಾತುಪಾಠದ ಮೇಲಣ ವ್ಯಾಖ್ಯಾನ. ಶ್ರೀಸಾಯಣರು ಧಾತುಪಾಠದ ಕ್ಲಿಷ್ಟಭಾಗಗಳನ್ನು ತಮ್ಮ ಸರಳವ್ಯಾಖ್ಯಾನದಿಂದ ಗಮ್ಯಗೊಳಿಸಿದ್ದಾರೆ. ಅವರು, ಅಲಂಕಾರ ಶಾಸ್ತ್ರಕ್ಕೆ ಸಂಬಂಧಿಸಿದಂತೆ 'ಅಲಂಕಾರ ಸುಧಾನಿಧಿ' ಎಂಬ ಗ್ರಂಥವನ್ನು ರಚಿಸಿದ್ದಾರೆ. ಇದು ಮುಖ್ಯವಾಗಿ ಅಲಂಕಾರ ಪ್ರಸ್ಥಾನಕ್ಕೆ ಸೇರಿದ ಗ್ರಂಥ. ಅರ್ಥಾಲಂಕಾರ ಮತ್ತು ಶಬ್ದಾಲಂಕಾರಗಳಿಗೆ ಸರಳವಾದ ವಿವರಣೆ ಬರೆದು ಉದಾಹರಣೆಗಳನ್ನು ನೀಡಿದ್ದಾರೆ. ಶ್ರೀಸಾಯಣರ ತಮ್ಮ ಭೋಗನಾಥನು 'ಉದಾಹರಣ ಮಾಲಾ' ಎಂಬುದನ್ನು ರಚಿಸಿದ್ದಾನೆ. ಇದು ಅಲಂಕಾರಶಾಸ್ತ್ರದಲ್ಲಿ ಹೇಳಿರುವ ನಿಯಮಗಳಿಗೆ ಉದಾಹರಣೆಯಾಗಿ ರಚಿತವಾಗಿರುವ ಪದ್ಯಗಳ ಸಂಗ್ರಹ. ಈ ಗ್ರಂಥದ ಪದ್ಯಗಳೆಲ್ಲವೂ ಸಾಯಣರ ಪ್ರಶಂಸಾಪರವಾಗಿವೆ. ಸರಳವೂ ಚಮತ್ಕಾರಯುತವಾದ ರಚನೆಗಳನ್ನು ಈ ಶ್ಲೋಕಗಳಲ್ಲಿ ನೋಡಬಹುದು. ನರಹರಿಯು 'ನೈಷಧ ದೀಪಿಕೆ'ಯ ಕರ್ತೃ. ಅವನು ಮಮ್ಮಟನ 'ಕಾವ್ಯಪ್ರಕಾಶ'ಕ್ಕೆ ವ್ಯಾಖ್ಯಾನವೊಂದನ್ನು ಬರೆದಿದ್ದಾನೆ. ಇಮ್ಮಡಿ ದೇವರಾಯನ ಕಾಲದಲ್ಲಿದ್ದು ಅವನ ರಾಜಪ್ರತಿನಿಧಿಯಾಗಿದ್ದ ಸಾಳುವ ಗೋಪ ತಿಪ್ಪಭೂಪಾಲನು ಅಲಂಕಾರ ಶಾಸ್ತ್ರದ ಮೇಲೆ ವ್ಯಾಖ್ಯಾನವೊಂದನ್ನು ಬರೆದಿದ್ದಾನೆ. ಇದು ವಾಮನನ ಕಾವ್ಯಾಲಂಕಾರ ಸೂತ್ರವೃತ್ತಿಯ ಮೇಲಣ ವ್ಯಾಖ್ಯಾನ. ಈ ಕೃತಿಯು ಅಲಂಕಾರ ವ್ಯಾಖ್ಯಾನ ಶಾಸ್ತ್ರಕ್ಕೆ ಪ್ರಮುಖ ಕೊಡುಗೆಯಾಗಿರುವುದನ್ನು ಸ್ಮರಿಸಬೇಕು ! ಹದಿನಾಲ್ಕನೆಯ ಶತಮಾನದ ಆದಿಭಾಗದಲ್ಲಿದ್ದ ವಿದ್ಯಾಮಾಧವ ಸೂರಿ ಎಂಬುವನು ಬಹು ಪ್ರಸಿದ್ಧನಾದ ಖಗೋಳಶಾಸ್ತ್ರಜ್ಞ. ಇವನ ಗ್ರಂಥವು ಇಪ್ಪತ್ತು ಅಧ್ಯಾಯಗಳಿಂದ ಕೂಡಿದೆ. ಜೀವನ್ಮುಕ್ತಿವಿವೇಕ, ಪಂಚದಶೀ ಮತ್ತು ಅನುಭೂತಿಪ್ರಕಾಶ ಇವು ಮೂರೂ ಪರಸ್ಪರ ಪೋಷಕಗಳಾಗಿವೆ; ಪೂರಕಗಳಾಗಿವೆ. ಇವು ಮೂರನ್ನು ಬಿಡಿಬಿಡಿಯಾಗಿ ನೋಡದೆ ಒಟ್ಟಾರೆ ನೋಡುವುದರ ಅಗತ್ಯವಿದೆ. ವಿದ್ಯಾರಣ್ಯರ ಮತ್ತೊಂದು ಗ್ರಂಥ 'ವಿವರಣ ಪ್ರಮೇಯ ಸಂಗ್ರಹ' ಇದು ಪ್ರಕಾಶಾತ್ಮಕ 'ಪಂಚಪಾದಿಕಾ' ಎಂಬ ಗ್ರಂಥದ ಸಂಗ್ರಹ ಮತ್ತು ಕ್ವಚಿತ್ ನಿರೂಪಣೆಯನ್ನು ಹೊಂದಿದೆ. (ಇಲ್ಲಿ ಒಂದು ಗ್ರಂಥವನ್ನು ಸ್ಮರಿಸಿಕೊಳ್ಳಬೇಕು. ಅದು ಇಮ್ಮಡಿ ದೇವರಾಯನು ಬ್ರಹ್ಮಸೂತ್ರದ ಮೇಲೆ ಬರೆದಿರುವ ವೃತ್ತಿಗ್ರಂಥ) 'ಜೈಮಿನೀಯ ನ್ಯಾಯಾಮಾಲಾ' ವಿದ್ಯಾರಣ್ಯರು ಬರೆದಿರುವ ಪೂರ್ವಮೀಮಾಂಸಾ ಗ್ರಂಥ. ಇದು ಹನ್ನೆರಡು ಅಧ್ಯಾಯಗಳಿಂದ ಕೂಡಿದೆ. ಈ ಗ್ರಂಥವು ಪೂರ್ವಮೀಮಾಂಸಾ ಸೂತ್ರಗಳ ಸಾರಸಂಗ್ರಹವಾಗಿದೆ.

ಈ ಕಾಲದಲ್ಲಿ ಅದ್ವೈತ ವೇದಾಂತದ ಗ್ರಂಥಗಳು ಬಂದಂತೆ ದ್ವೈತಪ್ರಸ್ಥಾನದ ಗ್ರಂಥಗಳೂ ಹೊರಬಂದುವು. ಅಕ್ಷೋಭ್ಯತೀರ್ಥರ ಹೆಸರು ದ್ವೈತವೇದಾಂತದಲ್ಲಿ ಪ್ರಾಮುಖ್ಯವಾದುದಷ್ಟೆ. ಇವರು ವಿದ್ಯಾರಣ್ಯರ ಸಮಕಾಲೀನರು. ಇವರ 'ಮಧ್ವತತ್ತ್ವಸಾರಸಂಗ್ರಹ' ದ್ವೈತದರ್ಶನದ ಮುಖ್ಯ ತತ್ತ್ವಗಳನ್ನೆಲ್ಲವನ್ನು ಬಹುವಾಗಿ ಒಳಗೊಂಡಿದೆ. ಜಯತೀರ್ಥರ 'ಪ್ರಮಾಣ ಪದ್ಧತಿ'ಯು ಜ್ಞಾನಮೂಲಗಳೆನಿಸಿರುವ ಪ್ರತ್ಯಕ್ಷ, ಅನುಮಾನ, ಆಗಮ ಎಂಬ ಪ್ರಮಾಣತ್ರಯಗಳ ವಿಷಯವಾದ ಗ್ರಂಥ. 'ವಾದಾವಳೀ' ಮತ್ತು 'ಅಧ್ಯಾತ್ಮತರಂಗಿಣೀ' ಅವರ ಇನ್ನೆರಡು ಗ್ರಂಥಗಳು. ಅವರು ಭಗವದ್ಗೀತೆಯ ಮೇಲೆ ಬರೆದ 'ತತ್ತ್ವಪ್ರಕಾಶಿಕಾ' ಮುಖ್ಯ ಕೃತಿ. ಅವರು ಬರೆದ ಪ್ರಮೇಯ ದೀಪಿಕಾ ಮತ್ತು ಋಗ್‌ಭಾಷ್ಯ ಟೀಕಾ ಇವು ಮಹಾವ್ಯಾಖ್ಯಾನಗಳೇ ಸರಿ. ಕ್ರಿ.ಶ. ೧೪೦೦ರಲ್ಲಿದ್ದ ರಘೂತ್ತಮನು 'ಭಾವಬೋಧನ'ವನ್ನು ಬರೆದನು. ಇದು ಆನಂದತೀರ್ಥರ 'ನ್ಯಾಯವಿವರಣ ವಾಗ್ವಜ್ರ'ದ ಮೇಲಣ ವ್ಯಾಖ್ಯಾನ. ಕ್ರಿ.ಶ. ೧೪೪೭–೧೫೩೯ರ ನಡುವೆ ಇದ್ದ ವ್ಯಾಸರಾಯರು ದ್ವೈತಶಾಸ್ತ್ರವನ್ನು ಕುರಿತು ಮೂರು ಗ್ರಂಥಗಳನ್ನು ಬರೆದಿದ್ದಾರೆ. ಅವು : ತಾತ್ಪರ್ಯಚಂದ್ರಿಕಾ, ನ್ಯಾಯಾಮೃತ ಮತ್ತು ತರ್ಕತಾಂಡವ. ಶ್ರೀ ಜಯತೀರ್ಥರ 'ತತ್ತ್ವಪ್ರಕಾಶ'ವೆಂಬ ವ್ಯಾಖ್ಯಾನ ಗ್ರಂಥ ಉಂಟು. ಅದಕ್ಕೆ ವ್ಯಾಖ್ಯಾನವಾಗಿ ತಾತ್ಪರ್ಯ

ಚಂದ್ರಿಕೆಯನ್ನು ಬರೆದಿದ್ದಾರೆ. ತತ್ತ್ವಪ್ರಕಾಶವು ಮಧ್ವಾಚಾರ್ಯರ ಬ್ರಹ್ಮಸೂತ್ರದ ಮೇಲಣ ವ್ಯಾಖ್ಯಾನ ಗ್ರಂಥ. ನ್ಯಾಯಾಮೃತ ಮತ್ತು ತರ್ಕತಾಂಡವ ಇವೆರಡೂ ನ್ಯಾಯಶಾಸ್ತ್ರದ ಮೇಲಣ ಗ್ರಂಥ. ನ್ಯಾಯದರ್ಶನಕ್ಕೆ ಅಮೂಲ್ಯವಾದ ಕೊಡುಗೆಯನ್ನು ದ್ವೈತದರ್ಶನದ ದಾರ್ಶನಿಕರು ನೀಡಿದ್ದಾರೆ. ವಿಜಯನಗರ ಕಾಲದ ಸಂಸ್ಕೃತ ಶಾಸ್ತ್ರಗ್ರಂಥಗಳಲ್ಲಿ ಶಾಸ್ತ್ರನಿರ್ಮಾಣ ಎಂಬುದು ನ್ಯಾಯದರ್ಶನಕ್ಕೆ ಸಂಬಂಧಿಸಿದಂತೆಯೂ ಆಯಿತು. ಆ ದರ್ಶನದ ಮೂರ್ಧನ್ಯ ಗ್ರಂಥಗಳಿವು. ಶ್ರೀ ವಾದಿರಾಜರ 'ಯುಕ್ತಿಮಲ್ಲಿಕಾ' ಒಂದು ಮೌಲಿಕ ಗ್ರಂಥ. ಇದು ದ್ವೈತದರ್ಶನವನ್ನು ಪ್ರತಿಪಾದಿಸುತ್ತದೆ. ಮಲ್ಲಿಕಾ ಎಂಬ ಹೆಸರಿಗೆ ಅನುಗುಣವಾಗಿ ಅಧ್ಯಾಯಗಳನ್ನು 'ಸೌರಭ' ಎಂದು ಶ್ರೀವಾದಿರಾಜರು ಕರೆದಿದ್ದಾರೆ. ಅವರ 'ನ್ಯಾಯರತ್ನಾವಳೀ' ಇದು ಐದು ಅಧ್ಯಾಯಗಳಿಂದ ಕೂಡಿದ ಗ್ರಂಥ. ಇದು ಅದ್ವೈತದರ್ಶನವನ್ನು ಖಂಡಿಸುತ್ತದೆ. ಪ್ರತಿ ಅಧ್ಯಾಯಕ್ಕೂ 'ಸಾರ'ವೆಂಬ ಹೆಸರನ್ನು ಕೊಡಲಾಗಿದೆ. ಅವರು ಈ ಗ್ರಂಥಗಳಲ್ಲದೆ, ಗುರ್ವರ್ಥದೀಪಿಕಾ, ತಾತ್ಪರ್ಯ ಪ್ರಕಾಶಿಕಾ, ಚಕ್ರಮೀಮಾಂಸಾ, ಗೀತಾವ್ಯಾಖ್ಯಾನ ವಿವರಣ, ಭೂಗೋಳ ವಿವರಣ ಇವೇ ಮೊದಲಾದ ಗ್ರಂಥಗಳನ್ನು ಬರೆದಿದ್ದಾರೆ. ಅವರ ಸಮಕಾಲೀನರಾದ ವಿಜಯೀಂದ್ರರು ನೂರನಾಲ್ಕು ಗ್ರಂಥಗಳನ್ನು ಬರೆದಿದ್ದಾರೆ. ಅದ್ವೈತ ವೇದಾಂತದ ಮಹಾದಾರ್ಶನಿಕರಾದ ಅಪ್ಪಯ್ಯದೀಕ್ಷಿತರ ಟೀಕೆಗಳಿಗೆ ಉತ್ತರ ಕೊಡುವ ಸಲುವಾಗಿ ಹಲವಾರು ಗ್ರಂಥಗಳನ್ನು ಬರೆದಿದ್ದಾರೆ. ಆ ಗ್ರಂಥಗಳೆಂದರೆ: ಭೇದ ವಿದ್ಯಾವಿಲಾಸ, ನ್ಯಾಯ ಮುಕ್ತಿಮಾಲಾ, ಅಧಿಕರಣ ಮಾಲಾ, ಮೀಮಾಂಸಾ ನ್ಯಾಯಮಾಲಾ, ನ್ಯಾಯಚಂಪಕ ಮಾಲಾ, ನಯಮುಕುರ, ನಯಮಂಜರಿ ಮತ್ತು ಪರತತ್ತ್ವಪ್ರಕಾಶಿಕಾ. ಇವುಗಳಲ್ಲಿ ವಿಜಯೀಂದ್ರರ ತತ್ತ್ವಪ್ರಭುತ್ವವನ್ನೂ ವಾದಪಟುತ್ವವನ್ನೂ ಕಾಣಬಹುದು. ಸೂಕ್ಷ್ಮಾತಿಸೂಕ್ಷ್ಮ ಭೇದಗಳನ್ನು ಕಲ್ಪಿಸಿ ಖಂಡಿಸುವ ಕ್ರಮವನ್ನು ಈ ಗ್ರಂಥಗಳಲ್ಲಿ ನಾವು ಕಾಣುತ್ತೇವೆ.

ವಿಜಯನಗರ ಕಾಲದ ಜ್ಯೋತಿಷ್ಯ ಗ್ರಂಥಗಳಲ್ಲಿ ವಿದ್ಯಾರಣ್ಯರ 'ಕಾಲಮಾಧವ' ವಿಶಿಷ್ಟವಾಗಿದೆ. ಇದು ಕಾಲ, ಸ್ವಭಾವ, ವಿಭಾಗಗಳನ್ನು ಕುರಿತು ಚರ್ಚಿಸುತ್ತದೆ. ಇದರಲ್ಲಿ ಐದು ಅಧ್ಯಾಯಗಳಿವೆ: ವರ್ಷ, ಋತು ಮಾಸ, ತಿಥಿ, ನಕ್ಷತ್ರ, ಯೋಗ, ಕರಣ, ಸಂಕ್ರಾಂತಿ, ಗ್ರಹಗಳ ವಿವರಣೆಗಳನ್ನು ಒಳಗೊಂಡಿದೆ. ಆ ಕಾಲದಲ್ಲಿ ರಚಿತವಾದ ಅಪೂರ್ವ ಜ್ಯೋತಿಷ್ಯ ಗ್ರಂಥವಿದು. ವಿದ್ಯಾರಣ್ಯರು ಹಾಕಿಕೊಟ್ಟ ಹಾದಿಯಲ್ಲಿ ಮುಂದೆ ಅನೇಕ ಜ್ಯೋತಿಷ್ಯ ಗ್ರಂಥಗಳು ಬಂದುವು. 'ಮುಹೂರ್ತದರ್ಶನ'ವು ಮುಹೂರ್ತ ವಿಷಯದಲ್ಲಿ ಬಹು ವಿವರವಾದ ಜ್ಯೋತಿಶ್ಶಾಸ್ತ್ರ ಗ್ರಂಥ. ಇದಕ್ಕೆ 'ವಿದ್ಯಾಮಾಧವೀಯ' ಎಂಬ ಇನ್ನೊಂದು ಹೆಸರೂ ಉಂಟು. ವಿದ್ಯಾಮಾಧವ ಸೂರಿಯ ಮಗ ವಿಷ್ಣುಸೂರಿಯು ಕ್ರಿ.ಶ. ೧೩೬೩ರಲ್ಲಿ 'ವಿದ್ಯಾಮಾಧವೀಯ'ಕ್ಕೆ ಒಂದು ಮಹತ್ತ್ವದ ವ್ಯಾಖ್ಯಾನವನ್ನು ಬರೆದಿದ್ದಾನೆ. ಇವನು ಬುಕ್ಕರಾಜನ ಮಗ ಮಲ್ಲಪ್ಪ ಒಡೆಯನ ಸಮಕಾಲೀನ. ಇವನ ವ್ಯಾಖ್ಯಾನ ಗ್ರಂಥಕ್ಕೆ 'ಮುಹೂರ್ತದೀಪಿಕಾ' ಎಂಬ ಹೆಸರುಂಟು. ಇವನ ಕಾಲಾನಂತರದಲ್ಲಿ ಬರುವ ಇನ್ನೊಬ್ಬ ಪ್ರಖ್ಯಾತ ವಿದ್ವಾಂಸ ಲೊಲ್ಲಲಕ್ಷ್ಮೀಧರ. ಇವನು 'ಜ್ಯೋತಿಷ್ಯ ದರ್ಪಣ'ದ ಒಂದು ಭಾಗವನ್ನು ಬರೆದನು. 'ಜ್ಯೋತಿಷ್ಯ ದರ್ಪಣ'ವು ಆ ಕಾಲದಲ್ಲಿ ರಚಿತವಾದ ವಿಶ್ವಕೋಶಾತ್ಮಕವಾದ ಖಗೋಳಶಾಸ್ತ್ರ ಗ್ರಂಥ. ಜ್ಯೋತಿಷ್ಯ ಶಾಸ್ತ್ರಕ್ಕೆ ಇದು ಅಪೂರ್ವಕೊಡುಗೆಯನ್ನು ನೀಡಿದೆ.

ಸಂಗೀತಶಾಸ್ತ್ರಕ್ಕೆ ಸಂಬಂಧಿಸಿದಂತೆ ಈ ಕಾಲದಲ್ಲಿ ಬಂದ ಗ್ರಂಥಗಳು ಅಪೂರ್ವವಾಗಿವೆ. ಮತಂಗನ 'ಬೃಹದ್ದೇಶೀ' ಪ್ರಭಾವ ಇವುಗಳ ಮೇಲೆ ಇದ್ದರೂ ತಾಳ, ಪದ್ಧತಿಗಳ ಬಗ್ಗೆ ಹೊಸ ವಿವರಗಳನ್ನು ಈ ಗ್ರಂಥವು ಕೊಡುತ್ತದೆ. ವಿದ್ಯಾರಣ್ಯರು ವೇದಾಂತದ ಮೇಲೆ ಗ್ರಂಥಗಳನ್ನು ಬರೆದಂತೆ ಸಂಗೀತವನ್ನು ಕುರಿತೂ ಬರೆದಿದ್ದಾರೆ. ಅವರ 'ಸಂಗೀತಸಾರಂ' ಒಂದು ಅಪೂರ್ವ ಕೃತಿ. ಇದು ಸಂಗೀತಕ್ಕೆ ಸಂಬಂಧಿಸಿದ ಸಿದ್ಧಾಂತವನ್ನೂ ಅದರ ಪ್ರಯೋಗವನ್ನೂ ವಿವರಿಸುತ್ತದೆ. ಮೈಸೂರಿನ ಚಿಕ್ಕದೇವರಾಯನು ತನ್ನ 'ಭರತಸಾರಸಂಗ್ರಹ'ಕ್ಕೆ ಇಲ್ಲಿಂದಲೇ ಉದ್ಧರಣಗಳನ್ನು ಎತ್ತಿಕೊಂಡಿದ್ದಾನೆ. ಗೋಪ ತಿಪ್ಪಭೂಪಾಲನು 'ತಾಳದೀಪಿಕಾ' ಎಂಬ ಒಂದು

ಪ್ರಕರಣಗ್ರಂಥವನ್ನು ಬರೆದಿದ್ದಾನೆ. ಅವನು ಈ ಗ್ರಂಥದಲ್ಲಿ ಬಗೆಬಗೆಯ ತಾಳಗಳನ್ನು ವಿವರಿಸಿದ್ದಾನೆ. ಇವನು ಮಾರ್ಗ ಮತ್ತು ದೇಶೀತಾಳಗಳ ವಿವೇಚನೆ ಮಾಡಿದವರಲ್ಲಿ ಪ್ರಮುಖ. ಕ್ರಿ.ಶ. ೧೪೪೫ರಲ್ಲಿದ್ದ ರೇವಣ್ಣಭಟ್ಟನು 'ಸಂಗೀತ ಮುಕ್ತಾವಳೀ' ಎಂಬ ಕೈಪಿಡಿಯನ್ನು ರಚಿಸಿದ್ದಾನೆ. ಇದು ಸಂಗೀತದ ಬಾಲಬೋಧೆ. ಶ್ರೀ ಕೃಷ್ಣದೇವರಾಯನ ಆಸ್ಥಾನದಲ್ಲಿದ್ದ ಲಕ್ಷ್ಮೀನಾರಾಯಣ ಎಂಬುವನು 'ಅಭಿನವ ಭರತ' ಎಂಬ ಹೆಸರಿಗೆ ಪ್ರಸಿದ್ಧಿಯಾಗಿದ್ದನು. ಅವನು ಸಂಗೀತಕ್ಕೆ ಪುರಾಣಪುರುಷನಾಗಿದ್ದನಂತೆ. ಅವನ 'ಸಂಗೀತ ಸೂರ್ಯೋದಯ' ಒಂದು ಬೃಹತ್ ಪ್ರಬಂಧ. ಇದರಲ್ಲಿ ತಾಳ, ವೃತ್ತ, ಸ್ವರಗೀತ, ಜತಿ ಮತ್ತು ಪ್ರಬಂಧಗಳು ಅನುಕ್ರಮ ಅಧ್ಯಾಯಗಳಾಗಿವೆ. ಸಂಗೀತಶಾಸ್ತ್ರದ ಮೂಲಪ್ರಮೇಯಗಳನ್ನು ವಿವರಿಸಿ ವ್ಯಾಖ್ಯಾನಿಸಿರುವುದು ಈ ಗ್ರಂಥದ ವೈಶಿಷ್ಟ್ಯಗಳಲ್ಲಿ ಒಂದು. ಕಲ್ಲರಸ ಅಥವ ಕಲ್ಲಾಮಾತ್ಯನು ಶಾರ್ಙ್ಗಧರನ 'ಸಂಗೀತರತ್ನಾಕರ'ಕ್ಕೆ 'ಕಲಾನಿಧಿ' ಎಂಬ ಒಂದು ವ್ಯಾಖ್ಯಾನವನ್ನು ಬರೆದಿದ್ದಾನೆ. ಸಂಗೀತಶಾಸ್ತ್ರಕ್ಕೆ ಸಂಬಂಧಿಸಿದ ವಿಪುಲಗ್ರಂಥಗಳನ್ನು ಮುಂದೆ ಒಡೆಯರ ಕಾಲದಲ್ಲಿ ನಾವು ನೋಡುತ್ತೇವೆ.

ಆಯುರ್ವೇದ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಕೆಲವು ಅಪೂರ್ವಗ್ರಂಥಗಳು ವಿಜಯನಗರ ಕಾಲದಲ್ಲಿ ಬಂದುವು. ಶ್ರೀಸಾಯಣರ ಅಪ್ಪಣೆಯ ಮೇರೆಗೆ ಏಕಾಂಭರನಾಥನು 'ಆಯುರ್ವೇದ ಸುಧಾನಿಧಿ' ಎಂಬ ಗ್ರಂಥವನ್ನು ಬರೆದನು. ಇದು ವಿಜಯನಗರ ಕಾಲದಲ್ಲಿ ದೊರೆಯುವ ತೀರಮೊತ್ತಮೊದಲ ವೈದ್ಯಗ್ರಂಥ. ಅವನ ಮೊಮ್ಮಗನಾದ ಶ್ರೀಶೈಲನಾಥನು 'ಪ್ರಶ್ನೋತ್ತರ ರತ್ನಮಾಲಾ' ಎಂಬ ಸರಳ ವೈದ್ಯಗ್ರಂಥವನ್ನು ಬರೆದಿದ್ದಾನೆ. ಈ ಕಾಲದ ವೈದ್ಯಗ್ರಂಥಗಳನ್ನು ಹೆಸರಿಸಬಹುದಾದರೆ: ಲಕ್ಷ್ಮಣಪಂಡಿತನ 'ವೈದ್ಯರಾಜವಲ್ಲಭ', ನರಸಿಂಹಶಾಸ್ತ್ರಿಯವರ 'ವೈದ್ಯಸಾರ ಸಂಗ್ರಹ' ಕ್ರಿ.ಶ. ೧೫೦೦ರಲ್ಲಿದ್ದ ಬಾಚರಸನ 'ಅಶ್ವವೈದ್ಯ' ಇವು ಕೆಲವು ಮುಖ್ಯ ಕೃತಿಗಳು. ರಾಮಚಂದ್ರ ಎಂಬುವನು ಅಶ್ವಶಾಸ್ತ್ರಕ್ಕೆ ಸಂಬಂಧಿಸಿದಂತೆ ಕ್ರಿ.ಶ. ೧೬೨೫ರಲ್ಲಿ 'ಅಶ್ವಶಾಸ್ತ್ರ'ವೆಂಬ ಗ್ರಂಥವನ್ನು ಬರೆದನು. ಕ್ರಿ.ಶ. ೧೬೨೭ರಲ್ಲಿ ಪದ್ಮಣ ಪಂಡಿತನು 'ಹಯಸಾರ ಸಮುಚ್ಚಯ' ಎಂಬ ಗ್ರಂಥವನ್ನು ರಚಿಸಿದನು. ಇವೆರಡೂ ಅಶ್ವಶಾಸ್ತ್ರದ ಮುಖ್ಯಗ್ರಂಥಗಳಾಗಿವೆ. ಇದೇ ಕಾಲದಲ್ಲಿ ಭಾಸ್ಕರನೆಂಬುವನ 'ಬೇಹಾರ ಗಣಿತ' ಉಲ್ಲೇಖಿಸಬಹುದಾದ ಗಣಿತಶಾಸ್ತ್ರಕ್ಕೆ ಸೇರಿದ ಗ್ರಂಥ. ಔಪಯೋಗಿಕ ಶಾಸ್ತ್ರಗಳ ರಚನೆ ಈ ಕಾಲದಲ್ಲಿ ಆದದ್ದು ಒಂದು ವಿಶೇಷ. ಶ್ರೀಸಾಯಣ ಮತ್ತು ವಿದ್ಯಾರಣ್ಯರು ಹಾಗೂ ಅವರ ಶಿಷ್ಯರು ಈ ಬಗೆಯ ಗ್ರಂಥಗಳನ್ನು ಬರೆದರು. ಖಗೋಳ, ಆಯುರ್ವೇದ, ಅಶ್ವಶಾಸ್ತ್ರ, ಸಂಗೀತಶಾಸ್ತ್ರ ಮತ್ತು ಕಾಮಶಾಸ್ತ್ರಕ್ಕೆ ಸಂಬಂಧಿಸಿದ ಒಂದೆರಡು ಗ್ರಂಥಗಳು ಈ ಕಾಲದಲ್ಲೇ ಬಂದುವು. ಇಮ್ಮಡಿ ದೇವರಾಯನು ರಚಿಸಿದ 'ರತಿರತ್ನ ಪ್ರದೀಪಿಕಾ' ಕಾಮಶಾಸ್ತ್ರಕ್ಕೆ ಸಂಬಂಧಿಸಿದ ಒಂದು ಗ್ರಂಥ. ಇದರಲ್ಲಿ ಏಳು ಅಧ್ಯಾಯಗಳಿವೆ. ಕಾಮಕಲೆಯ ವಿಷಯದಲ್ಲಿ ಇದು ವಿವರವೂ ಸ್ವಾರಸ್ಯಪೂರ್ಣವೂ ಆದ ಗ್ರಂಥ. ಆ ಕಾಲದ ರಾಜರು ಸಂಸ್ಕೃತ ಬಲ್ಲವರಾಗಿದ್ದು, ವಾತ್ಸ್ಯಾಯನನ 'ಕಾಮಶಾಸ್ತ್ರ'ವನ್ನು ಆಧರಿಸಿ-ಕಾಮಶಾಸ್ತ್ರದ ಪ್ರಕರಣಗ್ರಂಥಗಳು ಆಮೇಲೆ ಬಂದಿವೆ. ಇಮ್ಮಡಿ ದೇವರಾಯನ 'ರತಿರತ್ನ ಪ್ರದೀಪಿಕಾ' ಈ ಬಗೆಯ ಗ್ರಂಥಗಳಲ್ಲಿ ಒಂದು.

ಶಬ್ದಕೋಶ, ವಿಶ್ವಕೋಶದಂಥ ರಚನೆಗಳು

ವಿಜಯನಗರ ಕಾಲದ ಹೊತ್ತಿಗೆ ಸಂಸ್ಕೃತದಲ್ಲಿ ಶಬ್ದಕೋಶಗಳ ರಚನೆ ವಿಪುಲವಾಗಿತ್ತು. ಅಮರಸಿಂಹನ 'ಅಮರಕೋಶ', ಯಾಸ್ಕನ 'ನಿರುಕ್ತ'ಗಳು ಲೌಕಿಕ ಶಬ್ದಗಳ ಹಾಗೂ ವೈದಿಕ ಶಬ್ದಗಳ ನಿರ್ವಚನಗಳಲ್ಲಿ ತೊಡಗಿದ್ದುವು. ಎರಡನೆಯ ಸೋಮೇಶ್ವರನ 'ಅಭಿಲಷಿತಾರ್ಥ ಚಿಂತಾಮಣಿ' ಅಥವಾ 'ಮಾನಸೋಲ್ಲಾಸ' ವಿಶ್ವಕೋಶ ರಚನೆಯಾಗಿತ್ತು. ಈ ಹಿನ್ನೆಲೆಯಲ್ಲಿ ನೋಡಿದರೆ ಏಕಾಕ್ಷರ, ನಾನಾರ್ಥ, ಕ್ಲಿಷ್ಟಶಬ್ದಗಳ

ನಿಘಂಟುಗಳು ಹಾಗೂ ವಿಶ್ವಕೋಶವೊಂದು ಈ ಕಾಲದಲ್ಲಿ ಹೊರಬಂದುವು. ಮಾಯಣನ ಮಗ ಮಾಧವನೆಂಬುವನ 'ಏಕಾಕ್ಷರ ರತ್ನಮಾಲಾ' ಈ ಬಗೆಯ ವಿಶೇಷ ನಿಘಂಟು ಅಥವಾ ಶಬ್ದಕೋಶ. ಅವನು ಇದನ್ನು ಸ್ವರಕಾಂಡ, ವ್ಯಂಜನಕಾಂಡ, ಸಂಯುಕ್ತ ವ್ಯಂಜನಕಾಂಡ ಎಂದು ಮೂರುಭಾಗಗಳನ್ನಾಗಿ ಮಾಡಿದ್ದಾನೆ. ಒಂದೊಂದು ಅಕ್ಷರದ ಅರ್ಥವನ್ನು ವಿವರಿಸಿದ್ದಾನೆ. ಮೊದಲನೆಯ ಬುಕ್ಕ ಮತ್ತು ಇಮ್ಮಡಿ ಹರಿಹರನ ಸೈನ್ಯಾಧಿಪತಿಯಾಗಿದ್ದ ಇರುಗಪ್ಪ ದಂಡಾಧಿನಾಥನು 'ನಾನಾರ್ಥ ರತ್ನಮಾಲಾ' ಎಂಬ ನಿಘಂಟನ್ನು ರಚಿಸಿದ್ದಾನೆ. ಈ ಗ್ರಂಥದಲ್ಲಿ ಆರು ವಿಭಾಗಗಳಿವೆ. ಅವು ಕ್ರಮವಾಗಿ ಏಕಾಕ್ಷರ, ದ್ವ್ಯಕ್ಷರ, ತ್ರ್ಯಕ್ಷರ, ಚತುರಕ್ಷರ, ಸಂಕೀರ್ಣ, ಅವ್ಯಯ ಎಂಬ ಹೆಸರನ್ನು ಒಳಗೊಂಡಿವೆ. ಇದೇ ಕಾಲದಲ್ಲಿದ್ದ ವಾದಿರಾಜರ 'ಲಕ್ಷಾಭರಣ' ಒಂದುಲಕ್ಷ ಕ್ಲಿಷ್ಟಶಬ್ದಗಳ ಬೃಹತ್ ನಿಘಂಟು. ಈ ನಿಘಂಟು ಶಬ್ದಕೋಶಗಳ ರಚನೆಯಲ್ಲೇ ವಿಶಿಷ್ಟವಾಗಿದೆ.

ಎರಡನೆಯ ಸೋಮೇಶ್ವರನ 'ಮಾನಸೋಲ್ಲಾಸ' ವಿಶ್ವಕೋಶವು ರಚನೆಗೊಂಡು ನಾಲ್ಕು ಶತಮಾನಗಳು ಕಳೆದಿತ್ತು. ಆ ಬಗೆಯ ಮತ್ತೊಂದು ದೊಡ್ಡ ಪ್ರಯತ್ನ ನಡೆದದ್ದು ಕ್ರಿ.ಶ. ೧೬೬೮-೧೭೧೫ರ ವರೆಗೆ ಇದ್ದ ಕೆಳದಿಯ ಬಸವಭೂಪಾಲ ಅಥವಾ ಬಸವರಾಜನ ಕಾಲದಲ್ಲಿ. ಇದಕ್ಕೊಂದು ಹಿನ್ನೆಲೆ ಇತ್ತು. ವಿಜಯನಗರ ಸಾಮ್ರಾಜ್ಯವು ಕ್ರಿ.ಶ. ೧೫೬೫ರಲ್ಲಿ ಅವನತಿ ಹೊಂದಿತ್ತು. ಆಮೇಲೆ ಚಿಕ್ಕ ಸಂಸ್ಥಾನದವರೂ ಪಾಳೆಯಗಾರರೂ ಸಂಸ್ಕೃತಾಭಿಮಾನಿಗಳಾಗಿಯೇ ಇದ್ದು ಕವಿಗಳಿಗೂ ವಿದ್ವಾಂಸರಿಗೂ ಪ್ರೋತ್ಸಾಹವನ್ನು ಕೊಟ್ಟರು; ಆಶ್ರಯವನ್ನೂ ನೀಡಿದರು. ಕ್ರಿ.ಶ. ಹನ್ನೊಂದರಿಂದ ಹದಿನೇಳನೆಯ ಶತಮಾನದ ವರೆಗೂ ಶಾಸ್ತ್ರಗ್ರಂಥಗಳ ರಚನೆ ದಕ್ಷಿಣ ಭಾರತದಲ್ಲಿಯೇ ಅಧಿಕವಾಗಿ ನಿರ್ಮಿತವಾಯಿತೆಂಬುದು ಈ ಹಿನ್ನೆಲೆಯಲ್ಲಿ ನಾವು ಗಮನಿಸಬೇಕಾದ ಸಂಗತಿ.

ಕೆಳದಿಯ ನಾಯಕ ಬಸವಭೂಪಾಲನು ಹೆಸರಿನಲ್ಲಿರುವ 'ಶ್ರೀ ಶಿವತತ್ತ್ವರತ್ನಾಕರ'ವು ಸಂಸ್ಕೃತದಲ್ಲಿರುವ ಎರಡನೆಯ ವಿಶ್ವಕೋಶ. ಇದು 'ಮಾನಸೋಲ್ಲಾಸ' ವಿಶ್ವಕೋಶಕ್ಕಿಂತಲೂ ಆಕಾರದಲ್ಲೂ ವಿಷಯದಲ್ಲೂ ಬಹು ವ್ಯಾಪ್ತಿಯುಂಟು. ಕೆಳದಿಯ ನಾಯಕ ಬಸವಭೂಪಾಲನು ಶಿವಾದ್ವೈತಸಿದ್ಧಾಂತದಲ್ಲಿ ಪರಿಣತನಾಗಿದ್ದನು. ಈ ಕಾರಣದಿಂದಲೇ ಅವನ ವಿಶ್ವಕೋಶದ ಪ್ರಾರಂಭದ 'ಪ್ರಥಮ ಕಲ್ಲೋಲವು ಶಿವಾಗಮದ ಹಿನ್ನೆಲೆಯಲ್ಲಿ ಸೃಷ್ಟಿಯ ಮಹತ್ವವನ್ನು ವರ್ಣಿಸುತ್ತದೆ. ಅದೇ ಕೋಶದ ಕೊನೆಯ ನವಮಕಲ್ಲೋಲವು ಶಿವಾದ್ವೈತ ಸಿದ್ಧಾಂತವನ್ನು ಷಟ್‌ಸ್ಥಲಗಳ ಹಿನ್ನೆಲೆಯಲ್ಲಿ ಮಂಡಿಸುತ್ತದೆ. ಶಿವತತ್ತ್ವರತ್ನಾಕರವು ಒಂಭತ್ತು ಕಲ್ಲೋಲಗಳಿಂದಲೂ ನೂರ ಎಂಟು ತರಂಗಗಳಿಂದಲೂ ಕೂಡಿರುವ ಬೃಹತ್ ಕೃತಿ. ಈ ಕೋಶದಲ್ಲಿ ಸುಮಾರು ಹದಿಮೂರು ಸಾವಿರಕ್ಕೂ ಹೆಚ್ಚು ಶ್ಲೋಕಗಳಿವೆ. ವೇದ ಮತ್ತು ಆಗಮಗಳಲ್ಲಿ ಪ್ರತಿಪಾದಿತವಾದ ದರ್ಶನಗಳನ್ನೂ ಕಲೆಗಳನ್ನೂ ಇದು ವ್ಯಾಪಕವಾಗಿ ವಿವರಿಸುತ್ತದೆ. ಅಲ್ಲದೆ, ಕೆಳದಿ ಮತ್ತು ವಿಜಯನಗರಗಳ ನಿರ್ಮಾಣಕ್ಕೆ ಸಂಬಂಧಿಸಿದ ಕೆಲವು ಐತಿಹಾಸಿಕ ವಿವರಗಳು ಇದರಲ್ಲಿರುವುದು ಈ ಗ್ರಂಥದ ಮಹತ್ವವನ್ನು ಹೆಚ್ಚಿಸುತ್ತದೆ. ಈ ಕೋಶವು ಹಲವು ಲೌಕಿಕ ಶಾಸ್ತ್ರಗಳನ್ನು ಸಂಗ್ರಹಿಸಿ ನಿರೂಪಿಸುತ್ತದೆ. ಈ ಬಗೆಯ ಲೌಕಿಕ ಶಾಸ್ತ್ರಗ್ರಂಥಗಳು ಈ ಕಾಲದಲ್ಲೇ ಹೆಚ್ಚಾಗಿ ಬಂದುವು. ಗಜ, ಅಶ್ವ ಮತ್ತು ಆಯುರ್ವೇದಕ್ಕೆ ಸಂಬಂಧಿಸಿದ ವಿಸ್ತಾರದ ವಿವರವು ಆ ಕಾಲದ ಸಾಂಸ್ಕೃತಿಕ ಅಗತ್ಯಗಳನ್ನು ತಿಳಿಸುತ್ತದೆ. ಆಗ ಯುದ್ಧದ ಕಾಲವಷ್ಟೆ. ಆ ಕಾಲಕ್ಕೆ ತಕ್ಕಂತೆ ಗಜಾಶ್ವಗಳ ಪಾಲನೆ-ಪೋಷಣೆ ಮಾಡಬೇಕಾಗಿತ್ತು. ಆ ಬಗೆಗೆ ಹೆಚ್ಚಿನ ತಿಳಿವಳಿಕೆ ಜನರಿಗೆ ಅಗತ್ಯವಾಗಿತ್ತು. ಅದೇ ರೀತಿ ಆಯುರ್ವೇದಕ್ಕೆ ಪ್ರಾಮುಖ್ಯ ಬಂದು ವೈದ್ಯಶಾಸ್ತ್ರದ ಗ್ರಂಥಗಳು ಸಂಕಲನಗೊಂಡವು; ಸಂಗ್ರಹಗೊಂಡವು. ಇದು ಅನಿವಾರ್ಯ ಕೂಡಾ. ವಿಜಯನಗರದ ಕಾಲದಲ್ಲೂ ಅದು ಪತನಗೊಂಡ ವಿಜಯನಗರೋತ್ತರ ಕಾಲದಲ್ಲೂ ಲೌಕಿಕಶಾಸ್ತ್ರಗ್ರಂಥಗಳು ಮತ್ತು ಆಗಮಿಕ ಗ್ರಂಥಗಳು ವಿಪುಲವಾಗಿ ರಚನೆಗೊಂಡವು. ಈ ಹಿನ್ನೆಲೆಯಲ್ಲಿ 'ಶಿವತತ್ತ್ವರತ್ನಾಕರ' ವಿಶ್ವಕೋಶದ ಅಧ್ಯಯನ ಆಗಬೇಕಾಗಿದೆ.

ಈ ವಿಶ್ವಕೋಶದಲ್ಲಿ ಆಗಮಗಳು, ದರ್ಶನಗಳು, ಸಂಗೀತ, ಚಿತ್ರಕಲೆ, ಶಿಲ್ಪಕಲೆ, ನಗರನಿರ್ಮಾಣ, ಪರಿಸರಶಾಸ್ತ್ರ, ವನಶಾಸ್ತ್ರ, ಆಯುರ್ವೇದ, ಧನುರ್ವೇದ, ಯುದ್ಧವಿದ್ಯೆ, ಮಾಯ-ಮಾಟ-ತಂತ್ರ, ತಂತ್ರಶಾಸ್ತ್ರ, ರಾಜನೀತಿ, ಲೋಕನೀತಿ, ಭೂಶಾಸ್ತ್ರ, ಕಾಮಶಾಸ್ತ್ರ ಹೀಗೆ ವೇದ, ಉಪವೇದ, ಪುರಾಣ, ಆಗಮಗ್ರಂಥಗಳಲ್ಲಿ ವಿಸ್ತಾರವಾಗಿ ಬಂದಿರುವುದನ್ನು ಸಂಗ್ರಹಿಸಿ ಪುನರ್ ನಿರೂಪಿಸಲಾಗಿದೆ. ಕೆಲವೆಡೆ ಜಾನಪದದ ನಂಬುಗೆಗಳನ್ನೂ ಎತ್ತಿಕೊಳ್ಳಲಾಗಿದೆ; ಸಾಮಾನ್ಯಜನರ ತಿಳಿವಳಿಕೆಯೂ ಇದರೊಳಗೆ ಸೇರಿಕೊಂಡಿದೆ. ಹೀಗಾಗಿ, ಶ್ರೀ ಶಿವತತ್ತ್ವರತ್ನಾಕರವು ವಿಜಯನಗರೋತ್ತರ ಕಾಲದ ಅಪೂರ್ವ ರಚನೆ ಎಂದು ಮುಖ್ಯವಾಗಿ ಹೇಳಬೇಕು.

ರೂಪಕ, ಗದ್ಯಸಾಹಿತ್ಯ ಮತ್ತು ಕಾವ್ಯ ರಚನೆಗಳು

ವಿಜಯನಗರ ಕಾಲವು ಸಾಹಿತ್ಯಕ ದೃಷ್ಟಿಯಿಂದ ಅತ್ಯುತ್ತಮ ಸಾಹಿತ್ಯಕೃತಿಗಳ ರಚನಾ ಕಾಲವಲ್ಲ. ಸಾಹಿತ್ಯವು ಆ ಕಾಲದ ಶಾಸ್ತ್ರಸಾಹಿತ್ಯದ ಉಪಉತ್ಪತ್ತಿಯೇ ಹೊರತು; ಅದು ಮುಖ್ಯವಾಗಲಿಲ್ಲ. ಸುಮಾರು ನಾಲ್ಕುನೂರು ವರ್ಷಗಳ ಸಾಹಿತ್ಯಕೃತಿಗಳಲ್ಲಿ ಅಲ್ಲೊಂದು ಇಲ್ಲೊಂದು ಹೊಳೆಯುವ ನಕ್ಷತ್ರಗಳನ್ನು ಕಾಣಬಹುದು. ಆದರೆ, ಪ್ರೌಢಕೃತಿಗಳ ರಚನೆಯೇ ಹೆಚ್ಚು. ಅವು ಪುರಾಣ, ಭಾಗವತ, ರಾಮಾಯಣ ಮತ್ತು ಮಹಾಭಾರತಗಳಿಂದ ಪ್ರೇರಿತವಾಗಿದ್ದುವು. ಶ್ರೀಕೃಷ್ಣದೇವರಾಯನ ಕಾಲದಲ್ಲಿ ಪ್ರೌಢನಾಟಕಗಳು ಬಂದುವು. ಅದೇ ಹೊತ್ತಿಗೆ ಇತರ ಉಪರೂಪಕಗಳು ವಿರಳವಾಗಿಯಾದರೂ ಬಂದುವು. ಇವುಗಳನ್ನು ಗಮನಿಸಿದರೆ: ಒಂದು ಕಡೆ ಪ್ರೌಢರಚನೆಗಳ ಗೀಳು; ಮತ್ತೊಂದು ಕಡೆ ತಮ್ಮ ತತ್ತ್ವಾನುಸಂಧಾನಕ್ಕೆ ಪೂರಕವಾದ ರಚನೆಗಳ ಗೀಳು. ನಾವು ಇವೆರಡನ್ನೂ ಒಟ್ಟಿಗೆ ಕಾಣುತ್ತೇವೆ. ಆ ಕಾಲದ ಕೆಲವು ನಾಟಕ ಕೃತಿಗಳನ್ನು ಗಮನಿಸಿದರೆ ಇದು ಸ್ಪಷ್ಟವಾಗುತ್ತದೆ. ವಾಮನಭಟ್ಟ ಬಾಣನ 'ಶೃಂಗಾರ ಭಾಷಾಭೂಷಣ', ಕೃಷ್ಣಮಿಶ್ರನ 'ಪ್ರಬೋಧ ಚಂದ್ರೋದಯ', ವೇಂಕಟನಾಥನ 'ಸಂಕಲ್ಪ ಸೂರ್ಯೋದಯ', ನರಸಿಂಹನ 'ಕಾದಂಬರೀ ಕಲ್ಯಾಣ', ಭಾಸ್ಕರನ 'ಉನ್ಮತ್ತರಾಘವ', 'ರಾಮಾಯಣ ವಿಲಾಸ', ಮೊದಲನೆಯ ಅರುಣಗಿರಿನಾಥನ 'ಸೋಮವಲ್ಲೀ ಯೋಗಾನಂದ ಪ್ರಹಸನ', ಎರಡನೆಯ ಅರುಣಗಿರಿನಾಥನ 'ವೀರಭದ್ರ ವಿಜಯ', ಕೃಷ್ಣದೇವರಾಯನ 'ಜಾಂಬವತಿ ಪರಿಣಯ', ಮತ್ತು 'ಉಷಾಪರಿಣಯ'ಗಳು, ಮಲ್ಲಿಕಾರ್ಜುನನ 'ಸತ್ಯಭಾಮಾ ಪರಿಣಯ', ಗುರುರಾಯನ 'ಸುಭದ್ರಾ ಧನಂಜಯ', ಮತ್ತು 'ರತ್ನೇಶ್ವರ ಪ್ರಸಾದ'ಗಳನ್ನು ಹೆಸರಿಸಬಹುದು.

ವಿಜಯನಗರ ಕಾಲದ ನಾಟಕ ಸಾಹಿತ್ಯವು ಕಾಳಿದಾಸ, ಭವಭೂತಿ ಮತ್ತು ಶ್ರೀಹರ್ಷರ ಮಾದರಿಯ ನಾಟಕಗಳನ್ನು ಸಾಮಾನ್ಯವಾಗಿ ಅನುಸರಿಸಿವೆ. ಶ್ರೀಕೃಷ್ಣದೇವರಾಯನ ಜಾಂಬವತೀ ಪರಿಣಯವು ಐದು ಅಂಕಗಳ ನಾಟಕ. ಇದರ ಇತಿವೃತ್ತ ಶ್ಯಮಂತಕಮಣಿಯ ಸಂಪಾದನೆ. ಜಾಂಬವಂತನ ಮಗಳು ಜಾಂಬವತಿಗೂ ಕೃಷ್ಣನಿಗೂ ನಡೆದ ವಿವಾಹವನ್ನು ಇದು ಒಳಗೊಂಡಿದೆ. ಇದು ವಿರೂಪಾಕ್ಷನ ಚೈತ್ರೋತ್ಸವದಲ್ಲಿ ಪ್ರದರ್ಶಿತವಾಯಿತಂತೆ. ಕೃಷ್ಣದೇವರಾಯನ 'ಉಷಾಪರಿಣಯ'ವು ಇನ್ನೊಂದು ನಾಟಕ. ಮಲ್ಲಿಕಾರ್ಜುನನ 'ಸತ್ಯಭಾಮಾ ಪರಿಣಯ'ವು ಕೃಷ್ಣ-ಸತ್ಯಭಾಮೆಯರ ವಿವಾಹವನ್ನು ಒಳಗೊಂಡಿದೆ. ಇದು ಐದು ಅಂಕಗಳ ನಾಟಕ. ಗುರುರಾಯನ 'ರತ್ನೇಶ್ವರ ಪ್ರಸಾದ'ವು ಐದು ಅಂಕಗಳ ನಾಟಕ. ಇದು ಜಾನಪದ ವಸ್ತುವನ್ನು ಒಳಗೊಂಡಿದೆ. ಇದು ರತ್ನೇಶ್ವರ ದೇವರ ಅನುಗ್ರಹದಿಂದ ರತ್ನಚೂಡ ಮತ್ತು ರತ್ನಾವಳಿಯರ ವಿವಾಹದ, ವಸ್ತುವನ್ನು ಒಳಗೊಂಡಿದೆ. ವಾಮನ ಭಟ್ಟಬಾಣನ 'ಶೃಂಗಾರ ಭೂಷಣ ಭಾಣ'ವು ವಿರೂಪಾಕ್ಷನ ಉತ್ಸವ ಕಾಲದಲ್ಲಿ ನೆರೆದ ಸಭಿಕರ ಮನೋರಂಜನೆಗಾಗಿ ರಚಿಸಿದ ನಾಟಕ. ಈ ನಾಟಕವು ಚಾರಿತ್ರಿಕವಾಗಿ

ಮುಖ್ಯವಾಗಿದೆ. ಏಕೆಂದರೆ: ಈ ಕೃತಿಯಲ್ಲಿ ಆ ಕಾಲದ ಸಾಂಸ್ಕೃತಿಕ ಜೀವನವನ್ನು ಕಾಣಬಹುದು. ಕೃಷ್ಣಮಿಶ್ರನ 'ಪ್ರಬೋಧ ಚಂದ್ರೋದಯ' ಹಾಗೂ ವೇಂಕಟನಾಥನ 'ಸಂಕಲ್ಪ ಸೂರ್ಯೋದಯ' ಇವೆರಡೂ ತಾತ್ತ್ವಿಕ ನಾಟಕಗಳು. ಈ ಬಗೆಯ ತಾತ್ತ್ವಿಕ ನಾಟಕಗಳು ಸಂಸ್ಕೃತ ನಾಟಕ ಸಾಹಿತ್ಯದಲ್ಲಿ ತುಂಬಾ ವಿರಳ. ಈ ಬಗೆಯ ನಾಟಕವನ್ನು ಹೊರತುಪಡಿಸಿ ಡಿಮ, ಭಾಣ, ಮತ್ತು ಪ್ರೇಂಖಣಗಳು ರಚನೆಗೊಂಡಿವೆ. ಭಾಸ್ಕರನ 'ಉನ್ಮತ್ತರಾಘವ'ವೆಂಬ ಪ್ರೇಂಖಣವು ರಾಮಾಯಣದ ಕಥಾರೇಖೆಯನ್ನು ಹೊಂದಿದೆ. ಈ ಪ್ರೇಂಖಣದ ಕರ್ತೃ ಇಮ್ಮಡಿ ಹರಿಹರನ ಆಸ್ಥಾನಕವಿ. ದುರ್ವಾಸನ ಶಾಪದಿಂದ ಸೀತೆ ಜಿಂಕೆಯಾಗುತ್ತಾಳೆ. ರಾಮನು ಆ ಮೂಲಕ ಸೀತೆಯ ಅಗಲುವಿಕೆಯಿಂದ ಹುಚ್ಚನಾಗುತ್ತಾನೆ. ಆಮೇಲೆ ಅಗಸ್ತ್ಯನ ಸಹಾಯದಿಂದ ಶಾಪವಿಮೋಚನೆ ಯಾಗುತ್ತದೆ. ಇದು ಇದರ ಕಥಾವಸ್ತು. ಇದರಲ್ಲಿರುವ ಸ್ವಗತ ಭಾಷಣಗಳು ಮಹಾಕವಿ ಕಾಳಿದಾಸನ ವಿಕ್ರಮೋರ್ವಶೀಯದ ನಾಲ್ಕನೆಯ ಅಂಕದ ಅನುಕರಣೆಯಾಗಿದೆ. ವಿದ್ಯಾರಣ್ಯರಿಗೆ ಗೌರವಾರ್ಪಣೆ ಮಾಡಲು ನೆರೆದಿದ್ದ ಸಭಿಕರ ಮುಂದೆ ಇದು ಪ್ರದರ್ಶಿತವಾಯಿತು. ಇದೇ ಕಾಲದಲ್ಲಿ ಮೊದಲನೆಯ ಅರುಣಗಿರಿನಾಥನಿಂದ 'ಸೋಮವಲ್ಲೀ ಯೋಗಾನಂದ ಪ್ರಹಸನ' ರಚಿತವಾಯಿತು. ಇದು ವಿನೋದ ರೂಪಕ. ಯತಿಯೊಬ್ಬನು ಹೆಂಗಸೊಬ್ಬಳಲ್ಲಿ ಮೋಹಗೊಂಡು ನಡೆಸುವ ಪ್ರೇಮಚೇಷ್ಟೆಗಳನ್ನು ಈ ಪ್ರಹಸನವು ವಿಡಂಬಿಸುತ್ತದೆ. ಉಲ್ಲೇಖಿಸಬಹುದಾದ ಇನ್ನೊಂದು ಭಾಣವುಂಟು. ವರದಾಚಾರ್ಯನ 'ವಸಂತ ತಿಲಕ' ಇದು ಈ ಕಾಲದ ಒಂದು ಭಾಣ. ಇದರ ಕಥಾವಸ್ತು ರಾಮಾನುಜರ ವಿಜಯವನ್ನು ನಿರೂಪಿಸುತ್ತದೆ. ಎರಡನೆಯ ಅರುಣಗಿರಿನಾಥನ 'ವೀರಭದ್ರ ವಿಜಯ'ವೆಂಬ ಡಿಮವೊಂದುಂಟು. ಇದು ವೀರಭದ್ರನ ಜನ್ಮ ಹಾಗೂ ದಕ್ಷಬ್ರಹ್ಮದ ಯಜ್ಞಧ್ವಂಸವನ್ನು ಒಳಗೊಂಡ ಕಥಾವಸ್ತುವಾಗಿದೆ. ಇದು ಕ್ರಿ.ಶ. ೧೩೦೧ರಲ್ಲಿ ಪ್ರದರ್ಶಿತವಾಯಿತು.

ವಿಜಯನಗರ ಕಾಲದ ಸಂಸ್ಕೃತಕಾವ್ಯವು ಕೆಲವೊಮ್ಮೆ ಪ್ರೌಢವೂ ತಾತ್ತ್ವಿಕವೂ ಆದ ರಚನಾಮಾದರಿಗಳನ್ನು ಹೊಂದಿದೆ. ಈ ಕಾಲದಲ್ಲಿ ಕಲ್ಪಿತಕಾವ್ಯಗಳಿಲ್ಲ; ಅವು ಇದ್ದರೂ ಕಡಮೆ. ಹೆಚ್ಚಾಗಿ ಭಾಗವತ, ರಾಮಾಯಣ ಮತ್ತು ಭಾರತಗಳ ಕಥಾಸಾಮಗ್ರಿಯನ್ನು ಅವು ಹೊಂದಿವೆ. ಪುರಾಣಗಳಿಂದ ಆಯ್ದ ಕಥಾವಸ್ತುಗಳು ಇಲ್ಲಿರುವುದು ಗಮನಾರ್ಹ. ಅಪರೂಪಕ್ಕೆ ಶಂಕರಾಚಾರ್ಯರ ಹಾಗೂ ಜಯತೀರ್ಥರ ಜೀವನಕ್ಕೆ ಸಂಬಂಧಿಸಿದ ಕಾವ್ಯಗಳು ಉಂಟು! ವಿದ್ಯಾರಣ್ಯರ ಶಂಕರವಿಜಯ; ವ್ಯಾಸತೀರ್ಥರ 'ಜಯತೀರ್ಥವಿಜಯ'ಗಳನ್ನು ಪ್ರಧಾನವಾಗಿ ಉಲ್ಲೇಖಿಸಬಹುದು. ಇವು ತಮಿಳುಸಾಹಿತ್ಯದ 'ತೀರ್ಥಪ್ರಬಂಧ'ಗಳನ್ನು ಬಹುಮಟ್ಟಿಗೆ ಹೋಲುತ್ತವೆ. ಸ್ತೋತ್ರಕಾವ್ಯಗಳು ಈ ಕಾಲದಲ್ಲಿ ಬಂದಿವೆ. ಅವುಗಳಲ್ಲಿ ಕೆಲವನ್ನು ಉದಾಹರಿಸಬಹುದು. ಭೋಗನಾಥನ ಮಹಾಗಣಪತಿಸ್ತವ, ಗೌರೀನಾಥಾಷ್ಟಕಗಳು ಮಧ್ವಸಂಪ್ರದಾಯಕ್ಕೆ ಸೇರಿದ ಕೆಲವು ಸ್ತೋತ್ರಕಾವ್ಯಗಳಾಗಿವೆ. ರಾಮಾನುಜ ಸಂಪ್ರದಾಯಕ್ಕೆ ಸೇರಿದ ಕೆಲವು ಸ್ತೋತ್ರಕಾವ್ಯಗಳುಂಟು. ಇವು ಮುಖ್ಯವಾಗಿ ಶಂಕರ, ರಾಮಾನುಜ ಮತ್ತು ಮಧ್ವರ ಸ್ತೋತ್ರದ ಮಾದರಿಗಳನ್ನು ಹೋಲುತ್ತವೆ. ಈ ಕಾಲದ ಕೆಲವು ಪ್ರೌಢಕಾವ್ಯಗಳನ್ನು ಹೆಸರಿಸಬಹುದು. ವೇಂಕಟನಾಥನ ಯಾದವಾಭ್ಯುದಯ, ಮಾಧವನ ನರಕಾಸುರವಿಜಯ, ಸಾಳುವ ನರಸಿಂಹನ ರಾಮಾಭ್ಯುದಯ, ಎರಡನೆಯ ಡಿಂಡಿಮರಾಜನ ಸಾಳುವಾಭ್ಯುದಯ, ಅಭಿರಾಮ ಕಾಮಾಕ್ಷಿಯ ಅಭಿನವರಾಮಾಭ್ಯುದಯ, ಶಿವಸೂರ್ಯನ ಪಾಂಡವಾಭ್ಯುದಯ, ಮೂರನೆಯ ರಾಜನಾಥನ ಅಚ್ಯುತರಾಯಾಭ್ಯುದಯ, –ಇವೇ ಮುಂತಾದ ಅಭ್ಯುದಯ ಕಾವ್ಯಗಳು ಒಂದೇ ಮಾದರಿಯನ್ನು ಅನುಸರಿಸಿವೆ. ಈ ಕಾಲದಲ್ಲಿ ಚಂಪೂಕಾವ್ಯಗಳು ಹೇರಳವಾಗಿ ಬಂದಿವೆ. ಅಹೋಬಲಸೂರಿಯ ವಿರೂಪಾಕ್ಷ ವಸಂತೋತ್ಸವ ಚಂಪೂ ಅನಂತಭಟ್ಟನ 'ಭಾರತ ಚಂಪೂ', ಸೋಮನಾಥನ 'ವ್ಯಾಸಯೋಗಿಚರಿತ ಚಂಪೂ', ಮುಮ್ಮಡಿ ರಾಜನಾಥನ 'ಭಾಗವತ ಚಂಪೂ', ಸ್ವಯಂಭೂನಾಥನ 'ಶಂಕರಾನಂದ ಚಂಪೂ' ಗುರುರಾಯನ 'ಹರಿಶ್ಚಂದ್ರ ಚಂಪೂ' ಇವುಗಳನ್ನು ಮುಖ್ಯವಾಗಿ ಹೆಸರಿಸಬಹುದು. ಈ ಸರಣಿಯಲ್ಲಿ ಬಹುಮುಖ್ಯವಾಗಿ ಹೆಸರಿಸಿ ವಿವರಿಸಬಹುದಾದದ್ದು ಅಹೋಬಲಸೂರಿಯ 'ವಿರೂಪಾಕ್ಷವಸಂತೋತ್ಸವ ಚಂಪೂ'. ಇದು ಇತಿಹಾಸ

ದೃಷ್ಟಿಯಿಂದ ಗಣ್ಯ. ವಿಜಯನಗರದಲ್ಲಿ ಪಂಪಾವಿರೂಪಾಕ್ಷ ವಸಂತರಥೋತ್ಸವವು ಹೇಗೆ ನಡೆಯುತ್ತಿತ್ತೆಂಬುದಕ್ಕೆ ಇದು ಸಾಕ್ಷಿಯಾಗಿದೆ. ಅಹೋಬಲನು ಈ ಚಂಪೂವಿನಲ್ಲಿ ವಿದ್ಯಾರಣ್ಯರನ್ನೂ 'ವಿಜಯನಗರದ' ಹರಿಹರನನ್ನೂ ಪ್ರತ್ಯಕ್ಷದರ್ಶಿಯಂತೆ ವರ್ಣಿಸಿದ್ದಾನೆ. ಅವರ ಸಮಕಾಲೀನನಾದ ಈ ಕವಿ ೧೪ನೆಯ ಶತಮಾನದಲ್ಲಿದ್ದನು. ಈ ಕಾವ್ಯದಲ್ಲಿ ನಾಲ್ಕು ಕಾಂಡಗಳಿವೆ. ವಸಂತನವರಾತ್ರದಲ್ಲಿ ನಡೆಯುವ ವಿರೂಪಾಕ್ಷದೇವರ ರಥೋತ್ಸವ, ಪಂಪಾಂಬಿಕೆಯೊಡನೆ ವಿವಾಹೋತ್ಸವ, ಬೇಟೆ ಮೊದಲಾದವನ್ನು, ಅವಭೃತಸ್ನಾನ ಪರ್ಯಂತರವಾಗಿ ವರ್ಣಿಸಲಾಗಿದೆ. ವಿಜಯನಗರದ ಸ್ಥಾಪಕರಾದ ವಿದ್ಯಾರಣ್ಯರಿಗೂ ಹರಿಹರನಿಗೂ ವರ್ಣನೆಯಲ್ಲಿ ಪ್ರಾಧಾನ್ಯ ಉಂಟು. ಇದರಲ್ಲಿ ವಿದ್ಯಾನಗರ, ಕಮಲಾಪುರ, ಪಂಪಾ, ತುಂಗಭದ್ರಾ, ಪಾತಾಳ ವಿರೂಪಾಕ್ಷ-ಮೊದಲಾದ ಸ್ಥಳೀಯ ಊರುಗಳ, ಪ್ರದೇಶಗಳ ವರ್ಣನೆ ಸುಂದರವಾಗಿ ಬಂದಿದೆ. ಅವನ ಕಾಲದ ಹರದತ್ತಾಚಾರ್ಯ, ದೀಕ್ಷಿತ, ವಿದ್ಯಾಸಾಗರ ಮೊದಲಾದ ವಿದ್ವಾಂಸರ ಮತ್ತು ಹಲವು ಕವಿಗಳ ಪ್ರಸ್ತಾವ ಇದೆ. ಇವನ ಇನ್ನೊಂದು ಹೆಸರಿಸಬಹುದಾದ ಕೃತಿ 'ಯತಿರಾಜವಿಜಯ ಚಂಪೂ'.

ಈ ಕಾಲದ ರಚನೆಗಳಲ್ಲಿ ಮೂರು ಮುಖ್ಯ ಮಾದರಿಗಳನ್ನು ಕಾಣುತ್ತೇವೆ. ಮೊದಲನೆಯದು 'ವಿಜಯ', ಎರಡನೆಯದು 'ಅಭ್ಯುದಯ' ಮೂರನೆಯದು 'ಚಂಪೂ'. ಸಂಸ್ಕೃತದಲ್ಲಿ ಚಂಪೂ ಕಾವ್ಯಗಳಿದ್ದುವು. ಆದರೆ, ವಿಜಯ ಮತ್ತು ಅಭ್ಯುದಯವೆಂಬ ವಿಶಿಷ್ಟ ಬಗೆಯ ಪರಂಪರೆ ವಿಜಯನಗರ ಕಾಲದ ಕಾವ್ಯಮಾದರಿಗಳೇ ಆಗಿವೆ. ಇವು ಆ ಕಾಲದ ರಾಜಕೀಯ ಮತ್ತು ಸಾಂಸ್ಕೃತಿಕ ಸಂಗತಿಗಳನ್ನು ಸೂಕ್ಷ್ಮವಾಗಿ ವ್ಯಂಜಿಸುತ್ತವೆ. ಈ ಕಾಲಘಟ್ಟದ ಕಾವ್ಯಗಳಲ್ಲಿ ಸಂಸ್ಕೃತದ ಮಾದರಿಗಳನ್ನು ಕಂಡರೂ ಅವು ಕಂನಡದ ಮಾದರಿಯನ್ನು ಪಡೆದಿವೆ. ಈ ಹಿನ್ನೆಲೆಯಲ್ಲಿ ಐತಿಹಾಸಿಕ ಕಾವ್ಯವೊಂದು ಇರುವುದು ಗಮನಾರ್ಹ. ವಿಜಯನಗರದ ಪ್ರಾದುರ್ಭಾವವಾದ ಮೊದಲಲ್ಲಿ, ರಾಜ್ಯಕ್ಕೆ ಸಂಬಂಧಿಸಿದ ಚಾರಿತ್ರಿಕ ಧ್ವನಿಯುಳ್ಳ ಕಾವ್ಯವೊಂದು ರಚಿತವಾಯಿತು. ಅದೇ ಬುಕ್ಕರಾಯನ ಸೊಸ, ಕಂಪಣನ ಪಟ್ಟದರಸಿ ಗಂಗಾದೇವಿ ರಚಿಸಿದ 'ಮಧುರಾವಿಜಯ' ಅಥವಾ 'ವೀರಕಂಪಲರಾಯ ಚರಿತ' ಎಂಬ ಚಾರಿತ್ರಿಕ ಕಾವ್ಯ. ಬುಕ್ಕನ ಮಗನಾದ ಕಂಪಣ ತಂದೆಯ ಅಪೇಕ್ಷೆಯಂತೆ ದಕ್ಷಿಣಕ್ಕೆ ದಂಡೆತ್ತಿ ಬಂದು ತುಂಡೀರ ಮಂಡಲದ ಚಂಪನನ್ನು ನಿರ್ಮೂಲನ ಮಾಡಿ, ಪ್ರಜಾನುರಾಗಿಯಾಗಿ ಆಳಿದನು. ಆಮೇಲೆ ಸೈನ್ಯದಿಂದೊಡಗೂಡಿ ಮಧುರೆಗೆ ಮುತ್ತಿಗೆ ಹಾಕಿ, ಅಲ್ಲಿಯ ಸುಲ್ತಾನನ್ನೂ ಸದೆಬಡಿದು ಮತ್ತೆ ಶಾಂತಿಯಿಂದ ರಾಜ್ಯವಾಳಿದನು. ಹೀಗೆ, ದಕ್ಷಿಣದಲ್ಲಿ ಮುಸ್ಲಿಮರ ಆಳ್ವಿಕೆಯು ಕೊನೆಗೊಂಡು ವಿಜಯನಗರದ ಶ್ವೇತಚ್ಛತ್ರದಡಿಯಲ್ಲಿ ಹಿಂದೂಧರ್ಮ ಪುನರುತ್ಥಾನಗೊಂಡಿತು. ಇದು ಈ ಕಾವ್ಯದ ವಸ್ತು. ಇತಿಹಾಸದಿಂದಲೂ ಇದು ಸಮರ್ಥನೀಯವಾಗಿದೆ. ಗಂಗಾದೇವಿ ಬರೆದ ಕಾವ್ಯದಿಂದ ಚರಿತ್ರೆಗೆ ಪೂರಕವಾಗಿ ತಿಳಿದು ಬರುವ ಕೆಲವಂಶಗಳನ್ನು ಹೀಗೆ ಪಟ್ಟಿ ಮಾಡಬಹುದು.

೧. ಬುಕ್ಕ ಸಕಳ ಸಾಮಂತ ಮಸ್ತಕನ್ಯಸ್ತ ಶಾಸನನೆಂದು ವರ್ಣಿತನಾಗಿದ್ದಾನೆ. ಹರಿಹರನ ಸೋದರನಾದ ಬುಕ್ಕನಿಗೆ ಅಧಿರಾಜತ್ವದ ವಿಶೇಷಣಗಳು ಆರೋಪಿತವಾಗಿವೆ. ಧರ್ಮಪರಿಪಾಲಕನಾದ ಅವನ ವೀರವ್ಯಕ್ತಿತ್ವ, ವೈಭವ ಮತ್ತು ಅವನ ರಾಜಕೀಯ ದೂರದೃಷ್ಟಿಗಳೆಲ್ಲ ಕಾವ್ಯದಲ್ಲಿ ಚೆನ್ನಾಗಿ ಪ್ರತಿಫಲಿತಗೊಂಡಿವೆ, (೧. ೨೭ ರಿಂದ ೪೦; ೧-೬೫ರಿಂದ ೭೩)

೨. ಬುಕ್ಕನಿಗೆ ಕಾಲಕ್ರಮಾಗತಿಯಿಂದ ರಾಜ್ಯಸಂಪ್ರಾಪ್ತವಾಯಿತೆಂದು ಗಂಗಾದೇವಿ ಸೂಚಿಸುತ್ತಾಳೆ (೧. ೭೦)

೩. ವಿಜಯನಗರ ಪಟ್ಟಣದ ವೈಭವಪೂರ್ಣ ವರ್ಣನೆ ಬಂದಿದೆ. ಹೀಗಾಗಿ, ವೀರಕಂಪಣರಾಯನ ಕಾಲಕ್ಕೆ ಆ ನಗರ ಬೆಳೆದಿದ್ದಿರಬೇಕೆಂದು ತೋರುತ್ತದೆ (೧-೪೧ ಹಾಗೂ ೪-೬೫)

೪. ಬುಕ್ಕನ ಪ್ರಧಾನ ರಾಣಿಯು ಅಂದರೆ ಕಂಪಣನ ತಾಯಿಯ ಹೆಸರು ದೇವಾಯಿಯೆಂದು ತಿಳಿದು ಬರುತ್ತದೆ (೧. ೭೧) ಕಂಪಣನಿಗೆ ಇಬ್ಬರು ತಮ್ಮಂದಿರು ಇದ್ದರು. ಅವರ ಹೆಸರು ಕಂಪಣ ಮತ್ತು ಸಂಗಮ.

೫. ಬುಕ್ಕನು ಕಂಪಣನಿಗೆ ಅನೇಕ ಕನ್ಯೆಯರನ್ನು ತಂದು ಮದುವೆ ಮಾಡಿಸಿದನು. (೩-೧೭) ಇವರಲ್ಲಿ ಪ್ರಧಾನರಾಣಿ ಗಂಗಾದೇವಿ (೩-೧೮, ೧೯)

೬. ಕಂಪಣನು ತಂದೆಯ ಆದೇಶದಂತೆ ತುಂಡೀರಮಂಡಲದ ಮೇಲೆ ದಂಡೆತ್ತಿ ಹೋಗಿ ನಿರ್ಮೂಲಿಸಿದನು.

೭. ಹಿಂದೂಧರ್ಮದ ಅವನತಿ ಹಾಗೂ ಹೀನಸ್ಥಿತಿಯ ವರ್ಣನೆ. ದೇಶದ ಆಗಿನ ಸ್ಥಿತಿಗತಿಗಳ ವರ್ಣನೆ ವ್ಯಾಪಕವಾಗಿ ಬಂದಿದೆ. (೮ನೇ ಸರ್ಗದ ಬಹು ಭಾಗ)

೮. ವಿಜಯನಗರದ ಸ್ಥಾಪಕರು ಕನ್ನಡ ಮೂಲದವರೇ. ಬುಕ್ಕನನ್ನು 'ಕರ್ಣಾಟಲೋಕ ನಯನೋತ್ಸವ ಪೂರ್ಣಚಂದ್ರ'ನೆಂದು ವಿಶೇಷಿಸಿದ್ದಾಳೆ (೧. ೭೩) ಕಂಪಣನನ್ನು 'ಕರ್ಣಾಟಕ ಕುಲಪ್ರದೀಪ' (೯-೩೭) ವಿಜಯನಗರದ ಸೇನೆಯನ್ನು 'ಕರ್ಣಾಟ ಸೇನೆ'ಯೆಂದು ಕರೆಯುತ್ತಾಳೆ (೪.೬೪).

೯. ಕಂಪಣನ ಅಂತಃಪುರ ಸ್ತ್ರೀಯರ ವರ್ಣನೆಯನ್ನು ಮಾಡುವಾಗಲೆಲ್ಲ ಕುಂತಳಸ್ತ್ರೀಯರೆಂದು ಕರೆದಿರುವುದು (೫-೨೦, ೨೦, ೨೨ ಇತ್ಯಾದಿ).

ಗಂಗಾದೇವಿಯ 'ಮಧುರಾವಿಜಯ'ವು ಒಂದು ಇತಿಹಾಸಕಾವ್ಯ. ಭಾರತದ ಇತಿಹಾಸದಲ್ಲಿ ಕವಯಿತ್ರಿಯೊಬ್ಬಳು ಬರೆದ ಮೊತ್ತಮೊದಲ ಸಂಸ್ಕೃತ ಇತಿಹಾಸಕಾವ್ಯ ಇದು. ಮಧುರೆಯನ್ನು ಜಯಿಸುವ ಸಂದರ್ಭದಲ್ಲಿ ತನ್ನ ಪ್ರಿಯಕರನಾದ ಕಂಪಣನ ಜತೆಯಲ್ಲಿ ಅವಳೂ ಇದ್ದಿರಬೇಕೆಂಬುದು ಖಚಿತ. ಇದಕ್ಕೆ ಸರ್ಗದ ಕೊನೆಯಲ್ಲಿ 'ಶ್ರೀ ಮೀನಾಕ್ಷ್ಯೈ ನಮಃ' ಎಂದಿರುವುದು ಸಾಕ್ಷಿ. ಈ ಕಾವ್ಯದ ರಚನೆಯ ಸಂದರ್ಭದಲ್ಲಿ ರಾಜಗುರುವಾದ ಕ್ರಿಯಾಶಕ್ತಿ; ತಿಕ್ಕಯ್ಯ, ಅಗಸ್ತ್ಯ, ಗಂಗಾಧರ ಮುಂತಾದ ಕವಿಗಳು ಆದರ್ಶರಾಗಿದ್ದರು. ವಿಶ್ವನಾಥ ಕವಿಯ ಪ್ರತ್ಯಕ್ಷ ಪ್ರೋತ್ಸಾಹಗಳಂತೂ ಇದ್ದೇ ಇದ್ದುವು.

ಮಧುರಾವಿಜಯವು ಒಂಭತ್ತು ಸರ್ಗವುಳ್ಳ ಕಾವ್ಯ. ಲಲಿತವೂ ಮಧುರವೂ ಆದ ಅನುಷ್ಟುಭ್ ಶ್ಲೋಕಗಳಿಂದ ಕೂಡಿದೆ. ಉದಾ:

> ದಾಸತಾಂ ಕಾಲಿದಾಸಸ್ಯ ಕವಯಃ ಕೇನ ಬಿಭ್ರತಿ।
> ಇದಾನೀಮಪಿ ತಸ್ಯಾರ್ಥಾನುಪಜೀವಂತ್ಯಮೀಯತಃ। (೧. ೭)

ಕಂಪಣನ ವ್ಯಕ್ತಿತ್ವವು ಈ ಕಾವ್ಯದಲ್ಲಿ ಅನ್ಯಾದೃಶವಾಗಿ ವರ್ಣಿತಗೊಂಡಿದೆ. ಗಂಗಾದೇವಿಯು ಒಳ್ಳೆಯ ಕವಯಿತ್ರಿ, ವೀರರಮಣಿ, ರಸಿಕಳೆಂಬುದನ್ನು ಅನೇಕ ಸರ್ಗಗಳಲ್ಲಿ ಕಾಣಬಹುದು. ಇದು ಕರ್ಣಾಟಕದಲ್ಲಿ ಹುಟ್ಟಿದ ಮೊತ್ತಮೊದಲ ಸಂಸ್ಕೃತ ಚರಿತ್ರಕಾವ್ಯ ಎಂಬುದರಿಂದಲೂ ಇದರ ಐತಿಹಾಸಿಕಾಂಶಕ್ಕೆ ಮಹತ್ವವಿದೆ.

ಗಂಗಾದೇವಿಯ 'ಮಧುರಾವಿಜಯ'ವನ್ನು ಹೋಲುವ 'ಸಾಳುವಾಭ್ಯುದಯ'ವು ಈ ಕಾಲದ ಮತ್ತೊಂದು ಚರಿತ್ರಕಾವ್ಯ. ಈ ಕಾವ್ಯವು ಸುಮಾರು ಕ್ರಿ.ಶ. ೧೪೮೯ರಲ್ಲಿ ರಚಿತವಾಯಿತೆಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಈ ಕಾಲದಲ್ಲಿ ಗಂಗಾದೇವಿಯ ಜತೆಗೆ ಇನ್ನಿಬ್ಬರು ಕವಯಿತ್ರಿಯರು ಇದ್ದರಷ್ಟೆ. .ಸಾಳುವಾಭ್ಯುದಯ ಬರೆದ ಅಭಿರಾಮ ಕಾಮಾಕ್ಷಿ; ವರದಾಂಬಿಕಾ ಪರಿಣಯವನ್ನು ಬರೆದ ತಿರುಮಲಾಂಬೆ ಇವರಿಬ್ಬರೂ ಆ ಕಾಲದ ಕವಯಿತ್ರಿಯರು. ತಿರುಮಲಾಂಬೆಯ 'ವರದಾಂಬಿಕಾಪರಿಣಯ ಚಂಪೂ' ಗ್ರಂಥವನ್ನು ಸ್ವಲ್ಪಮಟ್ಟಿಗೆ ಪರಿಚಯಿಸಿಕೊಳ್ಳುವುದು ಒಳಿತು. ತಿರುಮಲಾಂಬೆಯು ಚಾರಿತ್ರಿಕ ವಿಷಯವನ್ನು ಕಾವ್ಯಶೈಲಿಯಲ್ಲಿ ನಿರೂಪಿಸಿದ್ದಾಳೆ, ಇದು ಶುದ್ಧ ಚಾರಿತ್ರಿಕ ಕಾವ್ಯವಲ್ಲ. ಈ ಕಾವ್ಯವು ಕ್ರಿ.ಶ. ೧೫೪೦-೪೨ರ ಅವಧಿಯಲ್ಲಿ ರಚಿತವಾಗಿರಬೇಕು. ಅವಳ ಕಾವ್ಯದ ಶೈಲಿಯು ಪ್ರಸನ್ನವಾಗಿದೆ. ಕಾವ್ಯದ ಸಮಾಪ್ತಿವಾಕ್ಯದಲ್ಲಿ ತನ್ನ ಪರಿಚಯವನ್ನು ತುಸು ಮಾಡಿಕೊಟ್ಟಿದ್ದಾಳೆ.[೮] ಈ ಕಾವ್ಯದ ಕಥಾಸಾರಾಂಶ ಇಷ್ಟು. ಅಚ್ಯುತರಾಯನ ತಂದೆ ನೃಸಿಂಹರಾಜ ಮಹಾಶೂರ. ಇವನು ನಾಲ್ಕುದಿಕ್ಕುಗಳಿಗೂ ಹೋಗಿ ದಿಗ್ವಿಜಯ ಮಾಡುತ್ತಾನೆ. ದಕ್ಷಿಣದಲ್ಲಿ

ಚೋಳರಾಜನನ್ನು ಜಯಿಸಿ ರಾಮೇಶ್ವರದ ವರೆಗೂ ಹೋಗಿ ಹಿಂದಿರುಗುತ್ತ ಶ್ರೀರಂಗಪಟ್ಟಣವನ್ನು ಗೆಲ್ಲುತ್ತಾನೆ. ಉತ್ತರದಲ್ಲಿ ಕಾಂಭೋಜ, ಬಾಹ್ಲೀಕ, ತುಕ್ಕ, ಸುರತ್ರಾಣ (ಸುಲ್ತಾನ್)ರನ್ನೂ ಜಯಿಸಿ ವಿಜಯನಗರಕ್ಕೆ ಹಿಂದಿರುಗುತ್ತಾನೆ. ಅನಂತರ ಓಬಮಾಂಬಾ ಎಂಬುವಳನ್ನು ಮದುವೆಯಾಗುತ್ತಾನೆ. ರಾಜಾನೃಸಿಂಹನಿಗೆ ಅಚ್ಯುತರಾಯನೆಂಬ ಮಗನು ಹುಟ್ಟಿ ಪಟ್ಟಾಭಿಷೇಕ ಹೊಂದುತ್ತಾನೆ. ಅಚ್ಯುತರಾಯನು ಒಂದು ದೇವಸ್ಥಾನದಲ್ಲಿ ಸೂರ್ಯವಂಶದ ವರದಾಂಬಿಕೆ ಎಂಬ ಕನ್ಯೆಯನ್ನು ನೋಡಿ ಮೋಹಗೊಂಡು ಮದುವೆಯಾಗುತ್ತಾನೆ. ಆ ದಂಪತಿಗಳ ಮಗ ಚಿನವೇಂಕಟಾದ್ರಿ. ಇವನ ಯುವರಾಜ ಪಟ್ಟಾಭಿಷೇಕಕ್ಕೆ ಕಾವ್ಯ ಕೊನೆಗೊಳ್ಳುತ್ತದೆ. ಈ ಕಾವ್ಯವು ಆಕಾಲದ ಚಾರಿತ್ರಿಕ, ಸಾಮಾಜಿಕ ಹಾಗೂ ರಾಜಕೀಯ ವಿಷಯಗಳನ್ನು ನಿರೂಪಿಸುತ್ತದೆಂಬ ಕಾರಣವಾಗಿ ನಮಗೆ ಮುಖ್ಯವಾಗಿದೆ. ವೇದಾಂತ ದೇಶಿಕರೆಂಬ ಹೆಸರಿನಿಂದ ಪ್ರಸಿದ್ಧರಾಗಿರುವ ವೇಂಕಟನಾಥರು ವಿದ್ಯಾರಣ್ಯರ ಸಮಕಾಲೀನರು. ಅವರು 'ಹಂಸಸಂದೇಶ' ವೆಂಬ ಸಂದೇಶಕಾವ್ಯವನ್ನು ಬರೆದಿದ್ದಾರೆ. ಇದರ ಜತೆಗೆ 'ಪಾದುಕಾಸಹಸ್ರ'ವೆಂಬ ಚಿತ್ರಕಾವ್ಯವನ್ನುಬರೆದಿರುವುದು ಗಮನಾರ್ಹ. ಇವರು ಬರೆದ ಅಸಂಖ್ಯ ಸ್ತೋತ್ರಗಳು ಆ ಪರಂಪರೆಯ ವಿಶಿಷ್ಟ ಜೀವಂತಿಕೆಯನ್ನು ಎತ್ತಿ ತೋರಿಸುತ್ತವೆ.

ವಿಜಯನಗರ ಕಾಲದ ಸಂಸ್ಕೃತ ಸಾಹಿತ್ಯವನ್ನು ಸೂಕ್ಷ್ಮವಾಗಿ ನೋಡಿದರೆ ಕೆಲವೊಂದು ವಿಶಿಷ್ಟವಾದ ಅಂಶಗಳು ನಮ್ಮ ಗಮನಕ್ಕೆ ಬರುತ್ತವೆ. ಅವುಗಳನ್ನು ಹೀಗೆ ಸಂಗ್ರಹಿಸಬಹುದು:

ಅ) ವೈದಿಕಮತದ ಪುನರುಜ್ಜೀವನ ಮತ್ತು ವ್ಯಾಖ್ಯಾನ-ಭಾಷ್ಯಗಳ ಪ್ರಾಚುರ್ಯ, ಇವು ಆ ಕಾಲದ ಪಾರಸ್ಪರಿಕ ಸಂಗತಿಗಳಾಗಿ ಇದ್ದುದು.

ಆ) ಸ್ಮೃತಿಗ್ರಂಥಗಳ ಮೇಲೆ ವೃತ್ತಿ, ವಿವೃತ್ತಿ ಮತ್ತು ಟಿಪ್ಪಣಿಗಳು. ಇವು ಒಂದು ಬಗೆಯಲ್ಲಿ ಆ ಕಾಲದ ಧಾರ್ಮಿಕ ಹಿಡಿತಗಳನ್ನು ಪರ್ಯಾಯವಾಗಿ ಸೂಚಿಸುತ್ತವೆ.

ಇ) ಲೋಕೋಪಕಾರಕವಾದ ಬಗೆಬಗೆಯ ಔಪಯೋಗಿಕ ಶಾಸ್ತ್ರಗ್ರಂಥಗಳ ರಚನೆ. ಅದರಲ್ಲೂ ಅಶ್ವಶಾಸ್ತ್ರ, ಜ್ಯೋತಿಷ್ಯ, ಸಂಗೀತ, ಆಯುರ್ವೇದ ಮತ್ತು ಯುದ್ಧಕಲೆ ಕುರಿತ ಗ್ರಂಥಗಳ ರಚನೆ. ಇದು ಆ ಕಾಲದ ಸಾಂಸ್ಕೃತಿಕ ಬದುಕನ್ನು ಪರ್ಯಾಯವಾಗಿ ಎತ್ತಿ ತೋರಿಸುತ್ತವೆ.

ಈ) ಕೆಲವೊಂದು ವಿಶಿಷ್ಟ ಬಗೆಯ ಕಾವ್ಯರಚನೆಗಳಿವೆ. ವಿಜಯ ಮತ್ತು ಅಭ್ಯುದಯವೆಂಬ ಕಾವ್ಯರಚನಾ ಮಾದರಿಗಳು ಕನ್ನಡ ದೇಶದಲ್ಲಿ ಮೂಡಿದ್ದು ಈ ಕಾಲದಲ್ಲೇ. ಇವು ಉತ್ತರ ಭಾರತದ ಹಾಗೂ ವಿಜಯನಗರ ಪೂರ್ವ ಸಂಸ್ಕೃತ ಸಾಹಿತ್ಯದಲ್ಲಿ ಈ ಬಗೆಯ ರಚನೆಗಳು ವಿರಳವೆಂಬುದು ಗಮನಾರ್ಹ.

ಉ) ಶಾಸ್ತ್ರಸಾಹಿತ್ಯ ನಿರ್ಮಾಣದ ಕಡೆ ಒಲವು ಮತ್ತು ವ್ಯಾಖ್ಯಾನಾತ್ಮಕ ಗ್ರಂಥ ರಚನೆಗಳ ಕಡೆ ಗಮನ. ಸಾಹಿತ್ಯವು ಶಾಸ್ತ್ರಸಾಹಿತ್ಯದ ಪೋಷಕ ಭಾಗವೇ ಹೊರತು; ಅದು ಅಂಗಿಯಾಗದೆ ಇದ್ದುದು. ಸೃಜನಶೀಲ ರಚನೆಗಳು ಸೃಜನೇತರ ರಚನೆಗಳ ಉಪಉತ್ಪತ್ತಿಗಳಾಗಿ ಕಾಣಿಸಿಕೊಂಡದ್ದು. ಈ ಅಂಶವು ವಿಜಯನಗರೋತ್ತರ ಸಂಸ್ಕೃತ ಸಾಹಿತ್ಯದಲ್ಲೂ ಮುಂದುವರೆಯುತ್ತದೆ.

ಈ ಕೆಲವೊಂದು ಅಂಶಗಳ ಹಿನ್ನೆಲೆಯಲ್ಲಿ, ವಿಜಯನಗರ ಕಾಲದ ಸಂಸ್ಕೃತ ಸಾಹಿತ್ಯವು ದೇಶೀಭಾಷೆಗಳ ಜತೆ ಸ್ಪರ್ಧೆ ಮಾಡಲಿಲ್ಲ. ಬದಲಾಗಿ ವ್ಯಾಖ್ಯಾನ-ಭಾಷ್ಯ-ಸ್ತೋತ್ರಗಳೆಂಬ ಪ್ರಧಾನರಚನೆಯಲ್ಲಿ ನೆಲೆನಿಂತವು. ಇದು ಗಮನಿಸಬೇಕಾದ ಸಂಗತಿ. ಆ ಕಾಲದ ವಿದ್ಯಾರಣ್ಯ, ಸಾಯಣ, ಮಾಧವ ಮೊದಲಾದವರು ಈ ಪರಂಪರೆಯ ಮುಖ್ಯರೆಂಬುದು ನಿರ್ವಿವಾದ. ಅವರ ಪ್ರಭಾವ ವಿಜಯನಗರೋತ್ತರ ಸಂಸ್ಕೃತ ಸಾಹಿತ್ಯದ ಮೇಲೆ ಆದದ್ದನ್ನು ಮುಂದೆ ನಾವು ಕಾಣುತ್ತೇವೆ!

ಟಿಪ್ಪಣಿಗಳು

೧ ಈ ಸಂಗತಿಯನ್ನು ದಕ್ಷಿಣಭಾರತಕ್ಕೆ ಮಾತ್ರ ಅನ್ವಯಿಸುವುದಲ್ಲ; ಉತ್ತರಭಾರತಕ್ಕೂ ಅನ್ವಯಿಸಬಹುದಾದ ಸಂಗತಿಯೇ. ಸಂಸ್ಕೃತ ಸಾಹಿತ್ಯ ಚರಿತ್ರೆಯ ಈ ಕಾಲಘಟ್ಟವನ್ನು ಈ ದೃಷ್ಟಿಯಿಂದ ನೋಡಬೇಕು. ಶಾಸ್ತ್ರ ಮತ್ತು ಕಲೆಗಳೆರಡೂ ಹಲವೊಮ್ಮೆ ಒಟ್ಟೊಟ್ಟಿಗೆ ಕೈಹಿಡಿದು ನಡೆಯುತ್ತವೆ. ಇಂಥ ಸಂದರ್ಭವನ್ನು ಕ್ರಿ.ಶ.ದ ಪ್ರಾರಂಭದಿಂದ ಕ್ರಿ.ಶ. ಹತ್ತನೆಯ ಶತಮಾನದ ವರೆಗೂ ಕಾಣುತ್ತೇವೆ.

೨ ಈವರೆಗೂ ಈ ಕಾಲಘಟ್ಟದ ಸಂಸ್ಕೃತ ಸಾಹಿತ್ಯದ ಬಗೆಗೆ ಬಂದಿರುವ ಎಲ್ಲ ಬರೆಹಗಳು ಕೇವಲ ಪುಸ್ತಕಗಳ ಪಟ್ಟಿಯನ್ನೂ ಶಾಸ್ತ್ರಕಾರರ ಪಟ್ಟಿಯನ್ನೂ ತೆರೆದು ತೋರಿಸುತ್ತವೆ. ಹಾಗೆ ನೋಡಿದರೆ: ಕನ್ನಡ ಸಾಹಿತ್ಯದ ಹಿನ್ನೆಲೆಯಲ್ಲಿ ಸಂಸ್ಕೃತ ಸಾಹಿತ್ಯದ ಒಳಚಾಚುಗಳನ್ನು ನೋಡಲು ಸಾಧ್ಯವಿದೆ. ಈವರೆಗಿನ ಬರೆಹಗಳು ಸಂಸ್ಕೃತ ಸಾಹಿತ್ಯದ ಹಿನ್ನೆಲೆಯಲ್ಲಿ ಕನ್ನಡ ಸಾಹಿತ್ಯವನ್ನು ನೋಡಲಾಗಿದೆ. ಇದು ತಿರುಗು-ಮುರುಗು ಆದಾಗ ಮಾತ್ರ ಹೊಸನೋಟಗಳು ಪ್ರಾಪ್ತವಾಗುತ್ತವೆ. ಹಾಗಾಗಿ ಇಲ್ಲಿಯ ಬರೆಹ, ಕನ್ನಡದ ಸಾಂಸ್ಕೃತಿಕ ಸಂದರ್ಭ ಹಾಗೂ ಆ ಕಾಲದ ದಕ್ಷಿಣ ಭಾರತದ ಸಾಂಸ್ಕೃತಿಕ ಹಾಗೂ ಸಾಹಿತ್ಯಕ ಸಂದರ್ಭವನ್ನು ಹಿನ್ನೆಲೆಯಾಗಿಟ್ಟುಕೊಳ್ಳುವ ನಮ್ಮ ಪ್ರಯತ್ನವನ್ನು ಮಾಡಲಾಗಿದೆ.

೩ ಶ್ರೀಸಾಯಣಾಚಾರ್ಯರು ವಿಜಯನಗರದ ಬುಕ್ಕಮಹಾರಾಜನ ಆಸ್ಥಾನ ವಿದ್ವಾಂಸರು. ಇವರು ಹಲವು ಶಾಸ್ತ್ರಗಳಲ್ಲಿ ಅದ್ವಿತೀಯ ಪಂಡಿತರು. ಇವರ ಅಣ್ಣನೇ ಮಾಧವಾಚಾರ್ಯ. ಅಣ್ಣನ ಅಪೇಕ್ಷೆಯಂತೆ ಬುಕ್ಕ ಮಹಾರಾಜನು ಸಾಯಣರಿಗೆ ವೇದಗಳಿಗೆ ಭಾಷ್ಯ ರಚಿಸಲು ಅಪ್ಪಣೆ ಮಾಡಿದನು. ಅದರಂತೆ, ಸಾಯಣರು ಮೊದಲು ಯಜುರ್ವೇದಕ್ಕೆ ಭಾಷ್ಯ ಬರೆದರು.

ತತ್ಕಟಾಕ್ಷೇಣ ತದ್ರೂಪಂ ದಧದ್ಬುಕ್ಕ ಮಹೀಪತಿಃ।
ಆದಿಶನ್ಮಾಧವಾಚಾರ್ಯಂ ವೇದಾರ್ಥಸ್ಯ ಪ್ರಕಾಶನೇ ॥ ೩ ॥
ಸ ಪ್ರಾಹ ನೃಪತಿಂ ರಾಜನ್ ಸಾಯಣಾರ್ಯೋ ಮಮಾನುಜಃ।
ಸರ್ವಂ ವೇತ್ತ್ಯೇಷ ವೇದಾನಾಂ ವ್ಯಾಖ್ಯಾತೃತ್ವೇ ನಿಯುಜ್ಯತಾಂ ॥ ೪ ॥
ಇತ್ಯುಕ್ತೋ ಮಾಧವಾರ್ಯೇಣ ವೀರಬುಕ್ಕ ಮಹೀಪತಿಃ।
ಅನ್ವಶಾತ್ ಸಾಯಣಾಚಾರ್ಯಂ ವೇದಾರ್ಥಸ್ಯ ಪ್ರಕಾಶನೇ ॥ ೫ ॥

೪ ಸಾಯಣರ ಭಾಷ್ಯದ ಒಂದು ತುಣುಕು ಹೀಗಿದೆ: ''ನನು ವೇದ ಏವ ತಾವನ್ನಾಸ್ತಿ। ಕುತಸ್ತದವಾಂತರ ವಿಶೇಷ ಋಗ್ವೇದಃ? ತಥಾ ಹಿ। ಕೋಽಯಂ ವೇದೋ ನಾಮ? ನ ಹಿ ತತ್ರ ಲಕ್ಷಣಂ ಪ್ರಮಾಣಂ ವಾಸ್ತಿ। ನ ಚ ತದುಭಯ ವ್ಯತಿರೇಕೇಣ ಕಿಂಚಿದ್ವಸ್ತು ಪ್ರಸಿಧ್ಯತಿ। ಲಕ್ಷಣ ಪ್ರಮಾಣಾಭ್ಯಾಂ ಹಿ ವಸ್ತುಸಿದ್ಧಿರಿತಿ ನ್ಯಾಯವಿದಾಂ ಮತಂ ॥'' (ಋಗ್ವೇದ ಭಾಷ್ಯಭೂಮಿಕೆ)

೫ ಇತ್ಯೇಕವಾರಾಕರ್ಣನಮಾತ್ರದೃಢಾವಧಾರಿತನವ್ಯಕಾವ್ಯನಾಟಕಾಲಂಕಾರಪುರಾಣಾಗಮರಹಸ್ಯ
ಸಾರಸ್ಯಾನುಬಂಧಸಮಿಂಧಾನಸ್ವಾಭಾವಿಕಪ್ರತಿಭಾನುಭಾವಯಾ...
ವಿರಿಂಚಿ ಚಂಚಲ ನಯನಾ ನಖಾಂಚಲ ಸಮುದಂಚಿತ ವಿಪಂಚೀ ಪ್ರಪಂಚಿತ
ಪಂಚಮಮಧುರೀಮೋದಂಚನ ವಿಕಸ್ವರಕಂಠಸ್ವರಯಾ.. ನಾನಾದೇಶಪ್ರತಿಷ್ಠಿತಾನೇಕ
ವಿರಚಿತ ವಾಜಪೇಯ ಪೌಂಡರೀಕ ಸರ್ವತೋಮುಖ ಮಹಾಧ್ವರ ದ್ವಿಜವರ
ವಿತೀರ್ಯಮಾಣಾಶೀರ್ವಾದ ಪರಿಪೋಷಿತ ಭಾಗ್ಯಸೌಭಾಗ್ಯಯಾ ನಿಯತಂ ರಕ್ಷಿತಕವಿಕುಟುಂಬಯಾ
ತಿರುಮಲಾಂಬಯಾ ನಿರ್ಮಿತಂ ವರದಾಂಬಿಕಾಪರಿಣಯಂ ನಾಮ ಚಂಪೂಕಾವ್ಯಮಾಚಂದ್ರ
ತಾರಕಮಭಿವರ್ಧತಾಂ

ಅನುಬಂಧ

ಮೈಸೂರಿನ ಕಿರಿಯ ರಾಜವಂಶಗಳು

ಮೈಸೂರಿನ ರಾಜ್ಯಾಡಳಿತದ ಮಧ್ಯಯುಗೀನವಾದ ಒಂದು ಲಕ್ಷಣ, ಸಾಮ್ರಾಜ್ಯದಲ್ಲಿ ಅಧಿಕಾರಿಗಳು ಆಡಳಿತ ನಿರ್ವಹಿಸುತ್ತಿದ್ದ ಪ್ರಾಂತಗಳ ಜೊತೆಜೊತೆಗೇ ಸಾಮಂತರಾಜರೂ ಇದ್ದದ್ದು. ಈ ಸಾಮಂತರಾಜರು ಕೇಂದ್ರ ಸರಕಾರದ ಎಲ್ಲಾ ಅಂಗಗಳನ್ನು ಒಳಗೊಂಡಂತೆ ಹೆಚ್ಚು ಕಡಮೆ ಒಂದು ಸಮಾನಾಂತರ ಸರಕಾರವನ್ನೇ ತಮ್ಮ ರಾಜ್ಯದಲ್ಲಿ ನಡೆಸುತ್ತಿದ್ದರು. ಹಾಗಾಗಿ ಅವರು ತಮ್ಮ ಸಂಸ್ಥಾನಗಳನ್ನು ಸ್ವತಂತ್ರ ರಾಜ್ಯಗಳನ್ನಾಗಿಯೇ ವಿಕಾಸಗೊಳಿಸಿದರು; ಜನತೆಯ ಸಾಂಸ್ಕೃತಿಕ ಜೀವನಕ್ಕೆ ವಿಶಿಷ್ಟವಾದ ಕೊಡುಗೆಯನ್ನು ಸಲ್ಲಿಸಿದರು. ದೈನಂದಿನ ಆಡಳಿತ ನಿರ್ವಹಣೆಗೆ ಅವರು ಅಧಿಕಾರಿಗಳೇ ಇದ್ದರು. ಪ್ರದೇಶದ ರಕ್ಷಣೆಗೆ ಅವರದೇ ಸೈನ್ಯವೂ, ಅವರದೇ ಆರ್ಥಿಕ ಸಂಪನ್ಮೂಲಗಳೂ ಇದ್ದುವು. ಧಾರ್ಮಿಕ ಸಂಸ್ಥೆಗಳನ್ನು, ದೇವಾಲಯ ನಿರ್ಮಾಣ ಚಟುವಟಿಕೆಯನ್ನು ಸಾಹಿತ್ಯವನ್ನು ಪೋಷಿಸಿದರು, ಶಿಕ್ಷಣವನ್ನು ಬೆಳೆಸಿದರು. ಹೀಗೆ ಈ ಪ್ರದೇಶದ ಇತಿಹಾಸದ ಮುಖ್ಯವಾಹಿನಿಗೆ ಬಹುದೊಡ್ಡ ಪ್ರಮಾಣದಲ್ಲಿ ಕೊಡುಗೆಯನ್ನು ನೀಡಿದರು.

ನಮ್ಮ ದೇಶದ ಇತಿಹಾಸವನ್ನು ಅಧ್ಯಯನ ಮಾಡುವಾಗ ಹೆಚ್ಚು ಪ್ರಸಿದ್ಧವಾಗಿರದ ಇಂತಹ ಸಾಮಂತ ರಾಜವಂಶಗಳನ್ನು ಸಾಮಾನ್ಯವಾಗಿ ಅಲಕ್ಷಿಸಲಾಗುತ್ತದೆ, ಗಮನಕ್ಕೆ ತಂದುಕೊಳ್ಳದೆ ಮುಂದೆ ಹೋಗಲಾಗುತ್ತದೆ. ಆದರೆ ಅಂತಹ ರಾಜವಂಶಗಳ ವಿಸ್ತಾರವಾದ ಅಧ್ಯಯನದಿಂದ ಒಳ್ಳೆಯ ಫಲವಿದ್ದೇ ಇದೆ. ನಮ್ಮ ನಾಡಿನ ಇತಿಹಾಸವನ್ನು ಇನ್ನೂ ಸಮಗ್ರವಾದ ರೀತಿಯಲ್ಲಿ ಅರಿಯಲು ಅದು ನೆರವಾಗುತ್ತದೆ. ಸಾಮಂತರಾಜರ ಸವಿಸ್ತಾರ ನಿರೂಪಣೆಯಿಲ್ಲದೆ ಮೈಸೂರು ರಾಜ್ಯದ ಇತಿಹಾಸವು ಪೂರ್ಣವಾಗುವುದಿಲ್ಲ. ಮುಖ್ಯ ರಾಜವಂಶದ ವಿಷಯವಾಗಿ ಬೇಕಾದಷ್ಟು ತಿಳಿದುಕೊಂಡದ್ದಾಗಿದೆ. ಅಷ್ಟು ಪ್ರಸಿದ್ಧರಾಗಿಲ್ಲದ ಸಾಮಂತನಾಯಕರ ಇತಿಹಾಸವನ್ನು ಗುರುತಿಸಲು ಸಾಕಷ್ಟು ಗಮನ ಕೊಟ್ಟಿಲ್ಲ. ಇವರಲ್ಲಿ ಅನೇಕ ರಾಜರು ಆಳುತ್ತಿದ್ದ ಪ್ರದೇಶ ತುಂಬಾ ಚಿಕ್ಕದು, ಮತ್ತು ಅವರು ಚಕ್ರವರ್ತಿಯ ಅಧಿಕಾರದ ನೆರಳಿನಲ್ಲೇ ಬದುಕುತ್ತಿದ್ದವರು. ಆದರೂ ಅವರು ತಮ್ಮ ಪ್ರದೇಶದ ಸರ್ವತೋಮುಖ ಅಭಿವೃದ್ಧಿಗಾಗಿ ಸಾಕಷ್ಟು ಶ್ರಮಿಸಿದರು. ರೈಸ್ ಈ ವಿಷಯವಾಗಿ ಮೈಸೂರ್ ಎಂಡ್ ಕೂರ್ಗ್ ಫ್ರಂ ಇನ್‌ಸ್ಕ್ರಿಪ್ಷನ್ಸ್ ಕೃತಿಯನ್ನು ರಚಿಸಿದ ನಂತರ ಹೆಚ್ಚಾಗಿ ಯಾವ ಕೆಲಸವೂ ಆಗಿಲ್ಲ. ಕಳೆದ ಕೆಲವು ದಶಕಗಳಲ್ಲಿ ಬೇಕಾದಷ್ಟು ಸಾಹಿತ್ಯಕ ಮತ್ತು ಶಾಸನಾಧಾರಗಳು ದೊರಕಿವೆ. ಇವು ಇದುವರೆಗೆ ತಿಳಿಯದಿದ್ದ ಸಾಮಂತ ಕುಟುಂಬಗಳ ಬಗೆಗೆ ತಿಳಿಸಿವೆ, ಆಗಲೆ ತಿಳಿದಿರುವವುಗಳ ಬಗೆಗೆ ನೂತನ ಮಾಹಿತಿಯನ್ನು ನೀಡಿವೆ.

ರಾಜಕೀಯ ಇತಿಹಾಸದಲ್ಲಿ ಮಾತ್ರವಲ್ಲ, ಧರ್ಮ-ಸಾಹಿತ್ಯ, ಕಲೆ-ವಾಸ್ತುಶಿಲ್ಪ ಮೊದಲಾದ ಕ್ಷೇತ್ರಗಳಲ್ಲಿಯೂ ಸಾಮಂತ ರಾಜಕುಟುಂಬಗಳು ತಮ್ಮವೇ ಸ್ವತಂತ್ರ ಕೊಡುಗೆಗಳನ್ನು ನೀಡಿವೆ. ಶೈವ, ವೀರಶೈವ, ಶ್ರೀವೈಷ್ಣವ ಧರ್ಮಗಳು ಮೈಸೂರಿನ ಈ ಸಾಮಂತ ಕುಟುಂಬಗಳ ಪೋಷಣೆಯಲ್ಲಿ ಬೆಳೆದವು. ಈ ಅಧ್ಯಯನಗಳ ಒಟ್ಟು ಮೊತ್ತವು ಮೈಸೂರಿನ ಇತಿಹಾಸದ ಹಲವು ಮುಖಗಳ ಬಗೆಗೆ ನಮ್ಮ ಪರಿಜ್ಞಾನವನ್ನು ಖಂಡಿತವಾಗಿಯೂ ಹೆಚ್ಚಿಸುತ್ತವೆ.

ತಾಳಿಕೋಟೆ ಯುದ್ಧದ ನಂತರ ಉಂಟಾದ ಪರಿಸ್ಥಿತಿಯಲ್ಲಿ ಆಶಾಗ್ರಸ್ತರಾದ ಸಾಮಂತರು ತಮ್ಮ ಸ್ವಾತಂತ್ರ್ಯವನ್ನು ಘೋಷಿಸಿಕೊಳ್ಳಲು ಅವಕಾಶವಾಯಿತಾದರೂ, ಸಾಮ್ರಾಜ್ಯವು ಇನ್ನೂ ಏಕೀಕೃತವಾಗೇ ಇತ್ತು. ಪೆನುಕೊಂಡೆಯಲ್ಲಿದ್ದ ವಿಜಯನಗರ ಚಕ್ರವರ್ತಿಗೆ ಸಾಮಂತರು ನಿಷ್ಠೆಯನ್ನು ವ್ಯಕ್ತಪಡಿಸುತ್ತಿದ್ದರು. ಆದರೆ ವಿಜಯನಗರದ ನಾಲ್ಕನೆಯ ವಂಶವು ಪತನಗೊಂಡ ಮೇಲೆ ಶಕ್ತಿಯಿದ್ದ ಅಧೀನ ರಾಜರು ಕ್ರಮೇಣ ಹತೋಟಿಯನ್ನು ಅತಿಕ್ರಮಿಸಿ ಸಾಮ್ರಾಜ್ಯದ ಕಷ್ಟಕಾಲವನ್ನು ಉಪಯೋಗಿಸಿಕೊಂಡು ತಮ್ಮ ಸ್ವಾತಂತ್ರ್ಯವನ್ನು ಘೋಷಿಸಿಕೊಂಡರು.

ಒಂದು ನಿದರ್ಶನವನ್ನು ಕೊಡಬಹುದು. ಮೈಸೂರು ಒಂದು ಸಣ್ಣ ಸಾಮಂತ ಸೊತ್ತಾಗಿತ್ತು. ಮೂಲತಃ ಅದರ ವ್ಯಾಪ್ತಿ ಈಗಿನ ಮೈಸೂರು ನಗರದ ಅರ್ಧದಷ್ಟು ಇರಲಿಲ್ಲ. ಕ್ರಮೇಣ ತನ್ನ ಗಡಿಯನ್ನು ವಿಸ್ತರಿಸುತ್ತಾ ಹೋಗಿ, ಕ್ರಿ.ಶ. ೧೫೭೮ರಲ್ಲಿ ರಾಜಒಡೆಯರು ಪಟ್ಟಕ್ಕೆ ಬರುವ ವೇಳೆಗೆ ಗಾತ್ರದಲ್ಲೂ ಪ್ರಾಮುಖ್ಯದಲ್ಲೂ ಗಣನೀಯವಾಗಿ ಬೆಳೆದಿತ್ತು.ರಾಜಒಡೆಯರ ರಾಜನೀತಿ ಕೌಶಲವು ಹೇಗಿದ್ದಿತೆಂದರೆ, ವಿಸ್ತೃತರೂಪದ ಮೈಸೂರು ಸಂಸ್ಥಾನಕ್ಕೆ ಪೆನುಗೊಂಡೆಯಲ್ಲಿದ್ದ ಚಕ್ರವರ್ತಿ ಎರಡನೆಯ ವೆಂಕಟಪತಿಯ ಮನ್ನಣೆಯನ್ನು ಗಳಿಸಿಕೊಂಡುದಲ್ಲದೆ, ಶ್ರೀರಂಗಪಟ್ಟಣದ ವೈಸರಾಯಿ ಆಗಿ ಸಾಮ್ರಾಜ್ಯದ ಹಿತವನ್ನು ರಕ್ಷಿಸಲು ತಕ್ಕವರು ಎಂಬ ಗೌರವವನ್ನೂ ಪಡೆದರು. ಕೊನೆಗೆ ತನ್ನ ಸೋದರಳಿಯ ತಿರುಮಲನು ಕರ್ನಾಟಕದ ವೈಸರಾಯಿ ಯಾಗಿರಲು ಅರ್ಹನಲ್ಲವೆಂದು ಸಾಬೀತಾದಾಗ ವೆಂಕಟಪತಿಯು ರಾಜನಿರೂಪವನ್ನು ಹೊರಡಿಸಿ ತಿರುಮಲನನ್ನು ಒಡನೆಯೇ ಕೆಳಗಿಳಿಯಲು ಆದೇಶಿಸಿ, ಆ ಪದವಿಯನ್ನು ವಹಿಸಿಕೊಳ್ಳುವಂತೆ ರಾಜಒಡೆಯರಿಗೆ ಹೇಳಿದನು. ಇದು ನಡೆದದ್ದು ಕ್ರಿ.ಶ. ೧೬೧೦ರಲ್ಲಿ. ಅಲ್ಲಿಂದ ಮುಂದಕ್ಕೆ ಅದು ಮೈಸೂರಿಗೂ, ವಿಜಯನಗರದ ಅವಶೇಷಗಳಿಂದ ಹುಟ್ಟಿದ ಇತರ ಸಂಸ್ಥಾನಗಳಿಗೂ ಸೆಣಸಾಟವಾಯಿತು. ಮೈಸೂರಿನ ಈ ರಾಜಕೀಯ ಘಟಕಗಳ ಅಧ್ಯಯನವು ಅವರ ಉದಯ, ಬೆಳವಣಿಗೆ, ಉಚ್ಛ್ರಾಯ ಮತ್ತು ಅವನತಿಗಳು ಅನೇಕ ಸಂದರ್ಭಗಳಲ್ಲಿ ಒಂದು ಸಾಮಾನ್ಯ ವಿನ್ಯಾಸಕ್ಕೆ ಹೊಂದಿಕೊಳ್ಳುವುದನ್ನು ನೋಡಬಹುದು. ಹೀಗೆ ವಿಜಯನಗರದ ಅವಶೇಷಗಳಿಂದ ಮೈಸೂರು ಪ್ರದೇಶದಲ್ಲಿ ಹುಟ್ಟಿಕೊಂಡ ರಾಜಕೀಯ ಘಟಕಗಳು ಉತ್ತರದಲ್ಲಿ ಬಸವಾಪಟ್ಟಣ, ಬಿದನೂರು ಮತ್ತು ಚಿತ್ರದುರ್ಗಗಳ ನಾಯಕರು; ಬಲಂ (ಬೇಲೂರು) ನಾಯಕರು ಮಧ್ಯಭಾಗದಲ್ಲಿ; ಪೂರ್ವದಲ್ಲಿ ಚಿಕ್ಕನಾಯಕನಹಳ್ಳಿ (ಹಾಗಲವಾಡಿ) ನಾಯಕರು ಮತ್ತು ಯಲಹಂಕನಾಡ ಗೌಡರು; ವಾಯವ್ಯದಲ್ಲಿ ಪಿರಿಯಾಪಟ್ಟಣ ಮತ್ತು ಹೊಳೆನರಸೀಪುರಗಳ ನಾಯಕರು, ಮತ್ತು ದಕ್ಷಿಣದಲ್ಲಿ ಉಮ್ಮತ್ತೂರಿನ ಒಡೆಯರು, ಹದಿನಾಡು (ಯಳಂದೂರು), ಅರಿಕುಠಾರ (ಚಾಮರಾಜನಗರ) ಮೊದಲಾದ ಸ್ಥಳಗಳ ನಾಯಕರು ಮುಖ್ಯರಾದವರು.

ಮುಗಲರು ಮತ್ತು ಶಾಹಿ ಸುಲ್ತಾನರ ನಡುವೆ ವೈರವು ಕೊನೆಗೊಂಡದ್ದು ೧೭ನೆಯ ಶತಮಾನದ ಪೂರ್ವಾರ್ಧದಲ್ಲಿ. ಕರ್ನಾಟಕದ ರಾಜಕಾರಣದ ಮೇಲೆ ಬಹು ದೂರಸ್ಪರ್ಶಿಯಾದ ಪರಿಣಾಮಗಳನ್ನು ಹೊಂದಿದ್ದುವು. ಮುಗಲರ ಆಕ್ರಮಣಗಳಿಂದ ಬಿಡುವು ದೊರಕಿದ ಮೇಲೆ ದಖ್ಖನಿನ ಸುಲ್ತಾನರು ತಮ್ಮ ಗಮನವನ್ನು ದಕ್ಷಿಣ ಮತ್ತು ಪೂರ್ವದ ಕಡೆ ತಿರುಗಿಸಿದರು. ಇಬ್ಬರೂ ಸುಲ್ತಾನರು ಒಪ್ಪಂದ ಮಾಡಿಕೊಂಡು ವಿಜಯನಗರದ ಮೇಲೆ ಪೂರ್ವದಿಂದಲೂ ಪಶ್ಚಿಮದಿಂದಲೂ ಒಟ್ಟಿಗೆ ಆಕ್ರಮಣ ಮಾಡಲು ನಿರ್ಧರಿಸಿದರು, ಬಿಜಾಪುರ ಪೂರ್ವದಿಂದ, ಗೋಲ್ಕೊಂಡ ಪೂರ್ವದಿಂದ. ಹಿಂದೊಮ್ಮೆ ವಿಜಯನಗರ ಸಾಮ್ರಾಜ್ಯದ ಭಾಗವಾಗಿದ್ದ ಎಲ್ಲ ಪ್ರದೇಶಗಳನ್ನೂ ಆಕ್ರಮಿಸಿಕೊಳ್ಳಬೇಕೆನ್ನುವುದು ಅವರ ಉದ್ದೇಶವಾಗಿತ್ತು.[೧]

ಬಿಜಾಪುರ ಮತ್ತು ಗೋಲ್ಕೊಂಡಗಳ ನಡುವೆ ಆದ ಒಪ್ಪಂದದ ಪ್ರಕಾರ ಬಿಜಾಪುರವು ಬಾರಾಮಹಲ್‌ನಲ್ಲಿ ಶ್ರೀರಂಗನ ಮೇಲೆ ಆಕ್ರಮಣ ಮಾಡಲು ಮೈಸೂರು ಪ್ರದೇಶವನ್ನು ಪ್ರವೇಶಿಸಬೇಕು; ದಾರಿಯಲ್ಲಿ ಇಕ್ಕೇರಿ, ಸಿರಾ, ಬೆಂಗಳೂರು ಮೊದಲಾದವನ್ನು ಗೆದ್ದು ಕರ್ನಾಟಕ ಪ್ರದೇಶವನ್ನು ತಲುಪಬೇಕು ಎಂದಿತ್ತು. ಮೈಸೂರಿನಲ್ಲಿ ಹಿಂದೂ ಅರಸರಲ್ಲಿದ್ದ ಅನೈಕ್ಯತೆ ಆದಿಲ್‌ಶಹನಿಗೆ ತನ್ನ ಉದ್ದೇಶವನ್ನು ಸಾಧಿಸಿಕೊಳ್ಳಲು

ಬಹಳ ಒಳ್ಳೆಯ ಅವಕಾಶವನ್ನು ಒದಗಿಸಿತು. ಇಷ್ಟು ಹಿನ್ನೆಲೆಯನ್ನಿಟ್ಟುಕೊಂಡು ಮೈಸೂರಿನ ಕಿರಿಯ ರಾಜವಂಶಗಳು, ಅವು ಮೈಸೂರಿನ ಇತಿಹಾಸದ ಸಂಧಿಕಾಲದಲ್ಲಿ ನಿರ್ವಹಿಸಿದ ಪಾತ್ರ ಇವುಗಳನ್ನು ಕುರಿತು ಅಧ್ಯಯನ ಮಾಡಬಹುದು. ಮೊದಲು ಮೈಸೂರಿನ ಉತ್ತರಕ್ಕಿದ್ದ ನಾಯಕರನ್ನು ಕುರಿತು ಪರಿಶೀಲಿಸಬಹುದು.

ಬಸವಾಪಟ್ಟಣದ ರಾಜರು

ಬಸವಾಪಟ್ಟಣ ಶಿವಮೊಗ್ಗ ಜಿಲ್ಲೆಯ ತರೀಕೆರೆ ತಾಲೂಕಿನ ಒಂದು ಸಣ್ಣ ಪಟ್ಟಣ. ರೈಸ್ ಹೇಳುವಂತೆ ಅದರ ಸ್ಥಾಪಕ ಧೂಮರಾಜ.[೫] ಆದರೆ ಈ ಧೂಮರಾಜ ಯಾರು, ಯಾವಾಗ ಅವನು ಈ ವಂಶವನ್ನು ಸ್ಥಾಪಿಸಿದನು ಎನ್ನುವುದು ಸರಿಯಾಗಿ ತಿಳಿದಿಲ್ಲ. ಸಮಕಾಲೀನ ಶಾಸನ ಮತ್ತು ಸಾಹಿತ್ಯಕ ಮೂಲಗಳಿಂದ ಕೂಡ ಈ ರಾಜರ ಬಗೆಗೆ ಹೆಚ್ಚಾಗಿ ತಿಳಿಯುವುದಿಲ್ಲ. ಈ ವಂಶವು ಬಹಳ ಕಾಲ ಆಳುತ್ತಿದ್ದಂತೆಯೂ ತೋರುವುದಿಲ್ಲ. ಧೂಮರಾಜನಿಗೆ ಇಬ್ಬರು ಮಕ್ಕಳು - ಕೆಂಗೆನಾಯಕ ಮತ್ತು ರಾಮಪ್ಪನಾಯಕ. ತಂದೆಯ ನಿಧನಾನಂತರ ಕೆಂಗೆನಾಯಕನು ಪಟ್ಟಕ್ಕೆ ಬಂದನು. ಅವನು ಬಸವಾಪಟ್ಟಣದ ಕೋಟೆಯನ್ನು ಕಟ್ಟಿಸಿದನು. ಅಕ್ಕಪಕ್ಕದ ಪ್ರದೇಶಗಳನ್ನು ಗೆದ್ದು ಆನಂದಪುರದಿಂದ ಮಾಯಕೊಂಡದವರೆಗೆ, ಹರಿಹರದಿಂದ ತರೀಕೆರೆಯವರೆಗೆ ವಿಸ್ತರಿಸಿದನು. ಅವನ ಸಂತರ ಹುಚ್ಚ ಹನುಮಪ್ಪ ನಾಯಕನೂ, ಅವನ ನಂತರ ಕೆಂಗೆ ಹನುಮನೂ ಪಟ್ಟಕ್ಕೆ ಬಂದರು.[೬]

ಧೂಮರಾಜ

ಕೆಂಗೆನಾಯಕ — ರಾಮಪ್ಪನಾಯಕ

ಕೆಂಗೆನಾಯಕ
|
ವೀರಹನುಮಪ್ಪನಾಯಕ
|
ಇಮ್ಮಡಿ ಹನುಮಪ್ಪನಾಯಕ
|
ಹುಚ್ಚ ಹನುಮಪ್ಪನಾಯಕ
|
ಕೆಂಗೆನಾಯಕ

(ಕೆಂಗೆ ನಾಯಕನು ಇಕ್ಕೇರಿಯ ವೀರಭದ್ರನಾಯಕನ (೧೬೨೯-೪೫), ಬಿಜಾಪುರದ ಮುಹಮ್ಮದ್ ಅದಿಲ್‌ಶಾಹನ (೧೬೨೬-೧೬೫೬) ಮತ್ತು ಮೈಸೂರಿನ ಕಂಠೀರವ ನರಸರಾಜರ (೧೬೩೮-೧೬೫೯) ಸಮಕಾಲೀನನಾಗಿದ್ದನು).

ಕಂಠೀರವ ನರಸರಾಜ ಒಡೆಯರ ಆಸ್ಥಾನ ಕವಿ ಗೋವಿಂದವೈದ್ಯ ಹೇಳುವಂತೆ, ಇಕ್ಕೇರಿಯ ವೀರಭದ್ರನಾಯಕನ ಮೇಲಣ ದುರ್ಭಾವನೆಯಿಂದ ಕೆಂಗೆ ಹನುಮನು ಬಿಜಾಪುರದ ನೆರವನ್ನು ಪಡೆದನು.[೭] ವೆಂಕಟಾದ್ರಿನಾಯಕನಿಂದ ಸೋತು ಹನುಮಪ್ಪನು ಬಿಜಾಪುರಕ್ಕೆ ಓಡಿಹೋಗಿ ಅದಿಲ್‌ಶಾಹನ ನೆರವನ್ನು ಯಾಚಿಸಿದನು. ಮೈಸೂರನ್ನು ಪ್ರವೇಶಿಸಲು ಸುಲ್ತಾನನೂ ಒಂದು ಅವಕಾಶವನ್ನು ಕಾಯುತ್ತಿದ್ದನು. ಬಾರಾಮಹಲ್‌ನಲ್ಲಿದ್ದ ಮೂರನೆಯ ಶ್ರೀರಂಗನೊಂದಿಗೆ ಯುದ್ಧಮಾಡಲು ಹೋಗುವ ದಾರಿಯಲ್ಲಿ ಅನೇಕ ಸಣ್ಣಪುಟ್ಟ ರಾಜರನ್ನು ಅವನು ಗೆಲ್ಲಬೇಕಾಗಿತ್ತು. ಈಗ ಕೆಂಗೆ ಹನುಮನ ಆಹ್ವಾನವು ಅವನಿಗೆ ಕರ್ನಾಟಕದ ಬಾಗಿಲನ್ನು ತೆರೆಯಿತು. ಅದಿಲ್‌ಶಾಹನು ಒಡನೆಯೇ ಸಮ್ಮತಿಸಿ ತನ್ನ ಸೈನ್ಯವನ್ನು ದಂಡನಾಯಕ ರಣದುಲ್ಲಾ ಖಾನನ ಕೈಕೆಳಗೆ ಕಳುಹಿಸಿದನು. ತೋರಿಕೆಯ ಉದ್ದೇಶ ಕೆಂಗೆ ಹನುಮನಿಗೆ ಸಹಾಯ ಮಾಡುವುದು, ಆದರೆ ನಿಜವಾಗಿ ದಕ್ಷಿಣದ ರಾಜ್ಯಗಳನ್ನು ಗೆಲ್ಲುವುದು.

ಕೆಂಗೆ ಹನುಮನನ್ನು ತನ್ನೊಂದಿಗೆ ಕರೆದುಕೊಂಡು ರಣದುಲ್ಲಾ ಖಾನನು ಗುಪ್ತಮಾರ್ಗದಿಂದ ಇಕ್ಕೇರಿಯನ್ನು ತಲುಪಿದನು. ಈ ಅನಿರೀಕ್ಷಿತ ಧಾಳಿಯನ್ನು ವೀರಭದ್ರನು ತಡೆದುಕೊಳ್ಳಲಾಗಲಿಲ್ಲ. ಕವಲೆದುರ್ಗ (ಭುವನಗಿರಿ)ದಲ್ಲಿ ನಡೆದ ಯುದ್ಧದಲ್ಲಿ ಅವನು ಸೋತು ಬಿಜಾಪುರಕ್ಕೆ ಶರಣಾಗಬೇಕಾಯಿತು. ಇಕ್ಕೇರಿಯ ಮೇಲೆ ತನ್ನ ಹಕ್ಕನ್ನು ಬಿಟ್ಟುಕೊಟ್ಟುದಲ್ಲದೆ, ಸುಲ್ತಾನನಿಗೆ ೩೦ ಲಕ್ಷ ಹಣವನ್ನು ಕೊಡಲು ಒಪ್ಪಿದನು. ಅದಿಲ್‌ಶಾಹನು ಇಕ್ಕೇರಿಯನ್ನು ಬಿಜಾಪುರಕ್ಕೆ ಸೇರಿಸಿಕೊಂಡು, ಬಿಜಾಪುರದ ಸುಲ್ತಾನನ ಅಧೀನರಾಜನಾಗಿ ನಗರ ಅಥವಾ ಬಿದನೂರನ್ನು ಆಳುತ್ತಿರಬೇಕೆಂದು ಏರ್ಪಾಟು ಮಾಡಿದನು.[೫]

ಮೊದಲನೆಯ ದಂಡಯಾತ್ರೆಯಲ್ಲಿ ದೊರೆತ ವಿಜಯವು ಅದಿಲ್‌ಶಾಹನ ರಾಜ್ಯದಾಹವನ್ನು ಹೆಚ್ಚಿಸಿತು, ಕರ್ನಾಟಕದಲ್ಲಿ ಹೆಚ್ಚು ಭಾಗವನ್ನು ಗೆಲ್ಲುವ ದಾಹ ಇಮ್ಮಡಿಸಿತು. ಅದರಿಂದ ಕರ್ನಾಟಕ ಪ್ರದೇಶಕ್ಕೆ ಹೋಗುವುದು ಸುಲಭವಾಗುತ್ತಿತ್ತು. ಅದಿಲ್‌ಶಾಹನ ಆಕ್ರಮಣಗಳು ಚುರುಕುಗೊಳ್ಳಲು ಇನ್ನೂ ಕೆಲವು ಕಾರಣಗಳಿದ್ದುವು. ಬೆಂಗಳೂರಿನ ಬಳಿಯ ಬೇಗೂರಿನ ಪಾಳೆಯಗಾರನು ಬೆಂಗಳೂರಿನ ಪ್ರಭು ೨ನೇ ಕೆಂಪೇಗೌಡನ ವಿರುದ್ಧವಾಗಿ ಮಲೆತಿದ್ದನು. ಕೆಂಪೇಗೌಡನ ಮೇಲೆ ಸೇಡು ತೀರಿಸಿಕೊಳ್ಳಲು ಅವನು ಬಿಜಾಪುರಕ್ಕೆ ಹೋಗಿ ಅದಿಲ್‌ಶಾಹನ ಸಹಾಯವನ್ನು ಕೇಳಿದನು.[೬] ಹಾಗೆಯೇ ನಾಗಮಂಗಲದ ಚನ್ನಯ್ಯ ದಳವಾಯಿ ಎನ್ನುವವನು ಚನ್ನಪಟ್ಟಣದ ಜಗದೇವರಾಯನ ಸೇವೆಯಲ್ಲಿದ್ದವನು ೧೬೩೦ರಲ್ಲಿ ಮೈಸೂರಿನ ೩ನೇ ಚಾಮರಾಜ ಒಡೆಯರ್ ಅವರಿಂದ ಸೋತಿದ್ದನು. ಈಗ ಬಿಜಾಪುರಕ್ಕೆ ಹೋಗಿ ಅದಿಲ್‌ಶಾಹನ ಸೇವೆಗೆ ಸೇರಿದನು.[೭] ಕಂಠೀರವನ ಬೆಳೆಯುತ್ತಿದ್ದ ಶಕ್ತಿಯನ್ನು ಮೊಟಕುಮಾಡಲು ಒಂದು ಸೈನ್ಯವನ್ನು ಕಳಿಸಬೇಕೆಂದು ಅದಿಲ್‌ಶಾಹನು ಮನವಿಮಾಡಿಕೊಂಡನು.

ದಕ್ಷಿಣದಲ್ಲಿ ಹೆಚ್ಚು ಪ್ರದೇಶಗಳನ್ನು ಗೆಲ್ಲುವ ತನ್ನ ಆಸೆಯನ್ನು ಈಡೇರಿಸಿಕೊಳ್ಳಲು ಸುಲ್ತಾನನಿಗೆ ಇದಕ್ಕಿಂತ ಉತ್ತಮವಾದ ಅವಕಾಶ ದೊರಕುತ್ತಿರಲಿಲ್ಲ. ಹಾಗಾಗಿ ಈ ಇಬ್ಬರು ನಾಯಕರ ಕೋರಿಕೆಯಂತೆ, ಸುಲ್ತಾನನು ೧೬೩೮ರಲ್ಲಿ ರಣದುಲ್ಲಾ ಖಾನನ ಕೈಕೆಳಗೆ ಕೆಂಪೇಗೌಡನ ವಿರುದ್ಧವಾಗಿ ಸೈನ್ಯವನ್ನು ಕಳುಹಿಸಿದನು. ಬಿಜಾಪುರ ಸೈನ್ಯವು ಸಿರಾ ಮತ್ತು ಬೇಗೂರುಗಳ ಮೂಲಕ ಹಾದು ಬೆಂಗಳೂರಿಗೆ ಮುತ್ತಿಗೆ ಹಾಕಿತು. ಈ ಸೈನ್ಯವನ್ನು ಎದುರಿಸಲು ಕೆಂಪೇಗೌಡನೇನೂ ಸಿದ್ಧನಾಗದೆ ಇರಲಿಲ್ಲ, ಆದರೆ ಶಕ್ತಿಯಲ್ಲಿ ಬಿಜಾಪುರಿಗಳಿಗೆ ಅವನು ಸಮನಾಗಿರಲಿಲ್ಲ. ೧೬೩೮ರಲ್ಲಿ ಬೆಂಗಳೂರಿನ ಬಳಿ ನಡೆದ ಭೀಕರ ಹೋರಾಟದಲ್ಲಿ ಕೆಂಪೇಗೌಡನು ಮೂರುದಿನಗಳ ಕಾಲ ಅಪ್ರತಿಮ ವೀರಾವೇಶದಿಂದ ಕಾದಿದನು, ಕೊನೆಗೆ ಅವನು ಸೋಲಬೇಕಾಯಿತು.

೧೬೩೮ ಡಿಸೆಂಬರಿನಲ್ಲಿ ಆದ ಒಂದು ಒಪ್ಪಂದದಂತೆ ಯುದ್ಧವು ಕೊನೆಗೊಂಡಿತು. ಅದರ ಪ್ರಕಾರ ಕೆಂಪೇಗೌಡನು ಅದಿಲ್‌ಶಾಹನಿಗೆ ಅಧೀನನಾಗಿ, ತನ್ನ ಮಗನನ್ನು ಒತ್ತೆಯಾಳಾಗಿ ಬಿಜಾಪುರಕ್ಕೆ ಕಳಿಸಿದನು. ಅದಕ್ಕೆ ಪ್ರತಿಯಾಗಿ ಬೆಂಗಳೂರಿನ ವಾಯವ್ಯಕ್ಕೆ ಸುಮಾರು ೩೦ ಮೈಲು ದೂರದಲ್ಲಿದ್ದ ಮಾಗಡಿ ಎಂಬ ಪಟ್ಟಣವನ್ನು ಪಡೆದನು. ಅಂದಿನಿಂದ ಮಾಗಡಿಯ ಹೆಸರು ಕೆಂಪೇಗೌಡನ ಕುಟುಂಬದೊಂದಿಗೆ ಬೆರೆತುಕೊಂಡಿತು.[೮]

ರಣದುಲ್ಲಾ ಖಾನನು ಬೆಂಗಳೂರನ್ನು ಶಾಹಜಿಯ ವಶಕ್ಕೆ ಕೊಟ್ಟು ಶ್ರೀರಂಗಪಟ್ಟಣದ ಕಡೆಗೆ ನಡೆದನು. ಕಂಠೀರವ ನರಸರಾಜ ಒಡೆಯರ್ ಸೋತು, ಕಾವೇರಿನದಿಯ ಉತ್ತರಕ್ಕಿದ್ದ ಪ್ರದೇಶವನ್ನು ಅದಿಲ್‌ಶಹನಿಗೆ ಒಪ್ಪಿಸಿದುದಲ್ಲದೆ, ಯುದ್ಧದ ನಷ್ಟಭರ್ತಿಯಾಗಿ ೫ ಲಕ್ಷ ಹಣವನ್ನು ಪಾವತಿ ಮಾಡಬೇಕಾಯಿತು. ಗೆದ್ದ ಪ್ರದೇಶಗಳ ಬಿಜಾಪುರದ ಹಿತವನ್ನು ರಕ್ಷಿಸಲು ಶ್ರೀರಂಗಪಟ್ಟಣದಲ್ಲಿ ಕೆಂಗೆ ಹನುಮನನ್ನು ಬಿಟ್ಟು ವಿಜಯೋತ್ಸಾಹದಿಂದ ಬಿಜಾಪುರಕ್ಕೆ ಹಿಂದಿರುಗಿದನು.[೯]

ಶ್ರೀರಂಗಪಟ್ಟಣದ ಒಪ್ಪಂದ ಬಹಳ ಕಾಲ ಉಳಿಯಲಿಲ್ಲ. ಕಂಠೀರವನು ಅದರ ಷರತ್ತುಗಳನ್ನು ಗೌರವಿಸಲಿಲ್ಲ. ಒಪ್ಪಿದ ಹಣವನ್ನು ಕೊಡಲು ನಿರಾಕರಿಸಿದನು. ಯಾರ ಸಹಾಯದಿಂದ ರಣದುಲ್ಲಾಖಾನನು ಮಲೆನಾಡನ್ನು ಗೆದ್ದು ಆದಿಲ್‌ಶಾಹನ ಪ್ರತಿನಿಧಿಯಾಗಿ ಇರಿಸಿದ್ದನೋ ಆ ಕೆಂಗೆ ಹನುಮನು ಸುಲ್ತಾನನ ವಿರುದ್ಧವಾಗಿ ದಂಗೆಯೆದ್ದನು.[೧೦] ಮೈಸೂರಿನಲ್ಲಿ ಇರಲು ಒಪ್ಪದೆ ತನ್ನ ರಾಜಧಾನಿಗೆ ಹಿಂದಿರುಗಿದನು. ಬಸವಾಪಟ್ಟಣಕ್ಕೆ ಕೋಟೆಯನ್ನು ಕಟ್ಟಿಸಿದನು. ಬಿಜಾಪುರದ ವಿರುದ್ಧವಾಗಿ ದಂಗೆಯೇಳಲು ಇತರ ಹಲವು ರಾಜರನ್ನು ಪ್ರಚೋದಿಸಿದನು. ವಿಜಯನಗರದ ವೆಂಕಟಪತಿರಾಯನನ್ನೂ ಸಂಧಿಸಿ ಅವನ ನೆರವನ್ನು ಕೋರಿದನೆಂದೂ ಹೇಳಲಾಗಿದೆ.[೧೧]

ಕೆಳದಿಯ ಆಸ್ಥಾನ ಇತಿಹಾಸಕಾರ ಲಿಂಗಣ್ಣನ ಪ್ರಕಾರ, ವೀರಭದ್ರನು ತನಗೆ ಕೆಂಗೆ ಹನುಮನಿಂದಾದ ಅಪಮಾನವನ್ನು ಮರೆತಿರಲಿಲ್ಲ. ಸೇಡುತೀರಿಸಿಕೊಳ್ಳಲು ಅವನು ಆದಿಲ್‌ಶಾಹನೊಂದಿಗೆ ಮೈತ್ರಿಯನ್ನು ಬೆಳೆಸಿಕೊಂಡನು. ೧೬೪೯ರ ಶ್ರೀರಂಗಪಟ್ಟಣದ ಕರಾರು ಅತೃಪ್ತಿಕರವಾಗಿದುದ್ದದನ್ನೂ ಕೆಂಗೆ ಹನುಮನು ವಿಶ್ವಾಸಕ್ಕೆ ಅನರ್ಹನಾಗಿರುವುದನ್ನೂ ಅವನಿಗೆ ತೋರಿಸಿಕೊಟ್ಟನು. ಕೆಂಗೆ ಹನುಮನನ್ನು ದಂಡಿಸಲು ಬಸವಾಪಟ್ಟಣದ ಮೇಲೆ ಸೈನ್ಯವನ್ನು ಕಳುಹಿಸಬೇಕೆಂದು ಸುಲ್ತಾನನಿಗೆ ಒತ್ತಾಯ ಮಾಡಿದನು.[೧೨] ಮೈಸೂರಿನ ಈ ಬೆಳವಣಿಗೆಯನ್ನು ಕೇಳಿ ಸುಲ್ತಾನನಿಗೆ ಬಹಳ ಕೋಪಬಂದಿತು. ರಣದುಲ್ಲಾಖಾನನನ್ನು ಮತ್ತೆ ಸೇನಾಸಮೇತವಾಗಿ ಕಳುಹಿಸಿದನು. ಬಿಜಾಪುರ ಸೈನ್ಯವು ಬಸವಾಪಟ್ಟಣಕ್ಕೆ ಮುತ್ತಿಗೆ ಹಾಕಿತು. ರಣದುಲ್ಲಾಖಾನನ ಸೇನಾಧಿಕಾರಿಗಳಲ್ಲಿ ಒಬ್ಬನಾಗಿದ್ದ ಅಫಜಲ್‌ಖಾನನು ಅಸಾಧಾರಣ ಪರಾಕ್ರಮದಿಂದ ಕೋಟೆಯೊಳಕ್ಕೆ ನುಗ್ಗಿ ಕೆಂಗೆ ಹನುಮನನ್ನು ಸೋಲಿಸಿದನು. ಸೋತ ಹನುಮನು ಕೋಟೆಯನ್ನು ಒಪ್ಪಿಸಿಕೊಟ್ಟು ಸುಲ್ತಾನನಿಗೆ ೪೦ ಲಕ್ಷ ಹಣವನ್ನು ತೆತ್ತು ಸಂಧಿಯನ್ನು ಯಾಚಿಸಿದನು. ಕೆಂಗೆ ಹನುಮನನ್ನು ಸೆರೆಹಿಡಿದೊಯ್ದು ಆಮೇಲೆ ವಧಿಸಲಾಯಿತು.[೧೩] ರಣದುಲ್ಲಾಖಾನನು ಬಸವಾಪಟ್ಟಣವನ್ನು ವಶಪಡಿಸಿಕೊಂಡು ಮುರ್ತುಜಾ ಬೇಗನನ್ನು ಆ ಸ್ಥಳದ ಗವರ್ನರ್ ಆಗಿ ನೇಮಿಸಿದನು.[೧೪] ಕೆಂಗೆ ಹನುಮನ ಕುಟುಂಬವನ್ನು ತರೀಕೆರೆಗೆ ಕಳುಹಿಸಲಾಯಿತು. ಅಲ್ಲಿ ಅವರು ಸುಲ್ತಾನನ ಅಧೀನರಾಗಿ ಆಳಲು ಅವಕಾಶ ಕಲ್ಪಿಸಲಾಯಿತು.[೧೫] ಈ ರೀತಿಯಾಗಿ ಬಸವಾಪಟ್ಟಣದ ರಾಜರ ವಂಶವು ಕೊನೆಗೊಂಡಿತು.

ಹಾಗಲವಾಡಿಯ (ಚಿಕ್ಕನಾಯಕನಹಳ್ಳಿ) ಪಾಳೆಯಗಾರರು (೧೪೭೮-೧೭೫೩)

ವೆಂಕಟಪತಿ ಮಹಾರಾಯನ ಕಾಲದ ಒಂದು ಶಾಸನವು ಈ ರಾಜವಂಶದ ಮೂಲವನ್ನು ಹೇಳುತ್ತದೆ. ವಂಶದ ಸ್ಥಾಪಕನು ಯೆರಿಮದನಾಯಕ (೧೪೭೮-೧೫೦೮). ಇವನಿಗೆ ವಿಜಯನಗರದ ಕೃಷ್ಣದೇವರಾಯನು ಚಿಕ್ಕನಾಯಕನಹಳ್ಳಿ ಪ್ರದೇಶವನ್ನು ನೀಡಿ ಅವನನ್ನು ಅಮರನಾಯಕನನ್ನಾಗಿ ನೇಮಿಸಿದ್ದನು. ಅವನ ಮಗ ಸಳನಾಯಕನು (೧೫೦೮-೧೫೪೪) ದೇಶವನ್ನು ವಿಸ್ತಾರ ಮಾಡಿದನು. ತುರುವೇಕೆರೆ, ನೊಣವಿನಕೆರೆ, ಸೆಟ್ಟಿಕೆರೆ, ಕಂದಿಕೆರೆ ಮೊದಲಾದ ಸ್ಥಳಗಳನ್ನು ಕೂಡಿಸಿದನು.[೧೬]

ಯೆರಿಮದನಾಯಕನ ತಮ್ಮ ಚಿಕ್ಕನಾಯಕನ ಹೆಸರಿನಿಂದ ಊರಿಗೆ ಆ ಹೆಸರು ಬಂದಿತು. ಕಾಲಕ್ರಮದಲ್ಲಿ ಈ ಅರಸರು ಕಡಬ, ಕಲ್ಲೂರು, ಮಾಯಿಸಮುದ್ರ ಮೊದಲಾದ ಪ್ರದೇಶಗಳನ್ನು ವಶಪಡಿಸಿಕೊಂಡು ತಮ್ಮ ಪ್ರಭಾವವನ್ನು ಇಂದಿನ ನಾಗಮಂಗಲ ಮತ್ತು ಗುಬ್ಬಿ ತಾಲೂಕುಗಳವರೆಗೂ ವಿಸ್ತರಿಸಿದರು. ಎರಡನೆಯ ಭೈರಪ್ಪನಾಯಕನ ಆಳಿಕೆಯಲ್ಲಿ, ಚನ್ನಪಟ್ಟಣದ ಜಗದೇವರಾಯನ ಪ್ರಾಂತದ ಭಾಗವಾಗಿದ್ದ ನಾಗಮಂಗಲ ತಾಲೂಕಿನ ಬೆಳ್ಳೂರನ್ನು ವಶಪಡಿಸಿಕೊಳ್ಳಲಾಯಿತು. ಆದರೆ ಮೈಸೂರಿನ ೫ನೇ ಚಾಮರಾಜ ಒಡೆಯರ್

(೧೬೧೭-೧೬೩೭) ಚನ್ನಪಟ್ಟಣವನ್ನು ೧೬೩೦ರಲ್ಲಿ ಸೋಲಿಸಿದಾಗ ಮೈಸೂರಿನ ಸೈನ್ಯವು ೧೬೩೧ ಮೂರ್ತಿಯಲ್ಲಿ ಚಿಕ್ಕನಾಯಕನಹಳ್ಳಿಯ ಮೇಲೆ ಆಕ್ರಮಣ ಮಾಡಿ ಬೆಳ್ಳೂರನ್ನು ಗೆದ್ದುಕೊಂಡಿತು. ಚಿಕ್ಕನಾಯಕನಹಳ್ಳಿ ಸೈನ್ಯದ ದಂಡನಾಯಕ ಪರಮಾರವುಂತ ಗುರುವಣ್ಣನು ಯುದ್ಧದಲ್ಲಿ ಹತನಾದನು.[೧೭] ಈ ಘಟನೆಯು ಚಿಕ್ಕನಾಯಕನಹಳ್ಳಿಯ ಮೊದಲನೆಯ ಮುದಿಯಪ್ಪನಾಯಕನ ಕಾಲದಲ್ಲಿ ನಡೆಯಿತು. ಸೋತ ಮುದಿಯಪ್ಪನಾಯಕನು ಮೈಸೂರಿನೊಂದಿಗೆ ಒಪ್ಪಂದ ಮಾಡಿಕೊಂಡನು. ಅದರ ಕುರುಹಾಗಿ ಮುದಿಯಪ್ಪನು ಚಾಮರಾಜ ಒಡೆಯರಿಗೆ ಅಮೂಲ್ಯವಾದ ಉಡುಗೆಗಳು, ರತ್ನಾಭರಣಗಳು ಮತ್ತು ರಾಮಲಿಂಗ ಎಂಬ ಹೆಸರಿನ ಒಂದು ಆನೆ ಇವನ್ನು ಉಡುಗೊರೆಯಾಗಿ ಕಳಿಸಿದನು.[೧೮] ಶಾಸನಾಧಾರಗಳಿಂದ ರಚಿಸಿದ ಚಿಕ್ಕನಾಯಕನಹಳ್ಳಿಯ ಅರಸರ ತಾತ್ಕಾಲಿಕ ವಂಶಾವಳಿ ಹೀಗಿದೆ :

ಯೆರಿಮದನಾಯಕ (೧೪೭೮-೧೫೦೮)
- ಸಾಲಿನಾಯಕ (೧೫೦೮-೧೫೪೪)
  - ಭೈರವನಾಯಕ (೧೫೪೪-೧೫೭೪)
    - ಹಿರೇಮುದಿಯಪ್ಪನಾಯಕ (೧೫೭೪-೧೬೧೮)
      - ಇಮ್ಮಡಿ ಭೈರವನಾಯಕ (೧೬೧೮-೧೬೪೬)
        - ಚನ್ನಬಸಪ್ಪನಾಯಕ
          - ರಾಮಪ್ಪನಾಯಕ (೧೬೭೧-೧೭೦೧)
          - ಮುದಿಯಪ್ಪನಾಯಕ
- ಚಿಕ್ಕನಾಯಕ
- ಅಣ್ಣನಾಯಕ

ಚಿಕ್ಕನಾಯಕನಹಳ್ಳಿಯ ಒಂದು ಶಾಸನವು ಮುಂದಿನ ಅರಸರ ವಂಶಾವಳಿಯನ್ನು ಹೀಗೆ ಕೊಡುತ್ತದೆ :[೧೯]

ಚನ್ನಬಸಪ್ಪನಾಯಕ
- ರಾಮಪ್ಪನಾಯಕ (೧೬೭೧-೧೭೦೧)
- ಎರಡನೆಯ ಸಳನಾಯಕ
  - ಸಂಗಪ್ಪನಾಯಕ
    - ಚನ್ನಬಸಪ್ಪನಾಯಕ (೧೭೦೧-೧೭೨೦)
      - ಇಮ್ಮಡಿ ಮುದಿಯಪ್ಪನಾಯಕ (೧೭೨೦-೧೭೪೦)

ಈ ಶಾಸನವು ಎರಡನೆಯ ಸಳನಾಯಕನನ್ನು ಚನ್ನಬಸಪ್ಪನಾಯಕನ ಎರಡನೆಯ ಮಗನನ್ನಾಗಿ ಹೇಳಿದೆ. ಹಾಗಾಗಿ ಚಿಕ್ಕನಾಯಕನಹಳ್ಳಿ ಪಾಳೆಯಗಾರರ ವಂಶಾವಳಿಯು ಹೀಗಾಗುತ್ತದೆ :

ಯೆರಿಮದನಾಯಕ (೧೪೭೮-೧೫೦೮)

ಸಾಲಿನಾಯಕ (೧೫೦೮-೧೫೪೪) | ಚಿಕ್ಕನಾಯಕ | ಅಣ್ಣನಾಯಕ

ಭೈರವನಾಯಕ (೧೫೪೪-೧೫೭೪)

ಹಿರೇ ಮುದಿಯಪ್ಪನಾಯಕ (೧೫೭೪-೧೬೧೮)

ಇಮ್ಮಡಿ ಭೈರವನಾಯಕ (೧೬೧೮-೧೬೪೬)

ಚನ್ನಬಸಪ್ಪನಾಯಕ

ರಾಮಪ್ಪನಾಯಕ (೧೬೭೧-೧೭೦೧) | ಇಮ್ಮಡಿ ಸಳನಾಯಕ

ಸಂಗಪ್ಪನಾಯಕ

ಚನ್ನಬಸಪ್ಪನಾಯಕ (೧೭೦೧-೧೭೨೦)

ಇಮ್ಮಡಿ ಮುದಿಯಪ್ಪ (೧೭೨೦-೧೭೪೦)

ಮುಮ್ಮಡಿ ಮುದಿಯಪ್ಪ ನಾಯಕ (೧೭೪೦-೧೭೫೩)

ಹನುಮಪ್ಪನಾಯಕ

ಮುದಿಯಪ್ಪನಾಯಕನು ಕಟ್ಟಾ ವೀರಶೈವನಾಗಿದ್ದನು. ಹತ್ಯೆಯಲ್ಲಿ ತನ್ನ ಗುರು ಬಸವರಾಜದೇವರು ಅವರಿಗಾಗಿ ಒಂದು ವೀರಶೈವ ಮಠವನ್ನು ಕಟ್ಟಿಸಿ ಅದಕ್ಕೆ ಭೂಮಿಯನ್ನು ದಾನ ಮಾಡಿದನು.[೨೮] ಅವನು ವಿದ್ಯಾಪೋಷಕನೂ ಆಗಿದ್ದನು. ಕನ್ನಡ ಕವಿ ಸೋಸಲೆ ರೇವಣಾಚಾರ್ಯನು ಮಹಿಮ್ನಾಸ್ತವಕ್ಕೆ ಚಿಕ್ಕನಾಯಕನ ಪುರದ ನಿರ್ಮಾಪಕ ಮುದಿಯಪ್ಪನಾಯಕನ ಆದೇಶದಂತೆ ಒಂದು ಕನ್ನಡ ವ್ಯಾಖ್ಯಾನವನ್ನು ಬರೆದುದಾಗಿ ಹೇಳಿದ್ದಾನೆ :

ಚಿಕ್ಕನಾಯಕ ಪೂಷ್ಕರ್ತುರ್ ಮುದಿನಾ
ಯಕ ಭೂಭುಜಃ ಮುದೇ ಟೀಕಾ ಕಾರಿತೇಯಂ
ಸೋಮಶೇಖರ ಯೋಗಿನಾ[೨೯]

ಚಿಕ್ಕನಾಯಕನಹಳ್ಳಿಯಲ್ಲಿರುವ ದ್ರಾವಿಡಶೈಲಿಯ ದೊಡ್ಡದಾದ ರಾಮೇಶ್ವರ ದೇವಾಲಯವನ್ನು ಕಟ್ಟಿಸಿದವನು ಚಿಕ್ಕನಾಯಕನಹಳ್ಳಿಯ ರಾಜನೆಂದು ಹೇಳಲಾಗಿದೆ.[೨೨]

ರಣದುಲ್ಲಾಖಾನನ ಮೈಸೂರು ದಂಡಯಾತ್ರೆಗೆ ಹಿಂದಿರುಗೋಣ. ಬಸವಾಪಟ್ಟಣವನ್ನು ಗೆದ್ದಮೇಲೆ ಅವನು ಅಫಜಲಖಾನನ ಕೈಕೆಳಗೆ ಚಿಕ್ಕನಾಯಕನಹಳ್ಳಿಯನ್ನು ಗೆಲ್ಲಲು ಸೇನೆಯನ್ನು ಕಳಿಸಿದನು.[೨೬] ಬಿಜಾಪುರ ಸೈನ್ಯವು ಬಿಜಾಪುರ ಪ್ರಭಾವ ವಲಯವನ್ನು ವಿಸ್ತರಿಸಲು ಹೊರಟಿತ್ತು. ಸೈನ್ಯವು ಸಮೀಪಿಸುತ್ತಿದ್ದಂತೆಯೇ ಚಿಕ್ಕನಾಯಕನಹಳ್ಳಿಯ ಪಾಳೆಯಗಾರ ಇಮ್ಮಡಿ ಭೈರಪ್ಪನಾಯಕನು ತಲ್ಲಣಿಸಿದನು. ಕೋಟೆಯನ್ನು ಅಫಜಲ ಖಾನನಿಗೆ ಒಪ್ಪಿಸಿ, ೨೦,೦೦೦ ಹಣವನ್ನು ತನ್ನ ಸ್ವಾತಂತ್ರ್ಯಕ್ಕಾಗಿ ಪಾವತಿ ಮಾಡಿದನು. ರಣದುಲ್ಲಾ

ಚಿಕ್ಕನಾಯಕನಹಳ್ಳಿಯನ್ನು ಆಕ್ರಮಿಸಿಕೊಂಡು ಭೈರಪ್ಪನನ್ನು ತುಮಕೂರು ಜಿಲ್ಲೆ ಗುಬ್ಬಿಯ ಉತ್ತರಕ್ಕಿದ್ದ ಒಂದು ಸಣ್ಣ ಊರು ಹಾಗಲವಾಡಿಗೆ ಕಳುಹಿಸಿದನು.[೨೪]

ಅದಿಲ್‌ಶಾಹನು ಚಿಕ್ಕನಾಯಕನಹಳ್ಳಿಯನ್ನು ಒಂದು ಸೇನಾ ಕೇಂದ್ರಸ್ಥಾನವಾಗಿ ಪರಿವರ್ತಿಸಿದಂತೆ ತೋರುತ್ತದೆ. ಚೋಳರು ಸಂಪಿಗೆ, ಹೊನ್ನವಳ್ಳಿ, ಹಂದಲಕೆರೆ ಮೊದಲಾದ ಮುಖ್ಯ ಸ್ಥಳಗಳಲ್ಲಿ ತನ್ನ ಅಧೀನರಾದ ಅನೇಕ ಸೈನ್ಯ ಸಹಾಯಕರನ್ನು ಇರಿಸಿದನು. ಚಿಕ್ಕನಾಯಕನಹಳ್ಳಿಗೆ ರಸೂಲ್‌ಪುರವೆಂದು ಹೊಸ ಹೆಸರಿಟ್ಟನು. ಈ ಮುಖ್ಯವಾದ ನೆಲೆಯನ್ನು ರಣದುಲ್ಲಾಖಾನನ ವಶದಲ್ಲಿರಿಸಿದಂತೆ ತೋರುತ್ತದೆ. ಚಿಕ್ಕನಾಯಕನಹಳ್ಳಿ ತಾಲೂಕಿನ ಬಮ್ಮಾಪುರದ ಒಂದು ತಾಮ್ರಫಲಕ ದಾನಶಾಸನವು ಇದನ್ನು ಸ್ಥಿರೀಕರಿಸುತ್ತದೆ. ೧೬೭೮ರ ವರೆಗೆ ಅವನ ವಂಶಜರು ಮುಂದುವರಿದಿದ್ದರು. ಆಗ ಖಾನ-ಎ-ಅಜಂ-ಎ-ರಣದುಲ್ಲಾಖಾನ್ ಎಂಬುವನೊಬ್ಬನು (ರಣದುಲ್ಲಾಖಾನನ ವಂಶಜನಾಗಿರಬಹುದು) ಹೊನ್ನವಳ್ಳಿ ಎಂಬ ಹಳ್ಳಿಯನ್ನು ರಜೂಲ್‌ಪುರ ಜಿಲ್ಲೆಯ ವೈದ್ಯನಾದ ಸೂಸೂಪಂಡಿತ ಸೋಸುಪಂಡಿತನಿಗೆ ಅಷ್ಟಭೋಗ ಸಹಿತವಾಗಿ ಸೂರ್ಯಚಂದ್ರರಿರುವ ವರೆಗೆ ಅನುಭವಿಸಿಕೊಂಡು ಬರುವಂತೆ ದಾನ ಮಾಡಿದನು.[೨೫] ಮುಂದಿನ ವರ್ಷಗಳಲ್ಲಿ ಚಿಕ್ಕನಾಯಕನಹಳ್ಳಿಯು ಇಕ್ಕೇರಿ ಮತ್ತು ಮೈಸೂರುಗಳ ನಡುವೆ ಕೈ ಬದಲಾಯಿಸುತ್ತಲೇ ಇದ್ದಿತು. ಏಕೋಜಿಯು ೧೬೮೨ರಲ್ಲಿ ಅದನ್ನು ಚಿಕ್ಕದೇವರಾಜ ಒಡೆಯರಿಂದ ಕಿತ್ತುಕೊಂಡನು. ಆದರೆ ೧೬೮೭ರಲ್ಲಿ ಮತ್ತೆ ಚಿಕ್ಕದೇವರಾಜರು ಅದನ್ನು ಅಧೀನ ಪ್ರದೇಶಗಳೊಂದಿಗೆ ಅಂತಿಮವಾಗಿ ಮೈಸೂರಿಗೆ ಸೇರಿಸಿಕೊಂಡರು. ಆ ಸಮಯದಲ್ಲಿ ಬಿಜಾಪುರದಲ್ಲಾಗುತ್ತಿದ್ದ ರಾಜಕೀಯ ಗೊಂದಲ ಪರಿಸ್ಥಿತಿಯಲ್ಲಿ ಅದಿಲ್‌ಶಾಹನು ಮೈಸೂರಿನಲ್ಲಾದ ಈ ಬೆಳವಣಿಗೆಗಳ ಕಡೆಗೆ ಗಮನ ಕೊಡಲು ಸಾಧ್ಯವಾಗಲಿಲ್ಲ. ೧೭೨೦ ರಿಂದ ೧೭೪೦ರ ವರೆಗೆ ಆಳಿದ ಇಮ್ಮಡಿ ಮುದಿಯಪ್ಪನಾಯಕನನ್ನು ರಾಜರ್ಷಿ ಎಂದು ಕೊಂಡಾಡಲಾಗಿದೆ.[೨೬] ಅವನ ಮಗ ಮುದಿಯಪ್ಪನಾಯಕನು (೧೭೪೦-೫೩) ಸಲಬತ್‌ಖಾನ್ ಮತ್ತು ದಿಲಾವರ್‌ಖಾನರ ಆಕ್ರಮಣಗಳನ್ನು ಯಶಸ್ವಿಯಾಗಿ ಸೋಲಿಸಿ ಜಂಗ್ ಬಹಾದುರ್ ಎನಿಸಿಕೊಂಡನು.[೨೭] ವಂಶದ ಕೊನೆಯವನಾದ ಚನ್ನಬಸಪ್ಪನಾಯಕನನ್ನು ಹೈದರನು ಬಂಧಿಸಿ ಶ್ರೀರಂಗಪಟ್ಟಣದಲ್ಲಿ ಕಾರಾಗೃಹದಲ್ಲಿಟ್ಟನು. ಅಲ್ಲೇ ಅವನು ಮೃತನಾಗಿ ಕೊನೆಗೆ ಹಾಗಲವಾಡಿ ಸಂಸ್ಥಾನವನ್ನು ಮೈಸೂರು ರಾಜ್ಯಕ್ಕೆ ಸೇರಿಸಿಕೊಳ್ಳಲಾಯಿತು.

ಇಕ್ಕೇರಿಯ ನಾಯಕರು (೧೪೯೯-೧೭೬೩)

ಈ ವಂಶದ ಮೊದಲನೆಯ ಮುಖ್ಯ ದೊರೆ ಸದಾಶಿವನಾಯಕ (೧೫೧೩-೧೫೬೦)ನಿಗೆ ವಿಜಯನಗರದ ಸದಾಶಿವರಾಯನು ದಕ್ಷಿಣ ಕನ್ನಡದಲ್ಲಿ ಎದ್ದಿದ್ದ ಒಂದು ದಂಗೆಯನ್ನು ಅಡಗಿಸಿದುದಕ್ಕೆ ಮೆಚ್ಚುಗೆಯಾಗಿ ಬಿದನೂರು ಪ್ರಾಂತದ ಆಡಳಿತವನ್ನು ಕೊಟ್ಟಿದ್ದನು.[೨೮]

ವಂಶದ ಅತಿ ಪ್ರಸಿದ್ಧ ಅರಸರಲ್ಲಿ ಶಿವಪ್ಪನಾಯಕನು (೧೬೪೫-೧೬೬೦) ಒಬ್ಬನು. ಅವನು 'ರಾಜ್ಯವಿಲ್ಲದ ರಾಜನಾಗಿ' ಅಲೆದಾಡುತ್ತಿದ್ದ ಶ್ರೀರಂಗನಿಗೆ ಆಶ್ರಯವನ್ನು ಕೊಟ್ಟನು.[೨೯] ಅವನು ಶ್ರೀರಂಗನನ್ನು ಬೇಲೂರಿನಲ್ಲಿಟ್ಟು, ಹಿಂದೆ ಬಿಜಾಪುರಕ್ಕೆ ಸೋತುಕೊಂಡಿದ್ದ ರಾಜ್ಯ ಪ್ರದೇಶಗಳೆಲ್ಲವನ್ನು ಮತ್ತೆ ಗೆದ್ದುಕೊಂಡು ಶ್ರೀರಂಗನ ಕೈಗಳನ್ನು ಬಲಪಡಿಸಿದನು. ೧೬೫೩ ರಿಂದ ೧೬೫೯ರ ವರೆಗೆ ಶ್ರೀರಂಗನು ಬೇಲೂರಿನಲ್ಲಿದ್ದುದನ್ನು ಶಾಸನಗಳೂ ದೃಢೀಕರಿಸುತ್ತವೆ.[೩೦] ತನ್ನ ಸಾಮಂತರಾಗಿದ್ದ ಐಗೂರಿನ ಕೃಷ್ಣಪ್ಪನಾಯಕ, ಚಿಂತಕಲ್ಲಿನ (ಚಿತ್ರದುರ್ಗ) ಪಾಳೆಯಗಾರ ಮೊದಲಾದವರ ಸೈನ್ಯಗಳನ್ನು ಕೂಡಿಸಿಕೊಂಡು ಶಿವಪ್ಪನಾಯಕನು ಬಲವಾದ ಸೈನ್ಯವನ್ನು ಕಟ್ಟಿದನು. ಇದರ ಜೊತೆಗೆ, ೧೬೫೬ರಲ್ಲಿ ಮುಹಮ್ಮದ್ ಅದಿಲ್‌ಶಾಹ ಮೃತನಾಗಲು ಅದಿಲ್ ಶಾಹಿ ರಾಜಧಾನಿಯಲ್ಲಿ ಭಾರೀ ಗೊಂದಲ ಮತ್ತು ಅನಾಯಕತ್ವಗಳುಂಟಾದುವು. ಆದ್ದರಿಂದ , ತನ್ನ ರಾಜ್ಯದಿಂದ ಬಹುದೂರವಿದ್ದ ದಂಗೆಕೋರ ಪಾಳೆಯಗಾರರನ್ನು ನಿಯಂತ್ರಿಸಲು ಅವನು ಅಸಮರ್ಥನಾದನು. ಆದ್ದರಿಂದ ಶಿವಪ್ಪ ನಾಯಕನು ಬಿಜಾಪುರದ ಅಧೀನತೆಯನ್ನು ತಿರಸ್ಕರಿಸಿ, ಹಿಂದೆ ಇಕ್ಕೇರಿಯು ಕಳೆದುಕೊಂಡಿದ್ದ

ವಸುಧಾರೆ, ಸಕ್ಕರೆಪಟ್ಟಣ, ಇಕ್ಕೇರಿ, ಸೊರಬ, ಉಡಗೇರಿ, ಮಹದೇವಪುರ, ಅಂಬಲಿಗೊಳ್ಳ ಮೊದಲಾದ ಸ್ಥಳಗಳನ್ನು ಮತ್ತೆ ವಶಪಡಿಸಿಕೊಂಡನು. ಹೀಗೆ ತನ್ನನ್ನು ಬಲಪಡಿಸಿಕೊಂಡು, ಬೇಲೂರಿನಲ್ಲಿ ಶ್ರೀರಂಗನು ತಂಗಿದ್ದ ಪರಿಸ್ಥಿತಿಯಿಂದ ಉತ್ತೇಜಿತನಾಗಿ, ಮೈಸೂರಿನ ಕಡೆಗೆ ದಂಡಯಾತ್ರೆ ಹೊರಟು ಶ್ರೀರಂಗಪಟ್ಟಣಕ್ಕೆ ಮುತ್ತಿಗೆ ಹಾಕಿದನು.[೬೨] ಈ ಯುದ್ಧದಲ್ಲಿ ಹೊಳೆನರಸೀಪುರದ ಲಕ್ಷ್ಮಪ್ಪನಾಯಕನೂ ಅವನ ಜೊತೆಗೂಡಿದನು. ಆದರೆ ಮೈಸೂರಿನ ದೊಡ್ಡದೇವರಾಜ ಒಡೆಯರು (೧೬೫೯-೧೬೭೩) ಅವರನ್ನು ಸೋಲಿಸಿದರು. ಇಕ್ಕೇರಿಗೆ ಭಾರೀ ನಷ್ಟವುಂಟಾಯಿತು. ಶಿವಪ್ಪನಾಯಕನು ಹಿಮ್ಮೆಟ್ಟಲೇ ಬೇಕಾಯಿತು. ಆಮೇಲೆ ಹೆಚ್ಚುಕಾಲ ಅವನು ಬದುಕಿರಲಿಲ್ಲ. ೧೬೬೦ರ ಮಧ್ಯಭಾಗದಲ್ಲಿ ಮೃತನಾಗಿ, ಅವನ ತಮ್ಮ ವೆಂಕಟಪ್ಪನು (೧೬೬೦-೬೧) ಪಟ್ಟಕ್ಕೆ ಬಂದನು.

ದೇವರಾಜ ಒಡೆಯರು ಈ ಗೆಲುವಿನಿಂದ ಉತ್ಸಾಹಿತರಾಗಿ ಕರ್ನಾಟಕ ಬಿಜಾಪುರ ಬಲಘಾಟನ್ನು (ತುಮಕೂರು ಜಿಲ್ಲೆಯ ಉತ್ತರಭಾಗ) ಪ್ರವೇಶಿಸಿದರು. ಆಗತಾನೆ ಭದ್ರಪ್ಪನಾಯಕನು ಬಿಜಾಪುರದ ಸುಲ್ತಾನನಿಂದ ಕಿತ್ತು ವಶಪಡಿಸಿಕೊಂಡಿದ್ದ ಸುಪ್ರಸಿದ್ಧ ಕೋಟೆಗಳಾದ ಚಿಕ್ಕನಾಯಕನಹಳ್ಳಿ ಮತ್ತು ಸಂಪಿಗೆಗಳನ್ನು ಇಕ್ಕೇರಿಯಿಂದ ಗೆದ್ದುಕೊಂಡದು. ಆಮೇಲೆ ಬೇಲೂರಿನಲ್ಲಿದ್ದ ಶ್ರೀರಂಗನಿಗೆ ಭೀತಿಯನ್ನುಂಟುಮಾಡುವ ದಿಟ್ಟಕ್ರಮವನ್ನು ಕೈಗೊಂಡರು. ಮಲೆನಾಡಿನ ಕಡೆಗೆ ನುಗ್ಗಿ ೧೬೬೩ರಲ್ಲಿ ಎರಡು ದುಸಾಧ್ಯ ಕೋಟೆಗಳಾಗಿದ್ದ ಹಾಸನ ಮತ್ತು ಸಕ್ಕರೆಪಟ್ಟಣಗಳನ್ನು ವಶಪಡಿಸಿಕೊಂಡರು.[೬೩] ಇದೇ ಯಶಸ್ಸಿನ ಗುಂಗಿನಲ್ಲೇ ದಳವಾಯಿ ನಂದಿನಾಥಯ್ಯನ ಕೈಕೆಳಗೆ ನಡೆದ ಸೇನೆಯು ಮಲೆನಾಡಿನೊಳಕ್ಕೆ ಇನ್ನಷ್ಟು ಮುಂದೆ ಹೋಗಿ ಕಳಸ, ಕಂಡೆಯ, ದನಿವಾಸ, ಹೆಬ್ಬೆ, ಜಾಗೆರ, ಬಿದನೂರುಗಳನ್ನು ಗೆದ್ದುಕೊಂಡು ಇಕ್ಕೇರಿ ಕೋಟೆಗೆ ಮುತ್ತಿಗೆ ಹಾಕಿತು. ಇಕ್ಕೇರಿಯ ರಾಜ ಒಂದನೆಯ ಸೋಮಶೇಖರನು (೧೬೬೩-೧೬೭೧) ಮುತ್ತಿಗೆಯ ಹೊಡೆತವನ್ನು ತಾಳಲಾರದೆ ಸಂಧಿಯನ್ನು ಕೋರಿದನು. ಮೈಸೂರಿಗೆ ವಾರ್ಷಿಕವಾಗಿ ಕಪ್ಪ ಕೊಡಲು ಒಪ್ಪಿದನು. ದೇವರಾಜ ಒಡೆಯರ ಈ ಗೆಲುವು ಅವರ ಆಳಿಕೆಯ ಬಹುದೊಡ್ಡ ಸಾಧನೆಗಳಲ್ಲಿ ಒಂದು. ಏಕೆಂದರೆ ವಿಜಯನಗರದ ಅವಶೇಷಗಳಿಂದ ಮೂಡಿಬಂದ ಬಹು ಬಲಿಷ್ಠ ಸಂಸ್ಥಾನಗಳಲ್ಲಿ ಒಂದು ಇಕ್ಕೇರಿ. ಅದನ್ನು ಸೋಲಿಸಿದ್ದು ನಿಜವಾಗಿ ಮಹತ್ವದ ಸಾಧನೆಯೇ ಸರಿ. ಈ ಮಧ್ಯೆ ಸೋಮಶೇಖರನು ಮಡಿದು ಅವನ ವಿಧವೆ ಪತ್ನಿ ಚೆನ್ನಮ್ಮಾಜಿಯು ಸಿಂಹಾಸನಕ್ಕೆ ಬಂದಿದ್ದಳು (೧೬೭೧-೧೬೯೭). ಅವಳು ಬಹು ಪರಾಕ್ರಮಿಯಾಗಿದ್ದುದಲ್ಲದೆ ಕುಶಲಿಯಾದ ಆಡಳಿತ ನಿಪುಣೆಯಾಗಿದ್ದಳು. ಅವಳು ಬಸವಾಪಟ್ಟಣವನ್ನೂ ಹರಿಕೆರೆಯೇ ಮೊದಲಾದ ಇತರ ಸ್ಥಳಗಳನ್ನೂ ಗೆದ್ದುಕೊಂಡಳು. ಹರಿಕೆರೆಗೆ ಚನ್ನಗಿರಿ ಎಂದು ತನ್ನ ಹೆಸರನ್ನೇ ಇಟ್ಟಳು. ತನ್ನ ದೇಶಕ್ಕೆ ಮರಳುವವರೆಗೆ ಮೊಗಲರಿಂದ ತಪ್ಪಿಸಿಕೊಂಡಿರಲು ಬಯಸಿದ ಶಿವಾಜಿಯ ಮಗ ರಾಜಾರಾಮನಿಗೆ ಆಶ್ರಯ ನೀಡಿದಳು.

೧೬೯೦ರಲ್ಲಿ ಮೈಸೂರಿನ ಚಿಕ್ಕದೇವರಾಜ ಒಡೆಯರು ಇಕ್ಕೇರಿಯ ಮೇಲೆ ಆಕ್ರಮಣ ಮಾಡಿದರು. ಇಕ್ಕೇರಿ ಈಗ ವಾಸ್ತವವಾಗಿ ಒಂಟಿಯಾಗಿತ್ತು. ಮಿತ್ರರಾದ ಬಿಜಾಪುರವಾಗಲಿ, ಮರಾಠರಾಗಲಿ ಸಹಾಯಕ್ಕೆ ಬರಲಿಲ್ಲ. ತಮ್ಮ ತಮ್ಮ ನಾಡಿನ ಆಂತರಿಕ ವ್ಯವಹಾರಗಳಲ್ಲಿ ಅವರು ಮುಳುಗಿಹೋಗಿದ್ದರು. ಇಕ್ಕೇರಿಯನ್ನು ಬಗ್ಗು ಬಡಿಯಲು ಮೈಸೂರು ರಾಜನು ಈ ಸಮಯವನ್ನು ಉಪಯೋಗಿಸಿಕೊಂಡಿದ್ದನು. ೧೬೯೦ರ ಏಪ್ರಿಲ್‌ನಲ್ಲಿ ಬಾಗಡಿಯ ಪಾಳೆಯಗಾರನನ್ನು ಸೋಲಿಸಿ ಮೈಸೂರು ಸೇನೆಯು ಅದನ್ನು ವಶಪಡಿಸಿಕೊಂಡಿತು. ಅದರ ಮುಂದಿನ ತಿಂಗಳೇ ಹೊನ್ನವಳ್ಳಿ ಮತ್ತು ಬಾಣಾವರಗಳು ಮೈಸೂರಿಗೆ ದಕ್ಕಿದುವು. ೧೬೯೦ರ ಜೂನ್ ಮತ್ತು ಆಗಸ್ಟ್ ನಡುವೆ ಕಡೂರು, ಸಕ್ಕರೆಪಟ್ಟಣ ಮತ್ತು ವಸ್ತಾರೆಗಳಂತಹ ಇಕ್ಕೇರಿಯ ಹಲವು ಮುಖ್ಯವಾದ ಸ್ಥಳಗಳು ಮೈಸೂರಿನ ಕೈವಶವಾದವು. ಆಗಸ್ಟ್ ತಿಂಗಳಲ್ಲಿ ಮೈಸೂರು ಚಿಕ್ಕಮಗಳೂರನ್ನು ಮಹಾರಾಜಿ ದುರ್ಗವನ್ನು ಗೆದ್ದುಕೊಂಡಿತು.[೬೪] ೧೬೯೦ರ ಸೆಪ್ಟೆಂಬರಿನಲ್ಲಿ ಹಾಸನ ಮತ್ತು ಗ್ರಾಮ (ಶಾಂತೀಗ್ರಾಮ)ಗಳನ್ನು ಗೆಲ್ಲುವುದರೊಂದಿಗೆ ಈ ಪ್ರದೇಶದಲ್ಲಿ ಚಿಕ್ಕದೇವರಾಜರ ಗೆಲುವಿನ ಸರಣಿ ಸಮಾಪನಗೊಂಡಿತು.[೬೫]

೧೬೯೪ರಲ್ಲಿ ಚೆನ್ನಮ್ಮಾಜಿಯು ಚನ್ನಬಸವಸೆಟ್ಟಿ ಮತ್ತು ಕುಪುಖಾನ್ ಎಂಬ ದಳಪತಿಗಳ ನೇತೃತ್ವದಲ್ಲಿ ಮೈಸೂರಿನ ಮೇಲೆ ಸೈನ್ಯವನ್ನು ಕಳುಹಿಸಿದಳು.[೬೬] ಈಗ ಇಕ್ಕೇರಿಯ ಸೈನ್ಯಕ್ಕೆ ಐಗೂರು ನಾಯಕನೂ,

ಚಿಂತಕಲ್ಲು (ಚಿತ್ರದುರ್ಗ)ದ ಪಾಳೆಯಗಾರನೂ ನೆರವಾಗಿದ್ದರು.[೬೭] ಆದರೆ ಮೈಸೂರಿನವರು ಅರಕಲಗೂಡಿನ ಬಳಿ ನಡೆದ ಭೀಕರ ಯುದ್ಧದಲ್ಲಿ ಬಿಜಾಪುರದ ಸೈನ್ಯವನ್ನು ಸೋಲಿಸಿ ಅರಕಲಗೂಡು, ಸಕಲೇಶಪುರ ಮತ್ತು ಹಾಸನಗಳು ಖಾಯಂ ಆಗಿ ಮೈಸೂರಿಗೆ ಸೇರಿದುವು.[೬೮]

ಚೆನ್ನಮ್ಮಾಜಿಯು ೧೬೯೭ ಜುಲೈ ತಿಂಗಳಲ್ಲಿ ನಿಧನ ಹೊಂದಿದಳು, ಅವಳ ದತ್ತಪುತ್ರ ಮೊದಲನೆಯ ಹಿರಿಯ ಬಸಪ್ಪನಾಯಕನು (೧೬೯೭-೧೭೧೪) ಸಿಂಹಾಸನವನ್ನೇರಿದನು. ಮೈಸೂರನ್ನು ಕುರಿತು ಅವನಿಗೆ ತುಂಬಾ ಅಸಮಾಧಾನವಿತ್ತು. ೧೬೯೫ರ ಯುದ್ಧದಲ್ಲಿ ಚನ್ನಮ್ಮಾಜಿಯು ಸೋತಿದ್ದ ಎಲ್ಲಾ ಸ್ಥಳಗಳನ್ನು ಮೈಸೂರಿನಿಂದ ಮರಳಿ ವಶಪಡಿಸಿಕೊಳ್ಳಲು ಅವನು ಬಯಸಿದನು. ತನ್ನ ದಂಡನಾಯಕ ಗರ್ಜಿನ ಬಸಪ್ಪದೇವರು ಎನ್ನುವವನ ಕೈಕೆಳಗೆ ತನ್ನ ಸೈನ್ಯವನ್ನು ಕಳುಹಿಸಿದನು.[೬೯] ಈ ಯುದ್ಧದಲ್ಲಿ ಅರಕಲಗೂಡನ್ನು ವಶಪಡಿಸಿಕೊಳ್ಳಲು ಇಕ್ಕೇರಿ ಪ್ರಯತ್ನಿಸಿತು. ಆದರೆ ಮೈಸೂರು ಅದನ್ನು ವಿಫಲಗೊಳಿಸಿತು. ಇನ್ನು ಯುದ್ಧ ಮಾಡಲು ಸಾಧ್ಯವಾಗದಾಗ ಒಂದು ಭಾಷಾಪತ್ರವನ್ನು ಕೊಟ್ಟು ಸಂಧಿಮಾಡಿಕೊಂಡಿತು. ಈ ಒಪ್ಪಂದದ ಪ್ರಕಾರ ಇಕ್ಕೇರಿಯು ಮೈಸೂರಿನ ಬಗೆಗೆ ವೈರವನ್ನು ತೊರೆದು ಈ ಪ್ರದೇಶದಲ್ಲಿ ಶಾಂತಿಯನ್ನು ನೆಲೆಗೊಳಿಸುವುದು, ಇದಕ್ಕೆ ಪ್ರತಿಯಾಗಿ, ಮೈಸೂರು ಬಸಪ್ಪನಾಯಕನಿಗೆ ಹಿಂದೆ ಇಕ್ಕೇರಿಗೆ ಸೇರಿದ್ದ ವಸ್ತಾರೆಯನ್ನು ಹಿಂದಿರುಗಿಸುವುದು ಎಂದಾಯಿತು.

೨ನೇ ಸೋಮಶೇಖರನಾಯಕನು (೧೭೧೪-೧೭೩೯) ದೊಡ್ಡ ಯೋಧ. ಇಕ್ಕೇರಿಯ ರಾಜ್ಯವನ್ನು ವಿಸ್ತಾರಗೊಳಿಸಿದನು. ಅವನು ಮುಗಲರಿಂದ ಸಿರಾ, ಅಜ್ಜಂಪುರ, ಸಂತೆಬೆನ್ನೂರು ಮತ್ತು ಇತರ ಸ್ಥಳಗಳನ್ನು ಗೆದ್ದನೆಂದು ಹೇಳಲಾಗಿದೆ.[೭೦] ೧೭೪೮ರಲ್ಲಿ ಮಾಯಕೊಂಡದಲ್ಲಿ ನಡೆದ ಉಗ್ರಕಾಳಗವೊಂದರಲ್ಲಿ ಅವನು ಚಿತ್ರದುರ್ಗದ ಮದಕರಿನಾಯಕನನ್ನು ಕೊಂದನು. ಅವನ ಪರವಾಗಿ ನಿಂತಿದ್ದ ಚಂದಾಸಾಹೇಬನನ್ನು ಸೆರೆಹಿಡಿದನು. ಚಂದಾಸಾಹೇಬನ ಮಗನು ಯುದ್ಧದಲ್ಲಿ ಕೊಲೆಯಾದನು.

೨ನೇ ಸೋಮಶೇಖರ ನಾಯಕನ ನಂತರ ೨ನೇ ಬಸಪ್ಪನಾಯಕನು (೧೭೩೯-೧೭೫೪) ಪಟ್ಟಕ್ಕೆ ಬಂದನು. ತನ್ನ ದತ್ತು ತಾಯಿಯ ಪ್ರೇಮ ಪ್ರಕರಣದಲ್ಲಿ ಬುದ್ಧಿವಾದ ಹೇಳುತ್ತಿದ್ದ ಅವನನ್ನು ಮಲ್ಲನೊಬ್ಬನು ಕುತ್ತಿಗೆ ಹಿಸುಕಿ ಸಾಯಿಸಿದನು. ಅವನ ಹೆಸರಿನಲ್ಲಿ ವೀರಮ್ಮಾಜಿಯೇ ಮುಂದೆ ರಾಜ್ಯವಾಳಿದಳು. ಇಕ್ಕೇರಿ ರಾಜರ ವಂಶದಲ್ಲಿ ಅವಳೇ ಕೊನೆಯವಳು.

ಈ ಮಧ್ಯೆ ಮೈಸೂರಿನಲ್ಲಿ ಹೈದರನು ಸಂಪೂರ್ಣವಾಗಿ ಅಧಿಕಾರವನ್ನು ವಹಿಸಿಕೊಂಡಿದ್ದನು. ಪೂರ್ವದಲ್ಲಿ ಹಲವು ಸ್ಥಳಗಳನ್ನು ಗೆದ್ದನಂತರ ಹೈದರನು ಚಿತ್ರದುರ್ಗದ ಮೇಲೆ ಆಕ್ರಮಣ ಮಾಡಿದನು. ಮದಕರಿನಾಯಕನು ಸೋತನು. ಇಲ್ಲಿ ಇನ್ನೊಂದು ಸ್ವಾರಸ್ಯವಾದ ಘಟನೆಯು ನಡೆದು ಹೈದರನ ಆಶೋತ್ತರಗಳಿಗೆ ಹೊಸ ಆಯಾಮವನ್ನು ತೆರೆಯಿತು. ಮದಕರಿ ನಾಯಕನು ಚನ್ನಬಸವಯ್ಯ ಎಂಬ ತರುಣನನ್ನು ಹೈದರನಿಗೆ ಒಪ್ಪಿಸಿದನು. ಅವನು ಇಕ್ಕೇರಿಯ ಹಿಂದಿನ ಅರಸ ಬಸಪ್ಪನಾಯಕನ ದತ್ತುಪುತ್ರನೆಂದು ಹೇಳಿಕೊಂಡನು. ಕೆಟ್ಟ ಹೆಂಗಸಾದ ತನ್ನ ಬಲತಾಯಿ ವೀರಮ್ಮಾಜಿಯು ತನ್ನನ್ನು ರಾಜ್ಯದಿಂದ ಹೊರಗಟ್ಟಿ ಕೊಲೆಮಾಡಲು ಕೂಡ ಪ್ರಯತ್ನಿಸಿದಳೆಂದೂ, ಅವಳೂ ಅವಳ ಪ್ರೇಮಿ ನಿಂಬಯ್ಯನೆಂಬುವವನೂ ಅಕ್ರಮವಾಗಿ ಬಿದನೂರನ್ನು ಆಳುತ್ತಿದ್ದಾರೆಂದೂ ಹೇಳಿದನು.

೧೭೫೪ರಲ್ಲಿ ಬಸಪ್ಪನು ಮೃತನಾದಾಗ ಅತನ ಮಗ ಚನ್ನಬಸವಯ್ಯನನ್ನು ಒಬ್ಬ ಜಟ್ಟಿಯು ಕುತ್ತಿಗೆ ಹಿಸುಕಿ ಕೊಂದನು. ಈ ಅಪರಾಧವು ವಿಧವೆ ರಾಣಿ ವೀರಮ್ಮಾಜಿಯಿಂದಲೇ ಪ್ರಚೋದಿತವಾಗಿದ್ದಿತೆಂದು ನಂಬಲಾಯಿತು. ಆಮೇಲೆ ಆಕೆಯು ತಾನೇ ಆಡಳಿತ ಸೂತ್ರಗಳನ್ನು ವಹಿಸಿಕೊಂಡಳು. ತನ್ನ ವಿಟಪುರುಷ ನಿಂಬಯ್ಯನೊಂದಿಗೆ ಅಕ್ರಮ ಸಂಬಂಧವಿಟ್ಟುಕೊಂಡು ಹೆಸರು ಕೆಡಿಸಿಕೊಂಡಳು. ಮದಕರಿನಾಯಕನು ಹೈದರನಿಗೆ ಒಪ್ಪಿಸಿಕೊಟ್ಟ ಚನ್ನಬಸವಯ್ಯನು ಒಬ್ಬ ನಕಲಿಯೇ ಅಲ್ಲವೆ ಎಂಬುದನ್ನು ಈಗ ಸಮರ್ಥಿಸುವುದು ಕಷ್ಟ. ಅದು ಹೇಗೇ ಇರಲಿ, ಇದು 'ಚಿನ್ನದ ಬಾಗಿಲು ತೆರೆಯುವ ಕೀಲಿಕೈ' ಎಂದು ಚಾಣಾಕ್ಷನಾದ ಹೈದರನು ಅರ್ಥಮಾಡಿಕೊಂಡನು.[೭೧] ಸಂದರ್ಭವನ್ನು ಹೇಗೆ ಉಪಯೋಗಿಸಿಕೊಳ್ಳಬೇಕೆನ್ನುವುದು ಅವನಿಗೆ ಗೊತ್ತಿತ್ತು. ಹೈದರನಿಗೆ ಇನ್ನೂ ಬೇರೆ ಉದ್ದೇಶಗಳೂ ಇದ್ದುವು. ಆದರೆ ಅವನ್ನು ಸದ್ಯಕ್ಕೆ ಎಚ್ಚರಿಕೆಯಿಂದ ತನ್ನಲ್ಲೇ

ಇಟ್ಟುಕೊಂಡನು. ಸೋಗಿನ ಚನ್ನಬಸವಯ್ಯನನ್ನು ಮುಂದಿಟ್ಟುಕೊಂಡು ತಾನೇ ಸೇನಾಸಮೇತನಾಗಿ ಹೋದನು. ಇಕ್ಕೇರಿಗೆ ನ್ಯಾಯವಾಗಿ ಅರಸನಾಗಬೇಕಾದವನಿಗೆ ಪಟ್ಟಕಟ್ಟುವುದಾಗಿ ಹೇಳಿದರೂ ನಿಜವಾಗಿ ಅವನಿಗೆ ತನ್ನ ಸ್ವಂತದ ಆಶೋತ್ತರಗಳನ್ನು ಪೂರೈಸಿಕೊಳ್ಳುವುದು ಮುಖ್ಯವಾಗಿತ್ತು. ಮೈಸೂರು ಮತ್ತು ಚಿತ್ರದುರ್ಗಗಳು ಕೊಡಿದ ಸೇನೆಯನ್ನು ನಡೆಸಿಕೊಂಡು ಬಿದನೂರಿನ ಕಡೆಗೆ ಹೊರಟನು. ಚನ್ನಬಸಪ್ಪನಾಯಕನ ಹೆಸರಿನಲ್ಲಿ ಒಂದು ಪ್ರಕಟಣೆಯನ್ನು ಹೊರಡಿಸಿದನು. ವೀರಾಜಮ್ಮಣ್ಣಿಯ ಅನೈತಿಕ ವ್ಯವಹಾರಗಳಿಂದ ಬೇಸತ್ತಿದ್ದ ಜನರು ತಮಗೆ ಬಿಡುಗಡೆ ದೊರಕಿಸಿದವನೆಂದು ಅವನನ್ನು ಕೊಂಡಾಡಿದರು. ಕುಂಸಿಯಲ್ಲಿ ಸೆರೆಯಲ್ಲಿದ್ದ ಇಮ್ಮಡಿ ಬಸಪ್ಪನಾಯಕನ ಮಂತ್ರಿ ಲಿಂಗಪ್ಪ ಎನ್ನುವವನನ್ನು ಸೆರೆಯಿಂದ ಬಿಡುಗಡೆಗೊಳಿಸಲಾಯಿತು. ಬಿದನೂರಿನ ಭದ್ರಕೋಟೆಯ ಹೊರ ವ್ಯವಸ್ಥೆಗಳ ತಂಟೆಗೇ ಹೋಗದೆ ಒಳಕ್ಕೆ ಪ್ರವೇಶಮಾಡುವ ರಹಸ್ಯಮಾರ್ಗವನ್ನು ತೋರಿಸುವುದಾಗಿ ಅವನು ಹೈದರನಿಗೆ ಭರವಸೆ ನೀಡಿದನು.[೪೨]

ಹೈದರನು ಬಿದನೂರಿನ ಹತ್ತಿರಕ್ಕೆ ಬರುತ್ತಿದ್ದಂತೆ ಹೆದರಿದ ರಾಣಿಯು ಹಣವನ್ನೂ, ಆಭರಣಗಳನ್ನೂ ಕೊಟ್ಟು ಅವನನ್ನು ಕೊಳ್ಳಲು ಪ್ರಯತ್ನಿಸಿದಳು. ಆದರೆ ತಕ್ಷಣವೇ ಶರಣಾಗಬೇಕೆಂದೂ ಶ್ರೀರಂಗಪಟ್ಟಣದಲ್ಲಿ ಗೌರವಾನ್ವಿತವಾಗಿ ಬದುಕಲು ಏರ್ಪಾಟು ಮಾಡುವುದಾಗಿಯೂ ಅವಳಿಗೆ ಹೇಳಿಕಳಿಸಿದನು. ಸ್ವಾಭಿಮಾನಿಯಾಗಿದ್ದ ರಾಣಿಯು ತನ್ನ ನಿಜವಾದ ಸತ್ವ ಎಂಥದೆಂದು ತೋರಿಸಿದಳು. ಹೈದರನ ಮಾತನ್ನು ತಿರಸ್ಕರಿಸಿದಳು.[೪೩] ಅನೇಕಾನೇಕ ಬಲಿಷ್ಠ ರಾಜರೊಂದಿಗೆ, ದಂಡನಾಯಕರು ಮತ್ತು ಪಾಳೆಯಗಾರರೊಂದಿಗೆ ಯುದ್ಧಮಾಡಿದ್ದ ಹೈದರನಿಗೆ ಈಗ ಒಬ್ಬ ಹೆಣ್ಣು ಸವಾಲು ಹಾಕಿದ್ದಳು. ರಾಜಧಾನಿಯಲ್ಲಿ ಭದ್ರವಾಗಿ ಕುಳಿತ ರಾಣಿಯು ಸುಮಾರು ಒಂದು ವರ್ಷಕಾಲ ವೀರಾವೇಶದಿಂದ ಪಟ್ಟುಹಿಡಿದಳು. ಆದರೆ ಅಂತಿಮವಾಗಿ ಹೈದರನು ಕೋಟೆಗೆ ಬಿರುಗಾಳಿಯಂತೆ ನುಗ್ಗಿದ್ದನು. ರಾಣಿಯು ತನ್ನ ವಿಟ ಹಾಗೂ ದತ್ತು ಮಗನೊಂದಿಗೆ ಬಲ್ಲಾಳರಾಯನದುರ್ಗಕ್ಕೆ (ಕಡೂರು ಜಿಲ್ಲೆ) ಓಡಿಹೋದಳು. ಅದಕ್ಕೆ ಮುಂಚೆ ಅರಮನೆಗೆ ಬೆಂಕಿಯಿಟ್ಟಳು. ವಿಜಯೀ ಹೈದರನು ಬಿದನೂರನ್ನು ವಶಪಡಿಸಿಕೊಂಡು, ಬೆಂಕಿಯನ್ನು ನಂದಿಸಿ, ಭಾರೀ ಸಂಪತ್ತನ್ನು ಕೊಳ್ಳೆಯಾಗಿ ಬಾಚಿಕೊಂಡನು. ರಾಣಿಯನ್ನೂ ಅವಳ ದತ್ತಪುತ್ರನನ್ನೂ ಸೆರೆಹಿಡಿದು ಮದ್ದಗಿರಿ ದುರ್ಗದಲ್ಲಿ ಇರಿಸಲಾಯಿತು. ಹೀಗೆ ಸುಮಾರು ೨೬೫ ವರ್ಷಗಳ ಕಾಲ ಅಧಿಕಾರದಲ್ಲಿದ್ದ ನಮ್ಮ ನಾಡಿನ ಸುಪ್ರತಿಷ್ಠಿತ ರಾಜವಂಶವೊಂದು ಕೊನೆಗೊಂಡಿತು.

ತನ್ನ ಉದ್ದೇಶವನ್ನು ಮುಂದುವರಿಸಿ ಹೈದರನು ಇಕ್ಕೇರಿಗೆ ಹೈದರ್‌ನಗರವೆಂದು ಹೊಸದಾಗಿ ಹೆಸರಿಟ್ಟನು, ಅದರ ವ್ಯಾಪಾರ ವಾಣಿಜ್ಯವನ್ನು ಹೆಚ್ಚಿಸಿದನು. ತನ್ನ ಮುಖ್ಯವಾದ ಶಸ್ತ್ರಾಸ್ತ್ರ ಕೋಠಿಯನ್ನು ಅಲ್ಲಿರಿಸಿದನು, ಜೊತೆಗೆ ಒಂದು ಟಂಕಸಾಲೆಯನ್ನು ಸ್ಥಾಪಿಸಿ ತನ್ನ ಹೆಸರಿನಲ್ಲಿ ಹೈದರಿಪಗೋಡಗಳೆಂಬ ನಾಣ್ಯಗಳನ್ನು ಮುದ್ರಿಸಿ ಚಲಾವಣೆಗೆ ತಂದನು.ರಾಣಿ ಲಕ್ಷಮ್ಮಣ್ಣಿಯು ತನ್ನ ವಿರುದ್ಧವಾಗಿ ಬ್ರಿಟಿಷರೊಂದಿಗೆ ರಹಸ್ಯವಾಗಿ ಸಂಪರ್ಕ ಬೆಳೆಸುತ್ತಿರುವುದರ ವಾಸನೆ ಹೈದರನ ಮೂಗಿಗೆ ಬಡಿದಿತ್ತು. ಶ್ರೀರಂಗಪಟ್ಟಣದಲ್ಲಿ ತನ್ನ ಸ್ಥಾನ ಅಷ್ಟು ಸುಭದ್ರವಲ್ಲ ಎಂದು ಅವನಿಗೆ ಅನ್ನಿಸಿತ್ತು. ಮುಂದೆ ಒಂದು ವೇಳೆ ಮೈಸೂರಿನಲ್ಲಿ ತನ್ನ ಸ್ಥಿತಿಯು ಬಿಗಡಾಯಿಸಿದರೆ ಬಿದನೂರು ತನಗೆ ಸುಭದ್ರವಾದ ಕ್ಷೇಮವಾದ ನೆಲೆಯಾಗಿರಲಿ ಎಂಬ ದೃಷ್ಟಿ ಅವನಿಗಿದ್ದಂತೆ ತೋರುತ್ತದೆ.

ಕೆಳದಿಯ ರಾಜ್ಯಾಡಳಿತ

ಈ ಅರಸರು ತಮ್ಮ ಆಡಳಿತ ಕಾಲದಲ್ಲಿ ಜೀವನವನ್ನು ಹೇಗೆ ರೂಪಿಸಿದರು ಎನ್ನುವುದನ್ನು ಶಾಸನಗಳು ತೋರಿಸುತ್ತವೆ. ವಿಜಯನಗರ ಸಾಮ್ರಾಜ್ಯವು ೧೫೬೫ರ ತಾಳಿಕೋಟೆ ಯುದ್ಧದಲ್ಲಿ ಪತನ ಹೊಂದುವವರೆಗೂ

ಭಾರತೀಯ ಸಂಸ್ಕೃತಿಯನ್ನೂ ಧರ್ಮವನ್ನು ಯಶಸ್ವಿಯಾಗಿ ರಕ್ಷಿಸಿತು. ಅದರ ಕೆಲಸವನ್ನು ಆಗಲೇ ಸ್ವತಂತ್ರವಾಗ ತೊಡಗಿದ್ದ ಸಾಮಂತರಾಜ್ಯಗಳು ಮುಂದುವರಿಸಿದುವು, ಅವುಗಳಲ್ಲಿ ಕೆಳದಿಯೂ ಒಂದು .

ಸರಕಾರವು ಲಕ್ಷಣದಲ್ಲಿ ಸಾರ್ವಭೌಮಿಕವಾಗಿತ್ತು. ಸಿಂಹಾಸನಾಧಿಕಾರವು ತಂದೆಯಿಂದ ಮಗನಿಗೆ ಬರುತ್ತಿತ್ತು. ಕರ್ತವ್ಯ ನಿರ್ವಹಣೆಯಲ್ಲಿ ರಾಜನಿಗೆ ಎರಡು ಸಲಹಾಮಂಡಳಿಗಳು ನೆರವಾಗುತ್ತಿದ್ದುವು : ೧) ಸಚಿವ ಸಂಪುಟ, ಹಾಗೂ ೨) ರಾಜಸಭೆ. ರಾಜ್ಯದ ಎಲ್ಲಾ ಮುಖ್ಯವಾದ ವ್ಯವಹಾರಗಳಲ್ಲೂ ರಾಜನು ಸಚಿವ ಸಂಪುಟದ ಸಲಹೆ ಕೇಳುತ್ತಿದ್ದನು. ಎಲ್ಲಾ ಮಂತ್ರಿಗಳು, ಅವರ ನಾಯಕನಾಗಿ ಪ್ರಧಾನಿ ಈ ಸಂಪುಟದಲ್ಲಿ ಇರುತ್ತಿದ್ದರು. ಕೆಳದಿ ಅರಸರ ಸಚಿವ ಸಂಪುಟದ ಸದಸ್ಯರ ಸಂಖ್ಯೆ ತಿಳಿದಿಲ್ಲ.

ಸಾರ್ವಜನಿಕ ಹಣಕಾಸು

ಸರಕಾರದ ಮುಖ್ಯ ವರಮಾನ ಮೂಲಗಳು ಹೀಗಿದ್ದುವು : ೧. ಭೂಕಂದಾಯ, ೨. ಸುಂಕಗಳು ೩. ಕೈಗಾರಿಕೆಗಳ ಮೇಲೆ ತೆರಿಗೆ, ೪. ವೃತ್ತಿತೆರಿಗೆ, ೫. ಸಾಮಾಜಿಕ ತೆರಿಗೆ, ೬. ಸಮುದಾಯ ತೆರಿಗೆ, ೭. ಪಾರಂಪರಿಕವಾದ ಕೊಡುಗೆಗಳು, ೮. ಸೈನಿಕ ಕೊಡುಗೆಗಳು, ೯. ಆಸ್ತಿ ತೆರಿಗೆ, ೧೦. ಮಾರಾಟ ತೆರಿಗೆ, ೧೧. ಅಸ್ವಾಮಿಕ, ಯಾರೂ ವಾರಸುದಾರರಿಲ್ಲದ ಆಸ್ತಿ ಸರಕಾರಕ್ಕೆ ಮುಟ್ಟುಗೋಲಾಗುತ್ತಿದ್ದುದು, ೧೨. ಸೇವೆಗಳಿಗಾಗಿ ಶುಲ್ಕಗಳು, ೧೩. ನ್ಯಾಯ ತೀರ್ಮಾನದಲ್ಲಿ ವಿಧಿಸುವ ದಂಡ, ೧೪. ಅರಣ್ಯ ಉತ್ಪಾದನೆಗಳು ಇತ್ಯಾದಿ.[೪೪]

ಭೂಕಂದಾಯ – ಶಿವಪ್ಪನಾಯಕನ ಶಿಸ್ತು

ಸರಕಾರದ ವರಮಾನ ಮೂಲಗಳಲ್ಲಿ ಅತ್ಯಂತ ಮುಖ್ಯವಾದದ್ದು ಭೂಕಂದಾಯ. ಅದನ್ನು ಶಿವಪ್ಪನಾಯಕನು (೧೬೪೫-೬೦) ಬಹುಮಟ್ಟಿಗೆ ಕ್ರಮಬದ್ಧಗೊಳಿಸಿದನು. ಮಣ್ಣಿನ ಫಲವತ್ತತೆಯನ್ನು ಆಧರಿಸಿ ನೆಲವನ್ನು ಐದು ವರ್ಗಗಳಾಗಿ ವಿಭಜಿಸಲಾಯಿತು. ಶಿವಪ್ಪನು ಮೊದಲು ರಾಜ್ಯದಲ್ಲಿನ ಸಾಗುವಳಿಯಾಗಬಹುದಾದ ಎಲ್ಲ ನೆಲವನ್ನೂ ನೀರಾವರಿಗೊಳಪಡಿಸಿದನು. ಸರಕಾರದ ಪ್ರತಿನಿಧಿಗಳು ಅದರ ಉಸ್ತುವಾರಿ ನೋಡಿಕೊಂಡರು. ನೆಲದ ಗುಣಮಟ್ಟ, ಬೀಜದ ಗುಣಮಟ್ಟ, ಬಿತ್ತುವ ವೆಚ್ಚ, ಸರಕಾರವು ಒದಗಿಸಿದ ನೀರಾವರಿ ಸೌಲಭ್ಯ, ಫಸಲು, ಬೇಸಾಯದ ಒಟ್ಟು ವೆಚ್ಚ – ಇವುಗಳನ್ನೆಲ್ಲ ಲೆಕ್ಕ ಹಾಕಿ ಅದರ ಆಧಾರದ ಮೇಲೆ ಉತ್ಪಾದನಾ ವೆಚ್ಚವನ್ನು ಲೆಕ್ಕ ಮಾಡಲಾಗುತ್ತಿತ್ತು. ಕಳೆದ ಐದುವರ್ಷಗಳಿಂದ ದೊರೆತ ಫಸಲಿನ ಆಧಾರದಿಂದ ನೆಲದ ಸರಾಸರಿ ವಾರ್ಷಿಕ ಉತ್ಪಾದನೆಯನ್ನು ನಿಗದಿಪಡಿಸಲಾಗುತ್ತಿತ್ತು. ಇವೆಲ್ಲವುಗಳನ್ನು ಪರಿಗಣಿಸಿ ಉತ್ಪಾದನಾ ವೆಚ್ಚವನ್ನು ೫೦ ಸೇರಿನ ಒಂದು ಖಂಡುಗಕ್ಕೆ ಒಂದು ಹಣ ಎಂದು ನಿರ್ಧರಿಸಲಾಗಿತ್ತು. ಈ ದರದಲ್ಲಿ ಇಡೀ ಫಸಲನ್ನು ಲೆಕ್ಕ ಹಿಡಿದು ಅದರ ಆಧಾರದ ಮೇಲೆ ಭೂ ಕಂದಾಯವನ್ನು ೧/೩ (ತ್ರಿಶ್ತೇಕ)ಎಂದು ನಿಗದಿಪಡಿಸಿತ್ತು.[೪೫] ಈ ವ್ಯವಸ್ಥೆಗೆ ಶಿಸ್ತು ಎಂದು ಹೆಸರು. ಮೈಸೂರಿನಲ್ಲಿ ಶಿವಪ್ಪನಾಯಕನ ಶಿಸ್ತು ಮನೆಮಾತಾಗಿತ್ತು. ವಾಸ್ತವವಾಗಿ ಶಿವಪ್ಪನಾಯಕನ ಹೆಸರೇ ಶಿಸ್ತು ಎಂಬುದರೊಂದಿಗೆ ಸಂವಾದಿಯಾಗಿತ್ತು. ಈ ಭೂಕಂದಾಯದ ಶಿಸ್ತು ಮತ್ತು ಅಡಕೆ ಮತ್ತಿತರ ಬೆಳೆಗಳ ಮೇಲೆ ಹಾಲತ್ ಸಂಗ್ರಹಿಸಲು ರೂಪಿಸಿದ್ದ ಪ್ರಹರ್‌ಪಟ್ಟಿ ಅಥವಾ ನಿಯಮಗಳು ಶಿವಪ್ಪನ ಹಣಕಾಸು ಸಂಬಂಧವಾದ ಜಾಣ್ಮೆಗೆ ಸಾಕ್ಷಿಯಾಗಿದ್ದುವು.

ಸದಾಶಿವನಾಯಕನ ಮೊಮ್ಮಗ ವೆಂಕಟಪ್ಪನಾಯಕನ ಕಾಲದ ಒಂದು ಶಾಸನವು ರಸ್ತೆ ತೆರಿಗೆಯನ್ನು ಸಂಗ್ರಹಿಸುತಿದ್ದ[೪೬] ಠಾಣಾ (ಸುಂಕದ ಮನೆ)ಗಳನ್ನು ಉಲ್ಲೇಖಿಸುತ್ತದೆ.[೪೭] ವ್ಯಾಪಾರ ವಹಿವಾಟು ಬಹಳ

ಉಚ್ಛ್ರಾಯ ಸ್ಥಿತಿಯಲ್ಲಿತ್ತು. ಸಾಗರೋತ್ತರ ವಾಣಿಜ್ಯ ಸಂಬಂಧಗಳೂ ಬೆಳೆಯುತ್ತಿದ್ದುವು. ಮಂಗಳೂರು ಮತ್ತು ಕಾರವಾರ ಮುಖ್ಯ ಬಂದರುಗಳಾಗಿದ್ದುವು. ಪೋರ್ಚುಗಲ್ ದೇಶವು ಇಕ್ಕೇರಿಯೊಂದಿಗೆ ಗೋವಾದ ಮೂಲಕ ವ್ಯಾಪಾರ ಸಂಪರ್ಕವನ್ನಿಟ್ಟುಕೊಂಡಿತ್ತು.

ವೆಚ್ಚದಲ್ಲಿ ಅರಮನೆಯ ವೆಚ್ಚ, ಸೈನ್ಯದ ಸಾಕಣೆ, ಧಾರ್ಮಿಕ ದತ್ತಿಗಳು, ಉಂಬಳಿ, ಅಗ್ರಹಾರ ಮೊದಲಾದ ಧರ್ಮಕಾರ್ಯಗಳು ಸೇರಿದ್ದುವು.

ರಾಜನು ತನಗೆ ಸೇರಿದ ಭೂಮಿಯನ್ನು ಖಾಸಗಿ ವ್ಯಕ್ತಿಗಳಿಗೆ ಮಾರಬಹುದಾಗಿತ್ತು. ಅಂತಹ ನೆಲದ ಮಾರಾಟದ ಬೆಲೆಯು ಅದರ ವಾರ್ಷಿಕ ವರಮಾನದ ಹತ್ತುಪಟ್ಟು, ಹೆಚ್ಚಾಗಿರುತ್ತಿದ್ದುದು ಸ್ವಾರಸ್ಯವಾದ ವಿಷಯ.[೬೭] ಸರಕಾರವೇ ರಾಜ್ಯದ ಎಲ್ಲಾ ನೆಲದ ಒಡೆಯನಾದರೂ, ಖಾಸಗಿ ವ್ಯಕ್ತಿಗಳು ಭೂಮಿಯನ್ನು ಕೊಳ್ಳುವುದನ್ನು ಪ್ರೋತ್ಸಾಹಿಸಲಾಗುತ್ತಿತ್ತು.

ಧರ್ಮ ಮತ್ತು ಶಿಕ್ಷಣ

ಕೆಳದಿಯ ಅರಸರು ಪಕ್ಕಾ ವೀರಶೈವರಾದರೂ ತಮ್ಮ ಧಾರ್ಮಿಕ ಮನೋಧರ್ಮದಲ್ಲಿ ಉದಾರಿಯಾಗಿದ್ದರು. ಮಹಮದೀಯರ ಮಸೀದಿಗಳಿಗೆ,[೬೮] ಬ್ರಾಹ್ಮಣ ಧರ್ಮಸಂಸ್ಥೆಗಳಿಗೆ[೬೯] ಉದಾರವಾಗಿ ದಾನಧರ್ಮ ಮಾಡುತ್ತಿದ್ದರು. ವಾಜಪೇಯವೇ ಮೊದಲಾದ ಯಾಗಗಳನ್ನೂ ಈ ಅರಸರು ಆಚರಿಸಿದರು. ವೆಂಕಟಪ್ಪ (೧೫೮೨-೧೬೨೯)ನನ್ನು ವಿಶುದ್ಧ ವೈದಿಕಾದ್ವೈತ ಸಿದ್ಧಾಂತ ಪ್ರತಿಷ್ಠಾಪಕ ಎಂದು ವರ್ಣಿಸಲಾಗಿದೆ (ಶುದ್ಧವಾದ ವೈದಿಕ ಮತ್ತು ಅದ್ವೈತ ಸಿದ್ಧಾಂತಗಳನ್ನು ಸ್ಥಾಪಿಸಿದವನು).[೭೦] ಈ ರಾಜರು ಶೈವ ಮತ್ತು ವೈಷ್ಣವ ದೇವಾಲಯಗಳಿಗೆ ಉದಾರವಾಗಿ ದಾನಮಾಡಿದರು. ಬ್ರಾಹ್ಮಣರಿಗೆ ಮತ್ತು ಜಂಗಮರಿಗೆ (ವೀರಶೈವರು) ಬೇಕಾದಷ್ಟು ಕೊಡುಗೆ ನೀಡಿದರು.[೭೧] ಶೃಂಗೇರಿಯಲ್ಲಿ ವೆಂಕಟಪ್ಪನು ಪೂಜ್ಯ ಅಭಿನವ ನರಸಿಂಹಭಾರತೀ ಸ್ವಾಮಿಗಳ ವಸತಿಗಾಗಿ ಒಂದು ಮಠವನ್ನು ಕಟ್ಟಿಸಿದನು, ಬ್ರಾಹ್ಮಣರಿಗೆ ಒಂದು ಅಗ್ರಹಾರವನ್ನು ರಚಿಸಿಕೊಟ್ಟನು.

ವೆಂಕಟಪ್ಪನಾಯಕನು ಶಿಕ್ಷಣ ಮತ್ತು ಸಾಹಿತ್ಯಗಳ ಪೋಷಕನಾಗಿದ್ದನು. ಕಾವ್ಯ ನಾಟಕ (ಧರ್ಮ ಶಾಸ್ತ್ರ) ಮೊದಲಾದವುಗಳನ್ನು ಕುರಿತು ಹಲವು ಪುಸ್ತಕಗಳು ರಚಿತವಾಗುವಂತೆ ನೋಡಿಕೊಂಡನು. ಸಂಗೀತ, ನರ್ತನಕಲೆಗೂ (ನಾಟ್ಯಶಾಸ್ತ್ರ) ಪೋಷಣೆ ಕೊಟ್ಟನು. ಈ ಕಲೆಗಳನ್ನು ಪ್ರೋತ್ಸಾಹಿಸುವ ಸಲುವಾಗಿ ಒಂದು ರಂಗಮಂದಿರವನ್ನು ಕಟ್ಟಿಸಿದನು. ಅವನು ತಿರುಮಲಭಟ್ಟನೆಂಬ ಕವಿಯಿಂದ ಪದ್ಮಪುರಾಣವನ್ನು ವಾರ್ಧಕ ಷಟ್ಪದೀ ರೂಪದಲ್ಲಿ ಕನ್ನಡಕ್ಕೆ ಭಾಷಾಂತರ ಮಾಡಿಸಿದನು. ಜೊತೆಗೆ ಅವನೇ ೧) ಶಿವ ಅಷ್ಟಪದಿ ಮತ್ತು ೨) ತಂತ್ರಸಾರ ಎಂಬ ಎರಡು ಸಂಸ್ಕೃತ ಕೃತಿಗಳನ್ನು ಬರೆಯುವಂತೆ ಮಾಡಿದನು. ಎರಡನೆಯದು ಆಗಮವನ್ನು ಕುರಿತ ಒಂದು ಕೃತಿ. ಅದರ ಮೇಲೆ ರಂಗನಾಥ ದೀಕ್ಷಿತನೆನ್ನುವವನು ಭಾಷ್ಯವನ್ನು ಬರೆದಿದ್ದಾನೆ. ಕಟ್ಟಾ ವಿಶಿಷ್ಟಾದ್ವೈತಿಯಾದ ರಾಮಾನುಜಾಚಾರ್ಯನೆನ್ನುವವನು ಇವನ ಆಸ್ಥಾನದಲ್ಲಿ ಇದ್ದಂತೆ ತೋರುತ್ತದೆ.[೭೨] ಹಾಗೆಯೇ ಬಸಪ್ಪನಾಯಕನೂ ಸಾಹಿತ್ಯದ ಪೋಷಕನಾಗಿದ್ದನು. ಅವನು ತನ್ನ ಹೆಸರಿನಲ್ಲಿ ೧) ಶಿವತತ್ತ್ವ ರತ್ನಾಕರ, ೨) ಸುರದ್ರುಮ ಎಂಬ ಎರಡು ಸಂಸ್ಕೃತ ಕೃತಿಗಳನ್ನೂ ಸೂಕ್ತಿಸುಧಾಕರ ಎಂಬ ಅರ್ಧ ಕನ್ನಡ ಮತ್ತು ಭಾಗಶಃ ಸಂಸ್ಕೃತ ಕೃತಿಯನ್ನೂ ರಚಿಸುವಂತೆ ಮಾಡಿದನು.

ಇಡೀ ಮೈಸೂರಿನ ಇತಿಹಾಸದಲ್ಲಿ ಕೆಳದಿವಂಶ ಮಾತ್ರವೇ ಇಬ್ಬರು ಮಹಿಳಾ ಆಡಳಿತಗಾರ್ತಿಯರನ್ನು ಕೊಟ್ಟಿತು. ಅವರು ಚೆನ್ನಮ್ಮಾಜಿ (೧೬೭೧-೯೭) ಮತ್ತು ವೀರಾಜಮ್ಮಣ್ಣಿ (೧೭೫೭-೧೭೬೩). ಚೆನ್ನಾಮ್ಮಾಜಿಯು ಉತ್ತಮ ಆಡಳಿತಗಾರ್ತಿ ಮಾತ್ರವಾಗಿರದೆ ಪರಾಕ್ರಮಿಯಾಗಿದ್ದಳು. ವೀರಾಜಮ್ಮಣ್ಣಿಯೂ ಪರಾಕ್ರಮಕ್ಕೆ ಹೆಸರಾದವಳೇ. ಆದರೆ ಅನೈತಿಕ ವ್ಯವಹಾರಗಳಿಂದ ಪ್ರಜೆಗಳ ಅಸಂತೋಷವನ್ನು ಗಳಿಸಿಕೊಂಡು ಕೊನೆಗೆ ಕೆಳದಿ ರಾಜವಂಶಕ್ಕೆ ಮುಕ್ತಾಯ ಹಾಡಿದಳು.

ಹುಲಿಬೈಲು ಬಸಪ್ಪ

ಚಂದ್ರಪ್ಪನಾಯಕ (೧೪೯೯-೧೫೧೩)

ಸದಾಶಿವನಾಯಕ (೧೫೧೩-೧೫೬೦)

- ದೊಡ್ಡ ಸಂಕಣ್ಣನಾಯಕ
  - ೫. ರಾಮರಾಯನಾಯಕ (೧೫೭೦-೧೫೮೨)
  - ೬. ವೆಂಕಟಾದ್ರಿನಾಯಕ (೧೫೮೨-೧೬೨೯)
    - ಭದ್ರಪ್ಪನಾಯಕ
      - (ಭೈರವನಾಯಕ - ೧)
        - ೭. ವೀರಭದ್ರನಾಯಕ(೧೬೨೯-೧೬೪೫)
- ಚಿಕ್ಕ ಸಂಕಣ್ಣನಾಯಕ (೧೫೬೦-೧೫೭೦)
  - ಸಿದ್ದಪ್ಪನಾಯಕ
    - ೮. ಶಿವಪ್ಪನಾಯಕ (೧೬೪೫-೧೬೬೦)
      - ೧೦. ಭದ್ರಪ್ಪನಾಯಕ-೨ (೧೬೬೧-೧೬೬೩)
      - ೧೧. ಸೋಮಶೇಖರನಾಯಕ (ತಾಯಿ : ಚೆನ್ನಮ್ಮಾಜಿ) ೧೬೬೩-೧೬೭೧
        - ೧೨. ಚೆನ್ನಮ್ಮಾಜಿ (೧೬೭೧-೧೬೯೭)
          - ೧೩. ಬಸಪ್ಪನಾಯಕ-೧ (೧೬೯೭-೧೭೧೪)
            - ೧೪. ಸೋಮಶೇಖರನಾಯಕ-೨ (೧೭೧೪-೧೭೩೯)
            - ವೀರಭದ್ರನಾಯಕ
              - ೧೫. ಬಸಪ್ಪನಾಯಕ-೨ (೧೭೩೯-೫೪)
                - ೧೬. ತಾಯಿ ವೀರಾಜಮ್ಮಣ್ಣಿ
                  - ದತ್ತುಪುತ್ರ ಚನ್ನಬಸಪ್ಪನಾಯಕ (೧೭೫೪-೫೭)
                    - ೧೭. ವೀರಾಜಮ್ಮಣ್ಣಿ (೧೭೫೭-೧೭೬೩)
    - ೯. ವೆಂಕಟಪ್ಪನಾಯಕ (೧೬೬೦-೧೬೬೧)

೧೭೬೩ರಲ್ಲಿ ಹೈದರನು ಬಿದನೂರನ್ನು ಬಲಿ ತೆಗೆದುಕೊಂಡು
ಮೈಸೂರು ರಾಜ್ಯಕ್ಕೆ ಸೇರಿಸಿದನು.

ಚಿತ್ರದುರ್ಗದ ನಾಯಕರು

ವಂಶದ ಸ್ಥಾಪಕ ತಿಮ್ಮಣ್ಣನಾಯಕನೆನ್ನುವವನು. ಅವನಿಗೆ ೧೫೬೩ರಲ್ಲಿ ವಿಜಯನಗರದ ಸದಾಶಿವರಾಯನು ಹೊಳಲ್ಕೆರೆಯನ್ನು ನೀಡಿದ್ದನು. ಕುಟುಂಬದ ಕೇಂದ್ರ ಸ್ಥಳವನ್ನು ೧೫೭೩ರಲ್ಲಿ ಚಿತ್ರದುರ್ಗಕ್ಕೆ ಸ್ಥಳಾಂತರಿಸಲಾಯಿತು. ಚಿತ್ರದುರ್ಗದ ಬಲವಾದ ಕೋಟೆಯನ್ನು ಕಟ್ಟಿದವನು ತಿಮ್ಮಣ್ಣನಾಯಕನೇ. ಆರು ಪೀಳಿಗೆಗಳವರೆಗೆ ಈ ಮತ್ತಿ ಕುಟುಂಬವು ರಾಜ್ಯವನ್ನಾಳಿತು.[೯೩] ಕಸ್ತೂರಿ ರಂಗಪ್ಪನಾಯಕನ ನಂತರ ಪಟ್ಟಕ್ಕೆ ಬಂದ ಭರಮಪ್ಪನಾಯಕನದು ಅಸಾಧಾರಣ ವ್ಯಕ್ತಿತ್ವ. ಅವನು ಮರಾಠಾ ದಂಡನಾಯಕ ಸಂತಾಜಿ ಘೋರ್ಪಡೆಯ ಮಿತ್ರನಾಗಿದ್ದನು. ೧೬೯೫ರಲ್ಲಿ ಖಾಸಿಂಖಾನನ ಕೈಕೆಳಗಿದ್ದ ಭಾರೀ ಮೊಗಲ್ ಸೇನೆಯ ಮೇಲೆ ಸಂತಾಜಿ ಘೋರ್ಪಡೆಯೂ ಚಿತ್ರದುರ್ಗದ ಭರಮಪ್ಪನಾಯಕನೂ ಸೇರಿ ದೊಡ್ಡೇರಿಯ ಬಳಿ ಆಕ್ರಮಣ ಮಾಡಿದರು. ಇವರ ಸೇನೆಯು ದೊಡ್ಡೇರಿಯ ಕೋಟೆಗೆ ಮುತ್ತಿಗೆ ಹಾಕಿತು. ಆಹಾರ ವಸ್ತುಗಳ ಪೂರೈಕೆಯನ್ನು ಪಡೆಯಲಾಯಿತು. ಮೊಗಲ್ ಸೇನೆಯು ಸೋಲಬೇಕಾಯಿತು. ಅಪಮಾನವನ್ನು ನಿವಾರಿಸಿಕೊಳ್ಳಲೋಸುಗ ಖಾಸಿಂಖಾನನು ವಿಷವನ್ನು ಸೇವಿಸಿ ಸತ್ತನು.[೯೪]

೧೭೪೮ರಲ್ಲಿ ಭರಮಪ್ಪನಾಯಕನ ಮಗ ಮದಕರಿನಾಯಕನು ಸತಾರಾದ ಕಾರಾಗೃಹದಿಂದ ಬಿಡುಗಡೆ ಹೊಂದಿ ದಕ್ಷಿಣದ ಕಡೆಗೆ ಬರುತ್ತಿದ್ದ ಚಂದಾಸಾಹೇಬನ ಮೈತ್ರಿಯನ್ನು ಸಂಪಾದಿಸಿ ಇಕ್ಕೇರಿಯ ಮೇಲೆ ಯುದ್ಧವನ್ನು ಘೋಷಿಸಿದನು. ಆದರೆ ಮಾಯಕೊಂಡದ ಬಳಿ ನಡೆದ ಭೀಕರ ಕಾಳಗದಲ್ಲಿ ಬಿದನೂರು ಸೈನ್ಯದೆದುರು ನಿಲ್ಲಲಾರದೆ ಭಾರೀ ನಷ್ಟವನ್ನು ಅನುಭವಿಸಬೇಕಾಯಿತು. ಈ ಯುದ್ಧದಲ್ಲಿ ರಾಯದುರ್ಗ, ಹರಪನಹಳ್ಳಿ ಮತ್ತು ಸವಣೂರುಗಳು ಬಿದನೂರಿನ ಜೊತೆಗೂಡಿದ್ದುವು. ಹರಪನಹಳ್ಳಿಯ ಸೋಮಶೇಖರನಾಯಕನು ದ್ವಂದ್ವ ಯುದ್ಧದಲ್ಲಿ ಮದಕರಿನಾಯಕನನ್ನು ಇರಿದು ಕೊಂದನು. ಯುದ್ಧದಲ್ಲಿ ಚಂದಾಸಾಹೇಬನ ಮಗನು ಸತ್ತನು. ಬಿದನೂರು ಸೈನ್ಯವು ಅವನನ್ನೂ ಸೆರೆಹಿಡಿಯಿತು.[೯೫]

೧೭೬೨ರಲ್ಲಿ ಹೈದರನು ಚಿತ್ರದುರ್ಗದ ಮೇಲೆ ಎರಗಿದನು. ಮದಕರಿನಾಯಕನು ಹೈದರನಿಗೆ ೨ ಲಕ್ಷ ರೂಪಾಯಿಗಳನ್ನು ಕೊಟ್ಟುದಲ್ಲದೆ ವಾರ್ಷಿಕವಾಗಿ ಕಪ್ಪವನ್ನು ಕೊಡುವುದಾಗಿ ಒಪ್ಪಿದನು. ಚಿತ್ರದುರ್ಗವು ಸಂಪೂರ್ಣವಾಗಿ ಹಾಳಾಗುವುದನ್ನು ತಪ್ಪಿಸಲು ಹೈದರನ ಗಮನವನ್ನು ಇಕ್ಕೇರಿಯ ಕಡೆಗೆ ತಿರುಗಿಸಿದನು.

ರಾಜ್ಯಾಡಳಿತ

ಚಿತ್ರದುರ್ಗದ ಅರಸರು ಪರಾಕ್ರಮಕ್ಕೆ ಹೆಸರಾದವರು. ರಾಜನಿಗೆ ಆಡಳಿತದಲ್ಲಿ ಸಲಹೆ ನೀಡಲು ಒಂದು ಮಂತ್ರಾಲೋಚನ ಸಭಾ ಮನಸಬ್ದಾರ್ ಇದ್ದಿತು. ಇದರಲ್ಲಿ ಪ್ರಧಾನಿಯ ನೇತೃತ್ವದಲ್ಲಿ ಮಂತ್ರಿಗಳು ಇದ್ದರು. ರಾಜ್ಯಾಡಳಿತದ ಎಲ್ಲ ವಿಚಾರಗಳಲ್ಲೂ ಅವರು ನಿಪುಣರಾಗಿದ್ದರು. ಈ ರಾಜರು ಯುದ್ಧದಲ್ಲಿ ಪರಾಕ್ರಮಿಗಳು, ಆಡಳಿತದಲ್ಲಿ ವಿವೇಕಿಗಳು, ನೀತಿಯಲ್ಲಿ ದೂರದೃಷ್ಟಿಯುಳ್ಳವರು, ನಂಬಿಕೆಯಲ್ಲಿ ಧಾರ್ಮಿಕರು, ಆಚಾರವಂತರು.

ಸಮರ್ಥರಾದ ಈ ನಾಯಕರ ಸೇವೆಯಲ್ಲಿ ಕೆಲವುರು ನಿಷ್ಣಾತ ಫ್ರೆಂಚ್ ಎಂಜಿನಿಯರರಿದ್ದರು. ಅವರು ಬಲವಾದ ಕೋಟೆಗಳನ್ನೂ ಇತರ ಸಾರ್ವಜನಿಕ ಉಪಯೋಗಿ ಕಟ್ಟಡಗಳನ್ನೂ ನಿರ್ಮಿಸಿದರು. ಇಂದಿಗೂ ಅವು ಅವರ ವೈಭವದ ಕುರುಹುಗಳಾಗಿ ಉಳಿದಿವೆ. ಅಂತಹ ಎಂಜಿನಿಯರರ ಪೈಕಿ ಜಾನ್ ಎನ್ನುವವನೂ ಒಬ್ಬ. ಉಚ್ಚಂಗಮ್ಮನ ಉಯ್ಯಾಲೆ ಕಂಬಗಳನ್ನೂ ದೊಡ್ಡ ದೀಪಸ್ತಂಭವನ್ನೂ ಚಿತ್ರದುರ್ಗದಲ್ಲಿ ನಿಲ್ಲಿಸಿದನು.

ಹೊಸದುರ್ಗ ತಾಲೂಕಿನ ಜಾನಕಲ್ಲಿನ ದುರ್ಭೇದ್ಯವಾದ ಕೋಟೆಯೂ ಬಹುಶಃ ಇವನದೇ ನಿರ್ಮಿತಿ. ಜಾನಕಲ್ಲು ಮತ್ತು ಜಾನಕೊಂಡ ಹಳ್ಳಿಗಳಿಗೆ ಬಹುಶಃ ಈ ಜಾನನ ಹೆಸರನ್ನೇ ಇರಿಸಿದೆಯೆಂದು ತೋರುತ್ತದೆ.[೫೬]

ಬಹಳ ಶಿಸ್ತಿನಿಂದಿದ್ದ ಸೈನ್ಯವನ್ನು ಅವರು ಕಟ್ಟಿದ್ದರು. ಸೈನಿಕರ ಪರಾಕ್ರಮವನ್ನೂ ಕೌಶಲವನ್ನೂ ರಾಜರು ಪುರಸ್ಕರಿಸುತ್ತಿದ್ದರು. ಸೇನಾಸೇವೆಯನ್ನು ಹೆಚ್ಚು ಆಕರ್ಷಕವಾಗುವಂತೆ ಮಾಡುವುದಕ್ಕಾಗಿ ಅವರು ಯೋಧರಿಗೆ ಬೇಕಾದಷ್ಟು ಸವಲತ್ತುಗಳನ್ನು ಒದಗಿಸಿದ್ದರು. ವೀರನೊಬ್ಬನು ಯುದ್ಧದಲ್ಲಿ ಒಬ್ಬ ವೈರಿಯನ್ನು ಸಂಹರಿಸಿದರೆ ಅವನಿಗೆ ಇನಾಂ ದೊರಕುತ್ತಿತ್ತು. ವೀರನೊಬ್ಬನು ಯುದ್ಧರಂಗದಲ್ಲಿ ಮಡಿದರೆ, ಅವನ ಮಕ್ಕಳಿಗೆ ಹಾಲು-ಬೆಣ್ಣೆ ಹಣವನ್ನು ಪ್ರತಿತಿಂಗಳೂ, ಅವರು ವಯಸ್ಕರಾಗುವವರೆಗೂ ನೀಡಲಾಗುತ್ತಿತ್ತು. ಆಮೇಲೆ ಅವರಿಗೆ ಸೈನ್ಯದಲ್ಲಿ ಕ್ರಮವಾದ ನೌಕರಿ ದೊರಕುತ್ತಿತ್ತು.[೫೭]

ಗ್ರಾಮದ ಆಡಳಿತವನ್ನು ಹನ್ನೆರಡು ಜನ ಗ್ರಾಮಕಾರ್ಯಕರ್ತರು ನಿರ್ವಹಿಸುತ್ತಿದ್ದರು. ಇವರಿಗೆ ಬಾರಾಬಲೂತಿಗಳೆಂದು ಹೆಸರು. ೧. ಗೌಡ ಗ್ರಾಮದ ಮುಖ್ಯಸ್ಥ; ೨. ಶಾನಭೋಗ, ಗ್ರಾಮದ ಲೆಕ್ಕಿಗ; ೩. ಬಡಗಿ, ಮರಗೆಲಸದವನು; ೪. ಕಮ್ಮಾರ, ರೈತನಿಗೆ ಅಗತ್ಯವಾದ ಕುಡುಗೋಲು, ನೇಗಿಲಗುಳ ಮೊದಲಾದ ಕೃಷಿ ಉಪಕರಣಗಳನ್ನು ತಯಾರಿಸಿ ಕೊಡುವವನು; ೫. ತಳವಾರ, ಹಳ್ಳಿಯ ಕಾವಲ ಅಧಿಕಾರಿ; ೬. ಬೇಗಾರ ಅಥವಾ ತೋಟಿ; ೭. ಜೋಯಿಸ ಪಂಚಾಂಗ ಓದಿಹೇಳುವವನು, ಇವನೇ ಹಳ್ಳಿಯ ಜ್ಯೋತಿಷಿ ; ೮. ಕುಳಾಲ ಅಥವಾ ಕುಂಬಾರ, ಗ್ರಾಮಸ್ಥರಿಗೆ ಬೇಕಾದ ಮಣ್ಣಿನ ಮಡಕೆ ಪಾತ್ರೆಗಳನ್ನು ಮಾಡಿಕೊಡುವವನು. ೯. ರಜಕ, ಅಗಸ ಹಳ್ಳಿಗರ ಬಟ್ಟೆಗಳನ್ನು ಒಗೆದು ಮಡಿಮಾಡುವವನು; ೧೦. ನವಿಕ, ಕ್ಷೌರ ಮಾಡುವವನು; ೧೧. ಚಳಕ ಅಥವಾ ನೀರುಗಂಟಿ, ಕೆರೆಯ ನೀರನ್ನು ನಿಯಂತ್ರಿಸುವವನು ಮತ್ತು ೧೨. ಅಕ್ಕಸಾಲೆ, ಹಳ್ಳಿಗರಿಗೆ ಅಗತ್ಯವಾದ ಚಿನ್ನ ಬೆಳ್ಳಿ ಕೆಲಸ ಮಾಡಿಕೊಡುವವನು.[೫೮] ಈ ವ್ಯವಸ್ಥೆಯನ್ನು ಆಯಗಾರ ವ್ಯವಸ್ಥೆ ಎಂದು ವಿಜಯನಗರ ಕಾಲದಲ್ಲಿ ಕರೆಯಲಾಗಿತ್ತು. ಚಿತ್ರದುರ್ಗದ ಪಾಳೆಯಗಾರರೂ ಇದನ್ನೇ ತಮ್ಮ ಆಡಳಿತದಲ್ಲಿ ಅಳವಡಿಸಿಕೊಂಡರು.[೫೯]

ಚಿತ್ರದುರ್ಗದ ಪಾಳೆಯಗಾರರು ಅನೇಕ ಹಳ್ಳಿಗಳನ್ನು ಪುನರ್ವಸತಿಗೊಳಪಡಿಸಿ, ಹೊಸದಾಗಿ ಭೂಮಿಯನ್ನು ಕೃಷಿಗೆ ತರುವ ಸಲುವಾಗಿ ಹೊಸ ಹಳ್ಳಿಗಳನ್ನೂ ಸ್ಥಾಪಿಸಿದರು. ಹೊಸಗ್ರಾಮಗಳಿಗೆ ರಾಜಮನೆತನದ ರಾಣಿಯರ ಹೆಸರನ್ನಿಡುವ ಸ್ವಾರಸ್ಯವಾದ ಪದ್ಧತಿ ಈ ನಾಯಕರಲ್ಲಿತ್ತು. ಉದಾಹರಣೆಗೆ ಸಿದ್ದವ್ವನ ಹೆಸರಿನಿಂದ ಸಿದ್ದವ್ವನಹಳ್ಳಿ, ಸಿದ್ದವ್ವನ ದುರ್ಗ, ರಂಗವ್ವನಹಳ್ಳಿ, ವೀರವ್ವ ನಾಗತಿಹಳ್ಳಿ, ಓಬವ್ವನಾಗತಿಹಳ್ಳಿ ಇತ್ಯಾದಿ. ಈ ಮನೆತನದಲ್ಲಿ ರಾಣಿಯರಿಗೆ ನಾಯಕಿತಿ ಅಥವಾ ನಾಗತಿ ಎಂಬ ಹೆಸರಿತ್ತು.[೬೦]

ಎಲ್ಲ ಮೂಲಗಳೂ ಸೇರಿ ಸರಕಾರಕ್ಕೆ ಬರುತ್ತಿದ್ದ ವಾರ್ಷಿಕ ವರಮಾನ ೪೦ ಲಕ್ಷ ವರಹಗಳು. ಇದರ ಬಹುಪಾಲು ಭೂಕಂದಾಯದಿಂದ ಬರುತ್ತಿತ್ತು. ಮಾರ್ಗದ ಸುಂಕ, ಸ್ಥಳಸುಂಕ, ಹುಲ್ಲುಸುಂಕ, ಇಟ್ಟಿಗೆ ಗುತ್ತಿಗೆ (ಇದು ಬಹುಶಃ ಇಟ್ಟಿಗೆ ಸುಡುವ ಗೂಡುಗಳಿಗೆ ಆಗಿರಬಹುದು), ಎಲೆಮನೆ ತಂಬಾಕು, ಶರಾಬು, ಗಾಂಜಾ, ಆಚಾರ ಕಾಣಿಕೆ, ರಾಜನಿಗೆ ಅರ್ಪಿಸುವ ಕಾಣಿಕೆಗಳು, ದೀವಳಿಗೆ ಕಾಣಿಕೆ ಇತ್ಯಾದಿಯಾಗಿ ಹಲವು ಬಗೆಯ ತೆರಿಗೆಗಳು ಮತ್ತು ಸುಂಕಗಳು ಇದ್ದುವು.[೬೧]

೧೬೯೧ರಲ್ಲಿ ಕಸ್ತೂರಿ ರಂಗಪ್ಪನಾಯಕನು ಒಂದು ಟಂಕಸಾಲೆಯನ್ನು ಸ್ಥಾಪಿಸಿ ದುರ್ಗಿವರಹ ಎಂಬ ನಾಣ್ಯಗಳನ್ನು ಮುದ್ರಿಸಿದನು. ದುರ್ಗ ಸೇರಿದ್ದಾದ್ದರಿಂದ ದುರ್ಗಿ ಎಂದಿರಬಹುದು.[೬೨]

ಚಿತ್ರದುರ್ಗದ ನಾಯಕರ ವಂಶಾವಳಿ (ರೈಸ್ ಆಧಾರಿತ)

ಕಾಮಗೇತಿ ಕಸ್ತೂರಿರಂಗನಾಯಕ

- ತಿಮ್ಮಣ್ಣನಾಯಕ (೧೫೫೬-೧೫೮೩)
  ಮದಕೇರಿನಾಯಕ (೧೫೬೮-೧೫೮೧)
  ರಂಗಪ್ಪನಾಯಕ (೧೫೭೬-೧೬೩೩)
  - ಮದಕರಿನಾಯಕ (೧೬೦೯-೧೬೫೩)
    - ಭರಮಪ್ಪನಾಯಕ (೧೬೮೯-೧೭೧೯)
      - ಮದಕೇರಿನಾಯಕ (೧೭೨೧-೧೭೩೦)
        - ದುಗ್ಗಪ್ಪನಾಯಕ
          - ಮದಕೇರಿನಾಯಕ (೧೭೫೬)
      - ಚಿಕ್ಕಣ್ಣನಾಯಕ (೧೭೨೧)
  - ಭರಮಪ್ಪನಾಯಕ (೧೬೪೦-೧೬೬೩)
    - ಮದಕೇರಿನಾಯಕ (೧೬೬೦-೧೬೮೭)
      - ರಂಗಪ್ಪನಾಯಕ ೧೬೯೦-೧೭೫೫)
        - ಮದಕೇರಿನಾಯಕ
  - ಚಿಕ್ಕಣ್ಣನಾಯಕ (೧೬೭೮-೧೬೮೫)
- ಓಬಣ್ಣನಾಯಕ
  ಚಿಕ್ಕಪ್ಪನಾಯಕ (೧೬೦೬)

ಯಲಹಂಕದ ರಾಜರು ಅಥವಾ ಯಲಹಂಕನಾಡ ಪ್ರಭುಗಳು (೧೪೧೮-೧೭೨೮)

ಆವತಿ ಕುಟುಂಬವು ಕಾಂಚೀಪುರಂ ಬಳಿಯ ಆಲೂರು ಎಂಬ ಹಳ್ಳಿಯಿಂದ ವಲಸೆಬಂದು ದೇವನಹಳ್ಳಿಯಲ್ಲಿ ನೆಲೆಸಿತು. ಅದರ ಒಂದು ಶಾಖೆಯು ಬೆಂಗಳೂರಿನ ಬಳಿಯ ಯಲಹಂಕದಲ್ಲಿ ನೆಲೆಸಿತು. ಆವತಿ ನಾಡಪ್ರಭುಗಳು ಮೊರಸು ಒಕ್ಕಲಿಗ ಜನಾಂಗಕ್ಕೆ ಸೇರಿದ ಗೌಡರು. ಆವತಿ ಪ್ರಭುಗಳ ಮೂಲಪುರುಷ ರಣಬೈರೇಗೌಡ. ಈ ಕುಟುಂಬದ ಶಾಸನಗಳು ೧೪೨೮ ರಿಂದ ಮುಂದಕ್ಕೆ ದೊರಕುತ್ತವೆ.[೬೬] ಆವತಿ ಸೋದರರಲ್ಲಿ ಅತ್ಯಂತ ಕಿರಿಯನಾದ ಜಯಗೌಡನು ಯಲಹಂಕಕ್ಕೆ ಬಂದು ನೆಲೆಸಿದನು. ೧೪೧೮ ರಿಂದ ೧೪೩೩ರ ವರೆಗೆ ೧೫ ವರ್ಷಗಳ ಕಾಲ ಅಲ್ಲೇ ಇದ್ದನು. ಈ ರಾಜರು ಸಾಮಾನ್ಯವಾಗಿ ತಮ್ಮ ಕುಲದೇವತೆ ಕೆಂಪಮ್ಮನ ಸ್ಮರಣೆಗಾಗಿ ಕೆಂಪ ಎಂಬ ಹೆಸರನ್ನು ತಮ್ಮ ಹೆಸರಿಗೆ ಸೇರಿಸಿಕೊಂಡರು. ಪ್ರಸಿದ್ಧರಾದ ಕೆಂಪೇಗೌಡರು ಬಂದದ್ದು ಜಯಗೌಡನ ವಂಶದಲ್ಲಿ ಎಲ್ಲರಿಗಿಂತ ಮೂವರು ಕೆಂಪೇಗೌಡರ ಹೆಸರುಗಳು ಪ್ರಸಿದ್ಧವಾಗಿವೆ.

೧೫೧೩ ರಿಂದ ೧೫೬೯ರ ವರೆಗೆ ಆಳಿದ ಮೊದಲನೆಯ ಕೆಂಪೇಗೌಡನು ಅತ್ಯಂತ ಪ್ರಸಿದ್ಧನಾದ ಅರಸ. ೧೫೩೭ರಲ್ಲಿ ಅವನು ಬೆಂಗಳೂರನ್ನು ಸ್ಥಾಪಿಸಿ ಅದಕ್ಕೊಂದು ಮಣ್ಣಿನ ಕೋಟೆಯನ್ನು ಕಟ್ಟಿಸಿದನು. ಅದರ ನಾಲ್ಕು ದಿಕ್ಕುಗಳಲ್ಲಿ ವೈಯ್ಯಾಳಿ ಶಿಖರಗಳೆಂದು ಪ್ರಸಿದ್ಧವಾದ ನಾಲ್ಕು ಕಾವಲು ಗೋಪುರಗಳನ್ನೂ ನಿರ್ಮಿಸಿದನು. ಈ ಕೋಟೆಯ ಸ್ಥಾಪನೆಯಿಂದ ಕೃಷ್ಣದೇವರಾಯನಿಗೆ ಬಹಳ ಸಂತೋಷವಾಯಿತು. ಬೆಂಗಳೂರಿನ

ಸುತ್ತಮುತ್ತ ಇದ್ದ ಹನ್ನೆರಡು ಹೋಬಳಿ(ಗ್ರಾಮ ಸಮುದಾಯ)ಗಳನ್ನು ಅವನಿಗೆ ನೀಡಿದನು. ಅವು ಹಲಸೂರು, ವರ್ತೂರು, ಬೇಗೂರು, ಜಿಗಣೆ, ತಲಘಟ್ಟದಪುರ, ಕುಂಬಳಗೋಡು, ಕೆಂಗೇರಿ, ಹೆಸರಘಟ್ಟ, ಬಾಣಾವರ ಮೊದಲಾದವು. ವರ್ಷಕ್ಕೆ ಇವು ೩೦,೦೦೦ ವರಹಗಳ ವರಮಾನವನ್ನು ತರುತ್ತಿದ್ದುವು. ಆಮೇಲೆ ಕೆಂಪೇಗೌಡನು ರಾಜ್ಯವನ್ನು ವಿಸ್ತರಿಸಿ ಬೆಂಗಳೂರನ್ನು ರಾಜಧಾನಿಯನ್ನಾಗಿ ಮಾಡಿಕೊಂಡನು. ಹೊಸ ಮಾರುಕಟ್ಟೆಗಳನ್ನು ಸ್ಥಾಪಿಸಿ, ವರ್ತಕರಿಗೆ ಸೌಲಭ್ಯಗಳನ್ನು ಕಲ್ಪಿಸಿ ವ್ಯಾಪಾರ ವಹಿವಾಟಿಗೆ ಬೇಕಾದಷ್ಟು ಪ್ರೋತ್ಸಾಹ ನೀಡಿದನು. ಅವನ ಈ ಧರ್ಮಯುತ ಆಳಿಕೆಯನ್ನು ಗಮನಿಸಿ ಕೃಷ್ಣದೇವರಾಯನು ಬಳ್ಳಾಪುರ, ದೇವನಹಳ್ಳಿ ಮತ್ತು ಹೊಸಕೋಟೆಗಳನ್ನು ಅವನಿಗಿತ್ತು ಪುರಸ್ಕರಿಸಿದನು. ಕೆಂಪೇಗೌಡ ಧರ್ಮಶೀಲನಾದ ವ್ಯಕ್ತಿ, ದೊಡ್ಡಭಕ್ತ ಹಾಗೂ ಉದಾರಿಯಾದ ದಾನಿ. ಬೇಕಾದಷ್ಟು ದೇವಾಲಯಗಳನ್ನು ಕಟ್ಟಿಸಿದನು. ಅವು ಇಂದಿಗೂ ಬೆಂಗಳೂರಿನಲ್ಲಿ ಮುಖ್ಯ ಯಾತ್ರಿಕೇಂದ್ರಗಳಾಗಿವೆ. ಗವಿ ಗಂಗಾಧರೇಶ್ವರ ದೇವಾಲಯ ಹಾಗೂ ಅದಿರುವ ಗವೀಪುರ ಅವನು ಕಟ್ಟಿದ್ದು, ದೇವಾಲಯದ ಆವರಣದಲ್ಲಿ ಏಕಶಿಲೆಯ ಒಂದ ಛತ್ರಿ, ಕಲ್ಲಿನ ಒಂದು ತ್ರಿಶೂಲ ಹಾಗೂ ಒಂದು ಡಮರುಗ ಇವೆ. ಇವು ಶಿವನ ಸಂಕೇತಗಳು. ಇವು ಒಂದೊಂದೂ ೧೨ ಅಡಿ ಎತ್ತರವಾಗಿವೆ. ಕೆಂಪಾಂಬುಧಿ ಎಂಬ ಕೆರೆಯನ್ನು ನಿರ್ಮಿಸಿದನು. ತನ್ನ ಕುಲದೇವತೆಯಾದ ಕೆಂಪಮ್ಮನ ಹೆಸರಿನಿಂದ ಕರೆದನು. ಈ ದೇವಾಲಯದಿಂದ ಸ್ವಲ್ಪ ಬಲಗಡೆಗೆ ಸುಪ್ರಸಿದ್ಧವಾದ ಬಸವನಗುಡಿಯಿದೆ. ೧೧ ಅಡಿ ಎತ್ತರದ ಭಾರಿ ನಂದಿಯನ್ನು ಇಲ್ಲಿ ಪೂಜಿಸಲಾಗುತ್ತದೆ. ಬೆಂಗಳೂರಿನ ಈ ವಿಸ್ತರಣಕ್ಕೆ ಬಸವನಗುಡಿ ಎಂದೇ ಹೆಸರು. ದೇವಾಲಯದ ಹಿಂದೆ ಒಂದು ಸಣ್ಣ ಸರೋವರವಿದೆ. ಅದು ಬಸವನ ಪಾದದಡಿಯಿಂದ ಪಶ್ಚಿಮ ಮುಖವಾಗಿ ಹರಿಯುವ ವೃಷಭಾವತಿ ನದಿಯ ಮೂಲವೆಂದು ಬಸವನ ಪೀಠದ ಮೇಲಿರುವ ಒಂದು ಶಾಸನವು ಹೇಳುತ್ತದೆ.[೬೪]

ಬಸವನಗುಡಿಯ ಆಸುಪಾಸಿನಲ್ಲಿ ಕೆಂಪೇಗೌಡನು ಬಸವೇಶ್ವರನ ನಾಲ್ಕು ರಕ್ಷಕ ದೇವತೆಗಳಿಗಾಗಿ ನಾಲ್ಕು ಗುಡಿಗಳನ್ನು ಕಟ್ಟಿಸಿದನು. ಅವು ದೊಡ್ಡ ವಿಘ್ನೇಶ್ವರ, ಆಂಜನೇಯ, ನಂದೀಶ್ವರ ಮತ್ತು ಮಲ್ಲಿಕಾರ್ಜುನ ಗುಡಿಗಳು. ೧೩ ಅಡಿ ಎತ್ತರದ ವಿಘ್ನೇಶ್ವರ ವಿಗ್ರಹವನ್ನು ಒಂದು ಭಾರೀ ಬಂಡೆಯ ಮೇಲೆ ಕೆತ್ತಲಾಗಿದೆ. ಇತರ ವಿಗ್ರಹಗಳೂ ಅಷ್ಟೆ, ಭವ್ಯ ಆಕಾರದವು. ಪ್ರತಿವರ್ಷ ನಡೆಯುವ ಜಾತ್ರೆಗಳು ಇಂದಿಗೂ ಜನರನ್ನು ಬಹುಸಂಖ್ಯೆಯಲ್ಲಿ ಆಕರ್ಷಿಸುತ್ತವೆ. ಮೇಲೆ ಹೇಳಿದ ದೇವಾಲಯಗಳಲ್ಲಿ ಪೂಜೆಮಾಡಲು ನಿಯುಕ್ತರಾದ ಬ್ರಾಹ್ಮಣರಿಗಾಗಿ ಕೆಂಪೇಗೌಡನು ಮೂರು ಅಗ್ರಹಾರಗಳನ್ನು ನಿರ್ಮಿಸಿದನು.[೬೫]

ಶಿವಗಂಗೆಯ ದೊಡ್ಡ ದೇವಾಲಯದಲ್ಲಿ ಕೆಂಪೇಗೌಡನ ಒಂದು ವಿಗ್ರಹ, ಭಕ್ತಿಭಾವದಿಂದ ಕೈಜೋಡಿಸಿ ನೀತಿರುವ ಭಂಗಿಯುಲ್ಲಿದೆ. ಅದರ ಪೀಠದ ಮೇಲಿರುವ ೧೬೦೮ರ ಶಾಸನದಲ್ಲಿ (ಬಹುಶಃ ಮರಣೋತ್ತರವಾಗಿರಬಹುದು) ವಿಗ್ರಹವು, ಬೆಂಗಳೂರಿನ ಕೆಂಪನಂಜೆಯಗೌಡನ ಮಗ ಕೆಂಪೇಗೌಡನದೆಂದೂ, ಅವನು ಸದಾಕಾಲವೂ ಗಂಗಾಧರೇಶ್ವರ ಸ್ವಾಮಿಯನ್ನು ಪೂಜಿಸುತ್ತಿದ್ದನೆಂದೂ ಹೇಳಿದೆ.[೬೬] ಈ ವಿಗ್ರಹವು ತಿರುಪತಿಯಲ್ಲಿ ವೆಂಕಟೇಶ್ವರ ದೇವಾಲಯದಲ್ಲಿ ಇರಿಸಿರುವ ವಿಜಯನಗರದ ಕೃಷ್ಣದೇವರಾಯನ ವಿಗ್ರಹವನ್ನು ನೆನಪಿಗೆ ತರುತ್ತದೆ.

ಕೆಂಪೇಗೌಡನು ಕೇವಲ ಕಟ್ಟಡ ನಿರ್ಮಾಪಕನೂ ಯೋಧನೂ ಆಗಿರದೆ, ದೊಡ್ಡ ಸಮಾಜ ಸುಧಾರಕನಾಗಿದ್ದನು. ತನ್ನ ಕುಟುಂಬದಲ್ಲಿದ್ದ ಮದುವೆಯಾಗುವ ವಯಸ್ಸಿನ ಹೆಣ್ಣುಮಕ್ಕಳ ಕೈಯ ಉಂಗುರದ ಬೆರಳನ್ನು ಕತ್ತರಿಸಿ ದೇವರಿಗೆ ಅರ್ಪಿಸುವ ಹೀನವೂ, ಕ್ರೂರವೂ ಆದ ಪದ್ಧತಿಯನ್ನು ನಿಲ್ಲಿಸಿದನು. ತನ್ನ ಗೌರವಕ್ಕೆ ದೊಡ್ಡರಾಜ್ಯದ ರಾಜನಾಗಿರುವ ಪ್ರತಿಷ್ಠೆಗೆ ಅಂತಹ ಕೂರಕೃತವು ಎಷ್ಟು ಮಾತ್ರಕ್ಕೂ

ಸೂಕ್ತವಲ್ಲವೆಂದು ಅವನು ಭಾವಿಸಿದನು. ಆದರೆ ಅದೇ ಸಮಯದಲ್ಲಿ ಸಂಪ್ರದಾಯವನ್ನು ಗೌರವಿಸುವುದಕ್ಕಾಗಿ ದೇವರಿಗೆ ಚಿನ್ನ ಮತ್ತು ಬೆಳ್ಳಿಗಳಿಂದ ತಯಾರಿಸಿದ ಬೆರಳುಗಳನ್ನು ಅರ್ಪಿಸುವ ಪದ್ಧತಿಯನ್ನು ರೂಢಿಗೆ ತಂದನು.

ಇಷ್ಟೇ ಪ್ರಸಿದ್ಧನಾದ ಮುಂದಿನ ರಾಜ ಕೆಂಪೇಗೌಡನ ಮಗ ಇಮ್ಮಡಿ ಕೆಂಪೇಗೌಡ (೧೫೬೯-೧೬೫೮).[೬೭] ಇವನು ಹುಲಿಕಲ್ಲು, ಹುಲಿಯೂರುದುರ್ಗ, ಹುತ್ರಿದುರ್ಗ, ಕುಣಿಗಲ್ ಮತ್ತು ಶಿವಗಂಗೆಗಳನ್ನು ಗೆದ್ದು ರಾಜ್ಯವನ್ನು ವಿಸ್ತರಿಸಿದನು. ಮಾಗಡಿಯನ್ನು ವಶಪಡಿಸಿಕೊಂಡು, ಸಾವನದುರ್ಗದ ಕೋಟೆಯನ್ನು ಬಲಪಡಿಸಿ, ಸಾವನದುರ್ಗ ಬೆಟ್ಟದ ಬುಡದಲ್ಲಿರುವ ನರಸಿಂಹ ಮತ್ತು ವೀರಭದ್ರ ದೇವಾಲಯಗಳ ಜೀರ್ಣೋದ್ಧಾರ ಮಾಡಿಸಿದನು. ೧೬೩೮ರಲ್ಲಿ ರಣದುಲ್ಲಾ ಖಾನನು ಹೇಗೆ ಕೆಂಪೇಗೌಡನನ್ನು ಸೋಲಿಸಿದನು, ಹೇಗೆ ಅವನು ರಾಜಧಾನಿಯನ್ನು ಬೆಂಗಳೂರಿನಿಂದ ಮಾಗಡಿಗೆ ವರ್ಗಾಯಿಸಿದನು ಎಂಬುದನ್ನು ಆಗಲೇ ನೋಡಿದ್ದೇವೆ.

ಇಮ್ಮಡಿ ಕೆಂಪೇಗೌಡನ ಅನಂತರ ಅವನ ಮಗ ಮುಮ್ಮಡಿ ಕೆಂಪೇಗೌಡನು (೧೬೫೮-೧೬೭೮) ಪಟ್ಟಕ್ಕೆ ಬಂದನು. ಅವನೂ ಬಹಳ ಧಾರ್ಮಿಕನೂ ದಯಾಳುವೂ ಆದ ಅರಸನಾಗಿದ್ದನು. ಇವನು ಮಾಗಡಿಯ ಬಳಿ ಸೋಮೇಶ್ವರ ದೇವಾಲಯವನ್ನು ಕಟ್ಟಿಸಿದನು. ಮುಮ್ಮಡಿ ಕೆಂಪವೀರಪ್ಪಗೌಡನ ಆಸ್ಥಾನಕವಿಯಾಗಿದ್ದ, ಮುಕ್ತೇಶ್ವರ ದೀಕ್ಷಿತನ ಮಗ ಏಕಾಂಬರ ದೀಕ್ಷಿತನು ಮುಮ್ಮಡಿ ಕೆಂಪೇಗೌಡನಿಗೂ ಏಕೋಜಿಗೂ ನಡೆದ ಒಂದು ಯುದ್ಧವನ್ನು ವರ್ಣಿಸಿದ್ದಾನೆ. ಅದರಲ್ಲಿ ಏಕೋಜಿಯು ತೀವ್ರವಾದ ಸೋಲನ್ನು ಅನುಭವಿಸಬೇಕಾಯಿತು.[೬೮] ಈ ಯುದ್ಧದಲ್ಲಿ ಕಂಠೀರವ ನರಸರಾಜ ಒಡೆಯರೂ ಪಲಾಯನ ಮಾಡುವಂತೆ ಮುಮ್ಮಡಿ ಕೆಂಪೇಗೌಡನು ಕಾದಿದನೆಂದು ಏಕಾಂಬರ ದೀಕ್ಷಿತನು ಹೇಳುವುದು ಕೇವಲ ಉತ್ಪ್ರೇಕ್ಷೆ. ಅದಕ್ಕೆ ಬೇರೆ ಯಾವುದೇ ಸಾಕ್ಷ್ಯಾಧಾರಗಳು ದೊರಕುವುದಿಲ್ಲ.

ಈ ಮನೆತನದ ಕೊನೆಯ ಅರಸ ಮುಮ್ಮಡಿ ಕೆಂಪವೀರಪ್ಪ ಗೌಡ. ಇವನ ಆಳಿಕೆಯಲ್ಲಿ ಮೈಸೂರಿನ ದಳವಾಯಿ ದೇವರಾಜಯ್ಯನು ಸೈನ್ಯವನ್ನು ಕಳಿಸಿದನು. ೧೭೨೮ರಲ್ಲಿ ಮಾಗಡಿಕೋಟೆಯು ಸಾವನದುರ್ಗ (ಸಾವಂಡಿ)ದೊಂದಿಗೆ ಮೈಸೂರಿನ ವಶವಾಯಿತು. ಗೌಡನನ್ನು ಸೆರೆಹಿಡಿದು ಶ್ರೀರಂಗಪಟ್ಟಣದಲ್ಲಿ ಕಾರಾಗೃಹದಲ್ಲಿರಿಸಲಾಯಿತು. ಸ್ವಲ್ಪಕಾಲದಲ್ಲೇ ಅಲ್ಲಿ ಅವನು ಮೃತನಾದನು.[೬೯]

ಮಾಗಡಿಯ ಪತನದಿಂದ ಕೆಂಪೇಗೌಡನ ಇಡೀ ರಾಜ್ಯವು ಮೈಸೂರಿನ ಆಡಳಿತಕ್ಕೆ ಸೇರಿಹೋಯಿತು. ಸಾವನದುರ್ಗದಲ್ಲಿ ಮೈಸೂರಿಗೆ ೨೦೦ ವರ್ಷಗಳಷ್ಟು ಹಳೆಯದಾದ ಗುಪ್ತನಿಧಿಯು ದೊರಕಿತು.[೭೦]

ಕೆಂಪೇಗೌಡ ಅರಸರು ಕಲೆ ಮತ್ತು ಸಾಹಿತ್ಯಗಳ ಮಹಾ ಪೋಷಕರಾಗಿದ್ದರು. ಏಕಾಂಬರ ದೀಕ್ಷಿತನು ಮುಮ್ಮಡಿ ಕೆಂಪ ವೀರಪ್ಪಗೌಡನ ಆಸ್ಥಾನ ಕವಿಯಾಗಿದ್ದು ಸಂಸ್ಕೃತದಲ್ಲಿ ವೀರಭದ್ರವಿಜಯ ಚಂಪೂ ಎಂಬ ಕೃತಿಯನ್ನು ರಚನೆ ಮಾಡಿದನು. ಇದು ಮಾಗಡಿಯ ವೀರಭದ್ರದೇವರ ಉತ್ಸವವನ್ನು ವರ್ಣಿಸುತ್ತದೆ. ಈ ಅರಸರು ವ್ಯಾಪಾರ-ವಾಣಿಜ್ಯಗಳಿಗೆ ತುಂಬಾ ಪ್ರೋತ್ಸಾಹ ನೀಡಿದರು. ಬೆಂಗಳೂರಿನಲ್ಲಿ ವಿಸ್ತಾರವಾದ ಮಾರುಕಟ್ಟೆ ಪೇಟೆಗಳನ್ನು ಸ್ಥಾಪಿಸಿದರು, ವರ್ತಕರು ಅಲ್ಲಿ ಬಂದು ನೆಲೆಸಲು ಬೇಕಾದ ಹಲವು ಸೌಲಭ್ಯಗಳನ್ನು ಒದಗಿಸಿಕೊಟ್ಟರು.[೭೧] ಬೆಂಗಳೂರಿನ ಒಂದು ಶಾಸನವು ಈ ರಾಜ್ಯದಲ್ಲಿ ವ್ಯಾಪಾರ ಚಟುವಟಿಕೆಗಳಲ್ಲಿ ನಿರತವಾಗಿದ್ದ ಹಲವಾರು ವರ್ತಕ ಸಂಘಗಳನ್ನು ಹೆಸರಿಸುತ್ತದೆ.[೭೨]

ಈ ಶಾಸನವು ಇನ್ನೂ ಒಂದು ಸ್ವಾರಸ್ಯವಾದ ವಿಷಯವನ್ನು ತಿಳಿಸುತ್ತದೆ. ಈ ವರ್ತಕ ಸಂಘಗಳು ತಮ್ಮ ಆದಾಯದ ಒಂದು ಭಾಗವನ್ನು ಬೆಂಗಳೂರಿನ ಮುತ್ಯಾಲಪೇಟೆಯ ರಂಗನಾಥದೇವರ ಪೂಜೆ, ಉತ್ಸವ ಮೊದಲಾದ ಸಮಾರಂಭಗಳಿಗಾಗಿ ಮೀಸಲಾಗಿಡುತ್ತಿದ್ದುವು.[೬೬]

ಮಾಗಡಿ ಅರಸರ ವಂಶಾವಳಿ

ಜಯಗೌಡ (೧೪೧೮-೧೪೩೩)

|

ಗಿಡ್ಡೇಗೌಡ (೧೪೩೩ - ೧೪೪೩)

|

ಕೆಂಪನಂಜೇಗೌಡ (೧೪೪೩-೧೫೧೩)

|

ಮೊದಲನೆಯ ಕೆಂಪೇಗೌಡ (೧೫೧೩-೧೫೬೯)
(ಹಿರಿಯ ಕೆಂಪೇಗೌಡ)

|

ಇಮ್ಮಡಿ ಕೆಂಪೇಗೌಡ (೧೫೬೯ - ೧೬೫೮)

|

(ಇವನನ್ನು ೧೬೩೮ರಲ್ಲಿ ರಣದುಲ್ಲಾಖಾನನು ಸೋಲಿಸಿ ಬೆಂಗಳೂರನ್ನು ಆಕ್ರಮಿಸಿ, ಕೆಂಪೇಗೌಡನನ್ನು ಮಾಗಡಿಗೆ ಕಳಿಸಿದನು)

|

ಮುಮ್ಮಡಿ ಕೆಂಪೇಗೌಡ (೧೬೫೮ - ೧೬೭೮)
(ಬೆಂಗಳೂರಿನಲ್ಲಿ ೧೬೫೮ರಲ್ಲಿ ಏಕೋಜಿಯನ್ನು ಸೋಲಿಸಿದನು)

|

ಮುಮ್ಮಡಿ ದೊಡ್ಡವೀರಪ್ಪಗೌಡ (೧೬೭೮-೧೭೦೫)

|

ಮುಮ್ಮಡಿ ಕೆಂಪವೀರಪ್ಪಗೌಡ

(೧೭೨೮ರಲ್ಲಿ ಮೊದಲನೆಯ ಕೃಷ್ಣರಾಜ ಒಡೆಯರು ಸೋಲಿಸಿದರು. ಮಾಗಡಿ ಮೈಸೂರು ರಾಜ್ಯದ ಭಾಗವಾಯಿತು).

ಹೊಳೆನರಸೀಪುರದ ನಾಯಕರು (೧೫೮೦-೧೬೬೩)

ಮೈಸೂರಿನ ಕಿರಿಯ ರಾಜವಂಶಗಳ ಪೈಕಿ ಹೊಳೆನರಸೀಪುರದ ನಾಯಕರು ತುಂಬಾ ಮುಖ್ಯರಾದವರು. ವಿಜಯನಗರದ ಅರಸರು ಪಾಲಿಸಿಕೊಂಡು ಬಂದ ಆದರ್ಶಗಳನ್ನೇ ಮುಂದುವರಿಸಿ, ಭಾರತೀಯ ಸಂಸ್ಕೃತಿ ಮತ್ತು ಧರ್ಮವನ್ನು ಈ ಪ್ರದೇಶದಲ್ಲಿ ಇನ್ನೊಂದು ಶತಮಾನ ಕಾಲ ಸಂರಕ್ಷಿಸಿಕೊಂಡು ಬಂದರು. ಅವರ ಶಾಸನಗಳ ಅಧ್ಯಯನದಿಂದ ತಿಳಿದುಬರುವಂತೆ, ಅವರು ಬೇಲೂರಿನಲ್ಲಿ ಆಳುತ್ತಿದ್ದ ಬಯ್ಯಪ್ಪನಾಯಕ ಎನ್ನುವವನ ವಂಶಸ್ಥರು. ಆದರೆ ಎರಡೋ ಮೂರೋ ತಲೆಮಾರುಗಳ ನಂತರ ಸಹೋದರರ ದಾರಿಗಳು ಬೇರೆಯಾದುವು. ಅವರಲ್ಲಿ ಒಬ್ಬನು ಹೊಳೆನರಸೀಪುರದಲ್ಲಿ ಸ್ವತಂತ್ರವಾಗಿ ಆಳತೊಡಗಿದನು. ಮೊದಲನೆಯ ಮುಖ್ಯನಾದ ರಾಜ ಲಕ್ಷ್ಮಪ್ಪನಾಯಕ (೧೫೯೧-೧೬೧೪). ಇವನು ಕೃಷ್ಣಪ್ಪನಾಯಕನ ಮೊಮ್ಮಗ, ವೆಂಕಟಪ್ಪನಾಯಕನ ಮಗ.[೬೭] ಇವನು ಕಾಶಿಯಲ್ಲಿ ಭಗವಾನ್ ಪಶುಪತಿಗಾಗಿ ಭವ್ಯವಾದೊಂದು ದೇವಾಲಯವನ್ನು ಕಟ್ಟಿಸಿದನೆಂದೂ ವಾಜಪೇಯವೇ ಮೊದಲಾದ ಯಾಗಗಳನ್ನು ಆಚರಿಸಿದನೆಂದು ಹೇಳಲಾಗಿದೆ. ಇವನ ಪತ್ನಿ ಚೆನ್ನಾಂಬಿಕೆ. ಈ ದಂಪತಿಗಳಿಗೆ ಇಬ್ಬರು ಮಕ್ಕಳು, ಹಿರಿಯನು ರಂಗಪ್ಪನಾಯಕ,

ಎರಡನೆಯವನು ವಿರುಪನಾಯಕ. ಅವನ ಮೂರ್ತಿಯನ್ನು ಹೊಳೆನರಸೀಪುರದ ಲಕ್ಷ್ಮೀನರಸಿಂಹ ದೇವಾಲಯದ ಪ್ರಾಕಾರದಲ್ಲಿರುವ ಕೊಠಾರಮಂಟಪದ ಒಂದು ಕಂಬದ ಮೇಲೆ ಕೆತ್ತಲಾಗಿದೆ. ಹೆಸರನ್ನು ಲಕ್ಷ್ಮಪ್ಪನಾಯನಿವಾರು ಎಂದು ಕೊಟ್ಟಿದೆ.[೭೫]

ಕೆಲವು ಸಾಹಿತ್ಯಕ ಮೂಲಗಳಿಂದ ತಿಳಿದುಬರುವಂತೆ, ೧೫೮೪ರಲ್ಲಿ ಮೈಸೂರಿನ ರಾಜಒಡೆಯರು ಹೊಳೆನರಸೀಪುರದ ಮೇಲೆ ಆಕ್ರಮಣ ಮಾಡಿ, ನರಸಿಂಹನಾಯಕನಿಂದ ಅಕ್ಕಿ ಹೆಬ್ಬಾಳನ್ನು ಗೆದ್ದುಕೊಂಡರು.[೭೬] ಆದರೆ ಶಾಸನಗಳ ಪ್ರಕಾರ ೧೫೮೦ ರಿಂದ ೧೫೯೧ರ ವರೆಗೆ ಹೊಳೆನರಸೀರಪುರವನ್ನಾಳುತ್ತಿದ್ದವನು ವೆಂಕಟಪ್ಪನಾಯಕ. ರಾಜಒಡೆಯರು ಅಕ್ಕಿಹೆಬ್ಬಾಳನ್ನು ವಶಪಡಿಸಿಕೊಂಡದ್ದರಿಂದ ಹೊಳೆನರಸೀಪುರದ ಪತನವು ಪ್ರಾರಂಭವಾಯಿತು.

ಲಕ್ಷ್ಮಪ್ಪನಾಯಕನ ಆಳಿಕೆಯಲ್ಲಿ ಮೈಸೂರು ಇತಿಹಾಸದ ಇನ್ನೊಂದು ಮುಖ್ಯವಾದ ಘಟನೆ ನಡೆಯಿತು. ಒಮ್ಮೆ ಶ್ರೀರಂಗಪಟ್ಟಣದ ವೈಸರಾಯ್ ತಿರುಮಲರಾಯನು ಶ್ರೀರಂಗಪಟ್ಟಣಕ್ಕೆ ತನ್ನ ದಳವಾಯಿ ಭದ್ರಯ್ಯ ಮತ್ತಿತರ ಕೆಲವು ಅಧಿಕಾರಿಗಳೊಂದಿಗೆ ಹೋಗುತ್ತಾ ದಾರಿಯಲ್ಲಿ ಹೊಳೆನರಸೀಪುರಕ್ಕೆ ಬಂದಿದ್ದಾಗ ಅಲ್ಲಿಯ ಲಕ್ಷ್ಮಪ್ಪನಾಯಕನು ಆತನನ್ನು ಹಿಡಿದು ಸೆರೆಯಲ್ಲಿಟ್ಟನು. ವಿಜಯನಗರದ ರಾಜ ವೆಂಕಟಪತಿಗೆ ಈ ವಿಷಯ ತಿಳಿದಾಗ, ಮೊದಲು ಹೋಗಿ ತಿರುಮಲನನ್ನು ಸೆರೆಯಿಂದ ಬಿಡಿಸಬೇಕೆಂದು ಮೈಸೂರಿನ ರಾಜಒಡೆಯರಿಗೆ ಆದೇಶಿಸಿದನು. ರಾಜಒಡೆಯರಿಗೆ ಲಕ್ಷಪ್ಪನಾಯಕನ ವಿರುದ್ಧ ಕೈಎತ್ತಲು ಒಳ್ಳೆಯ ಅವಕಾಶ ದೊರಕಿತು. ಒಡನೆಯೇ ಸೈನ್ಯ ಸಮೇತ ಹೊಳೆನರಸೀಪುರಕ್ಕೆ ಹೋಗಿ, ಉಗ್ರಕಾಳಗದಲ್ಲಿ ಲಕ್ಷ್ಮಪ್ಪನಾಯಕನನ್ನು ಸೋಲಿಸಿ ತಿರುಮಲನನ್ನು ಸೆರೆಯಿಂದ ಬಿಡಿಸಿದರು.[೭೭]

ಚನ್ನಪಟ್ಟಣವು ಸೋತು, ೧೬೩೦ರಲ್ಲಿ ಜಗದೇವರಾಯನನ್ನು ಅಲ್ಲಿಂದ ಹೊರಗಟ್ಟಿದ ಮೇಲೆ ಚಾಮರಾಜ ಒಡೆಯರು ಹೊಳೆನರಸೀಪುರದ ಮೇಲೆ ದಂಡೆತ್ತಿ ಹೋದರು. ಬೇಲೂರಿಗೆ ಹೋಗುವ ದಾರಿಯಲ್ಲಿ ಹೊಳೆನರಸೀಪುರದಲ್ಲಿ ರಂಗಪ್ಪನಾಯಕನನ್ನು ಸೋಲಿಸಿದರು. ನಾಯಕನು ಚಿನ್ನವನ್ನೂ ರತ್ನಾಭರಣಗಳನ್ನೂ ಕನಕವಸಂತವೆಂಬ ಒಂದು ಆನೆಯನ್ನೂ ಕೊಟ್ಟುದಲ್ಲದೆ ಮೈಸೂರಿಗೆ ಪ್ರತಿವರ್ಷವೂ ಕಪ್ಪವನ್ನು ಕೊಡುವುದಾಗಿ ಮಾತುಕೊಟ್ಟನು.[೭೮]

ಆದರೆ ಒಪ್ಪಂದದಂತೆ ನಡೆದುಕೊಳ್ಳದೆ ನಾಯಕನು ಮತ್ತೆ ಬಂಡಾಯದ ಬಾವುಟವನ್ನು ಹಾರಿಸಿದನು. ಆದರೆ ಕಂಠೀರವ ನರಸರಾಜರು ದಂಗೆಯನ್ನು ಅಡಗಿಸಿ, ಗೌಡನು ಶರಣಾಗುವಂತೆ ಮಾಡಿದರು. ಮೈಸೂರಿಗೆ ವಾರ್ಷಿಕ ಪೊಗದಿ ಕೊಡುವುದಲ್ಲದೆ, ಹಂಪಾಪುರ ಮತ್ತು ಅಕ್ಕಿಹೆಬ್ಬಾಳುಗಳನ್ನು ಒಪ್ಪಿಸುವಂತಾಯಿತು.[೭೯] ಹೊಳೆನರಸೀಪುರದ ಲಕ್ಷ್ಮೀನರಸಿಂಹ ದೇವಾಲಯದ ನವರಂಗದ ಬಾಗಿಲ ಬಲತೋಳಿನ ಮೇಲೆ ಒಂದು ಪುರುಷ ವಿಗ್ರಹವನ್ನು ಕೆತ್ತಿದೆ. ಅದರ ಮೇಲಿರುವ ಪಟ್ಟಿಕೆಯಿಂದ, ಅದು ರಂಗಪ್ಪನಾಯಕನ ಎಲೆ ಅಡಿಕೆ ಸಂಚಿಯನ್ನು ಹಿಡಿಯುತ್ತಿದ್ದ ಕಿಚ್ಚಯ್ಯ ಎಂದು ತಿಳಿದುಬರುತ್ತದೆ.[೮೦]

ಈ ವಂಶದ ಅತಿಶ್ರೇಷ್ಠ ಅರಸನೆಂದರೆ ಇಮ್ಮಡಿ ನರಸಿಂಹನಾಯಕ (೧೬೫೭– ೧೬೬೬). ಅವನೊಬ್ಬ ದೊಡ್ಡ ಶ್ರೀವೈಷ್ಣವ. ಹೊಳೆನರಸೀಪುರದ ಲಕ್ಷ್ಮೀನರಸಿಂಹ ದೇವಾಲಯದಲ್ಲಿ ಸುಡಿಕ್ಕುಡುತ್ತ ನಾಚ್ಚಿಯಾರ್‌ಗಾಗಿ ಒಂದು ಗರ್ಭಗುಡಿಯನ್ನು ಕಟ್ಟಿಸಿದನೆಂದು ೧೬೫೮ಕ್ಕೆ ಸೇರಿದ ಒಂದು ಶಾಸನವು ಹೇಳುತ್ತದೆ.[೮೧] ಇನ್ನೊಂದು ಶಾಸನವು, ಅದೇ ದೇವಾಲಯದಲ್ಲಿ ನರಸಿಂಹನಾಯಕನು ಚಕ್ರಾಳ್ವಾರ್ ಕೂರತ್ತಾಳ್ವಾರ್, ವೇದಾಂತಾಚಾರ್ಯ, ಮುದಲಿಯಾಂಡನ್ ಮತ್ತು ಪೆರಿಯ ಜೀಯರ್ ಇವರ ವಿಗ್ರಹಗಳನ್ನೂ ಪ್ರತಿಷ್ಠೆ ಮಾಡಿಸಿದನೆಂದು ಹೇಳುತ್ತದೆ.[೮೨] ಮಲಪನಹಳ್ಳಿಯಲ್ಲಿ ಈ ರಾಜನು ನರಸಾಂಬುಧಿ ಎಂಬ ಒಂದು ಕೆರೆಯನ್ನೂ[೮೩] ಹೊಳೆನರಸೀಪುರದ ಕೋಟೆಯಲ್ಲಿ ಚಂದ್ರ ಸರಸು ಎಂಬ ಕೊಳವನ್ನೂ ಕಟ್ಟಿಸಿದನೆಂದು ೧೬೫೯ರ ಇನ್ನೊಂದು ಶಾಸನದಲ್ಲಿ ಉಕ್ತವಾಗಿದೆ.

೧೬೬೩ರ ವೇಳೆಗೆ ಹೊರಗಿನ ಅಪಾಯಗಳಿಂದ ಬಿಡುಗಡೆ ಹೊಂದಿದ ಮೈಸೂರಿನ ದೇವರಾಜ ಒಡೆಯರು ಹೊಳೆನರಸೀಪುರದ ಪಾಳೆಯಗಾರನ ಕಡೆಗೆ ಗಮನ ಹರಿಸಿದರು. ಹಿಂದೆಯೇ ಈ ರಾಜನು ಎರಡು ಸಾರಿ, ೧೬೩೧ರಲ್ಲಿ ಮತ್ತು ೧೬೪೪ರಲ್ಲಿ ಮೈಸೂರಿಗೆ ಸೋತಿದ್ದನು. ಆದರೂ ಅವನು ಉದ್ಧತನಾಗಿದ್ದನು, ಮೈಸೂರಿಗೆ ವೈರಿಯಾಗಿದ್ದನು. ಇಕ್ಕೇರಿಯ ನಾಯಕನ ಪಕ್ಷವನ್ನು ಸೇರಿಕೊಂಡು, ೧೬೫೯ರಲ್ಲಿ ಶಿವಪ್ಪನಾಯಕನು ಮೈಸೂರಿನ ಮೇಲೆ ದಂಡೆತ್ತಿ ಬಂದಾಗ ಅವನಿಗೆ ಸಹಾಯ ಮಾಡಿದನು. ಇದು ಮೈಸೂರಿನ ರಾಜನನ್ನು ಕೆರಳಿಸಿತು. ದಳವಾಯಿ ನಂದಿನಾಥಯ್ಯನು ಸೇನಾಸಮೇತನಾಗಿ ಹೊಳೆನರಸೀಪುರದ ಮೇಲೆ ಏರಿಹೋದನು. ೧೬೬೩ರಲ್ಲಿ ನಡೆದ ಭೀಕರ ಯುದ್ಧದಲ್ಲಿ ಹೊಳೆನರಸೀಪುರದ ಸೈನ್ಯವು ಸೋತಿತು. ಯುದ್ಧರಂಗದಲ್ಲೇ ನರಸಿಂಹನಾಯಕನನ್ನು ಸೆರೆಹಿಡಿಯಲಾಯಿತು.[೬೪] ದೊಡ್ಡದೇವರಾಜನು ಅಂತಿಮವಾಗಿ ೧೬೬೬ರಲ್ಲಿ ಹೊಳೆನರಸೀಪುರವನ್ನು ಮೈಸೂರು ರಾಜ್ಯಕ್ಕೆ ಸೇರಿಸಿಕೊಂಡನು.[೬೫] ಇದನ್ನು ದೊಡ್ಡದೇವರಾಜ ಒಡೆಯರ ೧೬೬೬ರ ಒಂದು ಶಾಸನವು ಸ್ಥಿರಪಡಿಸುತ್ತದೆ.[೬೬] ಅಲ್ಲಿಗೆ ಹೊಳೆನರಸೀಪುರದಲ್ಲಿ ನಾಯಕರ ಆಳ್ವಿಕೆ ಕೊನೆಗೊಂಡ ಹಾಗಾಯಿತು. ಹೊಳೆನರಸೀಪುರ ಪಾಳೆಯಪಟ್ಟು ಮೈಸೂರು ರಾಜ್ಯದಲ್ಲಿ ಲೀನವಾಯಿತು. ಈ ರಾಜರ ವಂಶಾವಳಿ ಹೀಗಿದೆ:

ಬಯ್ಯಪ್ಪನಾಯಕ
|
ಕೃಷ್ಣಪ್ಪನಾಯಕ
|
(ಮಗ) ವೆಂಕಟಪ್ಪನಾಯಕ (೧೫೮೦) (ಚಿಕ್ಕನಾಯಕ ಎಂದೂ ಹೆಸರು)
|
(ತಾಯಿ) ಪದ್ಮಾಜಿಯಮ್ಮ (ಪದ್ಮಾಂಬಿಕೆ)
|
(ಮಗ) ಲಕ್ಷ್ಮಪ್ಪನಾಯಕ (೧೫೯೧-೧೬೧೪)
|
(ತಾಯಿ) ಚನ್ನಮಾಂಬಿಕೆ
|
(ಮಗ) ರಂಗಪ್ಪನಾಯಕ — ವಿರುಪನಾಯಕ (೧೬೨೯)

(ಮಗ) ರಂಗಪ್ಪನಾಯಕ
|
(ಮಗ) ನರಸಿಂಹನಾಯಕ (೧೬೫೪-೧೬೫೫)
|
(ಮಗ) ಇಮ್ಮಡಿ ರಂಗಪ್ಪನಾಯಕ (೧೬೫೫-೫೭)
|
(ಮಗ) ಇಮ್ಮಡಿ ನರಸಿಂಹನಾಯಕ (೧೬೫೭-೧೬೬೬)

ಪಿರಿಯಾಪಟ್ಟಣದ ಚಂಗಾಳ್ವ ನಾಯಕರು (೧೫೦೦ - ೧೬೪೫)

ಮೈಸೂರು ಜಿಲ್ಲೆಯ ಪಶ್ಚಿಮದಲ್ಲಿ ಮತ್ತು ಕೊಡಗಿನಲ್ಲಿ ಬಹಳ ಕಾಲ ಚಂಗಾಳ್ವರ ಮನೆತನ ರಾಜ್ಯವಾಳುತ್ತಿತ್ತು. ಮೂಲತಃ ಅವರು ಚೋಳರು ಮತ್ತು ಹೊಯ್ಸಳರ ಅಧೀನ ರಾಜರಾಗಿದ್ದರು. ೧೫ನೆಯ ಶತಮಾನದ ಕೊನೆಗೆ ಇತಿಹಾಸದಲ್ಲಿ ಮತ್ತೆ ಅವರು ಕಾಣಿಸಿಕೊಂಡರು, ೧೫೦೨ ರಿಂದ ೧೫೩೩ರ ವರೆಗೆ ಆಳಿದ ನಂಜರಾಜನು ಕೊಡಗಿನಲ್ಲಿ ನೂತನ ರಾಜಧಾನಿ ನಂಜರಾಜಪಟ್ಟಣವನ್ನು ನಿರ್ಮಿಸಿದನು.[೬೭] ೧೫೪೪ರಲ್ಲಿ ಆಳುತ್ತಿದ್ದ ಶ್ರೀಕಂಠರಾಜನು ಮುಖ್ಯನಾದವನು, ಉನ್ನತವಾದ ಬಿರುದುಗಳನ್ನು ಧರಿಸಿದ್ದನು.[೬೮] ಪಿರಿಯರಾಜ,

ಉಪನಾಮ ರುದ್ರಗಣನು ೧೫೮೯ ರಿಂದ ೧೬೦೭ರ ವರೆಗೆ ಆಳಿ, ಹುಣಸೂರು ತಾಲೂಕಿನ ಸಿಂಗಪಟ್ಟಣವನ್ನು ಮತ್ತೆ ನಿರ್ಮಿಸಿ ತನ್ನ ಹೆಸರಿನಿಂದ ಪಿರಿಯಪಟ್ಟಣವೆಂದು ಕರೆದನು.[೮೯] ಇದು ೧೬೦೭ರಲ್ಲಿ ನಡೆಯಿತು. ಶ್ರೀರಂಗಪಟ್ಟಣದಲ್ಲಿದ್ದ ವಿಜಯನಗರದ ವೈಸರಾಯಿ ತಿರುಮಲರಾಯನು ರುದ್ರಗಣನಿಗೆ ಬೆಟ್ಟದಪುರದ ಬೆಟ್ಟದ ಮೇಲಿನ ಅನ್ನದಾನಿ ಮಲ್ಲಿಕಾರ್ಜುನನಿಗೆ ಪೂಜೆ ಸಲ್ಲಿಸಲೆಂದು ಮಳಲವಾಡಿ (ಹುಣಸೂರು ತಾಲೂಕು)ಯನ್ನು ಕೊಡುಗೆಯಾಗಿ ನೀಡಿದನು.[೯೦]

೧೬೧೦ರಲ್ಲಿ ರಾಜ ಒಡೆಯರು ಶ್ರೀರಂಗಪಟ್ಟಣವನ್ನು ಗೆದ್ದ ನಂತರ, ಮೈಸೂರಿನ ರಾಜರು ಹೊಳೆನರಸೀಪುರ ಮತ್ತು ಪಿರಿಯಾಪಟ್ಟಣ ಸಂಸ್ಥಾನಗಳನ್ನು ಸ್ವಾಧೀನ ಪಡಿಸಿಕೊಳ್ಳುವ ಹವಣಿಕೆಯಲ್ಲಿದ್ದರು. ಆ ಕಾಲದ ರಾಜಕಾರಣದ ಅತಿಮುಖ್ಯವಾದ ಒಂದು ಪರಿಕಲ್ಪನೆ ರಾಜ್ಯವಿಸ್ತರಣ. ಇನ್ನೂ ಹೆಚ್ಚು ರಾಜ್ಯ, ಪ್ರದೇಶಗಳನ್ನು ಗೆಲ್ಲಬೇಕೆಂಬ ಆಸೆ, ವೈರ, ಮಾತ್ಸರ್ಯ, ಬಲಾತ್ಕಾರ, ಅಂತಃಕಲಹ ಇವು ಎಲ್ಲೆಲ್ಲೂ ಸಾಮಾನ್ಯವಾಗಿ ಕಂಡುಬರುತ್ತಿದ್ದುವು. ತಮ್ಮ ಆಶೋತ್ತರಗಳನ್ನು ಈಡೇರಿಸಿಕೊಳ್ಳಲು ರಾಜಒಡೆಯರು ಪಿರಿಯಾಪಟ್ಟಣದ ನಾಯಕನನ್ನು ಸೋಲಿಸಿ ೧೬೧೭ರಲ್ಲಿ ಮಾವತ್ತೂರನ್ನು ವಶಪಡಿಸಿಕೊಂಡರು.[೯೧] ಮತ್ತೆ ೧೬೨೬ರಲ್ಲಿ ೯ನೇ ಚಾಮರಾಜ ಒಡೆಯರ್ (೧೬೧೭-೧೬೩೭) ಅವನನ್ನು ಶರಣಾಗತನಾಗುವಂತೆ ಮಾಡಿದರು. ಪಿರಿಯಾಪಟ್ಟಣದ ರಾಜ ನಂಜುಂಡ ಅರಸು ಪ್ರತಿವರ್ಷ ಮೈಸೂರಿಗೆ ೩೦೦೦ ವರಹ ಪೊಗದಿಕೊಡಲು ಒಪ್ಪಿ ಸಂಧಿ ಮಾಡಿಕೊಂಡನು.[೯೨]

ಈ ನಂಜುಂಡ ಅರಸು, ಚಿಕ್ಕಹನಸೋಗೆಯ ಒಂದು ಶಾಸನದಲ್ಲಿ ಉಲ್ಲೇಖಿಗೊಂಡ ವೀರರಾಜಯ್ಯದೇವನೇ ಆಗಿರಬೇಕು.[೯೩] ಅವನ ಆಳಿಕೆಯಲ್ಲಿ ಮತ್ತೆ ಕಂಠೀರವನು ೧೬೪೪ರಲ್ಲಿ ಪಿರಿಯಾಪಟ್ಟಣದ ಮೇಲೆ ಆಕ್ರಮಣ ಮಾಡಿದನು. ಚೆಂಗಾಳ್ವನಾಯಕನು ೧೬೨೬ರ ಒಪ್ಪಂದವನ್ನು ಮುರಿದಿದ್ದನು. ಅವನು ಮೈಸೂರಿನ ಶಕ್ತಿಯನ್ನು ಕುಂಠಿತಗೊಳಿಸುವ ಸಲುವಾಗಿ ಇಕ್ಕೇರಿಯ ನಾಯಕ ಮತ್ತು ಬಿಜಾಪುರದ ಸುಲ್ತಾನ ಇವರೊಂದಿಗೆ ಮೈತ್ರಿ ಬೆಳೆಸಿಕೊಂಡನು. ದಳವಾಯಿ ನಂಜರಾಜಯ್ಯನ ಕೈಕೆಳಗೆ ಕಂಠೀರವನು ಪಿರಿಯಾಪಟ್ಟಣವನ್ನು ಬಗ್ಗು ಬಡಿಯಲು ಸೇನೆಯನ್ನು ಕಳುಹಿಸಿದನು. ೯ ತಿಂಗಳ ಕಾಲ ಉಗ್ರವಾದ ಕಾಳಗ ನಡೆಯಿತು. ಕೊನೆಗೆ ಮೈಸೂರು ಸೈನ್ಯವು ನಂಜುಂಡ ಅರಸುವನ್ನು ಸೋಲಿಸಿ ವಿಜಯೋತ್ಸವದಿಂದ ಪಿರಿಯಾಪಟ್ಟಣವನ್ನು ಪ್ರವೇಶಿಸಿತು. ೧೬೪೪ ಅಕ್ಟೋಬರ್ ೧ನೆಯ ತಾರೀಕಿನಂದು ಪಿರಿಯಾಪಟ್ಟಣದಲ್ಲಿ ಮೈಸೂರಿನ ವಿಜಯ ಪತಾಕೆಯು ಹಾರಾಡಿತು.[೯೪]

ಮೈಸೂರು ಪ್ಯಾಲೆಸ್ ರಿಕಾರ್ಡ್ಸ್ ಪ್ರಕಾರ, ಪಿರಿಯಾಪಟ್ಟಣವು ಬಿದ್ದ ಮೇಲೆ ನಂಜುಂಡ ಅರಸು ಬೆಟ್ಟದ ಪುರಕ್ಕೆ ಓಡಿಹೋದನು. ಕಂಠೀರವನು ಅವನ ಬೆನ್ನಟ್ಟಿಹೋಗಿ ೧೬೪೪ ಅಕ್ಟೋಬರ್ ೨೪ರಂದು ಬೆಟ್ಟದ ಪುರವನ್ನು ವಶಪಡಿಸಿಕೊಂಡನು ನಂಜುಂಡ ಅರಸು ಹೋದಲ್ಲೆಲ್ಲಾ ಬೆನ್ನಟ್ಟುತ್ತಾ ಮೈಸೂರು ಸೈನ್ಯವು ರುದ್ರಪಟ್ಟಣ, ಕಣಗಾಲು, ಕಿತ್ತೂರುಗಳನ್ನು ಗೆದ್ದು ಮೈಸೂರಿಗೆ ಸೇರಿಸಿತು.[೯೫] ಅಂತಿಮವಾಗಿ ೧೬೪೪ ಡಿಸೆಂಬರಿನಲ್ಲಿ ಕಂಠೀರವನು ಕೊಡಗಿನ ನಂಜರಾಜಪಟ್ಟಣಕ್ಕೆ ಮುತ್ತಿಗೆ ಹಾಕಿದನು. ನಂಜುಂಡ ಅರಸು ಅಲ್ಲಿಯ ರಾಜನ ಆಶ್ರಯ ಪಡೆದಿದ್ದನು. ಮೈಸೂರು ಸೈನ್ಯವು ಚಂಗಾಳ್ವ ಬಲವನ್ನು ಸಂಪೂರ್ಣವಾಗಿ ನಾಶಮಾಡಿತು. ನಂಜುಂಡ ಅರಸು ಯುದ್ಧ ಮಾಡುತ್ತಲೇ ಮಡಿದನು. ಕಂಠೀರವನು ಪಿರಿಯಾಪಟ್ಟಣವನ್ನು ಮೈಸೂರಿಗೆ ಸೇರಿಸಿಕೊಂಡು ಚಂಗಾಳ್ವ ಮನೆತನದ ಆಳಿಕೆಗೆ ಮಂಗಳವನ್ನು ಹಾಡಿದನು. ಪಿರಿಯಾಪಟ್ಟಣದ ಚಂಗಾಳ್ವರ ವಂಶಾವಳಿ ಹೀಗಿದೆ :

ನಂಜರಾಜ (೧೫೦೨-೧೫೩೩)
|
ಶ್ರೀಕಂಠರಾಜ (೧೫೪೪)
|
ಪೆರಿಯರಾಜ (ರುದ್ರಗಣ) (೧೫೮೬-೧೬೦೭)
|
ನಂಜುಂಡ ಅರಸು (೧೬೨೬-೧೬೪೫)

ಈ ವಂಶಾವಳಿಯು ಪೂರ್ತಿಯಾಗಿ ಶಾಸನಾಧಾರವನ್ನು ಅವಲಂಬಿಸಿದೆ ಮತ್ತು ತಾತ್ಕಾಲಿಕವಾಗಿದೆ.

ಬೇಲೂರಿನ ನಾಯಕರು (೧೫೦೦-೧೬೯೭)

ಬೇಲೂರಿನ ನಾಯಕರು ವಿಜಯನಗರದ ಚಕ್ರವರ್ತಿಯ ಹಡಪದ (ವೀಳೆಯದೆಲೆ ಸಂಚಿಯನ್ನು ಹಿಡಿಯುವ)ವರ ವಂಶಸ್ಥರು.[೯೭] ಅರಕಲಗೂಡಿನ ಒಂದು ಶಾಸನವು ಬೀಜಘಟ್ಟ ಅಥವಾ ವೆಂಕಟಸಮುದ್ರ ಎಂಬ ಹಳ್ಳಿಯನ್ನು ಕೃಷ್ಣಪ್ಪನಾಯಕನ ಮಗನೂ, ವೆಂಕಟಾದ್ರಿ ನಾಯಕನ ಮೊಮ್ಮಗನೂ, ಕಾಶ್ಯಪಗೋತ್ರ ಆಪಸ್ತಂಬ ಸೂತ್ರಕ್ಕೆ ಸೇರಿದ ಕೃಷ್ಣಪ್ಪನಾಯಕನ ಮರಿಮಗನೂ ಆದ ವೆಂಕಟಾದ್ರಿನಾಯಕನು ಹತ್ತುಜನ ಬ್ರಾಹ್ಮಣರಿಗೆ ದಾನವಾಗಿ ನೀಡಿದುದನ್ನು ದಾಖಲಿಸುತ್ತದೆ. ಈ ಹಳ್ಳಿಯು ಬೇಲೂರು ಸೀಮೆಯ ಅರಕಲಗೂಡು ಸ್ಥಳದಲ್ಲಿ ಇದ್ದಂತೆ ತೋರುತ್ತದೆ. ಅದನ್ನು ದಾನಿಯ ಮುತ್ತಾತನಿಗೆ ಆಗ ಚಕ್ರವರ್ತಿಯಾಗಿದ್ದ ವಿಜಯನಗರದ ಕೃಷ್ಣದೇವರಾಯನು ಅಮರಮಾಗಣಿಯಾಗಿ ನೀಡಿದ್ದನು.[೯೮] ಈ ಅರಸರು ಸಿಂಧುಗೋವಿಂದ, ಹಿಮಕರಗಂಡ, ಧವಳಾಂಕಭೀಮ, ಬಿರುದ ಸಪ್ತಾಂಗಹರಣ, ಮತ್ತು ಮಣಿನಾಗಪುರಾಧೀಶ್ವರ ಮೊದಲಾದ ಬಿರುದುಗಳನ್ನು ಧರಿಸಿದ್ದರು. ೧೬ನೆಯ ಶತಮಾನದಲ್ಲಿ ಸ್ಥಾಪನೆಯಾದಾಗಿನಿಂದ ೧೬೬೩ರಲ್ಲಿ ಮೈಸೂರಿನಲ್ಲಿ ವಿಲೀನಗೊಳ್ಳುವವರೆಗೂ ಈ ವಂಶದ ಇತಿಹಾಸವು ವೈವಿಧ್ಯಮಯವಾದದ್ದು. ಅದು ಮೈಸೂರು, ಇಕ್ಕೇರಿ ಮತ್ತು ಬಿಜಾಪುರಗಳ ನಡುವೆ ಹೋರಾಟದ ಕಣವಾಗಿತ್ತು. ಈ ಸಂಸ್ಥಾನದ ಇತಿಹಾಸವೆಂದರೆ, ಅದರ ಸ್ವಾಮ್ಯವನ್ನು ಪಡೆಯಲು ಕಿತ್ತಾಡಿದ ರಾಜರು ನಡೆಸಿದ ಯುದ್ಧಗಳ ನಿರೂಪಣೆಯೇ ಆಗುತ್ತದೆ. ೧೬೩೯-೪೦ರಲ್ಲಿ ರಣದುಲ್ಲಾಖಾನನು ಬೇಲೂರಿನ ಮೇಲೆ ದಾಳಿಮಾಡಿದನು; ಮತ್ತೆ ಶಿವಪ್ಪನಾಯಕನ ಕಾಲದಲ್ಲಿ ಅದು ಇಕ್ಕೇರಿಯ ಬೊಗಸೆಗೆ ಬಿತ್ತು; ಅಂತಿಮವಾಗಿ ದೊಡ್ಡದೇವರಾಜ ಒಡೆಯರ ಕಾಲದಲ್ಲಿ ೧೬೬೩ರಲ್ಲಿ ಮೈಸೂರಿಗೆ ಸೇರಿತು. ಬೇಲೂರು ಕುಟುಂಬವು ೧೬ನೆಯ ಶತಮಾನದ ಕೊನೆಯಲ್ಲಿ ಹೊಳೆನರಸೀಪುರದಿಂದ ಪ್ರತ್ಯೇಕಗೊಂಡು ಸ್ವತಂತ್ರವಾಗಿ ರಾಜ್ಯವಾಳಲು ಪ್ರಾರಂಭಿಸಿದ ಕುಟುಂಬ. ಮೈಸೂರಿನ ರಾಜರಿಗೆ ಬೇಲೂರಿನ ಮೇಲೆ ಕಣ್ಣಿದ್ದುದಕ್ಕೆ ಕಾರಣ, ಇಕ್ಕೇರಿಗೆ ಹೋಗಲು ಅನುಕೂಲವಾಗುವಂತೆ ಅದನ್ನು ತಮ್ಮ ಒಂದು ಸೇನಾ ನೆಲೆಯನ್ನಾಗಿ ಮಾಡಿಕೊಳ್ಳಲು ಅವರು ಇಚ್ಛಿಸಿದ್ದು. ಈ ಉದ್ದೇಶವನ್ನು ದೃಷ್ಟಿಯಲ್ಲಿಟ್ಟುಕೊಂಡು ಮೈಸೂರಿನ ರಾಜ ಚಾಮರಾಜಒಡೆಯರು (೧೬೧೭-೧೬೩೭) ದಳವಾಯಿ ವಿಕ್ರಮರಾಯನ ಕೈಕೆಳಗೆ ಬೇಲೂರಿನ ಮೇಲೆ ಒಂದು ಸೈನ್ಯವನ್ನು ಕಳುಹಿಸಿದರು. ಚನ್ನರಾಯಪಟ್ಟಣ ತಾಲೂಕಿನ ಚೋಳೆಯನಹಳ್ಳಿ ಮತ್ತು ಆನೆಕೆರೆಗಳಲ್ಲಿ ಮುಖಾಮುಖಿ ಯುದ್ಧವಾಯಿತು. ಬೇಲೂರು ತುಂಬಾ ಹಾನಿಯನ್ನನುಭವಿಸಿತು. ಮತ್ತೆ ವಿಕ್ರಮರಾಯನು ಬೇಲೂರು ಸೈನ್ಯವನ್ನು ಚನ್ನರಾಯಪಟ್ಟಣ ತಾಲೂಕಿನ ಬೆಳೆಲೆಯೂರಿನಲ್ಲಿ ಸೋಲಿಸಿ, ಕೊನೆಗೆ ಚನ್ನರಾಯಪಟ್ಟಣಕ್ಕೆ ಮುತ್ತಿಗೆ ಹಾಕಿದನು. ೧೬೩೪ರಲ್ಲಿ ಚಾಮರಾಜರು ಕೊಳತೂರು ಅಥವಾ ಚನ್ನರಾಯಪಟ್ಟಣವನ್ನು ಬೇಲೂರಿನ ವೆಂಕಟಾದ್ರಿನಾಯಕನಿಂದ ವಶಪಡಿಸಿಕೊಂಡರು.[೯೯] ಕೊನೆಗೆ ಪ್ರತಿಭಟನೆ ಇನ್ನು ಸಾಗದಾಗಿ ವೆಂಕಟಾದ್ರಿನಾಯಕನು ಶರಣಾಗತನಾದನು. ಚನ್ನರಾಯಪಟ್ಟಣವು ಮೈಸೂರಿಗೆ ಸೇರಿತು.

ಮೈಸೂರು ಈ ದಿಕ್ಕಿನಲ್ಲಿ ಮುಂದುವರಿಯುವುದನ್ನು ತಡೆಗಟ್ಟುವ ಸಲುವಾಗಿ ಬಿಜಾಪುರ ಸೈನ್ಯದ ದಂಡನಾಯಕನಾಗಿದ್ದ ರಣದುಲ್ಲಾಖಾನನು ಬೇಲೂರನ್ನು ತಾನು ವಶಪಡಿಸಿಕೊಳ್ಳಲು ಬಯಸಿದನು. ೧೬೩೪ರಲ್ಲಿ ಚನ್ನರಾಯಪಟ್ಟಣವನ್ನು ಗೆದ್ದುಕೊಂಡು ೫ನೇ ಚಾಮರಾಜ ಒಡೆಯರು, ಬೇಲೂರಿನ ಮೂಲಕ ಇಕ್ಕೇರಿಯ ಮೇಲೆ ದಂಡೆತ್ತಿ ಹೋಗಲು ತರಾತುರಿಯ ಸಿದ್ಧತೆಗಳನ್ನು ಮಾಡುತ್ತಿದ್ದರು. ಇಕ್ಕೇರಿಯ ಅದಿಲ್‌ಶಾಹನ ಮಿತ್ರರಾಜ್ಯವಾಗಿದ್ದುದರಿಂದ ಅದಕ್ಕೆ ರಕ್ಷಣೆ ನೀಡುವುದು ಬಿಜಾಪುರದ ಕರ್ತವ್ಯವಾಗಿತ್ತು. ೧೬೫೮ರಲ್ಲಿ ಬೇಲೂರನ್ನು ವಶಪಡಿಸಿಕೊಳ್ಳಲು ರಣದುಲ್ಲಾಖಾನನು ತನ್ನ ಸೈನ್ಯವನ್ನು ಅಫಜಲಖಾನನ ಕೈಕೆಳಗೆ ಕಳಿಸಿದನು. ಅಫಜಲಖಾನನು ಬೇಲೂರಿನ ಪಾಳೆಯಗಾರ ವೆಂಕಟಾದ್ರಿನಾಯಕನನ್ನು ಸೋಲಿಸಿದನು.[೯೪]

ಆದರೆ ಬೇಲೂರು ಬಹಳ ಕಾಲ ಅದಿಲ್‌ಶಾಹನ ಕೈಗಳಲ್ಲಿ ಉಳಿದಂತೆ ತೋರುವುದಿಲ್ಲ. ಏಕೆಂದರೆ, ಬಿಜಾಪುರದಲ್ಲಿ ೧೬೫೬ ರಲ್ಲಿ ಮುಹಮದ್‌ಅಲಿ ಶಾಹನು ಮೃತನಾಗಿ ಪರಿಸ್ಥಿತಿಯು ಗೊಂದಲಮಯವಾಗಿದ್ದ ಸಂದರ್ಭವನ್ನು ಉಪಯೋಗಿಸಿಕೊಂಡು ಶಿವಪ್ಪನಾಯಕನು (೧೬೪೫-೬೦) ತಾನು ಹಿಂದೆ ಅದಿಲ್‌ಶಾಹನಿಗೆ ಸೋತುಕೊಂಡಿದ್ದ ಬೇಲೂರೂ ಸೇರಿದಂತೆ ಎಲ್ಲ ರಾಜ್ಯಭಾಗಗಳನ್ನು ಮರಳಿ ವಶಪಡಿಸಿಕೊಂಡನು. ೧೬೫೪ರಲ್ಲಿ ಚಂದ್ರಗಿರಿಯ ಪತನದ ನಂತರ ನಿಲ್ಲಲು ನೆಲೆಯಿಲ್ಲದೆ ಅಲೆದಾಡುತ್ತಿದ್ದ ವಿಜಯನಗರದ ರಾಜ ೩ನೇ ಶ್ರೀರಂಗರಾಯನಿಗೆ ಆಶ್ರಯಕೊಟ್ಟು, ಬೇಲೂರಿನಲ್ಲಿ ಇರಿಸಿದನು. ಇದು ನಿಜವಿರಬೇಕು. ಏಕೆಂದರೆ, ಬೇಲೂರಿನ ನಾಯಕರು ಸಕ್ಕರೆಪಟ್ಟಣದಲ್ಲಿ ಆಳುತ್ತಿದ್ದರೆನ್ನುವುದಕ್ಕೆ ಸೂಕ್ತವಾದ ಯಾವ ಆಧಾರವೂ ತೋರುವುದಿಲ್ಲ. ಬದಲು, ೧೬೫೮ ರಿಂದ ೧೬೬೩ರ ವರೆಗೆ ಬೇಲೂರಿನಿಂದ ಶ್ರೀರಂಗನು ಹೊರಡಿಸಿದ ೧೬೫೮ ರಿಂದ ೧೬೬೩ರ ವರೆಗಿನ ಕೆಲವು ತಾಮ್ರಫಲಕ ದಾನಶಾಸನಗಳು ದೊರಕಿವೆ. ಆ ಐದುವರ್ಷ ಕಾಲ ೩ನೇ ಶ್ರೀರಂಗನು ಅಲ್ಲಿ ರಾಜ್ಯವಾಳುತಿದ್ದುದನ್ನು ಅವು ಸೂಚಿಸುತ್ತವೆ.[೯೯]

ಆದರೆ ೧೬೬೩ರಲ್ಲಿ ಮೈಸೂರಿನ ದೊಡ್ಡದೇವರಾಜ ಒಡೆಯರು ಕರ್ನಾಟಕ - ಬಿಜಾಪುರ ಬಲಘಾಟನ್ನು ಪ್ರವೇಶಿಸಿ, ಇಕ್ಕೇರಿಯಿಂದ ಸುಪ್ರತಿಷ್ಠಿತ ಕೋಟೆಗಳಾದ ಚಿಕ್ಕನಾಯಕನಹಳ್ಳಿ ಮತ್ತು ಕಂದಿಕೆರೆಗಳನ್ನು ಗೆದ್ದುಕೊಂಡು ಮಲೆನಾಡಿನ ಕಡೆಗೆ ನಡೆದರು. ಶ್ರೀರಂಗನನ್ನು ಸೋಲಿಸಿ, ಅತ್ಯಂತ ಮಹತ್ವದ ಹಾಗೂ ದುರ್ಭೇದ್ಯವೆನಿಸಿದ್ದ ಹಾಸನ ಮತ್ತು ಸಕ್ಕರೆಪಟ್ಟಣ ಕೋಟೆಗಳನ್ನು ವಶಪಡಿಸಿಕೊಂಡರು. ಮೈಸೂರಿನಲ್ಲಿ ಈ ಮಹತ್ವದ ಸ್ಥಳಗಳನ್ನು ಸೋತುದರಿಂದ ಶ್ರೀರಂಗನ ಸ್ಥಿತಿ ಬೇಲೂರಿನಲ್ಲಿ ಬಹಳ ಚಿಂತಾಜನಕವಾಯಿತು. ಅಲ್ಲಿಂದ ಹೊರಟು ಮಧುರೆಯ ಚೊಕ್ಕನಾಥನ ಆಸ್ಥಾನದಲ್ಲಿ ಆಶ್ರಯ ಪಡೆಯಬೇಕಾಯಿತು. ಮಧುರೆಯಲ್ಲಿ ಶ್ರೀರಂಗನು ಆಳುತ್ತಿದ್ದುದನ್ನು ಸೂಚಿಸುವ ಕೆಲವು ಶಾಸನಗಳು ದೊರಕಿವೆ.[೧೦೦]

ಇಕ್ಕೇರಿಯಲ್ಲಿ ೧೬೯೭ರಲ್ಲಿ ಚನ್ನಮ್ಮಾಜಿಯು ಮೃತಳಾಗಲು, ಹಿರಿಯ ಬಸಪ್ಪನಾಯಕ (೧೬೯೭-೧೭೧೪)ನಿಗೆ ರಾಜನಾಗಿ ಪಟ್ಟಕಟ್ಟಲಾಯಿತು. ಅವನು ಮೈಸೂರಿನ ಪ್ರಬಲ ವಿರೋಧಿ. ಚನ್ನಮ್ಮಾಜಿಯ ಆಳಿಕೆಯಲ್ಲಿ ೧೬೯೪-೯೫ರಲ್ಲಿ ಇಕ್ಕೇರಿಗೆ ಆಗಿದ್ದ ನಷ್ಟವನ್ನೆಲ್ಲ ಮರಳಿ ತುಂಬಿಕೊಳ್ಳಲು ಅವನು ಹಾತೊರೆಯುತ್ತಿದ್ದನು. ತನ್ನ ಸೇನಾಪತಿ ಗರ್ಜಿನ ಬಸಪ್ಪದೇವರು ಎಂಬುವನ ನೇತೃತ್ವದಲ್ಲಿ ಮೈಸೂರಿನ ವಿರುದ್ಧವಾಗಿ ಸೈನ್ಯವನ್ನು ಕಳುಹಿಸಿದನು. ಆದರೆ ಇಕ್ಕೇರಿಯ ಸೈನ್ಯವು ಮೈಸೂರಿಗೆ ಸಂಪೂರ್ಣವಾಗಿ ಸೋತಿತು. ಇನ್ನು ಪ್ರತಿಭಟಿಸಲಾರದೆ ಇಕ್ಕೇರಿಯು ಸಂಧಿಯನ್ನು ಕೋರಿತು. ಒಂದು ಭಾಷಾಪತ್ರವನ್ನು ಮಾಡಿಕೊಟ್ಟಿತು. ಅದರ ಪ್ರಕಾರ ಇಕ್ಕೇರಿಯು ವೈರವನ್ನು ತೊರೆದು ಈ ಪ್ರದೇಶದಲ್ಲಿ ಶಾಂತಿ ನೆಲೆಗೊಳ್ಳುವಂತೆ ಮಾಡಬೇಕು, ಬಲಂ (ಮಂಜರಾಬಾದ್ - ಬೇಲೂರು ಪ್ರದೇಶ) ಅನ್ನು ಮೈಸೂರಿಗೆ ಒಪ್ಪಿಸಬೇಕು ಎಂದಾಯಿತು. ಇದಕ್ಕೆ ಪ್ರತಿಯಾಗಿ ಮೈಸೂರು ಇಕ್ಕೇರಿಗೆ ಸೇರಿದ್ದ ವಸ್ತಾರೆಯನ್ನು ಮರಳಿಸಬೇಕು ಎಂದು ನಿಗದಿಯಾಯಿತು. ಹೀಗೆ ಹಲವು ಯುದ್ಧಗಳ ನಂತರ ಬೇಲೂರು ಮತ್ತೆ ೧೬೯೭ರಲ್ಲಿ ಮೈಸೂರಿನ ವಶಕ್ಕೆ ಬಂದಿತು.

ಆಡಳಿತ ಮತ್ತು ಅರ್ಥವ್ಯವಸ್ಥೆ

ಈ ಅರಸರ ಶಾಸನಗಳ ಅಧ್ಯಯನದಿಂದ ನಮಗೆ, ಬೇಲೂರಿನಲ್ಲಿ ನಾಯಕ ಆಡಳಿತದಲ್ಲಿದ್ದ ರಾಜಕೀಯ, ಆರ್ಥಿಕ, ಮತ್ತು ಜನರ ಧಾರ್ಮಿಕ ಜೀವನದ ಪರಿಸ್ಥಿತಿಯ ಒಂದು ಸ್ಥೂಲ ಚಿತ್ರವು ದೊರಕುತ್ತದೆ. ಅವರ ಶಾಸನಗಳಲ್ಲಿ ಪಾರುಪತ್ಯಗಾರ ಎಂಬ ಪದವು ಪದೇ ಪದೇ ಬರುತ್ತದೆ. ರಾಜ್ಯದ ಬೇರೆ ಬೇರೆ ಪ್ರಾಂತಗಳಲ್ಲಿ ಆಡಳಿತವನ್ನು ನೋಡಿಕೊಳ್ಳಲು ಅವರು ಒಬ್ಬ ಅಧೀನ ಅಧಿಕಾರಿಯನ್ನು ನೇಮಿಸುತ್ತಿದ್ದರು ಎಂಬುದನ್ನು ಈ ಪದವು ಸೂಚಿಸುತ್ತದೆ. ಈ ಪಾರುಪತ್ಯಗಾರರನ್ನು ರಾಜನು ತನ್ನ ಇಚ್ಛೆಯಂತೆ ನೇಮಿಸುತ್ತಿದ್ದನು, ಅವರೂ ಅವನಿಗೇ ನೇರವಾಗಿ ಉತ್ತರ ಕೊಡಲು ಜವಾಬ್ದಾರರಾಗಿರುತ್ತಿದ್ದರು. ಇಕ್ಕೇರಿ, ಮೈಸೂರು ಮತ್ತು ಬಿಜಾಪುರ ಮೂವರ ನಡುವೆ ಕಾದಾಟದ ವಸ್ತುವಾಗಿ ಸಿಕ್ಕಿಕೊಂಡಿದ್ದರೂ ಬೇಲೂರಿನ ಪಾಳೆಯಗಾರರು ದಕ್ಷ ಸರಕಾರವನ್ನು ನಡೆಸುತ್ತಿದ್ದಂತೆ ತೋರುತ್ತದೆ. ಅದರಿಂದಾಗಿ ಆಂತರಿಕವಾಗಿ ಶಾಂತಿಯು ನೆಲೆಸಿತ್ತು.

ಈ ರಾಜರು ಕಲೆ ಮತ್ತು ಸಾಹಿತ್ಯದ ಮಹಾ ಪೋಷಕರಾಗಿದ್ದರು. ಹಲವು ಮತಗಳಿಗೆ ಸೇರಿದ ಅನೇಕ ದೇವಾಲಯಗಳನ್ನು ಅವರು ಕಟ್ಟಿಸಿದರು, ಹಲವನ್ನು ಜೀರ್ಣೋದ್ಧಾರ ಮಾಡಿದರು. ದೇವಾಲಯಗಳಿಗೆ ಪಾಲನೆ, ದಿನನಿತ್ಯದ ಪೂಜೆ ಮೊದಲಾದವುಗಳಿಗಾಗಿ ಉದಾರವಾಗಿ ದಾನಮಾಡಿದರು.[೧೦೧] ವೇದಗಳು, ಧರ್ಮಶಾಸ್ತ್ರಗಳು ಮೊದಲಾದವುಗಳಲ್ಲಿ ಪರಿಣತರಾದ ಬ್ರಾಹ್ಮಣರಿಗೆ ಭೂಮಿಯನ್ನು ಉಚಿತವಾಗಿ ನೀಡಿ ವೇದಾಧ್ಯಯನವನ್ನು ಪ್ರೋತ್ಸಾಹಿಸಿದರು. ೧೬೬೨ ರಲ್ಲಿ ನರಸಿಂಹನಾಯಕನು ಹೆಬ್ಬಾಲೆ ಸ್ಥಳದ ದೇವನಹಳ್ಳಿ ಗ್ರಾಮವನ್ನು ಹನ್ನೆರಡು ಜನ ಬ್ರಾಹ್ಮಣರಿಗೆ ದಾನ ಮಾಡಿದನು. ಆ ವಿದ್ವಾಂಸರ ಪೈಕಿ ಲಿಂಗ ವಾರಣಾಸಿಯ ಮರಿಮಗನೂ ಮಲ್ಲಿಕಾರ್ಜುನನ ಮೊಮ್ಮಗನೂ, ಮಾದಪ್ಪನ ಮಗನೂ ಆಗಿದ್ದ ಭಾರತೀನಂಜನು ಒಬ್ಬನು.[೧೦೨] ಈ ಭಾರತೀನಂಜನು ವಿದ್ವಾಂಸನಾಗಿದ್ದು, ಗೋವಿಂದವೈದ್ಯನ ಒತ್ತಾಯದ ಮೇರೆಗೆ ಕಂಠೀರವನ ಆಸ್ಥಾನದಲ್ಲಿ ೧೬೪೮ರಲ್ಲಿ ಮೊದಲಬಾರಿಗೆ ಕಂಠೀರವನರಸರಾಜವಿಜಯವನ್ನು ಓದಿದನು. ಗೋವಿಂದವೈದ್ಯ ಕಂಠೀರವ ನರಸರಾಜನ ಆಸ್ಥಾನಕವಿ, ಕಂಠೀರವನರಸರಾಜವಿಜಯದ ಕರ್ತೃ.[೧೦೩]

ಬೇಲೂರಿನ ಅರಸರು ಕೃಷಿಗೆ ತುಂಬಾ ಪ್ರೋತ್ಸಾಹ ಕೊಟ್ಟರು. ಹಳ್ಳಿಗಳನ್ನು ಸ್ಥಾಪಿಸಿ ಹೊಸದಾಗಿ ಬೇಕಾದಷ್ಟು ಭೂಮಿಯನ್ನು ಬೇಸಾಯಕ್ಕೆ ಒಳಪಡಿಸಿದರು.[೧೦೪] ಹೊಸಕೆರೆಗಳನ್ನು ನಿರ್ಮಿಸಲು, ಹಳೆಯವನ್ನು ದುರಸ್ತಿಪಡಿಸಲು ಅವರು ತೋರಿಸಿದ ಆಸಕ್ತಿಯನ್ನು ಅನೇಕ ಶಾಸನಗಳು ದೃಢಪಡಿಸುತ್ತವೆ. ಒಂದು ಸಣ್ಣ ಉದಾಹರಣೆ ಕೊಡಬೇಕೆಂದರೆ, ಗೊರೂರಿನಲ್ಲಿ ಬಿರುಕು ಬಿಟ್ಟಿದ್ದ ಏರಿಯನ್ನು ಬೇಲೂರಿನ ರಾಜ ಎರಾ ಕೃಷ್ಣಪ್ಪನಾಯಕನ ಮಗ ವೆಂಕಟಾದ್ರಿನಾಯಕನು ೧೫೬೮ರ ಸುಮಾರಿನಲ್ಲಿ ಮರಳಿ ನಿರ್ಮಿಸಿದನು.[೧೦೫]

ವ್ಯಾಪಾರವು ಉಚ್ಛ್ರಾಯ ಸ್ಥಿತಿಯಲ್ಲಿತ್ತು. ಬೇಲೂರಿನ ವರ್ತಕ ಸಂಘಗಳು ಬೆಂಗಳೂರು (ಕೆಂಪೇಗೌಡ ಅರಸರ ಆಳಿಕೆಯಲ್ಲಿ) ಮತ್ತಿತರ ದೂರದ ಸ್ಥಳಗಳೊಂದಿಗೆ ವ್ಯಾಪಾರ ಸಂಪರ್ಕಗಳನ್ನು ಹೊಂದಿದ್ದುವು. ಇಮ್ಮಡಿ ಕೆಂಪೇಗೌಡನ ಆಳಿಕೆಯ ಕಾಲಕ್ಕೆ ಸೇರಿದ ೧೬೨೮ರ ಬೆಂಗಳೂರಿನ ಒಂದು ಶಾಸನದಲ್ಲಿ ನಾನಾದೇಶಿ ಸಂಘಗಳ ಪಟ್ಟಿಯಲ್ಲಿ ಬೇಲೂರು ಎಡೆ ಪಡೆದಿರುವುದು ಸ್ವಾರಸ್ಯವಾದ ವಿಚಾರವಾಗಿದೆ.[೧೦೬] ಪೋತಪ್ಪ ನಾಯಕನ ಮಗ ಕೃಷ್ಣಪ್ಪನಾಯಕನ ಕಾಲಕ್ಕೆ ಸೇರಿದ ಇನ್ನೊಂದು ಶಾಸನವು ದೊರಕಿದೆ. ಕೃಷ್ಣಪ್ಪನಾಯಕನ ಪ್ರತಿನಿಧಿಯು ಬಾಗೂರು ಸೀಮೆಯ ಪಾರುಪತ್ಯ (ಆಡಳಿತ) ನಿರ್ವಹಿಸುತ್ತಿದ್ದಾಗ ಬಾಗೂರಿನ ಹೊರಪೇಟೆಯು (ಮಾರುಕಟ್ಟೆಯು) ಹಾಳಾಗಿತ್ತು. ಒಡನೆಯೇ ಸುಂಕದ ಅಧಿಕಾರಿ ನರಸಿಂಹಯ್ಯನು ಅದನ್ನು ಮತ್ತೆ ಕಟ್ಟಿಸಿದನು. ಬೇಲೂರು ವಂಶದ ಪ್ರಸಿದ್ಧರಾಜ ಎರಾ ಕೃಷ್ಣಪ್ಪನಾಯಕನ ಹೆಸರಿನಿಂದ ಹೆಸರುಗೊಂಡ

ಪೇಟೆಯನ್ನು ಕೃಷ್ಣಾಪುರ ಎಂದು ಕರೆಯಲಾಯಿತು. ಮತ್ತೆ ಜನರು ಅಲ್ಲಿ ನೆಲೆಸುವಂತೆ ಮಾಡಿ, ಅವರಿಗೆ ಪೇಟೆಗೆ ಬಂದ ದಿನದಿಂದ ಒಂದು ವರ್ಷ ಅವಧಿಗೆ ಎಲ್ಲ ತೆರಿಗೆಗಳ ವಿನಾಯತಿ ನೀಡಿದರು. [೧೦೭]

ಸರಕಾರಕ್ಕೆ ವಿವಿಧ ಮೂಲಗಳಿಂದ ವರಮಾನವಿತ್ತು. ಕಾಣಿಕೆ, ಕಪ್ಪ, ಜೋಡಿ, ಬೇಡಿಕೆ, ಮನೆಗಂದಾಯ, ಕೆರೆಗಂದಾಯ (ಬಹುಶಃ ನೀರಿನ ತೆರಿಗೆ),[೧೦೮] ವರ್ತನೆ, ತಳವಾರಿಕೆ (ಕಾವಲುಗಾರನ ತೆರಿಗೆ), ಸೋಲಿಗೆ[೧೦೯] ಇತ್ಯಾದಿ. ಹಾಸನ ತಾಲೂಕಿನ ಕುದುರೆಗುಂಡಿಯ ಒಂದು ಶಾಸನವು ಆನೆಯ ಸುಂಕವನ್ನು ಉಲ್ಲೇಖಿಸುತ್ತದೆ.[೧೧೦] ಈಗ ನಮಗಿರುವ ತಿಳಿವಳಿಕೆಯ ಪ್ರಕಾರ ಇದನ್ನು ವಿವರಿಸುವುದು ಕಷ್ಟ. ಚಿಲುವನ, ಹೊಗೆಕಾಣಿಕೆ (ಕೈಗಾರಿಕೆಗಳ ಮೇಲೆ ತೆರಿಗೆ), ಹುರುಳಿವತ, ಸರತಿ, ಭಟ್ಟವತ, ಗೃಹಾರಾಮ ಕ್ಷೇತ್ರ[೧೧೧], ಬಿಟ್ಟಿ (ಉಚಿತ ಸೇವೆ)[೧೧೨], ಇತ್ಯಾದಿ. ಆಗ ಪ್ರಚಲಿತವಾಗಿದ್ದ ಹಲವು ಬಗೆಯ ಭೂದಾನಗಳು ನಮಗೆ ಶಾಸನಗಳಿಂದ ತಿಳಿಯುತ್ತವೆ. ಅಗ್ರಹಾರ, ಸರ್ವಮಾನ್ಯ (ಎಲ್ಲಾ ಬಗೆಯ ತೆರಿಗೆಗಳಿಂದ ವಿಮುಕ್ತವಾದದ್ದು), ಉಂಬಳಿ, ದಂಡಿಗೆಉಂಬಳಿ. ಈ ಕೊನೆಯದು ಏನೆಂದು ವಿವರಿಸುವುದು ಈಗ ಕಷ್ಟವಾಗಿದೆ.

ವಾಣಿಜ್ಯ

೧೫೫೪ರ ಶಾಸನದಲ್ಲಿ ಸುಂಕದ ಅಧಿಕಾರಿಯನ್ನು ಉಲ್ಲೇಖಿಸಿರುವುದರಿಂದ, ಆಗ ಸಮರ್ಥವಾಗಿ ಕೆಲಸ ಮಾಡುತ್ತಿದ್ದ ತೆರಿಗೆ ಇಲಾಖೆಯೊಂದು ಇತ್ತೆಂಬುದು ತಿಳಿಯುತ್ತದೆ.[೧೧೩]

ಕೈಗಾರಿಕೆಗಳು

ಹೊಗೆಹಣ ಎಂಬ ಪದವು ಹೊಳೆನರಸೀಪುರದ ಶಾಸನವೊಂದರಲ್ಲಿ ಕಂಡುಬರುತ್ತದೆ. ಹೊಗೆ ಉಗುಳುವ ಕೈಗಾರಿಕೆಗಳ ಮೇಲೆ ವಿಧಿಸಿದ್ದ ತೆರಿಗೆ ಅದು. ಆಗ ಬಹುತೇಕ ಗುಡಿಕೈಗಾರಿಕೆಗಳಾಗಿದ್ದ ಕೆಲವು ಉದ್ಯಮಗಳಿದ್ದಿರ ಬಹುದು. ಹೊಗೆಕಾಣಿಕೆಯು, ಕೆಲವು ಕೈಗಾರಿಕೋದ್ಯಮಗಳು ರಾಜನಿಗೆ ಕೆಲವು ನಿರ್ದಿಷ್ಟ ಸಂದರ್ಭಗಳಲ್ಲಿ ಕೊಡುತ್ತಿದ್ದ ಕಾಣಿಕೆ. ಸ್ಥಳದ ಜನರ ಅಗತ್ಯಗಳನ್ನು ಪೂರೈಸುತ್ತಿದ್ದ ಕೆಲವು ಕೈಗಾರಿಕೆಗಳಿದ್ದುವು. ಅವುಗಳಿಂದ ಸರಕಾರಕ್ಕೆ ವರಮಾನವಿತ್ತು.

ಶಾಸನಗಳನ್ನು ರಚಿಸುತ್ತಿದ್ದವರು ಮತ್ತು ಕೆತ್ತುತ್ತಿದ್ದವರು

ಸ್ವಾರಸ್ಯವಾದ ವಿಷಯವೆಂದರೆ, ಶಾಸನವನ್ನು ರಚಿಸಿದವನು ಮತ್ತು ಅದನ್ನು ಕೆತ್ತಿದವನು ಇಬ್ಬರ ಹೆಸರುಗಳನ್ನೂ ಕೊಡುವ ಒಂದೇ ಒಂದು ಶಾಸನವು ದೊರಕಿದೆ. ಇದು ೧೫೦೧ರ ಶಾಸನ. ಹಾಸನ ಸೀಮೆಯ ಕಬ್ಬಳ್ಳಿ ಎಂಬ ಹಳ್ಳಿಯನ್ನು ಆದಪ್ಪ ಬಯ್ಯಪ್ಪ ಎಂಬುವನು ದಾನಮಾಡಿದುದನ್ನು ದಾಖಲಿಸುತ್ತದೆ. ಈ ಶಾಸನವನ್ನು ಸಭಾಪತಿ ಸ್ವಯಂಭು ಎನ್ನುವವನು ರಚಿಸಿದನು, ವೀರಣನ ಮಗ ವೀರಣಾಚಾರ್ಯನು ಅದನ್ನು ಕೆತ್ತಿದನು.[೧೧೪]

ಬೇಲೂರು ಅರಸರ ವಂಶಾವಳಿ

ರಾಮದಾಸ
|
ಗಿರಿಯಪ್ಪನಾಯಕ (ಶ್ರೀಗಿರೀಶ)
|
ತಿಮ್ಮಪ್ಪನಾಯಕ — ಯೇರಭೂಪ — ಪೋತಪ್ಪನಾಯಕ

ತಿಮ್ಮಪ್ಪನಾಯಕ
|
ಬಯ್ಯಪ್ಪನಾಯಕ (೧೫೦೭-೧೫೩೮)
|

ಎರ ಕೃಷ್ಣಪ್ಪನಾಯಕ(೧೫೨೪-೧೫೭೦) — ವೀರಯ್ಯ (೧೫೫೮)

ಪತ್ನಿ ಪದ್ಮಾಂಬಿಕೆ

ವೆಂಕಟಾದ್ರಿ ನಾಯಕ (ಚಿಕ್ಕನಾಯಕ) (೧೫೬೬-೧೫೮೪) — ಸೂರಪ್ಪನಾಯಕ

ಪತ್ನಿ ಪದ್ಮಾಂಬಿಕೆ

ಕೃಷ್ಣಪ್ಪನಾಯಕ-೨ (೧೫೮೮-೧೬೨೫) — ಲಕ್ಷ್ಮಪ್ಪನಾಯಕ — ವಿರುಪನಾಯಕ — ರಂಗಪ್ಪನಾಯಕ

ವೆಂಕಟಾದ್ರಿನಾಯಕ (೧೬೨೬-೪೩) — ತಿರುಮಲನಾಯಕ (೧೬೪೦) — ನರಸಿಂಹನಾಯಕ-೧ (೧೬೫೫) — ರಂಗಪ್ಪನಾಯಕ

ನರಸಿಂಹನಾಯಕ-೨ (೧೬೫೪)

ಕೃಷ್ಣಪ್ಪನಾಯಕ-೩ (೧೬೪೩-೫೪)

ವೆಂಕಟಾದ್ರಿನಾಯಕ-೩ (೧೬೫೫-೭೦)

ಕೃಷ್ಣಪ್ಪನಾಯಕ-೪ (೧೬೮೫-೯೨)

ವೆಂಕಟಾದ್ರಿನಾಯಕ-೪ (೧೭೦೮-೧೭೫೧) — ಕೃಷ್ಣಪ್ಪನಾಯಕ -೫ (೧೭೧೧)

ಕೃಷ್ಣಪ್ಪನಾಯಕ-೬ (೧೭೫೫-೧೭೯೪)

ವೆಂಕಟಾದ್ರಿನಾಯಕ (೧೭೯೯)

ಉಮ್ಮತ್ತೂರಿನ ಒಡೆಯರು (೧೪೦೦-೧೫೧೨)

ಉಮ್ಮತ್ತೂರು ಚಾಮರಾಜನಗರ ತಾಲೂಕಿನ ಒಂದು ಸಣ್ಣ ಹಳ್ಳಿ. ಈ ಸ್ಥಳದ ಅಗಸರಾದ ಉಮ್ಮತ್ತೂರು ಒಡೆಯರು (ಸ್ಥಳೀಯವಾಗಿ ಗಣ್ಯರಾಗಿದ್ದವರೋ ವಿಜಯನಗರ ಚಕ್ರವರ್ತಿಗಳ ಸಮೀಪ ಬಂಧುಗಳೋ ಆಗಿದ್ದಿರಬಹುದು) ಮೈಸೂರಿನ ದಕ್ಷಿಣಕ್ಕೆ ಇದ್ದ ಮುಖ್ಯರಾದ ರಾಜರು ಮತ್ತು ಮೈಸೂರು ಮನೆತನದ ಮುಖ್ಯ ವೈರಿಗಳಾಗಿದ್ದವರು. ಇವರ ಮುಖ್ಯವಾದ ಕೋಟೆಯ ಕಾವೇರಿ ನದಿಯ ಜಲಪಾತವಾದ ಶಿವಸಮುದ್ರ ದ್ವೀಪದಲ್ಲಿತ್ತು. ಅಲ್ಲಿಯೇ ಅವರ ಕುಲದೈವ ಸೋಮೇಶ್ವರನ ದೇವಾಲಯವೂ ಇತ್ತು.[೧೧೫] ಅವರ ವಿಶಿಷ್ಟ ಬಿರುದುಗಳು ಮಹಾಮಂಡಲೇಶ್ವರ, ಜವಾದಿ ಕೋಲಾಹಲ, ಪೆಸಲಿ ಹನುಮ, ಅರಸಂಕ ಸೋನೆಗಾರ (ಯುದ್ಧದಲ್ಲಿ ರಾಜರನ್ನು ಇರಿಯುವವನು). ಫೇನಾಂಕ ಚಕ್ರೇಶ್ವರ (ಕಠಾರಿಯದ್ಧದಲ್ಲಿ ನಿಪುಣ), ಗಜಬೇಂಟೆಕಾರ[೧೧೬] ಸೌರಾಷ್ಟ್ರ ಪುರಾಧೀಶ್ವರ[೧೧೭] ಇತ್ಯಾದಿ. ಅವರು ಸೌರವಂಶದವರು, ತಮ್ಮನ್ನು

ಹೊಯ್ಸಳರಾಜ್ಯ (ದಕ್ಷಿಣ ಮೈಸೂರು)ದ ಪ್ರಭುಗಳು ಎಂದು ಕರೆದುಕೊಂಡು ತೆರಕಣಾಂಬಿ, ಕೊಯಮತ್ತೂರಿನ ಭಾಗ ಮತ್ತು ನೀಲಗಿರಿಗಳನ್ನು ಆಳುತ್ತಿದ್ದರು.

೧೪ನೆಯ ಶತಮಾನದ ಕೊನೆಯ ದಶಕ ಮತ್ತು ೧೫ನೆಯ ಶತಮಾನದ ಪ್ರಾರಂಭದ ವರ್ಷಗಳಿಗೆ ಸೇರಿದ ಕೆಲವು ಶಾಸನಗಳು ಮೈಸೂರಿನ ಸುತ್ತಮುತ್ತ ದೊರಕಿವೆ. ಅವು ಉಮ್ಮತ್ತೂರು ಮತ್ತು ತೆರಕಣಾಂಬಿಯ ರಾಜರು ಚಕ್ರವರ್ತಿಗಳ ಪ್ರತಿನಿಧಿಗಳಾಗಿ ಕಾವೇರಿ ನದಿಯ ದಕ್ಷಿಣಕ್ಕೆ ಆಳುತ್ತಿದ್ದರು, ಈ ಪ್ರಾಂತಗಳ ಗವರ್ನರ್‌ಗಳಾಗಿದ್ದರು ಎಂದು ಹೇಳುತ್ತವೆ. ಒಂದು ಶಾಸನದಿಂದ, ೨ನೇ ಹರಿಹರನ ಸಹೋದರ, ಮಹಾಮಂಡಲೇಶ್ವರ ಮಲ್ಲಪ್ಪ ಒಡೆಯರ ಮಗ ನಾರಾಯಣದೇವನು ಉಮ್ಮತ್ತೂರು ಸಂಸ್ಥಾನವನ್ನು ೧೩೯೬-೯೭ರಲ್ಲಿ ಆಳುತ್ತಿದ್ದನೆಂದು ತಿಳಿದುಬರುತ್ತದೆ.[೧೧೮] ೧ನೇ ದೇವರಾಯನ ಮಗ ಮೂರನೆಯ ಹರಿಹರನು ವಿಜಯರಾಯ ಮತ್ತು ೨ನೇ ದೇವರಾಯರ ಕಾಲದಲ್ಲಿ ತೆರಕಣಾಂಬಿಯ ಆಡಳಿತಾಧಿಕಾರಿಯಾಗಿದ್ದನು.[೧೧೯] ಈ ಶಾಸನಗಳ ಬೆಳಕಿನಲ್ಲಿ ನಾವು ಉಮ್ಮತ್ತೂರು ಅರಸರು ಕರ್ನಾಟಕದ ಮನೆತನಕ್ಕೆ ಸೇರಿದವರು, ಕೇಂದ್ರ ಪ್ರಭುತ್ವವು ದುರ್ಬಲವಾದಾಗ ಅಧಿಕಾರಕ್ಕೆ ಬಂದರು ಎಂದು ಹೇಳಬಹುದು.

ಉಮ್ಮತ್ತೂರು ಅರಸರು ಪ್ರಾಮುಖ್ಯ ಪಡೆದದ್ದು ೧೫ನೆಯ ಶತಮಾನದ ಕೊನೆಯ ದಶಕದಲ್ಲಿ; ವಿಜಯನಗರ ಸಾಮ್ರಾಜ್ಯದ ವ್ಯವಹಾರಗಳು ಅಸ್ತವ್ಯಸ್ತವಾಗಿದ್ದು, ಸಂಗಮವಂಶದ ರಾಜರು ಕ್ಷೀಣಿಸಿ ಸಾಳುವ ನರಸಿಂಹನು ಸಿಂಹಾಸನವನ್ನೇರಿದ ಸಮಯದಲ್ಲಿ. ಅವರ ಶಾಸನಗಳಿಂದ ಸ್ಥಿರಪಡುವಂತೆ, ಪ್ರಸ್ತುತ ಮೈಸೂರು ಮತ್ತು ಮಂಡ್ಯ ಜಿಲ್ಲೆಗಳನ್ನು ಕೊಯಮತ್ತೂರು ಮತ್ತು ಸೇಲಂ ಜಿಲ್ಲೆಯ ಭಾಗಗಳನ್ನೂ ಒಳಗೊಂಡ ವಿಸ್ತಾರವಾದ ರಾಜ್ಯವನ್ನು ಆಳುತ್ತಿದ್ದಂತೆ ತೋರುತ್ತದೆ. ೧೫ನೆಯ ಶತಮಾನದ ಕೊನೆಗೆ ಸೋಮರಾಜ ಒಡೆಯರ ಮಗ ದೇಪಣ್ಣ ಒಡೆಯರ್ ವಿಜಯನಗರದ ಅಧಿಕಾರವನ್ನು ನಿರಾಕರಿಸಿ, ಕಪ್ಪವನ್ನು ಕೊಡಲು ಒಪ್ಪದಾದನು. ಇವನ ಈ ದಂಗೆಕೋರ ಪ್ರವೃತ್ತಿಗೆ ಶಿಕ್ಷೆ ಮಾಡಬೇಕೆಂಬ ಉದ್ದೇಶದಿಂದ ಪರಸನಾಯಕನು ಸೇನಾಸಮೇತನಾಗಿ ಹೋದನು. ಕಾವೇರಿಯ ಮೇಲು ಕಣಿವೆಯುದ್ದಕ್ಕೂ ಹೋಗಿ ಶ್ರೀರಂಗಪಟ್ಟಣವನ್ನು ಸಮೀಪಿಸಿದನು. ಕಾವೇರಿಯಲ್ಲಿ ಪೂರ್ಣ ಪ್ರವಾಹವಿದ್ದುದರಿಂದ ಕೋಟೆಯನ್ನು ಆಕ್ರಮಿಸುವುದು ಅಸಾಧ್ಯವಾಗಿ ತೋರಿತು. ಆದರೂ ಅವನು ಅವಸರವಸರವಾಗಿ ಸೇತುವೆ ನಿರ್ಮಿಸಿ ನದಿಯನ್ನು ದಾಟಿ ಶ್ರೀರಂಗಪಟ್ಟಣವನ್ನು ಗೆದ್ದು ಅಲ್ಲಿ ಒಂದು ಜಯಸ್ತಂಭವನ್ನು ನಿಲ್ಲಿಸಿದನು. ಆದರೆ ಕೋಟೆಯನ್ನು ಅದರ ಅಧೀನ ಪ್ರದೇಶಗಳನ್ನು ತಾನು ಸೆರೆಹಿಡಿದಿದ್ದ ಅದರ ರಾಜನಿಗೇ ಮರಳಿಸುವುದು ಅಗತ್ಯ ಎಂದು ಅವನು ಭಾವಿಸಿದನು.[೧೨೦]

ದೇವರಾಜನ ಶರಣಾಗತಿಯಿಂದ ಉಮ್ಮತ್ತೂರು ಅರಸರ ವಿರೋಧೀ ಚಟುವಟಿಕೆಗಳೇನೂ ನಿಲ್ಲಲಿಲ್ಲ. ನರಸನಾಯಕನ ಮರಣ ಮತ್ತು ವೀರನರಸಿಂಹನ ದುರ್ಬಲ ಆಡಳಿತಗಳ ಅವಕಾಶವನ್ನು ಉಪಯೋಗಿಸಿಕೊಂಡು ಉಮ್ಮತ್ತೂರಿನ ದೇಪಣ್ಣವೊಡೆಯರ ಮಗ ಮಲ್ಲರಾಜ ಒಡೆಯನು ಬಂಡಾಯದ ಬಾವುಟವನ್ನು ಹಾರಿಸಿದನು. ಇದನ್ನು ತಿಳಿದು ವೀರ ನರಸಿಂಹನು ಸೇನಾಸಮೇತನಾಗಿ ಬಂದು ಉಮ್ಮತ್ತೂರಿನ ಕೋಟೆಗೆ ಮೂರು ತಿಂಗಳ ಕಾಲ ಮುತ್ತಿಗೆ ಹಾಕಿದನು. ಆದರೆ ಅಲ್ಲಿಯ ರಾಜನು ಬಿಟ್ಟುಕೊಡದೆ ಚಕ್ರವರ್ತಿಯ ಸೈನ್ಯವನ್ನು ಸೋಲಿಸಿ ವೀರನರಸಿಂಹನು ಓಮ್ಮೆಟ್ಟುವಂತೆ ಮಾಡಿದನು. ಹೀಗೆ ಇಮ್ಮಡಿ ನರಸಿಂಹನಿಗೆ ಉಮ್ಮತ್ತೂರಿನ ಅರಸನ ದಂಗೆಯನ್ನು ಅಡಗಿಸಲು ಸಾಧ್ಯವಾಗದೆ ಸೋತು ಹಿಂದಿರುಗಬೇಕಾಯಿತು.[೧೨೧]

ಚಕ್ರವರ್ತಿಯ ಸೇನೆಯು ಸೋತದ್ದರಿಂದ ಉಮ್ಮತ್ತೂರು ಅರಸನ ಉತ್ಸಾಹ ಗರಿಗೆದರಿತು. ಅವನು ಹೆಚ್ಚು ಹೆಚ್ಚಾಗಿ ಮಲೆತು ನಿಂತನು. ಇಮ್ಮಡಿ ದೇವರಾಜ ಒಡೆಯನ ಎರಡನೆಯ ಮಗ ನಂಜರಾಜ ಒಡೆಯನು ಮತ್ತೆ ಕೇಂದ್ರ ಪ್ರಭುತ್ವವನ್ನು ತಿರಸ್ಕರಿಸಿ, ಅರಿರಾಯ ವಿಭಾಡ, ಭಾಷೆಗೆ ತಪ್ಪುವ ರಾಜರ ಗಂಡ,

ಪೆನುಗೊಂಡ ಚಕ್ರೇಶ್ವರ, ಚಿಕ್ಕರಾಯಪಟ್ಟ ಹೀಗೆ ಕೆಲವು ಸಾಳುವ ಬಿರುದುಗಳನ್ನು ಧರಿಸಿದನು.[೧೨೨] ದುರ್ಬಲ ದೊರೆಯಾಗಿದ್ದ ವೀರನರಸಿಂಹನು ಬಹುಶಃ ಉಮ್ಮತ್ತೂರಿನ ರಾಜನನ್ನು ಗೌರವಿಸಿ, ಅವನನ್ನು ಯುವರಾಜ ಪದವಿಗೆ ಏರಿಸಿದ್ದನ್ನು ಈ ಬಿರುದು ಧರಿಸುವಿಕೆಯ ಸೂಚಿಸುತ್ತದೆ ಎಂದು ಕೃಷ್ಣಶಾಸ್ತ್ರಿ ಬರೆಯುತ್ತಾರೆ.[೧೨೩]

ಸಿಂಹಾಸನಕ್ಕೆ ಬರುತ್ತಿದ್ದಂತೆಯೇ ಕೃಷ್ಣದೇವರಾಯನು ಉಮ್ಮತ್ತೂರು ಪ್ರಾಂತದ ವ್ಯವಹಾರಗಳ ಕಡೆಗೆ ತನ್ನ ಗಮನವನ್ನು ಹರಿಸಬೇಕಾಯಿತು. ಈಗ ಅಲ್ಲಿಯ ದೊರೆಯಾಗಿದ್ದ ಗಂಗರಾಜನು ಮತ್ತೆ ದಂಗೆಯೇಳುವ ಸ್ಥಿತಿಯಲ್ಲಿದ್ದನು. ವೀರನರಸಿಂಹನ ಸೈನ್ಯಗಳ ಮೇಲೆ ದೊರೆತ ವಿಜಯದಿಂದ ಉತ್ತೇಜಿತನಾಗಿ, ಇನ್ನೂ ತನ್ನ ಪರಾಕ್ರಮವನ್ನು ತೋರಿಸಬೇಕಾಗಿದ್ದ ನೂತನ ಚಕ್ರವರ್ತಿಗೆ ತಲೆಬಾಗುವ ಒಲವು ತೋರಿಸದಾದನು. ದೊರೆತ ಮೊದಲ ಅವಕಾಶವೆಂದರೆ ಕೃಷ್ಣದೇವರಾಯನು ಪೆನುಗೊಂಡ ಕೋಟೆಯನ್ನು ಮರಳಿ ಗೆದ್ದುಕೊಂಡದ್ದು. ಪೆನುಗೊಂಡೆಯನ್ನು ಹಿಡಿದಿದ್ದ ರಾಜ ಉಮ್ಮತ್ತೂರಿನ ಗಂಗರಾಜ ಎಂದು ಗುರುತಿಸಲಾಗಿದೆ. ಕೃಷ್ಣದೇವರಾಯನು ೫೦೦೦ ಪದಾತಿದಳ ಮತ್ತು ಎರಡು ಸಾವಿರ ಅಶ್ವದಳದೊಂದಿಗೆ ಸಾಮ್ರಾಜ್ಯವೇ ತನ್ನದು ಎಂದು ಹಕ್ಕು ಘೋಷಿಸಿಕೊಂಡಿದ್ದ ಸಾಮಂತನ ಮೇಲೆ ದಂಡೆತ್ತಿ ನಡೆದನು ಎಂದು ಫಾದರ್ ಲೂಯಿಸ್ ಬರೆಯುತ್ತಾನೆ.[೧೨೪]

ಉಮ್ಮತ್ತೂರು ಮತ್ತು ಶಿವಸಮುದ್ರಗಳ ಕೋಟೆ ತೆನೆಗಳನ್ನು ಉರುಳಿಸಿದ್ದನ್ನು ಪಾರಿಜಾತಾಪಹರಣಮು ಕಾವ್ಯವು ಉಲ್ಲೇಖಿಸುತ್ತದೆ.[೧೨೫] ಶಿವಸಮುದ್ರದ ಮುತ್ತಿಗೆಯನ್ನು ಕೊಂಗುದೇಶ ರಾಜಕ್ಕಾಲಿನ್ ಚರಿತ್ರಮ್ ವಿಸ್ತಾರವಾಗಿ ವರ್ಣಿಸುತ್ತದೆ. ಚಕ್ರವರ್ತಿಯ ಸೈನ್ಯಗಳು ಕೋಟೆಯನ್ನು ಮುತ್ತಿದುವು. ತಡೆಯಲಾರದೆ ಗಂಗರಾಜನು ಓಡಲೆತ್ನಿಸಿದನು. ಹಾಗೆ ಪಲಾಯನ ಮಾಡುವಾಗ ಕಾವೇರಿಯ 'ಗಗನಸುಚಿ'ಯಲ್ಲಿ[೧೨೬] (ಗಗನಚುಕ್ಕಿ) ಸುಳಿಗೆ ಸಿಕ್ಕಿ ಮುಳುಗಿ ಸತ್ತನು.

ಉಮ್ಮತ್ತೂರಿನ ಮೇಲೆ ಕೃಷ್ಣದೇವರಾಯನು ಯುದ್ಧಮಾಡಿದ್ದು ಕ್ರಿ.ಶ.೧೫೧೧-೧೨ರಲ್ಲಿ. ಅರಸ ಗಂಗರಾಜನು ಸೋತು ಕೃಷ್ಣದೇವರಾಯನು ರಾಜ್ಯವನ್ನು ವಶಪಡಿಸಿಕೊಂಡು ಅದನ್ನು ಒಂದು ಅಧೀನ ಪ್ರಾಂತವನ್ನಾಗಿ ರೂಪಿಸಿ ಶ್ರೀರಂಗಪಟ್ಟಣವನ್ನು ಅದರ ಕೇಂದ್ರವನ್ನಾಗಿ ಮಾಡಿದನು. ವೀರಪ್ಪ ಒಡೆಯನನ್ನು ಶ್ರೀರಂಗಪಟ್ಟಣ ಪ್ರಾಂತದ ಅರಸನನ್ನಾಗಿ ನೇಮಕ ಮಾಡಿದನು. ಎರಡು ಶಾಸನಗಳಲ್ಲಿ ಈ ವೀರಪ್ಪ ಒಡೆಯನ ಹೆಸರು ಉಲ್ಲೇಖಿತವಾಗಿದೆ. ಕೃಷ್ಣದೇವರಾಯನು ಸೋಲಿಸಿದ ಉಮ್ಮತ್ತೂರಿನ ಗಂಗರಾಜನ ಮಗನೇ ಇವನು ಎಂದು ಗುರುತಿಸಲಾಗಿದೆ.[೧೨೭] ಗಂಗರಾಜನಿಗೆ ಚಿಕ್ಕರಾಯ, ಚಿಕ್ಕೊಡೆಯ ಎಂಬ ಹೆಸರುಗಳೂ ಇದ್ದುವು.[೧೨೮] ಅಲ್ಲದೆ ಶ್ರೀರಂಗಪಟ್ಟಣದಲ್ಲಿ ವೀರಪ್ಪ ಒಡೆಯನ ಆಳಿಕೆಯು ವಿಜಯನಗರದಲ್ಲಿ ಕೃಷ್ಣದೇವರಾಯನ ಆಳಿಕೆಯು ವಿಜಯನಗರದಲ್ಲಿ ಕೃಷ್ಣದೇವರಾಯನ ಆಳಿಕೆಯೊಂದಿಗೆ ಕಾಲದಲ್ಲಿ ತಾಳೆಯಾಗುತ್ತದೆ. ಆದ್ದರಿಂದ ಶ್ರೀರಂಗಪಟ್ಟಣದ ಚಿಕ್ಕೊಡೆಯನ ಮಗ ವೀರಪ್ಪ ಒಡೆಯನೇ ಪೇಸ್ ಹೇಳುವ 'ಕುಮಾರವೀರ್ಯ'ನೆನ್ನುವುದರಲ್ಲಿ ಸಂದೇಹವಿಲ್ಲ. ಕುಮಾರವೀರ್ಯನು ಮುಮ್ಮಡಿ ಬೆಟ್ಟದ ಚಾಮರಾಜ ಒಡೆಯರೆಂದು ಸಿವೆಲ್ ಗುರುತಿಸಿರುವುದು ಸರಿಯೆಂದು ತೋರುವುದಿಲ್ಲ.[೧೨೯]

ಉಮ್ಮತ್ತೂರಿನ ದಂಗೆಯನ್ನು ಅಡಗಿಸಿದ ಮೇಲೆ ಕೃಷ್ಣದೇವರಾಯನು ಗೆದ್ದ ರಾಜ್ಯನನ್ನು ಗಂಗರಾಜನ ಮಗ ವೀರಪ್ಪ ಒಡೆಯನಿಗೆ ವಹಿಸಿಕೊಟ್ಟನು. ಶ್ರೀರಂಗಪಟ್ಟಣದ ಸರಕಾರ ವ್ಯವಹಾರಗಳನ್ನು ವ್ಯವಸ್ಥೆಗೊಳಿಸಿದ ಮೇಲೆ ವೀರಪ್ಪ ಒಡೆಯನ ಮಗಳನ್ನು ಕೃಷ್ಣದೇವರಾಯನು ಮದುವೆ ಮಾಡಿಕೊಂಡನು. ಆಕೆಯು ಕೃಷ್ಣ ದೇವನ ಮುಖ್ಯರಾಣಿಯರಲ್ಲಿ ಒಬ್ಬಳಾದಳು ಎಂದು ಹೇಳಲಾಗಿದೆ.

ಈ ಅರಸರು ತಮ್ಮ ಕಾಲದ ಜನಜೀವನದ ಮೇಲೆ ಹೇಗೆ ಪ್ರಭಾವ ಬೀರಿದರು ಎನ್ನುವುದನ್ನು ಶಾಸನಗಳಿಂದ ತಿಳಿಯುವುದು ಕುತೂಹಲಕರವಾದ ವಿಷಯ. ಜನತೆಗೆ ಅವರು ಎಂತಹ ಆಡಳಿತವನ್ನು ಕೊಟ್ಟಿದ್ದರು ಎನ್ನುವುದು ನಮಗೆ ಶಾಸನಗಳಿಂದ ತಿಳಿದುಬರುತ್ತದೆ. ಜನವಿಹೀನ ಹಳ್ಳಿಗಳಲ್ಲಿ ಮರಳಿ ಜನರು ನೆಲೆಸುವಂತೆ ಮಾಡಿದರು, ಬಂಜರು ಭೂಮಿಯನ್ನು ಬೇಸಾಯಕ್ಕೆ ಒಳಪಡಿಸಿ ಕೃಷಿ ಉತ್ಪಾದನೆಯನ್ನು ಹೆಚ್ಚಿಸಿದರು. ಅವರು ಸೌಮ್ಯರಾಗಿದ್ದ ಅರಸರು. ಪ್ರಜೆಗಳ ಕಲ್ಯಾಣವೇ ಅವರಿಗೆ ಅತ್ಯಂತ ಪ್ರಧಾನವಾಗಿತ್ತು. ಅವರು ಶಿಥಿಲವಾಗಿದ್ದ ದೇವಾಲಯಗಳ ಜೀರ್ಣೋದ್ಧಾರ ಮಾಡಿಸಿದರು, ಧಾರ್ಮಿಕ ವ್ಯಕ್ತಿಗಳು ಮತ್ತು ಸಾಧು ಸಂತರಿಗೆ ಬೇಕಾದ ಸೌಲಭ್ಯಗಳನ್ನು ಮಾಡಿಕೊಟ್ಟರು. ವರ್ತಕರಿಗೆ ಪ್ರೋತ್ಸಾಹ ನೀಡಿ ವಾಣಿಜ್ಯವನ್ನು ಅಭಿವೃದ್ಧಿ ಪಡಿಸಿದರು.

ಉಮ್ಮತ್ತೂರು ರಾಜರ ಶಾಸನಗಳಲ್ಲಿ ಕೆಲವು ಆಡಳಿತೀಯ ಹಾಗೂ ಕಂದಾಯ ಸಂಬಂಧಿಯಾದ ಪಾರಿಭಾಷಿಕ ಪದಗಳು ಕಾಣಿಸಿಕೊಳ್ಳುತ್ತವೆ. ಇವು ಅಗಿನ ಆಡಳಿತ ಪದ್ಧತಿಯ ಒಂದು ಚಿತ್ರವನ್ನು ಕೊಡುತ್ತವೆ. ಅವು ೧) ಪಾರುಪತ್ಯಗಾರ (ವ್ಯವಹಾರಗಳನ್ನು ನೊಡಿಕೊಳ್ಳುವ ಪ್ರತಿನಿಧಿ); ೨) ಕರಣಿಕ ಅಥವಾ ಸೇನಬೋಗ ತೆರಿಗೆಯನ್ನು ಸಂಗ್ರಹಿಸಿ ಲೆಕ್ಕ ಬರೆದಿಡುತ್ತಿದ್ದವನು.[೧೩೦] ಇನ್ನೊಬ್ಬ ಮುಖ್ಯ ಅಧಿಕಾರಿ ಪಟ್ಟಣ ಸ್ವಾಮಿ.[೧೩೧] ಇವನು ನಗರದ ಪ್ರಥಮ ಪ್ರಜೆ, ಮೇಯರ್. ಕೌಟಿಲ್ಯನು ಹೇಳುವ ಪಟ್ಟಣಸ್ವಾಮಿನ್‌ಗೆ ಸಮನಾದವನು. ನಗರದ ಪೌರಾಡಳಿತ ಇವನ ವಶದಲ್ಲಿತ್ತು.

ಸಾರ್ವಜನಿಕ ಹಣಕಾಸು

ಶಾಸನಗಳು ಸರಕಾರದ ವರಮಾನ ಮೂಲಗಳು ಯಾವುವಿದ್ದವೆಂಬುದರ ಸ್ಥೂಲಚಿತ್ರವನ್ನು ಕೊಡುತ್ತವೆ. ಸ್ಥಿರ ಮತ್ತು ಚರ ಆಸ್ತಿಗಳ ಮೇಲೆ ಸರಕಾರವು ತೆರಿಗೆ ವಿಧಿಸಿತ್ತು. ಚರ ವಿಭಾಗದಲ್ಲಿ ಆಡಿನ ಮೇಲೆ ತೆರಿಗೆ ಹಾಕಿದ್ದರು.[೧೩೨] ಸ್ಥಿರ ವಿಭಾಗಕ್ಕೆ ಮನೆತೆರಿಗೆ (ಮನಿಸುಂಕ) ಉತ್ತಮ ನಿದರ್ಶನ,[೧೩೩] ಮಗ್ಗ[೧೩೪], ಕಬ್ಬಿನ ರಹಹಿಂಡುವ ಆಲೆಯಮನೆ[೧೩೫], ಎಣ್ಣೆತೆಗೆಯುವ ಬಿಸಿಲುಗಾಣ[೧೩೬] ಮೊದಲಾದ ಉದ್ಯಮಗಳ ಮೇಲೆ ತೆರಿಗೆಯಿತ್ತು. ಒಳವಾರು ಮತ್ತು ಹೊರವಾರು (ಸರಕುಗಳ ಆಮದು ಮತ್ತು ರಫ್ತು);[೧೩೭] ಸುವರ್ಣದಾಯ (ನಗದು ವರಮಾನ) [೧೩೮]; ಮದುವೆ ತೆರಿಗೆ (ಮದುವೆ ಮೊದಲು)[೧೩೯] ಮೊದಲಾದ ಸಾಮಾಜಿಕ ತೆರಿಗೆಗಳು; ಮಾರಾಟ ತೆರಿಗೆ(ಮಾದಾರಿಕೆ)ಗಳು, ಉದಾಹರಣೆಗೆ ಮೊಟ್ಟೆ ಸುಂಕ[೧೪೦]; ಹತ್ತಿ ಸುಂಕ[೧೪೧]; ಜಾತಿ ತೆರಿಗೆ; ಕಾಣಿಂಕೆ(ಉಡುಗೊರೆಗಳು ಮತ್ತು ಪುರಸ್ಕಾರಗಳು), ಖಡಯ (ಕಡ್ಡಾಯ) ಬಲಾತ್ಕಾರದ ದುಡಿಮೆ; ಗ್ರಾಮದಲ್ಲಿರುವ ಮನೆ ನಿವೇಶನಗಳು, ಗೊಬ್ಬರದ ಗುಂಡಿಗಳ ಮೇಲಿನ ತೆರಿಗೆ (ಎಲೆಗುಣಿ ಸುಂಕ); ಗೋಭೂಮಿ (ಸರಕಾರದ ಗೋಮಾಳ); ಸ್ತವರ ಸುಂಕ[೧೪೨]; ಹುರುಳಿ, ಕಡಲೆಗಳ ಮೇಲೆ ತೆರಿಗೆ[೧೪೩] ಇವು ಇದ್ದುವು. ಬಹಳ ಅಪರೂಪವಾಗಿ ಈ ತೆರಿಗೆಯ ಉಲ್ಲೇಖವನ್ನು ನೋಡುತ್ತೇವೆ, ಇವುಗಳಿಗೆ ತೃಪ್ತಿಕರವಾದ ವಿವರಣೆ ಕೊಡುವುದು ಕಷ್ಟವಾಗುತ್ತದೆ. ತಳವಾರ ಸುಂಕ (ಕಾವಲಿನವನ ಮೇಲೆ ತೆರಿಗೆ); ತಳವಾರಕುಳ (ಕಾವಲುಗಾರನಬಾಕಿ);[೧೪೪] ತೇರಕಾಣಿಕೆ [೧೪೫] ಹಳ್ಳಿಯ ರಥೋತ್ಸವದ ಸಮಯದಲ್ಲಿ ಕೊಡುತ್ತಿದ್ದ ಕಾಣಿಕೆ. ಇದು ಬಹುಶಃ ರಾಜ್ಯದ ಕೆಲವು ರಥೋತ್ಸವಗಳ ಸಂದರ್ಭಗಳಲ್ಲಿ ಜನರೋ, ಸಾಮಂತರಾಜರೋ ಚಕ್ರವರ್ತಿಗೆ ಒಪ್ಪಿಸುತ್ತಿದ್ದ ನಜರು ಕಾಣಿಕೆಯಿದ್ದಿರಬಹುದು. ಜಾತ್ರೆಸುಂಕ[೧೪೬] ವಾರಸುದಾರರಿಲ್ಲದೆ ಸರಕಾರಕ್ಕೆ ಸೇರುವ ಆಸ್ತಿ ಅಸ್ವೈನಿಕ[೧೪೭], ಪಾಸವಾರು (ಮೀನುಗಳ ಮೇಲೆ ತೆರಿಗೆ)[೧೪೮] ಇತ್ಯಾದಿಗಳು ಇದ್ದುವು..

ಉಮ್ಮತ್ತೂರು ಅರಸರು ಸಾಹಿತ್ಯದ ಉದಾರ ಪೋಷಕರಾಗಿದ್ದರು. ದೇವಣ್ಣ ಒಡೆಯನ ಮಗ ಚಿಕ್ಕರಾಯನು ಆಲಿಕೊಂಡಪುರದ ನಾಗಭಟ್ಟನೆನ್ನುವವನನ್ನು ಪೋಷಿಸಿದ್ದನು. ಅವನಿಗೆ ಆಲಂಕಾರಿಕ ಶಿರೋಮಣಿ ಪದವಾಕ್ಯ ಪ್ರಮಾಣ ತಜ್ಞ, ಪ್ರತಿವಾದ ಗಜಕೇಸರಿ ಮೊದಲಾದ ಬಿರುದುಗಳಿದ್ದುವು. ರಾಜ ಚಿಕ್ಕರಾಯನು ಮಸಮುತ್ತನಹಳ್ಳಿ ಗ್ರಾಮವನ್ನು, ಚಿಕ್ಕರಾಯ ಸಾಗರ ಎಂದು ಹೊಸ ಹೆಸರಿನಿಂದ ಕರೆದು ಈ ಆಸ್ಥಾನಕವಿಗೆ ಏಕಸ್ವಾಮ್ಯ ಅಗ್ರಹಾರವಾಗಿ ನೀಡಿದ್ದನು. ಇದು ಧನುಗೂರು ಸ್ಥಳದಲ್ಲಿದ್ದ ಹಳ್ಳಿ.

ಹೀಗೆಯೇ ಕಂಚಿಯ ಸಿಂಗವರ್ಯನ ಮಗ ನರಸಿಂಹಭಟ್ಟ ಎಂಬ ಇನ್ನೊಬ್ಬ ವಿದ್ವಾಂಸನ ಉಲ್ಲೇಖವನ್ನೂ ನಾವು ನೋಡುತ್ತೇವೆ. ಇವನು ತಜ್ಞ ವೈಯಾಕರಣನೂ, ಛಂದಸ್ಸಿನಲ್ಲಿ ಪ್ರಮಾಣನೂ ಆಗಿದ್ದನು. (ಪದವಾಕ್ಯ ಪ್ರಮಾಣ ತಜ್ಞ)[೧೪೯]

ನಾಣ್ಯ ಮತ್ತು ಕರೆನ್ಸಿ ಪದ್ಧತಿ

ಈಗ ದೊರಕಿರುವ ಶಾಸನಗಳಿಂದ ಉಮ್ಮತ್ತೂರು ರಾಜ್ಯದಲ್ಲಿ ಪ್ರಚುರವಾಗಿದ್ದ ಕರೆನ್ಸಿ ಬಗೆಗೆ ಸಂಕ್ಷೇಪವಾದ ಚಿತ್ರ ದೊರಕುತ್ತದೆ. ವೀರನಂಜರಾಜ ಒಡೆಯನ ೧೪೪೨ರ ಒಂದು ಶಾಸನವು, ಅವನು ತೆರಕಣಾಂಬಿಯ ಅಂಗಡಿವೀರಭದ್ರ ದೇವರಿಗೆ ಪ್ರತಿ ಮಂಗಳವಾರ ನೈವೇದ್ಯ ಮಾಡುವ ಸಲುವಾಗಿ ವಾರಕ್ಕೆ ೫ ಹಣಗಳಂತೆ ವೆಚ್ಚ ಮಾಡಲು, ತೆರಕಣಾಂಬಿ ನಾಡಿನ ಒಂದು ಹಳ್ಳಿಯನ್ನು ಉಂಬಳಿಯಾಗಿ ನೀಡಿದನು ಎಂದು ಹೇಳುತ್ತದೆ. ವರ್ಷದ ಅಂತಹ ೫೪ ದಿನಗಳಿಗೆ ವೆಚ್ಚವು ೨೭೦ ಹಣಗಳು ಅಥವಾ ೨೭ ಹೊನ್ನುಗಳು ಎಂದೂ ಶಾಸನವು ಹೇಳುತ್ತದೆ. ಅಂದರೆ ಹೊನ್ನು ಎನ್ನುವುದು ಅಧಿಕ ಮುಖಬೆಲೆಯ ನಾಣ್ಯ, ಹತ್ತು ಹಣಗಳಿಗೆ ಒಂದು ಹೊನ್ನು ಎಂದು ತಿಳಿಯುತ್ತದೆ.

ದೇವಣ್ಣ ಒಡೆಯನಿಗೆ ಸಂಬಂಧಿಸಿದ ೧೪೪೫ ಇನ್ನೊಂದು ಶಾಸನವು ಕೆಲವು ಹಳ್ಳಿಗಳನ್ನು ದಾನ ಮಾಡಿದ್ದನ್ನು ಉಲ್ಲೇಖಿಸುತ್ತದೆ. ಹರದನಹಳ್ಳಿಯಲ್ಲಿ ನಡೆಯುತ್ತಿದ್ದ ಸಾಪ್ತಾಹಿಕ ಸಂತೆಗಳಲ್ಲಿ ತೆರಿಗೆಯ ರೂಪದಲ್ಲಿ ಬಂದ ಹಣದ (ಸಂತೆ ಸುಂಕ)ದಲ್ಲಿ ಪ್ರತಿ ಹಣಕ್ಕೆ ಒಂದು ತರ ದಂತೆ ಅರಮನೆಯ ಭಂಡಾರಕ್ಕೆ ಜಮಾ ಮಾಡತಕ್ಕದ್ದು ಎಂದು ಹೇಳಿದೆ. [೧೫೦] ತರ ಎನ್ನುವುದು ಹಣಕ್ಕಿಂತ ಬೆಲೆಯಲ್ಲಿ ಕಡಿಮೆಯಾದ ಘಟಕವಾಗಿತ್ತು ಎಂದು ಗೊತ್ತಾಗುತ್ತದೆ. ಹೀಗೆ ಉಮ್ಮತ್ತೂರು ಒಡೆಯರ ನಾಣ್ಯಪದ್ಧತಿ ಮತ್ತು ಕರೆನ್ಸಿಯಲ್ಲಿ ಅತಿ ಹೆಚ್ಚು ಮುಖಬೆಲೆಯ ಹೊನ್ನು ನಾಣ್ಯ(ಬಹುಶಃ ಇದು ಚಿನ್ನದ ನಾಣ್ಯವಾಗಿರಬಹುದು) ವಿತ್ತು; ಅದಾದ ಮೇಲೆ ಹಣ, ಇದೂ ಬಹುಶಃ ಚಿನ್ನದ್ದು, ಬೆಲೆಯಲ್ಲಿ ಹೊನ್ನು ನಾಣ್ಯದ ೧/೧೦ ಭಾಗ, ಅದಾದ ನಂತರ ತರ, ಬಹುಶಃ ಇದು ಬೆಳ್ಳಿಯ ನಾಣ್ಯವಾಗಿರಬೇಕು. ತರಕ್ಕೂ ಹಣಕ್ಕೂ ಇದ್ದ ಮುಖಬೆಲೆಯ ಸಂಬಂಧ ನಮಗೀಗ ತಿಳಿದಿಲ್ಲ. ಮೇಲಿನ ಬಗೆಯ ನಾಣ್ಯಗಳಲ್ಲದೆ ಗದ್ಯಾಣ ಎಂಬುದನ್ನೂ ಕೇಳುತ್ತೇವೆ.[೧೫೦] ದುರದೃಷ್ಟವಶಾತ್ ಹೊನ್ನು ಒಂದಿಗೆ ಅದರ ಹೋಲಿಕೆಯ ಬೆಲೆಯಾಗಲಿ, ಆ ಕಾಲದ ಇತರ ನಾಣ್ಯಗಳೊಂದಿಗೆ ಅದರ ಸಂಬಂಧವಾಗಲಿ ನಮಗೆ ತಿಳಿದುಬಂದಿಲ್ಲ. ಅದೂ ಚಿನ್ನದ ನಾಣ್ಯವೇ ಆಗಿದ್ದು ಹೊನ್‌ಗೆ ಸಮವೋ ಅಥವಾ ಇನ್ನೂ ಹೆಚ್ಚಿನದೋ ಆಗಿರಬೇಕು.

ಕೃಷ್ಣದೇವರಾಯನು ೧೫೧೧-೧೨ರಲ್ಲಿ ಉಮ್ಮತ್ತೂರನ್ನು ಸೋಲಿಸಿದ ಮೇಲೆ, ಆ ಪ್ರದೇಶವನ್ನು ನೂತನ ಪ್ರಾಂತವನ್ನಾಗಿ ರೂಪಿಸಿ ಶ್ರೀರಂಗಪಟ್ಟಣವನ್ನು ಅದರ ಕೇಂದ್ರಸ್ಥಳವನ್ನಾಗಿ ಮಾಡಿದನು. ಆಮೇಲೆ ಉಮ್ಮತ್ತೂರು ಹದಿನಾಡಿಗೆ ಸೇರಿತು. ಶಾಸನಾಧಾರದಿಂದ ಸಿದ್ಧಪಡಿಸಿದ ಉಮ್ಮತ್ತೂರು ಅರಸರ ತಾತ್ಕಾಲಿಕ ವಂಶಾವಳಿ ಹೀಗಿದೆ :

ಸೋಮಣ್ಣ ಒಡೆಯರ್
|
ಚಿಕ್ಕಣ್ಣ ಒಡೆಯರ್ (೧೪೩೦)
|
ಸೋಮರಾಜ ಒಡೆಯರ್
|
ದೇವರಾಜ ಒಡೆಯರ್ (೧೪೬೯)
|
ವೀರಹನುಮಪ್ಪ ಒಡೆಯರ್
|
ಇಮ್ಮಡಿ ರಾಜ ಒಡೆಯರ್ (೧೪೭೮)
|
(ಸೋಮರಾಜ ಒಡೆಯರ್)

ದೇವಣ್ಣ ಒಡೆಯರ್ (೧೪೮೮-೧೫೦೪)	ನಂಜರಾಯ ಒಡೆಯರ್ (೧೫೧೨)	ಗಂಗರಾಜ(ಚಿಕ್ಕರಾಜ) (೧೫೧೧-೧೨)	ನಂಜರಾಜ ಒಡೆಯರ್ (೧೪೮೨-೧೫೦೭)
ವೀರಚಿಕ್ಕರಾಯ ಒಡೆಯರ್ (ಮಲ್ಲರಾಜ; ಇವನೇ ಪೆನುಕೊಂಡ ಚಕ್ರೇಶ್ವರ ಎಂಬ ಬಿರುದು ಧರಿಸಿದವನು) (೧೫೦೫-೬)		ವೀರಪ್ಪ ಒಡೆಯರ್	ಚನ್ನನಂಜರಾಜ ಒಡೆಯರ್

ಅರಿಕುಠಾರದ (ಚಾಮರಾಜನಗರ) ರಾಜರು ೧೫೩೨-೧೬೨೩

ವಿಜಯನಗರದ ಕೃಷ್ಣದೇವರಾಯನು ೧೫೧೧-೧೨ರಲ್ಲಿ ಉಮ್ಮತ್ತೂರನ್ನು ಸೋಲಿಸಿದ ಮೇಲೆ ಇಡೀ ದಕ್ಷಿಣ ಮೈಸೂರು ಚಕ್ರವರ್ತಿಯ ಅಂಕೆಗೆ ಬಂದಿತು. ಅವನು ಈ ಪ್ರದೇಶದ ವ್ಯವಹಾರಗಳನ್ನು ತನ್ನ ಪರವಾಗಿ ನೋಡಿಕೊಳ್ಳಲು 'ಪ್ರತಿನಿಧಿ'ಗಳನ್ನು ನೇಮಿಸಿದನು. ಅರಿಕುಠಾರದ ಉಸ್ತುವಾರಿಗೆ ನೇಮಿತನಾದವನೂ ಅಂಥ ಒಬ್ಬ. ಇವನನ್ನು ಮೈಸೂರು ರಾಜ್ಯದಲ್ಲಿ ಕಾರ್ಯಕರ್ತ, ಪಾರಪತ್ಯಗಾರ, ಗುರಿಕಾರ ಹೀಗೆ ಬೇರೆ ಬೇರೆ ಹೆಸರುಗಳಿಂದ ಕರೆಯುತ್ತಿದ್ದರು. ಅವನು ಆ ಪ್ರಾಂತದಲ್ಲಿ ರಾಜನ ಹಿತವನ್ನು ರಕ್ಷಿಸುವ ಅಧಿಕಾರಿಯಾಗಿದ್ದು ನೇರವಾಗಿ ಕೇಂದ್ರದ ಸರಕಾರಕ್ಕೆ ಉತ್ತರದಾಯಿಯಾಗಿದ್ದನು. ಅವನನ್ನು ಚಕ್ರವರ್ತಿಯು ಒಂದು ರಾಜಾಜ್ಞೆಯ (ನಿರೂಪ) ಮೂಲಕ ನೇಮಿಸುತ್ತಿದ್ದನು.[೧೫೨] ಪ್ರಾಂತದ ಮುಖ್ಯಸ್ಥನಾಗಿ ತನ್ನ ಸ್ಥಾನಬಲದಿಂದ ಈ ಪ್ರತಿನಿಧಿಯ ಬಳಿ ಆ ಸ್ಥಳದ ಭಂಡಾರದ ಮೊಹರು ಇರುತ್ತಿತ್ತು. ಐದನೆಯ ಚಾಮರಾಜ ಒಡೆಯರು ೧೬೨೩ರಲ್ಲಿ ಮೈಸೂರು ರಾಜ್ಯಕ್ಕೆ ಸೇರಿಸಿಕೊಳ್ಳುವವರೆಗೆ ಅರಿಕುಠಾರದಲ್ಲಿ ಐದು ಜನರು ಈ ಹುದ್ದೆಯಲ್ಲಿದ್ದರು ಎಂದು ತಿಳಿದುಬರುತ್ತದೆ.

ಚಾಮರಾಜನಗರದ ಒಂದು ಶಾಸನವು ಉಮ್ಮತ್ತೂರಿನ ಮಹಾಮಂಡಲೇಶ್ವರ ಸೋಮದೇವ ಅರಸು [೧೫೩] ಮೊದಲು ನಿರ್ಮಿಸಿದ್ದ ಸೋಮಸಾಗರ ಎಂಬ ಕೆರೆಯನ್ನು ಅರಿಕುಠಾರದ ಕಾಮ್ಯಪ್ಪನಾಯಕನ ಮಗದ ವೀರಭದ್ರನಾಯಕನ ಮಗ ಬಾಲಲೋಚನನಾಯಕನು ಹೂಳುತೆಗೆಸಿ ದುರಸ್ತಿಪಡಿಸಿದುದನ್ನು ಹೇಳುತ್ತದೆ. ಕೆರೆಯು ಕ್ರಿ.ಶ. ೧೫೫೩ರಲ್ಲಿ ಬಿರುಕು ಬಿಟ್ಟಿತ್ತು. ೧೬ ವರ್ಷಗಳ ಕಾಲ ಅದು ದುರಸ್ತಿಯಾಗಿರಲೇ ಇಲ್ಲ. ಆಗ ೧೫೬೯ರಲ್ಲಿ ಅರಿಕುಠಾರದ ವೀರಭದ್ರನಾಯಕನ ಮಗ ಬಾಲಲೋಚನನಾಯಕನು ಆ ಕಾರ್ಯವನ್ನು ನಿರ್ವಹಿಸಿದನು.[೧೫೪] ಹೀಗೆ ಈ ಶಾಸನವು ಆ ಕೆರೆಯ ಇತಿಹಾಸವನ್ನು, ೧೪೮೨ರ ಸುಮಾರಿನಲ್ಲಿ ಉಮ್ಮತ್ತೂರಿನ ಅರಸನು ಮೊದಲು ನಿರ್ಮಿಸಿದಂದಿನಿಂದ ಕ್ರಿ.ಶ. ೧೫೬೯ರಲ್ಲಿ ಅರಿಕುಠಾರದ ಅರಸನು

ದುರಸ್ತಿ ಪಡಿಸುವ ವರೆಗೆ, ಕೊಡುತ್ತದೆ. ಈ ಸಣ್ಣಪುಟ್ಟ ರಾಜರೂ ಕೂಡ ಕೃಷಿ ಅಭಿವೃದ್ಧಿಗೆ ಹಾಗೂ ತಮ್ಮ ಪ್ರಜೆಗಳ ಆರ್ಥಿಕಯೋಗಕ್ಷೇಮಕ್ಕೆ ಹೇಗೆ ಕಾಳಜಿ ತೋರಿಸುತ್ತಿದ್ದರು ಎಂಬುದನ್ನು ತಿಳಿಯಲು ಇದೊಂದು ಸ್ವಾರಸ್ಯವಾದ ನಿದರ್ಶನ.

ಮೈಸೂರಿನ ದಿನೇ ದಿನೇ ಅಧಿಕವಾಗುತ್ತಿದ್ದ ಶಕ್ತಿಗೆ ಹೆದರಿ ಅರಿಕುಠಾರದ ರಾಜರು ಮೈಸೂರು ರಾಜರ ವಿರುದ್ಧವಾಗಿ ಮಧುರೆಯ ನಾಯಕನಿಗೆ ಬೆಂಬಲ ಕೊಡುತ್ತಿದ್ದರು. ಮಧುರೆಯ ನಾಯಕನು ಮೈಸೂರಿನ ಕಡು ವೈರಿಯಾಗಿದ್ದನು. ಮೈಸೂರು ರಾಜ್ಯದ ದಕ್ಷಿಣಕ್ಕೆ ಇದ್ದ ಪಾಳೆಯಗಾರರು, ಹದಿನಾಡಿನ ನಾಯಕರು ಮತ್ತು ಅರಿಕುಠಾರದ ರಾಜರು ಮೈಸೂರಿನ ಪ್ರಬಲ ವೈರಿಗಳಾಗಿದ್ದು, ೧೬೧೦ರಲ್ಲಿ ರಾಜಒಡೆಯರು ಶ್ರೀರಂಗಪಟ್ಟಣವನ್ನು ವಶಪಡಿಸಿಕೊಳ್ಳುವವರೆಗೂ ಮೈಸೂರಿನ ರಾಜನಿಗೆ ತಲೆಬಾಗಿರಲಿಲ್ಲ. ಮಧುರೆಯ ನಾಯಕನ ಬೆಂಬಲ ಪಡೆದು ಆಗಾಗ ದಂಗೆಯೆದ್ದು ಈ ಪ್ರದೇಶದ ಶಾಂತಿಯನ್ನು ಕದಡುತ್ತಿದ್ದರು. ದಕ್ಷಿಣದ ಒಂದು ದಂಡಯಾತ್ರೆಯಲ್ಲಿ ರಾಜಒಡೆಯರು (೧೫೭೮-೧೬೧೭) ಅರಿಕುಠಾರವನ್ನು ೧೬೧೫ರಲ್ಲಿ ಆಕ್ರಮಣ ಮಾಡಿದರು. ಬಾಲಲೋಚನ ನಾಯಕನಿಂದ ಅರಿಕುಠಾರದ ಅಧೀನತೆಯಲ್ಲಿದ್ದ ಮೂಗೂರನ್ನು ಗೆದ್ದುಕೊಂಡರು.[೧೫೫] ಮತ್ತೆ ೧೬೨೩ರಲ್ಲಿ ಮೈಸೂರಿನ ೫ನೇ ಚಾಮರಾಜ ಒಡೆಯರು (೧೬೧೭-೩೭) ಮತ್ತೆ ಅರಿಕುಠಾರವನ್ನು ಆಕ್ರಮಿಸಿ ಚಾಮರಾಜ ನಾಯಕನ ಮಗ ಬಾಲೋಜಿನಾಯಕನಿಂದ ಅದನ್ನು ವಶಪಡಿಸಿಕೊಂಡರು.[೧೫೬] ಈ ಘಟನೆಯ ನಂತರ ಅರಿಕುಠಾರನು ಮೈಸೂರು ರಾಜ್ಯದ ಒಂದು ಭಾಗವಾಗಿ ಹೋಯಿತು.

ಕಾಮ್ಯಪ್ಪನಾಯಕ
|
(ಮಗ) ವೀರಪ್ಪನಾಯಕ (೧೫೩೨)
|
(ಮಗ) ಬಾಲಲೋಚನ ನಾಯಕ (೧೫೬೯)
|
ಚಾಮರಾಜ ನಾಯಕ
|
(ಮಗ) ಬಾಲೋಜಿನಾಯಕ

ಹದಿನಾಡಿನ ಅರಸರು (ಯಳಂದೂರು)

ಯಳಂದೂರು ಬಹಳ ಮುಂಚಿನಿಂದಲೂ ಪದಿನಾಡು ಅಥವಾ ಹದಿನಾಡುವಿಗೆ ಸೇರಿತ್ತು. ಇದು ಪ್ರಾಚೀನ ಕಾಲದ ಪುನ್ನಾಡು ಹತ್ತುಸಾವಿರ ಎನಿಸಿಕೊಂಡ ಪ್ರದೇಶ. ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ಒಂದು ಸಂಪದ್ಭರಿತವಾದ ಸಂಸ್ಥಾನವಾಗಿತ್ತು. ಅಲ್ಲಿನ ಮುಖ್ಯವಾದ ಗೌರೀಶ್ವರ ದೇವಾಲಯವನ್ನು ಪದಿನಾಡಿನ ರಾಜ ಸಿಂಗೆದೇಪನು ೧೬೫೪ರಲ್ಲಿ ಕಟ್ಟಿಸಿದನು. ಹದಿನಾಡಿನ ಮುಂದಿನ ರಾಜರು ಅದಕ್ಕೆ ಬೇಕಾದಷ್ಟು ದತ್ತಿಗಳನ್ನು ನಿರ್ಮಿಸಿದರು. ಯಳಂದೂರಿನ ಗೌರೀಶ್ವರ ದೇವಾಲಯದ ಒಂದು ಶಾಸನದಿಂದ ಯಳಂದೂರನ್ನು ಹದಿನಾಡ ಅರಸರ ರಾಜಧಾನಿಗೋಸ್ಕರವಾಗಿಯೇ ನಿರ್ಮಿಸಲಾಯಿತು. ಎಂದು ತಿಳಿದುಬರುತ್ತದೆ. ಅದರ ಮೂಲವನ್ನು ಕುರಿತು ವಿಸ್ತಾರವಾದ ನಿರೂಪಣೆಯಿದೆ. ಈ ರಾಜರಿಗೆ ಬೇರೆ ವಿಶಿಷ್ಟವಾದ ಬಿರುದುಗಳನ್ನೇನೂ ಸೇರಿಸದೆ ಹದಿನಾಡಿನ ಅರಸರು ಎಂದಷ್ಟು ಮಾತ್ರ ಹೇಳಲಾಗಿದೆ.[೧೫೭]

ಈ ಪ್ರದೇಶದಲ್ಲಿ ಪರಮಾಧಿಕಾರವನ್ನು ಸ್ಥಾಪಿಸುವ ಸಲುವಾಗಿ ಹದಿನಾಡು ಮೈಸೂರಿಗೆ ಪ್ರಬಲ ವೈರಿಯಾಗಿತ್ತು. ಬೆಳೆಯುತ್ತಿದ್ದ ಮೈಸೂರಿನ ಶಕ್ತಿಯನ್ನು ಕೆಳಗೆಳೆಯಲು ಹದಿನಾಡು ಮಧುರೆಯ ನಾಯಕನ ಬೆಂಬಲದಿಂದ ಪ್ರಯತ್ನಿಸುತ್ತಿತ್ತು. ೧೫೭೬ರಲ್ಲಿ ಶ್ರೀರಂಗಪಟ್ಟಣದ ವೈಸರಾಯಿ ತಿರುಮಲನು ಮೈಸೂರಿಗೆ

ಸೇರಿದ್ದ ಕೆಸರೆ ಕೋಟೆಗೆ ಮುತ್ತಿಗೆ ಹಾಕಿದಾಗ, ಹಾದಿನಾಡಿನ ಕಾಮರಾಜನಾಯಕನು ಅವನಿಗೆ ಸಹಾಯ ಮಾಡಲು ತನ್ನ ಸೈನ್ಯವನ್ನು ಕಳುಹಿಸಿದ್ದನು.[೧೫೮] ಮೈಸೂರು ಅರಮನೆಯ ದಾಖಲೆಗಳಿಂದ ನಮಗೆ ತಿಳಿದು ಬರುವುದೇನೆಂದರೆ, ಶ್ರೀರಂಗಪಟ್ಟಣದ ವೈಸರಾಯಿಯ ಅಧೀನದಲ್ಲಿದ್ದ ಕೆಲವು ಬಲಿಷ್ಠ ಪಾಳೆಯ ಗಾರರು,ಬೇಲೂರಿನ ಕೃಷ್ಣಪ್ಪನಾಯಕ, ಗ್ರಾಮದ ವೀರರಾಜಯ್ಯ, ಮೂಗೂರಿನ ಬಾಲಲೋಚನನಾಯಕ, ಯಳಂದೂರಿನ ಇಮ್ಮಡಿ ರಾಮರಾಜನಾಯಕ, ಉಮ್ಮತ್ತೂರಿನ ಮಲ್ಲರಾಜಯ್ಯ ಮೊದಲಾದವರು ಕುಣಿಗಲ್ಲಿನಲ್ಲಿ ಒಂದು ಒಕ್ಕೂಟವನ್ನು ರಚಿಸಿಕೊಂಡರು. ಅದಕ್ಕೆ ಹದಿನಾಡಿನ ರಾಮರಾಜನಾಯಕನು ಮುಖಂಡನಾಗಿದ್ದನು. ಅಸಮರ್ಥ ವೈಸರಾಯಿ ತಿರುಮಲನನ್ನು ಶ್ರೀರಂಗಪಟ್ಟಣದಿಂದ ಹೊರಹಾಕುವುದು ಅವರ ಉದ್ದೇಶವಾಗಿತ್ತು. ಅಂಥದೊಂದು ಒಕ್ಕೂಟ ರಚನೆಯು ತಮ್ಮ ಭದ್ರತೆಗೂ, ತಮ್ಮ ರಾಜ್ಯ ವಿಸ್ತರಣಾಕಾಂಕ್ಷೆಗೂ ಅಡ್ಡಿಯಾಗಬಹುದೆಂಬ ಭಾವನೆಯಿಂದ ಒಡನೆಯೇ ರಾಜಒಡೆಯರು ಸೇನಾಸಮೇತರಾಗಿ ಕುಣಿಗಲ್ಲಿಗೆ ಹೋಗಿ ಒಕ್ಕೂಟ ಸೈನ್ಯವನ್ನು ಸೋಲಿಸಿ ಅದನ್ನು ಮುರಿದುಹಾಕಿದರು.[೧೫೯]

೧೬೧೪ರಲ್ಲಿ ಹದಿನಾಡು ಹತ್ತುಸಾವಿರ ಸೀಮೆಯ ಚನ್ನರಾಜ ಒಡೆಯನ ಮಗ ನಂಜರಾಜ ಒಡೆಯನು ಮೈಸೂರಿನ ವಿರುದ್ಧವಾಗಿ ತನ್ನ ಹಿಂದಿನವರು ಇಟ್ಟುಕೊಂಡಿದ್ದ ವೈರಭಾವನೆಯನ್ನೇ ಅನುಸರಿಸುತ್ತಿರುವುದು ರಾಜಒಡೆಯರಿಗೆ ತಿಳಿಯಿತು. ೧೬೧೪ರಲ್ಲಿ ನಂಜರಾಜ ಒಡೆಯನು ಆಲಂಬಾಡಿ, ಕೊಲ್ಲ ಸತ್ಯಗಾಲ, ಮಧುರೆ ಮೊದಲಾದ ಅರಸರ ಬಲಗಳನ್ನು ಕೂಡಿಸಿದ ಭಾರೀ ಸೇನೆಯನ್ನು ಕಟ್ಟಿಕೊಂಡು ಮೈಸೂರಿನ ಮೇಲೆ ಯುದ್ಧಕ್ಕೆ ಬಂದನು. ಮೈಸೂರಿನ ಮುಂಚೂಣಿಯ ಕೋಟೆ ಯಡತೊರೆಯಲ್ಲಿ ಇರಿಸಿದ್ದ ಮೇಘಪುರುಷ ಎಂಬ ಒಂದು ಯುದ್ಧದ ಕುದುರೆಯನ್ನು ಅವನು ಅಪಹರಿಸಿದನು.[೧೬೦] ಉಮ್ಮತ್ತೂರು ಪ್ರದೇಶದ ತಾಯೂರಿಗೆ ಮುತ್ತಿಗೆ ಹಾಕಿ ರಾಜಒಡೆಯರು ಇದನ್ನು ಪ್ರತಿಭಟಿಸಿದರು. ವತ್ತಲು ಮತ್ತು ಗಾಣಿಗನೂರು ಎಂಬ ಹಳ್ಳಿಗಳಲ್ಲಿ ಭಾರೀ ಯುದ್ಧ ಸಂಭವಿಸಿತು. ನಂಜರಾಜನು ಯುದ್ಧದಲ್ಲಿ ಹತನಾದನು, ತೆರಕಣಾಂಬಿ ಮತ್ತು ಉಮ್ಮತ್ತೂರು ಪ್ರದೇಶಗಳನ್ನು ರಾಜಒಡೆಯರು ಗೆದ್ದು ಮೈಸೂರು ರಾಜ್ಯಕ್ಕೆ ಸೇರಿಸಿಕೊಂಡರು.[೧೬೧] ೧೬೧೬ರಲ್ಲಿ ಹದಿನಾಡಿನ ರಾಮಸಮುದ್ರವನ್ನು ಗೆಲ್ಲಲಾಯಿತು. ೧೬೧೬ರ ವೇಳೆಗೆ ಇಡೀ ಹದಿನಾಡು ಪ್ರಾಂತವು ಮೈಸೂರಿನ ಪ್ರಭುತ್ವಕ್ಕೊಳಪಟ್ಟಿತ್ತು. ಹದಿನಾಡಿನ ಪತನದಿಂದ ಮೈಸೂರಿನ ಅಧಿಕಾರದ ಪ್ರಬಲ ಸ್ಪರ್ಧಿಯೊಬ್ಬನನ್ನು ನಿವಾರಿಸಿದಂತಾಯಿತು. ರಾಜಒಡೆಯರು ಇನ್ನೂ ಬಲಯುತರಾದರು.

ಹದಿನಾಡು ಅರಸರ ಶಾಸನಗಳಲ್ಲಿ ಕೆಲವು ಆಡಳಿತ ಹಾಗೂ ಕಂದಾಯ ಸಂಬಂಧಿಯಾದ ಪದಗಳು ಕಂಡುಬರುತ್ತವೆ. ಅವರ ರಾಜ್ಯಾಡಳಿತ ಹಾಗೂ ಸರಕಾರದ ಒಟ್ಟು ನೀತಿಗಳ ವಿಷಯವಾಗಿ ಇದರಿಂದ ಒಂದು ಸ್ಥೂಲ ಅಭಿಪ್ರಾಯ ನಮಗೆ ಬರಬಹುದು. ಸಚಿವ ಮಂಡಳಿಯ ಮುಖ್ಯಸ್ಥನಾದ ಪ್ರಧಾನಿ ಎಂಬ ಪದವು ಒಂದು ಶಾಸನದಲ್ಲಿ ಬರುತ್ತದೆ. ಚಾಮರಾಜನಗರದ ಅದೇ ಶಾಸನವು[೧೬೨] ಪಾರುಪತ್ಯಗಾರ, ಗೌಡ ಮತ್ತು ಸೇನಬೋಗರನ್ನೂ ಉಲ್ಲೇಖಿಸುತ್ತದೆ. ಪಾರುಪತ್ಯಗಾರನು ಆ ಪ್ರದೇಶದ ವ್ಯವಹಾರಗಳನ್ನು ರಾಜನ ಪರವಾಗಿ ನೋಡಿಕೊಳ್ಳುತ್ತಿದ್ದ ಪ್ರತಿನಿಧಿಯಾದರೆ ಗೌಡ ಮತ್ತು ಸೇನಬೋಗರು ಹಳ್ಳಿಯ ಕಾರ್ಯಕರ್ತರಾಗಿದ್ದರು.

ಈ ಅರಸರು ತಮ್ಮ ರಾಜ್ಯದ ಆರ್ಥಿಕ ಸುಭದ್ರತೆಯ ಬಗೆಗೆ ಸದಾ ಜಾಗ್ರತರಾಗಿರುತ್ತಿದ್ದರು ಎಂಬುದನ್ನು ಸೂಚಿಸುವ ಕೆಲವು ಶಾಸನಗಳು ಕಂಡುಬರುತ್ತವೆ. ಅಣೆಕಟ್ಟುಗಳನ್ನು ನಿರ್ಮಿಸಿ ರೈತರಿಗೆ ನೀರಾವರಿ ಸೌಲಭ್ಯವನ್ನು ಒದಗಿಸಿದರು. ಚಾಮರಾಜನಗರ ತಾಲೂಕಿನ ಗಾಣಿಗನೂರಿನ ಒಂದು ಶಾಸನವು ಹೇಗೆ ದೇವಪ್ಪಗೌಡನ ಮಗ ರಾಜನಾಯಕನು ಹೊನ್ನುಹೊಳೆ ಅಣೆಕಟ್ಟಿನಲ್ಲಿ ಉಂಟಾಗಿದ್ದ ಎರಡು ಬಿರುಕುಗಳನ್ನು ನಂದ್ಯಾಲ ಸೀಮೆಯ ಬಂಡಿಕಾರರಿಂದ ರಿಪೇರಿ ಮಾಡಿಸಿದನು ಎಂಬುದನ್ನು ಹೇಳುತ್ತದೆ.[೧೬೩] ಹೊಸದಾಗಿ ನೆಲವನ್ನು ಬೇಸಾಯಕ್ಕೊಳಪಡಿಸುವುದರಲ್ಲೂ ಕೃಷಿ ಉತ್ಪಾದನೆಯನ್ನು ಹೆಚ್ಚಿಸುವುದರಲ್ಲೂ

ಈ ಅರಸರು ಬಹಳ ಆಸಕ್ತಿ ವಹಿಸಿದರು. ಚಾಮರಾಜನಗರದ ಒಂದು ಶಾಸನದಿಂದ ತಿಳಿದುಬರುವಂತೆ ರಾಜನು ಆನಿವಾಸಿ ಹಳ್ಳಿಗರಿಗೆ ಅವರು ಬೇಕಾದರೆ ಗ್ರಾಮದ ಅಧಿಕಾರಿಗಳಾದ ಪಾರುಪತ್ಯಗಾರ,ಗೌಡ ಮತ್ತು ಸೇನಬೋಗರಿಂದ ಪಟ್ಟಾ (ಪರವಾನಿಗಿ) ಪಡೆದು ಹೊಂಗನೂರಿನಲ್ಲಿ ಗದ್ದೆಗಳನ್ನು ಬೇಸಾಯ ಮಾಡಬಹುದು ಎಂಬು ಅನುಮತಿಕೊಟ್ಟನು.[೧೬೪]

ಆ ಕಾಲದಲ್ಲಿ ಪ್ರಚುರವಾಗಿದ್ದ ಭೂಮಿದಾನಗಳ ಪೈಕಿ ಪಲ್ಲಕ್ಕಿ ಉಂಬಳಿ ಎಂಬುದೊಂದಿದ್ದುದನ್ನು ಕೇಳುತ್ತೇವೆ. ರಾಜನ ಪಲ್ಲಕ್ಕಿಯನ್ನು ಸುಸ್ಥಿತಿಯಲ್ಲಿ ಇಟ್ಟುಕೊಂಡ ವ್ಯಕ್ತಿಗೆ ಕೊಡುತ್ತಿದ್ದ ಉಂಬಳಿಯೇ ಇದು.[೧೬೫] ಇನ್ನೊಂದು ಸ್ವಾರಸ್ಯವಾದ ಬಗೆ ಕೊಡಗಿ, ನೆತ್ತರು ಕೊಡಗಿ. ಯುದ್ಧದಲ್ಲಿ ಪ್ರಾಣವನ್ನು ಬಲಿಗೊಟ್ಟ ಯೋಧರ ಕುಟುಂಬಗಳಿಗೆ ಕೊಡುತ್ತಿದ್ದ ದಾನ ಇದು.[೧೬೬]

ಹದಿನಾಡಿನ ರಾಜರು ಬಹುವಾಗಿ ಧಾರ್ಮಿಕ ಪ್ರವೃತ್ತಿಯವರು. ದೇವಾಲಯಗಳನ್ನು ಅವರು ಕಟ್ಟಿಸಿದರು ಮತ್ತು ಜೀರ್ಣೋದ್ಧಾರ ಮಾಡಿಸಿದರು. ಸಿಂಗದೇವನು ಕಟ್ಟಿಸಿದ ಗೌರೀಶ್ವರ ದೇವಾಲಯಕ್ಕೆ ರಾಮರಾಜನಾಯಕ ಮತ್ತು ಅವನ ಮಗ ತಿರುಮಲನಾಯಕ ಬೇಕಾದಷ್ಟು ಕಾಣಿಕೆಗಳನ್ನು, ದತ್ತಿಗಳನ್ನು ಅರ್ಪಿಸಿದರು. ದೇವಾಲಯವನ್ನು ಸುಸ್ಥಿತಿಯಲ್ಲಿ ಇಟ್ಟುಕೊಳ್ಳಲು, ದಿನನಿತ್ಯದ ಪೂಜಾಕ್ರಮಗಳನ್ನು ನೆರವೇರಿಸಲು, ಸಂಗೀತಗಾರರು, ನರ್ತಕಿಯರು, ತಮಟೆಯವರು ಮೊದಲಾದ ದೇವಾಲಯದ ವಿವಿಧ ಸಿಬ್ಬಂದಿಗೆ ವೇತನ ಕೊಡಲು ಬೇಕಾದಷ್ಟು ಧನಸಹಾಯ ಮಾಡಿದರು.[೧೬೭]

ವ್ಯಾಪಾರವು ಉಚ್ಛ್ರಾಯ ಸ್ಥಿತಿಯಲ್ಲಿತ್ತು. ವಾರಕ್ಕೊಮ್ಮೆ ನಡೆಯುವ ಸಂತೆಗಳ ಸ್ಥಾಪನೆಯಲ್ಲಿ ಅವರು ಬಹುವಾಗಿ ಆಸಕ್ತಿ ತೋರಿಸಿದರು. ವರ್ತಕ ವರ್ಗಕ್ಕೆ ಸ್ಥಳಸುಂಕ, ಒಳವಾರು, ಹೊರವಾರು ಮೊದಲಾದ ತೆರಿಗೆಗಳ ವಿನಾಯಿತಿ ಕೊಟ್ಟು ಪ್ರೋತ್ಸಾಹಿಸಿದರು.[೧೬೮]

ಈ ಕಾಲಾವಧಿಯಲ್ಲಿ ಹದಿನಾಡಿನಲ್ಲಿ ದೇವದಾಸಿ (ದೇವಾಲಯ ನರ್ತಕಿಯರ) ಪದ್ಧತಿಯು ಚಾಲ್ತಿಯಲ್ಲಿದ್ದಿತೆಂಬುದು ಸ್ವಾರಸ್ಯವಾಗಿದೆ.[೧೬೯] ಹದಿನಾಡಿನ ಅರಸರು ಶಿಕ್ಷಣ ಮತ್ತು ಸಾಹಿತ್ಯಗಳ ಉದಾರ ಪೋಷಕರಾಗಿದ್ದರು. ಯಳಂದೂರಿನ ಮುದ್ದುಭೂಪನ ಮನೆತನದ ಆರಾಧ್ಯ (ಗುರು) ಷಡಕ್ಷರಯ್ಯ; ಯಳಂದೂರಿನ ಸುಪ್ರಸಿದ್ಧ ಜೈನ ವಿದ್ವಾಂಸ ವಿಶಾಲಾಕ್ಷ ಪಂಡಿತ, ಯಳಂದೂರು ಪಂಡಿತ ಎಂದು ಜನಪ್ರಿಯನಾದವನು, ಮುಂದೆ ಚಿಕ್ಕದೇವರಾಜನ ಪ್ರಧಾನಿಯಾದವನು; ಚಿಕ್ಕದೇವರಾಜರ ಆಸ್ಥಾನಕವಿ ತಿರುಮಲಾರ್ಯ ಇವರು ಚಿಕ್ಕದೇವನ ಸಹಚರರೂ ಸಹಪಾಠಿಗಳೂ ಆಗಿದ್ದರು. ಗುಂಡ್ಲುಪೇಟೆಯ ಬಳಿಯ ಹಂಗಳದಲ್ಲಿ ರಾಜನೀತಿಯ ತರಬೇತಿ ಪಡೆದರು.

ಷಡಕ್ಷರಯ್ಯನು ರೇಣುಕಾಚಾರ್ಯ ಗೋತ್ರದ ವೀರಶೈವ ಆರಾಧ್ಯನಾಗಿದ್ದನು. ಮಳವಳ್ಳಿ ತಾಲೂಕು ಧನುಗೂರಿನ ವೀರಶೈವ ಮಠದ ಮಖ್ಯಸ್ಥ ಚಿಕ್ಕವೀರದೇಶಿಕನ ಶಿಷ್ಯನಾಗಿದ್ದನು. ಅವನು ಹುಟ್ಟಿದ್ದು ಅಲ್ಲೇ ಎಂದು ಹೇಳಲಾಗಿದೆ. ಮೈಸೂರಿನ ಚಿಕ್ಕದೇವರಾಜ ಒಡೆಯರ ಮಂತ್ರಿಮಂಡಲದಲ್ಲಿ ಒಬ್ಬ ಸದಸ್ಯನಾಗಿದ್ದನು. ಶೈವ ಸಾಹಿತ್ಯದ ಎಲ್ಲಾ ಶಾಖೆಗಳಲ್ಲೂ ಪರಿಣತನಾಗಿದ್ದು ಮೊದಲು ಯಳಂದೂರಿನ ಮುದ್ದುಭೂಪನ ಗುರುವಾಗಿದ್ದನು. ಸುಪ್ರಸಿದ್ಧ ಕವಿಯಾದ ಷಡಕ್ಷರಯ್ಯನು ೧೬೫೭ ರಲ್ಲಿ 'ರಾಜಶೇಖರವಿಲಾಸ' ಕಾವ್ಯವನ್ನು ರಚಿಸಿದನು. ಚಿಕ್ಕದೇವರಾಜನ ಆಳಿಕೆಯ ಬಹುಭಾಗ ಅವನು ಯಳಂದೂರಿನಲ್ಲಿ ಮುದ್ದುಭೂಪನು ತನಗಾಗಿ ಕಟ್ಟಿಸಿಕೊಟ್ಟಿದ್ದ ಮಠದಲ್ಲೇ ಕಳೆದು ಅಲ್ಲೇ ಲಿಂಗೈಕ್ಯನಾದನು. ಯಳಂದೂರಿನ ಲಿಂಗರಾಜಯ್ಯನ ಮಗಳು ದೇವಾಜಮ್ಮ ಚಿಕ್ಕದೇವರಾಜ ಒಡೆಯರ ಪತ್ನಿ.[೧೭೦] ಶಾಸನದ ಕರ್ತೃ ಮತ್ತು ಶಾಸನವನ್ನು ಕೆತ್ತಿದವನ ಇಬ್ಬರ ಹೆಸರುಗಳನ್ನೂ ಕೊಡುವ ಸ್ವಾರಸ್ಯವಾದೊಂದು ಶಾಸನವು ದೊರಕಿದೆ. ಯಳಂದೂರಿನ ಗೌರೀಶಂಕರ ದೇವಾಲಯದ ಶಾಸನವನ್ನು ರಚಿಸಿದವನು ಸಾಸಲಯ್ಯನೆನ್ನುವವನು, ಅದನ್ನು ಬರೆದವನು (ಕಲ್ಲಿನ ಮೇಲೆ ಕೆತ್ತಿದವನು) ಬೊಮ್ಮಣ್ಣಪಂಡಿತನ ಮಗ ರಸಿಕಪಂಡಿತ ಎಂದು ಹೇಳಿದೆ.

ಹದಿನಾಡಿನ ಅರಸರ ವಂಶಾವಳಿ

ದೇವಪ್ಪ ಒಡೆಯರ್

ಮಗ ಚಿನ್ನರಸಒಡೆಯರ್ (ಸಿಂಗೆದೇಪ) ೧೬೫೪

ರಾಮರಾಜ

ಚನ್ನರಾಜ ಒಡೆಯರ್

ತಿಮ್ಮರಾಜ

ನಂಜರಾಜ

ಇಮ್ಮಡಿ ರಾಮರಾಜನಾಯಕ (ರಾಜಒಡೆಯರು ೧೬೦೮ರಲ್ಲಿ ಇದನ್ನು ಸೋಲಿಸಿ ಹದಿನಾಡನ್ನು ಮೈಸೂರಿಗೆ ಸೇರಿಸಿದರು)

ಮುದ್ದರಾಜ

ಲಿಂಗರಾಜ (೧೬೪೭)

ನಂಜರಾಜ ಒಡೆಯರ್ (ತೆರಕಣಾಂಬಿ ಮತ್ತು ಉಮ್ಮತ್ತೂರಿನ ರಾಜ. ಇವನನ್ನು ೧೬೧೬ ರಲ್ಲಿ ರಾಜಒಡೆಯರು ಸೋಲಿಸಿದರು)

ಚಂದ್ರಶೇಖರ ಒಡೆಯರ್ (ಹದಿನಾಡಿನ ಅಧೀನ ಪ್ರದೇಶ ರಾಮಸಮುದ್ರದ ರಾಜ. ೧೬೧೫ ರಲ್ಲಿ ರಾಜಒಡೆಯರು ಇವನನ್ನು ಸೋಲಿಸಿದರು)

ಇದು ಸಂಪೂರ್ಣವಾಗಿ ಶಾಸನಗಳು ಆಧಾರದಿಂದ ಸಿದ್ಧಪಡಿಸಿದ ಮತ್ತು ಕೇವಲ ತಾತ್ಕಾಲಿಕವಾದ ವಂಶಾವಳಿ

ಚನ್ನಪಟ್ಟಣದ ರಾಜರು

ಮೈಸೂರಿನ ಕಿರಿಯ ರಾಜವಂಶಗಳ ಪೈಕಿ ರಣವಂಶ ಅಂದರೆ ರಣಪೆದ್ದ ಜಗದೇವರಾಯನ ವಂಶವೂ ಮುಖ್ಯವಾದುದೊಂದು. ನಾವು ಇದುವರೆಗೆ ಪರಿಶೀಲಿಸಿದ ಇತರ ಕಿರಿಯ ರಾಜವಂಶಗಳು ಈ ಮಣ್ಣಿನ ಮಕ್ಕಳಾಗಿದ್ದರು. ಆದರೆ ರಣವಂಶದವರು ತೆಲುಗು ಮೂಲದವರು. ಚನ್ನಪಟ್ಟಣದ ಆಡಳಿತ ಪ್ರದೇಶವು ಅಸ್ತಿತ್ವಕ್ಕೆ ಬಂದದ್ದು ೧೫೮೦ರಲ್ಲಿ. ಪೆನುಕೊಂಡೆಯ ಮೇಲೆ ನಡೆದ ಕುತುಬ್‌ಶಾಹಿ ಧಾಳಿಗಳಲ್ಲಿ ೧೫೮೦ರಲ್ಲಿ ರಾಜ ಶ್ರೀರಂಗನೇ ಗೋಲ್ಕೊಂಡ ಸೇನೆಗೆ ಸೆರೆಸಿಕ್ಕಿದನು. ಆದರೆ ರಣಪೆದ್ದ ಜಗದೇವರಾಯನು ಅಸಾಧಾರಣ ಪರಾಕ್ರಮದಿಂದ ಅವನನ್ನು ಬಂಧನದಿಂದ ಬಿಡುಗಡೆ ಮಾಡಿದನು. ವಿಜಯನಗರ ಸಾಮ್ರಾಜ್ಯಕ್ಕೆ ನಿಷ್ಠಾವಂತ ಸೇವಕ ಜಗದೇವರಾಯನು ಸಲ್ಲಿಸಿದ ಸೇವೆಗಾಗಿ ವರ್ಷಕ್ಕೆ ಒಂದು ಲಕ್ಷ ವರಹಗಳನ್ನು ಕೊಡುತ್ತಿದ್ದ ಒಂದು ಹೊಸ ರಾಜ್ಯವನ್ನೇ ರೂಪಿಸಿ ಅವನಿಗೆ ಕೊಡಲಾಯಿತು. ಮಂಡ್ಯ, ಬೆಂಗಳೂರು ಮತ್ತು ಬಾರಾಮಹಲ್ ಜಿಲ್ಲೆಗಳನ್ನು ಒಳಗೊಂಡಿದ್ದ ಈ ಪ್ರದೇಶಕ್ಕೆ ಚನ್ನಪಟ್ಟಣವು ಕೇಂದ್ರಸ್ಥಾನವಾಯಿತು.

೧೬೧೦ ರಲ್ಲಿ ರಾಜಒಡೆಯರು ಶ್ರೀರಂಗಪಟ್ಟಣವನ್ನು ಗೆದ್ದುಕೊಂಡಾಗಿನಿಂದ ಮೈಸೂರಿನ ರಾಜರು ಇಕ್ಕೇರಿ ಹಾಗೂ ಚನ್ನಪಟ್ಟಣ ಸಂಸ್ಥಾನಗಳನ್ನು ಗೆಲ್ಲುವ ಸಂಕಲ್ಪ ಮಾಡಿದ್ದರು. ಏಕೆಂದರೆ, ೧೫೭೭ ರಲ್ಲಿ ತಿರುಮಲನು ರಚಿಸಿದ ಕರ್ನಾಟಕ ವೈಸರಾಯಿತ್ವದಲ್ಲಿ ಚನ್ನಪಟ್ಟಣ ಮತ್ತು ಇಕ್ಕೇರಿಗಳೂ ಸೇರಿದ್ದುವು. ಆದ್ದರಿಂದ ಚನ್ನಪಟ್ಟಣ ಮತ್ತು ಇಕ್ಕೇರಿಗಳಲ್ಲದೆ ಶ್ರೀರಂಗಪಟ್ಟಣದ ಗೆಲುವು ಅಸಂಪೂರ್ಣವಾಗುತ್ತಿತ್ತು.

ಅಲ್ಲದೆ ಮೈಸೂರಿನಿಂದ ಉತ್ತರಕ್ಕೆ ಮುಂದುವರಿಯಲು ಇದ್ದ ಕಡೆ ಚನ್ನಪಟ್ಟಣವನ್ನು ಗೆಲ್ಲದೆ ಇಕ್ಕೇರಿಯನ್ನು ವಶಪಡಿಸಿಕೊಳ್ಳುವ ಯೋಚನೆಯೂ ಸಾಧ್ಯವಿರಲಿಲ್ಲ. ಆದ್ದರಿಂದಲೇ ಉದ್ದಕ್ಕೂ ಮೈಸೂರು ಜಗದೇವರಾಯನ ಬಗೆಗೆ ವೈರಭಾವವನ್ನೇ ತಾಳಿತು. ಕಂಠೀರವ ನರಸರಾಜ ಒಡೆಯರ ಆಸ್ಥಾನ ಕವಿಯಾಗಿದ್ದ ಗೋವಿಂದ ವೈದ್ಯನಿಂದ ತಿಳಿದುಬರುವಂತೆ, (ಅವಿಧೇಯ ವೈಸರಾಯ್ ಆಗಿದ್ದ ರಾಜಒಡೆಯರನ್ನು ದಂಡಿಸಲು) ೧೫೯೬ರಲ್ಲಿ ತಿರುಮಲನು ಕೆಸರೆಯ ಮೇಲೆ ದಂಡೆತ್ತಿ ಬಂದಾಗ ಆ ಸೈನ್ಯದಲ್ಲಿ ಇತರರ ಜೊತೆಗೆ ಇಮ್ಮಡಿ ಜಕ್ಕನ (ಇಮ್ಮಡಿ ಜಗದೇವರಾಯನ) ಸೇನೆಯೂ ಸೇರಿದ್ದಿತು.[೧೬೧] ಇದಕ್ಕೆ ಸೇಡು ತೀರಿಸಲೆಂಬಂತೆ ರಾಜಒಡೆಯರು ೧೬೧೪ರಲ್ಲಿ ಚನ್ನಪಟ್ಟಣ ಪ್ರದೇಶದಲ್ಲಿ ಹಲವಾರು ಆಕ್ರಮಣಗಳನ್ನು ನಡೆಸಿ, ಜಗದೇವರಾಯನಿಗೆ ಸೇರಿದ್ದ ನೇರಳಕೆರೆ, ಮತ್ತಿಕೆರೆ, ಚೀಣ್ಯ, ದುದ್ದ ಮತ್ತು ಪಂಪಾಪುರ ಮೊದಲಾದ ಮುಖ್ಯ ಸ್ಥಳಗಳನ್ನು ವಶಪಡಿಸಿಕೊಂಡರು. ಇವೆಲ್ಲ ಈಗಿನ ನಾಗಮಂಗಲ ತಾಲೂಕಿನಲ್ಲಿ ಇರುವಂಥವು.[೧೬೨] ಮುಂದೆ ಅದೇ ವರ್ಷ ರಾಜಒಡೆಯರು ಚನ್ನಪಟ್ಟಣ ಸಂಸ್ಥಾನಕ್ಕೆ ಇನ್ನಷ್ಟು ಪ್ರವೇಶಿಸಿ ಕಿಕ್ಕೇರಿ ಮತ್ತು ಹೊಸಹೊಳಲುಗಳನ್ನು ಗೆದ್ದರು.

೧೬೧೮ ರಲ್ಲಿ ಜಗದೇವರಾಯನು ಶ್ರೀರಂಗಪಟ್ಟಣಕ್ಕೆ ಒಂದು ರಾಯಭಾರವನ್ನು ಕಳುಹಿಸಿದನು. ರಾಮಲಿಂಗ ಎಂಬ ಹೆಸರಿನ ಒಂದು ಆನೆಯನ್ನೂ ೩೦೦೦ ವರಹಗಳನ್ನೂ ಕಾಣಿಕೆಯಾಗಿ ಕಳಿಸಿ, ಚಿಕ್ಕನಾಯಕನ ಹಳ್ಳಿಯನ್ನು ಗೆಲ್ಲಲು ಚಾಮರಾಜ ಒಡೆಯರ ಸಹಾಯವನ್ನು ಕೋರಿದನು. ಚಾಮರಾಜ ಒಡೆಯರು ಆ ಉಡುಗೊರೆಗಳನ್ನು ಹಿಂದಿರುಗಿಸಿ ನಾಗಮಂಗಲವನ್ನು ಗೆದ್ದುಕೊಂಡು ಮುಖ್ಯ ಸಾಮಂತ ಜಗದೇವರಾಯನನ್ನೇ ತಮ್ಮ ಹಿಡಿತದಲ್ಲಿಟ್ಟುಕೊಳ್ಳಲು ಪ್ರಯತ್ನಿಸಿದರು.[೧೬೩] ಈ ಘಟನೆಯನಂತರ ಚಾಮರಾಜರು ಕಾವೇರಿ ನದಿಯಿಂದಾಚೆಗೆ ತಮ್ಮ ವಿಜಯೋದ್ಯೋಗವನ್ನು ವಿಸ್ತರಿಸಿ, ಸರಣಿ ಯುದ್ಧಗಳ ನಂತರ ೧೬೩೦ರಲ್ಲಿ ಇಡೀ ಚನ್ನಪಟ್ಟಣ ಪ್ರಾಂತವನ್ನೇ ವಾಸ್ತವವಾಗಿ ನಾಶಮಾಡಿದರು. ವಿಜಯನಗರದ ರಾಜನು ಚಕಾರವೆತ್ತಲಿಲ್ಲ. ವಿಜಯನಗರವು ಈ ಪ್ರಾಂತವನ್ನು ಕಳೆದುಕೊಂಡಿತು, ಜಗದೇವರಾಯನ ಅಧಿಕಾರ ಕೇವಲ ಬಾರಾಮಹಲ್‌ಗೆ ಸೀಮಿತವಾಯಿತು. ಅಂತೂ, ಚನ್ನಪಟ್ಟಣವು ಮೈಸೂರಿಗೆ ಸೇರಿದ್ದರಿಂದ ಆಕ್ರಮಣಕಾರಿ ಬಿಜಾಪುರಕ್ಕೆದುರಾಗಿ ಒಂದು ಬಲವಾದ ತಡೆಯನ್ನು ಒಡ್ಡುವುದು ಸಾಧ್ಯವಾಯಿತು.

ಸಾಹಿತ್ಯ ಮತ್ತು ಕಲೆ

ಈ ಅರಸರು ಬಹಳ ಕಡಮೆ ಸಮಯ ಆಳಿದರೂ ಭವಿಷ್ಯತ್ತಿಗೆ ಕೆಲವು ಸ್ವಾರಸ್ಯವಾದ ಉಡುಗೊರೆಗಳನ್ನು ಕೊಟ್ಟಿದ್ದಾರೆ.

ಸಂಸ್ಕೃತ ಕೃತಿ ಜಾಂಬವತೀಕಲ್ಯಾಣ, ಕೃಷ್ಣನು ಜಾಂಬವತಿಯನ್ನು ವಿವಾಹವಾದ ಕತೆಯನ್ನು ಕುರಿತ ಕಾವ್ಯ. ಇದನ್ನು ಬರೆದವನು ಕೊಂಡವೀಡಿನ ಏಕಾಮರನಾಥ. ಚನ್ನಪಟ್ಟಣದವರೆಗೆ ಬಂದು ಜಿಲ್ಲೆಯ ಆಡಳಿತಾಧಿಕಾರಿ ಇಮ್ಮಡಿ ಅಂಕುಶರಾಯನಿಗೆ ಕೃತಿಯನ್ನು ಅರ್ಪಿಸಿದನು. ಜಗದೇವರಾಯನು ನಾಲ್ಕನೆಯ ವರ್ಣಕ್ಕೆ ಸೇರಿದವನು, ಅದು ರಾಣವಂಶವೆಂದು ಹೆಸರಾಯಿತು ಎಂದು ಕವಿಯು ಹೇಳುತ್ತಾನೆ.[೧೬೪]

ಏಕಾಮರನಾಥನು ಸತ್ಯಪರಿಣಯಮು ಎಂಬ ಇನ್ನೊಂದು ಕೃತಿಯನ್ನೂ ರಚಿಸಿದ್ದಾನೆ. ಇದು ಇಮ್ಮಡಿ ಅಂಕುಶನಿಗೆ ಅರ್ಪಿತವಾಗಿದೆ. ಅವನ ರಾಜಧಾನಿ ಚನ್ನಪಟ್ಟಣ. ಜಗದೇವರಾಯನು ೧೫೭೭ರಲ್ಲಿ ಮುಹಮ್ಮದೀಯರನ್ನು ಸೋಲಿಸಿ ಪೆನುಕೊಂಡೆಯಿಂದ ಹೊರಗಟ್ಟಿದನು ಎಂದು ರೈಸ್ ಹೇಳುತ್ತಾರೆ. ಜಗದೇವರಾಯನು ವಿಜಯನಗರ ಚಕ್ರವರ್ತಿಯ ಅಳಿಯನಾಗಿದ್ದನು ಎಂದು ವಿಲ್ಕ್ಸ್ ಊಹಿಸುತ್ತಾರೆ. ಆದರೆ ಎಸ್. ಕೆ. ಅಯ್ಯಂಗಾರ್ ಈ ಮಾತನ್ನು ನಿರಾಕರಿಸುತ್ತಾರೆ.[೧೬೫]

ನಾಗಮಂಗಲದ ಸೌಮ್ಯ ಕೇಶವ ದೇವಾಲಯದ ಮುಂದಿರುವ ದೊಡ್ಡ ಸ್ತಂಭವು ಸೊಗಸಾದ ಒಂದು ಗರುಡಗಂಬ. ಸುಮಾರು ೫೫ ಅಡಿ ಎತ್ತರ, ಕೆಳಗೆ ೨ ೧/೩ ಅಡಿ ಚಚ್ಚೌಕ ಅಳತೆಯಲ್ಲಿದ್ದು ಬಹುಸೂಕ್ಷ್ಮವಾದ ಕೆತ್ತನೆ ಕೆಲಸವನ್ನು ಒಳಗೊಂಡಿದೆ. ಮೇಲೆ ದೀಪವನ್ನು ಇಡಲು ಕಬ್ಬಿಣದ ಸರಪಣಿ, ಕಬ್ಬಿಣದ ಚೌಕಟ್ಟು ಮುಂತಾದ ವ್ಯವಸ್ಥೆಗಳೆಲ್ಲ ಇವೆ. ಇದನ್ನು ನಾಗಮಂಗಲದ ಅರಸ ಜಗದೇವರಾಯನು ನಿಲ್ಲಿಸಿದನು ಎಂದು ಹೇಳಲಾಗಿದೆ. ದೇವಾಲಯದ ಎದುರಿನ ಗೋಪುರವನ್ನು ಅವನು ಕಟ್ಟಿಸಿದನು ಎಂದು ಹೇಳಲಾಗಿದೆ.[೧೭೬]

ನಾಗಮಂಗಲದಿಂದ ಸುಮಾರು ಒಂದು ಮೈಲು ದೂರದಲ್ಲಿ ೩ ಅಡಿ ಆಳವಾದ ಸುಂದರವಾದ ಒಂದು ವೃತ್ತಾಕಾರದ ಕೊಳವಿದೆ. ಇದನ್ನು ಜಗದೇವರಾಯನು ತನ್ನ ಪತ್ನಿಯರೊಂದಿಗೆ ಜಲಕ್ರೀಡೆಯಾಡಲು ಕಟ್ಟಿಸಿದನು ಎಂದು ಹೇಳಲಾಗಿದೆ. ಅದರ ಮುಂದೆ ಒಂದು ಮಂಡಪವೂ ಇದೆ.[೧೭೭]

ಚನ್ನಪಟ್ಟಣದ ರಾಜರ ವಂಶಾವಳಿ

ರಣಪೆದ್ದ ಜಗದೇವರಾಯ (೧೫೪೦)

ಅಂಕುಶರಾಯ (೧೫೪೫) — ಇಮ್ಮಡಿ ಜಗದೇವರಾಯ

ಅಂಕುಶರಾಯನ ಮಕ್ಕಳು: ಮುಮ್ಮಡಿ ಜಗದೇವರಾಯ (೧೬೩೦) — ಇಮ್ಮಡಿ ಅಂಕುಶರಾಯ

ಮುಮ್ಮಡಿ ಜಗದೇವರಾಯ (೧೬೩೦)
(ಕುಮಾರ ಜಗದೇವರಾಯ)
೧೬೩೦ರಲ್ಲಿ ಮೈಸೂರಿನ ಚಾಮರಾಜ
ಒಡೆಯರು ಇವನನ್ನು ಸೋಲಿಸಿದರು.

ಪ್ರಸ್ತುತ ಲೇಖನದಲ್ಲಿ ಮೇಲೆ ಕೊಟ್ಟಿರುವ ವಂಶಾವಳಿಗಳೆಲ್ಲವೂ ಸಂಪೂರ್ಣವಾಗಿ ಶಾಸನಾಧಾರದಿಂದ ರಚಿಸಿದವು. ಆದ್ದರಿಂದ ಅವನ್ನು ತಾತ್ಕಾಲಿಕ ಎಂದಿಟ್ಟುಕೊಳ್ಳಬೇಕು.

ಟಿಪ್ಪಣಿಗಳು

೧ ರೈಸ್, ಬಿ.ಎಲ್.: ಮೈಸೂರು ಗೆಜಿಟಿಯರ್, ಸಂ.೧, ಪು. ೩೫-೩೭

೨ ರೈಸ್, ಬಿ.ಎಲ್.: ಮೈಸೂರು ಆಂಡ್ ಕೂರ್ಗ್ ಫ್ರಂ ಇನ್‌ಸ್ಕ್ರಿಪ್ಷನ್ಸ್, ಪು. ೧

೩ ಅದೇ.

೪ ಕಂಠೀರವ ನರಸರಾಜ ವಿಜಯಂ, ಸಂ. ೧, ೧ ಪದ್ಯಗಳು ೧ ರಿಂದ ೭; ಮುಹಮದ್ ನಾಮಾ. (ಶಿವಾಜಿ ನಿಬಂಧಾವಳಿ.) ಪು. ೯೭

೫ ಫರೂಕಿ ಅಸ್ರಾಬಾದಿ: ಫುತುಹತ್-ಇ-ಅದಿಲ್‌ಶಾಹಿ, ೩೭೪ಅ; ೩೭೪ಬ; (ಶಿವ.ನಿಬಂ.) ಪು.೯೭; ಮುಹಮ್ಮದ್ ಇಬ್ರಾಹಿಂ ಜುಬೈರಿ, ಬಸತಿನ್-ಉಸ್-ಸತತ್ಮಿ, ಪು.೩೧೪; ಕೆಳದಿನೃಪವಿಜಯಂ, ಸಂ. ೬-೯೪, ೫-೩೨; ರೈಸ್, ಮೈ.ಗೆ. ೧, ಪು. ೩೫೯.

೬ ನರಸಿಂಹಯ್ಯ, ಎಸ್.ಕೆ.: ಫೌಂಡರ್ ಆಫ್ ಬೆಂಗಳೂರು, ಪು.೩೦

೭ ಚನ್ನಯ್ಯನು ಮೊದಲು ಚನ್ನಪಟ್ಟದ ಜಗದೇವರಾಯನ ಸೈನ್ಯದ ದಳವಾಯಿ ಆಗಿದ್ದನು. ೧೬೨೬ರಲ್ಲಿ ಮೈಸೂರಿನ ದಳವಾಯಿ ಲಿಂಗಣ್ಣನು ಚನ್ನಪಟ್ಟಣವನ್ನು ಆಕ್ರಮಿಸಿದಾಗ ಯುದ್ಧ ಮಾಡಿ ಅವನನ್ನು ಇರಿದು ಕೊಂದನು. ೧೬೩೦ರಲ್ಲಿ ಚನ್ನಪಟ್ಟಣವು ಪತನ ಹೊಂದಿದ ಮೇಲೆ ಚನ್ನಯ್ಯನು ಬಿಜಾಪುರಕ್ಕೆ ಹೋಗಿ, ಮೈಸೂರಿನ ಕಂಠೀರವನ ವಿರುದ್ಧವಾಗಿ ಅದಿಲ್‌ಶಾಹಿನ ನೆರವನ್ನು ಪಡೆದನೆಂದು ತೋರುತ್ತದೆ.

೮ ಕಂ.ನ.ವಿ.-೯, ೫-೬೧

೯ ಮು.ನಾ. (ಶಿವ.ನಿಬಂ.) ಪು. ೯೯, ೧೦೦; ಶಿವಭಾರತ ಪದ್ಯಗಳು ೩೯-೪೪

೧೦ ಮು.ನಾ.: ಪೂರ್ವೋಕ್ತ; ನೀಲಕಂಠಶಾಸ್ತ್ರಿ, ಕೆ.ಎ.: ಫರ್ದರ್ ಸೋರ್ಸಸ್, ಸಂ. ೧, ಪು.೩೪೩; ಶಿವಕಾಲೀನ ಪತ್ರಸಾರ, ಸಂ. ೨, ಪು. ೧೭೧

೧೧ ಫರ್ದರ್ ಸೋರ್ಸಸ್, ಸಂ.೧, ಪು. ೩೪೬, ಅಡಿಟಿಪ್ಪಣಿ ೧

೧೨ ಕೆ.ನೃ.ವಿ. ಪು. ೯೮-೯೯; ಕಂ.ನ.ವಿ.-೧೬, ಪು. ೨೨

೧೩ ಮು.ನಾ. (ಶಿವ. ನಿಬಂ.) ಪು.೧೦೦-೧೦೨; ವರ್ಮ : ಹಿಸ್ಟರಿ ಆಫ್ ಬಿಜಾಪುರ, ಪು. ೧೪೦-೪೧; ಕಂ.ನ.ವಿ. -೧೬, ಪದ್ಯಗಳು ೨೪-೨೯; ಫರ್ದರ್ ಸೋರ್ಸಸ್ ಸಂ. ೧, ಪು.೩೪೫

೧೪ ಮುದ್ದಾಚಾರಿ : ಮೈಸೂರು ಮರಾಠಾ ರಿಲೇಷನ್ಸ್, ಪು. ೨೩, ೨೬

೧೫ ಮೈ.ಗೆ. ೫, ಪು. ೧೨೭೬

೧೬ ಅದೇ.

೧೭ ಮೈಸೂರು ದೊರೆಗಳ ಪೂರ್ವಾಭ್ಯುದಯ, ಸಂ. ೨, ಪು. ೮; ಮೈಸೂರು ದೊರೆಗಳ ವಂಶಾವಳಿ, ಪು.೨೫; ಚಿಕ್ಕದೇವರಾಜ ವಂಶಾವಳಿ, ಸಂ. ೨, ಪು. ೭೮-೮೨

೧೮ ಚಿಕ್ಕದೇವರಾಜ ವಂಶಾವಳಿ, ಪೂರ್ವೋಕ್ತ

೧೯ ಎ.ಕ. ೧೨, ಸಿ.ಎಚ್. ೩೮

೨೦ ಎ.ಕ. ೧೬, ಟಿ.ಪಿ. ೨೦೨

೨೧ ಕರ್ಣಾಟಕ ಕವಿಚರಿತೆ, ಸಂ. ೨, ಪು. ೩೨೦

೨೨ ಹಯವದನ ರಾವ್: ಗಜೆಟಿಯರ್, ಸಂ. ೫, ಪು. ೪೬೮

೨೩ ಮು.ನಾ. ಪೂರ್ವೋಕ್ತ, ಪು. ೧೦೧-೧೦೨; ಚಿ.ನಂ. ಪು. ೩೩; ಚಿಕ್ಕದೇವರಾಜ ವಿಜಯ, ೭೮-೮೨

೨೪ ಪಾಳೆಗಾರ್ಸ್ ಆಫ್ ಹಾಗಲವಾಡಿ, ಪು. ೧೫-೧೬

೨೫ ಎಂ.ಎ.ಆರ್. ೧೯೨೨, ಪು. ೧೨೨, ೧೨೩

೨೬ ಸುಜಾತ, ಎಚ್.ಎಸ್.: ಎಂ.ಎಸ್ ಪುಟ್ಟಣ್ಣ : ಒಂದು ಅಧ್ಯಯನ, ಪು. ೨೫೫

೨೭ ಅದೇ.

೨೮ ಅದೇ.

೨೯ ಮೈ.ಕೂ., ಪು. ೧೫೭

೩೦ ಫರ್ದರ್ ಸೋರ್ಸಸ್, ಸಂ. ೧, ಪು. ೩೬೨

೩೧ ಎ.ಕ. ೯, ಎಚ್.ಟಿ. ೭೯; ಎ.ಕ.೫, ಬಿ.ಎಲ್. ೮೦ (೧೬೫೯), ೮೧ (೧೬೬೦) ೮೨; ಎ.ಜಿ. ೮೩ (೧೬೬೨), ಎಚ್.ಎನ್. ೩೯, ೪೦; ಎಂ.ಜೆ. ೨೧; ಎ.ಕ. ೧೧ , ಕೆ.ಜಿ. ೪೬, ಇತ್ಯಾದಿ

೩೨ ಕೆ.ನೃ.ವಿ. ಪು. ೧೧೯, ಪದ್ಯ ೪೩

೩೩ ಮೈ.ದೊ.ಪೂ. ಸಂ.೨, ಪು. ೨೬; ಮೈಸೂರು ರಾಜ್ಯದ ಚರಿತ್ರೆ, ಪು. ೨೬; ಎ.ಕ. ೫, ಎಸ್.ಆರ್. ೨೪ (೧೬೮೬); ಚಿ.ವಿ. ಪು. ೧೦೫; ಏನ್ಷೆಂಟ್ ಇಂಡಿಯಾ, ಪು. ೨೯೭; ಡೈನಾಸ್ಟಿ ಆಫ್ ಕಳಲೆ, ಎಂ.ಎ.ಆರ್.ನಲ್ಲಿ, ೧೯೪೨, ಪು. ೮೯

೩೪ ಮೈ.ದೊ.ಪೂ. ಸಂ. ೨, ಪು. ೪೩; ಅನ್ನಲ್ಸ್- ೧, ಪು. ೧೦೮; ವಿಲ್ಕ್ಸ್-ಹಿಸ್ಟರಿ ೧, ಪು. ೧೨೨, ೨೨೬, ೨೨೭; ಹಿಸ್ಟರಿ ಆಫ್ ಮೈಸೂರು - ೧, ಪು. ೩೧೧; ಮೈ.ಮ.ರಿ. ಪು. ೧೨೨

೩೫ ಅದೇ.

೩೬ ಕೆ.ನೃ.ವಿ. ೯, ಪು. ೧೬೭, ಪದ್ಯ ೯೧-೯೩; ಅಪ್ರತಿಮವೀರಚರಿತಂ, ಸಂ. ೩, ಪು. ೧೪೦

೩೭ ಅ.ವೀ.ಚ. ೩, ೫, ಪು. ೧೪೩; ೪, ೫, ಪು. ೯ (ಕೋಶ ಸಹಿತ)

೩೮ ಅದೇ, ೩, ಪದ್ಯ ೩೩, ೪೮, ೮೦, ೯೨, ೯೬, ೧೪೬, ೧೪೭, ೧೭೭; ಅದೇ. ೩, ೧೩೪, ೪-೯; ಮೈ.ದೊ.ಪೂ. ಸಂ. ೨, ೪೬-೪೭; ಅನ್ನಲ್ಸ್-೧, ಪು. ೧೦೮; ವಿಲ್ಕ್ಸ್-ಹಿಸ್ಟರಿ ೧, ಪು.೧೧೨, ೧೨೯

೩೯ ಕೆ.ನೃ.ವಿ. ೧೦, ೧೭೪, ಪದ್ಯ ೭ ಮತ್ತು ೧೦; ಈ ಯುದ್ಧದಲ್ಲಿ ಇಕ್ಕೇರಿಗೆ ದೊರೆತ ವಿಜಯನವನ್ನು ಲಿಂಗಣ್ಣನು ನಿರೂಪಿಸಿದ್ದಾನೆ. ಆದರೆ ಅದನ್ನು ಬೇರೆ ಯಾವ ಮೂಲವೂ ಸ್ಥಿರೀಕರಿಸುವುದಿಲ್ಲವಾಗಿ ಅದು ಕೇವಲ ಬಡಾಯಿಯಾಗಿ ತೋರುತ್ತದೆ.

೪೦ ಮೈ.ಕೂ. ೧, ಪು. ೧೫೯

೪೧ ಪ್ರಾಕ್ಸಿ ಫರ್ನಾಂಡಿಸ್: ದಿ ಟೈಗರ್ಸ್ ಆಫ್ ಮೈಸೂರು, ಪು. ೨೭

೪೨ ಅದೇ, ಪು. ೨೮

೪೩ ಅದೇ.

೪೪ ಪುಟ್ಟಣ್ಣ, ಎಂ.ಎಸ್. : ಹಿಸ್ಟರಿ ಆಫ್ ಇಕ್ಕೇರಿ, ಪು. ೯೬-೧೦೨

೪೫ ಅದೇ, ಪು. ೮೬-೮೭

೪೬ ಎ.ಕ. ೭, ಎಸ್.ಎ. ೧೨೩

೪೭ ಎ.ಕ. ೮, ಟಿ.ಐ. ೧೬೬

೪೮ ಅದೇ.

೪೯ ಕ್ಯು.ಜೆ.ಎಂ.ಎಸ್. ಸಂ. ೨೨, ಪು. ೭೭

೫೦ ಎ.ಕ. ೮, ಎಸ್.ಎ. ೧೨೩

೫೧ ಎ.ಕ. ೬, ಕೊಪ್ಪ ೬೧

೫೨ ಕ್ಯು.ಜೆ.ಎಂ.ಎಸ್. ಸಂ. ೨೨, ಪು. ೭೭-೭೮

೫೩ ಮೈ.ಕೂ., ಪು. ೧೬೧

೫೪ ಪಾಳೆಗಾರ್ಸ್ ಆಫ್ ಚಿತ್ರದುರ್ಗ, ಪು. ೪೧; ಮಸಿಸ್-ಇ-ಅಲಂಗಿರಿ : ಸರಕಾರ್ ಔರಂಗಜೇಬ್, ಸಂ. ೫, ಪು. ೧೧೨; ವಿಲ್ಕ್ಸ್-ಹಿಸ್ಟರಿ ೧, ಪು. ೧೧೭, ಹಿಸ್ಟರಿ ಆಫ್ ಮೈಸೂರು – ೧, ಪು. ೩೧೨

೫೫ ಮೈ.ಕೂ. ೧, ಪು. ೧೫೫ ; ಪಾಳೆಗಾರ್ಸ್ ಆಫ್ ಚಿತ್ರದುರ್ಗ, ಪು. ೫೬-೫೭

೫೬ ಪಾ. ಆಫ್ ಚಿ. ಮುನ್ನುಡಿ, ಪು. ೫

೫೭ ಅದೇ, ಪು. ೬

೫೮ ಅದೇ.

೫೯ ಅದೇ, ಪು. ೭

೬೦ ಅದೇ, ಪು. ೧೦

೬೧ ಅದೇ, ಪು. ೩-೪

೬೨ ರಾಮಚಂದ್ರರಾವ್, ಪಿ.ಬಿ. : ಪಾಳೆಗಾರ್ಸ್ ಆಫ್ ಚಿತ್ರದುರ್ಗ, ಕ್ಯು.ಜೆ.ಎಂ.ಎಸ್. ಸಂ. ೨೯-೩೦,

೬೩ ಎ.ಕ. ೯, ಸಿ.ಕೆ. ೪೦

೬೪ ಅದೇ, ಬಿ.ಜಿ. ೭೦

೬೫ ಕ್ಯು.ಜೆ.ಎಂ.ಎಸ್, ಪೂರ್ವೋಕ್ತ, ಪು. ೭೨೭

೬೬ ಎಂ.ಎ.ಆರ್. ೧೯, ೧೪, ೧೫, ಪು. ೧೧-೧೨

೬೭ ಎ.ಕ. ೯, ಎಂ.ಜಿ. ೧ ಮತ್ತು ೨ (ಕ್ರಮವಾಗಿ ೧೬೩೦ ಮತ್ತು ೧೬೭೦)

೬೮ ವೀರಭದ್ರವಿಜಯ ಚಂಪೂ, ಎಂ.ಎಸ್.ನಂ. ಎ೬೧೦, ಓ.ಲೈ. ಮೈಸೂರು

೬೯ ವಿಲ್ಕ್ಸ್-ಹಿಸ್ಟರಿ ೧, ಪು. ೨೫೦-೫೧; ಮೈ.ರಾ.ಚ. ಪು. ೫-೩೬; ಅನ್ನಲ್ಸ್-೧, ಪು. ೧೬೦; ಏನ್ಸಂಟ್ ಇಂಡಿಯಾ, ಪು. ೩೦೭

೭೦ ಪುಟ್ಟಯ್ಯ : ಕೆಂಪೇಗೌಡ ಚೀಫ್ಸ್, ಕ್ಯುಜೆ.ಎಂ.ಎಸ್. ಪೂರ್ವೋಕ್ತ, ಪು. ೭೩೫

೭೧ ಅದೇ, ಪು. ೭೨೫

೭೨ ಎ.ಕ. ೯, ಬಿ.ಎನ್. ೧

೭೩ ಅದೇ.

೭೪ ಎಂ.ಎ.ಆರ್. ೧೯೧೩, ಪು. ೪

೭೫ ಎ.ಕ. ೮, ಎ.ಜಿ. ೨೦ (೧೬೬೫)

೭೬ ಮೈ.ದೊ.ಪೂ. ಸಂ. ೧, ಪು. ೭೩; ಅನ್ನಲ್ಸ್-೧, ಪು. ೪೩; ವಿಲ್ಕ್ಸ್-ಹಿಸ್ಟರಿ ೧, ಪು. ೫೩

೭೭ ಕೆ.ನ್ಯ.ವಿ. ೩, ಪು. ೫೧; ಮೈ.ರಾ.ಚ. ೧೯; ಅನ್ನಲ್ಸ್-೧, ಪು. ೨೨-೨೩

೭೮ ಚಿ.ವಂ. ಪು. ೩೩; ಚಿ.ವಿ. ೨, ಪು. ೭೦-೭೧; ಮೈ.ದೊ.ವಂ. ಪು. ೨೬; ಮೈ.ರಾ.ಚ. ಪು. ೨೧

೭೯ ಕ.ನ್ಯ.ವಿ. ೧೩, ೧೬-೧೭; ಮೈ.ದೊ.ಪೂ. ೨, ೧೩-೧೪; ಅನ್ನಲ್ಸ್-೧, ಪು. ೬೯; ಕುಡ್ಲ್ಯಾನ್, ಪು. ೨೦೨

೮೦ ಎಂ.ಎ.ಆರ್. ೧೯೧೩, ಪ್ಯಾರಾ ೧೦೬

೮೧ ಅದೇ.

೮೨ ಅದೇ.

೮೩ ಅದೇ.

೮೪ ಚಿ.ವಿ. ಪು. ೧೧೬; ೫-೯೪, ಆದರೆ ಆಮೇಲೆ ನರಸಿಂಹ ನಾಯಕನಿಗೆ ಏನಾಯಿತೆನ್ನುವುದು ನಮಗೆ ತಿಳಿದಿಲ್ಲ.

೮೫ ಮೈ.ದೊ.ಪೂ. ೨, ಪು. ೨೭-೨೮; ಅನ್ನಲ್ಸ್- ೧, ಪು. ೯೮; ಕುಡ್ಲ್ಯಾನ್, ಪು. ೨೦೯; ಮೈ.ರಾ.ಚ. ಪು. ೨೫, ದಿ ಮೈಸೂರ್ ಪ್ಯಾಲೇಸ್ಸ್ ರಿಕಾರ್ಡ್ಸ್, ಅನ್ನಲ್ಸ್-೧, ಪು. ೯೭

೮೬ ಎ.ಕ. ೫, ಕೆ.ಎನ್. ೮೭

೮೭ ಮೈ.ಕೂ.

೮೮ ಎ.ಕ. ೫, ಎಚ್.ಎಸ್. ೨೪

೮೯ ಅದೇ, ಎಚ್.ಎಸ್. ೧೫

೯೦ ಅದೇ, ಎಚ್.ಎಸ್. ೩೬

೯೧ ಮೈ.ದೊ.ಪೂ. ೧, ಪು. ೮೨; ಅನ್ನಲ್ಸ್-೧, ಪು. ೪೪

೯೨ ಚಿ.ವಂ. ಪು. ೩೩; ಅನ್ನಲ್ಸ್-೧, ಪು. ೫೭-೫೮; ಮೈ.ದೊ.ವಂ. ಪು .೨೪-೧೫; ಚಿ.ವಿ. ಪು. ೩೧,

೯೩ ಎ.ಕ. ೫, ಟಿ.ಎನ್. ೧೮ ಮತ್ತು ೧೯; ಎ.ಕ. ೫, ಮುನ್ನುಡಿ, ಪು. ೧೦೬,

೯೪ ಕೆ.ನ್ಯ.ವಿ. ೧೭, ೧೭೮-೮೧; ಅನ್ನಲ್ಸ್-೧, ಪು. ೭೦-೭೧

೯೫ ಅನ್ನಲ್ಸ್-೧, ಪು. ೭೧-೭೨; ಹಿಸ್ಟರಿ ಆಫ್ ಮೈಸೂರ್ ೧, ಪು. ೧೩೪-೧೩೭; ಏನ್ಸಂಟ್ ಇಂಡಿಯಾ, ಪು. ೨೯೪, ೨೯೫; ವಿಲ್ಕ್ಸ್-ಹಿಸ್ಟರಿ ೧, ಪು. ೬೪; ಮೈ.ಮ.ರಿ. ಪು. ೨೭-೩೦

೯೬ ಮೈ.ಕೂ. ಪು. ೧೬೧

೯೭ ಎ.ಕ. ೭, ಎ.ಜಿ. ೮

೯೮ ಮೈ.ರಾ.ಚ. ಪು. ೨೧

೯೮ಅ ಮು.ನಾ.ಪೂರ್ವೋಕ್ತ ಪು. ೧೦೨; ಹಿಸ್ಟರಿ ಆಫ್ ಬಿಜಾಪುರ್, ಪು. ೧೪೧; ಹಿಸ್ಟರಿ ಆಫ್ ಮೈಸೂರ್-೧, ಪು. ೧೨೬; ಮೈ.ಮ.ರಿ. ಪು. ೨೧

೯೯ ಎ.ಕ. ೯, ಎಚ್.ಟಿ. ೪೯; ಎ.ಕ. ೮, ಬಿ.ಎಲ್. ೧೭೩, (೧೫೫೯); ೧೭೪ (೧೬೬೦); ೮೨ (೧೬೬೦); ಎಚ್.ಎನ್. ೩೯-೪೦; ಎಂ.ಜೆ. ೨೧; ಎ.ಕ. ೬, ಸಿ. ೧೫೩; ಎ.ಕ. ೧೧, ಕೆ.ಜಿ. ೪೬ ಇತ್ಯಾದಿ

೧೦೦ ಮೈ.ಗೆ. ೨, ೩, ಪು, ೨೩೫೨, ೨೩೫೩, ೨೩೬೬, ೨೩೬೭

೧೦೧ ಎ.ಕ. ೮, ಎಚ್.ಎನ್, ೨೦; ಎ.ಜಿ. ೧೪೮; ಎಚ್.ಎನ್. ೪೦, ಎ.ಜಿ. ೧೬೪, ೧೬೦; ಎಚ್.ಎ. ೭೬ ಇತ್ಯಾದಿ

೧೦೨ ಅದೇ, ಎ.ಜಿ. ೧೬

೧೦೩ ಕೆ.ನ್ಯ.ವಿ. ಪು. ೫೦೧; ಗದ್ಯಭಾಗ

೧೦೪ ಎ.ಕ. ೮, ಎಚ್.ಎನ್. ೧೪೫ (೧೬೦೫)

೧೦೫ ಎ.ಕ. ೭, ಎಚ್.ಎ. ೩೦೩

೧೦೬ ಎ.ಕ. ೯, ಬಿ.ಎನ್. ೧

೧೦೭ ಎ.ಕ. ೧೧, ಎಚ್.ಕೆ. ೧೧೨

೧೦೮ ಎ.ಕ. ೮, ಎಚ್.ಎ. ೧೨೨

೧೦೯ ಅದೇ, ಎಚ್.ಎ. ೨೦೩

೧೧೦ ಅದೇ, ಎಚ್.ಎ. ೭೯

೧೧೧ ಅದೇ, ಎಚ್.ಎ. ೧೪೪

೧೧೨ ಅದೇ, ಎಚ್.ಎ. ೭೯

೧೧೩ ಎ.ಕ. ೧೧, ಎಚ್.ಕೆ. ೧೧೨

೧೧೪ ಎ.ಕ. ೮, ಎ.ಜಿ. ೧೬

೧೧೫ ಎ.ಕ. ೩, ಜಿ.ಯು. ೧೧

೧೧೬ ಅದೇ.

೧೧೭ ಎ.ಕ. ೪, ಸಿ.ಎಚ್. ೨೩೧

೧೧೮ ಎ.ಇ. ೬, ಪು. ೩೨೭; ಮೈ.ಗೆ. ೨-೩, ಪು. ೧೫೨೬; ಎಂ.ಎ.ಆರ್. ೧೯೦೭-೦೮, ಪ್ಯಾರಾ ೫೨

೧೧೯ ಎ.ಕ. ೪, ಸಿ.ಎಚ್. ೩೭೨; ಜಿ.ಯು. ೭೮ (೧೪೨೨)

೧೨೦ ಫರ್ದರ್ ಸೋರ್ಸಸ್, ಪು. ೧೫೮

೧೨೧ ಅದೇ, ಸಂ. ೧, ಪು. ೧೮೨

೧೨೨ ಅದೇ.

೧೨೩ ಎ.ಎಸ್.ಐ. ೧೯೦೮-೦೯, ಪು. ೧೭೩ ಅಡಿಟಿಪ್ಪಣಿ ೪

೧೨೪ ಮೈ.ಗೆ. ಸಂ ೨-೩, ಪು. ೧೭೮೭

೧೨೫ ಫರ್ದರ್ ಸೋರ್ಸಸ್, ಸಂ. ೧, ಪು. ೧೯೯

೧೨೬ ಅದೇ, ಪು. ೨೦೦

೧೨೭ ಎ.ಕ. ೫, ಎಂ.ವೈ. ೧೧೬; ಎ.ಕ. ೬, ಎಸ್.ಆರ್. ೩೧

೧೨೮ ಮೈ.ಗೆ. ಪೂರ್ವೋಕ್ತ, ಪು. ೧೭೮೮

೧೨೯ ಎ ಫರ್ಗಾಟನ್ ಎಂಪೈರ್, ಪು. ೨೪೯, ಅಡಿಟಿಪ್ಪಣಿ ೧, ೩೩೬

೧೩೦ ಎ.ಕ. ೪, ಸಿ.ಎಚ್. ೩೯೦

೧೩೧ ಅದೇ, ಸಿ.ಎಚ್. ೩೦೦

೧೩೨ ಅದೇ, ಜಿ.ಯು, ೧೩೫

೧೩೩ ಎ.ಕ. ೩, ಎನ್.ಜೆ. ೧೩೫, ೧೮೭
೧೩೪ ಅದೇ.
೧೩೫ ಅದೇ.
೧೩೬ ಅದೇ.
೧೩೭ ಅದೇ.
೧೩೮ ಅದೇ.
೧೩೯ ಅದೇ, ಎನ್.ಜೆ. ೨೫೯
೧೪೦ ಅದೇ.
೧೪೧ ಅದೇ, ಎನ್.ಜೆ. ೩೩೮
೧೪೨ ಎ.ಕ. ೭, ಎಂ.ಎಲ್. ೧೦೬
೧೪೩ ಅದೇ.
೧೪೪ ಎ.ಕ. ೩, ಎನ್.ಜೆ. ೧೮೭
೧೪೫ ಎ.ಕ. ೪, ಜಿ.ಯು. ೧೧೪,೧೧೫
೧೪೬ ಎ.ಕ. ೫, ಕೆ.ಎನ್. ೮೦
೧೪೭ ಎ.ಕ. ೪, ಸಿ.ಎಚ್. ೩೦೦
೧೪೮ ಅದೇ, ಸಿ.ಎಚ್. ೨೭೪
೧೪೯ ಅದೇ, ಜಿ.ಯು. ೧೬೮
೧೫೦ ಅದೇ, ಸಿ.ಎಚ್. ೨೭೪
೧೫೧ ಅದೇ, ಸಿ.ಎಚ್. ೭೬
೧೫೨ ಐ.ಎಂ.ಸಿ. ನಂ. ೧೯-೧-೫೨
೧೫೩ ಎ.ಕ. ೪, ಸಿ.ಎಚ್. ೩೯೦ (೧೪೮೨)
೧೫೪ ಅದೇ, ಸಿ.ಎಚ್. ೪೦೫
೧೫೫ ಅನ್ನಲ್ಸ್-೧, ಪು. ೪೫
೧೫೬ ಅದೇ.
೧೫೭ ಎ.ಕ. ೪, ವೈ.ಎಲ್. ೧
೧೫೮ ಕೆ.ನೈ.ವಿ. ೩, ೨೩
೧೫೯ ಅನ್ನಲ್ಸ್ - ೧, ಪು. ೨೨
೧೬೦ ಚಿ.ವಂ. ಪು. ೩೧; ಮೈ.ದೊ.ಪೂ. ೧, ಪು. ೭೮; ಮೈ.ರಾ.ಚ. ಪು. ೧೯-೨೦
೧೬೧ ಮೈ.ದೊ.ಪೂ. ೧, ಪು. ೭೭-೭೮
೧೬೨ ಎ.ಕ. ೪, ಸಿ.ಎಚ್. ೨೦೬
೧೬೩ ಅದೇ, ವೈ.ಎಚ್. ೧೭೬
೧೬೪ ಅದೇ, ಸಿ.ಎಚ್. ೨೦೬
೧೬೫ ಎ.ಕ. ೭, ಎಂ.ಯು. ೧೩೭
೧೬೬ ಅದೇ, ವೈ.ಎಲ್. ೨೯
೧೬೭ ಎ.ಕ. ೪, ವೈ.ಎಲ್. ೧; ವೈ.ಎಲ್. ೧೯೬, ಸಿ.ಎಚ್. ೧೯೬ಗಳನ್ನು ನೋಡಿ

೧೬೮ ಎ.ಕ. ೪, ಸಿ.ಎಚ್. ೨೦೬, ಎನ್.ಜೆ. ೨೦೮ ಇತ್ಯಾದಿ
೧೬೯ ಅದೇ, ವೈ.ಎಲ್. ೧
೧೭೦ ಅನ್ನಲ್ಸ್-೧, ಪು. ೧೦೪
೧೭೧ ಕೆ.ನ್ಯ.ವಿ. ೩, ೩೨
೧೭೨ ಮೈ.ದೊ.ವಂ. ಪು. ೧೭-೧೮
೧೭೩ ಚಿ.ವಂ. ಪು. ೨೪; ಮೈ.ದೂ.ವಂ. ಪು. ೨೧; ಅನ್ನಲ್ಸ್ - ೧, ಪು. ೫೨-೫೩
೧೭೪ ಸೋರ್ಸಸ್, ಸಂ. ೨೭-೨೮
೧೭೫ ಅದೇ, ಪು. ೨೯-೩೦
೧೭೬ ಎಂ.ಎ.ಆರ್. ೧೯೧೫, ಪು. ೨೭
೧೭೭ ಅದೇ.

ಶಬ್ದಸೂಚಿ

ಅಂಕನಕಲ್ಲು ೧೧೬
ಅಂಕಲಾದೇವಿ ೩೫೩
ಅಂಕುಶಖಾನ ೨೭೬
ಅಂಕುಶರಾಯ ೪೬೫
ಅಂಕೋಲ ೨೦೬,೨೦೭,
೨೧೬,೨೨೯,೨೩೦,೨೩೧,೨೩೪
ಅಂಗಡಿ ವೀರಭದ್ರ ೪೫೮
ಅಂಚೆ ಹರಿಕಾರ ೩೦೨
ಅಂಡೆಕೊರಗರು ೨೬೦
ಅಂತಪ್ಪ ಒಡೆಯ ೧೦೦
ಅಂತಃಪುರ ಸ್ತ್ರೀಯರು ೩೨೩
ಅಂತ್ಯಜರು (ಹೊಲೆಯರು) ೨೪೭
ಅಂಬಲೆ-ಯಳಂದೂರು ೧೧೩
ಅಂಬಳಿಗೊಳ್ಳ ೪೩೫
ಅಕ್ಕಸಾಲಿಗರು ೧೩೮,೨೨೨
ಅಕ್ಬರ್ ೫೬,೧೭೨,೨೬೮,೨೮೪
ಅರ್ಕವಿವಾಹ ೩೨೧
ಅಕ್ಕಿಹೆಬ್ಬಾಳ ೨೭೬,೪೪೭
ಅಕ್ಷೋಭ್ಯತೀರ್ಥ ೪೧೭
ಅಗರ ೧೧೩
ಅಗಸರು ೧೧೬,೧೨೪,೨೬೦
ಅಗಸ್ಟಸ್ ೨೮೪
ಅಗಸ್ತ್ಯ ೪೨೨,೪೨೪
ಅಗ್ರಹಾರ ೧೧೫,೧೨೪,೧೩೬,೨೪೪
ಅಘೋರೇಶ್ವರ ದೇವಾಲಯ ೩೭೧
ಅಚ್ಚಕನ್ನಡ ೩೫೧
ಅಚ್ಚುಕಟ್ಟು ೧೧೩
ಅಚ್ಯುತರಾಯ ೩೯,೪೬-೪೯,೬೪,೬೬,೬೮,
೭೭,೭೮,೧೦೨,೨೫೭,೨೫೮,೨೬೦,೩೫೦,
೩೬೧,೩೬೫,೩೮೦,೩೯೨,೩೯೩,೪೨೪,೪೨೫
ಅಚ್ಯುತರಾಯ ಪೇಟೆ ೨೨೮
ಅಜಿಲ ೯೮,೨೬೧,೩೫೧
ಅರ್ಜುನಕೋಟೆ ೨೭೭
ಅಠಾರಾ ಕಚೇರಿ ೧೮೪, ೨೮೮
ಅಣತಿ ೩೩೭
ಅಣ್ಣದೇವ ೨೭
ಅಣ್ಣದೇವ ಚೋಡನ ತಾಮ್ರಫಲಕ ದಾನಶಾಸನ ೨೬
ಅಣ್ಣನಾಯಕ ೪೩೨,೪೩೩
ಅಣ್ಣಪ್ಪ ೧೦೦,೧೦೩,೧೦೪,೧೦೬
ಅಣ್ಣರಸ ೧೦೦
ಅಣ್ಣಗೇರಿ ೧೬೯,೨೦೬,೨೨೫
ಅತ್ತೂರು ೭೭
ಅತ್ರಿ ೩೨೦
ಅರ್ಥವ್ಯವಸ್ಥೆ ೪೫೨
ಅದಿನಾರು ೧೦೮
ಅದಿಲ್‌ಶಾಹ ೫೬,೮೪,೯೦,೨೭೪,
೨೭೯,೨೮೦,೪೩೦,೪೩೪,೪೫೧
ಅದ್ದಂಕಿ ೩೩
ಅದ್ರೀಶ ಕವಿ ೩೮೯
ಅದ್ವೈತ ೩೪೮,೪೧೭
ಅದ್ವೈತ ದರ್ಶನ ೮,೨೪೩,೨೯೭,೩೪೯,೪೧೬
ಅಧ್ಯಯನ ೩೧೭
ಅಧ್ಯಾಪನ ೩೧೭
ಅನಂತ ಕವಿ ೩೯೬
ಅನಂತಗಿರಿ ೨೮೪
ಅನಂತಪದ್ಮನಾಭ ದೇವಾಲಯ ೩೬೩
ಅನಂತಪುರ ೫೫,೮೩,೮೯,೧೨೦,೨೧೮,೨೨೨,೨೨೩
ಅನಂತಭಟ್ಟ ೩೮೬,೪೨೨
ಅನಂತವರಂ ತಾಮ್ರಫಲಕ ೩೭
ಅನಂತಶಯನ(ತಿರುವನಂತಪುರಂ) ೩೬
ಅನಂತಶಯನಗುಡಿ ೩೬೧,೩೬೪
ಅನಪೋತ ೨೫,೨೯
ಅನವೇತನ ೨೫
ಅನವೇಮರೆಡ್ಡಿ ೨೫
ಅನವೋತ ೨೬
ಅನಿತಲ್ಲಿ ೨೭
ಅನಿಲೇಶ್ವರ ದೇವಾಲಯ ೧೨೦
ಅಪ್ಪಣನಾಯಕ ೩೩೭

ಅಪ್ಪಯ್ಯ ೪೧೦,೪೧೮
ಅಪ್ರತಿಮಲ್ಲ ೨೮
ಅಪ್ಪಾಜಯ್ಯ ೩೨೯
ಅಫಕಿಗಳು ೩೭
ಅಫಜಲ್‌ಖಾನ್ ೪೩೧,೪೩೩,೪೫೧
ಅಫಾನ್ಸೋ ಮೆಕ್ಲಿಯಾ ೨೩೦
ಅಬಿಸೀನಿಯ ೨೧೫,೨೨೯
ಅಬಿಸೀನಿಯನ್ನರು(ಅಬಿಶಿ) ೩೭
ಅಬ್ದುಲ್ ರಜಾಕ್ ೩೦,೩೧,೫೭,೧೫೭,
೧೭೭,೨೨೧,೨೨೯,೨೪೯,೨೬೯
ಅಬ್ಬಕ್ಕದೇವಿ ೨೬೧
ಅಬ್ಬರಾಜ ತಿಮ್ಮಪ್ಪ ೨೨೨
ಅಭಿನವಚಂದ್ರ ೩೮೭
ಅಭಿನವಭಾರತ ಸಾರಸಂಗ್ರಹ ೮೬
ಅಭಿನವ ವೀರದೇವರಾಯ ೨೮
ಅಭಿನವ ಶ್ರುತಮುನಿ ೩೮೧
ಅಭಿರಾಮ ಕಾಮಾಕ್ಷಿ ೪೨೨,೪೨೪
ಅಮರಂ ೫,೬೨,೬೪
ಅಮರಅಂಬಲಿ ೬೩
ಅಮರಪಂದೆಯನಾಯಕ ೬೩
ಅಮರಮಹಲೆ ೬೩
ಅಮರನಾಯಕರು ೩,೬,೬೮,೭೧,
೭೬,೭೭,೨೪೬,೨೪೭
ಅಮರಮಾಗಣಿ ೬೩,೩೦೪,೪೫೦
ಅಮರಸಿಂಹ ೪೧೯
ಅಮ್ಮಚಾವಡಿ ೧೧೦,೨೬೮,೨೬೯,೩೩೪
ಅಮಿನಭಾವಿ ೧೬೯
ಅಮೀರ್‌ಖಾನ್ ೩೫೨
ಅಮೀರ್‌ಖಾಸಿಂ ಬರಿದ್ ೫೦
ಅಮೀರ್ ಬರಿದ್ ೪೭
ಅಮೃತಾಂಬೆ ೧೧೦,೩೩೭
ಅಮೇರಿಕ ೩,೨೦೧
ಅಮ್ರೋಟಿ ೨೦೬
ಅಯ್ಯಂಗಾರ್ ಎಸ್.ಕೆ. ೧೨,೨೬೫,೨೬೬,೪೬೪
ಅರಕಲುಗೂಡು ೧೬೦,೩೩೮,೪೩೬,೪೫೦
ಅರಗ ೬೩,೨೦೬
ಅರಗೆ ೭೩
ಅರಬ್ ೩, ೭, ೨೧, ೩೮, ೯೭, ೨೦೪
ಅರವತ್ತು ವಕ್ಕಲು ೨೪೩
ಅರಪೀಡು ೨೧,೪೬,೪೯,೫೫,೫೭,
೮೨,೮೯,೩೧೦,೩೪೯,೩೫೪,
೩೭೯,೩೮೦,೩೯೩,೩೯೪
ಅರವೇಲು ೨೪೩
ಅರಸುಗಳು ೧೧೫
ಅರಸೀಕೆರೆ ೧೩೭
ಅರಾಬಿಕ್ ೧೫೭
ಅರಿಕುಠಾರ(ಚಾಮರಾಜನಗರ) ೧೨೫,೨೭೨,
೪೨೮,೪೫೯,೪೬೦
ಅರಿಯಲೂರು ೨೮೪
ಅರೆಶಂಕರ ಬಾಗಿಲು ೩೭೦
ಅರೇಬಿಯ ೫೭,೯೭,೨೦೭,೨೦೮,೨೧೫,೨೧೯,೨೨೯
ಅಲಂಪುರ ೨೫
ಅಲತ್ತೂರು ೧೨೧
ಅಲವಕೊಂಡ ೨೨೦
ಅಲವೇಲಮ್ಮ ೪೦೧
ಅಲಿ ಅದಿಲ್‌ಶಾಹ ೫೨,೫೫
ಅಲಿಕೊಂಡ ೧೨೩
ಅಲೆಗ್ಸಾಂಡರ್ ಹ್ಯಾಮಿಲ್ಟನ್ ೩೦೭
ಅಲ್ಲಪ್ಪ ದಣ್ಣಾಯಕ ೨೦
ಅಲ್ಲಸಾನಿ ಪೆದ್ದನ ೩೮೯
ಅಲ್ಲಾಡ ೨೭
ಅಲ್ಲಾಡವೇಮ ೩೧
ಅಲ್ಲಾವುದ್ದೀನ್ ಖಿಲ್ಜಿ ೧೧,೧೨,೨೧,
೨೨,೨೩,೩೦,೪೯,೩೪೭
ಅವಂತಿ ೬೭
ಅವಿನಹಳ್ಳಿ ೩೦೦
ಅವಿನಾಶೀಶ್ವರ ೩೯೧
ಅವೈದಿಕ ೪೧೩
ಅಶ್ವದಳ ೩೦೯,೩೧೦,೪೫೬
ಅಷ್ಟಗ್ರಾಮದ ಚಾವಡಿ ೩೦೩
ಅಷ್ಟದಿಕ್ಪಾಲಕರು ೩೬೨
ಅಷ್ಟ ದಿಗ್ಗಜರು ೩೮೯
ಅಷ್ಟ ಮಹಿಷಿಯರು ೧೩೧
ಅಸದ್‌ಖಾನ್ ೪೩,೪೭,೪೮,೫೧
ಅಸ್ಪೃಶ್ಯತೆ ೨೪೯,೨೪೭,೨೫೩
ಅಹಮದ್‌ಖಾನ್ ೪,೩೫೮,೩೬೩
ಅಹಮದ್‌ನಗರ ೫೦-೫೨,೫೬,
೭೪,೨೦೬,೪೦೭,೪೦೮
ಅಹವಾಲು ೩೦೭
ಅಹೋಬಲ ೨೭,೪೬,೫೫,೨೨೧,೪೨೩
ಅಹೋಬಲ ನರಸಿಂಹಸ್ವಾಮಿ ೮೦
ಅಹೋಬಲಮಠ ೨೪೩
ಅಹೋಬಲಸೂರಿ ೪೨೨
ಆಳಸಿಂಗರಾರ್ಯ ೩೩೫

ಅಳಿಯ ರಾಮರಾಯ ೧೦೭,೩೫೪,೩೭೯,೩೯೩,೩೯೬
ಅಳಿಯ ಸೋವಣ್ಣ ೨೦
ಅಳಿಲುಘುಟ್ಟ ೯೦
ಅಕ್ಷೋಭ್ಯತೀರ್ಥ ೩೫೦

ಅಂಗಿರಸ ೩೨೦
ಆಂಧ್ರ ೧೪,೧೬,೩೬,೨೨೫
ಆಂಧ್ರದ ಕರಾವಳಿ ಪ್ರದೇಶ ೩೬
ಆಂಧ್ರಪ್ರದೇಶ ೧೩,೧೪,೨೨,೩೬,೩೭,೧೨೦
ಆರ್ಕಾಟ್ ೩,೨೨,೩೬,೧೩೨,೨೮೯
ಆಚರಸ ಒಡೆಯ ೧೦೦,೧೦೨
ಆತ್ಮಬಲಿ(ಆತ್ಮಾಹತ್ಯೆ) ೩೫೪
ಆತ್ಮಾರ್ಪಣೆ ೨೫೯,೨೬೦
ಆತ್ಮಾಹುತಿ ೨೫೯,೨೬೧
ಆದಪ್ಪ ಬಯ್ಯಪ್ಪ ೪೫೩
ಆದವಾನಿ ೩೯,೨೧೮,೨೨೫
ಆದಿಯಪ್ಪ ೩೮೧
ಆದಿವಾಸಿ ಜನರು ೨೪೧
ಆದೋನಿ ೨೪,೫೧,೮೯,೨೦೬,೨೦೯
ಆನಂದತೀರ್ಥ ೪೧೬,೪೧೭
ಆನಂದನಿಧಿ ೪೮
ಆನಂದಪುರ ೩೩೬,೪೦೮,೪೨೯
ಆನಂದರಾವ್ ರಾಸ್ತೆ ೨೮೯
ಆನೆಕೆರೆ ೪೫೦
ಆನೆಗೊಂದಿ ೧೩,೫೫,೬೪,೭೮,೯೦,೨೦೬,೩೭೧
ಆನೆವಿಡ್ಡ ೨೨೫
ಆನೆಹಳ್ಳಿ ೯೫
ಆಫ್ರಿಕಾ ೨೦೮,೨೪೧
ಆಫ್ಘನ್ ಆಕ್ರಮಣ ೧೯
ಆಭರಣಗಳು ೨೧೪
ಆಮದು ೨೧೬
ಆರ್ಮುಸ್ ೨೧೬
ಆಮುಕ್ತಮಾಲ್ಯದ ೪೬,೨೦೬,೨೧೬,೩೫೨,೩೮೮,೩೯೩
ಆರ್ಮುಜ್ ೧೫೭,೨೨೯
ಆರ್ಮೆಜ್ ೨೧೮,೨೩೦,೨೩೪
ಆಯಕಟ್ಟಿನ ಚಾವಡಿ ೩೦೨
ಆಯಗಾರ ೭
ಆಯುಧಗಳು ೨೧೫
ಆಯುಧಪೂಜೆ ೨೫೦
ಆರಗ ೨೪,೩೦೪,೩೦೫
ಆರನೇ ಚಾಮರಾಜ ಒಡೆಯರ್ ೩೯೦
ಆರಾಧ್ಯರು ೨೪೭
ಆಲಂಬಾಡಿ ೪೬೧
ಆಲಿಕೊಂಡಪುರ ೪೫೮
ಆಲ್ಮೀಡ ೩೯
ಆಲ್ಬುಕರ್ಕ್ ೩೮,೪೦,೪೩,೨೧೬
ಆಲೂರು ೨೨೧,೪೪೩
ಆವಗುಡಿಯ ವೀರಣ್ಣ ೭೪
ಆವತಿ ೭೭
ಆಶ್ರಮಧರ್ಮ ೨೪೨
ಆಹ್ಯ ತಿಮ್ಮಣ್ಣ ೧೦೨
ಆಳ್ವಾರ್ ಗೋದಾದೇವಿ ೪೬
ಆಳ್ವಾರರು ೧೧೮,೧೨೨,೩೯೪,೩೯೫,೪೦೬

ಇಂಗ್ಲಿಷರು ೨೩೦,೨೩೧,೨೩೨,೩೧೦
ಇಂಗ್ಲೀಷರ ಕೋಠಿ ೨೩೧
ಇಂಗ್ಲೆಂಡ್ ೨೩೧,೨೩೩,೨೮೪
ಇಂಡಿ ೩೦
ಇಂಡೋ-ಪರ್ಶಿಯನ್ ಇತಿಹಾಸಕಾರರು ೨೫
ಇಂಡೋಸಾರ್ಸೆನಿಕ್ ೩೫೨,೩೭೨
ಇಂದ್ರ ನೀಲಗಳು ೨೧೪
ಇಕ್ಕೇರಿ ೯,೫೬,೭೩,೭೪,೨೦೪, ೨೭೧-೨೭೩,೨೮೦,೨೮೪,೨೮೫,೩೧೦,೩೩೪, ೩೭೧,೪೨೮,೪೩೪-೪೪೧,೪೪೮-೪೫೦,೪೫೨,೪೬೩
ಇಕ್ಕೇರಿ ಅಘೋರೇಶ್ವರ ೧೮೦
ಇಕ್ಕೇರಿ ಮಲ್ಲನಗೌಡ ೭೪
ಇಕ್ಕೇರಿಯ ನಾಯಕರು ೨೩೨,೨೬೭
ಇಕ್ಕೇರಿ ಶಿವಪ್ಪ ೫೬
ಇಟಲಿ ೩೧,೫೭,೨೨೮,೨೭೭,೩೨೯
ಇತಿಹಾಸಕಾರ ೨೬೦
ಇದಲ್‌ಖಾನ್(ಆದಿಲ್‌ಶಾಹ) ೨೭೭
ಇಬನ್ ಬತೂತ ೧೪,೧೫೭
ಇಬ್ರಾಹಿಂ ೪೭,೪೮
ಇಬ್ರಾಹಿಂ ಅದಿಲ್‌ಶಾಹ ೨೭೪
ಇಬ್ರಾಹಿಂ ಕುತುಬ್‌ಶಾಹ ೫೫
ಇಮದ್-ಉಲ್-ಮುಲ್ಕ್ ೪೭,೫೦
ಇಮ್ಮಡಿ ಅಂಕುಶರಾಯ ೪೬೪,೪೬೫
ಇಮ್ಮಡಿ ಕೃಷ್ಣರಾಜ ಒಡೆಯರು ೩೯೧,೩೯೫
ಇಮ್ಮಡಿ ಕೆಂಪೇಗೌಡ ೩೭೪,೪೪೫,೪೪೬
ಇಮ್ಮಡಿ ಚಿಕ್ಕಪ್ಪಗೌಡ ೮೮
ಇಮ್ಮಡಿ ಚಿಕ್ಕಭೂಪಾಲ ೮೪,೮೫
ಇಮ್ಮಡಿ ಜಕ್ಕ ೪೬೪
ಇಮ್ಮಡಿ ಜಗದೇವರಾಯ ೪೬೫
ಇಮ್ಮಡಿ ದೇವರಾಯ (ಪ್ರೌಢದೇವರಾಯ) ೧೬,೩೭, ೪೧೭,೪೧೯,೪೮೧,೪೮೭

ಇಮ್ಮಡಿ ನರಸಿಂಹನಾಯಕ್ ೩೮,೪೪೭,೪೪೮,೪೫೫
ಇಮ್ಮಡಿ ನಂಜರಾಜಯ್ಯ ೩೯೮
ಇಮ್ಮಡಿ ಭೈರವನಾಯಕ ೪೩೨,೪೩೩
ಇಮ್ಮಡಿ ಮುದಿಯಪ್ಪನಾಯಕ ೯೨-೯೫,೪೩೨,೪೩೩
ಇಮ್ಮಡಿ ರಂಗಪ್ಪನಾಯಕ ೪೪೮
ಇಮ್ಮಡಿ ರಾಜಒಡೆಯರ್ ೩೩೪,೩೫೯,೩೯೦,೩೯೮
ಇಮ್ಮಡಿ ರಾಮರಾಜನಾಯಕ ೪೬೧,೪೬೩
ಇಮ್ಮಡಿ ರಾಯಒಡೆಯ
 (ಸೋಮರಾಯ ಒಡೆಯ) ೩೯,೧೨೦
ಇಮ್ಮಡಿ ವಿರೂಪಾಕ್ಷ ೩೭೯
ಇಮ್ಮಡಿ ಸದಾಶಿವನಾಯಕ(ಭದ್ರಪ್ಪ ನಾಯಕ) ೪೦೭
ಇಮ್ಮಡಿ ಸಳನಾಯಕ ೪೩೩
ಇಮ್ಮಡಿ ಹನುಮಪ್ಪನಾಯಕ ೪೨೯
ಇಮ್ಮಡಿ ಹರಿಹರ ೩೮೦,೪೧೨,
೪೧೫,೪೨೦,೪೨೨
ಇರಾನೀ ಸಂಸ್ಕೃತಿ ೩೭
ಇರುಕುಲಮ್ಮ (ನೆಲ್ಲೂರು) ೩೫೩
ಇರುಗಪ್ಪದಂಡನಾಥ ೨೫,೩೫೧,೩೫೮,೪೨೦
ಇಸ್ಮಾಯಿಲ್ ೪೨,೪೩,೪೭
ಇಸ್ಲಾಮಿಕ್ ವಾಸ್ತುಶಿಲ್ಪ ೫೮,೩೫೭,೩೬೩,೩೭೩
ಇಸ್ಲಾಂಧರ್ಮ ೧೪೧,೨೪೨,
೨೪೭,೨೪೮,೨೯೫,೩೫೨
ಇಸ್ಲಾಂ ಧರ್ಮೀಯರು ೩೫೨

ಈಚೆರ್ಲಾ ನಾಯಕರು ೨೫
ಈಜಿಪ್ಟ್ ೫೭
ಈರಪ್ಪಣ್ಣ ೭೫
ಈರೋಡ್ ೨೮೩,೨೯೭
ಈಶ್ವರ ೩೭,೩೮೭
ಈಶ್ವರ ದೀಕ್ಷಿತ್ ೪೧೬
ಈಶ್ವರ ನಾಯಕ ೩೪,೩೬,೩೭
ಈಸ್ಟ್ ಇಂಡಿಯಾ ಕಂಪೆನಿ ೨೦೪,೨೩೧,೨೩೩,೨೩೪
ಈಸ್ಟ್ ಇಂಡೀಸ್ ೨೧೯,೨೨೦

ಉಂಬಳಿ ೩೦೨
ಉಚ್ಚಂಗಮ್ಮ ೪೪೧
ಉಡಗೇರಿ ೪೩೫
ಉಡುಪಿ ೧೦೬,೨೪೩,೨೪೯,೨೫೧,೪೧೬
ಉತ್ತರ ಕನ್ನಡ(ಸೋಂದಾ) ೨೦,೧೦೪,೧೫೩,೧೫೪
೧೫೭,೧೭೫,೨೨೫,೨೩೧,೨೩೩,೨೩೪,೨೪೧
ಉತ್ತರ ಕರ್ನಾಟಕ ೧೧೩,೧೫೭,೨೨೬
ಉತ್ತರ ಕೊಂಕಣ ೩೪
ಉತ್ತರದಾಯಿ ೩೦೫,೩೦೬,೩೦೯
ಉತ್ತರಭಾರತ ೧೫೪
ಉದಯಗಿರಿ ೩೬,೪೧,೭೭,೨೦೪
ಉದಯಗಿರಿ ಕೋಟೆ ೩೬
ಉದಯಗಿರಿ ರಾಜ್ಯ ೨೨,೨೪,೨೫
ಉದಯಗಿರಿ ವೀರಣ್ಣ ೨೪
ಉಪ್ಪಲಿಗರು ೨೪೭
ಉಪ್ಪರಿಗೆ ಮಠ ೧೨೯
ಉಭಯ-ನಾನಾದೇಶಿಗರು ೨೨೬
ಉಮ್ಮತ್ತೂರು ೩೮,೪೭,೧೧೧,೧೧೫,
೧೨೧,೧೨೨,೧೨೫,೧೨೭,೨೬೯,೨೭೦,
೨೭೧,೩೦೭,೩೩೪,೪೫೪-೪೫೯,೪೬೧
ಉಮ್ಮತ್ತೂರು ಅರಸರು
(ಪಾಳೆಯಗಾರರು) ೩೭,೩೯,೪೦,
೪೧,೧೦೮,೧೧೯,೧೨೩,೧೨೭
ಉಲುಚುಕಮ್ಮೆ ೨೪೩

ಊಳಿಗಮಾನ್ಯ ವ್ಯವಸ್ಥೆ(ಫ್ಯೂಡಲಿಸಂ) ೬,೭೦,೭೧,
೧೮೭,೨೦೦,೩೦೪,೩೧೯

ಎಂಟು ಮಠ ೨೪೩
ಎಕದಲಖಾನ್ ೯೮,೧೦೨,೧೦೭
ಎಕ್ಕದ ತೋಲುಬಸಪ್ಪನಮಠ ೧೧೮
ಎಕ್ಕಲಾದೇವಿ ೩೫೩
ಎಡಗೈ(ಇಡಂಗೈ) ೨೪೮
ಎಡವ ಮುರಾರಿ ೭೪,೭೫
ಎಡೆಯೂರು ಸಿದ್ಧಲಿಂಗೇಶ್ವರ ೯೫
ಎಣ್ಣೆಗೆರೆ ೮೩
ಎಣ್ಣೆನಾಡು ೧೧೨
ಎತಿರಾಯ ಒಡೆಯ ೧೦೨
ಎಮ್ಮೆಯ ಊರು ೩೧೮
ಎರಡನೇ ಕಂಪಣ್ಣ ೨೨,೨೪,೩೫
ಎರಡನೇ ಕಂಠೀರವ ೨೮೮
ಎರಡನೇ ಕಾಟಯವೇಮ ೨೬
ಎರಡನೇ ಕೃಷ್ಣಪ್ಪನಾಯಕ ೪೫೪
ಎರಡನೇ ಕೃಷ್ಣರಾಜ ಒಡೆಯರು ೧೧೧,೧೩೧,
೧೩೪,೧೪೦,೧೪೧,೨೮೮
ಎರಡನೇ ಕೆಂಪೇಗೌಡ ೨೭೫
ಎರಡನೇ ಚನ್ನಬಸಪ್ಪನಾಯಕ ೯೧
ಎರಡನೇ ಚಾಮರಾಜ ಒಡೆಯರ್ ೨೬೬
ಎರಡನೇ ಡಿಂಡಿಮರಾಜ ೪೨೨
ಎರಡನೇ ತಿರುಮಲ ೨೬೮

ಎರಡನೇ ದೇವರಾಯ ೧೨,೨೨,೨೮,೩೫,೧೦೫,
೧೬೨,೧೬೪,೩೫೨,೩೫೯,೩೬೦,೩೬೩,೪೫೫
ಎರಡನೇ ನರಸಿಂಹ ೩೭೯
ಎರಡನೇ ಪ್ರತಾಪರುದ್ರ ೨೩
ಎರಡನೇ ಫಿಲಿಪ್ ೫೬
ಎರಡನೇ ಬಲ್ಲಾಳ ೧೧
ಎರಡನೇ ಬಸಪ್ಪನಾಯಕ ೪೪೦
ಎರಡನೇ ಬುಕ್ಕ ೨೫-೨೭,೩೨,೧೬೧
ಎರಡನೇ ಭದ್ರನಾಯಕ ೪೪೦
ಎರಡನೇ ಮಹಮೂದ್ ಶಾಹ ೨೫,೩೭,೪೦,೪೩
ಎರಡನೇ ಮುದಿಯಪ್ಪನಾಯಕ ೯೪
ಎರಡನೇ ರಾಜನಾಥ ೩೯೨
ಎರಡನೇ ವಿರೂಪಾಕ್ಷ ೨೪-೨೬,೩೨,೩೭,೫೫
ಎರಡನೇ ವೆಂಕಟ ೨೬೮,೨೭೯
ಎರಡನೇ ವೆಂಕಟಪತಿ ೪೨೮
ಎರಡನೇ ವೆಂಕಟಪ್ಪನಾಯಕ ೨೬೮,೨೯೯,೩೦೦,೩೧೧
ಎರಡನೇ ವೆನ್ರುಮಂಕೊಂಡಾನ್ ೨೨
ಎರಡನೇ ಶ್ರೀರಂಗ ೫೫
ಎರಡನೇ ಸೋಮೇಶ್ವರ ೪೧೯,೪೨೦
ಎರಡನೇ ಸೋಮಶೇಖರನಾಯಕ ೪೩೬,೪೪೦
ಎರಡನೇ ಹರಿಹರ ೧೮,೨೦,೨೪,೨೬,೩೦,
೫೮,೧೦೬,೧೬೧,೨೨೬,೨೨೭,೩೫೭,೪೫೫
ಎರಿಕಟ್ಟೆ ೮೯,೯೪,೯೬
ಎರಿಮಡಣಾಯಕ ೮೯
ಎಲ್ಲಮ್ಮ(ಸವದತ್ತಿ) ೩೫೩
ಎಲಿಜಬತ್ ರಾಣಿ ೨೮೪
ಎಲ್ಲೋರ ೪೨

ಏಕಶಿಲಾಮೂರ್ತಿ ೩೬೩
ಏಕಾಂಬರ ದೀಕ್ಷಿತರು ೪೪೫
ಏಕಾಂಭರನಾಥ ೪೧೯
ಏಕಾರಾಮನಾಥ ೪೬೪
ಏಕೋಜಿ ೪೩೪
ಏಡನ್ ೨೦೭,೨೦೮,೨೧೬,೨೨೯,೨೩೪
ಏಳನೇ ಚಾಮರಾಜ ಒಡೆಯರ್ ೩೯೦
ಏಷ್ಯಾ ೨೦೧,೨೦೪

ಐಂದ್ರ ಜಾಲಿಕರು ೨೪೪
ಐಗೂರು ೪೩೪
ಐಗೂರು ನಾಯಕ ೪೩೫
ಐದನೇ ಚಾಮರಾಜ ಒಡೆಯರ್ ೨೭೦-೨೭೬,೨೯೫,
೨೯೮-೩೦೦,೩೦೮-೩೧೧,೩೨೨,
೪೩೧,೪೪೯,೪೫೧,೪೬೦
ಐದನೇ ಬೈರವ ೧೦೫
ಐದುಸಾವಿರ ಸೀಮೆ ೮೫
ಐದು ಸುಲ್ತಾನಶಾಹಿ ೪೯
ಐನ್-ಉಲ್-ಮುಲ್ಕ್ -ಗಿಲಾನಿ ೩೫೨

ಒಂದನೇ ಅನಪೋತ ೨೯
ಒಂದನೇ ಅರುಣಗಿರಿನಾಥ ೩೮೧,೪೨೧,೪೨೨
ಒಂದನೇ ಕೃಷ್ಣರಾಜ ಒಡೆಯರ್ ೧೩೧,೧೪೦,
೨೮೧,೩೨೧,೪೪೬
ಒಂದನೇ ಕೆಂಪೇಗೌಡ ೬೪,೬೯,೭೭,೭೮,೩೭೪,೪೪೬
ಒಂದನೇ ಚಾಮರಾಜ ಒಡೆಯರ್ ೨೬೬
ಒಂದನೇ ತಿರುಮಲ ೨೬೭,೩೭೬
ಒಂದನೇ ದೇವರಾಯ ೨೫,೨೬,೨೯,
೧೦೪,೧೦೬,೩೫೯,೪೫೫
ಒಂದನೇ ನರಸಿಂಹ ೩೭೯
ಒಂದನೇ ಬಸವಪ್ಪನಾಯಕ ೨೯೭
ಒಂದನೇ ಬುಕ್ಕ ೧೨,೧೭,೧೮,೨೦-೨೨,೫೮,೧೭೯
ಒಂದನೇ ಬೈರಪ್ಪನಾಯಕ ೯೭
ಒಂದನೇ ಮಾಚ ೨೯
ಒಂದನೇ ಮುಹಮದ್‌ಶಹಾ ೨೩
ಒಂದನೇ ರಾಜಒಡೆಯರ್ ೩೯೦
ಒಂದನೇ ವೆಂಕಟ ೪೮
ಒಂದನೇ ವೆಂಕಟಪತಿರಾಯ ೮೪
ಒಂದನೇ ವೆಂಕಪ್ಪನಾಯಕ ೨೯೬,೨೯೮,೨೯೯,೩೧೭
ಒಂದನೇ ಶಿಹಾಬುದ್ದೀನ್ ಅಹಮದ್ ೨೮
ಒಂದನೇ ಶ್ರೀರಂಗ ೫೫,೨೬೭,೨೬೮
ಒಂದನೇ ಶ್ರೀರಂಗರಾಯ ೩೯೩
ಒಂದನೇ ಸಂಕಣ್ಣನಾಯಕ ೭೫
ಒಂದನೇ ಸೋಮಶೇಖರನಾಯಕ ೨೯೮,೨೯೯
ಒಂದನೇ ಹರಿಹರ ೨೦-೨೨,೧೬೦,೩೭೯
ಒಕ್ಕಲಿಗರು ೧೬೪
ಒಡೆಯರು(ಒಡೆಯರ ಮನೆತನ) ೪,೫,೨೬೪
ಒರಿಸ್ಸಾ ೩೬,೩೭,೪೦-೪೨
ಒರಿಸ್ಸಾದ ಗಜಪತಿ ೨೮
ಒಳನಾಡು ೨೦೫,೨೦೯,೨೧೭,೨೨೯

ಓಜರವ(ಬಡಗಿ)ನು ೩೨೫
ಓನ್‌ಗೋಲ್ ೨೭೮
ಓರ್ನಾಜ್ ೨೦೭
ಓನೋರ್ ೨೩೧
ಓಬಣ್ಣನಾಯಕ ೮೦,೮೧
ಓಬವ್ವ ನಾಗತಿಹಳ್ಳಿ ೪೪೨

ಓಬಳರಾಯ ಒಡೆಯ ೧೦೨
ಓಬಾಂಬಾ ೪೬
ಓರ್ಮಜ್ ೨೦೭
ಓರಾಜ್ ೨೦೭
ಓಲೇಕಾರರು ೩೦೧,೩೦೨,೩೦೫

ಔರಂಗಜೇಬ ೧೭೨,೧೮೪,೨೭೮, ೨೮೩–೨೮೭,೩೦೨,೨೧೨

ಕಂಚಿ ೩೬,೫೫,೨೧೮, ೨೨೫,೨೪೩,೨೯೬,೪೫೮
ಕಂಠೀರವ ನರಸರಾಜ ಒಡೆಯರ್ ೫೮,೮೮,೧೧೦,೧೧೧, ೧೩೧,೧೭೩,೨೭೫–೨೮೧,೨೯೫–೩೦೧, ೩೦೮–೩೧೧,೩೧೭,೩೨೧–೩೨೩,೩೩೧, ೩೩೨,೩೭೫,೩೯೧,೩೯೭,೪೨೯,೪೩೦, ೪೪೫–೪೪೯,೪೫೨,೪೬೪
ಕಂಡಿಕೆರೆ ೯೦,೨೮೫
ಕಂಡ್ಲಿಕೆರೆ ೯೨
ಕಂದುಗ ೧೩೮
ಕಂಡೆಯಕೋಟೆ ೨೮೧
ಕಂತೇದೇವರ ಮಠ ೯೫
ಕಂದನವೋಲು ೫೫,೩೯
ಕಂದಾಚಾರದ ಚಾವಡಿ ೩೦೩
ಕಂದಾಚಾರಸೇವೆ ೩೦೫
ಕಂದಾಯ ೧೭೨
ಕಂದೀಕೆರೆ ೯೬,೪೩೧,೪೫೧
ಕಂದುಕೂರು ೩೪,೩೬,೪೧
ಕಂಪಣ್ಣ ೨೧,೨೨,೪೨೩,೪೨೪
ಕಂಪಿಲದೇವ ೪,೧೨,೩೬೯
ಕಂಪಿಲಿ ೧೨,೧೩,೮೩
ಕಚ್ಚವಿಕೋಲು ೧೬೮
ಕಟ್ಟೆಮಳಲವಾಡಿ ೨೭೨,೩೩೦
ಕಡಪ ೨೨
ಕಡಬ ೯೨,೨೭೭,೩೩೩,೪೩೧
ಕಡಾರಂಬ ೧೨೫,೧೬೮
ಕಡ್ಡಿರಾಂಪುರ ೩೬೪
ಕಡೂರು ೨೮೪,೩೧೧,೪೩೫
ಕಣಗಾಲು ೪೪೯
ಕಣಲೆಯ ಪುಟ್ಟಣ್ಣ ೭೪
ಕಣ್ಣಾನೂರು ೨೩,೨೩೪
ಕಣೆಯಲನಾಡು ೧೨೩
ಕತ್ತಲು ಮಲ್ಲಪ್ಪ ದೇವಸ್ಥಾನ ೯೬
ಕತ್ತಿಗೋಪಾಲರಾಜ ಅರಸು ೩೯೧
ಕದಿರಿ ೨೨೨
ಕನ್‌ಫ್ರಾಟಮಿಟೋಗಳು ೨೨೧
ಕನಕಗಿರಿ ಕೋಟೆ ೨೭೭
ಕನಕಗಿರಿ ಗೋಪುರ ೩೬೨
ಕನಕದಾಸರು ೮,೧೫೬,೨೨೯,೨೪೮–೨೫೭, ೩೫೧,೩೫೪,೩೮೪,೩೮೫,೩೮೯
ಕನಗೀಲುಮಠ ೯೫
ಕನರೀಸ್ ೨೪೪
ಕನಹಳ್ಳಿ ೭೭
ಕನ್ನಂಬಾಡಿ ೧೩೯,೨೬೮,೨೬೯,೩೩೭
ಕರ್ನಮೋಟೆ ೩೫೩
ಕರ್ನಾಟಕದ ಕರಾವಳಿ ೭,೨೩೦,೨೩೩,೨೫೮,೨೬೦,೨೬೧
ಕರ್ನಾಟಕ ಬಿಜಾಪುರ ಬಲಘಾಟ್ ೨೮೦,೨೮೧,೪೫೧
ಕರ್ನಾಟಕ ಭುವನೇಶ್ವರಿ ೧೬
ಕರ್ನಾಟಕ ಹೈದರಾಬಾದ್ ಬಲಘಾಟ್ ೨೮೦
ಕರ್ನೂಲು ಪ್ರದೇಶ ೩೩,೨೧೮
ಕಪಿನಿನದಿ ೧೩೯,೩೯೯
ಕಪಿಲಾನದಿ ೧೨೪,೪೦೪
ಕಪಿಲೆ ೧೧೯,೧೩೭,೧೬೨
ಕಪಿಲೇಂದ್ರ ಗಜಪತಿ ೩೧,೩೪,೩೬
ಕಪಿಲೇಶ್ವರ ಗಜಪತಿ ೩೩
ಕಪೋತ(ಸೂರು) ೩೬೨
ಕಬ್ಬಳ್ಳಿ ೪೫೩
ಕಬ್ಬಾಳದುರ್ಗ ೧೩೨,೨೮೮
ಕಬ್ಬಿಣದ ಚಾವಡಿ ೩೦೪
ಕಮಲ್‌ಖಾನ ೪೨
ಕಮಲಮಹಲ್ ೩೬೭
ಕಮಲಾಪುರ ೩೬೪,೪೨೩
ಕಮ್ಮ ೪೯
ಕಮ್ಮಪ್ಪನಾಯಕ ೪೫೯
ಕಮ್ಮಾರರು ೧೨೪,೧೩೮,೨೧೫,೨೨೩,೩೨೫,೪೪೨
ಕರಣಿಕ(ಲೆಕ್ಕಿಗ) ೩೦೦,೩೦೧,೩೧೭
ಕರಣಿಕ ಲಿಂಗಣ್ಣಯ್ಯ ೨೮೭,೩೦೦
ಕರಸ್ಥಲದ ನಾಗಿದೇವ ೩೮೦
ಕರಾಚುರಿ ನಂಜರಾಜಯ್ಯ ೧೩೧,೧೩೨, ೧೪೦,೩೯೮,೪೦೨
ಕರಾವಳಿ ಪ್ರದೇಶ ೧೦೫,೨೧೭,೨೨೦,೨೪೧
ಕರಾವಳಿ ಪ್ರದೇಶದ ಅರಸರು ೯೭
ಕರಿಕಾಲ ಕಲ್ಲರಾಜ ೧೩೦
ಕರಿಕಾಲಮಲ್ಲ ೧೩೦,೩೦೭
ಕರಿಚನ್ನಬಸಪ್ಪನಾಯಕ ೯೨

ಕರಿತಿಮ್ಮ ಚಿಕ್ಕಭೂಪಾಲ ೮೪
ಕರಿಸ್ನ್ಯಾರರು ೨೬೦
ಕರಿಯ ಒಡೆಯ ೩೨೬
ಕರಿಯನಾಯಕ ೬೭
ಕರಿಯಪ್ಪನಾಯಕ ೯೦
ಕರಿಸಿದ್ದನಪುರ ೧೧೪
ಕರಿಹೊಲ ೧೨೫
ಕರೀಂನಗರ ೨೫
ಕಲ್ಮಠ ೯೫
ಕಲ್ಲಣಗೌಡ ೮೩
ಕಲ್ಲರಸ ೩೮೦,೪೧೯
ಕಲಾವತಿ ೩೫೧
ಕಲ್ಯಾಣ ೩೫,೫೧,೫೨,೬೪,೧೧೩,೨೦೬
ಕಲ್ಯಾಣ ಕೀರ್ತಿ ೩೮೧,೩೮೩
ಕಲ್ಯಾಣ ಚಾಲುಕ್ಯರು ೩೮೯,೩೯೧
ಕಲ್ಯಾಣದ ಕ್ರಾಂತಿ ೩೮೨
ಕಲಿಸೆ ೭೩
ಕಲ್ಲಿಕೋಟೆ ೩೯,೪೦,೨೧೫,೨೨೦,೨೩೪
ಕಲುಕೂಡ ಗ್ರಾಮ ೧೨೧
ಕಲ್ಲುಮಠದ ಪ್ರಭುದೇವ ೩೮೦
ಕಲ್ಲೂರು ೨೭೭,೪೩೧
ಕವಲೆದುರ್ಗ ೩೧೦,೩೭೧,೩೭೩,೪೩೦
ಕವಿ ವೆಂಕಟೇಶ ೧೩೪
ಕಸಬುದಾರರ ಸಂಘ ೨೨೩
ಕಸುಬುದಾರ ವರ್ಗಗಳು ೧೩೮
ಕಸುಬು ಮಂಡಳಿ ೨೨೨
ಕಸ್ತೂರಿ ರಂಗಪ್ಪನಾಯಕ ೮೦,೮೫,೪೪೧,೪೪೨
ಕರ್ಹಾಡಿ ೨೪೩
ಕಳಲೆ ೬೬,೧೧೧,೧೧೫,೧೧೯,
೧೨೭,೧೭೪,೩೦೭,೩೦೮,೩೨೬
ಕಳಲೆ ಅರಸರು ೪೦೩
ಕಳಲೆ ಕೆಂಪನಂಜಾರ್ಯ ೯೩
ಕಳಲೆ ತಿಮ್ಮರಾಜ ಒಡೆಯರ್ ೩೯೮
ಕಳಲೆ ದಳವಾಯಿ ೧೧೧,೧೧೪,೧೩೦,೩೯೭,೪೧೧
ಕಳಲೆ ದೇವರಾಜ ೩೯೨
ಕಳಲೆ ದೊಡ್ಡಯ್ಯ ೧೩೧
ಕಳಲೆ ನಂಜರಾಜ ೩೯೦,೩೯೧,೩೯೪,೪೦೨,೪೦೫
ಕಳಲೆ ಮನೆತನ ೧೩೦
ಕಳಲೆ ಲಿಂಗರಾಜ ೩೯೪,೪೦೨
ಕಳಲೆ ವೀರರಾಜ ೩೯೦,೩೯೧,೪೦೦,೪೦೫
ಕಳಸ-ಕಾರ್ಕಳ ೯೮,೯೯,೧೦೫,೨೮೧
ಕಾಂಚಿಪುರಂ ೪೬,೭೭,೨೮೦,೩೫೧,೪೪೩
ಕಾಂಚಿಯ ದೇವಾಲಯ ೩೪
ಕಾಂಚಿಯ ಪಲ್ಲವರು ೮೩
ಕಾಂತಯ್ಯ ೩೯೭
ಕಾಂಭೋಜ ೪೨೫
ಕಾಕತೀಯ ಪ್ರತಾಪರುದ್ರ ೧೩
ಕಾಕತೀಯರು ೨೧,೯೪,೨೬೪
ಕಾರ್ಕಳ ೭೫,೨೬೧
ಕಾರ್ಕಳದ ಭೈರರಸ ಒಡೆಯ ೭೫,೭೬
ಕಾಗಿನೆಲೆ ಆದಿಕೇಶವ ೨೪೯
ಕಾಚಗೌಡನಹಳ್ಳಿ ೧೨೧
ಕಾಚಪ್ಪ ಒಡೆಯ ೩೯
ಕಾಟಯವೇಮ ೨೯
ಕಾಡನೂರು ೬೭
ಕಾಡಸಿದ್ದೇಶ್ವರ ಮಠ ೯೫
ಕಾಣಿಕೆ ಕಡ್ಡಾಯ ೩೦೨
ಕಾರ್ತಿಕ(ಹೈನುಬೆಳೆ) ೧೨೫
ಕಾರ್ತಿಕ ಹುಣ್ಣಿಮೆ ೩೫೧
ಕಾದಲಗೆರೆ ೯೦
ಕಾಪಯಗಾಯಕ ೨೩
ಕಾಮಗೇತಿ ಕಸ್ತೂರಿ ರಂಗಪ್ಪನಾಯಕ ೪೪೩
ಕಾಮರಾಜ ನಾಯಕ ೪೬೧
ಕಾಮ್ಯಪ್ಪನಾಯಕ ೪೬೦
ಕಾಮಾಕ್ಷಿ ಅಮ್ಮ ೧೩೮
ಕಾರಕೂನರು ೩೦೧
ಕಾರವಾರ ೭೨,೧೭೭,೨೦೬,೨೩೪,೨೩೫,೪೩೯
ಕಾರುಗಹಳ್ಳಿ ೧೧೧,೨೬೮,೨೬೯,೩೧೧
ಕಾರೇಪುರ ಮಠ ೧೧೪
ಕಾಲಪುರುಷ ೨೯೪
ಕಾರ್ಲಾ ಸಿಸೇಪೊಲಿ ೪
ಕಾಲೂಳಿಗದವರು ೩೦೨
ಕಾವಡಿ ೧೨೭
ಕಾವಲಿಸುಂಕ ೧೨೬
ಕಾವಲುಗಾರ ೩೦೪
ಕಾವೇರಿ ೧,೧೧೯,೧೨೧,೧೨೪,೧೩೯,
೨೭೨,೨೭೫,೨೯೬,೩೦೩,೩೯೯,
೪೦೦,೪೦೨,೪೩೦,೪೫೪-೪೫೬
ಕಾವೇರಿಪಟ್ಟಣಂ ಕೋಟೆ ೨೭೭
ಕಾಶೀಪತಿ ಪಂಡಿತ ೧೩೩,೧೩೫
ಕಾಶೀವಿಲಾಸ ಕ್ರಿಯಾಶಕ್ತಿ ೧೭,೧೮,೨೨,೫೮
ಕಾಶ್ಯಪ ೩೨೦
ಕಾಸ್ ೨೧೦

ಕಾಸಯನಾಯಕ ೧೪
ಕಾಸರಗೋಡು ೭೪
ಕಾಸ್ಟನ್ ಹಿಡಾ ೪೨
ಕಾಸಿಂ ಬರೀದ್ ೩೭,೩೮
ಕಾಳಚಿಕ್ಕಪ್ಪಗೌಡ ೮೩,೮೫
ಕಾಳಹಸ್ತಿ ೪೬,೨೧೮,೨೭೪,೩೫೫
ಕಾಳಾಮುಖರು ೩೪೮,೩೪೯
ಕಾಳಾಮುಖ ಶೈವರು ೩೪೯
ಕಾಳಾಮುಖ ಸಂಪ್ರದಾಯ ೧೮
ಕಾಳಿ ೩೫೩
ಕಾಳಿದಾಸ ೪೨೧
ಕಾಳೇಶ್ವರಂ ೨೫
ಕ್ಯಾಂಡಿ ೪೯
ಕ್ಯಾಂಬೆ ೨೧೯
ಕ್ಯಾಲಿಕಟ್ ೨೦೬,೨೦೮,೨೧೪
ಕಿಕ್ಕೇರಿ ೨೭೧,೩೩೭,೪೬೪
ಕಿಕ್ಕೇರಿಯಾರಾಧ್ಯ ನಂಜುಂಡ ೩೮೧,೩೮೪
ಕಿಚ್ಚಯ್ಯ ೪೪೭
ಕಿಣ್ಣಕ-ಹೆಗ್ಗಡೆ ೯೮
ಕಿತ್ತೂರು ೪೪೯
ಕಿನ್ನೆಯ ಹೆಗ್ಗಡೆ ೧೦೫
ಕಿರಾತರ ೨೮೪
ಕಿರಿಯ ವೆಂಕಪ್ಪನಾಯಕ ೪೦೭
ಕಿಲ್ಲೆದಾರ ೩೦೨
ಕ್ರಿಯಾಶಕ್ತಿ ೧೭,೩೮೯,೪೨೪
ಕ್ರಿಶ್ಚಿಯನ್ನರು ೧೩,೨೪೧,೨೬೧,೩೧೨
ಕೈಲಾನ್ ೩೨,೩೮,೨೦೬
ಕೀಳ್ನಾತ್ತರ್ ೨೪೩
ಕುಂತೂರು ೧೨೨
ಕುಂದಹೆಗ್ಗಡೆ ೧೦೫
ಕುಂದಾಪುರ ೧೬೪
ಕುಂಬಳೆ ೨೦೬,೨೦೭,೨೨೬
ಕುಂಬಳಗೋಡು ೭೭,೪೪೪
ಕುಂಬಾರರು ೭,೧೧೬,೧೨೪,
೧೩೮,೨೨೩,೨೨೫,೨೬೦
ಕುಂಬಾರದೆರೆ ೧೨೭
ಕುಂಭಕೋಣಂ ೪೬,೨೯೬
ಕುಂಭಪಂಜರ ೩೫೮,೩೫೯,೩೬೬
ಕುಡಿಯರು ೨೪೧
ಕುಡುಕುನಾಡು ೧೧೨
ಕುಡುಗುನಾಡು ೧೨೦,೧೨೧
ಕುಣಿಗಲ್ ೧೬೦,೪೪೫,೪೬೧
ಕುತುಬ್‌ಶಾಹ ೫೨,೨೭೨,೨೭೫,೨೮೦,೨೮೫,೪೬೩
ಕುದುರೆಕಲ್ಲು ೩೬೯
ಕುದುರೆಗುಂಡಿ ೪೫೩
ಕುದುರೆಯವರು ೧೨೪
ಕುದೇರು ೧೦೯,೧೨೧
ಕುಪುಖಾನ್ ೪೩೫
ಕುಮರಿ ಬೇಸಾಯ ೧೫೩,೧೬೮
ಕುಮ್ಮಟದುರ್ಗ ೪,೩೬೯
ಕುಮಾರಗಿರಿ ೨೬,೨೭
ಕುಮಾರನಾಡು ೧೧೨
ಕುಮಾರ ಬಂಕನಾಥ ೩೮೦,೩೮೨
ಕುಮಾರ ವಾಲ್ಮೀಕಿ ೩೮೧,೩೮೪
ಕುಮಾರವ್ಯಾಸ ೩೨,೩೮೧,೩೮೨,೩೮೬,೩೮೮,೩೮೯
ಕುಮಾರವೀರ್ಯ ೪೫೬
ಕುರಾನ್ ೩೫೨
ಕುರುಗೋಡು ೨೨೧
ಕುರುಬಜಾತಿ ೨೫೦
ಕುರುಬರು ೧೨೪,೨೪೬,೨೪೮
ಕುಲಕರ್ಣಿ(ಕರಣಂ) ೧೭೩
ಕುಳಗಂದಾಯ ೧೭೬
ಕುಳಪಾಲು ೧೭೨
ಕುಳಾಲ(ಕುಂಬಾರ) ೪೪೨
ಕ್ಯುಲಿಕುತುಬ್‌ಶಾಹ ೪೨
ಕೂಟ ೩೫೯
ಕೂಡಲೂರು ಕೆರೆ ೬೮
ಕೂಡಾವಳಿ ಪದ್ಧತಿ ೧೪೦
ಕೂರಹ ಚೆರ್ಲ ೪೭
ಕೂಲಿಗಳು ೨೧೫,೨೧೮
ಕೃಷ್ಣ ೩೯,೧೧೧,೪೨೧
ಕೃಷ್ಣಗಿರಿ ೨೭೯
ಕೃಷ್ಣ ದೇವಸ್ಥಾನ ೩೫೮,೩೬೦,೩೬೧
ಕೃಷ್ಣದೇವರಾಯ ೧೨,೧೬,೩೭,೪೦-೪೮,೬೮-೭೩,
೭೭-೮೦,೯೮,೧೦೫,೧೦೭,೧೨೧,೧೬೨,೧೬೯,೧೭೬,
೨೨೮-೨೪೫,೨೫೦,೨೫೨,೨೫೭-೨೬೫,೨೭೪,
೩೮೦-೩೯೬,೪೦೮,೪೧೯,೪೩೧,೪೪೩,೪೪೪,
೪೫೦,೪೫೬-೪೫೯
ಕೃಷ್ಣಪ್ಪನಾಯಕ ೪೪೬,೪೪೮,೪೫೦,೪೫೨,೪೫೪,೪೬೧
ಕೃಷ್ಣಮಿಶ್ರ ೪೨೧
ಕೃಷ್ಣರಾಜ ಒಡೆಯ ೧೧೦,೧೩೩,೧೩೯,
೨೬೬,೨೬೭,೨೮೮,೨೯೦,೨೯೪
ಕೃಷ್ಣಶರ್ಮ ೪೨೨
ಕೃಷ್ಣಸ್ವಾಮಿ ಅಯ್ಯಂಗಾರ್ ಎಸ್. ೨೬೩
ಕೃಷ್ಣಸ್ವಾಮಿ ದೇವಾಲಯ ೩೨೩

ಕೃಷ್ಣಾನದಿ ೨೩,೨೫,೨೭,
೩೩,೪೨,೪೩,೫೨,೫೩,೫೬,೨೮೭
ಕೃಷ್ಣಾಪುರ ೪೫೩
ಕೃಷಿ ಉತ್ಪನ್ನಗಳು ೨೨೪
ಕೃಷಿಕರು ೧೨೪
ಕೃಷಿಯೇತರ ಅರ್ಥವ್ಯವಸ್ಥೆ ೨೦೦
ಕೃಷಿಯೇತರ ತೆರಿಗೆ ೨೦೦
ಕೃಷಿವ್ಯವಸ್ಥೆ ೧೫೩
ಕೆಂಗೆನಾಯಕ ೪೨೯
ಕೆಂಗೆ ಹನುಮ ೪೨೯,೪೩೦
ಕೆಂಗೇರಿ ೪೪೪
ಕೆಂಚ ಸೋಮಣ್ಣನಾಯಕ ೬೮
ಕೆಂಡದ ಬಸವರಸ ೧೦೧
ಕೆಂಪ ೮೪
ಕೆಂಪನಂಜೇಗೌಡ ೭೭,೪೪೪,೪೪೬
ಕೆಂಪಮ್ಮ ೪೪೩
ಕೆಂಪಾಂಬುಧಿಕೆರೆ ೭೮,೭೯,೩೭೩,೪೪೪
ಕೆಂಪು ಮಾಣಿಕ್ಯಗಳು ೨೧೪
ಕೆಂಪುಸಮುದ್ರ ೭,೨೧೫
ಕೆಂಪೇಂದ್ರ ೮೪
ಕೆಂಪೇಗೌಡ ೫೬,೭೮,೮೯,೪೩೦,೪೪೩,೪೪೪
ಕೆಂಬಾವಿ ೪೩,೧೧೯
ಕೆಂಬಾಳ ೨೬೬,೨೬೮
ಕೆಬ್ಬೆಗದ್ದೆ ೧೨೫
ಕೆರೆ ೭೯
ಕೆರೆಕೆಳಗೆಂ ಗದ್ದೆ ೧೨೫
ಕೆರೆಯ ಪದ್ಮರಸ ೩೮೬
ಕೆಲಸಿಗ(ಕ್ಷೌರಿಕ)ರು ೩೨೫
ಕೆಳಜಾತಿ ಜನರು ೨೫೧,೨೫೮,೨೫೯,೨೬೧,೨೬೨
ಕೆಳದಿ ೯,೪೯,೬೩,೬೪,೬೯,೭೦,೭೪-೭೭,೯೪,
೯೮,೧೬೮,೧೭೭,೨೬೧,೨೬೫-೩೦೦,೩೦೪-೩೧೦,
೩೧೭,೩೨೩,೩೨೪,೩೩೧,೪೨೦,೪೩೧,೪೩೭
ಕೆಳದಿ ನಾಯಕರು ೧, ೫,೫೪,೬೪,೬೭,೭೨,
೧೦೭,೧೭೮,೧೮೮,೧೮೯,೨೩೩,
೩೬೦,೩೬೨,೩೭೧,೩೭೩,೪೦೭,೪೧೧
ಕೆಳದಿನೃಪವಿಜಯ ೭೨
ಕೆಳದಿಯ ದೇವಾಲಯಗಳು ೯
ಕೆಳದಿಯ ಶಿವಪ್ಪನಾಯಕ ೧೧೬
ಕೆಳದಿ ರಾಜ್ಯಾಡಳಿತ ೭೬
ಕೇತಯ ವೇಮ ೨೭
ಕೇತಸಮುದ್ರ ೨೮೪
ಕೇರಳ ೩೧,೬೪,೭೪
ಕೇಶವ ದೇವಾಲಯ ೪೬೫
ಕೇಶವವರ್ಣಿ ೩೮೧,೩೮೨
ಕೇಸಪ್ಪ ಒಡೆಯ ೧೦೩
ಕೈಗಾರಿಕಾ ವ್ಯವಸ್ಥೆ ೨೧೩
ಕೈಕೋಳರು ೭
ಕೈಕ್ಕೋಲರು ೨೪೮
ಕೈಚಪ್ಪ ೧೦೨
ಕೈಲಾಸ್ ೨೦೮
ಕ್ಲೈವ್ ೨೮೬
ಕ್ರೈಸ್ತರಲ್ಲದವರು(ಹೀದನರು) ೩೫೨
ಕ್ರೈಸ್ತರು ೩೫೨
ಕ್ರೈಸ್ತಧರ್ಮ ೨೨೦,೨೯೬,೩೩೬,೩೪೭,೩೪೮,೩೫೨
ಕೊಂಕಣ ಪ್ರದೇಶ ೧೪
ಕೊಂಕಣಿ ೧೩,೨೪೧,೨೪೨
ಕೊಂಕಣಿ ಕ್ರಿಶ್ಚಿಯನರು ೭,೨೪೭,೨೬೧,೨೬೨
ಕೊಂಕಣಿ ಹಿಂದೂಗಳು ೭
ಕೊಂಗುದೇಶ ೪೫೬
ಕೊಂಗುಧಾರಾಪುರಿ(ಕೊಯಮತ್ತೂರು) ೩೭
ಕೊಂಡಪಲ್ಲಿ ೩೩,೩೪,೪೧,೨೦೬,೨೧೮
ಕೊಂಡಪ್ಪ ಒಡೆಯ ೧೦೨,೧೦೩
ಕೊಂಡರಾಜ ಒಡೆಯ ೧೦೧
ಕೊಂಡರಾಜಯ್ಯ ೬೮
ಕೊಂಡರಾಜ ವೆಂಕಟರಾಜು ನಾಯುಡು ೫೫
ಕೊಂಡವೀಡಿನರೆಡ್ಡಿ ೨೬,೨೮
ಕೊಂಡವೀಡು ೨೫,೨೭,೨೯,೩೬,೪೧,
೪೨,೨೧೭,೨೧೮,೪೬೪
ಕೊಂಡವೀಡು ದುರ್ಗ ೨೭೪
ಕೊಂಬಿನವ ೩೦೫
ಕೊಚಿನ್ ೨೦೬,೨೦೮,೨೩೧
ಕೊಟ್ಟಿಗೆಯವರು ೩೧೯
ಕೊಟ್ಟೂರಯ್ಯ ೩೦೦,೩೨೬
ಕೊಟ್ಟೂರು ೩೩೭
ಕೊಟ್ರಯ್ಯ ಸಿ.ಟಿ.ಎಂ. ೩
ಕೊಠಾರದ ಬಾಗಿಲು ೩೭೦
ಕೊಡಗದಹಾಳ ಕೋಟೆ ೮೮
ಕೊಡಗು ೯೪,೪೪೮,೪೪೯
ಕೊಡಿಗೇಹಳ್ಳಿ ೬೭,೭೭
ಕೊಡವ ೨೪೧
ಕೊತ್ತಗಾಲ ೨೬೭
ಕೊತ್ವಾಲ ೩೦೫,೩೦೬
ಕೊಪ್ಪಂ ೨೩,೧೬೪
ಕೊಯಮತ್ತೂರು ೧೧೯,೪೫೫
ಕೊರ್ರಗಲ್ ೧೬೨
ಕೊರಾನ್ ೧೨,೩೨

ಕೋರ್ಲಕುಂಟೆ ಕೊಂಡಮನಾಯಕ ೬೮
ಕೊಲ್ಹಾಪುರ ೨೦೬
ಕೊಲ್ಲೆಯ ಎಲ್ಲಪ್ಪ ಒಡೆಯ ೧೦೨
ಕೊಳಗ ೧೩೮,೧೬೯
ಕೊಳತೂರು(ಚನ್ನರಾಯಪಟ್ಟಣ) ೪೫೦
ಕೊಳ್ಳೇಗಾಲ ೧೦೮,೧೧೦,೧೧೯,೧೨೫
ಕೋಚರ್ಲಕೋಟ ೫೫
ಕೋಜಿ ೪೪೬
ಕೋಟಶಂಕರದೇವರ ಬಾಗಿಲು ೩೭೦
ಕೋಟೀಶ್ವರ ೩೮೩,೨೯೫
ಕೋಟೇಶ್ವರ ೧೦೭
ಕೋಠಿ ೩೧೨
ಕೋಡಿಹಳ್ಳಿ ಬಸವ ೩೦೭
ಕೋನೇಟಿರಾಜ ೩೮
ಕೋನೇರುನಾಥ ೩೯
ಕೋರಕೋಟೆ ೮೮
ಕೋರಗ್ರಾಮ ೮೩
ಕೋಲಾರ ೩೬,೬೭,೧೫೪,
೧೫೫,೧೬೩,೧೬೪,೨೨೫,೨೭೫,೨೮೦
ಕೋವಿಲ್‌ಕೊಂಡ ೩೯,೪೦,೫೨
ಕೋವೆಲ(ಶ್ರೀರಂಗಂ) ೩೬
ಕೌಂಡಿನಿ ನದಿ ೧೩೭,೨೯೬,೩೨೦,೩೨೭
ಕೌಟಿಲ್ಯ ೪೫೭
ಕೌತಾಳಂ ೧೭೧
ಕೌಮಾರಿ ೩೫೩
ಕೌಶಿಕ ೩೨೦

ಖಂಡುಗ ೧೭೯
ಖಂಡೇರಾವ್ ೨೯೦
ಖಾಂದೇಶ ೫೧
ಖಾನ್ ಮುಹಮ್ಮದ್ ೨೭೯
ಖಾರೇ ಪಟ್ಟಣ ೨೫
ಖಾಸಿಂಖಾನ್ ೨೮೬,೪೪೧
ಖಿಲ್ಜಿ ೧೧,೧೩
ಖೇಳ್ನಾ ಕೋಟೆ ೩೪

ಗಂಗ ೧೦೮
ಗಂಗಕೋಲು ೧೬೮
ಗಂಗರಾಜ ೩೯-೪೧,೧೨೧,೧೨೩,೪೫೬,೪೫೯
ಗಂಗವಂಶ ೧೨,೮೭
ಗಂಗವಾಡಿ ನದಿ ೭೨
ಗಂಗಾದೇವಿ ೨೨,೨೪,೩೮೦,೩೮೬,
೩೯೨,೪೦೮,೪೧೦,೪೨೩,೪೨೪
ಗಂಗಾಧರ ೩೩,೩೮೬,೪೨೪
ಗಂಗಾಧರೇಶ್ವರ ದೇವಾಲಯ ೧೩೮,೩೭೪
ಗಂಗಾನದಿ ೨೫೫
ಗಂಗು ೪೯
ಗಂಡಭೇರುಂಡ ೩೭೨
ಗಂಡಿಕೋಟ ೩೭,೪೮,೨೭೪
ಗಂಧಾರ ೨೦೬
ಗಜಪತಿ ೩೧,೩೨,೩೬,೪೧,೪೨,೪೭
ಗಜಬೇಂಟೆಕಾರ ೩೩೧
ಗಜಪತಿ ಭಾನುದೇವ ೨೯
ಗಜರಾಮತಿಪ್ಪ ೩೩
ಗಡಿಕಲ್ಲು ೧೬೭
ಗಣಪುರ ೫೨
ಗಣಕೆಯರು ೩೨೩
ಗದಗ ೧೬೨,೧೬೯
ಗದ್ಯಾಣ ೧೨೫
ಗರುಡಗಂಬಗಳು ೧೨೮
ಗವಾನ ೩೪
ಗವಿಗಂಗಾಧರೇಶ್ವರ ದೇವಸ್ಥಾನ ೭೮
ಗವೀಪುರ ೭೮,೩೭೪,೪೪೪
ಗಾಣಗಿತ್ತಿ ಜೈನ ದೇವಾಲಯ ೩೫೮
ಗಾಣಸುಂಕ ೧೨೬
ಗಾಣಿಗ ೧೩೮
ಗಾಣಿಗನೂರು ೧೦೯,೧೧೩,೧೧೫,೧೨೪,೩೨೧,೪೬೧
ಗಾಣುಗರಿ ೨೨೩
ಗಾಯಕರು ೧೧೬
ಗಾರೆಯುವರು ೧೧೬,೧೩೮,೨೧೫
ಗಾವುಡಹಳ್ಳಿ ೨೯೫
ಗಾರ್ಸಿಯ ೨೧೪,೨೧೯
ಗಾಳೆಮ್ಮ ೩೫೩
ಗ್ರಾಮದೇವತೆ ೩೨೬
ಗಿಡ್ಡೇಗೌಡ ೪೪೬
ಗಿರಿಯಪ್ಪನಾಯಕ ೪೫೩
ಗುಂಟೂರು ೪೨
ಗುಂಡ ೨೫
ಗುಂಡ ದಂಡನಾಥ ೩೫೭
ಗುಂಡ್ಲುಪೇಟೆ ೧೧೯,೧೨೦,೧೨೭,೪೬೨
ಗುಂಬಾರತಿಗಳು ೧೧೫
ಗುಜರಾತ್ ೨೧೩,೨೨೦
ಗುತ್ತಿ ೧೪,೫೫,೬೭,
೭೩,೨೦೬,೨೨೨,೨೨೫,೩೦೪

ಗುನಿವಾರಿ ಪಲ್ಲಿ ೨೨೩
ಗುಬ್ಬಿ ೮೮,೧೩೭,೩೨೭,೪೩೧
ಗುಬ್ಬಿಗಾಡಿ ೧೨೭
ಗುಬ್ಬಿಯ ಮಲ್ಲಣ್ಣ ೩೮೧-೩೮೩
ಗುಬ್ಬಿ ಹೊಸಹಳ್ಳಿ ೮೩
ಗುಮಾಸ್ತರು ೩೦೪,೩೦೫
ಗುರಿಕಾರ ೩೦೫,೩೦೬
ಗುರುಕರ್ಣರು ೩೬
ಗುರುತೋಂಟದ ಸಿದ್ಧಲಿಂಗಯತಿಗಳು ೮೪
ಗುರುನಂಜ ಭಟ್ಟಭಾಸ್ಕರ ೩೮೨
ಗುರುನಂಜಾರ್ಯ ೯೩
ಗುರುಪಾದಸ್ವಾಮಿ ಮಠ ೯೫,೯೬
ಗುರುಬಸಪ್ಪದೇವರು ೩೦೦
ಗುರುಬಸವ ೩೮೦,೩೮೧
ಗುರುಬಸವರಾಜ ದೇವರು ೯೫
ಗುರುಮಲ್ಲೇಶ್ವರ ಮಠ ೧೧೭
ಗುರುರಾಜಭಟ್ ಪಿ. ೨೬೧
ಗುರುರಾಯ ೪೨೧,೪೨೨
ಗುರುಲಿಂಗವಿಭು ೩೮೪
ಗುರುವಣ್ಣ ೯೦,೪೩೨
ಗುರುವಪ್ಪ ಒಡೆಯ ೧೦೧
ಗುರುವಾಜಮ್ಮಣ್ಣಿ ೨೭೩
ಗುರ್ರಮಕೊಂಡ ೨೮೦
ಗುಲ್ಬರ್ಗ ೨೮,೪೩,೬೪,೬೫,
೭೪,೨೦೬,೨೦೯,೨೬೧,೩೬೩,೪೧೩
ಗುಲಾಮಗಿರಿ ೨೪೯
ಗುಲಾಬಿ ಪನ್ನೀರು ೨೧೫
ಗೂಟಿ(ಕೊಂಡವೀಡು) ೪೪,೨೧೪,೨೮೦,೨೮೪
ಗೆಜ್ಜಿಗನಹಳ್ಳಿ ೨೯೫
ಗೇರುಸೊಪ್ಪೆಯ ಭೈರಾದೇವಿ ೭೫
ಗೇರುಸೊಪ್ಪೆಯ ರಾಣಿ ೨೩೧,೨೩೨
ಗೊತ್ತುಗಾರ ೩೦೪
ಗೊಬ್ಬೂರಿ ಕುಟುಂಬ ೫೬
ಗೊಮ್ಮಟೇಶ್ವರ ೨೯೫
ಗೊರೂರು ೪೫೨
ಗೊಲ್ಲ ೨೪೬,೩೦೨,೩೦೪
ಗೋಕರ್ಣ ೩೫೫
ಗೋದಾದೇವಿ ೩೯೩
ಗೋದಾವರಿ ೨೫-೨೭,೪೧,೪೨,೫೧,
ಗೋಪ ೨೩,೪೪,೯೯,೧೦೩,೩೮೪
ಗೋಪತಿಪ್ಪ ಭೂಪಾಲ ವಾಮನ ೩೮೭,೪೧೮
ಗೋಪಾಲ ೩೩೫
ಗೋಪಾಲ್ ಬಿ.ಆರ್. ೨,೪
ಗೋಪಾಲ ಚನ್ನಬಸವೇಶ್ವರ ೮೭
ಗೋಪಾಲದಾಸರು ೩೫೧
ಗೋಪಾಲರಾಜ ಅರಸು ೧೩೪
ಗೋಪಾಲಸ್ವಾಮಿ ದೇವಾಲಯ ೨೯೫
ಗೋಮಾಳ ೧೨೫
ಗೋಮೇಧಿಕಗಳು ೨೧೪
ಗೋಲ್ಕೊಂಡ ೨೩,೪೨,೫೨,೫೩,೫೬,೨೦೬,
೨೦೯,೨೭೪,೨೭೮,೨೭೯,೨೮೦,
೨೮೪-೨೮೬,೪೦೭,೪೦೮,೪೨೮,೪೬೩
ಗೋಲ್ಕೊಂಡದ ಕುತುಬ್‌ಶಾಹ ೫೦,೫೧
ಗೋವಾ ೧೩,೩೪,೪೦,೪೯,೫೫,೧೦೫,
೧೬೨,೨೦೬,೨೦೭,೨೦೯,೨೧೬,೨೧೮,೨೧೯,
೨೩೧,೨೩೩,೨೪೧,೨೪೭,೨೬೧,೪೩೯
ಗೋವಿಂದಯ್ಯ ೩೦೦
ಗೋವಿಂದರಾಜ ೪೧
ಗೋವಿಂದವೈದ್ಯ ೨೭೬,೨೭೭,೩೨೯,೩೩೦,೩೩೨,
೩೮೧,೩೯೨,೪೦೫,೪೨೯,೪೫೨,೪೬೪
ಗೋವಿನಹಳ್ಳಿ ೧೨೪
ಗೌಡ(ಪ್ರಭು) ೧೦೮,೧೧೨,
೧೬೪,೧೬೫,೧೭೩,೨೨೨,೩೨೫
ಗೌಡ ಸಾರಸ್ವತರು ೩೧೭
ಗೌತಮ ೨೫೦,೩೨೦
ಗೌತಮಬುದ್ಧ ೩೫೧
ಗೌರಮ್ಮ ೩೩೭
ಗೌರಿಬಿದನೂರು ೧೫೫
ಗೌರೀಶ್ವರ ದೇವಾಲಯ ೧೧೮,೪೬೦,೪೬೨
ಗೌಲರಸ ೧೦೨

ಘೋಷಾಲ್ ಕೆ.ಪಿ. ೧೬೫

ಚಂಗಾಳ್ವನಾಯಕರು ೪೪೮,೪೪೯
ಚಂಡ ದೇವತೆಗಳು ೩೫೪
ಚಂಡಿ ೩೫೩
ಚಂದ್ರ ಕವಿ ೩೮೦
ಚಂದ್ರಕೀರ್ತಿ ೩೮೩
ಚಂದ್ರಗಿರಿ ೩೩-೩೫,೪೬,೪೯,೫೪,೫೫,೫೯,
೮೨,೨೦೯,೨೧೮,೨೧೯,೨೨೪,೨೨೫,೨೭೫,
೨೭೮,೨೮೦,೩೩೩,೩೫೨,೪೫೧
ಚಂದ್ರಗುತ್ತಿ ೨೨,೬೪,೭೪,೭೫,೨೦೬,೨೨೫
ಚಂದ್ರಗುಪ್ತ ೬೩
ಚಂದ್ರಪ್ಪನಾಯಕ ೪೪೦
ಚಂದ್ರರಸ ೧೦೦

ಚಂದ್ರವಂಶ ೩೧೮
ಚಂದ್ರಶೇಖರ ಒಡೆಯ ೧೧೧,೩೧೧,೪೬೩
ಚಂದ್ರಶೇಖರ ಭಾರತಿ ೩೨
ಚಂದ್ರಸಾರಸು ೪೪೭
ಚಂದಾವರ ೨೨೫
ಚಂದಾಸಾಹೇಬ ೧೩೩,೪೩೬,೪೪೧
ಚಕ್ಕರೆ ೧೬೪
ಚಕ್ಕಲೂರು ೬೭
ಚರ್ಚುಗಳು ೨೬೨,೩೫೫
ಚತುರ್ ೪೨
ಚತುರ್ವೇದಿಮಗಳಂ ೧೧೫
ಚದುರಂಗ ಪಟ್ಟಣ ೨೨೫
ಚನ್ನಕೇಶವ ೧೫,೬೭,೯೬,೩೫೭
ಚನ್ನನಂಜರಾಜ ಒಡೆಯರ್ ೩೭,೧೨೨,೧೨೩,೪೫೯
ಚನ್ನಪಟ್ಟಣ ೫೫,೬೭,೬೮,೭೯,೮೪,೮೬,೧೩೨,
೨೭೧-೨೭೩,೨೭೮,೪೦೫,
೪೩೦,೪೩೨,೪೪೭,೪೬೩,೪೬೪
ಚನ್ನಪ್ಪಗೌಡ ೮೬
ಚನ್ನಪ್ಪನಪುರ ೧೧೦
ಚನ್ನಬಸಪ್ಪನಾಯಕ ೯೧,೯೨,
೪೦೮,೪೩೨,೪೩೩,೪೩೭,೪೪೦
ಚನ್ನಬಸವಪುರಾಣ ೧೬೯
ಚನ್ನಮಾಂಬಿಕೆ ೪೪೮
ಚನ್ನರಾಜ ೧೨೧,೪೬೧
ಚನ್ನರಾಜ ಒಡೆಯರ್ ೨೬೭,೪೬೩
ಚನ್ನರಾಯದುರ್ಗದ ಕೋಟೆ ೮೮
ಚನ್ನರಾಯಪಟ್ಟಣ ೨೭೩,೪೫೦,೪೫೧
ಚಬನಹಳ್ಳಿ ೩೨೬
ಚಳಕ(ನೀರುಗಂಟಿ) ೪೪೨
ಚಳ್ಳಕೆರೆ ೮೧
ಚಾಂದ್‌ಬೀಬಿ ೫೨
ಚಾಟುವಿಠಲನಾಥ ೩೮೦,೩೮೧,೩೮೪
ಚಾಮಯ್ಯ ೩೯೨,೩೯೩
ಚಾಮರಸ ೩೨,೫೮,೧೦೮,೧೧೦,
೩೮೦-೩೮೨,೩೮೬-೩೮೯
ಚಾಮರಾಜ ಒಡೆಯ ೯೦,೧೧೦,೧೧೫,೧೩೯,
೨೬೬,೨೬೭,೨೭೩,೨೮೮,೨೯೫,೩೦೯,೩೧೭,
೩೩೦,೩೩೪,೩೯೪,೩೯೫,೪೩೨,೪೫೦,೪೬೪
ಚಾಮರಾಜನಗರ ೧೧೯,೧೨೫,೧೨೭,
೧೬೪,೪೫೪,೪೬೧,೪೬೨
ಚಾಮರಾಜನಾಯಕ ೪೬೦
ಚಾಮರಾಜಸಮುದ್ರ ೨೯೫
ಚಾಮರಾಜೇಶ್ವರ ೧೩೯
ಚಾಮುಂಡಿ ೩೫೩,೩೯೪
ಚಾಮುಂಡಿ ಬೆಟ್ಟ ೩೭೫
ಚಾಮುಂಡೇಶ್ವರಿ ೨೯೫
ಚಾಮುಂಡೇಶ್ವರಿ ದೇವಾಲಯ ೩೦೭
ಚಾರರು ೩೦೯
ಚಾರುಕೀರ್ತಿ ಪಂಡಿತಾಚಾರ್ಯ ೨೯೫,೩೩೭
ಚಾಲ್ ೨೫
ಚಾಲುಕ್ಯ ಚಕ್ರವರ್ತಿಗಳು ೧೭೭
ಚಾಲುಕ್ಯರ ದೇವಾಲಯ ೩೫೮
ಚಾವಡಿ ೩೦೨
ಚಾವಡಿ ಕರಣಿಕರು ೧೧೨
ಚಿಕುಪಾದ್ಯಾಯ ೩೦೦,೩೯೧-೩೯೬,೪೦೬
ಚಿಂಚನಪುರ ೧೧೫
ಚಿಂತಕಲ್ಲು(ಚಿತ್ರದುರ್ಗ) ೪೩೪,೪೩೬
ಚಿಕ್ಕ ಉಪಾಧ್ಯಾಯ ೩೩೫
ಚಿಕ್ಕಕೃಷ್ಣರಾಜ ಒಡೆಯರು ೧೩೨
(೨ನೇ ಕೃಷ್ಣರಾಜ ಒಡೆಯರು)
ಚಿಕ್ಕಣ್ಣ ೧೦೬,೧೨೧
ಚಿಕ್ಕಣ್ಣ ಒಡೆಯರ್ ೪೫೯
ಚಿಕ್ಕಣ್ಣ ನಾಯಕ ೪೪೩
ಚಿಕ್ಕದೇವರಾಜ ಒಡೆಯರು ೮೫,೯೨,೧೧೦,
೧೧೬,೧೧೭,೧೩೧,೧೩೭,೧೬೯,೧೮೩,
೧೮೪,೧೮೬,೨೮೩-೨೮೮,೨೯೪-೩೦೪,
೩೧೬,೩೧೭,೩೨೦,೩೨೨,೩೨೫,೩೨೬,
೩೩೧,೩೩೫,೩೩೭,೩೩೮,೩೯೦,೩೯೧,
೩೯೩,೩೯೭,೪೦೬,೪೦೭,೪೧೮,೪೬೨
ಚಿಕ್ಕದೇವರಾಜ ವಂಶಾವಳಿ ೨೮೦
ಚಿಕ್ಕದೇವರಾಜ ಸಾಗರನಾಲೆ ೨೯೬,೩೦೩
ಚಿಕ್ಕನಾಯಕ ೪೩೧-೪೩೩,೪೪೮
ಚಿಕ್ಕನಾಯಕನಹಳ್ಳಿ ೭೨,೮೮,೮೯,೯೧,೯೨,೯೫,೯೬,
೨೮೧,೨೮೩,೪೨೮,೪೩೧,೪೩೨,೪೩೪,೪೫೧,೪೬೪
ಚಿಕ್ಕಪ್ಪಗೌಡ ೮೩,೨೮೫
ಚಿಕ್ಕಪ್ಪನಾಯಕ ೪೪೩
ಚಿಕ್ಕಬಳ್ಳಾಪುರ ೮೪
ಚಿಕ್ಕಮಗಳೂರು ೧೯,೨೦,೧೬೪,೧೭೭
ಚಿಕ್ಕರಾಯ ೨೬,೫೬,೧೨೧,೪೫೮
ಚಿಕ್ಕರಾಯಸಾಗರ ೪೫೮
ಚಿಕ್ಕವೀರ ದೇಶಿಕ ೪೬೨
ಚಿಕ್ಕ ಸಂಕಣ್ಣನಾಯಕ ೪೪೦
ಚಿಕ್ಕೊಡೆಯ ೪೫೬
ಚಿಟ್-ಲಿ(ಚಿಟಿ-ಲಿಪ) ೨೧೩
ಚಿಟ್ನಿಸ್ ೫,೧೨,೭೬
ಚಿಣ್ಯ ೨೭೧,೪೬೪

ಚಿತ್ರದುರ್ಗ ೬,೭೦-೭೨,೭೭,೮೯,
೧೬೩,೧೬೪,೧೮೩,೨೨೫,೩೩೩,೪೨೮
ಚಿತ್ರದುರ್ಗದ ನಾಯಕರು ೬೩,೬೫,೮೧,೯೧,೪೪೧,೪೪೩
ಚಿತ್ರದುರ್ಗದ ಪಾಳೆಯಗಾರವಂಶ ೮೧,೯೧
ಚಿತ್ರದುರ್ಗದ ಬೃಹನ್ಮಠ ೯೬
ಚಿತ್ರರಾವ್(ಅಚ್ಯುತರಾಯ) ೬೯
ಚಿತ್ಪಾವನ ೨೪೩
ಚಿತ್ತೂರು ಜಿಲ್ಲೆ ೩೬,೨೭೮,೨೮೦
ಚಿದಂಬರಂ ೨೧೮,೩೫೫
ಚಿನವೇಂಕಟಾದ್ರಿ ೪೨೫
ಚಿನ್ನ ೨೧೮
ಚಿನ್ನತಿಮ್ಮ ೪೯
ಚಿನ್ನತುಮ್ಮಲು ೮೯
ಚಿನ್ನರಸ ಒಡೆಯರ್(ಸಿಂಗಿದೇವ) ೪೬೩
ಚಿನಿವಾರರು ೨೨೩
ಚಿಪ್ಪಿಗರು(ದರ್ಜಿಗಳು) ೧೩೮,೩೧೯
ಚಿಮತನಕಲ್ಲು ೨೨೫
ಚಿಂಗಪ್ಪಾಡಿಕೋಟ ೨೭೬
ಚಿಂಗಲ್‌ಪೇಟೆ ೩೬
ಚಿಟ್ಟಿಗಳು(ಸೆಟ್ಟಿಗಳು) ೨೧೭
ಚೆನ್ನಪ್ಪಗೌಡ ೮೩
ಚೆನ್ನಬಸವ ೧೧೬
ಚೆನ್ನಬಸವರಾಜದೇವರು ೧೨೩
ಚೆನ್ನಬಸವಾಂಕ ೩೮೧
ಚೆನ್ನಮ್ಮಾಜಿ ೨೬೧,೨೯೬-೩೦೦,
೩೧೨,೩೨೩,೩೩೭,೪೦೭-೪೦೯,
೪೩೫,೪೩೬,೪೩೯,೪೪೦,೪೫೧
ಚೆನ್ನಯ್ಯ ೩೯೯,೪೦೦
ಚೆನ್ನಯ-ಚೆಲುವಾಂಬೆ ೩೯೩
ಚೆನ್ನರಸಣ್ಣ ೧೦೨
ಚೆನ್ನರಾಜ ೧೧೪,೩೦೦
ಚೆನ್ನರಾಜ ಒಡೆಯರ್ ೩೩೦
ಚೆನ್ನರಾಯದುರ್ಗ ೮೫,೨೮೫
ಚೆನ್ನವೀರ ೪೦೮,೪೦೯
ಚೆನ್ನವೀರಮ್ಮಾಜಿ ೪೦೮
ಚೆನ್ನವೀರಾಚಾರ್ಯ ೩೮೩
ಚೆನ್ನಾಂಬಿಕೆ ೪೪೬
ಚೆನ್ನೊಡೆಯ ೧೦೯
ಚೆಲುವಾಂಬೆ ೧೪೦,೩೩೯,೩೯೦,
೩೯೫,೩೯೮,೪೦೧,೪೦೫
ಚೆಲುವಾಜಮ್ಮ ೩೯೮
ಚೇರಮ ೩೮೪
ಚೇಳೂರು ೮೩,೯೨
ಚೈತ್ಯ ೩೫೫
ಚೈನಾ ೭,೫೭,೨೦೪,೨೦೭,
೨೦೮,೨೧೭,೨೧೯,೨೨೦,೨೨೯,೩೫೫
ಚೊಕ್ಕನಾಥನಾಯಕ ೨೮೩,೨೮೪,೪೫೧
ಚೋಳ ೨೪,೩೮,೨೬೭
ಚೋಳದೇಶ ೩೬
ಚೋಳ ಬಸವೇಶ್ವರ ೮೫
ಚೋಳಮಂಡಲ(ಕೋರಮಂಡಲ) ೨೧೯
ಚೋಳರಾಜ ೪೨೫
ಚೋಳರ ದೇವಾಲಯ ೩೫೮
ಚೋಳರು ೨೧,೮೩,೧೧೫,೧೧೮,೪೩೪,೪೪೮
ಚೋಳೆಯನಹಳ್ಳಿ ೪೫೦
ಚೋಳೇಂದ್ರಸಿಂಹ ೧೧೫
ಚೌಟ ೯೮,೨೬೧
ಚೌಡ ೬೪,೭೨
ಚೌಡಪ್ಪ ೭೩,೪೦೮
ಚೌಡಪ್ಪನಾಯಕ ೭೩,೪೦೭,೪೦೯
ಚೌಡಿ ೩೫೩
ಚೌಡೇಶ್ವರಿ(ಚೋಳಸಮುದ್ರಂ) ೩೫೩
ಚೌಥ್ ೨೮೯

ಜಂಗಮಕೂಟ ೩೨೪
ಜಂಗಮರು ೨೪೭
ಜಂಬೂರಿನ ವಿರುಪಣ್ಣ ಒಡೆಯರ್ ೭೫
ಜಕ್ಕಣ್ಣ ಒಡೆಯ ೯೯
ಜಕ್ಕಣ್ಣನಾಯಕ ೧೦೪
ಜಕ್ಕಣಾರ್ಯ ೩೮೦,೩೮೩,೩೮೫,೩೮೮
ಜಗದೇವರಾಜ ೭೮
ಜಗದೇವರಾಯ ೮೪,೮೯,೧೦೮,೨೭೧,
೨೭೭-೨೮೦,೪೩೦,೪೬೩,೪೬೫
ಜಗನ್ಮೋಹಿನಿ ೪೨
ಜಗಳೂರು ೮೧
ಜಡಕನದುರ್ಗ ೨೮೪
ಜಡಕಲ್‌ದುರ್ಗ ೮೦
ಜಡವಿನಾಯಕ ೮೦
ಜಡೆಯ ಶಂಕರದೇವರ ದಿಡ್ಡಿ ೩೭೦
ಜನಪ್ರಿಯ ಸಂಸ್ಕೃತಿ ೩೫೩
ಜನಾರ್ಧನ ೬೮
ಜನಾರ್ಧನಸ್ವಾಮಿ ದೇವಾಲಯ ೨೯೫
ಜನಾನಾ ಆವರಣ ೩೬೪,೩೬೭,೩೬೮
ಜಪಾನ್ ೩,೨೦೧
ಜಮದಗ್ನಿ ೩೨೦
ಜಮಾದಾರ ೩೧೦

ಜಮಾಲ್‌ಬೀಬಿ ೫೨
ಜಯಗೌಡ ೭೭,೪೪೩,೪೪೬
ಜಯಚಾಮರಾಜೇಂದ್ರ ಒಡೆಯರ್ ೩೯೦
ಜಯತೀರ್ಥ ೩೫೦,೪೧೭
ಜಯಮಂಗಲಿ ನದಿ ೮೩
ಜಯಸ್ವಾಲ್ ಕೆ.ಪಿ. ೧೬೫
ಜಲಸೇನದೇವರ ಕೊತ್ತಳ ೩೭೧
ಜಹಗೀರು ೩೦೨
ಜಹಾಂಗೀರ್‌ಖಾನ್ ೫೨
ಜಾಂಬವಂತ ೪೨೧
ಜಾಂಬವತಿ ೪೨೧
ಜಾಗರಕೋಟೆ ೨೮೧
ಜಾನ್ ೪,೪೪೧
ಜಾನ್ ಹಿಂಗೆನ್ ಲಿನ್ಸ್ಕೋಟೆನ್ ೨೧೮
ಜಾನಕಲ್ಲು ೪೪೨
ಜಾನಕೊಂಡ ೪೪೨
ಜಾನಪದ ಗೀತೆ ೩೨೦
ಜಾನಪದ ದೇವದೇವತೆ ೧೧೭
ಜಾನಪದ ನಂಬಿಕೆ ೧೧೭
ಜಾತಿ ವ್ಯವಸ್ಥೆ ೧೨೪,೨೪೧
ಜಾಲಿಹಾಳು ೭೪
ಜಾವೋ ಪಾಂಟೆ ೧೬೨
ಜಿಂಜಿ ೪೭,೫೪,೫೬,೨೬೭,೨೮೬
ಜಿಂಜಿನಾಯಕರು ೨೭೮
ಜಿಗಣಿ ೪೪೪
ಜಿದ್ದಾ-ಏಡನ್ ೨೧೯
ಜೀತಗಾರಿಕೆ ೧೬೪
ಜುನ್ನಾರು ೫೦,೨೦೬
ಜ್ಯೂಗಳು ೩೫೨
ಜೆಡ್ಡಾ ೨೩೧
ಜೆಸೂಟ್ ಪತ್ರಗಳು ೨೭೮
ಜೆಸೂಟ್ ಮಿಶನರಿ ೫೬
ಜೆಸ್ಯುಟರು ೨೪೪,೩೫೨
ಜೈನಕವಿ ೨೫೪
ಜೈನತೀರ್ಥಂಕರರು ೧೧೮
ಜೈನಧರ್ಮ ೨೯೫,೩೨೮,೩೪೭,೩೪೮,೩೫೧,೩೮೩
ಜೈನಪರಂಪರೆ ೧೨೯
ಜೈನ ಬಸದಿ ೮೭
ಜೈನ ಬ್ರಾಹ್ಮಣ ೩೧೭
ಜೈನರು ೨೪,೫೭,೧೧೪,೨೪೧,೨೬೧
ಜೈನ-ವೈಷ್ಣವ ಸಂಘರ್ಷ ೨೫೬
ಜೈಹಜಿ ೨೮೫
ಜೋಗಿಹಳ್ಳಿ ೯೫
ಜೋಡಿಕಂದಾಯ ೧೮೫
ಜೋಯಿಸ ೪೪೨
ಜ್ಞಾನಚಿಂತಾಮಣಿ ೩೮೦

ಟಂಕಸಾಲೆ ೩೦೧,೩೬೪,೩೬೫
ಟರ್ಕರು ೨೩೦
ಟರ್ಕಿಯೋಧರು ೩೦
ಟರ್ಕೋ ಆಫ್ಘನರು ೧
ಟಾನಿ ಆರ್.ಎಸ್. ೨೦೧
ಟ್ರಾವರ್ನಿಯರ್ ೨೩೧
ಟಿಪ್ಪುಸುಲ್ತಾನ್ ೮೫,೮೬,೩೯೦,೩೯೨
ಟಿನಸ್ಸೆರಿಮ್(ಬರ್ಮಾ) ೩೨
ಟೆರ್ರಿ ೧೫೪
ಟ್ರೆಂಚ್‌ಯುದ್ಧ ೩೧೦

ಠಾಣಾದಾರರು ೩೦೧,೩೦೨,೩೦೫

ಡಚ್ಚರು ೫೬,೨೩೦,೨೩೨,೩೩೯
ಡಣಾಯಕನ ಕೋಟೆ ೩೭೨,೩೭೬
ಡಣಾಯಕರ ಆವರಣ ೩೬೪
ಡಿಂಡಿಮನಾಥ ೩೮೬
ಡ್ಯುಆರ್ಟ್ ಬಾರ್ಬೋಸ ೫೭
ಡೂಪ್ಲೆ ೨೮೬
ಡ್ಯೂರೇಟ್ ಬಾರ್ಬೋಸಾ ೧೭೬
ಡೆಂಕಣಕೋಟೆ ೨೭೭,೨೭೯
ಡೆಮೆನ್ಸ್ ನೆಲ ೧೬೬
ಡೊಮಿಂಗೋಪೇಸ್ ೫೭,೨೨೧,೩೬೬,೩೭೯,೪೫೬

ತಂಜಾವೂರು ೪೭,೫೪,೫೬,೨೬೭,೨೭೮,೨೮೬
ತಗಡೂರು ೧೨೧,೧೨೨
ತತ್ವಶಾಸ್ತ್ರ ೨೯೭
ತಬತಬಾ ೨೯
ತಮಟೆ ಹೊಡೆಯುವವರು ೧೧೬,೩೦೫
ತಮ್ಮಣ್ಣನಾಯಕ ೧೦೪
ತಮ್ಮಯ್ಯ ೩೯೩
ತಮ್ಮರಾಯ ೩೯
ತಮಿಳರು ೪೪
ತಮಿಳು ೨೪೨,೪೧೨
ತಮಿಳುದೇಶ ೨೩
ತಮಿಳುನಾಡಿನ ಚೋಳರು ೧೦೮
ತಮಿಳುನಾಡು ೩,೧೪,೧೬,೩೩,೩೬,೨೨೫
ತಮಿಳು ಪ್ರಾಂತ ೨೪
ತಮಿಳು ರಾಜರು ೧೭೭
ತಮಿಳು ಸಾಹಿತ್ಯ ೪೨೨
ತರಿಯಕಲ್ಲು ೨೨೫

ತರೀಕೆರೆ ೬,೭೫,೪೩೧
ತಲಕಾಡು ೧೨೧,೧೨೭,
೨೬೮-೨೭೧,೩೩೪,೪೦೩
ತಲಕಾಡು ಪ್ರಾಂತ ೧೨೩
ತಲಘಟ್ಟದ ಪುರ ೪೪೪
ತಲಚೇರಿ ೭೭
ತಲೆಗಟ್ಟಪುರ ೭೭
ತೃಣೇಶ್ವರ ದೇವಾಲಯ ೧೩೮,೧೩೯
ತಾಂಡವೇಶ್ವರ ೧೩೮
ತಾತಾಚಾರ್ಯರು ೨೫೧,೨೫೦
ತಾಮ್ರಮರ್ದಕರು ೩೧೯
ತಾಯೂರು ೪೬೧
ತಾವರೆಗೆರೆ ೩೩೬
ತಾಳಿಕೋಟೆ ೪೬,೫೨,೭೬,೨೮೩
ತಾಳೀಕೋಟೆಯುದ್ಧ ೫೨,೭೯,೭೯,೮೪,೧೭೭,
೨೩೨,೨೬೪,೨೬೭,೪೨೮,೪೩೭
ತಿಂಗಳಾಂಬಾ ೪೬
ತಿಕ್ಕಯ್ಯ ೪೨೪
ತಿಗುಳರು ೩೬
ತಿಪ್ಪಾಜಿ ೪೬
ತಿಮ್ಮ(ಪೆದ್ದತಿರುಮಲ) ೩೮,೫೫,೪೦೬
ತಿಮ್ಮಗೌಡ ೮೫
ತಿಮ್ಮಣ್ಣ ೩೮೧
ತಿಮ್ಮಣ್ಣ ಒಡೆಯ ೧೦೦,೧೦೩
ತಿಮ್ಮಣ್ಣ ಕವಿ ೩೮೯,೩೯೬
ತಿಮ್ಮಣ್ಣ ಕೊಟ್ಟೂರು ೮೪
ತಿಮ್ಮಣ್ಣನಾಯಕ ೬೪,೬೯,೮೦,೮೧,೪೪೧,೪೪೩
ತಿಮ್ಮದಂಡನಾಯಕ ೪೪,೧೦೩
ತಿಮ್ಮಪ್ಪನಾಯಕ ೪೫೩
ತಿಮ್ಮರಸ ೩೮,೪೦,೩೦೦
ತಿಮ್ಮರಸಯ್ಯ ೮೬
ತಿಮ್ಮರಾಜ ೨೬೭,೨೬೮,೩೨೧,೩೯೪,೪೬೩
ತಿಮ್ಮರಾಜ ಒಡೆಯರ್ ೨೬೬
ತಿಮ್ಮರಾಜಯ್ಯ ೩೦೮
ತಿಮ್ಮಿನಾಯಕ ೮೪
ತಿರುಚೆಂಗೋಡು ಕೋಟ ೨೭೬
ತಿರುಚಿ(ನಾ)ರಾಪಲ್ಲಿ(ಳ್ಳಿ) ೩೩,೧೩೩,೨೭೬,೨೮೪,೨೮೯
ತಿರುಪತಿ ೨೩,೪೭,೫೫,೧೧೮,೨೦೯,
೨೧೮,೨೪೯,೨೯೬,೩೨೨,೪೦೬,೪೪೪
ತಿರುಮಂಗಳ ಆಳ್ವಾರ್ ದೇವಸ್ಥಾನ ೩೬೧
ತಿರುಮಲ(ಲೆ) ೪೧,೪೪,೪೭,೪೯,೫೪,
೫೫,೫೬,೮೪,೨೭೧,೨೭೬,,೩೦೭,
೩೦೮,೩೧೦,೩೫೫,೪೨೮,೪೬೦,೪೬೧,೪೬೪
ತಿರುಮಲ-ತಿರುಪತಿ ೪೬
ತಿರುಮಲದೇವಿ ೪೩
ತಿರುಮಲದೇವಿ ಪಟ್ಟಣ ೩೬೪
ತಿರುಮಲನಾಯಕ ೧೦೯,೧೧೧,೨೭೮,೨೭೯,೪೫೪,೪೬೨
ತಿರುಮಲಭಟ್ಟ ೩೦೬,೪೦೮,೪೦೯,೪೩೯
ತಿರುಮಲರಾಜನಾಯಕ ೧೦೯,೧೧೦,೧೧೫
ತಿರುಮಲರಾಯ ೪೪೭,೪೪೯
ತಿರುಮಲಾಂಬಾ ೨೫೮,೩೮೦,೩೯೬,೪೨೪
ತಿರುಮಲಾರ್ಯ(ತಿರುಮಲೈಂಗಾರ್) ೨೬೯,೩೦೦,೩೧೭,
೩೯೧-೩೯೪,೪೬೨
ತಿರುಮಲೈಯಾರ್ ೨೪೩
ತಿರುವಡಿ ೪೭
ತಿರುವಾಂಕೂರು ೪೭,೭೫
ತಿಲಗಟಕರು(ಗಾಣಿಗರು) ೩೧೯
ತಿಲ್ಲಹಳ್ಳಿ ೧೨೩
ತ್ರಿಯಂಬಕದೇವ ಒಡೆಯ ೧೦೩
ತ್ರಿಶೂಲ ೧೬೭
ತೀರ್ಥರಾಮೇಶ್ವರ ದೇವಸ್ಥಾನ ೯೬
ತೀರ್ಥಹಳ್ಳಿ ೧೬೭
ತುಂಗಭದ್ರಾ-ಕೃಷ್ಣಾನದೀಬಯಲು ೨೩
ತುಂಗಭದ್ರಾನದಿ ೧,೧೪,೧೯,
೨೫,೨೮,೪೮,೧೬೧,೪೨೩
ತುಂಗಭದ್ರೆಯ ದಂಡೆ ೨೯
ತುಂಗವತಿಗ್ರಾಮ ೮೨,೮೩
ತುಂಡೀರ ೨೬೭
ತುಂಡೀರ ನಾಯಕರು ೨೫
ತುಂಡೀರ ಮಂಡಲ ೪೨೩,೪೨೪
ತುಕಡಿಗಳು ೩೦೯
ತುಕ್ಕ ೪೨೫
ತುರ್ಕಿ ೧೯
ತುಗಲಖ್ ಆಡಳಿತಗಳು ೧೩
ತುಗಲಖ್ ಸಾಮ್ರಾಜ್ಯ ೧೧
ತುಮಕೂರು ೭೨,೮೩,೮೯,೯೨,೧೩೭,೧೫೫,
೧೬೦,೨೨೫,೨೭೫,೨೮೦,೨೮೪,೨೮೬
ತುಮ್ಮಲ ೮೯
ತುರುವೇಕೆರೆ ೮೯,೯೨,೯೬,೨೭೭,೩೨೭,೪೩೧
ತುಲಾಪುರುಷ ೨೯೪
ತುಳು ೨೪೨
ತುಳುನಾಡು ೬೪,೯೭-೯೯,೧೦೪,೨೬೦,೨೬೧
ತುಳುಪ್ರದೇಶ ೨೭೫
ತುಳುರಾಜ್ಯ ೩೭,೭೩,೩೦೪
ತುಳುವ ೨೧,೩೭೯-೩೮೧
ತುಳುವ ಮನೆತನ ೩೪೯
ತುಳುವ ವಂಶ ೧೨೦,೩೮೮,೩೯೩

ತೆಂಗಲೈ(ದಕ್ಷಿಣದವರು) ೨೪೩
ತೆನಾಲಿ ರಾಮಭದ್ರ ೩೯೬
ತೆನೆ ೩೭೧
ತೆರ(ಕನ್ಯಾಶುಲ್ಕ) ೧೪೦
ತೆರ(ಲ)ಕಣಾ(ಲಾ)ಂಬಿ
(ತ್ರಿಯಂಬಕಪುರ) ೧೨೦,೧೨೩,೧೨೫,
೧೨೭,೨೨೫,೨೬೬,೨೭೧,೨೯೫,
೩೧೮,೩೨೬,೪೫೫,೪೫೮,೪೬೧,೪೬೩
ತೆರಕಣಾಂಬಿ ಬೊಮ್ಮರಸ ೩೮೧
ತೆರೆಯೂರು ೮೩
ತೆಲಂಗಾಣ ೨೩,೨೫,೨೯,೩೩,೩೬,೩೯
ತೆಲಂಗಾಣ ಕೋಟೆ ೪೨
ತೆಲುಂಗರಾಯ ೨೮
ತೆಲುಗರು ೪೪
ತೆಲುಗು ೨೪,೨೪೨,೨೪೩,೩೮೦,೪೧೨,೪೬೩
ತೆಲುಗು ಚೋಳವಂಶ ೪೯
ತೆಲುಗು ಶೆಟ್ಟಿಗಳು ೧೨೭
ತೆಲುಗು ಸಾಹಿತ್ಯ ೧೩೫
ತೇರೆನಾಡು ೧೧೨
ತ್ರೈಯರ್ ೨೪೩
ತೊಂಡೈಮಂಡಲ ೨೩,೩೬
ತೊಗಲಿನ ಕೆಲಸ ಮಾಡುವವರು ೧೩೮
ತೊಣ್ಣೂರು ೨೪೨,೨೬೫
ತೊರೆನಾಡು ೨೮೪
ತೋಂಟದ ಸಿದ್ಧಲಿಂಗೇಶ್ವರ ೮೭
ತೋಂಟದಾರ್ಯ ೮೪-೮೬
ತೋಟಾರಂಬ ೧೬೮
ತೋಟಿ(ಜಲಗಾರ) ೩೨೫
ತೋಟಿಯರ್ ೩೨೧
ತೋಡಾಯದ ಚಾವಡಿ ೩೦೩
ತೋಪುಗಳು ೩೦೯
ತೋಪುರದ ಯುದ್ಧ ೫೬

ಥಾಮಸ್ ಮುನ್ರೋ ೧೬೧
ಥಾವೆನಾಟ್ ೫೬

ದಂಡನಾಯಕ ೩೦೯
ದಂಡನೀತಿ ೨೯೭,೩೧೦
ದಕ್ಷಿಣ ಆರ್ಕಾಟ್ ಜಿಲ್ಲೆ ೩೩
ದಕ್ಷಿಣ ಆಫ್ರಿಕಾ ೨೧೫,೨೨೯
ದಕ್ಷಿಣಕನ್ನಡ ಜಿಲ್ಲೆ ೧೯,೨೦,೭೨-೭೬,೧೫೩,
೧೫೪,೧೬೪,೧೭೫,೧೭೭,೨೨೫,
೨೩೧-೨೩೪,೨೬೦,೨೬೧
ದಕ್ಷಿಣ ಕರ್ನಾಟಕ ೨೪೩,೨೫೧,೨೫೬
ದಕ್ಷಿಣ ಚೈನ ೨೦೪
ದಕ್ಷಿಣಭಾರತ ೧೩೩,೨೦೭,
೨೦೯,೨೧೫,೨೧೮,೨೪೨,೩೩೫,೫೫೨
ದಕ್ಷಿಣ ಪಂಚದ್ರಾವಿಡ ೨೪೨
ದಕ್ಷಿಣಾಮೂರ್ತಿ ೧೩೮
ದಖ್ಖನ್ ೫೦,೨೦೨,೨೦೩,೨೧೪,೨೧೮,೨೧೯,೨೭೪
ದಖನ್ ಸುಲ್ತಾನರು ೨೭೪,೨೭೮,೨೭೯,೨೮೬,೪೨೮
ದಖನಿಗಳು ೩೭
ದಖ್ಖನಿನ ಮಹಮದೀಯರು ೨೬೮,೩೦೧
ದರ್ಗಾಗಳು ೩೫೨,೩೫೫
ದಡಿಗ ೧೨
ದಣ್ಣಾಯಕ ೨೨೬
ದನಗೂರು ೧೨೩
ದನಿವಾಸಕೋಟೆ ೨೮೧
ದರ್ಪಣರು(ಕನ್ನಡಿ) ೧೧೫
ದಫೇದಾರ ೩೦೨,೩೦೪,೩೦೫
ದಭೋಲ್ ೨೫,೨೦೬,೨೦೭
ದಲಂದ್ಯಿ ಲಿಂಗರಸರಾಯ ೧೦೨
ದಲಿತರು ೨೫೧
ದಸರಾ ಉತ್ಸವ ೧೧೧
ದಳವಾಯಿ ಕುಮಾರಯ್ಯ ೧೩೧
ದಳವಾಯಿದೇವರಾಜು ೮೫,೧೩೭,೧೪೧
ದಳವಾಯಿ ನಂಜರಾಜಯ್ಯ ೧೩೯,೧೪೧
ದಳವಾಯಿ ಬೆಟ್ಟದ ಅರಸು ೨೯೮,೨೯೯,
೩೦೪,೩೦೭,೩೦೮
ದಳವಾಯಿ ಮಠ ೯೫
ದಳವಾಯಿ ಸಹೋದರರು ೧೩೨
ದಾದಾಜಿ ಕಾಕಡೆ ೨೮೫
ದಾಮಸ್ ೨೦೭
ದಾವಣಗೆರೆ ೮೧, ೮೨,೧೫೯,೧೬೨,೧೬೩,೨೦೬
ದಾಸಕೂಟ ೨೪೮,೩೫೧
ದಾಸ ಚಳವಳಿ ೩೫೦
ದಾಸ ಪರಂಪರೆ ೩೫೦,೩೫೧
ದಾಸಿಯರು ೨೫೭
ದಾಸರಾಜಯ್ಯ ೩೦೮
ದ್ರಾವಿಡ ಶೈಲಿ ೩೫೯
ದ್ವಾರಕೆ ೨೬೪
ದ್ವಾರಸಮುದ್ರ ೨೦೬,೨೬೫
ದ್ವಾರಸಮುದ್ರದ ಹೊಯ್ಸಳರು ೧೧
ದ್ವಾರಾವತಿ(ದ್ವಾರಸಮುದ್ರ) ೨೬೪
ದಿಗಂಬರ ೨೬೧,೩೫೧

ದಿಗರಿ ೭೭
ದಿವ್ಯಲಿಂಗ ೧೨೦
ದಿವಾಕರ ೪೧೬
ದಿವಾನ್ ಪೂರ್ಣಯ್ಯ ೧೧೦
ದಿಲಾವರ್‌ಖಾನ್ ೯೧,೩೫೨,೪೩೪
ದೀಕ್ಷಿತ್ ಜಿ.ಎಸ್. ೨
ದೀವಟಿಗರು ೩೧೯
ದೀವಟಿಗೆ ೩೦೨,೩೦೪
ದುಗ್ಗನಸೇವಿತ ೧೦೫
ದುಗ್ಗಪ್ಪನಾಯಕ ೪೪೩
ದುಗ್ಗಹಟ್ಟಿ ೧೨೧,೧೨೩
ದುರ್ಗಮ್ಮ ೩೫೩
ದುರ್ಗೆ ೨೫೯
ದುದ್ದ ೨೭೧,೪೬೪
ದುಪ್ಪೂರು ೨೭
ದೂರಪ್ರಾಚ್ಯ ೭
ದೆಹಲಿ ೧೧,೮೦,೯೦,೨೮೪,೨೮೮
ದೆಹಲಿ ಸುಲ್ತಾನಿ ೧೧
ದ್ವೈತ ೪೧೭
ದ್ವೈತ ದರ್ಶನ ೨೪೩
ದ್ವೈತ ಸಿದ್ಧಾಂತ ೩೮೫
ದ್ವೈತಿಗಳು ೩೫೦
ದೇಪ(ವ)ಣ್ಣ ಒಡೆಯರ್ ೩೭,೧೨೦-೧೨೩,
೧೨೬,೪೫೫,೪೫೮,೪೫೯
ದೇಮಣ್ಣ ಒಡೆಯ ೧೦೧
ದೇವಕೋಷ್ಠ ೩೫೮
ದೇವಗಿರಿಯ ಸೇವುಣರು ೧೧
ದೇವಚಂದ್ರ ೧೧೪
ದೇವಡಿಗರು ೨೬೦
ದೇವದಾಸಿಯರು ೨೪೯,೩೨೩,೩೫೩
ದೇವನಗರ ೩೩೫
ದೇವನಹಳ್ಳಿ ೭೯,೨೮೯,೪೪೩,೪೪೪,೪೫೨
ದೇವನೂರುಮಠ ೧೧೭
ದೇವಪ್ಪಗೌಡ ೧೦೯,೧೧೦,೪೬೧
ದೇವಮ್ಮ ೩೯೭
ದೇವಮೂಢತೆ ೨೫೫
ದೇವರಕೊಂಡ ೨೯,೨೦೬
ದೇವರಸಒಡೆಯ ೧೦೧,೧೦೫,೧೨೦
ದೇವರಸಿಅಮ್ಮ ೧೨೩
ದೇವರಾಜ್ ಡಿ.ಎ. ೪,೫
ದೇವರಾಜ ಒಡೆಯರ್ ೧೨೦,೧೨೪,೨೬೭,
೨೮೧,೨೮೩,೨೯೪-೩೦೧,೩೦೮,೩೧೧,
೩೧೭,೩೨೨,೩೨೭,೩೩೫-೩೩೯,
೪೩೫,೪೪೮,೪೫೫,೪೫೯
ದೇವರಾಜನಾಲೆ ೨೯೬,೩೦೩
ದೇವರಾಜಪುರ ೨೯೫
ದೇವರಾಜಯ್ಯ ೧೩೧,೧೩೨,೨೮೮,೪೪೫
ದೇವರಾಯ ೨೭-೩೨,೫೮,೭೦,೧೦೩
ದೇವರಾಯನದುರ್ಗ ೨೮೫
ದೇವರಾಯನಪುರ ೧೨೬
ದೇವಲಾಪುರ ೩೯೪
ದೇವಾಂಗರು ೭,೧೩೮
ದೇವಾಂಗಶೆಟ್ಟಿಗಳು ೧೨೬
ದೇವಾಜಮ್ಮಣಿ ೨೬೬,೨೬೭,೨೮೮,೪೬೨
ದೇವಾದಾಯ ೧೨೬,೧೮೭
ದೇವಾಲಯ-ಮಠಗಳು ೩೫೩
ದೇಶಸ ೨೪೩
ದೇಶೀ ಸಂಗೀತ ೨೫೯
ದೇಸಾಯಿ ಪಿ.ಬಿ. ೨,೧೬
ದೇಹದಂಡನೆ ೨೫೯
ದೊಂತಿ ಅಲ್ಲಾಡರೆಡ್ಡಿ ೨೬
ದೊಡ್ಡಕೃಷ್ಣರಾಜ ಒಡೆಯರ್ ೩೯೦,೩೯೧,೩೯೯
ದೊಡ್ಡಣಾಂಕ ೩೮೧,೩೮೩
ದೊಡ್ಡದೇವಯ್ಯ ೩೩೭
ದೊಡ್ಡದೇವರಾಜ ೧೧೧,೨೮೧-೨೮೩,೨೯೦,೨೯೬,
೨೯೮,೩೭೫,೪೩೫,೪೪೮,೪೫೧
ದೊಡ್ಡಬಳ್ಳಾಪುರ ೭೯,೧೩೨,೨೮೦
ದೊಡ್ಡಯ್ಯ ೬೮
ದೊಡ್ಡ ಸಂಕಣ್ಣನಾಯಕ ೭೫,೭೬,೪೦೭,೪೧೯,೪೪೦
ದೊಡ್ಡಾಂಬಿಕೆ ೨೬
ದೊಡ್ಡೇಗೌಡ ೮೩
ದೊಡ್ಡೇರಿ ೮೭,೪೪೧
ದೋರಸಮುದ್ರ ೨೨,೨೨೫,೨೨೭
ದೌಲತಾಬಾದ್ ೨೦೬,೨೧೯,೨೩೪,೨೬೩

ಧನುಗೂರು ೪೫೮
ಧನುಷ್ಕೋಟಿ ೨೧೮
ಧರ್ಮ ೨೫೩,೨೫೭,೩೪೭,೪೩೯
ಧರ್ಮಪರೀಕ್ಷೆ ೨೫೪,೨೫೭
ಧರ್ಮಪುರಿ ಕೋಟೆ ೨೭೭,೨೭೯
ಧರ್ಮಶಾಸ್ತ್ರ ೨೯೪
ಧರ್ಮಾಚರಣೆ ೨೫೨
ಧಾರವಾಡ ೭೨,೧೫೬,೧೬೨,೧೭೮,೨೨೫,೨೪೯
ಧಾರಾನಗರ ೧೩೨
ಧಾರಾಪುರಂ ೨೮೪
ಧೂರ್ಜಟಿ ೩೯೨,೩೯೫,೩೯೬
ಧೂಮರಾಜ ೪೨೯

ನಂಜನಗೂಡಿನ ರಂಗಮ್ಮ ೧೪೦
ನಂಜನಗೂಡಿನ ಶ್ರೀಕಂಠೇಶ್ವರ ೧೩೮
ನಂಜನಗೂಡು ೧೦೮,೧೧೯,೧೨೩,೧೨೭,೧೩೪, ೨೪೨,೨೪೩,೨೮೧,೨೯೫,೩೯೪,೪೦೬
ನಂಜಮಲ್ಲ ೮೪
ನಂಜಯ್ಯ ೩೨೬
ನಂಜರಾಜ ಒಡೆಯ ೩೭-೪೧,೧೦೯-೧೧೦,೧೧೪, ೧೨೦-೧೨೪,೧೩೩,೧೩೮,೨೮೯,೩೧೧,೩೯೯, ೪೦೩,೪೦೪,೪೦೭,೪೫೦,೪೫೫,೪೫೯,೪೬೧,೪೬೩
ನಂಜರಾಜಪಟ್ಟಣ ೪೪೮,೪೪೯
ನಂಜರಾಜಯ್ಯ ೨೭೧,೨೭೬,೨೭೭, ೨೮೮,೨೯೦,೩೦೮,೩೧೭,೪೪೯
ನಂಜಶೆಟ್ಟಿ ೧೧೬
ನಂಜಿನಾಥ ಒಡೆಯ ೧೨೩
ನಂಜುಂಡ ೩೮೧,೩೮೬,೩೮೭,೩೯೩,೩೯೪
ನಂಜುಂಡ ಅರಸು ೨೭೨,೨೭೩,೨೭೬,೪೪೯,೪೫೦
ನಂಜುಂಡಾರಾಧ್ಯ ಕೆ.ಸಿ. ೪೦೨
ನಂಜುಂಡೇಶ್ವರ ೧೨೦-೧೨೨
ನಂದಿನಾಥಯ್ಯ ೧೩೦,೩೦೭,೩೯೭,೪೪೮
ನಂದೀಶ್ವರಸ್ವಾಮಿ ೯೫
ನಂಬಿಯಣ್ಣ ೩೮೪
ನಖರ ಪರಿವಾರದವರು ೨೨೬
ನಖರರು ೨೨೬
ನಗರ ೯
ನಗರಸ್ವಾಮಿ(ಪಟ್ಟಣಸ್ವಾಮಿ) ೧೨೭
ನಗರೀಕರಣ ೨೦೨
ನಗರೆ ೧೦೪
ನಗಿರೆ ೯೮
ನಗಿರೆ ರಾಜರು ೯೯
ನಟ್ಟುವರು ೧೧೬
ನರ್ತಕರು ೧೧೬
ನಯಸೇನ - ೨೫೪
ನರಗುಪ್ಪೆ ಪುಟ್ಟೇಗೌಡ ೭೪
ನರಸನಾಯಕ ೩೮,೩೯,೪೬,೪೫೫
ನರಸಪ್ಪ ಒಡೆಯರ್ ೨೮೪
ನರಸಪ್ಪಯ್ಯ ೩೦೦
ನರಸರಾಜ ೩೯೪
ನರಸರಾಜ ಒಡೆಯ ೨೭೧,೪೫೯
ನರಸರಾಜಪುರ ೨೯೫
ನರಸಿಂಗ ೩೫
ನರಸಿಂಗರಾಜ್ಯ ೨೧೬
ನರಸಿಂಹ ೩೫,೧೩೩,೪೨೧
ನರಸಿಂಹ ಉಪಾಧ್ಯಾಯ
(ನರಸಿಂಹರಾಯ) ೩೦೦,೩೧೭
ನರಸಿಂಹ ಕವಿ ೪೦೬
ನರಸಿಂಹ ದಾಸು ೩೧೯
ನರಸಿಂಹ ದೇವಒಡೆಯ ೧೦೦
ನರಸಿಂಹ ದೇವಾಲಯ ೯೬,೩೫೮,೩೫೯,೩೭೫
ನರಸಿಂಹ ನಾಯಕ ೪೪೭,೪೪೮,೪೫೨,೪೫೪
ನರಸಿಂಹಪುರ ೨೭೦
ನರಸಿಂಹಭಟ್ಟ ೪೫೮
ನರಸಿಂಹಮೂರ್ತಿ ಎ.ವಿ. ೪
ನರಸಿಂಹಯ್ಯ ೪೫೨
ನರಸಿಂಹರಾಜ ದಂಡನಾಯಕ ೪೬
ನರಸಿಂಹರಾಯ ೪೭
ನರಸಿಂಹಶಾಸ್ತ್ರಿ ೪೧೯
ನರಸೀಪುರ ಟಿ. ೧೧೯,೧೨೫,೧೨೭,೧೪೨
ನರಹರಿ ೪೧೫
ನರಹರಿತೀರ್ಥ ೩೫೦
ನರಹರಿ ಸೋಮಯಾಜಿ ೪೧೪
ನಲ್ಲಾಪುರ ೩೬೪
ನಲ್ಲೂರು ೨೯೫
ನಲ್ಲೂರು ಕೋಟೆ ೨೭೬
ನಲ್ಲೂರು ಪುಟ್ಟೇಗೌಡ ೭೪
ನಲ್ಗೊಂಡ ೨೭,೪೧,೨೦೬
ನವರತ್ನ ಸಿಂಹಾಸನ ೩೩೫
ನವರಾತ್ರಿ(ವಿಜಯದಶಮಿ) ೧೧೫,೧೭೪,೩೫೪
ನವಲಗುಂದ ೧೬೯
ನವಾಯಿತರು ೭
ನವಿಕ(ಕ್ಷೌರಿಕ) ೪೪೨
ನಾಗಣ್ಣ ಒಡೆಯ ೧೦೩
ನಾಗಪಟ್ಟಣಂ ೨೦೭,೨೦೮,೨೧೯,೩೫೧,೩೫೨
ನಾಗಪೂಜೆ ೩೫೪
ನಾಗಭಟ್ಟ ೧೨೩,೪೫೮
ನಾಗಮಂಗಲ ೨೭೧,೪೩೧,೪೬೪,೪೬೫
ನಾಗಮಂಡಲ ೩೬
ನಾಗರಸ ಒಡೆಯ ೯೯
ನಾಗರಾಜರಾವ್ ಎಂ.ಎಸ್. ೪
ನಾಗಲಾ ೪೬
ನಾಗಲಿಂಗ ೧೧೬
ನಾಗಾರ್ಜುನಕೊಂಡ ೪೧,೫೫
ನಾಗಾಭರಣ ೪೧೪

ನಾಗಿದೇವ ೩೮೧,೩೮೫
ನಾಚನ ಸೋಮ ೨೪
ನಾದಂಡ್ಲ ಗೋಪ ೪೨,೨೧೭
ನಾದೆಂಡ್ಲ ಅಪ್ಪ ೪೪
ನಾನದೇಶಿಗಳು ೧೬೦,೨೨೬
ನಾನಾದೇಶಿ ಸಂಘ ೪೫೨
ನಾಯಂಕರ ಪದ್ಧತಿ ೨೧
ನಾಯಂಕಚಾರ್ಯ ಕಂಪಣ ೨೫
ನಾಯಕರು ೧೨೪,೩೦೯
ನಾಯಕಸಾನಿಯರು ೩೨೩
ನಾಯಿಂದರು ೧೧೬,೧೨೪,೨೪೭,೩೧೯
ನಾರಣಪ್ಪ ೩೮೪,೩೮೭
ನಾರಾಯಣ ೩೩೫,೩೮೪
ನಾರಾಯಣದೇವ ೪೫೫
ನಾರಾಯಣ ವಾಜಪೇಯಿ ೪೧೪
ನಾರಾಯಣಸ್ವಾಮಿ ೧೩೩,೧೩೫
ನಾರಾಯಣಸ್ವಾಮಿ ದೇವಾಲಯ ೨೯೫,೩೬೦
ನಾಲ್ಕನೇ ಚಾಮರಾಜ ಒಡೆಯರ್ ೩೯೧
ನಾಲ್ಕನೇ ಭಾನುದೇವರೆಡ್ಡಿ ೨೮
ನ್ಯಾಯಾಡಳಿತ ೩೦೦
ನಿಂಬಾಜಿ ೨೮೫
ನಿಂಬಾಪುರ ೩೬೦
ನಿಕಿಟಿನ್ ೩೩,೧೫೭
ನಿಕೋಲೋ ಕಾಂಟಿ ೨೮,೩೧,೧೭೦,೨೦೯,೨೪೯
ನಿಜಗುಣ ಶಿವಯೋಗಿ ೧೧೬,೩೮೫,೩೮೮,೩೮೯
ನಿಜಾಂಶಾಹ ೫೩
ನಿಜಾಮ ೨೮೯
ನಿಟ್ಟೂರು ೯೦,೯೫
ನಿಡಂಬೂರು ೧೦೫
ನಿಡುಗಲ್ಲು ೨೨
ನಿಯೋಗಿಗಳು ೨೪೫
ನಿರಂಜನ ೮೭
ನಿರಂಜನಸ್ವಾಮಿ ಗದ್ದುಗೆ ೯೬
ನಿರುವಾರ ೧೦೪,೧೦೬
ನಿರೂಪದ ಚಾವಡಿ ೩೦೨
ನಿರ್ವಾಣಯ್ಯ ೪೦೯,೪೧೦
ನೀತಿಶಾಸ್ತ್ರ ೨೯೪
ನೀರಾರಂಬ ೧೨೫,೧೬೮
ನೀರಾವರಿ ೧೫೮
ನೀರುಗಂಟಿ ೩೨೫
ನೀಲಕಂಠ ೧೩೩
ನೀಲಕಂಠಶಾಸ್ತ್ರಿ ಕೆ.ಎ. ೬೩
ನೀಲಕಂಠಾಚಾರ್ಯ ೧೨೪
ನೀಲಗಿರಿ ೪೫೫
ನೀಲೇಶ್ವರ ೨೦೬,೨೦೮
ನೂಕಲಪರಮೇಶ್ವರಿ ೩೫೩
ನೂರುಕಂಬಗಳ ಹಜಾರ ೩೬೬
ನೂರೊಂದಯ್ಯ ೩೯೨,೩೯೮,೪೦೫
ನ್ಯೂನಿಜ್ ೩,೫,೨೭,೨೮,೩೪-೪೪, ೫೩,೬೫,೬೬,೬೯,೧೫೭,೧೭೦-೧೭೪, ೨೧೫,೨೨೮,೨೪೪,೨೪೯,೨೬೦
ನೆದರ್‌ಲ್ಯಾಂಡ್ ಕಂಪೆನಿ ೨೭೨
ನೆಲಮಂಗಲ ೭೯
ನೆಲ್ಲೂರು ೨೨,೩೪,೩೬,೨೨೦,೨೭೮
ನೆಲ್ಲೂರು ಜಿಲ್ಲೆ ೧೩,೧೪,೩೪
ನೇಕಾರರು ೨೨೩
ನೇಮಣ್ಣ ೩೮೧
ನೇಮಿಚಂದ್ರ ೩೫೧
ನೇಯ್ಗೆಯವರು ೧೨೪
ನೇರಳೆಕೆರೆ ೨೭೧,೪೬೪
ನೊಣಬ ೨೪೭
ನೊಣಬೇಶ್ವರ ದೇವಾಲಯ ೮೩
ನೊಣವಿನಕೆರೆ ೮೯,೯೨,೯೫,೯೬,೪೩೧
ನೊಬುರು ಕರಾಶಿಮ ೩೨,೬೩
ನೊಳಂಬ ಪಲ್ಲವರು ೮೩
ನೊಳಂಬ ವೀರಶೈವರು ೮೭
ನೋಬಲ್ ಮನ್ಸ್ ಪ್ಯಾಲೆಸ್ ೪
ನೌಕಾಪಡೆ ೩೧೦

ಪಂಗಳ ೨೫,೨೭,೪೨,೫೨
ಪಂಚದೇವತಾ ದೇವಾಲಯ ೮೪
ಪಂಚಮಶಾಲಿಗಳು ೩೪೯
ಪಂಚಲಿಂಗೇಶ್ವರ ದೇವಾಲಯ ೧೧೮
ಪಂಚವಳರು ೭
ಪಂಚಾಗ್ನಿ ಮಾಧವ ೪೧೪
ಪಂಜರ ೩೫೯
ಪಂಜಿಂ ೪೯
ಪಂಡರಾಪುರ ೩೫೧
ಪಂಡರಿದೇವ ಒಡೆಯ ೧೦೦-೧೦೪
ಪಂಢರಿದೀಕ್ಷಿತ ೪೧೪
ಪಂತ ಮೈಲಾರ ೨೮
ಪಂಪಾದೇವಿ ೨೬,೩೬೧,೪೨೩
ಪಂಪಾಪುರ ೨೭೧,೪೬೪
ಪಂಪಾಕ್ಷೇತ್ರ ೩೫೪
ಪಗೋಡ(ಪರ್ಡಾವೋ) ೧೭೧,೧೭೫,೧೮೬,೨೧೦
ಪಟ್ಟಣಪುರ ೨೯೫
ಪಟ್ಟಣಸ್ವಾಮಿ ೨೦೫,೨೨೧,೨೨೨,೨೨೬
ಪಟ್ಟಣಸೆಟ್ಟಿಗಳು ೨೨೬

ಪಟ್ಟಯ್ಯ ೨೭೬
ಪಟ್ಟಾಭಿಷೇಕ ೨೯೯
ಪಟ್ಟೆಯ ನಾಯಕ ೧೭೩
ಪಡೈವೀಡಿನನಾಯಕ ಸಂಬುವರಾಯ ೨೨
ಪಡೈವೀಡು ೩೩,೨೨೫
ಪಣ ೧೭೫
ಪತ್ತೆದಾರರು ೩೦೫
ಪದ್ಮಕವಿ ೩೮೧,೩೮೩
ಪದ್ಮನಾಭತೀರ್ಥ ೩೫೦
ಪದ್ಮಸಾಲಿಗಳು ೨೪೭
ಪದಾತಿದಳ ೨೭೭,೩೦೯,೩೧೦,೪೫೬
ಪದ್ಮಾಜಿಯಮ್ಮ(ಪದ್ಮಾಂಬಿಕೆ) ೪೪೮,೪೫೪
ಪದ್ಮಾಣಾಂಕ ೩೮೬
ಪದಿನಾಡು(ಹದಿನಾಡು) ೧೦೮,೧೧೦,೧೧೨
ಪದ್ಮಿನೀ ಕಲ್ಯಾಣ ೩೨೨
ಪರಕಾಲಮಠ ೨೪೩
ಪರಮಾತ್ರಿಪುರ ೨೮೪
ಪರವರು ೪೯
ಪರವಾಸುದೇವ ೩೩೫
ಪರಿಗ್ರಹ ೩೧೭
ಪರಿಮಳ ದ್ರವ್ಯಗಳು ೨೧೫
ಪರ್ವತ ಶಿವಯೋಗಿ ೧೧೬,೧೧೭
ಪಶ್ಚಿಮ ಕರಾವಳಿ ೨೨,೪೯,೧೫೪,೨೦೪,೨೧೫,
೨೨೯,೨೩೦,೨೩೨,೨೭೫,೩೦೫,೩೬೯
ಪಶ್ಚಿಮ ಚಾಲುಕ್ಯ ಶಾಸನ ೧೭೩
ಪರ್ಶಿಯನ್ ಕೊಲ್ಲಿ ೭,೨೦೪
ಪರ್ಶಿಯನ್ ವರ್ತಕರು ೨೧
ಪರ್ಷಿಯ ೪೯,೫೭,೯೭,
೧೭೭,೨೦೭,೨೧೯,೨೨೮,೨೨೯,೨೩೧,೨೩೨
ಪ್ರತಾಪ ಕೊತ್ತಳ ೩೭೧
ಪ್ರತಾಪದೇವರಾಯ ೨೮,೩೨
ಪ್ರತಾಪದೇವರಾಯನಪುರ(ಸೋಮಹಳ್ಳಿ) ೧೨೩
ಪ್ರತಾಪರುದ್ರ ೧೩,೩೭,೩೯
ಪ್ರಭುತ್ವ ೩೨೦
ಪ್ರಭುದೇವ ೩೮೩
ಪ್ರಸನ್ನ ರಾಮಪ್ಪನಾಯಕ ೯೨
ಪಾಂಚಾಲರು ೨೨೨,೨೬೦
ಪಾಂಡ್ಯ ಪ್ರದೇಶ ೨೫
ಪಾಂಡ್ಯರ ದೇವಾಲಯ ೨೫೮
ಪಾಂಡ್ಯರಾಜ್ಯ ೩೮,೪೮
ಪಾಂಡ್ಯರು ೨೧,೨೬೭,೨೮೪
ಪಾಟೀಲ್ ಸಿ.ಎಸ್. ೪
ಪಾತಾಳ ವಿರೂಪಾಕ್ಷ ೪೨೩
ಪಾಯಣ್ಣ ೩೨೬
ಪಾರಸಿಗೌಡ ೩೨೬
ಪಾರುಪತ್ತೆಗಾರರು ೧೧೨,೩೦೬,೪೫೨,೪೫೭
ಪಾರಿಚಾರಿಕೆಯರು ೩೨೩
ಪಾಲ್ಕುರಿಕೆ ಸೋಮೇಶ್ವರ ೮೭,೩೮೧,೩೮೬,೪೧೬
ಪಾರ್ವತಿದೇವಿ ೧೩೮
ಪಾಶುಪತ ೧೭,೨೨
ಪಾಶುಪತ ಆಚಾರ್ಯರು ೩೪೯
ಪಾಳೆಯಗಾರರು ೧,೪,೫,
೨೪೭,೨೭೬,೩೦೧,೩೦೯,೩೨೧
ಪ್ಯಾರಿಷ್‌ಗಳು ೨೬೨
ಪ್ರಾಣಬಲಿ ೩೫೪
ಪಿರಿಯರಾಜ ೪೪೮
ಪಿರಿಯಾಪಟ್ಟಣ ೨೭೧-೨೭೩,೨೭೬,೪೪೮,೪೪೯
ಪಿಲ್ಲಹಳ್ಳಿ ೧೨೨
ಪ್ರಿಯಂಕಪುರ ೧೨೫
ಪೀಕದಾನಿ ೩೦೧
ಪೀಟರ್ ಮಂಡಿ ೨೧೦,೩೨೯
ಪೀತ್ರೋದೆಲ್ಲಾವಲ್ಲೆ ೩೨೯
ಪ್ರೀಸ್ಟ್‌ಗಳು ೨೬೨
ಪುಟ್ಟಣ್ಣ ಎಂ.ಎಸ್. ೫,೮೦,೮೧,೮೪,೮೯
ಪುತನೂರು ೪೧
ಪುನರ್‌ವಿವಾಹ ೧೪೦,೩೨೧
ಪುನ್ನಾಟ ೧೦೮
ಪುನ್ನಾಡು ೪೬೦
ಪುರಂದರದಾಸರು ೮,೨೧೫,೨೪೮,೨೪೯,೩೫೧,೩೮೯
ಪುರಾಣಗಳು ೨೯೭
ಪುರಾತತ್ವ ಶೋಧನೆ ೩೬೧
ಪುರಿ(ಜಗನ್ನಾಥ) ೨೫೦
ಪುರು-ರೇಖಾ ೧೭೮
ಪುರುಷೋತ್ತಮ ೩೪,೩೮
ಪುರೋಹಿತರು ೩೧೮
ಪುಲಿಕಾಟ್ ೫೬,೨೦೬,೨೦೮,
೨೦೯,೨೧೩,೨೧೫-೨೨೦
ಪುಲಿಗದ ಪಾಟಿನರಸಯ್ಯ ೪೯
ಪುಲುಗುಲನಾಡು ೨೭
ಪುಷ್ಪಗಿರಿ ಪ್ರದೇಶ ೨೮
ಪೂನಾ ೨೮೮
ಪೂರ್ವಕರಾವಳಿ ೨೫,೨೭,೫೬,೨೦೪,೨೭೮
ಪೆಗು ೩೨,೨೧೩,೨೧೫,೨೧೬,೨೨೦
ಪೆದವೇದಗಿರಿ ೨೫

ಪೆದ್ದಕೋಮಟಿವೇಮ ೨೭,೨೮
ಪೆದ್ದವೆಂಕಟ ೫೬
ಪೆನ್ನಾಗರಕೋಟೆ ೨೭೭
ಪೆನುಗೊಂಡ(ಪೆನುಕೊಂಡ) ೨೬,೩೩,೩೭,೩೮,೪೧,೪೮,
೪೯,೫೫,೫೯,೮೪,೧೨೦,೨೦೬,೨೦೯,೨೧೮,
೨೨೫,೨೬೭,೨೭೨,೨೭೪,೩೧೧,೩೩೫,
೩೫೨,೩೭೦,೪೨೮,೪೫೬,೪೬೩,೪೬೪
ಪೆರಿಯರಾಜ(ರುದ್ರಗಣ) ೪೫೦
ಪೆರುಮಾಡಿರೆಡ್ಡಿ ೨೭
ಪೆಸಣೆ ಹನುಮಂತ ಚೌಧರಿ ೧೧೯
ಪೆಸಳಿ (ಪೆಸಣ,ಪರ್ಸನಿ) ೧೨೦
ಪೇಜಾವರಮಠ ೪೧೬
ಪೇಟೆಸೆಟ್ಟಿ ೩೦೫,೩೦೬
ಪೇಸ್ ೩,೫,೪೪,೪೬,೬೫,೬೮,೭೦,
೧೫೬,೧೬೪,೧೭೦,೨೧೪,೨೧೭,೨೧೮,
೨೨೬,೨೨೮,೨೪೩,೨೪೪,೨೪೯
ಪೈಠಣ ೫೧
ಪೋರ್ಚುಗಲ್ ೪೨,೫೭,೧೫೭,
೨೦೭,೨೧೯,೨೨೮,೨೨೯,೪೩೯
ಪೋರ್ಚುಗೀಸ್ ಕಾಲೋನಿ ೨೪೪
ಪೋರ್ಚುಗೀಸ್ ಕ್ರಿಶ್ಚಿಯನರು ೨೪೭,೨೬೧
ಪೋರ್ಚುಗೀಸ್ ಗೋವಾ ೨೪೧,೨೪೨
ಪೋರ್ಚುಗೀಸ್ ಪ್ರವಾಸಿಗರು ೧೬
ಪೋರ್ಚುಗೀಸ್ ವರದಿಗಳು ೫೪
ಪೋರ್ಚುಗೀಸರು ೩,೧೩,೩೯,೪೩,೪೮,೫೨,೭೫,
೯೭,೧೬೨,೧೭೦,೧೭೨,೨೦೮,೨೧೭,೨೨೦,
೨೨೮,೨೩೦-೨೩೪,೨೪೧,೨೫೯,೨೬೧,
೩೧೦,೩೧೨,೩೧೬,೩೩೯,೩೫೨,೩೬೯
ಪೊತ್ತಪೀನಾಡು ೨೭
ಪೊನ್ನಲಾದೇವಿ ೩೨
ಪೊಮ್ಮಿನ ಚಾವಡಿ ೩೦೭
ಪೋತಪ್ಪನಾಯಕ ೪೫೨,೪೫೩
ಪೋತು(ಲಂಬಕರ್ಣ) ೩೬
ಪೋಲಲದೇವಿ(ಮಂಗಳೂರು) ೩೫೩
ಪೋಲನಾಯಕ ೧೪
ಪ್ರೋಲಯವೇಮ ೨೬,೨೭
ಪೌರ ವಾಸ್ತುಶಿಲ್ಪ ೩೬೪
ಪ್ರೌಢದೇವರಾಯ ೨೮,೩೪,೩೫,
೩೫೧,೩೮೦,೩೮೨,೩೮೭-೩೮೯
ಫಕ್ರ್-ಉಲ್-ಮುಲು ೩೬
ಫತೇಹಾಬಾದ್ ೮೫
ಫರ್ಮಾನು ೨೮೭
ಫಾದರ್ ಥಾಮಸ್ ಸ್ಟೀಫನ್ ೨೬೨
ಫಾದರ್ ಫ್ರೊಯೆನ್ಸಾ ೫೬
ಫಾದರ್ ಬಿ. ಕುಟಿನ್ಹೋ ೨೪೪
ಫ್ರಾನ್ಸ್ ೨೮೪
ಫಿರಂಗಿ ೩೦೯
ಫಿರೂಜಶಾಹ ೨೫-೨೮,೧೭೨
ಫಿರೂಜಾಬಾದ್ ೪೩
ಫೆರ್ನಾವೋ ನ್ಯೂನಿಜ್ ೩೪,೫೭,೧೬೧,೩೬೫
ಫೆರಿಷ್ಟಾ ೨೩,೨೫-೨೯,೩೪,೩೮,೪೩,೪೭
ಫ್ರೆಂಚ್ ೫೬,೧೩೨,೨೩೨,೨೩೪,೨೩೫,೨೮೯
ಫ್ರೆಂಚ್ ಎಂಜಿನಿಯರ್ ೪೪೧
ಫ್ರೆಂಚ್ ಮಹಾಕ್ರಾಂತಿ ೧೦
ಫ್ರೈಯರ್ ೧೫೪,೨೩೧
ಫ್ರೆಯರ್ ಲೂಯಿಜ್ ೪೩

ಬಂಕಾಪುರ ೨೭,೬೪,೬೬,
೧೬೨,೧೭೪,೨೦೬,೨೦೯,೨೧೮
ಬಂಗ ೯೮,೨೬೧
ಬಂಗಾರದೊಡ್ಡಿ ನಾಲೆ ೨೯೬
ಬಂಗಾಳ ೨೧೭,೨೨೦
ಬಂಜಾರರು ೨೪೬,೨೪೭
ಬಂಟರು ೨೬೦
ಬಂಡವಾಳಶಾಹಿ ಅರ್ಥವ್ಯವಸ್ಥೆ ೨೦೦
ಬರ್ಟನ್‌ಸ್ಟೀನ್ ೨-೪,೬೨
ಬಡಗನಾಡು ೨೪೩
ಬಡಗಿಗಳು ೭,೧೨೪,೧೩೮,೨೧೫,೪೪೨
ಬಡವರು ೨೫೧
ಬಣಜಿಗರು ೧೨೭,೧೩೭,೧೩೮,೨೨೫,೨೨೬
ಬತ್ತೇರಿ ೩೦೩,೩೭೦
ಬನಪ್ಪ ಒಡೆಯ ೧೦೩
ಬನವಾಸಿ ೨೪
ಬನ್ನಿಹಟ್ಟಿ ೫೨
ಬಬ್ಬೂರುಕಮ್ಮೆ ೨೪೩
ಬರ್ಮಾ ೫೭,೨೧೯,೨೨೯
ಬಮ್ಮಾಪುರ ೪೩೪
ಬಯಲುಸೀಮೆ ೧೨೪
ಬಯ್ಯಪ್ಪನಾಯಕ ೪೪೮,೪೫೩
ಬರೀದ್‌ಶಾಹಿ ೭೫
ಬಲಂ(ಬೇಲೂರು) ೪೨೮
ಬಲಗೈ(ವಲಂಗೈ) ೨೪೨,೨೪೮
ಬಲಮುರಿ ೧೩೮
ಬಲ್ಲಾಗೇಟ್ ೨೧೯

ಬಲ್ಲಾಳರಾಯನ ದುರ್ಗ ೪೩೭
ಬಲಿಜಿಗರು ೨೪೬
ಬಲಿಪೀಠ ೧೧೮
ಬಸದಿಗಳು ೧೨೮,೩೫೧,೩೫೫
ಬಸಪ್ಪದೇವರು ೪೩೬,೪೫೧
ಬಸಪ್ಪನಾಯಕ ೧೬೨,೨೮೫,೩೩೭,೪೩೯
ಬಸರೂರು ೨೦೬,೨೦೭,೨೧೬,೨೨೯,೨೩೪,೩೧೧
ಬಸವಣ್ಣ ಒಡೆಯ ೯೮,೯೯
ಬಸವಣ್ಣ ನಾಲೆ ೧೬೨
ಬಸವಪ್ಪನಾಯಕ ೨೩೩
ಬಸವಭೂಪಾಲ(ಬಸವರಾಜ) ೪೨೦
ಬಸವರಾಜ ದೇವರು ೪೩೩
ಬಸವರಾಜಯ್ಯ ೧೩೨,೩೯೭
ಬಸವಾಪಟ್ಟಣ ೪೨೮,೪೨೯,೪೩೧
ಬಸವಿಯರು ೩೨೩
ಬಸವೇಂದ್ರ ೮೪
ಬಸವೇಶ್ವರ ೮೪,೧೧೪,೩೮೪,೩೮೬
ಬಸಾಲ್ಟ್ ೩೬೭
ಬಹಮನಿ(ರಾಜ್ಯ) ೨೨,೨೩,೨೫,೨೯,೩೭,೩೮,೪೯
ಬಹಮನಿಯ ಬಿಲ್ಲುಗಾರರು ೩೦
ಬಹಮನಿ ಸುಲ್ತಾನ ೨೯,೩೨,೩೩,೪೩,೮೪,೧೫೭
ಬಹಾವುದ್ದೀನ್ ಗುರ್ಷಸ್ಪ್ ೧೨
ಬರ್ಹಾನ್ ನಿಜಾಂಶಾಹ ೫೧
ಬಳ್ಳ ೧೩೮,೧೬೯
ಬಳ್ಳಾರಿ ೧೯,೧೬೧-೧೬೩,೧೭೧,೨೨೧,೨೨೫
ಬಳ್ಳಿಗಾಮೆ ೨೨೫
ಬಳ್ಳಿಯಪಟ್ಟಣ ೭೨
ಬಹುಪತ್ನಿತ್ವ ೨೪೯,೨೫೮,೩೨೧
ಬ್ರಹ್ಮದಾಯ ೧೨೩,೧೨೬,೧೮೭
ಬ್ರಹ್ಮನ್ ಶಾಹ ೪೯
ಬ್ರಹ್ಮಶಿವ ೨೫೪
ಬಾಕನೂರು ೨೩೦
ಬಾಗಲಕೋಟೆ ೫೨,೨೦೬
ಬಾಗೂರು ಸೀಮೆ ೪೫೨
ಬಾಗೇಪಲ್ಲಿ ೧೬೪
ಬಾಚಪ್ಪ ಒಡೆಯ ೯೯,೧೦೬,೪೧೯
ಬಾಚೆಯಪ್ಪ ೧೬೦
ಬಾರ್ಟರ್(ವಸ್ತುವಿನಿಮಯ) ೨೦೯
ಬಾಣ ೪೨೧
ಬಾಣಪ್ಪ ಒಡೆಯ ೧೦೦,೧೦೧
ಬಾಣಾವರ ೭೭,೨೮೫,೪೪೪
ಬಾದಾಮಿ ೧೪
ಬಾಬಯ್ಯನ ದರ್ಗಾ ೩೫೨
ಬಾರ್ಬೋಸಾ ೩,೧೫೪,೧೫೬,೧೭೦,೨೦೫,
೨೦೬,೨೧೫-೨೧೮,೨೩೦,೨೪೯,೩೫೨
ಬಾರಕೂರು ೨೪,೭೩,೭೪,೯೭,೯೮,
೧೦೪-೧೦೭,೨೦೬,೨೦೭,೨೧೬,
೨೨೫,೨೨೯,೨೩೪,೨೯೫,೩೦೪
ಬಾರಾಬಲೂತಿ ೧೩೬
ಬಾರಾಮಹಲ್ ೨೭೨,೨೭೭-೨೮೦,೪೨೮,೪೬೩
ಬಾಲಲೋಚನನಾಯಕ ೫೯,೪೫೯-೪೬೧
ಬಾಲ್ಯವಿವಾಹ ೧೪೦,೩೨೨
ಬಾಲೋಜನಾಯಕ ೪೬೦
ಬಾರ್ಸಿಲೂರು ೨೩೦
ಬಾಹುಬಲಿ ೩೮೩
ಬ್ರಾಹ್ಮಣ ಕಾಲೋನಿ(ಅಗ್ರಹಾರ) ೧೬೬,೧೮೭,೩೧೯
ಬ್ರಾಹ್ಮಣರು ೧೧೫,೧೨೩,೧೩೯,೨೪೨,೨೫೪,
೨೯೫-೨೯೭,೩೧೨,೩೧೭-೩೨೩
ಬಿಂಡಿಗನವಿಲೆ ೩೩೭
ಬಿಜಾಪುರ ೨೦,೪೦-೪೩,೫೦-೫೫,೭೪,
೮೪,೯೦,೯೧,೧೬೩,೧೬೯,೨೦೬,೨೦೯,
೨೧೬,೨೩೨,೨೩೩,೨೬೧,೨೭೨-೨೮೦,೨೮೫,೨೮೬,
೨೮೬,೩೧೧,೪೦೭-೪೧೩,೪೨೮-೪೩೫,೪೫೦,೪೫೨
ಬಿಜಾಪುರದ ಆದಿಲ್‌ಶಾಹಿ ೫೧
ಬಿಜಾಪುರದ ಯೂಸುಫ್ ಆದಿಲ್‌ಖಾನ್ ೩೯
ಬಿಜಾಪುರದ ಸುಲ್ತಾನ ೨೭೫,೨೭೮,೨೮೪,೪೩೦,೪೪೯
ಬಿಜಾಪುರ ಸೈನ್ಯ ೪೫೧
ಬಿಜ್ಜಾವರ ೮೨-೮೫,೮೮
ಬಿಜ್ಜಾವರದರಸರು ೮೪-೮೮
ಬಿಜೆನೆಗಾಲಿಯ ೩೧
ಬಿದನೂರು ೮೫,೨೮೧-೨೯೬,೩೧೦,೪೨೮,
೪೩೦,೪೩೪-೪೪೧
ಬಿಸ್ನಗರ್ ೨೧೯
ಬಿಳಿಕೆರೆ ೨೯೮
ಬ್ರಿಟಿಷ್ ಕಮೀಷನರ್ ೩೯೨
ಬ್ರಿಟಿಷ್ ಚರಿತ್ರಕಾರರು ೧೬೫
ಬ್ರಿಟಿಷ್ ದೊರೆಗಳು ೧೬೬
ಬ್ರಿಟಿಷರು ೫೬,೮೬,೨೮೭,೨೯೦
ಬೀಚನಹಳ್ಳಿ ೩೩೭
ಬೀಜಘಟ್ಟ(ವೆಂಕಟಸಮುದ್ರ) ೪೫೦
ಬೀಜವರಿ ೧೭೮,೧೭೯
ಬೀದರ್(ಕೋಟೆ) ೨೯,೩೭,೫೨,೭೪,೮೩,
೯೨,೧೫೭,೧೭೨,೨೦೬,೨೦೯,೨೬೧
ಬೀದರ್ ಸುಲ್ತಾನ ೬೪

ಬೀದರಿನ ಬಾರಿದ್‌ಶಾಹಿ ೫೦
ಬೀರ್ ೨೦೬
ಬೀರಾರ್ ೫೨
ಬೀರಾರಿನ ಇಮದ್‌ಶಾಹಿ ೫೦
ಬೀಳಗಿ ೯೪
ಬುಕನನ್ ೮೮,೧೨೬,೧೬೩,೨೩೪
ಬುಕ್ಕರಾಯ ೧೨-೧೪,೬೭,೧೬೦,೨೪೮,೨೫೬,
೨೫೭,೩೪೮,೩೫೪,೩೫೫,೩೮೦,೩೮೧,೩೯೨,
೪೦೯,೪೧೨,೪೧೪,೪೨೦,೪೨೩,೪೨೪
ಬುದ್ಧ ೩೫೨
ಬುಸ್ಸಲರಾವ್ ೩೯
ಬುಳ್ಳನಾಯಕ ೮೦
ಬೂದಿಹಾಳು ೬೬,೧೭೪
ಬೆಂಗಳೂರು ೩೬,೫೬,೭೭-೭೯,೮೬,೯೧,೯೪,
೧೩೭,೧೫೫,೧೫೬,೧೬೩,೨೭೫-೨೮೦,
೨೮೬-೨೯೦,೩೨೭,೩೭೪-೫,೪೨೮,
೪೩೦,೪೩೩-೪೪೬,೪೫೨,೪೬೩
ಬೆಜೆನಗರ ೨೧೯
ಬೆಟ್ಟದ ಚಾಮರಾಜ ಒಡೆಯರ್ ೧೩೧,೨೬೬,
೨೬೭,೨೭೩,೨೯೬-೩೦೦,೩೯೦,೩೯೧
ಬೆಟಿಕಾಲಿಯ ೨೩೧
ಬೆಟೆಕಲ್ಲ ೨೩೦
ಬೆಣ್ಣೆಯ ಚಾವಡಿ ೩೦೩
ಬೆನಪ್ಪನಾಯಕ ೬೬
ಬೆಬ್ಬಿ ೧೬೯
ಬೆಲ್ಲಂಕೊಂಡ ೫೫
ಬೆಸ್ಸೀನ್ ೨೦೬,೨೦೭
ಬೆಳಗಾವಿ ೪೩,೨೦೯
ಬೆಳಗೊಳ ೨೯೫
ಬೆಳಲೆಯೂರು ೪೫೦
ಬೆಳ್ಳಪ್ಪನಾಯಕ ೧೬
ಬೆಳ್ಳೂರು ೪೩೨
ಬೆಳ್ಳೂರು ಬಸದಿ ೩೩೭
ಬೇಕಲ್ ೩೧೦,೩೩೩
ಬೇಗಾರ(ತೋಟ) ೪೪೨
ಬೇಗೂರಿನ ಪಾಳೆಯಗಾರರು ೪೩೦
ಬೇಗೂರು ೪೪೪
ಬೇಟೆಕಾರರ ಹೆಬ್ಬಾಗಿಲು ೩೭೦
ಬೇರುಂಡ ಕೋಲು ೧೬೮
ಬೇಲೂರಿನ ನಾಯಕರು ೪೫೦
ಬೇಲೂರು ೧೫,೫೭,೨೨೬,೨೪೯,೨೭೩,೨೮೧,
೨೮೩,೩೨೬,೪೦೦,೪೩೪,೪೪೬,
೪೪೭,೪೫೧,೪೫೨,೪೬೧
ಬೇಲೂರು ಶಾಸನ ೨೨೬
ಬೇವೂರು ೭೭
ಬೇಹಿನ ಚಾವಡಿ ೩೦೩
ಬೇಹುಗಾರರು ೩೦೯
ಬೈಂದೂರು ೨೨೯
ಬೈರವನಾಯಕ ೮೯,೯೦,೯೧,೯೪,
೧೦೪,೪೩೧-೪೩೩,೪೪೦
ಬೈರರಸ ನಾಯಕ ೨೪
ಬೈರರು ೩೫೧
ಬೈರಿದೇವ ೬೭
ಬೊಂಬೆಯ ಲಕ್ಕ ೩೮೪
ಬೊಮ್ಮಣ್ಣಕವಿ ೧೩೯
ಬೊಮ್ಮಣ್ಣ ಪಂಡಿತ ೪೬೨
ಬೊಮ್ಮನಹಳ್ಳಿ ೧೨೫
ಬೊಮ್ಮರಸ(ಒಡೆಯ) ೯೯,೩೮೧-೩೮೪
ಬೋಗಾರರು ೩೧೯
ಬೋಳ ಚಾಮರಾಜ ೨೬೭
ಬೋಳ ಬೀರೇಗೌಡ ೩೨೬
ಬೌದ್ಧಧರ್ಮ ೩೪೭-೩೫೧

ಭಕ್ತಿ ಸಾಹಿತ್ಯ ೩೮೫,೩೮೯
ಭಟ್ಕಳ(ಬಂದರು) ೩೭-೪೦,೯೭,೧೫೬,
೨೦೬-೨೧೦,೨೧೬,೨೨೯-೨೩೪,೩೦೫
ಭದ್ರಗಿರಿ ೩೯೪
ಭದ್ರಪ್ಪನಾಯಕ ೭೨,೭೩,೨೬೮,೪೪೦
ಭದ್ರೇಶ್ವರಿ ಸಂತತಿ ೨೨೬
ಭನೂರು ೨೭
ಭರಮಪ್ಪನಾಯಕ ೪೪೧,೪೪೩
ಭವಭೂತಿ ೪೨೧
ಭವ್ಯ(ಜೈನ)ರು ೩೫೫
ಭಾಗವತ ೩೮೦,೩೮೫
ಭಾರತೀತೀರ್ಥರು ೧೭,೧೮,೨೦,೪೧೬
ಭಾರತೀನಂಜ ೪೫೨
ಭಾರದ್ವಾಜ ೩೨೦
ಭಾಸ್ಕರ ೩೮೧,೩೮೩,೪೨೨
ಭಿಲ್ಲರು ೨೨೬
ಭೀಮಕವಿ ೨೪,೩೮೧-೩೮೮
ಭೀಮಾದೇವಿ ೩೨
ಭುಜಂಗೇಶ್ವರ ಆಲಯಗಳು ೧೨೮
ಭುವನಗಿರಿದುರ್ಗ ೩೬,೩೩೩,೩೩೬
ಭುವನೈಕಬಾಹು ೨೫,೪೩
ಭುವನೈಕವೀರ ೩೬
ಭುವನೇಶ್ವರಿ ಆಲಯ ೩೬೧

ಭೂಒಡೆತನ ೧೨೬
ಭೃಗು ೩೨೦
ಭೈರವಿ ೩೫೩
ಭೈರಾದೇವಿ ೨೩೨,೨೬೧
ಭೈರೇಶ್ವರ ೮೭
ಭೈರೇಶ್ವರ ನಾಣ್ಯ ೭೮,೭೯
ಭೋಗನಾಥ ೪೧೭

ಮಂಗಪ್ಪ ದಂಡನಾಯಕ ೧೦೪
ಮಂಗರಸ ೧೦೩,೩೮೧
ಮಂಗರಾಜ ೩೮೭
ಮಂಗಲಾಷ್ಟಕರು ೧೧೬
ಮಂಗಳಗಿರಿ ೩೫
ಮಂಗಳೂರು ೩೭,೬೬,೭೩,೭೪,೯೭,೯೮, ೧೦೪-೧೦೭,೧೭೪,೧೮೧,೨೦೬,೨೦೭,೨೧೬,೨೨೫, ೨೨೯-೨೩೪,೨೭೫,೩೦೪,೩೦೫,೩೧೨,೩೩೭,೪೩೯
ಮಂಗು ೩೫
ಮಂಜರಾಬಾದ್(ಬೇಲೂರು ಪ್ರದೇಶ) ೪೫೧
ಮಂಚೇಶ್ವರ ೨೦೬,೨೦೭
ಮಂಡ್ಯ ೧೧೯,೧೬೪,೨೭೨,೨೮೫,೨೯೩,೪೫೫,೪೬೩
ಮಂಡ್ಯತ್ತಾರ್ ೨೪೩
ಮಗ್ಗಮನೆ ಸುಂಕ ೧೨೬
ಮಗ್ಗೆಯ ಮಾಯಿದೇವ ೩೮೦
ಮಠಗಳು ೯೫,೧೨೮,೨೫೯
ಮಡಗಾಸ್ಕರ್ ೨೧೬
ಮಡಿದವರ ಸ್ಮಾರಕಗಳು ೧೧೬
ಮಣ್ಣೂರು ೩೩
ಮತಂಗ ೪೧೮
ಮತಂಗದೇವರ ಕೊತ್ತಳ ೩೭೧
ಮತಂಗೇಶ್ವರ ದೇವರದಿಡ್ಡಿ ೩೭೦
ಮತ್ತಿಕೆರೆ ೨೭೧,೨೯೫,೪೬೪
ಮದಕೇರಿನಾಯಕ ೪೩೬,೪೪೩
ಮದಣಹಳ್ಳಿ ೨೯೫
ಮದನಕೊತ್ತಳ ೩೭೧
ಮದರ್-ಉಲ್-ಮುಲು ೪೨
ಮದರಾಸು ೨೯೦
ಮದ್ದಗಿರಿ ೮೪,೮೫,೮೯,೨೮೫
ಮದ್ದ ಹೆಗ್ಗಡೆ ೯೮,೧೦೫
ಮದ್ದಳಿಕಾರರು ೧೧೬
ಮದಾಲಸ ಚರಿತ್ರಂ ೩೮೦
ಮದ್ರಾಸ ಪಟ್ಟಣಂ ೫೬
ಮದ್ದೂರು ೧೧೩,೩೯೩

ಮಧ್ಯಯುಗ ೨೧೩
ಮಧ್ವಾಚಾರ್ಯ ೨೪೨,೩೫೦,೩೫೪,೩೮೫,೪೧೮,೪೨೨
ಮಧುಗಿರಿ ೮೨,೮೭,೮೮
ಮಧುರಕವಿ ೩೮೦
ಮಧುರಾವಿಜಯಂ (ವೀರಕಂಪಣರಾಯ ಚರಿತ) ೩೮೦
ಮಧುರೆ ೨೩,೪೭,೫೪,೫೬;೨೧೮,೨೨೫, ೨೬೭,೨೭೨-೨೭೪,೨೭೮-೨೮೩,೩೫೧, ೨೮೬,೩೮೧-೩೮೩,೪೨೩,೪೨೪,೪೬೦,೪೬೧
ಮಧುರೆಯ ಪಾಂಡ್ಯರು ೧೧
ಮಧುರೆಯ ಸುಲ್ತಾನ ೨೨,೩೫
ಮಧುವಿನಹಳ್ಳಿ ೧೨೨
ಮನಸಬ್ದಾರ್ ೪೪೧
ಮನು ೧೭೦
ಮನೆದೆರಿಗೆ ೩೦೨
ಮನೆಮುತ್ತನಹಳ್ಳಿ ೪೫೮
ಮಮ್ಮಟ ೪೧೭
ಮರಾಠರು ೮೫,೧೩೨,೧೬೯, ೨೮೪,೨೮೬,೨೮೯,೨೯೦,೩೦೧
ಮರಾಠಾ ಚಕ್ರವರ್ತಿ ೩೧೨
ಮರಾಠಾ ಪ್ರದೇಶ ೨೭೫
ಮರಾಠಾ ರಾಜ್ಯ ೨೮೪
ಮರಾಠಾ ಸೈನ್ಯ ೨೮೯
ಮರಾಠಿ ೨೪೨
ಮರಿಗಂಟಿ ಸಿಂಗನಾಚಾರ್ಯ ೩೯೩
ಮರುಳಯ್ಯ, ಸಾ.ಶಿ. ೫,೪೦೮
ಮಲಕಪ್ಪನಾಯುಡು ೫೫
ಮಲಕ್ಕಾ ೨೦೮,೨೧೩,೨೧೫-೨೧೭,೨೨೦
ಮಲದೇವನಹಳ್ಳಿ ೧೩೭
ಮಲಪನಗುಡಿ ೩೬೮
ಮಲಪನಹಳ್ಳಿ ೪೪೭
ಮಲಬಾರ್ ೨೧೩,೨೧೬,೨೧೭,೨೨೦,೨೩೪,೨೬೦
ಮಲಬಾರ್ ಅರಸರು ೨೩೩
ಮಲಯ ೫೭,೨೨೯
ಮಲಯ ದಂಡನಾಯಕ ೯೮
ಮಲ್ಲಣಾರ್ಯ ೩೮೪
ಮಲ್ಲಪ್ಪ ಒಡೆಯ ೩೧,೯೮,೯೯,೧೦೨,೪೧೮,೪೫೫
ಮಲ್ಲಪ್ಪನಾಯಕ ೬೭,೧೦೧
ಮಲ್ಲಯ ೯೯
ಮಲ್ಲಯದಣ್ಣಾಯಕ ೧೦೨
ಮಲ್ಲರಸ ೧೦೨
ಮಲ್ಲರಾಜ ೧೦೯,೧೧೧

ಮಲ್ಲರಾಜ ಒಡೆಯರ್ ೩೯೭,೪೫೫
ಮಲ್ಲರಾಜಯ್ಯ ೨೬೯,೩೦೮,೪೬೧
ಮಲ್ಲರಾಯ ೧೨೦
ಮಲ್ಲಾಜಮ್ಮ ೧೦೯,೧೧೧,೧೧೪
ಮಲ್ಲಾದೇವಿ ೨೬
ಮಲ್ಲಾಪುರಿ ೧೧೦,೧೧೪
ಮಲ್ಲಾರೆಡ್ಡಿ ೨೭
ಮಲಿಕ್ ಅಹಮದ್ ನಿಜಾಂ-ಉಲ್-ಮುಲ್ಕ್ ೫೦
ಮಲಿಕ್ ಹಸನ್ ನಿಜಾಂ-ಉಲ್-ಮುಲ್ಕ್ ೩೭
ಮಲ್ಲಿಕ್‌ಕಾಫರ್ ೧೨,೨೧
ಮಲ್ಲಿಕಾರ್ಜುನ ೩೨,೩೩,೩೫,೮೨,
೧೭೬,೩೬೦,೩೮೦,೩೯೩,೪೨೧,೪೫೨
ಮಲ್ಲಿಪಟ್ಟಣ ೨೦೭,೨೦೮
ಮಲೆದೇವನಹಳ್ಳಿ ೧೩೯
ಮಲೆನಾಡು ೨೦,೧೫೩,೧೫೪,೨೭೫
ಮಲೆಯಾಳಂ ೪೧೨
ಮಲ್ಲೆ ಅನಂತ ೫೫
ಮಲ್ಲೇಶ್ವರಸ್ವಾಮಿ ದೇವಾಲಯ ೮೮
ಮಸಲಿಪಟ್ಟಣ ೩೪,೩೬,೨೭೮
ಮಸ್ಕಿನದಿ ೫೨
ಮಸೀದಿ ೩೫೨,೩೫೫,೪೩೯
ಮಳಲವಿನಾಯಕ ಕೊತ್ತಳ ೩೭೧
ಮಳಲಿ ೨೮೪
ಮಳವಳ್ಳಿ ೧೧೯,೧೨೫,೧೬೦,೧೬೧,೧೬೪,೩೨೭,೪೬೨
ಮಹತ್ತಿನಮಠ ೯೫,೧೧೮
ಮಹದೇವಪುರ ೭೫,೪೩೫
ಮಹಮದ್ ಆದಿಲ್‌ಶಾಹ ೯೦
ಮಹಮ್ಮದ್ ಪೈಗಂಬರ್ ೩೫೨
ಮಹಮ್ಮದೀಯ ೨೭೦,೪೩೯
ಮಹಮೂದ್ ೪೧
ಮಹಮೂದ್ ಗವಾನ ೩೩,೩೬,೩೭,೫೦
ಮಹಾಜನರು ೧೧೫
ಮಹಾದೇವರಸ ೧೬೦
ಮಹಾನವಮಿ(ನವರಾತ್ರಿ) ೨೯೯,೩೩೧,೩೫೯
ಮಹಾನವಮಿದಿಬ್ಬ ೩೬೬,೩೬೭
ಮಹಾನಾಡು ಪ್ರಭುಗಳು ೮೨-೮೮
ಮಹಾನುಭವ ಪ್ರಕಾಶಿಕೆ ೯೨
ಮಹಾಬಲದೇವ ೧೦೬
ಮಹಾಮಂಡಲೇಶ್ವರರು ೬೮,೧೧೨
ಮಹಾಯಾನ ೩೫೧
ಮಹಾರಾಷ್ಟ್ರ ೩೫೧,೪೧೩
ಮಹಾಲಿಂಗಂ ಟಿ.ವಿ. ೨,೬೩,೨೪೨
ಮಹಾಲಿಂಗದೇವ ೩೮೨,೩೮೩,೩೮೫
ಮಹಾಶಿವರಾತ್ರಿ ೩೩೧
ಮಹಿಷಿ ಊರು ೩೧೮
ಮಹಿಷಪುರ (ಮೈಸೂರು) ೩೧೮
ಮಹೆವನ ೧೭೨
ಮಾಂಕಾಳಮ್ಮ ೩೫೩
ಮಾಂಡಲಿಕರು ೩೦೯
ಮಾರ್ಕ್ ವಿಲ್ಕ್ಸ್ ೫,೮,೧೮೨,೨೬೫,೨೬೬,೨೮೧,೪೬೪
ಮಾಗಡಿ ೬,೭೬,೧೩೨,೨೭೫,
೨೮೧,೩೭೪,೪೦೫,೪೪೬
ಮಾಗಡಿ ಅರಸರು ೪೪೬
ಮಾಗಡಿ ಕೆಂಪೇಗೌಡ ೪೧
ಮಾಗಣೆ ೮೬,೩೦೫
ಮಾಗಣೆಕಾರರು ೧೧೨
ಮಾಚ ೨೫
ಮಾಡೆಲ್‌ಸೋ ೨೩೩
ಮಾತಾಪುರ ೧೨೬
ಮಾದಪ್ಪ ೨೪,೪೫೨
ಮಾದರಸ ೭೫,೧೦೨
ಮಾದಿಗರು ೨೪೮
ಮಾದಿಹಳ್ಳಿ ೧೨೨,೧೨೩
ಮಾಧವ ೧೨,೧೭,೩೮೭,೪೨೦,೪೨೨,೪೨೫
ಮಾಧವತೀರ್ಥ ೩೫೦
ಮಾಧವ ಮಂತ್ರಿ ೪೧೬
ಮಾಧ್ವ(ಶ್ರೀವೈಷ್ಣವ) ೨೪೨,೨೪೩,೩೫೦
ಮಾಧವಾಚಾರ್ಯ ೨೪,೧೬೯,೧೭೦,೧೭೬,೨೪೩
ಮಾನ ೧೩೮
ಮಾಬುನಾಯಕ ೧೦೪
ಮಾಯಕೊಂಡ ೪೨೯,೪೩೬,೪೪೧
ಮಾಯಣ ೪೨೦
ಮಾಯದೇವ ೩೮೧,೩೮೩,೩೮೫
ಮಾಯಿಸಮುದ್ರ(ಮಾಯಿಸಂದ್ರ) ೨೭೭,೪೩೧
ಮಾರನಾಯಕ ೧೧೧,೧೩೦,೨೬೫,೩೦೭
ಮಾರಪ್ಪ ೨೧,೨೨
ಮಾರಮ್ಮ ೩೫೩
ಮಾರಿಸ್ ಡಾಬ್ ೨೦೧
ಮಾರೇಗೌಡ ೮೩
ಮಾಲಂಗಿನಾಡು ೧೩೦,೩೦೭
ಮಾಲತಿ ಪುಟ್ಟೇಗೌಡ ೭೪
ಮಾಲರು ೨೨೨,೨೪೮
ಮಾಲ್ಯವಂತ ಬೆಟ್ಟ ೩೬೩
ಮಾಲ್ಡೀವ್ಸ್ ೨೦೭,೨೦೮,೨೧೬,೨೨೯

ಮಾವಿನಹಳ್ಳಿ ೧೧೪
ಮಾಸ್ತಿ ೨೭೮
ಮಾಷೂರು ೭೨
ಮಾಹಿಂ ೨೦೬,೨೦೭
ಮಾಹುತರು ೩೧೭
ಮಿಚೆಲ್ ಜಾರ್ಜ್ ೪
ಮಿರ್ಜಾನ್ ೨೨೯,೨೩೪
ಮಿರ್ಜಯೋ ೨೩೦
ಮಿಡಿಕೇಶಿ(ಕೋಟೆ) ೮೪,೮೫,೧೩೨,೨೮೫
ಮಿಡಿಗೇಶಿಯ ಈಶ್ವರ ೮೭
ಮಿಲಾಗ್ರೆಸ್ ಚರ್ಚ್ ೩೩೭
ಮಿಲಿಟರಿ ವಾಸ್ತುಶಿಲ್ಪ ೩೬೮
ಮಿರ್ಲೆ ೨೪೨
ಮೀರ್‌ಜಾನ್ ೨೦೬
ಮೀರ್‌ಜುಮ್ಲಾ ೨೭೯,೨೮೦
ಮೀರ್‌ಜುವಲ್ ೫೬
ಮೀರಜ್ ೨೦೬
ಮೀಸರಗಂಡನ ಕೊತ್ತಳ ೩೭೧
ಮುಂಬಯಿ ೨೩೧
ಮುಕುಂದಬಾನ್ ೧೦೫
ಮುಗಲ್ ಚಕ್ರವರ್ತಿ ೯೦,೨೮೬
ಮುಚ್ಚುಗರು ೩೧೯
ಮುಜಾಹಿದ್ ೨೩
ಮುಡೆ(ಮುಡಿ) ೧೬೯
ಮುರ್ತಜಾ ನಿಜಾಂಶಾಹ ೫೨,೫೫
ಮುರ್ತುಜಾಬೇಗ್ ೪೩೧
ಮುತ್ತನ್‌ಚೆಟ್ಟಿ ೨೮೪
ಮುತ್ಯಾಲಪೇಟೆ ೪೪೬
ಮುತ್ತುಗಳು ೨೧೭
ಮುದಲಿಯಾರ್ ೨೭೬
ಮುದ್ಗಲ್‌ಕೋಟೆ ೨೪,೨೯,೩೦,೩೮,೩೯,೪೨,೪೭,೫೨,೬೭
ಮುದ್ದದಂಡೇಶ ೩೮೦
ಮುದ್ದಪ್ಪ ೨೧,೨೨
ಮುದ್ದವೀರನಾಯಕ ೯೧
ಮುದಿಯಪ್ಪನಾಯಕ ೯೦೦,೯೧,೪೩೨,೪೩೩
ಮುದಿಯಪ್ಪನಾಯಕನ ಸಮಾಧಿ ೯೬
ಮುದ್ವೀರಪ್ಪನಾಯಕ ೯೫,೯೭
ಮುದ್ದುಭೂಪ ೪೬೨
ಮುದ್ದುರಾಜ ೧೦೯-೧೧೫,೪೬೩
ಮುದ್ದುವೀರ ತಾರಾವಳಿ ೮೮
ಮುದ್ದುವೀರಸ್ವಾಮಿ ೯೧,೯೩-೯೬
ಮುದ್ದುವೀರಸ್ವಾಮಿ ಸ್ವರವಚನ ೮೮
ಮುಪ್ಪಿನ ಕಾಂತಯ್ಯ ೩೯೮
ಮುಪ್ಪಿನ ದೇವರಾಜ ಒಡೆಯರ್ ೨೮೩,೨೮೮,೨೯೬,೩೮೧
ಮುಪ್ಪಿನ ಷಡಕ್ಷರಿ ೧೧೬
ಮುಬಾರಕ್ ಖಾನ್ ೨೨
ಮುಮ್ಮಡಿ ಕೃಷ್ಣರಾಜ ೩೯೨,೩೯೬
ಮುಮ್ಮಡಿ ಕೆಂಪವೀರಪ್ಪ ಗೌಡ ೪೪೫,೪೪೬
ಮುಮ್ಮಡಿ ಕೆಂಪೇಗೌಡ ೧೫೯,೨೮೧,೪೪೬
ಮುಮ್ಮಡಿ ಚಿಕ್ಕಪ್ಪಗೌಡ ೮೮
ಮುಮ್ಮಡಿ ಚಿಕ್ಕಭೂಪಾಲ ೮೫
ಮುಮ್ಮಡಿ ಜಗದೇವರಾಯ ೪೬೫
ಮುಮ್ಮಡಿ ದೊಡ್ಡವೀರಪ್ಪಗೌಡ ೪೪೬
ಮುಮ್ಮಡಿನಗರದ ಕೋಟೆ ೮೮
ಮುಮ್ಮಡಿ ಪ್ರಭುಗಳು ೮೬
ಮುಮ್ಮಡಿ ಮುದಿಯಪ್ಪನಾಯಕ ೪೩೩
ಮುಮ್ಮರಿದಂಡರು ೨೨೬
ಮುರಾರಿರಾಯ ೧೩೩
ಮುಲದ್ಲು ೧೬೪
ಮುಲುಕುನಾಡು ೨೪೩
ಮುಲ್ಲುಖಾನ್ ೪೭,೮೩
ಮುಸಲಕಲ್ ೨೭
ಮುಸಲ್ಮಾನ ೨೭೭
ಮುಸ್ತಫಾಖಾನ್ ೨೭೭,೨೭೮
ಮುಸ್ಲಿಂ ಆಳ್ವಿಕೆ ೪೧೨
ಮುಸ್ಲಿಂ ಇತಿಹಾಸಕಾರರು ೨೭,೫೩
ಮುಸ್ಲಿಂ ದಾಳಿಕೋರರು ೧೫
ಮುಸ್ಲಿಂ ನೆಲೆಗಳು ೨೬೧
ಮುಸ್ಲಿಂ ಬಡಾವಣೆ ೩೬೩
ಮುಸ್ಲಿಂ ಮಸೀದಿ ೨೯೬
ಮುಸ್ಲಿಂ ರಾಜ್ಯಗಳು ೩೮೬
ಮುಸ್ಲಿಮರ ನವಾಬರು ೩೪೭,೩೫೨
ಮುಸ್ಲಿಮರು ೩೧೦,೩೧೫,೨೧೬, ೨೬೧,
೩೫೭,೩೮೭,೪೦೫,೪೦೭,೪೨೩
ಮುಹಮದ್ ಅದಿಲ್‌ಶಾಹ ೪೨೯
ಮುಹಮದ್ ಅಲಿಶಾಹ ೪೫೧
ಮುಹಮದ್-ಬಿನ್-ತುಗಲಖ್ ೪,೧೧,೧೨
ಮುಹಮದ್‌ಶಾಹ ೩೪,೩೬,೩೯
ಮುಹಮ್ಮದಲಿ ೨೮೯
ಮುಳಬಾಗಲು ೨೨,೨೪,೧೫೪,೧೫೫
ಮುಳುವಾಯಿ(ಮುಳಬಾಗಿಲು) ೨೨೫
ಮುಳ್ಳೂರು ಶಾಸನ ೧೨೦
ಮೂಕಹಳ್ಳಿ ೧೦೯
ಮೂಕಾಂಬಿಕೆ(ಕೊಲ್ಲೂರು) ೩೫೩

ಮೂಗೂರು ೧೩೦,೨೪೩,೨೬೮,೨೭೧,೪೬೦
ಮೂಡಬಿದರೆ ೨೬೧
ಮೂಡಬಿದರೆಯ ಚೌಟರು ೧೦೪
ಮೂರನೇ ಕಾಟಯವೇಮ ೨೭
ಮೂರನೇ ಗುಂಡ ೩೫
ಮೂರನೇ ಚನ್ನಬಸಪ್ಪನಾಯಕ ೯೨
ಮೂರನೇ ಚಾಮರಾಜ ಒಡೆಯರ್ ೨೬೬,೪೩೦
ಮೂರನೇ ಬಲ್ಲಾಳ ೧೪-೧೬,೨೧,೨೨
ಮೂರನೇ ಬೆಟ್ಟದ
ಚಾಮರಾಜ ಒಡೆಯರು ೨೬೭,೨೬೮,೪೫೬
ಮೂರನೇ ಮಂಗರಸ ೩೮೩
ಮೂರನೇ ಮಹಮದ್ ಶಾಹ ೩೩,೩೭,೪೦
ಮೂರನೇ ರಾಜನಾಥ ೩೯೨,೪೨೨
ಮೂರನೇ ರಾಮ ೨೬೭,೨೬೮
ಮೂರನೇ ವಿಜಯಬುಕ್ಕ ೨೮
ಮೂರನೇ ವಿರೂಪಾಕ್ಷ ೩೩
ಮೂರನೇ ವೆಂಕಟ ೨೭೪
ಮೂರನೇ ವೇಮ ೨೭
ಮೂರನೇ ಶಿಹಾಬುದ್ದೀನ್ ಮಹಮೂದ್ ೩೭
ಮೂರನೇ ಶ್ರೀರಂಗ ೫೬,೨೬೮,೨೭೪,೪೨೯,೪೫೧
ಮೂರನೇ ಸಿಂಗ ೨೯
ಮೂರನೇ ಸೋಮಶೇಖರನಾಯಕ ೪೦೭,೪೦೮
ಮೂರನೇ ಹರಿಹರ ೨೮
ಮೂರರು ೨೭,೧೫೭,೨೧೬,೨೨೦,೨೩೦,೩೫೨
ಮೂಲವೀಸೆ ೨೨೩
ಮೂಳೂರು ೧೨೨
ಮೆಂಚಿಬರಮ ೩೦೭
ಮೆಕ್ಕಾ ೨೦೭,೨೧೬,೨೧೭,೨೩೨
ಮೆಕೆಂಜೀ ೧೭೭
ಮೆರ್ಜನ್ ೨೩೧
ಮೆಸ್ಸೂರು(ಮೈಸೂರು) ೨೭೭
ಮೇದರು ೧೩೮
ಮೇಲಗಿರಿದುರ್ಗ ೨೭೯
ಮೇಲುಕೋಟೆ ೨೪೨,೨೬೦,೨೬೫,೨೭೧,
೨೯೩,೨೯೬,೩೯೫,೩೯೯,೪೦೬
ಮೈಲಾಪುರ ೨೦೬,೨೦೮,೨೧೮
ಮೈಸೂರಿನ ಒಡೆಯರು ೧,೯,೫೪,೧೦೮,೧೧೪,
೧೩೦,೧೩೯,೧೭೭,೨೭೧,೩೭೫,೩೯೦,೩೯೧
ಮೈಸೂರಿನ ದಳವಾಯಿಗಳು ೧೩೨
ಮೈಸೂರು ೯೧,೧೧೧,೧೧೫,೧೧೯,೧೨೧,
೧೨೬,೧೩೧,೧೩೩,೧೩೬-೧೪೧,೧೫೪,೧೫೫,
೧೬೪,೧೬೮,೧೬೯,೧೮೫,೨೨೫,೨೪೧,೨೬೪,
೨೬೬,೨೭೨,೨೭೫,೨೯೮,೩೦೧-೩೧೦,
೪೨೭-೪೩೬,೪೪೮-೪೫೫
ಮೈಸೂರು ಅರಮನೆ ೧೧೧,೩೨೩
ಮೈಸೂರು ಅರಮನೆ ದಾಖಲೆ ೨೬೫,೪೪೯
ಮೊಗಲರು ೩,೯೧,೧೩೨,೨೬೮,೨೭೪,೨೮೩,
೨೮೭,೩೦೧,೩೭೫,೪೨೮,೪೩೬
ಮೊಗಲ್ ಚಕ್ರವರ್ತಿ ೧೮೪,೩೦೨
ಮೊಗಲ್ ವ್ಯವಸ್ಥೆ ೧೮೫,೩೦೪
ಮೊಗಲ್ ಸೇನೆ ೩೧೨,೩೨೩
ಮೊಟ್ಟೆಸುಂಕ ೧೨೬
ಮೊನೆಮುತ್ತರಹಳ್ಳಿ ೧೨೩
ಮೊರಸು ಪಾಳೆಯಗಾರರು ೨೮೪
ಮೊಳಕಾಲ್ಮುರು ೮೧
ಮೊಳಗಾಲ ೩೨೬
ಮೊಹಮ್ಮದ್ ಅಲಿ ೧೩೩
ಮೋದೂರು ೭೩
ಮೋರ್‌ಲ್ಯಾಂಡ್ ೨೧೩
ಮೋಹನ ತರಂಗಿಣಿ ೨೨೯,೨೪೯,೩೫೪,೩೮೫
ಮೋಹನಾಂಬೆ ೩೯೬
ಮೋಳೂರು ಸೀಮೆ ೩೨೬

ಯಚಮನಾಯಕ ೫೬
ಯಜನ(ಯಾಜನ) ೩೧೭
ಯಜ್ಞಯಾಗಾದಿಗಳು ೨೪೩
ಯಡತೊರೆ ೪೬೧
ಯಡೆಹಳ್ಳಿ ೩೩೬
ಯತಿ ತಿಮ್ಮರಾಜಯ್ಯ ೧೦೯
ಯತಿರಾಜ ೫೬
ಯದು(ವಿಜಯ)ರಾಯ ೨೬೪-೨೬೬,೩೦೭,೩೯೦,೩೯೪
ಯದು(ಯಾದವ) ವಂಶ ೧೯,೭೪,೯೪,೩೧೮,೩೯೦,೩೯೪
ಯರಗಂಬಳ್ಳಿಮಠ ೧೨೨
ಯಲಗಲ್ಲಿ ಪುಟ್ಟೇಗೌಡ ೭೪
ಯಲಗಳಲಿ ೭೩
ಯಲಹಂಕನಾಡ ಗೌಡರು(ಪ್ರಭುಗಳು) ೬೪,೭೭,
೭೯,೩೭೪,೪೨೮,೪೪೩
ಯಲಹಂಕನಾಡು ೬,೬೭,೬೯,೭೦,೭೧,೭೮,೭೯,೧೫೯
ಯಶಕೀರ್ತಿ ೩೮೧
ಯಶವಂತರಾಯ ೨೮೫
ಯಳಂದೂರು ೧೦೮,೧೧೨-೧೧೫,೧೧೭-೧೧೯,
೧೨೫,೧೨೭,೧೨೯,೨೬೯,೩೧೭,೪೬೦,೪೬೧,೪೬೨

ಯಾದಗಿರ್ ೫೨
ಯಾದವರು ೩೪೭
ಯಾಸ್ಕ ೪೧೯
ಯಾಳಿ ೩೬೧,೩೬೨
ಯೂರೋಪ್(ಯೂರೋಪಿಯನ್ನರು) ೩,೭,೮೦,೧೩೨,
೨೦೦,೨೦೧,೨೦೪,೨೧೩,೨೩೧,೨೩೩,೨೩೪,೨೩೯
ಯೂಸುಫ್ ಆದಿಲ್‌ಖಾನ್ ೩೪,೩೬-೩೮,
೪೦,೪೨,೫೦,೨೨೪
ಯೆಮೆನ್ ೨೦೭
ಯೆರಿಮದನಾಯಕ ೪೩೧,೪೩೨,೪೩೩
ಯೆರಿಯೂರು ೧೧೩
ಯೇರಭೂಪ ೪೫೩

ರಂಗ ೩೯,೪೬
ರಂಗನಾಥ ದೀಕ್ಷಿತ ೪೩೯
ರಂಗಪ್ಪನಾಯಕ ೪೪೩,೪೪೬-೪೪೮
ರಂಗಪ್ಪರಾಜ ೮೫
ರಂಗಮ್ಮ ೩೧೦
ರಂಗಯ್ಯ ೩೯೧,೩೯೮
ರಂಗವ್ವನಹಳ್ಳಿ ೪೪೨
ರಂಗೇಶ ೩೩೫
ರಕ್ಕಸಗಿ-ತಂಗಡಗಿ ೫೨,೩೦೮
ರಘುದೇವ ನರೇಂದ್ರ ಮಹಾಪಾತ್ರ ೩೩
ರಘುನಾಥ ೫೫,೫೬
ರುಘುತ್ತಮ ೪೧೭
ರಜಕ(ಅಗಸ) ೪೪೨
ರಜಾಕ್ ೧೭೦,೨೨೬
ರಟ್ಟಮತ ೧೫೪,೧೫೮,೧೬೪
ರಣದುಲ್ಲಾಖಾನ್ ೫೬,೮೫,೯೦,೯೧,
೨೭೫,೪೨೯-೪೩೪,೪೪೫-೪೫೧
ರಣಧೀರ ಕಂಠೀರವ ನರಸರಾಜ ಒಡೆಯರ್ ೩೯೦
ರಣಪೆದ್ದ ಜಗದೇವರಾಯ ೪೬೫
ರಣಬೈರೇಗೌಡ ೬೪,೭೭,೪೪೩
ರಣವಂಶ ೪೬೩
ರತ್ನಗಿರಿ ೮೫,೨೩೨,೨೭೬,೨೭೭
ರತ್ನಪ್ಪ ಒಡೆಯ ೧೦೧,೧೦೩
ರತ್ನಾಕರವರ್ಣಿ ೩೮೧,೩೮೨,೩೮೫,೩೮೮
ರಫ್ತು ೨೧೬
ರಷ್ಯಾ ೧೫೭,೨೨೮
ರಸಮಂಜರಿ ೩೮೦
ರಸಿಕಪಂಡಿತ ೪೬೨
ರಸೂಲ್‌ಪುರ ೪೩೪

ರಾಘುವಧಾನ್ಯ ೨೫೦
ರಾಘುವಪುರ ೧೨೧
ರಾಘುವಾಂಕ ೩೫೪,೩೮೪
ರಾಘುವೇಂದ್ರಸ್ವಾಮಿ ೩೫೧
ರಾಚಕೊಂಡ ೨೯
ರಾಚಕೊಂಡದ ಪೇಲಮರು ೨೭
ರಾಜಒಡೆಯರು ೧೧೦,೧೧೧,೧೩೦,೨೬೭-೨೭೩,
೨೯೪-೩೦೧,೩೦೭-೩೧೧,೩೭೫,೩೯೪,
೪೨೮,೪೪೭,೪೪೯,೪೬೦-೪೬೩
ರಾಜ ಕೃಷ್ಣಪ್ಪನಾಯಕ ೬೬
ರಾಜ ಗೋಪನಾಯಕ ೬೬
ರಾಜಗೋಪಾಲ ೩೩೫
ರಾಜಧರ್ಮ ೨೯೪
ರಾಜನ ಮಟ್ಟದ ದಂಡ(ಕೋಲು) ೧೬೮
ರಾಜನಾಥ ಡಿಂಡಿಮ ೪೭,೪೧೦
ರಾಜ ಬಡಾವಣೆ ೩೬೭
ರಾಜಮಂಡ್ರಿ ೨೯,೩೧
ರಾಜಮಂಡ್ರಿ ಮ್ಯೂಸಿಯಂ ಫಲಕಗಳು ೨೭
ರಾಜಮಹೇಂದ್ರಿ ೨೬,೨೭,೪೧,೪೨,೨೭೪
ರಾಜಮುದ್ರೆ ೧೩೮
ರಾಜರ ಆವರಣ ೩೬೪
ರಾಜವೆಂಕಟಾದ್ರಿ ೨೭೩
ರಾಜಶೇಖರ ೩೩
ರಾಜಶೇಖರಪ್ಪ ಬಿ. ೫
ರಾಜಾ ಜಂಗ್‌ಬಹದ್ದೂರ್ ೯೧
ರಾಜಾಜ್ಞೆ(ನಿರೂಪ) ೩೦೪
ರಾಜಾನೃಸಿಂಹ ೪೨೫
ರಾಜಾಪುರ ೨೩೨
ರಾಜಾಪೆದ್ದ ಜಗದೇವರಾಯ ೨೭೨
ರಾಜಾರಾಮ ೩೧೨,೪೩೫
ರಾಜಾವಳೀ ಕಥೆ ೧೧೧,೧೬೯,೧೮೭
ರಾಣಿ ಚೆನ್ನಮ್ಮ ೮೫
ರಾಣಿ ಚೆಲುವಾಂಬಾ ೧೩೪
ರಾಣಿಯರ ಸ್ನಾನಗೃಹ ೩೬೭
ರಾಬರ್ಟ್ ಸಿವೆಲ್ ೧,೨,೩೮,೧೬೧,೩೬೪,೪೫೬
ರಾಮ ೫೫,೫೬,೨೬೭
ರಾಮಕವಿ ೧೩೫
ರಾಮಕೃಷ್ಣ ಒಡೆಯ ೧೦೨,೩೧೭
ರಾಮಚಂದ್ರ ೨೫,೨೮,೪೭,೧೦೪,೪೧೯
ರಾಮದಾಸ ೪೫೩
ರಾಮದೇವ ೨೫,೫೬,೩೭೯
ರಾಮದೇವರಾಯ ೫೬,೨೫೧

ರಾಮಧಾನ್ಯ ಚರಿತೆ ೨೪೯,೨೫೦
ರಾಮನವಮಿ ೩೩೧
ರಾಮನೃಪಾಲ ೧೦೯,೧೧೫
ರಾಮನಾಥ ೧೨
ರಾಮಪ್ಪಗೌಡ ೮೩,೮೫
ರಾಮಪ್ಪನಾಯಕ ೯೧,೪೨೯,೪೩೨,೪೩೩
ರಾಮಭಟ್ಟ ೪೯,೫೧
ರಾಮಭದ್ರಾಂಬೆ ೨೫೮
ರಾಮಯಾಮಾತ್ಯ ೪೯,೫೧
ರಾಮರಾಜ ೩೯,೮೫,೧೦೯,೧೧೪,೧೧೬,೪೬೨,೪೬೩
ರಾಮರಾಯ ೪೬-೫೪,೬೪,೭೫,೭೮,೨೫೮,೩೫೦
ರಾಮರಾಯನಾಯಕ ೪೪೦
ರಾಮರಾಯಭೂಷಣ(ಭಟ್ಟಮೂರ್ತಿ) ೫೫
ರಾಮಲಿಂಗ ೪೬೪
ರಾಮಸಮುದ್ರ ೨೭೧,೪೬೧
ರಾಮಸ್ವಾಮಿ ದೀಕ್ಷಿತ ೧೩೩,೧೩೫
ರಾಮಾನುಜಕೂಟ ೨೯೫,೨೯೬,೩೨೪
ರಾಮಾನುಜಾಚಾರ್ಯ ೨೪೨,೩೫೦,೩೮೫,೩೯೫,೪೨೨
ರಾಮೇಂದ್ರ ೩೮೪
ರಾಮೇಶ್ವರ ೧೪,೩೩,೩೬,೭೨,
೨೧೮,೨೬೯,೩೫೫,೪೨೫
ರಾಯಚೂರು ೨೪,೩೯-೪೩,
೪೭-೫೧,೨೦೬,೨೦೯,೨೧೮
ರಾಯದುರ್ಗ ೨೭೭,೪೪೧
ರಾಯನಾಯಕ ೭೫
ರಾಯರಸ ಒಡೆಯ ೧೦೦
ರಾಯರೇಖಾ ೧೭೮,೧೭೯,೧೮೩,೨೨೦
ರಾಯಲೇಖ ೧೬೯
ರಾಯವಾಚಕಮು ೪೪
ರಾಯಸಂ ಅಯ್ಯಪ್ಪರಸ ೪೪
ರಾಯಸದವರು ೩೦೪
ರಾವುತರು ೩೦೧
ರಾಷ್ಟ್ರಕೂಟರು ೩೮೯,೩೯೧
ರಾಷ್ಟ್ರೀಯ ಪ್ರವೃತ್ತಿ ೧
ರಿಪ್ಲಿ ೨೪೧
ರುದ್ರಗಣ ೪೪೯
ರುದ್ರಪಟ್ಟಣ ೪೪೯
ರೂಪಣ್ಣ ಒಡೆಯ ೧೦೦
ರೆಡ್ಡಿಗಳು ೨೪೮
ರೆಡ್ಡಿ ನಾಯಕರು ೩೧
ರೆಡ್ಡಿರಾಜ್ಯ ೨೫
ರೆಬಯಲ್ ೭೩
ರೆಮ್ಮುದಿಡ್ಡಿ ೩೭೦
ರೆವರೆಂಡ್ ಹೆರಾಸ್ ೨೭೦
ರೇಖಾ-ಕುಳ ೧೮೧
ರೇಖಾ-ನಿಗದಿ ೧೭೮
ರೇಖಾ-ಸಿದ್ಧಾಯ ೧೮೧
ರೇಣುಕಾಚಾರ್ಯ ೪೬೨
ರೇಮಟ ವೆಂಕಟಯ್ಯ ೨೬೮
ರೇವಣ್ಣಭಟ್ಟ ೪೧೫,೪೧೯
ರೇವಣಾರಾಧ್ಯ ೪೧೬
ರೇವದಂಡ ೫೨
ರೇಷ್ಮೆ ಬಟ್ಟೆಗಳು ೨೧೭,೨೧೮
ರೈಸ್ ಬಿ.ಎಲ್. ೭೪,೭೭,೮೧,೧೭೭,
೧೮೦,೪೨೭,೪೨೯,೪೪೩,೪೬೪
ರೈಹಾನ್ ೨೭೯
ರೋಮ್ ೨೮೪
ರೋಮನ್ ಕ್ಯಾಥೋಲಿಕ್ ೩೫೨

ಲಂಡನ್ ೨೦೧
ಲಂಬಕರ್ಣರು ೩೬
ಲಕ್ಕಣ್ಣ ದಂಡನಾಯಕ(ಲಕ್ಕಣ್ಣ ದಂಡೇಶ) ೩೦,೬೭,
೧೦೧,೨೪೭,೩೫೧,೩೮೦-೩೮೪,೩೮೮
ಲಕಲೀಶ ಪಾಶುಪತರು ೩೪೮,೩೫೩
ಲಕ್ಷ್ಮಣ್ ತೆಲಗಾವಿ ೫
ಲಕ್ಷ್ಮಣ ಪಂಡಿತ ೪೧೯
ಲಕ್ಷ್ಮಪ್ಪನಾಯಕ ೪೩೫,೪೪೬-೪೮,೪೫೪
ಲಕ್ಷ್ಮಾಮ್ಮಣ್ಣ ೪೩೭
ಲಕ್ಷ್ಮೀಧರ ೨೭
ಲಕ್ಷ್ಮೀನಾರಾಯಣ ೪೨,೪೧೯
ಲಕ್ಷ್ಮೀಪತಿ ಚಿಕ್ಕುಪಾಧ್ಯಾಯ ೩೦೦,೩೧೭
ಲಕ್ಷ್ಮೀರಮಣ ದೇವಾಲಯ ೩೭೫
ಲಕ್ಷ್ಮೀವರಾಹದೇವಿ ೧೧೮
ಲಕ್ಷ್ಮೀಶ ೩೮೭
ಲಾಂಗ್‌ಹರ್ಸ್ಟ್ ಎ.ಎಚ್. ೩೬೪
ಲಾಟವಾಡಿ ೭೩
ಲಾಠಿ ೩೦೯
ಲಾರೆನ್ಸ್ ೨೮೯
ಲಾಲ್‌ಬಾಗ್ ೩೭೪
ಲಿಂಗಕವಿ ೩೮೪,೪೧೦
ಲಿಂಗಣಯತಿ ೩೩೭
ಲಿಂಗಣಯ್ಯ ೧೮೪,೩೧೭
ಲಿಂಗಣ್ಣ ೧೩೩,೪೩೧
ಲಿಂಗಣಾರಾಧ್ಯ ೩೮೨

ಲಿಂಗಪ್ಪನ ಮಠ ೯೫,೯೬
ಲಿಂಗಬಸವಿ ೩೨೩
ಲಿಂಗಮುದ್ರೆಕಲ್ಲು ೧೨೫
ಲಿಂಗರಸ ಒಡೆಯ(ಲಿಂಗಪ್ಪ) ೧೦೦,೧೦೩
ಲಿಂಗರಾಜಯ್ಯ ೧೦೯-೧೧೧,೧೧೪, ೧೧೫,೧೩೯,೩೦೮,೪೬೨,೪೬೩
ಲಿಂಗಾಚಾರಿ ೧೩೮
ಲಿಂಗಾಯತರು(ವೀರಶೈವರು) ೨೪೬,೨೪೭,೨೬೧
ಲಿಂಗಯುತರು(ಶೈವರು) ೩೪೯
ಲಿಂಗೇಗೌಡ ೩೦೦
ಲಿಪಿಕ ೩೦೦
ಲಿಪಿಕರು ೩೧೭
ಲಿಪಿಕಾರ ೩೦೨
ಲೆಕ್ಕಪತ್ರ ತಜ್ಞ ೩೦೧
ಲೆಕ್ಕಿಗರು ೩೦೨
ಲೆಪ್ಪವರಸ ೩೦೦
ಲೊಲ್ಲಲಕ್ಷ್ಮೀಧರ ೪೧೮
ಲೋಕಮೂಢತೆ ೨೫೫
ಲೋಹಕಾರರು ೨೧೫
ಲೋಹಗಳು ೨೧೪

ವಂಕಿನಿ ೮೪
ವಚನ ಚಳವಳಿ ೩೫೦
ವಚನಸಾಹಿತ್ಯ ೩೮೨,೩೮೫
ವಜ್ರಕುರೂರು ೨೧೪,೨೧೮
ವಡಕರ್ರೈನಾಡು ೧೧೨
ವಡಗಲೈ(ಉತ್ತರದವರು) ೨೪೩
ವಡ್ಡರು ೨೪೭
ವಡ್ಡವ್ಯವಹಾರಿ ೧೬೦
ವರ್ಣಧರ್ಮ ೨೪೨,೩೧೬
ವಣಿಕಸಂಘ ೨೯೬,೩೦೧
ವತ್ತಲು ೪೬೧
ವರ್ತಕರ ಸಂಘಗಳು ೨೨೧-೨೨೩
ವರ್ತೂರು ೪೪೪
ವರ್ತೆಮಾ ೧೫೬
ವರ್ಧಮಾನ ಬಸದಿ ೧೨೯
ವಧುದಕ್ಷಿಣೆ(ತೆರಾ) ೨೫೮,೩೨೨
ವನವಸದುರ್ಗ ೮೯,೯೬
ವರಂಗಲ್ಲು ೧೩,೨೩,೨೯,೩೮,೪೧,೪೨,೨೦೬
ವರಂಗಲ್ಲು ಕಾಕತೀಯರು ೧೧
ವರಕೋಡು ೨೯೫
ವರದಣ್ಣನಾಯಕ ೨೯
ವರದರಾಜದೇವ ೬೭
ವರದರಾಜಾಚಾರ್ಯ ೪೧೬
ವರದಾಂಬಿಕಾ ಪರಿಣಯ ೩೮೦
ವರದಾಂಬಿಕೆ ೪೨೫
ವರದಾಚಾರ್ಯ ೪೧೫
ವರದಾದೇವಿ ೪೮
ವರಹ ೧೭೫,೨೧೦,೩೦೨
ವಲ್ಲಭದೇವ ಒಡೆಯ ೧೦೦
ವಸಾಹತುಶಾಹಿ ಪ್ರವೃತ್ತಿ ೧
ವಸಿಷ್ಠ ೩೨೦
ವಸುಧಾರೆ ೪೩೫
ವಳಲು ೧೩೦
ವಾಜಪೇಯ ಯಾಗ ೩೧೭
ವಾಣಿಯಗೆರೆ ೬೮
ವಾದಿಯರಪುರ ೧೧೫
ವಾದಿರಾಜತೀರ್ಥ ೩೫೦
ವಾದಿರಾಜರು ೩೮೨
ವಾಮನಭಟ್ಟ ೪೧೪,೪೨೧
ವಾಮನಮುದ್ರೆ(ಕಲ್ಲು) ೧೨೫,೧೬೭
ವಾರಣಾಸಿ ೧೮,೨೦
ವಾರಸುದಾರಿಕೆ ೨೯೭,೨೯೮
ವಾಲ್ಮೀಕಿ ಗೋತ್ರ ೮೦
ವಾಸ್ಕೋಡಿಗಾಮ ೩೯,೨೩೦
ವಾರಿ ಸಂಘಗಳು ೨೦೫
ವ್ಯಾಸಕೂಟ ೨೪೮,೩೫೧
ವ್ಯಾಸತೀರ್ಥ ೩೫೦,೪೨೨
ವ್ಯಾಸರಾಯರು ೨೫೧,೩೮೦,೩೮೧,೩೮೯,೪೧೬
ವಿಕ್ರಮರಾಜ ೨೯೯
ವಿಕ್ರಮರಾಯ ೨೭೩
ವಿಕಾರ್ (Vicar) ೨೬೨
ವಿಘ್ನೇಶ್ವರ ೧೬೫,೧೬೭
ವಿಚಾರದ ಚಾವಡಿ ೩೦೩
ವಿಜಯ ೧೧೧
ವಿಜಯಣ್ಣ ೩೮೩
ವಿಜಯದಾಸರು ೩೫೧
ವಿಜಯಧ್ವಜ ತೀರ್ಥರು ೪೧೬
ವಿಜಯಪ್ಪ ಒಡೆಯ ೧೦೧
ವಿಜಯಬಾಹು ೪೩
ವಿಜಯಭೂಪತಿ ೨೮
ವಿಜಯರಾಯ ೨೮
ವಿಜಯವಾಡ ೪೧
ವಿಜಯವಿಠಲ ೩೫೧

ವಿಜಯಿಂದ್ರರು ೪೧೮
ವಿಟ್ಟರಸ ಒಡೆಯ ೧೦೧,೧೦೩,೧೦೫
ವಿಠ್ಠಲ ೪೯
ವಿಠೋಬ ೩೫೧
ವಿದ್ಯಾತೀರ್ಥ(ವಿದ್ಯಾಶಂಕರ) ೩೪೯
ವಿದ್ಯಾತೀರ್ಥ ಶ್ರೀಪಾದರು ೧೮,೨೦
ವಿದ್ಯಾನಂದ ೩೫೧
ವಿದ್ಯಾಮಾಧವ ಸೂರಿ ೩೮೭,೪೧೭,೪೧೮
ವಿದ್ಯಾರಣ್ಯರು ೨,೮,೧೬-೨೦,೨೪,೫೮,
೨೪೩,೩೪೯,೩೫೪,೩೮೨,೩೮೬,೩೮೭,೪೧೪-೪೨೫
ವಿದ್ಯಾರಣ್ಯ ಶ್ರೀಪಾದರು ೨೦
ವಿದ್ಯಾರಣ್ಯ ಸಂಪ್ರದಾಯ ೧೨
ವಿದ್ಯಾಸಾಗರ ೪೨೩
ವಿದೇಶ ನೀತಿ ೩೧೧
ವಿದೇಶ ವ್ಯಾಪಾರ ೨೧೬
ವಿಧವಾ ಪುನರ್ವಿವಾಹ ೨೪೩
ವಿಧವಾ ವಿವಾಹ ೨೪೭,೨೫೮
ವಿನಾಯಕದೇವ ೨೩
ವಿನಿಮಯ(ಬಾರ್ಟರ್)ವ್ಯವಸ್ಥೆ ೨೦೩
ವಿನುಕೊಂಡ ೩೩,೪೧,೨೭೮
ವಿನ್ಸೆಂಟ್ ಸ್ಮಿತ್ ೧೬೫,೧೬೬
ವಿಪ್ರವಿನೋದಿಗಳು ೨೪೪,೨೪೮
ವಿಪಿಕರು ೩೨೮
ವಿಭೂತಿ ಒಡೆಯ ೧೨೩
ವಿರಕ್ತಮಠ ೯೫,೨೯೫
ವಿರಕ್ತ ತೋಂಟದಾರ್ಯ ೩೮೬
ವಿರುಗಪ್ಪ ದಂಡನಾಯಕ ೯೯,೧೦೦
ವಿರುಪನಾಯಕ ೪೪೭,೪೪೮,೪೫೪
ವಿರೂಪರಾಜ ೩೮೪
ವಿರೂಪಾಕ್ಷ ೧೬,೨೦,೩೪-೩೬,೮೦,೩೫೪
ವಿರೂಪಾಕ್ಷ ಒಡೆಯ ೧೦೧
ವಿರೂಪಾಕ್ಷದೇವ ೨೨
ವಿರೂಪಾಕ್ಷ ಬಲ್ಲಾಳ ೨೧
ವಿರೂಪಾಕ್ಷ ಪಂಡಿತ ೩೮೧,೩೮೬
ವಿಲಿಯಂ ಹೋರ್ ೨೩೨
ವಿಶ್ವನಾಥ ೪೨೪
ವಿಶ್ವನಾಥಪುರ ೨೯೫,೪೦೮
ವಿಶಾಖಪಟ್ಟಣ ೨೧೯
ವಿಶಾಲಾಕ್ಷ ಪಂಡಿತ ೩೦೦,೩೧೭,೪೬೨
ವಿಶ್ವಾಮಿತ್ರ ೩೨೦
ವಿಶಿಷ್ಟಾದ್ವೈತ(ದರ್ಶನ) ೨೪೩,೩೫೦,೩೮೫,೪೧೦
ವಿಷ್ಣು ಬಸವಿ ೩೨೩

ವಿಷ್ಣುವರ್ಧನ ೨೬೫
ವಿಷ್ಣುಸೂರಿ ೪೧೮
ವೀರ ಇಮ್ಮಡಿ ಚಿಕ್ಕವೀರಒಡೆಯ ೧೨೪
ವೀರಕಂಪಣರಾಯ ೩೯೨
ವೀರಗಲ್ಲು ೧೧೬,೧೨೮
ವೀರಚಿಕ್ಕರಾಜ ಒಡೆಯರ್ ೧೨೧,೪೫೯
ವೀರಣ್ಣ ೪೫೩
ವೀರಣಾಚಾರ್ಯ ೪೫೩
ವೀರಣ್ಣಾರಾಧ್ಯ ೪೧೬
ವೀರನಂಜರಾಜ ಒಡೆಯ ೧೨೩,೧೨೫,೪೫೮
ವೀರನರಸಿಂಹ ೩೯,೪೦,೪೬,೩೭೯,೪೫೫,೪೫೬
ವೀರನರಸಿಂಹ ಶ್ರೀಪಾದರಾಜ ೩೮೫
ವೀರಪ್ಪಒಡೆಯ ೪೫೬,೪೫೯
ವೀರಪ್ಪನಾಯಕ ೨೬೯,೪೬೦
ವೀರಬಣಜಿಗರು ೨೨೬
ವೀರಭದ್ರ(ಗಜಪತಿ) ೨೭,೩೧,೪೧,೪೨
ವೀರಭದ್ರ ಆರಾಧಕರು ೩೪೯
ವೀರಭದ್ರದುರ್ಗ ೨೭೭-೨೭೯
ವೀರಭದ್ರನಾಯಕ ೫೬,೧೨೫,೨೯೬-೩೦೦,
೩೧೭,೪೨೯,೪೩೦,೪೩೬,೪೪೦,೪೫೯
ವೀರಭದ್ರರಾಜ ೩೮೪
ವೀರಮಲ್ಲಪ್ಪ ೨೮
ವೀರಮಲ್ಲರಾಜ ೧೨೧
ವೀರಮ್ಮಾಜಿ ೨೬೧
ವೀರಯ್ಯ ೪೫೪
ವೀರರಗುಡಿ ೧೨೮
ವೀರರಾಜಯ್ಯ ೩೧೧,೪೬೧
ವೀರವ್ವನಾಗತಿಹಳ್ಳಿ ೪೪೨
ವೀರವಿಜಯ ೨೮
ವೀರಶೈವ ಕವಿಗಳು ೩೮೪
ವೀರಶೈವ ಧರ್ಮ ೯,೫೮,೮೭,೧೨೯,೨೫೮,೨೯೫,
೩೨೮,೩೩೪,೩೪೮,೩೮೧,೪೦೯,೪೧೬,೪೨೭
ವೀರಶೈವ ಪರಂಪರೆ ೪೧೩
ವೀರಶೈವ(ಆರಾಧ್ಯ) ಬ್ರಾಹ್ಮಣ ೩೦೦
ವೀರಶೈವ ಮಠ ೧೨೪,೨೯೬,೪೬೨
ವೀರಶೈವರು ೯,೧೧೫,೨೪೩,೩೪೯
ವೀರಸೆಟ್ಟಿ ೩೧೯
ವೀರಸೋಮಣ್ಣ ೧೨೦-೧೨೫
ವೀರಹನುಮಪ್ಪ ಒಡೆಯ ೧೨೦
ವೀರಹನುಮಪ್ಪನಾಯಕ ೪೨೯,೪೫೯
ವೀರಾಂಬಪುರ ೪೦೮
ವೀರಾಜಮ್ಮಣ್ಣಿ ೨೬೭,೪೩೭,೪೩೯,೪೪೦

ವೀರೇಗೌಡ ೮೩
ವೃತ್ತವಿಲಾಸ ೨೫೪,೨೫೬,೨೫೭
ವೃಷಭಾವತಿ ೪೪೪
ವೃಷಭೇಶ್ವರ ೮೭
ವೆಂಕ ೪೧೦
ವೆಂಕಟ ೫೬,೨೭೧
ವೆಂಕಟ ಜಗ್ಗರಾಯ ೫೬
ವೆಂಕಟ ತಾತಾಚಾರ್ಯ ೪೬
ವೆಂಕಟಪತಿ ೫೫,೫೬,೮೪,೧೦೯,೧೧೦, ೨೬೭,೨೬೯,೩೩೮,೪೩೧,೪೪೭
ವೆಂಕಟಪ್ಪನಾಯಕ ೭೬,೨೩೨,೨೯೫-೨೯೭,೩೦೪, ೪೩೫-೪೪೦,೪೪೬-೪೪೮
ವೆಂಕಟರತ್ನಂ ಎ.ವಿ. ೨
ವೆಂಕಟರಮಣಯ್ಯ ಎನ್. ೨,೩೮,೬೩, ೨೨೪,೨೪೫,೨೬೯
ವೆಂಕಟಾದ್ರಿ ೪೯,೫೧-೫೫,೧೦೭, ೨೭೩,೩೯೬,೪೪೦,೪೫೦-೪೫೪
ವೆಂಕಟಾರ್ಯ ೪೦೧
ವೆಂಕಟೇಶ ೧೩೩
ವೆಂಕಟೇಶ್ ಜೋಯಿಸ್ ೫
ವೆಂಕಾಮಾತ್ಯ(ವೆಂಕಪ್ಪಯ್ಯ) ೧೩೫, ೧೩೯-೧೪೧,೩೨೩,೩೯೧
ವೆಂಗಿನಾಡು ೪೧
ವೆನಿಸ್ ೨೧೯
ವೆಲ್ಲಮಡುಗ ೨೨೨
ವೆಲುಗೋಟಿ ಕಸ್ತೂರಿರಂಗಪ್ಪ ೫೫
ವೆಲ್ಲೂರು ೫೬,೨೭೪-೨೮೦
ವೆಲ್ವೆಟ್ ಬಟ್ಟೆ ೨೧೭-೨೨೦
ವೇಂಕಟನಾಥ ೪೨೧-೪೨೫
ವೇಂಠೆ ೩೦೫
ವೇಣುಪುರಿ ೧೩೯
ವೇದಾಂತ ದೇಶಿಕರು ೨೪೩,೩೫೦,೪೨೫
ವೇದೋಜಿ ೨೭೬
ವೇಮಯ್ಯ ೨೬
ವೇಲಮ ಅನಪೋತನಾಯುಡು ೨೫
ವೇಲಮನಾಯಕ ೨೬,೪೧
ವೇಲಮರು ೨೫-೩೧
ವೇಲುಗೋಟವಾರಿ ವಂಶಾವಳಿ ೨೫,೨೯
ವೇಶ್ಯೆಯರು(ದಾಸಿಯರು) ೬,೨೫೮,೨೫೯
ವೈಜಯಂತಿ ೨೫೪
ವೈದಿಕರು ೧೨೯,೨೪೩,೨೫೪, ೩೮೨-೩೮೫,೩೯೫,೪೧೩
ವೈಶ್ಯರು ೧೩೭,೧೩೯,೨೨೬,೨೪೬,೩೧೬,೩೧೮
ವೈಶಾಖ(ಕಾರಬೆಳೆ) ೧೨೫
ವೈಷ್ಣವಧರ್ಮ ೧೧೫,೧೨೯,೧೬೭, ೨೫೭,೨೯೫,೩೪೮,೩೪೯,೩೫೩
ವೈಸರಾಯ್ ೩೦೫
ವೊಕ್ಕಲಿಗರು ೩೧೯
ವೊತ್ತೂರು ೭೭
ವೊದುವಲು ೧೨೭
ಶಂಕರದೇವ ಒಡೆಯ ೯೯,೧೦೧-೧೦೪,೩೮೧
ಶಂಕರಾಚಾರ್ಯರು ೮,೧೮,೨೪೨,೪೧೫,೪೨೨
ಶಂಕರಾನಂದರು ೧೭
ಶಂಖಚಕ್ರಕಲ್ಲು ೧೨೫
ಶಂಖಮುದ್ರೆ ೧೬೭
ಶಂಬುವರಾಯ ೨೮
ಶಕ್ತಿವಿಶಿಷ್ಟಾದ್ವೈತ ೪೧೬
ಶಕ್ತಿವಿಶಿಷ್ಟಾದ್ವೈತಿಗಳು ೩೪೯
ಶತಘ್ನಿ ೩೦೯
ಶತಲೇಖಿನಿ ಕಲೆ ೨೫೮
ಶಬರರು ೭೩
ಶ್ಯಮಂತಕಮಣಿ ೪೨೧
ಶ್ರವಣಬೆಳಗೊಳ ಶಾಸನ ೨೫೭,೨೬೧,೨೯೫,೩೫೧
ಶಾಂಡಿಲ್ಯ ೩೨೦
ಶಾಕ್ತಧರ್ಮ ೧೨೯
ಶಾನಭೋಗ ೩೦೫,೩೧೭,೩೨೫
ಶಾಲ್ಯಂ(ಸೇಲಂ) ೨೮೪
ಶಾಹಜಿ ೨೭೫,೨೭೬
ಶಾಹಿ ಸುಲ್ತಾನರು ೪೨೮
ಶಿಗ್ಗಾಂವಿ ೧೬೨
ಶಿತಬ್‌ಖಾನ್(ಸೀತಾಪತಿ) ೪೧,೪೨
ಶಿರಸ್ತೆದಾರ ೩೦೨,೩೦೫
ಶಿಲ್ಪಿಗಳು ೧೩೮
ಶಿವಗಂಗೆ ೨೭೭,೩೭೪,೩೯೪,೪೪೪,೪೪೫
ಶಿವತತ್ತ್ವ ರತ್ನಾಕರ ೩೦೦
ಶಿವನಸಮುದ್ರ ೪೧,೭೦,೭೭,೧೧೪,೧೨೧, ೧೨೨,೨೦೬,೨೦೯,೨೧೮,೪೫೪,೪೫೬
ಶಿವನಸಮುದ್ರ ಕೋಟೆ ೩೭
ಶಿವನಸಮುದ್ರ ದ್ವೀಪ ೧೧೯
ಶಿವಪ್ಪನಾಯಕ ೧೭೮-೧೮೨,೨೮೦,೨೮೧,೨೯೫ ೨೯೯,೩೦೪-೩೦೭,೩೩೬,೩೭೩, ೪೦೭-೪೦೯,೪೩೪,೪೩೫,೪೪೦,೪೪೮-೪೫೧
ಶಿವಪ್ಪನಾಯಕನ ಅರಮನೆ ೫

ಶಿವಪ್ಪನಾಯಕನ ಶಿಸ್ತು ೧೭೯,೪೩೮
ಶಿವಪುರ ೧೨೦
ಶಿವಮೊಗ್ಗ ೫,೭೨,೭೬,೧೫೫,೧೫೮,
೧೭೭,೨೨೫,೩೩೩,೩೭೩,೪೨೬
ಶಿವಯೋಗ ೩೪೯
ಶಿವಶರಣರು ೩೮೫
ಶಿವಸೂರ್ಯ ೪೨೨
ಶಿವಳ್ಳಿ ೧೦೬
ಶಿವಾಜಿ ೨೩೪,೨೮೩,೨೮೫,೨೮೭,೩೧೨,೪೩೫
ಶಿಸ್ತು ನಿಗದಿ ೧೭೮
ಶಿಷ್ಟ ಸಂಸ್ಕೃತಿ ೧೧೭
ಶಿಕ್ಷಣ ೪೩೯
ಶೀಲವಂತ ಪರಮಪ್ಪ ವಿರಕ್ತ ೯೫
ಶ್ರೀಕಂಠರಾಜ ೪೪೮,೪೫೦
ಶ್ರೀಕಾಂತ ಶೈವಾಗಮ ೩೪೮,೩೪೯
ಶ್ರೀಕೂರ್ಮಂ ೨೧೮
ಶ್ರೀಕೃಷ್ಣದೇವರಾಯ ೪೧೭,೪೨೧
ಶ್ರೀಕೃಷ್ಣದೇವಾಲಯ ೨೫೧
ಶ್ರೀಗುರು ಸಿದ್ಧಾರಾಮೇಶ್ವರ ೮೭
ಶ್ರೀಧರದೇವ ೩೮೭
ಶ್ರೀನಾಥ ೧೬,೩೨,೩೮೯,೩೯೫
ಶ್ರೀನಿವಾಸ್ ಎಂ.ವಿ. ೫
ಶ್ರೀನಿವಾಸ ೪೧೦
ಶ್ರೀನಿವಾಸಯ್ಯ ೩೦೦
ಶ್ರೀಪತಿಪಂಡಿತ ೪೧೬
ಶ್ರೀಪಾದರಾಯ(ಜ)ರು ೩೫೧,೩೮೦,೩೮೧,೩೮೫
ಶ್ರೀರಂಗ ೨೩,೩೮,೫೬,೧೩೩,೨೬೭,
೨೭೫,೨೭೭-೨೮೩,೩೧೧,೩೬೦,
೪೨೮,೪೩೪,೪೫೧,೪೬೩
ಶ್ರೀರಂಗಂ ೫೫,೨೪೩,೨೯೬
ಶ್ರೀರಂಗಂ ದೇವಾಲಯ ೨೩,೪೬
ಶ್ರೀರಂಗಪಟ್ಟಣ ೯,೩೬,೪೧,೫೫,೫೬,೮೫,
೯೨,೧೧೧,೧೨೭,೧೩೦,೧೩೩,೧೩೭,೧೩೯,
೧೭೬,೨೦೬,೨೦೯,೨೧೮,೨೪೯,೨೬೪,೨೬೭-
೨೭೦,೨೭೩,೨೭೫,೨೭೭,೨೮೧,೨೮೫,೨೮೯,
೨೯೦,೨೯೬,೨೯೮,೩೦೧-೩೦೩,೩೦೭,೩೧೦,೩೧೧,
೩೨೨,೩೩೦-೩೩೭,೩೭೫,೩೯೩,೩೯೪,೩೯೯,೪೦೬,
೪೨೫,೪೩೦,೪೩೪,೪೩೭,೪೪೫-೪೪೯,೪೫೫-೪೬೪
ಶ್ರೀರಂಗರಾಯ ೮೪,೮೫,೧೧೦
ಶ್ರೀರಾಮಾನುಜಾಚಾರ್ಯರು ೩೩೧
ಶ್ರೀಲಂಕಾ ೩೧,೩೬
ಶ್ರೀವತ್ಸ ೩೨೦
ಶ್ರೀವಾದಿರಾಜ ೪೧೮
ಶ್ರೀ ವೆಂಕಟೇಶ್ವರಸ್ವಾಮಿ ದೇವಾಲಯ ೮೭
ಶ್ರೀವೈಷ್ಣವ ದೇವಾಲಯ ೪೬
ಶ್ರೀವೈಷ್ಣವ ಧರ್ಮ ೧೪೦,೨೫೬,೨೯೫,೩೦೦,೩೧೭,
೩೩೫,೩೪೮,೩೫೦,೩೮೯,೩೯೩,೪೨೭
ಶ್ರೀವೈಷ್ಣವರು ೨೪,೪೬,೫೪,೧೨೩
ಶ್ರೀಶೈಲ (ಪರ್ವತ) ೨೫,೨೬,೪೬
ಶ್ರೀಶೈಲ ಆರಾಧ್ಯ ಹೆಚ್. ೫
ಶ್ರೀಶೈಲನಾಥ ೪೧೯
ಶ್ರೀಸಾಯಣ ೪೧೪-೪೧೯
ಶ್ರೀಹರ್ಷ ೪೨೧
ಶೂದ್ರ ನಿವೇಶನ ೧೮೭
ಶೂದ್ರರು ೧೩೯,೧೬೪,೧೬೫,೨೪೬,
೨೪೮,೩೨೧,೩೨೨,೨೪೫
ಶೂದ್ರಾನ್ನ ೨೫೨
ಶೃಂಗಾರಮ್ಮ ೩೯೧,೩೯೫,೩೯೬
ಶೃಂಗೇರಿ ೧೮,೩೨,೫೮,೧೬೪,
೨೬೯,೩೩೭,೩೪೯,೩೫೮
ಶೃಂಗೇರಿ ಮಠ ೭,೮,೧೮-೨೦,
೧೮೧,೨೯೫,೩೦೬
ಶೃಂಗೇರಿ ಮಠದ ಗುರುಪರಂಪರೆ ೧೫,೧೭
ಶೃಂಗೇರಿಯ ಧರ್ಮಗುರುಗಳು ೨೨
ಶೃಂಗೇರಿ ಶಾಸನ ೮,೧೫
ಶೆಟ್ಟಿಕಾರರು ೧೦೫
ಶೆಟ್ಟಿಕೆರೆ ೮೯,೯೬
ಶೆಟ್ಟಿಗಳು ೧೧೬,೧೨೪
ಶೈವ ಆಲಯ ೧೨೮
ಶೈವಧರ್ಮ(ಪಂಥ) ೧೨೯,೧೬೭,
೨೯೫,೩೪೮,೩೫೩
ಶೈವ ಪಂಥೀಯರು ೩೫೦
ಶೈವ ಪರಂಪರೆ ೮೭,೪೧೩
ಶೈವ-ವೈಷ್ಣವ ದೇವಾಲಯ ೮೭
ಶೈವ ಸಿದ್ಧಾಂತಿಗಳು ೩೪೮,೩೪೯
ಶ್ರೇಣೀಕರಣ ೩೧೯
ಶ್ವೇತಾಂಬರ ೨೬೧
ಶ್ವೇತಾಂಬರಿಗಳು ೩೫೧
ಶೋರಾ(ಲಾ)ಪುರ ೪೩,೨೦೬

ಷಡಕ್ಷರದೇವ ೧೧೪,೧೧೬
ಷಡಕ್ಷರಯ್ಯ ೩೦೦,೩೧೭,೪೬೨
ಷಣ್ಮುಖಂ ಪಿ. ೩
ಷಹಜಹಾನ್ ೨೭೪
ಷಾಜಿ ೨೮೯

ಸಂಕಣ್ಣನಾಯಕ ೪೯
ಸಂಗನಬಸಪ್ಪ ೪೧೦
ಸಂಗಪ್ಪಗೌಡ ೮೩
ಸಂಗಪ್ಪನಾಯಕ ೪೩೨
ಸಂಗಮ(ದೇವ) ೧೯,೨೧,೯೪,೩೭೯,೪೨೩
ಸಂಗಮ ರಾಜವಂಶ ೨೫೬
ಸಂಗಮವಂಶದವರು ೨೨,೩೪,೩೫,೩೪೯,
೩೫೨,೩೫೪,೩೮೮,೪೫೫
ಸಂಗಮ ಸಹೋದರರು ೮,೧೩
ಸಂಚಾರಿ ನ್ಯಾಯಾಲಯ ೩೦೬
ಸಂಚಿಯ ಹೊನ್ನಮ್ಮ ೧೧೭,೩೨೨
ಸಂಜರ್ ಖಾನ್ ೩೩
ಸಂತಾಜಿ ಘೋರ್ಪಡೆ ೪೪೧
ಸಂತೆಗಳು ೨೦೬,೨೨೫
ಸಂತೆಬೀದಿ ೨೨೮
ಸಂತೆಬೆನ್ನೂರು ೪೩೬
ಸಂಪಾದನೆ ಮಠ ೯೫
ಸಂಪಿಗೆ ೪೩೪
ಸಂಬಾರ ವಸ್ತುಗಳು ೨೧೭,೨೧೯,೨೨೬,೨೩೧,೨೩೩
ಸಂಬುವರಾಯ ೩೫
ಸಂಭಾಜಿ ೨೮೫,೨೮೬
ಸಂಸ್ಕೃತ ಸಾಹಿತ್ಯ ೧೧೬,೧೩೫,೩೮೦,೪೧೨
ಸಂಸ್ಕೃತೀಕರಣ ೩೧೮
ಸಕ್ಕರೆಪಟ್ಟಣ ೨೮೩,೪೩೫,೪೫೧
ಸಕಲೇಶಪುರ ೪೩೬
ಸಚಿವಾಲಯ ೩೧೦
ಸರ್ಜಪ್ಪರಾಜ ೮೫
ಸಣ್ಣಪ್ಪನಾಯಕ ೬೭
ಸತ್ಯಗಾಲ ೧೧೫,೩೨೯,೪೬೧
ಸತ್ಯನಾರಾಯಣ ಕೆ. ೫,೧೬
ಸತ್ಯಮಂಗಲ ೨೯೦
ಸತ್ಯವಧೂ ಸಾಂತ್ವನ ೩೮೦
ಸತಾರಾ ೨೦೬
ಸತಿಪದ್ಧತಿ ೩೨,೧೪೦,೨೪೯,೨೫೮,೨೬೦,೩೫೪
ಸದಮಂಗಲಂ ೨೮೪
ಸದಾರಣದೇವ ೧೦೧
ಸದಾಶಿವನಾಯಕ ೬೪,೭೪,೭೫,೯೮,೧೦೩,
೪೦೭,೪೦೮,೪೩೮,೪೪೦,೪೪೧
ಸದಾಶಿವರಾಯ ೪೬,೪೮,೫೫,೬೪,೬೮,
೭೩,೭೮,೮೪,೯೮,೧೦೭,೧೦೯,
೩೦೪,೩೫೦,೩೬೧,೩೭೯,೩೯೩,೪೦೮,೪೩೪
ಸದಾಶಿವಸಾಗರ ೪೦೮
ಸರ್ದಾರ ೨೪೭
ಸಪ್ತಮಾತೃಕಾ ೧೨೮
ಸಪ್ಪೇಂದ್ರ ೮೫
ಸಬಗಡಿ ಓಬಣ್ಣನಾಯಕ ೮೦
ಸಬ್ಬುನೀಸ(ಸಬ್ನೀಸ್) ೩೧೦
ಸಭಾಪತಿ ಸ್ವಯಂಭು ೪೫೩
ಸಮಯವರಂ ೨೩
ಸಮಾಜ ೨೪೧
ಸಮ್ಮುಖದ ಚಾವಡಿ ೩೦೪
ಸಯ್ಯದ್ ಅಲಿ ೨೭
ಸರದೇಶಮುಖ ೨೮೯
ಸರಿಕಲ್ಹೆ ೨೨೫
ಸಲಕರಾಜು ತಿರುಮಲ ೪೭
ಸಲಗೆ ೧೬೯
ಸಲಬತ್ ಖಾನ್ ೪೩೪
ಸವಣೂರು ೧೬೯
ಸವರಂ ಚಿನ್ನಪ್ಪನಾಯಕ ೫೫
ಸರ್ವಜ್ಞ ೧೫೩
ಸರ್ವಮಂಗಳ ಅಮ್ಮ ೧೩೮
ಸರ್ವಮಾನ್ಯ ೧೨೩
ಸಹಗಮನ ೨೬೦
ಸ್ವರ್ಗಲೋಕ ೨೬೦
ಸ್ವಯಂಭೂನಾಥ ೪೨೨
ಸ್ವಯಮಾಚಾರ್ಯರ್ ೨೪೩
ಸ್ಥಳಸುಂಕ ೧೨೭
ಸಾಂಬಳ್ಳಿ ೨೭೬
ಸಾಗರ ೪೩
ಸಾಗರೋತ್ತರ ವಾಣಿಜ್ಯ ೨೦೯,೨೨೯
ಸಾಮಂತನಾಯಕರು ೯೮,೪೨೭
ಸಾಮಾಜಿಕ ಸ್ತರೀಕರಣ ೨೪೨
ಸಾಯಣ-ಮಾಧವ ೩೯೫,೪೦೯
ಸಾಯಣಾಚಾರ್ಯರು ೧೭,೨೪,೩೮೨,
೩೮೭,೪೧೦,೪೨೫
ಸಾಲಿಗ್ರಾಮ ೩೦೦,೨೪೨
ಸಾಲಿನಾಯಕ ೮೯,೪೩೨,೪೩೩
ಸಾಲಿಯಾನರು ೨೬೦
ಸಾಲುಮೂಲೆ-ಬಣಜಿಗ ೭,೨೨೬,೨೨೮
ಸಾಲೂರುಮಠ ೧೨೨
ಸಾಲೆತಿರುಮಲ ಮಹಾರಾಯಪುರ ೩೬೧
ಸಾಲೆತೊರೆ ಬಿ.ಎ. ೨,೧೨,೨೪೬
ಸಾವನದುರ್ಗ ೩೭೪,೪೪೫
ಸಾಸಲಯ್ಯ ೧೧೬

ಸಾಳುವ ಗುಂಡರಾಜ ೪೪
ಸಾಳುವ ಗೋತಿಪ್ಪಭೂಪಾಲ ೪೧೭
ಸಾಳುವ ಗೋವಿಂದರಾಜು ೧೨೧
ಸಾಳುವ ತಿಪ್ಪ ೩೫
ಸಾಳುವ ತಿಮ್ಮರಸ ೪೧-೪೪,೭೫
ಸಾಳುವ ನರಸಿಂಹ ೩೩,೩೪,೩೭,೬೭,
೩೮೦,೩೯೨,೪೨೨,೪೫೫
ಸಾಳುವನಾಯಕ ೬೬
ಸಾಳುವಮಂಗ ೨೩
ಸಾಳುವ ರಾಮಚಂದ್ರ ೩೩
ಸಾಳುವರು ೩೫
ಸಾಳುವ ವಂಶ ೩೫
ಸ್ಮಾರ್ತ ಬ್ರಾಹ್ಮಣರು ೨೪೨,೨೪೩,೩೦೦,೩೧೭
ಸ್ಯಾನ್‌ಥೋಮ್ ೪೯
ಸ್ಯಾಮ್ಯುಯಲ್ ಹಂಟಿಂಗ್‌ಟನ್ ೧೦
ಸ್ವಾದಿ ೯೪
ಸ್ವಾಮಿಗುಡಿ ೧೧೮
ಸ್ವಾಮಿದೇವರ ಬಾಗಿಲು ೩೭೦
ಸ್ವಾಮಿದ್ರೋಹರ ಗಂಡನ ಕೊತ್ತಳ ೩೭೧
ಸ್ವಾಮಿನಾಥನ್ ಕೆ.ಡಿ. ೫,೧೭೮
ಸ್ವಾಮಿ ಭಾರತೀತೀರ್ಥರು ೧೫
ಸಿಂಗಣ್ಣ ಒಡೆಯ ೯೯
ಸಿಂಗಪಟ್ಟಣ ೧೬೦,೨೨೫,೪೪೯
ಸಿಂಗಮಭಟ್ಟ ೨೬
ಸಿಂಗರಸ ಒಡೆಯ ೧೦೧
ಸಿಂಗರಾಜ ೩೮೧,೩೮೪,೩೮೬
ಸಿಂಗರಾರ್ಯ ೩೩೧,೩೯೧,೩೯೫,೩೯೬,೪೫೮
ಸಿಂಗಳಾರ್ಯ ೨೭೩
ಸಿಂಗಾರದ ಹೆಬ್ಬಾಗಿಲು ೩೭೦
ಸಿಂಘುದೇವ ೪೬೦,೪೬೨
ಸಿಂಘುದೇವಭೂಪ (ದೇವಪ್ಪಗೌಡ) ೧೦೮
ಸಿಂಹನಂದಿಮುನಿ ೧೨
ಸಿಂಹಾಚಲ ೪೧,೨೧೮
ಸಿದ್ದನಂಜಾರ್ಯ ೯೩
ಸಿದ್ದಪ್ಪ ದಣ್ಣಾಯಕ ೧೦೧
ಸಿದ್ದಪ್ಪನಾಯಕ ೪೪೦
ಸಿದ್ದಲಿಂಗ ೩೮೩
ಸಿದ್ದವ್ವನದುರ್ಗ ೪೪೨
ಸಿದ್ದವ್ವನಹಳ್ಳಿ ೪೪೨
ಸಿದ್ಧ ೮೪
ಸಿದ್ಧಬಸವರಾಜದೇವ ೩೮೩
ಸಿದ್ಧರಾಮೇಶ್ವರ ೯೦,೯೪
ಸಿದ್ಧಲಿಂಗೇಶ್ವರ ೮೪,೯೨
ಸಿದ್ಧಾಪುರ ೮೨,೮೭,೮೪
ಸಿದ್ಧಾಪುರ ಕೋಟೆ ೮೮
ಸಿದ್ಧಾಯ ೧೮೮
ಸಿದ್ಧಿಗಳು ೨೪೧
ಸಿದ್ಧೇಶ್ವರ ೮೭
ಸಿನ್ನಾಮಿ ೨೭೭
ಸಿರಾ ೮೫,೨೭೫,೨೭೯,೨೮೦,೪೨೮
ಸಿರಾ ದುರ್ಗ ೨೮೭
ಸಿಲೋನ್ ೨೫,೩೦-೩೨,೪೩,
೪೯,೫೩, ೫೭,೨೦೮,೨೧೬,೨೧೯
ಸೀಗುರಿ(ಚಾಮರ) ೧೧೫
ಸೀಗೆವಳ್ಳಿ ೭೨
ಸೀತಾಪತಿ(ಶಿತಾಬ್‌ಖಾನ್) ೩೯
ಸೀರ‍್ಯ ೮೯
ಸೀರುನಾಡು ೨೪೩
ಸೀರುಮುತ್ತುಗಳು ೨೧೮
ಸೀಸರ್ ಫ್ರೆಡರಿಕ್ ೨೧೯
ಸುಂಕದ ಚಾವಡಿ ೩೦೩
ಸುಂದರ ಅ. ೪,೫
ಸುಕನಾಸಿ ೩೬೦
ಸುತ್ತುಬಾವಿ ೪
ಸುತ್ತೂರು ೯೩
ಸುತ್ತೂರು ಮಠ ೧೧೪
ಸುದತ್ತಮುನಿ ೧೨
ಸುಬ್ರಹ್ಮಣ್ಯ ಆರ್. ೩೮
ಸುಬ್ಬರಾಯಲು ವೈ. ೩
ಸುಬ್ಬಾಪಂಡಿತ ೧೩೮
ಸುಬೇದಾರ ೩೦೨
ಸುಮಾತ್ರ ೫೭,೨೦೮,೨೧೩,೨೧೬,೨೨೦
ಸುರಂಗ ೩೮೧
ಸುರತ್ರಾಣ(ಸುಲ್ತಾನ್) ೪೨೫
ಸುಲ್ತಾನರು ೮೩
ಸುವರ್ಣಾದಾಯ ೧೭೨
ಸುವರ್ಣಾವತಿ ನದಿ ೧೦೯
ಸುವ್ವಿಮಲ್ಲ ೯೫
ಸೂಂದಾ ೨೩೧
ಸೂರತ್ ೨೦೭,೨೩೧,೨೩೩
ಸೂರಪ್ಪನಾಯಕ ೪೫೪
ಸೂಳೆಗಾರಿಕೆ ೨೪೯,೩೨೩
ಸೆಜ್ಜ ೩೬೯
ಸೆಟ್ಟರ ಬೀದಿ ೩೧೯

ಸೆಟ್ಟಿಕೆರೆ ೪೩೧
ಸೆಟ್ಟಿಗಳು ೨೨೬
ಸೆಟ್ಟಿಗುಟ್ಟರು ೨೨೬
ಸೆವಂಡಿಕೋಟೆ ೧೩೨
ಸ್ಪೈಯಿನ್ ೫೬
ಸೇಂಟ್ ಥೋಮ್ ೩೫೨
ಸೇನಗುಂಡಲ ೧೧೫
ಸೇನಬೋವರು ೧೧೨,೧೮೦,೧೭೩,೧೭೪,೨೨೨,೩೦೬
ಸೇನಾದಳ ೩೦೯
ಸೇನಾಪತಿಗಳು ೩೧೦
ಸೇರುವೆಗಾರರು ೧೧೬
ಸೇಲಂ ೩೨೧,೪೫೫
ಸೇಲಿಗರು ೩೧೯
ಸೇವುಣರು ೨೧
ಸ್ಪೇನಿಯಾಡರ್ಸ್ ೩೩೯
ಸೈಮನ್ ಸೆಹಾಮ ೧೦
ಸೊನ್ನಲಗಿ ೮೩
ಸೊರಬ ೪೩೫
ಸೋಂದಾ ೨೩೩
ಸೋಮಣ್ಣ ಒಡೆಯ ೧೦೧,೪೫೯
ಸೋಮನಾಥ ೪೨೨
ಸೋಮಯದೇವರ ಕೊತ್ತಳ ೩೭೧
ಸೋಮಯ್ಯ(ಸೋಮೇಶ್ವರ) ೧೨೦,೧೨೧
ಸೋಮರಾಜಯ್ಯ ೩೨೯
ಸೋಮರಾಯ ಒಡೆಯ ೧೨೧,೪೫೫,೪೫೯
ಸೋಮವಾರದ ಬಾಗಿಲು ೩೭೦
ಸೋಮಶೇಖರನಾಯಕ ೮೫,೨೩೩,
೨೮೧,೩೦೭,೩೧೨,೪೦೮,೪೪೧
ಸೋಮಶೇಖರಪುರ ೪೦೮
ಸೋಮಸಾಗರ ೧೨೦,೪೫೯
ಸೋಮಹಳ್ಳಿ ೧೨೬
ಸೋಮಾಂಬೆ ೮೪
ಸೋಮೇಶ್ವರ ೧೨೧,೧೨೨
ಸೋಮೇಶ್ವರ ದೇವಸ್ಥಾನ ೯೬,೧೧೯,೩೬೦,೪೫೪
ಸೋಲಿಗರು ೨೪೧,೪೫೩
ಸೋಸಲೆ ೨೪೨,೨೪೩,೨೪೯
ಸೋಸಲೆ ರೇವಣಾರಾಧ್ಯ ೯೦,೯೩,೪೩೩

ಹಂಗಳ ೪೬೨
ಹಂದರಾಜ ತಿಮ್ಮನಾಯಕ ೫೫
ಹಂದಲಗೆರೆ ೨೮೪,೪೩೪
ಹಂಪರಸ ಒಡೆಯ ೧೦೧
ಹಂಪಾದೇವಿ ದಿಡ್ಡಿ ೩೭೦
ಹಂಪಾಪುರ ೩೨೬,೪೪೭
ಹಂಪೆ(ಪಿ) ೪,೯,೧೮-೨೨,೪೩,೫೪,೫೯,
೮೦,೮೩,೩೫೪,೩೬೩,೩೬೮,೩೮೫
ಹಂಪೆಯರಸ ೩೫೪
ಹಂಪೆಯ ವಿರೂಪಾಕ್ಷ ೧೫
ಹಂಸರಾಜಯ್ಯ ೨೭೯,೩೦೮
ಹಜರತ್‌ವಲಿ ೮೬
ಹಟ್ನಿ ೯೫
ಹಡಗಲಿ ೧೬೩
ಹಡಪದ ಗೌಟರಸ ೧೦೨
ಹಡಪದ ಮಾದರಸ ೧೦೩
ಹಡಪ ಬೈಯಪೇಂದ್ರನಾಯಕ ೬೮
ಹಡೆಯಾಲಗ್ರಾಮ ೧೨೨
ಹತ್ತಿಗುಡ್ಡ ೯೬
ಹತ್ತಿಯ ಸುಂಕ ೧೨೭
ಹದಿನಾಡು(ಯಳಂದೂರು) ೧೧೭,೧೨೧,
೧೩೦,೩೧೧,೪೨೮
ಹದಿನಾಡು ದೊರೆಗಳು ೧೦೮,೧೧೧-೧೧೬,೪೬೦,೪೬೨
ಹದಿನಾಡು ಮುದ್ದುರಾಜ ೧೧೬
ಹದಿನಾಲ್ಕನೇ ಲೂಯಿ ೨೮೪
ಹದಿಬದೆಯಧರ್ಮ ೩೨೨
ಹದಿಯಾ ಸುಲ್ತಾನಾ ೫೨
ಹನ್ಸಿಯಾಟಿಕ್ ಲೀಗ್ ೨೨೮,
ಹನುಮಂತಪ್ಪ ಒಡೆಯ ೧೧೯
ಹನುಮಪ್ಪನಾಯಕ ೩೧೧,೪೩೩
ಹನುಮಾನ್ ದೇವಾಲಯ ೧೭೧
ಹಮ್ಮೀರ ೩೩,೩೪
ಹಯವದನರಾವ್ ಸಿ. ೫,೧೭೦,೪೦೦,೪೦೨
ಹರತಿಕೋಟೆ ೯೧
ಹರದತ್ತಾಚಾರ್ಯ ೪೨೩
ಹರದನಹಳ್ಳಿ ೧೨೦,೨೭೧,೨೯೫,೩೩೫,೪೦೩,೪೫೮
ಹರದನಹಳ್ಳಿ ಮಠ ೧೧೦,೧೧೪
ಹರಪನಹಳ್ಳಿ ೩೩೭,೪೪೧
ಹರವೆಕೋಟೆ ೮೫,೧೨೦
ಹರಷೇಣ ೨೫೪
ಹರಳುಗಳು ೨೧೭
ಹರಿಣಾ ೩೫
ಹರಿಚಟ್ಟಿಗಳು ೨೬೦
ಹರಿದಾಸ ಆಂದೋಲನ ೮,೨೪೯
ಹರಿದ್ರಾ ನದಿ ೧೬೪
ಹರಿನರಸಯ್ಯ ೮೬

ಹರಿಪಂತ ಫಡಕೆ ೨೮೯
ಹರಿದಾಸರು ೯,೨೪೮,೩೫೦,೩೮೫,೩೮೭-೩೮೯
‘ಹರಿ-ಹರ’ ೩೫೪
ಹರಿಹರ ೧೨,೧೬,೨೨,೨೬,೬೭,
೧೬೦,೧೬೬,೨೦೬,೨೪೮,೨೫೪
ಹರಿಹರ ಕ್ಷೇತ್ರ ೧೬೨
ಹರೀಶ್ವರ ೧೧೭
ಹಲಗೆಯಾರ್ಯ ೩೮೩
ಹಲಸಂಗಿ ೩೦
ಹಲಸೂರು ೭೭,೩೭೪,೪೪೪
ಹಲ್ಸಿ ೩೩೭
ಹವಲಿ ಬೈರೇಂದ್ರ ೮೫
ಹಸ್ತಿನಾವತಿ ೨೨೫
ಹಸುರಹಳ್ಳಿ ೧೧೪
ಹಳ್ಳಿಕೊಪ್ಪಲು ೧೨೧
ಹಳೇನಗರ ೩೭೧
ಹಳೇಪೈಕ ನಾಯಕರು ೨೬೦,೩೦೮
ಹಳೇ ಬೆಂಗಳೂರು ೭೭
ಹಾಗಲದಹಳ್ಳಿ ೯೦
ಹಾಗಲವಾಡಿ ಪಾಳೆಯಗಾರರು ೬,೮೮-೯೬,
೪೨೮,೪೩೧,೪೩೪
ಹಾಗಲವಾಡಿಯ ಕೋಟೆ ೯೬
ಹಾಡುವಳ್ಳಿ ೯೮,೯೯,೧೦೪
ಹಾಲಕ್ಕಿ ಒಕ್ಕಲಿಗರು ೨೪೧
ಹಾರ್ವರ್ಡ್ ವಿಶ್ವವಿದ್ಯಾಲಯ ೧೦
ಹಾಸನ ೨೦,೨೨೫,೨೨೬,೨೪೧,೨೮೧,
೨೮೩,೪೩೫,೪೫೧,೪೫೩
ಹಾಳೂರು ೨೪೯
ಹಿಂದೂಧರ್ಮ ೨೫೪,೨೫೭,೩೪೭,೩೪೮,೩೮೭
ಹಿಂದೂಧಾರ್ಮಿಕ ಪಂಥಗಳು ೨೫೬
ಹಿಂದೂಮಹಾಸಾಗರ ೨೦೪,೨೧೬,೨೨೯
ಹಿಂದೂಸ್ತಾನ ೨೩೩
ಹಿಂದೂಸ್ಥಾನದ ಚಕ್ರವರ್ತಿ ೨೬೮
ಹಿಂದೂಸ್ಥಾನಿ ೨೮೮
ಹಿರಿಯನಾಡು ೧೧೨
ಹಿರಿಯ ಬಸಪ್ಪನಾಯಕ ೪೦೮,೪೧೦,೪೫೧
ಹಿರಿಯ ವಡ್ಡ ವ್ಯವಹಾರಿ ೧೬೦
ಹಿರಿಯ ವೆಂಕಪ್ಪನಾಯಕ ೪೦೯
ಹಿರಿಯ ಸೋಮಶೇಖರನಾಯಕ ೪೦೭
ಹಿರಿಯೂರು ೮೦,೮೧,೧೦೯
ಹಿರೇಚಿಕ್ಕಪ್ಪಗೌಡ ೮೩,೮೪
ಹಿರೇತೋಂಟಪ್ಪಗೌಡ ೮೫
ಹಿರೇಮುದಿಯಪ್ಪನಾಯಕ ೪೩೨,೪೩೩
ಹಿರೇಲಿಂಗದೇವರು ೯೪
ಹೀದನರು ೨೩೦
ಹೀನಯಾನ ೩೫೧
ಹುಚ್ಚ ತಿರುಮಲ ೪೬
ಹುಚ್ಚ ಹನುಮಪ್ಪನಾಯಕ ೪೨೯
ಹುಣಸೂರು ೪೪೯
ಹುತ್ರಿದುರ್ಗ ೪೪೫
ಹುನಗುಂದ ೧೬೩
ಹುರಾ ೨೬೮
ಹುಲ್ಲಹಳ್ಳಿ ೧೨೨,೨೬೮
ಹುಲಿಕಲ್ಲು ೪೪೫
ಹುಲಿಗೆರೆ ೨೦೬,೨೨೫
ಹುಲಿಬೈಲು ಬಸಪ್ಪ ೪೪೦
ಹುಲಿಯೂರುದುರ್ಗ ೭೮,೨೮೧,೪೪೫
ಹುಲುಕಡಿನಾಡು ೬೭
ಹುಲ್ಲೂರು ಶ್ರೀನಿವಾಸ ಜೋಯಿಸ ೫,೮೧
ಹುಸೇನ್ ೫೨
ಹೂವಾಡಿಗರು ೧೧೬
ಹೂವಿನಬಾಗಿಲು ೩೭೦
ಹೆಂಜೇರು(ಹೇಮಾವತಿ) ೮೩
ಹೆಂಡ ಇಳಿಸುವವರು ೨೨೩
ಹೆಗ್ಗಡದೇವನ ಕೋಟೆ ೨೭೨
ಹೆಗ್ಗಡೆದೇವಪ್ಪ ದಣ್ಣಾಯಕ ೧೦೧
ಹೆಗ್ಗಡೆ ಸಂಕರಸ ೯೯
ಹೆನ್ನೆ ನದಿ ೨೬
ಹೆಬ್ಬಾರರು ೨೪೩,೩೨೬
ಹೆಬ್ಬಾಲೆ ೪೫೨
ಹೆಬ್ಬಾಳ ೩೭೪
ಹೆಬ್ಬಾಳಕೆರೆ ೭೭
ಹೆಬ್ಬೆಕೋಟೆ ೨೮೧
ಹೆಮ್ಮನಹಳ್ಳಿ ೨೬೬
ಹೆಮ್ಮಿಗೆಯಾರ್ ೨೪೩
ಹೆರಾಸ್ ಎಚ್. ೩,೨೭೧
ಹೆಸರುಗೊಂಡ ೪೫೨
ಹೆಸರುಘಟ್ಟ ೭೭,೪೪೪
ಹೆಳವನಕಟ್ಟೆ ಗಿರಿಯಮ್ಮ ೧೩೪,೧೪೦
ಹೇಮಾವತಿ ನದಿ ೩೦೩
ಹೈತದೇವ ೧೦೦
ಹೈದರ್ ಅಲಿ ೮೫,೯೧,೯೨,೧೩೨,೧೪೦,೨೯೦,೩೮೯,
೩೧೭,೩೯೦,೪೩೪,೪೩೬,೪೪೦,೪೪೧
ಹೈದರ್ ನಗರ ೪೩೭
ಹೈದರಾಬಾದ್ ೨೮೯

ಹೈದರಾಬಾದಿನ ನಿಜಾಮ ೧೩೨
ಹೈವರಸ ೧೦೪
ಹೊಂಗನೂರು ೧೧೨,೪೬೨
ಹೊಂಗಲವಾಡಿ ೧೩೦
ಹೊಂದರಬಾಳು ೧೨೧
ಹೊಗೆಸೊಪ್ಪಿನ ಚಾವಡಿ ೩೦೪
ಹೊಗೆಹಣ ೪೫೩
ಹೊಡೆಯ ಬಾಗಿಲು ೩೭೦
ಹೊನಕನಹಳ್ಳಿ ೧೨೧
ಹೊನ್ನಕಳಸರಾಯ ೧೦೧
ಹೊನ್ನಮ್ಮ ೩೯೧,೩೯೬,೩೯೭,೪೦೧
ಹೊನ್ನಲಗೆರೆ ೩೦೦,೩೧೭
ಹೊನ್ನವಳ್ಳಿ ೮೯,೨೮೪,೪೩೪,೪೩೫
ಹೊನ್ನಾವರ ೧೪,೩೭,೩೯,೪೩,೯೭,೨೦೬,೨೦೭,
೨೨೫,೨೨೯,೨೩೦,೨೩೪,೨೩೫,೩೦೫,೩೧೦,೩೧೨,೩೩೩
ಹೊನ್ನು ೧೭೫
ಹೊನ್ನುಹೊಳೆ (ಸುವರ್ಣಾವತಿ) ೧೧೩
ಹೊಯ್ಸಳ ಕರ್ನಾಟಕ ೨೪೩,೪೦೦
ಹೊಯ್ಸಳರು ೧೨,೧೫,೧೬,೧೯,೨೧,೧೦೮,೨೬೪,
೨೬೫,೩೪೭,೩೫೦,೩೫೭,೩೯೧,೪೪೮,೪೫೫
ಹೊಯ್ಸಳ ಸ್ತಂಭಗಳು ೩೭೩
ಹೊರನಾಡು ೨೦೫
ಹೊಲೆಯರು(ಪರಿಯರು) ೧೬೪,೧೬೫,೨೨೭,೨೬೦
ಹೊಸಕೆರೆ ೯೦,೪೫೨
ಹೊಸಕೋಟೆ ೭೯,೪೪೪
ಹೊಸದುರ್ಗ ೪೪೨
ಹೊಸಪೇಟೆ ೩೬೪,೩೬೮
ಹೊಸಮಠ ೯೫
ಹೊಸಲನಾಡು ೧೧೨
ಹೊಸಹೊಳಲು ೨೭೧,೪೬೪
ಹೊಸೂರು ೨೮೫
ಹೊಳಲ್ಕೆರೆ ೬೪,೬೮,೮೦-೮೨,೪೪೧
ಹೊಳೆನರಸೀಪುರ ೨೭೩,೨೭೬,೨೮೧,
೪೨೮,೪೩೫,೪೪೭-೪೫೦,೪೫೩
ಹೊಳೆನರಸೀಪುರದ ನಾಯಕರು ೪೪೬
ಹೊಳೆಮುಳ್ಕಾರು ೧೨೧
ಹೋಬಳಿದಾರರು ೩೦೧,೩೦೫

ಕ್ಷತ್ರಿಯ ೧೩೯,೨೪೫,೩೧೬
ಕ್ಷೌರಿಕರು ೧೧೬,೨೬೦

ಕನ್ನಡ ವಿಶ್ವವಿದ್ಯಾಲಯ ವಿಜಯನಗರ ಸಾಮ್ರಾಜ್ಯದ ಸ್ಥಳಗಳಲ್ಲಿ ಈಗ ತಲೆಯೆತ್ತಿದೆ. ಅದೇ ಕಾರಣಕ್ಕಾಗಿ ಈ ವಿಶ್ವವಿದ್ಯಾಲಯದ ಒಂದು ಜವಾಬ್ದಾರಿಯೆಂದರೆ ಕರ್ನಾಟಕದ ಸಮಗ್ರ ಇತಿಹಾಸವನ್ನು ಬರೆಯಿಸುವುದು. ಕನ್ನಡ ವಿಶ್ವವಿದ್ಯಾಲಯ ಈ ಕುರಿತು ಯೋಚಿಸಿದಾಗ ಅನೇಕ ವಿಚಾರಗಳು ನಮ್ಮಲ್ಲಿ ಅಸ್ಪಷ್ಟವಾಗಿ ರೂಪುಗೊಂಡಿದ್ದವು. ಭಾರತದ ಇತಿಹಾಸ ಕೇವಲ ಉತ್ತರ ಭಾರತದ ಇತಿಹಾಸವಾಗಿ, ದಕ್ಷಿಣ ಭಾರತದ ಇತಿಹಾಸ ಅಡಿಟಿಪ್ಪಣಿಗಳಲ್ಲಿ ಒಡಮೂಡುವುದನ್ನು ತಪ್ಪಿಸಬೇಕಾಗಿತ್ತು. ಅದು ತಪ್ಪಬೇಕಾದರೆ ಕರ್ನಾಟಕದ ಇತಿಹಾಸ ಸ್ವತಂತ್ರವಾಗಿ ರಚನೆಗೊಳ್ಳಬೇಕು. ನಮ್ಮ ಇತಿಹಾಸ ಕೇವಲ ದಿಗ್ವಿಜಯಗಳ ಇತಿಹಾಸ ಅಷ್ಟೇ ಆಗಬಾರದು. ಅದು ಸಾಂಸ್ಕೃತಿಕ ಇತಿಹಾಸವೂ ಆಗಬೇಕು. ರಾಜಕೀಯಕ್ಕೂ ಇತಿಹಾಸಕ್ಕೂ ಇರುವ ಸಂಬಂಧ ಅವಿಭಾಜ್ಯವೆಂದು ಒಪ್ಪಿಕೊಂಡರೂ ಈ ಮಾತನ್ನು ಹೇಳಬೇಕಾಗಿದೆ. ಇತಿಹಾಸದ ಬರೆವಣಿಗೆಯೂ ಬೇರೆ ಸ್ವರೂಪವನ್ನು ತಾಳಬೇಕಾಗಿದೆ. ಅವೆಲ್ಲ ಒಮ್ಮೆಲೆ ಆಗುವ ಕೆಲಸಗಳಲ್ಲ. ಮೊದಲು ಕರ್ನಾಟಕದ ಸಮಗ್ರ ಇತಿಹಾಸದ ಸಾಮಗ್ರಿ ಒಂದು ಕಡೆಗೆ ದೊರೆಯುವಂತಾಗಬೇಕು. ಈಗ ಆ ಕೆಲಸ ಪ್ರಾರಂಭವಾಗಿದೆ. ಇತಿಹಾಸದ ಈ ಸಂಪುಟಗಳಲ್ಲಿ ಈ ಪ್ರದೇಶದ ಅದ್ಭುತವಾದ ಸಾಂಸ್ಕೃತಿಕ ಮತ್ತು ರಾಜಕೀಯ ವಿಕಾಸದ ಚಿತ್ರಗಳಿವೆ. ಕರ್ನಾಟಕದ ಏಕೀಕರಣ ರಾಜಕೀಯವಾಗಿ ನಡೆದು ಹಳೆಮಾತಾಯಿತು. ಕರ್ನಾಟಕದ ಸೀಮಾರೇಖೆಗಳು ಅಲ್ಲಲ್ಲಿ ವಾದಗ್ರಸ್ತವಾಗಿದ್ದರೂ ನೃಪತುಂಗನಂತೆ ನಾವು ಈಗ ನಮ್ಮ ಪ್ರದೇಶ ಯಾವುದೆಂದು ನಿಶ್ಚಯಿಸಿಕೊಂಡಿದ್ದೇವೆ. ನಮ್ಮ ಇತಿಹಾಸ ಈ ಪ್ರಾದೇಶಿಕತೆಯಲ್ಲಿ ಪುನಃಸೃಷ್ಟಿಯಾಗಬೇಕು. ಇತಿಹಾಸ ಪ್ರತ್ಯಭಿಜ್ಞಾನದ ಫಲವೆಂದು ಬೇರೆ ಹೇಳುವ ಕಾರಣವಿಲ್ಲ. ಪ್ರತ್ಯಭಿಜ್ಞಾನ ಭಿನ್ನ ಭಿನ್ನವಾದ ಅಂಶಗಳನ್ನು ಒಳಗೊಡಿಸಿ ಒಂದು ಸಂಬಂಧವನ್ನು ಏರ್ಪಡಿಸಿಕೊಳ್ಳುತ್ತದೆ. ಈ ಸಂಬಂಧದ ಸೂತ್ರವನ್ನು ಅನುಸರಿಸುತ್ತಲೇ ಕನ್ನಡ ವಿಶ್ವವಿದ್ಯಾಲಯ ಕನ್ನಡದ ಕೆಲಸಕ್ಕಾಗಿ ಪ್ರಯತ್ನ ಮಾಡುತ್ತಿದೆ.

ಚಂದ್ರಶೇಖರ ಕಂಬಾರ
ಕುಲಪತಿಗಳು

